MICROFILMED BY
NEHRU MEMORIAL MUSEUM
AND LIBRARY
TEEN MURTI HOUSE
NEW DELHI

REEL-22

SWADESHABHIMANI

CONTD FROM:

3 JANUARY 1947

D.V

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಖು 3—1—1947 [ಸಂಚಿಕೆ 1]

ಹಿಂದೀ ರಾಜಕಾರಣ

ಲೇ: ಶ್ರೀ ಎನ್. ಆರ್. ಕಲ್ಲೆ.

ಮಹತ್ವದ ನಿರ್ಣಯದ ಆವಶ್ಯಕತೆ

ಗಾಂಧೀಜಿಯವರ ಸಲಹೆಯಂತೆ ಎ. ಐ. ಸಿ. ಸಿ ಯಲ್ಲಿ ಚರ್ಚೆ

ಕೆಲವು ಮಹತ್ವದ ಪ್ರಶ್ನೆಗಳು

ಬ್ರಿಟಿಶ ಭೇದತಂತ್ರ

ಈ ರೀತಿ ರಾಜ್ಯಘಟನೆಯ ಸಭೆಯು ಆರಂಭವಾಗುವಷ್ಟರಲ್ಲಿ ಅದಕ್ಕೆ ವಿಘ್ನಗಳನ್ನು ತಂದೊಡ್ಡಲು ಬ್ರಿಟಿಶ ಮುತ್ಸದ್ದಿಗಳು ಎಂದಿನಂತೆ ಮಗ್ನರಾಗಿರುವರು. [illegible] ಲೀಗನ್ನು ಹಿಡಿದು, ಕಾಂಗ್ರೆಸ ಹಿಂದು ಸಂಸ್ಥೆ ಎಂಬ ನೆಪವನ್ನು ಮುಂದೊಡ್ಡಿ ಹಿಂದುಗಳಿಗೆ ಸಮಾನವಾದ ಪ್ರತಿಶಕ್ತಿ ಇವೆರಡರ ನಡುವೆ ಸಮತೆಯಿಲ್ಲದೆ ಅನ್ಯಥಾ ಸ್ವರ್ಗವಿಲ್ಲವೆಂಬ ಬೊಬ್ಬಾಟವನ್ನೆಬ್ಬಿಸಿದ್ದಾರೆ. ತತ್ಪರಿಣಾಮವಾಗಿ ಆರಂಭದ ಸಭೆಗೆ ಲೀಗ ಬರಲಿಲ್ಲ. ಇದನ್ನು ಮೊದಲೇ ತಿಳಿದ ಬ್ರಿಟಿಶರು ಡಿಸೆಂಬರ ತಾ 6ಕ್ಕೆ ಹೊರಡಿಸಿದ ಹೇಳಿಕೆಯಿಂದ [illegible] ಮನಸ್ಸು ಕದಡಿದೆ. ಬ್ರಿಟಿಶರ [illegible] ವಿಶ್ವಾಸವು ಹಾರಿಹೋಗಿದೆ.

ಗಾಂಧಿಜಿಯವರ ಸಲಹೆ

ಬ್ರಿಟಿಶ ಭೇದನೀತಿಯು ಜಗದ್ವಿಖ್ಯಾತವಾದುದು. ಅದರ ಪರಿಣಾಮವನ್ನು ಎಲ್ಲರಿಗಿಂತ ಹೆಚ್ಚು ಗಾಂಧೀಜಿಯವರು ಬಲ್ಲರು. ಅಂತೇ ಅವರು ಒಡ್ಡಿದ ಬಲೆಗೆ ಸುಲಭವಾಗಿ ಹಿಂದೀಯರು ಸಿಗಬಾರದೆಂದು ಎ ಐ ಸಿ ಸಿ ಗೆ ತಮ್ಮ ಸಲಹೆಯನ್ನು ತತ್ವಮೂಲಕ ತಿಳಿಸಿರುವರೆಂದೂ ಆ ತಳಹದಿಯ ಮೇಲೆ ಚರ್ಚೆಯಾಗಿ ಮುಂದಿನ ನಿರ್ಣಯವಾಗಬಹುದೆಂದೂ ಹೇಳಲಾಗಿದೆ. ತಾವಾಗಿಯೇ ವಿಕಟವನ್ನು ಆಮಂತ್ರಿಸಿಕೊಳ್ಳುವದು ಬೇಡ. ಮೇ ತಾ 16ರ ಘೋಷಣೆಯಂತೆ ಕೆಲಸ ಸಾಗಲಿ-ಡಿಸಂಬರ ತಾ 6ರ ಬ್ರಿಟಿಶ ಸರಕಾರದ ಮಾತುಗಳು ಸಂಶಯಕ್ಕೆ ಅವಕಾಶ ಕೊಡುವಂತಿದ್ದರೂ ಲೀಗಿನ ಪ್ರವೇಶಕ್ಕೆ ಆಸ್ಪದಕೊಟ್ಟು ನೋಡಬೇಕು. ಮುಂದೆ ಲೀಗು ಬ್ರಿಟಿಶಹಸ್ತದ ಸಂಸ್ಥೆಯಾಗಿ ಉಳಿದು ಯಾವ ನೆರವಿಗೂ ಬಾರದೆ ಇದ್ದರೆ ಮಾತ್ರ ನಮಗೆ ಉಚಿತವೆನಿಸಿದ ಮಾರ್ಗವನ್ನು ನಾವು ಅನುಸರಿಸಬಹುದು, ಎಂದು ಗಾಂಧೀಜಿಯವರು ಹೇಳಿರಬಹುದೆಂದು ರಾಜಕೀಯ ವರ್ಗದವರ ತರ್ಕವಿದೆ.

ಮುಖ್ಯ ಪ್ರಶ್ನೆಗಳು

[illegible] ಗುಂಪುಗಳ ಪ್ರಶ್ನೆಯು ಬಹಳ ಮುಖ್ಯವಾದದು. ಯಾಕೆಂದರೆ ಈ ಗುಂಪುಗಳಲ್ಲಿ ಸೇರಬೇಕೆಂದು ಹೇಳಲಾಗಿದ್ದ ಗಡಿ

ಕ್ರಿಸ್ತ ಶಕೋತ್ತರ ವರುಷ ೧೯೪೬ನೇ ಇಸವಿಯು ಇತಿಹಾಸದಲ್ಲಿ ಅತ್ಯಂತ ಮಹತ್ವದ್ದು. ಕ್ರಿಸ್ತನ [illegible]ಕ್ಕನುಸರಿಸಿ ಪ್ರೇಮಮೂಲವಾದ ನವೀನ ಯುಗವನ್ನು ನಿರ್ಮಿಸಲು ನವ ತಳಹದಿಯನ್ನು ಈ ವರುಷವು ಹಾಕಿದೆ. ಅಂತೇ ಮಹಾತ್ಮಾ ಗಾಂಧಿಯವರು ಹಿಂದು ಮುಸಲ್ಮಾನರ ನಡುವೆ ಸೌಹಾರ್ದತೆಯನ್ನು ಹುಟ್ಟಿಸಿ ಬೆಳೆಯಿಸಲು ಕಾಲ್ನಡಿಗೆಯ ಸಂಚಾರ ಕೈಗೊಂಡಿರುವರು.

ಜಗತ್ತಿನ ಪ್ರಾಚೀನ ರಾಷ್ಟ್ರಗಳಲ್ಲಿ ಅತ್ಯಂತ ಹಿರಿಯದೆನಿಸಿದ ಹಿಂದುಸ್ಥಾನವು ಮಾನವ ಪ್ರಪಂಚಕ್ಕೆ ಆದರ್ಶವೆನಿಸಿದ ಹೊಸದೊಂದು ರಾಜ್ಯಘಟನೆಯನ್ನು ನಿರ್ಮಿಸಲು ಡಿಲ್ಲಿಯಲ್ಲಿ ತನ್ನ ಸಭೆಯನ್ನು ಕಳೆದ ತಿಂಗಳ ತಾ ೯ರಿಂದ ಆರಂಭಿಸಿ ತಾ ೨೩ರ ವರೆಗೆ ಜರುಗಿಸಿತು. ಪುನಃ ಇದೇ ತಾ. ೨೦ರಿಂದ ಸಭೆ ಕೂಡುವದಿದೆ. ಆಗ್ಗೆ ಮಹತ್ವದ ವಿಷಯಗಳು ಚರ್ಚಿಸಲ್ಪಡುವವೆಂದೂ ಮುಂದಿನ ಘಟನೆಯು ಸಾಮಾನ್ಯ ರೂಪರೇಖೆಗಳು ಅರಿವಾದರೂ ಜನತೆಗೆ ಉಂಟಾಗಬಹುದೆಂದೂ ಹೇಳಲಾಗಿದೆ.

ನಾವ [illegible] ಅಸ್ಸಾಮು ಪ್ರಾಂತಗಳು ಸೇರುವ ಅಥವಾ ಬಿಡುವ ಹಕ್ಕು ಆಯಾ ಪ್ರಾಂತಗಳ ಮೂಲಭೂತ ಹಕ್ಕೆಂದು ವಾದಿಸಿರುವದರಿಂದ ಈ ಪ್ರಶ್ನೆಯು [illegible] ಬಗೆಹರಿಸುವುದು ಪಾಕಿಸ್ತಾನ ವಾದಿಗಳಿಗೆ ಸುಲಭವಾದ ವಿಷಯವಲ್ಲ. ಅಲ್ಲದೆ ಪ್ರಬಲವಾದ ಕೇಂದ್ರ ಸರಕಾರದ [illegible] ಅದರ ಇತಿಮಿತಿಗಳ ಪ್ರಶ್ನೆಯು ರಾಜ್ಯಘಟನಾ ಸಮಿತಿಯಲ್ಲಿ ಚರ್ಚಿಸಲ್ಪಟ್ಟ ನಿರ್ಣಯವಾಗುವ ವರೆಗೆ ಮುಂದಿನ ಪ್ರಶ್ನೆಗಳಿಗೆ ಕೈಹಾಕುವದು ಅಷ್ಟೊಂದು ಸಮಂಜಸವೆನಿಸಲಾರದು.

ಎ ಐ ಸಿ. ಸಿ. ಸಭೆ

ಆದ್ದರಿಂದ ಸಮಗ್ರ ದೇಶವನ್ನು ಮುಂದೆ ಸಾಗಿಸಿಕೊಂಡು ಹೋಗುವ ಹೊಣೆಯು ಎ ಐ ಸಿ. ಸಿ. ಯ ನಿರ್ಣಯವನ್ನನುಸರಿಸಿಕೊಂಡಿದೆ. ನಾಳೆ ಕೂಡುವ ವರ್ಕಿಂಗ ಕಮಿಟಿ ಸಭೆಯಲ್ಲಿ ಆಗಲಿರುವ ಸೂತ್ರರೂಪಕ ನಿರ್ಣಯವೇ ಎ. ಐ ಸಿ ಸಿ ಯಲ್ಲಿ ನಾಳಿದ್ದು ತಾ. ೬ಕ್ಕೆ ಚರ್ಚಿಸಲ್ಪಟ್ಟು ಈ ಸಂಬಂಧದಲ್ಲಿ ದೇಶವು ತನ್ನ ಮಹತ್ವದ ನಿರ್ಣಯವನ್ನು ಆ ಸಂದರ್ಭದಲ್ಲಿ ಕೊಡುವದು. ಆ ನಿರ್ಣಯವನ್ನೇ ಇಂದು ಮಾನವ ಜಗತ್ತು ಎದುರು ನೋಡುತ್ತಿದೆ.

ಆ ಮೇಲೆ?

ಈ ನಿರ್ಣಯವಾದ ಮೇಲೆ ಮುಂದೆನು ಎಂಬ ಪ್ರಶ್ನೆ ಬರುವದು ಸಹಜವಿದೆ. ಸದ್ಯಕ್ಕಂತೂ ಬ್ರಿಟಿಶ ವಿರುದ್ಧ ಹೋರಾಟದ ಕಾರಣಗಳು ತೋರುವದಿಲ್ಲವೆಂದು ಸರದಾರ ಪಟೇಲರ ಮೊನ್ನೆ ಮೊನ್ನೆ ಅಂದ ಮಾತುಗಳು ಹಾಗೂ ಶ್ರೀ ಜಯಪ್ರಕಾಶರ ಹೇಳಿಕೆಯನ್ನು ವಿರೋಧಿಸಿ ಅಂದ ಮಾತುಗಳು ಮಹತ್ವದ್ದಿವೆ. ಕೂಡಲೇ ಚಳವಳಿಯನ್ನು ಹೂಡುವದು ಕಾಂಗ್ರೆಸಿನ ಉದ್ದೇಶವಿಲ್ಲ. ಎಷ್ಟು ಬಗೆಯಿಂದ ಸಂಧಾನದ ಪ್ರಯತ್ನಗಳು ಯಶಸ್ವಿಯಾಗುವವೋ ಅಷ್ಟನ್ನೆಲ್ಲ ಅವರು ಮಾಡುವರು. ಮಹಾತ್ಮಾಜಿಯವರ ಉದ್ದೇಶವು ಸತತ ಸಂಧಾನಪ್ರಿಯತೆಯದು. ಹೀಗಿರುವಾಗ ಇನ್ನು ಯಾವದೇ ಚಳವಳಿಯು ಅಸ್ತಿತ್ವದಲ್ಲಿ ಬರಬೇಕಾದರೆ ಅದಕ್ಕೆ ಬ್ರಿಟಿಶ ಸರಕಾರದ ಉದ್ಧಟ ಮನೋವೃತ್ತಿಯೇ ಕಾರಣವಾಗಬೇಕಾಗುವದು.

ಲೀಗಿಗೊಂದು ಮಾತು

ಇಂಥ ಸನ್ನಿವೇಶದಲ್ಲಿ ಮುಸ್ಲಿಂ ಲೀಗು ಹೊರಗುಳಿಯುವುದರಲ್ಲಿ ಅರ್ಥವಿಲ್ಲ. ಮುಸಲ್ಮಾನರ ಹಿತವನ್ನಾಗಲೀ ಅಥವಾ ಹಿಂದುಸ್ಥಾನದ ಇತರ ಅಲ್ಪಸಂಖ್ಯಾಕರ ಹಿತವನ್ನಾಗಲಿ ಸಾಧಿಸಬೇಕೆಂಬುದು ಬ್ರಿಟಿಶ ಸರಕಾರದ ಗುರಿಯಲ್ಲ. [illegible] ಗುಣಗಳನ್ನು [illegible] ಅಂತಃಕಲಹವನ್ನು [illegible] ಕಷ್ಟಸಿದ್ಧವಷ್ಟೆ ದೀರ್ಘಕಾಲ ಉಳಿದರೆ ಸಾಕು ಎಂಬುದು ಅವರ ಹವಣಿಕೆ. ಈ ಹವಣಿಕೆಗೆ ಅನುಕೂಲತೆಯನ್ನು ಒದಗಿಸಿಕೊಡುವ ವಾತಾವರಣವನ್ನು ಸಾಧಿಸುವದ ಬ್ರಿಟಿಶರಿಗೆ ಶಕ್ಯವಿದೆ. ಅವರಂತೆ [illegible] ಇರುವರು. ಅವರು ಒಡ್ಡಿದ [illegible] ಬಲೆಗೆ [illegible] ಹಿಂದೀಯರು ಗೊತ್ತಿದ್ದು [illegible] ಬೀಳುವದು ಮೂರ್ಖತನದ ಪರಮಾವಧಿಯೆನ್ನಬೇಕು. ಇದನ್ನು ಯಾವತ್ತು ಹಿಂದೀಯರು ತಿಳಿದುಕೊಳ್ಳಬೇಕಾದುದು ಅತ್ಯವಶ್ಯವಿದೆ. ಬ್ರಿಟಿಶರು ಇಲ್ಲಿಂದ ಕಾಲು ಕಿತ್ತುವ ವರೆಗೆ ನಮಗೆ ಸುಖವಿಲ್ಲವೆಂಬುದು ನಿಶ್ಚಿತ. ಅಂದ ಮೇಲೆ ಅವರನ್ನು [illegible] ಇರಗೊಡುವದರಲ್ಲಿ ಹುರುಳಿಲ್ಲ.

ಇದೇ ಸುಸಂಧಿಯನ್ನು ೪೦ ಕೋಟಿ ಹಿಂದೀಯರು ಉಪಯೋಗಿಸಿ ಶಾಶ್ವತವಾದ ಘಟನೆಯು ಹಿಂದುಸ್ಥಾನಕ್ಕೆ ದೊರಕುವ ರೀತಿಯಲ್ಲಿ ಪ್ರಯತ್ನಮಾಡಿ ಎಲ್ಲರೂ ಒರಿದಾಗಿ ಅದನ್ನು ರಚಿಸುವದು ಅತ್ಯಾವಶ್ಯವಿದೆ. ಆದಕಾರಣ ಮುಸ್ಲಿಂ ಲೀಗ್ ಹಾಗೂ ಇನ್ನಿತರ ಅಲ್ಪಸಂಖ್ಯಾತರೆನಿಸುವ ಪಕ್ಷಗಳು ಬ್ರಿಟಿಶರ ಕೈಗೊಂಬೆಯಾಗದೆ ಮುಂದಿನ ಕೆಲಸ ಮಾಡುವದು ಅತ್ಯವಶ್ಯವಿದೆ. ಈ ಸುಸಂಧಿಯನ್ನು ಕಳೆದುಕೊಂಡಲ್ಲಿ ಹಿಂದೀ ಸ್ವಾತಂತ್ರ್ಯ ಹೋರಾಟವು ನಿಲ್ಲಲಾರದು. ಆದರೆ ಅವರೊಂದಿಗೆ ಮನೆ ಮನೆ ಮುರುಕ ಧೋರಣೆ ತಳೆದ ಪಕ್ಷಗಳು ಚಿರಸ್ಥಾಯಿಯಾದ ಅಪಕೀರ್ತಿಯನ್ನು ಹೊರಬೇಕಾಗುವದು.

ಮುಸ್ಲಿಂ ಲೀಗಿನ ಮುತ್ಸದ್ದಿಗಳು ಇಂಥ ಪ್ರಸಂಗಗಳಿಗೆ ಎಡೆಗೊಡದೆ ಸರ್ವಸಾಮ್ಯ[illegible] ಯನ್ನು ಮಾಡಲಿ. ಹಿಂದುಸ್ಥಾನದ [illegible] ಆಡಂಬರದಲ್ಲಿ ಘಟನೆಯನ್ನು [illegible] ಬೆಳಗಲಿ.

ಖಗೋಳ ಮಾರ್ಗದ ಮೊದಲ ನಿಲ್ದಾಣ - ಚಂದ್ರ

ಅಗಾಧ ಸಂಚಾರ ಸಾಹಸವೆ ಸಂಶೋಧನೆ

ಮಾನವ ವರ್ಗಕ್ಕೆ ಅದರಿಂದಾಗುವ ಲಾಭ

[illegible] ನಗರದ ಹೊರಗಡೆಯ [illegible] ಯಲ್ಲಿರುವ ಒಂದು ಅಸ್ತವ್ಯಸ್ತ ಪ್ರಯೋಗ ಮಂದಿರದಲ್ಲಿ ಕೆಲವು ಪ್ರಖ್ಯಾತ ವಿಜ್ಞಾನಿಗಳು ಚಂದ್ರಲೋಕದ ಪ್ರಯಾಣವನ್ನು ಯೋಜಿಸುತ್ತಿರುವರು. ಒಂದು ದೊಡ್ಡ ನಕ್ಷೆಯ ಮೇಲೆ ಅವರು 240 ಸಾವಿರ ಮೈಲು ದೂರದ ಹೆಪ್ಪುಗಟ್ಟುವ ಶಶಿಲೋಕದ ಖೇಚರ ಮಾರ್ಗವನ್ನು ಗುರುತಿಸಿರುವರು. ಒಂದು ದಿನ ಇವರಾಗಲಿ ಅವರ ನಂತರದವರಾಗಲಿ ಗಾಳಿಯಿಲ್ಲದ ನರಿಬೆಳಕಿನ ಗ್ರಹದಲ್ಲಿ ಇಳಿಯುವರು

ಇದು ತನಕ ಚಂದ್ರಲೋಕವು ಅನೇಕ ವಿಜ್ಞಾನಿಗಳ ಮಹತ್ವಾಕಾಂಕ್ಷೆಯ ಸಮಾಧಿಯಾಗಿಯೇ ಉಳಿದಿದೆ ಅನೇಕ ಸಾಹಸವಂತ ಪ್ರಯತ್ನಗಳು ಮಣ್ಣುಗೂಡಿವೆ. ಕೆಲವು ದಶಮಾನಗಳಿಂದ ಅವಿಶ್ರಾಂತವಾಗಿ ಈ ಪ್ರಯಾಣದ ಸಂಬಂಧವಾದ ಅನೇಕ ರಹಸ್ಯಮಯವಾದ ವೈಜ್ಞಾನಿಕ ಸಮಸ್ಯೆಗಳನ್ನು ಬಗೆಹರಿಸಲು ಪ್ರಯೋಗ ಪ್ರಯತ್ನಗಳು ನಡೆದಿದ್ದು ಮಿಲಿಯಾಂತರ ಹಣವೆಚ್ಚವೂ ನೂರಾರು ತಜ್ಞ ವೈಜ್ಞಾನಿಕರ ಚೈತನ್ಯವೂ ವೆಚ್ಚವಾಗಿದೆ

ಯುದ್ಧದಿಂದ ಜರ್ಝರಿತವಾದ ಪರಿಸ್ ನಗರದಲ್ಲಿ ಅದ್ವಿತೀಯ ಪ್ರತಿಭಾವಂತ ವ್ಯಕ್ತಿಗಳು ಜನತೆಯ ಆಹಾರ, ಬಟ್ಟೆ, ವಸತಿಗಳ ಸಮಸ್ಯೆಯನ್ನು ಸುಧಾರಿಸಲು ಪ್ರಯತ್ನ ಮಾಡುವುದರ ಬದಲು ಈ ನರಲೋಕದ ವಿಹಂಗಮ ಗಡಿಗಳಾಚೆ ಇರುವ ಭಾವನಾತ್ಮಕ ಖಗೋಳ ಕ್ಷೇತ್ರದಲ್ಲಿರುವುದೇನೆಂದು ಕಂಡು ಹಿಡಿಯಲು ಯತ್ನಿಸುತ್ತಿರವುದೇಕೆಂದು ಕೆಲವರು ಕೌತುಕಗೊಳ್ಳಬಹುದು

ಆದರೆ ಕೆಲವು ವಿಜ್ಞಾನಿಗಳು, ವೈದ್ಯ ತಜ್ಞರು ಮತ್ತು ಖಗೋಳ ಶಾಸ್ತ್ರ ನಿಪುಣರು ಚಂದ್ರಲೋಕದಲ್ಲಿ ಒಂದು ವಾರದ ತನಕ ಇರಲು ಸಾಧ್ಯವಾದರೆ ಮರಳಿ ಬರುವಾಗ ಮಾನವಕೋಟಿಯು ಅನೇಕ ರೋಗ ರುಜಿನಗಳಿಂದ ತಪ್ಪಿಸಿಕೊಳ್ಳಬಹುದಾದ ಮಹತ್ವದ ಜ್ಞಾನವು ದೊರಕಬಹುದೆಂದು ನಿರೀಕ್ಷಿಸುತಿದ್ದಾರೆ ಹವಾಮಾನಕ್ಕೆ ಸಂಬಂಧವಾದ ಅನೇಕ ಬೌಗೋಳಿಕ ಮತ್ತು ವೈಜ್ಞಾನಿಕ ವಿಷಯಗಳು ಈ ಪ್ರಯಾಣ ಅನುಭವದಿಂದ ದೊರೆಯಬಹುದೆಂದವರ ಅಭಿಪ್ರಾಯ

ಸೃಷ್ಟಿ ರಹಸ್ಯದ ಮೂಲ

ಒರ್ವ ರಶ್ಯನ್ ರಸಾಯನಿಕ ಶಾಸ್ತ್ರಜ್ಞನು ಚಂದ್ರಗ್ರಹವನ್ನು 'ವಿಶ್ವದ ರಹಸ್ಯ ತುರಂಗ'ವೆಂದು ಕರೆಯುತ್ತಾನೆ ಭೂಲೋಕದಲ್ಲಿನ ಪ್ರತಿಯೊಂದು ಹವಾಮಾನ ಸಂಬಂಧವಾದ ಬದಲಾವಣೆಯು ಚಂದ್ರಲೋಕದ ವಿಚಿತ್ರ ರಚನೆಯ ಪರಿಣಾಮವಂತೆ

ಆಕಾಶಯಾನದ ಉಪಕರಣಗಳು ಶೋಧೆಯಾದಂದಿನಿಂದ ಅನೇಕಾನೇಕ ವಿಜ್ಞಾನಿ 'ಮುಟ್ಟ'ರು ಚಂದ್ರನೆಡೆಗೆ ಸಾಗಲು ವಿಶ್ವ ಪ್ರಯತ್ನ ಮಾಡಿದ್ದಾರೆ ಹ್ಯಾಡ್ರೊಜನ್ ಅನಿಲವನ್ನು ತುಂಬಿದ ದೊಡ್ಡ ರೇಶ್ಮೆ ಚೀಲಗಳು ಗುಡಾಣದಂತೆ ಮೇಲಕ್ಕೆ ಹಾರಿಸಲ್ಪಟ್ಟು ಅವುಗಳಲ್ಲಿ ಸಾಹಸವಂತರನೇಕರು ಮೇಘ ಮಂಡಳವನ್ನು ದಾಟಿ ಮೇಲಕ್ಕೆ ಹೋಗಿದ್ದಾರೆ. ಆದರೆ ಅವರ ವಾಹನಗಳು ಒಂದೆರಡು ಮೈಲುಗಳಿಗಿಂತ ಎತ್ತರ ಸಾಗುವುದಿಲ್ಲವೆಂದು ಖಚಿತವಾದ ಮೇಲೆ ಇತರ ಶಕ್ತಿವಂತ ಸ್ಫೋಟಕ ಯಂತ್ರಗಳ ಕಡೆಗೆ ವಿಜ್ಞಾನಿಗಳು ಮರೆಹೊಕ್ಕರು. 1903ರಿಂದ 1913ರ ಒಳಗೆ ಫ್ರಾನ್ಸ್, ಬ್ರಿಟನ್, ಅಮೇರಿಕನ್ ಮತ್ತು ರಶ್ಯನ್ ವಿಜ್ಞಾನಿಗಳು ರೊಕೆಟ್‌ಗಳೆಂಬ ಆಕಾಶ ಬಾಣ ವಿಮಾನಗಳ ಮೂಲಕ ನಭೋಮಂಡಳ ಯಾತ್ರೆಯ ಸಾಧ್ಯಾಸಾಧ್ಯತೆಯನ್ನು ಕುರಿತು ರಾತ್ರೆ ಹಗಲೆಂಬಂತೆ ಪ್ರಯೋಗ ನಡೆಸಿದ್ದರು.

ಮೇಲ್ಕಂಡವರ ಯತ್ನಗಳು ನೀರು ಹೋಮವಾದರೂ ರೊಕೆಟ್ ವಿಧಾನವು ಪರಿಪೂರ್ಣತೆಹೊಂದತೊಡಗಿತು ಜರ್ಮನಿಯಲ್ಲಿ ಮುಖ್ಯವಾಗಿ ಸಿಡಿಮದ್ದು ಸ್ಫೋಟದಿಂದ ಓಡಿಸಲ್ಪಡುವ ಅನೇಕ ಯಂತ್ರೋಪಕರಣಗಳ ಶೋಧೆಯಾಯಿತು. 1931ರಲ್ಲಿ ಶ್ಮಿಡಲ್ ಎಂಬ ಜರ್ಮನ್ ಯಂತ್ರ ತಜ್ಞನು ರೊಕೆಟ್ ವಿಮಾನಗಳನ್ನು ಟಪಾಲು ಒಯ್ಯುವಿಕೆಯ ಸಾಧನವಾಗಿ ತಯಾರಿಸಿದ ನಂತರ ಆ ವಾಹನದ ಉಪಯುಕ್ತತೆಯು ಅನೇಕರಿಗೆ ಮನದಟ್ಟಾಯಿತು

ಹೇಗಾದರೂ ಇಂದು ಎಟಂ ಶಕ್ತಿಯ ರಹಸ್ಯವು ಸರ್ವಸಾಧಾರಣ ಎಲ್ಲ ವಿಜ್ಞಾನಿಗಳ ಪರಿಜ್ಞಾನಕ್ಕೆ ಬಂದಿರುವಾಗ ಚಂದ್ರಲೋಕಕ್ಕೆ ಹೋಗಿ ಬರುವುದರ ಸಾಧ್ಯಾಸಾಧ್ಯತೆಗಳು ಹೆಚ್ಚು ಸಮಸ್ಯಾಮಯವೆಂದು ತಿಳಿಯಲ್ಪಡುವುದಿಲ್ಲ.

ಆರುವತ್ತು ವರ್ಷ ತಯಾರಿ

ಆರುವತ್ತು ವರ್ಷಗಳ ಹಿಂದೆ ಒರ್ವ ಜರ್ಮನ್ ಯಾಂತ್ರಿಕ ನಿಪುಣನು ತನ್ನ ದಿನಚರಿಯ ಪುಸ್ತಕದಲ್ಲಿ ಹೀಗೆ ಬರೆದಿದ್ದನು: "ಸ್ಫೋಟ ಶಕ್ತಿಯಿಂದ ಆಕಾಶ ಮಂಡಳದ ಮೇರೆಯನ್ನು ದಾಟಿದರೆ ನೇರವಾಗಿ ಚಂದ್ರಲೋಕದೊಳಗೆ ಪ್ರವೇಶಿಸಬಹುದು ಅಲ್ಲಿಂದ ಪುನಃ ಅದೇ ರೀತಿ ಭೂಲೋಕಕ್ಕೆ ಒಯ್ಯಲ್ಪಡಲು ಸಾಧ್ಯವಿದೆ"

ಆರವತ್ತು ವರ್ಷಗಳ ವೈಜ್ಞಾನಿಕ ಪ್ರಗತಿಯ ದೆಸೆಯಿಂದಾಗಿ ಇಂದು ಚಂದ್ರಲೋಕ್ಕ ಪ್ರಯಾಣದ ಸಾಧ್ಯತೆಯ ಅತಿ ಸಮೀಪಕ್ಕೆ ನಾವು ಮುಟ್ಟಿರುವೆವು ಸಿಡಿಮದ್ದು ಸ್ಫೋಟಕ ಆಕಾಶ ಬಾಣದಂತಹ ರೊಕೆಟಿನ ಮೂಲಕ [illegible] ಭೂಲೋಕ ಚಂದ್ರಲೋಕಗಳ ನಡುವಿನ ಅಗಾಧ ಆಕರ್ಷಣ ಶಕ್ತಿಯ ಮೇರೆಯನ್ನು ದಾಟ[illegible] ಆ [illegible] ಅಪೇಕ್ಷಿತ [illegible] ಸಿಡಿಮದ್ದು [illegible]

[illegible] ರೊಕೆಟನ್ನು ಓಡಿಸ[illegible] ಗಂಟೆಗೆ 15 ಸಾವಿರ ಮೈಲಿ ವೇಗದ [illegible] ಅವಶ್ಯವಿದೆ [illegible] 30 ಸಾವಿರ [illegible] ವೇಗ [illegible]

[illegible] ಸಮಸ್ಯೆಯೆಂದರೆ [illegible] ಅತ್ಯಂತ ಶೀತದ [illegible] ವಾತಾವರಣವನು [illegible]

[illegible] ವಿಜ್ಞಾನಿಗಳ [illegible] ಈ ಸಮಸ್ಯೆಯನ್ನು [illegible] ಅವರ [illegible] ಲೋಕ [illegible] ಕವಚ [illegible] ಆದರ ಭಾರ 25 ಪವನ್‌ಷ್ಟಿರ [illegible] ಒಳಗಿನ ವ್ಯಕ್ತಿಗೆ ಗಾಳಿ ಒತ್ತಡದ [illegible] ವಾಗದ [illegible] ಉಪಕರಣ ಸಾಧನಗಳಿವೆ

[illegible] ವಿಜ್ಞಾನಿಗಳು ಪ್ರಯೋಗ ನಡೆಸಿದ ರೊಕೆಟ್ ವಾಹನದ ಗಾತ್ರವು ಜಗತ್ತಿನ ಅತಿ ದೊಡ್ಡ ಹಡಗದಷ್ಟಿರುವುದು ಅದೆಂತಹ ಕಠಿಣ ವಾತಾವರಣದಲ್ಲಾದರೂ 3 ವಾರಗಳ ತನಕ ಬದುಕಬಹುದಾದ ಸುಖದ ಏರ್ಪಾಡು ಇದೆ

—— ON DISPLAY ——

ROVER

(10 H. P)

ONE OF BRITAIN'S FINEST CARS

An ideal Car to own and drive

U. SUBRAYA NAYAK

Dealer for

Rover Singer Pontiac cars and

G M C Trucks

ಸಮರ್ಥತೆ ಬಲ ಶುಭ್ರತೆ ಮತ್ತು ಮನೋಹರತೆ, ಇವುಗಳನ್ನು ಸುಭದ್ರ ಮತ್ತು ಸುಲಭವಾದ ಈ ರೀತಿಯಲ್ಲಿ ನಿಮ್ಮದಾಗಿ ಮಾಡಿಕೊಳ್ಳಬಹುದು ವನಸ್ಪತಿ ಮೂಲಗಳಿಂದ ಸಿದ್ಧವಾಗು , ಬ್ಯಾಲ್ ಬೀನ್ಸ್, ಎಂಬ ಈ ಶಕ್ತಿಕಾರಕ ಬೇದಿ ಮಾತ್ರೆಗಳನ್ನು ಕ್ರಮವಾಗಿ ಸೇವಿಸಿದಲ್ಲಿ ರಕ್ತದಿಂದ ವಿಷವಸ್ತುಗಳು ವಿಸರ್ಜನೆಯಾಗಿ, ಜೀರ್ಣಶಕ್ತಿಯ ವೃದ್ಧಿಯಾಗಿ ನಿಮ್ಮ ಅಂತರ್ಯ ಆರೋಗ್ಯವು ಉತ್ತಮಗೊಳ್ಳುವುದು

ಶುಭ್ರ ಆರೋಗ್ಯದಲ್ಲಿರಬೇಕಾದರೆ, ನಿಮಗೆ ಬ್ಯಾಲ್ ಬೀನ್ಸ್‌ಗಳ ಆವಶ್ಯವಿದೆ ಎಂದು ಸದಾ ಜ್ಞಾಪಕದಲ್ಲಿಡಿರಿ

ಮಲಗುವ ಮುನ್ನ ಶುದ್ಧ ವನಸ್ಪತಿಯಾದ

BILE BEANS

ಬ್ಯಾಲ್‌ಬೀನ್ಸ್‌ನ್ನು ನಿತ್ಯಲೂ ಸೇವಿಸಿರಿ.

ವಾರದ ವಾರ್ತಾ ವಿಶೇಷ

ವಧುವಿಲ್ಲದ ವಿವಾಹ

ಮುಸ್ಲಿಂ ಲೀಗು ಭಾಗವಹಿಸದ ಘಟನಾ ಸಮಿತಿಯ ನಿರ್ಧಾರಗಳು ಶೂನ್ಯವೆಂದು ಹೇಳಿಸುತ್ತಾ ಚರ್ಚಿಲ್ಲರು "ಲಗ್ನ ಮುಹೂರ್ತದಲ್ಲಿ ವಧುವಾಗಲಿ ವರನಾಗಲಿ ಯಾರಾದರೊಬ್ಬರು ಇಲ್ಲದೆ ಜರುಗಿಸಲ್ಪಡುವ ವಿವಾಹವು ಸಂಬಂಧವೆನಿಸುವುದೆ?" ಎಂದು ಪ್ರಶ್ನಿಸಿದರು.

ಇದು ಚರ್ಚಿಲ್ಲರ ವಿಕಾರಿದ ವಯಸ್ಸಿನ ಮನೋಗತಿಯೆನ್ನಬೇಕು. ಅವರು ಹೇಳಿದ ಮದುವೆ ಎಷ್ಟೋ ವರ್ಷಗಳ ಹಿಂದೆಯೇ ಆಗಿಹೋಗಿದೆ ಎಂಬ ವಿಚಾರವು ಯುದ್ಧಕಾಲದ ಈ ವೃದ್ಧ ಪುಢಾರಿಗೆ ಮರೆತುಹೋಗಿರಬೇಕು. ಈಗಿನ ಪ್ರಶ್ನೆ ವಿವಾಹವೆನ್ನುವುದಕ್ಕಿಂತಲೂ ವಿಹಾವ ವಿಚ್ಛೇಧವೆನ್ನುವುದು ಒಳಿತು. ಕಾರಣ ಝಳಪಿಸುವ ಪಾಶ್ಚಾತ್ಯ ಕತ್ತಿಯೊಂದು ಒಂದು ವಧುವನ್ನು ಅಪಹರಿಸಿದೆ. ವಿಚ್ಛೇದವಾಗಬೇಕೆಂಬ ಒತ್ತಾಯವೂ ಆ ಖಡ್ಗಧಾರಿಯ ಕಡೆಯಿಂದ ಮಾಡಲ್ಪಡುತ್ತಿದೆ. ಅನ್ಯರಾಶ್ರಯ ಹೊಂದಿದ ವಧುವನ್ನು ರಕ್ಷಿಸಲು ಸಕಲ ಪ್ರಯತ್ನಗಳನ್ನು ಮಾಡಲಾಗುವುದೆಂದು ಬರವಸೆಯೂ ಇದೆ. ಈ ಅವಧಿಯಲ್ಲಿ ಸಂಸಾರದ ಗೃಹಕೃತ್ಯವು ಸಾಗಲೇಬೇಕಲ್ಲವೆ?

★

ರಾಜಕೀಯ ಯಂತ್ರ

ಕೊಮನ್ಸ್ ಸಭೆಯಲ್ಲಿ ಚರ್ಚಿಲ್ ಸಾಹೇಬರ ದೀರ್ಘೋಪನ್ಯಾಸಗಳ ಕುರಿತು ವಿಮರ್ಶಿಸುತ್ತಾ ಬರ್ನಾರ್ಡ ಶಾ ಅವರು "ಅವರಿಗೆ ಏಳಿದು ಅಥವಾ ತಿಳಿಯದೆಯಾಗಲಿ ರಾಜಕೀಯ ಮುತ್ಸದ್ದಿಯಾಗಿ ಚರ್ಚಿಲ್ಲರು ಎಂದೊ ಪರಿಸಮಾಪ್ತಿ ಹೊಂದಿದ್ದಾರೆ" ಎಂದರು. ಚರ್ಚಿಲ್ಲರಂತೆ ಮುಸೊಲಿನಿಯವರೂ ಒರ್ವ ಮಾಜಿ ಪ್ರಧಾನರು. ಮಾಜಿ ಪ್ರಧಾನರ ಭವಿಷ್ಯ ರಾಜ ಪ್ರಧಾನರಿಗೇ ಚೆನ್ನಾಗಿ ಗೊತ್ತಿರಬೇಕು. ಪರಿಸಮಾಪ್ತಿ ಹೊಂದಿದರೆ ಗತಿಸಿದರೂ ಅವರ ಅಭಿಪ್ರಾಯವಾದರೆ ಪರಿಪೂರ್ಣತೆ ಹೊಂದಿರುವನೆಂದು ಚರ್ಚಿಲ್ಲರ ಮನೋಭಾವ. ತನ್ನ ರಾಜಕೀಯ ಶೇಷ ಕೊನೆಗೊಂಡರೂ ಸಾಮ್ರಾಜ್ಯಶಾಹಿಯ ಅವತಾರಗಳವನಾಗಿ ಹುಟ್ಟಿದ ತನ್ನ ಅವತಾರ ಮುಗಿದಿಲ್ಲವೆಂದು ಅವರ ನಂಬಿಕೆಯಿರಬಹುದೆ?

★

ಬೆಳಕು

ಪೂರ್ವ ಬಂಗಾಲದಲ್ಲಿ ಇದುವರೆಗೆ ಮುತ್ತಿದ ಗಾಢಾಂಧಕಾರವು ಮೆಲ್ಲಗೆ ಹರಿದುಹೋಗುತ್ತಲಿದೆ. ಮಹಾತ್ಮರ ಪ್ರಕಾಶ ರಶ್ಮಿಯನ್ನು ಕಂಡಿರುವುದಾಗಿ ಉಸುರಿಸಿದ್ದಾರೆ. ಪೂರ್ಣ ಪ್ರಾತಃಕಾಲವಿನ್ನೂ ಆಗಲಿಲ್ಲ. ಆದರೆ ಆಶಾದಾಯಕ ಪ್ರಭಾತ ಮೊಳಗುತ್ತಿದೆ. ಅಂತೆಯೇ ಮಹಾತ್ಮರು ನಿನ್ನೆ ತಮ್ಮ ಹಳ್ಳಿಯಿಂದ ಹಳ್ಳಿಗೆ ಹೋಗುವ ಪಾದ ಸಂಚಾರವನ್ನು ಪ್ರಾರಂಭಿಸಿದರು. ಕ್ರಮೇಣ ಪೂರ್ಣ ಬೆಳಕು ಹರಿಯುವುದೆಂದು ಹಾರೈಕೆಯಿದೆ.

ಒಂದು ಕಡೆಯಿಂದ ಮಹಾತ್ಮರು ತಮ್ಮ ಅಹಿಂಸಾ ಪ್ರಯೋಗದ ಯಶಸ್ಸಿನ ಪ್ರಭಾತ ಕಾಣುತಿದ್ದಾರೆ. ಇನ್ನೊಂದು ಕಡೆಯಿಂದ ಜಿನ್ನರ 'ಡೋನ್' (ಪ್ರಭಾತ) ಪತ್ರಿಕೆಯು ತನ್ನ ಕಪ್ಪು ಪ್ರಚಾರವನ್ನು ಭೋರ್ಗರೆಯುತ್ತಿದೆ. ಇಷ್ಟಾದರೂ ಲೀಗ್ ಪ್ರಧಾನ ಸುಹ್ರಾವರ್ದಿಯ ಮೇಲೆ 'ಡೋನ್'ಗಿಂತಲೂ ರಾಮ 'ಧುನ್'ದ ಪ್ರಭಾತ ಹೆಚ್ಚು ಪರಿಣಾಮಕಾರಿಯಾಗಿದೆಯೆನ್ನಬೇಕು. ಅವರು ಕೋಮು ಕಲಹದ ಘೋಷಣೆಯನ್ನು ತೀವ್ರ ಖಂಡಿಸಿದ್ದು ಇತ್ತೀಚಿನ ರಾಜಕೀಯ ಘಟನೆಗಳಲ್ಲಿ ಆದ ವಿಸ್ಮಯಕಾರಕ ಘಟನೆಗಳಲ್ಲೊಂದು. ಇದು ಮಹತ್ವದ ಪರಿವರ್ತನೆ. ಬೆಳಕು ಕಂಡಿರುವುದು ಮಹಾತ್ಮರು ಮಾತ್ರವಲ್ಲ, ಮತಾಂಧತೆಯು ಮಿತಿಮೀರಿದ ಲೀಗ್ ದುರೀಣರಲ್ಲೊಬ್ಬರು, ಅದರಲ್ಲಿಯೂ ವಿಶಾಲ ಪ್ರಾಂತದ ಪ್ರಧಾನಿಗಳಾಗಿರುವವರು, ಈ ಬೆಳಕನ್ನು ಕಂಡದ್ದು ಆಶಾದಾಯಕ.

★

ಪ್ರತ್ಯೇಕತೆ

'ರಾಜಕೀಯ ಘಟನಾಭರವು ತೀವ್ರವಾಗುತಿದ್ದ ಹಾಗೆ ಲೀಗ್ ದುರೀಣರು ಉನ್ನತೋನ್ನತ ಭಾವನೆಗಳಿಗೆ ನಿರೂಪ ಕೊಡುತಿದ್ದಾರೆ. ಮೊನ್ನೆ ಆರಂಭವಾದ ಅಖಿಲಭಾರತ ಘಟನಾ ಸಮಿತಿಗೆ ಲೀಗು ತಿಲಾಂಜಲಿ ಕೊಟ್ಟು ಅದನ್ನು ವಲ್ಲಭ್ಭಾಯಿಯವರ ಹೆಸರಿಗೆ ಪಾರಿತೋಷಕವಾಗಿ ಅರ್ಪಿಸುವುದಾಗಿ ಗಜ್ನಫರ್ ಅಲಿಖಾನರೂ, ಮುಸಲ್ಮಾನರೆಲ್ಲಿ ಇದ್ದಾರೊ ಅಲ್ಲಲ್ಲಿ ಪಾಕಿಸ್ಥಾನವನ್ನು ಸ್ಥಾಪಿಸುವುದಾಗಿ ಗಡಿನಾಡಿನ ಅಬ್ದುಲ್ ಖೊಯಮ್ ಖಾನರೂ, ಉದ್ಘೋಷಿಸಿದ್ದಾರೆ. ... ಉಡುಗೊರೆ ಕೊಡಲು ಘಟನಾ ಸಮಿತಿಯು ಯಾವ ರಾಜಕೀಯ ಪಕ್ಷದ ಸ್ವತಂತ್ರ ಸೊತ್ತಾಗಿರುವುದಿಲ್ಲ. ಅದು ಇಡೀ ದೇಶದ ಪ್ರತಿನಿಧಿಗಳಿಗೆ ಬ್ರಿಟಿಷ್ ಸರಕಾರದವರು ಉದಾರವಾಗಿತ್ತ ಒಪ್ಪಿಗೆ ... ಅದನ್ನು ಪುನಃ ಇನ್ನೊಬ್ಬರಿಗೆ ಸಮರ್ಪಿಸುವುದು ಯೋಗ್ಯದಾನವೆಂದೆನಿಸುವುದಿಲ್ಲ. ಅದನ್ನು ಎಲ್ಲರೂ ಸ್ವೀಕರಿಸಿ ಸದುಪಯೋಗ ಮಾಡುವುದು ಪ್ರತಿ ರಾಜಕೀಯ ಪಕ್ಷದ ಹೊಣೆಗಾರಿಕೆಯಾಗಿದೆ.

ಮುಸಲ್ಮಾನರೆಲ್ಲಿಲ್ಲಿ ಪಾಕಿಸ್ಥಾನ ಸ್ಥಾಪಿಸುವುದು ಅಸಾಧ್ಯವಾದ ಸಂಗತಿ, ಕಾರಣ ಅವರನ್ನು ಅಲ್ಪಸಂಖ್ಯಾಕರಾದ ಪ್ರಾಂತ್ಯಗಳಿಂದ ಸ್ಥಳಾಂತರಗೊಳಿಸುವ ಯೋಜನೆಯು ಇದರಿಂದ ಅಶಕ್ಯವೆಂದು ಮನಗಂಡ ವಿಷಯ ತೋರಿಬರುತ್ತದೆ." ಆದರೆ ಈ ಹೊಸ ಸೂಚನೆಯು ಹಿಂದೂ ಬಹುಸಂಖ್ಯಾಕ ಪ್ರಾಂತದಲ್ಲಿರುವ ಮುಸಲ್ಮಾನರಿಗೆ ಮಾತ್ರ ರುಚಿಸಲಿಕ್ಕಿಲ್ಲ. ಅವರು ತಮ್ಮ ಅಭಿವೃದ್ಧಿಯು ಬಹುಸಂಖ್ಯಾಕರೊಡನೆ ಹೊಂದಿಕೊಂಡಿರುವುದರಲ್ಲೇ ಇದೆ ಎಂದು ಚೆನ್ನಾಗಿ ಒಲ್ಲರು. ದೊಡ್ಡ ಶ್ರೀಮಂತರಾಗಿರುವ ಖೊಯಾಮ ಖಾನರು ತಮ್ಮ ಹುಟ್ಟುವಳಿಯ ಆಧಾರದಿಂದ ಪ್ರತ್ಯೇಕವಿರಬಲ್ಲರು. ಆದರೆ ಮುಸಲ್ಮಾನರೆಲ್ಲರೂ ಅದೇ ಪರಿಸ್ಥಿತಿಯಲ್ಲಿರುವುದಿಲ್ಲವೆಂಬ ಸಂಗತಿಯು ಅವರಿಗೆ ತಿಳಿಯದೆ ಇದ್ದುದು ಅತ್ಯಾಶ್ಚರ್ಯದ ಸಂಗತಿ.

★

ಹರಿಜನೋದ್ಧಾರ

ಕೆಲವು ವರ್ಷಗಳ ಹಿಂದೆ ಅದೊಂದು ನಿರ್ಭಾಗ್ಯ ಪರಿಸ್ಥಿತಿಯಲ್ಲಿ ಮಹಾತ್ಮರು ಪೂನಾದ ಯೆರವಾಡದಲ್ಲಿ ಅಸ್ಪೃಶ್ಯರನ್ನು ಹಿಂದೂ ವರ್ಗದಿಂದ ಪ್ರತ್ಯೇಕಿಸಬಾರದೆಂದು ಮರಣಾಂತಿಕ ಉಪವಾಸ ಕೈಕೊಂಡರು. ಅಂದಿನಿಂದ ಅವರು ಹರಿಜನೋದ್ಧಾರವನ್ನು ಎಲ್ಲದಕ್ಕೂ ಪ್ರಥಮ ಸೋಪಾನವಾಗಿ ಕೈಕೊಂಡರು. ಪರಿಣಾಮವಾಗಿ ಇಂದು ಅತ್ಯಂತ ಕಟ್ಟಾಚಾರದ ಕೋಟೆಗಳಂತಿರುವ ದಕ್ಷಿಣ ಹಿಂದೂಸ್ಥಾನದ ದೇವಾಲಯಗಳು ಆ ಪತಿತ ಜನರಿಗಾಗಿ ತೆರೆಯಲ್ಪಡುತ್ತವೆ. ಹಲವು ಶತಮಾನಗಳಿಂದ ಹಿಂದೂ ಸಮಾಜದಲ್ಲಿನ ಅಂಧ ವಿಶ್ವಾಸ, ಅಸಜ್ಜ ವಿಚಾರಿಗಳ ಧೂರ್ತ ಸಾಂಪ್ರದಾಯದ ಪರಿಣಾಮವಾಗಿ ಅಸ್ಪೃಶ್ಯರೆಂಬ ವರ್ಗವು ಸಕಲ ಪಾಪ ವಿನಾಶಕಾರಿಯಾದ ಪವಿತ್ರ ದೇವನ ಬಾಗಿಲಿಂದ ದೂರವಿರಿಸಲ್ಪಟ್ಟಿತ್ತು. ಅವರ ಉದ್ಧಾರಕ್ಕೆ ಒರ್ವ ಗಾಂಧಿಯ ಅವತಾರದ ಅವಶ್ಯಕತೆ ಉಂಟಾದುದರಿಂದ ದ್ರಾವಿಡ ಮಹಿಮೆಯ ಕಡೆಗೆ ನಂಬಿಗಸ್ಥ ಜನತೆಯ ಕಣ್ಣುಗಳು ತೆರೆಯಲ್ಪಡುವಂತಾದುದು ತುಂಬಾ ಸಮಾಧಾನದ ಸಂಗತಿ.

★

ಮುಂದಿನ ಹೋರಾಟ

ಕೊಂಗ್ರೆಸು ಬ್ರಿಟಿಷ್ ಸರಕಾರದವರ ದಶಂಬರ್ ೬ರ ಹೇಳಿಕೆಯನ್ನು ಸ್ವೀಕರಿಸುವುದೆಂಬ ಬಲವಾದ ಊಹಾಪೋಹ ಇದೆ. ಅದರಿಂದ ಕೇಂದ್ರ ರಾಜ್ಯಘಟನೆಯ ನಿರ್ಮಾಣಕ್ಕೆ ಯಾವ ಬಾಧಕವೂ ಇಲ್ಲ. ಮಾತ್ರವಲ್ಲ "ಒಂದು ಪ್ರಭಾವಿತ ಪಕ್ಷವು ಘಟನಾ ಸಮಿತಿಯಲ್ಲಿ ಸೇರಿಕೊಳ್ಳದೆ ನಿರ್ಣಯಿಸಲ್ಪಡುವ ಯಾವ ರಾಜ್ಯಭಾರ ಪದ್ಧತಿಯನ್ನಾದರೂ ಅಸಮ್ಮತಿ ಪಡುವ ದೇಶ ಭಾಗಗಳ ಮೇಲೆ ಹೊರಿಸಲಾಗುವುದಿಲ್ಲ"ವೆಂದು ದಶಂಬರ್ ೬ರ ಹೇಳಿಕೆಯಲ್ಲಿ ಸ್ಪಷ್ಟವಿದೆ. ಈ ಸೂಚನೆಯು ಈಗಿನ ಪರಿಸ್ಥಿತಿಯಲ್ಲಿ ಲೀಗಿಗೆಷ್ಟು ಒಲವಾಗಿ ಅನ್ವಯಿಸುತ್ತದೊ ಅಷ್ಟೇ ಬಲವಾಗಿ ಸಂಗಡ ರಾಜ್ಯಘಟನೆಯ ಕಾಲದಲ್ಲಿ ಹೊರಗೆ ಉಳಿಯಬಹುದಾದ ಗಡಿನಾಡು ಅಸ್ಸಾಮುಗಳಿಗೆ ಅನ್ವಯಿಸುವುದು. ಘಟನಾ ಸಮಿತಿಯು ಗುಂಪುಗಳಾಗಿ ವಿಂಗಡಿಸಲ್ಪಟ್ಟಾಗ ಈ ಎರಡು ಪ್ರಾಂತ್ಯಗಳು ಹೊರಗಿದ್ದರೆ 'ಅಸಮ್ಮತಿ ಪಡುವ ದೇಶಭಾಗಗಳ ಮೇಲೆ ಬಲಾತ್ಕಾರವಾಗಿ ಯಾವ ರಾಜ್ಯಘಟನೆಯನ್ನು ಹೊರಿಸಲಾಗುವುದಿಲ್ಲ'ವೆಂಬುದು ತಗಲುತ್ತದೆ. ಆ ಸಂದರ್ಭದಲ್ಲಿ ಬ್ರಿಟಿಷ್ ಸರಕಾರವು ಯಾವ ಧೋರಣೆ ನೀತಿಯನ್ನನುಸರಿಸುತ್ತದೆಂಬುದರ ಮೇಲೆ ಮುಂದಿನ ಹೋರಾಟದ ಪ್ರಶ್ನೆಯು ಹೊಂದಿಕೊಂಡಿದೆ.

ಅಂತೆಯೇ ಸರ್ದಾರ್ ವಲ್ಲಭಾ ಪಟೇಲರು, ಜೈಪ್ರಕಾಶ್ ನಾರಾಯಣರು ಹೇಳುವಂತೆ ಈಗಾಗಲೇ ಹೋರಾಟದ ಪರಿಸ್ಥಿತಿ ಒದಗಿಲ್ಲವೆಂದೂ ಅದು ಒದಗಿದಾಗ ಜನತೆಗೆ ಸ್ಪಷ್ಟವಾಗಿ ತಿಳಿಸಲಾಗುವುದೆಂದೂ ತಿಳಿಸಿದುದು ಗಮನೀಯ ವಿಚಾರ.

★

ಸಂಸ್ಥಾನಗಳು

ಬ್ರಿಟಿಷರಿಗೆ ಇಲ್ಲಿ ತೂಗಾಡಲು ನಮ್ಮಲ್ಲಿನ ಕೋಮುವಾರು ವ್ಯತ್ಯಾಸವು ಒಂದು ಬಲವಾದ ಆಧಾರವಿದ್ದಂತೆ ದೇಶಿ ಸಂಸ್ಥಾನಗಳೂ ಕ್ರಮೇಣ ಅವರ ಕಪಟ ನಾಟಕಕ್ಕೆ ಒಳ್ಳೇ ಸೂತ್ರವಾಗಿ ಪರಿಣಮಿಸುತ್ತಿವೆ. ರಾಜ ಮಹಾರಾಜರುಗಳೂ, ನವಾಬರುಗಳೂ ತಮ್ಮ ಅಧಿಕಾರವು ದೈವದತ್ತವೆಂದೂ ಚಾರಿತ್ರಿಕವಾದುದೆಂದೂ ತರ್ಕಿಸುತ್ತಿದ್ದಾರೆ. ಸಂಸ್ಥಾನಗಳಲ್ಲಿನ ಪ್ರಜಾಮಂಡಲಗಳು ಹಿರಿಯರ ಕಾಲದ ಈ ತತ್ವಗಳು ಕೇವಲ ಪೊಳ್ಳು ಬುರುಡೆಗಳೆಂದು ನಿರ್ಣಯಿಸಲೂ ಪ್ರಾರಂಭಿಸಿದ್ದಾರೆ.

ನಮ್ಮ ಸಂಸ್ಥಾನಾಧಿಪತಿಗಳಿಗೆ ಬ್ರಿಟಿಷ್ ಸಾರ್ವಭೌಮ್ಯರ ಒಂದೇ ಒಂದು ದೊಡ್ಡ ನಿದರ್ಶನವು ತೃಪ್ತಿಕರವಾಗಿ ತೋರುತ್ತಿಲ್ಲ. ನಿರಂಕುಶ ಅಧಿಕಾರದ ಅವರ ಲಾಲಸೆಗೆ ತುದಿಮೊದಲಿಲ್ಲವಾಗಿದೆ. ಅವರಲ್ಲಿನ ಈ ಧೈರ್ಯವು ಕೇವಲ ಬ್ರಿಟಿಷ್ ಬಂಧೂಕುಗಳಿಂದಲೇ ಉಂಟಾದುದೆಂಬುದಕ್ಕೆ ಪ್ರತ್ಯೇಕ ಪರಿಶೀಲನೆ ಅಗತ್ಯವಿಲ್ಲ. ಬ್ರಿಟಿಷ್ ಸರಕಾರದವರು ಬಹುಕಾಲದಿಂದ ತಮ್ಮ ಸಾಮ್ರಾಜ್ಯಶಾಹಿ ಯಂತ್ರದ ವಿಧೇಯ ಕೈಗೊಂಬೆಗಳಂತಿದ್ದ ಈ ಮಂಡಳಾಧೀಶರ ಕಡೆಗೆ ತೋರಿದ್ದ ಸಹಾನುಭೂತಿಯನ್ನು ಕೊಂಚ ಸಡಿಲಿಸಿದರೆ ಕೂಡಲೆ ಅವರು ಮತ್ತವರ ಚಾಣಾಕ್ಷ ಪ್ರಧಾನಿಗಳೂ ವಿವೇಕವನ್ನು ತಾಳುವರೆಂಬುದಕ್ಕೆ ಸಂದೇಹವಿಲ್ಲ. ಪ್ರಜಾಶಕ್ತಿಯನ್ನು ಅದೆಷ್ಟು ಅಯ್ಯಂಗಾರ್, ಮೊದಲಿಯಾರರುಗಳೂ ಎದುರಿಸಲಾರರೆಂದು ಅವರಿಗೇನು ತಿಳಿದಿರದ ವಿಷಯವಲ್ಲ.

ವಿಷಮಯ ಕಡಿತಗಳಿಗೆ ಗಾಯಗಳಿಗೆ ತೀವ್ರ ಗುಣಕಾರಿ.

ಜಾಂಬಕ್ ಜಗತ್ಪ್ರಸಿದ್ಧ ವಿಷಹಾರೀ ಲೇಪ

ನಿಮಗೆ ಗಾಯವಾದರೆ ಕಡಿತವುಂಟಾದರೆ ವಿಷವು ನಿಮ್ಮ ಚರ್ಮದೊಳಗೆ ಸೇರಿಬಿಡುವುದು. ಅದರಿಂದ ಮುಂದೆ ಅನರ್ಥವಾಗದಂತೆ ಕೂಡಲೇ ಜಾಂಬಕನ್ನು ಅಲ್ಲಿ ಸವರಿರಿ. ಜಾಂಬಕಿನಲ್ಲಿರುವ ಅತ್ಯುತ್ತಮ ವನೌಷಧಿ ರಸವು ಕೂಡಲೇ ಚರ್ಮಕ್ಕೆ ಎಳೆಯಲ್ಪಡುತ್ತದೆ. ಅದರಿಂದ ನೋವು ಕಡಿಮೆಯಾಗುತ್ತದೆ, ಕೀವು ಗುತ್ತದೆ. ವಿಷಮಯ ಕ್ರಿಮಿಗಳು ಜಾಂಬಕಿನಿಂದ ಕೂಡಲೇ ನಾಶವಾಗುತ್ತವೆ.

ಯಾವಾಗಲೂ ಜಾಂಬಕನೇ ಉಪಯೋಗಿಸಿ.

ZAM-BUK

ಪ್ರಾಣಿಕೊಬ್ಬು ವಿರಹಿತವಾದುದು.

ಜಿಲ್ಲಾ ಪರಿಚಯ

ಮಂಗಳೂರು

ಗ್ರಾಮ ಉದ್ಯೋಗಸ್ಥ ಸಂಘ: ಗ್ರಾಮ ಉದ್ಯೋಗಸ್ಥರ ಸಂಕಷ್ಟ ನಿವಾರಣೆಗಾಗಿ ಎಂಬ ಉದ್ದೇಶದಿಂದ ಕಳೆದ ತಾ. ೨೯—೧೨—೪೬ರಿಂದ ಶರವು ಗಣಪತಿ ದೇವಸ್ಥಾನದ ಗೋಪುರದ ವಠಾರದಲ್ಲಿ ಎಡ್ವೋಕೇಟ್ ಶ್ರೀ ಬಾಲಕೃಷ್ಣ ರಾಯರ ಅಧ್ಯಕ್ಷತೆಯಲ್ಲಿ ಜರಗಿದ ಗ್ರಾಮ ಉದ್ಯೋಗಸ್ಥರ ಸಭೆಯಲ್ಲಿ ಸರ್ವಾನುಮತದಿಂದ ಒಂದು ಸಂಘ ಸ್ಥಾಪನೆಯ ಕುರಿತು ನಿರ್ಣಯವಾದಂತೆ ಕರಿಯಂಗಳ ಪಟೇಲ ಶ್ರೀ ಎ. ಜಿ. ಸಿದ್ಧಣ್ಣ ಸೆಟ್ಟರು ಅಧ್ಯಕ್ಷರಾಗಿಯೂ, ಜೆಪ್ಪಿನಮೊಗ್ರು ಪಟೇಲ್ ಶೀನಪ್ಪ ಸೆಟ್ಟರು ಮತ್ತು ಕಸಬಾ ಬಜಾರ್ ಶ್ಯಾನುಭೋಗ ಯಂ. ಕೆ. ವಿಶ್ವನಾಥಯ್ಯನವರು ಜೊತೆ ಕಾರ್ಯದರ್ಶಿಗಳಾಗಿಯೂ ಇರುವ 'ದ. ಕ. ಜಿಲ್ಲಾ ಗ್ರಾಮ ಉದ್ಯೋಗಸ್ಥರ ಸಂಘ'ವೊಂದು ಸ್ಥಾಪಿಸಲ್ಪಟ್ಟಿತು. ಇತರ ಹತ್ತು ಮಹನೀಯರು ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಚುನಾಯಿತರಾಗಿರುವರು. ಈ ಸಂಘದ ಮುಂದಿನ ಸಭೆಯು ಬರುವ ಮಾರ್ಚಿ ತಿಂಗಳ ೩ನೇ ಆದಿತ್ಯವಾರ ಪೂರ್ವಾಹ್ನ ಘಂಟೆ ೧೧ಕ್ಕೆ ಇದೇ ಸ್ಥಳದಲ್ಲಿ ಜರಗಿಸಬೇಕೆಂದೂ ಸದಸ್ಯರೆಲ್ಲರೂ ಹಾಜರಾಗಬೇಕೆಂದೂ ವಿನಂತಿಸಲಾಗಿದೆ.

ಹಿಂದೀ ಪರೀಕ್ಷೆಗಳು: ೧೯೪೭ನೇ ಫೆಬ್ರವರಿ ತಿಂಗಳ ತಾ. ೧೫—೧೬ಕ್ಕೆ ನಡೆಯುವ ಹಿಂದೀ ಪರೀಕ್ಷೆಗಳ ಬಗ್ಗೆ ತಾ. ೭—೧—೪೭ರೊಳಗೆ ವಿದ್ಯಾರ್ಥಿಗಳು ತಮ್ಮ ಅರ್ಜಿಗಳನ್ನು ಪ್ರಚಾರಕರಿಗೆ ತಲುಪಿಸತಕ್ಕದ್ದು. ಅನಂತರ ತಾ. ೧೭—೧—೪೭ರ ವರೆಗೆ ಪ್ರತಿ ಅರ್ಜಿಗೆ ೦—೪—೦ ಯಂತೆ ಹೆಚ್ಚಿಗೆ ಕೊಡಬೇಕು. ಮಂಗಳೂರಲ್ಲಿ ಕೊಂಗ್ರೆಸ್ ಕಚೇರಿಯಲ್ಲಿರುವ ಪ್ರಾದೇಶಿಕ ಸಮಿತಿಯ ಆಫೀಸಿಗೆ ಪ್ರತಿದಿನ ಗಂಟೆ ೧೦ರಿಂದ ೧೨ರೊಳಗೆ ವಿದ್ಯಾರ್ಥಿಗಳು ತಮ್ಮ ಅರ್ಜಿಗಳನ್ನು ಕೊಡಬಹುದು. ಪ್ರಾದೇಶಿಕ ಸಮಿತಿಯ ಕಚೇರಿಯಲ್ಲಿ ಫಾರ್ಮುಗಳು ಸಿಗುವುವು. ಪ್ರಾಥಮಿಕ ಮಧ್ಯಮ ಮತ್ತು ರಾಷ್ಟ್ರ ಭಾಷೆ ಪರೀಕ್ಷೆಗಳಲ್ಲಿ ಪಾರಸಿ ಲಿಪಿಯನ್ನು ಕಲಿಯಬೇಕು. ಇದಕ್ಕಾಗಿ ಅವಾನ್ ಹುರೂಫ್ ಪುಸ್ತಕದ ಮೊದಲಿನ ಐದು ಪಾಠಗಳು ಪಠ್ಯವಿಷಯವೆಂದು ಪ್ರಾದೇಶಿಕ ಸಂಘಟಕ ವಿ. ಆರ್. ನಾವಡರು ತಿಳಿಸುತ್ತಾರೆ.

ಅಧ್ಯಾಪಕ ಸಭೆ: ಜಿಲ್ಲಾ ಎಲಿಮೆಂಟರಿ ಶಾಲಾಧ್ಯಾಪಕರ ಫೆಡರೇಶನಿನ ಕಾರ್ಯಕಾರಿ ಸಭೆ ಸೇರಿ ಸರಕಾರವು ಕೆಳತರಗತಿಯ ನೌಕರರಿಗೆ ಕೊಟ್ಟ ಸವಲತ್ತನ್ನು ತಮಗೆ ಕೊಡದಿರುವುದನ್ನೂ ಉಪಾಧ್ಯಾಯರ ಗೋಳಿನ ಕಡೆಗೆ ಸರಕಾರವು ಕಿವಿ ಕಿವುಡು ಮಾಡುತ್ತಿರುವುದನ್ನೂ ಖಂಡಿಸಿ ಮದ್ರಾಸಿಗೊಂದು ಜಾತಾ ಕಳುಹಲು ನಿರ್ಧರಿಸಿತು. ಮಧುರೆಯಲ್ಲಿ ಜರಗಲಿರುವ ವಿದ್ಯಾ ಪರಿಷತ್ತಿಗೆ ಪ್ರತಿನಿಧಿಗಳನ್ನು ಕಳುಹಲೂ ನಿರ್ಧರಿಸಿತು.

ನಿರ್ಬಂಧ ತಿದ್ದುಪಡಿ: ಟೀಪಾರ್ಟಿ ಮೊದಲಾದ ಸತ್ಕಾರಗಳಿಗೆ ಸಂಬಂಧಿಸಿದ ನಿರ್ಬಂಧದಲ್ಲಿ ತಿದ್ದುಪಡಿ ಮಾಡಲಾಗಿದೆ. ಈ ತಿದ್ದುಪಡಿ ಪ್ರಕಾರ ಪಾನೀಯ ಮಾತ್ರವಲ್ಲದೆ ಹಣ್ಣುಹಂಪಲು ಬಿಸ್ಕೂಟು ಮತ್ತು ಧ್ಯಾನೇತರ ಬೀಜ ಇತ್ಯಾದಿಗಳನ್ನು ಮಾತ್ರ ಬಡಿಸುವ ಸತ್ಕಾರಕೂ ಕೆಲ 80 ಜನರ ಮಿತಿ ಇರಬೇಕೆಂಬ ನಿರ್ಬಂಧವು ಅನ್ವಯಿಸುವುದಿಲ್ಲ.

ಲೀಗ್ ಸಭೆ: ಕಳೆದ ತಿಂಗಳಾಂತ್ಯದ ವಾರದಲ್ಲಿ ಜಿಲ್ಲೆಯ ಹಲವು ಭಾಗಗಳಲ್ಲಿ ಮಿ। ಜಿನ್ನಾರವರ ಜನ್ಮದಿನಾಚರಣೆ ಸಂಬಂಧ ಜಿಲ್ಲೆಯ ಮುಸಲ್ಮಾನರುಗಳ ಸಭೆ ಮೆರವಣಿಗೆಗಳು ಜರಗಿದುವು. ಪಾಸೆಮಂಗಳೂರು: ಪಣಂಬೂರು, ಕಾಸರಗೋಡು, ಉಳ್ಳಾಲ, ಮಂಗಳೂರು ಮೊದಲಾದ ಕಡೆಗಳಲ್ಲಿ ರಾಜಕೀಯ ಸಂಘಟನೆಯ ಕುರಿತು ಭಾಷಣಗಳಾದುವು.

ದುರ್ಮರಣ:—ಇಲ್ಲಿಯ ವೆಂಕಟ್ರಮಣ ದೇವಸ್ಥಾನದ ಚೌಕದ ಬಳಿ ಇರುವ ಒಂದು ಬಾವಿಯಲ್ಲಿ ಮೊನ್ನೆ ಸೋಮವಾರ ಶೇರಿಗಾರ ಜಾತಿಯ ಓರ್ವ ಯುವಕನ ಶವವು ಕಂಡುಬಂದಿತು. ಮೃತನು ಹೊಲಿಗೆ ಉದ್ಯಮದಲ್ಲಿದ್ದು ಆತ್ಮಹತ್ಯದ ಉದ್ದೇಶದಿಂದ ಹೀಗೆ ಮಾಡಿರುವನೆಂದು ಊಹಿಸಲಾಗಿದೆ. ಪೋಲಿಸ್ ಪಂಚನಾಮೆ, ಪೋಸ್ಟ್ ಮೋರ್ಟೆಮ್ ಮೊದಲಾದ ವಿಧಿಗಳು ಯಥಾಪ್ರಕಾರ ನಡೆದವು.

ಬೆಂಕಿಪೆಟ್ಟಿಗೆ:—ಜಿಲ್ಲೆಯಲ್ಲಿ ಬೆಂಕಿಪೆಟ್ಟಿಗೆ ಹಾಹಾಕಾರವೆದ್ದಿದೆ. ಪ್ರತಿ ತಿಂಗಳು ಇವುಗಳ ಸರಬರಾಯಿಯಾಗುತ್ತಿದ್ದರೂ ಪೇಟೆಯ ಯಾವ ಅಂಗಡಿಯಲ್ಲೂ ಇದು ಸಿಗುವುದಿಲ್ಲವೆಂದೂ, ಹಲವು ಕಡೆಗಳಲ್ಲಿ ಏರಿಸಿದ ಬೆಲೆಗೆ ಮಾರಲ್ಪಡುವುದೆಂದೂ, ಸಂಬಂಧಪಟ್ಟ ಅಧಿಕಾರಿಗಳು ಕ್ಲಪ್ತ ಕಾಲದಲ್ಲಿ ಈ ಕುರಿತು ಯೋಗ್ಯ ಧೋರಣೆ ಅನುಸರಿಸಬೇಕೆಂದು ಬಾತ್ಮಿಗಳು ಬಂದಿರುತ್ತವೆ.

ಕ್ರೈಸ್ತ ಶ್ರೇಯೋ ಸಂಘ:—ಕಥೋಲಿಕ್ ವೆಲ್‌ಫರ್ ಸೊಸೈಟಿ ಎಂಬೊಂದು ಸಂಸ್ಥೆಯು ಇತ್ತೀಚೆಗೆ ಮೂಲ್ಕಿಯಲ್ಲಿ ಸ್ಥಾಪಿಸಲ್ಪಟ್ಟು ಮಿ. ವಿ. ಎಂ. ಎಲ್. ಡಿ'ಸೋಜರು ಇದರ ಅಧ್ಯಕ್ಷರಾಗಿಯೂ ಮಿ. ಎಸ್. ವಿ. ಪುಡ್ತಾಡರು ಕಾರ್ಯದರ್ಶಿಯರಾಗಿಯೂ ಚುನಾಯಿಸಲ್ಪಟ್ಟಿರುವರು. ಸ್ವಜಾತಿಯ ಬಡ ಮಕ್ಕಳ ವಿದ್ಯಾಭಿವೃದ್ಧಿ, ಅನಾಥರಿಗೆ ವೈದ್ಯ ಸಹಾಯ ಇವೇ ಮೊದಲಾದ ಸಮಾಜಾಭಿವೃದ್ಧಿಯ ಉದ್ದೇಶಗಳನ್ನು ಇಟ್ಟುಕೊಂಡು ಈ ಸೊಸೈಟಿಯು ಸ್ಥಾಪಿಸಲ್ಪಟ್ಟಿರುತ್ತದೆಂದು ತಿಳಿದುಬರುತ್ತದೆ.

ಪುತ್ತೂರು:—ಬೊಕ್ಕಾಡಿಯ ಪಂಚಾಯತ ಮತ್ತು ಇನ್ನಿತರ ಮಾರ್ಗಗಳು ಬಹಳ ನಾದುರುಸ್ತಿಯಲ್ಲಿವೆ. ವಾಹನಗಳ ಸಂಚಾರಕ್ಕೂ ಅತ್ಯಂತ ಯೋಗ್ಯ ಪರಿಸ್ಥಿತಿಯಲ್ಲಿವೆ. ಈ ವಿಷಯದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಹಳ್ಳಿಯವರ ಸಹಾಯ ಕೇಳಿಯಾದರೂ ದುರುಸ್ತಿ ಮಾಡಿಸಿ ಜನರಿಗೆ ತೊಂದರೆಯಾಗದಂತೆ ಮಾಡಬೇಕೆಂದು ಊರವರೊಬ್ಬರ ಕೇಳಿಕೆ.

ತೆಂಗಿನಕಾಯಿ ನಿಯಂತ್ರಣ:—ಸದ್ಯದಲ್ಲೇ ಮದ್ರಾಸ್ ಸರಕಾರದವರು ಹಸಿ ತೆಂಗಿನಕಾಯಿ ಬೆಲೆಯನ್ನು ನಿಯಂತ್ರಿಸುವರೆಂದೂ, ಈಗ ವಿಪರೀತ ಬೆಲೆಗೆ ಮಾರಲ್ಪಡುವ ಕಾಯಿಗಳ ಬೆಲೆಯನ್ನೂ 2—3 ಆಣೆಯೊಳಗೆ ನಿಲ್ಲಿಸುವರೆಂದೂ ಮಾತ್ರವಲ್ಲ ಅವು ಕಪ್ಪು ಸಂತೆಯನ್ನು ಸೇರದಂತೆ ಬಿಗಿಯಾದ ಧೋರಣೆಯನ್ನು ನಿರ್ವಹಿಸಿ ಮಲಬಾರ್ ಪ್ರದೇಶದಿಂದ ತೆಂಗು ಹೊರಕ್ಕೆ ಹೋಗದಂತೆ ಕಾಯಿದೆ ಮಾಡುವುದರ ಮುಖ್ಯ ಸಾರ್ವಜನಿಕರಿಗೆ ಅದು ಸುಲಭವಾಗಿ ನಿಯಂತ್ರಿತ ಬೆಲೆಗೆ ಸಿಕ್ಕುವಂತೆಯೂ ಏರ್ಪಾಡು ಮಾಡುವರೆಂದು ಒಂದು ಮದ್ರಾಸ್ ಸರಕಾರ ಪ್ರಕಟಣೆ ಘೋಷಿಸಲ್ಪಟ್ಟಿದೆ. ಕೇಂದ್ರ ಸರಕಾರದವರು ಒಣ ಕೊಬ್ಬರಿಯ ಮತ್ತು ಎಣ್ಣೆಯ ಬೆಲೆಗಳನ್ನು ನಿರ್ಬಂಧಿಸದಿರುವುದರಿಂದ ತೆಂಗು ವಿಪರೀತ ಬೆಳೆಯುವ ಮಲಬಾರ್ ಕಡೆಗಳಲ್ಲಿ ಬೆಲೆ 8—12 ಆಣೆ ತನಕ ತಲುಪಿರುವುದೆಂದು ತಿಳಿದುಬರುತ್ತದೆ.

ಅ. ಕ. ತರುಣ ಕಾರ್ಯಕರ್ತರ ಸಭೆ

ಕರ್ನಾಟಕ ಏಕೀಕರಣ:—ಹಿಂದುಸ್ಥಾನದಲ್ಲಿ ಲೋಕಸತ್ತಾತ್ಮಕ ರಾಜ್ಯದ (ರಿಪಬ್ಲಿಕ್) ಶಂಕುಸ್ಥಾಪನೆಯಾಗಿ ಕಟ್ಟಡವು ಪ್ರಾರಂಭವಾಗಿದೆ. ಭಾರತದ ಹೊಸ ರಾಜ್ಯಘಟನೆಯನ್ನು ನಿರ್ಮಿಸಲು ನಮ್ಮ ಮುಂದಾಳುಗಳು ಡಿಸಂಬರ ಒಂಬತ್ತರಿಂದ ದಿಲ್ಲಿಯಲ್ಲಿ ಸೇರಿ ತಮ್ಮ ಕೆಲಸವನ್ನು ಪ್ರಾರಂಭಿಸಿರುವರು. ಇದೇ ಮಹತ್ವದ ಸಮಯದಲ್ಲಿ ನಮ್ಮ ಕೆಲಸ ಯಾವುದೆಂದು ನಿಶ್ಚಯಿಸಿಕೊಂಡು ನಾವೂ ಮುನ್ನೋಟದಿಂದ ಸಾಗಬೇಕಾಗಿದೆ. ಬ್ರಿಟಿಷರು ತಮ್ಮ ಆಡಳಿತೆಯನ್ನು ಬೆಳೆಸುವಾಗ ಕೇವಲ ಆ ಕಾಲದ ಅನುಕೂಲತೆಗಳನ್ನು ಮಾತ್ರ ನೋಡಿಕೊಂಡು ತಾವು ಗೆದ್ದ ಭಾಗಗಳನ್ನು ಕೂಡಿಸುತ್ತ ಹಂಡ ಬಂಡ ಪ್ರಾಂತಗಳನ್ನು ರಚಿಸಿದರು. ಇದರಿಂದ ಕರ್ನಾಟಕಕ್ಕೆ ಬಹಳ ಹಾನಿ ತಟ್ಟಿದೆ. ಕನ್ನಡಿಗರು ವಿಭಾಗಿಸಲ್ಪಟ್ಟರು, ಕನ್ನಡ ಸಂಸ್ಕೃತಿಯು ಹಾಳಾಗತೊಡಗಿತು, ಕರ್ನಾಟಕದ ಏಳಿಗೆಯು ಕುಂಠಿತವಾಯಿತು. ಕನ್ನಡೇತರರ ಪ್ರಾಬಲ್ಯವು ಬೆಳೆದು ಕನ್ನಡಿಗರ ವರ್ಚಸ್ಸು ಕಳೆಗುಂದತೊಡಗಿತು. ಆದರೆ ಈ ಕೋಟಲೆಯ ಸ್ಥಿತಿಯನ್ನು ಹೋಗಲಾಡಿಸುವ ಸುಸಂಧಿಯು ಈಗ ತಾನೇ ಬಂದೊದಗಿದೆ. ಅದರ ಸದುಪಯೋಗವನ್ನು ನಾವ್ ಮಾಡಿಕೊಳ್ಳದಿದ್ದರೆ ನಮ್ಮ ನಾಶವನ್ನು ನಾವೇ ಮಾಡಿಕೊಂಡಂತಾಗುವದು. ಅದಾಗದಂತೆ ಈಗ ನಾವು ಹೊಸ ಕರ್ನಾಟಕ ರಚನೆಗೆ ಉದ್ಯುಕ್ತರಾಗುವ.

ಭಾಷಾನುಗುಣ ಪ್ರಾಂತರಚನೆಯ ಪ್ರಶ್ನೆಯು ದಿಲ್ಲಿಯಲ್ಲಿ ಸೇರಿದ ಘಟನಾ ಸಮಿತಿಯ ಮುಂದೆ ಬಂದಿರುವದು. ಈ ಪ್ರಶ್ನೆಯು ಅತ್ಯಂತ ಮಹತ್ವದ್ದೂ ದೂರ ಪರಿಣಾಮವುಳ್ಳದ್ದೂ ಆಗಿರುವದು. ಇದು ವಿಶೇಷತಃ ಕರ್ನಾಟಕದ ಹಿತಾಹಿತಗಳಿಗೆ ಸಂಬಂಧಪಟ್ಟಿದೆ. ಯಾವುದಾದರೊಂದು ಕುಂಟು ನೆವದಿಂದ ಈ ಪ್ರಶ್ನೆಯನ್ನು ಮುಂದೂಡಬೇಡಿರೆಂದು ನಾವು ಘಟನಾ ಸಮಿತಿಯನ್ನು ಒತ್ತಾಯಪಡಿಸಬೇಕಾಗಿದೆ. ಭಾರತದ ಹೊಸ ರಾಜ್ಯಘಟನೆಯಲ್ಲಿ ಕರ್ನಾಟಕಕ್ಕೆ ಒಂದು ಸ್ವತಂತ್ರ ಪ್ರಾಂತವನ್ನು ಕೂಡಲೇ ಬೇಕು, ಎಂದು ಗಟ್ಟಿಯಾಗಿ ನಾವು ನಿಲ್ಲಬೇಕಾಗಿದೆ. ಕರ್ನಾಟಕ ಏಕೀಕರಣದ ನಮ್ಮ ಬಹುಕಾಲದ ಬೇಡಿಕೆಯನ್ನು ಒಪ್ಪದಿದ್ದರೆ ಹೊಸ ರಾಜ್ಯಘಟನೆಯು ಕನ್ನಡಿಗರಿಗೆ ನಿಷ್ಪ್ರಯೋಜಕವೆಂದೇ ನಾವು ಸಾರಬೇಕಾಗಿದೆ. ನಮ್ಮ ಕಷ್ಟನಷ್ಟಗಳನ್ನು ಬಗೆಹರಿಸದ ರಾಜ್ಯಘಟನೆಯಿಂದ ಪ್ರಯೋಜನವಾದರೂ ಏನು? ಕರ್ನಾಟಕವು "ಅ" ಗುಂಪಿನಲ್ಲಿ ಬರುವದು. ಇದೇ "ಅ" ಗುಂಪನ್ನು ಭಾಷಾನುಗುಣ ತತ್ವದ ಮೇಲೆ ಏಕೆ ಪುನರ್ರಚಿಸಬಾರದು? ಗುಂಪು ಬೇಕಾದರೆ ಮಾಡಿಕೊಳ್ಳಲಿ. ಆದರೆ ಆ ಗುಂಪಿಗೆ ಸೇರಿದ ಪ್ರಾಂತಗಳನ್ನು ಭಾಷೆ ಮತ್ತು ಸಂಸ್ಕೃತಿಗನುಸಾರವಾಗಿ ಈಗ ಹೊಸದಾಗಿ ವ್ಯವಸ್ಥಿತಗೊಳಿಸಬೇಕು. ಎಂಬುದೇ ನಮ್ಮ ಇಗಣದ ಬೇಡಿಕೆ. ಈ ಬೇಡಿಕೆಯ ಸಲುವಾಗಿ ನಾವು ಇನ್ನೂ ಹತ್ತು ವರ್ಷಗಳವರೆಗೆ ಕಾದು ಕೂಡಲಾರೆವು. ಪ್ರೌಢ ಅಥವಾ ಯಾವದೇ ಮತದಾನ ಪದ್ಧತಿ ಬಂದರೂ ಕನ್ನಡಿಗರು ಈಗಿದ್ದ ಪ್ರಾಂತಗಳಲ್ಲಿ ಅಲ್ಪಸಂಖ್ಯಾಕರಾಗಿ ಉಳಿಯುವದು ಖಂಡಿತ. ಆ ಬಳಿಕ ಈಗಿನಂತೆ ಮುಂದೆಯಾದರೂ ಕರ್ನಾಟಕದ ಹಿತವು ಹಿಂದೂಡಲ್ಪಡುವದರಲ್ಲಿ ಸಂದೇಹವಿಲ್ಲ. ಹರಿದು ಹಂಚಿ ಹೋದ ಕರ್ನಾಟಕದ ಪತಿಯೊಂದು ಭಾಗದಲ್ಲಿಯೂ ಕನ್ನಡಿಗರಿಗೆ ತಕ್ಕ ಸ್ಥಾನಮಾನ, ಗೌರವಗಳು ದೊರೆಯಲಾರವು. ಕರ್ನಾಟಕದಲ್ಲಿ ಸಮಾಧಾನಕರವಾದ ಶಿಕ್ಷಣ ಪ್ರಚಾರವಿಲ್ಲ. ವಿವಿಧ ಉಚ್ಚ ಶಿಕ್ಷಣ ಸಂಸ್ಥೆಗಳು ಇರುವದಿಲ್ಲ. ಕರ್ನಾಟಕಕ್ಕೆ ವಿಶ್ವವಿದ್ಯಾಲಯವಿಲ್ಲ. ಜಲಪಾತಗಳಿದ್ದರೂ ಉದ್ಯೋಗಾಭಿವೃದ್ಧಿಗೆ ಅನುವಿಲ್ಲ. ದೊಡ್ಡ ನದಿಗಳಿದ್ದರೂ ತಕ್ಕ ನೀರಾವರಿ ಯೋಜನೆಗಳಿಲ್ಲ. ೩೦೦ ಮೈಲು ಕರಾವಳಿ ಇದ್ದರೂ ಒಂದೂ ಬಂದರವಿಲ್ಲ. ಇಷ್ಟೂ ಅಲ್ಲದೆ ನೆರೆ ಪ್ರಾಂತಗಳಾದ ಆಂಧ್ರ, ತಮಿಳು, ಮಹಾರಾಷ್ಟ್ರಗಳು ತಮ್ಮ ವಿಸ್ತಾರಕ್ಕಾಗಿ, ಸ್ವಾರ್ಥ ಸಾಧನೆಗಾಗಿ, ಕನ್ನಡಿಗರ ಹಿತವನ್ನು ಕಡೆಗಣಿಸುತ್ತ ನಡೆದಿರುವವು. ಒಕ್ಕೂಟದ ಯೋಜನೆಯನ್ನೂ, ಮಹಾರಾಷ್ಟ್ರ ವಿಶ್ವವಿದ್ಯಾಲಯ ಸಮಿತಿಯ ಹೇತುವನ್ನೂ ನೋಡಿದರೆ ಅವು ಕರ್ನಾಟಕವನ್ನೇ ನುಂಗುವಂತಹವಾಗಿವೆ. ಈ ಮೊದಲಾದ ಘೋರ ಅನ್ಯಾಯಗಳನ್ನು ಪ್ರತಿಭಟಿಸಿ ಕರ್ನಾಟಕದ ಸರ್ವತೋಮುಖವಾದ ಉನ್ನತಿಗಾಗಿ ನಾವು ಸತತ ಪ್ರಯತ್ನ ಮಾಡಬೇಕಾಗಿದೆ. ಇದಕ್ಕೆ ಒಂದೇ ಒಂದು ಮುಖ್ಯ ಸಾಧನ— ಕರ್ನಾಟಕ ಏಕೀಕರಣ!

ಸ್ವತಂತ್ರ ಕರ್ನಾಟಕ ಪ್ರಾಂತ ರಚನೆ: ಘಟನಾ ಸಮಿತಿಯವರು ಕನ್ನಡಿಗರಿಗೆ ದಯಪಾಲಿಸುವ ವರವಿದ್ದರೆ ಅದು ಇದೇ. ಒಂದು ರಾಷ್ಟ್ರವು ಮತ್ತೊಂದು ರಾಷ್ಟ್ರವನ್ನು ನುಂಗಲು ಪ್ರಯತ್ನಿಸುವಂತೆ ಒಂದು ಪ್ರಾಂತವು ಮತ್ತೊಂದು ಪ್ರಾಂತವನ್ನು ನುಂಗಲು ಪ್ರಯತ್ನಿಸಿದರೆ ಆಶ್ಚರ್ಯವೇನು? ಆದರೆ ನೆರೆಯ ಪ್ರಾಂತಗಳು ತಮ್ಮ ಶ್ರೇಯಸ್ಸಿಗೆ ಹೋಗುತ್ತಿರುವಾಗ, ನಮ್ಮ ಮೇಲೆ ಆಕ್ರಮಣವನ್ನೂ ದಬ್ಬಾಳಿಕೆಯನ್ನೂ ಸಾಗಿಸಲು ಹವಣಿಸುತ್ತಿರುವಾಗ, ಕನ್ನಡಿಗರು ಸುಮ್ಮನೇ ಕೂಡ್ರುವುದು ಹೇಡಿತನವು. ಹೊಸ ರಾಜ್ಯಘಟನೆಯ ನಿರ್ಮಾಣದ ಈ ಸಂಧಿ ಕಾಲದಲ್ಲಿ ನಮ್ಮ ಅಲಕ್ಷ್ಯವನ್ನು ಬೀಸಾಡಿ ಸಮಯೋಚಿತ ಕೆಲಸಕ್ಕೆ ಅಣಿಯಾಗಬೇಕೆಂಬ ಉದ್ದೇಶದಿಂದಲೇ ಈ ಕಾರ್ಯಕರ್ತರ ಮಹಾಸಭೆಯನ್ನು ಕರೆಯಲಾಗಿದೆ.

ಪತ್ರಿಕೆ ವಿಮರ್ಶೆ

ಮದ್ಯಪಾನ ನಿರೋಧಕ: ಈ ಸಚಿತ್ರ ಮಾಸಪತ್ರಿಕೆಯ ವಿಶೇಷ ಸಂಚಿಕೆಯನ್ನು ಸಂತೋಷದಿಂದ ಸ್ವೀಕರಿಸಿದ್ದೇವೆ. ನಿಜಾಮರ ಹೈದರಾಬಾದಿನ ಮದ್ಯಪಾನ ನಿರೋಧಕ ಕೇಂದ್ರ ಸಂಘದ ಕಡೆಯಿಂದ ಹೊರಡಿಸಲ್ಪಡುವ ಈ ಮಾಸಿಕವು ಈಗಾಗಲೇ ೮ ಸಂಪುಟಗಳನ್ನು ಮುಗಿಸಿ ಮುಂದರಿದಿದೆ. ಈ ವಿಶೇಷ ಸಂಚಿಕೆಯು ಮಾತ್ರ ಪ್ರಥಮ ಬಾರಿಗೆ ನಮ್ಮ ಬಳಿ ಬಂದಿರುವುದರಿಂದ ಈ ಬಂಧು ಪತ್ರಿಕೆಯ ಹಿಂದಿನ ಚಟುವಟಿಕೆಗಳನ್ನು ಅಭ್ಯಾಸಿಸಲು ನಮಗಾಸ್ಪದ ಸಿಗಲಿಲ್ಲವಾದರೂ ಸಿಹಿ ನೋಡಲು ಸ್ವಲ್ಪವೇ ಸಾಕೆಂಬಂತೆ ವಿಶೇಷ ಸಂಚಿಕೆಯಲ್ಲಿ ನಿರೂಪಗೊಟ್ಟ ಪ್ರಬಂಧ, ಕವಿತೆ, ಕತೆ ಮತ್ತಿತರ-ವಿಷಯಕವಾದ ಸಂದೇಶಗಳು ಸಂಘದ ಆಪ್ತ ಉದ್ದೇಶವನ್ನು ಸಾಧಿಸಲು ಪತ್ರಿಕೆಯು ಪ್ರಭಾವಶಾಲಿ ಮಾಧ್ಯಮವಾಗಿ ಕಾರ್ಯ ನಿರ್ವಹಿಸಿಬೆಂಬುದು ನಿಸ್ಸಂದೇಹ. ಘನಪ್ರಭು ನಿಜಾಮರಿಂದ ಸ್ಫೂರ್ತಿ ಹೊಂದಿ ಸಂಸ್ಥಾನದ ಪ್ರಮುಖ ಮಹನೀಯರ ನಿರ್ದೇಶಕತ್ವದಲ್ಲಿ 'ಮದ್ಯಪಾನ ನಿರೋಧಕ'ವು ವಿಶೇಷವಾಗಿ ಹೈದರಾಬಾದಿನ ಪ್ರಜೆಗಳ ಮತ್ತು ಸರ್ವಸಾಮಾನ್ಯವಾಗಿ ಕನ್ನಡಿಗರೆಲ್ಲರ ಪರವಾಗಿ ಇದು ತನಕ ನಮ್ಮ ಸಮಾಜ ಶರೀರವನ್ನು ಕೊರೆಯುತ್ತಿದ್ದ ಸುರೆಯ ಪೈಶಾಚಿಕ ಚಟವನ್ನು ನಿರ್ಮೂಲಗೊಳಿಸಲು ಸೇವೆ ಸಲ್ಲಿಸುವುದೆಂಬ ಸಂಗತಿಯು ಶ್ಲಾಘನೀಯ. ಈಗ ಪ್ರಜಾ ಪ್ರತಿನಿಧಿಗಳು ದೇಶದ ಎಲ್ಲಾ ಪ್ರಾಂತ್ಯ, ಸಂಸ್ಥಾನಗಳಲ್ಲೂ ಆಡಳಿತ ಸೂತ್ರಗಳನ್ನು ವಹಿಸಿ ದಾಸ್ಯದ ಮತ್ತು ವಿದೇಶಿ ಆಡಳಿತಗಾರರ ಅಸಂಸ್ಕೃತ ಧೋರಣೆಯ ದುಷ್ಪರಿಣಾಮಗಳನ್ನು ಒಂದೊಂದಾಗಿ ತೊಡೆದು ಹಾಕಲು ಪ್ರಯತ್ನ ನಡೆಸುತ್ತಿರುವಾಗ ಇಂತಹ ಪತ್ರಿಕೆಗಳಿಂದ ಸಾರ್ವಜನಿಕ ಪ್ರಚಾರದ ಮಹತ್ವದ ಉಪಯುಕ್ತತೆ ಇದೆ.

—'ಸಾಥ'

ನೋಟೀಸು

ಮಂಗಳೂರು ಶ್ಯಾಹಾರ ಬೊಕ್ಕಪಟ್ಣದಲ್ಲಿರುವ ಬಬ್ಬು ಗುರಿಕಾರನ ಅಳಿಯ ವ ಕಂಪು ಹೆಂಗಸಿನ ಮಗ ಬ್ಯರೆ ಕುಂದರನು ಈ ಮೂಲ್ಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ —

ಈ ಕೆಳಗೆ ವಿವರಿಸಿದ ಆಸ್ತಿಗೆ ನಾನು ಮತ್ತು ಇತರ 3 ಜನ ನನ್ನ ಸಹೋದರಿಯರು ಕೂಡಾ ಹಕ್ಕುದಾರರಾಗಿರುತ್ತೇವೆ. ಸದ್ರಿ ಆಸ್ತಿಯನ್ನು ಇನ್ನೊಂದು ಕವರಿನ ಮೊಂಜರರಾದ ಲ್ಯಕು ಗುರಿಕಾರ 1 ನಚ್ಚಂಮ 1 ದೇಯಿ 1 ಕೂಡಾ 3 ಜನರು ನಮಗೆ ಮೋಸ ಕೊಡುವ ಇರಾದೆಯಿಂದ ಬೇರೆಯವರಿಗೆ ಅಡವು ವಗೈರೆ ಪರಾಧೀನ ಮಾಡುವರೆ ಉದ್ಯುಕ್ತರಾಗಿರುವರಾಗಿ ನಾನು ಕೇಳಿ ತಿಳಿಯುತ್ತೇನೆ. ಹೀಗೆ ಈ 3 ಜನರು ಮಾತ್ರ ಸೇರಿ ಪರಾಧೀನ ಮಾಡಿದಲ್ಲಿ ಅದು ಸಿಂಧಾಗತಕ್ಕದಲ್ಲ. ಮತ್ತ ಅಂಥಾ ಪರಾಧೀನಗಳು ನಮಗೆ 4 ಜನರ ಹಕ್ಕಿಗೆ ವ ನಮ್ಮ ಕುಟುಂಬಕ್ಕೆ ಕೂಡಾ ಬಾಧಿಸತಕ್ಕದಲ್ಲಾ ಹೊರತು ಸದ್ರಿಯವರು ಪಡಿಯತಕ್ಕ ಹಣಗಳಿಗೆ ಅವರವರೇ ಸ್ವತಹಾ ಜವಾಬ್ದಾರಿ ಹೊರತು ಸದ್ರಿ ಆಸ್ತಿಯಾಗಲಿ ಅವುಗಳ ಹುಟ್ಟುವಳಿಯಾಗಲಿ ಎಷ್ಟು ಮಾತ್ರಕ್ಕೂ ಜವಾಬ್ದಾರಿಯಾಗತಕ್ಕದಲ್ಲ ಎಂತ ಸಹಾ ಈ ಮೂಲಕ ಸರ್ವ ಜನರಿಗೆ ತಿಳಿಸಿರುತ್ತೇನೆ.

ಆಸ್ತಿ ವಿವರ

ಮಂಗಳೂರು ಶ್ಯಾಹಾರ ಬೊಕ್ಕಪಟ್ಣದಲ್ಲಿರುವ TS ೩—1006 ಆನೆ ಮನೆ ಇದಕ್ಕೆ ತಾಗಿಕುವ ಇತರ ಮನೆಗಳು ಅಂಗಡಿ ಕಟ್ಟೋಣಗಳು ಇದ್ದರೆ ಇದರ ಉಪಕಟ್ಟಡಗಳು ಮರಮಟ್ಟುಗಳು ವಗೈರೆ ಸರ್ವಾದಿ. ಇದರ ಗಡಿಗಳು ಪೂರ್ವ ಕೊರಗ ಗುರಿಕಾರನ ಹಿತ್ಲು ಪಶ್ಚಿಮ ಮಾರ್ಗ ಬಡಗು ಕುದ್ರ ಗುರಿಕಾರನ ಹಿತ್ಲು ತೆಂಕು ರಾಜಮಾರ್ಗ ಈ ಮಧ್ಯೆ ಇರುವ ಸರ್ವಾದಿ ಆಸ್ತಿಯಾಗಿರುತ್ತದೆ.

ಮಂಗಳೂರು, 24-12-46.	111 ಈ ಮೂರು ಗೆರೆ ಮತ್ತು ಎಡ ಕೈ ಹೆಬ್ಬೆಟ್ಟಿನ ಗುರ್ತು ಬ್ಯರೆ ಕುಂದರನ ರುಜು

ಮದ್ರಾಸ್ ಸರಕಾರದ ವಸ್ತ್ರ ಧೋರಣೆ

ನೂಲುವುದರಿಂದ ಕುಟುಂಬದ ಆದಾಯ ಹೆಚ್ಚುವುದು.

"ನೂಲುವ ಅಥವಾ ನೇಯುವ ಗಿರಣಿಗಳನ್ನು ಹೊಸದಾಗಿ ಇನ್ನು ಈ ಪ್ರಾಂತ್ಯದಲ್ಲಿ ಸ್ಥಾಪಿಸಲ್ಪಡಲು ಬಿಡುವ ಹಾಗಿಲ್ಲ" ಎಂದು ಮದ್ರಾಸ್ ಪ್ರಧಾನರಾದ ಪ್ರಕಾಶಂ ಅವರು ಹೇಳಿದಾಗ ತಮ್ಮ ಸರಕಾರದ ವಸ್ತ್ರ ಧೋರಣೆಯ ಮೂಲೋದ್ದೇಶವನ್ನು ನಿರೂಪಿಸಿದರು.

ಪಾಶ್ಚಾತ್ಯ ಆಕ್ರಮಣದೊಂದಿಗೆ ಅವರ ವ್ಯಾಪಾರೀ ಸುಲಿಗೆಯ ಸಂಸ್ಕೃತಿಯೂ ಇಲ್ಲಿ ಪ್ರಚಾರ ಹೊಂದುತ್ತ ಬಂತು. ಯಾಂತ್ರೀಕರಣವು 'ಲಾಭ' ಗಳಿಸುವ ಸುಲಭ ಸಾಧನ. ಕೆಲವೇ ಮಂದಿಗಳಿಗೆ ಯಥೇಷ್ಟ ಸಿರಿ ಸಂಪತ್ತು ಸುಲಭವಾಗಿ ಕೈವಶವಾಗುವುದು. ಆದರೆ ನಿರುದ್ಯೋಗವು ಜನತೆಯನ್ನು ದರಿದ್ರರನ್ನಾಗಿಯೂ ನಿರ್ಬಲರನ್ನಾಗಿಯೂ ಮಾಡುವುದು. ಒಂದು ಜನಾಂಗವನ್ನು ದಾಸ್ಯದಲ್ಲಿರಿಸಲು ಇದರಷ್ಟು ಸಿರಾಯಾಸವಾದ ಸಾಧನ ಬೇರೊಂದಿಲ್ಲ. ದಾಸ್ಯದಲ್ಲಿ ಮುಳುಗಿದ ದೇಶದ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಜೀವನವು ಮಣ್ಣುಪಾಲಾಗುವುದು.

ಈ ಪಾಶ್ಚಾತ್ಯ ಯಂತ್ರ ಪಿಶಾಚಿಯ ಪವಡೆಯೊಳಗೆ ಮರಣಾಂತಿಕ ನರಳುವಿಕೆಗೆ ಸಿಲುಕಿದ್ದ ದೀನ ಜನತೆಯನ್ನು ವಿಮೋಚನೆಗೊಳಿಸುವುದಕ್ಕೆ ಅತ್ಯಂತ ಸರಳವಾದ ಮಾರ್ಗವೆಂದರೆ ಪ್ರತಿಯೊಬ್ಬ ವ್ಯಕ್ತಿಯನ್ನು ಯಾವುದಾದರೊಂದು ಕೈಗಾರಿಕೆಯಲ್ಲಿ ತರಬೇತು ಮಾಡಿ ಅವನನ್ನು ಆರ್ಥಿಕವಾಗಿ ಸ್ವಾವಲಂಬಿಯನ್ನಾಗಿ ಮಾಡುವುದು. ಅದರಲ್ಲಿಯೂ ಮಾನವನ ಮೂಲ ಆವಶ್ಯಕತೆಗಳಲ್ಲೊಂದಾದ ಬಟ್ಟೆಯ ಹುಟ್ಟಿಗಾದರೂ ಆಲಸ್ಯದಲ್ಲಿ ಕಾಲಹರಣ ಮಾಡುವ ಅಪಾರ ಮತ್ತು ಅಮೂಲ್ಯವಾದ ತಮ್ಮ ಸಮಯವನ್ನು ಸದುಪಯೋಗಗೊಳಿಸುವಂತಾದರೆ ಅನಾನುಕೂಲತೆಗಳಿಗಿಂತಲೂ ಅನುಕೂಲತೆಗಳೇ ಹೆಚ್ಚು.

ನಮ್ಮ ದೇಶದ ಯಾವ ವರ್ಗದ ಸಮಾಜ ಪರಿಸ್ಥಿತಿಯನ್ನು ಪರಿಶೀಲಿಸುವಾಗಲಾದರೂ ಅದರಲ್ಲಿನ ಹಿರಿಯ ಕಿರಿಯ, ಅಬಾಲವೃದ್ಧ ಮತ್ತು ಸ್ತ್ರೀಪುರುಷರೇ ಇತ್ಯಾದಿ ಪ್ರತಿಯೊಬ್ಬ ವ್ಯಕ್ತಿಯು ತನ್ನ ದಿನಚರಿಯ ವೇಳೆಯ ಹೆಚ್ಚಿನ ಕಾಲಮಾನವನ್ನು ನಿಷ್ಪ್ರಯೋಜಕವಾಗಿ ಕಳೆಯುತ್ತಿರುವ ವಿಸ್ಮಯಕರ ಸಂಗತಿಯು ಗಮನಕ್ಕೆ ಬರುತ್ತದೆ.

ತಮ್ಮ ಶಾಶ್ವತ ಉದ್ಯೋಗ ವ್ಯವಹಾರದ ನಂತರ ಮಜೂರ ಮತ್ತು ಕಛೇರಿ ಕೆಲಸದ ಕಾರಕೂನ ವರ್ಗದವರೂ, ಗೃಹಕೃತ್ಯಗಳ ನಂತರ ಬಡ ಮತ್ತು ಮಧ್ಯಮ ವರ್ಗದ ಸ್ತ್ರೀಯರೂ, ಕಲಿಕದ ವೇಳೆ ನಂತರ ಮತ್ತು ರಜಾದಿನಗಳಲ್ಲಿ ವಿದ್ಯಾರ್ಥಿಗಳೂ, ಬಿಡು ಸಿಕ್ಕದಾಗಲೆಲ್ಲಾ ಸಮಯದಲ್ಲಿ ಸಿರಿವಂತರೂ ನೂಲುವ ಪರಿಶ್ರಮವನ್ನು ಇಟ್ಟುಕೊಂಡರೆ ಒಂದು ವರ್ಷದಲ್ಲಿ ತಮ್ಮ ತಮ್ಮ ಉಪಯೋಗಕ್ಕೆ ಬೇಕಾಗುವ ಬಟ್ಟೆಗೆ ತಕ್ಕಷ್ಟು ದಾರವನ್ನು ಉಂಟುಮಾಡಬಹುದು. ಇದರಿಂದ ಸಾಮಾನ್ಯವಾಗಿ ವರ್ಷಕ್ಕೆ 50 ರೂಪಾಯಿ ಮಿಲ್ಲು ಬಟ್ಟೆಗಳಿಗೆ ವ್ಯಯಿಸುವವನೊಬ್ಬನಿಗೆ ಅಷ್ಟೇ ಬಟ್ಟೆ ತನ್ನ ಸ್ವಂತ ಪರಿಶ್ರಮದಿಂದ ಇದರ ನಾಲ್ಕನೇ ಒಂದಂಶದಷ್ಟು ಖರ್ಚಿನಲ್ಲಿ ಒದಗುವುದು. ಪ್ರತಿಯೊಬ್ಬ ವ್ಯಕ್ತಿಯ ಖರ್ಚಿನಲ್ಲುಂಟಾಗುವ ಈ ಮಹತ್ವದ ಉಳಿತಾಯದ ಲೆಕ್ಕದಂತೆ ಒಂದು ಸಣ್ಣ ಕುಟುಂಬದ ಒಟ್ಟು ಉಳಿತಾಯವನ್ನು ಮೊತ್ತ ಮಾಡಿದರೆ ಕೌತುಕಗೊಳಿಸುವಷ್ಟು ಮೊಬಲಗು ಸಂಸಾರ ಪೋಷಣೆಯ ಇತರ ಆರೋಗ್ಯ ಸೌಕರ್ಯಗಳನ್ನು ಹೆಚ್ಚಿಸಲು ಯಥೇಷ್ಟವಾಗಿ ಪಡೆಯಲು ಅದೆಷ್ಟು ಸಹಾಯಕವಾಗಬಹುದೆಂಬ ಸಂಗತಿಯು ಸ್ಪಷ್ಟವಾಗುವುದು.

ಆಕ್ಷೇಪಗಳು

ಮದ್ರಾಸ್ ಸರಕಾರದ ಈ ಜನೋಪಕಾರಿ ಧೋರಣೆಯು ಪ್ರಾಂತ್ಯಾಭಿವೃದ್ಧಿಗೆ ಅತ್ಯಂತ ಹಾನಿಕರವೆಂದು ಅನೇಕರು ಆಕ್ಷೇಪಗಳನ್ನೆತ್ತಿರುವ ವಿಷಯ ಸರಿಯಾಗಿ ಪರ್ಯಾಲೋಚಿಸಿದರೆ ಈ ಆಕ್ಷೇಪದ ಹಾಹಾಕಾರವು ಅತ್ಯಲ್ಪ ಸಂಖ್ಯಾಕರಾದ ಬೆರಳೆಣಿಕೆಯ ಬಂಡವಾಳಶಾಹಿ ವರ್ಗದಿಂದಲೇ ಎದ್ದಿರುವ ಸಹಜವಾದ ಸಂಗತಿಯು ಖಚಿತವಾಗುವುದು. ಸ್ವಾರ್ಥಹಿತ ಸಾಧನೆಯ ಭೀಕರ ರೂಪ ಮರೆಸಲು ರಾಷ್ಟ್ರೀಯತೆಯ ಸೌಮ್ಯ ಸೋಗಿನ ತೆಳು ಕವಚ ಧರಿಸಿದ ಎಲ್ಲಾ ಸಣ್ಣ ಪುಟ್ಟ ವಸ್ತ್ರ ಉದ್ಯಮದವರು ತಮ್ಮ ಆಪ್ತ ಹಾರೈಕೆಗಳಿಗೆ ತಗಲುವ ಕಿಂಚಿತ್ ಧಕ್ಕೆಯಿಂದ ಕಂಗೆಡುವಂತಾಗುವುದು ನಮ್ಮ ಜನಾಂಗ ಜೀವನದ ಇಂದಿನ ಸಾಮಾನ್ಯ ಲಕ್ಷಣವಾಗಿದೆ.

ಆದರೆ ಖಾದಿ ಪ್ರಚಾರದಂತಹ ಬಹು ಜನೋಪಕಾರಿ ಧೋರಣೆಯಂತಹ ವಿಷಯವನ್ನು ದೃಷ್ಟಿಸುವಾಗ ಸಾಮಾನ್ಯ ಜನತೆಯ ಹಿತವೇ ಪ್ರಥಮ ಸಮಾಲೋಚನೆಯ ಮುದ್ದೆಯಾಗಿ ಅವಲೋಕಿಸಬೇಕು. ಮರದ ಒಳಿತಿಗಾಗಿ ಅದನ್ನು ಸುತ್ತಿರುವ ಬಳ್ಳಿಯನ್ನು ಕಿತ್ತೊಗೆದರೆ ಹೆಚ್ಚು ದುಃಖವಿಲ್ಲ—ಮರದ ಬಾಳ್ವೆಯೇ ಮುಖ್ಯ. ಅಂತೇ ಜನಸಾಮಾನ್ಯರ ಹಿತವೇ ಪ್ರಧಾನ ಗುರಿ.

ಇನ್ನು ಒತ್ತಾಯದ ಖಾದಿ ಧೋರಣೆಯು ಪ್ರಜಾಪ್ರಭುತ್ವ ತತ್ವಕ್ಕೆ ಕೊಡಲಿ ಹಾಕಿದಂತೆಂದು ಹೇಳುವವರಿದ್ದಾರೆ. ಸುಖಕ್ಕಾಗಿ ಜೀವಿಸುವವರ ವಿಷಯವಾಗಿ ಈ ಪ್ರಶ್ನೆಯು ಉದ್ಭವವಾಗುತ್ತದೆ. ಅನುಕೂಲಸ್ಥರು ತಮ್ಮ ಮೃದು ದೇಹಕ್ಕೆ ಅತ್ಯಂತ ಲಘು ಮತ್ತು ನುಣುಪಾದ ವಸನಗಳೇ ಬೇಕೆಂದು ದೊರಗಾದ ಈ ಧೋತರವನ್ನು ತಿರಸ್ಕರಿಸಿದರೆ ಅಂಥವರ ಕುರಿತು ಯಾವ ಏರ್ಪಾಟು ಮಾಡಬಹುದು? ಪ್ರತಿಯೊಬ್ಬರಿಗೆ ಸ್ವಂತ ಇಚ್ಛೆ ಪ್ರಕಾರ ನಡಕೊಳ್ಳಲು ಪ್ರಕಾಶಂ ಅವರ ಈ ಹೊಸ ಧೋರಣೆಯಲ್ಲಿ ಆಸ್ಪದವಿದೆಯೇ? ಎಂಬಿತ್ಯಾದಿ ತರಕಾರಿ ಪ್ರಶ್ನೆಗಳು ತಲೆಯೆತ್ತುವುದೂ ಸಹಜ.

ಅನುಕೂಲಸ್ಥರಿಗಾಗಿ ಸರಕಾರವು ಈಗ ಇರುವ ಮಿಲ್ಲುಗಳಲ್ಲಿನ ಬಟ್ಟೆಯನ್ನು ಒದಗಿಸುವುದು. ಅಲ್ಲದೆ ನೂಲುವ ಮತ್ತು ನೇಯಿಗೆ ಕೈಗಾರಿಕೆಗಳು ಸರಕಾರದ ಪ್ರೋತ್ಸಾಹದಿಂದ ಯೋಗ್ಯ ರೀತಿಯಲ್ಲಿ ಅಭಿವೃದ್ಧಿ ಹೊಂದಿತೆಂದರೆ ಅಲ್ಪ ಅವಧಿಯಲ್ಲಿ ಹಿಂದಿನ ಢಾಕ್ಕಾ ಮಸ್ಲಿನ್ ಮಾದರಿಯ ಬಟ್ಟೆಗಳೂ ಇಲ್ಲಿ ತಯಾರಿಸಲು ಶಕ್ಯವಿದೆ. ಮಾತ್ರವಲ್ಲ ಸಿಲ್ಕು ಬಟ್ಟೆಗಳು ಹೊರ ದೇಶಗಳಿಂದ ತರಿಸಲಾಗುವುದು. ಅತಿ ಶ್ರೀಮಂತರಿಗಾಗಿ ಸ್ಪೆಶಲ್ ಪರ್ಮಿಟ್ಟಿನ ಮೂಲಕ ವಿಶೇಷ ಶ್ರೇಷ್ಠತೆಯ ಬಟ್ಟೆಬರೆಗಳನ್ನು ತರಿಸಬಹುದು.

ಒಟ್ಟಿನಲ್ಲಿ ಸರಕಾರವು ತನ್ನೀ ಧೋರಣೆಯನ್ನು ಅತ್ಯಂತ ಹುರುಪಿನಿಂದ ಮುಂದೊತ್ತಲು ಮನಸ್ಸು ಮಾಡಿದರೆ ಪ್ರಾಂತ್ಯದ ಹೆಚ್ಚಿನ ಜನತೆಯೆಲ್ಲ ತಮ್ಮೆದುರು ಬಂದಿರುವ ಈ ಹೊಸ ಸಂದರ್ಭದ ಸದುಪಯೋಗವನ್ನು ಮಾಡಿ ಮಿಲ್ಲು ಬಟ್ಟೆಗೆ ಸರಿಸಮಾನವಾದ ಪೋಷಾಕು ವಸ್ತ್ರಗಳನ್ನು ಸಿದ್ಧಗೊಳಿಸುವಷ್ಟು ಉನ್ನತ ಮಟ್ಟದ ಕುಶಲತೆಗೆ ತಲಪುವುದರಲ್ಲಿ ಸಂದೇಹವಿಲ್ಲ. ಇದರ ಜೊತೆಗೆ ಸಂಸಾರ ಪೋಷಣೆಗೆ ಈ ಉಪ ಉದ್ಯಮದಿಂದಾಗುವ ಆರ್ಥಿಕ ಲಾಭದ ರುಚಿಯು ಒಮ್ಮೆ ಸಾಲಕ್ಕೆ ಜನತೆಯ ಆಕರ್ಷಣವನ್ನು ಸೆರಗುಮಾಡಿತೆಂದರೆ ನಾವು ಕೇಳುತ್ತಿರುವ ಆಕ್ಷೇಪಗಳೆಲ್ಲ ಹಳೇ ಹಾಡುಗಳಾಗಿ ತೋರದಿರವು.

ಜನರ ತಮ್ಮ ಕೈಯಲ್ಲಿ ಉಳಿತಾಯವಾಗುವ ಹಣದಿಂದ ಇಂದು ಪಡೆಯಲು ಅನುಕೂಲವಿಲ್ಲವೆಂದಿರುವ ಅನೇಕ ಆರೋಗ್ಯ ಸಾಧಕವಾದ ಸೌಕರ್ಯಗಳನ್ನು ಪಡೆಯಲು ಅದೆಷ್ಟು ಸಲಿಸಾಗುವುದೆಂದು ಆಶ್ಚರ್ಯಪಡದಿರರು. ಪಾನನಿರೋಧ, ಅಸ್ಪೃಶ್ಯೋದ್ಧಾರ, ಕೈಗಾರಿಕೆ ರಾಷ್ಟ್ರೀಕರಣ ಮುಂತಾದ ಅಗಾಧ ಯೋಜನೆಗಳನ್ನು ಕೈಕೊಂಡಾಗಲೂ ಪ್ರಾರಂಭದಲ್ಲಿ ಎತ್ತಿದ್ದ ಹಲವು ಆಕ್ಷೇಪಗಳು ಅಂತ್ಯದಲ್ಲಿ ಹಾಸ್ಯಾಸ್ಪದವೆನಿಸಿದೆ.

ಸಿಹಿಸುದ್ದಿ ಸಂಗ್ರಹ

ಪ್ರಕೃತಿಯ ಮಜೂರ ಸಂಘ: ಮಾನವ ವರ್ಗದ ಬಹುಸಂಖ್ಯಾಕ ಜನತೆಯು ಉದರ ಪೋಷಣೆಗಾಗಿ ಹಿಂದಿನಿಂದ ಅನುಸರಿಸಿದ ಅನೇಕ ಉದ್ಯಮಗಳನ್ನು ಸೃಷ್ಟಿಯ ಆದಿಯಿಂದೆಂಬಂತೆ ಅನೇಕ ಜೀವಿಗಳು ನಿರ್ವಹಿಸುತ್ತ ಬಂದಿರುವ ಸಂಗತಿಯು, ವಿಚಿತ್ರವಾದರೂ ತಾರ್ಕಿಕವೆನಿಸುತ್ತದೆ.

ಜಾನುವಾರು ಸಾಕಣೆ: ಮನುಷ್ಯರು ಹಾಲು ಬೆಣ್ಣೆ ಮತ್ತಿತರ ಉಪಯುಕ್ತ ವಸ್ತುಗಳಿಗಾಗಿ ಜಾನುವಾರುಗಳನ್ನೂ ಕುರಿ ಮಂದೆಗಳನ್ನೂ ಸಾಕುವಂತೆ ಇರುವೆಗಳು ಎಫಿಡ್ ಎಂಬ ಕೀಟಗಳನ್ನು ತಮ್ಮ ಹುತ್ತಗಳಲ್ಲಿ ಸಾಕುತ್ತವೆ. ಈ ಕೀಟಗಳು ಹಳೇ ಮರ ಪೊಟರೆಯಲ್ಲಿ ಜೀವಿಸುತ್ತವೆ. ಇರುವೆ ಸೈನ್ಯಗಳು ಇವುಗಳ ಮೇಲೆ ದಾಳಿ ಮಾಡಿ ಈ ಚಿಕ್ಕ ಬಿಳಿ ಹುಳಗಳನ್ನು ವಶಪಡಿಸುತ್ತವೆ. ಇವುಗಳ ದೇಹದಲ್ಲಿ ಒಂದು ತರದ ಸಿಹಿಯಾದ ರಸವು ಉತ್ಪನ್ನವಾಗುತಿದ್ದು ಇರುವೆಗಳು ಅದನ್ನು ಪೋಷಕ ಆಹಾರವಾಗಿ ಸೇವಿಸುತ್ತವೆ.

ವ್ಯಾಪಾರಿ: ಕೆಲಿಫೋರ್ನಿಯದಲ್ಲಿ ಒಂದು ಜಾತಿಯ ಹೆಗ್ಗಣವಿದೆ. ಇದು ಹೆಚ್ಚಾಗಿ ಬೆಳ್ಳಿ, ಬಂಗಾರ, ತಾಮ್ರದ ಅದಿರುಗಳಿರುವ ನೆಲದಲ್ಲಿಯೇ ಬಿಲವನ್ನು ತೋಡಿ ವಾಸಿಸುತ್ತವೆ. ತಮ್ಮ ಆಹಾರಕ್ಕಾಗಿ ನೆರೆಕರೆಯ ಮನೆ ಗುಡಿಸಲುಗಳನ್ನು ನುಗ್ಗುವಾಗ ಇದರ ಬಾಯಿಯಲ್ಲಿ ಅಮೂಲ್ಯ ಲೋಹಗಳ ಸಣ್ಣ ಸಣ್ಣ ಬಿಂದುಗಳಿರುತ್ತವೆ. ಆಹಾರ ವಸ್ತುಗಳನ್ನು ಒಯ್ಯುವಾಗ ಈ ಚೂರುಗಳನ್ನು ಆ ಸ್ಥಳದಲ್ಲಿ ಬಿಡುತ್ತವೆ. ಕೆಲವು ಸಲ ಅದರ ಹೊಟ್ಟೆಯಿಂದ ಹಿಕ್ಕೆಯ ಮೂಲಕ ಅದು ಸುರಿಯುವುದೂ ಉಂಟು.

ನೇಕಾರ: ಎಂಬ್ರಿವೋರ್ ಓರಿಯೋಲ್ ಎಂಬ ಪಕ್ಷಿಯು ಪ್ರಕೃತಿಯ ತಜ್ಞ ನೇಕಾರನೆಂದೆನಿಸುತ್ತದೆ. ಒಂದು ಕೊಂಬೆಗೆ ಮೊದಲು ನೇರವಾಗಿ ಹಗ್ಗಗಳನ್ನು ದಾರಗಳನ್ನು ತೂಗಬಿಡುತ್ತದೆ. ಮತ್ತೆ ಬೇರೆ ನಾರುಗಳನ್ನು, ಕುದುರೆ ಬಾಲದ ರೋಮಗಳನ್ನು ಅಡ್ಡಡ್ಡವಾಗಿ ಸರಿಯಾಗಿ ಬಟ್ಟೆ ನೇಯುವಂತೆಯೇ ಜೋಡಿಸುತ್ತದೆ. ಆಗ ಒಂದು ಅತೀ ಪಟ್ಟಿಯೂ, ಬಿಗಿಯೂ ಆದ ಬಟ್ಟೆ ಸಿದ್ಧವಾಗುತ್ತದೆ. ಅದನ್ನೇ ಗೂಡಾಗಿ ಉಪಯೋಗಿಸಿಕೊಳ್ಳುತ್ತದೆ.

ಕುಂಬಾರ: ಕುಂಬಾರ ಹುಳುವನ್ನು ಸರ್ವಸಾಧಾರಣ ಎಲ್ಲರೂ ನೋಡಿರಬಹುದು. ಇದು ಗೋಡೆಯಲ್ಲಿ ಇಲ್ಲವೆ ಮರದಲ್ಲಿ ತೂತನ್ನು ಕೊರೆದು ಹೊರಗಿನಿಂದ ಮೊದಲು ನಾಜೂಕಾದ ಮಣ್ಣನ್ನು ಪದರು ಪದರಾಗಿ ಒಟ್ಟಿ ಅಂದವಾದ ಗೋಡೆಯನ್ನು ಕಟ್ಟುತ್ತದೆ. ಮೊಟ್ಟೆಗಳನ್ನಿಟ್ಟಾದ ಮೇಲೆ ಸುಣ್ಣ ಬೆರಸಿದ ಮರಳನ್ನು ಮಿಶ್ರ ಮಾಡಿ ತಂದು ಮಣ್ಣಿನ ಗೋಡೆಯ ಹೊರಗೆ ಲೇಪಿಸುತ್ತದೆ. ಗೋಡೆಗೆ ಗಾರೆ ಹಾಕಿದಂತಾಯಿತು.

ಇಂಜಿನಿಯರ್: ಕಾಡು ಕೋಣಗಳು ಅಮೇರಿಕದ ಮೊದಲ ಮಾರ್ಗ ಇಂಜಿನಿಯರುಗಳಂತೆ. ಅವುಗಳು ತಮ್ಮ ಸಂಚಾರಕ್ಕಾಗಿ ಮಾಡಿಕೊಂಡ ಮಾರ್ಗಗಳು ಅಲ್ಲಿ ನೆಲಸಿದ್ದ ಜನರಿಗೆ ಯೋಗ್ಯವಾದ ಮಾರ್ಗಗಳನ್ನು ರಚಿಸಲು ಸಹಾಯ ಮಾಡಿತು. ಇವು ಅತೀ ಎತ್ತರದ ಇಲವೆ ಅತೀ ತಗ್ಗಾದ ಪ್ರದೇಶದಲ್ಲಿ ಸಂಚರಿಸುವುದಿಲ್ಲ. ಅಂತೇ ಮಧ್ಯ ಎತ್ತರದ ಸ್ಥಳಗಳನ್ನೇ ತಮ್ಮ ಮಾರ್ಗವಾಗಿ ಮಾಡಿಕೊಂಡದ್ದರಿಂದ ಅಲ್ಲಿನ ರೈಲು ಕಂಪೆನಿಯವರು ತಮ್ಮ ಕಂಬಿಗಳಿಗೆ ಹಾದಿ ಹುಡುಕುವಾಗ ಕೆಲವು ಸಂದರ್ಭಗಳಲ್ಲಿ ನೂರಾರು ಮೈಲುಗಳ ತನಕ ಈ 'ಕಾಡು ಕೋಣ' ರಸ್ತೆಗಳನ್ನೇ ನೇರವಾಗಿ ಅನುಸರಿಸಿದ್ದಾರೆ.

ಇದು ಮಗುವಿನ ಚರ್ಮವನ್ನು
ತಂಪಾಗಿಯೂ, ಮೃದುವಾಗಿಯೂ,
ಇಡುವುದು.
ಮಕ್ಕಳಿಗೆ ಕುಟಿಕೂರ ಟಾಲ್ಕಮ್ ಪೌಡರನ್ನೇ
ಉಪಯೋಗಿಸಿರಿ ಅಷ್ಟು ಸುಖಕರ— ಅಷ್ಟು
ಚರ್ಮ ಮೃದುಕರ—
ಕುಟಿಕೂರ ಟಾಲ್ಕಮ್ ಪೌಡರ್
CUTICURA TALCUM POWDER

ಜಿಲ್ಲಾ ಪರಿಚಯ

ಮಂಗಳೂರು

ಗ್ರಾಮ ಉದ್ಯೋಗಸ್ಥ ಸಂಘ: ಗ್ರಾಮ ಉದ್ಯೋಗಸ್ಥರ ಸಂಕಷ್ಟ ನಿವಾರಣೆಗಾಗಿ ಎಂಬ ಉದ್ದೇಶದಿಂದ ಕಳೆದ ತಾ. ೨೯-೧೨-೪೬ರಿಂದ ಶರವು ಗಣಪತಿ ದೇವಸ್ಥಾನದ ಗೋಪುರದ ಮಾಳಿಗೆಯಲ್ಲಿ ಎಡ್ವೋಕೇಟ್ ಶ್ರೀ ಬಾಲಕೃಷ್ಣ ರಾಯರ ಅಧ್ಯಕ್ಷತೆಯಲ್ಲಿ ಜರಗಿದ ಗ್ರಾಮ ಉದ್ಯೋಗಸ್ಥರ ಸಭೆಯಲ್ಲಿ ಸರ್ವಾನುಮತದಿಂದ ಒಂದು ಸಂಘ ಸ್ಥಾಪನೆಯ ಕುರಿತು ನಿರ್ಣಯವಾದಂತೆ ಕರಿಯಂಗಳ ಪಟೇಲ ಶ್ರೀ ಎ ಜಿ ಸಿದ್ಧಣ್ಣ ಶೆಟ್ಟರು ಅಧ್ಯಕ್ಷರಾಗಿಯೂ, ಜೆಪ್ಪಿನ ಮೊಗ್ರು ಪಟೇಲ್ ಶೀನಪ್ಪ ಶೆಟ್ಟರು ಮತ್ತು ಕಸಬಾ ಬಜಾರ್ ಶ್ಯಾನುಭಾಗ ಯಂ ಕೆ ವಿಶ್ವನಾಥಯ್ಯನವರು ಜೊತೆ ಕಾರ್ಯದರ್ಶಿಗಳಾಗಿಯೂ ಇರುವ 'ದ ಕ ಜಿಲ್ಲಾ ಗ್ರಾಮ ಉದ್ಯೋಗಸ್ಥರ ಸಂಘ'ವೊಂದು ಸ್ಥಾಪಿಸಲ್ಪಟ್ಟಿತು. ಇತರ ಹತ್ತು ಮಹನೀಯರು ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಚುನಾಯಿತರಾಗಿರುವರು. ಈ ಸಂಘದ ಮುಂದಿನ ಸಭೆಯು ಬರುವ ಮಾರ್ಚಿ ತಿಂಗಳ ೩ನೇ ಆದಿತ್ಯವಾರ ಪೂರ್ವಾಹ್ನ ಘಂಟೆ ೧೧ಕ್ಕೆ ಇದೇ ಸ್ಥಳದಲ್ಲಿ ಜರಗಿಸಬೇಕೆಂದೂ ಸದಸ್ಯರೆಲ್ಲರೂ ಹಾಜರಾಗಬೇಕೆಂದೂ ವಿನಂತಿಸಲಾಗಿದೆ.

ಹಿಂದೀ ಪರೀಕ್ಷೆಗಳು: ೧೯೪೭ನೇ ಫೆಬ್ರವರಿ ತಿಂಗಳ ತಾ ೧೫-೧೬ಕ್ಕೆ ನಡೆಯುವ ಹಿಂದೀ ಪರೀಕ್ಷೆಗಳ ಬಗ್ಗೆ ತಾ ೭ ೧ ೪೭ರೊಳಗೆ ವಿದ್ಯಾರ್ಥಿಗಳು ತಮ್ಮ ಅರ್ಜಿಗಳನ್ನು ಪ್ರಚಾರಕರಿಗೆ ತಲುಪಿಸತಕ್ಕದ್ದು. ಅನಂತರ ತಾ ೧೭-೧ ೪೭ರ ವರೆಗೆ ಪ್ರತಿ ಅರ್ಜಿಗೆ ೦ ೪ ೦ ಯಂತೆ ಲೇಟ್ ಫೀ ಕೊಡಬೇಕು. ಮಂಗಳೂರಲ್ಲಿ ಕೊಂಗ್ರೆಸ್ ಕಚೇರಿಯಲ್ಲಿರುವ ಪ್ರಾದೇಶಿಕ ಸಮಿತಿಯ ಆಫೀಸಿಗೆ ಪ್ರತಿದಿನ ಗಂಟೆ ೧೦ರಿಂದ ೧೨ರೊಳಗೆ ವಿದ್ಯಾರ್ಥಿಗಳು ತಮ್ಮ ಅರ್ಜಿಗಳನ್ನು ಕೊಡಬಹುದು. ಪ್ರಾದೇಶಿಕ ಸಮಿತಿಯ ಕಚೇರಿಯಲ್ಲಿ ಫಾರ್ಮುಗಳು ಸಿಗುವವು. ಪ್ರಾಥಮಿಕ ಮಧ್ಯಮ ಮತ್ತು ರಾಷ್ಟ್ರ ಭಾಷೆ ಪರೀಕ್ಷೆಗಳಲ್ಲಿ ಪಾರಸಿ ಲಿಪಿಯನ್ನು ಕಲಿಯಬೇಕು. ಇದಕ್ಕಾಗಿ ಆಸಾನ್ ಹುರೂಫ್ ಪುಸ್ತಕದ ಮೊದಲಿನ ಐದು ಪಾಠಗಳು ಪಠ್ಯವಿಷಯವೆಂದು ಪ್ರಾದೇಶಿಕ ಸಂಘಟಕ ಪಿ ಆರ್ ನಾಯರು ತಿಳಿಸುತ್ತಾರೆ.

ಅಧ್ಯಾಪಕ ಸಭೆ. ಜಿಲ್ಲಾ ಎಲಿಮೆಂಟರಿ ಶಾಲಾಧ್ಯಾಪಕರ ಫೆಡರೇಶನಿನ ಕಾರ್ಯಕಾರಿ ಸಭೆ ಸೇರಿ ಸರಕಾರವು ಕೆಳತರಗತಿಯ ನೌಕರರಿಗೆ ಕೊಟ್ಟ ಸವಲತ್ತನ್ನು ತಮಗೆ ಕೊಡದಿರುವುದನ್ನೂ ಉಪಾಧ್ಯಾಯರ ಗೋಳಿನ ಕಡೆಗೆ ಸರಕಾರವು ಕಿವಿ ಕಿವುಡು ಮಾಡುತ್ತಿರುವುದನ್ನು ಖಂಡಿಸಿ ಮುಂದಾ ಸಿಗೊಂಡು ಜಾತಾ ಕಳುಹಲು ನಿರ್ಧರಿಸಿತು. ಮಧುರೆಯಲ್ಲಿ ಜರಗಲಿರುವ ವಿದ್ಯಾ ಪರಿಷತ್ತಿಗೆ ಪ್ರತಿನಿಧಿಗಳನ್ನು ಕಳುಹಲೂ ನಿರ್ಧರಿಸಿತು.

ನಿರ್ಬಂಧ ತಿದ್ದುಪಡಿ: ಟೀಪಾರ್ಟಿ ಮೊದಲಾದ ಸತ್ಕಾರಗಳಿಗೆ ಸಂಬಂಧಿಸಿದ ನಿರ್ಬಂಧದಲ್ಲಿ ತಿದ್ದುಪಡಿ ಮಾಡಲಾಗಿದೆ. ಈ ತಿದ್ದುಪಡಿ ಪ್ರಕಾರ ಪಾನೀಯ ಮಾತ್ರವಲ್ಲದೆ ಹಣ್ಣುಹಂಪಲು ಬಿಸ್ಕುಟು ಮತ್ತು ಧಾನ್ಯೇತರ ಬೀಜ ಇತ್ಯಾದಿಗಳನ್ನು ಮಾತ್ರ ಬಡಿಸುವ ಸತ್ಕಾರಕ್ಕೂ ಟಿಕ್ಕೆ 30 ಜನರ ಮಿತಿ ಇರಬೇಕೆಂಬ ನಿರ್ಬಂಧವು ಅನ್ವಯಿಸುವುದಿಲ್ಲ.

ಲೀಗ್ ಸಭೆ: ಕಳೆದ ತಿಂಗಳಾಂತ್ಯದ ವಾರದಲ್ಲಿ ಜಿಲ್ಲೆಯ ಹಲವು ಭಾಗಗಳಲ್ಲಿ ಮಿ. ಜಿನ್ನಾರವರ ಜನ್ಮದಿನಾಚರಣೆ ಸಂಬಂಧ ಜಿಲ್ಲೆಯ ಮುಸಲ್ಮಾನರುಗಳ ಸಭೆ ಮೆರವಣಿಗೆಗಳು ಜರಗಿದುವು. ಪಾಣೆಮಂಗಳೂರು ಪಣಂಬೂರು, ಕಾಸರಗೋಡು, ಉಳ್ಳಾಲ ಮಂಗಳೂರು ಮೊದಲಾದ ಕಡೆಗಳಲ್ಲಿ ರಾಜಕೀಯ ಸಂಘಟನೆಯ ಕುರಿತು ಭಾಷಣಗಳಾದುವು.

ದುರ್ಮರಣ:—ಇಲ್ಲಿಯ ವೆಂಕಟ್ರಮಣ ದೇವಸ್ಥಾನದ ಚೌಕದ ಬಳಿ ಇರುವ ಒಂದು ಬಾವಿಯಲ್ಲಿ ಮೊನ್ನೆ ಸೋಮವಾರ ಶೇರಿಗಾರ ಜಾತಿಯ ಓರ್ವ ಯುವಕನ ಶವವು ಕಂಡು ಬಂದಿತು. ಮೃತನು ಹೊಲಿಗೆ ಉದ್ಯಮದಲ್ಲಿದ್ದು ಆತ್ಮಹತ್ಯದ ಉದ್ದೇಶದಿಂದ ಹೀಗೆ ಮಾಡಿರುವನೆಂದು ಊಹಿಸಲಾಗಿದೆ. ಪೋಲಿಸ್ ಪಂಚನಾಮೆ, ಪೋಸ್ಟ್ ಮೋರ್ಟೆಮ್ ಮೊದಲಾದ ವಿಧಿಗಳು ಯಥಾಪ್ರಕಾರ ನಡೆದವು.

ಬೆಂಕಿಪೆಟ್ಟಿಗೆ ಜಿಲ್ಲೆಯಲ್ಲಿ ಬೆಂಕಿಪೆಟ್ಟಿಗೆ ಹಾಹಾಕಾರವೆದ್ದಿದೆ. ಪ್ರತಿ ತಿಂಗಳು ಇವುಗಳ ಸರಬರಾಯಿಯಾಗುತ್ತಿದ್ದರೂ ಪೇಟೆಯ ಯಾವ ಅಂಗಡಿಯಲ್ಲೂ ಇದು ಸಿಗುವುದಿಲ್ಲವೆಂದೂ, ಹಲವು ಕಡೆಗಳಲ್ಲಿ ವಿಧಿಸಿದ ಬೆಲೆಗೆ ಮಾರಲ್ಪಡುವುದೆಂದೂ, ಸಂಬಂಧಪಟ್ಟ ಅಧಿಕಾರಿಗಳು ಕ್ಷಿಪ್ರ ಕಾಲದಲ್ಲಿ ಈ ಕುರಿತು ಯೋಗ್ಯ ಧೋರಣೆ ಅನುಸರಿಸಬೇಕೆಂದು ಬಾತ್ಮಿಗಳು ಬಂದಿರುತ್ತವೆ.

ಕ್ರೈಸ್ತ ಶ್ರೇಯೋ ಸಂಘ:—ಕಥೋಲಿಕ್ ವೆಲ್ ಫರ್ ಸೊಸೈಟಿ ಎಂಬೊಂದು ಸಂಸ್ಥೆಯು ಇತ್ತೀಚೆಗೆ ಮೂಲ್ಕಿಯಲ್ಲಿ ಸ್ಥಾಪಿಸಲ್ಪಟ್ಟು ಮಿ ಪಿ ಎಂ ಎಲ್ ಡಿಸೋಜರು ಇದರ ಅಧ್ಯಕ್ಷರಾಗಿಯೂ ಮಿ ಎಸ್ ವಿ ಪುಡ್ತಾಡರು ಕಾರ್ಯದರ್ಶಿಯರಾಗಿಯೂ ಚುನಾಯಿಸಲ್ಪಟ್ಟಿರುವರು. ಸ್ವಜಾತಿಯ ಬಡ ಮಕ್ಕಳ ವಿದ್ಯಾಭಿವೃದ್ಧಿ, ಅನಾಥರಿಗೆ ವೈದ್ಯ ಸಹಾಯ ಇವೇ ಮೊದಲಾದ ಸಮಾಜಾಭಿವೃದ್ಧಿಯ ಉದ್ದೇಶಗಳನ್ನು ಇಟ್ಟುಕೊಂಡು ಈ ಸೊಸೈಟಿಯು ಸ್ಥಾಪಿಸಲ್ಪಟ್ಟಿರುತ್ತದೆಂದು ತಿಳಿದುಬರುತ್ತದೆ.

ಪುತ್ತೂರು ಬೋರ್ಡಿನ ಪಂಚಾಯತ ಎತ್ತು ಇನ್ನಿತರ ಮಾರ್ಗಗಳು ಬಹಳ ನಾದುರಸ್ತಿಯಲ್ಲಿವೆ. ವಾಹನಗಳ ಸಂಚಾರಕ್ಕೂ ಅತ್ಯಂತ ಅಯೋಗ್ಯ ಪರಿಸ್ಥಿತಿಯಲ್ಲಿವೆ. ಈ ವಿಷಯದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಹಳ್ಳಿಯವರ ಗೋಳಾಯ ಕೇಳಿಯಾದರೂ ದುರುಸ್ತಿ ಮಾಡಿಸಿ ಜನರಿಗೆ ತೊಂದರೆಯಾಗದಂತೆ ಮಾಡಬೇಕೆಂದು ಊರವರೊಬ್ಬರ ಕೋರಿಕೆ.

ತೆಂಗಿನಕಾಯಿ ನಿಯಂತ್ರಣ. ಮದ್ರಾಸ್ ಸರಕಾರದವರು ಹಸಿ ತೆಂಗಿನಕಾಯಿ ಬೆಲೆಯನ್ನು ನಿಯಂತ್ರಿಸುವರೆಂದೂ ಈಗ ವಿಪರೀತ ಬೆಲೆಗೆ ಮಾರಲ್ಪಡುವ ಕಾಯಿಗಳ ಬೆಲೆಯನ್ನು 2 ಆಣೆಯೊಳಗೆ ನಿಲ್ಲಿಸುವರೆಂದೂ ಮಾತ್ರವಲ್ಲ ಅವು ಕಪ್ಪು ಪೇಟೆಯನ್ನು ಸೇರದಂತೆ ಬಿಗಿಯಾದ ಧೋರಣೆಯನ್ನು ನಿರ್ವಹಿಸಿ ಮಲಬಾರ್ ಪ್ರದೇಶದಿಂದ ತೆಂಗುಹೊರಕ್ಕೆ ಹೋಗದಂತೆ ಕಾಯದೆ ಮಾಡುವುದರ ಮತ್ತು ಸಾಮಾನ್ಯರಿಗೆ ಅದ ಸುಲಭವಾಗಿ ನಿಯಂತ್ರಿತ ಬೆಲೆಗೆ ಸಿಕ್ಕುವಂತೆಯೂ ಏರ್ಪಾಡು ನಡೆಯುವರೆಂದು [illegible] ಸರಕಾರದ ಪ್ರಕಟಣೆ ಹೊರಬಿದ್ದಿದೆ. [illegible] ಸರಕಾರದವರು ಒಣ ಕೊಬ್ಬರಿಯ ಮತ್ತು ಎಣ್ಣೆಯ ಬೆಲೆಗಳ ನಿರ್ಬಂಧಿಸಿದಂದಿನಿಂದ ತೆಂಗು ವಿಪರೀತ ಬೆಳೆಯುವ ಮಲಬಾರ ಕಡೆಗಳಲ್ಲಿ ಬೆಲೆ 8-9 ಆಣೆ ತನಕ ತಲುಪಿರುವುದೆಂದು ತಿಳಿದು ಬರುತ್ತದೆ.

ಅ. ಕ. ತರುಣ

ಕಾರ್ಯಕರ್ತರ ಸಭೆ

ಕರ್ನಾಟಕ ಏಕೀಕರಣ. ಹಿಂದುಸ್ಥಾನದಲ್ಲಿ ಲೋಕಸತ್ತಾತ್ಮಕ ರಾಜ್ಯದ (ರಿಪಬ್ಲಿಕ) ಶಂಕಸ್ಥಾಪನೆಯಾಗಿ ಕಟ್ಟಡವು ಪ್ರಾರಂಭವಾಗಿದೆ. ಭಾರತದ ಹೊಸ ರಾಜ್ಯಘಟನೆಯನ್ನು ನಿರ್ಮಿಸಲು ನಮ್ಮ ಮುಂದಾಳುಗಳು ಡಿಸಂಬರ ಒಂಬತ್ತರಿಂದ ದಿಲ್ಲಿಯಲ್ಲಿ ಸೇರಿ ತಮ್ಮ ಕೆಲಸವನ್ನು ಪ್ರಾರಂಭಿಸಿರುವರು. ಇದೇ ಮಹತ್ವದ ಸಮಯದಲ್ಲಿ ನಮ್ಮ ಕೆಲಸ ಯಾವುದೆಂದು ನಿಶ್ಚಯಿಸಿಗೊಂಡು ನಾವೂ ಮುನ್ನೋಟದಿಂದ ಸಾಗಬೇಕಾಗಿದೆ. ಬ್ರಿಟಿಷರು ತಮ್ಮ ಆಡಳಿತೆಯನ್ನು ಬೆಳೆಸುವಾಗ ಕೇವಲ ಆ ಕಾಲದ ಅನುಕೂಲತೆಗಳನ್ನು ಮಾತ್ರ ನೋಡಿಕೊಂಡು ತಾವು ಗೆದ್ದ ಭಾಗಗಳನ್ನು ಕೂಡಿಸುತ್ತ ಹಂಡ ಬಂಡ ಪ್ರಾಂತಗಳನ್ನು ರಚಿಸಿದರು. ಇದರಿಂದ ಕರ್ನಾಟಕಕ್ಕೆ ಬಹಳ ಹಾನಿ ತಟ್ಟಿದೆ. ಕನ್ನಡಿಗರು ವಿಭಾಗಿಸಲ್ಪಟ್ಟರು, ಕನ್ನಡ ಸಂಸ್ಕೃತಿಯು ಹಾಳಾಗತೊಡಗಿತು, ಕರ್ನಾಟಕದ ಏಳಿಗೆಯು ಕುಂಠಿತವಾಯಿತು. ಕನ್ನಡೇತರರ ಪ್ರಾಬಲ್ಯವು ಬೆಳೆದು ಕನ್ನಡಿಗರ ವರ್ಚಸ್ಸು ಕಳೆಗುಂದತೊಡಗಿತು. ಆದರೆ ಈ ಶೋಚನೀಯ ಸ್ಥಿತಿಯನ್ನು ಹೋಗಲಾಡಿಸುವ ಸುಸಂಧಿಯು ಈಗ ತಾನೇ ಬಂದೊದಗಿದೆ. ಅದರ ಸದುಪಯೋಗವನ್ನು ನಾವು ಮಾಡಿಕೊಳ್ಳದಿದ್ದರೆ ನಮ್ಮ ನಾಶವನ್ನು ನಾವೇ ಮಾಡಿಕೊಂಡಂತಾಗುವದು. ಅದಾಗದಂತೆ ಈಗ ನಾವು ಹೊಸ ಕರ್ನಾಟಕ ರಚನೆಗೆ ಉದ್ಯುಕ್ತರಾಗುವ.

ಭಾಷಾನುಗುಣ ಪ್ರಾಂತರಚನೆಯ ಪ್ರಶ್ನೆಯು ದಿಲ್ಲಿಯಲ್ಲಿ ಸೇರಿದ ಘಟನಾ ಸಮಿತಿಯ ಮುಂದೆ ಬಂದಿರುವದು. ಈ ಪ್ರಶ್ನೆಯು ಅತ್ಯಂತ ಮಹತ್ವದ್ದೂ ದೂರ ಪರಿಣಾಮವುಳ್ಳದ್ದೂ ಆಗಿರುವದು. ಇದು ವಿಶೇಷತಃ ಕರ್ನಾಟಕದ ಹಿತಾಹಿತಗಳಿಗೆ ಸಂಬಂಧಪಟ್ಟಿದೆ. ಯಾವುದಾದರೊಂದು ಕುಂಟು ನೆಪದಿಂದ ಈ ಪ್ರಶ್ನೆಯನ್ನು ಮುಂದೂಡಬೇಡಿರೆಂದು ನಾವು ಘಟನಾ ಸಮಿತಿಯನ್ನು ಒತ್ತಾಯಪಡಿಸಬೇಕಾಗಿದೆ. ಭಾರತದ ಹೊಸ ರಾಜ್ಯಘಟನೆಯಲ್ಲಿ ಕರ್ನಾಟಕಕ್ಕೆ ಒಂದು ಸ್ವತಂತ್ರ ಪ್ರಾಂತವನ್ನು ಕೊಡಲೇಬೇಕು, ಎಂದು ಗಟ್ಟಿಯಾಗಿ ನಾವು ನಿಲ್ಲಬೇಕಾಗಿದೆ. ಕರ್ನಾಟಕ ಏಕೀಕರಣದ ನಮ್ಮ ಬಹುಕಾಲದ ಬೇಡಿಕೆಯನ್ನು ಒಪ್ಪದಿದ್ದರೆ ಹೊಸ ರಾಜ್ಯಘಟನೆಯು ಕನ್ನಡಿಗರಿಗೆ ನಿಷ್ಪ್ರಯೋಜಕವೆಂದೇ ನಾವು ಸಾರಬೇಕಾಗಿದೆ. ನಮ್ಮ ಕಷ್ಟನಷ್ಟಗಳನ್ನು ಬಗೆಹರಿಸದ ರಾಜ್ಯಘಟನೆಯಿಂದ ಪ್ರಯೋಜನವಾದರೂ ಏನು? ಕರ್ನಾಟಕವು "ಅ ಗುಂಪಿನಲ್ಲಿ ಬರುವದು. ಇದೇ "ಅ" ಗುಂಪನ್ನು ಭಾಷಾನುಗುಣ ತತ್ವದ ಮೇಲೆ ಏಕೆ ಪುನರ್ರಚಿಸಬಾರದು? ಗುಂಪು ಬೇಕಾದರೆ ಮಾಡಿಕೊಳ್ಳಲಿ. ಆದರೆ ಆ ಗುಂಪಿಗೆ ಸೇರಿದ ಪ್ರಾಂತಗಳನ್ನು ಭಾಷೆ ಮತ್ತು ಸಂಸ್ಕೃತಿಗನುಸಾರವಾಗಿ ಈಗ ಹೊಸದಾಗಿ ವ್ಯವಸ್ಥೆಗೊಳಿಸಬೇಕು ಎಂಬುದೇ ನಮ್ಮ ಆಗ್ರಹದ ಬೇಡಿಕೆ. ಈ ಬೇಡಿಕೆಯ ಸಲುವಾಗಿ ನಾವು ಇನ್ನೂ ಹತ್ತು ವರ್ಷಗಳವರೆಗೆ ಕಾಯ ಕೂಡಲಾರೆವು. ಪ್ರಥಮ ಅಥವಾ ಎರಡನೇ ಮತದಾನ ಪದ್ಧತಿ ಬಂದರೂ ಕನ್ನಡಿಗರು ಈಗಿರುವ ತರಹ ಅಲ್ಪಸಂಖ್ಯಾಕರಾಗಿ ಉಳಿಯುವದು ಖಚಿತ. ಅಲ್ಲದೆ ಈಗಿನಂತೆ ಮುಂದೆಯಾದರೂ ಕರ್ನಾಟಕದ ಹಿತವು ಹಿಂದುಳಿದ ವದರಲ್ಲಿ ಸಂದೇಹವಿಲ್ಲ. ಹರಿದ ಹಂಚಿ ಹೋದ ಕರ್ನಾಟಕದ ಪ್ರತಿಯೊಂದ ಭಾಗದಲ್ಲಿಯೂ ಕನ್ನಡಿಗರಿಗೆ ತಕ್ಕ ಸ್ಥಾನಮಾನ ಗೌರವಗಳು ದೊರೆಯಲಾರವು. ಕರ್ನಾಟಕದಲ್ಲಿ ಮಾತೃಭಾಷಾಸಕರವಾದ ಶಿಕ್ಷಣ ಪ್ರಚಾರವಿಲ್ಲ. ವಿವಿಧ ಉಚ್ಚ ಶಿಕ್ಷಣ ಸಂಸ್ಥೆಗಳು ಇರುವದಿಲ್ಲ. ಕರ್ನಾಟಕಕ್ಕೆ ವಿಶ್ವವಿದ್ಯಾಲಯವಿಲ್ಲ. ಜಲಪಾತಗಳಿದ್ದರೂ ಉದ್ಯೋಗಾಭಿವೃದ್ಧಿಗೆ ಅನುವಿಲ್ಲ. ದೊಡ್ಡ ನದಿಗಳಿದ್ದರೂ ತಕ್ಕ ನೀರಾವರಿ ಯೋಜನೆಗಳಿಲ್ಲ. ರೈಲು ಮಾರ್ಗಗಳು ಇದರ ಒಂದೂ ಉದ್ದರವಿಲ್ಲ. ಇದೂ ಅಲ್ಲದೆ ನೆರೆ ಪ್ರಾಂತಗಳಾದ ಆಂಧ್ರ, ತಮಿಳು, ಮಹಾರಾಷ್ಟ್ರಗಳು ತಮ್ಮ ವಿಸ್ತಾರಕ್ಕಾಗಿ, ಸ್ವಾರ್ಥ ಸಾಧನೆಗಾಗಿ, ಕನ್ನಡಿಗರ ಹಿತವನ್ನು ಕಡೆಗೆಣಿಸುತ ನಡೆದಿರುವವು. ಒಕ್ಕೂಟದ ಯೋಜನೆಯನ್ನೂ ಮಹಾರಾಷ್ಟ್ರ ವಿಶ್ವವಿದ್ಯಾಲಯ ಸಮಿತಿಯು ಹೇಳುವನ್ನೂ ನೋಡಿದರೆ ಅವು ಕರ್ನಾಟಕವನ್ನೇ ನುಂಗುವಂತಹವಾಗಿವೆ. ಈ ಮೊದಲಾದ ಘೋರ ಅನ್ಯಾಯಗಳನ್ನು ಪ್ರತಿಭಟಿಸಿ ಕರ್ನಾಟಕದ ಸರ್ವತೋಮುಖವಾದ ಉನ್ನತಿಗಾಗಿ ನಾವು ಸತತ ಪ್ರಯತ್ನ ಮಾಡಬೇಕಾಗಿದೆ. ಇದಕ್ಕೆ ಒಂದೇ ಒಂದು ಮುಖ್ಯ ಸಾಧನ – ಕರ್ನಾಟಕ ಏಕೀಕರಣ.

ಸ್ವತಂತ್ರ ಕರ್ನಾಟಕ ಪ್ರಾಂತ ರಚನೆ: ಘಟನಾ ಸಮಿತಿಯವರು ಕನ್ನಡಿಗರಿಗೆ ದಯಪಾಲಿಸುವ ವರವಿದ್ದರೆ ಅದು ಇದೇ. ಒಂದು ರಾಷ್ಟ್ರವು ಮತ್ತೊಂದು ರಾಷ್ಟ್ರವನ್ನು ನುಂಗಲು ಪ್ರಯತ್ನಿಸುವಂತೆ ಒಂದು ಪ್ರಾಂತವು ಮತ್ತೊಂದು ಪ್ರಾಂತವನ್ನು ನುಂಗಲು ಪ್ರಯತ್ನಿಸಿದರೆ ಆಶ್ಚರ್ಯವೇನು? ಆದರೆ ನೆರೆಯ ಪ್ರಾಂತಗಳು ತಮ್ಮ ಶ್ರೇಯಸ್ಸಿಗೆ ಹೆಣಗುತ್ತಿರುವಾಗ, ನಮ್ಮ ಮೇಲೆ ಆಕ್ರಮಣವನ್ನೂ ದಬ್ಬಾಳಿಕೆಯನ್ನೂ ಸಾಗಿಸಲು ಹವಣಿಸುತ್ತಿರುವಾಗ ಕನ್ನಡಿಗರು ಸುಮ್ಮನೇ ಕೂಡ್ರುವುದು ಹೇಡಿತನವು. ಹೊಸ ರಾಜ್ಯಘಟನೆಯ ನಿರ್ಮಾಣದ ಈ ಸಂಧಿ ಕಾಲದಲ್ಲಿ ನಮ್ಮ ಅಲಕ್ಷ್ಯವನ್ನು ಬೀಸಾಡಿ ಸಮಯೋಚಿತ ಕೆಲಸಕ್ಕೆ ಅಣಿಯಾಗಬೇಕೆಂಬ ಉದ್ದೇಶದಿಂದಲೇ ಈ ಕಾರ್ಯಕರ್ತರ ಮಹಾಸಭೆಯನ್ನು ಕರೆಯಲಾಗಿದೆ.

ಪತ್ರಿಕೆ ವಿಮರ್ಶೆ

ಮದ್ಯಪಾನ ನಿರೋಧಕ: ಈ ಸಚಿತ್ರ ಮಾಸಪತ್ರಿಕೆಯ ವಿಶೇಷ ಸಂಚಿಕೆಯನ್ನು ಸಂತೋಷದಿಂದ ಸ್ವೀಕರಿಸಿದ್ದೇವೆ. ನಿಜಾಮರ ಹೈದರಾಬಾದಿನ ಮದ್ಯಪಾನ ನಿರೋಧಕ ಕೇಂದ್ರ ಸಂಘದ ಕಡೆಯಿಂದ ಹೊರಡಿಸಲ್ಪಡುವ ಈ ಮಾಸಿಕವು ಈಗಾಗಲೇ ೮ ಸಂಪುಟಗಳನ್ನು ಮುಗಿಸಿ ಮುಂದರಿದಿದೆ. ಈ ವಿಶೇಷ ಸಂಚಿಕೆಯು ಮಾತ್ರ ಪ್ರಥಮ ಬಾರಿಗೆ ನಮ್ಮ ಬಳಿ ಬಂದಿರುವುದರಿಂದ ಈ ಬಂಧು ಪತ್ರಿಕೆಯ ಹಿಂದಿನ ಚಟುವಟಿಕೆಗಳನ್ನು ಅಭ್ಯಾಸಿಸಲು ನಮಗಾಸ್ಪದ ಸಿಗಲಿಲ್ಲವಾದರೂ ಸಿಹಿ ನೋಡಲು ಸ್ವಲ್ಪವೇ ಸಾಕೆಂಬಂತೆ ವಿಶೇಷ ಸಂಚಿಕೆಯಲ್ಲಿ ನಿರೂಪಗೊಟ್ಟ ಪ್ರಬಂಧ, ಕವಿತೆ, ಕತೆ ಮುತ್ತಿತರ ವಿಷಯಕವಾದ ಸಂದೇಶಗಳು ಸಂಘದ ಆಪ್ತ ಉದ್ದೇಶವನ್ನು ಸಾಧಿಸಲು ಪತ್ರಿಕೆಯು ಪ್ರಭಾವಶಾಲಿ ಮಾಧ್ಯಮವಾಗಿ ಕಾರ್ಯ ನಿರ್ವಹಿಸಿದೆಂಬುದು ನಿಸ್ಸಂದೇಹ. ಘನಪ್ರಭು ನಿಜಾಮರಿಂದ ಸ್ಫೂರ್ತಿ ಹೊಂದಿ ಸಂಸ್ಥಾನದ ಪ್ರಮುಖ ಮಹನೀಯರ ನಿರ್ದೇಶಕತ್ವದಲ್ಲಿ ಮದ್ಯಪಾನ ನಿರೋಧಕವು ವಿಶೇಷವಾಗಿ ಹೈದರಾಬಾದಿನ ಪ್ರಜೆಗಳ ಮತ್ತು ಸರ್ವಸಾಮಾನ್ಯವಾಗಿ ಕನ್ನಡಿಗರೆಲ್ಲರ ಪರವಾಗಿ ಇದು ತನಕ ನಮ್ಮ ಸಮಾಜ ಶರೀರವನ್ನು ಕೊರೆಯುತ್ತಿದ್ದ ಸುರೆಯ ಪೈಶಾಚಿಕ ಚಟವನ್ನು ನಿರ್ಮೂಲಗೊಳಿಸಲು ಸೇವೆ ಸಲ್ಲಿಸುವುದೆಂಬ ಸಂಗತಿಯು ಶ್ಲಾಘನೀಯ. ಈಗ ಪ್ರಜಾ ಪ್ರತಿನಿಧಿಗಳು ದೇಶದ ಎಲ್ಲಾ ಪ್ರಾಂತ್ಯ ಸಂಸ್ಥಾನಗಳಲ್ಲೂ ಆಡಳಿತ ಸೂತ್ರಗಳನ್ನು ವಹಿಸಿ ದಾಸ್ಯದ ಮತ್ತು ವಿದೇಶಿ ಆಡಳಿತಗಾರರ ಅಸಂಸ್ಕೃತ ಧೋರಣೆಯ ದುಷ್ಪರಿಣಾಮಗಳನ್ನು ಒಂದೊಂದಾಗಿ ತೊಡೆದು ಹಾಕಲು ಪ್ರಯತ್ನ ಮಾಡುತ್ತಿರುವಾಗ ಇಂತಹ ಪತ್ರಿಕೆಗಳಿಂದ ಸಾರ್ವಜನಿಕ ಪ್ರಚಾರದ ಮಹತ್ವದ ಉಪಯುಕ್ತತೆ ಇದೆ.

—'ನಾಥ

ನೋಟೀಸು

ಮಂಗಳೂರು ಶ್ಯೆಹಾರ ಬೊಕ್ಕಪಟ್ಣದಲ್ಲಿರುವ ಒಬ್ಬ ಗುರಿಕಾರನ ಅಳಿಯ ಮತ್ತು ತಂಪು ಹೆಂಗಸಿನ ಮಗ ಬ್ಯರ ಕಂದರನು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ –

ಈ ಕೆಳಗೆ ವಿವರಿಸಿದ ಆಸ್ತಿಗೆ ನಾನು ಮತ್ತು ಇತರ 3 ಜನ ನನ್ನ ಸಹೋದರಿಯರ ಕೂಡಾ ಹಕ್ಕುದಾರರಾಗಿರತ್ತೇವೆ. ಸದ್ರಿ ಆಸ್ತಿಯನ್ನು ನಿನ್ನೊಂದು ಕವರಿನ ಮೆಂಬರಾದ ಆತನು ಗರಿಕಾರ 1 ನಚ್ಚಮ್ಮ ದೇಯಿ 1 ಕೂಡಾ 3 ಜನರು ನಮಗೆ ಮೋಸ ಕೊಡುವ ಇರಾದೆಯಿಂದ ಬೇರೆಯವರಿಗೆ ಅಡವು ವಗೈರೆ ಪರಾಧಿನ ಮಾಡುವರೆ ಉದ್ಯುಕ್ತರಾಗಿರುವರಾಗಿ ನಾನು ಕೇಳಿ ತಿಳಿಯುತ್ತೇನೆ. ಹೀಗೆ ಈ 3 ಜನರು ಮಾತ್ರ ಸೇರಿ ಪರಾಧಿನ ಮಾಡಿದಲ್ಲಿ ಅದು ಸಿಂಧುವಾಗತಕ್ಕದಲ್ಲ ಮತ್ತು ಅಂಥಾ ಪರಾಧಿನಗಳು ನಮಗೆ 4 ಜನರ ಹಕ್ಕಿಗೆ ಮ ನಮ್ಮ ಕುಟುಂಬಕ್ಕೆ ಕೂಡಾ ಬಾಧಿಸತಕ್ಕದಲ್ಲಾ ಹೊರತು ಸದರಿಯವರು ಪಡಿಯತಕ್ಕ ಋಣಗಳಿಗೆ ಅವರ ವರೀಸ ಕಹಾ ಜವಾಬ್ದಾರಿ ಹೊರತು ಸದ್ರಿ ಆಸ್ತಿಯಾಗಲಿ ಅವುಗಳ ಹುಟ್ಟುವಳಿಯಾಗಲಿ ಎಷ್ಟು ಮಾತ್ರಕ್ಕೂ ಜವಾಬ್ದಾರಿಯಾಗತಕ್ಕದಲ್ಲ ಎಂತ ಸದ್ರಿ ಈ ಮೂಲಕ ಸರ್ವ ಜನರಿಗೆ ತಿಳಿಸಿರುತ್ತೇನೆ.

ಆಸ್ತಿ ವಿವರ

ಮಂಗಳೂರು ಶ್ಯೆಹಾರ ಬೊಕ್ಕಪಟ್ಣದಲ್ಲಿರುವ TS5–1006 ೬ನೆ ಮನೆ ಇದಕ್ಕೆ ತಾಗಿರುವ ಇತರ ಮನೆಗಳು ಅಂಗಡಿ ಕಟ್ಟೋಣಗಳು ಇದ್ದರೆ ಇದರ ಉಪಕಟ್ಟಡಗಳು ಮರಮಟ್ಟುಗಳು ವಗೈರೆ ಸರ್ವಾದಿ. ಇದರ ಚತುಸ್ಸೀಮೆಗಳು ಪೂರ್ವಕೊರಗ ಗುರಿಕಾರನ ಹಿತ್ಲು ಪಶ್ಚಿಮ ಮಾರ್ಗ ಬಡಗು ಕುಡ್ಪ ಗುರಿಕಾರನ ಹಿತ್ಲು ತೆಂಕು ರಾಜಮಾರ್ಗ ಈ ಮಧ್ಯ ಇರುವ ಸರ್ವಾದಿ ಆಸ್ತಿಯಾಗಿರುತ್ತದೆ.

ಮಂಗಳೂರು,
24 12 46

111 ಈ ಮೂರು ಗೆರೆ ಮತ್ತು ಎಡ ಕೈ ಹೆಬ್ಬೆಟ್ಟಿನ ಗುರ್ತು ಬ್ಯರ ಕಂದರನ ರುಜು.

ಕಾಡು ಮೃಗಗಳು ಪೋಷಿಸಿದ ನಾಡ ಮಕ್ಕಳು

ಅವನ್ನು ನಾಗರೀಕರನ್ನಾಗಿ ಮಾಡಲು ಸಾಧ್ಯವೆ?

ತೋಳ ಚಿರತೆಗಳ ವಿಚಿತ್ರ ಶಿಶುಪಾಲನ

[illegible] ಪೋಷಕವೆಂ [illegible] ಮೃಗಗಳು ಕೂಡಾ ಅ ವನ್ನು [illegible] ಸಲಹುವವು. [illegible] ಅವನ ಲೆಕ್ಕನದೇ ಧ್ರುವ ನನ್ನು ವನ್ಯಜಂತುಗಳಿಂದ ರಕ್ಷಿಸಿಕೊಂಡ ಹುದು. ಕಾಡಿನಲ್ಲಿ ತೊರೆಯಲ್ಪಟ್ಟ ಕೂಸು ನವಿಲುಗಳಿಂದ ಪರಿಪೋಷಿತವಾಗಿ ಶಕುಂತಳೆ ಎನಿಸಿದಳು. ಜಾಂಬವತಿಯೋ ವೆಂಬ ಕರಡಿಗಳಿಂದ ಸಲಹಲ್ಪಟ್ಟು ಕೃಷ್ಣ ಪರಮಾತ್ಮನ ಕೈಹಿಡಿದಳು. ಪುರಾಣೇತಿಹಾಸದ ಮೇಲಿನ ಮೂರು ವ್ಯಕ್ತಿಗಳೂ ವನ್ಯ ಜಂತುಗಳ ಸಂಪರ್ಕದಲ್ಲಿ ಬೆಳೆದವರಾದರೂ ಅಮೋಘ ಗುಣ ಶ್ರೇಷ್ಠತೆಗಾಗಿ ಗೌರವಾರ್ಹರೆನಿಸಿರುವರು. ತೋಳಗಳಿಂದ ಪೋಷಿಸಲ್ಪಟ್ಟ ಇರ್ವ ಬಾಲಕರು ಅಸಾಮಾನ್ಯವೀರರಾಗಿ ಪ್ರಖ್ಯಾತ ರೋಮ್ ನಗರವನ್ನು ಕಟ್ಟಿದರಂತೆ. ಬೇರೆ ಕೆಲವು ಅತ್ಯಾಶ್ಚರ್ಯಕರವಾದ ಸಮಾನ ನಿದರ್ಶನಗಳನ್ನು ಪರಿಶೋಧಿಸೋಣ

ಇತ್ತೀಚೆಗೆ ಕೆಲವೇ ವಾರಗಳ ಹಿಂದೆ ಅರೇಬಿಯರ ಮರಳುಕಾಡಿನ ಬಳಿ ಜಿಂಕೆಗಳನ್ನು ಬೇಟೆಮಾಡುತಿದ್ದ ಕೆಲವು ಐರೋಪ್ಯರು ಈ ವೇಗದ ಪ್ರಾಣಿಗಳ ನಡುವೆ ಮಾನವಾಕೃತಿಯ ಒಂದು ಪ್ರಾಣಿ ಕೈಕಾಲುಗಳನ್ನುಪಯೋಗಿಸಿ ಗಂಟೆಗೆ ಇವತ್ತು ಮೈಲು ರಭಸದಲ್ಲಿ ಓಡುವುದನ್ನು ಕಂಡಾಗ ತಮ್ಮ ಕಣ್ಣುಗಳನ್ನೇ ನಂಬದಾದರು ಮೋಟಾರುಕಾರಿನಲ್ಲಿ ಬೆನ್ನುಹತ್ತಿ ಹೇಗೂ ಅದನ್ನು ಹಿಡಿದಾಗ ಅದು ಸುಮಾರು 15 ವರ್ಷದ ಒರ್ವ ಹುಡುಗನೆಂದು ಸ್ಪಷ್ಟವಾಯಿತು ಆತ ಜಿಂಕೆಗಳಂತೆ ಕೂಗುತ್ತ, ಎಲೆ ಹುಲ್ಲುಗಳನ್ನು ತಿನ್ನುತಿದ್ದ ಈಗ ಅವನು ರೊಟ್ಟಿ ಮಾಂಸವನ್ನು ತಿನ್ನಲು ಕಲಿತಿದ್ದಾನಂತೆ ಜಾಗರೂಕತೆಯಿಂದ ತರಬೇತಿಗೊಳಿಸಿದರೆ ಅವನು ಪರಿಪೂರ್ಣ ಮಾನವನಾಗಬಹುದೆಂದು ತಜ್ಞರು ಅಭಿಪ್ರಾಯಪಟ್ಟಿರುತ್ತಾರೆ ಆದರೆ ಬಾಲ್ಯದಿಂದ ಮನುಷ್ಯ ಸಮಾಜದಿಂದ ಸಂಪೂರ್ಣ ಪ್ರತ್ಯೇಕಿಸಲ್ಪಟ್ಟು ವನ್ಯ ಪ್ರಾಣಿಗಳ ಕ್ರೂರ ಆರೈಕೆಯಲ್ಲಿ ಬೆಳೆದು ಕೆಲವು ವರ್ಷಗಳ ನಂತರ ಪುನಃ ಮಾನವ ಸಮಾಜದ ಪೋಷಣೆಯೊಳಗೆ ಸಿಕ್ಕಿದ ಹೆಚ್ಚಿನ ಬಾಲಬಾಲಿಕಿಯರು ಅಲ್ಪಾಯುಷಿಗಳೂ, ತಮ್ಮ ಕಾಡು ಸ್ವಭಾವ ಬಿಡದವರು ಆಗಿದ್ದರೆಂದು ತಿಳಿದುಬರುತ್ತವೆ

1849ರಲ್ಲಿ ನಮ್ಮ ದೇಶದ ಒಂದು ಕಡೆ ಬೇಟೆಗಾರರು ಮೂರು ತೋಳದ ಮರಿಗಳೊಂದಿಗೆ ಒಂದು ಕೊಳದಲ್ಲಿ ನೀರು ಕುಡಿಯುತಿದ್ದ ಹುಡುಗನನ್ನು ಕಂಡು ಬೆರಗಾದರು ಬೆನ್ನಟ್ಟಿ ಅವನನ್ನು ಹಿಡಿದಾಗ ಭಯಂಕರ ಪಾಶವಿ ಚೇಷ್ಟೆಗಳನ್ನು ಪ್ರದರ್ಶಿಸುತ್ತಾ ಅವನು ಬಂದೂಕಿನ ಕೊಳವೆಯನ್ನು ಬಾಯಿಯಿಂದ ಕಚ್ಚಿದು ಹಾಕಿದನಂತೆ ಹಸಿ ಮಾಂಸವನ್ನಲ್ಲದೆ ಬೇರೇನೂ ಆತ ತಿನ್ನುತಿದ್ದಿಲ್ಲ ಯಾವ ಭಾಷೆಯೂ ಅವನಿಗೆ ಅರ್ಥವಾಗುತ್ತಿರಲಿಲ್ಲ ಆಗಲೇ ಇನ್ನೊಂದು ವಿಚಿತ್ರ ಸಂಭವಿಸಿತು ಒರ್ವ ಹೆಂಗುಸು ಮುಂದೆ ಬಂದು ಹುಡುಗನ ಮೈಮೇಲಿನ ಸುಟ್ಟ ಗಾಯದ ಕಲೆಯೊಂದನ್ನು ಗುರುತಿಸಿ ಅದು ತನ್ನ ಮಗುವೆಂದಳು. ಆರು ವರ್ಷದ ಕೆಳಗೆ ಅವಳ ಒಂದು ಮಗು ತೋಳಗಳಿಂದ ಒಯ್ಯಲ್ಪಟ್ಟಿತ್ತು. ಈ ಸಂಗತಿಯನ್ನು ನಿಜವೆಂದು ಸರ್ ವಿಲಿಯಂ ಸ್ಲೀಮೆನ್ ಎಂಬ ಆಗಿನ ಮಿಲಿಟರಿ ಅಧಿಕಾರಿಗಳೊಬ್ಬರು ತಮ್ಮೊಂದು ಗ್ರಂಥದಲ್ಲಿ ತಿಳಿಸಿದ್ದಾರೆ.

[illegible] ವಶ ಕೊಡಲ್ಪಟ್ಟ ತೋಳ [illegible] ಕೆಲವೇ ವರ್ಷ ಬದುಕಿದ್ದ.

ಹಳ್ಳಿ ಹುಡುಗರು ಅವನಿಗೆ ಕಪ್ಪೆಗಳನ್ನು ಆಹಾರವಾಗಿ ತಂದು ಕೊಡುತಿದ್ದರು ಅವನಿಂದ ಭಾಷೆಯನ್ನು ಕಲಿಯಲು ಸಾಧ್ಯವಾಗಲಿಲ್ಲ ತಾಯಿಯ ಮೇಲೆ ಒಂದಿಷ್ಟು ಪ್ರೀತಿಯೂ ಅವನಲ್ಲಿ ಹುಟ್ಟಲಿಲ್ಲ

ಮದುವೆಯಾದ ವ್ಯಾಘ್ರಿಣಿಯ ಮಗು

ಮಧ್ಯಪ್ರಾಂತ್ಯದ ಗುಡ್ಡನಾಡಿನ ಬಿಲ್ಲರು ಒಂದು ಸಲ ಹೆಣ್ಣು ಹುಲಿಯಿಂದ ಪೋಷಿಸಲ್ಪಟ್ಟ ಆರು ವರ್ಷದ ಹುಡುಗನನ್ನು ಕಂಡು ಹಿಡಿದರು ಆ ಹುಡುಗ ಕ್ರಮೇಣ ಅವರ ಪೋಷಣೆಯಲ್ಲಿ ಬೆಳೆದು ದೊಡ್ಡವನಾಗಿ ವಿವಾಹಿತನಾದ. ಅವನಿಗೆರಡು ಮಕ್ಕಳು ಹುಟ್ಟಿದ್ದವು ಇಷ್ಟಾದರೂ ಆತ ಸಹಜ ಮಾನವ ಲಕ್ಷಣಗಳ ಸಂಪೂರ್ಣವಾಗಿ ಹೊಂದಿದವನಾಗಿರಲಿಲ್ಲ. ಅವನಿಗೆ ಹುಲಿಗಳ ಭಯವೆಂಬುದಿರಲಿಲ್ಲ ಒಂದು ಸಲ ಎರಡು ಸಣ್ಣ ಹುಲಿಗಳೊಂದಿಗೆ ಕಾಡಿನಲ್ಲಿ ಅವನು ಮಲಗಿ ನಿದ್ರಿಸುತಿದ್ದನಂತೆ ದೊಡ್ಡ ಹುಲಿಗಳು ಕೂಡ ಅವನ ಮೈಮೇಲೆ ಬೀಳುತ್ತಿರಲಿಲ್ಲ ಪ್ರಾಯ ಹೋಗುತ್ತಲೆ ಅವನಿಗೆ ಬುದ್ಧಿ ಕೆಟ್ಟುಹೋಯಿತಂತೆ

ಆಫ್ರಿಕದ ಕೇಪ್ ಪ್ರಾಂತ್ಯದ ಫೋರ್ಟ್ ಹಿಲ್ ಎಂಬಲ್ಲಿನ ಹೊಲಗಳಲ್ಲಿ ಒರ್ವ ನಿಗ್ರೊ ಕೆಲಸಮಾಡಿಕೊಂಡಿದ್ದಾನೆ. ಇಪ್ಪತ್ತು ವರ್ಷಗಳ ಹಿಂದೆ ಬೆಬೂನ್‌ಗಳೆಂಬ ದೊಡ್ಡ ಜಾತಿಯ ಮಂಗಗಳ ಗುಂಪಿನಲ್ಲಿ ಅವನನ್ನು ಹಿಡಿಯಲಾಗಿತ್ತು. ಹತ್ತು ವರ್ಷದ ತನ್ನ ಬಾಲ್ಯವನ್ನು ಅವನು ಈ ಕಪಿ ಸಮಾಜದಲ್ಲಿ ಕಳೆದಿದ್ದನಾದರೂ ಈಗ ಅವನು ತನ್ನ ವಾನರ ಜೀವಾನಾನುಭವದ ಯಾವ ಲಕ್ಷಣವನ್ನೂ ತೋರಿಸದೆ ಸರ್ವಸಾಮಾನ್ಯ ಮನುಷ್ಯರಂತೆ ಇರುವನು. ಕೆಲವು ವರ್ಷಗಳ ನಂತರ ಅವನು ತನ್ನ ಮಂಗ ಮಾತೆಯ ಕುರಿತು ಬಾಲ್ಯನೆನವನ್ನು ತಿಳಿಸಿದನಂತೆ ಅವಳು ಅವನಿಗೆ ಹಣ್ಣುಗಳನ್ನು ತಿನ್ನಿಸುತಿದ್ದಳು. ಅಪಾಯಕಾರಕ ವಿಷಯಗಳ ಬಳಿ ಹೋದಾಗ ಕಿವಿ ಹಿಡಿದು ತಿರುವಿ ಅವನನ್ನು ಎಚ್ಚರಿಸುತಿದ್ದಳಂತೆ!

ಬ್ರಿಟಿಷ್ ಪ್ರಾಣಿ ಶಾಸ್ತ್ರ ಸಂಘದ ಸದಸ್ಯರಾದ ಮಿ। ಸ್ಟುವರ್ಟ್‌ಬೇಕರ್ ಎಂಬವರು ಒಂದು ವಿಚಿತ್ರ ಸಂಗತಿಯನ್ನು ತಿಳಿಸುತಾರೆ ಉತ್ತರ ಆಫ್ರಿಕದ ಕಾಚರ್ ಗುಡ್ಡಗಳಲ್ಲಿ ಒಂದು ಚಿರತೆಗಳಿಂದ ಸಾಕಲ್ಪಟ್ಟ ಮಗು ಸಿಕ್ಕಿತು ಹತ್ತಿರದ ಹಳ್ಳಿಗರು ಚಿರತೆಯ [illegible] ಮರಿಗಳನ್ನು ಕೊಂದಾಗ ಅವುಗಳ ತಾಯಿ ಹಳ್ಳಿಯವರ ಒಂದು ಮಗುವನ್ನು ಎತ್ತಿ ಕೊಂಡು ಹೋಗಿ [illegible] ವರ್ಷಗಳ [illegible] ಸಹಿತ ನಂತರ ಆ ಚಿರತೆ [illegible] ಗ [illegible] ದು ಅದರ [illegible] ಮರಿಗಳೊಂದಿಗೆ ಆಟವಾಡುತಿದ್ದ ಆ ಹುಡುಗನನ್ನು ಹಿಡಿದರು. ಆಗ ಅವನು ಕೈಕಾಲುಗಳಿಂದಲೇ ಚಲಿಸುತಿದ್ದ ಹಸ್ತ ಪಾದಗಳ ಮಾಂಸ ಆವರಣವು ಹುಲಿ ಚಿರತೆಗಳ [illegible] ವಾಗಿ ಬೆಳೆದಿದ್ದು [illegible] ತೆಗಳ [illegible] ಗಳ ತೆಳ್ಳಗಾಗಿ [illegible] ಮಾಂಸವನ್ನೇ ಅವನ ತಿನ್ನುತಿದ್ದ ಆದರೆ ಬೆಳೆಯುತ್ತಾ ಆತ [illegible] ನ ಕೆ ಪರಿವರ್ತನ ಹೊಂದಿದ್ದು [illegible] ಶಕ್ತಿಯು [illegible] ಅವನನ್ನು [illegible] ತಮ್ಮ ಸಂಗಡ [illegible]

ತೋಳ ಜೀವನದ ರಹಸ್ಯ

[illegible] ಎಂಬ ಜಿಲ್ಲೆಯಲ್ಲಿ ಕಲೆಕ್ಟರರಾಗಿದ್ದ ಮಿ। ಜೆ ಎ [illegible] ಅಧಿಕಾರಿಗಳು ತಮ್ಮೆದುರು [illegible] ಇರ್ವ ತೋಳ ಬಾಲಕರ ಕುರಿತ ಒಂದು ವರದಿಯಲ್ಲಿ ದಾಖಲಿ [illegible] ಅವರು ಅಸಹ್ಯ ಕೂಗುಗಳನ್ನು ಹೊರಡಿಸ [illegible] ಆಹಾರವನ್ನು ಕೊಟ್ಟಲ್ಲಿ ಮೃಗಗಳಂತೆ ಅದನ್ನು ಹರಿಹರಿದು ತಿನ್ನುತಿದ್ದರು

1914ರಲ್ಲಿ ಬಂಗಾಲದ ಮಿಡ್ನಾಪುರ ಜಿಲ್ಲೆಯಲ್ಲಿ ಗೋಚರಕ್ಕೆ ಬಂದ ಸಂಗತಿಯು ಇವುಗಳೆಲ್ಲದಕ್ಕಿಂತ ಕೌತುಕದ್ದು ತೋಳಗಳಿಂದ ಸಾಕಲ್ಪಟ್ಟ ಇರ್ವ ಹೆಣ್ಣು ಹುಡುಗಿಯರು ಸಿಕ್ಕಿದರು ಒಬ್ಬಳಿಗೆ 8 ವರ್ಷ, ಇನ್ನೊಬ್ಬಳಿಗೆ 1½ ವರ್ಷದ ಕೂಸು. ಇರ್ವರ [illegible] ಲಕ್ಷಣಗಳು ಹೆಚ್ಚು ಕಡಿಮೆ ಒಂದೇಯಾಗಿದ್ದವು. ಯಾವಳಾದರೊಬ್ಬ ನಿರ್ಭಾಗ್ಯ ತಾಯಿಯೋರ್ವಳು ಅನೈತಿಕವಾಗಿ ಹುಟ್ಟಿದ ಮಗುವನ್ನು ತೋಳ ಸಂಚಾರದ ಪ್ರದೇಶದಲ್ಲಿ ಇಟ್ಟಿರಬಹುದು. ಕೆಲವು ವರ್ಷಗಳ ನಂತರ ಅವಳಿಗೇ ಹುಟ್ಟಿದ ಇನ್ನೊಂದು ಮಗುವನ್ನು ಅದೇ [illegible] ಇಟ್ಟಿರಬಹುದೆಂದು ಊಹಿಸಲಾಗಿದೆ.

(೭ನೇ ಪುಟಕ್ಕೆ ಮುಂದುವರಿದಿದೆ)

ಕೆನರಾ ಬ್ಯಾಂಕ್ ಮತ್ತು ಘಟನಾ ಸಮಿತಿ

ಯಾವುದಾದರೊಂದು ಬ್ಯಾಂಕಿನ [illegible] ಗ್ರಾಹಕರಿಗೆ ಅದರ ಡೈರೆಕ್ಟರರ ಹೆಸರುಗಳಿಗಿಂತ ಆ ಬ್ಯಾಂಕು ಹೇಗೆ ನಡೆಯುತ್ತದೆನ್ನುವುದು ಮುಖ್ಯವಾಗಿದೆ ರತ್ನಾಲಂಕೃತ ಅಥವಾ ಬಿರುದಾಂಕಿತ [illegible] ಆಡಳಿತದಾರಿಕೆಗೆ ಎಂದೂ ಸರಿಗಟ್ಟಲಾರರು ಈ ತತ್ವವನ್ನು [illegible] ಪ್ರಕಟಣೆಗಳಲ್ಲಿ ಕೆನರಾ ಬ್ಯಾಂಕಿನ ಡೈರೆಕ್ಟರರು ತಮ್ಮ ಹೆಸರನ್ನು ಉಪಯೋಗಿಸಲು [illegible] ವರು ಅವರು ದಿನದಿಂದ ದಿನಕ್ಕೆ ಕೆನರಾ ಬ್ಯಾಂಕನ್ನು ಸಮೃದ್ಧಿಗೊಳಿಸಿ ಉತ್ತಮಗೊಳ್ಳುವಂತೆ ಎಲ್ಲಾ ವಿಧದಿಂದಲೂ ತಮ್ಮ [illegible] ಶಕ್ತಿಯನ್ನು ಉಪಯೋಗಿಸುವರು ಆದರೆ ಈಗ ಒಮ್ಮೆ ನಮ್ಮ ಪದ್ಧತಿಯಲ್ಲಿ ಸ್ವಲ್ಪ ವ್ಯತ್ಯಾಸಗೊಳಿಸದರೆ ತಪ್ಪಾಗದೆಂದು ಎನಿಸುತ್ತದೆ ಯಾವ [illegible] ಯಾವ ದೇಶಲ್ಲಾಗಲೀ ಘಟನಾ ಸಮಿತಿಗಳು ದಿನದಿನವೂ ಘಟನೆಗಳು [illegible] ಪ್ರಪಂಚ ಚರಿತ್ರೆಯಲ್ಲಿ ಮೊದಲನೆಯದಾಗಿ ಎಂದು ಸಾಮ್ರಾಜ್ಯ ಶಕ್ತಿಯು [illegible] ತನ್ನ ಅಧಿಕಾರವನ್ನು ಬಿಟ್ಟು ಕೊಡುತ್ತಲಿದೆ

[illegible] ನಮ್ಮ ಕೆನರಾ ಬ್ಯಾಂಕಿನ [illegible] ಡೈರೆಕ್ಟರರಲ್ಲಿ ಇಬ್ಬರು ನಮ್ಮ ದೇಶದ ಭಾವಿ ಘಟನಾ ಸೂತ್ರಗಳನ್ನು ರಚಿಸಲು [illegible] ತರಾಗಿರುವ ವಿಷಯವು ಬ್ಯಾಂಕಿನಲ್ಲಿ [illegible] ನಮ್ಮ [illegible] ಪ್ರತಿನಿಧಿಗಳು [illegible] ಗ್ರಾಹಕರು [illegible] ಅಭಿಮಾನಾಸ್ಪದವಾ [illegible] ಪಿ. ಎಸ್ ನಾಯಕ್, [illegible]

ಜನರಲ್ ಮೆನೇಜರ್

ಕೆನರಾ ಬ್ಯಾಂಕ್ ಲಿಮಿಟೆಡ್

ಮೂಲಧನ (ಸ್ಥಾಪನೆ: 1906) ಕ್ಷೇಮ ನಿಧಿ

೨೮ ಲಕ್ಷ ೧೧ ಲಕ್ಷ

ವ್ಯವಹಾರದಲ್ಲಿದ್ದ ಜುಮ್ಲಾ ನಿಧಿ 5ಕೋಟಿಗಿಂತಲೂ ಮಿಾರಿದೆ

48 ಶಾಖೆಗಳು

ಮದರಾಸು	ಪೂನಾ
ಕೊಯಮುತ್ತೂರು	ನಾಗಪುರ
ಮಧುರೆ	ಅಮರಾವತಿ
ಸೇಲಮ್	ಅಕೋಲಾ
ಕಲ್ಲಿಕೋಟೆ	ತಿರುಚಿನಾಪಳ್ಳಿ
ಕೊಚ್ಚಿ	ತುತುಕುಡಿ
ಅಲಪ್ಪೆ	ಕರಾಚಿ
ಕ್ವಿಲೋನ್	ಮೈಸೂರು
ಸಿಕಂದರಾಬಾದು	ಬೆಂಗಳೂರು
ಕೊಲ್ಹಾಪುರ	ದಾವಣಗೆರೆ
ಬೆಳಗಾಂವ್	ಶಿವಮೊಗ್ಗಾ
ಹುಬ್ಬಳ್ಳಿ	ಮಂಗಳೂರು ಮುಂತಾದುವು

ಮುಂಬಯಿ ಮತ್ತು ಅದರ ಸರಹದ್ದುಗಳಲ್ಲಿ 5 ಶಾಖೆಗಳು

CANARA BANK LIMITED.

(Incorporated in British India. Liability of Members Ltd.)

ನೆಹರುಗಳೊಡನೆ ಡಿಲ್ಲಿಯಿಂದ ಲಂಡನಿಗೆ

ಕಾರ್ಯದರ್ಶಿ ಮಥ್ಯಾಯವರ ಅನುಭವ

ಮಾಲ್ಟಾದಲ್ಲಿ ಚರ್ಚಿಲ್ಲರ ಕೋಣೆಯೊಳಗೆ ವಾಸ

ನೆಹರುಗಳೊಂದಿಗೆ ಅವರ ಸ್ವಂತ ಕಾರ್ಯದರ್ಶಿಗಳಾಗಿ ಲಂಡನಿಗೆ ಹೋಗಿದ್ದ ತಿರುವಾಂಕೂರಿನ ಶ್ರೀ 'ಮಾಥೈ' ಅವರು ತಮ್ಮ ಪ್ರಯಾಣದನುಭವಗಳನ್ನು ಒಂದು ವಿಶೇಷ ಲೇಖನದಲ್ಲಿ ತಿಳಿಸುತ್ತಾರೆ.

ಲಂಡನ್ ಪ್ರಯಾಣ ಸಿದ್ಧತೆಗೆ ಕೇವಲ 30 ಗಂಟೆಗಳ ಅವಧಿಯಿತ್ತು. ಇಷ್ಟರಲ್ಲಿ ತಕ್ಕ ಉಡುಪು ತೊಡುಪುಗಳು ತಯಾರಾಗಬೇಕು. ನೆಹರುಗಳ ಐರೋಪ್ಯ ಅಂಗಿ ಚಲ್ಲಣಗಳನ್ನು ಅಲಾಹಾಬಾದಿನಿಂದ ತರಬೇಕು. ಅಲ್ಲಿ ಅವು 9 ವರ್ಷಗಳಿಂದ ಕಪಾಟು ವಾಸಮಾಡುತ್ತವೆ. ಕೆಲವಕ್ಕೆ ಹುಳ ಹುಪ್ಪಟ್ಟೆಗಳೂ ಆಕ್ರಮಿಸಿದ್ದವು. ಅವನ್ನೆಲ್ಲ ದುರುಸ್ತಿ ಮಾಡಿ ಇಸ್ತ್ರಿ ಹಾಕಿ ಸಜ್ಜುಗೊಳಿಸುವ ಭಾರ ಇಂದಿರಾ ನೆಹರುವಿನ ಮೇಲೆ ಬಿತ್ತು.

ಮತ್ತೆ ಡಿಲ್ಲಿ ವಿಮಾನ ರಾಣ್ಯಕ್ಕೆ ಮುಟ್ಟಿದಾಗ ಮೂರು ಮಹತ್ವದ ಕಾಗದ ಪತ್ರಗಳ ಕಟ್ಟುಗಳು ಸಂಸ್ಕಾರ ಭವನದೊಳಗೆ ಉಳಿದುವು. ಅವನ್ನು ತಾರದಕ್ಕೆ ನೆಹರು ಕಾರ್ಯದರ್ಶಿಗಳನ್ನು ಗದರಿಸಿದರು. ಬೀಗದ ಕೈಯೂ ಕಛೇರಿಯಲ್ಲೇ ಇದೆ ಎಂದಾಯಿತು. ಅಲ್ಲಿ ಹೋಗಿ ನೋಡಿದರೆ ಬೀಗದ ಕೈ ಸಿಗಲಿಲ್ಲ. ಮತ್ತೆ ಹೇಗೋ ಮೀರಿ ಕೀಲಿಯಿಂದ ಬಾಗಿಲು ತೆಗೆದು ಕಾಗದ ಪತ್ರ ತರಲಾಯಿತು. ನೆಹರುಗಳು ಕೌತುಕ ಸೂಚಿಸಿದರು—ಕಾರಣ ಬೀಗದ ಕೈ ಅವರ ಕೋಟಿನಲ್ಲೇ ಇತ್ತು!

ಕರಾಚಿಗೆ ಮುಟ್ಟಿದಾಗ ನೆಹರುಗಳ ಹಾಸಿಗೆ ಡಿಲ್ಲಿಯಲ್ಲೇ ಉಳಿಯಿತು. ಈ ಅಲಕ್ಷ್ಯಕ್ಕಾಗಿ ಪಂಡಿತಜಿ ತಮ್ಮ ಸ್ವಂತ ಆಳಾದ ಹರಿಯನ್ನು ಗದರಿಸಿದರು. ಫಾರಿ ವ್ಯಾಸ್‌ರಾಯರನ್ನು ತಂದ ವಿಮಾನದಲ್ಲಿ ಡಿಲ್ಲಿಗೆ ಹಾರಿ ಅವರೊಡನೆ ಬೆಡ್ಡಿಂಗನ್ನು ತಂದ.

ತಂದ ಬೆಡ್ಡಿಂಗು ಕರಾಚಿಯಿಂದ 5 ಮೈಲು ದೂರದ ಶ್ರೀ ಮುಲ್‌ಹೋತ್ರರ ಬಂಗ್ಲೆಗೆ ಹೋಯಿತು. ಆದರೆ ನೆಹರುಗಳು ನಗರದ ಹೋಟೆಲೊಂದರಲ್ಲಿ ಇಳಕೊಂಡದ್ದರಿಂದ ಅರ್ಜಂಟ್ ಕಾರಿನಲ್ಲಿ ಅದನ್ನು ತರಬೇಕಾಯಿತು.

ಕರಾಚಿಯಲ್ಲಿ ವಿಮಾನದ ಯಂತ್ರ ಬಾಧೆ ಕೊಡತೊಡಗಿತು. "ಯಂತ್ರ ಕಿಂಕುಳ ತೊಂದರೆ ಕೊಡುತ್ತಿದೆ. ಒಂದು ಸಲಕ್ಕೆ ಹಾರಾಟ ಶುರು ಮಾಡಿದರೆಂದರೆ ಮತ್ತೆ ಆತಂಕವಿಲ್ಲ" ಎಂದು ವೈಮಾನಿಕ ಕ್ಷಮೆ ಕೇಳಿದ. ಈಗಿನ ರಾಜಕೀಯದಲ್ಲಿ ಸ್ವಲ್ಪ ಕಿರುಕುಳ ಉಂಟಾಗಿದೆ—ಎಲ್ಲರೂ ಒಮ್ಮೆ ಘಟನಾ ಸಭೆಯಲ್ಲಿ ಒಟ್ಟುಗೂಡಿದರೆ ಎಲ್ಲವೂ ಸರಿಹೋಗಬಹುದು.

ಕೈರೋದಲ್ಲಿ ಪಂಡಿತಜಿ ಅವರು ಅಲ್ಲಿನ ಪ್ರಾಚೀನ ಕ್ರಿಶ್ಚನ್ ಗೋಪುರ ಸಮಾಧಿಗಳಾದ ಪಿರಮಿಡ್ಡುಗಳನ್ನು ನೋಡಬೇಕೆಂದಿದ್ದರು. ಆದರೆ ಅವು ಸ್ವರ ಭೇಟಿಗಳಿಂದ ಸಾಧ್ಯವಾಗಲಿಲ್ಲ. ಮಧ್ಯ ರಾತ್ರೆ ತನಕ ಸಂದರ್ಶಕರು ಅವರನ್ನು ಬಿಡಲಿಲ್ಲ. ಹಿಂದೀ ಸೈನಿಕರಂತೂ ಜೈ ಹಿಂದ್ ಎಂದು ಪಂಡಿತರನ್ನು ಸ್ವಾಗತಿಸಿದರು.

ಮಾಲ್ಟಾದಲ್ಲಿ 12 ಗಂಟೆ ತಡವಾಯಿತು. ಅಲ್ಲಿಯ ಗವರ್ನರರು ಜನ್ನ ನೆಹರುಗಳ ಹಳೆ ಸ್ನೇಹಿತರು. ಚರ್ಚಿಲ್ಲರು ಉಳಕೊಂಡ ಕೋಣೆಯಲ್ಲಿ ಅತಿಥಿಗಳಲ್ಲಿ ಕೆಲವರು ಉಳಕೊಂಡರು. ಅಲ್ಲಿನ ತೋಟದಲ್ಲಿ ಮಾಜಿ ಕೈಸರನೂ, ಜಪಾನಿನ ಚಕ್ರವರ್ತಿಯಾದ ಹಿರೊ ಹಿಟೊವೂ ನೆಟ್ಟ ಕೆಲವು ಮರಗಳಿದ್ದವು. ಕಾಂಗ್ರೆಸ್ ಅಧ್ಯಕ್ಷರ ಹತ್ತಿರದ ಸಂಬಂಧಿಕರಾದ ಓರ್ವ ಕೃಪ್ಲಾನಿಯವರು ನೆಹರುಗಳನ್ನು ನೋಡಬಂದಿದ್ದರು. ಅವರು ಮಾಲ್ಟದ ದೊಡ್ಡ ವರ್ತಕರಾಗಿದ್ದರು.

ಲಂಡನಿನಲ್ಲಿ ಭಾರಿ ಸ್ವಾಗತ. ಸಿಕ್ಖರು ಕಾಂಗ್ರೆಸ್ ಧ್ವಜ ಹಿಡಿದು ಹಾರ ತುರಾಯಿ ಹಾಕಿದರು. ಲೀಗ್ ಸಹಾನುಭೂತಿಗಳು ಕರ್ಕಶವಾದ ಗುಲ್ಲು ಘೋಷ ಹಾಕುತ್ತಲಿದ್ದರು. ನೂರು ವರ್ತಮಾನ ಪತ್ರಿಕಾ ಪ್ರತಿನಿಧಿಗಳೂ, ನೂರು ಛಾಯಾಚಿತ್ರ, ಚಲಚಿತ್ರಗಾರರೂ ತಮ್ಮ ಕೆಲಸದಲ್ಲಿದ್ದರು.

4 ದಿವಸ ಲಂಡನ್ ವಾಸ. ಸ್ಕಾಟ್ಲೆಂಡ್ ಯಾರ್ಡಿನ ಗುಪ್ತ ಪೋಲೀಸರು ನೆಹರುಗಳ ಕಾವಲಾಗಿ ತುಂಬಾ ಪರಿಶ್ರಮ ವಹಿಸಿದ್ದರು. ಅವರಿಗೊಂದು ಪಾರಿತೋಷಕ ಕಳುಹಿಸಬೇಕೆಂದರು ಪಂಡಿತರೆಂದಿದ್ದರು.

ಮರಳಿ ಬರುವಾಗ ಪೆಲೆಸ್ತೀನದ ಲಿಡ್ಡಾ ವಿಮಾನ ನಿಲ್ದಾಣದಲ್ಲಿ ಬ್ರಿಟಿಷ್ ಹಿಂದೀ ಸೈನ್ಯದ ಚೌಧರಿ ದಂಪತಿಗಳ ಅತಿಥಿಗಳಾಗಿದ್ದರು. ಅಲ್ಲಿಂದ ಹಾರಿದಾಗ ನೆಹರುಗಳ ಒಂದು ಪೆಟ್ಟಿಗೆ ಕಾಣೆಯಾಗಿತ್ತು. ಪುನಃ ಕಾರ್ಯದರ್ಶಿಗೂ ಹರಿಗೂ ಗದರಿಕೆ. ಈ ಸಲ ತಾಜಾ ನೆಹರು ಕ್ರೋಧ. ಪೆಟ್ಟಿಗೆಯಲ್ಲಿ ಅವರ ಶಯನ ಪೋಷಾಕು ಇತ್ತು. ನೆಹರುಗಳು ತಮ್ಮ ಕ್ಷೌರ ಮತ್ತು ಶಯನ ಪೋಷಾಕಿನ ಕುರಿತು ವಿಶೇಷ ನಿಷ್ಠೆ ವಹಿಸುತ್ತಾರೆ. ಬೇರೇನಿಲ್ಲದಿದ್ದರೂ ಅವರು ಸಹಿಸುವರು. ಕೊನೆಗೆ ಪೆಟ್ಟಿಗೆ ವಿಮಾನದ ಎದುರ್ಭಾಗದ ಮೂಗು ಕೋಣೆಯಲ್ಲಿದೆ ಎಂದು ತಿಳಿಯಿತು. ಅಂದಿನ ನಿದ್ರೆ ಹಾಕಿದ ಬಟ್ಟೆಯಲ್ಲೇ ಸಾಗಿತು.

5444 ಮೈಲು ಡಿಲ್ಲಿಯಿಂದ ಲಂಡನಿಗೆ ಹೋಗುವಾಗ 30 ಗಂಟೆಗಳ ಹಾರಾಟ. ಬರುವಾಗ ಅಷ್ಟೇ ದೂರ ಕೇವಲ 21 ಗಂಟೆಗಳಲ್ಲಿ. ಕಾರಣ— ಘಟನಾ ಸಮಿತಿಗೆ ವಿಳಂಬವಾಗಬಹುದು.

೬ನೇ ಪುಟದಿಂದ ಮುಂದುವರಿದುದು

ಕಾಡು ಮೃಗಗಳು ಪೋಷಿಸಿದ ನಾಡ ಮಕ್ಕಳು

ಹುಡುಗಿಯರು ಮೈಮೇಲೆ ಬಟ್ಟೆ ಉಡಿಸಿಕೊಳ್ಳಲು ತಿರಸ್ಕರಿಸುತ್ತಿದ್ದರು. ಮೈತೊಳೆಯಲು ಪ್ರಯತ್ನಿಸಿದಾಗ ಅವರು ಬೊಬ್ಬೆ ಹೊಡೆದು ಮೈಗೆ ಮುಟ್ಟಿದ ಕೈಯನ್ನು ಕಚ್ಚುತ್ತಿದ್ದರು. ಕೊನೆಗೆ ಅವರನ್ನೊಂದು ಅನಾಥಾಲಯಕ್ಕೆ ಕೊಂಡು ಹೋಗಲಾಯಿತು. ಅಲ್ಲಿ ಅವರು ಇತರ ಮಕ್ಕಳೊಂದಿಗೆ ಬೆರೆಯಲು ಪ್ರಯತ್ನಿಸುತ್ತಿಲ್ಲ. ಇತರರು ಹತ್ತಿರ ಬಂದರೆ ಗುರುಗುಟ್ಟುತ್ತ ಹಲ್ಲು ಕಿರಿದು ಹೆದರಿಸುತ್ತಿದ್ದರು. ಆದರೆ ನಾಯಿ ಆಡುಗಳೊಂದಿಗೆ ಅವರು ಸ್ನೇಹ ಭಾವದಿಂದ ಸಂಪರ್ಕ ಹೊಂದುತ್ತಿದ್ದರು. ಹಿಡಿದ ಒಂದು ವರ್ಷದ ನಂತರ ಚಿಕ್ಕವಳು ಸತ್ತು ಹೋದಳು.

ಕಿರಿ ಸಂಗಾತಿಯ ಮರಣದಿಂದ ಹಿರಿಯಳು ಸಮಾಧಾನ ಪಡಿಸಲಾರದಷ್ಟು ನೊಂದುಕೊಂಡಳು. ಎರಡು ದಿನಗಳ ತನಕ ಅನ್ನ ನೀರನ್ನು ಅವಳು ಮುಟ್ಟಲಿಲ್ಲ. ಆಗ ಅವಳು ಬರಿ ಎರಡು ಶಬ್ದಗಳನ್ನು ಮಾತ್ರ ಕಲಿತಿದ್ದಳು. ತನ್ನ ಪೋಷಕಿಯಾದ ಓರ್ವ ಕ್ರೈಸ್ತ ಮಿಶನರಿಯ ಹೆಂಡತಿಗೆ "ಮಾಮಾ" ಎಂದು ಸಂಬೋಧಿಸುತ್ತಿದ್ದಳು. ತೃಷೆ ಹಸಿವಾದಾಗ ಭ್ಯೂ ಎನ್ನುತ್ತಿದ್ದಳು. ಮತ್ತೆ ನಾಲ್ಕು ಶಬ್ದಗಳನ್ನು ಕಲಿಯಲು ಅವಳಿಗೆ ಎರಡುವರ್ಷ ತಗಲಿತು. 'ಹೌದು, ಅಥವಾ "ಇಲ್ಲ' ಎಂದು ಸರಳ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದಳು.

ಈ ಹೊತ್ತಿಗೆ ಅವಳು ನೆಟ್ಟಗೆ ನಿಲ್ಲಲೂ ನಡೆಯಲೂ ಕಲಿತಿದ್ದಳು. ಆದರೆ ವೇಗವಾಗಿ ಚಲಿಸಲು ಕೈಕಾಲುಗಳನ್ನೆಲ್ಲ ಉಪಯೋಗಿಸುತ್ತಿದ್ದಳು. ಹದಿನಾಲ್ಕು ವರ್ಷವಾದಾಗ ಅವಳು ಸುಮಾರು 45 ಶಬ್ದಗಳನ್ನು ಕಲಿತಿದ್ದಳು. ಅಲ್ಪ ಅವಧಿಯ ತನಕ ಅವಳನ್ನು ಚಿಕ್ಕ ಮಕ್ಕಳನ್ನು ನೋಡಿಕೊಳ್ಳುವುದಕ್ಕೆ ಬಿಡಬಹುದಿತ್ತು. ಅವಳ ರಕ್ತದಲ್ಲಿ ತನ್ನ ಸ್ವಭಾವವೂ ದೋಷವೂ ಇತ್ತು. ತನ್ನ ಹದಿನೈದನೇ ವರ್ಷದಲ್ಲಿ ಒಂದು ಕ್ಷಯ ವ್ಯಾಧಿಯಿಂದವಳು ಮಡಿದಳು.

THE CANARA BANKING CORPORATION LTD.

(Incorporated in British India)

Estd: 1906

Head Office: UDIPI, S Kanara

Authorised Capital	Rs 25,00,000
Issued & Subscribed Capital	16,00,000
Paid up Capital	15,87,600
Reserves	4,60,000
Total Resources Around	Rs 2¼ Crores

Branches at Fort Bombay Madras, Bangalore Coimbatore, Salem Calicut Hubli, Mysore, Cochin, Mangalore Mercara etc, etc etc.

BANKING BUSINESS OF EVERY DESCRIPTION TRANSACTED

ರಿಯಾಯತಿ ಲಗ್ಗೇಜಿನಲ್ಲಿ ವ್ಯಾಪಾರಿ ಸಾಮಾನುಗಳ ನಿಷೇಧ

ಪಸೆಂಜರರ ಸೌಕರ್ಯಗಳ ಬಗ್ಗೆ ಒಂದು ಮಣ ಭಾರದ ಸಾಮಾನುಗಳನ್ನು ಫ್ರೀ ತೆಗೆದುಕೊಂಡು ಹೋಗಬಹುದಾಗಿ ಮಾಡಿದ ರಿಯಾಯತಿ ಕಾರಣದಿಂದಾಗಿ ಪೆಸೆಂಜರರು ಅವರ ಸ್ವಂತ ಉಪಯೋಗದ ಸಾಮಾನುಗಳಲ್ಲದೆ ವ್ಯಾಪಾರಿ ಸಾಮಾನುಗಳನ್ನು ತಮ್ಮೊಡನೆ ಪ್ರಯಾಣ ಬೆಳೆಸುವ ಸ್ನೇಹಿತರ ಹೆಸರಿನಲ್ಲಿ ಈ ರಿಯಾಯತಿ ಮೂಲಕ ಧರ್ಮಾರ್ಥ ಸಾಗಿಸುವುದು ರೂಢಿಯಾಗಿದೆ

ಮೋಟರ್ ವಾಹನಗಳು ರೈಲುಗಾಡಿಗಳಂತಾಗಿಲ್ಲ. ಅವುಗಳಲ್ಲಿ ನಿಯಮಿತ ಭಾರಕ್ಕಿಂತ ಹೆಚ್ಚಿನ ಸಾಮಾನುಗಳನ್ನು ಒಯ್ಯುವುದು ಮೋಟರ್ ವಾಹನಕ್ಕೂ ಮತ್ತು ಪೆಸೆಂಜರರಿಗೂ ಅಪಾಯವಾಗಿದೆ. ಕಾರಣ ಬಸ್ಸುಗಳಲ್ಲಿ ಒಯ್ಯುವ ಸಾಮಾನುಗಳನ್ನು ಪೆಸೆಂಜರರ ಆವಶ್ಯಕತೆ ಬಗ್ಗೆನೇ ಮಿತಗೊಳಿಸುವುದು ಅಗತ್ಯವಿದೆ.

ವ್ಯಾಪಾರಿ ಸಾಮಾನುಗಳನ್ನು ಒಯ್ಯುವರೆ ವ್ಯಾಪಾರಿಗಳು

ಶೆಡ್ಯೂಲ್ ಟೈಮಿಗೆ ಕೊಂಡೊಯ್ಯುವ "ಲಕ್ಷ್ಮಿ" ಯಾ "ಸಿ. ಪಿ. ಸಿ. ಲೋರಿ ಸರ್ವಿಸುಗಳ ಸೌಖ್ಯವನ್ನು ಉಪಯೋಗಿಸಬೇಕಾಗಿ ಅಪೇಕ್ಷಿಸುತ್ತೇವೆ

ವ್ಯಾಪಾರಿ ಸಾಮಾನುಗಳನ್ನು ಎಷ್ಟಕ್ಕೂ ಫ್ರೀ ಲಗ್ಗೇಜಿನ ಅಂಶದಲ್ಲಿ ಸೇರಿಸಿಕೊಳ್ಳಲಾಗುವುದಿಲ್ಲ. ಈ ಕುರಿತು ಮಾಹಿತಿಯನ್ನು ಬುಕ್ಕಿಂಗ್‌ಕ್ಲಾರ್ಕರಿಂದ ಪಡೆಯಬಹುದು

JOINT MANAGERS,

The Combined Booking Agency, MANGALORE — **The Joint Booking Office,** KODIALBAIL

[illegible]

ಮಂಗಳೂರು.

[illegible]

(Regd)

ಅಮೃತಾಂಜನ

[illegible]

1947 ***Greetings For The New Year*** **1947**

To

ALL OUR POLICY HOLDERS,
MEDICAL EXAMINERS,
AGENTS AND WELLWISHERS,

And Best Wishes

FOR A PROSPEROUS YEAR TO COME

From

Kochikar Brothers, Limited.

Chief Agents for South India including Indian States & Bombay City

THE BOMBAY LIFE ASSURANCE COMPANY LIMITED

MADRAS, BANGALORE, TRIVANDRUM, MANGALORE, MADURA, CALICUT, BOMBAY, & UDIPI.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. Increases the vitality and sexual vigour. Also useful in habitual abortion and all [illegible] pertaining to the [illegible] & lungs.

Depot: [illegible]

Bhuv[illegible]ndra Produc[illegible] Ltd.

[illegible] Office

[illegible] S. Kanara

'ಭುವನೇಂದ್ರ'

ದಶಮೂಲಾರಿಷ್ಟ

[illegible]

ಭುವನೇಂದ್ರ [illegible]

[illegible]

ಡೊಂಗರೆ

ಬಾಲಾಮೃತವು

ಮಕ್ಕಳಿಗೆ

[illegible]

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಖು 10—1—1947 [ಸಂಚಿಕೆ 2]

ಹಿಂದೀ ರಾಜಕಾರಣ

ಲೇ: ಶ್ರೀ ಎನ್. ಆರ್. ಕಲ್ಲೆ.

ಕಾಂಗ್ರೆಸ್ಸಿನ ಮಹತ್ವದ ನಿರ್ಧಾರ

ಎ. ಆಯ್. ಸಿ. ಸಿ. ನಿರ್ಣಯವನ್ನು ಕುರಿತು ಈ ವರೆಗೆ ಜಿನ್ನಾಸಾಹೇಬರು ಏನೂ ಅಂದಿಲ್ಲ. ಬೇಗನೆ ಅಂದರೆ ತಿಂಗಳ ಕೊನೆಗೆ ಲೀಗ ವರ್ಕಿಂಗ್ ಕಮಿಟಿ ಸಭೆ ಕೂಡುವದೆಂದೂ ಅದರ ಮೇಲೆ ಅವರ ಕ್ರಿಯಾಸಮಿತಿ ಸಭೆ ಕೂಡುವದೆಂದೂ ಮುಂತಾದ ಸುದ್ದಿ ಇದೆ. ಆದರೆ ಮುಸ್ಲಿಂ ಲೀಗು ಮುಂದಿನ ಮಾರ್ಗ ಕೈಕೊಳ್ಳಬಹುದು. ಲಂಡನಿನಿಂದ ಯಾವ ಸಲಹೆ ಸಿಗಬಹುದು ಎಂಬ ವಿವರವಿನ್ನೂ ಗೊತ್ತಾಗಿಲ್ಲ. ಅಂತೇ ಜಿನ್ನಾರು ಬಾಯಿ ಬಿಗಿ ಹಿಡಿದುಕೊಂಡು ಮೌನ ತಳೆದಿರುವರ

ಉಚಿತ ಮಾರ್ಗ

ಕಾಂಗ್ರೆಸ್ ಅನುಸರಿಸಿದ ಮಾರ್ಗ ಉಚಿತವಾದುದೆಂದು ಡಾ। ಗಾರ್ಗೀಳ ಹಾಗೂ ಇನ್ನಿತರ ಘಟನಾತಜ್ಞರ ಅಭಿಪ್ರಾಯವಿದೆ. ಡಿಸೆಂಬರ ತಾ ೬ಕ್ಕೆ ಕೊಟ್ಟ ವ್ಯಾಖ್ಯೆಯು ಆಗತ್ಯವಿದ್ದುದಲ್ಲ. ಮೇ ತಾ ೧೬ರ ಘೋಷಣೆಯೇ ಸಾಕಿತ್ತು. ಆದರೂ ಬ್ರಿಟಿಷ್ ಸರಕಾರವು ಅಧಿಕಪ್ರಸಂಗತನ ಮಾಡಿ ಈ ರೀತಿ ಮಾಡಿದೆ. ಇಷ್ಟಾದರೂ ಪ್ರಾಂತಗಳಿಗೆ ಅಥವಾ ಆಯಾಯಭಾಗದ ಅಲ್ಪಸಂಖ್ಯಾತರಿಗೆ ಸಂಬಂಧಪಟ್ಟ ಗುಂಪುಗಳಿಗೂ ಸೇರುವ ಅಥವಾ ಸೇರದೆ ಸಿಡಿದು ನಿಲ್ಲುವ ಅಧಿಕಾರವನ್ನು ಕಾಂಗ್ರೆಸ್ ತನ್ನ ಠರಾವಿನಲ್ಲಿ ತೆರೆದಿಟ್ಟಿರುವದರಿಂದ ಕಾಂಗ್ರೆಸ್ ಮಾಡಿದ ನಿರ್ಣಯವು ಮಹತ್ವದ್ದೆಂದೂ ನಿಷ್ಪಕ್ಷಪಾತದ್ದೆಂದೂ ಜನಜನಿತವಿದೆ

ಬ್ರಿಟಿಷರ ಮೇಲಿರುವ ಹೊಣೆ

ಕಾಂಗ್ರೆಸ್ ಸ್ಪಷ್ಟ ಭಾಷೆಯಲ್ಲಿ ವ್ಯಕ್ತ ಮಾಡಿದ ಅಭಿಪ್ರಾಯ ಮತ್ತು ನಿರ್ಣಯದಿಂದ ಈಗ ಎಲ್ಲ ಹೊಣೆಯು ಬ್ರಿಟಿಷ್ ಸರಕಾರದ ಮೇಲೆ ಬಂದಂತಾಗಿದೆ. ಕಾಂಗ್ರೆಸ್ ವಹಿಸಿದಷ್ಟು ನಿಷ್ಪಕ್ಷಪಾತ ಮಾರ್ಗವನ್ನು ಲೀಗಿನವರಾಗಲಿ ಬ್ರಿಟಿಷರಾಗಲಿ ಈ ವರೆಗೆ ವಹಿಸಲಿಲ್ಲ. ಹೊರಗೆ ಉಳಿದವರನ್ನು ಒಳಗೆ ತೆಗೆದುಕೊಳ್ಳಲು ಕಾಂಗ್ರೆಸ್ ಇಲ್ಲಿ ಅವಕಾಶವನ್ನು ಕಲ್ಪಿಸಿಕೊಟ್ಟಿದೆ. ಇಂಥ ಸಂದರ್ಭದಲ್ಲಿ ಜಾಗತಿಕ ಅಭಿಪ್ರಾಯವು ಕಾಂಗ್ರೆಸ್ ನಿರ್ಣಯವನ್ನು ಸಮರ್ಥಿಸಿದೆಯಲ್ಲದೆ, ಲಂಡನ್ ಟಾಯಿಮ್ಸ್‌ದಂಥ ಬ್ರಿಟಿಷ್ ಪತ್ರಿಕೆಯೂ ಲೀಗಿಗೆ ಬುದ್ಧಿ ಹೇಳಿದೆ. ಜಗತ್ತಿನ ಬುದ್ಧಿವಾದವು ಲೀಗು ಕೇಳಲಿ, ಕೇಳದಿರಲಿ—ಯಾವ ಅಪವಾದದ ಹೊಣೆಯೂ ಇನ್ನು ಕಾಂಗ್ರೆಸಿನ ಮೇಲೆ ಇಲ್ಲ.

ಲೀಗಿನ ಅಂಜಿಕೆ

ಘಟನಾ ಸಮಿತಿಯು ಮೇಲಿರುವ ಹೊಣೆ

ಇದೇ ತಿಂಗಳ ತಾ ೬ಕ್ಕೆ ಎ. ಐ. ಸಿ. ಸಿ. ಸಭೆ ಕೂಡಿದಾಗ ಕಾಂಗ್ರೆಸ್ ಮಾಡಿದ ನಿರ್ಣಯವು ಹಿಂದುಸ್ಥಾನದ ಇತಿಹಾಸದಲ್ಲಿ ಅತ್ಯಂತ ಮಹತ್ವದ್ದಿದೆ. ಹೇಗಿದ್ದರೂ ಕಾಂಗ್ರೆಸನ್ನು ಅಪವಾದಕ್ಕೆ ಗುರಿಪಡಿಸಿ ಅಪಪ್ರಚಾರ ಮಾಡಿ ತಮ್ಮ ಬೇಳೆ ಬೇಯಿಸಿಕೊಳ್ಳುವದು ಬ್ರಿಟಿಷ ಮುತ್ಸದಿಗಳಿಗೆ ಬೇಕಾಗಿತ್ತು. ಆದರೆ ಆ ಕೆಲಸವು ಕೈಗೂಡಲಿಲ್ಲ. ಸಕಾಲದಲ್ಲಿ ಎ. ಐ. ಸಿ. ಸಿ. ಮಾಡಿದ ನಿರ್ಣಯದ ಬಗ್ಗೆ ಬನ್ನಾಭಿಮತಗಳು ಕಂಡು ಇದಕ್ಕಿಂತ ಉತ್ತಮ ನಿರ್ಣಯ ಮಾಡುವದು ಕಾಂಗ್ರೆಸಿಗೆ ಸಾಧ್ಯವಿರಲಿಲ್ಲ

ಲೀಗಿನ ಹಠಮಾರಿತನದಿಂದ ದೇಶದ ಪ್ರಗತಿಯಾಗಲಿ ಮುಸ್ಲಿಂ ಏಳಿಗೆಯಾಗಲಿ ಜಿನ್ನಾರು ನೆರವಾದಂತಾಗುವದಿಲ್ಲ. ಇದು ಸಂಧಿಗ್ಧ ಕಾಲ. ಈ ಕಾಲದಲ್ಲಿ ದೊರಕಿದ ಸುಸಂಧಿಯನ್ನು ಜಿನ್ನರು ಬಿಟ್ಟುಕೊಡುವದೆಂದರೆ ತೀರ ದುಸ್ಸಹವಾದ ವಿಷಯ. ಇದನ್ನು ಯಾವ ರಾಜಕಾರಣಿಯೂ ಸಮರ್ಥಿಸಲಾರನು. ರಾಜನೀತಿಯ ದೃಷ್ಟಿಯಲ್ಲಿ ಇದೊಂದು ಬಗೆಯ ದೇಶದ್ರೋಹವೆಂದರೂ ಸಲುವದು

ಘಟನಾ ಸಮಿತಿ ಸಭೆ

ಈ ತಾ ೨೦ಕ್ಕೆ ಪುನಃ ರಾಜ್ಯ ಘಟನಾಸಮಿತಿ ಸಭೆ ಕೂಡುವದಿದೆ. ಆಗ್ಗೆ ಲೀಗು ಸೇರುವದೋ ಇಲ್ಲವೋ? ಹೇಳಬರುವಂತಿಲ್ಲ. ತಿಂಗಳ ಕೊನೆಗೆ ಲೀಗ್ ವರ್ಕಿಂಗ ಕಮಿಟಿ ಸಭೆ ಸೇರುವದಾದರೆ ಈ ಸಭೆಗೆ ಲೀಗು ಬರಲಿಕ್ಕಿಲ್ಲ. ಮುಂದ ತಮ್ಮ ಸಭೆಯಲ್ಲಿ ಆಗತಕ್ಕ ನಿರ್ಣಯದಂತೆ ಲೀಗ್ ನಡೆದುಕೊಳ್ಳಬಹುದು. ಈ ವರೆಗೆ ಮಾಡಿದಂತೆ ಲೀಗ್ ಇನ್ನೂ ಬ್ರಿಟಿಷರ ಮೇಲೆ ವಿಶ್ವಾಸವನ್ನಿಟ್ಟು ಅಡ್ಡಗಾಲಿಡುತ್ತ ಸಾಗಿದರೆ ಜಾಗತಿಕ ಸಹಾನುಭೂತಿ ಹಾಗೂ ತಮ್ಮವರ ಸಹಕಾರವನ್ನು ಮುಂದೆ ಕಳೆದುಕೊಳ್ಳಬೇಕಾದೀತು.

ಪ್ರಾಂತಗಳ ಪ್ರಶ್ನೆ

ಗಡಿನಾಡ ಪ್ರಾಂತ, ಅಸ್ಸಾಮು, ಹಾಗೂ ಸಿಖರಿಗೆ ಡಿಸೆಂಬರ ತಾ ೬ರ ಬ್ರಿಟಿಶ ವ್ಯಾಖ್ಯೆಯಿಂದ ಪ್ರಶ್ನೆ ಗಡುಚಿಸಲಾಗಿದೆ. ಗಡಿನಾಡು ಮತ್ತು ಅಸ್ಸಾಮು ಪ್ರಾಂತಗಳು ಕಾಂಗ್ರೆಸ್ ನಿರ್ಣಯದಂತೆ ಶಕ್ಯವಿರುವವರೆಗೆ ರಾಜ್ಯಘಟನಾ ಸಮಿತಿಎಂಬ ಸಭೆಯಲ್ಲಿ ಭಾಗವಹಿಸಬಹುದು. ಮುಂದೆ ಕಷ್ಟವೆಂದು ತೋರಿದಾಗ ಸಿಡಿದು ಹೋಗಬಹುದು. ಸಿಖರು ಅಲ್ಪಸಂಖ್ಯಾಕರು—ಬಿಗುಂಪಿನಲ್ಲಿ ಆ ಭಾಗದ ಸಮಾವೇಶವಾಗುವ ತಮ್ಮ ವಿರೋಧನ್ಯಕ ಮಾಡಿ ದೂರ ಸರಿದು ನಿಲ್ಲಲು ಸಿಖರು ಘಟನಾಸಮಿತಿಯಿಂದ ಅಂಥ ಪ್ರಸಂಗದಲ್ಲಿ ಹೊರಬೀಳಬೇಕು. ಅಲ್ಲದೆ ಕಾಂಗ್ರೆಸ್ ಅವರಿಗೆ ಎಲ್ಲ ಸಹಕಾರಕೊಟ್ಟು ನೆರವಾಗಬೇಕಾಗುವದು

ಮುಂದೇನು?

ಇಷ್ಟಾದರೂ ಮುಂದೆ ಬಿಕ್ಕಟ್ಟು ಕಟ್ಟಿದ್ದಾದರೆ ಮುಂದೇನು' ಎಂಬ ಪ್ರಶ್ನೆಯು ಅತ್ಯಂತ ಮಹತ್ವದ್ದು—ಎಷ್ಟರಮಟ್ಟಿಗೆ ಶಕ್ಯವಿರುವದೋ ಅಷ್ಟರ ವರೆಗೆ ಕಾಂಗ್ರೆಸ್ ಎಲ್ಲರ ಕೂಡೆ ಸಹಕರಿಸಿಕೊಂಡು ಹೋಗುವದು ಎಂದು ಬಿಕ್ಕಟ್ಟುಂಟಾಗುವುದೇ ಆಗ ಮುಂದಿನ ಮಾರ್ಗಕ್ಕೆ ಶಕ್ತ ತಳಹದಿಯನ್ನು ಹಾಕಿಕೊಂಡಿರುವ ಅದು ಹೋರಾಟಕ್ಕೆ ಸಿದ್ಧವಾಗಿ ನಿಲ್ಲುವದು ಎಂಬುದರಲ್ಲಿ ಸಂಶಯವಿಲ್ಲ. ಮುಂದೆ ಅನಿವಾರ್ಯವಾಗಿ ಹೋರಾಟವಾದಿಯೇ ತೀರಬೇಕಾದರೆ ಮೊದಲಿನಂತೆ ಸತ್ಯ ಹಾಗೂ ಅಹಿಂಸೆಯ ತಳಹದಿಯ ಮೇಲೆ ಕಾಂಗ್ರೆಸ್ ಹೋರಾಡಿ ಸ್ವಾತಂತ್ರ್ಯಗಳಿಸಲು ಸಿದ್ಧವಿದೆ. ಹಾಗೂ ಅದಕ್ಕೆ ದೇಶದ ಬೆಂಬಲವಿದೆ.

ಚಿಲ್ಲರೆಸುದ್ದಿ ಸಂಗ್ರಹ

ಅಮೇರಿಕದಲ್ಲಿ ಪ್ರತಿವರ್ಷ 15ವರ್ಷದ 15 ಸಾವಿರ ಹುಡುಗಿಯರು ಮದುವೆಯಾಗುತ್ತಾರೆ. ಪ್ರತಿವರ್ಷ ಇವರಲ್ಲಿ 250 ಹುಡುಗಿಯರು ವಿವಾಹ ವಿಚ್ಛೇದನ ಮಾಡಲ್ಪಡುತ್ತಾರೆ. ಅಲ್ಲದೆ ಆ ಪ್ರಾಯದ 350 ಹುಡುಗಿಯರು ಪ್ರತಿವರ್ಷ ವಿಧವೆಯರಾಗುತ್ತಾರೆ

★

ಶೀಘ್ರದಲ್ಲಿ ಇಡೀ ಯುರೋಪ್ ಖಂಡವು ಸಮಾಜವಾದ ತತ್ವಾನುಯಾಯಿಯಾಗುವುದೆಂದೂ ಜರ್ಮನಿ ಫ್ರಾನ್ಸುಗಳು ಹೊಸ ಬದಲಾವಣೆಯ ನಾಯಕತ್ವ ವಹಿಸುವವೆಂದೂ ಜೋರ್ಜ್ ಸಂತಾಯಾನಾ ಎಂಬ ತತ್ವಜ್ಞಾನಿಗಳು ತಿಳಿಸುತ್ತಾರೆ

★

ಲೊಂಗ್ ಐಲೆಂಡಿನ ಬೆಂಕಿ ಆರಿಸುವ ಶಿಬಂದಿಯವರಾದ ಇರ್ವರು ಒಂದು ಮನೆಗೆ ಬೆಂಕಿ ಕೊಟ್ಟ ಆಪಾದನೆಯ ಮೇಲೆ ವಿಚಾರಣೆಗೊಳಗಾಗಿರುವರು—ತಮ್ಮ ಕೆಲಸದಲ್ಲಿ ಉತ್ಸಾಹ ಹೆಚ್ಚಿಸಲು ಹಾಗೆ ಮಾಡಿದ್ದೆಂದು ಅವರ ಹೇಳಿಕೆ!

★

ಈಚೆಗೆ ಸಂಯುಕ್ತ ಅಮೇರಿಕದ ನಾಗರಿಕರು ವರ್ತಮಾನ ಪತ್ರಿಕೆಗಳಲ್ಲಿ 'ಮನೆಗಳು ಬೇಕೆಂದು' ಜಾಹಿರಾತು ಮಾಡುವಾಗ ತಮ್ಮ ತಮ್ಮ ಗುಣ ದೋಷಗಳನ್ನು ಬಹಿರಂಗ ಮಾಡುವುದು ಒಂದು ಸ್ವಾರಸ್ಯದ ರೂಢಿಯಾಗಿದೆ. ಓರ್ವ ಪ್ರಾಮಾಣಿಕ ಗೃಹಶೋಧಕನು ಹೀಗೆ ಜಾಹಿರಾತು ಇತ್ತಿದ್ದನು. "ಮೊಸಳೆಯೊಂದನ್ನು ಸಾಕುವ ದಂಪತಿಗಳಿಗೆ ಮನೆಬೇಕು. ಶರಾಬು ಕುಡಿಯುವುದು, ಧೂಮ್ರಪಾನ ಸೇವಿಸುವುದು ಮತ್ತು ಇಡೀ ರಾತ್ರಿ ಬೇಂಡು ಬಾರಿಸುವುದೆಂದರೆ ಅವರಿಗೆ ತುಂಬಾ ಇಷ್ಟ"—ಅವನಿಗೆ ಬಹು ಬೇಗನೇ ಮನೆ ಸಿಕ್ಕಿತು!

★

ಯುದ್ಧಕಾಲದಲ್ಲಿ ಶಕ್ತಿರಾಷ್ಟ್ರಗಳ ದೇಶಗಳಲ್ಲೆಲ್ಲ ಮೃತ್ಯು ಕಿರಣಗಳ ಕುರಿತು ತುಂಬಾ ಸಂಶೋಧನೆ ನಡೆದಿದೆ. ಅಮೇರಿಕದಲ್ಲಿ ಕೆಲ ವಿಜ್ಞಾನಿಗಳು ಕಂಡುಹಿಡಿದ ಮೃತ್ಯು ಕಿರಣಗಳಿಂದ 9 ಅಡಿ ದೂರದಲ್ಲಿರುವ ಒಂದು ಹೆಗ್ಗಣವನ್ನು ಮಾತ್ರ ಕೊಲ್ಲಲು ಸಾಧ್ಯವಿತ್ತು.

★

ಶ್ರದ್ಧೆಯ ಪುನರುದ್ಧಾರ-ಗಾಂಧೀಜಿಯ ಧ್ಯೇಯ

[illegible]ರು ಗಾಂಧೀಜಿಗೆ ಕಲ್ಲೆಸೆದ ರೀತಿ

[illegible] ಬಂಗಾಳದಲ್ಲಿ [illegible] ನಡೆಸುವ [illegible] ಕಳೆದುಹೋದ ಶ್ರದ್ಧೆಯನ್ನು ಪುನರುಜ್ಜೀವನಗೊಳಿಸುವುದು ಎಂಬ [illegible] ಶ್ರೀ [illegible] ಹರಿಹರ [illegible] ಒಂದು [illegible]ದಲ್ಲಿ [illegible]ಸುತ್ತಾರೆ:

ಶ್ರದ್ಧೆ ಎಂದರೇನೆಂದು ವಿವರಿಸುತ್ತಾ ಅವರೆನ್ನುತ್ತಾರೆ: ವಿಲಕ್ಷಣವಾದ ಆತ್ಮಗೌರವವನ್ನುಂಟುಮಾಡುವುದೇ ಶ್ರದ್ಧೆಯ ಗುಣ. ಅದನ್ನು ಮುರಿಯ ಬಯಸುವ ಉದ್ಧತ ನ್ಯಾಯಬಾಹಿರ ಬಲಾತ್ಕಾರವನ್ನು ಪ್ರಾಣವನ್ನಾದರೂ ಪಣಕ್ಕಿಟ್ಟು ಎದುರಿಸುವ ಇಚ್ಛಾಶಕ್ತಿಯನ್ನು ಉಂಟುಮಾಡುವುದೇ ಶ್ರದ್ಧೆ.

ಸತ್ವವಿಲ್ಲದ ಶ್ರದ್ಧೆಯಿಂದ ನಂಬಿಕೆ, ಸಂಪ್ರದಾಯ, ರೂಢಿಗಳು ಒಂದು ಮೂಟೆ ಎನಿಸುವುವು. ಸ್ತ್ರೀಯರು ಬಳೆ ತೊಡುವಿಕೆ, ಕುಂಕುಮ ಹಚ್ಚುವಿಕೆ, ಮುಖದ ಮೇಲೆ ಮತ ಚಿಹ್ನೆ ಚಿತ್ರಿಸುವಿಕೆ, ಗಡ್ಡ ಬೆಳೆಸುವಿಕೆ ಇವುಗಳು ಒಂದು ಕಾಲದ ಶ್ರದ್ಧಾಪೂರ್ವಕವಾದ ಕಟ್ಟಳೆಗಳಾಗಿದ್ದವು ಆದರೆ ಇಂದು ಅವು ತೊಡೆದೊಗೆಯಲ್ಪಟ್ಟಿವೆ. ಒಂದು ಕಾಲದಲ್ಲಿ ಇವು ಧ್ಯೇಯಬದ್ಧವಾದ ಪರಿಶುದ್ಧ ಅಂತರೀಕ ಜೀವನದ ಬಾಹ್ಯ ಚಿಹ್ನೆಗಳಾಗಿದ್ದುವು

ಅಂದವೇಲೆ ಇಂದು ಕೇವಲ ಬಾಹ್ಯಾಂಡಬರವಾಗಿ ತೋರುವ ಈ ಚಿಹ್ನೆಗಳ ಮೇಲೆ ದೇಶದ ಕೆಲವೊಂದು ಕಡೆ ನಡೆದ ಅತ್ಯಾಚಾರದಿಂದ ನಮ್ಮಲ್ಲನೇಕರ ಚೈತನ್ಯ ಜ್ವಾಲೆ ಪುನಃ ಉರಿದೆದ್ದಿರಬಹುದು ಆದರೆ ಇಂದಿಗೆ ಬಹಳ ಕಾಲದಿಂದ ನಾವು ಕಳೆದುಕೊಂಡಿರುವ ಈ ಅಂತರೀಕ ಶ್ರದ್ಧೆಯನ್ನು ಪುನರುದ್ಧಾರಗೊಳಿಸುವುದು ಮಹತ್ವದ ಸಂಗತಿಯಾಗಿದೆ.

ಜಾಲಿಯನ್‌ವಾಲಾಭಾಗ್ ಹತ್ಯಾಕಾಂಡದುದೂ, ಇತ್ತೀಚೆಗೆ ಚಿಮೂರ್ ಅಸ್ತಿ ಪ್ರಕರಣಗಳಂತೂ ಪೋಲಿಸ್ ಮತ್ತು ಸೈನಿಕರಿಂದ ಪೂರ್ವ ಬಂಗಾಳದಷ್ಟೇ ಭೀಕರ ಅನಾಚಾರಗಳು ನಡೆಸಲ್ಪಟ್ಟಿವೆ ಎಂಬ ವಿಷಯ ಜಗಜ್ಜನಿತವಾದುದು "ಪ್ರತಿಯೊಂದು ಸಂದರ್ಭದಲ್ಲೂ ಪುರುಷರಲ್ಲಿ ತಮ್ಮ ಸ್ತ್ರೀಯರನ್ನು ರಕ್ಷಿಸುವ ದೈಹಿಕ ಬಲಕ್ಕಿಂತಲೂ ಆತ್ಮಬಲದ ಅಭಾವವೂ ಸ್ತ್ರೀಯರಲ್ಲಿ ಧ್ಯೇಯಬದ್ಧ ಜೀವನದಿಂದ ಹುಟ್ಟುವ ಆತ್ಮಗೌರವವೊಂದೇ ಕೊಡಬಲ್ಲ ಶ್ರದ್ಧಾಬಲದ ಅಭಾವವೂ ಕಂಡುಬಂದಿದೆ."

ಶ್ರದ್ಧೆಯ ಅಭಾವದ ಪರಿಣಾಮ ತಮ್ಮ ಹೆಂಗುಸರನ್ನು ಜೀವಾರ್ಪಣಮಾಡಿ ರಕ್ಷಿಸುವ ಆತ್ಮಭರವಸೆ ಇಲ್ಲದೆ ಪುರುಷರು ಅವರನ್ನು ಅವರ ಪಾಡಿಗೇ ಬಿಟ್ಟು ತಮ್ಮ ಸ್ವಂತ ಜೀವ ರಕ್ಷಣೆಗಾಗಿ ಓಡಿಹೋಗುವಂತೆ ಮಾಡಿತು.

ಶ್ರದ್ಧೆಯ ಪುನರುತ್ಥಾನಗೊಳಿಸುವುದು ಮಹಾತ್ಮರ ಜೀವನದ ಮುಖ್ಯೋದ್ದೇಶ ರಾಜಕೋಟೆ ಸಂಸ್ಥಾನದ ರಾಜಕೀಯ ಏಜೆಂಟನಿಂದ ದೊರೆತ ಮೊದಲನೆ ಅವಮಾನದಿಂದ ಗಾಂಧೀಜಿಗೆ ಈ ಶ್ರದ್ಧಾಹೀನತೆಯ ಅನುಭವವಾಯಿತು-ಅದು ಸುಮಾರು 50 ವರ್ಷಗಳ ಹಿಂದಿನ ಮಾತು. ಆ ಅವಮಾನವನ್ನು ಗಾಂಧೀಜಿ ನುಂಗಿಕೊಂಡರು. ಮುಂಬೈ ಕೇಸರಿ ಎನಿಸಿದ ಸರ್ ಫಿರೋಜಷಾ ಮೆಹತಾ ಅವರು ಕೂಡಾ ಗಾಂಧೀಜಿಗೆ ಅದೇ ಉಪದೇಶ ಮಾಡಿದರು.

ಮುಂದೆ ಗಾಂಧೀಜಿ ಅದಕ್ಕಿಂತಲೂ ದೊಡ್ಡ ಅವಮಾನಗಳನ್ನೂ ಕೂಡಾ ನುಂಗಬೇಕಾದರು ಆದರೆ ಅದನ್ನು ಮರೆಯಲು ಸಾಧ್ಯವಿಲ್ಲ. ಅದಕ್ಕೆ ತಕ್ಕ ಔಷಧ ಹುಡುಕಲು ಅವರು ಪ್ರಯತ್ನ ಆರಂಭಿಸಿದರು.

ದಕ್ಷಿಣ ಆಫ್ರಿಕದಲ್ಲಿಯ ಸಾರ್ವಜನಿಕ ವಾಹನವೊಂದರಲ್ಲಿ ಬಿಳಿ ಕೆಂಡಕ್ಟರನು ಅವರನ್ನು ಚೆನ್ನಾಗಿ ಗುದ್ದಿದಾಗ ಅವರಿಗೆ ಔಷಧ ಸಿಕ್ಕಿತು. ಕಲ್ಲಿನಿಂದ ತೆಂಗಿನಕಾಯಿ ಮೇಲೆ ಬಡಿದರೆ ಒಳಗಿನ ಮಧುರವಾದ ತಿರುಳು ಹೊರಬರುವಂತೆ ಆ ಬಿಳಿ ಕೆಂಡಕ್ಟರನ ಗುದ್ದುಗಳು ಬೀಳುತ್ತ ಹೊರಗಿನ ಚಿಪ್ಪು ಒಡೆದು ಒಳಗೆ ಅಡಗಿದ್ದ ಜ್ವಾಲೆ ಗೋಚರವಾಯಿತು.

"ಒಬ್ಬನು ಇನ್ನೊಬ್ಬನನ್ನು ಸಾಯ ಹೊಡೆಯಬಹುದು. ಆದರೆ ಅವನ ಇಚ್ಛೆಗೆ ವಿರೋಧವಾಗಿ ಅವನನ್ನು ಬಗ್ಗಿಸುವುದು ಸಾಧ್ಯವಿಲ್ಲವೆಂದು ಅವರು ಕಂಡುಕೊಂಡರು"

ಮೃತ್ಯು ಹಿಂಸೆಗಳ ಭಯ, ಆಸ್ತಿ ಕಳೆದುಕೊಳ್ಳುವ, ಸಾಮಾಜಿಕ ಬಹಿಷ್ಕಾರದ ಅಥವಾ ಸುಖಜೀವನಕ್ಕೆರವಾಗುವ ಭೀತಿ ಇವುಗಳಿಂದ ಮನುಷ್ಯ ತನ್ನ ಸ್ವಾತಂತ್ರ್ಯ ಕಳೆದುಕೊಳ್ಳುತ್ತಾನೆ. ತನ್ನ ತತ್ವಗಳನ್ನು ಆತ್ಮಗೌರವವನ್ನು ಬಲಿಗೊಡಲು ಒಪ್ಪುತ್ತಾನೆ. ಆ ಹೆದರಿಕೆಯನ್ನು ಒಗೆದನೆಂದರೆ ಮತ್ತೆ ಏಕಾಕಿಯಾದರೂ ಒಂದು ಸೈನ್ಯದಷ್ಟು ಬಲ ಅವನಿಗೆ ಬರುವುದು.

ಅದಿಲ್ಲದಿದ್ದರೆ ಸುಶಿಕ್ಷಿತ ಸೈನಿಕನಾದರೂ ಪೂರ್ವ ಬಂಗಾಳ ಬಿಹಾರದ ಜನರಂತೆ ಪಲಾಯನ ಮಾಡಬಹುದು

ಗಾಂಧೀಜಿಯ ವಿರೋಧಿಯಾಗಿದ್ದ ಪ್ರಖ್ಯಾತ ಫೀಲ್ಡ್ ಮಾರ್ಶಲ್ ಸ್ಮಟ್ಸರೇ ಅವರ ಕುರಿತು ಹೀಗೆಂದಿದ್ದಾರೆ "ಗಾಂಧಿ ಹೊಸ ತಂತ್ರವೊಂದನ್ನು ಪ್ರಯೋಗಿಸಿವೆ ಹಿಂದೂಸ್ಥಾನದಲ್ಲಿ ಮುಂದೆ ಅದು ರಾಜಕೀಯ ಹೋರಾಟದಿಂದ ಜಗತ್ಪ್ರಸಿದ್ಧವಾದಿದ ಅವನ ಪಾಲಿಗೆ ಎಲ್ಲವೂ ಯೋಜನೆಯಂತೇ ಸಾಗಿತು ಈ ತಂತ್ರದಿಂದ ನನಗೆ [illegible]ಟಾ ಪೇಚಾಟವಾಯಿತು. ನನ್ನ ಕಾಯಿದೆಗಳನ್ನು ನಾನೇ ಹಿಂದೆಗೆಯಬೇಕಾಯಿತು."

"ತಂತ್ರ" ಎಂಬ ಶಬ್ದಕ್ಕೆ ಬರಿ ಸವಿನಯ ಕಾಯಿದೆ ಭಂಗ, ಕರನಿರಾಕರಣೆ ಎಂದಿಷ್ಟೇ ಅರ್ಥವಲ್ಲ. ಪುಸ್ತಕದ ಹೊರ ಹೊದಿಕೆ ಅದರ ಯೋಗ್ಯತೆಗೆ ಆಧಾರವಲ್ಲ. ಸ್ತ್ರೀಯ ಸೌಭಾಗ್ಯದ ಬಾಹ್ಯ ಚಿಹ್ನೆಗಳಾದ ಬಳೆ ಕುಂಕುಮಗಳಂತೆ ಇದು ಕೇವಲ ಬಾಹ್ಯ ಸಂಕೇತ. ಸವಿನಯ ಕಾಯಿದೆ ಭಂಗದ 'ತಂತ್ರ'ವೊಂದರಿಂದಲೇ ಮುಂಬಯಿಯ ಮಹಿಳೆಯರಲ್ಲಿ ಅಶ್ವಬಲದ ಗೊರಸಿನ ತುಳಿತ ಎದುರಿಸುವ ಇಲ್ಲವೆ ಬೋರ್ಸದ ಸ್ತ್ರೀಯರಲ್ಲಿ ತಲೆ ಕೂದಲನ್ನೆಳೆದು ಹೊಡೆಯುವ ಪೋಲಿಸರನ್ನೆದುರಿಸುವ ಅವುರ ಸತ್ವ ಬರುತ್ತಿದ್ದಿಲ್ಲ

ಶ್ರದ್ಧೆಯ ಸಿಜವಾದ ಪುನರುತ್ಥಾನ ಹಿಂದಿ ಜನತೆಯ ಕೆಲವರಲ್ಲಾದರೂ ಉಂಟಾದುದರಿಂದಲೇ ಅವರಿಗೆ ಕ್ಲೇಶಗಳನ್ನು ಸಹಿಸಿ ಪ್ರಬಲ ಸಾಮ್ರಾಜ್ಯಶಾಹಿ ಶಕ್ತಿಯೆದುರು ಸಡ್ಡು ಹೊಡೆಯುವ ಧೈರ್ಯ ಬಂತು. ಅದರ ಅಭಾವದಿಂದಲೇ ಇತರ ವೇಳೆಗಳಲ್ಲಿ ಜನರು ದೌರ್ಜನ್ಯ, ಅಪಮಾನಗಳಿಗೆ ಮೂಕರಂತೆ ತಲೆವಾಗಲು ಕಾರಣವಾಯಿತು

ತನ್ನ ಧರ್ಮದಲ್ಲಿ ನಿಜವಾದ ಶ್ರದ್ಧೆಯಿರುವವನು [illegible] ವಿಧರ್ಮಿಯರ ನಡುವಿನಲ್ಲಿ ಏಕಾಂಗಿಯಾಗಿಯಾದರೂ ವಾಸಿಸಲು ಸಮರ್ಥನಿರುವನು ಸ್ಥಳವನ್ನು ಬದಲಾಯಿಸಿ ಧರ್ಮವನ್ನು ಬದಲಾಯಿಸದೆ ಉಳಿಸಿಕೊಂಡೆನೆಂಬವನ ಆತ್ಮಸಮಾಧಾನವು ಶೂನ್ಯವಾದುದು

'ಬೇರೆ ಧರ್ಮಗಳ ಅನುಯಾಯಿಗಳ ನಡುವಿನಲ್ಲಿ ಒಬ್ಬನೇ ಒಬ್ಬ ವಿಧರ್ಮಿಯನಿದ್ದರೂ ಅವನಿಗೆ ಶಾಂತಿಯಿಂದಲೂ, ನಿರ್ಭಯವಾಗಿಯೂ ಬಾಳುವ ಹಕ್ಕುಂಟು ಅವನಿಗೆ ಹಾಗೆ ಮಾಡಲು ಸಾಧ್ಯವಿಲ್ಲದಿದ್ದರೆ ಅವನ ಶ್ರದ್ಧೆಯಲ್ಲೇ, ಅವನ ಧರ್ಮದಲ್ಲೇ ಏನೋ ದೋಷವಿದೆ ಇನ್ನೊಂದು ಧರ್ಮದ ಅನುಯಾಯಿಗಳು ಹಾಗೆ ಮಾಡಗೊಡದಿದ್ದರೆ ಅವನ ಶ್ರದ್ಧೆಯಲ್ಲಿ ಮಾತ್ರವಲ್ಲ ಅವರದರಲ್ಲಿಯೂ ಏನೋ ದೋಷವಿರಬೇಕು ಹೇಗೆ ಇದ್ದರೂ ಆಗ ಅವನು ತನ್ನ ಶ್ರದ್ಧೆಯ ಪುನರುತ್ಥಾನ ಮಾಡಬೇಕು"

ನನ್ನ ಕಾಲೇಜು ದಿನಗಳಲ್ಲಿ ನಾನು ಎಷ್ಟೋ ವೇಳೆ ಕೇಳುತ್ತಿದ್ದ ಕೀರ್ತನೆಯ ಪಲ್ಲವಿಯೊಂದು ನನ್ನ ಮನಸ್ಸಿನಲ್ಲಿ ನಿಚ್ಚಳವಾಗಿದೆ

ಇರಬೇಕು ನ್ಯಾಯ ನಿಷ್ಠೆಯ ಕಡುಧೈರ್ಯ,
ಏಕಾಕಿಯಾದರೂ ವಿಚಲಿಸದ ಧೈರ್ಯ,
ಧ್ಯೇಯದಲಿ ಮನವನ್ನು ನಡುವೊಂದು ಧೈರ್ಯ,
ಅದನ್ನು ಜಗದಲಿ ಬಿಚ್ಚಿ ಸಾರುವಾ ಧೈರ್ಯ

ಕೆನರಾ ಬ್ಯಾಂಕ್ ಮತ್ತು ಘಟನಾ ಸಮಿತಿ

ಯಾವುದಾದರೊಂದು ಬೇಂಕಿನ ರೇವಣಾತಿದಾರರಿಗೆ [illegible] ಗ್ರಾಹಕರಿಗೆ ಅದರ ಡೈರೆಕ್ಟರರ ಹೆಸರುಗಳಿಗಿಂತ ಆ ಬೇಂಕು ಹೇಗೆ ನಡೆಯುತ್ತಿದೆನ್ನುವುದು ಮುಖ್ಯವಾಗಿದೆ ರತ್ನಾಲಂಕೃತ ಅಥವಾ ಬಿರುದಾಂಕಿತ ಮಹನೀಯರು ಸಿಪ್ಪಣ ಆಡಳಿತದಾರಿಕೆಗೆ ಎಂದೂ ಸರಿಗಟ್ಟಲಾರರು ಈ ತತ್ವವನ್ನು ಅಧರಿಸಿ ಬೇಂಕಿನ ಪ್ರಕಟಣೆಗಳಲ್ಲಿ ಕೆನರಾ ಬೇಂಕಿನ ಡೈರೆಕ್ಟರರು ತಮ್ಮ ಹೆಸರನ್ನು ಉಪಯೋಗಿಸಲು ನಿರಾಕರಿಸಿರುವರು ಅವರು ದಿನದಿಂದ ದಿನಕ್ಕೆ ಕೆನರಾ ಬೇಂಕನ್ನು ಸಮೃದ್ಧಿಗೊಳಿಸಿ ಉತ್ತಮಗೊಳ್ಳುವಂತೆ ಎಲ್ಲಾ ವಿಧದಿಂದಲೂ ತಮ್ಮ ಸರ್ವ ಶಕ್ತಿಯನ್ನು ಉಪಯೋಗಿಸುವರು ಆದರೆ ಈಗ ಒಮ್ಮೆ ನಮ್ಮ ಪದ್ಧತಿಯಲ್ಲಿ ಸ್ವಲ್ಪ ವ್ಯತ್ಯಾಸಗೊಳಿಸಿದರೆ ತಪ್ಪಾಗದೆಂದು ಎನಿಸುತ್ತದೆ ಯಾವ ಕಾಲದಲ್ಲಾಗಲೀ ಯಾವ ದೇಶದಲ್ಲಾಗಲೀ ಘಟನಾ ಸಮಿತಿಗಳು ದಿನಚರಿಯ ಘಟನೆಗಳು [illegible] ಚರಿತ್ರೆಯಲ್ಲಿ ಮೊದಲನೆಯದಾಗಿ ಬಂದು ಸಾಮ್ರಾಜ್ಯ ಶಕ್ತಿಯು [illegible] ತನ್ನ ಅಧಿಕಾರವನ್ನು ಬಿಟ್ಟು ಕೊಡುತ್ತಲಿದೆ.

ನಮ್ಮ ಕೆನರಾ ಬೇಂಕಿನ ಒಂಭತ್ತು ಮಂದಿ ಡೈರೆಕ್ಟರರಲ್ಲಿ ಇಬ್ಬರು ನಮ್ಮ ದೇಶದ ಭಾವಿ ಘಟನಾ ಸೂತ್ರಗಳನ್ನು ರಚಿಸಲಿರುವ ಆ ಮಹಾ ಸಮಿತಿಗೆ ಚುನಾಯಿತರಾಗಿರುವ ವಿಷಯವು ಬೇಂಕಿನಲ್ಲಿ ಕಾರ್ಯನಿರತರಾಗಿರುವ ನಮಗೆ [illegible]ವಲ್ಲ ಹಲವು ಮಂದಿ ರೇವಣಾತಿದಾರರು ಗ್ರಾಹಕರು ಪಾಲುದಾರರು ಇವರಿಗೆಲ್ಲ ಅಭಿಮಾನಾಸ್ಪದವಾಗಿದೆ **ಪಿ. ಎಸ್. ನಾಯಕ್,** [illegible]

ಜನರಲ್ ಮೆನೇಜರ್

ಕೆನರಾ ಬ್ಯಾಂಕ್ ಲಿಮಿಟೆಡ್

ಮೂಲಧನ	(ಸ್ಥಾಪನೆ: 1906)	ಕ್ಷೇಮ ನಿಧಿ
೨೮ ಲಕ್ಷ		೧೧ ಲಕ್ಷ

ವ್ಯವಹಾರದಲ್ಲಿದ್ದ ಜುಮ್ಲಾ ನಿಧಿ 5 ಕೋಟಿಗಿಂತಲೂ ಮೀರಿದೆ.

48 ಶಾಖೆಗಳು

ಮದರಾಸು	ಪೂನಾ
ಕೊಯಮುತ್ತೂರು	ನಾಗಪುರ
ಮಧುರೆ	ಅಮರಾವತಿ
ಸೇಲಮ್	ಅಕೋಲಾ
ಕಲ್ಲಿಕೋಟೆ	ತಿರುಚಿನಾಪಳ್ಳಿ
ಕೊಚ್ಚಿ	ತುತುಕುಡಿ
ಅಲಪ್ಪೆ	ಕರಾಚಿ
ಕ್ವಿಲೋನ್	ಮೈಸೂರು
ಸೆಕುಂದರಾಬಾದು	ಬೆಂಗಳೂರು
ಕೊಲ್ಹಾಪುರ	ದಾವಣಗೆರೆ
ಬೆಳಗಾಂವ್	ಶಿವಮೊಗ್ಗಾ
ಹುಬ್ಬಳ್ಳಿ	ಮಂಗಳೂರು ಮುಂತಾದುವು

ಮುಂಬಯಿ ಮತ್ತು ಅದರ ಸರಹದ್ದುಗಳಲ್ಲಿ 5 ಶಾಖೆಗಳು

CANARA BANK LIMITED.

(Incorporated in British India: Liability of Members Ltd.)

NOTICE

The Bombay Life Assurance Company Ltd.

Notice having been given of the loss of Policy No 8427 (later converted into a paid up one) on the life of Mr M Subraya Kamath (now deceased), a duplicate Policy will be issued unless objection is lodged with us within one month from this date

Bombay, 9-1 47, K. Balasubrahmanyam, Manager & Actuary

ವಾರಾಂತ್ಯ ವಾರ್ತಾ ವಿಮರ್ಶೆ

ಜವಾಹರಲಾಲರು ಒರ್ವ ಶ್ರೇಷ್ಠ ತತ್ವವಾದಿಗಳೂ ಧ್ಯೇಯವಾದಿಗಳೂ ಎಂದೆನಿಸಿಕೊಳ್ಳುತ್ತಾರೆ. ಅವರ ತತ್ವಗಳು ನೀತಿಯ ಅಸ್ತಿವಾರದ ಮೇಲೆ ಭದ್ರವಾಗಿ ನಿಂತಿರುವಂತಹುಗಳು. ಅವರ ಧ್ಯೇಯಗಳು ಲೋಕೋಪಕಾರಿ ಮತ್ತು ಮಾನವ ಹಿತಚಿಂತನೆಯವು. ಅಂತೆಯೆ ಅವರಂತಹ ಅನೇಕ ಧ್ಯೇಯವಾದಿಗಳು ಪ್ರತಿಯೊಂದು ಜನಾಂಗದಲ್ಲೂ ಕಾಣ ಸಿಗುತ್ತಾರೆ.

ಒಂದು ದೃಷ್ಟಿಯಿಂದ ಬ್ರಿಟಿಷ್ ಆಡಳಿತ ವರ್ಗದವರೂ ಒಂದು ತರದ ವಿಚಿತ್ರ ತತ್ವವಾದಿಗಳು. ಬರ್ನಾರ್ಡ್ ಶೋ ಅವರು ಹೇಳುವಂತೆ ಬ್ರಿಟಿಷರ 'ಎಲ್ಲಾ ಕೃತಿಗಳಲ್ಲಿ ಅಷ್ಟೊಂದು ಒಳಿತೂ ಇರಲಿಕ್ಕಿಲ್ಲ ಕೆಡುಕೂ ಇರಲಿಕ್ಕಿಲ್ಲ ಅವರೆಂದಿಗೂ ತಪ್ಪು ಕೆಲಸ ಮಾಡಲಾರರು ಅವರು ತತ್ವಗಳ ಆಧಾರದಿಂದ ಪ್ರತಿಯೊಂದು ಕೆಲಸ ಮಾಡುವರು **ದೇಶಭಕ್ತಿಯ ತತ್ವದ ಆಧಾರದಿಂದ** ಅವರು ಯುದ್ಧಮಾಡುತ್ತಾರೆ, ವ್ಯಾಪಾರಿ ತತ್ವದ ಆಧಾರದಿಂದ ವಸಾಹತು [illegible] ಸುಲಿಗೆ ನಡೆಸುತ್ತಾರೆ, ಸಾಮ್ರಾಜ್ಯವಾದಿ ತತ್ವದಂತೆ ಅವರನ್ನು ದಾಸ್ಯಕ್ಕೀಡುಮಾಡುತ್ತಾರೆ ಹೀಗೆ ಅನೇಕ ತತ್ವಗಳ ಆಧಾರದಿಂದ ಜನತೆಯನ್ನು ಕಂಗೆಡಿಸುತ್ತಾರೆ ರಾಜನಿಷ್ಠೆಯ ತತ್ವದಂತೆ ಅವರು ತಮ್ಮ ಅರಸನಿಗೆ ಬೆಂಬಲ ಕೊಡುತ್ತಾರೆ ಪ್ರಜಾಪ್ರಭುತ್ವ ತತ್ವದಂತೆ ಅರಸನ ತಲೆಯನ್ನೂ ಕಡಿಯುತ್ತಾರೆ (ಹಿಂದೆ 17ನೇ ಶತಮಾನದಲ್ಲಿ ಮೊದಲನೇ ಚಾರ್ಲ್ಸನನ್ನು ಬ್ರಿಟಿಷ್ ಜನತಾಮುಖಂಡರು ದೊಡ್ಡ ಅಂತರ್ಯುದ್ಧದನಂತರ ತಲೆ ಕಡಿದರು)

ತತ್ವಾನುಯಾಯಿ ಲೀಗು

ತತ್ವ ಬದ್ಧ ವರ್ತನೆಗೆ ಮುಸ್ಲಿಂಲೀಗು ಹೊರಗಿಲ್ಲ ಅಲ್ಪ ಸಂಖ್ಯಾತರಿಗೆ ನ್ಯಾಯ ದೊರಕ ಬೇಕೆಂಬ ತತ್ವದ ಮೇಲೆ ಅದು ಪಾಕಿಸ್ತಾನ ಕೇಳುತ್ತಿದೆ (ಬಹು ಸಂಖ್ಯೆ ಕರ ಪಾಡು ಏನಾದರೂ ಆಗಲಿ) ಪಾರಮಾರ್ಥಿಕವಾದ ಮತೀಯ ವಿಚಾರವು ಲೌಕಿಕವಾದ ರಾಜಕೀಯಕಿಂತ ಮೇಲಿನದೆಂಬ ತತ್ವದಿಂದ ಲೀಗ್ ಮುಖಂಡರು ಇಡೀ ಭಾರತವನ್ನೇ ಮತಾಂತರ ಮಾಡಿಕೊಳ್ಳುವ ಉತ್ಕಟೆಚ್ಛೆ ಪ್ರಕಟಿಸಿದ್ದಾರೆ ದೇಶಕ್ಕೆಲ್ಲ ಸ್ವಾತಂತ್ರ್ಯ ಸಿಕ್ಕಿದರೆ ಜನತೆಯೆಲ್ಲ ಉನ್ನತವಾಗಿ ಇಂದಿನ ದೇಶಭಕ್ತಿಯ ದಾಹವನ್ನು ನೀಗಿಕೊಂಡಿತೆಂಬ ಸದುದ್ದೇಶದ ತತ್ವದಿಂದ ಪಾರತಂತ್ರ್ಯವನ್ನು ಕಿತ್ತೊಗೆಯಲು ಅದು ಸಿದ್ಧವಿಲ್ಲ ಜನತೆಯಲ್ಲಿ ಹೋರಾಟ ಪ್ರವೃತ್ತಿಯು ಕಳೆಗುಂದಿತೆಂದು ಅನೇಕ ಲೀಗ್ ಸಹಾನುಭೂತಿಗಳು ದೇಶದಲ್ಲಿ ಕೋಮುದ್ವೇಷದ ನಂಜನ್ನು ಹರಡುತಿರುವರು

ಬ್ರಿಟಿಷರ ಇಂಗ್ಲಿಷು

ಎ. ಐ. ಸಿ. ಸಿ ಯ ಅಧಿವೇಶನದಲ್ಲಿ ಅಧ್ಯಕ್ಷ ಕೃಪಲಾನಿಯವರು ತಮ್ಮ ಅನನುಸರಣೀಯ ವಾಕ್‌ಶೈಲಿಯಲ್ಲಿ ಬ್ರಿಟಿಷ್ ಲಕ್ಷಣದ ವಿಡಂಬನ ಮಾಡಿದರು ಜಗತ್ತಿಗೇ ಇಂಗ್ಲಿಷ್ ವಿದ್ಯೆ ಕಲಿಸಿದ ಮಾಟಗಾರರಿಗೆ ಒಂದು ಘೋಷಣೆ ಹೊರಡಿಸುವಾಗ ಸರಿಯಾದ ಶಬ್ದ ಸರಣಿಯನ್ನು ಜೋಡಿಸಲು ಆ ಭಾಷೆ ತಾಯ್ನುಡಿಯಾಗಿದ್ದವರಿಗೆ ಅದೆಷ್ಟು ಪೇಚಿನದಾಗಿ ಸಂಭವಿಸಿತೆಂಬುದಕ್ಕೆ ಬ್ರಿಟಿಷ್ ಮಂತ್ರಿತ್ರಯರ ಮೇ 16ರ ಘೋಷಣೆಯೇ ನಿದರ್ಶನ. ಇಲ್ಲವೆ, ಬ್ರಿಟಿಷ್ ಮುತ್ಸದ್ದಿಗಳಿಗೆ ಮನಸ್ಸಿನಲ್ಲಿದ್ದುದನ್ನು ಮಾತಿನಲ್ಲಿ ಸರಿಯಾಗಿ ನಿರೂಪಿಸಲು ಗೊತ್ತಿಲ್ಲವೆಂದಾಯಿತು. ಕೃಪಲಾನಿಯವರೆನ್ನುವಂತೆ 'ಅದು ರಚಿಸುವವರಿಗೆ ವಿವರಣೆ ಕೊಡುವ ಅಧಿಕಾರವಿಲ್ಲ' ಘೋಷಣೆಯ ಅರ್ಥ ಸ್ಪಷ್ಟತೆಗಾಗಿ ನಿಷ್ಪಕ್ಷಪಾತ ನ್ಯಾಯಾಲಯದ ಮರೆಹೋಗುವುದು ನ್ಯಾಯಬದ್ಧವಾದುದು. ಆದರೆ ನಮ್ಮ ಬ್ರಿಟಿಷ್ 'ತಜ್ಞ'ರಾಗಲಿ ಅವರ 'ಆಪ್ತ'ರಾಗಲೀ ಅವರಿಂದಲೇ ಸ್ಥಾಪಿತವಾದ ಫೆಡರಲ್ ಕೋರ್ಟಿನ ತೀರ್ಮಾನ ಕ್ಕೊಪ್ಪಲೂ ಸಿದ್ಧರಿಲ್ಲವೆಂಬುದು ನಮ್ಮ ದೇಶದ ರಾಜಕೀಯದ ವಿಚಿತ್ರ ದುಃಸ್ಥಿತಿಯೆನ್ನಬೇಕು ಇದೇ ಇಂಗ್ಲಿಷ್ ಮಾದರಿಯ ವ್ಯವಹಾರ ನೀತಿ

ಸ್ವೀಕಾರ

ಅಹಿಂಸಾತ್ಮಕ ಕ್ರಾಂತಿಯ ಮೂಲಕ ಅಧಿಕಾರವು ಬ್ರಿಟಿಷರ ಕೈಯಿಂದ ಭಾರತೀಯರ ಕೈಗೆ ಶಾಂತರೀತಿಯಲ್ಲಿ ಸ್ಥಿತ್ಯಂತರಗೊಳಿಸಬೇಕೆಂಬುದು ಕಾಂಗ್ರೆಸಿನ ಧ್ಯೇಯ ಆದಷ್ಟು ವಿಶಾಲವಾದ ತಳಹದಿಯ ಮೇಲೆ ಸ್ವತಂತ್ರ ಭಾರತದ [illegible] ರಾಜಕೀಯ [illegible] ರಚಿತವಾಗ [illegible] ಕಾಂಗ್ರೆಸ ಕಾರ್ಯಕಾರಿ [illegible] ಬ್ರಿಟಿಷ್ ಸರಕಾರದ [illegible] ಘೋಷಣೆಯನ್ನು ಕಾಂಗ್ರೆಸ್ ಸ್ವೀಕರಿಸಿತು

ಇದಕ್ಕೆ [illegible] ಗಡಿನಾಡ ಗಾಂಧಿ [illegible] ಶರತ್ ಚಂದ್ರಬೋಸರ [illegible] ರಾಜಿನಾಮೆ ಕೊಟ್ಟರು [illegible] ಭವಿಷ್ಯದ [illegible] ಅವರಿಗೆ ತುಂಬಾ ಕಳವಳವುಂಟಾಗಿದೆ ಆದರೆ ವರ್ಕಿಂಗ್ ಕಮಿಟಿಯು ಆ ಕುರಿತು ಸ್ಪಷ್ಟ ಅಭಿಪ್ರಾಯ ತಿಳಿಸಿದೆ. "ಯಾವ ರೀತಿಯಲ್ಲೂ ಸರಕಾರ ಹಸ್ತಕ್ಷೇಪವಿರಕೂಡದು ಒಂದು ಪ್ರಾಂತವನ್ನಾಗಲೀ ಅದರ ಒಂದು ಭಾಗವನ್ನಾಗಲೀ [illegible] ಒತ್ತಾಯಪಡಿಸಲಾಗದು [illegible] 16ರ ಬ್ರಿಟಿಷ [illegible] ದಶಂಬರ 6ರ [illegible] ರಣಾತ್ಮಕ ಪ್ರಕಟನೆಯಿಂದ [illegible] ಗಳು ಅದರಲ್ಲಿಯೂ ಅಸ್ಸಾಮ ಗಡಿನಾಡುಗಳ [illegible] ತೊಂದರೆಗಳುಂಟಾದ ದ ಕಾಂಗ್ರೆಸು ಅರಿತಿದೆ" ಮತ್ತೆ ಹೀಗೂ ತಿಳಿಸಲಾಗಿದೆ **ಬ್ರಿಟಿಷರೇ ಒಪ್ಪಿಕೊಂಡಿರುವ ತತ್ವದಂತೆ ಕಾಂಗ್ರೆಸ್ಸೂ ಯಾವದೊಂದು ವಿಭಾಗದ ಜನರನ್ನು ಒತ್ತಾಯಕ್ಕೊಳಪಡಿಸುವ ಕಾರ್ಯದಲ್ಲಿ ಸಹಕರಿಸಲಾರದು."**

ಲೀಗಿನ ಚಂಡೀಹಟ

ಮೋಲಿನ ವಿಷಪೂರಿತ ಸ್ಪಷ್ಟತೆ [illegible] ಲೀಗಿನ ಕಲಹ ಮನೋವೃತ್ತಿಗೆ ಚೆನ್ನಾಗಿ ನಾಟುವ ಕಾರಣವಾಗಬಹುದು 'ಇದರಿಂದ ಕಾಂಗ್ರೆಸ್ಸು ಅಸ್ಸಾಮಕ್ಕೆ ಗುಂಪಿನಿಂದ ಹೊರಗುಳಿಯಲು ಪ್ರೋತ್ಸಾಹಕೊಟ್ಟಂತಾಗುವುದು ಅಸ್ಸಾಮು ಗಡಿನಾಡುಗಳು ಗುಂಪುಕೂಟದಲ್ಲಿ ಖಂಡಿತ ಸೇರುವವೆಂದು ಕಾಂಗ್ರೆಸು ಭರವಸೆಯನ್ನು ಕೊಟ್ಟರೆ ಮಾತ್ರ ಲೀಗ್ ವರ್ಕಿಂಗ್ ಕಮಿಟಿಯು ಘಟನಾ ಸಮಿತಿಯನ್ನು ಸೇರುವ ಪರ್ಯಾಲೋಚನೆ ಮಾಡಬಹುದು' ಎಂಬುವ ಮಿ। ಜಿನ್ನರ ಹೊಸ ಶರ್ತ ಸದ್ಯದಲ್ಲೇ ಕೇಳಿಸಿದರೆ ಆಶ್ಚರ್ಯವಿಲ್ಲ

ಜೈಮಿನಿ ಭಾರತದಲ್ಲಿ ಒಂದು ಉಪಕತೆಯಿದೆ ಉದ್ದಾಲಕನೆಂಬ ಬ್ರಾಹ್ಮಣನ ಕೈಹಿಡಿದಾಕೆಯಾಗಿ ಒರ್ವ ಹಟಮಾರಿ ಹೆಂಗುಸು ಇದ್ದಳು ಗಂಡ 'ನದಿಗೆ ಹಾಕೆಂದರೆ ಅವಳು [illegible] ಬಿಸಾಡುವಳು' ಅಂತು ಹೇಳಿದ್ದಕ್ಕೆ ವಿರೋಧ ವರ್ತಿಸುವುದು ಅವಳ ಹುಟ್ಟು ಸ್ವಭಾವ ಗಂಡನು ತನ್ನ ಪಿತೃಶ್ರಾದ್ಧವನ್ನು ಮಾಡುವುದಿಲ್ಲವೆಂದಾಗಲೇ ಅವಳು ಅದನ್ನು ಮಾಡುವೆನೆಂದಳು ಮಾಡಬೇಕೆಂದರೆ ಇಲ್ಲವೆನ್ನುತಿದ್ದಳು ಈಗ ಒಂದು ವೇಳೆ ಲೀಗಿಗೆ ಪಾಕಿಸ್ತಾನವನ್ನೇ ಕೊಡುವುದಾಗಿ ಕಾಂಗ್ರೆಸು ಹೇಳಿದರೆ ಅದ [illegible] ಪಾಕಿಸ್ತಾನದೊಳಗೆ ಸೇರಿಸಲ್ಪಡಬೇಕು ಎಂದು ಕೇಳಿದರೂ ಕೌತುಕದ ಸಂಗತಿಯಾಗದೆಂಬ ಭಾವನೆ ಹಲವರಲ್ಲಿ ಉಂಟಾಗಿದೆ ಕಾಂಗ್ರೆಸಿನ ಇದುವರೆಗಿನ ಪ್ರಯತ್ನಗಳು ಲೀಗ್‌ರವಿದ್ದವರನ್ನು ಒಲಿಸಲು ಮಾಡಿದ ಪರಿಶ್ರಮವೆಂದೇ ಆಗಿದೆ ಎಂದು ಅಭಿಪ್ರಾಯಪಡುವವರು ಇದ್ದಾರೆ

ವೀಟ್‌ನಾಮ್ ಪ್ರಕರಣ

ಎರಡನೆಯ ಘೋರ ವಿಶ್ವಯುದ್ಧದ ನಂತರವೂ ಶಕ್ತಿ ರಾಷ್ಟ್ರಗಳು ತಮ್ಮ ಸಾಮ್ರಾಜ್ಯವಾದವನ್ನು ಬಿಟ್ಟಿಲ್ಲವೆಂಬುದಕ್ಕೆ ದಕ್ಷಿಣ ಜಾವಾ ಸೀರಿಯ, ಫ್ರೆಂಚ ಇಂಡೋ ಚೀನಾದಲ್ಲಿನ ಘಟನೆಗಳು, ಅವರೊಂದಿಗೆ ಬ್ರಿಟಿಷರ ಭಾರತ, ಪಲೆಸ್ಟೀನ ಮತ್ತು ಈಜಿಪ್ತ ದೇಶಗಳಲ್ಲಿನ [illegible] ಪ್ರತ್ಯಕ್ಷ ನಿದರ್ಶನಗಳು.

ವಸಾಹತುಗಳ ಜನತೆಯನ್ನು ನಿರಂತರ ದಾಸ್ಯ ಶೃಂಖಲೆಯಲ್ಲಿಟ್ಟು ಸುಖಪಡೆಯುವ ಈ ಪಾಶ್ಚಾತ್ಯರ ನೀತಿಯು ಎಂದು ಅಂತ್ಯವಾಗುವುದೊ ಅಂದೇ ಜಗತ್ತು ನಿಜವಾದ ಶಾಂತಿಯುತ ಸಾಗುವುದು ಜಾವಾದ ಜನತೆಯನ್ನು ಹತ್ತಿಕ್ಕಲು ಡಚ್ಚರು ಮಾತ್ರವಲ್ಲ ಬ್ರಿಟಿಷ್ ಮತ್ತು ಮಿತ್ರ ಜನಾಂಗದವರೆಲ್ಲರೂ ತಮ್ಮ ಪಾಶವಿ ಶಕ್ತಿಯನ್ನು ಸಂಘಟಿಸಿದರು ಈಗ ಸ್ವಾತಂತ್ರ್ಯಕ್ಕಾಗಿ ಸಿಡಿದೆದ್ದ ಇಂಡೋಚೀನದ ಜನತೆಯನ್ನು ಸದೆಬಡಿಯಲು ಫ್ರೆಂಚರು ತಮ್ಮ ಶಸ್ತ್ರಾಸ್ತ್ರಗಳನ್ನೆಲ್ಲ ಒರೆಗೆ ಹಚ್ಚಿರುವರು ಆಪ್ತ ಬ್ರಿಟಿಷರೂ ತಮ್ಮ ಖಂಡದ ನೆರೆಯವರಿಗೆ ಅಪ್ರತ್ಯಕ್ಷ ಸಹಾಯ ಹಸ್ತವನ್ನು ಚಾಚಿರುವರು ಜನಾಂಗ ಸಂಘದವರು ಫ್ರೆಂಚರ ಈ ದುಸ್ವಾರ್ಥದ ಧೋರಣೆಯನ್ನು ತಡೆಯದಿದ್ದರೆ ಲೋಕದ ಶಾಂತಿಯು ಚಿರವಾಗಿ ಬಾಳಲಿಕ್ಕಿಲ್ಲ

ಕಾಲ್ನಡೆ ಪ್ರಯೋಗ

ಮಹಾತ್ಮರು ಪೂರ್ವ ಬಂಗಾಲದಲ್ಲಿ ತಮ್ಮ ಐಕ್ಯತೆ ಮತ್ತು ಸೌಹಾರ್ದ ಪ್ರಚಾರದ ಮೂರನೇ ಹಂತವನ್ನಾರಂಭಿಸಿರುವರು ಕಾಲ್ನಡೆಯಿಂದ ಹಳ್ಳಿಯಿಂದ ಹಳ್ಳಿಗೆ ಏಕಾಂಗಿ ಸಂಚಾರಮಾಡುತ್ತಿರುವ ಮಹಾತ್ಮರ ವ್ಯಕ್ತಿತ್ವ ಪ್ರಭಾವವು ಪೂರ್ವ ಬಂಗಾಲದ ಜನತೆಯ ಮೇಲೆ ಅಲ್ಪಸ್ವಲ್ಪವಾಗಿ ಬೀರಲ್ಪಟ್ಟಿದೆ ಅನೇಕ ಮುಸಲ್ಮಾನರು ಅವರನ್ನು ಅತಿಥಿಗಳಾಗಿ ಬರಮಾಡಿಕೊಂಡಿದ್ದಾರೆ ಆ ಪ್ರದೇಶಗಳಲ್ಲಿನ ಹಿಂದೂಗಳಲ್ಲಿ ಭರವಸೆ ಉಂಟಾಗಹತ್ತಿದೆ ದೇಶದ ಇನ್ನೊಂದು ಕಡೆಯಲ್ಲಿ ಬಿಕ್ಕಟ್ಟಿನ ರಾಜಕೀಯ ಸಮಸ್ಯೆಗಳನ್ನು ಬಿಡಿಸಲು ಪ್ರಚಂಡ ಪ್ರಯತ್ನಗಳಾಗುತ್ತಿರುವಾಗ ಸೇವಾ ಗ್ರಾಮದ ಕರ್ಮಯೋಗಿಯು ಬಂಗಾಲದ ಕೊನೆ ಗ್ರಾಮ ಪ್ರದೇಶಗಳಲ್ಲಿ ಮಾನವ ಸೌಹಾರ್ದ ಸಾಧನೆಗಾಗಿ ಶ್ರಮಿಸುತ್ತಿರುವರು ಉನ್ನತ ರಾಜಕೀಯ ಮುತ್ಸದ್ದಿಯೊರ್ವನು ಇಷ್ಟೊಂದು ಅನಾಸಕ್ತ ರೀತಿಯಲ್ಲಿ ದೇಶದ ಸಮಾಜದೊಳಗಿನ ಅತ್ಯಂತ ತೊಡಕಿನ ಪ್ರಶ್ನೆಯಾದ ಮತೀಯ ಐಕ್ಯತೆಯ ಕಡೆಗೆ ಗಮನವನ್ನು ಕೇಂದ್ರೀಕರಿಸಿ ಮಾಡುತ್ತಿರುವ ಯತ್ನಗಳು ಇತಿಹಾಸದಲ್ಲೇ ಅಪೂರ್ವವಾದುದು ಅವರ ಮಹೋನ್ನತ ಆತ್ಮಶಕ್ತಿಗೆ [illegible] ಇರಲಾರವು

ಕತ್ತಲಲ್ಲಿ ಮಿಂಚುವ ಬಟ್ಟೆ

ರಶ್ಯನರ ಸಂಶೋಧೆ

ರಶ್ಯದ ವಿಖ್ಯಾತ ಐವನೊವ್ಹೊ ಗಿರಣಿಯಲ್ಲಿ ಮಿನುಗುವ ಬಟ್ಟೆಯ ತಯಾರಿ ಪ್ರಾರಂಭವಾಗಿದೆ!

ಬಟ್ಟೆಗಳಿಗೆ ಬಣ್ಣ ಕೊಡುವಾಗ ಅದರೊಡನೆ ಮಿನುಗುವ ದ್ರಾವಕಗಳನ್ನು ಸೇರಿಸಿ ಮೊದಮೊದಲು ಪ್ರಯೋಗಗಳು ನಡೆದವು ಹೀಗೆ ತಯಾರಿಸಿದ ಬಟ್ಟೆಗಳು ಮಿನುಗುತಿದ್ದವಾದರೂ ಮೊದಲ ಒಗೆಯುವಿಕೆಯಲ್ಲಿ ಮಿನುಗು ದ್ರಾವಕಗಳು ತೊಳೆದು ಹೋಗುತಿದ್ದವು. ಈಗ ರಶ್ಯದಲ್ಲಿ ಕಂಡುಹಿಡಿಯಲ್ಪಟ್ಟ ವಿಧಾನದಿಂದ ಬಣ್ಣವಾಗಲಿ ಮಿಂಚುವಿಕೆಯಾಗಲಿ ನಶಿಸುವುದಿಲ್ಲ.

ಬಟ್ಟೆಯ ಹೊಳೆಯುವ ಪ್ರಕಾಶವು ಸೂರ್ಯನ ಬೆಳಕಿಗೆ ಕಾಣಿಸುವುದಿಲ್ಲ. ಆದರೆ ಕತ್ತಲಾದ ಮೇಲೆ ಬಟ್ಟೆಗಳು ಬಂಗಾರ, ವಜ್ರದ ಹರಳುಗಳಂತೆ ಮಿನುಗುತ್ತವೆ. ನಾಟ್ಯ ನಾಟಕಗಳಲ್ಲಿನ ವೋಷಾಕಿಗೂ, ಸ್ತ್ರೀಯರ ಉಡುಪುಗಳಿಗೂ ಮತ್ತು ಗಂಡಸರ ನೆಕಟೈಗಳಿಗೂ ಇದು ಹೆಚ್ಚಾಗಿ ಉಪಯೋಗಿಸಲ್ಪಡಬಹುದು

THE CANARA BANKING CORPORATION LTD.

(Incorporated in British India)

Estd: 1906

Head Office: UDIPI, S Kanara.

Authorised Capital	Rs 25,00,000
Issued & Subscribed Capital	16,00,000
Paid up Capital	15,87,600
Reserves	4,60,000
Total Resources Around	Rs 2½ Crores.

Branches at Fort-Bombay, Madras, Bangalore, Coimbatore, Salem, Calicut, Hubli, Mysore, Cochin, Mangalore, Mercara etc., etc., etc.

BANKING BUSINESS OF EVERY DESCRIPTION TRANSACTED.

ಅಖಂಡ ಅಹಿಂಸೆಯ ಅಗ್ನಿ-ಪರೀಕ್ಷೆ

ಘೋರ-ಪಾಶವೀ ವಾತಾವರಣದಲ್ಲಿ ಓರ್ವ ಮಹಾತ್ಮನು

ಗಾಂಧಿ, ನೆಹರು, ಪಟೇಲ್, ಜೈಪ್ರಕಾಶ್, ಲೋಹಿಯಾ-ಪಾಂಡವರು

ಪೌರ್ವಾತ್ಯರು ಸರ್ವಸಾಮಾನ್ಯವಾಗಿ ತತ್ವಜ್ಞಾನಪ್ರಿಯರು. ಅದರಲ್ಲೂ ಭಾರತೀಯರಿಗೆ ದೈವೀಕ ಚಮತ್ಕಾರದ ಮೇಲೆ ಅಸ್ಪಷ್ಟ ಭರವಸೆ, ವಿಶ್ವಾಸ. ಮಹೋನ್ನತ ಸ್ಥಿತಿಗೇರಿದ ಮಾನವ ಸ್ವಭಾವದಲ್ಲಿ ಅಮೋಘ ಅವತಾರ ಲಕ್ಷಣಗಳನ್ನು ಕಲ್ಪಿಸುವುದು ನಮ್ಮ ಸುಸಂಸ್ಕೃತ ಭಾವೋದ್ರೇಕದ ಸಹಜ ಪ್ರವೃತ್ತಿ.

ಲೋಕಮಾನ್ಯ ತಿಲಕ್, ಸಾವರ್‌ಕರ್ ಮೊದಲಾದವರನ್ನು ಶಿವಾಜಿಯ ಅವತಾರವಾಗಿ ಭಾವಿಸುವ ಜನತೆ ಆ ಉದಾತ್ತ ಧ್ಯೇಯದ ಮುಖಂಡರಲ್ಲಿ ತಮಗಿದ್ದ ಅಚಲ ಭಕ್ತಿ ವಿಶ್ವಾಸಗಳನ್ನು ನಿರೂಪಿಸಲು ಮಾಡಿಕೊಂಡ ಭಾವನಾತ್ಮಕ ದಾರಿ. ಇಂದು ದೇಶದ ರಾಷ್ಟ್ರೀಯತೆಯ ಪ್ರತೀಕಗಳಾದ ಜನಪ್ರಿಯ ಮುಖಂಡರನ್ನು ಹಿಂದಿನ ಪೌರಾಣಿಕ ಮಹಾ ವ್ಯಕ್ತಿಗಳೊಡನೆ ಹೋಲಿಸಿ ತನ್ನ ಪೂಜ್ಯ ಭಾವನೆಗಳನ್ನು ವ್ಯಕ್ತ ಮಾಡುವುದು ಸಹಜವೇ ಆಗಿದೆ.

ಆ ದೃಷ್ಟಿಯಿಂದ ಪರಿಪೂರ್ಣ ಪ್ರಜಾಪ್ರಭುತ್ವ ತತ್ವವನ್ನೊಳಗೊಂಡ ರಾಜ್ಯ ಪದ್ಧತಿಯನ್ನು ರಾಮರಾಜ್ಯವೆಂದು ಕರೆಯುವುದೂ, ತನ್ನ ಹಕ್ಕುಗಳನ್ನು ಕಳಗೊಂಡು ಪಾರತಂತ್ರ್ಯದಲ್ಲಿ ಸಿಲುಕಿ ಸೊರಗಿಹೋದ ಜನತೆ ಸಾಮ್ರಾಜ್ಯಶಾಹಿಯೊಡನೆ ಮಾಡುವ ಹೋರಾಟವನ್ನು ಇಂದಿನ ಕುರುಕ್ಷೇತ್ರವೆನ್ನುವುದೂ ಪ್ರಾಚೀನ ಸಂಸ್ಕೃತಿಯ ನವಿನ್ಯಾಂಗದ ಮನೋಪಟಲದ ಮೇಲೆ ನಿರಂತರವಾಗಿ ಉಂಟುಮಾಡುವ ಪ್ರತಿಕ್ರಿಯೆಯ ಪರಿಣಾಮವೇ ಆಗಿದೆ.

ಹಿಟ್ಲರನನ್ನು ರಾಕ್ಷಸನನ್ನಾಗಿಯೂ ರಾವಣನನ್ನಾಗಿಯೂ ಚಿತ್ರಿಸಿ ಬ್ರಿಟಿಷರೇ ಭಾರತದಲ್ಲಿ ಪ್ರಚಾರ ಮಾಡಿದ್ದಾರೆ. ನಮ್ಮ ಜನತೆಯ ಮನಸ್ಸನ್ನು ಅಂತಹ ಸಾಮ್ಯಗಳು ಸುಲಭವಾಗಿ ಸೆಳೆಯುವುದೆಂದು ಚಾಣಾಕ್ಷರಾದ ಅವರು ಚೆನ್ನಾಗಿ ಬಲ್ಲರು.

ಅಹಿಂಸಾತ್ಮಕ ಚಳವಳಾರಂಭದಿಂದ ಮಹಾತ್ಮ ಗಾಂಧಿಯವರು ಮಹಾ ಭಾರತದ ವ್ಯಕ್ತಿಗಳೊಡನೆ ಹೋಲಿಸಲ್ಪಟ್ಟಿದ್ದಾರೆ. ಧರ್ಮಪರಾಯಣನೂ, ಸತ್ಯಸಂಧನೂ, ಶಾಂತಿಪ್ರಿಯನೂ ಆದ ಯುಧಿಷ್ಠಿರನ ವರ್ಚಸ್ಸು ಅವರಲ್ಲಿ ತುಂಬಾ ಹೊಳೆಯುತ್ತಿರುವುದು. ಯುಧಿಷ್ಠಿರನಂತೆ ಅನೇಕ ಸಲ ಅವರು ರಾಜಕೀಯ ದ್ಯೂತವನ್ನಾಡಿ ವನವಾಸ ಅಜ್ಞಾತವಾಸಗಳನ್ನು ಅನುಭವಿಸಿದ್ದಾರೆ.

ಕಾಂಗ್ರೆಸಿನ ಉಕ್ಕಿನ ಮನುಷ್ಯನೆಂದೆನಿಸುವ ವಲ್ಲಭಾಯ್ ಪಟೇಲರು ಎಲ್ಲರ ಭಯಕ್ಕೆ ಕಾರಣಭೂತರೆನಿಸುವ ವ್ಯಕ್ತಿಗಳು. ಕ್ರೋಧಾವೇಶಭರಿತವಾದ ಇವರ ಭಾಷಣಗಳಿಂದಲೂ, ಅದೆಂತಹ ಬೆದರಿಕೆಗೂ ಸೊಪ್ಪು ಹಾಕದಂತಹ ಇವರ ಧೀರೋದಾತ್ತತೆಯು ಸುಲಭವಾಗಿ ಇವರನ್ನು ಭೀಮನ ಕೋಪಾಟೋಪದ ಸಿಂಹಾಸನಕ್ಕೇರಿಸುವುದು. ವಾಯುಪುತ್ರನಂತೆ ಗಾಂಧೀಜಿಯವರಲ್ಲಿ ಇವರಿಗೆ ಯುಧಿಷ್ಠಿರನ ಮೇಲಿರುವ ವಿಶ್ವಾಸವಿದೆ.

ಮಹಾ ಪ್ರತಾಪಿಯೂ, ಅಸಮಾನ ಶೂರನೂ ಅದ್ವಿತೀಯ ದಿಗ್ವಿಜಯ ಪ್ರಖ್ಯಾತನೂ ಆದ ಅರ್ಜುನನ ಸಕಲ ವೀರತ್ವ ಧೀರತ್ವಗಳು ಜವಾಹರ ನೆಹರುಗಳಲ್ಲಿ ಪ್ರತಿಯಚ್ಚುಗೊಂಡಂತೆ ಭಾಸವಾಗುತ್ತಿದೆ. ಅತ್ತ ಭೀಮನಂತೆ ವಿಚಾರಹೀನನಾಗುವ ಸ್ವಭಾವ ತೀವ್ರತೆಯೂ ಇಲ್ಲ, ಇತ್ತ ಯುಧಿಷ್ಠಿರನಂತೆ ಅತ್ಯಂತ ಸೌಮ್ಯವಾದಿಯೂ ಅಲ್ಲ. ವೈಭೋಗಶಾಲಿ ದೇವೇಂದ್ರನ ಪುತ್ರ—ಸೌಭಾಗ್ಯಶಾಲಿ ಮೋತಿಲಾಲರ -ಮಗ- ಅದೆಂತಹ ಸಾಮ್ಯ! ಅರ್ಜುನನಂತೆ ಹೋರಾಟದ ಮುಂಭಾಗದಲ್ಲಿ ಸದಾ ನೆಹರುಗಳಿರುವರು. ಯುಧಿಷ್ಠಿರನೆನಿಸುವ ಸೇವಾಗ್ರಾಮದ ಸಾಧುವಿನ ವಚನವನ್ನು ಎಂದಿಗೂ ಮೀರುವವರಲ್ಲ. ಸಕಲ ಕಲಾ, ವಿಜ್ಞಾನ, ಸಾಹಿತ್ಯಗಳ ಭಕ್ತ. ತನ್ನ ಅನೇಕ ದಿಗ್ವಿಜಯಗಳಿಂದ ಅಂತರಾಷ್ಟ್ರೀಯ ಕೀರ್ತಿ ಪಡೆದಿರುವರು.

ಜೈಪ್ರಕಾಶ ನಾರಾಯಣ್ ಮತ್ತು ಡಾ। ರಾಮಮನೋಹರ ಲೋಹಿಯಾ ಅವರು ನಕುಲ ಸಹದೇವರೆಂಬ ರಾಜಕೀಯ ಅವಳಿಜವಳಿಗಳು. ಯಾವಾಗಲೂ ತೀಕ್ಷ್ಣ ಹೋರಾಟದ ಮುದ್ದೆಗಳೇ ಇವರಿಗೆ ತುಂಬಾ ರುಚಿಸುತ್ತವೆ.

ಒಂದು ಕಾಲದಲ್ಲಿ ಚರ್ಚಿಲ್ಲರಿಗೆ ದುರ್ಯೋಧನನ ಸ್ಥಾನಮಾನವಿತ್ತು. ಈಗ ಅವರು ಶಕುನಿಯ ಪಾತ್ರ ವಹಿಸಿದ್ದಾರೆ. ಬ್ರಿಟಿಷ್ ಜನಾಂಗದ ಸಾಮ್ರಾಜ್ಯಶಾಹಿ ಮನೋಭಾವವನ್ನು ಸಂಪೂರ್ಣ ನಾಶ ಮಾಡಬೇಕೆಂಬ ಉದ್ದೇಶದಿಂದಲೇ ಇವರು ಭಾರತೀಯ ರಾಷ್ಟ್ರೀಯತೆಯನ್ನು ಅಷ್ಟು ತೀಕ್ಷ್ಣವಾಗಿ ಕೆದರುತ್ತಾರೆ. ಪಾಂಡವರನ್ನು ಕೊಚ್ಚಿಗೆಬ್ಬಿಸದಿದ್ದರೆ ಕೌರವರ ನಾಶವಾಗುವದೆಂತು!

ಡಾ। ಅಂಬೇಡಕರರು ಹಲವು ಸಲ ದಾನಶೂರ ಕರ್ಣನ ಮಟ್ಟಕ್ಕೆ ಮುಟ್ಟುತ್ತಾರೆ. ಮಹಾತ್ಮರು ಉಪವಾಸ ಮಾಡಿ ಹರಿಜನರನ್ನು ಹಿಂದೂ ಹಿಡಿತದಿಂದ ತಪ್ಪಿಸಬಾರದಾಗಿ ಇವರಿಂದ ವಚನ ಪಡೆಕೊಂಡರು. ಕರ್ಣನಂತೆ ಬ್ರಿಟಿಷ್ ಸರಕಾರದ ಆಪ್ತ ಆರೈಕೆಯಿಂದ ಬೆಳೆದ ಕೂಸು ಅವರು. ಯಾವ ಹೋರಾಟದಲ್ಲೂ ಅವರನ್ನು ಕೈಬಿಡುವಂತಿಲ್ಲ.

ಮತ್ತೆ ಸಪ್ರೂ, ರಾಧಾಕೃಷ್ಣನ್, ಕುಂಜ್ರು, ಸಿ. ಪಿ. ರಾಮಸ್ವಾಮಿ ಅಯ್ಯರ್ ಮೊದಲಾದವರು ಭೀಷ್ಮಾಚಾರ್ಯ, ದ್ರೋಣಾಚಾರ್ಯರ, ಅಶ್ವತ್ಥಾಮ, ಶಲ್ಯರುಗಳಂತೆ ಯಾವುದ್ಯಾವುದೊ ಕರ್ತವ್ಯ ಕರ್ಮದ ಪರಿಸ್ಥಿತಿಗೆ ಸಿಲುಕಿ ಪೇಚಾಡುತ್ತಿರುವರು.

ಸಪ್ರೂಗಳೂ ಭೋಪಾಲದ ನವಾಬರೂ ಒಂದೊಂದು ಸಲ ಕೃಷ್ಣಸಂಧಾನದ ಪಾತ್ರವನ್ನು ನಿರ್ವಹಿಸಲು ನೋಡಿರುವರು. ರಾಜಾಜಿಯವರು ಒಂದು ಸಲ ಈ ಯುದ್ಧಕ್ಕೆ ಕೈಹಾಕಿ ಇತ್ತಂಡದವರ ಅತೃಪ್ತಿಗೆ ಕಾರಣಭೂತರಾಗಿರುವರು.

ಬಹುಸಂಖ್ಯಾಕ ಬಿಹಾರ್ ಪ್ರಾಂತ್ಯದಲ್ಲಿ ಮುಸಲ್ಮಾನರ ಮೇಲಾದ ದಾಳಿಯ ಕುರಿತು ಸಂಖ್ಯೆ ಸಂಗತಿಗಳನ್ನು ಪರಿಶೀಲಿಸಲು ಕಳುಹಲ್ಪಟ್ಟ ಲೀಗ್ ಸಮಿತಿಯೊಂದರ ನಾಯಕರಾಗಿ ಮಾಜಿ ಸರ್ ಫಿರೋಜ್ ಖಾನ್ ನೂನರು ಬಿಹಾರಿನ ಲೀಗಿನ ಕುರಿತು "ಇಲ್ಲಿಯ ಮುಸ್ಲಿಮರ ಪರಿಹಾರಕ್ಕೆ ಹೇರಳ ಹಣ ಬೇಕಾಗಿದೆ. ಆದರೆ ಅದನ್ನು ಇಲ್ಲಿಯ ಲೀಗಿನವರ ಕೈಯಲ್ಲಿ ಕೊಟ್ಟರೆ ಒಂದು ಚಿಕ್ಕಾಸು ಕೂಡಾ ನರಳುವವರಿಗೆ ಮುಟ್ಟಲಿಕ್ಕಿಲ್ಲ"ವೆಂಬರ್ಥದಲ್ಲಿ ವರದಿ ಮಾಡಿರುವದಾಗಿ ಟೈಮ್ಸ್ ಪತ್ರಿಕೆಯ ಒಂದು ವರದಿ ತಿಳಿಸುತ್ತದೆ.

★

...ಮಾರ್ಗದ ಗಂಡಾಂತರಗಳನ್ನು ಕಥಾರೂಪದಲ್ಲಿ ಚಿತ್ರಿಸುವ ವ್ಯಂಗ ಚಿತ್ರಗಳನ್ನು ತಯಾರಿಸಿ ಮಕ್ಕಳಿಗೆ ಹಂಚಿದರೆ ಮಾರ್ಗ ಅಪಘಾತಗಳು ಕಮ್ಮಿಯಾಗಬಹುದೆಂದು ಇಂಗ್ಲೆಂಡಿನ ಸಸೆಕ್ಸ್ ಜಿಲ್ಲಾ ಬೋರ್ಡಿನವರ ಅಭಿಪ್ರಾಯ.

★

ತಲೆ ಬಿಸಿಯಾದ ವ್ಯಾಪಾರಿ ವಹಿವಾಟುದಾರರು ತಮ್ಮ ಕೆದರಿದ ನರಗ್ರಂಥಿಗಳನ್ನು ತಂಪುಗೊಳಿಸಲು ಸಹಾಯಕವಾಗುವಂತೆ ನಗರ ಮಧ್ಯದಲ್ಲಿ ಸ್ನಾನದ ಗೃಹಗಳನ್ನು ಸ್ಥಾಪಿಸಬೇಕೆಂದು ಲಿವರ್‌ಪೂಲದ ನಗರ ಸಭಾಧ್ಯಕ್ಷರು ಸೂಚಿಸಿದ್ದಾರೆ.

★

ಈಕೆಯಲ್ಲಿ
ಯೌವನದ ಲಕ್ಷಣಗಳೂ
ಯೌವನದ ಶಕ್ತಿಯೂ ಇವೆ.

ಬ್ಯಾಲ್ ಬೀನ್ಸ್‌ಗಳನ್ನು ನಿತ್ಯಲೂ ಸೇವಿಸಿ, ನೀವೂ ಯೌವನವನ್ನು ಪಡೆಯಬಹುದು. ಇಂದಿನಿಂದಲೆ, ಮಲಗುವ ಮುನ್ನ ಎರಡರಂತೆ, ಅವುಗಳ ಸೇವನೆಯನ್ನು ಪ್ರಾರಂಭಿಸಿರಿ.

ಆರೋಗ್ಯವನ್ನು ಕೆಡಿಸುವ ದೇಹದೊಳಗೆ ಉಂಟಾಗುವ ವಿಸರ್ಜನಾ ಕಲ್ಮಷ ವಿಷಗಳನ್ನು ಹೊರಡಿಸಿ, ದೇಹಕ್ಕೆ ಶಕ್ತಿಯನ್ನು ಕೊಡುವ ಶುದ್ಧ ವನಸ್ಪತಿ ಶಕ್ತಿದಾಯಕ ಬೇದಿ ಮದ್ದು ಬ್ಯಾಲ್ ಬೀನ್ಸುಗಳು.



ತರುಣಾಂಗ ಬೇಕಾದರೆ, ಯೌವನದ ಹುರುಪನ್ನು ತಾಳ ಬೇಕಾದರೆ, ನಿಮಗೆ ಬಾಲ್ ಬೀನ್ಸುಗಳ ಅವಶ್ಯವಿದೆ.

ಮಲಗುವ ಮುನ್ನ
BILE BEANS
ದಿನ ನಿತ್ಯ ಜ್ಞಾಪಿಸಿರಿ.

ಎದೆನೋವನ್ನು ನಿವಾರಿಸಿರಿ

ನಿಮಗೆ ಬೇಗನೆ ಶೀತವಾಗುವುದೇ?

ನೀವು ಆಗಾಗ ಕೆಮ್ಮು ಶ್ವಾಸಕೋಶದ ದೌರ್ಬಲ್ಯಗೊಳಿಸುವ ಶೀತಬಾಧೆಯಿಂದ ನರಳುತ್ತೀರಾ? ಹಾಗಿದ್ದರೆ, ವಿಷಹಾರಿ, ಶ್ವಾಸಯೋಗ್ಯ ಮಾತ್ರೆಗಳಾದ ಪೆಪ್ಸಗಳನ್ನು ಸೇವಿಸಿ ಗುಣಹೊಂದಿರಿ.

ಪೆಪ್ಸು ಬಾಯಲ್ಲಿ ಹಾಕಿದ ಕೂಡಲೇ ಉತ್ತಮ ಸುಗಂಧ ಔಷಧಿ ರಸ ಹೊರಡಿಸುತ್ತದೆ. ಅದು ಶ್ವಾಸದೊಡನೆ ಶ್ವಾಸಕೋಶವನ್ನು ಸೇರುವುದು. ಹಾಗೆ ಸೇರಿ, ಎದೆನೋವು, ಕಫ, ಗಂಟಲು ನೋವು, ಶೀತಬಾಧೆ, ಕೆಮ್ಮು ಮೊದಲಾದುವುಗಳನ್ನು ಗುಣಪಡಿಸುವುದು. ನೇವಸ ಮತ್ತು ಶೀತಜ್ವರಗಳಿಗೂ ಸರ್ವೌಷಧ.



ಪೆಪ್ಸನ್ನು
ಕೊಂಡುಕೊಳ್ಳಿರಿ



PEPS
ವಿಷಹಾರಿ ಶ್ವಾಸಯೋಗ್ಯ ಮಾತ್ರೆಗಳು

ಜಿಲ್ಲಾ ಪರಿಚಯ

ಹೊಸ ವರ್ಷದ ಪದವಿ: ನಮ್ಮ ಜಿಲ್ಲೆಯವರಾದ ಖಾನ್ ಬಹದೂರ್ ಕೆ. ಪಿ. ಬ ಸಾಧರ್ಶನ ರಾಯರಿಗೆ ಸರ್ವಿಸ್ ಪದಕ ದೊರಕಿದೆ. ಇವರು ಮದ್ರಾಸ್ ಪ್ರಾಂತ್ಯದ ಡಿಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಆಗಿದ್ದಾರೆ. ಅದೇ ರೀತಿ ಮದ್ರಾಸಿನ ಡೆಪ್ಯುಟಿ ಪೋಲೀಸ್ ಸುಪರಿಂಟೆಂಡೆಂಟರಾಗಿರುವ ಶ್ರೀ ಉಳ್ಳಾಲ ನಾಗೇಶರಾವ್ ಇವರಿಗೆ ಹಿಂದೀ ಪೋಲೀಸ್ ಪದಕವನ್ನು ಕೊಡಲಾಗಿದೆ.

ಭಾಷಣ: ...ದ ಕ ಸಂದಿತ ಸಂಘದ ಆಶ್ರಯದಲ್ಲಿ ಕಳೆದ ತಾ ೪ನೇ ಶನಿವಾರ ಸಂಜೆ ಸುಪ್ರಸಿದ್ಧ ಹರಿಕಥಾ ವಿದ್ವಾಂಸರಾದ ಬ್ರಹ್ಮಶ್ರೀ ಕೇಲೂರು ಕೇಶವದಾಸರು 'ದಾಸ ಸಾಹಿತ್ಯ' ಎಂಬ ವಿಷಯದ ಕುರಿತು ಇಲ್ಲಿಯ ಥಿಯೋಸೋಫಿಕಲ್ ಲೋಜಿನಲ್ಲಿ ಸುರಸವಾದ ಭಾಷಣವಿತ್ತರು. ದಾಸ ವಾಙ್ಮಯದ ವೈಶಿಷ್ಟ್ಯ, ಅದರ ಬೆಳವಣಿಗೆ, ಸಾಮಾಜಿಕ ಮತ್ತು ಆಧ್ಯಾತ್ಮಿಕ ಪರಿಣಾಮ, ಸಾಹಿತ್ಯ ಬೆಳವಣಿಗೆ ಮತ್ತು ಸಾಂಸ್ಕೃತಿಕ ಲಕ್ಷಣಗಳನ್ನೂ ಶ್ರೀ ದಾಸರು ಅಂದದ ಭೋಗೋಚಿತ ಉದಾಹರಣೆಗಳನ್ನು ಕೊಟ್ಟು ಚಿತ್ರವತ್ತಾಗಿ ವಿವರಿಸಿದರು. ಅದನ್ನು ಅಭಿವೃದ್ಧಿಪಡಿಸಿ ಪ್ರಚಾರ ಮಾಡುವುದರ ಸಂಬಂಧವಾದ ಉಪಯುಕ್ತ ಸಲಹೆ ಸೂಚನೆಗಳನ್ನು ನಿರೂಪಿಸಿದರು.

ಮಂಗಳವಾರ ತಾ ೭ರಂದು ಕೇ ದಾಸರು ಪಳ್ಳಿಯಿನ ಶ್ರೀ ತಾಳಿತ್ತಾಯರಲ್ಲಿ (ಪ್ಲೇಸಿಂಗ್ ಇಂಜಿನಿಯರರು) ಒಂದು ಹರಿಕಥೆಯನ್ನು ಜರಗಿಸಿದರು.

ರಥೋತ್ಸವ: ಸ್ಥಳೀಯ ಶ್ರೀ ವೆಂಕಟರಮಣ ದೇವಸ್ಥಾನದ ಈ ವರ್ಷದ ರಥೋತ್ಸವಗಳು ಈ ತಿಂಗಳ ಕೊನೆಯ ವಾರದಲ್ಲಿ ಜರಗುವವು. ತಾ ೨೫ರಂದು ಕೋಡಿ ಸಮಾರಂಭವೂ ೨೯ರಂದು ಬ್ರಹ್ಮರಥೋತ್ಸವವೂ ಇದರ ಮರುದಿನ ಅವಭೃತ ಮಂಗಲಸ್ನಾನೋತ್ಸವವೂ ಜರಗುವವು. ಈ ಸಲದ ಉತ್ಸವಗಳಲ್ಲಿ ಕಾಶೀಮಠದ ಶ್ರೀ ಸ್ವಾಮಿಜಿಗಳು ಭಾಗವಹಿಸುವರೆಂದೂ, ಪ್ರಾಮುಖ್ಯವಾದ ೨–೩ ದಿನಗಳಲ್ಲಿ ವೈಕುಂಠ ಸಮಾರಾಧನೆಗಾಗಿ ಅಕ್ಕಿ ಮಂಜೂರಾತಿಯೂ ದೊರಕಿದೆ ಎಂತಲೂ ತಿಳಿದುಬರುತ್ತದೆ.

ಗೌರವ ಕೂಟ: ಮದ್ರಾಸ್ ಪ್ರಾಂತ್ಯದ ವಿದ್ಯಾ ಇಲಾಖೆಯ ಶಾರೀರಕ ಶಿಕ್ಷಣ ಖಾತೆಯ ಡೈರೆಕ್ಟರರಾದ ಮಿ ಎಂಡ್ರ್ಯೂಸ್‌ರವರು ಇಲ್ಲಿಗೆ ಪರಿಶೀಲನಾ ಸಂಚಾರಕ್ಕಾಗಿ ಬಂದಿದ್ದಾಗ ಸ್ಥಳೀಯ ಮುಖ್ಯೋಪಾಧ್ಯಾಯರುಗಳ ಶವನ್ನವರು ಸಭೆಯಲ್ಲಿ ಡೈರೆಕ್ಟರರನ್ನು ಒಂದು ಉಪಹಾರ ಕೂಟ ನೆರವೇರಿಸುವುದರ ಮೂಲಕ ಗೌರವಿಸಿದರು. ಶರೀರ ಶಿಕ್ಷಣಕ್ಕೆ ಯೋಗ್ಯ ವ್ಯವಸ್ಥೆಗಳು ರಚಿತವಾಗುವುದರ ಮತ್ತು ವಿದ್ಯಾ ಸಂಸ್ಥೆಗಳು ವಿದ್ಯಾರ್ಥಿಗಳ ಶಾರೀರಕ ಅಭಿವೃದ್ಧಿಯ ಕುರಿತು ವಹಿಸಬೇಕಾದ ಯೋಗ್ಯ ಧೋರಣೆಯ ಆವಶ್ಯಕತೆಯ ಕುರಿತು ಡೈರೆಕ್ಟರರು ಅಧಿಕಾರಿಗಳ ಸಹಕಾರವನ್ನೂ ಕೋರಿದರು.

ಬಿ. ಟಿ ತರಬೇತಿ: ಬರುವ ಜೂನ್ ತಿಂಗಳಿಂದ ಸ್ಥಳೀಯ ಗವರ್ನಮೆಂಟ್ ಕೋಲೇಜಿನಲ್ಲಿ ಬಿ ಟಿ ತರಬೇತಿಯ ವರ್ಗವನ್ನು ತೆರೆಯುವುದರ ಕುರಿತು ವಿದ್ಯಾ ಇಲಾಖೆಯವರು ತಕ್ಕ ಸಮಾಲೋಚನೆ ನಡೆಸುತ್ತಿರುವರೆಂದು ತಿಳಿದುಬರುತ್ತದೆ. ಈಗಾಗಲೇ ಎರಡು ವರ್ಷಗಳ ಹಿಂದೆ ಸ್ತ್ರೀ ಅಧ್ಯಾಪಕಿಯರ ತರಬೇತಿಗಾಗಿ ಬಿ. ಟಿ ಕ್ಲಾಸುಗಳು ಇಲ್ಲಿ ತೆರೆಯಲ್ಪಟ್ಟಿವೆ. ಅಧ್ಯಾಪಕರ ತರಬೇತಿ ವ್ಯವಸ್ಥೆಯೂ ಸ್ಥಾಪಿಸಲ್ಪಟ್ಟರೆ ಇಲ್ಲಿಂದ ತುಂಬಾ ಹಣ ಖರ್ಚುಮಾಡಿ ಮದ್ರಾಸಿಗೆ ಹೋಗಿ ಕಲಿಯುವ ಅನೇಕ ಸಂಕಷ್ಟಗಳು ನೀಗುವವು.

ಆಯುರ್ವೇದ ಸಮ್ಮೇಲನ: ಮಂಗಳೂರಿನವರಾದ ವೈದ್ಯಗುರು ಶ್ರೀಮತಿ ಸುಮತಿಬಾಯಿ ತಾರಾನಾಥ ಬಿ ಎ. ಎಲ್ ಟಿ. ಇವರ ಅಧ್ಯಕ್ಷತೆಯಲ್ಲಿ ಅಖಿಲ ಕರ್ನಾಟಕ ಆಯುರ್ವೇದ ಸಮ್ಮೇಲನ ಮತ್ತು ಪ್ರದರ್ಶನಗಳು ಕಳೆದ ತಾ ೮ ಮತ್ತು ೯ರಂದು ಗದಗಿನಲ್ಲಿ ಜರಗಿದುವು. ಮುಂಬಯಿ ಸರಕಾರದ ಮಾನ್ಯ ಆರೋಗ್ಯ ಸಚಿವರಾದ ಡಾ। ಗಿಲ್ಡರರು ಸಮ್ಮೇಲನದ ಉದ್ಘಾಟನ ಸಮಾರಂಭ ಮಾಡಿದರು. ಪ್ರದರ್ಶನದ ಪ್ರಾರಂಭೋತ್ಸವವನ್ನು ಮದ್ರಾಸ್ ಸರಕಾರದ ಆರೋಗ್ಯ ಮಂತ್ರಿಗಳಾದ ಶ್ರೀಮತಿ ರುಕ್ಮಿಣಿ ಲಕ್ಷ್ಮೀಪತಿಯವರು ನೆರವೇರಿಸಿದರು.

ಪ್ರಧಾನರ ಸೆಕ್ರೆಟರಿಗಳು: ಪ್ರಧಾನ ಪ್ರಕಾಶಂ ಅವರ ನಿಧಾಯಕ ಕಾರ್ಯದರ್ಶಿಗಳಾದ ಶ್ರೀ ವಿ ರಾಘವಯ್ಯನವರು ಮದ್ರಾಸ್ ಸರಕಾರದ ವಸ್ತುಸಂಗ್ರಹಾಲಯದ ಮೇಲಾಧಿಕಾರಿಯಾದ ಡಾ। ಅಯ್ಯಪ್ಪನ್ ಅವರೊಡನೆ ಕಳೆದ ತಿಂಗಳ ಅಂತ್ಯದ ವಾರದಲ್ಲಿ ನಮ್ಮ ಜಿಲ್ಲೆಗೆ ದಯಮಾಡಿಸಿದಾಗ ಉಡುಪಿಗೆ ಆಗಮಿಸಿ ಶ್ರೀಕೃಷ್ಣ ಮಠವನ್ನು ಸಂದರ್ಶಿಸಿದ್ದರು. ಪರ್ಯಾಯ ಪೀಠಸ್ಥರಾದ ಶ್ರೀ ಶೀರೂರು ಸ್ವಾಮಿಜಿಯವರ ಪರಿಚಯ ಮಾನ್ಯ ಕಾರ್ಯದರ್ಶಿಗಳಿಗೆ ಮಾಡಿಕೊಡಲಾಯಿತು. "ಕೊಂಗ್ರೆಸು ಜಯಪ್ರದವಾಗಿ ಬಾಳಲಿ" ಎಂಬುದು ತಮ್ಮ ಅನುನಿತ್ಯದ ಪ್ರಾರ್ಥನೆ ಎಂದು ಶ್ರೀ ಸ್ವಾಮಿಜಿಗಳು ಅತಿಥಿಗಳನ್ನು ಪ್ರಸಾದ ಸಮೇತ ಹರಸಿದರು.

ಮಕರಸಂಕ್ರಾಂತಿ ಜಾತ್ರೆ: ಶ್ರೀ ಕೃಷ್ಣ ಮಠದಲ್ಲಿ ಕಾಲಂಪ್ರತಿ ನಡೆಯುವ ಮಕರ ಸಂಕ್ರಾಂತಿ ಜಾತ್ರೆಯು ಇದೇ ತಾ 0ಕ್ಕೆ ಆರಂಭವಾಗಿದ್ದು ತಾ 1 ರಲ್ಲಿ ಹಗಲು ಉತ್ಸವ ಅವಭೃತಸ್ನಾನದೊಂದಿಗೆ ಮುಕ್ತಾಯವಾಗುವುದು. ತಾ 1।ರಲ್ಲಿ ಮಕರ ಸಂಕ್ರಮಣ ಉತ್ಸವ.

ಪ್ರದರ್ಶನ: ಜಿಲ್ಲಾ ಎಡ್ವಾನ್ಸ್‌ಮೆಂಟ್ ಅಸೋಸಿಯೇಶನಿನ ಆಶ್ರಯದಲ್ಲಿ ಜರಗಲಿರುವ 2ನೇ ವ್ಯವಸಾಯ ವಸ್ತು ಗೃಹ ಕೈಗಾರಿಕೆ ಪ್ರದರ್ಶನವನ್ನು ಇದೇ ಬರುವ ಫೆಬ್ರವರಿ 28 ಮಾರ್ಚ 1 2 ಮತ್ತು ಮುಂದಿನ ದಿವಸಗಳಲ್ಲಿ ಕಾರ್ನಾಡು ಮಿಶನ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗಿಸಲು ನಿಶ್ಚಯಿಸಿರುತ್ತದೆ. ಇದೇ ಸಮಯ ಕೊಡಗಿನ ಗ್ರಾಮೀಣನವರು ಸರ್ಕಾರದ ಸೆಂಕ್ಷನ್ ಮೇರೆಗೆ ಫಲವಸ್ತು ಪ್ರದರ್ಶನವನ್ನು ಜರಗಿಸಲಿರುವರು. ಈ ಮೂಲಕ ಎಲ್ಲರಿಗೂ ತಿಳಿಸಿ ಸಹಕಾರವನ್ನು ಕೋರಲಿ ಗ್ರಾಮಾಭಿವೃದ್ಧಿ ಕಮಿಟಿಯ ಸೆಕ್ರೆಟರಿಗಳಾದ ಶ್ರೀ ಎಂ ಆರ್ ಪೊಂಜಾ ಅವರು ಕೇಳಿಕೊಳ್ಳುತ್ತಾರೆ.

ಟಪ್ಪಾಲು ಆಫೀಸು: ಅತಿಕಾರಬೆಟ್ಟು, ಕದತಾರು, ತಿಮಂತೂರು, ಎಳತ್ತೂರು ಮತ್ತು ಕಿಲ್ಪಾಡಿ ಗ್ರಾಮಗಳ ಮಧ್ಯಸ್ಥಳವಾದ ಪಂಜಿನಡ್ಕ ಎಂಬಲ್ಲಿ ಸದ್ರಿ ಗ್ರಾಮಸ್ಥರ ಸಲುವಾಗಿ ಒಂದು ಬ್ರೆಂಚ್ ಪೋಸ್ಟ್ ಆಫೀಸು ತೆರೆಯಲ್ಪಟ್ಟಿರುತ್ತದೆ.

ಬಟ್ಟೆ ರೇಶನಿಂಗ್: ಮದ್ರಾಸ್ ಪ್ರಾಂತ್ಯದಲ್ಲೆಲ್ಲ ಬಟ್ಟೆಯ ರೇಶನಿಂಗ್ ಇದೇ ತಾ ೧–೧ ೧೯೪೭ರಿಂದ ಜ್ಯಾರಿಗೆ ಬಂದಿರುವುದು. ಪ್ರಾಯಸ್ಥರಿಗೆ ವರ್ಷಕ್ಕೆ (ಗಿರಣಿಬಟ್ಟೆ ಮಾತ್ರ) ಐದು ಗಜ ಮಕ್ಕಳಿಗೆ ಎರಡು ಗಜದಂತೆ ಕೊಡಲಾಗುವುದು. ಈ ಮೊದಲು ಪ್ರಕಟವಾದಂತೆ ಈ ಐದು ಮತ್ತು ಎರಡು ಗಜಗಳನ್ನು ಎರಡು ಪಾಲಾಗಿ ಆರು ತಿಂಗಳಿಗೊಮ್ಮೆ ಕೊಂಡುಕೊಳ್ಳಬೇಕಾಗಿತ್ತು. ಈಗಿನ ಪ್ರಕಟನೆಯಂತೆ ವರ್ಷದ ಐದು ಗಜ ಬಟ್ಟೆಯನ್ನು ಒಂದೇ ಬಾರಿ ತೆಗೆದುಕೊಳ್ಳಬಹುದು. ಆದರೆ ವರುಷಾಂತ್ಯದೊಳಗೆ ಕೊಂಡುಕೊಳ್ಳದಿದ್ದರೆ ಮಾತ್ರ ಆ ಪ್ರಮಾಣವು ಅವಧಿ ಮೀರಿ ರದ್ದಾಗುವುದು. ಸದ್ಯದಲ್ಲಿ ರೇಶನಿಂಗ್ ಕ್ಷೇತ್ರಗಳಲ್ಲಿ ಈ ಸಂಬಂಧದ ಹೊಸ ಕಾರ್ಡುಗಳು ಹಂಚಲಾಗುವುದೆಂದು ಸುದ್ದಿಯಿದೆ.

ಹೊಸ ವರ್ಷದ ಹಾರೈಕೆ

ಬ್ರಿಟಿಷರಿಗೆ ಇದು ಹೊಸ ವರ್ಷವಾದರೂ ಒಟ್ಟು ಸಮಸ್ತ ಭಾರತೀಯರಿಗೆ ಹಳೆಯ ವರ್ಷವೆಂತಲೇ ಲೆಕ್ಕ. ಆದರೂ ನಮ್ಮ ಮತ್ತು ಅವರ ಬಹುಕಾಲದ ಸಂಪರ್ಕದ ಗೌರವಕ್ಕಾಗಿಯೂ, ಸದ್ಯದಲ್ಲೇ ಅವರು ಇಲ್ಲಿಂದ ಹೊರಡಲಿಕ್ಕಿರುವುದರಿಂದ ಅವರನ್ನು ಬೀಳ್ಕೊಡುವ ಸಂತೋಷಕ್ಕಾಗಿಯೂ ಅವರ ಲೆಕ್ಕವನ್ನೇ ಹಿಡಿಯೋಣ.

ಇನ್ನು ಮೂರು ಮಾಸಗಳ ಸುಮಾರಿಗೆ ಹಿಂದೂಗಳ ಹೊಸ ಸಂವತ್ಸರವೂ ಪ್ರಾರಂಭವಾಗುವುದು. ಬ್ರಿಟಿಷರ ಆಡಳಿತ ವ್ಯವಹಾರದ ಹೊಸ ವರ್ಷ ಆರಂಭವಾಗುವುದು ಮಾರ್ಚ್ ನಂತರವೆ. ಮಾರ್ಚ್ ನಂತರದ ತಿಂಗಳುಗಳಲ್ಲೇ ಶಾಲಾ ವರ್ಷವೂ ಪ್ರಾರಂಭವಾಗುವುದು. ಅಂತೂ ಈ ಸಮಯವನ್ನು ಹೊಸ ಹಳೆಯುಗಗಳ ಮಿಶ್ರಣವೆಂದೂ, ಸಂಧಿಕಾಲವೆಂದೂ ಭಾವಿಸೋಣ. ಒಂದು ಲೆಕ್ಕದಲ್ಲಿ ಇದು ಸಂಕ್ರಾಂತಿ ಕಾಲವೂ ಆಗಿದೆ. ನಮ್ಮ ದೇಶದ ಮಾತ್ರವಲ್ಲ ಜಗತ್ತಿನ ಸ್ಥಿತಿಗತಿಗಳಲ್ಲಿ ಉತ್ಕ್ರಾಂತಿಯೂ ಉಂಟಾಗುವ ಕಾಲ.

ಹಳೆಯ ವರ್ಷದೊಡನೆ ಬ್ರಿಟಿಷ್ ಆಡಳಿತ ವರ್ಗದವರು ಅನೇಕ ಹಳೆ ಸಾಂಪ್ರದಾಯಗಳನ್ನು ಹರಿದೊಗೆದಿದ್ದಾರೆ. ಬಿರುದು ಬಾವಲಿ ಕೊಡುವ ಕ್ರಮವನ್ನು ನಡುಗಾಲ ಸರಕಾರದ ಸಲಹೆ ಮೇರೆಗೆ ರದ್ದು ಮಾಡಿದ್ದು ವಿವೇಕೋದಯ ಸೂಚಕ.

ಘಟನಾ ಸಮಿತಿಯು ಧ್ಯೇಯ ನಿರ್ಣಯದ ಚರ್ಚೆಯನ್ನು ಹೊಸ ವರ್ಷಕ್ಕೆ ಮುಂದರಿಸಿದ್ದು ಶುಭದಾಯಕವೆಂದು ಹಾರೈಸಲಾಗಿದೆ.

ಅಖಿಲಭಾರತ ಕೊಂಗ್ರೆಸ್ ಕಮಿಟಿಯೂ ಉದಾರತೆಯಿಂದ ಬ್ರಿಟಿಷ್ ಸರಕಾರದ ದಶಂಬರ್ 6ರ ಹೇಳಿಕೆಯನ್ನು ಸ್ವೀಕರಿಸಿ ಲೀಗಿಗೆ ಸೌಹಾರ್ದದ ಕೈಯನ್ನು ತೋರಿಸಿದ್ದು ಹೊಸ ರಾಜ್ಯಾಂಗ ರಚನೆಯು ಸುಗಮವಾಗಿ ಸಾಗಲು ಸುಲಭವಾಗಿದೆ.

ಆಸಫ್ ಆಲಿಯವರು ಹೊಸ ವರ್ಷಾರಂಭದಲ್ಲೇ ಹೊಸ ಎಂದೆನಿಸುವ ಅಮೇರಿಕಕ್ಕೆ ರಾಯಭಾರಿಯಾಗಿ ಹೋಗುವರು. ಪ್ರಾಚೀನ ಮತ್ತು ಅರ್ವಾಚೀನ ಸಂಸ್ಕೃತಿಗಳ ಸ್ಪರ್ಶದಿಂದ ಮಿಲನವಾಗಿ ಪರಸ್ಪರ ಸರ್ವತೋಮುಖ ಅಭಿವೃದ್ಧಿಯಾಗಲಿ.

ಮಹಾತ್ಮರು ಪೂರ್ವ ಬಂಗಾಲದಲ್ಲಿ ಅಹಿಂಸೆಯ ಪ್ರಯೋಗಾರ್ಥವಾಗಿ ಕಾಲ್ನಡೆ ಸಂಚಾರಕ್ಕಾರಂಭಿಸಿದ್ದೂ ಹೊಸ ವರ್ಷದಲ್ಲಿ ನವಕ್ರಿಸ್ತ ಶಕದಲ್ಲಿ ಕ್ರಿಸ್ತನ ಆಪ್ತ ತತ್ವಕ್ಕೆ ಉತ್ತರೋತ್ತರ ಯಶಸ್ಸು ಲಭಿಸುವುದರಲ್ಲಿ ಸಂದೇಹವಿಲ್ಲ.

ಏಷ್ಯಾ ರಾಷ್ಟ್ರಗಳ ಪರಿಷತ್ತು ಸದ್ಯದಲ್ಲೇ ದಿಲ್ಲಿಯಲ್ಲಿ ಕೂಡಲಿಕ್ಕಿರುವುದು. ಪೌರ್ವಾತ್ಯದ ವರ್ಣ ಜನಾಂಗಗಳ ಐಕ್ಯತೆಯಿಂದ ವರ್ತಿಸಿದರೆ ಪಾಶ್ಚಾತ್ಯರ ದೇಶದರ್ಪವು ತನ್ನಷ್ಟಕ್ಕೆ ಮೆದುವಾಗಿ ಪರಸ್ಪರ ಇತ್ತಂಡದವರಲ್ಲಿ ಸಮಾನತೆಯ ಎಂಟುಗಳು ಜನವಾಗುತ್ತದೆ.

ಬಂಟ್ವಾಳದಲ್ಲಿ ಹರಿಜನ ಪ್ರವೇಶ

ಬಂಟ್ವಾಳದ ಶ್ರೀ ವೆಂಕಟರಮಣ ಮತ್ತು ಚಲಿಂಗೇಶ್ವರ ದೇವಸ್ಥಾನಗಳಲ್ಲಿ ತಾ ೭–೧ರಂದು ಕ್ರಮವಾಗಿ ಹರಿಜನ ಪ್ರವೇಶ ಸಮಾರಂಭವು ವಿಜೃಂಭಣೆಯಿಂದ ಜರಗಿಸಲಾಯಿತು. ಡಾ ಯು ಪಿ ಮಲ್ಯ, ಶ್ರೀ ಈಶ್ವರ, ಶ್ರೀ ನಾರಾಯಣ ಕಿಣಿ ಮೊದಲಾದವರ ನೇತೃತ್ವದಲ್ಲಿ ಹಿಮ್ಮ ವರ್ಗದವರು ನದಿಸ್ನಾನ ಮಾಡಿ ಪಟ್ಟೆಗಳಿಂದಲೂ ಸುವರ್ಣ ಬಂದ ಆಭರಣಗಳಿಂದಲೂ ದೇವಸ್ಥಾನಗಳಲ್ಲಿ ಎರಮಾತಿಕೊಳ್ಳಲ್ಪಟ್ಟರು. ಹರಿಜನರು ದೇವರಿಗೆ ಹಣ್ಣುಕಾಯಿಗಳನ್ನು ಕೊಟ್ಟು ಪ್ರದಕ್ಷಿಣೆಯನ್ನು ಮಾಡಿ ಪ್ರಸಾದನಂತರ ... ಜಿಲ್ಲೆಯಲ್ಲಿ ಈ ನವ ಸುಧಾರಣೆಯನ್ನು ಪ್ರಥಮವಾಗಿ ಆರಂಭಿಸಿದ ಕೀರ್ತಿಯು ಅಲ್ಲಿನ ಗೌಡಸಾರಸ್ವತ ವೆಂಕಟರಮಣ ದೇವಸ್ಥಾನಕ್ಕೆ ಸಲ್ಲುವುದು. ಬಂಟ್ವಾಳದ ನಾಗರೀಕರು ತಮ್ಮ ಉದಾರವೂ ಉದಾತ್ತವೂ ಆದ ಆದರ್ಶದಿಂದ ಇಡೀ ಜಿಲ್ಲೆಗೆ ಮುಂದಾಳತ್ವ ಕೊಟ್ಟಿದ್ದು ಶ್ಲಾಘನಾರ್ಹರಿರುವರು. ಜಿಲ್ಲೆಯ ಇತರ ದೇವಸ್ಥಾನಗಳಲ್ಲೂ ನಿರ್ಬಂಧ ಕಿತ್ತೊಗೆಯಲ್ಪಟ್ಟು ಈ ಹಿಂದೂಗಳಿಗೆಲ್ಲ ತೆರವಾಗಲೆಂದು ಹಾರೈಕೆ.

THE KONKANI NATAK SABHA

At the demand of many again stages

"RAITHAK ZAITH"

at the Milagres High School, Mangalore

On Sunday 19 1-47 at 6 p m

Rates Re 1-10 0, 0-13 0 0-6-6 & 0-2-0

(Inclusive of tax)

Tickets available at

M s Cyril Pinto & V J D'Souza
St Aloysius College

M/s Simon & Co Hampankatta

Mr Felix Pinto, Bizai

ಬಾವುಗಳನ್ನು ಕೂಡಲೇ ಗುಣ ಪಡಿಸಿರಿ

ನೋವನ್ನು ಉಂಟುಮಾಡುವ ವಿಷಕಾರೀ ಬಾವುಗಳು ಈ ರೀತಿ ಗುಣವಾಗುತ್ತವೆ. ಅದನ್ನು ಆಗಾಗ ನೀರಿನಿಂದ ಕುಟಿಕೂರಾ ಸೋಪು ಹಾಕಿ ತೊಳೆಯಿರಿ; ಅದರ ಮೇಲೆ ಕುಟಿಕೂರಾ ಮುಲಾಮು ಹಚ್ಚಿರಿ.



ಕುಟಿಕೂರಾ ಮುಲಾಮು

CUTICURA OINTMENT

ಶಿವಾಜಿಯು ಹಿಂದೂಧರ್ಮ ಸುಧಾರಕನಾಗಿದ್ದ

ವಿಶ್ವವ್ಯಾಪಿಯಾಗಿದ್ದ ವೇದ ಧರ್ಮ

ಗ್ರೀಕರೂ ಹೂಣರೂ ಹಿಂದುತ್ವ ಸ್ವೀಕರಿಸಿದ್ದರು.

ನವಖಾಲಿ ಜಿಲ್ಲೆಯಲ್ಲಿ ಕೆಲವು ಪುಂಡರು ಮತಾಂಧತೆಯಿಂದ ಮದೋನ್ಮತ್ತರಾಗಿ ಅಲ್ಲಿನ ಸಾವಿರಾರು ಹಿಂದುಗಳನ್ನು ಇಸ್ಲಾಂ ಧರ್ಮಕ್ಕೆ ಬಲಾತ್ಕಾರವಾಗಿ ಮತಾಂತರಗೊಳಿಸಿದ್ದ ಭೀಕರ ಸಂಗತಿಯು ನಂತರ ಅವಿಚಾರದ ಕಟ್ಟು ನಿಟ್ಟಿನ ಹಿಂದುಗಳು ಮಾತ್ರವಲ್ಲ ಸುವಿಚಾರಿಗಳೆನಿಸಿದ್ದ ಸಾಂಪ್ರದಾಯಬದ್ಧರಾಗಿದ್ದ ಅನೇಕ ಮಠಾಧಿಪತಿಗಳೂ ತಮ್ಮ ಪವಿತ್ರ ಧರ್ಮಕ್ಕಾಗುತ್ತಿರುವ ಅಪಾಯದ ಕಡೆಗೆ ಕಣ್ಣು ಬಿಡುವಂತಾಯಿತು. ಪರಿಣಾಮವಾಗಿ ಎಲ್ಲರೂ ಒಕ್ಕೊರಲಿಂದ ಇದುತನಕ ಬಿಗಿಯಾಗಿ ಹಿಡಿದಿದ್ದ ಸಾಂಪ್ರದಾಯ ಪದ್ಧತಿಯನ್ನು ಸಡಿಲುಗೊಳಿಸುವಂತಾಗಿ ಬಲಾತ್ಕಾರದ ಮೋಸದ ಮತಾಂತರಗಳಿಂದ ಹಿಂದೂಗಳಾಗಿದ್ದವರು ಕಲಂಗಿತರಾಗುವುದಿಲ್ಲವೆಂದು ಘಂಟಾಘೋಷವಾಗಿ ಸಾರುವಂತಾಯಿತು

ಇಪ್ಪತ್ತೈದು ವರ್ಷಗಳ ಕೆಳಗೆ ಮಲಬಾರದಲ್ಲಿ ಮಾಪ್ಲಾ ದಂಗೆಯ ಕಾಲದಲ್ಲೂ ಬಲಾತ್ಕಾರದ ವೃತಾಂತರಗಳಾಗಿದ್ದವು ಆಗಲೂ ಇದೇ ತರದ ಸಮಸ್ಯೆ ಉತ್ಪನ್ನವಾಗಿತ್ತು ಆದರೆ ಅಂದಿನ ಭಾವನೆಗಳು ಇಂದಿನಷ್ಟೇ ತೀವ್ರವಾಗಿರಲಿಲ್ಲ

ಹಿಂದೂ ಸಮಾಜವು ಇಂದು ತೋರಿಸಿದ ಮನೋವೈಶಾಲತೆಯು ಸಾವಿರ ವರ್ಷಗಳ ಹಿಂದೆಯೇ ತೋರಿಸುತ್ತಿದ್ದರೆ ನಮ್ಮ ದೇಶದಲ್ಲಿ ಹಾವಳಿಮಾಡುತ್ತಿರುವ ಹಿಂದೂ ಮುಸ್ಲಿಂ ಸಮಸ್ಯೆಯೇ ಉದ್ಭೂತವಾಗುತ್ತಿರಲಿಲ್ಲವೆಂದು ಬೆನಾರಿಸ್ ಹಿಂದೂ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಪ್ರಾಧ್ಯಾಪಕರಾಗಿರುವ ಡಾ॥ ವಿ. ಎಸ್. ಅಲ್ಟೇಕರ್ ಅವರು ಅಭಿಪ್ರಾಯಪಡುತ್ತಾರೆ. ಇಂದು ಮುಸ್ಲಿಮರ ಜನ ಸಂಖ್ಯೆ 1 ಕೋಟಿಗಿಂತಲೂ ಹೆಚ್ಚಾಗಿರುತ್ತಿರಲಿಲ್ಲನಂತೆ.

ಸಾವಿರ ವರ್ಷಗಳ ಹಿಂದೆ ದುರ್ಭಾಗ್ಯವಶಾತ್ ಹಿಂದೂತ್ವವು ಅವಿಚಾರದ್ದೂ, ಕುತರ್ಕಬದ್ಧವಾದುದೂ ಆದ ಧೋರಣೆಯನ್ನು ವಹಿಸಿತು ಪರಿಣಾಮವಾಗಿ ಮತಾಂತರಗೊಳಿಸಲ್ಪಟ್ಟವರು ಪುನಃ ತಮ್ಮ ಹಿರಿಯರ ಧರ್ಮಕ್ಕೆ ಹಿಂತಿರುಗಲು ಹಿಂದೂ ಸಮಾಜವು ಬಲವಾದ ಕೊಡಕನ್ನುಂಟು ಮಾಡಿತು. ಪರಧರ್ಮಕ್ಕೆ ಬಲಾತ್ಕಾರದಿಂದಲೂ, ಮೋಸ, ವಿಶ್ವಾಸಘಾತುಕದಿಂದಲೂ, ಬೆದರಿಕೆಯಿಂದಲೂ ಪರಿವರ್ತಿಸಲ್ಪಟ್ಟವರು ತಲಾಂತರಗಳ ವರೇಗೆ ಮತಭ್ರಷ್ಟರಾಗಿಯೇ ಉಳಿಯಬೇಕಾಯಿತು

ಹದಿನೇಳನೇ ಶತಮಾನದಲ್ಲಿ ಭಾರತ ಸಂಚಾರ ಮಾಡಿದ ಬರ್ನಿಯರ್ ಎಂಬ ಫ್ರೆಂಚ್ ಪ್ರವಾಸಿಕನು ಬೆನಾರಿಸಿನ ಪಂಡಿತರಿಗೆ ಒಂದು ನ್ಯಾಯವಾದ ಪ್ರಶ್ನೆಯನ್ನೇ ಕೇಳಿದನು "ನಿಮ್ಮ ಧರ್ಮವು ಅತ್ಯುತ್ತಮವಾದುದೆಂದು ನೀವು ಹೇಳುತ್ತೀರಿ ಹಾಗಾದರೆ ನನ್ನನ್ನೇಕೆ ಅದರೊಳಗೆ ಸೇರಿಸಿಕೊಳ್ಳಲಾರಿರಿ?" ಅದಕ್ಕೆ ಅವರ ಉತ್ತರ "ನಮ್ಮ ಮತವು ಎಲ್ಲರಿಗೂ ಅತ್ಯುತ್ತಮವಾದುದೆಂದು ನಾವು ಹೇಳುವುದಿಲ್ಲ. ಹಿಂದೂಗಳಾಗಿದ್ದವರಿಗೆ ಮಾತ್ರ ಅದು ಅತ್ಯುತ್ತಮವಾಗಿದೆಯೆಂದು ನಮ್ಮ ದೇವರವಾಣಿಯಿದೆ. ಬೇರೆ ಮತಗಳು ಬೇರೆಯವರಿಗೆ ಒಳ್ಳೆಯದಿರಬಹುದು ಆದುದರಿಂದ ಅವರವರದನ್ನು ಅನುಸರಿಸುವರು. ನಾವು ಮಾತ್ರ ಅವರನ್ನು ನಮ್ಮೊಳಗೆ ಸೇರಿಸುವುದಿಲ್ಲ"

ಚಾರಿತ್ರಿಕ ಅವಲೋಕನ

ವೇದ ಕಾಲದ ಹಿಂದೂಗಳು ಇಡೀ ವಿಶ್ವವನ್ನು ಆರ್ಯಮಯವಾಗಿ ಮಾಡುವ ಉದ್ದೇಶವುಳ್ಳವರಾಗಿದ್ದರು. ಕೃಣ್ವಂತೋ ವಿಶ್ವಮಾರ್ಯಂ- 'ಸಕಲ ಪೃಥ್ವಿಯನ್ನು ಆರ್ಯ ಸಂಸ್ಕೃತಿಗೆ ಪರಿವರ್ತಿಸುವುದು. ಅವರ ಧ್ಯೇಯವಾಗಿತ್ತು ಆ ಕಾಲದ ಭಾರತದಲ್ಲಿ ಅನೇಕ ಮತಧರ್ಮಗಳು ಅಸ್ತಿತ್ವದಲ್ಲಿದ್ದುವು. ಕ್ರಮೇಣ ಅವು ಹಿಂದೂ ಧರ್ಮದಲ್ಲಿ ಸಂಗಮಗೊಂಡವು ಈ ಸಂಯೋಗೀಕರಣವು ಅದೆಷ್ಟು ಪರಿಪೂರ್ಣವಾಗಿದೆಯೆಂದರೆ ಇಂದು ಹಿಂದಿನ ಆ ಮತಗಳ ಸಂಸ್ಕೃತಿಯ ಯಾವ ಕುರುಹಾದರೂ ನೋಡಸಿಗುವುದಿಲ್ಲ ಅನೇಕ ಆರ್ಯೇತರ ದೇವರುಗಳು ಆರ್ಯ ದೇವ ಶ್ರೇಣಿಯಲ್ಲಿ ಸೇರಿಸಲ್ಪಟ್ಟರು. ಅನಾರ್ಯರೊಡನೆ ವಿವಾಹ ಸಂಬಂಧವೂ ಸಾಮಾನ್ಯ ವಿಷಯವಾಗಿತ್ತು. ಪೌರಾಣಿಕ ವ್ಯಕ್ತಿಗಳಾಗಿರುವ ಭೀಮಾರ್ಜುನರು ಉಡೂಪಿ, ಹಿಡಿಂಬೆ ಮೊದಲಾದವರನ್ನು ಮದುವೆ ಮಾಡಿಕೊಂಡಿದ್ದರು ಈ ಮಹಿಳೆಯರು ನಿಸ್ಸಂದೇಹವಾಗಿ ದ್ರಾವಿಡ ಪಂಗಡದವರಾಗಿದ್ದರು

ಅನೇಕ ಶತಮಾನಗಳ ತನಕ ವಿದೇಶಿಯ ಆಕ್ರಮಣಗಾರರನ್ನು ಹಿಂದೂಧರ್ಮಕ್ಕೆ ಮತಾಂತರಗೊಳಿಸಲ್ಪಡುವ ಕಾರ್ಯವು ಯಶಸ್ವಿಯಾಗಿ ಸಾಗಿತ್ತು ಕ್ರಿಸ್ತ ಪೂರ್ವ 4ನೇ ಶತಮಾನದಲ್ಲಿ ಭಾರತದ ಮೇಲೆ ಗ್ರೀಕರ ಆಕ್ರಮಣವೊಂದು ಪ್ರಾರಂಭವಾಯಿತು ನಂತರ ಪಂಜಾಬಿನಲ್ಲಿ ಗ್ರೀಕರ ಒಡೆತನವು ಸಂಸ್ಥಾಪಿಸಲ್ಪಟ್ಟಿತು ಕ್ರಮೇಣ ಈ ಯವನ ಆಳೊಡೆಯರು ಹಿಂದೂಗಳಾದರು ಅನೇಕರು ಬೌದ್ಧರಾದರು

ಕ್ರಿಸ್ತಪೂರ್ವ 50ರಿಂದ 350 ವರ್ಷಗಳ ತನಕದ ಅವಧಿಯಲ್ಲಿ ಪಾರ್ಥಿಯನ್ನರೂ, ಸಿಥಿಯನ್ನರೂ ಮೊದಲಾದ ಅನೇಕ ವಿದೇಶಿ ಆಕ್ರಮಣಗಾರರೂ ಭಾರತದಲ್ಲಿ ತಳವೂರಿದ್ದರು ಕೆಲವೆ ವರ್ಷಗಳಲ್ಲಿ ಇವರೆಲ್ಲರೂ ಹಿಂದೂ ಇಲ್ಲವೆ ಬೌದ್ಧ ಮತದ ದೀಕ್ಷೆ ತೆಗೆದುಕೊಂಡರು ರುದ್ರದ್ಮನ ಜಯದಮನ ಎಂಬ ಗ್ರೀಕ್ ಕ್ಷತ್ರಪ ಅರಸರ ಕೆಲವು ಉದಾಹರಣೆಗಳನ್ನು ಕೊಡಬಹುದು

ಆಕ್ರಮಣಗಾರರನ್ನು ಮಾತ್ರವಲ್ಲ ಹಿಂದೂ ಮತ ಬೋಧಕರು ಸುಮಾತ್ರಾ ಜಾವಾ, ಚೀನಾ, ಇಂಡೋ ಚೀನಗಳಿಗೂ ಹೋಗಿ ವಿಶಾಲ ಜನಸಂಖ್ಯೆಯನ್ನು ತಮ್ಮ ಮತಕ್ಕೆ ಪರಿವರ್ತಿಸಿಕೊಂಡಿದ್ದರು ಚೀನಿ ಯಾತ್ರಿಕನಾದ ಫಾ ಹೀ ನ ನು ಕ್ರಿಸ್ತಶಕ 415ರಲ್ಲಿ ಜಾವಾದಲ್ಲಿಳಿದಾಗ ಹಿಂದೂ ಧರ್ಮ ಸಂಸ್ಕೃತಿಗಳು ಆ ದ್ವೀಪದಲ್ಲಿ ಶ್ರೇಯಸ್ಕರವಾಗಿ ಮೆರೆಯುತ್ತಿರುವುದನ್ನು ಬರೆದಿಟ್ಟಿದ್ದಾನೆ.

ಇತ್ತ ಯೆಹೂದಿ ಜನಾಂಗಭರಿತ ಪಾಶ್ಚಿಮಾತ್ಯ ದೇಶಗಳಲ್ಲೂ ಹಿಂದೂ ಮತವು ಪ್ರಚಾರದಲ್ಲಿದ್ದ ಕುರುಹುಗಳು ಸಿಕ್ಕಿವೆ ಆಸ್ಸ್ಯ ಮ್ಯಾನರ್ ಪ್ರದೇಶದಲ್ಲಿ ಎರಡು ಅಗ್ನಿ ದೇವಾಲಯಗಳು ಸಿಕ್ಕಿದ್ದು ಅವುಗಳಲ್ಲಿ ಸುಮಾರು 12-15 ಅಡಿಯ ಹಿಂದೂ ವಿಗ್ರಹಗಳಿದ್ದುವು ಕ್ರಿಸ್ತಶಕ 304ರಲ್ಲಿ ಕ್ರೈಸ್ತ ಧರ್ಮ ಪ್ರಚಾರಕನಾದ ಸೈಂಟ್ ಗ್ರೆಗರಿಯು ಅವುಗಳನ್ನು ನಾಶಮಾಡಿದ್ದನು

8ನೇ ಶತಮಾನದಲ್ಲಿ ಮುಸಲ್ಮಾನರ ಆಕ್ರಮಣ ಪ್ರಾರಂಭವಾದಾಗ ಹಿಂದೂ ಧರ್ಮವು ತನ್ನ ಪ್ರಚಾರ ಕಾರ್ಯವನ್ನೆಲ್ಲ ಬದಿಗಿರಿಸಿ ಕೇವಲ ರೂಢಿಪ್ರಿಯವಾದ ಮತವಾಗಿ ನಿಶ್ಚೇತನವಾಗಿ ಹೋಗಿತ್ತು ಮುಸ್ಲಿಮರನ್ನು ಅದು ತನ್ನ ಧರ್ಮಶರೀರದೊಳಗೆ ಹೀರುವಷ್ಟು ಶಕ್ತಿಯಾಗಲಿ, ಇಚ್ಛೆಯಾಗಲಿ ಅದಕ್ಕಿರಲಿಲ್ಲ ಇದೇ ಹೊತ್ತಿಗೆ ಮೂರ್ತಿ ಪೂಜೆಯ ಆಡಂಬರವೂ ಹೆಚ್ಚಿದ್ದು ಒಂದು ಕಾಲದಲ್ಲಿ ಬ್ರಾಹ್ಮಣರು ಸಮೇತವಾಗಿ ಸಕಲ ಮೇಲ್ ಜಾತಿಯ ಹಿಂದುಗಳೆಲ್ಲರೂ ಮಾಂಸಹಾರಿಗಳಾಗಿದ್ದವರು ಶುದ್ಧ ಸಸ್ಯಾಹಾರಿ ಸಾಂಪ್ರದಾಯವನ್ನನುಸರಿಸಿದರು ಮಾಂಸಹಾರಿಗಳಾಗಿದ್ದ ಮುಸ್ಲಿಮರನ್ನು ಹಿಂದೂ ಬಗಲೊಳಗೆ ಸೇರಿಸಿಕೊಳ್ಳಲು ಇದೊಂದು ಬಲವಾದ ಮಾನಸಿಕ ತಡೆಯಾಯಿತು.

ಹಿಂದೂ ಆಚಾರ ವಿಚಾರಗಳ ಅನುಕೂಲತೆಯನ್ನು ತೆಗೆದುಕೊಂಡು ಮುಸಲ್ಮಾನ ಆಕ್ರಮಣಗಾರರು ಇಲ್ಲಿಯ ಜನತೆಯನ್ನು ಬಲಾತ್ಕಾರದ ಮತಾಂತರಕ್ಕೆ ಒಳಮಾಡಿದಾಗ ಅಂಥ ಆಚಾರವಂತ ಹಿಂದೂ ಸಮಾಜವು ಅವರನ್ನು ಮತಭ್ರಷ್ಟರನ್ನಾಗಿ ಕಂಡಿತ ಇಸ್ಲಾಮ್ ಧರ್ಮವು ಬೆಳೆಯಲು ಒಳ್ಳೆ ಸಂದರ್ಭವು ಇದರಿಂದ ಒದಗಿತ

ಮೊಗಲರನ್ನು ವಿರೋಧಿಸಿ ಹಿಂದೂ ಚಕ್ರಾಧಿಪತ್ಯ ಸ್ಥಾಪಿಸಿದ ಛತ್ರಪತಿ ಶಿವಾಜಿಯು ಹಿಂದೂ ಧರ್ಮದ ಈ ಕುಂದನ್ನು ಬೇಗನೆ ಕಂಡನು. ಬಲಾತ್ಕಾರ ಮೋಸದ ಮತಾಂತರಗಳಿಂದ ಮತ ಭ್ರಷ್ಟಿಸುವುದಿಲ್ಲವೆಂದು ಸಾರಿ ಅಂದವರನ್ನು ಪುನಃ ಹಿಂದೂ ವರ್ಗದೊಳಗೆ ತೆಗೆದುಕೊಳ್ಳಲು ಏರ್ಪಾಡು ಗಳನ್ನಿಟ್ಟವನು ... ಬಂಧನದಿಂದ ಶಿವಾಜಿಯು ... ಮೇಲೆ ಅವನ ಸೇನಾನಿಗಳ ... ತಾಜಿ ಪಾಲ್ಕರನು ಸೆರೆ ಸಿಕ್ಕಿ ಬಲಾತ್ಕಾರದಿಂದ ಇಸ್ಲಾಮ ಕ್ಕೆ ಮತಾಂತರಿಸಲ್ಪಟ್ಟ ಕಡೆಗೆ ಹೇಗೂ ಅವನು ತಪ್ಪಿಸಿ ತನ್ನ ಒಡೆಯನನ್ನು ಸೇರಿದಾಗ ಶಿವಾಜಿಯು ಅವನಿಗೆ ಪುನಃ ಹಿಂದೂ ಸಂಸ್ಕಾರದಿಂದ ಪುನೀತನನ್ನಾಗಿ ಮಾಡಿದನು ... ಎಂಬಾಳ್ಕರ್ ಸರದಾರವಂಶದವರೊಬ್ಬರು ಬಲಾತ್ಕಾರದಿಂದ ಮತಾಂತರಗೊಳಿಸಲ್ಪಟ್ಟಾಗ ಶಿವಾಜಿಯು ಅವನನ್ನು ಹಿಂದೂತ್ವಕ್ಕೆ ಪುನರ್ ಮತಾಂತರಿಸಿ ತಮ್ಮ ಹೃತ್ಪೂರ್ವಕತೆಯ ನಿದರ್ಶನಕ್ಕಾಗಿ ಸ್ವಂತ ಮಗಳನ್ನು ಅವನಿಗೆ ಕೊಟ್ಟು ವಿವಾಹ ಮಾಡಿದನು

ಇದಕ್ಕಿಂತ ಮುಂಚೆ ಸಿಂಧದಲ್ಲಿ ಮುಸಲ್ಮಾನರ ಮತಾಂತರ ಹಾವಳಿಯು ಉಗ್ರವಾದಾಗ ದೇವಲನೆಂಬ ಪಂಡಿತನು ಸ್ಮೃತಿಯ ಅರ್ಥವನ್ನು ಬದಲಿಸಿ ತನ್ನ ಸ್ವಂತ ಹೆಸರಿನ ಸ್ಮೃತಿಯೊಂದನ್ನು ನಿರ್ಮಿಸಿ ಬಲಾತ್ಕಾರದ ಮತಾಂತರಗಳು ನ್ಯಾಯ ಬದ್ಧವಲ್ಲವೆಂದು ಸಾರಿ ಹಿಂದೂಸಮಾಜಕ್ಕೆ ಹೊಸ ಮಾರ್ಗದರ್ಶಕನಾದನು

ಬ್ರಿಟಿಷರ ಮತ್ತಿತರ ಐರೋಪ್ಯ ಆಕ್ರಮಣದ ಮತ್ತು ಆಡಳಿತದ ನೀತಿಯ ಫಲವಾಗಿ ಹಿಂದೂ ಸಮಾಜದಲ್ಲಿನ ಐಕ್ಯತೆಯು ಭಂಗವಾಗಿ ಕ್ಷೀಣವಾಗಿ ಆಗುತ್ತಿರುವ ಅದರ ನಾಶಕ್ಕೆ ಯಾರೂ ಗಮನಕೊಡದಾದರು. ಮತ್ತು ಆರ್ಯಸಮಾಜ, ಬ್ರಹ್ಮಸಮಾಜಗಳು ಸ್ಥಾಪಿತವಾಗಿ ಮತಾಂತರಗಳಿಗೆ ಬಲವಾದ ತಡೆಯಾಗುವಂತಾಯಿತು

"ಈಗ ಹೊತ್ತು ಮೀರಿಯಾದರೂ ಹಿಂದೂಸಮಾಜವು ಉದಾರಭಾವವನ್ನು ತಾಳಿದ್ದು, ಅಸ್ಪೃಶ್ಯೋದ್ಧಾರ, ಪುನರ್ ಮತಾಂತರ ಮೊದಲಾದವುಗಳಿಗೆ ಪ್ರೋತ್ಸಾಹ ಮನ್ನಣೆಗಳು ಸಿಗುವಂತಾದುದು ಬಹಳ ಸಮಾಧಾನದ ವಿಚಾರವಾಗಿದೆ. ಜಗತ್ತಿನ ಪ್ರಾಚೀನ ಮತವು ತನ್ನ ಪೂರ್ವ ಶೋಭೆಯಿಂದ ಮೆರೆಯಬಹುದೆಂದು ಹಾರೈಕೆ ಇದೆ **ಕಾಲಿಗೆ ಕೆಸರು ತಾಗಿದರೆ ಅದನ್ನು ತೊಳೆಯಬೇಕೆ ಹೊರತು ಅದನ್ನು ಕಡಿದು ಹಾಕುವುದಿಲ್ಲ."**

ಸಂಖ್ಯೆ ಸಂಗತಿಗಳು

1 1834ರ ವರೇಗೆ ಜಗತ್ತಿನಲ್ಲೆಲ್ಲ ಉಪಯೋಗಿಸಲ್ಪಟ್ಟ ಚಹಾ ಸೊಪ್ಪೆಲ್ಲ ಚೀನದಿಂದಲೇ ಬರುತಿತ್ತು

2 ಇಂಗ್ಲೆಂಡಿನಲ್ಲಿ 946 ಮಜೂರ ಸಂಘಗಳಿದ್ದು ಅವುಗಳಲ್ಲಿ 80 ಲಕ್ಷಕ್ಕೂ ಮಿಕ್ಕಿ ಸದಸ್ಯರಿದ್ದಾರೆ

3 ಯುರೋಪ ಖಂಡದಲ್ಲಿ ಕೆಸ್ಪಿಯನ್ ಸಮುದ್ರವೆಂದೆಣಿಸಲ್ಪಡುವ ಸರೋವರವು ಜಗತ್ತಿನಲ್ಲಿ ಅತಿ ದೊಡ್ಡದು ಅದನ್ನು ಬಿಟ್ಟರೆ ಕೆನೆಡದ ಸುಪೀರಿಯರ್ ಸರೋವರವು ಎರಡನೆ ಸ್ಥಾನ ಪಡೆಯುತದೆ

4 1896ರಿಂದ ಪ್ರಾರಂಭವಾದ ಮೋಟಾರ್ ವಾಹನ ತಯಾರಿಕೆಯು ಬ್ರಿಟನಿನ ಅತಿ ದೊಡ್ಡ ಮೂರು ಕೈಗಾರಿಕೆಗಳಲ್ಲೊಂದಾಗಿದೆ

5 ಜರ್ಮನರು ಶರಣಾಗತಿ ಬರುವ ಕಾಲಕ್ಕೆ ಬರ್ಲಿನ್ ನಗರದಲ್ಲಿ ಒಂದೇ ಒಂದು ವೃತ್ತಪತ್ರಿಕೆ ಇರಲಿಲ್ಲ ಈಗ ಕೇವಲ 15 ದಿನಪತ್ರಿಕೆಗಳ ಮಾತ್ರ ಪ್ರಚಾರವಾಗುತ್ತಿವೆ

6 ಹಮ್ಮಿಂಗ್ ಬರ್ಡ್ ಎಂಬ ಅತೀ ಚಿಕ್ಕ ಪಕ್ಷಿಯು ಹಿಂದಕ್ಕೆ ಹಾರಬಲ್ಲುದು.

7 ಪ್ರಥಮ ತರಗತಿಯ ಕ್ರಿಕೆಟ್ ಪಂದ್ಯಾಟಗಳಲ್ಲಿ ಒಬ್ಬರ ನಂತರ ಒಂದಾಗಿ ... ಮ್ಯಾಚುಗಳಲ್ಲಿ ನೂರು ನೂರು ಓಟಗಳನ್ನು ಸಂಪಾದಿಸಿದ ಕೀರ್ತಿ ಸಿ. ಬಿ. ಪ್ರೈ ಎಂಬ ಕ್ರಿಕೆಟ್ ತಜ್ಞನಿಗೆ ಸಲ್ಲುತ್ತಿದೆ. ಈಗ ಆತ ಕ್ರಿಕೆಟಿನಿಂದ ನಿವೃತ್ತನಾಗಿ ಪತ್ರಿಕೋದ್ಯಮಿಯಾಗಿದ್ದಾನೆ

8 ನ್ಯಾಯವಿಧಾಯಕ ಶಾಸನ ಸಭೆಯ ಮಾದರಿಯಲ್ಲಿ ಸರಕಾರ ಪದ್ಧತಿಯು ಮೊದಲಿನ ಸಲಕ್ಕೆ ಯುರೋಪಿನಲ್ಲಾರಂಭಿಸಲ್ಪಟ್ಟಿತು

9 ಇಂಗ್ಲೆಂಡಿನ ಟಪ್ಪಾಲ್ ಆಫೀಸಿನಲ್ಲಿ 220 ಲಕ್ಷ ಜನರ ಠೇವಣಾತಿ ಲೆಕ್ಕವಿದೆ ಅವರಿಟ್ಟ ರೊಕ್ಕದ ಮೊತ್ತ 180 ಕೋಟಿ ಪವನುಗಳಷ್ಟಿದೆ

10 ಸಿಂಬೆ ಹಣ್ಣಿನಷ್ಟು ಗಾತ್ರವಿದ್ದು ಉರಿವ ತೆಂಗಿನ ಕಾಯಿಗಳ ಪ್ರತಿರೂಪ ಚಿಕ್ಕ ಮಾದರಿಗಳಂತಿರುವ 20 ಲಕ್ಷ ವರ್ಷಗಳ ಹಿಂದಿನ ಕಾಯಿಗಳು ನ್ಯೂಜಿಲೆಂಡಿನಲ್ಲಿ ದೊರಕಿವೆ

11. ಬಿದಿರು 50 ವರ್ಷಕ್ಕೊಂದು ಸಲ ಹೂ ಬಿಡುತ್ತದೆ ಬಿದಿರು ಛತ್ರದ ಜಾತಿಯು ಒಂದು ಹುಲ್ಲುಗಿಡವಾಗಿರುವುದರಿಂದ ಒಂದು ತರದ ಅಕ್ಕಿಯೂ ಅದರಲ್ಲಾಗುತ್ತದೆ.

೭೭ ವಯಸ್ಸಿನಲ್ಲಿ ಅದ್ಭುತ ಚೈತನ್ಯ

ಸೇವಾಗ್ರಾಮದ ಕರ್ಮಯೋಗಿಯ ಪ್ರಯೋಗ

ಕ್ರೂರ ವಾತಾವರಣದಲ್ಲಿ ಸೌಮ್ಯ ಸ್ಮೃತಿ

ಗಾಂಧೀಜಿಯ ರಾಷ್ಟ್ರೀಯ ಚಳವಳಾನುಭವ ಹೆಚ್ಚಿದಂತೆ ಗ್ರಾಮ ಪುನರುಜ್ಜೀವನದ ಕಡೆ ಮಹಾತ್ಮರ ಮನಸ್ಸು ತಿರುಗಿತು. ಒಂದು ಸಲ ಮೈಸೂರು ಪ್ರಾಂತದಲ್ಲಿ ಸಂಚರಿಸುತ್ತಿದ್ದಾಗ ಅಲ್ಲಿನ ಕೆಲವು ಹಳ್ಳಿಗರನ್ನು ಅವರು ವಿಚಾರಿಸಿದಾಗ ಅವರಿಗೆ ತಮ್ಮ ಮಹಾ ರಾಜನು ಯಾರೆಂದೇ ಗೊತ್ತಿರಲಿಲ್ಲ. ಇಂತಹ ಅಜ್ಞ ಪರಿಸ್ಥಿತಿಯಲ್ಲಿ ಆ ಜನರು ಹೇಗೆ ಜೀವನ ಸಾಗಿಸುತ್ತಿದ್ದರು? ಸರ್ವಾಂತರ್ಯಾಮಿಯ ದೈವೀಕ ಶಕ್ತಿಯೊಂದು ಬಡವ ಬಲ್ಲಿದರನ್ನು ಕಾಪಾಡುತ್ತಿರುವ ಹೃದಂಗಮ ನಿದರ್ಶನವಿದು.

ಈ ಸಂದರ್ಭವನ್ನು ನಿರೂಪಿಸುತ್ತ ಮಹಾತ್ಮರು ಒಂದು ಸಲ 'ಹಿಸ್ ಮಾಸ್ಟರ್ಸ್ ವೊಯ್ಸ್' ಗ್ರಾಮೊಫೋನ್ ಕಂಪನಿಯವರಿಗೆ ಒಂದು ಭಾಷಣ ರಿಕಾರ್ಡ್ ಕೊಟ್ಟಿದ್ದರು. ಅದರಲ್ಲಿ ಗಣನೀಯವಾದ ಅವರ ಆತ್ಮವಿಶ್ವಾಸದ ಸಂಗತಿಯೊಂದನ್ನು ಅವರು ಹೀಗೆ ಹೇಳಿದ್ದಾರೆ

"ಕಾರ್ಗತ್ತಲೆಯ ನಡುವಿನಲ್ಲಿ ಬೆಳಕೂ, ಮರಣದ ಮಧ್ಯದಲ್ಲಿ ಜೀವವೂ, ಅಸತ್ಯದ ಅಂತರ್ಯದಲ್ಲಿ ಸತ್ಯವೂ ಅವಿಚ್ಛಿನ್ನವಾಗಿ ಕಾಣಸಿಗುವುದು."

ಪೂರ್ವ ಬಂಗಾಲ ಸಂಚಾರ

ಬಂಗಾಲದ ಪೂರ್ವ ಪ್ರದೇಶದಲ್ಲಿ ಆಗ ಬಾರದ ಭೀಕರ ದುರಂತವೊಂದು ಅಭಿನಯಿಸಲ್ಪಟ್ಟಿತು. ಅಲ್ಲಿನ ಬಹುಸಂಖ್ಯಾಕರು ಅಲ್ಪ ಸಂಖ್ಯಾಕರನ್ನು ರಕ್ಷಿಸುವ ಬದಲಿಗೆ ಶಿಕ್ಷೆಗೊಳಮಾಡಿದರು. ಅವರ್ಣನೀಯ ಪಾತಕಗಳು ನಿರ್ವಹಿಸಲ್ಪಟ್ಟವು. ಕೇವಲ ಪುಂಡರ ಹಾವಳಿಯಾಗಿರುತ್ತಿದ್ದರೆ ಲೂಟಿ ಸುಲಿಗೆಯಲ್ಲೇ ಅಂತ್ಯವಾಗುತ್ತಿತ್ತು. ಆದರೆ ಉನ್ಮತ್ತವಾದ ಮತಾಂಧತೆಯಿಂದ ಆ ಬಹುಸಂಖ್ಯಾಕರು ಪ್ರೇರಿತರಾಗಿ ಅಲ್ಪ ಸಂಖ್ಯಾಕರಾದ ಹಿಂದೂಗಳನ್ನು ಅಮಾನುಷಿಕ ಯಾತನೆಗೊಳಪಡಿಸಿ ಅವರ ಸಂಸ್ಕೃತಿಯನ್ನೇ ನಾಶಮಾಡಲು ಯತ್ನಿಸಿದರು. ಪರಿಣಾಮವಾಗಿ ಸಾಮೂಹಿಕ ಕೊಲೆ, ಸ್ತ್ರೀ ಅಪಹಾರ, ಬಲಾತ್ಕಾರದ ಮತಾಂತರ, ಅನಾಚಾರಗಳು ಸಂಭವಿಸಿದುವು. ಸಹಾನುಭೂತಿಪರವಾದ ಸರಕಾರವೊಂದು ಪುಂಡರಿಗೆ ಹೆಚ್ಚಿನ ಪ್ರೋತ್ಸಾಹ ದೊರಕಿಸಿಕೊಳ್ಳಲು ಅನುಮಾಡಿಕೊಟ್ಟಿತು.

ಪೂರ್ವ ಬಂಗಾಳದಲ್ಲಿ ಹಿಂದೂಗಳು ನೆಮ್ಮದಿಯಿಂದಿರಲು ಭಯಗೊಂಡರು. ಪಾಕಿಸ್ಥಾನವನ್ನು ಸ್ಥಾಪಿಸುವ ಕನಸುಗಾರರು ಸಂತೃಪ್ತಿಯಿಂದ ಮೆರೆಯತೊಡಗಿದರು. ಆದರೆ ಮಹಾತ್ಮಾ ಗಾಂಧಿಯವರು ನೌಖಾಲಿಯಲ್ಲಿ ಬಿಡಾರ ಮಾಡುವರೆಂಬ ಸುದ್ದಿಯು ಪ್ರಕಟವಾದಾಗ ಇತ್ತಂಡದವರಲ್ಲಿ ಕಳವಳವುಂಟಾಯಿತು. 'ಮೃತ್ಯುವಿನ ಮಧ್ಯದಲ್ಲಿ ಜೀವವೂ, ಕತ್ತಲೆಯ ನಡುವಿನಲ್ಲಿ ಬೆಳಕೂ ರಾರಾಜಿಸುವುದೆಂದು' ದೃಢವಾಗಿ ನಂಬಿದ್ದ ಮಹಾತ್ಮರು ನಿಶ್ಚಲ ಧ್ಯೇಯದಿಂದ ಸ್ಥೈರ್ಯಗೆಟ್ಟ ಜನತೆಯೊಳಗೆ ಧೈರ್ಯವನ್ನು ತುಂಬಲು ನಿರ್ಧರಿಸಿದರು.

ಕರ್ತವ್ಯ - ಕರ್ಮ

ರಾಮರಾಜ್ಯದ ಕನಸು ಕಾಣುವ ಮಹಾತ್ಮರು ತಮ್ಮ ಅಹಿಂಸಾ ಸಂಸ್ಕಾರ ಯಾತ್ರೆಯ ಪ್ರಥಮ ದೀಕ್ಷಾ ಶಿಬಿರವನ್ನಾಗಿ ಆರಿಸಿದ ಸ್ಥಳದ ಹೆಸರೇ ಶ್ರೀರಾಮಪುರವಾಗಿದ್ದುದು ಶ್ರೇಯಸ್ಕರ ಭವಿಷ್ಯ ಸೂಚನೆಯೆನ್ನಬೇಕು. ಅಲ್ಲಿಗೆ ಬರಬೇಕಾದರೆ ಅವರು ತಮ್ಮೊಡನಿದ್ದ ಪರಿವಾರವನ್ನೆಲ್ಲ ಕಳಚಿಬಿಟ್ಟಿದ್ದು ಏಕಾಂಗಿಯಾಗಿ ವಿಧಿಯನ್ನೆದುರಿಸಲು ಸಿದ್ಧತೆ ಮಾಡಿದ್ದರು. ಅಹಿಂಸೆಯ ಅಚಲ ಶ್ರದ್ಧೆಯ ಪ್ರಯೋಗಕ್ಕಾರಂಭ ಅಲ್ಲಿಯೇ ಆಯಿತು.

ಎಪ್ಪತ್ತೇಳು ವರ್ಷದ ಜೋಲು ಮುದುಕ, ಹೆಚ್ಚುಕಮ್ಮಿ ನೂರು ರಾತ್ಲು ಭಾರದ ತಮ್ಮ ಪುಟ್ಟ ಶರೀರವನ್ನು ಭೀಕರ ಹತ್ಯಾಕಾಂಡವೊಂದು ಸಂಭವಿಸಿದ ಅನಾಗರಿಕ ವಾತಾವರಣದಲ್ಲಿ ಚಲಿಸಲಾರಂಭಿಸಿದಾಗಿನಿಂದ ಅಲ್ಲಿನ ಸಕಲ ರಾಕ್ಷಸಿ ಗುಣಲಕ್ಷಣಗಳನ್ನು ಪರಿಹಾರಗೊಳಿಸುವ ಒಂದು ಪ್ರಶಾಂತ ಪ್ರಭಾವ ಜ್ಯೋತಿಯನ್ನು ಬೀರಿಸಿದಂತಾಯಿತು. ಅದರ ಜ್ವಾಲೆಗೆ ಎಲ್ಲಾ ಮಾತ್ಸರ್ಯ ಪರಿಪೋಷಿತ ಕುಕರ್ಮಗಳೂ ಒಂದೊಂದಾಗಿ ಕರಗಿ ನಿರಾಗಹತ್ತಿದವು. ನಡುಗು ಹುಟ್ಟಿಸುವ ಪ್ರದೇಶದಲ್ಲಿ ನೆಮ್ಮದಿಯೂ, ನೀಚ ಕೃತ್ಯಗಳು ನಡೆದಲ್ಲಿ ನಿರ್ಮಲತೆಯೂ ಗೋಚರವಾದುವು. ಮಹಾ ಆತ್ಮದ ಅಸದೃಶ್ಯ ಶಕ್ತಿಯು ಮುಂದೆ ದುಷ್ಟಾಚರಣೆಯ ಪ್ರವೃತ್ತಿಗಳು ಮಾಯವಾಗುವಂತಾಯಿತು. ಹಲವು ಕಡೆಗಳಲ್ಲಿ ಮುಸಲ್ಮಾನರೇ ಪುಂಡರನ್ನು ಹತ್ತಿಕ್ಕಲು ಪ್ರಾರಂಭಿಸಿದರು.

ಗಾಂಧೀಜಿಯವರಾದರೋ ಜನತೆಗೆ ಪ್ರೀತಿ ಸೌಹಾರ್ದದ ಸಂದೇಶವನ್ನು ಸಾರುವುದಕ್ಕಿಂತ ಹೆಚ್ಚಿನದೇನನ್ನೂ ಮಾಡಲಿಲ್ಲ. ದಿನದಲ್ಲಿ ಹದಿನೆಂಟು ತಾಸು ಬಿಡುವಿಲ್ಲದೆ ಮಾನದ ಕಾರ್ಯಕ್ರಮ ಜರಗಿ ಪ್ರಾರ್ಥನೆಯನ್ನೇ ಪರಿಷ್ಕಾರ ನೀತಿಯ ಆಧಾರವಾಗಿಟ್ಟುಕೊಂಡರು. ದೈವಾರಾಧನೆಗೆ ಜನರು ಜಾತಿಮತ ಭೇದವಿಲ್ಲದಂತೆ ಬರತೊಡಗಿದಂತೆ ಅವರಲ್ಲಿ ಧೈರ್ಯ ಆತ್ಮ ವಿಶ್ವಾಸಗಳೂ ಪರಸ್ಪರ ನಂಬಿಕೆಗಳೂ ಹೆಚ್ಚುವಂತಾಯಿತು.

ಈ ಮಧ್ಯದಲ್ಲಿ ಗಾಂಧೀಜಿಗೆ ಭಾರತದ ಇತರ ಕಡೆಗಳಲ್ಲಿ ನಡೆಯುವ ರಾಜಕೀಯ ಚಟುವಟಿಕೆಗಳ ಕುರಿತು ಸವಿಸ್ತಾರ ವರದಿಗಳು ತಲ್ಪುವ ಏರ್ಪಾಡೂ ಮಾಡಲಾಗಿತ್ತು. ಅದನ್ನು ಅಭ್ಯಸಿಸುತ್ತಲೇ ಅವರು ತಮ್ಮ ಹತ್ತಿರದ ಕೆಲಸವನ್ನು ಸಾಗಿಸುತ್ತಿದ್ದರು. ಈ ಅವಧಿಯಲ್ಲಿ ಅವರ ಆಹಾರದ ಕುರಿತೂ ಅವರು ಸ್ವತಃ ಶ್ರಮ ವಹಿಸುತ್ತಿದ್ದರು. ಮಾತ್ರವಲ್ಲ ಬಂಗಾಳಿಯಾಗಿ ಅಲ್ಲಿನ ಭಾಷೆಯನ್ನು ಕಲಿಯುತ್ತಲಿದ್ದಾರೆ.

ಸಂದರ್ಶಕರಂತೂ ಎಲ್ಲಿ ಹೋದರೂ ಅವರ ಬೆನ್ನು ಬಿಡುವಂತಿಲ್ಲ. ಜಗತ್ತಿನ ನಾನಾ ಕಡೆಗಳಿಂದ ಕುತೂಹಲದ ಜನರು ಅವರನ್ನು ಹಗಲು ರಾತ್ರಿ ಕಾಣಲು ಕಾತರಿಸುವರು. ಎಲ್ಲದಕ್ಕೂ ಗಾಂಧೀಜಿಯ ನಿರ್ದಿಷ್ಟ ಸಮಯವಿದೆ. ಆ ಸಮಯದಲ್ಲಲ್ಲದೆ ಇತರ ವೇಳೆಗಳಲ್ಲಿ ಅವರು ಯಾರನ್ನೂ ಕಾಣುತ್ತಿರಲಿಲ್ಲ. ಕೆಲವೊಮ್ಮೆ ಊಟ ಮಾಡುವಾಗಲೂ ಸಂದರ್ಶಕರೊಡನೆ ಮಾತುಕತೆಯಾಡುವ ಕೆಲಸ ಬೀಳುತ್ತಿತ್ತು. ಮುಪ್ಪಿನ ಈ ವಯಸ್ಸಿನಲ್ಲಿ ಅವರು ತೋರಿಸುವ ಅಸಾಮಾನ್ಯ ಚೈತನ್ಯವು ಎಂತಹ ವ್ಯಾಯಾಮ ಪಟುವನ್ನಾದರೂ ದಿಗಿಲುಗೊಳಿಸುವಂತಿದೆ.

ಇಂದು ಇಡೀ ಭಾರತವು ಅವರ ಚಟುವಟಿಕೆಗಳನ್ನು ಶ್ರದ್ಧೆಯಿಂದ ವೀಕ್ಷಿಸುತ್ತಿದೆ. ಅವರ ಕಾಲ್ನಡೆ ಸಂಚಾರವು ತಮ್ಮ ದೀರ್ಘಯಾತ್ರೆಯ ಮಹತ್ವವನ್ನು ಹೆಚ್ಚಿಸಿದೆ. ಬಂಗಾಲ ಸರಕಾರದವರೂ ಅವರ ಬದಿಗೆ ತಕ್ಕ ಬಂದೋಬಸ್ತು ಇಟ್ಟಿದ್ದಾರೆ. ಉನ್ನತ ಪೋಲೀಸ್ ಅಧಿಕಾರಿಗಳ ಅಪ್ರತ್ಯಕ್ಷವಾಗಿ ಅವರ ಕಾವಲಿದ್ದಾರೆ. ಇವೆಲ್ಲದಕ್ಕಿಂತ ಪರಿಪೂರ್ಣವಾದ ದೈವ ಸಹಾಯವು ಅವರನ್ನು ಸದಾ ರಕ್ಷಿಸುತ್ತದೆ. ಶೀಘ್ರದಲ್ಲಿ ಅವರ ಸಂಚಾರದಿಂದ ಇಡೀ ದೇಶದೊಳಗಿನ ಜಾತಿ ದ್ವೇಷವೇ ಭಗ್ನವಾಗಿ ಹೋಗುವುದೆಂಬುವಕ್ಕೆ ಸಂದೇಹವಿಲ್ಲ.

ವೈಜ್ಞಾನಿಕ ಪ್ರಪಂಚ

ರೇಡಿಯೋದ ಮೂಲಕ ನಾವು ಧ್ವನಿಯನ್ನು ಮಾತ್ರ ಕೇಳಬಹುದು. ಆದರೆ ಟೆಲಿವಿಜನ್ ಸಾಧನದ ಮೂಲಕ ಸಂಗೀತದೊಂದಿಗೆ ಸಂಗೀತಗಾರನನ್ನೂ ನೋಡಬಹುದು. ಈಚೆಗೆ ಬ್ರಿಟಿಷ್ ಬ್ರೋಡ್‌ಕಾಸ್ಟಿಂಗ್ ಕೊರ್ಪೊರೇಶನಿನವರು ನಡೆಸಿದ ಪ್ರಯೋಗಗಳಿಂದ ಟೆಲಿವಿಜನ್ ಮೂಲಕ ಜನರನ್ನು ನಿದ್ದೆಗೊಳಿಸಬಹುದೆಂದು ಆ ಸಂಸ್ಥೆಯವರು ಪ್ರಕಟಿಸಿದ್ದಾರೆ.

ಮೊದಲ ಪ್ರಯೋಗವು ಬಿ. ಬಿ. ಸಿ ಯ ೧೨ ಮಂದಿ ಸ್ವಯಂಸೇವಕರ ಮೇಲೆ ನಡೆಸಲ್ಪಟ್ಟಿತು. ಅವರಲ್ಲಿ ಐದು ಮಂದಿ ಮಾನಸಿಕ ದಿಗ್ಭ್ರಮೆಯಾದ ನಿದ್ರಾಲೋಲರಾದರು.

ಎರಡನೆಯ ಪ್ರಯೋಗವು ಸಾಮಾನ್ಯ ಟೆಲಿವಿಜನ್ ಪ್ರೇಕ್ಷಕ ಕುಟುಂಬದವರ ಮೇಲೆ ನಡೆಸಲ್ಪಟ್ಟಿತು. ಅದರಲ್ಲೂ 4 ಮಂದಿ ಗಾಢ ನಿದ್ರಾಪರವಶರಾದರು.

★

ಮೋಟಾರಿನಡಿಗೆ ಬಿದ್ದರೆ ಏಟಾಗುವುದಿಲ್ಲ

ಹೊಸ ಉಪಕರಣ

ಲೋಸ್ ಏಂಜಲಿಸ್ ನಗರದಲ್ಲಿ ೧೯೮೦ ರಲ್ಲಿ ಮಾರ್ಗ ಅವಗಡಗಳು ವಿಪರೀತವಾಗಲು ಅಲ್ಲಿನ ಅಧಿಕಾರಿಗಳು ಓರ್ವ ಸಂಶೋಧಕನಿಂದ ತಯಾರಿಸಲ್ಪಟ್ಟ ಒಂದು ಹೊಸ ಉಪಕರಣದ ಉಪಯೋಗವನ್ನು ಜಾರಿಗೆ ತರಲು ಪ್ರಯತ್ನ ಮಾಡಿದರು. ಒಂದು ಮೆತ್ತಗೆ ಹಾಸಿಗೆಯಂತಿರುವ ಕುರ್ಚಿಯಾಕೃತಿಯ ಉಪಕರಣವು ಮೋಟಾರು ಗಾಡಿಗಳ ಮುಂಭಾಗದಲ್ಲಿ ಜೋಡಿಸಲ್ಪಡುವುದು. ಎದುರಿಗೆ ಸಿಲುಕುವ ವ್ಯಕ್ತಿಯನ್ನು ಈ ಉಪಕರಣವು ಮೆಲ್ಲನೆ ಕುರ್ಚಿಯ ಮೇಲೆ ಬರಿಸುವುದು. ಏಟು ತಗಲುವುದಿಲ್ಲ. ಗಾಬರಿಗೊಂಡವರು ಸ್ವಲ್ಪ ಹೊತ್ತು ಮೆತ್ತಗಾದ ಆಸನದ ಮೇಲೆ ವಿಶ್ರಮಿಸಬಹುದು. ಇದನ್ನು ಜೋಡಿಸಲು ವಿಪರೀತ ಖರ್ಚು ತಗಲುವುದರಿಂದ ಕೊನೆಗೆ ಈ ಯೋಜನೆಯನ್ನು ಬಿಟ್ಟುಬಿಡಲಾಯಿತು.

★

ರಿಯಾಯತಿ ಲಗ್ಗೇಜಿನಲ್ಲಿ ವ್ಯಾಪಾರಿ ಸಾಮಾನುಗಳ ನಿಷೇಧ

ಪಸೆಂಜರರ ಸೌಕರ್ಯಗಳ ಬಗ್ಗೆ ಒಂದು ಮಣ ಭಾರದ ಸಾಮಾನುಗಳನ್ನು ಫ್ರೀ ತೆಗೆದುಕೊಂಡುಹೋಗಬಹುದಾಗಿ ಮಾಡಿದ ರಿಯಾಯತಿ ಕಾರಣದಿಂದಾಗಿ ಪೆಸೆಂಜರರು ಅವರ ಸ್ವಂತ ಉಪಯೋಗದ ಸಾಮಾನುಗಳಲ್ಲದ ವ್ಯಾಪಾರಿ ಸಾಮಾನುಗಳನ್ನು ತಮ್ಮೊಡನೆ ಪ್ರಯಾಣ ಬೆಳೆಸುವ ಸ್ನೇಹಿತರ ಹೆಸರಿನಲ್ಲಿ ಈ ರಿಯಾಯತಿ ಮೂಲಕ ಧರ್ಮಾರ್ಥ ಸಾಗಿಸುವುದು ರೂಢಿಯಾಗಿದೆ

ಮೋಟರ್ ವಾಹನಗಳು ರೈಲುಗಾಡಿಗಳಂತಾಗಿಲ್ಲ. ಅವುಗಳಲ್ಲಿ ನಿಯಮಿತ ಭಾರಕ್ಕಿಂತ ಹೆಚ್ಚಿನ ಸಾಮಾನುಗಳನ್ನು ಒಯ್ಯುವುದು ಮೋಟರ್ ವಾಹನಕ್ಕೂ ಮತ್ತು ಪೆಸೆಂಜರರಿಗೂ ಅಪಾಯವಾಗಿದೆ. ಕಾರಣ ಬಸ್ಸುಗಳಲ್ಲಿ ಒಯ್ಯುವ ಸಾಮಾನುಗಳನ್ನು ಪೆಸೆಂಜರರ ಅವಶ್ಯಕತೆ ಬಗ್ಗನೇ ಮಿತಗೊಳಿಸುವುದು ಆಗತ್ಯವಿದೆ.

ವ್ಯಾಪಾರಿ ಸಾಮಾನುಗಳನ್ನು ಒಯ್ಯುವರೆ ವ್ಯಾಪಾರಿಗಳು

ಶೆಡ್ಯೂಲ್ ಟೈಮಿಗೆ ಕೊಂಡೊಯ್ಯುವ "ಲಕ್ಷ್ಮಿ" ಯಾ "ಸಿ. ಪಿ ಸಿ." ಲೋರಿ ಸರ್ವಿಸುಗಳ ಸೌಖ್ಯರ್ಯವನ್ನು ಉಪಯೋಗಿಸಬೇಕಾಗಿ ಅಪೇಕ್ಷಿಸುತ್ತೇವೆ.

ವ್ಯಾಪಾರಿ ಸಾಮಾನುಗಳನ್ನು ಎಷ್ಟಕ್ಕೂ ಫ್ರೀ ಲಗ್ಗೇಜಿನ ಅಂಶದಲ್ಲಿ ಸೇರಿಸಿಕೊಳ್ಳಲಾಗುವುದಿಲ್ಲ. ಈ ಕುರಿತು ಮಾಹಿತಿಯನ್ನು ಬುಕ್ಕಿಂಗ್‌ಕ್ಲಾರ್ಕರಿಂದ ಪಡೆಯಬಹುದು

JOINT MANAGERS,

The Combined Booking Agency, MANGALORE — **The Joint Booking Office,** KODIALBAIL

ದಿನನಿತ್ಯ ಉಪಯೋಗದ ಲೋಹದ ಪಾತ್ರಸಾಮಾನುಗಳು
ಖಾತರೀ ಬಾಳಿಕೆಯವುಗಳು
ಕುಶಲ ಲೋಹ ಕಲಸುಗಾರರಿಂದ ತಯಾರಿಸಲ್ಪಟ್ಟ ತರಾವರಿ ನಮೂನೆಯ ದಾಗಿನೆಗಳ ಭಂಡಾರ

"ಕಮ್ಮಿಂಜೀಸ್ ಮೆಟಲ್ ವೇರ್"

(ಬೆಳ್ಳಿ, ತಾಮ್ರ, ಕಂಚು, ಹಿತ್ತಾಳೆ ಪಾತ್ರೆ ಉಪಕರಣಗಳ ಅಂಗಡಿ)

ರಥಬೀದಿ, ಮಂಗಳೂರು.

ಒಮ್ಮೆ ಸಂದರ್ಶಿಸಿದರೆ ಖಾತ್ರಿಯಾಗುವುದು

ವಿ: ಸೂ:— ಗಿರಾಕಿಗಳ ಅಭಿರುಚಿಗನುಸಾರವಾಗಿ ತಾಮ್ರ, ಹಿತ್ತಾಳೆ ಕಂಚು ಮತ್ತು ಬೆಳ್ಳಿ ಸಾಮಾನುಗಳನ್ನು ತಯಾರಿಸಿ ಕೊಡಲಾಗುತ್ತದೆ.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಕ್ತ ಉಪದ್ರವ, ಕಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,
ಬೊಂಬಾಯಿ, ಮದರಾಸು, ಕಲ್ಕತ್ತಾ
ಮಂಗಳೂರಲ್ಲಿ ಶಾಪುಕೆಂಪೆನಿಯಲ್ಲಿ ದೊರೆಯುವುದು.

1947 *Greetings For The New Year* 1947

To

ALL OUR POLICY HOLDERS,
MEDICAL EXAMINERS,
AGENTS AND WELLWISHERS,

And Best Wishes

FOR A PROSPEROUS YEAR TO COME

From

Kochikar Brothers, Limited.

Chief Agents for South India including Indian States & Bombay City

THE BOMBAY LIFE ASSURANCE COMPANY LIMITED

MADRAS, BANGALORE, TRIVANDRUM, MANGALORE, MADURA, CALICUT, BOMBAY, & UDIPI.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs.

Depot: Maharata Galli, Hubli.

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಖು 17—1—1947 [ಸಂಚಿಕೆ 3]

ಹಿಂದೀ ರಾಜಕಾರಣ

ಲೇ: ಶ್ರೀ ಎನ್. ಆರ್. ಕಲ್ಲೆ.

ಲೀಗು ತನ್ನ ಮೇಲಿರುವ ಹೊಣೆ ನಿರ್ವಹಿಸಬೇಕು

ಕಾಂಗ್ರೆಸಿನ ಮುತ್ಸದ್ದಿತನ

ಘಟನಾ ಸಮಿತಿ ಸಭೆ ಸಾಗುವದು

ಶಾಂತಿಕಾಲದ ಹಿಂದೀ ರಾಜಕಾರಣದಲ್ಲಿ ಇದೊಂದು ಪರ್ವಕಾಲವೆನ್ನಬಹುದು. ವಿಸ್ತಾರವಾದ ಭೂಖಂಡವೆನಿಸಿದ ನಮ್ಮ ದೇಶದ ಭವಿತವ್ಯವನ್ನು ರೂಪುಗೊಳಿಸುವದಕ್ಕೆ ಘಟನಾಸಮಿತಿಯು ದಿಲ್ಲಿಯಲ್ಲಿ ಕೂಡುತ್ತಿರುವ ಈ ಸಮಯದಲ್ಲಿ ಲೀಗು ಹಿಡಿದ ಹಟವನ್ನು ಬಿಡದೆ ಹೊರಗುಳಿದುದು ತೀರ ದುರ್ದೈವದ ಪ್ರಸಂಗ

ಕಾಂಗ್ರೆಸ್ ಶಕ್ಯವಿದ್ದ ಎಲ್ಲ ಸವಲತ್ತುಗಳನ್ನು ಕೊಟ್ಟಿದ್ದಲ್ಲದೆ ಅಪಾರ ತ್ಯಾಗಕ್ಕೆ ಸಿದ್ಧವಾಗಿದೆ. ಲೀಗು ಮಾತ್ರ ಸ್ವಾರ್ಥ ಬಿಟ್ಟು ಸ್ವಲ್ಪವೂ ಚಲಿಸಲು ಸಿದ್ಧವಿಲ್ಲ. ತಮ್ಮ ಆಶ್ರಯದಾತರಾದ ಬ್ರಿಟಿಷರಿಂದಲ್ಲದೆ ತಮಗೆ ಇಹ ಪರಗಳಿಲ್ಲವೆಂದು ಮುಸ್ಲಿಂ ಲೀಗಿನ ಚರ್ಚಿಲ ಮುತ್ಸದ್ದಿಗಳ ಮೇಲೆ ಹೊರಲಾರದ ಹೊರೆಯಾಗಿ ಕುಳಿತಿದೆ. ಎಷ್ಟರ ವರೆಗೆ ಲೀಗಿನಿಂದ ತಮಗೆ ಲಾಭವಾಗುವಂತಹುಂಟೋ ಅಷ್ಟರ ವರೆಗೆ ಬ್ರಿಟಿಷ ಮುತ್ಸದ್ದಿಗಳು ಅವರ ಉಪಯೋಗ ಮಾಡಿಕೊಳ್ಳದೆ ಬಿಡಲಾರರು ಆದರೆ ಲೀಗ ಪ್ರಮುಖರು ಇದನ್ನು ತಿಳಿದರೂ ಬ್ರಿಟಿಷರಿಂದ ಸಾಕಷ್ಟು ಲಾಭಮಾಡಿಕೊಳ್ಳುವ ಹಂಬಲದಿಂದ ಚಂಡಿಹಿಡಿದು ಇನ್ನೂ ಘಟನಾ ಸಮಿತಿಯಿಂದ ಹೊರಗೆ ಉಳಿದಿರುವದು ಮುಸ್ಲಿಂ ಹಿತಚಿಂತನೆಯ ದೃಷ್ಟಿಯಿಂದಲೇ ತೀರ ಅನ್ಯಾಯದ್ದು ಹಾಗೂ ಅವ್ಯಾವಹಾರ್ಯವಾದುದಿದೆ. ಈ ವಿಷಯವನ್ನು ಇಂದಿನವರು ತಿಳಿಯದಿದ್ದರೂ ಮುಂದಿನ ಪೀಳಿಗೆಯವರು ತಮ್ಮ ಹಿರಿಯರ ತಪ್ಪು ಮತ್ತು ಆಕ್ರೋಶಕ್ಕಾಗಿ ತಾವು ನಿರಂತರ ಕುದಿಯಬೇಕಾದ ಪ್ರಸಂಗವು ತಪ್ಪಿದಂತೆ ತೋರುವುದಿಲ್ಲ

ಬ್ರಿಟಿಷ ನೀತಿ

ನಾನು ಮುಖ್ಯ ಮಂತ್ರಿಯಾದುದು ಬ್ರಿಟಿಷ ಸಾಮ್ರಾಜ್ಯವನ್ನು ದಿವಾಳಿ ತೆಗೆಯುವದಕ್ಕೆ ಅಲ್ಲವೆಂದು ಹಿಂದೊಮ್ಮೆ ಚರ್ಚಿಲರು ಬಾಯ್ಬಿಟ್ಟು ಅಂದಿದ್ದರು. ಅಟ್ಲಿಯವರ ಬಾಯಲ್ಲಿ ಅನ್ನದೆ ಕಾರ್ಯದಲ್ಲಿ ಮಾಡಿ ತೋರಿಸುತ್ತಿದ್ದಾರೆ. ಇಷ್ಟೇ ಸಾಂಪ್ರದಾಯವಾದಿ ಮತ್ತು ಕೂಲಿಕಾರ ಬ್ರಿಟಿಷ ಸರಕಾರಗಳ ನಡುವೆ ಇರುವ ಅಂತರವಲ್ಲದೆ ಹಿಂದೀಯರ ಏಳ್ಗೆಯಾಗಬೇಕೆಂದು ಬ್ರಿಟಿಶರ ಉದ್ದೇಶವಿದ್ದಂತೆ ತೋರುವದಿಲ್ಲ. ಅದಕ್ಕೆಂದೇ ಅವಷ್ಟು ಬಾಣಗಳನ್ನು ಈ ಮೊದಲೇ ಹೆಚ್ಚಿಸಿದ್ದಲ್ಲದೆ ಲೀಗನ್ನು ದೂರ ಸರಿಸುವದಕ್ಕೆ ಡಿಸೆಂಬರ ತಾ 6ಕ್ಕೆ ಕಳೆದ ಮೇ ತಾ 16ರ ಮಂತ್ರಿ ಶಿಷ್ಟತ್ರಯದ ಘೋಷಣೆಗೆ ಒಂದು ಹೊಸ ವ್ಯಾಖ್ಯೆಯು ಹೊರಬಿತ್ತು. ಸದ್ಯಕ್ಕಂತೂ ಬ್ರಿಟಿಷರು ಸಾಮ್ರಾಜ್ಯಲಾಲಸೆಯನ್ನು ಬಿಟ್ಟು ಕೊಡುವಂತೆ ತೋರುವದಿಲ್ಲ. ಅಲ್ಲದೆ ಎರಡನೇ ಮಹಾ ಯುದ್ಧದಲ್ಲಿ ಜಯಶೀಲವಾದ ರಾಷ್ಟ್ರಗಳೆಲ್ಲ ತಂತಮ್ಮ ವಸಾಹತು ಮತ್ತು ಸಾಮ್ರಾಜ್ಯಗಳ ಮೇಲೆ ತಂತಮ್ಮ ಹಿಡಿತವನ್ನು ಬಲಗೊಳಿಸುವದರಲ್ಲಿ ಮಗ್ನವಾಗಿವೆ, ಇಂಥ ಸನ್ನಿವೇಶದಲ್ಲಿ ಜಾಗತಿಕ ಶಾಂತಿಯಾಗುವದಾಗಲಿ, ಮಾನವಕೋಟಿಯ ಹಿತವಾಗುವದಾಗಲಿ ಸಾಧ್ಯವಿದ್ದಂತೆ ತೋರುವದಿಲ್ಲ

ಕಾಂಗ್ರೆಸಿನ ಮುತ್ಸದ್ದಿತನ

ಕಾಲ ಪರಿಸ್ಥಿತಿ ಹಾಗೂ ರಾಜಕಾರಣದ ಮರ್ಮಗಳನ್ನು ಚೆನ್ನಾಗಿ ತಿಳಿದುಕೊಂಡು ಕಾಂಗ್ರೆಸ್ ಮಾತ್ರ ಮೊದಲು ಬ್ರಿಟಿಶರ ಶಿಷ್ಟತ್ರಯದ ಘೋಷಣೆಯನ್ನು ಸ್ವೀಕರಿಸಿ ರಾಜ್ಯಘಟನಾ ಸಮಿತಿಯ ಪ್ರತಿನಿಧಿಗಳ ಚುನಾವಣೆಯಲ್ಲಿ ಭಾಗವಹಿಸಿ ಬಹುಮತವನ್ನು ಗಳಿಸಿತು. ಇದರಿಂದ ಬೆರಗಾದ ಬ್ರಿಟಿಶ ಸರಕಾರವು ಅಂದಿನಿಂದಲೂ ಕಾಂಗ್ರೆಸಿನ ವರ್ಚಸ್ಸನ್ನು ಕುಗ್ಗಿಸಿ ಅದರ ಆಡಳಿತೆಯ ಪಥದಲ್ಲಿ ಅನಿವಾರ್ಯ ತೊಂದರೆಗಳು ತಲೆದೋರುವಂಥ ಪರಿಸ್ಥಿತಿಗೆ ಪೋಷಣೆಯನ್ನು ಮೊದಲಿನಂತೆಯೇ ಕೊಡುತ್ತ ಬಂದಿತೆಂದರೆ ಅತ್ಯುಕ್ತಿಯಾಗಲಾರದು ಆ ಮೇಲೆ ಮೊನ್ನೆ ಡಿಸೆಂಬರ ತಾ 6ಕ್ಕೆ ಬ್ರಿಟಿಶ ಸರಕಾರವು ಮೇ ತಾ 16ರ ಘೋಷಣೆಯ ಮೇಲೆ ತನ್ನ ಸ್ವಂತದ್ದೆಂತೆ ವ್ಯಾಖ್ಯೆಯನ್ನು ಮಾಡಿತು. ಇದನ್ನು ಒಪ್ಪಿಕೊಳ್ಳುವದು ಮುಂದಿನ ಮಾತು ಎಂಬ ಪ್ರಶ್ನೆಯುಂಟು. ಆದರೂ ಬ್ರಿಟಿಶರ ಹುಚ್ಚಾಟಿಕೆಗೆ ಲೀಗ ಬಲಿಯಾಗಿ ಹೊರಗೆ ಉಳಿಯಲಾರದೆಂಬ ಉದ್ದೇಶದಿಂದ ಕಾಂಗ್ರೆಸ್ ಆ ವ್ಯಾಖ್ಯೆಯನ್ನೂ ಒಪ್ಪಿಕೊಂಡಿತು. ಇನ್ನು ಯಾವ ಆರೋಪಕ್ಕೂ ಕಾಂಗ್ರೆಸ್ ಹೊಣೆಯಲ್ಲ. ಇಷ್ಟು ಸೌಹಾರ್ದತೆ ತೋರಿಸಿದ್ದಕ್ಕೆ ಪ್ರತಿಯಾಗಿ ಲೀಗು ಪರಮ ಸೌಹಾರ್ದತೆಯಿಂದ ನಡೆದುಕೊಳ್ಳಬೇಕಾಗಿತ್ತು. ಆದರೆ ಜಿನ್ನರ ಮಾರ್ಗವೇ ಬೇರೆ. ಕೊನೆಯ ವರೆಗೂ ಲೀಗಿನ ಹಸ್ತಕರಾಗಿ ಉಳಿಯುವದೇ ಅವರ ಉದ್ದೇಶವಿದ್ದಂತೆ ತೋರುತ್ತದೆ.

ಸತ್ವಪರೀಕ್ಷೆ

ತಾಳ್ಮೆ, ಸಹನೆ, ಸೌಹಾರ್ದತೆ ಮುಂತಾದ ಶೀಲ ವಿನಯ ಗುಣ ಸಂಪನ್ನತೆಯಲ್ಲಿ ಕಾಂಗ್ರೆಸು ತನ್ನ ಅರ್ಹತೆಯನ್ನು ಜಗತ್ತಿಗೆ ಮುಂದಿಟ್ಟು ಮಾಡಿತು. ಈಗ ಮುತ್ಸದ್ದಿತನದಲ್ಲಿ ಕಾಂಗ್ರೆಸ್ ತನ್ನ ಪರಂಪರೆಗನುಸರಿಸಿದ ಉದಾತ್ತ ರಾಜನೀತಿಯನ್ನು ತೋರಿಸುವ ಕಾಲವು ಈಗ ಸನ್ನಿಹಿತವಾಗಿದೆ. ಲೀಗು ಒಳಗೆ ಬರಲಿ, ಅಥವಾ ಬಾರದಿರಲಿ ಘಟನಾ ಸಮಿತಿಯ ಸಭೆಯು ಕೂಡಿ ಮುಂದಿನ ಕೆಲಸಗಳು ನಡೆಯುವವು

ಮುಂದೇನು?

ಲೀಗು ಮತ್ತೂ ಸಹಕರಿಸದಿದ್ದರೆ ಮುಂದೇನು? ಅಂತಃಕಲಹವೋ! ಪಾಕಿಸ್ಥಾನವೋ? ಎಂದು ಕೆಲ ಮುತ್ಸದ್ದಿಗಳು ಈಗಲೇ ಪ್ರಶ್ನಿಸಲಾರಂಭಿಸಿರುವರು. ರಾಜನೀತಿಯ ತಳಹದಿಯನ್ನವಲಂಬಿಸಿ ಯಾವ ರೀತಿಯಿಂದ ಪರಿಶೀಲಿಸಿದರೂ ಲೀಗು ಘಟನಾಸಮಿತಿಯೊಡನೆ ಸಹಕರಿಸದೆ ದೂರ ಸರಿಯುವದು ಸಮರ್ಪಕವಲ್ಲವೆಂಬುದು ಚೆನ್ನಾಗಿ ಸ್ಪಷ್ಟವಾಗುವದು. ಆದ್ದರಿಂದ ಈ ತಿಂಗಳ ಕೊನೆಗೆ ಲೀಗ್ ವರ್ಕಿಂಗ್ ಕಮಿಟಿ ಸಭೆ ಜರುಗಿದೊಡನೆ ತಕ್ಕ ನಿರ್ಣಯ ಮಾಡಿ ಲೀಗು ಘಟನಾ ಸಮಿತಿಯಲ್ಲಿ ಪ್ರವೇಶ ಪಡೆಯುವದು ಸಮರ್ಪಕವಾದ ಮಾರ್ಗ. ತನ್ನ ಛಲವನ್ನು ಕೊನೆಯವರೆಗೆ ಸಾಧಿಸಿ ಲೀಗು ಹೊರಗುಳಿದರೂ ಸರ್ವ ಹಿತಸಾಧಿಸಿ ಘಟನಾಸಮಿತಿಯು ಮುಂದೆ ರಚಿಸುವ ತಳಹದಿಯ ಮೇಲೆ ಘಟನೆಯನ್ನು ಸಿದ್ಧಮಾಡಿದರೆ ಅದನ್ನು ಒಲ್ಲೆನೆಂದು ಮುಬ್ಬುಗಂಟಿಕ್ಕಿ ದೂರ ನಿಲ್ಲುವದು ಆಗಿನ ಪರಿಸ್ಥಿತಿಗನುಸರಿಸಿ ಲೀಗಿನ ಆಳತೆಯೊಳಗಿನ ವಿಷಯವಾಗಲಾರದು. ಜಗತ್ತೇ ಲೀಗಿನ ಮೇಲೆ ಮುನಿದುಬಿದ್ದು ಲೀಗನ್ನು ಅಗ್ನಿ ಸರಿದಾರಿಗೆ ತರುವ ಪ್ರಸಂಗವುಂಟಾಗುವ ಸಂಭವವಿಲ್ಲವೆಂದಿಲ್ಲ

ಲೀಗಿನ ಮೇಲಿರುವ ಹೊಣೆ

ಆದ್ದರಿಂದ ಇಂಥ ಸಮಯದಲ್ಲಿ ಲೀಗು ತನ್ನ ಮುತ್ಸದ್ದಿತನದ ಯೋಗ್ಯತೆಯನ್ನು ತೋರಿ ಘಟನಾ ಸಮಿತಿಯಲ್ಲಿ ಸಹಭಾಗಿಯಾಗುವದು ಉತ್ತಮ ಮಾರ್ಗವಲ್ಲದೆ ಬ್ರಿಟಿಷ ಹಸ್ತಕ ಮಂತ್ರಕ್ಕೆ ಒಳಗಾದರೆ ಅದರಿಂದ ಅತ್ತ ಮುಸಲ್ಮಾನರ ಹಿತವೂ ಆಗುವದಿಲ್ಲ. ಇತ್ತ ದೇಶದ ಕಲ್ಯಾಣವೂ ಆಗುವದಿಲ್ಲವೆಂಬುದನ್ನು ಲೀಗ ಪ್ರಮುಖರು ಚೆನ್ನಾಗಿ ಮನಗಂಡು ಈಗ ತಮ್ಮ ಕರ್ತವ್ಯ ಪರಿಪಾಲನೆಗೆ ಸಿದ್ಧರಾಗುವದು ಅತ್ಯವಶ್ಯ

ಪಾಕಿಸ್ಥಾನಕ್ಕೆ ಪ್ರತ್ಯೇಕ ಸೈನ್ಯ?

ಜಿನ್ನರಿಗೆ ಕ್ರಿಪ್ಸರ ವಿಚಿತ್ರ ಸೂಚನೆ

ನಾಗಪುರದಲ್ಲಿ ಮಧ್ಯಪ್ರಾಂತ್ಯ ಮತ್ತು ಬಿರಾರ್ ತರುಣ ಪರಿಷತ್ತಿನ ಅಧ್ಯಕ್ಷತೆ ವಹಿಸಿದ ಡಾ| ಪಟ್ಟಾಭಿ ಸೀತಾರಾಮಯ್ಯನವರು ಒಂದು ವಿಚಿತ್ರ ಸಂಗತಿಯನ್ನು ಪ್ರಕಟಪಡಿಸಿದರು.

ಪಟ್ಟಾಭಿಯವರ ಬಳಿ ಎರಡು ದಾಖಲೆಗಳಿವೆಯಂತೆ. ದಿಲ್ಲಿಯಲ್ಲಿ ಬ್ರಿಟಿಷ ಮಂತ್ರಿತ್ರಯರು ಭಾರತೀಯರ ಮುಂದಾಳುಗಳೊಡನೆ ಮಾತುಕತೆ ಜರಗಿಸುತ್ತಿದ್ದಾಗ ಸರ್ ಸ್ಟ್ಯಾಫರ್ಡ್ ಕ್ರಿಪ್ಸರು ಮಿ| ಜಿನ್ನರಿಗೆ ಪ್ರತ್ಯೇಕ ಘಟನಾ ಸಮಿತಿಯನ್ನೂ, ಪ್ರತ್ಯೇಕ ಸೈನ್ಯವೊಂದನ್ನೂ ಕೊಡುವದಾಗಿ ತಿಳಿಸಿದರಂತೆ ಈ ಕುರಿತು ಡಾ| ಪಟ್ಟಾಭಿಯವರು ಹೀಗೆ ಎಚ್ಚರಿಸುತ್ತಾರೆ "ಈ ಕುರಿತು ಮುಂದಾಗಿಯೇ ಎಚ್ಚರ ವಹಿಸುವದೇ ಒಳಿತು. ಹೋರಾಟವು ಬಂದೇ ಬಿಡುವದು. ಮುಸ್ಲಿಂ ಲೀಗನ್ನು ಮೆಚ್ಚಿಸುವ ಯತ್ನವು ವಿನಾಶಕ್ಕೆ ಕಾರಣವು ತನ್ನ ಮನಸ್ಸೇನೆಂದು ಕಾಂಗ್ರೆಸಿಗೇ ಗೊತ್ತಿಲ್ಲ"

ಶಾಲೆಯಲ್ಲಿ ಮಕ್ಕಳ ಭವಿಷ್ಯ ಹೇಳಲಾಗುವದಿಲ್ಲ

ಶಿಕ್ಷಣವು ಸದ್ಗುಣ ಬೆಳೆಸುವಂತಹದಿರಬೇಕು

ರಷ್ಯನ್ ವಿದ್ಯಾಕ್ರಮದ ಆದರ್ಶ

ಆದ್ದರಿಂದ ... ಎರಡು ರಂಗಗಳಾಗಿ ವಿಂಗಡಿಸುವುದು. ಒಳ್ಳೇ ಬುದ್ಧಿ ಸಾಮರ್ಥ್ಯ ಪ್ರದರ್ಶಿಸಿದವರನ್ನು ಉನ್ನತ ಶಿಕ್ಷಣಕ್ಕೂ ಇತರರ ... ಶಿಕ್ಷಣಕ್ಕೂ ಕಳುಹಿಸುವುದು.

ಬಾಲಕರ ಭವಿಷ್ಯವನ್ನು ನಿರ್ಧರಿಸಲು ... ಯೋಗ್ಯವಲ್ಲವೆಂಬಲ್ಲದೆ ಆ ಪ್ರಾಯದಲ್ಲಿ ಹುಡುಗನ ನಿಜವಾದ ಸಾಮರ್ಥ್ಯವು ತಿಳಿಯುವುದಿಲ್ಲವೆಂತಲೂ ಈಗಿನ ಶಿಕ್ಷಣತಜ್ಞರು ಅಭಿಪ್ರಾಯಪಡುತ್ತಾರೆ. ಸುಮಾರು 18ನೇ ಪ್ರಾಯದಲ್ಲಿ ನಮ್ಮ ನಿಜವಾದ ಸಾಮರ್ಥ್ಯವು ಕಂಡುಹಿಡಿಯಲು ಸಾಧ್ಯವಾಗುತ್ತದೆ.

ಕೆಲವು ಮನುಷ್ಯರು, ಜನಾಂಗಗಳು ಇಲ್ಲವೆ ಪಂಗಡದವರು ಇತರರಿಗಿಂದ ಹೆಚ್ಚು ಬುದ್ಧಿಶಕ್ತಿಯುಳ್ಳವರಾಗಿದ್ದಾರೆ. ಕೆಲವರ ಬುದ್ಧಿ ವಿಕಾಸದ ಪ್ರಾಯ ಇತರರಿಗಿಂತ ಹೆಚ್ಚಾಗಿರುತ್ತದೆ. ಯಹೂದಿ ಜನಾಂಗದವರ ಮಿದುಳು ಬ್ರಿಟಿಷ್ ಜನಾಂಗದವರಿಗಿಂತ ಮುಂಚಿತವಾಗಿ ಪಕ್ವವಾಗುತ್ತದೆ. ಬಾಲಕರ ಭವಿಷ್ಯ ತಿಳಿಯಲು ಕನಿಷ್ಠ ಎಂದರೆ ಹದಿನೈದನೆ ವರ್ಷವಾದರೂ ದಾಟಬೇಕೆಂದು ಈಗ ಕಂಡುಹಿಡಿಯಲಾಗಿದೆ.

ಆದರೆ ಕೆಲವರು ಶಿಕ್ಷಣದಲ್ಲಿ ಭೌತಿಕ ಮತ್ತು ಕ್ರಿಯಾತ್ಮಕವೆಂಬ ಬೇಧವನ್ನೇ ಮಾಡಬಾರದಾಗಿ ತಿಳಿಸುತ್ತಾರೆ.

ಪಶ್ಚಿಮ ಯುರೋಪಿನಲ್ಲಿ ಅತೀ ಪ್ರಾಚೀನ ನಾಗರೀಕತೆಯ ದೇಶ ಇಟೆಲಿ. ಅವರು ಶಿಕ್ಷಣವೆಂಬುದನ್ನು ಎರಡು ಪ್ರತ್ಯೇಕ ಶಬ್ದಗಳಲ್ಲಿ ನಿರೂಪಿಸುತ್ತಾರೆ. ಅವರ ತಿಳುವಳಿಕೆ ಪ್ರಕಾರ ಶಿಕ್ಷಣ ಬೇರೆ, ಕಲಿಸುವಿಕೆ ಬೇರೆ. ಶಿಕ್ಷಣವು ಮನೋವಿಕಾಸಕ್ಕೆ ಸಂಬಂಧಪಟ್ಟ ವಿಷಯ. ಕಲಿಸುವಿಕೆಯು ಕೇವಲ ವಿಷಯ ತಿಳುವಳಿಕೆಗೆ ಸಂಬಂಧಪಟ್ಟ ಬೋಧನೆ.

ಕಲಿಸುವಿಕೆಯಿಂದ ಒಬ್ಬನು ತಜ್ಞ ಕೆಲಸಗಾರನಾಗಬಹುದು, ಇಲ್ಲವೆ ವಿಷಯ ಬಲ್ಲವನಿರಬಹುದು. ಆದರೆ ಉತ್ತಮ ನಾಗರಿಕನನ್ನಾಗಿ ಮಾಡುವುದೇ ಶಿಕ್ಷಣ. ಕಲಿಯುವಿಕೆಯಿಂದ ಉದರ ಪೋಷಣೆಗೆ ಸಹಾಯವಾಗಬಹುದು. ಆದರೆ ಶಿಕ್ಷಣವು ಗ್ರೀಕರು ಉಲ್ಲೇಖಿಸಿದ ಆ "ಸನ್ಮಾರ್ಗ ಜೀವನ"ಕ್ಕೆ ದಾರಿಮಾಡಿಕೊಡುತ್ತದೆ.

ಚರ್ಚಿಲ್ಲರು ಕ್ಲಾಸಿನಲ್ಲಿ ಶುದ್ಧ ದಡ್ಡರಾಗಿದ್ದರು. ಶೇಕ್ಸಪಿಯರ್, ಕಾಳಿದಾಸ, ರನ್ನ ಪೊನ್ನರನ್ನ, ಅವರವರ ಹನ್ನೊಂದನೇ ವಯಸ್ಸಿನಲ್ಲಿ ಪರೀಕ್ಷೆ ಮಾಡಿ ನೋಡಿದ್ದರೆ ಮುಂದೆ ಅವರು ಶ್ರೇಷ್ಠ ವ್ಯಕ್ತಿಗಳಾಗಿ ಶೋಭಿಸಬಹುದೆಂಬ ಸಂಗತಿಯು ತಿಳಿಯಲಿಕ್ಕಿಲ್ಲವಿತ್ತು.

ಭಾವೀ ಜನಾಂಗದ ತರಬೇತಿಯ ಹೊಣೆ ಹೊತ್ತವರು ಈ ಎರಡು ವಿಷಯಗಳ ವ್ಯತ್ಯಾಸ ಮತ್ತು ಪರಸ್ಪರ ವೈಶಿಷ್ಟ್ಯವನ್ನು ಚೆನ್ನಾಗಿ ಅರಿತಿರಬೇಕು. ಇದಾದ ಮೇಲೆ ಮಕ್ಕಳನ್ನು ಅವರವರ ಮಾನಸಿಕ ಒಲವಿಗನುಗುಣವಾಗಿ ಬೇರೆ ಬೇರೆ ಕಲಿಯುವಿಕೆಗೆ ಒಳಪಡಿಸುವುದು ಬಹಳ ಉತ್ತಮವಾದರೂ ಶಿಕ್ಷಣದ ಸಂದರ್ಭಗಳು ಮಾತ್ರ ಎಲ್ಲರಿಗೂ ಕಲ್ಪಿಸಬೇಕು.

ಪ್ರಾಚೀನ ಕಾಲದ ವಿಶ್ವವಿದ್ಯಾಲಯಗಳು ಬಹುಕಾಲ ಕಲಿತು ... ಉಳ

ವಿದ್ಯಾರ್ಥಿಗಳಿಗೆ ನಿಜವಾಗಿ ಶಿಕ್ಷಣ ದೊರಕುತ್ತಿರಲಿಲ್ಲವೆಂದು ವಾದಿಸುವುದು ಸಾಮಾನ್ಯವಾಗಿ ಕೇಳಿಬರುತ್ತದೆ. ಇದು ಸಂಪೂರ್ಣ ಸರಿಯಲ್ಲ. ಪರೀಕ್ಷೆಗಳನ್ನು ಪಾಸ್ ಮಾಡಿದ ಲೆಕ್ಕದಿಂದ ಓರ್ವನ ಶಿಕ್ಷಣ ಮಟ್ಟವನ್ನು ಅಳೆಯಲಿಕ್ಕಾಗುವುದಿಲ್ಲ. ಪರೀಕ್ಷಾ ವಿಷಯವನ್ನು ಸ್ವಲ್ಪ ಶ್ರಮವಹಿಸಿ ಬಾಯಿಪಾಠ ಕಲಿತಾದರೂ ಉತ್ತೀರ್ಣರಾಗಬಹುದು. ಒಂದೇ ಒಂದು ಸ್ವತಂತ್ರ ವಿಚಾರವನ್ನು ಬರೆಯದೆನೇ ಪಾಸ್‌ಮಾಡಿಕೊಳ್ಳುವ ಅನೇಕಾನೇಕ ಡಿಗ್ರಿಗಳಿರುವುದು ಆಶ್ಚರ್ಯದ ಸಂಗತಿ.

1914–18ರ ಯುದ್ಧದ ಮುಂಚೆ ಜಗತ್ತಿನಲ್ಲಿ ಜರ್ಮನಿಯ ಶಿಕ್ಷಣವು ಆದರ್ಶವೆಂದೆನಿಸಿಕೊಳ್ಳಲ್ಪಟ್ಟಿತು. ಜರ್ಮನಿಗೆ ಆ ಸ್ಥಾನಮಾನಕ್ಕೆ ನಿಜವಾದ ಹಕ್ಕು ಇತ್ತೆನಬಹುದು. ಆದರೆ ಜಗತ್ತಿನ ನಿರೀಕ್ಷೆ ಸಿರಾಶೆಗೊಂಡಿತೆಂಬಂತೆ ಶಿಕ್ಷಣದ ಅತೀ ಉನ್ನತ ಮಟ್ಟಕ್ಕೆ ಮುಟ್ಟಿದ ದೇಶದ ಜನರು ವ್ಯಯಕ್ತಿಕವಾಗಿ ತಮ್ಮ ಸ್ವಂತ ಮನಸ್ಸುಗಳಿಂದ ಯೋಚಿಸಲು ಸಮರ್ಥರಿಲ್ಲವೆಂಬ ಸಂಗತಿಯು ಕಳೆದ ಯುದ್ಧದಿಂದ ಸಿದ್ಧಾಂತವಾಯಿತು.

THE CANARA BANKING CORPORATION LTD.
(Incorporated in British India)
Estd: 1906.
Head Office: UDIPI, S. Kanara.

Authorised Capital	Rs. 25,00,000
Issued & Subscribed Capital	16,00,000
Paid up Capital	15,87,600
Reserves	4,60,000
Total Resources Around	Rs. 2¼ Crores.

Branches at Fort-Bombay, Madras, Bangalore, Coimbatore, Salem, Calicut, Hubli, Mysore, Cochin, Mangalore, Mercara etc., etc., etc.
BANKING BUSINESS OF EVERY DESCRIPTION TRANSACTED.

ಚಳಿ ಮತ್ತು ಶೀತಗಳನ್ನು ಕೂಡಲೇ ಗುಣಪಡಿಸುವುದು.

ಜಾಂಬಕವನ್ನು ಪ್ರತಿ ರಾತ್ರೆ ಮಲಗೊಳ್ಳುವಾಗ ಹಚ್ಚಿರಿ

ಕೆಟ್ಟ ಶೀತಬಾಧೆಯನ್ನು ನೀವು ಪ್ರತಿದಿನ ರಾತ್ರಿ ಎದೆಗೆ ಮತ್ತು ಕೊರಳಿಗೆ ಜಾಂಬಕನ್ನು ಸವರಿ ಮಲಗೊಳ್ಳುವುದರಿಂದ, ಪರಿಹರಿಸಿಕೊಳ್ಳಬಹುದು. ಜಾಂಬಕಿನಲ್ಲಿರುವ ಅತ್ಯುತ್ತಮ ವನೌಷಧಿ ಸತ್ವವು, ಚರ್ಮಕ್ಕೆ ಹೀರಲ್ಪಟ್ಟು ನಿಮ್ಮ ಶರೀರದ ಕಾವಿನಿಂದ ಹಾರಿ ಹೋಗುವುದು. ಹಾಗೆ ಅವು ಶ್ವಾಸಕಾಲದಲ್ಲಿ ಶ್ವಾಸದೊಡನೆ ಸೇರಿ ನಿಮ್ಮ ತಲೆಯ ಭಾರವನ್ನು ಕಡಿಮೆ ಮಾಡುತ್ತದೆ. ಜಾಂಬಕ್ ಕೂಡಲೇ ಶೀತ ಮತ್ತು ಇಂಫ್ಲುಯೆಂಜಾ ಕ್ರಿಮಿಗಳನ್ನು ನಾಶ ಮಾಡುತ್ತದೆ.



ಯಾವಾಗಲೂ ಜಾಂಬಕನ್ನೇ ಸೇವಿಸಿರಿ.

ZAM-BUK

ಶ್ಯಾಣೆ ಕೊಟ್ಟು ವಿಶಿಷ್ಟವಾದುದು.

ರಷ್ಯದ ಪಾಠ

ಶಿಕ್ಷಣ ಪ್ರಚಾರವು ರಷ್ಯದಲ್ಲಿ ತುಂಬಾ ಬಿರುಸಾಗಿ ಜರಗಿಸಲ್ಪಟ್ಟಿದೆ. ಕೆಲವೇ ವರ್ಷಗಳ ಹಿಂದೆ ಶೇಕಡಾ 10ರಷ್ಟು ನಿರಕ್ಷರಸ್ಥರಿದ್ದ ದೇಶದಲ್ಲಿ ಈಗ ಶೇಕಡಾ 90ರಷ್ಟು ಸಾಕ್ಷರತೆಯವರಿದ್ದಾರೆ. ಅಲ್ಲಿ ಈಗೊಂದು ಬಲವಾದ ಆಳವಾದ ಸಂದೇಹದ ಸಮಸ್ಯೆ ಎದ್ದಿದೆ. ಝಾರನ ಕಾಲದಲ್ಲಿ ಅಲ್ಲಿನ ಜನರು ಮೌನವಾಗಿ ಎಲ್ಲಾ ದಬ್ಬಾಳಿಕೆಯನ್ನೂ ಸಹಿಸುತಿದ್ದರು. ಕಾರಣ ಅವರು ಅಶಿಕ್ಷಿತರಿದ್ದರು. ಈಗ ಅಲ್ಲಿನವರು ಶಿಕ್ಷಣಪಡೆದ ಮೇಲೂ ಮೌನವಾಗಿಯೇ ಸಮತಾವಾದ ಸರ್ವಾಧಿಕಾರವನ್ನು ಸಹಿಸುತ್ತಲಿದ್ದಾರೆ. ಹಾಗಾದರೆ ಶಿಕ್ಷಿತ ಮತ್ತು ಅಶಿಕ್ಷಿತರೊಳಗೆ ವ್ಯತ್ಯಾಸವೇನಾಯಿತು?

ಯುದ್ಧದ ಮುಂಚಿನ ಓರ್ವ ಮೆಟ್ರಿಕ್ ವಿದ್ಯಾರ್ಥಿಯು ತನ್ನ ಸ್ವಂತ ಅನುಭವ ಮತ್ತು ಹೊರಗಿನ ಸಂಪರ್ಕದಿಂದ ಹೆಚ್ಚು ವಿಷಯಗಳನ್ನು ಕಲಿತುಕೊಳ್ಳುತಿದ್ದನು. ಆದರೆ ಈಗಿನ ವಿದ್ಯಾರ್ಥಿಯು ಕೊಲೇಜಿನ ಲೆಕ್ಚರುಗಳನ್ನು ಕೇಳಿದ ಮೇಲೂ ಪ್ರಾಪಂಚಿಕ ವಿಷಯಗಳ ಕುರಿತು ಅಜ್ಞನಾಗಿರುವನು.

ಇಂದಿನ ನಮ್ಮ ವಿಶ್ವವಿದ್ಯಾಲಯಗಳಾದರೆ ವಿದ್ಯಾರ್ಥಿಗಳನ್ನು ಕೇವಲ ಕಛೇರಿ ಕಾರಕೂನರನ್ನಾಗಿ ಮಾಡುವಂತಹವಾಗಿವೆ. ಆದರೆ ಇತ್ತೀಚೆ ಇಂಗ್ಲೆಂಡಿನಲ್ಲಿ ಈ ಪ್ರವೃತ್ತಿಯು ಕಡಿಮೆಯಾಗಿದ್ದುದರ ಪರಿಣಾಮವಾಗಿ ಸರಕಾರಿ ಉದ್ಯಮಗಳಿಗೆ ಯೋಗ್ಯ ಅಧಿಕಾರಿಗಳು ದೊರೆಯದಂತಾಗಿದೆ.

ಪ್ರತಿಯೊಬ್ಬರಿಗೂ ಅನ್ಯಾಯ

ಸ್ವತಂತ್ರ ವಿದ್ಯಾ ಸಂಸ್ಥೆಗಳಲ್ಲಿ ಶಿಕ್ಷಣ ಸಾಗುತ್ತಿರುವಾಗಲೇ ಪರಿಸ್ಥಿತಿಯು ಇಷ್ಟು ಗಂಭೀರವಾಗಿ ಶಿಕ್ಷಣವು ಕೇವಲ ಕಲಿಯುವಿಕೆಯಾಗಿ ಮಾರ್ಪಾಟು ಹೊಂದಿದೆಯೆಂದಾದರೆ, ಶಿಕ್ಷಣ ಸಂಸ್ಥೆಯು ಸರಕಾರದ ನಿಯಂತ್ರಣಕ್ಕೆ ಒಳಪಟ್ಟು ವಿಶಿಷ್ಟವಾದ ಒಂದು ವಿದ್ಯಾಕ್ರಮವು ಜಾರಿಗೆ ಬಂದಾಗ ಅದೇ ಪರಿಸ್ಥಿತಿಯು ಇನ್ನಷ್ಟು ಗಂಭೀರವಾಗಲಿಕ್ಕಿಲ್ಲವೆ? ಪುನಃ ರಷ್ಯದ ಸಮಸ್ಯೆಯೇ ಉದ್ಭವಿಸುವುದು.

ಶಿಕ್ಷಣದ ಧ್ಯೇಯವು ಎರಡು ವಿಧವಾಗಿರಬೇಕು. ಜನತೆಯು ಉತ್ತಮ ನಾಗರೀಕರಾಗುವುದು ಮಾತ್ರವಲ್ಲ ಅವರು ತಮ್ಮೆದುರಿಗಿರುವ ಸಂದರ್ಭಗಳನ್ನು ಅರಿತು ಅವುಗಳ ಸದುಪಯೋಗ ಮಾಡಿ ಮಾನಸಿಕ ಮತ್ತು ಶಾರೀರಿಕ ವಿಕಾಸವನ್ನು ಮಾಡಿಕೊಳ್ಳಲು ಸಮರ್ಥರಾಗಬೇಕು. ಇದರ ಮುಂದೆ ಕೇವಲ ಹಣ ಸಂಪಾದನೆಯ ತರಬೇತಿಯು ರದ್ದಾಗಬೇಕು. ಮಾನಸಿಕ ವಿಕಾಸದ ಸಂದರ್ಭವನ್ನು ಕೊಡದಿರುವುದೆಂದರೆ ಸಮಾಜಕ್ಕೂ, ಜನಾಂಗಕ್ಕೂ ವ್ಯಕ್ತಿಗೂ ಅನ್ಯಾಯ ಮಾಡಿದಂತೇ ಸರಿ.

ಮಾನಸಿಕ ವಿಕಾಸದ ಉದ್ದೇಶವಿರುವ ಶಿಕ್ಷಣ ಕ್ರಮವನ್ನು ಪ್ರಚಾರಿಸುವಾಗ ಕೆಲವೊಂದು ತಪ್ಪುಗಳನ್ನು ಮಾಡಿದರೂ ಬೇಸರವಿಲ್ಲ. ಶುದ್ಧವಾದ ಶಿಕ್ಷಣವು ತನ್ನ ನಿಜವಾದ ಗುರಿಯನ್ನು ಬಿಟ್ಟು ತ್ವರಿತ ಜೀವನೋಪಾಯ ಸಾಧನೆಯನ್ನು ಕಲಿಸುವಿಕೆಯೊಡನೆ ಬೆರೆಯಬಾರದು. ಇಂದಿನವರಲ್ಲದಿದ್ದರೂ ಮುಂದಿನ ಪೀಳಿಗೆಯಾದರೂ ಆನಂದಮಯ ಜೀವನವನ್ನು ಸಾಗಿಸಲು ಶಕ್ತವಾಗಬಹುದು.

ವಾರಾಂತ್ಯ ವರದಿ ವಿಮರ್ಶೆ

ಲೀಗಿನವರ ಪುಂಡಾಟಿಕೆ

ಅಲ್ಪ ಸಂಖ್ಯಾಕ ಮುಸಲ್ಮಾನೇತರರಿರುವ ಪ್ರದೇಶದಲ್ಲಿ ಉಂಟಾದ ಜಾತೀಯ ದಂಗೆಗಳಲ್ಲಿ ಭಾಗವಹಿಸಿದವರು ಲೀಗಿನವರೆಂದಾಗ ಮಿ। ಜಿನ್ನರು ರೋಷವೆದ್ದು ಉದ್ದದ ಪ್ರಕಟಣೆಯನ್ನು ಹೊರಡಿಸುತ್ತಿದ್ದರು. ಪೂರ್ವ ಬಂಗಾಲದ ರಾಮಗಂಜ ಮುಸ್ಲಿಂ ಲೀಗಿನ ಅಧ್ಯಕ್ಷರಾದ ಗುಲಾಮಖಾನ್ ಎಂಬವರು ಜಾತೀಯ ಗಲಭೆಯಲ್ಲಿ ಕೊಲೆ ಮಾಡಿದ ಅಪರಾಧಕ್ಕೆ ಗುರಿಯಾಗಿ ಬರದ್ವಾನ್ ಸೆಶ್ಶನ್ ಜಡ್ಜರಿಂದ ಮರಣದಂಡನೆಯ ಶಿಕ್ಷೆಗೆ ಗುರಿಮಾಡಲ್ಪಟ್ಟಿದ್ದಾರೆ ನ್ಯಾಯಸ್ಥಾನದಲ್ಲಿ ತೀರ್ಮಾನಿಸಲ್ಪಟ್ಟ ಸಂಗತಿಯನ್ನು ಯಾರೂ ಅಲ್ಲಗಳೆಯುವಂತಿಲ್ಲ ಈ ಪ್ರಕರಣದಲ್ಲಿ ಕೊಲೆಮಾಡಲ್ಪಟ್ಟವನು ಕೇವಲ ಹದಿಮೂರು ವರ್ಷದ ಬಾಲಕನೊಬ್ಬ. ಜವಾಬ್ದಾರಿ ಲೀಗ್ ಅಧಿಕಾರಸ್ಥರೊಬ್ಬರು ಹೇಯವೂ ನೀಚವೂ ಆದ ಇಂತಹ ಅಕೃತ್ಯಗಳಿಗೆ ಕೈಹಾಕುವುದೆಂದರೆ ಮನುಷ್ಯತನಕಿಂತಲೂ ಕೀಳಾದ ವಿಷಯ.

ಲೀಗ್ ಅನುಯಾಯಿಗಳ ಪುಂಡತನ ಲೀಗ್ ಸರಕಾರಗಳಿದ್ದಲ್ಲೇ ಹೆಚ್ಚು ಭರದಿಂದ ನಿರ್ವಹಿಸಲ್ಪಡುವುದು ಇನ್ನೊಂದು ಗಣನೀಯ ಸಂಗತಿ ಉದಾಹರಣೆಗಾಗಿ ಕರಾಚಿಯ ಸರಕಾರ ಕಛೇರಿ ಭವನದ ಮುಂದೆ ಮತ ಪ್ರದರ್ಶನ ಮಾಡುತ್ತಿದ್ದ ೨೨ ನಗರ ಮುಸ್ಲಿಂ ಲೀಗ್ ರಕ್ಷಕ ದಳದ ಸದಸ್ಯರನ್ನು ಬಂಧಿಸಲಾಗಿದೆ ಇವರಲ್ಲಿ ಕೆಲವರು ಕಛೇರಿಯೊಳಗೆ ಬಲಾತ್ಕಾರದಿಂದ ನುಗ್ಗಿದವರು. ಲೀಗ್ ಸರಕಾರದವರು ಇದುವರೆಗೆ ತಮ್ಮ ಪಕ್ಷದ ಮೇಲೆ ಸಾಕಷ್ಟು "ಔದಾರ್ಯ"ವಿತ್ತವೆ ಅವರ ಸ್ವೇಚ್ಛಾಚಾರಕ್ಕೆ ಎಡೆಕೊಟ್ಟಿದ್ದೇ ಇಂದು ಅವರು ಹತೋಟಿ ತಪ್ಪಿ ನ್ಯಾಯನೀತಿಗಳ ಎಲ್ಲೆಯನ್ನು ಮೀರುವುದು ಕಂಡುಬರುತ್ತದೆ

ಲೀಗಿನ ಹೊಸ ಶರ್ತ

ನಿರೀಕ್ಷಿಸಿದಂತೆ ಹೆಚ್ಚಿನ ಪೀಳ ಭವಿಷ್ಯದ ಲೀಗಿನ ಹೊಸ ಶರ್ತದ ವರದಿಗಳು ಬರುತ್ತಿವೆ "ಕೊಂಗ್ರೆಸ್ಸು ಬ್ರಿಟಿಷ್ ಸರಕಾರದ ದಶಂಬರದ ೬ರ ಹೇಳಿಕೆಯನ್ನು ಸ್ವೀಕರಿಸಿದೆ ಆದರೆ ಪೂರ್ಣ ಮನಸ್ಸಿನಿಂದಲ್ಲ ಪ್ರಾಂತ್ಯಗಳಿಗೆ ಗುಂಪಿಸಿದ ಹೊರಬೀಳು ಸಂಪೂರ್ಣ ಸ್ವಾತಂತ್ರ್ಯವಿದೆ ಎಂದು ಅದು ತನ್ನ ಠರಾವಿನಲ್ಲಿ ನಿರೂಪಿಸಿದುದು ತಪ್ಪು ಎಂಬರ್ಥದಲ್ಲಿ ಲೀಗ್ ಧುರೀಣರು ನುಡಿಯುತ್ತಿದ್ದಾರೆ

ಕೊಂಗ್ರೆಸು ಬ್ರಿಟಿಷ್ ಸರಕಾರದ ಪ್ರನಾಳಿ ಮನ್ನಿಸಿ ಅವರ ದಶಂಬರ ೬ರ ಹೇಳಿಕೆಯನ್ನೂ ಒಪ್ಪಿದೆ ಘಟನಾಸಮಿತಿಯ ಕಾರ್ಯಕಲಾಪದಲ್ಲಿ ಆದಷ್ಟು ಹೆಚ್ಚಿನ ಸಹಕಾರ ಸಿಗುವಂತೆಯೂ, ಲೀಗು ಅದರಲ್ಲಿ ಭಾಗವಹಿಸುವಂತಾಗಲೆಂದೂ ಕೊಂಗ್ರೆಸು ಅದನ್ನು ಒಪ್ಪಿತಲ್ಲದೆ ಲೀಗಿನ ದಿನದಿನಕ್ಕೆ ಬೆಳೆಯುವ ಶರ್ತಮಾಲೆಯನ್ನು ಗಮನಿಸಿ ಅದು ಹಾಗೆ ಮಾಡಿಲ್ಲ ಹಾಗೆ ಮಾಡಲೂ ಸಾಧ್ಯವಿಲ್ಲ ಇನ್ನು ಲೀಗು ಘಟನಾಸಮಿತಿಯಲ್ಲಿಲ್ಲದೆ ಅದ ನಿರ್ಧಾರಗಳನ್ನು ಜಾರಿಗೆ ತರುವ ಬ್ರಿಟಿಷರೇ ಆ ವಿಷಯ ನೋಡಿಕೊಳ್ಳಬೇಕು. ಈ ಸಲದ ಬುದ್ಧಿವಾದ ಲೀಗಿಗೆ ಉಪದೇಶಿಸಲ್ಪಡಬೇಕಲ್ಲದೆ ಕೊಂಗ್ರೆಸಿಗಲ್ಲ

ಮೈಸೂರ್ ಘೋಷಣೆ

ಪ್ರಜೆಗಳ ಹಾರ್ಕೆ ಮನ್ನಿಸಿ ಮೈಸೂರಿನ ಘನ ಮಹಾರಾಜರು ಪ್ರಜಾಪ್ರತಿನಿಧಿಗಳಿಗೆ ಆಡಳಿತದಲ್ಲಿ ಯೋಗ್ಯ ಭಾಗ ಸಿಗುವಂತೆ ಒಂದು ಹೊಸ ರಾಜ್ಯಾಂಗ ರಚನೆಯ ರೂಪರೇಷೆಗಳನ್ನೂ ರಚಿಸಲು ದಿವಾಣರಾದ ಸರ್ ರಾಮಸ್ವಾಮಿ ಮುದಲಿಯಾರರಿಗೆ ನಿರ್ದೇಶಿಸಿದ್ದಾರೆ "ದೇಶದ ಇತರ ಕಡೆಗಳಲ್ಲಿ ಸಾಗುವ ರಾಜಕೀಯ ಘಟನೆಗಳನ್ನು ಮನಸ್ಸಿನಲ್ಲಿಟ್ಟು" ಹೊಸ ರಚನೆಯು ಕೆತ್ತಲ್ಪಡಬೇಕು. ಆದರೆ ಅದರ ನಿರ್ದಿಷ್ಟವಾದ ಗುರಿಯಾವುದೆಂದು ಮಹಾರಾಜರು ಸ್ಪಷ್ಟಪಡಿಸಿಲ್ಲ

ನಮಗೆ ತಿಳಿದ ಮಟ್ಟಿಗೆ ಭಾರತದ ಎಲ್ಲಾ ಕಡೆಗಳಲ್ಲೂ ಕೇಳಿಬರುತ್ತಿರುವ ಕೂಗೆಂದರೆ ಒಂದೇ — ಪ್ರಜಾರಾಜ್ಯ, ಸ್ವಾತಂತ್ರ್ಯ ಅನುಭವಸ್ಥ ದಿವಾಣರಿಗೆ ಇದೇನು ಅರಿಯದ ವಿಷಯವಲ್ಲ ಆದರೆ ಈ ದಿವಾಣರು ತಮ್ಮ ರಾಜಕೀಯ ಶಿಕ್ಷಣವನ್ನೆಲ್ಲ ಬ್ರಿಟಿಷರ ಬಗಲಲ್ಲೇ ಹೊಂದಿದವರು ಬ್ರಿಟಿಷರಂತೇ ಅವರು ಮಹಾರಾಜರ ಘೋಷಣೆಗೆ ತಮ್ಮದೇ ಸ್ವಂತ ಅರ್ಥಕಟ್ಟಿ ಪ್ರಜಾಪ್ರತಿನಿಧಿ ಆಡಳಿತ ಮಂಡಳವು ತನ್ನ ದಿನನಿತ್ಯದ ಕಾರ್ಯಕ್ರಮದಲ್ಲಿ ರಾಜರ ನಿರ್ಬಂಧ ಮತ್ತು ಸಾಂದರ್ಭ್ಯವೂ ದೈವದತ್ತವೂ ಆದ ಅಧಿಕಾರದಿಂದ ತಡಗಟ್ಟಲ್ಪಡುವ ತನ ರಾಜ್ಯಾಂಗ ರಚನೆಯನ್ನು ರೂಪುಗೊಳಿಸದಿರಲೆಂದು ಎಲ್ಲರ ಆಶಯ.

ಫ್ರೆಂಚ್ ವಸಾಹತು

ಫ್ರಾನ್ಸಿನ ವಸಾಹತು ಮಂತ್ರಿಗಳಾದ ಮೊಟೆಟರು ಏಬ್ ನಾವರ್ ಮೊದಲಾದ ದೂರ ಪ್ರಾಚ್ಯದ ತಮ್ಮ ಸಾಮ್ರಾಜ್ಯವನ್ನು ಸಂದರ್ಶಿಸಿ ಬಂದರು ಇಂಡೋ ಚೀನದ ಜನರು ಒಗ್ಗಟ್ಟಾಗಿ ದಂಗೆ ಎದ್ದಾಗ ಹೆದರಿ ಅಲ್ಲಿನ ಫ್ರೆಂಚರ ಸೈನ್ಯವು ಶರಣು ಹೊಡೆಯಿತು ಶಾಂತಿ ಸಂಧಾನ ಮಾಡುವ ನೆವದಿಂದ ಫ್ರೆಂಚ್ ಸರಕಾರ ಮೆಲ್ಲನೆ ತನ್ನ ಸೈನ್ಯ ಸರಬರಾಯಿಯನ್ನು ಆ ಕಡೆ ಬರಗೊಳಿಸಿ ಈಗ ಪುನಃ ಎದುರುಬಿದ್ದರು ಮಾತನಾಡಹತ್ತಿದೆ ಮೊಟೆಟರು ಪಾಂಡುಚೇರಿಗೂ ಬಂದಿದ್ದು ತಮ್ಮ ಭಾರತ ವಸಾಹತನ್ನೂ ನೋಡಿದರು ವಸಾಹತನ್ನು ಬಿಟ್ಟುಕೊಡುವುದು ಅವರಿಗೆ ಇಷ್ಟವಿಲ್ಲವಂತೆ ಹಿಂದೆ ಇಷ್ಟಪಟ್ಟು ಯಾರೂ ನೆರೆತ್ರನ್ನು ಬಿಟ್ಟಿದ್ದಿಲ್ಲ. ಬಿಡುವ ಬಿಡದಿರುವ ಇಷ್ಟ ಫ್ರೆಂಚರದಲ್ಲ, ಅದು ಭಾರತೀಯರದಾಗಿದೆ.

ಹಜಾರಿ ಭಾಗದ ಗಲಭೆ

ಗಡಿನಾಡಿನ ಹಜಾರಿಭಾಗ ಜಿಲ್ಲೆಯಲ್ಲಿ ಪುಂಡರು ಪುನಃ ಜಾತೀಯ ಗಲಭೆಯನ್ನು ಎಬ್ಬಿಸಿರುವರು. ಅಲ್ಲಿನ ಅಲ್ಪಸಂಖ್ಯಾಕರಾದ ಹಿಂದೂಗಳ ಜೀವ, ವಿತ್ತ, ಮಾನ, ಮತೀಯ ಸಂಸ್ಥೆಗಳಿಗೆ ತುಂಬಾ ಧಕ್ಕೆಯುಂಟಾಗಿದೆ. ಕೆಲ ಲೀಗ್ ದುರೀಣರು ಪ್ರಚಾರ ಮಾಡಿದ ದ್ವೇಷ ಸಾಧನೆಯ ಪರಿಣಾಮವಿದೆಂದು ಹೇಳಲಾಗಿದೆ ಅಧಿಕಾರದಲ್ಲಿರುವ ಅಲ್ಲಿನ ಕೊಂಗ್ರೆಸ್ ಸರಕಾರವು ಬಿಗುವಾದ ಧೋರಣೆಯನ್ನನುಸರಿಸಿದೆ. ಶೀಘ್ರದಲ್ಲಿ ಕೊನೆಗೊಳ್ಳದಿದ್ದರೆ ಇದರ ಪ್ರತಿಕ್ರಿಯೆಗಳು ಇತರ ಕಡೆಗಳಲ್ಲುಂಟಾಗಬಹುದು

ಅಜಾದ್‌ರ ಹೊಸ ಹುದ್ದೆ

ಇದುವರೆಗೆ ಸರಕಾರಿ ಸಚಿವತ್ವವನ್ನೂ ತಿರಸ್ಕರಿಸಿದ ಮೌಲಾನಾ ಅಜಾದರು ಕೊನೆಗೆ ಹೇಗೂ ನಡುಗಾಲ ಸರಕಾರದ ಶಿಕ್ಷಣ ಮಂತ್ರಿಗಳಾದರು ದೇಶದ ಆಡಳಿತದಲ್ಲಿ ಅವರ ವಿವೇಕಪರ ಸಲಹೆಯ ಆವಶ್ಯಕತೆ ಇದೆ ಪೂರ್ಣ ಬದಲಾಗಬೇಕಾದ ಶಿಕ್ಷಣ ಪದ್ಧತಿಯ ಕುರಿತು ಯೋಗ್ಯವೂ ಧೈರ್ಯವಂತವೂ ಆದ ಧೋರಣೆಯನ್ನು ಅನುಸರಿಸಲು ಅಜಾದರಂತಹ ದೃಢ ವಿವೇಚನೆಯ ವ್ಯಕ್ತಿಗಳೇ ಬೇಕು ಮಾತ್ರವಲ್ಲ ಶಿಕ್ಷಣ ವಿಚಾರದಲ್ಲಿ ಅನೇಕ ಜಾತೀಯ ಮತ್ತು ಸಾಂಸ್ಕೃತಿಕ ಸಮಸ್ಯೆಗಳು ಒಳಗೊಂಡಿವೆ ಸಕಲ ಮತಸ್ಥರ ಹಿತಚಿಂತನೆಯ ಕಡೆಗೂ ಆಳವಾದ ಸಹಾನುಭೂತಿ ಇರುವ ಮಾಜಿ ಕೊಂಗ್ರೆಸ್ ಅಧ್ಯಕ್ಷರ ನಿರ್ದೇಶಕತ್ವದಲ್ಲಿ ಭಾರತವು ಶಿಕ್ಷಣ ಕ್ರಾಂತಿಯನ್ನು ಕಾಣುವುದೆಂದು ಹಾರೈಕೆ ಇದೆ

ಗಾಂಧಿಗಳಿಬ್ಬರ ಸಂಚಾರ

ಇತ್ತ ಪೂರ್ವ ಬಂಗಾಲದಲ್ಲಿ ಮಹಾತ್ಮಾ ಗಾಂಧಿಯವರು ತಮ್ಮ ಶಾಂತಿ ಸಂದೇಶದ ಸಂಚಾರವನ್ನಾರಂಭಿಸಿ ಅಲ್ಲಿನ ವೈಷಮ್ಯವಾದ ವಾತಾವರಣವನ್ನು ಸೌಮ್ಯಗೊಳಿಸಲು ಪ್ರಯತ್ನ ಮಾಡುತ್ತಿರುವಾಗಲೇ ಅತ್ತ ಬಿಹಾರದಲ್ಲಿ ಗಡಿನಾಡು ಗಾಂಧಿಗಳಾದ ಗಫೂರ್ ಖಾನರು ಶಾಂತಿದೂತರಾಗಿ ಹಳ್ಳಿಹಳ್ಳಿ ಸಂಚಾರ ಮಾಡುತ್ತಿರುವರು. ಎರಡೂ ಪ್ರದೇಶಗಳೊಳಗಿನ ಬಹುಸಂಖ್ಯಾಕರ ಮೇಲೆ ಇವರ ಪ್ರತಿಭಾವಂತ ಧುರೀಣರ ಪ್ರಭಾವವು ತೃಪ್ತಿಕರವಾದ ಪರಿಣಾಮ ಮಾಡುತ್ತದೆಂದು ಭರವಸೆಯಿಂದ ಹೇಳಬಹುದು. ಮಹಾತ್ಮರು ಪಾದಸಂಚಾರ ಮಾಡುತ್ತ ಹೋದಲ್ಲೆಲ್ಲ ಮುಸಲ್ಮಾನರು ಸೌಹಾರ್ದದಿಂದ ಅವರನ್ನು ಸ್ವಾಗತಿಸುವ ಮತ್ತು ಪ್ರಾರ್ಥನಾ ಸಭೆಗಳಲ್ಲಿ ಭಾಗವಹಿಸುವ ವದಂತಿಗಳು ಪ್ರಕಟವಾಗುತ್ತಿವೆ. ಅಲ್ಲಿನ ಬಹುಜನ ಮುಸಲ್ಮಾನರ ಆತುರದ ವರ್ತನೆಯನ್ನು ಪರಿಶೀಲಿಸಿದಾಗ ಜಾತೀಯ ಗಲಭೆಗಳು ಹೊರ ಪ್ರದೇಶದಿಂದ ಉದ್ದೇಶಪೂರ್ವಕವಾಗಿ ಕರತರಲ್ಪಟ್ಟವರಿಂದಲೇ ನಿರ್ವಹಿಸಲ್ಪಟ್ಟವೆಂದು ಖಚಿತವಾಗುತ್ತದೆ ಅನೇಕ ಪುಂಡರೂ, ಅತ್ಯಾಚಾರ ಮಾಡಿದವರೂ ಇನ್ನೂ ಸ್ವೇಚ್ಛೆಯಾಗಿ ಅಲ್ಲಿ ಸಂಚರಿಸುತ್ತಿರುವುದು ಸರಕಾರದ ಅಲಕ್ಷ್ಯವನ್ನು ತೋರಿಸುತ್ತದೆ.

ಲೀಗ ಸರಕಾರಗಳಿದ್ದ ಪ್ರಾಂತ್ಯಗಳಲ್ಲಿ ವಾಸಿಸುವ ಮುಸಲ್ಮಾನೇತರ ಅಲ್ಪಸಂಖ್ಯಾಕರು ನೆಮ್ಮದಿಯಲ್ಲಿ ವಾಸಿಸುವರೆ ತಕ್ಕ ವಾತಾವರಣವನ್ನು ಕಲ್ಪಿಸದಿದ್ದರೆ ಮುಸಲ್ಮಾನೇತರರು ಬಹುಸಂಖ್ಯಾಕರಾಗಿರುವಲ್ಲಿ ಇರುವ ಮುಸಲ್ಮಾನರಿಗೆ ತುಂಬಾ ಹಾನಿಯಾಗುವ ಸಂಭವವಿದೆ ಎಂಬುದು ಬಿಹಾರದ ಪ್ರತಿಧ್ವನಿಯಿಂದ ವ್ಯಕ್ತವಾಗುತ್ತದೆ.

ಕೆನರಾ ಬ್ಯಾಂಕ್ ಮತ್ತು ಘಟನಾ ಸಮಿತಿ

ಯಾವುದಾದರೊಂದು ಬ್ಯಾಂಕಿನ ಠೇವಣಾತಿದಾರರಿಗ ಹಾಗೂ ಗ್ರಾಹಕರಿಗೆ ಅದರ ಡೈರೆಕ್ಟರರ ಹೆಸರುಗಳಿಗಿಂತ ಆ ಬ್ಯಾಂಕು ಹೇಗೆ ನಡೆಯುವುದೆನ್ನುವುದು ಮುಖ್ಯವಾಗಿದೆ ಪ್ರಖ್ಯಾಲಂಕೃತ ಅಥವಾ ಬಿರುದಾಂಕಿತ ಮಹನೀಯರ ನಿಪುಣ ಆಡಳಿತದಾರಿಕೆಗೆ ಬದಲು ನಿಲಗಟ್ಟಲಾರರ ಈ ತತ್ವವನ್ನು ಅನುಸರಿಸಿ ಬ್ಯಾಂಕಿನ ಪ್ರಕಟಣೆಗಳಲ್ಲಿ ಕೆನರಾ ಬ್ಯಾಂಕಿನ ಡೈರೆಕ್ಟರರು ತಮ್ಮ ಹೆಸರನ್ನು ಉಪಯೋಗಿಸಲು ನಿರಾಕರಿಸಿರುವರ ಅವರ ದಿನದಿಂದ ದಿನಕ್ಕೆ ಕೆನರಾ ಬ್ಯಾಂಕನ್ನು ಸಮೃದ್ಧಿಗೊಳಿಸಿ ಉತ್ತಮಗೊಳ್ಳುವಂತೆ ಎಲ್ಲಾ ವಿಧದಿಂದಲೂ ತಮ್ಮ ಸರ್ವ ಶಕ್ತಿಯನ್ನು ಉಪಯೋಗಿಸುವರು ಆದರೆ ಈಗ ಒಮ್ಮೆ ನಮ್ಮ ಪದ್ಧತಿಯಲ್ಲಿ ಸ್ವಲ್ಪ ವ್ಯತ್ಯಾಸಗೊಳಿಸಿದರೆ ತಪ್ಪಾಗದೆಂದು ಎನಿಸುತ್ತದೆ ಯಾವ ಕಾಲದಲ್ಲಾಗಲೀ ಯಾವ ದೇಶದಲ್ಲಾಗಲೀ ಘಟನಾ ಸಮಿತಿಗಳ ವಿನಹ ನಡೆಯು ಘಟನೆಗಳು ನಡೆದಿದ್ದರೆ ಇಂದಿಗೆ ಪ್ರಪಂಚ ಚರಿತ್ರೆಯಲ್ಲಿ ಮೊದಲನೆಯದಾಗಿ ಒಂದು ಸಾಮ್ರಾಜ್ಯ ಶಕ್ತಿಯು ಭಾರತ ದೇಶದಲ್ಲಿ ತನ್ನ ಅಧಿಕಾರವನ್ನು ಬಿಟ್ಟುಕೊಡುತ್ತಲಿದೆ

ನಮ್ಮ ಕೆನರಾ ಬ್ಯಾಂಕಿನ ಒಂಭತ್ತು ಮಂದಿ ಡೈರೆಕ್ಟರರಲ್ಲಿ ಇಬ್ಬರು ನಮ್ಮ ದೇಶದ ಭಾವಿ ಘಟನಾ ಶಾಸನಗಳನ್ನು ರಚಿಸಲಿರುವ ಆ ಮಹಾ ಸಮಿತಿಗೆ ಚುನಾಯಿತರಾಗಿರುವ ವಿಷಯವು ಬೇಂಕಿನಲ್ಲಿ ಕಾರ್ಯನಿರತರಾಗಿರುವ ನಮಗೆ ಮಾತ್ರವಲ್ಲ ಸಕಲ ಠೇವಣಾತಿದಾರರು, ಗ್ರಾಹಕರು ಪಾಲುದಾರರು ಇವರಿಗೆಲ್ಲ ಅಭಿಮಾನಾಸ್ಪದವಾಗಿದೆ ಪಿ. ಎಸ್. ನಾಯಕ್, ಬಿ ಎ ಬಿ ಎಲ್ ಎಫ್ ಐ ಐ ಬಿ

ಜನರಲ್ ಮೆನೇಜರ್

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ: 1906)

ಮೂಲಧನ	ಕ್ಷೇಮ ನಿಧಿ
೨೮ ಲಕ್ಷ	೧೧ ಲಕ್ಷ

ವ್ಯವಹಾರದಲ್ಲಿದ್ದ ಜುಮ್ಲಾ ನಿಧಿ 5 ಕೋಟಿಗಿಂತಲೂ ಮೀರಿದೆ.

48 ಶಾಖೆಗಳು

ಮದರಾಸು	ಪೂನಾ
ಕೊಯಮುತ್ತೂರು	ನಾಗಪುರ
ಮಧುರೆ	ಅಮರಾವತಿ
ಸೇಲಮ್	ಅಕೋಲಾ
ಕಲ್ಲಿಕೋಟೆ	ತಿರುಚಿನಾಪಳ್ಳಿ
ಕೊಚ್ಚಿ	ತುತುಕುಡಿ
ಅಲಪ್ಪೆ	ಕರಾಚಿ
ಕ್ವಿಲೋನ್	ಮೈಸೂರು
ಸಿಕಂದರಾಬಾದು	ಬೆಂಗಳೂರು
ಶೋಲಾಪುರ	ದಾವಣಗೆರೆ
ಬೆಳಗಾಂವ್	ಶಿವಮೊಗ್ಗಾ
ಹುಬ್ಬಳ್ಳಿ	ಮಂಗಳೂರು ಮುಂತಾದುವು

ಮುಂಬಯಿ ಮತ್ತು ಅದರ ಸರಹದ್ದುಗಳಲ್ಲಿ ೭ ಶಾಖೆಗಳು

CANARA BANK LIMITED.

(Incorporated in British India. Liability of Members Ltd.)

ಒಬ್ಬ ವ್ಯಾಪಾರಿಗೆ ... ಪಾಠ

ಭಾರತ ಸಂಚಾರಕ್ಕೆ ಬಂದಿದ್ದ ಓರ್ವ ಐರೋಪ್ಯ ಮಹಿಳೆ ಕೆಲವು ದಿನಗಳ ಹಿಂದೆ ದಿಲ್ಲಿಯ ಓರ್ವ ಶ್ರೀಮಂತ ಹಿಂದೀಯ ವ್ಯಾಪಾರಿಗೆ ಯೋಗ್ಯ ರಾಷ್ಟ್ರಭಕ್ತಿಯ ಪಾಠ ಕಲಿಸಿದಳು.

ಕ್ರಿಸ್‌ಮಸ್ ಸಮಯದಲ್ಲಿ ಆ ಹಿಂದೀಯನ ವ್ಯಾಪಾರ ಸಂಸ್ಥೆಯು ಬ್ರಿಟಿಷ್ ಮತ್ತು ಇತರ ಪಾಶ್ಚಾತ್ಯ ಧ್ವಜಗಳಿಂದ ಶೃಂಗರಿಸಲ್ಪಟ್ಟಿತ್ತು. ಮೇಲ್ಕಂಡ ಲೇಡಿಯು ಅಂಗಡಿಯನ್ನು ಹೊಕ್ಕು ಹಿಂದೀ ರಾಷ್ಟ್ರೀಯ ಧ್ವಜವೊಂದು ಬೇಕೆಂದು ಕೇಳಿದಳು.

"ಕ್ಷಮಿಸಬೇಕು ನಾವದನ್ನು ಮಾರುವುದಿಲ್ಲ"ವೆಂಧ ವ್ಯಾಪಾರಿ.

"ಯಾಕೆ? ನೀವು ಭಾರತೀಯರಲ್ಲವೇನು?" ಎಂದು ಲೇಡಿ ಪ್ರಶ್ನಿಸಿದಳು.

"ಆದರೆ ನಾವು ಐರೋಪ್ಯ ಗಿರಾಕಿಗಳಿಗೆ ಮಾತ್ರ ಸರಬರಾಯಿ ಮಾಡುವವರು" ಎಂದವನು ತರ್ಕಿಸಿದ.

"ಹಾಗಾದರೆ ನಾನು ಐರೋಪ್ಯಳಲ್ಲವೆ?" ಎಂದು ಲೇಡಿ ಮರು ಪ್ರಶ್ನಿಸಿದಾಗ ವ್ಯಾಪಾರಿ ಸಪ್ಪಗಾದ. ಖಂಡಿತವಾಗಿ ಅವನು ನಾಚಿಗೆಯಿಂದ ತಲೆಬಗ್ಗಿಸದಿರಲಿಕ್ಕಿಲ್ಲ.

ಎಲ್ಲಾ ಐರೋಪ್ಯರೂ ಸಾಮ್ರಾಜ್ಯಶಾಹಿಯ ದೃಷ್ಟಿಯಿಂದಲೇ ನಿಸಾಹತು ಜನರನ್ನು ಕಾಣುವುದಿಲ್ಲವೆಂಬುದಕ್ಕೆ ಇದೊಂದು ಅಖಂಡ ನಿದರ್ಶನ. ಸುಸಂಸ್ಕೃತ ಮನೋವೈಶಾಲ್ಯತೆಯ ಬಿಳಿ ಜನರು ಜನರಲ್ ಸ್ಮಟ್ಸ್ ಇಲ್ಲವೆ ಚರ್ಚಿಲ್ ಮನೋಭಾವನೆಯವರಾಗಿರುವುದಿಲ್ಲ.

ವಿಮಾನ ವೇಗ

ಗಂಟೆಗೆ 770 ಮೈಲು ವೇಗದಲ್ಲಿ ಹಾರಲು ವಿಮಾನಗಳಿಗೆ ಸಾಧ್ಯವಿದೆಯೆ? ಈ ವಿಜ್ಞಾನಿಗಳು ನಿರಾಶೆಯನ್ನೇ ಸೂಚಿಸುತ್ತಾರೆ.

ವಿಮಾನ ಯಂತ್ರಗಳ ಶಬ್ದದಿಂದಾಗುವ ಕಂಪನವೇ ಅವರ ವೇಗಕ್ಕೊಂದು ಬಲವಾದ ತಡೆಯನ್ನುಂಟುಮಾಡುತ್ತದೆ. ಅಂತಹ ಕಂಪನದ 'ಗೋಡೆಯು' ವಿಮಾನದ ಮುಂದೆ ನಿಂತಿತಾಗಿ ಆ ಕ್ಷೇತ್ರದಲ್ಲಿ ಅದು ಬಂಧಾಕ್ಷಣ ಸುಚ್ಛ ನೂರಾಗುವುದೆಂದು ಪ್ರಯೋಗಗಳಿಂದ ತಿಳಿದು ಬಂದಿದೆ.

ಈ ಕಂಪನ ಗೋಡೆಯ ಗಂಡಾಂತರವು 600 ಮೈಲು ವೇಗದಲ್ಲೂ ಸಂಭವಿಸಬಹುದು. ಈ ವೇಗದಲ್ಲಿ ವಿಮಾನದ ಯಂತ್ರ ಇಲ್ಲವೆ ಅದರ ಹೊರಗೆ ತೆಗೆದ ಪೈಂಟ್ ಸಾರಣೆಯಲ್ಲಿರುವ ಅತಿ ಚಿಕ್ಕ ಬಿರುಕು ಕೂಡಾ ವಿಮಾನಕ್ಕೆ ಧಕ್ಕೆಯುಂಟುಮಾಡಬಹುದು.

ಆದರೆ ವಿಪರೀತ ವೇಗದಿಂದ ಈ ಕಂಪನ ಕ್ಷೇತ್ರವನ್ನು ನಿರಪಾಯವಾಗಿ ದಾಟಬಹುದೆಂದೂ ಕಂಡುಹಿಡಿಯಲಾಗಿದೆ. ಅಂತಹ ವಿಮಾನವನ್ನು ರೇಡಿಯೋ ನಿಯಂತ್ರಣದಿಂದಲೇ ಚಲಿಸಬೇಕು. ಜರ್ಮನರ ರೆಕ್ಕೆ ಬೋಂಬು ಒಂದು ನಿದರ್ಶನ. ಗುಂಡಿನಿಂದ ಹುರಿಸಲ್ಪಟ್ಟ ತೋಟಿ ಕಂಪನ ಕ್ಷೇತ್ರವನ್ನು ಹರಿದುಹೋಗುವುದು. ವಿಮಾನಗಳೂ ಅದೇ ರೀತಿ ಸುರುಳಿ ಸುತ್ತಿ ಧಾವಿಸುವಂತೆ ಮಾಡಬಹುದಾದರೂ ಗಂಡಾಂತರ ಕ್ಷೇತ್ರ ದಾಟುವಾಗ ಅವಕ್ಕೆ ಧಕ್ಕೆ ತಗಲುತ್ತದೋ ಇಲ್ಲವೊ ಎಂದು ಖಂಡಿತವಾಗಿ ಹೇಳಬರುವುದಿಲ್ಲ.

ಬರ್ಮಾದ ಗಾಂಧಿಯಾಗಲು ಯು ಸೊ ಪ್ರಯತ್ನ

"ಶಾಂತಿ ರಾಜ ಗಾಂಧಿ"

"ಇಂದಿನ ಜಗತ್ತಿನ ಸಂಕಷ್ಟಗಳ ಹೋರಿಯನ್ನೂ, ಮೋರಿಯನ್ನೂ, ಮತ್ತು ನಾಶನಷ್ಟಗಳನ್ನೂ ವಿಹಂಗಮವಾಗಿ ಅವಲೋಕಿಸುವಾಗ ಪೂರ್ವ ಬಂಗಾಲದ ಧೂಳು ಮಾರ್ಗದಲ್ಲಿ ಸಂಚರಿಸುವ ಗಾಂಧಿಯವರು 'ಶಾಂತಿ ರಾಜ'ನಂತೆಯೂ 'ಭಾರತೋದ್ಧಾರಕ'ನಂತೆಯೂ ತೋರುವರು" ಹೀಗೆಂದು ಬರ್ಮನ ಮಾಜಿ ಪ್ರಧಾನರೂ, ಯುದ್ಧ ಕಾಲದ ಬ್ರಿಟಿಷ್ ಕೈದಿಗಳೂ ಆದ ಯು ಸೊ ಅವರು ಉದ್ಗರಿಸಿದರು.

"ಆಸ್ಯದ ಇರ್ವ ಮಹಾ ಶ್ರೇಷ್ಠರ ಕುರಿತು ನಾವು ತುಂಬಾ ಅಭಿಮಾನ ತಾಳುತ್ತೇವೆ—ಭಾರತದ ಗಾಂಧಿ ಮತ್ತು ಚೀನದ ಚೇಂಗ್ ಕೈಶೇಕ್. ಆಸ್ಯದವರಾದ ನಾವು ಜಗತ್ತಿಗೆ ಧೈರ್ಯದಿಂದ 'ಇದೊ ಆಸ್ಯವು ಇಂತಹ ಮಹಾವ್ಯಕ್ತಿಗಳನ್ನು ಸೃಷ್ಟಿಸಿದೆ' ಎಂದು ಬೆಟ್ಟು ತೋರಿಸಿ ಹೇಳಬಹುದು.

"ಗಾಂಧೀಜಿಯವರ ಮಾನಸಿಕ ಸ್ಥಿರತೆ, ಅವರ ಸ್ವನಿರ್ಣಯ ಶಕ್ತಿ, ಅವರ ತರ್ಕಸರಣೆಯ ಶೈಲಿ, ಹೃತ್ಪೂರ್ವಕತೆ ಮತ್ತು ವಿಚಾರ ವಿವೇಕಗಳು ನನ್ನಲ್ಲಿ ರಾಜಕೀಯ ಮುತ್ಸದಿಯಾಗುವಂತೆ ಸ್ಫೂರ್ತಿಯನ್ನುಂಟುಮಾಡಿದುವು.

ಅವರಿಗೆ ಸಮಾನರಿಲ್ಲ

"ನಾನು ಬರ್ಮಾದ ಗಾಂಧಿಯಾಗಲು ಸದಾ ಪ್ರಯತ್ನಪಡುತ್ತೇನೆ. ಆದರೆ ನನ್ನ ಪ್ರಯತ್ನವು ಅಯಶಸ್ವಿಯಾಗಿದೆ ಎಂದು ಹೇಳಲಂಜುವುದಿಲ್ಲ. ಅದ್ಯಾವ ಬರ್ಮೀಯನಾಗಲಿ, ಹಿಂದೀಯನಾಗಲಿ ಅಥವಾ ಜಗತ್ತಿನ ಇನ್ನಾವ ವ್ಯಕ್ತಿಯೇ ಆಗಲಿ ಗಾಂಧಿಯಂತಾಗಲು ಸಾಧ್ಯವೇ ಇಲ್ಲ.

"1921ರ ವಿಶೇಷ ಕೊಂಗ್ರೆಸ್ ಅಧಿವೇಶನದಲ್ಲಿ ಗಾಂಧಿಯವರು ಅದೆಂತಹ ತರ್ಕಶಕ್ತಿಯಿಂದ ಅಹಿಂಸಾತ್ಮಕ ಅಸಹಕಾರದ ತಮ್ಮ ವಿಧಾನವನ್ನು ಕೈಕೊಳ್ಳಬೇಕೆಂದು ಯಶಸ್ವಿಯಾಗಿ ವಾದಿಸಿದುದನ್ನು ನಾನೀಗಲೂ ಸ್ಮರಿಸಿಕೊಳ್ಳುತ್ತೇನೆ.

"ತಮ್ಮ ಜೀವಮಾನವನ್ನೆಲ್ಲ ಯಾವ ಪವಿತ್ರ ಧ್ಯೇಯ ಸಾಧನೆಗಾಗಿ ಅವರು ಸವೆದರೊ ಅದನ್ನು ಕಣ್ಣಾರೆ ನೋಡಲು ಬದುಕುವಂತೆ ಅವರು ದೀರ್ಘಾಯುಗಳಾಗಲೆಂದೇ ನನ್ನ ಪ್ರಾರ್ಥನೆ." ಹೀಗೆಂದು ಯು ಸೊ ಅವರು ಮುಗಿಸುತ್ತಾರೆ.

ಗಫೂರ್ ಖಾನರು ಗಾಂಧಿ ತತ್ವಾನುಯಾಯಿಯಾಗಿ ಗಡಿನಾಡು ಗಾಂಧಿ ಎನಿಸಿದರು. ರಾಜಾಜಿ ದಕ್ಷಿಣದ ಗಾಂಧಿ, ಶಂಕರರಾವ್ ದೇವರು ಮಹಾರಾಷ್ಟ್ರದ ಗಾಂಧಿ, ಪ್ರಫುಲ್ಲ ಚಂದ್ರ ಘೋಷರು ಬಂಗಾಲದ ಗಾಂಧಿಯೆನಿಸಿಕೊಳ್ಳುತ್ತಾರೆ. ಯುಸೊ ಅವರು ಬರ್ಮಾದ ಗಾಂಧಿಯೆನಿಸಿಕೊಂಡರೆ ಅತ್ಯಂತ ಸಂತೋಷದ ವಿಷಯ.



ಕಿರುಸುದ್ದಿ ಸಂಗ್ರಹ

ವಜ್ರವನ್ನು ವಜ್ರದಿಂದಲೇ ಕಡಿದು ಬೇಕಾದ ಆಕೃತಿಯುಂಟುಮಾಡುವುದು ಇದುವರೆಗಿನ ರೂಢಿ. ಆದರೆ ರಶ್ಯನ್ ವಿಜ್ಞಾನಿಗಳು ವಿದ್ಯುಚ್ಛಕ್ತಿಯಿಂದ ವಜ್ರ ಕೆತ್ತುವ ವಿಧಾನವನ್ನು ಈಚೆಗೆ ಪರಿಪೂರ್ಣಗೊಳಿಸಿರುವರು.

★

ಕೆಲವು ವರ್ಷಗಳ ಹಿಂದೆ ಓರ್ವ ಐರೋಪ್ಯ ಶ್ರೀಮಂತನು ತನ್ನ ಮರಣ ಶಾಸನದಲ್ಲಿ ತನ್ನ ಸಂಪತ್ತನ್ನೆಲ್ಲ ಮಗನಿಗೆ ಸಿಗುವಂತೆ ಬರೆದು 'ಆದರೆ ಅವನು ಎಂದಾದರೂ ವರ್ತಮಾನ ಪತ್ರಿಕೆಯೋದಿದನ್ನು ನೋಡಿದರೆ ಅವನಿಗೊಂದು ಚಿಕ್ಕಾಸೂ ಕೊಡಬಾರದು' ಎಂದು ಶರ್ತ ಹಾಕಿದ್ದನಂತೆ. ಅಮೇರಿಕದ ಮೆಸೆಚುಸೆಟ್ಸ್ ಪ್ರಾಂತ್ಯದ ವೂರ್ಸೆಸ್ಟರ್ ಎಂಬಲ್ಲಿನ ಕ್ಷೌರಿಕನೊಬ್ಬನು ತನ್ನ ಹೆಂಡತಿಯ ಹೆಸರಲ್ಲಿ ಕೇವಲ ಒಂದು ಡೊಲರ್ ಬರೆದು "ಇದರಿಂದ ಅವಳು ವಿಷ ತೆಗೆದುಕೊಳ್ಳಬೇಕು" ಎಂದು ನಿರ್ದೇಶಿಸಿದ್ದು ಉಯಿಲುಗಳಲ್ಲಿ ವಿಚಿತ್ರವಾದುದು.

★

1926ರ ದಶಂಬರ 3ರಂದು ಫಿರೋಜ್‌ಪುರದ ಒಂದು ಗಿರಣಿಯವರು ಕರಾಚಿಯ ಒಂದು ಕಂಪೆನಿಗೆ ಬರೆದ ಕಾಗದವು ಈಗೆರಡು ದಶಮಾನಗಳ ನಂತರ ಸಾಬಿತಾಗಿ ವಿಳಾಸದಾರರು ಇಲ್ಲವೆಂದು ವಾಪಾಸು ಬಂದಿರುತ್ತವೆ. ಇದೊಂದು ಅದ್ವಿತೀಯ ದಾಖಲೆಯಾಗಬಹುದು.

★

ಯುದ್ಧಕ್ಕೆ ಮುಂಚೆ ಜಗತ್ತಿನಲ್ಲಿ ವರ್ಷಕ್ಕೆ 20 ಕೋಟಿ ಟಿನ್‌ಗಳಷ್ಟು ಕಾಗದ ಖರ್ಚಾಗುತಿತ್ತು.

★

ವಿಜಾಪೂರ್ ತಾಲೂಕಿನ ಅರ್ಜಣಗಿ ಗ್ರಾಮದಲ್ಲಿ ಹುಲೆಪ್ಪಾ ಭೀಮಪ್ಪಾ ನಾದರ ಈತನ ಮಗಳು ಭಾಗವ್ವಾ ಎಂಬ 8 ವರ್ಷದ ಹುಡುಗಿಯು 6 ಆ ತಿಂಗಳ ಗರ್ಭಿಣಿ ಇರುವಳೆಂಬ ಸುದ್ದಿ ಹರಡಿದೆ. ಸುತ್ತಲಿನ ಹಳ್ಳಿಯ ಜನರು ಬಾಲಿಕೆಯನ್ನು ನೋಡಿ ಹೋಗುತ್ತಿರುವರಂತೆ.

★

ನೀವು ಲಂಡನಿಗೆ ಹೋದಾಗ ನಿಮ್ಮ ಗಡಿಯಾರದ ಸಮಯವನ್ನು ಸರಿಮಾಡಿಕೊಳ್ಳಬೇಕಾದರೆ ಅಲ್ಲಿಯ ಟೆಲಿಫೋನಿನಲ್ಲಿ ವಿಚಾರಿಸಿದರೆ ಟೆಲಿಫೋನ್ ಕಛೇರಿಯಲ್ಲಿನ 'ಮಾತಾಡುವ ಗಡಿಯಾರವು' ನಿಮಗೆ ಸರಿಯಾದ ಸಮಯ ತಿಳಿಸುವುದು, ವಾರಕ್ಕೆ 50 ಕೋಟಿ ಸಲ ಅದು ಸಮಯ ಹೇಳುವ ಕೆಲಸ ಮಾಡುತ್ತದೆಯಂತೆ.

★

ಜಗತ್ತಿನ ಜನಸಂಖ್ಯೆ 200 ಕೋಟಿ. ನಿತ್ಯ $1\frac{1}{4}$ ಲಕ್ಷ ಸಾಯುತ್ತಾರೆ. ಅಷ್ಟೆ ಸಂಖ್ಯೆಯ ಜನನಗಳಾಗುತ್ತವೆ. ಎಟಂ ಬೋಂಬಿನಿಂದ ನಗಸಾಕಿ ಹಿರೋಶಿಮಾಗಳಲ್ಲಿ ಒಂದು ಕ್ಷಣದಲ್ಲಿ ಸುಮಾರು 1 ಲಕ್ಷ ಜನ ಸತ್ತರು. ಹೀಗೆ ಕೇವಲ 3 ಗಂಟೆಗಳಲ್ಲಿ ಮಾನವ ಕೋಟಿಯನ್ನೆಲ್ಲ ನಾಶಮಾಡಬಹುದು.

ಮಂಗಳೂರು

ದೇಶಭಕ್ತರ ದಿನಾಚರಣೆ: ದಿವಂಗತ ದೇಶಭಕ್ತ ಕಾರ್ನಾಡ್ ಸದಾಶಿವ ರಾಯರ ಪುಣ್ಯ ದಿನಾಚರಣೆಯು ತಾ ೯ರಲ್ಲಿ "ಜೈಹಿಂದ್ ಯುವಕ ಮಂಡಲಿ, "ಕೊಡಿಯಾಲ ಬೈಲು" ಇವರಿಂದ ಜರಗಿತು. ಬೆಳಿಗ್ಗೆ ಪ್ರಭಾತಫೇರಿಯು ಇತ್ತು. ಅಂದು ಸಾಯಂಕಾಲ ಕೊಡಿಯಾಲ ಬೈಲು ಶ್ರೀ ದೇವುಸೆಟ್ರ ಮೈದಾನಿನಲ್ಲಿ ಶ್ರೀ. ಕೆ. ಪಿ ಶೆಣೆಯವರ ಅಧ್ಯಕ್ಷತೆಯಲ್ಲಿ ಸಭೆಸೇರಿತು ಶ್ರೀ ಬಿ. ಎಸ್. ಭಾಸ್ಕರ ರೈ ಅವರೂ ಶ್ರೀ ದುಗ್ಗಪ್ಪ ಸುವರ್ಣರೂ ಶ್ರೀ ಲೋಕಯ್ಯ ಸೆಟ್ಟರೂ ದಿವಂಗತರ ಜೀವನ ಚರಿತ್ರದ ಕುರಿತು ಭಾಷಣ ಮಾಡಿದರು. ಯುವಕ ಮಂಡಳಿಯ ವಾಚನಾಲಯಕ್ಕೆ 'ಕಾರ್ನಾಡ್ ಸದಾಶಿವ ರಾವ್ ವಾಚನಾಲಯು'ವೆಂದು ಹೆಸರಿಡಬೇಕಾಗಿಯೂ ನಿರ್ಣಯಿಸಲಾಯಿತು.

ಶೋಚನೀಯ ಮರಣ: ರಥಬೀದಿಯಲ್ಲಿ ಕಂಚು ಹಿತ್ತಾಳೆ ಪಾತ್ರೆಗಳ ವ್ಯಾಪಾರಿಗಳಾಗಿದ್ದ ಉಡುಪಿಯ ಶ್ರೀ ಕಲ್ಯಂಜೆ ವ್ಯಾಸಾರಾಯಾಚಾರ್ಯರ ಪುತ್ರ ಶ್ರೀ ಲಕ್ಷ್ಮೀನಾರಾಯಣಾಚಾರ್ಯ ಕಲ್ಯಂಜೆಯವರು ತಾ ೧೦ನೇ ಸಾಯಂಕಾಲ ಮೋಟಾರ್ ಸ್ಯಾಕಲಿನಲ್ಲಿ ಹೋಗುತಿದ್ದಾಗ ಇವರ ವಾಹನವೂ ಮತ್ತೊಂದು ಮೋಟಾರು ಕಾರೂ ಪರಸ್ಪರ ಡಿಕ್ಕಿ ಒಡೆದು ಶ್ರೀ ಕಲ್ಯಂಜೆಯವರಿಗೆ ತನ್ಮೂಲಕ ಉಂಟಾದ ಘಾಯಗಳು ಮರಣಾಂತಿಕವಾದುವೆಂದು ತಿಳಿಸಲು ವಿಷಾದಿಸುತ್ತೇವೆ ಮುಖ್ಯವಾಗಿ ರುಂಡಭಾಗವು ಭೀಕರವಾಗಿ ಘಾತಕ್ಕೊಳಗಾದುದರಿಂದ ಆಸ್ಪತ್ರೆಯ ವೈದ್ಯತಜ್ಞರ ಅವಿಶ್ರಾಂತ ಶ್ರಮಗಳು ಫಲಕಾರಿಯಾಗದೆ ಶ್ರೀಯುತರು ಅಂದೇ ರಾತ್ರೆ 12 ಗಂಟೆ ಸುಮಾರಿಗೆ ಮೃತಿಯನ್ನೈದಿದರು. ಮೃತರು ತರುಣಪ್ರಾಯದವರಾಗಿದ್ದು ಶೋಕಿತ ತಂದೆಗೆ ಏಕಮಾತ್ರ ಪುತ್ರರಾಗಿದ್ದರು ತಮ್ಮ ವ್ಯಾಪಾರ ವಹಿವಾಟುಗಳಲ್ಲಿ ಅಸಾಧಾರಣ ಕುಶಲತೆಯನ್ನು ತೋರ್ಪಡಿಸಿ ಜನಪ್ರಿಯರಾಗಿದ್ದರು. ಅವರ ಆಕಸ್ಮಿಕ ಅಂತ್ಯವು ಜಿಲ್ಲೆಯ ಅನೇಕರಲ್ಲಿ ಬೆರಗಿನ ಸಂತಾಪವನ್ನುಂಟುಮಾಡಿದೆ ಅವರ ಆತ್ಮಕ್ಕೆ ಶಾಂತಿಯನ್ನು ಶೋಕಿತ ಕುಟುಂಬಕ್ಕೆ ಸಮಾಧಾನವನ್ನೂ ಕೋರುತ್ತೇವೆ

ಖನಿಜ ಸಂಪತ್ತು ಶೋಧಕರು: ಮದ್ರಾಸ್ ಸರಕಾರದ ಸಹಾಯಕ ಭೂಗರ್ಭ ಪರಿಶೀಲನಾಧಿಕಾರಿಗಳ ನಮ್ಮ ಜಿಲ್ಲೆಯನ್ನು ಸಂಚರಿಸುತ್ತಲಿದ್ದಾರೆ ನಮ್ಮ ಜಿಲ್ಲೆಯೊಳಗಿನ ಖನಿಜ ಸಂಪತ್ತುಳ್ಳ ಸ್ಥಳಗಳ ಪರಿಶೀಲನೆ ನಡೆಸುವುದು ಅವರ ಉದ್ದೇಶವಿರುತ್ತದೆ

ಈ ಜಿಲ್ಲೆಯ ಯಾವ ಯಾವ ಪ್ರದೇಶದಲ್ಲಿ ಎಂತೆಂತಹ ಲೋಹಧಾತುಗಳು ಮತ್ತಿತರ ಖನಿಜ ವಸ್ತುಗಳು ದೊರೆಯುತ್ತವೆಂದು ನಿರ್ದಿಷ್ಟವಾಗಿ ತಿಳಿಯದಿದ್ದರೆ ವ್ಯಥಾ ಕಾಲಹರಣವಾಗಬಹುದಾದರಿಂದ ಆ ಕುರಿತು ಮಾಹಿತಿಯುಳ್ಳ ಗೃಹಸ್ಥರು ತಮ್ಮ ಅನುಭವವನ್ನು ದಯವಿಟ್ಟು ಇಲ್ಲಿಯ ಬಂದರದಲ್ಲಿರುವ ಕೆನರಾ ಚೇಂಬರ್ ಆಫ್ ಕೊಮರ್ಸ್ ಆಫೀಸಿನಲ್ಲಿ ತಿಳಿಸಬೇಕಾಗಿ ಸದ್ರಿ ಚೇಂಬರಿನ ಕಾರ್ಯದರ್ಶಿಗಳು ವಿನಂತಿಸಿಕೊಳ್ಳುತ್ತಾರೆ ಈ ವಿವರಗಳನ್ನು ಅತೀ ಶೀಘ್ರದಲ್ಲಿ ತಿಳಿಸಿದರೆ ತುಂಬಾ ಸಹಾಯವಾಗುತ್ತಿತ್ತೆಂದೂ ಕೇಳಿಕೊಳ್ಳಲಾಗಿದೆ

ದಾಸ ಸಾಹಿತ್ಯ: ಇಲ್ಲಿಯ ಸೈಂಟ್ ಎಲೋಸಿಯಸ್ ಕೋಲೇಜ್ ಯುನಿಯನಿನ ಆಶ್ರಯದಲ್ಲಿ ಶ್ರೀ ಬೇಲೂರ ಕೇಶವದಾಸರು ದಾಸಸಾಹಿತ್ಯದ ಕುರಿತು ಸಾರಸ್ಯಪರವಾದ ಭಾಷಣವನ್ನಿತ್ತರು. ಶ್ರೀ ಸಿಡ್ಲೋಡಿ ಅನಂತ ಉಪಾಧ್ಯಾಯರು ಅಧ್ಯಕ್ಷತೆ ವಹಿಸಿದರು

ಭಾಷಣ: ಥಿಯಾಸೊಫಿಕಲ್ ಲಾಜಿನಲ್ಲಿ ಮೊನ್ನೆ ಬೆಂಗಳೂರು ಸೆಂಟ್ರಲ್ ಕೋಲೇಜಿನ ರಸಾಯನ ಶಾಸ್ತ್ರಾಧ್ಯಾಪಕರಾದ ಪ್ರೊಫೆಸರರು ವಾಲ್ಮೀಕಿ ರಾಮಾಯಣದೊಳಗಿನ ಸೀತೆ ಎಂಬ ವಿಷಯದ ಕುರಿತು ವಿಚಾರಪರ ಭಾಷಣವನ್ನಿತ್ತರು.

ಕದ್ರಿ ಜಾತ್ರೆ: ತಾ. 14ರಂದು ಇಲ್ಲಿಯ ಕದ್ರಿ ಶ್ರೀ ಮಂಜುನಾಥ ದೇವಸ್ಥಾನದ ಮಕರ ಸಂಕ್ರಾಂತಿ ಉತ್ಸವಾರಂಭವಾಗಿದೆ. ಅಂದು ಧ್ವಜಾರೋಹಣವಾಯಿತು. ತಾ. 21ರಂದು ರಥೋತ್ಸವ ಮರುದಿನ ಅವಭೃತ ಸ್ನಾನಗಳೊಂದಿಗೆ ಉತ್ಸವಗಳು ಕೊನೆಗೊಳ್ಳುವವು.

ಜಿಲ್ಲಾ ಪರಿಚಯ

೩

ವಿದ್ಯಾರ್ಥಿ ಅಧ್ಯಾಪಕ ಸಂಘ: ಸೆಕಂಡರಿ ಗ್ರೇಡ್ ವಿದ್ಯಾರ್ಥಿ ಅಧ್ಯಾಪಕ ಸಂಘ ಗವರ್ನಮೆಂಟ್ ಕೋಲೇಜ್ ಇದರ ಆಶ್ರಯದಲ್ಲಿ ಪಿ। ಅಮದ್, ಬಿ ಎ ಬಿ ಎಲ್. ಅವರು 'ಶಿಕ್ಷಣ ಧ್ಯೇಯ' ಎಂಬ ವಿಷಯದ ಕುರಿತು ಬೋಧಪರ ಭಾಷಣವಿತ್ತರು

ತೆಂಗಿನೆಣ್ಣೆ: ಈ ತೈಲ್ಯದ ಅಭಾವವು ತೀವ್ರವಾಗಿದೆ ನಗರದ ಎರಡು ಮಿಲ್ಲುಗಳಲ್ಲಿ ಅಲ್ಪಸ್ವಲ್ಪ ಪ್ರಮಾಣದ ಎಣ್ಣೆಯು ಕೆಲವು ದಿವಸಗಳಿಗೊಮ್ಮೆ ಸಾರ್ವಜನಿಕಕ್ಕೆ ಮಾರಲ್ಪಡುತ್ತದೆ ನಾಗರೀಕರು ವನಸ್ಪತಿ ತಯಾರಿಕೆಗಳನ್ನು ಉಪಯೋಗಿಸಹತ್ತಿದ್ದಾರೆ ಕ್ಲಪ್ತಕಾಲದಲ್ಲಿ ಅಧಿಕಾರಿಗಳು ತೆಂಗಿನೆಣ್ಣೆ ಸರಬರಾಯಿಯ ವ್ಯವಸ್ಥೆ ಮಾಡದಿದ್ದರೆ ಜನತೆಯ ಆರೋಗ್ಯಕ್ಕೆ ತುಂಬಾ ಗಂಡಾಂತರವುಂಟಾಗಬಹುದು ಆಗಲೇ ಮದ್ರಾಸ್ ಸರಕಾರದವರು ಪ್ರಮುಖ ಕೊಬ್ರಿ ಮತ್ತು ಎಣ್ಣೆ ವ್ಯಾಪಾರಿಗಳನ್ನು ಕರೆಸಿ ಪರ್ಯಾಲೋಚನೆ ನಡೆಸಿರುವರಾಗಿ ತಿಳಿದುಬರುತ್ತದೆ ವಿಳಂಬವಿಲ್ಲದೆ ಎಣ್ಣೆ ಪೂರೈಕೆಯ ಏರ್ಪಾಡು ನಡೆಯಬೇಕಾದುದು ಅತ್ಯಾವಶ್ಯಕ ಕಾಳಸರಣವು ಕಪ್ಪು ಸಂತೆಗೂ ಇನ್ನಿತರ ಅನೀತಿ ವ್ಯವಹಾರಕ್ಕೆ ಹೆಚ್ಚಿನ ಆಸ್ಪದ ಪ್ರೋತ್ಸಾಹ ಕೊಟ್ಟಂತಾದೀತು

ನಗರಾರೋಗ್ಯ: ಹಾವಳಿಗೈಯುವ ಸಾಂಕ್ರಾಮಿಕಗಳ ಸುದ್ದಿ ಕೇಳಿ ಬರುವುದಿಲ್ಲ ನಿರಪಾಯಕ ಇಲಿ ಪೀಳೋಣವು ಕೆಲವು ಕಡೆ ಉಂಟಾಗಿವೆ ಎಂದು ತಿಳಿದುಬರುತ್ತದೆ ನಗರಾರೋಗ್ಯ ಇಲಾಖೆಯವರು ಮೂಷಿಕ ನಾಶದ ಕಾರ್ಯಕ್ರಮವನ್ನು ಭರದಿಂದ ಸಾಗಿಸುತ್ತಿರುವರು ಬಿಲಗಳನ್ನು ಮುಚ್ಚುವುದು ಗ್ಯಾಸ್ ಪ್ರಯೋಗಗಳು ನಡೆಯುತ್ತಿವೆ ಹೆಲ್ತ್ ಆಫೀಸರರು ಮುತುವರ್ಜಿಯಿಂದ ನಿರ್ಮೂಲತೆಯ ಏರ್ಪಾಡುಗಳ ಪರಿಶೀಲನೆ ಪ್ರತ್ಯಕ್ಷವಾ ಮಾಡುತ್ತಿರುವರು

ಈ ಸಂದರ್ಭದಲ್ಲಿ ಬಹುಕಾಲದಿಂದ ನಾಗರೀಕರು ಹಾರೈಸಿಕೊಂಡಿರುವ ಮಾರ್ಗ ನೀರಿನ ವ್ಯವಸ್ಥೆಯ ಕಡೆಗೆ ಆರೋಗ್ಯಾಧಿಕಾರಿಗಳ ಯೋಗ್ಯ ಗಮನ [illegible]ವರೆಂದು ನಿರೀಕ್ಷಿಸಲಾಗಿದೆ ಹೆಚ್ಚಿನ ವಾಹನ ಸಂಚಾರದಿಂದ ದೂಳಿನ [illegible] ಕಾಟವೂ ಬಲವಾಗಿದೆ.

ನಗರದಲ್ಲಿ ಆನೆಕಾಲಿನ ಜಾಢ್ಯವು ವರ್ಷಹೊಂದಂತೆ ವೃದ್ಧಿಯಾಗುತ್ತಿದೆ ಎಂದು ಮಾರ್ಗಗಳಲ್ಲಿ ಹೆಚ್ಚೆಚ್ಚು ಕಾಣಸಿಗುವ ನಿದರ್ಶನಗಳಿಂದ ತಿಳಿಯುವುದು ಆ ಕುರಿತು ನಗರಸಭೆಯವರು ಮಾತ್ರವಲ್ಲ ಮದ್ರಾಸ್ ಮತ್ತು ಕೇಂದ್ರ ಸರಕಾರದವರೂ ಗಂಭೀರವಾಗಿ ಯೋಚಿಸಬೇಕಾಗಿದೆ

ವಾಣಿಜ್ಯ ನೌಕರರ ಸಂಘ: ಕಳೆದ ತಾ 2ರಂದು ದ ಕ ವಾಣಿಜ್ಯ ನೌಕರರ ಸಂಘದ ಕಾರ್ಯಕಾರಿ ಸಮಿತಿ ಮತ್ತು ಮರ್ಕೆಂಟೈಲ್ ಎಂಪ್ಲೊಯಿಸ್ ಎಸೋಸಿಯೇಶನ್ ಮಂಗಳೂರು ಇದರ ತಾತ್ಕಾಲಿಕ ಸಮಿತಿಗಳವರು ಒಟ್ಟುಗೂಡಿ ಸಭೆಸೇರಿ ವಾಣಿಜ್ಯ ನೌಕರರು ಒಂದೇ ಸಂಘದಲ್ಲಿ ಒಟ್ಟುಗೂಡಬೇಕಾಗಿ ಉದ್ದೇಶವಿಟ್ಟದರಿಂದ ಮರ್ಕೆಂಟೈಲ್ ಎಸೋಸಿಯೇಶನಿನವರೆಲ್ಲರೂ ದ ಕ ವಾಣಿಜ್ಯ ನೌಕರರ ಸಂಘವನ್ನೇ ಸೇರುವುದೆಂದು ಸರ್ವಾನುಮತದಿಂದ ಮಂಜೂರಾಯಿತು

ಬರುವ ತಾ 18-1-47 ಮತ್ತು 19-1 47 ರ ಎರಡು ದಿನಗಳಲ್ಲಿ ಮದ್ರಾಸು ಪ್ರಾಂತೀಯ ವಾಣಿಜ್ಯ ನೌಕರರ ಪರಿಷತ್ತು ಜರಗುವುದು. ಮಾನ್ಯ ಮಜೂರ ಮಂತ್ರಿ ಶ್ರೀ ವಿ ವಿ. ಗಿರಿಯವರು ಉದ್ಘಾಟಿಸುವರು ಮುಂಬಯಿಯ ವಾಣಿಜ್ಯ ನೌಕರರ ಮುಂದಾಳುಗಳಾದ ಶ್ರೀ ಜೆ. ಮೇಥಾ ಬಿ, ಎ ಬಾರೆಟ್‌ಲಾ ಅವರು ಅಧ್ಯಕ್ಷತೆ ವಹಿಸುವರು ದ ಕನ್ನಡದಿಂದ ಸದ್ರಿ ಪರಿಷತ್ತಿಗೆ ಪ್ರತಿನಿಧಿಗಳಾಗಿ ಶ್ರೀ ಟಿ. ರಾಮರಾಯರೂ, ಶ್ರೀ. ಆರ್. ಅಣ್ಣಾಜಿ ರಾಯರೂ ನಿಯೋಗಿಸಲ್ಪಟ್ಟಿರುವರು,

ಬಾಲಹತ್ಯ: ಇಲ್ಲಿಯ ಬಿಕರ್ನಕಟ್ಟೆ ಪದವಿನಲ್ಲಿ ಹಿಂದು ಭೀಕರ ಬಾಲಹತ್ಯಾ ಪ್ರಕರಣದ ಸುದ್ದಿ ಇದೆ, ಮೈಮೇಲೆ ಚಿನ್ನಾಭರಣಗಳಿದ್ದ ಒಂದು ಗೌಡಸಾರಸ್ವತ ಜಾತಿಯ ಶಾಲೆಗೆ ಹೋಗಿಬರುತಿದ್ದ ಮಗುವನ್ನು ರೋಮನ್ ಕೆಥೋಲಿಕನೊಬ್ಬನು ತಿಂಡಿಕೊಡುವೆನೆಂದು ಪುಸಲಾಯಿಸಿ ಸಮೀಪದ ಪೊದರು ಪ್ರದೇಶದಲ್ಲಿ ಹತ್ಯೆಮಾಡಿ ಅಭರಣಗಳನ್ನು ಅಪಹರಿಸಿದನೆಂದೂ, ದೂರದ ಮರದಲ್ಲಿ ಕೂತಿದ್ದ ಓರ್ವ ಮಜೂರಿ ಹುಡುಗನು ನಡುಮಧ್ಯಾಹ್ನದಲ್ಲಿ ಜರುಗಿದ ಈ ಕೊಲೆಯನ್ನು ನೋಡಿ ಪೇಟೆಯಲ್ಲಿ ಕೊಲೆಗಡುಕನ ರೂಪ ವರ್ಣನೆಯನ್ನು ತಿಳಿಸುತ್ತಲೆ ಪೋಲೀಸ ತನಿಖೆಯಾಗಿ ಸಾಯಂಕಾಲದ ಹೊತ್ತಿಗೆ ಹತ್ತಿರದ ಶೇಂದಿ ಗಡಂಗಿನಲ್ಲಿ ಆರೋಪಿಯು ಸಿಕ್ಕಿದನೆಂತಲೂ, ಅವನ ಬಳಿ ಸೊತ್ತುಗಳು ಸಿಕ್ಕಿದ್ದು ಈಗವನು ಪೋಲೀಸ್ ಕೈದಿಗೊಳಗಾಗಿರುವನೆಂದು ತಿಳಿದುಬರುತ್ತದೆ

ಕೃಷ್ಯುತ್ಪನ್ನದ ಆದಾಯ ತೆರಿಗೆ: ಈ ಸಂಬಂಧವಾದ ಮದ್ರಾಸ್ ಸರಕಾರದ ಒಂದು ಮಸೂದೆ ತಯಾರಾಗಿ ಅದರ ವಿವರಗಳೀಗ ಪ್ರಕಟವಾಗಿವೆ ಮದ್ಯದ ನಿರೋಧದಿಂದ ಉಂಟಾದ ನಷ್ಟವನ್ನು ತುಂಬಿಕೊಳ್ಳುವದೇ ಇದರ ಮುಖ್ಯೋದ್ದೇಶ ಬೇಸಾಯದ ಖರ್ಚು, ತೀರ್ವೆಗೇಣಿ, ಸಾಲದ ಬಡ್ಡಿ ವಿಮೆಯ ಪ್ರೀಮಿಯಮ್ ಇವನ್ನು ಕಳೆದು ಉಳಿದ ಉತ್ಪತ್ತಿಯ ಮೇಲೆ ಈ ತೆರಿಗೆ ಹೀಗಿದೆ – ಮೊದಲಿನ ಒಟ್ಟು ಉತ್ಪತ್ತಿಯ ರೂ ೭೫೦೦ ಮೇಲೆ ತೆರಿಗೆ ಇಲ್ಲ, ಅನಂತರದ ರೂ ೪೫೦೦ರ ಒಟ್ಟು ಉತ್ಪತ್ತಿಯ ಮೇಲೆ ರೂಪಾಯಿಗೆ ೯ ಪೈ ಅನಂತರ ರೂ ೫ ಸಾವಿರದ ಒಟ್ಟು ಉತ್ಪತ್ತಿಯ ಮೇಲೆ ರೂಪಾಯಿಗೆ ೧ ಆಣೆ ಅನಂತರದ ರೂ ೫ ಸಾವಿರದ ಒಟ್ಟು ಉತ್ಪತ್ತಿಯ ಮೇಲೆ ರೂಪಾಯಿಗೆ ಒಂದಾಣೆ ಆರು ಪೈ ಅನಂತರ ರೂ ೫ ಸಾವಿರದ ಒಟ್ಟು ಉತ್ಪತ್ತಿಯ ಮೇಲೆ ರೂಪಾಯಿಗೆ ಎರಡಾಣೆ, ಅನಂತರದ ರೂ ೪೦ ಸಾವಿರದ ಒಟ್ಟು ಉತ್ಪತ್ತಿಯ ಮೇಲೆ ರೂಪಾಯಿಗೆ ಮೂರಾಣೆ ಒಟ್ಟು ಕೃಷ್ಯುತ್ಪತ್ತಿಯ ಆದಾಯದ ಶಿಲ್ಕಿನ ಮೇಲೆ ರೂಪಾಯಿಗೆ ೪ ಆಣೆ

ಪುಸ್ತಕ ವಿಮರ್ಶೆ

ಭಗ್ನಮಂದಿರ

ಲೇಖಕರು "ಹೇಮಂತ"

ಪ್ರಕಾಶಕರು ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ ಬೆಲೆ 4–8 0.

ಇದೊಂದು ಸ್ವತಂತ್ರ ಸಾಮಾಜಿಕ ಕಾದಂಬರಿ ಶೀಲೆಯೆಂಬೋರ್ವ ಸುಶಿಕ್ಷಿತ ತರುಣಿಯು ಶ್ಯಾಮನೆಂಬ ಸುಶಿಕ್ಷಿತನೂ, ಸರಳ ಸ್ವಭಾವಿಯೂ ಆದ ತರುಣನೊಬ್ಬನಲ್ಲಿ ಅನುರಕ್ತಳಾಗುತ್ತಾಳೆ ಅವನು ಬಡತನದ ಸಾಗರದಲ್ಲಿ ಮುಳುಗೇಳುವ ವ್ಯಕ್ತಿ ಇವಳಾದರೋ ಅಗರ್ಭ ಶ್ರೀಮಂತ ವೈದ್ಯನೊಬ್ಬನ ಏಕಮಾತ್ರ ಪ್ರೇಮ ಪುತ್ರಿ ಅವರಿಬ್ಬರ ನಡುವೆ ಭೂಮ್ಯಾಕಾಶಗಳಿಗಿರುವಷ್ಟು ಅಂತರ ಆದರೂ ಅವರಿಬ್ಬರೊಳಗಣ ಪ್ರೇಮವು ನಿಷ್ಕಾಮವೂ, ಪವಿತ್ರವೂ ಆಗಿರುತ್ತದೆ ಆದರೆ ಶ್ಯಾಮನು, ದೈವಚಿತ್ತವೆಂಬತೆಯೋ ಏನೋ ಇನ್ನೊಬ್ಬ ಶ್ರೀಮಂತ ತರುಣಿಯೊಡನೆ, ತನ್ನ ತಂದೆಯ ಆಜ್ಞೆಯಂತೆ ವಿವಾಹವಾಗಿ ತನ್ನ ಪ್ರೇಯಸಿಗೆ ಆಶಾಭಂಗವನ್ನುಂಟುಮಾಡುತ್ತಾನೆ ಆದರೆ ಶೀಲೆ? ತನ್ನ ಪ್ರಿಯಕರನ ವಿವಾಹದ ವಿಷಯ ಕೇಳಿ ಅವಳ ಎದೆ ಬಿರಿಯುವುದು ಆದರೂ ಸಹನಾಶಕ್ತಿಯುಳ್ಳ ಅವಳು ತಮ್ಮ ಪ್ರಣಯಭಂಗವನ್ನು ಅತಿ ಕಷ್ಟದಿಂದ ಸಹಿಸುತ್ತಾಳೆ ಮತ್ತು ತನ್ನ ಭಗ್ನಮಂದಿರದಲ್ಲಿ ಜಹಾಗೀರದಾರನೆಂಬ ಧನಿಕ ಕುವರನಿಗೆ ಆಶ್ರಯವೀಯುತ್ತಾಳೆ ಅವರಿಬ್ಬರೊಳಗೆ ಪ್ರೇಮ ವಿವಾಹ ನೆಸಗಿ, ಅವನು ತನ್ನ ವಿಷಯಾಸಕ್ತತೆಯಿಂದಾಗಿ ಅವಳಿಂದ ತ್ಯಾಜ್ಯನೆನಿಸಲ್ಪಡುತ್ತಾನೆ ಕಟ್ಟಕಡೆಗೆ ತನ್ನ ತಾಯ್ನಾಡಿನ ಸ್ವಾತಂತ್ರ್ಯಕ್ಕೋಸ್ಕರ ಹೆಣಗಾಡಿದ ಆದರ್ಶ ವ್ಯಕ್ತಿ ಶ್ಯಾಮನ ಸಮಾಧಿಯೊಡನೆ ಕಾದಂಬರಿಯು ಅಂತ್ಯವಾಗುತ್ತದೆ

ಈ ಕಾದಂಬರಿಯು ಉತ್ತಮ ತರಗತಿಯದೆಂಬುದರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ ಇದು, ಭರತಖಂಡದ ಸ್ವಾತಂತ್ರ್ಯದ ಹೋರಾಟದ ಇತಿಹಾಸದಲ್ಲೇ ಸುವರ್ಣಾಕ್ಷರಗಳಿಂದ ಕೆತ್ತಲ್ಪಟ್ಟು ಉಜ್ವಲವಾಗಿ ಶೋಭಿಸುತ್ತಿರುವ ಸನ್ 1942ನೇ ಆಗಸ್ಟ್ ತಿಂಗಳ ವಾತಾವರಣವನ್ನು ಬಹುಮಟ್ಟಿಗೆ ಸೂಚಿಸುತ್ತದೆ ಲೇಖಕರಾದ 'ಹೇಮಂತರು ಸ್ವಾತಂತ್ರ್ಯದ ಪರವಾದ ಅನೇಕ ಉದಾತ್ತ ವಿಚಾರಗಳನ್ನು ಕಾದಂಬರಿಯಲ್ಲಿ ನಿರೂಪಿಸಿದಾರೆ ಉದಾಹರಣೆಗಾಗಿ ಅವರು, ಸ್ವಾತಂತ್ರ್ಯವಿದು ಬರಿಯ ಕಲ್ಪನೆಯ ಗೊಂಬೆಯಲ್ಲ ಅಧಿಕಾರವು ಒಂದು ಕೈಯಿಂದ ಮತ್ತೊಂದು ಕೈಗೆ ಸೇರಿದರೆ, ಅದರಿಂದ ಸ್ವಾತಂತ್ರ್ಯ ಲಭಿಸೀತೇ? ಸ್ವಾತಂತ್ರ್ಯದಿಂದ ಎಲ್ಲ ಜನತೆಗೆ ಸಮಾನವಾದ ಸುಖದ ಹಕ್ಕುಗಳು ದೊರೆಯಬೇಕು ಸುಖವು ಎಲ್ಲರಿಗೂ ಸಿಗುವ ವಸ್ತುವಾಗಬೇಕು ಎಲ್ಲರಲ್ಲಿ ನಿಜವಾದ ಸಮತೆ ನೆಲಸಬೇಕಾದರೆ ಒಳಗಿನ ಹೃದಯ ಮಾರ್ಪಡಬೇಕು. ಅದಕ್ಕೆ ಪ್ರೀತಿಯ ಶಿಕ್ಷಣ ದೊರೆಯಬೇಕು, ತ್ಯಾಗದ ಪಾಠಗಳನ್ನು ಕೊಡಬೇಕು ಕಲಹದ ಜೀವನದಲ್ಲಿ ಸಮತೆ ಎಲ್ಲಿಂದ ನಿರ್ಮಾಣವಾದೀತು?" (ಪುಟ ೬೨ ೬೩) ಎಂಬ ಸರ್ವಸಮ್ಮತವಾದ ವಿಷಯವನ್ನು ಹೊರಹೊಮ್ಮಿಸಿದ್ದಾರೆ ಅಲ್ಲದೆ ಬಡತನದ ಬಾಳುರಿಯಲ್ಲಿ ಸಿಲುಕಿ ಬೆಂದು ಬಳಲುತ್ತಿರುವವರ ದಾರಿದ್ರ್ಯ, ಜೀವನವು ಸ್ವಾಭಾವಿಕವಾಗಿಯೂ, ಸಹಾನುಭೂತಿ ಪರವಾಗಿಯೂ ಚಿತ್ರಿಸಲ್ಪಟ್ಟಿದೆ ಪುಸ್ತಕದ ಶೈಲಿಯು ಸರಳವಾಗಿಯೂ, ಮನರಂಜಕವಾಗಿಯೂ ಒಂದೇ ಸಮನೆ ಓಡುತ್ತಿದೆ ಇವಿಷ್ಟು ಪುಸ್ತಕದ ಮೇಲ್ಮೆಯ ಕುರಿತು ಕೆಲವು ಶ್ಲಾಘನೀಯ ಮಾತುಗಳು. ಹೀಗೆಂದ ಮಾತ್ರಕ್ಕೆ ಇದರಲ್ಲಿ ದೋಷಗಳೂ ಇಲ್ಲವೆಂದಿಲ್ಲ. ಆದರೂ ಅವು ಮನ್ನಿಸಲರ್ಹವಾಗಿವೆ. ಯಾಕೆಂದರೆ, ಅದು ಗ್ರಂಥಕರ್ತರ ಮೊದಲ ಪ್ರಯತ್ನವೆಂಬುದನ್ನು ಸಹೃದಯರಾದ ವಾಚಕರು ನೆನಪಿನಲ್ಲಿಟ್ಟುಕೊಳ್ಳತಕ್ಕದ್ದು.

ಈಗ ಈ ಕಾದಂಬರಿಯಲ್ಲಿ ಕಂಡುಬರುವ ಮುಖ್ಯ ಪಾತ್ರಗಳ ಪರಿಶೀಲನೆಯನ್ನು ಕೂಲಂಕುಷವಾಗಿ ಮಾಡುವ, ಬಡತನದಲ್ಲಿ ಸಿಕ್ಕಿ ಬಳಲುತ್ತಿರುವ, ಅಜ್ಞಾನದಲ್ಲಿ ತೊಳಲಾಡುತ್ತಿರುವ, ಬೇನೆಯಿಂದ ಜರ್ಜರಿತವಾದ ಹಾಯಸ್ಸ್ವಿನ ಜನರನ್ನುದ್ಧರಿಸಬೇಕೆಂಬ ಕಾಂಕ್ಷೆಯಿಂದಾವೃತಳಾಗಿದಳು. ಕಥಾನಾಯಕಿ ಶೀಲೆ ಅಲ್ಲದೆ ಅವಳು ಹೆಣ್ಣಿನ ಮಾರ್ದವ ಗಂಡಿನ ಕಾಠಿಣ್ಯ ಅಬಲೆಯ ಕನಿಕರ ಪುರುಷನ ಸಹನಶಕ್ತಿ ಮತ್ತು ಸಾಹಸ ಪ್ರೀತಿಗಳ ಸಂಗಮವಾಗಿದಳು. ಈ ರೀತಿಯ ಗುಣಶೀಲಗಳು ಅವಳಲ್ಲಿ ಬೆಳೆಯಲು ಗಂಡಸಿನ ಹಾಗೆ ಅವಳನ್ನು ಬೆಳೆಸಬೇಕೆಂದೂ, ಯುಗಯುಗಗಳ ದಾಸ್ಯತ್ವದಿಂದ ಶಕ್ತಿ[illegible]ದ ಅಬಲತೆಯನ್ನು ಹೋಗಲಾಡಿಸಬೇಕೆಂದೂ ಕಂಕಣಬದ್ಧರಾದ ಅವಳ ತಂದೆ ಡಾಕ್ಟರ್ ಕೃಷ್ಣರಾಯರೇ ಕಾರಣಭೂತರಾಗಿದ್ದರು ಕಥಾನಾಯಕನಾದ ಶ್ಯಾಮನಾದರೊ ತನ್ನ ಬುದ್ಧಿಯ ವೈಭವದಿಂದ ಪ್ರೀತಿಯ ಸಮೃದ್ಧಿಯಿಂದ ತನ್ನ ಜೀವನವನ್ನು ಎಲ್ಲ ಬಗೆಯಿಂದಲೂ ಸಂಪನ್ನಗೊಳಿಸಿ, ಪರದಾಸ್ಯ ಬಂಧನದಲ್ಲಿ ನರಳುತ್ತಿರುವ ತನ್ನ ಮಾತೃಭೂಮಿಯ ಪಾರತಂತ್ರ್ಯದ ಶೃಂಖಲೆಗಳಿಂದ ಅವಳನ್ನು ಬಂಧವಿಮುಕ್ತಳನ್ನಾಗಿ ಮಾಡಲು ತನ್ನ ಜೀವನವನ್ನೆ ಧಾರೆಯೆರೆಯಲು ಸದಾ ಸಿದ್ಧನಾಗಿದ್ದವನು ರೋಗದ ತವರುಮನೆಯಾದ ಹಳ್ಳಿಗಳಲ್ಲಿ ಆಯುರಾರೋಗ್ಯದ ಬೆಳವಣಿಗೆ ಮತ್ತು ನಿರಕ್ಷರ ಕುಕ್ಷಿಗಳಲ್ಲಿ ವಿದ್ಯಾಪ್ರಚಾರ–ಇವು ಸ್ವಾತಂತ್ರ್ಯ ಸಂಗ್ರಾಮಕ್ಕಿಂತಲೂ ಹಿರಿಯ ಕೆಲಸಗಳೆಂಬ ಉಚ್ಚ ಧ್ಯೇಯಗಳನ್ನಿಟ್ಟುಕೊಂಡು ಅವುಗಳ ಪರಿಪೂರ್ಣತೆಗಾಗಿ ತನ್ನ ಸರ್ವಸ್ವವನ್ನೂ ವಿನಿಯೋಗಿಸಲು ಒಂದು [illegible] ನೋಡದವನು. ಕಥಾನಾಯಕನ ಪ್ರತಿಸ್ಪರ್ಧಿಯಾದ ಜಹಾಗೀರದಾರನು ಇವರೀರ್ವರ ನಾನಾ ಗುಣಗಳನ್ನು ತೂಗಿ ನೋಡಿದರೆ, ಅವರಲ್ಲಿ ಯಾರು ಹೆಚ್ಚೆಂಬುದನ್ನು ನಿರ್ಧರಿಸಲಾರದೆ ಮನಸ್ಸು ಮುಗ್ಧತೆಯ ತೆರೆಯ ಹಿಂದೆ ಹುದುಗಿಕೊಳ್ಳುತ್ತದೆ.

ಹೀಗೆ ಅನೇಕ ಉತ್ತಮ ವಿಷಯಗಳಿಂದ ಅಲಂಕೃತವೂ, ಸ್ವಾರಸ್ಯಮಯವೂ ಆದ "ಭಗ್ನಮಂದಿರ"ವನ್ನು ಬರೆದು ಕನ್ನಡಿಗರಿಗೆ ಅರ್ಪಿಸಿದುದಕ್ಕಾಗಿ, ಕನ್ನಡಿಗರೆಲ್ಲರೂ ಗ್ರಂಥಕರ್ತರಾದ "ಹೇಮಂತ"ರನ್ನು ಅಭಿನಂದಿಸಬೇಕು.

ಸ್ವಪಾಷ್,

ಹರಿಜನರಿಗಾಗಿ ದೇವಾಲಯ ತೆರೆಯಲಿ

[illegible] ಹಿಂದೂ ಧರ್ಮ ಉದ್ದೇಶ

ಡಾ। ಕೆ. ಎನ್. ಕಿಣಿಯವರ ಆಶಯ

"ಹರಿಜನರಿಗಾಗಿ ದೇವಸ್ಥಾನಗಳನ್ನು ತೆರೆಯುವುದು ತುಂಬಾ ಸಂತೋಷಕರ ಸಂಗತಿ. ಆದರೂ ಅಷ್ಟೇ ಸಾಲದು. ನಮ್ಮ ದೇವಮಂದಿರಗಳು ಹಿಂದೂ, ಹಿಂದೇತರೆಲ್ಲರಿಗೂ ತೆರೆಯಲ್ಪಡಬೇಕು."

ಹೀಗೆಂದು ಮೈಸೂರಿನ ನಿವೃತ್ತ ವಿದ್ಯಾಇಲಾಖಾಧಿಕಾರಿಗಳಾದ ಡಾ। ಕೆ. ಎನ್. ಕಿಣಿ, ಪಿ. ಎಚ್. ಡಿ. ಅವರು ಒಂದು ಪತ್ರ ಪ್ರಕಟಣೆಯಲ್ಲಿ ತಿಳಿಸುತ್ತಾರೆ:

ಹಿಂದೂ ಮತವು ಅಸ್ಪೃಶ್ಯತೆಯನ್ನು ಸಮರ್ಥಿಸುವುದಿಲ್ಲ. ದೇವಸ್ಥಾನಗಳು ಹರಿಜನರಿಗೆ ಸ್ವೇಚ್ಛೆಯಾಗಿ ತೆರೆಯಲ್ಪಡುವುದು ಮಹತ್ವದ ಸುಧಾರಣೆಯಾಗಿದ್ದು ಹಿಂದೂ ಧರ್ಮದ ಮೇಲಿರುವ ದೊಡ್ಡದೊಂದು ಕಲೆಯನ್ನು ತೆಗೆದ ಹಾಗಾಗುವುದು, ಆದರೆ ಇಷ್ಟರಲ್ಲೇ ನಾವು ತೃಪ್ತಿಯಾಗಬಾರದು.

ನಮ್ಮ ನಿತ್ಯದ ಪ್ರಾರ್ಥನೆಯಲ್ಲಿ ನಾವು "ಲೋಕಕ್ಕೆ ಆನಂದವಾಗಲಿ; ಸಕಲರೂ ಸಂಕಷ್ಟದಿಂದ ವಿಮೋಚನೆ ಹೊಂದಲಿ; ಎಲ್ಲರೂ ಪವಿತ್ರತೆಯನ್ನು ದರ್ಶನ ಮಾಡಲಿ; ನರಳುವಿಕೆಗಾರೂ ತುತ್ತಾಗದಿರಲಿ." ಎಂದು ಜಪಿಸುತ್ತೇವೆ. ಇಲ್ಲಿ "ಲೋಕ, ಎಲ್ಲರೂ, ಸಕಲರೂ" ಎಂದರೆ ಇಡೀ ಮಾನವಕೋಟಿಯೆಂದೇ ಅರ್ಥ. ನಿಜವಾದ ಹಿಂದೂ ಧರ್ಮವು ಒಬ್ಬ ಮಾನವನಿಗೂ ಇನ್ನೊಬ್ಬನಿಗೂ ಬೇಧವುಂಟೆಂದು ಗಣಿಸುವುದಿಲ್ಲ. ಆದುದರಿಂದ ನಮ್ಮ ದೇವಸ್ಥಾನಗಳಲ್ಲಿ ಆರಾಧನೆ ಮಾಡಬಯಸುವ ಇಲ್ಲವೆ ಪೂಜೆ ಉತ್ಸವಗಳಲ್ಲಿ ಭಾಗವಹಿಸಲಿಚ್ಛಿಸುವ ಹಿಂದೇತರರಿಗೆಲ್ಲಾ ಅವು ತೆರೆಯಲ್ಪಡಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

ಕುತ್ಸಿತ ಮನೋಭಾವ

ಹಿಂದೂಗಳಾದ ನಮಗೆ ಇಗರ್ಜಿಗಳಲ್ಲೂ, ಮಸೀದಿಗಳಲ್ಲೂ ಪ್ರವೇಶವಿದೆ. ನಮ್ಮ ಬಂಧುಗಳಾದ ಕ್ರೈಸ್ತರನ್ನೂ, ಮುಸಲ್ಮಾನರನ್ನು ನಮ್ಮ ದೇವಸ್ಥಾನಗಳಿಗೆ ಪ್ರವೇಶಗೊಡದಿರುವುದು ನಮ್ಮ ಕುತ್ಸಿತ ಮನೋಭಾವವೆನ್ನಬೇಕು. ಇಂಗ್ಲೆಂಡಿನ ಸ್ಯಾಂಟ್ ಪೌಲ್ ಅಥವಾ ವೆಸ್ಟ್‌ಮಿನ್‌ಸ್ಟರ್ ಇಗರ್ಜಿಗಳಿಗೆ ಹಿಂದುಗಳಾರೂ ಹೋಗಬಹುದು. ಅವರ ಪ್ರಾರ್ಥನೆ, ಉಪದೇಶಗಳಲ್ಲಿ ಭಾಗವಹಿಸಬಹುದು. ಹಾಗೇ ಅಮೇರಿಕದ ಇಗರ್ಜಿಗಳಿಗೂ ಎಲ್ಲರಿಗೆ ಪ್ರವೇಶವಿದೆ. ಆದರೆ ಓರ್ವ ಆಂಗ್ಲ ಇಲ್ಲವೆ ಅಮೇರಿಕನರು ಬಂದರೆ ನಾವವನನ್ನು ನಮ್ಮ ದೇವಾಲಯದೊಳಗೆ ಪ್ರವೇಶಿಸ ಬಿಡುವುದಿಲ್ಲ. "ನೀವು ಅಲ್ಲಿ ಪ್ರವೇಶಿಸಲಾಗದು" ಎಂದು ನಾವವರಿಗೆ ತಿಳಿಸುತ್ತೇವೆ.

ಇದೆಂತಹ ಲಜ್ಜಾಸ್ಪದ ವಿಷಯ. ಇದರ ಮೇಲೂ ನಾವು ನಮ್ಮ ಮತ ಅನಾದಿಯೂ ಅಮರವೂ ಆದುದೆಂದೂ, ಸರ್ವ ವ್ಯಾಪಿ, ಸಕಲ ಜ್ಞಾನ ಪರಿಪೂರ್ಣವಾದುದೆಂದೂ ಏನೇನೂ ಹೇಳಿಕೊಳ್ಳುತ್ತೇವೆ.

ಸಾಂಪ್ರದಾಯಪ್ರಿಯರೊಡನೆ ನಾನು ಅಂತಃಕರಣಪೂರ್ವಕವಾಗಿ ಬೇಡಿಕೊಳ್ಳುವುದೇನೆಂದರೆ: ನಮ್ಮ ನಡೆಯು ನಮ್ಮ ನುಡಿಗೆ ತಕ್ಕಂತಿರಲಿ. ವಿಶ್ವದ ತುದಿಯಿಂದ ತುದಿಯವರೆಗೆ ಇರುವ ಜನತೆಗೆಲ್ಲ ನಮ್ಮ ದೇವಾಲಯಗಳು ತೆರವಾಗಿರಲಿ, ಧ್ರುವದಿಂದ ಧ್ರುವದ ತನಕ ಇರುವ ಜನರಿಗೂ ಅಲ್ಲಿ ಪ್ರವೇಶವಿರಲಿ.

ಅಹಿಂಸಾ ಚಳವಳದ ವಿಶ್ವ ದರ್ಶನ

ಹೃದಯ ಪರಿವರ್ತನೆಯ ಸಮಾಜ ಕ್ರಾಂತಿ

ಗಾಂಧೀಜಿಗೆ ಬರ್ಮಾ ಮುಖಂಡರ ಅಭಿನಂದನೆ

ಸ್ಪೃಶ್ಯ ಹಿಂದೂಗಳ ದೇವಸ್ಥಾನಗಳನ್ನು ಪ್ರವೇಶಿಸಿದರೆ ಅಸ್ಪೃಶ್ಯರ ಕಣ್ಣುಗಳು ಕುರುಡಾಗುವುವು ಎಂಬ ಅಂಜಿಕೆಯನ್ನು ಅಜ್ಞರಾದ ದಳಿತ ವರ್ಗದವರಲ್ಲಿ ಪ್ರಚಾರಮಾಡಿದರು ಯಾರೋ ಧೂರ್ತ ಆಚಾರವಂತರೇ ಇರಬೇಕು. ರಾಜ್ಯಾಡಳಿತವು ಸ್ಪೃಶ್ಯರಾಜರ ಕೈಯಲ್ಲೇ ಇದ್ದುದರಿಂದ ಅವರ ಸಲಹೆಗಾರರಾದ ಅಂಥ ಕಟ್ಟಾಚಾರದವರು ಅಧಿಕಾರ ಬಲದಿಂದ ನಮ್ಮ ಸಮಾಜದ ಒಂದು ಅಂಗದವರನ್ನು ಅನ್ಯಾಯದ ದಬ್ಬಾಳಿಕೆಗೊಳಮಾಡಿ ಶತಮಾನಗಳಿಂದವರನ್ನು ಆರಾಧನಾಲಯಗಳಿಂದ ದೂರವಿಟ್ಟರು.

ಮನುಷ್ಯನಲ್ಲಿ ಹೊಲೆತನವೆಂಬುದು ಹಲವು ರೀತಿಯಲ್ಲಿ ಉಂಟಾಗಬಹುದೆಂದು ವಿಚಾರವಂತರು ತಿಳಿಸುತ್ತಾರೆ. ವನ್ಯ ಸ್ವಭಾವದ ಮಾನವರನ್ನು ಕೂಡಾ ಉತ್ತಮ ನಾಗರೀಕ ಸಂಸ್ಕಾರಗೊಳಿಸಲು ಸಾಮರ್ಥ್ಯವುಳ್ಳ ಹಿಂದೂ ಧರ್ಮವು ಅದರ ಕೆಲವೊಂದು ಸ್ವಾರ್ಥಿ ಅನುಯಾಯಿಗಳಿಂದ ಅಧರ್ಮದ ಕಡೆಗೆ ವಾಲಿತು. ಇಲ್ಲವೆ ಆ ಪವಿತ್ರವೂ ಪರಿಶುದ್ಧವೂ ಆದ ಮತಸೂತ್ರಗಳ ಹೆಸರಿನಲ್ಲಿ ಅಮಾನುಷಿಕವಾದ ಕೃತ್ಯಗಳನ್ನೂ ಪ್ರೋತ್ಸಾಹಿಸುವುದೆಂದರೇನರ್ಥ?

"ಮಾನವನ ಹೀನತೆಯನ್ನು ಕೀಳ್ಗಾಣಿಸುವ ಸಾಮಾಜಿಕ ಕಟ್ಟಳೆಗಳು ರಾಕ್ಷಸೀ ಹಿಂಸೆಯ ಭೀಕರ ರೂಪಾಂತರಗಳು" ಎಂದು ಮಹಾತ್ಮರು ಉದ್ಘೋಷಿಸಿದರು.

"ತಮ್ಮ ಅಮರ ಸಾಹಸದಿಂದ ಗಾಂಧಿಜಿಯವರು ತುಳಿಯಲ್ಪಟ್ಟವರನ್ನು ಮೇಲೆತ್ತಲು ಇಂದಿಗೊಂದು ದಶಮಾನದ ಹಿಂದೆ ಪ್ರಾರಂಭಿಸಿದ ಕಾರ್ಯವು ಇಂದು ಶ್ರೇಯಸ್ಕರವಾಗಿ ಫಲಬಿಟ್ಟಿದೆ" ಹೀಗೆಂದು ಓರ್ವ ಹರಿಜನ ಲೇಖಕರು "ಗಾಂಧಿ ಮತ್ತು ಅಂಬೇಡಕರ್" ಎಂಬ ಚಿಕ್ಕ ಪುಸ್ತಕದಲ್ಲಿ ಬರೆಯುತ್ತಾರೆ.

"ಅವರು ಹೊರಡಿಸಿದ ಉತ್ಸಾಹದ ಬಿರುಗಾಳಿಗೆ ಶತಮಾನಗಳಿಂದ ಹರಿಜನರಿಗೆ ಮುಚ್ಚಲ್ಪಟ್ಟ ದೇವ ದ್ವಾರಗಳು ಭರದಿಂದ ತೆರೆದವು. ಆ ಜಂಝಾವಾತದ ರಭಸವು ದಕ್ಷಿಣದ ಕುರುಡುಕಟ್ಟಳೆಯನ್ನುರುಳಿಸಿಬಿಟ್ಟಿತು. ಆಚಾರವು ವಿಚಾರಕ್ಕೆಡೆಗೊಟ್ಟಿತು. ಇಂದು ದಕ್ಷಿಣವು ಹೆಮ್ಮೆಯಿಂದ ಉತ್ತರಕ್ಕೆ ಆದರ್ಶ ಕಲ್ಪಿಸಿದೆ."

"ಗಾಂಧಿ ವಾದವು ಮಾನವ ಸ್ವಾತಂತ್ರ್ಯದ ತತ್ವಜ್ಞಾನ. ಹಳೇ ಸಮಾಜ ಕಟ್ಟಡದ ತಳಹದಿಯನ್ನೇ ಅದು ಪರಿವರ್ತನಗೊಳಿಸಿದೆ. ಅದರ ಸಂಪರ್ಕದಿಂದ ಸುಪ್ತವಾಗಿದ್ದ ಹಿಂದೂ ಸಮಾಜದ ಆತ್ಮಜಾಗೃತಿಯಾಗಿದೆ. ಹರಿಜನ ಸಮಸ್ಯೆಯು ಗಾಂಧಿ ತತ್ವಜ್ಞಾನದ ಹೃದಯ ಕೇಂದ್ರವಾಗಿರುತ್ತದೆ. ದೇವರ ಮುಂದೆ ಸಮಾನರಾಗಿರುವವರು ಸಮಾಜದಲ್ಲೂ ಸಮಾನತೆ ಪಡೆಯಬೇಕೆಂದು ಮಹಾತ್ಮರು ಸಾರಿದರು."

"ಎಂದು ಅವರು ತಮ್ಮ ಪವಿತ್ರ ಕಾರ್ಯೋದ್ದೇಶಕ್ಕಾಗಿ ದಕ್ಷಿಣ ಸಂಚಾರವನ್ನು ಕೈಕೊಂಡು ಈ ಭೂಮಿಯನ್ನು ತಮ್ಮ ಪೂಜ್ಯ ಪಾದಗಳಿಂದ ಪುನೀತಗೊಳಿಸಿದರೋ ಅಂದೇ ಅಮೋಘವಾದ ಹೃದಯ ಪರಿವರ್ತನೆಗಾರಂಭವಾಗಿದೆ. ಸ್ಪೃಶ್ಯರಿಂದ ಅಸ್ಪೃಶ್ಯ ನಿವಾರಣೆಗಾಗಿ ಧನ ಸಂಗ್ರಹಿಸಿ "ನಿಮ್ಮ ಪಾತಕಕ್ಕಾಗಿ ಪ್ರಾಯಶ್ಚಿತ್ತ ಮಾಡಿರಿ" ಎಂದು ಉದ್ಗರಿಸಿದರು. ಅವರ ವಿನಂತಿಗೆ ಹೃತ್ಪೂರ್ವಕ ಮನ್ನಣೆಯೂ ದೊರೆಯಿತು.

ಹಿಂದೂ ಮುಸ್ಲಿಂ ಐಕ್ಯ

"ಅಹಿಂಸಾತ್ಮಕವಾದ ಹೃದಯ ಶುದ್ಧೀಕರಣದ ಅಮೋಘ ಕ್ರಾಂತಿ ಇದು. ಅವರ ನೈತಿಕ ಶಕ್ತಿಯು ದೈವೀಕ ಚಮತ್ಕಾರಗಳನ್ನುಂಟುಮಾಡಿತು. ಯಾರ ನೆರಳಿನಿಂದ ಭ್ರಷ್ಟತೆಯುಂಟಾಗುವುದೆಂದು ಭಾವಿಸಲ್ಪಡುತಿತ್ತೊ ಅಂತಹ ಹರಿಜನರನ್ನು ಹಿಂದೂಗಳು ತಮ್ಮ ಸಮಾಜ ಸಂಸಾರದ ಸದಸ್ಯರನ್ನಾಗಿ ಸ್ವೀಕರಿಸಿದ್ದಾರೆ. ಮಹಿಳೆಯರು ಉಕ್ಕುವ ಆನಂದದಿಂದ ತಮ್ಮ ಆಭರಣಗಳನ್ನು ಗಾಂಧೀಜಿಗೆ ಅರ್ಪಿಸಿದರು."

ಇಂದವರು ಹಿಂದೂ ಮುಸ್ಲಿಂ ಸೌಹಾರ್ದಕ್ಕಾಗಿ ಸಮಾನ ಸಾಹಸವೊಂದನ್ನು ಕೈಕೊಂಡಿರುವರು. ಈಗಾಗಲೇ ಪೂರ್ವ ಬಂಗಾಳದ ಮುಸಲ್ಮಾನರಲ್ಲಿ ಪರಿಣಾಮಕಾರಿ ಪರಿವರ್ತನೆಯುಂಟಾಗಿದೆ. ಸಾವಿರಾರು ಇಸ್ಲಾಮ್ ಅನುಯಾಯಿಗಳು ಅವರನ್ನು ಆದರದಿಂದ ಸನ್ಮಾನಿಸಿದ್ದಾರೆ. ಇನ್ನು ಕೆಲವೇ ವರ್ಷಗಳಲ್ಲಿ ಭಾರತದಲ್ಲಿನ ಮತೀಯ ದ್ವೇಷವೆಲ್ಲವೂ ಹರಿದುಹೋಗಿ ಐಕ್ಯತೆಯ ಪರಿಶುದ್ಧ ಪ್ರಕಾಶವು ಶೋಭಿಸುವಂತಾಗಿ ಸ್ವಾತಂತ್ರ್ಯ ರವಿಯು ತನ್ನ ಸಂಪೂರ್ಣ ತೇಜದಿಂದ ರಾರಾಜಿಸುವನೆಂದು ನಿಸ್ಸಂದೇಹವಾಗಿ ಭವಿಷ್ಯ ಹೇಳಬಹುದು. ಅದ್ವಿತೀಯವಾದ ಆತ್ಮಶಕ್ತಿಯ ಪ್ರಭಾವಕ್ಕೆ ಅದೆಂತಹ ಕಠೋರ ವಿಷವೂ ಅಮೃತವಾಗುವುದು.



ವಿಜ್ಞಾನ ಪ್ರಪಂಚ

ಮಹಾ ಜ್ಞಾನಿಗಳನ್ನು ಕೊಂದರೆ ವಿಶ್ವಕ್ಕೆ ಶಾಂತಿ

ಅಮೇರಿಕನ್ ಜ್ಯೋತಿಷ್ಯರ ಸಂದೇಶ

ಡಾ। ಹಾರ್ಲೊ ಶೇಪ್ಲಿ ಎಂಬ ಹರ್ವಾರ್ಡ್ ವಿಶ್ವವಿದ್ಯಾಲಯದ ಪ್ರೊಫೆಸರರು ತಮ್ಮೊಂದು ವಿಚಿತ್ರ ಸೂಚನೆಯಿಂದ ಅಮೇರಿಕರನ್ನು ಬೆರಗುಗೊಳಿಸಿದರು. ಅಮೇರಿಕದ ವಿಜ್ಞಾನ ಪ್ರಗತಿ ಸಂಘದ ಆಶ್ರಯದಲ್ಲಿ ಭಾಷಣ ಕೊಡುತ್ತಾ ಈ ಪ್ರೊಫೆಸರರು ಅಸಾಧಾರಣ ಬುದ್ಧಿ ಶಕ್ತಿಯುಳ್ಳ ಯುವಕರನ್ನು ಕೊಲ್ಲುವುದರಿಂದಲೇ ಮಾನವಕೋಟಿಯನ್ನು ವಿನಾಶದಿಂದ ರಕ್ಷಿಸಿಕೊಳ್ಳುವ ಒಂದೇ ಉಪಾಯ ಎಂದವರು ತಿಳಿಸಿದರು.

ಮಾನವ ವ್ಯಕ್ತಿಗಳ ಮೇಲೆ ಸಮಾಜದ ಯೋಗ್ಯ ನಿಯಂತ್ರಣವಿಲ್ಲದಿದ್ದುದರಿಂದ ಪ್ರಗಲ್ಭ ವಿಜ್ಞಾನಿಗಳು ವಿಶ್ವವನ್ನೇ ಧ್ವಂಸಗೊಳಿಸುವ ವಿಧಾನಗಳನ್ನು ಕಂಡುಹಿಡಿಯಬಹುದೆಂಬ ವಿಚಾರದ ಮೇಲೆ ಮೇಲ್ಕಂಡ ಪ್ರೊಫೆಸರರು ತಮ್ಮ ಸೂಚನೆಯನ್ನು ಕಟ್ಟಿರುವರು.

"ಹದಗೆಟ್ಟ ಮಿದುಳಿನ ಹುಚ್ಚುತನದೊಂದಿಗೆ ವಿಸ್ತೃತ ಪ್ರಮಾಣದಲ್ಲಿ ಪ್ರಗತಿ ಹೊಂದಿದ ಯುದ್ಧ ಕೌಶಲ್ಯದ ಜ್ಞಾನವು ಸೇರುವುದೇ ಮಹಾ ಗಂಡಾಂತರಕ್ಕೆಡೆಗೊಡುವ ವಿಷಯ. ಮುಂದಿನ ಮಹಾವಿಜ್ಞಾನಿಗಳಲ್ಲೊಬ್ಬರು ಮಾನವಕೋಟಿ ವಿಧ್ವಂಸಕ ವಿಧಾನವೊಂದನ್ನು ಕಂಡುಹಿಡಿದು ಕೊಲ್ಲುವುದರೊಂದಿಗೆ ತಾನೂ ನಾಶವಾಗುತ್ತೇನೆ. ಇದು ವಿಜ್ಞಾನೋನ್ನತೆ, ಇಲ್ಲವೆ ರಹಸ್ಯವಾದೊಂದು ಹುಚ್ಚು" ಹೀಗೆಂದು ಪ್ರೊ. ಶೇಪ್ಲಿಯವರು ತಿಳಿಸುತ್ತಾರೆ.

ಎಟಂ ಬೊಂಬ್ ದೃಷ್ಟಿ

ಹಿರೋಶಿಮಾದ ಮಿಲಿಟರಿ ಆಸ್ಪತ್ರೆಯ ಪ್ರಧಾನ ವೈದ್ಯರಾದ ಡಾ। ಆಯೊ ಕೊಯೊಮಾ ಅವರು ಕಣ್ಣು ವೈದ್ಯರ ಸಭೆಯೊಂದರಲ್ಲಿ ಭಾಷಣ ಕೊಡುತ್ತ ಹಿರೋಶಿಮಾದಲ್ಲಾದ ಎಟಂ ಬೊಂಬಿನ ಸ್ಫೋಟವನ್ನು ಹತ್ತಿರದಿಂದ ನೋಡಿದ ಓರ್ವ 23 ವರ್ಷದ ಹೆಂಗುಸಿಗೆ ವಿಚಿತ್ರ ದೃಷ್ಟಿಯುಂಟಾಗಿದೆ ಎಂದು ತಿಳಿಸಿದರು.

ಬಾಗಿಲ ಬೀಗದ ತೂತಿನಿಂದ ನೋಡಿದರೆ ಎಷ್ಟು ಕಾಣಿಸುವುದೊ, ಅಷ್ಟೇ ಅವಳಿಗೆ ಕಾಣಿಸುವುದು. ಅವಳು ವೃತ್ತ ಪತ್ರಿಕೆ ಓದಲು ಪ್ರಯತ್ನಿಸುತ್ತಾಳೆ. ಆದರೆ ಮುದ್ರಿತ ಅಕ್ಷರಗಳು ಅವಳಿಗೆ ಕಾಣಿಸುವುದಿಲ್ಲ. ಅವಳಿಗೆ ಕೇವಲ ವೃತ್ತಪತ್ರಿಕೆಯ ಬರಿದಾಗಿರುವ ಸುತ್ತಲಿನ ಭಾಗ ಮಾತ್ರ ಕಾಣಿಸುವುದು. ಒಂದು ಚಿತ್ರವನ್ನು ನೋಡಿದರೆ ಅವಳಿಗೆ ಅದರ ಫ್ರೇಮು ಮಾತ್ರ ಕಾಣುವುದು—ಚಿತ್ರ ಕಾಣಿಸುವುದಿಲ್ಲ. ಸೂರ್ಯನನ್ನು ಬರಿ ಕಣ್ಣಿನಿಂದ ನೋಡಿ ತಕ್ಷಣ ಒಂದು ವಸ್ತುವನ್ನು ನೋಡಿದರೆ ಹೇಗಾಗುತ್ತದೆ—ಅವಳಿಗೂ ಅದೇ ರೀತಿಯಾಗಿದೆ.

ಎಟಂ ಬೊಂಬಿನ ಭೀಕರ ಸ್ಫೋಟಕ್ಕೆ ಉಂಟಾಗುವ ಪ್ರಜ್ವಲಿತ ಪ್ರಕಾಶಕ್ಕೆ ಅವಳ ಕಣ್ಣಿನ ಕೆಲವೊಂದು ಸೂಕ್ಷ್ಮ ನರೆಗಳು ಸುಟ್ಟುಹೋಗಿರುವುದೇ ಈ ವಿಚಿತ್ರ ಲಕ್ಷಣಕ್ಕೆ ಕಾರಣವಾಯಿತು.

ಆರೋಗ್ಯ ವಿಭಾಗ

ಸುಖ ನಿದ್ರೆಗಾಗಿ ಸೂಕ್ತ ಸಲಹೆ

ಕ್ರಿಕೆಟ್ ಆಟಕ್ಕೆ ಯೋಗಾಸನದ ಸಹಾಯ

ಬೆಕ್ಕುಗಳ ವ್ಯಾಯಾಮ ಮಾದರಿ

ಯಾವುದೇ ತರದ ಶಾರೀರಕ ಇಲ್ಲವೆ ಮಾನಸಿಕ ನರಳುವಿಕೆಯು ನಿದ್ರೆಗೆ ತೊಂದರೆ ಕೊಡುವುದು. ಉದ್ವೇಗಗೊಳಿಸುವ ಮಾನಸಿಕ ಆಸಕ್ತಿಯಿಂದ ಶರೀರ ಸ್ನಾಯುಗಳಿಗೆ ವಿಶ್ರಾಂತಿ ಕೊಡಲಿಕ್ಕಾಗದಿರುವುದೇ ಇದರ ಹಲವು ಕಾರಣಗಳಲ್ಲಿ ಮುಖ್ಯವಾದುದೊಂದು.

ಹಾಸಿಗೆ ಸೇರುವ ಮುಂಚಿತವಾಗಿಯೇ ನಿಮ್ಮನ್ನು ಮನೋಸಂಕಷ್ಟಕ್ಕೊಳಪಡಿಸುವ ಸಮಸ್ಯೆಗಳನ್ನು ರದ್ದುಮಾಡಿ ಬಿಡಿರಿ. ರಾತ್ರೆ ಭೋಜನಾನಂತರ ಚಿಕ್ಕ ಕಾಲ್ನಡೆ ಸಂಚಾರ ಕಾರ್ಯಕ್ರಮವನ್ನಿಟ್ಟರೆ ಸುಖಪ್ರದವಾದೊಂದು ದಣುಂಟಾಗುವುದು. ನಂತರ ಸುಮಾರು ಒಂದು ಘಂಟೆಯ ಓದುವಿಕೆಯಿಂದ ಮನಸ್ಸನ್ನು ಬೇರೆ ದಾರಿಯಲ್ಲಿ ತಿರುಗಿಸಬಹುದು.

ಹಾಸಿಗೆ ಸೇರಿದ ಮೇಲೆ ನಿಮ್ಮ ಶರೀರ ಸ್ನಾಯುಗಳೆಲ್ಲ ಆರಾಮವಾಗಿ ಸಡಿಲಿಸಲ್ಪಟ್ಟಿರಬೇಕು. ಯಾವ ತರದ ಶ್ರಮವಾಗದಂತ ಶಯನಭಂಗಿಯಲ್ಲಿ ಹಚಾಚಿಕೊಳ್ಳಬೇಕು. ತಲೆ ಮತ್ತು ಭುಜಗಳ ನಡುವಿನ ಅಂತರವನ್ನು ತುಂಬುನಂತೆ ತಲೆಗಿಂಬುಗಳನ್ನಿಟ್ಟುಕೊಳ್ಳಬೇಕು. ತೊಟ್ಟಿಲಲ್ಲಿ ಶಿಶು ಯಾವ ರೀತಿ ನಿದ್ರಿಸುವುದೆಂಬುದನ್ನು ಅಭ್ಯಾಸಿಸಬೇಕು. ಮಕ್ಕಳಿಗೆ ಸಂಪೂರ್ಣ ಆರಾಮದ ರಹಸ್ಯವು ಸಹಜವಾಗಿ ಗೊತ್ತಿದೆ.

ಅಜೀರ್ಣಕರ ಅವ್ಯವಸ್ಥೆ

ಮಧ್ಯಮಧ್ಯದಲ್ಲಿ ಜಾಗ್ರಣಗೊಳ್ಳುವ ನಿದ್ರೆಯು ಸಾಮಾನ್ಯವಾಗಿ ಜೀರ್ಣ ಕ್ರಿಯೆಗೆ ಸಂಬಂಧಪಟ್ಟ ಪರಿಣಾಮ. ಆಗ ನಿಮ್ಮ ಹೊಟ್ಟೆಯಲ್ಲಿ ಅಜೀರ್ಣದ ಅವ್ಯವಸ್ಥೆಯಾಗಿದೆ ಎಂದು ನಿಮಗೆ ತಿಳಿಯುವುದಿಲ್ಲ.

ಹೊಟ್ಟೆಯಲ್ಲಿನ ಒಂದು ತರದ ಅಮ್ಲರಸವು ಒಂದು ಭಾಗದಿಂದ ಇನ್ನೊಂದಕ್ಕೆ ಹರಿಯುವಾಗ ನಿದ್ರಾಭಂಗವಾಗುತ್ತದೆ. ಪ್ರತಿ ಒಂದೆರಡು ಗಂಟೆಗೊಂದಾವರ್ತಿ ಹೀಗಾಗಬಹುದು. ಒಂದು ಗ್ಲಾಸು ಹಾಲು ಕುಡಿದು ಇಲ್ಲವೆ ಯಾವುದಾದರೂ ಬಿಸ್ಕಿಟ್ ತಿಂದು ಈ ತೊಂದರೆಯನ್ನು ಪರಿಹರಿಸಬಹುದು.

ಅತೀ ಹೆಚ್ಚು ನಿದ್ರೆಯು ಬೇಡವೆಂದೇ ನಿದ್ರಾವಿಜ್ಞಾನಿಗಳ ಅಭಿಪ್ರಾಯ. ಶತಮಾನದ ಹಿಂದೆ ಇದ್ದ ಪ್ರಖ್ಯಾತ ವೈದ್ಯತಜ್ಞರಾದ ಸರ್ ಜೋನ್ ಸಿನ್‌ಕ್ಲೇರ್ ಅವರು ಹೀಗೆ ತಿಳಿಸುತ್ತಾರೆ:

"ಅತಿ ನಿದ್ರೆಗಿಂತ ಹಾನಿಕರವಾದುದು ಬೇರೇನಿಲ್ಲ. ಅದರಿಂದ ಶರೀರ ಕ್ರಿಯೆಯು ಬಡ್ಡಾಗಿ ಆಲಸ್ಯವುಂಟಾಗುವುದು. ಮಾತ್ರವಲ್ಲ ಶರೀರವೂ ಕೃಶವಾಗುವುದು. ಇಂದ್ರಿಯಗಳೂ ಅದರಿಂದ ಬಡ್ಡಾಗಿ ಹೋಗಿ ಮಾನಸಿಕ ಮತ್ತು ಶಾರೀರಕ ಚೈತನ್ಯವು ನಿರ್ಬಲಗೊಳ್ಳುವವು."

ಹೆಚ್ಚು ನಿದ್ರಿಸಬೇಕೆಂಬ ಆಶೆಯು ಅಸಹಜವಾದುದು. ಪಿತ್ತಕೋಶದ ಬಾಧೆಯಿಂದ ಇಲ್ಲವೆ ಶ್ವಾಸಕೋಶದೊಳಗಿನ ಅಶುದ್ಧವಾಯುವು ಹೊರಹೋಗದಿರುವುದರಿಂದ ಈ ಯಾಚನೆಯುಂಟಾಗಬಹುದು.

ಪರಿಹಾರೋಪಾಯ

ಪಿತ್ತ ಕೋಶದ ಅವ್ಯವಸ್ಥೆಯಿಂದುಂಟಾಗುವ ಅತಿ ನಿದ್ರೆಯನ್ನು ಹೋಗಲಾಡಿಸಲು ವ್ಯಾಯಾಮವೇ ಉತ್ತಮ ಸಾಧನ.

ಗಾಳಿಸಂಚಾರ ಸರಿಯಿಲ್ಲದ ಕೋಣೆಯಲ್ಲಿ ಬಹುಕಾಲ ಇರುವುದರಿಂದಲೂ ಇಲ್ಲವೆ ಬಾಗಿಲು ಕಿಟಕಿಗಳನ್ನು ಮುಚ್ಚಿದ್ದ ಕೋಣೆಯಲ್ಲಿ ಮಲಗುವುದರಿಂದ ಆಲಸ್ಯ ಹೆಚ್ಚಿಸುವ ವಿಷಮಯ ವಾತಾವರಣವುಂಟಾಗುವುದು. ಮಲಗುವ ಮೊದಲು ಶುದ್ಧ ಗಾಳಿ ವಾತಾವರಣದಲ್ಲಿ ಸ್ವಲ್ಪ ಹೊತ್ತು ಇದ್ದು ನಂತರ ಮಲಗುವಾಗ ಕಿಟಕಿ ಬಾಗಿಲುಗಳನ್ನು ತೆರೆದಿಡುವುದು ಉತ್ತಮ ವಿಧಾನ.

ಹಾಸಿಗೆ ವಸ್ತ್ರದ ಕುರಿತು ಒಂದು ಮಾತು. ಇವು ಸಾಧ್ಯವಿದ್ದಷ್ಟು ಹಗುರವಾಗಿದ್ದು ಸಾಕಷ್ಟು ಬೆಚ್ಚಗಿರಬೇಕು.

ಎಂಟು ಗಂಟೆಯ ನಿದ್ರೆಯಲ್ಲಿ ನಾವು ಸುಮಾರು 35 ಸಲ ಭಂಗಿ ಬದಲಿಸುತ್ತೇವೆ. ಭಾರವಾದ ಹಾಸಿಗೆ ವಸ್ತ್ರಗಳು ಈ ಚಲನಕ್ಕೆ ತುಂಬಾ ತೊಡಕನ್ನುಂಟುಮಾಡುತ್ತವೆ. ಆಗ ನಿದ್ರಾಭಂಗಕ್ಕೂ ಎಡೆ ಸಿಗುವುದು.

ಮಾರ್ಜಾಲ ಆದರ್ಶ

ಬೆಕ್ಕು ಆರೋಗ್ಯತಜ್ಞ ಪ್ರಾಣಿ. ಅದು ಆಹಾರ ತಿನ್ನುವ ರೀತಿಯನ್ನು ಸ್ವಲ್ಪ ಹೊತ್ತು ನಿರೀಕ್ಷಿಸಿದರೆ ಇದರ ಸತ್ಯಾಂಶ ನಿಮಗೆ ತಿಳಿಯುವುದು. ಒಳ್ಳೇ ತಿನಸೂ ಒಳ್ಳೇ ಆರಾಮವೂ ಬೆಕ್ಕಿಗೆ ಪ್ರಿಯವಾದ ವಿಷಯಗಳಾದರೂ ಅದು ಆಹಾರವನ್ನು ಸಾವಧಾನವಾಗಿಯೇ ತಿನ್ನ ಬಯಸುವುದು. ಆ ವಿಷಯದಲ್ಲಿ ಅದಕ್ಕೆ ಅವಸರವಿಲ್ಲ. ಬೆಕ್ಕಿನ ಹಿರಿ ವಂಶಸ್ಥರಾದ ಹುಲಿಗಳು ಕೂಡಾ ಕೊಂದ ಕೊಳ್ಳೆಯನ್ನು ಕೂಡಲೇ ತಿನ್ನದೆ ಸಾವಕಾಶವಾಗಿ ತಿನ್ನಲು ಯೋಗ್ಯವಾದ ಸ್ಥಳಕ್ಕೆ ಒಯ್ಯುತ್ತವೆ.

ಬೆಕ್ಕು ತನ್ನ ಪಚನ ಕ್ರಿಯೆಯ ವಿಷಯ ಮನುಷ್ಯರಿಗಿಂತ ತುಂಬಾ ಜಾಗರೂಕತೆ ವಹಿಸುತ್ತದೆ. ಆಹಾರವನ್ನು ಅದು ಚೆನ್ನಾಗಿ ಜಗಿಯುತ್ತದೆ. ಅಷ್ಟಲ್ಪ ಅಜೀರ್ಣ ತೊಂದರೆ ಇದ್ದರೆ ಅದು ಆಹಾರವನ್ನು ಮುಟ್ಟಲೂ ಬಯಸುವುದಿಲ್ಲ. ವಿಶ್ರಾಂತಿ ಹೊಂದುವಾಗಲೂ ಅದು ಸಂಪೂರ್ಣ ಆರಾಮ ಅನುಭವಿಸುತ್ತದೆ.

ನಿದ್ರೆಯ ನಂತರ ಅದು ಚಟುವಟಿಕೆ ಅಭಿವೃದ್ಧಿಗೊಳಿಸುವ ವ್ಯಾಯಾಮ ಮಾಡುತ್ತದೆ. ಇದು ನಮಗೆ ಒಳ್ಳೇ ಮಾರ್ಗದರ್ಶಕ ಸಲಹೆ. ಅಂಗಾಂಗಗಳನ್ನದು ಅದಷ್ಟು ಉದ್ದಕ್ಕೆ ಚಾಚಿಕೊಂಡು ಸ್ನಾಯುಗಳನ್ನು ಸಡಲಿಸುತ್ತದೆ. ಇದರಿಂದ ಹೊಟ್ಟೆಯೊಳಗಿನ ಅನಿಲಗಳು ನೇರಗೊಳ್ಳುವವು. ದಿನವನ್ನು ಚಾಚಿಕೊಳ್ಳುವ ಲಘು ವ್ಯಾಯಾಮದಿಂದಾರಂಭಿಸುವುದು ಅತ್ಯುತ್ತಮ.

ಕ್ರಿಕೆಟ್ ಆಟಕ್ಕೆ ಯೋಗಾಸನ

ಇತ್ತೀಚೆಗೆ ಇಂಗ್ಲಂಡಿಗೆ ಹೋಗಿ ತಮ್ಮ ಸಾಮರ್ಥ್ಯವನ್ನು ಶ್ಲಾಘನೀಯವಾಗಿ ಪ್ರದರ್ಶಿಸಿದ ಭಾರತೀಯ ಕ್ರಿಕೆಟ್ ಆಟಗಾರರು ಈ ವರ್ಷದ ಕೊನೆಯ ಭಾಗದಲ್ಲಿ ಆಸ್ಟ್ರೇಲಿಯಕ್ಕೆ ಹೋಗಲಿದ್ದಾರೆ. ಇಂಗ್ಲೆಂಡಿನ ಆಟದ ಬಯಲಲ್ಲಿ ಭಾರತೀಯರು ಕೆಲವೊಂದು ಶಾರೀರಕ ಚಟುವಟಿಕೆಯ ನ್ಯೂನತೆಗಳನ್ನು ತೋರಿಸಿದರು. ಯೋಗ್ಯ ವ್ಯಾಯಾಮದ ಕೊರತೆಯೇ ಇದಕ್ಕೆ ಕಾರಣವೆಂದೂ ಆಸ್ಟ್ರೇಲಿಯನ್ನರಂತಹ ಜಗತ್ ಶ್ರೇಷ್ಠ ಕ್ರಿಕೆಟ್ ಪಟುಗಳೊಡನೆ ಪಂದ್ಯವಾಡುವಾಗ ಶೀಘ್ರತಾ, ತಾಳ್ಮೆ, ಶರೀರ ಧಾರ್ಡ್ಯವಿರದಿದ್ದರೆ ಸಂಚಾರವು ಪೀಡಕವಾಗುವ ಸಂಭವವಿಟ್ಟುಮಾಡಬಹುದೆಂತಲೂ ಪ್ರಖ್ಯಾತ ಮಹಾರಾಷ್ಟ್ರ ಆಟಗಾರರಾದ ಪ್ರೊ|| ದೇವಧಾರರು ತಿಳಿಸುತ್ತಾರೆ.

"ನಮ್ಮ ಆಟಗಾರರಲ್ಲಿ ವಿಪುಲ ನೈಪುಣ್ಯವೂ ಗೌಣಕ್ರೀಡಾ ಶ್ರೇಷ್ಠತೆಯೂ ಇದೆ. ಶರೀರಾರೋಗ್ಯ, ಸಾಮರ್ಥ್ಯ ಮತ್ತು ಸಹಿಷ್ಣುತೆಯಲ್ಲಿ ಮಾತ್ರ ಅವರು ಪಾಶ್ಚಾತ್ಯರಿಗಿಂತ ಕೊಂಚ ಹಿಂದಿದ್ದಾರೆ" ಹೀಗೆಂದು ತಿಳಿಸುತ್ತ ದೇವಧಾರರು ಈ ಕೆಳಗಿನ ಸಲಹೆ ಕೊಡುತ್ತಾರೆ:

ಉತ್ತಮ ಶರೀರಧಾರ್ಡ್ಯವು ಜೀವನದ ಎಲ್ಲಾ ಆಶೆ ಹಾರೈಕೆಗಳ ಯಶಸ್ಸಿಗೆ ಕಾರಣ. ಕ್ರಿಕೆಟಿನಂತಹ ಬಯಲಾಟಗಳಲ್ಲಿ ಅದು ಇನ್ನೂ ಹೆಚ್ಚಿನ ಪರಿಪೂರ್ಣತೆಯದಿರಬೇಕು. ಆಸ್ಟ್ರೇಲಿಯದ ಬಿಸಿಲಲ್ಲಿ ಆರ್ರಾರು ದಿವಸದ ಟೆಸ್ಟ್ ಮೇಚುಗಳ ದಣಿವನ್ನೆದುರಿಸುವಾಗ ಇನ್ನೂ ಹೆಚ್ಚಿನ ಬಿಗಿ ಅವಶ್ಯವಿದೆ.

ನಮ್ಮ ಆಟಗಾರರೂ ಕ್ರೀಡಾಪಟುಗಳೂ ಬಿಗಿ ಶರೀರಕ್ಕಾಗಿ ಉತ್ತಮ ವ್ಯಾಯಾಮ ಕ್ರಮವನ್ನನುಸರಿಸಬೇಕು. ಯೋಗಾಸನ ವ್ಯಾಯಾಮ ಪದ್ಧತಿಯು ಇಂತಹ ಆಟ ಸಾಧನೆಗಳಿಗೆ ಅತ್ಯುತ್ತಮವಾದುದೆಂದು ನಾನು ಸ್ವಂತ ಅನುಭವದಿಂದ ಬಲ್ಲೆ. ಕ್ರಿಕೆಟ್ ಆಟದಲ್ಲಾಗಬಹುದಾದ ಆಯಾಸ, ನರಸೆಳೆತ, ಜಡ್ಡುಗಳನ್ನು ಯೋಗಾಸನದಿಂದ ಸ್ನಾಯುಗಳಿಗೆ ಸಿಗುವ ಉತ್ತಮ ಶಕ್ತಿಯಿಂದ ನಿವಾರಿಸಿಕೊಳ್ಳಬಹುದು.

ಕೃತ್ರಿಮ ಆಡಿನ ಮರಿ ರಾಜೆನ್ ಬಾಬುಗಳಿಗೆ

ಸರಕಾರದ ಪಶುವೈದ್ಯಕೀಯ ಪ್ರಯೋಗ ಶಾಲೆಗೆ ರಾಜೆನ್ ಬಾಬುಗಳು ಭೇಟಿ ಇತ್ತಾಗ ಕೃತ್ರಿಮ ರೀತಿಯಲ್ಲಿ ನಳಿಗೆ ಮೂಲಕ ವೀರ್ಯ ಸಂಯೋಗಿಸಿ ಉತ್ಪನ್ನ ಮಾಡಿದ ಆಡಿನ ಮರಿಯನ್ನು ಅವರಿಗೆ ಪ್ರಯೋಗ ಶಾಲಾಧಿಕಾರಿಗಳು ಅರ್ಪಿಸಿದರು.

ರಿಯಾಯತಿ ಲಗ್ಗೇಜಿನಲ್ಲಿ ವ್ಯಾಪಾರಿ ಸಾಮಾನುಗಳ ನಿಷೇಧ

ಪಸೆಂಜರರ ಸೌಕರ್ಯಗಳ ಬಗ್ಗೆ ಒಂದು ಮಣ ಭಾರದ ಸಾಮಾನುಗಳನ್ನು ಫ್ರೀ ತೆಗೆದುಕೊಂಡು ಹೋಗಬಹುದಾಗಿ ಮಾಡಿದ ರಿಯಾಯತಿ ಕಾರಣದಿಂದಾಗಿ ಪೆಸೆಂಜರರು ಅವರ ಸ್ವಂತ ಉಪಯೋಗದ ಸಾಮಾನುಗಳಲ್ಲದೆ ವ್ಯಾಪಾರಿ ಸಾಮಾನುಗಳನ್ನು ತಮ್ಮೊಡನೆ ಪ್ರಯಾಣ ಬೆಳೆಸುವ ಸ್ನೇಹಿತರ ಹೆಸರಿನಲ್ಲಿ ಈ ರಿಯಾಯತಿ ಮೂಲಕ ಧರ್ಮಾರ್ಥ ಸಾಗಿಸುವುದು ರೂಢಿಯಾಗಿದೆ.

ಮೋಟರ್ ವಾಹನಗಳು ರೈಲುಗಾಡಿಗಳಂತಾಗಿಲ್ಲ. ಅವುಗಳಲ್ಲಿ ನಿಯಮಿತ ಭಾರಕ್ಕಿಂತ ಹೆಚ್ಚಿನ ಸಾಮಾನುಗಳನ್ನು ಒಯ್ಯುವುದು ಮೋಟರ್ ವಾಹನಕ್ಕೂ ಮತ್ತು ಪೆಸೆಂಜರರಿಗೂ ಅಪಾಯವಾಗಿದೆ. ಕಾರಣ ಬಸ್ಸುಗಳಲ್ಲಿ ಒಯ್ಯುವ ಸಾಮಾನುಗಳನ್ನು ಪೆಸೆಂಜರರ ಅವಶ್ಯಕತೆ ಬಗ್ಗೆನೇ ಮಿತಗೊಳಿಸುವುದು ಅಗತ್ಯವಿದೆ.

ವ್ಯಾಪಾರಿ ಸಾಮಾನುಗಳನ್ನು ಒಯ್ಯುವರೆ ವ್ಯಾಪಾರಿಗಳು ಶಡ್ಯೂಲ್ ಟೈಮಿಗೆ ಕೊಂಡೊಯ್ಯುವ "ಲಕ್ಕಿ" ಯಾ "ಸಿ. ಪಿ. ಸಿ." ಲೋರಿ ಸರ್ವಿಸುಗಳ ಸೌಕರ್ಯವನ್ನು ಉಪಯೋಗಿಸಬೇಕಾಗಿ ಅಪೇಕ್ಷಿಸುತ್ತೇವೆ.

ವ್ಯಾಪಾರಿ ಸಾಮಾನುಗಳನ್ನು ಎಷ್ಟಕ್ಕೂ ಫ್ರೀ ಲಗ್ಗೇಜಿನ ಅಂಶದಲ್ಲಿ ಸೇರಿಸಿಕೊಳ್ಳಲಾಗುವುದಿಲ್ಲ. ಈ ಕುರಿತು ಮಾಹಿತಿಯನ್ನು ಬುಕ್ಕಿಂಗ್ ಕ್ಲಾರ್ಕರಿಂದ ಪಡಿಯಬಹುದು

JOINT MANAGERS,

The Combined Booking Agency, MANGALORE — The Joint Booking Office, KODIALBAIL

ಚಿನ್ನ ... ಪಾತ್ರೆ ಸಾಮಾನುಗಳು

ನುರಿತ ಕೆಲಸಗಾರರಿಂದ ತಯಾರಿಸಲ್ಪಟ್ಟ ತರಾವರಿ ನಮೂನೆಯ
ಪಾತ್ರೆಗಳ ಭಂಡಾರ

"ಕಲ್ಯಾಣೀಸ್ ಮೆಟಲ್ ಡೀರ್"

(ಬೆಳ್ಳಿ, ತಾಮ್ರ, ಕಂಚು, ಹಿತ್ತಾಳೆ ಪಾತ್ರೆ ಉಪಕರಣಗಳ ಅಂಗಡಿ)
ರಥಬೀದಿ, ಮಂಗಳೂರು.

ಒಮ್ಮೆ ಸಂದರ್ಶಿಸಿದರೆ ಖಾತ್ರಿಯಾಗುವುದು.

ವಿ. ಸೂ.— ಗಿರಾಕಿಗಳ ಅಭಿರುಚಿಗನುಸಾರವಾಗಿ ತಾಮ್ರ, ಹಿತ್ತಾಳೆ
ಕಂಚು ಮತ್ತು ಬೆಳ್ಳಿ ಸಾಮಾನುಗಳನ್ನು ತಯಾರಿಸಿ ಕೊಡಲಾಗುತ್ತದೆ.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಪದನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ್ದು ಬೇನೆ, ಪಕ್ಷವಾತ, ನೋವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ,
ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

1947 *Greetings For The New Year* 1947

To

ALL OUR POLICY HOLDERS,
MEDICAL EXAMINERS,
AGENTS AND WELLWISHERS,

And Best Wishes

FOR A PROSPEROUS YEAR TO COME

From

Kochikar Brothers, Limited.

Chief Agents for South India including Indian States & Bombay City

THE BOMBAY LIFE ASSURANCE COMPANY LIMITED

MADRAS, BANGALORE, TRIVANDRUM, MANGALORE, MADURA, CALICUT, BOMBAY, & UDIPI.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with seletced ingredients under the supervision of the experienced staff. A specific for the puerperal diseases and also valuable to puerperal woman as tonic increases the vitality and sexual vigour, Also useful in habitual abortion and all diseases pertaining to the heart & lungs.

Depot: **Maharata Galli, Hubli**

Bhuvanendra Products Ltd.

Factory & Head Office: KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು; ಸೂತಿಕಾ ರೋಗಗಳನ್ನು ಕಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಖು 24—1—1947 [ಸಂಚಿಕೆ 4]

ಹಿಂದೀ ರಾಜಕಾರಣ

ಲೇ: ಶ್ರೀ ಎನ್. ಆರ್. ಕಲ್ಲೆ.

ಘಟನಾ ಸಮಿತಿಯ ಕಾರ್ಯಕಲಾಪಗಳು

ಪಂಡಿತ ಜವಾಹರಲಾಲರ ಠರಾವು ಸ್ವೀಕೃತವಾಯಿತು

ಮುಸ್ಲಿಂ ಲೀಗು ಮುಂದೇನು ಮಾಡುವದು

ಇದೇ ತಾ. ೨೦ಕ್ಕೆ ರಾಜ್ಯ ಘಟನಾ ಸಮಿತಿಯ ಸಭೆಯು ಪುನಃ ಆರಂಭವಾಯಿತು. ಆದರೆ ಮೊದಲೇ ನಿರೀಕ್ಷಿಸಿದಂತೆ ಮುಸ್ಲಿಂ ಲೀಗು ಚಂಡಿತನದಿಂದ ಈ ಸಭೆಗೆ ಬರಲಿಲ್ಲ. ನರೇಂದ್ರ ಮಂಡಲದವರು ಇನ್ನೂ ಮಾತುಕತೆಯಲ್ಲಿಯೇ ಕಾಲಹರಣ ಮಾಡುತ್ತಿರುವರು. ಹೀಗಾಗಿ ಹೊರಗುಳಿದವರು ಇನ್ನೂ ಉಪೇಕ್ಷೆಯಲ್ಲಿಯೇ ಕಾಲಕಳೆಯುವಂತೆ ತೋರುತ್ತದೆ.

ಪಂಡಿತ ಜವಾಹರರ ಠರಾವು

ಮೊತ್ತಮೊದಲು ಸಭೆ ಕೂಡಿದಾಗ, ಮುಂದಿನ ಕೆಲಸವನ್ನು ಯಶಸ್ವಿಯಾಗಿ ಸಾಗಿಸುವುದಕ್ಕೆ ನಾನಾ ಜನರ ಮಾರ್ಗದರ್ಶಕ ಸಮಿತಿ ರಚಿಸಲ್ಪಟ್ಟಿದ್ದು ಅದರಲ್ಲಿಯ ಸದಸ್ಯರ ಹೆಸರನ್ನು ಅಧ್ಯಕ್ಷರು ಸಭೆಯಲ್ಲಿ ಉದ್ಘೋಷಿಸಿದರು. ನಂತರ ಪಂಡಿತ ಜವಾಹರಲಾಲರ ಘಟನಾ ಸಮಿತಿಯ ಗೊತ್ತುಗುರಿಗಳನ್ನು ವಿವೇಚಿಸಿದ ಠರಾವಿನ ಮೇಲೆ ಚರ್ಚೆಯಾಯಿತು. ಚರ್ಚೆಯಲ್ಲಿ ಸರ್ ರಾಧಾಕೃಷ್ಣನ್, ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್ ಹಾಗೂ ಬೇರೆ ಬೇರೆ ಪಕ್ಷದ ಪ್ರಮುಖರು ಭಾಗವಹಿಸಿದರು. ಪಂಡಿತ ಜವಾಹರಲಾಲರ ಠರಾವನ್ನು ಈ ಸಲ ಮುಂದೆ ಹಾಕದೆ ಸ್ವೀಕರಿಸಿಕೊಳ್ಳಬೇಕು. ಮುಂದಿನ ಕಾರ್ಯಾಕಲಾಪಗಳನ್ನು ಯಶಸ್ವಿಯಾಗಿ ಸಭೆ ಸಾಗಿಸಿಕೊಂಡು ಹೋಗಬೇಕೆಂಬ ಅಭಿಪ್ರಾಯವೇ ಸದಸ್ಯರ ಮಾತುಗಳಿಂದ ಧ್ವನಿತವಾಗುತ್ತಿತ್ತು. ಮುಸ್ಲಿಂಲೀಗು ತಳೆದ ಧೋರಣೆಯು ಯಾರ ಮನಸ್ಸಿಗೂ ಒಪ್ಪಲಿಲ್ಲ. ಕಳೆದ ಸಲ ಉಪಸೂಚನೆಯನ್ನು ಮುಂದಿಸಿದ್ದ ಎಂ. ಆರ್. ಜಯಕರರು ಈ ಸಲ ತಮ್ಮ ಉಪಸೂಚನೆಯನ್ನು ಹಿಂತೆಗೆದುಕೊಂಡುದಲ್ಲದೆ ಲೀಗಿನ ಪ್ರವೇಶಕ್ಕೆ ಅನುಕೂಲಮಾಡುವದೇ ನನ್ನ ಸೂಚನೆಯ ಉದ್ದೇಶ, ಆ ರೀತಿ ಮಾಡಿ ಸಮಯ ಕೊಟ್ಟರೂ ಲೀಗು ಬಾರದ್ದರಿಂದ, ಮುಂದಾದರೂ ಬರುತ್ತದೋ ಇಲ್ಲವೋ ಎಂಬುದು ಸಂಶಯಾಸ್ಪದವಾದ ವಿಷಯವಿದೆ. ನನ್ನ ಉಪಸೂಚನೆಯು ಈಗ ಅಗತ್ಯವಿಲ್ಲವೆಂದು ಅದನ್ನು ಹಿಂತೆಗೆದುಕೊಂಡರು. ಹೀಗಾಗಿ ಈ ಠರಾವು ತಾ. ೨೨ಕ್ಕೆ ಅವಿರೋಧವಾಗಿ ಸ್ವೀಕೃತವಾಯಿತೆಂದು ಸುದ್ದಿಯುಂಟು.

ನರೇಂದ್ರರ ಬಗ್ಗೆ

ನರೇಂದ್ರರ ಪ್ರವೇಶದ ಬಗ್ಗೆ ಆಸ್ಪದ ಮಾಡಿಕೊಡಬೇಕೆಂಬುದು ಘಟನಾ ಸಮಿತಿಯ ಉದ್ದೇಶ. ಈ ಉದ್ದೇಶದಿಂದಲೇ ನರೇಂದ್ರ ಮಂಡಲದ ಸಂಧಾನ ಸಮಿತಿಯವರು ಮಾಡಿದ ಸೂಚನೆಗೆ ಅನುಗುಣವಾಗಿ ಘಟನಾ ಸಮಿತಿಯು ಒಂದು ಉಪಸಮಿತಿಯನ್ನು ನೇಮಿಸಲಿರುವದೆಂದೂ ಪಂಡಿತ ಜವಾಹರಲಾಲರು ಆ ಬಗ್ಗೆ ಒಂದು ಠರಾವನ್ನು ಮುಂದಿಸಿರುವರೆಂದೂ ಹೇಳಲಾಗಿದೆ. ಒಟ್ಟಿನಲ್ಲಿ ಅಡ್ಡಿ ಆತಂಕಗಳಿಲ್ಲದೆ ಎಲ್ಲರ ಒಪ್ಪಿಗೆಗೆ ಪಾತ್ರವಾಗುವಂತೆ ಶಾಂತರೀತಿಯಿಂದ ಕೆಲಸ ಸಾಗಿಸಬೇಕೆಂಬುದು ಘಟನಾ ಸಮಿತಿಯ ಉದ್ದೇಶ.

ಟೀಕಾಕಾರರಿಗೆ ಸಮರ್ಪಕ ಉತ್ತರ

ಹಿಂದೀ ಪ್ರಗತಿಯ ವಿರೋಧಿಗಳೂ ಅಪಪ್ರಚಾರದಲ್ಲಿ ಸಂಪನ್ನರೂ ಆದ ಚರ್ಚಿಲ್ ಮತ್ತು ಸಾಯಿಮನ್ನರು ಬ್ರಿಟಿಶ್ ಪಾರ್ಲಿಮೆಂಟರಲ್ಲಿ ಹಾಗೂ ತಂತಮಗೆ ಅನುಕೂಲವಿರುವ ಪತ್ರಿಕೆಗಳಲ್ಲಿ ಮಾಡಿದ ಟೀಕೆಯನ್ನು ಆಕ್ಷೇಪಿಸಿ ಘಟನಾ ಸಮಿತಿಯು ಹಿಂದೂ ಪ್ರತಿನಿಧಿಗಳೂ ಸಂಸ್ಥೆಯಲ್ಲಿ ಅದು ಸರ್ವ ಪ್ರತಿನಿಧಿಕವಾಗಿದ್ದು ಎಲ್ಲ ಅಲ್ಪ ಸಂಖ್ಯಾಕರೂ ಅವರಲ್ಲಿರುವರು. ಆದರೆ ದುರ್ದೈವದಿಂದ ಲೀಗು ಮಾತ್ರ ಅವರಲ್ಲಿ ಪ್ರವೇಶಿಸಲಿಲ್ಲವೆಂದು ಅಂಕೆ ಸಂಖೆ ಕೊಟ್ಟು ಹೇಳಿದ್ದಲ್ಲದೆ ಪರ್ಯಾಯದಿಂದ ಬ್ರಿಟಿಶ ಉದ್ದೇಶವು ಹಿಂದೀ ಪ್ರಗತಿಗೆ ಎಂದಿನಂತೆ ತಡೆಯಾಗಿರುವದೆಂಬುದದನ್ನು ಸ್ಪಷ್ಟಮಾಡಿರುವರು. ಇದರಿಂದ ಹಿಂದೀ ಹಿತಘಾತುಕರಿಗೆ ಸ್ವಲ್ಪ ತ್ರಾಸವಾಗಿರಬಹುದು.

ಲೀಗಿನ ಉದ್ದೇಶವೇನು?

ಈ ಜಗತ್ತಿನಲ್ಲಿ ಸಾಮ್ರಾಜ್ಯವನ್ನು ಕಟ್ಟಿಕೊಂಡು ಈ ವರೆಗೆ ಬೇಳೆ ಬೇಯಿಸಿಕೊಂಡು ಬಂದ ಬ್ರಿಟಿಷರು ತಮ್ಮ ವಿಲಂಬಕಾರಕ ಧೋರಣೆಯಿಂದಲೇ ಎದುರಾಳಿಗಳನ್ನು ಬಗ್ಗಿಸಿಕೊಂಡು ಬಂದವರು. ಆದರೆ ಇಂದು ಪರಿಸ್ಥಿತಿ ಬದಲಾಗಿದೆ. ಬ್ರಿಟಿಷ ವಿಲಂಬಕಾರಕ ಧೋರಣೆಗೆ ಬೆಲೆಯಿಲ್ಲದಂತಾಗಿದೆ. ಇಂಥ ಕಾಲದಲ್ಲಿ ಆ ವಿಲಂಬಕಾರಕ ಮಾರ್ಗವನ್ನು ಮುಸ್ಲಿಂ ಲೀಗು ಅನುಸರಿಸಿಕೊಂಡಿದೆಯೆಂಬುದು ಈಗಿನ ಕೆಲವು ದಿನಗಳಲ್ಲಿ ಅದು ನಡೆದ ಬಗೆಯಿಂದ ಸ್ಪಷ್ಟವಾಗುತ್ತದೆ. ಬ್ರಿಟಿಷರಿಗಾದ ಗತಿ ತನಗೆ ಎಂದು ಲೀಗು ಮರೆತಿದೆಯೋ ಅಥವಾ ಬ್ರಿಟಿಷರಿಂದಲೇ ತನ್ನ ಸ್ವಾರ್ಥ ಸಿದ್ಧಿ– ಅವರನ್ನು ಬಿಟ್ಟು ನಮಗೆ ಸ್ವರ್ಗವೂ ಬೇಡವೆಂದು ನಿರ್ಧರಿಸಿರುವದೋ ಎಂಬ ವಿಷಯವು ನಮಗೆ ಇನ್ನೂ ಗೊತ್ತಾಗಿಲ್ಲ. ಒಟ್ಟಿನಲ್ಲಿ ಹಿಂದುಸ್ಥಾನದ ಪ್ರಗತಿಗೆ ಲೀಗು ಉಪೇಕ್ಷೆಯಿಂದ ಹಾಗೂ ವಿಲಂಬಕಾರಕ ಧೋರಣೆಯಿಂದ ತನ್ನ ಶಕ್ತಿಯ ಪ್ರಮಾಣಕ್ಕನುಸರಿಸಿ ತಡೆಯನ್ನೊಡ್ಡಲು ಪ್ರಯತ್ನಮಾಡಿದಂತೆ ತೋರುವದು.

ತಾನೊಂದೆಣಿಸಿದರೆ–?

ಎಲ್ಲ ಕೆಲಸಗಳೂ ಮಾನವನ ಎಣಿಕೆಯಂತೆ ಸಾಧಿಸುವದಿಲ್ಲ. ತಾನೊಂದನ್ನು ಮಾನವನು ಎಣಿಸುವಾಗ ದೈವವು ಬೇರೊಂದನ್ನು ಚಿಂತಿಸುತ್ತಿದೆ. ಇಂಥ ಪರಿಸ್ಥಿತಿ ಈಗ ಬ್ರಿಟಿಷರಿಗೆ ಬಂದೊದಗಿದೆ. ಯಾವ ವಸಾಹತುಗಳಿಗೂ ದಾಸ್ಯ ದೇಶಗಳಿಗೂ ಸ್ವಾತಂತ್ರ್ಯ ದೊರಕಬಾರದೆಂಬುದು ಬ್ರಿಟಿಷ ಗುರಿ. ಅದಕ್ಕೆ ಅನುಕೂಲವಾಗುವಂತೆ ಅಂತಃಕಲಹವನ್ನು ತಂದೊಡ್ಡುವದು ಅವರ ಉದ್ದೇಶ. ಅಂತೇ ಚೀನ ಮತ್ತು ಬರ್ಮಾದಲ್ಲಿ ಅಂತಃಕಲಹವು ವ್ಯಾಪಿಯಾಗಿದೆ. ಪೂರ್ವ ದೇಶಗಳಲ್ಲಿ ಸ್ವಾಭಿಮಾನ ಮತ್ತು ಸ್ವಾತಂತ್ರ್ಯಾಭಿಮಾನಗಳು ಕೆರಳುತ್ತಿವೆ. ಈಗೆದ್ದಿರುವ ಈ ಸ್ವಾಭಿಮಾನ ಮತ್ತು ಸ್ವಾತಂತ್ರ್ಯಾಭಿಮಾನದ ಪ್ರವಾಹವು ಒಮ್ಮಿಂದೊಮ್ಮೆಲೆ ಬ್ರಿಟಿಷ ಸಾಮ್ರಾಜ್ಯವನ್ನು ಕೊಚ್ಚಿ ಜಗತ್ತಿನ ಎಲ್ಲಾ ಸಾಮ್ರಾಜ್ಯಗಳನ್ನು ಕೊನೆಗೊಳಿಸುವಷ್ಟು ಸಮರ್ಥವಿದೆಯೆಂಬುದನ್ನು ಬ್ರಿಟಿಷ ಮುತ್ಸದ್ದಿಗಳು ಮರೆತಿರುವರು.

ಏಶಿಯಾವನ್ನು ರಣಕ್ಷೇತ್ರ ಮಾಡಬಾರದು

ಏಶಿಯಾವು ರಣಕ್ಷೇತ್ರವಾಗಬಾರದೆಂಬುದೇ ಹಿಂದೀಯರ ಗುರಿ. ಇದು ರಣಕ್ಷೇತ್ರವಾದಾಗ ಯುರೋಪದ ಯುದ್ಧಗಳಂತೆ ಸಣ್ಣಪುಟ್ಟ ಯುದ್ಧಗಳಲ್ಲ, ದೊಡ್ಡ ಯುದ್ಧಗಳಾಗುವದು ಅನಿವಾರ್ಯವಿದೆ. ಇನ್ನು ಮುಂದೆ ಆಗಲಿರುವ ದೊಡ್ಡ ಯುದ್ಧಗಳನ್ನು ಸಹಿಸುವ ಶಕ್ತಿಯೂ ಮಾನವ ಜಗತ್ತಿಗೆ ಈಗ ಉಳಿದಿಲ್ಲ. ಈ ತಪ್ಪನ್ನು ಯುರೋಪಿಯನ್ನರು ಮಾಡಿದರೂ ಏಶಿಯಾವು ಮಾಡಬಾರದು. ಏಶಿಯಾದಲ್ಲಿ ಆದರ್ಶ ರಾಷ್ಟ್ರವೆನಿಸಿ ಮುಂಬೆಳಕನ್ನು ಬೀರಿ ಹಿಂದುಸ್ಥಾನವು ಸಾಗಬೇಕೆಂತಲೇ ಘಟನಾಸಮಿತಿಯು ಅತ್ಯುಚ್ಛವಾದ ಹಾಗೂ ಸರ್ವಮಾನ್ಯವಾದ ಮತ್ತು ಸರ್ವಹಿತದಾಯಕವಾದ ಘಟನೆಯನ್ನು ರಚಿಸಲು ಕಂಕಣಬದ್ಧವಾಗಿದೆ–ಇಂಥ ಸಂದರ್ಭದಲ್ಲಿ ಲೀಗಿನವರಲ್ಲಿ ಸ್ವಾತಂತ್ರ್ಯವಾದ ಮುತ್ಸದ್ದಿತನವು ಸ್ವಲ್ಪ ಪ್ರಮಾಣದಲ್ಲಿದ್ದರೂ ಅದರ ಉಪಯೋಗ ಮಾಡಿಕೊಳ್ಳುವಂತಿದ್ದರೆ ಅವರು ಘಟನಾಸಮಿತಿಯನ್ನು ಸೇರಿ ನಮ್ಮ ಹಿತಘಾತುಕರೂ ವೈರಿಗಳೂ ಆದ ಪರಕೀಯರಿಂದ ನಮ್ಮ ದೇಶವನ್ನು ಮೊದಲು ಬಂಧಮುಕ್ತ ಮಾಡುವದು ಅತ್ಯಾವಶ್ಯಕ.

ಮಹಾತ್ಮರು ತಮ್ಮ ಸಂಚಾರ ಪ್ರಸಂಗದಲ್ಲಿ ಒಂದು ಕಡೆ ದಾರಿಯಲ್ಲಿನ ಕಸದ ಕೊಚ್ಚೆಗಳನ್ನು ತೆಗೆದರು. ಒಂದು ಸಲ ಬಂದು ಮಲದ ರಾಶಿಯನ್ನು ತೆಗೆಯಲು ಹೋಗುವಾಗ ಅವರ ಸಂಗಾತಿಗಳಾಗಿರುವ ಸಿಖ್ಖ ಸ್ವಯಂ ಸೇವಕರು ಮುಂದೆ ಬಂದು ಅದನ್ನು ತೆಗೆದರು. ಮತ್ತೊಂದು ಸಲ ದನದ ಸೆಗಣಿಯನ್ನು ಮಹಾತ್ಮರು ತೆಗೆಯಲು ಹೋದಾಗ ಕೆಲವು ಮುಸಲ್ಮಾನರು ಅದನ್ನು ಬೇಗನೆ ತೆಗೆದರು–ಎಂತಹ ಪವಿತ್ರ ಆದರ್ಶ!

ಪಾಕಿಸ್ತಾನದ ಉನ್ನತಿ ಅವನತಿಗಳು

ಮತಾಂಧತೆಯುವರ ಕನಸು ರಾಜ್ಯ

ದ್ವೇಷ, ವೈಷಮ್ಯ, ಅತೃಪ್ತಿ ದಂಗೆಗಳ ಹೇಮ

[illegible] ಈಗ [illegible] ವರ್ಷ [illegible] 1948ರ [illegible] ಪಾಕಿಸ್ತಾನವು [illegible] ಮುಸಲ್ಮಾನರು ತಮ್ಮ ಉಜ್ವಲ ಭವಿಷ್ಯದ ರುಚಿ ನೋಡಲು ತಮ್ಮ ನಾಯಕನಿಂದ ರಚಿಸಲ್ಪಟ್ಟ ಪಂಜಾಬ (ಪಾಕ್) ಪ್ರದೇಶ (ಸ್ತಾನ) [illegible] ಮನಸ್ಸು [illegible] ಸಂಚಾರ ಹೋಗಿ [illegible] ಅವ್ಯವಸ್ಥೆಯ ಸಂಧಿಕಾಲವಾಗಿತ್ತು. ಆಗಲೇ ನಾನು ಪಾಕಿಸ್ತಾನದ ದಿಗ್ದರ್ಶನವೊಂದನ್ನು ಕಂಡೆ" ಹೀಗೆಂದು ಸಿ. ಕೆ. ನಾರಾಯಣ ಸ್ವಾಮಿಯವರು ಒಂದು ಲೇಖನದಲ್ಲಿ 'ಮುಸ್ಲಿಂ ಮನೆನಾಡಿನ' ಕಲ್ಪನಾತ್ಮಕ ಭವಿಷ್ಯದ ಕುರಿತು ಸವಿಸ್ತಾರವಾಗಿ ನಿರೂಪಿಸಿದ್ದಾರೆ ಅದರ ಸಾರಾಂಶ ಹೀಗಿದೆ:

ಆ ಹತ್ತು ವರ್ಷಗಳು

ಹಲವು ವರ್ಷಗಳು ಉರುಳಿದುವು.

ಪಾಕಿಸ್ತಾನದಲ್ಲಿ ಅಭಿವೃದ್ಧಿ ಕಾಣಬಹುದೆಂದು ಕಟ್ಟಿ ಹೋದ ನನ್ನ ಕೆಲ ಸ್ನೇಹಿತರು ಹೇಗಿರುವರೆಂದು ನೋಡಬೇಕೆಂಬ ಕುತೂಹಲ ಹೆಚ್ಚಿತು. ನಾನು ಹೊರಟೆ. ನಾನು ಹಲವು ಸ್ನೇಹಿತರನ್ನೂ ಇತರರನ್ನೂ ಕಂಡು ಮಾತನಾಡಿದೆ ಆ ಪ್ರದೇಶದಲ್ಲಿ ಒಂದು ತರದ ವ್ಯವಸ್ಥೆ ಸ್ಥಾಪಿಸಲ್ಪಟ್ಟಿತ್ತಾದರೂ ಜನತೆಯ ಮನಸ್ಸಿನಲ್ಲಿ ಅತೃಪ್ತಿ, ಅಂಜಿಕೆ, ಕೋಪೋದ್ರೇಕದ ಭಾವನೆಗಳು ತುಂಬಿದ್ದುದು ಕಂಡುಬಂತು ಪಾಕಿಸ್ತಾನಕ್ಕೆ ಇದು ಶುಭ ಸೂಚಕವಲ್ಲ

ಆಗ ರಮ್ಜಾನಿನ ತಿಂಗಳಾಗಿತ್ತು ಪ್ರವಾದಿ ಮಹಮ್ಮದನ ಬೋಧನೆಗಳು ರಾಜ್ಯಭಾರ ಮತ್ತು ಸಮಾಜ ಕ್ರಮಗಳು ಮತ ಧರ್ಮಬದ್ಧವಾಗಿರಬಹುದೆಂದು ನಾನು ಎಣಿಸಿದ್ದೆ ಜನರೇನೋ ಕೊರಾನನ್ನು ಗುಂಪಾಗಿ ಓದುತಿದ್ದು, ಅನೇಕರು ಉಪವಾಸ ವ್ರತವನ್ನಾಚರಿಸಿದ್ದರು. ವಿಶ್ವಾಸಿಗರು ಗುಂಪಾಗಿ ಮಸೀದಿಗಳಿಗೆ ಹೋಗುತಿದ್ದರು. ಬೇರೆ ಕೆಲವು ಕಡೆ ಶ್ರೀಮಂತ ಗೃಹಗಳಲ್ಲಿ ಸಂತೋಷ ಕೂಟಗಳ ಗುಲ್ಲೂ ಕೇಳಿಸುತಿತ್ತು. ಅಲ್ಲಿ ಒಳಗೆ ಯಾರನ್ನೂ ಬಿಡುತ್ತಿರಲಿಲ್ಲ ಕಡೆಗೆ ಹೇಗೂ ಪಾಕಿಸ್ತಾನ್ ಸರಕಾರದ ಪ್ರೀತಿಗೊಳಗಾದ ಒರ್ವ ಗೃಹಸ್ಥನನ್ನು ಕಂಡೆ. ಬಂಗಲೆಯೊಳಗೆ ಏನು ನಡೆಯುತ್ತಿದೆ ಎಂದು ವಿಚಾರಿಸಿದಾಗ ಅವನು ನನ್ನನ್ನೇ ದಿಟ್ಟಿಸಿ ನೋಡಿ ತಲೆಯನ್ನು ಬಗ್ಗಿಸಿದ.

ಆಳುವ ವರ್ಗ

"ಅವರೆಲ್ಲ ಆಳುವ ವರ್ಗಕ್ಕೆ ಸೇರಿದವರು" ಎಂದು ಹೇಳಿದ. ಈ ಧರ್ಮಪ್ರಧಾನ ರಾಜ್ಯದಲ್ಲಿ ಪಾಶ್ಚಾತ್ಯ ಮಾದರಿಯ ಆಡಳಿತ ವರ್ಗವೊಂದು ಉಂಟಾಗಿದೆಯೆಂದು ಕೇಳಿ ನನಗಾಶ್ಚರ್ಯವಾಯಿತು.

ಇಸ್ಲಾಮಿಕ್ ಧರ್ಮ ಬೋಧೆಗಳನ್ನು ಪ್ರತಿ ವರ್ಷವೂ ಪುನರ್ ಸ್ಫೂರ್ತಿಗೊಳಿಸಿ ಕಾರ್ಯಾಚರಣೆಯಲ್ಲಿ ತರಬೇಕೆಂದು ಆಚರಿಸಲ್ಪಡುವ ಪ್ರಾರ್ಥನೆ ಉಪವಾಸಗಳ ತಿಂಗಳಲ್ಲಿ ಒಂದು ಆಡಳಿತ ವರ್ಗವು ನಾಟ್ಯ ನೃತ್ಯ ಮಾದಕ ದ್ರಾಕ್ಷಾರಸ...... ಗಳಲ್ಲಿ ಮಗ್ನರಾಗಿರುವುದು.

"ಮಾದಕ ದ್ರವ್ಯಗಳು 'ಹರಾಮ್' (ನಿಷಿದ್ಧ) ಎಂದೆನಿಸಲ್ಪಡುವುದಿಲ್ಲವೇ?" ಎಂದು ಪ್ರಶ್ನಿಸಿದೆ. "ನಂಬಿಗಸ್ಥರಿಗೆ ನಿಷಿದ್ಧವಾಗಿರುವಂತಹುದು ಆಳುವವರಿಗೆ ಉಚಿತವೇ!" ಅದಕ್ಕವನೆಂದ: "ಮಹಾಶಯರೆ ಮುಸಲ್ಮಾನರಾದ ನಾವು ಪಾಕಿಸ್ತಾನವು ಅಮೃತವೆಂದು ತಿಳಿದಿದ್ದೆವು. ಈಗ ಮಾತ್ರ ವಿಷ ಉತ್ಪನ್ನವಾಗಿದೆ"

ಈ ಸರಳವೂ ನಿರ್ಭೀತಿಯುದೂ ಆದ ನಿರೂಪಣೆ ನನ್ನನ್ನು ಚಕಿತಗೊಳಿಸಿತು.

ಆದರ್ಶ ಈ ಸ್ನೇಹಿತ ಪಾಕಿಸ್ತಾನದ ಉತ್ಸಾಹಿಯಾಗಿರಲಿಲ್ಲ. ಕೇವಲ ಇಸ್ಲಾಮ್ ಮತಾನುಯಾಯಿಯಾದುದರಿಂದ ಅವನು ಈ ಸ್ಥಾನದಲ್ಲಿ ಇರಬೇಕಾದ ಒತ್ತಾಯದ ಪರಿಸ್ಥಿತಿಯುಂಟಾಯಿತು

ಪಾಕಿಸ್ತಾನದ ನಿಜರೂಪ

ಹಾಗೆ ನಾನು ಸ್ಥಳದಿಂದ ಸ್ಥಳಕ್ಕೆ ಸಂಚರಿಸಿದೆ. ಒಂದು ಕಡೆ ಹಿಂದುಸ್ಥಾನದಲ್ಲಿ ಶ್ರೇಯಸ್ಕರವಾದ ವ್ಯಾಪಾರ ಮಾಡಿಕೊಂಡಿದ್ದ ಬೋರಿಗಳನ್ನು ಕಂಡೆ ಈಗ ಅವರ ವ್ಯಾಪಾರವು ಕ್ಷೀಣವಾಗಿತ್ತು ಇದಕ್ಕೆ ಪಾಕಿಸ್ತಾನದ ದರಿದ್ರತೆ ಮತ್ತು ಅವನತಿಯೇ ಕಾರಣವಾಗಿತ್ತು ಪಾಕಿಸ್ತಾನ ಜೀವನಕ್ಕೆ ತಮ್ಮನ್ನು ಹೊಂದಿಸಿಕೊಳ್ಳಲು ಅವರಿಗೆ ತುಂಬಾ ಕಷ್ಟತರವಾಗುತಿತ್ತು

ಇನ್ನೊಂದು ಕಡೆ ಮಲಬಾರಿನ ಮಾಪಿಳ್ಳೆಗಳಿದ್ದರು ಅವರ ವಿಶಿಷ್ಟ ಉಡುಪು ತೊಡಪುಗಳೆಲ್ಲ ಬದಲಾದವಣೆಯಾಗಿರಲಿಲ್ಲ ಅವರ ಹೆಂಗುಸರಿಗೆ ಕೇರಳದಲ್ಲಿರುವಾಗ ಪರದೆಯ ತೊಂದರೆಯಿರಲಿಲ್ಲ ಈಗ ಒತ್ತಾಯದ ಮುಸುಕು ಹಾಕಿಕೊಂಡಿದ್ದರವರು ಮಾಪಿಳ್ಳೆಗಳು ಸಣ್ಣಪುಟ್ಟ ವ್ಯಾಪಾರಿ (ಬ್ಯಾರಿ) ಗಳಾಗಿದ್ದರು ಅವರಿಗೆ ಪಾಕಿಸ್ಥಾನದ ಭಾಷೆಯೂ ಕಷ್ಟತರವೆ ಆಯಿತು.

ಮತ್ತೊಂದು ಕಡೆ ಆಗಾಖಾನರ ಶಿಷ್ಯವರ್ಗದ ಖೋಜಾಗಳಿದ್ದರು ಹಿಂದೆ ಇವರು ಪ್ರಗತಿಶೀಲರೂ, ಶ್ರೀಮಂತರೂ, ಆಡಂಬರ ಶೈಲಿಯವರೂ ಆಗಿದ್ದರು ಅವರು ಎಂದಿಗೂ ಗಡ್ಡ ಬಿಡುವವರಲ್ಲ ಆದರೆ ಪಾಕಿಸ್ತಾನದಲ್ಲಿ ಅವರು ಭ್ರಷ್ಟರೆನಿಸಿಕೊಂಡಿದ್ದಾರೆ

ಇಸ್ಲಾಮ್ ಕಾಣೆಯಾಗಿದೆ

ಪಾಕಿಸ್ಥಾನ ಸ್ಥಾಪನೆಯಲ್ಲಿ ಪರಸ್ಪರ ಸಹಾಯದ ಸರಕಾರವನ್ನೂ, ಪರಸ್ಪರ ಸಹಕಾರದ ಸಮಾಜಕ್ರಮವನ್ನು ಹೊಂದಲೆಳಸಿದವರ ಕನಸುಗಳೆಲ್ಲ ಶೂನ್ಯವಾದವು ಐರೋಪ್ಯ ಮಾದರಿಯ ಸರಕಾರವೂ ಅರ್ಥಿಕ ಪ್ರಧಾನ ಸಮಾಜವೂ ಒಟ್ಟುಗೂಡಿ ನಿಜವಾದ ಇಸ್ಲಾಮಿ ವಾತಾವರಣವನ್ನು ಲೋಪಗೊಳಿಸಿವೆ. ಕುಹುಕ ಗಲಭೆಗಾರರು ಕೆಡು ಮತಾಚಾರದವರೊಡನೆ ಸ್ನೇಹ ಬೆಳೆಸಿರುವರು ನಿಜವಾದ ಇಸ್ಲಾಮಿ ನೀತಿ ಪ್ರಕಾರ ದೇಶದ ಸಂಪತ್ತನ್ನು ಯಾರೂ ಅನುಭೋಗಿಸುವಂತಿಲ್ಲ. ಪ್ರಜೆಗಳೆಲ್ಲರಿಗೂ ಅದು ಸಮಾನವಾಗಿ ಹಂಚಲ್ಪಡಬೇಕು.

ಆದರೆ ನಾನು ಕಂಡ ಪಾಕಿಸ್ಥಾನದಲ್ಲಿ ಅಧಿಕಾರ ಸಂಪತ್ತು ಕೆಲವೇ ಶ್ರೀಮಂತರ ಕೈಯೊಳಗಾಗಿದ್ದುವು. ಈ ಶ್ರೀಮಂತರು ಸಮಾಜದ ಜೀಡರಂತಿದ್ದರು. ಅಧಿಕಾರದಿಂದ ಅವರು ತಮ್ಮ ಸ್ವಂತ ಸೊತ್ತನ್ನು ಕಾಪಾಡಲು ಪ್ರಯತ್ನಿಸುತಿದ್ದರು. ಇದರಿಂದ ಒಂದು ಗಂಭೀರ ಪರಿಸ್ಥಿತಿ ಉತ್ಪನ್ನವಾಯಿತು. ಪೈಗಂಬರರ ಕಾಲದ ನೆಮ್ಮದಿ ಜೀವನಕ್ಕೆ ಹಾತೊರೆಯುವವರು ಹಾರ್ದಿಕಗಳು ಪಾಶ್ಚಾತ್ಯ ನಾಗರೀಕತೆಯಲ್ಲಿ ತರಬೇತಿ ಹೊಂದಿದ ಆಡಳಿತ ವರ್ಗದ ಮನಸ್ಸಿಗೆ ಒಪ್ಪುತ್ತಿರಲಿಲ್ಲ.

ನಾನು ಹೋದ ಕಡೆಗಳಲ್ಲೆಲ್ಲ ಜನಜೀವನದ ಆಳದಲ್ಲಿ ಬೆಳೆಯುವ ಅತೃಪ್ತಿ, ನಿರಾಶೆ, ಶೂನ್ಯತೆಗಳೇ ಕಾಣಿಸುತಿದ್ದವು ಅಲ್ಲಿನ ಸರಕಾರಕ್ಕೂ ಅದು ಚೆನ್ನಾಗಿ ತಿಳಿದಿತ್ತು ಕಠಿಣ ಧೋರಣೆಯನ್ನು ವಹಿಸಿ ಎಲ್ಲವನ್ನು ಅದು ಹತೋಟಿಯಲ್ಲಿ ಹಿಡಕೊಂಡಿತ್ತು ಮೇಲೆ ಕಾಣುತ್ತಿರುವ ನೆಮ್ಮದಿಯು ಕೇವಲ ತೋರಿಕೆಯದಾಗಿತ್ತು ಆದರ ನಿರುದ್ಯೋಗ ದರಿದ್ರತೆ, ಮತ್ತು ಕ್ಲೇಶಗಳು ಮಾಯವಾಗಿರಲಿಲ್ಲ

ಪಾಕಿಸ್ಥಾನದಲ್ಲಿಯೂ ಮಜೂರ ಸಮಸ್ಯೆಯ ಪರಿಹಾರವಾಗಲಿಲ್ಲ ಮುಸ್ಲಿಂ ಬಂಡವಾಳಶಾಹಿಯು ಮುಸ್ಲಿಂ ಕೆಲಸಗಾರನಿಗೆ ಯಾವ ಸಹಾನುಭೂತಿಯುಳ್ಳವನಾಗಿರಲಿಲ್ಲ ಮುಸ್ಲಿಂ ಜಮೀನ್ದಾರನು ಮುಸ್ಲಿಂ ಕೃಷಿಕರಿಗೆ ಹಿಂದಿನ ಜಮೀನ್ದಾರನಷ್ಟೇ ಕಾಠಿಣ್ಯದಿಂದ ನೋಡುತಿದ್ದನು. ಸಮಾಜರೂ, ಜಮೀನ್ದಾರರೂ ಬಂಡವಾಳಶಾಹಿಗಳು ಅಲ್ಲೂ ಇದ್ದರು ಧರ್ಮಬದ್ಧ ರಾಜ್ಯಕಿಂತಲೂ ಆರ್ಥಿಕ ಸುಸ್ಥಿತಿಯ ರಾಜ್ಯಕ್ರಮವು ಉತ್ತಮವೆಂದು ಜನರಿಗೆ ತೋರಹತ್ತಿತು ಶುದ್ಧ ಮುಸಲ್ಮಾನರ ರಾಜ್ಯ (ಪಾಕಿಸ್ಥಾನ) ವೆಂಬ ಭಾವನೆಯು ಮೆಲ್ಲನೆ ಮಾಯವಾಗುತಿತ್ತು

ಹಿಂದೂ ಧರ್ಮದಲ್ಲಿ

ಅದೇ ಸಮಯಕ್ಕೆ ಹಿಂದೂಸ್ಥಾನದಲ್ಲಿ ಪ್ರಜಾಪ್ರಭುತ್ವವೊಂದ ಸ್ಥಾಪಿತವಾಗಿತ್ತು ಸಮಾಜಸತ್ತಾ ಪದ್ಧತಿಯ ಮೇಲ್ಪಂಕ್ತಿಯಾದ ದೂ ಪರಸ್ಪರ ಸಹಕಾರ ಕ್ರಮದಲ್ಲಿ ಆಡಳಿತವು ಸಾಗುತಿತ್ತು ಆಧುನಿಕ ಕೈಗಾರಿಕೆಯ ಉತ್ತಮ ವಿಧಾನಗಳನ್ನು ಕೃಷಿಗಾರಿಕೆಗಾಗಿ ಪರಿವರ್ತಿಸಿಕೊಳ್ಳಲಾಗಿತ್ತು ಜನತೆಯಿಂದಲೇ ಎಲ್ಲವೂ ನಡೆಸಲ್ಪಡುತಿತ್ತು

ಹಿಂದೂ ಮನೆನಾಡು ಸ್ಥಾಪನೆಯ ಆರಂಭದಲ್ಲಿಯೂ ಅನೇಕ ತೊಂದರೆಗಳುಂಟಾದುವು ವಿವಿಧ ಪ್ರಾಂತೀಯ ಹಿಂದೂಗಳ ಆಚಾರ ವಿಚಾರ ಸಂಸ್ಕೃತಿಗಳು ಒಟ್ಟುಗೂಡುವಾಗ ಹಾಸ್ಯಾಸ್ಪದ ಸನ್ನಿವೇಶಗಳುತ್ಪನ್ನವಾದುವು ಭಾಷಾ ಗಲಿಬಿಲಿಯೂ ಕೋಲಾಹಲವೆಬ್ಬಿಸಿತು ಸ್ಪೃಶ್ಯಾಸ್ಪೃಶ್ಯ ಭೇದಗಳು ತಲೆಯೆತ್ತಿದುವು ಆದರೆ ಅರ್ಧಶತಮಾನದಿಂದ ಜನತೆಯ ಸಾಮಾಜಿಕ ಆಚಾರ ವಿಚಾರಗಳಲ್ಲಿ ಕ್ರಾಂತಿಯನ್ನುಂಟುಮಾಡಿ ನವ ಜಾಗೃತಿ ಚೇತನಗೊಳಿಸಿದ ಕೊಂಗ್ರೆಸಿನ ಅವಿಶ್ರಾಂತ ಶ್ರಮದ ಫಲವಾಗಿ ಹಿಂದೂಸ್ಥಾನದಲ್ಲಿ ಹೆಚ್ಚಿನ ತೊಂದರೆಗಳು ಪ್ರಗತಿ ಪ್ರತಿಬಂಧಕವಾಗಲಿಲ್ಲ.

ಹಿಂದೂಸ್ಥಾನದಲ್ಲಿನ ಜನತೆ ಪ್ರಗತಿಶೀಲ ದೃಷ್ಟಿ ಕೋನವನ್ನಿಟ್ಟುಕೊಂಡು ಅನೇಕಾನೇಕ ರಾಜಕೀಯ ಮತ್ತು ಸಾಮಾಜಿಕ ಚಳವಳಗಳ ಅನುಭವವುಳ್ಳವಾದರಿಂದ ತನ್ನ ಹೊಸ ಸರಕಾರದೊಡನೆ ಸೌಹಾರ್ದಪೂರ್ಣ ಸಂಪರ್ಕವನ್ನಿಟ್ಟುಕೊಂಡು ಸಹಕರಿಸಿತು. ವಿಪರೀತ ದಾರಿದ್ರ್ಯ ಮತ್ತು ಹೇರಳ ಸಂಪತ್ತುಗಳ ಪರಿಸ್ಥಿತಿಯೂ ಸುಧಾರಿಸತೊಡಗಿತು. ಗ್ರಾಮ ಅಭಿವೃದ್ಧಿಯ ಮೇಲೆ ಹಿಂದೂಸ್ಥಾನದ ನೂತನ ಸಮಾಜ ಜೀವನ ವ್ಯವಹಾರವು ಸಂಸ್ಥಾಪಿಸಲಾಯಿತು. ಪಟ್ಟಣಗಳ ಕೃತ್ರಿಮ ಪ್ರಾಮುಖ್ಯತೆ ಹಳ್ಳಿಗಳ ಕಡೆ ತಿರುಗಿತು. ಹೆಚ್ಚಿನ ಜನತೆಯಲ್ಲಿ ಶ್ರೇಯಸ್ಸಿನ ಭರವಸೆಯುಂಟಾಯಿತು.

ಜನತೆಯು ಸುಭದ್ರವಾಯಿತು

ಹಿಂದೂಸ್ಥಾನವು ತನ್ನ ಆಂತರೀಕ ಪರಿಸ್ಥಿತಿಯನ್ನೂ ಸುಧಾರಿಸಿ ಅಂತರಾಷ್ಟ್ರೀಯ ವ್ಯವಹಾರದಲ್ಲಿ ಸಹಕಾರತನ್ನು ತೋರಿಸುತ್ತ ಮುಂದೆ ಸಾಗಿತು. ಹತ್ತಿರದ ನೆರೆ ರಾಷ್ಟ್ರಗಳೊಡನೆ ಹೆಚ್ಚೆಚ್ಚಿನ ಸ್ನೇಹ ಸಂಪರ್ಕ ವಿರಿಸಲಾಯಿತು ಪಾಕಿಸ್ತಾನಕ್ಕೆ ಹೋಗಲು ತಿರಸ್ಕರಿಸಿದ ಮುಸಲ್ಮಾನರಿಗೆ ಹಿಂದೂಸ್ಥಾನದಲ್ಲಿ ತೃಪ್ತಿಕರವಾದ ಮತೀಯ ಆರಾಧನೆಯ ಹಕ್ಕು ಭದ್ರತೆಗಳು ದೊರಕಿದುವು. ಅಲ್ಪ ಸಂಖ್ಯಾಕರು ನಿಜವಾದ ನೆಮ್ಮದಿ ಸ್ವಾತಂತ್ರ್ಯವನ್ನು ಅನುಭೋಗಿಸುವವರಾದರು ಸಾಮಾಜಿಕ ಮತ್ತು ಆಡಳಿತ ಚಟುವಟಿಕೆಗಳಲ್ಲಿ ಅವರ ಯೋಗ್ಯ ಸ್ಥಾನಮಾನಗಳು ದೊರಕುವಂತಾಯಿತು

ಪಾಕಿಸ್ಥಾನದೊಳಗೆ

ಈ ಸ್ಥಾನದ ಉತ್ತರ ಮತ್ತು ಪೂರ್ವಗಳಲ್ಲಿ ಎರಡು ರೀತಿಯ ರಾಜ್ಯಕ್ರಮವು ಸ್ಥಾಪಿತವಾಯಿತು ಗಡಿನಾಡು ಪ್ರದೇಶದಲ್ಲಿನ ಬೆಟ್ಟ ಜನರು ಪಂಗಡ ಪಂಗಡಗಳಾಗಿಯೇ ಬಾಳಲು ಇಚ್ಛಿಸಿದ್ದರು ಪೂರ್ವದ ಬಂಗಾಳದ ಜನತಾ ಮುಖಂಡರು ಧರ್ಮದ ಹೆಸರಲ್ಲಿ ಜನತೆಯ ಅತೃಪ್ತಿಯನ್ನು ದಬ್ಬಿ ಹಿಡಿಯಲು ಪ್ರಯತ್ನಪಟ್ಟರು ಸಿಂಧ ಮೊದಲಾದ ಕಡೆಗಳಲ್ಲಿ ಹಾರರು ಶ್ರೀಮಂತ ಪಾಕಿಸ್ಥಾನಿಗಳ ಮೇಲೆ ಪುಂಡಾಟಿಕೆ ನಡೆಸತೊಡಗಿದರು ಆ ಪ್ರಾಂತ್ಯ ಸರಕಾರದವರಿಗೆ ಅವರನ್ನು ಹತೋಟಿಯಲ್ಲಿಟ್ಟುಕೊಳ್ಳಲು ಸಾಧ್ಯವಾಗಲಿಲ್ಲ ಪಂಜಾಬ್ ಮೊದಲಾದ ಕಡೆಗಳಲ್ಲಿ ಜಮೀನ್ದಾರರು ರೈತರ ಶೋಷಣವನ್ನು ಕಡಿಮೆ ಮಾಡಿದಂತೆ ಕಾಣಲಿಲ್ಲ

ಪಾಕಿಸ್ಥಾನದ ಅಂತ್ಯ

ಈ ಸಮಯಕ್ಕೆ ಹಿಂದೂಸ್ಥಾನದ ಮುಖಂಡರು ಭಾರತದ ಎರಡು ಸ್ಥಾನಗಳ ಜನತಾ ಪ್ರತಿನಿಧಿಗಳ ಪರಿಷತ್ತೊಂದನ್ನು ಕರೆದು ಇದುವರೆಗಿನ ಪ್ರತ್ಯೇಕೀಕರಣದ ಅನುಭವವನ್ನು ಚರ್ಚಿಸಬೇಕೆಂದು ವಿನಂತಿಸಿಕೊಂಡರು. ಟಿಬೆಟ್ಟಿನಲ್ಲಿ ಈ ಪರಿಷತ್ತು ಜರಗಿತು ಪಾಕಿಸ್ಥಾನದ ಬೇರೆ ಬೇರೆ ಪ್ರಾಂತ್ಯಗಳು ಪರಸ್ಪರ ವಿರೋಧ ಧೋರಣೆಯನ್ನವಲಂಭಿಸಿದ ಪರಿಣಾಮವಾಗಿ ಅವರಲ್ಲಿ ಅನ್ಯೋನ್ಯ ತಿಕ್ಕಾಟವುಂಟಾಯಿತು ಪರಿಷತ್ತಿನಲ್ಲಿ ಈ ಕುರಿತು ಭೀಕರ ಚರ್ಚೆಯೂ ಆಯಿತು ಗಡಿನಾಡು ಸ್ವತಂತ್ರವೆಂದು ಘೋಷಿಸಿತು ಸಿಂಧಿಗಳೂ, ಬಲೂಚಿಗಳೂ ಅವರೊಡನೆ ಸೇರಿದರು ಅಸ್ಸಾಮಿನ ನಾನಾ ಜನರು ಸ್ವತಂತ್ರರಾದರು ಬಂಗಾಳದವರಿಗೆ ಬರ್ಮಾ ಗಡಿಯಿಂದ ತೊಂದರೆಗಳುಂಟಾಗತೊಡಗಿದುವು. ಯುದ್ಧ ಭಯದಿಂದ ಅದು ಹಿಂದೂಸ್ಥಾನದ ಸರಕಾರಕ್ಕೆ ಮೊರೆಯಿಟ್ಟು ಅದರ ಆಶ್ರಯ ಪಡೆಯಿತು ಅತ್ತ ಪಂಜಾಬಿನಲ್ಲಿ ಸಿಖ್ಖರು ದಂಗೆಯೆದ್ದು ಪ್ರಗತಿಶೀಲ ಮುಸಲ್ಮಾನ ಜನತಾ ಮುಖಂಡರೊಡನೆ ಸೇರಿ ಸರಕಾರವನ್ನು ವಶಪಡಿಸಿ ತಾವೂ ಹಿಂದೂಸ್ಥಾನಕ್ಕೆ ಸೇರುವುದೊಳಿತೆಂದು ನಿರ್ಧರಿಸಿದರು. ಕಡೆಗೆ ಎಲ್ಲರೂ ಅಖಂಡ ಹಿಂದೂಸ್ಥಾನವೇ ಶಾಂತಿ ನೆಮ್ಮದಿಗಳಿಗೆ ಸುಗಮ ದಾರಿ ಎಂದು ನಿರ್ಣಯಿಸಿದರು

ಪಾರ್ಲಿಮೆಂಟರಿ ವರದಿ ವಿಮರ್ಶೆ

ಭಾರತದ ಪ್ರಜಾಪ್ರಭುತ್ವ

ತಾ। 20ರಂದು ಸೇರಿದ ಘಟನಾ ಸಮಿತಿಯ ದ್ವಿತೀಯ ಅಧಿವೇಶನದಲ್ಲಿ ಘಟನಾ ನಿರ್ಮಾಪಕರು, ಪ್ರಜಾಪ್ರಭುತ್ವ ಪದ್ಧತಿಯೇ ತಮ್ಮ ಗುರಿಯಾಗಿ ನಿರ್ಧರಿಸಿದರು. ಪಾರತಂತ್ರ್ಯದಿಂದ ಪಾರಾಗಿ, ವಿಶ್ವಶಾಂತಿಗಾಗಿ ಸಹಕರಿಸುವ ಸ್ವತಂತ್ರ ರಾಷ್ಟ್ರಕ್ಕೆ ಅದಕ್ಕಿಂತಲೂ ಹಿರಿದಾದ ಬೇರೆ ಗುರಿಯಿಲ್ಲ. ಪ್ರಜೆಗಳ ಹಿತವನ್ನು ಹೃತ್ಪೂರ್ವಕ ಹಾರೈಸುವವರೆಲ್ಲ ಘಟನಾ ಸಮಿತಿಯ ಉದ್ದೇಶವನ್ನು ಸಂತೋಷದಿಂದ ಸ್ವಾಗತಿಸದಿರರು. ಸ್ವಾರ್ಥಹಿತ, ನಿರಂಕುಶ ಅಧಿಕಾರ, ಸ್ವೇಚ್ಛೆ ಸಲ್ಲಿಸುವವರುಗಳಿಗೆ ಇದರಿಂದ ಧಕ್ಕೆ ಬರುವುದೆಂದು ಅಂಜುವವರು ಸಹಜವಾಗಿ ಪ್ರಜಾರಾಜ್ಯಭಾರಕ್ಕೆ ತಮ್ಮ ಬದ್ಧ ವಿರೋಧವನ್ನು ಖಂಡಿತ ತೋರಿಸುವರು.

ಲೀಗಿನ ಮೌನ

ಮೌನವು ಸಂಮತಿ ಲಕ್ಷಣವೆಂದೂ ಸಿಮ್ಮತಿಯ ಚಿಹ್ನೆಯೆಂದೂ ಎರಡು ವಿಧವಾಗಿ ವ್ಯಾಖ್ಯೆ ಮಾಡಲಾಗುತ್ತಿದೆ. ಈಚೆಗಿನ ದಿನಗಳಿಂದ ಲೀಗ್ ಸರ್ವಾಧಿಕಾರಿ ಜಿನ್ನರು ಅಪೋಷ ಮೌನವ್ರತವನ್ನು ಧರಿಸುತ್ತಿರುವರು. ಇದು ಯಾವ ವಿಧದ ನಿಮಗಾಳಿಯ ಪೂರ್ವದ ಶಾಂತತೆಯೂ ತಿಳಿಯದು. 'ಮಾತು ಬೆಳ್ಳಿ; ಮೌನ ಬಂಗಾರದಂತೆ' ಎಂಬ ನಾಣ್ಣುಡಿಯೂ ಇದೆ. ಈ ಸಲದ ಘಟನಾ ಸಮಿತಿಯ ಅಧಿವೇಶನದಲ್ಲಿ ಸೇರದೇ ಇದ್ದ ಲೀಗು ಇದುವರೆಗೆ ತನ್ನ ಕಾರ್ಯಕಾರಿ ಮಂಡಳದ ಸಭೆಯನ್ನೂ ಕರೆಯಲಿಲ್ಲ. ಅದು ತಾ 29ರಂದು ಸೇರುವುದು. ದ್ವಿತೀಯಾಧಿವೇಶನವು ಅದೇ ತಾರೀಕಿನ ಸುಮಾರಿಗೆ ಕೊನೆಗೊಳ್ಳುವುದು. ಬಹುಶಃ ಅದು ಯೋಗ್ಯ ನೆವನಗಳನ್ನು ಹುಡುಕಲು ಈ ಭಂಗಿಯನ್ನಾಚರಿಸಿರಬಹುದು.

ಚರ್ಚಿಲ್ ಆಕ್ರೋಶ

ಲೀಗು ಸೇರಿಂದ ಘಟನಾ ಸಮಿತಿಯು ಪ್ರಾತಿನಿಧಿಕವಲ್ಲವೆಂದು ಎಟ್ಲಿ ಸರಕಾರವು ಕಾಂಗ್ರೆಸಿಗೆ ಸಹಾನುಭೂತಿ ತೋರಿಸುವುದು ಗಂಡಾಂತರ ಸ್ವಾತಂತ್ರ್ಯದ ಮಾಜಿ ಪ್ರಧಾನ ಚರ್ಚಿಲ್ಲರು ತಮ್ಮ ಭ್ರಾಂತ ಭಾವನೆಗಳಿಗೆ ನಿರೂಪಕೊಟ್ಟಿರುವರು.

ಒಂದು ದೃಷ್ಟಿಯಿಂದ ಎಟ್ಲಿ ಸರಕಾರವು ಲೀಗಿಗೆ ತೋರಿಸಿದಷ್ಟು ನಿರ್ಭೀತಿಯನ್ನು ಚರ್ಚಿಲ್ಲರು ತಮ್ಮ ಅಧಿಕಾರೋನ್ನತಿಯ ಕಾಲದಲ್ಲೂ ತೋರಿಸಿಲ್ಲವೆನ್ನಬೇಕು. ಆದರೆ ಅವಿಚಾರದಿಂದಲೋ, ಅವಿವೇಕದ ಪರಿಣಾಮ ಎಂಬಂತೆ ಲೀಗು ತಾನು ಮುಂದಿಸಿದ ಶರ್ತಗಳಿಂದ ತಾನೇ ಸಿಕ್ಕಿಬಿದ್ದು ದಾರಿ ಕಾಣದೆ, ಹೊಸ ನೆವಗಳನ್ನು ನಿರೀಕ್ಷಿಸುತ್ತ ಕಾಲವನ್ನು ಕೊಲ್ಲುತ್ತಿದೆ. ಆಗಲೇ ಲೀಗಿನ ಉನ್ನತ ಧುರೀಣ ವರ್ಗದಲ್ಲಿ ಭೇದಾಭೇದಗಳುತ್ಪನ್ನವಾಗಿಯೆಂದೂ ಚರ್ಚಿಲ್ಲರು ಅಧಿಕಾರಕ್ಕೆ ಬರುವ ತನಕ ಕಾಯುವುದು ಶವಕ್ಕೆ ಜೀವ ಬರುತ್ತದೆಂದು ಹಾರೈಸಿ ಕೂತಂತೆ ಮೂರ್ಖತನವಾಗುವುದೆಂದೂ ಅವರು ಅಭಿಪ್ರಾಯಪಡುತ್ತಿರುವರೆಂದೂ ತಿಳಿದು ಬರುತ್ತದೆ.

ಐ ಸಿ ಎಸ್. ಸಮಾಪ್ತಿ

ಬ್ರಿಟಿಷ್ ಸಾಮ್ರಾಜ್ಯಶಾಹಿಯ ಉಕ್ಕಿನ ಕವಚವು ಕಳಚಲ್ಪಡುವುದು. ಮುಂದೆ ಐ. ಸಿ. ಎಸ್. ಅಧಿಕಾರಿಗಳು ಬ್ರಿಟಿಷ್ ಸರಕಾರದ ಬೆಂಬಲದ ಮೇಲೆ ಹೊಂದಿಕೊಂಡಿರುವಂತಿಲ್ಲ. ಇಷ್ಟವಿದ್ದರೆ ಅವರು ಭಾರತ ಪ್ರಜಾಪ್ರಭುತ್ವ ಆಡಳಿತಗಾರರ ಕೈಕೆಳಗೆ ಸೇವೆ ಸಲ್ಲಿಸಬೇಕು. ಈ ಖಾತೆಯಿಂದ ವಿಮುಕ್ತರಾದವರಿಗೆ ಪರಿಹಾರ ಕೊಡಲು ಭಾರತ ಉಪಮಂತ್ರಿ ಹೆಂಡರ್ಸನ್ನರು ಡಿಲ್ಲಿಗೆ ಬಿತ್ತೈಸಿ ಸರ್ದಾರ್ ಪಟೇಲರೊಡನೆ ಸುಧೀರ್ಘ ಚರ್ಚೆ ನಡೆಸಿದ್ದರು. ಕೆಲಸ ಮಾಡುವವರಿಗೆ ಬ್ರಿಟಿಷ ಸರಕಾರದ ಕೈಕೆಳಗಾದರೇನು, ಭಾರತ ಸರಕಾರದಾದರೇನು? ಅನೇಕ 'ಎಸ್' ಮನುಷ್ಯರಿಗೆ ಪ್ರಜಾಪ್ರಭುತ್ವ ಮಾದರಿಯ ಮೇಲೆ ಆಡಳಿತ ನಡೆಸಲು ಬರುವುದಿಲ್ಲವೆಂದು ತಿಳಕೊಳ್ಳಬೇಕೆ? ಅದಕ್ಕೂ ಕಾರಣವಿದೆ. ಇದುವರೆಗೆ ತಮಗಿದ್ದ ಬಲವಾದ ಬೆಂಬಲದಿಂದ ಅವರ ನಿರಂಕುಶ ಪ್ರವೃತ್ತಿಯು ಬೆಳೆದಿತ್ತು. ಈಗ ಅದಕ್ಕೆ ಅಷ್ಟೇ ಬಲವಾದ ತಡೆಯುಂಟಾಗುವುದು.

ಅವರಿಗೆ ಪರಿಹಾರ ದ್ರವ್ಯವನ್ನು ಬ್ರಿಟಿಷ್ ಸರಕಾರದವರೇ ಕೊಡಬೇಕು. ಸಾಮ್ರಾಜ್ಯಶಾಹಿಯ ಯಂತ್ರವನ್ನು ಇದುವರೆಗೆ ಯಶಸ್ವಿಯಾಗಿ ಚಲಾಯಿಸಿದ ಕೀರ್ತಿ ಅವರಿಗೇ ಸಲ್ಲುವುದು. ಅವರ ಕೈಯಿಂದ ಬಿಡುಗಡೆ ಹೊಂದಿದವರಿಗೆ ಆ ಕೀರ್ತಿಯ ಹೆಚ್ಚು ಮಮತೆ ಇರದಿರುವುದು ಸಹಜ.

ನಾವಿಕರ ದಂಗೆಯ ಕಾರಣ

ಹಿಂದೀ ನಾವಿಕರ ಭಾರಿ ಬಂಡಾಯದ ಕುರಿತು ನೇಮಿಸಲಾದ ವಿಚಾರಣಾ ಸಮಿತಿಯ ವರದಿ ಮೇರೆಗೆ ಆ ಭೀಕರ ದಂಗೆಗೆ ಕಾರಣಭೂತರು ನೌಕಾಧಿಕಾರಿಗಳೇ ಎಂದು ತಿಳಿದುಬರುತ್ತದೆ. ನಾವಿಕರ ಅಸಂತೋಷವನ್ನು ಹೋಗಲಾಡಿಸಲು ಅವರು ಯಾವದೊಂದು ಉಪಾಯವನ್ನು ಕೈಕೊಳ್ಳಲಿಲ್ಲ. ಬಂಡಾಯವನ್ನು ನಿಲ್ಲಿಸಲೂ ತಕ್ಕ ಸಿದ್ಧತೆ ಮಾಡಲಿಲ್ಲ. ಗಲಭೆಯು ದೊಡ್ಡದಾಗಬೇಕೆಂದೇ ಅವರ ಉದ್ದೇಶವಿದ್ದಂತೆ ಕಾಣುತ್ತದೆ. ಯುರೋಪಿಯನ್ ನಾವಿಕರಿಗಿದ್ದ ಸವಲತ್ತುಗಳು ಹಿಂದೀಯರಿಗಿರಲಿಲ್ಲ. ಅವಾಚ್ಯ ಶಬ್ದಗಳಿಂದ ಹಿಂದೀ ನಾವಿಕರ ಮುಖಂಡರನ್ನು ಬೈಯಲಾಗುತ್ತಿತ್ತು. ಸದ್ಯಕ್ಕಂತೂ ಸರಕಾರವು ಹಿಂದೀ ನಾವಿಕರ ಅಡಚಣೆಗಳನ್ನು ನಿವಾರಿಸಲು ಪ್ರಯತ್ನಿಸುವುದಾಗಿ ಆಶ್ವಾಸನ ಇತ್ತುದು ಸ್ತುತ್ಯ.

ರಾಯಭಾರಿ ಆಸಫ್ ಅಲಿ

ಅಮೇರಿಕಕ್ಕೆ ಪ್ರಥಮ ಭಾರತೀಯ ರಾಯಭಾರಿಗಳಾಗಿ ಹೋಗುವ ಆಸಫ್ ಅಲಿಯವರು ಇದುವರೆಗೆ ಈ ಎರಡು ದೇಶಗಳ ನಡುವೆ ಇದ್ದ ತಪ್ಪಾಭಿಪ್ರಾಯವನ್ನು ಸರಿಪಡಿಸಲು ಪ್ರಯತ್ನಿಸುವರೆಂದು ಹಾರೈಸಲಾಗಿದೆ. ಭಾರತದ ಕುರಿತು ಅಮೇರಿಕದ ಜನತೆಯಲ್ಲಿರುವ ಅನೇಕ ತಪ್ಪು ಭಾವನೆಗಳ ಹೆಚ್ಚಾಗಿ ಬ್ರಿಟಿಷ್ ಪ್ರಚಾರಕರಿಂದ ಸೃಷ್ಟಿಸಲ್ಪಟ್ಟವು. ಈಚೆಗೆ ಮುಸ್ಲಿಂ ಲೀಗಿನ ಕೆಲವು ಪ್ರತಿನಿಧಿಗಳು ಆ ಕಡೆಗಳಲ್ಲಿ ಹಿಂದೂ ಮುಸ್ಲಿಂ ವ್ಯತ್ಯಾಸಗಳನ್ನು ಬೃಹತ್ಕರಿಸಿ ಪ್ರಚಾರ ಮಾಡಿರುವರು. ಅಖಿಲ ಭಾರತದ ಪ್ರತಿನಿಧಿಗಳಾಗಿ ಒರ್ವ ರಾಷ್ಟ್ರೀಯ ಮುಸಲ್ಮಾನರು ರಾಯಭಾರಿಗಳಾಗಿ ನೇಮಿಸಲ್ಪಟ್ಟಿರುವ ಒಂದೇ ಕಾರಣದಿಂದ ಅಲ್ಲಿಯ ಜನತೆಯಲ್ಲಿ ಜಿಜ್ಞಾಸೆಯನ್ನುಂಟುಮಾಡಬಹುದು.

ಭಾರತದ ಜನರು ಪ್ರಥಮ ಸಂಚಿಕೆಯ ಪರಿಚಯ, ತತ್ಸಂಬಂಧ ಸಂಗ್ರಹದೊಳಗೆ ಅಲ್ಲಿನ ಸ್ತ್ರೀಯರು ಸದಾ ಪರದೆಯ ಹಿಂದಿರುವವರೆಂತಲೂ ಅತ್ಯಂತ ಪ್ರಾಚೀನ ವಿಲಕ್ಷಣ ಚಿತ್ರಗಳಿಂದ ನಿರೂಪಿಸಲಾದ ಆಸಫ್ ಅಲಿಯವರು ಮೊದಲು ಈ ಅಪಪ್ರಚಾರವನ್ನು ನಿಲ್ಲಿಸಲು ಪ್ರಯತ್ನ ಮಾಡುವರು. ವಿಜಯಲಕ್ಷ್ಮಿಯವರು ತಮ್ಮ ವ್ಯಕ್ತಿತ್ವ ಪ್ರಭಾವದಿಂದ ಆಗಲೇ ಅಮೇರಿಕನ್ ಜನತೆಯನ್ನು ಆಕರ್ಷಿಸಿರುವರು.

ಮುಸ್ಲಿಮಳ ಉಪವಾಸ ವ್ರತ

ಪೂರ್ವ ಬಂಗಾಲದ ಶಿರೋಂಧಿ ಹಳ್ಳಿಯಲ್ಲಿ ಹಿಂದೂ ಮುಸ್ಲಿಂ ಐಕ್ಯತೆಗಾಗಿ ಮರಣಾಂತಿಕ ಉಪವಾಸ ಕೈಕೊಂಡ ಅಮತುಸ್ ಸಲಾಂ ಎಂಬ ಮುಸಲ್ಮಾನ ಮಹಿಳೆಯು 21 ದಿನಗಳ ನಂತರ ಯೋಗ್ಯ ಆಶ್ವಾಸನಗಳ ನಂತರ ತಮ್ಮ ವ್ರತವನ್ನು ನಿಲ್ಲಿಸಿದರು. ಪಂಜಾಬಿನ ಶ್ರೀಮಂತವೂ ವಿದ್ಯಾವಂತವೂ ಆದ ಕುಟುಂಬಕ್ಕೆ ಸೇರಿದ ಈ ಮುಸಲ್ಮಾನ ಧೀರೆಯು ಹಲವು ವರ್ಷಗಳಿಂದ ಗಾಂಧಿ ಆಶ್ರಮವಾಸಿಯಾಗಿದ್ದಳು. ಇವಳ ಉಪವಾಸದಿಂದ ಪೂರ್ವ ಬಂಗಾಲದ ಬಹುಸಂಖ್ಯಾಕರಲ್ಲಿ ಪ್ರಭಾವಿತ ಹೃದಯ ಪರಿವರ್ತನೆಯುಂಟಾಗಿದೆ. ಅದು ಅಖಿಲ ಭಾರತದಲ್ಲಿ ಪರಿಣಾಮಕಾರಿಯಾಗಲೆಂದು ದೇಶವಿಡೀ ಹಾರೈಸುತ್ತದೆ.

Making "West End" Watches for you



। ನಿಮಗಾಗಿ ವೆಸ್ಟ್ ಎಂಡ್ ವಾಚ್ ತಯಾರಿ ವಿಧಾನ

ಕೆಲಸ, 250 ಟನ್ ಶಕ್ತಿ ಯಂತ್ರ ವಾಚ್ ಕವಚ ಅಚ್ಚಿಸುವುದು. ಕೈಯಿಂದ ನಾಜೂಕತೆ ದೀರ್ಘ ಬಾಳಿಕೆ, ಚಲನಾ ಭದ್ರತೆ ಗೆರಂಟಿ ಯೋಗ್ಯ ಶ್ರೇಷ್ಠತೆ ಕೂಡಿ—ಅರ್ಥಾತ್ ವೆಸ್ಟ್ ಎಂಡ್ ಕೊಳ್ಳುವಾಗಲು ಪೂರೈಕೆಯ ಅಭಾವವಿದ್ದಾಗ್ಯೂ ಗಿರಾಕಿತಟ್ಟಿಗಾಗಿ ಯತ್ನವಿದೆ

ವೆಸ್ಟ್ ಎಂಡ್ ವಾಚ್ ಕಂಪೆನಿ,
ಬೊಂಬಾಯಿ, ಮತ್ತು ಕಲ್ಕತ್ತ.

WEST END WATCH CO.
BOMBAY CALCUTTA

ಬಾವುಗಳನ್ನು ಕೂಡಲೇ ಗುಣಪಡಿಸಿರಿ

ನೋವನ್ನು ಉಂಟುಮಾಡುವ ವಿಷಕಾರಿ ಬಾವುಗಳು ಈ ರೀತಿ ಗುಣವಾಗುತ್ತವೆ. ಅದನ್ನು ಆಗಾಗ ನೀರಿನಿಂದ ಕುಟಿಕೂರಾ ಸೋಪು ಹಾಕಿ ತೊಳೆಯಿರಿ, ಅದರ ಮೇಲೆ ಕುಟಿಕೂರಾ ಮುಲಾಮು ಹಚ್ಚಿರಿ.

ಕುಟಿಕೂರಾ ಮುಲಾಮು
CUTICURA OINTMENT

ತೋಟಗಾರಿಕೆಯೇ ಮುಖ್ಯ ಶಿಕ್ಷಣವಾಗಲಿ

ಆಹಾರ ಕೊರತೆಯನ್ನು ನೀಗುವ ಉತ್ತಮ ವಿಧಾನ

ಮಕ್ಕಳಿಗೆ ಮಣ್ಣಿನ ಮೂಲಕ ಪಾಠ

ಯುದ್ಧ ಪ್ರಾರಂಭವಾದಾಗ ಭಾರತೀಯ ಆಹಾರ ಮತ್ತು ಆಹಾರ ಪದಾರ್ಥಗಳು ಅಂದಿನ ಸರ್ಕಾರಕ್ಕೆ ಯುದ್ಧದ ಪ್ರಥಮ ಅಗತ್ಯಕ್ಕೆ ವಿಪತ್ತಿನಲ್ಲಿರಾದ ಸೈನಿಕರೂ ಬೇಕಾಗಿದ್ದರು. ಆದುದರಿಂದ "ಆಹಾರ ಹೆಚ್ಚು ಬೆಳೆಸಿರಿ" ಎಂಬ ಪ್ರಚಾರ ಶುರುವಾಯಿತು.

ಅಕ್ಕಿ ಬೆಳೆಸಲಿಕ್ಕೆ ನಮ್ಮ ಜನವೇನು ಹಿಂದೆಯಿಲ್ಲ. ಸುಗ್ಗಿ ಹತ್ತಿದಂತೆ ಹಣ್ಣು ಕಾಯಿ ಮುಗಿಯಿತು, ತಿಂದು ತಿಂದು ತಿಂಡಿ ಬರಿದಾಯಿತು. ರೊಕ್ಕವಿದ್ದರೂ ಅಕ್ಕಿಯಿಲ್ಲ, ಎಣ್ಣೆಯಿಲ್ಲ, ಕೊನೆಗೆ ಉಪ್ಪೂ ಕೈತಪ್ಪುವಂತಾಗಿದೆ. ಗೋದಿ ತಿನ್ನುವವರಿಗೆ ರಾಗಿಯೂ, ಅಕ್ಕಿ ತಿನ್ನುವವರಿಗೆ ಮೆಕ್ಕೆ ಜೋಳವೂ ತರಿಸಿ ಕೊಡಲಾಯಿತು. ಅಂತೆಯೇ 'ಆಹಾರ ಬೆಳೆಸಿರಿ' ಪ್ರಚಾರವು 'ಬೆಳೆಸಿರಿ' ಎಂದು ಪರಿವರ್ತಿಸಲ್ಪಟ್ಟಿತು.

ನಗರದ ಗೋಡೆಗಳಲ್ಲೂ, ರೈಲು ಮೋಟಾರು ಸ್ಟೇಶನುಗಳಲ್ಲೂ, ವೃತ್ತ ಪತ್ರಿಕೆಗಳಲ್ಲೂ, ಸಿನೇಮಾ ಪರದೆಯಲ್ಲೂ ಆಹಾರ ಬೆಳೆಸಲೂ ಪ್ರಯತ್ನಗಳಾದುವು. ಆದರೆ ಈ ಜನಾಕರ್ಷಿತ ಜಾಗಗಳಲ್ಲಿ ಫಲವಸ್ತುಗಳು ಅರಳುವುದಿಲ್ಲವೆಂಬ ಸಂಗತಿ ಆಗಿನ ಆಡಳಿತದಾರರ ಗಮನಕ್ಕೆ ಬರಲಿಲ್ಲ. ಮೇಲಾಗಿ ಸಮಾಜದ ಧ್ಯಡಕಾಯರು ಯುದ್ಧದ ಕಂತೆಯಲ್ಲೂ, ಕಪ್ಪು ಸಂತೆಯಲ್ಲೂ ಮಗ್ನರಾಗಿದ್ದರು. ಮನೆಮಾರು ಕೆಲಸದಲ್ಲೂ, ಕಾರಕೂನ ವೃತ್ತಿಯಲ್ಲೂ ಹೆಚ್ಚಿನ ಮಹಿಳೆಯರು ಮಗ್ನರಾದರು.

ಮಣ್ಣಿನ ಮೆಜಿಕ್

ಯುದ್ಧ ಮುಗಿದ ಮೇಲಂತೂ ಆಹಾರದ ದುಸ್ಥಿತಿ ಇನ್ನಷ್ಟು ತೀವ್ರವಾಯಿತು. ಈಗಿನ ಕೊರತೆಯನ್ನು ನೀಗಿಸುವ ಒಂದೆರಡು ಉಪಾಯಗಳಲ್ಲಿ ಮುಂದಿನ ಜನಾಂಗಕ್ಕೆ ಕೃಷಿಗಾರಿಕೆಯಲ್ಲಿ ವ್ಯಾಯಾಮ ಕೊಡುವುದು ಒಂದಾಗಿದೆ. ಮಕ್ಕಳ ಕೈಗೆ ಹಾರೆ ಪಿಕ್ಕಾಸು ಕೊಟ್ಟು ಅವರಿಗೆ ನೆಲ ಕೊರೆಯುವ ಮತ್ತು ನೀರೆರೆಯುವ ಆಟದ ಪಾಠಗಳನ್ನು ಕೊಡಬೇಕು. ನಮ್ಮ ಬಾಲಕರನ್ನು ಮರಳಿ ಮಣ್ಣಿಗೆ ತಿರುಗಿಸಬೇಕು.

ಭಾವಿ ಜನಾಂಗದ ಕಿರಿಯರನ್ನು ಕೃಷಿ ತಜ್ಞರಾಗಿ ಮಾಡುವ ಭಾರ ಪುನಃ ಬಡ ಉಪಾಧ್ಯಾಯರ ಮೇಲೇ ಇದೆ. ಆದರೆ ಸರಕಾರವು ತನ್ನ ಈಗಿನ ವಿದ್ಯಾಂಗ ಧೋರಣೆಯಿಂದ ಆಹಾರ ಕೊರತೆಯನ್ನು ನೀಗಲು ಸಹಾಯ ಮಾಡುತ್ತದೆಂದು ಹಾರೈಸಲಾಗುವುದಿಲ್ಲ. ಖಂಡಿತವಾಗಿ ಉಪಾಧ್ಯಾಯರ ಸಂಭಾವನೆ ಮಟ್ಟವನ್ನು ಏರಿಸುವುದೆಂದರೆ ನಿಸ್ಸಂಶಯವಾಗಿ ಆಹಾರ ತುಟ್ಟಿಯನ್ನು ನೀಗಲು ಉತ್ತಮ ಪ್ರೋತ್ಸಾಹ.

ವಿದ್ಯಾಕ್ರಮದಲ್ಲಿ ತೋಟಗಾರಿಕೆಯೇ ಪ್ರಥಮ ವಿಷಯವಾಗಬೇಕು. ಈಗಿನ ಮಾತೃಭಾಷೆಗೆ ಕೊಟ್ಟ ಸ್ಥಾನವು ಅದಕ್ಕೆ ಕೊಡಬೇಕು. ಪ್ರತಿ ಶಾಲೆಯ ಮುಖ್ಯೋಪಾಧ್ಯಾಯನನ್ನಾಗಿ ಒಬ್ಬ ಕೃಷಿ ಪದವೀಧರನನ್ನು ನೇಮಿಸಬೇಕು. ಅವನು ತಜ್ಞ ಬೇಸಾಯಗಾರನಾದರೂ ಆಗಬಹುದು. ಆಟದ ಬಯಲಿನ ಹೆಚ್ಚಿನ ಭಾಗವನ್ನು ಆಹಾರ ಬೆಳೆಗೆ ವಿನಿಯೋಗಿಸಬೇಕು. ಮಕ್ಕಳಿಗೆ ಮಣ್ಣು ಅಗೆಯುವ ದಂಡು, ನೀರು ಹೊರುವ ಬಕೆಟ್ಟು ತೆಗೆಸಬೇಕು. ಅವರಿಗೆ ಅದೇ ಡ್ರಿಲ್.

ದೇಹ, ಗೊಬ್ಬರ, ಹೂ, ಹಣ್ಣಿನ ಸಾಧನಗಳನ್ನು ವಿಜ್ಞಾನ ಮಕ್ಕಳಿಗದೆಷ್ಟು ಚಂದದ ಪ್ರಾಕ್ಟಿಕಲ್ ಮೆಥಡ್ ಆಗದು! ಮಳೆಗಾಲದ ಕೃಷಿ, ಚಳಿಗಾಲದ ಬೆಳೆ, ಬೇಸಿಗೆಕಾಲದ ಫಲಗಳು ಆತ್ಮಾನಂದ ಭೂಗೋಳ ವಿವರಣೆ. ಮಕ್ಕಳಿಗೆ ತೋಟಗಾರಿಕೆಯನ್ನು ರಸವತ್ತಾದ ಪ್ರಯೋಗ ವಿಧಾನ ಅದ್ಯಾವ ಡಾಲ್ಟನ್ ಪದ್ಧತಿಯನ್ನು ಮೀರಿಸುವಂತಹುದು.

ದೊಡ್ಡ ಎಲೆಗಳು ಹಣ್ಣುಗಳು, ಬೀಜಗಳು, ಹೂಗಳು, ತೋಟದ ಉದ್ದ, ಅಗಲ, ವಿಸ್ತೀರ್ಣ, ಮಳೆ ಬಂದ ಮತ್ತು ಬಾರದ ಸರಾಸರಿ ದಿನಗಳು, ಅದಕ್ಕೆ ತಗಲಿದ ವೆಚ್ಚ, ಮಾರಿ ಸಿಕ್ಕಿದ ಲಾಭನಷ್ಟಗಳು, ಶೇಕಡಾ ಲಾಭ, ಮೊತ್ತ ಫಲ, ಕೂಡಿಸುವುದು, ಕಳೆಯುವುದು, ತೋಟದ ಅಂಶಭಾಗ, ಭಿನ್ನರಾಶಿ, ದಿನಕ್ಕೆ ಮೂರು ಕೊಡದಂತೆ ನೂರು ದಿನದ ಲೆಕ್ಕ, ನೂರು ದಿನದ ಶ್ರಮಕ್ಕೆ ಸಿಕ್ಕಿದ ಲಾಭ, ಒಂದು ದಿನ ಕೈನಷ್ಟ! ಇದೇ ಅವರಿಗೆ ಲೆಕ್ಕ.

ದಿನನಿತ್ಯದ ತೋಟದ ಪರಿಶೀಲನೆ, ದಿನಚರಿಯ ನೋಟ್ಸ್, ಅನುಭವದ ದಾಖಲೆ, ಇವು ಅದೆಷ್ಟು ಗುಣ ಬೆಳೆಸುವ ಶಿಸ್ತು. ಎಲೆಗಳ ಆಕೃತಿ ಹೂವಿನ ಬಣ್ಣ, ಫಲಗಳ ಆಕಾರವನ್ನು ಬಿಡಿಸಿರಿ. ಅದೇ ಡ್ರಾಯಿಂಗ್.

ಬೆಂಡೇ ಗಿಡದ ವರ್ಣನೆ ಬರೆಯಿರಿ, ತೊಂಡೇ ಬಳ್ಳಿಯನ್ನು ವಿವರಿಸಿರಿ. ಬದನೇ ಗಿಡವನ್ನು ವರ್ಣಿಸಿರಿ. ಇದೇ ಮಕ್ಕಳಿಗೆ ಪ್ರಬಂಧ ಪಾಠ. ದಿನನಿತ್ಯ ಉಪಾಧ್ಯಾಯ ಶಿಷ್ಯರೊಳಗಿನ ಮಾತುಕತೆಯೇ ಭಾಷಾಪಾಠಕ್ಕೆ ಉತ್ತಮ ಸಾಧನ.

ಈ ರೀತಿ ಮುಂದರಿದರೆ ಮುಂದಿನೊಂದು ದಶಮಾನದಲ್ಲಿ ನಮ್ಮ ಯುವಕರು ಕೃಷಿಗಾರಿಕೆಯಲ್ಲಿ ಪಳಗುವರು. ಅವರಿಗೆ ಮಣ್ಣಿನ ಮಮತೆಯುಂಟಾಗುತ್ತದೆ. ಈಗ ಹಾಳು ಬೀಳುವ ನೆಲವೆಲ್ಲ ಹೊಲವಾಗುವುದು. ಗುಡ್ಡಗಳಲ್ಲೂ ಗೆಣಸು ಬೆಳೆವುದು, ಬಂಜರುಗಳು ಸುಂದರವಾಗುವವು. ಈ ಸಂದರ್ಭದಲ್ಲಿ ಸರಕಾರವೂ ತನ್ನ ತಾಬೆಯೊಳಗಿನ ಸಾಗುವಳಿಗೊಳಗಾಗದ ಪ್ರದೇಶಗಳನ್ನು ಶಾಲಾ ಮಕ್ಕಳ ಚಟುವಟಿಕೆಗೊಳಪಡಿಸಬೇಕು. ಆಗ ನಾಡೆಲ್ಲ ಹಸನಾಗಿ ನಗುವುದು. ಈ ಕೀರ್ತಿಯು ಇಂದಿನ ಉಪಾಧ್ಯಾಯರಿಗೇ ಸಲ್ಲುವುದು. ಅವರ ಕುರಿತು ಇತಿಹಾಸದಲ್ಲಿ ಹಸುರಾಕ್ಷರಗಳಿಂದ ಬರೆಯಲ್ಪಡುವುದು.

ಕಾಂಗ್ರೆಸು ಬ್ರಿಟಿಷ್ ಸರಕಾರದ ವಿನಂತಿ ಮನ್ನಿಸಿ ಅವರ ದಶಂಬರ 6ರ ಹೇಳಿಕೆಯನ್ನು ಸ್ವೀಕರಿಸಿದರಲ್ಲದೆ ಮುಸ್ಲಿಂ ಲೀಗಿನ ತರ್ಕವನ್ನು ಒಪ್ಪಲಿಲ್ಲವೆಂದು ಇನ್ನೂ ಹೆಚ್ಚಿನ ಲೀಗ್ ದುರೀಣರಿಗೆ ಮುಂದಟ್ಟಾಗಲಿಲ್ಲ. ಅವರಲ್ಲನೇಕರು 'ಕಾಂಗ್ರೆಸು ಹೀಗೆ ಮಾಡಬೇಕಿತ್ತು, ಹಾಗೆ ಮಾಡಬೇಕಿತ್ತು' ಎನ್ನುತ್ತಲೇ ಇರುವರು.

★

CANARA BANK LIMITED.

Estd: 1906.

(Incorporated in British India. Liability of Members Ltd.)

SEASON DEPOSITS

of Rs. 10,000/- and over in multiples of Rs. 1000/- and maturing within 30th September 1947 are now accepted at the following rates:-

3 months	2¼%
4 to 5 months	2½%
6 to 9 months	2¾%

Rates of Season Deposits of less than Rs. 10,000/- with a minimum of Rs. 1000/- and in multiples of Rs. 500/- may be ascertained on application to our nearest branch.

ಕಫ, ಶೀತ, ಎದೆನೋವುಗಳನ್ನು ದಿನಂಪ್ರತಿ ಪೆಪ್ಸ್ ತೆಗೆದು ಕೊಳ್ಳುವುದರಿಂದ ಗುಣಪಡಿಸಿರಿ

ಸಾಂಕ್ರಾಮಿಕ ಕಫ, ಎದೆನೋವು, ಶೀತಾದಿಗಳನ್ನು ಬೆಳೆಯಬಿಡಬೇಡಿರಿ. ಅದು ನಿಮ್ಮ ಜೀವನಾಂದವನ್ನು ಕೆಡಿಸುವುದು. ಕೆಲವು ಪೆಪ್ಸಗಳನ್ನು ಕೈಯಲ್ಲಿ ತೆಗೆದು ಕೊಳ್ಳಿ. ಅಗತ್ಯಬಿದ್ದಾಗೆಲ್ಲ ಈ ವಿಷಹಾರೀ ಶ್ವಾಸಯೋಗ್ಯ ಮಾತ್ರೆಗಳನ್ನು ಸೇವಿಸಿರಿ.

ಬಾಯಲ್ಲಿ ಹಾಕಿದ ಕೂಡಲೇ ಕರಗುವುದು. ಪೆಪ್ಸ ಮಾತ್ರೆಗಳು ಉತ್ತಮ ಔಷಧಿ ತತ್ವದಿಂದ ಕೂಡಿದ ರಸವನ್ನು ನಿಮ್ಮ ಶ್ವಾಸಕೋಶದ ನೋವವನ್ನು ಪೆಪ್ಸ ಗುಣಗೊಳಿಸಿ ಕಫವನ್ನು ನಿಲ್ಲಿಸುವುದು. ಕಂಠನಾಳವನ್ನು ಸರಿಗೊಳಿಸುವುದು.

ಕೆಟ್ಟ ಶೀತ, ಇಂಪ್ಲುಯೆಂಜಾ, ಕಫ, ಮೊದಲಾದುವುಗಳೆಲ್ಲ ಇದು ಅತ್ಯುತ್ತಮ ಔಷಧಿ.

ಪೆಪ್ಸನ್ನು ಕೊಂಡುಕೊಳ್ಳಿರಿ.

PEPS

ವಿಷಹಾರೀ ಶ್ವಾಸಯೋಗ್ಯ ಮಾತ್ರೆಗಳು

ನೋಟೀಸು

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಜಡ್ಜರ ಕೋರ್ಟಿನಲ್ಲಿ

O. P. ನಂಬ್ರ 7/47

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನಂದ್ರೆ:

1) ಹತಿಜಮ್ಮ
2) ಸಾದು ಅಬ್ದುಲ್ಲ
3) ಹಾಶಿಂ ಅಬ್ದುಲ್ಲ
4) ಆಸಮ್ಮ

} ಅರ್ಜದಾರರು.

1ನೇ ಅರ್ಜದಾರಳು ದಲಾಲ್ ಅಬ್ದುಲ್ಲ ಸಾದುವಿನ ವಿಧವೆ. 2-3ನೇಯವರು ದಲಾಲ್ ಅಬ್ದುಲ್ಲ ಸಾದುವಿನ ಮಗಂದಿರು. 4ನೇಯವಳು ಅಬ್ದುಲ್ಲ ಸಾದುವಿನ ಮಗಳು ಮಂಗ್ಳೂರು ತಾಲ್ಲೂಕ ಅಡ್ಯಪಾಡಿ ಗ್ರಾಮ.

ಸದ್ರಿ ದಲಾಲ್ ಅಬ್ದುಲ್ಲ ಸಾದು ತಾ. 13-7-'46ರಲ್ಲು ಮೃತಪಟ್ಟಿರುತ್ತಾರೆ. ಸದ್ರಿ ಅಬ್ದುಲ್ಲ ಸಾದುವಿಗೆ ಬರಬೇಕಾದ ಹಣ ವಸ್ತು ಮಾತ್ರಕುರಿತು ಸಕ್ಸೆಸನ್ (succession) ಸರ್ಟಿಫಿಕೇಟು ಕೊಡಬೇಕೆಂತ ವಗೈರೆ ನಿವೃತ್ತಿ ಕೇಳಿ ಅರ್ಜದಾರರು ಅರ್ಜಿದಾಖಲು ಮಾಡಿರುತ್ತಾರೆ. ಸದ್ರಿ ಅರ್ಜಿಯು ತಾ. 18-2-1947 ಕ್ಕೆ ತನಿಖೆಗೆ ಇಟ್ಟಿದೆ. ಅದ್ರಿಂದ ಸದ್ರಿ ಅರ್ಜಿಗೆ ಆಕ್ಷೇಪಣೆ ದಾಖಲು ಮಾಡುವವರಾದ್ರೆ ಆ ದಿನ 10 ಗಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ತಮ್ಮ ತಮ್ಮ ಆಕ್ಷೇಪಣೆಗಳನ್ನು ಹಾಜರುಪಡಿಸತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರಹಾಜರಿಯಲ್ಲಿ ಸದ್ರಿ ಅರ್ಜಿಯು ತನಿಖೆ ತೀರ್ಮಾನಿಸಲ್ಪಡುವುದು ತಿಳಿದಿರಲಿ.

ಮಂಗ್ಳೂರು 21-1-'47.

M. C. Ahmed,
Advocate for Petitioner.

ಜಿಲ್ಲಾ ಪರಿಚಯ

ಮಂಗಳೂರು

ಕೊರೇಜ್ ದಿನ: ಸ್ಥಳೀಯ ಗವರ್ನ್‌ಮೆಂಟ್ ಕೊಲೇಜಿನ ದಿನಾಚರಣೆಯು ಇದೇ ಬರುವ ತಾ. 27ರಂದು ಸೋಮವಾರ ಶ್ರೀಮಾನ್ ಎ. ಬಿ. ಶೆಟ್ಟಿ, ಎಂ. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗುವುದು.

ಸುಭಾಸ್ ಜಯಂತಿ: ನಗರದ ರಾಷ್ಟ್ರ ಸೇವಾ ದಳದವರು ನಿನ್ನೆ ತಾ. 23ರಂದು ಸುಭಾಸ್ ಜಯಂತಿಯನ್ನು ಆಚರಿಸಿದರು. ಬೆಳಗ್ಗೆ ಪ್ರಭಾತ್‌ಪೇರಿ, ಧ್ವಜವಂದನೆ, ಪ್ರಾರ್ಥನೆಗಳಾದುವು. ಸಾಯಂಕಾಲ ಪುನಃ ಮೆರವಣಿಗೆ, ಮೈದಾನಿನಲ್ಲಿ ಸಾರ್ವಜನಿಕ ಸಭೆಗಳು ಜರಗಿ ನೇತಾಜಿಯ ಜೀವನಾದರ್ಶ, ಪ್ರತಿಭೆ, ದೇಶಪ್ರೇಮ, ಕ್ರಾಂತಿಕಾರಕ ಚಟುವಟಿಕೆಗಳ ಕುರಿತು ಶ್ಲಾಘಿಸುವ ಭಾಷಣಗಳಾದುವು.

ಲಾಠಿ ಚಾರ್ಜ್: ಮುಂಬೈ ಮತ್ತಿತರ ಕಡೆಗಳಲ್ಲಿ ಕೊಮ್ಯುನಿಸ್ಟರ ಮೇಲೆ ಕೈಕೊಂಡ ಕೈದು, ಜಪ್ತಿ ಮೊದಲಾದ ಕಾರ್ಯಕ್ರಮಗಳ ಕುರಿತು ನಿಷೇಧ ಸೂಚಿಸುವುದಕ್ಕಾಗಿ ಸ್ಥಳೀಯ ಕೊಮ್ಯುನಿಸ್ಟರು ಸಾರ್ವಜನಿಕ ಮೈದಾನಿನಲ್ಲಿ ತಮ್ಮವರ ಸಭೆಯೊಂದನ್ನು ಜರಗಿಸುವ ಏರ್ಪಾಡು ಮಾಡಿದ್ದರು. ಹಲವು ಕೊಮ್ಯುನಿಸ್ಟ್ ಅನುಯಾಯಿಗಳೂ ಸೇರಿದ್ದರು. ಸಾರ್ವಜನಿಕ ಶಿಸ್ತು ಶಾಂತಿಗಳನ್ನು ರಕ್ಷಿಸುವ ಕಾರಣದಿಂದ ಅಧಿಕಾರಿಗಳು ಈ ಸಭೆಗೆ ನಿರ್ಬಂಧ ಹಾಕಿದರು. ಆದರೆ ಏರ್ಪಾಡುಗಾರರು ಸಭೆಯನ್ನು ಜರಗಿಸುವ ನಿರ್ಧಾರವನ್ನೇ ಸೂಚಿಸಿ ನಿರ್ಬಂಧಾಜ್ಞೆಯನ್ನು ಉಲ್ಲಂಘಿಸಿದರೆಂದೂ, ಕೂಡಲೇ ಸುಮಾರು 100 ರಿಜರ್ವ್ ಪೋಲಿಸರ ದಳವನ್ನು ಕರೆಸಿ ಅಧಿಕಾರಿಗಳು ಸದ್ರಿ ಸಭೆ ನಿಲ್ಲಿಸಲು 144ನೇ ಸೆಕ್ಷನ್ ಜಾರಿ ಮಾಡಿ ನೆರೆದವರಿಗೆ ಚದರಲು ಯೋಗ್ಯ ಮುಂಜಾಗ್ರತೆ ಕೊಟ್ಟು ಮೇಲೂ ಪರಿಣಾಮಕಾರಿ ವರ್ತನೆ ಕಂಡುಬಾರದ್ದರಿಂದ ಶ್ರೀಗಳಾದ ಹೊಳ್ಳ, ಕಕ್ಕಿಲ್ಲಾಯ, ಶಾಂತಾರಾಮ ಪೈ ಮೊದಲಾಗಿ ಐದು ಕೊಮ್ಯುನಿಸ್ಟ್ ಮುಖಂಡರೆನಿಸಿದವರನ್ನು ಕೈದು ಮಾಡಲಾಯಿತೆಂದೂ, ಈ ಸಮಯಕ್ಕೆ ಅವರ ಅನುಯಾಯಿಗಳು ತೀವ್ರ ಉಲ್ಲಂಘನೀಯ ಪ್ರತಿಘಟನೆ ತೋರಿಸಿದ್ದರಿಂದ ಲಘು ಲಾಠಿಚಾರ್ಜ್ ಮಾಡುವ ಪ್ರಸಂಗ ಒದಗಿತೆಂದೂ, ಫಲಿತಾಂಶವಾಗಿ ಕೆಲವರಿಗೆ ಜಖಂ ಆಗಿದೆಯಾಗಿಯೂ ವದಂತಿ ಇದೆ.

ವಿದ್ಯಾರ್ಥಿ ಕೊಂಗ್ರಸ್: 8ನೇ ದಕ್ಷಿಣ ಕನ್ನಡ ಜಿಲ್ಲಾ ವಿದ್ಯಾರ್ಥಿ ಕೊಂಗ್ರೆಸ್ ಸಮ್ಮೇಳನವು ನಾಳೆ ಮತ್ತು ನಾಡಿದು (ತಾ 5 6 ರಲ್ಲಿ) ಪುತ್ತೂರಿನಲ್ಲಿ ಜರಗುವುದು. ಸುಖ್ಯಾತ ಸಾಹಿತಿಗಳಾದ ಶ್ರೀ ಸಿಧ್ಧವನಹಳ್ಳಿ ಕೃಷ್ಣಶರ್ಮ ಅವರು ಸಮ್ಮೇಳನಾಧ್ಯಕ್ಷತೆ ವಹಿಸುವರು.

ಉಪ್ಪು ತುಟ್ಟಿ: ಅನಿರೀಕ್ಷಿತವಾಗಿ ಇತ್ತೀಚೆಲ್ಲಿಯಲ್ಲಿ ಉಪ್ಪಿನ ಸರಬರಾಯಿಯು ಕಡಿಮೆಯಾಗಬಹುದೆಂಬ ಅಂಜಿಕೆ ಹುಟ್ಟಿದ್ದು ಜನರು ಹೆಚ್ಚೆಚ್ಚು ಪ್ರಮಾಣವನ್ನು ಕೊಂಡೊಯ್ಯುತ್ತಿರುವರು. ಉಪ್ಪು ತಯಾರಾಗುವ ಕಡೆಯಲ್ಲಿ ಕೆಲವೊಂದು ಅಡಚಣೆಗಳಿಂದ ಉಪ್ಪು ಮಾಡಲು ವಿಳಂಬವಾದುದರ ಪರಿಣಾಮವಾಗಿ ಇಲ್ಲಿಯ ಬಂದರಿನಲ್ಲಿ ಅದರ ದಾಸ್ತಾನು ಪ್ರಮಾಣವು ಕಡಿಮೆಯಾಗುತ್ತ ಬಂತು.

ದಕ್ಷಿಣ ಕನ್ನಡ ಜಿಲ್ಲೆಯ ಗೇಣಿ ಒಕ್ಕಲುಗಳ ಪರಿಸ್ಥಿತಿಯನ್ನು ಸುಧಾರಿಸುವಗೋಸುಗ ಮದ್ರಾಸ ಸರಕಾರ ವಿವರ ಸಂಗ್ರಹಕ್ಕಾಗಿ ಒಂದು ಪ್ರಶ್ನೆ ಮಾಲಿಕೆಯನ್ನು ಹೊರಡಿಸಿದೆ. ಈ ವಿಷಯದಲ್ಲಿ ಒಕ್ಕಲುಗಳನ್ನು ಸಂಘಟಿಸಿ ಸರಿಯಾದ ವಿವರಗಳು ಸರಕಾರಕ್ಕೆ ಸಿಗುವಂತೆ ಮಾಡಬೇಕೆಂದು ಜಿಲ್ಲಾ ಕಾಂಗ್ರೆಸ್ ಸಮಿತಿ ನಿರ್ಧರಿಸಿದೆ. ಹೀಗೆ ಮಾಡಿದರೆ ಮಾತ್ರ ಒಕ್ಕಲುಗಳಿಗೆ ಯೋಗ್ಯ ಪರಿಹಾರ ದೊರೆಯಬಹುದು. ಒಕ್ಕಲುಗಳ ಸಂಘಟನೆಗಾಗಿ ಜಿಲ್ಲಾ ಕಾಂಗ್ರೆಸ್ಸು ಕಾಸರಗೋಡು ತಾಲೂಕು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಂ ಉಮೇಶರಾಯರನ್ನು ನೇಮಿಸಿದೆ.

ಉಡುಪಿ ಫಲಿಮಾರು ಮಠದ ಶ್ರೀ ರಘುಮಾನ್ಯ ತೀರ್ಥ ಶ್ರೀಪಾದಂಗಳವರು ತಮ್ಮ ಪರಿವಾರದೊಂದಿಗೆ ಷಷ್ಟಿ ಉತ್ಸವ ನಿಮಿತ್ತ ಮೂಲ್ಕಿಗೆ ದಯಮಾಡಿಸಿದಾಗ ಅವರನ್ನು ಶ್ರೀ ಕಾಶೀಮಠದ ಶ್ರೀಪಾದಂಗಳವರು ಸ್ಥಳೀಯ ವೆಂಕಟರಮಣ ದೇವಸ್ಥಾನದಲ್ಲಿ ಸತ್ಕರಿಸಿದರು.

ಸ್ಕೌಟುಗಳ ಪ್ರವಾಸ: ಮಂಗಳೂರು ಗವರ್ನ್‌ಮೆಂಟ್ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ಬೃಹಸ್ಪತಿ ರೋವರ್ ಸ್ಕೌಟುಗಳು ತಾ 18–1–47ನೇ ಶನಿವಾರ ದೇರೆಬೈಲಿನ ಸಮಿಪದ ಮಾಲಾಡಿಕಾಡು ಎಂಬಲ್ಲಿಗೆ ಶಾಲಾ ಸ್ಕೌಟು ಮಾಸ್ಟರಾದ ಶ್ರೀಗಳು ಯಂ ಶಿವರಾಮಾಚಾರ್ಯ, ವೀನಸ್ ರೋವರ್ ದಳದ ಲೀಡರರಾದ ಹರಿಶ್ಚಂದ್ರಾಚಾರ್ಯ, ಮತ್ತು ಕೆನರಾ ಹ್ಯಾಸ್ಕೂಲ್ ಟ್ರೂಪಿನ ಸ್ಕೌಟು ಮಾಸ್ಟರರಾದ ಶ್ರೀ ಯಸ್ ಸುಬ್ರಾಯ ಐತಾಳ ಮೊದಲಾದವರೊಂದಿಗೆ ಪ್ರಾತಃ ಕಾಲ 8 30 ಗಂಟೆಗೆ ಹೋಗಿ ತಮ್ಮ ಟೆಂಡರ್ ಫುಟ್ ತರಬೇತಿಯನ್ನು ಮುಗಿಸಿ ಸಾಯಂಕಾಲ 6 ಗಂಟೆಗೆ ಹಿಂದಿರುಗಿದರು.

ಮುನಿಸಿಪಲ್ ಕೌನ್ಸಿಲ್ ಮೀಟಿಂಗ್: ಮಂಗಳೂರು ಮು|| ಕೌನ್ಸಿಲಿನ ಮೀಟಿಂಗ್ ಕಳೆದ ಗುರುವಾರ ತಾ 16ರಲ್ಲಿ ಮು|| ಕೌನ್ಸಿಲ್ ಹಾಲ್‌ನಲ್ಲಿ ಚೆಯರ್ ಮ್ಯಾನರ ಅಧ್ಯಕ್ಷತೆಯಲ್ಲಿ ಜರಗಿತು. ಮಾಜಿ ತಹಶಿಲ್ದಾರರೂ ಈ ಕೌನ್ಸಿಲಿನ ಸದಸ್ಯರೂ ಆಗಿದ್ದ ಶ್ರೀ ಜೆ ಸುವರ್ಣರ ನಿಧನದ ಸಂಬಂಧ ವಿ. ಗೋನ್ಸಾಲೀಸರು (ಮೃತರ ಗುಣಕಥನದೊಡನೆ) ತಂದ ಸಂತಾಪ ಸೂಚಕ ಠರಾವು ಮಂಜೂರಾಗಿ ಅದನ್ನು ಅವರ ಕುಟುಂಬಕ್ಕೆ ತಿಳಿಸಬೇಕೆಂಬುದರೊಡನೆ ಸಭಾ ಕಾರ್ಯಗಳು ಎರಡು ನಿಮಿಷಗಳ ವರೆಗೆ ಮುಂದುವರಿಸಲಾಯಿತು. ಅನಂತರ ನಡೆದ ಮುಖ್ಯ ಕಾರ್ಯಕಲಾಪಗಳಲ್ಲಿ 1946–47ನೆಯ ಸಾಲಿನ ರಿವೈಸ್ಡ್ ಬಜೆಟ್ ಮತ್ತು 1947–48ರ ಸಾಲಿನ ಬಜೆಟ್ ಇವುಗಳ ಕುರಿತು ಚರ್ಚೆಯಾಗಿ ಕೆಲವೊಂದು ತಿದ್ದುಪಡಿಗಳೊಡನೆ ಬಜೆಟ್ ಮಂಜೂರಾಯಿತು.

ಹ್ಯಾಸ್ಕೂಲು ಕಟ್ಟಡಗಳ ಅಸ್ತಿವಾರ ಶಿಲಾಸ್ಥಾಪನೆ ಬಾರ್ಕೂರು. ಬಾರ್ಕೂರು ಎಡ್ಯುಕೇಶನಲ್ ಸೊಸೈಟಿಯವರಿಂದ ನಡೆಸಲ್ಪಡುವ ನೇಶನಲ್ ಹ್ಯಾಸ್ಕೂಲಿನ ಕಟ್ಟಡಗಳ ಅಸ್ತಿವಾರ ಶಿಲಾಸ್ಥಾಪನಾ ಸಮಾರಂಭವು ಕಳೆದ ತಾ 13ರಲ್ಲಿ ಶ್ರೀ ... ಶೆಟ್ಟಿ ಎಂ ಎಲ್ ಎ ಯವರಿಂದ ನೆರವೇರಿಸಲ್ಪಟ್ಟಿತು. ... ರಕೇರಿ ಮಠದ ಶ್ರೀ ಶ್ರೀ ವಿದ್ಯಾಮಾನ ತೀರ್ಥ ಶ್ರೀಪಾದಂಗಳವರು ಸಮಾರಂಭಕ್ಕೆ ಚಿತ್ತೈಸಿದ್ದು ಆಶೀರ್ವದಿಸಿದರು. ... ಸೇರಿದ್ದ ... ಊರ ಪರ ... ಪ್ರಶಂಸನೀಯವೆನಿಸಿತು. ನೆರದಲ್ಲಿದ್ದ ... ಸಂಘದ ಸದಸ್ಯರ ... ಸಾವಿರಕ್ಕೆ ಸಿಕ್ಕಿದ್ದರೂ ಸಂಘದ ಗುರಿಯಾದರೂ ... ಲಕ್ಷವನ್ನು ಮುಟ್ಟುವರೆ ಊರ ಪರಊರ ಸದ್ಗೃಹಸ್ಥರೆಲ್ಲರೂ ನೆರವಾಗಿ ಸಂಘದ ಧ್ಯೇಯಗಳನ್ನು ಪ್ರೋತ್ಸಾಹಿಸಿ ವಿದ್ಯಾದಾನದ ಪುಣ್ಯ ಭಾಗಿಗಳಾಗಬೇಕಾಗಿ ವಿನಂತಿ.

ಬೆಲ್ಲದ ವ್ಯಾಪಾರ ಸಹಕಾರೀ ಸ್ಟೋರ್ಸುಗಳಿಗೆ: ಇದೇ ಕಳೆದ ತಾ 13ರಿಂದ ಬೆಲ್ಲ ಇರುವವರು ಜಿಲ್ಲಾ ಕಲೆಕ್ಟರರು ಅದವಾ ಅವರಿಂದ ಅಧಿಕಾರ ಹೊಂದಿದವರಿಗಲ್ಲದೆ ಬೇರೆ ಯಾರಿಗೂ ಬೆಲ್ಲ ಮಾರಕೂಡದೆಂದೇ ಸರಕಾರದ ಅಪ್ಪಣೆಯಾಗಿದೆ. ಕಲೆಕ್ಟರರು ತಾಲೂಕು ಹೆಡ್ ಕ್ವಾರ್ಟರ್ಸ್ ಮತ್ತು ಸಬ್ ತಾಲೂಕು ಹೆಡ್ ಕ್ವಾರ್ಟರ್ಸಿನ ಸಹಕಾರಿ ಸ್ಟೋರ್ಸ್ ಮತ್ತು ದ. ಕ. ಜಿಲ್ಲಾ ಸಹಕಾರಿ ಸ್ಟೋರ್ಸುಗಳನ್ನು ಮಾತ್ರ ಈ ವ್ಯಾಪಾರಕ್ಕೆ ತನ್ನ ಅಧಿಕೃತ ವಿತರಕರನ್ನಾಗಿ ನೇಮಿಸಿದ್ದಾರೆ. ಬೆಲ್ಲದ ಕಂಟ್ರೋಲ್ ಕ್ರಯ 82 2/7 ರಾತ್ತು (ಬಂಗಾಳ ಮಣ) I ಕ್ಲಾಸಿಗೆ ರೂ 14, ಅದೇ II ತರಗತಿಗೆ ರೂ. 18, ಬೆಲ್ಲ ಮಾಡುವವರು 28ರಾತ್ತಲಗಳಿಗೆ (ನಮ್ಮಲ್ಲಿನ ಒಂದು ಮಣ) ಮೇಲ್ಕಂಡ ಬೆಲೆಯಲ್ಲಿ 4 ಆಣೆಯಂತೆ ಕಡಿಮೆ ಮಾಡಿ ಮಾರಾಟ ಮಾಡಬೇಕಾಗಿದೆ.

ತೆಂಗಿನೆಣ್ಣೆ, ತೆಂಗಿನಕಾಯಿ ವ್ಯಾಪಾರ: ಕಳೆದ ತಾ. 17ರಲ್ಲಿ ಕಲೆಕ್ಟರರ ಕಚೇರಿಯಲ್ಲಿ ತೆಂಗಿನ ಎಣ್ಣೆ, ತೆಂಗಿನ ಕಾಯಿಗಳ ಕುರಿತು ಸಮಾಲೋಚಿಸಲು ಒಂದು ಸಭೆ ಸೇರಿತ್ತು. ಅದೇ ಚಾರ್ಜು ವಹಿಸಿಕೊಂಡ ನಮ್ಮ ಹೊಸ ಜಿಲ್ಲಾ ಕಲೆಕ್ಟರರಾದ ಮಿ ಜಿ ಎಫ್. ಸೋಂಡರ್ಸ್ ಐ. ಸಿ. ಎಸ್. ಅವರು ಅಂದಿನ ಸಭೆಯ ಅಧ್ಯಕ್ಷರಾಗಿದ್ದರು. ಈ ಸಭೆಗೆ ಕೆಲವು ಎಣ್ಣೆ ಮಿಲ್ ಮಾಲಕರೂ ಚೇಂಬರ್ ಆಫ್ ಕಾಮರ್ಸ್‌ನ ಪ್ರತಿನಿಧಿಗಳೂ ಬಂದಿದ್ದರು. ಈ ಜಿಲ್ಲೆಯಲ್ಲಿರುವ 18 ಎಣ್ಣೆ ಮಿಲ್ಲುಗಳೂ ಸರಿಯಾಗಿ ಕೆಲಸ ನಡೆಸಬೇಕಾದರೆ ವರ್ಷಕ್ಕೆ ಒಟ್ಟು 7200ಟನ್ ಕೊಬ್ಬರಿ ಬೇಕು, ಆದರಲ್ಲಿ ಈ ಜಿಲ್ಲೆಯಲ್ಲಿ ಕೇವಲ 1500ಟನ್ ಕೊಬ್ಬರಿ ಮಾತ್ರ ಉತ್ಪತ್ತಿಯಾಗುತಿದ್ದು ಮಿಕ್ಕ ಕೊಬ್ಬರಿ ಹೊರಗಿನಿಂದ ಬರಬೇಕಾದ್ದರಿಂದ ಅದನ್ನು ಮಲಬಾರ್ ಇತ್ತ ಕಡೆಯಿಂದ ತರಿಸಿಕೊಡುವ ಏರ್ಪಾಡು ನಡೆಯಬೇಕೆಂಬ ಅಭಿಪ್ರಾಯ ಸೂಚಿಸಲ್ಪಟ್ಟಿತು. ತೆಂಗಿನ ಕಾಯಿಯನ್ನು ರಖಂ ಆಗಿ ಸಾವಿರಕ್ಕೆ ರೂ 110ರಂತೆಯೂ ಚಿಲ್ಲರೆಯಾಗಿ ಸಾವಿರಕ್ಕೆ ರೂ 1?5ರಂತೆಯೂ ಮಾರುವ ಹಾಗೆ ಕ್ರಯ ನಿರ್ಣಯಿಸುವುದು ವಿಹಿತವೆಂದು ಸೂಚಿಸಲಾಯಿತು.

ಶ್ರೀಮತಿ ಕಮಲಾದೇವಿಯವರು: ಕಾಂ ವರ್ಕಿಂಗ್ ಕಮಿಟಿ ಮೆಂಬರರಾದ ಶ್ರೀಮತಿ ಕಮಲಾದೇವಿಯವರು ಕಳೆದ ಶನಿವಾರ ಇಲ್ಲಿಗೆ ಬಂದಿದ್ದು ಇಷ್ಟರಲ್ಲೇ ಹಿಂದೆ ತೆರಳಲಿರುವರು.

ಕುಂಬಳೆ: ಕಳೆದ ತಾ. 11ನೇ ಮಂಗಳವಾರ ಕುಂಬಳೆ ಬೋರ್ಡ್ ಹಾ... ಶಾಲಾ ಮಂದಿರದಲ್ಲಿ ಶ್ರೀ ಯಂ... ಚಿಕ್ಕಪ್ಪ ಭಂಡಾರಿಗಳ ಅಧ್ಯಕ್ಷತೆಯಲ್ಲಿ ಯಕ್ಷಗಾನ ಸಭೆ ಜರಗಿತು. ಸಭೆಯಲ್ಲಿ ತಂದ ಸೂಚನೆಯಂತೆ ಈ ಕೇಂದ ಸಭೆಗೆ "ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಾಹಿತ್ಯ ಮಂಡಳಿ" ಎಂದು ನಾಮಕರಣ ಮಾಡಲ್ಪಟ್ಟಿತು. ಈ ಮಂಡಳಿಗೆ ಶ್ರೀ ಮರುವಳ ರಾಮಭಟ್ಟರ ಅಧ್ಯಕ್ಷತೆಯಲ್ಲಿ ನಡೆಯುವ ಸಂಘವೂ ಒಂಬ್ರಾಣ ಯಕ್ಷಗಾನ ಮಂಡಳಿಯೂ ಸೇರಿಸಲ್ಪಟ್ಟಿತು. ಮಂಡಳಿಗೆ ಶ್ರೀ ಕೋಟೆಕುಂಜ ನಾರಾಯಣ ಶೆಟ್ಟರು ಕಾರ್ಯದರ್ಶಿಯಾಗಿ ನೇಮಿಸಲಾಯಿತು.

... "ಶ್ರೀ ಕೃಷ್ಣರಾಯ..." ಮತ್ತು ... ಭಾಗವತರ, ಶ್ರೀಗಳಾದ ... ನೋಂದರು ... ಶೆಟ್ಟಿ, ... ದೇರಣ್ಣ ರೈಗಳ ಶ್ರೀ ಮಾಸ್ತರ್ ... ಭಟ್ಟರ ಶ್ರೀ ಕೋಟೆಕುಂಜ ನಾರಾಯಣ ಶೆಟ್ಟರ ... ಸರಗೋಡು ಶ್ರೀ ... ಮಾಸ್ತರ್ ಮುಂತಾದ ... ಅರ್ಥಧಾರಿಗಳಿಂದ ... ಗವಾಗಿ ನೆರವೇರಿತು. ಅಧ್ಯಕ್ಷರ ಉಪಸಂಹಾರ ಭಾಷಣ ಧನ್ಯವಾದದೊಂದಿಗೆ ಸಭೆ ... ವಾಯಿತು.

ಪುಸ್ತಕ ವಿಮರ್ಶೆ

ಉದ್ಘೋಷ

ಪ್ರಕಾಶಕರು: ... ಬಾಳಿಗಾ ಎಂಡ್ ಸನ್ಸ್ ಕಥುಬೀದಿ, ಮಂಗಳೂರು. ಬೆಲೆ. 0–12–0

ಸ್ವಾತಂತ್ರ್ಯ ದಿನದಂದು ಪ್ರಕಟವಾಗುವ ರಾಷ್ಟ್ರೀಯ ಕವನಗಳ ಸಂಗ್ರಹವಿದು. ಭಾರತಾಂಬೆಯ ಬಿಗಿದ ಶೃಂಖಲೆಗಳನ್ನು ಅಜ್ಞಾತ ವೀರಾಗ್ರೇಸರರು ತುಂಡರಿಸುವ ಉಚಿತವಾದ ತ್ರಿವರ್ಣದ ತೊದಿಕೆಯಿಂದೊಪ್ಪುವ ಈ ಸಂಕಲನದ 41 (ನ್ಯೂನತೆ ಹಲ್ಯು) ಕವನಗಳಿವೆ. ಶ್ರೀ ಗೋವಿಂದ ಪೈ ಮೊದಲಾದ ಹಿರಿಯ ಕವಿಗಳಲ್ಲದೆ ಕ್ರಾಂತಿಯ ಕಿಡಿ ಕಾರುತ್ತಿರುವ ಕಾಲ ಧೈರ್ಯದಿಂದ ಸ್ಫೂರ್ತಿ ಕಳೆದು ಮುಂದೆ ಬಂದ ಹಲವು ಕಿರಿಯರ ಒಳ್ಳೆಯ ಕವನಗಳು ಈ ಸಂಗ್ರಹದಲ್ಲಿ ಒಟ್ಟುಗೂಡಿಸಿ ಪ್ರಕಟಪಡಿಸುದುದು ಸಂದರ್ಭೋಚಿತವಾಗಿದೆ. ಛಂದೋಬದ್ಧವಾದ ಕವನಗಳಲ್ಲದೆ ಹಾಬ್ಬವೂ ಹಾಗೂ ಸಂಗೀತಕ್ಕನುಗುಣವಾಗಿ ಬರೆದ ಪದ್ಯಗಳೂ ಇರುವುದರಿಂದ ಭಿನ್ನ ಭಿನ್ನ ರುಚಿಯುವರಿಗೆ ಇದು ಬಗ್ಗಬಹುದೆಂಬ ಭರವಸೆ ಇದೆ.

ಶ್ರೀ ಪೈಗಳ "ಬಿಡುಗಡೆಗೆ" ಎಂಬ ಚತುರ್ದಶ ಪಾದದ (Sonnet) ಹೊಸ ಕವಿತೆಯಿಂದ ಪ್ರಾರಂಭವಾದ ಈ ಸಂಗ್ರಹವು "ಉದ್ಘೋಷ" ಎಂಬ ಸ್ಫೂರ್ತಿಭಾವ ಕೆಳೆಯು ಸರಳ ಕವಿತೆಯಿಂದ ಕೊನೆಗೊಳ್ಳುತ್ತದು. ಶ್ರೀ ಸೇಡಿಯಾಪು ಕೃಷ್ಣಭಟ್ಟರ "ಒ ತೇಜೋರಾಶಿ" ಶ್ರೀ ಕೆ ಕಿಂಞಣ್ಣ ರೈಗಳ "ರಕ್ತಮಸಿ" ಶ್ರೀ ಪಿ ಕೆ ನಾರಾಯಣ ಇವರ ಸ್ವಾತಂತ್ರ್ಯ ಸೂರೆವೆಣ್ಣು ಪೂರ್ಣಯ್ಯಾ, ಸಾಗಿಘಹುತ್ರ ತಿಲಗು ಭಾರತ ದಿ... ಎಂಬ ಕವನಗಳು ಚೆನ್ನಾಗಿವೆ. ತರುಣ ಮುಸ್ಲಿಮರಾದ ಜನಾಬ್ ಬಿ ಯಮ್ ಇದಿನಬ್ಬ ಇವರ ನಾಲ್ಕು ನೂರು ಮಿಲಿಯ ಧೀರರೇ ಎಂಬ ಕವನವು ಆಶಾದಾಯಕವಿದೆ. "ಕೈತನ ಬಿಟ್ಟರೆ ಕೆಟ್ಟಿತು ಜಗವು" ಎಂಬುದು ಲಾವಣಿ. "ಸ್ವಾತಂತ್ರ್ಯ ದೇವಿ" "ಕ್ರಾಂತಿ ದುಂದುಭಿ" "ಸನಿಯ ವೈಸಾಮ್ಯ ಸ್ವರಾಜ್ಯ" ಪರದೇಶಿ ರಾಜರ ನಾಟಕ ಮಾಟ್ಯು ಎಂಬವುಗಳು ಜನಪ್ರಿಯವಾದ ಇತ್ತೀಚೆಗಿನ ಸಿನೆಮಾ ಪದಗಳ ಧಾಟಿಯಲ್ಲಿ ಬರೆದಿವೆ. ಒಟ್ಟಿನಲ್ಲಿ ಈ ಕವನ ಸಂಗ್ರಹವು ಸಾಹಿತ್ಯದ ಅಭಿರುಚಿಯುಳ್ಳವರಿಗೂ ರಾಷ್ಟ್ರೀಯ ಕೆಲಸಗಾರರಿಗೂ ಸೇವಾದಳದವರಿಗೂ ಹಾಡುಗಾರರಿಗೂ ಉಪಯುಕ್ತವಾಗಿಯೇ ಇದೆ. ಕಾಗದದ ಅಭಾವ, ಛಾಪಖಾನೆಗಳಲ್ಲಿನ ತೊಡಕು ಇವೇ ಮೊದಲಾದ ಅನೇಕ ಆತಂಕಗಳಿರುವ ಈ ಸಮಯದಲ್ಲಿ ವ್ಯಾಪಾರೀ ದೃಷ್ಟಿಯಿಂದ ಎಂದೆಂದಿಗೂ ಹಿತಕರವಲ್ಲದ ಕವನ ಸಂಗ್ರಹವು ಈ ಸಂದಿಗ್ಧ ಸಂದರ್ಭದಲ್ಲಿ ಪ್ರಕಟವಾದುದು ಸ್ತುತ್ಯ. ಕನ್ನಡಿಗರೆಲ್ಲರ ಆದರಕ್ಕೆ "ಉದ್ಘೋಷ"ವು ಪಾತ್ರವಾಗಲಿ ಎಂದು ನಾವು ಹಾರೈಸುತ್ತೇವೆ.

—ಶ್ರೀನಾಥ್

KANARA COMMERCIAL BANK LTD.

PUTTUR

H O Puttur] Estd 1920 [Branch Vittal

All kinds of Banking Business transacted.

Deposits Current, Savings, Cumulative

Deposits are accepted

Fixed Deposits for periods of 3 months and above up to 24 months are accepted.

SEASON DEPOSITS

ARE Accepted up to 31-5-1947 Terms on application.

ಆಧುನಿಕ ಚಿಕಿತ್ಸೆಯ ಪ್ರಾಚೀನ ಇತಿಹಾಸ

ವೇದಗಳ ಕಾಲದಲ್ಲಿ ಮಲಶುದ್ಧಿ

ವ್ಯಕ್ತಿಯೊರ್ವನು ರೋಗಗ್ರಸ್ತನಾದಾಗ ವೈದ್ಯರು ಮಲಶುದ್ಧತೆಯ ಕುರಿತು ವಿಶೇಷ ಜಾಗರೂಕತೆಯನ್ನು ವಹಿಸುವರು. ರೋಗಿಯ ಹೊಟ್ಟೆಯ ಕಲ್ಮಶ ರಹಿತವಾಗಿದ್ದರೇನೇ ಮಾಡಿದ ಚಿಕಿತ್ಸೆಯು ಪರಿಣಾಮಕಾರಿಯಾಗುವುದು. ಆಧುನಿಕ ವೈದ್ಯರು ರಬ್ಬರ್ ನಳಿಗೆಯ ಮೂಲಕ ಸಾಬೂನು ನೀರನ್ನು ರೋಗಿಯ ಹೊಟ್ಟೆಯೊಳಗೆ (ಮಲರಂಧ್ರದ ಮುಖಾಂತರ) ಕಳುಹಿಸಿ ಮಲವನ್ನು ಹೊರ ತೆಗೆಯುವರು.

ವಿಚಿತ್ರವೂ ನಂಬಲಸಾಧ್ಯವೂ ಎನಿಸುವಂತಹ ಎನಿಮಾ ವಿಧಾನವು ಸಾವಿರಾರು ವರ್ಷಗಳ ಹಿಂದಿನ ಜನರಿಗೆ ತಿಳಿದಿತ್ತೆಂದು ತಿಳಿಸುತ್ತಾ ಡಾ| ವಿಲಿಯಂ ಲಿಬ್ಬರ್‌ಮೇನರೆಂಬ ಅಮೇರಿಕನ್ ವೈದ್ಯತಜ್ಞರು ಅದರ ಇತಿಹಾಸವನ್ನು ವರ್ಗೀಕರಿಸಿರುವರು ಅವರು ಹೀಗೆ ಬರೆಯುತ್ತಾರೆ

ಮಲಶುದ್ಧೀಕರಣದ ವಿಧಾನವು ಪ್ರಾಚೀನ ಕಾಲಾಂತರದ ಮಂಜು ಮುಸುಕಿನಲ್ಲಿ ಮರೆಯಾದಂತಿದೆ ಪೂರ್ವ ಕಾಲದ ಹಿಂದೂಗಳು ಅದ್ಭುತ ಯೋಗ ಸಾಧನೆಯ ಮೂಲಕ ಈ ಆವಶ್ಯಕ ಕ್ರಿಯೆಯನ್ನು ನಿರ್ವಹಿಸುತ್ತಿದ್ದರು ಮಲರಂಧ್ರದ ಮೂಲಕ ನೀರನ್ನು ಹೊಟ್ಟೆಯೊಳಗೆ ಹೀರಿಕೊಳ್ಳುವ ಪ್ರದರ್ಶನವನ್ನು ಈಗಲೂ ಅನೇಕಾನೇಕ ಭಾರತೀಯ ಯೋಗಾಭ್ಯಾಸಿಗಳು ಬಹಿರಂಗವಾಗಿ ಮಾಡಿ ತೋರಿಸುತ್ತಾರೆ ಕೆಲವು ಮಿನಿಟುಗಳ ತನಕ ಈ ನೀರು ಉದರದೊಳಗೆ ಇಡಲ್ಪಟ್ಟು ಕರುಳುಗಳು ಸಂಪೂರ್ಣ ಶುದ್ಧಿ ಮಾಡಲ್ಪಟ್ಟ ನಂತರ ಕಲ್ಮಶದೊಂದಿಗೆ ಹೊರ ಕಳುಹಲ್ಪಡುವದು ವೇದಗಳಲ್ಲಿ ಇವರ ಶಾಸ್ತ್ರೀಯ ಅಭ್ಯಾಸ ಕ್ರಮವು ವಿವರೀತವಾಗಿದೆ

ಐದನೇಯ ಶತಮಾನದ ಪ್ರಖ್ಯಾತ ಗ್ರೀಕ್ ಸಂಚಾರಿಯಾದ ಹೆರೊಡೊಟಸನು ತನ್ನ ಡೈರಿಯಲ್ಲಿ ಹೀಗೆ ಬರೆದಿದ್ದಾನೆ ಇಜಿಪ್ತಿನ ಜನರು ತಿಂಗಳಿಗೆ ಮೂರು ಸಲ ಹೊಟ್ಟೆಯನ್ನು ಶುದ್ಧಿ ಮಾಡಿಕೊಳ್ಳುತ್ತಾರೆ ಈ ಕಲೆಯನ್ನು ಅವರು ಐಬಿಸ್ ಎಂಬ ಕೊಕ್ಕರೆ ಜಾತಿಯ ಒಂದು ಪಕ್ಷಿಯಿಂದ ಕಲಿತರಂತೆ. ಅದು ತನ್ನ ಉದ್ದವಾದ ಕೊಕ್ಕಿನಿಂದ ನೀರನ್ನು ಹೊಟ್ಟೆಯೊಳಗೆ ಕಳುಹಿಸಿ ಆಹಾರ ಶೇಷವನ್ನು ಹೊರ ಹಾಕುತ್ತದೆ ಹೀಗೆಂದು ಪ್ರಖ್ಯಾತ ರೋಮಾಯ ವಿಜ್ಞಾನಿ ಪ್ಲಿನಿಯು ತಿಳಿಸುತ್ತಾನೆ

ಹಿಪ್ಪೊಕ್ರೇಟ್ಸನೆಂಬ ಗ್ರೀಕ್ ವೈದ್ಯ ತಜ್ಞನು ಬೇಧಿ ಔಷಧಿಗಿಂತ ಉದಕ ಶುದ್ಧೀಕರಣವೇ ಉತ್ತಮವೆನ್ನುತ್ತಾನೆ ಗ್ರೀಕರು ಹೆಚ್ಚಾಗಿ ಈ ಸಂಬಂಧ ಉಷ್ಣ ನೀರನ್ನು ಉಪಯೋಗಿಸುತ್ತಿದ್ದರು

ಕೆಲವು ಶತಮಾನಗಳ ನಂತರ ಮಧ್ಯ ಕಾಲದ ಸ್ಪೇನಿನ ವೈದ್ಯರು ಪಿಚಕರಿಯ ನಳಿಗೆಯಿಂದ ನೀರನ್ನು ಹೊಟ್ಟೆಯೊಳಗೆ ಹೊಗಿಸುವ ಕ್ರಮವನ್ನು ಕಂಡು ಹಿಡಿದು ಆಧುನಿಕ ಎನಿಮಾ ವಿಧಾನಕ್ಕೆ ಬುನಾದಿ ಹಾಕಿದರು.

17ನೇ ಶತಮಾನ ಎನಿಮಾ ಕ್ರಮದ ಸುವರ್ಣ ಕಾಲವಂತೆ! ಆಗ ಮರದ ಇಲ್ಲವೆ ಎಲುಬಿನ ನಳಿಗೆಯನ್ನು ಮಲರಂಧ್ರದಲ್ಲಿ ತೂರಿ ಪ್ರಾಣಿಗಳ ಉದರ ಕೋಶ ಇಲ್ಲವೆ ಚರ್ಮದ ಚೀಲುಗಳಲ್ಲಿನ ನೀರನ್ನು ಕರುಳಿಗೆ ಒಯ್ಯುತ್ತಿದ್ದ ಕ್ರಮವನ್ನು ರದ್ದುಗೊಳಿಸಿ ಸ್ನಾಯುಗಳಿಗೆ ಗಾಳಿಹಾಕುವ ವಾಯು ನಳಿಗೆಯಂತಹ ಉಪಕರಣವು ಕಂಡುಹಿಡಿಯಲ್ಪಟ್ಟಿತು. ಫ್ರಾನ್ಸಿನ ಜನರಿಗೆ ಎನಿಮಾ ಚಿಕಿತ್ಸೆಯ ಹುಚ್ಚು ಹಿಡಿದಿತ್ತು. ಆಗ ಇಲ್ಲಿ ವೈದ್ಯರ ಸಹಾಯಕರು ಹೆಗಲ ಮೇಲೆ ಇಂತಹ ಉಪಕರಣವನ್ನು ಹೊತ್ತು ಪೇರಿಸಿನ ಬೀದಿಗಳಲ್ಲಿ ಹೋಗುವುದು ಒಂದು ಸಾಮಾನ್ಯ ದೃಶ್ಯವಾಗಿತ್ತು.

ಹೊಟ್ಟೆಯು ಶುದ್ಧವಾದರೆ ಆರೋಗ್ಯ ಉತ್ತಮವಾಗಿ ಮುಖಕಾಂತಿ ಹೆಚ್ಚುವುದೆಂಬ ಕಲ್ಪನೆಯಿಂದ ಫ್ರೆಂಚರು ದಿನಕ್ಕೆ 3-4 ಸಾರಿ ಎನಿಮಾ ತೆಗೆದುಕೊಳ್ಳುವ ರೂಢಿಯೂ ಪ್ರಚಾರದಲ್ಲಿತ್ತು.

ಫ್ರಾನ್ಸಿನ ಅರಸ 14ನೇ ಲೂಯಿಯು ತನ್ನ ಆಳ್ವಿಕೆಯಲ್ಲಿ 2 ಸಾವಿರ ಸರ್ತಿ ಎನಿಮಾ ತೆಗೆದುಕೊಂಡಿದ್ದನು. ಹಲವು ಸಾರಿ ಓಲಗ ನಡೆಯುತ್ತಿದ್ದ ಹಾಗೆ ಶುದ್ಧೀಕರಣವು ಸಾಗುತ್ತಿತ್ತಂತೆ. ಉಪಯೋಗಿಸಲ್ಪಡುವ ದ್ರಾವಕಗಳು ಸುಗಂಧ ದ್ರವ್ಯ ಮಿಶ್ರವಾಗಿರುತ್ತಿದ್ದುವು ಕೆಲವು ದ್ವೇಷ ಸಾಧಕರು ಶತ್ರುಗಳನ್ನು ವಿಷಮಿಶ್ರಿತ ಎನಿಮಾ ದ್ರಾವಕ ಮೂಲಕ ಕೊಲ್ಲುತ್ತಿದ್ದ ಸಂಗತಿ ಗಮನಕ್ಕೆ ಬಂದಾಗ ಲೂಯಿಯು ಆ ಕುರಿತು ಪರಿಶೀಲನೆಗಾಗಿ ಒಂದು ಗುಪ್ತಚಾರರ ದಳವನ್ನೇ ನೇಮಿಸಿದ್ದನು

1800 ಸುಮಾರಿಗೆ ಎನಿಮಾ [illegible] ಕಾಲ ಮುಗಿದು ಆಧುನಿಕ ಶಾಸ್ತ್ರೀಯ ವಿಧಾನದ ಪ್ರಭಾತವಾಯಿತು 1895ರಲ್ಲಿ ಜರ್ಮನ್ ವೈದ್ಯ ಪ್ರೊ ಇಸ್ಮಾರನು ಅದನ್ನು ಪರಿಪೂರ್ಣ ಶಾಸ್ತ್ರೀಯತೆಗೆ ಮುಟ್ಟಿಸಿದನು

ಬಿಳಿಯರನ್ನು ಕಂಡರೆ ಹಾಯುವ ಕೋಣಗಳು

ಬರ್ಮಾ ದೇಶದ ವೈಶಿಷ್ಟ್ಯ

ಬರ್ಮಿಯರು ಇಂದು ಸ್ವಾತಂತ್ರ್ಯಕ್ಕಾಗಿ ಹೋರಾಟದ ಸಿದ್ಧತೆ ನಡಸುತ್ತಾರೆ [illegible] ವಿಶಾಲ ದಂಗೆಯ ಸ್ಥಿತಿ [illegible] ಬ್ರಿಟಿಷ್ ಸರಕಾರದವರು ಬರ್ಮಾ ಮುಖಂಡರನ್ನು ಮಾತುಕತೆಗಾಗಿ ಲಂಡನ್ನಿಗೆ ಆಹ್ವಾನಿಸಿದ್ದಾರೆ [illegible] ಭಾರತದ ಒಂದಂಗವಾಗಿದ್ದ [illegible] ದೇಶದ ಅತೀ ಹತ್ತಿರದ ನೆರೆರಾಷ್ಟ್ರವಾದ ಈ ಚಿಕ್ಕ ದೇಶದ ಕೆಲವು ವೈಶಿಷ್ಟ್ಯಗಳ ಕುರಿತು ಓರ್ವ ಅಮೇರಿಕನ್ ಪತ್ರಿಕೋದ್ಯೋಗಿ [illegible] ದು ಲೇಖನದಲ್ಲಿ ಹೀಗೆ ಬರೆಯುತ್ತಾರೆ

ಬರ್ಮಾವು ಒಂದು ವಿಚಿತ್ರ ದೇಶ ಅತೀ ದೂರದಲ್ಲಿರುವ ಸ್ಥಳವೊಂದು ಎಲ್ಲಿದೆ ಎಂದು ನೀವು ಅಲ್ಲಿಯವನೊಬ್ಬನ ಕೇಳಿದರೆ ತುಂಬಾ ನಡಯಬೇಕೆಂಬ ಭಾವನೆಯಿಂದ ನೀವು ನೊಂದುಕೊಳ್ಳಬಹುದೆಂದು ಕನಿಕರಪಟ್ಟು ಅವನು 'ಇಲ್ಲೇ ಹತ್ತಿರವಿದೆ' ಅನ್ನುವನು. ಅಲ್ಲಿಯ ಒಂದು ನಾಟಕ ಕತೆ ಮುಗಿಯಲು ಏಳೆಂಟು ದಿವಸ ತಗಲುವುದು. ಮನೆ ಪ್ರವೇಶಿಸುವಾಗ ನಾವು ಹೇಟು ತೆಗೆಯುವುದಾದರೆ ಅವರು ಬೂಟು ತೆಗೆಯುವರು. ಇಂಗ್ಲೆಂಡಿನಲ್ಲಿ ಶತಮಾನಗಳಲ್ಲಿ ಆದ ಪ್ರಗತಿಯು ಇಲ್ಲಿ ಅರ್ಧ ಶತಮಾನದಲ್ಲಾಗಿದೆ.

ಮರದ ಮತ್ತು ಲೋಹದ ಸಾಮಾನುಗಳನ್ನು ತಯಾರಿಸುವಾಗ ಅವನ್ನು ಕಾಲಿನ ಬೆರಳುಗಳಿಂದ ಬಿಗಿಯಾಗಿ ಹಿಡಕೊಳ್ಳಲು ಬರ್ಮಿಯರು ತುಂಬಾ ನಿಪುಣರು. ಅಲ್ಲಿನ ಜನರಿಗೆ ಮಾತ್ರವಲ್ಲ ಮನೆಯಲ್ಲಿ ಸಾಕಲ್ಪಡುವ ಅಲ್ಲಿನ ಕೋಣಗಳು ಕೂಡಾ ಮಾರ್ಗದಲ್ಲಿ ಪಕ್ಕನೆ ಯಾವನಾದರೂ ಬಿಳಿಯನನ್ನು ಕಂಡರೆ ಹಾಯಲು ಓಡುತ್ತವೆ!

ಒಂದು ಪ್ರಶಾಂತ ನದಿತೀರದ ಮೇಲೆ ಬರ್ಮಿಯನೊಬ್ಬನು ಮೀನು ಹಿಡಿಯುತ್ತಾನೆ. ಅವನ ಬಳಿ ಮೀನು ತುಂಬಿಸುವ ದೊಡ್ಡ ಬುಟ್ಟಿಯುದೆ. ಆದರೆ ಮೀನನ್ನು ಹಿಡಿದಹಾಗೆ ಅವನು ಅವನ್ನು ಹುಲ್ಲು ನೆಲದ ಮೇಲೆ ಹಾಕುತ್ತಾನೆ. ಅದಕ್ಕೊಂದು ಕಾರಣವೂ ಇದೆ. ಬುಟ್ಟಿಯಲ್ಲಿ ತುಂಬಿದರೆ ಮೇಲಿನವುಗಳ ಭಾರಕ್ಕೆ ಕೆಳಗಿನವುಗಳು ಜಜ್ಜಲ್ಪಡಬಹುದು. ಆದುದರಿಂದ ಅವು ಜಾಗರೂಕತೆಯಿಂದ ನೀರಿನಿಂದ ಎತ್ತಲ್ಪಟ್ಟು ಮೆತ್ತಗೆ ಹುಲ್ಲು ನೆಲದಲ್ಲಿ ಮಲಗಿಸಲ್ಪಡುತ್ತವೆ ಆ ಕ್ರಿಯೆಯಲ್ಲಿ ಅವು ಮಡಿದರೆ ಯಾರಿಗೂ ಪಾಪವಿಲ್ಲ. ಕಾರಣ ಬುದ್ಧನು "ಯಾವ ಜೀವವನ್ನು ಕೊಲ್ಲಬಾರದು" ಎಂದು ಹೇಳಲಿಲ್ಲವೆ?

[ಪಾಶ್ಚಾತ್ಯರು ಪೌರ್ವಾತ್ಯರ ಆಚಾರ ವಿಚಾರಗಳಲ್ಲಿರುವ ಲೋಪದೋಷಗಳನ್ನು ಹೆಕ್ಕಿ ತಮ್ಮ ಜನರ ಮುಂದೆ ವ್ಯಂಗವಾಗಿ ನಿರೂಪಿಸಿ ಅಪಪ್ರಚಾರ ಮಾಡುವ ಒಂದು ನಿದರ್ಶನವಿದು. ಇಲ್ಲಿ ಲೇಖಕನು ಅಹಿಂಸೆಯ ವಿಡಂಬನೆ ಮಾಡಿದ್ದಾನೆ]

ವಿಮೋಚನಾ ಕಾಲದ ನಿರ್ಧಾರ

ಸ್ವಾತಂತ್ರ್ಯ ಪ್ರತಿಜ್ಞೆಯ ಸಾರಾಂಶ

[illegible] ಜನತೆ [illegible] ಜನತೆಗೆ [illegible] ರ ಜನ್ಮಸಿದ್ಧವಾದುದು

ಜನತೆಯ ಅಧಿಕಾರ ಅಪಹರಿಸಿ ದಬ್ಬಾಳಿಕೆ ಮಾಡುವ ಸರಕಾರ [illegible] ಆ ಅಧಿಕಾರ ಜನತೆ [illegible] ನಮ್ಮ ವಿಶ್ವಾಸ

[illegible] ಸ್ವಾತಂತ್ರ್ಯ [illegible]

[illegible] ಗಬೇಕ

[illegible]

[illegible] ಸಾಗುವೆವು ಸ್ವಾತಂತ್ರ್ಯ [illegible] ಈ ಹೋರಾಟ ನಡೆವುದು

ಅಹಿಂಸಾತ್ಮಕ ವಿಧಾನಕ್ಕೆ ಗಾಂಧಿಜಿಯ ಪುನರ್ರಚನಾತ್ಮಕವಾದ ವಿಧಾಯಕ ಕಾರ್ಯಕ್ರಮವು ಅತ್ಯಾವಶ್ಯಕವೆಂದು ನಾವು ನಂಬುತ್ತೇವೆ. ಖಾದಿ ಅಸ್ಪೃಶ್ಯತಾ ನಿವಾರಣೆ ಜಾತೀಯ ಐಕ್ಯ ಇವು ಮೂರು ಮುಖ್ಯ

ಜಾತಿ ಮತ ಭೇದವಿಲ್ಲದೆ ಪ್ರತಿಯೊಬ್ಬ ವ್ಯಕ್ತಿಗೂ ತನ್ನ ಜೀವನ ಶ್ರೇಯಸ್ಸನ್ನು ಗಳಿಸಲು ಸಮಾನ ಸಂದರ್ಭಗಳಿರಬೇಕು

ದುರ್ಲಕ್ಷಿಸಲ್ಪಟ್ಟವರ ದಾರಿದ್ರ್ಯತೆಯಲ್ಲಿ ಮುಳುಗಿದವರನ್ನು ಉದ್ಧರಿಸಲು ಪ್ರಯತ್ನ ಮಾಡುವೆವು

ಸಾಮ್ರಾಜ್ಯವಾದಿ ಪದ್ಧತಿಯನ್ನು ನಿರ್ಮೂಲಗೊಳಿಸಲು ಬದ್ಧಕಂಕಣರಾಗಿರುವೆವು ಆದರೆ ವ್ಯಕ್ತಿಶಃ ಇಂಗ್ಲಿಷ್ ಜನರೊಡನೆ ನಮಗೆ ದ್ವೇಷವಿಲ್ಲ.

ನಮ್ಮ ಧರ್ಮಗಳು ಬೇರೆ ಬೇರೆ ಇದ್ದರೂ ನಾವು ಒಂದೇ-ಭಾರತ ಮಾತೆಯ ಮಕ್ಕಳಂತೇ ಪರಸ್ಪರ ಅನ್ಯೋನ್ಯತೆಯಿಂದ ಬಾಳುವೆವು

ನಮ್ಮ ನಾಡಿನ 7 ಲಕ್ಷ ಹಳ್ಳಿಗಳ ಉದ್ಧಾರದ ಕುರುಹಾದ ಖಾದಿಯನ್ನೇ ತೊಡುವೆವು. ಶಕ್ಯವಾದ ಮಟ್ಟಿಗೆ ಗ್ರಾಮೋದ್ಯೋಗದಿಂದ ಸಿದ್ಧವಾದ ವಸ್ತುಗಳನ್ನೇ ಉಪಯೋಗಿಸುತ್ತೇವೆ.

ಸ್ವಾತಂತ್ರ್ಯ ಯುದ್ಧದಲ್ಲಿ ಭಾಗವಹಿಸಿ ಕಷ್ಟ, ನಷ್ಟ, ಭ್ರಷ್ಟಗಳಿಗೊಳಗಾದವರಿಗಾಗಿ ನಾವು ಅಭಿನಂದಿಸಿ ಕೃತಜ್ಞರಾಗಿರುವೆವು. ಅವರ ತ್ಯಾಗಗಳು ನಮ್ಮನ್ನು ಸ್ಫೂರ್ತಿಗೊಳಿಸುವ ವಿಷಯಗಳು ಆ ಸ್ಫೂರ್ತಿಯಿಂದ ಗುರಿ ಮುಟ್ಟುವ ತನಕ ಅವಿಶ್ರಾಂತ ಹೋರಾಡುವೆವು.

ಕಾಂಗ್ರೆಸಿನ ಧ್ಯೇಯ ಮತ್ತು ಧೋರಣೆಗಳನ್ನು ಶಿಸ್ತಿನಿಂದ ಮನ್ನಿಸುತ್ತೇವೆ. ಅದರ ಕರೆಗೆ ನಾವು ಸದಾ ಸಿದ್ಧರಿದ್ದೇವೆ.

ಸಿಹಿಸುದ್ದಿ ಸಂಗ್ರಹ

ಒಂದು ಜನತೆಯ ರಾಜಕೀಯ ಅಭಿವೃದ್ಧಿಯೆಂದರೆ ಅದರ ಸಾಮಾಜಿಕ, ನೈತಿಕ ಮತ್ತು ಆರ್ಥಿಕ ಅಭಿವೃದ್ಧಿಗಳ ಒಟ್ಟು ಮೊತ್ತ ಇವು ಮೂರು ಸಾಧಿಸದಿದ್ದರೆ ರಾಜಕೀಯ ಅಭಿವೃದ್ಧಿ ಎಂಬುದು ಕೇವಲ ಕಣ್ಣುಕಟ್ಟು ಕಾಂಗ್ರೆಸ್ಸು ಹರಿಜನೋದ್ಧಾರ ಗ್ರಾಮೋದ್ಧಾರ ಸ್ತ್ರೀಯರ ಉದ್ಧಾರ, ಮದ್ಯಪಾನ ನಿಷೇಧ ಅಹಿಂಸಾ ಪ್ರಚಾರ ಮೊದಲಾದವುಗಳನ್ನು ಸಾರುತ್ತ ಭಾರತೀಯ [illegible] ಯನ್ನು ಸಾಧಿಸಿದೆ ಆದರೆ [illegible] ಇವುಗಳ [illegible] ರಾಜಕೀಯ ತಜ್ಞರೆಲ್ಲರೂ ನಿರ್ಭೀತಿಯಿಂದ ಹೇಳುತ್ತಾರೆ "ಲೀಗು ಮುಸಲ್ಮಾನರ ಹಿತೈಷಿ ಸಂಸ್ಥೆಯೆಂದು ಅನಕ್ಷರಸ್ಥ ಜನತೆಯಲ್ಲಿ ಹುಟ್ಟಿಸಿದ ಭರವಸೆ [illegible] ಗುಳ್ಳೆಯಂತೆ ತಾತ್ಕಾಲಿಕವಾದುದು ಎಂದು [illegible] ತಿಳಿಸಿದು [illegible]

★

[illegible] ಅಸ್ಪೃಶ್ಯತೆಯ [illegible] ಪಕ್ಷದವರನ್ನು [illegible] ಸಾಧ್ಯವಾಗಲಿಲ್ಲ [illegible] ಕಾಂಗ್ರೆಸಿನ [illegible] ಸಲ ಅವರು [illegible] ಸಿಕ್ ಪಂಥಕ್ಕೆ [illegible] ತೃಪ್ತಿಪಡಿಸಲಿಲ್ಲ [illegible] ಕಮ್ಯುನಿಸ್ಟರನ್ನು ಹೊಗಳಿದರು ಇನ್ನೊಂದು ಸಲ ಲೀಗನ್ನು ಪ್ರಶಂಸಿದರು ಅದರ ಸ್ವಲ್ಪ ಸಮಯದ ನಂತರ ಪಾಕಿಸ್ತಾನಕ್ಕೆ ವಿರೋಧವಾಗಿ ಒಂದು ಗ್ರಂಥವನ್ನೇ ಬರೆದರು. ಆಶ್ಚರ್ಯವೆಂದರೆ ನೌಖಾಲಿಯಲ್ಲಿ ಬಹುಸಂಖ್ಯಾಕ ದಳಿತ ವರ್ಗದವರಿಗೆ ಕಷ್ಟನಷ್ಟಗಳಾಗಿದ್ದರೂ ಈ ಪುಣ್ಯಾತ್ಮರು ಇದುತನಕ ಚಕಾರ ಶಬ್ದವೆತ್ತಿಲ್ಲ

★

ಲಂಡನ್ನಿನಲ್ಲಿ ಬರ್ಮಾದ ಭವಿಷ್ಯದ ಕುರಿತು ಮಾತುಕತೆಗಳಾಗುತ್ತಿದ್ದಾಗಲೇ ಆ ದೇಶಸ್ಥರು ಹೋರಾಟದ ಸಿದ್ಧತೆ ಮಾಡುತ್ತಿರುವರು ಅಲ್ಲೇ ಪಲೇಸ್ತೀನದ ಅರಬಿ ಯೆಹೂದಿ ಮಾತುಕತೆಗಳಾಗಲಿರುವಾಗ ಯೆಹೂದಿ ಬೆದರಿಕೆಗಾರರ ಚಟುವಟಿಕೆಗಳೂ ಹೆಚ್ಚುತ್ತಿವೆ. ಭಾರತದಲ್ಲೂ ಕಾಂಗ್ರೆಸು ಎಲ್ಲದಕ್ಕೂ ಸಿದ್ಧವಿದೆ ಎನ್ನುತ್ತಿದೆ. ಲೀಗಿನ (ಅ) ಪ್ರತ್ಯಕ್ಷ ಹೋರಾಟವಂತೂ ಸಾಗುತ್ತಲೇ ಇದೆ

ಚಿಂತೆ ಯಾಕೆ ಮಾಡಬಾರದು?

ಕಳವಳದಿಂದ ಕಷ್ಟ ನಿವಾರಿಸಬಹುದು

ಆರೋಗ್ಯದ ವಿಚಾರ ಸದಾ ಚಿಂತಿಸಿರಿ

ಚಿಂತೆಯೇ ಮುಪ್ಪಂತೆ. ಮುಪ್ಪಾದರೇನು? ಮನಸ್ಸನ್ನು ಅತೀ ಚಿಂತೆಗೊಳಮಾಡಿ ಮತ್ತೆ ಯೌವನವನ್ನುಂಟುಮಾಡುವ ಸಂತೋಷ ಉಂಟಾಗುವುದಾದರೆ ಅದೇಕಾಗಬಾರದು? 'ಚಿಂತೆ ಯಾಕೆ ಮಾಡ್ತಿಯಾ ಚಿನ್ಮಯನಿದ್ದಾನೆ' ಎಂದು ದಾಸರೂ, 'ಚಿಂತೆ ಮಾಡುವುದರಿಂದ ಒಂದು ಕೂದಲನ್ನು ಬಿಳಿಯಾಗಲಿ, ಕಪ್ಪಾಗಲಿ ಮಾಡಲು ಸಾಧ್ಯವಿಲ್ಲ'ವೆಂದು ಕ್ರಿಸ್ತನೂ ಬೋಧಿಸುತ್ತಾನೆ. ಮೃಗ ಪಕ್ಷಿಗಳಿಗೆ ಚಿಂತೆಯಿಲ್ಲವೆಂದು ಅದೇ ಕ್ರಿಸ್ತನು ತಿಳಿಸುತ್ತಾನೆ ಆದರೆ ಆ ಜಂತುಗಳಿಗಿಂತ ಶ್ರೇಷ್ಠರೆನಿಸಿದ ನಮ್ಮ ಜೀವನಗಳು ಒಂದಲ್ಲ ಒಂದು ಚಿಂತೆಯಿಂದ ಸುಗಮವಾಗುವುದಾದರೆ ಚಿಂತೆ ಯಾಕಾಗಬಾರದು? ಮಿಂಚಿಹೋದ ಕಾರ್ಯಕ್ಕೆ ಚಿಂತಿಸಿ ಫಲವೇನೂ ಇಲ್ಲ. ಆದರೆ ಮಿಂಚಿಹೋಗದಿರುವ ಕಾರ್ಯಕ್ಕಾದರೂ ಚಿಂತೆ ಮಾಡಬೇಡವೆ? ದೇವರ ಧ್ಯಾನವಾದರೂ ಒಂದು ಚಿಂತೆಯಲ್ಲವೆ?

ಚಿಂತೆಮಾಡಲು ಇಂದಿನ ಕಾಲದಲ್ಲಿರುವಷ್ಟು ಸಂದರ್ಭಗಳು ಬೇರೆಂದಾದರೂ ಇದ್ದುವೆ? ನಾವದರ ಅನುಕೂಲತೆಯನ್ನು ತೆಗೆದುಕೊಳ್ಳಬೇಕು. ಪ್ರತಿಯೊಬ್ಬನೂ ಪ್ರತಿದಿನವೆಂಬಂತೆ ಒಂದಿಷ್ಟು ಚಿಂತೆ ಮಾಡಲೇಬೇಕಾದುದು ಕರ್ತವ್ಯವೆನಿಸುತ್ತದೆ. ಮೊದಲು ಸಣ್ಣ ಸಣ್ಣ ಹುಲ್ಲು ಸಂಕವನ್ನು ದಾಟಲು ಪ್ರಯತ್ನಿಸಬೇಕು ಅಂದರೆ ಮುಂದೆ ದೊಡ್ಡ ದೊಡ್ಡ ಕಲ್ಲು ಸೇತುವೆಗಳನ್ನು ದಾಟಲು ಸುಲಭಾಭ್ಯಾಸವಾಗುತ್ತದೆ

ಚಿಂತೆಯನ್ನು ಯಶಸ್ವಿಯಾಗಿ ಸಫಲಗೊಳಿಸಲು ಅಮೇರಿಕದ ಫ್ರೆಂಕ್ ಸುಲಿವಾನ್ ಎಂಬ ಮಾನಸಿಕ ತಜ್ಞರು ಈ ಕೆಳಗಿನ ಸೂಚನೆಗಳನ್ನು ಕೊಡುತ್ತಾರೆ.

ಮೊದಲು ಚಿಂತಾಕಾರ್ಯವನ್ನು ಎಂದಿಗೂ ಮುಂದೆ ಹಾಕಬೇಡಿ. "ಈ ವಿಷಯ ನಾನಿಂದು ಚಿಂತಿಸುವುದಿಲ್ಲ ಇಂದು ನಾನು ವಿನೋದ ಸಲ್ಲಾಪಗಳಿಂದ ಕಳೆಯುತ್ತೇನೆ. ಚಿಂತೆಯ ಕೆಲಸ ನಾಳೆ" ಎನ್ನಬೇಡಿ. ನಾಳೆ ಹೆಚ್ಚೆಚ್ಚು ವಿನೋದವಾಡಲು ಮನಸ್ಸಾಗಬಹುದು

ಚಿಂತೆ ಮಾಡಲು ನೀವು ಅತೀ ಚಿಕ್ಕವರೆಂದು ಯಾರಾದರೂ ನಿಮ್ಮನ್ನು ತಿಳಿಸಲು ಸಂದರ್ಭ ಕೊಡಬೇಡಿ. ಮಹತ್ತರವಾದ ತೊಡಕುಗಳನ್ನು ದಾಟಿದವರು ಎಳೆತಾರುಣ್ಯದಲ್ಲೇ ಚಿಂತೆ ಮಾಡಲು ಕಲಿತವರು. ದೊಡ್ಡ ಸಮಸ್ಯೆಯ ಕುರಿತು ಸಣ್ಣ ಚಿಂತೆ ಸಾಕಾಗದು. ಯಾವ ತರದ ಚಿಂತೆ ನಿಮ್ಮ ಮನಃಪ್ರವೃತ್ತಿಗೆ ಸರಿಹೋಗುತ್ತದೆಂದು ತಿಳಿದು ಅದೇ ತರದ ಚಿಂತೆಯನ್ನಾರಂಭಿಸಿರಿ

ಮೊದಮೊದಲು ನೀವು ಹೀಗೆ ಹೇಳಬಹುದು. "ಇದು ಅತಿ ಕಿರಕುಳ ವಿಚಾರ. ಈ ಕುರಿತೇಕೆ ಚಿಂತೆ"– ಇದು ಯೋಗ್ಯ ಧೋರಣೆಯಲ್ಲ ಚಿಕ್ಕ ಚಿಕ್ಕ ವಿಷಯಗಳ ಕುರಿತು ಚಿಂತಿಸಿಯೇ ನೀವು ಲಾಭಗಳಿಸಬಹುದು. ನೀವು ನಿಮ್ಮ ಸ್ನೇಹಿತರೊಬ್ಬರಿಗೆ ತಪ್ಪಿ ಮಾತನಾಡಿದರ ಕುರಿತು ಇಲ್ಲವೆ ನಿಮ್ಮ ಸ್ನೇಹಿತನು ನಿಮಗೆ ಬೇಸರಗೊಳಿಸುವಂತೆ ಮಾತನಾಡಿದ್ದುದರ ಕುರಿತು ನೀವು ಬಿಡದೆ ಚಿಂತೆ ಮಾಡಿದರೆ ಒಂದು ದಿವಸ ಹಾಳಾದರೂ ಅಂತ್ಯದಲ್ಲಿ ಮುಂದಿನ ಧೋರಣೆಯು ಸ್ಪಷ್ಟ ಕಾಣುವುದು.

ನನ್ನ ಮಟ್ಟಿಗೆ ನಾನೊಂದು ಅತೀ ಚಿಕ್ಕ ಕಿರಕುಳವನ್ನು ತೆಗೆದುಕೊಂಡು ಅದನ್ನು ಚಿಂತಾಸಾರದಿಂದ ಪೋಷಿಸಿ ದೊಡ್ಡ ಗಂಡಾಂತರ ಮಾಡಿಕೊಳ್ಳುವೆ. ಒಂದು ಕಾಗದವನ್ನು ಟಪ್ಪಾಲುಪೆಟ್ಟಿಗೆಯೊಳಗೆ ಹಾಕಿ ಅದಕ್ಕೆ ಸ್ಟೇಂಪು ಹಚ್ಚಿಸಿದೆನೊ ಇಲ್ಲವೊ ಎಂದು ಮನಸ್ಸು ಬಗ್ನವಾಗಿ ಹೋಗುವ ತನಕ ಚಿಂತಿಸಬೇಕೆಂದು ಚಿಂತಾ ಕಟಾಗಾರನಾದ ನನಗೆ ಅನಿಸುತ್ತದೆ.

ನಾಗರೀಕತೆಯು ವಿವಿಧ ಒಂದು ಸೂಕ್ಷ್ಮ ಕಸೂತಿ ಕೆಲಸದಂತಿದೆ ಹಾಕಾದಾಗ ಅದರೊಳಗಿನ ಕಿಸಿರು ದಾರಗಳನ್ನೆಳೆದು ಚಿಂತೆಮಾಡಲವಕಾಶವಿದೆ. ನಿಮ್ಮ ಆರೋಗ್ಯದ ಕುರಿತು ಬೇಸರಿಸುವುದು ಒಳ್ಳೇ ಚಿಂತಾ ವಿಷಯ ನೀವು ಈಗ ಆರೋಗ್ಯವಂತರಾಗಿದ್ದೀರಿ ಎಂದು ತೃಪ್ತಿಪಟ್ಟುಕೊಂಡಿರಬಹುದು ಆದರೆ ಮರುಕ್ಷಣವಲ್ಲೆಂಬಂತೆ ನಿಮ್ಮ ಈ ಹೆಮ್ಮೆಗೆ ಘಾತವುಂಟಾಗಬಹುದು. ಕೆಲವು ವೈದ್ಯಕೀಯ ಗ್ರಂಥಗಳನ್ನು ಓದಿರಿ ಆಗ ನಿಮಗೆ ಈ ವಿಷಯದ ಸತ್ಯಸ್ಥಿತಿ ತಿಳಿಯುವುದು. ಆರೋಗ್ಯವಂತರಾಗಿದ್ದೀರೆಂದು ತಿಳಿದ ನಿಮ್ಮಲ್ಲಿಯೇ ಕಡಿಮೆ ಎಂದರೆ 50 ಅನಾರೋಗ್ಯ ದೋಷಗಳು ಕಾಣಬಹುದು ಒಂದು ವೇಳೆ ನಿಮ್ಮ ಸ್ವಂತ ದೇಹದಲ್ಲಿ ಚಿಂತಿಸುವ ವಿಷಯ ಕಂಡು ಹಿಡಿಯಲು ಕಷ್ಟವಾದರೆ ನಿಮ್ಮ ಕುಟುಂಬದವರ, ಇಲ್ಲವೆ ಸ್ನೇಹಿತರ ಆರೋಗ್ಯದ ಕುರಿತು ಚಿಂತಿಸಿರಿ. ಸುಪ್ಪಡನೂ ಆರೋಗ್ಯವಂತನೂ ಆಗಿದ್ದ ಮಗನಿಬ್ಬನ ಕುರಿತು 19 ವರ್ಷ ಚಿಂತಿಸಿದ ತಾಯಿಯೋರ್ವಳ ವಿಷಯ ನನಗೆ ಗೊತ್ತಿದೆ.

ಇದಾದ ಮೇಲೆ ಹಣದ ವಿಷಯ ಚಿಂತೆ ಮಾಡುವ ಪ್ರಸಂಗ ದಿನನಿತ್ಯವೆಂಬಂತಿದೆ, ಈ ಸಂದರ್ಭದಲ್ಲಿ ಪ್ರಾಚೀನ ಗ್ರೀಕರ ಧೋರಣೆಯು ಶ್ಲಾಘನೀಯವಾಗಿದೆ, ನಿಮ್ಮಲ್ಲಿ ಹಣವಿಲ್ಲದಿದ್ದರೆ ಅದನ್ನು ಸಂಪಾದಿಸುವುದು ಹೇಗೆಂದು ಚಿಂತಿಸಿರಿ. ಹಣ ತುಂಬಾ ಇದ್ದರೆ ಅದನ್ನು ಕಳೆದುಕೊಳ್ಳದಂತೆ ಮಾಡುವ ಉಪಾಯಗಳ ಕುರಿತು ಚಿಂತಿಸಿರಿ.

ಈ ವಿಷಯವನ್ನು ಈಗ ಪುನರಾವರ್ತಿಸೋಣ. ಚಿಂತೆಮಾಡಬೇಡಿರೆಂದು ಹೇಳುವವರನ್ನು ಲಕ್ಷಿಸಬೇಡಿರಿ. ಎಣ್ಣೆ ಚೆಲ್ಲಿಹೋದರೂ ಚಿಂತಿಸಿರಿ, ತೆಂಗಿನಕಾಯಿ ಬಿದ್ದರೂ ಚಿಂತಿಸಿರಿ. ದೇಶಮುಖಂಡರೂ ತತ್ವಜ್ಞಾನಿಗಳೂ, ವಿಜ್ಞಾನಿಗಳೂ, ಕಲಾಗಾರರೂ ಸಾಹಿತಿಗಳೂ ನಿಶ್ಚಿಂತರಾಗುತ್ತಿದ್ದರೆ ಜಗತ್ತಿನ ಗತಿ ಏನಾಗುತಿತ್ತು? ಆದುದರಿಂದ ಚಿಂತೆಯೊಂದು ಕಂತೆಯೆಂದು ತಿಳಿಯಬೇಡಿರಿ,



ಸಮರ್ಥತೆ, ಒಳ್ಳೆ ಶುಭ್ರತೆ ಮತ್ತು ಮನೋಹರತೆ, ಇವುಗಳನ್ನು ಸುಭದ್ರ ಮತ್ತು ಸುಲಭವಾದ ಈ ರೀತಿಯಲ್ಲಿ ನಿಮ್ಮದಾಗಿ ಮಾಡಿಕೊಳ್ಳಬಹುದು. ವನಸ್ಪತಿ ಮೂಲಗಳಿಂದ ಸಿದ್ಧವಾಗುವ, ಬ್ಯಾಲ್ ಬೀನ್ಸ್, ಎಂಬ ಈ ಶಕ್ತಿಕಾರಕ ಬೇದಿ ಮದ್ದನ್ನು ಕ್ರಮವಾಗಿ ಸೇವಿಸಿದಲ್ಲಿ ರಕ್ತದಿಂದ ವಿಷವಸ್ತುಗಳು ವಿಸರ್ಜನೆಯಾಗಿ, ಜೀರ್ಣಶಕ್ತಿಯು ವೃದ್ಧಿಯಾಗಿ ನಿಮ್ಮ ಅಂತರ್ಯ ಆರೋಗ್ಯವು ಉತ್ತಮಗೊಳ್ಳುವುದು

ಶುಭ್ರ ಆರೋಗ್ಯ ಫಲ್ಲಿರಬೇಕಾದರೆ, ನಿಮಗೆ ಬ್ಯಾಲ್ ಬೀನ್ಸ್‌ಗಳ ಅವಶ್ಯವಿದೆ ಎಂದು ಸದಾ ಜ್ಞಾಪಕದಲ್ಲಿಡಿರಿ

ಮಲಗುವ ಮುನ್ನ ಶುದ್ಧ ವನಸ್ಪತಿಯಾದ

BILE BEANS

ಬ್ಯಾಲ್ ಬೀನ್ಸಿನ್ನು ತ್ವಲಪ ಸೇವಿಸಿರಿ.

ರಿಯಾಯತಿ ಲಗ್ಗೇಜಿನಲ್ಲಿ ವ್ಯಾಪಾರಿ ಸಾಮಾನುಗಳ ನಿಷೇಧ

ಪೆಸೆಂಜರರ ಸೌಕರ್ಯಗಳ ಬಗ್ಗೆ ಒಂದು ಮಣ ಭಾರದ ಸಾಮಾನುಗಳನ್ನು ಫ್ರೀ ತೆಗೆದುಕೊಂಡು ಹೋಗಬಹುದಾಗಿ ಮಾಡಿದ ರಿಯಾಯತಿ ಕಾರಣದಿಂದಾಗಿ ಪೆಸೆಂಜರರು ಅವರ ಸ್ವಂತ ಉಪಯೋಗದ ಸಾಮಾನುಗಳಲ್ಲದೆ ವ್ಯಾಪಾರಿ ಸಾಮಾನುಗಳನ್ನು ತಮ್ಮೊಡನೆ ಪ್ರಯಾಣ ಬೆಳೆಸುವ ಸ್ನೇಹಿತರ ಹೆಸರಿನಲ್ಲಿ ಈ ರಿಯಾಯತಿ ಮೂಲಕ ಧರ್ಮಾರ್ಥ ಸಾಗಿಸುವುದು ರೂಢಿಯಾಗಿದೆ.

ಮೋಟರ್ ವಾಹನಗಳು ರೈಲ್ವೆಗಾಡಿಗಳಂತಾಗಿಲ್ಲ. ಅವುಗಳಲ್ಲಿ ನಿಯಮಿತ ಭಾರಕ್ಕಿಂತ ಹೆಚ್ಚಿನ ಸಾಮಾನುಗಳನ್ನು ಒಯ್ಯುವುದು ಮೋಟರ್ ವಾಹನಕ್ಕೂ ಮತ್ತು ಪೆಸೆಂಜರರಿಗೂ ಅಪಾಯವಾಗಿದೆ. ಕಾರಣ ಬಸ್ಸುಗಳಲ್ಲಿ ಒಯ್ಯುವ ಸಾಮಾನುಗಳನ್ನು ಪೆಸೆಂಜರರ ಆವಶ್ಯಕತೆ ಬಗ್ಗೆನೇ ಮಿತಗೊಳಿಸುವುದು ಅಗತ್ಯವಿದೆ.

ವ್ಯಾಪಾರಿ ಸಾಮಾನುಗಳನ್ನು ಒಯ್ಯುವರೆ ವ್ಯಾಪಾರಿಗಳು
ಶೆಡ್ಯೂಲ್ ಟೈಮಿಗೆ ಹೊಂಡೊಯ್ಯುವ "ಲಕ್ಷ್ಮಿ" ಯಾ "ಸಿ. ಬಿ. ಸಿ." ಲೋರಿ
ಸರ್ವಿಸುಗಳ ಸೌಖರ್ಯವನ್ನು ಉಪಯೋಗಿಸಬೇಕಾಗಿ ಅಪೇಕ್ಷಿಸುತ್ತೇವೆ.

ವ್ಯಾಪಾರಿ ಸಾಮಾನುಗಳನ್ನು ಎಷ್ಟಕ್ಕೂ ಫ್ರೀ ಲಗ್ಗೇಜಿನ ಅಂಶದಲ್ಲಿ ಸೇರಿಸಿಕೊಳ್ಳಲಾಗುವುದಿಲ್ಲ. ಈ ಕುರಿತು ಮಾಹಿತಿಯನ್ನು ಬುಕ್ಕಿಂಗ್ ಕ್ಲಾರ್ಕರಿಂದ ಪಡಿಯಬಹುದು

JOINT MANAGERS,

The Combined Booking Agency, MANGALORE — **The Joint Booking Office,** KODIALBAIL

THE CANARA BANKING CORPORATION LTD.
(Incorporated in British India)
Estd. 1906.
Head Office: UDIPI, S. Kanara.

Authorised Capital	Rs. 25,00,000
Issued & Subscribed Capital	16,00,000
Paid up Capital	15,87,600
Reserves	4,60,000
Total Resources Around	Rs. 2½ Crores.

Branches at Fort-Bombay, Madras, Bangalore, Coimbatore, Salem, Calicut, Hubli, Mysore, Cochin, Mangalore, Mercara etc., etc., etc.
BANKING BUSINESS OF EVERY DESCRIPTION TRANSACTED.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳಕಡ್ಡಿ, ಸಿಕ್ತ ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,
ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ. ಕಂಪನಿಯಲ್ಲಿ ಸಿಯುವುದು.

1947 *Greetings For The New Year* **1947**

To

ALL OUR POLICY HOLDERS,
MEDICAL EXAMINERS,
AGENTS AND WELLWISHERS,

And Best Wishes

FOR A PROSPEROUS YEAR TO COME

From

Kochikar Brothers, Limited.

Chief Agents for South India including Indian States & Bombay City

THE BOMBAY LIFE ASSURANCE COMPANY LIMITED

MADRAS, BANGALORE, TRIVANDRUM, MANGALORE, MADURA, CALICUT, BOMBAY, & UDIPI

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion, and all diseases pertaining to the heart & lungs

Depot: **Maharaja Galli, Hubli**

Bhuvanendra Products, Ltd.
Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ಕುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ಕೊಡುವುದು. ಸೂತಿಕಾ ರೋಗಗಳನ್ನು ಕಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.
ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಖು 31—1—1947 [ಸಂಚಿಕೆ 5]

ಹಿಂದೀ ರಾಜಕಾರಣ

ಲೇ: ಶ್ರೀ ಎನ್. ಆರ್. ಕಲ್ಲೆ.

ಘಟನಾ ಸಮಿತಿಯ ಪ್ರಗತಿ

ಮುಸ್ಲಿಂ ಲೀಗಿನ ಪ್ರತಿಕ್ರಿಯೆ

ಕರಾಚಿ ಪರಿಷತ್ತಿನಲ್ಲೇನಾಗುವದು ?

ಹಿಂದೀ ರಾಜ್ಯ ಘಟನಾ ಸಮಿತಿಯು ಕಳೆದ ಡಿಸೆಂಬರ ಮತ್ತು ಜನೆವರಿ ತಿಂಗಳಲ್ಲಿ ಒಟ್ಟು ಎರಡು ಸಾರಿ ಸಭೆಗೂಡಿ ಆರಂಭದ ಕೆಲಸಗಳನ್ನು ಮಾಡಿದೆ. ಮುಂದಿನ ಕಾರ್ಯಕಲಾಪಗಳನ್ನು ಯಶಸ್ವಿಯಾಗಿ ಸಾಗಿಸುವ ಬಗ್ಗೆ ಬೇಕಾದ ಉಪ ಸಮಿತಿಗಳು ಈಗಾಗಲೇ ನೇಮಿಸಲ್ಪಟ್ಟಿವೆ ಎಲ್ಲ ಕೆಲಸವನ್ನು ಸಾಗಿಸುವದಕ್ಕೆ ತಕ್ಕ ಕಾರ್ಯಕ್ರಮ ಪಟ್ಟಿ ಮತ್ತು ವಿಷಯಗಳನ್ನು ನಿರೂಪಿಸುವ ಬಗ್ಗೆ ಸಹ ಸಮಿತಿಗಳ ನೇಮಕವಾದುದಲ್ಲದೆ ಅದರಂತೆ ಕಾರ್ಯಕ್ರಮವನ್ನು ಜರುಗಿಸುವದಕ್ಕೆ ಮೊನ್ನೆ ಜನೆವರಿ ತಾ 22ಕ್ಕೆ ಪಂಡಿತ ಜವಾಹರಲಾಲರ ಗೊತ್ತುಗುರಿ ಸ್ಪಷ್ಟಪಡಿಸಿದ ಠರಾವು ಸ್ವೀಕೃತವಾಯಿತು. ಇದಲ್ಲದೆ ಡಾ। ಪಟ್ಟಾಭಿ ಸೀತಾರಾಮಯ್ಯನವರ ಹಾಗೂ ಶ್ರೀ ಸಿ ರಾಜಗೋಪಾಲಾಚಾರ್ಯರ ಠರಾವುಗಳೂ ಸ್ವೀಕೃತವಾಗಿದ್ದು ಮುಂದಿನ ಕೆಲಸಕ್ಕೆ ಅನುಕೂಲತೆಗಳನ್ನು ಮಾಡಿವೆ

ಸಮಾಧಾನ

ಘಟನಾಸಮಿತಿಯ ಈ ವರೆಗಿನ ಕಾರ್ಯಕಲಾಪದ ಬಗ್ಗೆ ಸಮಿತಿಯ ಒಳಗಿರುವ ಸದಸ್ಯರಂತೆ ಹೊರಗಿರುವ ಜನತೆಗೂ ಸಮಾಧಾನವಾಗಿದೆ. ಆಂಗ್ಲೋ ಇಂಡಿಯನ್ನರು ಕ್ರಿಶ್ಚಿಯನರು ಹಾಗೂ ಇನ್ನಿತರ ಅಲ್ಪ ಸಂಖ್ಯಾಕರು ಘಟನಾಸಮಿತಿಯ ಧೋರಣೆಯನ್ನು ಬಹಳವಾಗಿ ಮೆಚ್ಚಿರುವರು. ಇದೇ ರೀತಿ ಘಟನಾಸಮಿತಿಯ ಕೆಲಸ ಸಾಗಿಸಿಕೊಂಡು ಹೋಗಬಹುದೆಂಬ ವಿಶ್ವಾಸವು ಈಗ ಎಲ್ಲರಲ್ಲಿಯೂ ಉಂಟಾಗಿದೆ ಇದರಿಂದ ಲೀಗಕ್ಕೆ ಬಹಳ ಅಸಮಾಧಾನವೆಂಗಿದೆ ಅಲ್ಲದೆ ನರೇಂದ್ರರೂ ಮೆಚ್ಚಿಬಿಟ್ಟಿರುವರು ತಮ್ಮ ಅಸ್ತಿತ್ವಕ್ಕೆ ಆಶ್ರಯದಾತರೆನಿಸಿದ ಬ್ರಿಟಿಷರ ಕೃಪಾಛತ್ರದಲ್ಲಿ ಬಾಳಿದ ನರೇಂದ್ರರಿಗಾಗಲಿ ಲೀಗಿಗಾಗಲಿ ಹಿಂದೂಸ್ಥಾನದ ಜನತಾಹಿತವಾಗುವದು ಬೇಡವಾಗಿದೆ ತಮ್ಮ ಕಲ್ಪಿತ ಹಿಂದು ವೈಶಿಷ್ಟ್ಯಕ್ಕೆ ತೊಂದರೆಯಾಗದೆ ಸುಖದಲ್ಲಿ ತಮ್ಮ ಜೀವನವು ಸುಗಮವಾಗಿ ಸಾಗಲೆಂಬುದೇ ನರೇಂದ್ರರ ಹಾಗೂ ಲೀಗಿನ ಪ್ರಮುಖರ ಇಚ್ಛೆಯಿದ್ದಂತೆ ತೋರುವುದ

ಪ್ರತಿಕ್ರಿಯೆ

ಲೀಗಿನ ಹಟಮಾರಿತನದಿಂದ ಹಾಗೂ ಉಪೇಕ್ಷೆಯಿಂದ ಉಂಟಾದ ಪ್ರತಿಕ್ರಿಯೆಯು ಸದ್ಯಕ್ಕೆ ಲೀಗಿಗೆ ಪ್ರತಿಕೂಲವಾಗಿ ನಿಂತಿದೆ. ಪರಕೀಯರನ್ನು ನಮ್ಮ ದೇಶದಿಂದ ಹೊರಗಟ್ಟಿ ಸ್ವಾತಂತ್ರ್ಯವನ್ನು ಗಳಿಸುವದು ಮೊದಲನೆಯ ಗುರಿಯಿರುವಾಗ ಅವರ ಇರುವರಿಗೆ ನೆರವಾಗುವಂಥ ಸಾಧನಗಳನ್ನು ಹುಡುಕಲು ಪ್ರಯತ್ನಿಸುವದು ಲೀಗಿನ ಗೌರವಕ್ಕೆ ತಕ್ಕುದಲ್ಲ, ಮುತ್ಸದ್ದಿತನಕ್ಕೂ ಯೋಗ್ಯವಾದುದಲ್ಲ. ಲೀಗಿನ ಈ ಧೋರಣೆಯಿಂದ ಲೀಗೇತರ ಮುಸಲ್ಮಾನ ಬಂಧುಗಳೂ ನೊಂದಿರುವರು.

ಇತ್ತ ಘಟನಾಸಮಿತಿ ಕೊಟ್ಟ ಅವಕಾಶವನ್ನು ಬಿಟ್ಟು ಉಪೇಕ್ಷೆಯಿಂದ ಲೀಗು ದೂರ ಸರಿದು ಉಳಿದಿರುವುದಲ್ಲದೆ ಇನ್ನೂ ಮುಂದಿನ ನಿರ್ಣಯವನ್ನು ಸ್ಪಷ್ಟಮಾಡಿಲ್ಲ. ಇದೇ ತಾ. 29ಕ್ಕೆ ಆರಂಭವಾಗಿರುವ ಲೀಗ್ ವರ್ಕಿಂಗ್ ಕಮಿಟಿಯಲ್ಲಿ ಯಾವ ನಿರ್ಣಯವನ್ನೂ ಲೀಗು ಮಾಡಲಿರುವದೆಂಬದು ಇನ್ನೂ ಗೊತ್ತಾಗಿಲ್ಲ. ಈಗ ಇದ್ದ ಪರಿಸ್ಥಿತಿಯಲ್ಲಿ ಲೀಗು ಘಟನಾ ಸಮಿತಿಯಿಂದ ಹೊರಗ ಉಳಿಯುಬಹುದಾಗಿಲ್ಲ ಆದರೆ ಲೀಗು ಈ ಮಹತ್ವದ ಸಭೆಯನ್ನು ಬಿಟ್ಟು ಕೆಲಸವಲ್ಲದ ಕೆಲಸಕ್ಕೆ ಕೈಹಾಕಿದ ಪಂಜಾಬಿನಲ್ಲಿ ಕಾಯದೆ ಭಂಗ ಚಳವಳಿ ಕೈಗೊಂಡು ತಮ್ಮವರ ಸಹಾನುಭೂತಿಯನ್ನು ತನ್ನ ಕಡೆಗೆ ಸೆಳೆಯುವ ಪ್ರಯತ್ನ ನಡಿಸಿದೆ–ಆದರೆ ಇದು ಎಷ್ಟರಮಟ್ಟಿಗೆ ಯಶಸ್ವಿಯಾದೀತೆಂಬದನ್ನು ಲೀಗ ಪ್ರಮುಖರು ಇನ್ನೂ ತಿಳಿದುಕೊಂಡಿಲ್ಲ ಲೀಗಿನ ಅಂಧ ದೃಷ್ಟಿಯ ಸದ್ಯದ ಧೋರಣೆಯಿಂದ ಮುಸ್ಲಿಂ ಬಂಧುಗಳಲ್ಲಿರುವ ಬಂಧುಪ್ರೇಮದ ಲಾಭವು ಜನತೆಗೆ ದೊರಕದಂತಾಗಿದೆ ಈ ಲೋಪದೋಷಗಳಿಗೆ ಲೀಗ ಪ್ರಮುಖರ ಧೋರಣೆಯೇ ಕಾರಣವೆಂಬುದನ್ನು ಅತ್ಯಂತ ವಿಷಾದದಿಂದ ಒಪ್ಪಬೇಕಾಗುವದು

ನರೇಂದ್ರರು

ಲೀಗಿನಂತೆ ಘಟನಾಸಮಿತಿಯಿಂದ ಹೊರಗೆ ಉಳಿದಿರುವ ಇನ್ನೊಂದು ಘಾತವೇ ನರೇಂದ್ರಮಂಡಲ ಈ ಮಂಡಲದವರು ಆಚಂದ್ರಾರ್ಕವಾಗಿ ಜನತೆಯನ್ನು ಆಳಲು ಹುಟ್ಟಿದ ಸಂತತಿಗಳೆಂದು ತಿಳಿದುಕೊಂಡಿರುವರಲ್ಲದೆ ರಾಜನೆಂದರೆ ಜನರ ಸೇವಕ–ಅವರ ದರ್ಶಿ ಎಂಬುದನ್ನು ಅವರು ಇನ್ನೂ ತಿಳಿದುಕೊಂಡಿಲ್ಲ. ಆದರೆ ಅವರ ಆಡಳಿತೆಯಲ್ಲಿ ಮೂಗುಬ್ಬಸಕ್ಕೆ ಗುರಿಯಾದ ಪ್ರಜೆಗಳು ಮಾತ್ರ ಈ ನರೇಂದ್ರರು ಇನ್ನು 10 ವರ್ಷ ತಮ್ಮನ್ನು ಆಳಿದರೆ ತಾವು ಮಾನವರಿಂದ ಕಾಡುಜಂತುಗಳ ವರ್ಗಕ್ಕೆ ಇಳಿಯಬೇಕಾಗುವದೆಂಬುದನ್ನು ತಿಳಿದ ಬ್ರಿಟಿಷ ಹಿಂದುಸ್ಥಾನದ ಜೊತೆಯಲ್ಲಿ ಮುಂದೆ ಸಾಗಲು ಪ್ರಯತ್ನಿಸುತ್ತಿರುವರು ಇಂಥ ಸಮಯದಲ್ಲಿ ಪ್ರಜೆಗಳ ಸ್ವಾತಂತ್ರ್ಯ ಪ್ರೇಮದ ವೇಗವನ್ನು ತಮಗೆ ತಡೆಗಟ್ಟಲು ಸಾಧ್ಯವಿಲ್ಲವೆಂಬುದನ್ನು, ಹಾಗೆ ಮಾಡುವದು ಅನ್ಯಾಯವೆಂಬುದನ್ನೂ ತಿಳಿದು ತಮ್ಮ ಪ್ರಜೆಗಳ ಒಪ್ಪಿಗೆಯಂತೆ ಘಟನಾಸಮಿತಿಗೆ ಪ್ರತಿನಿಧಿಗಳನ್ನು ನರೇಂದ್ರರು ಕಳಿಸುವದು ಅತ್ಯಾವಶ್ಯ ಅಂದರೆ ಮಾತ್ರ ಹಿಂದುಸ್ಥಾನದ ಜಟಿಲ ಸಮಸ್ಯೆಯನ್ನು ಬಗೆಹರಿಸಿ ಮುಂದಿನ ಘಟನೆಯನ್ನು ರಚಿಸಲು ಅವರು ಅನುಕೂಲ ಇರುವಂತಾಗುವದು

ಮುಂದಿನ ಹೊಣೆ

ತನ್ಮಧ್ಯೆ ಲೀಗು ಅಥವಾ ನರೇಂದ್ರ ಮಂಡಲ ಈ ಎರಡು ಘಾತಕಗಳೊಡನೆ ಸಂಧಾನದ ಮಾತುಕತೆ ನಡಿಸಲು ಅವಕಾಶವನ್ನಿಟ್ಟು ಘಟನಾಸಮಿತಿಯು ಮುಂದಿನ ಕೆಲಸವನ್ನು ಸಾಗಿಸುವದರಲ್ಲಿ ಯಾವ ಸಂಶಯವಿಲ್ಲ ಆ ಮಾತುಗಳನ್ನು ಅಧ್ಯಕ್ಷರಾದ ಡಾ ರಾಜೇಂದ್ರ ಪ್ರಸಾದರು ಮೊನ್ನೆ ಮೊನ್ನೆ ಸ್ಪಷ್ಟಮಾಡಿರುವರು ಆದುದರಿಂದ ಘಟನಾಸಮಿತಿಯ ಮುಂದಿನ ಕಾರ್ಯಕಲಾಪಗಳನ್ನು ಯಶಸ್ವಿಮಾಡುವ ಹೊಣೆಯು ಲೀಗು ಮತ್ತು ನರೇಂದ್ರಮಂಡಲದ ಮೇಲಿದೆಯಲ್ಲದೆ ಘಟನಾಸಮಿತಿಯ ಮೇಲಾಗಲಿ ಇನ್ನಿತರ ರಾಜಕೀಯ ಪಕ್ಷಗಳ ಮೇಲಾಗಲಿ ಇಲ್ಲ ಇದನ್ನು ಲೀಗ ಧುರೀಣರು ಹಾಗೂ ನರೇಂದ್ರ ಮಂಡಲದ ರಾಜರಾಜೇಶ್ವರರು ಚೆನ್ನಾಗಿ ಆಲೋಚಿಸಿ ಘಟನಾಸಮಿತಿಯಲ್ಲಿ ಬೇಗನೆ ಭಾಗವಹಿಸುವದು ಮುತ್ಸದ್ದಿತನದ ಲಕ್ಷಣ.

ಉಪಸಂಹಾರ

ಘಟನಾಸಮಿತಿಯ ಮುಂದಿನ ಅಧಿವೇಶನವು ಏಪ್ರಿಲ ತಿಂಗಳ ಉತ್ತರಾರ್ಧದಲ್ಲಿ ನಿಶ್ಚಿತಗೊಳಿಸಿದ ತಾರೀಕಿಗೆ ದಿಲ್ಲಿಯಲ್ಲಿ ಕೂಡಲಿದೆ ಅಷ್ಟರೊಳಗೆ ಲೀಗಿನವರು ಮತ್ತು ನರೇಂದ್ರರು ತಮ್ಮ ಹಿರಿತನಕ್ಕೆ ಮುತ್ಸದ್ದಿತನದ ಸದುಪಯೋಗಮಾಡಿಕೊಂಡು ರಾಜ್ಯಘಟನಾಸಮಿತಿಯಲ್ಲಿ ಭಾಗವಹಿಸಲು ಮುಂದೆ ಬರುವದು ಉತ್ತಮ ಮತ್ತು ವಿಹಿತ ಹಾಗೆ ಮಾಡುವದರಿಂದಲೇ ಬ್ರಿಟಿಷರು ಒಡ್ಡಿರುವ ಬಲೆಯಿಂದ ಪಾರಾಗಲು ಅನುಕೂಲವಾಗುವದಲ್ಲದೆ ಸ್ವತಂತ್ರ ಹಿಂದುಸ್ಥಾನವನ್ನು ಆದರ್ಶ ರೀತಿಯಲ್ಲಿ ಕಟ್ಟಿ ಮಾನವ ಜಗತ್ತಿನ ಮುಂದೆ ಹೊಸ ಆದರ್ಶವನ್ನು ಇಡಲು ಶಕ್ಯವಾಗುವದು ಅಲ್ಲದೆ ಹಿಂದುಸ್ಥಾನವು ಪಡೆದುಕೊಂಡಿರುವ ಭೌಗೋಲಿಕ ಮಹತ್ವವು ಅದರ ಔದ್ಯೋಗಿಕ ಉನ್ನತಿಗೆ ಬಹಳ ಅನುಕೂಲವಾದುದಿದೆ–ಇವೆಲ್ಲವನ್ನು ಮಥಿಸಿ ತಿಳಿದುಕೊಂಡು ಈಗ ಘಟನಾಸಮಿತಿಯಿಂದ ಹೊರಗೆ ಉಳಿದಿರುವ ಘಾತಗಳು ತಮ್ಮ ಅದೂರ ದೃಷ್ಟಿಯ ಪರಿಣಾಮದ ಕಡೆಗೆ ಲಕ್ಷ್ಯವಿಟ್ಟು ಈಗಲೇ ತಕ್ಕ ಪರಿಮಾರ್ಜನೆ ಮಾಡಿಕೊಳ್ಳುವದು ನ್ಯಾಯಸಮ್ಮತವಾಗಿದೆ.

THE CANARA BANKING CORPORATION LTD.
(Incorporated in British India)
Estd: 1906.
Head Office: UDIPI, S. Kanara.

Authorised Capital	Rs. 25,00,000
Issued & Subscribed Capital	16,00,000
Paid up Capital	15,87,600
Reserves	4,60,000
Total Resources Around	Rs. 2½ Crores.

Branches at Fort-Bombay, Madras, Bangalore, Coimbatore, Salem, Calicut, Hubli, Mysore, Cochin, Mangalore, Mercara etc., etc., etc.

BANKING BUSINESS OF EVERY DESCRIPTION TRANSACTED.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ಸೊರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ

ಅಮೃತಾಂಜನ ಡಿಪೋ,
ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರಕುವುದು.

1947 Greetings For The New Year 1947

To

ALL OUR POLICY HOLDERS,
MEDICAL EXAMINERS,
AGENTS AND WELLWISHERS,

And Best Wishes

FOR A PROSPEROUS YEAR TO COME

From

Kochikar Brothers, Limited.

Chief Agents for South India including Indian States & Bombay City

THE BOMBAY LIFE ASSURANCE COMPANY LIMITED

MADRAS, BANGALORE, TRIVANDRUM, MANGALORE, MADURA, CALICUT, BOMBAY, & UDIPI

Bhuvanendra Products Limited,

KATAPADI S. Kanara.

'Bhuvanendra'
Dashamoolarishta

Prepared with seleted ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs

Depot: Maharaja Galli, Hubli

Bhuvanendra Products Ltd.
Factory & Head Office
KATAPADI S. Kanara

'ಭುವನೇಂದ್ರ'
ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ತಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮಹಾರಾಜಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್
ಕಟಪಾಡಿ ದ. ಕನ್ನಡ

ಡೋಂಗರೆ
ಬಾಲಾಮೃತವು
ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಖು 31—1—1947 [ಸಂಚಿಕೆ 5]

ಹಿಂದೀ ರಾಜಕಾರಣ

ಲೇ: ಶ್ರೀ ಎನ್. ಆರ್. ಕಲ್ಲೆ.

ಘಟನಾ ಸಮಿತಿಯ ಪ್ರಗತಿ

ಮುಸ್ಲಿಂ ಲೀಗಿನ ಪ್ರತಿಕ್ರಿಯೆ

ಕರಾಚಿ ಪರಿಷತ್ತಿನಲ್ಲೇನಾಗುವದು?

ಹಿಂದೀ ರಾಜ್ಯ ಘಟನಾ ಸಮಿತಿಯು ಕಳೆದ ಡಿಸೆಂಬರ ಮತ್ತು ಜನೆವರಿ ತಿಂಗಳಲ್ಲಿ ಒಟ್ಟು ಎರಡು ಸಾರಿ ಸಭೆಗೂಡಿ ಆರಂಭದ ಕೆಲಸಗಳನ್ನು ಮಾಡಿದೆ. ಮುಂದಿನ ಕಾರ್ಯಕಲಾಪಗಳನ್ನು ಯಶಸ್ವಿಯಾಗಿ ಸಾಗಿಸುವ ಬಗ್ಗೆ ಬೇಕಾದ ಉಪ ಸಮಿತಿಗಳು ಈಗಾಗಲೇ ನೇಮಿಸಲ್ಪಟ್ಟಿವೆ ಎಲ್ಲ ಕೆಲಸವನ್ನು ಸಾಗಿಸುವದಕ್ಕೆ ತಕ್ಕ ಕಾರ್ಯಕ್ರಮ ಪಟ್ಟಿ ಮತ್ತು ವಿಷಯಗಳನ್ನು ನಿರೂಪಿಸುವ ಬಗ್ಗೆ ಸಹ ಸಮಿತಿಗಳ ನೇಮಕವಾದುದಲ್ಲದೆ ಅದರಂತೆ ಕಾರ್ಯಕ್ರಮವನ್ನು ಜರುಗಿಸುವದಕ್ಕೆ ಮೊನ್ನೆ ಜನೆವರಿ ತಾ 22ಕ್ಕೆ ಪಂಡಿತ ಜವಾಹರಲಾಲರ ಗೊತ್ತುಗುರಿ ಸ್ಪಷ್ಟಪಡಿಸಿದ ಠರಾವು ಸ್ವೀಕೃತವಾಯಿತು. ಇದಲ್ಲದೆ ಡಾ। ಪಟ್ಟಾಭಿ ಸೀತಾರಾಮಯ್ಯನವರ ಹಾಗೂ ಶ್ರೀ ಸಿ ರಾಜಗೋಪಾಲಾಚಾರ್ಯರ ಠರಾವುಗಳೂ ಸ್ವೀಕೃತವಾಗಿದ್ದು ಮುಂದಿನ ಕೆಲಸಕ್ಕೆ ಅನುಕೂಲತೆಗಳನ್ನು ಮಾಡಿವೆ

ಸಮಾಧಾನ

ಘಟನಾಸಮಿತಿಯ ಈ ವರೆಗಿನ ಕಾರ್ಯಕಲಾಪದ ಬಗ್ಗೆ ಸಮಿತಿಯ ಒಳಗಿರುವ ಸದಸ್ಯರಂತೆ ಹೊರಗಿರುವ ಜನತೆಗೂ ಸಮಾಧಾನವಾಗಿದೆ ಆಂಗ್ಲೋ ಇಂಡಿಯನ್ನರು ಕ್ರಿಶ್ಚಿಯನರು ಹಾಗೂ ಇನ್ನಿತರ ಅಲ್ಪ ಸಂಖ್ಯಾಕರು ಘಟನಾಸಮಿತಿಯ ಧೋರಣೆಯನ್ನು ಬಹಳವಾಗಿ ಮೆಚ್ಚಿರುವರು. ಇದೇ ರೀತಿ ಘಟನಾಸಮಿತಿಯು ಕೆಲಸ ಸಾಗಿಸಿಕೊಂಡು ಹೋಗಬಹುದೆಂಬ ವಿಶ್ವಾಸವು ಈಗ ಎಲ್ಲರಲ್ಲಿಯೂ ಉಂಟಾಗಿದೆ ಇದರಿಂದ ಲೀಗಕ್ಕೆ ಬಹಳ ಅಸಮಾಧಾನವಾಗಿದೆ ಅಲ್ಲದೆ ನರೇಂದ್ರರೂ ಬೆಚ್ಚಿಬಿಟ್ಟಿರುವರು. ತಮ್ಮ ಅಸ್ತಿತ್ವಕ್ಕೆ ಆಶ್ರಯದಾತರೆನಿಸಿದ ಬ್ರಿಟಿಷರ ಕೃಪಾಛತ್ರದಲ್ಲಿ ಬಾಳಿದ ನರೇಂದ್ರರಿಗಾಗಲಿ ಲೀಗಿಗಾಗಲಿ, ಹಿಂದೂಸ್ಥಾನದ ಜನತಾಹಿತವಾಗುವದು ಬೇಡವಾಗಿದೆ ತಮ್ಮ ಕೇವಲ ವೈಶಿಷ್ಟ್ಯತೊಂದರೆಯಾಗದೆ ಸುಖದಲ್ಲಿ ತಮ್ಮ ಜೀವನವು ಸುಗಮವಾಗಿ ಸಾಗಲೆಂಬುದೇ ನರೇಂದ್ರರ ಹಾಗೂ ಲೀಗ ಪ್ರಮುಖರ ಇಚ್ಛೆಯಿದ್ದಂತೆ ತೋರುವುದು

ಪ್ರತಿಕ್ರಿಯೆ

ಲೀಗಿನ ಹಟಮಾರಿತನದಿಂದ ಹಾಗೂ ಉಪೇಕ್ಷೆಯಿಂದ ಉಂಟಾದ ಪ್ರತಿಕ್ರಿಯೆಯು ಸದ್ಯಕ್ಕೆ ಲೀಗಿಗೆ ಪ್ರತಿಕೂಲವಾಗಿ ನಿಂತಿದೆ ಪರಕೀಯರನ್ನು ನಮ್ಮ ದೇಶದಿಂದ ಹೊರಗಟ್ಟಿ ಸ್ವಾತಂತ್ರ್ಯವನ್ನು ಗಳಿಸುವದು ಮೊದಲನೆಯ ಗುರಿಯಿರುವಾಗ ಅದರ ಈಡೇರಿಕೆಗೆ ನೆರವಾಗುವಂಥ ಸಾಧನಗಳನ್ನು ತ್ಯಜಿಸಲು ಪ್ರಯತ್ನಿಸುವದು ಲೀಗಿನ ಗೌರವಕ್ಕೆ ತಕ್ಕುದಲ್ಲ, ಮುತ್ಸದ್ದಿತನಕ್ಕೂ ಯೋಗ್ಯವಾದುದಲ್ಲ ಲೀಗಿನ ಈ ಧೋರಣೆಯಿಂದ ಲೀಗೇತರ ಮುಸಲ್ಮಾನ ಬಂಧುಗಳೂ ನೊಂದಿರುವರು.

ಇತ್ತ ಘಟನಾಸಮಿತಿ ಕೊಟ್ಟ ಅವಕಾಶವನ್ನು ಬಿಟ್ಟು ಉಪೇಕ್ಷೆಯಿಂದ ಲೀಗು ದೂರ ಸರಿದು ಉಳಿದಿರುವುದಲ್ಲದೆ ಇನ್ನೂ ಮುಂದಿನ ನಿರ್ಣಯವನ್ನು ಸ್ಪಷ್ಟಮಾಡಿಲ್ಲ. ಇದೇ ತಾ. 29ಕ್ಕೆ ಆರಂಭವಾಗಿರುವ ಲೀಗ್ ವರ್ಕಿಂಗ್ ಕಮಿಟಿಯಲ್ಲಿ ಯಾವ ನಿರ್ಣಯವನ್ನೂ ಲೀಗು ಮಾಡಲಿರುವದೆಂಬದು ಇನ್ನೂ ಗೊತ್ತಾಗಿಲ್ಲ. ಈಗ ಇದ್ದ ಪರಿಸ್ಥಿತಿಯಲ್ಲಿ ಲೀಗು ಘಟನಾ ಸಮಿತಿಯಿಂದ ಹೊರಗೆ ಉಳಿಯುವದಿಲ್ಲ ಆದರೆ ಲೀಗು ಈ ಮಹತ್ವದ ಸಂಸ್ಥೆಯನ್ನು ಬಿಟ್ಟು ಕೆಲಸವಲ್ಲದ ಕೆಲಸಕ್ಕೆ ಕೈಯಿಕ್ಕಿ ಪಂಜಾಬಿನಲ್ಲಿ ಕಾಯದೆ ಭಂಗ ಚಳವಳಿ ಕೈಗೊಂಡು ತಮ್ಮವರ ಸಹಾನುಭೂತಿಯನ್ನು ತನ್ನ ಕಡೆಗೆ ಸೆಳೆಯುವ ಪ್ರಯತ್ನ ನಡಿಸಿದೆ—ಆದರೆ ಇದು ಎಷ್ಟರಮಟ್ಟಿಗೆ ಯಶಸ್ವಿಯಾದೀತೆಂಬದನ್ನು ಲೀಗ ಪ್ರಮುಖರು ಇನ್ನೂ ತಿಳಿದುಕೊಂಡಿಲ್ಲ ಲೀಗಿನ ಅಂದ ದೃಷ್ಟಿಯ ಸದ್ಯದ ಧೋರಣೆಯಿಂದ ಮುಸ್ಲಿಂ ಬಂಧುಗಳಲ್ಲಿರುವ ಬಂಧುಪ್ರೇಮದ ಲಾಭವು ಜನತೆಗೆ ದೊರಕದಂತಾಗಿದೆ ಈ ಲೋಪದೋಷಗಳಿಗೆ ಲೀಗ ಪ್ರಮುಖರ ಧೋರಣೆಯೇ ಕಾರಣವೆಂಬುದನ್ನು ಅತ್ಯಂತ ವಿಷಾದದಿಂದ ಒಪ್ಪಬೇಕಾಗುವದು

ನರೇಂದ್ರರು

ಲೀಗಿನಂತೆ ಘಟನಾಸಮಿತಿಯಿಂದ ಹೊರಗೆ ಉಳಿದಿರುವ ಇನ್ನೊಂದು ಘಾತವೇ ನರೇಂದ್ರಮಂಡಲ ಈ ಮಂಡಲದವರು ಆಚಂದ್ರಾರ್ಕವಾಗಿ ಜನತೆಯನ್ನು ಆಳಲು ಹುಟ್ಟಿದ ಸಂತತಿಗಳೆಂದು ತಿಳಿದುಕೊಂಡಿರುವರಲ್ಲದೆ ರಾಜನೆಂದರೆ ಜನರ ಸೇವಕ—ಅವರ ದರ್ಶಿ ಎಂಬುದನ್ನು ಅವರು ಇನ್ನೂ ತಿಳಿದುಕೊಂಡಿಲ್ಲ. ಆದರೆ ಅವರ ಆಡಳಿತೆಯಲ್ಲಿ ಮೂಗುಬ್ಬಸಕ್ಕೆ ಗುರಿಯಾದ ಪ್ರಜೆಗಳು ಮಾತ್ರ ಈ ನರೇಂದ್ರರು ಇನ್ನು 50 ವರ್ಷ ತಮ್ಮನ್ನು ಆಳಿದರೆ ತಾವು ಮಾನವರಿಂದ ಕಾಡುಜಂತುಗಳ ವರ್ಗಕ್ಕೆ ಇಳಿಯಬೇಕಾಗುವದೆಂಬುದನ್ನು ತಿಳಿದ ಬ್ರಿಟಿಷ ಹಿಂದುಸ್ಥಾನದ ಜೊತೆಯಲ್ಲಿ ಮುಂದೆ ಸಾಗಲು ಪ್ರಯತ್ನಿಸುತ್ತಿರುವರು ಇಂದ ಸಮಯದಲ್ಲಿ ಪ್ರಜೆಗಳ ಸ್ವಾತಂತ್ರ್ಯ ಪ್ರೇಮದ ವೇಗವನ್ನು ತಮಗೆ ತಡೆಗಟ್ಟಲು ಸಾಧ್ಯವಿಲ್ಲವೆಂಬುದನ್ನೂ ಹಾಗೆ ಮಾಡುವದು ಅನ್ಯಾಯವೆಂಬುದನ್ನೂ ತಿಳಿದು ತಮ್ಮ ಪ್ರಜೆಗಳ ಒಪ್ಪಿಗೆಯಂತೆ ಘಟನಾಸಮಿತಿಗೆ ಪ್ರತಿನಿಧಿಗಳನ್ನು ನರೇಂದ್ರರು ಕಳಿಸುವದು ಅತ್ಯಾವಶ್ಯ ಅಂದರೆ ಮಾತ್ರ ಹಿಂದುಸ್ಥಾನದ ಜಟಿಲ ಸಮಸ್ಯೆಯನ್ನು ಬಗೆಹರಿಸಿ ಮುಂದಿನ ಘಟನೆಯನ್ನು ರಚಿಸಲು ಅವಕಾಶ ಅನುಕೂಲ ಇರುವಂತಾಗುವದು

ಮುಂದಿನ ಹೊಣೆ

ತನ್ನಧ್ಯೆ ಲೀಗು ಅಥವಾ ನರೇಂದ್ರ ಮಂಡಲ ಈ ಎರಡು ಘಾತಕಗಳೊಡನೆ ಸಂಧಾನದ ಮಾತುಕತೆ ನಡಿಸಲು ಅವಕಾಶವನ್ನಿಟ್ಟು ಘಟನಾಸಮಿತಿಯು ಮುಂದಿನ ಕೆಲಸವನ್ನು ಸಾಗಿಸುವದರಲ್ಲಿ ಯಾವ ಸಂಶಯವಿಲ್ಲ ಆ ಮಾತುಗಳನ್ನು ಅಧ್ಯಕ್ಷರಾದ ಡಾ ರಾಜೇಂದ್ರ ಪ್ರಸಾದರು ಮೊನ್ನೆ ಮೊನ್ನೆ ಸ್ಪಷ್ಟಮಾಡಿರುವರು. ಆದುದರಿಂದ ಘಟನಾಸಮಿತಿಯು ಮುಂದಿನ ಕಾರ್ಯಕಲಾಪಗಳನ್ನು ಯಶಸ್ವಿಮಾಡುವ ಹೊಣೆಯು ಲೀಗು ಮತ್ತು ನರೇಂದ್ರ ಮಂಡಲದ ಮೇಲಿದೆಯಲ್ಲದೆ ಘಟನಾಸಮಿತಿಯ ಮೇಲಾಗಲಿ, ಇನ್ನಿತರ ರಾಜಕೀಯ ಪಕ್ಷಗಳ ಮೇಲಾಗಲಿ ಇಲ್ಲ ಇದನ್ನು ಲೀಗ ಧುರೀಣರು ಹಾಗೂ ನರೇಂದ್ರ ಮಂಡಲದ ರಾಜರಾಜೇಂದ್ರರು ಚೆನ್ನಾಗಿ ಆಲೋಚಿಸಿ ಘಟನಾಸಮಿತಿಯಲ್ಲಿ ಬೇಗನೆ ಭಾಗವಹಿಸುವದು ಮುತ್ಸದ್ದಿತನದ ಲಕ್ಷಣ.

ಉಪಸಂಹಾರ

ಘಟನಾಸಮಿತಿಯ ಮುಂದಿನ ಅಧಿವೇಶನವು ಎಪ್ರಿಲ್ ತಿಂಗಳ ಉತ್ತರಾರ್ಧದಲ್ಲಿ ನಿಶ್ಚಿತಗೊಳಿಸಿದ ತಾರೀಕಿಗೆ ದಿಲ್ಲಿಯಲ್ಲಿ ಕೂಡಲಿದೆ ಅಷ್ಟರೊಳಗೆ ಲೀಗಿನವರು ಮತ್ತು ನರೇಂದ್ರರು ತಮ್ಮಲ್ಲಿರತಕ್ಕ ಮುತ್ಸದ್ದಿತನದ ಸದುಪಯೋಗಮಾಡಿಕೊಂಡು ರಾಜ್ಯಘಟನಾಸಮಿತಿಯಲ್ಲಿ ಭಾಗವಹಿಸಲು ಮುಂದೆ ಬರುವದು ಉತ್ತಮ ಮತ್ತು ವಿಹಿತ ಹಾಗೆ ಮಾಡುವದರಿಂದಲೇ ಬ್ರಿಟಿಷರು ಒಡ್ಡಿರುವ ಬಲೆಯಿಂದ ಪಾರಾಗಲು ಅನುಕೂಲವಾಗುವದಲ್ಲದೆ ಸ್ವತಂತ್ರ ಹಿಂದುಸ್ಥಾನವನ್ನು ಆದರ್ಶ ರೀತಿಯಲ್ಲಿ ಕಟ್ಟಿ ಮಾನವ ಜಗತ್ತಿನ ಮುಂದೆ ಹೊಸ ಆದರ್ಶವನ್ನು ಇಡಲು ಶಕ್ಯವಾಗುವದು ಅಲ್ಲದೆ ಹಿಂದುಸ್ಥಾನವು ಪಡೆದುಕೊಂಡಿರುವ ಭೌಗೋಲಿಕ ಮಹತ್ವವು ಅದರ ಭಾಗದ ಭೌತಿಕ ಉನ್ನತಿಗೆ ಬಹಳ ಅನುಕೂಲವಾದುದಿದೆ—ಇವೆಲ್ಲವನ್ನು ಮಥಿಸಿ ತಿಳಿದುಕೊಂಡು ಈಗ ಘಟನಾಸಮಿತಿಯಿಂದ ಹೊರಗೆ ಉಳಿದಿರುವ ಘಾತಗಳು ತಮ್ಮ ಅದೂರ ದೃಷ್ಟಿಯ ಪರಿಣಾಮದ ಕಡೆಗೆ ಲಕ್ಷ್ಯವಿಟ್ಟು ಈಗಲೇ ತಕ್ಕ ಪರಿಮಾರ್ಜನೆ ಮಾಡಿಕೊಳ್ಳುವದು ನ್ಯಾಯಸಮ್ಮತವಾಗಿದೆ.

ವಿಶ್ವ ಪುನರ್ನಿರ್ಮಾಣದಲ್ಲಿ ಭಾರತದ ಭಾಗ

ಆಸ್ಯಾ ಜನಾಂಗಗಳಲ್ಲಿ ಭಾರತಕ್ಕೆ ಕೇಂದ್ರ ಸ್ಥಾನ

ಪದವೀಧರರಿಗೆ ನೆಹರು ಸಂದೇಶ

ಕಲ್ಕತ್ತಾ ವಿಶ್ವವಿದ್ಯಾಲಯದ ಪದವಿದಾನ ಸಮಾರಂಭದ ಭಾಷಣ ಮಾಡುತ್ತ ಈ ಕೆಳಗಿನ ಉಜ್ವಲ ಭಾವನೆಗಳನ್ನು ತರುಣರ ಮುಂದೆ ನಿರೂಪಿಸಿದರು:

ಇಂದು ಮಾನವ ಜಗತ್ತಿನಲ್ಲೆಲ್ಲ ಗಂಡಾಂತರದ ಪರಿಸ್ಥಿತಿಯು ಕಾಣಿಸುತ್ತಿದೆ. ಗತ ಯುದ್ಧದ ಭೀಕರ ದುಸ್ಸ್ವಪ್ನವು ಒಂದು ಕಡೆ ನಮ್ಮನ್ನು ಕಂಗೆಡಿಸುತ್ತಿರುವಾಗ ಭಾವೀ ಯುದ್ಧದ ಸಂಭವವೊಂದು ನಮ್ಮನ್ನು ಕಳವಳಕ್ಕೀಡುಮಾಡುವುದು.

ಇದೇ ಮಾನವ ಕೋಟಿಯು ಮನಸ್ಸೇ ಮ್ಮಥನಹೊಂದುತ್ತಿರುವಾಗಲಾದರೂ ಅತ್ಯ ಪೂರ್ವವಾದ ಬದಲಾವಣೆಗಳು ಖಂಡಿತ ಬರುವುವೆಂದೊಂದು ಭಾಸವೂ ನಮ್ಮೆಲ್ಲರಲ್ಲಿ ಖಂಡಿತ ಉಂಟಾಗಿದೆ. ಆ ಕುರಿತು ಸಾಕಷ್ಟು ನಿದರ್ಶನಗಳೂ ಕಾಣಿಸುತ್ತಿವೆ. ಆರ್ಥಿಕ ಮತ್ತು ರಾಜಕೀಯ ಸ್ಥಿತಿಗತಿಗಳಂತೂ ಅನಿವಾರ್ಯವಾಗಿ ಸ್ಥಿತ್ಯಂತರಗೊಳ್ಳುವುವು. ಕಳೆದ ಕಾಲು ಶತಮಾನದೊಳಗೆ ಈ ಹಳೆಯ ರಾಜಕೀಯ ಆರ್ಥಿಕ ಸಮಾಜ ರಚನೆಯು ಭೀಕರ ದುರಂತವನ್ನು ತಂದೊಡ್ಡಿರುವುದೇ ಈ ಬದಲಾವಣೆ ಅತ್ಯಾವಶ್ಯಕವೆನಿಸುವುದಕ್ಕೊಂದು ಬಲವಾದ ಕಾರಣ. ನಾವು ಮುಂದೆ ಯುದ್ಧಗಳನ್ನು ತಡೆಗಟ್ಟಿ ಶಾಂತಿಯನ್ನು ಪುನರ್ರಚಿಸಬೇಕಾಗಿದೆ. ಅದೂ ಹೊಸ ತಳಹದಿಯ ಮೇಲೆ ಕಟ್ಟಲ್ಪಡಬೇಕು

ಮಾನವ ಜನಾಂಗವು ತನ್ನ ಸಮಸ್ಯೆಗಳನ್ನು ಪರಿಹರಿಸಲು ಹಲವು ಹೋರಾಟಗಳನ್ನು ಮಾಡಿತು ಆದರೆ ಆ ಎರಡು ಹೋರಾಟಗಳೂ ಹಳೇ ರಾಜಕೀಯ ಮತ್ತು ಆರ್ಥಿಕ ತಳಹದಿಯ ಮೇಲೆ ಜರಗಿಸಲ್ಪಡುವುದರಿಂದ ಈ ಎರಡು ಹೋರಾಟಗಳ ನಂತರವೂ ಮಾನವರ ಪ್ರಯತ್ನಗಳು ನಿಷ್ಫಲವಾದುವು ಆದರೂ ಇನ್ನೂ ನಾವು ಹಳೆಯ ಒರಟುಭಾವನೆಗಳನ್ನು ತೊಡೆದು ಹಾಕಲು ಪ್ರಯತ್ನಿಸುತ್ತಿಲ್ಲ

ಅಧ್ಯಾತ್ಮಿಕ ಬಿಕ್ಕಟ್ಟು

ಇಂದು ಎಲ್ಲದಕಿಂತ ಜಗತ್ತು ಮಹತ್ತರವಾದೊಂದು ಆಧ್ಯಾತ್ಮಿಕ ಬಿಕ್ಕಟ್ಟಿನೊಳಗಿಂದ ನುಸುಳುತ್ತಿದೆ. ನಾನು ಆಧ್ಯಾತ್ಮಿಕವೆಂದು ಹೇಳುತ್ತಿರುವುದು ಮತವಿಚಾರದ ಅಗಲ ಕಿರಿದಾದ ದೃಷ್ಟಿಕೋನದಿಂದಲ್ಲ ಕಾರಣ ನಾನು ಮತೀಯ ಭಾವನೋನ್ಮತ್ತನಲ್ಲವೆಂದು ನೀವು ಅರಿತಿದ್ದೀರಿ. ಆ ಕುರಿತು ನನ್ನ ಅರ್ಥವು ಇನ್ನಷ್ಟು ವಿಶಾಲವಾಗಿದೆ ಮಾನವಕೋಟಿಯು ಮೇಲಿಂದ ಮೇಲಾದ ಹೃದಯ ಕರಗಿಸುವ ದುರ್ಘಟನೆಗಳನ್ನು ಕಂಡು ಅನುಭವಿಸಿ ನೂತನ ಸಮಾಜ ಸುಖವೊಂದನ್ನು ಕಾಣಬಯಸುವುದು ಮಾನವನ ಆತ್ಮವೂ ನವೀನ ನೆಮ್ಮದಿಗಾಗಿ ಕಾತರಿಸುತ್ತಿರುವುದು. ಪ್ರಗತಿ ಹೊಂದಿದ ನಾಗರೀಕತೆಯು ಸುಸ್ವಾದ ಫಲವನ್ನುಪಭೋಗಿಸಲು ಅದು ಹಾತೊರೆಯುವುದು.

ಊರ್ಜಿತ ಆಸ್ಯಾಖಂಡ

ಇಂದೇನೆಲ್ಲ ಸಂಭವಿಸುವುದನ್ನು ನಾವು ಕಾಣುತ್ತಿದ್ದೇವೆ? ಕಳೆದ 200 ವರ್ಷಗಳಿಂದ ವಿಶ್ವ ಕಾರ್ಯಕಾರಣಗಳಲ್ಲಿ ಮುಂದಾಳತ್ವ ವಹಿಸಿ ಆತ್ಮರಹಿತವಾದ ಪಾಶವೀ ನಾಗರೀಕತೆಯೊಂದನ್ನು ಪೋಷಿಸಿ ತಂದು ನಿಷ್ಕರುಣವಾದ ಅದರ ದುಷ್ಫಲಗಳನ್ನು ವಿಶ್ವಕ್ಕುಣಿಸಿ ಮಾನವ ಕುಲಕ್ಕೇ ಪ್ರಚಂಡ ಘಾತವನ್ನುಂಟುಮಾಡಿದ ಯುರೋಪ್ಯರ ಪ್ರಭಾವವಿಂದು ಅಯಶಸ್ವಿಯಾಗಿದೆ. ವಿಶ್ವ ನಾಯಕತ್ವವಿಂದು ಆಸ್ಯದ ಕಡೆ ತಿರುಗಿದೆ ಯುರೋಪುಖಂಡವು ಇಂದೊಂದು ಭಿನ್ನಕಾಂಕ್ಷೆಗಳ ಭಗ್ನವಲಯವಾಗಿದೆ. ಅಲ್ಲಿನ ಜನಸಂಖ್ಯೆಯು ಕುಗ್ಗುತ್ತಿದೆ. ಇನ್ನುಮುಂದೆ ಅದು ಯಾವ ತರದ ಬಲಾತ್ಕಾರದ ಅಧಿಕಾರ ಯತ್ನಕ್ಕೆ ಕೈಯೊಡ್ಡುವಂತಿಲ್ಲ

ಆದರೆ ಆಸ್ಯವು ತನ್ನ ಐರೋಪ್ಯ ಸಂಕೀರ್ಣಕಾಲದಿಂದ ತಡೆದು ಹಿಡಿದಿದ್ದ ಮುಂದ ಪ್ರಗತಿಯ ವೇಗವನ್ನು ಹೆಚ್ಚಿಸಿದೆ ಈ ಪ್ರಗತಿಯು ಮುಂದೆ ಯಾವ ರೂಪವನ್ನು ತಾಳಿತೆಂದು ಹೇಳಬರುವುದಿಲ್ಲ ಹೀಗೆನ್ನುವಾಗ ನಾನು ಆಸ್ಯದ ಸೈನ್ಯ ಶಕ್ತಿಯ ವಿಸ್ತರಣದ ಕುರಿತು ಮಾತನಾಡುತ್ತಿರುವೆನೆಂದರ್ಥ ಮಾಡಿಕೊಳ್ಳಬಾರದು ಸೈನ್ಯ ಶಕ್ತಿಯು ವಿಶ್ವಶಾಂತಿಯ ಭದ್ರತೆಗಾಗಿ ಎಂಬ ತತ್ವವು ಎಂದೋ ಪೊಳ್ಳಾಗಿಹೋಗಿದೆ

ಶಕ್ತಿ ಬಲಾತ್ಕಾರದ ಪ್ರಶ್ನೆಯನ್ನು ಬಿಟ್ಟೇ ಮುಂದಿನ ಶಾಂತಿಯ ಪ್ರಯತ್ನಗಳಾಗತಕ್ಕದ್ದು ನಾನು ಆಸ್ಯದ ಶಕ್ತಿಗಿಂತಲೂ ಅದರ ಚೈತನ್ಯದ ಕುರಿತು ಹೇಳಬಯಸುತ್ತೇನೆ ಈ ಚೈತನ್ಯವು ನಮ್ಮ ಜನರನ್ನು ಆವರಿಸಿದ್ದು ಮಾನವ ಹಿತದ ಎಲ್ಲಾ ಚಟುವಟಿಕೆಗಳ ಕಡೆಗೂ ಅದು ಪ್ರಗತಿಯನ್ನೈಯ್ಯುತಿದೆ ಬಹುಕಾಲದಿಂದ ಭಾರತ ಮತ್ತು ಆಸ್ಯದ ಅನೇಕ ಇತರ ದೇಶಗಳು ಈ ಚೈತನ್ಯವನ್ನು ಕಳೆಕೊಂಡಿದ್ದವು ಇಂದು ನಾವದನ್ನು ಪುನಃ ಸಂಪಾದಿಸಿದ್ದೇವೆ ಮುಂದಿನ ವಿಶ್ವಕಾರಣದಲ್ಲಿ ಆಸ್ಯವು ದೊಡ್ಡ ಪಾತ್ರವನ್ನು ವಹಿಸುವುದು

ಭಾರತವನ್ನು ದೂರವಿರಿಸಿದ್ದರು

ಬ್ರಿಟಿಷರು ಭಾರತವನ್ನು ಹಿಡಿದಾಗ ಮೊದಲು ಈ ದೇಶಕ್ಕೆ ಹೊರದೇಶಗಳೊಡನಿದ್ದ ಸಂಪರ್ಕ ಸಂಬಂಧವನ್ನೆಲ್ಲ ಕತ್ತರಿಸಿಬಿಟ್ಟರು ವಿಚಿತ್ರವೆಂಬಂತೆ ಭಾರತವು ಬ್ರಿಟಿಷರ ನಾಡಿನ ಒಂದು ಭಾಗವೇ ಆದಂತಾಯಿತು ಇದರಿಂದ ನಮ್ಮ ಆಚಾರ ವಿಚಾರಗಳೂ ಬಹುಮಟ್ಟಿಗೆ ಬದಲಾವಣೆಹೊಂದಿದುವು

ಈಗ ನಾವು ಪುನಃ ನಮ್ಮ ಹಳೆಯ ನೆರೆಕೆರೆಯವರೊಂದಿಗೆ ಸ್ನೇಹ ಬೆಳೆಸಲು ಪ್ರಯತ್ನಿಸುತ್ತಿರುವುದು ಇನ್ನೊಂದು ಮಹತ್ವದ ಸಂಗತಿ ಹೊಸ ಪರಿಸ್ಥಿತಿಯು ಹೇಗೆ ಅಭಿವೃದ್ಧಿ ಹೊಂದುತ್ತಿದೆ ಎಂಬುದರ ಲಕ್ಷಣವಿದು. ಭಾರತದ ಭೌಗೋಳಿಕ ಸ್ಥಾನ ಮಹತ್ವದಿಂದ ಅದಕ್ಕೆ ಇಡೀ ಹಿಂದೂ ಸಾಗರದ ಪ್ರದೇಶದಲ್ಲಿ ಪ್ರಾಮುಖ್ಯತೆಯುಂಟಾಗಿದೆ. ಇತ್ತ ಪಶ್ಚಿಮ ಗಡಿಯತ್ತಲೂ ಇರುವ ಮಧ್ಯ ಪೂರ್ವ ಮತ್ತು ಇತ್ತ ಪೂರ್ವದ ದೇಶಗಳಾದ ಚೀನಾ, ಜಪಾನ್, ಮೊದಲಾದ ದೇಶಗಳ ನಡುವೆ ಇರುವುದರಿಂದ ಭಾರತವು ಆಸ್ಯದ ಒಂದು ಕೇಂದ್ರವೇ ಆಗಿದೆ ಎನ್ನಬಹುದು.

ನಮ್ಮ ಸ್ವಾತಂತ್ರ್ಯ ಸ್ವರೂಪ

ಹೊಸ ವಿಶ್ವ ನಿರ್ಮಾಣದಲ್ಲಿ ಪ್ರಭಾವಿತ ಭಾಗವಹಿಸಲು ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯವು ಅತ್ಯವಶ್ಯಕವಿದೆ. ಭಾರತವು ಆಸುಪಾಸಿನ ಅನೇಕ ದೇಶಗಳ ಜನರಿಗೆ ಮತೀಯವಾಗಿ ಆಗಲಿ, ಸಾಂಸ್ಕೃತಿಕವಾಗಲಿ ಒಂದು ತವರೂರೇ ಆಗಿದೆ. ಅವರು ತಮ್ಮ ಕಲ್ಯಾಣಕ್ಕಾಗಿ ಭಾರತವನ್ನೇ ದಿಟ್ಟಿಸುತ್ತಿರುವರು.

ಸ್ವತಂತ್ರವಾದೊಡನೆ ಭಾರತವು ತನ್ನ ಪೂರ್ವ ಸ್ನೇಹ ಸಂಬಂಧವನ್ನು ಪುನರುಜ್ಜೀವಗೊಳಿಸಿ ಅಭಿವೃದ್ಧಿಸುವುದು ಭಾರತದ ಸ್ನೇಹಿತರು ಯಾರೆಂದು ನಾವೇ ಚುನಾಯಿಸಿಕೊಳ್ಳುತ್ತೇವೆ ನಮ್ಮ ದೇಶದ ಆಂತರೀಕ ಇಲ್ಲವೆ ಬಾಹ್ಯ ಧೋರಣೆಯಲ್ಲಿ ನಮ್ಮ ಸ್ವಂತ ಇಚ್ಛೆಗನುಸಾರವಾಗಿ ನಡೆಯುವ ಸ್ವಾತಂತ್ರ್ಯವಿರಬೇಕು

ಭಾರತ ಕಾಣುವ ಶಾಂತಿಗನಸು

ಸೌಭಾಗ್ಯ ವಶಾತ ಭಾರತವು ಹತ್ತು ಹಲವಾರು ವಿಧಾನಗಳಲ್ಲಿ ವಿಶ್ವ ಶಾಂತಿಗಾಗಿ ಪ್ರಯತ್ನಿಸಿದ ದೇಶವಾಗಿದೆ ಆದುದರಿಂದ ನಾವು ಯಾರೊಡನೆಯೂ ಸೌಹಾರ್ದ ಬೆಳೆಸಬೇಕೆನ್ನುವಾಗ ಇತರರೊಡನೆ ವಿರೋಧ ಕಟ್ಟಿಕೊಳ್ಳುವ ಉದ್ದೇಶದಿ ದಲ್ಲಿ ನಮಗಿಲ್ಲದ ಸ್ನೇಹ ಪಸ್ತವೂ ಬೇಕು. ಇಂದು ಜಗತ್ತು ಚಿರಶಾಂತಿಗಳಿಸಬೇಕೆಂದಿಚ್ಛಿಸಿದರೆ ಅದನ್ನು ಸೈನ್ಯ ಶಸ್ತ್ರಾಸ್ತ್ರಗಳ ಮೂಲಕ, ಯಾರೊಡನೆಯೂ ಒಪ್ಪಂದ ಮಾಡಿಕೊಳ್ಳುವುದರ ಮೂಲಕ ಸಾಧ್ಯವಾಗದು ಒಂದು ತರದ ವಿಶ್ವ ಬಾಂಧವ್ಯ ಭಾವನೆಯ ಮೂಲಕವೇ ಇದ ಸಾಧ್ಯ ಈ ಬಾಂಧವ್ಯ ವ್ಯವಸ್ಥೆಯಲ್ಲಿ ಎಲ್ಲಾ ಜನಾಂಗಗಳೂ ಸ್ವತಂತ್ರರಿರುವರು

ಆದುದರಿಂದ ನಾವು ಪ್ರಸಕ್ತ ಕಾಲದ ಆಸ್ಯದ ನವಸ್ಫೂರ್ತಿ ಈ ದೃಷ್ಟಿಯಿಂದ ವಿಶ್ವಶಾಂತಿಯ ಚಿತ್ರವನ್ನು ನೋಡುವುದವಶ್ಯ ಎಲ್ಲಾ ದೇಶ ಜನಾಂಗಗಳನ್ನು ಸಂಯೋಗಿಸುವ ಶೃಂಖಲೆಯೊಂದರ ಕೇಂದ್ರ ಉಂಗುರವಾಗಿಂದು ಭಾರತವು ತನ್ನ ಸ್ಥಾನ ವೈಶಿಷ್ಟ್ಯದಿಂದ ವಿರಾಜಿಸುತ್ತಿದೆ

ನವ ಭಾರತ ನಿರ್ಮಾಣ

ನಾನು ನಿಮಗೆ ಹೇಳುತ್ತಿರುವ ಬದಲಾವಣೆ ಕೇವಲ ಒಂದು ಸರಕಾರ ಹೋಗಿ ಮತ್ತೊಂದು ಅದರ ಸ್ಥಾನದಲ್ಲಿ ಬಂದ ಅಲ್ಪ ಸ್ಥಿತ್ಯಂತರವಲ್ಲ ಮುಂದಿನ ಬದಲಾವಣೆ ಇಡೀ ಸಮಾಜದ ಮೂಲ ತಳಹದಿಗೇ ಅನ್ವಯಿಸಿದಂತಾದ್ದು ಇಂದಿನ ವಿಶ್ವ ವಿದ್ಯಾಲಯಗಳು ನೂತನ ಭಾರತ ನಿರ್ಮಾಣಕ್ಕೆ ಯೋಗ್ಯರಾಗುವಂತೆ ತರುಣರನ್ನು ತರಬೇತಿ ಮಾಡಬೇಕು

ನಾವಿಂದು ಭಾರತ ಸ್ವಾತಂತ್ರ್ಯದ ಕುರಿತು ಉದ್ದಗಲಕ್ಕೆ ಮಾತನಾಡುತ್ತೇವೆ ಆದರೆ ಅದರ ನಿಜವಾದ ಸ್ವರೂಪ ಹೇಗಿರುವುದೆಂದು ಸ್ಪಷ್ಟ ಜ್ಞಾನವಿರಬೇಕಾದುದೂ ಅತ್ಯಾವಶ್ಯಕ ವಿಶ್ವ ವಿದ್ಯಾಲಯಗಳು ತಮ್ಮ ಮುಂದೆ ಇಂತಹ ಸುಸ್ಪಷ್ಟ ಚಿತ್ರವೊಂದನ್ನು ಕಲ್ಪಿಸಿಕೊಳ್ಳಸಿದ್ದರೆ ಅವು ತನ್ನ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಹೇಗೆ ತರಬೇತುಗೊಳಿಸಬಲ್ಲುವು? ಭಾವಿ ಭಾರತದಲ್ಲಿ ಎಂತಹ ಸುಸಮಾಜ ರಚನೆಯಾಗಬೇಕೆಂಬುದರ ಕುರಿತು ಆ ವಿಶ್ವವಿದ್ಯಾಲಯಗಳು ನಿರ್ದಿಷ್ಟ ಗುರಿಯನ್ನಿಟ್ಟುಕೊಳ್ಳಬೇಕು.

ಬಂಗಾಲ ಕ್ಷಾಮ-ಒಂದು ಪಾಠ

ಇಂದಿನ ಸಾಮಾಜಿಕ ಇಲ್ಲವೆ ಆರ್ಥಿಕ ಪದ್ಧತಿಯು ಕಾರ್ಯವೆಸಗಲು ತೀರ ಅಯೋಗ್ಯವಾಯಿತೆಂದು ಎರಡು ವರ್ಷಗಳ ಹಿಂದೆ ಬಂಗಾಲದಲ್ಲಿ ಮೃತ್ಯುತಾಂಡವಾಡಿದ ಬರಗಾಲ ಪಿಶಾಚಿಯಿಂದ ಮುಂದಟ್ಟಾಗುವುದು. ಭಗ್ನಾವಶೇಷವಾಗಿ ಹೋದ ಆ ಹಳೆ ಕಟ್ಟಡದ ಮೇಲೆ ಹೊಸತೊಂದನ್ನು ರಚಿಸಬೇಕು ನಾವು ಬೇಗನೇ ಇಂತಹ ನವ ಭಾರತವೊಂದನ್ನು ಕಾಣುವೆವು. ವಿಶ್ವವಿದ್ಯಾಲಯಗಳು ತಮ್ಮಲ್ಲಿ ಬರುವವರನ್ನು ಆ ನೂತನ ನಿರ್ಮಾಣಕ್ಕಾಗಿ ಸಿದ್ಧಗೊಳಿಸತಕ್ಕದ್ದು 40 ಕೋಟಿ ಜನರ ಆಹಾರ ಬಟ್ಟೆಯ ಕೊರತೆಯನ್ನು ನೀಗಿಸುವುದು ಅತಿ ಜರೂರಿನ ಸಮಸ್ಯೆ

ಸಮಸ್ಯೆ ಪರಿಹಾರ ಹೇಗೆ?

ಮಂತ್ರಿ ಪದವಿ ಹೊತ್ತ ಮಾತ್ರಕ್ಕೆ ಈ ಸಮಸ್ಯೆಗಳನ್ನು ಬಗೆಹರಿಸುವುದು ಸುಲಭವಲ್ಲ ವಿವೇಚನಾಯುಕ್ತವಾದ ಉತ್ಪಾದನೆ ಮತ್ತು ಅದರ ಯೋಗ್ಯ ಹಂಚುವಿಕೆಯ ಯೋಜನೆಯಾಗಬೇಕು ಆಗಲೂ ತೊಂದರೆಗಳು ನಿಮ್ಮನ್ನು ಬಾಧಿಸುವುವು. ಉದಾಹರಣೆಗಾಗಿ ನನ್ನನ್ನೇ ನೋಡಿರಿ. ನಾನೊಬ್ಬ ಸಮತಾವಾದಿ ಈಗ ಅತ್ಯಾವಶ್ಯಕವಾಗಿ ಪರಿಹರಿಸಬೇಕಾದ ಸಮಸ್ಯೆಗಳೆಂದರೆ ಹೊಟ್ಟೆ, ಬಟ್ಟೆ, ವಾಸಸ್ಥಾನ, ಆರೋಗ್ಯ ಸೌಕರ್ಯ ಮೊದಲಾದುವುಗಳು ಇವುಗಳನ್ನು ಬಗೆಹರಿಸುವ ಕಾರ್ಯ ಮೊದಲಾಗಬೇಕು ನಂತರ ಸಮತಾವಾದ ತತ್ವ ಸ್ಥಾಪನೆಯ ಕಾರ್ಯವೆಂದು ನನಗೆ ತೋರುತ್ತದೆ ಸದ್ಯಕ್ಕೆ ನಮ್ಮ ತತ್ವಗಳನ್ನೆಲ್ಲ ಮೂಲೆಗಿರಿಸದೆ ಉಪಾಯವಿಲ್ಲ

ಸ್ವತಂತ್ರ ಭಾರತದ ದಿಗ್ದರ್ಶನ

ಕೇವಲ ರಾಜಕೀಯ ಸ್ವಾತಂತ್ರ್ಯ ದೊರಕಿದರಿಂದಲೇ ನಾವು ಪರಿಪೂರ್ಣ ಸ್ವತಂತ್ರರಾಗುವುದಿಲ್ಲ 40 ಕೋಟಿ ನಮ್ಮ ಜನ ಮಾನವ ಯೋಗ್ಯರಾಗಿ ಜೀವಿಸುವಂತಾಗಬೇಕು ಪ್ರತಿಯೊಬ್ಬ ಭಾರತೀಯನಿಗೆ ತನ್ನ ಜೀವನೋನ್ನತಿಗೊಳಿಸಲು ಸಂಪೂರ್ಣ ಸಂದರ್ಭ ದೊರಬೇಕು. ಆರಾಮವಿದ್ದ ಜನರು ನಮ್ಮ ಪ್ರಾಚೀನರಂತೆ ಲೋಕ ಕಲ್ಯಾಣದ ಪ್ರಗತಿ ಸಾಧನೆಗಾಗಿ ತಮ್ಮ ತಪಸ್ಸನ್ನು ಮಾಡಬೇಕು ಹಿಂದಿನದನ್ನು ಮರೆತು ಮುಂದಿನದಕ್ಕಾಗಿ ಯತ್ನಿಸೋಣ.

ನಮ್ಮ ಜನಾಂಗ ವಿಶ್ವ ಜನಾಂಗಗಳೊಡನೆ ಸಂಪರ್ಕ ಬೆಳೆಸಬೇಕು. ನಮ್ಮ ವಿಶ್ವವಿದ್ಯಾಲಯಗಳನ್ನು ಜಗತ್ತಿನ ಪ್ರಾಮುಖ್ಯ ಭಾಷಾ ಕಲಿಸುವಿಕೆಯನ್ನಿಡಬೇಕು. ಎಲ್ಲರಿಗೂ ರಾಜಕೀಯ ವ್ಯವಹಾರದ ತರಬೇತಿ ದೊರಕಬೇಕು, ಈ ರೀತಿ ನಾವು ಮುಂದರಿದರೆ ಖಂಡಿತ ಗುರಿ ಮುಟ್ಟುವೆವು

ಕೊಮ್ಯುನಿಸ್ಟ್ ರಶ್ಯವು ಎಲ್ಲಾ ಜನಾಂಗಗಳ ಪ್ರೀತ್ಯಾದರಗಳಿಗೆ ಪಾತ್ರವಾಗಿದೆ. ಆದರೆ ಕೊಮ್ಯುನಿಸ್ಟ ಚಳವಳವನ್ನು ಗ್ರೀಸ್, ತುರ್ಕಿ, ಹೊಲೆಂಡ್, ಬರ್ಮಾ, ಭಾರತ, ಜಪಾನ್, ಇಟಲಿ, ಫ್ರಾನ್ಸ್, ಚೀನಾ ಮೊದಲಾದೆಲ್ಲಾ ದೇಶಗಳಲ್ಲೂ ನಾಶಮಾಡಲು ಪ್ರಯತ್ನಗಳಾಗುತ್ತಿವೆ.

ವಾರಾಂತ್ಯ ವರದಿ ವಿಮರ್ಶೆ

ಲೀಗಿನ 'ಸತ್ಯಾಗ್ರಹ'

ಈ ವಾರದ ಅತೀ ಕೌತುಕದ ಘಟನೆ ಯೆಂದರೆ ಪಂಜಾಬಿನಲ್ಲಿ ಆದ ಲೀಗ್ ಪುಢಾರಿಗಳ ಕೈದು. ಅವರನ್ನು ಕೈದು ಮಾಡಿದ ಸಂಗತಿಗಿಂತಲೂ ಇದುತನಕ ಸುಖದ ರಾಜಕೀಯ ಆಟವಾಡುತ್ತಿದ್ದವರು ಕೈದಿಗೆ ಒಳಗಾಗಲು ಮನಸ್ಸು ಮಾಡಿದ ಸಂಗತಿ ಹೆಚ್ಚಿನ ಕೌತುಕದ್ದು. ಇದುತನಕ ಅವರು ಇತರರನ್ನು ಹಲವು ರೀತಿಯಲ್ಲಿ ಕೈದು ಮಾಡುವುದರಲ್ಲೇ ಮಗ್ನರಾಗಿದ್ದರು ಸಿಂಧದಲ್ಲಿ ಲೀಗ್ ಹುರಿಯಾಳುಗಳಿಗೆ ವಿರೋಧವಾಗಿ ಚುನಾವಣೆಗೆ ನಿಂತವರು ಯಾವುದಾದರೊಂದು ಶಿಥಿಲ ನೆಪದಿಂದ ಕೈದು ಮಾಡಲ್ಪಡುತ್ತಿದ್ದರು. ಸತ್ಯಾರ್ಥ ಪ್ರಕಾಶದ ಸುದ್ದಿ ಎತ್ತಿದರೆ ಕೈದೇ ಗತಿ ಕೊನೆಗೆ ಸಿಂಧ ಲೀಗ್ ಮಂತ್ರಿಗಳು ಅತಿ ಉತ್ಸಾಹ ತೋರಿದ ತಮ್ಮವರನ್ನೇ ಕೈದು ಮಾಡಿದ್ದಾರೆ

ಉಪಾಯದ ಕಾರಣ

ಪಂಜಾಬದಲ್ಲಿ ಲೀಗ್ ದುರೀಣರ ದಸ್ತಗಿರಿಯಾಗಲಿಕ್ಕೆ ಚಳವಳ ಪ್ರಾರಂಭಿಸಿ ಸಂಕಷ್ಟ ಅನುಭವಿಸಿ ತ್ಯಾಗ ಬಲಿದಾನಗಳನ್ನು ಮಾಡಬೇಕೆಂಬ ಅವರ ಉನ್ನತ ಸಿಧ್ಧಾಂತ ಕಾರಣವಲ್ಲ. ಅಲ್ಲಿನ ಅಲ್ಪಸಂಖ್ಯಾಕ ಮುಸಲ್ಮಾನೇತರರ ಮೇಲೆ ತಮ್ಮ ಸಂಘಟಿತ ಶಕ್ತಿಯ ಪ್ರಯೋಗ ನಡೆಸಲು ಲೀಗು ಒಂದು 'ಸ್ವಯಂ ಸೇವಕ ದಳ'ವನ್ನು ಏರ್ಪಡಿಸಿತ್ತು. ಹಿಂದೂಗಳನೇಕರು ರಾಷ್ಟ್ರೀಯ ಸ್ವಯಂ ಸೇವಕ ದಳವೊಂದನ್ನು ಸ್ಥಾಪಿಸಿ ಗೌಪ್ಯವಾಗಿ ಸಂಘಟನೆಯನ್ನು ನಡೆಸುವುದನ್ನು ಕಂಡು ಇದು ತಮಗೆ ಗಂಡಾಂತರದೆಂಬ ಅಂಜಿಕೆಯಿಂದಲೂ ಈ ಮುಸ್ಲಿಂ ಸೇವಕ ದಳ ಸ್ಥಾಪಿತವಾಗಿತ್ತು. ಲೀಗು ಸಾರ್ವಜನಿಕ ಸಂಸ್ಥೆ ಆದರೆ ಅದರ ಉಪಾಂಗವಾಗಿರುವ ಅದರ ಸ್ವಯಂಸೇವಕ ದಳ ಮಾತ್ರ ಗುಪ್ತ ಕಾರ್ಯಭಾರಗಳನ್ನು ಮಾಡುವುದೆಂದರೆ ಯಾವ ಸರಕಾರ ಸಹಿಸೀತು? ಗುಪ್ತವಾಗಿ ಅದರ ಕಛೇರಿಯಲ್ಲಿ ಶಸ್ತ್ರಾಸ್ತ್ರಗಳನ್ನು ಶೇಖರಿಸಿಡಲ್ಪಟ್ಟಿವೆ ಎಂದು ಪಂಜಾಬ್ ಸಿ ಐ ಡಿಗಳಿಗೆ ಇದರ ವಾಸನೆ ತಿಳಿಯಿತು ಗೊತ್ತಾದ ಮೇಲೆ ಪತ್ತೆ ಮಾಡಬೇಡವೆ? ಪತ್ತೆಯಾದರೆ ಗುಟ್ಟು ಹೊರಬೀಳುವುದೆಂದು ಕಳವಳ ಪೋಲಿಸ್ ಅಧಿಕಾರಿಗಳನ್ನು ಒಳಗೆ ಬಿಡುವುದಿಲ್ಲವೆಂದರೆ ತಮ್ಮನ್ನು ಕೈದು ಮಾಡಲಿಕ್ಕಿಲ್ಲವೆಂಬ ಒಂದು ಭರವಸೆಯೂ ಫಿರೋಜ್‌ಖಾನ್ ನೂನ್ ಮೊದಲಾದವರಲ್ಲಿತ್ತು ಕಾರಣ ಅವರು ವೈಸ್‌ರಾಯರ ಮಾಜಿ ಮಂತ್ರಿಗಳಾಗಿದ್ದರಲ್ಲವೆ?

ಒಂದುವೇಳೆ ರಾಷ್ಟ್ರೀಯ ಸ್ವಯಂ ಸೇವಕ ಸಂಘದವರಿಗೆ ರಿಯಾಯಿತಿ ತೋರಿಸಿದ್ದರೆ ಇವರಿಗೂ ತೋರಿಸಬಹುದಿತ್ತು, ಹಾಗೇನೂ ಮಾಡಲಿಲ್ಲ ಮುಂದೆ ಗಲಭೆಯುಂಟು ಮಾಡಲು ನಿರ್ಧರಿಸಿದ ಎರಡು ಸ್ವಯಂ ಸೇವಕ ಸಂಘಗಳನ್ನೂ ಕಾಯಿದೆಬಾಹಿರ ಸಂಸ್ಥೆಗಳಾಗಿ ಪಂಜಾಬ್ ಸರಕಾರ ಸಾರಿತು. ಅಂತೂ ಪರಿಸ್ಥಿತಿಯ ಒತ್ತಡದಿಂದ ಪಂಜಾಬ್ ಲೀಗ್ ಉನ್ನತಾಧಿಕಾರಿಗಳು ಜೈಲು ನೋಡಬೇಕಾಯಿತು.

ಜಾಮೀನಿಲ್ಲದೆ ಮೇಲೆ ಹೊರಬಂದವರೇ ಪುನಃ ಅವರು ಶಾಸನ ಮುರಿಯಲು ಪ್ರಯತ್ನಮಾಡಿದರು. ಇದರಿಂದ ಪಂಜಾಬ್ ಸರಕಾರದ ಶಾಸನ ಶಿಸ್ತನ್ನು ಭಂಗಮಾಡುವುದು ತಮ್ಮ ಮನಮುಚಿತವಾದ ಉದ್ದೇಶವಿದೆಯೆಂದು ಜಗತ್ತಿಗೆ ತೋರಿಸಲು ಮಾಡಿದ ಢೇಖಾವೆ ಇದು.

ಕೊಮ್ಯುನಿಸ್ಟ್ ಪ್ರಕರಣ

ಇಂದು ಈ ಪಂಥದವರ ಮೇಲೆ ಇಡೀ ಜಗತ್ತೇ ಮುನಿದಿದೆ ಎಂದರೆ ಅತಿಶಯವಲ್ಲ. ಜಗತ್ತಿನ ಶಕ್ತಿ ರಾಷ್ಟ್ರಗಳಾದ ಬ್ರಿಟನ್ ಅಮೇರಿಕಗಳು ಮಾತ್ರವಲ್ಲ ಚೀನ, ಇಟಲಿ, ಬರ್ಮಾ ಮೊದಲಾದ ಕಡೆಗಳಲ್ಲೂ ಇವರ ಮೇಲೆ ಬಲವಾದ ಗದಾಪ್ರಹಾರ ನಡೆಯುತ್ತಲಿ ಇದೆ. ಇದಕ್ಕೆ ಒಂದೇ ಕಾರಣ ಹೇಳಲಾಗಿದೆ ಇವರ ಸ್ಫೂರ್ತಿಯ ಉಗಮ ಸ್ಥಾನ ರಶ್ಯವಂತೆ. ಅದು ಹೇಗೂ ಇರಲಿ ಇವರ ಉಪಟಳದಿಂದ ಅನೇಕ ರಾಷ್ಟ್ರಗಳು ನೊಂದಿವೆ

ಭಾರತದಲ್ಲಿ ಕೊಮ್ಯುನಿಸ್ಟರೆಂಬವರು ಉನ್ನತ ರಾಜಕಾರಣ ಮುತ್ಸದ್ದಿತನ ತೋರಿಸಿದರು ಯುದ್ಧಕಾಲದಲ್ಲಿ ಇವರು 'ಇದು ಜನರ ಯುದ್ಧ'ವೆಂದು ಸಾರಿ ಬ್ರಿಟಿಷ್ ಸರಕಾರದೊಡನೆ ಸಹಕರಿಸಿದರು ಯೋಗ್ಯ ಸಂಭಾವನೆಯೂ ಅವರಿಗೆ ದೊರಕಿದೆಯಂತೆ ಈಗ ಅದು ಬಹುಶ್ಯ ದೊರೆಯದಿದ್ದುದರಿಂದೇನೊ ಕಿರಕುಳ ಮಜೂರ ಚಳವಳಗಳನ್ನೆಬ್ಬಿಸಿ ನಗರಗಳಲ್ಲೆಲ್ಲಾ ಗಲಭೆಗಾರಂಬಿಸಿದರು ಗಲಭೆಯಾದರೊ ಅಹಿಂಸಾತ್ಮಕವಾಗಿಯೂ ನಡೆಯಲಿಲ್ಲ ಮಿತಿ ಮೀರಿದ ಉದ್ವೇಗದಿಂದ ಸಾರ್ವಜನಿಕ ಶಿಷ್ಟಾಚಾರ ಮೀರಿ ಅವರ ನಡೆ ನುಡಿಗಳು ರೂಪುಗೊಂಡವು ಸರಕಾರಿ ಬಂದೋಬಸ್ತಿಯ ಮೇಲೂ ಇವರ ಉದ್ವೇಗದ ದಾಳಿ ನಡೆಯಲಾರಂಭವಾದ ಮೇಲೂ ಯಾವ ಸರಕಾರ ಸಹಿಸೀತೆ?

ಸ್ವಾತಂತ್ರ್ಯ ಪ್ರಶ್ನಾವಳಿ

ಲೀಗ ಕಾರ್ಯದರ್ಶಿ ಲಿಯಾಕತ್ ಅಲಿಖಾನರು ಜನವರಿ ತಾ 26ರಂದು ಕೊಂಗ್ರೆಸ್ಸಿನ ಉತ್ತರಗಳನ್ನು ಕೋರಿ ಒಂದು ಪ್ರಶ್ನಾವಳಿಯನ್ನು ಪ್ರಕಟಿಸಿರುವರು. ಈ ಕುರಿತು ಆಚಾರ್ಯ ಕೃಪಲಾನಿಯವರು ಉತ್ತರ ಹೇಳಲಿಕ್ಕೆ ಏನೂ ಇಲ್ಲವೆಂದು ಸ್ಪಷ್ಟಪಡಿಸಿರುವರು. ಅದಕ್ಕೆ ಕಾರಣವಿದೆ ಕೊಂಗೆಸ್ಸು ಬ್ರಿಟಿಷ್ ಸರಕಾರದ ಡಿಸೆಂಬರ್ 6ರ ವಿನಂತಿಯನ್ನು ಮನ್ನಿಸಿ ಅವರ ಹೇಳಿಕೆಯನ್ನು ಒಪ್ಪಿದೆ ಲೀಗಿನವರ ಕುರಿತ ಘೋರ ಶೆಯನ್ನು ಅದು ಸಂಪೂರ್ಣ ಅಲಕ್ಷಿಸಿದೆ ಅಂದಮೇಲೆ ಈ ಪ್ರಶ್ನೆಗಳು ನೇರವಾಗಿ ಬ್ರಿಟಿಷ್ ಸರಕಾರದೊಡನೆ ಕೇಳಲ್ಪಡಬೇಕಲ್ಲದೆ ಕೊಂಗ್ರೆಸಿನೊಡನಲ್ಲ ಬೇಕಾದರೆ ಇದುತನಕ ವರ್ತಮಾನವೃತವನ್ನಾಚರಿಸುವ ವೈಸರಾಯರು ತಮ್ಮ ಮೇಲಧಿಕಾರಿಗಳ ಪರವಾಗಿ ಉತ್ತರಿಸಲಿ

ರಾಯಭಾರಿಣಿ

ಮದ್ರಾಸಿನ ಶ್ರಿಮತಿ ಅಮ್ಮು ಸ್ವಾಮಿನಾಥನ್ ಅವರು ಮಲಯಕ್ಕೆ ಭಾರತ ರಾಯಭಾರಿಣಿಯರಾಗಿ ನೇಮಿಸಲ್ಪಟ್ಟಿದ್ದಾರೆ ಪಶ್ಚಿಮ ಖಂಡಕ್ಕೆ ಹೋಗಿ ಕೀರ್ತಿಗಳಿಸಿದ ವಿಜಯ ಲಕ್ಷ್ಮಿಯವರಂತೆ ಶ್ರೀ ಅಮ್ಮು ದೇವಿಯವರು ಬಹುಸಂಖ್ಯಾಕ ಮದ್ರಾಸಿಗಳಿರುವ ಮಲಯದಲ್ಲಿ ಪ್ರಭಾವಿತ ಸೇವೆಯನ್ನು ಸಲ್ಲಿಸಿ ತಮ್ಮ ದೇಶ ಬಾಂಧವರ ಸ್ಥಿತಿಗತಿಗಳನ್ನು ಸುಧಾರಿಸಲು ಯತ್ನಿಸುವರು ಇವರು ಕೆಪ್ಟನ್ ಲಕ್ಷ್ಮೀಯವರ ಮಾತೃಶ್ರೀ ಅವರು

ಘಟನಾ ಸಮಿತಿ

ಈ ಸ್ವತಂತ್ರ ಭಾರತೀಯ ಪ್ರಜಾಪ್ರತಿನಿಧಿ ಮಂಡಳವು ಪ್ರಜಾಪ್ರಭುತ್ವವೇ ತನ್ನ ಧ್ಯೇಯವೆಂದು ನಿರ್ಧರಿಸಿತು ಪ್ರಜಾಪ್ರಭುತ್ವದಲ್ಲಿ ಕೋಮು ಕಲಹಗಳಿಗೂ, ಅಲ್ಪಸಂಖ್ಯಾಕರ ಕಿರುಕುಳಗಳಿಗೂ ಆಸ್ಪದವಿಲ್ಲ ಇಡೀ ದೇಶದ ಮತ್ತದರ ಸಾಮಾನ್ಯ ಜನತೆಯ ಹಿತದೃಷ್ಟಿಯಿಂದಲೇ ಎಲ್ಲಾ ಕಾರ್ಯಕಲಾಪಗಳು ಜರಗಿಸಲ್ಪಡುವವು

ಇದಲ್ಲದೆ ಘಟನಾಸಮಿತಿಯಲ್ಲಿ ಇದುತನಕ ಭಾಗವಹಿಸದೆ ಇದ್ದ ಮುಸ್ಲಿಂ ಲೀಗಿಗೂ ಯಾವ ತರದ ಅನ್ಯಾಯವಾಗದಂತೆ ಧ್ಯೇಯ ಧೋರಣೆಗಳನ್ನು ನಿರ್ಧರಿಸಬೇಕೆಂದು ಶ್ರೀ ರಾಜಾಜಿಯವರು ಮಂಡಿಸಿದ ಸೂಚನೆಯೂ ಮಾನ್ಯಮಾಡಲ್ಪಟ್ಟಿದೆ ಆದುದರಿಂದ ಒಂದು ಪಕ್ಷ ಲೀಗು ಸಂಪೂರ್ಣ ಹೊರ ಉಳಿದರೂ ಮುಸಲ್ಮಾನ ಪ್ರಜೆಗಳಿಗೆ ಯಾವ ತರದ ಅನ್ಯಾಯ ಅನಾನುಕೂಲತೆಗಳಾಗದಂತೆ ದೇಶದ ಧೋರಣೆಯನ್ನು ನಿಷ್ಕರ್ಷಿಸಲಾಗುವುದು.

CANARA BANK LIMITED.

Estd 1906

(Incorporated in British India Liability of Members Ltd)

SEASON DEPOSITS

of Rs. 10,000/- and over in multiples of Rs. 1000/- and maturing within 30th September 1947 are now accepted at the following rates -

3 months	$2\frac{1}{4}$%
4 to 5 months	$2\frac{1}{2}$%
6 to 9 months	$2\frac{3}{4}$%

Rates of Season Deposits of less than Rs 10,000/- with a minimum of Rs. 1000/- and in multiples of Rs. 500/- may be ascertained on application to our nearest branch.

ಸ್ವಾತಂತ್ರ್ಯ ದಿನ

ಹೊರಡಲು ಸಿದ್ಧರಾಗಿದ್ದವರಿಗೆ ಪ್ರತ್ಯೇಕವಾಗಿ 'ಹೋಗಿರಿ' ಎಂದು ಸಾರುವ ಅವಶ್ಯವಿಲ್ಲವೆಂದು ಈ ಸಲದ ಸ್ವಾತಂತ್ರ್ಯ ಪ್ರತಿಜ್ಞೆಯಲ್ಲಿ 'ಕ್ವಿಟ್' ಕಲಮನ್ನು ಮನ್ನಾ ಮಾಡಿದೆ. ಅಂದ ಮಾತ್ರಕ್ಕೆ ಬ್ರಿಟಿಷರು ಇನ್ನು ಇಲ್ಲಿ ತಳವೂರುವ ಯೋಚನೆ ಪುನಃ ಪುನಃ ಮಾಡದಿರಲೆಂದು ಹಾರೈಕೆ.

ನಾಳಿನ ಪ್ರಪಂಚ

ಹೊಸ ಬೆಂಕಿ ಪೆಟ್ಟಿಗೆ

ಉರಿಕಲ್ಲು ಇಲ್ಲವೆ ಬೆಂಕಿ ಮದ್ದು ಇಲ್ಲದೆ ಉರಿಯುವ ಸಿಗರೇಟ್ ದೀಪವೊಂದನ್ನು ಬ್ರಿಟನಿನ ಒಂದು ಕೈಗಾರಿಕಾ ಸಂಸ್ಥೆಯವರು ಕಂಡು ಹಿಡಿದಿರುವರು

ಈ ದೀಪದ ಪೆಟ್ಟಿಗೆಯ ಬಾಗಿಲು ಹಾರಿ ತೆರೆಯುವುದು ಆಗ ಒಳಗೆ ಕಾಣಿಸುವ ಒಂದು ಅಗ್ನಿ ರಂಧ್ರದಲ್ಲಿ ಸಿಗರೇಟಿನ ತುದಿ ಇಟ್ಟು ಇನ್ನೊಂದು ತುದಿಯಿಂದ ಶ್ವಾಸ ಎಳೆದ ಕೂಡಲೇ ಸಿಗರೇಟು ಹೊತ್ತು ಕೊಳ್ಳುವುದು ಅಗ್ನಿ ರಂಧ್ರದೊಳಗೆ ಅತ್ಯಾಧುನಿಕ ದಾಹಕ ಮಾಧ್ಯಮವೊಂದಿದೆ ಒಂದು ಸಾರಿ ಈ ದಾಹಕ ದ್ರವವನ್ನು ತುಂಬಿದರೆ 400 ಸಲ ಹತ್ತಿಸಲು ಬರುವುದು ಗಾಳಿ ಮಳೆಗಳಿಗೆ ಅದು ಆರಿ ಹೋಗುವುದೆಂದಿಲ್ಲ ಚಿಲಿಮಿ ಸೇದುವವರಿಗನುಕೂಲವಾಗುವ ಉರಿಪೆಟ್ಟಿಗೆಯನ್ನು ತಯಾರಿಸಲು ಪ್ರಯತ್ನಗಳಾಗುತ್ತಿವೆಯಂತೆ—ಭಂಗಿ ಭಕ್ತರಿಗೆ ತುಂಬಾ ಸುಲಭವಾಯಿತು

ಹೊಸ ಟೈಪ್‌ರ್‍ಯಾಟರ್

ಇದು ತನಕದ ಟೈಪ್ ರ್‍ಯಾಟರ್ ಯಂತ್ರಗಳಲ್ಲಿ ಯಾವುದಾದರೂ ಒಂದೇ ಭಾಷೆಯಿಂದ ಟೈಪ್ ಮಾಡಬಹುದಾಗಿದೆ ಆದರೆ ಈಗ ಹೊಸತೊಂದು ವಿಧಾನದ ಯಂತ್ರವು ಕಂಡು ಹಿಡಿಯಲ್ಪಟ್ಟಿದೆ ಇದರ ಅಚ್ಚುಮೊಳೆಗಳನ್ನು ಕ್ಷಣದಲ್ಲಿ ಕಳಚಿ ಬೇರೆಯಾವ ಭಾಷೆಯ ಮೊಳೆಗಳನ್ನು ಬೇಕಾದರೂ ಅದಕ್ಕೆ ಜೋಡಿಸುವ ಏರ್ಪಾಡು ಇದೆ ಬೆರಳೊತ್ತು ಗುರುತುಗಳನ್ನು ಅದೇ ರೀತಿ ಬದಲಿಸಬಹುದು

ವ್ಯವಹಾರದಲ್ಲಿರುವ ಎಲ್ಲಾ ಭಾಷೆಗಳಿಂದ ಕೂಡಿದ 100 ಬಾಷೆಗಳ ವ್ಯವಸ್ಥೆಯೂ ಒಂದೇ ಯಂತ್ರದೊಂದಿಗೆ ಇಡಲಾಗುವುದು ಸಯಾಮಿ ಮತ್ತು ಯೆಹೂದಿಗಳ ಹಿಬ್ರೂ ಭಾಷೆಯೂ ಇವುಗಳಲ್ಲಿದೆ

ಕುಂಟರಿಗೆ ಕಾರ್ಖಾನೆ

ತಾವು ನಿಷ್ಪ್ರಯೋಜಕರೂ, ಚೇತನ ರಹಿತರೂ ಆಗಿರುವೆವೆಂಬ ಜೀವನ್ಮೃತ ಭಾವನೆಯುಳ್ಳ ಯುದ್ಧ ಗಾಯಾಳುಗಳಿಗೆ ಯೋಗ್ಯ ಉದ್ಯಮ ಕೊಡುವ ಸಮಸ್ಯೆಯು ಜಗತ್ತಿನ ಕೈಗಾರಿಕಾ ಮುಂದಾಳುಗಳ ಗಮನವನ್ನು ಸೆಳೆದಿದೆ. ಅವರನ್ನು ಹಾಗೆ ಕೊಳೆಯ ಬಿಡುವುದು ಹಾನಿಕಾರಕವೂ ಆಗಿದ್ದು ಸಮಾಜಕ್ಕೆ ಅವರೊಂದು ಹೊರೆಯಾಗುವರು.

ಇಂಗ್ಲೆಂಡಿನ ಸರಕಾರದ ಕಾರ್ಮಿಕ ಖಾತೆಯವರು ಗ್ಲೆಮೋರ್ಗನ್ ಶಾಯರಿನಲ್ಲಿ ಕೇವಲ ಯುದ್ಧ ಅಸಮರ್ಥರಿಗಾಗಿಯೇ ಸಂಪೂರ್ಣ ಕೆಲಸ ಕೊಡುವ ಕಾರ್ಖಾನೆಯೊಂದನ್ನು ತೆರೆದಿರುವರು. ಬರುವ ಮಾರ್ಚ್ ತಿಂಗಳೊಳಗೆ ಇಂತಹ 8 ಇತರ ಕಾರ್ಖಾನೆಗಳೂ ತೆರೆಯಲ್ಪಡುವವು. ಸಾಧಾರಣ 80 ಈ ನಮೂನೆಯವುಗಳನ್ನು ತೆರೆದರೆ ಬ್ರಿಟನಿನ ಎಲ್ಲ ಯುದ್ಧಕುಂಟರನ್ನು ಉದ್ಯೋಗದಲ್ಲಿರಿಸಲು ಸಾಧ್ಯವಾಗುತ್ತದೆಯಂತೆ.

ಬರ್ಮಾದ ವಿದ್ಯಾರ್ಥಿ ಮುಖಂಡ ಆಂಗ್‌ಸೇನ್

ವಿಶ್ವ ವಿದ್ಯಾರ್ಥಿಗಳ ಸಂಘಟನಾಶಕ್ತಿ

"ನಿಮ್ಮ ಶಕ್ತಿ ಉಪಯುಕ್ತವಾಗಿ ಹರಿಯಲಿ"

ವಿದ್ಯಾರ್ಥಿಗಳು ಶಿಷ್ಯಪರಂಪರೆಗೆ ಸೇರಿದವರು. ಪ್ರಾಚೀನಕಾಲದಿಂದಲೂ ಈ ವರ್ಗದವರು ಜನಾಂಗ ಜೀವನದ ಮೇಲೆ ಪ್ರತ್ಯಕ್ಷವಾಗಿ ಇಲ್ಲವೆ ಅಪ್ರತ್ಯಕ್ಷವಾಗಿ ಪ್ರಭಾವವನ್ನು ಬೀರಿರುವರು. ಹಿಂದಿನ ಕಾಲದಲ್ಲಿ ಇವರ ಸ್ವತಂತ್ರ ವರ್ತನೆಗೆ ಹಲವು ತೆರನಾದ ನಿರ್ಬಂಧಗಳಿದ್ದುವು. ಪುರುಷಾರ್ಥಸಾಧನೆಗೆ ಯೋಗ್ಯವಾದ ವಿದ್ಯಾಭ್ಯಾಸವನ್ನು ಗೈಯುವಾಗ ಅವರು ದೇಶದ ರಾಜಕಾರಣದಲ್ಲಾಗಲಿ, ಸಾಮಾಜಿಕ ಚಟುವಟಿಕೆಗಳಲ್ಲಾಗಲಿ ಯಾವ ತರದ ಪ್ರಭಾವಿತ ಪಾತ್ರವನ್ನು ವಹಿಸುವಂತಿಲ್ಲ. ಪೂರ್ವದಲ್ಲಂತೂ ಶ್ರೇಷ್ಠರೆನಿಸಿಹ ಗುರುವರ್ಗದವರ ಸಲಹೆ ಸೂಚನೆಗಳನ್ನು ಅವರು ಮೀರಿಹೋಗುವುದಸಾಧ್ಯವಿತ್ತು. ಹಿರಿಯರು ತಮ್ಮ ಕಿರಿಯರಿಂದ ಮರುತ್ತರವಿಲ್ಲದ ವಿಧೇಯತೆಯನ್ನು ನಿರೀಕ್ಷಿಸುತ್ತಿದ್ದ ಸಾಂಪ್ರದಾಯವಿತ್ತು. ಹೆಚ್ಚಾಗಿ ದೇಶದ ಇಲ್ಲವೆ ಸಮಾಜದ ಮುಂದಾಳುಗಳಾಗಿ ಗುರುಹಿರಿಯರೇ ಮುಂದಾಗುತ್ತಿದ್ದು ಯೋಗ್ಯ ರೀತಿಯಲ್ಲಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದುದರಿಂದ ವಿದ್ಯಾರ್ಥಿಗಳು ಅಂತಹ ಯಾವ ತರದ ಕಾರ್ಯಗಳಿಗೆ ಕೈಹಾಕುವ ಆವಶ್ಯಕತೆ ಇರಲಿಲ್ಲ.

ಇಂದು ವಿದ್ಯಾರ್ಥಿಗಳೇ ಮುಂದು

ಆಧುನಿಕ ಕಾಲದ ಸ್ಥಿತಿಗತಿಗಳೇ ಪ್ರತ್ಯೇಕ. ಇಂದಿನವರ ಸಾಮಾಜಿಕ ಮತ್ತು ರಾಜಕೀಯ ಧ್ಯೇಯ ಧೋರಣೆಗಳೇ ವಿಶಿಷ್ಟತರದ್ದಾಗಿವೆ. ಎಲ್ಲಿ ಹೋದರೂ ಯೋಗ್ಯ ಆದರ್ಶ ವ್ಯಕ್ತಿಗಳೇ ಕಾಣಿಸುವುದಿಲ್ಲ. ಜಗತ್ತಿನಲ್ಲಿ ಸಾಮ್ರಾಜ್ಯಶಾಹಿ ಮತ್ತು ಪರಸ್ಪರ ಶೋಷಣೆಯ ಆಸಕ್ತಿಗಳೇ ಕಂಡುಬರುತ್ತವೆ. ಮಾನವ ಜೀವನದ ಆರ್ಥಿಕ ವಿವರಣೆಗಳೆಲ್ಲ ಕೃತ್ರಿಮ ಸೋಗಿನವಾಗಿವೆ. ಹೀಗಾಗಿ ಒಬ್ಬನು ಇನ್ನೊಬ್ಬನಿಗೆ ಸಲಹೆ ಸೂಚನೆಗಳನ್ನು ಕೊಡುವಂತಿಲ್ಲ. ಒಬ್ಬೊಬ್ಬ ವ್ಯಕ್ತಿಯ ಸಂಬಂಧ ಹೀಗಿರುವಂತೆ ಒಂದು ಸಮಾಜ ಇಲ್ಲವೆ ದೇಶದ ಸಂಬಂಧವಾಗಿಯೂ ಅದೇ ರೀತಿ ನಿಂತಿದೆ. ಪ್ರಜಾಪ್ರಭುತ್ವ, ಸಮತಾವಾದಗಳ ಹಾರೈಕೆಯೇ ಎಲ್ಲೆಲ್ಲೂ ತೋರಿಬರುತ್ತವೆ.

ಹಿಂದಿನ ಕಾಲದ ವಿದ್ಯಾರ್ಥಿಗಳಿಗೆ ಇದ್ದ ನಿರ್ಬಂಧಗಳೆಲ್ಲ ಮಾಯವಾಗಿ ಅದಕ್ಕೆ ಪ್ರತಿಯಾಗಿ ತಡೆಯಿಲ್ಲದ ಸ್ವೇಚ್ಛಾರದ ಸ್ವಾತಂತ್ರ್ಯವು ಅವರಿಗೆ ದೊರಕಿದೆ. ವಿದ್ಯೆಯ ಮಟ್ಟಿಗೆ ಮಾತ್ರ ಶಾಲೆ ಮತ್ತು ಉಪಾಧ್ಯಾಯರು. ಎಳೆತನದಲ್ಲಿ ಮಾತ್ರ ಹಿರಿಯರ ಲಾಲನೆಪಾಲನೆ. ತದನಂತರ ಏನೆನ್ನಾದರೂ ಮಾಡಲು ವಿದ್ಯಾರ್ಥಿಗಳು ಸಂಪೂರ್ಣ ಸ್ವತಂತ್ರರು.

ನವಜಾಗೃತಿ

ರಾಜಕೀಯ ಆಂದೋಲನಗಳು ಮೇಲಿಂದ ಮೇಲೆ ಸಂಭವಿಸಿದ ನಂತರವಂತೂ ವಿದ್ಯಾರ್ಥಿ ವರ್ಗವು ಮೆಲ್ಲನೆ ತನ್ನ ಶಕ್ತಿಗಳ ನಿರ್ದಿಷ್ಟ ಮಿತಿಯನ್ನರಿತುಕೊಂಡಿತು. ಸಂಘಟನೆಯಿಂದ ಪ್ರಚಂಡ ಕಾರ್ಯಗಳನ್ನು ಸಾಧಿಸಬಹುದೆಂದು ಅವರಿಗೆ ಮನವರಿಕೆಯಾಯಿತು. ಸಾಹಸಿಗರೂ ಧೀರರೂ ಸ್ಥೈರ್ಯಶಾಲಿಗಳೂ ಆದ ತರುಣ ಕ್ರಾಂತಿಕಾರರ ಸ್ಫೂರ್ತಿದಾಯಕ ಆದರ್ಶಗಳು ಅವರನ್ನು ಹುರುಪುಗೊಳಿಸಿದುವು.

ಮೊದಲ ಅಸಹಕಾರ ಚಳವಳದ ಕಾಲದಲ್ಲಿ ನಮ್ಮ ದೇಶದ ವಿದ್ಯಾರ್ಥಿಗಳಿಗೆ ಕಾಲೇಜುಗಳನ್ನು ಬಿಟ್ಟು ಹೊರಬರಲು ಜನಪ್ರಿಯ ಮುಖಂಡರ ಅಧಿಕಾರಯುಕ್ತ ನಿರ್ದೇಶ ಸಿಕ್ಕಿತು. ಅಂದಿನಿಂದ ವಿದ್ಯಾರ್ಥಿಗಳು ರಾಜಕೀಯದಲ್ಲಿ ಮುನ್ನಡೆಯಿಡಲಾರಂಭಿಸಿದರು. ಮೆಲ್ಲಮೆಲ್ಲನೆ ವಿದ್ಯಾರ್ಥಿ ಸಮ್ಮೇಳನಗಳು ಜರಗತೊಡಗಿದುವು.

ಲೋಪ ದೋಷಗಳು

ವಿದ್ಯಾರ್ಥಿ ಸಂಘಟನಾ ಚಳವಳ ಪ್ರಾರಂಭದಲ್ಲಿ ಹಲವು ಲೋಪದೋಷಗಳು ಕಂಡುಬಂದುವು. ವಿದ್ಯಾರ್ಥಿಗಳಲ್ಲಿ ಒಂದು ಚಳವಳವನ್ನು ಸಾಗಿಸಲು ಬೇಕಾದಷ್ಟು ಗುಣ ಶಿಸ್ತುಗಳಿರಲಿಲ್ಲ. ಅವರಲ್ಲಿ ಹಿರಿಯರ ಗಂಭೀರತ್ವಕ್ಕಿಂತ ಮಕ್ಕಳಾಟಿಕೆಯ ಅತ್ಯಾಸಕ್ತಿಗಳೇ ಹೆಚ್ಚೆಂದು ತೋರಿಬಂತು. ಅವರ ಉತ್ಸಾಹದ ನದಿಯು ರಣಾವುಗಳ ಮರಳು ಕಾಡಿನಲ್ಲೇ ಇಂಗಿಹೋಗುತ್ತದೆಂದೂ ಟೀಕೆಗಳಾದುವು.

ಆದರೆ ಹೀಗೆ ಟೀಕಿಸುವವರು ವಿದ್ಯಾರ್ಥಿ ಪ್ರಪಂಚದಲ್ಲಿ ಮೌನವಾಗಿ ನಡೆಯುತ್ತಿದ್ದ ಕ್ರಾಂತಿಯನ್ನು ಲಕ್ಷಿಸಲಿಲ್ಲ. ಭರದಿಂದ ಸಾಗುವ ವಿಶ್ವ ಘಟನೆಗಳು ವಿದ್ಯಾರ್ಥಿಗಳಲ್ಲಿ ಹೊಣೆಗಾರಿಕೆಯ ಅರಿವನ್ನುಂಟು ಮಾಡಿದುವು. ಎಲ್ಲಾ ಜನಾಂಗಗಳಲ್ಲಿ ವಿದ್ಯಾರ್ಥಿಗಳು ರಾಜಕೀಯ ಹೋರಾಟದ ಭಾರವನ್ನು ಹೊರಬೇಕಾಯಿತು. ಯುದ್ಧಗಳನ್ನು ತಂದೊಡ್ಡಿದ ಜಾಗತಿಕ ದುರ್ಘಟನೆಗಳಂತೂ ವಿದ್ಯಾರ್ಥಿಗಳನ್ನು ಭೀಕರ ರಣಕ್ಷೇತ್ರಕ್ಕೊಯ್ದುವು. ಬಲಿಷ್ಠ ರಾಷ್ಟ್ರಗಳ ಶಕ್ತಿಯು ಕೇವಲ ತರುಣ ವಿದ್ಯಾರ್ಥಿಗಳಿಂದಲೇ ಬರುವಂತಾಯಿತು.

ಈ ಎಲ್ಲ ಅನುಭವವು ವಿದ್ಯಾರ್ಥಿಗಳನ್ನು ಸುವ್ಯವಸ್ಥಿತ ಸಂಘಟನೆಯ ಕಡೆಗೆ ಒಯ್ಯಿತು. ಇಂದಿನ ಅನೇಕ ದೇಶ ಧುರೀಣರು ತಮ್ಮ ವಿದ್ಯಾರ್ಥಿ ದೆಶೆಯಲ್ಲೇ ಉಜ್ವಲ ನಾಯಕತ್ವದ ಕಸುವನ್ನು ಪ್ರದರ್ಶಿಸಿದ್ದರು. ಅವರ ಆದರ್ಶವು ವಿದ್ಯಾರ್ಥಿಗಳಿಗೆ ಸ್ಪಷ್ಟ ಮಾರ್ಗದರ್ಶಕಗಳಾದುವು. ತಮ್ಮ ಹಿಂದಿನ ಲೋಪ ದೋಷಗಳನ್ನು ವಿದ್ಯಾರ್ಥಿ ವರ್ಗವು ತಿದ್ದುತ್ತ ಮುನ್ನಡೆಯಿತು.

ವಿದ್ಯಾರ್ಥಿ ಶಕ್ತಿ

ಫಲಿತಾಂಶವಾಗಿ ಇಂದು ನಾವೇನು ನೋಡುತ್ತಿದ್ದೇವೆ? ಅವರ ಸಂಘಶಕ್ತಿಯ ಎದುರು ಬಲಿಷ್ಠವಾದ ಸರಕಾರವು ಅಂಜುವಂತಾಗಿದೆ. ಅದೆಂತಹ ಮಹತ್ತರವಾದ ತ್ಯಾಗ ಬಲಿದಾನಗಳನ್ನು ಮಾಡಲೂ ವಿದ್ಯಾರ್ಥಿಗಳನ್ನು ಸಿದ್ಧರಿರುವರೆಂದು ಎಲ್ಲರಿಗೂ ಸುಸ್ಪಷ್ಟವಾಗಿದೆ. ಯಾವ ರೀತಿಯಲ್ಲೂ ಅವರ ಪ್ರಗತಿಯನ್ನು ತಡೆಗಟ್ಟಲು ಸಾಧ್ಯವಿಲ್ಲದಾಗಿದೆ. ಬಹಿರಂಗದಲ್ಲಿ ಅವರನ್ನು ತಡೆದರೆ ಅವರು ಅಂತರಂಗವಾಗಿ ಸಾಹಸ ತೋರಿಸಲು ಹಿಂಜರಿಯುವುದಿಲ್ಲ. ಹೀಗಾಗಿ ಅನೇಕಾನೇಕ ವಿದ್ಯಾರ್ಥಿಗಳು ಗುಪ್ತ ಕ್ರಾಂತಿಕಾರರಾಗಿ ಆಡಳಿತಕ್ಕೆ ನಿತ್ಯ ತೊಂದರೆಯ ವಿಷಯಗಳಾಗಿ ಪರಿಣಮಿಸಿದರು.

ಇಂದು ಜಗತ್ತಿನ ಎಲ್ಲಾ ಜನಾಂಗಗಳಲ್ಲೂ ತರುಣ ವಿದ್ಯಾರ್ಥಿಗಳೇ ರಾಜಕೀಯ ಕ್ರಾಂತಿಯಲ್ಲಿ ಮುಖ್ಯ ಪಾತ್ರ ವಹಿಸುತ್ತಿದ್ದಾರೆ. ಬರ್ಮದ ಆಂಗ್‌ಸೇನ್‌ರ ಪ್ರಾಯ ಕೇವಲ 32. ಇಂಡೋನೇಸ್ಯದ ಮುಖಂಡರೆಲ್ಲ ನಿನ್ನೆ ಮೊನ್ನೆಯ ವಿದ್ಯಾರ್ಥಿಗಳು. ಅಮೇರಿಕನ್ ಜನ ಜೀವನದ ಎಲ್ಲಾ ಕ್ಷೇತ್ರಗಳಲ್ಲೂ ವಿದ್ಯಾರ್ಥಿಗಳೇ ತುಂಬಿರುತ್ತಾರೆ.

ವಿದ್ಯಾರ್ಥಿಗಳೆದುರು ಉಜ್ವಲ ಭವಿಷ್ಯವಿದೆ. ಅವರು ತಮ್ಮಲ್ಲಿರುವ ಉತ್ಸಾಹ ಚೈತನ್ಯಗಳನ್ನು ಸಿಕ್ಕಿದೆಡೆ ಹರಿಯ ಬಿಡದೆ, ಯೋಗ್ಯ ಸ್ವಂಯಮ ಸ್ಥೈರ್ಯ ಗುಣ ಶಿಸ್ತುಗಳಿಂದ ವಿಚಾರ ವಿವೇಕದಿಂದ ಕಾರ್ಯವನ್ನೆಸಗಿದರೆ ಅವರ ಏಟಿಕೆಗೆ ಬಾರದ ವಿಷಯವೇ ಇರದು.

"ವಿಷಮ ವಿವಾಹಗಳು"

ಮುಂಬಯಿಯಲ್ಲಿ ಮುಸ್ಲಿಮೇತರ ಬಹುಪತ್ನೀ ವಿವಾಹಗಳನ್ನು ಅಕ್ರಮವೆಂದು ಸಾರುವಂತೆ ಮಾಡುವದರಲ್ಲಿ ಶ್ರೀಮತಿ ಲೀಲಾವತಿ ಮುನಶಿಯವರು ಈಗಾಗಲೆ ಯಶಸ್ವಿಯಾಗಿದ್ದಾರೆ. ಈಗ ಅವರು "ವಿಷಮ ವಿವಾಹ"ಗಳನ್ನು ಅಂದರೆ 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಹೆಂಗಸನ್ನು 45 ಕ್ಕಿಂತ ಹೆಚ್ಚು ವಯಸ್ಸಿನ ಪುರುಷನಿಗೆ ಕೊಟ್ಟು ಮಾಡುವ ವಿವಾಹಗಳನ್ನು ಪ್ರತಿಬಂಧಿಸಲು ಮಸೂದೆಯೊಂದನ್ನು ತಂದಿದ್ದಾರೆ. ಅಂಥ ಮದುವೆಯಲ್ಲಿ ಭಾಗಿಗಳಾದವರಲ್ಲಿ ಮುಖ್ಯರಾದವರನ್ನು ದಂಡಿಸಲು ಆ ಮಸೂದೆ ಇಚ್ಛಿಸುತ್ತದೆ. ಆದರೆ ಬಹುಪತ್ನೀತ್ವ ಪ್ರತಿಬಂಧಕ ಕಾಯದೆಯಲ್ಲಿರುವಂತೆ ಅಂಥ ಮದುವೆಗಳನ್ನು ಅಕ್ರಮವೆಂದು ಸಾರಲು ಅದು ಅಪೇಕ್ಷಿಸುವದಿಲ್ಲ.

ನಮ್ಮ ದೇಶದಲ್ಲಿ ಅಲ್ಪವಯಿ ಕಾಯದೆಯಲ್ಲಿ ಬಹಳ ತೊಡಕುಗಳಿವೆ. ಸಾಧಾರಣವಾಗಿ ಒಂದು ವ್ಯಕ್ತಿಗೆ 18 ವರ್ಷ ವಯಸ್ಸು ಪೂರ್ತಿಯಾದೊಡನೆ ಪ್ರೌಢತ್ವ ಪ್ರಾಪ್ತವಾಗುವದು. ಆದರೆ ಅವನು ಆ ವಯಸ್ಸಿಗೆ ಬರುವ ಮೊದಲೆ ತನ್ನ ನೈಸರ್ಗಿಕ ಪಾಲಕನನ್ನು ಕಳದುಕೊಂಡು ಅವನ ಮೇಲೆ ಪಾಲಕನನ್ನು ನೇಮಿಸುವ ಹಾಳಿ ನ್ಯಾಯಸ್ಥಾನಕ್ಕೆ ಬಂದರೆ ಆಗ ಅವನು 20ನೇ ವಯಸ್ಸನ್ನು ಪೂರೈಸುವ ವರೆಗೆ ತನ್ನ ಸ್ವಂತ ವ್ಯವಸ್ಥೆಯನ್ನು ನೋಡಿಕೊಳ್ಳಲು ಸಮರ್ಥನೆಂದು ಅಂಗೀಕೃತನಾಗುವದಿಲ್ಲ. ಮದುವೆಯ ಮಟ್ಟಿಗೆ ಹುಡುಗಿ 14ನೇ ವಯಸ್ಸಿಗೆ ಒಂದೊಡನೆಯೆ ಪ್ರೌಢಳೆಂದು ಪರಿಗಣಿಸಲ್ಪಡುವಳು. ಆದರೂ ಯಾವನೊಬ್ಬನು ಅಥವಾ ಒಬ್ಬಳು ಇನ್ನೂ ಮಗುವಾಗಿರುವಾಗಲೇ ಆ ವ್ಯಕ್ತಿಯನ್ನು ವಿವಾಹ ಬಂಧನದಲ್ಲಿ ಪಾಲಕರು ಬಿಗಿಯಬಲ್ಲರು. ಬಾಲ್ಯವಿವಾಹವನ್ನು ತಡೆಯಲುದ್ದೇಶಿಸಿದ ಶಾರದಾ ಕಾಯದೆ ಕೂಡ ಆ ಮದುವೆಯನ್ನೆ ಅಕ್ರಮವೆಂದು ಸಾರುವದಿಲ್ಲ. [illegible] ಇಲ್ಲವೆ ಶಿಕ್ಷೆಯ [illegible] ಯನ್ನು ಮಾತ್ರ ಅದು ವಿಧಿಸುತ್ತದೆ. ಆದರೆ ಆ ದಂಡನೆ ಎಸಗಲ್ಪಟ್ಟಲಿ ಇಲ್ಲವೆ, ಜಿದಲಿ ಆ ಮದುವೆ ವಧೂವರರಿಬ್ಬರಿಗೂ ಬಂಧಕವೇ ಆಗಿದೆ. ಅದು ಅಕ್ರಮವಾಗುವದಿಲ್ಲ ಇಲ್ಲದೆ ಅಸಿಂಧುವಾಗುವದಿಲ್ಲ.

ಶ್ರೀಮತಿ ಮುನಶಿಯವರ "ವಿಷಮ ವಿವಾಹ ಮಸೂದೆ ಅದೇ ತರಹದ್ದು, ಕಾಯದೆ ಕೈ ಹಾಕಲು ಸಾಧ್ಯವಾಗುವ ಮೊದಲೆ ವಿವಾಹದ ಕರ್ಮವೆಲ್ಲ ಮುಗಿದು ಹೋದರೆ ಅಲ್ಪವಯಿ ಹುಡುಗಿಯಾಗಲಿ ಆಕೆಯ ಹಿತೈಷಿಗಳಾಗಲಿ ಕೆಲವರನ್ನು ಶಿಕ್ಷೆಗೆ ಗುರಿ ಮಾಡುವದರಿಂದಷ್ಟೇ ತೃಪ್ತಿಯನ್ನು ಹೊಂದಬೇಕಾಗುವುದು.

ಇದು ಸಾಲದೆಂದು ನನಗೆನಿಸುತ್ತದೆ. ಅಂಥ ಕಾಯದೆಯ ಮೇರೆಗೆ ತಪ್ಪು ಸ್ಥಾಪಿಸಲ್ಪಟ್ಟ ಮೇಲೆ ಈ ಕೆಳಗಿನ ಬಲಿಯು ಯಾವುದೊಂದು ಪರಿಹಾರ ದೊರಕುವಂತಿರಬೇಕು; ತಪ್ಪು ಸ್ಥಾಪಿಸಲ್ಪಟ್ಟ ಮಾತ್ರಕ್ಕೆ ಆ ಮದುವೆ ರದ್ದಾಗಬೇಕು. ಅವಳು ಪ್ರೌಢತ್ವಕ್ಕೆ ಬಂದ ಮೂರರ ತಿಂಗಳೊಳಗೆ ಅವಳು ಕೊನೆಯ ಆಜ್ಞೆಯನ್ನು ಪಡೆಯಲು ಹಾಜರಾಗುವ ಗೋಸುವ ಒಂದು ದಿನವನ್ನು ನಿಶ್ಚಿತಗೊಳಿಸಬೇಕು. ಆ ದಿನ ಹುಡುಗಿಯ ಇಚ್ಛೆಯನ್ನು ಕೇಳಿ ತಿಳಿದುಕೊಳ್ಳಬೇಕು. ಅವಳಿಗೆ ಆ ಮದುವೆ ರದ್ದಾಗಬೇಕೆಂದು ಇಚ್ಛೆಯಿದ್ದರೆ ಕೊನೆಯ ತೀರ್ಪು ಹಾಗೇ ಆಜ್ಞಾಪಿಸಬೇಕು. ಬದಲಿಗೆ ಆ ಮದುವೆಯನ್ನು ಅನುಸರಿಸಲು ಅವಳಿಗೆ ಮನಸ್ಸಿದ್ದರೆ ಪ್ರಾರಂಭಿಕ ತೀರ್ಪನ್ನು ರದ್ದುಗೊಳಿಸಬೇಕು. ಈ ನಡುವಿನ ಅಂತರದಲ್ಲಿ ಉಭಯ ಪಕ್ಷಗಳೂ ಬೇರೆ ಮದುವೆಯಲ್ಲಿ ಬಂಧಿತರಾಗುವಂತಿಲ್ಲವೆಂದು ಹೇಳಬೇಕಾಗಿಯೆ ಇಲ್ಲ.

ಸ್ತ್ರೀಗೆ ರಕ್ಷಣೆ ಕೊಡುವ ಇಚ್ಛೆ ಕಾಯದೆಗಿದ್ದರೆ ಅದು ಪರಿಣಾಮಕಾರಿ ರಕ್ಷಣೆಯನ್ನು ಕೊಡತಕ್ಕದ್ದು. ತನ್ನ ಕಾಲದಿಂದ ದಂಡಿಸಲ್ಪಟ್ಟ ಗಂಡನೊಡನೆ ಬಾಳುವೆ ಮಾಡುವದು ಯಾವ ಹೆಂಡತಿಗೂ ಸುಖದಾಯಕವಾಗುವದು. ನ್ಯಾಯಸ್ಥಾನಗಳ ಫೌಜದಾರಿ (ಕ್ರಿಮಿನಲ್) ಅಧಿಕಾರ ಪರಿಧಿಯಲ್ಲಿ ಸೇರದೆ ಕೇವಲ ದಿವಾಣಿ (ಸಿವ್ಹಿಲ) ಪರಿಧಿಯಲ್ಲಿ ಸೇರಿದರೂ ಚಿಂತೆಯಿಲ್ಲ, ಹೆಂಗಸಿಗೆ ಕೊಡುವ ರಕ್ಷಣೆ ಪರಿಪೂರ್ಣವಾಗಿರಬೇಕು.

ಇನ್ನು, ಈ ಮಸೂದೆ ಈಗಿರುವಂತಿದ್ದರೆ 14 ವರ್ಷದ ಹುಡುಗಿಯನ್ನು 44 ವಯಸ್ಸಿನ ವರನಿಗೆ ಮದುವೆ ಮಾಡಲು ಸಾಧ್ಯವುಂಟಾದರೂ 17 ವರ್ಷದ ಹುಡುಗಿಯನ್ನು 45 ವರ್ಷದವನಿಗೆ ಮದುವೆ ಮಾಡಲು ಹಾದಿಯಿಲ್ಲ. ಇದರ ಬದಲು ಅಲ್ಪವಯಿ ಹುಡುಗಿಯನ್ನು ಮದುವೆಯ ಕಾಲಕ್ಕೆ ಅವಳ ವಯಸ್ಸಿನ ಎರಡೂವರೆ ಪಾಲಿಗಿಂತ ಹೆಚ್ಚು ವಯಸ್ಸಿನ ಗಂಡನಿಗೆ ಕೊಡುವ ಎಲ್ಲ ಪ್ರಕರಣಗಳಿಗೂ ಈ ಕಾಯಿದೆಯನ್ನು ಅನ್ವಯಿಸಿದರೆ ಇದಕ್ಕಿಂತ ಸರಳವಾಗುವದೆಂದು ನನ್ನೆಣಿಕೆ.

ಸಾಬರಮತಿ — ಕೆ. ಘ. ಮಶ್ರುವಾಲಾ

ಆನೆಗಳಿಗೆ ವಿದ್ಯುತ್ ಔಷಧಿ

ಇಂಗ್ಲೆಂಡಿನ ಪ್ರಖ್ಯಾತ ಸರ್ಕಸ್ ಪ್ರದರ್ಶನಗಾರನಾದ ಮಿಲ್ಸನಿಗೆ ಸೊಂಟನೋವುಂಟಾಗಲು ವಿದ್ಯುತ್ ವಿಧಾನದ ಶಸ್ತ್ರಚಿಕಿತ್ಸೆಯನ್ನು ಕೊಡಲು ಪರಿಹಾರ ದೊರಕಿತು.

ಅದೇ ಸಮಯಕ್ಕೆ ಅವನ ಸರ್ಕಸಿನ 4 ಆನೆಗಳಿಗೂ ಸೊಂಟ ನೋವುಂಟಾಗಲು ಸರ್ಕಸ್ ಮೂಲಕ ಮಿಲ್ಸನು ಆನೆಗಳಿಗೂ ವಿದ್ಯುತ್ ಚಿಕಿತ್ಸೆಯನ್ನು ಕೊಡಿಸಿದನು. ಈಗ ಅವು ಸೊಂಟಕ್ಕೆ ಸಂಬಂಧಪಟ್ಟ ಎಲ್ಲಾ ಕಸರತ್ತುಗಳನ್ನು ಮಾಡಲು ಸಮರ್ಥವಾಗಿರುವವು.

ಇಂದಿಗೆ ಕಾಲುಶತಮಾನಕಿಂತಲೂ ಹೆಚ್ಚು ಸಮಯದಿಂದ ಶಾಸನ ಭಂಗವನ್ನೇ ಧ್ಯೇಯವನ್ನಾಗಿಟ್ಟ ಕಾಂಗ್ರೆಸು ಇಂದು ತನ್ನ ಅನುಯಾಯಿಗಳಿಗೆ ಹಾಗೆ ಮಾಡಬಾರದೆಂದು ನಿರ್ದೇಶಿಸಿದೆ.

*

ಈಗೆರಡು ತಿಂಗಳಿಂದ ವ್ಹಾಯ್ಸ್‌ರಾಯ್ ವೇವಲ್ಲರು ವಿಚಿತ್ರ ಮೌನ ವ್ರತವನ್ನು ಹಿಡಿದಿರುವುದು ರಾಜಕೀಯ ಕೇಂದ್ರಗಳಲ್ಲಿ ಕೌತುಕವನ್ನುಂಟುಮಾಡಿದೆ. ಇವರು ಅಧಿಕಾರ ವಹಿಸಿದಂದಿನಿಂದ ಇಷ್ಟೊಂದು ದೀರ್ಘ ಕಾಲ ಮೌನವಾಗಿರಲಿಲ್ಲ. ಈಗಿನದೊಂದು ದಾಖಲೆ.

ಜಿಲ್ಲಾ ಪರಿಚಯ

ತೆಂಗಿನೆಣ್ಣೆ: ಇದು, ವಾರದಿಂದ ವಾರಕ್ಕೆ ಅಪರೂಪ ವಸ್ತುವಾಗುತ್ತಿದೆ. ಅಂಗಡಿಗಳ ಮಟ್ಟಿಗೆ ಇದರ ವ್ಯಾಪಾರವು ನಿಂತಂತೆಯೆ. ಜನರು ಹೆಚ್ಚಾಗಿ "ವನಸ್ಪತಿ"ಗಳ ಮೇಲೆಯೇ ಅವಲಂಬಿಸಿರಬೇಕಿದೆ. ಕೆಲದಿನಗಳ ಹಿಂದೆ, ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಎಣ್ಣೆಯ ಮಿಲ್ ವ್ಯಾಪಾಲಕರ ಮತ್ತು ಕೆನರಾ ಚೇಂಬರ್ ಒಫ್ ಕೊಮರ್ಸಿನ ಪ್ರತಿನಿಧಿಗಳ ಒಂದು ಸಮಾಲೋಚನಾ ಕೂಟ ಸೇರಿತ್ತೆಂದು ತಿಳಿಯಲಾಗಿದೆ. ಈ ಸಭೆಯಲ್ಲಿ ತಿಳಿದುಬಂದಂತೆ ಈ ಜಿಲ್ಲೆಯಲ್ಲಿನ ಒಟ್ಟು ಹದಿಮೂರು ಎಣ್ಣೆಯ ಮಿಲ್ಲುಗಳಿಗೆ ವರ್ಷವಿಡೀ ಕೆಲಸ ನಡೆಸಲು ಸುಮಾರು ೭೨೦೦ ಟನ್ ಕೊಬ್ಬರಿ ಬೇಕು, ಇದರಲ್ಲಿ ನಮ್ಮ ಜಿಲ್ಲೆಯಲ್ಲಿ ೧೫೦೦ ಟನ್‌ಗಳಷ್ಟು ಮಾತ್ರ ದೊರೆಯುತ್ತಿದೆ. ಉಳಿದುದನ್ನು ಹೊರ ಜಿಲ್ಲೆಗಳಿಂದ ತರಿಸಬೇಕಾಗಿದೆ. ಇದನ್ನು ಮಲಬಾರ ದತ್ತ ಕಡೆಯಿಂದ ತರಿಸಿಕೊಡುವ ಏರ್ಪಾಡುಮಾಡಬೇಕೆಂದು ಸೂಚಿಸಲಾಯಿತು. ತೆಂಗಿನಕಾಯಿಯ ಬೆಲೆಯನ್ನು ರಖಂ ಆಗಿ ಸಾವಿರಕ್ಕೆ ರೂ ೧೧೦ರಂತೆ, ಚಿಲ್ಲರೆಯಾಗಿ ಸಾವಿರಕ್ಕೆ ರೂ ೧೨೫ರಂತೆಯೂ ನಿರ್ಣಯಿಸುವುದು ವಿಹಿತವೆಂದೂ ಸೂಚಿಸಲಾಗಿದೆ.

ಶಾಲಾ ದಿನಾಚರಣೆ: ಸ್ಥಳೀಯ ಬಿ ಇ ಎಮ್ ಹೈಸ್ಕೂಲಿನ ವರ್ಧಂತ್ಯುತ್ಸವವು, ಇದೇ ತಾ ೨೫ನೇ ಶನಿವಾರ, ಜನಾಬ್ ಕೆ ಗುಲಾಮ ಮಹಮ್ಮದ್, ಬಿ ಎ, (ಜಿಲ್ಲಾ ಕಲೆಕ್ಟರರ ಪರ್ಸನಲ್ ಅಸಿಸ್ಟಂಟರು) ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಬೆಲ್ಲ: ಖಾಸಗಿ ವ್ಯಾಪಾರಸ್ಥರು ಬೆಲ್ಲವನ್ನು ಮಾರಾಟ ಮಾಡದಂತೆ ನಿರ್ಬಂಧ ವಿಧಿಸಲಾಗಿದೆ. ಜಿಲ್ಲಾ ಕಲೆಕ್ಟರರ ಅಪ್ಪಣೆಯಂತೆ, ಬೆಲ್ಲ ಸ್ಟಾಕ್ ಇರುವ ವ್ಯಾಪಾರಸ್ಥರು ಅಧಿಕಾರಿಗಳಿಗೆ ತಿಳಿಸಿ ಮಾರಾಟ ಮಾಡದೆ ಹಾಗೇ ಇರಿಸಬೇಕು. ತಮ್ಮಲ್ಲಿನ ದಾಸ್ತಾನಿನ ಪ್ರಮಾಣದ ಲೆಕ್ಕವನ್ನು ತಹಶೀಲ್ದಾರರಿಗೆ ಕೊಟ್ಟು ಅವರಿಂದ ರಶೀದಿ ಪಡೆದ ಅಂಗಡಿಗಾರರು ಸರಿಯಾದ ಲೆಕ್ಕಪತ್ರಗಳನ್ನಿಡಲು ಒಪ್ಪಿದರೆ ಪ್ರತಿಯೊಬ್ಬ ಸಂಸಾರಸ್ಥರಿಗೆ ಪಕ್ಷಕ್ಕೊಂದಾವರ್ತಿ ೪ ರಾತ್ತಲುಗಳಷ್ಟು ಬೆಲ್ಲವನ್ನು ನಿಯಂತ್ರಿತ ಬೆಲೆಗೆ ಮಾರಬಹುದು ಎಂದೂ, ಅದೇ ರೀತಿ ಬೆಲ್ಲ ತಯಾರಕರು ತಮ್ಮ ಉತ್ಪತ್ತಿಯ ಲೆಕ್ಕವನ್ನು ತಹಶೀಲ್ದಾರರಿಗೆ ಕೊಟ್ಟ ಮೇಲೆ ೧ ಮಣಕ್ಕೆ ಮೀರದಂತೆ ([illegible] ರಾತ್ತಲು) ನಿಯಂತ್ರಿತ ಬೆಲೆಗೆ ಯಾರಿಗೂ ಮಾರಬಹುದೆಂದು ಕಲೆಕ್ಟರರ ಪ್ರಕಟಣೆಯೊಂದು ತಿಳಿಸುತ್ತದೆ.

ಬೆಲ್ಲವನ್ನು ದಾಸ್ತಾನು ಮಾಡಿಡುವ ಅಧಿಕೃತ ವ್ಯಾಪಾರಿಗಳು ಅದನ್ನು ಹಾಳಾಗದಂತಹ ಮಡಿಕೆ, ಡಬ್ಬಿ ಯಾ ಇತರ ಸಂಗ್ರಹ ಪಾತ್ರೆಗಳಲ್ಲಿ ಇಡಬಹುದು. ಮತ್ತು ಮಾರಾಟ ಮಾಡುವಾಗ ಅಂತಹ ಸಂಗ್ರಹ ಪಾತ್ರೆಯ ಬೆಲೆಯನ್ನು ರೂ ಒಂದರಿಂತ ಹೆಚ್ಚಾಗಿ ಲೆಕ್ಕ ಹಿಡಿಯಬಾರದು. ಬೆಲ್ಲವನ್ನು ಮೂರು ನಮೂನೆಯವಾಗಿ ವಿಂಗಡಿಸಲಾಗಿವೆ. ಉತ್ತಮವಾದ ಗಟ್ಟಿ, ಉತ್ತಮವಾದ ಕೆಳು, ಮತ್ತು ಮಾನವ ಉಪಯೋಗಕ್ಕೆ ಬಾರದ ಎರಡು ನಮೂನೆಯ ನಿಕೃಷ್ಟ ಮಾದರಿಯದು. ಇದರಲ್ಲಿ ಕೊನೆಯದನ್ನು ಕೊಂಡುಕೊಳ್ಳಲು ಫೆಲಿಕ್ಸ್ ಪೈ ಡಿಸ್ಟಿಲರಿಗೆ ಅಧಿಕಾರ ಕೊಟ್ಟಿದೆ.

ಜಿಲ್ಲಾ ಸಮಿತಿ: ತಾ 28ರಂದು ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜಿಲ್ಲಾ ಸಮಿತಿಯ ಸಭೆ ಸೇರಿತ್ತು. ಇದರಲ್ಲಿ ಪುತ್ತೂರು ತಾಲೂಕಿಗೆ ರಾಗಿಯನ್ನೂ, ಕುಂದಾಪುರ ತಾಲೂಕಿಗೆ ಜೋಳದ ಹಿಟ್ಟನ್ನು ಕಳುಹಿಸಬೇಕೆಂದೂ ನಿರ್ಧರಿಸಲಾಯಿತು. ಕೈಮಗ್ಗಗಳಿಗೆ ನೂಲು ಸರಬರಾಯಿ ಮಾಡುವ ಹೊಸತೊಂದು ವ್ಯವಸ್ಥೆಯು ಸಭೆಯಲ್ಲಿ ವಿವರಿಸಲಾಯಿತು. ಜಿಲ್ಲಾ ಸಮಿತಿಗೆ ಕೆನರಾ ಚೇಂಬರ್ ಆಫ್ ಕೊಮರ್ಸಿನ ಕಡೆಯಿಂದ ಒಬ್ಬ, ಮತ್ತು ಮುಸ್ಲಿಂ ಪ್ರಜೆಗಳ ಕಡೆಯಿಂದೊಬ್ಬ ಹೀಗೆ ಇಬ್ಬರ್ ಸದಸ್ಯರನ್ನು ಸಮಿತಿಗೆ ಸೇರಿಸಿಕೊಳ್ಳಲಾಯಿತು. ಮಂಗಳೂರು ರೇಶನ್ ಕ್ಷೇತ್ರದಲ್ಲಿ ಬರುವ ತಿಂಗಳಿಂದ (ಫೆಬ್ರುವರಿಯಿಂದ) ಹಂಚಲ್ಪಡುವ ಸಕ್ಕರೆ ಪ್ರಮಾಣ ಹೀಗೆಂದು ನಿಷ್ಕರ್ಷಿಸಲಾಯಿತು. ಕಾರ್ಡು ಹೋಲ್ಡರರಿಗೆ 250 ಗೋಣಿ, ಹೋಟೇಲುಗಳಿಗೆ 250 ಗೋಣಿ; ಸೋಡಾ ಅಂಗಡಿಗಳಿಗೆ 24 ಗೋಣಿ, ಬಿಸ್ಕಿಟು ತಯಾರಕರಿಗೆ 16 ಗೋಣಿ, ಬ್ರೆಡ್ಡಿನವರಿಗೆ 60 ಗೋಣಿ, ಸ್ಪೆಶಲ್ ಪರ್ಮಿಟಿನ ಮೇಲೆ 47 ಗೋಣಿ, ಮಂಗಳೂರು ತಾಲೂಕಿಗೆ 142 ಗೋಣಿ. ಬೆಂಕಿಪೆಟ್ಟಿಗೆಯ ಸರಬರಾಯಿ ತೊಂದರೆಯನ್ನು ರಿವೆನ್ಯೂ ಬೋರ್ಡಿಗೆ ಅರಿಕೆಮಾಡಿಕೊಳ್ಳಲು ನಿರ್ಧರಿಸಲಾಯಿತು. ಅಕ್ಕಿಯ 2ನೇ ಕಂತಿನ ಅವಧಿ ಜನವರಿ 15ಕ್ಕೆ ಮುಂದರಿಸಿದ ಸಂಗತಿ ತಿಳಿಸಲಾಯಿತು. ಬೆಲ್ಲವನ್ನು ರಿಕ್ವಿಜಿಶನ್ ಮಾಡಲಾಗಿದೆ ಎಂದೂ, ಕೊಬ್ಬರಿ ಮತ್ತು ಎಣ್ಣೆಗಳನ್ನು ಮಲಬಾರ್ ಕೊಚ್ಚಿಗಳಿಂದ ತರಿಸುವ ಏರ್ಪಾಡು ಮಾಡಲಾಗಿದೆ ಎಂದೂ, ಕಲೆಕ್ಟರರು ತಿಳಿಸಿದರು. ಅವಲಕ್ಕಿಯನ್ನು ಕಾರ್ಡು ಹೋಲ್ಡರರಿಗೆ ಸ್ಟೋರುಗಳು ತಯಾರಿಸಿ ಹಂಚುವದು ಕಷ್ಟವಿದ್ದುದರಿಂದ ಈ ಸೂಚನೆ ಬಿದ್ದುಹೋಯಿತು.

ಚೇಂಬರ್ ಒಫ್ ಕೊಮರ್ಸ್: ಮದರಾಸಿನಲ್ಲಿ, ಆಂಧ್ರ ಚೇಂಬರ್ ಒಫ್ ಕೊಮರ್ಸಿನವರು ಇದೇ ತಾ ೩ರಲ್ಲಿ ಸೇರಲಿರುವ ವ್ಯಾಪಾರಿಗಳ ಪರಿಷತ್ತಿಗೆ ಕೆನರಾ ಚೇಂಬರ್ ಒಫ್ ಕೊಮರ್ಸಿನ "ನೂಲು ಮತ್ತು ಬಟ್ಟೆ"ಗಳ ವಿಭಾಗದಿಂದ ಶ್ರೀ ಆರ್ ಡಿ ಸೋಜ, ಶ್ರೀ ಆರ್ ಬಿ ವಸಂತ, ಶ್ರೀ ಕೆ ಬ್ರಹ್ಮಾನಂದ ಮತ್ತು ಜನಾಬ್ ಎಸ್ ಎಮ್ ಸಯ್ಯದ್ (ಬಟ್ಟೆ ವ್ಯಾಪಾರಿಗಳು) ಇವರು ಪ್ರತಿನಿಧಿಗಳಾಗಿ ಹೋಗ[illegible]ಂತೆ, ತಾ ೨೨-೧-೪೭ರಲ್ಲಿ ಶ್ರೀ ಆರ್ ಬಿ ವಸಂತರವರ ಅಧ್ಯಕ್ಷತೆಯಲ್ಲಿ ಕೆನರಾ ಚೇಂಬರ್ ಒಫ್ ಕೊಮರ್ಸಿನಲ್ಲಿ ಸೇರಿದ ಸಭೆಯಲ್ಲಿ ನಿರ್ಣಯವಾಗಿದೆ. ಬಟ್ಟೆ ವ್ಯಾಪಾರಿಗಳ ಕೈಯಿಂದ ಆ ವ್ಯಾಪಾರವನ್ನು ತೆಗೆದು ಸಹಕಾರ ಸಂಘಗಳ ವಶಕ್ಕೊಪ್ಪಿಸುವ ಮದರಾಸು ಸರಕಾರದ ಧೋರಣೆಯನ್ನು ಖಂಡಿಸಿ ಠರಾವಾಗಿದೆ. ಮತ್ತು ಈ ಖಂಡನೆಯ ಪ್ರದರ್ಶನವಾಗಿ ಇದೇ ತಾ ೬ನೇ ಗುರುವಾರ ಮಂಗಳೂರಿನ ಎಲ್ಲ ಜವುಳಿ ವ್ಯಾಪಾರಿಗಳು ಹರತಾಳ ಆಚರಿಸುವಂತೆಯೂ ನಿರ್ಣಯವಾಗಿದೆ.

ಸ್ವಾತಂತ್ರ್ಯ ದಿನ: ಜಿಲ್ಲೆಯ ಮೂಲೆ ಮೂಲೆಗಳಲ್ಲೊಂದಂತೆ ತಾ 26ರಂದು ಸ್ವಾತಂತ್ರ್ಯ ದಿನಾಚರಿಸಲಾಯಿತು. ಮಂಗಳೂರಿನಲ್ಲಿ ಅಂದು ಪ್ರಭಾತಫೇರಿ, ಸೂತಯಜ್ಞ ಸ್ಪರ್ಧೆಗಳೂ ಸಾಯಂಕಾಲದಲ್ಲಿ ಮೆರವಣಿಗೆಗಳಾಗಿ [illegible] ಮೈದಾನಿನಲ್ಲಿ ಸ್ವಾತಂತ್ರ್ಯ ಪ್ರತಿಜ್ಞೆ ಓದಲಾಯಿತು.

ಸತ್ಕಾರ. ಪ್ರಸಿದ್ಧ ಸಾಹಿತಿಗಳೂ [illegible]ದ ಕೆಲಸಗಾರರೂ ಆದ ಶ್ರೀ ಸಿದ್ಧವನಹಳ್ಳಿ ಕೃಷ್ಣಶರ್ಮರು ಇಲ್ಲಿಗೆ ಚಿತ್ತೈಸಿದಾಗ ಸ್ಥಳೀಯ ಯುವಕ ಮಂಡಳಿಯವರು ಕೆನರಾ ಹೈಸ್ಕೂಲಿನಲ್ಲಿ [illegible] ಗೌರವಾರ್ಥವಾಗಿ ಒಂದು ಕೂಟವನ್ನೇರ್ಪಡಿಸಿದರು. ಶ್ರೀ ಶರ್ಮರು ಏಕೀಕರಣ ಸಾಹಿತ್ಯ ಚಳವಳಿ ರಾಷ್ಟ್ರ ಆಂದೋಲನದ ಕುರಿತು ಸ್ಫೂರ್ತಿದಾಯಕ ಭಾಷಣವಿತ್ತರು.

ರಥೋತ್ಸವ: ಮಂಗಳೂರು ಶ್ರೀ ವೆಂಕಟ್ರಮಣ ದೇವಸ್ಥಾನದ ರಥೋತ್ಸವ ಸಮಾರಂಭಗಳು ವಿಜೃಂಭಣೆಯಿಂದ ಜರಗಿದವು. ತಾ 30ರಂದು ಅವಭೃತ ಸ್ನಾನವಾಗಿ ಮಂಗಲವಾಯಿತು. 4 ದಿನಗಳಲ್ಲಿ ಸಮಾರಾಧನೆಗಳಿದ್ದುವು.

ಜಿಲ್ಲಾ ಹರಿಜನ ಸೇವಕ ಸಂಘದ ಸಭೆಯು: ಕಾರ್ಯ ನಿರ್ವಾಹಕ ಸಭೆಯು ಸಂಘದ ಅಧ್ಯಕ್ಷರಾದ ಶ್ರೀ ಎ ಬಿ ಶೆಟ್ಟಿ, M. L. A ಯವರ ಅಧ್ಯಕ್ಷತೆಯಲ್ಲಿ ತಾರೀಕು 24-1-47ರಲ್ಲಿ ಥಿಯೊಸೋಫಿಕಲ್ ಲೋಜಿನಲ್ಲಿ ಜರಗಿತು. ನವಂಬರ ಮತ್ತು ದಶಂಬರ ತಿಂಗಳುಗಳ ಲೆಕ್ಕ ಮತ್ತು ವರದಿಗಳ ಮಂಜೂರಾತಿಯಾಗಿ ಬಂಟ್ವಾಳ ಶ್ರೀ ಪಣಿಕಿಲ ಶ್ರೀ ದೇವಿ ದೇವಸ್ಥಾನ, ಶ್ರೀ ವೆಂಕಟರಮಣ ದೇವಸ್ಥಾನ, ಶ್ರೀ ಮಹಾಲಿಂಗೇಶ್ವರ ದೇವಸ್ಥಾನ, ಪಾಣೆಮಂಗಳೂರಿನ ಶ್ರೀ ನರಿಮುಂಗೇಶ್ವರ ದೇವಸ್ಥಾನ, ಶ್ರೀ ವೀರ ವಿಠಲ ದೇವಸ್ಥಾನ, ನಂದಾವರದಲ್ಲಿ ಶ್ರೀ ಗಣಪತಿ ದೇವಸ್ಥಾನಗಳಲ್ಲಿ ಹರಿಜನರಿಗೆ ಪ್ರವೇಶ ಕೊಟ್ಟುದಕ್ಕಾಗಿ ಸದ್ರಿ ದೇವಸ್ಥಾನಗಳ ಮೊಕ್ತೇಸರರನ್ನೂ ಭಜಕರನ್ನೂ ಅಭಿನಂದಿಸುವ ನಿರ್ಣಯವಾಯಿತು. ಹರಿಜನರಿಗೆ ಧಾರಾಳ ಪ್ರವೇಶವಿತ್ತಿರುವ ಬಂಟ್ವಾಳದ ಹೋಟೇಲು ಮಾಲಕರುಗಳು ಅಭಿನಂದನೀಯರೆಂದೂ ಇದೇ ಮಾದರಿಯನ್ನು ಜಿಲ್ಲೆಯ ಎಲ್ಲೆಡೆಗಳಲ್ಲೂ ಅನುಸರಿಸುವರೆಂದೂ ವಿಶ್ವಾಸಪೂರ್ವಕ ಭಾವಿಸಲಾಗಿದೆ.

ದ ಕ ಜಿಲ್ಲಾ ರೈತರ, ಯಾ ಭೂಮ್ಯಾಲಿಕರ ಸಂಘ ದ ಕಾರ್ಯಕಾರೀ ಸಮಿತಿಯು ಜನವರಿ ತಾ 26ರಲ್ಲಿ ರಾವ್ ಬಹದೂರ್ ಕೆ ಟಿ ಆಳ್ವರ ಅಧ್ಯಕ್ಷತೆಯಲ್ಲಿ ಮಂಗಳೂರಿನಲ್ಲಿ ನೆರೆದು ಈ ಕೆಳಗಿನ ನಿರ್ಧಾರಗಳನ್ನು ಮಾಡಿದೆ (1) ಬೇಸಾಯೋತ್ಪತ್ತಿಯ ಮೇಲಿನ ತೆರಿಗೆಯ ಸಂಬಂಧವಾಗಿ ಸರಕಾರಕ್ಕೂ, ನ್ಯಾಯ ವಿಧಾಯಕ ಸಭಾ ಸದಸ್ಯರೆಲ್ಲರಿಗೂ ಒಪ್ಪಿಸಲು ಒಂದು ನಿವೇದನಾ ಪತ್ರ (Memorandum) ವನ್ನು ತಯಾರಿಸಿ ಮುಂದಿಡುವರೆ ಶ್ರೀಗಳಾದ ಎಮ್ ವೆಂಕಟೇಶ ಪೈ ಎನ್ ಕೃಷ್ಣ ಭಟ್ ನಾಗರಾಜಯ್ಯ ಮತ್ತು ಕೆ ಎಸ್ ಹೆಗ್ಡೆಯವರುಳ್ಳ ಒಂದು ಕಮಿಟಿಯನ್ನು ನೇಮಿಸಲಾಗುತ್ತದೆ. ಶ್ರೀ ಎಮ್ ವೆಂಕಟೇಶ ಪೈಗಳು ಈ ಕಮಿಟಿಯ ಕನ್ವೀನರರಾಗಿ ನೇಮಿಸಲ್ಪಟ್ಟಿರುತ್ತಾರೆ (2) ಚಕ್ಕಲುತನ ಮಸೂದೆಯ ಸಂಬಂಧವಾಗಿ ಸರಕಾರವು ತಯಾರಿಸಿರುವ ಪ್ರಶ್ನಾವಳಿಯ ಕುರಿತು ತಾಲೂಕು ಕಮಿಟಿಗಳು ತಂತಮ್ಮ ತಾಲೂಕುಗಳ ಪ್ರಚಲಿತ ಸ್ಥಿತಿಗತಿಗಳ ವಿಶೇಷ ನಮೂದನೆಯೊಂದಿಗೆ ಅಭಿಪ್ರಾಯ ಸಂಗ್ರಹಿಸಬೇಕೆಂದೂ [illegible]ತ್ತದನ್ನು ಸ್ಪೆಶಲ್ ಆಫೀಸರರಿಗೊಪ್ಪಿಸುವದಲ್ಲದೆ ಅದರ ಪ್ರತಿಯೊಂದನ್ನು ಈ ಸಂಘಕ್ಕೆ ಕಳಿಸಿಕೊಡಬೇಕೆಂದೂ ವಿಜ್ಞಾಪನೆಯಿದೆ (3) [illegible] ಕೊಳ್ಳಬೇಕಾಗಿರುವ ಸಣ್ಣ ಪುಟ್ಟ ನೀರಾವರಿ ಕೆಲಸಗಳ ಕುರಿತು ಒಂದಿರ [illegible]ಗಳನ್ನು ತುರಗತಿಯಾಗಿ ವಿಂಗಡಿಸಿ ಕಲೆಕ್ಟರರ ಮುಂದಿಡುವ ಅಧಿಕಾರವನ್ನು ಉಪಮಾರ್ಗದರ್ಶಿಗಳಿಗೀಯಲಾಗುತ್ತದೆ. ಚಕ್ಕಲುತನ ಮಸೂದೆ ಸಂಬಂಧದ ಸರಕಾರದ ಪ್ರಶ್ನಾವಳಿಯ ಪ್ರತಿಗಳು ಶ್ರೀ ಕೆ ಎಸ್ ಹೆಗ್ಡೆ ಎಡ್ವೋಕೇಟ್ ಮಂಗಳೂರು ಇವರ ಆಫೀಸಿನಲ್ಲಿ ದೊರೆಯುತ್ತವೆ)

ಪರಿಷತ್ತು: ಐದನೇ ದ ಕ ಜಿಲ್ಲಾ ಸಹಕಾರಿ ಪರಿಷತ್ತು ಇದೇ ತಾ 25ರಲ್ಲಿ ಮತ್ತು 26ರಲ್ಲಿ ಕೆನರಾ ಹೈಸ್ಕೂಲಿನಲ್ಲಿ ಶ್ರೀ ಎಮ್ ಎಮ್ ಕುಂಞ ರಾಮಮೆನನ್ ಬಿ ಎ ಬಿ ಎಲ್ (ಮಲಬಾರ ಜಿಲ್ಲಾ ಕೋಪರೇಟಿವ್ ಬೇಂಕಿನ ಅಧ್ಯಕ್ಷರು) ಇವರ ಅಧ್ಯಕ್ಷತೆಯಲ್ಲಿ ಜರಗಿತು. ರಾವ್ ಸಾಹೇಬ್ ಎಮ್ ಮೊಂತೆರೋರವರ ಸ್ವಾಗತ ಭಾಷಣ, ಕೃಷಿ-ಕೈಗಾರಿಕಾ ಪ್ರದರ್ಶನ, ಜಿಲ್ಲಾ ಸಹಕಾರಿ ಅಧಿವೇಶನ, ಮೊದಲಾದ ಕಾರ್ಯಕ್ರಮಗಳಿದ್ದುವು.

ಉಳ್ಳಾಲ

ಹುಲಿಕಾಟ: "ಇಲ್ಲಿಗೆ ಸಮೀಪವಿರುವ ಮೂಚಿಲ ಎಂಬಲ್ಲಿ, ಇದೇ ತಾ. ೨೫ರಲ್ಲಿ ಒಂದು ಹುಲಿಯು ಒಂದು ಕಬ್ಬಿನ ಹಿತ್ತಿಲನ್ನು ಪ್ರವೇಶಿಸಿ ಕುಳಿತಿದೆ ಎಂಬ ವಾರ್ತೆ ಹರಡಿ, ಊರ ಹಲವರು ಸೇರಿ ಆ ಕಡೆಗೆ ಹೋಗಿ ಹುಡುಕಲಾರಂಭಿಸಲು, ಅಡಗಿಕುಳಿತ ಹುಲಿಯು ಒಬ್ಬ ಮುದುಕನ ಮೇಲೆ ಹಾರಿ ಗಾಯಗೊಳಿಸಿತು. ಅಂದೇ ಸಾಯಂಕಾಲ ಒಬ್ಬ ಹುಡುಗನನ್ನೂ ಗಾಯಗೊಳಿಸಿದೆ. ಇವರಿಬ್ಬರೂ ಆಸ್ಪತ್ರೆಗೆ ಸಾಗಿಸಲ್ಪಟ್ಟಿರುವರು. ಜನರಲ್ಲಿ ಭೀತಿ ಹರಡಿದೆ. ಕೋವಿ ಲೈಸೆನ್ಸ್‌ದಾರರಾದರೂ ಇತ್ತ ಬಂದು, ಆ ಹುಲಿಯನ್ನು ಕೊಲ್ಲುವುದರಿಂದ ಗ್ರಾಮಕ್ಕೆ ಶಾಂತಿಯೊದಗಿಸಿದಂತಾಗುವುದು" ಎಂದು ಓರ್ವ ವಾರ್ತಾದಾರರು ಬರೆಯುತ್ತಾರೆ.

ವಿದ್ಯಾರ್ಥಿ ಕಾಂಗ್ರೆಸ್

ಪುತ್ತೂರು: ದ. ಕ ಜಿಲ್ಲಾ ವಿದ್ಯಾರ್ಥಿ ಕಾಂಗ್ರೆಸಿನ 8ನೇ ಸಮ್ಮೇಳನವು ಈ ಸಲ ಪುತ್ತೂರಲ್ಲಿ ಕಳೆದ ತಾ 25, 26ರಂದು ನೆರೆದಿತ್ತು. ಜಿಲ್ಲೆಯ ಬಹುತೇಕ ಎಲ್ಲಾ ತಾಲೂಕುಗಳಿಂದಲೂ, ಶಾಲಾಕೊಲೇಜುಗಳಿಂದಲೂ ವಿದ್ಯಾರ್ಥಿ ಪ್ರತಿನಿಧಿಗಳು ಭಾಗವಹಿಸಿದರು. ಶ್ಲಾಘನೀಯವೂ ಸುವ್ಯವಸ್ಥಿತವೂ ಆದ ವಸತಿ, ಉಪಹಾರ, ಭೋಜನ, ಕ್ರೀಡಾಸ್ಪರ್ಧೆ, ನೂಲುಸ್ಪರ್ಧೆ, ಭಾಷಣಸ್ಪರ್ಧೆ, ವಿವಿಧ ವಿನೋದಾವಳಿಗಳ ಏರ್ಪಾಡುಗಳಿದ್ದುವು. ಸಮ್ಮೇಳನದ ಎಲ್ಲಾ ಕಾರ್ಯಕಲಾಪಗಳಲ್ಲೂ ಮನರಂಜಕ ಗಂಭೀರತ್ವವಿತ್ತು.

ತಾ 25ರ ಬೆಳಗ್ಗಿನ ವಿಷಯ ನಿರ್ಣಾಯಕ ಸಭೆಗೆ ಮೈಸೂರು ವಿದ್ಯಾರ್ಥಿ ಮುಂದಾಳುಗಳಾದ ಶ್ರೀ ಶಿ ಶಂಕರಪ್ಪನವರು ಅಧ್ಯಕ್ಷತೆ ವಹಿಸಿದರು. ಸಾಯಂಕಾಲದ ಬಹಿರಂಗಾಧಿವೇಶನವನ್ನು ಮೈಸೂರ್ ಸಂಸ್ಥಾನ ಕಾಂಗ್ರೆಸಿನ ಕಾರ್ಯಕಾರಿ ಮಂಡಳಿ ಸದಸ್ಯರಾದ ಶ್ರೀ ಕುಮಾರನ್ ಅವರು ಉದ್ಘಾಟಿಸಿದರು. ಶ್ರೀ ಅಶೋಕ ಮೇಥಾ ಅವರು ಈ ಸಮಾರಂಭ ಜರಗಿಸಲಿದ್ದರು. ಆದರೆ ಅನಿವಾರ್ಯವಾಗಿ ಅವರಿಗೆ ಬರಲಿಕ್ಕಾಗಲಿಲ್ಲ. ಶ್ರೀ ಸಿದ್ಧವನಹಳ್ಳಿ ಕೃಷ್ಣಶರ್ಮರು ಅಧಿವೇಶನದ ಅಧ್ಯಕ್ಷಸ್ಥಾನ ವಹಿಸುವ ಮೊದಲು ಮೆರವಣಿಗೆಯಿಂದ ಕರೆತರಲ್ಪಟ್ಟರು.

ಬ್ರಿಟಿಷ್ ಮತ್ತಿತರ ಸಾಮ್ರಾಜ್ಯಶಾಹಿ ಧೋರಣೆಗಳನ್ನು ಖಂಡಿಸುವ, ಕೋಮುಕಲಹಗಾರರನ್ನು ಖಂಡಿಸುವ ಮತ್ತು ಅದಕ್ಕಾಗಿ ಖೇದ ಸೂಚಿಸುವ, ಘಟನಾ ಸಮಿತಿಗೆ ಯಶ ಕೋರುವ, ಈಗಿನ ಶಿಕ್ಷಣ ಪದ್ಧತಿಯನ್ನು ಗ್ರಾಮಪ್ರಧಾನವಾಗಿ ಪರಿವರ್ತಿಸಬೇಕೆಂದು ಒತ್ತಿಹೇಳುವ ಮೊದಲಾದ ಮಹತ್ವದ ಠರಾವುಗಳು ಸರ್ವಾನುಮತದಿಂದ ಮಂಜೂರಾದವು. ಮರುದಿವಸದ ನಿರ್ಣಯಕ ಸಭೆಯಲ್ಲೂ, ಬಹಿರಂಗಾಧಿವೇಶನದಲ್ಲೂ ಜಿಲ್ಲೆಗೂ ಶಿಕ್ಷಣಕ್ಕೂ ಸಂಬಂಧಪಟ್ಟ ಅನೇಕ ಸಮಸ್ಯೆಗಳ ಕುರಿತೂ, ಅಲ್ಲದೆ ಮದ್ರಾಸ್ ಸರಕಾರದ ವಸ್ತ್ರ ಧೋರಣೆಯನ್ನು ಸಮರ್ಥಿಸುವ ಠರಾವುಗಳಾದುವು.

ಈ ಎರಡು ದಿನಗಳಲ್ಲೂ ಅಧ್ಯಕ್ಷ ಶ್ರೀ ಸಿದ್ಧವನಹಳ್ಳಿ ಅವರು ತಮ್ಮ ಅಮೋಘವೂ, ಬೋಧಪರವೂ, ಸ್ಫೂರ್ತಿದಾಯಕವೂ ಆದ ಭಾಷಣದಲ್ಲಿ ವಿದ್ಯಾರ್ಥಿ ಚಟುವಟಿಕೆಗಳನ್ನು ಶ್ಲಾಘಿಸಿ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಚಟುವಟಿಕೆಗಳನ್ನು ಖಂಡಿಸಿ, ಗಾಂಧಿ ಮಾರ್ಗದ ಆದರ್ಶವನ್ನು ಚಿತ್ರವತ್ತಾಗಿ ವಿವರಿಸಿದರು. ಮಾತ್ರವಲ್ಲ ಯಶಸ್ವಿಯಾಗಿ ಕಾರ್ಯನಿರ್ವಹಿಸಲು ವಿದ್ಯಾರ್ಥಿಗಳಿಗೆ ಯೋಗ್ಯ ಸಲಹೆ ಸೂಚನೆಗಳನ್ನವರು ಕೊಟ್ಟರು. ಒಟ್ಟಿನಲ್ಲಿ ಇದೇ ಸಮ್ಮೇಳನವು ಅತ್ಯಂತ ಯಶಸ್ವಿಯಾಗಿ ಕೊನೆಗೊಂಡಿತೆಂದು ನಿಸ್ಸಂದೇಹವಾಗಿ ಹೇಳಬಹುದು.

(ಸ್ವಂತ ಭಾತ್ಮೀದಾರರಿಂದ)

ಶ್ರೀ ಪುರಂದರ ದಾಸರ ಆರಾಧನೆ: ಈ ತಿಂಗಳ 25 ಮತ್ತು 26ನೇ ತಾರೀಕಿಗೆ ಮದ್ರಾಸಿನ ಕರ್ನಾಟಕ ಮಿತ್ರ ಮಂಡಳಿಯವರು ಶ್ರೀ ಪುರಂದರ ದಾಸರ ದಿನವನ್ನು ಸರ್. ಎಮ್. ಸಿ. ಟಿ ಮುತ್ತಯ್ಯ ಚೆಟ್ಟಿಯಾರ್ ಹೈ. ಸ್ಕೂಲು, ಮದ್ರಾಸಿನಲ್ಲಿ ಆಚರಿಸುತ್ತಾರೆ.

ಇದು ಮಗುವಿನ ಚರ್ಮವನ್ನು ತಂಪಾಗಿಯೂ, ಮೃದುವಾಗಿಯೂ, ಇಡುವುದು.
ಮಕ್ಕಳಿಗ ಕುಟಿಕೂರ ಟಾಲ್ಕಮ್ ಪೌಡರನ್ನೇ ಉಪಯೋಗಿಸಿರಿ ಅಷ್ಟು ಸುಖಕರ– ಅಷ್ಟು ಚರ್ಮ ಮೃದುಕರ–
ಕುಟಿಕ್ಯೂರ ಟಾಲ್ಕಮ್ ಪೌಡರ್
CUTICURA TALCUM POWDER

ವಿದ್ಯಾರ್ಥಿಗಳು ದೇಶದ ಭಾವೀ ಮುಂದಾಳುಗಳು

ಕಿರಿಯರಿಗೆ ಹಿರಿಯರ ಆದರ್ಶ ಬೇಕು

ಶ್ರೀ ಸಿದ್ಧವನಹಳ್ಳಿ ಕೃಷ್ಣಶರ್ಮರ ಸಂದೇಶ

"ಇನ್‌ಕ್ವಿಲಾಬ್ ಜಿಂದಾಬಾದ್. ಜೀವನವನ್ನೊಗಿಸುಗೊಳಿಸುವ ಈ ಕ್ರಾಂತಿ ಶಕ್ತಿ ಅಂತಲಿ. ಅದು ವೃದ್ಧಿಯಾಗಲಿ. ಅದು ಚಿರಕಾಲ ಬದುಕಿರಲಿ." ಇದೊಂದು ಮಹಾ ಮಂತ್ರ. ಇಂದಿನ ನಮ್ಮ ದಿನನಿತ್ಯದ ಜೀವನದಲ್ಲಿ ಇದೊಂದು ಮಂತ್ರಘೋಷವಾಗಿದೆ. ಹಿಂದಿನವರು ಜೀವನ ಬೆಳಗಿಸಲು ಉಪಯೋಗಿಸುತ್ತಿದ್ದಂತೆ ಇಂದಿದು ಪರಾಧೀನತೆಯಿಂದ ರಸಹೀನವಾದ ಜೀವನದ ನಿರಾಶೆ ಹೋಗಲಾಡಿಸುವ ಮಂತ್ರ. ಪ್ರತಿಯೊಂದು ಚಳವಳದ ಸಭಾರಂಭ ಕಾಲದಲ್ಲಿ ಇದನ್ನು ಭಾವಾವೇಶದಿಂದ ಉಚ್ಚಾರ ಮಾಡುತ್ತೇವೆ. ಹೊಸ ಕಾಲ, ಹೊಸದೇಶ ರಚಿಸಬೇಕೆಂಬ ಮಹತ್ವಾಕಾಂಕ್ಷೆಯು ಉಕ್ಕಿ ಹರಿಯುವ ಹುಮ್ಮಸ್ಸಿನಿಂದುಂಟಾದ ಕ್ರಾಂತಿ ಸ್ಫೂರ್ತಿಯಿದು. ಹಿಂದಿನವು ಹಳೆ ರೀತಿಯವು, ನಮ್ಮದಿದು ಹೊಸ ರೀತಿಯದು. ಹಿಂದೆ ಪರಿಣಾಮಕಾರಿಯಾಗಿ ಉದ್ದೇಶ ಸಾಧಕವಾದಂತೆ ಇಂದಿದು ನಮ್ಮ ಹಾರೈಕೆಗಳನ್ನು ಪರಿಪೂರ್ಣಗೊಳಿಸೀತು. ಈ ಸ್ಫೂರ್ತಿ ಪ್ರವಾಹದೆದುರು ಅಡ್ಡವಾಗಿ ಬರುವ ಬಲವತ್ತರವಾದ ಅಧಿಕಾರ ವರ್ಗದ ಅದೆಂತಹ ತಡೆಯನ್ನೂ ಇದು ಝಾಡಿಸಿ ನುಚ್ಚುನೂರುಗೊಳಿಸದಿರದು.

ವೇದವ್ರತ ಬದ್ಧರಾಗಿದ್ದ ಜನತೆ ಕರ್ಮಜಡ್ಡರಾಗಿದ್ದ ಕಾಲದಲ್ಲಿ ಬುದ್ಧ ಭಗವಾನನಂತಹ ದಿವ್ಯ ಜ್ಯೋತಿರ್ಮೂರ್ತಿಯ ಮೌನ ಕ್ರಾಂತಿ ಅದು ಹೇಗೆ ನಡೆಯಿತು? ದೈವೀಕ ಪ್ರಭಾವವಂತನಾದ ಆ ಮಹಾತ್ಮನ ಸಂದೇಶ ಸಂಚಾರಕಾಲದಲ್ಲುತ್ಪನ್ನವಾದ ಆತ್ಮಸ್ಫೂರ್ತಿ ಕ್ರೂರ ಹಿಂಸಾತ್ಮಕ ವಾತಾವರಣದ ಕಾರ್ಗತ್ತಲನ್ನು ಹೇಗೆ ತೊಡೆದು ಹಾಕಿತು?

ಕ್ರಾಂತಿ ದೊಡ್ಡದೊಂದು ಪರಿವರ್ತನೆ. ಮುನ್ನಡೆವ ಜನತಾ ಚಳವಳದ ಚೈತನ್ಯವನ್ನು ಗಂಡಾಂತರದಿಂದ ತಿರುಗಿಸುವುದು ಧುರೀಣರ ಕರ್ತವ್ಯ. ಹಳೆಯ ಕೊಚ್ಚೆಯಿಂದ ನೂತನ ನೈರ್ಮಲ್ಯತ್ವಕ್ಕೆ ದಾಟಿ ಹೋಗುವುದು ಕ್ರಾಂತಿಯ ಅಂತಿಮ ಉದ್ದೇಶ. ನಮ್ಮ ಕಣ್ಣೆದುರಿಗೊಂದು ಅಪ್ರತಿಮ ಆದರ್ಶದ ಕ್ರಾಂತಿಯೊಂದುಂಟಾಗುತ್ತಿರುವುದನ್ನು ನೋಡುವುದಿಲ್ಲವೇ? ಸಮಾಜವು ತುಚ್ಛವೆಂದು ಪರಿಗಣಿಸಿ ಕಡೆಗಾಣಿಸಿದ ಅಸ್ಪೃಶ್ಯತೆಯ ಅಲಕ್ಷವೆಂಬ ಮೋಡದ ಗಾಢಾಂಧಕಾರವು ಶುಭ್ರ ತೇಜೋವಂತ ಪ್ರಕಾಶಕ್ಕೆಡೆಗೊಟ್ಟಿದೆ. ಮಹಾತ್ಮರ ಆತ್ಮಬಲದ ಪ್ರಚಂಡ ಪ್ರಭಾವಕ್ಕೆ ಸ್ಪೃಶ್ಯಾಸ್ಪೃಶ್ಯ ಭಾವನೆಯ ತಿಮಿರ ರಾಶಿ ಕಳೆದು ಹೋಗಿದೆ. ಪರಿವರ್ತನೆಗೊಂಡ ನಮ್ಮವರ ಹೃದಯಗಳು ಹರ್ಷ ಪ್ರಕಾಶದಿಂದ ಶೋಭಿಸುತ್ತಿವೆ. ಮುಂದರಿದಿರುವೆವೆಂದು ಹೆಮ್ಮೆ ಪಡುವ ಆಫ್ರಿಕ ಅಮೇರಿಕದ ಬಿಳಿಯರಲ್ಲಿ ವರ್ಣ ದರ್ಪದ ವಿಕಾರವು ಅವ್ಯಾಹತವಾಗಿ ಬೆಳೆಯುತ್ತಲಿದೆ.

ಕ್ರಾಂತಿ ಉದ್ರೇಕಪ್ರಧಾನವಾಗಬಾರದು. ನಮ್ಮ ಕ್ರಾಂತಿ ನಮ್ಮ ಸಂಸ್ಕೃತಿಗನುಗುಣವಾಗಿ ಮುನ್ನಡೆಯಬೇಕು. ಪರಕೀಯರ ಲಘು ಕೃತ್ರಿಮ ಅನುಕರಣವು ನಮಗೆ ಸಲ್ಲದು. ನಾವು ನಮ್ಮ ಜನಗುಣ ನಮ್ಮ ನೆಲಗುಣಗಳನ್ನು ಚೆನ್ನಾಗಿ ಅರಿಯಬೇಕು. ನಮ್ಮ ಸಂಸ್ಕೃತಿ ಇತಿಹಾಸಗಳಲ್ಲಿ ಓತಪ್ರೋತವಾಗಿ ಕಾಣುತ್ತಿರುವ ಒಂದೇ ಒಂದು ರಸವೆಂದರೆ ಶಾಂತಿ ರಸ. ಪರದೇಶ ಪ್ರಚಾರಕ್ಕೆ ಹೊರಡುವ ಕಾಲಕ್ಕೆ ಭಗವಾನ ಬುದ್ಧದೇವನು ಸಂದೇಶ ಸಾರುವ ಶಿಷ್ಯರಿಗೆ "ನೀವು ಹೋದಲ್ಲಿ ಜನರು ನಿಮಗೆ ಅಹಿತದ ನುಡಿಗಳನ್ನಾಡಿದರೇನೆನ್ನುವಿರಿ?" ಎಂದು ಪ್ರಶ್ನಿಸಲು "ಅಹಿತ ಮಾತಿಗೆ ಹಿತ-ವಚನವನ್ನೇ ಹೇಳುವೆವು" ಎಂದರಂತೆ. "ಹೊಡೆದರೆ?" "ಸ್ನೇಹ ಭಾವದಿಂದ 'ಬೇಡ' ಅದು ಹಿಂಸೆ ಎನ್ನುವೆವು" "ಕೊಂದರೆ?" "ಇದು ಬುದ್ಧನ ದಾರಿಯಲ್ಲವೆಂದೇ ಪ್ರಾಣ ಬಿಡುವೆವು" ಎಂದರಂತೆ. ಕೆಡುಕನ್ನು ಒಳಿತಿನಿಂದೆದುರಿಸುವ ಅದೆಂತಹ ಅಮೋಘ ಆದರ್ಶ! ಇದು ನಮ್ಮ ಪ್ರಾಚೀನರ ಮಾತ್ರವಲ್ಲ ಅರ್ವಾಚೀನರ ಇಂದಿನವರ ಧ್ಯೇಯವೂ ಆಗಿರಬೇಕು. ಹಿಂದಿನವರ ಉಜ್ವಲವಾದ ಜ್ಯೋತಿರ್ಮಾರ್ಗವನ್ನು ಬಿಟ್ಟುಬಿಡುವುದು ಅನವಶ್ಯಕ. ಹೊಸ ದೇಶ ಹೊಸ ಲೋಕಕ್ಕಾಗಿ ಕ್ರಾಂತಿ ಎಂಬುದರ ಅರ್ಥವೇನು? ವಿದ್ಯಾರ್ಥಿಗಳು ಇದನ್ನು ಸ್ಪಷ್ಟ ತಿಳಿಯಬೇಕು.

ಭಕ್ತರಿಗೆ ಪಾರಮಾರ್ಥಿಕ ಸಾಧಕವಾದ ಆಧ್ಯಾತ್ಮ ಗುರಿ ಅಸ್ಪಷ್ಟವಾಗಿರುವಂತೆ ನಮ್ಮ ದೇಶ ಭಕ್ತರಿಗೆ ನಾಡ ಪಾರಮಾರ್ಥ್ಯದ ಕುರಿತು ಮುಸುಕು ಮುಸುಕಾದ ಅಭಿಪ್ರಾಯವಿರಬಹುದು. ಗುರಿ ಅಸ್ಪಷ್ಟವಿರಬಾರದು. ನಮ್ಮ ಧ್ಯೇಯದ ಕುರಿತಾದ ಅಂತಜ್ಞಾನ ನಮಗೆ ನಿರ್ದಿಷ್ಟವಾಗಿರಬೇಕು. ಬ್ರಿಟಿಷರು ನಮ್ಮ ಒಡೆಯರೆಂಬ ಭಾವನೆ ಇಂದು ನಮ್ಮನ್ನು ಬಿಟ್ಟು ಹೋಗಿದೆ. ನಾವು ಕಂಡ ಸ್ವಾತಂತ್ರ್ಯದ ದಿಗ್ದರ್ಶನದ ಪೀಠಿಕಾ ರೂಪವಿದು. ಶಾಲೆಗೆ ಹೋಗುವುದು ನಿಮಿತ್ತ ಮಾತ್ರ – ಕಲಿಯುವಿಕೆಯು ಮುಖ್ಯವಾದ. ಸ್ವಾತಂತ್ರ್ಯ ಮಂದಿರಕ್ಕೆ ತಲ್ಪಿದಾಕ್ಷಣ ನಮ್ಮ ಕಾರ್ಯ ಮುಗಿಯಲಿಲ್ಲ. ಸ್ವಾತಂತ್ರ್ಯಗಳಿಸುವುದೆಂದರೆ ದುರ್ಗಮವಾದ ಕೋಟೆಯೊಂದರ ಪ್ರಾಕಾರವನ್ನೊಡೆದಂತೆ. ಒಡೆದು ಹಿಡಿದ ಕೋತಳದ ಸುವ್ಯವಸ್ಥೆ, ಶಾಂತಿ ನೆಮ್ಮದಿಯ ಪುನರಚನೆಗಾಗಿ ಗಹನವಾದ ಸಾಹಸದ ಅವಶ್ಯಕತೆ ಇದೆ. ಪಕ್ಷ ವಿಪಕ್ಷಗಳ ದ್ವಂದ್ವಗಳು ನಿಲ್ಲಬೇಕು. ಯಾದವೀ ಕಲಹದ ಅಂತ್ಯವಾಗಬೇಕು. ವರ್ಗ ಕಲಹ ಸೇವಕ ಸಂಘಗಳೊಳಗಿನ ಸ್ಪರ್ಧೆ, ಕೋಮು ಹೋರಾಟ, ಸ್ಪೃಶ್ಯಾಸ್ಪೃಶ್ಯ ಭೇದಾಭೇದಗಳು ನಮ್ಮ ರಾಜಕೀಯ ಶರೀರದಿಂದ ತೊಳೆದು ಹಾಕಬೇಕಾದ ಕಲ್ಮಶಾಂಶಗಳು.

ಮುಂಬರುವ ಕ್ರಾಂತಿಯ ಗುಣ ಲಕ್ಷಣಗಳ ಸ್ವರೂಪವನ್ನು ನಾವು ಚೆನ್ನಾಗಿ ಅರಿಯಲೆತ್ನಿಸಬೇಕು. ಇಂದೀ ವಿಚಾರವು ನಮ್ಮ ಮನಸ್ಸುಗಳನ್ನು ಚೆನ್ನಾಗಿ ಕದಡಿದೆ. ಕರ್ನಾಟಕದ ಮೂಲೆಯೊಂದರಲ್ಲಿರುವ ನಿಮಗೆ (ದ. ಕನ್ನಡಿಗರಿಗೆ) ಗದ್ದಲ ಕಡಿಮೆ. ಸಂಸ್ಥಾನಗಳಲ್ಲಿರುವವರ ಸಂಕಷ್ಟಗಳು ಕಠಿಣ ತರದವು. ವಿದ್ಯಾರ್ಥಿಗಳು ಉದ್ವೇಗವನ್ನು ಬಿಗಿಹಿಡಿಯಬೇಕು. ಹುರುಪಿನ ಜೀವನದ ಸದುಪಯೋಗ ಮಾಡಲು ಸ್ವಂಯಮವನ್ನು ಕಲಿಯಬೇಕು. ಇಲ್ಲವೆ ನಮ್ಮ ಕ್ರಾಂತಿ ನೀರು ಹೋಮವಾದೀತು.

ದೇಶ ವಿಚ್ಛೇದೀಕರಿಸುವುದು ನಮ್ಮ ಉದ್ದೇಶವಿರಬಾರದು. ಇಲ್ಲಿ ಈ ದೇಶದಲ್ಲಿ ನಾವೊಂದು ಮಾತನ್ನು ನೆನೆಯೋಣ. ನಮ್ಮ ಮಂತ್ರವನ್ನು ಪವಿತ್ರವಿರಿಸೋಣ. ಇದರಲ್ಲಿ ದ್ವೇಷ ವೈರತ್ವಕ್ಕೆಡೆಯಿಲ್ಲ. ಹಿಂದೆ ಯಾವ ರಾಜಕೀಯ ಮಹಾನಾಯಕನಾಗಲಿ ಇಲ್ಲವೆ ಮತಸಂಸ್ಥಾಪಕನಾಗಲಿ ಮಾಡದಂಥ ಅಸಿಧಾರಾವ್ರತವಿದು. ಹಿಂದೂ ಮುಸ್ಲಿಂ ಪಕ್ಷಗಳ ನ್ಯಾಯ ತೀರಿಸಲು ಬ್ರಿಟಿಷ ಕೋತಿ ನಡುವೆ ನಿಂತಿದೆ. ಅಲ್ಪಸಂಖ್ಯಾಕರು ಬಹುಸಂಖ್ಯಾಕರಿರುವಲ್ಲಿ ನೆಮ್ಮದಿಯಿಂದಿರಬೇಕಾದರೆ ದ್ವೇಷ ವೈಷಮ್ಯದ ದಳ್ಳುರಿಯ ನಡುವೆ ನಿಂತು ಅದನ್ನು ಎದುರಿಸಬೇಕಾಗಿದೆ. ಪ್ರತಿ ಕ್ಷಣ ಕ್ಷಣಕ್ಕೂ ಕಣ ಕಣಕ್ಕೂ ಅಹಿಂಸಾತ್ಮಕ ಪ್ರತಿರೋಧ ಸೂಚಿಸಬೇಕು. ನೆರೆಗಟ್ಟಿ ಜನತೆಯಲ್ಲಿ ಗಾಂಧೀಜಿ ಸ್ಫೂರ್ತಿ ತುಂಬಿಸುತ್ತಿದ್ದಾರೆ. ಕತ್ತಿಧಾರೆಯಿಂದ ಇದು ಸಾಧ್ಯವಿಲ್ಲ. ವ್ಯಕ್ತಿಯೇ ಮುಖ್ಯವೆನ್ನುವಲ್ಲಿ ಹಿಂದಿನ ಸಂತ ಶರಣರ ಪಥವಲ್ಲಿಂದ ಗಾಂಧೀಜಿ ಸಾಗುತ್ತಿರುವರು. ದರ್ಪೋದ್ಧತರನ್ನು ದರ್ಪರಹಿತರಾಗಿ ಮಾಡುವ — ಹುಲಿಯನ್ನು ಮೇಕೆಯನ್ನಾಗಿ ಮಾಡುವ ಕಾರ್ಯದ ಮಹಾ ಉದಾಹರಣೆಯನ್ನು ನಾವು ಮರೆಯಬಾರದು. ಎಲ್ಲಾ ಶಸ್ತ್ರಗಳೂ ನಮ್ಮಲ್ಲಿ ಹಾರಾಡಲು ಬಿಡುವ ಸೈರಣೆ ನಾವು ಕಲಿಯಬೇಕು.

ಕೆತ್ತನೆಯ ಕಟ್ಟಡ, ಕಟ್ಟುವ ಕಾರ್ಯದಲ್ಲಿ ಅದರ ಶಿಲ್ಪ ಚಾತುರ್ಯದ ಸ್ವಾಮಿತ್ವ ಪಡೆಯಬೇಕು. ರಾಜ್ಯ ಕಟ್ಟುವ ಜನ, ಘಟನೆ ರೂಪಿಸುವ ಜನ ಉತ್ತಮ ಶಿಲ್ಪಿಗಳಾಗಬೇಕು. ವಿದ್ಯಾರ್ಥಿಗಳು ಈ ಕಲೆಯ ಒಡೆತನಗಳಿಸಬೇಕು. ಅದಕ್ಕಾಗಿ ತನ್ನ ಕೈಗಳನ್ನಳವಡಿಸಬೇಕು.

ಇಂದು ಕೆಲವು ಸಂಸ್ಥೆಗಳು ಗುಟ್ಟಿನಲ್ಲಿ ಸಂಘಟನೆ ಮಾಡುತ್ತಿವೆ. ಈ ಚಿದಂಬರ ರಹಸ್ಯವೇಕೆ? ಜೀವನದ ಔನ್ನತ್ಯದಿಂದ ಇತರರನ್ನು ಪರಿವರ್ತಿಸುವುದು ಶ್ರೇಷ್ಠ ಸಂಘಟನೆ. ಕ್ಷಾತ್ರಸ್ಫೂರ್ತಿ ಸನ್ನಿವೇಶ ಪ್ರಧಾನವಾದುದು. ಗುಪ್ತ ಸಂಘಟನೆ ವಿಷವಾದೀತು. ಅದು ಶಾಪವೂ ಆಗಿ ಪರಿಣಮಿಸಬಹುದು.

ಏಕೀಕರಣ

ಏಕೀಕರಣ ಆಂದೋಲನವಿಂದು ದ್ವೇಷಮಯವಾದ ಚಳವಳಿಯಾಗುತ್ತಿದೆ. ನಮ್ಮ ನೆರೆಯವರಾದ ಆಂಧ್ರ, ಮಹಾರಾಷ್ಟ್ರ, ತಮಿಳರನ್ನು ದ್ವೇಷಿಸುವುದಕ್ಕೆ ಏಕೀಕರಣದ ಉತ್ಸಾಹ ಬೇಡ. ಉತ್ಸವವನ್ನು ಸಿಂಚನವನ್ನಾಗಿ ಮಾಡುವ ದ್ವೇಷಕ್ಕೆ ಗುರಿಯಾಗಿದ್ದೇವೆ. ಏಕೀಕರಣಕ್ಕಿಂತ ಪ್ರಾಂತೀಕರಣವು ಲೇಸು.

ಏಕೀಕರಣ ಪಾಳೆಯಗಾರಿಕೆಯ ಮಾದರಿಯದಾಗಬಹುದು. ಇದಕ್ಕಾಗಿ ಹಲವು ವೇದಿಕೆಗಳಿಂದ ಗವ ಗುಡಿಸಿ ದ್ವೇಷದ ಕಿಡಿ ಕಾರಲ್ಪಡುತ್ತವೆ. ನಾವು ಕಿರುಕುಳದಿಂದ ಗುರಿಮರೆ ಮಾಡಿಕೊಳ್ಳಬಾರದು. ಕಿರುಕುಳಕ್ಕೆ ಇದರಲ್ಲಿ ಆಸ್ಪದವಿಲ್ಲ. ಗಡಿಮೇರೆಗಳ ಕಿರಿ ಸಮಸ್ಯೆಯಲ್ಲಿ ಮಗ್ನರಾಗುವುದು, ಗಡಿ ಒಳಿಯ ಒಂದೆರಡು ಗ್ರಾಮಗಳನ್ನು ಕಳೆದು ಇಲ್ಲವೆ ಕಳೆದುಕೊಳ್ಳುವ ಕಳವಳದಲ್ಲಿ ಮುಳುಗಿರುವುದು ಬೇಡ.

ಯಾವುದಕ್ಕೂ ಮೊದಲು ಸ್ವಾತಂತ್ರ್ಯ ದೊರೆಯಬೇಕಾದುದು ಅತ್ಯಾವಶ್ಯಕ ಮತ್ತು ಅದ ಅನಿವಾರ್ಯ. ಅದಿಲ್ಲದೆ ಓದಿಯ ಶ್ರಮ ಗದ್ದಾಟದಿಂದೇನು? ಸಾಮಾಜಿಕ ರಾಜಕೀಯ, ಸಾಹಿತ್ಯಿಕ ಐಕ್ಯತೆಯ ಚಳವಳಿ ಸಾಗಬೇಕು. ಒಂದೇ ಭಾವನೆಯನ್ನು ಬೆಳೆಸಬೇಕು. ಬ್ರಿಟಿಷ ಭಾರತ ಸಂಸ್ಥಾನೇತರ ಭಾರತಗಳು ಒಂದೇ ಯೆಂದು ಭಾವಿಸಬೇಕು. ಅಂಥವರಲ್ಲಿ ಭಿನ್ನತೆ ಇಲ್ಲ. ಕೇರಳರಲ್ಲಿಲ್ಲ, ಆದರೆ ಈ ಹುಚ್ಚು ನಮಗೆ ಮಾತ್ರ ತಗಲಿರುವುದು ಖೇದಾಸ್ಪದ. ವ್ಯರ್ಥ ಸಂಘಟನೆಯ ಶಾಪಕ್ಕೆ ಸಿಲುಕದಿರೋಣ.

ಕನ್ನಡಕ್ಕೆ ನಾವು ಕೊಡುತ್ತಿರುವ ಅಲಕ್ಷ್ಯ ಇನ್ನೂ ಮುಂದುವರಿಯುತ್ತಿದೆ. ನಮ್ಮ ಕನ್ನಡ ವ್ಯಾಮೋಹ ನುಡಿಯಲ್ಲಿ ಮಾತ್ರ ಕೇಳುತ್ತಿದೆ. ಅದು ನಡೆಯಲ್ಲಿ ಕಂಡುಬರುತ್ತಿಲ್ಲ. ನಮ್ಮ ಧ್ಯೇಯ ಸಾಧನೆ ಹೆಚ್ಚು ನಿಷ್ಠೆಯಿಂದ ಸಾಗಬೇಕು. ವಿನಾಯಕನನ್ನು ಮಾಡುವ ಉದ್ದೇಶಕ್ಕೆ ಹೊರಟು ವಾನರನನ್ನು ರಚಿಸುವ ಫಲಿತಾಂಶವುಂಟಾಗಬಾರದು. ನಮ್ಮ ವ್ರತ ದೃಢವಾಗಬೇಕು.

ಈಗಿನ ವಿದ್ಯಾರ್ಥಿ ದೆಶೆಯ ಸನ್ನಿವೇಶ ಬೇರೆಯೇ: ಸಾಧಿಸಿದ ಕೆಲಸ ವ್ಯವಸ್ಥಿತವಾಗಿ ಅನುಭವಿಸಲೋಸುಗ ಸಾಧನೆಯ ಕಾಲದಲ್ಲಿ ಒಂದು ತರದ ಸ್ವಂಯಮ, ಒಂದು

(೭ನೇ ಪುಟಕ್ಕೆ ಮುಂದುವರಿದಿದೆ)

KANARA COMMERCIAL BANK LTD.

PUTTUR

H O Puttur] Estd 1920 [Branch Vittal

All kinds of Banking Business transacted.

Deposits - Current, Savings, Cumulative. Deposits are accepted

Fixed Deposits for periods of 3 months and above up to 24 months are accepted.

SEASON DEPOSITS

ARE Accepted up to 31-5-1947 Terms on application.

ವಿದ್ಯಾರ್ಥಿಗಳು ದೇಶದ ಭಾವೀ ಮುಂದಾಳುಗಳು

೬ನೇ ಪುಟದಿಂದ ಮುಂದುವರಿದುದು.

ಶ್ರದ್ಧಾಯುಕ್ತ ನಿಷ್ಠೆ ಅತ್ಯಾವಶ್ಯಕ. ಕ್ರಾಂತಿ ಫಲದ ತೇಜದ ಝಳಪಿಗೆ ನಮ್ಮ ಕಣ್ಣು ಕುರುಡಾಗಬಾರದು. ನಿಷ್ಠೆಯಿಂದ ಶಕ್ತಿಯೂ, ಸ್ವಂಯಮದಿಂದ ಜಾಗೃತಿಯೂ ಉಂಟಾಗುವುದು. ನಾವು ನಮ್ಮ ಗೇಲನ್ನು ಗಟ್ಟಿಮಾಡಿಕೊಳ್ಳಬೇಕಾದರೆ ಇವು ಅತೀ ಅವಶ್ಯಕ.

ಹಿರಿಯರ ಪರಿಶ್ರಮವು ಇತಿಹಾಸವಾಗುತ್ತಿದೆ. ನಮ್ಮ ಹೊಣೆಗಳ ಹೊರೆ ಹೆಚ್ಚಾಗುತ್ತಿದೆ. ನಾವು ಮಾತಿನ ಮಲ್ಲರಾಗದೆ ಕಾರ್ಯಗಲಿಗಳಾಗಿ ಸಿದ್ಧರಾಗೋಣ. ಮಹಾಕ್ರಾಂತಿಯು ಒದಗಲಿದೆ. ಪರಾಧೀನತೆಯಿಂದ ಮುಕ್ತಗೊಳ್ಳುವ ಹಂಬಲು ಹೂ ಬಿಡುತ್ತಿದೆ. ಹೂ ಬಿಟ್ಟು ಕಾಂಪ್ಷ ಹಣ್ಣಾಗುವುದು. ಪ್ರಥಮ ಫಲದಿಂದ ಬೀಜ ಕಿತ್ತು ಸರ್ವೋತ್ಕೃಷ್ಟವಾದ ನವೋದಯವನ್ನು ಸಾಧಿಸಬೇಕು. ಪರಾಧೀನತೆಯನ್ನೆಲ್ಲ ತೊಡದುಹಾಕಬೇಕು. ಈ ಪರಾಧೀನತೆ ಪರಕೀಯರದೇ ಮಾತ್ರವಲ್ಲ, ನಮ್ಮ ನಮ್ಮೊಳಗಿನ ಶೋಷಣೆಗೆ ತಡಗಟ್ಟಬೇಕು. ಯಾವ ಶಿಲ್ಪದ ಚಾಣಾಕ್ಷ್ಯದಿಂದದನ್ನು ಬಿಡಿಸಬೇಕೆಂದು ಪರ್ಯಾಲೋಚಿಸಬೇಕು. ಒಂದು ತೊಡಕು ಬಿಡಿಸುವಾಗ ಮತ್ತೊಂದರಲ್ಲಿ ಸಿಲುಕಬಾರದು.

ವಿದ್ಯಾರ್ಥಿಗಳು ತಮ್ಮ ಹೊಣೆ ಕಂಡು ಸಿದ್ಧರಾಗಬೇಕು. ನಾನಾ ವಿಧದ ಶಕ್ತಿಗಳನ್ನು ಎದುರಿಸಿ ಸ್ಪರ್ಧಿಸಿ ಸಾಹಸದಿಂದ ಮುಂದರಿಯಬೇಕು. ಹಿಂದಿನ ನಾಲಿಸ್ಯದ ನಾನ್ಯವನ್ನು ಬಿಟ್ಟು ಪರಿಶುದ್ಧ ಸ್ವರ್ಗಾಲ್ಯ ಪಥದಲ್ಲಿ ಮುಂದರಿಯಬೇಕು. ಹಿಂದಿನವರ ಹರಕೆ ಅದೆಷ್ಟು ಹಿಂದಾಗಿತ್ತೆಂದು ಒರೆ ಮೆಚ್ಚಿಗೆಯಲ್ಲಿ ದಾರಿಗೆಡದೆ ಹಿರಿಯರ ಸಹೆಯಿಂದ ಮುಂದರಿಯಬೇಕು. ಹಿರಿಯರು ಕಿರಿಯರೊಡನೆ ತಾತ್ಸಾರವಿಟ್ಟುಕೊಳ್ಳದೆ ಉದಾರ ವಿಶಾಲತೆ ತೋರಬೇಕು. ಹಿಂದಿನ ಜೀವನ ಮುಂದಿನದರ ಕೈ ಕೈ ಹಿಡಿದು ಸಾಗಬೇಕು. ಒಂದು ಹಿಂದೆ ಮತ್ತೊಂದು ಮುಂದು ಎಳೆಯುವಾರದು.

ರಾಜ ರಹಿತವಾದ ರಾಜ್ಯ ಬೇಕೆನ್ನುವ ಕೂಗು ಕೇಳುತ್ತಿದೆ. ಇದಕ್ಕೆ ಹಿರಿಯರು ಮೂಗು ಮುರಿದುಕೊಳ್ಳುವರು. ಮಾನವೀಯತೆಯ ಮೇಲೆ ದಾಳಿ ಇಡುವ ಈ ಮಹೋದ್ಯೋಗದ ಗರಣಗಾರಿಕೆಯು ನಿಸ್ಸಾರವಾದುದು.

ಶುಷ್ಕ ಕಲಹದಲ್ಲೂ ನಮ್ಮ ಹಿರಿಯಾಸ ವಿಶ್ವ ಕಲ್ಯಾಣವಲ್ಲವೆ? ನಮಗೆ ಶತ ಸ್ವಾತಂತ್ರ್ಯವು ಬೇಕು. ಕಲಾ ವೈಭವತೆಬೇಕು. ಎಳೆತನದಲ್ಲಿ ವಿದ್ಯಾರ್ಥಿಗಳಾಗಿರುವಾಗಲೇ ದುರಭಿಮಾನಗಳನ್ನು ತೊರೆದು, ರಸಮಯವಾದ ಜೀವನವನ್ನು ಮೆಲ್ಲಲು ಕಣ್ಣು ಕುರುಡುಗೊಳಿಸುವ ಕಾರ್ಯರಹಿತವಾದ ಘೋಷಣೆ ಕಾರ್ಯ ಬೇಡ—ಬರೀ ಕೂಗಿನಿಂದ ಕಾರ್ಯ ಸಾಗದು. ಕಾರ್ಯತತ್ಪರತೆಯೇ ಕ್ರಾಂತಿಯ ಅಡಿಗಲ್ಲು.

ಸಂಸ್ಕೃತಿಮಯವಾದ ಜೀವನ ಬೆಳೆಯಲಿ. ಸಾಹಿತ್ಯ ಜನಸಾಮಾನ್ಯವಾದುದಾಗಿರಬೇಕು. ನಿಕೃಷ್ಟ ಕೃತಿಗಳಿಗೆ ಮನಸೋಲದಿರೋಣ. ಶ್ರೇಷ್ಠವಾದುವುಗಳ ರುಚಿ ನೋಡಲು ಅವುಗಳ ರೂಪ ರೇಖೆ ಗುರುತಿಸಲು ಕಲಿಯೋಣ. ಸಾಹಿತ್ಯ ಕ್ರಾಂತಿಯು ಆಗಲಿ - ಸಾಹಿತ್ಯ ಕಲಾ ಚಟುವಟಿಕೆಗಳು ಒಂದು ಮುಖ್ಯಾಂಶವಾಗಬೇಕು. ಪರಕೀಯರದು ಅದೆಷ್ಟು ಮೋಹಕರವಾಗಿ ಕಂಡರೂ ಅದು ತ್ಯಾಜ್ಯವೆ. ಆದುದರಿಂದ ಅವಿಚಾರದ ವಿವೇಚನೆಯಿಲ್ಲದ ಅಂಧ ಅನುಕರಣೆಗೆ ಬಲಿಯಾಗದಿರೋಣ.

ಹಿಂಸುದ್ದಿ ಸಂಗ್ರಹ

ಜಗತ್ತಿನ ಜನಾಂಗಗಳನ್ನು ಮೂರು ವರ್ಣ ಪಂಗಡಗಳಾಗಿ ವಿಂಗಡಿಸುತ್ತಾರೆ— ಬಿಳಿ, ಕಪ್ಪು, ಮತ್ತು ಹಳದಿ. ಇದರಲ್ಲಿ ಕಂದು ಇಲ್ಲವೆ ಕಪ್ಪು ಬಣ್ಣವು ಒಳ್ಳೇ ಆರೋಗ್ಯದಾಯಕವಾದುದು. ಈ ಬಣ್ಣದವರು ಕಲೆ ಕೈಗಾರಿಕೆಗಳಲ್ಲಿ ತುಂಬಾ ನಿಪುಣರು. ನಿಗ್ರೊ ಮತ್ತು ದ್ರಾವಿಡ ಜನಾಂಗದವರು ಇದರ ನಿದರ್ಶನ. ಹಳದಿ ಜನಾಂಗದವರು ಶೀಘ್ರ ಕೋಪಿಗಳೂ, ತತ್ವಜ್ಞಾನಿ ಮನೋಭಾವದವರೂ ಆಗಿರುತ್ತಾರಂತೆ. ಚೀನಿಯರು ಇದಕ್ಕೆ ನಿದರ್ಶನ. ಬಿಳಿಯರು ಮೇಧಾವಿಗಳೂ ಕಾರ್ಯಕುಶಲರೂ ಆಗಿರುತ್ತಾರೆ. ಐರೋಪ್ಯ ಜನರು ಆರ್ಯರೂ ಇದರ ನಿದರ್ಶನ.

★

ಮುಸ್ಲಿಂ ಲೀಗಿನ ಪರವಾಗಿ ಅದರ ಉನ್ನತ ಶ್ರೇಣಿಯ ಮುಖಂಡರು ಪೋಲಿಸ್ ಕೈದಿಗೆ ಒಳಪಟ್ಟದ್ದು ಇದೇ ಮೊದಲನೆ ಸಲ. ಪಂಜಾಬದಲ್ಲಿ ಅವರ ರಾಷ್ಟ್ರೀಯ ದಳದ ಕಛೇರಿಗಳನ್ನು ಝಡ್ತಿ ಮಾಡುವಾಗ ಅವರ ಅಧಿಕಾರಿಗಳು ಕೆಲವರು ವಿರೋಧ ತೋರಿಸಿದರು. ಈ ವಿರೋಧಕ್ಕೂ ಕಾರಣ ವಿದೆ. ಕಛೇರಿಯೊಳಗೆ ಶಿರಸ್ತ್ರಾಣ ಶಕ್ತಿ ಪ್ರಿವಲಿಂದ ಶಸ್ತ್ರಾಯುಧಗಳಿದ್ದವು. ಲೀಗಿನವರ ತ್ಯಾಗ ಬಲಿದಾನದ ನಿದರ್ಶನವೂ ಇದೇ ಮೊದಲಿನದು.

★

ಪರ್ಷಿಯನ್ ಸರಕಾರವು ಇಷ್ಟು ಸಮಾತರ ವಾದಿಗಳ ಕೈಯಲ್ಲಿದೆ. ಸಮತೋಲವಾದ ತತ್ವವು ಸಾಮ್ರಾಜ್ಯಶಾಹಿ ಧೋರಣೆಗೆ ಸಂಪೂರ್ಣ ವಿರೋಧವಾದುದು. ಆದರೂ ಫ್ರಾನ್ಸು ತನ್ನ ಅಂಕಿತದಲ್ಲಿದ್ದ ವಸಾಹತುಗಳನ್ನು ಬಿಟ್ಟುಕೊಡಲು ಇಚ್ಛಿಸುವುದಿಲ್ಲ.

★

ನಮ್ಮ ದೇಶದಲ್ಲಿ ಆಹಾರ ಕ್ಷಾಮವುಂಟಾದುದು ಆಹಾರದ ಕಮ್ಮಿ ಬೆಳೆಯಿಂದಲ್ಲ. ಜನತೆ ಆಹಾರ ಹೆಚ್ಚಿಸ್ಕೊಂಡು ಶಿಸ್ತೆಲ ಪಂಚಿಸಿ ದುರ್ಗೆ ಇದಕ್ಕೆ ಕಾರಣ.

★



ರಿಯಾಯತಿ ಲಗ್ಗೇಜಿನಲ್ಲಿ ವ್ಯಾಪಾರಿ ಸಾಮಾನುಗಳ ನಿಷೇಧ

ಪಾಸೆಂಜರರ ಸೌಕರ್ಯಗಳ ಬಗ್ಗೆ ಒಂದು ಮಣ ಭಾರದ ಸಾಮಾನುಗಳನ್ನು ಫ್ರೀ ತೆಗೆದುಕೊಂಡುಹೋಗಬಹುದಾಗಿ ಮಾಡಿದ ರಿಯಾಯತಿ ಕಾರಣದಿಂದಾಗಿ ಪೆಸೆಂಜರರು ಅವರ ಸ್ವಂತ ಉಪಯೋಗದ ಸಾಮಾನುಗಳಲ್ಲದೆ ವ್ಯಾಪಾರಿ ಸಾಮಾನುಗಳನ್ನು ತಮ್ಮೊಡನೆ ಪ್ರಯಾಣ ಬೆಳೆಸುವ ಸ್ನೇಹಿತರ ಹೆಸರಿನಲ್ಲಿ ಈ ರಿಯಾಯತಿ ಮೂಲಕ ಧರ್ಮಾರ್ಥ ಸಾಗಿಸುವುದು ರೂಢಿಯಾಗಿದೆ.

ಮೋಟರ್ ವಾಹನಗಳು ರೈಲ್ವೆಗಾಡಿಗಳಂತಲ್ಲ. ಅವುಗಳಲ್ಲಿ ನಿಯಮಿತ ಭಾರಕ್ಕಿಂತ ಹೆಚ್ಚಿನ ಸಾಮಾನುಗಳನ್ನು ಒಯ್ಯುವುದು ಮೋಟರ್ ವಾಹನಕ್ಕೂ ಮತ್ತು ಪೆಸೆಂಜರರಿಗೂ ಅಪಾಯವಾಗಿದೆ. ಕಾರಣ ಬಸ್ಸುಗಳಲ್ಲಿ ಒಯ್ಯುವ ಸಾಮಾನುಗಳನ್ನು ಪೆಸೆಂಜರರ ಆವಶ್ಯಕತೆ ಬಗ್ಗೆನೇ ಮಿತಗೊಳಿಸುವುದು ಆಗತ್ಯವಿದೆ.

ವ್ಯಾಪಾರಿ ಸಾಮಾನುಗಳನ್ನು ಒಯ್ಯುವರೆ ವ್ಯಾಪಾರಿಗಳು

ಶೆಡ್ಯೂಲ್ ಟೈಮಿಗೆ ಕೊಂಡೊಯ್ಯುವ "ಲಕ್ಷ್ಮಿ" ಯಾ "ಸಿ. ಪಿ. ಸಿ." ಲೋರಿ ಸರ್ವಿಸುಗಳ ಸೌಖ್ಯರ್ಯವನ್ನು ಉಪಯೋಗಿಸಬೇಕಾಗಿ ಅಪೇಕ್ಷಿಸುತ್ತೇವೆ.

ವ್ಯಾಪಾರಿ ಸಾಮಾನುಗಳನ್ನು ಎಷ್ಟಕ್ಕೂ ಫ್ರೀ ಲಗ್ಗೇಜಿನ ಅಂಶದಲ್ಲಿ ಸೇರಿಸಿಕೊಳ್ಳಲಾಗುವುದಿಲ್ಲ. ಈ ಕುರಿತು ಮಾಹಿತಿಯನ್ನು ಬುಕ್ಕಿಂಗ್ ಕ್ಲಾರ್ಕರಿಂದ ಪಡಿಯಬಹುದು

JOINT MANAGERS,

The Combined Booking Agency, MANGALORE

The Joint Booking Office, KODIALBAIL

THE CANARA BANKING CORPORATION LTD.

(Incorporated in British India)

Estd: 1906.

Head Office: UDIPI, S. Kanara.

Authorised Capital	Rs. 25,00,000
Issued & Subscribed Capital	16,00,000
Paid up Capital	15,87,600
Reserves ...	4,60,000
Total Resources Around	Rs. 2½ Crores

Branches at Fort-Bombay, Madras, Bangalore, Coimbatore, Salem, Calicut, Hubli, Mysore, Cochin, Mangalore, Mercara etc., etc., etc.

BANKING BUSINESS OF EVERY DESCRIPTION TRANSACTED.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

1947 *Greetings For The New Year* 1947

To

ALL OUR POLICY HOLDERS,
MEDICAL EXAMINERS,
AGENTS AND WELLWISHERS,

And Best Wishes

FOR A PROSPEROUS YEAR TO COME

From

Kochikar Brothers, Limited.

Chief Agents for South India including Indian States & Bombay City

THE BOMBAY LIFE ASSURANCE COMPANY LIMITED

MADRAS, BANGALORE, TRIVANDRUM, MANGALORE, MADURA, CALICUT, BOMBAY, & UDIPI.

Bhuvanendra Products Limited,

KATAPADI S. Kanara.

'Bhuvanendra' Dashamoolarishta

Prepared with seletced ingredients under the supervision of the experienced staff.

A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs.

Depot: Maharata Galli, Hubli.

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ' ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಖು 7—2—1947 [ಸಂಚಿಕೆ 6]

ಹಿಂದೀ ರಾಜಕಾರಣ

ಲೇ: ಶ್ರೀ ಎಸ್. ಆರ್. ಕಲ್ಲೆ.

ಲೀಗಿನ ನಿರ್ಣಯದಿಂದ ವ್ಯಾಸರಾಯರಿಗೆ ಸಂಕಟ

ಲಂಡನಿನ ಮುತ್ಸದ್ದಿಗಳಿಗೆ ಬೇಸರ

ನರೇಂದ್ರ ಮಂಡಲವು ಪ್ರವೇಶ ಮಾಡುವದೇ?

ಕಳೆದ ತಿಂಗಳ ಕೊನೆಯಲ್ಲಿ ಲೀಗಿನ ಕಾರ್ಯ ಸಮಿತಿಯು ಕರಾಚಿಯಲ್ಲಿ ಸಭೆಕೂಡಿದಾಗ ಮಾಡಿದ ನಿರ್ಣಯವು ರಾಜಕೀಯ ದೃಷ್ಟಿಯಿಂದ ಅನುಚಿತ ವಾದುದು, ಮುತ್ಸದ್ದಿತನ ರಹಿತವಾದುದು ಮತ್ತು ಅದೂರದೃಷ್ಟಿಯದು ಎಂಬು ದರಲ್ಲಿ ಯಾವ ಸಂಶಯವೂ ಇಲ್ಲ. ಡಿಸೆಂಬರ ತಾ. ೬ಕ್ಕೆ ಬ್ರಿಟಿಷ ಸರಕಾರವು ಮಾಡಿದ ಸ್ಪಷ್ಟೀಕರಣದ ಸಂಬಂಧದಲ್ಲಿ ಜನವರಿ ತಾ. ೬ಕ್ಕೆ ಎ ಐ ಸಿ ಸಿ ಯು ಮಾಡಿದ ನಿರ್ಣಯದಿಂದ ಲೀಗು ಘಟನಾ ಸಮಿತಿಯ ಒಳಗೆ ಸೇರಿಕೊಂಡು ಭಾವೀ ಘಟನೆಯನ್ನು ರೂಪಿಸುವದರಲ್ಲಿ ನೆರವಾಗಬೇಕಾಗಿತ್ತು. ಆದರೆ ಮುಸ್ಲಿಂ ಲೀಗು ಹಾಗೆ ಮಾಡದೆ ವೃಥಾ ಬೆದರಿಕೆ ಹಾಕುವ ಹಾಗೂ ತಮ್ಮ ಘೋಷಣೆಯೇ ಸರಿಯೆಂದು ವಾದಿಸುವ ಹಟಮಾರಿತನಕ್ಕೆ ಇಳಿದಿದೆ.

ಸದ್ಯದ ಪರಿಸ್ಥಿತಿ

ಸದ್ಯದ ಪರಿಸ್ಥಿತಿಯನ್ನು ಅವಲೋಕಿಸು ವಾಗ ಮುಸ್ಲಿಂಲೀಗಿನ ಅನುಚಿತ ಹಾಗೂ ಅದೂರ ದೃಷ್ಟಿಯ ಅಸಹಕಾರ, ನರೇಂದ್ರರ ಸಂಧಿ ಸಾಧಕ ಮನೋವೃತ್ತಿ ಇವೆರಡ ಕಂಡು ಬರುತ್ತವೆ. ಇವೆರಡು ಹೊರಗುಳಿದ ಪಕ್ಷಗಳ ನಡುವೆ ಇನ್ನಿತರ ಎಲ್ಲ ಅಲ್ಪಸಂಖ್ಯಾಕ ಪ್ರತಿನಿಧಿಗಳನ್ನು ಒಳಗೊಂಡು ಘಟನಾಸಮಿತಿಯು ತನ್ನ ಕೆಲಸ ಸಾಧಿಸಲು ನಿರ್ಧರಿಸಿದೆ. ಅವರ ಮುಂದಿನ ಸಭೆಯು ಬರುವ ಎಪ್ರಿಲ್ ತಿಂಗಳ ಕೊನೆಗೆ ಕರೆಯಲಿದೆ. ತನ್ಮಧ್ಯೆ ಮುಂದೇನು ಮಾಡಬೇಕೆಂಬ ನಿರ್ಣಯಕ್ಕೆ ಲೀಗು ಬಂದಿಲ್ಲ. ಘಟನಾ ಸಮಿತಿಯನ್ನು ಬಹಿಷ್ಕರಿಸಿ ಲೀಗಿನ ಸದಸ್ಯರು ತಾತ್ಪೂರ್ತಿಕ ರಾಷ್ಟ್ರೀಯ ಸರಕಾರ ದೊಳಗೆ ಇರಲು ಬರುವುದಿಲ್ಲ. ಅವರು ಅಲ್ಲಿ ಉಳಿಯಬೇಕೆಂದಿದ್ದರೆ ಘಟನಾಸಮಿತಿಯಲ್ಲಿ ಸೇರಿ ಭಾಗವಹಿಸಬೇಕು. ಹಾಗೆ ಅವರು ಭಾಗವಹಿಸುವ ಲಕ್ಷಣಗಳು ತೋರಿ ಬರುವುದಿಲ್ಲ.

ನೇಹೆಲ್ಲರ ಪ್ರಯತ್ನ

ಲೀಗು ಒಂದೆಡೆ ಹಾಗೂ ನರೇಂದ್ರರನ್ನು ಇನ್ನೊಂದೆಡೆ ತಮ್ಮ ಬೆನ್ನ ಮೇಲೆ ಹಾಕಿಕೊಂಡ ಬ್ರಿಟಿಷ ಪ್ರತಿನಿಧಿ ವ್ಯಾಸರಾಯರಿಗೆ ಸದ್ಯದ ಪರಿಸ್ಥಿತಿಯು ತೀರ ದುಸ್ಸಹವಾಗಿದೆ. ಎ. ಐ. ಸಿ. ಸಿ. ನಿರ್ಣಯದಲ್ಲಿ ಬ್ರಿಟಿಷ ಸರಕಾರದ ಸ್ಪಷ್ಟೀಕರಣವನ್ನು ಒಪ್ಪಿಕೊಳ್ಳಲಾಗಿರುವದರಿಂದ ಹಾಗೂ ಪ್ರಾಂತಗಳಿಗೆ ಘಟನೆಯಲ್ಲಿ ಸೇರುವ ಅಥವಾ ಬಿಡುವ ಸ್ವಾತಂತ್ರ್ಯವಿರುವದರಿಂದ ಈ ವಿಷಯದಲ್ಲಿ ಲೀಗು ಹಟತೊಡದೆ 'ಬ' ಗುಂಪಿನಲ್ಲಿ ಸಿಕ್ಖರನ್ನು 'ಕ' ಗುಂಪಿನಲ್ಲಿ ಆಸ್ಸಾಮನ್ನು ಸಂತೈಸಿ ಅವೆರಡೂ ಗುಂಪುಗಳ ಅಲ್ಪಸಂಖ್ಯಾಕರ ವಿಶ್ವಾಸವನ್ನು ಗಳಿಸಲು ಯತ್ನಿಸಬೇಕಾಗಿತ್ತು. ಯಾವದನ್ನು ಮುಸ್ಲಿಂಲೀಗು 'ಅ' ಗುಂಪಿನಲ್ಲಿ ತನ್ನ ಮಟ್ಟಿಗೆ ಬಯಸುತ್ತದೊ ಅದನ್ನೇ 'ಬ' ಮತ್ತು 'ಕ' ಗುಂಪಿನಲ್ಲಿ ಇನ್ನಿತರ ಅಲ್ಪಸಂಖ್ಯಾಕರಿಗೆ ಕೂಡ ತನ್ನ ಯೋಗ್ಯವಾದ ಮಾರ್ಗದಲ್ಲಿ ಮುಂದಿಡಬೇಕಾಗಿತ್ತು. ಹಾಗೆ ಮಾಡದೆ ಯಾವದೇ ಭಾಗದ ಮೇಲೆ ತನ್ನ ಭಾಗದವರು ಘಟನಾಸಮಿತಿಯಲ್ಲಿ ಭಾಗವಹಿಸದಿದ್ದರೆ ಹಾಗೂ ಅವರು ಎಲ್ಲಿಯೆ ಇಲ್ಲವಾದರೆ ಉಳಿದವರು ರಚಿಸಿದ ಘಟನೆಯನ್ನು ಅವರ ಇಚ್ಛೆಗೆ ವಿರುದ್ಧವಾಗಿ ಹೇರಿಸಲು ಬರುವದಿಲ್ಲವೆಂಬ ಮಾತನ್ನು ಡಿಸಂಬರ ೬ರ ಸ್ಪಷ್ಟೀಕರಣದಿಂದ ತೆಗೆದುಕೊಂಡು ತನ್ನ ಅನುಕೂಲಕ್ಕಾಗಿ ಲೀಗು ಉಪಯೋಗಿಸಲು ನುಗ್ಗುವಂತೆ ತೋರುತ್ತದೆ. ಆದರ ಮೇಲೆ ತಾ. ೬ರ ಘೋಷಣೆಯಲ್ಲಿ ಅಲ್ಪಸಂಖ್ಯಾಕರ ವೃಥಾ ಹಟತೊಟ್ಟು ಒಂದು ದೇಶದ ಅಥವಾ ಜನಾಂಗದ ಉನ್ನತಿಗೆ ತಡೆ ಮಾಡುವದಿದ್ದರೆ ಆ ತಡೆಗೆ ಸ್ವಲ್ಪವೂ ಎಡೆ ಇಲ್ಲ. ಹಿಂದುಸ್ಥಾನವು ಅಖಂಡವಾಗಿ ಉಳಿಯುವಂಥ ಘಟನೆಯನ್ನು ಪ್ರಬಲ ರಾಜಕೀಯ ಪಕ್ಷಗಳು ಹೊಂದಿಕೊಂಡು ರಚಿಸಬೇಕೆಂದು ಸ್ಪಷ್ಟವಾಗಿದೆ. ಈ ಮಾತುಗಳನ್ನು ಮೀರಿ ಹೋಗಲು ಬ್ರಿಟಿಷ ಸರಕಾರಕ್ಕೆ ಬರುವಂತಿಲ್ಲ. ತನ್ನಿಮಿತ್ತ ವ್ಯಾಸರಾಯರು ಲೀಗು ಘಟನಾಸಮಿತಿಯಲ್ಲಿ ಸೇರುವಂತೆ ಹಾಗಾಗದಿದ್ದರೆ ನಡುಗಾಲಿ ಸರಕಾರದಿಂದ ಹೊರಗೆ ಬೀಳುವಂತೆ ಸಲಹೆಯನ್ನಿತ್ತಿರುವರೆಂದೂ ಆ ವಿಷಯದಲ್ಲಿ ಈಗ ಮಾತುಕತೆಗಳು ನಡದಿದೆಯೆಂದೂ ದಿಲ್ಲಿಯ ರಾಜಕಾರಣಿಗಳು ತರ್ಕಿಸಿರುವರು.

ಶ್ವೇತಭವನದಲ್ಲಿ

ಲೀಗಿನ ಮೊನ್ನೆಯ ನಿರ್ಣಯದಿಂದ ಶ್ವೇತಭವನದಲ್ಲಿ ಅತೀವ ಅಸಮಾಧಾನವುಂಟಾಗಿದೆ. ಲೀಗಿನ ಮುತ್ಸದ್ದಿತನವು ಇಷ್ಟು ಕೆಳಮಟ್ಟಕ್ಕೆ ಇಳಿಯಬಹುದೆಂದು ಬ್ರಿಟಿಷ ಮುತ್ಸದ್ದಿಗಳು ಲೆಕ್ಕಿಸಿರಲಿಲ್ಲ. ತಾವೆಷ್ಟು ಪಕ್ಷಪಾತವನ್ನು ಲೀಗಿಗೆ ತೋರಿಸಿದರೂ ಲೋಕಾಪವಾದಕ್ಕೆ ಗುರಿಯಾಗದೆ ಲೀಗನ್ನು ಎತ್ತಿಹಿಡಿಯಬೇಕೆಂಬುದು ಬ್ರಿಟಿಷ ಮನೋವೃತ್ತಿ. ಆ ದೃಷ್ಟಿಯಿಂದ ಶ್ವೇತಭವನವು ವೈಸರಾಯರೊಡನೆ ಮಾತುಕತೆ ನಡೆಸಿದೆಯೆಂದೂ ಘಟನಾ ಸಮಿತಿಯಲ್ಲಿ ಲೀಗು ಭಾಗವಹಿಸುವಂತಿಲ್ಲವಾದರೆ ಕೇಂದ್ರ ಸರಕಾರದಿಂದ ಹೊರಗೆ ಬೀಳಬೇಕಾದದ್ದು ಅನಿವಾರ್ಯವೆಂದೂ ಹೇಳಲಾಗಿದೆ.

ನರೇಂದ್ರರ ಮನೋವೃತ್ತಿ

ಲೀಗಿನ ಹಟದಿಂದ ಕಂಡು ಹಟವಾದಿತನದಿಂದ ತಮಗೆ ಲಾಭವಿದೆಯೆಂದು ನರೇಂದ್ರರು ತಿಳಿದುಕೊಂಡಂತೆ ತೋರುತ್ತದೆ. ಅಂತೇ ಕಳೆದ ತಿಂಗಳ ಕೊನೆಗೆ ನರೇಂದ್ರ ಮಂಡಲವು ಸ್ವೀಕರಿಸಿದ ಗೊತ್ತುವಳಿಯನ್ನು ಪರಿಶೀಲಿಸಿದರೂ ಬ್ರಿಟಿಷರು ಇಲ್ಲಿಂದ ಹೊರಟುಹೋದ ತರುವಾಯ ತಮ್ಮ ಕೈತಪ್ಪಿದ ಅಬಾಧಿತ ಅಧಿಕಾರವು ಪುನಃ ತಮ್ಮ ಕೈಸೇರುವದು. ತಾವು ಒಪ್ಪಿಗೆಯಿಂದ ಎಷ್ಟು ಅಧಿಕಾರ ಕೇಂದ್ರಕ್ಕೆ ಬಿಟ್ಟು ಕೊಡುವೆವೋ ಅಷ್ಟರ ಮಟ್ಟಿಗೆ ಕೇಂದ್ರ ಸರಕಾರದ ಸಂಬಂಧವಿದ್ದು ಮಾತನೆಯಾದಾಗ ತಮ್ಮ ಆಂತರಿಕ ವಿಷಯದಲ್ಲಿ ಹೊರಗಿನವರಿಗೆ ಸಂಬಂಧವಿಲ್ಲ. ಈ ಮೊದಲು ವಿಷಯಗಳನ್ನಿಟ್ಟುಕೊಂಡು ಸಂಧಾನದ ಮಾತುಕತೆ ನಡೆಸಲು ನರೇಂದ್ರ ಮಂಡಲವು ಸಂಧಾನ ಸಮಿತಿಯನ್ನು ನಿರ್ವಹಿಸಿದೆ. ಈ ಸಮಿತಿಯು ಮುಂದೆ ಮಾತುಕತೆ ನಡೆಯಿಸಲಿದೆಯೆಂದೂ ಆಗ್ನೇಯ ಭವನ ಮತ್ತು ವ್ಯಾಸರಾಯರು ನರೇಂದ್ರರಿಗೆ ಬುದ್ಧಿ ಹೇಳಿ ದಾರಿಗೆ ತರಬಹುದೆಂದೂ ಮುಂದೆ ನರೇಂದ್ರ ಭಾರತದ ಪ್ರತಿನಿಧಿಗಳು ಬೇಗನೆ ಘಟನಾ ಸಮಿತಿಯಲ್ಲಿ ಭಾಗವಹಿಸುವ ಸಂಭವವುಂಟೆಂದೂ ದಿಲ್ಲಿಯ ಹಾಗೂ ಶ್ವೇತ ಭವನದ ನಿಕಟ ಪರಿಚಯವುಳ್ಳ ರಾಜಕಾರಣಿಗಳ ತರ್ಕವಿದೆ. ಇಂಥ ಸಂದರ್ಭದಲ್ಲಿ ನರೇಂದ್ರರು ತಾವು ಪ್ರಜೆಗಳ ಧರ್ಮದರ್ಶಿಗಳೆಂದು ತಿಳಿದು ಘಟನಾ ಸಮಿತಿಗೆ ತಮ್ಮ ಭಾಗಗಳಿಂದ ಪ್ರಜೆಗಳನ್ನೇ ಪ್ರತಿನಿಧಿಗಳನ್ನಾಗಿ ಕಳುಹಿ ಭಾವೀ ರಾಜ್ಯ ಘಟನೆಯನ್ನು ರೂಪಗೊಳಿಸಲು ನೆರವಾಗುವದು ಉಚಿತ ಹಾಗೂ ಶ್ರೇಯಸ್ಕರವಾದುದು ಇದೆ.

THE CANARA BANKING CORPORATION LTD.
(Incorporated in British India)
Estd: 1906.
Head Office: UDIPI, S. Kanara.

Authorised Capital	Rs. 25,00,000
Issued & Subscribed Capital	16,00,000
Paid up Capital	15,87,600
Reserves ...	4,60,000
Total Resources Around	Rs 2½ Crores

Branches at Fort-Bombay, Madras, Bangalore, Coimbatore, Salem, Calicut, Hubli, Mysore, Cochin, Mangalore, Mercara etc., etc., etc.
BANKING BUSINESS OF EVERY DESCRIPTION TRANSACTED.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಚಂತ್ರಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.
ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾಖೆ ಕಂಪೆನಿಯಲ್ಲಿ ದೊರೆಯುವುದು.

1947 *Greetings For The New Year* 1947

To

ALL OUR POLICY HOLDERS,
MEDICAL EXAMINERS,
AGENTS AND WELLWISHERS,

And Best Wishes

FOR A PROSPEROUS YEAR TO COME

From

Kochikar Brothers, Limited.

Chief Agents for South India including Indian States & Bombay City

THE BOMBAY LIFE ASSURANCE COMPANY LIMITED

MADRAS, BANGALORE, TRIVANDRUM, MANGALORE, MADURA, CALICUT, BOMBAY, & UDIPI.

Bhuvanendra Products Limited,

KATAPADI S. Kanara.

'Bhuvanendra'
Dashamoolarishta

Prepared with seletced ingredients under the supervision of the experienced staff.

A specific for the puerperal diseases and also valuable to puerperal women as tonic increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'
ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ ಮರಾಠಗಲ್ಲಿ, ಹುಬ್ಬಳ್ಳಿ.

'ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್'

ಕಟಪಾಡಿ ದ. ಕನ್ನಡ

ಡೋಂಗರೆ
ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಕು: 7—2—1947 [ಸಂಚಿಕೆ 6]

ಹಿಂದೀ ರಾಜಕಾರಣ

ಲೇ: ಶ್ರೀ ಎನ್. ಆರ್. ಕಲ್ಲೆ.

ಲೀಗಿನ ನಿರ್ಣಯದಿಂದ ವ್ಯಾಸರಾಯರಿಗೆ ಸಂಕಟ

ಲಂಡನಿನ ಮುತ್ಸದ್ದಿಗಳಿಗೆ ಬೇಸರ

ನರೇಂದ್ರ ಮಂಡಲವು ಪ್ರವೇಶ ಮಾಡುವದೇ?

ಕಳೆದ ತಿಂಗಳ ಕೊನೆಯಲ್ಲಿ ಲೀಗಿನ ಕಾರ್ಯ ಸಮಿತಿಯು ಕರಾಚಿಯಲ್ಲಿ ಸಭೆಕೂಡಿದಾಗ ಮಾಡಿದ ನಿರ್ಣಯವು ರಾಜಕೀಯ ದೃಷ್ಟಿಯಿಂದ ಅನುಚಿತವಾದುದು, ಮುತ್ಸದ್ದಿತನ ರಹಿತವಾದುದು ಮತ್ತು ಅದೂರದೃಷ್ಟಿಯದು ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಡಿಸೆಂಬರ ತಾ ೬ಕ್ಕೆ ಬ್ರಿಟಿಷ ಸರಕಾರವು ಮಾಡಿದ ಸ್ಪಷ್ಟೀಕರಣದ ಸಂಬಂಧದಲ್ಲಿ ಜನವರಿ ತಾ, ೬ಕ್ಕೆ ಎ ಐ ಸಿ ಸಿ ಯು ಮಾಡಿದ ನಿರ್ಣಯದಿಂದ ಲೀಗು ಘಟನಾ ಸಮಿತಿಯು ಒಳಗೆ ಸೇರಿಕೊಂಡು ಭಾವೀ ಘಟನೆಯನ್ನು ರೂಪಿಸುವದರಲ್ಲಿ ನೆರವಾಗಬೇಕಾಗಿತ್ತು. ಆದರೆ ಮುಸ್ಲಿಂ ಲೀಗು ಹಾಗೆ ಮಾಡದ ವೃಥಾ ಬೆದರಿಕೆ ಹಾಕುವ ಹಾಗೂ ತಮ್ಮ ಧೋರಣೆಯೇ ಸರಿಯೆಂದು ವಾದಿಸುವ ಹಟಮಾರಿತನಕ್ಕೆ ಇಳಿದಿದೆ.

ಸದ್ಯದ ಪರಿಸ್ಥಿತಿ

ಸದ್ಯದ ಪರಿಸ್ಥಿತಿಯನ್ನು ಅವಲೋಕಿಸುವಾಗ ಮುಸ್ಲಿಂಲೀಗಿನ ಅನುಚಿತ ಹಾಗೂ ಅದೂರ ದೃಷ್ಟಿಯ ಅಸಹಕಾರ, ನರೇಂದ್ರ ಸಂಧಿ ಸಾಧಕ ಮನೋವೃತ್ತಿ ಇವೆರಡು ಕಂಡು ಬರುತ್ತವೆ. ಇವೆರಡು ಹೊರಗುಳಿದ ಪಕ್ಷಗಳ ನಡುವೆ ಇನ್ನಿತರ ಎಲ್ಲ ಅಲ್ಪಸಂಖ್ಯಾಕ ಪ್ರತಿನಿಧಿಗಳನ್ನು ಒಳಗೊಂಡು ಘಟನಾಸಮಿತಿಯು ತನ್ನ ಕೆಲಸ ಸಾಧಿಸಲು ನಿರ್ಧರಿಸಿದೆ. ಅವರ ಮುಂದಿನ ಸಭೆಯು ಬರುವ ಎಪ್ರಿಲ್ ತಿಂಗಳ ಕೊನೆಗೆ ಕೂಡಲಿದೆ. ಸನ್ನಿವೇಶವು ಹೀಗಿದ್ದು ಮುಂದೇನು ಮಾಡಬೇಕು. ಈ ನಿರ್ಣಯಕ್ಕೆ ಲೀಗು ಬಂದಿಲ್ಲ. ಘಟನಾ ಸಮಿತಿಯನ್ನು ಬಹಿಷ್ಕರಿಸಿ ಲೀಗಿನ ಸದಸ್ಯರು ತಾತ್ಪೂರ್ತಿಕ ರಾಷ್ಟ್ರೀಯ ಸರಕಾರದೊಳಗೆ ಇರಲು ಬರುವುದಿಲ್ಲ. ಅಥವಾ ಅಲ್ಲಿ ಉಳಿಯಬೇಕೆಂದಿದ್ದರೆ ಘಟನಾಸಮಿತಿಯಲ್ಲಿ ಸೇರಿ ಭಾಗವಹಿಸಬೇಕು. ಹಾಗೆ ಕೇಳಿ ಭಾಗವಹಿಸುವ ಲಕ್ಷಣಗಳು ತೋರಿ ಬರುವುದಿಲ್ಲ.

ವೇವೆಲ್ಲರ ಪ್ರಯತ್ನ

ಲೀಗು ಒಂದೆಡೆ ಹಾಗೂ ನರೇಂದ್ರರನ್ನು ಇನ್ನೊಂದೆಡೆ ತಮ್ಮ ಬೆನ್ನ ಮೇಲೆ ಹಾಕಿಕೊಂಡ ಬ್ರಿಟಿಷ ಪ್ರತಿನಿಧಿ ವ್ಯಾಸರಾಯರಿಗೆ ಸದ್ಯದ ಪರಿಸ್ಥಿತಿಯು ತೀರ ದುಸ್ಸಹವಾಗಿದೆ. ಎ ಆಯ್ ಸಿ ಸಿ ನಿರ್ಣಯದಲ್ಲಿ ಬ್ರಿಟಿಷ ಸರಕಾರದ ಸ್ಪಷ್ಟೀಕರಣವನ್ನು ಒಪ್ಪಿಕೊಳ್ಳಲಾಗಿರುವದರಿಂದ ಹಾಗೂ ಪ್ರಾಂತಗಳಿಗೆ ಘಟನೆಯಲ್ಲಿ ಸೇರುವ ಅಥವಾ ಬಿಡುವ ಸ್ವಾತಂತ್ರ್ಯವಿರುವದರಿಂದ ಈ ವಿಷಯದಲ್ಲಿ ಲೀಗು ಹಟತೊಡದೆ 'ಬಿ' ಗುಂಪಿನಲ್ಲಿ ಸೀಖ್ಖರನ್ನು 'ಸಿ' ಗುಂಪಿನಲ್ಲಿ ಆಸ್ಸಾಮನ್ನು ಸಂತೈಸಿ ಅವೆರಡೂ ಗುಂಪುಗಳ ಅಲ್ಪಸಂಖ್ಯಾಕರ ವಿಶ್ವಾಸವನ್ನು ಗಳಿಸಲು ಯತ್ನಿಸಬೇಕಾಗಿತ್ತು. ಯಾವದನ್ನು ಮುಸ್ಲಿಂಲೀಗು 'ಅ' ಗುಂಪಿನಲ್ಲಿ ತನ್ನ ಮಟ್ಟಿಗೆ ಬಯಸುತ್ತದೊ ಅದನ್ನೇ 'ಬಿ' ಮತ್ತು 'ಸಿ' ಗುಂಪಿನಲ್ಲಿ ಇನ್ನಿತರ ಅಲ್ಪಸಂಖ್ಯಾತರಿಗೆ ಕೊಡಲು ತಾನು ಯೋಗ್ಯವಾದ ~~ಮಾರ್ಗದಲ್ಲಿ~~ ಮಾರ್ಗದಲ್ಲಿ ಮುಂದಡಿಯಿಡಬೇಕಾಗಿತ್ತು. ಹಾಗೆ ಮಾಡದೆ ಯಾವದೇ ಭಾಗದ ಮೇಲೆ ತ ಭಾಗವಹಿಸದೆ ಘಟನಾಸಮಿತಿಯಲ್ಲಿ ಭಾಗವಹಿಸದಿದ್ದರೆ ಹಾಗೂ ಅದರ ಎಲ್ಲೆಗೆ ಎಲ್ಲವಾದರೆ ಉಳಿದವರು ರಚಿಸಿದ ಘಟನೆಯನ್ನು ಅದರ ಇಚ್ಛೆಗೆ ವಿರುದ್ಧವಾಗಿ ಹೇರಿಸಲು ಬರುವದಿಲ್ಲವೆಂಬ ಮಾತನ್ನು ಡಿಸಂಬರ ೬ರ ಸ್ಪಷ್ಟೀಕರಣದಿಂದ ತೆಗೆದುಕೊಂಡು ತನ್ನ ಅನುಕೂಲತೆಗಾಗಿ ಲೀಗು ಉಪಯೋಗಿಸಲು ಸಿದ್ಧವಾದಂತೆ ತೋರುತ್ತದೆ. ಆದರೆ ಮೇ ೧೬ರ ಘೋಷಣೆಯಲ್ಲಿ ಅಲ್ಪಸಂಖ್ಯಾಕರ ವೃಥಾ ಹಟತೊಟ್ಟು ಒಂದು ದೇಶದ ಅಥವಾ ಜನಾಂಗದ ಉನ್ನತಿಗೆ ತಡೆ ಮಾಡುವದಿದ್ದರೆ ಆ ತಡೆಗೆ ಸ್ವಲ್ಪವೂ ಎಡೆ ಇಲ್ಲ. ಹಿಂದುಸ್ಥಾನವು ಅಖಂಡವಾಗಿ ಉಳಿಯುವಂಥ ಘಟನೆಯನ್ನು ಪ್ರಬಲ ರಾಜಕೀಯ ಪಕ್ಷಗಳು ಹೊಂದಿಕೊಂಡು ರಚಿಸಬೇಕೆಂದು ಸ್ಪಷ್ಟವಾಗಿದೆ. ಈ ಮಾತುಗಳನ್ನು ಮೀರಿ ಹೋಗಲು ಬ್ರಿಟಿಷ್ ಸರಕಾರಕ್ಕೆ ಬರುವಂತಿಲ್ಲ. ತನ್ನಷ್ಟಕ್ಕೆ ತ್ಯಾಗರಾಯರು ಲೀಗು ಘಟನಾಸಮಿತಿಯಲ್ಲಿ ಸೇರುವಂತೆ ಹಾಗಾಗದಿದ್ದರೆ ಸದ್ಯದ ಸರಕಾರದಿಂದ ಹೊರಗೆ ಬೀಳುವಂತೆ ಸಲಹೆಯನ್ನಿತ್ತಿರುವರೆಂದೂ ಈ ವಿಷಯದಲ್ಲಿ ಈಗ ಮಾತುಕತೆಗಳು ನಡದಿದೆಯೆಂದೂ ದಿಲ್ಲಿಯ ರಾಜಕಾರಣಗಳು ತರ್ಕಿಸುವರು.

ಶ್ವೇತಭವನದಲ್ಲಿ

ಲೀಗಿನ ಮೊನ್ನೆಯ ನಿರ್ಣಯದಿಂದ ಶ್ವೇತಭವನದಲ್ಲಿ ತೀವ್ರ ಜಿಗುಪ್ಸೆಯುಂಟಾಗಿದೆ. ಲೀಗಿನ ಮುತ್ಸದ್ದಿತನವು ಇಷ್ಟು ಕೆಳಮಟ್ಟಕ್ಕೆ ಇಳಿಯಬಹುದೆಂದು ಬ್ರಿಟಿಷ ಮುತ್ಸದ್ದಿಗಳು ಲೆಕ್ಕಿಸಿರಲಿಲ್ಲ. ತಾವೆಷ್ಟು ಪಕ್ಷಪಾತವನ್ನು ಲೀಗಿಗೆ ತೋರಿಸಿದರೂ ಲೋಕಾಪವಾದಕ್ಕೆ ಗುರಿಯಾಗದೆ ಲೀಗನ್ನು ಎತ್ತಿಹಿಡಿಯಬೇಕೆಂಬುದು ಬ್ರಿಟಿಷ ಮನೋವೃತ್ತಿ. ಆ ದೃಷ್ಟಿಯಿಂದ ಶ್ವೇತಭವನವು ವೈಸರಾಯರೊಡನೆ ಮಾತುಕತೆ ನಡೆಸಿದೆಯೆಂದೂ ಘಟನಾ ಸಮಿತಿಯಲ್ಲಿ ಲೀಗು ಭಾಗವಹಿಸುವಂತಿಲ್ಲವಾದರೆ ಕೇಂದ್ರ ಸರಕಾರದಿಂದ ಹೊರಗೆ ಬೀಳಬೇಕಾದದ್ದು ಅನಿವಾರ್ಯವೆಂದೂ ಹೇಳಲಾಗಿದೆ.

ನರೇಂದ್ರರ ಮನೋವೃತ್ತಿ

ಲೀಗಿನ ಹಟವನ್ನು ಕಂಡು ಘಟನಾಸಮಿತಿಯ ಸದಸ್ಯರ ತಮಗೆ ಲಾಭವಿದೆಯೆಂದು ನರೇಂದ್ರರು ತಿಳಿದುಕೊಂಡಂತೆ ತೋರುತ್ತದೆ. ಅಂತೇ ಕಳೆದ ತಿಂಗಳ ಕೊನೆಗೆ ನರೇಂದ್ರ ಮಂಡಲವು ಸ್ವೀಕರಿಸಿದ ಗೊತ್ತುವಳಿಯನ್ನು ಪರಿಶೀಲಿಸಿದರೂ ಬ್ರಿಟಿಷರು ಇಲ್ಲಿಂದ ಹೊರಟ ಬಳಿಕ ತಮ್ಮ ಸ್ವಾತಂತ್ರ್ಯದ ಅಬಾಧಿತ ಅಧಿಕಾರವು ಪುನಃ ತಮ್ಮ ವಶ ಸೇರುವದು. ತಾವು ಒಪ್ಪಿಗೆಯಿಂದ ಎಷ್ಟು ಅಧಿಕಾರ ಕೇಂದ್ರಕ್ಕೆ ಬಿಟ್ಟು ಕೊಡುವೆವೊ ಅಷ್ಟರ ಮಟ್ಟಿಗೆ ಕೇಂದ್ರ ಸರಕಾರದ ಸಂಬಂಧವಿದ್ದು ಮಿಕ್ಕರಸಿಯನ್ನು ತಮ್ಮ ಆಂತರಿಕ ವಿಷಯದಲ್ಲಿ ಹೊರಗಿನವರಿಗೆ ಸಂಬಂಧವಿಲ್ಲ. ಈ ವಿಷಯಗಳಷ್ಟಕ್ಕೆ ಸಂಬಂಧಪಟ್ಟ ಮಾತುಕತೆ ನಡೆಸಲು ನರೇಂದ್ರ ಮಂಡಲವು ಸಂಧಾನ ಸಮಿತಿಯನ್ನು ನಿರ್ಣಯಿಸಿದೆ. ಈ ಸಮಿತಿಯು ಮುಂದೆ ಮಾತುಕತೆ ನಡೆಯಿಸಲಿದೆಯೆಂದೂ ಆಗ್ಲ ಶ್ವೇತ ಭವನ ಮತ್ತು ವ್ಯಾಸರಾಯರು ನರೇಂದ್ರರಿಗೆ ಬುದ್ಧಿ ಹೇಳಿ ದಾರಿಗೆ ತರಬಹುದೆಂದೂ ಮುಂದ ನರೇಂದ್ರ ಭಾರತದ ಪ್ರತಿನಿಧಿಗಳು ಲೀಗಿನ ಘಟನಾ ಸಮಿತಿಯಲ್ಲಿ ಭಾಗವಹಿಸುವ ಸಂಭವವುಂಟೆಂದೂ ದಿಲ್ಲಿಯ ಹಾಗೂ ಶ್ವೇತ ಭವನದ ನಿಕಟ ಪರಿಚಯವುಳ್ಳ ರಾಜಕಾರಣಿಗಳ ತರ್ಕವಿದೆ. ಇಂಥ ಸಂದರ್ಭದಲ್ಲಿ ನರೇಂದ್ರರು ತಾವು ಪ್ರಜೆಗಳ ಧರ್ಮದರ್ಶಿಗಳೆಂದು ತಿಳಿದು ಘಟನಾ ಸಮಿತಿಗೆ ತಮ್ಮ ಭಾಗಗಳಿಂದ ಪ್ರಜೆಗಳನ್ನೇ ಪ್ರತಿನಿಧಿಗಳನ್ನಾಗಿ ಕಳುಹಿ ಭಾವೀ ರಾಜ್ಯ ಘಟನೆಯನ್ನು ರೂಪುಗೊಳಿಸಲು ನೆರವಾಗುವದು ಉಚಿತ ಹಾಗೂ ಶ್ರೇಯಸ್ಕರವಾದುದು ಇದೆ.

—ಸಂಪಾ—

ಕ್ರೈಸ್ತರೂ ಆಶ್ರಮ ಜೀವನವೂ

ಪುರಾಣ ಕ್ಷೇತ್ರವನ್ನು ಬಿಟ್ಟು ಇತಿಹಾಸವನ್ನೇ ಅವಲೋಕಿಸಿದರೆ ಎರಡುವರೆ ಸಾವಿರ ವರ್ಷಗಳ ಹಿಂದಿನಿಂದಲೂ ಭಾರತದಲ್ಲಿ ಅರಣ್ಯಗಳಲ್ಲಿನ ಪರ್ಣ ಕುಟೀರಗಳೆಂಬ ಆಶ್ರಮಗಳು ಜನತೆಯ ಮತೀಯ ಜೀವನದ ಮೇಲೆ ತುಂಬಾ ಪ್ರಭಾವವನ್ನು ಬೀರಿವೆ. ಅಲ್ಲಿಗ ತರುಣರು ಲೌಕಿಕ ವಿದ್ಯಾಗಾಗಿ ಮಾತ್ರವಲ್ಲ ಆಧ್ಯಾತ್ಮಿಕ ಶಿಕ್ಷಣಕ್ಕಾಗಿಯೂ ತಂಡತಂಡವಾಗಿ ಸೇರುತ್ತಿದ್ದರು.

ಶತಮಾನಗಳು ಕಳೆಯುತ್ತಲೆ ಆಶ್ರಮ ಜೀವನ ಮತ್ತು ಪದ್ಧತಿಯಲ್ಲಿ ಹಲವು ಬದಲಾವಣೆಗಳಾದುವು. ಹಲವು ವಿಧದ ಆಶ್ರಮಗಳಲ್ಲಿ ಕೆಲವು ಶುದ್ಧ ಪಾರಮಾರ್ಥ ಸಾಧನಾ ಕೇಂದ್ರಗಳಾಗಿ ... ಕೆಲವು ಲೌಕಿಕ ಜೀವನ ಪರಿತ್ಯಾಗಿಗಳ ... ಎಲ್ಲಾ ಆಶ್ರಮಗಳಲ್ಲಿಯೂ ... ಗುರುವಿರುತ್ತಿದ್ದನು. ಗುರುವಿನ ಹೆಸರಲ್ಲೇ ಆಶ್ರಮವು ... ನಡೆಯುತ್ತಿತ್ತು. ಹೀಗೆ ... ಆಶ್ರಮ ಎಂದು ಕರೆಯುತ್ತಿದ್ದರು. ಈ ಗುರುಗಳು ಹಿಂದೂ ... [illegible]

ಇಂದಿನ ಆಶ್ರಮಗಳಲ್ಲಿ ... ಲೌಕಿಕ ಬ್ರಹ್ಮಾಂಡದ ರಹಸ್ಯ ... [illegible] ಇವು ಲೌಕಿಕ ಪಾರಮಾರ್ಥಿಕಗಳ ಮುಕ್ತಿ ಸಾಧನ ... [illegible]

[illegible]

ಕಂಡು ಹಿಡಿವಂತಾಯಿತು. ಮೃಗಪಕ್ಷಿ ಮತ್ತು ಹಾವ್ರೋರಗಳು ಮುಂತಾದ ವಿಷ ಜಂತುಗಳ ಗುಣ ಸ್ವಭಾವವನ್ನೂ ಅವುಗಳ ರೋಗ ನಿರೋಗ ಲಕ್ಷಣವನ್ನೂ, ಅದರ ಪರಿಹಾರೋಪಾಯವನ್ನೂ ಆಶ್ರಮವಾಸಿಗಳೇ ಶೋಧಿಸಿದುದರಿಂದ ಇಂದು ನಮಗೆ ಆ ಸಂಬಂಧದ ಹಲವು ವಿಚಾರಗಳಲ್ಲಿ ಉಪಯುಕ್ತ ಜ್ಞಾನ, ಸುಲಭವಾಗಿ ಪಾರಂಪರ್ಯವಾಗಿ ಸಿಗುವಂತಾಯಿತು. ಇಷ್ಟಲ್ಲದೆ ಆತ್ಮೋನ್ನತಿಯ ಯೋಗ ಸಾಧನದ ಹಲವು ಉಪಯುಕ್ತ ... [illegible]

[illegible]

ಆಶ್ರಮ ಜೀವನವೇ, ಪರಮ ಆದರ್ಶವಾಗಿ ಸಾರಲ್ಪಡುತ್ತಿತ್ತು. ಆದರೆ ಈ ಕಾಲದಲ್ಲಿ ಪೂರ್ವಜರ ಬ್ರಹ್ಮಜ್ಞಾನ ಸಾಧನ ಧ್ಯೇಯವು ಮಾತ್ರ ಬಿಟ್ಟುಬಿಡಲ್ಪಟ್ಟಿದೆ ... ಇತಿಹಾಸದಲ್ಲಾದರೂ ... [illegible]

ಹೀಗೆ ಹಲವು ಶತಮಾನಗಳು ಕಳೆದ ನಂತರ ಈಗ ಪುನಃ ಭಾರತದಲ್ಲಿ ಆಶ್ರಮಗಳಿಗ ನೂತನ ಪ್ರಾಮುಖ್ಯತೆ ... ಇವು ಪ್ರಾಚೀನ ಧ್ಯೇಯ ಪ್ರಧಾನ ... ಸ್ಥಿತಿಗತಿಗಳಿಗನುಸಾರವಾಗಿ ... [illegible]

ಇಲ್ಲಿನ ... ಪ್ರಾಚೀನ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸಲೋಸುಗ ... [illegible]

ನಿರ್ಮಾಣಕ್ಕೂ, ದೀನ ... ಆದರ್ಶ ... ತರಬೇತಿಗೊಳಿಸಲ್ಪಡುತ್ತಾರೆ. ... ಗಾಂಧಿ ಆಶ್ರಮದ ಮೂಲ ... ಅಹಿಂಸೆಯು ಅವರ ಆಧಾರಸ್ತಂಭ. ಇವು ರಾಜಕೀಯ ಚಟುವಟಿಕೆಗಳ ಕೇಂದ್ರವೂ ಆಗಿ ಪರಿವರ್ತಿಸಲ್ಪಟ್ಟಿದ್ದು ಆಶ್ರಮ ಸಾಂಪ್ರದಾಯಕ್ಕೆ ನವೀನ ರೂಪ ಕೊಟ್ಟಂತಾಯಿತು. ಟಾಗೂರ್-ಗಾಂಧಿಗಳಂಥ ... ಗಳು ಶೈಕ್ಷಣಿಕ ಮತ್ತು ರಾಜಕೀಯ ತತ್ವ ಪ್ರಚಾರಕ್ಕಾಗಿ ... ಪೂರ್ವಜರ ಆಶ್ರಮ ವಿಧಾನಗಳನ್ನನುಸರಿಸುವಾಗ ಈ ದೇಶದ ಪೂರ್ವ ಸಂಸ್ಕೃತಿಯ ಪ್ರಭಾವಕ್ಕೆ ಅಲ್ಲಿನ ಕ್ರೈಸ್ತ ಪ್ರಚಾರಕರು ಒಳಪಡಬಹುದೆಂಬುದು ... ವಿಷಯವೆನ್ನಬೇಕು.

ಈಗಾಗಲೇ ಕ್ರೈಸ್ತ ಚಟುವಟಿಕೆಗಳಿಗ ಭಾರತೀಯ ... ಅನೇಕ ಕ್ರೈಸ್ತ ಪ್ರಚಾರಕರಲ್ಲಿ ... ಹುಟ್ಟಿರುವುದು ಸಂತೋಷದ ಸಂಗತಿ. ಕ್ರಿಸ್ತನ ಸೀಕಿ ತತ್ವಗಳನ್ನು ... ಉತ್ತಮ ವಾತಾವರಣವು ... [illegible]



ವಿಷಮಯ ಕಡಿತಗಳಿಗೆ ಗಾಯಗಳಿಗೆ ತೀವ್ರ ಗುಣಕಾರಿ.

ಜಾಂಬಕ್ ಜಗತ್ಪ್ರಸಿದ್ಧ ವಿಷಹಾರೀ ಲೇಪ.

... ಕೂಡಲೇ ಚರ್ಮಕ್ಕೆ ... ಕಡಿಮೆಯಾಗುತ್ತದೆ, ತೀವ್ರ ... ವಿಷವು ... ಜಾಂಬಕಿನಿಂದ ಕೂಡಲೇ ನಾಶವಾಗುತ್ತದೆ

ಯಾವಾಗಲೂ ಜಾಂಬಕನ್ನು ಉಪಯೋಗಿರಿ.

ZAM-BUK

ಪ್ರಾಣಿಕೂಟಕ್ಕೆ ವಿರಹಿತವಾದುದು.

NOTICE

House sites of extents ranging from 20 to 30 cents each in Urva Maidan in T S No 284 3, 4, 5, 6 & 7 and T S No 285 1, 3 & 4 (portion) of ward III within the Mangalore Municipality will be sold by public auction on Saturday, the 22nd February 1947, commencing from 9 a m, at the places of the sites and on other subsequent days that will be fixed at the time of the close of the auction, by the Executive Authority, or anyone authorised by him. The terms and conditions of the sale may be had from the Municipal Office, Mangalore

Municipal Office, Mangalore 31—1—1947

M Narayana Shenoy, Commissioner

ಪಾರ್ಲಿಮೆಂಟರಿ ವರದಿ ವಿಮರ್ಶೆ

ಹಿಂದೂಮ್ಯ ಕಾಂಗ್ರೆಸ್ಸು ಸಾರಿತ್ತು: "ಯಾವ ಪ್ರಾಂತ್ಯವನ್ನು ಅದರ ಇಚ್ಛೆಯ ವಿರೋಧವಾಗಿ ಯಾವ ರಾಜ್ಯ ಘಟನೆಗೂ ಸೇರಲು ನಾವು ಒತ್ತಾಯವನ್ನೊಡ್ಡುವುದಿಲ್ಲ" ವೆಂದು.

ರಾಷ್ಟ್ರ ಸಂಸ್ಥೆಯು ಈ ಸ್ಪಷ್ಟೀಕರಣವನ್ನು ಬ್ರಿಟಿಷ್ ಸರಕಾರದವರು ತಮ್ಮ ದಶಂಬರ 6ರ ಹೇಳಿಕೆಯಲ್ಲಿ ಸ್ಪಷ್ಟಿಕರಿಸುತ್ತ "ಅಸಮ್ಮತಿ ಪಡುವ ದೇಶದ ಯಾವ ಭಾಗದ ಮೇಲೂ ಒತ್ತಾಯ ಪೂರ್ವಕವಾಗಿ ಯಾವ ರಾಜ್ಯ ಘಟನೆಯನ್ನು ಹೊರಿಸಲು ನಾವು ಬಿಡುವುದಿಲ್ಲ—ಕಾಂಗ್ರೆಸ್ಸಿನ ನಿರ್ಣಯವೂ ಇದೇ ರೀತಿ ಇದೆ" ಎಂದು ಒತ್ತಿ ತಿಳಿಸಿದರು.

ತಿಲ್ಲಿಯಲ್ಲಿ ಇತ್ತೀಚೆ ಸೇರಿದ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸಭೆಯು ನಿರ್ಣಯದಲ್ಲಿ ಪುನಃ ಅದೇ ವಿಷಯವನ್ನು ಸ್ಪಷ್ಟಗೊಳಿಸಲಾಯಿತು. "ಕಾಂಗ್ರೆಸು ಬ್ರಿಟಿಷ್ ಸರಕಾರದ ದಶಂಬರ 6ರ ಹೇಳಿಕೆಯನ್ನು ಸ್ವೀಕರಿಸುತ್ತದೆ. ತನಗೆ ಅಸಮ್ಮತವಾದ ಘಟನೆಯನ್ನು ತಿರಸ್ಕರಿಸಲು ಪ್ರಾಂತಗಳಿಗೂ, ದೊಡ್ಡ ಅಲ್ಪಸಂಖ್ಯಾಕ ಪಕ್ಷಕ್ಕೂ ಹಕ್ಕುಂಟು ಎಂಬ ಬ್ರಿಟಿಷ್ ಸರಕಾರದ ಅಭಿಪ್ರಾಯವನ್ನು ನಾವು ಅನುಮೋದಿಸುತ್ತೇವೆ."

[illegible]

ಮುನ್ಯಾಯದ ತೀರ್ಪು

[illegible]

ಕಾಂಗ್ರೆಸು [illegible]

ಮುಂದಿನ ಕಾರ್ಯ

ಇನ್ನು ಮುಂದಿನ ಕಾರ್ಯಕ್ರಮದ ಕುರಿತು ಲೀಗಿಗೆ ಬಿಟ್ಟದ್ದಾದ ಹೇಳಿಕೆಯ ಹೊಣೆಗಾರಿಕೆ ಬ್ರಿಟಿಷ್ ಸರಕಾರದ ಮೇಲೇ ಬಿದ್ದಿದೆ. ಆಗಲೇ ನಡುಗಾಲ ಸರಕಾರದಿಂದ ಅವರ ಮಂತ್ರಿಗಳನ್ನು ಹೊರಹಾಕಬೇಕೆ ...

ಶಕ್ಯವಾಗದೆ ಎಂದು [illegible] ಲೀಗಿನೊಡನೆ ಸೇರಿದ ಅಂಬೇಡಕರ್ ಅನುಯಾಯಿ ಜೋಗೇಂದ್ರ ಮಂಡಲರು ಲೀಗಿಗೆ ಘಟನಾಸಮಿತಿಯಲ್ಲಿ ಸೇರುವುದೊಳಿತೆಂದು ಸಲಹೆ ಇತ್ತಿದ್ದಾರೆ. ಅಂಬೇಡಕರರಂತೂ ಅಖಂಡ ಹಿಂದುಸ್ತಾನವೇ ಒಳಿತೆಂದು ಸಾರಿರುವರು. ತನ್ನ ಬೆಂಬಲಕ್ಕೆ ಇರುವ ಒಂದೇ ಅಲ್ಪಸಂಖ್ಯಾಕ ಪಕ್ಷವು ಕೈಬಿಡುತ್ತಿರುವುದನ್ನು ನೋಡಿ ಲೀಗ್ ಸರ್ವಾಧಿಕಾರಿಗೆ ನೈರಾಶ್ಯವಾಗದಿರಲಿಕ್ಕಿಲ್ಲ.

ಬ್ರಿಟಿಷ್ ಸರಕಾರದ [illegible]

ಸಂಸ್ಥಾನ ಮಂಡಲ

[illegible]

ಕಾಂಗ್ರೆಸ್ಸು ಅಧಿಕಾರ ಬಿಡುವುದೆ?

[illegible]

ಬ್ರಿಟಿಷ್ ಸರಕಾರದ ಮೇಲಿನ ಮುತ್ಸದ್ದಿ ಯೋಜನೆಗಳ ಮೂಲಕ ಜನತೆಯಲ್ಲಿ [illegible] ತನ್ನ ಸ್ವಂತ [illegible] ಬಿಕ್ಕಟ್ಟಿಗೆ [illegible] ತಕ್ಕಿದೆ."

"[illegible] ಕಾಂಗ್ರೆಸು [illegible] ಸರಕಾರ [illegible]

ಕಾಂಗ್ರೆಸು ಬಗ್ಗುವಂತಿಲ್ಲ

ಸಮಾಧಾನವಾಗಿಲ್ಲ ಬಲ್ಲ ಸಂದರ್ಭ

[illegible]

ಕಾಂಗ್ರೆಸಿನ [illegible]

[illegible] ಸಾರಸ್ವ ಪ್ರಪಂಚ

ನವೀನ ನೆಷ

[illegible]

ನಾಲಿಂದು ಪವನು ಹೊಗೆ

[illegible]

1/ಜನವರಿ 3 ಮರಣ

ಇಂದಿನ ಜನರ್ಜನರ ಪರಿಸ್ಥಿತಿ

[illegible]

ಬಾವುಗಳನ್ನು ಕೂಡಲೇ ಗುಣಪಡಿಸಿರಿ

[illegible] ಕುಟಿಕೂರಾ ಸೋಪು [illegible] ಕುಟಿಕೂರಾ ಮುಲಾಮು [illegible]

ಕುಟಿಕೂರಾ ಮುಲಾಮು

CUTICURA OINTMENT

ಕ್ರೈಸ್ತರೂ ಆಶ್ರಮ ಜೀವನವೂ

ಈಗಿನ ಗ್ರೀಕರನ್ನು ಈಜಿಪ್ಟಿನವರ ಇತಿಹಾಸವನ್ನು ಅವಲೋಕಿಸಿದರೆ ನಾವು ನಾಲ್ಕು ಸಾವಿರ ವರ್ಷಗಳ ಹಿಂದಿನಿಂದಲೂ ಭಾರತದಲ್ಲಿ ಅರಣ್ಯಗಳಲ್ಲಿನ ನದೀ ತೀರಗಳಲ್ಲಿ ಆಶ್ರಮಗಳು ಜನತೆಯ ಮತೀಯ ಜೀವನದ ಮೇಲೆ ತುಂಬಾ ಪ್ರಭಾವವನ್ನು ಬೀರಿವೆ. ಅಲ್ಲಿಗೆ ತರುಣರು ಲೌಕಿಕ ವಿದ್ಯೆಗಾಗಿ ಮಾತ್ರವಲ್ಲ ಆಧ್ಯಾತ್ಮಿಕ ಶಿಕ್ಷಣಕ್ಕಾಗಿಯೂ ತಂಡತಂಡವಾಗಿ ಸೇರುತ್ತಿದ್ದರು.

ಶತಮಾನಗಳು ಕಳೆಯುತ್ತಲೆ ಆಶ್ರಮ ಜೀವನ ಮತ್ತು ಪದ್ಧತಿಯಲ್ಲಿ ಹಲವು ಬದಲಾವಣೆಗಳಾದುವು. ಹಲವು ವಿಧದ ಆಶ್ರಮಗಳಲ್ಲಿ ಕೆಲವು ಶುದ್ಧ ಪಾರಮಾರ್ಥ ಸಾಧನ ಕೇಂದ್ರಗಳಾಗಿ ವಾನಪ್ರಸ್ಥಾನುಯಾಯಿಗಳ ಬೀಡೂ, ಕೆಲವು ಲೌಕಿಕ ಜೀವನ ಪರಿತ್ಯಾಗಿಗಳ ಗೂಡೂ,—ಹೀಗಾಗಿದ್ದವು. ಎಲ್ಲಾ ಆಶ್ರಮಗಳಲ್ಲಿಯೂ ಸರ್ವಸಾಮಾನ್ಯವಾಗಿ ಒಬ್ಬ ಗುರುವಿರುತ್ತಿದ್ದನು; ಗುರುವಿನ ಹೆಸರಲ್ಲೇ ಆಶ್ರಮವು ಪ್ರಖ್ಯಾತಿ ಪಡೆಯುತ್ತಿತ್ತು. ಹೀಗೆ ನಾವು ಕಣ್ವಾಶ್ರಮ, ವಸಿಷ್ಠಾಶ್ರಮ ಎಂದು ಕೇಳುತ್ತಿದ್ದೇವೆ. ಈ ಗುರುಗಳು ಹಿಂದೆ ಶ್ರದ್ಧಾವಂತ ಶಿಷ್ಯರಾಗಿದ್ದು, ಸಂಸಾರವನ್ನು ಕಟ್ಟಿಕೊಂಡಿದ್ದು ಕೊನೆಗೆ ಇತ್ಯರ್ಥಪೂರ್ವವಾದ ಜ್ಞಾನ ಪ್ರಸಾರಕ್ಕಾಗಿ ಆಶ್ರಮಗಳನ್ನು ಸ್ಥಾಪಿಸಿ ಸನ್ಯಾಸ ಶಿಷ್ಯರಲ್ಲಿರುತ್ತಿದ್ದರು.

ಇಂಥಾ ಆಶ್ರಮಗಳಲ್ಲಿ ಮಾನವ ಆತ್ಮ ರಹಸ್ಯವನ್ನು, ಭೌತಿಕ ಬ್ರಹ್ಮಾಂಡದ ರಹಸ್ಯವನ್ನು ಕಂಡುಕೊಳ್ಳಲು ಪ್ರಯೋಗಗಳು ನಡೆಯುತ್ತಿದ್ದವು. ಒಂದು ದೃಷ್ಟಿಯಿಂದ ಇವು ಲೌಕಿಕ ಪಾರಮಾರ್ಥಿಕಗಳ ಮುಕ್ತಿ ಸಾಧನೆಯ ಪ್ರಯೋಗ ಮಂದಿರಗಳೇ ಆಗಿದ್ದುವೆಂದರೆ ಅತಿಶಯವಲ್ಲ. ಉಪನಿಷತ್ ಎಂಬ ಶಬ್ದ ಉತ್ಪತ್ತಿಯು 'ಮರದ ಕೆಳಗೆ ಕುಳಿತುಕೊಳ್ಳುವುದೆಂಬ' ಮೂಲ ಶಬ್ದದಿಂದ ಉತ್ಪನ್ನವಾದುದೆಂದು ಹೇಳಲಾಗಿದೆ. ಅರಣ್ಯ ಕೇಂದ್ರಗಳಲ್ಲಿ ಕುಳಿತು ಆದಿ ಅನಾದಿ, ಸೃಷ್ಟಿ ಸ್ಥಿತಿಲಯಗಳ ಸ್ಥೂಲವಿಚಾರ ಚರ್ಚೆಗಳು ಜರಗಿಸಲ್ಪಟ್ಟುದರ ಪರಿಣಾಮವಾಗಿಯೇ ಉಪನಿಷತ್ತುಗಳಂತಹ ಜ್ಞಾನಸಾರ ನಿರೂಪಗಳು ನಿರ್ಮಾಣ ಹೊಂದುವಂತಾಯಿತು. ಒಟ್ಟಿನಲ್ಲಿ ಅಖಂಡ ಬ್ರಹ್ಮಜ್ಞಾನ ಸಾಧನೆಯೇ ಎಲ್ಲಾ ಆಶ್ರಮಗಳ ಮುಖ್ಯೋದ್ದೇಶವಾಗಿದ್ದಿತ್ತೆನ್ನಬಹುದು.

ವಿಶ್ವ ಜೀವನದ ಸತ್ಯಾಸತ್ಯತೆಯ ಕುರಿತು ಈ ಆಶ್ರಮಗಳಿಂದ ಮಹೋನ್ನತವಾದ ಜ್ಞಾನ ನಿರೂಪವು ಜಗತ್ತಿಗೆ ಕೊಡಲ್ಪಟ್ಟಿದೆ. ಮಾತ್ರವಲ್ಲ ರಾಮಾಯಣ ಮಹಾ ಭಾರತಾದಿ ಎಲ್ಲಾ ಪುರಾಣ ಪ್ರವಚನಗಳ ಝರಿಯೂ ಆಶ್ರಮಗಳಿಂದಲೇ ಉದ್ಭವಿಸಿತು. ಆಶ್ರಮಗಳು ನಿವಾಸಯೋಗ್ಯ ಸ್ಥಳಗಳಾದವು. ಅನೇಕ ಉಪಯುಕ್ತ ಕಾಡುಜಂತುಗಳು ಮನೆ ಪ್ರಾಣಿಗಳಾಗಿ ಪಳಗಿಸಲ್ಪಟ್ಟವು. ಕಾಡು, ಬೆಟ್ಟ, ಜೀವಿಗಳು ಆಶ್ರಮವಾಸಿಗಳ ದಿವ್ಯ ಸಂಪರ್ಕದಿಂದ ನಾಗರೀಕತೆಯ ಸಂಸ್ಕಾರಕ್ಕೊಳಗಾದರು. ಇದು ಆಶ್ರಮಗಳ ಸಾಂಸ್ಕೃತಿಕ ಪ್ರಸಾರದ ಪರಿಣಾಮ.

ಆಶ್ರಮಗಳನ್ನು ಸೇರಿದವರು ಶ್ರೇಷ್ಠ ಪ್ರತಿಭಾವಂತರೂ ವಿಶಾಲ ಅನುಭವಿಕರೂ ಆಗಿದ್ದುದರಿಂದ ಮಾನವ ಕೋಟಿಯ ಕಲ್ಯಾಣಕ್ಕಾಗಿ ಅವರು ರಾತ್ರೆ ಹಗಲೆಂಬಂತೆ ಪ್ರಯೋಗದ ತಪಶ್ಚರ್ಯವನ್ನು ಮಾಡುತ್ತಿದ್ದರು. ಅಮೂಲ್ಯ ಧಾತು ಲೋಹಗಳ ವಿಶಿಷ್ಟ ಗುಣಲಕ್ಷಣಗಳನ್ನು, ವಿಚಿತ್ರ ಔಷಧೀಯ ಸತ್ವದ ಗಿಡಮೂಲಿಕೆಗಳ ಶರೀರ [illegible] ಪದಾರ್ಥ [illegible] ಅವರು ಕಂಡು ಹಿಡಿವಂತಾಯಿತು. ಮೃಗಪಕ್ಷಿ ಮತ್ತು ಹಾವೂರಗಗಳು ಮುಂತಾದ ವಿಷ ಜಂತುಗಳ ಗುಣ ಸ್ವಭಾವವನ್ನೂ ಅವುಗಳ ರೋಗ ನಿರೋಗ ಲಕ್ಷಣವನ್ನೂ, ಅದರ ಪರಿಹಾರೋಪಾಯವನ್ನೂ ಆಶ್ರಮವಾಸಿಗಳೇ ಶೋಧಿಸಿದುದರಿಂದ ಇಂದು ನಮಗೆ ಆ ಸಂಬಂಧದ ಹಲವು ವಿಚಾರಗಳಲ್ಲಿ ಉಪಯುಕ್ತ ಜ್ಞಾನ, ಸುಲಭವಾಗಿ ಪಾರಂಪರ್ಯವಾಗಿ ಸಿಗುವಂತಾಯಿತು. ಇಷ್ಟಲ್ಲದೆ ಅತ್ಯಮೋಘವಾದ ಯೋಗ ಸಾಧನದ ಹಲವು ಉಪಯುಕ್ತ ವಿನ್ಯಾಸಗಳೂ ಅಲ್ಲೇ ಅಭ್ಯಸಿಸಲ್ಪಟ್ಟು ಇಂದದು ನಮಗೆ ಅಮೂಲ್ಯವಾದ ಶಾರೀರಿಕ ಸುಖಸಾಧಕ ಜ್ಞಾನ ಸಂಪತ್ತಾಗಿದೆ

ಎಲ್ಲದಕ್ಕಿಂತಲೂ ಆಶ್ರಮಗಳು ಶಿಕ್ಷಣ ಪ್ರಸಾರಕ್ಕೆ ಅತೀ ಮಹತ್ವದ ಲಾಭವನ್ನು ಗಳಿಸಿಟ್ಟಿವೆ. ಯೋಗ ಸಾಧನೆಯ ದ್ವಾರಾ ನಿರ್ದಿಷ್ಟ ಸಂಖ್ಯೆಯ ವಿದ್ಯಾರ್ಥಿಗಳಿಗೆ ಆಧ್ಯಾತ್ಮಿಕ ಶಿಕ್ಷಣ ತರಬೇತಿಯು, ಅಲ್ಲಿ ಕೊಡಲ್ಪಡುತ್ತಿತ್ತು. ಕಾರಣ ಯೋಗಾಭ್ಯಾಸವು ಗುರುವಿನ ಮೂಲಕ ಮಾತ್ರ ಕಲಿಯಬಹುದಾಗಿದೆ. ಗುರು ಶಿಷ್ಯರೊಳಗೆ ದೀರ್ಘ ಕಾಲದ ಅನ್ಯೋನ್ಯ ಸಂಪರ್ಕವಿರುತ್ತಿದ್ದುದರಿಂದ ಇಂದಿನ ಗುರುಕುಲ ಪದ್ಧತಿಯು ಈ 'ಆಶ್ರಮಗಳು ನಮಗಿತ್ತ ದಾನ'ವೆಂದು ಹೆಮ್ಮೆಯಿಂದ ಹೇಳಬಹುದು.

ಆಶ್ರಮಗಳಲ್ಲಿ ಸುತ್ತಾಡಿ ಭಗವಾನ ಬುದ್ಧದೇವನು ಜ್ಞಾನದ ಬೆಳಕನ್ನು ಕಂಡನು. ಬೌದ್ಧ ಭಿಕ್ಷುಗಳಿಗೆ ಆಶ್ರಮ ಜೀವನವು ಕಡ್ಡಾಯವಾಗಿದ್ದಿತು. ಆಶ್ರಮ ಜೀವನದ ಮುಖ್ಯ ತತ್ವವಾದ ಅಹಿಂಸೆಯು ಬೌದ್ಧ ಧರ್ಮದ ಮೂಲವೇ ಆಗಿ ಪರಿಣಮಿಸಿತು. ಬೌದ್ಧ ಸನ್ಯಾಸಿ ಮಠಗಳು ಪ್ರಾಚೀನ ಆಶ್ರಮ ಜೀವನದ ಪ್ರತಿಬಿಂಬಗಳಾಗಿದ್ದುವು. ನಂತರ ಬ್ರಾಹ್ಮಣ ಧರ್ಮವು ತಲೆಯೆತ್ತಿ ಶಿವ, ಶಕ್ತಿ ಮತ್ತು ಭಕ್ತಿ ಮಾರ್ಗಗಳು ಪ್ರಾಧಾನ್ಯತೆಗೆ ಬಂದಾಗಲೂ ಆಶ್ರಮ ಜೀವನವೇ ಪರಮ ಆದರ್ಶವಾಗಿ ಸಾರಲ್ಪಡುತ್ತಿತ್ತು. ಆದರೆ ಈ ಕಾಲದಲ್ಲಿ, ಪೂರ್ವಜರ ಬ್ರಹ್ಮಜ್ಞಾನ ಸಾಧನ ಧ್ಯೇಯವು ಮಾತ್ರ ಬಿಟ್ಟುಬಿಡಲ್ಪಟ್ಟದುದು ಆಶ್ರಮ ಇತಿಹಾಸದಲ್ಲಾದೊಂದು ಗಣನೀಯ ಸ್ಥಿತ್ಯಂತರ.

ಹೀಗೆ ಹಲವು ಶತಮಾನಗಳು ಕಳೆದ ನಂತರ ಈಗ ಪುನಃ ಭಾರತದಲ್ಲಿ ಆಶ್ರಮಗಳಿಗೆ ನೂತನ ಪ್ರಾಮುಖ್ಯತೆಯುಂಟಾಗಿದೆ. ಇವು ಪ್ರಾಚೀನ ಧ್ಯೇಯ ಪ್ರಧಾನವಾದುದಾದರೂ ಆಧುನಿಕ ಸ್ಥಿತಿಗತಿಗಳಿಗನುಸಾರವಾಗಿ ಇಂದಿನ ಆಶ್ರಮಗಳು ಕಾರ್ಯ ನಿರ್ವಹಿಸುತ್ತವೆ

ಮೆಲ್ಲನೆ ಮಾಯವಾಗುತ್ತಿರುವ ನಮ್ಮ ಪ್ರಾಚೀನ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸಲೋಸುಗ ನಮ್ಮ ಆಧುನಿಕ ಆಶ್ರಮಗಳು ಸ್ಥಾಪಿಸಲ್ಪಟ್ಟವು ಶಿಕ್ಷಣ ಅಭಿವೃದ್ಧಿಯೇ ಅವುಗಳ ಧ್ಯೇಯವಾಗಿದ್ದಿತು. ಆರ್ಯ ಸಮಾಜಸ್ಥರ ಗುರುಕುಲಗಳೂ, ಟಾಗೂರರ ಶಾಂತಿನಿಕೇತನವೂ ಇದೇ ಉದ್ದೇಶ ಸಾಧಕಗಳು. ಗುರುಕುಲಗಳು ಅಚ್ಚ ಪ್ರಾಚೀನ ಮಾದರಿಯಲ್ಲಿ ನಡೆಸಲ್ಪಡುತ್ತಿವೆ. ಗುರುಶಿಷ್ಯರ ಸಾಂಸಾರಿಕ ಸಂಪರ್ಕವೇ ಇವುಗಳ ಪ್ರಧಾನ ಸರಿಕ್ರಮವಾಗಿದೆ. ಶಾಂತಿನಿಕೇತನವು ಅದೇ ಮಾದರಿಯದಾದರೂ ಅದರಲ್ಲಿ ಜಾತಿಮತ ಭೇದವಿಲ್ಲದೆ ಅಂತರಾಷ್ಟ್ರೀಯ ಶಿಷ್ಯ ಪರಂಪರೆಯ ಸಂಪ್ರದಾಯವಿಟ್ಟಲಾಗಿದೆ. ಇದರಿಂದ ಪ್ರಾಚೀನ ಭಾರತದ ಸಂಸ್ಕೃತಿಯು ವಿಶ್ವವ್ಯಾಪಿಗೊಳಿಸುವ ಉದಾತ್ತ ಉದ್ದೇಶವೂ ಅಡಕವಾಗಿದೆ.

ಇವುಗಳಲ್ಲಿ ಮಹಾತ್ಮಾ ಗಾಂಧಿಯವರ ಆಶ್ರಮಗಳ ವೈಶಿಷ್ಟ್ಯ ಪ್ರತ್ಯೇಕ [illegible] ಪ್ರಾಚೀನ ಆಶ್ರಮದ ಹಲವು ಲಾಕ್ಷಣಿಕ ರೂಪರೇಖೆಗಳು ಇದರಲ್ಲಿ ಕಾಣುತ್ತವೆ. ಇದರೊಳಗಿನ [illegible] ಅಮೋಘ ಸರಳತೆಯ ಜೀವನವನ್ನು ಜರಗಿಸುವುದಕ್ಕಿದೆ [illegible] ವಿದ್ಯಾರ್ಥಿಗಳಿಗೂ, ದೇಶ ವಿಮೋಚನೆಗೂ ಆದರ್ಶ ಮುಂದಾಳುಗಳಾಗುವಂತೆ ತರಬೇತಿಗೊಳಿಸಲ್ಪಡುತ್ತಾರೆ. ಸ್ವಾವಲಂಬನವು ಗಾಂಧಿ ಆಶ್ರಮದ ಮೂಲಮಂತ್ರ. ಅಹಿಂಸೆಯು ಅದರ ಆಧಾರಸ್ಥಂಭ. ಇವು ರಾಜಕೀಯ ಚಟುವಟಿಕೆಗಳ ಕೇಂದ್ರವೂ ಆಗಿ ಪರಿವರ್ತಿಸಲ್ಪಟ್ಟದ್ದು ಆಶ್ರಮ ಸಾಂಪ್ರದಾಯಕ್ಕೆ ನವೀನ ರೂಪ ಕೊಟ್ಟಂತಾಯಿತು.

ಟಾಗೂರ್ ಗಾಂಧಿಗಳಂತಹ ವಿಶ್ವವ್ಯಕ್ತಿಗಳು ಶೈಕ್ಷಣೀಕ ಮತ್ತು ರಾಜಕೀಯ ತತ್ವ ಪ್ರಚಾರಕ್ಕಾಗಿ ಭಾರತದ ಪೂರ್ವಜರ ಆಶ್ರಮ ವಿಧಾನಗಳನ್ನನುಸರಿಸುವಾಗ ಈ ದೇಶದ ಪೂರ್ವ ಸಂಸ್ಕೃತಿಯ ಪ್ರಭಾವಕ್ಕೆ ಅಲ್ಲಿನ ಕ್ರೈಸ್ತ ಪ್ರಚಾರಕರು ಒಳಪಡದಿದ್ದರೆ ಅದು ಅತಿಕೌತುಕದ ವಿಷಯವೆನ್ನಬೇಕು.

ಈಗಾಗಲೇ ಕ್ರೈಸ್ತ ಚಟುವಟಿಕೆಗಳಿಗೆ ಭಾರತೀಯ ರೂಪರೇಷೆ ಕೊಡಲು ಅನೇಕ ಕ್ರೈಸ್ತ ಪ್ರಚಾರಕರಲ್ಲಿ ಆತುರ ಹುಟ್ಟಿರುವುದು ಸಂತೋಷದ ಸಂಗತಿ. ಕ್ರಿಸ್ತನ ನೀತಿ ತತ್ವಗಳನ್ನು ಮನಃಪೂರ್ವಕವಾಗಿ ಕಾರ್ಯಾಚರಣೆಗೆ ತರಲು ಆಶ್ರಮ ಜೀವನದಂತಹ ಉತ್ತಮ ವಾತಾವರಣವು ಸ್ಫೂರ್ತಿ ಪ್ರಚೋದಕವಾಗಿದೆ. ಪಾಶ್ಚಾತ್ಯ ಇಲ್ಲವೆ ಭಾರತೀಯ ಕ್ರೈಸ್ತಾನುಯಾಯಿಗಳಲ್ಲಿ ಗೌಣ್ಯ ವ್ಯಕ್ತಿಗಳು ವಿರಳವಾಗಿರುವುದಕ್ಕೆ ಅವರ ಚಟುವಟಿಕೆಗಳಲ್ಲಿ ಆಯಾ ದೇಶ ಕಾಲಕ್ಕನುಗುಣವಾದ ವಾತಾವರಣದ ಲೋಪವು ಒಂದು ಕಾರಣವೆನ್ನಲಾಗಿದೆ. ಭಾರತೀಯರ ಮತೀಯ 'ಹವಾ ಗುಣ'ಕ್ಕನುಸಾರವಾಗಿ ಕ್ರಿಸ್ತನ ಪ್ರಕೃತಿ ಸಹಜವೂ ಸರಳವೂ, ವರ್ಣ, ಜಾತಿಭೇದ ರಹಿತವಾದುದೂ ಆದ ಉದಾತ್ತ ತತ್ವ ಬೀಜಗಳನ್ನು ಬಿತ್ತುವುದು ಕ್ರಿಸ್ತ ನೀತಿ ಪ್ರಚಾರಕ ಯೋಗ್ಯವಾದ ಧೋರಣೆ.

ಇಂತಹ ಯೋಜನೆಗಳು ಭಾರತದಲ್ಲಿನ ಅನೇಕ ಕ್ರೈಸ್ತ ಸಂಘಗಳ ಅವಗಾಹನೆಗೆ ಬಂದುದು ತುಂಬಾ ತೃಪ್ತಿಯ ಸಂಗತಿ. ಅಂತೆಯೇ ಇಂದು ಈ ದೇಶದ ಹಲವಾರು ಕಡೆಗಳಲ್ಲಿ ಆಶ್ರಮ ಪದ್ಧತಿಗನುಸಾರವಾಗಿ ಕ್ರೈಸ್ತ ಚಟುವಟಿಕೆಗಳು ನಿರ್ವಹಿಸಲ್ಪಡುತ್ತವೆ. ಜಪಾಲಯ 'ಸ್ವಸ್ತ್ರೀ ಮಂದಿರ' 'ಕ್ರಿಸ್ತ ಕುಲ' (ಗುರುಕುಲದಂತೆ) ಮೊದಲಾದ ಹೆಸರಿನ ಕ್ರೈಸ್ತಾಶ್ರಮಗಳಿಂದು ಅಲ್ಲಲ್ಲಿ ಸ್ಥಾಪಿಸಲ್ಪಟ್ಟಿವೆ. ಈ ಆಶ್ರಮಗಳ ಜೀವನ ಕ್ರಮವೂ ಹಳೇಯ ಮಾದರಿಯ ಮೇಲೆ ನಿರ್ವಹಿಸಲ್ಪಡುತ್ತವೆ. ಇವುಗಳ ಕಟ್ಟಡ ಶಿಲ್ಪವೂ ಹಿಂದೂ ದೇವಾಲಯ ಗೋಪುರಗಳಾಕೃತಿಯನ್ನು ಹೋಲುತ್ತವೆ.

ವಿಷಮಯ ಕಡಿತಗಳಿಗೆ ಗಾಯಗಳಿಗೆ ತೀವ್ರ ಗುಣಕಾರಿ.

ಜಾಂಬಕ್ ಜಗತ್ಪ್ರಸಿದ್ಧ ವಿಷಹಾರೀ ಲೇಪ

ನಿಮಗೆ ಗಾಯವಾದರೆ ಕಡಿತವುಂಟಾದರೆ ವಿಷವು ನಿಮ್ಮ ಚರ್ಮದೊಳಗೆ ಸೇರಿಬಿಡುವುದು. ಅದರಿಂದ ಮುಂದೆ ಅನರ್ಥವಾಗದಂತೆ ಕೂಡಲೇ ಜಾಂಬಕನ್ನು ಅಲ್ಲಿ ಸವರಿರಿ. ಜಾಂಬಕಿನಲ್ಲಿರುವ ಅತ್ಯುತ್ತಮ ವನೌಷಧಿ ರಸವು ಕೂಡಲೇ ಚರ್ಮಕ್ಕೆ ಎಳೆಯಲ್ಪಡುತ್ತದೆ. ಅದರಿಂದ ನೋವು ಕಡಿಮೆಯಾಗುತ್ತದೆ. ಕೀವು [illegible]ಗುತ್ತದೆ. ವಿಷಮಯ ಕ್ರಿಮಿಗಳು ಜಾಂಬಕಿನಿಂದ ಕೂಡಲೇ ನಾಶವಾಗುತ್ತವೆ.

ಯಾವಾಗಲೂ ಜಾಂಬಕನ್ನೇ ಉಪಯೋಗಿಸಿರಿ.

ZAM-BUK

ಪ್ರಾಣಿಕೊಬ್ಬು ವಿರಹಿತವಾದುದು.

NOTICE

House sites of extents ranging from 20 to 30 cents each in Urva Maidan in T. S. No. 284/3, 4, 5, 6 & 7 and T. S. No. 285/1, 3 & 4 (portion) of ward III within the Mangalore Municipality, will be sold by public auction on Saturday, the 22nd February 1947, commencing from 9 a. m., at the places of the sites and on other subsequent days that will be fixed at the time of the close of the auction, by the Executive Authority, or anyone authorised by him. The terms and conditions of the sale may be had from the Municipal Office, Mangalore.

Municipal Office, Mangalore. 31—1—1947.

M. Narayana Shenoy, Commissioner.

ಪ್ರಾಂತ್ಯ ವರದಿ ವಿಮರ್ಶೆ

...ಹಿಂಥೊನ್ನು ಕೊಂಗ್ರೆಸ್ಸು ಸಾರಿತ್ತು. "ಯಾವ ಪ್ರಾಂತ್ಯವನ್ನು ಅದರ ಇಚ್ಛೆಯ ವಿರೋಧವಾಗಿ ಯಾವ ರಾಜ್ಯ ಘಟನೆಗೂ ಸೇರಲು ನಾವು ಒತ್ತಾಯವಡಿಸುವುದಿಲ್ಲ" ವೆಂದು.

ರಾಷ್ಟ್ರ ಸಂಸ್ಥೆಯು ಈ ಸ್ಪಷ್ಟೀಕರಣವನ್ನು ಬ್ರಿಟಿಷ್ ಸರಕಾರದವರು ತಮ್ಮ ದಶಂಬರ 6ರ ಹೇಳಿಕೆಯಲ್ಲಿ ಪುಷ್ಟೀಕರಿಸುತ್ತ "ಅಸ ಮ್ಮತಿ ಪಡುವ ದೇಶದ ಯಾವ ಭಾಗದ ಮೇಲೂ ಒತ್ತಾಯ ಪೂರ್ವಕವಾಗಿ ಯಾ ವ ರಾಜ್ಯ ಘಟನೆಯನ್ನು ಹೊರಿಸಲು ನಾವು ಸಿದ್ಧರಿಲ್ಲ—ಕೊಂಗ್ರೆಸ್ಸಿನ ನಿರ್ಣಯವೂ ಇದೇ ರೀತಿ ಇದೆ" ಎಂದು ಒತ್ತಿ ತಿಳಿಸಿದರು.

ಡಿಲ್ಲಿಯಲ್ಲಿ ಇತ್ತೀಚೆ ಸೇರಿದ ಅಖಿಲ ಭಾರತ ಕೊಂಗ್ರೆಸ್ ಸಮಿತಿ ಸಭೆಯು ನಿರ್ಣಯದಲ್ಲಿ ಪುನಃ ಅದೇ ವಿಷಯವನ್ನೇ ವಿಸ್ತೃತಗೊಳಿಸಲಾಯಿತು. "ಕೊಂಗ್ರೆಸು ಬ್ರಿಟಿಷ್ ಸರಕಾರದ ದಶಂಬರ 6ರ ಹೇಳಿಕೆಯನ್ನು ಸ್ವೀಕರಿಸುತ್ತದೆ. ತಮಗೆ ಅಸಮ್ಮತವಾದ ಘಟನೆಯನ್ನು ತಿರಸ್ಕರಿಸಲು ಪ್ರಾಂತ್ಯಗಳಿಗೂ, ದೊಡ್ಡ ಅಲ್ಪಸಂಖ್ಯಾಕ ಪಕ್ಷಕ್ಕೂ ಹಕ್ಕುಂಟು ಎಂಬ ಬ್ರಿಟಿಷ್ ಸರಕಾರದ ಅಭಿಪ್ರಾಯವನ್ನು ನಾವು ಸಮರ್ಥಿಸುತ್ತೇವೆ"

ಇದರಿಂದ ಲೀಗು ಆಕ್ರೋಷಕ್ಕೊಳಗಾಗಿದೆ. ಅದು ತನ್ನ ಅನುಯಾಯಿಗಳಿಗೆ ಸ್ಪಷ್ಟವಾದ ಮಾರ್ಗ ದರ್ಶನ ಮಾಡುವುದರ ಬದಲಿಗೆ ತನ್ನ ಇತ್ತೀಚೆಗಿನ ಠರಾವಿನಲ್ಲಿ ದ್ವೇಷದ ನಂಜನ್ನು ಕಾರಿರುತ್ತದೆ.

ಮುನ್ಯಾಯದ ತೀರ್ಪು

ಮೇಲೆ ಹೇಳಿದಂತೆ ಲೀಗಿನ ಮೂರು ಸಾವಿರ ಶಬ್ದ ದೀರ್ಘತೆಯ ಠರಾವು ಸಂಪೂರ್ಣವಾಗಿ ಉದರಾಗ್ನಿಯ [illegible] ಪಸರಿಸಿದೆ.

ಕೊಂಗ್ರೆಸು ಬ್ರಿಟಿಷ್ ಸರಕಾರದ ಹೇಳಿಕೆಗಳನ್ನು ಒಪ್ಪಲಿಲ್ಲವಂತೆ [illegible] ಘಟನಾಸಮಿತಿಯಲ್ಲಿ ಅದು ಸೇರಿದುದು ಒಂದು ಮಹಾ ಮೋಸವಂತೆ [illegible] ಇದುತನಕ ಲೀಗನ್ನೇ [illegible] ಹಿಡಿದ ಬ್ರಿಟಿಷ್ ಸರಕಾರದವರೂ ಅದನ್ನು [illegible] ಮಾತ್ರವಲ್ಲ ಅದರ ಅಭಿಪ್ರಾಯದಲ್ಲಿ ಕೊಂಗ್ರೆಸು ತಮ್ಮ ಹೇಳಿಕೆಯನ್ನು ಸ್ವೀಕರಿಸಲಿಲ್ಲ ವೆಂದಿದ್ದರೆ ಅವರು ಹಾಗೆ ಏಕೆ ಹೇಳದೆ ಇದುತನಕ ಸುಮ್ಮನಿರುವರು? ಘಟನಾಸಮಿತಿಯು ಒಂದು ಮೋಸದ ಮನೆಯಾದರೆ ಲೀಗನ್ನು ಅದರಲ್ಲಿ ಸೇರಲು ಅಷ್ಟೊಂದು ಆಸ್ಥೆಯಿಂದೇಕೆ ವಿನಂತಿಸಿಕೊಂಡು ಒಂದು ಹೇಳಿಕೆಯ ಅರ್ಥರೂಪವಾಗಿ ಇನ್ನೊಂದು ಹೇಳಿಕೆಯನ್ನೇಕೆ ಹೊರಡಿಸಿ ಕೊಂಗ್ರೆಸು ಸ್ವೀಕರಿಸಬೇಕೆಂದು ವಿನಂತಿಸಲಾಯಿತು?

ಕೊಂಗ್ರೆಸಿನ ನಿರ್ಣಯ ಅಪ್ರಾಮಾಣಿಕತನದೆಂದು ಲೀಗ್ ಅಭಿಪ್ರಾಯ ಸಾರಿದ ಪ್ರಾಮಾಣಿಕತನಕ್ಕೆ ಲೀಗು ಪ್ರಖ್ಯಾತಿ ಹೊಂದಿರುತ್ತದೆಂದು ಇದುತನಕ ನಿಲ್ಲಿಂದ [illegible] ಕೇಳಿ ಬಂದಿರುವುದಿಲ್ಲ. ಲೀಗಿನ ಪ್ರಾಮಾಣಿಕತನದ ಸಿಹಿಯನ್ನು ಬ್ರಿಟಿಷ್ ಸರಕಾರವೂ ಕೊಂಚ ಸವೆದು ನೋಡಿದೆ. ಆದುದರಿಂದ ಲೀಗು ತನ್ನಂತೇ ಎಲ್ಲರನ್ನು ಕಾಣುವ ಸಾಹಸ ಮಾಡಿರುವುದು ಕೇವಲ ಸಹಜವಾದುದು.

ಮುಂದಿನ ಕಾರ್ಯ

ಇನ್ನು ಮುಂದಿನ ಕಾರ್ಯಕ್ರಮದ ಕುರಿತು ಲೀಗಿಗೆ ಬುದ್ಧಿವಾದ ಹೇಳುವ ಹೊಣೆಗಾರಿಕೆ ಬ್ರಿಟಿಷ್ ಸರಕಾರದ ಮೇಲೇ ಬಿದ್ದಿದೆ. ಆಗಲೇ ನಡುಗಾಲ ಸರಕಾರದಿಂದ ಲೀಗಿನವರ ಮಂತ್ರಿಗಳನ್ನು ಹೊರಹಾಕುವ ಹಂ[illegible]ಚಿಕೆಯಾಗಿದೆಯೆಂದು ಊಹಾಪೋಹ ಇದೆ. ಲೀಗಿನೊಡನೆ ಸೇರಿದ ಅಂಬೇಡಕರ್ ಅನುಯಾಯಿ ಜೋಗೇಂದ್ರ ಮಂಡಲರೂ ಲೀಗಿಗೆ ಘಟನಾಸಮಿತಿಯಲ್ಲಿ ಸೇರುವುದೊಳಿತೆಂದು ಸಲಹೆ ಇತ್ತಿದ್ದಾರೆ. ಅಂಬೇಡಕರರಂತೂ ಅಖಂಡ ಹಿಂದುಸ್ಥಾನವೇ ಬಾಳಕೆಂದು ಸಾರಿರುವರು. ತಮ್ಮ ಬೆಂಬಲಕ್ಕೆ ಇದುವ ಒಂದೇ ಅಲ್ಪಸಂಖ್ಯಾಕ ಪಕ್ಷವು ಕೈಬಿದುತ್ತಿರುವುದನ್ನು ನೋಡಿ ಲೀಗ್ ಸರ್ವಾಧಿಕಾರಿಗೆ ವ್ಯಸನವಾಗದಿರಲಿಕ್ಕಿಲ್ಲ.

ಬ್ರಿಟಿಷ್ ಸರಕಾರದವರೂ ಹೆಚ್ಚು ಹದಗೆಡುವಂತೆ [illegible] ಅವಶ್ಯವಿಲ್ಲ. ರಾಷ್ಟ್ರೀಯ ಮುಸ್ಲಿಮರ [illegible] ಶಿಯಾಗಳೂ, ಕೊಂಗ್ರೆಸ್ಸಿನ ಧೋರಣೆಯನ್ನು ಸಮರ್ಥಿಸಿರುವರು. ಲೀಗು ಈ ಸಲ ಯಾವ ತರದ ಡೈರೆಕ್ಟ್ ಏಕ್ಶನಿಂದ ಏನನ್ನು ಗೆಲ್ಲುವಂತಿಲ್ಲ. ಅಂಥ ಮೇಲೆ ನಿಯಮಿತ ಕಾರ್ಯಕ್ರಮಕ್ಕನುಗುಣವಾಗಿ ರಾಜಕಾರಣವು ಮುಂದು[illegible] ಆವಶ್ಯವಿದೆ.

ಸಂಸ್ಥಾನ ಮಾಟ

[illegible]

ಕೊಂಗ್ರೆಸ್ಸು ಅಧಿಕಾರ ಬಿಡುವುದೆ?

[illegible] ಪರಿಸ್ಥಿತಿಯು [illegible] ಕೂಡು ಬರುತ್ತಿದೆ. [illegible] ವಿರಕ ಕೊಂಗ್ರೆಸ್ಸು ನಿರಂಕುಶಿಯ ಘಟನೆಗಳನ್ನ [illegible] ಮಾಡುತ್ತಿದೆ.

ಬ್ರಿಟಿಷ್ ಸರಕಾರದ ಮೇಲೂ ಮತ್ತು ವರ ಯೋಜನೆಗಳ ಮೇಲೂ ಜನತೆಯಲ್ಲಿ ತಪ್ಪಾರ ಹುಟ್ಟುತ್ತ ಬಂದಿದೆ. ಕೊಂಗ್ರೆಸ್ಸು ತನ್ನ ಸ್ವಂತ ಮನೆಯಲ್ಲಿನ ಗೊಂದಲಕ್ಕೊಳಗಾದಂತಿದೆ. ಸರ್ವ ವಿಧದಿಂದಲೂ ತಾನು ಬಿಕ್ಕಟ್ಟಿಗೊಳಗಾದಂತೆ ಅದಕ್ಕೆ ಭಾಸವಾಗ ಹತ್ತಿದೆ"

"ಪರಿಸ್ಥಿತಿಯು ತೃಪ್ತಿಕರವಾಗಿ ಸುಧಾರಿಸದಿದ್ದರೆ ಕೊಂಗ್ರೆಸು ಸದ್ಯದಲ್ಲೇ ಕೇಂದ್ರ ಸರಕಾರ ಮಂಡಳದಿಂದ ಹೊರಬರುಬಹುದೆಂಬ ಅಂಜಿಕೆ ಇದೆ. ಲೋರ್ಡ್ ವೇವೆಲ್ಲರೂ ಅವರ ಬ್ರಿಟಿಷ್ ಒಡೆಯರೂ ಕೆಲ ಮಂದಿ—ತಮ್ಮ ಭಾರತೀಯ ಸಂಚುಗಾರರೊಡಗೂಡಿ ಕೊಂಡು ಕೊಂಗ್ರೆಸ್ಸಿನ ಮೇಲೆ ಈ ಒತ್ತಾಯದ ಪ್ರಸಂಗವನ್ನು ತಂದೊಡ್ಡುತಿದ್ದಾರೆ. ಕೊನೆಯ ಪರದೆಯು ಇನ್ನೇನು ಸದ್ಯದಲ್ಲೇ ಬೀಳಲಿದೆ"

ಹೀಗೆಂದು ಬೊಂಬಾಯಿಯ ಪ್ರಮುಖ ಪತ್ರಿಕೆಯೊಂದರ ಡಿಲ್ಲಿ ಬಾತ್ಮಿದಾರರು ಬರೆಯುತ್ತಾರೆ. ಬ್ರಿಟಿಷ್ ಸರಕಾರದ ಯಾವ ಯೋಜನೆಯನ್ನು ಮುಸ್ಲಿಮರ ಮುಸ್ಲಿಂ ಲೀಗನ್ನು ಅಧಿಕಾರದಲ್ಲಿರಲು ಬಿಟ್ಟದ್ದು ಬ್ರಿಟಿಷ್ ಸರಕಾರದ ಪಕ್ಷಪಾತದ ಮೋರೆ [illegible] ಸಾದೃಶ್ಯ ಪ್ರದರ್ಶನವೆಂತಲೂ ಪಂಜಾಬಾ ಗವರ್ನರರು [illegible] ಮುಸ್ಲಿಂ ಲೀಗ್ [illegible]

ಕೊಂಗ್ರೆಸು ಬಗ್ಗುವಂತಿಲ್ಲ

ಸಮತಾವಾದಿಗಳಿಗೆ ಒಳ್ಳೇ ಸಂದರ್ಭ

[illegible] ಕೊಂಗ್ರೆಸ್ [illegible] ಬ್ರಿಟಿಷ್ ಸರಕಾರದ ಇದುತನಕದ ಮಂತ್ರ ಪಾಲೀಸಿಗಳನ್ನೆಲ್ಲ ಸಹಿಸಿ[illegible]

ಕೊಂಗ್ರೆಸಿನ ತಾಳ್ಮೆ [illegible] ಮುಂದುವರಿಯಬಹುದೆಂಬ ಭರವಸೆಯಿಲ್ಲ. ಬ್ರಿಟಿಷ್ ರಾಜಕೀಯ ಮುತ್ಸದ್ದಿತನವು ದಿವಾಳಿಯಾದುದೇ ಆದರೆ [illegible] ಈ ಮಹಾ ಶಿಷ್ಟ ಸಂಸ್ಥೆಯು ತನ್ನ ಶಕ್ತಿಯಲ್ಲಿ ವ್ವ ಕೊನೆಯ ಒಂದೇ ಅಸ್ತ್ರವಾದ [illegible] ಹೋರಾಟವನ್ನು ಪ್ರಾರಂಭಿಸಬೇಕಾಗುವುದು. ಬ್ರಿಟಿಷರು ತಮ್ಮ ಹೃತ್ಪೂರ್ವಕತೆಯನ್ನು ಪ್ರದರ್ಶಿಸಲು ಈಗ ಸುಸಮಯವುಂಟಾಗಿದೆ. ಅವರೀ ಸುಸಂಧಿಯನ್ನು ಕಳಕೊಂಡು ನಿರಂತರವಾಗಿ ಭಾರತ ಜನತೆಯ ತಿರಸ್ಕಾರಕ್ಕೆ ಗುರಿಯಾಗಲಿಕ್ಕಿಲ್ಲವೆಂಬ ಹಾರೈಕೆ ಇದೆ.



ಸಾರಸ್ವ ಪ್ರಪಂಚ

ನವೀನ ನೆಪ

ರೇಶನ್ ಕಾರ್ಡುಗಳು ಕಳೆದು ಹೋಗಲು ಹಲವು ಕಾರಣಗಳಿವೆ. ಆದರೆ ಆಸ್ಟ್ರೇಲಿಯದ ಒರ್ವ ಗೃಹಸ್ಥನು ಅಲ್ಲಿನ ರೇಶನ್ ಅಧಿಕಾರಿಗಳಿಗೆ ಕೊಟ್ಟ ಕಾರಣವು ಅತಿ ವಿಚಿತ್ರವಾದುದು. ಅವನ ಕಾರ್ಡು ಅವನು ಸಾಕುತಿದ್ದ ಆನೆಯೊಂದು ತಿಂದಿತಂತೆ. ಅವನು ಸರ್ಕಸ್ ಕಂಪೆನಿಯವ. ಆನೆಗೆ ತಿಂಡಿ ಕೊಡುವಾಗ ಕಾರ್ಡು ಕೈತಪ್ಪಿ ಅದರಲ್ಲಿ ಸೇರಿತು.

ಆಸ್ಟ್ರೇಲಿಯಾ ಹೆಂಗಸರು ಅಲ್ಲಿನ ರೇಶನ್ ಅಧಿಕಾರಿಗಳಿಗೆ ಕೊಡುವಷ್ಟು ತಲೆನೋವು ಯಾರೂ ಕೊಡುವುದಿಲ್ಲ. ಆ ದೇಶದಲ್ಲಿ ನಮ್ಮ ದೇಶದಂತೆ ಮನೆಗಳ ತುಟ್ಟಿ [illegible] ಬಹಳವಿದೆ. ಆದರೂ ಹೊಸ ಕಾರ್ಡುಗಳಿಗೆ ಬರುವ ಅರ್ಜಿಗಳಲ್ಲಿ [illegible] ಕಾರಣಗಳೇ ಹೆಚ್ಚು [illegible] ಎಂಬ ಕಾರಣಗಳೂ ಬಹಳವಿವೆ.

ಮಿಲಿಯ ಪವನು ಹೊಗೆ

1945ರಲ್ಲಿ ಆಸ್ಟ್ರೇಲಿಯದ ಪ್ರತಿಯೊಬ್ಬ ಪ್ರಜೆಯು ಸುಮಾರು 4 ರಾತ್ತಲುಗಳಷ್ಟು ತಂಬಾಕು ಸೇದಿದ್ದಾನೆ. ಇಷ್ಟು ಹೊಗೆಸೊಪ್ಪಿಗೆ [illegible] 22 ಮಿಲಿಯ ಪವನುಗಳಷ್ಟು ಗುರಿಯಾಯಿತು. ಯುದ್ಧಕ್ಕೆ ಮುಂಚಿನ ವರ್ಷ ಕೇವಲ 70 ಲಕ್ಷ ಪವನುಗಳಷ್ಟು ಆದಾ[illegible] 1945ರಲ್ಲಿ ಆಸ್ಟ್ರೇಲಿಯನ್ನರು 4071 ಮಿಲಿಯ ಸಿಗರೇಟುಗಳನ್ನು ಮತ್ತು 158 ಲಕ್ಷ ಚುರುಟುಗಳನ್ನು ಸೇದಿರುತ್ತಾರೆ.

1 ಜನನಕ್ಕೆ 3 ಮರಣ

ಇಂದಿನ ಜರ್ಮನರ ಪರಿಸ್ಥಿತಿ

[illegible] ನಗರದ ಜನ ಸಂಖ್ಯೆ 30 ಲಕ್ಷ [illegible] 10 ಲಕ್ಷ [illegible] ಜರ್ಮನ್ [illegible]

ಜರ್ಮನ ಶರಣಾಗತಿಯಾದ ಕೂಡಲೇ ಅಲ್ಲಿನ ಮುದುಕರು ಮತ್ತು ಮಕ್ಕಳು ಸೊಕ್ಕಿಯೋ[illegible] ಸಾಯುತ್ತಿದ್ದರು. ಆಹಾರವಿಲ್ಲ, ಬಟ್ಟೆಯಿಲ್ಲ, ಮನೆಗಳಿಲ್ಲ.

ಬರ್ಲಿನಿನ 30 ಲಕ್ಷ ಜನಸಂಖ್ಯೆಯಲ್ಲಿ ಶೇಕಡಾ 60 ರಷ್ಟು ಸ್ತ್ರೀಯರಿರುವರಂತೆ. ಯುದ್ಧಕ್ಕೆ ಆಹುತಿಯಾದ ವಿಪರೀತ ಜರ್ಮನ ಗಂಡಸರಿಂದಾಗಿ ಈ ಪರಿಸ್ಥಿತಿ ಒದಗಿದೆ. ಬರ್ಲಿನಿನ ನದಿ ಕಾಲುವೆಗಳಲ್ಲಿ ಚೀನಾ ದೇಶದಂತೆ ಜನರು ದೋಣಿಯ ಮೇಲೆ ವಸಿಸಲು ಕಟ್ಟಿ ವಾಸಿಸುತ್ತಿರುವರಂತೆ.

ಜರ್ಮನರು ಪ್ರಖ್ಯಾತ ಶುನಕ ಪ್ರೇಮಿಗಳು. 1929ರಲ್ಲಿ ಬರ್ಲಿನ್ ನಗರದ ಪ್ರತಿ 20 ಜನರಿಗೆ ಒಂದರಂತೆ ಅಲ್ಲಿ ನಾಯಿಗಳಿದ್ದುವು— ಅಂದರೆ 189 ಸಾವಿರಗಳಷ್ಟಿದ್ದುವು. ಹಿಟ್ಲರನ ಆಳ್ವಿಕೆಯಲ್ಲಿ ನಾಯಿಗಳನ್ನು ಯುದ್ಧ ಘಾತಿಗೆ ಕೊಡಬೇಕಾಗಿ ಬಂಧುದರಿಂದಲೂ, ಮಾಂಸಕ್ಕಾಗಿಯೂ ಅವನ್ನುಪಯೋಗಿಸಿದುದರಿಂದಲೂ ಇಂದು ಅವುಗಳ ಸಂಖ್ಯೆ ಕಾಲಂಶವಾಗಿದೆ.

ಜಗತ್ತಿನ ಪುಟ್ಟ ಪ್ರಜಾಪ್ರಭುತ್ವ

ಸ್ಯಾಂಟ್ ಮೆರಿನೋದ ಉಜ್ವಲ ಆದರ್ಶ

ಅಧ್ಯಕ್ಷನಿಗೆ ೧೫ ರೂಪಾಯಿ ಸಂಬಳ

ಇಟಲಿಯಲ್ಲಿ ಹೋರಾಡುತ್ತಿದ್ದ ಕೆಲ ಅಮೇರಿಕನ್ ಸೈನಿಕರು, ನಾಜಿಗಳನ್ನು ಬೆನ್ನಟ್ಟಿ ರೋಮ್ ನಗರದ ಉತ್ತರಕ್ಕೆ ಸುಮಾರು 120 ಮೈಲು ದೂರ ಹೋದಾಗ ಒಂದು ಬೆಟ್ಟ ಪ್ರದೇಶದ ಬಯಲು ಪ್ರದೇಶದಲ್ಲಿ ಒರ್ವ ವಿಚಿತ್ರ ಪೋಷಾಕಿನ ಕಾವಲುಗಾರನಿಂದ ತಡೆಯಲ್ಪಟ್ಟರು. ಅವನೆಂದನು: "ಇದು ತಟಸ್ಥ ರಾಜ್ಯ, ಇಲ್ಲಿಂದ ದೂರವಿರಿ. ಅತಿಕ್ರಮ ಪ್ರವೇಶ ಮಾಡಿದರೆ ನಾವು ನಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡುವೆವು."

ಅಮೇರಿಕನ್ ಸೈನಿಕರಿಗೆ ಕೌತುಕವಾಯಿತು. ಆದರೆ ಅವರ ಬಳಿ ಇದ್ದ ಗುಪ್ತಚಾರನೊಬ್ಬನು "ಇದು ಸ್ಯಾಂಟ್ ಮೆರಿನೊ ದೇಶ. ಜಗತ್ತಿನ ಅತೀ ಚಿಕ್ಕ ಮತ್ತು ಅತಿ ಹಳೆ ಪ್ರಜಾಪ್ರಭುತ್ವವಿದು. ಕೇವಲ 38 ಮೈಲು ವಿಸ್ತೀರ್ಣ, ಜನ ಸಂಖ್ಯೆ 14 ಸಾವಿರ" ಎಂದ.

ಕುತೂಹಲದಿಂದ ಎಲ್ಲರೂ ಈ ಪುಟ್ಟ ಪ್ರಜಾರಾಜ್ಯದ ಕೂಲಂಕುಶ ವಿಚಾರವನ್ನು ತಿಳಕೊಂಡರು. ಅವರಿಗೆ ಈ ಕೆಳಗಿನ ಸ್ವಾರಸ್ಯವಾದ ಇತಿಹಾಸ ಸಂಗತಿಗಳು ತಿಳಿದವು.

ಸ್ಯಾಂಟ್ ಮೆರಿನೊ ಪ್ರಜಾಪ್ರಭುತ್ವವು 360ನೇ ಇಸವಿಯಲ್ಲಿ ಮೆರಿನಸ್ ಎಂಬ ಕಟ್ಟಡ ಶಿಲ್ಪಿಯಿಂದ ಸ್ಥಾಪಿಸಲ್ಪಟ್ಟಿತು. ಅವನ ಮರಣ ಸಂದೇಶ "ಎಲ್ಲಾ ಜನರಿಂದಲೂ ಸ್ವತಂತ್ರರಾಗಿರುವ ನಿಮ್ಮನ್ನು ನಾನು ಬಿಟ್ಟು ಹೋಗುತ್ತೇನೆ" ಎಂದಿತ್ತು.

ಜಗದ್ವಿಖ್ಯಾತ ನೆಪೋಲಿಯನನು ಇಟಲಿಯನ್ನು ಗೆದ್ದು ತನ್ನ ಸಂಬಂಧಿಕರೊಳಗೆ ಹಂಚುವ ಏರ್ಪಾಡಿನಲ್ಲಿದ್ದಾಗ ಅಕಸ್ಮಾತ್ ಅವನು ಈ ಚಿಕ್ಕ ದೇಶಕ್ಕೆ ಹಾದು ಬಂದ. ಅಲ್ಲಿನ ಜನತಾ ಪ್ರತಿನಿಧಿಗಳು ತಮ್ಮ ದೇಶ ವೈಶಿಷ್ಟ್ಯವನ್ನು ಕುರಿತು ಸೈನಿಕ ಚಕ್ರವರ್ತಿಗೆ ವಿಜ್ಞಾಪಿಸಿಕೊಂಡಾಗ ಕರುಣೆಗೊಂಡವನಾದ ಅವನು ಅದರ ಸ್ವಾತಂತ್ರ್ಯವನ್ನು ಹಾಗೇ ಬಿಟ್ಟುಬಿಟ್ಟನಲ್ಲದೆ ಇನ್ನಷ್ಟು ಪ್ರದೇಶವನ್ನು ಅದಕ್ಕೆ ಕೂಡಿಸಿ ಕೊಡುವೆನೆಂದು ವಾಗ್ದಾನವಿತ್ತ. ಆಗ ಮೆರಿನೋದ ಪ್ರಜಾ ಅಧ್ಯಕ್ಷನು "ಸ್ವಾಮಿ ನಮಗೆ ಇತರರ ಒಂದಂಗುಲ ಸ್ಥಳವೂ ಬೇಡ. ನಮ್ಮದರ ಒಂದಂಗುಲವನ್ನು ನಾವೂ ಬಿಟ್ಟುಕೊಡಲಿಚ್ಛಿಸುವುದಿಲ್ಲ"ವೆಂದ. ಅವನ ಉದಾರ ದಾನವನ್ನು ತಿರಸ್ಕರಿಸಿ ಬಿಟ್ಟು ಪ್ರಜಾಪ್ರಭುತ್ವದ ಉತ್ಕೃಷ್ಟ ತತ್ವ ನಿರ್ಮಲತೆಯನ್ನು ಜಗತ್ತಿಗೆ ತೋರಿಸಿಕೊಟ್ಟನು.

ಆಡಳಿತ ಪದ್ಧತಿ

ಸ್ಯಾಂಟ್ ಮೆರಿನೋದ ಆಡಳಿತವು ಎರಡು ಪ್ರಜಾಪ್ರತಿನಿಧಿ ಸಭೆಗಳಿಂದ ನಿರ್ವಹಿಸಲ್ಪಡುತ್ತದೆ. ವಿಧಾಯಕ ಸಭೆಯ ಕೆಳಮನೆಗೆ 60 ಪ್ರಜಾ ಪ್ರತಿನಿಧಿಗಳು ಪ್ರಜೆಗಳಿಂದಲೇ ಚುನಾಯಿಸಲ್ಪಡುತ್ತಾರೆ. ಎಲ್ಲಾ ಗಂಡಸರಿಗೆ ವೋಟಿನ ಹಕ್ಕಿದೆ. ಕೆಳಮನೆಯ ಪ್ರತಿನಿಧಿಗಳು ಮೇಲ್ಮನೆಯ 12 ಪ್ರತಿನಿಧಿಗಳನ್ನು ಆರಿಸುತ್ತಾರೆ. ಇದು ಅವರ ಹೌಸ್ ಆಫ್ ಲೋರ್ಡ್ಸ್ ಇಲ್ಲವೆ ಪ್ರಭುಸಭೆ. ಇವರು ವರ್ಷಕ್ಕೆ ಒಂದೆರಡಾವರ್ತಿ ಹೊಸ ಶಾಸನಗಳನ್ನು ಮಾಡುವರು. ಮಾತ್ರವಲ್ಲ ಪ್ರಜಾ ಪ್ರಭುತ್ವದ ಅಧ್ಯಕ್ಷರನ್ನು ಆರಿಸುವ ಹೊಣೆಗಾರಿಕೆಯು ಮೇಲ್ಮನೆಯವರದೇ. ಅವರು ಆ ಪ್ರತಿನಿಧಿಗಳನ್ನು ಆರಿಸಿ, ಅವರ ಹೆಸರುಗಳನ್ನು ಬರೆದ ಆರು ಚೀಟಿಗಳನ್ನು ಒಂದು ಪಾತ್ರೆಯಲ್ಲಿರಿಸಿ ಒರ್ವ ಚಿಕ್ಕ ಹುಡುಗನಿಂದ ಒಂದು ಚೀಟನ್ನು ತೆಗೆಸುತ್ತಾರೆ. ಅದರಲ್ಲಿ ಹೆಸರು ಇದ್ದವನೇ ಅಧ್ಯಕ್ಷ. ಈ ಸೋದ್ದಿ ಅಧ್ಯಕ್ಷನಿಗೆ ತಿಂಗಳಿಗೆ 15 ರೂ. ಸಂಬಳ!

ಸ್ಯಾಂಟ್ ಮೆರಿನೊ ಸರಕಾರ ತನ್ನ 12 ಮಂದಿಯ ಪೋಲಿಸ್ ಪೌಜಿಗೆ ಹೊರಗಿನವರನ್ನೇ ಸೇರಿಸುತ್ತದೆ. ಮೂರು ಡಾಕ್ಟರರು ಮತ್ತೊರ್ವ ಪಾದ್ರಿಯೂ ಹೊರಗಿನಿಂದಲೇ ತರಿಸಲ್ಪಡುತ್ತಾರೆ. ಕಾರಣ ಒಳಗಿನವರು ಪಕ್ಷಪಾತವಾಡಬಹುದೆಂದು.

ಅಲ್ಲಿ ಕಾಗದದ ನೋಟುಗಳಿಲ್ಲ. ಹಣವೆಲ್ಲ ನಾಣ್ಯಗಳಲ್ಲಿ. ವೃತ್ತಿ ತೆರಿಗೆ ಇಲ್ಲ. ಈ ದೇಶಕ್ಕೆ ಸಾಲವೂ ಇಲ್ಲ. ಆದರೆ ಅತ್ಯಲ್ಪ ಭೂಕಂದಾಯ ಮತ್ತು ಕಟ್ಟಡ ತೆರಿಗೆಯಿಂದ ಸರಕಾರ ಸಾಗುತ್ತಿದೆ. ಆರು ಕೋಣೆಯ ಮನೆಗೆ ಒಂದುವರೆ ರೂಪಾಯಿ ತೆರಿಗೆ. ಅಲ್ಲಿ ರೇಡಿಯೋಗಳಿವೆ— ಆದರೆ ಪ್ರಸಾರ ಕೇಂದ್ರವಿಲ್ಲ. ವಿಮಾನ ಟಪ್ಪಾಲು ಟಿಕೇಟುಗಳಿವೆ, ಆದರೆ ವಿಮಾನಗಳಿಲ್ಲ. ಅಲ್ಲಿಯ ಗಡಿಯಾರಗಳಲ್ಲಿ 12 ಗಂಟೆಗಳಿಲ್ಲ. ಅರ್ಧ ದಿನವನ್ನು 3 ಗಂಟೆಯ ನಾಲ್ಕು ಜಾಮುಗಳಾಗಿ ವಿಂಗಡಿಸಿದ್ದಾರೆ.

ಮೊದಲನೇ ಜಾಗತಿಕ ಯುದ್ಧದಲ್ಲಿ ಮೆರಿನೋ ದೇಶ ತಟಸ್ಥವಿದ್ದಿತು. ಅಲ್ಲಿಯ ಜನರು ಯುದ್ಧ ಗಾಯಾಳುಗಳಿಗಾಗಿ 25 ಸಾವಿರ ರೂಪಾಯಿಯಷ್ಟು ಹಣ ಶೇಖರಿಸಿ ಮಿತ್ರರಾಷ್ಟ್ರಗಳಿಗೆ ಕೊಟ್ಟರು. 15 ಜನ ಮೆರಿನೊ ಸ್ವಯಂಸೇವಕರು ವೈದ್ಯಕೀಯ ಶುಶ್ರೂಷೆಗಾಗಿ ಕಳುಹಲ್ಪಟ್ಟರು. ಅವರಲ್ಲಿ ಮೂವರನ್ನು ಜರ್ಮನರು ಸೆರೆಹಿಡಿದಾಗ ಕೋಪಗೊಂಡ ಮೆರಿನೊ ಸರಕಾರ ಜರ್ಮನಿಯ ಮೇಲೆ ಯುದ್ಧ ಸಾರಿತು.

ಕಳೆದ ಯುದ್ಧ ಕಾಲದಲ್ಲಿ ಮುಸೋಲಿನಿಗೆ ಈ ಪುಟ್ಟ ಪ್ರದೇಶ ಒಂದು ಭಾರಿ ಮುಳ್ಳಾಗಿ ತೋರಿತು. ಆದರೆ ಅದನ್ನು ವಶಪಡಿಸಿದರೆ "ಸೊಳ್ಳೆ ಮಾಂಸ ತಿಂದು ಜಾತಿ ಕಳಕೊಂಡಂತೇ ಸರಿ" ಎಂದು ಮುಸ್ಸೋಲಿನಿ ಮೆರಿನೊ ಸರಕಾರವನ್ನು ಲಂಚದಿಂದ ವಶಪಡಿಸಿದನು. ಆದರೆ ಅಲ್ಲಿನ ದೇಶ ಪ್ರೇಮಿಗಳು ಗುಪ್ತವಾಗಿ ಅಮೇರಿಕನ್ ರಾಯಭಾರಿಗೆ ತಮ್ಮ ಸಹಾನುಭೂತಿ ಸೂಚಿಸಿ ಪತ್ರ ಬರೆದರು.

ಸೇನ್ ಮೆರಿನೊ ಜಗತ್ತಿಗೆ ಒಂದು ಆದರ್ಶ ಕಲ್ಪಿಸಿದೆ. ಕೆಲವು ಅಂತರಾಷ್ಟ್ರೀಯ ಜುಗಾರಿಕೋರರು ಈ ಪ್ರಶಾಂತ ದೇಶದಲ್ಲಿ ದೊಡ್ಡದೊಂದು ಸಟ್ಟಾ ಕೇಂದ್ರ ತೆರೆಯುವ ಯೋಜನೆ ಮಾಡಿದ್ದರು. ಇದರಿಂದ ಅಲ್ಲಿನ ಸರಕಾರಕ್ಕೂ ತುಂಬಾ ಲಾಭವಿದೆಯೆಂದವರು ಗುಣಿಸಿ ತೋರಿಸಿದರು. ಆದರೆ ಅದರ ಅಧ್ಯಕ್ಷ ಹೀಗೆ ತಿಳಿಸಿದ: "ಕೇವಲ ಲೌಕಿಕ ಅಭಿವೃದ್ಧಿಯಿಂದ ಒಂದು ಸ್ವತಂತ್ರ ರಾಷ್ಟ್ರದ ಪವಿತ್ರತೆ ಉಳಿಯದು. ಅದರ ಜನತೆಯ ಉತ್ತಮ ಶೀಲಗಳೇ ಶ್ರೇಷ್ಠ ಕೀರ್ತಿ" ಮೇರಿನೊ ಸಟ್ಟಾ ಯೋಜನೆಯನ್ನು ತಿರಸ್ಕರಿಸಿತು.

ದ. ಕ. ವಿದ್ಯಾರ್ಥಿ ಕಾಂಗ್ರೆಸ್ ನೋಟಗಳು

ಸುವ್ಯವಸ್ಥಿತ ಕಾರ್ಯಕಲಾಪ

ಸೂಕ್ಷ್ಮವಾಗಿ ಅಭ್ಯಾಸಿಸಿ ನೋಡಿದರೆ ದಕ್ಷಿಣ ಕನ್ನಡಾ ಜಿಲ್ಲೆಗೆ ಹಲವು ವಿಷಯ ಕ್ಷೇತ್ರಗಳಲ್ಲಿ ಪ್ರಧಾನ ಸ್ಥಾನವಿದೆ. ಈ ಜಿಲ್ಲೆಗೆ ಹಲವು ವೈಶಿಷ್ಟ್ಯಗಳೂ ಇವೆ. ಶಿಕ್ಷಣ ವಿಚಾರದಲ್ಲೂ ಇದು ಬಹು ಮುಂದೆಂದು ಪರಿಗಣಿಸಲಾಗಿದೆ. ಯಾವ ರಾಜಕೀಯ ಇಲ್ಲವೆ ಸಾಮಾಜಿಕ ಚಳವಳದಲ್ಲೂ ಇದು ಮುಂದಿನ ಶ್ರೇಣಿಯಲ್ಲೇ ಬರಲು ಪ್ರಯತ್ನಿಸುತ್ತಿದೆ.

ದೇಶದಲ್ಲೆಲ್ಲಾ ಕಡೆಗಳಲ್ಲಿ ವಿದ್ಯಾರ್ಥಿ ಚಟುವಟಿಕೆಗಳು ಬೆಳಗುಗೊಳಿಸುವ ತೆರದಲ್ಲಿ ಭರದಿಂದ ಸಾಗುವಾಗ ನಮ್ಮ ಜಿಲ್ಲೆಯೂ ಅದರಲ್ಲೊಂದು ಅಗ್ರಸ್ಥಾನ ಹೊಂದಲು ಯತ್ನಿಸುವುದು.

ಈಚೆಗೆ ಪುತ್ತೂರಿನಲ್ಲಿ ನಡೆದ ಜಿಲ್ಲಾ ವಿದ್ಯಾರ್ಥಿ ಸಮ್ಮೇಳನವು ಒಂದು ಗಣನೀಯ ನಿದರ್ಶನ.

ಸುಮಾರು 200ಕ್ಕೆ ಮಿಕ್ಕಿ ವಿದ್ಯಾರ್ಥಿ ಪ್ರತಿನಿಧಿಗಳು ಜಿಲ್ಲೆಯ ನಾನಾ ಭಾಗಗಳಿಂದ ಅಲ್ಲಿ ನೆರೆದಿದ್ದರು. ಸಮ್ಮೇಳನಾ ಸ್ಥಳವು ಸರ್ವ ವಿಧದಿಂದಲೂ ಅನುಕೂಲ ಸ್ಥಳ. ಎಲ್ಲಾ ಏರ್ಪಾಡುಗಳೂ ಅಚ್ಚರಿಗೊಳಿಸುವ ಸುವ್ಯವಸ್ಥೆಯಿಂದ ನಿರ್ವಹಿಸಲ್ಪಟ್ಟಿದ್ದವು. ರಾಷ್ಟ್ರೀಯ ಕಾಂಗ್ರೆಸಿನ ಚಿಕ್ಕ ಮಾದರಿ ಅದಾಗಿತ್ತೆಂದರೆ ಅತಿಶಯವಾಗದು.

ವಿದ್ಯಾರ್ಥಿ ಪ್ರತಿನಿಧಿಗಳು ಶ್ಲಾಘನೀಯ ಕಾರ್ಯ ಗಾಂಭೀರ್ಯವನ್ನೂ ತಮ್ಮ ಕಲಾಪಗಳಲ್ಲಿ ಪ್ರದರ್ಶಿಸಿದರು. ಅವರ ಶಿಸ್ತು, ಪ್ರೌಢವು ಅನುಕರಣೀಯವಿತ್ತು. ಚರ್ಚಾ ಸಮಯದಲ್ಲಿ ಅವರ ಸ್ವಾತಂತ್ರ್ಯ ವಿಧಾನಕ ಶ್ರದ್ಧೆ ಆದರ್ಶಪ್ರಾಯವಿತ್ತು. ಪ್ರಜಾಪ್ರಭುತ್ವತತ್ವಕ್ಕೆ ಲೋಪ ಬಾರದಂತೆ ಅವರು ತುಂಬಾ ಸಹಿಷ್ಣುತೆ ತಾಳಿದ್ದರು. ವಿರೋಧಿಗಳ ಅಭಿಪ್ರಾಯಗಳಿಗೆ ಯೋಗ್ಯ ಗಮನ, ಆದರಗಳು ಕೊಡಲ್ಪಡುತ್ತಿದ್ದವು. ಶ್ರೇಷ್ಠ ಶಾಸನ ಸಭೆಯ ಸಾಂಪ್ರದಾಯಗಳಿಗೆ ತಕ್ಕುದಾಗಿ ವಿಷಯನಿರ್ಣಾಯಕ ಮತ್ತು ಬಹಿರಂಗಾಧಿವೇಶನಗಳು ಜರಗಿದುವು.

ಈ ಸಲ ಹಿಂದಿನಂತೆ ಕಿರುಕುಳಗಳಲ್ಲಿ ಚೈತನ್ಯ ವಿನಿಯೋಗಿಸಲ್ಪಡದೆ ಸಮ್ಮೇಳನದ ಯಾವ ಕಾರ್ಯಕ್ರಮದಲ್ಲೂ ಲಘು ಹೃದಯತ್ವವು ಪ್ರದರ್ಶಿಸಲ್ಪಡಲಿಲ್ಲ.

ಈ ವಿದ್ಯಾರ್ಥಿ ಸಂಸ್ಥೆಯ ಅಧಿಕಾರ ವರ್ಗದವರೂ ಮುಂದಾಳುಗಳೂ ಪ್ರಶಂಸನೀಯ ವ್ಯವಹಾರ ಕುಶಲತೆಯನ್ನೂ ರಚನಾ ಸಾಮರ್ಥ್ಯವನ್ನು ಮತ್ತು ಆಶಾದಾಯಕ ಮುಖಂಡತ್ವದ ಲಕ್ಷಣಗಳನ್ನು ತಮ್ಮ ಕಾರ್ಯ ನಿರ್ವಹಣೆಯಲ್ಲಿ ಪ್ರದರ್ಶಿಸಿ ಅಭಿನಂದನೀಯರಾಗಿರುವರು. ಒಟ್ಟಿನಲ್ಲಿ ಭಾಗವಹಿಸಿದವರೆಲ್ಲರೂ ಅತ್ಯಂತ ತೃಪ್ತಿಕರವಾಗಿ ತಮ್ಮ ಹೊಣೆಗಾರಿಕೆಯನ್ನು ಪೂರ್ತಿಗೊಳಿಸಿದ್ದು ಸಮ್ಮೇಳನದ ಅಸಾಧಾರಣ ಯಶಸ್ಸಿಗೆ ಕಾರಣವಾಯಿತು.

ವಿವಿಧ ವಿನೋದಾವಳಿ ಕಾರ್ಯಕ್ರಮಗಳಲ್ಲೂ ವಿದ್ಯಾರ್ಥಿಗಳು ಮೂಲ ಕಲ್ಪನೆಯ ಹಲವು ಮನರಂಜಕ ಕೃತಿಗಳನ್ನು ನೂತನ ನಟನಾ ಮಾಧ್ಯಮಗಳ ಮೂಲಕ ಪ್ರದರ್ಶಿಸಿ ತಮ್ಮ ಕಲಾ ಪ್ರೌಢಿಮೆಯನ್ನು ಬೆಳಗಿದರು.

ಇನ್ನು ಶೀಘ್ರದಲ್ಲಾಗುವ ದೇಶ ಪುನರ್ನಿರ್ಮಾಣ ಕಾರ್ಯದಲ್ಲಿ ಯೋಗ್ಯ ಜವಾಬ್ದಾರಿಕೆ ಹೊರಲು ನಮ್ಮ ಜಿಲ್ಲೆಯ ವಿದ್ಯಾರ್ಥಿಗಳು ಸರ್ವ ಸಿದ್ಧತೆಗಳನ್ನು ಮಾಡುತ್ತಿರುವುದು ಸಂತೋಷದ ಸಂಗತಿ. ಒಟ್ಟಿನಲ್ಲಿ ಈ ಕಾರ್ಯದಲ್ಲಿ ತಜ್ಞತೆಯನ್ನು ಹೊಂದಿರ ಬೇಕಾದ್ದು ಅನಿವಾರ್ಯವೆನ್ನಬಹುದು.

CANARA BANK LIMITED.

Estd 1906

(Incorporated in British India Liability of Members Ltd.)

SEASON DEPOSITS

of Rs 10,000 - and over in multiples of Rs. 1000/- and maturing within 30th September 1947 are now accepted at the following rates

3 months	2¼%
4 to 5 months	2½%
6 to 9 months	2¾%

Rates of Season Deposits of less than Rs 10,000/- with a minimum of Rs. 1000/- and in multiples of Rs. 500/- may be ascertained on application to our nearest branch.

ಜಿಲ್ಲಾ ಪರಿಚಯ

ಅನಾವರಣ: ಕೆನರಾ ಹೈಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ ತಾ. 5ರಂದು ಸದ್ರಿ ಶಾಲೆಯ ಸ್ಥಾಪಕ ಸದಸ್ಯರಲ್ಲೊಬ್ಬರಾಗಿದ್ದ ದಿವಂಗತ ರಂಗಪ್ಪ ಭಂಡಾರಿ ಅವರ ತೈಲ್ಯ ಚಿತ್ರ ಅನಾವರಣವನ್ನು ರಾ। ಬ। ರಾಮಚಂದರ್, ನಿವೃತ್ತ ಸೆಶ್ಶನ್ ಜಡ್ಜರು, ಅವರ ಶುಭಹಸ್ತದಿಂದ ನೆರವೇರಿಸಲಾಯಿತು. (ಚಿತ್ರವನ್ನು ದಿವಂಗತರ ಪುತ್ರರಲ್ಲೊಬ್ಬರಾದ ಡಾ। ರಮಾನಾಥ ಭಂಡಾರಿ ಅವರು ಶಾಲೆಗೆ ಪಾರಿತೋಷಕವಾಗಿ ಸಮರ್ಪಿಸಿದ್ದರು. ಅದನ್ನು ಮಲಯದ ಓರ್ವ ಚಿತ್ರಗಾರನು ತಯಾರಿಸಿದ್ದನು. ಡಾ ಭಂಡಾರಿಯವರು ಜಪಾನೀ ಆಕ್ರಮಿತ ಮಲಯದಲ್ಲಿ ಒಂದೆರಡು ವರ್ಷ ಸಿಕ್ಕಿಬಿದ್ದಿದ್ದು ಸುದೈವವಶಾತ್ ಸುರಕ್ಷಿತರಾಗಿ ಇತ್ತೀಚೆಗೆಂಬಂತೆ ಮಲಯದಿಂದ ಸ್ವದೇಶಕ್ಕೆ ಬಂದಿದ್ದರು) ಶ್ರೀಗಳಾದ ವೈಕುಂಠ ಬಾಳಿಗಾ ಡಾ। ಕೇಶವ ಪೈ, ಎಂ ವೆಂಕಟೇಶ ಪೈ ಮತ್ತು ರಾ। ಬ। ರಾಮಚಂದರ್ ಅವರು ದಿವಂಗತ ಭಂಡಾರಿಯವರ ವಕಾಲತು ವ್ಯವಹಾರದ ಧ್ಯೇಯ ಧರ್ಮಗಳನ್ನು ಮನರಂಜಕವಾಗಿ ವಿವರಿಸಿ ಅವರ ಜೀವನಾದರ್ಶವನ್ನು ಒತ್ತಿ ಹೇಳಿದರು

ದ. ಕ ಜಿಲ್ಲಾ ಕಾಂಗ್ರೆಸ್ ಕೆಲಸಗಾರರ ಸಮ್ಮೇಲನ

ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಸಾಮಾನ್ಯ ಮಹಾಸಭೆಯು ಇದೇ ತಾ 8ಕ್ಕೆ ಶನಿವಾರ ಮಧ್ಯಾಹ್ನ 3 ಗಂಟೆಗೆ ಜಿಲ್ಲಾ ಕಾಂಗ್ರೆಸ್ ಕಮಿಟಿ ಕಚೇರಿಯಲ್ಲಿ ಕೂಡಲಿರುವದು.

ಅದೇ ಸಂದರ್ಭದಲ್ಲಿ ಜಿಲ್ಲೆಯ ಕಾಂಗ್ರೆಸ್ ಕೆಲಸಗಾರರ ಪರಿಷತ್ತು, ಕೃಷಿಕ ಮಜೂರ ರಾಷ್ಟ್ರ ಸೇವಾದಲ ಹಿಂದೀ, ಖಾದಿ, ಹರಿಜನ ಮೊದಲಾದ ವಿಧಾಯಕ ಕಾರ್ಯಗಳಲ್ಲಿ ಆಸಕ್ತರಾದ ಕಾರ್ಯಕರ್ತರ ಮಹಾಸಭೆಯೂ ತಾ 9ಕ್ಕೆ ಪೂರ್ವಾಹ್ನ ಗಂಟೆ 10ಕ್ಕೆ ಕೆನರಾ ಹೈಸ್ಕೂಲಿನಸಭಾಭವನದಲ್ಲಿ ಜರುಗಲಿರುವದು. ಶ್ರೀಮತಿ ಕಮಲಾದೇವಿಯವರು ಈ ಸಭೆಯ ಅಧ್ಯಕ್ಷತೆ ವಹಿಸಲಿರುವರು.

ಸೇವಾದಲದ ರ್‍ಯಾಲಿ

ಇದೇ ತಾ 9ರಲ್ಲಿ ಸಾಯಂಕಾಲ 6 ಗಂಟೆಗೆ ಸಾರ್ವಜನಿಕ ಮೈದಾನಿನಲ್ಲಿ ರಾಷ್ಟ್ರ ಸೇವಾದಲದ ಜಿಲ್ಲಾ ಪ್ರದರ್ಶನ (Rally) ಜರುಗುವದು ಪ್ರತಿಯೊಬ್ಬ ಕಾರ್ಯಕರ್ತರೂ ತಂತಮ್ಮ ಭಾಗಗಳಿಂದ ಆದಷ್ಟು ಹೆಚ್ಚು ಜನರು ಕಾಂಗ್ರೆಸ್ ಕೆಲಸದಲ್ಲಿ ಆಸಕ್ತಿಯುಳ್ಳವರನ್ನು ಕರೆದುಕೊಂಡು ಬರಬೇಕಾಗಿ ಬಿನ್ನಹ

ಬೆನಿಫಿಟ್ ನಾಟಕ

ಇದೇ ತಾ 8ನೇ ರಾತ್ರಿ 10 ಗಂಟೆಗೆ ಮೈಸೂರಿನ ಶ್ರೀ ಚಾಮುಂಡೇಶ್ವರಿ ನಾಟಕ ಸಭಾ ಇವರು ಸೆಂಟ್ರಲ್ ಮೈದಾನಿನಲ್ಲಿ ಕಟ್ಟಿಸಲ್ಪಟ್ಟಿರುವ ತಮ್ಮ ಭವ್ಯವಾದ ಶ್ರೀ ಲಕ್ಷ್ಮೀ ನಾಟ್ಯ ~~ಮಂದಿರದಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿಯು~~ ವಿವಿಧ ವಿಧಾಯಕ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಸಾಗಿಸುವ ಬಗ್ಗೆ 'ಮಹಾ ಭಾರತ'ವೆಂಬ ನಾಟಕವನ್ನು ಸಹಾಯಾರ್ಥ (ಬೆನೆಫಿಟ್)ವಾಗಿ ಆಡಲಿರುವರು. ಈ ನಾಟಕವು ಮಹಾತ್ಮಾಗಾಂಧಿಯವರು ನಿರೂಪಿಸಿದ 1× ಬಗೆಯ ವಿಧಾಯಕ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸುವುದರ ಬಗ್ಗೆ ಪ್ರದರ್ಶಿಸಲ್ಪಡಲಿರುವದರಿಂದ ನಮ್ಮ ಜಿಲ್ಲೆಯ ಮಹಾಜನರು ಈ ಸಂದರ್ಭದಲ್ಲಿ ಚೆನ್ನಾಗಿ ಪ್ರೋತ್ಸಾಹಿಸಿ ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಹೆಚ್ಚಿಗೆ ಹಣ ದೊರಕುವಂತೆ ನೆರವಾಗಬೇಕಾಗಿ ವಿನಂತಿಸುತ್ತೇನೆ ಈ ನಾಟಕವು ಶ್ರೀಮತಿ ಕಮಲಾದೇವಿ ಇವರ ಅಧ್ಯಕ್ಷತೆಯಲ್ಲಿಯೇ ಜರುಗಲಿದೆ

ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮಹಾಸಭೆಗೆ ಠರಾವು ಕಳಿಸುವ ಸದಸ್ಯರು ಅದನ್ನು ನಮ್ಮ ಕಚೇರಿಗೆ ತಾ 7ಕ್ಕೆ ಅಥವಾ ಅದರ ಒಳಗೆ ಮುಟ್ಟುವಂತೆ ಕಳಿಸಬೇಕು

ವಿಶೇಷ ಸೂಚನೆ

ಕಾಂಗ್ರೆಸ್ ಕೆಲಸಗಾರರ ಪರಿಷತ್ತಿಗೆ ಬರುವ ಕೆಲಸಗಾರರು ತಾ 5ಕ್ಕೆ ಅಥವಾ ಅದರ ಒಳಗೆ ಮುಟ್ಟುವಂತೆ ಎಷ್ಟು ಜನರು ಬರುವರು. ಎಂಬುದನ್ನು ತಿಳಿಸಬೇಕು ಈ ಪರಿಷತ್ತಿಗೆ ಬರುವವರ ಊಟದ ವ್ಯವಸ್ಥೆ ತಾ 8ನೇ ರಾತ್ರಿ ಹಾಗೂ ಮರುದಿನ ಮಾಡಲಾಗುವುದು ಬಂದೊಡನೆ ತಮ್ಮ ಹೆಸರು ದಾಖಲುಮಾಡಿಸಿ ರೂಪಾಯಿ 1(ಒಂದು) ಕೊಟ್ಟು ನಮ್ಮ ಕಚೇರಿಯಿಂದ ಊಟದ ಟಿಕೇಟನ್ನು ಕೊಳ್ಳಬೇಕು. ಒಟ್ಟಿನಲ್ಲಿ ಈ ಸಲದ ಪರಿಷತ್ತು ಯಶಸ್ವಿಯಾಗಿ ಜರಗುವಂತೆ ಎಲ್ಲರೂ ಸಹಕರಿಸಿ ನೆರವಾಗಬೇಕೆಂದು ವಿಜ್ಞಾಪಿಸುವ.

ಕೆ ಕೆ. ಶೆಟ್ಟಿ, ಪ್ರಧಾನ ಕಾರ್ಯದರ್ಶಿ ಮಂಗಳೂರು, ತಾ. 26–1–47.

ಆಹಾರ ಮಂತ್ರಿಗಳಿಗೆ ಒಂದು ಮನವಿ

ಜಿಲ್ಲಾ ಆಹಾರ ಸಮಿತಿಯ ಸದಸ್ಯರಾದ ಶ್ರೀ ಸುಬ್ಬಣ್ಣ ಶೆಟ್ಟರು ಪ್ರಾಂತೀಯ ಆಹಾರ ಮಂತ್ರಿ ರಾಘವ ಮೆನೊನರಿಗೆ ತಾ 9 1 47ರಂದು ಮನವಿಯೊಂದನ್ನು ಅರ್ಪಿಸಿದ್ದಾರೆ ಅದರ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ

ರಿಕ್ವಿಸಿಶನ್ ಆದ ಅಕ್ಕಿಯನ್ನು ಸಕಾಲದಲ್ಲಿ ಸ್ಟೋರಿಗೊಪ್ಪಿಸದ ಕಾರಣಕ್ಕಾಗಿ ಅಕ್ಕಿಯ ಬೆಲೆಯಲ್ಲಿ ಕಡಿತವಾದುದರ ಬಾಬ್ತು ಸುಮಾರು ರೂ 69,000 ಈಗ ದಕ್ಷಿಣ ಕೇಂದ್ರ ಸಹಕಾರಿ ಸ್ಟೋರಿನವರ ವಶವಿದೆ ಈ ಹಣವನ್ನು ಯಾವ ಯಾವ ತಾಲೂಕುಗಳಿಂದ ಎಷ್ಟೆಷ್ಟು ಪಡೆಯಲಾಗಿದೆಯೊ ಆ ತಾಲೂಕುಗಳ ರೆವಿನ್ಯೂ ಡಿವಿಜನಲ್ ಆಫೀಸರರ ವಶಕೊಟ್ಟು ಹಣವನ್ನು ಬೇಸಾಯಗಾರರ ಉಪಯೋಗಕ್ಕಾಗಿರುವ ಕಾಲುಸೇತುವೆ ಸಾಕೆಸುವ ಹಾಗೂ, ನೆರೆ ಹಾವಳಿಯಿಂದ ಮನೆ ಕಳಕೊಂಡ ಬಡ ಬೇಸಾಯಗಾರರ ಮನೆ ಕಟ್ಟಿಸುವುದಕ್ಕೂ ಉಪಯೋಗಿಸಬೇಕು.

ಈಗಿನ ಹಮಗೆಯ ಪದ್ಧತಿಯಿಂದ ಅನಕ್ಕಿ ಕುಟ್ಟುವ ವೃತ್ತಿಯವರು ತಮ್ಮ ವೃತ್ತಿಯನ್ನೇ ಕಳಕೊಳ್ಳುವಂತಾದ್ದರಿಂದ ಹಸುಗೆ ಕಾರ್ಡುಳ್ಳವರಿಗೆ, ಅವಲಕ್ಕಿಯನ್ನೂ ರೇಶನ್ ಮಿತಿಯೊಳಗೆ ಕೊಡಿಸುವಂತೆ ಸಹಕಾರಿ ಸಂಘ ಅಥವಾ ಗ್ರಾಮಸಭೆಯವರು ವ್ಯವಸ್ಥೆ ಮಾಡಿ ಈ ವೃತ್ತಿಯವರಿಗೆ ಗತಿ ಕಾಣಿಸಬೇಕು

ಮೆಣಸು ಬೆಲ್ಲ ತೆಂಗಿನಕಾಯಿ ತೆಂಗಿನೆಣ್ಣೆ ಮತ್ತು ಬೆಂಕಿಪೆಟ್ಟಿಗೆಗಳ ದುರ್ಲಭ ವಸ್ತುಗಳಿಗೆ ತ್ರಿವ ಸರಕಾರವೇನೊ ತೆಂಗಿನೆಣ್ಣೆಯ ಬೆಲೆಯನ್ನು ನಿಯಂತ್ರಿಸಿದೆ ಆದರೆ ಇದರಿಂದ ಏನೂ ಉಪಕಾರ ಹೊಂದುವ ಒದಲೇ ಕಷ್ಟವನ್ನೇ ಅನುಭವಿಸಬೇಕಾಗಿದೆ ಎಣ್ಣೆ ಮತ್ತು ಮೇಲೆ ಸೂಚಿಸಿದ ಪದಾರ್ಥಗಳ ಕಳ್ಳ ವ್ಯಾಪಾರವು ಮೇರೆ ಮೀರಿ ನಡೆಯುತ್ತಿದೆ ಸರಕಾರ ಇದಕ್ಕೆ ಕಡೆ ಗಮನಕೊಡಲೇ ಬೇಕು

ನಮ್ಮ ಜಿಲ್ಲೆಗೆ ಉತ್ತರದ ಸಕ್ಕರೆಯ ಮಿತಿ ಅತ್ಯಲ್ಪವಾಗಿದೆ 9000 ಗೋಣಿ ಸಕ್ಕರೆಯನ್ನು (ಈಗ ಇದನ್ನು 775 ಗೋಣಿಗಿಳಿಸಲಾಗಿದೆ) 22,000 ಪ್ರಜೆಗಳಿಗೆ ಪ್ರತಿ ತಿಂಗಳೂ ಹಂಚಬೇಕಾಗಿದೆ ನಮಗೆ ಪ್ರತಿ ತಿಂಗಳಿಗೂ 8000 ಗೋಣಿಯಷ್ಟಾದರೂ ಸಕ್ಕರೆ ಸಿಗುವಂತಾಗಬೇಕು.

ಅಕ್ಕಿಯನ್ನು ಬೇಗನೆ ತಯಾರಿಸಿ ಕೊಟ್ಟ ಒಗ್ಗೆ ಕೊಡಲಾಗುತ್ತಿರುವ ಬೋನಸ್ಸು ಒಕ್ಕಲಿಗೆ ಸಿಗುವಂತಾಗಬೇಕು.

ವರ್ಗ: ಶ್ರೀ ಎಂ ಆದಿಕೇಶವಲು ನಾಯ್ಡು ಅವರ ಸ್ಥಾನಕ್ಕೆ ಶ್ರೀ ಎಸ್ ವೆಂಕಟಾಚಲಂ ನಾಯ್ಡು ಅವರು ಈ ಜಿಲ್ಲೆಯ ಜನರಲ್ ಡ್ಯೂಟಿ (ಪುತ್ತೂರು) ವರ್ಗಾಯಿಸಲ್ಪಟ್ಟಿದ್ದಾರೆ

ಪ್ರವಾಸ: ಕೆನರಾ ಹೈಸ್ಕೂಲ್ ಬುಲ್ಬುಲ್ ಟ್ರೂಪಿನ ಕಾಮಧೇನು ದಳದ 12 ಮಂದಿ ಬಾಲವೀರರು ಅವರ ಸ್ಕೌಟು ಮಾಸ್ಟರರ ನಾಯಕತ್ವದಲ್ಲಿ ದೇರೆಬೈಲು ಬಳಿ ಪರಪಾದೆ ಎಂಬ ಸ್ಥಳಕ್ಕೆ ಇತ್ತೀಚೆಗೆ ಪ್ರವಾಸ ನಡೆಸಿದರು ಸ್ಕೌಟು ದಂಡುಗಳ ಉಪಯೋಗ, ಸ್ಕೌಟು ಪತಾಕೆ ಹಾರಿಸುವುದು ಮೊದಲಾದವುಗಳ ಸ್ಪರ್ಧಾ ರೀತಿಯ ಪ್ರದರ್ಶನಗಳೂ ಇನ್ನಿತರ ಚಟುವಟಿಕೆಗಳೂ ಪ್ರವಾಸದ ಮುಖ್ಯಾಂಗಗಳಾಗಿದ್ದುವು.

ಪ್ರಕಾಶ ಸಂಘ: ಈ ಸಂಘದ 8ನೇ ವಾರ್ಷಿಕೋತ್ಸವವು ಕಳೆದ ತಾ. 2ನೇ ಭಾನುವಾರ ಸಂಜೆ ಮಿಶನ್ ಹೈಸ್ಕೂಲಿನಲ್ಲಿ ಜರಗಿತು. ಶ್ರೀ ಸೇಡಿಯಾಪು ಕೃಷ್ಣಭಟ್ ವಿದ್ವಾನ್ ಅವರು ಸಭಾಧ್ಯಕ್ಷರಾಗಿದ್ದರು. ಸ್ವಾಗತ ಭಾಷಣವಾಗಿ ಕಾರ್ಯದರ್ಶಿ ಶ್ರೀ ಎಂ. ನವೀನಚಂದ್ರ ಅವರಿಂದ ವರದಿ ವಾಚನವೂ, ಶ್ರೀಗಳಾದ ಬೇಲಿಗದೆ ಅಪ್ಪಯ್ಯ, ಬೇಲಿಗದೆ ಗೋಪಾಲ ಕೃಷ್ಣ ಮೊದಲಾದವರಿಂದ ಸಮಯೋಚಿತ ಭಾಷಣಗಳೂ, ಅಧ್ಯಕ್ಷರ ಕೊನೆ ನುಡಿಯೂ ಮುಗಿದ ಬಳಿಕ 'ವಿವಿಧ ವಿನೋದಾವಳಿ'ಗಳು ಪ್ರೇಕ್ಷಕರನ್ನು ಸಂತೋಷ ಪಡಿಸಿದುವು.

ಹೊಸ ನೇಮಕ:–ದಕ್ಷಿಣ ಕನ್ನಡ ಜಿಲ್ಲೆಗೊಬ್ಬ "ಪಬ್ಲಿಸಿಟಿ ಆಫೀಸರ್"ರನ್ನು ಮದ್ರಾಸು ಸರಕಾರದವರು ಹೊಸದಾಗಿ ನೇಮಿಸಲಿದ್ದಾರೆ ಆಫೀಸರರು "ಸರಕಾರದ ತಿಳುವಳಿಕೆ ಕೊಡುವ ಮತ್ತು ಪ್ರಕಟನಾ ಶಾಖೆ" ಕೈಗಳಿಗೆ ಕೆಲಸ ಮಾಡಬೇಕಾಗಿದೆ ಮುಖ್ಯ ಕಾರ್ಯಾಲಯದಿಂದ 'ಪ್ರಕಟಣಾ ಪಹಿ'ಗಳನ್ನು ಹೊರಡಿಸಲು ಅನುಕೂಲಿಸುವ ಹಾಗೆ ವಿಷಯ ಸಂಗ್ರಹ ಮಾಡುವುದೂ, "ಸರಕಾರದ ವಿರುದ್ಧವಾದ ಪ್ರಚಾರ ಕಾರ್ಯ"ಕ್ಕೆ ಪ್ರತಿ ಹೇಳುವುದೂ ಈ ಆಫೀಸರರ ಮುಖ್ಯ ಕರ್ತವ್ಯಗಳಾಗಿವೆ. ಈ ಹುದ್ದೆಗಳಿಗೆ ತಕ್ಕ ಮಂದಿಯನ್ನು ಒಂದೆರಡು ವಾರಗಳೊಳಗೇ ಆರಿಸಲಾಗುತ್ತದೆ

ತೆಂಗಿನೆಣ್ಣೆ ಮತ್ತು ಕಾಯಿ ಬೆಲೆ: ಕೇಂದ್ರ ಸರಕಾರವು ತೆಂಗಿನ ಎಣ್ಣೆಯ ಮತ್ತು ಕೊಬ್ಬರಿಯ ಬೆಲೆಯನ್ನು ಸಾರ್ವತ್ರಿಕವಾಗಿ ನಿಯಂತ್ರಿಸಿದ ಮೇರೆಗೆ ಮದ್ರಾಸ್ ಸರಕಾರದವರು ತೆಂಗಿನ ಕಾಯಿಯ ಸಾವಿರದ ಬೆಲೆಯನ್ನು 1.5 ರೂಪಾಯಿಗಳಂತೆಯೂ ಚಿಲ್ಲರೆ ಒಂದರ ಬೆಲೆ 0–2 8ಯಂತೆಯೂ ಮಾರುವಂತೆ ನಿಯಂತ್ರಣಾಜ್ಞೆ ಹೊರಡಿಸಿರುವರು. ತೆಂಗಿನೆಣ್ಣೆಯ ಬೆಲೆ ಮಣಕ್ಕೆ ರೂಪಾಯಿ 86 ಎಂದೂ ಚಿಲ್ಲರೆ ಸೀಸಕ್ಕೆ (20 ತೊಲೆ) ರೂ 2 –(ಎಂದೂ ನಿರ್ದಿಷ್ಟಗೊಳಿಸಲಾಗಿದೆ

ತೆಂಗಿನ ಕಾಯಿಯೊಂದರ ಬೆಲೆ ಎರಡು ಕಾಲಾಣೆ ಎಂದು ನಿಯಂತ್ರಿಸುವಾಗ ಸರಕಾರವು ಅಂತಹ ಕಾಯಿಗಳ ಆಕೃತಿ ಇಲ್ಲವೆ ಭಾರ ಮೊದಲಾದುವುಗಳ ಒಂದು ಅಂದಾಜು ಪ್ರಮಾಣವನ್ನಾದರೂ ತಿಳಿಸಬೇಕಿತ್ತೆಂದೂ ಹಾಗೆ ಮಾಡದಿದ್ದುದರಿಂದ ಸಾರ್ವಜನಿಕರಿಗೆ ಅತೀ ಚಿಕ್ಕ ಎಳೆತು ಕಾಯಿಗಳ ಮಾತ್ರ ಸಿಗುವಂತಾಗಿ ದೊಡ್ಡವು ಗುಪ್ತ ದಾಸ್ತಾನಿಗೊ ಕಳ್ಳಸಂತೆಗೂ ಮಾಯವಾಗಬಹುದೆಂದೂ ಶಂಕಿಸಲಾಗಿದೆ ಆದರೆ ಈ ವಿಷಯ ಒಳ್ಳೆ ಉಪಾಯಗಳನ್ನು ಕೈಕೊಳ್ಳುವುದಾಗಿಯೂ ತಿಳಿಸಿರುವುದರಿಂದ ಸ್ವಲ್ಪ ಧರವಸೆಪಟ್ಟುಕೊಳ್ಳಬಹುದು.

ಈಗಿನ ಮಾರಾಟಗಾರರು ಮೊದಲಿನ ಲೆಕ್ಕ ಯಲ್ಲಿ ಎಣ್ಣೆಯನ್ನು ಸಾರ್ವಜನಿಕಕ್ಕೆ ಒಡೆದಿದ್ದರೆ ಅದರ ವ್ಯಾಪಾರ ವಹಿವಾಟನ್ನು ಸಂಪೂರ್ಣವಾಗಿ ಸಹಕಾರಿ ಸಂಘಗಳಿಗೂ ವ್ಯಾಪಾರ ~~ಸ್ಟೋರುಗಳಿಗೂ ವಹಿಸಿಕೊಡುವುದಾಗಿ ಸರಕಾ~~ರ ಪ್ರಕಟನೆ ಎಚ್ಚರಪಡಿಸುವುದನ್ನು ಸಂಬಂಧಪಟ್ಟವರು ಗಮನಿಸುವುದವಶ

ಅನಾವರಣ:–ಸ್ಥಳೀಯ ಮಿಶನ್ ಹೈಸ್ಕೂಲಿನಲ್ಲಿ ಅಧ್ಯಾಪಕ ಸೇವೆ ಸಲ್ಲಿಸಿ ಇತ್ತೀಚೆಗೆ ಅಕಾಲ ನಿಧನಹೊಂದಿದ ಕನ್ನಡ ಪಂಡಿತ ಶ್ರೀ ರಾಮಶರ್ಮ, ಶಿರೋವಣಿ ಮತ್ತು ಶ್ರೀ ಎಮ್ ಆನಂದರಾವ್ ಇವರುಗಳ ಭಾವಚಿತ್ರ ಅನಾವರಣ ಸಮಾರಂಭವು ಮಿಶನ್ ಹೈಸ್ಕೂಲಿನಲ್ಲಿ ಕಳೆದ ತಾ 24ರಂದು ಸಂಜೆ ಸಂಸ್ಕೃತ ಮಹೋಪಾಧ್ಯಾಯ ಶ್ರೀ। ನಿಡ್ಲೋಣಿ ಅನಂತ ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಜರಗಿತು. ದಿವಂಗತ ರಾಮಶರ್ಮರ ಆದರ್ಶ ಗುಣಗಳ ಕುರಿತು ಶ್ರೀ। ನಿಡ್ಲೋಣಿ ಅನಂತ ಉಪಾಧ್ಯಾಯರೂ, ದಿವಂಗತ ಆನಂದರಾಯರ ಕುರಿತು ಶ್ರೀ। ಬಿ. ವಿ ಬಾಳಿಗರೂ ಭಾಷಣ ಮಾಡಿದರು.

ದಕ್ಷಿಣ ಕನ್ನಡ ಜವುಳಿ ಸಾಹುಕಾರರ ಸಂಘ: ಇದರ ವರ್ಷಾವಧಿ ಮಹಾಸಭೆಯು ಇದೇ ಕಳೆದ ತಾ. 25-1-'47ರಲ್ಲು ಜರಗಿತು. ಬಾಲ್ತಿ ವರ್ಷದ ಆಡಳಿತ ಸಮಿತಿಯ ಚುನಾವಣೆಯು ನಡೆದು, ಶ್ರೀ ಧೀರಜಲಾಲ್ ವಿಠಲಜೀ– ಅಧ್ಯಕ್ಷ, ಮಿ. ಎ. ಆರ್. ಡಿ'ಸೋಜ– ಉಪಾಧ್ಯಕ್ಷ; ಶ್ರೀ ದೇವಿದಾಸ ಗಿರಧರಲಾಲ್ ಗೌರವ ಕಾರ್ಯದರ್ಶಿ; ಶ್ರೀ ಡಿ. ಎಸ್. ನಗರ್ಕಾರ–ಜತೆ ಕಾರ್ಯದರ್ಶಿ – ಮಿ. ಆರ್ ಎಫ್. ಎಲ್ಸ್ ಫೆರ್ನಾಂಡೀಸ–ಖಜಾಂಚಿ ಮತ್ತು ಜಿಲ್ಲೆಯ ಬೇರೆ ಬೇರೆ ಕಡೆಯ ಪ್ರತಿನಿಧಿಗಳಲ್ಲಿ 20ಮಂದಿಯನ್ನು ಸಮಿತಿಯ ಇತರ ಸದಸ್ಯರನ್ನಾಗಿಯೂ ಆರಿಸಲಾಯಿತು.

ಮಹಾಸಭೆಯಲ್ಲಿ ಹಲವು ನಿರ್ಣಯಗಳು ಮಂಜೂರಾದುವು. ಎಷ್ಟೋ ಕಾಲದಿಂದ ಸ್ಥಾಪಿತವಾದ ವ್ಯಾಪಾರಿಗಳ ಕೈಯಲ್ಲಿದ್ದ ಜವುಳಿ ವ್ಯಾಪಾರವನ್ನು ಕೋಪರೇಟಿವ್ ಸ್ಟೋರುಗಳಿಗೆ ಒಪ್ಪಿಸಿಕೊಡಬೇಕೆಂಬ ಮದ್ರಾಸು ಸರಕಾರದ ಯೋಜನೆಯನ್ನು ಈ ಮಹಾಸಭೆಯು ಬಲವಾಗಿ ಖಂಡಿಸುತ್ತದೆ. ಈಗಿರುವ ನೂಲು ಮತ್ತು ವಸ್ತ್ರದ ತುಟ್ಟಿಯನ್ನು ಹೋಗಲಾಡಿಸುವರೆ ಹೊಸ ಗಿರಿಣಿಗಳನ್ನು ಸ್ಥಾಪಿಸುವುದೇ ಸರಕಾರದ ಮುಖ್ಯ ಕರ್ತವ್ಯವೆಂದೂ ಒತ್ತಾಯಪಡಿಸುತ್ತದೆ.

ಜವುಳಿ ವ್ಯಾಪಾರಿಗಳ ಹಿತಸಾಧನೆ ಬಗ್ಗೆ ತಕ್ಕ ಕಾರ್ಯಕ್ರಮವನ್ನು ಕೈಕೊಳ್ಳುವರೆ ಒಂದು ಉಪಸಮಿತಿಯನ್ನುನೇಮಿಸಲಾಯಿತು ಮತ್ತು ಇದೇ ಬರುವ ತಾ 30–1 '47ನೇ ಗುರುವಾರ ಸರಕಾರದ ಬಟ್ಟೆ ಧ್ಯೇಯವನ್ನು ಖಂಡಿಸುವ ಉದ್ದಿಶ್ಯ ಹರತಾಳವನ್ನಾಚರಿಸಬೇಕೆಂದೂ ಜವುಳಿ ಅಂಗಡಿಗಳೆಲ್ಲ ಜಿಲ್ಲೆಯಲ್ಲಿ ತೆರದಿರಬಾರದೆಂದೂ ನಿರ್ಣಯಿಸಲಾಯಿತು

ಪುತ್ತೂರು

ನಿಧನ:–ಇಲ್ಲಿಯ ಬೋ। ಹಾ। ಎಲಿಮೆಂಟರೀ ಶಾಲೆಯ ಒಂದನೇ ಸಹ ಅಧ್ಯಾಪಕರಾಗಿದ್ದ ಶ್ರೀ। ಬ ರಾಮಪ್ಪಯ್ಯ ಅವರು ತಾ 28ನೇ ರಾತ್ರಿ ಹೃದಯ ಸ್ತಂಭನದಿಂದ ಮೃತಪಟ್ಟಿರವುದು ಶೋಚನೀಯವಾಗಿದೆ ದುಃಖಸೂಚನೆ ಬಗ್ಗೆ ತಾ 30ರಲ್ಲು ಶಾಲೆಗೆ ರಜೆ ಕೊಡಲ್ಪಟ್ಟಿತು.

ಪುಸ್ತಕ ವಿಮರ್ಶೆ

ಶ್ರೀ ರಾಮಭಕ್ತಿಯ ರಹಸ್ಯ: ಸಧರ್ಮ ಪ್ರಚಾರಕ ಗ್ರಂಥಮಾಲೆಯ ಒನೇ ಪುಷ್ಪ ಲೇಖಕರು ಶ್ರೀ ಎಂ ಚಂದ್ರೇಶ್ವರರು. ಮುಂಬಾಯಿ "ವೈದಿಕ ಧರ್ಮ ಪ್ರಚಾರಕ ಶ್ರೀ ಬಿ ಲಕ್ಷ್ಮೀ ಇಬೇಷ ವಿದ್ಯಾರ್ಥಿ ಇವರಿಂದ ಪ್ರಕಾಶಿಸಲ್ಪಟ್ಟಿದೆ.

ಜನತೆಯಲ್ಲಿ ಸನಾತನ ವೈದಿಕ ಧರ್ಮದ ಅಮೂಲ್ಯ ತತ್ವಗಳನ್ನು ಚಿಕ್ಕ ಪುಸ್ತಕಗಳ ಮೂಲಕ ಪ್ರಚಾರಗೊಳಿಸಿ ಹಿಂದೂ ಸಮಾಜದಲ್ಲಿ ಧಾರ್ಮಿಕ ಸಾಮಾಜಿಕ ಮತ್ತು ರಾಜಕೀಯ ಜಾಗೃತಿಯನ್ನುಂಟುಮಾಡುವುದೇ ಈ ಗ್ರಂಥಮಾಲೆಯ ಮುಖ್ಯ ಉದ್ದೇಶ ಮಾನವ ಸಂಸಾರ ಜೀವನದಲ್ಲಿ ಭಗವಾನ್ ಶ್ರೀ ರಾಮಚಂದ್ರನದು ಅತ್ಯಮೋಘ ಆದರ್ಶ ಅದನ್ನು ಅನುಕರಣೆ ಮಾಡಿ ಪ್ರತಿಯೊಬ್ಬ ಮಾನವನೂ ಧನ್ಯನಾಗಲೊಳಿಸಬಹುದು. ನಾನಾತರದ ಅಪ್ರಾಗತಿಕ ಮತ್ತು ಮೂಢ ನಂಬಿಕೆ ಅಂಧ ಆಚಾರವಿಚಾರಗಳಿಂದಲೂ ಮ್ಲೇಂಛ ಮತ್ತು ಪರಕೀಯವಾದ ದುಷ್ಟ ಸಾಂಸ್ಕೃತಿಕ ಸಂಪರ್ಕದಿಂದಲೂ ಅಧೋಗತಿಗಿಳಿಯುತ್ತಿರುವ ಹಿಂದೂ ಸಮಾಜವು ಸಕಲ ದುರಿತ ಪರಿಹಾರ ಸಾಧಕವಾದ ಶ್ರೀ ನಾಮಸಾಮೋದ್ಧರಣೆಯಿಂದ ಹೇಗೆ ಅಂತರ್ ಶುದ್ಧಿಯನ್ನು ಹೊಂದಬಹುದೆಂದು ಲೇಖಕರು ಚಿತ್ತಾಕರ್ಷಕ ಸರಳ ಗಂಭೀರ ಶೈಲಿಯಲ್ಲಿ ವಿವರಿಸಿದ್ದಾರೆ ಕನ್ನಡಿಗನೂ ಹಿಂದೂವೂ ಆದ ಪ್ರತಿಯೊಬ್ಬನೂ ಅತ್ಯಾವಶ್ಯಕವಾಗಿ ಓದಿ ತಿಳಕೊಳ್ಳಬೇಕಾದ ವಿಷಯ ನಿರೂಪವುಳ್ಳ ಪುಟ್ಟ ಪುಸ್ತಕದ ಕರ್ತೃಗಳು ಅಭಿನಂದನೀಯರು. ಅವರ ಸಾಹಸಕ್ಕೆ ಯಶ ಕೋರುವೆವು ಕ್ರೌನ್ ಸ್ತ ಆಕೃತಿಯ 20 ಪುಟಗಳು. ತೃಪ್ತಿಕರ ಮುದ್ರಣ ಬೆಲೆ 0–2–9 ಮಾತ್ರ.

'ನಾಥ'

ಸಾದರ ಸ್ವೀಕಾರ

ದೇವತಾ ಮನುಷ್ಯ: ಮನೋಹರ ಗ್ರಂಥಮಾಲೆಯ ಆ–ಅಗನೇ ಕುಸುಮ ಕ್ರೌನ್ ಅಷ್ಟ ಪುಟದ ೩೨+೪ ಪುಟಗಳು. ಬೆಲೆ ೦–೧೨–೦. ಲೇಖಕರು ಕಡೆಂಗೋಡ್ಲು ಶಂಕರ ಭಟ್ಟ. ಪ್ರಕಾಶಕರು ಮನೋಹರ ಗ್ರಂಥಪ್ರಕಾಶನ ಸಮಿತಿ, ಧಾರವಾಡ.

ಕಾಂಗ್ರೆಸ್ಸೂ ದೇಶೀಯ ಸಂಸ್ಥಾನಗಳೂ

'ಅವು ಅಖಂಡ ಭಾರತದಲ್ಲೇ ಸೇರಿರಬೇಕು'

ಪಂಡಿತ ನೆಹರು ಅವರ ಸ್ಪಷ್ಟೋಕ್ತಿ

ಭಾವೀ ಸ್ವತಂತ್ರ ಭಾರತದ ಘಟನೆ ರಚನೆಯಾಗುವ ಕಾಲದಲ್ಲಿ ಈ ದೇಶದ ರಾಜಕೀಯದಲ್ಲಿ ಅತೀ ತೊಡಕಿನ ವಿಷಯ ಕಂಡೆನಿಸಲ್ಪಡುವ ದೇಶಿ ಸಂಸ್ಥಾನಗಳ ಸ್ಥಾನ ಮಾನಗಳ ಕುರಿತು ಒಂದು ಕಡೆಯಿಂದ ರಾಷ್ಟ್ರೀಯವಾದಿಗಳಲ್ಲಿ ಮತ್ತೊಂದು ಕಡೆಯಿಂದ ಸಂಸ್ಥಾನಾಧಿಪತಿಗಳೊಳಗೆ ತೀವ್ರ ಚರ್ಚೆ ನಡೆಯುತ್ತಿದೆ. ತಮ್ಮ ಅರಸುಗಿರಿಯು ಹಕ್ಕು ದೈವದತ್ತವಾದುದೆಂದು ದೇಶಿ ರಾಜರವಾದ. ರಾಜತ್ವದ ಎಲ್ಲಾ ಶಕ್ತಿಗೂ ಪ್ರಜೆಗಳೇ ಮೂಲ ಕಾರಣರಿರುವುದರಿಂದ ರಾಜ್ಯಾಡಳಿತ ಹಕ್ಕು ಅವರಿಗೆ ಜನ್ಮಸಿದ್ಧವಾದುದೆಂದು ಪ್ರಜಾಮುಖಂಡರ ವಿವಾದ.

ಈ ಕುರಿತು ಪಂಡಿತ್ ನೆಹರುಗಳಂತಹ ವಿಚಾರವಂತ ವ್ಯಕ್ತಿಗಳ ಅಭಿಪ್ರಾಯವು ಗಮನಾರ್ಹವಾದುದು. ಅವರೊಂದು ಸಲ ಪ್ರಸ್ತಿಕಾ ಪ್ರತಿನಿಧಿಗಳ ಸಭೆಯಲ್ಲಿ ಈ ಕುರಿತು ಹೀಗೆಂದಿದ್ದರು:

"ದೇಶೀ ಸಂಸ್ಥಾನಗಳು ಭಾರತದ ಅವಿಭಕ್ತ ಭಾಗಗಳಾಗಿರಬೇಕೆಂದೂ, ಆದರೆ ಅವಕ್ಕೆ ಅತೀ ಹೆಚ್ಚಿನ ಸಂಸ್ಥಾನಿಕ ಸ್ವಾಯತ್ತತೆಯೂ ಇರಬೇಕೆಂದೂ ಕಾಂಗ್ರೆಸ್ಸಿನ ಅಭಿಪ್ರಾಯವಿರುತ್ತದೆ.

ಚಿಕ್ಕವು ದೊಡ್ಡವು ನೊದಲಾದ ಹಲವು ಆಕೃತಿಯ ನೂರಾರು ಸಂಸ್ಥಾನಗಳಿರುವುದರಿಂದ ಅವೆಲ್ಲವನ್ನು ಒಂದೇ ರೀತಿಯಾಗಿ ವರ್ಗೀಕರಿಸುವುದು ಅಸಾಧ್ಯ.

ದೊಡ್ಡ ಸಂಸ್ಥಾನಗಳು ಸಂಯುಕ್ತ ಭಾರತೀಯ ಪ್ರಜಾಭುತ್ವ ಕೇಂದ್ರದ ಅಂಗಗಳಾಗಬಲ್ಲುವು. ಚಿಕ್ಕವು ಬಾದೋ ತಮ್ಮಂತಿರುವ ಇತರ ಸಂಸ್ಥಾನಗಳ ಒಕ್ಕೂಟ ಮಾಡಿಒಂದು ಸಂಯುಕ್ತ ಉಪಾಂಗವಾಗಬೇಕು. ಇಲ್ಲವೆ ಹತ್ತಿರದ ಪ್ರಾಂತ್ಯವೊಂದರಲ್ಲಿ ಸೇರಿ ಅದರ ಭಾಗವಾಗಬೇಕು.

ದೊಡ್ಡ ಚಿಕ್ಕವುಗಳ ಸ್ಥಾನಮಾನಗಳು ಸಮಾನವೂ ಏಕ ಪ್ರಕಾರವೂ ಆಗಿರುತ್ತವೆ.

ದೇಶಿ ಸಂಸ್ಥಾನಗಳನ್ನು ತನ್ನ ಸಾಲಿಗೆ ತರಲು ಕಾಂಗ್ರೆಸು ಎಲ್ಲಾ ತರದ ಶಾಂತ ರೀತಿಯ ವಿಧಾನಗಳಿಂದ ಪ್ರಯತ್ನಿಸಿದೆ. ಮುಂದೆ ಬ್ರಿಟಿಷ್ ಪ್ರಾಂತ್ಯಗಳಲ್ಲಾಗಲಿ, ಸಂಸ್ಥಾನಗಳಲ್ಲಾಗಲಿ ಎಲ್ಲಿಯೂ ನಿರಂಕುಶತ್ವವೆಂಬುದಿರಬಾರದು. ಕೊನೆಯ ಅಧಿಕಾರ ಪ್ರಜೆಗಳದ್ದೇ ಆಗಿರುತ್ತದೆ.

ಕೆಲವು ಸಂಸ್ಥಾನಗಳಲ್ಲಿ ಈಗಾಗಲೇ ಶಾಸನಸಭೆಯ ಸುಧಾರಣೆಗಳಾಗಿವೆ. ಆದರೆ ಒಟ್ಟಿನಲ್ಲಿ ಅವರು ತೃಪ್ತಿಕರವಾಗಿ ಪ್ರಾಪ್ತಾರ್ಡು ಹೊಂದುತ್ತಿಲ್ಲ. ಕೆಲವು ಸಂಸ್ಥಾನಗಳು ಮಧ್ಯ ಕಾಲದ ಧೋರಣೆ ವಹಿಸಲೂ ಹಿಂಜರಿಯಲಿಲ್ಲ.

ಹಿಂದೀ ಸಂಸ್ಥಾನಗಳಂತಹ ರಾಜ್ಯ ಪದ್ಧತಿಯು ಜಗತ್ತಿನಲ್ಲೆಲ್ಲೂ ಇಲ್ಲ. ಈಗಲೂ ಅವರು ಭಾರತ ಸರಕಾರದ ರಾಜಕೀಯ ಖಾತೆಯ ಮೇಲೇ ಸಂಪೂರ್ಣ ಹೊಂದಿಕೊಂಡಿದ್ದಾರೆ.

ಬ್ರಿಟಿಷ್ ಅಧಿಕಾರವು ಇಲ್ಲಿಂದ ಹಿಂದಕ್ಕೆ ಹೆಯಲ್ಪಟ್ಟ ನಂತರ ಸಂಸ್ಥಾನ ಪ್ರಜೆಗಳೇ ತಮ್ಮ ಭವಿತವ್ಯವನ್ನು ರಚಿಸಲು ಹಕ್ಕುದಾರರಾಗುವರು. ಹಿಂದಿನ ನಿರಂಕುಶ ಅಧಿಕಾರ ನಡೆಯಲಾರದು.

ಸಂಸ್ಥಾನ ಪ್ರಜೆಗಳಾದರೂ ಅಖಂಡ ಭಾರತ ಸರಕಾರದೊಡನೆ ತಾವು ಸೇರಿಕೊಳ್ಳುವುದಾಗಿ ಅಭಿಪ್ರಾಯ ಸಾರಿರುವರು.

ಮೂಲ ಭೂತ ಹಕ್ಕುಗಳು ಬ್ರಿಟಿಷ್ ಭಾರತದಲ್ಲಾಗಲಿ, ಸಂಸ್ಥಾನಗಳಲ್ಲಾಗಲಿ, ಎಲ್ಲಾ ಕಡೆಗಳಲ್ಲೂ ಸಮಾನವಾಗಿರಬೇಕು.

ಕೆಲವೊಂದು ಆಡಳಿತ ವಿಚಾರಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳಿರಬಹುದಾದರೂ ಸ್ಥೂಲ ವಿಚಾರಗಳಲ್ಲಿ ಎಲ್ಲಾ ಪ್ರಾಂತ್ಯ ಸಂಸ್ಥಾನಗಳೂ ಒಂದೇಯಾಗಿರಬೇಕು.

ಸಂಸ್ಥಾನಾಧೀಶರು ಶಾಸನ ಬದ್ಧರಾದ, ಹೆಸರು ಮಾತ್ರದ ಸರಕಾರಾಧಿಪತಿಗಳಾಗಿರಬಹುದು —(ಬ್ರಿಟಿಷ್ ಅರಸರಂತೆ)—ಆದರೆ ಪ್ರಜೆಗಳಿಗೆ ಸಂಪೂರ್ಣ ಜವಾಬ್ದಾರಿ ಸರಕಾರವೀಯಬೇಕು. ರಾಜತ್ವವು ಪ್ರಜೆಗಳ ಕೈಯಲ್ಲೇ ಉಳಿಯಬೇಕು.

ಸಂಸ್ಥಾನದ ರಾಜ್ಯ ಘಟನೆಯನ್ನು ಆಂತರೀಕ ಆಡಳಿತೆಯ ರೂಪವನ್ನೂ ರಚಿಸುವ ಅಧಿಕಾರ ಸಂಪೂರ್ಣ ಪ್ರಜೆಗಳದ್ದೇ ಆಗಿರುತ್ತದೆ.

ಘಟನಾಸಮಿತಿಯಲ್ಲಿ ಭಾಗವಹಿಸುವ ಸಂಸ್ಥಾನ ಪ್ರತಿನಿಧಿಗಳು ಪ್ರಜೆಗಳಿಂದ ಚುನಾಯಿಸಲ್ಪಟ್ಟವರಿರಬೇಕಲ್ಲದೆ ರಾಜರಿಂದ ನೇಮಕ ಹೊಂದಿದವರಿರಬಾರದು.

ವೈಜ್ಞಾನಿಕ ಭವಿಷ್ಯ

ಭಾವೀ ಜಗತ್ತಿನ ರೂಪ ಲಕ್ಷಣ

ಮನುಷ್ಯ

"ಇನ್ನೆರಡು ಸಾವಿರ ವರ್ಷಗಳಲ್ಲಿ ಅಂದರೆ ಕ್ರಿಸ್ತಶಕ 4000ದಲ್ಲಿ ವರ್ಣ ಸಮಸ್ಯೆಯು ಇಲ್ಲದಂತಾಗುವುದು. ಜಗತ್ತಿನಲ್ಲಿ ಒಂದೇ ಬಣ್ಣದ ಜನಾಂಗವುಳಿಯುವುದು. ಕಾಫಿ ಹುಡಿ ಬಣ್ಣದ, ಚಪ್ಪಟೆ ಕಣ್ಣು ಮೂಗುಗಳುಳ್ಳ ಮತ್ತು ಈಗಿನವರಿಗಿಂತ ಕುಳ್ಳಗಾಗಿರುವ ಜನರುಂಟಾಗುವರು."

—ಜೋನ್ ಲೆಂಗ್ಡನ್ ಡೆವಿಸ್.

ಮದುವೆ

"ವಿವಾಹ ವಿಧಿಗಳು ಯಾಂತ್ರಿಕ ರೀತಿಯಲ್ಲಾಗುವವು. ರೇಡಿಯೊ ಮತ್ತು ಟೆಲಿವಿಜನ್‌ಗಳ ಮೂಲಕ ಒಬ್ಬನೇ ಪುರೋಹಿತನು ಒಂದೇ ಸಲಕ್ಕೆ ಐನೂರು ಮದುವೆ ಲಗ್ನಗಳನ್ನು ಸುಧಾರಿಸಬಹುದು. ಮಂತ್ರ ಶ್ಲೋಕಗಳು ರೇಡಿಯೊ ಮೂಲಕ ಕೇಳುವವು. ಪುರೋಹಿತನ ಚಿತ್ರ ಟೆಲಿವಿಜನ್ ಮೂಲಕ ತೋರುವುದು. ಅಂತಹ ಒಂದು ಉಪಕರಣವನ್ನು ಮದುವೆ ಚಪ್ಪರಗಳಲ್ಲಿರಿಸಲಾಯಿತು."

—ಪ್ರೊ. ಎ. ಎಂ. ಲೊಪ್.

ನಗರಗಳು

"ಕೃತಕ ಆಹಾರ ವಸ್ತುಗಳನ್ನು ಗುಳಿಗೆ ರೂಪದಲ್ಲಿ ನಾಗರಿಕರಿಗೆ ಹಂಚಲಾಗುವುದು. ಆಹಾರ ಬೆಳೆಸುವ ಅವಶ್ಯಕತೆ ಇಲ್ಲದಿದ್ದುದರಿಂದ ನಗರಗಳಲ್ಲಿನ ತೋಟಗಳೂ, ಮಾಂಸದಂಗಡಿಗಳೂ ಮಾಯವಾಗಿ ಅವುಗಳ ಸ್ಥಾನದಲ್ಲಿ ವೈಜ್ಞಾನಿಕ ಆಹಾರ ತಯಾರಿ ಕಾರಖಾನೆಗಳು ಸ್ಥಾಪಿಸಲ್ಪಡುವವು."

ಸಮಾಜ ಸಮಸ್ಯೆ

"ಈಗ ಶರೀರ ಚಿಕಿತ್ಸಕ ಡಾಕ್ಟರುಗಳಂತೆ ಮುಂದೆ ಮಾನಸೀಕ ವೈದ್ಯರೇ ಹೆಚ್ಚುವರು. ಸಮಾಜದೊಳಗಿನ ವ್ಯಕ್ತಿಗಳ ವಿಚಿತ್ರ ವರ್ತನೆಗಳನ್ನೂ ನಿದ್ಯಮಾನಗಳನ್ನೂ ಗುಣಲಕ್ಷಣಗಳನ್ನು ಚತುರ ವೈದ್ಯರು ಪರೀಶೀಲಿಸಿ ಆರೋಗ್ಯವಂತ ಚಿಕಿತ್ಸೆಗಳನ್ನು ಶಿಫಾರಸು ಮಾಡುವರು. ಮುಂದಿನ ಕಾಲದ ಜೈಲುಗಳು ಈಗಿನಂತೆ ಸಂಕಷ್ಟದಾಯಕವಾಗಿರದೆ ಮಾನಸೀಕ ತಜ್ಞರ ಆಡಳಿತದಲ್ಲಿರಿಸಲ್ಪಡುತ್ತವೆ. ಅವರು ಅಪರಾಧಿಗಳಲ್ಲಿ ಯೋಗ್ಯ ಮನೋಧೈರ್ಯ ವಿಶ್ವಾಸಗಳನ್ನುಂಟುಮಾಡಿ ಅವರನ್ನು ಯೋಗ್ಯ ಸಮಾಜ ಜೀವಿಗಳಾಗಿ ಪರಿವರ್ತಿಸುವರು."

—ಆಲ್ಫ್ರೆಡ್ ಹೊರ್ಕ್ಸೆಸ್ಟ್.

ಸಂಸ್ಕೃತಿ

"ಮುಂದಿನೊಂದು ಶತಮಾನದಲ್ಲಿ ಕಲಾ ಸಾಹಿತ್ಯವಾಗಲೀ ಅದರ ಅಭಿರುಚಿಯಾಗಲೀ ಜನರಲ್ಲಿರಲಾರದು. ಯಂತ್ರ ಚಾಲಕರ ಗುಂಪೊಂದು ದೇಶವನ್ನಾಳುವುದು. ಮಾನವ ಕೋಟಿಯು ಬರೀ ಬಾಯಿ ಹರಟೆಯಲ್ಲಿ ಕಾಲ ಕಳೆಯುವುದು. ಆಗ ಮನೆ ಎಂಬುದಿಲ್ಲ, ವಿಶ್ರಾಂತಿ ಸುಖವಿಲ್ಲ, ಹಳ್ಳಿ ಜೀವನವೆಂಬುದಿರುವುದಿಲ್ಲ. ಎಲ್ಲಿ ನೋಡಿದರೂ ಕೂಸ್ಯ ಕಾಭಾವದ ಪೆಚ್ಚು ವ್ಯಕ್ತಿಗಳೇ ಕಾಣಸಿಗುವರು. ಪ್ರಶಾಂತತೆಯೆಂಬುದು ಕಿಂಚಿತ್ತಾದರೂ ಉಳಿಯುವುದಿಲ್ಲ. ಸಂಸ್ಕೃತಿಯೂ ಕಾಣೆಯಾಗುವುದು. ವಿಚಾರ, ಕಲಾ ಸ್ಫೂರ್ತಿಗಳೆಂಬಿವು ಮೃತವಾದಂತಿರುವವು."

—ಟಿ. ಎಫ್. ಪ್ರೊವಿಸ್.

ಚಲಚಿತ್ರಗಳು

ನೂರು ವರ್ಷ ನಂತರದ ಜಗತ್ತಿನಲ್ಲಿ ಪ್ರತಿಯೊಬ್ಬರ ಮನೆಯಲ್ಲೂ ಒಂದು ಸಿನೆಮಾ ಪರದೆ ಇಲ್ಲವೆ ಗೋಡೆ ಇದ್ದೇ ಇರುವುದು. ಒಂದು ಗುಂಡಿಯೊತ್ತಿದಾಕ್ಷಣ ವರ್ಣರಂಜಿತ ವಾಕ್ಚಿತ್ರಗಳು ಬೇಕಾದ ಮನರಂಜನೆಯನ್ನು ಮಾಡುವವು. ಆದರೆ ಮಾತ್ರಚಿತ್ರಗಳು ಮಾತ ಇದನ್ನು ನೋಡುವರು. ಕಿರಿಯರಿಗೆ ಇದರಲ್ಲಿ ಅಭಿರುಚಿಯಿಲ್ಲದೆ ಅವರು ಸಾಮಾನ್ಯವಾಗಿ ನಾವು ಬಲ್ಲ ಪ್ರಾಚೀನ ರಂಗಭೂಮಿಯತ್ತ ಸಾಗುವರು.

—ಪವರ್ ಬ್ರೌನ್.

ಸ್ತ್ರೀ ಪೋಷಾಕು

"ಉಣ್ಣೆಯ ಉಷ್ಣತೆಯನ್ನೂ, ರೇಶ್ಮೆಯ ನಾಜೂಕನ್ನೂ, ಮತ್ತು ನಾರಿನ ಬಲಿಷ್ಠತೆಯನ್ನೂ ಸಂಯೋಗಿಸಿ ರಚಿಸಿದ ಬಟ್ಟೆಬರೆಗಳು ವ್ಯವಹಾರಕ್ಕೆ ಬರುವವು. ಉಡುಪುಗಳು ಅತ್ಯಂತ ಹಗುರವೂ ಆಗಿರುವವು. ಅರ್ಧ ಡಜನ್ ಪೋಷಾಕುಗಳನ್ನು ಚಿಕ್ಕ ಕೈಚೀಲದಲ್ಲಿ ಹೊರಬಹುದು. ಅವನ್ನು ಒಂದು ಕೋಟು ತೆಗೆದಷ್ಟು ಸುಲಭವಾಗಿ ಹಾಕಲೂ ತೆಗೆಯಲೂ ಆಗುವುದು."

—ಪ್ರೊರ್ಫಿಯರ್ ಡಿ ಆಲ್ಸೇ.

ಗಂಡುಡುಪು

"ಪುರುಷರಿಗೆ ಎರಡು ಅಥವಾ ಮೂರು ವಿಧಾನದ ಉಡುಪುಗಳು ಕಂಡುಹಿಡಿಯಲ್ಪಡುವವು. ಒಂದು ವಿಶೇಷ ಸಂದರ್ಭಗಳಲ್ಲಿ ಧರಿಸುವಂತಹದು. ಇನ್ನೊಂದು ಉದ್ಯೋಗ ಕಾಲದಲ್ಲಿ ಧರಿಸಲು ಯುಕ್ತವಾಗಿರುವಂತಹದು. ಅವುಗಳ ರಚನೆಯೂ ಆರೋಗ್ಯದಾಯಕವಾಗಿರುವುದು."

—ಬರ್ಕನ್ ಹಡ್.

ನಿದ್ರೆ

"ಮುಂದಿನ ಕಾಲದ ನಗರಗಳಲ್ಲಿ ಮಲಗಿದ ಮಕ್ಕಳಿಗೆ ನಿದ್ರಾಭಂಗದ ತೊಂದರೆ ಕಿಂಚಿತ್ತಾದರೂ ಇರಲಾರದು. ವ್ಯಕ್ತಿಪರ ಆರೋಗ್ಯ ದೃಷ್ಟಿಯಿಂದ ನಿದ್ರಾನಾಶವು ಉಬ್ಬಸದಷ್ಟೇ ಹಾನಿಕರವೆಂದೆನಿಸಲಾಗುವುದು. ಎಂಟು ಗಂಟೆಗಳ ಅಭಾಧಿತ ನಿದ್ರೆಯು ಅನಿವಾರ್ಯವಾಗಿ ಪ್ರತಿಯೊಬ್ಬನಿಗೂ ಸಿಗಲೇಬೇಕು. ಅದು ಅವನ ಜನ್ಮಸಿದ್ಧ ಹಕ್ಕು ಎಂದೆನಿಸಲಾಗುವುದು."

—ಪ್ರೊ. ಹೆರಿಸ್.



ಅದೆಲ್ಲವೂ ಆಂತರ್ಯ ಆರೋಗ್ಯವು ನೆಟ್ಟಗಿರುವುದರ ಮೇಲೆ ಹೊಂದಿಕೊಂಡಿದೆ. ಈ ಉತ್ತಮ ಸ್ಥಿತಿಯು ಬ್ಯಾಲ್‌ಬೀನ್ಸ್‌ಗಳು ಒದಗಿಸಿಕೊಡುತ್ತವೆ. ಇದೊಂದು ಶುದ್ಧ ವನಸ್ಪತಿಯ ಮೂಲ ಶಕ್ತಿದಾಯಕ ಬೇದಿ ಮದ್ದು. ಇದು ನಮ್ಮ ಜೀರ್ಣ ಕ್ರಿಯೆಯನ್ನು ಉತ್ತಮಗೊಳಿಸುತ್ತದೆ. ರಕ್ತ ಸಂಚಲನವನ್ನು ಆರೋಗ್ಯದಲ್ಲಿಡುತ್ತದೆ. ಮತ್ತು ನಿಕ್ಕಲೂ ದೇಹದೊಳಗಿನ ಕಶ್ಮಲ ವಿಸರ್ಜನೆಯನ್ನು ಮಾಡುತ್ತದೆ.

ಶಕ್ತಿ, ಮನೋಹರತೆ ಉತ್ತಮ ಆರೋಗ್ಯದ ತಳಹದಿಯನ್ನು ಹಾಕಿಕೊಳ್ಳಲು ಇದೇ ಸುಸಂಧಿಯು—ಬ್ಯಾಲ್‌ಬೀನ್ಸ್‌ಗಳಿಂದ ಇದನ್ನು ನೆರವೇರಿಸಕೊಳ್ಳಬಹುದು.



BILE BEANS

ಬ್ಯಾಲ್‌ಬೀನ್ಸ್ ಕ್ರಮವನ್ನು ಯಾವಾಗಲೂ ಚಿಪ್ಪಕದಲ್ಲಿ ಡಿರಿ.

ವಿಜ್ಞಾನ ವೈಶಿಷ್ಟ್ಯ ಸೊಳ್ಳೆಗಳ 'ಪ್ರಣಯ' ನೃತ್ಯ

ಇನ್ನು ಸ್ವಲ್ಪ ಸಮಯದಲ್ಲೇ ಬಂತೆ ನಗರ ವಾಸಿಗಳಿಗೆ, ಮಲೆನಾಡಿಗರಿಗೆ ಸೊಳ್ಳೆಕಾಟದಿಂದ ವಿಮೋಚನೆ ದೊರೆಯುವ ಶುಭ ವಾರ್ತೆ ಅಮೇರಿಕನ್ ವಿಜ್ಞಾನ ಕೇಂದ್ರಗಳಿಂದ ಕೇಳಿಬರುತ್ತದೆ. ಇನ್ನು ಮೇಲೆ ಸೊಳ್ಳೆ ಪರದೆಯ ತಾಪತ್ರಯವೂ, ಆನೆಕಾಲು, ಮಲೇರಿಯಾ ಜ್ವರದ ಪೀಡೆಯೂ ತಪ್ಪಬಹುದು.

ಸೊಳ್ಳೆಗಳನ್ನು ವಿಚಿತ್ರ ವಿಧಾನವೊಂದರಿಂದ ಆಕರ್ಷಿಸಿ ನಾಶಮಾಡುವ ಒಂದು ಉಪಕರಣವನ್ನು ಓರ್ವ ಅಮೇರಿಕನ್ ವಿಜ್ಞಾನಿಯಿಂದ ಕಂಡುಹಿಡಿಯಲ್ಪಟ್ಟಿದೆ. ಇದಕ್ಕೆ 'ಪ್ರಣಯಾಕರ್ಷಣ ಬೋನು' ಎಂದು ಹೆಸರಿಡಲಾಗಿದೆ.

ಒಂದು ಚಿಕ್ಕ ಗೂಡು. ಅದರೊಳಗೆ ಚಿಕ್ಕದೊಂದು ಗ್ರಾಮೊಫೋನ್ ಯಂತ್ರ. ಹೆಣ್ಣು ಸೊಳ್ಳೆಗಳು ಕಾಮಪರವಶರಾಗಿ ಸಂಗಾತಿಯನ್ನು ಆಹ್ವಾನಿಸುವ ಕೂಗಿನಂತೆ ಒಂದು ಸ್ವರ ಅದರಿಂದ ಹೊರಡುವುದು. ಇದನ್ನು ಆಲಿಸುತ್ತಲೇ ಗಂಡು ಸೊಳ್ಳೆಗಳು ಗೂಡನ್ನು ಹೊಕ್ಕುತ್ತವೆ—ಆದರೆ ಮತ್ತೆ ಅವು ಜೀವಂತ ಮರಳುವುದಿಲ್ಲ.

ಈ ಗೂಡಿನಿಂದ ಹೊರಡುವ ಪ್ರಣಯ ಸಿನಾದವು ಮಾನವ ಕರ್ಣೇಂದ್ರಿಯಕ್ಕೆ ಕೇಳಿಸುವುದಿಲ್ಲ. ಸಾಂಕ್ರಾಮಿಕ ರೋಗಗಳನ್ನುಂಟುಮಾಡುವ ಸೊಳ್ಳೆಗಳ ಸ್ವರ ಬಹಳ ಸೂಕ್ಷ್ಮವಾಗಿರುತ್ತದೆ.

೩೨ ಸಾವಿರ ಅಶ್ವ ಭಕ್ಷಣೆ

ಬ್ರಿಟನಿನಲ್ಲಿ ಕಳೆದ ವರ್ಷ 679 ಸಾವಿರ ಕುದುರೆಗಳಿದ್ದುವು. ಇಂದು ಕೇವಲ 647 ಸಾವಿರ ಮಾತ್ರ ಉಳಿದಿವೆ. 32 ಸಾವಿರ ಕುದುರೆಗಳನ್ನು ಬ್ರಿಟಿಷ್ ಜನರು ಕಳೆದ ವರ್ಷ ಆಹಾರಕ್ಕಾಗಿ ಉಪಯೋಗಿಸಿದ್ದಾರೆ.

ಇದೇ ಪ್ರಮಾಣದಲ್ಲಿ ಮುಂದರಿದರೆ ಬರುವ 15 ವರ್ಷಗಳಲ್ಲಿ ಇಂಗ್ಲೆಂಡಿನಲ್ಲಿ ಒಂದೇ ಒಂದು ಕುದುರೆ ಉಳಿಯಲಿಕ್ಕಿಲ್ಲ. ನಂತರ ಗದ್ದೆಗಳಲ್ಲಿ ಯಾಂತ್ರೀಕರಣವು ಒಂದಹಾಗೆ ಕುದುರೆಗಳ ಸಂಖ್ಯೆಯು ಕಡಿಮೆಯಾಗುವುದು ಇನ್ನೊಂದು ಕಾರಣ.

ಕುದುರೆ ಮಾಂಸವನ್ನು ಇಂಗ್ಲೆಂಡಿನ ರೇಶನ್ ಅಂಗಡಿಗಳಲ್ಲಿ ಮಾರುತ್ತಾರೆ. ಇದರ ಕೊಳ್ಳು ಸಂತೆಯಾಲ್ಲಿ ಅದಕ್ಕೆ ಹೇರಳ ಬೆಲೆ ಬರುವುದರಿಂದ ಈಚೆಗೆ ಗಾಡಿಗೆ ಕಟ್ಟುವ, ಹೊಲ ಉಳುವ ಕುದುರೆಗಳನ್ನು ಗುಪ್ತವಾಗಿ ಕಟಾವ್ ಮಾಡುತಿದ್ದಾರಂತೆ.

ಸಮುದ್ರ ಪ್ರಯಾಣ ಸೌಖ್ಯ

ರೇಡಿಯೋ, ರಾಡರ್ ಮತ್ತಿತರ ಅತ್ಯಾಧುನಿಕ ವೈಜ್ಞಾನಿಕ ಪರಿಪೂರ್ಣತೆಯಿಂದಾಗಿ ಜಲಪ್ರಯಾಣವನ್ನು ನಿರಪಾಯಗೊಳಿಸಲು ಅತ್ಯುಪಕಾರವಾಗಿದೆ. ಮುಂದಿನ ದೀಪಸ್ತಂಭಗಳು ರೇಡಿಯೋ ಮೂಲಕ ಹತ್ತಿಸಲ್ಪಡುವವು. ಅವುಗಳ ಬೆಳಕು ಎಂತಹ ಮಂಜುಮುಸುಕಿನಲ್ಲೂ ಕಾಣಿಸುವಂತಹದಾಗಿರುತ್ತದೆ.

ಸಮುದ್ರದಲ್ಲೆಲ್ಲಾ ತೇಲುವ ರೇಡಿಯೊ ಮತ್ತು ರಾಡರ್ ಉಪಕರಣಗಳು ಸ್ಥಾಪಿಸಲ್ಪಡುವುದರಿಂದ ಯಾವದಾದರೊಂದು ಹಡಗು ಅಪಾಯಕ್ಕೊಳಗಾದ ಕೂಡಲೇ ಅದು ನಿರ್ದಿಷ್ಟವಾದ ಯಾವ ಸಾಗರ ಭಾಗದಲ್ಲಿದೆ ಎಂದು ಒಂದು ಕೇಂದ್ರ ರೇಡಿಯೋ ನಿಲಯದಲ್ಲಿ ತಿಳಿಯುವುದು. ಕೂಡಲೇ ಆತೀ ಹತ್ತಿರದ ಸಹಾಯ ನಿಲ್ದಾಣದಿಂದ ವಿಮಾನ ಹಡಗುಗಳು ಗಂಡಾಂತರದ ಪ್ರದೇಶಕ್ಕೆ ಧಾವಿಸುವವು.

ಕಿರುಸುದ್ದಿ ಸಂಗ್ರಹ

ಕೆಲವು ಕಾಲದ ಹಿಂದೆ ಓರ್ವ ಅಮೇರಿಕನ್ ಪತ್ರಿಕೋದ್ಯೋಗಿಯು ಮಿ| ಜಿನ್ನರನ್ನು ಕುರಿತು "ನೀವು ಪ್ರಜಾಪ್ರಭುತ್ವ ಮಾದರಿಯ ಮೇಲೆ ದೇಶದ ಇತರ ರಾಜಕೀಯ ಪಕ್ಷಗಳೊಡನೆ ಸಹಕರಿಸಬಾರದೇಕೆ?" ಎಂದು ಪ್ರಶ್ನಿಸಿದಾಗ "ಪ್ರಜಾಪ್ರಭುತ್ವ ಮಾದರಿಯು ಭಾರತದ ಜನತೆಯ ಗುಣ ಸ್ವಭಾವಕ್ಕೆ ಯೋಗ್ಯವಾದ ಧೋರಣೆಯಲ್ಲ"ವೆಂದು ಮಿ| ಜಿನ್ನರು ಉತ್ತರವಿತ್ತರು. ಇದರಿಂದ ಅವರು ಪ್ರಜಾಪ್ರಭುತ್ವ ಪ್ರಿಯರಲ್ಲವೆಂದು ಪ್ರತ್ಯಕ್ಷಪಡಿಸಿದಂತಾಯಿತು.

★

ಆದರೆ ಮೊನ್ನಿನ ಪಂಜಾಬ್ ಪ್ರಕರಣದ ಕುರಿತು ಮುಸ್ಲಿಂ ಲೀಗ್ ವರ್ಕಿಂಗ್ ಕಮಿಟಿಯು ಠರಾವಿನಲ್ಲಿ "ಪಂಜಾಬ್ ಸರಕಾರವು ಪ್ರಜಾಪ್ರಭುತ್ವ ತತ್ವಗಳಿಗೆ ವಿರೋಧ ಕಾರ್ಯವೆಸಗುತ್ತಿದೆ". ಪ್ರಜಾಪ್ರಭುತ್ವವನ್ನು ಪಂಜಾಬ್ ಸರಕಾರವು ಒಂದು ಪ್ರಹಸನವನ್ನಾಗಿ ಮಾಡಿದೆ." ಎಂದು ಒತ್ತಿ ಹೇಳಿದೆ. ಪ್ರಜಾಪ್ರಭುತ್ವ ಪ್ರಿಯರಲ್ಲದವರು ಪ್ರಜಾಪ್ರಭುತ್ವದ ಹೆಸರಲ್ಲಿ ಇತರರನ್ನು ಖಂಡಿಸುವ ವಿಚಿತ್ರ ವಾದವಿದೆಂದು ಹೇಳಲಾಗಿದೆ.

★

"ಯಾವ ಸಾರ್ವಜನಿಕ ಸೇವೆ ಮಾಡದ, ಇಲ್ಲವೆ ತ್ಯಾಗ ಬಲಿದಾನಗಳನ್ನೂ ಮಾಡದೆ ಇಲ್ಲವೆ ಯಾವ ರಾಜಕೀಯ ಪಕ್ಷವನ್ನೂ ಸೇರದೆ ಪ್ರಖ್ಯಾತಿಗೆ ಬಂದ ಒಂದು ಸಂಸ್ಥೆಯೆಂದರೆ ರಾಷ್ಟ್ರೀಯ ಸ್ವಯಂಸೇವಕ ಸಂಘವೆಂಬ ಸಂಸ್ಥೆ. ಇದು ಒಂದು ರಾಷ್ಟ್ರೀಯ ಸಂಸ್ಥೆಯಾದರೂ ಹಿಂದೇತರರಿಗೆ ಇದರಲ್ಲಿ ಪ್ರವೇಶವಿಲ್ಲ. ಇಂದು ನೂರಕ್ಕೆ 90 ಹಿಂದುಗಳು ಕಾಂಗ್ರೆಸಿನ ಅಡಿಯಲ್ಲಿ ಸಂಘಟಿತರಾಗಿರುತ್ತಾರೆ. ಉಳಿದ ಶೇಕಡಾ ಹತ್ತರನ್ನು ಸಂಘಟಿಸುವುದು ಈ ಸಂಘದ ಧ್ಯೇಯವಂತೆ. ಹಿಂದೂ ಸಂಸ್ಕೃತಿಯನ್ನು ರಕ್ಷಿಸುವ ಈ ಸಂಘದ ಮುಂದಾಳುಗಳು ಶಿಕ್ಷಣ ಮುಂತರೇ ಹೆಚ್ಚಾಗಿದ್ದು ಸಂಸ್ಕೃತಿಯನ್ನು ಉದ್ಧರಿಸುವ ವಿಶಾಲ ಹೃದಯದ ಒಂದು ಒಂದು ಆದರ್ಶವನ್ನಾದರೂ ಇವರು ತಮ್ಮ ಅನುಯಾಯಿ (ಇವರು ಹೆಚ್ಚಿನವರು ಬಡವರು) ಗಳ ಅನುಭವಕ್ಕೆ ತರಲಿಲ್ಲ." ಹೀಗೆಂದೋರ್ವ ಕಾಂಗ್ರೆಸಿಗರ ಹೇಳಿಕೆ.

★

KANARA COMMERCIAL BANK LTD.

PUTTUR

H O Puttur Estd 1920 Branch Vittal

All kinds of Banking Business transacted.

Deposits Current, Savings, Cumulative Deposits are accepted

Fixed Deposits for period of 3 months and above up to 24 months are accepted.

SEASON DEPOSITS

ARE Accepted up to 31 5 1947 Terms on application

NOTICE

The G. S. B. Seva Sangha Mangalore.

The Annual General Meeting of the Sangha will be held on Sunday the 16th February 1947 at 10-30 A M at Madhava Bhag, the residence of Rao Bahadur Dr M Keshava Pai, Kadri Road Mangalore

You are requested to be present at the Meeting.

AGENDA

1 Adoption of the Annual Report and passing of Accounts for 1946

2 Election of members on the Council of Management

The following members of the Council retire under Rule 38

1 Dr N N Suju L M & S

2 Dr B Subraya Baliga L M & S

3 Appointment of an Auditor for the year 1947 and

4 Any other matter with the permission of the meeting

By order

Mangalore 2 - 1947 — B Subraya Baliga, Hon Secretary

The Report is being printed and will be sent separately

ರಿಯಾಯತಿ ಲಗ್ಗೇಜಿನಲ್ಲಿ ವ್ಯಾಪಾರಿ ಸಾಮಾನುಗಳ ನಿಷೇಧ

ಪಸೆಂಜರರ ಸೌಕರ್ಯಗಳ ಬಗ್ಗೆ ಒಂದು ಮಣ ಭಾರದ ಸಾಮಾನುಗಳನ್ನು ಫ್ರೀ ತೆಗೆದುಕೊಂಡು ಹೋಗಬಹುದಾಗಿ ಮಾಡಿದ ರಿಯಾಯತಿ ಕಾರಣದಿಂದಾಗಿ ಪಸೆಂಜರರು ಅವರ ಸ್ವಂತ ಉಪಯೋಗದ ಸಾಮಾನುಗಳಲ್ಲದೆ ವ್ಯಾಪಾರಿ ಸಾಮಾನುಗಳನ್ನು ತಮ್ಮೊಡನೆ ಪ್ರಯಾಣ ಬೆಳೆಸುವ ಸ್ನೇಹಿತರ ಹೆಸರಿನಲ್ಲಿ ಈ ರಿಯಾಯತಿ ಮೂಲಕ ಧರ್ಮಾರ್ಥ ಸಾಗಿಸುವುದು ರೂಢಿಯಾಗಿದೆ.

ಮೋಟರ್ ವಾಹನಗಳು ರೈಲ್ವೆಗಾಡಿಗಳಂತಲ್ಲ. ಅವುಗಳಲ್ಲಿ ನಿಯಮಿತ ಭಾರಕ್ಕಿಂತ ಹೆಚ್ಚಿನ ಸಾಮಾನುಗಳನ್ನು ಒಯ್ಯುವುದು ಮೋಟರ್ ವಾಹನಕ್ಕೂ ಮತ್ತು ಪಸೆಂಜರರಿಗೂ ಅಪಾಯವಾಗಿದೆ. ಕಾರಣ ಬಸ್ಸುಗಳಲ್ಲಿ ಒಯ್ಯುವ ಸಾಮಾನುಗಳನ್ನು ಪಸೆಂಜರರ ಅವಶ್ಯಕತೆ ಬಗ್ಗೆನೇ ಮಿತಗೊಳಿಸುವುದು ಆಗತ್ಯವಿದೆ.

ವ್ಯಾಪಾರಿ ಸಾಮಾನುಗಳನ್ನು ಒಯ್ಯುವರೆ ವ್ಯಾಪಾರಿಗಳು

ಶೆಡ್ಯೂಲ್ ಟೈಮಿಗೆ ಕೊಂಡೊಯ್ಯುವ "ಲಕ್ಷ್ಮಿ" ಯಾ "ಸಿ. ಸಿ. ಸಿ." ಲೋರಿ ಸರ್ವಿಸುಗಳ ಸೌಖ್ಯರ್ಯವನ್ನು ಉಪಯೋಗಿಸಬೇಕಾಗಿ ಅಪೇಕ್ಷಿಸುತ್ತೇವೆ.

ವ್ಯಾಪಾರಿ ಸಾಮಾನುಗಳನ್ನು ಎಷ್ಟಕ್ಕೂ ಫ್ರೀ ಲಗ್ಗೇಜಿನ ಅಂಶದಲ್ಲಿ ಸೇರಿಸಿಕೊಳ್ಳಲಾಗುವುದಿಲ್ಲ. ಈ ಕುರಿತು ಮಾಹಿತಿಯನ್ನು ಬುಕ್ಕಿಂಗ್ ಕ್ಲಾರ್ಕರಿಂದ ಪಡೆಯಬಹುದು.

JOINT MANAGERS,

The Combined Booking Agency, — The Joint Booking Office,

MANGALORE — KODIALBAIL

THE CANARA BANKING CORPORATION LTD.
(Incorporated in British India)
Estd: 1906.
Head Office: UDIPI, S. Kanara.

Authorised Capital	Rs. 25,00,000
Issued & Subscribed Capital	16,00,000
Paid up Capital	15,87,600
Reserves ...	4,60,000
Total Resources Around	Rs. 2½ Crores

Branches at Fort-Bombay, Madras, Bangalore, Coimbatore, Salem, Calicut, Hubli, Mysore, Cochin, Mangalore, Mercara etc., etc., etc.
BANKING BUSINESS OF EVERY DESCRIPTION TRANSACTED.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ.

ಬೊಂಬಾಯಿ, ಮದರಾಸು, ಕಲ್ಕತ್ತಾ ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

1947 *Greetings For The New Year* 1947

To

ALL OUR POLICY HOLDERS,
MEDICAL EXAMINERS,
AGENTS AND WELLWISHERS,

And Best Wishes

FOR A PROSPEROUS YEAR TO COME

From

Kochikar Brothers, Limited.

Chief Agents for South India including Indian States & Bombay City

THE BOMBAY LIFE ASSURANCE COMPANY LIMITED

MADRAS, BANGALORE, TRIVANDRUM, MANGALORE, MADURA, CALICUT, BOMBAY, & UDIPI.

Bhuvanendra Products Limited,

KATAPADI S. Kanara.

'Bhuvanendra'
Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs.

Depot: **Maharata Galli, Hubli.**
Bhuvanendra Products Ltd.
Factory & Head-Office
KATAPADI S. Kanara.

'ಭುವನೇಂದ್ರ'
ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವದು.

ಡಿಪೋ: ಮುರಾರಗಲ್ಲಿ, ಹುಬ್ಬಳ್ಳಿ.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.
ಕಟಪಾಡಿ ದ. ಕನ್ನಡ

ಡೋಂಗರೆ
ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಕು 14—2—1947 [ಸಂಚಿಕೆ 7]

ಹಿಂದೀ ರಾಜಕಾರಣ

ಲೇ: ಶ್ರೀ ಎನ್. ಆರ್. ಕಲ್ಲೆ.

ಹಿಂದುಸ್ಥಾನಕ್ಕೆ ಎಟ್ಲಿ ಇವರು ಬರಲಿರುವರು?

ಬಿಕ್ಕಟ್ಟು ಬಿಡಿಸಲು ಇನ್ನೊಮ್ಮೆ ಪ್ರಯತ್ನ

ಲೀಗಿನ ಚಂಡಿತನ

ಕಳೆದ ತಿಂಗಳ ಕೊನೆಯಲ್ಲಿ ಲೀಗು ಮಾಡಿದ ನಿರ್ಣಯದಿಂದ ಬ್ರಿಟಿಷ ಮುತ್ಸದ್ದಿಗಳು ಬಾಯಿತೆರೆದು ಮಾತಾಡಲಾರದ ಪರಿಸ್ಥಿತಿಯುಂಟಾಗಿದೆ. ನೆಚ್ಚಿದ ಎಮ್ಮೆ ಕೋಣಗಳಂತೆ ತಾವು ಬಹಳ ಅಚ್ಚುಕಟ್ಟಿನಿಂದ ಸರಸ ಮಾತುಗಳನ್ನಾಡಿ ಈ ವರೆಗೆ ತಮ್ಮ ಹಸ್ತಕರನ್ನಾಗಿ ಬೆಳೆಯಿಸಿಕೊಂಡು ತಮಗೆ ಬೇಕಾದ ಸಾಧನವೆಂದು ಉಪಯೋಗಿಸಿದ ಮುಸ್ಲಿಂ ಲೀಗು ತಮ್ಮ ಧೋರಣೆಗೆ ಪ್ರತಿಕೂಲವಾದ ನಿರ್ಣಯವನ್ನು ಕೈಗೊಂಡುದರಿಂದ ಬ್ರಿಟಿಷ ಮುತ್ಸದ್ದಿಗಳಿಗೆ ಜಿಗುಪ್ಸೆಯುಂಟಾಗಿದೆ. ಒಂದೆಡೆಯಿಂದ ಚರ್ಚಿಲ ಅಮರಿ ಗುಂಪು ಅದಕ್ಕೆ ಬೆಂಬಲ ಕೊಡುತ್ತಿರುವದಾದರೂ ಅಧಿಕೃತವಾಗಿ ಲೀಗು ನಿರ್ಣಯವನ್ನು ಬ್ರಿಟಿಷ ಸರಕಾರವು ಅನುಮೋದಿಸಲಾರದು. ಅಲ್ಲದೆ ಹಾಗೆ ಮಾಡಲು ಬರುವಂತೆಯೂ ಇಲ್ಲ. ಮೇ ತಾ 16ರ ಘೋಷಣೆಯನ್ನಾಗಲಿ, ಡಿಸೆಂಬರ ತಾ 6ರ ಸ್ಪಷ್ಟೀಕರಣದ ಮಿತಿಯನ್ನಾಗಲಿ ಬ್ರಿಟಿಷ ಸರಕಾರವು ಸಾಗಲು ಬರುವದಿಲ್ಲ. ಆದ ಕಾರಣ ಆ ಘೋಷಣೆ ಮತ್ತು ಈ ಸ್ಪಷ್ಟೀಕರಣದ ಮಿತಿಯೊಳಗೆ ಹಿಂದೀ ರಾಜಕಾರಣದಲ್ಲಿ ಮೂರಾಬಟ್ಟೆ ಮಾಡಿ ರೂಪಿಸಿ ತಾವು ಸಂಭಾವಿತರೆನಿಸಿಕೊಂಡು ಸಾಗಬೇಕೆಂಬುದು ಬ್ರಿಟಿಷ ಮುತ್ಸದ್ದಿಗಳ ಉದ್ದೇಶವಿದ್ದಂತೆ ತೋರುತ್ತದೆ. ಅದೆಷ್ಟರ ಮಟ್ಟಿಗೆ ಸಫಲವಾಗುವದೆಂಬುದು ಈಗಲೇ ಊಹಿಸಲು ಬರುವಂತಿಲ್ಲ.

ಉತ್ತರ ಕೊಡಲು ವಿಳಂಬವೇಕೆ?

ನಡುಗಾಲ ಸರಕಾರದಿಂದ ಲೀಗು ಮಂತ್ರಿಗಳು ಹೊರಬೀಳಬೇಕು—ಅದವಾ ಘಟನಾ ಸಮಿತಿಯಲ್ಲಿ ಲೀಗು ಭಾಗ ವಹಿಸಬೇಕೆಂದು ಈಗಾಗಲೇ ಒಂಭತ್ತು ಜನ ಲೀಗೇತರ ಮಂತ್ರಿಗಳು ವೈಸರಾಯರಿಗೆ ತಿಳಿಸಿರುವರು. ವೈಸ ರಾಯರು ಅದನ್ನು ಲೀಗ್ ಮಂತ್ರಿಗಳಿಗೆ ಕಳಿಸಿಕೊಟ್ಟು ಅವರ ಉತ್ತರ ತೆಗೆದುಕೊಂಡು ಎರಡನ್ನು ಭಾರತ ಮಂತ್ರಿಗಳಿಗೆ ತಿಳಿಸಿರುವರೆಂದೂ ಆ ಸಂಬಂಧವಲ್ಲಿ ಈಗ ಬ್ರಿಟನಿನಲ್ಲಿ ಮಂತ್ರಾಲೋಚನ ನಡೆದಿದೆಯೆಂದೂ ತಿಳಿದು [illegible] ತನ್ಮಧ್ಯೆ ಇಲ್ಲಿಂದ ಅಮೇರಿಕೆಗೆ [illegible] ಯಾಗಿ ತೆರಳಿದ ಅಸಫ ಅಲಿಯವರು ಲಂಡನದಲ್ಲಿ [illegible] ಹೋಗುವುದರಿಂದ ಅವರೊಡನೆ ಕಾಂಗ್ರೆಸ್ ಪಕ್ಷದ ಪರವಾಗಿ ಬ್ರಿಟಿಷ್ ಮುತ್ಸದ್ದಿಗಳು ವಿಚಾರ ವಿನಿಮಯ ಮಾಡುವರೆಂದೂ ಪಂಡಿತ ಜವಾಹರಲಾಲರು ಇಲ್ಲಿಯ ಪರಿಸ್ಥಿತಿ ಬಗ್ಗೆ ಹಿಂದುಸ್ಥಾನ ಮಂತ್ರಿಗಳಿಗೆ ಪತ್ರ ಕಳಿಸಿ ಕೊಟ್ಟಿರುವರೆಂದೂ ಹೇಳಲಾಗಿದೆ. [illegible] ರಹಸ್ಯವೇನಿದ್ದರೂ ಹಿಂದುಸ್ಥಾನದ ಪರಿಸ್ಥಿತಿಯನ್ನು ಅಸಫ ಅಲಿಯವರಿಂದ ಬಾಯಿಯಿಂದಲೇ ಕೇಳಿ ತಿಳಿದುಕೊಳ್ಳಲು ಬ್ರಿಟಿಷ್ ಮಂತ್ರಿಗಳು ಆತುರಪಡುವರೆಂಬುದು ನಿಶ್ಚಿತ. ಆದಕಾರಣ ಅವರೊಡನೆ ವಿಚಾರ ವಿನಿಮಯ ಮಾಡಿ ವಿಷಯ ತಿಳಿದು ಕೊಂಡ ಬಳಿಕವೇ ಬ್ರಿಟಿಷ್ ಸರಕಾರವು ಒಂದು ಹೇಳಿಕೆಯನ್ನು ಹೊರಡಿಸಬಹುದೆಂದು ನಂಬಲಾಗಿದೆ. ಬಹಳ ಬಟ್ಟಿನಲ್ಲಿ ಬ್ರಿಟಿಷ್ ಸರಕಾರವು ಈ ವರೆಗೆ ಈ ವಿಷಯದಲ್ಲಿ ವಹಿಸಿದ ಮೌನದಿಂದ ಹೆಚ್ಚಿನ ಮಟ್ಟಿಗೆ ರಾಜಕೀಯ ವರ್ಗದಲ್ಲಿ ಅನುಮಾನಕ್ಕೆ ಕಾರಣವಾಗಿದೆ.

ಲೀಗಿನ ಹಟಮಾರಿತನ

ಇಂಥ ಅನಿಶ್ಚಿತ ವಾತಾವರಣದಲ್ಲಿ ಮುಸ್ಲಿಂ ಲೀಗು ಹಿಡಿದ ಹಟವನ್ನು ಬಿಡದೆ 'ಲೀಗೇತರ ಮುಸ್ಲಿಕ ಶೂಲ'ವೆಂದು ಬಿರುದನ್ನು ಎತ್ತಿ ಹಿಡಿದು ಕೊಂಡು ಪಾಕಿಸ್ಥಾನ ಯೋಜನೆಗಾಗಿ ಹಾತೊರೆಯುತ್ತಿದೆಯೆಂದೂ ಲೀಗು ಸದಸ್ಯರು ನಡುಗಾಲ ಸರಕಾರದಿಂದ ಹೊರಬಿದ್ದೊಡನೆ ಪ್ರತ್ಯಕ್ಷ ಚಳವಳಿಗೆ ಕೈಹಾಕುವರೆಂದೂ, ಲೀಗ ಪ್ರಾಂತ್ರಗಳು [illegible] ಒಹುದಾದೂ ಲೀಗು ಪ್ರಮುಖರ ಅನುಭವವುಳ್ಳ ಪತ್ರಿಕಾ ಸುದ್ದಿಗಾರರು ಅಭಿಪ್ರಾಯ ಪಟ್ಟಿರುವರು. ಅಲ್ಲದೆ ಪಾಕಿಸ್ಥಾನಕ್ಕೆ ಸಮಗ್ರ ಮುಸಲ್ಮಾನರನ್ನು ಒಯ್ದು ಅಲ್ಲಿರುವ ಹಿಂದುಗಳನ್ನು ಹಿಂದುಸ್ಥಾನಕ್ಕೆ ನೂಕಬೇಕೆಂಬ ಯೋಜನೆಯು ಜಿನ್ನಾ ಸಾಹೇಬರ ನೇತೃತ್ವದಲ್ಲಿ ಈಗ ರೂಪುಗೊಳ್ಳುತ್ತಿದೆಯೆಂದೂ, ಬ್ರಿಟಿಷ್ ಸರಕಾರದ ಹೇಳಿಕೆಯನ್ನಷ್ಟೇ ಲೀಗ್ ಪ್ರಮುಖರು ಈಗ ಹಾದಿ ನೋಡುತ್ತಿರುವರೆಂದೂ ದಿಲ್ಲಿಯ ರಾಜಕೀಯ ವರ್ಗದವರ ಹಾಗೂ ಪತ್ರಿಕಾ ಸುದ್ದಿಗಾರರ ತರ್ಕವುಂಟು. ತರ್ಕವೇ ನಿಜವಾದರೆ ನಡುಗಾಲ ಸರಕಾರದಿಂದ ಲೀಗು ಹೊರ ಬಿದ್ದೇ ತೀರಬೇಕಾಗುವುದು.

ಅಟ್ಲಿಯವರು ಬರುವರೇ?

ಲೀಗುದಾರಿಗೆ ಬಾರದಿದ್ದರೆ ಮುಂದೆ ಅಂತಃಕಲಹವಾಗುವದು ನಿಶ್ಚಿತವೆಂದು ಸಾಮಾನ್ಯವಾಗಿ ಎಲ್ಲರ ತರ್ಕವಿದೆ. ಅಂತಃಕಲಹವಾಗುವದಾದರೆ ಯಾವ ಕಾಲದಲ್ಲಿ ಯಾವ ರೂಪ ತಳೆಯಬಹುದು? ಬ್ರಿಟಿಶರು ಈ ಅಂತಃಕಲಹವಾಗದಂತೆ ಏನು ಮಾಡಬಹುದು? ಅದಕ್ಕೆ ಮೀರಿ ಅಂತಃಕಲಹವಾದರೆ ಮುಂದೆಯೇನಾದೀತು ಎಂಬ ಕೆಲವು ಪ್ರಶ್ನೆಗಳು ತಲೆದೋರುವದು ಸಹಜವಿದೆ. ಅಂತಃಕಲಹವಾದರೆ ಅದು ಪರಸ್ಪರ ಉಭಯ ಪಕ್ಷದವರಿಗೂ ಅದರಿಂದ ಯಾರ ಹಿತವೂ ಆಗಲಾರದು. ಆಗಗೊಟ್ಟರೆ ಅದರಿಂದ ಬ್ರಿಟಿಶ ಘನತೆ ಹೆಚ್ಚಲಾರದು. ಅದರ ಬದಲು ಬ್ರಿಟನಿನ ಕೈಯಲ್ಲಿ ನೈತಿಕ ಶಕ್ತಿ ಇರುವದಾದರೆ ಈಗಲೇ ಲೀಗಿಗೆ ಬುದ್ಧಿ ಹೇಳಿ ಕಾಂಗ್ರೆಸ್ ಲೀಗ್ ಒಪ್ಪಂದ ಮಾಡಿ ಮುಂದಿನ ಕೆಲಸ ನಡಿಸುವದು ಉತ್ತಮ. ಇಲ್ಲವಾದರೆ ಮುಂದೆ ಅಂತಃಕಲಹವಾದಾಗ ಈ ದೇಶಕ್ಕೆ [illegible] ಹಾನಿಯುಂಟಾಗಬಹುದು. [illegible] ಲೀಗಿನಿಂದ ಈ ವರೆಗೆ ಜನಸಾಮಾನ್ಯರ ಹಿತವಾಗಿಲ್ಲ. ಆದಕಾರಣ ಅಂತಃಕಲಹದ ಸಂಘರ್ಷದಲ್ಲಿ ಲೀಗು [illegible] ವ್ಯರ್ಥ ಅಂಥ [illegible] ಪಕ್ಷಗಳಿಗೆ [illegible] [illegible] ಶಾಂತಿಯು [illegible] ಮಾಡಲು ಮುಂದಾಗಿ, ಆ [illegible] ಅಂತರಿಕವಾದ ಪಾಕಿಸ್ಥಾನ ಪ್ರಶ್ನೆಯನ್ನು ಲೀಗು ಲೀಗೇತರರೊಡನೆ [illegible] ಈಗ ಆ ಪ್ರಶ್ನೆಯನ್ನು [illegible] ತಮ್ಮ ಹಾಗೂ ತಮ್ಮ ಜನತೆಯ [illegible] ಮಾಡುವದು [illegible] ಅಲ್ಲ [illegible] ಕರವೂ ಅಲ್ಲವೆಂಬುದನ್ನು ಬಹಳ ವಿಷಾದದಿಂದ ಒಪ್ಪಿಕೊಳ್ಳಬೇಕಾಗುವದು.

ಅತೀ ಉತ್ತರದಲ್ಲಿರುವ ಹಿಮ ಪ್ರದೇಶವಾದ ಐಸ್‍ಲೆಂಡಿನಲ್ಲಿ 3 ಸಾವಿರ ಮೈಲುಗಳಷ್ಟು ಮಾರ್ಗ ಸೌಕರ್ಯವಿದೆ. 4 ಸಾವಿರ ಮೋಟಾರುಗಳೂ, 330 ಟಪಾಲು ಕಟ್ಟೆಗಳೂ ಅಲ್ಲಿವೆಯಾದರೂ ರೈಲು ಮಾರ್ಗಗಳಿಲ್ಲ

★

ಇಂಗ್ಲೆಂಡ್, ಸ್ಕಾಟ್ಲೆಂಡ್ ಮತ್ತು ವೇಲ್ಸ್‍ಗಳಲ್ಲಿ 3 ಕೋಟಿ 10 ಲಕ್ಷ ಜನರು ಪ್ರತಿವಾರ ಸಿನೇಮಾಕ್ಕೆ ಹೋಗುತ್ತಾರೆ—ಅಂದರೆ ಇದು ಅಲ್ಲಿನ ಒಟ್ಟು ಜನ ಸಂಖ್ಯೆಯ, ಶೇಕಡಾ 75ರಷ್ಟಾಯಿತು.

ಆಧುನಿಕ ಭಾರತೀಯ ಸಾಹಿತ್ಯ ಜ್ಯೋತಿಗಳು

ಇನ್ನೂರು ಭಾಷೆ—ಆರ್‍ನೂರು ನುಡಿಗಳ ದೇಶ

ವಾಙ್ಮಯದಲ್ಲಿ ಗಾಂಧಿ ವಿವೇಕಾನಂದರು

[illegible] ನಮ್ಮದು ವಿಚಿತ್ರ ದೇಶವಾಗಿ ಕಂಡರೆ ಆಶ್ಚರ್ಯವಲ್ಲ. ಕಾರಣ ಇಲ್ಲಿರುವ ಹಲವು ವರ್ಣಗಳ ಜನತೆ, ಇಲ್ಲಿಯ ಅಸಂಖ್ಯಾತ ಜಾತಿ ನೀತಿ ಸಂಬಂಧವಾದ ಸಾಮಾಜಿಕ ಭೇದಾಭೇದಗಳು ಇಲ್ಲಿಯ ಹಲವಾರು ಮತ ವೈವಿಧ್ಯತೆಗಳು ಯಾರನ್ನೂ ಕೌತುಕಗೊಳಿಸಬಲ್ಲವು. ಇದರ ಜೊತೆಗೆ ಭಾರತದಲ್ಲಿ 200 ಭಾಷೆಗಳೂ ಆನ್ನೂರು ಉಪ ಭಾಷೆಗಳೂ ಇಲ್ಲಿನ ವಾಡಿಕೆಯಲ್ಲಿಯೆಂದಾಗ ಎಂಥವರಾದರೂ ಅವಕ್ಕಾಗದಿರರು.

ಇವುಗಳಲ್ಲಿ ಹಲವು ಭಾಷೆಗಳಿಗೆ ಸ್ವಂತ ಲಿಪಿಯೂ ಸಾಹಿತ್ಯವೂ ಇದೆ. ಕೆಲವುಗಳ ಸಾಹಿತ್ಯ ಕೇವಲ ಮೌಖಿಕವಾದುದು. ಒಂದೊಂದು ಪ್ರಾದೇಶಿಕ ವಿಭಾಗದ ಜನರ ಆಚಾರ ವಿಚಾರಗಳೂ, ಸಂಸ್ಕೃತಿಯೂ ಪ್ರತಪ್ರತ್ಯೇಕವೂ ಆಗಿದೆ ಇವುಗಳಲ್ಲಿ ಹಲವು ಸುಂದರ ಮುತ್ತುಗಳಂತಿದ್ದು ಎಲ್ಲವೂ ಅತೀ ಪ್ರಾಚೀನವಾದೊಂದು ಭಾವನಾತ್ಮಕ ಸಂಸ್ಕೃತಿಯ ದಾರದಿಂದ ಒಂದು ಅಪೋಘ ಹಾರದಂತೆ ಪೋಣಿಸಲ್ಪಟ್ಟಂತೆಯೂ ಇರುವುದು ಇನ್ನಷ್ಟು ಬೆರಗಿನ ಸಂಗತಿ

ಕೆಲವು ಭಾಷೆಗಳು ಕೇವಲ ಮತೀಯ ಚಳವಳಿಗಳ ಮೂಲಕ ಅಭಿವೃದ್ಧಿ ಹೊಂದಿವೆ. ಇತರವು ಸಾಮಾಜಿಕ ವ್ಯವಹಾರಗಳಿಂದಲೇ ಜೀವಂತವಿದೆ ಹಿಂದೂ ಜನತೆಗೆ ಸಂಸ್ಕೃತವು ಪುರಾತನವೂ ಪವಿತ್ರವೂ ಆದ ಭಾಷೆ. ಪಾಲಿ ಭಾಷೆಯು ಬೌದ್ಧರ ಗೌರವಾದರಕ್ಕೆ ಪಾತ್ರವಾಗಿದೆ, ಅರಬಿ ಭಾಷೆಯು ಮುಸಲ್ಮಾನರ ಪವಿತ್ರ ಭಾಷೆಯಾಗಿರುತ್ತದೆ ಭಾರತೀಯ ಕೆಥೋಲಿಕರಿಗೆ ಲೆಟಿನ್ ಭಾಷೆಯು ಶ್ರೇಷ್ಠವಾಗಿದೆ. ಕಾರಣ ಅವರ ಮತೀಯ ಶಾಸನಗಳೆಲ್ಲ ಅದೇ ಭಾಷೆಯಲ್ಲಿವೆ ಪಾರಸೀ ಇದೆ ಜನರಿಗೂ ಒಟ್ಟಿನಲ್ಲಿ ಹೇಳುವುದಾದರೆ ಭಾರತದಲ್ಲಿ ಸಜೀವವಾಗಿರುವ ಎಲ್ಲಾ ಭಾಷೆಗಳೂ ಮತೀಯ ಸಂಬಂಧ ಪ್ರಾಮುಖ್ಯತೆಯಿಂದಲೇ ಅಸ್ತಿತ್ವ, ವಿಲಿ ದಲ್ಲವೆನ್ನಬಹುದು

ಹೀಗೆ ಒಂದು ಕಡೆಯಿಂದ ಸಂಸ್ಕೃತ, ಪಾಲಿ, ಪರ್ಸಿಯ ಪಾರಸಿ, ಮತ್ತು ಲೆಟಿನ್ ಭಾಷೆಗಳು ಪ್ರಾಚೀನ ಭಾಷೆಗಳ ಗುಂಪು ಇನ್ನೊಂದು ಕಡೆಯಿಂದ ಆಧುನಿಕ 'ಜೀವಂತ' ಸಾಹಿತ್ಯಗಳಂತಿರುವ ಅಸಾಮಿ, ಬಂಗಾಲ, ಹಿಂದಿ, ಉರ್ದು, ಮರಾಠಿ, ಒರಿಯಾ, ಪಂಜಾಬಿ, ಸಿಂಧೀ, ಟಮಿಳು, ತೆಲಗು, ಕನ್ನಡ, ಮಲಯಾಲಮ್, ಮೊದಲಾದುವು ಒಂದು ಗುಂಪಾಗಿವೆ ಇವು ಇಲ್ಲಿಯ ಕಿಕ್ಕಿರಿದ ಜನ ಜೀವನದ ದಿನ ನಿತ್ಯದ ವ್ಯವಹಾರದಲ್ಲಿ ಬಳಸಲ್ಪಡುತ್ತವೆ

ಸಂಸ್ಕೃತ ಶ್ರೇಷ್ಠತೆ

ನಾವು ಭಾರತೀಯ ಸಾಹಿತ್ಯವೆನ್ನುವಾಗ ಈ ಎಲ್ಲ ಭಾಷೆಗಳ ಒಟ್ಟು ವಾಙ್ಮಯದ ವೈಶಿಷ್ಟ್ಯದ ಕುರಿತು ಮಾತನಾಡದೆ ಅವುಗಳಿಗೆ ಜೀವನಾಧಾರವಾಗಿರುವ ಒಂದೇ ಸಂಯುಕ್ತವೂ. ಮೂಲವೂ ಆಗಿರುವುದರ ಕುರಿತು ನಿರೂಪಿಸುತ್ತೇವೆ ಅವುಗಳೆಲ್ಲದಕ್ಕೂ ಒಂದು ಮೂಲಾತ್ಮವಿದ್ದಂತೆ ನಮಗೆ ತೋರದಿರದು.

ಇಂದು ನಮ್ಮನ್ನು ಬೆರಗುಗೊಳಿಸುವ ಈ ಭಾಷಾ ವೈವಿಧ್ಯವು ಒಂದೇ ಮೂಲ ಸಂಸ್ಕೃತ ಝರಿಯಿಂದ ಪರಿಪೋಷಿಸಲ್ಪಟ್ಟ ಬಹಿಸ್ಕೃತ ರೂಪಾಂತರಗಳೆಂದು ನಾವು ತಿಳಿಯುತ್ತೇವೆ. ಇನ್ನೊಂದು ಅಗಾಧ ವೈವಿಧ್ಯತೆಯ ಹಿನ್ನೆಲೆಯನ್ನು ಆಳವಾದ ಐಕ್ಯತೆಯೂ, ಸಾಮರಸ್ಯವೂ ಅಡಕವಾಗಿರುವುದು ನಮ್ಮ ವಿಚಾರ ದೃಷ್ಟಿಗೆ ಗೋಚರವಾಗದಿರದು.

ನಮ್ಮ ದೇಶದಲ್ಲಿ ರೂಢಿಯಲ್ಲಿರುವ ಹೆಚ್ಚಿನ ಲಿಪಿಗಳು ಬ್ರಾಹ್ಮಿ ಲಿಪಿಯಿಂದುದ್ಭವಿಸಿದಂತವುಗಳು. ಹೆಚ್ಚಿನ ಭಾಷೆಗಳು. ಆರ್ಯ ಇಲ್ಲವೆ ದ್ರಾವಿಡ ಭಾಷಾ ಮೂಲದವು. ಪ್ರಾಚೀನ ಸಂಸ್ಕೃತದ ವಿಶ್ರಾಂತಿಯಿಂದ ಇಂದಿನ ಮರಾಠಿ, ಹಿಂದಿ, ಗುಜರಾತಿ, ಬಂಗಾಲಿ ಮತ್ತು ಸಿಂಹಳ ಭಾಷೆಗಳು ಉತ್ಪನ್ನವಾದುವು. ಪ್ರಾಚೀನ ದಕ್ಷಿಣ ಭಾರತದಲ್ಲಿ ಪ್ರಚಾರವಿರುವ ದ್ರಾವಿಡ ಭಾಷೆಯಿಂದ ಟಮಿಳು, ತೆಲುಗು, ಕನ್ನಡ, ತುಳು ಭಾಷೆಗಳು ರೂಪು ಗೊಂಡವು ಆದರೆ ಈ ಎಲ್ಲಾ ಭಾಷೆಗಳ ಮೇಲೂ ಸಂಸ್ಕೃತದ ಅಪ್ರತಿಮ ಪ್ರಭಾವವು ಬೆಳಗಿದೆ ಸಂಸ್ಕೃತದ ಪ್ರಭಾವವು ಈ ಭಾಷೆಗಳಲ್ಲಿ ಅದೆಷ್ಟು ಆಳವಾಗಿದೆ ಎಂದರೆ ಇಂದವುಗಳಿಂದ ಸಂಸ್ಕೃತದ ಪ್ರತಿ ಬಿಂಬಗಳನ್ನು ಅಳಿಸುವುದು ಅಸಾಧ್ಯವೇ ಆಗಿದೆ

ಆಧುನಿಕ ಪ್ರಭಾವಗಳು

ಆಧುನಿಕ ಇತಿಹಾಸವನ್ನು ಪರಿಶೀಲಿಸಿದರೆ ಬೇರೆ ಕೆಲವು ಸನ್ನಿವೇಶಗಳು ಭಾರತೀಯ ಸಾಹಿತ್ಯಗಳ ಮೇಲೆ ತಮ್ಮ ಶ್ರೇಷ್ಠ ಪ್ರಭಾವವನ್ನು ಬೀರಿರುವುದು ಕಂಡು ಬರುವುದು—ವಿಶಾಲವೂ ಫಲದಾಯಕವೂ ಆದ ಮುಸ್ಲಿಂ-ಸಾಹಿತ್ಯ ಪ್ರಭಾವ ಅವುಗಳೊಂದಿಗೆ ಪಾರಸೀ ಮತ್ತು ಅರಬಿ ಭಾಷೆಗಳ ಸಂಯುಕ್ತ ಪ್ರಭಾವ ಕೂಡಿ ಕೊಂಡಿದೆ ಇಂದು ಈ ಭಾಷೆಗಳ ಅನೇಕ ಶಬ್ದಗಳು ಆಚ್ಚ ಭಾರತೀಯ ಭಾಷೆಗಳಲ್ಲಿ ಸೇರಿಕೊಂಡಿವೆ ಪರಿಣಾಮವಾಗಿ ಉರ್ದು ಎಂಬೊಂದು ಭಾಷೆಯೂ ರೂಢಿಗೆ ಬಂತು

ಪಾಶ್ಚಾತ್ಯ ಸಂಸ್ಕೃತಿಗಳ ಪ್ರಭಾವವು ನಮ್ಮ ನಾಡ ನುಡಿಗಳ ಮೇಲೆ ಝಂಝಾವಾತದಂತೆ ಬೀಸಿತು ಒಂದು ಕಾಲಕ್ಕೆ ಇದರ ಪರಿಣಾಮವು ಅತ್ಯಂತ ವಿಷಕಾರಕವೆಂದೆನಿಸಲ್ಪಟ್ಟಿತು ಗೋವಾದಲ್ಲಿ ಪೋರ್ತುಗೀಸರೂ, ಪಾಂಡುಚೇರಿ, ಚಂದ್ರನಾಗೊರುಗಳಲ್ಲಿ ಫ್ರೆಂಚರೂ, ನೆಲೆಸಿದ್ದರು. ಇಂಗ್ಲಿಷರಾದರೊ ಸರ್ವ ವ್ಯಾಪಿಯಾದರು ಹದಿನೆಂಟನೆ ಶತಮಾನದಲ್ಲಿ ಭಾರತೀಯ ಸಾಹಿತ್ಯ ಝರಿಯು ಒಂದೇ ಸನೆ ಚಲನಾಸ್ತಬ್ಧವಾದಂತೆ ನಿಂತು ಹೋಯಿತು.

ಅಲ್ಲಿಂದ ನವ ಜಾಗೃತಿಯ ಪ್ರಭಾವವಾಯಿತೆನ್ನಬಹುದು ಪಾಶ್ಚಾತ್ಯ ಸಾಹಿತ್ಯ, ಸಂಪರ್ಕದಿಂದ ಸುಪ್ತವಾಗಿದ್ದ ನಮ್ಮ ಬೌದ್ಧಿಕ ಮತ್ತು ವಿಮರ್ಶಾತ್ಮಕ ಕುಶಲತೆಗಳು ಪುನರುಜ್ಜೀವನಗೊಂಡವು ನಮ್ಮ ಸಾಹಿತ್ಯಕ್ಕೆ ನವಜೀವನವೂ ನೂತನ ಸೃಜನಾ ಶಕ್ತಿಯೂ ಉಂಟಾದುವು ಹೊಸ ಪರಿಸ್ಥಿತಿಗಳನ್ನು ಎದುರಿಸಿ ಭಾರತೀಯ ಸಾಹಿತ್ಯವು ತನ್ನನ್ನು ಆಕ್ರಮಿಸಿದ ಸಾಹಿತ್ಯ ಪ್ರಭಾವವನ್ನು ತನ್ನೊಳಗೆ ಹೀರಿ ಅದನ್ನು ಪಾದಾಕ್ರಾಂತ ಮಾಡುವ ಶಕ್ತಿಯನ್ನು ಗಳಿಸಿಕೊಳ್ಳುತ್ತಿತ್ತು ಇದೇ ಸಮಯಕ್ಕೆ ಕ್ರೈಸ್ತ ಪ್ರಚಾರಕರು ಮುದ್ರಣ ಕಲೆಯನ್ನು ಇಲ್ಲಿಗೆ ತಂದು ಬೈಬಲ್ ಗ್ರಂಥವನ್ನು ವಿವಿಧ ಭಾರತೀಯ ಭಾಷೆಗಳಿಗೆ ತರ್ಜುಮೆ ಮಾಡಿದರು

ವಿವೇಕಾನಂದ ಭ್ಯುದಯ

ಕ್ರೈಸ್ತ ಪ್ರಚಾರದ ದೇಶದಲ್ಲಿ ಪುನರ್ವಿಚಾರಗಳೂ, ಆತ್ಮ ಶೋಧನೆಗಳೂ ನಡೆದುವು ಬ್ರಹ್ಮ ಸಮಾಜ, ಆರ್ಯ ಸಮಾಜ ಮತ್ತು ಪ್ರಾರ್ಥನಾ ಸಮಾಜ ಗಳು ಸ್ಥಾಪಿತವಾದುವು. [illegible] ತಲೆ ಎತ್ತಿದುವು

ಆಮೇಲೆ ಕಲ್ಕತ್ತೆ ದಕ್ಷಿಣೇಶ್ವರದಲ್ಲಿ ರಾಮಕೃಷ್ಣ ಪರಮಹಂಸರೊಬ್ಬ ಹೊಸತೊಂದು ತಾರೆಯು ಕಾಣಿಸಿಕೊಂಡು ಅಶಾಂತಿ ಕಲ್ಲೋಲವಾದ ಭಾರತೀಯ ಜನ ಜೀವನ ಸಾಗರದ ಮೇಲೆ ದಿಗ್ದರ್ಶಕವಾಗಿ ತಲಿಸುತ್ತಿದ್ದ ಸಾಹಿತ್ಯ ನೌಕೆಗೆ ಹೊಸ ದಾರಿ ಕಂಡು ಬಂತು ಹಿಂದೂ ಧರ್ಮವು ತನ್ನ ಪ್ರಾಚೀನ ಪರಿಶುದ್ಧತೆಯಿಂದ ಭಾರತ ವರ್ಷದಲ್ಲಿ ಬೆಳಗ ತೊಡಗಿತು. ಪರಮಹಂಸರ ಶಿಷ್ಯರಾದ ವಿವೇಕಾನಂದರು ವೇದಾಂತದ ಸಂದೇಶವನ್ನು ಸಾಗರೋತ್ತರದ ಪ್ರದೇಶಗಳಲ್ಲಿ ಸಾರ ತೊಡಗಿದಾಗ ವಿಶ್ವವೆಲ್ಲ ಭಾರತೀಯ ಸಾಹಿತ್ಯ ಅಮೋಘತೆಗೆ ಕಣ್ಣು ತೆರೆಯಿತು. ವಿವೇಕಾನಂದರ ಉಜ್ವಲ ಭಾಷಣೋಪದೇಶಗಳಿಂದು ಪ್ರತಿ ಭಾಷಾಂತರಿಸಲ್ಪಟ್ಟು ಪ್ರಕಟವಾಗಿವೆ ಅದರ ಪರಿಣಾಮವಾಗಿ ವೇದಾಂತ ವಿಚಾರವಿಂದು ದ್ವಿಜನ್ನು ಹೊಂದಿದ ದ್ವಿಜರ ಸ್ವಂತ ಸೊತ್ತಾಗಿರದೆ ಅದು ಜನಾಂಗದ ಸಂಪತ್ತೇ ಆಗಿರುವಂತಾಯಿತು ಇಂದು ಪಾಂಡುಚೇರಿಯಲ್ಲಿನ ಯೋಗಾಶ್ರಮದಲ್ಲೊಂದು ತಾರೆ (ಅರವಿಂದರು) ಬೆಳಗುತ್ತಿದೆ ಅದು ತನ್ನ ಶಾಂತಿ ಕಿರಣಗಳನ್ನು ನೂತನ ಸ್ವರ್ಗಕ್ಕೂ ನೂತನ ಜಗತ್ತಿನ ಕಡೆಗೂ ಮಾರ್ಗ ದರ್ಶಕವಾಗಿದೆ.

ವಂಗ ತಾರೆಗಳು

ನಂತರ ಬಂಕೀಮ್ ಚಂದ್ರರ ಕಾದಂಬರಿಗಳು ಜನಾಂಗದ ಆತ್ಮ ಗೌರವವನ್ನು ಎತ್ತಿ ಹಿಡಿದು ಮೆರೆಯಿಸುವ ಗ್ರಂಥಗಳಾಗಿ ಆದರಣೆಗೆ ಪಾತ್ರವಾದವು ಮುಖ್ಯವಾಗಿ ಬಂಗಾಲ ವಿಚ್ಛೇದಿಕರಣ ಕಾಲದಲ್ಲಿ ಬಂಕೀಮ ಚಂದ್ರರ ವ್ಯಕ್ತಿತ್ವವು ಸಾಹಿತ್ಯ ಪ್ರಪಂಚದಲ್ಲಿ ತೇಜೋಮಾನವಾಗಿ ಪ್ರಜ್ವಲಿಸಿತು ಜನತೆ ಅವರನ್ನು ಋಷಿ ಬಂಕೀಮರೆಂದು ಪೂಜಿಸಿತು "ವಂದೇ ಮಾತರಂ" ಎಂಬ ಮಂತ್ರವು ಅವರ ಪ್ರತಿಭಾಪೂರ್ತ ತುಟಿಗಳಿಂದ ಹೊರಟಿತು

ರವೀಂದ್ರರು ನೋಬೆಲ್ ಬಹುಮಾನ ಗಳಿಸಿದಾಗ ಭಾರತೀಯ ನವ ಸಾಹಿತ್ಯವು ಪ್ರೌಢ ರೂಪಕ್ಕೆ ಬಂದಿದೆಯೆಂದೂ ವಿಶ್ವ ಮಾನ್ಯತವಾಯಿತು ದೇಶ ಪರದೇಶದ ಎಲ್ಲಾ ಭಾಷೆಗಳ ಸಾಹಿತ್ಯವೂ ರವೀಂದ್ರರ ಕೃತಿಗಳಿಂದ ಅಲಂಕೃತವಾಯಿತು. ಠಾಗೋರರ ಸರ್ವ ಸಾಹಿತ್ಯ ಪ್ರಭೃತಿಗಳು ಉರ್ದುವಿನ ಇಕ್ಬಾಲರ ಮೂಲಕ ಭಾರತೀಯ ಸಾಹಿತ್ಯ ಜ್ಯೋತಿಯ ಕೀರ್ತಿಯನ್ನು ಮೊಳಗಿಸಿದರು ಅವರೇ ಮಹಮ್ಮದ್ ಇಕ್ಬಾಲರು ಇವೆಲ್ಲ ದೇಶದ ಸಾಂಸ್ಕೃತಿಕನವೋದಯದ ಚೈತನ್ಯ ಶಕ್ತಿಯನ್ನು ಪ್ರದರ್ಶಿಸಿದುವು

ಸಾಹಿತ್ಯ ಮಹಾತ್ಮಾ

ಭಾರತೀಯ ರಂಗದಲ್ಲಿ ಮಹಾತ್ಮಾ ಗಾಂಧಿಯವರ ಪ್ರವೇಶವು ಇಲ್ಲಿನ ಸಾಹಿತ್ಯ ಕ್ಷೇತ್ರದಲ್ಲಿ ಗಣನೀಯ ಘಟನೆಯಾಗಿ ಸಂಭವಿಸಿತು. ಜನತೆಯು ಪ್ರೀತ್ಯಾದರಗಳಿಂದ ಅವರ ಧ್ಯೇಯ ತತ್ವಗಳನ್ನು ಮನ್ನಿಸಿತು ಪುನರ್ನಿರ್ಮಾಣ ಹೊಂದುತ್ತಿದ್ದೊಂದು ಜನಾಂಗದ ಹೃದಯ ಮಿಡಿತಗಳನ್ನೂ, ಮಾನಸಿಕ ಪ್ರತಿಕ್ರಿಯೆಯನ್ನೂ ಮತ್ತು ಗಾಂಧಿವಾದದಿಂದುಂಟಾದ ಅಮೋಘ ವಿಚಾರ ಕ್ರಾಂತಿಯನ್ನೂ ನಿರೂಪಿಸಿ ಸರತ್ ಚಂದ್ರ, ಮುಲ್ಕರಾಜ ಆನಂದ, ಪ್ರೇಮಚಂದ, ವೆಂಕಟ್ ರಾಮಾನಿ ಮೊದಲಾದ ಪ್ರಗಲ್ಭ ಸಾಹಿತಿಗಳು ಹೃದಂಗಮವಾದ ಸಾಹಿತ್ಯ ಕೃತಿಗಳನ್ನು ರಚಿಸಿದರು. ರಾಜಕೀಯದಲ್ಲಿ ಗಾಂಧಿ ಯುಗವಾದಂತೆ ಸಾಹಿತ್ಯದಲ್ಲೂ ಗಾಂಧೀ ವಾಙ್ಮಯ ಕಾಲವೊಂದು ಪರಿಗಣಿಸಲ್ಪಡುವಂತಾಯಿತು

ಇತ್ತೀಚೆಗೆಂಬಂತೆ ಸಮತಾವಾದಿ ಸಾಹಿತ್ಯವು ನಮ್ಮ ದೇಶದಲ್ಲಿ ಪಸರಿಸ ಹತ್ತಿದೆ. ಆದರೆ ಇದನ್ನು ಕ್ಷಣಿಕ ಆಕರ್ಷಕ್ಕಣದ ವಸ್ತುವಾಗಿದ್ದು ಗಾಂಧಿಯಂತಹ ಗೋಮಟ ವ್ಯಕ್ತಿತ್ವದೆದುರು ಹೆಚ್ಚು ಬೆಳಕು ತೋರುವಂತೆ ಕಾಣುವುದಿಲ್ಲ.

KANARA COMMERCIAL BANK LTD.

PUTTUR

H O Puttur] Estd 1920 [Branch Vittal

All kinds of Banking Business transacted.

Deposits - Current, Savings, Cumulative

Deposits are accepted

Fixed Deposits for periods of 3 months and above up to 24 months are accepted.

SEASON DEPOSITS

ARE Accepted up to 31-5-1947 Terms on application.

ವಾರಾಂತ್ಯ ವರದಿ ವಿಮರ್ಶೆ

ಮದ್ರಾಸ್ ರಾಜಕಾರಣ

ರಾಜಾಜಿ ಪಕ್ಷವನ್ನು ಸೋಲಿಸಿ ಮೇಲೆ ಬಿದ್ದ ಪ್ರಕಾಶಮರ ಮೇಲೆ ಗಂಡಾಂತರದ ಪ್ರಕರಣ ಒದಗಿದೆ. ಮದ್ರಾಸ್ ಮಂತ್ರಿ ಮಂಡಳವನ್ನು ನಿರ್ದೇಶಿಸುವ ಶಾಸನಸಭೆಯ ಕೊಂಗ್ರೆಸ್ ಸದಸ್ಯರಲ್ಲಿ ಈ ನಿರ್ದಿಷ್ಟವಾದ ಮೂರು ತಂಡಗಳಾಗಿವೆ. ಒಂದು ಕಾಮರಾಜ ನಾಡರರ ತಮಿಳು ಪಕ್ಷ ಒಂದು ಪ್ರಕಾಶಮರ ಆಂಧ್ರ ಪಕ್ಷ ಮೂರನೇಯದು ಎಲ್ಲಾ ಭಾಷಾ ಪ್ರಾಂತ್ಯಗಳ ಪ್ರತಿನಿಧಿಗಳ ಬೆಂಬಲವಿರುವ ರಾಜಾಜಿ ಪಕ್ಷ. ದೂರದ ದಿಲ್ಲಿಯಲ್ಲಿ ಕೇಂದ್ರ ಮಂತ್ರಿಯಾಗಿ ಕೂತ ರಾಜಾಜಿ ತಮ್ಮ ಪಕ್ಷಕ್ಕೆ ಸದ್ಯಕ್ಕೆ ತಟಸ್ಥ ಧೋರಣೆಯ ಸಲಹೆ ಕೊಟ್ಟಿರುವರು. ಪ್ರಕಾಶಮ ಮಂಡಳಿಯನ್ನುರುಳಿಸಿದರೆ ಉನ್ನತ ಕೊಂಗ್ರೆಸ್ ಅಧಿಕಾರ ವರ್ಗದ ಕೈಗೆ ಭವಿಷ್ಯದ ಪರಿಸ್ಥಿತಿಯು ಹೋಗಿ ತಾವೆಲ್ಲರೂ ಪರಾವಲಂಬಿಗಳಾಗಬಹುದೆಂಬ ಅಂಜಿಕೆ ನಾಡರ್ ಪಕ್ಷಕ್ಕೆ ಸನ್ನಿವೇಶ ಒತ್ತಡದಿಂದ ಆಂಧ್ರಕ್ಕೆ ಸಿಕ್ಕಿದ ಪ್ರಧಾನ ಸೂತ್ರವು ಕೈತಪ್ಪಿಹೋದಿತೆಂದು ಪ್ರಕಾಶಂ ಪಕ್ಷದ ಭೀತಿ

ಮದ್ರಾಸ್ ಸರಕಾರವು ತನ್ನ ಸುಧಾರಣೆ ಸೂತ್ರಗಳಲ್ಲಿ ಭರದಿಂದ ಸಾಗುವುದಾದರೂ ಅದರ ಕೆಲವೊಂದು ಧೋರಣೆಗಳು ಕೊಂಗ್ರೆಸ್ ಶಾಸನ ಸಭಾ ಸದಸ್ಯರಲ್ಲಿ ಅತೃಪ್ತಿಯನ್ನುಂಟುಮಾಡಿವೆ ಕೈಗೊಂಡ ಸುಧಾರಣೆಗಳು ಶೀಘ್ರ ವೇಗದಿಂದ ಸಾಗುತ್ತಿಲ್ಲವೆಂಬುದೂ ಒಂದು ಆರೋಪ ಇತ್ತೀಚಿಗಿನ ಪಬ್ಲಿಕ್ ಸೇಫ್ಟಿ ಶಾಸನವು ಎಲ್ಲರನ್ನು ಗಲಿಬಿಲಿಗೊಳಿಸಿದೆ ತಪ್ಪುವರು ಮಾಡಿದ ಅಸ್ತ್ರ ತಮ್ಮ ಮೇಲೆ ಬರಬಹುದೆಂದ ಹೆದರಿಗೆ ಹಲವರಲ್ಲಿದೆ

ಏನಾವುದಕ್ಕೂ ಈ ಸಲದ ಅಧಿವೇಶನದಲ್ಲಿ ಗಂಡಾಂತರವು ತಪ್ಪಿದೆಯಾದರೂ ಪ್ರಾಂತ್ಯದ ರಾಜ್ಯಕಾರಣದಲ್ಲಿ ಪದೇಪದೇ ಬದಲಾವಣೆಗಳಾಗುತ್ತಿದ್ದರೆ ಆಡಳಿತ ನಿರ್ವಹಣೆಗೆ ತುಂಬಾ ಧಕ್ಕೆ ಇದೆ ಈ ದೃಷ್ಟಿಯಿಂದ ಜನತಾ ಪ್ರತಿನಿಧಿಗಳು ಐಕ್ಯಮತ್ಯದಿಂದ ವರ್ತಿಸುವುದು ಅವಶ್ಯವಿದೆ

ಒರಿಸ್ಸಾದ ಆದರ್ಶ

ಮದ್ರಾಸಿನಂತಹ ಸಮಾನ ಪರಿಸ್ಥಿತಿಯೊಂದು ಒರಿಸ್ಸಾದಲ್ಲುತ್ಪನ್ನವಾಗಿತ್ತು ಅಲ್ಲಿನ ಪ್ರಧಾನ ಮೆಹತಾಬರು ತಮ್ಮ ರಾಜಿನಾಮೆಯನ್ನು ಮುಂದಿಟ್ಟಿದ್ದರು. ಕೊನೆಗಂತೂ ಶಾಸನ ಸಭಾ ಕೊಂಗ್ರೆಸ ಪಕ್ಷವು ನಿರ್ವೇಕ ತಾಳಿ ದೇಶದ ಈ ಸಂಧಿಕಾಲದಲ್ಲಿ ಐಕ್ಯತೆಯ ಮಹತ್ವವನ್ನು ಮನಗಂಡು ತಮ್ಮ ಪ್ರಧಾನರ ರಾಜಿನಾಮೆಯನ್ನು ಹಿಂದೆಗೆಯುವಂತೆ ವಿನಂತಿಸಿರುವುದು. ಶ್ಲಾಘನೀಯ ಮದ್ರಾಸವು ಈ ಆದರ್ಶವನ್ನು ಅನುಸರಿಸಬಾರದೇಕೆ?

ಲೀಗಿನ ಸ್ಥಾನಮಾನ

ಬ್ರಿಟಿಷ ಸರಕಾರದ ದೀರ್ಘ ಕಾಲದ ಯೋಜನೆಯನ್ನು ಸ್ವೀಕರಿಸದೆ ಲೀಗು ಮೌನವಾಗಿ ನಡುಗಾಲ ಸರಕಾರದೊಳಗೆ ಕಾಲ ಕಳೆಯಲು ಯತ್ನ ಮಾಡುತ್ತಿದೆ ಒಂದೊ ಅವರು ಘಟನಾಸಮಿತಿಯಲ್ಲಿ ಭಾಗವಹಿಸಬೇಕು, ಇಲ್ಲವೆ ನಡುಗಾಲದಿಂದ ಹೊರನಿಲ್ಲಬೇಕು ಎಂದು ಒತ್ತಾಯಪೂರ್ವಕವಾಗಿ ತಿಳಿಸುವ ಪತ್ರವೊಂದನ್ನು ನೆಹುರುಗಳು ವ್ಹಾಯ್‌ಸ್‌ರಾಯರಿಗೆ ಬರೆದಿರುವರಂತೆ.

ಲೀಗಿನ ಡೈರೆಕ್ಟ್ ಏಕ್ಶನ್ ಕಾರ್ಯಕ್ರಮ ಕೊಲೆ ಸುಲಿಗೆಯಲ್ಲಿ ಅಂತ್ಯವಾಗಿ ಅಯಶಸ್ವಿಯಾಗುವುದು. ಪಂಜಾಬದಲ್ಲಿ ಅವರು ಅನುಸರಿಸಿದ ಅಹಿಂಸಾತ್ಮಕ ಚಳವಳವು ಬೆಂಬಲಿಗರಿಲ್ಲದೆ ಒಂದು ಕಿರುಕುಳವಾಗಿದೆ. ಇಧುತನಕದ ಚಳವಳಗಾರರೆಲ್ಲ ಶ್ರೀಮಂತ ವರ್ಗದವರು, ನಡು ವರ್ಗದವರು ತಮ್ಮ ದಂಧೆ ಬಿಟ್ಟು ಲೀಗಿನ ಪರವಾಗಿ ತ್ಯಾಗಕ್ಕೆ ಸಿದ್ಧರಿಲ್ಲವೆಂದು ತೋರುತ್ತದೆ ಜಾತೀಯ ಮತಾಂಧತೆಯನ್ನು ಕೆರಳಿಸುವ ಲೀಗ್ ದುರೀಣರ ಯತ್ನಗಳು ಅವಿವೇಕದೆಂದು ಸರ್ವವಿಧಿತವಾಗಿದೆ ಅಂದ ಮೇಲೆ ಬ್ರಿಟಿಷ್ ಸರಕಾರಕ್ಕಾದರೂ ಲೀಗಿನ ಕುರಿತು ಅಂಜಿಕೆ ಏತರದೊ ಎಂದು ಹಲವು ಪ್ರಮುಖ ಮುಖಂಡರು ಪ್ರಶ್ನಿಸುತ್ತಾರೆ ಇತ್ತೀಚಿಗಿನ ವರದಿಗಳಿಂದ ವ್ಹಾಯ್‌ಸರಾಯರು ಈ ಕುರಿತು ಕಠಿಣ ಧೋರಣೆಯನ್ನು ವಹಿಸುವರೆಂದು ತಿಳಿದುಬರುವುದು. ತೃಪ್ತಿಯ ಸಂಗತಿ

ವಿಚ್ಛೇಧಿಕರಣ ಬೇಡ

ಆರಬೀ ಮುಖಂಡರಿಗೆ ದೇಶ ವಿಚ್ಛೇಧಿಕರಣ ಬೇಡವೆಂದು ಸ್ಪಷ್ಟವಾಯಿತು ಲಂಡನಿನಿಂದ ಹಿಂದೆ ಬರುವಾಗ ಮಿ| ಜಿನ್ನರು ಈಜಿಪ್ತಿನಲ್ಲಿ ಪಾಕಿಸ್ಥಾನದ ಪ್ರಚಾರ ಮಾಡುತ್ತ ಬೆಂಬಲವನ್ನು ಗಳಿಸಲು ಪ್ರಯತ್ನ ಪಟ್ಟಿದ್ದರು. ಬ್ರಿಟಿಷ್ ಬಂಡವಾಳ ಹಿತಗಳ ಒಂದು ಪತ್ರಿಕೆಯಲ್ಲದೆ ಇತರ ಯಾವ ಪ್ರಭಾವಿತ ಪಕ್ಷವೂ ಅವರ ಯೋಜನೆಗೆ ಕಿವಿಗೊಡಲಿಲ್ಲ

ಇಚಿಗೆ ಪಲೆಸ್ತೀನದ ಅರಬ ಸಂಘದ ಕಾರ್ಯದರ್ಶಿಗಳೂ ಪಾಕಿಸ್ತಾನಕ್ಕೆ ತಮ್ಮ ಬೆಂಬಲವಿಲ್ಲವೆಂದು ಸ್ಪಷ್ಟ ತಿಳಿಸುತ್ತ "ನಮಗೆ ಇಲ್ಲಿ ಬೇಡವಾದುದನ್ನು (ಅರಬಸ್ಥಾನ, ಯೆಹೂದಿಸ್ಥಾನ) ನಾವು ಭಾರತದಲ್ಲಿ ಬೇಕೆಂದು ಹೇಳುವುದು ಸಮ್ಮತವಲ್ಲ" ವೆನ್ನುತ್ತ ಸದ್ಯದಲ್ಲೇ ದಿಲ್ಲಿಯಲ್ಲಿ ಸೇರಲಿರುವ ಅಂತರ್ ಆಸ್ಯ ಪರಿಷತ್ತಿಗೆ ಪ್ರತಿನಿಧಿಗಳನ್ನು ಕಳುಹಿಸಲು ನಿರ್ಧರಿಸಿದೆ ಇನ್ನಾದರೂ ಲೀಗ್ ದುರೀಣರು ವಿವೇಕತಂದುಕೊಳ್ಳಬಾರದೇಕೆ?



...ವಪೂರ್ಣ ಒಳ್ಳೆ ಶುಭತೆ ಆರೋಗ್ಯ ಹಗಲು ...ಗಳನ್ನು ಸಭದ ಮತ್ತು ಸುಲಭವಾದ ಈ ರೀತಿಯಲ್ಲಿ ನಿಮ್ಮದಾಗಿ ಮಾಡಿಕೊಳ್ಳಬಹುದು. ವನಸ್ಪತಿ ಮೂಲಗಳಿಂದ ಸಿದ್ಧವಾಗು ಬ್ಯಾಲ್ ಬೀನ್ಸ್ ಎಂಬ ಈ ಶಕ್ತಿಕಾರಕ ಬೇದಿ ...ದ ಕ್ರಮವಾಗಿ ಸೇವಿಸಿದಲ್ಲಿ ರಕ್ತದಿಂದ ವಿಷ ವಸ್ತುಗಳು ವಿಸರ್ಜನೆಯಾಗಿ ಜೀರ್ಣಶಕ್ತಿಯು ವೃದ್ಧಿಯಾಗಿ ನಿಮ್ಮ ಅಂತರ್ಯ ಆರೋಗ್ಯವು ಉತ್ತಮಗೊಳ್ಳುವದು.

ಶುಭ್ರ ಆರೋಗ್ಯದಲ್ಲಿರಬೇಕಾದರೆ ನಿಮಗೆ ಬ್ಯಾಲ್ ಬೀನ್ಸ್‌ಗಳ ಅವಶ್ಯವಿದೆ ಎಂದು ಸದಾ ಜ್ಞಾಪಕದಲ್ಲಿಡಿರಿ

ಮಲಗುವ ಮುನ್ನ ಶುದ್ಧ ವನಸ್ಪತಿಯಾದ

BILE BEANS

ಬ್ಯಾಲ್ ಬೀನ್ಸ್‌ಗಳನ್ನು ನಿತ್ಯಲೂ ಸೇವಿಸಿ

ಬಾವುಗಳನ್ನು ಕೂಡಲೇ ಗುಣಪಡಿಸಿರಿ

ನೋವನ್ನುಂಟುಮಾಡುವ ವಿಷಕಾರೀ ಬಾವುಗಳು ಈ ರೀತಿ ಗುಣವಾಗುತ್ತವೆ. ಅದನ್ನು ಆಗಾಗ ನೀರಿನಿಂದ ಕುಟಿಕೂರಾ ಸೋಪು ಹಾಕಿ ತೊಳೆಯಿರಿ, ಅದರ ಮೇಲೆ ಕುಟಿಕೂರಾ ಮುಲಾಮು ಹಚ್ಚಿರಿ.

ಕುಟಿಕೂರಾ ಮುಲಾಮು

CUTICURA OINTMENT

ಸಂಸ್ಥಾನಗಳು

ಬೋಪಾಲ ನವಾಬರೂ ನೆಹುರುಗಳೂ ರಾಷ್ಟ್ರೀಯ ಭಾರತ ಮತ್ತು ಸಂಸ್ಥಾನಿ ಭಾರತಗಳ ಪರವಾಗಿ ಇತ್ತೀಚೆಗೆ ಹೊರಡಿಸಿದ ಹೇಳಿಕೆಯಿಂದ ಇಲ್ಲಿನ ರಾಜಕೀಯ ಪರಿಸ್ಥಿತಿಯು ನಿರೀಕ್ಷಿಸಿದಕ್ಕಿಂತ ಉತ್ತಮವಾಗಿ ಸುಧಾರಿಸುವುದೆಂದು ಹಾರೈಸಬಹುದಾಗಿದೆ ದೇಶಿ ರಾಜರು ಜನಾಭಿಪ್ರಾಯಕ್ಕೆ ವಿರೋಧ ಹೋಗುವುದರ ಗಂಡಾಂತರವನ್ನು ಮನಗಂಡತೆ ಕಾಣುತ್ತದೆ ಬರೋಡಾ ಸಂಸ್ಥಾನವಂತೂ ಹತ್ಪೂರ್ವಕವಾಗಿ ಘಟನಾಸಮಿತಿಯಲ್ಲಿ ಸೇರಲು ಸರ್ವಸಮ್ಮತಿ ಸೂಚಿಸಿದೆ ಸಂಸ್ಥಾನಗಳ ಸಮಸ್ಯೆ ಬಗೆಹರಿದರೆ ಮತ್ತುಳಿದುದು ಲೀಗಿನ ಹಟಮಾರಿತನದ ಪ್ರಶ್ನೆಯೊಂದೇ ಇದೂ ಖಂಡಿತ ಸುಧಾರಿಸುವುದು

ವಿಜ್ಞಾನ ಪ್ರಪಂಚ

ವಿಶ್ವವು ಹಿಮಮಯವಾಗುವುದು

ಒರ್ವ ವಿಜ್ಞಾನಿಗಳ ಭವಿಷ್ಯ ವಾಣಿ

ಮಿಲಿಯಾಂತರ ವರ್ಷಗಳ ಹಿಂದೆ ಜಗತ್ತೆಲ್ಲ ಹಿಮದಿಂದ ಮುಚ್ಚಿ ಹೋಗಿತ್ತು ಈಗ ಚಂದ್ರಲೋಕವು ಹೇಗೆ ಹಿಮಮಯವಾಗಿದೆಯೋ ಅದೇ ರೀತಿ ಭೂಲೋಕದ ಸ್ಥಿತಿಯು ಆಗಿತ್ತು ಆದರೆ ಕ್ರಮೇಣ ಉಷ್ಣವು ಹೆಚ್ಚಾಗಿ ಈಗಿನ ಸ್ಥಿತಿಯಾಗಿದೆ

ಕೆಲಿಫೋರ್ನಿಯದ ಭೂಶಾಸ್ತ್ರಜ್ಞರಾದ ಪ್ರೊ. ...ಸನ್ ಅವರ ಅಭಿಪ್ರಾಯದಲ್ಲಿ ಜಗತ್ತು ಪುನಃ ಹಿಂದಿನಂತೆ ಹಿಮಮಯವಾಗುವುದಂತೆ ಆದರೆ ನಾವು ಅನಾವಶ್ಯಕ ಗಾಬರಿಗೊಳ್ಳಬೇಕಾದುದಿಲ್ಲ ಕಾರಣ ಈ ಸ್ಥಿತ್ಯಂತರವುಂಟಾಗಲು ಕಡಿಮೆ ಪಕ್ಷ 2 ಲಕ್ಷ ವರ್ಷಗಳಾದರೂ ಹಿಡಿಯುತ್ತವೆ

ಹಿಂದಿನ ಶೀತಯುಗದಲ್ಲುಂಟಾದ ಹಿಮ ...ವಚವು ಇನ್ನೂ ಸಹ ... ಕಳಚಿಹೋಗಿಲ್ಲ ಉತ್ತರ ದಕ್ಷಿಣ ಧ್ರುವದ ಬಳಿ ಅದು ಹಾಗೆಯೇ ಇದ್ದೇ ಇದೆ ಆದರೆ ಉಷ್ಣತಾಪ್ರದೇಶವು ಶತಮಾನಕ್ಕೆ ಒಂದು ಅಡಿ ಮುಂದೆ ಮುಂದರಿದರೆ ನಮ್ಮ ಜೀವಮಾನದಲ್ಲಿ ಇನ್ನು ಅನೇಕ ತಲಾಂತರಗಳ ನಂತರವೇ ಇದು ವಿಶ್ವವನ್ನಾವರಿಸೀತು. ಅಷ್ಟರಲ್ಲಿ ಮಾನವ ಕೋಟಿಯೂ ನಾಶವಾಗುವುದು ಆದುದರಿಂದ ಹೆದರಿಕೆಯೇ ಇಲ್ಲ

ನೋಟೀಸು

ಮಂಗ್ಳೂರು ತಾಲ್ಲೂಕು ಕೈರಂಗಳ ಗ್ರಾಮದಲ್ಲಿರುವ ಹೊಸಮನೆ ನಾರಾಯಣ ಭಟ್ಟರ ಮಗ ಶಂಕರ ಭಟ್ಟನು ಸರ್ವ ಜನರಿಗೆ ತಿಳಿಯಪಡಿಸುವದೇನಂದೆ ಸದ್ರಿ ತಾಲೂಕು ಕೋಣಾಜೆ ಗ್ರಾಮದ ಕೋಣಾಜೆ ಈಶ್ವರ ಭಟ್ಟರ ಮಗ ರಾಮ ಭಟ್ಟರೆಂಬವರು ಕಳೆದ ಒಕ್ಟೋಬರದಲ್ಲಿ ಮೃತರಾಗಿದಾರೆ ಸದ್ರಿ ಅವರು ತಾ 3 8-43 ರಲ್ಲು ನನಗೆ ರೂಪ್ಯಾ 800 (ಎಂಟು ನೂರಕ್ಕೆ) ಒಂದು ಡಿ ಪ್ರೊ ನೋಟು ಬರಕೊಟ್ಟಿದ್ದಾರೆ ಅದರಲ್ಲಿ ರೂಪ್ಯಾ 160 ಈ ಮೊದ್ಲು ಒಂದದ್ದು ಕಳದು ಬಾಕಿ ಬರತಕ್ಕ ಹಣದಲ್ಲಿ ಲಾಭಾಂಶವಿಟ್ಟು ನೋಟೀಸು ಕೊಡುವದೆಂತ ನನ್ನ ಅಭಿಪ್ರಾಯವಿದೆ ಪಡಕೊಳ್ಳುವವರಿಗೆ ನನ್ನಲ್ಲಿಗೆ ಬಂದಲ್ಲಿ ಎಲ್ಲಾ ಸಂಗತಿಗಳು ತಿಳಿಯಬಹುದು

ಹೊಸಮನೆ ನಾರಾಯಣ ಭಟ್ಟರ ಮಗ
ಶಂಕರ ಭಟ್ಟ,
ಕೈರಂಗಳ ಗ್ರಾಮ ಪೋಸ್ಟ್ ಮಂಜೇಶ್ವರ.

ಮಕ್ಕಳ ಶ್ರೇಯಸ್ಸು ಅಧ್ಯಾಪಕರ ಮೇಲೆ ಹೊಂದಿದೆ

"ಉಪಾಧ್ಯಾಯರಿಗೆ ಸಂಬಳ ಹೆಚ್ಚಿಸಬೇಕೆಂತ ಏಕೆ? ವರ್ಷದಲ್ಲಿ 180 ದಿವಸ ಕಲಿಸುವುದು, ವಾರಕ್ಕೆ ಐದು ದಿನ ಶಾಲೆ, ದಿನಕ್ಕೆ 5 ಗಂಟೆ ಪಾಠ. ಈ ಅವಧಿಯಲ್ಲಿ ಉಪಾಧ್ಯಾಯರು ಕಲಿಸಿದರೆ ಕಲಿಸಿದರು—ಇಲ್ಲವೆ ಇಲ್ಲ. ಕತೆ ಹೇಳಿ ಕಾಲ ಕಳೆಯುವವರೆಷ್ಟೋ ಮಂದಿ ಇದ್ದಾರೆ. ಇಷ್ಟೊಂದು ಆರಾಮವಾಗಿ ದಿನಗಳೆಯುವ ಭಾಗ್ಯವಿದ್ದವರಿಗೆ ಮತ್ತೆ ಹೆಚ್ಚು ಸಂಬಳದ ಸೌಕರ್ಯ ಕೊಟ್ಟರೆ ಅವರ ಸುಖಲೋಲುಪ್ತತೆಯು ಹೆಚ್ಚಿ ಕಲಿಸುವಿಕೆಯು ಶೂನ್ಯವಾದೀತು" ಇವೇ ಮೊದಲಾದ ತರ್ಕ ವಿತರ್ಕಗಳಿಂದು ಹೆಚ್ಚಿನ ಸಾರ್ವಜನಿಕರಲ್ಲಿ ಉಂಟಾಗಿವೆ.

ಈ ಕುರಿತು ಸಾರ್ವಜನಿಕರು ಕೆಲವು ಮಹತ್ವದ ಸಂಗತಿಗಳನ್ನು ತಿಳಕೊಳ್ಳುವುದು ಅತ್ಯಾವಶ್ಯಕವಿದೆ.

ಮಕ್ಕಳಿಗೆ ದಿನಕ್ಕೆ ಐದು ಗಂಟೆಗಿಂತಲೂ ಮಿಕ್ಕಿ ಕಲಿಸುವುದೆಂದರೆ ಅವರ ಎಳೆ ಮಿದುಳುಗಳನ್ನು ವಿಪರೀತ ಶ್ರಮಕ್ಕೊಳಪಡಿಸಿದಂತಾಗುವುದು. ಇದು ಅವರ ಶಾರೀರಿಕ ಮಾನಸಿಕ ಬೆಳವಣಿಗೆಗೆ ಅತ್ಯಂತ ಹಾನಿಕರ. ಅದೇ ರೀತಿ ವರ್ಷದಲ್ಲಿ ವಿದ್ಯಾರ್ಥಿಗಳಿಗೆ 180 ದಿನಗಳ ವಿರಾಮವೂ ಅತ್ಯಾವಶ್ಯಕ. ಈ ದೃಷ್ಟಿಯಿಂದ ಶಾಲೆಗಳಿಗೆ ಸಿಗುತ್ತಿರುವ ರಜೆಯು ಉದ್ದಿಶ್ಯಪೂರ್ವಕವಾಗಿ ಮಕ್ಕಳ ಹಿತದೃಷ್ಟಿಯಿಂದ ಕೊಡಲ್ಪಡುವ ವಿರಾಮಕಾಲ. ಹೃತ್ಕೋಶದ ಮೇಲೆ ಒತ್ತಡ ಹಾಕಿ ಶ್ರಮಿಸುವ ಉಪಾಧ್ಯಾಯನಿಗೂ ಅದು ಅತ್ಯಾವಶ್ಯವೇ ಆಗಿದೆ ಎಂದು ವೈದ್ಯ ತಜ್ಞರನ್ನು ವಿಚಾರಿಸಿದರೆ ತಿಳಿಯುವುದು.

ರಾಜಕೀಯ ತಂತ್ರ

ಹಿಂದಿನ ಕಾಲದಲ್ಲಿ ಗುರುಗಳೆನಿಸಿದ ಅಧ್ಯಾಪಕರುಗಳಿಗೆ ಸಕಲ ಮನ್ನಣೆ ಸಿಗುತ್ತಿದ್ದಿತು. ಆಗಿನ ಅಳೊಡೆಯರೂ ತುಂಬಾ ಪ್ರಜಾವಾತ್ಸಲ್ಯವುಳ್ಳವರಾಗಿದ್ದರು. ವಸಿಷ್ಠ, ವಿಶ್ವಾಮಿತ್ರ, ದ್ರೋಣರೇ ಮೊದಲಾದ ಪ್ರಖ್ಯಾತ ಗುರುಗಳು ಭಾರತದಲ್ಲಿ ರಾಜರಾಜ್ಯ ನಿರ್ಮಾಪಕರಾಗಿದ್ದರು. ಇವರ ಆಶ್ರಮಗಳು ಅಖಂಡ ಜ್ಞಾನದ ವಿಶ್ವವಿದ್ಯಾಲಯಗಳಾಗಿದ್ದುವು.

ಬ್ರಿಟಿಷರು ನಮ್ಮ ದೇಶಕ್ಕೆ ಕಾಲಿಡುವ ಮೊದಲು ಅಧ್ಯಾಪಕರುಗಳಿಗೆ ಭದ್ರವಾದ ರಾಜಾಶ್ರಯವಿದ್ದಿತು. ಆದರೆ ಭಾರತೀಯ ಗುರುಗಳದೊಂದು ಅದ್ಭುತ ವೈಶಿಷ್ಟವೆಂದರೆ ಪರಕೀಯ ಅಭಿಕ್ರಮಣ ಕಾಲದಲ್ಲಿ ದೇಶದ ಆದ್ಯಂತದಲ್ಲಿನ ಅಧ್ಯಾಪಕ ವರ್ಗವು ರಾಜಕೀಯ ಮುಂದಾಳುತನ ವಹಿಸಿ ಜನತೆಯನ್ನು ಪರಕೀಯ ಶತ್ರುಗಳಿಗಿದಿರಾಗಿ ಹೋರಾಡುವಂತೆ ಹುರಿದುಂಬಿಸುತ್ತಿದ್ದರು. ಕರ್ನಾಟಕ ಸಾಮ್ರಾಜ್ಯ ಸಂಸ್ಥಾಪನೆಗೆ ಓರ್ವ ವಿದ್ಯಾರಣ್ಯರೂ, ಮಹಾರಾಷ್ಟ್ರ ರಾಜ್ಯ ಸಂಸ್ಥಾಪನೆಗೆ ಓರ್ವ ರಾಮದಾಸರೂ ಸ್ಫೂರ್ತಿ ಮೂಲರಾಗಿ ನಿಂತಿದ್ದು ಮೊದಲಿನ ಸಂದರ್ಭದಲ್ಲಿ ಹರಿಹರ ಬುಕ್ಕರನ್ನೂ, ಎರಡನೆ ಸಂದರ್ಭದಲ್ಲಿ ಶಿವಾಜಿಯನ್ನೂ ಹುರಿದುಂಬಿಸಿದರು.

ಭಾರತೀಯ ಅಧ್ಯಾಪಕರ ಅದ್ವಿತೀಯ ಪ್ರಭಾವವನ್ನೂ, ಅವರಿಗೆ ಜನತೆಯ ಮಾನಸಿಕ ಭಾವನೆಗಳ ಮೇಲಿರುವ ಹಿಡಿತವನ್ನೂ ಚೆನ್ನಾಗಿ ಅರಿತುಕೊಂಡ ಬ್ರಿಟಿಷರು ಭಾರತೀಯರ ಶಿಕ್ಷಣಾಂಗವನ್ನೇ ದುರ್ಲಕ್ಷಿಸುವುದರ ಮೂಲಕ ಇಲ್ಲಿನ ಅಧ್ಯಾಪಕ ವರ್ಗವನ್ನೇ ನಿರಪಾಯಗೊಳಿಸಲು ನಿರ್ಧ-

ಇಂದಿನ ಮತ್ತು ಹಿಂದಿನ ಕಾಲದ ಉಪಾಧ್ಯಾಯರು

ಸಮಾಜದಲ್ಲಿ ಶಿಕ್ಷಕರ ಸ್ಥಾನಮಾನ

ಅಧ್ಯಾಪಕರಿಗೆ ಹೆಚ್ಚು ಸಂಬಳವೇಕೆ?

ರಿಸಿದರು. ಅಂತೆಯೇ ಆ ಕಸುಬಿಗೆ ಬರುವವರಿಗೆ ಅತ್ಯಲ್ಪ ಸಂಬಳ ಮಟ್ಟವನ್ನೇ ನಿರ್ಮಿಸಿದರು. ಇದರಿಂದಾಗಿ ಭಾರತೀಯ ಉಪಾಧ್ಯಾಯ ವರ್ಗವೆಲ್ಲವೂ ನಿರಂತರ ದರಿದ್ರತೆಯಲ್ಲಿರುವಂತಾಯಿತು. ಹೀಗಾಗಿ ಮೊದಮೊದಲು ಉಪಾಧ್ಯಾಯ ವೃತ್ತಿಯನ್ನು ಕೈಕೊಂಡವರು ಅಲ್ಪ ಸ್ವಲ್ಪ ತಿನ್ನುಣ್ಣಲಿಕ್ಕಿದ್ದವರೇ ಆಗಿದ್ದರು. ಹಳ್ಳಿ ಕಡೆಗಳಲ್ಲಿದ್ದವರಂತೂ ಸಣ್ಣಪುಟ್ಟ ವ್ಯಾಪಾರ ವಹಿವಾಟುಗಳಿದ್ದವರೂ, ವೈದ್ಯ ಬರವಣಿಗೆ ಮೊದಲಾದ ಉಪವೃತ್ತಿಗಳುಳ್ಳವರೂ ಆಗಿದ್ದರು.

ಇಂಥವರಿಗೆ ಉಪಾಧ್ಯಾಯ ವೃತ್ತಿಯು ಒಂದು ಉಪ ಉದ್ಯಮವಾಗಿತ್ತು. ಅದೆಷ್ಟು ಅಲ್ಪ ಸಂಭಾವನೆಯಾಗಿದ್ದರೂ ಅವರು ತೃಪ್ತಿಪಟ್ಟುಕೊಂಡಿದ್ದರು. ಅವರ ಕಲಿಸುವಿಕೆಯಾದರೂ ಹೆಚ್ಚಿನ ಸಂದರ್ಭಗಳಲ್ಲಿ ಅಷ್ಟೇ ಕಸಿಪ್ಪ ಮಾದರಿಯದಾಗಿತ್ತು. ಶಾಲೆಗಳ ಮೇಲೆ ಸರಕಾರ ಶಿಕ್ಷಣಖಾತೆಯು ಬಲವಾದ ಹತೋಟಿಯಿದ್ದುದರಿಂದ ಅಧ್ಯಾಪಕ ವರ್ಗವು ಸಂಘಟಿತ ವಿರೋಧವನ್ನೂ ತೋರ್ಪಡಿಸಲು ಅಸಾಧ್ಯವಾಗಿತ್ತು. ಇತರ ಹೆಚ್ಚಿನ ಸಂದರ್ಭಗಳಲ್ಲಿ ಶಾಲಾ ಮೆನೇಜರುಗಳು ಸ್ವತಃ ಅಧ್ಯಾಪಕರಾಗಿದ್ದುದರಿಂದಲೂ, ಮತ್ತು ಗ್ರೇಂಟ್ ವಿತರಣದ ಮೇಲೆ ಶಿಕ್ಷಣಖಾತೆಯವರ ಬಲವಾದ ನಿಯಂತ್ರಣವಿಲ್ಲದಿದ್ದುದರಿಂದ ಸರಕಾರದಿಂದ ಕೊಡಲ್ಪಡುವ ಹೆಚ್ಚಿನ ಪಾಲು ಹಣವು ಈ ಮೆನೇಜರ್ ಅಧ್ಯಾಪಕರ ಜೇಬನ್ನೇ ಸೇರುತ್ತಿತ್ತು.

ಕ್ರಮೇಣ ನಿರುದ್ಯೋಗದ ಸಮಸ್ಯೆಯು ಬಲವಾಗಲು ಇತರ ಲಾಭದಾಯಕ ಉದ್ಯಮಗಳಲ್ಲಿ ಸಂದರ್ಭ ಸಿಗದ ಬಡವರ್ಗದವರೂ ಉಪಾಧ್ಯಾಯ ವೃತ್ತಿಯನ್ನವಲಂಬಿಸತೊಡಗಿದರು. ಇವರು ಸಂಪೂರ್ಣವಾಗಿ ತನ್ನ ಸಂಬಳದ ಮೇಲೆ ಹೊಂದಿಕೊಂಡಿರುವರು. ಜನತಾ ಸರಕಾರ ಅಧಿಕಾರಕ್ಕೆ ಬರುವ ಮೊದಲು ಇವರ ಸಂಕಷ್ಟಗಳಿಗೆ ಕಿವಿಗೊಡುವವರಿರಲಿಲ್ಲ.

ಜನಪ್ರಿಯ ಸರಕಾರಕ್ಕೂ ಅಧ್ಯಾಪಕ ವರ್ಗದ ಭೀತಿ ಇದ್ದೇ ಇದ್ದಿತು. ಹಿಂದಿನ ಸಲ ಕಾಂಗ್ರೆಸ್ ಪ್ರಧಾನರಾಗಿದ್ದ ರಾಜಾಜಿಯವರು 'ಅಧ್ಯಾಪಕರಾರೂ ರಾಜಕೀಯದಲ್ಲಿ ಭಾಗವಹಿಸಬಾರದೆಂದು" ನಿರ್ದೇಶ ಕಳುಹಿಸಿದ್ದರು. ಶಿಕ್ಷಕ ವರ್ಗದಿಂದ ಆತಂಕಕ್ಕೆಡೆಯಾಗಬಹುದಾದ ತೊಂದರೆಯನ್ನು ಗ್ರಹಿಸಿಯೇ ಜನಪ್ರಿಯ ಮಂತ್ರಿಗಳಾದ ಇವರು ಈ ರೀತಿ ನಿರ್ದೇಶ ಹೊರಡಿಸಲು ಕಾರಣವಾಯಿತು.

ಎರಡನೇ ಜಾಗತಿಕ ಯುದ್ಧವು ಅನೇಕ ಅನೇಕ ಅಧ್ಯಾಪಕರಿಗೆ ಆಕರ್ಷಕ ಸಂಬಳದ ಸಂದರ್ಭಗಳನ್ನೊದಗಿಸಿಕೊಟ್ಟಿತು. ಪರಿಣಾಮವಾಗಿ ಶಾಲೆಗಳಲ್ಲಿ ತರಬೇತು ಹೊಂದಿದ ಉಪಾಧ್ಯಾಯರುಗಳು ದೊರಕುವುದೇ ದುರ್ಲಭವಾಯಿತು. ವರ್ಷದಲ್ಲಿ ಹಲವಾರು ಬದಲಾವಣೆಗಳಾಗುತ್ತಿದ್ದುದರಿಂದ ಶಿಕ್ಷಣವು ತುಂಬಾ ಕುಂಠಿತವಾಯಿತು.

Ittಷ್ಟಾದರೂ ಸರಕಾರವು ಅಧ್ಯಾಪಕರ ಸಂಬಳದ ಕಡೆಗೆ ಗಮನ ಕೊಡಲು ಬಿಡುವಿಲ್ಲದಾಯಿತು. ಕೊನೆಗಂತೂ ಸನ್ನಿವೇಶಗಳು ಪರಮಾವಧಿಗೆ ತಲ್ಪುವಂತಾಗಿ ಇನ್ನೇನು ದೇಶದ ಎಲ್ಲಾ ಕಡೆಗಳಲ್ಲಿ ಉದ್ಯಮಗಳಲ್ಲಿ ಕಂಡುಬರುವ ಮುಷ್ಕರ ವಿಧಾನವನ್ನು ಶಿಕ್ಷಕವರ್ಗವೂ ಕೈಕೊಳ್ಳುವ ಪರಿಸ್ಥಿತಿಯ ಕುರುಹುಗಳು ಕಂಡುಬಂದಿವೆ.

ಇಲ್ಲಿ ಉಗುಳಿದರೆ ಜೈಲಿಗೆ ಹೋಗಬೇಕು

ಅಮೇರಿಕದ ಕೆಲವು ವಿಚಿತ್ರ ಶಾಸಗಳು

ಸಂಯುಕ್ತ ಅಮೇರಿಕದ ಕೆಲವು ಪ್ರಾಂತ್ಯಗಳಲ್ಲಿನ ಶಾಸನ ಪುಸ್ತಕಗಳಲ್ಲಿ ಈ ಕೆಳಗಿನ ವಿಚಿತ್ರ ಕಾನೂನುಗಳಿದ್ದು ಅವನ್ನೋರ್ವ ಪತ್ರಿಕೋದ್ಯಮಿಗಳು ಈ ಕೆಳಗಿನಂತೆ ಯಾದಿ ಮಾಡಿದ್ದಾರೆ

ನ್ಯೂ ಹೆಂಪ್ ಶಾಯರ್ ಎಂಬಲ್ಲಿನ ಎದುರುಬದುರು ಹಾದುಹೋಗುವ ಮಾರ್ಗಗಳ ಸಂದಿನಲ್ಲಿ ಎರಡು ವಾಹನಗಳು ಒಂದಕ್ಕೊಂದು ಎದುರಾಗಿ ಸಿಕ್ಕಿದರೆ ಎರಡೂ ಸಂಪೂರ್ಣ ನಿಲ್ಲಬೇಕು. ನಂತರ ಯಾವುದಾದರೂ ಒಂದು ಮುಂದರಿಯಬೇಕು. ಅದು ಸಂಪೂರ್ಣ ಹೋದ ನಂತರವೇ ನಿಂತ ವಾಹನ ಮುಂದರಿಯಬೇಕು.

ಜೋರ್ಜಿಯಾ ಪ್ರಾಂತ್ಯದಲ್ಲಿ 'ಎಲೆ ಹುಡುಗ!' ಎಂದು ಹೇಳುವುದು ಶಾಸನ ವಿರೋಧವಾಗುವುದು.

ಇಂಡಿಯಾನಾದ ಗೆರಿ ಎಂಬ ಪಟ್ಟಣದಲ್ಲಿ ಬೆಳ್ಳುಳ್ಳಿ ತಿಂದ 4 ಘಂಟೆಯ ನಂತರ ನಾಗರಿಕರು ಸಾರ್ವಜನಿಕ ಬಸ್ ಇಲ್ಲವೆ ಟ್ರಾಮ್‌ಗಳ ಮೂಲಕ ಪ್ರಯಾಣ ಮಾಡಬೇಕು.

ಮಿಚಿಗನ್ ಪ್ರಾಂತ್ಯದ ಸ್ಕೆಂಟ್ ಮೆರಿ ನಗರದಲ್ಲಿ ಗಾಳಿಬರುವ ದಿಕ್ಕಿನಲ್ಲಿ ಉಗುಳಿದರೆ ವಿಚಾರಣೆಗೊಳಗಾಗುವರು.

ಮೇರಿಲೆಂಡ್ ಪ್ರಾಂತದ ಬಾಲ್ಟಿಮೋರ್ ನಗರದಲ್ಲಿ ಯಾರಾದರೂ ದೆವ್ವ ಹುಳಕ್ಕೆ ಕ್ರೂರತನ ತೋರಿದರೆ ಅಪರಾಧವಾಗುವುದು

ಕೆಲಿಫೋರ್ನಿಯದಲ್ಲಿ ಇಲಿಗಳನ್ನು ಹಿಡಿಯಲು ಗೂಡು ಇಡಬೇಕಾದರೆ ಬೇಟೆ ಮಾಡುವ ಲೈಸೆನ್ಸ್ ಬೇಕು.

ಮಿನಿಸೋಟಾದಲ್ಲಿ ಸ್ತ್ರೀಪುರುಷರ ಒಳ ಹಾಕುವ ಪೋಷಾಕು ಹೊರಪೋಷಾಕು ತೂಗಾಡಿಸುವಲ್ಲಿರಿಸಬಾರದು.

ಮಿಚಿಗನ್ ಪ್ರಾಂತ್ಯದಲ್ಲಿ ಓರ್ವಳು ತನ್ನ ಗಂಡನನ್ನು ಬಿಟ್ಟು ಹೋಗುವುದಾದರೆ ಅವನು ಅವಳ ಮೈಮೇಲೆ ತಾನು ಮಾಡಿಸಿ ಕೊಟ್ಟ ಬಟ್ಟೆಗಳಿದ್ದರೆ ಅವನ್ನು ಬಲಾತ್ಕಾರದಿಂದ ತೆಗೆಯಬಹುದು.

ಇಲಿಯೊನೈಸ್ ಪ್ರಾಂತ್ಯದಲ್ಲಿ ಓರ್ವ ಹೆಂಗುಸು ಒಂದು ಬಟ್ಟೆ ಅಂಗಡಿಗೆ ಹೋಗಿ ಆರು ಪೋಷಾಕುಗಳಿಗಿಂತ ಹೆಚ್ಚಿನವುಗಳನ್ನು ನೋಡಿ ಬೇಡವೆಂದರೆ ಅವಳನ್ನು ಶಿಕ್ಷೆಗೆ ಗುರಿಮಾಡಬಹುದು.

CANARA BANK LIMITED.

Estd: 1906.

(Incorporated in British India. Liability of Members Ltd.)

SEASON DEPOSITS

of Rs. 10,000/- and over in multiples of Rs. 1000/- and maturing within 30th September 1947 are now accepted at the following rates:-

3 months .... $2\frac{1}{4}\%$

4 to 5 months .... $2\frac{1}{2}\%$

6 to 9 months .... $2\frac{3}{4}\%$

Rates of Season Deposits of less than Rs. 10,000/- with a minimum of Rs. 1000/- and in multiples of Rs. 500/- may be ascertained on application to our nearest branch.

ಜಿಲ್ಲಾ ಪರಿಚಯ

ಕಮಿಟಿ ಮೀಟಿಂಗು: ಮಂಗಳೂರು ತಾಲೂಕು ಕಮಿಟಿ ಮೀಟಿಂಗ್ ಕಳೆದ ತಾ [illegible]ರಲ್ಲಿ ಮಂಗಳೂರು ರೆವಿನ್ಯೂ ಡಿ। ಆಫೀಸರರಾದ ಶ್ರೀ। ಎಸ್. ಬಾಲಾಜಿ ರಾಯರ ಅಧ್ಯಕ್ಷತೆಯಲ್ಲಿ ಜರುಗಿತು ಕಮಿಟಿ ಕಾರ್ಯದರ್ಶಿ ಮಂಗಳೂರು ತಹಶೀಲ್ದಾರ್ ಶ್ರೀ। ಪಿ [illegible]ಗಣೇಶರಾವ್, ತಾ॥ ಸಪ್ಲೈ ಆಫೀಸರ್ ಶ್ರೀ। ವೆಂಕಟರಾವ್ ಬಂಟ್ವಾಳ, ಅ॥ ತಾ॥ ಸಪ್ಲೈ ಆಫೀಸರ್, ಬಂಟ್ವಾಳ ಡೆ॥ ತಹಶೀಲ್ದಾರ್ ಟೈಕ್ಸ್‌ಟೈಲ್ ಕಂಟ್ರೋಲ್ ಆಫೀಸರ್ ಮೊದಲಾದವರೂ ಶ್ರೀ। ರಾಮಕೃಷ್ಣ ಪೂಂಜ ಮೊದಲಾದ 16 ಮಂದಿ ಸದಸ್ಯರೂ ಹಾಜರಿದ್ದರು ತಾ 31 1 47ರೊಳಗೊಪ್ಪಿಸಿದ ಮಿಗತೆ ಅಕ್ಕಿಗೆ ಸಂಪೂರ್ಣ ಬೆಲೆ ಕೊಡಬೇಕು, ಆ ಅಕ್ಕಿ ಬೆಲೆ ಕಡಿತವಾಗಿದ್ದರೆ, ರೈತರಿಗೆ ಅದನ್ನು ಹಿಂತಿರುಗಿಸಬೇಕು ಎಂದು ಕಲೆಕ್ಟರರಿಗೆ ಬರೆದುಕೊಳ್ಳುವಂತೆ ನಿರ್ಧರಿಸಲಾಯಿತು, ಒರುವ ಮೀಟಿಂಗಿನಲ್ಲಿ ಇನ್ನಿಬ್ಬರು ಮೆಂಬರುಗಳನ್ನು ಸೇರಿಸಿಕೊಳ್ಳುವಂತೆಯೂ ಸುಗ್ಗಿ ಅಕ್ಕಿ ಬದಲಾಗಿ ಎಣೆಲ್ ಅಕ್ಕಿ ಒಪ್ಪಿಸಿದಲ್ಲಿ ಆಯಾ ಅಕ್ಕಿಯ ಜಾತಿಗೆ ಅನುಸರಿಸಿ ಎಣೆಲ್ ಅಕ್ಕಿ ದರವನ್ನೇ ಕೊಡತಕ್ಕದೆಂದೂ ನಿರ್ಧರಿಸಲಾಯಿತು. ವಿಳಂಬಿಸಿ ಒಪ್ಪಿಸಿದ ಅಕ್ಕಿಗೆ ಕಡಿತ ಮಾತ್ರ ಹಾಗೆ ಪಡೆದ ಮೊತ್ತವನ್ನು ವ [illegible] ಗ [illegible]ಗಳಲ್ಲಿ ರೇಡಿಯೋವನ್ನು ಇರಿಸಲೂ ಧರ್ಮಾರ್ಥ ವಾಚನಾಲಯವನ್ನು ತೆರೆಯಲೂ ಕೃಷಿಗೆ ಬೇಕಾದ ಕೆರೆ ಕಾಲುವೆಗಳ ದುರಸ್ತಿಗೂ ಉಪಯೋಗಿಸುವ ಠರಾವು [illegible] ನೇಕಾರ ಪ್ರತಿನಿಧಿಗಳಾಗಿ ಕೂಳೂರು ಟಿ. [illegible] ಶ್ರೀ ಎಸ್ ನಾರಾಯಣ [illegible] ಸುರತ್ಕಲ್, ಮತ್ತು ಶ್ರೀ। ವಿ [illegible] ಸೆಟ್ಟಿಗಾರ ತಾಳಿಪಾಡಿ ಇವರನ್ನು ನಾಮಕರಣ ಮಾಡಲಾಯಿತು ಅಲ್ಲದೆ ಮಾಸ್ಟರ್ ನೇಕಾರರ ಬಗ್ಗೆ ಶ್ರೀ ಬಿ ಕೋಚಪ್ಪ ಸೆಟ್ಟಿ [illegible]ರನ್ನು ಆರಿಸಿತು. ಮುಂದಿನ ಮೀಟಿಂಗ ಮಾರ್ಚ ತಾ 5ರಲ್ಲಿ

ಟೆಕ್ಸ್‌ಟೈಲ್ ಕಂಟ್ರೋಲ್ ಆಫೀಸ್: ಇನಸ್ಪೆಕ್ಟಿಂಗ್ ಆಸಿ ಟೆಕ್ಸ್‌ಟೈಲ್ ಕ[illegible] ಮತ್ತು [illegible] ಕಮಿಶನರ್ [illegible] ಟೆಕ್ಸ್‌ಟೈಲ್ ಕಂಟ್ರೋಲ್ [illegible]ರರ ಕಚೇರಿಯು ಕಲೆಕ್ಟರರ [illegible] ಕೊಠಡಿಯಲ್ಲಿ ತೆರೆಯಲಾಗಿದೆ

ಸಾರ್ವಜನಿಕ ಸಭೆ: ಶ್ರೀಮತಿ [illegible] ದೇವಿ (ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೆಂಬರ್) ಅವರ ಅಧ್ಯಕ್ಷತೆಯಲ್ಲಿ ಕಳೆದ ಆದಿತ್ಯವಾರ ಸಂಜೆ ಮೈದಾನಿನಲ್ಲಿ ಒಂದು ಸಾರ್ವಜನಿಕ ಸಭೆ ಜರುಗಿ ಶ್ರೀಮತಿಯವರ "ರಾಷ್ಟ್ರೀಯ ಸೇವಾ ದಳದ ಅವಶ್ಯಕತೆ"ಯ ಕುರಿತು ಭಾಷಣ ಮಾಡಿದರು ಶ್ರೀ ಎಂ ಉಮೇಶರಾಯರೂ ಅದೇ ವಿಷಯದಲ್ಲಿ ಮಾತಾಡಿದರು.

ಡಿ ಸಿ. ಮಿಶನ್ ದಿನಾಚರಣೆ: [illegible] ದಿನಾಚರಣೆ ಈಚೆಗೆ ರಾ ಬ ಎಂ [illegible]ರ್ ಚಂದರ್ (ನಿವೃತ್ತ ಜಿಲ್ಲಾ ಜಡ್ಜ) ಅವರ ಅಧ್ಯಕ್ಷತೆಯಲ್ಲಿ ಜರುಗಿತು.

ದ. ಕ. ವಾಣಿಜ್ಯ ಸಂಘ-ಮಂಗಳೂರು: ಈ ಸಂಘದ ಕಾರ್ಯಕಾರಿ ಸಮಿತಿ ಈಚೆಗೆ ಕಾಂಗ್ರೆಸ್ ಕಚೇರಿಯಲ್ಲಿ ಸಭೆ ಸೇರಿ ಇದೇ ತಾ 28ರಲ್ಲಿ ಸಂಘದ ಮಹಾಸಭೆ ಕರೆದು ವಾಣಿಜ್ಯ ವ್ಯವಹಾರರ ಮುಸೂದೆಯ ಕುರಿತೂ ಸಂಘದ ಕೆಲಸಗಳ ಕುರಿತೂ ಚರ್ಚಿಸಬೇಕೆಂದಾಯಿತು "ಸಾರ್ವಜನಿಕರ ಭದ್ರತಾ ಮಸೂದೆ"ಯನ್ನು ವಿರೋಧಿಸಿ ತಂದ ಶ್ರೀ ಆರ್ [illegible] [illegible]ಜೂರರ ಠರಾವು ಬಿದ್ದುಹೋಯಿತು

ದಂಡನೆ—6 ತಿಂಗಳ ಸಜೆ: 1944ನೇ ಇಸವಿ ನವೆಂಬರದಲ್ಲಿ ಮಂಚಿ ಮೂಲಕ ತಲ್ಪಾಡಿಯಿಂದ 85 ಗೋಣಿ ಅಕ್ಕಿ ಸಾಗಿಸಿದರೆಂಬ ಆರೋಪದ ಮೊಕದ್ದಮೆಯಲ್ಲಿ ಒಬ್ಬ ಆರೋಪಿಯಾಗಿ ಅನಂತರ ಕಾಣೆಯಾಗಿದ್ದ ಗೋಪಾಲ ನಾಯ್ಕ ಎಂಬಾತನನ್ನು ಈಚೆಗೆ ಹಿಡಿದು ವಿಚಾರಣೆಗೆ ಗುರಿಪಡಿಸಿದಲ್ಲಿ ಸಬ್ ಡಿ ಮೆಜಿಸ್ಟ್ರೇಟರಾದ ಶ್ರೀ ಬಾಲಾಜಿರಾಯರು ಆತನಿಗೆ ಇಂಡಿಯಾ ರಕ್ಷಣಾ ಕಾನೂನಿನಂತೆ 6 ತಿಂಗಳ ಕಠಿನ ಸಜೆ ವಿಧಿಸಿರುವರು

ಉಪಾಧ್ಯಾಯ ಸಂಘ ನಿರ್ಣಯ: ಕಳೆದ ತಾ [illegible]ರಂದು ಸೇರಿದ ದ ಕ ಜಿಲ್ಲಾ ಉಪಾಧ್ಯಾಯರ ಗಿಲ್ಡಿನ ಕೌನ್ಸಿಲ್ ಮೀಟಿಂಗಿನಲ್ಲಿ ಈ ಕೆಳಗಿನ ಮುಖ್ಯ ನಿರ್ಣಯಗಳಾದವು ತಾ [illegible]ರಂದು ಸೇರಲಿರುವ ಗಿಲ್ಡಿನ ಕೌನ್ಸಿಲ್ ಮೀಟಿಂಗಿನಲ್ಲಿ ಪರ್ಯಾಲೋಚಿಸಲ್ಪಡಲಿಕ್ಕಿರುವ ಈ ಕೆಳಗಿನ ಸೂಚನಾ ಠರಾವನ್ನು ಗಿಲ್ಡಿನ ಉಪ ಸಂಘಗಳಿಗೆ ಅವವುಗಳ ಅಭಿಪ್ರಾಯ ತಿಳಿಯೋಣಕ್ಕಾಗಿ ಕಳುಹಿಸಬೇಕು

"ಉಪಾಧ್ಯಾಯರ ಸಂಬಳದ ಕುರಿತು ಇತ್ತೀಚೆಗೆ ಸರಕಾರದವರು ಒಪ್ಪಿಕೊಂಡ ಮಟ್ಟವು ಅಧ್ಯಾಪಕರ ಹಿತಚಿಂತನೆಯದಲ್ಲ ಈ ಸಂಬಂಧ ಮದ್ರಾಸಿನ ಸೌತ್ ಇಂಡಿಯನ್ ಟೀಚರ್ಸ್ ಯೂನಿಯನಿನವರು ಈ ಕೆಳಗಿನ ಕಾರ್ಯ ಧೋರಣೆಯನ್ನು ಅನುಸರಿಸಲು ಗಿಲ್ಡು ಶಿಫಾರಸು ಮಾಡುತ್ತದೆ

(1) ಎಲಿಮೆಂಟರಿ ಮತ್ತು ಐಡೆಡ್ ಮೆನೆಜಮೆಂಟುಗಳ ಶಾಲಾ ಉಪಾಧ್ಯಾಯರನ್ನೂ ಸರಕಾರಿ ಶಾಲಾ ಉಪಾಧ್ಯಾಯರ ಸಂಬಳ ಮಟ್ಟದಲ್ಲಿ ಇರಿಸುವಂತೆ ಸರಕಾರವನ್ನು ಒತ್ತಾಯಪಡಿಸಬೇಕು

[illegible] ಕೇಳಿಕೆಯನ್ನು [illegible] ಮನ್ನಿಸದಿದ್ದರೆ [illegible] ಅಧ್ಯಾಪಕರ [illegible] ಬೇಕಿದ್ದ [illegible] ಆ ಕಾರ್ಯ [illegible] ತೆಗೆದು [illegible] ಸರಕಾರಕ್ಕೆ ಸ್ಪಷ್ಟ ತಿಳಿಸಬೇಕು

( ) [illegible] ಉಪಾಧ್ಯಾಯ [illegible] ಕಷ್ಟವನ್ನೆದುರಿಸ [illegible] ಸೌತ್ ಇಂಡಿಯನ್ ಟೀಚರ್ [illegible]

(4 [illegible] ಚಸೆಗೆ [illegible] ಬೇಕು.

ಮುಸ್ಕರ [illegible] 13 [illegible]

ವರ್ಗಾವರ್ಗಿ [illegible] ಕಾಮತರವರು ಮಂಗಳೂರು [illegible] ಎಕ್ಸಿಕ್ಯೂಟಿವ್ ಇಂಜಿನಿಯರರಾಗಿ ನೇಮಿಸಲ್ಪಟ್ಟಿದ್ದಾರೆ

ಮರಣ: ಸುಪ್ರಸಿದ್ಧ ಒಂಟಿ [illegible]ತನದ ಡಾ॥ ಕೆ ಜಿ ಎಮ್ ಭಂಡಾರಿ ಎಂ ಬಿ ಬಿ ಎಸ್‌ರವರು ತಾ 8ನೇ ಶನಿವಾರ ಮಧ್ಯಾಹ್ನ ಆಕಸ್ಮಾತ್ತಾಗಿ ಹೃದಯಸ್ತಂಭನದಿಂದ ವಿಧಿವಶರಾದರೆಂಬುದನ್ನು ತಿಳಿಸಲು ವಿಷಾದಪಡುತ್ತೇವೆ

ಮಾರ್ಗ ನೀರು: ಬಹಳ ಕಾಲದ ನಂತರ ನಗರ ಸಭೆಯವರು ಒಂದು ನೀರಿನ ಹೋರಿಯನ್ನು ಸಾರ್ವಜನಿಕ ಮಾರ್ಗ ನೀರು ಸರಬರಾಜಿಗಾಗಿ ತಲಾವಣೆಗೆ ತಂದಿರುವುದು ಶ್ಲಾಘನೀಯ ಇನ್ನು ಆ ನೀರು ಅವಶ್ಯವಿದ್ದ ಕಡೆಗಳಲ್ಲಿ ತಪ್ಪದೆ ಬೀಳುವಂತೆ ನೋಡುವುದೂ ಅತ್ಯಗತ್ಯ

ತೊಗರಿ ಬೇಳೆ: ಸ್ಟೋರುಗಳಲ್ಲಿ ಮಾರಾಟಕ್ಕಿದ್ದ ತೊಗರಿಯನ್ನು ವಶಪಡಿಸಿ ಅಧಿಕಾರಿಗಳು ಅದನ್ನು ಬೇಳೆಯನ್ನಾಗಿ ಮಾಡಿ ರೇಶನ್ ಅಂಗಡಿಗಳಲ್ಲಿ ಕಾರ್ಡುಗಳ ಮೂಲಕ ಹಂಚಲು ಇಟ್ಟಿರುವರು

ನೇಮಕ: ರಿಟಾಯರ್ಡ ಡಿ। ಜಡ್ಜರಾದ ರಾವ್ ಬಹದ್ದೂರ್ ಎಂ ರಾಮಚಂದರ್‌ರನ್ನು ರೈಲ್ವೆ ಬೋರ್ಡಿನ ಮದ್ರಾಸ ಶಾಖೆಯ ಉಚ್ಚ ಅಧಿಕಾರಿಯನ್ನಾಗಿ ನೇಮಿಸಿರುವರೆಂದು ವದಂತಿ

ಗೋಧಿ ಸ್ವಲ್ಪ ಸಮಯದಲ್ಲೇ ಇಲ್ಲಿಗೆ ಪುನಃ ಗೋಧಿ ಬರಬಹುದೆಂದು ನಿರೀಕ್ಷಿಸಲಾಗಿದೆ

ಪುಸ್ತಕ ವಿಮರ್ಶೆ

ದೇವತಾ ಮನುಷ್ಯ

ಲೇಖಕರು: ಕಡೆಂಗೋಡ್ಲು ಶಂಕರ ಭಟ್ಟರು ಇದೊಂದು ಸ್ವತಂತ್ರ ಸಾಮಾಜಿಕ ಕಾದಂಬರಿ ಸಾಂಪ್ರದಾಯವಾದಿಗಳಾದ ಶ್ರೀನಿವಾಸರಾಯರಿಗೂ ಆಧುನಿಕ ಮನೋವೃತ್ತಿಯ ಅವರ ಮುದ್ದುಮಗ ಮಧುಸೂಧನನಿಗೂ ವಿವಾಹದ ವಿಷಯದಲ್ಲುಂಟಾದ ಭೇದಭಾವದಿಂದ ಅವನು ಉಚ್ಚ ಶಿಕ್ಷಣಕ್ಕೆಂದು ಇಂಗ್ಲೆಂಡಿಗೆ ತೆರಳುವನು ಅಲ್ಲಿ ಶ್ಯಾಮಸುಂದರಿ ಬೋಸ್ [illegible] ಕಪಟನಾಟಕದ ಸೂತ್ರಧಾರಿಯಾಗಿರುವ ಬಂಗಾಳೀ ಯುವತಿಯನ್ನು ಮೋಹಿಸಿ ಅವಳೊಡನೆ ಮನಾಯ ಜೀವನವನ್ನೆಸಗುವನು ಆದರೆ ಅವಳ ತನ್ನ ಕಲಾಭ್ಯಾಸದ ಸಮಾಪ್ತಿಯಾದ ಒಳಿಕ ಸ್ವದೇಶಕ್ಕೆ ಮರಳಿ ಸುಪ್ರಸಿದ್ಧ ಚಲಚ್ಚಿತ್ರ ತಾರೆಯಾಗಿ ಮೆರೆದು ಆತನನ್ನು ತ್ಯಜಿಸುತ್ತಾಳೆ ಇದರಿಂದ ವ್ಯಾಕುಲನಾದ ಮಧುಸೂದನನ ಇಂಗ್ಲೆಂಡಿನ ಪ್ರಕಾಶಸಂಸ್ಥೆಯೊಂದರ ಹಿಂದೂದೇಶದ ಪ್ರವಾಸಿ ಪ್ರತಿನಿಧಿಯಾಗಿ ತನ್ನ ಭವಿಷಜ್ಜೀವನವನ್ನು ಕಳೆಯುತ್ತಾನೆ ಇತ್ತ ಶ್ರೀನಿವಾಸರಾಯರ ಮಡದಿಯು [illegible] ಅವರು ತನ್ನ [illegible] ದತ್ತ್ಯೇಕಣೆಗಾಗಿ ಎರಡನೇ ಹೆಂಡತಿಯೊಬ್ಬಳನ್ನು ತಂದು ಜನ್ಮಾಂತರ ತೊಂದರೆಗೊಳಗಾಗಿ ಅತಿ ಕಷ್ಟದಿಂದ ಸಂಸಾರ ಸಾಗರದ ದಡಸೇರುತ್ತಾರೆ ಕಟ್ಟಕಡೆಗೆ ಅವರ ಅಂತ್ಯಗಳಿಗೆಯಲ್ಲಿ ತಂದೆ ಮಕ್ಕಳ ಪುನರ್ಮಿಲನವಾಗುತ್ತದೆ ಇದಿಷ್ಟು ಕಾದಂಬರಿಯ ಕಥಾಸಾರ

ಈ ಕಾದಂಬರಿಯ ಮುನ್ನುಡಿಯಲ್ಲಿ ಸಂಪಾದಕರು ಇದರ ವಿಷಯ ಮಾಡಿದ ಪ್ರಶಂಸೆಯು ಅತಿ ಹೆಚ್ಚಾಗಿದೆ ಆದರೆ ಈ ಪ್ರಶಂಸೆಯೆಲ್ಲದಕ್ಕೂ ಇದು ಒಳಗಾಗಿಲ್ಲವೆಂದು ಓದುಗರು ನಿರ್ಧರಿಸಬಹುದು ಪುಸ್ತಕದ ಶೈಲಿ ಯೇನೋ ಉತ್ತಮ ತರದ್ದೆಂಬುದರಲ್ಲಿ ಸಂದೇಹವಿಲ್ಲ ಆದರೆ ಇನ್ನಿತರ ವಿಷಯಗಳಲ್ಲಿ ಇದು ಆಧುನಿಕ ಕಾದಂಬರಿಗಳನ್ನು ಎಂದೂ ಸರಿಗಟ್ಟಲಾರದು ಲೇಖಕರು ಕಾದಂಬರೀ ರಚನೆಯಲ್ಲಿ ಇನ್ನೂ ಬಲಿತಿಲ್ಲ ಇಷ್ಟರಿಂದ ಮಾತ್ರಕ್ಕೆ ಗ್ರಂಥಕರ್ತರ ತೆಗಳಿಕೆಯಾಗಿದೆಯೆಂದು ಯಾರೂ ಗ್ರಹಿಸಬಾರದು. ಕನ್ನಡದಲ್ಲಿ ಕಾದಂಬರಿಗಳ ಕೊರತೆಯಿರುವಾಗ ಅದನ್ನು ಸ್ವಲ್ಪಮಟ್ಟಿಗಾದರೂ ಪರಿಹರಿಸಿದ ಯಶಸ್ಸು, ಶ್ರೇಯಸ್ಸು ಇವರದು. ಅವರು ಇದಕ್ಕಿಂತಲೂ ಉತ್ತಮವಾದ ಇನ್ನೂ ಅನೇಕ ಕಾದಂಬರೀ ರತ್ನಗಳನ್ನು ಒರೆದು ಕನ್ನಡ ಕಾದಂಬರೀ ಪ್ರಪಂಚವನ್ನು ಬೆಳಗಲಿ

ಬೆಲೆ [illegible]

ದೇವದಾಸ್

★



ಮದ್ಯಪಾನದಿಂದ ಜನಾಂಗ ಕೆಡುತ್ತಿದೆ

ಮಾದಕ ಪದಾರ್ಥಗಳು ಸಾರ್ವಜನಿಕ ಶತ್ರು

ದಕ್ಷಿಣ ಕನ್ನಡದಲ್ಲಿ ಪಾನನಿರೋಧ

ಮದ್ಯಪಾನ ಚಟವು ಮಜೂರ ವರ್ಗಕ್ಕೆ ಮಾಡುವಷ್ಟು ಹಾನಿಯನ್ನು ಇನ್ನಾರಿಗೂ ಮಾಡುವುದಿಲ್ಲ. ಆ ವರ್ಗವನ್ನು ಈ ದುಶ್ಚಟದಿಂದ ವಿಮೋಚನೆಗೊಳಿಸುವ ಯಾವ ಶಾಸನವನ್ನಾದರೂ ನಾವು ಹೃತ್ಪೂರ್ವಕವಾಗಿ ಸ್ವಾಗತಿಸಬೇಕು. ಬರುವ ಒಕ್ಟೋಬರ್ ತಿಂಗಳಿಂದ ದ. ಕನ್ನಡ ಮತ್ತು ಮಲಬಾರು ಜಿಲ್ಲೆಗಳು ಮದ್ಯಪಾನ ನಿರೋಧ ಶಾಸನಕ್ಕೊಳಗಾಗಬಹುದೆಂದು ತಿಳಿದುಬಂದಿರುವುದು ಸಂತೋಷದ ಸಂಗತಿ.

ಸಾರ್ವಜನಿಕ ಶತ್ರು

ಮಾದಕ ದ್ರವ್ಯ ಸೇವನೆಯು ಸಮಾಜದ ಘೋರ ಶತ್ರುವಾಗಿರುವುದೆಂದು ಪ್ರಾಚೀನ ಕಾಲದಿಂದಲೂ ಪರಿಗಣಿಸಲ್ಪಟ್ಟಿದ್ದು ಜನತೆಯನ್ನು ಈ ದುರ್ವ್ಯಸನದಿಂದ ಬಿಡುಗಡೆಮಾಡಲು ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ದೇಶಗಳಲ್ಲಿ ಹಲವು ಪ್ರಯತ್ನಗಳಾಗಿವೆ. ಈ ನೀಚ ಹವ್ಯಾಸವನ್ನು ನಿರ್ಮೂಲಿಸಲು ಅದರ ಮೂಲ ಕಾರಣಗಳನ್ನು ಮೊದಲು ಪರಿಶೋಧಿಸಬೇಕು.

14ನೇ ಶತಮಾನದಲ್ಲಿ ಇರಾನದ ಸುಲ್ತಾನ್ ಮಹಮ್ಮದ್ ಮುಜಫರನು ತನ್ನ ದೇಶದಲ್ಲಿನ ಮದ್ಯದಂಗಡಿಗಳೆಲ್ಲವನ್ನೂ ಮುಚ್ಚಿಸಿದನು. ಅವನು ನಿಷ್ಠಾವಂತ ಮುಸಲ್ಮಾನನಾಗಿದ್ದನು. ಆದರೆ ಅವನು ಸತ್ತ ಒಂದು ವರ್ಷದೊಳಗೆ ಪಟ್ಟಕ್ಕೆ ಬಂದ ಅವನ ಮಗ ಶಾಸುಜಾನು ಪುನಃ ಅವುಗಳ ತೆರೆಯುವಿಕೆಗೆ ಆಜ್ಞೆ ಮಾಡಿದನು. ಕಾರಣ ಸೂಜಾನು ಸ್ವತಃ ದ್ರಾಕ್ಷಾರಸ ಸೇವಕನಾಗಿದ್ದನು.

ಭಾರತದಲ್ಲಿ ಅನೇಕ ಮುಸಲ್ಮಾನ ಅರಸರ ಕಾಲಗಳಲ್ಲಿ ಮದ್ಯಪಾನ ನಿರೋಧದ ಪ್ರಯೋಗಗಳನ್ನು ಮಾಡಲಾಗಿದೆ. ಆದರೆ ಆ ಪ್ರಯತ್ನಗಳೆಲ್ಲವು ತಾತ್ಕಾಲಿಕ ಬಾಳ್ವಿಕೆಯವಾಗಿ ಪರಿಣಮಿಸಿದವು. ಕೆಲವು ವರುಷಗಳ ಹಿಂದೆ ಸಂಯುಕ್ತ ಅಮೇರಿಕದಲ್ಲಿ ಈ ಕುರಿತು ಬಾರಿ ಪ್ರಯತ್ನವೊಂದು ನಡೆದು ಅಯಶಸ್ವಿಯಾದುದು ನಮಗೆ ಚೆನ್ನಾಗಿ ಗೊತ್ತಿದೆ. ಈ ಎಲ್ಲಾ ಸಂದರ್ಭಗಳಲ್ಲಿ ಸರಕಾರಗಳು ಮದ್ಯಪಾನ ದುಷ್ಟಟದ ಮೂಲಕ್ಕೆ ಕೊಡಲಿ ಹಾಕುವ ಬದಲು ಕೇವಲ ಶಾಸನ ಮೂಲಕ ಮಾದಕ ಪದಾರ್ಥಗಳ ಸರಬರಾಯಿಯನ್ನು ಮಾತ್ರ ನಿಲ್ಲಿಸಿದರು.

ಈ ಸಂದರ್ಭದಲ್ಲಿ ಒಂದು ಸಂಗತಿಯನ್ನು ಆಳವಾಗಿ ಪರಿಶೋಧಿಸಬೇಕು. ಕೆಲವು ಜನರು ತಮ್ಮ ಅನುಕೂಲತೆಗೆ ಮೀರಿ ಕುಡಿದು ತಮ್ಮ ಆರೋಗ್ಯ, ಜೀವನವನ್ನಷ್ಟೇ ಅಲ್ಲ ತಮ್ಮ ಸಂಸಾರದ ಸ್ಥಿತಿಯನ್ನೇ ಹಾಳುಗೆಯ್ಯುವುದಾದರೂ ಏತಕ್ಕೆ? ಬಡ ವರ್ಗದ ಜನತೆಯು ಈ ದುರ್ವ್ಯಸನದಲ್ಲಿ ಹೆಚ್ಚೆಚ್ಚು ಮಗ್ನವಾಗಿರುವುದು ಇನ್ನೊಂದು ಗಮನಾರ್ಹ ಸಂಗತಿ. ಯಾವ ಜನತೆಗೆ ಶಿಕ್ಷಣ ಸೌಕರ್ಯವಿಲ್ಲವೊ, ಯಾರಲ್ಲಿ ಭೌಧಿಕ ಶಕ್ತಿಗಳು ಕೆಳಮಟ್ಟದವುಗಳಾಗಿವೆಯೊ, ಯಾರು ಮನರಂಜನೆಯ ಕಾರ್ಯಕ್ರಮಗಳನ್ನು ಅನುಸರಿಸಲು ಅಶಕ್ತರಾಗಿರುವರೊ ಅವರಲ್ಲೇ ಈ ಮಾಧಕ ಚಟವು ಹೆಚ್ಚಾಗಿ ಅಂಟಿಕೊಂಡಿರುತ್ತದೆ. ಗಿರಣಿ, ಕಾರ್ಖಾನೆ ಕೆಲಸಗಾರರೂ ಸಣ್ಣ ಪುಟ್ಟ ಕೈಗಾರಿಕೆ ಉದ್ಯಮದ ಮಜೂರರೂ ಈ ವರ್ಗದಲ್ಲಿ ಸೇರುತ್ತಾರೆ.

ಇವರು ದಿನವೆಲ್ಲ ಬೇಸರಗೊಳಿಸುವ ಒಂದೇ ಕೆಲಸದಲ್ಲಿ ಮಗ್ನರಾಗಿರಬೇಕು. ಅನಾರೋಗ್ಯಕರವೂ, ವಿಶ್ರಾಮದ ಯಾವ ಸೌಕರ್ಯವಿಲ್ಲದವೂ ಕಾರ್ಖಾನೆಗಳಲ್ಲಿ ದುಡಿದು ದಣಿದು ಹೋಗುವಾಗ ಸುರಾಪಾನವು ಆಕರ್ಷಿಸುವ ಒಂದೇ ಬದಲಾವಣೆಯಾಗಿರುತ್ತದೆ. ಸುರೆಯಿಂದ ತಮ್ಮ ತನುಮನಗಳು ರಂಜನೆ ಹೊಂದುವವು ಎಂದವರು ಭಾವಿಸುವಂಥಾ ಪರಿಸ್ಥಿತಿಯುಂಟಾಗುವುದು. ಮಾದಕ ದ್ರವ್ಯ ಸೇವನೆಯ ಮೂಲಕ ಅವರು ಕಠೋರವಾದ ತಮ್ಮ ಜೀವನ ತಾಪತ್ರಯವನ್ನು ಮರೆಯಲು ಪ್ರಯತ್ನ ಮಾಡುತ್ತಾರೆ.

ಮಾನಸೀಕ ದೃಷ್ಟಿ ಕೋನ

ಮನೋಶಾಸ್ತ್ರ ದೃಷ್ಟಿಯಿಂದ ಪರಿಶೀಲಿಸಿದರೆ ಮಾನವ ಕೋರಿಕೆಯು ಸದಾ ಸುಖಲೋಲುಪ್ತತೆಯ ಸಾಧನಗಳನ್ನು ಹುಡುಕುತ್ತಲೇ ಇರುವುದೆಂದು ನಮಗೆ ತಿಳಿದುಬರುತ್ತದೆ. ಅಮಲು ವಸ್ತುಗಳು ಒಂದು ತರದ ತಾತ್ಕಾಲಿಕ ಮಾನಸೀಕ ಹರ್ಷವನ್ನೂ, ದೇಹಿಕ ಆನಂದವನ್ನೂ ಕೊಡುವ ಲಕ್ಷಣಗಳಿಂದ ಕೂಡಿವೆ. ಇದರ ಗುಟ್ಟನ್ನು ಒಂದು ಸಲ ಅನುಭವಿಸಿದವರು ಮೇಲಿಂದ ಮೇಲೆ ಅದರಿಂದ ಆಕರ್ಷಿತರಾಗುವರು. ಹೀಗೆ ಅಭ್ಯಾಸವಾಗುತ್ತಲೆ ಸೇವನೆಯ ಪ್ರಮಾಣವೂ ಏರುತ್ತದೆ ಪ್ರಾರಂಭದ ಸಣ್ಣ ಪ್ರಮಾಣದ ಅಮಲು ಅವನಿಗೆ ಸಾಕಾಗುವುದಿಲ್ಲ. ಅನುಕೂಲಸ್ಥ ವರ್ಗದವರು ಶ್ರೇಷ್ಠ ತರಗತಿಯ ಅಮಲು ದ್ರಾವಕಗಳನ್ನು ಸೇವಿಸುವುದು ಇದೇ ಕಾರಣದಿಂದಾಗಿ.

ಪರಿಹಾರ

ಪಾನ ನಿರೋಧವನ್ನು ಪರಿಣಾಮಕಾರಿಯಾಗಿ ಮಾಡಲು ಮೊದಲು ನಗರಗಳಲ್ಲಿನ ಮಜೂರ ವಾಸಸ್ಥಾನ, ಕೆಲಸ ಸ್ಥಳಗಳಲ್ಲಿನ ಅನೈರ್ಮಲ್ಯದ ವಾತಾವರಣವನ್ನು ಶುದ್ಧಗೊಳಿಸಬೇಕು. ಸಾಯಂಕಾಲಗಳಲ್ಲಿ ಕೆಲಸಗಾರರು ಯಾವದಾದರೂ ಮನರಂಜನೆಯಲ್ಲಿ ತಮ್ಮ ಮನಸ್ಸನ್ನು ಮಗ್ನಗೊಳಿಸುವಂತೆ ಆಟ ಕೂಟಗಳನ್ನೋ, ಸಂಘಗಳನ್ನೊ ಪ್ರಾರಂಭಿಸಬೇಕು. ನಾಟಕ ಚಲಚಿತ್ರ ಮೊದಲಾದ ಆಕರ್ಷಣೆಗಳನ್ನಿಡಬೇಕು. ಶೇಂದಿ ಗಡಂಗುಗಳ ಸ್ಥಾನದಲ್ಲಿ ಶುದ್ಧವೂ ರುಚಿಕರವೂ ಆದ ಇತರ ಆಹಾರ ಪಾನೀಯಗಳ ಮಂದಿರಗಳನ್ನು ಸ್ಥಾಪಿಸಬೇಕು. ಭಾಷಣ, ಹರಿಕತೆ, ಯಕ್ಷಗಾನ, ಭಜನೆ ಸಂಗೀತಕಚೇರಿ, ನಾಟ್ಯ ಮೊದಲಾದವುಗಳನ್ನು ಸಾಯಂಕಾಲಗಳಲ್ಲಿ ಏರ್ಪಡಿಸಬೇಕು. ರಜಾ ದಿನಗಳಲ್ಲಿ ಕೆಲಸಗಾರರಿಗೆ ಯಾವುದಾದರೂ ಮನಾಕರ್ಷಕ ಸ್ಥಳಗಳಿಗೆ ಸಂಚಾರ ಹೋಗುವಂತೆ ವಾಹನ ಸೌಕರ್ಯಗಳನ್ನೇರ್ಪಡಿಸಬೇಕು.

ದೀರ್ಘ ಕಾಲದ ಅಭ್ಯಾಸವಿದ್ದವರಿಗೆ ಒಂದೇ ಸವನೆ ಮಾದಕ ಪದಾರ್ಥಗಳನ್ನು ಸಿಗದಂತೆ ಮಾಡುವುದೂ ಹಾನಿಕರವಾದುದರಿಂದ ಅಂಥವರಿಗೆ ಒಂದು ನಿರ್ಧಿಷ್ಟ ಪ್ರಮಾಣ ದೊರೆಯುವಂತೆ ರೇಶನ್ ವಿಧಾನವೊಂದನೇರ್ಪಡಿಸಿ ಕ್ರಮೇಣ ಅಮಲುಗಳ ಪ್ರಮಾಣವನ್ನು ಕಡಿಮೆ ಮಾಡುತ್ತ ಬರಬೇಕು. ಈ ಇಡೀ ಯೋಜನೆ ಅವಸರದಿಂದ ನಿರ್ವಹಿಸದೆ ಹತ್ತು ವರ್ಷಗಳ ತನಕ ತಾಳ್ಮೆಯಿಂದ ಮುಂದರಿಸಬೇಕು. ಅಂದರೆ ಪಾನ ನಿರೋಧವು ಯಶಸ್ವಿಯಾಗುವುದು.

ಭಾರತದಲ್ಲಿ ಬ್ರಿಟಿಷರಿಗಿರುವ ಒಂದೇ ದಾರಿ

ಪಾರ್ಲಿಮೆಂಟ್ ಮೆಂಬರರ ಅಭಿಪ್ರಾಯ

ಒಂದು ವೇಳೆ ಘಟನಾ ಸಮಿತಿಯು ಫಲದಾಯಕವಾದ ಯಾವ ಘಟನೆಯನ್ನಾಗಲಿ ರಚಿಸದಿದ್ದರೆ ಇಲ್ಲವೆ ಯಾವದಾದರೊಂದು ಅಲ್ಪ ಸಂಖ್ಯಾಕ ಪಕ್ಷದವರಿಗೆ ಸಮ್ಮತಿಯಿಲ್ಲದ ರಾಜ್ಯಪದ್ಧತಿಯನ್ನು ರಚಿಸಿದರೆ ಬ್ರಿಟಿಷ್ ಸರಕಾರವು ಏನು ಮಾಡುವುದು?

ಈ ಪ್ರಶ್ನೆಯನ್ನು ಮುಂದಿಟ್ಟು ಪಾರ್ಲಿಮೆಂಟಿನ ಸದಸ್ಯರಾದ ಮಿ। ಗೊಡ್‌ಫ್ರೆನಿ ಕೊಲ್ನಸ್ ಅವರು ಸ್ಪೆಕ್ಟೇಟರ್ ಪತ್ರಿಕೆಯಲ್ಲಿ ಒಂದು ಲೇಖನ ಬರೆದು ಈ ಕೆಳಗೆ ಕಾಣಿಸಿದುದರಲ್ಲಿ ಒಂದು ಖಂಡಿತ ಸಂಭವಿಸುವುದೆಂದು ತಿಳಿಸುತ್ತಾರೆ:

ನಮ್ಮ ಮುಂದೆ ಎರಡರಲ್ಲಿ ಒಂದು ದಾರಿ ಮಾತ್ರವಿದೆ. ಒಂದೊ ನಾವು ಭಾರತದಲ್ಲಿ ಶಾಂತಿ ಶಿಸ್ತುಗಳನ್ನು ಕಾಪಾಡುವ ನಮ್ಮ ಹೊಣೆಗಾರಿಕೆಯನ್ನು ಮುಂದರಿಸಬೇಕು. ಇಲ್ಲವೆ ಅಲ್ಲಿಂದ ಗಂಟುಮೂಟೆ ಕಟ್ಟಬೇಕು.

ನಾವು ಭಾರತದಿಂದ ಹೊರಡಲು ನಿರ್ಧರಿಸಿದ ಮರುದಿನವೇ ಆ ದೇಶವು ಭೀಕರ ಅರಾಜಕತೆಗೆ ಗುರಿಯಾಗುವುದು. ಸಂಗತಿಯೇನೆಂದು ಶೇಕಡಾ ೯೧ರಷ್ಟು ಜನತೆಗೆ ತಿಳಿಯದೆನೇ ಘೋರ ವಿವಾದವೀ ಕಲಹ ಕ್ಕಾರಂಭವಾಗಬಹುದು.

ಇದು ಅತ್ಯಂತ ಕಳವಳಾಸ್ಪದ ಸಂಗತಿ. ಕಠೋರ ಮಾನವ ಹತ್ಯಾಕಾಂಡದಲ್ಲಿ ಪರಿಣಮಿಸಬಹುದಾದ ಹೊರಡುವಿಕೆಯ ಘೋರಣೆಯನ್ನು ಬ್ರಿಟಿಷ್ ಜನತೆ ಎಂದೂ ಸಹಿಸದು. ಆದರೆ ಭಾರತದಲ್ಲಿ ನಮ್ಮ ಇರುವಿಕೆಯು ಮುಂದುವರಿದರೂ ಅಷ್ಟೇ ಗಂಡಾಂತರವಿದೆ ಎಂದೂ ನಮ್ಮ ಜನರಿಗೆ ತಿಳಿಯದೆ ಇಲ್ಲ. ನಾವು ನಿಜವಾಗಿ ಭಾರತೀಯರ ಮಿತ್ರರು ಎಂದು ಅಲ್ಲಿನ ಜನತೆ ಮನಗಂಡರೆ ಮಾತ್ರ ನಾವು ಅಲ್ಲಿ ಎಲ್ಲಾ ಜನತೆಯ ಸಮ್ಮತಿಯುಳ್ಳ ರಾಜ್ಯಘಟನೆ ರಚನೆಯಾಗುವ ತನಕ ಇರಬಹುದು.

ಕಳವಳದ ಭವಿಷ್ಯ

ಭಾರತದ ಭವಿಷ್ಯವು ಮುಸುಕುಮುಸುಕಾಗಿದೆ. ಆದರೂ ಬ್ರಿಟಿಷರಾದ ನಾವು ಎದೆಗುಂದಬೇಕಾದುದಿಲ್ಲ; ಇಲ್ಲವೆ ತಲೆಕೆಡಿಸಿಕೊಳ್ಳಬೇಕಾದುದೂ ಇಲ್ಲ. ನಮ್ಮ ಜನರಲ್ಲಿ ವಿವೇಕ ಸ್ಥೈರ್ಯಗಳಿಗೆ ಕೊರತೆಯಿಲ್ಲ. ಭಾರತದ ಜನರು ಯಾವ ತರದ ರಾಜ್ಯಘಟನೆಯನ್ನು ನಿರ್ಮಿಸುವರೆಂದು ಹೇಳಬರುವುದಿಲ್ಲ. ಆದರೆ ಒಂದು ತರದ ವಿಚ್ಛೇಧಿಕರಣವು ಅನಿವಾರ್ಯವೆಂದು ತೋರುತ್ತದೆ.

ಯಾವ್ವಹಕ್ಕೂ ನಾವು ಸತ್ಯಸ್ಥಿತಿಯನ್ನು ಧೈರ್ಯದಿಂದೆದುರಿಸಬೇಕಾಗಿದೆ. ಅದುದರಿಂದ ನಾವು ನಮ್ಮ ಮನಸ್ಸಿಗೆ ಉಚಿತವಾದ ನಿರ್ಧಾರಗಳನ್ನು ಕಾರ್ಯರೂಪಕ್ಕೆ ತರುತ್ತೇವೆಂದು ಅಲ್ಲಿನ ಜನರಿಗೆ ಸ್ಪಷ್ಟವಾಗಿ ತಿಳಿಸುವುದು ಉತ್ತಮ.

[ಈ ಲೇಖಕರು ವಿಭಾಗೀಕರಣವೇ ಭಾರತ ಸಮಸ್ಯೆಗೆ ಇರುವ ಒಂದೇ ಪರಿಹಾರವೆಂದು ನಂಬುವವರಲ್ಲೊಬ್ಬರೆಂದು ಅವರ ಲೇಖನದಿಂದ ತಿಳಿಯುತ್ತದೆ. ಇವರು 'ಸತ್ಯಸ್ಥಿತಿಯನ್ನು ಎದುರಿಸಬೇಕೆಂದು' ಹೇಳುತ್ತಿರುವುದರ ಅರ್ಥ ಬಹುಸಂಖ್ಯಾಕರು ಅಲ್ಪಸಂಖ್ಯಾಕರ ಒತ್ತಡಕ್ಕೆ ಬಲಿಬೀಳಬೇಕೆಂದಿದೆ. ಮನಸ್ಸಿನಲ್ಲಿ ಕೊಂಗ್ರೆಸಿನ ಮೇಲೆ ಆಳವಾದ ದ್ವೇಷವಿರುವುದನ್ನು ಅಲ್ಲಿನ ಕೆಲ ಪ್ರಮುಖ ವ್ಯಕ್ತಿಗಳು ನಿರೂಪಿಸುವ ರೀತಿಯಿದು.]

Canara Bank, Ltd.

Incorporated in British India-Liability of Members Limited.

NOTICE.

Is hereby given that under Section 37 of the Indian Companies Act VII of 1913, the Register of members and the transfer books of the Bank will be closed from Monday the 24th February, 1947 to Monday the 10th March, 1947 both days inclusive.

ಕೆನರಾ ಬೇಂಕ್, ಲಿಮಿಟೆಡ್

ನೋಟೀಸು

1913ನೇ ಇಸವಿಯ ನಂಬ್ರ VIIನೇ ಇಂಡಿಯನ್ ಕಂಪೆನಿಸ್ ಆಕ್ಟಿನ 37ನೇ ಸೆಕ್ಶನಿಗನುಗುಣವಾಗಿ, ಈ ಬೇಂಕಿನ ಮೆಂಬರರ ರಿಜಿಸ್ಟರು ವ ಶೇರು ಟ್ರಾನ್ಸಫರ ಪುಸ್ತಕಗಳು 1947ನೇ ಇಸವಿ ಫೆಬ್ರವರಿ ತಾ. 24ನೇ ಸೋಮವಾರದಿಂದ 1947ನೇ ಮಾರ್ಚ ತಾ. 10ನೇ ಸೋಮವಾರದ ವರೆಗೆ (ಉಭಯ ದಿವಸಗಳೂ ಕೂಡಿ) ಮುಚ್ಚಲ್ಪಡುವವು.

Office of the Bank, Mangalore 10-2-1947

By Order (Sd.) P. Sarvothum Nayak, General Manager

REGISTERED

Ansuiya - Hills—Herb

A most powerful and well renowned Asthma extraordinary herb for more than 150 years founded by a Sidha Mahatma is to be taken once in a month on full moon-day

Correspondance in English.

MAHATMA, S. K. DASS

SRI SANT SEWA ASHRAM

P. O. CHITRAKOT (BANDA)

೪ಂ ಲಕ್ಷ ಜನರಿಗೆ ಉದ್ಯೋಗ ಕೊಟ್ಟ ವಿಜ್ಞಾನಿ

ಚಲಚ್ಚಿತ್ರ ಸಂಶೋಧಕನ ಶತಮಾನೋತ್ಸವ

ಗ್ರಾಮಫೋನು—ವಿದ್ಯುದ್ದೀಪಗಳು ಅವನವು

ಕಳೆದ ತಾ. 11ರಂದು ಅಮೇರಿಕದ ಮಹಾ ಪ್ರತಿಭಾವಂತ ಸಂಶೋಧಕನಾದ ಥೋಮಸ್ ಆಲ್ವಾ ಎಡಿಸನನ 100ನೇ ಜನ್ಮೋತ್ಸವ. ವಿಜ್ಞಾನ ಪ್ರಪಂಚವೆಲ್ಲವೂ ಈ ಮಹೋನ್ನತ ಮಿದುಳು ಶಕ್ತಿಯ ವ್ಯಕ್ತಿಯ ಸ್ಮರಣೆ ಮಾಡದಿರದು.

ಎಡಿಸನನ ಜೀವನ ಇತಿಹಾಸವಾದರೊ ರೋಮಾಂಚಕ ಸಾಹಸದಿಂದೊಡಗೂಡಿದೆ ಕೇವಲ ಬಡತನದ ಮಡಿಲಲ್ಲಿ ಬೆಳೆದ ಬಾಲಕ, ವೃತ ಪತ್ರಿಕೆ ಮಾರಿ ಜೀವಿಸುತಿದ್ದ. ಉದ್ಧಟ ರೈಲ್ವೇ ಗಾರ್ಡನೊಬ್ಬನಿಂದ ಕಿವಿ ಮೇಲೆ ತಪರಾಕು ತಿಂದು ಕಿವುಡನಾದ ಅದೇ ಸಮಯಕ್ಕೆ ತನ್ನ ಯಂತ್ರ ತಂತ್ರ ಪಾಂಡಿತ್ಯದಿಂದ ಹಾಳಾದ ರೈಲ್ವೇ ಸ್ಟೇಶನ ತಂತಿ ವಾರ್ತೆ ಉಪಕರಣವನ್ನು ರಿಪೇರಿ ಮಾಡಿ ಹಿರಿಯರ ಆದರಕ್ಕೊಳಗಾದ

ಕಿವಿ ಕೇಳದ ಕಿವುಡ ಗ್ರಾಮಫೋನ್ ಸಂಗೀತ ಗ್ರಾಹಕ, ಮರುವಾಚಕ ಯಂತ್ರವನ್ನು ಕಂಡು ಹಿಡಿದನೆಂದರೆ ನಂಬಲಸಾಧ್ಯ ಸಂಗತಿಯಾದರೂ ಆ ವಿಚಿತ್ರ ತೆಗೆಯುವ ಯಂತ್ರವೂ ಅವನಿಂದಲೇ ಕಂಡು ಹಿಡಿಯಲ್ಪಟ್ಟಿತು ವಿದ್ಯುದ್ದೀಪವನ್ನು ಅವನೇ ಶೋಧಿಸಿದ [illegible] ಇಲೆಕ್ಟ್ರಿಕ್ ಟ್ರಾಮ್, ಡೈನಮೋ

ಅವನ ಶೋಧೆಗಳ ಪಟ್ಟಿ ತಯಾರಿಸಿದರೆ ಒಂದು ಗ್ರಂಥವೇ ತುಂಬಬಹುದು. ತನ್ನ ಮುಪ್ಪಿನ ಪ್ರಾಯದಲ್ಲಿ ಜಗತ್ತಿಗೆ ಅವನೊಂದು ಅಮರ ಸಂದೇಶ ಕೊಟ್ಟ

"ಇಷ್ಟೊಂದು ಶೋಧೆಗಳಿಂದ ನನಗೆ ಆತ್ಮ ಸಂತೋಷ ಸಿಗಲಿಲ್ಲ. ಆದರೆ ಇವುಗಳಿಂದ ಒಬ್ಬ ವ್ಯಕ್ತಿಯು ಮಾನವನಾಗಿ ಸಚ್ಚರಿತನಾಗಿ ಬದುಕುವಂತಾದರೆ ಅದರಷ್ಟು ಮಿಗಿಲಾದ ಸಂತೃಪ್ತಿ ಬೇರೆ ಇಲ್ಲ"

ಇದನ್ನು ಓದುವಾಗ ಯಾರಿಗಾದರೂ ಆಶ್ಚರ್ಯವಾಗಬಹುದು ಆದರೆ ಸಹಜವಾಗಿ ಎಡಿಸನನು ತನ್ನೀ ಉನ್ನತ ಧ್ಯೇಯವನ್ನು ಪ್ರತ್ಯಕ್ಷ ಕಾರ್ಯರೂಪದಲ್ಲಿ ಆಚರಿಸಿದ್ದನು ಆ ಕುರಿತು ಅವನ ಜೀವನದಲ್ಲಿನ ಒಂದು ಘಟನೆ ಈ ಕೆಳಗಿನಂತಿದೆ

ಎಡಿಸನನು ವಿದ್ಯುದ್ದೀಪವನ್ನು ಕಂಡು ಹಿಡಿಯುವ ಸಾಧನೆಯಲ್ಲಿದ್ದ ಸಾವಿರಾರು ತರದ ಲೋಹಗಳನ್ನು ಗಾಜಿನ ಬುರುಡೆಯಲ್ಲಿರಿಸಿ ಪ್ರಯೋಗ ನಡೆಸಿದ ಒಂದೂ ವಿದ್ಯುಚ್ಛಕ್ತಿನ ಪ್ರಚಂಡ ಉಷ್ಣವನ್ನು ತಡೆಯದಾಯಿತು ಹೆಚ್ಚೆಂದರೆ ಹತ್ತು ಮಿನಿಟುಗಳ ತನಕ ಉರಿದು ಅವು ಭಸ್ಮವಾಗುತ್ತಿದ್ದವು. ಕೊನೆಗೆ ಟಂಗಸ್ಟನ್ ಎಂಬ ಲೋಹ ಮಿಶ್ರವೊಂದು ಕಂಡುಹಿಡಿಯಲ್ಪಟ್ಟಿತು ಎಡಿಸನನು ಊಟ ನಿದ್ರೆ ಇಲ್ಲದೆ ಟಂಗಸ್ಟನ್ ಸರಿಗೆಗಳನ್ನಿರಿಸಿದ ಬುರುಡೆಯೊಂದನ್ನು ತಯಾರಿಸಿ ತನಕೆಳ ಕೊಟಡಿಯ ಒಂದು ಕಪಾಟಿನಲ್ಲಿದನ್ನು ಇರಿಸಿ ನಿದ್ರಿಸಹೋದ

ಮರು ದಿನ ಅದನ್ನು ಉರಿಸಿ ನೋಡಬೇಕು. ಮಹಡಿ ಮೇಲಿನ ತನ್ನ ಪ್ರಯೋಗ ಶಾಲೆಗೆ ಬಂದು ತನ್ನ ಬಳಿ ಕೆಲಸಕ್ಕಿದ್ದ ವಿಲಿಯಂ ಎಂಬ ಹುಡುಗನನ್ನು ಕರೆದು 'ಕೆಳಗಿನ ಕೋಣೆಯೊಳಗಿನ ಕಪಾಟಿನಿಂದ ಬರುಡೆಯನ್ನು ತೆಗೆದುಕೊಂಡು ಬಾ' ಎಂದು ತಿಳಿಸಿದ

ಹುಡುಗ ಹುಡುಗಾಟಿಕೆಯವ ಯಜಮಾನನ ಹುಕುಮಿಗೆ ಸಂತೋಷಗೊಂಡು ಭರ್ರನೆ ಕೆಳಗೋಡಿ ಅವಸರದಿಂದ ಬರುಡೆಯನ್ನು ಕೈಯಲ್ಲಿ ಹಿಡಿದು ಅವಸರವಸರವಾಗಿ ಮೇಲೆ ಓಡಿ ಬಂದ. ಕಡೆಯ ಮೆಟ್ಟಲನ್ನು ದಾಟುವಾಗ ಅವನ ಒಂದು ಕಾಲು ಮುರುಟಿ ಹೋಯಿತು ದಡಂಮನೆ ನೆಲಕ್ಕಪ್ಪಳಿಸಲ್ಪಟ್ಟವನಂತೆ ಹುಡುಗ ಬಿದ್ದ. ಅವನೊಂದಿಗೆ ಬರುಡೆಯೂ ಚೂರುಚೂರಾಯಿತು ಅದರೊಂದಿಗೆ ಹಲವು ದಿವಸಗಳ ಶ್ರಮವೂ ಭಗ್ನವಾಯಿತು

ಇತರರಾದರೆ ಹುಡುಗನನ್ನು ಅದರ ಮೇಲೆ ಒದ್ದು ಬಿಡುತಿದ್ದರು ಎಡಿಸನನು ಅವನನ್ನೆತ್ತಿ ಘಾಯವಾಗಿದೆಯೊ ಎಂದು ಮೆಲ್ಲನೆ ಬಿಗಿಹಿಡಿದ ರೋಷದಿಂದ ಕೇಳಿದ ಹುಡುಗ ತನ್ನ ಅತ್ಯುತ್ಸಾಹಕ್ಕೆ ಭೀಕರ ಮರುಕಗೊಂಡಿದ್ದ ತಾಳ್ಮೆಯಿಂದ ಮೌನವಾಗಿ ಎಡಿಸನನು ಅವನನ್ನು ಕೆಳಗೆ ಕಳುಹಿಸಿ ಪುನ ಹಲವು ದಿನಗಳ ಉಪವಾಸ ನಿದ್ರಾಭಂಗದಿಂದ ಮತ್ತೊಂದು ಬುರುಡೆಯನ್ನು ತಯಾರಿಸಿದ ಅದನ್ನು ಮತ್ತೊಮ್ಮೆ ಅದೇ ಸ್ಥಳದಲ್ಲಿರಿಸಿದ

ಮರುದಿನ ಪುನಃ ವಾಡಿಕೆಗೆ ಹೋಗಿ ಅದೇ ಹುಡುಗನನ್ನು ಮೆಲ್ಲಗೆ ಕರೆದ ತನ್ನ ವರ್ತನೆಯನ್ನೆ [illegible] ಹುಡುಗನು [illegible] ಮಾಡಿದ [illegible] ಅನಿಸಿ ಪುನಃ ಕೆಳಗೆ ಅದೇ ಸ್ಥಳದಿಂದ [illegible] ತರಲು [illegible] ಕಳುಹಿಸಿದ [illegible] ಪುನಃ ಹಿಂದೆ ತಪ್ಪು ಮಾಡಿದ [illegible] ಹೇಳದನ್ನು [illegible] ಹುಡುಗನು ಒಂದು [illegible] ಸಂತೋಷವೂ ಮತ್ತೊಂದು [illegible] ವಿಶ್ವಾಸ [illegible] ಗರ್ವ [illegible] ಹುಡುಗ ಅತ್ಯಂತ ಜಾಗರೂಕತೆಯಿಂದ [illegible] ತಂದು ಕೊಟ್ಟ. ಅದನ್ನು ತೆಗೆದುಕೊಂಡು ಮಾನವ ವಿಜ್ಞಾನಿ ಎಂದ "ಮಗನೆ ಜಾಗರೂಕತೆಯನ್ನು ಕಲಿತೆಯಲ್ಲವೆ?" ಎಂದು ಬೆನ್ನು ಚಪ್ಪರಿಸಿದ. ಅಂದಿನಿಂದ ಹುಡುಗನಲ್ಲಿ ವಿಶಿಷ್ಟ ಗುಣ ವಿಚಾರಗಳುತ್ಪನ್ನವಾದುವು. ಮುಂದೆ ಅವನು ಎಡಿಸನನ ಸಹಾಯಕನಾಗಿ ಜೀವನದಲ್ಲಿ ತುಂಬಾ ಯಶಸ್ವಿಯಾದನು

ಎಡಿಸನನು ಒರ್ವ ಉತ್ತಮ ಮಾನವನನ್ನು ಸಂಶೋಧಿಸಿದ!

ದೇವರಿಗೆ ರೇಶನ್ ಇಲ್ಲ!

ಹಸುಗೆ ಅಧಿಕಾರಿಯ ಸಮಸ್ಯೆ

ರೈಪುರದಲ್ಲಿನ ರೇಶನ ಅಧಿಕಾರ ಮುಂದೆ ಒಂದು ಸಮಸ್ಯಾತ್ಮಕ ಪರಿಸ್ಥಿತಿ ಬಂತು. ರೇಶನಿಗಾಗಿ ಬಂದ ಅರ್ಜಿಯೊಂದರಲ್ಲಿ ಈ ಕೆಳಗಿನ ಒಕ್ಕಣೆಗಳಿದ್ದುವು ರಾಜರಾಜೇಶ್ವರನಾದ ಮಹದೇವ – ದೇವರ ಮಗ. ಗೌರಿ–ಮಹದೇವನ ಮಡದಿ. ಶ್ರೀಗಣೇಶ್–ಮಹದೇವನ ಮಗ. ನಂದಿ–ಪವಿತ್ರ ಪಶು ವಾಹನ. ಈ ರೇಶನ್ ಪಡಿ ನಿಜವಾಗಿ ಅಲ್ಲಿನ ಪೂಜಾರಿಗಳಿಗೆ ಸಲ್ಲತಕ್ಕದು. ದೇವರ ನೈವೇದ್ಯಕ್ಕಾದರೂ ಅದು ಪುಜಾರಿಗಳ ಲೆಕ್ಕದಲ್ಲೇ ಸೇರಿಸಲಾಗದು. ದೇವರ ಹೆಸರಲ್ಲಿ ಅರ್ಜಿ ಬಂದ ಮೇಲೆ ನಿಶ್ಚಾಪಂತ ಹಿಂದೂ ರೇಶನ್ ಅಧಿಕಾರಿಗಳು ಕೊಡಬೇಕೆ. ಬಿಡಬೇಕು? ಕೊನೆಗೆ ಅರ್ಜಿ ಬದಲಾಯಿಸಲಾಯಿತು

ಎದೆನೋವನ್ನು ನಿವಾರಿಸಿರಿ

ನಿಮಗೆ ಬೇಗನೆ ಶೀತವಾಗುವುದೇ? ನೀವು ಆಗಾಗ ಕೆಮ್ಮು ಶ್ವಾಸಕೋಶದ ದೌರ್ಬಲ್ಯಗೊಳಿಸುವಶೀತಬಾಧೆಯಿಂದ ನರಳುತೀರಾ? ಹಾಗಿದ್ದರೆ, ವಿಷಹಾರಿ, ಶ್ವಾಸಯೋಗ್ಯ ಮಾತ್ರೆಗಳಾದ ಪೆಪ್ಸಗಳನ್ನು ಸೇವಿಸಿ ಗುಣಹೊಂದಿರಿ

ಪೆಪ್ಸು ಬಾಯಲ್ಲಿ ಹಾಕಿದ ಕೂಡಲೇ [illegible] ಸುಗಂಧ ಔಷಧಿ ರಸ ಹೊರಡಿಸುತ್ತದೆ ಅದು ಶ್ವಾಸದೊಡನೆ [illegible] ಸೇರುವುದು [illegible] ಕಫ ಗಂಟಲು ನೋವು ಶೀತಬಾಧೆ [illegible] ಮೊದಲಾದುವುಗಳನ್ನು [illegible] ವಾಸ [illegible] ಮಾತ್ರೆಗಳ [illegible] ವೌಷಧ

ಪೆಪ್ಸನ್ನು ಕೊಂಡುಕೊಳ್ಳಿರಿ

PEPS

ಶ್ವಾಸಯೋಗ್ಯ ವಿಷಹಾರಿ ಮಾತ್ರೆಗಳು

ರಿಯಾಯತಿ ಲಗ್ಗೇಜಿನಲ್ಲಿ ವ್ಯಾಪಾರಿ ಸಾಮಾನುಗಳ ನಿಷೇಧ

ಪೆಸೆಂಜರರ ಸೌಕರ್ಯಗಳ ಬಗ್ಗೆ ಒಂದು ಮಣ ಭಾರದ ಸಾಮಾನುಗಳನ್ನು ಫ್ರೀ ತೆಗೆದುಕೊಂಡುಹೋಗ ಬಹುದಾಗಿ ಮಾಡಿದ ರಿಯಾಯತಿ ಕಾರಣದಿಂದಾಗಿ ಪೆಸೆಂಜರರು ಅವರ ಸ್ವಂತ ಉಪಯೋಗದ ಸಾಮಾನುಗಳಲ್ಲದೆ ವ್ಯಾಪಾರಿ ಸಾಮಾನುಗಳನ್ನು ತಮ್ಮೊಡನೆ ಪ್ರಯಾಣ ಬೆಳೆಸುವ ಸ್ನೇಹಿತರ ಹೆಸರಿನಲ್ಲಿ ಈ ರಿಯಾಯತಿ ಮೂಲಕ ಧರ್ಮಾರ್ಥ ಸಾಗಿಸುವುದು ರೂಢಿಯಾಗಿದೆ

ಮೋಟರ್ ವಾಹನಗಳು ರೈಲ್ವೆಗಾಡಿಗಳಂತಾಗಿಲ್ಲ ಅವುಗಳಲ್ಲಿ ನಿಯಮಿತ ಭಾರಕ್ಕಿಂತ ಹೆಚ್ಚಿನ ಸಾಮಾನುಗಳನ್ನು ಒಯ್ಯುವುದು ಮೋಟರ್ ವಾಹನಕ್ಕೂ ಮತ್ತು ಪೆಸೆಂಜರರಿಗೂ ಅಪಾಯವಾಗಿದೆ. ಕಾರಣ ಬಸ್ಸುಗಳಲ್ಲಿ ಒಯ್ಯುವ ಸಾಮಾನುಗಳನ್ನು ಪೆಸೆಂಜರರ ಆವಶ್ಯಕತೆ ಬಗ್ಗೆನೇ ಮಿತಗೊಳಿಸುವುದು ಅಗತ್ಯವಿದೆ.

ವ್ಯಾಪಾರಿ ಸಾಮಾನುಗಳನ್ನು ಒಯ್ಯುವರೆ ವ್ಯಾಪಾರಿಗಳು ಶೆಡ್ಯೂಲ್ ಟೈಮಿಗೆ ಕೊಂಡೊಯ್ಯುವ "ಲಕ್ಷ್ಮಿ" ಯಾ "ಸಿ. ಪಿ. ಸಿ." ಲೋರಿ ಸರ್ವಿಸುಗಳ ಸೌಖ್ಯವನ್ನು ಉಪಯೋಗಿಸಬೇಕಾಗಿ ಅಪೇಕ್ಷಿಸುತ್ತೇವೆ.

ವ್ಯಾಪಾರಿ ಸಾಮಾನುಗಳನ್ನು ಎಷ್ಟಕ್ಕೂ ಫ್ರೀ ಲಗ್ಗೇಜಿನ ಅಂಶದಲ್ಲಿ ಸೇರಿಸಿಕೊಳ್ಳಲಾಗುವುದಿಲ್ಲ. ಈ ಕುರಿತು ಮಾಹಿತಿಯನ್ನು ಬುಕ್ಕಿಂಗ್‌ಕ್ಲಾರ್ಕರಿಂದ ಪಡಿಯಬಹುದು

JOINT MANAGERS,

The Combined Booking Agency, MANGALORE — **The Joint Booking Office,** KODIALBAIL

THE CANARA BANKING CORPORATION LTD

(Incorporated in British India with Limited Liability)

Estd: 1906.

Head Office: UDIPI, S. Kanara.

	Rs.
CAPITAL:	
Authorised	25,00,000
Issued, subscribed & called up	16,00,000
Paid up	15 97,145
RESERVES	5,25,000
DEPOSITS	2,07,47,928
TOTAL RESOURCES	3,00,01,186

With a net work of branches & Agencies in all principal cities of India, we shall be able to render efficient collection services.

BANKING BUSINESS OF EVERY DESCRIPTION TRANSACTED.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE BOMBAY LIFE ASSURANCE COMPANY LIMITED

(ESTD. 1910)

Peace and Security........

The Mightiest War to secure freedom for the oppressed Nations of Europe has ended. With many attempts at securing the four Freedoms, we do not seem to be anywhere near it. We, in our humble way, have been contributing to this Individual Material Freedom, in War as well as in Peace, by extending Insurance Service to all who seek it.

1945 completed Business { Company's: Over $2\frac{3}{4}$ Crores / Ours: About 50 lakhs.

Kochikar Brothers, Limited.

(ESTD 1908)

Chief Agents for South India and Special agents for Bombay City & Suburbs.

"Bombay Life Building," Gandhi Nagar, UDIPI.

With Offices at:

MADRAS, BANGALORE, TRIVANDRUM, MANGALORE, MADURA, CALICUT, BOMBAY, & UDIPI.

And Agencies all over South India

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with seleted ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs

***Depot:* Maharata Galli, Hubli.**

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ಕುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ಕಡೆಗೆಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪ್ಪೊ. ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಖು 21—2—1947 [ಸಂಚಿಕೆ 8]

ಹಿಂದೀ ರಾಜಕಾರಣ

ಲೇ: ಶ್ರೀ ಎನ್. ಆರ್. ಕಲ್ಲೆ.

ಬೇಗನೆ ಬ್ರಿಟಿಷರು ಹಿಂದುಸ್ಥಾನ ಬಿಡುವರು

ಬ್ರಿಟಿಷ್ ಧೋರಣೆ

ಈ ವರೆಗೆ ಪರಾಧೀನ ಮತ್ತು ಆಶ್ರಿತ ರಾಜ್ಯಗಳ ಬಗ್ಗೆ ಬ್ರಿಟನು ವಹಿಸಿದ ಧೋರಣೆಯಿಂದ ಎಲ್ಲರಿಗೂ ದುಃಖವಾಗಿದೆ—ಈಗಲಾದರೂ ಬ್ರಿಟನು ವಹಿಸಿದ ಧೋರಣೆಯು ಸರಳವಾದುದೆಂದು ಹೇಳಲು ಬರುವಂತಿಲ್ಲ. ಘಟನಾಸಮಿತಿಯಲ್ಲಿ ಸೇರಿ ಮುಂದೆ ಹೋಗಲು ಲೀಗಿಗೆ ಮನಸ್ಸಿಲ್ಲವಾದರೆ ಲೀಗು ಕೇಂದ್ರದ ತಾತ್ಪೂರ್ತಿಕ ಸರಕಾರದಲ್ಲಿ ಇರಬಾರದಾಗುತ್ತದೆ. ಶ್ವೇತ ಪತ್ರದ ಪೂರ್ಣ ವಿವರವು ಕೈಸೇರುವ ವರೆಗೆ ಹಾಗೂ ಬೇರೆ ಬೇರೆ ರಾಜಕೀಯ ಪಕ್ಷಗಳು ಈ ಸಂಬಂಧವಾಗಿ ತಮ್ಮ ಅಭಿಪ್ರಾಯ ಮತ ಪ್ರತಿಕ್ರಿಯೆಗಳನ್ನು ಸ್ಪಷ್ಟ ಪಡಿಸುವ ವರೆಗೆ ಇದರ ಇತಿಮಿತಿಗಳನ್ನಾಗಲಿ ಸಾಧಕಬಾಧಕಗಳನ್ನಾಗಲಿ ಹೇಳಲು ಬರುವಂತಿಲ್ಲ. ಈ ವರೆಗೆ ಭೇದ ನೀತಿಯಿಂದ ಬ್ರಿಟಿಷರು ಎಲ್ಲವನ್ನು ಸಾಧಿಸಿ ಕೊಂಡು ಹೋಗಿರುವರು. ಇನ್ನು ಹೊರಡಲಿಕ್ಕಾಗುವಾಗ ಅವರಿಗೆ ಯಾವನರ ಪಾಲಿಗೂ ಆಶೆ ಇಲ್ಲದ ಪರಿಸ್ಥಿತಿಯುಂಟಾಗಿದೆ. ತಮ್ಮ ಹಿತವನ್ನಷ್ಟೇ ಸಾಧಿಸಿಕೊಳ್ಳುವ ಬ್ರಿಟಿಷರ ಈ ಧೋರಣೆಯಿಂದ ಅವರ ಮೇಲೆ ಯಾರ ವಿಶ್ವಾಸವೂ ಇಲ್ಲದಂತಾಗಿದೆ.

ಲೀಗಿನ ಹೊಣೆ

ಈ ಪ್ರಕಟಣೆ ಹೊರಬಿದ್ದುದರಿಂದ ಲೀಗಿನ ಮೇಲಿನ ಹೊಣೆಯು ದ್ವಿಗುಣಿತವಾಗಿದೆ. ಈ ವರೆಗೆ ಕಾಂಗ್ರೆಸ್ ಸರಕಾರವನ್ನು ಬೆನ್ನು ಹತ್ತಿ ಬ್ರಿಟಿಷರು ಕುಣಿಸಿದಂತೆ ಕುಣಿದು ಲೀಗು ತನ್ನನ್ನು ತಾನು ಮರೆತಿತ್ತು. ಮುಂದಿನ ಪ್ರಶ್ನೆ ಹಾಗಲ್ಲ. ಲೀಗು ಇತ್ತರರಂತೆ ಹೊಣೆ ಹೊತ್ತೇ ತೀರಬೇಕಾಗುವದು. 40 ಕೋಟಿ ಮಾನವರ ಹಿತ ಸಂರಕ್ಷಣೆಗಾಗಿ ಸ್ವತಂತ್ರ ರಾಷ್ಟ್ರವೆಂಬ ಹೆಮ್ಮೆಯ ಗುರಿಯನ್ನು ಸಿದ್ಧಿಸಿಕೊಳ್ಳುವದಕ್ಕಾಗಿ ಹಾಗೂ ನಮ್ಮ ಹಿಂದುಸ್ಥಾನವು ಅತಿ ಪ್ರಾಚೀನವಾದುದೆಂಬುದನ್ನು ಸ್ಪಷ್ಟ ಮಾಡಿ ಅದರ ಪರಂಪರೆಯನ್ನು ಉಳಿಸಿಕೊಳ್ಳುವದಕ್ಕಾಗಿ ಲೀಗು ಕಾಂಗ್ರೆಸಿನೊಡನೆ ಸಂಬಂಧ ಮುರಿದುಕೊಳ್ಳದೆ ಒಟ್ಟಿಗೆ ಸಾಗಬೇಕಾಗುವದು.

ಘಟನಾಸಮಿತಿ

ಭಾವೀ ಘಟನೆಯನ್ನು ನಿರ್ಮಿಸಲು ಕಂಕಣ ಬದ್ಧವಾಗಿ ಈಗಾಗಲೇ ಎರಡು ಸಲ ಸಭೆ ಕೂಡಿರುವ ಘಟನಾಸಮಿತಿಯ ಮೇಲೆ ಅತ್ಯಂತ ಮಹತ್ವದ ಹೊಣೆಯು ಇದೆ. ಈ ಸಮಿತಿಯು 1948ನೇ ಇಸವಿ ಜೂನ್ ತಿಂಗಳಿನ ಒಳಗೆ ಹಿಂದುಸ್ಥಾನಕ್ಕಾಗಿ ಘಟನೆಯನ್ನು ಸಿದ್ಧಮಾಡಬೇಕು—ಅಂದರೆ ಮಾತ್ರ ಎಲ್ಲ ಕೆಲಸ ಸುಲಭವಾಗುವದು. ತಮಗೆ ಅಧಿಕಾರ ಬಿಟ್ಟುಕೊಡಲು ಸುಸಂಧಿಯೆಂದು ಅವರು ಒಪ್ಪಿಕೊಂಡಿರುವರು—ಈ ಸುಸಂಧಿಯ ಲಾಭವನ್ನು ಮಾತ್ರ ಹಿಂದೀಯರು ಅತ್ಯಗತ್ಯವಾಗಿ ಮಾಡಿಕೊಳ್ಳಬೇಕು. ಈ ವರೆಗೆ ಹೊರಗುಳಿದ ಮುಸ್ಲಿಂ ಲೀಗು ಈ ಸಂದರ್ಭದಲ್ಲಿ ಮುಂದೆ ಬಂದು ತನ್ನ ಭಾಗದ ಕರ್ತವ್ಯವನ್ನು ಪೂರೈಸಿ ಬ್ರಿಟಿಷರಿಂದ ಹಿಂದುಸ್ಥಾನವನ್ನು ತೆಗೆದು ಕೊಳ್ಳುವದಕ್ಕೆ ನೆರವಾಗಬೇಕು. ಈಗಾಗಲೇ ನರೇಂದ್ರರು ಘಟನಾಸಮಿತಿಯೊಡನೆ ಸಹಕರಿಸಿ ಕೆಲಸ ಮಾಡಿಕೊಂಡು ಹೋಗಲು ಒಪ್ಪಿರುವರು. ಎಪ್ರಿಲ್ ತಿಂಗಳಲ್ಲಿ ಪುನಃ ಸಭೆ ಕೂಡುವಾಗ ಘಟನಾ

ಹಿಂದುಸ್ಥಾನಕ್ಕೆ

ಹೊಸ ವಾಯಿಸರಾಯರು

ಬ್ರಿಟಿಷ ಪ್ರಧಾನರ ಮಹತ್ವದ ಹೇಳಿಕೆ

ಇದೇ ತಾ. ೨೦ಕ್ಕೆ ಬ್ರಿಟಿಷ ಮುಖ್ಯ ಮಂತ್ರಿ ಆಟ್ಲಿಯವರು ಪಾರ್ಲಿಮೆಂಟಿನಲ್ಲಿ ಮಾಡಿದ ಹಿಂದುಸ್ಥಾನ ಸಂಬಂಧಕವಾದ ಹೇಳಿಕೆಯು ಅತ್ಯಂತ ಮಹತ್ವದ್ದಿದೆ. ಈ ಮಾತುಗಳು ಹಿಂದುಸ್ಥಾನ ಸಂಬಂಧಕ ಹೊರಬಿದ್ದ ಶ್ವೇತಪತ್ರವನ್ನು ಅನುಸರಿಸಿಕೊಂಡಿದೆ. ಬ್ರಿಟಿಷ್ ಸರಕಾರವು ೧೯೪೮ನೇ ಇಸವಿ ಜೂನ್ ತಾ. ೩೦ರೊಳಗೆ ಹಿಂದುಸ್ಥಾನವನ್ನು ಬಿಟ್ಟುಕೊಡಲಿದೆಯೆಂದೂ ಎಲ್ಲ ಹೊಣೆಯನ್ನು ಹಿಂದೀಯರ ಕೈಯಲ್ಲಿ ಕೊಡಲಿದೆಯೆಂದೂ ಮುಂತಾಗಿ ಮುಖ್ಯ ಮಂತ್ರಿಗಳು ಸಾರಿರುವರು. ಇದು ಬ್ರಿಟಿಷ ಇತಿಹಾಸದಲ್ಲಿಯೇ ಅತ್ಯಂತ ಮಹತ್ವದ ಘೋಷಣೆಯೆನಿಸಿದೆ. ಯಾವದೇ ರಾಜ್ಯದಿಂದಲಾದರೂ ತಾವು ಬಿಟ್ಟುಹೋಗುವದಾಗಿ ಬ್ರಿಟಿಷರು ಘೋಷಿಸಿದುದಿಲ್ಲ. ಈ ಬಗೆಯ ಘೋಷಣೆ ಮಾಡಿದುದೆಂದರೆ ಇದೇ ಮೊದಲು.

ಬ್ರಿಟಿಷರು ಹಿಂದುಸ್ಥಾನವನ್ನು ಜೂನ್ ತಿಂಗಳ ಒಳಗೆ ಹೊಸ ಘಟನೆಯು ಸಿದ್ಧವಾದರೆ ಆ ಸರಕಾರದ ಕೈಯಲ್ಲಿ ಒಪ್ಪಿಸಲಿರುವದೆಂದೂ ಹಾಗೆ ಸಿದ್ಧವಾಗಲಿಲ್ಲವಾದರೆ ಆಗ್ಗೆ ಪ್ರಬಲಸ್ಥಾನ ವಹಿಸಿರುವ ಪಕ್ಷದ ಕೈಯಲ್ಲಿ ಕೊಡಲಿರುವದೆಂದೂ ಅದು ಸಾಧ್ಯವಾಗದಿದ್ದರೆ ಆಯಾ ಪ್ರಾಂತ್ಯಗಳನ್ನು ಆಯಾ ಪ್ರಾಂತಿಕ ಸರಕಾರಕ್ಕೆ ಹಾಗೂ ಸಂಸ್ಥಾನಗಳನ್ನು ಆಯಾ ಸಂಸ್ಥಾನಗಳಿಗೆ ಒಪ್ಪಿಸಿ ಕಾಲ್ತೆಗೆಯುವದೂ ನಿಶ್ಚಿತವೆಂದೂ ಸಾರಲಾಗಿದೆ. ಬ್ರಿಟಿಷರು ಹೋಗುವ ನಿಶ್ಚಯ ಮಾಡಿದ್ದು ಸಂತೋಷದ ವಿಷಯ. ಹೋಗುವಾಗ ಹಿಂದೀಯರ ವಿಶ್ವಾಸ ಮತ್ತು ಪ್ರೇಮ ಹಾಗೂ ಸಹಾನುಭೂತಿಯನ್ನು ಉಳಿಸಿಕೊಂಡು ಹೋಗಬೇಕು. ಇದೇ ಮುಖ್ಯ ವಿಷಯ.

ಸಮಿತಿಯಲ್ಲಿ ಸೇರುವದಕ್ಕೆ ಅನುಕೂಲತೆಯನ್ನು ಮಾಡಿಕೊಂಡು ನರೇಂದ್ರ ಮಂಡಲದವರ ಅದರಲ್ಲಿ ಭಾಗವಹಿಸುವುದು ಅವರ ಲೀಗಿನ ನೇತೃ ಗುರಿಗಳು. ಇನ್ನು ತಿಳಿಯುವಂತಿಲ್ಲ. ಹಿಂದಿನ ಮಾರ್ಗವನ್ನು ಬಿಟ್ಟು ಈಗಲಾದರೂ ಮುಸ್ಲಿಂ ಲೀಗು ಯೋಗ್ಯ ಮಾರ್ಗ ಹಿಡಿದು ಘಟನಾಸಮಿತಿಯಲ್ಲಿ ಭಾಗವಹಿಸುವದಾದರೆ ಹಿಂದೀನ ಪರಿಸ್ಥಿತಿ ಮತ್ತಷ್ಟು ಅನುಕೂಲವಾಗಬಹುದು.

ಮುಂದಿನ ಸಮಸ್ಯೆಗಳು

ಈ ವರೆಗೆ ನಮ್ಮಲ್ಲಿ ಎದ್ದಿರುವ ರಾಜಕೀಯ ಸಮಸ್ಯೆಗಳಲ್ಲಿ ಬ್ರಿಟಿಷ ನಿರ್ಮಿತವುಗಳೇ ಸ್ವತಂತ್ರವಾಗಬೇಕಾದ ಅವರೇ ಇಲ್ಲಿಂದ ತೊಲಗಲೇಕು. ತಾವೀಗಲೇ ಇನ್ನು 15 ತಿಂಗಳೊಳಗೆ ಹೊರಬೀಳುವದಾಗಿ ಅವರು ತಿಳಿಸಿರುವರು. ಅದರಿಂದ ಬ್ರಿಟಿಷರನ್ನು ಹೊರಡಿಸುವದಕ್ಕೆ ಒಂದಾಗಿ ನಿವು ಮುಂದೆ ಘಟನಾಸಮಿತಿಯಲ್ಲಿಯೇ ಯಾವತ್ತು ಅಲ್ಪಸಂಖ್ಯಾಕರ ಹಿತ ಸಂರಕ್ಷಣೆಯ ಮಾರ್ಗವನ್ನು ಕಲ್ಪಿಸಿ ಸರ್ವ ಸಮ್ಮತವಾದ ಆದರ್ಶ ಘಟನೆಯನ್ನು ರಚಿಸುವದು ಮುಖ್ಯ ಕರ್ತವ್ಯವಿದೆ. ಈ ರೀತಿ ಘಟನೆ ರಚಿಸಿದವ ದರೆ ಹೊರಡಲು ಗಂಟು ಮೂಟೆ ಕಟ್ಟಿ ಕುಳಿತ ಬ್ರಿಟಿಷರು ನಮ್ಮನ್ನು ನಮ್ಮಷ್ಟಕ್ಕೆ ಬಿಟ್ಟು ಹೋಗುವರು. ಇಲ್ಲವಾದರೆ ಹೋದ ಮೇಲೂ ನಮ್ಮಲ್ಲಿಯ ದೋಷಗಳನ್ನೇ ಅವರು ಹೇಳಬೇಕಾದ ಸಂದರ್ಭವು ಉಳಿಯುವದು.

ಶುಭ ಚಿಹ್ನೆ

ಬ್ರಿಟಿಷರು ತಾವಾಗಿಯೇ ಹಿಂದುಸ್ಥಾನದಿಂದ ಕಾಲ್ತೆಗೆಯುವದು ಶುಭ ಚಿಹ್ನೆ. ಆಗ ಅವರು ಯಾರ ಕೈಯಲ್ಲಿ ಅಧಿಕಾರ ಬಿಟ್ಟು ಕೊಡುವದಾದರೂ ಹಿಂದೀಯರ ಕೈಯಲ್ಲಿಯೇ ಕೊಡಬೇಕಾಗುವದು. ಅಷ್ಟರೊಳಗೆ ಹಿಂದೀಯರಲ್ಲಿ ಭಿನ್ನಾಭಿಮತವಿಲ್ಲದಂತೆ ಒಮ್ಮತವಾಗಬಹುದೆಂದೂ ಹಿಂದೀ ಪ್ರಯತ್ನವು ಬೇಗನೆ ಯಶಸ್ವಿಯಾಗಬಹುದೆಂದೂ ನಂಬಬಹುದು.

(೫ನೇ ಪುಟಕ್ಕೆ ಮುಂದುವರಿದಿದೆ)

★ ಅಮೇರಿಕಕ್ಕೆ ಭಾರತದ ಪ್ರಥಮ ರಾಯಭಾರಿ ★

ಪ್ರಾಚೀನ ಭಾಷಾ ವಿಶಾರದ ಆಸಫ್ ಆಲಿ

ಸಂಸ್ಕೃತದಲ್ಲಿ ಹಿಂದೂ ಪುರಾಣ ಪ್ರಬಂಧ ಬರೆದರು

"ಕೇವಲ ಟ್ರೊಳ್ಳು ಸೌಹಾರ್ದ ಸಂಸ್ಥಾಪಿಸುವುದು ನನ್ನ ಹೊಣೆಯಲ್ಲ. ಸ್ವಮಾನತೆ ಮತ್ತು ಸ್ವಾತಂತ್ರ್ಯದ ಫಲದಾಯಕವಾದ ಆರ್ಥಿಕ ಸಹಕಾರವನ್ನು ಎರಡು ದೇಶಗಳೊಳಗೆ (ಭಾರತ ಮತ್ತು ಅಮೇರಿಕಾ) ಉಂಟುಮಾಡುವುದಕ್ಕೆ ಶ್ರಮಿಸುತ್ತೇನೆ."

ಈ ಉದಾತ್ತ ನಿರೂಪಣೆಯನ್ನು ಅಮೇರಿಕಕ್ಕೆ ಹೊರಟ ಭಾರತದ ಪ್ರಥಮ ರಾಯಭಾರಿಗಳಾದ ಆಸಫ್ ಅಲಿಯವರು ಒಂದು ವೃತ್ತ ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ತಿಳಿಸಿದ್ದರು.

ಭಾರತದ ಈ ಪ್ರಥಮ ರಾಯಭಾರಿಗಳು ಚತುರ ರಾಜಕೀಯ ಮುತ್ಸದ್ದಿಗಳು ಮಾತ್ರವಲ್ಲ ಅವರು ಕವಿಗಳೂ, ಪ್ರಾಚೀನ ಭಾಷಾ ವಿಶಾರದರೂ, ತತ್ವ ಜ್ಞಾನಿಗಳೂ, ಆಗಿದ್ದಾರೆ. ಎಲ್ಲದಕ್ಕಿಂತಲೂ ಅವರು ನೈಜ ಸ್ಥಿತಿ ಸಂಶೋಧಕರಾಗಿದ್ದು ಎಲ್ಲವನ್ನು ಡಾಲರ್ ದೃಷ್ಟಿಯಿಂದ ಅವಲೋಕಿಸುವ ಜಗತ್ತಿನ ಶ್ರೇಷ್ಠ ನೈಜ ವ್ಯವಹಾರ ಕುಶಲ ದೇಶವಾದ ಅಮೇರಿಕಕ್ಕೆ ಅವರು ತಮ್ಮ ಪ್ರಥಮ ಯಾತ್ರೆಯನ್ನು ಕೈಕೊಂಡಿರುವರು

ಸ್ವನಿರ್ಮಿತ ವ್ಯಕ್ತಿ

ಸ್ವಶಕ್ತಿಯಿಂದ ಸ್ವತಂತ್ರರಾದ ಜನತೆಯ ದೇಶದ ರಾಯಭಾರಿತ್ವ ವಹಿಸಿ ಹೋಗುವ ಈ ಪ್ರತಿಭಾವಂತ ಭಾರತೀಯರು ಸ್ವನಿರ್ಮಿತ ವ್ಯಕ್ತಿಗಳೇ ಆಗಿರುವರು. ಅಂದರೆ ಸ್ವಂತ ಶ್ರಮದಿಂದಲೇ ಅವರು ಯಶಸ್ಸನ್ನು ಸಂಪಾದಿಸಿರುವರು ಬಾಲ್ಯದಲ್ಲೇ ಆಸಫ್ ಆಲಿಯವರು ಅತ್ಯುತ್ಕೃಷ್ಟ ಮತ್ತು ಅತಿ ಕನಿಷ್ಟ ಜೀವನಾನುಭವವನ್ನು ಸವೆದಿರುವರು.

ಆಸಫ್ ಆಲಿಯವರು ಮೊಗಲ ಆಸ್ಥಾನದಲ್ಲಿ ಗೌರವಂತ ಸ್ಥಾನಮಾನವಿದ್ದ ಒಂದು ಶ್ರೀಮಂತ ಕುಟುಂಬದಲ್ಲಿ ಜನಿಸಿದರು. ಮೊಗಲ್ ಆಸ್ಥಾನದ ರೂಢಿ ಸಾಂಪ್ರದಾಯಗಳಲ್ಲಿ ಅವರು ಬೆಳೆಸಲ್ಪಟ್ಟರು. ಆದರೆ ಆ ಸೊಗಡಿಯ ದುಷ್ಪರಿಣಾಮದಿಂದ ಅವರು ಹಾಳಾಗದಿದ್ದುದು ಪುಣ್ಯವೆನ್ನಬೇಕು ಒಂದುವರೆ ವರ್ಷದಲ್ಲಿ ತಂದೆ ತಾಯಿಯನ್ನು ಕಳೆಕೊಂಡು ಅನಾಥರಾದರು ನಂತರ ತಮ್ಮ ಸ್ವಂತ ಕುಶಲತೆ ಸಾಮರ್ಥ್ಯಗಳಿಂದ ಜೀವನ ಮುಂದರಿಸಿದರು

ದಿಲ್ಲಿಯ ಸ್ಟೀಫನ್ ಕಾಲೇಜಿನಲ್ಲಿ ಪದವೀಧರರಾದರು—ಅಲ್ಲಿ ಸುದೈವವಶಾತ್ ಬ್ರಿಟಿಷ್ ಜನಾಂಗದ ಅನಧಿಕೃತ ರಾಯಭಾರಿಯಾದ ದೀನಬಂಧು ಸಿ ಎಫ್ ಎಂಡ್ರೂಸರ ಸಂಪರ್ಕವು ಆಲಿಯವರಿಗಾಯಿತು. ಗ್ರೀಕ್, ಲಟಿನ್, ಪರ್ಸಿಯನ್, ಅರಬ ಮತ್ತು ಫ್ರೆಂಚ್ ಭಾಷೆಗಳನ್ನು ಆಸಫರು ಕಲಿತರಲ್ಲದೆ ತತ್ವಜ್ಞಾನ, ವಿಜ್ಞಾನ, ಜ್ಯೋತಿಶ್ಶಾಸ್ತ್ರ ಮತ್ತು ಶರೀರ ಶಾಸ್ತ್ರಗಳನ್ನು ಅವರು ಆಳವಾಗಿ ಅಧ್ಯಯನ ಮಾಡಿದ್ದಾರೆ.

ಮಾನವ ಹಕ್ಕು ಪ್ರಿಯರು

ತಮ್ಮ ಅತೀ ಎಳೆಯ ತಾರುಣ್ಯದಲ್ಲಿ ಆಲಿಯವರು ಇಂಗ್ಲೆಂಡಿಗೆ ಹೋದುದು ಅವರ ಸಾಮರ್ಥ್ಯ ಪ್ರತಿಭೆಗಳಿಗೆ ಉತ್ತಮ ಸಂದರ್ಭ ಸಿಗುವಂತಾಯಿತು. ಹದಿನಾರನೆ ವರ್ಷದಲ್ಲಿ ಅವರು ಇಂಗ್ಲೆಂಡಿನ ಪ್ರಗತಿಶೀಲ ಸಂಘದ ಸದಸ್ಯರಾಗಿ ಸ್ವೀಕರಿಸಲ್ಪಟ್ಟುದು ಅವರ ಜೀವನದ ಗಣನೀಯ ಘಟನೆಗಳಲ್ಲೊಂದು.

ಇಂಗ್ಲೆಂಡಿನಲ್ಲಿ ಐದು ವರ್ಷ ನ್ಯಾಯಶಾಸ್ತ್ರಾಭ್ಯಾಸ ಮಾಡುವಾಗ—ಆಸಫರು ಆಂಗ್ಲ ಕವಿತೆಗಳನ್ನು ಬರೆದು 20ನೇ ಶತಮಾನದ ಜೀವಂತ ಆಂಗ್ಲ ಕವಿಗಳ ಪರಿಚಯ ಮಾಡಿ ಕೊಂಡರು. ಅವರ ಅನೇಕ ಕವಿತೆಗಳು ಆಂಗ್ಲ ಪತ್ರಿಕೆಗಳಲ್ಲಿ ಪ್ರಕಟವಾದುವು ಬೆರಿಸ್ಟರ್ ಪದವಿ ಗಳಿಸಿದ ಮೇಲೆ ಆಲಿಯವರು ಐರೋಪ್ಯ ಖಂಡದ ಪ್ರಮುಖ ದೇಶವನ್ನು ಸಂದರ್ಶಿಸುತ್ತಾ ಕೆಲಕಾಲ ಸಂಚರಿಸಿ 1914ರಲ್ಲಿ ಸ್ವದೇಶಕ್ಕೆ ಮರಳಿದರು

ಯುದ್ಧಾನಂತರ ಜನಾಂಗ ಮಂಡಳದಲ್ಲಿ ಭಾರತದ ಕೀಳು ಸ್ಥಾನವನ್ನು ನೋಡಿ ದೇಶ ಭಕ್ತ ಆಸಫ ಆಲಿಯವರು ತುಂಬಾ ಆಕ್ರೋಶ ಗೊಂಡರು 1916ರಲ್ಲಿ ಅವರು ಎನ್ನಿ ಬೆಸೆಂಟರ ಹೋಂರೂಲ್ ಚಳವಳಿಗೆ ಸೇರಿಕೊಂಡರು ಅದೇ ಸಮಯಕ್ಕೆ ಪತ್ರಿಕೋದ್ಯೋಮವೂ ಅವರನ್ನು ಚೆನ್ನಾಗಿ ಆಕರ್ಷಿಸಲು ಅವರು ಬೊಂಬೇ ಕ್ರೊನಿಕಲ್, ಮೋತಿಲಾಲರಿಂದ ಸ್ಥಾಪಿಸಲ್ಪಟ್ಟ ಇಂಡಿಪೆಂಡೆಂಡ್ ಫೊರ್ವಾರ್ಡ ಮೊದಲಾದ ಪತ್ರಿಕೆಗಳಿಗೆ ಲೇಖನ ಬರೆಯುತ್ತಿದ್ದರು 1918ರಲ್ಲಿ ಅವರು ಜನಪ್ರಿಯ ಭಾಷಣಗಾರರಾಗಿ ಪ್ರಖ್ಯಾತಿ ಪಡೆದರು.

ಅವರ ಭಾಷಣಗಳ ಪ್ರಧಾನ ಧಾಟಿಯಾದರೊ ಮಾನವ ಹಕ್ಕು ಬಾಧ್ಯತೆಗಳೇ ಆಗಿದ್ದವು 1918ರಲ್ಲೇ ಅವರು ಕಾಂಗ್ರೆಸ್ಸನ್ನು ಸೇರಿದರು ಆಗವರು ಸ್ವಾತಂತ್ರ್ಯಕ್ಕಾಗಿ ಮಾಡಿದ ಚಳವಳವು ಅವರನ್ನು ಡಿಫೆನ್ಸ ಆಫ್ ಇಂಡಿಯಾ ಕಾನೂನು ದ್ವಾರಾ ಪ್ರಥಮ ಸಲಕ್ಕೆ ಬಂಧಿಖಾನೆ ಗೊಯ್ಯಿತು ಆದರೆ ವಿಚಾರಣೆಯಲ್ಲಿ ಅವರು ನಿರಪರಾಧಿಗಳೆಂದು ಬಿಡುಗಡೆ ಮಾಡಲ್ಪಟ್ಟದ್ದು ಆಗಿನ ರಾಜಕೀಯದಲ್ಲೊಂದು ಕೌತುಕದ ಸಂಗತಿ

ಜೈಲಿನಲ್ಲೂ ಚಳವಳ

1919ರಲ್ಲಿ ಪಂಜಾಬದ ಅತ್ಯಾಚಾರವು ಜಾಲಿಯನ್ ವಾಲಾ ಪ್ರಕರಣ—ಅವರನ್ನು ಖಿಲಾಫತ್ ಚಳವಳದೊಳಗೆಡುಮುಕಿಸಿತು. ಶ್ರೇಷ್ಟ ತರಗತಿಯ ಸ್ವಯಂ ಸೇವಕ ದಳವೊಂದನ್ನವರು ತರಬೇತುಗೊಳಿಸಿ ಎಲ್ಲಾ ಸಾರ್ವಜನಿಕ ಉತ್ಸವ ಹಬ್ಬ, ಮೆರವಣಿಗೆ ಕಾಲದಲ್ಲಿ ಉಸ್ತುವಾರಿ ನೋಡುವ ಕಾರ್ಯಕ್ಕೆ ಹಚ್ಚಿದುದು ಪೋಲಿಸ್ ಅಧಿಕಾರಿಗಳಲ್ಲಿ ತುಂಬಾ ಸಂದೇಹವನ್ನುಂಟು ಮಾಡಿತು

ಅದೇ ಕಾಲಕ್ಕೆ ಅವರು ರಚನಾತ್ಮಕ ಅಸಹಕಾರವೆಂಬ ವಿಷಯದ ಕುರಿತು ತನ್ನದೊಂದು ಚಿಕ್ಕ ಪುಸ್ತಕ ಬರೆದು ಗಾಂಧೀಜಿಯ ಶ್ಲಾಘನೆಗೆ ಪಾತ್ರರಾದರು ಕಳೆದ 27 ವರ್ಷಗಳಿಂದ ಆಸಫ್ ಆಲಿಯವರು ಮಹಾತ್ಮಾ ಗಾಂಧಿಯವರ ಸಮೀಪದ ಸಹೋದ್ಯೋಗಿಗಳೂ ಆಪ್ತ ಸ್ನೇಹಿತರೂ ಸಲಹೆಗಾರರೂ ಆಗಿಯೇ ಉಳಿದಿದ್ದಾರೆ 1920ರಲ್ಲೇ ಅವರು ಘಟನಾಸಮಿತಿಯ ಪ್ರಸ್ತಾಪವೆತ್ತಿದ್ದು ಅನೇಕರಿಗೆ ತಿಳಿದಿರಲಿಕ್ಕಿಲ್ಲ

1920ರಲ್ಲಿ ದಿಲ್ಲಿಯಿಂದ [illegible] ಜೈಲಿಗೆ ಹೋದವರು ಆಸಫ ಆಲಿಯವರು ಆಗಿನ ಜೈಲು ಜೀವನವೆಂದರೆ ತಗಣೆ ಮತ್ತು ಸೊಳ್ಳೆಗಳ ಕೊಳೆ ಕೂಪ ಜೀವನ [illegible] ಲಕ್ಷ್ಯಗೊಟ್ಟ [illegible] ಆ ಸಲದ 18 ತಿಂಗಳ [illegible] ವಾಸದಲ್ಲಿಯೂ ರಾಮಾಯಣ ಮಹಾಭಾರತದ ಅಧ್ಯಯನವಲ್ಲದೆ ಕೊರಾನ್ ಹಿಂದಿನ ದಂತ ಕತೆಗಳು, ಪುರಾಣಗಳು ಅವರ ಮನಸ್ಸಿನ ಮೇಲೆ [illegible] ವಾದ ಪರಿಣಾಮವನ್ನುಂಟುಮಾಡಿದವು ಎಂಬುದಕ್ಕೆ ಅವರು ಹಿಂದೂ ಪುರಾಣಗಳ ಕುರಿತು ಹಿಂದೀಯಲ್ಲಿ ಬರೆದ ಅನೇಕ ಪ್ರಬಂಧಗಳೇ ಸಾಕ್ಷಿ. ಜಾತೀಯ ವೈಮನಸ್ಯದಿಂದ ವಿಷಭರಿತವಾದ ಇಂದಿನ ವಾತಾವರಣದಲ್ಲಿ ಆಸಫ ಆಲಿಯವರ ಈ ಕೃತಿಗಳು ಒಂದು ಉನ್ನತ ಆದರ್ಶವೇ ಸರಿ.

ವಿಧಾಯಕರಾಗುವರು

1923ರಲ್ಲಿ ಜೈಲಿನಿಂದ ಹೊರ ಬಂದಾಗ ಆಸಫರನ್ನು ಮೋತಿಲಾಲರು ಸಿ. ಆರ್. ದಾಸರ ಸ್ವರಾಜ್ಯ ಪಕ್ಷಕ್ಕೆ ಆಮಂತ್ರಿಸಿದರು ಮಾನಸೀಕವಾಗಿ ವಿಧಾಯಕ ಕಾರ್ಯಕ್ರಮ ಪ್ರಿಯರಾಗಿರುವ ಆಲಿಯವರು 5 ಸಲ ತುರಂಗ ವಾಸವನ್ನನುಭವಿಸಿರುವರಾದರೂ ಮೂಲತಃ ಅವರನ್ನು ಚತುರ ರಾಜಕೀಯ ಕ್ರಾಂತಿಗಾರರೆನ್ನುವುದಕ್ಕಿಂತ ಶ್ರೇಷ್ಟ ರಾಜಕಾರಣಿಕ ಮುತ್ಸದ್ದಿಗಳೆನ್ನಬಹುದು ಸ್ವರಾಜ್ಯ ಪಕ್ಷದಲ್ಲಿದ್ದಾಗ ಆಸಫ್ ಆಲಿಯವರು ಮಹಮ್ಮದಾಲಿ ಜಿನ್ನರೊಡನೆ ಸೇರಿ ಕೇಂದ್ರ ವಿಧಾಯಕ ಸಭೆಯಲ್ಲಿ ಆಗಿನ ವ್ಯಾಸರಾಯ್ ರಚಿತ ಸರಕಾರವನ್ನು ಹಲವು ಸಲ ಸೋಲಿಸಿರುವರು (ಇತ್ತೀಚೆಗಿನವರೆಗೆ ಆ ಸರಕಾರಕ್ಕೆ ಸೋಲಿನ ನಾಚಿಗೆ ಇರಲಿಲ್ಲ)

ಅಂದಿನಿಂದಲೂ ವಿಧಾಯಕ ಚಟುವಟಿಕೆಗಳನ್ನನುಸರಿಸಬೇಕೆಂದು ಆಸಫರು ಕಾಂಗ್ರೆಸಿನಲ್ಲಿದ್ದು ಬಹಳ ಪ್ರಯತ್ನ ಮಾಡಿದ್ದರು. ಸ್ವಲ್ಪ ಸಮಯದ ತನಕ ಅವರದು ಅರಣ್ಯರೋಧನವಾದರೂ ಇಂದು ಕಾಂಗ್ರೆಸು ಅವರ ಆಶಯದ ಮಾರ್ಗವನ್ನೇ ಅನುಸರಿಸುತ್ತದೆನ್ನಬಹುದು. ತಮ್ಮ ಆಳ ವಿಶ್ವಾಸಕೆ ವಿರೂಪ ಕೊಡಲು ಆಲಿಯವರು ಹಿಂಜರಿಯಲಿಲ್ಲ. 1933ರಲ್ಲಿ ಸಾಮೂಹಿಕ ಶಾಸನಭಂಗ ಚಳವಳವನ್ನು ವಿಲ್ಲಿಂಗ್ಡನ್ ಸರಕಾರ [illegible] ಸತ್ಯಮೂರ್ತಿ ಆಸಫ್ ಆಲಿ ಮತ್ತು ಡಾ. ಅನ್ಸಾರಿಯವರು ಸಾಮೂಹಿಕ ಶಾಸನಭಂಗ ಚಳವಳವನ್ನು ಹಿಂದೆಗೆಯುವಂತೆ ಧೈರ್ಯವಾಗಿ ಪ್ರಕಟಣೆಯನ್ನು ಹೊರಡಿಸಿದರು. ಶಾಸನ ಸಭೆಗಳನ್ನು ಹೊಕ್ಕು ಅಧಿಕಾರ ಹಿಡಿಯುವಂತೆ ದೇಶ ಕೊಡಬೇಕೆಂದು ಅವರು ಮಹಾತ್ಮಾ ಗಾಂಧಿಯವರನ್ನು ವಿನಂತಿಸಿದರು ಆಗಲೇ ಮಹಾತ್ಮರು "ನಮ್ಮವರಲ್ಲಿ ವಿಧಾಯಕ ಮನೋಭಾವ ತಳವೂರಿದೆ" ಎಂದರು

ಎರಡು ದೇಹ—ಒಂದು ಆತ್ಮ

ಆಜಾದರ ಆರು ವರ್ಷದ ಅಧ್ಯಕ್ಷತೆಯಲ್ಲಿ ಅವರ ಸಿಂಹಾಸನದ ಹಿಂದೆ ಇದ್ದವರು ಆಲಿಯವರೆ ಮೌಲಾನಾರ ಆಪ್ತ ಸ್ನೇಹಿತರೂ ತತ್ವೋಪದೇಶಕರೂ ಇಂದು ಅವರನ್ನು ಅಗಲಿ ಹೋಗಿದ್ದಾರೆ ಮನೆಯೊಳಗೆಷ್ಟೊ ರಾಜಕೀಯದಲ್ಲೂ ಅವರು ಆಪ್ತರು—ಅವರನ್ನು ಒಂದು ಆತ್ಮ ಎರಡು ದೇಹದ ವ್ಯಕ್ತಿಗಳೆನ್ನಬಹುದು

[illegible]

ಒಂದು ಕಾಲದಲ್ಲಿ ಸಂಯುಕ್ತ ಅಮೇರಿಕದಲ್ಲೂ ಮದ್ಯ ಪಾನ ನಿರೋಧವಿತ್ತು ಜನರ ಗಲಭೆಯಿಂದ ಅದನ್ನು ರದ್ದುಮಾಡಲಾಯಿತು ಆ ನಂತರದ 13 ವರ್ಷಗಳಲ್ಲಿ ಅಲ್ಲಿನ ಜನರು 1800 ಲಕ್ಷ ಗೆಲನ್ ಸಾರಾಯಿಯನ್ನು, 1000 ಗೆಲನ್ ದ್ರಾಕ್ಷಾರಸವನ್ನೂ, 22000 ಲಕ್ಷ ಗೆಲನ್ ಬೀರನ್ನು ಕುಡಿದು ಹಾಕಿರುವರು



ನಿತ್ಯಲೂ ಬ್ಯಾಲ್ ಬೀನ್ಸ್‌ಗಳನ್ನು ಸೇವಿಸಿ, ಅಂತರ್ಯ್ಯಾರೋಗ್ಯವನ್ನು ಪಡೆಯುವುದರ ಮೇಲೆ ಹೊಂದಿಕೊಂಡಿದೆ ನಿಮ್ಮ ಮನೋರತೆಯು ದೇಹಕ್ಕೆ ಹುರುಪುಕೊಟ್ಟು, ರಕ್ತಶುದ್ಧಗೊಳಿಸಿ, ಮತ್ತು ಜೀರ್ಣ ಕೋಶದಲ್ಲಿರುವ ಕಲ್ಮಶಗಳನ್ನು ಹೊರಡಿಸಿ, ಈ ವನಸ್ಪತೀ ಔಷಧಿಯು, ನಿಮ್ಮ ಕಾಂತಿ ಮತ್ತು ಕಾಯಗಳನ್ನು ವೃದ್ಧಿಗೊಳಿಸುತ್ತದೆ ಮತ್ತು ನಿಮಗೆ ಹರ್ಷಯುಕ್ತ ಆರೋಗ್ಯವನ್ನೂ, ಶಕ್ತಿಯನ್ನೂ, ಒದಗಿಸುತ್ತದೆ ಶಯನಕ್ಕೆ ಹೋಗುವ ಸಮಯ ಇದರ ಸೇವನೆಯಾದರೆ ಉತ್ತಮ

ಪಿತ್ತ, ಮಲಬದ್ಧತೆ, ಮತ್ತು ತಲೆನೋವು, ಅಜೀರ್ಣ, ಪ್ಲಿಹ ಸಂಬಂಧ ಪೀಡೆ, ವಾತ, ಇತ್ಯಾದಿಗಳಿಗೆ ಬ್ಯಾಲ್ ಬೀನ್ಸ್ ಅತ್ಯುತ್ತಮ

ಟೋನಿಕ್ ಮತ್ತು ದೋಷ ನಿವಾರಣೇ

BILE BEANS

ಬ್ಯಾಲ್‌ಬೀನ್ಸ್‌ಗಳನ್ನು ಸೇವಿಸಿರಿ.

ವಾರಾಂತ್ಯ ವರದಿ ವಿಮರ್ಶೆ

ಲೀಗಿನವರ ದ್ವೇಷ ಘೋಷ

"ಕೆಲವೇ ಸಾವಿರ ಸೈನಿಕರನ್ನು ತಂದು ಘಜನಿ ಮಹಮ್ಮದನು ಲಕ್ಷಾಂತರ ಹಿಂದುಗಳನ್ನು ಸೋಲಿಸಿದನು ದೇವರ ಇಚ್ಛೆ ಇದ್ದರೆ ಈಗಲೂ ಕೆಲವೇ ಲಕ್ಷ ಮುಸಲ್ಮಾನರು ಕೋಟ್ಯಾಂತರ ಹಿಂದುಗಳನ್ನು ಗೆಲ್ಲಲು ಸಾಧ್ಯವಾಗಬಹುದು." ಹೀಗೆಂದು ನಡುಗಾಲ ಸರಕಾರದ ಆರೋಗ್ಯ ಮಂತ್ರಿಗಳಾದ ರಾಜಾಗಜ್ನಾಫರ ಅಲಿಖಾನರು ಕರಾಚಿಯ ಇದಗಾ ಮೈದಾನಿನದಲ್ಲಿ ಸೇರಿದ ಒಂದು ಸಭೆಯಲ್ಲಿ ವಿವರಿಸಿದರು

ಪಂಜಾಬ್ ಸರಕಾರವು ಲೀಗಿನ ಮೇಲೆ ಕೈಕೊಂಡ ಧೋರಣೆಯನ್ನು ಖಂಡಿಸುವುದಕ್ಕಾಗಿ ಈ ಸಭೆ ಸೇರಿಸಲಾಗಿತ್ತು. ಆ ಕುರಿತು ಮಾತನಾಡಲು ಹೆಚ್ಚಿನದೇನೂ ಸಿಗಲಿಲ್ಲವೆಂದು ತೋರುತ್ತದೆ ಅಂದಿನ ಭಾಷಣಗಾರರೆಲ್ಲ ಹಿಂದೂಗಳ ಮೇಲೆ ದ್ವೇಷದ ಕಿಡಿಕಾರ ತೊಡಗಿದರು ಉದಾಹರಣೆಗಾಗಿ ಅಂದು ಭಾಷಣ ಮಾಡಿದ ಲಿಯಾಖತ್ ಹಯತ್‌ಖಾನರು ಭಾರತವನ್ನು ಹಿಂದೂ ಮತ್ತು ಮುಸಲ್ಮಾನರೊಳಗೆ ಹಂಚಿಕೊಡದಿದ್ದರೆ ರಕ್ತಮಯ ಹೋರಾಟವು ಅನಿವಾರ್ಯ"ವೆಂದರು

ತಮ್ಮ ದ್ವೇಷದ ಹಾದಿಯಿಂದ ಪರಿಣಾಮವೇನಾದೀತೆಂದು ಅರಿಯದ ಈ ಲೀಗ್ ಧುರೀಣರ ಮಂದಮತಿಗೆ ಏನು ಹೇಳಬೇಕೊ! ಆದರೂ ಈಗಾಗಲೇ ಏನು ಮಾಡಿದರೆ ಏನಾಗುತ್ತದೆಂದು ತಿಳಿಸಿದ್ದಾರೆ ಜಿನ್ನರು ಒಂದು ಸಲ "ಮುಸಲ್ಮಾನರು ಗುಣ ಶಕ್ತಿಯನ್ನೂ, ಶಿಸ್ತನ್ನೂ, ಬೆಳೆಸಿಕೊಳ್ಳಬೇಕು ತಮ್ಮ ಪ್ರದೇಶದಲ್ಲಿನ ಅಲ್ಪಸಂಖ್ಯಾಕರಿಗೆ ಯಾವದೇ ತರದ ಹಾನಿಯಾಗದಂತೆ ನೋಡಿಕೊಳ್ಳಬೇಕು" ಎಂದಿದ್ದರು. "ಇದನ್ನು ಅಲ್ಲಿನ ಮುಸಲ್ಮಾನರಿಗೆ ತಿಳಿಸುತ್ತಾ "ಜಿನ್ನಾ ಸಾಹೇಬರ ಈ ಮಾತುಗಳು ಗಣನೀಯವಿವೆ ಸದ್ಗುಣ ಮತ್ತು ಶಿಸ್ತು ಸಾಂಪದಾಗಳುಳ್ಳ ಎಂತಹ ರಾಜ್ಯವನ್ನಾದರೂ ನಾನು ಮೆಚ್ಚುವೆ" ಎಂದರು

ಮಹಾತ್ಮರು ಮೆಚ್ಚುವ ರಾಜ್ಯ ದ್ವೇಷದೋಷಗಳಿದ್ದಲ್ಲ ಹಿಂದೊಂದು ಸಲ ಫಿರೋಜಖಾನ್‌ನೂನರು "ನಮಗೆ ಪಾಕಿಸ್ಥಾನ ಕೊಡದಿದ್ದರೆ ತೈಮೂರ ಚೆಂಗೀಸ್ ಖಾನರ ಕ್ರೌರ್ಯಕ್ಕಿಂತಲೂ ಮಿಗಿಲಾದ ಕೃತ್ಯಗಳು ಸಂಭವಿಸಬಹುದು" ಎಂದಿದ್ದರು. ಇದು ಸದ್ಗುಣದ ರಾಜ್ಯ ಕಲ್ಪನೆಯಲ್ಲ ಮೇಲ್ಕಂಡ ಭಾಷಣಗಾರರರೂ ಯಾವ ಸಾತ್ವಿಕ ಲಕ್ಷಣಗಳನ್ನು ಪ್ರಕಟಿಸಲಿಲ್ಲ

ಮರೆತ ವಿಷಯಗಳು

ಇಷ್ಟೆಲ್ಲ ಮಾತುಗಾರಿಕೆಯೆಲ್ಲ ಬಂಡವಾಳವಿಲ್ಲದ ಒಡಾಯಿ ಎನ್ನಬೇಕು ಯಾವುದೊ ಒಂದ ಕಾಲದಲ್ಲಿ ದುರ್ದೈವ ವಶಾತ್ ಏನೊ ಸಂಭವಿಸಿತೆಂದರೆ ಇಂದೂ ಅದೇ ಪರಿಸ್ಥಿತಿ ಬಲ್ಲ ಮುಸಲ್ಮಾನ ಜನತೆ ತಮ್ಮ ಅವಿಚಾರವಂತ ನಾಯಕರ ಮಾತುಗಳನ್ನು ಗಾಳಿಗೆ ಬಿಟ್ಟು ಬಿಡದಿರಲಾರರು

ದೊಡ್ಡ ನಗೆ

ಕಾರಣ ಅದೇ ಸಭೆಯಲ್ಲಿ ಗಜ್ನಾಫರ್ ಅಲಿಯವರು ಒಂದು ಕಡೆ ಮಾಸ್ಟರ್ ತಾರಾ ಸಿಂಗರು ಪಾಕಿಸ್ಥಾನವನ್ನು ಖಂಡಿಸಿ ಮಾಡಿದ ಪ್ರಕಟನೆಯನ್ನು ಮೂರ್ಖತನದೆಂದು ತಿಳಿಸುತ್ತಾ "ಇದಕ್ಕೆ ಮಾಸ್ಟರ್ ತಾರಾ ಸಿಂಗರನ್ನು ದೂರಿ ಫಲವಿಲ್ಲ. ಅವರು ಸಿಕ್ಕರಾಗಿದ್ದರು" ಎಂದಾಗ ಸಭೆಯೆಲ್ಲ ದೊಡ್ಡ ನಗೆಯನ್ನು ಬೀರಿತಂತೆ ಅಲಿಯವರಿಗೆ ಬಹುಶ್ಯ ಸಿಕ್ಕರ ಕುರಿತು ಮಾತನಾಡುವಾಗ ಶಬ್ದಗಳೇ ದೊರಕುವುದಿಲ್ಲವೆಂದು ಕಾಣುತ್ತದೆ. ಕೋಟ್ಯಾಂತರ ಹಿಂದುಗಳನ್ನು 'ಸೋಲಿಸುವ' ಧೈರ್ಯವಿದ್ದವರಿಗೆ ಕೆಲವೇ ಲಕ್ಷ ಸಿಕ್ಕರ ಕುರಿತು ಮಾತನಾಡುವಾಗ ಎದೆಗಾರಿಕೆ ಹಾರಿ ಹೋದಂತಾಗಲು ಕಾರಣವೇನೊ!

ಕನಸಿನ ರಾಜ್ಯ

ಇಂದಿಗೆ ಬಹುಕಾಲದಿಂದ ಲೀಗ್ ದುರೀಣರು ಹಿಂದೂಸ್ಥಾನದಲ್ಲಿ ಇಸ್ಲಾಂ ರಾಜ್ಯವನ್ನು ಕಟ್ಟುವ ಕನಸು ಕಾಣುತ್ತಿರುವರು ಈ ಕುರಿತು ಮಹಾತ್ಮಾ ಗಾಂಧಿಯವರು ಸ್ಪಷ್ಟ ಅಭಿಪ್ರಾಯವನ್ನು ತಮ್ಮ ನಾಖಾಲಿ ಪ್ರವಾಸದಲ್ಲಿ ತಿಳಿಸಿದರು

ಬ್ರಿಟಿಷರು ಭಾರತ ಬಿಡುವರು

ಮೂರು ತಿಂಗಳಲ್ಲಿ ದೇಶ ಸ್ವಾತಂತ್ರ್ಯ

ಶ್ರೀ ಬ್ರಿಟಿಷ್ ಪ್ರಧಾನ ಮಂತ್ರಿ ಅಟ್ಲಿಯವರು ಹೇಳಿಕೆಯಲ್ಲಿ [illegible] ತಿಂಗಳೊಳಗೆ ಬ್ರಿಟಿಷರು [illegible] ಬಿಟ್ಟು ಹೋಗುವರೆಂದು ಅಧಿಕಾರವನ್ನು ಸಂಪೂರ್ಣ ಭಾರತೀಯರ [illegible] ಸಾರಿರುವರು

ಅಧಿಕಾರವನ್ನು ಯಾವದೊಂದು ರಾಜಕೀಯ ಪಕ್ಷದ ಕೈಗೆ ಕೊಡುವ ಪ್ರಶ್ನೆಯಿಲ್ಲ ದೇಶದ ಅತೀ ಹೆಚ್ಚು ಜನತಾವರ್ಗದ ಪ್ರತಿನಿಧಿಗಳು ಸಾಧ್ಯವಿದ್ದರೆ ಒಂದು ಒಪ್ಪಂದಕ್ಕೆ ಬಂದು ಆ ಅಧಿಕಾರವನ್ನು ತೆಗೆದುಕೊಳ್ಳಬೇಕು ಇಲ್ಲದಿದ್ದರೆ ತಾವು ಬಿಟ್ಟುಹೋಗುವ ಕಾಲಕ್ಕೆ ತಮ್ಮ ಆಯ್ಕೆಯ ಪ್ರತಿ ಧಿಯುಂಡಳವೊಂದನ್ನು ರಚಿಸಿ ಅಧಿಕಾರವನ್ನು ಅವರ ಕೈಗೆ ಬಿಟ್ಟು ಕೊಡಲಾಗುವುದು, ಎಂಬ ಭಾವವು ಸ್ಪಷ್ಟವಾಗುವುದು

ಸದ್ಯದ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಲೀಗ್‌ಗಳಲ್ಲಿ ಬಿರುಕು ಇನ್ನಷ್ಟು ವಿಶಾಲವಾಗಿಯೇ ಉಳಿದಿದೆ ಇದು ಮುಂದುವರಿದರೆ ಬ್ರಿಟಿಷರ [illegible] ಕಾಲಕ್ಕೆ ಇಲ್ಲಿ [illegible] ವುದ

ಪೆಲೆಸ್ತೀನದ ಪಕ್ಷಿಯನ್ನ ಜನಾಂಗ [illegible] ಒಪ್ಪಿದಂತೆ ಭಾರತದ ಸಮಸ್ಯೆಯನ್ನು ಅದೇ ಸಂಸ್ಥೆಯ [illegible] ಬಿಟ್ಟು ಬಿಡದೆ ಒಳಿತಿನ ಮುತ್ಸದ್ದಿ [illegible] ಹೀಗೆ [illegible] ಬಿಟಿಷರು ಕಂಬಿಕೀಳುವರೆಂದು ಘೋಷಿಸಿದಲ್ಲಿ ಏನೋ ದುರಭಿಪ್ರಾಯವಿದೆಯೆಂದು ಸಂದೇಹವಾಗುತ್ತಿದೆ

ಸೈನ್ಯವನ್ನು ಪ್ರಾಂತ್ಯಗಳ ವಶಕ್ಕೆ ಬಿಟ್ಟುಬಿಡುವುದು ಒಂದು ಆವಶ್ಯಕ ಸೂಚನೆ. ಈ ಸಂದರ್ಭದಲ್ಲಿ ಕಲಹಗಾರರು ವಿರೋಧಿಗಳ ಹೆಚ್ಚಿನ ಬಲಾಬಲಗಳನ್ನರಿತಾದರೂ ತಮ್ಮ ಧೂರ್ತಕಾರ್ಯದಿಂದ ಹಿಂದುಳಿಯುವಂತಾಗುತಿತ್ತು. ದೇಶವನ್ನು ಗುಂಪುಗಳನ್ನಾಗಿ ಮಾಡಿದವರಿಗೆ ಈ ವ್ಯವಸ್ಥೆಯನ್ನು ನಷ್ಟ ಮಾಡುವುದು ಕಷ್ಟವಲ್ಲ

ವಿದೇಶಿ ಆಕ್ರಮಣ

ಯಾವದಾದರೊಂದು ಶಾಂತಿಯುಕ್ತ ಇತ್ಯರ್ಥವಾಗದಿದ್ದರೆ ಇಂಡೋನೇಸ್ಯಾ, ವಿಟ್ನಾಮುಗಳಲ್ಲಾದಂತೆ ಅಂತಃಕಲಹವೇ ಮಾತ್ರವಲ್ಲ ಬ್ರಿಟಿಷ್ ಬಂಡವಾಳಶಾಹಿ ಹಿತವರ್ಗಗಳ ಕಡೆಯಿಂದ ದುಷ್ಪರಿಣಾಮಕಾರಿಯಾದ ಒಳಸಂಚು ನಡೆಯುವುದಕ್ಕೆ ಆಸ್ಪದವಿದೆ ಇನ್ನೆರಡು ವರ್ಷಗಳಲ್ಲಿ ಎಟ್ಲಿ ಸರಕಾರವು ಪದಚ್ಯುತವಾಗಿ ಚರ್ಚಿಲ್ಲರ ಕನ್ಸರ್ವೆಟಿವ್ ಪಕ್ಷವು ಸಾಮ್ರಾಜ್ಯ ಸೂತ್ರಗಳನ್ನು ಕೈಕೊಂಡರೆಂದರೆ ಮತ್ತೆ ಭಾರತದ ಪುನರ ದಿಗ್ವಿಜಯ ಪ್ರಾರಂಭವಾಗುವುದು

ಈ ಸಂದರ್ಭದಲ್ಲಿ ಜನಾಂಗ ಮಂಡಳವು ತನ್ನ ಪ್ರಭಾವವನ್ನು ತೋರದಿದ್ದರೆ ಹಿಂದಿನ ಲೀಗ್ ಆಫ್ ನೇಶನ್ಸನಂತೆ ಅದೊಂದು ಶಬ ಸಂಸ್ಥೆಯಾಗುವುದು ಈಗಾಗಲೇ ಪೆಲೆಸ್ತೀನ್ ಮತ್ತು ಇಂಡೋನೇಸ್ಯದ ಕುರಿತು ಆ ಸಂಸ್ಥೆ ಚಿಕ್ಕಗಾಣದಂತೆ ಸ್ತಬ್ಧವಾಗಿರುವ ಪರಿಸ್ಥಿತಿ ನೋಡಿದರೆ ಭವಿಷ್ಯವು ಆಶಾದಾಯಕವಿದ್ದಂತೆ ತೋರುವುದಿಲ್ಲ

ಪಂಜಾಬ್ ಗೊಂದಲ

26 ದಿನಗಳ ಶಾಸನಭಂಗ ಚಳವಳಿಯ ಲೀಗ್ ಧುರೀಣರಿಗೆ ಪಂಜಾಬದಲ್ಲಿ ಸಾಕಾಗಿ ಸಾಕಾದಂತೆ ತೋರುತ್ತದೆ ಸಿಖ್ಖರ ಹಿಂದೂಗಳ ಕೈಗಳಲ್ಲಿ ಕೈ ಹಾಕಿ ಅದರ ಸ್ಥಾನಮಾನಕ್ಕೆ ತುಂಬಾ ಧಕ್ಕೆ ತಗಲಿದೆ [illegible] ಲೀಗ್ ಸಹಾ[illegible] ಪಂಜಾಬಿನ ತಮ್ಮ ಸಹಿತ ಕ್ಷೇಮ ಸಾಹಸವು ಸ್ಫೂರ್ತಿದಾಯಕವಾಗಿಲ್ಲ

ಅಂತೇ ಈಗ ಈ ಚಳವಳವನ್ನು ಹಿಂತೆ ಸೆಳೆ ಮಾತುಕತೆಗಳಾಗುತ್ತಿವೆ ಕುಸಿಯುವ ಲೀಗಿನ ಶಕ್ತಿಯನ್ನು ಎತ್ತಿಹಿಡಿಯಲು ಅದರ ಬಹಿರಂಗ ಸಹಾನುಭೂತಿಗಳಾಗಿದ್ದ ವ್ಹೈಸ್‌ರಾಯ್ ವೇವೆಲ್ಲರು ಒಳಗೊಳಗೇ ಪಂಜಾಬ್ ಗವರ್ನರರೊಡನೆ ಸಲಹೆ ಕಳುಹಿಸುತ್ತಿರುವಂತೆ ಹೇಗಾದರೂ ಮಾಡಿ ಪಕ್ಕಾ ಒಂದು ಪರಿಹಾರವಾಗಬೇಕಷ್ಟೆ!



ನೋಟೀಸು

ಮಂಗ್ಳೂರು ದಿ ಮುನ್ಸಿಫ್ ಕೋರ್ಟಿನಲ್ಲಿ

R C P 400/46.

ಅಲ್ಬರ್ಟ ತಿಕೇರಿ ಅರ್ಜಿದಾರ

ಎದ್ರಿ

ಶ್ರೀನಿವಾಸ ಪುರಾಣಿಕ ರೈಸ್ಪೊಂಡೆಂಟ.

ಮೇಲ್ಕಂಡ ಅಮ್ಲ ಜ್ಯಾರಿಯಲ್ಲಿ ಪ್ರತಿವಾದಿಗೆ ದಿ ಮಂಗ್ಳೂರು ಪಿಟ್ಯೂ, ಸೂ ಕೊಪರೇಶನ್ ಲಿಮಿಟೆಡ್‌ನೇ ಕಂಪೆನಿಯಲ್ಲಿರುವ ನಂಬ್ರ 1401 1600ನೇ ವರೆಗಿನ ಶೇರು 10 ರೂಪಾಯಿ 10ರ ಪ್ರಕಾರ 200 ಶೇರ್ಸುಗಳನ್ನು ತಾರೀಖು 24 2-47ನೇ ದಿವ್ಸ ಮೇಲಿನ ಕೋರ್ಟಿನಲ್ಲಿ ಬಹಿರಂಗವಾಗಿ ಏಲಂ ಮಾಡೋಣಾಗುತ್ತದೆ ಎಂತ ಈ ಮೂಲ್ಕ ತಿಳಿಸೋಣಾಗಿಯದೆ

By order of the Court,
John Gonsalves, BA, LLB
Vakil for Petr

ಮಂಗ್ಳೂರು 8-3-1947

ಕರಕರೆ ದೇವರಿಗೆ ಮರದ ಜಾಗಟೆ

ಹಶಾಪು ಮಗುವಿಗೆ ಮೈಗೆ ತಾಯು ದಪ್ಪಿನ ಕೃತಕ ವಾಲೆಯನ್ನು ಚೀಪಲು ಕೊಡುವಳು ಅದು ಮಗುವಿಗೆ ಯಾವ ಶಕ್ತಿಯನ್ನೂ ಕೊಡದಿದ್ದರೂ ಅವರ ಹಸಿವೆಯನ್ನು ತೃಪ್ತಿಗೊಳಿಸುವದು. ಅದೇ ಪ್ರಕಾರ, ನಮ್ಮ ವನಸ್ಪತಿ ತುಪ್ಪವನ್ನು ಉಪಯೋಗಿಸುವವರಿಗೂ ತುಪ್ಪದಂತೆ ತೋರುವದೇನನ್ನಾದರೂ ಉಣ್ಣುವ ಆತುರವಿರುತ್ತದೆ. ನಮ್ಮ ವನಸ್ಪತಿ "ತುಪ್ಪ"ವನ್ನು ತಯಾರಿಸುವವರು ಕೂಡ ಅಂಥವರ ಚಪಲವನ್ನು ಪೂರೈಸುವಗೋಸ್ಕರ, ತುಪ್ಪದ ಪೌಷ್ಟಿಕತೆಯಿಲ್ಲದ ವಸ್ತುವನ್ನು ಒದಗಿಸುತ್ತಾರೆ. ಆದರೆ ತಾಯಿ ತನ್ನ ಮಗುವಿನ ರಬ್ಬರಿನ ಮೊಲೆ ಕೊಟ್ಟರೆ ಅದಕ್ಕೇನೂ ಬೆಲೆ ಕೇಳುವದಿಲ್ಲ. ವನಸ್ಪತಿ ತುಪ್ಪ ಮಾಡುವವರು ಮಾತ್ರ ತಮ್ಮ ಗಿರಾಕಿಗಳಿಂದ ದೊರೆತ ಲಾಭದಿಂದ ಕೊಬ್ಬುತಾರೆ. ನಿಜವಾದ ತುಪ್ಪದಲ್ಲಿರುವ "ಅ" ಜೀವ ಸತ್ವಕ್ಕೆ ಸಮಾನವಾದುದೇನಾದರೂ ಇಲ್ಲದಿದ್ದ ಮೇಲೆ ವನಸ್ಪತಿ ತುಪ್ಪವೊಂದು ತುಪ್ಪವೇ ಅಲ್ಲ. ಬಹಳವಾದರೆ, ಅಥನ್ನು ತುಪ್ಪದಂತೆ ಗಟ್ಟಿಯಾಗಿ ಮಾಡಲು ಅವಶ್ಯವಿದ್ದಷ್ಟು ಜಲಜನಕವಾಯು ಪ್ರಯೋಗ (Hydrogenate) ಮಾಡಿದ ಜೀರ್ಣಬಾರದಂಥ ವನಸ್ಪತಿ ಎಣ್ಣೆಯೆಂದು ಕರೆಯಬಹುದು. ಶುದ್ಧ ವನಸ್ಪತಿ ಎಣ್ಣೆಯನ್ನು ತುಪ್ಪದಲ್ಲಿ ಮಿಶ್ರಮಾಡಲು ಅನುಕೂಲ ಮಾಡುವ ಹೊರತು ಜಲಜನಕ ಪ್ರಯೋಗದಿಂದ ಆಹಾರ ಗುಣವೇನೂ ಸುಧಾರಿಸುವದಿಲ್ಲ. ವನಸ್ಪತಿ ತೈಲಕ್ಕೂ ನಿಜವಾದ ತುಪ್ಪಕ್ಕೂ ಇರುವ ಭೇದವೆಂದರೆ ಎರಡನೆಯದು ಪ್ರಾಣಿಜನ್ಯವೆಂಬುದು. "ಅ" ಜೀವಸತ್ವವೆಂಬುದು ಹೆಚ್ಚು ಕಡಿಮೆ ಪ್ರಾಣಿಜನ್ಯವೇ ಆಗಿರುವದು. ಅದರಿಂದ 'ಜೀವಸತ್ವಪೂರ್ಣ'ವಾಗಿದೆಯೆಂದು ಹೇಳಲ್ಪಡುವ ವನಸ್ಪತಿ ತುಪ್ಪದಲ್ಲಿ ಜೀವಸತ್ವವಿರಬೇಕಾದರೆ ಅದನ್ನು ಪ್ರಾಣಿಜನ್ಯ ಪದಾರ್ಥಗಳಿಂದಲೆ—ಅಂದರೆ ಶಾರ್ಕ ಲಿವರ ಆಯಿಲ ಅಥವಾ ಕಾಡಲಿವರ ಆಯಿಲದಂಥ ಮೀನೆಣ್ಣೆ ಗಳಿಂದಲೆ—ಒದಗಿಸಬೇಕಾಗುತ್ತದೆ. ನಮ್ಮಂಥ ಸಸ್ಯಾಹಾರಿ ದೇಶದ ಗಿರಾಕಿಗಳು ಹಾಲಿನಿಂದ ಹುಟ್ಟಿದ್ದಲ್ಲದೆ ಬೇರಾವದೇ ಪ್ರಾಣಿಜನ್ಯ ಪದಾರ್ಥಗಳನ್ನು ತಿನ್ನಲು ಹೇಸುತಿರುವಾಗ, ವನಸ್ಪತಿ ತುಪ್ಪವನ್ನೂ ಅದರಲ್ಲಿರುವ ಪ್ರಾಣಿಜನ್ಯ ಮಿಶ್ರಣವನ್ನೂ ಗುಟ್ಟು ಮಾಡಿ ಮಾರುತ್ತ ಹೋಗುವದೆಂದರೆ ಜನತೆಯನ್ನು ಮೋಸಗೊಳಿಸಿದಂತೆಯೇ ಸೈ.

ಇದಲ್ಲದೆ, ಹಾಟಸ್ಪ್ರಿಂಗ್ಸದಲ್ಲಿ ಸೇರಿದ ಪೌಷ್ಟಿಕತಾ ಪರಿಷತ್ತಿನಲ್ಲಿ ಕೃತಕ ಜೀವ ಸತ್ವಗಳನ್ನು ನಿರಂತರವಾಗಿ ಉಪಯೋಗಿಸುವದು ಹಾನಿಕರವೆಂದು ತೋರಿಸಲ್ಪಟ್ಟಿದೆ. ಆದುದರಿಂದ ವನಸ್ಪತಿಯಲ್ಲಿ ಕಾಡ್ ಅಥವಾ ಶಾರ್ಕ ಲಿವರ ಎಣ್ಣೆಯಿಂದ ತೆಗೆದ ಕೃತಕ ಜೀವಸತ್ವವನ್ನು ಸೇರಿಸಿದ್ದರೆ ಅದೂ ಹಾನಿಕಾರಕವೇ ಸೈ. ಅದಲ್ಲದೆ ಜಲಜನಕ ಪ್ರಯೋಗಕ್ಕೊಂದು ವಾಹನ ಬೇಕಾಗುತ್ತದೆ. ಇದಕ್ಕಾಗಿ ಸಾಮಾನ್ಯವಾಗಿ ಉಪಯೋಗಿಸುವ ವಾಹನ ನಿಕ್ಕೆಲ ತೈಲಗಳಲ್ಲಿ ನಿಕ್ಕಲ್ಲಿನ ಅಂಶಗಳು, ಕಾಣಸಿಕ್ಕಿವೆ. ಈಗ ನಿಕ್ಕಲ್ ಲೋಹ ಮನುಷ್ಯ ದೇಹಕ್ಕೆ ಅವಶ್ಯವಾದ ಧಾತುವಲ್ಲ. ಆದರಿಂದ ಅತಿ ಸೂಕ್ಷ್ಮ ಪ್ರಮಾಣದಲ್ಲಾದರೂ ಅದನ್ನು ಬಳಸುತ್ತ ಹೋಗುವದರಿಂದ ಕೊನೆಗೆ ಅದು ವಿಷವಾಗಿ ಪರಿಣಮಿಸಬಹುದು. ಕೂನೂರಿನಲ್ಲಿರುವ ಪೌಷ್ಟಿಕತಾ ಸಂಶೋಧನ ಸಂಸ್ಥೆಯ ನಿರ್ದೇಶಕರಾದ ಡಾ. ವಿ. ಎನ್. ಪಟವರ್ಧನರು ಕಳೆದ ತಿಂಗಳು ಹಿಂದೀ ವಿಜ್ಞಾನ ಕಾಂಗ್ರೆಸ್ ಸಭೆಯಲ್ಲಿ, ವನಸ್ಪತಿಯ ಉಪಯೋಗದಿಂದ ಪ್ರಾಣಿಗಳ ಪ್ರಜೋತ್ಪಾದನ ಶಕ್ತಿಯ ಮೇಲೆ ದುಷ್ಪರಿಣಾಮವಾಗುವದೆಂದು ತಮ್ಮ ಸಂಶೋಧನಗಳಿಂದ ಕಂಡು ಬಂದಿರುವದಾಗಿ ತಿಳಿಸಿದ್ದಾರೆ.

ದೇಶದ ಬೇರೆ ಬೇರೆ ಭಾಗಗಳಲ್ಲಿ ಜನರಿಗೆ ಬೇರೆ ಬೇರೆ ಎಣ್ಣೆಗಳು ರೂಢಿಬಿದ್ದಿವೆ—ಸಾಸಿವೆ ಎಣ್ಣೆ, ಎಳ್ಳೆಣ್ಣೆ, ಕೊಬ್ಬರಿ ಎಣ್ಣೆ ಇತ್ಯಾದಿ. ಆಯುರ್ವೇದ ಸಂಪ್ರದಾಯಕ್ಕನುಸಾರವಾಗಿ ಎಲ್ಲ ಎಣ್ಣೆಗಳೂ ಮಾನವ ಶರೀರಕ್ಕೆ ಸಮಾನ ಹಿತವನ್ನು ಮಾಡುವದಿಲ್ಲ. ಒಂದೊಂದು ಎಣ್ಣೆಯ ಗುಣ ಒಂದೊಂದು ತೆರ. ಉದಾಹರಣೆಗಾಗಿ ಬದಾಮಿ ಎಣ್ಣೆ ಬುದ್ಧಿಗೂ ದೇಹಕ್ಕೂ ಪುಷ್ಟಿಕರವೆಂದು ಹೇಳಲಾಗಿದೆ. ಆದರೆ ಸೇಂಗಾ ಎಣ್ಣೆಯಲ್ಲಿ ಕೊಬ್ಬಿನ ಅಂಶವಿದ್ದರೂ ಅದು ಬುದ್ಧಿಗೆ ಹಾನಿಕರವೆಂದು ಭಾವಿಸಲ್ಪಟ್ಟಿದೆ. ಈ ದೃಷ್ಟಿಯಲ್ಲಿ ಸೇಂಗಾ ಎಣ್ಣೆಗಿಂತ ಬಿಳಿ ಸಾಸಿವೆ ಎಣ್ಣೆ, ಎಳ್ಳೆಣ್ಣೆ, ಕೊಬ್ಬರಿ ಎಣ್ಣೆಗಳು ಎಷ್ಟೋ ಲೇಸು. ವನಸ್ಪತಿ ತುಪ್ಪದ ಕಾರಖಾನೆಗಳು ಹೆಚ್ಚಾಗಿ ಉಪಯೋಗಿಸುವದು ಸೇಂಗಾ ಮತ್ತು ಹತ್ತಿಕಾಳಿನ ಎಣ್ಣೆಗಳನ್ನು. ಇವೆರಡೂ ನಿಕೃಷ್ಟ ಎಣ್ಣೆಗಳು. ಆದುದರಿಂದ ವನಸ್ಪತಿ ತುಪ್ಪವನ್ನು ಕೊಬ್ಬಿಗಾಗಿ ಸಾದಾ ಎಣ್ಣೆಯ ಸ್ಥಾನದಲ್ಲಿ ಉಪಯೋಗ ಮಾಡುವೆವೆಂದರೆ ಕೂಡ ಉತ್ತಮ ಎಣ್ಣೆಗಳಲ್ಲಿದ್ದ ಗುಣವೂ ಇದರಲ್ಲಿಲ್ಲ. ಗಿರಾಕಿಗಳಿಗೆ ಶುದ್ಧ ಆಹಾರ ವಸ್ತುಗಳನ್ನೇ ಒದಗಿಸುವಗೋಸುಗ ಒಂದು ಕಾಯದೆ ಮಾಡಿ, ಅದರಲ್ಲಿ ವನಸ್ಪತಿ ತುಪ್ಪ ಮಾಡುವವರು ತಮ್ಮ ಡಬ್ಬಿಗಳ ಮೇಲಿನ ಪಟ್ಟಿಯಲ್ಲಿ ಅದರೊಳಗಿರುವ ವಸ್ತುವಿನಲ್ಲಿರುವ ವಿವಿಧ ಪದಾರ್ಥಾಂಶಗಳನ್ನು—ಜೀವ ಸತ್ವದ ಮೂಲ ಸಹಿತ—ಸ್ಪಷ್ಟವಾಗಿ ಉಲ್ಲೇಖಿಸಬೇಕೆಂದು ವಿಧಿಸುವದು ಅವಶ್ಯ.

ಸ್ಥಿತಿಗತಿ ಹೀಗಿರುವಾಗ ಸಾಬೂನು ಮಾಡುವದಕ್ಕೂ ಇತರ ಉದ್ಯೋಗಿಕ ಕಾರ್ಯಗಳಿಗೂ ಅನುಕೂಲ ಸ್ವರೂಪದಲ್ಲಿ ಎಣ್ಣೆಗಳನ್ನು ಒದಗಿಸುವದಕ್ಕಲ್ಲದೆ ಬೇರಾವದೇ ಕಾರಣಕ್ಕಾಗಿ ವನಸ್ಪತಿ ತುಪ್ಪವನ್ನು ಮಾಡಬೇಕಾದ ಅವಶ್ಯಕತೆಯೇನಿದೆಯೋ ತಿಳಿಯುವದಿಲ್ಲ. ಸದ್ಯಕ್ಕಂತೂ ಗಾಣದಿಂದ ತೆಗೆದ ವನಸ್ಪತಿ ಎಣ್ಣೆಗಳು ವನಸ್ಪತಿ ತುಪ್ಪಕ್ಕಿಂತ ಹೆಚ್ಚು ಜೀರ್ಣಕರವೂ ಶುದ್ಧವೂ ಇರುತ್ತವೆ. ನಿಜವಾದ ತುಪ್ಪಕ್ಕಂತೂ ಇದನ್ನು ಯಾವ ರೀತಿಯೂ ಹೋಲಿಸಲಾಗಲ್ಲ. ಆದರೂ ನಮ್ಮ ಜನತೆಯ ಒಂದು ಅಲ್ಪಾಂಶದ, ಮುಖ್ಯವಾಗಿ ನಗರವಾಸಿಗಳ ಚಪಲದಿಂದ ಲಾಭ ಪಡೆಯಲು ಬಂಡವಲಗಾರರು ವಿದೇಶಗಳಿಂದ ತರಿಸಿದ ಯಂತ್ರ ಸಾಮಗ್ರಿಗಳ ಮೇಲೆ ನಾಲ್ಕೈದು ಲಕ್ಷ ರೂಪಾಯಿಗಳನ್ನು ತೊಡಗಿಸಲು ಸಿದ್ಧರಾಗಿದ್ದಾರೆ.

ಕೇಂದ್ರ ಸರಕಾರದವರು ಸುಮಾರು 26 ಹೊಸ ಕಾರಖಾನೆಗಳನ್ನು ಮುಖ್ಯವಾಗಿ ಮದ್ರಾಸ ಮತ್ತು ಮುಂಬಯಿ ಪ್ರಾಂತಗಳಲ್ಲಿ ಸ್ಥಾಪಿಸಲು ಅನುಮತಿ ಕೊಟ್ಟಿದ್ದಾರೆಂದು ತಿಳಿಯಬಂದಿದೆ. ಇದು ಜನತೆಯ ಹಿತವನ್ನು ದುರ್ಲಕ್ಷಿಸಿ ಶೋಷಕರಿಗೆ ಕೇಂದ್ರ ಸರಕಾರದವರು ತೋರಿಸುತ್ತಿರುವ ಸೌಹಾರ್ದವೋ ಅಥವಾ ಉದ್ಯೋಗೀಕರಣದ ಹುಚ್ಚು ಹುಮ್ಮಸದಲ್ಲಿ ಅವರು ಹಾರುತಿರುವರೋ ಇಲ್ಲವೆ, ಇದು ಬ್ರಿಟಿಷರ "ಹಿಂದುಸ್ಥಾನವನ್ನು ಸೂರೆಮಾಡಿರಿ" ಧೋರಣೆಯ ಮುನ್ನಡೆಯೋ? ಏಕೆಂದರೆ 27 ಕಾರಖಾನೆಗಳ ಸ್ಥಾಪನೆಯೆಂದರೆ ಗ್ರೇಟ್ ಬ್ರಿಟನ್ನಿಗೆ ಒಂದು ಕೋಟಿ ಮಿಕ್ಕಿದಷ್ಟು ವ್ಯಾಪಾರ ಸಿಕ್ಕಂತಾಗುತ್ತದೆ.

ಜನಹಿತವನ್ನು ಇಚ್ಛಿಸುವ ಸರಕಾರ ಜನತೆಯ ಆರೋಗ್ಯಕ್ಕೂ ಭಾವನೆಗಳಿಗೂ ವ್ಯತಿರಿಕ್ತವಾದ ಈ ಬಗೆಯ ಶೋಷಣವನ್ನು ಪ್ರತಿಬಂಧಿಸಲು ಹಿಂದೆಮುಂದೆ ನೋಡಬಾರದೆಂದು ನಾವು ಸೂಚಿಸಬಯಸುತ್ತೇವೆ. ಉದ್ಯೋಗೀಕರಣದ ಹೆಸರಲ್ಲಿ ದೇಶವನ್ನು ಹಾಳುಗೆಡಹಬಾರದು. ಅದರಲ್ಲಿಯೂ ಈಗಾಗಲೆ ಪುಷ್ಟಿರಾಹಿತ್ಯದಿಂದ ಹಾಳಾದ ಜನರ ಸ್ವಾಸ್ಥ್ಯವನ್ನು ಇನ್ನಷ್ಟು ಕೆಡಿಸಬಾರದು. ವನಸ್ಪತಿ ತುಪ್ಪದ ಉತ್ಪಾದಕರು ದೇಶದ್ರೋಹಿಗಳೆಂದು ಜನಮತವನ್ನು ರೂಪಿಸತಕ್ಕದ್ದು. ಜನಮತದ ಪ್ರತಿನಿಧಿಯಾಗಿ ಸರಕಾರ ಇರುವದಾದರೆ ಜನತೆಯನ್ನು ಈ ಬಗೆಯಾಗಿ ವಂಚಿಸುವದನ್ನು ಅದು ತಡೆಯಬೇಕು.

ಜೆ. ಪಿ. ಕುಮಾರಪ್ಪ.

ಸಂಖ್ಯೆಯ ಸುದ್ದಿ ವಿಚಾರ

ಜಗತ್ತಿನಲ್ಲಿ ಪ್ರತಿವರ್ಷ 2 ಕೋಟಿ 70 ಲಕ್ಷ ಔನ್ಸುಗಳಷ್ಟು ಬಂಗಾರವು ಗಣಿಗಳಿಂದ ತೆಗೆಯಲ್ಪಡುತ್ತದೆ.

★

ಪೆಸಿಫಿಕ್ ಸಾಗರವು ಜಗತ್ತಿನ ಅತೀ ದೊಡ್ಡ ನೀರಿನ ರಾಶಿ. ಅದರ ವಿಸ್ತೀರ್ಣ 6 ಕೋಟಿ, 39 ಲಕ್ಷದ 86 ಸಾವಿರ ಚದರ ಮೈಲುಗಳಷ್ಟಿದೆ.

★

ಸುವೇಜ್ ಕಾಲುವೆಯ ಉದ್ದ 101 ಮೈಲು. ಅದರ ಅತೀ ಕಮ್ಮಿ ಅಗಲವೆಂದರೆ 196 ಅಡಿ 10 ಇಂಚುಗಳಷ್ಟು.

★

ಒಕ್ಸಫರ್ಡ ವಿಶ್ವವಿದ್ಯಾಲಯಕ್ಕೆ 22 ಕೊಲೇಜುಗಳು ಸೇರಿಸಲ್ಪಟ್ಟಿವೆ. ಅದಕ್ಕೆ ನೂರು ಸ್ವಂತ ಸಭಾಭವನಗಳಿಗೆ. ಕೇಂಬ್ರಿಜ್ ವಿಶ್ವವಿದ್ಯಾಲಯಕ್ಕೆ 17 ಕೋಲೇಜುಗಳಿದ್ದು 1 ಸಭಾಭವನವಿದೆ.

★

ಕಳೆದ ಯುದ್ಧದಲ್ಲಿ ಇಂಗ್ಲೆಂಡಿನ ಶೇಕಡಾ 10ರಷ್ಟು ಕಟ್ಟಡಗಳು ಮಾತ್ರ ಬೊಂಬು ಧಕ್ಕೆಯಿಂದ ಸುರಕ್ಷಿತವಾಗಿವೆ. ಶೇಕಡಾ ಹತ್ತರಷ್ಟು ಸಂಪೂರ್ಣ ನಾಶವಾಗಿವೆ.

★

ಬೆಂಕಿ ಅನಾಹುತಗಳನ್ನು ತಪ್ಪಿಸುವ ವಿಧಾನಗಳನ್ನು ಕಂಡು ಹಿಡಿಯುವ ಪ್ರಯೋಗ ಶಾಲೆಯೊಂದು ಲಂಡನಿನಲ್ಲಿ ಸ್ಥಾಪಿಸಲ್ಪಟ್ಟಿದೆ. ಇದರ ಖರ್ಚು ವಾರಕ್ಕೆ 1 ಸಾವಿರ ಪವನು. ಲಂಡನ್ ನಗರದಲ್ಲಿ ವರ್ಷವೊಂದಕ್ಕೆ 1500 ಜೀವಗಳೂ, 1 ಕೋಟಿ ಪವನುಗಳಷ್ಟು ಸೊತ್ತುಗಳೂ ಅಗ್ನಿಗಾಹುತಿಯಾಗುತ್ತಿವೆ.

KANARA COMMERCIAL BANK LTD.

PUTTUR.

H. O. Puttur.] Estd. 1920 [Branch: Vittal.

All kinds of Banking Business transacted.

Deposits:- Current, Savings, Cumulative Deposits are accepted.

Fixed Deposits for periods of 3 months and above up to 24 months are accepted.

SEASON DEPOSITS

ARE Accepted up to 31-5 1947 Terms on application.

ಮೃದುವಾದ ಚರ್ಮವನ್ನು ಬಹು ಜಾಗ್ರತೆಯಿಂದ ಕಾಪಾಡಬೇಕು

ಕುಟಿಕೂರಾ ಸಾಬೂನು ಮಗುವಿನ ಮೃದುಚರ್ಮವನ್ನು ರಕ್ಷಿಸಲಿ!

ಕುಟಿಕೂರಾ ಸೋಪು

CUTICURA SOAP.

ಜಿಲ್ಲಾ ಪರಿಚಯ

ಸಂಘದ ಸಭೆ: ನಿನ್ನೆ ಆರ್. ಎಸ್. ಎಸ್. ಸಂಘದವರ ಪ್ರದರ್ಶನ ಕೂಟವೊಂದು ಕೆನರಾ ಹ್ಯಾಸ್ಕೂಲಿನ ಅಂಗಣದಲ್ಲಿ ನೆರೆದಿತ್ತು. ಸಾಯಂ ಕಾಲದಲ್ಲಿ ನಗರದ ಬೀದಿಗಳಿಂದ ಸಂಘದ ಸ್ವಯಂ ಸೇವಕರ ದಂಡು ಮೆರವಣಿಗೆಯು ರಥ ಬೀದಿ, ಹಂಪನಕಟ್ಟೆಯಿಂದಾಗಿ ಸಭಾಸ್ಥಾನಕ್ಕೆ ಮುಟ್ಟಿತು. ಅಂದು ಅತಿಥಿಗಳಾಗಿ ಬರಲಿದ್ದ ಸದ್ರಿ ಸಂಘದ ಗುರುಜಿಗಳೆನಿಸುವ ಶ್ರೀ ಗೊಲ್ವಾಲಕರರು ಸಂದರ್ಭವಶಾತ್ ಬಂದಿರಲಿಲ್ಲವಾದುದರಿಂದ ಸಂಚಾಲಕರಲ್ಲೊಬ್ಬರಾದ ಶ್ರೀ ಯಾದವರಾವ್ ಜೋಶಿಯವರೂ, ಶ್ರೀ ಸದಾಶಿವ ರಾಯರೂ ಸ್ವಯಂ ಸೇವಕರನ್ನುದ್ದೇಶಿಸಿ ಅವರ ಧ್ಯೇಯ, ಕರ್ತವ್ಯಗಳ ಕುರಿತು ಭಾಷಣ ಮಾಡಿದರು. ಪರಕೀಯ ಅತಿಕ್ರಮಣಗಳಿಂದ ನಮ್ಮ ಸಂಸ್ಕೃತಿಗೆ ಹೇಗೆ ಗಂಡಾಂತರವೊದಗಿದೆ ಎಂದೂ ಅದನ್ನು ರಕ್ಷಿಸುವುದಕ್ಕಾಗಿ ಸಿದ್ಧರಿರಬೇಕೆಂಬುದೂ ಅವರ ಸಂದೇಶದ ಮುಖ್ಯ ಮುದ್ದೆಗಳು.

ರಥೋತ್ಸವ: ಸ್ಥಳೀಯ ಶ್ರೀ ಗೋಕರ್ಣನಾಥ ದೇವಸ್ಥಾನದ ಶಿವರಾತ್ರಿ ಸಂಬಂಧದ ರಥೋತ್ಸವಗಳು ಇಂದು ಬೆಳಗ್ಗೆ ಅವಭೃತ ಸ್ನಾನದೊಂದಿಗೆ ಕೊನೆಗೊಂಡವು. ಈ ಉತ್ಸವದ ಪ್ರಾರಂಭ ದಿನದಂದು ಸದ್ರಿ ದೇವಸ್ಥಾನಕ್ಕೆ ಇಲ್ಲಿಯ ಮೋಡರ್ನ್ ಬೇಕರಿಯ ಮಾಲಕರು ದಾನವಾಗಿ ಕೊಟ್ಟ ವಿದ್ಯುದ್ದೀಪ ಅಲಂಕಾರದ ಏರ್ಪಾಡುಗಳನ್ನು ಜಿಲ್ಲಾ ಕಲೆಕ್ಟರರ ಪರ್ಸನಲ್ ಅಸಿಸ್ಟಾಂಟರಾದ ಜ। ಮಹಮ್ಮದ್‌ರು ಉದ್ಘಾಟಿಸುತ್ತ, ಕೋಮು ಕೋಮುಗಳಲ್ಲಿ ಜಾತಿ ಧರ್ಮಗಳಲ್ಲಿರಬೇಕಾದ ಪರಸ್ಪರ ತಾಳ್ಮೆ, ಸಹಕಾರ ಮತ್ತು ತಿಳುವಳಿಕೆಗಳನ್ನು ಒತ್ತಿ ಹೇಳಿ ಐಕ್ಯತೆಯನ್ನು ಹಾರೈಸಿದರು.

ಕೊಲೇಜ್ ವಿದ್ಯಾರ್ಥಿಗಳ ಕೂಟ: ಸ್ಥಳೀಯ ಸೈಂಟ್ ಎಲೋಸಿಯಸ್ ಕೊಲೇಜಿನ ಕೊಲೇಜ್ ವಿದ್ಯಾರ್ಥಿ ಸಂಘದವರ ವಾರ್ಷಿಕ ಸಮಾರಂಭವು ಶ್ರೀಮಾನ್ ಜಿನರಾಜ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿದವು. ಲಘು ಉಪಹಾರದ ನಂತರ ವರದಿ ವಾಚನ ಸಭಿಕರ ಭಾಷಣಗಳಾದ ಮೇಲೆ ಅಧ್ಯಕ್ಷರು ಕನ್ನಡದಲ್ಲಿ ಶಿಕ್ಷಣಧ್ಯೇಯ, ಪದವೀಧರರ ಕರ್ತವ್ಯ ಅವರು ಕನ್ನಡ ನಾಡಿಗಾಗಿ ಅದರ ಐಕ್ಯತೆಗಾಗಿ ಹೇಗೆ ಸಾಧಿಸಬಹುದೆಂದು ಬೋಧಪರ ಭಾಷಣ ಕೊಟ್ಟರು. ಕೊನೆಯಲ್ಲಿ ಮನರಂಜಕವಾದ ವಿವಿಧ ವಿನೋದಾವಳಿಗಳಿದ್ದವು.

ಹವಾಮಾನ: ಕಳೆದ ವಾರದಲ್ಲಿ ಅಲ್ಪಸ್ವಲ್ಪ ಮಳೆ ಬಿದ್ದಿದ್ದು ಕೆಲವು ಮೋಡದ ಹಗಲುಗಳೂ ಉಂಟಾಗಿದ್ದುವು. ಇದರಿಂದ ಸೆಕೆಯು ಇನ್ನಷ್ಟು ಅಧಿಕವಾದಂತೆ ಅನುಭವವಾಗುತ್ತದೆ. ಈಗೀಗ ಬಿಸಿಲೂ ವಿಪರೀತ ಬೀಳುತ್ತಿರುವುದು ಶಿವರಾತ್ರಿಯ ನಂತರವಂತೂ ಸೆಕೆಗಾಲವು ಪ್ರಾರಂಭವಾಯಿತೆನ್ನಬಹುದು.

ಸಿಟಿ ಸರ್ವಿಸ್: ನಗರ ಬಸ್ ಸೌಕರ್ಯವು ಇನ್ನಷ್ಟು ವಿಶಾಲಿಸಲ್ಪಟ್ಟಿದೆ. ಕೆಲವು ಸಮಯದ ಹಿಂದೆ ದುರ್ಗಾಪರಮೇಶ್ವರಿ ಸರ್ವಿಸಿನವರು ಜೆಪ್ಪು, ಕುಲಶೇಖರ ಲೈನಿಗೆ ತಮ್ಮ ವಾಹನಗಳನ್ನು ಚಲಾಯಿಸ ಹತ್ತಿದ ನಂತರ ಈಚೆಗೆ ಸಿ ಪಿ ಸಿ ಕಂಪೆನಿಯ ಬಸ್ಸುಗಳು ಉರ್ವದ ಕಡೆ ಓಡುತ್ತಿವೆ. ಸದ್ಯದಲ್ಲೇ ಶಂಕರ್ ವಿಟ್ಠಲ್ ಕಂಪೆನಿಯವುಗಳೂ ಆರಂಭವಾಗಬಹುದೆಂದು ಹೇಳಲಾಗಿದೆ.

ವಾಹನಗಳು ಹೆಚ್ಚು ಓಡಾಡುವ ಸ್ಥಳಗಳಲ್ಲಿ ಕೆಲವು ಕಡೆ ಮಾರ್ಗಗಳು ತುಂಬಾ ಇಕ್ಕಟ್ಟಿನವಾಗಿಯೂ, ಅಗಲ ಕಿರಿದಾಗಿಯೂ ಇವೆ. ಮತ್ತೆ ಬೀದಿ ಕಡೆಗಳಲ್ಲಿ ಕಣ್ಣು ಕಟ್ಟುವ ತಿರುಗು ~~ಮಾರ್ಗಗಳಿವೆ. ಇಂಥಾ ಕಡೆಗಳಲ್ಲಿ ಪೋಲೀಸ್~~ ಉಸ್ತುವಾರಿ ಮಾಡುವುದವಶ್ಯವಿದೆ. ಇಲ್ಲವೆ ಅಪಘಾತಗಳ ಸಂಭವ ಹೆಚ್ಚಬಹುದು.

ಬೆಲ್ಲ: ಇದರ ಮೇಲಿನ ಕಂಟ್ರೋಲ್ ತೆಗೆದು ಹಾಕಲಾಗಿದೆ. ಇದುವರೆಗೆ ವಶಪಡಿಸಿದ ಇಲ್ಲವೆ ಮಾರಬಾರದೆಂದು ನಿರ್ದೇಶಿಸಿದ ಸ್ಟಾಕನ್ನು ಆಗಲೇ ಕಂಟ್ರೋಲ್ ಬೆಲೆಯಲ್ಲಿ ಮಾರಲು ಅಂಗಡಿಗಳಿಗೆ ಕೊಡಲಾಗಿದೆ. ವ್ಯಾಪಾರಸ್ಥರು ಸಾರ್ವಜನಿಕಕ್ಕೆ ಈ ವಸ್ತುವನ್ನು ಪೂರೈಸಲು ಹೆಚ್ಚಿನ ಯತ್ನ ಮಾಡಬೇಕು.

ಎಣ್ಣೆ: ತೆಂಗಿನ ಎಣ್ಣೆ, ಕಾಯಿಗಳು ಕಂಟ್ರೋಲ್ ಆದಂದಿನಿಂದ ಸಿಕ್ಕುವುದು ದುರ್ಲಭವಾಗಿವೆ. ಬೆಲ್ಲಕ್ಕಿಂತಲೂ ಹೆಚ್ಚು ಅವಶ್ಯವೆನಿಸುವ ಈ ವಸ್ತುಗಳ ಕೊರತೆಯಿಂದ ಜನತೆ ಹೆಚ್ಚಿನ ಕಷ್ಟಕ್ಕೊಳಗಾಗುವುದು. ಆದುದರಿಂದ ರೇಶನ್ ಪ್ರದೇಶಗಳಲ್ಲಿ ಇವು ಯಾವುದಾದರೊಂದು ಏರ್ಪಾಡು ಮೂಲಕ ದೊರೆಯುವಂತೆ ಮಾಡುವುದು ಅತ್ಯಾವಶ್ಯಕ.

ಎಣ್ಣೆ ಮಿಲ್ಲುಗಳಿಗೆ ಕೊಬ್ಬರಿಯನ್ನು ಸರಬರಾಯಿ ಮಾಡಿ ಅಲ್ಲಿ ತಯಾರಾದ ಎಣ್ಣೆಯನ್ನು ರೇಶನ್ ಅಂಗಡಿಗಳಲ್ಲಿ ಕಾರ್ಡು ಮೂಲಕ ವಿತರಣೆ ಮಾಡಿದರೆ ಅನೇಕ ತೊಂದರೆಗಳು ತಪ್ಪಬಹುದು. ಕಾಯಿಗಳನ್ನು ತೂಕದ ಆಧಾರದಿಂದ ಮಾರಬಹುದು.

ವಂಚನೆ: ಯಾವನೋ "ರಾಜಕುಮಾರ"ನೆಂದು ನಟಿಸಿ ಮಂಗಳೂರಿಗೆ ಬಂದು ಇಲ್ಲಿಯ ಒಬ್ಬಿಬ್ಬರು ಪ್ರಸಿದ್ಧ ಜವುಳಿಯಂಗಡಿಯವರನ್ನು ಒಬ್ಬರು ಇತ್ತೀಚೆಗೆ ಕೆಲವು ಸಾವಿರ ರೂಪಾಯಿ ಮೌಲ್ಯದ ಜವುಳಿಗೆ ವಂಚಿಸಿದರೆಂದು ಸುದ್ದಿಯಿದೆ. ವಂಚಿಸಲ್ಪಟ್ಟ ಜವುಳಿ ಸಾಹುಕಾರರು ಕೊನೆಗೆ "ರಾಜಕುಮಾರರು" ತೆರಳಿದ ಊರಿಗೆ ಹೋಗಿ, ಅವರ "ಅರಮನೆ"ಗೂ ಪ್ರವೇಶಿಸಿ ತಮಗೆ ಬೇಕಾದ ಹಣಕ್ಕಾಗಿ ಪೀಡಾಡಬೇಕಾಯಿತೆಂದೂ "ರಾಜಕುಮಾರ"ರ ಮೇಲೆ ಕೋರ್ಟು ಮೂಲಕವೇ ಮುಂದುವರಿಯಬೇಕಾಗಿದೆಯೆಂದೂ ಕೇಳಿಬರುತ್ತದೆ.

ದ. ಕ. ವಾಣಿಜ್ಯ ನೌಕರರ ಸಂಘ: ಇದರ ಮಹಾಸಭೆಯು ತಾ 3-4-4ಕ್ಕೆ ಜರಗುವುದು. ಈ ಸಭೆಯಲ್ಲಿ ಮದ್ರಾಸು ಸರಕಾರದ Shop Assistant Bill (ವಾಣಿಜ್ಯ ನೌಕರರ ಮಸೂದೆಯ) ಕುರಿತು ಚರ್ಚೆ ನಡೆಯಲಿರುವುದು. ಸಂಘದ ಮುಂದಿನ ಧೋರಣೆಯನ್ನೂ ವಾಣಿಜ್ಯ ನೌಕರರ ಬೇಕುಬೇಕುಗಳ ವಿಚಾರವನ್ನೂ ಆಲೋಚಿಸಲಾಗುವುದು ಎಂದು ಪ್ರಧಾನ ಕಾರ್ಯದರ್ಶಿಗಳು ತಿಳಿಸುತ್ತಾರೆ (ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಮದರಾಸು ಸರಕಾರದ ಸಾರ್ವಜನಿಕ ಭದ್ರತಾ ಮಸೂದೆಯನ್ನು ವಿರೋಧಿಸಿ ಶ್ರೀ ಆರ್ ... ಜಜೂರರು ತಂದ ಠರಾವು ನಾಲ್ಕು ಮತಗಳ ಅನುಕೂಲ ಹಾಗು ನಾಲ್ಕು ಮತಗಳ ವಿರೋಧವಾಗಿ ಬಿದ್ದು, ಅಧ್ಯಕ್ಷರು ತಮ್ಮ ಪಿಕೇಸ್ಟ್ ಮತವನ್ನು ವಿರೋಧವಾಗಿತ್ತ ದರಿಂದ ಠರಾವು ಬಿದ್ದು ಹೋಯಿತು.)

ದ. ಕ. ಕಾಂಗ್ರೆಸ್ ಕಮಿಟಿ ಸಭೆ: ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮಹಾಸಭೆಯು ದಿನಾಂಕ 8-2-47ರಂದು ಮಧ್ಯಾಹ್ನ 3 ಗಂಟೆಗೆ ಶ್ರೀ ಎಚ್ ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರುಗಿತು.

ದೀರ್ಘ ಚರ್ಚೆಯನಂತರ ಒಲ್ಲ ಅಧೀನ ಸರ್ಕಲ್ ಕಮಿಟಿಗಳು ಚುನಾವಣೆಯ ಕಳಹದಿಯಲ್ಲೇ ರಚಿಸಲ್ಪಡಬೇಕೆಂಬ ನಿರ್ಣಯವು ಸ್ವೀಕರಿಸಲ್ಪಟ್ಟು ಸಭೆಯು ಮರುದಿನಕ್ಕೆ ಮುಂದುವರಿಯಿತು.

ಮರುದಿನ ಶ್ರೀ ಯು ಶ್ರೀನಿವಾಸ ಮಲ್ಯರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು. ಸರ್ಕಲ್ ಕಾಂಗ್ರೆಸ್ ಕಮಿಟಿಗಳ ಸ್ಥಾನದಲ್ಲಿ ತಾಲೂಕು ಕಾಂಗ್ರೆಸ್ ಕಮಿಟಿಗಳಾಗಬೇಕೆಂಬ ಗೊತ್ತುವಳಿಯನ್ನು ಸಭೆಯು ನಿರಾಕರಿಸಿತು.

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ ಕಾರ್ಯಸಮಿತಿ ಸಭೆ ದಿನಾಂಕ 8ಕ್ಕೆ ಸೇರಿ 10ಕ್ಕೆ ಮುಂದುವರಿದಿತ್ತು. ಬಳಿಕ ಪುನಃ ದಿನಾಂಕ 10ರಲ್ಲಿ ಶ್ರೀಯು ಶ್ರೀನಿವಾಸ ಮಲ್ಯರ ಅಧ್ಯಕ್ಷತೆಯಲ್ಲಿ ~~ಸೇರಿ ಕೆಳಗಿನ ಆಶಯದ ನಿರ್ಣಯಗಳನ್ನಂಗೀ~~ಕರಿಸಿತು.

1 ಕೆ ಪಿ ಸಿ ಸಿ ಕಾರ್ಯದರ್ಶಿಗಳಿಂದ ಬಂದ ಪತ್ರವನ್ನು ಸಭೆಯಲ್ಲಿ ಓದಲಾಯಿತು. ಕೆಲವೊಂದು ವಿಷಯಗಳ ಸ್ಪಷ್ಟೀಕರಣ ಕೇಳುವಂತೆಯೂ ತಕ್ಕ ಉತ್ತರ ಕೊಡುವಂತೆಯೂ ಪ್ರಧಾನ ಕಾರ್ಯದರ್ಶಿಗಳಿಗೆ ಅಧಿಕಾರ ಕೊಡುವುದು. 2 ಶ್ರೀ ಸತ್ಯೇಂದ್ರ ನಾಯಕರನ್ನು ಸೇವಾದಲದ ಜಿಲ್ಲಾ ಸಂಘಟಕರೆಂದು ನೇಮಿಸಬೇಕು. ಸೇವಾದಲದ ಬಗ್ಗೆ ತಾತ್ಕಾಲಿಕ ಸಂಘಟನೆಯೊಂದನ್ನು ರಚಿಸಬೇಕು. 3 ಸರ್ಕಲ್ ಕಾಂಗ್ರೆಸ ಕಮಿಟಿಯ ಚುನಾವಣೆ ಮಾರ್ಚ 17ರೊಳಗೆ ~~ನಡೆಯಬೇಕು ಎಂದು ಗೊತ್ತಾಗಿ ಚುನಾವಣೆ~~ ಅಧಿಕಾರಿಗಳನ್ನು ನೇಮಿಸಲಾಯಿತು. ಬಳಿಕ ಹಂಚಿನ ಕೆಲಸಗಾರರಿಗೆ ಸಹಾನುಭೂತಿ ತೋರಿಸುವ ಗೊತ್ತುವಳಿಯಾಗಿ ಹೊಟೆಲ ಕೆಲಸಗಾರರ ಹಿತರಕ್ಷಣೆ ವಿಚಾರಿಸಲು ಒಂದು ಸಮಿತಿ ನೇಮಿಸಲಾಯಿತು.

ಗುತ್ತಿಗೆಗಳ ಏಲಂ ನಿಂತಿತು: ಮಂಗಳೂರಿನ ಕೆಲವು ಶೇಂದಿ ಗುತ್ತಿಗೆಗಳ ಏಲಂ ತಾ 10ಕ್ಕೆ ಇಟ್ಟಿದ್ದರು. ಏಲಮಿಗೆ ನಿಲ್ಲುವರೆ ಹಳ್ಳಿಯಿಂದ ಜನರು ಬಂದಿದ್ದರು. ಆದರೆ ಸರಕಾರದ ಆಜ್ಞೆಯಂತೆ ಈ ಗುತ್ತಿಗೆಗಳ ಏಲಮನ್ನು ನಿಲ್ಲಿಸಲಾಗಿದೆ ಎಂದು ಕೇಳಿಬರುತ್ತದೆ.

ಪುತ್ತೂರು: ಕಳೆದ ತಾ 10ನೇ ಸೋಮವಾರ ದಿನ ಇಲ್ಲಿಯ ಸಂತೆಗೆ ಹಳ್ಳಿಗಳಿಂದ ಬಂದಿದ್ದ ತೆಂಗಿನಕಾಯಿಗಳನ್ನು ಊರವರ ಪೈಕಿ ಕೆಲವರು ತೆಂಗಿನ ಕಾಯಿಗೆ ಕಂಟ್ರೋಲ್ ಆಗಿದೆ ಎಂಬ ನೆಪ ಮಾಡಿ ಒಂದಕ್ಕೆ 2ಆಣೆ ದರ ಹಿಡಿದು ಹಣ ಕೊಟ್ಟು ತೆಂಗಿನ ಕಾಯಿಗಳನ್ನು ಬಲಾತ್ಕಾರದಿಂದ ಎಂಬಂತೆ ಕೊಂಡುಹೋಗಿರುವುದಾಗಿಯೂ, ನಂತರ ಪೋಲೀಸರು ಒಂದು ಗಲಾಟೆ ನಿಲ್ಲಿಸಬೇಕಾಗಿ, ಬಂತೆಂತಲೂ ತಿಳಿದು ಬಂದಿದೆ. ಈ ರೀತಿಮಾಡುದುದು ಅನುಚಿತ ಕೆಲಸವಾಗಿದೆ. ಈ ಮೊದಲು ಕೂಡಾ ಆ ರೀತಿಯಾಗಿ ನಂತರದ ಸಂತೆಗಳಿಗೆ ತೆಂಗಿನ ಕಾಯಿಯೇ ಬಂದಿರಲಿಲ್ಲ. ಇದು ಅದರ ಪುನರಾವರ್ತನೆ.

ಇತ್ತೀಚೆಗಿನ ಜನತಾ ಸರಕಾರವು ಪುನರ್ರಚಿಸಿದ ಮಾಹೆಯಾನ ಸಂಬಳ ಕೂಡಾ ಎಷ್ಟಕ್ಕೂ ಸಾಲದೆಂದೂ ಕೊನೆಯ ಅಸೆ ಕೂಡಾ ನಿರಾಶೆಯಾಗಿ ಪರಿಗಣಿಸಿತೆಂದೂ ಸೂಚಿಸಿ ಸರಕಾರದ ವರ್ತನೆಯಿಂದಾಗಿ ಅಧ್ಯಾಪಕ ವೃಂದದಲ್ಲಿ ಉಂಟಾದ ಅತೃಪ್ತಿಯನ್ನು ಜನತೆಗೆ ವಿದಿತವಾಗುವಂತೆ ತಿಳಿಯ ಪಡಿಸುವರೆ ದಕ್ಷಿಣ ಭಾರತ ಅಧ್ಯಾಪಕ ಸಂಘದ ಕಾರ್ಯಕಾರೀ ಸಮಿತಿಯ ಕರೆಗೆ ಇದೇ ತಿಂಗಳ ತಾ 15ನೇ ಶನಿವಾರ ಅಖಿಲ ಅಧ್ಯಾಪಕರ ಭವಿತವ್ಯದ ಚಿಂತನಾ ದಿನವಾಗಿ ಆಚರಿಸಿ ಸಾರ್ವತ್ರಿಕ ಸಾರ್ವಜನಿಕ ಸಭೆ ಜರಗಿಸುವ ಏರ್ಪಾಡಿನಲ್ಲಿರುವರಾಗಿಯೂ ಈ ಸಂಬಂಧ ಪುತ್ತೂರಲ್ಲಿಯೂ ಅಂತಹ ಸಭೆ ಏರ್ಪಡಿಸಿದೆಯಾಗಿಯೂ ಗೊತ್ತಾಗಿದೆ.

ಉಡುಪಿ: ಲೋಕ ದಿಸ್ವ ಪರಿಸಂಚಾರ್ಥವಾಗಿ ಸನಾತನ ಧರ್ಮದ ವೇಸ್ಟ್ರೀಯ ಪರ್ಯಾಯ ಶೀರೂರ ಲಕ್ಷ್ಮೀಂದ ತೀರ್ಥ ಶ್ರೀಪಾದಂಗಳವರು ... ದನಂತೇಶ್ವರಸ್ವಾಮಿ ಸನ್ನಿಧಿಯಲ್ಲಿ ಇತ್ತೀಚೆಗೆ ಸೋಮಯಾಗವನ್ನು ಯಶಸ್ವಿಯಾಗಿ ಪೂರ್ತಿಗೊಳಿಸಿದರು.

ಮಂಗಲಪಾಡಿ: ಇದೇ ತಿಂಗಳ 3, 8ನೇ ಗುರುವಾರ ಇಲ್ಲಿಯ ಬೋರ್ಡ ಹಾಯರ್ ಎಲಿಮೆಂಟರಿ ಶಾಲೆಯ ಸಂಘ ಮತ್ತು ಮಂಗಲ್ಪಾಡಿಯ ಪಿ. ಎಲ್. ಗ್ರೀಸ್ ಹೈಸ್ಕೂಲಿನ ತಾರ್ಕಿಕ ಸಂಘ ಈ ಎರಡು ಸಂಘಗಳ ಒಂದು ಸಭೆಯು ಶ್ರೀ ಯು ಉಮಾನಾಥರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆಯಾದ ನಂತರ ಸಂಘದ ಅಧ್ಯಕ್ಷರಾದ ಶ್ರೀ ಕೆ ಎಸ್ ಪೈಗಳು ಅತಿಥಿಗಳನ್ನು ಸ್ವಾಗತಿಸಿದರು. "ರೇಶನ್ ಕಾಲದಲ್ಲಿ ಹಳ್ಳಿಯ ವಾಸಕ್ಕಿಂತ ಪಟ್ಟಣ ವಾಸವೇ ಮೇಲು" ಎಂಬ ಠರಾವಿನ ಮೇಲೆ ಚರ್ಚೆ ನಡೆದು ಠರಾವು ಬಿದ್ದು ಹೋಯಿತು.

ವಾರ್ಷಿಕೋತ್ಸವ: ಶ್ರೀ ರಾಮಕೃಷ್ಣ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿ ಭವನಗಳ ಸಂಯುಕ್ತ ವಾರ್ಷಿಕೋತ್ಸವವು ತಾ 8ರಲ್ಲಿ ಡಾ। ಕೇಶವ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ~~ಸಭಾರಂಭದಲ್ಲಿ ಅಧ್ಯಕ್ಷರಿಂದ ಸೂಚಿಸಲಾದ~~ ಶ್ರೀ ಕೆ ಡಿ ಎಂ ಭಂಡಾರಿಗಳ ನಿಧನಕ್ಕಾಗಿ ದುಃಖಸೂಚಕ ಠರಾವು ಸ್ವೀಕೃತವಾಯಿತು. ಭವನದ ಮೇಲ್ವಿಚಾರಕರಾದ ಶ್ರೀ ಇವರ್ಾದಿ ಆನಂದ ಶೆಟ್ಟರು ಸ್ವಾಗತ ಭಾಷಣ ಮಾಡಿದರು. ಕಾರ್ಯದರ್ಶಿಗಳಾದ ಶ್ರೀ ನರಸಿಂಹ ಶೆಟ್ಟಿ, ಶ್ರೀ ನಾರಾಯಣ ಶೆಟ್ಟಿ, ಶ್ರೀಮತಿ ಮಾಲತಿ ಮತ್ತು ಶ್ರೀಮತಿ ರಾಜೀವಿ ಶೆಟ್ಟಿಯವರು ವರದಿಗಳನ್ನು ಓದಿದರು. ಡಾ। ನಾಗಪ್ಪ ಆಳ್ವರು ಶ್ರೀಯೋ ಭಾಷಣ ಮಾಡಿದರು. ಶ್ರೀ ಎ ಕಾಂತಪ್ಪ ಶೆಟ್ಟರ ಉತ್ತರದಿತ್ತರು. ಬಳಿಕ ಪಾರಿತೋಷ ವಿತರಣೆ, ಧನ್ಯವಾದ, ವಿವಿಧ ವಿನೋದ ಕಾಲಕ್ಷೇಪಗಳಾದುವು.

ವಾರ್ಷಿಕ ದಿನಾಚರಣೆ: ಸ್ಥಳೀಯ ಗವರ್ನಮೆಂಟ್ ಕಾಲೇಜಿನ 'ವೈಜ್ಞಾನಿಕ ಸಂಘ'ದ ವಾರ್ಷಿಕ ದಿನಾಚರಣೆಯು ಇದೇ ತಾ. 18ಕ್ಕೆ ಡಾ। ಪೀಟರ್, ಎಂ. ಎ., ಪಿ ಯಚ್. ಡಿ (ಪ್ರಿನ್ಸಿಪಾಲ್)ರ ಅಧ್ಯಕ್ಷತೆಯಲ್ಲಿ ನಡೆಯಿತು. ಡಾ। ಕೇಶವ ಪೈ ಎಂ ಡಿ., ಓ ಬಿ ಈ ಯವರೂ ಡಾ। ನಾಗಪ್ಪಾಳ್ವರೂ ಆಮಂತ್ರಿತರಿದ್ದರು. ಕಾರ್ಯದರ್ಶಿ ಶ್ರೀ। ಎಸ್ ಎಮ್ ಆರ್ ಶೇಟ್ ಅತಿಥಿಗಳಿಗೆ ಸ್ವಾಗತವಿತ್ತು, ವಾರ್ಷಿಕ ವರದಿಯನ್ನೋದಿದ ಅನಂತರ ಶ್ರೀ ಕೆ ನಾರಾಯಣನ್ (ವಿದ್ಯಾರ್ಥಿ) ಅವರು ಸ್ವಸ್ತಿವಾಚನವನ್ನು ಮಾಡಿದರು.

ಪಡುಬಿದರೆ: ಜಿಲ್ಲಾ ಬೋರ್ಡು ಅಧ್ಯಕ್ಷಪದವಿಯಿಂದ ನಿವೃತ್ತರಾದ ಶ್ರೀ ಆರೂರು ಲಕ್ಷ್ಮೀನಾರಾಯಣರಾವ್, ಬಿ ಎ, ಬಿ.ಎಲ್, ಅಡ್ವೋಕೇಟ್, ಇವರಿಗೆ, ಈ ಊರಿನ ಅಧ್ಯ ಮಹಾಸಭೆಯರೂ ಬೋರ್ಡು ಹಾಯರ್ ಎಲಿಮೆಂಟರಿ ಶಾಲಾ ಅಧ್ಯಾಪಕರೂ ಸೇರಿ ತಾ 7ರಲ್ಲಿ ಒಂದು ವಿದಾಯ ಸತ್ಕಾರವನ್ನೇರ್ಪಡಿಸಿದ್ದರು. ಶ್ರೀ ಆರೂರರ ತೈಲಚಿತ್ರವೊಂದನ್ನು ಇಲ್ಲಿಯ ಶಾಲೆಯಲ್ಲಿರಿಸುವ ಖರ್ಚನ್ನು ಈ ಊರಿನ ಶ್ರೀ ಎಮ್ ವೆಂಕಟೇಶ ಪ್ರಭುಗಳವರು ವಹಿಸಿರುವುದಾಗಿ ತಿಳಿಯಲಾಗಿದೆ.

೧ನೇ ಪುಟದಿಂದ ಮುಂದುವರಿದುದು

ಹೊಸ ವ್ಯಾಸರಾಯರು

ರಾಜಕೀಯದಲ್ಲಿ ಇಂಥ ಸ್ಥಿತ್ಯಂತರಗಳಾಗುವಾಗ ಇತ್ತ ಇನ್ನೊಂದು ಮಹತ್ವದ ವಿಷಯವು ನಮ್ಮ ಲಕ್ಷ್ಯವನ್ನು ಸೆಳೆಯುವಂತಿದೆ. ಈವರೆಗೆ ವಾಯಿಸರಾಗಿದ್ದ ಲಾರ್ಡ ವೇವೆಲ್ಲರು ಹೋಗಲಿರುವರೆಂದೂ ಅವರ ಸ್ಥಳದಲ್ಲಿ ಲಾರ್ಡ ಮೌಂಟ್‌ಬೇಟನರು ಬರಲಿರುವರೆಂದೂ ಪ್ರಕಟವಾಗಿ ಗೊತ್ತಾಗಿದೆ. ನಡುಗಾಲ ಸರಕಾರ ರಚನೆಯ ಸಂಬಂಧದಲ್ಲಿ ವೇವೆಲರ ಪ್ರಯತ್ನವು ಯಶಸ್ವಿಯಾಗದ್ದೇ ಅವರನ್ನು ಬೇಗನೆ ಕರೆಸಿಕೊಳ್ಳಲು ಕಾರಣವೆಂದು ಕೆಲವು ಮುತ್ಸದ್ದಿಗಳ ತರ್ಕವಿದೆ. ಏನಿದ್ದರೂ ಬ್ರಿಟಿಷರು ಹಿಂದುಸ್ಥಾನ ಬಿಟ್ಟು ಹೋಗುವಾಗ ಎರಡನೆ ಮಹಾಯುದ್ಧದ ವೀರ ಲಾರ್ಡ ಮೌಂಟ್‌ಬೇಟನರನ್ನು ಕೊನೆಯ ವ್ಯಾಸರಾಯ್ಯಾಗಿ ಇಡಿಸಿ ಅವರ ಮೂಲಕ ಇಂಗ್ಲೆಂಡಕ್ಕೂ ಲಾಭದಾಯಕವಾಗುವ ಮುಂದಿನ ಒಪ್ಪಂದಕ್ಕೆ ಅನುಕೂಲವಾದ ಸಂದರ್ಭಗಳನ್ನು ಒದಗಿಸಿಕೊಳ್ಳುವ ಪ್ರಯತ್ನ ವಿರಬಹುದೆಂದೂ ಕೆಲವರ ತರ್ಕವಿದೆ.



ತೆರಿಗೆಗಳಲ್ಲಿ ಅತ್ಯನ್ಯಾಯ ಹೊರೆ

ಉಪ್ಪಿನ ತೆರಿಗೆಯು ಬಡವರಿಗೆ ಬಾಧಕರ

ಹೆಚ್ಚು ಉಪ್ಪು ಬಳಸುವಿಕೆಯಿಂದ ಶ್ರೇಯಸ್ಸು

ಎರಡು ಸಾವಿರ ಮೈಲುಗಳ ಸಮುದ್ರ ಕರಾವಳಿ ಇರುವ ದೇಶದ ಜನರಿಗೆ ತಮ್ಮ ಸ್ವಂತ ಉಪ್ಪನ್ನು ತಯಾರಿಸುವ ಸ್ವಾತಂತ್ರ್ಯ ವಿಲ್ಲವೆಂದರೆ ಅತ್ಯಂತ ಖೇದಕರ ವಿಷಯು. ಇಷ್ಟಲ್ಲದೆ ಹೇರಳ ಉಪ್ಪಿನ ಸಾಗರದಂತಿರುವ ಸಾಂಬಾರ ಸರೋವರವೂ, ಪಂಜಾಬಿನ ಉಪ್ಪಿನ ಗನಿಗಳೂ ನಮ್ಮಲ್ಲಿ ಇವೆ. ಇಂತಹ ಅತ್ಯುತ್ಕೃಷ್ಟವಾದ ಲವಣಗಾರಗಳನ್ನು ಅಭಿವೃದ್ಧಿಗೊಳಿಸಿ ಬೇಕಾದಷ್ಟು ಉಪ್ಪನ್ನು ತಯಾರಿಸುವ ಸಂದರ್ಭವನ್ನು ನಷ್ಟಗೊಳಿಸಿ ಬ್ರಿಟಿಷ್ ಸರಕಾರದವರು ಉದ್ದೇಶಪೂರ್ವಕವಾಗಿ ಪಾಶ್ಚಾತ್ಯ ದೇಶಗಳಿಂದ ಉಪ್ಪು ಇಲ್ಲಿಗೆ ಬರುವಂತೆ ಪ್ರೋತ್ಸಾಹ ಕೊಡುತ್ತಿರುವುದು ದಾಸ್ಯ ಜನಾಂಗವೊಂದರ ದುರ್ದಶೆಯನ್ನಬೇಕು.

ಬ್ರಿಟಿಷರು ಇಲ್ಲಿಂದ ಬಿಟ್ಟುಹೋಗುವುದಾಗಿ ಕೊನೆಯ 'ನೋಟಿಸ'ನ್ನು ಕೊಟ್ಟಿರುವರು. ಆದರೆ ಉಪ್ಪಿನ ತೆರಿಗೆಯನ್ನು ರದ್ದು ಮಾಡಿದಾಗಲೇ ನಿಜವಾದ ಅಧಿಕಾರವು ಜನತೆಯ ಕೈಗೆ ಬಂತೆನ್ನಬೇಕು. ಕೆಲವು ಆರಾಮ್ ಕುರ್ಚಿಯ ಆರ್ಥಿಕ ತತ್ವಶಾಸ್ತ್ರಜ್ಞರು ಈ ತೆರಿಗೆ ರದ್ದು ಮಾಡಬಾರದೆಂದು ಸಲಹೆ ಕೊಡುತ್ತಿರುವುದು ಇನ್ನೊಂದು ದುರಂತದ ಸಂಗತಿ. ಉದಾಹರಣೆಗಾಗಿ ಪಂಜಾಬಿನ ಪ್ರೊ| ಬ್ರಿಜನಾರಾಯಣರೆಂಬ ಅರ್ಥಶಾಸ್ತ್ರಜ್ಞರು ಹೀಗೆನ್ನುತ್ತಾರೆ: "ಉಪ್ಪು ತೆರಿಗೆಯನ್ನಾಗಲಿ, ತಯಾರಾದ ಉಪ್ಪನ್ನು ಸರಕಾರಕ್ಕೆ ಒಪ್ಪಿಸಬೇಕೆಂಬ ಶಾಸನವನ್ನಾಗಲಿ ರದ್ದುಮಾಡಬೇಕೆಂದು ಹೇಳುವವರು ಅದನ್ನು ಸಮರ್ಥಿಸುವ ಒಂದೇ ಒಂದು ಯೋಗ್ಯ ಕಾರಣವನ್ನು ಕೊಡುವುದಿಲ್ಲ. ಮಹಾತ್ಮಾಗಾಂಧಿಯವರು ತಮಗೆ ಸರಿಯಾಗಿ ತಿಳಿಯದ ವಿಷಯಗಳಲ್ಲಿ ಕೈಹಾಕಬಾರದು."

ತಿಂಗಳಿಗೆ ಓರ್ವನು ಸರಾಸರಿ ಅರ್ಧ ಸೇರು ಉಪ್ಪು ಬಳಸುವನೆಂದಾದರೆ ಉಪ್ಪಿನ ತೆರಿಗೆ ರದ್ದುಮಾಡುವುದರಿಂದ ಪ್ರತಿಯೊಬ್ಬನಿಗೆ 9ಪೈಯಷ್ಟು ಉಳಿತಾಯವಾಗುವುದು. ಇದೊಂದು ಅತ್ಯಲ್ಪ ಹಣವೆಂದು ಕಂಡುಬಂದರೂ ಗಾಂಧೀಜಿಯವರು ಹೇಳುವಂತೆ ಹಳ್ಳಿಗರಿಗೂ ಅವರ ಜಾನುವಾರಗಳಿಗೂ ಅದರಿಂದ ತುಂಬಾ ಅನುಕೂಲವಾಗುತ್ತದೆ. ಭಾರತದ ಚಲ್ಲಾಪಿಲ್ಲಿಯಾದ ಆರ್ಥಿಕ ವ್ಯವಸ್ಥೆಯನ್ನು ಸರಿಪಡಿಸಲು ಈ ಉಪ್ಪಿನ ತೆರಿಗೆ ರದ್ದುಮಾಡಬೇಕಾದುದು ಅತ್ಯಾವಶ್ಯಕ.

ಅತೀ ಅನ್ಯಾಯದ್ದು

1930ರಲ್ಲಿ ಕಾಂಗ್ರೆಸು ಈ ತೆರಿಗೆ ರದ್ದುಮಾಡುವ ಉದ್ದೇಶದಿಂದಲೇ ಒಂದು ಚಳವಳಿಯನ್ನು ಪ್ರಾರಂಭಿಸಿತು. ಗಾಂಧೀಜಿ ಲೋಡ್ ಇರ್ವಿನ್ನರಿಗೆ ಆಗ ಬರೆದ ಪತ್ರ ಹೀಗಿದೆ: "ಈ ತೆರಿಗೆಯು ಬಡವರ ಮೇಲೊಂದು ಹೊರೆಯಾಗಿದೆ. ಆ ದೃಷ್ಟಿಯಿಂದ ಇದು ಅತೀ ಅನ್ಯಾಯದ್ದೆಂದು ನನ್ನ ಅಭಿಪ್ರಾಯ. ಸ್ವಾತಂತ್ರ್ಯವು ಬಡವರಿಗೆ ಅತ್ಯಾವಶ್ಯಕವಾಗಿಯಿರುವುದರಿಂದ ಈ ದುಷ್ಟ ತೆರಿಗೆಯ ವಿರೋಧವಾಗಿ ನಾನು ಚಳವಳಿ ಕೈಕೊಂಡಿರುವೆ. ಈ ಕ್ರೂರ ಕೃತ್ಯ ನಾಗರಿಕತನಕ್ಕೆ ಬಗ್ಗಿದ್ದು ಆಶ್ಚರ್ಯದ ಸಂಗತಿ."

ಉಪ್ಪಿನಿಂದ ಬಡತನ

ನಮ್ಮ ದೇಶದಲ್ಲಿ ಉಪ್ಪನ್ನು ಸರಕಾರವೇ ತಯಾರಿಸುತ್ತದೆ, ಇಲ್ಲವೆ ತಯಾರಿಸಿದ ಉಪ್ಪನ್ನು ವಶಪಡಿಸಿಕೊಳ್ಳುತ್ತದೆ. ಸ್ವತಂತ್ರ ತಯಾರಕರು ಅದನ್ನು ಸರಕಾರಕ್ಕೆ ಬಿಟ್ಟುಕೊಡಬೇಕು. ಹಾಗಲ್ಲದಿದ್ದರೆ ಸ್ವಂತ ಮಾರುವವರು ತಮ್ಮ ಉಪ್ಪಿಗೆ ಕರತೆರಬೇಕು. ಇದರಿಂದ ಸರಕಾರಕ್ಕೆ ಸುಮಾರು 9½ ಕೋಟಿ ರೂಪಾಯಿಯಷ್ಟು ತೆರಿಗೆ ಸಿಗುತ್ತದೆ.

ಬಹಳ ಕಾಲದಿಂದ ಉಪ್ಪು ಕರದ ವಿರೋಧವಾಗಿ ಅನೇಕರು ಆಕ್ಷೇಪವೆತ್ತಿರುವರು. ವಿ. ರೆಟನ್ ಎಂಬ ಬ್ರಿಟಿಷ್ ಅರ್ಥಶಾಸ್ತ್ರಜ್ಞರು ಹೀಗೆ ವರದಿ ಮಾಡಿದ್ದಾರೆ: "ಎಪ್ಪತ್ತು ವರ್ಷಗಳ ಕೆಳಗೆ ಐದು ಮಂದಿಗಳ ಅನ್ನ ಉಣ್ಣುವ ಭಾರತೀಯ ಒಂದು ಬಡ ಕುಟುಂಬವು ವರ್ಷಕ್ಕೆ 60 ರಾತ್ತಲ್ಲ ಉಪ್ಪನ್ನು ಬಳಸುತಿತ್ತು. ಇದಕ್ಕಾಗಿ ಆ ಕುಟುಂಬದವರು ತಮ್ಮ ಆದಾಯದ ಶೇಕಡಾ 3ರಷ್ಟನ್ನು ತೆರಿಗೆಯಾಗಿ ತೆರಬೇಕಾಗುವುದು. ಭಾರತದ ಹಳ್ಳಿಗಳಲ್ಲಿ ವಾಸಮಾಡುವ ರೈತರ ಜಾನುವಾರುಗಳಿಗೂ ಮತ್ತು ವ್ಯವಸಾಯಕ್ಕೂ ಬೇಕಾಗುವ ಉಪ್ಪನ್ನು ಧರ್ಮಾರ್ಥವಾಗಿ ತಯಾರಿಸಿಕೊಳ್ಳುವ ಯಾವ ಅನುಕೂಲತೆಯೂ ಇಲ್ಲದಿರುವುದು ಕೌತುಕದ ಸಂಗತಿ. ಬ್ರಿಟಿಷರ ಈ ಧೋರಣೆಯು ಖಂಡನಾಸ್ಪದವಿದೆ. ಈ ಕರದಿಂದ ದೇಶವೇ ದರಿದ್ರವಾಗುತ್ತಿದೆನ್ನಬಹುದು. ಈ ತೆರಿಗೆ ರದ್ದು ಮಾಡುವುದರಿಂದ ಸರಕಾರದ ಆದಾಯಕ್ಕೆ ನಷ್ಟವಾಗುವುದೆಂದು ಹೆದರಿಕೆಯಿದೆ. ಆದರೆ ಇದನ್ನು ರದ್ದುಮಾಡುವುದರಿಂದ ಉಂಟಾಗುವ ಶ್ರೇಯಸ್ಸಿನಿಂದ ಸರಕಾರಕ್ಕೂ ದೇಶಕ್ಕೂ ಇತರ ವಿಷಯಗಳಲ್ಲಿ ಖಂಡಿತ ಲಾಭವಾಗುವುದು."

ಕನಿಷ್ಟ ಖರ್ಚು

ಆದುದರಿಂದ ಉಪ್ಪಿನ ಕರವು ರದ್ದಾಗಬೇಕಾದುದು ಅತ್ಯಾವಶ್ಯಕ. ಬಡ ಭಾರತದ ಬಡ ಜನತೆಗೂ, ಬಡ ಜಾನುವಾರುಗಳಿಗೂ ಮತ್ತು ಬಡವಾದ ಅಲ್ಲಿನ ಮಣ್ಣಿಗೂ ಹೆಚ್ಚೆಚ್ಚು ಉಪ್ಪಿನ ಅವಶ್ಯಕತೆಯಿದೆ.

ಬೇರೆ ಬೇರೆ ದೇಶಗಳಲ್ಲಿನ ಜನತೆ ತಲೆಯೊಂದಕ್ಕೆ ವರ್ಷಕ್ಕೆ ಎಷ್ಟೆಷ್ಟು ಉಪ್ಪು ಬಳಸುತ್ತದೆಂಬುದನ್ನು ಈ ಕೆಳಗಿನ ಅಂಕೆ ಸಂಖ್ಯೆಗಳಿಂದ ತಿಳಿಯಬಹುದು. ಅಮೇರಿಕಾ 186 ರಾತ್ತಲು; ಬ್ರಿಟನ್ 124; ಫ್ರಾನ್ಸ್ 97; ಜರ್ಮನಿ 64; ಭಾರತ 15!

ಭಾರತೀಯನೊಬ್ಬ ಅದೆಷ್ಟು ಕಮ್ಮಿ ಉಪ್ಪನ್ನು ತಿನ್ನುತಾನೆ! ನಮ್ಮ ಜನತೆ ಹೆಚ್ಚೆಚ್ಚು ಉಪ್ಪನ್ನು ಬಳಸಬೇಕಾದುದು ಶರೀರ ಬೆಳವಣಿಗೆಯ ದೃಷ್ಟಿಯಿಂದ ಅತ್ಯಾವಶ್ಯಕ. "ಇಷ್ಟು ಅತ್ಯಾವಶ್ಯಕವಾದ ವಸ್ತುವಿನ ಮೇಲೆ ಕೂಡಾ ಬ್ರಿಟಿಷರು ತೆರಿಗೆ ಹೊರಿಸಿರುವರೆಂದ ಮೇಲೆ ಬ್ರಿಟಿಷ್ ಆಳ್ವಿಕೆಯ ಮಹಿಮೆ ಏನು ಹೇಳಬೇಕು." ಹೀಗೆಂದು ದಾದಾಬ್ಬಾಯ್ ನವರೋಜಿಯವರು ತಮ್ಮ ಗಂಥದಲ್ಲಿ ಉಲ್ಲೇಖಿಸಿರುವರು.

ಆರೋಗ್ಯ ಭಾಗ್ಯ

ಸಾರ್ವಜನಿಕ ಆರೋಗ್ಯ ದೃಷ್ಟಿಯಿಂದಲೂ ಉಪ್ಪಿನ ಕರ ರದ್ದಾಗಬೇಕಾದುದು ಅತ್ಯಾವಶ್ಯಕ. 19ನೇ ಶತಮಾನದಲ್ಲಿ ಬ್ರಿಟನ್ನಿನಲ್ಲಿ ಉಪ್ಪಿನ ತೆರಿಗೆಯನ್ನು ರದ್ದು ಮಾಡಿದ ನಂತರ ಅಲ್ಲಿಯ ಜನರ ಆರೋಗ್ಯ ಶಕ್ತಿಗಳು ಅಭಿವೃದ್ಧಿಯಾದುವಲ್ಲದೆ ಮಾತ್ರವಲ್ಲ ಅವರ ಮರಣ ಸಂಖ್ಯೆಯು ಕಡಿಮೆಯಾಯಿತು. ಅಷ್ಟೇ ಅಲ್ಲ ಕೇವಲ 16 ರಾತ್ತಲು ಉಪ್ಪನ್ನು ಬಳಸುತಿದ್ದ ಬ್ರಿಟಿಷರು 72 ರಾತ್ತಲು ಉಪಯೋಗಿಸತೊಡಗಿದರು. ಉಪ್ಪಿನ ಕರ ರದ್ದಾದರೆ ನಮ್ಮ ದೇಶದಲ್ಲೂ ಅದೇ ರೀತಿಯಾಗುವುದರಲ್ಲಿ ಸಂದೇಹವಿಲ್ಲ.

ಹಸ್ತಲಾಘವ ವಿದೇಶೀ ಆಚಾರವೆ?

ಪ್ರಾಚೀನ ಭಾರತೀಯ ಸಾಹಿತ್ಯದಲ್ಲಿ--ಪುರಾಣ ಕಾವ್ಯ ನಾಟಕಗಳಲ್ಲಿ--ಅಂದಿನ ದಿನಗಳ ನಮ್ಮ ಸಾಮಾಜಿಕ ರೂಢಿ-ಆಚಾರಗಳ ಚಿತ್ರಗಳು ಸಿಗುತ್ತವೆ. ಹಿಂದುಸ್ಥಾನದ ಪ್ರಾಚೀನ ಸಾಹಿತ್ಯದಲ್ಲಿ ಇತಿಹಾಸದ ಅಭಾವ ಬಹಳವಾಗಿದ್ದುದರಿಂದ ಇತರ ಸಾಹಿತ್ಯವನ್ನು ಸಾಮಾಜಿಕ ದೃಷ್ಟಿಯಿಂದ ಅಭ್ಯಸಿಸುವ ಅವಶ್ಯಕತೆ ಮತ್ತಷ್ಟು ಹೆಚ್ಚಾಗಿದೆ. ನಾಟಕಗಳು, ಅವುಗಳಲ್ಲಿಯೂ ಭಾಸ, ಕಾಳಿದಾಸ, ಶೂದ್ರಕ, ಭವಭೂತಿಗಳ ಕೃತಿಗಳು ಈ ಸುಂದರ್ಭದಲ್ಲಿ ತುಂಬ ಅಮೂಲ್ಯವಾಗಿವೆ. ಪ್ರಾಚೀನ ಭಾರತದ ಎದ್ದುಗೋಳ್ಳುವ ರೀತಿಗಳನ್ನೇ ಉದಾಹರಣೆಗಾಗಿ ತೆಗೆದುಕೊಂಡರೂ ಪ್ರಾಚೀನ ಸಾಹಿತ್ಯದಿಂದ ಹಲವು ಸ್ವಾರಸ್ಯಕರ ತಥ್ಯಾಂಶಗಳು ಹೊರಬೀಳುವವು.

ಇಂದಿನ ಜಗತ್ತಿನಲ್ಲಿ ಬಹಳ ಪ್ರಚಲಿತವಾಗಿರುವ ಕೈಕುಲುಕಿಸುವ ಅಥವಾ ಶೇಕಹ್ಯಾಂಡ ಪದ್ಧತಿ ಪಶ್ಚಿಮದಿಂದ ಬಂದ ವಿದೇಶಿ ಆಚಾರವೆಂಬ ಭಾವನೆಯುಂಟಾಗಿದೆ. ಆದರೆ ಈ ಕೆಳಗಿನ ಆಧಾರಗಳಿಂದ ಒಂದಲ್ಲ ಒಂದು ಬಗೆಯ ಹಸ್ತಲಾಘವರೂಢಿ ಹಿಂದುಸ್ಥಾನದಲ್ಲಿ ಪ್ರಚಲಿತವಾಗಿತ್ತೆಂಬ ಅಂಶ ಹೊರಪಡುತ್ತದೆ.

ಭಾಗವತದ ಪ್ರಮಾಣ

ಕೈ ಜೋಡಿಸಿ ಅಂತರ್ಮುಖ ಮಾಡಿ ಅಭಿವಂದಿಸುವ ಪದ್ಧತಿಯೇ ಇಲ್ಲಿ ಅತಿಶಯ ಜನಪ್ರಿಯವಾಗಿತ್ತೆಂಬಲ್ಲಿ ಸಂದೇಹವಿಲ್ಲ. ಆದರೂ ಅವರವರ ಅಂತಸ್ತಿಗನುಸಾರವಾಗಿ ಬೇರೆ ಬಗೆಯ ಸಂಕೇತಗಳನ್ನೂ ಉಪಯೋಗಿಸುವ ರೂಢಿಯಿತ್ತು. ಕೃಷ್ಣ ಚರಿತೆಯನ್ನು ಅತಿ ಮನೋಹರವಾಗಿ ಬಣ್ಣಿಸುವ ಭಾಗವತ ಪುರಾಣದಲ್ಲಿ ಶ್ರೀಕೃಷ್ಣನು ದ್ವಾರಕೆಗೆ ಹೋದಾಗ ಅಲ್ಲಿಯ ನಾಗರಿಕರನ್ನು ಅವರವರ ಅಂತಸ್ತಿಗನುಸಾರ ಅಭಿವಂದಿಸಿದನೆಂದು ಹೇಳಲಾಗಿದೆ. ಕೆಲವರನ್ನು ಅವನು ನಮಸ್ಕರಿಸಿದನು, ಕೆಲವರನ್ನು ಅಪ್ಪಿಕೊಂಡನು, ಉಳಿದ ಕೆಲವರನ್ನು ಕೈಮುಟ್ಟಿ (ಕರಸ್ಪರ್ಶ, ಹಸ್ತಗ್ರಹ) ದನು. (ಭಾಗವತ-೧.೧೧.೨೨) ಬಲರಾಮನು ಗೋಕುಲಕ್ಕೆ ಹೋದಾಗಲೂ ಅವನು ಹಿರಿಯರಿಗೆ ಬಾಗಿ ನಮಸ್ಕರಿಸಿದನು, ಆದರೆ ತನ್ನ ಹಳೆಯ ಗೋವಳ ಗೆಳೆಯರ ಬಳಿಗೆ ಹೋದಾಗ ನಸುನಗುತ್ತ ಕೈಕುಲುಕಿಸಿದನೆಂದು ಹೇಳಲಾಗಿದೆ. (೧೦. ೬೫. ೫) ಆದರೆ ಭಾಗವತ ನಿರ್ಮಾಣದ ನಿರ್ದಿಷ್ಟ ಕಾಲ ಗೊತ್ತಿಲ್ಲವಾದುದರಿಂದ ಈ ಪದ್ಧತಿ ಎಂದು ರೂಢವಾಗಿತ್ತೆಂದು ಸಿದ್ಧವಾಗುವದಿಲ್ಲ.

"ವಿಕ್ರಮೋರ್ವಶೀಯ"ದಲ್ಲಿ

ಆದರೆ ಕ್ರಿಸ್ತ ಶಕ ೪ನೇ ಶತಮಾನದಲ್ಲಿ ರಚಿಸಲ್ಪಟ್ಟ ಕಾಳಿದಾಸನ ಸುಂದರ "ವಿಕ್ರಮೋರ್ವಶೀಯ" ನಾಟಕದಲ್ಲಿಯೂ ಈ ಮಾತು ಬರುತ್ತದೆ. ರಾಜಾ ಪುರೂರವನಿಗೂ ಗಂಧರ್ವಾಧಿಪ ಚಿತ್ರರಥನಿಗೂ ಭೆಟ್ಟಿಯಾಗುವ ಅಂಕದಲ್ಲಿ ರಂಗ ನಿರ್ದೇಶವೊಂದರಲ್ಲಿ ಅವರಿಬ್ಬರು ಕೈಕುಲುಕಿಸಿ ಅಪಾರ ಸಂತೋಷವನ್ನು ಪ್ರದರ್ಶಿಸಿದ ಉಲ್ಲೇಖವುಂಟು.

೧೧ನೆ ಶತಮಾನದ ಅರಬ ಯಾತ್ರಿಕನೂ ಗಣಿತಜ್ಞನೂ ಆದ ಅಲ್ಬೆರೂನಿ "ಕೈಕುಲುಕಿಸುವದರಲ್ಲಿ ಹಿಂದುಗಳು ಕೈಯ ಬಳಿಪಾರ್ಶ್ವವನ್ನು ಹಿಡಿದು ಕುಲುಕುತ್ತಾರೆ" ಎಂದು ಅವನ ಹೇಳಿಕೆ. ಆದುದರಿಂದ ಹಸ್ತಲಾಘವ ನಮಗೆ ಹೊಸದಲ್ಲ.

"ಸರ್ವತೀರ್ಥ"

ಚಳಿ ಮತ್ತು ಶೀತಗಳನ್ನು ಕೂಡಲೇ ಗುಣಪಡಿಸುವುದು.

ಜಾಂಬಕವನ್ನು ಪ್ರತಿ ರಾತ್ರೆ ಮಲಗೊಳ್ಳುವಾಗ ಹಚ್ಚಿರಿ

ಕೆಟ್ಟ ಶೀತಬಾಧೆಯನ್ನು ನೀವು ಪ್ರತಿದಿನ ರಾತ್ರಿ ಎದೆಗೆ ಮತ್ತು ಕೊರಳಿಗೆ ಜಾಂಬಕನ್ನು ಸವರಿ ಮಲಗೊಳ್ಳುವುದರಿಂದ, ಪರಿಹರಿಸಿಕೊಳ್ಳಬಹುದು. ಜಾಂಬಕಿನಲ್ಲಿರುವ ಅತ್ಯುತ್ತಮ ವನೌಷಧ

ಸತ್ವವು ಬೇಗನೆ ಚರ್ಮಕ್ಕೆ ಹೀರಲ್ಪಟ್ಟು ಶರೀರದ ಕಾವಿನಿಂದ ಹಾರಿ ಹೋಗುವುದು. ಹಾಗೆ ಅವು ಶ್ವಾಸಕಾಲದಲ್ಲಿ ಶ್ವಾಸದೊಡನೆ ಸೇರಿ ನಿಮ್ಮ ತಲೆಯ ಭಾರವನ್ನು ಕಡಿಮೆ ಮಾಡುತ್ತದೆ. ಜಾಂಬಕ್ ಕೂಡಲೇ ಶೀತ ಮತ್ತು ಇನ್ಫ್ಲುಯೆಂಜಾ ಕ್ರಿಮಿಗಳನ್ನು ನಾಶಮಾಡುತ್ತದೆ.

ಯಾವಾಗಲೂ ಜಾಂಬಕನ್ನೇ ಸೇವಿಸಿರಿ.

ZAM-BUK

ಹಾನಿ ಕೊಟ್ಟು ವಿರಹಿತವಾದುದು.

ವೃತ್ತಿ ಶಿಕ್ಷಣದ ಆವಶ್ಯಕತೆ
ಆಂಗ್ಲ ಶಿಕ್ಷಣ ತಜ್ಞರ ಶ್ಲಾಘನೆ

ಲಂಡನಿನ ಟ್ರಿಬ್ಯೂನ್ ಪತ್ರಿಕೆಯಲ್ಲಿ ಇ. ಎಸ್. ಫೆಯರ್ಸ್ ಎಂಬ ಶಿಕ್ಷಣತಜ್ಞರು ಕೈಗಾರಿಕೆ ಮೂಲಕ ಶಿಕ್ಷಣ ಕೊಡುವುದರ ಪ್ರಾಶಸ್ತ್ಯವನ್ನು ಮುಕ್ತಕಂಠದಿಂದ ಹೊಗಳುವರು. ವಾರ್ಧಾ ಶಿಕ್ಷಣ ಪದ್ಧತಿಯು ದೇಶದ ಹಿರಿಯ ಪರ್ಯಾಲೋಚನೆಗೊಳಗಾಗಿರುವಾಗ ಫೆಯರ್ಸರ ಈ ಕೆಳಗಿನ ಲೇಖನ ಭಾಷಾಂತರವು ಪ್ರೋತ್ಸಾಹಕವಾಗಿದೆ

ಮೇಲಿಂದ ಮೇಲೆ ಹಲವು ಶಿಕ್ಷಣತಜ್ಞರು ವೃತ್ತಿ ಶಿಕ್ಷಣದ ವಿದ್ಯಾಮೌಲ್ಯವನ್ನು ಮನಸ್ಸಿಗೆ ತಂದುಕೊಳ್ಳದಿರುವ ಸಂಗತಿಯು ಅತೀ ವಿಚಿತ್ರದ್ದಾಗಿದೆ ವೃತ್ತಿ ತರಪೇತಿಯು ಮಾನಸೀಕ ವಿಕಾಸವನ್ನುಂಟುಮಾಡುವುದಲ್ಲದೆ ಕಲಿಯುವಾಗಲೇ ದುಡಿಯುವ ಸಂದರ್ಭವಿರುವುದರಿಂದ ಉತ್ತಮ [illegible] ರ್ಥಿಕ ಅನುಕೂಲತೆಯೂ ಅದರಲ್ಲಿದೆ

ತಾಳ್ಮೆ, ಜಾಣ್ಮೆ, ಸಹಿಷ್ಣುತೆ, ದ[illegible]ದೃಷ್ಟಿ, ವಿಮರ್ಶನಾಶಕ್ತಿ, ನಿರ್ಧಾರಶಕ್ತಿ ಪರಿಸ್ಥಿತಿಗೆ ಪರಿವರ್ತಿಸಿಕೊಳ್ಳುವ ಶಕ್ತಿ ಇವುಗಳು ಅಭಿವೃದ್ಧಿ [illegible] ವಸ್ತು ಉಪಕರಣಗಳ [illegible] ಗಳಿಸುವುದು, [illegible] ಕಾರ್ಯ [illegible] ಗೆದ್ದು ಯಶಸ್ಸು ಸಂಪಾದಿಸುವ [illegible] ಕಲಿಸುವನ್ನು ಕಲಿತುಕೊ[illegible] [illegible] ತು[illegible] [illegible] [illegible] ವೇಗಗಳಿ ಸ್ವಕಲ್ಪಿತ [illegible] ವುದರಲ್ಲಿ [illegible] ಸಹಜವಾದ ಸಂತೃ[illegible] [illegible] ಣದಲ್ಲಿ ಅವಕಾಶವಿದೆ

ಮೊದಮೊದಲು [illegible] ದಿನಗಟ್ಟಲೆ [illegible] [illegible] ನ್ನೂ ಕಷ್ಟ [illegible] ಕೊನೆಗೆ ಯಶಸ್ವಿಯಾಗುವ[illegible] ಸಂತೋಷಭರಿತನಾಗಿ ಅವನು [illegible] ಉದ್ಗಾರಗೈಯುವನು. ತನ್ನ ಯಶಸ್ಸನ್ನು ಸಂಭ್ರಮಪೂರ್ವಕವಾಗಿ ಪ್ರದರ್ಶಿಸಿ ಗಲಭೆಯುಂಟುಮಾಡುವನು. "[illegible] ಗಲಾಟೆಯ ಹುಡುಗನಪ್ಪ" [illegible] ಅವನ ಕಲ್ಲಿಸನ್ನು ಸಂದರ್ಶಿಸಿದವರ [illegible]ಹುದು ಹೌದು ಅವನಲ್ಲಿ ಸ್ವಲ್ಪ ಗಲಾಟೆ ಕೂಡ ಬರುತ್ತಿದೆ

ಆದರೆ ಅವನದೊಂದು ಗಪ್ಪ ಸೈನ್ಯ [illegible] ದೇಶವನ್ನು ಆಕ್ರಮಿಸುವ ಸೈನ್ಯ ದಿಗ್ವಿಜಯದ ವಾದ್ಯ ಘೋಷಗಳ ಕೋಲಾಹಲ ಅವನದು. ಅವನು ತನ್ನ ಹೊಸ ವ್ಯಕ್ತಿಯಲ್ಲಿ ಅಂತರೀಕ ಆನಂದ ಮೆಚ್ಚುಗೆಗಳನ್ನು ಪಡೆಯಲ್ಲನೆ ಹೊಂದುವುದನ್ನು ನೀವು ಕಾಣಬಹುದು

ಈ ವಿಷಯಗಳನ್ನು ಅತ್ಯಲ್ಪವೆಂದು ಕಡೆಗಾಣಿಸಬಾರದು ಶಾಲೆಯ ಕೈಗಾರಿಕೆ ಶಿಕ್ಷಣಾಲಯದಲ್ಲಿ ಪರಸ್ಪರ ನೋಡಿ ಕಲಿಯುವ ಸ್ಪರ್ಧೆಯೊಂದಿದೆ ಹುಡುಗರು 'ನಕಲು' ಹೊಡೆಯುವರೆಂಬ ಹೆದರಿಕೆ ಇಲ್ಲ. 'ಸಾಧ್ಯವಿದ್ದವರು ನನ್ನದನ್ನು ನಕಲು ತೆಗೆದು ಮಾಡಿ ನೋಡೋಣ' ಎಂಬಕ್ಷರಗಳು ತರಗತಿಯ ಅತೀ ನಿಪುಣ ಹುಡುಗನ ಬೆಂಚಿನ ಮೇಲೆ ಬರೆದಂತೆ ಹೊಳೆಯುತ್ತಿವೆ. ಒಬ್ಬ ಹುಡುಗನು ಯಶಸ್ವಿಯಾಗಿ ಸಂಪೂರ್ಣ ಮಾಡದ ಕೃತಿಯೊಂದನ್ನು ಯಾರು ಬೇಕಾದರೂ ನೋಡಿ ಹಾಗೆ ಮಾಡಲು ಕಲಿಯಬಹುದು. ಇದು ಇತರರಲ್ಲಿ ಹುರುಪನ್ನೂ, ಅಭಿರುಚಿಯನ್ನೂ ಉಂಟು ಮಾಡುತ್ತದೆ.

ಈ ಕೈಗಾರಿಕೆ ಕೂಪದಲ್ಲಿ ಬಾಲಕನು ಶಿಷ್ಟ ಸಾಂಪ್ರದಾಯ ಕಲಿಯುವನು ಇತರ ಹುಡುಗರ ಹಕ್ಕು ಬಾಧ್ಯತೆಗಳನ್ನು, ಇತರರ ವಸ್ತು ಉಪಕರಣಗಳನ್ನು ಸನ್ಮಾನಿಸುವಂತ ಪ್ರೇರೇಪಿಸುತ್ತವೆ ಅಲ್ಲಿಯೇ ಅವನು ತನ್ನ ಸಹ ಬಂಧುಗಳಿಗೆ ಪರಸ್ಪರ ಸಹಾಯ ಸಹಕಾರಗಳನ್ನು ಕೊಡಲು ಕಲಿಯುವನು ಅವನಿಂದ [illegible] ತಿಳಿಕೊಳ್ಳುವರ

ಶಾಲಾ ಕೈಗಾರಿಕೆ ಸರಂಜಾಮುದಲ್ಲಿ ನಾವು ಅತ್ಯುಪಯುಕ್ತವಾದ ರಚನಾಸಾಮರ್ಥ್ಯವುಳ್ಳವೊಂದು ಪುಟ್ಟ ಮಾನವ ಸಮಾಜವನ್ನೇ ಕಾಣುತ್ತೇವೆ ಹುಡುಗರಲ್ಲಿ ಆನಂದವು ಅವರ ಮಾನಸೀಕ ಶಿಕ್ಷಣದ ಒಂದು ಶ್ರೇಷ್ಠ ಲಕ್ಷಣವಲ್ಲವೆಂದು ಕೆಲವರು ತರ್ಕಿಸಬಹುದು ಆದರೆ ಹರ್ಷಯುಕ್ತ ವಾತಾವರಣದ ಅಲ್ಪಸ್ವಲ್ಪ ಕುರುಹನ್ನು ನಾನು ಸಂತೋಷದಿಂದ ಸ್ವಾಗತಿಸುತ್ತೇನೆ ಜನರನ್ನು ಜೀವನಕ್ಕಾಗಿ ತರಬೇತುಗೊಳಿಸುವ ಕಾರ್ಯವಾದ ಶಿಕ್ಷಣದಲ್ಲಂತೂ ಬಾಲ್ಯಾವಸ್ಥೆಯ ಸ್ವಭಾವ ಮಾನಸಿಕ ಚಾತುರ್ಯ ರೂಪುಗೊಳ್ಳುವ ಈ ಅವಧಿಯಲ್ಲಿ ಹರ್ಷಾನ್ವಿತವಾದ ಮಾನಸಿಕ ಶಿಕ್ಷಣವು ಮುಂದೆ ಉತ್ತಮ ಫಲಕಾರಿಯಾಗುವುದೆಂದು ಅನುಭವದಿಂದ ತಿಳಿಯಬಹುದು. ಹೀಗೆ ಕಲಿತ ಮಕ್ಕಳು ಉತ್ತಮ ಮಾನವರಾಗಿ ಬಾಳುವರು.

ಬೆಂಕಿ ಪೆಟ್ಟಿಗೆ ತಯಾರಿಗೆ ಸ್ವೀಡನ್ ಪ್ರಖ್ಯಾತವಪಟ್ಟ ದೇಶ ಕಳೆದ 100 ವರ್ಷಗಳಲ್ಲಿ ಅಲ್ಲಿಂದ 40 ಸಾವಿರ ವಿವಿಧ ಬೆಂಕಿ ಪೆಟ್ಟಿಗ ಚಿತ್ರಗಳುಳ್ಳ ಪೆಟ್ಟಿಗೆಗಳು ತಯಾರಾಗಿವೆ.

*

ಅಮೇರಿಕದ ಕೆಂಟುಕಿಯಲ್ಲಿನ 88 ವರ್ಷದ ವಕೀಲ ವಾಲ್ಸ್ ಎಡನ್ನುನಿಗೆ ಜಗತ್ತಿನ ಅತೀ ಉದ್ದದ ಮೀಸೆಗಳಿವೆ- ಒಂದೊಂದು ಬದಿ 10 ಇಂಚು ಉದ್ದ

*

ESTD 1906

CANARA BANK, LIMITED

(Incorporated in British India with Limited Liability)

(PROGRESS STATEMENT CORRECT TO THOUSANDS OF RUPEES)

LIABILITIES

	194	1946
Capital S[illegible]	9 00 [illegible]	9 00 000
Capital paid up	[illegible] 8 4[illegible] [illegible]	[illegible] 80 000
Reserve	11 00 000	11 [illegible]
Deposits	3 [illegible] 43 [illegible]	4 8[illegible]
Due to Bankers	26 91 000	69 [illegible] 7 00[illegible]
Call Deposits from Bankers	[illegible] 00 [illegible]	1 [illegible] 000
Branch Adjustments	17 [illegible]	1 [illegible]
Bills for collection and foreign bills negotiated	[illegible] 56 00[illegible]	34 [illegible]
Other Liabilities	[illegible]	[illegible]
Profit for the year	3 8[illegible]	[illegible]
Rs	[illegible] 4 1 78 000	6 45 13 000

ASSETS

	194	1946
[illegible]	1 [illegible] 91 000	1 16 16 000
[illegible] Securities	1 [illegible] 45 00[illegible]	2 75 81 000
[illegible]	[illegible] 56 47 000	01 38 000
Bills for collection and Foreign Bills negotiated	[illegible]	34 23 000
[illegible] Properties	[illegible]	00
Bank Premises and Furniture and Fixtures	1 4[illegible] 000	1 47 000
[illegible] Assets	[illegible] 000	6 [illegible]3 000
R[illegible]	4 1 [illegible] 000	6 45 13 000

ರಿಯಾಯತಿ ಲಗ್ಗೇಜಿನಲ್ಲಿ ವ್ಯಾಪಾರ ಸಾಮಾನುಗಳ ನಿಷೇಧ

ಪಸೆಂಜರರ ಸೌಕರ್ಯಗಳ ಬಗ್ಗೆ ಒಂದು ಮಣ ಭಾರದ ಸಾಮಾನುಗಳನ್ನು ಫ್ರೀ ತೆಗದುಕೊಂಡುಹೋಗಬಹುದಾಗಿ ಮಾಡಿದ ರಿಯಾಯತಿ ಕಾರಣದಿಂದಾಗಿ ಪೆಸೆಂಜರರು ಅವರ ಸ್ವಂತ ಉಪಯೋಗದ ಸಾಮಾನುಗಳಲ್ಲದೆ ವ್ಯಾಪಾರಿ ಸಾಮಾನುಗಳನ್ನು ತಮ್ಮೊಡನೆ ಪ್ರಯಾಣ ಬೆಳೆಸುವ ಸ್ನೇಹಿತರ ಹೆಸರಿನಲ್ಲಿ ಈ ರಿಯಾಯತಿ ಮೂಲಕ ಧರ್ಮಾರ್ಥ ಸಾಗಿಸುವುದು ರೂಢಿಯಾಗಿದೆ

ಮೋಟರ್ ವಾಹನಗಳು ರೈಲ್ವೆಗಾಡಿಗಳಂತಾಗಿಲ್ಲ ಅವುಗಳಲ್ಲಿ ನಿಯಮಿತ ಭಾರಕ್ಕಿಂತ ಹೆಚ್ಚಿನ ಸಾಮಾನುಗಳನ್ನು ಒಯ್ಯುವುದು ಮೋಟರ್ ವಾಹನಕ್ಕೂ ಮತ್ತು ಪೆಸೆಂಜರರಿಗೂ ಅಪಾಯವಾಗಿದೆ ಕಾರಣ ಬಸ್ಸುಗಳಲ್ಲಿ ಒಯ್ಯುವ ಸಾಮಾನುಗಳನ್ನು ಪಸೆಂಜರರ ಅವಶ್ಯಕತೆ ಬಗ್ಗನೇ ಮಿತಗೊಳಿಸುವುದು ಅಗತ್ಯವಿದೆ

ವ್ಯಾಪಾರ ಸಾಮಾನುಗಳನ್ನು ಒಯ್ಯುವರೆ ವ್ಯಾಪಾರಿಗಳು

~~ಶೆಡ್ಯೂಲ್ ಪ್ರಮಿಗೆ ಕೊಂಡೊಯ್ಯುವ ಲಕ್ಕಿ ಯಾ ಸಿ. ಪಿ. ಸಿ. ಲೋರಿ~~

ಸರ್ವಿಸುಗಳ ಸೌಖರ್ಯವನ್ನು ಉಪಯೋಗಿಸಬೇಕಾಗಿ ಅಪೇಕ್ಷಿಸುತ್ತೇವ

ವ್ಯಾಪಾರಿ ಸಾಮಾನುಗಳನ್ನು ಎಷ್ಟಕ್ಕೂ ಫ್ರೀ ಲಗ್ಗೇಜಿನ ಅಂಶದಲ್ಲಿ ಸೇರಿಸಿಕೊಳ್ಳಲಾಗುವುದಿಲ್ಲ. ಈ ಕುರಿತು ಮಾಹಿತಿಯನ್ನು ಬುಕ್ಕಿಂಗ್ ಕ್ಲಾರ್ಕರಿಂದ ಪಡಿಯಬಹುದು

JOINT MANAGERS,

The Combined Booking Agency,	The Joint Booking Office,
MANGALORE	KODIALBAIL

THE CANARA BANKING CORPORATION LTD.
(Incorporated in British India with Limited Liability)
Estd: 1906
Head Office: UDIPI, S. Kanara.

CAPITAL:	Rs.
Authorised	25,00,000
Issued, subscribed & called up	16,00,000
Paid up	15 97,145
RESERVES	5,25,000
DEPOSITS	2,07,47,928
TOTAL RESOURCES	3,00,01,186

With a net work of branches & Agencies in all principal cities of India, we shall be able to render efficient collection services

BANKING BUSINESS OF EVERY DESCRIPTION TRANSACTED.

ಹುಳುಕಡ್ಡಿ ಮಲಾಮು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಚಿತ್ತ ಉಪದ್ರವ, ಕಿವಿ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತ ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

THE BOMBAY LIFE ASSURANCE COMPANY LIMITED

(ESTD. 1910)

Peace and Security........

The Mightiest War to secure freedom for the oppressed Nations of Europe has ended. With many attempts at securing the four Freedoms, we do not seem to be anywhere near it. We, in our humble way, have been contributing to this Individual Material Freedom, in War as well as in Peace, by extending Insurance Service to all who seek it.

1945 completed Business { Company's: Over $2\frac{3}{4}$ Crores / Ours: About 50 lakhs.

Kochikar Brothers, Limited.

(ESTD. 1908)

Chief Agents for South India and Special agents for Bombay City & Suburbs.

"Bombay Life Building," Gandhi Nagar, UDIPI.

With Offices at:

MADRAS, BANGALORE, TRIVANDRUM, MANGALORE, MADURA, CALICUT, BOMBAY, & UDIPI.

And Agencies all over South India

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ತಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಫುಪ್ಫುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೊಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. **1906**

[ಸಂಪುಟ 41] ತಾರೀಖು 28—2—1947 [ಸಂಚಿಕೆ 9]

ಹಿಂದೀ ರಾಜಕಾರಣ

ಲೇ: ಶ್ರೀ ಎನ್. ಆರ್. ಕಲ್ಲೆ.

★ ಬ್ರಿಟಿಷ ಘೋಷಣೆಗೆ ಸ್ವಾಗತ ★

ಮುಸ್ಲಿಮ್ ಲೀಗಿಗೆ ಎಚ್ಚರಿಕೆ

ಹೊಣೆ ನಿರ್ವಹಿಸಲು ಕಾಂಗ್ರೆಸಿನ ಅರ್ಹತೆ

1948ನೇ ಇಸವಿ ಜೂನ ತಾ 31ರ ಒಳಗ ಹಿಂದುಸ್ಥಾನವನ್ನು ಹಿಂದೀಯರ ಕೈಯಲ್ಲಿ ಬಿಟ್ಟುಕೊಟ್ಟು ಬ್ರಿಟಿಷರು ಹೋಗಲು ಮಾಡಿದ ನಿರ್ಣಯದಿಂದ ಹಿಂದೀ ರಾಜಕಾರಣದ ಮುಖ ಬದಲಾಗಿದೆ. ಆ ಮೇರೆಗೆ ಬ್ರಿಟಿಷ ಸಾಮ್ರಾಜ್ಯದಲ್ಲಿಯೆ ಒಂದು ಪರಿವರ್ತನೆಯಾಗುವ ಸಂಭವವಿದೆ ಸ್ವತಂತ್ರವಾದ ಆದರ್ಶ ಹಿಂದುಸ್ಥಾನವು ರಚಿಸಲ್ಪಟ್ಟರೆ ಜಗತ್ತಿನ ಮುಖವನ್ನೇ ಬದಲಿಸಬಹುದು

ಈ ಘೋಷಣೆಯನ್ನು ಕುರಿತು ಮಹಾತ್ಮಾ ಗಾಂಧಿಯವರು ತಮ್ಮ ಅಭಿಪ್ರಾಯ ವ್ಯಕ್ತಮಾಡಿ ಲೀಗು ಮತ್ತು ಕಾಂಗ್ರೆಸ್ ಒಂದಾಗಿ ಮಾಡುವ ನಿರ್ಣಯವನ್ನು ಜಗತ್ತಿನ ಯಾವ ಶಕ್ತಿಯೂ ತಡೆಯಲಾರದು ಅವರ ಒಟ್ಟು ನಿರ್ಣಯದಲ್ಲಿ ಆ ಮಹತ್ವದ ಶಕ್ತಿಯಿದೆ ಬ್ರಿಟಿಷ ಘೋಷಣೆಯು ಸದುಪಯೋಗಮಾಡಿಕೊಳ್ಳುವದು ಅಥವಾ ಬಿಡುವದು ಇವೆರಡು ಪಕ್ಷಗಳ ಜೊತೆ ನಿರ್ಣಯವನ್ನನುಸರಿಸಿಕೊಂಡಿದೆ ಶೈಮಚಾರದಿಂದ ದಾರ್ಶನಿಕರಾಗಿ ಸಕಾಲದಲ್ಲಿ ಅಭಿಪ್ರಾಯವನ್ನು ಕೊಟ್ಟಿರುವರು. ಬ್ರಿಟಿಷರು ಹೊರಟು ಹೋಗುವ ತಾರೀಕು ನಿಶ್ಚಯಿಸಿ ಮಾಡಿದ ಈ ಘೋಷಣೆಯನ್ನು ಹಿಂದುಸ್ಥಾನದ ಎಲ್ಲ ರಾಜಕೀಯ ಪಕ್ಷಗಳೂ ಸ್ವಾಗತಿಸಿವೆ

ಪ್ರತಿಕ್ರಿಯೆಗಳು

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಯು ಮಾರ್ಚ ತಾ 8ಕ್ಕೆ ಮುಹೂರ್ತವನ್ನು ಇದಲ್ಲಿಯೇ ಕೂಡಲಿದೆಯೆಂದು ಈಗ ಸರ್ವ ವಿದಿತವಿದೆ ಆಗ್ಗೆ ಕಾಂಗ್ರೆಸ್ ಯಾವ ನಿರ್ಣಯ ಮಾಡುವದೆಂಬ ಬಗ್ಗೆ ದೀರ್ಘಾಲೋಚಿಸುವ ಕಾರಣವಿಲ್ಲ ಕೇಂದ್ರದಲ್ಲಿಯ ತಾತ್ಕಾಲಿಕ ಸರಕಾರದ ಉಪಾಧ್ಯಕ್ಷ ಪಂಡಿತ್ ಜವಾಹರಲಾಲರು ಈ ಘೋಷಣೆಯನ್ನು ಸ್ವಾಗತಿಸಿ 1948ನೇ ಇಸವಿ ಜೂನ್ ಕೊನೆಯ ಒಳಗೆ ಹೊಸ ಘಟನೆಯನ್ನು ರಚಿಸಿಯೇ ತೀರುವೆವೆಂದು ಬ್ರಿಟಿಷ್ ಆಹ್ವಾನವನ್ನು ಸ್ವೀಕರಿಸಿ ನಮ್ಮ ಅರ್ಹತೆಯನ್ನು ಸ್ಪಷ್ಟ ಮಾಡಬೇಕೆಂದು ವಿನಂತಿಸಿರುವದಲ್ಲದೆ ಘಟನಾಸಮಿತಿಯಿಂದ ಹೊರಗುಳಿದವರನ್ನು ಒಳಗೆ ಬರುವದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮ ಅಭಿಪ್ರಾಯವನ್ನು ಸ್ಪಷ್ಟ ಮಾಡಿರುವರು. ಸಹಕಾರದಿಂದ ಕರ್ತವ್ಯ ಪರಿಪಾಲನ ಮಾಡುವದೇ ಕಾಂಗ್ರೆಸಿನ ಅಭಿಮತವೆಂಬುದು ಸ್ಪಷ್ಟವಾಗಿ ತೋರುತ್ತದೆ

ಲೀಗಿನ ಅಭಿಪ್ರಾಯ

ಲೀಗಿನ ಅಧಿಕೃತ ಅಭಿಪ್ರಾಯ ಹೊರಗೆ ಬಿದ್ದಿಲ್ಲವಾದರೂ ಅಧ್ಯಕ್ಷರಾದ ಜಿನ್ನಾ ಸಾಹೇಬರು ಪಾಕಿಸ್ಥಾನವೇ ತಮ್ಮ ಗುರಿ ಅದಕ್ಕಿಂತ ಕಡಿಮೆಯಾದರೂ ತಮಗೆ ಬೇಡವೆಂದು ಪಾಕಿಸ್ಥಾನ ಪಡೆಯುವ ಸಾಮರ್ಥ್ಯವು ಲೀಗಿನಲ್ಲಿ ಉಂಟೆಂದು ಒಳ್ಳೆ ದರ್ಪದಿಂದ ಗರ್ಜಿಸಿರುವರು. ಹಿಂದುಸ್ಥಾನ ವಿಚ್ಛೇದ ಮಾಡಿ ತಮ್ಮ ಬೇಳೆ ಬೇಯಿಸಿಕೊಳ್ಳಬಹುದು ಪ್ರತಿಷ್ಠೆ ಬೆಳೆಸಿಕೊಳ್ಳಬಹುದು ಎಂದು ಮುಂತಾಗಿ ಅವರ ಅಭಿಪ್ರಾಯವಿದೆ ಆದರೆ ಈ ಅಭಿಮತವು ಕಲ್ಪನಾ ಸಾಮ್ರಾಜ್ಯದಲ್ಲಿದೆ ವಾಸ್ತವಿಕ ಜಗತ್ತಿನಲ್ಲಿ ಅದಕ್ಕೆ ಬೆಲೆಯಿಲ್ಲ ಪಾಕಿಸ್ಥಾನವನ್ನು ಯಾರೂ ಕೊಡುವದೂ ಶಕ್ಯವಲ್ಲ ಆದ್ದರಿಂದ ವ್ಯಥಾ ಉದ್ಘಟತನ ಮಾಡುವದರಿಂದ ಲೀಗಿನ ಪದವಿ ಏರು ತನ್ನ ಧ್ಯೇಯವನ್ನೇ ಹೆಚ್ಚಿನ ಮಟ್ಟಿಗೆ ಸಾಧಿಸದಂತಾಗುವದು

ಮಹಾ ಸಭೆಯ ಟೀಕೆ

ಮಹಾ ಸಭೆಯು ಕೇವಲ ಲೋಪದೋಷಗಳನ್ನು ತಿಳಿಸಿ ಅಷ್ಟರ ಮಟ್ಟಿಗೆ ಅಸ್ತು ಎಂದು ಬ್ರಿಟಿಷ ಘೋಷಣೆಯನ್ನು ಮಹಾ ಸಭೆಯ ಅಧ್ಯಕ್ಷ ಡಾ ಮುಖರ್ಜೀಯವರು ಸ್ವಾಗತಿಸಿರುವರು. ಬ್ರಿಟಿಷರು ಬಿಟ್ಟು ಹೋಗುವುದನ್ನು ಎಲ್ಲರೂ ಒಪ್ಪಿಕೊಂಡಿರುವರು. ಆದರೆ ಈ ಸಂತೋಷದ ಮಧ್ಯೆ ಲೀಗಿನ ಅನುಚಿತ ಧೋರಣೆಯು ಗಂಟಲಗಾಣವಾಗಿದೆ

ವಿದೇಶೀಯ ಟೀಕೆ

ಲಂಡನಿನ ಮ್ಯಾಂಚೆಸ್ಟರ್ ಗಾರ್ಡಿಯನ್ ಮತ್ತು ಟಾಯಿಮ್ಸ್ ಪತ್ರಿಕೆಗಳ ಜವಾಹರಲಾಲರ ಆಶ್ವಾಸನವನ್ನು ಎತ್ತಿ ಹಿಡಿದು ಈ ಸಂದರ್ಭದಲ್ಲಿ ತನ್ನ ಜಾಣ್ಮೆ ಮತ್ತು ಮುತ್ಸದ್ದಿತನದ ಉಪಯೋಗ ಮಾಡಿಕೊಂಡು ಹಿಂದುಸ್ಥಾನದ ಪ್ರಕೃತಿಗೆ ನೆರವಾಗುವಂತೆ ಮುಸ್ಲಿಂಲೀಗಿಗೆ ಎಚ್ಚರಕೊಟ್ಟು ಜಿನ್ನರು ಸಹಕರಿಸಿಕೊಂಡು ಹೋಗಬೇಕೆಂದು ತಿಳಿಸಿವೆ ಅಮೇರಿಕೆಯ ನ್ಯೂಯಾರ್ಕ ಟಾಯಿಮ್ಸ್ ಪತ್ರಿಕೆಯೂ ಈ ಸಂದರ್ಭದಲ್ಲಿ ಲೀಗಿಗೆ ಚೆನ್ನಾಗಿ ಎಚ್ಚರಕೊಟ್ಟು ಇನ್ನಾದರೂ ಜಿನ್ನರು ತಕ್ಕ ಮಾರ್ಗದಲ್ಲಿ ಸಾಗಬೇಕು ದುರಭಿಮಾನ ಮತ್ತು ದುರಾಗ್ರಹ ಪ್ರಯೋಜನವಿಲ್ಲವೆಂದು ಚೆನ್ನಾಗಿ ತಿಳಿಸಿ ಎಚ್ಚರಿಸಿದೆ ಜಗತ್ತಿನ ಅಭಿಪ್ರಾಯವು ಒಟ್ಟಿನಲ್ಲಿ ಇಂದು ಜಿನ್ನರಿಗೆ ವಿರುದ್ಧವಿದೆ ಕೆಲ ಬ್ರಿಟಿಷ ರಾಜಕಾರಣಿ ಸನಾತನಿಗಳನ್ನು ಬಿಟ್ಟರೆ ಉಳಿದವರೆಲ್ಲ ಈ ಘೋಷಣೆಯನ್ನು ಸಮರ್ಥಿಸಿರುವರು.

ಲಾರ್ಡರ ಸಭೆಯಲ್ಲಿ ಈ ಸಂಬಂಧ ವಿರೋಧಿಸಿ ಮುಂತಾದ ಠರಾವನ್ನು ಲಾರ್ಡ್ ಟೆಂಪಲ್ ವುಡ್ಡರು ಹಿಂದೆ ತೆಗೆದುಕೊಂಡದರಿಂದ ಬ್ರಿಟಿಶ್ ಪಾರ್ಲಿಮೆಂಟಿನ ಹಿರಿಯರಿಗೂ ಈ ಘೋಷಣೆ ಬಂದದೆಯೆಂಬುದು ಸ್ಪಷ್ಟವಾಗುತ್ತದೆ

ಕಾಂಗ್ರೆಸಿನ ಅರ್ಹತೆ

ಸ್ಥಿತಿಯಲ್ಲಿಯೂ ಕಾಂಗ್ರೆಸಿನ ಅರ್ಹತೆ ಹೆಚ್ಚಿನದು ಅದು ರಾಷ್ಟ್ರೀಯ ಸಂಸ್ಥೆಯಲ್ಲಿ ನ್ಯಾಯವಾಗಿ ಹೆಣಗಿದೆ. ಆದ ಕಾರಣ ... ತಿಂಗಳ ಒಳಗೆ ಯಾವದೇ ಕಾರಣದಿಂದ ಘಟನೆಯು ಸಿದ್ಧವಾಗದಿದ್ದರೆ ... ಸರಕಾರವು ಕಾಂಗ್ರೆಸಿನ ಕೈಯಲ್ಲಿ ಅಧಿಕಾರ ಒಪ್ಪಿಸಿ ಹೋಗುವದು ... ಈ ಹೊಣೆಯು ಮುಂದೆ ಬರಲಿರುವ ... ಮೇಲಿದೆ ಅವರು ಈ ವಿಷಯಗಳನ್ನು ಕುರಿತ ಚೆನ್ನಾಗಿ ... ಹಿಂದುಸ್ಥಾನದ ಅಖಂಡತೆ ... ಅದರ ಅಭಿವೃದ್ಧಿಗೆ ನೆರವಾಗುವದೇ ... ಆದ ಕಾರಣ ಮುಂದಿನ ಎಲ್ಲ ಕೆಲಸಗಳ ಹೊಣೆಯು ಹೊಸ ವಾಯಿಸರಾಯರ ಹಾಗೂ ಹಿಂದೀ ರಾಜಕೀಯ ಪಕ್ಷಗಳ ಮೇಲಿದೆ

ಪರಿಷತ್ತಾಧ್ಯಕ್ಷರು

ಇದೇ ಎಪ್ರಿಲ್ ತಿಂಗಳು ಕೊನೆಯ ವಾರದಲ್ಲಿ ಹರಪನಹಳ್ಳಿಯಲ್ಲಿ ನಡೆಯಲಿರುವ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನಕ್ಕೆ ಶ್ರೀಮಾನ್ ಸಿ ಕೆ ವೆಂಕಟರಾಮಯ್ಯ ಎಂ ಎ, ಎಲ್ ಎಲ್ ಬಿ ಅವರು ಹೆಚ್ಚು ಅಭಿಮತಗಳಿಂದ ಆಯ್ಕೆಯಾಗಿರುತ್ತಾರೆಂದು ತಿಳಿಸಲು ಸಂತೋಷಪಡುತ್ತೇವೆ

ಸುರತ್ಕಲ್: ಬರುವ ತಾ 9—3—47 ರಂದು ಇಲ್ಲಿಯ ವಿದ್ಯಾದಾಯಿನೀ ಹೈಸ್ಕೂಲಿನ ಮಂದಿರದಲ್ಲಿ **ನೂತನ ಮಂದಿರ ಪ್ರವೇಶೋತ್ಸವ ಮತ್ತು ಶಾಲಾ ವರ್ಧಂತ್ಯುತ್ಸವವು** ಜರಗುವುದು. ರಾ। ಸಾ। ಎಂ ಕೆ ನಂಬಿಯಾರ್ ಬಾರ್ ಎಟ್ ಲಾ ಅವರು ಅಧ್ಯಕ್ಷತೆ ವಹಿಸುವರು

ಫೆಬ್ರುವರಿ 11ನೇ ತಾರೀಕು ಶೇಟ ಶ್ರೀ ಜಮುನಾಲಾಲಜಿಯ ಸಾಂವತ್ಸರಿಕ. ಅವರು ಗೋಸೇವೆಗಾಗಿ ಎಷ್ಟೊಂದು ನಿಷ್ಠರಾಗಿದ್ದರೆಂಬುದು ಈ ಸಾಂವತ್ಸರಿಕ ನಮ್ಮ ಸ್ಮರಣೆಗೆ ತಂದು ಕೊಡುತಿದೆ. ಆ ನಿಷ್ಠೆಯ ಸ್ಮರಣೆಯಿಂದ ಗೋವಿನ ಬಗ್ಗೆ ನಮ್ಮ ಕರ್ತವ್ಯ ಜಾಗೃತಿಯ ಅರಿವು ಉಂಟಾಗುತ್ತದೆ. ಕೇವಲ ಸದಿಚ್ಛೆ ವ್ಯಕ್ತಪಡಿಸುವಲ್ಲಿಯೆ ಪಂಚವರ್ಷ ಗತಿಸಿ ಹೋದವು. ಉಳಿದವರು ತಮ್ಮ ಪಂಚವಾರ್ಷಿಕ ಯೋಜನೆಗಳನ್ನು ಮಾಡಿಕೊಂಡು ಜಾರಿಯಲ್ಲಿ ತಂದು ತಮ್ಮ ದೇಶದ ಭವಿತವ್ಯವನ್ನು ಬದಲಿಸಿ ಕೊಂಡರು. ಆದರೆ ಈ ಐದು ವರ್ಷಗಳಲ್ಲಿ ತೋರಿಬರುವಂಥ ಯಾವ ಕೆಲಸವನ್ನಾದರೂ ಮಾಡಿರುವೆನೆಂದು ಹೇಳಿಕೊಳ್ಳುವುದು ನವಗೆ ಶಕ್ಯವಿಲ್ಲ. ಆದರೆ ಈ ಐದು ವರ್ಷಗಳ ಅವಧಿಯಲ್ಲಿ ನಾವು ಸ್ವರಾಜ್ಯಕ್ಕಾಗಿ ದೊಡ್ಡ ಹೋರಾಟವನ್ನು ನಡೆಸಿದೆವು. ಅದರಿಂದ ನಮಗೆ ಕೆಲ ಮಟ್ಟಿಗೆ ರಾಜಕೀಯ ಅಧಿಕಾರ ಪ್ರಾಪ್ತವಾಗಿದೆ. ಗೋಸೇವೆಯ ದೇಶ ವ್ಯಾಪಕ ಕಾರ್ಯಕ್ರಮವನ್ನು ಕೈಕೊಳ್ಳಲು ಈ ಅಧಿಕಾರದ ಉಪಯೋಗ ಮಾಡಿಕೊಳ್ಳುವಾ ನಾವೀಗ ಪಡೆದ ಅಧಿಕಾರವೇನು ಸಣ್ಣಪುಟ್ಟದಲ್ಲ. ಗೋಸೇವೆಯಲ್ಲಿ ನಾವು ಪಡೆಯದಿರುವ ಪ್ರಗತಿಯನ್ನು ಅದು ತುಂಬಿ ಕೊಡುತಿದೆ. ಆದರೆ ಮುಂಬರುವ ಐದು ವರ್ಷಗಳ ಗತಿಯೇನು? ನಾವೊಂದು ಯೋಜನೆಯನ್ನು ಸಿದ್ಧಪಡಿಸಿ ಕೊಂಡು ಅದನ್ನು ಕಾರ್ಯರೂಪದಲ್ಲಿ ತರಲು ಕಂಕಣಬದ್ಧರಾಗಬೇಕು.

ಯುದ್ಧದ ಗೊಂದಲದ ಕಾಲದಲ್ಲಿಯೂ ಗೋಸೇವಾಸಂಘವು ಹೇಳಿಕೊಳ್ಳುವಂಥ ಸ್ವಲ್ಪ ಸೇವೆ ಸಲ್ಲಿಸಿದೆ. ಅದರ ಸ್ವರೂಪ ಮರ್ಯಾದಿತವಿದೆ ಮಾತ್ರ. ಅಂಕೆಸಂಖ್ಯೆಗಳಿಂದ ಈ ಕಾರ್ಯ ಕಡಮೆಯದೆನಿಸಬಹುದು. ಆದರೆ ಅದು ಅಮೂಲ್ಯವಾಗಿದೆ. ಭಾವೀ ಯೋಜನೆಯನ್ನು ಸಿದ್ಧಪಡಿಸುವಲ್ಲಿ ದೇಶಕ್ಕೆ ಅದೊಂದು ಬಗೆಯ ಮಾರ್ಗದರ್ಶನ ಮಾಡಿ ಕೊಡುತ್ತಿದೆ. ಸೇವಾ ಗ್ರಾಮದಲ್ಲಿ ಮತ್ತು ಗೋಪುರಿ ಗೋಶಾಲೆಯಲ್ಲಿ ನಡೆದ ಸಣ್ಣ ಸಣ್ಣ ಪ್ರಯೋಗಗಳಿಂದ ಸಿದ್ಧವಾದುದೆಂದರೆ ನಾವು ನಮ್ಮ ಸ್ಥಳಿಕ ಗೋವುಗಳ ಹಾಲಿನ ಸಂಪತ್ತಿಯನ್ನೂ ಬೀಜದ ಹೋರಿಗಳ ಸಂಪತ್ತಿಯನ್ನು ಅಭಿವರ್ಧಿಸಿಕೊಳ್ಳಬಲ್ಲೆವೆಂಬುದು. ಗೋಸೇವೆಯ ದೃಷ್ಟಿಯಿಂದಲಾದರೂ ನಾವು ನಮ್ಮ ಸ್ಥಳಿಕ ಗೋಗಳ ಪೀಳಿಗೆಯಲ್ಲಿ ಸುಧಾರಣೆ ಮಾಡಬೇಕಾದುದು ಅವಶ್ಯವಾಗಿದೆ. ಈ ಸಭೆಗಳಲ್ಲಿ ಇದನ್ನು ಮಾಡಲಾಗಿದ್ದು ಹೆಚ್ಚು ಹಣವೂ ಇದಕ್ಕಾಗಿ ವೆಚ್ಚವಾಗಿಲ್ಲ. ಇದರಲ್ಲಿ ಮಾಡತಕ್ಕದ್ದು ಇನ್ನೂ ಬೇಕಾದಷ್ಟಿದೆಂಬುದು ನಿಜ. ಮತ್ತು ನಮ್ಮ ಧ್ಯೇಯವನ್ನು ನಾವಿನ್ನೂ ಮುಟ್ಟಿರುವದಿಲ್ಲ. ಆದರೆ ನಾವು ಪಡೆದಷ್ಟು ನಿಸ್ಸಂಶಯವಾಗಿ ಪ್ರಶಂಸನೀಯವಾಗಿದೆ. ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಮಂತ್ರಿಗಳು ಇರುವದರಿಂದ ನಮ್ಮ ಆಕಳು ಮತ್ತು ಎತ್ತುಗಳ ಪರಿಸ್ಥಿತಿಯನ್ನು ಸುಧಾರಿಸುವ ಹೊಣೆ ಬಹಳ ಮಟ್ಟಿಗೆ ಹೆಚ್ಚಿದೆ. ಈಗ ಕಾರ್ಯ ಯಾವ ಮಾರ್ಗದಿಂದ ಸಾಗತಕ್ಕದ್ದು ಎಂಬುದರ ನಿಶ್ಚಿತ ರೂಪರೇಷೆಯನ್ನು ಗೊತ್ತುಪಡಿಸತಕ್ಕದ್ದು. ನಗರಗಳಿಗೆ ಒಳ್ಳೆ ಮತ್ತು ಸಾಕಷ್ಟು ಹಾಲಿನ ಪೂರೈಕೆಯ ಅವಶ್ಯಕತೆ ಕೂಡಲೆ ನಮ್ಮ ಗಮನಕ್ಕೆ ಬರುತ್ತದೆ. ಈ ಸಂದರ್ಭದಲ್ಲಿ ಮತ್ತು ಸಾಮಾನ್ಯವಾಗಿ ಗೋಪಾಲನೆಯಲ್ಲಿ ಕೆಲ ಸೂಚನೆಗಳನ್ನು ನಾನಿಲ್ಲಿ ಮಾಡ ಬಯಸುತ್ತೇನೆ.

ಹಾಲಿಗಾಗಿ ದನವನ್ನು ಅಲಕ್ಷಿಸದಿರಿ

ಗೋಪಾಲನೆಗೆ ಗಾಂಧಿ 'ಶಿಷ್ಯರ' ಸಲಹೆ

ದಿವಂಗತ ಜಮುನ್‌ಲಾಲರ ಆದರ್ಶ

1) ಹಾಲಿನ ಪೂರೈಕೆ ಪ್ರಶ್ನೆ ಎತ್ತಲ್ಪಟ್ಟ ಕೂಡಲೆ ಹೆಚ್ಚು ಹಾಲು ಕೊಡುವ ಆಕಳುಗಳನ್ನು ತರಿಸಬೇಕೆಂಬ ವಿಚಾರದಿಂದಲೆ ನಾವು ಹೊರಡುತ್ತೇವೆ. ನಮ್ಮ ಅಭಿಪ್ರಾಯದಲ್ಲಿ ಇದು ಅವಶ್ಯವಿಲ್ಲ. ಶಕ್ಯವಿದ್ದ ಮಟ್ಟಿಗೆ ಸ್ಥಳಿಕ ಪೀಳಿಗೆಯನ್ನೇ ನಮ್ಮ ಕೆಲಸಕ್ಕಾಗಿ ಆರಿಸಿಕೊಳ್ಳಬೇಕು. ಸ್ವಲ್ಪ ವಿಚಾರ ಮಾಡಿದ್ದಾದರೆ ನಮ್ಮ ಮುದ್ದೆ ಸ್ಪಷ್ಟವಾಗುವದು. ಸ್ಥಳಿಕ ಪೀಳಿಗೆಯನ್ನು ಅಲಕ್ಷಿಸಿದರೆ ನಮ್ಮ ಉದ್ದೇಶ ಸಾಧಿಸಲಾರದು. ಒಕ್ಕಲಿಗನನ್ನು ನಾವು ವಂಚಿಸಲಾರೆವು. ಅವರಲ್ಲಿದ್ದ ಆಕಳುಗಳ ಸ್ಥಿತಿಯನ್ನು ಸುಧಾರಿಸುವ ಮಾರ್ಗವನ್ನು ನಾವು ಅವರಿಗೆ ತೋರಿಸಿ ಕೊಡತಕ್ಕದ್ದು ಅವಶ್ಯವಾಗಿದೆ. ನಗರಗಳಿಗೆ ಹಾಲಿನ ಪೂರೈಕೆ ಮಾಡುವ ಹುರುಪಿನಲ್ಲಿ ನಾವು ಈ ಪ್ರಾಣಿಗಳನ್ನು ಅಲಕ್ಷಿಸುವದು ಘಾತಕವಾಗುವದು.

2) ಕೇವಲ ಹೆಚ್ಚು ಹಾಲನ್ನು ಕೊಡುವ ಪೀಳಿಗೆಗಳನ್ನೇ ಬೆಳೆಸಿ ಬೀಜದ ಹೋರಿಗಳ ಉತ್ಪಾದನೆಯನ್ನು ಅಲಕ್ಷಿಸುವದು ತಪ್ಪಾಗುವದು. ಒಕ್ಕಲತನಕ್ಕಾಗಿ ಒಳ್ಳೆ ಎತ್ತುಗಳನ್ನು ಒದಗಿಸಬೇಕು. ಯಾವ ದೇಶಗಳಲ್ಲಿ ಒಕ್ಕಲತನ ಎತ್ತುಗಳನ್ನು ಅವಲಂಬಿಸುವದಿಲ್ಲವೊ ಮತ್ತು ಎಲ್ಲಿ ಕರುಗಳು ಕೇವಲ ಆಹಾರಪದಾರ್ಥವಾಗಿ ಪರಿಣಮಿಸುವುವೋ ಅಂಥಲ್ಲಿ ಹೆಚ್ಚು ಹಾಲು ಒದಗಿಸುವುದರ ಕಡೆಗೆ ನಾವು ಗಮನ ಕೊಡುತ್ತೇವೆಂದು ಹೇಳಿದರೆ ನಡೆಯುವದು. ಬಲಿಷ್ಠ ಎತ್ತುಗಳ ಬಗ್ಗೆ ನಾವೇನು ಕಾಳಜಿ ಮಾಡಲಾರೆವು. ಹಿಂದುಸ್ಥಾನದಲ್ಲಿ ಮಾತ್ರವೆ ಗೋವಿನ ಭವಿತವ್ಯ ಉಜ್ವಲವಾಗಿದೆ. ಇಲ್ಲಿನ ಆಕಳುಗಳು ನಮಗೆ ಸಾಕಷ್ಟು ಹೆಚ್ಚು ಪ್ರಮಾಣದಲ್ಲಿ ಹಾಲನ್ನು ಪೂರಯಿಸುವದಲ್ಲದೆ ಬಲಿಷ್ಠ ಹೋರಿಗಳನ್ನೂ ಒದಗಿಸಬಲ್ಲವು.

3) ನಗರಗಳಿಗೆ ಹಾಲು ಪೂರಯಿಸುವುದು ಹಳ್ಳಿಗಳ ಕರ್ತವ್ಯ ಖಂಡಿತವಾಗಿ ಅಲ್ಲ. ಹಳ್ಳಿಯ ಜನ ತಾವೇ ಬೇಕಾದಷ್ಟು ಹಾಲು ಕುಡಿಯಬೇಕು. ಹೆಚ್ಚಿಗೆ ಉಳಿದುದನ್ನು ಮಾತ್ರ ಎರಡನೆಯವರಿಗೆ ಮಾರತಕ್ಕದ್ದು- ಹಳ್ಳಿಗಳಲ್ಲಿ ಹೆಚ್ಚು ಪ್ರಮಾಣದಲ್ಲಿ ಹಾಲು ಪೂರಯಿಕೆಯಾದರೆ ಮಾತ್ರ ಈ ಧ್ಯೇಯ ಸಾಧ್ಯವಾಗುವದು. ಮತ್ತು ಹಳ್ಳಿಗರಿಗೆ ಸಾಕಷ್ಟು ಹಾಲು ಕುಡಿಯಲಿಕ್ಕೆ ದೊರೆಯುವದು.

4) ಒಕ್ಕಲತನ, ಗೋಪಾಲನೆ, ಎತ್ತಿನಿಂದ ಎಳೆಯುವ ಗಾಣದಿಂದ ಎಣ್ಣೆ ತೆಗೆವುದು, ಚರ್ಮ ಹದ ಮಾಡುವದು ಮತ್ತು ಒಳ್ಳೆ ಗೊಬ್ಬರ ತಯಾರ ಮಾಡುವದು ಇವೆಲ್ಲ ಒಂದೇ ಘಟ್ಟದಲ್ಲಿ ಬರುವದಾದ್ದರಿಂದ ಎಲ್ಲ ಕೂಡಿಯೆ ನಡೆಯಲಿಕ್ಕೆಬೇಕು. ಒಕ್ಕಲಿಗರಿಗೆ ಮತ್ತು ಅವರ ಮಕ್ಕಳಿಗೆ ಸಾಕಷ್ಟು ಹಾಲು ಸಿಕ್ಕಬೇಕಾದರೆ ಇವೆಲ್ಲ ಉದ್ಯೋಗಗಳು ಕೂಡಿಯೆ ಸಾಗತಕ್ಕದ್ದು. ಗೋಪಾಲನೆಯ ಯಾವದೊಂದು ಯೋಜನೆಯಲ್ಲಿ ಎಲ್ಲವೂ ಏಕಕಾಲದಲ್ಲಿಯೇ ಸಾಗತಕ್ಕದ್ದು.

5) ಗೋಪಾಲನೆ ಬೇರೆ ಗ್ರಾಮೋದ್ಯೋಗಗಳಿಂದ ಪ್ರತ್ಯೇಕಿತವಾಗಲಾರದು. ತನ್ನ ಮನೆಯಲ್ಲಿಯೇ ಅವಶ್ಯಕ ಉದ್ಯೋಗಗಳಲ್ಲಿ ಒಕ್ಕಲಿಗನನ್ನು ತೊಡಗಿಸುವ ವ್ಯವಸ್ಥೆ ಮಾಡುವದು ಶಕ್ಯವಾಗದಿದ್ದರೆ ತನ್ನ ಬೇಂಕುಗಳಿಗಾಗಿ ಅವನು ಹೊರಗಿನ ಪೇಟೆಯನ್ನವಲಂಬಿಸಬೇಕಾಗುವದು ಮತ್ತು ಅದಕ್ಕಾಗಿ ಅವನು ರೋಖ ಹಣ ಕೊಟ್ಟು ಕೊಳ್ಳಬೇಕಾಗುವದು. ಈ ಪರಿಸ್ಥಿತಿ ಇರುವ ವರೆಗೆ ಅವನು ಯಾವಾಗಲೂ ತನ್ನ ಹಾಲು ಮತ್ತು ಹಾಲಿನ ಪದಾರ್ಥಗಳನ್ನೆಲ್ಲ ಮಾರಲಿಕ್ಕೆ ಬೇಕಾಗುವದು.

6) ಹಳ್ಳಿಗರು ಹೊರಗಿನಿಂದ ಎತ್ತುಗಳನ್ನು ಕೊಳ್ಳುವ ಆವಶ್ಯಕತೆಯಿಲ್ಲ. ಪ್ರತಿ ಹಳ್ಳಿಯಲ್ಲಿ ಒಳ್ಳೆ ಎತ್ತುಗಳನ್ನು ಉತ್ಪಾದಿಸಬಹುದು. ಇದಕ್ಕಾಗಿ ಸರಕಾರದವರು ಯೋಗ್ಯ ಸೌಕರ್ಯಗಳನ್ನು ಒದಗಿಸಿ ಕೊಡತಕ್ಕದ್ದು. ಇದು ಅತಿ ಮುಖ್ಯ ಮಹತ್ವದ್ದೆಂದು ಭಾವಿಸಬೇಕು.

ಗೋಪಾಲನೆಗೆ ಕನಿಷ್ಠ ಇಷ್ಟಾದರೂ ಇರತಕ್ಕದ್ದೆಂದು ನಾನು ಸೂಚಿಸಬಯಸುತ್ತೇನೆ. ವಿವರಗಳನ್ನು ನಾನು ವಿವೇಚಿಸಿಲ್ಲ. ಇವೆಲ್ಲ ಸೂಚನೆಗಳನ್ನು ಮನಸಿನಲ್ಲಿಟ್ಟುಕೊಂಡರೆ ದೇಶಕ್ಕೆ ಹಿತಕರವಾಗುವದು. ಆದರೆ ನಾವು ತಪ್ಪುದಾರಿಯಲ್ಲಿ ಕೆಲಸ ಪ್ರಾರಂಭಿಸಿದರೆ ಯಾವ ಕಾರ್ಯವೂ ಚೆನ್ನಾಗಿ ಆಗದು. ಮತ್ತು ಶ್ರಮ ಮತ್ತು ಹಣ ವ್ಯರ್ಥ ವ್ಯಯವಾದಂತಾಗುವದು.

ವ್ಯಾಪಕ ಯೋಜನೆಯನ್ನು ಸಿದ್ಧಪಡಿಸುವಾಗ ಈ ಮುದ್ದೆಗಳನ್ನೆಲ್ಲ ಮನಸಿನಲ್ಲಿಟ್ಟುಕೊಳ್ಳತಕ್ಕದ್ದು.

—ವಿನೋಬಾ ಭಾವೆ



ESTD 1906

CANARA BANK, LIMITED.

(Incorporated in British India with Limited Liability)

(PROGRESS STATEMENT CORRECT TO THOUSANDS OF RUPEES)

LIABILITIES	1945	1946	ASSETS	1945	1946
Capital Subscribed	29 00,000	29 00,000	Cash	1 01,91,000	1,16,16,000
Capital paid up	28,43 000	28 80 000	Govt Securities	1 80 45,000	2 75,61,000
Reserve	11 00,000	11 00,000	Advances to customers	1,56,87,000	2,01,38,000
Deposits	3,50 43,600	4 60 40,000	Bills for collection and Foreign Bills negotiated	20,56,000	34,23,000
Due to Bankers	26 91,000	69 57 000	Landed Properties	28,000	5,000
Call Deposits from Bankers	8,00 000	15 00 000	Bank Premises and Furniture and Fixtures	1,46,000	1,47,000
Branch Adjustments	22,07,000	21 09 000	Other Assets	10,25,000	16,23,000
Bills for collection and foreign bills negotiated	20,56 000	34,23,000			
Other Liabilities	77,000	85,000			
Profit for the year	3 61,000	4 19,000			
Rs	4,71,78,000	6,45,13,000	Rs.	4,71,78,000	6,45,13,000

ವಾರಾಂತ್ಯ ವರದಿ ವಿಮರ್ಶೆ

ಬ್ರಿಟಿಷ್ ಘೋಷಣೆಯ ಪ್ರತಿಕ್ರಿಯೆ

ಒಂದು ದೃಷ್ಟಿಯಿಂದ ಇತ್ತೀಚೆಗಿನ ಬ್ರಿಟಿಷ್ ಘೋಷಣೆಯು ಅತೀ ಮಹತ್ವದೆನ್ನಬೇಕು. ಕಾರಣ ಇದುತನಕದ ಇತಿಹಾಸದಲ್ಲಿ ಪರ ರಾಷ್ಟ್ರವನ್ನಾಳಿಕೊಂಡಿದ್ದ ಜನಾಂಗವೊಂದು ಉದ್ದೇಶ ಪೂರ್ವಕವಾಗಿ ಅಧಿಕಾರವನ್ನು ಬಿಟ್ಟು ಕೊಟ್ಟದ್ದಿಲ್ಲ.

ಬ್ರಿಟಿಷ್ ಸರಕಾರದ ಈ ಕೌತುಕದ ಧೋರಣೆಗಾದರೂ ಕಾರಣವಿಲ್ಲದ್ದಿಲ್ಲ ಹಿಂದೊಂದು ಸಲ ಪಂಡಿತ್ ನೆಹರುಗಳು ಹೇಳಿದ್ದರು: "ಬ್ರಿಟಿಷರು ಭಾರತದ ಕುರಿತು ವಹಿಸಿದ ಧೋರಣೆ ಬದಲಾವಣೆಯು ಜಾಗತ್ತಿಕ ಪರಿಸ್ಥಿತಿಯ ಒತ್ತಾಯದಿಂದಲೇ ರೂಪುಗೊಂಡಿದೆ" ಎಂದು

ಅತೃಪ್ತಿಕರವಾದ ದೇಶವೊಂದನ್ನು ದಬ್ಬಾಳಿಕೆಯಲ್ಲಿ ಬಹುಕಾಲ ಹಿಡಕೊಳ್ಳಲು ಸಾಧ್ಯವಿಲ್ಲ. ಅದರಲ್ಲಿಯೂ ಇಂದು ಜಗತ್ತಿನ ಇತರ ಶಕ್ತಿ ರಾಷ್ಟ್ರಗಳು ತಮ್ಮ ಕಡೆ ಹೆಚ್ಚೆಚ್ಚಿನ ಜನಾಂಗಗಳ ಸೌಹಾರ್ದವನ್ನು ಸೆಳೆದುಕೊಳ್ಳಲು ಪ್ರಯತ್ನಿಸುತ್ತವೆ

ಒಂದು ಕಡೆ ರಶ್ಯವು ಮಧ್ಯ ಯುರೋಪಿನ ಮತ್ತು ಮಧ್ಯ ಪೂರ್ವ, ದೂರ ಪೂರ್ವದ ದೇಶಗಳಲ್ಲಿ ತನ್ನ ಪ್ರಭಾವವನ್ನು ಬೀರಲು ಪ್ರಯತ್ನಿಸುತ್ತದೆ ಆದಷ್ಟು ಹೆಚ್ಚು ದೇಶಗಳನ್ನು ತನ್ನ ಅಭಿಪ್ರಾಯಕ್ಕೆ ಒಲಿಸಿಕೊಂಡರೆ ತನ್ನ ನೂತನ ರಾಜ್ಯ ಪದ್ಧತಿಯಾದ ಕೊಮ್ಯುನಿಸಮನ್ನು ಶಾಶ್ವತಗೊಳಿಸಬಹುದೆಂದದರ ವಿಶ್ವಾಸ

ಅದೇ ರೀತಿ ಅಮೇರಿಕವಾದರೊ ಅಭಿವೃದ್ಧಿಯಾಗುತ್ತಿರುವ ತನ್ನ ಕೈಗಾರಿಕೆಗೆ ವಿಶ್ವ ವ್ಯಾಪಾರ ಕೇಂದ್ರಗಳನ್ನು ಹುಡುಕುವ ಹವ್ಯಾಸದಲ್ಲಿದೆ ಆ ಮೂಲಕ ತನ್ನ ಆರ್ಥಿಕ ಸ್ಥಿತಿಯನ್ನು ಬಲಗೊಳಿಸಿ ಜಗತ್ತನ್ನು ಒಂದು ಪ್ರಜಾಪ್ರಭುತ್ವ ರೀತಿಗೆ ಒಲಿಸಿಕೊಂಡರೆ ಶಾಂತಿಯು ಚಿರ ಬಾಳ ಬಹುದು ಅದರ ಭರವಸೆ

ಬ್ರಿಟಿಷ್ ಸರಕಾರವಾದರೊ ಭಾರತದ ವೈರತ್ವಕ್ಕಿಂತ ಅದರ ಸ್ನೇಹವೇ ಮುಂದಿನ ಪರಸ್ಪರ ಸಹಕಾರಕ್ಕೆ ಉತ್ತಮ ಸಾಧಕವೆಂಬ ತೀರ್ಮಾನಕ್ಕೆ ಬಂದಿದೆ ಅದರ ಪರಿಣಾಮವೇ ಇಂದಿನವರ ಘೋಷಣೆಗೆ ಸ್ಫೂರ್ತಿ ಕೊಟ್ಟಿತು

ಸಂದೇಹಾಸ್ಪದ ಕಲಮುಗಳು

ಬ್ರಿಟಿಷ್ ಘೋಷಣೆಯಲ್ಲಿಯೂ ಅನೇಕ ತೂತುಗಳಿವೆ ಸ್ಥೂಲವಾಗಿ ಅವರು ಪಾಕಿಸ್ಥಾನಕ್ಕೆ ಪ್ರೋತ್ಸಾಹ ಕೊಟ್ಟಂತೆ ತೋರುತ್ತದೆ ಆದರೆ ಪಾಕಿಸ್ಥಾನದಿಂದ ಆ ಪ್ರದೇಶದವರಿಗೆ ಖಂಡಿತ ಅನಾನುಕೂಲವಾಗುತ್ತದೆಂದು ಮನಗಂಡರೆ ಲೀಗು ಇತರ ಪಕ್ಷಗಳೊಡನೆ ಸಹಕರಿಸುವುದು ಖಂಡಿತ ಪ್ರತ್ಯೇಕೀಕರಣದಿಂದುಂಟಾಗುವ ಅನೇಕಾನೇಕ ಸಮಸ್ಯೆಗಳನ್ನು ಯಾರೂ ಎದುರಿಸಲಾರರು ಮುಸಲ್ಮಾನರಿಗೆ ಹಿಂದೂಗಳಿಂದ ತೊಂದರೆಗಳಾಗಬಹುದೆಂಬ ಅಂಜಿಕೆ ಕೇವಲ ಪೊಳ್ಳು ತರ್ಕವೆಂದು ಆಳವಾಗಿ ವಿಚಾರಿಸಿದರೆ ತಿಳಿಯುವುದು

ಬ್ರಿಟಿಷ್ ಘೋಷಣೆಯ ಇನ್ನೊಂದು ಕುಹಕವೆಂದರೆ ದೇಶಿ ಸಂಸ್ಥಾನಗಳಿಗೆ ಸ್ವತಂತ್ರವಾಗಿ ಮುಂದುವರಿಯಲು ಕೊಟ್ಟ ಅನುಕೂಲ ಇದೂ ಪಾಕಿಸ್ಥಾನದಷ್ಟೇ ಗಂಡಾಂತರದ್ದು ಜಗತ್ತಿನ ಅತ್ಯಂತ ಬಲಶಾಲಿ ರಾಷ್ಟ್ರವಾದ ಬ್ರಿಟನ್ನೇ ತನ್ನ ವಸಾಹತುಗಳನ್ನು ಆಳಲು ಕಷ್ಟ ಕಾಣುತ್ತಿರುವಾಗ ಒಂದು ದೇಶಿ ಸಂಸ್ಥಾನದ ಮಾಂಡಲಿಕನು ಬಹುಸಂಖ್ಯಾಕ ತನ್ನ ಜನತೆಯನ್ನು [illegible]ತರ ದಬ್ಬಾಳಿಕೆಯಲ್ಲಿಟ್ಟು ಕೊಂಡು ಆಳ ಬಹುದೆಂದರೆ ಕನಸಿನ ಭ್ರಾಂತಿ ದೇಶಿ ಸಂಸ್ಥಾನಗಳು ಬಿಟಿಷ ಭಾರತದೊಡನೆ ತಮ್ಮ ಕೈಗಳನ್ನು ಜೋಡಿಸುವುದು ಅತ್ಯ[illegible] ಪಥ [illegible]

ಅಧಿಕಾರವನ್ನು [illegible] ಬಿಟ್ಟು [illegible] ವುದ [illegible] ಬ್ರಿಟಿಷ ಘೋಷಣೆ [illegible] ತಿಳಿಸುವುದಿಲ್ಲ 1948ರ [illegible] [illegible] ಪ್ರಾಂತ್ಯಗಳಿಗೆ [illegible] [illegible] ಸ್ಥಾನವು [illegible]

ವ್ಯಾಸ್‌ರಾಯರ ಅದಲು ಬದಲು

ವೇವೆಲ್ಲರು ಚರ್ಚಿಲ್ ಪಕ್ಷದ ಸಹಾನುಭೂತಿಗಳು ಚರ್ಚಿಲ್ಲರಂತೆ ಇವರು ಮುಸ್ಲಿಂ ಲೀಗಿನ ದಾಕ್ಷಿಣ್ಯಕ್ಕೆ ಒಳಗಾಗಿದ್ದರು. ಲೀಗನ್ನು ನಡುಗಾಲ ಸರಕಾರದಿಂದ ಹೊರ ಹಾಕಲು ಅವರಿಗೆ ಮನಸ್ಸುಬಾರದು

ಹಿಂದೊಂದು ಸಲ ಅವರು ಬ್ರಿಟಿಷ್ ಸರಕಾರಕ್ಕೆ 'ಕೊಂಗ್ರೆಸು ನಡುಗಾಲದಿಂದ ಖಂಡಿತ ಹೊರಗೆ ಹೋಗುವುದಿಲ್ಲ" ವೆಂದು ಭರವಸೆ ಕೊಟ್ಟಿದ್ದರಂತೆ ಆದರೆ ಮೊನ್ನೆ ಸರ್ದಾರ್ ಪಟೇಲರು "ಲೀಗು ಹೊರ ಹೋಗದಿದ್ದರೆ ನಾವು ಹೊರಹೋಗುತ್ತೇವೆ" ಎಂದು ತಿಳಿಸಿದ್ದು ವೇವೆಲ್ಲರನ್ನು ತಬ್ಬಿಬ್ಬುಗೊಳಿಸಿತಂತೆ ಅದೇ ಬ್ರಿಟಿಷ್ ಸರಕಾರದವರೂ ವೇವೆಲ್ಲರನ್ನು ಈ ಕುರಿತು ಪ್ರಶ್ನಿಸಿರಬಹುದು

ಅಷ್ಟೇ ಅಲ್ಲ ಮಿ। ಜಿನ್ನರು ಲೀಗನ್ನು ನಡುಗಾಲದಲ್ಲಿ ಸೇರಿಸುವಾಗ ತನ್ನ ಪಕ್ಷವು ಸಂಯುಕ್ತವಾಗಿ ಸಹಕಾರದಿಂದ ವರ್ತಿಸುವುದಾಗಿ ಮೊಕ್ತಾ ಭರವಸೆ ಕೊಟ್ಟಿರುವುದಾಗಿ ವೇವೆಲ್ಲರು ನೆಹರುಗಳಿಗೆ ತಿಳಿಸಿದ್ದರು ನಡುಗಾಲದೊಳಗೆ ಬಂದೊಡನೆ ತಾನು ಹಾಗೆ ವಚನವಿತ್ತಿಲ್ಲವೆಂದು ಅದೇ ಮಿ। ಜಿನ್ನರು ಬಹಿರಂಗವಾಗಿ ಸಾರಿದರು ಅವರಿಂದ ಬರಹ ಮೂಲಕ ಆ ಭರವಸೆಯನ್ನು ತೆಗೆದುಕೊಳ್ಳದೆ ಇದ್ದುದು ವೇವೆಲ್ಲರ ದೊಡ್ಡ ತಪ್ಪು-ಲೀಗಿನ ಸಂಘದಿಂದವರು ತುಂಬಾ ಕುಖ್ಯಾತಿಗೆ ಬೀಳಬೇಕಾಯಿತು.

ಆದರೆ ಪ್ರಚಾರವಾದಂತೆ ವೇವೆಲ್ಲರು ಕುತಂತ್ರ ನಡೆಸಿಲ್ಲವೆಂಬುದಕ್ಕೆ ನೆಹರುಗಳೂ, ಆಜಾದರೂ ಅವರ ಪ್ರಾಮಾಣಿಕತೆ, ಪ್ರಾಮಾಣಿಕತೆಗಳ ಕುರಿತು ಶ್ಲಾಘಿಸಿ ಕೊಟ್ಟ ಹೇಳಿಕೆಗಳೇ ಸಾಕ್ಷಿ

ಮೌಂಟ್‌ಬೇಟನರು ಚರ್ಚಿಲ್ ಪಕ್ಷದವರೂ ಅಲ್ಲ, ಎಟ್ಲಿ ಪಕ್ಷದವರೂ ಅಲ್ಲ ಅವರು ರಾಜಕುಟುಂಬದವರು ನಡುಗಾಲ ಸರಕಾರವನ್ನು ಸಂಯುಕ್ತ ಸರಕಾರವಾಗಿ, ಸಂಯುಕ್ತ ಹೊಣೆಗಾರಿಕೆಯ ಮೇಲೆ ಕೆಲಸಗೈಯುವಂತೆ ಅವರು ನಡೆಸಲು ವಿಶೇಷ ನಿರ್ದೇಶಗಳನ್ನು ಪಡೆದು ಬರುವರೆಂದು ಊಹಾಪೋಹ ಇದೆ ಇವರು ನೆಹರುಗಳ ಸ್ನೇಹಿತರೂ ಆಗಿರುವರು ಇವರ ನೇತೃತ್ವದಲ್ಲಿ ನಡುಗಾಲ ಸರಕಾರವು ಸುಗಮವಾಗಿ ಸಾಗಬಹುದೆಂದು ನಿರೀಕ್ಷೆಯಿದೆ

ಕ. ಕೃಷ್ಣ.

KANARA COMMERCIAL BANK LTD.

PUTTUR

H O Puttur] Estd 1920 [Branch Vittal

All kinds of Banking Business transacted.

Deposits Current, Savings Cumulative Deposits are accepted

Fixed Deposits for periods of 3 months and above up to 24 months are accepted.

SEASON DEPOSITS

ARE Accepted up to 31-5 1947 Terms on application

Making "West End" Watches for you



ನಿಮಗಾಗಿ ವೆಸ್ಟ್ ಎಂಡ್ ವ್ಯಾಚ್ ತಯಾರಿ ವಿಧಾನ

ಮ್ಯೆನ್‌ಸ್ಪ್ರಿಂಗ್: ವಾಚಿಗಿದು ಚಲನಾಶಕ್ತಿ ತಳ್ಳನೆಗಟ್ಟಿ ಪಟ್ಟಿ ಬಿಗಿಯಾಗಿ ಸುತ್ತಿದ ಬೆರಲ್ ಮನೆಯಲ್ಲಿ ಮರುಸುತ್ತುವಾಗ ಚಕ ನಾಳೆ ನ ಾಲಕ ಎಸ್ಕೆಪ್ ವೀಲಿಗೆ ಶಕ್ತಿ ಬರುವುದ ವೆಸ್ಟ್ ಎಂಡಿನ ಎಲಾ ಭಾಗದಷ್ಟೇ ಎತ್ತರಿಕೆಯಿಂದಿದೂ ಮಾಡಲ್ಪಡುತ್ತದೆ—ಅತೀ ನಿಪುಣ ಕೈಗಾರಿಕೆಯ ಫಲ

ಮ್ಯಾಲು ಪೂರೈಕೆಯ ಅಡ್ಡಿಯಿದ್ದಾಗ್ಯೂ ಗಿರಾಕಿ ತೃಪ್ತಿಗಾಗಿ ಯತ್ನವಿದೆ

ವೆಸ್ಟ್ ಎಂಡ್ ವಾಚ್ ಕಂಪೆನಿ, ಬೊಂಬಾಯಿ ಮತ್ತು ಕಲ್ಕತ್ತ.



ಸೆಕ[illegible]ಡ್ ಟೂನೊ

ರೂ ಗೋಲ್ಡ್ 20 ಮೈಕ್ರೊನ್ ರೂ 85
9 ಕೆರೆಟ್ ಅಖಂಡ ಬಂಗಾರದ್ದು ರೂ 135

ಸೆ ಮ[illegible]ಡರ್ನ್ ನಿಕ್ಕೆಲ್ ಬೆಳ್ಳಿದ್ದು ರೂ. 61
ರೆಡಿಯಂ ಅಂಕೆ ಮುಳ್ಳು 2ಡಕ್ಕೂ ರೂ 3ಹೆಚ್ಚು

WEST END WATCH CO.
BOMBAY CALCUTTA

ಭಾರತದಿಂದ ಬ್ರಿಟನು ದೋಚಿಕೊಂಡ ದ್ರವ್ಯರಾಶಿ

ಕ್ಲೈವನ ಕಾಲದಿಂದ ಇದುತನಕದ ಸುಲಿಗೆ

'ನಿಷ್ಪಕ್ಷಪಾತ ವಿಚಾರಣೆಯಾಗಲಿ' — ಕುಮಾರಪ್ಪ

"ಕ್ಲೈವನ ಕಾಲದಿಂದ ಇದು ತನಕದ ಬ್ರಿಟಿಷ್ ಆಳ್ವಿಕೆಯ ದಾಖಲೆಯು ಒಂದು ದೀರ್ಘ ಮೋಸ, ಅಪ್ರಮಾಣಿಕತೆ, ವಿಶ್ವಾಸ ಘಾತಗಳ ಇತಿಹಾಸವಾಗಿದೆ." ಎಂಬ ಧಾಟಿಯನ್ನು ನಿರೂಪಿಸುತ್ತಾ ಡಾ. ಜೆ. ಸಿ. ಕುಮಾರಪ್ಪನವರು ಹರಿಜನದಲ್ಲಿ ಬರೆದ ಒಂದು ಲೇಖನದಲ್ಲಿ ಸ್ಟರ್ಲಿಂಗ್ ಬೆಲೆನ್ಸಿನ ಕುರಿತು ಬ್ರಿಟಿಷ್ ಮತ್ತು ಭಾರತ ಸರಕಾರಗಳೊಳಗೆ ನಡೆಯುತ್ತಿರುವ ಮಾತುಕತೆಗಳ ಕುರಿತು ಪ್ರಸ್ತಾಪಿಸಿದುದರ ಸಾರಾಂಶ ಹೀಗಿದೆ:

ಭಾರತದೊಡನೆ ಬ್ರಿಟಿಷರ ಸಂಬಂಧದ ಇತಿಹಾಸವನ್ನು ಪರಿಶೀಲಿಸುವಾಗ ಬ್ರಿಟಿಷರು ಎಲ್ಲಾ ರೀತಿಯ ಅಪ್ರಾಣಿಕತನಗಳ ಅನುಕೂಲತೆಯನ್ನೂ ಪಡೆದಿದ್ದಾರೆ ಮಾತ್ರವಲ್ಲ ಅನೇಕ ಸಂದರ್ಭಗಳಲ್ಲಿ ಮೋಸದ ಮತ್ತು ವಿಶ್ವಾಸಘಾತದ ಕೃತಿಗಳೂ ತೋರಿ ಬರುತ್ತವೆ. ಹೆದರಿಕೆ ಬೆದರಿಕೆಗಳಿಂದ ಹಣ ವಸೂಲು ಮಾಡುವುದು ಕ್ಲೈವನ ಕಾಲದ ಸಾಮಾನ್ಯ ಧೋರಣೆಯಾಗಿತ್ತು. ಪ್ಲೆಸಿ ಮತ್ತು ಪೊಟರ್‌ಲೂ ಕದನದ ಹೆಚ್ಚು ಕಡಿಮೆ ಐವತ್ತು ವರ್ಷ ಅವಧಿಯಲ್ಲಿ ಸುಮಾರು 100 ಕೋಟಿ ಪವನುಗಳಷ್ಟು ಸಂಪತ್ತು ಭಾರತದಿಂದ ಬ್ರಿಟಿಷ್ ಬೇಂಕುಗಳ ಕೇಪಣಾತಿಗಳಿಗೆ ತಲ್ಪಿರುತ್ತದೆ.

ಕಣ್ಣು ಕಟ್ಟು ಲೆಕ್ಕ

ಕ್ಲೈವನ ನಂತರದ ಕಾಲವು "ಗಲಿಬಿಲಿ ಲೆಕ್ಕದ್ದು. ಘನಹೊಂದಿದ ಈಸ್ಟ್ ಇಂಡಿಯಾ ಕಂಪೆನಿಯು ಗದರಿಕೆಯಿಂದ ಹಣ ಸುಲಿಯುವಷ್ಟು ಹೀನಸ್ಥಾನಮಾನದಲ್ಲಿ. ಅದರ ಭಾರತ ಚಾಲಕರು ಇಲ್ಲಿಯ ಖಜಾನೆಯೊಳಗಿನ ತೆರಿಗೆ ಹಣದಿಂದ ಮಾಲುಗಳನ್ನು ಖರೀದಿ ಮಾಡಿ ಯುರೋಪಿಗೆ ಕಳುಹಿಸಿ ತಮ್ಮ 'ಸ್ವಂತ ಲೆಕ್ಕ'ದಲ್ಲಿ ಮಾರಿದರು. ಹೀಗೆ 1793ರಿಂದ 1812ರ ವರೇಗೆ ತಬ್ಬೇಲು ಮಾಡಿದ ಲೆಕ್ಕದ ಹಣವು ಸುಮಾರು 26 ಕೋಟಿ ಪವನುಗಳಷ್ಟಾಗುತ್ತದೆಂದು 'ಈಸ್ಟ್ ಇಂಡಿಯಾ ಕಂಪೆನಿಯ ವ್ಯವಹಾರ ಇತಿಹಾಸ'ವೆಂಬ ಪರಿಶೋಧನಾ ಪಂದಿಯಲ್ಲಿ ತಿಳಿಸಿದೆ.

ವಿಕ್ಟೋರಿಯಾ ರಾಣಿಯ ಕಾಲದಲ್ಲಿ ಬ್ರಿಟಿಷ್ ಸರಕಾರವು ಕ್ಲೈವನ ಕಾಲದ ಚೌರ್ಯವೃತ್ತಿಯನ್ನಾಗಲಿ ಈಸ್ಟ್ ಇಂಡಿಯಾ ಕಂಪೆನಿಯ ಮೋಸದ ಲೆಕ್ಕದ ಕೃತಿಯನ್ನಾಗಲಿ ಮಾಡುವುದು ಘನಸ್ಥಿಕೆಯಲ್ಲವೆಂದು ಬಗೆಯಿತು. ಕೊಳ್ಳೆಯು ಅವರಿಗೆ ಬೇಕಾಗಿತ್ತಾದರೂ ಪ್ರಾಮಾಣಿಕರೆಂದು ತೋರಿಸಿಕೊಳ್ಳಲು ಅವರು ಆತುರಪಟ್ಟರು. ಆಗ ಅವರು ತುದಿಯಿಂದ ಕೊನೆ ತನಕ ಸುಳ್ಳು ಲೆಕ್ಕಗಳನ್ನು ಬರೆಯಿಸ ತೊಡಗಿದರು. ಭಾರತಕ್ಕೆ ಯಾವ ಸಂಬಂಧವಿಲ್ಲದ ಆಫ್ಘಾನ್, ಬರ್ಮಾ, ಚೀನಾ ಪರ್ಸಿಯಾ ಮಾತ್ರವಲ್ಲ ಅತೀ ದೂರ ಈಜಿಪ್ಟ್ ಮತ್ತು ಅಬಿಸೀನಿಯಾ ಯುದ್ಧಗಳ ಖರ್ಚು ಹಿಂದೀ ಖಜಾನೆಯ ಲೆಕ್ಕಕ್ಕೆ ಖರ್ಚು ಬರೆಯಲಾಯಿತು. ಇದು ಸುಮಾರು 700 ಕೋಟಿ ರೂಪಾಯಿಗಳಷ್ಟಾಗುತ್ತದೆ. ವೆಬ್ಲಿ ಕಮಿಶನಿನವರು ಮಾಡಿದ ವರದಿಯನ್ನು ಇಣಿಕಿ ನೋಡಿದರೆ ಈ ಕುರಿತಾದ ಅನೇಕ ಮೋಸದ ಲೆಕ್ಕಗಳು ಗೋಚರವಾಗುತ್ತದೆ.

ಚಿತ್ರಾಯದ ಉಡುಗರೆ

ಪ್ರಾಚೀನ ಯೆಹೂದಿ ಸಾಂಪ್ರದಾಯವೊಂದಿದೆ. ಓರ್ವ ತಂದೆಯ ಸೊತ್ತನ್ನು ಮಗನಾದವನು "ಇದು ನನ್ನ ಉಡುಗರೆ" ಎಂದರೆ ಸಾಕು. ಮತ್ತೆ ಅದೆಲ್ಲ ಅವನದಾಗುವುದು. ಮುಂದೆ ಅವನಿಗೆ ತನ್ನ ಹೆತ್ತವರನ್ನು ಸಾಕುವ ಜವಾಬ್ದಾರಿ ಕೂಡ ತಪ್ಪುವುದು. ಎಲ್ಲಾ ಜವಾಬ್ದಾರಿಕೆಯಿಂದ ತಪ್ಪಿಸಿಕೊಳ್ಳಲು ಇದೊಂದು ಒಳ್ಳೇ ಉಪಾಯ.

ಇಪ್ಪತ್ತನೆಯ ಶತಮಾನದಲ್ಲಿ ಜಗತ್ತಿನ ಕಣ್ಣಿಗೆ ಮಣ್ಣೆರಚಲು ಬ್ರಿಟನ್ನು ಯಾವುದಾದರೂ ಇಂತಹ ಉಪಾಯಗಳನ್ನು ಕಂಡು ಹಿಡಿಯಬೇಕಾಯಿತು. ಮೊದಲನೇ ಜಾಗತ್ತಿಕ ಯುದ್ಧದಲ್ಲಿ ಬ್ರಿಟನ್ನು ಭಾರತದಲ್ಲಿ ತನ್ನ ಭದ್ರತೆಗಾಗಿ ಹೇರಳ ದ್ರವ್ಯವನ್ನು ಖರ್ಚು ಮಾಡಬೇಕಾಯಿತು. ಮೊದಲು ಸಾಲವಾಗಿ ಭಾರತ ಖಜಾನೆಯಿಂದ ಖರ್ಚು ಮಾಡಿಸಲಾಯಿತು. ನಂತರ ತಮ್ಮ ವ್ಯಾಸ್‌ರಾಯ ಪ್ರತಿನಿಧಿಗಳ ಮೂಲಕ ಆ ಹಣವು ಬ್ರಿಟನಿಗೆ ಭಾರತದ ಉಡುಗೊರೆ ಎಂದು ಘೋಷಣೆ ಮಾಡಿಸಲಾಯಿತು!!

ಬೃಹದ್ ಮೋಸ್

ಕಳೆದ ಯುದ್ಧದಲ್ಲಿ ಬ್ರಿಟನು ಇನ್ನೊಂದು ಹೆಜ್ಜೆ ಮುಂದರಿಯಿತು. ಭಯಂಕರ ವಿನಾಶಕಾರಿ ಯುದ್ಧವೊಂದನ್ನು ನಿರ್ವಹಿಸಲು ಅದಕ್ಕೆ ಹೇರಳ ದ್ರವ್ಯದವಶ್ಯಕತೆ ಬಿತ್ತು. ಮಿಲಿಯಾವಧಿ ಬೆಲೆಯ ತನ್ನ ಸೊತ್ತನ್ನು ಮಾರಿದ ಬ್ರಿಟನು ಇಂದು ದೀವಾಳಿಗರಿಯು ಕಡೆಧಾವಿಸುತ್ತದೆ. ಆದುದರಿಂದ ಭಾರತದ ಕಡೆ ಅದರ ದೃಷ್ಟಿ ಸಹಜವಾಗಿ ಆಕರ್ಷಿಸಲ್ಪಟ್ಟಿದೆ. ತಮ್ಮ ಶಕ್ತಿ ಯುಕ್ತ ಹಸ್ತಗಳಿಂದವರು ಕೋಟಿ ಗಟ್ಲೆ ಬೆಲೆ ಬಾಳುವ ಆಹಾರ ವಸ್ತುಗಳನ್ನು ಬಸಿದುಕೊಂಡು ಇಲ್ಲಿ "ಕೇಳಿದಾಗ ಕೊಡು" ನೋಟು ರಾಶಿಯನ್ನು 'ಭದ್ರತೆ'ಯಾಗಿ ಬಿಟ್ಟು ಬಿಟ್ಟಿರುವರು. ಇದು ಇನ್ನೊಂದು ನೈತಿಕ ಮತ್ತು ನ್ಯಾಯ ವಿರೋಧವಾದ ವಿಶ್ವಾಸ ಘಾತ.

ನಿಷ್ಪಕ್ಷಪಾತ ವಿಚಾರಣೆಯಾಗಲಿ

ಮೇಲಿನ ಸಂಗತಿಗಳಿಂದ ಬ್ರಿಟನ್ನು ತನ್ನ ಹಣಕಾಸಿನ ವ್ಯವಹಾರದಲ್ಲಿ ಯಾವ ಯಾವ ತರದ ಮಾಟ ಮೋಡಿಗಳನ್ನು ಮಾಡಿರುತ್ತದೆಂದು ಅಂದಾಜಾಗುತ್ತದೆ. ಈಗ ಬ್ರಿಟನು ಭಾರತಕ್ಕೆ ಕೊಡಬೇಕಾಗಿರು ಸ್ಟರ್ಲಿಂಗ್ ಹಣವು ಸುಮಾರು 1600 ಕೋಟಿಗೆ ಮಿಗುತ್ತದೆಂದು ಊಹಿಸಲಾಗಿದೆ. ಈ ಬಾಕಿಯನ್ನು ಬ್ರಿಟಿಷರು ಚಾಲ್ತಿ ಲೆಕ್ಕದಲ್ಲಿರಿಸಿದ್ದರು: ನಮ್ಮ ಜನತಾ ಪ್ರತಿನಿಧಿಗಳಿಗೆ ಅದನ್ನು ತನಿಖಿ ಮಾಡುವ ಸಂದರ್ಭವಿರಲಿಲ್ಲ. ಆದುದರಿಂದ ಈಗ ಯಾವ ತರದ ಇತ್ಯರ್ಥ ಮಾಡುವ ಮೊದಲು ಈ ಚಾಲ್ತಿ ಲೆಕ್ಕಗಳನ್ನು ಆಮೂಲಾಗ್ರವಾಗಿ ಪರಿಶೋಧಿಸುವುದು ಅತ್ಯಾವಶ್ಯಕ. ಅದಕ್ಕಾಗಿ ಒಂದು ನಿಷ್ಪಕ್ಷಪಾತ ಪರಿಶೋಧನಾ ಸಮಿತಿಯನ್ನೇರ್ಪಡಿಸಬೇಕು. ಈ ಚಾಲ್ತಿ ಲೆಕ್ಕಾಚಾರಗಳು ಕ್ಲೈವನ ಕಾಲದಿಂದ ಮುಂದರಿಸಿ ಬಂದಿವೆ. ಇದುತನಕ ಜನತಾ ಪ್ರತಿನಿಧಿಗಳ ತನಿಖೆಗೆ ಸಿಕ್ಕಿಲ್ಲ. ಆದುದರಿಂದ ಈಗ ಅಧಿಕಾರದಲ್ಲಿರುವ ರಾಷ್ಟ್ರೀಯ ಸರಕಾರದವರು ಈ ಕುರಿತು ಯಾವ ಹೊಣೆಗಾರಿಕೆಯನ್ನು ತೆಗೆದುಕೊಳ್ಳುವ ಮೊದಲು ಅದನ್ನು ಕೂಲಂಕಶ ಶೋಧನೆಗೊಳಿ ಮಾಡುವುದು ಅಗತ್ಯ.

ವಿಜ್ಞಾನ ಪ್ರಪಂಚ

೪ ಸಾವಿರ ಪಾಲು ಸಿಹಿ

ಕಬ್ಬಿನ ರಸವೂ ಸಿಹಿ. ಅದಕ್ಕಿಂತ ಬೆಲ್ಲ ಸಿಹಿ, ಬೆಲ್ಲಕ್ಕಿಂತ ಸಕ್ಕರೆ ಸಿಹಿ. ಆದರೆ ಸಿಹಿಯು ಸಕ್ಕರೆಯೊಳಗೆ ಮಾತ್ರವಲ್ಲ ಸೆಕ್ರೀನ್ ಎಂಬ ರಾಸಾಯನಿಕ ಪದಾರ್ಥವೊಂದು ಸಕ್ಕರೆಗಿಂತ 700 ಪಾಲಷ್ಟು ಸಿಹಿಯಾಗಿದೆ.

ಈಗ ಬೆಂಜಿನ್ ಎಂಬ ರಾಸಾಯನಿಕ ಧಾತುವಿನಿಂದ ಮತ್ತೊಂದು ಅತ್ಯಂತ ಸಿಹಿ ವಸ್ತುವನ್ನು ತಯಾರಿಸಿರುತ್ತಾರೆ. ಇದು ಸಕ್ಕರೆಗಿಂತ 4 ಸಾವಿರ ಪಾಲಷ್ಟು ಸಿಹಿಯಾಗಿದ್ದು ಒಂದು ಚೂರನ್ನು ನಾಲಿಗೆಯಲ್ಲಿಟ್ಟರೆ ಅರ್ಧ ಗಂಟೆ ಬಾಯಿಯ ಸಿಹಿ ಹೋಗುವುದಿಲ್ಲ. ಇದನ್ನು ಡೆನ್ಮಾರ್ಕಿನಲ್ಲಿ ಕಂಡು ಹಿಡಿದಿದ್ದಾರೆ. ಚಲಾವಣೆಗೆ ಬಂದಾಗ ಸಕ್ಕರೆಯ ಕೊರತೆ ಕ್ಷಣದಲ್ಲಿ ನೀಗಲು ಅಡಿಯಿಲ್ಲ.

ಕೋಪದಿಂದ ಹಲ್ಲು ನೋವು

ಭಾವನಾತ್ಮಕ ಮತ್ತು ಮಾನಸೀಕ ಅಲ್ಲಕಲ್ಲೋಲದಿಂದ ಹೊಟ್ಟೆ ನೋವು, ಹೊಟ್ಟೆ ಹುಣ್ಣು, ರಕ್ತ ಒತ್ತಡ ಮೊದಲಾದ ವ್ಯಾಧಿಗಳುಂಟಾಗುತ್ತದೆಂದು ಕಂಡು ಹಿಡಿಯಲ್ಪಟ್ಟಿದೆ. ಈ ಅವ್ಯವಸ್ಥೆಗಳು ಹೆಚ್ಚಿನ ಪಾಲಿಗೆ ಹಲ್ಲಿನ ಅನಾರೋಗ್ಯದಿಂದಲೂ ಉಂಟಾಗುತ್ತವೆಂದು ಸಂಯುಕ್ತ ಅಮೇರಿಕದ ಓರ್ವ ವೈದ್ಯ ತಜ್ಞರು ತಿಳಿಸುತ್ತಾರೆ.

"ಜನರು ನಿಜವಾಗಿ ಹಲ್ಲುಗಳಿಂದ ದ್ವೇಷಿಸುತ್ತಾರೆ" ಎಂದವರು ತಿಳಿಸುತ್ತಾ ತಮ್ಮ ತರ್ಕವನ್ನು ಹೀಗೆ ವಿವರಿಸುತ್ತಾರೆ:

"ಎಂಜಲು ಜೊಲ್ಲಿನಲ್ಲುಂಟಾಗುವ ಬದಲಾವಣೆಯಿಂದ ಹಲ್ಲು ನೋವುಗಳುಂಟಾಗುವವು. ಎಂಜಲು ಹಲ್ಲುಗಳನ್ನು ರಕ್ಷಿಸುವ ಒಂದು ಲೇಪ. ಅದು ರಕ್ತದ ಒಂದು ನಾಜೂಕು ರೂಪ. ಒಬ್ಬನ ಆರೋಗ್ಯ ಕೆಟ್ಟಿತೆಂದರೆ ಅವನ ಎಂಜಲಿನಲ್ಲಿ ಬದಲಾವಣೆಯಾಗುತ್ತದೆ. ಆಗ ಎಂಜಲ್ಲಿನರುವ ರಾಸಾಯನಿಕ ವಸ್ತುಗಳು ಬದಲಾವಣೆ ಹೊಂದಿ ಹಲ್ಲು ನೋವುಗಳುಂಟಾಗುತ್ತವೆ. ಹಲ್ಲು ನೋವಿನಿಂದ ಹೊಟ್ಟೆಯುಲ್ಲೂ ವ್ಯಾಧಿಗಳುಂಟಾಗುವವು."

ಹೃತ್ಕ್ರಿಯೆ ಪುನರ್ಚಲನೆ

ಶಸ್ತ್ರಕ್ರಿಯೆ ಮಾಡುತ್ತಿರುವಾಗ ರೋಗಿಗಳ ಹೃದಯ ಕ್ರಿಯೆಯು ಒಂದೇ ಸವನೆ ನಿಂತು ಹೋಗುವುದುಂಟು. ಡಾ॥ ಹೆಮಿಲ್ಟನ್ ಬೈಲಿ ಎಂಬ ಲಂಡನಿನ ಶಸ್ತ್ರ ಚಿಕಿತ್ಸಾ ತಜ್ಞರು ಹೀಗೆ ನಿಂತ ಹೃತ್ಕೋಶವನ್ನು ಪುನರ್ಚಲನೆ ಮಾಡುವವೊಂದು ವಿಧಾನವನ್ನು ವೈದ್ಯರಿಗೆ ಶಿಫಾರಸು ಮಾಡುತ್ತಾರೆ.

ಹೃದಯ ಚಲನೆನಿಂತ ಕೂಡಲೇ ಹೊಟ್ಟೆಗೊಂದು ಗಾಯ ಹಾಕಿ ಉದರ ಪರೆಯ ಕೆಳಗಿಂದ ಕೈಯನ್ನು ನೇರವಾಗಿ ಎದೆ ಗುಂಡಿಗೆಗೆ ತಲುಪುವಂತೆ ದಾರಿ ಮಾಡಿ ಅಲ್ಲಿ ಮೆಲ್ಲಗೆ ಅದನ್ನು ಒತ್ತಿ ಬಿಡಬೇಕು ಎರಡು ಮೂರು ಸಲ ಹೀಗೆ ಮಾಡುವುದರಿಂದ ಹೃತ್ಕೋಶವು ಪುನ: ಕೆಲಸಕ್ಕಾರಂಬಿಸುವುದಂತೆ.

ಮೂರು ಸಂದರ್ಭದಲ್ಲಿ ಮೇಲ್ಕಂಡ ಡಾಕ್ಟರರು ಯಶಸ್ವಿಯಾಗಿ ಹೀಗೆ ಮಾಡಿರುವರೆಂದು ತಿಳಿಸುತ್ತಾರೆ. ಹೃತ್ಕ್ರಿಯೆನಿಂತ ಒಂದೆರಡು ಮಿನಿಟುಗಳಲ್ಲಿ ಮಾತ್ರ ಇದು ಸಾಧ್ಯ, ಆದುದರಿಂದ ಕೆಲಸವು ತ್ವರೆಯಾಗಿ ನಿರ್ವಹಿಸಬೇಕು.

ಕಫ, ಶೀತ, ಎದೆನೋವುಗಳನ್ನು ದಿನಂಪ್ರತಿ ಪೆಪ್ಸನ್ನು ತೆಗೆದು ಕೊಳ್ಳುವುದರಿಂದ ಗುಣಪಡಿಸಿರಿ

ಸಾಂಕ್ರಾಮಿಕ ಕಫ, ಎದೆನೋವು, ಶೀತಾದಿಗಳನ್ನು ಬೆಳೆಯಬಿಡಬೇಡಿರಿ. ಅದು ನಿಮ್ಮ ಜೀವನಾಂದವನ್ನು ಕೆಡಿಸುವುದು. ಕೆಲವು ಪೆಪ್ಸುಗಳನ್ನು ಕೈಯಲ್ಲಿ ತೆಗೆದುಕೊಳ್ಳಿ. ಅಗತ್ಯಬಿದ್ದಾಗೆಲ್ಲ ಈ ವಿಷಹಾರೀ ಶ್ವಾಸಯೋಗ್ಯ ಮಾತ್ರೆಗಳನ್ನು ಸೇವಿಸಿರಿ.

ಬಾಯಲ್ಲಿ ಹಾಕಿದ ಕೂಡಲೇ ಕರಗುವುದು. ಪೆಪ್ಸು ಮಾತ್ರೆಗಳು ಉತ್ತಮ ಔಷಧಿತತ್ವದಿಂದ ಕೂಡಿದ ರಸವನ್ನು ನಿಮ್ಮ ಶ್ವಾಸಕೋಶದ ನೋವವನ್ನು ಪೆಪ್ಸು ಗುಣಗೊಳಿಸಿ ಕಫವನ್ನು ನಿಲ್ಲಿಸುವುದು. ಕಂಠನಾಳವನ್ನು ಸರಿಗೊಳಿಸುವುದು. ಕೆಟ್ಟ ಶೀತ, ಇಂಫ್ಲುಯೆಂಜಾ, ಕಫ, ಮೊದಲಾದುವುಗಳಿಗೆಲ್ಲ ಇದು ಅತ್ಯುತ್ತಮ ಔಷಧಿ.

ಪೆಪ್ಸನ್ನು ಕೊಂಡುಕೊಳ್ಳಿರಿ.

PEPS

ವಿಷಹಾರೀ ಶ್ವಾಸಯೋಗ್ಯಮಾತ್ರೆಗಳು

ಸರ್ಕಲ್ ಕಮಿಟಿಗಳ ರಚನೆ

ಇದೇ ಕಳೆದ ತಾ. 16-2-'47ನೇ ಸೋಮವಾರ ಕಾಂಗ್ರೆಸ್ ಕಚೇರಿಯಲ್ಲಿ ನೆರೆದ ಕಾರ್ಯಕಾರಿ ಮಂಡಲದ ಸಭೆಯಲ್ಲಿ ಮಂಜೂರಾದ ನಿರ್ಣಯಗಳ ಮೇರೆಗೆ ಎಲ್ಲ ಸರ್ಕಲ್ ಕಾಂಗ್ರೆಸ್ ಕಮಿಟಿಗಳು ಇನ್ನೇ ಬರುವ ಮಾರ್ಚ ತಾ 15 ರೊಳಗೆ ಚುನಾವಣೆ ಹೊಂದತಕ್ಕದ್ದೆಂದು ನಿರ್ಣಯವಾಗಿ ಆ ಬಗ್ಗೆ ಬೇರೆ ಬೇರೆ ಸರ್ಕಲ್‌ಗಳಿಗೆ ಬೇರೆ ಬೇರೆ ಚುನಾವಣಾಧಿಕಾರಿಗಳನ್ನು ನೇಮಿಸಲಾಗಿದೆ. ಅವುಗಳ ಪಟ್ಟಿಯನ್ನು ಇದರ ಅಂತ್ಯದಲ್ಲಿ ಕೊಡಲಾಗಿದೆ

ಚುನಾವಣೆಗೆ ಈ ಕೆಳಗಿನ ನಿಯಮಗಳನ್ನು ಅನುಸರಿಸತಕ್ಕದ್ದು

ಪ್ರತಿಯೊಂದು ನೂರು ಮಂದಿ ಸದಸ್ಯರಿಗೆ ಒಬ್ಬ ಪ್ರತಿನಿಧಿಯಂತೆ ಕನಿಷ್ಠಾವಧಿ 7 (ಏಳು) ಮತ್ತು ಪರಮಾವಧಿ 12 ಮಂದಿ ಕಮಿಟಿಯ ಮೆಂಬರರನ್ನು ಚುನಾಯಿಸತಕ್ಕದ್ದು.

ಕೆಲವು ಮತದಾರ ಸಂಘಗಳು ಒಬ್ಬನನ್ನೇ ತನ್ನ ಪ್ರತಿನಿಧಿಯಾಗಿ ಆರಿಸುವ ಕ್ರಮವಿದೆ ಅಂಥವುಗಳು ಒಬ್ಬನನ್ನೇ ಆರಿಸಬೇಕು

ಮತದಾನ (ಓಟು)ವು ಗುಪ್ತವಾಗಿರಬೇಕು

ಆಯಾ ಚುನಾವಣಾಧಿಕಾರಿಗಳು ತಮಗೆ ಬೇಕಾದ ಮತದಾನ ಪತ್ರ ಪಟ್ಟಿಗೆ ಮುಂತಾದವುಗಳನ್ನೆಲ್ಲ ತಾವೇ ತಯಾರಿಟ್ಟುಕೊಳ್ಳತಕ್ಕದ್ದು

ಮತದಾನ ಸಂಘಗಳ ಹೆಸರುಗಳನ್ನು ಪ್ರಕಟಿಸಿದ ಕೂಡಲೇ ಯಾವದೇ ತರದ ಆಕ್ಷೇಪಗಳಿದ್ದರೆ ಚುನಾವಣಾಧಿಕಾರಿಗಳು ಕಮಿಟಿಯಾಗಿ ಕುಳಿತು ಆಕ್ಷೇಪಗಳನ್ನು ಕೇಳಿ ಅವುಗಳ ವಿಷಯ ಕೊನೆಯ ತೀರ್ಮಾನವನ್ನು ಮಾಡಿಕೊಳ್ಳಬೇಕು

ಚುನಾವಣಾಧಿಕಾರಿಗಳೇ "ಪೋಲಿಂಗ್ ಆಫೀಸರರನ್ನು ನೇಮಿಸತಕ್ಕದ್ದು

ಚುನಾವಣೆ ಬಗ್ಗೆ ಯಾರದೇ ತಕರಾರು ಇದ್ದರೆ ಚುನಾವಣೆಯ ನಂತರ ಏಳು ದಿವಸಗಳೊಳಗೆ 5 ರೂಪಾಯಿಗಳ ಸಮೇತ ತನ್ನ ಆಕ್ಷೇಪಣಾ ಅರ್ಜಿಯನ್ನು ಚುನಾವಣಾಧಿಕಾರಿಗಳಲ್ಲಿ ಕೊಡತಕ್ಕದ್ದು

ಜಿಲ್ಲೆಯ ಚುನಾವಣೆಗಳ ಪಂಚ ಮಂಡಲದವರು ಕೊಟ್ಟ ತೀರ್ಮಾನದ ಮೇಲೆ "ಅಪ್ಪೀಲು ಮಾಡುವದಿದ್ದರೆ, ಸದ್ರಿ ತೀರ್ಮಾನದ ನಂತರದ ಏಳು ದಿವಸಗಳೊಳಗೆ 10 ರೂಪಾಯಿಗಳ ಸಹಿತ ಪ್ರಾಂತಿಕ ಪಂಚ ಮಂಡಲಕ್ಕೆ ಆಕ್ಷೇಪಣೆ ಅರ್ಜಿ ಬರೆಕೊಳ್ಳತಕ್ಕದ್ದು

ಆಯಾ ಸರ್ಕಲಿನ ಯಾವತ್ತೂ ವೆಚ್ಚಗಳನ್ನು ಆಯಾ ಸರ್ಕಲ್ ಕಮಿಟಿಗಳೇ ವಹಿಸಿಕೊಳ್ಳತಕ್ಕದ್ದು

ಉಮೇದ್ವಾರರಿಗೆ ಮತದಾರರ ಪಟ್ಟಿಯನ್ನು ಮತ್ತು ಅವರು ಕೇಳುವ ನ್ಯಾಯವಾದ ಯಾವತ್ತೂ ಸಹಾಯವನ್ನು ಸರ್ಕಲ್ ಕಮಿಟಿಯ ಅಧಿಕಾರಿಯಾಗಲೀ ಇನ್ನಿತರ ಸದಸ್ಯರಾಗಲೀ ಮಾಡತಕ್ಕದ್ದು

ಮತದಾರ ಸಂಘಗಳ ಪಟ್ಟಿಯನ್ನು ಆಯಾ ಚುನಾವಣಾಧಿಕಾರಿಗಳ ಮನೆಯಲ್ಲಿ ಅಥವಾ ಆಫೀಸಿನ ಕಚೇರಿಯಲ್ಲಿ ಬಂದು ನೋಡಬೇಕು

ಚುನಾವಣೆಯನ್ನು ಇದೇ ಬರುವ ಮಾರ್ಚಿ 1ರೊಳಗೆ ಮಾಡಿ ಮುಗಿಸಬೇಕು ಸರ್ಕಲಿನ ಹೆಸರು ಚುನಾವಣಾಧಿಕಾರಿಯ ಹೆಸರನ್ನು ಈ ಕೆಳಗೆ ಕೊಡಲಾಗಿದೆ

ಉಡುಪಿ ಶ್ರೀ ಲಕ್ಷ್ಮೀನಾರಾಯಣ ನ್ಯಾಕ ಉಪ್ಪಿನಂಗಡಿ—ವೇಣುಗೋಪಾಲ ನ್ಯಾಕ ಕಟಪಾಡಿ ಶ್ರೀ ಲಕ್ಷ್ಮೀನಾರಾಯಣನ್ಯಾಕ ಕಾರ್ಕಳ ಶ್ರೀ ಎಂ ಡಿ ಅಧಿಕಾರಿ ಕಾಸರಗೋಡು—ಶ್ರೀ ಎಂ ಉಮೇಶ ರಾವ್ ಕುಂದಾಪುರ—ಶ್ರೀ ಟಿ ಎಸ್ ಸೂರಪ್ಪ ಶೆಟ್ಟಿ ಬಸರೂರು ಪಾಣೆ ಮಂಗಳೂರು— ಶ್ರೀ ಎನ್. ಉಪೇಂದ್ರ ನ್ಯಾಕ ಪುತ್ತೂರು-ಶ್ರೀ ಕೆ ರಾಮ ಶುಡ್ವ. ಬಾರಕೂರು ಪ್ರಧಾನ ಕಾರ್ಯದರ್ಶಿಗಳು ವ್ಯವಸ್ಥೆ ಮಾಡುವರು. ಬಂಟವಾಳ - ಶ್ರೀ ಎನ್. ಉಪೇಂದ್ರ ನ್ಯಾಕ ಮೂಲ್ಕಿ—ಶ್ರೀ ಪಿ ರಾಮಚಂದ್ರ ಭಟ್ಟ, ಮಂಗಳೂರು—ಶ್ರೀ ಎಚ್. ನಾರಾಯಣರಾವ್. ಮಂಜೇಶ್ವರ-ಶ್ರೀ ಅಮೃತಕೃಷ್ಣರಾವ್. ಹೊಸದುರ್ಗ—ಶ್ರೀ ಕೆ ಅಚ್ಯುತ ಶೆಣ್ಯೆ

ಜಿಲ್ಲಾ ಪರಿಚಯ

ರಾಷ್ಟ್ರ ಸೇವಾದಲದ ವಿರುದ್ಧ ಪ್ರದರ್ಶನಕ್ಕೆ ಕಾರಣರಾರು? ಕಳೆದ ತಾ. 20ರ ಸಂಜೆ ಮಂಗಳೂರಿನ ಕೆನರಾ ಹ್ಯಾಸ್ಕೂಲಿನಲ್ಲಿ ಆರ್ ಎಸ್ ಎಸ್ಸಿನ ಜಿಲ್ಲಾ ಪ್ರದರ್ಶನವೊಂದು ನಡೆದಿದ್ದಾಗ ಆರ್ ಎಸ್ ಡಿ ಯವರು ವಿರುದ್ಧ ಪ್ರದರ್ಶನ ಮಾಡಿದುದೇಕೆಂಬ ಕುರಿತು ನಾನಾ ತಪ್ಪು ಭಾವನೆಗಳು ಹಬ್ಬಿರುತ್ತವೆ ಆದುದರಿಂದ ಆ ಕುರಿತು ಹೇಳಿಕೆಯೊಂದನ್ನು ಹೊರಡಿಸುವ ಆವಶ್ಯಕತೆಯು ಬಂತು

ಕೆನರಾ ಹ್ಯಾಸ್ಕೂಲಿನ ಕೆಲಮಂದಿ ಅಧಿಕಾರಿಗಳು ಆರ್ ಎಸ್ ಎಸ್ಸಿನ ಪಕ್ಷಪಾತಿಗಳಾಗಿ ಆರ್ ಎಸ್ ಡಿ ಯನ್ನು ಅನಾದಾರ ದೃಷ್ಟಿಯಿಂದ ನೋಡುತ್ತಿದ್ದಾರೆಂದು ಕೆಲವು ಆರೋಪಗಳು ನಮ್ಮ ಬಳಿಗೆ ಆಗಾಗ ಬರುತ್ತಿದ್ದವು ಆದರೆ ಅವುಗಳಿಗೆ ಗಮನ ಕೊಡಲಿಲ್ಲ

ಕಳೆದ ತಾ 20ರಲ್ಲಿ ನಡೆದ ಆರ್ ಎಸ್ ಎಸ್ಸಿನ ಜಿಲ್ಲಾ ಪ್ರದರ್ಶನವು ಕೆನರಾ ಹ್ಯಾಸ್ಕೂಲಿನ ಅಧಿಕಾರಿಗಳ ಪಕ್ಷ ಪಕ್ಷಿಯತೆಯನ್ನು ಸಿದ್ಧಗೊಳಿಸಿರುವುದು

ಶಿವರಾತ್ರಿ ಸಂಬಂಧವಾದ ಶಾಲೆಯ ರಜಾದಿನವು ತಾ 19 ಆಗಿದ್ದರೂ ಹಲವು ಮಂದಿ ವಿದ್ಯಾರ್ಥಿಗಳು ಆಕ್ಷೇಪಿಸಿದ್ದರೂ ಗಣಿಸದೆ ವಿದ್ಯಾರ್ಥಿಯ ಸಮ್ಮತಿಯ ಸಹಿ ಪಡೆದ ನೆಪದಿಂದ ಆರ್ ಎಸ್ ಎಸ್ಸಿನ ಪ್ರದರ್ಶನಕ್ಕೆ ಅನುಕೂಲವಾಗುವಂತೆ ತಾ 20ನ್ನು ರಜಾ ದಿನವಾಗಿ ಮಾಡಿದರು

ಆ ಮೇಲೆ ಕೆನರಾ ಹ್ಯಾಸ್ಕೂಲಿನ ಒಂದು ಮೂಲೆಯಲ್ಲಿ ಪ್ರತಿದಿನ ನಡೆಯುತ್ತಿದ್ದ ಆರ್ ಎಸ್ ಡಿ ಶಾಖೆಯನ್ನು ತಾ 20ರಲ್ಲಿ ಒಂದು ಮಾಡಬೇಕೆಂದು ಕೇವಲ ಶಾಖಾನಾಯಕ ಮತ್ತು ಸೈನಿಕರೊಡನೆ ತಿಳಿಸಿದರು ಆದರೆ ಜಿಲ್ಲಾ ಸಂಘಟಕರನ್ನಾಗಲೀ ಕಾಂಗ್ರೆಸ್ ಕಮಿಟಿಯ ಅಧಿಕಾರಿಗಳನ್ನಾಗಲೀ ಕರೆದು ಯಾವುದನ್ನೂ ತಿಳಿಸಲಿಲ್ಲ

ಈ ಸಂಗತಿಯನ್ನು ತಿಳಿದ ನಾನು ಜಿಲ್ಲಾ ಸಂಘಟಕ ಮತ್ತು ಇತರ ಸೇವಾದಲದ ಅಧಿಕಾರಿಗಳೊಂದಿಗೆ ಕೆನರಾ ಹ್ಯಾಸ್ಕೂಲಿನ ಮೆನೇಜರರಾದ ಶ್ರೀ ಎಂ ಮಾಧವರಾಯರ ಮನೆಗೆ ಹೋಗಿ ಸಂಗತಿಯೇನೆಂದು ವಿಚಾರಿಸಿದೆವು ಅವರು ಒಮ್ಮೆಲೆ ಉದ್ವೇಗಗೊಂಡು ಏನೇನೆಲ್ಲಾ ಮಾತಾಡಿದರೂ ಆ ಮೇಲೆ ವಿವೇಕ ತಳೆದು ಸೇವಾದಳದ ಅನುಸಿತ್ಯದ ಕಾರ್ಯಕಲಾಪವನ್ನು ಯಥಾ ಪ್ರಕಾರ ಮೊದಲಿದ್ದ ಸ್ಥಳದಲ್ಲೇ ನಡೆಸಬಹುದೆಂದು ಸಮ್ಮತಿಸುವ ಉಧಾರತೆ ತೋರಿಸಿದರು ಈ ಸಂದರ್ಭದಲ್ಲಿ ನಮ್ಮ ಸೈನಿಕರು ಶಾಂತವಾಗಿ ಶಿಸ್ತಿನಿಂದ ನಡೆಯುವಂತೆ ನೋಡುವೆವೆಂದು ಜಿಲ್ಲಾ ಸಂಘಟಕರೂ ನಾನೂ ಭರವಸೆ ಕೊಟ್ಟೆವು

ಈ ಪ್ರಕಾರ ತಾ 20ನೇ ಬೆಳಗ್ಗೆ ಸೇವಾದಳದ ಬೆಳಗ್ಗಿನ ಶಾಖೆಯು ಕೆನರಾ ಹ್ಯಾಸ್ಕೂಲಿನಲ್ಲಿ ಯಥಾಪ್ರಕಾರ ನಡೆಯಿತು ಅದಕ್ಕೆ ಯಾರೂ ಆತಂಕ ಮಾಡಲಿಲ್ಲ

ಆದರೆ ಸಂಜೆ ನಮ್ಮ ಸೈನಿಕರು ಯಥಾಪ್ರಕಾರ ತಮ್ಮ ಶಾಖೆ ನಡೆಸಲು ಕೆನರಾ ಹ್ಯಾಸ್ಕೂಲಿಗೆ ಹೋದಾಗ ಗೇಟಿನಲ್ಲೇ ಆರ್ ಎಸ್ ಎಸ್ಸಿನ ಸೈನಿಕರು ಅವರನ್ನು ತಡೆದು "ನೀವು ಮರ್ಯಾದೆ ಇದ್ದವರಾದರೆ ಇಲ್ಲಿಂದ ಹೊರಟು ಹೋಗಬೇಕು ನೀವು ಮನುಷ್ಯರಲ್ಲವೊ" ಎಂದೆಲ್ಲಾ ನಮ್ಮ ಸೈನಿಕರನ್ನು ಅವಮಾನಿಸಿದರು ಇದೇ ನಮ್ಮ ಸೈನಿಕರು ಉದ್ವೇಗಗೊಳ್ಳಲು ಮುಖ್ಯ ಕಾರಣವಾಯಿತು

ಆ ಮೇಲೆ ಜಿಲ್ಲಾ ಸಂಘಟಕರಾದ ಸತ್ಯೇಂದ್ರ ನಾಯ್ಕರು ಕೆನರಾ ಹ್ಯಾಸ್ಕೂಲಿಗೆ ಹೋಗಿ ಮುಖ್ಯೋಪಾಧ್ಯಾಯ ಮತ್ತು ಮೆನೇಜರರ ಹತ್ತಿರ ಮಾತಾಡಿದಾಗ ನಿತ್ಯದ ಸ್ಥಳದಲ್ಲಿ ತಮ್ಮ ಶಾಖೆ ನಡೆಯಿಸಲು ಎಷ್ಟಕ್ಕೂ ಸಾಧ್ಯವಿಲ್ಲೆಂದೂ ಹಿಂದಿನ ಗೇಟಿನಿಂದ ಬಂದು ಗುಪ್ತವಾದೊಂದು ಮೂಲೆಯಲ್ಲಿ ಶಾಖೆ ನಡಿಸಬೇಕೆಂದೂ ಅವರೆಂದರು.

ಕೊಟ್ಟ ಮಾತಿಗೆ ತಪ್ಪಿ ನಡೆದ, ಆರ್.ಎಸ್. ಎಸ್ಸಿನ ಕುರಿತು ತೀರಾ ಪಕ್ಷಪಾತದ ಕೆನರಾ ಹ್ಯಾಸ್ಕೂಲಿನ ಅಧಿಕಾರಿಗಳ ಧೋರಣೆಯಿಂದ ಸೇವಾದಳದ ತರುಣ ಸೈನಿಕರ ಉದ್ವೇಗವು ಮತ್ತಷ್ಟು ಅಧಿಕವಾಯಿತು. ಕೆನರಾ ಹ್ಯಾಸ್ಕೂಲಿನ ಗೇಟಿನ ಮೇಲೆ ಮಲಗಿ ಸತ್ಯಾಗ್ರಹ ಮಾಡಲು ಅವರು ಮುಂದಾದರು. ಆಗ ಜಿಲ್ಲಾ ಸಂಘಟಕರೂ ಎಚ್ ಎಚ್. ಪೊಡೆಯರರೂ ನಮ್ಮ ಸೈನಿಕರಿಗೆ ಬುದ್ಧಿವಾದ ಹೇಳಿ ಅಧಿಕಾರಿಗಳ ವರ್ತನೆಯನ್ನು ನಿಷೇಧಿಸಲು ಮೈದಾನಿನಲ್ಲಿ ಸಭೆ ನಡಿಸೋಣ ಎಂದು ಸಮಜಾಯಿಸಿ ಮೆರವಣಿಗೆಯಿಂದ ಅವರಿಗೆ ಮೈದಾನಿಗೆ ಕರೆಕೊಂಡು ಬಂದು ಸಭೆ ನಡೆಯಿತು

ಆ ಮೇಲೆ ಪುನಃ ಮೆರವಣಿಗೆಯು ಕೆನರಾ ಹ್ಯಾಸ್ಕೂಲಿನ ಸುತ್ತಾಗಿ ಕಾಂಗ್ರೆಸ್ ಆಫೀಸಿಗೆ ಬಂದು ಶಾಂತವಾಯಿತು

ಅತ್ಯಂತ ಉದ್ವೇಗಿತರ ಪರಿಸ್ಥಿತಿಯಲ್ಲಿ ನಮ್ಮ ಸೈನಿಕರಲ್ಲಿ ಕೆಲವರು ತಾವಾಗಿ ಕೆಲವು ಅಲ್ಲಸಲ್ಲದ ಘೋಷಣೆಗಳನ್ನು ಮಾಡಿರಬಹುದು ಆದರೆ ಈ ಸಂದರ್ಭದಲ್ಲಿ ಸರ್ವಸಾಧಾರಣ ಸೈನಿಕರು ತೋರಿಸಿದ ಶಿಸ್ತು ಮತ್ತು ಸಂಯಮ ಅಭಿನಂದನೀಯವಿರುತ್ತದೆ ಸೇವಾದಳದವರು ಕೆನರಾ ಹ್ಯಾಸ್ಕೂಲನ್ನು ಬಿಡಬೇಕೆಂದು ಅವರು ಘೋಷಿಸಿದುದೇ ಹೊರತು ಆ ಶಾಲೆಗೆ ಹೋಗಲೇಬಾರದೆಂದು ಅಲ್ಲ

ಒಮ್ಮೆ ನಮಗೆ ಮಾತು ಕೊಟ್ಟು ಕೆನರಾ ಹ್ಯಾಸ್ಕೂಲಿನ ಅಧಿಕಾರಿಗಳು ಬೆಳಗ್ಗೆ ನಮ್ಮ ಕಾರ್ಯಕ್ರಮವನ್ನೆಲ್ಲಾ ಆಗ ಬಿಟ್ಟು ನಮಗೆ ಏನೊಂದನ್ನೂ ತಿಳಿಸದೆ ಸಂಜೆ ನಮ್ಮ ಸೈನಿಕರಿಗೆ ಆರ್ ಎಸ್ ಎಸ್ಸಿನ ಮೂಲಕ ಹೀಯಾಳಿಸಿ ಅವಮಾನ ಮಾಡುವರೆ ಕಾರಣವಾದುದು ಎಷ್ಟೊಂದು ಜವಾಬ್ದಾರಿ ಹಾಗು ಯೋಗ್ಯ ವರ್ತನೆಯೆಂಬುದರ ವಿಚಾರವನ್ನು ನಾವು ಅವರಿಗೂ ಸಾರ್ವಜನಿಕರಿಗೂ ಬಿಟ್ಟು ಬಿಡುತ್ತೇವೆ

ಇಷ್ಟರ ವರೆಗೆ ನಮಗೆ ಆಶಯವನ್ನಿತ್ತುದಕ್ಕಾಗಿ ನಾವು ಕೆನರಾ ಹ್ಯಾಸ್ಕೂಲಿನ ಅಧಿಕಾರಿಗಳಿಗೆ ಆಭಾರಿಯಾಗಿದ್ದೇವೆ ಇನ್ನು ಮುಂದೆ ನಮ್ಮ ಯಾವ ಕಾರ್ಯ ಕಲಾಪಕ್ಕಾದರೂ ಅವರ ಆಶ್ರಯ ಪಡೆಯಬಾರದೆಂಬ ಸಿಧ್ಧಾಂತಕ್ಕೆ ನಾವು ಬಂದಿರುತ್ತೇವೆ ಜೈ ಹಿಂದ್

ಕೆ ಕೆ ಶೆಟ್ಟಿ,

ಪ್ರಧಾನ ಕಾರ್ಯದರ್ಶಿ

ಜಿಲಾ ಕಾಂಗ್ರೆಸ್ ಕಮಿಟಿ

ಹೊಟೇಲ್ ಮ್ಯಾಲಕರ ಮುಷ್ಕರ:

ನಗರದ ಸುಮಾರ 23 ಹೋಟೇಲುಗಳು ತಾ 26, 27 ಮತ್ತು 28ರ ತನಕ ಮುಚ್ಚಲ್ಪಟ್ಟಿರುತ್ತವೆ ತಮಗೆ ಸಾಕಷ್ಟು ಸಕ್ಕರೆ ಮತ್ತಿತರ ತಿಂಡಿತಯಾರಿಕೆ ವಸ್ತುಗಳು ಸಿಗುತ್ತಿಲ್ಲವೆಂಬುದು ಹೋಟೇಲ್‌ಗಾರರ ಈ ಹರತಾಳಕ್ಕೆ ಕಾರಣವೆನ್ನಲಾಗಿದೆ ಪರಿಣಾಮವಾಗಿ ಹೇರಳ ಗಿರಾಕಿಗಳು ತೆರೆದಿರುವ ಸಣ್ಣಪುಟ್ಟ ಹೋಟೇಲುಗಳಿಗೆ ತಂಡತಂಡವಾಗಿ ನುಗ್ಗುತ್ತಿರುವುದು ಕಂಡುಬಂದಿದೆ ಸಂದರ್ಭವಶಾತ್ ಉಂಟಾದ ಈ ಪರಿಸ್ಥಿತಿಯಿಂದ ಈ ಚಿಕ್ಕ ಹೊಟೇಲುಗಳಲ್ಲಿ ತಿಂಡಿತೀರ್ಥಗಳ ಬೆಲೆಯಾದರೂ ಸಹಜವಾಗಿ ಏರಿಸಲಾಗಿದೆ ಅವುಗಳ ಶ್ರೇಷ್ಠತೆಯೂ ಅಷ್ಟಷ್ಟೇ ಎನ್ನಬಹುದು ವಿಪರೀತ ಗಿರಾಕಿಗಳ ದೆಸೆಯಿಂದ ಇದೂ ಸಹಜವೇ ಆಗಿದೆ ಮನೆಗಳಲ್ಲೇ ಫಲಹಾರ ಅಭ್ಯಾಸ ಮಾಡಲೂ ಅನೇಕರಿಗೆ ಇದು ಸುಸಂಧಿಯಾಗಬಹುದು. ನಂತರ ಕ್ರಮೇಣ ಈ ಅಭ್ಯಾಸವು ಮುಂದುವರಿದರೆ ಹೋಟೇಲುಗಳ ಮೇಲಿರುವ ಈಗಿನ ಒತ್ತಡವಾದರೂ ಕಡಿಮೆಯಾಗಬಹುದೆಂಬ ನಿರೀಕ್ಷೆಯಿದೆ ಸಕ್ಕರೆಯು ಹೆಚ್ಚು ಕಡಿಮೆ ಪ್ರಮಾಣದಲ್ಲಿ ಪ್ರತಿ ಸಂಸಾರಕ್ಕೂ ಸರಬರಾಯಿಯಾಗುತ್ತಿಲ್ಲವೆ? ಅಂದಮೇಲೆ ಸಾಧ್ಯವಿದ್ದಷ್ಟು ನಾಗರೀಕರು ಅದರ ಸದುಪಯೋಗ ಮಾಡಿ ಫಲಹಾರ ಮಂದಿಗಳ ಮೇಲಿರುವ ಗರದಿಯನ್ನು ಕಡಿಮೆ ಮಾಡಬಹುದಲ್ಲವೆ? ಈ ಸಂದರ್ಭದಲ್ಲಿ ಹೋಟೇಲುಗಳಿಗೆ ಹೆಚ್ಚು ಸಕ್ಕರೆ ಸರಬರಾಯಿ ಮಾಡುವ ಆವಶ್ಯಕತೆಯೂ ಕಡಿಮೆಯಾಗಬಹುದೆಂಬುದು ಬಾಕ್ಕಿ.

ಸಂಸ್ಕೃತಾಭ್ಯಾಸಕ್ಕಾಗಿ ನಿವೇದನೆ

ಪ್ರಾಚೀನ ಕಾಲದಲ್ಲಿ ಭರತಖಂಡದ ಆಶ್ರಮಗಳಲ್ಲಿಯೂ ವಿಶ್ವವಿದ್ಯಾಲಯಗಳಲ್ಲಿಯೂ ಸಂಸ್ಕೃತವೇ ಮಾಧ್ಯಮವಾಗಿತ್ತು ಮಾತ್ರವಲ್ಲ, ವಿದ್ವಾಂಸರೆಲ್ಲ ಸಂಸ್ಕೃತದಲ್ಲೇ ಸಕಲ ವ್ಯವಹಾರವನ್ನೂ ನಡೆಸುತಿದ್ದರು. ಆ ಕಾಲದಲ್ಲಿ ಭಾರತವು ಜಗತ್ತಿಗೆಲ್ಲ ಆಧ್ಯಾತ್ಮಿಕದಲ್ಲೂ ಐಹಿಕ ಸಾಧನೆಯಲ್ಲೂ ಆದರ್ಶಪ್ರಾಯವಾಗಿತ್ತು.

ಪರಕೀಯರು ದಂಡೆತ್ತಿ ಬಂದು ಶಾಸನ ಮಾಡಲಾರಂಭಿಸಿದಂದಿನಿಂದ ಮೊದ ಮೊದಲು ಪಾರಸೀ ಭಾಷೆ ಮತ್ತೆ ಇಂಗ್ಲೀಷು ನಮ್ಮ ವಿದ್ಯಾಭಾಷೆಯಾಗಿ ಸಂಸ್ಕೃತವು ಮೂಲೆಪಾಲಾದಂದಿನಿಂದ ನಮ್ಮ ಸ್ಥಾನವು ಜಗತ್ತಿನಲ್ಲಿ ಕೆಳಕೆಳಗೆ ಹೋಗುತ್ತ ಬಂದಿತು, ಪಾರಮಾರ್ಥಿಕದಲ್ಲಿ ಮಾತ್ರವಲ್ಲ, ಇಹಲೋಕದ ಸಂಪತ್ತಿನಲ್ಲೂ ಅಂತೇ ಆಯಿತು ತನ್ನ ಪಿತ್ರಾರ್ಜಿತವನ್ನು ಕಳಕೊಂಡ ಜನಾಂಗವು ಇತರ ಸಭ್ಯ ದೇಶಗಳನ್ನು ಎಷ್ಟೇ ಅನುಕರಿಸಿದರೂ ಅದಕ್ಕೆ ಉಜ್ವಲ ಭವಿಷ್ಯ ಇಲ್ಲವೇ ಇಲ್ಲ ಮಹಾತ್ಮಾ ಗಾಂಧಿಯವರು ಹೇಳುವಂತೆ ನಾವು ಬರೀ ಪರಕೀಯರ ನೂಣಪ್ರತಿಯಾಗುವ ಪ್ರಯತ್ನ ಬಿಟ್ಟು ನಮ್ಮ ನಮ್ಮ ಭಾಷೆಗಳನ್ನೇ ತಿಳಿದು ಸಂಸ್ಕೃತ ರತ್ನಾಕರದಿಂದ ಮುತ್ತುಗಳನ್ನು ಆರಿಸಲಿಕ್ಕೆ ಸಿದ್ಧರಾಗಬೇಕು ಶಾಲೆಗಳಲ್ಲಿ ದೇಶಭಾಷೆಗಳಿಗೆ ಮೇಲ್ಪರದ ಸ್ಥಾನವನ್ನು ಕೊಡಲು ಕಾಂಗ್ರೆಸು ಮಂತ್ರಿಮಂಡಳದವರು ಪ್ರಯತ್ನಮಾಡುತ್ತಿರುವಾಗ ಅವರಿಗೆ ಸಹಾಯಕರಾಗಿ ಸಂಸ್ಕೃತವನ್ನು ಪೋಷಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ

ನಮ್ಮ ಯುವಕಯುವತಿಯರು ಭಾರತೀಯ ವಿದ್ಯಾರ್ಥಿಗಳಿಗೆ ಸಹಜವಾದ ವಿನಯ, ಸೌಜನ್ಯಗಳನ್ನು ಕಳಕೊಂಡಿದ್ದಾರಾದರೆ ಅದಕ್ಕೆ ಕಾರಣ ಅವರು ಸಂಸ್ಕೃತಾಭ್ಯಾಸ ಮಾಡದಿದ್ದುದೇ, ಹೀಗಾಗಿ ನಮ್ಮ ಉಪನಿಷತ್ತುಗಳು, ಧರ್ಮಶಾಸ್ತ್ರಗಳು ಕಾವ್ಯಗಳು, ಇವುಗಳಲ್ಲಿರುವ ಆತ್ಮಪೋಷಣೆಯನ್ನು ಅವರು ಪಡೆದಿಲ್ಲ ಇನ್ನಾದರೂ ಎಲ್ಲಾ ವಿದ್ಯಾರ್ಥಿಗಳಿಗೆ ಮುಖ್ಯವಾಗಿ ಮುಂದಿನ ಜನಾಂಗದ ತಾಯಂದಿರಿಗೆ ಸಂಸ್ಕೃತ ವಾತಾವರಣವನ್ನು ಕೊಡುವುದು ಅತ್ಯಗತ್ಯವಾಗಿದೆ

ಅದಕ್ಕಾಗಿ ತಂತಮ್ಮ ಮಕ್ಕಳು, ಮುಖ್ಯವಾಗಿ ಹುಡುಗಿಯರು III ಫಾರ್ಮಿನಿಂದಲೇ ಸಂಸ್ಕೃತಾಭ್ಯಾಸವನ್ನು ಆರಂಭಿಸುವಂತೆ ಅವರಿಗೆ ಬೋಧಿಸಬೇಕೆಂದು ಹಿರಿಯರೊಡನೆ ನಿವೇದಿಸುತ್ತೇವೆ

ತೆಂಗಿನ ಹಿಂಡಿ: ಈ ಕುರಿತು ದ ಕ ಜಿಲ್ಲಾ ಕಲೆಕ್ಟರರು ಈ ಕೆಳಗಿನ ಆಜ್ಞೆಯನ್ನು ಹೊರಡಿಸಿದ್ದಾರೆ

1 ಈ ಆಜ್ಞೆ ಪ್ರಕಟವಾದಂದಿನಿಂದ (14 1 47) ಕಲೆಕ್ಟರರ ಬರಹ ಮೂಲಕ ಹುಕುಂಪಿನ ವಿನಹ ಈ ಜಿಲ್ಲೆಯಿಂದ ತೆಂಗಿನ ಹಿಂಡಿಯನ್ನು ರೈಲು, ನೆಲ ವ ಜಲ ಮಾರ್ಗದಿಂದ ಹೊರಗೆ ಕಳುಹಿಸಬಾರದು ಆಜ್ಞೆ ಮೀರಿದವರು ಶಿಕ್ಷೆಗೊಳಗಾಗುವರು

2 ಹಿಂಡಿಯ ಬೆಲೆ ಹೀಗೆ ನಿರ್ಧರಿಸಲಾಗಿದೆ 28 ರಾತ್ತಲಿನ ಮಣಕ್ಕೆ ರಖಂ ಬೆಲೆ ರೂ 8 ಚಿಲ್ಲರೆ ರೂ 8—8 0 ಈ ಬೆಲೆಗಳು ಸೇಲ್‌ಟೆಕ್ಸ್ ರಹಿತವಾಗಿವೆ ಈ ಜಿಲ್ಲೆಯ ಯಾವ ಭಾಗದಲ್ಲೂ ಈ ಬೆಲೆಗೆ ಮಿಕ್ಕಿ ತೆಂಗಿನ ಹಿಂಡಿಯನ್ನು ಈ ಆಜ್ಞೆ ಪ್ರಕಟವಾದಂದಿನಿಂದ (18—2-'47) ಮಾರಬಾರದು ಉಲ್ಲಂಘನೆ ಮಾಡುವವರು ಶಿಕ್ಷೆಗೊಳಗಾಗುವರು.

3 ಜಿಲ್ಲೆಯಲ್ಲಿ ಒಂದು ಖಂಡಿಗೆ ಮಿಕ್ಕಿ (560 ರಾತ್ತಲು) ತೆಂಗಿನ ಹಿಂಡಿ ದಾಸ್ತಾನಿಟ್ಟವರು ಈ ಆಜ್ಞೆ ಪ್ರಕಟವಾದ (17—2—'47) ಏಳು ದಿನಗಳಲ್ಲಿ ಸ್ಟಾಕಿನ ವಿವರಗಳನ್ನು ಕಲೆಕ್ಟರರಿಗೆ ತಿಳಿಸಿರತಕ್ಕದ್ದು

ಸಬ್ ಇನ್ಸ್‌ಪೆಕ್ಟರರು, ಅಸಿಸ್ಟಾಂಟ್ ಕಮ್ಮರ್ಶಿಯಲ್ ಟೆಕ್ಸ್ ಆಫೀಸರರು ಇಲ್ಲವೆ ರೆವಿನ್ಯೂ ಇನ್ಸ್‌ಪೆಕ್ಟರರಿಗೆ ಕೆಳಗಿನವರಲ್ಲದ ಅಧಿಕಾರಿಗಳು ತಮ್ಮ ಕ್ಷೇತ್ರದಲ್ಲಿ ಯುಕ್ತ ಸಮಯದಲ್ಲಿ ಈ ಸ್ಟಾಕುಗಳ ಕುರಿತು ತಪಾಸನೆ ನಡೆಸಲು ಅಧಿಕೃತರಿರುತ್ತಾರೆ.

ಈ ಆಜ್ಞೆ ಉಲ್ಲಂಘಿಸುವವರು ಯೋಗ್ಯ ಶಿಕ್ಷೆಗೆ ಗುರಿಯಾಗುವರು.

ಭಾರತದಿಂದ ಬ್ರಿಟನು ದೋಚಿಕೊಂಡ ದ್ರವ್ಯರಾಶಿ

ಕ್ಲೈವನ ಕಾಲದಿಂದ ಇದುತನಕದ ಸುಲಿಗೆ

'ನಿಷ್ಪಕ್ಷಪಾತ ವಿಚಾರಣೆಯಾಗಲಿ' — ಕುಮಾರಪ್ಪ

"ಕ್ಲೈವನ ಕಾಲದಿಂದ ಇದು ತನಕದ ಬ್ರಿಟಿಷ್ ಆಳ್ವಿಕೆಯ ದಾಖಲೆಯು ಒಂದು ದೀರ್ಘ ಮೋಸ, ಅಪ್ರಮಾಣಿಕತೆ, ವಿಶ್ವಾಸ ಘಾತಗಳ ಇತಿಹಾಸವಾಗಿದೆ" ಎಂಬ ಥಾಟಿಯನ್ನು ನಿರೂಪಿಸುತ್ತಾ ಡಾ. ಜೆ. ಸಿ. ಕುಮಾರಪ್ಪನವರು ಹರಿಜನದಲ್ಲಿ ಬರೆದ ಒಂದು ಲೇಖನದಲ್ಲಿ ಸ್ಟರ್ಲಿಂಗ್ ಬೆಲೆಸ್ಸಿನ ಕುರಿತು ಬ್ರಿಟಿಷ್ ಮತ್ತು ಭಾರತ ಸರಕಾರಗಳೊಳಗೆ ನಡೆಯುತ್ತಿರುವ ಮಾತುಕತೆಗಳ ಕುರಿತು ಪ್ರಸ್ತಾಪಿಸಿದುದರ ಸಾರಾಂಶ ಹೀಗಿದೆ:

ಭಾರತದೊಡನೆ ಬ್ರಿಟಿಷರ ಸಂಬಂಧದ ಇತಿಹಾಸವನ್ನು ಪರಿಶೀಲಿಸುವಾಗ ಬ್ರಿಟಿಷರು ಎಲ್ಲಾ ರೀತಿಯ ಅಪ್ರಾಣಿಕತನಗಳ ಅನುಕೂಲತೆಯನ್ನೂ ಪಡೆದಿದ್ದಾರೆ ಮಾತ್ರವಲ್ಲ ಅನೇಕ ಸಂದರ್ಭಗಳಲ್ಲಿ ಮೋಸದ ಮತ್ತು ವಿಶ್ವಾಸಘಾತದ ಕೃತಿಗಳೂ ತೋರಿ ಬರುತ್ತವೆ. ಹೆದರಿಕೆ ಬೆದರಿಕೆಗಳಿಂದ ಹಣ ವಸೂಲು ಮಾಡುವುದು ಕ್ಲೈವನ ಕಾಲದ ಸಾಮಾನ್ಯ ಧೋರಣೆಯಾಗಿತ್ತು. ಕ್ಲೈವ ಮತ್ತು ವೊಟರ್‌ಲೂ ಕದನದ ಹೆಚ್ಚು ಕಡಿಮೆ ಐವತ್ತು ವರ್ಷ ಅವಧಿಯಲ್ಲಿ ಸುಮಾರು 100 ಕೋಟಿ ಪವನುಗಳಷ್ಟು ಸಂಪತ್ತು ಭಾರತದಿಂದ ಬ್ರಿಟಿಷ್ ಬೇಂಕುಗಳ ಠೇವಣಾತಿಗಳಿಗೆ ತಲ್ಪಿರುತ್ತದೆ.

ಕಣ್ಣುಕಟ್ಟು ಲೆಕ್ಕ

ಕ್ಲೈವನ ನಂತರದ ಕಾಲವು "ಗಲಿಬಿಲಿ ಲೆಕ್ಕದ್ದು. 'ಘನಹೊಂದಿದ ಈಸ್ಟ್ ಇಂಡಿಯಾ ಕಂಪೆನಿಯು ಗದರಿಕೆಯಿಂದ ಹಣ ಸುಲಿಯುವಷ್ಟು ಹೀನಸ್ಥಾನಮಾನದಲ್ಲ. ಅದರ ಭಾರತ ಚಾಲಕರು ಇಲ್ಲಿಯ ಖಜಾನೆಯೊಳಗಿನ ತೆರಿಗೆ ಹಣದಿಂದ ಮಾಲುಗಳನ್ನು ಖರೀದಿಮಾಡಿ ಯುರೋಪಿಗೆ ಕಳುಹಿಸಿ ತಮ್ಮ 'ಸ್ವಂತ ಲೆಕ್ಕ'ದಲ್ಲಿ ಮಾರಿದರು. ಹೀಗೆ 1793ರಿಂದ 1812ರ ವರೆಗೆ ತಬ್ಬಿಲು ಮಾಡಿದ ಲೆಕ್ಕದ ಹಣವು ಸುಮಾರು 26 ಕೋಟಿ ಪವನುಗಳಷ್ಟಾಗುತ್ತದೆಂದು 'ಈಸ್ಟ್ ಇಂಡಿಯಾ ಕಂಪೆನಿಯ ವ್ಯವಹಾರ ಇತಿಹಾಸ'ವೆಂಬ ಪರಿಶೋಧನಾ ವರದಿಯಲ್ಲಿ ತಿಳಿಸಿದೆ.

ವಿಕ್ಟೋರಿಯಾ ರಾಣಿಯ ಕಾಲದಲ್ಲಿ ಬ್ರಿಟಿಷ್ ಸರಕಾರವು ಕ್ಲೈವನ ಕಾಲದ ಚೌರ್ಯವೃತ್ತಿಯನ್ನಾಗಲಿ ಈಸ್ಟ್ ಇಂಡಿಯಾ ಕಂಪೆನಿಯ ಮೋಸದ ಲೆಕ್ಕದ ಕೃತಿಯನ್ನಾಗಲಿ ಮಾಡುವುದು ಪನಸ್ಕೃತಿಕೆಯಲ್ಲವೆಂದು ಬಗೆಯಿತು. ಕೊಳ್ಳೆಯು ಅವರಿಗೆ ಬೇಕಾಗಿತ್ತಾದರೂ ಪ್ರಾಮಾಣಿಕರೆಂದು ತೋರಿಸಿಕೊಳ್ಳಲು ಅವರು ಆತುರಪಟ್ಟರು. ಆಗ ಅವರು ತುದಿಯಿಂದ ಕೊನೆ ತನಕ ಸುಳ್ಳು ಲೆಕ್ಕಗಳನ್ನು ಬರೆಯಿಸತೊಡಗಿದರು. ಭಾರತಕ್ಕೆ ಯಾವ ಸಂಬಂಧವಿಲ್ಲದ ಅಫ್ಘಾನ್, ಬರ್ಮಾ, ಚೀನಾ ಪರ್ಶಿಯಾ ಮಾತ್ರವಲ್ಲ ಅತೀ ದೂರ ಈಜಿಪ್ಟ್ ಮತ್ತು ಅಬಿಸೀನಿಯಾ ಯುದ್ಧಗಳ ಖರ್ಚು ಹಿಂದೀ ಖಜಾನೆಯ ಲೆಕ್ಕಕ್ಕೆ ಖರ್ಚು ಬರೆಯಲಾಯಿತು. ಇದು ಸುಮಾರು 700 ಕೋಟಿ ರೂಪಾಯಿಗಳಷ್ಟಾಗುತ್ತದೆ. ವೆಲ್ಬಿ ಕಮಿಶನಿನವರು ಮಾಡಿದ ವರದಿಯನ್ನು ಇಣಿಕಿ ನೋಡಿದರೆ ಈ ಕುರಿತಾದ ಅನೇಕ ಮೋಸದ ಲೆಕ್ಕಗಳು ಗೋಚರವಾಗುತ್ತದೆ.

ಪಿತ್ರಾಯದ ಉಡುಗರೆ

ಪ್ರಾಚೀನ ಯೆಹೂದಿ ಸಾಂಪ್ರದಾಯವೊಂದಿದೆ. ಓರ್ವ ತಂದೆಯ ಸೊತ್ತನ್ನು ಮಗನಾದವನು "ಇದು ನನ್ನ ಉಡುಗರೆ" ಎಂದರೆ ಸಾಕು ಮತ್ತೆ ಅದೆಲ್ಲ ಅವನದಾಗುವುದು. ಮುಂದೆ ಅವನಿಗೆ ತನ್ನ ಹೆತ್ತವರನ್ನು ಸಾಕುವ ಜವಾಬ್ದಾರಿ ಕೂಡ ತಪ್ಪುವುದು. ಎಲ್ಲಾ ಜವಾಬ್ದಾರಿಕೆಯಿಂದ ತಪ್ಪಿಸಿಕೊಳ್ಳಲು ಇದೊಂದು ಒಳ್ಳೇ ಉಪಾಯ.

ಇಪ್ಪತ್ತನೆಯ ಶತಮಾನದಲ್ಲಿ ಜಗತ್ತಿನ ಕಣ್ಣಿಗೆ ಮಣ್ಣೆರಚಲು ಬ್ರಿಟನ್ನು ಯಾವುದಾದರೂ ಇಂತಹ ಉಪಾಯಗಳನ್ನು ಕಂಡು ಹಿಡಿಯಬೇಕಾಯಿತು. ಮೊದಲನೇ ಜಾಗತಿಕ ಯುದ್ಧದಲ್ಲಿ ಬ್ರಿಟನ್ನು ಭಾರತದಲ್ಲಿ ತನ್ನ ಭದ್ರತೆಗಾಗಿ ಹೇರಳ ದ್ರವ್ಯವನ್ನು ಖರ್ಚು ಮಾಡಬೇಕಾಯಿತು. ಮೊದಲು ಸಾಲವಾಗಿ ಭಾರತ ಖಜಾನೆಯಿಂದ ಖರ್ಚು ಮಾಡಿಸಲಾಯಿತು. ನಂತರ ತಮ್ಮ ವ್ಯಾಸ್‌ರಾಯ ಪ್ರತಿನಿಧಿಗಳ ಮೂಲಕ ಆ ಹಣವು ಬ್ರಿಟನಿಗೆ ಭಾರತದ ಉಡುಗೊರೆ ಎಂದು ಘೋಷಣೆ ಮಾಡಿಸಲಾಯಿತು!!

ಬೃಹದ್ ಮೋಸ

ಕಳೆದ ಯುದ್ಧದಲ್ಲಿ ಬ್ರಿಟನು ಇನ್ನೊಂದು ಹೆಜ್ಜೆ ಮುಂದರಿಯಿತು. ಭಯಂಕರ ವಿನಾಶಕಾರಿ ಯುದ್ಧವೊಂದನ್ನು ನಿರ್ವಹಿಸಲು ಅದಕ್ಕೆ ಹೇರಳ ದ್ರವ್ಯದವಶ್ಯಕತೆ ಬಿತ್ತು. ನಿರಿಯಾವಧಿ ಬೆಲೆಯ ತನ್ನ ಸೊತ್ತನ್ನು ಮಾರಿದ ಬ್ರಿಟನು ಇಂದು ದೀವಾಳಿಗರಿಯ ಕಡೆಧಾವಿಸುತ್ತದೆ. ಆದುದರಿಂದ ಭಾರತದ ಕಡೆ ಅದರ ದೃಷ್ಟಿ ಸಹಜವಾಗಿ ಆಕರ್ಷಿಸಲ್ಪಟ್ಟಿದೆ. ತಮ್ಮ ಶಕ್ತಿ ಯುಕ್ತ ಹಸ್ತಗಳಿಂದವರು ಕೋಟಿ ಗಟ್ಲೆ ಬೆಲೆ ಬಾಳುವ ಆಹಾರ ವಸ್ತುಗಳನ್ನು ಬಳಸಿದು ಕೊಂಡು ಇಲ್ಲಿ "ಕೇಳಿದಾಗ ಕೊಡು" ನೋಟು ರಾಶಿಯನ್ನು 'ಭದ್ರತೆ'ಯಾಗಿ ಬಿಟ್ಟು ಬಿಟ್ಟಿರುವರು. ಇದು ಇನ್ನೊಂದು ನೈತಿಕ ಮತ್ತು ನ್ಯಾಯ ವಿರೋಧವಾದ ವಿಶ್ವಾಸಘಾತ.

ನಿಷ್ಪಕ್ಷಪಾತ ವಿಚಾರಣೆಯಾಗಲಿ

ಮೇಲಿನ ಸಂಗತಿಗಳಿಂದ ಬ್ರಿಟನ್ನು ತನ್ನ ಹಣಕಾಸಿನ ವ್ಯವಹಾರದಲ್ಲಿ ಯಾವ ಯಾವ ತರದ ಮಾಟ ಮೋಡಿಗಳನ್ನು ಮಾಡಿರುತ್ತದೆಂದು ಅಂದಾಜಾಗುತ್ತದೆ. ಈಗ ಬ್ರಿಟನು ಭಾರತಕ್ಕೆ ಕೊಡಬೇಕಾಗಿರು ಸ್ಟರ್ಲಿಂಗ್ ಹಣವು ಸುಮಾರು 1600 ಕೋಟಿಗೆ ಮಿಗುತ್ತದೆಂದು ಊಹಿಸಲಾಗಿದೆ. ಈ ಬಾಕಿಯನ್ನು ಬ್ರಿಟಿಷರು ಚಾಲ್ತಿ ಲೆಕ್ಕದಲ್ಲಿರಿಸಿದ್ದರು. ನಮ್ಮ ಜನತಾ ಪ್ರತಿನಿಧಿಗಳಿಗೆ ಅದನ್ನು ತನಿಖೆ ಮಾಡುವ ಸಂದರ್ಭವಿರಲಿಲ್ಲ. ಆದುದರಿಂದ ಈಗ ಯಾವ ತರದ ಇತ್ಯರ್ಥ ಮಾಡುವ ಮೊದಲು ಈ ಚಾಲ್ತಿ ಲೆಕ್ಕಗಳನ್ನು ಆಮೂಲಾಗ್ರವಾಗಿ ಪರಿಶೋಧಿಸುವುದು ಅತ್ಯಾವಶ್ಯಕ. ಅದಕ್ಕಾಗಿ ಒಂದು ನಿಷ್ಪಕ್ಷಪಾತ ಪರಿಶೋಧನಾ ಸಮಿತಿಯನ್ನೇರ್ಪಡಿಸಬೇಕು. ಈ ಚಾಲ್ತಿ ಲೆಕ್ಕಾಚಾರಗಳು ಕ್ಲೈವನ ಕಾಲದಿಂದ ಮುಂದರಿಸಿ ಬಂದಿವೆ. ಇದುತನಕ ಜನತಾ ಪ್ರತಿನಿಧಿಗಳ ತನಿಖೆಗೆ ಸಿಕ್ಕಿಲ್ಲ. ಆದುದರಿಂದ ಈಗ ಅಧಿಕಾರದಲ್ಲಿರುವ ರಾಷ್ಟ್ರೀಯ ಸರಕಾರದವರು ಈ ಕುರಿತು ಯಾವ ಹೊಣೆಗಾರಿಕೆಯನ್ನು ತೆಗೆದುಕೊಳ್ಳುವ ಮೊದಲು ಅದನ್ನು ಕೂಲಂಕಶ ಶೋಧನೆಗೊಳ ಮಾಡುವುದು ಅಗತ್ಯ.

ಕಫ, ಶೀತ, ಎದೆನೋವುಗಳನ್ನು ದಿನಂಪ್ರತಿ ಪೆಪ್ಸು ತೆಗೆದು ಕೊಳ್ಳುವುದರಿಂದ ಗುಣಪಡಿಸಿರಿ

ಸಾಂಕ್ರಾಮಿಕ ಕಫ, ಎದೆನೋವು, ಶೀತಾದಿಗಳನ್ನು ಬೆಳೆಯಬಿಡಬೇಡಿರಿ. ಅದು ನಿಮ್ಮ ಜೀವನಾಂದವನ್ನು ಕೆಡಿಸುವುದು. ಕೆಲವು ಪೆಪ್ಸುಗಳನ್ನು ಕೈಯಲ್ಲಿ ತೆಗೆದುಕೊಳ್ಳಿ. ಅಗತ್ಯಬಿದ್ದಾಗೆಲ್ಲ ಈ ವಿಷಹಾರೀ ಶ್ವಾಸಯೋಗ್ಯ ಮಾತ್ರೆಗಳನ್ನು ಸೇವಿಸಿರಿ.

ಬಾಯಲ್ಲಿ ಹಾಕಿದ ಕೂಡಲೇ ಕರಗುವುದು. ಪೆಪ್ಸು ಮಾತ್ರೆಗಳು ಉತ್ತಮ ಔಷಧಿ ತತ್ವದಿಂದ ಕೂಡಿದ ರಸವನ್ನು ನಿಮ್ಮ ಶ್ವಾಸಕೋಶದ ನೋವವನ್ನು ಪೆಪ್ಸು ಗುಣಗೊಳಿಸಿ ಕಫವನ್ನು ಸಿಲ್ಲಿಸುವುದು. ಕಂಠನಾಳವನ್ನು ಸರಿಗೊಳಿಸುವುದು. ಕೆಟ್ಟ ಶೀತ, ಇಂಪ್ಲುಯೆಂಜಾ, ಕಫ, ಮೊದಲಾದುವುಗಳಲ್ಲ ಇದು ಅತ್ಯುತ್ತಮ ಔಷಧಿ.

ಪೆಪ್ಸನ್ನು ಕೊಂಡುಕೊಳ್ಳಿರಿ.

PEPS

ವಿಷಹಾರೀ ಶ್ವಾಸಯೋಗ್ಯಮಾತ್ರೆಗಳು

ವಿಜ್ಞಾನ ಪ್ರಪಂಚ

೪ ಸಾವಿರ ಪಾಲು ಸಿಹಿ

ಕಬ್ಬಿನ ರಸವೂ ಸಿಹಿ. ಅದಕ್ಕಿಂತ ಬೆಲ್ಲ ಸಿಹಿ, ಬೆಲ್ಲಕ್ಕಿಂತ ಸಕ್ಕರೆ ಸಿಹಿ. ಆದರೆ ಸಿಹಿಯು ಸಕ್ಕರೆಯೊಳಗೆ ಮಾತ್ರವಲ್ಲ ಸೆಕ್ರೀನ್ ಎಂಬ ರಾಸಾಯನಿಕ ಪದಾರ್ಥವೊಂದು ಸಕ್ಕರೆಗಿಂತ 700 ಪಾಲಷ್ಟು ಸಿಹಿಯಾಗಿದೆ.

ಈಗ ಬೆಂಜಿನ್ ಎಂಬ ರಾಸಾಯನಿಕ ಧಾತುವಿನಿಂದ ಮತ್ತೊಂದು ಅತ್ಯಂತ ಸಿಹಿ ವಸ್ತುವನ್ನು ತಯಾರಿಸಿರುತ್ತಾರೆ. ಇದು ಸಕ್ಕರೆಗಿಂತ 4 ಸಾವಿರ ಪಾಲಷ್ಟು ಸಿಹಿಯಾಗಿದ್ದು ಒಂದು ಚೂರನ್ನು ನಾಲಿಗೆಯಲ್ಲಿಟ್ಟರೆ ಅರ್ಧ ಗಂಟೆ ಬಾಯಿಯ ಸಿಹಿ ಹೋಗುವುದಿಲ್ಲ. ಇದನ್ನು ಡೆನ್‌ಮಾರ್ಕಿನಲ್ಲಿ ಕಂಡು ಹಿಡಿದಿದ್ದಾರೆ. ಚಲಾವಣೆಗೆ ಬಂದಾಗ ಸಕ್ಕರೆಯ ಕೊರತೆ ಕ್ಷಣದಲ್ಲಿ ನೀಗಲು ಅಡಿಯಿಲ್ಲ.

ಕೋಪದಿಂದ ಹಲ್ಲು ನೋವು

ಭಾವನಾತ್ಮಕ ಮತ್ತು ಮಾನಸಿಕ ಅಲ್ಲಕಲ್ಲೋಲದಿಂದ ಹೊಟ್ಟೆ ನೋವು, ಹೊಟ್ಟೆ ಹುಣ್ಣು, ರಕ್ತ ಒತ್ತಡ ಮೊದಲಾದ ವ್ಯಾಧಿಗಳುಂಟಾಗುತ್ತದೆಂದು ಕಂಡು ಹಿಡಿಯಲ್ಪಟ್ಟಿದೆ. ಈ ಅವ್ಯವಸ್ಥೆಗಳು ಹೆಚ್ಚಿನ ಪಾಲಿಗೆ ಹಲ್ಲಿನ ಅನಾರೋಗ್ಯದಿಂದಲೂ ಉಂಟಾಗುತ್ತವೆಂದು ಸಂಯುಕ್ತ ಅಮೇರಿಕದ ಓರ್ವ ವೈದ್ಯ ತಜ್ಞರು ತಿಳಿಸುತ್ತಾರೆ.

"ಜನರು ನಿಜವಾಗಿ ಹಲ್ಲುಗಳಿಂದ ದ್ವೇಷಿಸುತ್ತಾರೆ" ಎಂದವರು ತಿಳಿಸುತ್ತಾ ತಮ್ಮ ತರ್ಕವನ್ನು ಹೀಗೆ ವಿವರಿಸುತ್ತಾರೆ.

"ಎಂಜಲು ಜೊಲ್ಲಿನಲ್ಲುಂಟಾಗುವ ಬದಲಾವಣೆಯಿಂದ ಹಲ್ಲು ನೋವುಗಳುಂಟಾಗುವವು. ಎಂಜಲು ಹಲ್ಲುಗಳನ್ನು ಭಕ್ಷಿಸುವ ಒಂದು ಲೇಪ. ಅದು ರಕ್ತದ ಒಂದು ನಾಜೂಕು ರೂಪ. ಒಬ್ಬನ ಆರೋಗ್ಯ ಕೆಟ್ಟಿತೆಂದರೆ ಅವನ ಎಂಜಲಿನಲ್ಲಿ ಬದಲಾವಣೆಯಾಗುತ್ತದೆ. ಆಗ ಎಂಜಲಿನಲ್ಲಿರುವ ರಾಸಾಯನಿಕ ವಸ್ತುಗಳು ಬದಲಾವಣೆ ಹೊಂದಿ ಹಲ್ಲು ನೋವುಗಳುಂಟಾಗುತ್ತವೆ, ಹಲ್ಲು ನೋವಿನಿಂದ ಹೊಟ್ಟೆಯಲ್ಲೂ ವ್ಯಾಧಿಗಳುಂಟಾಗುವವು."

ಹೃತ್ಕ್ರಿಯೆ ಪುನರ್ಚಲನೆ

ಶಸ್ತ್ರಕ್ರಿಯೆ ಮಾಡುತ್ತಿರುವಾಗ ರೋಗಿಗಳ ಹೃದಯ ಕ್ರಿಯೆಯು ಒಂದೇ ಸವನೆ ನಿಂತು ಹೋಗುವುದುಂಟು. ಡಾ|| ಹೆಮಿಲ್ಟನ್ ಬೈಲಿ ಎಂಬ ಲಂಡನಿನ ಶಸ್ತ್ರ ಚಿಕಿತ್ಸಾ ತಜ್ಞರು ಹೀಗೆ ನಿಂತ ಹೃತ್ಕೋಶವನ್ನು ಪುನರ್ಚಲನೆ ಮಾಡುವವೊಂದು ವಿಧಾನವನ್ನು ವೈದ್ಯರಿಗೆ ಶಿಫಾರಸು ಮಾಡುತ್ತಾರೆ.

ಹೃದಯ ಚಲನೆನಿಂತ ಕೂಡಲೇ ಹೊಟ್ಟೆಗೋದು ಗಾಯ ಹಾಕಿ ಉದರ ಪರೆಯ ಕೆಳಗಿಂದ ಕೈಯನ್ನು ನೇರವಾಗಿ ಎದೆ ಗುಂಡಿಗೆಗೆ ತಲುಪುವಂತೆ ದಾರಿ ಮಾಡಿ ಅಲ್ಲಿ ಮೆಲ್ಲಗೆ ಅದನ್ನು ಒತ್ತಿ ಬಿಡಬೇಕು. ಎರಡು ಮೂರು ಸಲ ಹೀಗೆ ಮಾಡುವುದರಿಂದ ಹೃತ್ಕೋಶವು ಪುನಃ ಕೆಲಸಕ್ಕಾರಂಭಿಸುವುದಂತೆ.

ಮೂರು ಸಂದರ್ಭದಲ್ಲಿ ಮೇಲ್ಕಂಡ ಡಾಕ್ಟರರು ಯಶಸ್ವಿಯಾಗಿ ಹೀಗೆ ಮಾಡಿರುವರೆಂದು ತಿಳಿಸುತ್ತಾರೆ. ಹೃತ್ಕ್ರಿಯೆ ನಿಂತ ಒಂದೆರಡು ಮಿನಿಟುಗಳಲ್ಲಿ ಮಾತ್ರ ಇದು ಸಾಧ್ಯ, ಆದುದರಿಂದ ಕೆಲಸವು ತ್ವರೆಯಾಗಿ ನಿರ್ವಹಿಸಬೇಕು.

ಸರ್ಕಲ್ ಕಮಿಟಿಗಳ ರಚನೆ

ಇದೇ ಕಳೆದ ತಾ. 10-2-'47ನೇ ಸೋಮವಾರ ಕಾಂಗ್ರೆಸ್ ಕಚೇರಿಯಲ್ಲಿ ನೆರೆದ ಕಾರ್ಯಕಾರಿ ಮಂಡಲದ ಸಭೆಯಲ್ಲಿ ಮಂಜೂರಾದ ನಿರ್ಣಯಗಳ ಮೇರೆಗೆ ಎಲ್ಲ ಸರ್ಕಲ್ ಕಾಂಗ್ರೆಸ್ ಕಮಿಟಿಗಳು ಇದೇ ಬರುವ ಮಾರ್ಚ ತಾ. 15 ರೊಳಗೆ ಚುನಾವಣೆ ಹೊಂದತಕ್ಕದ್ದೆಂದು ನಿರ್ಣಯವಾಗಿ ಆ ಬಗ್ಗೆ ಬೇರೆ ಬೇರೆ ಸರ್ಕಲ್‌ಗಳಿಗೆ ಬೇರೆ ಬೇರೆ ಚುನಾವಣಾಧಿಕಾರಿಗಳನ್ನು ನೇಮಿಸಲಾಗಿದೆ. ಅವುಗಳ ಪಟ್ಟಿಯನ್ನು ಇದರ ಅಂತ್ಯದಲ್ಲಿ ಕೊಡಲಾಗಿದೆ.

ಚುನಾವಣೆಗೆ ಈ ಕೆಳಗಿನ ನಿಯಮಗಳನು ಅನುಸರಿಸತಕ್ಕದ್ದು.

ಪ್ರತಿಯೊಂದು ನೂರು ಮಂದಿ ಸದಸ್ಯರಿಗೆ ಒಬ್ಬ ಪ್ರತಿನಿಧಿಯಂತೆ ಕನಿಷ್ಠಾವಧಿ 7 (ಏಳು) ಮತ್ತು ಪರಮಾವಧಿ 12 ಮಂದಿ ಕಮಿಟಿಯ ಮೆಂಬರರನ್ನು ಚುನಾಯಿಸತಕ್ಕದ್ದು

ಕೆಲವು ಮತದಾರ ಸಂಘಗಳು ಒಬ್ಬನನ್ನೇ ತಮ್ಮ ಪ್ರತಿನಿಧಿಯಾಗಿ ಆರಿಸುವ ಕ್ರಮವಿದೆ ಅಂಥವುಗಳು ಒಬ್ಬನನ್ನೇ ಆರಿಸಬೇಕು

ಮತದಾನ (ಓಟು)ವು ಗುಪ್ತವಾಗಿರಬೇಕು

ಆಯಾ ಚುನಾವಣಾಧಿಕಾರಿಗಳು ತಮಗೆ ಬೇಕಾದ ಮತದಾನ ಪತ್ರ ಪೆಟ್ಟಿಗೆ ಮುಂತಾದವುಗಳನ್ನೆಲ್ಲ ತಾವೇ ತಯಾರಿಟ್ಟುಕೊಳ್ಳತಕ್ಕದ್ದು

ಮತದಾನ ಸಂಘಗಳ ಹೆಸರುಗಳನ್ನು ಪ್ರಕಟಿಸಿದ ಕೂಡಲೇ ಯಾವದೇ ತರದ ಆಕ್ಷೇಪಗಳಿದ್ದರೆ ಚುನಾವಣಾಧಿಕಾರಿಗಳು ಲಿಖಿತಯಾಗಿ ಕುರಿತು ಆಕ್ಷೇಪಗಳನ್ನು ಕೇಳಿ ಅವುಗಳ ವಿಷಯ ಕೊನೆಯ ತೀರ್ಮಾನವನ್ನು ಮಾಡಿಕೊಳ್ಳಬೇಕು

ಚುನಾವಣಾಧಿಕಾರಿಗಳೇ "ಪೋಲಿಂಗ್" ಆಫೀಸರರನ್ನು ನೇಮಿಸತಕ್ಕದ್ದು

ಚುನಾವಣೆ ಬಗ್ಗೆ ಯಾರದೇ ತಕರಾರು ಇದ್ದರೆ ಚುನಾವಣೆಯ ನಂತರ ಏಳು ದಿವಸಗಳೊಳಗೆ 5 ರೂಪಾಯಿಗಳ ಸಮೇತ ತಮ್ಮ ಆಕ್ಷೇಪಣಾ ಅರ್ಜಿಯನ್ನು ಚುನಾವಣಾಧಿಕಾರಿಗಳಲ್ಲಿ ಕೊಡತಕ್ಕದ್ದು

ಜಿಲ್ಲೆಯ ಚುನಾವಣೆಗಳ ಪಂಚ ಮಂಡಲದವರು ಕೊಟ್ಟ ತೀರ್ಮಾನದ ಮೇಲೆ 'ಅಪ್ಪೀಲು ಮಾಡುವದಿದ್ದರೆ, ಸದ್ರಿ ತೀರ್ಮಾನದ ನಂತರದ ಏಳು ದಿವಸಗಳೊಳಗೆ 10 ರೂಪಾಯಿಗಳ ಸಹಿತ ಪ್ರಾಂತಿಕ ಪಂಚ ಮಂಡಲಕ್ಕೆ ಆಕ್ಷೇಪಣೆ ಅರ್ಜಿ ಬರೆಕೊಳ್ಳತಕ್ಕದ್ದು

ಆಯಾ ಸರ್ಕಲಿನ ಯಾವತ್ತೂ ವೆಚ್ಚಗಳನ್ನು ಆಯಾ ಸರ್ಕಲ್ ಕಮಿಟಿಗಳೇ ವಹಿಸಿಕೊಳ್ಳತಕ್ಕದ್ದು

ಉಮೇದ್ವಾರರಿಗೆ ಮತದಾರರ ಪಟ್ಟಿಯನ್ನು ಮತ್ತು ಅವರು ಕೇಳುವ ನ್ಯಾಯವಾದ ಯಾವತ್ತೂ ಸಹಾಯವನ್ನು ಸರ್ಕಲ್ ಕಮಿಟಿಯ ಅಧಿಕಾರಿಯಾಗಲೀ ಇನ್ನಿತರ ಸದಸ್ಯರಾಗಲೀ ಮಾಡತಕ್ಕದ್ದು

ಮತದಾರ ಸಂಘಗಳ ಪಟ್ಟಿಯನ್ನು ಆಯಾ ಚುನಾವಣಾಧಿಕಾರಿಗಳ ಮನೆಯಲ್ಲಿ ಅಥವಾ ಆಫೀಸಿನ ಕಚೇರಿಯಲ್ಲಿ ಬಂದು ನೋಡಬೇಕು

ಚುನಾವಣೆಯನ್ನು ಇದೇ ಬರುವ ಮಾರ್ಚ 1ರೊಳಗೆ ಮಾಡಿ ಮುಗಿಸಬೇಕು. ಸರ್ಕಲಿನ ಹೆಸರು ಚುನಾವಣಾಧಿಕಾರಿಯ ಹೆಸರನ್ನು ಈ ಕೆಳಗೆ ಕೊಡಲಾಗಿದೆ

ಉಡುಪಿ ಶ್ರೀ ಲಕ್ಷ್ಮೀನಾರಾಯಣ ನಾಯಕ ಉಪ್ಪಿನಂಗಡಿ—ವೇಣುಗೋಪಾಲ ನಾಯಕ ಕಟಪಾಡಿ ಶ್ರೀ ಲಕ್ಷ್ಮೀನಾರಾಯಣನಾಯಕ ಕಾರ್ಕಳ ಶ್ರೀ ಎಂ ಡಿ ಅಧಿಕಾರಿ ಕಾಸರಗೋಡು—ಶ್ರೀ ಎಂ ಉಮೇಶ ರಾವ್ ಕುಂದಾಪುರ—ಶ್ರೀ ಬಿ ಎಸ್ ಸೂರಪ್ಪ ಶೆಟ್ಟಿ ಬಸರೂರು ಪಾಣೆ ಮಂಗಳೂರು— ಶ್ರೀ ಎನ್ ಉಪೇಂದ್ರ ನಾಯಕ ಪುತ್ತೂರು—ಶ್ರೀ ಕೆ ರಾಮ ಕುಡ್ವ ಬಾರಕೂರು ಪ್ರಧಾನ ಕಾರ್ಯದರ್ಶಿಗಳು ವ್ಯವಸ್ಥೆ ಮಾಡುವರು, ಬಂಟ್ವಾಳ ಶ್ರೀ ಎನ್ ಉಪೇಂದ್ರ ನಾಯಕ ಮೂಲ್ಕಿ—ಶ್ರೀ ಪಿ ರಾಮಚಂದ್ರ ಭಟ್ಟ. ಮಂಗಳೂರು—ಶ್ರೀ ಎಚ್ ನಾರಾಯಣರಾವ್. ಮಂಜೇಶ್ವರ—ಶ್ರೀ ಅಮೃತಕೃಷ್ಣರಾವ್ ಹೊಸದುರ್ಗ—ಶ್ರೀ ಕೆ. ಅಚ್ಯುತ ಶೆಣೈ

ಜಿಲ್ಲಾ ಪರಿಚಯ

ರಾಷ್ಟ್ರ ಸೇವಾದಲದ ವಿರುದ್ಧ ಪ್ರದರ್ಶನಕ್ಕೆ ಕಾರಣರಾರು? ಕಳೆದ ತಾ. 20ರ ಸಂಜೆ ಮಂಗಳೂರಿನ ಕೆನರಾ ಹೈಸ್ಕೂಲಿನಲ್ಲಿ ಆರ್ ಎಸ್ ಎಸ್ಸಿನ ಜಿಲ್ಲಾ ಪ್ರದರ್ಶನವೊಂದು ನಡೆದಿದ್ದಾಗ ಆರ್ ಎಸ್. ಡಿ ಯವರು ವಿರುದ್ಧ ಪ್ರದರ್ಶನ ಮಾಡಿದುದೇಕೆಂಬ ಕುರಿತು ನಾನಾ ತಪ್ಪು ಭಾವನೆಗಳು ಹಬ್ಬಿರುತ್ತವೆ ಆದುದರಿಂದ ಆ ಕುರಿತು ಹೇಳಿಕೆಯೊಂದನ್ನು ಹೊರಡಿಸುವ ಆವಶ್ಯಕತೆಯು ಬಂತು

ಕೆನರಾ ಹೈಸ್ಕೂಲಿನ ಕೆಲಮಂದಿ ಅಧಿಕಾರಿಗಳು ಆರ್ ಎಸ್ ಎಸ್ಸಿನ ಪಕ್ಷಪಾತಿಗಳಾಗಿ ಆರ್ ಎಸ್ ಡಿ ಯನ್ನು ಅನಾದಾರ ದೃಷ್ಟಿಯಿಂದ ನೋಡುತ್ತಿದ್ದಾರೆಂದು ಕೆಲವು ಆರೋಪಗಳು ನಮ್ಮ ಬಳಿಗೆ ಆಗಾಗ ಬರುತ್ತಿದ್ದವು. ಆದರೆ ಅವುಗಳಿಗೆ ಗಮನ ಕೊಡಲಿಲ್ಲ

ಕಳೆದ ತಾ 20ರಲ್ಲಿ ನಡೆದ ಆರ್ ಎಸ್ ಎಸ್ಸಿನ ಜಿಲ್ಲಾ ಪ್ರದರ್ಶನವು ಕೆನರಾ ಹೈಸ್ಕೂಲಿನ ಅಧಿಕಾರಿಗಳ ಪಕ್ಷ ಪಕ್ಷಿಯತೆಯನ್ನು ಸಿದ್ಧಗೊಳಿಸಿರುವುದು

ಶಿವರಾತ್ರಿ ಸಂಬಂಧವಾದ ಶಾಲೆಯ ರಜಾದಿನವು ತಾ 19 ಆಗಿದ್ದರೂ ಹಲವು ಮಂದಿ ವಿದ್ಯಾರ್ಥಿಗಳು ಆಕ್ಷೇಪಿಸಿದ್ದರೂ ಗಣಿಸದೆ ವಿದ್ಯಾರ್ಥಿಯ ಸಮ್ಮತಿಯ ಸಹಿ ಪಡೆದ ನೆಪದಿಂದ ಆರ್ ಎಸ್ ಎಸ್ಸಿನ ಪ್ರದರ್ಶನಕ್ಕೆ ಅನುಕೂಲವಾಗುವಂತೆ ತಾ 20ನ್ನು ರಜಾ ದಿನವಾಗಿ ಮಾಡಿದರು

ಆ ಮೇಲೆ ಕೆನರಾ ಹೈಸ್ಕೂಲಿನ ಒಂದು ಮೂಲೆಯಲ್ಲಿ ಪ್ರತಿದಿನ ನಡೆಯುತ್ತಿದ್ದ ಆರ್ ಎಸ್ ಡಿ ಶಾಖೆಯನ್ನು ತಾ 20ರಲ್ಲಿ ಒಂದು ಮಾಡಬೇಕೆಂದು ಕೇವಲ ಶಾಖಾನಾಯಕ ಮತ್ತು ಸೈನಿಕರೊಡನೆ ತಿಳಿಸಿದರು ಆದರೆ ಜಿಲ್ಲಾ ಸಂಘಟಕರನ್ನಾಗಲೀ ಕಾಂಗ್ರೆಸ್ ಕಮಿಟಿಯ ಅಧಿಕಾರಿಗಳನ್ನಾಗಲೀ ಕರೆದು ಯಾವುದನ್ನೂ ತಿಳಿಸಲಿಲ್ಲ

ಈ ಸಂಗತಿಯನ್ನು ತಿಳಿದ ನಾನು ಜಿಲ್ಲಾ ಸಂಘಟಕ ಮತ್ತು ಇತರ ಸೇವಾದಲದ ಅಧಿಕಾರಿಗಳೊಂದಿಗೆ ಕೆನರಾ ಹೈಸ್ಕೂಲಿನ ಮೆನೇಜರರಾದ ಶ್ರೀ ಎಂ ಮಾಧವರಾಯರ ಮನೆಗೆ ಹೋಗಿ ಸಂಗತಿಯೇನೆಂದು ವಿಚಾರಿಸಿದೆವು ಅವರು ಒಮ್ಮೆಲೆ ಉದ್ವೇಗಗೊಂಡು ಏನೆನೆಲ್ಲಾ ಮಾತಾಡಿದರೂ ಆ ಮೇಲೆ ವಿವೇಕ ತಳೆದು ಸೇವಾದಳದ ಅನಿಶ್ಚಿತ ಕಾರ್ಯಕ್ರಮವನ್ನು ಯಥಾಪ್ರಕಾರ ಮೊದಲಿದ್ದ ಸ್ಥಳದಲ್ಲೇ ನಡೆಸಬಹುದೆಂದು ಸಮ್ಮತಿಸುವ ಉದಾರತೆ ತೋರಿಸಿದರು ಈ ಸಂದರ್ಭದಲ್ಲಿ ನಮ್ಮ ಸೈನಿಕರು ಶಾಂತವಾಗಿ ಶಿಸ್ತಿನಿಂದ ನಡೆಯುವಂತೆ ನೋಡುವೆವೆಂದು ಜಿಲ್ಲಾ ಸಂಘಟಕರೂ ನಾನೂ ಭರವಸೆ ಕೊಟ್ಟೆವು

ಆ ಪ್ರಕಾರ ತಾ 20ನೇ ಬೆಳಗ್ಗೆ ಸೇವಾದಳದ ಬೆಳಗ್ಗಿನ ಶಾಖೆಯು ಕೆನರಾ ಹೈಸ್ಕೂಲಿನಲ್ಲಿ ಯಥಾಪ್ರಕಾರ ನಡೆಯಿತು ಅದಕ್ಕೆ ಯಾರೂ ಆತಂಕ ಮಾಡಲಿಲ್ಲ

ಆದರೆ ಸಂಜೆ ನಮ್ಮ ಸೈನಿಕರು ಯಥಾಪ್ರಕಾರ ತಮ್ಮ ಶಾಖೆ ನಡೆಸಲು ಕೆನರಾ ಹೈಸ್ಕೂಲಿಗೆ ಹೋದಾಗ ಗೇಟಿನಲ್ಲೇ ಆರ್ ಎಸ್ ಎಸ್ಸಿನ ಸೈನಿಕರು ಅವರನ್ನು ತಡೆದು "ನೀವು ಮರ್ಯಾದೆ ಇದ್ದವರಾದರೆ ಇಲ್ಲಿಂದ ಹೊರಟು ಹೋಗಬೇಕು. ನೀವು ಮನುಷ್ಯರಲ್ಲವೊ" ಎಂದೆಲ್ಲಾ ನಮ್ಮ ಸೈನಿಕರನ್ನು ಅವಮಾನಿಸಿದರು ಇದೇ ನಮ್ಮ ಸೈನಿಕರು ಉದ್ವೇಗಗೊಳ್ಳಲು ಮುಖ್ಯ ಕಾರಣವಾಯಿತು

ಆ ಮೇಲೆ ಜಿಲ್ಲಾ ಸಂಘಟಕರಾದ ಸತ್ಯೇಂದ್ರ ನಾಯ್ಕರು ಕೆನರಾ ಹೈಸ್ಕೂಲಿಗೆ ಹೋಗಿ ಮುಖ್ಯೋಪಾಧ್ಯಾಯ ಮತ್ತು ಮೆನೇಜರರ ಹತ್ತಿರ ಮಾತಾಡಿದಾಗ ನಿಶ್ಚಿತ ಸ್ಥಳದಲ್ಲಿ ತಮ್ಮ ಶಾಖೆ ನಡೆಯಿಸಲು ಎಷ್ಟಕ್ಕೂ ಸಾಧ್ಯವಿಲ್ಲೆಂದೂ ಹಿಂದಿನ ಗೇಟಿನಿಂದ ಒಂದು ಗುಪ್ತವಾದೊಂದು ಮೂಲೆಯಲ್ಲಿ ಶಾಖೆ ನಡಿಸಬೇಕೆಂದೂ ಅವರೆಂದರು.

ಕೊಟ್ಟ ಮಾತಿಗೆ ತಪ್ಪಿ ನಡೆದ, ಆರ್ ಎಸ್. ಎಸ್ಸಿನ ಕುರಿತು ತೀರಾ ಪಕ್ಷಪಾತದ ಕೆನರಾ ಹೈಸ್ಕೂಲಿನ ಅಧಿಕಾರಿಗಳ ಧೋರಣೆಯಿಂದ ಸೇವಾದಳದ ತರುಣ ಸೈನಿಕರ ಉದ್ವೇಗವು ಮತ್ತಷ್ಟು ಅಧಿಕವಾಯಿತು ಕೆನರಾ ಹೈಸ್ಕೂಲಿನ ಗೇಟಿನ ಮೇಲೆ ಮಲಗಿ ಸತ್ಯಾಗ್ರಹ ಮಾಡಲು ಅವರು ಮುಂದಾದರು. ಆಗ ಜಿಲ್ಲಾ ಸಂಘಟಕರೂ ಎಚ್ ಎಚ. ವೊಡೆಯರರೂ ನಮ್ಮ ಸೈನಿಕರಿಗೆ ಬುದ್ಧಿವಾದ ಹೇಳಿ ಅಧಿಕಾರಿಗಳ ವರ್ತನೆಯನ್ನು ನಿಷೇಧಿಸಲು ಮೈದಾನಿನಲ್ಲಿ ಸಭೆ ನಡಿಸೋಣ ಎಂದು ಸಮಜಾಯಿಸಿ ಮೆರವಣಿಗೆಯಿಂದ ಅವರಿಗೆ ಮೈದಾನಿಗೆ ಕರಕೊಂಡು ಬಂದು ಸಭೆ ನಡೆಯಿತು

ಆ ಮೇಲೆ ಪುನಃ ಮೆರವಣಿಗೆಯು ಕೆನರಾ ಹೈಸ್ಕೂಲಿನ ಮುಖಾಂತರ ಕಾಂಗ್ರೆಸ್ ಆಫೀಸಿಗೆ ಬಂದು ಶಾಂತವಾಯಿತು

ಅತ್ಯಂತ ಉದ್ವೇಗತರ ಪರಿಸ್ಥಿತಿಯಲ್ಲಿ ನಮ್ಮ ಸೈನಿಕರಲ್ಲಿ ಕೆಲವರು ತಾವಾಗಿ ಕೆಲವು ಅಲ್ಲಸಲ್ಲದ ಘೋಷಣೆಗಳನ್ನು ಮಾಡಿರಬಹುದು ಆದರೆ ಈ ಸಂದರ್ಭದಲ್ಲಿ ಸರ್ವಸಾಧಾರಣ ಸೈನಿಕರು ತೋರಿಸಿದ ಶಿಸ್ತು ಮತ್ತು ಸಂಯಮ ಅಭಿನಂದನೀಯವಿರುತ್ತದೆ ಸೇವಾದಳದವರು ಕೆನರಾ ಹೈಸ್ಕೂಲನ್ನು ಬಿಡಬೇಕೆಂದು ಅವರು ಘೋಷಿಸಿದುದೇ ಹೊರತು ಆ ಶಾಲೆಗೆ ಹೋಗಲೇಬಾರದೆಂದು ಅಲ್ಲ

ಒಮ್ಮೆ ನಮಗೆ ಮಾತು ಕೊಟ್ಟು ಕೆನರಾ ಹೈಸ್ಕೂಲಿನ ಅಧಿಕಾರಿಗಳು ಬೆಳಗ್ಗೆ ನಮ್ಮ ಕಾರ್ಯಕ್ರಮವನ್ನೆಲ್ಲಾ ಆಗ ಬಿಟ್ಟು ನಮಗೆ ಏನೊಂದನ್ನೂ ತಿಳಿಸದೆ ಸಂಜೆ ನಮ್ಮ ಸೈನಿಕರಿಗೆ ಆರ್ ಎಸ್ ಎಸ್ಸಿನ ಮೂಲಕ ಹೀಯಾಳಿಸಿ ಅವಮಾನ ಮಾಡುವರೆ ಕಾರಣವಾದುದು ಎಷ್ಟೊಂದು ಜವಾಬ್ದಾರಿ ಹಾಗು ಯೋಗ್ಯ ವರ್ತನೆಯಾಗುವುದರ ವಿಚಾರವನ್ನು ನಾವು ಅವರಿಗೂ ಸಾರ್ವಜನಿಕರಿಗೂ ಬಿಟ್ಟು ಬಿಡುತ್ತೇವೆ

ಇಷ್ಟರ ವರೆಗೆ ನಮಗೆ ಆಶ್ರಯ ವಿತ್ತುದಕ್ಕಾಗಿ ನಾವು ಕೆನರಾ ಹೈಸ್ಕೂಲಿನ ಅಧಿಕಾರಿಗಳಿಗೆ ಆಭಾರಿಯಾಗಿದ್ದೇವೆ ಇನ್ನು ಮುಂದೆ ನಮ್ಮ ಯಾವ ಕಾರ್ಯಕಲಾಪಕ್ಕಾದರೂ ಅವರ ಆಶ್ರಯ ಪಡೆಯಬಾರದೆಂಬ ನಿರ್ಧಾರಕ್ಕೆ ನಾವು ಬಂದಿರುತ್ತೇವೆ. ಜೈ ಹಿಂದ್

ಕೆ ಕೆ ಶೆಟ್ಟಿ,

ಪ್ರಧಾನ ಕಾರ್ಯದರ್ಶಿ

ಜಿಲ್ಲಾ ಕಾಂಗ್ರೆಸ್ ಕಮಿಟಿ

ಹೊಟೇಲ್ ಮಾಲಕರ ಮುಷ್ಕರ:

ನಗರದ ಸುಮಾರು 73 ಹೋಟೇಲುಗಳು ತಾ 26, 27, ಮತ್ತು 28ರ ತನಕ ಮುಚ್ಚಲ್ಪಟ್ಟಿರುತ್ತವೆ ತಮಗೆ ಸಾಕಷ್ಟು ಸಕ್ಕರೆ ಮತ್ತಿತರ ತಿಂಡಿ ತಯಾರಿಕ ವಸ್ತುಗಳು ಸಿಗುತ್ತಿಲ್ಲವೆಂಬುದು ಹೋಟೇಲ್‌ಗಾರರ ಈ ಹರತಾಳಕ್ಕೆ ಕಾರಣವೆನ್ನಲಾಗಿದೆ ಪರಿಣಾಮವಾಗಿ ಹೇರಳ ಗಿರಾಕಿಗಳು ಕೆರಿದಿರುವ ಸಣ್ಣಪುಟ್ಟ ಹೋಟೇಲುಗಳಿಗೆ ತಂಡತಂಡವಾಗಿ ನುಗ್ಗುತ್ತಿರುವುದು ಕಂಡು ಬಂದಿದೆ ಸಂದರ್ಭವಶಾತ್ ಉಂಟಾದ ಈ ಪರಿಸ್ಥಿತಿಯಿಂದ ಈ ಚಿಕ್ಕ ಹೋಟೇಲುಗಳಲ್ಲಿ ತಿಂಡಿತೀರ್ಥಗಳ ಬೆಲೆಯಾದರೂ ಸಹಜವಾಗಿ ಏರಿಸಲಾಗಿದೆ ಅವುಗಳ ಶ್ರೇಷ್ಠತೆಯೂ ಅಷ್ಟಷ್ಟೇ ಎನ್ನಬಹುದು ವಿಪರೀತ ಗಿರಾಕಿಗಳ ದೆಸೆಯಿಂದ ಇದೂ ಸಹಜವೇ ಆಗಿದೆ ಮನೆಗಳಲ್ಲೇ ಫಲಹಾರ ಅಭ್ಯಾಸ ಮಾಡಲೂ ಅನೇಕರಿಗೆ ಇದು ಸುಸಂಧಿಯಾಗಬಹುದು ನಂತರ ಕ್ರಮೇಣ ಈ ಅಭ್ಯಾಸವು ಮುಂದುವರಿದರೆ ಹೋಟೇಲುಗಳ ಮೇಲಿರುವ ಈಗಿನ ಒತ್ತಡವಾದರೂ ಕಡಿಮೆಯಾಗಬಹುದೆಂಬ ನಿರೀಕ್ಷೆಯುಂಟು. ಸಕ್ಕರೆಯು ಹೆಚ್ಚು ಕಡಿಮೆ ಪ್ರಮಾಣದಲ್ಲಿ ಪ್ರತಿ ಸಂಸಾರಕ್ಕೂ ಸರಬರಾಯಿಯಾಗುತ್ತಿಲ್ಲವೆ? ಅಂದಮೇಲೆ ಸಾಧ್ಯವಿದ್ದಷ್ಟು ನಾಗರೀಕರು ಅದರ ಸದುಪಯೋಗ ಮಾಡಿ ಫಲಹಾರ ಮಂದಿಗಳ ಮೇಲಿರುವ ಗಲಿಬಿಯನ್ನು ಕಡಿಮೆ ಮಾಡಬಹುದಲ್ಲವೆ! ಆ ಸಂದರ್ಭದಲ್ಲಿ ಹೋಟೇಲುಗಳಿಗೆ ಹೆಚ್ಚು ಸಕ್ಕರೆ ಸರಬರಾಯಿ ಮಾಡುವ ಆವಶ್ಯಕತೆಯೂ ಕಡಿಮೆಯಾಗಬಹುದೆಂದೊಂದು ಬಾತ್ಮಿ.

ಸಂಸ್ಕೃತಾಭ್ಯಾಸಕ್ಕಾಗಿ ನಿವೇದನೆ

ಪ್ರಾಚೀನ ಕಾಲದಲ್ಲಿ ಭರತಖಂಡದ ಆಶ್ರಮಗಳಲ್ಲಿಯೂ ವಿಶ್ವವಿದ್ಯಾಲಯಗಳಲ್ಲಿಯೂ ಸಂಸ್ಕೃತವೇ ಮಾಧ್ಯಮವಾಗಿತ್ತು ಶಾಸ್ತ್ರಜ್ಞ, ವಿದ್ವಾಂಸರೆಲ್ಲ ಸಂಸ್ಕೃತದಲ್ಲೇ ಸಕಲ ವ್ಯವಹಾರವನ್ನೂ ನಡೆಸುತ್ತಿದ್ದರು. ಆ ಕಾಲದಲ್ಲಿ ಭಾರತವು ಜಗತ್ತಿಗೆಲ್ಲ ಆಧ್ಯಾತ್ಮಿಕದಲ್ಲೂ ಐಹಿಕ ಸಾಧನೆಯಲ್ಲೂ ಆದರ್ಶಪ್ರಾಯವಾಗಿತ್ತು.

ಪರಕೀಯರು ದಂಡೆತ್ತಿ ಬಂದು ಶಾಸನ ಮಾಡಲಾರಂಭಿಸಿದಂದಿನಿಂದ ಮೊದ ಮೊದಲು ಪಾರಸೀ ಭಾಷೆ ಮತ್ತೆ ಇಂಗ್ಲೀಷು ನಮ್ಮ ವಿದ್ಯಾಭಾಷೆಯಾಗಿ ಸಂಸ್ಕೃತವು ಮೂಲೆಪಾಲಾದಂದಿನಿಂದ ನಮ್ಮ ಸ್ಥಾನವು ಜಗತ್ತಿನಲ್ಲಿ ಕೆಳಕೆಳಗೆ ಹೋಗುತ್ತ ಬಂದಿತು, ಪಾರಮಾರ್ಥಿಕದಲ್ಲಿ ಮಾತ್ರವಲ್ಲ, ಇಹಲೋಕದ ಸಂಪತ್ತಿನಲ್ಲೂ ಅಂತೇ ಆಯಿತು. ತನ್ನ ಪಿತ್ರಾರ್ಜಿತವನ್ನು ಕಳಕೊಂಡ ಜನಾಂಗವು ಇತರ ಸಭ್ಯ ದೇಶಗಳನ್ನು ಎಷ್ಟೇ ಅನುಕರಿಸಿದರೂ ಅದಕ್ಕೆ ಉಜ್ವಲ ಭವಿಷ್ಯ ಇಲ್ಲವೇ ಇಲ್ಲ ಮಹಾತ್ಮಾ ಗಾಂಧಿಯವರು ಹೇಳುವಂತೆ ನಾವು ಒರೇ ಪರಕೀಯರ ನೊಣಪ್ರತಿಯಾಗುವ ಪ್ರಯತ್ನ ಬಿಟ್ಟು ನಮ್ಮ ನಮ್ಮ ಭಾಷೆಗಳನ್ನೇ ತಿಳಿದು ಸಂಸ್ಕೃತ ರತ್ನಾಕರದಿಂದ ಮುತ್ತುಗಳನ್ನು ಆರಿಸಲಿಕ್ಕೆ ಸಿದ್ಧರಾಗಬೇಕು ಶಾಲೆಗಳಲ್ಲಿ ದೇಶಭಾಷೆಗಳಿಗೆ ಮೇಲ್ತರದ ಸ್ಥಾನವನ್ನು ಕೊಡಲು ಕಾಂಗ್ರೆಸು ಮಂತ್ರಿ ಮಂಡಳದವರು ಪ್ರಯತ್ನ ಮಾಡುತ್ತಿರುವಾಗ ಅವರಿಗೆ ಸಹಾಯಕರಾಗಿ ಸಂಸ್ಕೃತವನ್ನು ಪೋಷಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ

ನಮ್ಮ ಯುವಕಯುವತಿಯರು ಭಾರತೀಯ ವಿದ್ಯಾರ್ಥಿಗಳಿಗೆ ಸಹಜವಾದ ವಿನಯ ಸೌಜನ್ಯಗಳನ್ನು ಕಳಕೊಂಡಿದ್ದಾರಾದರೆ ಅದಕ್ಕೆ ಕಾರಣ ಅವರು ಸಂಸ್ಕೃತಾಭ್ಯಾಸ ಮಾಡದಿದ್ದುದೇ, ಹೀಗಾಗಿ ನಮ್ಮ ಉಪನಿಷತ್ತುಗಳು, ಧರ್ಮಶಾಸ್ತ್ರಗಳು ಕಾವ್ಯಗಳು ಇವುಗಳಲ್ಲಿರುವ ಆತ್ಮಪೋಷಣೆಯನ್ನು ಅವರು ಪಡೆದಿಲ್ಲ ಇನ್ನಾದರೂ ಎಲ್ಲಾ ವಿದ್ಯಾರ್ಥಿಗಳಿಗೆ ಮುಖ್ಯವಾಗಿ ಮುಂದಿನ ಜನಾಂಗದ ತಾಯಂದಿರಿಗೆ ಸಂಸ್ಕೃತ ವಾತಾವರಣವನ್ನು ಕೊಡುವುದು ಅತ್ಯಗತ್ಯವಾಗಿದೆ

ಆದಕ್ಕಾಗಿ ತಂತಮ್ಮ ಮಕ್ಕಳು ಮುಖ್ಯವಾಗಿ ಹುಡುಗಿಯರು III ಫಾರ್ಮಿನಿಂದಲೇ ಸಂಸ್ಕೃತಾಭ್ಯಾಸವನ್ನು ಆರಂಭಿಸುವಂತೆ ಅವರಿಗೆ ಬೋಧಿಸಬೇಕೆಂದು ಹಿರಿಯರೊಡನೆ ನಿವೇದಿಸುತ್ತೇವೆ

ತೆಂಗಿನ ಹಿಂಡಿ: ಈ ಕುರಿತು ದ ಕ ಜಿಲ್ಲಾ ಕಲೆಕ್ಟರರು ಈ ಕೆಳಗಿನ ಆಜ್ಞೆಯನ್ನು ಹೊರಡಿಸಿದ್ದಾರೆ

1 ಈ ಆಜ್ಞೆ ಪ್ರಕಟವಾದಂದಿನಿಂದ (14 1 47) ಕಲೆಕ್ಟರರ ಬರಹ ಮೂಲಕ ಹುಕುಂ ವಿನಹ ಈ ಜಿಲ್ಲೆಯಿಂದ ತೆಂಗಿನ ಹಿಂಡಿಯನ್ನು ರೈಲು, ನೆಲ ವ ಜಲ ಮಾರ್ಗದಿಂದ ಹೊರಗೆ ಕೊಂಡುಹೋಗಬಾರದು. ಆಜ್ಞೆ ಮೀರಿದವರು ಶಿಕ್ಷೆಗೊಳಗಾಗುವರು

2 ಹಿಂಡಿಯ ಬೆಲೆ ಹೀಗೆ ನಿರ್ಧರಿಸಲಾಗಿದೆ 28 ರಾತ್ತಲಿನ ಮಣಕ್ಕೆ ರಖಂ ಬೆಲೆ ರೂ 8 ಚಿಲ್ಲರೆ ರೂ 8—8 0 ಈ ಬೆಲೆಗಳು ಸೇಲ್‌ಟೆಕ್ಸ್ ರಹಿತವಾಗಿವೆ ಈ ಜಿಲ್ಲೆಯ ಯಾವ ಭಾಗದಲ್ಲೂ ಈ ಬೆಲೆಗೆ ಮಿಕ್ಕಿ ತೆಂಗಿನ ಹಿಂಡಿಯನ್ನು ಈ ಆಜ್ಞೆ ಪ್ರಕಟವಾದಂದಿನಿಂದ (19—2—47) ಮಾರಬಾರದು ಉಲ್ಲಂಘಿಸುವವರು ಶಿಕ್ಷೆಗೊಳಗಾಗುವರು.

3. ಜಿಲ್ಲೆಯಲ್ಲಿ ಒಂದು ಖಂಡಿಗೆ ಮಿಕ್ಕಿ (560 ರಾತ್ತಲು) ತೆಂಗಿನ ಹಿಂಡಿ ದಾಸ್ತಾನಿದ್ದವರು ಈ ಆಜ್ಞೆ ಪ್ರಕಟವಾದ (17-2-'47) ಏಳು ದಿನಗಳಲ್ಲಿ ಸ್ಟಾಕಿನ ವಿವರಗಳನ್ನು ಕಲೆಕ್ಟರರಿಗೆ ತಿಳಿಸಿರತಕ್ಕದ್ದು.

ಸಬ್ ಇನ್ಸ್‌ಪೆಕ್ಟರರು, ಅಸಿಸ್ಟಾಂಟ್ ಕಮರ್ಷಿಯಲ್ ಟೆಕ್ಸ್ ಆಫೀಸರರು ಇಲ್ಲವೆ ರೆವಿನ್ಯೂ ಇನ್ಸ್‌ಪೆಕ್ಟರರಿಗೆ ಕೆಳಗಿನವರಲ್ಲದ ಅಧಿಕಾರಿಗಳು ತಮ್ಮ ಕ್ಷೇತ್ರದಲ್ಲಿ ಯುಕ್ತ ಸಮಯದಲ್ಲಿ ಈ ಸ್ಟಾಕುಗಳ ಕುರಿತು ತಪಾಸನೆ ನಡೆಸಲು ಅಧಿಕೃತರಿರುತ್ತಾರೆ.

ಈ ಆಜ್ಞೆ ಉಲ್ಲಂಘಿಸುವವರು ಯೋಗ್ಯ ಶಿಕ್ಷೆಗೆ ಗುರಿಯಾಗುವರು.

ಭಾರತದಿಂದ ಬ್ರಿಟನು ದೋಚಿಕೊಂಡ ದ್ರವ್ಯರಾಶಿ

ಕ್ಲೈವನ ಕಾಲದಿಂದ ಇದುತನಕದ ಸುಲಿಗೆ

'ನಿಷ್ಪಕ್ಷಪಾತ ವಿಚಾರಣೆಯಾಗಲಿ' — ಕುಮಾರಪ್ಪ

"ಕ್ಲೈವನ ಕಾಲದಿಂದ ಇದು ತನಕದ ಬ್ರಿಟಿಷ್ ಆಳ್ವಿಕೆಯ ದಾಖಲೆಯು ಒಂದು ದೀರ್ಘ ಮೋಸ, ಅಪ್ರಮಾಣಿಕತೆ, ವಿಶ್ವಾಸ ಘಾತಗಳ ಇತಿಹಾಸವಾಗಿದೆ." ಎಂಬ ಧಾಟಿಯನ್ನು ನಿರೂಪಿಸುತ್ತಾ ಡಾ: ಜೆ. ಸಿ. ಕುಮಾರಪ್ಪನವರು ಹರಿಜನದಲ್ಲಿ ಬರೆದ ಒಂದು ಲೇಖನದಲ್ಲಿ ಸ್ಟರ್ಲಿಂಗ್ ಬೆಲೆನ್ಸಿನ ಕುರಿತು ಬ್ರಿಟಿಷ್ ಮತ್ತು ಭಾರತ ಸರಕಾರ ಗಳೊಳಗೆ ನಡೆಯುತ್ತಿರುವ ಮಾತುಕತೆಗಳ ಕುರಿತು ಪ್ರಸ್ತಾಪಿಸಿದುದರ ಸಾರಾಂಶ ಹೀಗಿದೆ:

ಭಾರತದೊಡನೆ ಬ್ರಿಟಿಷರ ಸಂಬಂಧದ ಇತಿಹಾಸವನ್ನು ಪರಿಶೀಲಿಸುವಾಗ, ಬ್ರಿಟಿಷರು ಎಲ್ಲಾ ರೀತಿಯ ಅಪ್ರಾಣಿಕತನಗಳ ಅನುಕೂಲತೆಯನ್ನೂ ಪಡೆದಿದ್ದಾರೆ ಮಾತ್ರವಲ್ಲ, ಅನೇಕ ಸಂದರ್ಭಗಳಲ್ಲಿ ಮೋಸದ ಮತ್ತು ವಿಶ್ವಾಸಘಾತದ ಕೃತಿಗಳೂ ತೋರಿ ಬರುತ್ತವೆ. ಹೆದರಿಕೆ ಬೆದರಿಕೆಗಳಿಂದ ಹಣ ವಸೂಲು ಮಾಡುವುದು ಕ್ಲೈವನ ಕಾಲದ ಸಾಮಾನ್ಯ ಧೋರಣೆಯಾಗಿತ್ತು. ಪ್ಲಾಸಿ ಮತ್ತು ವಾಟರ್‌ಲೂ ಕದನದ ಹೆಚ್ಚು ಕಡಿಮೆ ಐವತ್ತು ವರ್ಷ ಅವಧಿಯಲ್ಲಿ ಸುಮಾರು 100 ಕೋಟಿ ಪವನುಗಳಷ್ಟು ಸಂಪತ್ತು ಭಾರತದಿಂದ ಬ್ರಿಟಿಷ್ ಬೇಂಕುಗಳ ಠೇವಣಾತಿಗಳಿಗೆ ತಲ್ಪಿರುತ್ತದೆ.

ಕಣ್ಣುಕಟ್ಟು ಲೆಕ್ಕ

ಕ್ಲೈವನ ನಂತರದ ಕಾಲವು "ಗಲಿಬಿಲಿ ಲೆಕ್ಕದ್ದು. ಘನಹೊಂದಿದ ಈಸ್ಟ್ ಇಂಡಿಯಾ ಕಂಪೆನಿಯು ಗದರಿಕೆಯಿಂದ ಹಣ ಸುಲಿಯುವಷ್ಟು ಹೀನಸ್ಥಾನಮಾನದ್ದಲ್ಲ. ಅದರ ಭಾರತ ಚಾಲಕರು ಇಲ್ಲಿಯ ಖಜಾನೆಯೊಳಗಿನ ಶೆರಿಗೆ ಹಣದಿಂದ ಮಾಲುಗಳನ್ನು ಖರೀದಿ ಮಾಡಿ ಯುರೋಪಿಗೆ ಕಳುಹಿಸಿ ತಮ್ಮ 'ಸ್ವಂತ ಲೆಕ್ಕ'ದಲ್ಲಿ ಮಾರಿದರು. ಹೀಗೆ 1793ರಿಂದ 1812ರ ವರೇಗೆ ತಬ್ಬೀಲು ಮಾಡಿದ ಲೆಕ್ಕದ ಹಣವು ಸುಮಾರು 26 ಕೋಟಿ ಪವನುಗಳಷ್ಟಾಗುತ್ತದೆಂದು 'ಈಸ್ಟ್ ಇಂಡಿಯಾ ಕಂಪೆನಿಯ ವ್ಯವಹಾರ ಇತಿಹಾಸ'ವೆಂಬ ಪರಿಶೋಧನಾ ವರದಿಯಲ್ಲಿ ತಿಳಿಸಿದೆ.

ವಿಕ್ಟೋರಿಯಾ ರಾಣಿಯ ಕಾಲದಲ್ಲಿ ಬ್ರಿಟಿಷ್ ಸರಕಾರವು ಕ್ಲೈವನ ಕಾಲದ ಚೌರ್ಯವೃತ್ತಿಯನ್ನಾಗಲಿ ಈಸ್ಟ್ ಇಂಡಿಯಾ ಕಂಪೆನಿಯ ಮೋಸದ ಲೆಕ್ಕದ ಕೃತಿಯನ್ನಾಗಲಿ ಮಾಡುವುದು ಘನಸ್ಥಿತಿಕೆಯಲ್ಲವೆಂದು ಬಗೆಯಿತು. ಕೊಳ್ಳೆಯು ಅವರಿಗೆ ಬೇಕಾಗಿತ್ತಾದರೂ ಪ್ರಾಮಾಣಿಕರೆಂದು ತೋರಿಸಿಕೊಳ್ಳಲು ಅವರು ಆತುರಪಟ್ಟರು. ಆಗ ಅವರು ತುದಿಯಿಂದ ಕೊನೆ ತನಕ ಸುಳ್ಳು ಲೆಕ್ಕಗಳನ್ನು ಬರೆಯಿಸ ತೊಡಗಿದರು. ಭಾರತಕ್ಕೆ ಯಾವ ಸಂಬಂಧವಿಲ್ಲದ ಅಫ್ಘಾನ್, ಬರ್ಮಾ, ಚೀನಾ ಪರ್ಶಿಯಾ ಮಾತ್ರವಲ್ಲ ಅತೀ ದೂರದ ಈಜಿಪ್ಟ್ ಮತ್ತು ಅಬಿಸೀನಿಯಾ ಯುದ್ಧಗಳ ಖರ್ಚು ಹಿಂದೀ ಖಜಾನೆಯ ಲೆಕ್ಕಕ್ಕೆ ಖರ್ಚು ಬರೆಯಲಾಯಿತು. ಇದು ಸುಮಾರು 700 ಕೋಟಿ ರೂಪಾಯಿಗಳಷ್ಟಾಗುತ್ತದೆ. ವೆಬ್ಬಿ ಕಮಿಶನಿನವರು ಮಾಡಿದ ವರದಿಯನ್ನು ಇಣಿಕಿ ನೋಡಿದರೆ ಈ ಕುರಿತಾದ ಅನೇಕ ಮೋಸದ ಲೆಕ್ಕಗಳು ಗೋಚರವಾಗುತ್ತದೆ.

ಚಿತ್ರಾಯದ ಉಡುಗರೆ

ಪ್ರಾಚೀನ ಯೆಹೂದಿ ಸಾಂಪ್ರದಾಯವೊಂದಿದೆ. ಓರ್ವ ತಂದೆಯ ಸೊತ್ತನ್ನು ಮಗನಾದವನು "ಇದು ನನ್ನ ಉಡುಗರೆ" ಎಂದರೆ ಸಾಕು. ಮತ್ತೆ ಅದೆಲ್ಲ ಅವನದಾಗುವುದು. ಮುಂದೆ ಅವನಿಗೆ ತನ್ನ ಹೆತ್ತವರನ್ನು ಸಾಕುವ ಜವಾಬ್ದಾರಿ ಕೂಡ ತಪ್ಪುವುದು. ಎಲ್ಲಾ ಜವಾಬ್ದಾರಿಕೆಯಿಂದ ತಪ್ಪಿಸಿಕೊಳ್ಳಲು ಇದೊಂದು ಒಳ್ಳೇ ಉಪಾಯ.

ಇಪ್ಪತ್ತನೆಯ ಶತಮಾನದಲ್ಲಿ ಜಗತ್ತಿನ ಕಣ್ಣಿಗೆ ಮಣ್ಣೆರಚಲು ಬ್ರಿಟನ್ನು ಯಾವುದಾದರೂ ಇಂತಹ ಉಪಾಯಗಳನ್ನು ಕಂಡು ಹಿಡಿಯಬೇಕಾಯಿತು. ಮೊದಲನೇ ಜಾಗತ್ತಿಕ ಯುದ್ಧದಲ್ಲಿ ಬ್ರಿಟನ್ನು ಭಾರತದಲ್ಲಿ ತನ್ನ ಭದ್ರತೆಗಾಗಿ ಹೇರಳ ದ್ರವ್ಯವನ್ನು ಖರ್ಚು ಮಾಡಬೇಕಾಯಿತು. ಮೊದಲು ಸಾಲವಾಗಿ ಭಾರತ ಖಜಾನೆಯಿಂದ ಖರ್ಚು ಮಾಡಿಸಲಾಯಿತು. ನಂತರ ತಮ್ಮ ವ್ಯಾಸ್‌ರಾಯ ಪ್ರತಿನಿಧಿಗಳ ಮೂಲಕ ಆ ಹಣವು ಬ್ರಿಟನಿಗೆ ಭಾರತದ ಉಡುಗೊರೆ ಎಂದು ಘೋಷಣೆ ಮಾಡಿಸಲಾಯಿತಪ್ಪ!

ಬೃಹದ್ ಮೋಸ

ಕಳೆದ ಯುದ್ಧದಲ್ಲಿ ಬ್ರಿಟನು ಇನ್ನೊಂದು ಹೆಜ್ಜೆ ಮುಂದರಿಯಿತು. ಭಯಂಕರ ವಿನಾಶಕಾರಿ ಯುದ್ಧವೊಂದನ್ನು ನಿರ್ವಹಿಸಲು ಅದಕ್ಕೆ ಹೇರಳ ದ್ರವ್ಯದಾವಶ್ಯಕತೆಯಿತ್ತು. ಮಿಲಿಯಾವಧಿ ಬೆಲೆಯ ತನ್ನ ಸೊತ್ತನ್ನು ಮಾರಿದ ಬ್ರಿಟನು ಇಂದು ದೀವಾಳಿಗರಿಯ ಕಡೆಧಾವಿಸುತ್ತದೆ. ಆದುದರಿಂದ ಭಾರತದ ಕಡೆ ಅದರ ದೃಷ್ಟಿ ಸಹಜವಾಗಿ ಆಕರ್ಷಿಸಲ್ಪಟ್ಟಿದೆ. ತಮ್ಮ ಶಕ್ತಿ ಯುಕ್ತ ಹಸ್ತಗಳಿಂದವರು ಕೋಟಿ ಗಟ್ಟಲೆ ಬೆಲೆ ಬಾಳುವ ಆಹಾರ ವಸ್ತುಗಳನ್ನು ಬಸಿದು ಕೊಂಡು ಇಲ್ಲಿ "ಕೇಳಿದಾಗ ಕೊಡು" ನೋಟು ರಾಶಿಯನ್ನು 'ಭದ್ರತೆ'ಯಾಗಿ ಬಿಟ್ಟು ಬಿಟ್ಟಿರುವರು. ಇದು ಇನ್ನೊಂದು ನೈತಿಕ ಮತ್ತು ನ್ಯಾಯ ವಿರೋಧವಾದ ವಿಶ್ವಾಸಘಾತ.

ನಿಷ್ಪಕ್ಷಪಾತ ವಿಚಾರಣೆಯಾಗಲಿ

ಮೇಲಿನ ಸಂಗತಿಗಳಿಂದ ಬ್ರಿಟನ್ನು ತನ್ನ ಹಣಕಾಸಿನ ವ್ಯವಹಾರದಲ್ಲಿ ಯಾವ ಯಾವ ತರದ ಮಾಟ ಮೋಡಿಗಳನ್ನು ಮಾಡಿರುತ್ತದೆಂದು ಅಂದಾಜಾಗುತ್ತದೆ. ಈಗ ಬ್ರಿಟನು ಭಾರತಕ್ಕೆ ಕೊಡಬೇಕಾಗಿರು ಸ್ಟರ್ಲಿಂಗ್ ಹಣವು ಸುಮಾರು 1600 ಕೋಟಿಗೆ ಮಿಗುತ್ತದೆಂದು ಊಹಿಸಲಾಗಿದೆ. ಈ ಬಾಕಿಯನ್ನು ಬ್ರಿಟಿಷರು ಚಾಲ್ತಿ ಲೆಕ್ಕದಲ್ಲಿರಿಸಿದ್ದರು. ನಮ್ಮ ಜನತಾ ಪ್ರತಿನಿಧಿಗಳಿಗೆ ಅದನ್ನು ತನಿಖೆ ಮಾಡುವ ಸಂದರ್ಭವಿರಲಿಲ್ಲ. ಆದುದರಿಂದ ಈಗ ಯಾವ ತರದ ಇತ್ಯರ್ಥ ಮಾಡುವ ಮೊದಲು ಈ ಚಾಲ್ತಿ ಲೆಕ್ಕಗಳನ್ನು ಆಮೂಲಾಗ್ರವಾಗಿ ಪರಿಶೋಧಿಸುವುದು ಅತ್ಯಾವಶ್ಯಕ. ಅದಕ್ಕಾಗಿ ಒಂದು ನಿಷ್ಪಕ್ಷಪಾತ ಪರಿಶೋಧನಾ ಸಮಿತಿಯನ್ನೇರ್ಪಡಿಸಬೇಕು. ಈ ಚಾಲ್ತಿ ಲೆಕ್ಕಾಚಾರಗಳು ಕ್ಲೈವನ ಕಾಲದಿಂದ ಮುಂದರಿಸಿ ಬಂದಿವೆ. ಇದುತನಕ ಜನತಾ ಪ್ರತಿನಿಧಿಗಳ ತನಿಖೆಗೆ ಸಿಕ್ಕಿಲ್ಲ. ಆದುದರಿಂದ ಈಗ ಅಧಿಕಾರದಲ್ಲಿರುವ ರಾಷ್ಟ್ರೀಯ ಸರಕಾರದವರು ಈ ಕುರಿತು ಯಾವ ಹೊಣೆಗಾರಿಕೆಯನ್ನು ತೆಗೆದುಕೊಳ್ಳುವ ಮೊದಲು ಅದನ್ನು ಕೂಲಂಕಶ ಶೋಧನೆಗೊಳ ಮಾಡುವುದು ಅಗತ್ಯ.

ಕಫ, ಶೀತ, ಎದೆನೋವುಗಳನ್ನು ದಿನಂಪ್ರತಿ ಪೆಪ್ಸು ತೆಗೆದು ಕೊಳ್ಳುವುದರಿಂದ ಗುಣಪಡಿಸಿರಿ

ಸಾಂಕ್ರಾಮಿಕ ಕಫ, ಎದೆನೋವು, ಶೀತಾದಿಗಳನ್ನು ಬೆಳೆಯಬಿಡಬೇಡಿರಿ. ಅದು ನಿಮ್ಮ ಜೀವನಾಂದವನ್ನು ಕೆಡಿಸುವುದು. ಕೆಲವು ಪೆಪ್ಸುಗಳನ್ನು ಕೈಯಲ್ಲಿ ತೆಗೆದುಕೊಳ್ಳಿ. ಅಗತ್ಯಬಿದ್ದಾಗೆಲ್ಲ ಈ ವಿಷಹಾರೀ ಶ್ವಾಸಯೋಗ್ಯ ಮಾತ್ರೆಗಳನ್ನು ಸೇವಿಸಿರಿ.

ಬಾಯಲ್ಲಿ ಹಾಕಿದ ಕೂಡಲೇ ಕರಗುವುದು. ಪೆಪ್ಸು ಮಾತ್ರೆಗಳು ಉತ್ತಮ ಔಷಧಿ ತತ್ವದಿಂದ ಕೂಡಿದ ರಸವನ್ನು ನಿಮ್ಮ ಶ್ವಾಸಕೋಶದ ನೋವವನ್ನು ಪೆಪ್ಸು ಗುಣಗೊಳಿಸಿ ಕಫವನ್ನು ನಿಲ್ಲಿಸುವುದು. ಕಂಠನಾಳವನ್ನು ಸರಿಗೊಳಿಸುವುದು.

ಕೆಟ್ಟ ಶೀತ, ಇಂಪ್ಲುಯೆಂಜಾ, ಕಫ, ಮೊದಲಾದುವುಗಳಿಗೆಲ್ಲ ಇದು ಅತ್ಯುತ್ತಮ ಔಷಧಿ.

ಪೆಪ್ಸನ್ನು ಕೊಂಡುಕೊಳ್ಳಿರಿ.

PEPS

ವಿಷಹಾರೀ ಶ್ವಾಸಯೋಗ್ಯ ಮಾತ್ರೆಗಳು

ವಿಜ್ಞಾನ ಪ್ರಪಂಚ

೪ ಸಾವಿರ ಪಾಲು ಸಿಹಿ

ಕಬ್ಬಿನ ರಸವೂ ಸಿಹಿ. ಅದಕ್ಕಿಂತ ಬೆಲ್ಲ ಸಿಹಿ, ಬೆಲ್ಲಕ್ಕಿಂತ ಸಕ್ಕರೆ ಸಿಹಿ. ಆದರೆ ಸಿಹಿಯು ಸಕ್ಕರೆಯೊಳಗೆ ಮಾತ್ರವಲ್ಲ ಸೆಕ್ರೀನ್ ಎಂಬ ರಾಸಾಯನಿಕ ಪದಾರ್ಥವೊಂದು ಸಕ್ಕರೆಗಿಂತ 700 ಪಾಲಷ್ಟು ಸಿಹಿಯಾಗಿದೆ.

ಈಗ ಬೆಂಜಿನ್ ಎಂಬ ರಾಸಾಯನಿಕ ಧಾತುವಿನಿಂದ ಮತ್ತೊಂದು ಅತ್ಯಂತ ಸಿಹಿ ವಸ್ತುವನ್ನು ತಯಾರಿಸಿರುತ್ತಾರೆ. ಇದು ಸಕ್ಕರೆಗಿಂತ 4 ಸಾವಿರ ಪಾಲಷ್ಟು ಸಿಹಿಯಾಗಿದ್ದು ಒಂದು ಚೂರನ್ನು ನಾಲಿಗೆಯಲ್ಲಿಟ್ಟರೆ ಅರ್ಧ ಗಂಟೆ ಬಾಯಿಯ ಸಿಹಿ ಹೋಗುವುದಿಲ್ಲ. ಇದನ್ನು ಡೆನ್ಮಾರ್ಕಿನಲ್ಲಿ ಕಂಡು ಹಿಡಿದಿದ್ದಾರೆ. ಚಲಾವಣೆಗೆ ಬಂದಾಗ ಸಕ್ಕರೆಯ ಕೊರತೆ ಕ್ಷಣದಲ್ಲಿ ನೀಗಲು ಅಡಿಯಿಲ್ಲ.

ಕೋಪದಿಂದ ಹಲ್ಲು ನೋವು

ಭಾವನಾತ್ಮಕ ಮತ್ತು ಮಾನಸೀಕ ಅಲ್ಲಕಲ್ಲೋಲದಿಂದ ಹೊಟ್ಟೆ ನೋವು, ಹೊಟ್ಟೆ ಹುಣ್ಣು, ರಕ್ತ ಒತ್ತಡ ಮೊದಲಾದ ವ್ಯಾಧಿಗಳುಂಟಾಗುತ್ತದೆಂದು ಕಂಡು ಹಿಡಿಯಲ್ಪಟ್ಟಿದೆ. ಈ ಅವ್ಯವಸ್ಥೆಗಳು ಹೆಚ್ಚಿನ ಪಾಲಿಗೆ ಹಲ್ಲಿನ ಅನಾರೋಗ್ಯದಿಂದಲೂ ಉಂಟಾಗುತ್ತವೆಂದು ಸಂಯುಕ್ತ ಅಮೇರಿಕದ ಓರ್ವ ವೈದ್ಯ ತಜ್ಞರು ತಿಳಿಸುತ್ತಾರೆ.

"ಜನರು ನಿಜವಾಗಿ ಹಲ್ಲುಗಳಿಂದ ದ್ವೇಷಿಸುತ್ತಾರೆ" ಎಂದವರು ತಿಳಿಸುತ್ತಾ ತಮ್ಮ ತರ್ಕವನ್ನು ಹೀಗೆ ವಿವರಿಸುತ್ತಾರೆ:

"ಎಂಜಲು ಜೊಲ್ಲಿನಲ್ಲುಂಟಾಗುವ ಬದಲಾವಣೆಯಿಂದ ಹಲ್ಲು ನೋವುಗಳುಂಟಾಗುವವು. ಎಂಜಲು ಹಲ್ಲುಗಳನ್ನು ರಕ್ಷಿಸುವ ಒಂದು ಲೇಪ. ಅದು ರಕ್ತದ ಒಂದು ನಾಜೂಕು ರೂಪ. ಒಬ್ಬನ ಆರೋಗ್ಯ ಕೆಟ್ಟರೆ ಅವನ ಎಂಜಲಿನಲ್ಲಿ ಬದಲಾವಣೆಯಾಗುತ್ತದೆ. ಆಗ ಎಂಜಲಿನಲ್ಲಿರುವ ರಾಸಾಯನಿಕ ವಸ್ತುಗಳು ಬದಲಾವಣೆ ಹೊಂದಿ ಹಲ್ಲು ನೋವುಗಳುಂಟಾಗುತ್ತವೆ. ಹಲ್ಲುನೋವಿನಿಂದ ಹೊಟ್ಟೆಯಲ್ಲೂ ವ್ಯಾಧಿಗಳುಂಟಾಗುವವು."

ಹೃತ್ಕ್ರಿಯೆ ಪುನರ್ಚಲನೆ

ಶಸ್ತ್ರಕ್ರಿಯೆ ಮಾಡುತ್ತಿರುವಾಗ ರೋಗಿಗಳ ಹೃದಯ ಕ್ರಿಯೆಯು ಒಂದೇ ಸಮನೆ ನಿಂತು ಹೋಗುವುದುಂಟು. ಡಾ॥ ಹೆಮಿಲ್ಟನ್ ಬೈಲಿ ಎಂಬ ಲಂಡನಿನ ಶಸ್ತ್ರ ಚಿಕಿತ್ಸಾ ತಜ್ಞರು ಹೀಗೆ ನಿಂತ ಹೃತ್ಕೋಶವನ್ನು ಪುನರ್ಚಲನೆ ಮಾಡುವವೊಂದು ವಿಧಾನವನ್ನು ವೈದ್ಯರಿಗೆ ಶಿಫಾರಸು ಮಾಡುತ್ತಾರೆ.

ಹೃದಯ ಚಲನೆ ನಿಂತ ಕೂಡಲೇ ಹೊಟ್ಟೆಗೊಂದು ಗಾಯ ಹಾಕಿ ಉದರ ಪರೆಯ ಕೆಳಗಿಂದ ಕೈಯನ್ನು ನೇರವಾಗಿ ಎದೆ ಗುಂಡಿಗೆಗೆ ತಲುಪುವಂತೆ ದಾರಿ ಮಾಡಿ ಅಲ್ಲಿ ಮೆಲ್ಲಗೆ ಅದನ್ನು ಒತ್ತಿ ಬಿಡಬೇಕು ಎರಡು ಮೂರು ಸಲ ಹೀಗೆ ಮಾಡುವುದರಿಂದ ಹೃತ್ಕೋಶವು ಪುನ: ಕೆಲಸಕ್ಕಾರಂಭಿಸುವುದಂತೆ.

ಮೂರು ಸಂದರ್ಭದಲ್ಲಿ ಮೇಲ್ಕಂಡ ಡಾಕ್ಟರರು ಯಶಸ್ವಿಯಾಗಿ ಹೀಗೆ ಮಾಡಿರುವರೆಂದು ತಿಳಿಸುತ್ತಾರೆ. ಹೃತ್ಕ್ರಿಯೆ ನಿಂತ ಒಂದೆರಡು ಮಿನಿಟುಗಳಲ್ಲಿ ಮಾತ್ರ ಇದು ಸಾಧ್ಯ, ಆದುದರಿಂದ ಕೆಲಸವು ತ್ವರೆಯಾಗಿ ನಿರ್ವಹಿಸಬೇಕು.

ಜಿಲ್ಲಾ ಪರಿಚಯ

ಸರ್ಕಲ್ ಕಮಿಟಿಗಳ ರಚನೆ

ಇದೇ ಕಳೆದ ತಾ. 10-2-'47ನೇ ಸೋಮವಾರ ಕಾಂಗ್ರೆಸ್ ಕಚೇರಿಯಲ್ಲಿ ನೆರೆದ ಕಾರ್ಯಕಾರಿ ಮಂಡಲದ ಸಭೆಯಲ್ಲಿ ಮಂಜೂರಾದ ನಿರ್ಣಯಗಳ ಮೇರೆಗೆ ಎಲ್ಲ ಸರ್ಕಲ್ ಕಾಂಗ್ರೆಸ್ ಕಮಿಟಿಗಳು ಇದೇ ಬರುವ ಮಾರ್ಚ ತಾ. 15 ರೊಳಗೆ ಚುನಾವಣೆ ಹೊಂದತಕ್ಕದ್ದೆಂದು ನಿರ್ಣಯವಾಗಿ ಆ ಬಗ್ಗೆ ಬೇರೆ ಬೇರೆ ಸರ್ಕಲ್‌ಗಳಿಗೆ ಬೇರೆ ಬೇರೆ ಚುನಾವಣಾಧಿಕಾರಿಗಳನ್ನು ನೇಮಿಸಲಾಗಿದೆ. ಅವುಗಳ ಪಟ್ಟಿಯನ್ನು ಇದರ ಅಂತ್ಯದಲ್ಲಿ ಕೊಡಲಾಗಿದೆ

ಚುನಾವಣೆಗೆ ಈ ಕೆಳಗಿನ ನಿಯಮಗಳನು ಅನುಸರಿಸತಕ್ಕದ್ದು.

ಪ್ರತಿಯೊಂದು ನೂರು ಮಂದಿ ಸದಸ್ಯರಿಗೆ ಒಬ್ಬ ಪ್ರತಿನಿಧಿಯಂತೆ ಕನಿಷ್ಠಾವಧಿ 7 (ಏಳು) ಮತ್ತು ಪರಮಾವಧಿ 12 ಮಂದಿ ಕಮಿಟಿಯ ಮೆಂಬರರನ್ನು ಚುನಾಯಿಸತಕ್ಕದ್ದು.

ಕೆಲವು ಮತದಾರ ಸಂಘಗಳು ಒಬ್ಬನನ್ನೇ ತಮ್ಮ ಪ್ರತಿನಿಧಿಯಾಗಿ ಆರಿಸುವ ಕ್ರಮವಿದೆ ಅಂಥವುಗಳು ಒಬ್ಬನನ್ನೇ ಆರಿಸಬೇಕು

ಮತದಾನ (ಓಟು)ವು ಗುಪ್ತವಾಗಿರಬೇಕು

ಆಯಾ ಚುನಾವಣಾಧಿಕಾರಿಗಳು ತಮಗೆ ಬೇಕಾದ ಮತದಾನ ಪತ್ರ ಪಟ್ಟಿಗೆ ಮುಂತಾದವುಗಳನ್ನೆಲ್ಲ ತಾವೇ ತಯಾರಿಟ್ಟುಕೊಳ್ಳತಕ್ಕದ್ದು.

ಮತದಾನ ಸಂಘಗಳ ಹೆಸರುಗಳನ್ನು ಪ್ರಕಟಿಸಿದ ಕೂಡಲೇ ಯಾವದೇ ತರದ ಆಕ್ಷೇಪಗಳಿದ್ದರೆ ಚುನಾವಣಾಧಿಕಾರಿಗಳು ಕಮಿಟಿಯಾಗಿ ಕುಳಿತು ಆಕ್ಷೇಪಗಳನ್ನು ಕೇಳಿ ಅವುಗಳ ವಿಷಯ ಕೊನೆಯ ತೀರ್ಮಾನವನ್ನು ಮಾಡಿಕೊಳ್ಳಬೇಕು

ಚುನಾವಣಾಧಿಕಾರಿಗಳೇ "ಪೋಲಿಂಗ್ ಆಫೀಸರರನ್ನು ನೇಮಿಸತಕ್ಕದ್ದು

ಚುನಾವಣೆ ಬಗ್ಗೆ ಯಾರದೇ ತಕರಾರು ಇದ್ದರೆ ಚುನಾವಣೆಯ ನಂತರ ಏಳು ದಿವಸಗಳೊಳಗೆ 5 ರೂಪಾಯಿಗಳ ಸಮೇತ ತಮ್ಮ ಆಕ್ಷೇಪಣಾ ಅರ್ಜಿಯನ್ನು ಚುನಾವಣಾಧಿಕಾರಿಗಳಲ್ಲಿ ಕೊಡತಕ್ಕದ್ದು

ಜಿಲ್ಲೆಯ ಚುನಾವಣೆಗಳ ಪಂಚ ಮಂಡಲದವರು ಕೊಟ್ಟ ತೀರ್ಮಾನದ ಮೇಲೆ "ಅಪೀಲು ಮಾಡುವದಿದ್ದರೆ, ಸದ್ರಿ ತೀರ್ಮಾನದ ನಂತರದ ಏಳು ದಿವಸಗಳೊಳಗೆ 10 ರೂಪಾಯಿಗಳ ಸಹಿತ ಪ್ರಾಂತಿಕ ಪಂಚ ಮಂಡಲಕ್ಕೆ ಆಕ್ಷೇಪಣೆ ಅರ್ಜಿ ಬರಕೊಳ್ಳತಕ್ಕದು

ಆಯಾ ಸರ್ಕಲಿನ ಯಾವತ್ತೂ ವೆಚ್ಚಗಳನ್ನು ಆಯಾ ಸರ್ಕಲ್ ಕಮಿಟಿಗಳೇ ವಹಿಸಿಕೊಳ್ಳತಕ್ಕದ್ದು

ಉಮೇದ್ವಾರರಿಗೆ ಮತದಾರರ ಪಟ್ಟಿಯನ್ನು ಮತ್ತು ಅವರು ಕೇಳುವ ನ್ಯಾಯವಾದ ಯಾವತ್ತೂ ಸಹಾಯವನ್ನು ಸರ್ಕಲ್ ಕಮಿಟಿಯ ಅಧಿಕಾರಿಯಾಗಲೀ ಇನ್ನಿತರ ಸದಸ್ಯರಾಗಲೀ ಮಾಡತಕ್ಕದ್ದು

ಮತದಾರ ಸಂಘಗಳ ಪಟ್ಟಿಯನ್ನು ಆಯಾ ಚುನಾವಣಾಧಿಕಾರಿಗಳ ಮನೆಯಲ್ಲಿ ಅಥವಾ ಆಫೀಸಿನ ಕಚೇರಿಯಲ್ಲಿ ಬಂದು ನೋಡಬೇಕು

ಚುನಾವಣೆಯನ್ನು ಇದೇ ಬರುವ ಮಾರ್ಚ 1ರೊಳಗೆ ಮಾಡಿ ಮುಗಿಸಬೇಕು ಸರ್ಕಲಿನ ಹೆಸರು ಚುನಾವಣಾಧಿಕಾರಿಯ ಹೆಸರನ್ನು ಈ ಕೆಳಗೆ ಕೊಡಲಾಗಿದೆ

ಉಡುಪಿ ಶ್ರೀ ಲಕ್ಷ್ಮೀನಾರಾಯಣ ನ್ಯಾಕ ~~ಉಪ್ಪಿನಂಗಡಿ—ವೇಣುಗೋಪಾಲ ನ್ಯಾಕ~~ ಕಟಪಾಡಿ ಶ್ರೀ ಲಕ್ಷ್ಮೀನಾರಾಯಣನ್ಯಾಕ ಕಾರ್ಕಳ ಶ್ರೀ ಎಂ ಡಿ ಅಧಿಕಾರಿ ಕಾಸರಗೋಡು—ಶ್ರೀ ಎಂ ಉಮೇಶ ರಾವ್ ಕುಂದಾಪುರ—ಶ್ರೀ ಬಿ ಎಸ್. ಸೂರಪ್ಪ ಶೆಟ್ಟಿ ಬಸರೂರು ಪಾಣೆ ಮಂಗಳೂರು— ಶ್ರೀ ಎನ್ ಉಪೇಂದ್ರ ನ್ಯಾಕ ಪುತ್ತೂರು-ಶ್ರೀ ಕೆ. ರಾಮ ಕುಡ್ವ. ಬಾರಕೂರು ಪ್ರಧಾನ ಕಾರ್ಯದರ್ಶಿಗಳು ವ್ಯವಸ್ಥೆ ಮಾಡುವರು. ಬಂಟವಾಳ ಶ್ರೀ ಎನ್ ಉಪೇಂದ್ರ ನ್ಯಾಕ. ಮೂಲ್ಕಿ—ಶ್ರೀ ಪಿ ರಾಮಚಂದ್ರ ಭಟ್ಟ. ಮಂಗಳೂರು—ಶ್ರೀ ಎಚ್. ನಾರಾಯಣರಾವ್. ಮಂಜೇಶ್ವರ-ಶ್ರೀ ಅನ್ನುಕೃಷ್ಣರಾವ್. ಹೊಸದುರ್ಗ—ಶ್ರೀ ಕೆ. ಅಚ್ಯುತ ಶೆಟ್ಟಿ.

ರಾಷ್ಟ್ರ ಸೇವಾದಲದ ವಿರುದ್ಧ ಪ್ರದರ್ಶನಕ್ಕೆ ಕಾರಣರಾರು? ಕಳೆದ ತಾ. 20ರ ಸಂಜೆ ಮಂಗಳೂರಿನ ಕೆನರಾ ಹ್ಯಾಸ್ಕೂಲಿನಲ್ಲಿ ಆರ್. ಎಸ್ ಎಸ್ಸಿನ ಜಿಲ್ಲಾ ಪ್ರದರ್ಶನವೊಂದು ನಡೆದಿದ್ದಾಗ ಆರ್ ಎಸ್. ಡಿ. ಯವರು ವಿರುದ್ಧ ಪ್ರದರ್ಶನ ಮಾಡಿದುದೇಕೆಂಬ ಕುರಿತು ನಾನಾ ತಪ್ಪು ಭಾವನೆಗಳು ಹಬ್ಬಿರುತ್ತವೆ ಆದುದರಿಂದ ಆ ಕುರಿತು ಹೇಳಿಕೆಯೊಂದನ್ನು ಹೊರಡಿಸುವ ಆವಶ್ಯಕತೆಯು ಬಂತು

ಕೆನರಾ ಹ್ಯಾಸ್ಕೂಲಿನ ಕೆಲಮಂದಿ ಅಧಿಕಾರಿಗಳು ಆರ್ ಎಸ್ ಎಸ್ಸಿನ ಪಕ್ಷಪಾತಿಗಳಾಗಿ ಆರ್ ಎಸ್ ಡಿ ಯನ್ನು ಅನಾದಾರ ದೃಷ್ಟಿಯಿಂದ ನೋಡುತ್ತಿದ್ದಾರೆಂದು ಕೆಲವು ಆರೋಪಗಳು ನಮ್ಮ ಬಳಿಗೆ ಆಗಾಗ ಬರುತ್ತಿದ್ದವು. ಆದರೆ ಅವುಗಳಿಗೆ ಗಮನ ಕೊಡಲಿಲ್ಲ

ಕಳೆದ ತಾ 20ರಲ್ಲಿ ನಡೆದ ಆರ್ ಎಸ್ ಎಸ್ಸಿನ ಜಿಲ್ಲಾ ಪ್ರದರ್ಶನವು ಕೆನರಾ ಹ್ಯಾಸ್ಕೂಲಿನ ಅಧಿಕಾರಿಗಳ ಪಕ್ಷ ಪಕ್ಷಿಯತೆಯನ್ನು ಸಿದ್ಧಗೊಳಿಸಿರುವುದು

ಶಿವರಾತ್ರಿ ಸಂಬಂಧವಾದ ಶಾಲೆಯ ರಜಾದಿನವು ತಾ 19 ಆಗಿದ್ದರೂ ಹಲವು ಮಂದಿ ವಿದ್ಯಾರ್ಥಿಗಳು ಆಕ್ಷೇಪಿಸಿದ್ದರೂ ಗಣಿಸದೆ ವಿದ್ಯಾರ್ಥಿಯ ಸಮ್ಮತಿಯ ಸಹಿ ಪಡೆದ ನೆಪದಿಂದ ಆರ್ ಎಸ್ ಎಸ್ಸಿನ ಪ್ರದರ್ಶನಕ್ಕೆ ಅನುಕೂಲವಾಗುವಂತೆ ತಾ 20ನ್ನು ರಜಾ ದಿನವಾಗಿ ಮಾಡಿದರು

ಆ ವೇಳೆ ಕೆನರಾ ಹ್ಯಾಸ್ಕೂಲಿನ ಒಂದು ಮೂಲೆಯಲ್ಲಿ ಪ್ರತಿದಿನ ನಡೆಯುತ್ತಿದ್ದ ಆರ್ ಎಸ್ ಡಿ ಶಾಖೆಯನ್ನು ತಾ 20ರಲ್ಲಿ ಒಂದು ಮಾಡಬೇಕೆಂದು ಕೇವಲ ಶಾಖಾನಾಯಕ ಮತ್ತು ಸೈನಿಕರೊಡನೆ ತಿಳಿಸಿದರು ಆದರೆ ಜಿಲ್ಲಾ ಸಂಘಟಕರನ್ನಾಗಲೀ ಕಾಂಗ್ರೆಸ್ ಕಮಿಟಿಯ ಅಧಿಕಾರಿಗಳನ್ನಾಗಲೀ ಕರೆದು ಯಾವುದನ್ನೂ ತಿಳಿಸಲಿಲ್ಲ

ಈ ಸಂಗತಿಯನ್ನು ತಿಳಿದ ನಾನು ಜಿಲ್ಲಾ ಸಂಘಟಿತ ಮತ್ತು ಇತರ ಸೇವಾದಲದ ಅಧಿಕಾರಿಗಳೊಂದಿಗೆ ಕೆನರಾ ಹ್ಯಾಸ್ಕೂಲಿನ ಮೆನೇಜರಾದ ಶ್ರೀ ಎಂ ಮಾಧವರಾಯರ ಮನೆಗೆ ಹೋಗಿ ಸಂಗತಿಯೇನೆಂದು ವಿಚಾರಿಸಿದೆವು ಅವರ ಒಪ್ಪಿಗೆ ಉದೇಗಗೊಂಡು ಏನೇನೆಲ್ಲಾ ಮಾತಾಡಿದರೂ ಆ ಮೇಲೆ ವಿವೇಕ ತಳೆದ ಸೇವಾದಳದ ಅನುಸಿತ್ಯದ ಕಾರ್ಯಕಲಾಪವನ್ನು ಯಥಾ ಪ್ರಕಾರ ಮೊದಲಿದ್ದ ಸ್ಥಳದಲ್ಲೇ ನಡೆಸಬಹುದೆಂದು ಸಮ್ಮತಿಸುವ ಉದಾರತೆ ತೋರಿಸಿದರು ಈ ಸಂದರ್ಭದಲ್ಲಿ ನಮ್ಮ ಸೈನಿಕರು ಶಾಂತವಾಗಿ ಶಿಸ್ತಿನಿಂದ ನಡೆಯುವಂತೆ ನೋಡುವೆವೆಂದು ಜಿಲ್ಲಾ ಸಂಘಟಕರೂ ನಾನೂ ಭರವಸೆ ಕೊಟ್ಟೆವು

ಈ ಪ್ರಕಾರ ತಾ 20ನೇ ಬೆಳಗ್ಗೆ ಸೇವಾದಳದ ಬೆಳಗ್ಗಿನ ಶಾಖೆಯು ಕೆನರಾ ಹ್ಯಾಸ್ಕೂಲಿನಲ್ಲಿ ಯಥಾಪ್ರಕಾರ ನಡೆಯಿತು ಅದಕ್ಕೆ ಯಾರೂ ಅತಂಕ ಮಾಡಲಿಲ್ಲ

ಆದರೆ ಸಂಜೆ ನಮ್ಮ ಸೈನಿಕರು ಯಥಾಪ್ರಕಾರ ತಮ್ಮ ಶಾಖೆ ನಡೆಸಲು ಕೆನರಾ ಹ್ಯಾಸ್ಕೂಲಿಗೆ ಹೋದಾಗ ಗೇಟಿನಲ್ಲೇ ಆರ್ ಎಸ್ ಎಸ್ಸಿನ ಸೈನಿಕರ ಅವರನ್ನು ತಡೆದು 'ನೀವು ಮುಯ್ಯಾದೆ ಇದ್ದವರಾದರೆ ಇಲ್ಲಿಂದ ಹೊರಟು ಹೋಗಬೇಕು ನೀವು ಮನುಷ್ಯರಲ್ಲವೋ" ಎಂದೆಲ್ಲಾ ನಮ್ಮ ಸೈನಿಕರನ್ನು ಅವಮಾನಿಸಿದರು ಇದೇ ನಮ್ಮ ಸೈನಿಕರು ಉದ್ವೇಗಗೊಳ್ಳಲು ಮುಖ್ಯ ಕಾರಣವಾಯಿತು

ಆ ಮೇಲೆ ಜಿಲ್ಲಾ ಸಂಘಟಕರಾದ ಸತ್ಯೇಂದ್ರ ನಾಯ್ಕರು ಕೆನರಾ ಹ್ಯಾಸ್ಕೂಲಿಗೆ ಹೋಗಿ ಮುಖ್ಯೋಪಾಧ್ಯಾಯ ಮತ್ತು ಮೆನೇಜರರ ಹತ್ತಿರ ಮಾತಾಡಿದಾಗ ನಿತ್ಯದ ಸ್ಥಳದಲ್ಲಿ ತಮ್ಮ ಶಾಖೆ ನಡೆಯಿಸಲು ಎಷ್ಟಕ್ಕೂ ಸಾಧ್ಯವಿಲ್ಲೆಂದೂ ಹಿಂದಿನ ಗೇಟಿನಿಂದ ಬಂದು ಗುಪ್ತವಾದೊಂದು ಮೂಲೆಯಲ್ಲಿ ಶಾಖೆ ನಡಿಸಬೇಕೆಂದೂ ಅವರೆಂದರು.

ಕೊಟ್ಟ ಮಾತಿಗೆ ತಪ್ಪಿ ನಡೆದ, ಆರ್ ಎಸ್ ಎಸ್ಸಿನ ಕುರಿತು ತೀರಾ ಪಕ್ಷಪಾತದ ಕೆನರಾ ಹ್ಯಾಸ್ಕೂಲಿನ ಅಧಿಕಾರಿಗಳ ಧೋರಣೆಯಿಂದ ಸೇವಾದಳದ ತರುಣ ಸೈನಿಕರ ಉದ್ವೇಗವು ಮತ್ತಷ್ಟು ಅಧಿಕವಾಯಿತು ಕೆನರಾ ಹ್ಯಾಸ್ಕೂಲಿನ ಗೇಟಿನ ಮೇಲೆ ಮಲಗಿ ಸತ್ಯಾಗ್ರಹ ಮಾಡಲು ಅವರು ಮುಂದಾದರು. ಆಗ ಜಿಲ್ಲಾ ಸಂಘಟಕರೂ ಎಚ್ ಎಚ. ವೊಡೆಯರರೂ ನಮ್ಮ ಸೈನಿಕರಿಗೆ ಬುದ್ಧಿವಾದ ಹೇಳಿ ಅಧಿಕಾರಿಗಳ ವರ್ತನೆಯನ್ನು ನಿಷೇದಿಸಲು ಮೈದಾನಿನಲ್ಲಿ ಸಭೆ ನಡಿಸೋಣ ಎಂದು ಸಮಜಾಯಿಸಿ ಮೆರವಣಿಗೆಯಿಂದ ಅವರಿಗೆ ಮೈದಾನಿಗೆ ಕರಕೊಂಡು ಬಂದು ಸಭೆ ನಡೆಯಿತು

ಆ ಮೇಲೆ ಪುನಃ ಮೆರವಣಿಗೆಯು ಕೆನರಾ ಹ್ಯಾಸ್ಕೂಲಿನ ಸುತ್ತಾಗಿ ಕಾಂಗ್ರೆಸ್ ಆಫೀಸಿಗೆ ಬಂದು ಶಾಂತವಾಯಿತು

ಅತ್ಯಂತ ಉದ್ವೇಗಕರ ಪರಿಸ್ಥಿತಿಯಲ್ಲಿ ನಮ್ಮ ಸೈನಿಕರಲ್ಲಿ ಕೆಲವರು ತಾವಾಗಿ ಕೆಲವು ಅಲ್ಲಸಲ್ಲದ ಘೋಷಣೆಗಳನ್ನು ಮಾಡಿರಬಹುದು ಆದರೆ ಈ ಸಂದರ್ಭದಲ್ಲಿ ಸರ್ವಸಾಧಾರಣ ಸೈನಿಕರು ತೋರಿಸಿದ ಶಿಸ್ತು ಮತ್ತು ಸಂಯಮ ಅಭಿನಂದನೀಯವಿರುತ್ತದೆ ಸೇವಾದಳದವರು ಕೆನರಾ ಹ್ಯಾಸ್ಕೂಲನ್ನು ಬಿಡಬೇಕೆಂದು ಅವರು ಘೋಷಿಸಿದುದೇ ಹೊರತು ಆ ಶಾಲೆಗೆ ಹೋಗಲೇಬಾರದೆಂದು ಅಲ್ಲ

ಒಮ್ಮೆ ನಮಗೆ ಮಾತು ಕೊಟ್ಟು ಕೆನರಾ ಹ್ಯಾಸ್ಕೂಲಿನ ಅಧಿಕಾರಿಗಳು ಬೇಗ ನಮ್ಮ ಕಾರ್ಯಕಮವನ್ನೆಲ್ಲಾ ಅಗ ಬಿಟ್ಟು ನಮಗೆ ಏನೊಂದನ್ನೂ ತಿಳಿಸದೆ ಸಂಜೆ ನಮ್ಮ ಸೈನಿಕರಿಗೆ ಆರ್ ಎಸ್ ಎಸ್ಸಿನ ಮೂಲಕ ಹೀಯಾಳಿಸಿ ಅವಮಾನ ಮಾಡುವರೆ ಕಾರಣವಾದುದು ಎಷ್ಟೊಂದು ಜವಾಬ್ದಾರಿ ಹಾಗ ಯೋಗ್ಯ ವರ್ತನೆಯೆಂಬುದರ ವಿಚಾರವನ್ನು ನಾವು ಅವರಿಗೂ ಸಾರ್ವಜನಿಕರಿಗೂ ಬಿಟ್ಟು ಬಿಡುತ್ತೇವೆ

ಇಷ್ಟರ ವರೆಗೆ ನಮಗೆ ಆಶಯ ವಸ್ನಿತ್ತುದಕ್ಕಾಗಿ ನಾವು ಕೆನರಾ ಹ್ಯಾಸ್ಕೂಲಿನ ಅಧಿಕಾರಿಗಳಿಗೆ ಅಭಾರಿಯಾಗಿದೇವೆ ಇನ್ನು ಮುಂದೆ ನಮ್ಮ ಯಾವ ಕಾರ್ಯ ಕಲಾಪಕ್ಕದರೂ ಅವರ ಆಶ್ರಯ ಪಡೆಯಬಾರದೆಂಬ ಸಿದ್ಧಾಂತಕ್ಕೆ ನಾವು ಬಂದಿರುತ್ತೇವೆ ಜೈ ಹಿಂದ್

ಕೆ ಕೆ ಶೆಟ್ಟಿ,

ಪ್ರಧಾನ ಕಾರ್ಯದರ್ಶಿ

ಜಿಲಾ ಕಾಂಗ್ರೆಸ್ ಕಮಿಟಿ

ಹೊಟೇಲ್ ಮ್ಹಾಲಕರ ಮುಷ್ಕರ:

ನಗರದ ಸುಮಾರು 28 ಹೋಟೇಲುಗಳು ತಾ 26, 27, ಮತ್ತು 28ರ ತನಕ ಮುಚ್ಚಲ್ಪಟ್ಟಿರುತ್ತವೆ ತಮಗೆ ಬೇಕಷ್ಟು ಸಕ್ಕರೆ ಮತ್ತಿತರ ತಿಂಡಿತಯಾರಕ ವಸ್ತುಗಳು ಸಿಗುತ್ತಿಲ್ಲವೆಂಬುದು ಹೋಟೇಲ್‌ಗಾರರ ಈ ಹರತಾಳಕ್ಕೆ ಕಾರಣವೆನ್ನಲಾಗಿದೆ ಪರಿಣಾಮವಾಗಿ ಹೇರಳ ಗಿರಾಕಿಗಳು ತೆರೆದಿರುವ ಸಣ್ಣಪುಟ್ಟ ಹೋಟೇಲುಗಳಿಗೆ ತಂಡತಂಡವಾಗಿ ನುಗ್ಗುತ್ತಿರುವುದು ಕಂಡುಬಂದಿದೆ ಸಂದರ್ಭವಶಾತ್ ಉಂಟಾದ ಈ ಪರಿಸ್ಥಿತಿಯಿಂದ ಈ ಚಿಕ್ಕ ಹೋಟೇಲುಗಳಲ್ಲಿ ತಿಂಡಿತೀರ್ಥಗಳ ಬೆಲೆಯಾದರೂ ಸಹಜವಾಗಿ ಏರಿಸಲಾಗಿದೆ ಅವುಗಳ ಶ್ರೇಷ್ಠತೆಯೂ ಅಷ್ಟಷ್ಟೇ ಎನ್ನಬಹುದು ವಿಪರೀತ ಗಿರಾಕಿಗಳ ದೆಸೆಯಿಂದ ಇದೂ ಸಹಜವೇ ಆಗಿದೆ ಮನೆಗಳಲ್ಲೇ ಫಲಹಾರ ಅಭ್ಯಾಸ ಮಾಡಲೂ ಅನೇಕರಿಗೆ ~~ಇದು ಸುಸಂಧಿಯಾಗಬಹುದು. ನಂತರ ಕ್ರ~~ಮೇಣ ಈ ಅಭ್ಯಾಸವು ಮುಂದುವರಿದರೆ ಹೋಟೇಲುಗಳ ಮೇಲಿರುವ ಈಗಿನ ಒತ್ತಡವಾದರೂ ಕಡಿಮೆಯಾಗಬಹುದೆಂಬ ನಿರೀಕ್ಷೆಯಿದೆ. ಸಕ್ಕರೆಯು ಹೆಚ್ಚು ಕಡಿಮೆ ಪ್ರಮಾಣದಲ್ಲಿ ಪ್ರತಿ ಸಂಸಾರಕ್ಕೂ ಸರಬರಾಯಿಯಾಗುತ್ತಿಲ್ಲವೆ? ಅಂದಮೇಲೆ ಸಾಧ್ಯವಿದ್ದಷ್ಟು ನಾಗರೀಕರು ಅದರ ಸದುಪಯೋಗ ಮಾಡಿ ಫಲಹಾರ ಮಂದಿಗಳ ಮೇಲಿರುವ ಗರದಿಯನ್ನು ಕಡಿಮೆ ಮಾಡಬಹುದಲ್ಲವೆ? ಆ ಸಂದರ್ಭದಲ್ಲಿ ಹೋಟೇಲುಗಳಿಗೆ ಹೆಚ್ಚು ಸಕ್ಕರೆ ಸರಬರಾಯಿ ಮಾಡುವ ಆವಶ್ಯಕತೆಯೂ ಕಡಿಮೆಯಾಗಬಹುದೆಂದೊಂದು ಬಾಕಿ.

ಸಂಸ್ಕೃತಾಭ್ಯಾಸಕ್ಕಾಗಿ ನಿವೇದನೆ

ಪ್ರಾಚೀನ ಕಾಲದಲ್ಲಿ ಭರತಖಂಡದ ಆಶ್ರಮಗಳಲ್ಲಿಯೂ ವಿಶ್ವವಿದ್ಯಾಲಯಗಳಲ್ಲಿಯೂ ಸಂಸ್ಕೃತವೇ ಮಾಧ್ಯಮವಾಗಿತ್ತು ಮಾತ್ರವಲ್ಲ, ವಿದ್ವಾಂಸರೆಲ್ಲ ಸಂಸ್ಕೃತದಲ್ಲೇ ಸಕಲ ವ್ಯವಹಾರವನ್ನೂ ನಡೆಸುತ್ತಿದ್ದರು ಆ ಕಾಲದಲ್ಲಿ ಭಾರತವು ಜಗತ್ತಿಗೆಲ್ಲ ಆಧ್ಯಾತ್ಮಿಕದಲ್ಲೂ ಐಹಿಕ ಸಾಧನೆಯಲ್ಲೂ ಆದರ್ಶಪ್ರಾಯವಾಗಿತ್ತು

ಪರಕೀಯರು ದಂಡೆತ್ತಿ ಬಂದು ಶಾಸನ ಮಾಡಲಾರಂಭಿಸಿದಂದಿನಿಂದ ಮೊದ ಮೊದಲು ಪಾರಸೀ ಭಾಷೆ ಮತ್ತೆ ಇಂಗ್ಲೀಷು ನಮ್ಮ ವಿದ್ಯಾಭಾಷೆಯಾಗಿ ಸಂಸ್ಕೃತವು ಮೂಲೆಪಾಲಾದಂದಿನಿಂದ ನಮ್ಮ ಸ್ಥಾನವು ಜಗತ್ತಿನಲ್ಲಿ ಕೆಳಕೆಳಗೆ ಹೋಗುತ್ತ ಬಂದಿತು, ಪಾರಮಾರ್ಥಿಕದಲ್ಲಿ ಮಾತ್ರವಲ್ಲ, ಇಹಲೋಕದ ಸಂಪತ್ತಿನಲ್ಲೂ ಅಂತೇ ಆಯಿತು ತನ್ನ ಪಿತ್ರಾರ್ಜಿತವನ್ನು ಕಳಕೊಂಡ ಜನಾಂಗವು ಇತರ ಸಭ್ಯ ದೇಶಗಳನ್ನು ಎಷ್ಟೇ ಅನುಕರಿಸಿದರೂ ಅದಕ್ಕೆ ಉಜ್ವಲ ಭವಿಷ್ಯ ಇಲ್ಲವೇ ಇಲ್ಲ ಮಹಾತ್ಮಾ ಗಾಂಧಿಯವರು ಹೇಳುವಂತೆ ನಾವು ಒರೇ ಪರಕೀಯರ ನೊಣಪ್ರತಿಯಾಗುವ ಪ್ರಯತ್ನ ಬಿಟ್ಟು ನಮ್ಮ ನಮ್ಮ ಭಾಷೆಗಳನ್ನೇ ತಿಳಿದು ಸಂಸ್ಕೃತ ರತ್ನಾಕರದಿಂದ ಮುತ್ತುಗಳನ್ನು ಆರಿಸಲಿಕ್ಕೆ ಸಿದ್ಧರಾಗಬೇಕು ಶಾಲೆಗಳಲ್ಲಿ ದೇಶಭಾಷೆಗಳಿಗೆ ಮೇಲ್ತರದ ಸ್ಥಾನವನ್ನು ಕೊಡಲು ಕಾಂಗ್ರೆಸು ಮಂತ್ರಿ ಮಂಡಳದವರು ಪ್ರಯತ್ನಮಾಡುತ್ತಿರುವಾಗ ಅವರಿಗೆ ಸಹಾಯಕರಾಗಿ ಸಂಸ್ಕೃತವನ್ನು ಪ್ರೋತ್ಸಾಹಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ

ನಮ್ಮ ಯುವಕಯುವತಿಯರು ಭಾರತೀಯ ವಿದ್ಯಾರ್ಥಿಗಳಿಗೆ ಸಹಜವಾದ ವಿನಯ ಸೌಜನ್ಯಗಳನ್ನು ಕಳಕೊಂಡಿದ್ದಾರಾದರೆ ಅದಕ್ಕೆ ಕಾರಣ ಅವರು ಸಂಸ್ಕೃತಾಭ್ಯಾಸ ಮಾಡದಿದುದೇ, ಹೀಗಾಗಿ ನಮ್ಮ ಉಪನಿಷತ್ತುಗಳು, ಧರ್ಮಶಾಸ್ತ್ರಗಳು ಕಾವ್ಯಗಳು ಇವುಗಳಲ್ಲಿರುವ ಆತ್ಮಪೋಷಣೆಯನ್ನು ಅವರು ಪಡೆದಿಲ್ಲ ಇನ್ನಾದರೂ ಎಲ್ಲಾ ವಿದ್ಯಾರ್ಥಿಗಳಿಗೆ ಮುಖ್ಯವಾಗಿ ಮುಂದಿನ ಜನಾಂಗದ ತಾಯಂದಿರಿಗೆ ಸಂಸ್ಕೃತ ವಾತಾವರಣವನ್ನು ಕೊಡುವುದು ಅತ್ಯಗತ್ಯವಾಗಿದೆ

ಅದಕ್ಕಾಗಿ ತಂತಮ್ಮ ಮಕ್ಕಳು, ಮುಖ್ಯವಾಗಿ ಹುಡುಗಿಯರು III ಫಾರ್ಮಿನಿಂದಲೇ ಸಂಸ್ಕೃತಾಭ್ಯಾಸವನ್ನು ಆರಂಭಿಸುವಂತೆ ಅವರಿಗೆ ಬೋಧಿಸಬೇಕೆಂದು ಹಿರಿಯರೊಡನೆ ನಿವೇದಿಸುತ್ತೇವೆ

ತೆಂಗಿನ ಹಿಂಡಿ: ಈ ಕುರಿತು ದ ಕ ಜಿಲ್ಲಾ ಕಲೆಕ್ಟರರು ಈ ಕೆಳಗಿನ ಆಜ್ಞೆಯನ್ನು ಹೊರಡಿಸಿದ್ದಾರೆ

1 ಈ ಆಜ್ಞೆ ಪ್ರಕಟವಾದಂದಿನಿಂದ (14 1 47 ಕಲೆಕ್ಟರರ ಒರಹ ಮೂಲಕ ಹುಕುಮಿನ ಪ್ರಕಾರ) ಈ ಜಿಲ್ಲೆಯಿಂದ ತೆಂಗಿನ ಹಿಂಡಿಯನ್ನು ರೈಲು, ನೆಲ ವ ಜಲ ಮಾರ್ಗದಿಂದ ಹೊರಗೆ ಕಳುಹಿಸಬಾರದು ಆಜ್ಞೆ ಮೀರಿದವರು ಶಿಕ್ಷೆಗೊಳಗಾಗುವರು

2 ಹಿಂಡಿಯ ಬೆಲೆ ಹೀಗೆ ನಿರ್ಧರಿಸಲಾಗಿದೆ 28 ರಾತ್ತಲ ಮಣಕ್ಕೆ ಧರ್ಮ ಬೆಲೆ ರೂ 8 ಚಿಲ್ಲರೆ ರೂ 8—8 0 ಈ ಬೆಲೆಗಳು ಸೇಲ್ ಟೆಕ್ಸ್ ರಹಿತವಾಗಿವೆ ಈ ಜಿಲ್ಲೆಯ ಯಾವ ಭಾಗದಲ್ಲೂ ಈ ಬೆಲೆಗೆ ಮಿಕ್ಕಿ ತೆಂಗಿನ ಹಿಂಡಿಯನ್ನು ಈ ಆಜ್ಞೆ ಪ್ರಕಟವಾದಂದಿನಿಂದ (13—?—'47) ಮಾರಬಾರದು ಉಲ್ಲಂಘನೆ ಮಾಡುವವರು ಶಿಕ್ಷೆಗೊಳಗಾಗುವರು.

3 ಜಿಲ್ಲೆಯಲ್ಲಿ ಒಂದು ಖಂಡಿಗೆ ಮಿಕ್ಕಿ ~~(೫೦೦ ರಾತ್ತಲ್) ತೆಂಗಿನ ಹಿಂಡಿ ದಾಸ್ತಾನಿಟ್ಟ~~ವರು ಈ ಆಜ್ಞೆ ಪ್ರಕಟವಾದ (17—2—'47) ಏಳು ದಿನಗಳಲ್ಲಿ ಸ್ಟಾಕಿನ ವಿವರಗಳನ್ನು ಕಲೆಕ್ಟರರಿಗೆ ತಿಳಿಸಿರತಕ್ಕದ್ದು.

ಸಬ್ ಇನ್ಸ್‌ಪೆಕ್ಟರರು, ಅಸಿಸ್ಟಾಂಟ್ ಕಮರ್ಶಿಯಲ್ ಟೆಕ್ಸ್ ಆಫೀಸರರು ಇಲ್ಲವೆ ರೆವಿನ್ಯೂ ಇನ್ಸ್‌ಪೆಕ್ಟರರಿಗೆ ಕೆಳಗಿನವರಲ್ಲದ ಅಧಿಕಾರಿಗಳು ತಮ್ಮ ಕ್ಷೇತ್ರದಲ್ಲಿ ಯುಕ್ತ ಸಮಯದಲ್ಲಿ ಈ ಸ್ಟಾಕುಗಳ ಕುರಿತು ತಪಾಸನೆ ನಡೆಸಲು ಅಧಿಕೃತರಿರುತ್ತಾರೆ.

ಈ ಆಜ್ಞೆ ಉಲ್ಲಂಘಿಸುವವರು ಯೋಗ್ಯ ಶಿಕ್ಷೆಗೆ ಗುರಿಯಾಗುವರು.

ಉದರ ವ್ಯಾಧಿಗಳಿಗೆ ಯೋಗಾಭ್ಯಾಸ ಪರಿಹಾರ

5 ಮಿನಿಟಿನ ವ್ಯಾಯಾಮದಿಂದ ಉತ್ತಮ ಆರೋಗ್ಯ

ಸ್ವಾಮಿ ಶಿವಾನಂದರ ಸಲಹೆ

ಉದರ ವ್ಯಾಧಿಗಳಲ್ಲೊಂದಾದ ಸಿಹಿ ಮೂತ್ರ ಕಾಹಿಲೆಗೆ ಸ್ವಾಮಿ ಶಿವಾನಂದರು ಈ ಕೆಳಗಿನ ಅತ್ಯುತ್ತಮ ಪರಿಹಾರ ಸಲಹೆಯನ್ನು ಕೊಡುತ್ತಾರೆ:

ಸಾಮಾನ್ಯವಾಗಿ ಸಿಹಿ ಮೂತ್ರ (ಡಾಯಬೆಟಿಸ್) ವ್ಯಾಧಿಗೆ ಇನ್ಸುಲಿನ್ ಎಂಬ ಔಷಧಿಯನ್ನು ಕೊಡುತ್ತಾರೆ. ಇದು ಆ ರೋಗವನ್ನು ಸ್ವಲ್ಪಮಟ್ಟಿಗೆ ತಡೆಗಟ್ಟುತ್ತದಲ್ಲದೆ ಅದನ್ನು ಸಂಪೂರ್ಣ ಪರಿಹಾರಮಾಡುವುದಿಲ್ಲ.

ಪಶ್ಚಿಮೋತ್ತಾನಾಸನ್, ಉದಿಯಾನಬಂಧ, ಅಗ್ನಿಸಾರಕ್ರಿಯೆಗಳೆಂಬ ಆಸನಗಳನ್ನು ಪ್ರತಿದಿನ ಪ್ರಾತಃಕಾಲದಲ್ಲಿ 5 ಮಿನಿಟುಗಳ ತನಕ ಅಭ್ಯಾಸಿಸಿರಿ.

ಕಾಲುಗಳನ್ನು ಉದ್ದಕ್ಕೆ ಚಾಚಿ ಕುಳಿತುಕೊಂಡು ತಲೆಯನ್ನು ಮೊಣಕಾಲಿಗೆ ಮುಟ್ಟಿಸಲು ಪ್ರಯತ್ನಮಾಡಿರಿ. ಇದೇ ಸಮಯಕ್ಕೆ ಕೈಗಳನ್ನು ಮುಂದಕ್ಕೆ ಚಾಚಿ ತರ್ಜನಿ ಬೆರಳುಗಳಿಂದ ಕಾಲಿನ ಉಂಗುಷ್ಠಗಳನ್ನು ಹಿಡಿಯಿರಿ. ಇದೇ ಪಶ್ಚಿಮೋತ್ತಾಸನ ನಂತರ ಹೊಟ್ಟೆಯನ್ನು ಒಳಕ್ಕೆ ಎಳೆಕೊಳ್ಳಿರಿ. ಇದು ಉದಿಯಾನ ಬಂಧಾಸನ. ಆ ಮೇಲೆ ಹೊಟ್ಟೆಯನ್ನು ಒಳಗೂ ಹೊರಕ್ಕೂ ಎಳೆಯುವ ಕ್ರಿಯೆಯನ್ನು ಮುಂದರಿಸಿರಿ ಇದೇ ಅಗ್ನಿಸಾರ ಕ್ರಿಯೆ.

ಪ್ರಕೃತಿ ಚಿಕಿತ್ಸೆ

ಸಿಹಿ ಮೂತ್ರದ ಪರಿಣಾಮವಾಗಿ ಅತಿ ಮೀರಿ ಶ್ರಮಪಟ್ಟು ಕೆಲಸಮಾಡಿದ ಮೂತ್ರೇಂದ್ರಿಯಗಳು ಈ ಯೋಗಾಸನದಿಂದ ವ್ಯಾಯಾಮಹೊಂದಿ ಆರೋಗ್ಯಗೊಳ್ಳುವವು. ಪಚನಕ್ರಿಯೆಗೆ ಅನುಕೂಲವಾದ ಜೀರ್ಣರಸಗಳನ್ನು ಅವು ಹೆಚ್ಚೆಚ್ಚಾಗಿ ತಯಾರಿಸುವಂತಾಗುವುದು. ಕೃತಕವಾಗಿ ದೇಹದೊಳಗೆ ಕಳುಹಲ್ಪಡುವ ಪ್ರಾಣಿಜನ್ಯ ಜೀರ್ಣರಸಗಿಂತ ಇದು ಹೆಚ್ಚು ಪ್ರಾಕೃತಿಕವಾದುದು. ನಿಮ್ಮ ಇಡೀ ಶರೀರದ ಆರೋಗ್ಯವೂ ಉತ್ತಮಗೊಳ್ಳುವುದು ಆಯುರಾರೋಗ್ಯಗಳು ಅಭಿವೃದ್ಧಿಗೊಳ್ಳುವವು

ಇದು ಅನುಭವದಿಂದ ಅತ್ಯುತ್ತಮವೆಂದು ತಿಳಿಕೊಂಡ ಪರಿಹಾರ ಸಾಧನವಾಗಿದೆ ನಿಮ್ಮ ಆಹಾರ ಸೇವನೆಯಲ್ಲೂ ವಿ ತವಿಡಿರಿ. ಹತ್ತು ಹದನೈದು ದಿವಸಕ್ಕೊಮ್ಮೆ ಸಂಪೂರ್ಣ ಉಪವಾಸ ವ್ರತವನ್ನಾಚರಿಸಿರಿ

ಜೇನುನೊಣಗಳಿಂದ ಜ್ವರ ಔಷಧಿ

ರಶ್ಯನ್ ವಿಜ್ಞಾನಿಗಳ ಯಶಸ್ಸು

ಮಲೇರಿಯಾ ಜ್ವರಕ್ಕೆ ಕ್ವಿನೀನು ಅತ್ಯುತ್ತಮ ಔಷಧಿ. ಆದರೆ ಇದು ಬಹಳ ಕಹಿಯಾಗಿರುತ್ತದೆ. ಈಗ ಕೆಲವು ರಶ್ಯನ್ ವಿಜ್ಞಾನಿಗಳು ಕ್ವಿನಿನಿನೊಳಗಿನ ಕಹಿತ್ವವನ್ನು ತೆಗೆಯಲು ಒಂದು ಒಳ್ಳೆ ವಿಧಾನವನ್ನು ಕಂಡುಹಿಡಿದಿರುವರು.

ಈ ವಿಧಾನದಲ್ಲಿ ಜೇನುನೊಣಗಳೇ ಮುಖ್ಯ ಪಾತ್ರವಹಿಸುವಂತೆ ಮಾಡಿರುವುದು ರಶ್ಯನ್ ವಿಜ್ಞಾನಿಗಳ ಚತುರ ಪ್ರಯೋಗಗಳ ಪರಿಣಾಮವಾಗಿದೆ. ಕೊಕಸಸ್ ಬೆಟ್ಟ ಪ್ರದೇಶದಲ್ಲಿ ದೊಡ್ಡದೊಂದು ಜೇನುನೊಣ ನಿವಾಸವಿದೆ. ಕ್ವಿನಿನ್ ಬೆರೆಸಿದ ಜೇನನ್ನು ಅವುಗಳಿಗೆ ಆಹಾರವಾಗಿ ಇಡಲಾಗುತ್ತದೆ. ನೊಣಗಳು ಇದನ್ನು ತಮ್ಮ ಮರಿಗಳಿಗೆ ತಿನ್ನಿಸುತ್ತವೆ. ಇದನ್ನು ತಿಂದು ಬೆಳೆದ ನೊಣಗಳು ಕ್ವಿನಿನಿನ ಸತ್ವವುಳ್ಳ ಜೇನನ್ನು ತಯಾರಿಸುತ್ತವೆ ಇದರಲ್ಲಿ ಜ್ವರ ನಿವಾರಕ ಔಷಧಿ ಸತ್ವವಿದ್ದು ಸೇವನೆಗೆ ಅತ್ಯಂತ ಸಿಹಿಯಾಗಿಯೇ ಇರುತ್ತದೆ

ಸಾವಿರ ವರ್ಷ ನಂತರದ ಮನುಷ್ಯ

ಕೆಲವು ಶತಮಾನಗಳ ಆಯುಷ್ಯ

ಈಗಿಂದ ಒಂದು ಸಾವಿರ ವರ್ಷಗಳ ನಂತರ ಮನುಷ್ಯನು ಹೇಗೆ ಕಾಣುವನೆಂದು ಪ್ರಖ್ಯಾತ ಬ್ರಿಟಿಷ್ ವಿಜ್ಞಾನಿಗಳಾದ ಪ್ರೊ। ಜೆ ಬಿ ಎಸ್, ಹಾಲ್ಡೇನ್ ಅವರು ಒಂದು ವಿಶ್ವವಿದ್ಯಾಲಯ ಭಾಷಣದಲ್ಲಿ ಭಾವೀ ಮಾನವನ ರೂಪ ಲಕ್ಷಣಗಳನ್ನು ನಿರೂಪಿಸಿದರು

"ಮುಂದಿನ ಮನುಷ್ಯನ ಅಂಗಾಂಗ ಸ್ನಾಯುಗಳು ಅಗಾಧ ಶಕ್ತಿಯುಕ್ತವಾಗಿದ್ದು, ದೊಡ್ಡತಲೆ, ಕೆಲವೇ ಹಲ್ಲುಗಳಿಂದ ಕೂಡಿರುತ್ತದೆ ಅವನ ಬೆಳವಣಿಗೆಯೂ ಅತ್ಯಂತ ಮಂದಗತಿಯಲ್ಲಿ ಸಾಗುವುದು 5 ವರ್ಷಗಳ ತನಕ ಅವನಿಗೆ ಭಾಷೆ ಬರುವುದಿಲ್ಲ ಅವನ ಶಿಕ್ಷಣವು 40 ವರ್ಷಗಳ ತನಕ ಮುಂದರಿಯುವುದು. ಅವನು ಕೆಲವು ಶತಮಾನಗಳ ತನಕ ಜೀವಿಸುವನು

"ಅವನಲ್ಲಿ ಹುಟ್ಟುಗುಣಗಳು ಕಡಿಮೆಯಾಗಿ ವಿಚಾರವಂತ ಅಭ್ಯಾಸಗಳು ಹೆಚ್ಚಾಗಿರುವವು ಅವನಲ್ಲಿ ಲೈಂಗಿಕ ಭಾವೋದ್ರೇಕಗಳೂ, ಬಂಧುವಾತ್ಸಲ್ಯಗಳೂ ಕಡಿಮೆ ಇರುವವು

"ಹಿರೋಶಿಮಾ ನಾಗಸಾಕಿಗಳಲ್ಲಿ ಎಟಂ ಬೊಂಬಿನ ಪರಿಣಾಮವು ಅಲ್ಲಿನ ಭಾವೀ ಜನತೆಯ ಮೇಲೆ ವಿಚಿತ್ರ ರೀತಿಯಲ್ಲಿ ಕಾಣಿಸಿಕೊಳ್ಳಬಹುದು ಅತಿ ಕುಳ್ಳ ವ್ಯಕ್ತಿಗಳೂ, ವಿಚಿತ್ರ ರೂಪ ಲಕ್ಷಣಗಳ ಮನುಷ್ಯರೂ ಅಲ್ಲಿ ಹುಟ್ಟುವ ಸಂಭವವಿದೆ."

ಆಧುನಿಕ ಭಾರತದ ಅಮರ ಪ್ರವಾದಿ

ಪರಮಹಂಸರ ವಿಶ್ವ ಧರ್ಮ ಸಂದೇಶ

ಮಾರ್ಗದ ಬದಿಯಲ್ಲಿ ಡೊಂಬನೊಬ್ಬನು ಯಾವಾಗಲೂ ಜನರನ್ನು ಆಕರ್ಷಿಸುತ್ತಾನೆ. ನದಿ ದಂಡೆಯ ಕಟ್ಟೆಯೊಂದರಲ್ಲಿ ಕೂತ ಸನ್ಯಾಸಿಯೊಬ್ಬನು ದೊಡ್ಡ ಗುಂಪಿನ ಮನಸೆಳೆಯುವನು. ಜನರು ಅವನನ್ನು ಬೇಗನೆ ಮಹಾತ್ಮನೆನ್ನುವರು. ಕೆಲವು ವಿಸ್ಮಯಕರವಾದ ಯೋಗೀ ಚಮತ್ಕಾರಗಳನ್ನು ಮಾಡಿ ತೋರಿಸುವ ಸಾಧುವಿನ ಹಿಂದೆ ಸದಾ ಭಕ್ತ ಮಂಡಳಿಯೊಂದು ಅಲೆದಾಡುವುದು.

ಮತ ಧರ್ಮಗಳ ಇತಿಹಾಸವನ್ನು ನೋಡಲು ಅದರಲ್ಲಿ ಅನೇಕಾನೇಕ ಸಾಧು ಸಂತರ ದೈವೀಕ ಚಮತ್ಕಾರಗಳ ದಾಖಲೆಯು ಕಂಡು ಬರುವುದು ಕೆಲವೊಂದು ವಿಚಿತ್ರಗಳನ್ನು ಮಾಡಿ ತೋರಿಸಿದವರನ್ನು ಭಕ್ತಿ ಭಾವನೆಯಿಂದ ಕಾಣುವುದು ಪ್ರಾಚೀನ ಕಾಲದ ಗುಡ್ಡಗಾಡು ನಿವಾಸಿಯು ಒಂದು ವಿಶಿಷ್ಟ ಗುಣವಾಗಿದ್ದಂತೆ ಆಧುನಿಕ ಸುಸಂಸ್ಕೃತ ವ್ಯಕ್ತಿ ಕೂಡ ಅದರಿಂದ ಮುಗ್ಧಗೊಳ್ಳುವನು

ಆದರೆ ಕಳೆದ ಶತಮಾನಾಂತ್ಯದಲ್ಲಿ ನಾವೊರ್ವ ಅದ್ಭುತ ಚಮತ್ಕಾರಿಕ ವ್ಯಕ್ತಿಯ ಕುರಿತು ಓದುತ್ತೇವೆ ಆತ ಆಧ್ಯಾತ್ಮಿಕ ಜ್ಞಾನಕ್ಕಾಗಿ ಹಸಿದವರನ್ನು ತೃಪ್ತಿಗೊಳಿಸಿದನು. ಮಾತ್ರವಲ್ಲ ಲೌಕಿಕ ಸಂಕಷ್ಟದಲ್ಲಿ ನರಳುವವರನ್ನು ಕೂಡ ಉದ್ಧರಿಸಿದನು ಅಷ್ಟಲ್ಲದೆ ಜನರಲ್ಲಿದ್ದ ಮತೀಯ ಸಂಕುಚಿತ ಭಾವನೆಗಳನ್ನು ಹೋಗಲಾಡಿಸಿ ಹಿಂದೆ ಯಾವ ಪಾಶ್ಚಿಮಾತ್ಯ ಇಲ್ಲವೆ ಪೌರ್ವಾತ್ಯ ಮತ ಸ್ಥಾಪಕನಿಂದಾಗದ ಕಾರ್ಯವನ್ನು ಸಾಧಿಸಿದನು.

ಇದು ರಾಮಕೃಷ್ಣ ಪರಮಹಂಸರ ವೈಶಿಷ್ಟ್ಯ ಬಂಗಾಲದ ಹಳ್ಳಿಯೊಂದರ ಬಡ ಬ್ರಾಹ್ಮಣ ಕುಟುಂಬವೊಂದರಲ್ಲಿ ಜನಿಸಿ ತನ್ನ ಬಾಲ್ಯವನ್ನು ಪ್ರಕೃತಿಯ ಅತಿ ಹತ್ತಿರದ ಸಂಪರ್ಕದಿಂದ ಕಳೆದನು ಜೀವನೋದ್ದೇಶವು ದೈವೀಕ ಸಾರವಾತ್ಮ್ಯದ ದರ್ಶನವನ್ನು ಮಾಡುವುದೇ ಆಗಿರುತ್ತದೆಂದು ಅವನು ಬಾಲ್ಯದಲ್ಲೇ ಕಂಡು ಹಿಡಿದ—ಆ ಧ್ಯೇಯ ಸಾಧನೆಗಾಗಿ ತನ್ನ ಜೀವನವನ್ನು ರೂಪುಗೊಳಿಸಿದ.

ಅಪ್ರತ್ಯಕ್ಷವಾಗಿ ಮಾಡುವ ಒಂದು ಅತೀ ಚಿಕ್ಕ ಪಾಪ ಕರ್ಮದಿಂದ ನಮ್ಮೀ ಭೌತಿಕ ಶರೀರವು ಕಂಪನಗೊಳ್ಳುವುದನ್ನು ನಾವು ಕಾಣಬಹುದು ಸರಳ ಶ್ರದ್ಧೆಯಿಂದಲೂ, ಗುಣ ಧಾರ್ಢ್ಯದಿಂದಲೂ ಅವರು ದೈವೀಕ ಮಾತೆಯೊಡನೆ ದರ್ಶನಕ್ಕಾಗಿ ಅಂಗಲಾಚುವರು. ಕೊನೆಗೆ ಆ ಮಾತೆಯು ಅವರನ್ನು ತನ್ನ ಪರಮ ಪವಿತ್ರ ದರ್ಶನದಿಂದ ಪಾವನಗೊಳಿಸುವಳು ರೋಮಾಂಚಕವಾದ ಸ್ಫೂರ್ತಿಗೊಳಿಸುವ ಕಾಳಿಮಾತೆಯು ತನ್ನ ಭಕ್ತಿಗೆ ಪಾತ್ರನಾದೀ ಮಗುವನ್ನು ಆಧ್ಯಾತ್ಮಿಕ ದಾರಿಯಲ್ಲಿ ನಡೆಸುವಳು. ಅವರಿಗೆ ಆಧ್ಯಾತ್ಮಿಕ ಶಿಸ್ತನ್ನು ಕಲಿಸಲು ಓರ್ವ ಬ್ರಾಹ್ಮಣನನ್ನು, ವೇದಾಂತವನ್ನು ಕಲಿಸಲು ಓರ್ವ ವೇದಾಂತಿಯನ್ನು ಅವಳು ಅವನ ಬಳಿ ಕಳುಹಿಸುವಳು. ಇವರು ಅವರಿಗೆ ಸನ್ಯಾಸ ದೀಕ್ಷೆಯನ್ನು ಕೊಡುವರು. ದೇವರ ಸನ್ನಿಧಾನದಲ್ಲಿದ್ದು ತಮ್ಮ ಶರೀರಾರ್ಪಣೆಯನ್ನು ಗೈದು ಸರಳವೂ ಆದ ಶ್ರದ್ಧೆ ವಿಶ್ವಾಸಗಳಿಂದ ಕೂಡಿದವರಾಗಿದ್ದುದರಿಂದ ಅವರು ಅನೇಕ ಮತೀಯ ಶಿಸ್ತು ಸಂಸ್ಕಾರಗಳನ್ನು ಯಶಸ್ವಿಯಾಗಿ ಪರಿಪೂರ್ಣಗೊಳಿಸಿದರು.

ಕೊನೆಗೆ ಅವರು ಎಲ್ಲಾ ಮತ ವಿಶ್ವಾಸಗಳ ಅಂತರಾಳದರ್ಶನವನ್ನು ಮಾಡಿದರು. "ಏಕಂ ಸತ್ ವಿಪ್ರಾ ಬಹುಧಾ ವದಂತಿ" (ಸತ್ಯವು ಒಂದೇ, ಋಷಿಗಳು ಅದನ್ನು ಅನೇಕ ಹೆಸರುಗಳಿಂದ ಕರೆಯುತ್ತಾರೆ.) ಎಂಬ ವೇದೋಕ್ತಿಯನ್ನು ಅವರು ಪ್ರಯೋಗ ಮೂಲಕ ಅನುಭವ ಮಾಡಿದರು. ವಿವಿಧ ಮತಗಳ ಸಾಮರಸ್ಯ, ಐಕ್ಯತೆಯ ಕುರಿತು ಅವರು ಹೀಗೆಂದಿರುವರು: "ಒಂದೇ ನೀರನ್ನು ಬೇರೆ ಬೇರೆ ಜನರು ಬೇರೆ ಬೇರೆ ಹೆಸರುಗಳಿಂದ (ಇಂಗ್ಲಿಷಿನಲ್ಲಿ ವೊಟರ್, ಲೆಟಿನ್ ಭಾಷೆಯಲ್ಲಿ ಎಕ್ವಾ, ಹಿಂದಿಯಲ್ಲಿ ಪಾನಿ ಮೊದಲಾಗಿ" ಕರೆಯುವಂತೆ ದೇವರನ್ನೂ ಬೇರೆ ಬೇರೆ ಹೆಸರಿನಿಂದ ಕರೆಯುವರು. ಕೆಲವರು ಗೊಡ್, ಕೆಲವರು ಅಲ್ಲಾ, ಕೆಲವರು ಹರಿ, ಮತ್ತೆ ಕೆಲವರು ಬ್ರಹನ್ ಎಂದು ಕರೆಯುವರು " ಇದೇ ದೇವರನ್ನು ಪರಮಹಂಸರು ನಾವು ಕಂಡು ಹಿಡಿಯಬೇಕಾದ ಸತ್ಯವೆಂಬುದು ತನ್ನ ಮುಂದಿಟ್ಟಿರುವರಲ್ಲದೆ ನಮ್ಮ ಪಾಪ ಪುಣ್ಯಗಳ ಮೇಲೆ ನ್ಯಾಯತೀರ್ಪಿಗಾಗಿ ಆ ದೇವರಲ್ಲವೆಂದು ತಿಳಿಸುತ್ತಾರೆ

ಅವರು ಬೋಧಿಸಿದ ಜೀವನ ಧರ್ಮವು ಸಾಮಾನ್ಯ ಅಂಧ ಆಚಾರಗಳಂತಿರುವುದಿಲ್ಲ ಪರಿಶುದ್ಧವಾದ ಮನಸ್ಸಿನಿಂದ ಹೃತ್ಪೂರ್ವಕವಾಗಿ ಪ್ರಾರ್ಥನೆ ಮಾಡಿರಿ ಎಂಬುದೇ ಅವರ ಸರಳ ಸಂದೇಶ "ಓರ್ವ ಜಮೀನ್ದಾರನು ದೊಡ್ಡ ಸಿರಿವಂತನಾಗಿರಬಹುದು. ಆದರೆ ಅವನ ಓರ್ವ ಒಕ್ಕಲು ಭಕ್ತಿಪೂರ್ವಕ ತಂದ ಅದೆಂತಹ ಅಲ್ಪ ಪಾರಿತೋಷಕವನ್ನೇ ಆಗಲಿ ಅವನು ಸಂತೋಷದಿಂದ ಸ್ವೀಕರಿಸುವುದಿಲ್ಲವೆ? "ಹಾಗೆಯೇ ಮಹಾ ಶಕ್ತಿವಂತನಾದ ದೇವರು ನಮ್ಮ ಹೃದಯದ ಮನಃಪೂರ್ವಕ ಬಿನ್ನಹವನ್ನು ಅತ್ಯಂತ ತೃಪ್ತಿಯಿಂದ ಸ್ವೀಕರಿಸುವನು."

ಪರಮ ಹಂಸರು ತಮ್ಮ ಸುತ್ತಲೂ ದೈವ ಸಾನಿಧ್ಯವನ್ನೇ ಕಾಣುತ್ತಿದ್ದರು ಶಿವನನ್ನು ಆರಾಧಿಸುವ ಅತೀ ಶ್ರೇಷ್ಠ ಮಾರ್ಗವೆಂದರೆ ಜೀವರ ಸೇವೆಮಾಡುವುದು. ಸಾಮಾಜಿಕ ಸೇವಾ ಕಾರ್ಯದ ವೈಶಿಷ್ಟ್ಯವನ್ನು ಇದರಿಂದ ನಾವು ಕಂಡುಹಿಡಿಯುತ್ತೇವೆ ತಮ್ಮ ಕೊನೆಯ ದಿನಗಳಲ್ಲಿ ಅವರು ತೀಕ್ಷ್ಣ ಮಾಂಸಾರ್ಬುದ (ಕೆನ್ಸರ್) ವ್ಯಾಧಿಯಿಂದ ನರಳುತಿದ್ದರು ವೈದರು ಅವರಿಗೆ ಮೌನವಾಗಿರಲು ಸಲಹೆಯಿತ್ತಿದ್ದರು ಆದರೆ ಸಾವಿರಾರು ಜನರು ಮಾರ್ಗದರ್ಶನಕ್ಕಾಗಿ ಅವರ ಹಿಂದೆ ಬರುತ್ತಿದ್ದಾಗ ವೈದ್ಯರ ಸಲಹೆಯನ್ನು ಕಾಪಾಡಲಿಕ್ಕಾಗುವುದಿಲ್ಲ

ಬೆನಾರಿಸಿನ ಸರಕಾರಿ ಸಂಸ್ಕೃತ ಶಾಲೆಯು ಸ್ಥಾಪನೆಯಾಗಿ 150 ವರ್ಷಗಳಾದುವು. ಅದರ ಓರ್ವ ಜೋತಿಷ್ಯ ಪಂಡಿತರು ತಮ್ಮ ಶಾಲೆಯ ಒಂದು ಜಾತಕ ತಯಾರಿಸಿರುವರು— ಜಗತ್ತಿನಲ್ಲಿ ಇದು ಪ್ರಥಮ ದಾಖಲೆ. ಅದೇ ಪಂಡಿತರು ಸದ್ಯದಲ್ಲೇ ಕೊಂಗ್ರೆಸ್ ಸಂಸ್ಥೆಯ ಒಂದು ಜಾತಕವನ್ನು ತಯಾರಿಸುವರು

ಬಾವುಗಳನ್ನು ಕೂಡಲೇ ಗುಣ ಪಡಿಸಿರಿ

ನೋವನ್ನು ಉಂಟುಮಾಡುವ ವಿಷಕಾರೀ ಬಾವುಗಳು ಈ ರೀತಿ ಗುಣವಾಗುತ್ತವೆ. ಅದನ್ನು ಆಗಾಗ ನೀರಿನಿಂದ ಕುಟಿಕೂರಾ ಸೋಪು ಹಾಕಿ ತೊಳೆಯಿರಿ; ಅದರ ಮೇಲೆ ಕುಟಿಕೂರಾ ಮುಲಾಮು ಹಚ್ಚಿರಿ.

ಕುಟಿಕೂರಾ ಮುಲಾಮು

CUTICURA OINTMENT

ಭಾರತ ಮಹಿಳೆಯರ ಸ್ಥಾನಮಾನಗಳೆತ್ತ?

ಅವರು ಕೇವಲ ಮಡದಿ ತಾಯಂದಿರೆ?

ಅವರೂ ಮಾನವ ಜೀವಿಗಳಾಗಿರುವರು

ಭಾರತೀಯರು ಮುಖ್ಯವಾಗಿ ಸ್ತ್ರೀಯರನ್ನು ಮಡದಿ, ತಾಯಿಂದಿರೆಂಬ ಭಾವನೆಗಿಂತ ಹೆಚ್ಚಾಗಿ ಬೇರೇನನ್ನು ಎಣಿಸುವುದಿಲ್ಲ. ಹೆಚ್ಚಿನವರ ಅಭಿಪ್ರಾಯದಲ್ಲಿ ಓರ್ವ ಹೆಣ್ಣು ಮಗು ಬೆಳೆದೊಡನೆ ಅದೊಂದು ಹೆಂಗುಸಾಯಿತೆಂದೂ, ನಂತರ ಕೂಡಲೇ ಆವಳು ತನ್ನ ಹೆಂಡತಿ ಮತ್ತು ತಾಯಿಯ ಪಾತ್ರವಹಿಸಲು ಸಿದ್ಧಳಾದಳೆಂದಿದೆ.

ಬೇಗನೇ ಮಡದಿಯಾಗಿ ಗೃಹಿಣಿಯಾಗದ ಹುಡುಗಿಯಲ್ಲಿ ಸ್ತ್ರೀಯತ್ವವಿಲ್ಲವೆಂದೇ ನಮ್ಮಲ್ಲಿ ಹೆಚ್ಚಿನವರ ವಿಚಾರ ಅದೇ ರೀತಿ ಮಡದಿಯಾದೊಡನೆ ಮಗುವನ್ನು ಹೊಂದದವಳ ಮೇಲೆ ಪ್ರೀತಿ ಆದರಗಳು ಕಡಿಮೆ ಮಾಡಲ್ಪಡುವುದೂ ಒಂದು ಕ್ರೂರ ವಿಧ ಸಾಂಪ್ರದಾಯವೇ ಆಗಿದೆ

ಸಾಮಾನ್ಯ ಭಾರತೀಯನು ಶ್ರೇಷ್ಠವಾದ ನಾಟ್ಯಕಲಾಪ್ರಿಯನಾಗಿರುತ್ತಾನೆ ಆದರೆ ಅವನು ತನ್ನ ಮಡದಿಯಲ್ಲಿ ಆ ಕಲಾ ಲಕ್ಷಣಗಳ ಕುರುಹನ್ನೂ, ಅವರ ಹಾವ ಭಾವ ಭಂಗಿಗಳನ್ನೂ ಕಾಣಲು ಸಿದ್ಧನಿಲ್ಲ ಅವನು ಯಾವಾಗಲೂ ಸ್ತ್ರೀಯಾಕರ್ಷಣದಿಂದ ದೂರವಿರಲು ಪ್ರಯತ್ನಮಾಡುತ್ತಾನೆ

ಇದಕ್ಕೆ ಒಂದೇ ಒಂದು ಕಾರಣವೆಂದರೆ ಭಾರತೀಯರಲ್ಲಿ ಸ್ತ್ರೀಯರು ಮಡದಿ ಮಾತೆಗಳು ಮಾತ್ರವೆಂಬ ಭಾವನಾಚಿತ್ರದ ಪರಿಣಾಮವಾಗಿದೆ

ಇದರ ಸತ್ಯತ್ವವನ್ನು ಕಂಡುಹಿಡಿಯಬೇಕಾದರೆ ನಮ್ಮ ಪುರುಷರು ಸ್ತ್ರೀಯರ ವಿಷಯಕವಾದ ಚರ್ಚೆಬಂದಾಗ ತೋರಿಸುವ ಮಾನಸಿಕ ಪ್ರತಿಕ್ರಿಯೆಯನ್ನು ಸ್ವಲ್ಪ ಅಭ್ಯಾಸಿಸಬೇಕು ಉದಾಹರಣೆಗಾಗಿ ಶಿಕ್ಷಣದ ಪ್ರಶ್ನೆಯನ್ನು ತೆಗೆಯೋಣ ಕೂಡಲೇ ನೂರಾರು ಪುರುಷ ಕಂಠಗಳು "ಉತ್ತಮ ಮಡದಿಯೂ ಮಾತೆಯೂ ಆಗಲು ತಕ್ಕುದಾದ ಶಿಕ್ಷಣವು ಅವರಿಗೆ ಅವಶ್ಯ"ವೆಂದು ಘೋಷಿಸುತ್ತಾರೆ

ವಸತಿಗೃಹ ಇಲ್ಲವೆ ಆರೋಗ್ಯ ಪ್ರಶ್ನೆ ಎತ್ತಿದರೆ ಮತ್ತದನ್ನು ಸ್ತ್ರೀ ಶ್ರೇಯಸ್ಸಿನ ದೃಷ್ಟಿಯಿಂದ ವಿವೇಚಿಸಿದಾಗ ಮೇಲ್ಕಂಡ ವಿಷಯಗಳು ಸ್ತ್ರೀಯರನ್ನು "ಉತ್ತಮ ಮಡದಿಯರೂ ಮಾತೆಯರೂ ಆಗುವಂತೆ ಅವುಗಳನ್ನು ನಿರ್ಮಿಸಬೇಕು, ಇಲ್ಲವೆ ಅವುಗಳಲ್ಲಿ ಸುಧಾರಣೆಗಳಾಗಬೇಕು ಎನ್ನುವರು

ಅದೇ ಸಾಮಾಜಿಕ ಸಮಸ್ಯೆಗಳ ಕುರಿತು ವಿವಾದಗಳಿದ್ದಾಗ ಈ ಮಡದಿ ಮಾತೆ ತತ್ವವನ್ನೇ ಒತ್ತಿಹೇಳುವುದು ಗಮನಕ್ಕೆ ಬರುತ್ತದೆ. ಹಾಗೆಯೇ ಮಡದಿ ಧರ್ಮಗಳ ಕುರಿತು ವಿಚಾರಿಸುವಾಗಲೂ ಅದೇ ಧಾಟಿಯು ಕೇಳಿಬರುತ್ತದೆ.

ಮನೆ ಸಮಾಜದಲ್ಲಿ ಸ್ತ್ರೀ

ಏಚಿತ್ರವೆಂದರೆ ಈ ಮಡದಿ ಮಾತೆ ತತ್ವವನ್ನು ಭಾರತ ಸ್ತ್ರೀಯರೇ ಒಪ್ಪಿಕೊಳ್ಳುತ್ತ ಬಂದಿದ್ದು ಆ ಚಿತ್ರವನ್ನು ಸಂಪೂರ್ಣ ಮಾಡುತ್ತಿರುವದು ಇದರ ಹೊರಗೆ ತಮಗೆ ಸಂಬಂಧಿಸಿದ ಬೇರೊಂದು ವಿಷಯವಿದೆ ಎಂದು ಅವರು ತಾತ್ವಿಕವಾಗಿ ಕೂಡ ಯೋಚಿಸದಂತಾಗಿದೆ ಆಟಪಾಟದ ಬಾಲ್ಯಕಳೆದು, ತಾರುಣ್ಯ ಬರದ ಕೂಡಲೇ ಅವರು ಜೀವನದ ಉನ್ನತ ಸಾಹಸಕ್ಕೆ ಅವರು ಸಾಗಿ ಹೋಗುವರು ನಂತರ ಕೊನೆಯ ತಳಕೊಳ್ಳೆಯು ಇಲ್ಲವೆ ಕೆಟ್ಟ ಅಥವಾ ಅಲಕ್ಷ್ಯಕ್ಕೆ ಬಿಟ್ಟ ಮಡದಿ, ತಾಯಿಯಾಗಿ ಬಾಳುವಳು

ಆದರೆ ಪ್ರಕೃತಿಯು ಇಂತಹ ವಿಪರೀತ ಸರಳ ತತ್ವವನ್ನು ಲಕ್ಷಿಸುವುದಿಲ್ಲ ಇಲ್ಲವೆ ಪುರುಷ ನಿರ್ಮಿತ ಇಂತಹ ಕೃತಕ ರೂಢಿ ಸಾಂಪ್ರದಾಯಗಳು ಸ್ತ್ರೀಯರ ಸಹಜವಾದ ಭಾವನೆ, ಅನುರಾಗಗಳನ್ನು ನಿರಂತರವಾಗಿ ಹತ್ತಿಕ್ಕಲು ಸಮರ್ಥವಾಗಲಾರವು ಇಂದಿನ ಭಾರತೀಯ ಸಮಾಜದಲ್ಲಿ ಈ ಪ್ರಕೃತಿ ತತ್ವದ ಸತ್ಯಾಂಶವು ಸ್ಪಷ್ಟವಾಗಿ ಕಾಣುತ್ತಿದೆ

ಸ್ತ್ರೀಯರನ್ನು ಈ ಮಡದಿ ಮಾತೆ ಚಿತ್ರದ ಚೌಕಟ್ಟಿನಲ್ಲಿ ಇರಿಸಿದವರು ಅವರು ಈ ಕರ್ತವ್ಯವನ್ನು ಅದೆಷ್ಟು ಪರಿಪೂರ್ಣತೆಯಿಂದ ಪಾಲಿಸಿಕೊಂಡು ಬಂದಿರುವರೆಂದು ಅರಿತುಕೊಂಡಂತೆಯೂ ತೋರುವುದಿಲ್ಲ ಯಾಕೆ?

ತಮ್ಮ ತನುಮನಗಳನ್ನು ಗೃಹಕೃತ್ಯಕ್ಕಾಗಿಯೂ ಅಡಿಗೆಗೂ ಒಗೆತಕ್ಕೂ, ಮಕ್ಕಳನ್ನು ಹೆರುವುದಕ್ಕೂ ಪಾಲನೆಗೂ ಸವೆಸಿದ ಸ್ತ್ರೀಯರ ಮೇಲೆ ಅದೆಷ್ಟು ಪುರುಷರು ಅವರ ಈ ಸೇವಾತತ್ಪರತೆಯನ್ನು ಈಗಲೂ ಅಲಕ್ಷ್ಯದಿಂದ ಕಾಣುತ್ತಿಲ್ಲ? ಅವಳ ಮೌಲ್ಯವು ಇನ್ನೂ ಅವನಿಗೆ ಸರಿಯಾಗಿ ತಿಳಿಯದೆ ಇರಲಿಕ್ಕಾದರೂ ಕಾರಣವೇನಿರಬಹುದು?

(ಅಪೂರ್ಣ)

ಕಿರಿಸುದ್ದಿ ಸಂಗ್ರಹ

ಕರಾಚಿಯ ಓರ್ವ ಗೃಹಸ್ಥನು ಎರಡು ಮದುವೆ ಮಾಡಿಕೊಂಡಿದ್ದು 'ಇರ್ವ ಪತ್ನಿಯರನ್ನೂ ಮನೆಯಲ್ಲಿಟ್ಟುಕೊಂಡಿದ್ದಾನೆ. ಅವನಿಗೆ ಬುದ್ಧಿ ಕಲಿಸಲು' ಈಗ ವಿವಾಹ ವಯಸ್ಕಳಾದ ಅವನ ಮಗಳು ತನಗೆ ಎರಡು ಗಂಡಂದಿರನ್ನು ಒಂದೇ ಸಲ ಲಗ್ನ ಮಾಡಿಸಬೇಕೆಂದು ಹಟತೊಟ್ಟಿರುವಳಂತೆ "ನಿಮಗೆರಡು ಪತ್ನಿಯರಿದ್ದರೆ ನನಗೇಕೆ ದ್ವಿಪತಿಯರಿರಬಾರದು?" ಎಂದವಳ ಪ್ರಶ್ನೆಗೆ ತಂದೆ ಮೌನವಾದನಂತೆ

✱

ಪಂಡರ್‌ಪುರ್ ಸಂಸ್ಥಾನದ ಮಹಾರಾಣಿಯವರು ಪುರಿಯ ಜಗನ್ನಾಥ ದೇವಸ್ಥಾನಕ್ಕೆ ಯಾತ್ರೆ ಹೊರಟಿದ್ದಾರೆ—ಕಾಲುನಡೆಯಿಂದ ಪಯಣ. 150 ಸಂಗಾತಿಗಳ ಪರಿವಾರವನ್ನು ಕಟ್ಟಿಕೊಂಡು ರಾಣಿಯವರು ಕಳೆದ 9 ತಿಂಗಳಿಂದ ಪಾದಚಾರಿಗಳಾಗಿರುವರು ದಾರಿಯಲ್ಲಿ ಅಹಿಂಸಾ ಧರ್ಮದ ಮಹತ್ವವನ್ನು ಅವರು ಉಪದೇಶಿಸುತ್ತಲಿರುವುದು ಇನ್ನೊಂದು ವೈಶಿಷ್ಟ್ಯ

★

ಸಂಯುಕ್ತ ಪ್ರಾಂತ್ಯದ ಚಾಲಸ್ ಎಂಬ ತಾಲೂಕು ತಹಶೀಲ್ದಾರನ ಬಳಿ ಪಂಡಿತ್ ನೆಹರೂಗಳ ಪ್ರೈವೆಟ್ ಸೆಕ್ರೆಟರಿಯವರೆಂಬುವರು 40 ಗಜ ಬಟ್ಟೆ ಅರ್ಜಿಯೊಂದು ಬಂತು ಡಾ। ಶಿವಶಂಕರಲಾಲರೆಂದು ಆ 'ನೆಹರು ಸೆಕ್ರೆಟರಿ'ಗಳ ನಾಮಧೇಯ. ಸಂದೇಹದಿಂದ ಆ ವ್ಯಕ್ತಿಯನ್ನು ಕೈದು ಮಾಡಿ ವಿಚಾರಿಸಲು ಆತ ಹರ್ದೋಯಿನ ಶಿವಶಂಕರ್ ಎಂಬವ—ಒಂದು ಮದುವೆ ದಿಬ್ಬಣ ಕೂಟದೊಂದಿಗೆ ಚಾಲಸಿಗೆ ಬಂದಿದ್ದನೆಂದು ತಿಳಿಯಿತು.

★

ನೀರಲ್ಲಿ ಮುಳುಗಿ ಸತ್ತ ಪುರುಷನ ದೇಹ ಮೇಲ್ಮುಖವಾಗಿ ತೇಲುತ್ತದೆ ಸ್ತ್ರೀಯದು ಕೆಳಮುಖವಾಗಿ ತೇಲುವುದು

★

ಭೂಮಿಯೊಳಗಿನ ಕೆಲವೊಂದು ಖನಿಜ ವಸ್ತುಗಳು, ನೀರು ಮತ್ತು ವಾಯುವಿನಿಂದ ಪ್ರಕೃತಿಯು ಅಪಾರವಾದ ಸಸ್ಯ ವರ್ಗಕ್ಕೆ ಆಹಾರವನ್ನೊದಗಿಸುವುದು. ಅಮೇರಿಕದ ಕೆಲ ರಾಸಾಯನಿಕ ಶಾಸ್ತ್ರಜ್ಞರು "ಮಾನವ ವರ್ಗಕ್ಕೂ ಇದೇ ರೀತಿಯಲ್ಲಿ ಸುಲಭವೂ ಪುಷ್ಟಿಕರವೂ ಆದ ರಾಸಾಯನಿಕ ಆಹಾರವನ್ನು ಸಿದ್ಧಗೊಳಿಸಬಹುದು." ಎಂದು ತಿಳಿಸುತ್ತಾರೆ ಕೆಲವು ವರ್ಷಗಳಲ್ಲಿ ಮಾನವಕೋಟಿಯ ಆಹಾರವು ಈ ತರದ್ದಾಗುವ ಸಂಭವವಿದೆ ಎಂದವರ ಅಭಿಪ್ರಾಯ

✱

ಕಳೆದ ವರ್ಷ ಅಮೇರಿಕವು ಶಿಕ್ಷಣಕ್ಕಾಗಿ ವೆಚ್ಚ ಮಾಡಿದ್ದಕಿಂತ ಆರು ಪಾಲಷ್ಟು ಮದ್ಯ ತಯಾರಿಗೆ ಖರ್ಚು ಮಾಡಿದೆಯಂತೆ!

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O P No 5/47

ವಾಸುದೇವ ಭಟ್ಟ ಕೂಡಾ ಅರ್ಜಿದಾರರು

ದಿವಂಗತ ಶ್ರೀಧರ ಭಟ್ಟರ ಸೊತ್ತಿನ ಕುರಿತು ವಾರಿಶ್ ಸರ್ಟಿಫಿಕೇಟು ಮೃತನ ಹೆಂಡ್ತಿ ಸುನಿತಗೆ ಕೊಡ್ಬೇಕಾಗಿ ಆತನ ತಂದೆಯು ಸಹೋದರರೂ ಆತನ ಹೆಂಡ್ತಿಯು ಕೂಡಾ ಮಾಡಿದ O P No 5/47ನೆ ಅರ್ಜಿಯು 1 3 47 ಕ್ಕೆ ತನ್ಕಿಗೆ ಇಟ್ಟಿರುತ್ತದೆ ಈ ಕುರಿತು ಆಕ್ಷೇಪವುಳ್ಳವರು ತಾ 1 3—47ನೆ ಹಗಲು 11 ಗಂಟೆಗೆ ಖುದ್ದಾಗಿ ಅಗ್ಲಿ ವಕೀಲರ ಮುಖಾಂತ್ರವಾಗ್ಲಿ ಕೋರ್ಟು ಮುಂದೆ ಹಾಜರಾಗಿ ವ್ಯವಹರಿಸಬೇಕು ಇದಕ್ಕೆ ತಪ್ಪಿದ್ರೆ ಕೋರ್ಟಿನವರು ಯುಕ್ತಕಂಡ ರೀತಿ ತೀರ್ಮಾನಿಸುವರು

B Mangesh Rao
Pleader for Petitioners

ಪುತ್ತೂರು 5 2 47

ರಿಯಾಯಿತಿ ಲಗ್ಗೇಜಿನಲ್ಲಿ ವ್ಯಾಪಾರಿ ಸಾಮಾನುಗಳ ನಿಷೇಧ

ಪೆಸೆಂಜರರ ಸೌಕರ್ಯಗಳ ಬಗ್ಗೆ ಒಂದು ಮಣ ಭಾರದ ಸಾಮಾನುಗಳನ್ನು ಫ್ರೀ ತೆಗೆದುಕೊಂಡುಹೋಗಬಹುದಾಗಿ ಮಾಡಿದ ರಿಯಾಯತಿ ಕಾರಣದಿಂದಾಗಿ ಪೆಸೆಂಜರರು ಅವರ ಸ್ವಂತ ಉಪಯೋಗದ ಸಾಮಾನುಗಳಲ್ಲದೆ ವ್ಯಾಪಾರಿ ಸಾಮಾನುಗಳನ್ನು ತಮ್ಮೊಡನೆ ಪ್ರಯಾಣ ಬೆಳೆಸುವ ಸ್ನೇಹಿತರ ಹೆಸರಿನಲ್ಲಿ ಈ ರಿಯಾಯತಿ ಮೂಲಕ ಧರ್ಮಾರ್ಥ ಸಾಗಿಸುವುದು ರೂಢಿಯಾಗಿದೆ

ಮೋಟರ್ ವಾಹನಗಳು ರೈಲ್ವೆಗಾಡಿಗಳಂತಾಗಿಲ್ಲ ಅವುಗಳಲ್ಲಿ ನಿಯಮಿತ ಭಾರಕ್ಕಿಂತ ಹೆಚ್ಚಿನ ಸಾಮಾನುಗಳನ್ನು ಒಯ್ಯುವುದು ಮೋಟರ್ ವಾಹನಕ್ಕೂ ಮತ್ತು ಪೆಸೆಂಜರರಿಗೂ ಅಪಾಯವಾಗಿದೆ ಕಾರಣ ಬಸ್ಸುಗಳಲ್ಲಿ ಒಯ್ಯುವ ಸಾಮಾನುಗಳನ್ನು ಪೆಸೆಂಜರರ ಅವಶ್ಯಕತೆ ಬಗ್ಗೆನೇ ಮಿತಗೊಳಿಸುವುದು ಅಗತ್ಯವಿದೆ

ವ್ಯಾಪಾರಿ ಸಾಮಾನುಗಳನ್ನು ಒಯ್ಯುವರೆ ವ್ಯಾಪಾರಿಗಳು
ಶೆಡ್ಯೂಲ್ ಟೈಮಿಗೆ ಕೊಂಡೊಯ್ಯುವ "ಲಕ್ಷ್ಮಿ" ಯಾ "ಸಿ. ಪಿ ಸಿ." ಲೋರಿ ಸರ್ವಿಸುಗಳ ಸೌಕರ್ಯವನ್ನು ಉಪಯೋಗಿಸಬೇಕಾಗಿ ಅಪೇಕ್ಷಿಸುತ್ತೇವೆ

ವ್ಯಾಪಾರಿ ಸಾಮಾನುಗಳನ್ನು ಎಷ್ಟಕ್ಕೂ ಫ್ರೀ ಲಗ್ಗೇಜಿನ ಅಂಶದಲ್ಲಿ ಸೇರಿಸಿಕೊಳ್ಳಲಾಗುವುದಿಲ್ಲ. ಈ ಕುರಿತು ಮಾಹಿತಿಯನ್ನು ಬುಕ್ಕಿಂಗ್‌ಕ್ಲಾರ್ಕರಿಂದ ಪಡೆಯಬಹುದು

JOINT MANAGERS,

The Combined Booking Agency, MANGALORE — **The Joint Booking Office,** KODIALBAIL

ಉದರ ವ್ಯಾಧಿಗಳಿಗೆ ಯೋಗಾಭ್ಯಾಸ ಪರಿಹಾರ

೫ ಮಿನಿಟು ವ್ಯಾಯಾಮದಿಂದ ಉತ್ತಮ ಆರೋಗ್ಯ

ಸ್ವಾಮಿ ಶಿವಾನಂದರ ಸಲಹೆ

ಉದರ ವ್ಯಾಧಿಗಳಲ್ಲೊಂದಾದ ಸಿಹಿ ಮೂತ್ರ ಕಾಹಿಲೆಗೆ ಸ್ವಾಮಿ-ಶಿವಾನಂದರು ಈ ಕೆಳಗಿನ ಅತ್ಯುತ್ತಮ ಪರಿಹಾರ ಸಲಹೆಯನ್ನು ಕೊಡುತ್ತಾರೆ:

ಸಾಮಾನ್ಯವಾಗಿ ಸಿಹಿ ಮೂತ್ರ (ಡಾಯಬೆಟಿಸ್) ವ್ಯಾಧಿಗೆ ಇನ್ಸೂಲಿನ್ ಎಂಬ ಔಷಧಿಯನ್ನು ಕೊಡುತ್ತಾರೆ. ಇದು ಆ ರೋಗವನ್ನು ಸ್ವಲ್ಪಮಟ್ಟಿಗೆ ತಡೆಗಟ್ಟುತ್ತದಲ್ಲದೆ ಅದನ್ನು ಸಂಪೂರ್ಣ ಪರಿಹಾರಮಾಡುವುದಿಲ್ಲ.

ಪಶ್ಚಿಮೋತ್ತಾನಾಸನ್, ಉದಿಯಾನಬಂಧ, ಅಗ್ನಿಸಾರಕ್ರಿಯೆಗಳೆಂಬ ಆಸನಗಳನ್ನು ಪ್ರತಿದಿನ ಪ್ರಾತಃಕಾಲದಲ್ಲಿ 5 ಮಿನಿಟುಗಳ ತನಕ ಅಭ್ಯಾಸಿಸಿರಿ.

ಕಾಲುಗಳನ್ನು ಉದ್ದಕ್ಕೆ ಚಾಚಿ ಕುಳಿತುಕೊಂಡು ತಲೆಯನ್ನು ಮೊಣಕಾಲಿಗೆ ಮುಟ್ಟಿಸಲು ಪ್ರಯತ್ನಮಾಡಿರಿ. ಇದೇ ಸಮಯಕ್ಕೆ ಕೈಗಳನ್ನು ಮುಂದಕ್ಕೆ ಚಾಚಿ ತರ್ಜನಿ ಬೆರಳುಗಳಿಂದ ಕಾಲಿನ ಉಂಗುಷ್ಟಗಳನ್ನು ಹಿಡಿಯಿರಿ. ಇದೇ ಪಶ್ಚಿಮೋತ್ತಾಸನ ನಂತರ ಹೊಟ್ಟೆಯನ್ನು ಒಳಕ್ಕೆ ಎಳಕೊಳ್ಳಿರಿ ಇದು ಉದಿಯಾನ ಬಂಧಾಸನ, ಆ ಮೇಲೆ ಹೊಟ್ಟೆಯನ್ನು ಒಳಗೂ ಹೊರಕ್ಕೂ ಎಳೆಯುವ ಕ್ರಿಯೆಯನ್ನು ಮುಂದರಿಸಿರಿ ಇದೇ ಅಗ್ನಿಸಾರ ಕ್ರಿಯೆ.

ಪ್ರಕೃತಿ ಚಿಕಿತ್ಸೆ

ಸಿಹಿ ಮೂತ್ರದ ಪರಿಣಾಮವಾಗಿ ಅತಿ ಮೀರಿ ಶ್ರಮಪಟ್ಟು ಕೆಲಸಮಾಡಿದ ಮೂತ್ರೇಂದ್ರಿಯಗಳು ಈ ಯೋಗಾಸನದಿಂದ ವ್ಯಾಯಾಮಹೊಂದಿ ಆರೋಗ್ಯಗೊಳ್ಳುವವು. ಪಚನಕ್ರಿಯೆಗೆ ಅನುಕೂಲವಾದ ಜೀರ್ಣರಸಗಳನ್ನು ಅವು ಹೆಚ್ಚೆಚ್ಚಾಗಿ ತಯಾರಿಸುವಂತಾಗುವುದು ಕೃತಕವಾಗಿ ದೇಹದೊಳಗೆ ಕಳುಹಲ್ಪಡುವ ಪ್ರಾಣಿಜನ್ಯ ಜೀರ್ಣರಸಗಿಂತ ಇದು ಹೆಚ್ಚು ಪ್ರಾಕೃತಿಕವಾದುದು. ನಿಮ್ಮ ಇಡೀ ಶರೀರದ ಆರೋಗ್ಯವೂ ಉತ್ತಮಗೊಳ್ಳುವುದು ಆಯುರಾರೋಗ್ಯಗಳು ಅಭಿವೃದ್ಧಿಗೊಳ್ಳುವವು

ಇದು ಅನುಭವದಿಂದ ಅತ್ಯುತ್ತಮವೆಂದು ತಿಳಕೊಂಡ ಪರಿಹಾರ ಸಾಧನಯಾಗಿದೆ ನಿಮ್ಮ ಆಹಾರ ಸೇವನೆಯಲ್ಲೂ ನಿತ್ಯವಿಡಿರಿ ಹತ್ತು ಹದನೈದು ದಿವಸಕ್ಕೊಮ್ಮೆ ಸಂಪೂರ್ಣ ಉಪವಾಸ ವ್ರತವನ್ನಾಚರಿಸಿರಿ

ಜೇನುನೊಣಗಳಿಂದ ಜ್ವರ ಔಷಧಿ

ರಶ್ಯನ್ ವಿಜ್ಞಾನಿಗಳ ಯಶಸ್ಸು

ಮಲೇರಿಯಾ ಜ್ವರಕ್ಕೆ ಕ್ವಿನೀನು ಅತ್ಯುತ್ತಮ ಔಷಧಿ ಆದರೆ ಇದು ಬಹಳ ಕಹಿಯಾಗಿರುತ್ತದೆ. ಈಗ ಕೆಲವು ರಶ್ಯನ್ ವಿಜ್ಞಾನಿಗಳು ಕ್ವಿನಿನಿನೊಳಗಿನ ಕಹಿತ್ವವನ್ನು ತೆಗೆಯಲು ಒಂದು ಒಳ್ಳೆ ವಿಧಾನವನ್ನು ಕಂಡುಹಿಡಿದಿರುವರು.

ಈ ವಿಧಾನದಲ್ಲಿ ಜೇನುನೊಣಗಳೇ ಮುಖ್ಯ ಪಾತ್ರವಹಿಸುವಂತೆ ಮಾಡಿರುವುದು ರಶ್ಯನ್ ವಿಜ್ಞಾನಿಗಳ ಚತುರ ಪ್ರಯೋಗಗಳ ಪರಿಣಾಮವಾಗಿದೆ. ಕೊಕಸಸ್ ಬೆಟ್ಟ ಪ್ರದೇಶದಲ್ಲಿ ದೊಡ್ಡದೊಂದು ಜೇನುನೊಣ ನಿವಾಸವಿದೆ. ಕ್ವಿನಿನ್ ಬೆರೆಸಿದ ಜೇನನ್ನು ಅವುಗಳಿಗೆ ಆಹಾರವಾಗಿ ಇಡಲಾಗುತ್ತದೆ. ನೊಣಗಳು ಇದನ್ನು ತಮ್ಮ ಮರಿಗಳಿಗೆ ತಿನ್ನಿಸುತ್ತವೆ ಇದನ್ನು ತಿಂದು ಬೆಳೆದ ನೊಣಗಳು ಕ್ವಿನಿನಿನ ಸತ್ವವುಳ್ಳ ಜೇನನ್ನು ತಯಾರಿಸುತ್ತವೆ. ಇದರಲ್ಲಿ ಜ್ವರ ನಿವಾರಕ ಔಷಧಿ ಸತ್ವವಿದ್ದು ಸೇವನೆಗೆ ಅತ್ಯಂತ ಸಿಹಿಯಾಗಿಯೇ ಇರುತ್ತದೆ

ಸಾವಿರ ವರ್ಷ ನಂತರದ ಮನುಷ್ಯ

ಕೆಲವು ಶತಮಾನಗಳ ಆಯುಷ್ಯ

ಈಗಿಂದ ಒಂದು ಸಾವಿರ ವರ್ಷಗಳ ನಂತರ ಮನುಷ್ಯನು ಹೇಗೆ ಕಾಣುವನು? ಪ್ರಖ್ಯಾತ ಬ್ರಿಟಿಷ್ ವಿಜ್ಞಾನಿಗಳಾದ ಪ್ರೊ। ಜೆ ಬಿ ಏಸ್ ಹಾಲ್ಡೇನ್ ಅವರು ಒಂದು ವಿಶ್ವವಿದ್ಯಾಲಯ ಭಾಷಣದಲ್ಲಿ ಭಾವೀ ಮಾನವನ ರೂಪ ಲಕ್ಷಣಗಳನ್ನು ನಿರೂಪಿಸಿದರು

"ಮುಂದಿನ ಮನುಷ್ಯನ ಅಂಗಾಂಗ ಸ್ನಾಯುಗಳು ಅಗಾಧ ಶಕ್ತಿಯುಕ್ತವಾಗಿದ್ದು, ದೊಡ್ಡತಲೆ, ಕೆಲವೇ ಹಲ್ಲುಗಳಿಂದ ಕೂಡಿರುತ್ತದೆ ಅವನ ಬೆಳವಣಿಗೆಯೂ ಅತ್ಯಂತ ಮಂದಗತಿಯಲ್ಲಿ ಸಾಗುವುದು 5 ವರ್ಷಗಳ ತನಕ ಅವನಿಗೆ ಭಾಷೆ ಬರುವುದಿಲ್ಲ ಅವನ ಶಿಕ್ಷಣವು 40 ವರ್ಷಗಳ ತನಕ ಮುಂದರಿಯುವುದು ಅವನು ಕೆಲವು ಶತಮಾನಗಳ ತನಕ ಜೀವಿಸುವನು

'ಅವನಲ್ಲಿ ಹುಟ್ಟುಗುಣಗಳು ಕಡಿಮೆಯಾಗಿ ವಿಚಾರವಂತ ಅಭ್ಯಾಸಗಳು ಹೆಚ್ಚಾಗಿರುವವು ಅವನಲ್ಲಿ ಲೈಂಗಿಕ ಭಾವೋದ್ರೇಕಗಳೂ, ಬಂಧುವಾತ್ಸಲ್ಯಗಳೂ ಕಡಿಮೆ ಇರುವವು

"ಹಿರೋಶಿಮಾ ನಾಗಸಾಕಿಗಳಲ್ಲಿ ಎಟಂ ಬೊಂಬಿನ ಪರಿಣಾಮವು ಅಲ್ಲಿನ ಭಾವೀ ಜನತೆಯ ಮೇಲೆ ವಿಚಿತ್ರ ರೀತಿಯಲ್ಲಿ ಕಾಣಿಸಿಕೊಳ್ಳಬಹುದು ಅತಿ ಕುಳ್ಳ ವ್ಯಕ್ತಿಗಳೂ, ವಿಚಿತ್ರ ರೂಪ ಲಕ್ಷಣಗಳ ಮನುಷ್ಯರೂ ಅಲ್ಲಿ ಹುಟ್ಟುವ ಸಂಭವವಿದೆ "

ಬಾವುಗಳನ್ನು ಕೂಡಲೇ ಗುಣಪಡಿಸಿರಿ

ನೋವನ್ನು ಉಂಟುಮಾಡುವ ವಿಷಕಾರೀ ಬಾವುಗಳು ಈ ರೀತಿ ಗುಣವಾಗುತ್ತವೆ. ಅದನ್ನು ಆಗಾಗ ನೀರಿನಿಂದ ಕುಟಿಕೂರಾ ಸೋಪು ಹಾಕಿ ತೊಳೆಯಿರಿ, ಅದರ ಮೇಲೆ ಕುಟಿಕೂರಾ ಮುಲಾಮು ಹಚ್ಚಿರಿ.



ಕುಟಿಕೂರಾ ಮುಲಾಮು

CUTICURA OINTMENT

ಆಧುನಿಕ ಭಾರತದ ಅಮರ ಪ್ರವಾದಿ

ಪರಮಹಂಸರ ವಿಶ್ವ ಧರ್ಮ ಸಂದೇಶ

ಮಾರ್ಗದ ಬದಿಯಲ್ಲಿ ಡೊಂಬನೊಬ್ಬನು ಯಾವಾಗಲೂ ಜನರನ್ನು ಆಕರ್ಷಿಸುತ್ತಾನೆ. ನದಿ ದಂಡೆಯ ಕಟ್ಟೆಯೊಂದರಲ್ಲಿ ಕೂತ ಸನ್ಯಾಸಿಯೊಬ್ಬನು ದೊಡ್ಡ ಗುಂಪಿನ ಮನಸೆಳೆಯುವನು. ಜನರು ಅವನನ್ನು ಬೇಗನೆ ಮಹಾತ್ಮನೆನ್ನುವರು ಕೆಲವು ವಿಸ್ಮಯಕರವಾದ ಯೋಗೀ ಚಮತ್ಕಾರಗಳನ್ನು ಮಾಡಿ ತೋರಿಸುವ ಸಾಧುವಿನ ಹಿಂದೆ ಸದಾ ಭಕ್ತ ಮಂಡಳಿಯೊಂದು ಅಲೆದಾಡುವುದು.

ಮತ ಧರ್ಮಗಳ ಇತಿಹಾಸವನ್ನು ನೋಡರೆ ಅದರಲ್ಲಿ ಅನೇಕಾನೇಕ ಸಾಧು ಸಂತರ ದೈವೀಕ ಚಮತ್ಕಾರಗಳ ದಾಖಲೆಯು ಕಂಡು ಒರುವುದು ಕೆಲವೊಂದು ವಿಚಿತ್ರಗಳನ್ನು ಮಾಡಿ ತೋರಿಸಿದವರನ್ನು ಭಕ್ತಿಭಾವನೆಯಿಂದ ಕಾಣುವುದು ಪ್ರಾಚೀನ ಕಾಲದ ಗುಡ್ಡ ಕಾಡು ನಿವಾಸಿಯ ಒಂದು ವಿಶಿಷ್ಟ ಗುಣವಾಗಿದ್ದಂತೆ ಆಧುನಿಕ ಸುಸಂಸ್ಕೃತ ವ್ಯಕ್ತಿ ಕೂಡ ಅದರಿಂದ ಮುಗ್ಧಗೊಳ್ಳುವನು

ಆದರೆ ಕಳೆದ ಶತಮಾನಾಂತ್ಯದಲ್ಲಿ ನಾವೊರ್ವ ಅದ್ಭುತ ಚಮತ್ಕಾರಿಕ ವ್ಯಕ್ತಿಯ ಕುರಿತು ಓದುತ್ತೇವೆ ಆತ ಅಧ್ಯಾತ್ಮಿಕ ಜ್ಞಾನಕ್ಕಾಗಿ ಹಸಿದವರನ್ನು ತೃಪ್ತಿಗೊಳಿಸಿದನು ಮಾತ್ರವಲ್ಲ ಲೌಕಿಕ ಸಂಕಷ್ಟದಲ್ಲಿ ನರಳುವವರನ್ನು ಕೂಡ ಉದ್ಧರಿಸಿದನು ಅಷ್ಟಲ್ಲದೆ ಜನರಲ್ಲಿದ್ದ ಮತೀಯ ಸಂಕುಚಿತ ಭಾವನೆಗಳನ್ನು ಹೋಗಲಾಡಿಸಿ ಹಿಂದೆ ಯಾವ ಪಾಶ್ಚಿಮಾತ್ಯ ಇಲ್ಲವೆ ಪೌರ್ವಾತ್ಯ ಮತ ಸ್ಥಾಪಕನಿಂದಾಗದ ಕಾರ್ಯವನ್ನು ಸಾಧಿಸಿದನು

ಶ್ರೀ ರಾಮಕೃಷ್ಣ ಪರಮಹಂಸರ ವೈಶಿಷ್ಟ ಬಂಗಾಳದ ಹಳ್ಳಿಯೊಂದರ ಬಡ ಬ್ರಾಹ್ಮಣ ಕುಟುಂಬವೊಂದರಲ್ಲಿ ಜನಿಸಿ ತನ್ನ ಬಾಲ್ಯವನ್ನು ಪ್ರಕೃತಿಯ ಆತ್ಮೀಯ ಸಂಪರ್ಕದಿಂದ ಕಳೆದನು ಜೀವನೋದ್ದೇಶವು ದೈವೀಕ ಸಾರಮ್ಯತ್ವದ ದರ್ಶನವನ್ನು ಮಾಡುವುದೇ ಆಗಿರುತ್ತದೆಂದು ಅವನು ಬಾಲ್ಯದಲ್ಲೇ ಕಂಡು ಹಿಡಿದ—ಆ ಧ್ಯೇಯ ಸಾಧನೆಗಾಗಿ ತನ್ನ ಜೀವನವನ್ನು ರೂಪುಗೊಳಿಸಿದ

ಅಪ್ರತ್ಯಕ್ಷವಾಗಿ ಮಾಡುವ ಒಂದು ಅತೀ ಚಿಕ್ಕ ಪಾಪ ಕರ್ಮದಿಂದ ನಮ್ಮೀ ಭೌತಿಕ ಶರೀರವು ಕಂಪನಗೊಳ್ಳುವುದನ್ನು ನಾವು ಕಾಣಬಹುದು ಸರಳ ಶ್ರದ್ಧೆಯಿಂದಲೂ, ಗುಣ ಧಾರ್ಢ್ಯದಿಂದಲೂ ಅವರು ದೈವೀಕ ಮಾತೆಯೊಡನೆ ದರ್ಶನಕ್ಕಾಗಿ ಅಂಗಲಾಚುವರು. ಕೊನೆಗೆ ಆ ಮಾತೆಯು ಅವರನ್ನು ತನ್ನ ಪರಮ ಪವಿತ್ರ ದರ್ಶನದಿಂದ ಪಾವನಗೊಳಿಸುವಳು ರೋಮಾಂಚಕವಾದ ಸ್ಫೂರ್ತಿಗೊಳಿಸುವ ಕಾಳಿಮಾತೆಯು ತನ್ನ ಭಕ್ತಿಗೆ ಪಾತ್ರವಾದೀ ಮಗುವನ್ನು ಆಧ್ಯಾತ್ಮಿಕ ದಾರಿಯಲ್ಲಿ ನಡೆಸುವಳು ಅವರಿಗೆ ಆಧ್ಯಾತ್ಮಿಕ ಶಿಸ್ತನ್ನು ಕಲಿಸಲು ಓರ್ವ ಬ್ರಾಹ್ಮಣನನ್ನು, ವೇದಾಂತವನ್ನು ಕಲಿಸಲು ಓರ್ವ ವೇದಾಂತಿಯನ್ನು ಅವಳು ಅವನ ಬಳಿ ಕಳುಹಿಸುವಳು ಇವರು ಅವರಿಗೆ ಸನ್ಯಾಸ ದೀಕ್ಷೆಯನ್ನು ಕೊಡುವರು. ದೇವರ ಸನ್ನಿಧಾನದಲ್ಲಿದ್ದು ತಮ್ಮ ಶರೀರಾರ್ಪಣೆಯನ್ನು ಗೈದು ಸರಳವೂ ಆದ ಶ್ರದ್ಧೆ ವಿಶ್ವಾಸಗಳಿಂದ ಕೂಡಿದವರಾಗಿದ್ದುದರಿಂದ ಅವರು ಅನೇಕ ಮತೀಯ ಶಿಸ್ತು, ಸಂಸ್ಕಾರಗಳನ್ನು ಯಶಸ್ವಿಯಾಗಿ ಪರಿಪೂರ್ಣಗೊಳಿಸಿದರು.

ಕೊನೆಗೆ ಅವರು ಎಲ್ಲಾ ಮತ ವಿಶ್ವಾಸಗಳ ಅಂತರಾಳ ದರ್ಶನವನ್ನು ಮಾಡಿದರು. "ಏಕಂ ಸದ್ ವಿಪ್ರಬಹುದ್ ವೇದಾಂತಿ" (ಸತ್ಯವು ಒಂದೇ, ಋಷಿಗಳು ಅದನ್ನು ಅನೇಕ ಹೆಸರುಗಳಿಂದ ಕರೆಯುತ್ತಾರೆ.) ಎಂಬ ವೇದೋಕ್ತಿಯನ್ನು ಅವರು ಪ್ರಯೋಗ ಮೂಲಕ ಅನುಭವ ಮಾಡಿದರು. ವಿವಿಧ ಮತಗಳ ಸಾಮರಸ್ಯ, ಐಕ್ಯತೆಯ ಕುರಿತು ಅವರು ಹೀಗೆಂದಿರುವರು. "ಒಂದೇ ನೀರನ್ನು ಬೇರೆ ಬೇರೆ ಜನರು ಬೇರೆ ಬೇರೆ ಹೆಸರುಗಳಿಂದ (ಇಂಗ್ಲಿಷಿನಲ್ಲಿ ವೊಟರ್, ಲೆಟಿನ್ ಭಾಷೆಯಲ್ಲಿ ಎಕ್ವಾ, ಹಿಂದಿಯಲ್ಲಿ ಪಾನಿ ಮೊದಲಾಗಿ" ಕರೆಯುವಂತೆ ದೇವರನ್ನೂ ಬೇರೆ ಬೇರೆ ಹೆಸರಿನಿಂದ ಕರೆಯುವರು. ಕೆಲವರು ಗೊಡ್, ಕೆಲವರು ಅಲ್ಲಾ, ಕೆಲವರು ಹರಿ, ಮತ್ತೆ ಕೆಲವರು ಬ್ರಹನ್ ಎಂದು ಕರೆಯುವರು " ಇದೇ ದೇವರನ್ನು ಪರಮಹಂಸರು ನಾವು ಕಂಡು ಹಿಡಿಯಬೇಕಾದ ಸತ್ಯವೆಂಬುದು ತಮ್ಮ ಮುಂದಿಟ್ಟಿರುವರಲ್ಲದೆ ನಮ್ಮ ಪಾಪ ಪುಣ್ಯಗಳ ಮೇಲೆ ನ್ಯಾಯತೀರ್ಪಿಗಾಗಿ ಆ ದೇವರಲ್ಲವೆಂದು ತಿಳಿಸುತ್ತಾರೆ

ಅವರು ಬೋಧಿಸಿದ ಜೀವನ ಧರ್ಮವು ಸಾಮಾನ್ಯ ಅಂಧ ಆಚಾರಗಳಂತಿರುವುದಿಲ್ಲ **ಪರಿಶುದ್ಧವಾದ ಮನಸ್ಸಿನಿಂದ ಹೃತ್ಪೂರ್ವಕವಾಗಿ ಪ್ರಾರ್ಥನೆ ಮಾಡಿರಿ ಎಂಬುದೇ** ಅವರ ಸರಳ ಸಂದೇಶ "ಓರ್ವ ಜಮೀನ್ದಾರನು ದೊಡ್ಡ ಸಿರಿವಂತನಾಗಿರಬಹುದು ಆದರೆ ಅವನ ಓರ್ವ ಒಕ್ಕಲು ಭಕ್ತಿಪೂರ್ವಕ ತಂದ ಅದೆಂತಹ ಅಲ್ಪ ಪಾರಿತೋಷಕವನ್ನೇ ಆಗಲಿ ಅವನು ಸಂತೋಷದಿಂದ ಸ್ವೀಕರಿಸುವುದಿಲ್ಲವೆ? "**ಹಾಗೆಯೇ ಮಹಾ ಶಕ್ತಿವಂತನಾದ ದೇವರು ನಮ್ಮ ಹೃದಯದ ಮನಃಪೂರ್ವಕ ಚಿನ್ಹವನ್ನು ಅತ್ಯಂತ ತೃಪ್ತಿಯಿಂದ ಸ್ವೀಕರಿಸುವನು.**"

ಪರಮಹಂಸರು ತಮ್ಮ ಸುತ್ತಲೂ ದೈವ ಸಾನಿಧ್ಯವನ್ನೇ ಕಾಣುತ್ತಿದ್ದರು **ಶಿವನನ್ನು ಆರಾಧಿಸುವ ಅತೀ ಶ್ರೇಷ್ಠ ಮಾರ್ಗವೆಂದರೆ ಜೀವರ ಸೇವೆಮಾಡುವುದು.** ಸಾಮಾಜಿಕ ಸೇವಾ ಕಾರ್ಯದ ವೈಶಿಷ್ಟವನ್ನು ಇದರಿಂದ ನಾವು ಕಂಡುಹಿಡಿಯುತ್ತೇವೆ ತಮ್ಮ ಕೊನೆಯ ದಿನಗಳಲ್ಲಿ ಅವರು ತೀಕ್ಷ್ಣ ಮಾಂಸಾರ್ಭುತ (ಕೆನ್ಸರ್) ವ್ಯಾಧಿಯಿಂದ ನರಳುತಿದ್ದರು ವೈದರು ಅವರಿಗೆ ಮೌನವಾಗಿರಲು ಸಲಹೆಯುತ್ತಿದ್ದರು ಆದರೆ ಸಾವಿರಾರು ಜನರು ಮಾರ್ಗದರ್ಶನಕ್ಕಾಗಿ ಅವರ ಹಿಂದೆ ಬರುತ್ತಿದ್ದಾಗ ವೈದ್ಯರ ಸಲಹೆಯನ್ನು ಕಾಪಾಡಲಿಕ್ಕಾಗುವುದಿಲ್ಲ.

ಬೆನಾರಿಸಿನ ಸರಕಾರಿ ಸಂಸ್ಕೃತ ಶಾಲೆಯು ಸ್ಥಾಪನೆಯಾಗಿ 150 ವರ್ಷಗಳಾದುವು ಆದರ ಓರ್ವ ಜೋತಿಷ್ಯ ಪಂಡಿತರು ತಮ್ಮ ಶಾಲೆಯ ಒಂದು ಜಾತಕ ತಯಾರಿಸಿರುವರು—ಜಗತ್ತಿನಲ್ಲಿ ಇದು ಪ್ರಥಮ ದಾಖಲೆ. ಅದೇ ಪಂಡಿತರು ಸದ್ಯದಲ್ಲೇ ಕೊಂಗ್ರೆಸ್ ಸಂಸ್ಥೆಯ ಒಂದು ಜಾತಕವನ್ನು ತಯಾರಿಸುವರು

ಭಾರತ ಮಹಿಳೆಯರ ಸ್ಥಾನಮಾನಗಳೆತ್ತ?

ಅವರು ಕೇವಲ ಮಡದಿ ತಾಯಂದಿರೆ?

ಅವರೂ ಮಾನವ ಜೀವಿಗಳಾಗಿರುವರು

ಭಾರತೀಯರು ಮುಖ್ಯವಾಗಿ ಸ್ತ್ರೀಯರನ್ನು ಮಡದಿ, ತಾಯಿಂದಿರೆಂಬ ಭಾವನೆಗಿಂತ ಹೆಚ್ಚಾಗಿ ಬೇರೇನನ್ನು ಎಣಿಸುವುದಿಲ್ಲ. ಹೆಚ್ಚಿನವರ ಅಭಿಪ್ರಾಯದಲ್ಲಿ ಓರ್ವ ಹೆಣ್ಣು ಮಗು ಬೆಳೆದೊಡನೆ ಅದೊಂದು ಹೆಂಗುಸಾಯಿತೆಂದೂ, ನಂತರ ಕೂಡಲೇ ಅವಳು ತನ್ನ ಹೆಂಡತಿ ಮತ್ತು ತಾಯಿಯ ಪಾತ್ರವಹಿಸಲು ಸಿದ್ಧಳಾದಳೆಂದಿದೆ.

ಬೇಗನೇ ಮಡದಿಯಾಗಿ ಗೃಹಿಣಿಯಾಗದ ಹುಡುಗಿಯಲ್ಲಿ ಸ್ತ್ರೀಯತ್ವವಿಲ್ಲವೆಂದೇ ನಮ್ಮಲ್ಲಿ ಹೆಚ್ಚಿನವರ ವಿಚಾರ. ಅದೇ ರೀತಿ ಮಡದಿಯಾದೊಡನೆ ಮಗುವನ್ನು ಹೊಂದದವಳ ಮೇಲೆ ಪ್ರೀತಿ ಆದರಗಳು ಕಡಿಮೆ ಮಾಡಲ್ಪಡುವುದೂ ಒಂದು ಕ್ರೂರ ವಿಧಿ ಸಾಂಪ್ರದಾಯವೇ ಆಗಿದೆ.

ಸಾಮಾನ್ಯ ಭಾರತೀಯನು ಶ್ರೇಷ್ಠವಾದ ನಾಟ್ಯಕಲಾಪ್ರಿಯನಾಗಿರುತ್ತಾನೆ. ಆದರೆ ಅವನು ತನ್ನ ಮಡದಿಯಲ್ಲಿ ಆ ಕಲಾ ಲಕ್ಷಣಗಳ ಕುರುಹನ್ನೂ, ಅವರ ಹಾವ ಭಾವ ಭಂಗಿಗಳನ್ನೂ ಕಾಣಲು ಸಿದ್ಧನಿಲ್ಲ. ಅವನು ಯಾವಾಗಲೂ ಸ್ತ್ರೀಯಾಕರ್ಷಣದಿಂದ ದೂರವಿರಲು ಪ್ರಯತ್ನಮಾಡುತ್ತಾನೆ.

ಇದಕ್ಕೆ ಒಂದೇ ಒಂದು ಕಾರಣವೆಂದರೆ ಭಾರತೀಯರಲ್ಲಿ ಸ್ತ್ರೀಯರು ಮಡದಿ ಮಾತೆಗಳು ಮಾತ್ರವೆಂಬ ಭಾವನಾಚಿತ್ರದ ಪರಿಣಾಮವಾಗಿದೆ.

ಇದರ ಸತ್ಯತ್ವವನ್ನು ಕಂಡುಹಿಡಿಯಬೇಕಾದರೆ ನಮ್ಮ ಪುರುಷರು ಸ್ತ್ರೀಯರ ವಿಷಯಕವಾದ ಚರ್ಚೆಬಂದಾಗ ತೋರಿಸುವ ಮಾನಸಿಕ ಪ್ರತಿಕ್ರಿಯೆಯನ್ನು ಸ್ವಲ್ಪ ಅಭ್ಯಾಸಿಸಬೇಕು. ಉದಾಹರಣೆಗಾಗಿ ಶಿಕ್ಷಣದ ಪ್ರಶ್ನೆಯನ್ನು ತೆಗೆಯೋಣ. ಕೂಡಲೇ ನೂರಾರು ಪುರುಷ ಕಂಠಗಳು "ಉತ್ತಮ ಮಡದಿಯೂ ಮಾತೆಯೂ ಆಗಲು ತಕ್ಕದಾದ ಶಿಕ್ಷಣವು ಅವರಿಗೆ ಅವಶ್ಯ"ವೆಂದು ಘೋಷಿಸುತ್ತಾರೆ.

ವಸತಿಗೃಹ ಇಲ್ಲವೆ ಆರೋಗ್ಯ ಪ್ರಶ್ನೆ ಎತ್ತಿದರೆ ಉತ್ತರವನ್ನು ಸ್ತ್ರೀ ಶ್ರೇಯಸ್ಸಿನ ದೃಷ್ಟಿಯಿಂದ ವಿವೇಚಿಸಿದಾಗ ಮೇಲ್ಕಂಡ ವಿಷಯಗಳು ಸ್ತ್ರೀಯರನ್ನು "ಉತ್ತಮ ಮಡದಿಯರೂ ಮಾತೆಯರೂ ಆಗುವಂತೆ ಅವುಗಳನ್ನು ನಿರ್ಮಿಸಬೇಕು, ಇಲ್ಲವೆ ಅವುಗಳಲ್ಲಿ ಸುಧಾರಣೆಗಳಾಗಬೇಕು" ಎನ್ನುವರು.

ಅದೇ ಸಾಮಾಜಿಕ ಸಮಸ್ಯೆಗಳ ಕುರಿತು ವಿವಾದಗಳಿದ್ದಾಗ ಈ ಮಡದಿ ಮಾತೆ ತತ್ವವನ್ನೇ ಒತ್ತಿಹೇಳುವುದು ಗಮನಕ್ಕೆ ಬರುತ್ತದೆ. ಹಾಗೆಯೇ ಮಡದಿ ಧರ್ಮಗಳ ಕುರಿತು ವಿಚಾರಿಸುವಾಗಲೂ ಅದೇ ಧಾಟಿಯು ಕೇಳಿಬರುತ್ತದೆ.

ಮನೆ ಸಮಾಜದಲ್ಲಿ ಸ್ತ್ರೀ

ವಿಚಿತ್ರವೆಂದರೆ ಈ ಮಡದಿ ಮಾತೆ ತತ್ವವನ್ನು ಭಾರತ ಸ್ತ್ರೀಯರೇ ಒಪ್ಪಿಕೊಳ್ಳುತ್ತ ಬಂದಿದ್ದು ಆ ಚಿತ್ರವನ್ನು ಸಂಪೂರ್ಣ ಮಾಡುತ್ತಿರುವುದು. ಇದರ ಹೊರಗೆ ತನಗೆ ಸಂಬಂಧಿಸಿದ ಬೇರೊಂದು ವಿಷಯವಿದೆ ಎಂದು ಅವರು ತಾತ್ವಿಕವಾಗಿ ಕೂಡ ಯೋಚಿಸದಂತಾಗಿದೆ. ಆಟಪಾಟದ ಬಾಲ್ಯಕಳೆದು, ತಾರುಣ್ಯ ಬಂದ ಕೂಡಲೇ ಅವರು ಜೀವನದ ಉನ್ನತ ಸಾಹಸಕ್ಕೆ ಅವರು ಸಾಗಿ ಹೋಗುವರು. ನಂತರ ಕೊನೆಯ ತನಕ ಒಳ್ಳೆಯ ಇಲ್ಲವೆ ಕೆಟ್ಟ ಅಥವಾ ಅಲಕ್ಷಿಸಲ್ಪಟ್ಟ ಮಡದಿ, ತಾಯಿಯಾಗಿ ಬಾಳುವಳು.

ಆದರೆ ಪ್ರಕೃತಿಯು ಇಂತಹ ವಿಪರೀತ ಸರಳ ತತ್ವವನ್ನು ಲಕ್ಷಿಸುವುದಿಲ್ಲ. ಇಲ್ಲವೆ ಪುರುಷ ನಿರ್ಮಿತ ಇಂತಹ ಕೃತಕ ರೂಢಿ ಸಾಂಪ್ರದಾಯಗಳು ಸ್ತ್ರೀಯರ ಸಹಜವಾದ ಭಾವನೆ, ಅನುರಾಗಗಳನ್ನು ನಿರಂತರವಾಗಿ ಹತ್ತಿಕ್ಕಲು ಸಮರ್ಥವಾಗಲಾರವು. ಇಂದಿನ ಭಾರತೀಯ ಸಮಾಜದಲ್ಲಿ ಈ ಪ್ರಕೃತಿ ತತ್ವದ ಸತ್ಯಾಂಶವು ಸ್ಪಷ್ಟವಾಗಿ ಕಾಣುತ್ತಿದೆ.

ಸ್ತ್ರೀಯರನ್ನು ಈ ಮಡದಿ ಮಾತೆ ಚಿತ್ರದ ಚೌಕಟ್ಟಿನಲ್ಲಿ ಇರಿಸಿದವರು ಅವರು ಈ ಕರ್ತವ್ಯವನ್ನು ಅದೆಷ್ಟು ಪರಿಪೂರ್ಣತೆಯಿಂದ ಪಾಲಿಸಿಕೊಂಡು ಬಂದಿರುವರೆಂದು ಅರಿತುಕೊಂಡಂತೆಯೂ ತೋರುವುದಿಲ್ಲ ಯಾಕೆ?

ತಮ್ಮ ತನುಮನಗಳನ್ನು ಗೃಹಕೃತ್ಯಕ್ಕಾಗಿಯೂ, ಅಡಿಗೆಗೂ, ಒಗೆತಕ್ಕೂ, ಮಕ್ಕಳನ್ನು ಹೆರುವುದಕ್ಕೂ, ಪಾಲನೆಗೂ ಸವೆಸಿದ ಸ್ತ್ರೀಯರ ಮೇಲೆ ಅದೆಷ್ಟು ಪುರುಷರು ಅವರ ಈ ಸೇವಾತತ್ಪರತೆಯನ್ನು ಈಗಲೂ ಅಲಕ್ಷ್ಯದಿಂದ ಕಾಣುತ್ತಿಲ್ಲ? ಅವಳ ಮೌಲ್ಯವು ಇನ್ನೂ ಅವನಿಗೆ ಸರಿಯಾಗಿ ತಿಳಿಯದೆ ಇರಲಿಕ್ಕಾದರೂ ಕಾರಣವೇನಿರಬಹುದು?

(ಅಪೂರ್ಣ)

ಹಿಂಸುದ್ದಿ ಸಂಗ್ರಹ

ಕರಾಚಿಯ ಓರ್ವ ಗೃಹಸ್ಥನು ಎರಡು ಮದುವೆ ಮಾಡಿಕೊಂಡಿದ್ದು 'ಇರ್ವ ಪತ್ನಿಯರನ್ನೂ ಮನೆಯಲ್ಲಿಟ್ಟುಕೊಂಡಿದ್ದಾನೆ. ಅವನಿಗೆ 'ಬುದ್ಧಿ ಕಲಿಸಲು' ಈಗ ವಿವಾಹ ವಯಸ್ಕಳಾದ ಅವನ ಮಗಳು ತನಗೆ ಎರಡು ಗಂಡಂದಿರನ್ನು ಒಂದೇ ಸಲ ಲಗ್ನ ಮಾಡಿಸಬೇಕೆಂದು ಹಟತೊಟ್ಟಿರುವಳಂತೆ. "ನಿಮಗೆರಡು ಪತ್ನಿಯರಿದ್ದರೆ ನನಗೇಕೆ ದ್ವಿಪತಿಯರಿರಬಾರದು!" ಎಂದವಳ ಪ್ರಶ್ನೆಗೆ ತಂದೆ ಮೂಕನಾದನಂತೆ.

★

ಮಂಡರ್ ಪುರಾ ಸಂಸ್ಥಾನದ ಮಹಾರಾಣಿಯವರು ಪುರಿಯ ಜಗನ್ನಾಥ ದೇವಸ್ಥಾನಕ್ಕೆ ಯಾತ್ರೆ ಹೊರಟಿದ್ದಾರೆ—ಕಾಲುನಡೆಯಿಂದ ಪಯಣ. 150 ಸಂಗಾತಿಗಳ ಪರಿವಾರವನ್ನು ಕಟ್ಟಿಕೊಂಡು ರಾಣಿಯವರು ಕಳೆದ 9 ತಿಂಗಳಿಂದ ಪಾದಚಾರಿಗಳಾಗಿರುವರು. ದಾರಿಯಲ್ಲಿ ಅಹಿಂಸಾ ಧರ್ಮದ ಮಹತ್ವವನ್ನು ಅವರು ಉಪದೇಶಿಸುತ್ತಲಿರುವುದು ಇನ್ನೊಂದು ವೈಶಿಷ್ಟ್ಯ.

★

ಸಂಯುಕ್ತ ಪ್ರಾಂತ್ಯದ ಜಾಲಿನ್ ಎಂಬ ತಾಲೂಕು ತಹಶೀಲ್ದಾರನ ಬಳಿ ಪಂಡಿತ್ ನೆಹರೂರವರ ಪ್ರೈವೇಟ್ ಸೆಕ್ರೆಟರಿಯವರೆಂಬ 40 ಗಜ ಒಟ ಅರ್ಜಿಯೊಂದು ಬಂತು. ಡಾ. ಶಿವಶಂಕರಲಾಲರೆಂದು ಆ 'ನೆಹರು ಸೆಕ್ರೆಟರಿ'ಗಳ ನಾಮಧೇಯ. ಸಂದೇಹದಿಂದ ಆ ವ್ಯಕ್ತಿಯನ್ನು ಕೈದು ಮಾಡಿ ವಿಚಾರಿಸಲು ಆತ ಹರ್ದೋಯಿಯ ಶಿವಶಂಕರ್ ಎಂಬವ—ಒಂದು ಮದುವೆ ದಿಬ್ಬಣ ಕೂಟದೊಂದಿಗೆ ಜಾಲಿನಿಗೆ ಬಂದಿದ್ದನೆಂದು ತಿಳಿಯಿತು.

★

ನೀರಲ್ಲಿ ಮುಳುಗಿ ಸತ್ತ ಪುರುಷನ ದೇಹ ಮೇಲ್ಮುಖವಾಗಿ ತೇಲುತ್ತದೆ. ಸ್ತ್ರೀಯಳದು ಕೆಳಮುಖವಾಗಿ ತೇಲುವುದು.

★

ಭೂಮಿಯೊಳಗಿನ ಕೆಲವೊಂದು ಖನಿಜ ವಸ್ತುಗಳು, ನೀರು ಮತ್ತು ವಾಯುವಿನಿಂದ ಪ್ರಕೃತಿಯು ಅಪಾರವಾದ ಸಸ್ಯ ವರ್ಗಕ್ಕೆ ಆಹಾರವನ್ನೊದಗಿಸುವುದು. ಅಮೇರಿಕದ ಕೆಲ ರಾಸಾಯನಿಕ ಶಾಸ್ತ್ರಜ್ಞರು "ಮಾನವ ವರ್ಗಕ್ಕೂ ಇದೇ ರೀತಿಯಲ್ಲಿ ಸುಲಭವೂ ಪುಷ್ಟಿಕರವೂ ಆದ ರಾಸಾಯನಿಕ ಆಹಾರವನ್ನು ಸಿದ್ಧಗೊಳಿಸಬಹುದು." ಎಂದು ತಿಳಿಸುತ್ತಾರೆ. ಕೆಲವು ವರ್ಷಗಳಲ್ಲಿ ಮಾನವಕೋಟಿಯ ಆಹಾರವು ಈ ತರದ್ದಾಗುವ ಸಂಭವವಿದೆ ಎಂದವರ ಅಭಿಪ್ರಾಯ.

★

ಕಳೆದ ವರ್ಷ ಅಮೇರಿಕವು ಶಿಕ್ಷಣಕ್ಕಾಗಿ ವೆಚ್ಚ ಮಾಡಿದ್ದಕಿಂತ ಆರು ಪಾಲಷ್ಟು ಮದ್ಯ ತಯಾರಿಗೆ ಖರ್ಚು ಮಾಡಿದೆಯಂತೆ!

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O P No 5/47

ವಾಸುದೇವ ಭಟ್ಟ ಕೂಡಾ ಅರ್ಜಿದಾರರು

ದಿವಂಗತ ಶ್ರೀಧರ ಭಟ್ಟರ ಸೊತ್ತಿನ ಕುರಿತು ವಾರಿಶ್ ಸರ್ಟಿಫಿಕೇಟು ಮೃತನ ಹೆಂಡ್ತಿ ಸುನಿತಗೆ ಕೊಡ್ಬೇಕಾಗಿ ಆತನ ತಂದೆಯು ಸಹೋದರರೂ ಆತನ ಹೆಂಡ್ತಿಯು ಕೂಡಾ ಮಾಡಿದ O P No 5/47ನೆ ಅರ್ಜಿಯು 1 8 '47ಕ್ಕೆ ತನಿಖೆಗೆ ಇಟ್ಟಿರುತ್ತದೆ. ಈ ಕುರಿತು ಆಕ್ಷೇಪವುಳ್ಳವರು ತಾ 1 3— 47ನೆ ಹಗಲು 11 ಗಂಟೆಗೆ ಕುದ್ದಾಗಿ ಅಗ್ಲಿ ವಕೀಲರ ಮುಖಾಂತ್ರವಾಗ್ಲಿ ಕೋರ್ಟ ಮುಂದೆ ಹಾಜರಾಗಿ ವ್ಯವಹರಿಸಬೇಕು. ಇದಕ್ಕೆ ತಪ್ಪಿದ್ರೆ ಕೋರ್ಟಿನವರು ಯುಕ್ತಕಂಡ ರೀತಿ ತೀರ್ಮಾನಿಸುವರು.

B Mangesh Rao,
Pleader for Petitioners

ಪುತ್ತೂರು 5 2 47

ರಿಯಾಯತಿ ಲಗ್ಗೇಜಿನಲ್ಲಿ ವ್ಯಾಪಾರಿ ಸಾಮಾನುಗಳ ನಿಷೇಧ

ಪಸೆಂಜರರ ಸೌಕರ್ಯಗಳ ಬಗ್ಗೆ ಒಂದು ಮಣ ಭಾರದ ಸಾಮಾನುಗಳನ್ನು ಫ್ರೀ ತೆಗೆದುಕೊಂಡುಹೋಗ ಬಹುದಾಗಿ ಮಾಡಿದ ರಿಯಾಯತಿ ಕಾರಣದಿಂದಾಗಿ ಪೆಸೆಂಜರರು ಅವರ ಸ್ವಂತ ಉಪಯೋಗದ ಸಾಮಾನುಗಳಲ್ಲದೆ ವ್ಯಾಪಾರಿ ಸಾಮಾನುಗಳನ್ನು ತಮ್ಮೊಡನೆ ಪ್ರಯಾಣ ಬೆಳೆಸುವ ಸ್ನೇಹಿತರ ಹೆಸರಿನಲ್ಲಿ ಈ ರಿಯಾಯತಿ ಮೂಲಕ ಧರ್ಮಾರ್ಥ ಸಾಗಿಸುವುದು ರೂಢಿಯಾಗಿದೆ

ಮೋಟರ್ ವಾಹನಗಳು ರೈಲ್ವೆಗಾಡಿಗಳಂತಾಗಿಲ್ಲ. ಅವುಗಳಲ್ಲಿ ನಿಯಮಿತ ಭಾರಕ್ಕಿಂತ ಹೆಚ್ಚಿನ ಸಾಮಾನುಗಳನ್ನು ಒಯ್ಯುವುದು ಮೋಟರ್ ವಾಹನಕ್ಕೂ ಮತ್ತು ಪೆಸೆಂಜರರಿಗೂ ಅಪಾಯವಾಗಿದೆ. ಕಾರಣ ಬಸ್ಸುಗಳಲ್ಲಿ ಒಯ್ಯುವ ಸಾಮಾನುಗಳನ್ನು ಪೆಸೆಂಜರರ ಅವಶ್ಯಕತೆ ಬಗ್ಗೆನೇ ಮಿತಗೊಳಿಸುವುದು ಅಗತ್ಯವಿದೆ

ವ್ಯಾಪಾರಿ ಸಾಮಾನುಗಳನ್ನು ಒಯ್ಯುವರೆ ವ್ಯಾಪಾರಿಗಳು ಶೆಡ್ಯೂಲ್ ಟೈಮಿಗೆ ಕೊಂಡೊಯ್ಯುವ "ಲಕ್ಷ್ಮಿ" ಯಾ "ಸಿ. ಪಿ. ಸಿ." ಲೋರಿ ಸರ್ವಿಸುಗಳ ಸೌಖರ್ಯವನ್ನು ಉಪಯೋಗಿಸಬೇಕಾಗಿ ಅಪೇಕ್ಷಿಸುತ್ತೇವೆ.

ವ್ಯಾಪಾರಿ ಸಾಮಾನುಗಳನ್ನು ಎಷ್ಟಕ್ಕೂ ಫ್ರೀ ಲಗ್ಗೇಜಿನ ಅಂಶದಲ್ಲಿ ಸೇರಿಸಿಕೊಳ್ಳಲಾಗುವುದಿಲ್ಲ. ಈ ಕುರಿತು ಮಾಹಿತಿಯನ್ನು ಬುಕ್ಕಿಂಗ್ ಕ್ಲಾರ್ಕರಿಂದ ಪಡೆಯಬಹುದು

JOINT MANAGERS,

The Combined Booking Agency, MANGALORE

The Joint Booking Office, KODIALBAIL

THE CANARA BANKING CORPORATION LTD

(Incorporated in British India with Limited Liability)

Estd: 1906.

Head Office: UDIPI, S. Kanara.

	Rs.
CAPITAL:	
Authorised	25,00,000
Issued, subscribed & called up	16,00,000
Paid up	15,97,145
RESERVES	5,25,000
DEPOSITS	2,07,47,928
TOTAL RESOURCES	3,00,01,186

With a net work of branches & Agencies in all principal cities of India, we shall be able to render efficient collection services.

BANKING BUSINESS OF EVERY DESCRIPTION TRANSACTED.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE BOMBAY LIFE ASSURANCE COMPANY LIMITED

(ESTD. 1910)

Peace and Security........

The Mightiest War to secure freedom for the oppressed Nations of Europe has ended. With many attempts at securing the four Freedoms, we do not seem to be anywhere near it. We, in our humble way, have been contributing to this Individual Material Freedom, in War as well as in Peace, by extending Insurance Service to all who seek it.

1945 completed Business { **Company's: Over $2\frac{3}{4}$ Crores** / **Ours: About 50 lakhs.**

Kochikar Brothers, Limited.

(ESTD. 1908)

Chief Agents for South India and Special agents for Bombay City & Suburbs.

"Bombay Life Building," Gandhi Nagar, UDIPI.

With Offices at:—

ADRAS, BANGALORE, TRIVANDRUM, MANGALORE, MADURA, CALICUT, BOMBAY, & UDIPI.

And Agencies all over South India.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs.

Depot: Maharata Galli, Hubli.

Bhuvanendra Products Ltd.

Factory & Head Office

KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಖು 7—3—1947 [ಸಂಚಿಕೆ 10]

ವಾರಾಂತ್ಯ ವರದಿ ವಿಮರ್ಶೆ

ಪಂಜಾಬ್ ಒಪ್ಪಂದ

ಐದು ನದಿಗಳ ದೇಶ ಪಂಜಾಬು ಭಾವಿ ಪಾಕಿಸ್ಥಾನದ ರಾಜಧಾನಿ ಪ್ರಾಂತ್ಯ. ಅಲ್ಲಿನ ಶಾಸನ ಸಭೆಯಲ್ಲಿ ಲೀಗಿನದು ಅತಿದೊಡ್ಡ ಪಕ್ಷ. ಎರಡನೇ ದೊಡ್ಡ ಪಕ್ಷ ಕಾಂಗ್ರೆಸು. ಆದರೆ ಮಂತ್ರಿಮಂಡಲದ ಲಾಭ ಕೇವಲ ಹದಿನೆರಡು ಸದಸ್ಯರಿರುವ ಯೂನಿಯನಿಸ್ಟ್ ಪಕ್ಷಕ್ಕೆ. ಅವರ ಮುಖಂಡ 40 ವರ್ಷದ ಜಮೀನ್ದಾರ್ ಕಿಜೀರ್ ಹಯಾತ್ ಖಾನ್ ರ ಸ್ವಂತ ಧ್ಯೇಯವೂ ಪಾಕಿಸ್ಥಾನವೆ. ಆದರೆ ಹೊರಗಿನ ಜಿನ್ನರುಗಳು ಪಂಜಾಬಿನ ರಾಜಕೀಯದಲ್ಲಿ ಕೈಯಾಡಿಸಿದರೆ ಅವರಿಗ [illegible] ಅಂತೇ ಅವರು ಲೀಗ್ [illegible] ನಿಜವಾಗಿ ಕಿಜೀರರು ಲೀಗ [illegible] ತಿಗಳು ಆದರೆ [illegible] ಹಿತೈಷಿಗಳು ಆಗಿರುವವರು. ಆದುದರಿಂದ ಅತ್ತ ಲೀಗಿನ ಜಾತೀಯತೆಯನ್ನು ಬಿಟ್ಟು ಕಾಂಗ್ರೆಸಿನ ರಾಷ್ಟ್ರೀಯತೆಯನ್ನೂ ಬಿಟ್ಟು ಅವರು ತಮ್ಮ ಪ್ರಾರಂಭದಿಂದ ಬ್ರಿಟಿಷ್ ಶಕ್ತಿಯ ವಿಧೇಯತೆಯನ್ನೇ [illegible] ದರು.

ಅವರ ವರ್ತನೆ [illegible] ತಮ್ಮ ತತ್ವಗಳನ್ನು ಬದಿಗಿಟ್ಟು [illegible] ನಡೆಯುವ ಪಂಜಾಬ್ ಕಾಂಗ್ರೆಸ [illegible] ನೆಗಳನ್ನು ಸಹಿಸದೆ ಹಿಂದೂ ಮಹಾಸಭಾ [illegible] ಸಿಗಳು [illegible] ಸ್ವಯಂಸೇವಕ ಸಂಘವನ್ನು ಸ್ಥಾಪಿಸಿ ಚಟುವಟಿಕೆ ನಡೆಸಲಾರಂಭಿಸಿದ [illegible] ಕಾಯುತ್ತಿದ್ದ ಲೀಗಿನವರ ಕಿಜೀರ್-ಕಾಂಗ್ರೆಸ್ ಸಂಯುಕ್ತ ಸರಕಾರಕ್ಕೆ [illegible] ಸಲು ಇದೇ ಸಮಯವೆಂದು ತಿಳಕೊಂಡು ತಮ್ಮ ಮುಸ್ಲಿಂ ನೇಶನಲ್ ಗಾರ್ಡ್ಸ್ ಎಂಬ ದಳವನ್ನು ತರಬೇತಿಗೊಳಿಸಲಾರಂಭಿಸಿದರು.

ಕಲಹ ಕಾರಣ

ಒಂದು ದಿನ ಈ ಹಿಂದೂ ಮತ್ತು ಮುಸ್ಲಿಂ ದಳಗಳ ಪ್ರದರ್ಶನವೆಂದು ನಿಶ್ಚಯಿಸಲಾಯಿತು. ಎರಡೂ ಜಾತೀಯ ಸಂಸ್ಥೆಗಳೊಳಗೆ ಜಗಳ ಘರ್ಷಣವಾಗುವುದು ಶತಸಿದ್ಧ. ಶಾಂತಿ ಹೆಸರಲ್ಲಿ ಪಂಜಾಬ್ ಸರಕಾರ [illegible] ದರ ಮೇಲೆ ನಿರ್ಬಂಧ ಹಾಕಿತು.

ಇದೇ ಸಮಯಕ್ಕೆ ಲೀಗು ಪ್ರಜಾಪ್ರಭುತ್ವದ ಮತ್ತು ನಾಗರೀಕ ಹಕ್ಕು ಬಾಧ್ಯತೆಗಳ ಹೆಸರಲ್ಲಿ ಪಂಜಾಬ್ ಸರಕಾರವನ್ನು ದೂರಹತ್ತಿತು. ಕರಾಚಿಯಲ್ಲಿ ಆರೋಗ್ಯ ಹವೆಗಾಗಿ ತಂಗಿದ್ದ ಮಿ। ಜಿನ್ನರೊಡನೆ ಗುಪ್ತ ಸಮಾಲೋಚನೆ ನಡೆಯಿತು. ಇತ್ತ ದಿಲ್ಲಿಯಲ್ಲಿ ಲೀಗ್ ಸಹಾನುಭೂತಿ ವ್ಯಾಸರಾಯ್ ವೇವೆಲ್ಲರೂ ಲೀಗಿನ ಪರವಾಗಿ ಗುಪ್ತ ಸಲಹೆ ಕೊಟ್ಟು ಲೀಗಿನ ಮೇಲಿನ ನಿರ್ಬಂಧ ತೆಗೆಯಲು ಒತ್ತಾಯಪಡಿಸಿದರಂತೆ. ರಾಜಕೀಯ ಸಂಸ್ಥೆಯಾದ ಲೀಗನ್ನು ಅರಾಜಕೀಯ ಸಸ್ಥೆಯಾದ ಆರ್ [illegible] ಸಮಾನತೆಯಲ್ಲಿ [illegible] ವುದು ಎಲ್ಲಿಯ ನ್ಯಾಯ ಎಂದು ಲೀಗು [illegible]

ಲೀಗ್ ಪ್ರಾಂತ್ಯಗಳಲ್ಲಿ

ಈ ಸಂದರ್ಭದಲ್ಲಿ ಪಂಜಾಬ್ ಸರಕಾರದ ವರ್ತನೆಯನ್ನು ನಾಗರೀಕ ಹಕ್ಕು ಬಾಧ್ಯತೆ ಪ್ರಜಾಪ್ರಭುತ್ವದ ಹೆಸರಲ್ಲಿ [illegible] ಲೀಗಿನವರು ತಮ್ಮ [illegible] ಧ [illegible] ಬಂಗಾಲದಲ್ಲಿ [illegible] ನಡೆ [illegible] ಸದಾದರು. ಅಲ್ಲಿನ ಮಂತ್ರಿಗಳು ತಮ್ಮ ಅಧಿಕಾರ [illegible] ಕೊಂಡು ಬಹಿರಂಗವಾಗಿ ಅಲ್ಪ ಸಂಖ್ಯಾಕರ ಮೇಲೆ ದಬ್ಬಾಳಿಕೆ ಮಾಡುತ್ತಿರುವರು ಮಾತ್ರವಲ್ಲ ಜಗತ್ತಿನ ಎಲಾ ರಾಜಕೀಯ್ಯ ನ್ಯಾಯನೀತಿಗಳ ತತ್ವಗಳನ್ನು ಬದಿಗಿರಿಸಿ ಆಳುತ್ತಿರುವರು.

ಕಿಜೀರರ ವರ್ತನೆ

ಬ್ರಿಟಿಷ ಸರಕಾರದವರು ಪಾಕಿಸ್ತಾನಕ್ಕೆ ಒಲವು ತೋರಿಸಹತ್ತಿದ್ದಾಗಿನಿಂದ ರಾಷ್ಟ್ರೀಯ ಪಕ್ಷದೊಳಗಿದ್ದ ಮುಸಲ್ಮಾನರು ಕೂಡ ಲೀಗನ್ನು ಸೇರಹತ್ತಿದರು. ಅಬ್ದುಲ್ ಕಲಾಮ್ ಆಜಾದ್, ಸಿಕಂದರ್‌ಹಯಾತ್ ಮೊದಲಾದವರು ಕಾಂಗ್ರೆಸ್ಸನ್ನು ತ್ಯಜಿಸಿ ತಮ್ಮ ಜಾತೀಯ ಸಂಸ್ಥೆಯನ್ನು ಸೇರಿದರು. ಅಧಿಕಾರಕ್ಕಾಗಿ ಮಾರ ಮನಸ್ಸು ಸಳೆಯದಿರುವುದಿಲ್ಲ?

ಈಗ ಕಿಜೀರ್ ಹಯಾತ್ ಖಾನರಾದರೋ ಲೀಗ್ ಮಂತ್ರಿಮಂಡಲ ರಚಿಸಲು ಒಂದು ಸಂದರ್ಭ ಕೊಡುವುದಕ್ಕಾಗಿ ತನ್ನ ಪಕ್ಷದವರನ್ನು ವಿಚಾರಿಸದೆ, ತನ್ನೊಡನೆ ತನ್ನ ತತ್ವಗಳನ್ನಾದರೂ ಬದಿಗಿರಿಸಿ ಸರಕಾರಿಸಿದ [illegible] ರಾಜಿನಾಮೆ ಕೊಟ್ಟರು.

ಪಂಜಾಬಿನಲ್ಲಿ [illegible] ಸಂಸ್ಥೆಯೊಂದು ಆಡಳಿತ ಸೂತ್ರ ವಹಿಸುವ ಕಾಲ ಬಂದೊದಗಿದೆ. ತಮ್ಮ ಧರ್ಮದ ನ್ಯಾಯ ನೀತಿಗನುಸಾರವಾಗಿ ಆಳುವ ನಿರ್ಧಾರ ತೊಟ್ಟ ಲೀಗು ಇದುವರೆಗೆ ಅಲ್ಪ ಸಂಖ್ಯಾಕರಿಗೆ ಯಾವದೊಂದು ಭರವಸೆಯುಂಟಾಗುವ ರೀತಿಯಲ್ಲಿ ಆಡಳಿತವನ್ನು ನಿರ್ವಹಿಸಿದ್ದು ಸಿಂಧ ಮತ್ತು ಬಂಗಾಲದ ನಿದರ್ಶನಗಳಿಂದ ತೋರಿಬರುವುದಿಲ್ಲ.

ಸಿಕ್ಕರ ಗತಿ ಏನು?

ಪಂಜಾಬು ಸದ್ಯದಲ್ಲೇ ಇನ್ನೊಂದು ಪ್ಯಾಲೆಸ್ಟೀನ್ ಆಗುವುದು. ಆದು ಮುಸಲ್ಮಾನರ ಮನೆ ನಾಡಂತೆ ಅಕಾಲಿಪಂಥವೂ ಹಾಗೇ ಗರ್ಜಿಸತೊಡಗಿತು. ಈಗ ಲೀಗಿನ ಪಕ್ಷಪಾತದ ಆಡಳಿತಕ್ಕೆ ತುತ್ತಾಗುವ ಪ್ರಸಂಗ ಪಂಜಾಬಿನ ಸಿಕ್ ಮತ್ತು ಹಿಂದುಗಳಿಗೆ ಬಂದಿದೆ. ಲೀಗು ವಿರೋಧಿಗಳು ಆಗಲೆ ಪಾಕಿಸ್ತಾನ ವಿರೋಧ ದಿನವನ್ನಾಚರಿಸಿದುದು [illegible] ಕೋಮು ಗಲಭೆಯುಂಟಾಗಿದೆ.

[illegible] ಸ್ವತಂತ್ರ ಮನೋವೃತ್ತಿಯವರು. ಅಲ್ಲಿ ಜಗಳವಾರಂಭವಾದರೆ ಸುಲಭದಲ್ಲಿ ನಿಲ್ಲುವ ಹಾಗಿಲ್ಲ. ಘೋರ ಪರಿಣಾಮವು ಇದರಿಂದುಂಟಾಗುವುದರಲ್ಲಿ ಸಂದೇಹವಿಲ್ಲ. ಬಿಟ್ಟುಹೋಗುವ ಬ್ರಿಟಿಷರಿಗೂ ಇದು ಸುಸಂಧಿ. ಜಾತೀಯ [illegible] ಭೇದಾಭೇದಗಳನ್ನು [illegible] ವಿ [illegible] ವಸಾಹತು. ಅವರಿಗೆ ಸಂದ ಭರ್ತಿ ದಗಿಸಿದಂತಾಗುವದು.

ಗಡಿನಾಡಿನ ಚಳವಳ

[illegible] ಮುಸಲ್ಮಾನ್ ಬಹುಸಂಖ್ಯಾಕ ಪ್ರಾಂತ್ಯಗಳ [illegible] ತಮ್ಮ ವಶಪಡಿಸಿಕೊಳ್ಳುವ ಹವಣಿಕೆಯಲ್ಲಿ ಲೀಗು [illegible] ರ್ಧರಿತವಾಗಿದೆಂಬುದಕ್ಕೆ ಗಡಿನಾಡಿನಲ್ಲಿ ನಡೆಯುವ ಚಳವಳವು ನಿದರ್ಶನ. ಆದರೆ ಅಲ್ಲಿ ಖಾನ್ ಬಂಧುಗಳಿರುವ ತನಕ ಲೀಗಿನ ಕೈಸಾಗಲಾರದು.

ಜೊಲಿ, ಸುಲಿಗೆ, ಮರೋಡೆಗಳನ್ನು ಮಾಡುವುದಕ್ಕೆ ಸ್ವತಂತ್ರವಿರಬೇಕೆಂಬುದು ನಾಗರೀಕ ಹಕ್ಕುಬಾಧ್ಯತೆಯ ಅರ್ಥದಲ್ಲಿ ಬರುವುದಿಲ್ಲ ಎಂದವರು ಚಳವಳದ ಹೆಸರಲ್ಲಿ ಪುಂಡಾಟಿಕೆ ನಡೆಸುವವರಿಗೆ ಎಚ್ಚರಿಕೆ ಕೊಟ್ಟಿದ್ದಾರೆ.

ಬಿಹಾರ್ ನಿರಾಶ್ರಿತರಿಗೆ ಸಿಂಧದಲ್ಲೂ ಬಂಗಾಲದಲ್ಲೂ ವಸತಿ ಏರ್ಪಡಿಸಲು ಅಲ್ಲಿನ ಲೀಗ್ ಸರಕಾರಗಳು ಪ್ರಯತ್ನಿಸುತ್ತಿವೆ. ಪಾಕಿಸ್ತಾನವನ್ನು ಅದಷ್ಟು ಭದ್ರ ಮಾಡಿಕೊಳ್ಳುವುದು ಅವರ ಉದ್ದೇಶ.

~~ಅಲ್ಪಸಂಖ್ಯಾಕರ ಹಿತಗಳನ್ನು ಆಲಕ್ಷಿಸಿ~~ ಬ್ರಿಟಿಷರು ಅಧಿಕಾರವನ್ನು ಜಾತೀಯ ಸಂಸ್ಥೆಗಳಿಗೆ ಬಿಟ್ಟುಹೋಗುಂತ್ತಾರೆಬುದು ಲೀಗಿನ ತಪ್ಪು ಅಭಿಪ್ರಾಯವಾಗಿದೆ. ಕಾಂಗ್ರೆಸಿಗಾಗಲಿ, ಲೀಗಿಗಾಗಲಿ ಅಧಿಕಾರ ಬಿಟ್ಟುಕೊಡಬೇಕಾದರೆ ಅಧಿಕಾರ ಸ್ವೀಕರಿಸುವವರು ತಮ್ಮ ಪ್ರದೇಶದ ಎಲ್ಲಾ ಕೋಮುಗಳ ಪ್ರಾತಿನಿಧ್ಯವುಳ್ಳ ಮಂಡಳವೊಂದರಿಂದ ಸಮ್ಮತಿಸಲ್ಪಟ್ಟ ಘಟನೆಯನ್ನು ತಯಾರಿಸಬೇಕು. ಜಾತೀಯ ಭಾವನೆಗಳನ್ನು ಉದ್ರೇಕಿಸುವ ಲೀಗಿಗೆ ಈ ದೃಷ್ಟಿಯಿಂದ ನಿರಾಶೆಯಾಗುವುದು ಖಂಡಿತ.

THE
UNITED INDIA LIFE ASSURANCE CO., LTD.
ESTD 1906 — H O MADRAS
SECURITY
Greater than any conferred by legislative enactments is guaranteed
by
UNITED INDIA'S TRUST ARRANGEMENT
with
THE OFFICIAL TRUSTEE TO THE GOVRNMENT OF MADRAS
For Particulars apply to —
INSPECTORATE OFFICE
K. S. Rao Road, Mangalore.

ಅಂಧ ರಾಜತ್ವದಿಂದ ಪ್ರಜಾತತ್ವಕ್ಕೆ

ಗುಲಾಮಿ ಜಪಾನರು ಸ್ವತಂತ್ರರಾಗುತ್ತಿರುವರು

ಅಮೇರಿಕನ್ ಆಡಳಿತ ಸತ್ಪರಿಣಾಮ

ಜಗತ್ತಿನ ಒಂದು ಮೂಲೆಯಲ್ಲಿ ಕಂತದ ಸೂರ್ಯನ ಸಾಮ್ರಾಜ್ಯದ ಚಕ್ರಾಧಿಪತ್ಯದ ಇಂಗ್ಲೆಂಡ್ ದ್ವೀಪ. ಅಧರ ಸಮವಿರೋಧ ದಿಕ್ಕಿನಲ್ಲಿ, ಸೂರ್ಯನುದಯಿಸುವ ಜಪಾನ್ ದ್ವೀಪ. ಎರಡೂ ಸೋಳ್ಳೆಯಂತ ಸಾಗರ ಮಧ್ಯ ಪ್ರದೇಶಗಳು, ಆದರೆ ಎರಡರ ಪ್ರಸ್ತುತದಲ್ಲೂ ಇತಿಹಾಸ ಅಚ್ಚರಿಯದೆನ್ನಬೇಕು.

ಇಂಗ್ಲೆಂಡು ಇಂದಿಗೆ ಸುಮಾರು ಐನೂರು ವರ್ಷಗಳಿಂದ ಪ್ರಪಂಚದ ರಾಜಕೀಯದಲ್ಲಿ ಪ್ರಭಾವಿತ ಚಟುವಟಿಕೆಯನ್ನು ನಿರ್ವಹಿಸಿದೆ. ಭೂಗೋಲದ ಐದನೇ ಒಂದಂಶ ನೆಲವೂ ನೂರರನೆ ಒಂದು ಭಾಗ ಸಾಗರಾಂಶವೂ ಅವರ ಶಕ್ತಿಯುಕ್ತ ಆಡಳಿತಕ್ಕೆ ಸೇರಿದ್ದುವು.

ಜಪಾನಿನದು ಕೃಷ್ಣಲೀಲೆ ಐವತ್ತು ವರ್ಷಗಳ ಕೆಳಗೆ ಬೆರಳುದ್ದದ ಜಪಾನು ಗೊಮಟಾಕೃತಿಯ ರಶ್ಯವನ್ನು ಸೋಲಿಸಿ ಜಗತ್ತಿನ ಆದರಕ್ಕೆ ಪಾತ್ರವಾಯಿತು ಆ ಮೇಲಂತೂ ಕೈಗಾರಿಕೆಯ ವಿಶ್ವ ಮರ್ಯಾದೆಯನ್ನೇ ಅರಿತುಕೊಂಡು ಶಕ್ತಿರಾಷ್ಟ್ರಗಳಲ್ಲಿ ಒಂದೆಂದು ಪರಿಗಣಿಸಲ್ಪಟ್ಟಿತು.

ಆದರೆ ಸಹವಾಸ ದೋಷದಿಂದ ಜಪಾನು ಕೆಟ್ಟಿತು. ಸರ್ವಾಧಿಕಾರಿಗಳ ದುರಂತ ಮಾರ್ಗವನ್ನು ಪುಟ್ಟ ಜಪಾನು ತುಳಿಯಿತು, ಎತ್ತಿಗೆ ಹೊಟ್ಟೆ ವಿಶಾಲವಿದೆಯೆಂದು ಕಪ್ಪೆ ಉದರ ಉಬ್ಬಿಸಿದರೆ ಒಡೆದೇ ಹೋಗುವಂತೆ ಜಪಾನಿನ ಹುಡುಗಾಟಿಕೆ ಜಪಾನರಿಗೆ ಕಷ್ಟ ತಂದೊಡ್ಡಿತು

ಪರಿವರ್ತನೆ

ಒಂದು ದೃಷ್ಟಿಯಿಂದ ಜಪಾನಿನ ಸೋಲು ಜಪಾನಿಯರಿಗೂ ಜಗತ್ತಿಗೂ ಶ್ರೇಯಸ್ಕರವಾಯಿತೆನ್ನಬೇಕು. ಇದೀಗ ನಿರಂಕುಶತ್ವ ದಾಸತ್ವಕ್ಕೊಳಗಾದೊಂದು ಜನಾಂಗದ ಜನತೆ ಸರ್ವತೋಮುಖ ಸ್ವಾತಂತ್ರ್ಯವನ್ನು ಹೊಂದಿ ಜಗತ್ತಿನ ಇತರ ಪ್ರಜಾಪ್ರಭುತ್ವ ಶಕ್ತಿಗಳೊಂದಿಗೆ ಸೇರಲು ಸಿದ್ಧವಾಗುತ್ತಿದೆ.

ಯುದ್ಧಾನಂತರದ ಜಪಾನಿನ ಪರಿವರ್ತನೆ ಕೌತುಕಗೊಳಿಸುವಂತಹುದು ಸಾವಿರಿರಡು ಸಾವಿರ ವರ್ಷಗಳ ಅದರ ಇತಿಹಾಸದಲ್ಲೊಂದು ದಿನವಾದರೂ ಜಪಾನಿನ ರಾಜನಾಗಲಿ ಪ್ರಜೆಗಳಾಗಲಿ ಸ್ವತಂತ್ರತೆಯ ಸವಿಯನ್ನು ಕಂಡವರಲ್ಲ ಬಹು ಪ್ರಾಚೀನದಿಂದಲೂ ರಕ್ಕಸ ಮನೋವೃತ್ತಿಯ ಅಲ್ಲಿನ ಸೈನಿಕ ವರ್ಗವೊಂದು ಅಂದಿನಿಂದ ಇಂದಿನ ತನಕ ದೇಶದ ಆಡಳಿತದ ಮೇಲೆ ತನ್ನ ಕ್ರೂರ ಪ್ರಭಾವವನ್ನು ಒತ್ತಿಹಿಡಿದಿತ್ತು. ಸಾಮಾನ್ಯ ಜನತೆಯನ್ನು ನಿತ್ಯ ದಾಸತ್ವದ ಅಂಜಿಕೆಯಲ್ಲಿರಿಸಿ, ಅವರಲ್ಲಿ ರಾಜರು ದೈವ ಸಂಭೂತರೆಂಬ ಭಾವನೆಯನ್ನು ಹುಟ್ಟಿಸಿದರು. ರಾಜರನ್ನು ಕೈಗೊಂಬೆಗಳಂತೆ ಅವರು ಕುಣಿಸಿ ತಮ್ಮ ಜನಾಂಗವನ್ನು ಕೇಡಿಗೆ ಗುರಿಮಾಡಿದರು.

ಈಗ ಜಪಾನು ಪ್ರಜಾಪ್ರಭುತ್ವದ ಕಡೆ ತಿರುಗಿದೆ. ಅಮೇರಿಕದ ಮೆಕ್ ಆರ್ಥರರ ನಿರ್ದೇಶದಲ್ಲಿ ಜಪಾನಿನ ಅಂತರೀಕ ಆಡಳಿತದಲ್ಲಿ ಜನತಾ ಪ್ರತಿನಿಧಿಗಳಿಗೆ ಹಕ್ಕಿನ ಅಧಿಕಾರ ದೊರೆಯುವಂತಾಗಿದೆ. ಇದುತನಕ ಬಹಳ ಮುಂದರಿದಂತೆ ತೋರುತಿದ್ದ ಜಪಾನಿ ಮಹಿಳೆಯರಿಗೆ ಆ ದೇಶದಲ್ಲಿ ಮತದಾನದ ಅಧಿಕಾರವಿರಲಿಲ್ಲ. ಮೊನ್ನೆ ನಡೆದ ಚುನಾವಣೆಯಲ್ಲಿ 13 ಮಿಲಿಯ ಜಪಾನಿ ಮಹಿಳೆಯರು ವೋಟು ಕೊಟ್ಟರು. ಅವರ 40 ಪ್ರತಿನಿಧಿಗಳು ಇಂದು ಶಾಸನ ಸಭೆಗಳಲ್ಲಿ ಸ್ತ್ರೀಯರ ಹಕ್ಕು ಬಾಧ್ಯತೆಗಳಿಗಾಗಿ ಹೋರಾಡುವಂತಾಗಿದೆ. ಜನರನ್ನು ಭೀತಿಗೊಳಿಸಿ ವೋಟು ಪಡೆಯುವ ಕಾಲವು ಅಂತ್ಯವಾಯಿತು

ಇಂದು ಪ್ರತಿಯೊಬ್ಬ ಜಪಾನಿಯನು ತನಗಿದ್ದ ಚಿಕ್ಕಪುಟ್ಟ ಹೊಲ ಗದ್ದೆಗಳನ್ನು ಸಾಗುವಳಿ ಮಾಡುವುದರಲ್ಲಿ ತೃಪ್ತನಾಗಿದ್ದಾನೆ ಅವನು ಯಾವ ನಿರಂಕುಶ ಸರ್ವಾಧಿಕಾರಕ್ಕೂ ಒಳಗಾಗಬೇಕಾಗಿಲ್ಲ

ಜಪಾನಿ ಶಾಲೆಗಳಲ್ಲಿ ಹಿಂದಿನ ರಾಜಭಕ್ತಿ ಶಿಕ್ಷಣವು ಲೋಪ ಮಾಡಲ್ಪಟ್ಟಿದೆ ಪ್ರಜಾಪ್ರಭುತ್ವ ಪ್ರೋತ್ಸಾಹಕ ಪಠ್ಯ ಪುಸ್ತಕಗಳನ್ನು ಅಲ್ಲಿನ ಶಿಕ್ಷಣತಜ್ಞರು ಬರೆಯುತ್ತಿದ್ದಾರೆ ಶಾಲಾ ಕಾಲೇಜುಗಳಲ್ಲಿ ತರ್ಕ ಸಭೆಗಳು ಅಮೇರಿಕನ್ ಮಾದರಿಯ ಮೇಲೆ ನಿರ್ವಹಿಸಲ್ಪಡುತ್ತವೆ ಅಧ್ಯಾಪಕರು ತಮ್ಮ ವಿಚಾರ ಸ್ವಾತಂತ್ರ್ಯವುಳ್ಳವರಾಗಿ ಹರ್ಷಿತರಾಗಿದ್ದಾರೆ ಇತರರು ಒಂದು ಸೈನಿಕ ವರ್ಗದ ಉದ್ದೇಶಗಳನ್ನು ಪೂರ್ತಿಗೊಳಿಸಬೇಕಾಗಿಲ್ಲ

ಜಪಾನಿನ ಮಜೂರ ವರ್ಗವಾದರೋ ಸಂಘಟಿತವಾಗುತ್ತಿದೆ ಮೆಕ್ ಆರ್ಥರರು ಹೆಚ್ಚೆಚ್ಚು ಮಜೂರ ಸಂಘಗಳು ಸ್ಥಾಪಿಸಡುವಂತೆ ಪ್ರಚಾರ ಮಾಡುತ್ತಿರುವರು ಹಿಂದಿನಂತೆ ಕೆಲವೇ ಕೈಗಾರಿಕೆ ಮಾಲಿಕರು ದೇಶದ ಮಜೂರ ವರ್ಗವನ್ನು ಇಷ್ಟ ಕಂಡಂತೆ ನೀಚವಾದ ಶ್ರಮ ಕೂಲಿಗೆ ಒಳಮಾಡುವಂತಿಲ್ಲ

ಹೀಗೆ ಜಗತ್ತಿನಲ್ಲಿ ಹೊಸ ಪೌರ್ವಾತ್ಯ ದೇಶವೊಂದು ಪ್ರಜಾಪ್ರಭುತ್ವದ ಸಾಲಿಗೆ ಬರಹತ್ತಿದೆ ಭಾರತಕ್ಕೂ ಆಸ್ಯಕ್ಕೂ ಇದು ಬಹಳ ಸಹಕಾರಿಯಾದುದು ಮಾತ್ರವಲ್ಲ, ಅತ್ಯಂತ ಸಂತೋಷದ ಸಂಗತಿಯೂ ಆಗಿದೆ

ಸೋವಿಯಟ್ ರಶ್ಯದ ದೃಶ್ಯಗಳು

ಹರಟೆ ಮತ್ತು ಚಹಾ ಪ್ರೀತಿಯ ಆಟಗಳು

ಅಮೇರಿಕನ್ ಶೈಲಿಗಳ ಅನುಕರಣ

1914ರ ಯುದ್ಧಕಾಲದ ಓರ್ವ ರಶ್ಯನ ಚಿತ್ರವನ್ನು ನೋಡಿದರೆ ಅವನೊಬ್ಬ ಮಧ್ಯಕಾಲದ ಯೋಧನಂತೆ ಕಾಣುವನು- ಎತ್ತರದ ಬೂಟ್ಸು, ಎರಡು ಬದಿಯಲ್ಲಿ ಬಿಗಿದ ಗುಂಡಿಗಳ ಕೋಟು ಉದ್ದವಾದ ರೋಮದ ಟೊಪ್ಪಿಗೆ, ದಶಾವತಾರ ಪಾತ್ರಗಳ ಮೀಸೆ ಮತ್ತು ಗಲ್ಲಗಡ್ಡಗಳು

ಈಗಿನ ರಶ್ಯನ್ ಸ್ತ್ರೀಪುರುಷರು ತಮ್ಮ ಹೆಚ್ಚಿನ ಚಟುವಟಿಕೆಗಳಲ್ಲಿ ಅಮೇರಿಕನ್ ಶೈಲಿಗಳನ್ನನುಸರಿಸುತ್ತಾರೆ. ಅಲ್ಲಿ ಮಳೆ ಸ್ವಲ್ಪ ಹೆಚ್ಚಾಗಿರುವುದರಿಂದ ಜನರು ಹೆಚ್ಚಾಗಿ ರಬ್ಬರ್ ಬೂಟ್ಸುಗಳನ್ನುಪಯೋಗಿಸುವರು ಗಂಡಸರು ಗಿಡ್ಡದ ಕೋಟುಗಳನ್ನು ಧರಿಸಿ ಅರ್ಧ ಮಂದಿ ಮೀಸೆ ಇದ್ದವರು ಇನ್ನರ್ಧ ಬೋಳು ಮುಖದವರು ಬಹಳ ಮಂದಿ ಬೋಳು ತಲೆಯವರೂ ಇರುವರು

ಹೆಂಗಸರು: ಇತರ ಯುರೋಪ್ಯ ಮತ್ತು ಅಮೇರಿಕನ್ ನಗರಗಳಲ್ಲಿರುವಂತೆ ರಶ್ಯನ್ ಸ್ತ್ರೀಯರು ಹೇಟು ಪಿಯರು ತುಟಿಗಳಿಗೆ ಕೆಂಪು ಲೇಪ ಧಾರಾಳವಾಗಿ ಉಪಯೋಗಿಸುವರಾದರೂ ಕಪೋಲಗಳನ್ನು ಕೆಂಪಗೆ ಮಾಡುವುದಿಲ್ಲ

ರಶ್ಯದ ನಗರಗಳಲ್ಲಿ ಅಂಗಡಿಗಳು ಹೆಚ್ಚಾಗಿ ಹೆಂಗಸರಿಂದಲೇ ನಡೆಸಲ್ಪಡುತ್ತವೆ ಆಹಾರ ಮಾರುವ ಅಂಗಡಿಗಳಲ್ಲೂ ಹೆಂಗಸರೇ ಇದ್ದು ಅವು ಯಾವಾಗಲೂ ತುಂಬಿರುತ್ತವೆ

ಮನರಂಜನೆ: ರಶ್ಯದಲ್ಲಿ ಉತ್ತಮ ನಾಟಕ ಸಿನೇಮಾ ನೃತ್ಯ ಗೃಹಗಳಿವೆ ಇವುಗಳು ಸದಾ ಜನರಿಂದ ತುಂಬಿರುತ್ತವೆ ಆದರೆ ಅಲ್ಲಿ ರಾತೆ ವಿಹಾರ ಭವನಗಳು ಇಲ್ಲವೆ ಕ್ಲಬ್ಬುಗಳಿಲ್ಲ ಆದರೆ ಹೋಟೇಲುಗಳಲ್ಲಿ ನೃತ್ಯ ಸಂಗೀತದ ಜೊತೆ ಪ್ರದರ್ಶನಗಳಿವೆ ಮೋಸ್ಕೋದಲ್ಲಿ ತುಂಬಾ ಮದ್ಯದಂಗಡಿಗಳಿವೆ ಪಾನೀಯವು ರಶ್ಯನರ ಪ್ರೀತಿಯ ಪಾನೀಯ

ಆಟಪಾಟಗಳು: ಎಲ್ಲಕ್ಕಿಂತಲೂ ರಶ್ಯನರಿಗೆ ಚಹಾ ಎಂದರೆ ಹೆಚ್ಚು ಪ್ರೀತಿ ಊಟ ಮಾಡಿದಾಕ್ಷಣ ಒಂದು ಕಪ್ ಟೀ ಕುಡಿಯುವುದೆಂದರೆ ಅಷ್ಟು ಆನಂದದ ಸಂಗತಿ ಮಾತ್ರವಲ್ಲ ಅವರು ಕೊಡಗಟ್ಲೆ ಚಹಾವನ್ನು ಬೇಕಾದರೂ ಕುಡಿಯಲು ಸಿದ್ಧರೇ ಇರುವರು. ತಲಾಂತರಗಳಿಂದ ಚಹಾ ಕುಡಿಯುವುದು ಮತ್ತು ಹರಟೆ ಹೊಡೆಯುವುದೆಂದರೆ ರಶ್ಯನರಿಗೆ ಅತ್ಯಂತ ಮನರಂಜನೆಯ ಕ್ರೀಡೆ.

ಅಲ್ಲದೆ ಕಾಲುಚೆಂಡು, ಹೊಕ್ಕಿ, ಮುಷ್ಟಿ ಕಾಳಗ, ಜಟ್ಟಿಕಾಳಗ, ಭಾರ ಎತ್ತುವುದು, ಹಿಮದ ಮೇಲೆ ಹೊರಳುವುದು, ಹಾರುವುದು, ದೋಣಿ ನಡೆಸುವುದು, ಟೆನ್ನಿಸ್, ಕುದುರೆ ಪಂದ್ಯಾಟ, ಇವುಗಳೂ ರಶ್ಯನರ ಪ್ರೀತಿಯ ಆಟಗಳು ಆದರೆ ರಶ್ಯದಲ್ಲಿ ಕ್ರಿಕೆಟ್ ಆಟವಿಲ್ಲ

ರಶ್ಯನರು ತುಂಬಾ ಓದು ಪ್ರಿಯರು ವರ್ತಮಾನ ಪತ್ರಿಕೆಗಳು ಅವರ ಜೀವನದಲ್ಲಿ ತುಂಬಾ ಪ್ರಭಾವದ ಪಾತ್ರ ವಹಿಸುತ್ತವೆ

ರಶ್ಯನ್ ಪುರುಷರು ಮತ್ತು ಹುಡುಗರು ಕಾರ್ಖಾನೆ ಕೆಲಸ ಮಾಡುವಾಗ ಅವರ ಹೆಂಗಸರು ಮನೆ ಕೆಲಸ, ಗೃಹಕೃತ್ಯಕ್ಕೆ ಬೇಕಾಗುವ ವಸ್ತು ಸಂಗ್ರಹಿಸುವ ಕೆಲಸ ಮಾಡುತ್ತಾರೆ ಎಲ್ಲರೂ ಮನೆಗೆ ಬಂದಾಗ ರುಚಿಕರವಾದ ಭೋಜನವನ್ನು ನಿರೀಕ್ಷಿಸುತ್ತಾರೆ

ತಾರ್ಕಿಕರು: ಸಂಭಾಷಣೆಯಲ್ಲಿ ರಶ್ಯನರು ತುಂಬಾ ಬುದ್ಧಿವಂತಿಕೆ ತೋರಿಸುತ್ತಾರೆ ಭಾಷಣ, ತರ್ಕಗಳಲ್ಲೂ ಕತೆ ಹೇಳುವುದರಲ್ಲೂ ಅವರು ತುಂಬಾ ನಿಪುಣರು ಇವನ್ನು ಕೇಳುವುದರಲ್ಲೂ ಅವರಿಗೆ ತುಂಬಾ ತಾಳ್ಮೆ ಇದೆ

ಕಾರ್ತಿಯ ವಾರ್ಷಿಕೋತ್ಸವವು ಅವರ ಹಬ್ಬದ ದಿನ ಅದರಲ್ಲಿ ಭಾಗವಹಿಸಲು ಅವರು ಅತ್ಯಂತ ಸಂತೋಷಪಡುತ್ತಾರೆ ಸ್ವಭಾವಿಕ ಅವರು ಹರ್ಷ ಚಿತ್ತರೂ ಮಿಶ್ರ ಜೀವನ ಪ್ರಿಯರೂ ಆಗಿರುವರು ಅವರಿಗೆ ಕೂಟ ಊತಣ, ಸಂಗೀತಗಳು ಬಹು ಆನಂದದ ವಿಷಯಗಳು ಆದರೆ ವಿಶೇಷ ಮದ್ಯಪಾನ ಕೂಟಗಳನ್ನು ಅವರು ಮೆಚ್ಚುವುದಿಲ್ಲ ಇವೊಂದು ವಿಷಯ ಬಿಟ್ಟರೆ ಅವರ ಜೀವನವು ಇಂಗ್ಲಿಷರ ಇಲ್ಲವೆ ಅಮೇರಿಕನರ ಹಾಗೇ ಇರುತ್ತವೆ

ESTD. 1906.

CANARA BANK, LIMITED.

(Incorporated in British India with Limited Liability)

(PROGRESS STATEMENT CORRECT TO THOUSANDS OF RUPEES)

LIABILITIES

	1945	1946
Capital Subscribed	29,00,000	29 00,000
Capital paid up	28,43,000	28,80,000
Reserves	11,00,000	11,00,000
Deposits	3,50,43,000	4 60 40,000
Due to Bankers	26,91,000	69 57,000
Call Deposits from Bankers	8,00,000	15,00,000
Branch Adjustments	22,07,000	21,09,000
Bills for collection and foreign bills negotiated	20,56,000	34,23,000
Other Liabilities	77,000	85,000
Profit for the year	3,61,000	4,19,000
Rs.	4,71,78,000	6,45,13,000

ASSETS

	1945	1946
Cash	1,01,91,000	1,16,16,000
Govt Securities	1,80 46,000	2 75,61,000
Advances to customers	1 56,87,000	2,01,38,000
Bills for collection and Foreign Bills negotiated	20,56 000	34,23,000
Landed Properties	28,000	5,000
Bank Premises and Furniture and Fixtures	1,46,000	1,47,000
Other Assets	10,25,000	16,23,000
Rs	4,71,78,000	6,45,13,000

ಈ ಪಾಕಿಸ್ತಾನವೆ!...

ಒರ್ವ ಮುಸ್ಲಿಂ ಮಹಿಳೆಯ ಪತ್ರ

ಫಿರೋಜ್‌ಪುರದ ಮಿಸೆಸ್ ಜಲಾಲು ದ್ದಿನ್ ಎಂಬ ಮುಸ್ಲಿಂ ಮಹಿಳೆ ಬೊಂಬಾಯಿಯ ಒಂದು ಪತ್ರಿಕೆಯಲ್ಲಿ ಈ ಕೆಳಗಿನ ಪತ್ರವೊಂದನ್ನು ಪ್ರಕಟಿಸುವರು

"ಪಾಕಿಸ್ಥಾನಕ್ಕಾಗಿ ಮಾಡಲ್ಪಡುವ ಈ 'ಡಾರೆಕ್ಟ್ ಗಲಾಟೆ'ಯಿಂದ ಸಾಕೋ ಸಾಕಾಯಿತು. ಅವಿಚಾರವಂತ ಅಶಿಕ್ಷಿತರು ಅದಕ್ಕೆ ಆಕರ್ಷಿತರಾಗುವರಾದರೂ ಆಳವಾಗಿ ಪರಿಶೀಲಿಸಿದಲ್ಲಿ ಈ ಕಾರ್ಯಕ್ರಮದ ಶೂನ್ಯತೆ ಮನಗಾಣುವುದು ಮಾನವ ಸಾವಿರಾರು ವರ್ಷಗಳಿಂದ ಸುಖದಾಯಕವಾದ ಕಾಲವೊಂದು ಬರಲೆಂದು ಹಾರೈಸುತ್ತಾನೆ ಆದರೆ ಇವರಿಂದ ಕಷ್ಟದ ದಿವಸಗಳೇ ನಮ್ಮನ್ನು ಕಾಯುತ್ತಿವೆ

ನಾವು ಒಂದು ಪರಿಶುದ್ಧ ಸ್ಥಾನಕ್ಕಾಗಿ ಅದೆಷ್ಟು ಕಾತರಿಸುತ್ತಿದ್ದೇವೆ ಪಾಕಿಸ್ಥಾನವೆಂಬುದರ ಅರ್ಥವೂ ಅದೇ ಆಗಿದೆ ಆದರೆ ನಮ್ಮ ಲೀಗ್ ಬಾಂಧವರಲ್ಲಿ ಈ ಪರಿಶುದ್ಧ ಸ್ಥಾನದಲ್ಲಿ ವಾಸಿಸಲು ಯೋಗ್ಯ ಜೀವನಾಭ್ಯಾಸಗಳಿದ್ದವರು ಎಷ್ಟು ಮಂದಿ ಇದ್ದಾರೆ? ಇವರ ಕೈಕೆಳಗೆ ಬಾಳುವವರ ಜೀವನ ಸುಖಶಾಂತಿಮಯವಾಗುತ್ತದೆಂಬುದಕ್ಕೆ ಭರವಸೆ ಕೊಡಲು ಧೈರ್ಯವಿದ್ದವರಷ್ಟು ಮಂದಿ ಇದ್ದಾರೆ?

ಆರ್ಥಿಕ ದರಿದ್ರತೆಯ ಒರೆ[illegible] ದೃಷ್ಟಿಯಿಂದ ಮಾತ್ರವಲ್ಲ [illegible] ವಿಧಾನಗಳೆದುರಿನಲ್ಲಿ ಪಾಕಿಸ್ಥಾನವು [illegible] ವರ್ಥವಾದ ಭಾವನೆಯೆಂದು ಬ್ರಿಟಿಷ್ ಸರಕಾರದ ಮಂತ್ರಿತ್ರಯರು ತಮ್ಮ ವರದಿಯಲ್ಲಿ ಸ್ಪಷ್ಟ ತಿಳಿಸಿದ್ದಾರೆ

ಸ್ವಾತಂತ್ರ್ಯವನ್ನು [illegible] ಅದನ್ನು [illegible] ರಕ್ಷಿಸಿಕೊಳ್ಳ[illegible] ಶಕ್ತಿ [illegible] ಒಂದ ದೇಶ [illegible] ನ್ಯದ ಆವಶ್ಯಕತೆ [illegible] ದುಳಿನವರೂ ಬೇಕು. [illegible] ಕಲ್ಲಿ ವಿವೇಕದಿಂದ [illegible] ಯೋಗ್ಯ ಬುದ್ಧಿಶಕ್ತಿಯು [illegible]

ನಮ್ಮ ಜಾತಿಯಲ್ಲಿ [illegible] ಶಕ್ತಿಯುಳ್ಳ ಒರ್ವನೇ ಒರ್ವ [illegible]ಗಲಿ, ಆರ್ಥಿಕ [illegible]ಗಲಿ, [illegible] ನಿಕ ಶಾಸ್ತ್ರಜ್ಞನಾಗಲಿ ಇಲ್ಲವೆ [illegible]ನಾಗಲಿ ಇರುವನೆಂದು ನನ್ನ ಲೀಗ್ [illegible] ಳ್ಯಾರಾದರೂ ಧೈರ್ಯವಾಗಿ ನನಗೆ ತಿಳಿಸಬಲ್ಲರೆ? ಪಾಕಿಸ್ಥಾನದ ಭವಿತವ್ಯವು ಇಂಥಹ ಕೈಯಲ್ಲಿರಬೇಕಲ್ಲವೆ?

ಲೀಗಿನವರ ಅದೆಂತಹ ಕವಿತಾ ಸ್ಫೂರ್ತಿಯಾಗಲಿ, ಉದ್ದಂಡ ಮಾತಿನ ಮಲ್ಲತನವಾಗಲೀ, ಇಲ್ಲವೆ ಪಶುಶಕ್ತಿಯಾಗಲಿ, ಡಿಮಾನ್ಸ್ಟ್ರೇಶನ್ ಪದ್ಧತಿಯ ಪ್ರೀತಿಯಾಗಲಿ, ಮತ್ತು ಅದೆಷ್ಟು ರೇಡಿಯೊತಾರೆಗಳಾಗಲಿ ಒಟ್ಟುಗೂಡಿ ಪಾಕಿಸ್ತಾನವನ್ನು ರಕ್ಷಣೆ ಮಾಡಲು ಸಾಧ್ಯವಿಲ್ಲ. ಸಂಯುಕ್ತ ಭಾರತದಲ್ಲಿ ಶಾಂತಿಯಿಂದಿರುವುದೇ ಉನ್ನತ ಮಾರ್ಗ. ಹಿಂದೂಗಳ ಪರಿಪಕ್ವ ಮಿದುಳೂ ಮುಸಲ್ಮಾನರ ಬಲಶಕ್ತಿಗಳು ಒಟ್ಟುಗೂಡಬೇಕು."

ಬ್ರಿಟಿಷ್ ಘೋಷಣೆಯ ಪ್ರತಿಕ್ರಿಯೆ ಸಂಕ್ಷಿಪ್ತ

ಕೊಂಗ್ರೆಸ್ ಕಡೆಯಿಂದ

ಮಹತ್ಮಾ ಗಾಂಧಿ: ಸಂದರ್ಭ ಚೆನ್ನಾಗಿದೆ. ಆಳುವುದು ಇಲ್ಲವೆ ಹಾಳು ಮಾಡುವುದು ನಮ್ಮ ಕೈಯಲ್ಲಿದೆ ಎಲ್ಲಾ ಪಕ್ಷಗಳು ಒಟ್ಟುಗೂಡಿದರೆ ಯಾರೂ ಅವರ ಐಕ್ಯವನ್ನು ಮುರಿಯಲಾರರು.

ನೆಹುರು: ಸ್ಥೈರ್ಯ ವಿವೇಕಿಗಳ ನಿರ್ಧಾರ ಸದ್ಯದ ಪರಿಸ್ಥಿತಿಗೆ ನಿಜರೂಪ ಶಕ್ತಿ[illegible]ಗಳುಂಟಾದಂತಾಗಿದೆ ಘಟನಾ ಸಮಿತಿ ಹೆಚ್ಚು ಭರದಿಂದ ಸಾಗಬೇಕಾಗಿದ ದೂರ [illegible]ತವರು ಈ ಮಹತ್ಕಾರ್ಯದಲ್ಲಿ ಸಹಕರಿಸಬೇಕೆಂದು ನಾವು ಆಹ್ವಾನಿಸುತ್ತೇವೆ

ಕೃಪಲಾನಿ: [illegible] ಸಂಭವಿಸಬಹುದೆಂದು ಹೇಳುವ [illegible] ಗತಿ ಎಂದರ ವೇವೆಲ್ಲರು ಹೋಗಿ [illegible] ನರು [illegible]

ವಲ್ಲಭಭಾಯಿ ಪಟೇಲ್: "ಭಾರತ [illegible] ಸಿದ್ಧ[illegible] ಚಿಹ್ನೆ

ರಾಷ್ಟ್ರೀಯ ಪತ್ರಿಕೆಗಳು

ಹಿಂದೂ: [illegible] ಡುವುದು ಕಷ್ಟ

ಹಿಂದೂಸ್ಥಾನ್ ಟೈಮ್ಸ್: [illegible] ಅಧಿಕಾರ ಸ್ಥಳಾಂತರದ ಚಿತ್ರವು [illegible]

ಭಾರತ ಜ್ಯೋತಿ: [illegible]

ಬೊಂಬಾಯಿ ಕ್ರಾನಿಕಲ್: [illegible] ಈ ಅಧಿಕಾರ [illegible]

ಹಿತವಾದ[illegible] ಹೋಗಲು [illegible]

ನೇಶನಲ್ ಹೆರಲ್ಡ್: [illegible] ಅಧಿಕಾರ [illegible] ನಡೆಸಿಕೊಳ್ಳುವ ರೀತಿಯಲ್ಲಿ ಎಲ್ಲವೂ ತಿಳಿಯುವುದು ಅದು ಸ್ಪಷ್ಟವಾದರೆ ಎಲ್ಲವೂ ಸ್ಪಷ್ಟ

ಲೀಗ್ ಕಡೆಯಿಂದ

ಮಿ। ಜಿನ್ನಾ ಅತಿ ಮಹತ್ವದ ಘೋಷಣೆ ಏನೋ ಹೌದು. ಒಾಗರೂಕತೆಯಿಂದ ಪರಿಶೀಲಿಸಬೇಕಾಗುವುದು.

ಅಬ್ದುರ್ ರಹಮಾನ್ ಸಿದ್ದಿಕಿ ಅರ್ಥವಿಲ್ಲದ ಅನರ್ಥಗಳಿಂದ ತುಂಬಿದೆ.

ಡಾನ್ ಪತ್ರಿಕೆ: ಘೋಷಣೆಯನ್ನು ಮುಸ್ಲಿಮರು ಸ್ವಾಗತಿಸುವರು. ಹಿಂದೂ ಬಹುಸಂಖ್ಯಾಕ ಪ್ರದೇಶಗಳ ಕುರಿತು ಕೊಂಗ್ರೆಸಿನೊಡನೆಯೂ, ಮುಸ್ಲಿಂ ಬಹುಸಂಖ್ಯಾಕ ಪ್ರದೇಶಗಳ ಕುರಿತು ಲೀಗಿನೊಡನೆಯೂ ಒಪ್ಪಂದ ಮಾಡುತ್ತೇವೆಂದು ನೇರವಾಗಿ ತಿಳಿಸಬಹುದಿತ್ತು. ನಡುಗಾಲದಿಂದ ಲೀಗ್ ಮಂತ್ರಿಗಳನ್ನು ಹೊರಹಾಕಬೇಕೆಂಬ ಕೊಂಗ್ರೆಸಿನ ಮನವಿಯನ್ನೂ ಪೂರೈಸುವುದಂತಿರಲಿ ಅದಕ್ಕೆ ಲಕ್ಷ್ಯವನ್ನು ಕೊಡಲಿಲ್ಲ.

ಸಮತಾವಾದಿ ಟೀಕೆ

ನರೇಂದ್ರದೇವ: [illegible] ಯಿಲ್ಲ - ಭಾರತದ ಐಕ್ಯತೆಗೆ ಎಟ್ಲಿಯವರು ಕೊಡಲಿ ಹಾಕಿರುವರು

ಪಟ್‌ವರ್ಧನ್: ಅಧಿಕಾರ ಆಕಾಶದಿಂದ ಬೀಳಲಾರದು ಅದನ್ನು ಸೆಳೆದುಕೊಳ್ಳಬೇಕೆಂಬ ನಮ್ಮ ಭಾವನೆಯನ್ನು ಎಟ್ಲಿ ಘೋಷಣೆ ಒತ್ತಿಹೇಳುತ್ತದೆ.

ಕೊಮ್ಯುನಿಸ್ಟ್ ಜೋಶಿ ಇದು ಭಾರತ ಬಿಡುವ ಬ್ರಿಟನ್ ಯೋಜನೆಯಲ್ಲ [illegible] ಸಾಮ್ರಾಜ್ಯವಾದಿ [illegible]

ಮಹಾಸಭೆ ಟೀಕೆ

ಮುಖರ್ಜಿ: ಅಧಿಕಾರ [illegible] ಬಲಿಷ್ಠವಾದ [illegible] ನಾವು [illegible] ಕೇಳುವೆವು

ಹಿಂದುಸ್ಥಾನ್ ಸ್ಟೆಂಡಾರ್ಡ್. ಈ [illegible] ಅಧಿಕಾರ ಸ್ಥಳಾಂತರಗಿಂತ [illegible] ಅಧಿಕಾರವನ್ನು ಕಂಡವರಿಗೆ ಬಿಟ್ಟುಹೋಗುವ [illegible] ಹಾಗೆ ಬಿಟ್ಟುಹೋಗಲಿ ನಂತರ ಅದು [illegible] ಕೈಗೆ ತನ್ನಷ್ಟಕ್ಕೆ ಬರುವುದು

ಸಂಸ್ಥಾನಗಳ ಟೀಕೆ

ಭೋಪಾಲ ನವಾಬ್: [illegible] ಸ್ವತಂತ್ರ[illegible]

ಸರ್ ಸಿ ಪಿ : [illegible] 10 12 [illegible]

ಪಟ್ಟಾಭಿ: [illegible]

ಸಿಹಿಸುದ್ದಿ ಸಂಗ್ರಹ

ರೋಂ ನಗರದ ರೊಮಾನೊ ಪೆಂಡೋಲ್ಫಿ ಎಂಬಾತನಿಗೆ ದೊಡ್ಡ ಕಿವಿಗಳಿದ್ದುದರಿಂದ ಎಲ್ಲರೂ ಅವನಿಗೆ ತಮಾಷೆ ಮಾಡುವರು. ಇದನ್ನು ಸಹಿಸಲಾರದೆ ಅವನು ಅನೇಕರ ಹಾಸ್ಯಕ್ಕೊಳಗಾದ ಆ ಕರ್ಣೇಂದ್ರಿಯವನ್ನು ಒಂದು ಹರಿತವಾದ ಬಾಲಿನಿಂದ ನಾಜೂಕಾಗಿ ಕತ್ತರಿಸಿಕೊಂಡಿದ್ದಾನೆ!

✱

ಸೆನ್ ಫ್ರೆನ್ಸಿಸ್‌ಕೊ ನಗರದ ಚಿತ್ರಗಾರರಿಗೂ ಫೊಟೋಗ್ರಾಫರರಿಗೂ ಇಲ್ಲವೆ ಚಲಚಿತ್ರ ಕಂಪೆನಿಯವರಿಗೂ ನಗ್ನ ಬಾವಚಿತ್ರಕ್ಕಾಗಿ ನಿಲ್ಲುವ ಹೆಂಗಸರು ಬಟ್ಟೆ ಉಟ್ಟುಕೊಂಡು ನಿಂತರೆ ಹೆಚ್ಚು ಸಂಬಳ ಕೊಡಬೇಕೆನ್ನುತ್ತಾರೆ ಕಾರಣ "ಒಟ್ಟೆ ಇಲ್ಲದೆ ನಿಲ್ಲುವುದು ಹೆಚ್ಚು ಸುಖಕರ."

✱

ಸ್ಟಾರ್ಟನ್ ಬರ್ಗ್ ಎಂಬಲ್ಲಿ ಆರ್ ಸಿ ವ್ಯಾಟ್ ಎಂಬ 79 ವರ್ಷದ ಮುದುಕ ಅಲ್ಲಿನ ಒಂದು ಹೋಟೇಲಿನ ಸೇವಕಿಯ ಮೇಲೆ ಅನುರಾಗ ತಾಳಿದ ಅವಳು ಮುದುಕನನ್ನು ತಿರಸ್ಕರಿಸಿದಳು. ಕೋಪದಿಂದ ವ್ಯಾಟ್ ಹೋಟೇಲಿನ ಬಳಿಯಲ್ಲಿ ಬಾಂಬ ಸಿಡಿಯುವ ಮದ್ದು ಇಟ್ಟು ಅದನ್ನು ಧ್ವಂಸ ಮಾಡಿದ

✱

ರಾಷ್ಟ್ರೀಯ ಬೀಡಿ ಕೆಲಸಗಾರರ ಸಂಘದ ಸಭೆ ರಾಷ್ಟ್ರೀಯ ಬೀಡಿ ಕೆಲಸಗಾರರ ಸಂಘದ ಕಾರ್ಯಕಾರಿ ಸಮಿತಿಯ ಸಭೆಯು ಇತ್ತೀಚೆಗೆ ಕಾಂಗ್ರೆಸ್ ಭವನದಲ್ಲಿ ಸೇರಿ ಮಂಗಳೂರಿನ ಹಂಚಿನ ಮಜೂರರ ನ್ಯಾಯವಾದ ಕೋರಿಕೆಗಳನ್ನು ಮಾಲಕ ಸಂಘವು ಕೊಡುವಂತೆ ಒತ್ತಾಯಪಡಿಸುವ ಠರಾವು ಮಂಜೂರಾಯಿತು.

ವರ್ಧಂತ್ಯುತ್ಸವ–ಅನಿವಾರ್ಯ ಕಾರಣದಿಂದಾಗಿ ನಿಶ್ಚಯಿಸಲ್ಪಟ್ಟ ಅಧ್ಯಕ್ಷರಾದ ಶ್ರೀ [illegible] ಶೆಟ್ಟಿ, [illegible] ಇವರಿಗೆ ಬರಲು ಅನಾನುಕೂಲವಾದ ಕಾರಣ [illegible] ಅಧ್ಯಕ್ಷತೆಯಲ್ಲಿ [illegible] ವರ್ಧಂತ್ಯುತ್ಸವ [illegible]

ಉಳುಕು, ವಾತರೋಗ, ಹರಿವಾತ, ಸುಳುಕು, ನ್ಯೂರೈಟಿಸ್, ಸೆಡವು, ಅಥವಾ ಹಲ್ಲು ನೋವುಗಳಿಗೆ

ಖಾತರಿ ಗುಣವನ್ನು ಪಡೆಯಲು ಉಪಯೋಗಿಸಿರಿ

ನೋವಿರುವ ಕಡೆ ಚೆಟ್ಟಗೆ ಮಾಡಿ ಲಿಟಲ್ಸ್ ಒರಿಯಂಟಲ್ ಬಾಮ್ ದಿನಕ್ಕೆ ಮೂರಾವರ್ತಿ ಹಚ್ಚಿ 10–15 ನಿಮಿಷ ಚೆನ್ನಾಗಿ ತಿಕ್ಕಿರಿ ನೋವು [illegible] ಬಿಡುವುದು

ಇನ್ನೂ
ನಡುನೋವು ಸೊಂಟ ನೋವು ತಲೆನೋವು, ಸಂಧಿವಾಯು ಕ್ರಿಮಿಕೀಟಗಳ ಕಡಿತ, ಶೈತ್ಯ, ನೆಗಡಿ, ಶೀತದ ಕುಬ್ಬಸ, ಶ್ವಾಸಕಾಸ, ಗಂಟಲು ಕಟ್ಟುವುದು, ಕೆಮ್ಮು ಮೊದಲಾದುವನ್ನೂ ಗುಣಪಡಿಸುವುದು

LITTLE'S ORIENTAL BALM
ಇಂಡಿಯದ ಸುಪ್ರಸಿದ್ಧ ಅತ್ಯುತ್ತಮ ಮುಲಾಮು.

DJK 18

ಅಂಥ ರಾಜತ್ವದಿಂದ ಪ್ರಜಾತತ್ವಕ್ಕೆ

ಗುಲಾಮ ಜಪಾನಿನ ಸ್ವತಂತ್ರರಾಗುತ್ತಿರುವರು

ಅಮೇರಿಕನ್ ಆಡಳಿತ ಸತ್ಪರಿಣಾಮ

ಜಗತ್ತಿನ ಒಂದು ಮೂಲೆಯಲ್ಲಿ ಕಂತದ ಸೂರ್ಯನ ಸಾಮ್ರಾಜ್ಯದ ಚಕ್ರಾಧಿಪತ್ಯದ ಇಂಗ್ಲೆಂಡ್ ದ್ವೀಪ. ಅದರ ಸಮುಖರೋಧ ದಿಕ್ಕಿನಲ್ಲಿ, ಸೂರ್ಯನುದಯಿಸುವ ಜಪಾನ್ ದ್ವೀಪ ಎರಡೂ ಸೊಳ್ಳೆಯಂತ ಸಾಗರ ಮಧ್ಯ ಪ್ರದೇಶಗಳು, ಆದರೆ ಎರಡರ ಮಹಿಮೆಯೂ ಇತಿಹಾಸ ಅಚ್ಚರಿಯದೆನ್ನಬೇಕು.

ಇಂಗ್ಲೆಂಡು ಇಂದಿಗೆ ಸುಮಾರು ಐನೂರು ವರ್ಷಗಳಿಂದ ಪ್ರಪಂಚದ ರಾಜಕೀಯದಲ್ಲಿ ಪ್ರಭಾವಿತ ಚಟುವಟಿಕೆಯನ್ನು ನಿರ್ವಹಿಸಿದೆ. ಭೂಗೋಲದ ಐದನೇ ಒಂದಂಶ ನೆಲವೂ ಮೂರನೆ ಒಂದು ಭಾಗ ಸಾಗರಾಂಶವೂ ಅವರ ಶಕ್ತಿಯುಕ್ತ ಆಡಳಿತಕ್ಕೆ ಸೇರಿದ್ದುವು.

ಜಪಾನಿನದು ಕೃಷ್ಣಲೀಲೆ ಐವತ್ತು ವರ್ಷಗಳ ಕೆಳಗೆ ಬೆರಳುದ್ದದ ಜಪಾನು ಗೊಮಟಾಕೃತಿಯ ರಶ್ಯವನ್ನು ಸೋಲಿಸಿ ಜಗತ್ತಿನ ಆದರಕ್ಕೆ ಪಾತ್ರವಾಯಿತು ಆ ಮೇಲಂತೂ ಕೈಗಾರಿಕೆಯ ವಿಶ್ವ ಮರ್ಮವನ್ನೇ ಅರಿತುಕೊಂಡು ಶಕ್ತಿರಾಷ್ಟ್ರಗಳಲ್ಲಿ ಒಂದೆಂದು ಪರಿಗಣಿಸಲ್ಪಟ್ಟಿತು

ಆದರೆ ಸಹವಾಸ ದೋಷದಿಂದ ಜಪಾನು ಕೆಟ್ಟಿತು ಸರ್ವಾಧಿಕಾರಿಗಳ ದುರಂತ ಮಾರ್ಗವನ್ನು ಪಟ್ಟ ಜಪಾನು ತುಳಿಯಿತು. ಎತ್ತಿಗೆ ಹೊಟ್ಟೆ ವಿಶಾಲವಿದೆಯೆಂದು ಕಪ್ಪೆ ಉದರ ಉಬ್ಬಿಸಿದರೆ ಒಡೆದೇ ಹೋಗುವಂತೆ ಜಪಾನಿನ ಹುಡುಗಾಟಿಕೆ ಜಪಾನರಿಗೆ ಕಷ್ಟ ತಂದೊಡ್ಡಿತು

ಪರಿವರ್ತನೆ

ಒಂದು ದೃಷ್ಟಿಯಿಂದ ಜಪಾನಿನ ಸೋಲು ಜಪಾನಿಯರಿಗೂ ಜಗತ್ತಿಗೂ ಶ್ರೇಯಸ್ಕರವಾಯಿತೆನ್ನಬೇಕು - ಇಂದು ನಿರಂಕುಶತ್ವ ದಾಸತ್ವಕ್ಕೊಳಗಾದೊಂದು ಜನಾಂಗದ ಜನತೆ ಸರ್ವತೋಮುಖ ಸ್ವಾತಂತ್ರ್ಯವನ್ನು ಹೊಂದಿ ಜಗತ್ತಿನ ಇತರ ಪ್ರಜಾಪ್ರಭುತ್ವ ಶಕ್ತಿಗಳೊಂದಿಗೆ ಸೇರಲು ಸಿದ್ಧವಾಗುತ್ತಿದೆ.

ಯುದ್ಧಾನಂತರದ ಜಪಾನಿನ ಪರಿವರ್ತನೆ ಕೌತುಕಗೊಳಿಸುವಂತಹುದು ಸಾವಿರೆರಡು ಸಾವಿರ ವರ್ಷಗಳ ಅದರ ಇತಿಹಾಸದಲ್ಲೊಂದು ದಿನವಾದರೂ ಜಪಾನಿನ ರಾಜನಾಗಲಿ ಪ್ರಜೆಗಳಾಗಲಿ ಸ್ವತಂತ್ರತೆಯ ಸವಿಯನ್ನು ಕಂಡವರಲ್ಲ ಬಹು ಪ್ರಾಚೀನದಿಂದಲೂ ರಕ್ಕಸ ಮನೋವೃತ್ತಿಯ ಅಲ್ಲಿನ ಸೈನಿಕ ವರ್ಗವೊಂದು ಅಂದಿನಿಂದ ಇಂದಿನ ತನಕ ದೇಶದ ಆಡಳಿತದ ಮೇಲೆ ತನ್ನ ಕ್ರೂರ ಪ್ರಭಾವವನ್ನು ಒತ್ತಿಹಿಡಿದಿತ್ತು. ಸಾಮಾನ್ಯ ಜನತೆಯನ್ನು ನಿತ್ಯ ದಾಸತ್ವದ ಅಂಚಿಕೆಯಲ್ಲಿರಿಸಿ, ಅವರಲ್ಲಿ ರಾಜರು ದೈವ ಸಂಭೂತರೆಂಬ ಭಾವನೆಯನ್ನು ಹುಟ್ಟಿಸಿದರು. ರಾಜರನ್ನು ಕೈಗೊಂಬೆಗಳಂತೆ ಅವರು ಕುಣಿಸಿ ತಮ್ಮ ಜನಾಂಗವನ್ನು ಕೇಡಿಗೆ ಗುರಿಮಾಡಿದರು.

ಈಗ ಜಪಾನು ಪ್ರಜಾಪ್ರಭುತ್ವದ ಕಡೆ ತಿರುಗಿದೆ. ಅಮೇರಿಕದ ಮೆಕ್ ಆರ್ಥರರ ನಿರ್ದೇಶದಲ್ಲಿ ಜಪಾನಿನ ಅಂತರೀಕ ಆಡಳಿತದಲ್ಲಿ ಜನತಾ ಪ್ರತಿನಿಧಿಗಳಿಗೆ ಹಕ್ಕಿನ ಅಧಿಕಾರ ದೊರೆಯುವಂತಾಗಿದೆ. ಇದುತನಕ ಬಹಳ ಮುಂದರಿದ್ದಂತೆ ತೋರುತಿದ್ದ ಜಪಾನಿ ಮಹಿಳೆಯರಿಗೆ ಆ ದೇಶದಲ್ಲಿ ಮತದಾನದ ಅಧಿಕಾರವಿರಲಿಲ್ಲ. ಮೊನ್ನೆ ನಡೆದ ಚುನಾವಣೆಯಲ್ಲಿ 13 ಮಿಲಿಯ ಜಪಾನಿ ಮಹಿಳೆಯರು ವೋಟು ಕೊಟ್ಟರು. ಅವರ 40 ಪ್ರತಿನಿಧಿಗಳು ಇಂದು ಶಾಸನ ಸಭೆಗಳಲ್ಲಿ ಸ್ತ್ರೀಯರ ಹಕ್ಕು ಬಾಧ್ಯತೆಗಳಿಗಾಗಿ ಹೋರಾಡುವಂತಾಗಿದೆ. ಜನರನ್ನು ಭೀತಿಗೊಳಮಾಡಿ ವೋಟು ಪಡೆಯುವ ಕಾಲವು ಅಂತ್ಯವಾಯಿತು

ಇಂದು ಪ್ರತಿಯೊಬ್ಬ ಜಪಾನಿಯನು ತನಗಿದ್ದ ಚಿಕ್ಕಪುಟ್ಟ ಹೊಲ ಗದ್ದೆಗಳನ್ನು ಸಾಗುವಳಿ ಮಾಡುವುದರಲ್ಲಿ ತೃಪ್ತನಾಗಿದ್ದಾನೆ ಅವನು ಯಾವ ನಿರಂಕುಶ ಸರ್ವಾಧಿಕಾರಕ್ಕೂ ಒಳಗಾಗಬೇಕಾಗಿಲ್ಲ.

ಜಪಾನಿ ಶಾಲೆಗಳಲ್ಲಿ ಹಿಂದಿನ ರಾಜಭಕ್ತಿ ಶಿಕ್ಷಣವು ಲೋಪ ಮಾಡಲ್ಪಟ್ಟಿದೆ ಪ್ರಜಾಪ್ರಭುತ್ವ ಪ್ರೋತ್ಸಾಹಕ ಪಠ್ಯ ಪುಸ್ತಕಗಳನ್ನು ಅಲ್ಲಿನ ಶಿಕ್ಷಣತಜ್ಞರು ಬರೆಯುತ್ತಿದ್ದಾರೆ ಶಾಲಾ ಕಾಲೇಜುಗಳಲ್ಲಿ ತರ್ಕ ಸಭೆಗಳು ಅಮೇರಿಕನ್ ಮಾದರಿಯ ಮೇಲೆ ನಿರ್ವಹಿಸಲ್ಪಡುತ್ತವೆ ಅಧ್ಯಾಪಕರು ತಮ್ಮ ವಿಚಾರ ಸ್ವಾತಂತ್ರ್ಯವುಳ್ಳವರಾಗಿ ಹರ್ಷಿತರಾಗಿದ್ದಾರೆ ಇಂದವರು ಒಂದು ಸೈನಿಕ ವರ್ಗದ ಉದ್ದೇಶಗಳನ್ನು ಪೂರ್ತಿಗೊಳಿಸಬೇಕಾಗಿಲ್ಲ

ಜಪಾನಿನ ಮಜೂರ ವರ್ಗವಾದರೂ ಸಂಘಟಿತವಾಗುತ್ತಿದೆ ಮೆಕ್ ಆರ್ಥರರು ಹೆಚ್ಚೆಚ್ಚು ಮಜೂರ ಸಂಘಗಳ ಸ್ಥಾಪಿಸಡುವಂತೆ ಪ್ರಚಾರ ಮಾಡುತ್ತಿರುವರು ಹಿಂದಿನಂತೆ ಕೆಲವೇ ಕೈಗಾರಿಕೆ ಮಾಲಿಕರು ದೇಶದ ಮಜೂರ ವರ್ಗವನ್ನು ಇಷ್ಟ ಕಂಡಂತೆ ಸೀಚವಾದ ಶ್ರಮ ಸ ೦ಿಗೆ ಒಳಮಾಡುವಂತಿಲ್ಲ

ಹೀಗೆ ಜಗತ್ತಿನಲ್ಲಿ ಹೊಸ ಪೌರ್ವಾತ್ಯ ದೇಶವೊಂದು ಪ್ರಜಾಪ್ರಭುತ್ವದ ಸಾಲಿಗೆ ಬರಹತ್ತಿದೆ ಭಾರತಕ್ಕೂ ಏಷ್ಯಕ್ಕೂ ಇದು ಬಹಳ ಸಹಕಾರಿಯಾದುದು ಮಾತ್ರವಲ್ಲ, ಅತ್ಯಂತ ಸಂತೋಷದ ಸಂಗತಿಯೂ ಆಗಿದೆ

ಸೋವಿಯಟ್ ರಶ್ಯದ ದೃಶ್ಯಗಳು

ಹರಟೆ ಮತ್ತು ಚಹಾ ಪ್ರೀತಿಯ ಆಟಗಳು

ಅಮೇರಿಕನ್ ಶೈಲಿಗಳ ಅನುಕರಣ

1914ರ ಯುದ್ಧಕಾಲದ ಒರ್ವ ರಶ್ಯನನ ಚಿತ್ರವನ್ನು ನೋಡಿದರೆ ಅವನೊಬ್ಬ ಮಧ್ಯಕಾಲದ ಯೋಧನಂತೆ ಕಾಣುವನು- ಎತ್ತರದ ಬೂಟ್ಸು, ಎರಡು ಬದಿಯಲ್ಲಿ ಬಿಗಿದ ಗುಂಡಿಗಳ ಕೋಟು ಉದ್ದವಾದ ರೋಮದ ಟೊಪ್ಪಿಗೆ, ದಶಾವತಾರ ಪಾತ್ರಗಳ ಮೀಸೆ ಮತ್ತು ಗಲ್ಲಗಡ್ಡಗಳು

ಈಗಿನ ರಶ್ಯನ್ ಸ್ತ್ರೀಪುರುಷರು ತಮ್ಮ ಹೆಚ್ಚಿನ ಚಟುವಟಿಕೆಗಳಲ್ಲಿ ಅಮೇರಿಕನ್ ಶೈಲಿಗಳನ್ನನುಸರಿಸುತ್ತಾರೆ. ಅಲ್ಲಿ ಮಳೆ ಸ್ವಲ್ಪ ಹೆಚ್ಚಾಗಿರುವುದರಿಂದ ಜನರು ಹೆಚ್ಚಾಗಿ ರಬ್ಬರ್ ಬೂಟ್ಸುಗಳನ್ನುಪಯೋಗಿಸುವರು ಗಂಡಸರು ಗಿಡ್ಡದ ಕೋಟುಗಳನ್ನು ಧರಿಸಿ ಅರ್ಧ ಮಂದಿ ಮೀಸೆ ಇದ್ದವರು ಇನ್ನರ್ಧ ಬೋಳು ಮುಖದವರು ಬಹಳ ಮಂದಿ ಬೋಳು ತಲೆಯುವರೂ ಇರುವರು

ಹೆಂಗಸರು: ಇತರ ಐರೋಪ್ಯ ಮತ್ತು ಅಮೇರಿಕನ್ ನಗರಗಳಲ್ಲಿರುವಂತೆ ರಶ್ಯನ್ ಸ್ತ್ರೀಯರು ಹೇಟು ಪಿಯರು ತುಟಿಗಳಿಗೆ ಕೆಂಪು ಲೇಪ ಧಾರಾಳವಾಗಿ ಉಪಯೋಗಿಸುವಾದರೂ ಕಪೋಲಗಳನ್ನು ಕೆಂಪಗಾಗಿಸುವದಿಲ್ಲ

ರಶ್ಯದ ನಗರಗಳಲ್ಲಿ ಕ್ಷೌರದಂಗಡಿಗಳು ಹೆಚ್ಚಾಗಿ ಹೆಂಗಸರಿಂದಲೇ ನಡೆಸಲ್ಪಡುತ್ತವೆ ಅಲಂಕಾರ ಮಾಡುವ ಅಂಗಡಿಗಳಲ್ಲೂ ಹೆಂಗಸರೇ ಇದ್ದು ಅವು ಯಾವಾಗಲೂ ತುಂಬಿರುತ್ತವೆ

ಮನರಂಜನೆ: ರಶ್ಯದಲ್ಲಿ ಉತ್ತಮ ನಾಟಕ, ಸಿನೇಮಾ, ನೃತ್ಯ ಗೃಹಗಳಿವೆ ಇವುಗಳು ಯಾವಾಗಲೂ ತುಂಬಿರುತ್ತವೆ ಆದರೆ ಅಲ್ಲಿ ರಾತ್ರೆ ವಿಹಾರ ಭವನಗಳು ಇಲ್ಲವೆ ಕ್ಲಬ್ಬುಗಳಿಲ್ಲ ಆದರೆ ಹೊಟೇಲುಗಳಲ್ಲಿ ನೃತ್ಯ ಸಂಗೀತದ ಜೊತೆ ಪ್ರದರ್ಶನಗಳಿವೆ ಮಾಸ್ಕೋದಲ್ಲಿ ತುಂಬಾ ಮದ್ಯದಂಗಡಿಗಳಿವೆ ದ್ರಾಕ್ಷಾರಸವು ರಶ್ಯನರ ಪ್ರೀತಿಯ ಪಾನೀಯ

ಆಟಪಾಟಗಳು: ಎಲ್ಲದಕ್ಕಿಂತಲೂ ರಶ್ಯನಿಗೆ ಚಹಾ ಎಂದರೆ ಹೆಚ್ಚು ಪ್ರೀತಿ ಊಟ ಮಾಡಿದಾಕ್ಷಣ ಒಂದು ಕಪ್ ಟೀ ಕುಡಿಯುವುದೆಂದರೆ ಅಷ್ಟು ಆನಂದದ ಸಂಗತಿ ಮಾತ್ರವಲ್ಲ ಅವರು ಕೊಡಗಟ್ಟಲೆ ಚಹಾವನ್ನು ಬೇಕಾದರೂ ಕುಡಿಯಲು ಸಿದ್ಧರೇ ಇರುವರು. ತಲಾಂತರಗಳಿಂದ ಚಹಾ ಕುಡಿಯುವುದು ಮತ್ತು ಹರಟೆ ಹೊಡೆಯುವುದೆಂದರೆ ರಶ್ಯನರಿಗೆ ಅತ್ಯಂತ ಮನರಂಜನೆಯ ಕ್ರೀಡೆ

ಅಲ್ಲದೆ ಕಾಲುಚೆಂಡು, ಹೊಕ್ಕಿ, ಮುಷ್ಟಿ ಕಾಳಗ, ಜಟ್ಟಿಕಾಳಗ, ಭಾರ ಎತ್ತುವುದು, ಹಿಮದ ಮೇಲೆ ಹೊರಳುವುದು, ಹಾರುವುದು, ದೋಣಿ ನಡೆಸುವುದು, ಟೆನ್ನಿಸ್ ಕುದುರೆ ಪಂದ್ಯಾಟ, ಇವುಗಳೂ ರಶ್ಯನರ ಪ್ರೀತಿಯ ಆಟಗಳು ಆದರೆ ರಶ್ಯದಲ್ಲಿ ಕ್ರಿಕೆಟ್ ಆಟವಿಲ್ಲ

ರಶ್ಯನರು ತುಂಬಾ ಓದು ಪ್ರಿಯರು ವರ್ತಮಾನ ಪತ್ರಿಕೆಗಳು ಅವರ ಜೀವನದಲ್ಲಿ ತುಂಬಾ ಪ್ರಭಾವದ ಪಾತ್ರ ವಹಿಸುತ್ತವೆ

ರಶ್ಯನ್ ಪುರುಷರು ಮತ್ತು ಹುಡುಗರು ಕಾರ್ಖಾನೆ ಕೆಲಸ ಮಾಡುವಾಗ ಅವರ ಹೆಂಗಸರು ಮನೆ ಕೆಲಸ, ಗೃಹಕೃತ್ಯಕ್ಕೆ ಬೇಕಾಗುವ ವಸ್ತು ಸಂಗ್ರಹಿಸುವ ಕೆಲಸ ಮಾಡುತ್ತಾರೆ ಎಲ್ಲರೂ ಮನೆಗೆ ಬಂದಾಗ ರುಚಿಕರವಾದ ಭೋಜನವನ್ನು ನಿರೀಕ್ಷಿಸುತ್ತಾರೆ

ತಾರ್ಕಿಕರು: ಸಂಭಾಷಣೆಯಲ್ಲಿ ರಶ್ಯನರು ತುಂಬಾ ಬುದ್ಧಿವಂತಿಕೆ ತೋರಿಸುತ್ತಾರೆ ಭಾಷಣ, ತರ್ಕಗಳಲ್ಲೂ ಕತೆ ಹೇಳುವುದರಲ್ಲೂ ಅವರು ತುಂಬಾ ನಿಪುಣರು ಇವನ್ನು ಕೇಳುವುದರಲ್ಲೂ ಅವರಿಗೆ ತುಂಬಾ ತಾಳ್ಮೆ ಇದೆ

ಕ್ರಾಂತಿಯ ವಾರ್ಷಿಕೋತ್ಸವವು ಅವರ ಹಬ್ಬದ ದಿನ ಅದರಲ್ಲಿ ಭಾಗವಹಿಸಲು ಅವರು ಅತ್ಯಂತ ಸಂತೋಷಪಡುತ್ತಾರೆ. ಸ್ವಭಾವಿಕ ಅವರು ಹರ್ಷ ಚಿತ್ತರೂ ಮಿಶ್ರ ಜೀವನ ಪ್ರಿಯರೂ ಆಗಿರುವರು ಅವರಿಗೆ ಕೂಟ ಔತಣ, ಸಂಗೀತಗಳು ಬಹು ಆನಂದದ ವಿಷಯಗಳು ಆದರೆ ವಿಶೇಷ ಮದ್ಯಪಾನ ಕೂಟಗಳನ್ನು ಅವರು ಮೆಚ್ಚುವುದಿಲ್ಲ ಇವೊಂದು ವಿಷಯ ಬಿಟ್ಟರೆ ಅವರ ಜೀವನವು ಇಂಗ್ಲಿಷರ ಇಲ್ಲವೆ ಅಮೇರಿಕನರ ಹಾಗೇ ಇರುತ್ತವೆ.

ESTD 1906

CANARA BANK, LIMITED.

(Incorporated in British India with Limited Liability)

(PROGRESS STATEMENT CORRECT TO THOUSANDS OF RUPEES)

LIABILITIES	1945	1946	ASSETS	1945	1946
Capital Subscribed	29,00,000	29,00,000	Cash	1,01,91,000	1,16,16,000
Capital paid up	28,43,000	28,80,000	Govt Securities	1,80,45,000	2,76,61,000
Reserves	11,00,000	11,00,000	Advances to customers	1,56,87,000	2,01,38,000
Deposits	3,50,43,000	4,60,40,000	Bills for collection and Foreign Bills negotiated	20,56,000	34,23,000
Due to Bankers	26,91,000	69,57,000	Landed Properties	28,000	5,000
Call Deposits from Bankers	8,00,000	15,00,000	Bank Premises and Furniture and Fixtures	1,46,000	1,47,000
Branch Adjustments	22,07,000	21,09,000	Other Assets	10,25,000	16,23,000
Bills for collection and foreign bills negotiated	20,56,000	34,23,000			
Other Liabilities	77,000	85,000			
Profit for the year	3,61,000	4,19,000			
Rs.	4,71,78,000	6,45,13,000	Rs.	4,71,78,000	6,45,13,000

ಈ ಪಾಕಿಸ್ತಾನವೆ!...

ಒರ್ವ ಮುಸ್ಲಿಂ ಮಹಿಳೆಯ ಪತ್ರ

ಫಿರೋಜ್‌ಪುರದ ಮಿಸೆಸ್ ಜಲಾಲುದ್ದೀನ್ ಎಂಬ ಮುಸ್ಲಿಂ ಮಹಿಳೆ ಬೊಂಬಾಯಿಯ ಒಂದು ಪತ್ರಿಕೆಯಲ್ಲಿ ಈ ಕೆಳಗಿನ ಪತ್ರವೊಂದನ್ನು ಪ್ರಕಟಿಸುವರು

"ಪಾಕಿಸ್ಥಾನಕ್ಕಾಗಿ ಮಾಡಲ್ಪಡುವ ಈ 'ಡಾರೆಕ್ಟ್ ಗಲಾಟೆ'ಯಿಂದ ಸಾಕೋ ಸಾಕಾಯಿತು. ಅವಿಚಾರವಂತ ಅಶಿಕ್ಷಿತರು ಅದಕ್ಕೆ ಆಕರ್ಷಿತರಾಗುವರಾದರೂ ಆಳವಾಗಿ ಪರಿಶೀಲಿಸಿದಲ್ಲಿ ಈ ಕಾರ್ಯಕ್ರಮದ ಶೂನ್ಯತೆ ಮನಗಾಣುವುದು. ಮಾನವ ಸಾವಿರಾರು ವರ್ಷಗಳಿಂದ ಸುಖದಾಯಕವಾದ ಕಾಲವೊಂದು ಬರಲೆಂದು ಹಾರೈಸುತ್ತಾನೆ. ಆದರೆ ಇವರಿಂದ ಕಷ್ಟದ ದಿವಸಗಳೇ ನಮ್ಮನ್ನು ಕಾಯುತ್ತಿವೆ

ನಾವು ಒಂದು ಪರಿಶುದ್ಧ ಸ್ಥಾನಕ್ಕಾಗಿ ಅದೆಷ್ಟು ಕಾತರಿಸುತ್ತಿದ್ದೇವೆ. ಪಾಕಿಸ್ಥಾನವೆಂಬುದರ ಅರ್ಥವೂ ಅದೇ ಆಗಿದೆ. ಆದರೆ ನಮ್ಮ ಲೀಗ್ ಬಾಂಧವರಲ್ಲಿ ಈ ಪರಿಶುದ್ಧ ಸ್ಥಾನದಲ್ಲಿ ವಾಸಿಸಲು ಯೋಗ್ಯ ಜೀವನಾಭ್ಯಾಸಗಳಿದ್ದವರು ಎಷ್ಟು ಮಂದಿ ಇದ್ದಾರೆ? ಇವರ ಕೈಕೆಳಗೆ ಬಾಳುವವರ ಜೀವನ ಸುಖ ಶಾಂತಿಮಯವಾಗುತ್ತದೆಂಬುದಕ್ಕೆ ಭರವಸೆ ಕೊಡಲು ಧೈರ್ಯವಿದ್ದವರೆಷ್ಟು ಮಂದಿ ಇದ್ದಾರೆ?

ಆರ್ಥಿಕ ದರಿದ್ರತೆಯ [illegible] ದೃಷ್ಟಿಯಿಂದ [illegible] ಆಧುನಿಕ ಯುದ್ಧ ವಿಧಾನಗಳೆದುರಿನಲ್ಲಿ ಪಾಕಿಸ್ಥಾನವು [illegible] ಭಾವನೆಯೆಂದು ಬ್ರಿಟಿಷ್ ಸರಕಾರದ [illegible] ಯಲ್ಲಿ ಸ್ಪಷ್ಟ ತಿಳಿಸಿದಾರೆ

ಸ್ವಾತಂತ್ರ್ಯವನ್ನು [illegible] ಅದನ್ನು ಮುಂದುವರಿಸಿ ರಕ್ಷಿಸಿಕೊಳ್ಳುವ ಶಕ್ತಿಯೇ ಒಂದು ದೇಶ ರಕ್ಷಣೆ [illegible] ಅನಶ್ಯಕತೆ ಮಾತ್ರವಲ್ಲ [illegible] ದುಳಿನವರೂ ಬೇಕು. ಕಠಿಣ ಸಂದರ್ಭಗಳಲ್ಲಿ ವಿವೇಕದಿಂದ ನಡೆಯಲು ಯೋಗ್ಯ ಬುದ್ಧಿಶಕ್ತಿಯೂ ಬೇಕು

ನಮ್ಮ ಜಾತಿಯಲ್ಲಿ [illegible] ಶಕ್ತಿಯುಳ್ಳ ಒರ್ವನೇ ಒರ್ವ ವಿಜ್ಞಾನಿಯಾಗಲಿ, ಆರ್ಥಿಕ ನಿಪುಣನಾಗಲಿ [illegible] ಶಾಸ್ತ್ರಜ್ಞನಾಗಲಿ ಇಲ್ಲ. ಗಣಿತಜ್ಞನಾಗಲಿ ಇರುವನೆಂದು ನನ್ನ ಲೀಗ್ [illegible] ಳ್ಯಾರಾದರೂ ಧೈರ್ಯವಾಗಿ ನನಗೆ ತಿಳಿಸಬಲ್ಲರೆ? ಪಾಕಿಸ್ಥಾನದ ಭವಿತವ್ಯವು ಇಂಥಹ ಕೈಯಲ್ಲಿರಬೇಕಲ್ಲವೆ?

ಲೀಗಿನವರ ಅದ್ಭುತ ಕವಿತಾ ಸ್ಫೂರ್ತಿಯಾಗಲಿ, ಉದ್ದಂಡ ಮಾತಿನ ಮಲ್ಲತನವಾಗಲೀ, ಇಲ್ಲವೆ ಪಶುಶಕ್ತಿಯಾಗಲಿ, ಡವಿನಾಸ್ಟ್ವರಿ ಪದ್ಧತಿಯ ನೀತಿಯಾಗಲಿ, ಮತ್ತು ಅದೆಷ್ಟು ರೇಡಿಯೊತಾರಗಳಾಗಲಿ ಒಟ್ಟುಗೂಡಿ ಪಾಕಿಸ್ಥಾನವನ್ನು ರಕ್ಷಣೆ ಮಾಡಲು ಸಾಧ್ಯವಿಲ್ಲ. ಸಂಯುಕ್ತ ಭಾರತದಲ್ಲಿ ಶಾಂತಿಯಿಂದಿರುವುದೇ ಉನ್ನತ ಮಾರ್ಗ. ಹಿಂದೂಗಳ ಪರಿಪಕ್ವ ಮಿದುಳೂ ಮುಸಲ್ಮಾನರ ಬಲಶಕ್ತಿಗಳೂ ಒಟ್ಟುಗೂಡಬೇಕು."

ಬ್ರಿಟಿಷ್ ಘೋಷಣೆಯ ಪ್ರತಿಕ್ರಿಯೆ ಸಂಕ್ಷಿಪ್ತ

ಕೊಂಗ್ರೆಸ್ ಕಡೆಯಿಂದ

ಮಹಾತ್ಮಾ ಗಾಂಧಿ: ಸಂದರ್ಭ ಚೆನ್ನಾಗಿದೆ. ಆಳುವುದು ಇಲ್ಲವೆ ಹಾಳು ಮಾಡುವುದು ನಮ್ಮ ಕೈಯಲ್ಲಿದೆ. ಎಲ್ಲಾ ಪಕ್ಷಗಳು ಒಟ್ಟುಗೂಡಿದರೆ ಯಾರೂ ಅವರ ಐಕ್ಯವನ್ನು ಮುರಿಯಲಾರರು

ನೆಹರು: ಸ್ವೈರ್ಯ ವಿವೇಕಗಳ ನಿರ್ಧಾರ ಸದ್ಯದ ಪರಿಸ್ಥಿತಿಗೆ ನಿಜ ರೂಪ ಶಕ್ತಿ ಭರ್ಗಗಳುಂಟಾದಂತಾಗಿದೆ . ಘಟನಾ ಸಮಿತಿ ಹೆಚ್ಚು ಭರದಿಂದ ಸಾಗಬೇಕಾಗಿದ. ದೂರ ನಿಂತವರು ಈ ಮಹತ್ಕಾರ್ಯದಲ್ಲಿ ಸಹಕರಿಸಬೇಕೆಂದು ನಾವು ಆಹ್ವಾನಿಸುತ್ತೇವೆ

ಕೃಪ್ಲಾನಿ: ಖಂಡಿತ ಸಂಭವಿಸಬಹುದೆಂದು ಹೇಳುವ ಒಂದೇ ಸಂಗತಿ ಎಂದರೆ ವೇವೆಲ್ಲರು ಹೋಗಿ ಮೌಂಟ್ ಬಟನರು ಬರುವರೆಂಬುದು

ವಲ್ಲಭಭಾಯಿ ಪಟೇಲ್: "ಭಾರತ ಬಿಟ್ಟು ತೊಲಗಿರಿ ಸಿಧ್ಧಾಂತಕ್ಕೆ ಒಂದ ವಿಜಯ [illegible] ಚಿಹ್ನೆ

ರಾಷ್ಟ್ರೀಯ ಪತ್ರಿಕೆಗಳು

ಹಿಂದೂ: ಕೆಬಿನೆಟ್ ಮಿಶನ್ [illegible] ದಲ್ಲಿ [illegible] ಅಧಿಕಾರ [illegible] ಕೊಡುವುದು ಕಷ್ಟ

ಹಿಂದೂಸ್ಥಾನ್ ಟ್ಯಾಮ್ಸ್: [illegible] ಅಧಿಕಾರ ಸ್ಥಳಾಂತರದ ಚಿತ್ರವು [illegible] ವಾಗಿದೆ

ಭಾರತ ಜ್ಯೋತಿ: [illegible] ಅಧಿಕ [illegible] ಹೋಗುತ್ತೇವೆ ಎಂದು [illegible] ಇಂಥವರಿಗೆ [illegible] ಗುತ್ತೇವೆ [illegible]

ಬೊಂಬೇ ಕ್ರೊನಿಕಲ್: [illegible] ಕೊಂಗ್ರೆಸ್ [illegible] ಈ ಅಧಿಕಾರ [illegible] ದಿಲ್ಲ

ಹಿತವಾದ: ಭಾರತಕ್ಕೆ [illegible] ಹೋಗಲು ನಿರ್ಧರಿಸಿದಂತಿದೆ

ನೇಶನಲ್ ಹೆರೇಲ್ಡ್: ಹೋಗುವುದು ಖಂಡಿತ [illegible] ಸ್ಪಷ್ಟವಿಲ್ಲ. ಅಧಿಕಾರ ಸ್ಥಳಾಂತರ ವೆಂದರೆ ಪ್ರಯಾಣದ [illegible] ಅದರ ಅಂತ್ಯದಲ್ಲಿ ನಡುಗಾಲಿ [illegible] ಕಾರವನ್ನು ನಡೆಸಿಕೊಳ್ಳುವ ರೀತಿ [illegible] ತಿಳಿಯುವುದು. ಅದು ಸ್ಪಷ್ಟವಾದರೆ ಎಲ್ಲವೂ ಸ್ಪಷ್ಟ

ಲೀಗ್ ಕಡೆಯಿಂದ

ಮಿ ಜಿನ್ನಾ ಅತಿ ಮಹತ್ವದ ಘೋಷಣೆ ಎನೋ ಹೌದು. ಜಾಗರೂಕತೆಯಿಂದ ಪರಿಶೀಲಿಸಬೇಕಾಗುವುದು.

ಅಬ್ದುರ್ ರಹಮಾನ್ ಸಿದ್ದಿಕಿ ಅರ್ಧವಿಲ್ಲದ ಅನರ್ಥಗಳಿಂದ ತುಂಬಿದೆ

ಡಾನ್ ಪತ್ರಿಕೆ: ಘೋಷಣೆಯನ್ನು ಮನ್ನಿಸಿ ಸ್ವಾಗತಿಸುವರು. ಹಿಂದೂ ಬಹುಸಂಖ್ಯಾಕ ಪ್ರದೇಶಗಳ ಕುರಿತು ಕೊಂಗ್ರೆಸಿನೊಡನೆಯೂ, ಮುಸ್ಲಿಂ ಬಹುಸಂಖ್ಯಾಕ ಪ್ರದೇಶಗಳ ಕುರಿತು ಲೀಗಿನೊಡನೆಯೂ ಒಪ್ಪಂದ ಮಾಡುತ್ತೇವೆಂದು ನೇರವಾಗಿ ತಿಳಿಸಬಹುದಿತ್ತು. ನಡುಗಾಲದಿಂದ ಲೀಗ್ ಮಂತ್ರಿಗಳನ್ನು ಹೊರಹಾಕಬೇಕೆಂಬ ಕೊಂಗ್ರೆಸಿನ ಮನವಿಯನ್ನೂ ಪೂರೈಸುವುದರಂತಿರಲಿ ಅದಕ್ಕೆ ಲಕ್ಷ್ಯವನ್ನು ಕೊಡಲಿಲ್ಲ.

ಸಮತಾವಾದಿ ಟೀಕೆ

ನರೇಂದ್ರದೇವ: ಸಂತೋಷಕ್ಕೆಡೆಯಿಲ್ಲ-ಭಾರತದ ಐಕ್ಯತೆಗೆ ಎಟ್ಟಿಯವರು ಕೊಡಲಿ ಹಾಕಿರುವರು

ಪಟ್‌ವರ್ಧನ್: ಅಧಿಕಾರ ಆಕಾಶದಿಂದ ಬೀಳಲಾರದು. ಅದನ್ನು ಸೆಳೆದುಕೊಳ್ಳಬೇಕೆಂಬ ನಮ್ಮ ಭಾವನೆಯನ್ನು ಎಟ್ಲೀ ಘೋಷಣೆ ಒತ್ತಿಹೇಳುತ್ತದೆ.

ಕೊಮ್ಯುನಿಸ್ಟ್ ಜೋಶಿ ಇದು ಭಾರತ ಬಿಡುವ ಬಿಟನ್ ಯೋಜನೆಯಲ್ಲ ಸಮಯ ತೆಗೆಯುವ ಸಾಮ್ರಾಜ್ಯವಾದಿ ಕುಹಕ

ಮಹಾಸಭೆ ಟೀಕೆ

ಮುಖರ್ಜಿ: ಅಧಿಕಾರ ಬಲಿಷ್ಠವಾದ ಕೇಂದ್ರವೊಂದಕ್ಕೇ ಕೊಡುವಂತೆ ನಾವು ಏಕಕಂಠರಾಗಿ ಕೇಳುವೆವು

ಹಿಂದುಸ್ಥಾನ್ ಸ್ಟೆಂಡಾರ್ಡ್: ಈ ಶಾಂತಿಯುಕ್ತ ಅಧಿಕಾರ ಸ್ಥಳಾಂತರಗಿಂತ ಕ್ರಾಂತಿಯೇ ಮೇಲು. ಅಧಿಕಾರವನ್ನು ಕಂಡವರಿಗೆ ಬಿಟ್ಟುಹೋಗುವ ಬದಲು ಹಾಗೇ ಬಿಟ್ಟುಹೋಗಲಿ. ನಂತರ ಅದು ಹಕ್ಕುಳ್ಳವರ ಕೈಗೆ ತನಗೆ ತಾನೇ ಒದಗುವುದು

ಸಂಸ್ಥಾನಗಳ ಟೀಕೆ

ಭೋಪಾಲ ನವಾಬ್: ಸಾರ್ವಭೌಮತ್ವ ಹೋಗುತ್ತದೆಂದು ಸಂತೋಷಿಸುತ್ತೇನೆ. ಆಡಳಿತ ಕ್ಷೇತ್ರದಿಂದ ಹಿಂತೆಗೆದು ತನ್ನ ಸಂಸ್ಥಾನಗಳು ಸ್ವತಂತ್ರವಾಗುವುದು [illegible]

ಸರ್ ಸಿ ಪಿ: ಸಂಸ್ಥಾನಗಳು 10 12 [illegible] ಬ್ರಿಟಿಷ [illegible] ಬೇಕು

ಪಟ್ಟಾಭಿ: ಬ್ರಿಟಿಷ್ [illegible] ಗವರ್ನರುಗಳಿಂದ [illegible] ಅಧಿಕಾರದಲ್ಲಿ [illegible] ದೊಳಿತು

ಪಿಸಿಸುದ್ದಿ ಸಂಗ್ರಹ

ರೋಂ-ನಗರದ ರೊಮಾನೊ ಪೆಂಡೋಲ್ಲಿ ಎಂಬಾತನಿಗೆ ದೊಡ್ಡ ಕಿವಿಗಳಿದ್ದುದರಿಂದ ಎಲ್ಲರೂ ಅವನಿಗೆ ತಮಾಷೆ ಮಾಡುವರು. ಇದನ್ನು ಸಹಿಸಲಾರದೆ ಅವನು ಅನೇಕರ ಹಾಸ್ಯಕ್ಕೊಳಗಾದ ಆ ಕರ್ಣೇಂದ್ರಿಯಗಳನ್ನು ಒಂದು ಹರಿತವಾದ ಬಾಲಿನಿಂದ ನಾಜೂಕಾಗಿ ಕತ್ತರಿಸಿಕೊಂಡಿದ್ದಾನೆ!

*

ಸೇನ್ ಫ್ರಾನ್ಸಿಸ್ಕೊ ನಗರದ ಚಿತ್ರಗಾರರಿಗೂ ಫೊಟೋಗ್ರಾಫರರಿಗೂ ಇಲ್ಲವೆ ಚಲಚಿತ್ರ ಕಂಪೆನಿಯವರಿಗೂ ನಗ್ನ ಭಾವ ಚಿತ್ರಕ್ಕಾಗಿ ನಿಲ್ಲುವ ಹೆಣ್ಣುಗಳು ಬಟ್ಟೆ ಉಟ್ಟುಕೊಂಡು ನಿಂತರೆ ಹೆಚ್ಚು ಸಂಬಳ ಕೊಡಬೇಕೆನ್ನುತ್ತಾರೆ. ಕಾರಣ "ಬಟ್ಟೆ ಇಲ್ಲದೆ ನಿಲ್ಲುವುದು ಹೆಚ್ಚು ಸುಖಕರ"

*

ಸ್ಪಾರ್ಟನ್ ಬರ್ಗ್ ಎಂಬಲ್ಲಿ ಆರ್ ಸಿ ವ್ಯಾಟ್ ಎಂಬ 79 ವರ್ಷದ ಮುದುಕ ಅಲ್ಲಿನ ಒಂದು ಹೊಟೇಲಿನ ಸೇವಕಿಯ ಮೇಲೆ ಅನುರಾಗ ತಾಳಿದ. ಅವಳು ಮದುವೆಯನ್ನು ತಿರಸ್ಕರಿಸಿದಳು. ಕೋಪದಿಂದ ವ್ಯಾಟ್ ಹೊಟೇಲಿನ ಬಳಿಯಲ್ಲಿ ಬಾಂಬ ಸಿಡಿಯುವಂತೆ ಇಟ್ಟು ಅದನ್ನು ಧ್ವಂಸ ಮಾಡಿದ

*

ರಾಷ್ಟ್ರೀಯ ಬೀಡಿ ಕೆಲಸಗಾರರ ಸಂಘದ ಸಭೆ-ರಾಷ್ಟ್ರೀಯ ಬೀಡಿ ಕೆಲಸಗಾರರ ಸಂಘದ ಕಾರ್ಯಕಾರಿ ಸಮಿತಿಯ ಸಭೆಯು ಇತ್ತೀಚೆಗೆ ಕಾಂಗ್ರೆಸ್ ಭವನದಲ್ಲಿ ಸೇರಿ [illegible] ಹಂಚಿನ ಮಜೂರರ ನ್ಯಾಯವಾದ ಬೇಡಿಕೆಗಳನ್ನು ವ್ಯಾಪಕ ಸಂಘಟನೆ ಕೊಡುವಂತೆ [illegible] ರಾವು ಮಂಜೂರಾಯಿತು

ವರ್ಧಂತ್ಯುತ್ಸವ-ಅನಿವಾರ್ಯ ಕಾರಣದಿಂದಾಗಿ ನಿಶ್ಚಯ ಗೊಳಿಸಲ್ಪಟ್ಟ ಅಧ್ಯಕ್ಷರಾದ [illegible] ಬರಲು ಅನಾನುಕೂಲವಾದ ಕಾರಣ [illegible] ಅಧ್ಯಕ್ಷತೆಯಲ್ಲಿ [illegible] ವರ್ಧಂತ್ಯುತ್ಸವ ವಿಜೃಂಭಣೆಯಿಂದ [illegible]

ಉಳುಕು, ವಾತರೋಗ, ಹರಿವಾತ,
ಸುಳುಕು, ನ್ಯೂರೈಟಿಸ್, ಸೆಡವು, ಅಥವಾ
ಹಲವು ನೋವುಗಳಿಗೆ

ಖಾತರಿ ಗುಣವನ್ನು
ಪಡೆಯಲು
ಉಪಯೋಗಿಸಿರಿ

ನೋವಿರುವ ಕಡೆ ಬೆಚ್ಚಗೆ ಮಾಡಿ ಲಿಟಲ್ಸ್ ಒರಿಯಂಟಲ್ ಬಾಮ್ ವಿನಕ್ಕೆ ಮಸಾಜ್ ಮಾಡಿ
ಹಚ್ಚಿ 10-15 ನಿಮಿಷ ಚೆನ್ನಾಗಿ ತಿಕ್ಕಿರಿ
ನೋವು, ಸ್ವಲ್ಪ ಅತಿ ಶೀಘ್ರ ಶಮನವಾಗಿ ಗುಣಪಡುವುದು

LITTLE'S
ORIENTAL BALM
ಇಂಡಿಯದ ಸುಪ್ರಸಿದ್ಧ
ಅತ್ಯುತ್ತಮ ಮುಲಾಮು.

ಇನ್ನೂ
ನಡುನೋವು ಸೊಂಟ
ನೋವು ತಲೆನೋವು, ಸಂಧಿ
ವಾಯು ಕ್ರಿಮಿಕೀಟಗಳ
ಕಡಿತ, ಶೈತ್ಯ, ನೆಗಡಿ, ಶೀತದ
ಉಬ್ಬಸ, ಶ್ವಾಸಕಾಸ,
ಗಂಟಲು ಕಟ್ಟುವುದು,
ಕೆಮ್ಮು ಮೊದಲಾದುವನ್ನೂ
ಗುಣಪಡಿಸುವುದು.

DIK 18

ಪಟೇಲರಿಗೆ ಹೆದರಿ ಓಡಿದ ಮೇಜಿಸ್ಟ್ರೇಟರು

ಅಮೇರಿಕನ್ ದೃಷ್ಟಿಯಲ್ಲಿ ಭಾರತ ಮುಖಂಡರು

ಕೊಂಗ್ರೆಸಿನ ಪೋಲಿಸ್ ಫೌಜುದಾರ್ ವಲ್ಲಭಾಯಿ

[ಇದು ಕೆಲವು ಅಮೇರಿಕನರಿಗೆ ಒದಗಲು ತಿಳಿಸಿದ ವಿಷಯ ಸಂಗ್ರಹ. ಇದ್ದರೆ ಸಾಕು, ಅವರದೊಂದು ಸ್ವಾರಸ್ಯವಾದ ಶೈಲಿ ಇದೆ. ಜಗತ್ತಿನ ಎಲ್ಲಾ ವರ್ತಮಾನ ವಿದ್ಯಮಾನಗಳೂ ಆ ಶೈಲಿಯಲ್ಲೇ ನಿರೂಪಿಸಿದರೆ ಅವರ ವಿರಾಮ ಕಾಲ ಹರ್ಷದಿಂದ ಕಳೆಯುತ್ತದೆ. ರಾಜಕೀಯದ ತಾತ್ವಿಕತೆಯು ಅವರ ಅಭಿರುಚಿಗೆ ಸಲ್ಲದು, ಇತರರ ಮಾತ್ರವಲ್ಲ ತಮ್ಮವರ ವಿಷಯದಲ್ಲೂ ಅವರು ಹೆಚ್ಚು ಆಸಕ್ತಿ ವಹಿಸುವುದಿಲ್ಲ. ತಾವು ಓದುವ ವಿಷಯ ಸಂಗತಿಗಳ ಸತ್ಯಾಸತ್ಯ ವಿಮರ್ಶೆಯು ಶ್ರಮವೂ ಅವರ ಮಟ್ಟಿಗೆ ಸಂಕಷ್ಟದಾಯಕವೆ. ಭಾರತದ ಕೆಲ ಮುಖಂಡರ ವಿಷಯವಾಗಿ ಅಮೇರಿಕದ ಒಂದು ವಿಶಾಲ ಪ್ರಾಚಾರವಿರುವ ಪತ್ರಿಕೆಯಲ್ಲಿ ಪ್ರಕಟವಾದ ಈ ಕೆಳಗಿನ ಸುದ್ದಿ ಸಂಗ್ರಹ ನಿರೂಪವು ಅಭಿರುಚಿದಾಯಕವಿರುವುದು.]

ಧಪೇದಾರ್ ಪಟೇಲ್

ಬಂಗಾಲದ ಹೂ, ಹುಲ್ಲು ತುಂಬಿದ ಹಳ್ಳಿ ಸಂಚಾರ ಮಾಡಿ ಗಾಂಧಿಯ ಕಾಲುಗಳು ಒಡೆದಿವೆ: ಬೆಂಡೇಜ್ ಕಟ್ಟಿದ ಅವರ ಪಾದಕ್ಕೆ ಹಿಂದೂ ಮುಸಲ್ಮಾನರು ಉದ್ದಂಡ ಬೀಳುತ್ತಾರೆ. ಇನ್ನೊಂದು ಕಡೆ ಅವರು ಹಿಂದೂ ಮುಸಲ್ಮಾನರಲ್ಲಿ ಭ್ರಾತೃತ್ವ ಉಪದೇಶಿಸುವಾಗ ಇನ್ನೊಂದು ಕಡೆ ಈ ಉಭಯ ಪಂಗಡದವರು ಚಾಕು ಚೂರಿಯಿಂದ ಕೊರಳು ಕರಳು ಕೆಡಿಯುತ್ತಿದ್ದಾರೆ.

ಗಾಂಧಿ ಪ್ರೀತಿ ಅಹಿಂಸೆ ಬೋಧಿಸುವಾಗ ಅವರ ಪಟ್ಟದ ಶಿಷ್ಯನೂ, 'ಅಂಧ ಅನುಯಾಯಿಯೂ' ಎನಿಸುವ ಬ್ರಿಟಿಷರ ಸೆರೆಮನೆ ನೆಂಟನಾದ ವಲ್ಲಭಾಯಿ ಪಟೇಲರೆಂಬವರು 40 ಕೊಮ್ಯುನಿಸ್ಟ್ ಮುಖಂಡರನ್ನು ಬಂಧಿಸಿಟ್ಟಿದ್ದಾರೆ.

ಒಟ್ಟಿನಲ್ಲಿ ಭಾರತದಲ್ಲಿ ಪ್ರತಿಯೊಂದೂ ಯಥಾಪ್ರಕಾರವೇ ನಡೆಯುತ್ತಿದೆ. ಅಲ್ಲಿಯ ಮಣ್ಣಿಗಿಂತ ಜನರು ಹೆಚ್ಚು ಫಲಸಮೃದ್ಧರು. ಜನರಿಗಿಂತ ಅಲ್ಲಿನ ಪರಸ್ಪರ ವಿರೋಧ ಸನ್ನಿವೇಶಗಳು ಹೆಚ್ಚು ಸಮೃದ್ಧವಾಗಿವೆ, ಈಗ ತಾನೇ ಸ್ವಾತಂತ್ರ್ಯದ ಬೆಳಕನ್ನು ಕಂಡಿರುವ ದೇಶದಲ್ಲಿ ಈ ಕೆಳಗಿನ ಸಮಸ್ಯೆಗಳಾಗಿವೆ:

ಹಿಂದೂ ಮುಸಲ್ಮಾನ ಜಾತಿಗಳಲ್ಲಿ ಕಟು ವೈಷಮ್ಯ; ಪರಿಣಾಮವಾಗಿ ಕಲ್ಕತ್ತದಲ್ಲಿ 6000 ಮಾನವ ಆಹುತಿಯಾಯಿತು. ಈಗ ಅದು ದುರಂತಮಯ ಪಾಕಿಸ್ತಾನದ ಹೋರಾಟವಾಗಿ ಬಿಗಿಗೊಳ್ಳುತ್ತಿದೆ.

ಆವಶ್ಯಕ ವಸ್ತುಗಳ ತಯಾರಿಕೆ ಕಡಿಮೆಯಿರುವಾಗಲೇ ಬೆಲೆಗಳು ವಿಪರೀತ ಏರಿದ್ದುದರಿಂದ ಜಗತ್ತಿನಲ್ಲೇ ಅತಿ ಶ್ರೀಮಂತರೆನಿಸುವವರೊಳಗೂ ಮಿಲಿಯಾವಧಿ ಅತಿ ದರಿದ್ರ ಜನತೆಯೊಳಗೂ ಕಚ್ಚಾಟಕ್ಕಾರಂಭವಾಗಿದೆ. ಎಲ್ಲಾ ಕಡೆಗಳಲ್ಲಿ ಮುಷ್ಕರಗಳ ಬೊಬ್ಬೆಗಳೇಳುತ್ತಿವೆ. ಕೊಮ್ಯುನಿಸ್ಟರ ಶಕ್ತಿ ಅಭಿವೃದ್ಧಿಯಾಗುತ್ತಿದೆ. ಕೊಂಗ್ರೆಸ್ ಮತ್ತು ಲೀಗಿನೊಳಗೆ ಎಡಬಲ ಪಕ್ಷಗಳು ತಲೆಯೆತ್ತುತ್ತಿವೆ.

ಗಾಂಧಿ ಯಂತ್ರೀಕರಣಕ್ಕೆ ವಿರೋಧ ಪ್ರಚಾರ ಮಾಡುತ್ತಿರುವಾಗ ಅವರ ಶ್ರದ್ಧಾನುಯಾಯಿಗಳು ಕೆಲವರು ಭಾರತವನ್ನು ಅಸ್ಸದ ಕೈಗಾರಿಕೆ ಕೇಂದ್ರ ಮಾಡುವ ಯೋಜನೆಗಳನ್ನು ತಯಾರಿಸುತ್ತಿರುವರು.

ಭಾರತಕ್ಕೆ ಸಿಕ್ಕುವ ಸ್ವಾತಂತ್ರ್ಯ ದೇಶೀ ಸಂಸ್ಥಾನಗಳಲ್ಲಿ ವಾಸಿಸುವ 93 ಮಿಲಿಯ ಭಾರತೀಯರಿಗೆ ಸಂಬಂಧಿಸುವುದಿಲ್ಲ. ಈ ಸಂಸ್ಥಾನಗಳು ವಿಚಿತ್ರಾಧಿಕಾರಗಳಿರುವ ಕೆಲವು ನಿರಂಕುಶ ಮಾಂಡಲೀಕರುಗಳಿಂದ ಆಳಲ್ಪಡುತ್ತವೆ. ಈ ರಾಜರುಗಳಿಗೆ ಸರಾಸರಿಯಲ್ಲಿ 11 ಬಿರುದಾವಳಿಗಳೂ, 5½ ಪತ್ನಿಯರೂ, 12½ ಮಕ್ಕಳೂ, 3½ ರಿಓಲ್ಸ್ [illegible] ಕಾರುಗಳೂ ಇವೆ. ಶೀಘ್ರದಲ್ಲಿ ಸ್ವತಂತ್ರಭಾರತ ಜನಾಂಗವು ಈ ರಾಜರುಗಳೊಡನೆ ಏನಾದರೊಂದು ಇತ್ಯರ್ಥ ಮಾಡಬೇಕಾಗುವುದು. ಕೊಮ್ಯುನಿಸ್ಟರು ಇವರನ್ನು ಓಡಿಸುವ ಧ್ಯೇಯವುಳ್ಳವರಾಗಿದ್ದಾರೆ.

ಅಧಿಕಾರವೇ ಸ್ಪೂರ್ತಿ

ಹಿಡಿತಕ್ಕೆ ಸಿಕ್ಕಲಾರದೆಂದು ತೋರುವ ಈ ದೇಶದ ವಿಲಕ್ಷಣ ಸನ್ನಿವೇಶಗಳನ್ನು ನಿಯಂತ್ರಣದೊಳಗೆ ತರಲು ಮುಸ್ಲಿಂ ಲೀಗಿನ ಮಹಮ್ಮದ್ ಆಲಿ ಜಿನ್ನರ ಜಾತೀಯ ದ್ವೇಷಾಂಧತೆಯು ಸಾಲದು, ಇಲ್ಲವೆ ಇದಕ್ಕೆ ಜವಾಹರಲಾಲ್ ನೆಹರುರುಗಳ ಮಧುರ ಧ್ಯೇಯವಾದವೂ ಸಾಲದು, ಮಾತ್ರವಲ್ಲ ಗಾಂಧಿಯ ಅಧ್ಯಾತ್ಮಿಕ ರಹಸ್ಯವಾಗಲಿ ರಾಜಕೀಯ ಚಾಣಾಕ್ಷವಾಗಲಿ ಸಾಲದು. ಭಾರತಕ್ಕೊಬ್ಬರು ವ್ಯವಸ್ಥಾಪಕರ ಅವಶ್ಯಕತೆ ಇದೆ. ಅಂತಹರೊಬ್ಬರು ಇದ್ದಾರೆ. ಗಾಂಧಿ ದೇವರಿಗೆ ಕಿವಿಗೊಟ್ಟು ಕೇಳಿ ತನ್ನ ರಾಜಕೀಯ ಯೋಜನೆಗಳನ್ನು ವಲ್ಲಭಾಯಿಯವರಿಗೆ (ಪಟ್ಯಕ್ಯೊಂಡು ಕ್ವಾ ಎರ್ಟಂತೆ ಉಚ್ಚಾರ) ವಹಿಸಿಕೊಟ್ಟರು. ಪಟೇಲರು ಗಾಂಧಿವಾದ ಕೇಳಿ ಆ ಯೋಜನೆಗಳನ್ನು ನಿರ್ದಿಷ್ಟವಾದ ರಾಜಕೀಯ ಕಾರ್ಯರೂಪಕ್ಕೆ ಭಾಷಾಂತರಿಸಿದರು.

ಪಟೇಲರು ತಾವು ಸನ್ಯಾಸಿಯೆಂದಾಗಲಿ ಮಧುರ ಭಾಷಿಯೆಂದಾಗಲಿ, ಮತೀಯ ಉನ್ಮತ್ತಗಾರರೆಂದಾಗಲೀ ನಟಿಸುವುದಿಲ್ಲ. ಅಮೇರಿಕನ್ ಘೋತುಗಳಲ್ಲಿ ಹೇಳುವಂತೆ ಅವರೊಬ್ಬ ರಾಜಕೀಯ ಯಜಮಾನ. ಶ್ರೀಮಂತ ಪಾರ್ಸಿ ಮತ್ತು ಹಿಂದೂ ಕೈಗಾರಿಕೆ ಮಾಲಿಕರು ಅವರ ಕೈಗೆ ವಿಪುಲ ದ್ರವ್ಯವನ್ನು ತೂರುತ್ತಾರೆ. ಈ ಉದಾರ ಹಣದಿಂದ ಮತ್ತು ಕೊಂಗ್ರೆಸಿನ ಬಲಿಷ್ಠ ಪ್ರೋತ್ಸಾಹದಿಂದ ಪಟೇಲರು ಭಾರತದ ಪ್ರತಿಯೊಂದು ಹೋರಾಟ ಸಮಸ್ಯೆಯೊಡನೆಯೂ ಪ್ರಭಾವಿತ ಸಂಪರ್ಕವನ್ನಿಟ್ಟುಕೊಳ್ಳುವ ಶಕ್ತಿಯುಕ್ತ ಯಂತ್ರವೊಂದನ್ನು ತಯಾರಿಸಿರುವರು. ಪ್ರತಿಯೊಂದು ಹೋರಾಟದಲ್ಲೂ ಅವರ ಧ್ಯೇಯ: ಭಾರತಕ್ಕೆ ಅಧಿಕಾರಗಳಿಸುವುದು.

ಹೊಸ ಕೇಂದ್ರ ಸರಕಾರದ ಗೃಹ ಮಂತ್ರಿ, ಸುದ್ದಿ ಖಾತೆ ಸಚಿವರಾಗಿಯೂ ಕೊಂಗ್ರೆಸ್ ಪಕ್ಷದ ಯಜಮಾನರಾಗಿಯೂ ಆಗಿರುವ ಪಟೇಲರ ಕೈಯಲ್ಲಿ ಸ್ವತಂತ್ರ ಭಾರತಕ್ಕಿರುವ ಮಹತ್ವದ ಎಲ್ಲಾ ಅಧಿಕಾರ ಶಕ್ತಿಗಳೂ ಒಟ್ಟುಗೂಡಿದಂತಾಗಿದೆ. ಭಾರವಾದ ಕೆಂಡಗಣ್ಣಿನ ಈ ವ್ಯಕ್ತಿ ಅತೀ ಶ್ರೇಷ್ಠ, ಇಲ್ಲವೆ ಅತೀ ಕನಿಷ್ಠ, ಇಲ್ಲವೆ ಅತೀ ಸಾಮಾನ್ಯ ಭಾರತೀಯ ಮುಖಂಡರಲ್ಲ. ಆದರೆ ತಿಳಕೊಳ್ಳಲು ಅತೀ ಸುಲಭವಾದ ಪುರುಷ ಇವರು. ಗಾಂಧಿಯನ್ನು ಬಿಟ್ಟರೆ ಭಾರತದಲ್ಲಿ ಮುಂದೇಳಬಹುದಾದ ರಾಜಕೀಯ ಬಿರುಗಾಳಿಯ ಅಲ್ಲಕಲ್ಲೋಲವನ್ನು ಎದುರಿಸಲು ಇವರಷ್ಟು ಸಮರ್ಥರಾದವರು ಬೇರೊಬ್ಬರಿಲ್ಲ.

ಪಟೇಲ್ ಇತಿಹಾಸ

ಪಟೇಲರು ವ್ಯವಸ್ಥೆಗೈದ್ದ ಮೊತ್ತಮೊದಲಿನ ಚಳವಳವೆಂದರೆ ವಿದ್ಯಾರ್ಥಿಯಾಗಿದ್ದಾಗ-ಪೆನ್ಸಿಲ್ ಮತ್ತು ಕಾಗದವನ್ನು ಹೆಚ್ಚು ಬೆಲೆಗೆ ಮಾರಿ ಲಾಭ ಗಳಿಸುತ್ತಿದ್ದ ಒರ್ವ ಉಪಾಧ್ಯಾಯನ ವಿರೋಧವಾಗಿ. ನಂತರ ಅವರು ಲಂಡನಿಗೆ ಹೋಗಿ ದಿನಕ್ಕೆ 16 ಗಂಟೆ ಓದಿ ನ್ಯಾಯಶಾಸ್ತ್ರ ಕಲಿತು ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿ ಪಡೆದರು. ನಂತರ ಯುರೋಪಖಂಡಕ್ಕೂ ಹೋಗದೆ ನೇರವಾಗಿ ಸ್ವದೇಶಕ್ಕೆ ಬಂದು ವಕಾಲತು ಸುರು ಮಾಡಿದರು. ಆ ಮೇಲೆ ಇದು ತನಕ ದೇಶ ಬಿಟ್ಟು ದೂರ ಕಾಲಿಡಲಿಲ್ಲ.

ಅವರ ವಕಾಲತು ಕೆಲಸವೆಂದರೆ ಕೊಲೆಗಡುಕರ ಮತ್ತು ದರೋಡೆಗಾರರ ಪರವಾಗಿ ವ್ಯವಹರಿಸುವುದೇ ಆಗಿತ್ತು. ಮಾತ್ರವಲ್ಲ ಜಿಲ್ಲಾ ಮೆಜಿಸ್ಟ್ರೇಟರುಗಳನ್ನು ಅವರು ತಮ್ಮ ತೀಕ್ಷ್ಣ ನಾಲಿಗೆಯಿಂದ ತುಂಬಾ ಭೀತಿಗೊಳಮಾಡಿದ್ದರು. ಪಟೇಲರು ತಮ್ಮ ಉದ್ಯೋಗವನ್ನು ವಿಸ್ತರಿಸುತ್ತಿರುವುದನ್ನು ಕೇಳಿ ಹತ್ತಿರದ ಜಿಲ್ಲೆಯ ಒರ್ವ ಮೆಜಿಸ್ಟ್ರೇಟರು ತಮ್ಮ ಕೋರ್ಟನ್ನು ಪಟೇಲರ ಮುಟ್ಟುವಿಕೆಗೆ ಎಟಕದಂತಿರುವ ಬೇರೊಂದು ಪಟ್ಟಣಕ್ಕೆ ಬದಲಾಯಿಸಿದರು!

ಇಂದು ಶತ್ರುಗಳು ತಮ್ಮನ್ನು "ಉಕ್ಕಿನ ಸರ್ವಾಧಿಕಾರಿ" 'ಹರ್ ಪಟೇಲ್' (ಹರ್ ಹಿಟ್ಲರ್ ಎಂದ ಹಾಗೆ) ಅನ್ನುವಾಗ ವಲ್ಲಭಾಯಿಯವರಿಗೆ ಒಂದು ತರದ ಸಪ್ಪೆಗಾದ ಸಂತೃಪ್ತಿಯುಂಟಾಗುತ್ತದೆ. ಆದರೆ ಅವರ ಬಿಗಿಯಾದ ಮನಸ್ಸಿನ ಪ್ರಸಂಗಾವಧಾನದ ಕುರಿತು ಅವರ ಶತ್ರುಗಳೂ ಮಿತ್ರರೂ ಒಂದು ಘಟನೆಯನ್ನು ತಿಳಿಸುತ್ತಾರೆ. ತನ್ನ ಕಾಯಿಲೆಯ ಪತ್ನಿಯನ್ನು ಪಟೇಲರು ಬೊಂಬಾಯಿಯ ಆಸ್ಪತ್ರೆಗೆ ಸೇರಿಸಿ ಮರುದಿನ ಅಹಮದಾಬಾದಿಗೆ ಬಂದು ಒಂದು ಕೊಲೆ ಕೇಸನ್ನು ವ್ಯವಹರಿಸುತ್ತಿದ್ದರು. ಆಗಲೇ ಒಂದು ತಂತಿ ವಾರ್ತೆ ಅವರಿಗೆ ತಲುಪಿತು 'ನಿಮ್ಮ ಪತ್ನಿ ಸ್ವರ್ಗಸ್ಥರಾದಳು' ಎಂಬುದರೊಳಗಿನ ವಿಷಯ ಓದಿ ಯಾವುದೊಂದು ಪ್ರತಿಕ್ರಿಯೆ ತೋರಿಸದೆ ಪ್ರಶಾಂತತೆಯಿಂದ ತಂತಿ ಪತ್ರವನ್ನು ಜೇಬಿನೊಳಗೆ ತುರುಕಿಸಿ ನ್ಯಾಯಾಧೀಶರೆದುರಿನಲ್ಲಿ ತನ್ನ ವ್ಯವಹರಣೆಯನ್ನು ಮುಂದುವರಿಸಿದರು.

ಗಾಂಧಿ ಸಂಪರ್ಕ

1915ರಲ್ಲಿ ದಕ್ಷಿಣ ಆಫ್ರಿಕದಲ್ಲಿ ವಿಜಯದ ಚಳವಳ ಮುಗಿಸಿ ಬಂದಿದ್ದ ಇನ್ನೊರ್ವ ವಕೀಲರಾದ ಗಾಂಧಿ ಅಹಮದಾಬಾದಿನ ಗುಜರಾತ್ ಕ್ಲಬ್ಬಿನಲ್ಲಿ ಭಾಷಣ ಮಾಡುವಾಗ ಪಟೇಲ್ ಇಸ್ಪೀಟ್ ಆಡುತ್ತಿದ್ದರು. ಬಿಳಿ ದೊರೆಗಳಂತೆ ಪಕ್ಕಾ ಐರೋಪ್ಯ ದುಸ್ತಿನಲ್ಲಿದ್ದ ಅವರು ಗಾಂಧಿಯನ್ನು ಕೇಳಲು ಸ್ವಲ್ಪ ಹೊತ್ತು ತಮ್ಮ ಇಸ್ಪೀಟ್ ನಿಲ್ಲಿಸಿದರು. ಮರುವರ್ಷ ಅವರು ಗಾಂಧಿಯನ್ನು ಸೇರಿಕೊಂಡರು.

1927ರಲ್ಲಿ ಪಟೇಲರು ಅಹಮದಾಬಾದಿನ ನಗರ ಸಭಾಧ್ಯಕ್ಷರಾದರು. ಗುಜರಾತಿನ ಅನಧಿಕೃತ ರಾಜಧಾನಿಗೆ ಇವರೊಬ್ಬ ಅಸಭಿಷಿಕ್ತ ರಾಜ. ಆಗ ಸಂಭವಿಸಿದ ಗುಜರಾತ್ ನೆರೆ ಹಾವಳಿಯ ಕಾಲದಲ್ಲಿ ಇವರು ತಮ್ಮ ವ್ಯವಸ್ಥಾಪನಾ ಶಕ್ತಿಯನ್ನು ಸಂಪೂರ್ಣ ತೋರಿಸಿದರು. ಆ ನೆರೆಯಿಂದ ಜನರು ಕಂಗಾಲಾದರು. ಮಾರ್ಗವಿಲ್ಲ, ವಾಹನವಿಲ್ಲ, ಇಂತಹ ಸಂಕಷ್ಟಗಳನ್ನು ಭಾರತೀಯರು ದೈವ ಶಾಪವೆಂದು ತಿಳಿಯುತ್ತಾರೆ.

ಪಟೇಲರು ನೆರೆ ನಿರ್ಗತಿಕರಿಗಾಗಿ ಯಾರಿಂದಲೂ ಗ್ರಹಿಸಲಾಗದ ಒಂದು ಧನಸಂಗ್ರಹ ಚಳವಳವನ್ನಾರಂಭಿಸಿ ಹಣ ಒಟ್ಟುಗೂಡಿಸಿದರು. ಸ್ವಯಂ ಸೇವಕರನ್ನು ಸೊಂಟ ತನಕ ನೀರಲ್ಲಿ ತೇಲಿಸಿ ಹಳ್ಳಿಯಿಂದ ಹಳ್ಳಿಗೆ ಆಹಾರವನ್ನು ಪೂರೈಕೆ ಮಾಡಿದರು. ಬೊಂಬಾಯಿಂದ ಸರಕಾರದ ಸಹಾಯ ಬರುವುದರೊಳಗೆ ಎಲ್ಲಾ ಏರ್ಪಾಡುಗಳು ಮುಗಿದಿದ್ದವು-ಜನರಿಗೆ ಸರಕಾರದ ಒಂದು ಕಾಸೂ ಬೇಕಾಗಿರಲಿಲ್ಲ.

ಅವರ ಅಮೋಘ ಕಾರ್ಯ

ಭಾರತ ಸರಕಾರ ದೃಢವಾಗಿ ಉಳಿಯಬೇಕಾದರೆ ಉತ್ತಮ ವ್ಯವಸ್ಥೆಯು ಅತ್ಯಾವಶ್ಯಕ. ಆ ದೇಶದ ಜನರು ಪಟೇಲರ ಬಾರ್ಡೋಲಿ ಕರನಿರಾಕರಣೆ ಚಳವಳವನ್ನು ಇಂದಿಗೂ ಸ್ಮರಿಸುತ್ತಾರೆ. ಹಲವು ವರ್ಷಗಳಿಂದ ಹಾಳು ಬೆಳೆ ಕೊಡುವ ಬಾರ್ಡೋಲಿ ಜಿಲ್ಲೆಗೆ ಶೇಕಡಾ 25ರಷ್ಟು ಭೂತೆರಿಗೆ ಹೆಚ್ಚಿಸಲ್ಪಟ್ಟಿತು. ಗಾಂಧಿಗೆ ಚಳವಳ ಹೂಡಲು ಇದು ಒಳ್ಳೇ ಸಮಯ. ಪಟೇಲರನ್ನು ಚಳವಳ ನಾಯಕರನ್ನಾಗಿ ನೇಮಿಸಲಾಯಿತು. ಅವರೆಂದರು "ನಮ್ಮ ಜಾನುವಾರುಗಳನ್ನು ಕೊಂಡು ಹೋಗಿ ಸರಕಾರದವರು ಸಾಕಿದರೆ ಇನ್ನೂ ಉತ್ತಮವಾಯಿತು. ಹೇಗಾದರೂ ನಮ್ಮ ಗದ್ದೆಗಳನ್ನು ಅವರು ರೈಲಿನಲ್ಲಿ ಹಾಕಿ ವಿಲಾಯಿತಿಗೆ ಕೊಂಡು ಹೋಗಲಾರರು ತಾನೆ!" ಎಂದು ರೈತರನ್ನು ಹುರಿ ದುಂಬಿಸಿದರು. ಪರಿಣಾಮವಾಗಿ ಸರಕಾರಕ್ಕೆ ಒಂದೇ ಒಂದು ರೂಪಾಯಿ ತೆರಿಗೆ ಸಿಗದಾಯಿತು. ಮತ್ತೆ ಸಂಧಾನವಾಗಿ ಶೇಕಡಾ 25ರಿಂದ ತೆರಿಗೆಯನ್ನು ಶೇಕಡಾ 6ಕ್ಕೆ ಇಳಿಸಲಾಯಿತು. ಅಲ್ಲಿಂದ ಅವರು ಸರ್ದಾರರಾದರು. ಬೊಂಬಾಯಿಯ ಇನ್ನೊರ್ವ ಕೊಂಗ್ರೆಸ್ ಧುರೀಣರಾದ ಕೆ. ಎಫ್. ನರಿಮೇನರು ಇವರನ್ನು ಮೊದಲಿನ ಸಲಕ್ಕೆ 'ಸರ್ದಾರ'ರೆಂದರು. (ಕೆಲ ವರ್ಷಗಳ ನಂತರ ಪಟೇಲ್ ನರಿಮೇನರು ಜಗಳವಾಡಿಕೊಂಡಾಗ ವಲ್ಲಭಾಯಿಯವರು ಅವರನ್ನು ಬೊಂಬಾಯಿ ರಾಜಕೀಯದಿಂದ ಹೊರ ಅಟ್ಟಿದರು.

ಬಾರ್ಡೋಲಿ ನಂತರ ಪಟೇಲ್ ಕೊಂಗ್ರೆಸಿನ ಮುಖ್ಯ ವ್ಯವಸ್ಥಾಪಕ ಸೂತ್ರ ವಹಿಸಿಕೊಂಡರು. ಗಾಂಧಿಯ ಅನುಯಾಯಿಗಳು ಏನು ತಿನ್ನಬೇಕು, ಏನು ಕುಡಿಯಬೇಕು ಮತ್ತು ಏನು ಧರಿಸಬೇಕೆಂದು ಅವರು ನಿರ್ದೇಶಿಸತೊಡಗಿದರು.

ಸ್ವತಃ ಅವರು ಮಿಲಿಯಗಟ್ಲೆ ತನ್ನ ಸಂಸ್ಥೆಯ ಹಣವನ್ನು ವ್ಯಯಿಸುವುದಾದರೂ ಅವರು ಸ್ವಂತವಾಗಿ ದುಡ್ಡಿನ ಭಕ್ತರಲ್ಲ. ಹದಿನಾರು ವರ್ಷದಲ್ಲಿ ಎಂಟನ್ನು ಅವರು ಬ್ರಿಟಿಷ್ ಜೈಲುಗಳಲ್ಲಿ ಕಳೆದಿದ್ದಾರೆ. ಅಂದಿನಿಂದ ಧೂಮ್ರ ಪಾನ, ಮಧ್ಯ ಪಾನ ತ್ಯಜಿಸಿದ್ದಾರೆ. ಅವರ ಮಗಳೇ ಅವರ ಪ್ರಧಾನ ಕಾರ್ಯದರ್ಶಿ. ಅವರ ಬಳಿ ಇರುವ 300 ಪುಸ್ತಕಗಳ ಬಂಡಾರದಲ್ಲಿನ ಎಲ್ಲಾ ಗ್ರಂಥಗಳೂ ಭಾರತೀಯ ಗ್ರಂಥಕಾರರಿಂದಲೇ ಬರೆಯಲ್ಪಟ್ಟವು.

ಪಟೇಲರ ಆಪ್ತ ಶ್ರೀಮಂತ ಬಿರ್ಲಾ, ದೊಡ್ಡ ನಾರು ಮತ್ತು ಅರಳೆ ಗಿರಣಿ ಮಾಲಕರಿದ್ದರೂ, ಬಿರ್ಲಾ ಉಡುವುದು ಕೈನೂಲಿನ ಖಾದಿ. ಗಾಂಧಿ ಪಟೇಲರ ಸಹಾಯದಿಂದ ಅವರು ಭಾರತವನ್ನು ಯಂತ್ರ ಕೈಗಾರಿಕಮಯ ಮಾಡುವ ಕನಸು ಕಾಣುತ್ತಿದ್ದಾರೆ. ಇಂಗ್ಲೆಂಡಿನ ಮೋರಿಸ್ ಮೋಟಾರಿನ ಮಿಲಿಯಾಧೀಶ ನಫೀಲ್ಡರೊಂದಿಗೆ ಇವರಿಗೆ ಕೈಗಾರಿಕೆ ಕರಾರು ಇದ್ದು ಹಿಂದುಸ್ಥಾನ್ ಟೆನ್ ಎಂಬ ಕಾರುಗಳನ್ನು ತಯಾರಿಸುವ ಕಾರ್ಖಾನೆ ಸ್ಥಾಪಿಸಿದ್ದಾರೆ. ಬಿರ್ಲಾರವರ ಬಂಡವಾಳವಿಲ್ಲದ ದೊಡ್ಡ ಕೈಗಾರಿಕೆ ಭಾರತದಲ್ಲೊಂದೂ ಇಲ್ಲವೆನ್ನಬಹುದು. ಈ ಬಿರ್ಲಾ ಪಟೇಲ್ ಸ್ನೇಹದ ಮೇಲೆ ಭಾರತದ ಸಮತಾವಾದಿಗಳಿಗೆ ದೊಡ್ಡ ಶಂಕೆ ಉತ್ಪನ್ನವಾಗಿದೆ.

"ಸಾರ್ವಜನಿಕ ಸುರಕ್ಷಿತಾ ಮಸೂದೆ"ಯ ಖಂಡನೆಯನ್ನು ಮಾಡಿ ಮಜೂರ ಮುಖಂಡರನ್ನು ಹಾಗೂ ಕಾಂಗ್ರೆಸ್ ಧುರೀಣರನ್ನು ಕೂಡಲೇ ಬಿಡುಗಡೆ ಮಾಡುವ ಹಾಗೂ ಈ ಕಾಯಿದೆಯನ್ನು ಕೂಡಲೇ ಹಿಂತೆಗೆದುಕೊಳ್ಳುವಂತೆ ಮದರಾಸು ಸರಕಾರವನ್ನು ನ್ಯಾಯಪೂರ್ವಕವಾಗಿ ಕೇಳಿಕೊಳ್ಳುವಂತೆಯೂ ಯು. ಯನ್. ಶ್ರೀನಿವಾಸ ಭಟ್ಟರು ಸೂಚಿಸಿದ ಠರಾವೊಂದು ಸರ್ವಾನುಮತದಿಂದ ದ. ಕ. ಜಿಲ್ಲಾ ವಾಣಿಜ್ಯ ನೌಕರರ ಮಹಾಸಭೆಯಲ್ಲಿ ಮಂಜೂರಾಯಿತು. ಈ ಮಹಾ ಸಭೆಯು ಕಾಂಗ್ರೆಸ್ ಕಛೇರಿಯಲ್ಲಿ ಕೂಡಿದ್ದು ವಾಣಿಜ್ಯ ನೌಕರರೆಲ್ಲಾ ಉತ್ಸಾಹದಿಂದ ಬಂದು ಕೂಡಿದ್ದರು. ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪ್ರಧಾನ ಕಾರ್ಯದರ್ಶಿ ಕೆ. ಕೆ. ಶೆಟ್ಟರು ವಾಣಿಜ್ಯ ನೌಕರರ ಕಾರ್ಯಕಾರಿ ಸಮಿತಿಯಲ್ಲಿ ಅಧ್ಯಕ್ಷರ ಅನುಮತಿಯಿಲ್ಲದೆ ಅಸಭ್ಯ ರೀತಿಯಿಂದ ವರ್ತಿಸಿದುದನ್ನು ಖಂಡಿಸುವ ಠರಾವೊಂದು ಆರ್. ಎ. ಬಜಾರರಿಂದ ಮಂಡಿಸಲ್ಪಟ್ಟು ಪ್ರಚಂಡ ಬಹುಮತದಿಂದ ಮಂಜೂರಾಯಿತು. ಅಲ್ಲದೆ ಸಂಘದ ವರ್ಗಣಿಯನ್ನು ಎರಡಾಣೆಯಿಂದ ನಾಲ್ಕಾಣೆಗೇರಿಸುವ ವಾಣಿಜ್ಯ ನೌಕರರ ಸಮಸ್ಯೆಯ ಸಂಪೂರ್ಣ ಪರಿಹಾರವು ಪರದೇಶೀ ಆಳ್ವಿಕೆಯ ಬಂಧ ವಿಮೋಚನೆಯಲ್ಲಿ ಮತ್ತು ಸಮತಾವಾದ ರಾಷ್ಟ್ರದ ನಿರ್ಮಾಣದಲ್ಲಿ ಹೊಂದಿದೆ ಎಂಬದೇ ಠರಾವುಗಳು ಅಂಗೀಕರಿಸಲ್ಪಟ್ಟುದಲ್ಲದೆ ವಾಣಿಜ್ಯ ನೌಕರರ ಜೀವನದ ಮಟ್ಟ ಬಹಳ ಕೀಳ ದೆಸೆಯಲ್ಲಿರುವುದರಿಂದ ಅದಕ್ಕೆ ಬೇಕಾದ ಕನಿಷ್ಟ ಕೇಳಿಕೆಗಳನ್ನೂ ವ್ಯಾಪಾರಿಕರ ಮುಂದಿಡಲಾಯಿತು. (—ಬಾತ್ಮಿ)

ನಾಟಕ: ಶ್ರೀ ಲಕ್ಷ್ಮೀ ಥಿಯೇಟರಿನಲ್ಲಿ ಶ್ರೀ ಬಾಲಸಿದ್ದೇಶ್ವರ ನಾಟಕ ಮಂಡಲಿ ಹಲಗೇರಿ ಇವರು, "ಪರಾಣಿ ಪಾಕ" ಎಂಬ ತಮ್ಮ ಪ್ರಥಮ ನಾಟಕವನ್ನು ಕಳೆದ ಶನಿವಾರ ತಾ. 1ನೇ ರಾತ್ರಿ ಯಶಸ್ವಿಯಾಗಿ ಆಡಿದರು. ಶ್ರೀ ವೈಕುಂಠ ಬಾಳಿಗ ಇವರು ಈ ನಾಟಕಗಳ ಕಂಟ್ರಾಕ್ಟರ್ ಶ್ರೀ ರಂಗನಾಥ ಮಲ್ಲಿಯವರ ವಿನಂತಿಯ ಮೇರೆಗೆ ಈ ನಾಟಕದ ಆರಂಭೋತ್ಸವ ನೆರವೇರಿಸಿದರು.

ಕಂಟ್ರೋಲ್ ತೆಂಗಿನಕಾಯಿಗಳು: ಕಂಟ್ರೋಲ್ ಬೆಲೆಗೆಂದು ಅಪರೂಪವಾಗಿ ಕಂಡುಬರುವ ತೆಂಗಿನ ಮರದ ಈ ಕಾಯಿಗಳು "ಸಮಗ್ರ ಹಿಂದುಸ್ಥಾನದ ವಸ್ತುಪ್ರದರ್ಶನಕ್ಕಿಡಲು ಯೋಗ್ಯವಾಗಿವೆ. (ಬಾತ್ಮಿ)

ಟ್ರೈನ್ಡ್ ಅಂಡರ್ ಗ್ರೆಜುವೇಟರ ಸಂಘ: ಸೆಕೆಂಡರಿ ಗ್ರೇಡ್ ತರಬೇತಿ ಉಪಾಧ್ಯಾಯರ ಸಂಬಳಗಳ ಕುರಿತಾದ ಸ್ಕೇಲಿನ ವಿಚಾರದಲ್ಲಿ ಸರಕಾರದವರಲ್ಲಿ ವಿನಂತಿಸುವ ಹಾಗೆ ಆ ಎಲ್ಲಾ ಉಪಾಧ್ಯಾಯರೂ ತಮ್ಮ ಸಂಬಳ ಶಾಲಾ ವಿಳಾಸಗಳನ್ನು, ಇತರ ಮಾಹಿತಿಗಳೊಂದಿಗೆ ಶ್ರೀ ಯು. ಉಮಾನಾಥರಾವ್, ಟೀಚರ್, ಮಿಲಾಗ್ರಿಸ್ ಹೈಸ್ಕೂಲ್ ಇವರಿಗೆ ಕಳುಹಿಸಬೇಕಾಗಿ ಅಪೇಕ್ಷಿಸಲಾಗಿದೆ.

ನಿಧನ: ನಿವೃತ್ತ ಪೋಲೀಸ್ ಪೆನ್ಶನರ ಶ್ರೀ ಎಂ. ಅನಂತ ಪ್ರಭುಗಳು ತಾ. 28-2-47ರಲ್ಲಿಯೂ ನಿವೃತ್ತ ಡಿಸ್ಟ್ರಿಕ್ಟ್ ಬೋರ್ಡ್ ಇಂಜಿನಿಯರ ಶ್ರೀ ಬಿ. ಶ್ರೀನಿವಾಸ ಬಾಳಿಗರು 3-8-47ರಲ್ಲಿಯೂ ನಿಧನರಾದರೆಂಬುದನ್ನು ತಿಳಿಸಲು ವಿಷಾದಪಡುತ್ತೇವೆ.

ದಿನಾಚರಣೆ: ಸ್ಥಳೀಯ ಗವರ್ನಮೆಂಟ್ ಕಾಲೇಜಿನ ವಿದ್ಯಾರ್ಥಿ ಉಪಾಧ್ಯಾಯರ ಸಂಘದ ವಾರ್ಷಿಕ ಸಮಾರಂಭವು ತಾ. 3-8-47ರಂದು ಪ್ರಿನ್ಸಿಪಾಲರಾದ ಶ್ರೀ. ಕೆ. ಬಿ. ಮಧ್ಯಸ್ಥರ ನೇತೃತ್ವದಲ್ಲಿಯೂ, ಪ್ರೊ॥ ಅಂಚನರ ಅಧ್ಯಕ್ಷತೆಯಲ್ಲಿಯೂ ಯಶಸ್ವಿಯಾಗಿಯೂ ಸಂಭ್ರಮದಿಂದಲೂ ಜರಗಿಸಲ್ಪಟ್ಟಿತು. ದ. ಕ. ಜಿಲ್ಲಾ ಟೀಚರ್ಸ್ ಗಿಲ್ಡಿನ ಅಧ್ಯಕ್ಷರಾದ ಶ್ರೀ ಎಚ್. ಮುಕುಂದರಾಯರು ಆಮಂತ್ರಿತರ ಪರವಾಗಿ ಬೋಧಪರ ಸಲಹೆಗಳನ್ನಿತ್ತು, ತರಬೇತಿ ಹೊಂದಿ ಹೋಗುವ ಉಪಾಧ್ಯಾಯರ ಕರ್ತವ್ಯಗಳಾದ ಐಕ್ಯಸಾಧನೆ, ಹೃತ್ಪೂರ್ವಕ ಉದ್ಯೋಗ ನಿರ್ವಹಣೆಗಳ ಅವಶ್ಯಕತೆಗಳನ್ನು ಒತ್ತಿ ಹೇಳಿದರು. ನಮ್ಮ ದೇಶದಲ್ಲೂ ಉಪಾಧ್ಯಾಯರ ಸ್ಥಾನಮಾನಗಳನ್ನು ಇಂಗ್ಲೆಂಡ್ ದೇಶಗಳಂತೆ ಸುಧಾರಿಸಬೇಕೆಂದೂ, ಉಪಾಧ್ಯಾಯರಲ್ಲಿ ವಿವಿಧ ಭೇದಾಭೇದಗಳನ್ನು ಮಾಡಬಾರದೆಂದೂ ತಿಳಿಸಿ

ಜಿಲ್ಲಾ ಪರಿಚಯ

ದರು. ಅಧ್ಯಕ್ಷರು ಯುಕ್ತ ಸಲಹೆ ಕೊಟ್ಟು ವಂದನಾರ್ಪಣೆಗಳಾದ ನಂತರ ಮೊಡೆಲ್ ಸ್ಕೂಲಿನ ವಿದ್ಯಾರ್ಥಿಗಳು 'ಲವಕುಶ' ಎಂಬ ಗೀತಾ ನಾಟಕವನ್ನು ವಿದ್ಯಾರ್ಥಿ ಉಪಾಧ್ಯಾಯರು 'ಅಳಿಯನ ಎರ್ರೈವಲ್' ಎಂಬ ಪ್ರಹಸನವನ್ನು ಅತ್ಯಂತ ಮನರಂಜಕವಾಗಿ ಹಾಡಿ ತೋರಿಸಿದರು.

ತೆಂಗಿನ ಕಾಯಿ: ನಗರದಲ್ಲಿ ತೆಂಗಿನಕಾಯಿಗೂ ತೆಂಗಿನ ಎಣ್ಣೆಗೂ ಕ್ಷಾಮ ಉಂಟಾದಂತೆ ತೋರುತ್ತದೆ. ಈ ಎರಡು ವಸ್ತುಗಳೂ ದೊರೆಯುವುದು ಅತಿ ದುರ್ಲಭವಾಗುತ್ತಿದೆ. ತೆಂಗಿನ ತೋಟಗಳ ತವರೂರಾದ ಈ ಜಿಲ್ಲೆಯಲ್ಲಿ ಅದರ ಕಾಯಿಗಳಿಗೆ ಬರಗಾಲವಾದಂತಾದುದು ಅತ್ಯಂತ ಕ್ರೂರ ವಿಧಿಯ ಮಾಟವೆನ್ನಬೇಕು. ಹಲವು ಕಡೆಗಳಿಂದ ಈ ಕುರಿತಾದ ಸಾರ್ವಜನಿಕ ಗೋಳನ್ನು ಅಧಿಕಾರಿಗಳ ಗಮನಕ್ಕೆ ತರಲು ಪ್ರಯತ್ನಗಳಾಗಿವೆಯಾದರೂ ಇದು ತನಕ ಯಾವುದಾದರೊಂದು ಏರ್ಪಾಡು ಕೈಕೊಂಡದ್ದು ತೋರುವುದಿಲ್ಲ. ಸ್ಥಳೀಯ ಪತ್ರಿಕೆಯೊಂದು "ಕಂಟ್ರೋಲ್ ದರಕ್ಕೆ ಮಾರಲ್ಪಡುವ ತೆಂಗಿನ ಕಾಯಿಗಳನ್ನೂ ಈ ಕಂಟ್ರೋಲ್ ಯುಗದ ಚಿರಸ್ಮರಣೀಯ ಕುರುಹಾಗಿ ವಸ್ತು ಪ್ರದರ್ಶನಾಲಯಗಳಲ್ಲಿ ಇಡಬೇಕು" ಎಂಬ ಅರ್ಥದಲಿ ಭಂಗವಾಗಿ ನಿರೂಪಿಸಿದ್ದು ತೆಂಗಿನ ಕಾಯಿ ಕಂಟ್ರೋಲಿನ ಸಡಿಲು ಏರ್ಪಾಡಿನ ಪರಿಣಾಮದ ಲಕ್ಷಣವೆನ್ನಬೇಕಾದು—ಹೀಗೆಂದೊಂದು ಬಾತ್ಮಿ.

ರೇಶನ್ ಚೌಕಿ ವ್ಯವಹಾರ: ನಗರದ ಹೊರವಠಗಳಲ್ಲಿರುವ ರೇಶನ್ ಚೌಕಿದಾರರು ಮೋಟಾರ ಬಸ್ ಪ್ರಯಾಣಿಕರ ಪೆಟ್ಟಿಗೆ ಟ್ರಂಕು ಮೂಟೆಗಳನ್ನು ಪತ್ತೆ ಮಾಡುವಾಗ ಬಹಳ ಉದ್ಧಟತನವನ್ನು ತೋರಿಸುತ್ತಿರುವರೆಂಬ ದೂರು ಸ್ಥಳೀಯ ಪತ್ರಿಕೆಯೊಂದರಲ್ಲಿ ಪ್ರಕಟವಾಗಿದೆ. ದೇಶದ ರಾಜಕೀಯ ಹವಾಮಾನ ಹೇಗೆ ಬದಲಾವಣೆಗೊಳ್ಳುತ್ತಿದೆಯೆಂದು ಒಹುಶ್ಯ ಈ ಚೌಕಿದಾರರಿಗೆ ತಿಳಿಯುವ ವಿಷಯವಿರಲಿಕ್ಕಿಲ್ಲವೆಂದೂ, ಇವರು ತಮ್ಮ ಕರ್ತವ್ಯ ನಿರ್ವಹಣದಲ್ಲಿ ಪ್ರಯಾಣಿಕರಿಗೆ ಅತೀ ಕಮ್ಮಿ ಅನಾನುಕೂಲತೆಯಾಗುವಂತೆ ನೋಡಿಕೊಳ್ಳಬೇಕೆಂದು ಪತ್ಯೇಕ ತಿಳಿಸುವ ಅವಶ್ಯಕತೆ ಇಲ್ಲ. ಮುಖ್ಯವಾಗಿ ಎಕ್ಕಾಂಗಿನಿಯರಾಗಿ ಪ್ರಯಾಣ ಮಾಡುವ ಮಹಿಳೆಯರಿಗೂ ವೃದ್ಧರಿಗೂ ಮೋಟಾರಿನ ಮಾಡು ಹತ್ತಿ ಟ್ರಂಕು ಬಿಚ್ಚಿ ತೋರಿಸಿ ಎಂದು ಆಜ್ಞಾಪಿಸುವುದು ಹಾಸ್ಯಾಸ್ಪದ ಸಂಗತಿಯು. ಮೇಲಾಧಿಕಾರಿಗಳು ಈ ವಿಷಯ ಗಮನ ತೆಗೆದುಕೊಳ್ಳುವರಾಗಿ ಒರ್ವ ಬಾತ್ಮಿದಾರರು ವಿನಂತಿಸುತ್ತಾರೆ.

ಬೆಲ್ಲ, ಬೆಂಕಿಪೆಟ್ಟಿಗೆ: ಮಾರಾಟ ಕಂಟ್ರೋಲ್ ತೆಗೆದ ಮೇಲೆ ಬೆಲ್ಲ ಸಿಗುವುದು ಅಪರೂಪವಾಗಿದೆ ಎಂತಲೂ, ಬೆಂಕಿಪೆಟ್ಟಿಗೆಗಳನ್ನು ರೇಶನ್ ಅಂಗಡಿಗಳಲ್ಲಿ ಕಾರ್ಡಿಗೆ ತಿರಂಕೆ ವಿತರಣೆ ಮಾಡಲು ಏರ್ಪಡಿಸಿದ್ದು ಸ್ತುತ್ಯವಾದರೂ ಆ ಪ್ರಮಾಣವನ್ನು ಇಮ್ಮಡಿ ಮಾಡುವುದು ಯುಕ್ತವೆಂಬೊಂದು ಬಾತ್ಮಿ.

ಸೇಂದಿ ಅಂಗಡಿಗಳು—ಅಕ್ಟೋಬರ ತಿಂಗಳಲ್ಲಿ ಮದ್ಯನಿಷೇಧ ಕಾನೂನು ನಮ್ಮ ಜಿಲ್ಲೆಯಲ್ಲೂ ಜ್ಯಾರಿಗೆ ಬರಬಹುದಾದ್ದರಿಂದ ಸೇಂದಿ ಶರಾಬು ಗುತ್ತಿಗೆಗಳ ಹರಾಜು ಇಳ್ಳಿಸಲ್ಪಟ್ಟಿತಷ್ಟೆ. ಪುನಃ ಸರಿಯಾದ ನೋಟೀಸು ಇಲ್ಲದೆ, ಎಪ್ರಿಲಿನಿಂದ ಅಕ್ಟೋಬರ ವರೆಗಿನ ಅವಧಿಗೆ ಗುತ್ತಿಗೆಗಳ ಹರಾಜು ನಡೆಯಿತೆಂದೂ, ಹಲವರಿಗೆ ಇದು ತಿಳಿದುಬಂದಿಲ್ಲವೆಂದೂ ಕೆಲವರ ದೂರು ಇದೆ.

ಯಕ್ಷಗಾನ ಶ್ರೀ ಮಹಿಷಾಸುರಮರ್ಧಿನಿ ಯಕ್ಷಗಾನ ಕಲಾ ಸಭಾ, ಬೋಳಾರ ಇವರು ಕಳೆದ ತಾ. 26ನೇ ಶುಕ್ರವಾರ ರಾತ್ರಿ, ಶ್ರೀ ಬಿ. ಲೋಕೋಜಿರಾವ್ ಇವರ ಹಾಡುವಿಕೆಯಿಂದಲೂ, ಶ್ರೀ ವಿಠಪ್ಪನವರ ಮೃದಂಗ ವಾದನದಿಂದಲೂ, ಶ್ರೀ ರಾಮಕೃಷ್ಣನವರ ಚೆಂಡೆ ವಾದನದಿಂದಲೂ "ವೈದರ್ಭಿ ಪ್ರತಾಪ" ಎಂಬ ನೂತನವಾದ ಯಕ್ಷಗಾನ ಕಲಾಕಚೇರಿಯನ್ನು ಶ್ರೀ ಬೋಳಾರ ಚೆನ್ನಪ್ಪ ಮೇಸ್ತ್ರಿಯವರ ಹಿತ್ತಲಿನಲ್ಲಿ ಜರಗಿಸಿದರು.

ಉತ್ಸವ—ಇಲ್ಲಿಯ ಶ್ರೀ ಆದೀಶ್ವರ ಸ್ವಾಮಿ ಜೈನ ಬಸದಿಯಲ್ಲಿ ಜರಗುವ ವರ್ಷಾವಧಿ ಉತ್ಸವವು ಇದೇ ಬರುವ ಮಾರ್ಚ ತಿಂಗಳ ತಾ. 8ಕ್ಕೆ ಪ್ರಾರಂಭವಾಗಿ ತಾ. 8ಕ್ಕೆ ಕೊನೆಗೊಳ್ಳುವುದು. ತಾ. ನೇ ದಿನ ರಾತ್ರಿ ಮೆರವಣಿಗೆ ಉತ್ಸವಗಳಿವೆ. ಮೈಸೂರಿನ ಸಂಗೀತ ವಿದ್ವಾನ್ ಶ್ರೀನಿವಾಸ ಅಯ್ಯಂಗಾರ್ ಇವರ ಗಾಯನ, ಹಾರ್ಮೋನಿಯಮ್ ವಾದನದೊಡನೆ ಕಟ್ಟೆ ಪೂಜಾಮಹೋತ್ಸವವು ಜರಗುವುದು ಎಂದು ಶ್ರೀ ಶ್ರೀನಿವಾಸ ಬಲ್ಲಾಳರವರು ತಿಳಿಸುತ್ತಾರೆ.

ಹರಿಕಥಾ ಕಾಲಕ್ಷೇಪ— ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರ ಪ್ರೋತ್ಸಾಹ ಈ ಕಡೆಗಳಲ್ಲಿ ಕಳೆದ ಒಂದೂವರೆ ತಿಂಗಳಿನಿಂದ ಹರಿಕೀರ್ತನೆ ನಡೆಸಿ ಜನರ ಆದರಕ್ಕೆ ಪಾತ್ರರಾದ ಬೆಂಗಳೂರಿನ ಹರಿಕಥಾ ಶಿರೋಮಣಿ ಶ್ರೀ ರಾಮಸ್ವಾಮಿ ನಾಯ್ಡು ಇವರು ಈಗ ತಾನೆ ಮಂಗಳೂರಿಗೆ ಬಂದಿದ್ದು ನಿನ್ನೆಯಿಂದ ಇಲ್ಲಿ ಹರಿಕೀರ್ತನೆ ಆರಂಭಿಸಿರುವರು. ನಿನ್ನೆ ರಾತ್ರೆ (ರವಿವಾರ) ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಸುಕನ್ಯಾ ಚರಿತೆಯನ್ನು ಕೀರ್ತನೆ ಮಾಡಿ ಪ್ರೇಕ್ಷಕರನ್ನು ಆನಂದಗೊಳಿಸಿದರು. ಇಲ್ಲಿ ಇನ್ನೂ ಕೆಲವು ಕಥೆಗಳನ್ನು ನಡೆಸಲಿರುವರಾಗಿ ತಿಳಿದುಬಂದಿದೆ.

KANARA COMMERCIAL BANK LTD.

PUTTUR

H O Puttur] Estd 1920 [Branch Vittal

All kinds of Banking Business transacted.

Deposits.- Current, Savings, Cumulative.

Deposits are accepted

Fixed Deposits for periods of 3 months and above up to 24 months are accepted.

SEASON DEPOSITS

ARE Accepted up to 31-5-1947 Terms on application.

ಕೊಂಚಾಡಿ ತಾ. 21ರಂದು ಇಲ್ಲಿಯ ಶ್ರೀ ರಾಮಾಶ್ರಮ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಮಂಗಳೂರು ರೇಂಜಿನ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ್ ಎನ್. ಸುಂದರರಾವ್ ಅವರ ಅಧ್ಯಕ್ಷತೆಯಲ್ಲಿ ಮಕ್ಕಳ ಹೆತ್ತವರ ಕೂಟದ ಸಭೆಯೊಂದು ಜರಗಿತು. ಅಂದು ಪ್ರೊ॥ ಶ್ರೀ ಶಂಕರನಾರಾಯಣ ಶಾಸ್ತ್ರಿಗಳ ಅರ್ಥ ಹೇಳುವಿಕೆ ಮತ್ತು ಶ್ರೀ ಕೆ. ವಿ. ದಾಸ್ ಇವರ ವಾಚನದಿಂದೊಡಗೂಡಿ 'ರಾವಣ ಮಂಡೋದರಿ ಸಂವಾದ' ಎಂಬ ಭಾಗದ ರಾಮಾಯಣ ವಾಚನ ನಡೆಯಿತು.

ಕಾರ್ಕಳ, ವಾರ್ಷಿಕೋತ್ಸವ—ಇಲ್ಲಿಯ ಭಗಿನೀ ವೃಂದದ ವಾರ್ಷಿಕೋತ್ಸವವು ತಾ. 23ರಂದು ಮಂಗಳೂರಿನ ಶ್ರೀಮತಿ ಜೆ. ಎಂ. ಬ್ರಿಟೋರವರ ಅಧ್ಯಕ್ಷತೆಯಲ್ಲಿ ಅತ್ಯಂತ ಯಶಸ್ವಿಯಾಗಿ ಜರಗಿತು.

ಸ್ಟೋರಿನ ಮಹಾಸಭೆ— ಸ್ಥಳೀಯ ಕೋಪರೇಟಿವ್ ಸ್ಟೋರಿನ ಸದಸ್ಯರ ವಾರ್ಷಿಕ ಮಹಾಸಭೆಯು ಇತ್ತೀಚೆಗೆ ಇಲ್ಲಿಯ ಬೋರ್ಡ್ ಹೈಸ್ಕೂಲಿನಲ್ಲಿ ನಡೆಯಿತು.

ಪೆರಡಾಲ ಕಸ್ತೂರಿಬಾ ಪುಣ್ಯದಿನ— ಪ್ರೇಮಕೂಟದ ಆಶ್ರಯದಲ್ಲಿ ಕಸ್ತೂರಬಾ ಪುಣ್ಯ ದಿನಾಚರಣೆಯು ತಾ. 22—2 47ರಂದು ಡಾ॥ ಪಿ. ಎಸ್. ಶಾಸ್ತ್ರಿಗಳ ಅಧ್ಯಕ್ಷತೆಯಿಂದ ನೆರವೇರಿತು. ಪ್ರಾತಃಕಾಲ ಪ್ರಭಾತಫೇರಿ ಧ್ವಜವಂದನೆಗಳಾದ ನಂತರ, ಪ್ರಬಂಧ ಸ್ಪರ್ಧೆ ನಡೆದು, ಸಂಜೆಗೆ ನೂಲುವುದು ಮತ್ತು ಮೆರವಣಿಗೆಗಳಾದ ನಂತರ ಸಾರ್ವಜನಿಕ ಸಭೆ ಸೇರಿತು. ಸಭೆಯಲ್ಲಿ ಶ್ರೀಗಳಾದ ಬಿ. ಎಂ. ಕೃಷ್ಣ ಭಟ್ಟ, ಶ್ರೀ ಸುಬ್ರಮಣ್ಯಂ ಎಂ. ಎಲ್. ಸಿ. (ಕೊಯಂಬುತ್ತೂರು) ಬಿ. ಕೊರಗ ಇವರು ಮಾತನಾಡಿದ ಬಳಿಕ ಅಧ್ಯಕ್ಷ ಭಾಷಣದ ನಂತರ ಧನ್ಯವಾದದೊಡನೆ ಸಭಾಂತ್ಯವಾಯಿತು.

ಮಂಗಳೂರು ಸರ್ಕಲ್ ಕಾಂಗ್ರೆಸ್ ಚುನಾವಣೆ ಮೊಹರಾ ಪತ್ರಿಕೆ—೧ ವಿಷಯ ಮಂಗಳೂರು ಸರ್ಕಲ್ ಕಾಂಗ್ರೆಸ್ ಚುನಾವಣೆ

೨ ನಾಮಪತ್ರಗಳನ್ನು ಕೊಡುವಿಕೆ ೮ ೩—೪೭ಕ್ಕೆ ಕೊನೆ ತಾರೀಕು (ಸಂಜೆ ೬ರ ವರೆಗೆ)

೩ ನಾಮಪತ್ರ ಪರಿಶೀಲನೆ ೧೦—೩—೪೭ (ಸಾಯಂಕಾಲ ೫ಕ್ಕೆ), ಅದರ ಪ್ರಕಟಣೆ ಸಾಯಂಕಾಲ ೬ಕ್ಕೆ

೪ ನಾಮಪತ್ರ ಹಿಂತೆಗೆದುಕೊಳ್ಳುವಿಕೆ ೧೧ ೩—೪೭ ಸಾಯಂ ೬ರ ವರೆಗೆ

೫ ಹಿಂತೆಗೆದುಕೊಂಡವರ ಹೆಸರು ಮತ್ತು ಹುರಿಯಾಳುಗಳ ಹೆಸರ ಪ್ರಕಟಣೆ ೧೨ ೩—೪೭ (ಸಂಜೆ ೬ ಗಂಟೆಗೆ)

೬ ಚುನಾವಣೆ ೧೪—೩—೪೭ ಬೆಳಗ್ಗೆ ಗಂಟೆ ೮—೧೨ರ ವರೆಗೆ, ಸಂಜೆ ೨—೬ರ ವರೆಗೆ

೭ ಮತಗಣನೆ ಹಾಗೂ ಪರಿಣಾಮ ನೋಡುವಿಕೆ ಮತ್ತು ಪ್ರಕಟಣೆ ೧೫—೩—೪೭

೮ ಚುನಾವಣೆಯ ಆಕ್ಷೇಪಗಳಿದ್ದರೆ ಒಪ್ಪಿಸುವಿಕೆ ೨೨—೩—೪೭ ಸಂಜೆ ೫ರ ವರೆಗೆ

ಎಚ್. ನಾರಾಯಣರಾವ್,
ಚುನಾವಣೆ ಅಧಿಕಾರಿ, ಮಂಗಳೂರು

ತಾ. ೧—೩—೪೭ ಸರ್ಕಲ್

ಶ್ರೀರಾಮ ವಾಜಪೇಯಿಯವರ ಆಗಮನ ಮಂಗಳೂರು ತಾ. 26 ಹಿಂದುಸ್ಥಾನ ಚರಸಂಘದ ಅಖಿಲಭಾರತ ರಾಷ್ಟ್ರೀಯ ಸಂಘಟಕರಾದ ಪಂ॥ ಶ್ರೀ ರಾಮ ವಾಜಪೇಯಿಯವರು ಇಂದು ಇಲ್ಲಿಗೆ ಬಂದಿದ್ದರು. ಅವರು ಬೆಳಗ್ಗೆ ರೈಲಿನಿಂದಿಳಿದಾಗ ಹಿಂದುಸ್ಥಾನ ಸ್ಕೌಟು ಸಂಘದವರು ಅವರನ್ನು ಸ್ವಾಗತಿಸಿದರು.

ಸಂಜೆ 4½ ಗಂಟೆಗೆ ಪಂಡಿತರು ಸ್ಥಳೀಯ ವಿದ್ಯಾಸಂಸ್ಥೆಗಳನ್ನು ಸಂದರ್ಶಿಸುತ್ತಾ ಭಗಿನೀ ಸಮಾಜಕ್ಕೆ ಹೋದರು. ಶ್ರೀಮತಿ ಲೀಲಾದೇವಿಯವರು ಪಂಡಿತಜೀಯವರನ್ನು ಸ್ವಾಗತಿಸಿದರು. ಪಂಡಿತರು ತಮ್ಮ ಮಾತಿನಲ್ಲಿ ನಮ್ಮ ಹಿಂದಿನ ಸ್ತ್ರೀಯರು ಮಾಡಿದ ಸೇವೆ ತ್ಯಾಗಗಳನ್ನು ವಿವರಿಸಿದರು. ಶ್ರೀಮತಿ ಕಲ್ಯಾಣಿ ಶೆಟ್ಟಿಯವರು ವಂದನೆ ಅರ್ಪಿಸಿದರು.

ಜಗತ್ತು ಸತ್ಯಶೀಲಗಳ ಕಡೆ ತಿರುಗಬೇಕು

'ಅಧ್ಯಾತ್ಮಿಕ ವಿಷಯಗಳಲ್ಲಿ ಚಿತ್ತವಿಡಿರಿ'

ಸಾಂಸ್ಕೃತಿಕ ಸಮ್ಮೇಳನಕ್ಕೆ ರಾಧಾಕೃಷ್ಣರ ಸಂದೇಶ

ಈ ಹೊಸ ತತ್ವ ಜ್ಞಾನವು ಹೊಸ ಅಧ್ಯಾತ್ಮಿಕ ಮೌಲ್ಯಕ್ಕಾಗಿ ವಿನಿಯೋಗಿಸಬೇಕು. ಜಪಾನು ಜರ್ಮನಿಗಳ ದುರಂತವು ನಮಗೊಂದು ಪಾಠವಾಗಿರಲಿ. ಅವರ ವೈಜ್ಞಾನಿಕ ವೈಶಿಷ್ಟ್ಯ, ಅವರ ಕೈಗಾರಿಕೆಯ ಪರಿಪೂರ್ಣತೆ, ಅವರ ಸೈನ ಶಕ್ತಿಗಳೆಲ್ಲವೂ ಅಧಃಪತನ ಹೊಂದಿದವು. ಕಾರಣ? ಅವುಗಳನ್ನು ಯೋಗ್ಯ ರೀತಿಯಲ್ಲಿ ಉಪಯೋಗಿಸಿಕೊಳ್ಳುವ ವಿವೇಕ ತಿಳುವಳಿಕೆಗಳು ಅವರಿಗಿಲ್ಲದಾದವು.

ನ್ಯೂರೆಂಬರ್ಗದಲ್ಲಿ ನಾಜೀ ಪುಢಾರಿಗಳ ವಿಚಾರಣೆಯ ಕಾಲದಲ್ಲಿ ಆರೋಪಿಗಳ ಪರವಾಗಿ ಜೆಕೋಸ್ಲೋವೇಕಿಯದ ನಾಜೀ ಹಿಂಸಕನಾಗಿದ್ದ ಫ್ರೆಂಕನು ತನ್ನ ಕೊನೆಯ ಹೇಳಿಕೆಯಲ್ಲಿ ಹೇಳಿದ ಮಾತುಗಳು ಗಮನೀಯವಿವೆ ಅವನೆಂದ "ಜರ್ಮನ್ ಜನರ ಪರವಾಗಿ ಕೊನೆಯ ಹೇಳಿಕೆಯನ್ನು ಹೇಳಲು ಮುಖ್ಯ ಆರೋಪಿಯಾದ ಹರ್ ಹಿಟ್ಲರನು ಇಲ್ಲಿಲ್ಲ ನಮ್ಮ ಸೋಲಿಗೆ ನಮ್ಮ ಶಸ್ತ್ರಾಸ್ತ್ರಗಳ ನಿರ್ಬಲತೆಯು ಕಾರಣವಲ್ಲ, ದೇವರಿಂದ ದೂರ ಹೋದ ಹೃದಯಗಳಿಂದ ಹಿಟ್ಲರನನ್ನು ಅನುಸರಿಸಿದುದದಕ್ಕೆ ಆ ಪರಮಾತ್ಮನು ನಮಗೆ ತಕ್ಕ ಶಿಕ್ಷೆಯನ್ನೇ ವಿಧಿಸಿದನು"

ಯಾವಾಗ ಒಂದು ಜನಾಂಗ ಅವಿಚಾರ ಪೂರ್ವಕವಾಗಿ ದೇವರಿಂದ ದೂರ ಹೋಗುತ್ತದೊ ಮತ್ತು ಯಾವಾಗ ಅದು ಲೌಕಿಕ ಸುಖ ಸಾಧನೆಗಾಗಿ ಆಧ್ಯಾತ್ಮಿಕ ತತ್ವಗಳನ್ನು ಮರೆತ್ತದೊ ಅಂದಾ ಜನಾಂಗಕ್ಕೆ ಕೇಡು ಕಟ್ಟಿಟ್ಟದ್ದು ಇಂದು ಅತ್ಯಾವಶ್ಯಕವಾದದ್ದು ಕೈಗಾರಿಕೆಗಳ ಪುನರ್ರಚನೆಯಲ್ಲ ಇಲ್ಲವೆ ಶಾಲಾ ಕೋಲೇಜುಗಳ ಪುನರ್ವ್ಯವಸ್ಥೆಯಲ್ಲ, ನಾವಿಂದು ಮಾನವನನ್ನೇ ಪುನರಚಿಸಬೇಕಾಗಿದೆ ಹೊಸ ಜಗತ್ತಿನ ನಿರ್ಮಾಣಕ್ಕಾಗಿ ಹೊಸ ಮಾನವ ಅಂತಃಕರಣವೊಂದನ್ನು ನಿರ್ಮಿಸಬೇಕು

ಅನೇಕರಿಗಿಂದು ದೈವೀಕ ಶಕ್ತಿಯಲ್ಲಿ ವಿಶ್ವಾಸ ಸಡಿಲಾಗಿದೆ ಆದರೆ ನೀವು ಹಾಗೆ ಅಸತ್ಯವಂತರೂ ಅಪ್ರೀತಿಯವರೂ ಆಗಿರಬಾರದೆಂದು ಹೇಳಿದರೆ ಅವರು ಕೋಪಿಸಿಕೊಳ್ಳುವರು ಸತ್ಯ ಪ್ರೀತಿಗಳು ಎಲ್ಲಾ ಮತಗಳ ಧರ್ಮಸಾರ ಇದಕ್ಕನುಸಾರವಾಗಿ ನಾವು ವ್ಯಕ್ತಿಗಳನ್ನು ಮರ್ಯಾದಿಸಬೇಕು. ವ್ಯಕ್ತಿಯೇ ಎಲ್ಲಾ ಪೂಜ್ಯ ಭಾವನೆಗಳ ನಿರ್ವಾಹಕ ಇಂತಹ ಅನೇಕ ಮಾನವರಿಂದ ಮಾನವಕೋಟಿಯುಂಟಾಗಿದೆ.

ಇಂದು ಜಗತ್ತು ಈ ಆಧ್ಯಾತ್ಮಿಕ ಭಾವನೆಗಳನ್ನು ಕಡೆಗಾಣಿಸುವ ಲೌಕಿಕ ವಿಜ್ಞಾನ ತತ್ವ ಪ್ರೇರಣೆಯಿಂದ ದೇವರಲ್ಲಿ ಅವಿಶ್ವಾಸವಿಟ್ಟಿರುವುದರಿಂದಲೇ ನಮ್ಮ ದುರ್ದೆಶೆಗೆ ಕಾರಣವಾಗಿದೆ ನಾವು ಜಪಾನ್ ಜರ್ಮನಿಗಳ ತಪ್ಪನ್ನು ಪುನಃ ಮಾಡದಂತಾಗಲಿ ಜ್ಞಾನ ಸಂಶೋಧಕರಾದ ನಾವು ಮುಖ್ಯವಾಗಿ ನಮ್ಮ ಉದ್ಯೋಗವನ್ನು ಬಿಡಬಾರದು ನಾವು ಮಾನವ ಹೃದಯದ ಉದ್ದಾರತೆಯನ್ನು ಸ್ಫೋಟಗೊಳಿಸಿ ನಾಶವಾಡಬಾರದು ನಾವು ಆಧ್ಯಾತ್ಮಿಕ ಶಕ್ತಿಯಪೂಜಾರಿಗಳು, ಅದರ ನಿತ್ಯ ಅರ್ಚಕರು. ಅಸತ್ಯವು ನಮ್ಮ ತುಟಿಗಳಿಂದ ಹೊರಬೀಳಬಾರದು ಈ ವಿಶ್ವ ಸಾಂಸ್ಕೃತಿಕ ಸಮ್ಮೇಳನದ ಪ್ರತಿನಿಧಿಗಳಿಗೆ ನಾವು ರಾಜಕ್ಷೇಯದಿಂಧ ಹೊರ ನಿಲ್ಲಬೇಕು ಓರ್ವ ಪ್ರಖ್ಯಾತ ಜರ್ಮನ್ ವಿಚಾರವಂತನು ಹೀಗೆ ಹೇಳಿದ್ದನು —

"ಜಗತ್ತು ಇಂದು ನೂತನ ವಿಜ್ಞಾನ ಸೂತ್ರ ಪರಿಶೋಧಕರ ಸುತ್ತಲೂ ತಿರುಗುತ್ತಿಲ್ಲ. ಅದು ನೂತನ ಅಧ್ಯಾತ್ಮಿಕ ಮೌಲ್ಯವನ್ನು ಕಂಡು ಹಿಡಿಯುವವರ ಸುತ್ತಲೂ ತಿರುಗುತ್ತಿದೆ."

ನಮ್ಮ ನಾಗರೀಕತೆಯ ಅಮೂಲ್ಯ ಪಾರಂಪರ್ಯವನ್ನು ಕಾಪಾಡಲಿಕ್ಕೆಂದು ನಾವು ಯುದ್ಧ ಕಾಲದಲ್ಲಿ ಮಿಲಿಯಾಂತರ ಜನರ ಜೀವಾರ್ಪಣೆಗಾಗಿ ವಿನಂತಿಸಿ ಕೊಂಡೆವು ಸ್ವತಂತ್ರ ಜನಾಂಗ ಸಂಘವೊಂದನ್ನು ರಚಿಸುವುದು ನಮ್ಮ ಧ್ಯೇಯಗಳಲ್ಲೊಂದಾಗಿತ್ತು ಮಾನವ ಕೋಟಿಯ ಸುಖ ಶಾಂತಿಗಾಗಿ ಮಿಲಿಯಾವಧಿ ಜನರು ಜೀವದಾನ ಮಾಡಿದರು ಮತ್ತೆ ಮಿಲಿಯಾವಧಿಗಳು ಘೋರ ಸಂಕಷ್ಟಗಳನ್ನು ಸಹಿಸುವ ಹೊಣ ಹೊತ್ತರು

ಆದರೆ ಇಂದು ನಮ್ಮೀ ಧ್ಯೇಯವನ್ನು ನಾವೆಷ್ಟರ ಮಟ್ಟಿಗೆ ಪರಿಪೂರ್ಣಗೊಳಿಸಿದ್ದೇವೆ? ಜಗತ್ತು ಇಂದು ಭೀಕರ ಭೀತಿಗೊಳಗಾಗಿದೆ ನಾವು ನಮ್ಮ ವರ್ತನೆಯ ಕುರಿತು ಅಂಜಿಕೆ ಪಟ್ಟುಕೊಳ್ಳುತ್ತಿದ್ದೇವೆ ನಮಗೇ ಇಂದು ಯೇನೆಂದು ಗೊತ್ತಿಲ್ಲದ ಈ ಎಟಂ ಬೋಂಬಿನ ಕುರಿತು ನಾವು ಭೀತಿಗೊಳಗಾಗಿದ್ದೇವೆ ಈಗಿನ ವಿಶ್ವ ರಾಜಕೀಯ ಮುತ್ಸದ್ದಿಗಳು ತಂತ್ರವೊಳಗೆ ವಾಗ್ಯುದ್ಧ ಮಾಡಿಕೆ ಳ್ಳುವರೀತಿಯನ್ನೂ, ಅವರ ಪರಸ್ಪರ ವ್ಯವಹಾರ ವರ್ತನೆಯನ್ನು ಕಾಣುವಾಗಲೂ ನಾವು 1946ರಲ್ಲಿಲ್ಲ ಪುನ 1939ರಲ್ಲೇ ಇದ್ದೇವೆ ಎಂದು ಭಾಸವಾಗುತ್ತದೆ

ಕಳೆದ ರಕ್ತಮಯ ವಿಶ್ವ ವೇಧದಿಂದುಂಟಾದ ಈಗಿನ ಜನಾಂಗ ಸಭೆಯೆಂಬ ಶಿಶುವು ಒಂದು ಉದಾತ್ತ ಯೋಜನೆಯಾಗಿದೆ ನಮ್ಮ ಉನ್ಮತ್ತ ರಾಜಕೀಯ ಮುತ್ಸದ್ದಿಗಳು ಈ ಹೊಸ ಕೂಸಿನ ಕತ್ತು ಹಿಚುಗಿ ಅದನ್ನು ಕೊಲೆ ಮಾಡದಂತಾಗಲಿ ಈಗದರ ಸದಸ್ಯತನವನ್ನು ನೋಡುವಾಗ ಅದಿನ್ನೂ ವಿಶ್ವ ಪ್ರಭಾವಿತವಾಗಲಿಲ್ಲವೆಂದು ತಿಳಿದು ಬರುತ್ತದೆ

ಇಂದು ಜನಾಂಗ ಸಭೆಯ ಸದಸ್ಯರಾಗಿರುವ ಎಲ್ಲಾ ಶಕ್ತಿ ರಾಷ್ಟ್ರಗಳೂ ಮಾನವ ಹಕ್ಕು ಸ್ವಾತಂತ್ರ್ಯದ ತತ್ವಕ್ಕೆ ಸಹಿ ಹಾಕಿರುವುದೇನೊ ಸಂತೋಷದ ಸಂಗತಿ ಈಗ ರಶ್ಯಾ ಅಮೇರಿಕಾಗಳೊಳಗೆ ವಿಶಾಲವಾದ ಮತಭೇದವುಂಟಾಗಿರುವುದೆಂದು ನಮ್ಮ ಗಮನಕ್ಕೆ ಬಂದಿದೆ.

ನಾವು ರಶ್ಯದ ಕಡೆ ತಿರುಗಿದರೆ ಆ ಜನಾಂಗವು ಆರ್ಥಿಕ ಮತ್ತು ಜನಾಂಗಿಕ ಸಮಾನತೆಗಾಗಿ ಅದೆಷ್ಟು ಶ್ರಮಿಸಿದೆ ಎಂದು ತಿಳಿಯುತ್ತೇವೆ. ಅಮೇರಿಕವಾದರೊ ವಿಶ್ವಶಾಂತಿ, ಪ್ರಜಾಪ್ರಭುತ್ವ ತತ್ವಗಳಿಗೆ ಅವಿಶ್ರಾಂತ ದುಡಿದ ದೇಶ. ಇವೆರಡು ದೇಶಗಳು ಜನಾಂಗ ಸಭೆಯ ಧ್ಯೇಯಗಳನ್ನು ಕಾರ್ಯ ರೂಪಕ್ಕೆ ತರುವುದಕ್ಕೆ ಸಂಯುಕ್ತವಾಗಿ ಸಹಕರಿಸಿದರೆ ಜಗತ್ತು ಅದೆಷ್ಟು ಉತ್ತಮವಾಗುವುದು!

ರಶ್ಯವಾದರೊ ವರ್ಣಭೇದ ನಿವಾರಣೆ, ಆರ್ಥಿಕ ದುಸ್ಥಿತಿಗಳನ್ನು ನಿವಾರಿಸಲು ತುಂಬಾ ಶ್ರಮ ವಹಿಸಿದೆ. ಆದರೆ ಅದು ಇನ್ನು ಮುಂದೆ ಈ ಲೌಕಿಕ ವಿಚಾರಗಳನ್ನು ಒಂದಿಷ್ಟು ಬದಿಗಿರಿಸಿ ಮಾನವನ ಅಧ್ಯಾತ್ಮಿಕ ಸ್ವಾತಂತ್ರ್ಯ ಮತ್ತು ಘನತೆಗಾಗಿ ಶ್ರಮ ವಹಿಸಬೇಕಾದುದು ಅತ್ಯಾವಶ್ಯಕವೆನಿಸುತ್ತದೆ. ಆರ್ಥಿಕ ಸಮಾನತೆ ಸ್ವಾತಂತ್ರ್ಯ ಸ್ಥಾಪನೆಗೆ ಒಳ್ಳೇ ಮಾರ್ಗ. ಆದರೆ ಅದರಿಂದಲೇ ಸ್ವಾತಂತ್ರ್ಯವುಂಟಾಗಲಾರದು.

ಕಾಲದ ಅವಶ್ಯಕತೆ

ನಾವಿಂದು ಕೇವಲ ನೂತನ ಆರ್ಥಿಕ ವ್ಯವಸ್ಥೆಗಾಗಿ ಇಲ್ಲವೆ ನೂತನ ಕೈಗಾರಿಕೆ ಶ್ರೇಯಸ್ಸಿಗಾಗಿ ಮಾತ್ರ ಹೆಣಗಾಡುವುದಲ್ಲ. ಒಂದು ಜೀವನ ಮಾರ್ಗ, ಒಂದು ಹೊಸ ದೃಷ್ಟಿ ಕೋಣ, ಮತ್ತೊಂದು ಹೊಸ ತತ್ವಜ್ಞಾನಕ್ಕಾಗಿ ನಾವು ಯತ್ನಿಸಬೇಕಾಗಿದೆ.

ಅಂತರ್ ಶುದ್ಧಿಯಿಂದ ಸೌಂದರ್ಯತೆಯನ್ನು ಕಾಯ್ದುಕೊಳ್ಳಬಹುದು ವನಸ್ಪತಿ ಮೂಲಿಕೆಗಳಿಂದ ತಯಾರಿಸಿದ ಈ ಭೇದಿ ಔಷಧಿಯು ದಿನನಿತ್ಯ ತಿಂದ ಉಳಿದ ಆಹಾರ ಭಾಗವನ್ನು ಹೊರ ಹಾಕಿ ರಕ್ತ ಸಂಚಾರವು ಸರಿಯಾಗುವಂತೆ ಮಾಡಿ ಜೀರ್ಣ ಕಾರ್ಯವು ಸರಿಯಾಗುವಂತೆ ಮಾಡುವುದು

ವನಸ್ಪತಿ ಔಷಧಿಗಳಿಂದ ತಯಾರಿಸಿದ

BILE BEANS

ಬೈಲ್ ಬೀನ್ಸ್ ಆರೋಗ್ಯ ಮತ್ತು ಶಕ್ತಿ ಪ್ರದರ್ಶಕ

ವಿಷಮಯ ಕಡಿತಗಳಿಗೆ ಗಾಯಗಳಿಗೆ ತೀವ್ರ ಗುಣಕಾರಿ.

ಜಾಂಬಕ್ ಜಗತ್ಪ್ರಸಿದ್ಧ ವಿಷಹಾರೀ ಲೇಪ

ನಿಮಗೆ ಗಾಯವಾದರೆ ಕಡಿತವುಂಟಾದರೆ ವಿಷವು ನಿಮ್ಮ ಚರ್ಮದೊಳಗೆ ಸೇರಿಬಿಡುವುದು ಅದರಿಂದ ಮುಂದೆ ಅನರ್ಥವಾಗದಂತೆ ಕೂಡಲೇ ಜಾಂಬಕನ್ನು ಅಲ್ಲಿ ಸವರಿರಿ ಜಾಂಬಕಿನಲ್ಲಿರುವ ಅತ್ಯುತ್ತಮ ವನೌಷಧಿ ರಸವು ಕೂಡಲೇ ಚರ್ಮಕ್ಕೆ ಎಳೆಯಲ್ಪಡುತದೆ ಅದರಿಂದ ನೋವು ಕಡಿಮೆಯಾಗುತ್ತದೆ. ಕೀವು ಗುತ್ತದೆ ವಿಷಮಯ ಕ್ರಿಮಿಗಳು ಜಾಂಬಕಿನಿಂದ ಕೂಡಲೇ ನಾಶವಾಗುತ್ತವೆ.



ಯಾವಾಗಲೂ ಜಾಂಬಕನೇ ಉಪಯೋಗಿಸಿ

ZAM-BUK

ಪ್ರಾಣಿಕೊಬ್ಬು ವಿರಹಿತವಾದುದು.

★ ಬುದ್ಧನು ಆನೆಯು ಜನ್ಮವೆತ್ತಿದಾಗ
★ ಪರೋಪಕಾರಕ್ಕಾಗಿಯೇ ದೇಹ ತೆತ್ತ ★
ಪರಮ ಧರ್ಮದ ಅಮೋಘ ಆದರ್ಶ ★

ಬುದ್ಧನು ಆನೆಯ ಅವತಾರವೆತ್ತಿದಾಗ ತನ್ನ ದೇಹವನ್ನು ಹಸಿವಿನಿಂದ ಬಳಲಿದವರ ಆಹಾರಕ್ಕಾಗಿ ಹೇಗೆ ಕೊಟ್ಟನೆಂಬದೊಂದು ದಂತಕತೆ ಚೀನೀ ಯಾತ್ರಿಕರಿಂದ ಕೇಳಿದನ್ನು ಒರ್ವ ಅಮೇರಿಕನ್ ಲೇಖಕರು ವರ್ಲ್ಡ್ ಡ್ಯಾಜೆಸ್ಟ್ ಪತ್ರಿಕೆಯಲ್ಲಿ ಈ ಕೆಳಗಿನಂತೆ ನಿರೂಪಿಸಿದ್ದಾರೆ

ಒಂದು ಸಲ ಬೋಧಿಸತ್ವನಾದ ಬುದ್ಧನು ಆನೆಯಾಗಿ ಅವತರಿಸಿದನು ತಾರುಣ್ಯದ ಪರಿಪೂರ್ಣತೆಗೆ ಮುಟ್ಟಿದಾಗ ಈ ಆನೆ ತನ್ನ ಗುಂಪಿನ ಪ್ರೀತ್ಯಾದರಕ್ಕೆ ಪಾತ್ರವಾಗಿ ಅದರ ಮುಖಂಡನೆಂದು ಸ್ವೀಕರಿಸಲ್ಪಟ್ಟಿತು

ಒಂದು ಸಲ ಈ ಆನೆರಾಜನ ತನ್ನ ಬಳಗವನ್ನು ಬಿಟ್ಟು ದೂರದ ಬಂಜರು ಪ್ರದೇಶವೊಂದಕ್ಕೆ ಸಂಚಾರಹೋಯಿತ ಅಲ್ಲಿ ಮರಗಳಿರಲಿಲ್ಲ, ಸುತ್ತಲೆತ್ತ ನೋಡಿದರೂ ವಿಸ್ತಾರದ ಮರಭೂಮಿ. ಇಲ್ಲಿ ಅದು ಕೆಲವು ಕಾಲ ಒಂದು ಸನ್ಯಾಸಿಯಂತೆ ಜೀವಿಸುತ್ತಿತ್ತು ಸರೋವರಗಳಲ್ಲಿ ಕಮಲದ ದಂಟುಗಳೂ, ನೀರೂ ಅದರ ಆಹಾರವಾಗಿತ್ತು

ಕನಿಕರ ಸ್ಥಿತಿ

ಒಂದು ಸಲ ಹೀಗೆ ಆ ಬಂಜರು ಭೂಮಿಯ ಬದಿಯಲ್ಲಿ ಸಂಚರಿಸುತ್ತಿರುವಾಗ ಗೋಳಿಡುವ ಮನುಷ್ಯರ ಕರುಣಾ ಜನಕವಾದ ಸ್ವರಗಳು ಅದರ ಕಿವಿಗೆ ಬಿದ್ದುವು ಕೂಡಲೇ ಸ್ವರಗಳು ಬರುವ ದಿಕ್ಕಿಗೆ ಧಾವಿಸಲು ಸ್ವಲ್ಪ ದೂರದಲ್ಲಿ ನೂರಾರು ದಾರಿತಪ್ಪಿದ ಯಾತ್ರಿಕರು ಒಂದು ಕಡೆ ಕೂತಿದ್ದು ಅಳುತಿದ್ದರು ಹಸಿವು ಆಯಾಸಗಳೇ ಅವರ ಸಂಕಷ್ಟಕ್ಕೆ ಕಾರಣವಾಗಿದ್ದವು ಆನೆಯನ್ನು ಕಂಡು ಅವರು ಇನ್ನಷ್ಟು ದಿಗಿಲುಗೊಂಡರು ಆದರೆ ಕದಲಲು ಅಶಕ್ತರಾಗಿದ್ದರಿಂದ ಮೃತ್ಯುವೇಗತಿಯೆಂದು ಅವರು ಅಲ್ಲೇ ಕೂತರು

ಆನೆಯು ಮೆಲ್ಲನೆ ಅವರ ಬಳಿ ಹೋಗಿ ಸ್ನೇಹ ಸಂಕೇತವಾಗಿ ಮೆಲ್ಲನೆ ತನ್ನ ಸೊಂಡಿಲನ್ನು ಪ್ರೀತಿಪೂರ್ವಕವಾಗಿ ಅಲ್ಲಾಡಿಸಿತು. ಕಡೆಗೆ ಮನುಷ್ಯ ಧ್ವನಿಯಲ್ಲಿ ನುಡಿಯುಹತ್ತಿದನ್ನು ಕೇಳುತ್ತಲೆ ಯಾತ್ರಿಕರಿಗೆ ಅತ್ಯಂತ ಕೌತುಕವುಂಟಾಯಿತು "ನೀವು ಹೆದರಬೇಡಿರಿ ನೀವು ಎಲ್ಲಿಯವರು? ಈ ನಿರ್ಜನ ಬಂಜರಿಗೆ ಹೇಗೆ ತಲುಪಿದಿರಿ?"

ಸ್ವಲ್ಪ ಧೈರ್ಯಗೊಂಡ ಯಾತ್ರಿಕ ಸಮೂಹದ ಮುಖಂಡನು ಎದ್ದು ಭರವಸೆಯಿಂದ "ನಮ್ಮ ದೇಶದ ಅರಸನ ಕ್ರೂರ ಆಳ್ವಿಕೆಯನ್ನು ತಪ್ಪಿಸಿಕೊಳ್ಳಲು ಯಾತ್ರೆಗೆಂದು ಹೊರಟವರು ದಾರಿ ತಪ್ಪಿ ಇಲ್ಲಿಗೆ ಬಂದಿದ್ದೇವೆ ಅಯ್ಯಾ ಗಜರಾಜನೆ ನಿನ್ನನ್ನು ನೋಡಿ ನಮಗೆ ನಾವು ಈಗ ನಮ್ಮ ಸಂಕಷ್ಟಗಳ ಸಾಗರವನ್ನು ದಾಟಿ ದಡ ಮುಟ್ಟಿದ್ದೆವೆಂಬ ಧೈರ್ಯ ಬಂದಿದೆ ನಮ್ಮಲ್ಲಿ" ಎಂದು ಅರಿಕೆಮಾಡಿಕೊಂಡನು

ಅದಕ್ಕೆ ಆನೆಯೆಂದಿತು "ನೀವೆಷ್ಟು ಮಂದಿ ಇದ್ದಿರಿ?"

"ಮನೆ ಬಿಡುವಾಗ ನಾವು ಐನೂರು ಮಂದಿಗಳಿದ್ದೆವು. ಅಸುತ್ತೃಷೆಯಿಂದ ದಾರಿಯಲ್ಲಿ ಅನೇಕರು ಮೃತರಾದರು"

ಈ ಹೃದ್ರಾವಕ ಪರಿಸ್ಥಿತಿಯ ನಿರೂಪಣೆಯನ್ನು ಕೇಳಿ ಮನಕರಗಿದಂತಾದ ಆನೆ ಮರುಗತೊಡಗಿತು "ಈ ಅರಸರು ಹೇಗೆ ಅಂಧರಂತೆ ತಮ್ಮ ನಾಶವನ್ನ ತಾವೇ ಮಾಡಿಕೊಳ್ಳುವರು! ಮರಣವು ಮಗ್ಗುಲಲ್ಲೇ ಕಾಯುತ್ತಿದೆ ಎಂಬುದನ್ನವರು ಕಿಂಚಿತ್ತಾದರೂ ಅರಿತಿದ್ದರೆ ಹೀಗೆ ಮಾಡುತಿದ್ದರೆ? ಕ್ರೂರತನ ಮತ್ತು ದುಷ್ಟತನದ ಅಂತ್ಯಗಳು ಅದೆಷ್ಟು ದುಃಖಮಯವಾಗಿ ಪರಿಣಮಿಸುತ್ತವೆಂದು ಇವರಿಗೆ ತಿಳಿದಿಲ್ಲ ಅವರ ಅಜ್ಞಾನಕ್ಕೆ ಧಿಕ್ಕಾರವಿರಲಿ'

ಆನೆಯು ಯೋಚಿಸತೊಡಗಿತು ತನ್ನ ಅತಿಥಿಗಳನ್ನು ಯಾವ ರೀತಿಯಲ್ಲಿ ಉದ್ಧರಿಸಬಹುದೆಂದೇ ಅದರ ವಿಚಾರವಾಯಿತು ಅದೇ ಸಮಯಕ್ಕೆ ಕಂಗಾಲಾದ ಆ ಯಾತ್ರಿಕರು ಅಶ್ರುಭರಿತರಾಗಿ ತಮಗೆ ಹೇಗಾದರೂ ಈ ದುರಂತಮಯ ಸ್ಥಳದಿಂದ ಪಾರುಗಾಣಿಸಬೇಕೆಂದು ಅಂಗಲಾಚಿದರು ಕೊನೆಗೆ ಒಂದು ಜಲಾಶಯದ ದಿಕ್ಕನ್ನಾದರೂ ತೋರಿಸೆಂದು ವಿನಂತಿಸಿದರು

ಆಗ ಆನೆಯು ತನ್ನ ಸೊಂಡಿಲೆತ್ತಿ ಉತ್ತರ ದಿಕ್ಕನ್ನು ತೋರಿಸುತ್ತ "ಅದೋ ಅಲ್ಲಿ ಕಾಣುವ ಆ ಬೆಟ್ಟದಡಿಯಲ್ಲಿ ಒಂದು ಸರೋವರವಿದೆ ಅದರಲ್ಲಿ ನಿರ್ಮಳವಾದ ನೀರಿರುವುದರಿಂದ ನಿಮ್ಮ ತೃಷೆಯನ್ನು ನೀಗಬಹುದು ಅಲ್ಲಿಂದ ಮುಂದೆ ಹೋದರೆ ನಿಮಗೆ ಒಂದು ಈಗ ತಾನೆ ಸತ್ತ ಆನೆಯೊಂದರ ದೇಹ ಸಿಗುವುದು ಅದನ್ನು ತಿಂದು ತೃಪ್ತಿ ಪಡಿರಿ ಎಂದು ಹೇಳಿತು

ಯಾತ್ರಿಕರು ಹಾಗೆ ಮಾಡಿದರು ಅವರು ಸರೋವರದ ನೀರು ಕುಡಿಯುತ್ತಿರುವಾಗ ಆನೆರಾಜನು ಎತ್ತರದ ಬೆಟ್ಟದ ತುದಿಗೆ ಹೋಗಿ ಅಲ್ಲಿಂದ ಕೆಳಗೆ ಹಾರಿತು. ಯಾತ್ರಿಕರು ಬಂದು ನೋಡುವಾಗ ಅದು ತಮ್ಮೊಡನೆ ಸ್ವಲ್ಪ ಹಿಂದೆ ಮಾತನಾಡಿದ ಆನೆಯೇ ಎಂದು ತಿಳಿಯಿತು. ಮೊದಲು ಅವರ ಅದನ್ನು ತಿನ್ನಲು ಒಪ್ಪದಾದರು ಕಡೆಗೆ ಅವರಲ್ಲೊರ್ವ ವಿಚಾರಿಯು "ಬಂಧುಗಳೇ ನಮಗೆ ತೃಪ್ತಿಗೊಳಿಸಿ ಜೀವನ ಸಾರ್ಥಕ ಮಾಡುವ ಉದ್ದೇಶವುಳ್ಳ ಈ ಗಜೋತ್ತಮನನ್ನು ನಾವು ಪರಿಗ್ರಹಿಸದಿದ್ದರೆ ನಮಗೂ ಅದಕ್ಕೂ ಮೋಕ್ಷ ಸಿಗಲಾರದು" ಎಂದು ಸಲಹೆ ಕೊಟ್ಟಾಗ ಅವರೆಲ್ಲರೂ ಅದರ ಮಾಂಸವನು ಭಕ್ಷಿಸಿ ಸಂತೃಪ್ತರಾಗಿ ಮುಂದೆ ಸುರಕ್ಷಿತ ಸ್ಥಳಕ್ಕೆ ಮುಟಿದರು

ಗಾಂಧಿಭಕ್ತ ರಾಮಸ್ವಾಮಿ ರೆಡ್ಡಿಯಾರ್

ಮುಂದಿನ ಮದ್ರಾಸ್ ಪ್ರಧಾನ ಮಂತ್ರಿಗಳು

ನಾಲ್ಕು ನಾಡಿನ ಪ್ರಾಂತ್ಯದಲ್ಲಿ ರಾಜಕೀಯ ತಿಕ್ಕಾಟ

ಮದ್ರಾಸ್ ರಾಜಕೀಯವು ಭರದಿಂದ ಚಲಿಸುತ್ತಿದೆ ರಾಜಾಜಿಯನ್ನು ಸ್ತಬ್ಧಗೊಳಿಸಿದಾಗದಿಂದ ಮದ್ರಾಸ್ ಶಾಸನ ಸಭೆಯ ಸದಸ್ಯರಲ್ಲಿ ಒಂದಲ್ಲ ಒಂದು ತರದ ಕಳವಳ ತಪ್ಪಲಿಲ್ಲ ಕರ್ನಾಟಕ, ತಮಿಳುನಾಡು, ಆಂಧ್ರ ಮತ್ತು ಕೇರಳ ಈ ನಾಲ್ಕು ನಾಡುಗಳ ಒಂದು ಪ್ರಾಂತ್ಯ ಮದ್ರಾಸ್ ಅದರ ಶಾಸನ ಸಭೆಯಲ್ಲಿ ಮೂರ ಮುಖ್ಯ ಪಕ್ಷಗಳಾಗಿವೆ ರಾಜಾಜಿ ಪಕ್ಷ ನಾಯುಡು ಪಕ್ಷ ಮತ್ತು ಗೋಪಾಲ ರೆಡ್ಡಿ ಪಕ್ಷ

ರಾಜಾಜಿ ಪತನದ ಕಾಲಕ್ಕೆ ಅವರ ವಿರೋಧಿಗಳು ಕೊಂಗ್ರೆಸ್ ಹೈಕಮಾಂಡಿನ ಮಧ್ಯಸ್ಥಿಗೆಗೆ ಒಪ್ಪಲಿಲ್ಲ ಈಗ 110 ಶಾಸನ ಸಭಾ ಸದಸ್ಯರ ಅವಿಶ್ವಾಸದ ಅರ್ಜಿ ಆ ಕಡೆ ಹೋಗಿದೆ ತಾನು ಹೇಳಿದಂತೆ ನಡೆದರೆ ವರ್ಕಿಂಗ್ ಕಮಿಟಿಯು ಮದ್ರಾಸ್ ನ ಡಕೆಯೊಳಗೆ ಕೈಹಾಕುವುದು ಇಲ್ಲವಿದ್ದರೆ ಎರಡೆರಡು ತಿಂಗಳಿಗೊಮ್ಮೆ ಫ್ರಾನ್ಸಿನ ಮಂತ್ರಿಮಂಡಳಗಳಾಗ[illegible]ದು ಫ್ರಾನ್ಸಿನಲ್ಲಿ ವಾರಕ್ಕೊಮ್ಮೆ [illegible] ಬದಲಾವಣೆಯಾಗುತಿತು.

ಮೇಲ್ಕಂಡ ಮೂರ ಪಕ್ಷಗಳು ಈಚೆಗೆ ಒಂದು ಸಾಮಾನ್ಯ ಒಪ್ಪಂದಕ್ಕೆ ಬಂದಿರುವರೆಂದು ತಿಳಿಯಬರುತ್ತದೆ ಅದೇನೆಂದರೆ ಕೊಂಗ್ರೆಸ್ ವರಿಷ್ಠರಿಗೆ ಸಮ್ಮತವಿರುವ ಒಬ್ಬ ನಾಯಕನನ್ನು ಚುನಾಯಿಸುವುದು. ಅವನು ಅವರೊಂದಿಗೇ ವಿಚಾರಿಸಿ ಮಂತ್ರಿಮಂಡಳವನ್ನು ಚುನಾಯಿಸುವುದು.

ಈಗಿನ ಮಂತ್ರಿಮಂಡಳವನ್ನು ಕಿತ್ತುಹಾಕಲು ರಾಜಾಜಿ ಪಕ್ಷದ ಸಮ್ಮತಿಯಿಲ್ಲ ಕಾರಣ [illegible] ರೆಡ್ಡಿ ಪಕ್ಷಗಳು ವರ್ಕಿಂಗ್ ಕಮಿಟಿಯ ಸಹಾಯ ಅಪೇಕ್ಷಿಸಲು ಸಿದ್ಧರಿಲ್ಲ

ತಿಕ್ಕಾಟಕ್ಕೆಡೆ

ಈಗಾಗಲೇ 110 ಮಂದಿ ಶಾಸನ ಸಭಾ ಸದಸ್ಯರ ಸಹಿ ಹಾಕಲ್ಪಟ್ಟ ಒಂದು ಅವಿಶ್ವಾಸ ಠರಾವು ಕಳುಹಿಸಲ್ಪಟ್ಟಿದೆ ಈಗ ಈ ಮೂರು ಪಕ್ಷಗಳಿಗೂ ಓಮಾಂಡೂರ್ ರಾಮಸ್ವಾಮಿ ರೆಡ್ಡಿಯರು ನಾಯಕರಾಗುವುದು ಸಮ್ಮತವಿದೆ

ಓಮಾಂಡೂರು ರಾಮಸ್ವಾಮಿ ರೆಡ್ಡಿಯರು ಇದುತನಕ ರಾಜಕೀಯ ರಂಗದಲ್ಲೊರ್ವ ಮೌನ ಕೆಲಸಗಾರರಾಗಿದ್ದರು. ಅವರ ಮಾತೃಭಾಷೆ ತೆಲುಗು, ಆದರೂ ಹುಟ್ಟುನಾಡು ತಮಿಳು ಇವರು ಸರ್ವತೋಮುಖ ಗಾಂಧಿ ವಾದಿಗಳು ಇವರ ಆಹಾರ ಅನುಪಾನಗಳೆಲ್ಲವೂ ಗಾಂಧಿ ಮಾದರಿಯವು ರಮಣ ಮಹರ್ಷಿಯ ಅನುಯಾಯಿಗಳಲ್ಲಿ ಇವರಾಗಿದ್ದಾರೆ ರಾಜಾಜಿಯ ಸಹಾಯದಿಂದೊಂದು ಸಲ ಇವರು ತಮಿಳುನಾಡು ಕೊಂಗ್ರೆಸ್ ಕಮಿಟಿಯ ಅಧ್ಯಕ್ಷರೂ ಆಗಿದ್ದರು

ಕಳೆದ ವರ್ಷದ ನಾಯಕತ್ವ ಚರ್ಚೆಯಲ್ಲಿ ಇವರು ರಾಜಾಜಿ ವಿರೋಧ ಪಕ್ಷದಲ್ಲಿ [illegible]ರಾದರೂ ಬಾಯ್ಬಿಟ್ಟು ಯಾವ ಅಭಿಪ್ರಾಯ ಪ್ರಕಟಿಸಲಿಲ್ಲ.

ಈ ರೆಡ್ಡಿಯವರು ಶಾಸನ ಸಭಾ ಕೊಂಗ್ರೆಸ್ ಪಕ್ಷದ ಕೇವಲ ನಾಯಕರು ಮಾತ್ರ ಆಗ ವರೊ ಇಲ್ಲವೆ ಪ್ರಧಾನಿಗಳು ಕೂಡಾ ಆಗುವರೊ ನೋಡಲಿದೆ ಅದರ ಅಂತಿಮ ನಿರ್ಣಯ ವರ್ಕಿಂಗ ಕಮಿಟಿಯದು ಇದು ತನಕ ಯಾವ ವಿಧಾಯಕ ಚಟುವಟಿಕೆಗಳನ್ನು ಕೈಗೊಳ್ಳದ್ದರಿಂದ ಇವರಿಗೆ ಆಡಳಿತ ಅನುಭವವಿಲ್ಲ

— [illegible]

ರಿಯಾಯತಿ ಲಗ್ಗೇಜಿನಲ್ಲಿ ವ್ಯಾಪಾರಿ ಸಾಮಾನುಗಳ ನಿಷೇಧ

ಪೆಸೆಂಜರರ ಸೌಕರ್ಯಗಳ ಬಗ್ಗೆ ಒಂದು ಮಣ ಭಾರದ ಸಾಮಾನುಗಳನ್ನು ಫ್ರೀ ತೆಗೆದುಕೊಂಡುಹೋಗ ಬಹುದಾಗಿ ಮಾಡಿದ ರಿಯಾಯತಿ ಕಾರಣದಿಂದಾಗಿ ಪೆಸೆಂಜರರು ಅವರ ಸ್ವಂತ ಉಪಯೋಗದ ಸಾಮಾನುಗಳಲ್ಲದೆ ವ್ಯಾಪಾರಿ ಸಾಮಾನುಗಳನ್ನು ತಮ್ಮೊಡನೆ ಪ್ರಯಾಣ ಬೆಳೆಸುವ ಸ್ನೇಹಿತರ ಹೆಸರಿನಲ್ಲಿ ಈ ರಿಯಾಯತಿ ಮೂಲಕ ಧರ್ಮಾರ್ಥ ಸಾಗಿಸುವುದು ರೂಢಿಯಾಗಿದೆ

ಮೋಟರ್ ವಾಹನಗಳು ರೈಲ್ವೆಗಾಡಿಗಳಂತಾಗಿಲ್ಲ ಅವುಗಳಲ್ಲಿ ನಿಯಮಿತ ಭಾರಕ್ಕಿಂತ ಹೆಚ್ಚಿನ ಸಾಮಾನುಗಳನ್ನು ಒಯ್ಯುವುದು ಮೋಟರ್ ವಾಹನಕ್ಕೂ ಮತ್ತು ಪೆಸೆಂಜರರಿಗೂ ಅಪಾಯವಾಗಿದೆ ಕಾರಣ ಬಸ್ಸುಗಳಲ್ಲಿ ಒಯ್ಯುವ ಸಾಮಾನುಗಳನ್ನು ಪೆಸೆಂಜರರ ಅವಶ್ಯಕತೆ ಬಗ್ಗೆನೇ ಮಿತಗೊಳಿಸುವುದು ಅಗತ್ಯವಿದೆ.

ವ್ಯಾಪಾರಿ ಸಾಮಾನುಗಳನ್ನು ಒಯ್ಯುವರೆ ವ್ಯಾಪಾರಿಗಳು ಶೆಡ್ಯೂಲ್ ಟೈಮಿಗೆ ಕೊಂಡೊಯ್ಯುವ "ಲಕ್ಷ್ಮಿ" ಯಾ "ಸಿ. ಪಿ. ಸಿ." ಲೋರಿ ಸರ್ವಿಸುಗಳ ಸೌಕರ್ಯವನ್ನು ಉಪಯೋಗಿಸಬೇಕಾಗಿ ಅಪೇಕ್ಷಿಸುತ್ತೇವೆ

ವ್ಯಾಪಾರಿ ಸಾಮಾನುಗಳನ್ನು ಎಷ್ಟಕ್ಕೂ ಫ್ರೀ ಲಗ್ಗೇಜಿನ ಅಂಶದಲ್ಲಿ ಸೇರಿಸಿಕೊಳ್ಳಲಾಗುವುದಿಲ್ಲ. ಈ ಕುರಿತು ಮಾಹಿತಿಯನ್ನು ಬುಕ್ಕಿಂಗ್‌ಕ್ಲಾರ್ಕರಿಂದ ಪಡೆಯಬಹುದು

JOINT MANAGERS,

The Combined Booking Agency, — MANGALORE
The Joint Booking Office, — KODIALBAIL

THE CANARA BANKING CORPORATION LTD.
(Incorporated in British India with Limited Liability)
Estd: 1906.
Head Office: UDIPI, S. Kanara.

	Rs.
CAPITAL:	
Authorised	25,00,000
Issued, subscribed & called up	16,00,000
Paid up	15 97,145
RESERVES	5,25,000
DEPOSITS	2,07,47,928
TOTAL RESOURCES	3,00,01,186

With a net work of branches & Agencies in all principal cities of India, we shall be able to render efficient collection services.

BANKING BUSINESS OF EVERY DESCRIPTION TRANSACTED.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,
ಬೊಂಬಾಯಿ, ಮದರಾಸು, ಕಲ್ಕತ್ತಾ
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ
ದೊರೆಯುವುದು

THE BOMBAY LIFE ASSURANCE COMPANY LIMITED

(ESTD. 1910)

Peace and Security........

The Mightiest War to secure freedom for the oppressed Nations of Europe has ended. With many attempts at securing the four Freedoms, we do not seem to be anywhere near it. We, in our humble way, have been contributing to this Individual Material Freedom, in War as well as in Peace, by extending Insurance Service to all who seek it

1945 completed Business { **Company's: Over $2\frac{3}{4}$ Crores**
Ours: About 50 lakhs.

Kochikar Brothers, Limited.

(ESTD. 1908)

Chief Agents for South India and Special agents for Bombay City & Suburbs.

"Bombay Life Building," Gandhi Nagar, UDIPI.

With Offices at:

MADRAS, BANGALORE, TRIVANDRUM, MANGALORE, MADURA, CALICUT, BOMBAY, & UDIPI

And Agencies all over South India.

Bhuvanendra Products Limited.

KATAPADI S. Kanara.

Bhuvanendra

Dashamoolarishta

Prepared with seleted ingredients under the supervision of the experienced staff. A specific for the puerperal diseases and also valuable to puerperal women as tonic increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli.**

Bhuvanendra Products Ltd.
Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ಉಂಟುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುವು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಖು 14—3—1947 [ಸಂಚಿಕೆ 11]

ವಾರಾಂತ್ಯ ವರದಿ ವಿಮರ್ಶೆ

ಪಾಕಿಸ್ತಾನ ಸ್ವೀಕಾರವೆ?

ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯು ತನ್ನ ಇತ್ತೀಚಿನ ನಿರ್ಣಯದಲ್ಲಿ ಕೆಲವು ಮಹತ್ವದ ವಿಷಯಗಳನ್ನು ತೀರ್ಮಾನಿಸಿದೆ. ಅದರಲ್ಲಿ ಅತೀ ಮುಖ್ಯವಾದುದೆಂದರೆ ಪಂಜಾಬನ್ನು ಮುಸ್ಲಿಮೇತರ ಪ್ರದೇಶಗಳಾಗಿ ವಿಭಾಗಿಸಲು ಒಪ್ಪಿದುದು.

ಹಲವರು ಈ ನಿರ್ಣಯವನ್ನು 'ಪಾಕಿಸ್ಥಾನಕ್ಕೆ ಒಪ್ಪಿಗೆ' ಎಂದು ಟೀಕಿಸಿರುವರು. 'ಲೀಗಿನ ಜಾತಿಯತೆ ಗೆದ್ದಿತು,' ಎಂಬ ಪತ್ರಿಕಾ ಉದ್ಗಾರಗಳು ಹಲವು ಕಡೆಗಳಿಂದ ಕೇಳಿಬರುತ್ತಿವೆ. ಆದರೆ ಈ ಸಂದರ್ಭದಲ್ಲಿ ಲೀಗಿನ ಕಡೆಯಿಂದಲೇ ನೇರವಾಗಿ ಯಾವ ನಿರ್ದಿಷ್ಟ ಪ್ರತಿಕ್ರಿಯೆ ತೋರಿಬಂದಿಲ್ಲ. ಸಿಖ್ಖ ಮುಖಂಡರು ಹೆಚ್ಚುಕಡಿಮೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸೂಚನೆಯನ್ನು ಗಂಭೀರ ಸಂತೋಷದಿಂದ ಒಪ್ಪಿ ಸ್ವೀಕರಿಸಿದ್ದಾರೆ. ಅದರ ಸವಿಸ್ತಾರ ಯೋಜನೆ ಹೇಗಿರುತ್ತದೆಂದು ಮಾಸ್ಟರ್ ತಾರಾಸಿಂಗರು ಪ್ರಶ್ನಿಸಿರುವರು.

ಒಂದು ದೃಷ್ಟಿಯಿಂದ ಕಾಂಗ್ರೆಸು ಸ್ಥಿತಿಯನ್ನೆದುರಿಸಲು ತನಗಿರುವ ಸಿದ್ಧತೆಯನ್ನೂ ಮನಃಪೂರ್ವಕತೆಯನ್ನೂ ಈ ಮೂಲಕ ತೋರಿಸಿರುತ್ತದೆ. ಇಂದು ವಿಭಾಗೀಕರಣದ ಕುರಿತು ಮಾತೆತ್ತದೆ ಸುಮ್ಮನೆ ಕುಳಿತಿದ್ದರೆ ಅದು ಬೇಕೆಬೇಕೆಂದು ಒತ್ತಿ ಹೇಳುವವರು ಪಕ್ಷಪಾತದ ಬ್ರಿಟಿಷ್ ಅಧಿಕಾರದ ಸಹಾಯದಿಂದ ಒಂದಲ್ಲ ಒಂದು ರೀತಿಯಿಂದ ಅದನ್ನು ಪಡೆಯುವರು.

ಕಾಂಗ್ರೆಸು ಒಪ್ಪಲಿ ಒಪ್ಪದಿರಲಿ ಬಂಗಾಲ, ಸಿಂಧ್, ಮತ್ತೂ ಪಂಜಾಬ್‌ಗಳಲ್ಲಿ ಪಾಕಿಸ್ಥಾನ ಪಕ್ಷಕ್ಕೆ ಬಹುಮತವಿದೆ. ತಾನೆ ಅವು ಸಂಯುಕ್ತ ಭಾರತ ಕೇಂದ್ರಕ್ಕೆ ಸೇರದೆ ದೂರವಿರಲು ನಿಶ್ಚಯಿಸಿದರೆ, ಮತ್ತು ಬ್ರಿಟಿಷರು ಭಾರತ ಬಿಟ್ಟು ತೊಲಗ ಬೇಕಾಗ ತಾವು ಘೋಷಿಸಿದಂತೆ ಅಲ್ಲಲ್ಲಿನ ಪ್ರಾಂತ್ಯಗಳಿಗೆ ಅಧಿಕಾರವನ್ನು ಹಂಚಿ ಹೋದರೆ ಮರಳಲ್ಲಿ ತಲೆಮುಚ್ಚಿ ಕೂತ ಉಷ್ಟ್ರಪಕ್ಷಿಯ ಬೆನ್ನನ್ನು ಸಿಂಹ ಕೊರೆದು ತಿಂದಂತಾಗುತಿದ್ದಲ್ಲವೆ? ಅಂತಹ ಸಂದರ್ಭದಲ್ಲಿ ಆ ಪ್ರಾಂತ್ಯಗಳಲ್ಲಿ ಮುಸಲ್ಮಾನೇತರರನ್ನು ಧರ್ಮಸಂಕಟಕ್ಕೊಳಮಾಡಿದಂತಾಗುತ್ತದೆ.

ಪಾಕಿಸ್ಥಾನದೊಳಗೆ ಪಾಕಿಸ್ತಾನ

ವಿಚ್ಛೇದನವಾದಿಗಳಿಗೆ ತಮ್ಮ ಧೂರ್ತ ಯೋಜನೆಯ ಗಂಡಾಂತರ ತಿಳಿಯಬೇಕಾದರೆ ಅಂತಹ ಸಮಾನ ಪರಿಸ್ಥಿತಿಯು ಅವರಿಗೆ ಒದಗಬೇಕು. ಈ ದೃಷ್ಟಿಯಿಂದ ಕಾಂಗ್ರೆಸಿನ ನಿರ್ಣಯವು ಶ್ಲಾಘನೀಯ ರಾಜಕೀಯ ಮುತ್ಸದ್ದಿತನದೆನ್ನಬೇಕು.

ಇಡೀ ಭಾರತದಲ್ಲಿ ಶೇಕಡಾ 25ರಷ್ಟಿರುವವರಿಗೆ ಬಹುಸಂಖ್ಯಾಕರ ಆಡಳಿತವು ಸಹನೀಯವಾಗುವುದಿಲ್ಲವೆಂದರೆ ಶೇಕಡಾ 40ಕ್ಕೂ ಮಿಕ್ಕಿರುವ ಪಾಕಿಸ್ತಾನಗಳಲ್ಲಿನ ಮುಸಲ್ಮಾನೇತರರು ಪ್ರತ್ಯೇಕವಾಗಬಾರದೇಕೆ? ಈ ದೃಷ್ಟಿಯಿಂದ ಪಂಜಾಬ್, ಬಂಗಾಳಗಳು ವಿಭಾಗಿಸಲ್ಪಡಬೇಕಾದುದು ಅತ್ಯವಶ್ಯಕ.

ಆವೆರಡು ಪಂಜಾಬ ಬಂಗಾಳಗಳನ್ನು ಮುಸಲ್ಮಾನ ಮತ್ತು ಮುಸಲ್ಮಾನೇತರ ಪ್ರದೇಶಗಳಾಗಿ ವಿಂಗಡಿಸಿದರೆ ಮೂಲ ಪಾಕಿಸ್ತಾನದ ಬೀಜವೇ ಶೂನ್ಯವಾಗುವುದು. [illegible] ಕಿಸ್ತಾನಗಳಲ್ಲಿ [illegible] ದೃಷ್ಟಿಯಿಂದಲೂ ಅದೂ [illegible] ಬಲಿಷ್ಠವಾಗುವುದು. ಮತ್ತೆ ಮುಸಲ್ಮಾನೇತರ ಪ್ರದೇಶಗಳು ಹಿಂದೂಸ್ಥಾನಕ್ಕೆ ಸೇರಿದರೆ ಅವುಗಳ [illegible] ರಕ್ಷಿಸಲ್ಪಡುತ್ತದೆ.

ಆದುದರಿಂದಲೇ ಲೀಗ್ ಮುಂದಾಳುಗಳು, ಮುಖ್ಯವಾಗಿ ಮಿ. ಜಿನ್ನರು ವರ್ಕಿಂಗ್ ಕಮಿಟಿಯ ನಿರ್ಣಯದಿಂದ ದಂಗು ಬಡಿದವರಂತೆ ತೆಪ್ಪಗಿದ್ದಾರೆ. ಒಂದು ಕ್ಷಣಕ್ಕೆ ಪಂಜಾಬದಲ್ಲಿ ತಾವು ಗೆದ್ದರೆಂದು ತಿಳಿದು ಹೆಮ್ಮೆಯಿಂದ ಗಡಿನಾಡಿನ ಖಾನಾ ಸಾಹೇಬರಿಗೆ ರಾಜಿನಾಮೆ ಕೊಡಲು ಆಹ್ವಾನವಿತ್ತ ಜಿನ್ನರು ಈಗ ಹಿಂದುಸ್ಥಾನದಲ್ಲಿ ಮುಸಲ್ಮಾನರಿರುವಲ್ಲೆಲ್ಲ ಪಾಕಿಸ್ತಾನಗಳಾಗಲಿ ಎಂದು ಹೇಳಲೂಬಹುದು.

ಹಾಗಾದರೂ ಆ ಸ್ಥಾನಗಳಿಗೆ ತೊಂದರೆ ಬರುವುದು. ಸಾಗರದ ಮಧ್ಯದಲ್ಲಿರುವ ಪುಟ್ಟ ದ್ವೀಪಗಳಂತೆ ಈ ಪಾಕಿಸ್ಥಾನ್ ಮಾದರಿ ಸ್ಥಾನಗಳು ಯಾವದೊಂದು ರೀತಿಯಲ್ಲೂ ತಮ್ಮ ಸುತ್ತಮುತ್ತಲಿನ ಹಿಂದೂಸ್ಥಾನಗಳಿಂದ ಸಹಾಯ ಸಹಕಾರ ದೊರಕದೆ ಉಸಿರು ಕಟ್ಟಿದಂತಾಗುವುವು. ತಪ್ಪು ಯೋಜನೆಯೊಂದನ್ನು ಯಾವ ದೃಷ್ಟಿಯಿಂದ ಎಷ್ಟು ಆಳವಾಗಿ ಯೋಚಿಸಿದರೂ ಅದರಿಂದ ಅನಾನುಕೂಲತೆ ತಪ್ಪಿದ್ದಲ್ಲ.

ಸರಿ ದಾರಿ

ಈ ವಿಷಯದಲ್ಲಿ ಬಂಗಾಲದ ಶ್ಯಾಮಾಪ್ರಸಾದ ಮತ್ತು ಮಾಜಿ ಮಂತ್ರಿ ಲೀಗ್ ಪ್ರಧಾನಿಗಳೆನಿಸಿದ್ದ ಮತ್ತು ಡೈರೆಕ್ಟ್ ಎಕ್ಷನ್‌ನ ದುರಂತದ ಪ್ರೋತ್ಸಾಹಕರೆಂದು ಆರೋಪಿಸಲ್ಪಟ್ಟ ಸುಹ್ರವರ್ದಿಯವರು ಬೆಳಕು ಕಿರಣ ಕಂಡಿದ್ದಾರೆ. ಬಂಗಾಲಕ್ಕೆ ಸರ್ವಪಕ್ಷೀಯ ಸರಕಾರವೆ ಯುಕ್ತವಾದುದು ಎಂದವರು ಘೋಷಿಸಿ ಇತ್ತಿದ್ದಾರೆ. ಸದ್ಯದಲ್ಲಿ ಇವರನ್ನು ಜಿನ್ನರು ಹೊರಹಾಕದಿದ್ದರೆ ಪುಣ್ಯ.

ಕಾಂಗ್ರೆಸ್ಸಿಗೆ ಅಧಿಕಾರವನ್ನು ಬಿಟ್ಟು ಕೊಡಲಿಕ್ಕಾಗುವುದಿಲ್ಲವೆಂದು ಜಿನ್ನರ ಹೇಳುವ ಬಿಟಿಷರು ಈಗ ಪಾಕಿಸ್ಥಾನ ಪ್ರದೇಶಗಳಲ್ಲಿಯೂ ಜಾತೀಯ ಪಕ್ಷವೊಂದರ ಆಳ್ವಿಕೆಯನ್ನು ಯಾರೂ ಒಪ್ಪುವುದಿಲ್ಲವೆಂದು ಪಂಜಾಬದಲ್ಲಿ ನಡೆಯುವ ಭೀಕರ ಕೋಮು ಕದನದಿಂದ ಮಾತ್ರವಲ್ಲ ಲೀಗಿನ ಸುಹ್ರವರ್ದಿಯವರ ಅಭಿಪ್ರಾಯದಿಂದ ಸ್ಪಷ್ಟವಾಗಿ ತಿಳಕೊಳ್ಳಬಹುದು.

ಒಂದೇ ದಾರಿ

ಕಾಂಗ್ರೆಸು ಅನಾನುಕೂಲ ಪತ್ಯಾಕ್ಷಿತ ಹಿಂಸಕ ಲೀಗ್ ಬಾಲಿಗೆಗಳನ್ನು ಅಂತ್ಯಗೊಳಿಸಲು ವಿಭಾಗೀಕರಣವನ್ನು ಒಪ್ಪಿದೆಯಾದರೂ ಅದೇ ಸಮಯದಲ್ಲಿ ಅಧಿಕಾರವನ್ನು ಶಾಂತರೀತಿಯಲ್ಲಿ ಸ್ವೀಕರಿಸಲು ಲೀಗಿನೊಡನೆ ಮಾತುಕತೆ ನಡೆಸಲೂ ಅದರ ಪ್ರತಿನಿಧಿಗಳನ್ನು ಆಹ್ವಾನಿಸಿದೆ.

ಮಾತ್ರವಲ್ಲ, ಬ್ರಿಟಿಷ್ ಸರಕಾರದ ಮೇ 16ರ ಡಿಸೆಂಬರ್ 6ರ ಹೇಳಿಕೆಗಳನ್ನು ಯಾವ ಆತಂಕವಿಲ್ಲದೆಯೂ ಸ್ವೀಕರಿಸುವುದಾಗಿ ಮತ್ತೊಂದು ಸಲ ಸ್ಪಷ್ಟಪಡಿಸಿದೆ.

ಆದುದರಿಂದ ಕಾಂಗ್ರೆಸ್ಸು ಈಗ ವಿಭಾಗೀಕರಣಕ್ಕೂ ಸಿದ್ಧವಿದೆ, ಪರಸ್ಪರ ಒಪ್ಪಂದಕ್ಕೂ ತಯಾರಾಗಿದೆ, ಮಾತ್ರವಲ್ಲ ಕೊನೆಯ ಸಂದರ್ಭದಲ್ಲಿ ಯಾವ ಗಂಡಾಂತರವನ್ನೆದುರಿಸಲು ಕೂಡಾ ಅದು ಸದಾ ಸಿದ್ಧವಿದೆ ಎಂಬುದನ್ನು ಲೋಕದೆದುರಿಗೆ ಸಾರಿದಂತಾಯಿತು.

ಲೀಗಿನ ಕರ್ತವ್ಯ

ಪರಸ್ಪರರ ಕತ್ತು ಕೊಯ್ಯುವುದರಿಂದಲೂ, ಸುಲಿಗೆ ಸುಡುವಿಕೆಗಳಿಂದಲೂ ಯಾವ ಲಾಭವಿಲ್ಲವೆಂದು ಇನ್ನಾದರೂ ಲೀಗಿಗೆ ಮನಗಾಣದಿರದು. ಗಾಂಧೀಜಿ ಎಂದಂತೆ ಅಂತಃಕಲಹದಿಂದ ನಮ್ಮ ಗುಲಾಮಗಿರಿಯನ್ನು ಶಾಶ್ವತಪಡಿಸುವುದಕಿಂತ ಹೆಚ್ಚಿನ ಅನುಕೂಲತೆ ಇಲ್ಲ.

ಈಗ ಲೀಗು ಪಂಜಾಬದ ಸಿಕ್ಕರಿಗೂ, ಹಿಂದೂಗಳಿಗೂ ಯಾವ ಯಾವ ಭರವಸೆಗಳನ್ನು ಕೊಡ ಬಯಸುತ್ತದೊ ಅಂತಹದೇ ಭರವಸೆಗಳನ್ನು-ಕಾಂಗ್ರೆಸಿನಿಂದ ಪಡೆದು ಅಖಂಡ ಭಾರತದಲ್ಲಿ ನೆಮ್ಮದಿಯಿಂದಿರಲು ಪ್ರಯತ್ನಿಸುವುದೊಳಿತು.

ಮದ್ರಾಸ್ ಮಂತ್ರಿತ್ವ

ಕೊನೆಗಂತೂ ಒಂದು ಸಲ ದಾರಿ ತಪ್ಪಿದ ಮದ್ರಾಸ್ ಶಾಸನಸಭೆಯ ಕಾಂಗ್ರೆಸ್ ಪಕ್ಷ ಪುನಃ ಕಾಂಗ್ರೆಸ್ ವರಿಷ್ಠರ ಹಿಡಿತದಲ್ಲಿ ಬಂತು. ಅಲ್ಲಿನ ಸಮಸ್ಯೆಯನ್ನು ಇತ್ಯರ್ಥಿಸಲು ರಾಷ್ಟ್ರಾಧ್ಯಕ್ಷರೇ ಸ್ವತಃ ಬರಬೇಕಾಯಿತು. ಶ್ರೀ ಪ್ರಕಾಶಂ ಅವರು ತಮ್ಮ ಮಂಡಳಿಯ ರಾಜಿನಾಮೆಯನ್ನು ಕೃಪಾಲಿನಿಯವರ ಕೈಗೆ ಮಾತ್ರವಲ್ಲ ಗವರ್ನರರ ಕೈಗೂ ಕೊಟ್ಟಿರುವರು. ಇಷ್ಟಾದರೂ ತಾ. 2?ರ ತನಕ ಅದಕ್ಕೆ ಜೀವದಾನ ದೊರಕಿದೆ.

ನಂತರದ ಸಂಭವಗಳು ಹೇಗೆ ರೂಪಿಸುವವೂ ಹೇಳಲಿಕ್ಕಾಗುವುದಿಲ್ಲ. ಆದರೆ ಈ ಸಲವಾದರೂ ಪ್ರಾಂತ್ಯದ ಕಾಂಗ್ರೆಸ್ ಪ್ರತಿನಿಧಿಗಳು ದೀರ್ಘ ಬಾಳ್ವಿಕೆಯ ಆಡಳಿತ ಮಂಡಳವನ್ನು ಚುನಾಯಿಸುವುದೆಂದು ಹಾರೈಸಲಾಗಿದೆ. ಕೃಪಾಳಿನಿಯವರೆಂದಂತೆ ಜೈಲಿಗೆ ಹೋಗುವುದಕ್ಕಿಂತಲೂ ಅಧಿಕಾರ ಲಾಲಸೆಯನ್ನು ಬಿಟ್ಟುಬಿಡುವುದು ದೊಡ್ಡ ತ್ಯಾಗ. ಅಧಿಕಾರಕ್ಕಾಗಿ ನಡೆಯುವ ಪಟಾಪಟಿಯಿಂದ ಸಾಮಾನ್ಯ ಜನತೆ ಯೋಗ್ಯ ಮಾರ್ಗದರ್ಶನವಿಲ್ಲದೆ ಅವಸ್ಥೆಗೊಳಗಾಗುವುದು. ಆಡಳಿತವೂ ಹದಗೆಡುವುದು. ಇದರ ಅನುಕೂಲ ಪಡೆದು ಸರಕಾರದ ಖಾತೆಗಳು ಅನೀತಿ ವ್ಯವಹಾರಕ್ಕೆ ತೊಡಗುವಂತಾಗುವುದು.

ಈಗಿನ ಅವಿಶ್ವಾಸ ಇಡೀ ಮಂತ್ರಿಮಂಡಳದ ಮೇಲಿರುತ್ತದೆಂಬ ದೃಷ್ಟಿ ತೆಗೆದುಕೊಂಡರೆ ಪ್ರಕಾಶಂರಿಗೆ ಹೊಸ ರಚನೆಯಲ್ಲಿಂದು ಸ್ಥಾನವಿದೆ ಎಂದು ಭಾವಿಸಬಹುದು. ಅವರಿಗೆ ಆಂಧ್ರದಲ್ಲಿಯೂ, ಅಖಿಲಭಾರತದಲ್ಲೂ ತುಂಬಾ ಪ್ರಭಾವವಿದೆ ಎಂದು ಕೃಪಾಲಿನಿಯವರೇ ತಿಳಿಸಿದ್ದಾರೆ. ಅಂತು ಯಾರೂ ಒಂದರೂ ಲೋಕದ ಮುಂದೆ ಗುದ್ದಾಡಿಕೊಳ್ಳುವ ಪರಿಸ್ಥಿತಿ ಬರದಿರಲೆಂದು ಜನತೆ ಹಾರೈಸುತ್ತದೆ.

ಫ್ರಾನ್ಸ್ ಮತ್ತು ಜರ್ಮನಿಯ ಮಧ್ಯದಲ್ಲಿರುವ ಎಲ್ಸೇಸ್‌ಲೊರೈನ್ ಪ್ರದೇಶದಲ್ಲಿನ ಕೆರ್ಪೆಟ್ ಎಂಬ ಹಳ್ಳಿಯಲ್ಲಿ ಒಂದೇ ಬಾವಿ ಇರುವುದರಿಂದ ಅಲ್ಲಿ ನೀರನ್ನು ರೇಶನ್ ಕಾರ್ಡುಗಳ ಮೂಲಕ ಹಂಚುತ್ತಾರೆ.

✱

ಶಿಕ್ಷಿತ ಮಹಿಳೆಯರಿಗೆ ಚಲಚಿತ್ರ ಉದ್ಯೋಗ

ನೈತಿಕ ಕುಂದುಕೊರತೆಗಳ ದಿನಗಳು ಕಳೆದವು

ಪ್ರಾಚೀನ ಕಾಲದಿಂದ ಮಡದಿಯ ಸ್ಥಾನಮಾನ

ಅನಾದಿ ಕಾಲದಿಂದಲೂ ಜಗತ್ತಿನ ಮಹಿಳೆಯರಿಗೆಲ್ಲಾ ತೆರೆದಿರುವ ಒಂದೇ ಒಂದು ಉದ್ಯೋಗವೆಂದರೆ ಮದುವೆಮಾಡಿಕೊಳ್ಳುವುದೆಂಬ ಭಾವನೆ ಮುಂದರಿಸಿ ಬಂದಿದೆ. ಭಾರತದಲ್ಲಂತೂ ಅದಕ್ಕೆ ಇನ್ನಷ್ಟು ಹೆಚ್ಚಿನ ಮಹತ್ವ ಕೊಡಲ್ಪಟ್ಟಿದ್ದರಿಂದ ಇಲ್ಲಿನ ಮಹಿಳೆಯರು ಇನ್ನೂ ತಮ್ಮ ಮುತ್ತಜ್ಜಿಯರ ಕಾಲದಲ್ಲಿದ್ದಂತೆ ಇದ್ದಾರೆ.

ಕಳೆದ 20 ವರ್ಷಗಳಲ್ಲಿ ಉಚ್ಚ ಶಿಕ್ಷಣ ಪಡೆಯುವ ಮಹಿಳೆಯರ ಸಂಖ್ಯೆ ತುಂಬಾ ಹೆಚ್ಚಾಗಿದೆ. ಆದರೆ ಎಷ್ಟು ಕಲಿತರೂ ತಮ್ಮ ಹುಡುಗಿಯರು ಯಾವುದಾದರೊಂದು ಉದ್ಯೋಗವನ್ನವಲಂಬಿಸಲು ಹೆತ್ತವರ ಆಕ್ಷೇಪವಿದ್ದೇ ಇದೆ. ಹುಡುಗಿಯನ್ನು ಕೇವಲ ಮದುವೆ ದೃಷ್ಟಿಯಿಂದಲೇ ಶಿಕ್ಷಣ ಕೊಡಿಸುವರು. ಕಲಿತ ಹುಡುಗಿಯರಿಗೆ ಮದುವೆ ಸಂತೆಯಲ್ಲಿ ಶೀಘ್ರ, ಗಿರಾಕಿಗಳು ಸಿಗುತ್ತವೆ. ತುಂಬಾ ಮುಂದುವರಿದ ಇಲ್ಲವೆ ಸುಧಾರಿತರೆನಿಸಿಕೊಂಡ ಕುಟುಂಬದಲ್ಲೂ ಹುಡುಗಿಯರನ್ನು ಅವರ ಬಂಧುಗಳಂತೆ ಯಾವುದಾದರೊಂದು ನಿರ್ದಿಷ್ಟ ಉದ್ಯೋಗ ಇಲ್ಲವೆ ವೃತ್ತಿಯಲ್ಲಿ ತರಬೇತಿಗೊಳಿಸುವ ಮಾತೇ ಇಲ್ಲ.

ಆದರೆ ಜಗತ್ತು ಇಂದು ಭರದಿಂದ ಬದಲಾಗುತ್ತಿದೆ. ಕಳೆದ ಯುದ್ಧವು ಸ್ತ್ರೀಯರನ್ನು ತುಂಬಾ ಮುಂದಕ್ಕೆ ತಂದಿರುತ್ತದೆ.

ನಿಜವಾದ ಸಹಾಯಕರು

ಜೀವನಾವಶ್ಯಕತೆಯ ವಸ್ತುಗಳ ಬೆಲೆಯು ವಿಪರೀತ ಏರಿದ್ದು ಜೀವನವು ತುಂಬಾ ತಾಪತ್ರಯಗಳಿಂದ ತುಂಬಿರುವಾಗ ಮಡದಿಯಾದವಳು 'ಸಂಸಾರ ನೌಕೆಯನ್ನು ಸುಗಮವಾಗಿ ಸಾಗಿಸಲು ತನ್ನ ಶಕ್ತಿಯನ್ನಿತ್ತರೆ ಅದೆಷ್ಟು ಸುಲಭವಾಗುವುದು! ತಮ್ಮ ಆದಾಯಕ್ಕೆ ತಮ್ಮ ಹೆಂಡತಿಯು ದುಡಿದು ತಂದ ಆದಾಯವನ್ನು ಸೇರಿಸಿದಾಗ ಗಂಡಂದಿರಿಗೆ ಅದೆಷ್ಟು ಹೊರೆ ಕಮ್ಮಿಯಾದಂತಾಗುವುದು.

ಈ ಸಂದರ್ಭದಲ್ಲಿ 'ಮನೆ ಮತ್ತು ಮಕ್ಕಳ ಗತಿ ಏನು? ಅವರ ಲಾಲನೆ ಪಾಲನೆ ಮಾಡುವವರಾರು' ಎಂಬ ಪ್ರಶ್ನೆ ಯಾವಾಗಲೂ ಕೇಳಲ್ಪಡುವುದೊಂದು ರೂಢಿಯೇ ಆಗಿದೆ. ಹೆಚ್ಚಿನ ಭಾರತೀಯ ಕುಟುಂಬಗಳಲ್ಲಿ ಸರ್ವಸಾಧಾರಣವಾಗಿ ಓರ್ವ ಅತ್ತೆಯಾಗಲಿ ಇಲ್ಲವೆ ಬೇರೆ ಹಿರಿ ಮಹಿಳೆಯಾಗಲಿ ಮನೆಯನ್ನು ನೋಡಿಕೊಳ್ಳುತ್ತಿರುವಳು. ಆಗ ಸೊಸೆಯಾದವಳಿಗೆ ತನ್ನ ಗಂಡನೊಡನೆ ಸಹಕರಿಸಿ ದುಡಿಯಲು ಬಿಡುವಾಗುವುದು.

ಇದಲ್ಲದೆ ತಾನು ಸ್ವಂತ ಶ್ರಮಪಟ್ಟು ದುಡಿದ ಒಂದಷ್ಟು ಹಣವೆಂದರೂ ಯಾರಿಗೆ ತಾನೆ ಹೆಮ್ಮೆ ಹುಟ್ಟಲಿಕ್ಕಿಲ್ಲ. ಅದು ಅವಳದೇ ಸ್ವಂತದ ಸಂಪತ್ತಾಗಿರುತ್ತದೆ. ಹೆಂಗಸಿಗೆ ಅದರಿಂದ ಆತ್ಮಗೌರವವೆನಿಸುವಂತಾಗುತ್ತದೆ. ಮಾತ್ರವಲ್ಲ ದುರಾದೃಷ್ಟದ ಸಂದರ್ಭಗಳಲ್ಲಿ ತಾನು ಸ್ವತಂತ್ರಳಾಗಿ ಜೀವನ ನಡೆಸಲು ಅವಳಿಗೆ ಪ್ರೋತ್ಸಾಹವೂ ಸಿಗುತ್ತದೆ. ಕಾರಣ ಸಶಕ್ತರೇ ಈ ಜಗತ್ತಿನಲ್ಲಿ ಬಾಳಬಲ್ಲರು ತಾನೆ.

ಆದರೆ ಇದು ತನಕ ಮಹಿಳೆಯರಿಗಾಗಿ ಕೆಲವು ಉದ್ಯೋಗಗಳು ಮಾತ್ರ ತೆರೆದಿವೆ. ಇವುಗಳಲ್ಲಿ ಅಧ್ಯಾಪಕ ವೃತ್ತಿಯು ಮಹಿಳೆಯರಲ್ಲಿ ತುಂಬಾ ಜನಪ್ರಿಯವೂ ಆಗಿದ್ದು, ಅದಕ್ಕೆ ಅತ್ಯಲ್ಪ ಶೈಕ್ಷಣಿಕ ಪದವಿಗಳಿದ್ದರೆ ಸಾಕಾಗುತ್ತದೆ. ಸ್ವಲ್ಪ ಕಲಿತರೆ ಯಾರಾದರೂ ಅಧ್ಯಾಪಕಿಯಾಗಬಹುದು. ಆದರೆ ದುರ್ದೈವವಶಾತ್ ಉಪಾಧ್ಯಾಯ ವೃತ್ತಿಯು ಅತೀ ಕನಿಷ್ಠ ಸಂಭಾವನೆಯ ಉದ್ಯೋಗವಾಗಿದ್ದು ಮಹತ್ವಾಕಾಂಕ್ಷೆ ಇದ್ದವರಿಗೆ ಆಕರ್ಷಕ ಉದ್ಯಮವೆನಿಸುವುದಿಲ್ಲ.

ಚಿಕ್ಕ ಮಗುವಿನ ಗುಣಲಕ್ಷಣಗಳನ್ನು ರೂಪುಗೊಳಿಸಲು ಶಾಲೆಗಳು ಪ್ರಭಾವಿತ ಸ್ಥಾನಗಳಾಗಿವೆ. ಆದುದರಿಂದ ಅಧ್ಯಾಪಕರಾಗಿರುವವರ ಮೇಲೆ ವಿಶೇಷ ಹೊಣೆಗಾರಿಕೆಯೂ ಇದೆ. ಈ ಸದೃಷ್ಟಿಯಿಂದ ಶಿಕ್ಷಕರಿಗೆ ಉನ್ನತ ಸಂಬಳ ಮಟ್ಟವನ್ನು ಕೊಡಬೇಕಾದುದು ಅತ್ಯಾವಶ್ಯಕವೆನಿಸುತ್ತದೆ. ಉಪಾಧ್ಯಾಯರಿಗೆ ಕೊಡುವ ಸಂಬಳದ ಮಟ್ಟವು ಕಮ್ಮಿ ಇದ್ದಲ್ಲೆಲ್ಲಾ ಶಾಲೆಯ ವಾತಾವರಣವೂ ಕನಿಷ್ಠ ಮಟ್ಟದಲ್ಲೇ ಇರುತ್ತದೆ. ಅದರಲ್ಲೂ ಇಂಥಾ ಶಾಲೆಗಳಲ್ಲಿನ ಶಿಕ್ಷಕಿಯರ ಜೀವನವು ಸತ್ಯ ಸಂಕಷ್ಟಮಯವಾಗಿದೆ. ಅಂಥಹ ಶಾಲೆಗಳ ಕಟ್ಟಡಗಳಾದರೂ ಕಿಟಕಿಗಳಿಲ್ಲದ ಗುಹೆಗಳಂತಿದ್ದು, ಸ್ಥಳವು ವಿದ್ಯಾರ್ಥಿ ಸಂಖ್ಯೆಗೆ ಇಕ್ಕಟ್ಟಿನದಾಗಿರುತ್ತದೆ.

ಇಂತಹ ಸಂದರ್ಭದಲ್ಲೂ ಉಪಾಧ್ಯಾಯಿನಿಯಾದವಳು ತನ್ನ ಆದರ್ಶ ಶ್ರಮದಿಂದ ಮಕ್ಕಳನ್ನು ತಿದ್ದಬೇಕೆಂದು ನಿರೀಕ್ಷಿಸಲ್ಪಡುತ್ತದೆ. ಇಷ್ಟಾದರೂ ಈ ಉದ್ಯಮಕ್ಕೆ ಹೆಚ್ಚು ಸಂಖ್ಯೆಯಲ್ಲಿ ಮಹಿಳೆಯರು ಬರುತ್ತಾರೆ. ಕಾರಣ ಅದಕ್ಕೆ ಅತ್ಯಲ್ಪ ಶಿಕ್ಷಣವಿದ್ದರೆ ಸಾಕು. ಆದರೆ ಈ ಅಧ್ಯಾಪಕ ವೃತ್ತಿಗಿಂತಲೂ ಮಹಿಳೆಯರು ಅನುಕೂಲಸ್ಥರ ಮನೆಗಳಲ್ಲಿ ಮಕ್ಕಳ ಮೇಲ್ವಿಚಾರಣೆಯನ್ನು ನೋಡುವ 'ಒಡತಿ'ಯ ಕೆಲಸವನ್ನು ಕೈಕೊಂಡರೆ ನಮ್ಮಲ್ಲಿ ಅವೆಷ್ಟು ಮಂದಿ ಅವರನ್ನು ಸ್ವಾಗತಿಸಲಿಕ್ಕಿಲ್ಲ.

ರಂಗಭೂಮಿ ಉದ್ಯೋಗ

ಉಪಾಧ್ಯಾಯ ವೃತ್ತಿಯ ನಂತರ ಭಾರತ ಮಹಿಳೆಯರ ಮುಂದಿರುವ ಇತರ ಉದ್ಯೋಗಗಳೆಂದರೆ ವೈದ್ಯ, ವಕಾಲತು ಮತ್ತು ದಾದಿ ಕೆಲಸಗಳು. ವಕಾಲತು ವೃತ್ತಿಯು ಹೆಚ್ಚು ಮಹಿಳೆಯರ ಆಕರ್ಷಣೆಗೊಳಗಾಗಲಿಲ್ಲ. ನ್ಯಾಯಸ್ಥಾನಗಳಲ್ಲಿ ಸ್ತ್ರೀಯರು ವ್ಯವಹರಿಸುವುದಾದರೂ ಯಾರ ಪರವಾಗಿ? ಸ್ತ್ರೀ ಕಕ್ಷಿದಾರರು ಹೆಚ್ಚಾಗಿರಲಿಕ್ಕೆ ನಮ್ಮ ದೇಶದಲ್ಲಿ ಮಹಿಳೆಯರಿಗೆ ಆಸ್ತಿಪಾಸ್ತಿಗಳಲ್ಲಿ ಸಮ ಹಕ್ಕಿಲ್ಲ. ಪುರುಷ ಕಕ್ಷಿಗಾರರು ಪುರುಷ ವಕೀಲರ ಸಮಕ್ಷಮದಲ್ಲೇ ಇರಲು ಧೈರ್ಯಪಡುತ್ತಾರೆ.

ವೈದ್ಯಕೀಯ ಮತ್ತು ದಾದಿಯ ವೃತ್ತಿಗಳಾದರೂ ಹೆಚ್ಚೆಚ್ಚು ಶ್ರಮ ಮತ್ತು ಸೌಕರ್ಯಗಳಿಂದೊಡಗೂಡಿರಬೇಕಾದುದು. ಆದರೆ ವಿಶಾಲವಾದ ನಮ್ಮ ದೇಶದಲ್ಲಿ ಇದಕ್ಕೆ ಬೇಕಾದ ಸುವ್ಯವಸ್ಥಿತ ಸೌಕರ್ಯಗಳಿಲ್ಲ. ಸದ್ಯದಲ್ಲಿ ದಿಲ್ಲಿಯಲ್ಲಿ ಒಂದು ನರ್ಸಿಂಗ್ ಕಾಲೇಜು ತೆರೆಯಲ್ಪಡುವುದು. ಹೆಚ್ಚೆಚ್ಚು ಮಹಿಳೆಯರು ಅದರ ಅನುಕೂಲ ತೆಗೆದುಕೊಳ್ಳುವರೆಂದು ಹಾರೈಸಲಾಗಿದೆ.

ಚಲಚ್ಚಿತ್ರ ಇಲ್ಲವೆ ನಾಟಕ ನಟಿಯ ಉದ್ಯಮವೆಂದರೆ ನಮ್ಮ ಹೆತ್ತವರು ಉರಿದು ಬೀಳುವರು. ಈ ಕಲಾಕ್ಷೇತ್ರಗಳಲ್ಲಿ ಕಾಲಿಟ್ಟಾಗಲೇ ಹುಡುಗಿಯರ ನೈತಿಕತೆಯು ಲೋಪವಾಗುವುದೆಂದು ಅವರ ಭಾವನೆ. ನೀತಿ ತಪ್ಪಿ ಹಾದಿ ವರ್ತಿಸುವ ಅವಶ್ಯಕತೆ ಇಲ್ಲ. ಹಿಂದೆ ಒಂದೊಂದು ಕಾಲದಲ್ಲಿ ಚಲಚಿತ್ರ ಉದ್ಯಮವು ಕೆಲವೊಂದು ನಿರ್ದಿಷ್ಟ ವರ್ಗದವರಿಗೇ ಹೇಳಿದ ಕೆಲಸವಾಗಿತ್ತು. ಈಗೋರ್ವ ಶಿಕ್ಷಿತ ಮಹಿಳೆಯು ಈ ಉದ್ಯಮವನ್ನು ಮಾಡಿಕೊಂಡಿರಬೇಕೆಂದರೆ ಅನೇಕಾನೇಕ ಟೀಕೆಗಳನ್ನು ಎದುರಿಸಲು ಅವಳಲ್ಲಿ ಸಾಕಷ್ಟು ಧೈರ್ಯವಿರಬೇಕು. ಕೆಲವೊಬ್ಬ ಸ್ಥೈರ್ಯವಂತ ನಾರಿಯರು ಇದಕ್ಕೆ ಸೇರಿ ಆದರ್ಶ ಕಲ್ಪಿಸಿದುದರಿಂದ ಹೆಚ್ಚೆಚ್ಚಿನ ಶಿಕ್ಷಿತ ಮಹಿಳೆಯರು ಈ ಉದ್ಯಮಕ್ಕೆ ಸೇರುತ್ತಿರುವರೆಂಬುದು ತೃಪ್ತಿಯ ಸಂಗತಿ.

ಸಾಹಸಬೇಕು

ಮಹಿಳೆಯರು ಸಾಹಸವಂತರಾದರೆ ಇನ್ನೂ ಅನೇಕಾನೇಕ ಉದ್ಯಮಗಳು ಅವರಿಗೆ ಕಾದಿರುತ್ತವೆ. ಮನೆಗಳನ್ನು ಶೃಂಗರಿಸುವುದು ಒಳ್ಳೇ ಉದ್ಯಮ. ಸ್ವಲ್ಪ ಚಿತ್ರಕಲೆಯನ್ನು ಮನೆಯಲ್ಲೇ ಅಭ್ಯಾಸಿಸಿ ಮತ್ತು ಬಣ್ಣ ಹಾಕುವ ಕೆಲಸವನ್ನು ಯಾರಾದರೂ ಪೈಂಟರರ ಬಳಿ ಅವರು ಸುಲಭವಾಗಿ, ಕಲಿತು ಜೀವನ ಸಾಗಿಸಬಹುದು. ಇದಲ್ಲದೆ, ಇಂಜಿನಿಯರಿಂಗ್ ಲೆಕ್ಕಪತ್ರ ಬರೆಯುವುದು, ಪತ್ರಿಕೋದ್ಯೋಗ, ಕಟ್ಟಡ ಶಿಲ್ಪ, ಶಿರ ಅಲಂಕಾರ, ಸೌಂದರ್ಯ ಶೃಂಗಾರ, ಮೊದಲಾದವುಗಳು ಮಹಿಳೆಯರಿಗೆ ಸ್ವಲ್ಪ ಶ್ರಮದಲ್ಲಿ ಕಲಿಯಲಿಕ್ಕಾಗುವಂತಹುಗಳು.

ಮದುವೆಯಾದ ಮಾತ್ರಕ್ಕೆ ಸ್ತ್ರೀಯರು ಉದ್ಯೋಗ ಬಿಟ್ಟುಬಿಡಬೇಕೆಂತಿಲ್ಲ. ಮತ್ತೆ ಅವರು ದುಡಿಯುವ ಉದ್ಯಮವನ್ನೇ ಅನುಸರಿಸಬೇಕೆಂದಿಲ್ಲ. ಸ್ವಲ್ಪ ಅನುಕೂಲತೆ ಇದ್ದರೆ ಏನಾದರೂ ಸಾಮಾಜಿಕ ಸುಧಾರಣೆಯ ಕಾರ್ಯವನ್ನು ಮಾಡಬಾರದು. ಹೇಗಾದರೂ ಸ್ತ್ರೀಯರಿಂದು ಸ್ವಾವಲಂಬಿಗಳಾಗಲು ಯತ್ನಿಸುತ್ತಿರುವರು. ಅನೇಕ ಉದ್ಯೋಗಗಳು ಅವರ ಮುಂದಿವೆ. ತಮ್ಮ ಗುಣಶೀಲಗಳಿಗೆ ಲೋಪಬಾರದಂತೆ ಅವರು ಅವುಗಳನ್ನು ಯಶಸ್ವಿಯಾಗಿ ನಿರ್ವಹಿಸಬಹುದು.

ಫ್ರಾನ್ಸಿನ ಲಿಲ್ಲೆ ಎಂಬ ಪಟ್ಟಣದಲ್ಲಿ ಯಾನ್‌ದ್ಲೇರಿ ಎಂಬ ಮಾಡು ರಿಪೇರಿ ಮಾಡುವವ ಕೆಲಸಮಾಡುವಾಗ ಜಾರಿ ಆರು ಮಾಳಿಗೆ ಕೆಳಗೆ ಬಿದ್ದ. ಜಾರಿದವ ಮಾರ್ಗದಲ್ಲಿನ ಒಂದು ನಾಲ್ಕು ಚಕ್ರದ ಶಿಶುವಾಹನದಲ್ಲೇ ಆರಾಮವಾಗಿ ಬಿದ್ದ. ಒಂದು ಕ್ಷಣಕ್ಕೆ ಹಿಂದೆ ಓರ್ವ ತಾಯಿ ಅದರಿಂದ ಮಗುವನ್ನು ಎತ್ತಿಕೊಂಡು ಬಳಿಯಲ್ಲಿ ನಿಂತಿದ್ದಳು. ತನ್ನ ಮಗುವಿನ ಗಾಡಿಯಲ್ಲಿ ಅಕಸ್ಮಾತ್ ಬಿದ್ದವನ ದೃಶ್ಯ ನೋಡಿ ಗಾಬರಿಯಿಂದ ಅವಳು ಮೂರ್ಛೆ ಹೋಗಿ ನೆಲಕ್ಕುರುಳಿದಾಗ ಅವಳ ಮೊಣಕಾಲು ಮುರಿಯಿತು!

ESTD 1906

CANARA BANK, LIMITED.

(Incorporated in British India with Limited Liability)

(PROGRESS STATEMENT CORRECT TO THOUSANDS OF RUPEES)

LIABILITIES

	1945	1946
Capital Subscribed	29,00,000	29,60,000
Capital paid up	28,43,000	28 80 000
Reserve	11,00 000	11,00,000
Deposits	3,50,42,000	4 60,40 000
Due to Bankers	26,91,000	69 57,000
Call Deposits from Bankers	8,00,000	15,00,000
Branch Adjustments	22,07,000	21,09,000
Bills for collection and foreign bills negotiated	20,56,000	34,23,000
Other Liabilities	77,000	85,000
Profit for the year	3,61,000	4,19,000
Rs.	4,71,78,000	6,45,13,000

ASSETS

	1945	1946
Cash	1,01,91,000	1,18,16,000
Govt Securities	1,80,45,000	2,75,61,000
Advances to customers	1 56,87,000	2,01,38,000
Bills for collection and Foreign Bills negotiated	20,56,000	34,23,000
Landed Properties	28,000	5,000
Bank Premises and Furniture and Fixtures	1,46,000	1,47,000
Other Assets	10,25,000	16,23,000
Rs.	4,71,78,000	6,45,13,000

ಕೆನರಾ ಬೇಂಕಿನ ೪೧ನೇ ವಾರ್ಷಿಕ ಸಾಮಾನ್ಯ ಮಹಾಸಭೆ.

ಅಧ್ಯಕ್ಷರ ವರದಿ ಭಾಷಣ

ಸದ್ಗೃಹಸ್ಥರೇ,

ತಮ್ಮ ಅನುಮತಿಯಿಂದ ಉಳಿತಾಯದ ಪಟ್ಟಿಯನ್ನೂ, ಲಾಭನಷ್ಟದ ಲೆಕ್ಕವನ್ನೂ ಪರಿಶೀಲಿಸಲ್ಪಟ್ಟಿರುವುದಾಗಿ ಭಾವಿಸಲ್ಪಡಬಹುದು.

ನಮ್ಮ ಬೇಂಕು ಸರ್ವತೋಮುಖ ಪ್ರಗತಿಯನ್ನೈದಿದೆಯೆಂದು ಉಳಿತಾಯದ ಪಟ್ಟಿಯಿಂದ ಕಂಡುಬರುತ್ತದೆ. ಸರಕಾರದ ಭದ್ರತೆಯ ಮೇಲೆ ವಿನಿಯೋಗಿಸಲ್ಪಟ್ಟ ಬೇಂಕಿನ ಧನಸಂಚಯದ ಅಂಕೆಸಂಖ್ಯೆಗಳು ಕಳೆದ ವರ್ಷಕ್ಕಿಂತ ಹೆಚ್ಚಾಗಿವೆ. ನಮ್ಮ ಧನ ವಿನಿಯೋಗ ಖಾತೆಯು ಹೆಚ್ಚುಕಡಿಮೆ ಭಾರತ ಸರಕಾರದ ನಿರ್ದಿಷ್ಟ ಮಿತಿಯ ಭದ್ರತೆಗಳಲ್ಲೇ ಇದೆ ಎಂಬುದು ಗಮನೀಯ ಸಂಗತಿ.

ನಮ್ಮ ಬೇಂಕಿನ ಧನ ವಿನಿಯೋಗದ ಧೋರಣೆಯು ಸಂಪೂರ್ಣ ನ್ಯಾಯಬದ್ಧವಾದುದೆಂದು ಉಳಿತಾಯದ ಪಟ್ಟಿಯಲ್ಲಿ ಕಾಣಿಸಿದ ಫಲಿತಾಂಶದಿಂದ ಮನವರಿಕೆಯಾಗುತ್ತದೆಂದು ಹೇಳುವುದು ಈ ಸಂದರ್ಭದಲ್ಲಿ ಅಪ್ರಸ್ತುತವಾಗಲಾರದು. 1946 ಡಿಸೆಂಬರದಲ್ಲಿ ಭದ್ರತೆಗಳ ಬೆಲೆಯು ಕೆಲವು ಸಮಯದ ತನಕ ಕನಿಷ್ಠ ಮಟ್ಟಕ್ಕಿಳಿದಿದ್ದುವು. ಆ ಸಮಯದಲ್ಲಾದರೂ-ಅಂದರೆ 31-12-1946ರ ಅವಧಿಗೆ-ನಮ್ಮ ವಿನಿಯೋಗಗಳ ಪೇಟೆಧಾರಣೆಯು ಲೆಕ್ಕಪುಸ್ತಕ ವರೌಲ್ಯಕ್ಕಿಂತ 8½ ಲಕ್ಷಕ್ಕೆ ಮಿಕ್ಕಿತೆಂಬ ಸಂಗತಿಯಲ್ಲಿ ನಾವು ನ್ಯಾಯವಾದ ತೃಪ್ತಿಯನ್ನು ಪಡೆಯಬಹುದು. ಸೂತ್ರವನ್ನಿಲ್ಲಿ ಮೇಲ್ಕಾಣಿಸಿದ ಈ ಸಂಗತಿಯು ಬೇಂಕಿನ ಸ್ಥಾನಮಾನವನ್ನು ಬಲಗೊಳಿಸುತ್ತದೆಂಬ ವಿಷಯವು ನಿಮ್ಮಲ್ಲಿ ತುಂಬಾ ಸಂತೃಪ್ತಿಯನ್ನು ಮಾಡಿರಬೇಕು.

ಈ ವರ್ಷವಿಡೀ ಬೇಂಕಿನ ಎಲ್ಲಾ ಶಾಖೆಗಳಲ್ಲಿನ ವ್ಯವಹಾರವು ಸುಗಮವಾಗಿ ನಡೆದಿದ್ದು, ಕರಾಚಿ, ನಾಗ್ಪುರ, ಅಮರಾವತಿ, ಅಕೋಲಾ, ಪೂನಾ, ಮೈಸೂರು, ತಿರುಚನಾಪಳ್ಳಿ, ಮತ್ತು ಟ್ಯುಟಿಕೊರಿನ್‌ಗಳಲ್ಲಿ ಹೊಸ ಶಾಖೆಗಳು ಉದ್ಘಾಟಿಸಲ್ಪಟ್ಟಿವೆ.

ಕ್ರಮಾಗತವಾಗಿ ವಿಕಾಸಹೊಂದಿ ಮುಂದುವರಿಯುವುದು ನಮ್ಮ ಆಶಯವಿರುತ್ತದೆ. ಆದರೆ ಶಾಖೆಗಳ ಅಭಿವೃದ್ಧಿಯು ಕಡಿಮೆ ಖರ್ಚಿನದಲ್ಲವಾದುದರಿಂದ ನಾವು ಜಾಗರೂಕತೆಯಿಂದ ಮುಂದರಿಯುವ ಕೋರಿಕೆಯುಳ್ಳವರಾಗಿದ್ದೇವೆಂಬುದನ್ನು ನಾನು ಈ ಸಂದರ್ಭದಲ್ಲಿ ತಿಳಿಸಲಿಚ್ಛಿಸುತ್ತೇನೆ. ಶಾಖಾಭಿವೃದ್ಧಿಗಾಗಿ ಈಗಾಗಲೇ ಒಂದು ಲಕ್ಷ ರೂಪಾಯಿಯ ನಿಧಿಯೊಂದನ್ನು ಪ್ರತ್ಯೇಕವಾಗಿಡಲಾಗಿದೆ. ಹೊಸ ಶಾಖೆಗಳನ್ನು ಅವುಗಳ ಉತ್ಪನ್ನದಿಂದ ಅಭಿವೃದ್ಧಿಗೊಳಿಸಲಾಗದ ಸಂದರ್ಭದಲ್ಲಿ ಈ ನಿಧಿಯನ್ನು ವಿನಿಯೋಗಿಸಲಾಗುವುದು.

ನಮ್ಮ ದೀರ್ಘ ಬಾಳ್ವಿಕೆಯ ಒಂದು ದೊಡ್ಡ ಅನುಕೂಲವೆಂದರೆ ಪ್ರಾರಂಭದ ಅವಧಿಗಳ ಆರ್ಥಿಕ ದುಸ್ಥಿತಿಯ ಅನುಭವದ ಲಾಭ ಪಡೆದದ್ದು. ಈ ಅನುಭವದ ಬುದ್ಧಿಸಾರವನ್ನು ನಾವು ನಂತರದ ಪ್ರತಿಯೊಂದು ಬಿಕ್ಕಟ್ಟಿನ ಪ್ರಸಂಗದಲ್ಲಿ ಸತ್ವಯೋಜನಕ್ಕಾಗಿ ಉಪಯೋಗಿಸಲು ಸಮರ್ಥರಾದೆವು. ಅರ್ಬತ್‌ನೋಟ್ ಕಂಪೆನಿಯು ಕುಸಿದು ಬಿದ್ದನಂತರ ಉಂಟಾದ 1906ರ ಆರ್ಥಿಕ ದುರ್ದೆಶೆಯ ಅವಧಿಯಲ್ಲಿ ಪ್ರಾರಂಭ ಹೊಂದಿದವರಾಗಿ ನಮ್ಮ ಬೇಂಕು ನಂತರ ಶೀಘ್ರದಲ್ಲೇ 1913ರ ಹಣಕಾಸಿನ ಬಿಕ್ಕಟ್ಟನ್ನೆದುರಿಸಿತು. ಅದೇ ಸಮಯಕ್ಕೆ ಭಾರತದಲ್ಲೆಲ್ಲಾ ಅನೇಕ ಬೇಂಕುಗಳು ಭಗ್ನಹೊಂದಿದ್ದುವು. ಆ ಮೇಲೆ 1914-18ರ ಜಾಗತಿಕ ಯುದ್ಧವು ಸಂಭವಿಸಿತು. ಇದರ ಪರಿಣಾಮವಾಗಿ ಉಂಟಾದ ವಿಪರೀತ ಉತ್ಪಾದನೆ ಮತ್ತು ಕನಿಷ್ಠ ಬೆಲೆಗಳ ದೆಶೆಯುಂಟಾದಾಗಲೂ ಅನೇಕ ಬೇಂಕುಗಳು ಅವಸಾನವನ್ನೈದಿದುವು. 1929ರಲ್ಲಿ ಇನ್ನೊಂದು ಬಂಡವಾಳದ ಬಿಕ್ಕಟ್ಟು ಸಂಭವಿಸಿದುದರ ಬೆನ್ನಿಗೆ 1933ರಲ್ಲಿ ಮತ್ತೊಂದು ಆರ್ಥಿಕ ಮುಗ್ಗಟ್ಟು ಪಸರಿಸಿತು. ಇದರಿಂದ ಚೇತರಿಸಿಕೊಳ್ಳುವಷ್ಟರಲ್ಲಿ ತಿರುವಾಂಕೂರ್ ನೇಶನಲ್ ಮತ್ತು ಕ್ವಿಲೋನ್ ಬೇಂಕಿನ ದಿವಾಳಿಯು ಹುಟ್ಟುಹಾಕಿದ 1938ರ ಬಂಡವಾಳ ಬಿಕ್ಕಟನ್ನು ನಾವು ಎದುರಿಸಬೇಕಾಯಿತು. ಆ ನಂತರ ಒಂದರ್ಧ ಅನಿಶ್ಚಿತತೆಯ ಜಾಗತಿಕ ಯುದ್ಧ ಮತ್ತು ಫ್ರಾನ್ಸಿನ ಶರಣಾಗತಿಯ ಪರಿಣಾಮದಿಂದುಂಟಾದ ಮತ್ತೊಂದು ಬಿಕ್ಕಟ್ಟು.

ಯುದ್ಧವು ಮುಗಿಯಿತು. ನಾವು ನಿರೀಕ್ಷಿಸುವುದಕ್ಕಿಂತ ಮುಂಚಿತವಾಗಿಯೇ ಇನ್ನೊಂದು ಆರ್ಥಿಕ ಬಿಕ್ಕಟ್ಟು ಖಂಡಿತ ಸಂಭವಿಸುವುದೆಂದು ನಮ್ಮ ಪೂರ್ವ ಅನುಭವದಿಂದ ಭಾವಿಸಿಕೊಳ್ಳಬಹುದು. ಈಗಾಗಲೇ ಆ ಸ್ವರೂಪದ ಅನುಭವ ಭಾಸವಾಗುತ್ತಿದೆ. ಆದರೆ ನಮ್ಮ ಬೇಂಕು ದೃಢವಾಗಿ ಹಣದ ಸ್ಥಿರತೆಯನ್ನು ... ಧನವಿನಿಯೋಗಗಳೂ ನಮ್ಮ ... ಎಂಬುದರ ಸಮಾಧಾನ ನಮಗಿದೆ.

ದಿನದಿನದ ಪರಿಸ್ಥಿತಿ ಬದಲಾವಣೆಗಳಿಗನುಕೂಲವಾಗಿ ಬೇಂಕಿನ ವ್ಯವಹಾರವನ್ನು ಸದಾ ಸುಧಾರಿಸಿ ಮುಂದುವರಿಸುವ ನಮ್ಮ ಧೋರಣೆಯನ್ವಯ ನಾವು ನಾವಾಗಿ ರಿಸರ್ವ ಬೇಂಕನ್ನು ನಮ್ಮ ಸಂಸ್ಥೆಯ ಸರ್ವಸಾಮಾನ್ಯ ವ್ಯವಹಾರವನ್ನು ಪರಿಶೀಲಿಸಲೂ ಅವಶ್ಯ ತೋರುವ ಸುಧಾರಣೆಗಳನ್ನು ಸೂಚಿಸಲೂ ಆಹ್ವಾನಿಸಿರುತ್ತೇವೆ. ಸಂಧರ್ಭವಶಾತ್ ಎಲ್ಲಾ ಪ್ರಸಂಗಗಳಲ್ಲಿ ನಮಗೆ ಆದಷ್ಟು ಅತೀ ಹೆಚ್ಚಿನ ಉಪಯುಕ್ತತೆಗೆ ಬೀಳಲು ರಿಸರ್ವ್ ಬೇಂಕಿಗೆ ಇದರಿಂದ ಸಾಧ್ಯವಾಗಿದೆ.

ಕೊನೆಯಲ್ಲಿ ಹೊಸ ತೆರಿಗೆ ಯೋಜನೆಗಳ ಕುರಿತು ಒಂದೆರಡು ಮಾತುಗಳು ಅಪ್ರಾಸಂಗಿಕವಾಗಲಾರವು. ನಾವು ಇಂದಿನ ತನಕ ನಮ್ಮ ಲಾಭ ವಿತರಣೆಯಲ್ಲಿ ಜಾಗರೂಕತೆಯ ಧೋರಣೆಯನ್ನನುಸರಿಸಿ ಬಂದಿರುವುದರಿಂದ ಹೊಸ ತೆರಿಗೆ ಯೋಜನೆಗಳು-ಸಿಲೆಕ್ಟ್ ಕಮಿಟಿಯಿಂದ ತಿದ್ದುಪಡಿ ಮಾಡಲ್ಪಡದಿದ್ದರೂ-ನಮ್ಮ ಭಾವಿ ಲಾಭ ಹಂಚೋಣಕ್ಕೆ ಯಾವ ರೀತಿಯಲ್ಲೂ ತೊಡಕಾಗಲಾರವೆಂದು ಹೇಳಲು ಸಂತೋಷಿಸುತ್ತೇನೆ.

ಮುಗಿಸುವ ಮೊದಲು ಬೇಂಕಿನ ಕೇಂದ್ರ ಕಛೇರಿ ಮತ್ತು ಶಾಖೆಗಳಲ್ಲಿನ ಉದ್ಯೋಗಸ್ಥರ ಕಾರ್ಯ ಪ್ರಶಂಸೆಯನ್ನು ದಾಖಲೆ ಮಾಡಲು ಬಯಸುತ್ತೇವೆ.

ಗ್ರಹಗಳು ಶರೀರಪೋಷಣೆ ಮಾಡುತ್ತವೆ.

ಜ್ಯೋತಿಷ್ಯ ಶಾಸ್ತ್ರವು ಏಕೆ ಸುಳ್ಳಲ್ಲ?

ಜಾತಕ ಫಲವೂ ಪೂರ್ವ ಜನ್ಮ ಸಂಸ್ಕಾರವೂ

ಮಾನವ ಶರೀರ ಪೋಷಣೆಯಲ್ಲಿ ಆಹಾರದೊಳಗಿನ ವಿಟಮಿನ್ ಎಂಬ ಜೀವಾತು ಇಲ್ಲವೆ ಜೀವಸತ್ವಗಳು ಯಾವ ಪಾತ್ರವನ್ನು ನಿರ್ವಹಿಸುತ್ತವೊ ಅದೇ ರೀತಿ ನಕ್ಷತ್ರ ಲೋಕದಿಂದ ಪಸರಿಸಲ್ಪಡುವ ಜ್ಯೋತಿರ್ ಪ್ರಭಾವವು ಮಾನವ ಬೆಳವಳಿಗೆಯ ಮೇಲೆ ವಿವಿಧ ಪರಿಣಾಮಗಳನ್ನುಂಟುಮಾಡುತ್ತದೆ.

ಟ್ರಿಬ್ಯೂನ್ ಪತ್ರಿಕೆಯಲ್ಲಿ ಈ ವಿಷಯದ ಕುರಿತು ಶ್ರೀ ನರ್‌ಪತ್ ರೇ ಜಂಗಮ್ ಎಂಬ ಜ್ಯೋತಿಷ್ಯ ಶಾಸ್ತ್ರ ನಿಪುಣರು ಹೀಗೆ ತಿಳಿಸುತ್ತಾರೆ.

ಜ್ಯೋತಿಷ್ಯ ಇಲ್ಲವೆ ನಕ್ಷತ್ರ ಸಂಬಂಧದ ಶಾಸ್ತ್ರವು ಒಂದು ವಿಜ್ಞಾನ. ಒರ್ವ ಹಿಂದೂವಿನ ಮಟ್ಟಿಗೆ ಅದು ಅವನ ಮತಧರ್ಮದ ಒಂದು ಅವಿಚ್ಛಿನ್ನ ಅಂಗವೇ ಆಗಿದೆ. ನಮ್ಮ ಶಾಸ್ತ್ರಗಳ ಬೆನ್ನೆಲುಬಿನಂತಿರುವ ಕರ್ಮಾನುಫಲ ತತ್ವವು ಜ್ಯೋತಿಷ್ಯ ಶಾಸ್ತ್ರವನ್ನು ಒಡಗೂಟ್ಟಿಗೆ ಅನುಸರಿಸಿಕೊಂಡಿರುತ್ತದೆ.

ಮಾನವ ಕರ್ಮಗಳು ಮತ್ತು ಹೋಗುವ ಸಂಸ್ಕಾರಗಳು ಮಾನವ ಮನಸ್ಸಿನ ಮೇಲೆ ನಿರ್ದಿಷ್ಟ ಪ್ರತಿಕ್ರಿಯೆಯನ್ನುಂಟುಮಾಡುತ್ತವೆಯೆಂದಾದರೆ, ಆತ್ಮವು ಒಂದು ಜನ್ಮದಿಂದ ಇನ್ನೊಂದಕ್ಕೆ ಯಾತ್ರೆಗೈಯುತ್ತಿರುವಾಗ ಈ ಪ್ರತಿಕ್ರಿಯೆಯನ್ನು ಜನ್ಮವಾಗಿ ಹೇಗೆ ತಿಳಕೊಳ್ಳಬಹುದು?

ಏಕಮೇವ ಜಗತ್

ವಿವಿಧ ವಿಚಿತ್ರ ಸ್ವಭಾವದ ತಾರಾಗಣದಿಂದ ಭೂಮಿಯ ಸತ್ವಬಲ ... ಮಂಡಳವು ... ಶರೀರದಲ್ಲಿರುವ ಸ್ನೇಹ, ಬುದ್ಧಿಶಕ್ತಿ, ... ಅನುರಾಗ ... ಮುಂತಾದ ಸಾಮಾನ್ಯ ಶಕ್ತಿಗಳನ್ನುಂಟುಮಾಡುತ್ತದೆ. ಇದು ಮನಸ್ಸಿನ ಶಕ್ತಿಯ ಒಂದು ಅಂಗವಾಗುತ್ತದೆ. ಈ ಮನಸ್ಸು ವಾಸ್ತವಿಕವು ಒಂದು ರ ಗರ್ಭದ ಜನ್ಮಾಂತರಕ್ಕೆ ಚಲಿಸುವ ಆತ್ಮಕ್ಕೆ ಒಂದು ವಾಹಕವಾಗಿದೆ.

ಮೇಲೆ ಹೇಳಿದ ಸ್ಮರಣ, ಬುದ್ಧಿಶಕ್ತಿ, ಮೋಹ, ಅನುರಾಗ, ದ್ವೇಷ ಮೊದಲಾದುವುಗಳನ್ನು ಯಾವದೊಂದು ಭೌತಿಕ ರೂಪರೇಖೆಗನುಸಾರವಾಗಿ ... ವುದಿಲ್ಲ. ಕಾರಣ ಅವು ಭಾವನಾತ್ಮಕ ಅನುಭವಗಳು. ಮನಸ್ಸಿನ ಬೆಳವಣಿಗೆಗೆ ಅನುಸಾರವಾಗಿ ಅವೂ ಬೆಳೆದಿರುತ್ತವೆ. ನಮ್ಮ ಪಿಂಡ ಕಣಗಳು ಅವುಗಳ ಶೇಖರಸ್ಥಾನಗಳು.

ವೇದ ವಿದ್ಯೆಯಲ್ಲಿ ಆತ್ಮನಂತೆ ಸಲ್ಲುವ ಸೂರ್ಯನು ಕೇಂದ್ರ ಶಕ್ತಿ ... ತನ್ನ ಮಂಡಲದ ಇತರ ಗಣಗಳ ಮೇಲೆ ಅವನು ಸಂಪೂರ್ಣ ಅಧಿಕಾರವನ್ನಿಟ್ಟುಕೊಂಡಿರುತ್ತಾನೆ. ಮನಸ್ಸು, ಚಂದ್ರನಂತೆ ಆತ್ಮನಾದ ಸೂರ್ಯನಿಂದಲೇ ತನ್ನ ತೇಜವನ್ನು ಪಡೆಯುತ್ತವೆ. ಬುಧ ಗ್ರಹವು ಶಾರೀರಿಕ ಶಕ್ತಿಗೆ ಸಂಬಂಧಿಸುತ್ತದೆ. ಬೃಹಸ್ಪತಿ ಗ್ರಹವು ನ್ಯಾಯಧೀಶ, ಮಂತ್ರಿ ಮತ್ತು ಆಚಾರ್ಯ ಸಂಬಂಧವನ್ನೂ, ಶುಕ್ರ ಗ್ರಹವು ಪ್ರೀತಿ ಮೋಹ ಸಂಬಂಧವನ್ನೂ, ಶನಿಯು ಸೇವಕ ಸಂಬಂಧವನ್ನೂ, ರಾಹು ಕೇತುಗಳು ಅನಿಷ್ಟಕಾರಕ ಸಂಬಂಧವನ್ನೂ ಪ್ರಭಾವಿಸುತ್ತವೆ.

ಕರ್ಮ ತತ್ವ

ಆಹಾರದಲ್ಲಿನ ಜೀವಾತುಗಳು ಶರೀರ ಪೋಷಣೆಯಲ್ಲಿ ವಹಿಸುವ ಪಾತ್ರದಂತೆ ಗ್ರಹ ತಾರೆಗಳ ಚಲನವಲನಗಳಿಂದ ಸಂಕೇತಿಸಲ್ಪಡುವ ಪ್ರಭಾವಗಳು ಮನುಷ್ಯನ ಜೀವನದ ಮೇಲೆ ಪ್ರತಿಕ್ರಿಯೆಯುಂಟುಮಾಡುತ್ತವೆ. ಜನ್ಮಪತ್ರಿಕೆಯಾದ ಜಾತಕದಲ್ಲಿನ ಗ್ರಹ ಕುಂಡಲಿಯು ಈ ಪ್ರತಿಕ್ರಿಯೆಯ ಪೂರ್ವಜನ್ಮದ ಕರ್ಮ ಫಲದ ಒಟ್ಟು ಮೊತ್ತವಾಗಿದೆ ಎನ್ನಬಹುದು. ಇದು ಒಂದು ಬೀಜದಂತಿದ್ದು ಬೆಳೆಯುತ್ತಾ ದೊಡ್ಡ ಮರವಾಗುವುದು.

ಒಂದು ಬೀಜದ ಬೆಳವಣಿಗೆಗೆ ಫಲವತ್ತಾದ ಮಣ್ಣು, ಭೌತಿಕ ವಾತಾವರಣ, ಋತುಗಳು ಹೇಗೆ ಆಧಾರವಾಗಿವೆಯೊ ಅದೇ ರೀತಿ ಕುಟುಂಬ, ದೇಶ, ಇಲ್ಲವೆ ಪ್ರಕೃತಿಯು ರಚಿಸಿಕೊಟ್ಟ ಸಮಾಜ ಸನ್ನಿವೇಶಗಳ ಮೇಲೆ ಜಾತಕವೊಂದರ ಸತ್ಫಲವು ಹೊಂದಿಕೊಂಡಿದೆ. ಸ್ಪ್ರಿಂಗ್ ಎಂಬ ಸುತ್ತುಪಟ್ಟಿಯು ಮರುಕಿಡುಗುವಾಗ ಉದ್ಭವಿಸುವ ಶಕ್ತಿಯಿಂದ ಗ್ರಾಮೊಫೋನ್ ಪ್ಲೇಟು ಒಂದು ಫೋನೋ ... ಸೂಜಿಯ ಒತ್ತಡಕ್ಕೆ ಸ್ವರ ಕಂಪನಗಳನ್ನು ಹೊರಡಿಸುತ್ತದೆ. ಅದೇ ರೀತಿ ಪತಿ ಗ್ರಹದ ಪ್ರಭಾವವು ನಮ್ಮ ಜಾತಕದಲ್ಲಿ ಪೂರ್ವ ಜನ್ಮದ ಮಾನಸಿಕ ಸಂಸ್ಕಾರಕ್ಕನುಗುಣವಾಗಿ ತಕ್ಕ ಪ್ರತಿಫಲವನ್ನುಂಟುಮಾಡುತ್ತದೆ.

ಬ್ರಹ್ಮಾನಂದ

ನಕ್ಷತ್ರಗಳದ್ದು ಒಂದು ಭಾಷೆ. ಅವುಗಳ ಸಂಕೇತಿಕ ಸ್ವಭಾವ ಮತ್ತು ಕರ್ಮಫಲದ ಸಂಕೇತ ಸೂಚನವಾಗಿ ಜ್ಯೋತಿಷ್ಯ ಶಾಸ್ತ್ರವು ದೈವೀಕವಾಗಿ ರಚಿತವಾದ ಒಂದು ... ಭಾಷೆಯಲ್ಲಿ ಜೀವನ ರಹಸ್ಯವನ್ನು ಮಾನವ ಮನಸ್ಸಿಗೆ ತಿಳಿಸಿಕೊಳ್ಳಲು ಸಾಧ್ಯವಾಗುತ್ತದೆ.

ಸಂಚಿತ ಕರ್ಮ ಕ್ಷೇತ್ರವನ್ನು ಮೀರಿ ಹೋಗುವ ಯೋಗವೊಂದಿದೆ. ಇದೊಂದು ಪರಮಾತ್ಮಿಕ ಸಾಧನ. ಈ ಯೋಗದ ಹೊಸ್ತಿಲನ್ನು ಪ್ರವೇಶಿಸಿದಾಗ ಮನುಷ್ಯನು ಎಲ್ಲಾ ಕರ್ಮ ಸಂಬಂಧವನ್ನು ತ್ಯಜಿಸಿದವನಾಗಿ ಅವನ ಮನಸ್ಸು ಕರ್ಮಫಲ ಬಂಧನದಿಂದ ವಿಮುಕ್ತವಾಗಿರುತ್ತದೆ. ಈ ಮಾನಸಿಕ ಸ್ಥಿತಿಯು ಬ್ರಹ್ಮಾನಂದಮಯವಾಗಿದ್ದು ಜ್ಯೋತಿಷ್ಯ ಶಾಸ್ತ್ರವನ್ನು ದಾಟಿದ್ದಾಗಿರುತ್ತದೆ.

ಅಮೇರಿಕದ ಕೆನ್ಸಾಸ್ ನಗರದಲ್ಲೊಬ್ಬ ಒರ್ವ ಹೆಂಗುಸು ವಿವಾಹ ವಿಚ್ಛೇದನಕ್ಕಾಗಿ ಗಂಡನ ಮೇಲೆ ಕಚ್ಚೆ ಹೂಡಿದಳು. ಅವಳು ಕೊಟ್ಟ ಕಾರಣಗಳು: "ಅವನು ಅಸಹ್ಯನೂ, ಕೊಳಕನೂ, ಜಡನೂ, ಪ್ರತಿಘಾತನೂ, ಕಟುವೂ, ಹೊಟ್ಟೆಕಿಚ್ಚಿನವನೂ, ನಿಂದಕನೂ ಅಂಜುಬುರುಕನೂ, ನೀಚನೂ, ಮರ್ಯಾದೆ ರಹಿತನೂ, ತಿರಸ್ಕಾರ ಯೋಗ್ಯನೂ, ಕಲ್ಲು ಹೃದಯದವನೂ, ಶೀಘ್ರಭಾವಾನುಮಯನೂ, ಸ್ವಾರ್ಥಿಯೂ, ಜಿಪುಣನೂ, ಅವಿನಯನೂ, ಅಲಕ್ಷ್ಯಯೂ ಸುಖದುಃಖವಿಲ್ಲದವನೂ ಆಗಿದ್ದಾನೆ."

★ ಭಾರತವು ಅಮೇರಿಕನ್ ಆದರ್ಶ ಅನುಸರಿಸಬೇಕು ★

ಸರ್ವಸಾಮಾನ್ಯವಾಗಿ ಭಾರತವನ್ನು ಬಡದೇಶವೆನ್ನುವರು. ನಿಜವಾಗಿ ಈ ದೇಶವು ಬಡವಾಗಿರುವುದಿಲ್ಲ. ಹೇಗೆ ಸಂಪತ್ತನ್ನು ಬಚ್ಚಿಟ್ಟು ಉಪಯೋಗಿಸಲು ಮನಸ್ಸಿಲ್ಲದಿರುವ ಜಿಪುಣನೊಬ್ಬನನ್ನು ದರಿದ್ರನೆನ್ನಬಹುದಿಲ್ಲವೊ ಅದೇ ರೀತಿ ಭಾರತದಲ್ಲಿರುವ ಎಲ್ಲಾ ಸಂದರ್ಭ ಸಂಪತ್ತು ಶಕ್ತಿಗಳನ್ನು ಪಯೋಗಿಸಿದರೆ ಈ ದೇಶವು ಎಂದಿಗೂ ಬಡವಾಗಿರದು.

ಹೀಗೆಂದು ಶ್ರೀ ಪಿ. ಕೋದಂಡರಾವ್ ಎಂಬ ಆಂಧ್ರ ಪತ್ರಿಕೋದ್ಯೋಗಿಯ ಅಮೇರಿಕನ್ ಪತ್ನಿಯಾಗಿರುವ ಶ್ರೀಮತಿ ಮೇರಿರಾವ್ ಅವರು ಒಂದು ಲೇಖನದಲ್ಲಿ ಬರೆಯುತ್ತಾರೆ. ಅದರ ಸಾರಾಂಶ ಹೀಗಿದೆ:

ಒಂದು ದೇಶದ ಜನತೆಯ ಜೀವನ ಮಟ್ಟದ ಉತ್ಕೃಷ್ಟತೆ ನಿಕೃಷ್ಟತೆಗಳು ಅವರು ತಮ್ಮಲ್ಲಾಗುವ ಕಚ್ಚಾ ವಸ್ತುಗಳನ್ನು ಯೋಗ್ಯ ರೀತಿಯಲ್ಲಿ ಉಪಯೋಗಿಸಿಕೊಳ್ಳುವುದರ ಮೇಲೆ ಹೊಂದಿಕೊಂಡಿದೆ. ಅಮೇರಿಕದ ಜನರು ತಮ್ಮ ದೇಶದ ಕೃಷಿ ಮತ್ತು ಖನಿಜ ಸಂಪತ್ತನ್ನು ವಿವೇಕದಿಂದು ಪಯೋಗಿಸಿಕೊಂಡುದರ ಪರಿಣಾಮವಾಗಿಂದು ಅಲ್ಲಿ ಸಾವಿರಾರು ಮೈಲುಗಳ ಉತ್ತಮ ಮಾರ್ಗಗಳೂ, ಮಿಲಿಯಾವಧಿ ಮೋಟಾರುಗಳೂ; ಶ್ರೇಷ್ಠ ತರಗತಿಯ ಶಿಕ್ಷಣ ಸೌಕರ್ಯವಿರುವ ಧರ್ಮಾರ್ಥ ಶಾಲೆಗಳೂ ಉಂಟಾಗಿವೆ. ಮಾತ್ರವಲ್ಲ ಇವುಗಳೆಲ್ಲವನ್ನು ಅನುಭೋಗಿಸುವರೆ ಜನರ ಕೈಯಲ್ಲಿ ಯಥೇಷ್ಟ ಹಣವೂ ತಿರುಗುವಂತಾಗಿದೆ. ಹದಿನೆರಡು ವರ್ಷಗಳ ತನಕ ಮಕ್ಕಳಿಗೆ ಧರ್ಮಾರ್ಥ ಶಿಕ್ಷಣ ದೊರೆಯುವುದು, ಮತ್ತು ನಾಲ್ಕು ವರ್ಷಗಳ ತನಕ ಅವರು ಕಡ್ಡಾಯವಾಗಿ ಕಲಿಯಲೇಬೇಕು. ಈ ಶಿಕ್ಷಣ ಕ್ರಮವು ಅಲ್ಲಿನ ಹಳ್ಳಿ ಪ್ರದೇಶಗಳಲ್ಲಿ ಹೇಗೊ ಪಟ್ಟಣಗಳಲ್ಲೂ ಅದೇ ರೀತಿಯಾಗಿದೆ.

ಇದಲ್ಲದೆ ಕೆಲವೇ ಮನೆಗಳಿರುವ ಹಳ್ಳಿಯಲ್ಲೂ ವಿದ್ಯುತ್ ಸೌಕರ್ಯವೂ, ಉತ್ತಮ ನೀರು ಸರಬರಾಯಿಯೂ, ಶಾಸ್ತ್ರೀಯ ರೀತಿಯ ಚರಂಡಿಗಳ ವ್ಯವಸ್ಥೆಯೂ ಇದೆ. ಅಲ್ಲಿನ ಅಂಗಡಿಗಳಲ್ಲಿ ದೇಶದ ಕೈಗಾರಿಕೆಯ 'ಫಲ'ಗಳೆಲ್ಲವೂ ತುಂಬಲ್ಪಟ್ಟಿವೆ: ಆಹಾರ, ಬಟ್ಟೆ, ಗೃಹಕೃತ್ಯದ ವಸ್ತುಗಳು, ಮತ್ತಿತರ ಸುಖೋಪಭೋಗದ ಸಾಮಾನುಗಳು. ಶರೀರ ಶ್ರಮವನ್ನು ಒಂದಲ್ಲ ಒಂದು ರೀತಿಯಲ್ಲಿ ಕಡಿಮೆಮಾಡುವ ಯಂತ್ರೋಪಕರಣಗಳು ಪ್ರತಿ ಮನೆಯಲ್ಲೂ ಇವೆ. ಹೆಚ್ಚಿನ ಅಮೇರಿಕನ್ ನಗರಗಳಲ್ಲಿ ಕೊಳೆಕೊಚ್ಚೆಯ ಸಮಸ್ಯೆಯೇ ಇರುವುದಿಲ್ಲ.

ದುಡಿಯುವ ಶಕ್ತಿ

ಅಮೇರಿಕದಲ್ಲಿ ಬಡತನವಿಲ್ಲವೆಂದಿಲ್ಲ. ಅಲ್ಲಿನ ಹೆಚ್ಚಿನವರು ಸುಖಲೋಲುಪ್ತರಾಗಿರುವಾಗ ಕೆಲವು ಮಂದಿ ಅವರ ವಿಷಯವಾಗಿ ನೊಂದುಕೊಳ್ಳುವವರೂ ಇದ್ದಾರೆ. ಆದರೆ ಅಲ್ಲಿನ ಜನರ ಸರ್ವಸಾಧಾರಣ ಜೀವನ ಕ್ರಮವನ್ನು ನೋಡುವಾಗ ಹೆಚ್ಚು ಕಡಿಮೆ ಅವರೆಲ್ಲರೂ ಸುಖಸಂತೃಪ್ತರಾಗಿರುವರೆಂದು ಹೇಳಬಹುದು. ಅಮೇರಿಕದಲ್ಲಿನ ಇನ್ನೊಂದು ಗಣನೀಯ ವಿಷಯವೆಂದರೆ: ಅಲ್ಲಿನ ಜನರ ದುಡಿತದ ಶಕ್ತಿಗಿಂತ ಅಲ್ಲಿ ಮಾರಲ್ಪಡುವ ವಸ್ತುಗಳ ಬೆಲೆಯು ತುಂಬಾ ಕಮ್ಮಿಯಾಗುತ್ತವೆ. ಅನೇಕ ವಸ್ತುಗಳು ಭಾರತದಲ್ಲಿಗಿಂತ ಅಮೇರಿಕದಲ್ಲಿ ಕಮ್ಮಿ ದರದವು.

ಯಂತ್ರಗಾರಿಕೆ ಅಭಿವೃದ್ಧಿಯಾಗಬೇಕು

ಅಂದರೆ ಜೀವನಮಟ್ಟವನ್ನೇರಿಸಬಹುದು.

ಅಮೇರಿಕನ್ ಮಹಿಳೆಯ ಸಲಹೆ

ಭಾರತದ ಚಿತ್ರವೇ ಬೇರೆ. ಸರಿಯಾದ ಉತ್ತಮ ಮಾರ್ಗಗಳೇ ಕಡಿಮೆ. ಮೋಟಾರು ವಾಹನಗಳ ಸಂಖ್ಯೆ ಅತ್ಯಲ್ಪ. ಹೆಚ್ಚಿನ ಭಾರತೀಯರ ವಾಸಸ್ಥಾನಗಳನ್ನು ಮನೆಗಳೆಂದು ಕರೆಯಲಿಕ್ಕಾಗುವುದಿಲ್ಲ. ಅವು ಮಾನವ ವಾಸಕ್ಕೂ ಯೋಗ್ಯವಾಗಿಲ್ಲ. ಇಲ್ಲಿಯ ಅಂಗಡಿಗಳು ಸಿಮ್ಮಾವಸ್ಥೆಯಲ್ಲಿದ್ದು ವಸ್ತುಗಳ ಬೆಲೆ ವಿಪರೀತ. **ಅಮೇರಿಕನನೊಬ್ಬನು ಅರ್ಧ ದಿನದಲ್ಲಿ ದುಡಿಯುವ ಮಜೂರಿಗಾಗಿ ಭಾರತೀಯನೊಬ್ಬ ಒಂದು ವಾರ ಶ್ರಮಿಸಬೇಕಾಗುವುದು.** ಇಲ್ಲಿ ಹೆಚ್ಚಿನ ಮಕ್ಕಳು ಶಾಲೆಗೆ ಹೋಗುವುದಿಲ್ಲ. ಮತ್ತೆ ಕೆಲವು ಮಕ್ಕಳು ಹೋಗುವ ಶಾಲೆಗಳಾದರೂ ಅತೀ ನಿಕೃಷ್ಟಾವಸ್ಥೆಯವು—ಸರಿಯಾದ ಶಿಕ್ಷಣೋಪಕರಣಗಳಿಲ್ಲ, ಆಟಪಾಟಗಳಿಗೆ ಯೋಗ್ಯ ಸಂದರ್ಭಗಳಿಲ್ಲ.

ಒಂದು ದುರ್ದೆಶೆ

ಈ ವಿಷಯಗಳನ್ನೆಲ್ಲರೂ ಬಲ್ಲರು. ಈಗ ಮಹತ್ವದ ಪ್ರಶ್ನೆ ಎಂದರೆ: 'ಇವುಗಳನ್ನು ಹೇಗೆ ಸರಿಪಡಿಸಬಹುದು?' ಎಂಬುದು. ಯಂತ್ರಗಳನ್ನುಪಯೋಗಿಸಿದರೆ ನಿರುದ್ಯೋಗ ಹೆಚ್ಚುವದೆಂಬ ಭಾವನೆ ಭಾರತದಲ್ಲಿ ಆಳವಾಗಿ ಬೇರೂರಿದೆ. ಜನತೆಗೆ ಉದ್ಯೋಗ ಕೊಡಲು ಹಳೆಯ ಮಾದರಿಯ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸಬೇಕೆಂಬ ಮನವರಿಕೆಯೂ ಅನೇಕರಲ್ಲಾಗಿದೆ.

ಈಗ ಭಾರತದಲ್ಲಿ ಅದೆಷ್ಟು ಕಾರ್ಯ ಸಾಗಬೇಕಾಗಿದೆ ಎಂದರೆ ಇಲ್ಲಿನ ಎಲ್ಲಾ ಜನತೆಯು ಒಟ್ಟುಗೂಡಿ ಶ್ರಮಪಟ್ಟರೂ ಈ ಕಾರ್ಯವನ್ನು ಶೀಘ್ರವಾಗಿ ಮುಗಿಸಲಿಕ್ಕಾಗುವುದಿಲ್ಲ. ಮಾತ್ರವಲ್ಲ ಯಂತ್ರೋಪಕರಣಗಳಿಂದಾಗುವಷ್ಟು ಶ್ರೇಷ್ಠವೂ ಚೊಕ್ಕಟವೂ ಆಗಿ ಈ ಕಾರ್ಯ ಪರಿಪೂರ್ಣಗೊಳಿಸಲಾಗುವುದಿಲ್ಲ. ಒಂದು ವೇಳೆ ಇಲ್ಲಿ ಮಾಡಬೇಕಾದ ಕಾರ್ಯವು ಬಹಳ ಕಮ್ಮಿ ಇದ್ದಿದ್ದರೆ ಯಂತ್ರಗಳ ಉಪಯೋಗವನ್ನು ಬಿಟ್ಟುಬಿಡಬಹುದಿತ್ತು. ಭಾರತೀಯರು ಸ್ವಂತ ಶ್ರಮದಿಂದ ಶರೀರವನ್ನು ಸವೆದು ಶಾರೀರಿಕ ನಿರ್ಬಲತೆಯನ್ನು ಕಲ್ಪಿಸಿಕೊಳ್ಳುವುದಕ್ಕಿಂತ ಯೋಗ್ಯ ಯಂತ್ರೋಪಕರಣಗಳನ್ನು ಉಪಯೋಗಿಸಿ ತಮ್ಮ ಚೈತನ್ಯವನ್ನು ವೃದ್ಧಿಸಿಕೊಳ್ಳಬಹುದು.

ಉದಾಹರಣೆಗಾಗಿ ಶಾಲೆಗಳನ್ನು ಕಟ್ಟಿಸುವ ಕಾರ್ಯವನ್ನು ತೆಗೆದುಕೊಳ್ಳೋಣ. ಆ ಶಾಲೆಗಳಿಗೆ ಬೇಕಾದ ಉಪಾಧ್ಯಾಯರನ್ನು ತರಬೇತಿಗೊಳಿಸಬೇಕು. ಉತ್ತಮ ರಸ್ತೆಗಳ ರಚನೆಯಾಗಬೇಕು. ಒಳ್ಳೇ ಪುಸ್ತಕಗಳು ಬರೆಯಲ್ಪಟ್ಟು, ಮುದ್ರಿಸಿ ಪ್ರಚಾರಗೊಳಿಸಬೇಕು. ಮೋಟಾರುಗಳೂ, ರೈಲುಗಳೂ, ಹಡಗುಗಳೂ, ವಿಮಾನಗಳೂ ತುಂಬಾ ಬೇಕಾಗಿವೆ. ಮಿಲಿಯಾವಧಿ ಜನರಿಗೆ ಉತ್ತಮ ಆಹಾರ ಬಟ್ಟೆ ಮೊದಲಾದ ಜೀವನಾವಶ್ಯಕತೆಯ ವಸ್ತುಗಳನ್ನು ತಯಾರಿಸಿ ಪೂರೈಸಬೇಕು. ಅನೇಕ ಮಜೂರರು ಸೇರಿ ಒಂದೊಂದು ಬುಟ್ಟಿ ಮಣ್ಣನ್ನು ಹೊರುವಂತೆ ಮಾಡುವುದು ಕೇವಲ ವ್ಯರ್ಥ. ಅದರ ಬದಲಿಗೆ ಅತ್ಯಂತ ಶೀಘ್ರದಲ್ಲಿ ಕೆಲಸಗೈಯುವ ಆಧುನಿಕ ಯಂತ್ರವನ್ನುಪಯೋಗಿಸಿದರೆ ಎಷ್ಟೋ ಸಮಯ ಉಳಿಯುವುದು, ಎಷ್ಟೋ ಸಂಕಷ್ಟ ಕಡಿಮೆಯಾಗುವುದು. ಹೀಗೆ ಉಳಿಸಿದ ಮಜೂರ ಚೈತನ್ಯವನ್ನು ಸಮಾಜದ ಇತರ ಉಪಯುಕ್ತ ಕಾರ್ಯಗಳಿಗೆ ವಿನಿಯೋಗಿಸಬಹುದು. ಉತ್ತಮ ರಚನಾಕ್ರಮ ಮತ್ತು ವ್ಯವಸ್ಥಿತ ವಿಧಾನಗಳೆಂದರೆ ಹೆಚ್ಚೆಚ್ಚು ಜನರಿಗೆ ಉದ್ಯೋಗ ಸಿಗುವಂತಾಗುವುದಲ್ಲದೆ ನಿರುದ್ಯೋಗವುಂಟಾಗುವುದಿಲ್ಲ.

ತಯಾರಿಕೆ ಹೆಚ್ಚುವುದು

ಆಧುನಿಕ ಸಾಗುವಳಿ ವಿಧಾನಗಳನ್ನುಪಯೋಗಿಸಿ ಜನತೆಯ ಆಹಾರ ಪ್ರಮಾಣವನ್ನು ಹೆಚ್ಚಿಸಬೇಕು. ಹೊಲಗಳಲ್ಲಿ ಅತೀ ಕಮ್ಮಿ ಜನರು ಸಾಕಾಗುವರು. ಉಳಿದವರು ತಯಾರಾದ ಆಹಾರವನ್ನು ಒಣಗಿಸುವ, ಅವನ್ನು ದೀರ್ಘಕಾಲದ ತನಕ ಹಾಳಾಗದಂತೆ ಇಡುವ, ಅವನ್ನು ಡಬ್ಬಿಗಳಲ್ಲಿ ತುಂಬಿಸಿಡುವ ಕಾರ್ಯಗಳಲ್ಲಿ ತೊಡಗಬಹುದು. ಅಂತೂ ತಯಾರಾದ ಆಹಾರವು ಒಂದಿಷ್ಟೂ ಹಾಳಾಗದಂತೆ ನೋಡಿಕೊಳ್ಳಬಹುದು.

ಭಾರತದ ಜನತೆಯ ಆದಾಯವು ಅತ್ಯಲ್ಪವಾದುದು. ಕೃಷಿ ಕೈಗಾರಿಕೆಗಳನ್ನು ಹೆಚ್ಚೆಚ್ಚು ಸುವ್ಯವಸ್ಥಿತವಾಗಿ ಏರ್ಪಡಿಸಿದಲ್ಲಿ ವಸ್ತುಗಳ ಬೆಲೆಯೂ ಕಮ್ಮಿಯಾಗುವುದು. ನಂತರ ಹೆಚ್ಚೆಚ್ಚು ಜನರು ಅವನ್ನು ಹೆಚ್ಚೆಚ್ಚಾಗಿ ಕೊಂಡುಕೊಳ್ಳಬಹುದು. ಹೀಗೆ ಈ ಉದ್ಯಮದಲ್ಲಿ ಹೆಚ್ಚೆಚ್ಚು ಜನರು ಕೆಲಸಕ್ಕೆ ಹಚ್ಚಲ್ಪಡುವರು. ಜಗತ್ತಿನ ಎಲ್ಲಾ ಕಡೆಗಳಲ್ಲಿ ಇದೇ ರೀತಿ ನಡೆಯುತ್ತಿರುವಾಗ ಭಾರತದಲ್ಲಿ ಇದು ಯಶಸ್ವಿಯೇಕಾಗಬಾರದು?

ಬಡವನವಿಲ್ಲ

ಭಾರತದಲ್ಲಿ ಅನೇಕರು "ಭಾರತವು ಬಡದೇಶ" ಎನ್ನುವುದು ರೂಢಿಯಾಗಿದೆ. ಬೇಕಾದುದನ್ನು ಒಂದಿಷ್ಟು ಮಾಡದೆ ಸುಮ್ಮಗಿರಲಿಕ್ಕೆ ಇದೊಂದು ಒಳ್ಳೇ ನೆವನ. ಮೇಲೆ ಹೇಳಿದಂತೆ ಭಾರತವು ನಿಜವಾಗಿ ಬಡವಾಗಿಲ್ಲ. ಹೇರಳ ಹಣ ಕೂಡಿಸಿಟ್ಟು ಅದನ್ನು ಖರ್ಚು ಮಾಡದಿರುವ ಜಿಪುಣನನ್ನು ಬಡವನೆನ್ನಬಹುದೆ? ಜನರನ್ನು, ವಸ್ತುಗಳನ್ನು ಯೋಗ್ಯ ರೀತಿಯಲ್ಲಿ ಉಪಯೋಗಿಸಿಕೊಳ್ಳುವುದೇ ಮಹತ್ವದ ವಿಷಯ.

ಭಾರತದ ಉತ್ತಮ ಕಲಾತ್ಮಕವಾದ ಕಸಬು ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸುವುದು ಬೇಗನೇ ಹಣ ಸಂಪಾದಿಸುವ ಒಂದು ವಿಧಾನ. ವಿದೇಶಗಳಿಂದ ಪ್ರೇಕ್ಷಕರು ಇಲ್ಲಿಯ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿ ಹೋಗಲು ಸೌಕರ್ಯವನ್ನೇರ್ಪಡಿಸಿದರೆ ಹೇರಳ ಪಾಶ್ಚಾತ್ಯ ಬಂಡವಾಳವು ಇಲ್ಲಿ ಸುಳಿದಾಡುವುದು. ಪ್ರಾಮಾಣಿಕ ವ್ಯಾಪಾರಿಗಳು ವಿದೇಶಿ ಸಂಚಾರಿಗಳಿಗೆ ಬೇಕಾದ ವಸ್ತುಗಳನ್ನು ಸರಬರಾಯಿ ಮಾಡಲು ನೇಮಿಸಲ್ಪಡಬೇಕು. ಇಲ್ಲಿ ಇತಿಹಾಸ ಪ್ರಸಿದ್ಧ ಸ್ಥಳಗಳು ಖಂಡಿತವಾಗಿ ಒಂದು ದೊಡ್ಡ ಸಂಚಾರಕರ ಉದ್ಯಮವನ್ನು ಸ್ಥಾಪಿಸುವುದು.

ಕಫ, ಶೀತ, ಎದೆನೋವುಗಳನ್ನು ದಿನಂಪ್ರತಿ ಪೆಪ್ಸ್ ತೆಗೆದುಕೊಳ್ಳುವುದರಿಂದ ಗುಣಪಡಿಸಿರಿ

ಸಾಂಕ್ರಾಮಿಕ ಕಫ, ಎದೆನೋವು, ಶೀತಾದಿಗಳನ್ನು ಬೆಳೆಯಬಿಡಬೇಡಿರಿ. ಅದು ನಿಮ್ಮ ಜೀವನಾಂದವನ್ನು ಕೆಡಿಸುವುದು. ಕೆಲವು ಪೆಪ್ಸುಗಳನ್ನು ಕೈಯಲ್ಲಿ ತೆಗೆದುಕೊಳ್ಳಿ. ಅಗತ್ಯಬಿದ್ದಾಗೆಲ್ಲ ಈ ವಿಷಹಾರೀ ಶ್ವಾಸಯೋಗ್ಯ ಮಾತ್ರೆಗಳನ್ನು ಸೇವಿಸಿರಿ.

ಬಾಯಲ್ಲಿ ಹಾಕಿದ ಕೂಡಲೇ ಕರಗುವುದು. ಪೆಪ್ಸ್ ಮಾತ್ರೆಗಳು ಉತ್ತಮ ಔಷಧ ತತ್ವದಿಂದ ಕೂಡಿದ ರಸವನ್ನು ನಿಮ್ಮ ಶ್ವಾಸಕೋಶದ ನೋವನ್ನು, ಪೆಪ್ಸ್ ಗುಣಗೊಳಿಸಿ ಕಫವನ್ನು ನಿಲ್ಲಿಸುವುದು. ಕಂಠನಾಳವನ್ನು ಸರಿಗೊಳಿಸುವುದು.

ಕಟ್ಟಿ ಶೀತ, ಇಂಪ್ಲುಯೆಂಜಾ, ಕಫ, ಮೊದಲಾದುವುಗಳೆಲ್ಲ ಇದು ಅತ್ಯುತ್ತಮ ಔಷಧಿ.

ಪೆಪ್ಸನ್ನು ಕೊಂಡುಕೊಳ್ಳಿರಿ.

PEPS

ವಿಷಹಾರೀ ಶ್ವಾಸಯೋಗ್ಯಮಾತ್ರೆಗಳು

ಮಂಗಳೂರು

ಜಿಲ್ಲಾ ಸಮಿತಿ

ಈ ಸಮಿತಿಯ ಮೀಟಿಂಗ್ ಈಚೆಗೆ ಅದರ ಅಧ್ಯಕ್ಷರಾದ ಮಿ. ಜೆ ಎಫ್ ಸಾಂಡರ್ಸ್ ಐ ಸಿ. ಎಸ್. ಅವರ ಅಧ್ಯಕ್ಷತೆಯಲ್ಲಿ ಕಲೆಕ್ಟರರ ಕಚೇರಿಯಲ್ಲಿ ಜರುಗಿತು. ಜಿಲ್ಲೆಯ ಆಹಾರ ಪರಿಸ್ಥಿತಿಯ ಪರಿಶೀಲನೆಯಾಯಿತು; ಮಲಬಾರಿಗೆ ಕಳುಹಿಸುತ್ತಿರುವ ಅಕ್ಕಿಯ ವಿಚಾರದ ಶಹಿಲನ್ನು ವಿವರಿಸಲಾಯಿತು. ಜಿಲ್ಲೆಯಲ್ಲಿ ಮಾಂಸದ ಸರಬರಾಯಿ ಹೆಚ್ಚಿಸಲೂ, ಕಾರ್ಡುದಾರನಿಗೆ ರಾಗಿ, ಗೋಧಿಯ ಬದಲು ಗೋಧಿಹಿಟ್ಟು ಕೊಡಲೂ ಸೂಚನೆಗಳು ಬಂದು ಆ ಕುರಿತು ಸೂಕ್ತ ಪ್ರಯತ್ನ ನಡೆಸುವುದೆಂದಾಯಿತು ಗ್ರಾಮಗಳಿಂದ ತಡವಾಗಿ ಅಕ್ಕಿಬತ್ತಗಳನ್ನೊಪ್ಪಿಸಿದ ಸಂಬಂಧವಾದ ಆ ದಂಡನೆಯ ಮೊತ್ತದ ವಿನಿಯೋಗದ ಕುರಿತು ಸರಕಾರಕ್ಕೆ ಬರೆದುಕೊಳ್ಳುವಂತೆಯೂ ತಾಲೂಕು ಸಮಿತಿಗಳ ಅಭಿಪ್ರಾಯ ಕೇಳುವಂತೆಯೂ ನಿರ್ಧರಿಸಲಾಯಿತು ಮಂಗಳೂರು ಹೊಟೇಲುಗಳಿಗೆ ಸಕ್ಕರೆ ಕೋಟಾ ಹೆಚ್ಚಿಸಬಾರದೆಂದು ಶ್ರೀ ಸುಬ್ಬಣ್ಣ ಶೆಟ್ಟರೂ ಶ್ರೀ ಕೃಷ್ಣ ಶೆಟ್ಟರೂ ಸಾಧಿಸಿದರು, ಮದುವೆ ಇತ್ಯಾದಿಗಳಿಗೆ ಧಾರಾಳ ಸಕ್ಕರೆ ಹಂಚಿ ಎಂದು ಶ್ರೀ ,ಕೆ ಬಿ ಜಿನರಾಜ ಹೆಗ್ಗಡೆಯವರು ಶಿಫಾರಸು ಮಾಡಿದರು ಆದರೆ ಪ್ರೆಸಿಡೆಂಟರು, ತಾಲೂಕುಗಳ ಸಕ್ಕರೆ ಕೋಟಾ ಕಡಿಮೆ ಮಾಡುವುದಿಲ್ಲ, ಮಂಗಳೂರು ನಗರದ ಸಕ್ಕರೆ ವಿತರಣೆಯ ವಿಚಾರದಲ್ಲಿ ತಾವೇ ಸೂಕ್ಷ್ಮವಾಗಿ ಪರಿಶೀಲಿಸುತ್ತೇವೆ ಎಂದರು ನೀರಾವರಿ ಪಂಪುಗಳ ಸರಬರಾಯಿ ಬಗ್ಗೆ ಕೇಳಿಕೆ ಒಂದಾಗ ಕೃಷಿ ಇಲಾಖೆಯ ಅಧಿಕಾರಿಗಳು "ನೋಡುತ್ತೇವೆ" ಎಂದರು

ಪಂಡಿತ ಸಂಘ ನಿರ್ಣಯ: ಮೊನ್ನೆ ಒಂಭತ್ತನೆಯ ದಿನಾಂಕದಂದು ಗಣಪತಿ ಶಾಲೆಯಲ್ಲಿ ಸೇರಿದ ದ ಕ ಪಂಡಿತರ ಸಂಘದಲ್ಲಿ ಈ ಕೆಳಗಿನ ನಿರ್ಣಯಗಳಾದುವು ಇದನ್ನು ಶ್ರೀ ಯಂ ವೆಂಕಟ್ರಾವ್ ಬಿ ಎ ಬಿ ಒ ಎಲ್ ಬಿ ಟಿ ಅವರು ಮಂಡಿಸಿದರು

೧ a) ದ ಕ ಪಂಡಿತ ಸಂಘದ ಈ ಮಹಾಸಭೆಯು, ಮದ್ರಾಸ್ ಸರಕಾರದವರು ಪ್ರಕಟಿಸಿದ ಪಂಡಿತರ ವೇತನದ ಕುರಿತಾದ ನಿಯಮಗಳನ್ನು ಪರಿಶೀಲಿಸಿ, ಪಂಡಿತರೊಳಗೆ ಮಾಡಲಾದ ಅನವಶ್ಯಕ ಭೇದಗಳಿಗಾಗಿ ಅತ್ಯಂತ ವಿಷಾದಗೊಳ್ಳುತ್ತದೆ

b) ಆದುದರಿಂದ ಈಗ ಮಾಡಲಾಗಿರುವ ಹಲವು ಭೇದಗಳನ್ನು ತೆಗೆದು ಹಾಕಿ ಪ್ರಕೃತ ಕಾಲೇಜುಗಳಲ್ಲಿಯೂ ಹೈಸ್ಕೂಲುಗಳಲ್ಲಿಯೂ ಅಧ್ಯಾಪಕರಾಗಿರುವ ಪಂಡಿತರೊಳಗೆ ಡಿಗ್ರಿ ಪಡೆದಿರುವ ಪಂಡಿತರು ಮತ್ತು ಇತರರು ಎಂಬಿತ್ಯಾದಿ ಭೇದವಿಲ್ಲದೆ, ಈಗ ಪ್ರಕಟಿತವಾದ ನಿಯಮಾವಳಿಯಲ್ಲಿ ತೋರುವ ಮೊದಲಿನ ವರ್ಗಕ್ಕೆ ನಿಯಮಿತವಾದ ವೇತನವನ್ನೇ (ಕಾಲೇಜುಗಳಲ್ಲಿ ಅಸಿಸ್ಟಾಂಟ್ ಲೆಕ್ಚರರ್ಸ್‌ಗ್ರೇಡ್, ಹೈಸ್ಕೂಲುಗಳಲ್ಲಿ ಸ್ಕೂಲ್ ಅಸಿಸ್ಟಾಂಟ್ ಗ್ರೇಡ್) ಈಗ ಅಧ್ಯಾಪಕರಾಗಿರುವ ಪಂಡಿತರೆಲ್ಲರಿಗೂ ನಿಯಮಿಸಬೇಕೆಂದೂ, ಆ ಕುರಿತು ಸರಕಾರಿ ಶಾಲೆಗಳು ಮತ್ತು ಬೇರೆ ಶಾಲೆಗಳು ಎಂಬ ಭೇದ ಮಾಡದೆ ಒಂದೇ ನಿಯಮವನ್ನು ಎಲ್ಲವಕ್ಕೂ ಅನ್ವಯಿಸಬೇಕೆಂದೂ ಸರಕಾರದೊಡನೆ ಕೇಳಿಕೊಳ್ಳುತ್ತದೆ ಈ ಠರಾವನ್ನು ಶ್ರೀ ಮುಳಿಯ ತಿಮ್ಮಪ್ಪಯ್ಯನವರು ಅನುಮೋದಿಸಿದರು—ಇದು ಸರ್ವಾನುಮತವಾಗಿ ಪಾಸಾಯಿತು

ದ ಕ ಜಿಲ್ಲಾ ಎಣ್ಣೆ ಮಿಲ್ಲಿನ ಮಾಲಕರ ಸಂಘ: ಈ ಸಂಘದವರ ಆಡಳಿತೆಯ ಸಮಿತಿಯವರು ಈಗ ಮಂಗಳೂರಿನ ಅದರ ಕಾರ್ಯಾಲಯದಲ್ಲಿ ಸಭೆ ಸೇರಿ ಜಿಲ್ಲೆಯ ಹಲವು ಮಿಲ್ಲುಗಳಿಗೆ ಸ್ಥಳೀಯ ಕೊಬ್ಬರಿಯ ವಿತರಣೆ ಹೇಗೆ ಆಗಬೇಕೆಂಬುದರ ಕುರಿತಾಗಿ ಒಂದು ವ್ಯವಸ್ಥೆ ಮಾಡಿದರು

ದ. ಕ. ಜಿಲ್ಲಾ ವಾಣಿಜ್ಯ ಸಂಘದವರ ಮನವಿ: ಅಕ್ಕಿ ಬಟ್ಟೆ ಮೊದಲಾದುವುಗಳ ವ್ಯಾಪಾರವೆಲ್ಲ ಹಿಂದಿನಂತೆ ತಾವು ವ್ಯಾಪಾರಿಗಳ ಕೈಯಲ್ಲಿ ಇರಗೊಡಿಸಬೇಕಾಗಿ, ಸಹಕಾರ ಸಂಘಗಳಿಗೆ ಒಪ್ಪಿಸಬಾರದಾಗಿ ವಿನಂತಿಸುವ ಪತ್ರವೊಂದನ್ನು ಸಂಬಂಧಪಟ್ಟವರಿಗೆ ಮೇಲ್ಕಂಡ ಸಂಘದವರು ಈಚೆಗೆ ಒಪ್ಪಿಸಿದ್ದಾರೆ.

ಜಿಲ್ಲಾ ಪರಿಚಯ

ದಕ್ಷಿಣ ಕನ್ನಡ ಜಿಲ್ಲಾ ಗ್ರಾಮ ಉದ್ಯೋಗಸ್ಥರ ಸಂಘ

ಈ ಸಂಘದ 2ನೇ ಮಹಾಸಭೆಯು ತಾ 2–8–47ನೇ ಆದಿತ್ಯವಾರ ಪೂರ್ವಾಹ್ನ 11 ಗಂಟೆಗೆ ಮಂಗ್ಳೂರು ಶಹರ ಶರವು ಶ್ರೀ ಮಹಾಗಣಪತಿ ದೇವಸ್ಥಾನದ ಗೋಪುರದ ಮಾಳಿಗೆಯಲ್ಲಿ ಶ್ರೀಮಾನ್ ಎಡ್ವೋಕೇಟ್ ಕೆ ಬಾಲಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿತು ಜಿಲ್ಲೆಯ 6 ತಾಲೂಕುಗಳಿಂದ ಹೆಚ್ಚು ಮಂದಿ ಗ್ರಾಮಉದ್ಯೋಗಸ್ಥರು ಸಭೆಗೆ ಬಂದಿದ್ದರು ದೇವತಾ ಪ್ರಾರ್ಥನೆ, ಅಧ್ಯಕ್ಷರ ಚುನಾವಣೆ, ಸ್ವಾಗತ ಭಾಷಣ ಇವುಗಳಾದನಂತರ ಅಧ್ಯಕ್ಷರು ತಮ್ಮ ಆರಂಭದ ಭಾಷಣದಲ್ಲಿ, ಇಡಿ ಹಿಂದು ಸ್ಥಾನದಲ್ಲಿ ಎಲ್ಲೆಡೆಗಳಲ್ಲಿಯೂ ಆಂದೋಲನಗಳಿಂದಲೇ ಕೂಡಿದ ಇಂದಿನ ಪರಿಸ್ಥಿತಿಯನ್ನು ವಿವರಿಸಿ ಆಂದೋಲನಗಳು ಬಾರದಂತಿರಬೇಕಾದರೆ ಒಗ್ಗಟ್ಟೇ ಮುಖ್ಯವಾಗಿರಬೇಕೆಂದು ಸೂಚಿಸಿ ಗ್ರಾಮ ಉದ್ಯೋಗಸ್ಥರ ಸಂಘದಲ್ಲಿ ಯಾವ ತರದ ಇಕ್ಕಟ್ಟಿಗೂ ಎಡೆಗೊಡದೆ ಕಾರ್ಯರಂಗದಲ್ಲಿ ಬಹಳ ಉತ್ಸಾಹ ಮತ್ತೂ ಜಾಗ್ರತೆ ಇವುಗಳಿಂದ ಮುಂದುವರಿಸಬೇಕೆಂದರು

ಕಾರ್ಯದರ್ಶಿ ಶ್ರೀ ಎಮ್ ಕೆ ವಿಶ್ವನಾಥಯ್ಯನವರು ಹಿಂದಿನ ಸಭೆಯ ವರದಿ ಮತ್ತು ಈ ವರೇಗಿನ ಆಯ ವ್ಯಯಗಳ ಪಟ್ಟಿಯನ್ನು ಸಭೆಯ ಮುಂದಿಟ್ಟು ಅನಂತರ ಸಂಘದ ನಿಯಮ ನಿಬಂಧನೆಗಳ ಕುರಿತು ಹೆಚ್ಚಿನ ವಿಮರ್ಶೆಯು ನಡದು ಕಾರ್ಯನಿರ್ವಾಹಕ ಸಮಿತಿಯವರು ಮೊದಲೇ ತಯಾರಿಸಿದ ನಿಯಮ ನಿಬಂಧನೆಗಳಲ್ಲಿ ಸ್ವಲ್ಪಮಟ್ಟಿನ ತಿದ್ದುಪಡಿಯಿಂದ ಮಹಾಸಭೆಯು ಮಂಜೂರು ಮಾಡಿ ಸಂಘವನ್ನು 3 ತಿಂಗಳುಗಳವಳಗೆ ರಿಜಿಸ್ಟರ್ ಮಾಡಬೇಕೆಂಬ ನಿರ್ಣಯವೂ ಸರ್ವಾನುಮತದಿಂದ ಮಂಜೂರಾಯಿತು. ಕಾರ್ಯ ನಿರ್ವಾಹಕ ಸಮಿತಿಗೆ ಉಡುಪಿ ತಾಲೂಕಿನಿಂದ ಒಬ್ಬ ಸದಸ್ಯರನ್ನು ಹೆಚ್ಚು ಆರಿಸಿ ಸಂಘದ ಉಪಾಧ್ಯಕ್ಷರು ಮತ್ತೂ ಕೋಶಾಧಿಕಾರಿ ಇವರ ಆರಿಸುವಿಕೆಯು ಹೊಸದಾಗಿ ಆದ ನಂತರ "ಮಾನ್ಯ ಸರಕಾರದವರು ಗ್ರಾಮ ಉದ್ಯೋಗಸ್ಥರಲ್ಲಿ ತರಬೇಕೆಂದಿರುವ ಬದಲಾವಣೆ ಮತ್ತೂ ಸುಧಾರಣೆಗಳ ವಿಷಯ ಈ ಸಂಘವನ್ನು ಕೇಳಿ ಅದರ ಅಭಿಪ್ರಾಯವನ್ನು ತಿಳಿದು ಮುಂದುವರಿಸಬೇಕೆಂಬುದಾಗಿ ಮಾನ್ಯ ಸರಕಾರವನ್ನು ಕೇಳಿಕೊಳ್ಳಬೇಕು ಎಂಬ ನಿರ್ಣಯವು ಸರ್ವಾನುಮತದಿಂದ ಮಂಜೂರಾಗಿ ಆ ಸಲುವಾಗಿ ಮಾನ್ಯ ಸರಕಾರದವರೊಡನೆ ಕೇಳಿಕೊಳ್ಳುವರೇ ಶ್ರೀಗಳಾದ A G ಸಿದ್ದಣ್ಣ ಶೆಟ್ಟರು, M K ವಿಶ್ವನಾಥಯ್ಯ, J ಶೀನಪ್ಪ ರೈ B ಕುಂಞಣ್ಣ ಶೆಟ್ಟರು ಮತ್ತೂ ಪದ್ಮನಾಭಯ್ಯನವರು, ಈ ಐದು ಮಂದಿಗಳಿಂದ ಕೂಡಿದ ಸಮಿತಿ 1 ನಿಶ್ಚಯವಾಯಿತು ಮಾನ್ಯ ಅಧ್ಯಕ್ಷರ ಉಪಸಂಹಾರ ಭಾಷಣವಾದ ನಂತರ ಬರುವ ದಶಂಬರದ ವಾರ್ಷಿಕ ಸಭೆಯನ್ನು ಕುಂದಾಪುರದಲ್ಲಿ ಜರಗಿಸುವುದೆಂತ ನಿಶ್ಚಯವಾಗಿ ಉಪಕಾರ ಸ್ಮರಣೆಯೊಂದಿಗೆ ಸಭಾಂತ್ಯವಾಯಿತು

ಹೈಸ್ಕೂಲು ಆಡಳಿತಕ್ಕೆ

ಇಲ್ಲಿನ ಕೆನರಾ ಹೈಸ್ಕೂಲಿನ ಆಡಳಿತೆಯ ಮಂಡಳಿಯಲ್ಲಿ ಎರಡು ಸ್ಥಾನಗಳು ಖಾಲಿಯಿದ್ದು ಅವುಗಳನ್ನು ಭರ್ತಿಗೊಳಿಸುವರೆ ಚುನಾವಣೆ ನಡೆಯಬೇಕಾಗಿದ್ದಿತು ಆದರೆ ಆ ಎರಡು ಸ್ಥಾನಗಳ ಬಗ್ಗೆ ಶ್ರೀಯುತ ಅರ್ಕಳ ರಾಘವೇಂದ್ರ ರಾವ್ ರಿಟಾಯರ್ಡ್ ಇಂಜಿನಿಯರ್ ಮತ್ತು ಸಾಹುಕಾರ್ ಶ್ರೀ ಎಮ್ ಜಿ ಅನಂತ ಪೈ ಇವರಿಬ್ಬರೇ ಉಮೇದುದಾರರಾಗಿದ್ದ ಕಾರಣ ಇವರು ಪ್ರತಿ ಸ್ಪರ್ಧೆಯಿಲ್ಲದೆ ಆ ಸ್ಥಾನಗಳಿಗೆ ಚುನಾಯಿತರಾಗಿದ್ದಾರೆ

ಕೊಬ್ಬರಿ, ತೆಂಗಿನೆಣ್ಣೆ ಸರಬರಾಯಿ: ನಮ್ಮ ಜಿಲ್ಲಾ ಕಲೆಕ್ಟರರು ಈ ಜಿಲ್ಲೆಗೆ ೨೫೩೦ ಟನ್ ಕೊಬ್ಬರಿ, ೬೦೦ ಟನ್ ತೆಂಗಿನ ಎಣ್ಣೆ ತರಿಸಿ ಕೊಡುವಂತೆ ಶಿಫಾರಸು ಮಾಡಿರುವರು. ಆ ರೀತಿ ಸರಬರಾಯಿಯಾದರೆ ಈ ಜಿಲ್ಲೆಗೆ ಆರು ತಿಂಗಳಿಗೆ ಅದು (ಎಣ್ಣೆ) ಸಾಕು ಎಂದು ನಮ್ಮ ವಾಣಿಜ್ಯ ಸಂಘದ ಅಭಿಪ್ರಾಯ

ಕೊಬ್ಬರಿ ಹಿಂಡಿ: ೨ ಸಾವಿರ ಟನ್ ತೆಂಗಿನ ಹಿಂಡಿ ಬಗ್ಗೆ ಪರ್ಮಿಟು ಪಡೆಯಲು ಪ್ರಯತ್ನಗಳು ನಡೆದಿವೆ ಎಂದು ನಮ್ಮ ವಾಣಿಜ್ಯ ಸಂಘದ ಕಡೆಯಿಂದ ತಿಳಿದುಬಂದಿದೆ

ಉಪಾಧ್ಯಾಯ ಸಂಕಷ್ಟ ನಿವಾರಣೆಗಾಗಿ ಚಳವಳ ಸನ್ನಾಹ: ಮದ್ರಾಸಿನ ಸೌತ್ ಇಂಡಿಯನ್ ಟೀಚರ್ಸ್ ಯೂನಿಯನಿನವರು ಉಪಾಧ್ಯಾಯರ ಸಂಕಷ್ಟ ನಿವಾರಿಸಿಕೊಳ್ಳಲು ಯಾವ ಕಾರ್ಯ ಧೋರಣೆಯನ್ನನುಸರಿಸಬಹುದೆಂದು ನಿರ್ಧರಿಸಲು ಈ ಜಿಲ್ಲೆಯ ಉಪಾಧ್ಯಾಯರ ಅಭಿಪ್ರಾಯ ಗಣನೆಯನ್ನು ಮಾಡಬಯಸಿದೆ ಈ ಜಿಲ್ಲೆಯ ಉಪಾಧ್ಯಾಯರು, ಇಲ್ಲವೆ ಅವರ ಸಂಘಗಳವರು ಈ ಕೆಳಗಿನ ಅರ್ಥದ ಹೇಳಿಕೆಗೆ ಸಹಿ ಹಾಕಿ ದ ಕ ಜಿಲ್ಲಾ ಟೀಚರ್ ಗಿಲ್ಡಿನ ಕಾರ್ಯದರ್ಶಿಗಳಿಗೆ ಕಳುಹಿಸುವುದು

1 " ಉಪಾಧ್ಯಾಯ ಸಂಘದ ಸದಸ್ಯರಾದ ನಾವು ಸೌತ್ ಇಂಡಿಯನ್ ಟೀಚರ್ಸ್ ಎಸೋಸಿಯೇಶನಿನವರು ಸರಕಾರಕ್ಕೂ ಸಾರ್ವಜನಿಕರಿಗೂ ತಮ್ಮ ಸಂಬಳ ಪ್ರಮಾಣದ ಮೇಲಿರುವ ಅತೃಪ್ತಿಯನ್ನು ಮನವರಿಕೆ ಮಾಡಲು ಸೂಕ್ತ ಕಂಡ ಯಾವ ಸರ್ವಸಾಮಾನ್ಯ ಡೈರೆಕ್ಟ್ ಏಕ್ಷನ್ ಧೋರಣೆಯನ್ನು ನಿರ್ದೇಶಿಸುವರೂ ಅದನ್ನು ಅನುಸರಿಸಲು ನಾವು ಸಿದ್ಧರಿದ್ದೇವೆ

2, "ಅಂತಹ ಕಾರ್ಯದ ಪರಿಣಾಮವೂ ನಮಗೆ ಗೊತ್ತಿದೆ, ಅವಶ್ಯಬಿದ್ದರೆ ಸರ್ಟಿಫಿಕೇಟು ರದ್ದು ಮಾಡುವಿಕೆ, ಕೆಲಸದಿಂದ ತೆಗೆದು ಹಾಕುವಿಕೆ ಮತ್ತು ಕೈದು ಮಾಡುವಿಕೆಗೂ ನಾವು ಸಿದ್ಧರಿದ್ದೇವೆ

3 "ಡೈರೆಕ್ಟ್ ಏಕ್ಷನಿನ ಬೆಂಬಲಕ್ಕಾಗಿ ಏರ್ಪಡಿಸಲ್ಪಡುವ ಯಾವ ನಿಧಿಗೂ ಧನ ಸಹಾಯ ಮಾಡಲು ನಾವು ಸಿದ್ಧರಿದ್ದೇವೆ "

NOTICE

Empire of India Life Assurance Co Ltd., Bombay.

Notice having been given of the loss of Policy Numbered 188944 on the life of P Sanjeeva Shetty of Mangalore, a fresh policy in lieu thereof will be issued unless objection is lodged with the Company within one month from this date

Bombay | E. E. Allum
16 8 47 | *Manager*

ಭರತಖಂಡದ ಅತ್ಯಂತ ಪ್ರಸಿದ್ಧ ಮುಲಾಮು

ನೋವನ್ನು ಒಡನೆಯೇ ನಿರ್ಮೂಲಿಸುವುದು.

ನೆಗಡಿ, ಕೆಮ್ಮು, ಹರಿವಾತ, ನರಗಳ ಬಾವು, ಹಲ್ಲುನೋವು, ವಾತರೋಗ ಉಳುಕು, ದೆಬ್ಬೆ, ತಲೆನೋವುಗಳಿಗೆ–ಆ ಭಾಗವನ್ನು ಬೆಚ್ಚಗೆ ಮಾಡಿ 10–15 ನಿಮಿಷಗಳು ಲಿಟಲ್ಸ್ ಓರಿಯಂಟಲ್ ಬಾಮನ್ನು ತಿಕ್ಕುವುದು

DJK-19

ಇದು ಮಗುವಿನ ಚರ್ಮವನ್ನು ತಂಪಾಗಿಯೂ, ಮೃದುವಾಗಿಯೂ, ಇಡುವುದು.
ಮಕ್ಕಳಿಗೆ ಕುಟಿಕೂರ ಟಾಲ್ಕಮ್ ಪೌಡರನ್ನೇ ಉಪಯೋಗಿಸಿರಿ ಅಷ್ಟು ಸುಖಕರ– ಅಷ್ಟು ಚರ್ಮ ಮೃದುಕರ–

ಕುಟಿಕೂರ ಟಾಲ್ಕಮ್ ಪೌಡರ್
CUTICURA TALCUM POWDER

ಉಪ್ಪಿನ ಸತ್ಯಾಗ್ರಹಕ್ಕೆ ಅಪೂರ್ವ ವಿಜಯ
ಶ್ರೀಮಂತರ ಆದಾಯಕ್ಕೆ ಗದಾಪ್ರಹಾರ
ಲೀಗ್ ಲಿಯಾಖತರ ಸಮತಾವಾದಿ ಬಜೆಟ್

ಉಪ್ಪಿನ ಕರರದ್ದಿಗಾಗಿ ಹದಿನಾರು ವರ್ಷಗಳ ಹಿಂದೆ ಮಹಾತ್ಮಾ ಗಾಂಧಿಯವರು ದೇಶ ವಿಶಾಲ ಚಳವಳ ಪ್ರಾರಂಭಿಸಿದರು.

ಹತ್ತು ವರ್ಷಗಳ ಹಿಂದೆ ಪುನ: ಈ ವೃದ್ಧ ಮಹಾತ್ಮರು ಹರಿಜನೋದ್ಧಾರ ಪ್ರವಾಸವನ್ನು ಕೈಕೊಂಡರು.

ಇನ್ನು ಗ್ರಾಮ ಕೈಗಾರಿಕೆಗಳ ಪುನರುಜ್ಜೀವನ ಮದ್ಯಪಾನ ನಿರೋಧ, ಖಾದಿ, ಹಿಂದೀ ಪ್ರಚಾರ, ಮಹಿಳೋದ್ಧಾರ, ಜಾನುವಾರ ಅಭಿವೃದ್ಧಿ ಮೊದಲಾದ ಹಲವಾರು ಚಳವಳಗಳು ಒಂದರ ಹಿಂದೆ ಒಂದಾಗಿ ಅವರ ಚಟುವಟಿಕೆಮಯ ಜೀವನವನ್ನಾವರಿಸಿವವು.

ಸತ್ಕಾರ್ಯಕ್ಕೆ ಸತ್ಫಲ

ಈಗ ಸೇವಾಗ್ರಾಮದ ಸಂತನ ಒಂದೊಂದೇ ಜೀವನ ಧ್ಯೇಯಗಳು ಯಶಸ್ವಿಯಾಗುತ್ತಲಿವೆ. ನಡುಗಾಲ ಸರಕಾರದ ಅರ್ಥ ಸಚಿವರು 1947-48ನೇ ವರ್ಷದ ಮುಂಗಡ ಪತ್ರಿಕೆಯನ್ನು ಮಂಡಿಸುತ್ತಾ ಉಪ್ಪಿನ ಕರವನ್ನು ರದ್ದು ಮಾಡಿರುವುದಾಗಿ ಮೊದಲು ಘೋಷಿಸಿದರು ಸಂತೋಷಗೊಂಡ ಓರ್ವ ಕೇಂದ್ರ ಶಾಸನ ಪ್ರತಿನಿಧಿಗಳು ಮೈಮರೆತು ಕೈ ಚಪ್ಪಾಳೆ ಹೊಡೆದರು ಪಕ್ಕದಲ್ಲಿ ಕೂತಿದ್ದವರೊಬ್ಬರು ಅವರನ್ನು ಎಚ್ಚರಗೊಳಿಸುವ ತನಕ ಚಪ್ಪಾಳೆ ಬಾರಿಸಲ್ಪಟ್ಟಿತು!

ಸಮತಾವಾದ ಮಾದರಿ

ಎಟ್ಲಿ ಸರಕಾರ ಅಧಿಕಾರಕ್ಕೆ ಬಂದೊಡನೆ ಬೇಂಕ್ ಆಫ್ ಇಂಗ್ಲೆಂಡನ್ನು ರಾಷ್ಟ್ರೀಕರಣ ಮಾಡಿದರು ಲಿಯಾಖತ್ ಅಲಿಖಾನರು ಭಾರತದ ರಿಸರ್ವ್ ಬೇಂಕನ್ನು ರಾಷ್ಟ್ರದ ಸೊತ್ತಾಗಿ ಮಾಡುವುದಾಗಿ ಸಾರಿದರು

★ ಷೇರ್, ಚಿನ್ನ ಮತ್ತು ಇತರ ಬಜಾರುಗಳಲ್ಲಿ ವಾಯಿದೆ ವ್ಯಾಪಾರ ನಿಯಂತ್ರಿಸುವ ಮಸೂದೆ ಮಂಡಿಸಲಾಗುವುದು

★ ಸ್ಟರ್ಲಿಂಗ್ ಬೆಲೆನ್ಸಿನ ಕುರಿತು ಪರಿಶೀಲನೆ ಮಾಡಲು ಒಂದು ಸಮಿತಿಯನ್ನು ನೇಮಿಸಲಾಗುವುದು

★ ಇದು ತನಕ ರೂ ಎರಡು ಸಾವಿರದ ಮೇಲ್ಪಟ್ಟ ಆದಾಯದ ಮೇಲೆ ಆದಾಯಕರ ಹೆತ್ತಲಾಗುತಿದ್ದುದು ಇನ್ನು ಮೇಲೆ 2500 ಮೇಲಿನ ಆದಾಯಕ್ಕೆ ಮಾತ್ರ ಕರ ಹೆತ್ತಲಾಗುವುದು. ಇದರಿಂದ ಮಧ್ಯಮ ವರ್ಗದವರಿಗೆ ಸ್ವಲ್ಪ ಪರಿಹಾರ ಸಿಕ್ಕದಂತಾಯಿತು

★ ಒಂದು ಲಕ್ಷ ರೂಪಾಯಿ ಮಿಕ್ಕಿನ ಲಾಭಗಳ ಮೇಲೆ ನೂರಕ್ಕೆ 25ರಂತೆ ಕರ ಹೇರಲಾಗಿದೆ. ಕೊರ್ಪೊರೇಶನ್ ಕರ ಒಂದಾಣೆಯಿಂದ ಎರಡಾಣೆಗೇರಿಸಲಾಗಿದೆ.

★ ಉತ್ಪನ್ನ ಕರದ ದರಗಳಲ್ಲಿ ಬದಲಾವಣೆ ಇಲ್ಲ. ಚಹದ ಮೇಲಿನ ಒಂದು ಪೌಂಡಿಗೆ ಆಮದು ಕರವನ್ನು ಎರಡಾಣೆಯಿಂದ ನಾಲ್ಕಾಣೆಗೆ ಹೆಚ್ಚಿಸಿದೆ

★ ಮೂಲ ಧನದ ಲಾಭದ ಮೇಲೆ ಕ್ರಮವಾಗಿ ಏರುವಂಥ ಕರಹೇರಿರುವರು.

★ ಸುಪರ್ ಟೆಕ್ಸಿನಲ್ಲಿ ಸ್ವಲ್ಪ ಬದಲಾವಣೆ ಮಾಡಿದೆ- ಸಂಪಾದಿಸದ ಆದಾಯದ ಉತ್ಪತ್ತಿಗೆ 1 ಲಕ್ಷ 20 ಸಾವಿರದ ಮೇಲೂ ಸಂಪಾದನೋತ್ಪತ್ತಿಗೆ 1½ ಲಕ್ಷದ ಮೇಲೂ ಸುಪರ್ ಟೆಕ್ಸ್ ಲಗಾವಾಗುತ್ತದೆ. (ಹಿಂದೆ ಇದು ಕ್ರಮಲಕ್ಷ ಮತ್ತು ೧ ಲಕ್ಷಕ್ಕೆ ಮೇಲ್ಪಟ್ಟಿತು.)

★ ಲಿಮಿಟೆಡ್ ಕಂಪೆನಿಗಳು ತಮ್ಮ ಲಾಭದ ಅರ್ಧಕ್ಕೆ ಮಿಕ್ಕಿ ಡಿವಿಡೆಂಡ್ ಹಂಚದಂತೆ ನಿರ್ಬಂಧ ಬೀಳಲಿವೆ

★ ಬಡವರಿಗೆ ಆಹಾರ, ಮನೆ ಇತ್ಯಾದಿಗಳ ಸಹಾಯ ಯೋಜನೆಗಳಿಗೂ ಈ ಬಜೆಟಿನಲ್ಲಿ ಹಣ ಮೀಸಲಿರಿಸಿದೆ

ರಾಜಾಜಿ ಕೈಚಳಕ

ಕೇಂದ್ರ ಸರಕಾರದ ಮುಂಗಡ ಪತ್ರಿಕೆಯನ್ನು ಪರಿಶೀಲಿಸುವಾಗ ಅದರಲ್ಲಿ ರಾಜಾಜಿಯ ಚಾಣಾಕ್ಷತೆಯು ಹಲವು ಆರ್ಥಿಕ ತಜ್ಞರಿಗೆ ಕಂಡುಬಂದಿದೆ ನೆಹುರುಗಳ ಉದಾತ್ತ ಸಮತಾವಾದವೂ ಅದರಲ್ಲಿ ಎದ್ದು ಕಾಣಿಸುತ್ತಿದೆ

ಈ ಆಯ ವ್ಯಯದ ಪಟ್ಟಿಯನ್ನು ತಯಾರಿಸಿದವರು ಲೀಗು ಕಾರ್ಯದರ್ಶಿ ಲಿಯಾಖತರು ಬ್ರಿಟಿಷ್ ಸರಕಾರದ ಘೋಷಣೆ ಸ್ವೀಕರಿಸದ ಇವರಿಗೆ ನ್ಯಾಯವಾಗಿ ನಡುಗಾಲದಲ್ಲಿ ಸ್ಥಾನವಿಲ್ಲ ಆದರೆ ಇವರು ಬಜೆಟನ್ನು ತಯಾರಿಸುವಾಗ ಇಟ್ಟುಕೊಂಡ ಉದ್ದೇಶವೂ ಅದರಲ್ಲಿನ ಹೊಸ ಯೋಜನೆಗಳೂ ಎಲ್ಲಾ ರಾಜಕೀಯ ಪಕ್ಷಗಳ ಶ್ಲಾಘನೆಗೊಳಗಾಗಿವೆ

ಸಿಹಿಸುದ್ದಿ ಸಂಗ್ರಹ

ಸೆನ್ ಫ್ರೆನ್ಸಿಸ್ಕೋದ ಓರ್ವ ಬಾಡಿಗೆ ಮನೆ ಯಜಮಾನನಿಗೆ ತನ್ನಿರ್ವ ಒಕ್ಕಲುಗಳನ್ನು ಹೊರಹಾಕಲು ಕೋರ್ಟಿನ ಅನುಮತಿ ದೊರೆಯದಾಯಿತು. ಕೂಡಲೇ ಅವನು ಆವರಿರ್ವರನ್ನು ಒಂದು ಗುಂಡಿನಿಂದ ಕೊಂದುಹಾಕಿದ. ಪೋಲಿಸರು ಅವನನ್ನು ಹಿಡಿದಾಗ "ಅವರು ಮಾಡುವ ಗುಲ್ಲನ್ನು ತಡೆಯಲಿಕ್ಕಾಗುವುದಿಲ್ಲ" ಎಂದನಂತೆ

★

ಪ್ರಖ್ಯಾತ ಯೆಹೂದಿ ಶಿಲ್ಪಿಯಾದ ಇಪ್ಸ್‌ಟಿನನು ಮಾಡಿದ ನೆಹುರುಗಳ ಪುತ್ತಳಿಯನ್ನು ಲಾಹೋರಿನ ವಸ್ತು ಪ್ರದರ್ಶನಾಲಯದವರು ತೆಗೆದುಕೊಂಡಿರುತ್ತಾರೆ

★

ಖಾನ್ ಅಬ್ದುಲ್ ಗಫೂರ್ ಖಾನರ ಶ್ರಮದ ಫಲವಾಗಿ ಬಿಹಾರಿನ ಚಪ್ರಾದ ಹಿಂದೂಗಳು ಒಂದು ವಾರದಲ್ಲಿ ತಮ್ಮ ಸ್ವಂತ ಶ್ರಮ ಮತ್ತು ಹಣದಿಂದ ಅಲ್ಲಿನ ಮಸೀದಿಯೊಂದನ್ನು ದುರುಸ್ತಿ ಮಾಡಿ ಕೊಡುವುದಾಗಿ ವಚನವಿತ್ತಿದ್ದಾರೆ

★

ಪ್ರಖ್ಯಾತ ಗಣಿತಜ್ಞನೂ, ವಿಜ್ಞಾನಿಯೂ ಆಗಿದ್ದ ಸರ್ ಐಸಾಕ್ ನ್ಯೂಟನ್ ಪಾರ್ಲಿಮೆಂಟಿನ ಸದಸ್ಯನಾಗಿದ್ದನು ಒಂದು ವರ್ಷದ ತನ್ನ ಸದಸ್ಯತನದಲ್ಲಿ ಅವನು ಒಂದು ಭಾಷಣ ಮಾಡಿದ್ದನು. ತಾನು ಕೂತುಕೊಳ್ಳುವ ಹಿಂದೆ ಇರುವ ಕಿಟಿಕಿಯನ್ನು ಮುಚ್ಚಬೇಕೆಂದು ವಿನಂತಿಸಿದ್ದು ಅವನ ಭಾಷಣದ ಸಾರಾಂಶ.

★

ಕೆಂಟಕಿನ ಜಂಗ್‌ಜೊವ್ ಎಂಬವನಿಗೆ ಒಂದೇ. ಒಂದು ಮೀನು ಸಿಕ್ಕಿ, ಅವನು ಶ್ರೀಮಂತನಾದನು. ಅವನು ಹಿಡಿದ ಮೀನಿನಲ್ಲಿ 4 ವಜ್ರದ ಉಂಗುರಗಳಿದ್ದುವು. ಈ ಉಂಗುರಗಳು 1943ರಲ್ಲಿ ನೌಕಾಯುದ್ಧದಲ್ಲಿ ಮಡಿದ ಜಪಾನಿ ನೌಕಾಧಿಪತಿಯಾದ ಯಾಮೊಟೊವಿನದೆಂದು ಗುರುತಿಸಲಾಗಿವೆ.

★

ತಮ್ಮ ಕಾರ್ಖಾನೆಯ ಯಜಮಾನನನ್ನು ಕೊಂದರೆಂಬ ಆಪಾದನೆಯ ಮೇಲೆ ಮಿಸಿಸಿಪಿ ಪ್ರಾಂತ್ಯದ ಇರ್ವ 14 ವರ್ಷದ ನಿಗ್ರೋ ಹುಡುಗರಿಗೆ ಮರಣ ದಂಡನೆಯಾಯಿತು ಅದೇ ಸಮಯಕ್ಕೆ 2 ಸಾವಿರ ಮೈಲು ದೂರದಿಂದ ಮಿಸೆಸ್ ಬ್ಲಂಚ್ ಮಿಯರ್ಸ್ ಎಂಬ ಬಿಳಿ ಮಹಿಳೆ ತನ್ನ ಕಾಯಿಲೆಯನ್ನು ಕೂಡಾ ಗಮನಿಸದೆ ವಿಮಾನದಲ್ಲಿ ಬಂದು ನಿಗ್ರೋ ಬಾಲಕರ ಮೇಲೆ ಕೊಟ್ಟ ತೀರ್ಪು ಪಕ್ಷಪಾತದ್ದಿರಬೇಕು ಎಂದು ತಡೆದಳು

★

ಜಪಾನು ಚಕ್ರವರ್ತಿಯಾದ ಹಿರೊಹಿಟೋವು ವಿಶೇಷ ಭೂಕಂದಾಯ ರೂಪದಲ್ಲಿ ತನ್ನ ಸಂಪತ್ತಿನ ಶೇಕಡಾ 40ರಷ್ಟನ್ನು ಸರಕಾರಕ್ಕೆ ಕೊಡುವನು ಅವನ ಇಡೀ ಸಂಪತ್ತು 250 ಕೋಟಿ ಡಾಲರ್ ಬೆಲೆ ಬಾಳುವುದಂತೆ

★

ಕೋಮು ಸಮಸ್ಯೆಯ ಪರಿಹಾರ ಯೋಜನೆ
ಸರ್ ಹರಿಸಿಂಗ್ ಗೌರರ ಸೂಚನೆ

ಘಟನಾ ಸಮಿತಿಯ ಸದಸ್ಯರೂ ವ್ಯಾಸರಾಯರ ಕೌನ್ಸಿಲಿನ ಮಾಜಿ ಸದಸ್ಯರೂ ಆದ ಸರ್ ಹರಿಸಿಂಗ್ ಗೌರ್ ಅವರು ಕೋಮು ಕೋಮುಗಳಲ್ಲಿರುವ ಕಲಹ ಕಾರಣಗಳನ್ನು ನಿವಾರಿಸುವ ಒಂದು ಯೋಜನೆಯನ್ನು ತಯಾರಿಸಿದ್ದಾರೆ ಗಾಂಧೀಜಿಯ ಸಮ್ಮತಿಯನ್ನು ಪಡೆದ ಈ ಯೋಜನೆಯ ತಳಹದಿಯು ಸಂಯುಕ್ತ ಮತದಾನದ ಪದ್ಧತಿಯಾಗಿದೆ

"ಚುನಾಯಿಸಲ್ಪಡುವ ಓರ್ವ ಪ್ರತಿನಿಧಿಗೆ ಆಯಾ ಪ್ರದೇಶದಲ್ಲಿನ ವಿವಿಧ ಜಾತಿ ಪಂಗಡಗಳವರ ಇತಿಷ್ಟೇ ಕನಿಷ್ಠ ಸಂಖ್ಯೆಯ ಓಟುಗಳು ದೊರಕಲೇಬೇಕು ಚುನಾಯಿಸಲ್ಪಡುವವನು ಒಬ್ಬ ಹಿಂದೂವಾದರೆ ಅವನಿಗೆ ಮುಸಲ್ಮಾನರ ಮತ್ತು ಸೀಕರ ಇಂತಿಷ್ಟೇ ವೋಟುಗಳು ಸಿಗಲೇಬೇಕು ಅದೇ ರೀತಿ ಮುಸಲ್ಮಾನ ಇಲ್ಲವೆ ಸೀಖ್ ಪ್ರತಿನಿಧಿಗಳಿಗೂ ಅನ್ವಯಿಸುವುದು

"ಇದರಿಂದ ಹಿಂದೂ ರಾಜ್ಯ ಇಲ್ಲವೆ ಮುಸ್ಲಿಂ ರಾಜ್ಯದ ಹೆದರಿಕೆ ಇರುವುದಿಲ್ಲ ಪ್ರತಿನಿಧಿಗಳು ಪ್ರಾದೇಶಿಕವಾಗಿ ಚುನಾವಣೆಗೆ ನಿಲ್ಲಬೇಕಲ್ಲದೆ ಯಾವದಾದರೂ ಜಾತೀಯ ಕಡೆಯಿಂದಲ್ಲ"

ಸೀಕರೂ ಈ ಯೋಜನೆಗೆ ತಮ್ಮ ಸಮ್ಮತಿಯನ್ನು ಸೂಚಿಸಿರುವರಂತೆ

ಸರ್ ಹರಿಸಿಂಗ್ ಗೌರರು ತಮ್ಮೀ ಯೋಜನೆಗೆ ಇನ್ನಷ್ಟು ಹೆಚ್ಚು ಬೆಂಬಲ ಸಂಪಾದಿಸಿ ಸದ್ಯದಲ್ಲೇ ಘಟನಾ ಸಮಿತಿಯಲ್ಲಿ ಆ ಕುರಿತಾದ ಒಂದು ಠರಾವು ತರುವ ಯೋಚನೆಯಲ್ಲಿರುವರು.



ಚೀನದ ಸರ್ವಾಧಿಕಾರಿ ಸನ್ಯಾಸಿ

ಗಂಜಿ ಪ್ರಿಯ ಚೆಂಗ್ ಕೈಶೇಕರು

ಅವರು ಚರ್ಚಿಲ್ಲರಿಗೆ ಸೊಪ್ಪು ಹಾಕಲಿಲ್ಲ

ಚೀನೀ ಪ್ರಜಾಪ್ರಭುತ್ವದ ಅಧ್ಯಕ್ಷರಾದ ಚೆಂಗ್ ಕೈಶೇಕರು ಇಂದು ಜಗತ್ತಿನ ಸರ್ವ ಶ್ರೇಷ್ಠ ವ್ಯಕ್ತಿಗಳಲ್ಲೊಬ್ಬರು ಅವರ ವಿಚಾರವಂತ ಮುತ್ಸದ್ದಿತನದಿಂದಲೂ, ಅದ್ವಿತೀಯ ಸ್ಥೈರ್ಯ ಸಾಹಸದಿಂದಲೂ ಮತ್ತು ಅನುಕರಣೀಯ ತಾಳ್ಮೆಯಿಂದಲೂ ಅವರು ತಮ್ಮ ದೇಶದ ಸ್ವಾತಂತ್ರ್ಯವನ್ನು ಗಳಿಸಿದರು. 1940ರಲ್ಲಿ ಚೀನಾ ಜಪಾನ್ ಯುದ್ಧ ಪರಿಸ್ಥಿತಿಯು ಗಂಡಾಂತರದಿಂದ ಕೂಡಿದಾಗ ಅವರು ತಮ್ಮ ಜನರಿಗೆ "ಜಪಾನರು ಬರಲಿ, ನನ್ನನ್ನವರು ಟಿಬೆಟ್ ತನಕ ಓಡಿಸಲಿ ಆದರೆ ಐದು ವರ್ಷಗಳಲ್ಲಿ ನಾನು ಚುಂಕಿಂಗಿಗೆ ಪುನಃ ಬಂದು ಚೀನವನ್ನು ಗೆದ್ದುಕೊಳ್ಳುವೆನು." ಎಂದು ಉತ್ತೇಜನಗೊಳಿಸಿದರು.

ಚೀನವು ಹಿಂದೆ ಅನೇಕ ಆಕ್ರಮಣಗಳನ್ನೆದುರಿಸಿದೆ. ಆದರೆ ಆ ದೇಶ ಒಂದು ಬಿದಿರು ತುಂಡಿನಂತೆ ಎಷ್ಟು ಬೇಕಾದರೂ ಬಗ್ಗುವುದು ಆದರೆ ಓಡೆಯುವುದಿಲ್ಲ ಸಂದರ್ಭವಶಾತ್ ಚೀನವು ಆಕ್ರಮಣಗಾರರಿಗೆ ಬಗ್ಗುವುದಾದರೂ ಕ್ರಮೇಣ ಅದು ತನ್ನೆದುರಿನವರೆಲ್ಲರನ್ನೂ ಸಂಪೂರ್ಣ ನುಂಗಿಕೊಳ್ಳುತ್ತದೆ

ಜನಾಂಗದ ಧರ್ಮದರ್ಶಿ

ಅನೇಕರ ಚೆಂಗರನ್ನು ಸರ್ವಾಧಿಕಾರಿಯೆಂದು ಕರೆಯುತ್ತಿರುವರು ಅದೇನು ವಿಚಿತ್ರವಲ್ಲ ಯುದ್ಧಕ್ಕೆ ಮುಂಚಿನ ಚೀನೀ ರಾಜ್ಯಘಟನೆಯಂತೆ ಚೀನಿ ಅಧ್ಯಕ್ಷನು ಜನಾಂಗದ ಧರ್ಮದರ್ಶಿಯೆನಿಸಲ್ಪಡುತ್ತಿದ್ದನು ಆದರೆ ತಮ್ಮ ವೈಯಕ್ತಿಕ ಆಚಾರ ವಿಚಾರಗಳಲ್ಲಿ ಚೆಂಗರು ಕೊಮ್ಯುನಿಸ್ಟರೇ ಆಗಿರುವರೆಂದು ಹೇಳಬಹುದು ಅವರು ಕಾರ್ಲ್‌ಮಾರ್ಕ್ಸನ ಸಮತಾವಾದ ಸಿದ್ಧಾಂತವನ್ನು ತಮ್ಮ ದೇಶದ ಪ್ರಾಚೀನ ಋಷಿ ಕನ್‌ಫೂಸಿಯ ಧ್ಯೇಯವಾದದೊಡನೆ ಬರಸಿ ಜೀವನವನ್ನು ಸಾಗಿಸುತ್ತಾರೆ

ಕನ್‌ಫೂಸಿಯದು ವಿಶ್ವಧರ್ಮ ಜಗತ್ತು ಒಂದು ದೊಡ್ಡ ಮಾನವ ಸಂಸಾರ ಜನತೆಯ ಹಕ್ಕು ಬಾಧ್ಯತೆಗಳನ್ನು ರಕ್ಷಿಸಲು ನ್ಯಾಯವಾದ ಶಾಸನಗಳನ್ನು ರಚಿಸಿ ತಮ್ಮ ಧ್ಯೇಯವು ವಿಶ್ವವ್ಯಾಪಿಯಾಗುವಂತೆ ಮಾಡುವುದು ಚೆಂಗರ ಜೀವನದ ಗುರಿಯಾಗಿದೆ

ಕೊನೆಯ ಹಂತ

ಚೀನದ ರಾಷ್ಟ್ರೀಯ ಪಕ್ಷದ ಮುಖ್ಯ ಧ್ಯೇಯವು ದೇಶ ಸಂಪತ್ತಿನ ಸಮಾನ ವಿತರಣೆಯನ್ನು ಮಾಡುವುದಾಗಿದೆ ಈ ಉದ್ದೇಶದಿಂದಲೇ 1936ರಲ್ಲಿ ರಚಿತವಾದ ರಾಜ್ಯಘಟನೆಯನ್ನು ಕಾರ್ಯರೂಪಕ್ಕೆ ತರಲು 1946ರಲ್ಲಿ ಚೆಂಗರ ಅಧ್ಯಕ್ಷತೆಯಲ್ಲಿ ಸೇರಿತ್ತು ಈ ಧ್ಯೇಯ ಸಾಧನೆಯು ಚೀನಿ ಕ್ರಾಂತಿಯ ಕೊನೆಯ ಹಂತವೆನ್ನಬಹುದು. ಆಧುನಿಕ ಚೀನದ ಪಿತಾಮಹರೆನಿಸುವ ದಿವಂಗತ ಸನ್‌ಯಟ್‌ಸೆನ್ನರ ರಾಜಕೀಯ ಶಾಸ್ತ್ರ ನಿರ್ದೇಶದಲ್ಲಿ ಇದನ್ನು "ಜನರ ಜೀವನಾವಶ್ಯಕತೆಗಳು" ಎಂದು ಸಂಬೋಧಿಸಲಾಗಿದೆ. ಪ್ರಜಾಪ್ರಭುತ್ವ ಮಾದರಿಯ ಸರಕಾರವೊಂದು ಆಡಳಿತ ಸೂತ್ರಗಳನ್ನು ವಹಿಸಿಕೊಂಡು ದೇಶದ ಸಂಪತ್ತನ್ನೆಲ್ಲ ರಾಷ್ಟ್ರದ ಸೊತ್ತಾಗಿ ಮಾಡಿ ಜನತೆಯು ಅದರ ಸಂಪೂರ್ಣ ಮತ್ತು ಸಮವಾದ ಪಾಲು ಪಡೆಯುವಂತೆ ಮಾಡುವದು ಅವರ ಉದ್ದೇಶ.

ಸ್ವಂತಕ್ಕೆ ಸೊತ್ತಿಲ್ಲ

ಚೀನದ ಅಪ್ರತಿಮ ಮುಖಂಡರಾದ ಚೆಂಗರು ತಮ್ಮ ದೇಶ ಬಾಂಧವರಂತೆ ಬಡವರಲ್ಲಿ ಅತೀ ಬಡವರು. ಅಧ್ಯಕ್ಷ ನೆಹರುಗಳಂತೆ ಅವರಿಗೆ ಸ್ವಂತ ಆಸ್ತಿಪಾಸ್ತಿಗಳಿಲ್ಲ. ಅಧ್ಯಕ್ಷರಾಗಿ ಅವರು ತಮ್ಮ ಸ್ಥಾನಮಾನಗಳನ್ನು ನಿರ್ವಹಿಸುವಂತೆ ಅವರ ದೇಶಬಾಂಧವರು ಅವರಿಗೆ ಅಲ್ಪಸ್ವಲ್ಪ ಧನಸಹಾಯವನ್ನು ಕೊಡುತ್ತಾರೆ.

ಚೀನಿ ಸರಕಾರ ಕೇಂದ್ರವು ನೆನ್‌ಕಿಂಗಿಗೆ ಸ್ಥಳಾಂತರಿಸಲ್ಪಟ್ಟಾಗ ಅವರಿಗೆ ವಾಸಿಸಲು ದೊಡ್ಡದೊಂದು ಅರಮನೆಯು ಕೊಡಲಾಯಿತು. ಆದರೆ ಸರಳ ಚೆಂಗರು ಅದನ್ನು ತಿರಸ್ಕರಿಸಿ ದೂರದ ಗುಡ್ಡದ ಬಳಿಯ ಒಂದು ಚಿಕ್ಕ ಕೆಂಪು ಇಟ್ಟಿಗೆ ಮನೆಯನ್ನು ಚುನಾಯಿಸಿದರು. ವಿದೇಶಿ ರಾಯಭಾರಿಗಳನ್ನವರು ಇಲ್ಲೇ ಸಂದರ್ಶಿಸುತ್ತಿದ್ದರು

ಸನ್ಯಾಸಿ ಜೀವನ

ಸೂರ್ಯೋದಯಕ್ಕೆ ಮುಂಚೆ ಎದ್ದು ಚೆಂಗರು ಸ್ವಲ್ಪ ಸಮಯವನ್ನು ಪ್ರಾರ್ಥನೆಯಲ್ಲೂ, ಮೌನ ಯೋಚನೆಯಲ್ಲೂ ಕಳೆಯುವರು ಕನ್‌ಫೂಸಿಯ ಧರ್ಮಶಾಸ್ತ್ರದಿಂದ ಕೆಲವೊಂದು ಅಂಶವನ್ನು ಓದುವರು ಅನಂತರ ಮಧ್ಯಾಹ್ನ [illegible] ದಲ್ಲಿ [illegible] ಸ್ವಂತ [illegible] ವಾದ [illegible]ವನ್ನು ಅವರು ಕಲವು ಸಮಯ ತೆಗೆದುಕೊಳ್ಳುವುದಿಲ್ಲ [illegible] ಸುರಿದ ರೊಟ್ಟಿ ತುಂಡುಗಳು ಮತ್ತು ಒಂದು ಗ್ಲಾಸ್ ಹಾಲು ಅವರ ಪ್ರಾತಃ ಭೋಜನಾವಸ್ತುಗಳು ಇದಕ್ಕೆ ಮತ್ತೆ ರಸ ವಸ್ತುಗಳನ್ನು ಸೇರಿಸಿದರೆ ಮಧ್ಯಾಹ್ನದ ಊಟವಾಗುವುದು

ಆದರೆ ಎಲ್ಲದಕ್ಕಿಂತ ಚೆಂಗರಿಗೆ ಭಾರತೀಯ ಮತ್ತು ಚೀನೀ ಬಡವನ ನಿತ್ಯದ ಆಹಾರವಾದ ಅನ್ನದ ಗಂಜಿಯನ್ನು ಕುಡಿಯುವುದೆಂದರೆ ತುಂಬಾ ಇಷ್ಟ [illegible] ಅವರು [illegible] ತ್ಯಜಿಸಿದ್ದಾರೆ ಅವರು [illegible] ಆಟಗಳನ್ನು ಆಡುವುದಿಲ್ಲ. ಬೆಟ್ಟ ಪ್ರದೇಶ ಸಂಚರಿಸುವುದು, ಚಿಕ್ಕ ಪಿಹಾರ ಕೂಟಗಳಲ್ಲಿರುವುದೆಂದರೆ ಅವರಿಗೆ ತುಂಬಾ ಪ್ರೀತಿ ಅವರು ಶ್ರದ್ಧಾವಂತ ಕ್ರೈಸ್ತರೂ ಆಗಿರುವರು. ವಯಸ್ಸು ಅರುವತ್ತು ಮೀರಿರುವುದಾದರೂ ಅವರ ಶರೀರವು ಸುದೃಢವಾಗಿದೆ ತಮ್ಮ ಭಾರವಾದ ದೇಶ ಹೊಣೆಯನ್ನು ಅವರು ಕನ್‌ಫೂಸಿಯ ಸರಳ ಜೀವನ ಕ್ರಮಗಳೊಂದಿಗೆ ನಿರ್ವಹಿಸುತ್ತಾರೆ

ಚರ್ಚಿಲ್ಲರನ್ನು ಹಿಮ್ಮೆಟ್ಟಿಸಿದರು

ಯುದ್ಧಕಾಲದಲ್ಲೇ ಚೆಂಗರು ಭಾರತವನ್ನು ಸ್ವತಂತ್ರಗೊಳಿಸಬೇಕೆಂದು ಅಭಿಪ್ರಾಯ ಸೂಚಿಸಿದ್ದಾಗ ಚರ್ಚಿಲ್ಲರು ಅವರ ಮೇಲೆ ತುಂಬಾ ರೇಗಿಬಿದ್ದರಂತೆ ಆಂಗ್ಲ ಚೀನಿ ಒಪ್ಪಂದವನ್ನು ಮುರಿದುಹಾಕುವೆನೆಂದು ಮಾಜಿ ಬ್ರಿಟಿಷ್ ಪ್ರಧಾನಿಗಳು ಚೆಂಗರು ಟುಕಳ್ಳ ಗದರಿಸಿದರು. ಆದರೆ ಚೆಂಗರು ತಮ್ಮ ತತ್ವದಿಂದ ಒಂದಿಷ್ಟಾದರೂ ಕದಲದ್ದನ್ನು ನೋಡಿ ಚರ್ಚಿಲ್ಲರು ತೆಪ್ಪಗಾದರು

ಬಂಗಾಲ ಬರಗಾಲ ಕಾಲದಲ್ಲಿ ಚೆಂಗರು ಚೀನದಲ್ಲಿ ಒಂದು ಪರಿಹಾರ ನಿಧಿ ಕೂಡಿಸಿ 20 ಲಕ್ಷ ರೂಪಾಯಿ ಬಂಗಾಲಕ್ಕೆ ಕಳುಹಿಸಿದರು. ಠಾಗೂರರ ವಿಶ್ವ ಭಾರತಿಗೆ ಅವರು (1940ರಲ್ಲಿ ಇಲ್ಲಿ ಬಂದಾಗ) 50 ಸಾವಿರ ರೂಪಾಯಿ ದಾನ ಕೊಟ್ಟಿದ್ದಾರೆ. ಇತ್ತೀಚೆಗೆ ಅವರ ಆದರ್ಶ ಪತ್ನಿ ಮೆಡಮ್ ಚೆಂಗಳು ಅದೇ ಸಂಸ್ಥೆಗೆ 5 ಲಕ್ಷ ರೂಪಾಯಿ ಕೊಟ್ಟಿರುವಳು. ಚೀನಿ ಭಾರತೀಯ ಸಾಂಸ್ಕೃತಿಕ ಸಂಪರ್ಕಾಭಿವೃದ್ಧಿಗಾಗಿ ಚೆಂಗರು ತುಂಬಾ ಶ್ರಮ ವಹಿಸುತ್ತಾರೆ.

KANARA COMMERCIAL BANK LTD.

PUTTUR

H O Puttur] Estd 1920 [Branch Vittal.

All kinds of Banking Business transacted.

Deposits - Current, Savings, Cumulative Deposits are accepted

Fixed Deposits for periods of 3 months and above up to 24 months are accepted.

SEASON DEPOSITS

ARE Accepted up to 31-5 1947 Terms on application.

ರಿಯಾಯತಿ ಲಗ್ಗೇಜಿನಲ್ಲಿ ವ್ಯಾಪಾರಿ ಸಾಮಾನುಗಳ ನಿಷೇಧ

ಪೆಸೆಂಜರರ ಸೌಕರ್ಯಗಳ ಬಗ್ಗೆ ಒಂದು ಮಣ ಭಾರದ ಸಾಮಾನುಗಳನ್ನು ಫ್ರೀ ತೆಗೆದುಕೊಂಡುಹೋಗಬಹುದಾಗಿ ಮಾಡಿದ ರಿಯಾಯತಿ ಕಾರಣದಿಂದಾಗಿ ಪೆಸೆಂಜರರು ಅವರ ಸ್ವಂತ ಉಪಯೋಗದ ಸಾಮಾನುಗಳಲ್ಲದೆ ವ್ಯಾಪಾರಿ ಸಾಮಾನುಗಳನ್ನು ತಮ್ಮೊಡನೆ ಪ್ರಯಾಣ ಬೆಳೆಸುವ ಸ್ನೇಹಿತರ ಹೆಸರಿನಲ್ಲಿ ಈ ರಿಯಾಯತಿ ಮೂಲಕ ಧರ್ಮಾರ್ಥ ಸಾಗಿಸುವುದು ರೂಢಿಯಾಗಿದೆ.

ಮೋಟಾರ್ ವಾಹನಗಳು ರೈಲ್ವೆಗಾಡಿಗಳಂತಾಗಿಲ್ಲ ಅವುಗಳಲ್ಲಿ ನಿಯಮಿತ ಭಾರಕ್ಕಿಂತ ಹೆಚ್ಚಿನ ಸಾಮಾನುಗಳನ್ನು ಒಯ್ಯುವುದು ಮೋಟಾರ್ ವಾಹನಕ್ಕೂ ಮತ್ತು ಪೆಸೆಂಜರರಿಗೂ ಅಪಾಯವಾಗಿದೆ ಕಾರಣ ಬಸ್ಸುಗಳಲ್ಲಿ ಒಯ್ಯುವ ಸಾಮಾನುಗಳನ್ನು ಪೆಸೆಂಜರರ ಅವಶ್ಯಕತೆ ಬಗ್ಗೆನೇ ಮಿತಗೊಳಿಸುವುದು ಅಗತ್ಯವಿದೆ.

ವ್ಯಾಪಾರಿ ಸಾಮಾನುಗಳನ್ನು ಒಯ್ಯುವರೆ ವ್ಯಾಪಾರಿಗಳು ಶೆಡ್ಯೂಲ್ ಟೈಮಿಗೆ ಕೊಂಡೊಯ್ಯುವ "ಲಕ್ಷ್ಮಿ" ಯಾ "ಸಿ. ಪಿ. ಸಿ" ಲೋರಿ ಸರ್ವಿಸುಗಳ ಸೌಖರ್ಯವನ್ನು ಉಪಯೋಗಿಸಬೇಕಾಗಿ ಅಪೇಕ್ಷಿಸುತ್ತೇವೆ.

ವ್ಯಾಪಾರಿ ಸಾಮಾನುಗಳನ್ನು ಎಷ್ಟಕ್ಕೂ ಫ್ರೀ ಲಗ್ಗೇಜಿನ ಅಂಶದಲ್ಲಿ ಸೇರಿಸಿಕೊಳ್ಳಲಾಗುವುದಿಲ್ಲ. ಈ ಕುರಿತು ಮಾಹಿತಿಯನ್ನು ಬುಕ್ಕಿಂಗ್‌ಕ್ಲಾರ್ಕರಿಂದ ಪಡೆಯಬಹುದು

JOINT MANAGERS,

The Combined Booking Agency, MANGALORE

The Joint Booking Office, KODIALBAIL.

THE CANARA BANKING CORPORATION LTD

(Incorporated in British India with Limited Liability)

Estd: 1906.

Head Office: UDIPI, S. Kanara.

CAPITAL:	Rs.
Authorised	25,00,000
Issued, subscribed & called up	16,00,000
Paid up	15,97,145
RESERVES	5,25,000
DEPOSITS	2,07,47,928
TOTAL RESOURCES	3,00,01,186

With a net work of branches & Agencies in all principal cities of India, we shall be able to render efficient collection services.

BANKING BUSINESS OF EVERY DESCRIPTION TRANSACTED.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯುಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃಂತಾಂಜನ ಡಿಪೋ. ಬೊಂಬಾಯಿ,

ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE BOMBAY LIFE ASSURANCE COMPANY LIMITED

(ESTD. 1910)

Peace and Security........

The Mightiest War to secure freedom for the oppressed Nations of Europe has ended. With many attempts at securing the four Freedoms, we do not seem to be anywhere near it. We, in our humble way, have been contributing to this Individual Material Freedom, in War as well as in Peace, by extending Insurance Service to all who seek it.

1945 completed Business { **Company's: Over $2\frac{3}{4}$ Crores**
Ours: About 50 lakhs.

Kochikar Brothers, Limited.

(ESTD. 1908)

Chief Agents for South India and Special agents for Bombay City & Suburbs.

"Bombay Life Building," Gandhi Nagar, UDIPI.

With Offices at:-

MADRAS, BANGALORE, TRIVANDRUM, MANGALORE, MADURA, CALICUT, BOMBAY, & UDIPI.

And Agencies all over South India.

Bhuvanendra Products Limited,

KATAPADI S. Kanara.

'Bhuvanendra

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic increases the vitality and sexual vigour. Also useful in habitual abortion and all diseases pertaining to the heart & lungs.

Depot: **Maharata Galli, Hubli.**

Bhuvanendra Products Ltd.

Factory & Head Office

KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ಕುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಬೇನೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೊಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಕು 21—3—1947 [ಸಂಚಿಕೆ 12]

ವಾರಾಂತ್ಯ ವರದಿ ವಿಮರ್ಶೆ

ಹೊಸ ವಾಯಿಸರಾಯರ ಹೊಸ ಧೋರಣೆ

ತಾತ್ಕಾಲಿಕ ಸರಕಾರದ ಬದಲಾವಣೆಯೆ?

ಕೆಬಿನೆಟ್ ಶಿಷ್ಟಮಂಡಳದ ಯೋಜನೆಯನ್ನು ಒಪ್ಪಬೇಕು.

[ಭಾರತ ನಡುಗಾಲ ಸರಕಾರಕ್ಕೆ ತ್ರಿಶಂಕು ಪರಿಸ್ಥಿತಿ ಒದಗಿದೆ. ಎರಡು ಪರಸ್ಪರ ವಿರೋಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಎದುರು ಎದುರು ದಿಕ್ಕಿನಿಂದ ಎಳೆಯುವರು. ಮೌಂಟ್ ಬೆಟನರು ಅಧಿಕಾರ ಸ್ವೀಕರಿಸಿದಾಗ ಕೊನೆಯ ತೀರ್ಮಾನ ಮಾಡಲಾಗುವುದೆಂದು ಲಂಡನ್ ರಾಜಕೀಯ ಕೇಂದ್ರದಲ್ಲಿ ಊಹಾಪೋಹೆಗಳುಂಟಾಗಿವೆ. ವೇವೆಲ್ಲರು ಅಧಿಕಾರ ಬಿಟ್ಟುಕೊಡುವಾಗ ಕೋಂಗ್ರೆಸ್ ಮಂತ್ರಿಗಳ ರಾಜಿನಾಮೆಗಳನ್ನು ತಮ್ಮೊಂದಿಗೆ ಒಯ್ಯುವರಂತೆ]

ಈ ತನ್ಮಧ್ಯೆ ಕೋಂಗ್ರೆಸ್ ಲೀಗುಗಳೊಳಗೆ ಒಂದು ಒಪ್ಪಂದವಾದರೆ ನಡುಗಾಲ ಮಂತ್ರಿಮಂಡಳವನ್ನು ಪುನಃರ್ರಚಿಸುವ ಪ್ರಸಂಗ ಬೀಳುವುದಿಲ್ಲ. ಆದರೆ ಈಗಿನಂತೆ ಬಿಕ್ಕಟ್ಟು ಮುಂದರಿದು ಪಂಜಾಬದ ಜಾತಿ ದಂಗೆಯಿಂದಾಗಿ ಅದು ಇನ್ನೂ ತೀವ್ರಗೊಂಡರೆ ಹೊಸತಾಗಿ ಬರುವ ಮೌಂಟ್ ಬೆಟನರು ಹೊಸ ಸರಕಾರವನ್ನು ರಚಿಸುವರೆಂದೂ, ಇದರಲ್ಲಿ ಭಾಗವಹಿಸಲು ಬ್ರಿಟಿಷ್ ಮಂತ್ರಿತ್ರಯರ ದೀರ್ಘಕಾಲದ ಮತ್ತು ಅಲ್ಪಕಾಲದ ಯೋಜನೆಯನ್ನು ಸ್ವೀಕರಿಸುವವರಿಗೆ ಮಾತ್ರ ಆಹ್ವಾನ ಕಳುಹಿಸಲಾಗುವುದೆಂದೂ ಸುದ್ದಿ ಇದೆ.

ಇತ್ತೀಚಿನ ಕಾರ್ಯಕಾರಿ ಸಮಿತಿಯ ಠರಾವಿನಲ್ಲಿ ಕೋಂಗ್ರೆಸು ತನ್ನ ಅಭಿಪ್ರಾಯವನ್ನು ಸ್ಪಷ್ಟಗೊಳಿಸಿದೆ. ಆದುದರಿಂದ ಮೇಲೆ ತಿಳಿಸಿದ ಶರ್ತ ... ಘಟನಾಸಮಿತಿಯಲ್ಲಿ ಭಾಗವಹಿಸಿ ... ಲದಲ್ಲಿ ಸೇರುವುದು, ಇಲ್ಲವೆ ಬಿಡುವುದು ಇವುಗಳೆರಡರಲ್ಲಿ ಯಾವುದಾದರೊಂದನ್ನು ಆರಿಸುವ ಕೆಲಸ ಲೀಗಿನ ಮೇಲೆ ಬಿದ್ದಿದೆ.

ಪಾಶ್ಚಾತ್ಯ ಅಭಿಪ್ರಾಯ

ವಿದೇಶಗಳಲ್ಲಿ ಮುಖ್ಯವಾಗಿ ಬ್ರಿಟನ್ ಅಮೇರಿಕಗಳಲ್ಲಿ ಭಾರತದ ನಡುಗಾಲ ಸರಕಾರದ ಸಮಸ್ಯೆಗಿಂತಲೂ ಮುಂದೆ ಜಾಗತಿಕ ಭದ್ರತೆಯಲ್ಲಿ ಸ್ವತಂತ್ರ ಭಾರತದ ರಕ್ಷಣೆಯ ವಿಷಯವೇನೆಂದು ಚರ್ಚಿಸಲ್ಪಡುತ್ತದೆಂದು, ಅಲ್ಲಿನ ಪತ್ರಿಕಾಭಿಪ್ರಾಯಗಳಿಂದ ವ್ಯಕ್ತವಾಗುತ್ತದೆ.

ಟ್ಯಾಮ್ ಎಂಬ ಅಮೇರಿಕನ್ ಪತ್ರಿಕೆಯು ಈ ಕೆಳಗಿನಂತೆ ಕಟುವಾಗಿ ಬರೆದಿದೆ:

ಬ್ರಿಟಿಷರು ಹೊರಡುವುದು ಖಂಡಿತವಾದ ಹಾಗೆ ರಾಜ್ಯಾಧಿಕಾರಕ್ಕಾಗಿ ಭಾರತದ ರಾಜಕೀಯ ಪಕ್ಷಗಳಲ್ಲಿ ಕಡಿದುದಕ್ಕಾರಂಭವಾಗಿದೆ. ಅಲ್ಲಿ ಅಂತಯುದ್ಧವಾದರೆ ಸುವ್ಯವಸ್ಥೆ ಸ್ಥಾಪಿಸುವುದಾದರೂ ಯಾರು? ರಶ್ಯವೊ? ಅಮೇರಿಕವೊ?

ಭಾರತವು ತನ್ನನ್ನು ತಾನು ರಕ್ಷಣೆ ಮಾಡಿಕೊಳ್ಳಲು ಸಮರ್ಥವಿಲ್ಲವೆಂದು ವಿದೇಶಿಗರೆಲ್ಲರೂ ಮನಃಪೂರ್ವಕವಾಗಿ ತಿಳಕೊಂಡಿದ್ದಾರೆ.

ಪಾಕಿಸ್ತಾನದ ಮಾತ್ರೆ

ಆಸ್ಟ್ರೇಲಿಯದ ಮೂಲ ನಿವಾಸಿಗಳು ಬೂಮರೆಂಗ್ ಎಂಬ ಆಯುಧವೊಂದನ್ನು ಉಪಯೋಗಿಸುವರು. ಅದನ್ನು ಯಾವದಾದರೊಂದು ಪ್ರಾಣಿಯ ಮೇಲೆ ಬಿಟ್ಟರೆ ಅದನ್ನು ಹೊಡೆದು ಅದು ಪುನಃ ಬಿಟ್ಟವನ ಬಳಿ ಹಿಂತಿರುವುದು. ಒಮ್ಮೊಮ್ಮೆ ಮರಳಿಹೋಗುವ ಆಸ್ತ್ರ ಅದರ ಯಜಮಾನನನ್ನು ಕಿವಿಯುವುದೂ ಇದೆ.

1940ರಲ್ಲಿ ಜಿನ್ನಾ ಸಾಹೇಬರು ತಮ್ಮ ಪಾಕಿಸ್ತಾನದ ಕೇಳಿಕೆಯಿಂದ ಜಗತ್ತನ್ನು ಗುಡುಗಿಸಿದರು. ಇಂದಿಗೆ ಆರೇಳು ವರ್ಷಗಳಿಂದ ಕೋಂಗ್ರೆಸು ದೇಶವಿಚ್ಛೇಧಿಕರಣ ಧೋರಣೆಯ ನಿಸ್ಸಾರತೆಯನ್ನು ಬಹು ವಿಧದಲ್ಲಿ ಒತ್ತಿ ಹೇಳಿತು. ಈ ಕೇಳಿಕೆಯಿಂದ ಕೋಂಗ್ರೆಸು ಸಂಪೂರ್ಣ ಬಗ್ಗುವದೆಂದು ಲೀಗ್ ಸರ್ವಾಧಿಕಾರಿಗಳು ತಿಳಿದಿದ್ದರು.

ಈಗ ಹಟಮಾಡುವ ಲೀಗಿಗೆ ಕೇಂದ್ರಕ್ಕೆ ಮುಟ್ಟಲು ಬಿಟ್ಟರೆ ... ಕೋಂಗ್ರೆಸು ವಿಚ್ಛೇಧೀಕರಣವನ್ನು ಭೇದಪೂರ್ವಕವಾಗಿ ಸ್ವೀಕರಿಸಿದೆ. ಪಂಜಾಬನ್ನು ಮುಸ್ಲಿಂ ಮತ್ತು ಮುಸ್ಲಿಮೇತರ ಪ್ರದೇಶಗಳಾಗಿ ವಿಭಾಗಿಸಲು ಅದು ಸಮ್ಮತಿಸಿದೆ.

ಹಿಂದೂ ಬಹುಸಂಖ್ಯಾಕ ಆಡಳಿತದಲ್ಲಿರಲು ಲೀಗಿನವರಿಗೆ ಇಷ್ಟವಿಲ್ಲ. ಲೀಗಿನ ಜಾತೀಯ ಆಡಳಿತವನ್ನು ಮಾನಿಸಲು ಸಿಕ್ಕರು ಸಿದ್ಧವಿಲ್ಲ. ಲೀಗು ಕೋಂಗ್ರೆಸ್ಸಿನ ವಿರೋಧ ಮಂಡಿಸಿದ ತರ್ಕ ಈಗ ಲೀಗಿನ ವಿರೋಧ ... ಸರ್ವ ಪ್ರಯತ್ನದಿಂದ ಪಂಜಾಬಿನಲ್ಲಿ ಮಂತ್ರಿಮಂಡಳ ರಚಿಸಲು ಅಲ್ಲಿ ಲೀಗಿಗೆ ಅಸಾಧ್ಯವಾಯಿತು. ಕೋಮು ದಂಗೆಯ ... ಅದನ್ನು ... ಸಾಧ್ಯವಿಲ್ಲ. ಅಲ್ಲಿನ ಶಾಸನ ಸಭೆಯಲ್ಲಿ ಬಹುಮತ ಪಡೆಯಲು ಲೀಗಿಗೆ ಅಸಾಧ್ಯವಾಗಿದೆ. ... ಇಲ್ಲವೆ ಸಂಯುಕ್ತ ಎಲ್ಲಾ ಪಕ್ಷೀಯ ಮಂತ್ರಿಮಂಡಳವಾಗಬೇಕು. ಪಾಕಿಸ್ತಾನದ ಬೂಮರೆಂಗು ... ಹಚ್ಚಿನ ರಭಸದಿಂದ ಹಿಂದಕ್ಕೆ ಹಾರಿದೆ. ಲೀಗು ಕೋಂಗ್ರೆಸಿಗೆ ನುಂಗಲು ... ಕಹಿ ಮಾತ್ರೆ ಪುನಃ ಅದಕ್ಕೇ ನುಂಗ... ಸಿಕಿದೆ.

ಅಖಂಡ ಭಾರತವೇ ಗತಿ

... ಹೊರಟುಹೋಗುವ ... ಸರ್ವ ಪಕ್ಷೀಯ ಸಂಪೂರ್ಣ ಸಮ್ಮತಿ ... ಒಂದು ಕೇಂದ್ರಕ್ಕಾಗಲಿ ... ಕೇಂದ್ರಗಳಿಗಾಗಲಿ ಅಧಿಕಾರ ಬಿಟ್ಟುಕೊಡುವರೆಂದು ... ಈಗ ... ಘಟನಾ ಸಮಿತಿಯಲ್ಲಿ ಲೀಗು ಭಾಗವಹಿಸದಿದ್ದರೆ ಬ್ರಿಟಿಷರು ಅದರ ಘಟನೆಯನ್ನು ಇಡೀ ಭಾರತದ ಮೇಲೆ ... ಒಪ್ಪಲಾರರು. ಆ ಸಂದರ್ಭದಲ್ಲಿ ಅದು ... ಹಿಂದೂಗಳಿರುವ ... ಪ್ರಾಂತ್ಯಗಳಿಗೆ ಮಾತ್ರ ಅನ್ವಯಿಸುತ್ತದೆ.

ಆಗ ಲೀಗು ತನ್ನ ಪ್ರತ್ಯೇಕವೊಂದು ಘಟನೆಯನ್ನು ತಯಾರಿಸಬೇಕಾಗುವುದು. ಇದರಲ್ಲಿ ಪಂಜಾಬದ ಸಿಕ್ಕರೂ, ಬಂಗಾಲದ ಹಿಂದುಗಳೂ ಭಾಗವಹಿಸಬೇಕು. ಇಲ್ಲದಿದ್ದರೆ ಅದೂ ಸಂಪೂರ್ಣ ಸಮ್ಮತಿಯ ಘಟನೆಯಾಗಲಾರದು. ಸಿಕ್ಕರೂ ಮತ್ತು ಹಿಂದುಗಳು ಸಹಜವಾಗಿ ಆದರಿಂದ ದೂರವಿರುವರು.

ಈ ಪರಿಸ್ಥಿತಿಯಲ್ಲಿ ಕೋಂಗ್ರೆಸ್ ಸೂಚನೆಯಂತೆ ಒಂದೊ ಪಂಜಾಬ್ ಬಂಗಾಲ

(೭ನೇ ಪುಟಕ್ಕೆ ಮುಂದುವರಿದಿದೆ)

THE
UNITED INDIA LIFE ASSURANCE
CO, LTD.
ESTD 1906 — H O MADRAS

SECURITY

Greater than any conferred by legislative enactments is guaranteed

by

UNITED INDIA'S TRUST ARRANGEMENT

with

THE OFFICIAL TRUSTEE TO THE GOVRNMENT OF MADRAS.

For Particulars apply to —

INSPECTORATE OFFICE
K. S. Rao Road, Mangalore.

ಆರೋಗ್ಯ ಶಾಸ್ತ್ರ ಕಲಿಯಲು ನಾಯಿಯೆ ಆದರ್ಶ

ಶುನಕ ನಿಪುಣತೆಯ ವಿಚಿತ್ರ ಮಾದರಿ

ಹುಚ್ಚು ಹಿಡಿದರೂ ಯಜಮಾನನನ್ನು ಕಚ್ಚುವುದಿಲ್ಲ.

"ಕೆಲಸವೇನೆಂದು ಕಲಿಯಲು ಇರುವೆಯ ಬಳಿಗೆ ಹೋಗಿರಿ" ಎಂದು ವಿವೇಕಿಯಾದ ಯೆಹೂದಿ ಅರಸ ಸೊಲೊಮೊನನು ಬೋಧಿಸಿರುವಾಗ ನಾವು ಇಂದು ಕೆಲವು ಉಪಯುಕ್ತ ಜೀವನ ಸೂತ್ರಗಳನ್ನು ನಾಯಿಯೊಂದರಿಂದ ಕಲಿಯಲು ನಾಚಿಗೆಪಟ್ಟುಕೊಳ್ಳುವ ಅವಶ್ಯಕತೆಯಿಲ್ಲ

ಹೊರಗೆ ಜೋರು ಮಳೆ ಬರುತಿದ್ದು ಚಳಿಗೊಳಿಸುವ ಗಾಳಿ ರಭಸದಿಂದ ಬೀಸುತ್ತಿರುವಾಗ ನಿಮಗೆ ನಿಮ್ಮೊಬ್ಬ ಸ್ನೇಹಿತನ ಮನೆಗೆ ಹೋಗಬೇಕಾಗಿದೆ ಮನೆ ಬಾಗಿಲಲ್ಲೇ ಮಲಗಿದ್ದ ನಿಮ್ಮ ನಾಯಿಗೆ ನಿಮ್ಮೊಡನೆ ಹೋಗಲು ಅತ್ಯಾತುರವಾಗಿ ಅದು ಪ್ರೀತಿಯಿಂದ ಬಾಲ ಅಲ್ಲಾಡಿಸಿ ಮುಂಗಾಲುಗಳನ್ನು ಎತ್ತೆತ್ತಿ ಹೆಜ್ಜೆಯಿಡುತ್ತದೆ. ಆದರೆ ಮುದ್ದು ನಾಯಿಯನ್ನು ಮಳೆಗೆ ನೋಂದಿಸುವುದು ನಿಮಗಿಷ್ಟವಿಲ್ಲ. ನೀವು ಹೊರಡುವಿರಿ. ಕೆಲವೇ ಕ್ಷಣಗಳಲ್ಲಿ ನಿಮ್ಮ ಚತುಷ್ಪಾದ ಸೇವಕ ನಿಮ್ಮ ಹಿಂದೆ ಧಾವಿಸಿ ಬರುತಿದ್ದಾನೆ. ನೀವು ಗದರಿಸುತ್ತೀರಿ, ಹಿಂದಕ್ಕೆ ಓಡಿಸುತ್ತೀರಿ.- ಸ್ವಲ್ಪ ಮುಂದೆ ಹೋಗುತ್ತೀರಿ. ಅಕೊಳ್ಳಿ ಅಷ್ಟೇ ಮುಂದಿನ ಮಾರ್ಗ ತಿರುಗುವಿಕೆಯಲ್ಲಿ ನಿಮ್ಮ 'ಫ್ರೆಂಡ್' ಇಲ್ಲವೆ . . . . ನಿಂತಿದ್ದಾನೆ!

ಆಹಾ ಎಂತಹ ಪ್ರೀತಿ ಈ ಪ್ರಾಣಿಗೆ ತನ್ನ ಯಜಮಾನನನ್ನು ಏಕಾಂಗಿಯಾಗಿ ಅಪಾಯಕರವಾದ ಹವಾಮಾನದಲ್ಲಿ ಹೋಗಬಿಡುವುದಿಲ್ಲ ನಿಮಗಿಷ್ಟವಿಲ್ಲದಿದ್ದರೂ ನಿಮ್ಮ ಬೆನ್ನು ಬಿಡುವುದಿಲ್ಲ ಎಂತಹ ಏಟುಗಳನ್ನಾದರೂ ಸಹಿಸಿ ಜೊತೆಗಾರನಾಗಬಯಸುತ್ತಾನೆ! ಇಂತಹ ನಿಸ್ವಾರ್ಥ ಪ್ರೇಮ, ಗೆಳೆತನದ ಆದರ್ಶವನ್ನು ಬೇರೆಲ್ಲಿ ಕಾಣುವಿರಿ? ಈ ವಿಷಯದಲ್ಲಿ ನಿಮ್ಮನ್ನು ಒಡೆಯನನ್ನಾಗಿ ಸ್ವೀಕರಿಸಿದ ಕುನ್ನಿಯಿಂದ ನೀವು ಉತ್ತಮ ಪಾಠವನ್ನು ಕಲಿಯಬಹುದು.

ನಿಮ್ಮ ನಾಯಿ ಹಸಿವೆಯಿಲ್ಲದಾಗ ಉಣ್ಣುವುದಿಲ್ಲ ಬಾಯಾರಿಕೆಯಾಗದ ವಿನಹ ನೀರು ಕುಡಿಯುವುದಿಲ್ಲ ಹೊಟ್ಟೆ ತುಂಬಿದಾಕ್ಷಣ ಊಟನ ನಿಲ್ಲಿಸುವುದು ಅದೆಷ್ಟು ಮಾನವರು ಹಾಗೆ ಮಾಡುವರು? ಅನಾರೋಗ್ಯಗೊಳಿಸುವ ಆಹಾರವನ್ನು ನಾಯಿ ಮೊದಲಿನ ಸಲಕ್ಕೆ ತಿನ್ನಬಹುದು ಮತ್ತೆ ಮುಂದೆಂದಿಗೂ ಅದು ಅದನ್ನು ಮೂಸುವುದಿಲ್ಲ ಹೊಟ್ಟೆ ಅವ್ಯವಸ್ಥೆಗೊಂಡಾಗ ನಾಯಿಗಳು ಒಂದಗಳನ್ನೂ ತಿನ್ನುವುದಿಲ್ಲ. ಆದುದರಿಂದ ಡಾಕ್ಟರಿರಿಗೆ ಮತ್ತೆ ಹತ್ತು ರೂಪಾಯಿ ತೆರುವ ಅವಶ್ಯಕತೆಯೂ ಅದಕ್ಕಿಲ್ಲ.

ಏನಾದರೂ ಕೆಲಸ ಮಾಡಲಿಕ್ಕಿದ್ದರೆ ನಾಯಿಗಳು ತಮ್ಮ ಸಂಪೂರ್ಣ ಚೈತನ್ಯ ಮತ್ತು ಮನಸ್ಸನ್ನು ಹಾಕಿ ಅದನ್ನು ಮಾಡುತ್ತವೆ. ಏನೂ ಮಾಡಲಿಕ್ಕಿಲ್ಲದಿದ್ದರೆ ಸುಮ್ಮನೆ ಬಿದ್ದುಕೊಂಡು ವಿಶ್ರಾಂತಿ ತೆಗೆದುಕೊಳ್ಳುತ್ತವೆ. ಮನುಷ್ಯರಂತೆ ಅವು ಅನಾವಶ್ಯಕವಾಗಿ ತಮ್ಮ ಶಕ್ತಿ ಚೈತನ್ಯವನ್ನು ಕಳೆಕೊಳ್ಳುವುದಿಲ್ಲ.

ಯುದ್ಧಗಳಲ್ಲಿ, ಜಾತೀಯ ಗಲಭೆಗಳಲ್ಲಿ ಹೆಂಗುಸರಿಗೆ ದಂಗೆಗಾರರಿಂದ ಅವರ್ಣನೀಯ ಅವಮಾನವಾಗುವ ವರದಿಗಳನ್ನು ಓದುತ್ತೇವೆ. ಆದರೆ ಹೆಣ್ಣು ನಾಯಿಗಳಿಗೆ ಗಂಡು ನಾಯಿಗಳು ಯಾವ ರೀತಿಯಲ್ಲೂ ಕ್ರೂರತನ ತೋರುವುದಿಲ್ಲ ಒಂದು ಗಂಡು ಮತ್ತೊಂದು ಹೆಣ್ಣು ನಾಯಿಗಳು ಪ್ರಣಯ ಲೀಲೆಯಾಡುವುದನ್ನು ನೀವು ಕಂಡಿರಬಹುದು ಕೆಲವು ಸಲ ಹೆಣ್ಣು ನಾಯಿ ರೇಗಿಕೊಂಡು ಕಚ್ಚಲಿಕ್ಕಾರಂಭಿಸುತ್ತದೆ ಕೂಡಲೇ ಇನ್ನೊಂದು ಇಲ್ಲವೆ ಅನೇಕ ಗಂಡು ನಾಯಿಗಳು ಓಡಿಬರುತ್ತವೆ ಗಂಡು ನಾಯಿಗಳೊಳಗೆ ತೀವ್ರ ಕಚ್ಚಾಟಕ್ಕಾರಂಭವಾಗಿ ಭೀಕರ ಹೋರಾಟ ನಡೆಯುತ್ತದೆ ಇಷ್ಟಾದರೂ ಒಂದು ಗಂಡು ನಾಯಿಯಾದರೂ ಹೆಣ್ಣಿನ ಸುದ್ದಿಗೆ ಹೋಗುವುದಿಲ್ಲ ನಾಯಿಗಳಲ್ಲಿ ಅದೆಂತಹ ಧೀರೋದಾತ್ತತೆ! ನಮ್ಮ ಕ್ರಿಮಿನಲ್ ಕೋರ್ಟುಗಳ ಹೆಂಡರಿದಿರಿಗೆ ಬಡಿದ ಅದೆಷ್ಟು ಮೊಕದ್ದಮೆಗಳು ಬರುತ್ತಿಲ್ಲ?

ಹುಚ್ಚು ನಾಯಿಗಳು ಎಂದಾದರೂ ತಮ್ಮ ಯಜಮಾನನನ್ನು ಕಚ್ಚಿದ ಸಂಗತಿ ಕೇಳಿರುವಿರಾ? ಇಲ್ಲ, ಹಾಗಾಗಲು ಕಾರಣವೇ ಇಲ್ಲ. ಸ್ವಾಮಿ ಪ್ರೇಮದ ಈ ಪ್ರಾಮಾಣಿಕ ಪ್ರಾಣಿಗಳು ತಮ್ಮಲ್ಲಿ ಬುದ್ಧಿ ಭ್ರಮಣದ ಸೂಕ್ಷ್ಮ ಕುರುಹನ್ನು ಕಂಡಾಗ ಯಜಮಾನನ ಮನೆಯಿಂದ ಓಡಿಹೋಗುತ್ತವೆ ಮತ್ತೆ ಹುಚ್ಚು ಹೆಚ್ಚಾದಾಗ [illegible]ನಿಗೆ ಕಚ್ಚುವ ಪ್ರಸಂಗ ಬರಬಹುದಲ್ಲಾ ಎಂಬುದಕ್ಕೆ ಚಿಂತೆ

ಮರಣವುಂಟಾಗುವಾಗಲೂ ನಾಯಿಗಳು ಅದೇ ರೀತಿ ವರ್ತಿಸುತ್ತವೆ ತನ್ನ ಕೊನೆಯ ಬಲಿಷ್ಠ ಶಕ್ತಿಯನ್ನು ಪ್ರಯೋಗಿಸಿ ಅದು [illegible] ಕಡೆಗೆ ಹೊರಳಿ ಹೋಗುತ್ತದೆ ತನ್ನ ಸಾವು ಯಜಮಾನನಿಗೊಂದು ಹೊರೆಯಾಗಬಾರದೆಂಬುದರ ಆಶಯ.

ತಾನು ಹೋದಲ್ಲಿನ ಪರಿಸ್ಥಿತಿಗೆ ತನ್ನನ್ನು ಹೊಂದಿಸಿಕೊಳ್ಳುವ ಅಗಾಧ ಶಕ್ತಿ ನಾಯಿಗಿದೆ ತನಗೆ ಆಗಂತುಕರಿರುವ ಒಂದು ಹೊಸ [illegible]ದ ಮನೆಗೆ ಹೋದರೆ ಅದು ಕ್ಷಣದಲ್ಲಿ ಅಲ್ಲಿನವರ ರೀತಿ ನೀತಿಗಳನ್ನು ಅರಿತುಕೊಂಡು ಅಲ್ಲಿಯವರನ್ನು ಒಲಿಸಿಕೊಳ್ಳುತ್ತದೆ

ಶುನಕ ಬುದ್ಧಿಗೆ ಸಾಧ್ಯವಾಗುವ ಒಂದು ವಿಷಯವನ್ನು ಅದಕ್ಕೆ ಕಲಿಸಿರಿ ಮನುಷ್ಯ ಮಗುವೊಂದು ಅದೇ ವಿಷಯವನ್ನು ಕಲಿಯಲು ತೆಗೆಯುವ ಸಮಯದ ಹತ್ತನೇ ಒಂದು ಪಾಲು ಅವಧಿಯಲ್ಲಿ ನಾಯಿಯೊಂದು ಮಗುವಿನ ಇಮ್ಮಡಿ ಪರಿಪೂರ್ಣತೆಯಿಂದ ಮಾಡುವುದು. ಮಗುವಿಗಿಂತಲೂ ಹೆಚ್ಚು ಜ್ಞಾಪಕಶಕ್ತಿ ಅವುಗಳಿಗಿದೆ.

ನಿಷ್ಪ್ರಯೋಜಕ ನಾಯಿಗಳೂ ಇವೆ. ಆದರೆ ಯಾವ ನಾಯಿಗಾದರೂ ಉತ್ತಮ ಸಂದರ್ಭ, ಸನ್ನಿವೇಶ ಆಹಾರಗಳನ್ನೊದಗಿಸಿದರೆ ಅದು ಬಹು ಬೇಗನೆ ಬದಲಾವಣೆ ಹೊಂದಿ ತನ್ನ ಹೊಸ ಸನ್ನಿವೇಶಕ್ಕೆ ಪರಿವರ್ತನೆ ಹೊಂದಿ ನಿರ್ಮಲವೂ, ನಿಸ್ವಾರ್ಥವೂ ಶಿಸ್ತುಳ್ಳದ್ದೂ ಆದ ಸೇವಕನಾಗುವುದು.

ಕಲ್ಪನೆಯಿಂದಲೇ ಕಾಯಿಲೆಯುಂಟಾಗಬಹುದು

ದೇಹದ ಮೇಲೆ ಮನಸ್ಸಿನ ಪರಿಣಾಮ

ನೆನಸಿ ನೆನಸಿ ರೋಗ—ಕೆಲವು ನಿದರ್ಶನಗಳು

ಅಲ್ಲಸಲ್ಲದ ರೋಗರುಜಿನಗಳ ಕುರಿತು ನೆನಸಿಕಲ್ಪನೆಮಾಡುತ್ತಾ ಅವುಗಳನ್ನು ತರಿಸಿಕೊಳ್ಳುವ ಕೆಲವು ಜನರಿರುವರೆಂಬುದನ್ನು ಬಲ್ಲಿರಾ?

ಒಂದು ಮನಶ್ಶಾಸ್ತ್ರ ಪತ್ರಿಕೆಯಲ್ಲಿ ಬರೆಯುತ್ತ ಡಾ| ಫ್ರೆಂಕ್ಲಿನ್ ಲಿವಿಟ್ ಅವರು 'ಇದು ಒಂದು ತರದ ಸಹಾನುಭೂತಿ ಪರವಾದ ಸಾಂಕ್ರಾಮಿಕ" ವೆಂದಿದ್ದಾರೆ ಆ ಕುರಿತು ಅವರು ಹೀಗೆನ್ನುತ್ತಾರೆ

ಎತ್ತರದ ಹುರಿಹಗ್ಗದ ಮೇಲೆ ನಡೆಯುವ ಡೊಂಬನ ನಿದರ್ಶನವನ್ನು ತೆಗೆದುಕೊಳ್ಳೋಣ. ಅವನ ರೋಮಾಂಚಕ ಆಟವನ್ನು ನೋಡುವವರು ಅವನಷ್ಟೇ ಕಳವಳದಿಂದ ತುಂಬಿರುತ್ತಾರೆ ಅವನು ಹಗ್ಗದ ಮೇಲೆ ತನ್ನ ಶರೀರವನ್ನು ಜೋತಾಡಿಸುವಾಗ ಪ್ರೇಕ್ಷಕರು ತಮ್ಮ ಶರೀರಗಳನ್ನು ಜೋತಾಡಿಸುವರು ಅವನು ಬಗ್ಗುವಾಗ ಅವರೂ ಬಗ್ಗುವರು.

ಅದೇ ರೀತಿ ಒಬ್ಬನು ಇನ್ನೊಬ್ಬನಿಗೆ ಒಂದು ಬೆತ್ತದಿಂದ ಗುರಿಯಿಟ್ಟು ಕಾಲಿಗೆ ಹೊಡೆಯುವನೆಂದು ತಿಳಕೊಳ್ಳೋಣ ಅವನ ಕಾಲಿಗೆ ಏಟು ಬೀಳುವಾಗ ನಾವೂ ಸಂಕೋಚಗೊಂಡು ನಮ್ಮ ಕಾಲುಗಳನ್ನು ಹಿಂದಕ್ಕೆಳೆಯುತ್ತೇವೆ ಆ ಸಮಯದಲ್ಲಿ ನಾವೇ ಏಟು ತಿನ್ನುತ್ತಿರುವುದೆಂದು ನಾವು ಕಲ್ಪಿಸಿಕೊಳ್ಳುತ್ತೇವೆ

ಕುಸ್ತಿ ಪಂದ್ಯಾಟ, ಮುಷ್ಟಿಕಾಳಗವನ್ನು ಈಕ್ಷಿಸುತ್ತಿರುವ ಒಂದು ಸಭೆಯನ್ನು ನೋಡೋಣ ಪಂದ್ಯಾಟಗಾರರು ಉರುಡುವಾಗ ಪ್ರದರ್ಶಿಸುವ ಭಾವಭಂಗಿಗಳನ್ನೇ ಪ್ರೇಕ್ಷಕರೂ ಪ್ರದರ್ಶಿಸುವುದು ಸಾಮಾನ್ಯವಾಗಿ ಕಾಣಬಹುದು.

ಇವು ಸಹಾನುಭೂತಿ ಅನುಕರಣದ ಕೆಲವು ಸರಳ ದರ್ಶನಗಳು ಹಿಂದಿನ ಕಾಲದ ಕೆಲವು ಕ್ರೈಸ್ತ ಪ್ರಚಾರಕ ಭಿಕ್ಷುಗಳು ಮನಸ್ಸನ್ನು ಕೇಂದ್ರೀಕರಿಸುವುದರ ಮೂಲಕ ಅಂಗೈಗೆ ಎಲ್ಲಾ ರಕ್ತವನ್ನು ತರಿಸುತ್ತಿದ್ದರಂತೆ ಕ್ರಿಸ್ತನ ಅಂಗೈಗಳಿಗೆ ಮೊಳೆ ಹೊಡೆದುದಕ್ಕೆ ಸಹಾನುಭೂತಿಗೊಂಡ ಹೃದಯದ ಪ್ರತಿಕ್ರಿಯೆಯಿದು

ಇಟೆಲಿಯಲ್ಲಿನ ಒರ್ವ ಕ್ರೈಸ್ತ ಸನ್ಯಾಸಿಯೋರ್ವಳು ತನ್ನ ಮರಣದ ಹಲವು ವರ್ಷಗಳ ಮುಂಚಿತವಾಗಿಯೇ ತನ್ನ ಹೃತ್ಕೋಶದ ಮೇಲೆ ಶಿಲುಬೆಯ ಚಿಹ್ನೆ ಇರುವುದಾಗಿ ಹೇಳುತಿದ್ದಳು. ಆಕೆಳ ಮರಣಾನಂತರ ಶಸ್ತ್ರ ಚಿಕಿತ್ಸಕರು ಈ ಸಂಗತಿಯನ್ನು ಪ್ರತ್ಯಕ್ಷವಾಗಿ ಪರಿಶೋಧಿಸಿ ನೋಡಿದರು

ನಾನು ವೈದ್ಯಶಾಸ್ತ್ರ ಕಲಿಯುತ್ತಿದ್ದಾಗ ಅತೀಯ ಕಲ್ಪನಾಮಯಿಯಾದೊರ್ವ ಸಹಪಾಠಿ ಇದ್ದ ಪ್ರೊಫೆಸರರು ರೋಗಗಳ ಲಕ್ಷಣಗಳನ್ನು ಒಂದೊಂದಾಗಿ ವಿವರಿಸುತ್ತಿದ್ದಾಗ ಈತನು ಅವುಗಳೊಂದಿಗೆ ತೋರಿಸುತಿದ್ದ ಕಾಲ್ಪನಿಕ ಸಹಾನುಭೂತಿಯಿಂದಾಗಿ ಅವನಲ್ಲಿ ಆಯಾ ರೋಗಗಳ ಲಕ್ಷಣಗಳು ತನ್ನಷ್ಟಕ್ಕೆ ಕಾಣುತಿದ್ದವು ಉದಾ ಮಲೇರಿಯಾ ಜ್ವರದ ಕುರಿತು ವಿವರಿಸುವಾಗ ಅವನಿಗೆ ಕೂಡಲೇ ನಡುಕವುಂಟಾಗಿ ಜ್ವರವುಂಟಾಗುತಿತ್ತು.

ನಮ್ಮ ಯೋಚನೆಯು ಶಕ್ತಿಯುಕ್ತವಾದೊಂದು ಅಮೂರ್ತ ವಸ್ತು. ಇದನ್ನು ಕಾರ್ಯರೂಪಕ್ಕೆ ಪರಿವರ್ತಿಸಿದರೆ ಕಲ್ಪಿಸಿದ ಶಾರೀರಕ ನ್ಯೂನತೆಗಳುಂಟಾಗಬಹುದು.

ನಮ್ಮ ದೇಹವು ಮಿಲಿಯಾವಧಿ ಅಣುಗಳಿಂದ ರಚಿತವಾಗಿದೆ. ನಮ್ಮ ಕಲ್ಪನೆಗಳು ದುಃಖಮಯವಾದಾಗ ಈ ಅಣುಗಳು ತಮ್ಮ ಕಾರ್ಯ ನಿಲ್ಲಿಸುತ್ತವೆ. ಯೋಚನೆಗಳು ಸ್ಫೂರ್ತಿದಾಯಕವೂ, ಪ್ರಚೋದನಕಾರಿಗಳೂ ಉದಾತ್ತ ಭಾವನೆಯವುಗಳೂ ಆದಾಗ ಈ ಅಣುಗಳು ಸ್ವೇಚ್ಛೆಯಾಗಿ ಕಾಲವಿಹಾರಿ ಕೆಲಸಮಾಡುತ್ತವೆ ಈ ಪರಿಸ್ಥಿತಿಯಲ್ಲಿ ಶರೀರದ ರೋಗ ಪ್ರತಿಬಂಧಕ ಶಕ್ತಿಯು ಉನ್ನತ ಮಟ್ಟದಲ್ಲಿರುತ್ತದೆ.

ಮಾನಸಿಕ ಶಕ್ತಿ

ಪ್ರತಿ ದೇಹಾಣುವಿಗೂ ಸ್ವಲ್ಪ ಪ್ರಮಾಣದ ಮಾನಸಿಕ ಶಕ್ತಿಯೂ ಇದ್ದಂತೆ ತೋರುತ್ತದೆ ಅದರ ಶಾರೀರಕ ಶಕ್ತಿ ಎಲ್ಲಿ ಅಂತ್ಯವಾಗುತ್ತದೆ ಮತ್ತು ಅದರ ಮಾನಸಿಕ ಶಕ್ತಿ ಎಲ್ಲಿ ಪ್ರಾರಂಭವಾಗುತ್ತದೆಂದು ಹೇಳಬರುವುದಿಲ್ಲ. ಅವುಗಳು ಅಷ್ಟು ನಿಕಟವಾಗಿ ಹೊಂದಿಕೊಂಡಿವೆ ನೀವು ಯಾವುದಾದರೊಂದು ರೋಗದ ಕುರಿತು ಭೀಕರ ಮಾನಸಿಕ ಚಿತ್ರವನ್ನು ಕಲ್ಪಿಸಿಕೊಂಡರೆ ಇಲ್ಲವೆ ಯಾವುದಾದರೂ ಉದ್ಯಮದ ವ್ಯವಹಾರದ ಕುರಿತು ವ್ಯಥೆಪಟ್ಟುಕೊಂಡಾಗ ಈ ಅಣುಗಳು ನಿಮ್ಮ ಶರೀರ ಶಕ್ತಿಯನ್ನು ಸರಮಾಲಿಗಳ ಮೂಲಕ ಹರಿದು ಹಂಚಿಹಾಕುತ್ತವೆ.

ಆದುದರಿಂದ ನಾವು ನಮ್ಮೀ ಮಾನಸಿಕ ಪ್ರತಿಕ್ರಿಯೆಯು ತರುವ ದುಷ್ಪರಿಣಾಮವನ್ನು ಚೆನ್ನಾಗಿ ಅರಿತುಕೊಂಡು ಅಂತರೀಕ ಶಕ್ತಿಗಳನ್ನು ಬೆಳೆಸಿಕೊಳ್ಳುವುದು ಉತ್ತಮ. ಹೀಗೆ ಉತ್ತಮ ಶರೀರದಾರ್ಢ್ಯವನ್ನು ಬೆಳೆಸಿಕೊಂಡು ಇತರರಲ್ಲಿ ಇದೇ ತರದ ಉತ್ತಮ ಪ್ರಭಾವವನ್ನು ಬೀರುವುದೊಳಿತು



ಗಾಂಧೀವಾದ ಪ್ರಜಾಪ್ರಭುತ್ವದ ತಿರುಳು

ನೈತಿಕ ಅವನತಿಯೇ ಜಾಗತ್ತಿಕ ಯುದ್ಧ ಕಾರಣ

ಅಮೇರಿಕನ್ ಲೇಕಖರ ಗಾಂಧೀಶ್ಲಾಘನೆ

"ಮೊದಲನೆ ಜಾಗತ್ತಿಕ ಯುದ್ಧವು ಮುಗಿದಾಗ ಜನರು ಎರಡನೇ ಜಾಗತ್ತಿಕ ಯುದ್ಧದ ಕುರಿತು ಮಾತನಾಡಹತ್ತಿದರು. ಈಗ ಎರಡನೇದು ಮುಗಿದಿರುವಾಗ ಜನರು ಮೂರನೆಯುದರ ಕುರಿತು ಮಾತನಾಡುತ್ತಿರುವರು."

ಹೀಗೆಂದು ಪ್ರತಿಭಾವಂತ ಅಮೇರಿಕನ್ ಲೇಖಕರಾದ ಲೂಯಿಫಿಶರರು ಒಂದು ವಿಶೇಷ ಲೇಖನದಲ್ಲಿ ಬರೆಯುತ್ತಾರೆ. ಇದಕ್ಕೆ ಅವರು ಹೀಗೆ ಕಾರಣ ಕೊಡುತ್ತಾರೆ:

"ಶಾಂತಿಯ ಅನಿಶ್ಚಿತತೆ ಮತ್ತು ಮಾನವ ನಿರ್ಮಿತ ಬಡತನದ ದುರ್ದಶೆಗಳೆರಡು ನಮ್ಮ ಜೀವನದ ಮುಖ್ಯ ಸಂಗತಿಗಳು. ಕಳೆದ ಶತಮಾನದಿಂದ ಮಾನವನು ಅಮೋಘ ಪ್ರಗತಿಯನ್ನೆಯ್ದಿದ್ದಾನೆ. ಆದರೆ ಆ ಪ್ರಗತಿ ಶಾಂತಿರಹಿತವಾದುದು. ಮಾನವನ ಆವಶ್ಯಕತೆಗಳೂ ಸಮೃದ್ಧಿಯಾಗಿ ಅವನಿಗೆ ಪೂರೈಸಲ್ಪಡುವುದಿಲ್ಲ. ಇದರಿಂದ ಅವನಿಗೆ ಭದ್ರತೆ ಇಲ್ಲದಾಯಿತು. ಸ್ತ್ರೀಪುರುಷರಿಂದೊಡಗೂಡಿದ ಇಡೀ ಜಗತ್ತು ಯೋಗ್ಯ ಭದ್ರತೆ ಇಲ್ಲದೆ ಕಂಗಾಲಾಯಿತು."

"ಭದ್ರತೆಯನ್ನುಹೊಂದಬಯಸುವ ಪ್ರತಿಯೊಬ್ಬ ವ್ಯಕ್ತಿ ಸತ್ಯನಿಷ್ಠೆಯನ್ನ ಮರೆಯುತ್ತಾನೆ. ಇವನು ಭದ್ರತೆಯಿಲ್ಲದ ಅಸಂಖ್ಯಾತ ಇತರರನ್ನು ಗಣಿಸುವುದಿಲ್ಲ. ಭದ್ರತೆಯಿಲ್ಲದವರಾದರೊ ತಮ್ಮ ಶರೀರ ಮತ್ತು ಮನಸ್ಸುಗಳನ್ನು ಇತರರ ಸರ್ವಾಧಿಕಾರಕ್ಕೆ ಒಪ್ಪಿಸುವ ಒತ್ತಾಯದ ಪ್ರಸಂಗಕ್ಕೆ ತುತ್ತಾಗುತ್ತಾರೆ. ಅಭದ್ರತೆಯು ನಿರಂಕುಶತ್ವ ಸತ್ತೆಯನ್ನ ಪೋಷಿಸುತ್ತದೆ.

ಅನೈತಿಕ ಬಿಕ್ಕಟ್ಟು

ನಮ್ಮ ದುರ್ದಶೆಗೆ ಅನೈತಿಕತೆಯೇ ಕಾರಣವೆಂದು ತಿಳಿಸುತ್ತಾ ಫಿಶರರು ಹೀಗೆನ್ನುತ್ತಾರೆ:

"ಭದ್ರತೆಯನ್ನು ಹುಡುಕುವ ಹುಮ್ಮಸ್ಸಿನಲ್ಲಿ ಜನರು ನೀತಿ ಮಾರ್ಗಕ್ಕೆ ತಿಲಾಂಜಲಿಯನ್ನೀಯುವರು. ಇದರಿಂದಲೇ ಇಂದಿನ ಘೋರ ವಿಶ್ವ ಬಿಕ್ಕಟ್ಟುಂಟಾಗಿದೆ. ನಾಗರೀಕ ಹಕ್ಕುಬಾಧ್ಯತೆಗಳನ್ನು ಕಿತ್ತುಹಾಕಿ ಜನರನ್ನು ತುರಂಗದಲ್ಲಿ ತೂರಿ ಮುಸ್ಸೋಲಿನಿಯು ತನ್ನ ದೇಶಗಳಲ್ಲಿ ರೈಲುಗಳನ್ನು ಕ್ಲುಪ್ತ ಕಾಲದಲ್ಲಿ ಓಡಿಸುವ ಏರ್ಪಾಡು ಮಾಡಿದರಿಂದ ಏನು ಪ್ರಯೋಜನ? ಹಿಟ್ಲರನು ಜರ್ಮನ್ ತಾಯಂದಿರಿಗೆ ಸಹಾಯವನ್ನೂ, ಮಕ್ಕಳಿಗೆ ವಿಮಾ ಭದ್ರತೆಯನ್ನೂ, ಕೊಟ್ಟನು; ಜರ್ಮನ್ ಕೆಲಸಗಾರರಿಗೆ ಉದ್ಯೋಗ ಕೊಟ್ಟನು. ಆದರೆ ಅದೇ ಹಿಟ್ಲರನು ಒಂದು ಜನಾಂಗವನ್ನು ಗುಲಾಮಗಿರಿಯಲ್ಲಿ ದೊಬ್ಬಿ ಜಗತ್ತನ್ನು ರಕ್ತದಲ್ಲಿ ಮುಣುಕಿಸಿದುದನ್ನು ಯಾರು ಗಮನಿಸಿದ್ದಾರೆ?

"ಭದ್ರತೆಗಾಗಿ ಮಾಡಲ್ಪಡುವ ಈ ಯತ್ನಗಳು ಆ ಭದ್ರತೆಯನ್ನೆ ನಾಶ ಮಾಡುವುದು ಈ ಸಂಗತಿಗಳ ವೈಚಿತ್ರ. ಭದ್ರತೆಗಳನ್ನು ಅರಸುವ ಜನಾಂಗಗಳು ಅದನ್ನೆಂದಿಗೂ ಹೊಂದರು. ಅವರಿಗೆ ಸಿಕ್ಕುವ ಒಂದಿಷ್ಟು ಭದ್ರತೆಯು ಇತರ ಚಿಕ್ಕ ಜನಾಂಗಗಳ ಗೋಳಿನದು. ಚಿಕ್ಕ ಚಿಕ್ಕ ಜನಾಂಗಗಳು ಈ ಭದ್ರತಾ ಮಂಡಳದ ಪ್ರಭಾವಕ್ಕೊಳಗಾಗುವಾಗ ಶೀಘ್ರದಲ್ಲಿ ಇವು ಇನ್ನೊಂದು ಸಮಾನ ಭದ್ರತಾ ಮಂಡಳವೊಂದರೊಡನೆ ಘರ್ಷಿಸುವಾಗಲೀ ಜಾಗತ್ತಿಕ ಯುದ್ಧವಾರಂಭವಾಗುತ್ತದೆ.

"ಅದೇ ರೀತಿ ಜನರು ಸಂಪತ್ತನ್ನು ಗಳಿಸಲೋಸುಗ ನೀತಿಯನ್ನು ಬಿಟ್ಟು ಬಿಡುವರು. ಆದರೆ ಇದು ಸುಖಶಾಂತಿಯ ಮಾರ್ಗವಲ್ಲ.

ಅಜ್ಞಾನದ ಫಲ

"ಆದ್ದುದರಿಂದ ನಮ್ಮ ಕಾಲದ ಬಿಕ್ಕಟ್ಟು ನೀತಿಸಂಬಂಧವಾದುದು. ಅಧರ್ಮವನ್ನು ಎದುರಿಸಲು ಅಸಮರ್ಥವಾದ ಅನೈತಿಕ ಜಗತ್ತಿನಲ್ಲಿಂದು ನಾವು ವಾಸಿಸುತಿದ್ದೇವೆ. ರಾಜಕೀಯ ಮುತ್ಸದ್ಧಿಗಳ ಅಪಯಶಸ್ಸಿಗೆ ಇದೇ ಮುಖ್ಯ ಕಾರಣವಾಗಿದೆ.

"ರಶ್ಯದ ಝಾರನ ಅನಾಚಾರಗಳೂ, ಯೆಹೂದಿ ವಿರೋಧ ಅನ್ಯಾಯಗಳೂ ನಮ್ಮಲ್ಲಿ ರೋಷವೆಬ್ಬಿಸಿದುವು. ಆದರೆ ಲಕ್ಷಾಂತರ ಜನರು ಸರ್ವಾಧಿಕಾರಿಗಳ ತುರಂಗ ಶಿಬಿರಗಳಲ್ಲಿ ಕೊಳೆಯುವಾಗಲೂ ಬಂಗಾಲ ಕ್ಷಾಮದಂಥ ಮಾನವ ನಿರ್ಮಿತ ದುರಂತದಲ್ಲಿ ಮಿಲಿಯಾವಧಿಗಳು ದಹಿಸಲ್ಪಟ್ಟಾಗಲೂ ನಾವು ಸುಮ್ಮನಿದ್ದೆವು. ಈಗಲೂ ಚೀನಾ, ಭಾರತ, ಮತ್ತು ಯುರೋಪುಗಳಲ್ಲಿ ಮಿಲಿಯಾವಧಿ ಜನರು ಉಪವಾಸಕ್ಕೊಳಗಾಗಿರುವುದು ನಮ್ಮಲ್ಲಿ ಪ್ರತಿಕ್ರಿಯೆಯುಂಟುಮಾಡುತ್ತಿಲ್ಲ. ಎಲ್ಲೆಲ್ಲೂ ವರ್ಣವೈಷಮ್ಯವು ತಲೆಯೆತ್ತುತ್ತಿರುವುದರ ಕಡೆಗೆ ನಾವು ಕಣ್ಣು ಮುಚ್ಚಿರುತ್ತೇವೆ. ಜಗತ್ತಿನ ಬೇರೆ ಬೇರೆ ದೇಶಗಳಲ್ಲಿ ಫ್ರೆಂಕೊ, ಸಲಾಜರ್, ಪೆರನ್ ಮೊದಲಾದ ಚಿಕ್ಕ ಸರ್ವಾಧಿಕಾರಿಗಳು ಜನತೆಯ ಹಕ್ಕುಬಾಧ್ಯತೆಗಳನ್ನು ತುಳಿಯುತ್ತಿರುವಾಗಲೂ ನಾವು ಚೇತನಗೊಳ್ಳುತ್ತಿಲ್ಲ.

"ಹೀಗೆ ಆಧುನಿಕ ಮಾನವನು ಅಜ್ಞಾನವನ್ನೂ, ಅಲಕ್ಷತನವನ್ನೂ, ಅನಭಿರುಚಿಯನ್ನು ಪ್ರೀತಿಸುತ್ತಾನೆ. ಅವನು ತನ್ನ ಸ್ವಂತ ಜೀವನದಲ್ಲಿ ಲೋಲನಾಗಿದ್ದಾನೆ. ಸ್ವಾರ್ಥಸಾಧನೆಯು ಅವನ ಒಂದೇ ಒಂದು ಉದ್ದೇಶವಾಗಿದೆ. ಅದರ ಹೊರಗೆ ತಪ್ಪಿಂದ ಏನೂ ಮಾಡಲು ಸಾಧ್ಯವಿಲ್ಲೆಂದು ಅವನ ಭಾವನೆಯಾಗಿದೆ. ಯುದ್ಧಕಾಲದ ಶ್ರೀಮಂತನು ಸಮಾಜದಲ್ಲಿ ಒಂದು ಸ್ಥಾನ ಗಳಿಸಲು ಪ್ರಯತ್ನಿಸುತ್ತಾನೆ. ಆದರೆ ಅವನ 'ಕಪ್ಪು' ಕಾರ್ಯವು ಅವನ ಹೃದಯವನ್ನು ಚುಚ್ಚುತ್ತದೆ. ಆದುರಿಂದಲೇ ಅವರು ರಾಜಕೀಯದಲ್ಲಿ ಮನಃಪೂರ್ವಕವಾಗಿ ಅವರು ಭಾಗವಹಿಸಲು ಇಚ್ಛೆಪಡುವುದಿಲ್ಲ. ಜನತೆಯ ಸಂಕಷ್ಟ ನಿವಾರಣೆಯ ಕಡೆಗೂ ಅವನು ಗಮನಿಸುವುದಿಲ್ಲ.

ಪರಿಹಾರೋಪಾಯ

"ಜಗತ್ತಿನಲ್ಲಿ ಒಂದೇ ಒಂದು ವ್ಯಕ್ತಿ ಗುಲಾಮಗಿರಿಯಲ್ಲೂ, ಸಂಕಷ್ಟದಲ್ಲೂ ಮತ್ತು ಅಭದ್ರತೆಯಲ್ಲೂ ಇರುವ ತನಕ ಯಾವ ಜನಾಂಗವೂ ಸ್ವತಂತ್ರವೆನಿಸಿಕೊಳ್ಳದು. ಇದನ್ನು ತಿಳಕೊಂಡರೆ ಜಗತ್ತಿನ ದುರ್ದಶೆಯನ್ನು ಪರಿಹರಿಸಲು ಒಂದು ದಾರಿ ಕಾಣುವುದು. ಸ್ವಾರ್ಥವು ತನ್ನನ್ನು ತಾನೇ ಸೋಲಿಸುವುದು. ಲಾಭ ಹೊಂದಬೇಕಾದರೆ ನಾವು ಇತರರನ್ನು ರಕ್ಷಿಸಬೇಕು. ಉನ್ನತ ಧ್ಯೇಯವನ್ನಿಟ್ಟುಕೊಳ್ಳುವುದು ಉತ್ತಮ ಸತ್ಯ ಶೋಧನೆ.

"ಮನುಷ್ಯನ ನೀತಿ ವರ್ತನೆಯು ಮಹತ್ವದ ವಿಷಯ. ಅದಿಲ್ಲದಿದ್ದರೆ ನಮ್ಮ ಪರಿಷತ್ತುಗಳೂ, ಠರಾವುಗಳೂ, ಒಪ್ಪಂದ ಕರಾರುಗಳೂ, ವ್ಯಾಪಾರಿ ಸವಲತ್ತುಗಳೂ, ರಾಜಕೀಯ ಪಕ್ಷಗಳು, ಮತ್ತು ವೋಟುಗಳು ವ್ಯರ್ಥವೇ ಸರಿ. **ನೀತಿಸೂತ್ರಗಳನ್ನನುಸರಿಸುವಲ್ಲಿ ಒಂದು ತರದ ಶಕ್ತಿ ಸುವಿಚಾರವಿದೆ."**

ಕೊನೆಯಲ್ಲಿ ಲೂಯಿಫಿಶರರು ಮಹಾತ್ಮಾ ಗಾಂಧಿಯವರ ತತ್ವಗಳಿಗೆ ಕೃತಜ್ಞಪೂರ್ವಕ ಮನ್ನಣೆ ಸಲ್ಲಿಸುತ್ತಾ, ಹೀಗೆ ಮುಗಿಸುತ್ತಾರೆ;

"ಮಾನವಕೋಟಿಯ ರಾಜಕೀಯವು ನೀತಿಸೂತ್ರದೊಂದಿಗೆ ಪೋಣಿಸಲ್ಪಟ್ಟಿರಬೇಕಾದುದು ಅತ್ಯಾವಶ್ಯಕ. ಇದು ತನಕ ಇವೆರಡು ವಿಷಯಗಳು ಪರಸ್ಪರ ವಿರೋಧವಾಗಿದ್ದ ಶತ್ರುಗಳಂತಿವೆ. **ಮಹಾತ್ಮಾ ಗಾಂಧಿಯವರದು ರಾಜಕೀಯ ಮುತ್ಸದ್ದಿತನವನ್ನು ನೀತಿ ನಿಯಮದೊಡನೆ ಸಂಯೋಗಿಸಿದ ಉನ್ನತ ಆದರ್ಶ. ಅವರ ಗುರಿಯೂ ಅದನ್ನು ಹೊಂದುವ ರೀತಿಯೂ ವಿವೇಕಪರವಾದುದು. ಅದೇ ಪ್ರಜಾಪ್ರಭುತ್ವದ ತಿರುಳು.**

"ನೀತಿರಹಿತವಾದ ಮಾರ್ಗಗಳಿಂದ ಗುರಿ ಮುಟ್ಟುವುದು ಪ್ರಜಾಪ್ರಭುತ್ವ ವಿರೋಧವಾದುದು. ಪ್ರಜಾಪ್ರಭುತ್ವವನ್ನು ಈ ಗಂಡಾಂತರದಿಂದ ತಪ್ಪಿಸುವುದು ದೊಡ್ಡದೊಂದು ನೈತಿಕ ಹೊಣೆಗಾರಿಕೆ, ವ್ಯಕ್ತಿಗಳಿಂದ ಇದು ಪ್ರಾರಂಭಿಸಲ್ಪಡಬೇಕು. ಶಾಂತಿ ಮತ್ತು ಪ್ರಜಾಪ್ರಭುತ್ವಗಳು ಮಾನವನ ಹೃದಯಾಂತರಾಳದಿಂದ ಉದ್ಭವಿಸಬೇಕು."

ಬಾವುಗಳನ್ನು ಕೂಡಲೇ ಗುಣಪಡಿಸಿರಿ.

ನೋವನ್ನು ಉಂಟುಮಾಡುವ ವಿಷಕಾರಿ ಬಾವುಗಳು ಈ ರೀತಿ ಗುಣವಾಗುತ್ತವೆ. ಅವನ್ನು ಆಗಾಗ ನೀರಿನಿಂದ ಕುಟಿಕೂರಾ ಸೋಪು ಹಾಕಿ ತೊಳೆಯಿರಿ; ಅದರ ಮೇಲೆ ಕುಟಿಕೂರಾ ಮುಲಾಮು ಹಚ್ಚಿರಿ.

ಕುಟಿಕೂರಾ ಮುಲಾಮು

CUTICURA OINTMENT

ESTD. 1906.

CANARA BANK, LIMITED.

(Incorporated in British India with Limited Liability)

(PROGRESS STATEMENT CORRECT TO THOUSANDS OF RUPEES)

LIABILITIES	1945	1946	ASSETS	1945	1946
Capital Subscribed	20,00,000	20,00,000	Cash	1,01,91,000	1,10,16,000
Capital paid up	28,43,000	28,80,000	Govt. Securities	1,80,45,000	2,75,61,000
Reserves	11,00,000	11,00,000	Advances to customers	1,56,87,000	2,01,33,000
Deposits	3,50,43,000	4,60,40,000	Bills for collection and Foreign Bills negotiated	20,56,000	34,23,000
Due to Bankers	26,01,000	69,57,000	Landed Properties	28,000	5,000
Call Deposits from Bankers	8,00,000	15,00,000	Bank Premises and Furniture and Fixtures	1,46,000	1,47,000
Branch Adjustments	22,07,000	21,09,000	Other Assets	10,25,000	16,23,000
Bills for collection and foreign bills negotiated	20,56,000	34,23,000			
Other Liabilities	77,000	85,000			
Profit for the year	3,61,000	4,19,000			
Rs.	4,71,78,000	6,45,13,000	Rs.	4,71,78,000	6,45,13,000

ಮಂಗಳೂರಿನ ಆಢ್ಯ ಮಹನೀಯರೊಬ್ಬರು ಸನ್ಮಾನಿಸಲ್ಪಟ್ಟರು

ಕೆನರಾ ಬೇಂಕ್ ಹೆಡ್ ಆಫೀಸಿನ ವಠಾರದಲ್ಲಿ ಮಂಗಳೂರಿನ ಲೋರ್ಡ್ ಬಿಶಪರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ನಡೆದ ಶ್ರೀಮಾನ್ ಅಮ್ಮೆಂಬಳ ಶ್ರೀನಿವಾಸ ಪೈಯವರ ಭಾವಚಿತ್ರ ಅನಾವರಣ ಸಮಾರಂಭ.

... ತಾ 17ರಂದು ... ಕೆನರಾ ಬೇಂಕಿನ ಹೆಡ್ ಆಫೀಸಿನ ವಠಾರ ದಲ್ಲಿ ಶ್ರೀಮಾನ್ ಅಮ್ಮೆಂಬಳ ಶ್ರೀನಿವಾಸ ಪೈ, ಬಿ. ಎ. ಬಿ. ಎಲ್. ಅವರನ್ನು ಸನ್ಮಾನಿಸಲೋಸುಗ ಮಂಗಳೂರಿನ ನಾಗರೀಕರ ಮಹಾಸಭೆಯೊಂದು ನೆರೆದಿತ್ತು. ಇದೇ ಸಂದರ್ಭದಲ್ಲಿ ಮಂಗಳೂರಿನ ಸ್ಥಾನ ಹೊಂದಿದ ಬಿಶಪರಾದ ರೈಟ್ ರೆವೆರೆಂಡ್ ಡಾ| ವಿ. ಅರ್. ಫೆರ್ನಾಂಡಿಸ್ ಅವರು ಶ್ರೀಮಾನ ಪೈ ಅವರ ಭಾವಚಿತ್ರ ಅನಾವರಣ ಸಮಾರಂಭವನ್ನು ನೆರವೇರಿಸಿದಾಗ ಅಂದಿನ ಮಾನ್ಯ ಅತಿಥಿಗಳಿಗೆ ಯೋಗ್ಯ ಪುರಸ್ಕಾರ ಶ್ಲಾಘನೆಗಳೂ ಸಲ್ಲಿಸಲ್ಪಟ್ಟವು. 1906ರಲ್ಲಿ ಬೇಂಕಿನ ಪ್ರಾರಂಭದಿಂದ 1942ರಲ್ಲಿ ನಿವೃತ್ತರಾಗುವ ತನಕ ಬೇಂಕಿನ ಡ್ಯಾರೆಕ್ಟರರಾಗಿದ್ದ ಶ್ರೀಮಾನ್ ಪೈ ಅವರನ್ನು ಸನ್ಮಾನಿಸಲೋಸುಗ ಬೇಂಕಿನ ಡ್ಯಾರೆಕ್ಟರ್ ಮಂಡಳಿಯವರು ಈ ಸಮಾರಂಭವನ್ನು ಏರ್ಪಡಿಸಿದ್ದರು. ಶ್ರೀಮಾನ್ ಪೈ ಅವರು 1918ರಿಂದ ಅವರ ನಿವೃತ್ತಿಯ ತನಕ ಬೇಂಕಿನ ಡ್ಯಾರೆಕ್ಟರ್ ಮಂಡಳಿಯ ಅಧ್ಯಕ್ಷರೂ ಆಗಿದ್ದರು. ನಾಗರೀಕ ಜೀವನದ ಎಲ್ಲಾ ಕ್ಷೇತ್ರಗಳಿಂದಲೂ ಮಹನೀಯರು ಆಮಂತ್ರಿತರಾಗಿದ್ದರು. ಪೂಜ್ಯ ಬಿಶಪರನ್ನು ಅಧ್ಯಕ್ಷರನ್ನಾಗಿ ಚುನಾಯಿಸಿದ ನಂತರ ಅಂದಿನ ಸಮಾರಂಭವು ಡ್ಯಾರೆಕ್ಟರ್ ಮಂಡಳಿಯ ಪರವಾಗಿ ಶ್ರೀಮಾನ್ ಎಚ್ ಲಕ್ಷ್ಮೀನಾರಾಯಣ ಕಾಮತರು ಇತ್ತ ಸ್ವಾಗತ ಭಾಷಣದಿಂದಾರಂಭವಾಯಿತು. ಆ ಭಾಷಣದಲ್ಲಿ ಶ್ರೀ ಕಾಮತರು ಹೀಗೆಂದರು:

"ಘನ ಪ್ರಭುಗಳೆ, ಶ್ರೀಮಾನ್ ಶ್ರೀನಿವಾಸ್ ಪೈಯವರೆ, ಸಭ್ಯ ಮಹಿಳೆಯರೆ ಮತ್ತು ಸದ್ಗೃಹಸ್ಥರೆ,

ಸ್ವಾಗತದ ಆನಂದದಾಯಕ ಕರ್ತವ್ಯ ನನ್ನ ಪಾಲಿಗೆ ಬಿದ್ದಿದೆ. ಶೀಘ್ರ ಅವಧಿಯುಳ್ಳ ಆಮಂತ್ರಣ ಮನ್ನಿಸಿದ ತಮಗೆ ತುಂಬಾ ಆಭಾರಿಯಾಗಿದ್ದೇವೆ. ಈ ಸಮಾರಂಭದ ಅಧ್ಯಕ್ಷತೆ ವಹಿಸಲು ಕರುಣೆಯಿಂದ ತಕ್ಷಣವೇ ಒಪ್ಪಿದ ಪ್ರಭುವರ್ಯರಾದ ತಮಗೆ ನಾವು ಚಿರಋಣಿಗಳು. ಇಂದಿಲ್ಲಿ ಹಾಜರಿರಲು ಒಪ್ಪಿದ ನಮ್ಮ ಮಾಜಿ ಅಧ್ಯಕ್ಷ ಶ್ರೀಮಾನ್ ಶ್ರೀನಿವಾಸ ಪೈ ಅವರಿಗೂ ನಾವು ತುಂಬಾ ಕೃತಜ್ಞರಿರುತ್ತೇವೆ. ಇಂದಿನ ಸನ್ಮಾನ್ಯ ಅತಿಥಿ ಶ್ರೀಮಾನ್ ಪೈ ಅವರ ಜೀವನ ಚರಿತ್ರೆಯು ಹೆಚ್ಚು ಕಡಿಮೆ 1906ರಲ್ಲಿ ಸ್ಥಾಪಿಸಲ್ಪಟ್ಟ ಈ ಬೇಂಕಿನ ಇತಿಹಾಸವೇ ಆಗಿದೆನ್ನಬಹುದು. ಅವರು ಬೇಂಕಿನ ಮೊದಲ ಡೈರೆಕ್ಟರರೂ 1918ರಿಂದ 1942ರಲ್ಲಿ ನಿವೃತ್ತರಾಗುವ ತನಕ ಅದರ ಅಧ್ಯಕ್ಷರೂ ಆಗಿದ್ದರು. ಆ ಅವಧಿಯಲ್ಲಿನ ಬೇಂಕಿನ ಅಭಿವೃದ್ಧಿ ಸಂಪೂರ್ಣ ಅವರ ಹೃತ್ಪೂರ್ವಕ ಶ್ರಮದ ಫಲವೇ ಆಗಿದೆ. 1942ರ ನಂತರ ಬೇಂಕಿನ ಅಮೋಘ ಪ್ರಗತಿಯಾದರೂ ಮೊದಲ ಅವಧಿಯಲ್ಲಿ ಅವರು ಈ ಸಂಸ್ಥೆಯ ಆರೋಗ್ಯವಂತ ಸುದೃಢ ಬೆಳವಣಿಗೆಗೆ ವಹಿಸಿದ ಮಾತೃಸಮಾನ ಆರೈಕೆಯ ಪರಿಣಾಮವೇ ಆಗಿದೆ. ಎಲ್ಲಾ ತರದ ಅಭಿಪ್ರಾಯಗಳಿಗೂ ಮನ್ನಣೆ ಕೊಟ್ಟು ಸ್ನೇಹಾದಾರಗಳಿಂದಲೂ ಸಹಾನುಭೂತಿಯಿಂದಲೂ ನಮ್ಮ ವ್ಯವಹಾರಗಳನ್ನು ನಿರ್ವಹಿಸಿದ ಅವರಿಗೆ ನಾವು ಕೃತಜ್ಞರಿರುತ್ತೇವೆ. ಡ್ಯಾರೆಕ್ಟರ್ ಮಂಡಳಿಯ ಅನುಕ್ರಮದ ಸಭಾಕಾರ್ಯಕಲಾಪಗಳನ್ನು ಅವರು ತಮ್ಮ ಸುರಸ ವಿನೋದ ಮಾನವೀಕತೆಯ ಮಾತುಗಳಿಂದ ಘುಂಟುಮಾಡುತ್ತಿದ್ದ ಹರ್ಷ ವಾತಾವರಣವನ್ನೆಂದಿಗೂ ನಾವು ಮರೆಯಲಾರೆವು.

ಬೇಂಕಿನ ಜನಪ್ರಿಯತೆ, ಪ್ರಗತಿಗಳಲ್ಲಿ ಅವರ ವಿವೇಕ ನಿರ್ದೇಶವು ಪ್ರತಿಬಿಂಬಿತವಾಗುತ್ತದೆ. ಪ್ರತಿ ವರ್ಷ ಅವರೇ ಅಧ್ಯಕ್ಷರಾಗಿ ಸರ್ವಾನುಮತದಿಂದ ಚುನಾವಣೆ ಹೊಂದಿದುದರಿಂದ ಅವರ ಅಮೂಲ್ಯ ಅನುಭವವು 1914ರ ನಂತರದ ಕಳವಳಾಸ್ಪದ ಕಾಲದಲ್ಲಿ ಬೇಂಕಿಗೆ ದೊರೆತಂತಾಯಿತು. ಬೇಂಕಿನ ನೌಕೆ ಬಿರುಸು ಬಿರುಗಾಳಿಯಿಂದ ಹಾದುಹೋಗುವಾಗ ಇವರು ಧ್ರುವ ತಾರೆಯಂತೆ ಮಾರ್ಗದರ್ಶಕರಾದರು. ಬೇಂಕಿನಂತಹ ಸಂಸ್ಥೆಯ ಖ್ಯಾತಿ ಸ್ಥಿರತೆಗಳಿಗೆ ಇವು ಅತ್ಯಾವಶ್ಯಕ

ಶ್ರೀಮಾನ್ ಅಮ್ಮೆಂಬಳ ಶ್ರೀನಿವಾಸ ಪೈಯವರು.

ಬೇಂಕಿಗೂ ಮತ್ತು ಶ್ರೀಮಾನ್ ಪೈ ಅವರಿಗೂ ಆಶೀರ್ವಾದಗಳನ್ನೀಯಲು ಕಳೆದ ಶನಿವಾರ ಇಲ್ಲಿಗೆ ಚಿತ್ತೈಸಿದ ಶ್ರೀ ಕಾಶೀ ಮಠದ ಸುಪವಿತ್ರ ಶ್ರೀಮದ್ ಸುಕೃತೀಂದ್ರ ಮತ್ತು ಶ್ರೀಮದ್ ಸುಧೀಂದ್ರ ತೀರ್ಥ ಸ್ವಾಮಿಜಿಯವರಿಗೂ ನಾವು ಕೃತಜ್ಞತೆ ಸೂಚಿಸುತ್ತೇವೆ. ಈ ಸಮಾರಂಭಕ್ಕೆ ತಮ್ಮ ಪ್ರತಿನಿಧಿಗಳ (ಶ್ರೀ ಗಿರಿರಾಯ ಆಚಾರ್ಯರ) ಮೂಲಕ ಆಶೀರ್ವಾದದ ಸಂದೇಶವನ್ನು ಕಳುಹಿಸಿದ ಪರ್ತಗಾಳಿ ಸಂಸ್ಥಾನಾಧೀಶ್ವರರಾದ ಸುಪವಿತ್ರ ಶ್ರೀಮದ್ ದ್ವಾರಕನಾಥ ಶ್ರೀಪಾದಂಗಳವರಿಗೂ ಬೇಂಕಿನ ಪರವಾಗಿ ಕೃತಜ್ಞತೆ ಸಲ್ಲಿಸುತ್ತೇನೆ."

ಸ್ವಾಗತ ಭಾಷಣಾನಂತರ ಸಂದೇಶ ವಾಚನವಾಯಿತು. ಪರ್ತಗಾಳಿ ಮಠಾಧಿಪರ ಘನ ಸಂದೇಶವು ಹೀಗಿದೆ.

"ನಮ್ಮ ಅತ್ಯಂತ ಪ್ರಿಯ ಶಿಷ್ಯ ಅಮ್ಮೆಂಬಳ ಶ್ರೀನಿವಾಸ ನಾರಾಯಣ ಪೈ ಅವರಿಗೆ, ಶ್ರೀಮನ್ನಾರಾಯಣ ದೇವರ ಪರವಾಗಿ ಆಶೀರ್ವಾದಗಳು.

ಶ್ರೀ ಸನ್ನಿಧಿಯ ಕೃಪೆಯಿಂದ ಸುಕ್ಷೇಮ ನಿಮ್ಮ ಕ್ಷೇಮದ ಕುರಿತು ತಿಳಿಸುವುದು

ಕನರಾ ಬೇಂಕಿನವರು ನಿಮ್ಮ ಸನ್ಮಾನಾರ್ಥವಾಗಿ ಏರ್ಪಡಿಸಿದ ಸಮಾರಂಭದ ಸುದ್ದಿ ಕೇಳಿ ಹರ್ಷಿತರಾಗಿದ್ದೇವೆ.

ಬೇಂಕಿನ ಸ್ಥಾಪಕರೂ ಸಮಾಜೋದ್ಧಾರಕರೂ ಆದ ನಿಮ್ಮ ಪಿತಾಸುಜ ದಿ। ಅಮ್ಮೆಂಬಳ ಸುಬ್ರಾಯ ಪೈ ಅವರ ನಂತರ ಬೇಂಕಿನ ಕಾರ್ಯಭಾರ ನಿರ್ವಹಣೆ ನಿಮ್ಮ ವಿವೇಕಪರವೂ, ಚೈತನ್ಯದಾಯಕವೂ ಆದ ಕೈಯಿಂದಾಗ ಶ್ರದ್ಧಾಪೂರ್ವಕವಾದ ನಿಮ್ಮ ಸೇವೆಯಿಂದ ಉನ್ನತ ವ್ಯವಹಾರ ಸಾಂಪದಾಯವು ಸುಪ್ರಗತಿಗೊಯ್ಯಿತು. ... ಸವ ಜೀರ್ಣೋದ್ಧಾರವೂ ... ಇದ ... ನಿರ್ಮಿಸ ಲೌಕಿಕ ಆಧ್ಯಾತ್ಮಿಕ ಶ್ರೀಮಂತಿಕೆ ... ಸಮಾಜೋದ್ಧಾರ, ಮತ್ತು ಸ್ವಧರ್ಮೋನ್ನತಿ ಮಾಡುವ ಧ್ಯೇಯವುಳ್ಳವರಾದ ನಿಮಗೆ ನಮ್ಮ ಸಂಸ್ಥಾನದ ಮತ್ತಿತರ ಹಲವು ಸಂಸ್ಥೆಗಳ ಸೇವೆ ಮಾಡಲನುವಾಯಿತು. ಇವರಿಂದ ಸಮಾಜದ ಕೃತಜ್ಞತೆ ಮನ್ನಣೆಗಳು ನಿಮಗೆ ದೊರಕಿವೆ. ಧರ್ಮ ಮತ್ತು ಸಮಾಜ ಕ್ಷೇತ್ರಗಳಲ್ಲಿ ಸೇವೆ ಮಾಡಿದವರು ವಿರಳರು.

ಈ ಸಂತೋಷ ಸಮಾರಂಭಕ್ಕೆ ನಮ್ಮ ಆಶೀರ್ವಚನದೊಡನೆ ನಮ್ಮ ಪರಮ ಗುರುವರ್ಯರು ಧರಿಸಿದ ಶಾಲನ್ನು ನಮ್ಮ ಭಾವಚಿತ್ರ ಮಂತ್ರ ಗಂಧಾಕ್ಷತೆಯನ್ನು ಕಳುಹಿಸುತ್ತೇವೆ.

ನಿಮ್ಮ ಸೇವೆಯಿಂದಭಿವೃದ್ಧಿಗೊಂಡ ಕೆನರಾ ಬೇಂಕು ಉತ್ತರೋತ್ತರ ಅಭಿವೃದ್ಧಿ ಹೊಂದಿ ವ್ಯಾಪಿಸಲೆಂದೂ, ಆಶೀರ್ವದಿಸುತ್ತೇವೆ.

ಶ್ರೀರಾಮದೇವ ವೀರ ವಿಠಲರು ನಿಮಗೆ ದೀರ್ಘ ಹರ್ಷಾಭಿವೃದ್ಧಿ ಕೊಡಲೆಂದು ನಮ್ಮ ನಿರಂತರ ಪ್ರಾರ್ಥನೆ. ಇತಿ ಆಶೀರ್ವಾದ."

ಇದೇ ರೀತಿ ತಾ. 15ರಂದು ತಮ್ಮ ಶಿಷ್ಯರೊಂದಿಗೆ ಬೇಂಕಿಗೆ ಚಿತ್ತೈಸಿ ತಮ್ಮ ಘನ ಆಶೀರ್ವಚನಗಳಿಂದ ಬೇಂಕನ್ನೂ, ಶ್ರೀಮಾನ್ ಪೈ ಅವರನ್ನೂ ಶ್ರೀ ಕಾಶಿ ಮಠದ ಶ್ರೀಮದ್ ಸುಕೃತೀಂದ್ರ ಮತ್ತು ಶ್ರೀಮತ್ ಸುಧೀಂದ್ರ ತೀರ್ಥ ಸ್ವಾಮಿಜಿಯವರು ಮನ್ನಿಸಿದರಲ್ಲದೆ ಶ್ರೀಮಾನ್ ಪೈ ಅವರಿಗೆ ಚಿನ್ನದ ಕೈಪಟ್ಟಿಯನ್ನೂ ತಮ್ಮ ಪರಮ ಗುರುವಿನ ಭಾವಚಿತ್ರವನ್ನೂ ಪಾರಿತೋಷಕವಿತ್ತರು.

ಯಶಕೋರಿ ಬಂದ ಅನೇಕ ಸಂದೇಶಗಳಲ್ಲಿ ತಿರುವಾಂಕೂರಿನ ದಿವಾನರಾದ ಸರ್. ಸಿ ಪಿ ರಾಮಸ್ವಾಮಿ ಅಯ್ಯರರದು ಒಂದಾಗಿತ್ತು. ಸಂದೇಶ ವಾಚನಾನಂತರ ಮಾನಪತ್ರ ಅರ್ಪಣೆಯಾಯಿತು.

ಕನರಾ ಬೇಂಕಿನ ಸದಸ್ಯರ ಪರವಾಗಿ ಮಾನಪತ್ರ ಅರ್ಪಿಸುತ್ತ ಶ್ರೀಮಾನ್ ಕೆ. ಪಿ. ಜನಾರ್ಧನ ಪ್ರಭು ಅವರು ಬೇಂಕಿನ ಶ್ರೀಯ ಅಭಿವೃದ್ಧಿಗೆ ಸಹಾಯಕರಾದ ಶ್ರೀಮಾನ್ ಪೈ ಅವರ ಸಂಪರ್ಕದಿಂದ ತಮಗುಂಟಾದ ಗೌರವವನ್ನು ಶ್ಲಾಘಿಸಿದರು.

ಜಿಲ್ಲೆಯ ವಾಣಿಜ್ಯ ವರ್ಗದವರಿಗೆ ಶ್ರೀಮಾನ್ ಪೈ ಅವರ ಮೇಲಿರುವ ವಿಶ್ವಾಸಾಧರಗಳನ್ನು ... ಕೆನರಾ ... ಕಾರ್ಯದರ್ಶಿ ಶ್ರೀ ಮಾಳ್ಕೇಲ್ ಶ್ರೀನಿವಾಸ ನಾಯಕರು ಶ್ರೀ ಪೈ ಅವರ ನ್ಯಾಯತತ್ಪರತೆಯನ್ನು ... ಅಧ್ಯಕ್ಷ ... ವಾಣಿಜ್ಯ ಪ್ರಪಂಚಕ್ಕೆ ಸಲ್ಲಿಸಿದ ... ವನ್ನು ಶ್ಲಾಘಿಸಿದರು.

ಶ್ರೀ ಹಿಂದಿನ ನೂತನದಿನ ಉದ್ಯೋಗಿಗಳ ಪರವಾಗಿತ್ತ ಮಾನಪತ್ರವನ್ನರ್ಪಿಸುತ್ತ ಶ್ರೀ ... ಮುಕುಂದ ಕಿಣಿ ಅವರು ತಮ್ಮ ಮಾಜಿ ಅಧ್ಯಕ್ಷರ ಕ್ಷಮಾ ಶಾಂತಿ ಗುಣಗಳನ್ನು ಸ್ತುತಿಸಿದರು.

ಅನಂತರ ಮಂಗಳೂರಿನ ಬಿಷಪರು ಶ್ರೀಮಾನ್ ಪೈ ಅವರ ಭಾವಚಿತ್ರ ಅನಾವರಣ ನೆರವೇರಿಸಿದರು. ಆ ಸಂದರ್ಭದ ಭಾಷಣದಲ್ಲಿ ಮಾನ್ಯ ಬಿಷಪರು ಶ್ರೀಮಾನ್ ಪೈ ಅವರ ಜೀವನಕತೆಯನ್ನು ತಿಳಿಸಿ ಇತರರೊಂದಿಗೆ ತಮ್ಮ ಶ್ಲಾಘನೆಗಳನ್ನು ಸೇರಿಸಿ ಸಲ್ಲಿಸಿದರು.

ಆ ಮೇಲಿನ ಭಾಷಣಗಾರರಾದ ಶ್ರೀಗಳಾದ ಎ. ಬಿ ಶೆಟ್ಟಿ, ಎಂ ಎಲ್. ಎ, ಎಂ ಕೆ. ನಂಬಿಯಾರ್ ಬಾರ್ ಎಟ್. ಲೊ ಪಬ್ಲಿಕ್ ಪ್ರಾಸಿಕ್ಯೂಟರ್, ರೆವೆರೆಂಡ್ ಫಾದರ್ ಜೋಸ್ ಎ ಬಿ ಕೊಯಿಲೊ, ಎಲೋಸಿಯಸ್ ಕೋಲೇಜಿನ ರೆಕ್ಟರರು ಜಿ. ಸೋಮಶೇಖರ ರಾವ್ ಎಡ್ವೋಕೇಟ್, ಬಿ ವೈಕುಂಠ ಬಾಳಿಗಾ ಎಡ್ವೋಕೇಟ್, ಮುರುಳಿ ಭೀಮರಾವ ಇವರೆಲ್ಲರೂ ಶ್ರೀಮಾನ ಪೈ ಅವರ ಸರಳ ಸ್ನೇಹಾತ್ಮಕ ಗುಣ ವೈಶಿಷ್ಟಗಳನ್ನು ನಿರೂಪಿಸಿದರು. ಕೊನೆಯಲ್ಲಿ ಶ್ರೀ ಕೆ. ಪಿ. ಜನಾರ್ಧನ ಪ್ರಭು ಅವರು ದನ್ಯವಾದ ಸಮರ್ಪಿಸಿದ ನಂತರ ಸಮಾರಂಭ ಕೊನೆಗೊಂಡಿತು.

ಜಿಲ್ಲಾ ಪರಿಚಯ

ಭಾವಚಿತ್ರ ಅನಾವರಣ: ಹಲವು ವರ್ಷ ಕೆನರಾ ಬ್ಯಾಂಕಿನ ಡೈರೆಕ್ಟರ್ ಮಂಡಳದ ಅಧ್ಯಕ್ಷರಾಗಿದ್ದು ಇತ್ತೀಚೆಗೆ ನಿವೃತ್ತರಾದ ಶ್ರೀ ಅಮ್ಮೆಂಬಳ್ ಶ್ರೀನಿವಾಸ ಪೈ, ಬಿ. ಎ. ಬಿ. ಎಲ್. ಇವರ ಭಾವಚಿತ್ರವನ್ನು ಸದ್ರಿ ಬ್ಯಾಂಕಿನ ಬಾವಟೆಗುಡ್ಡದ ಕೇಂದ್ರ ಕಛೇರಿಯಲ್ಲಿ ತಾ 17-8-47ರಂದು ಸೋಮವಾರ ಸಾಯಂಕಾಲ ಮಂಗಳೂರಿನ ಬಿಶಪರಾದ ಮಾನ್ಯ ರೈಟ್ ರೆವರೆಂಡ್ ಡಾ| ವಿ. ಆರ್ ಫೆರ್ನಾಂಡಿಸ್ ಅವರು ಅನಾವರಣ ಮಾಡಿದರು ಬ್ಯಾಂಕಿನ ಸಿಬ್ಬಂದಿಯ ಪರವಾಗಿಯೂ, ಸದಸ್ಯರ ಪರವಾಗಿಯೂ ಮತ್ತು ಸ್ಥಳೀಯ ಕೆನರಾ ಚೇಂಬರ್ ಆಫ್ ಕೊಮರ್ಸಿನ ಪರವಾಗಿಯೂ ಶ್ರೀಮಾನ್ ಪೈ ಅವರಿಗೆ ಮಾನಪತ್ರಗಳನ್ನರ್ಪಿಸಲಾಯಿತು. ಮಾನ್ಯ ಬಿಶೋಪರು ಅನಾವರಣ ಕಾಲದಲ್ಲಿ ಶ್ರೀಮಾನ್ ಪೈ ಅವರ ಗುಣಕಥನ ಮಾಡಿ ಅನೇಕ ಸ್ವಾರಸ್ಯ ಘಟನೆಗಳನ್ನು ತಿಳಿಸಿದರು. ನೆರೆದವರಲ್ಲಿ ಅನೇಕ ಮಹನೀಯರು ಶ್ರೀಯುತರ ಸೇವಾ ಶ್ಲಾಘನೆಯಲ್ಲಿ ಭಾಗವಹಿಸಿದರು

ವಾರ್ಷಿಕ ಸಭೆ: ದ ಕ ಜಿಲ್ಲಾ ಮೂಲ್ಯರ ಯಾನೆ ಕುಲಾಲರ ಶ್ರೀರಾಮಸೇವಾ ಜಾತ್ಯಾಭ್ಯುದಯ ಸಂಘ ಇದರ ವಾರ್ಷಿಕ ಸಭೆ ಮತ್ತು ಮಹಾಧಿವೇಶನಗಳು ಕ್ರಮವಾಗಿ ಶ್ರೀಗಳಾದ ಡಬ್ಲ್ಯು ಕೆ ಒಡೆಯರ್, ಮತ್ತು ಡಾ| ಬಿ ಎನ್ ಎನ್ ಸುವರ್ಣ ಅವರ ಅಧ್ಯಕ್ಷತೆಗಳಲ್ಲಿ ತಾ 30 8 47ರಂದು ಬೆಳಿಗ್ಗೆ 9 ಗಂಟೆಗೂ, ಸಾಯಂ 5 ಗಂಟೆಗೂ ಜಿಲ್ಲಾ ಬೋರ್ಡ್ ಆಫೀಸಿನ ಬಳಿಯ ದೇವಸ್ಥಾನದಲ್ಲಿ ಜರಗುವುದೆಂದು ತಿಳಿದುಬರುತ್ತದೆ

ಪರೀಕ್ಷೆಗಳು ಮುಂದರಿದವು
ಪ್ರಶ್ನೆ ಪತ್ರಿಕೆಗಳ ಮುಂಪ್ರಕಟಣೆ

ತಾ. 17ರಂದು ಪ್ರಾಂತ್ಯದಲ್ಲೆಲ್ಲಾ ಎಸ್ ಎಸ್ ಎಲ್ ಸಿ ಪರೀಕ್ಷೆಯು ಪ್ರಾರಂಭಗಾದಂದಿನಿಂದ ಪ್ರಶ್ನೆಪತ್ರಿಕೆಗಳು ಮುಂದಾಗಿ ಪ್ರಕಟಣೆಗೊಂಡಿರುವುದಾಗಿ ಸುದ್ದಿ ಹರಡಿತ್ತೆಂದು ತಿಳಿದುಬರುತ್ತದೆ ಈ ಕುರಿತು ಮದ್ರಾಸ್ ಶಾಸನ ಸಭೆಯಲ್ಲಿ ಪ್ರಶ್ನೋತ್ತರಗಳು ಕೇಳಲ್ಪಟ್ಟಾಗಲೇ ಇದರ ಸತ್ಯಸ್ಥಿತಿಯು ಸಿದ್ಧವಾಯಿತು ಕೂಡಲೇ ವಿದ್ಯಾಂಗ ಇಲಾಖೆಯವರು ಬುಧವಾರದಿಂದ ಪರೀಕ್ಷೆಗಳನ್ನು ನಿಲ್ಲಿಸಲು ಸ್ಥಳೀಯ ಪರೀಕ್ಷಾ ಕೇಂದ್ರಗಳಿಗೆ ಆಜ್ಞೆಯಿತ್ತರು

ಅದೇ ಸಮಯಕ್ಕೆ ಇಂಟರ್ಮೀಡಿಯೇಟ್ ಪರೀಕ್ಷೆಯ ಕೆಲವು ವಿಷಯ ಭಾಗಗಳ ಪರೀಕ್ಷೆಯನ್ನು ಮುಂದರಿಸಲಾಗಿದೆ ಎಂದು ತಿಳಿಸಲಾಯಿತು.

ಬಿ. ಎಸ್. ಸಿ , ಬಿ ಕೊಮ್, ಪರೀಕ್ಷೆಯ ಕೆಲವು ಪ್ರಶ್ನೆ ಪತ್ರಿಕೆಗಳು ಮುಂದಾಗಿ ಹೊರಬಿದ್ದಿವೆ ಎಂದು ಪ್ರಚಾರವಾದ ಸುದ್ದಿ ಕೊನೆಗೆ ನಿರಾಧಾರವೆಂದು ತಿಳಿಯಿತು

ಈ ತರದ ಘಟನೆಗಳು ಹೇಗೆ ಸಂಭವಿಸಿದುವೆಂದು ಆಧಾರಬದ್ಧವಾಗಿ ತಿಳಿದುಬಂದಿಲ್ಲ ಸರಕಾರದವರು ಆ ಕುರಿತು ಪರಿಶೋಧನೆ ನಡೆಸಲಿರುವರೆಂಬುದಾಗಿ ತಿಳಿದುಬರುತ್ತದೆ

ಅಂತೂ ನಗರದಲ್ಲಿರಬೇಕಾಗುವ ಪರಸ್ಥಳದ ವಿದ್ಯಾರ್ಥಿಗಳಿಗೆ ಪುನಃ ಪರೀಕ್ಷೆಯಿಂದ ತುಂಬಾ ಅನಾನುಕೂಲಗಳಾಗತ್ತವೆ ಮಾತ್ರವಲ್ಲ ಪುನಃ ತಯಾರಿಯ ಪ್ರಸಂಗವೂ ವಿದ್ಯಾರ್ಥಿಗಳ ಪಾಲಿಗೆ ಬಿದ್ದಿರುತ್ತವೆ

ರಾಮನವಮಿ ಉತ್ಸವ: ಹರಿದಾಸ್ ಶ್ರೀ ಶಿವಾನಂದ ಭಟ್‌ಜಿ ಅವರಲ್ಲಿ ಈ ವರ್ಷವೂ 9 ದಿನಗಳ ವರೆಗೆ ರಾಮನವಮಿ ಉತ್ಸವಗಳು ವಿವಿಧ ಕಾರ್ಯಕ್ರಮಗಳಿಂದ ಜರಗಲಿವೆ ಹರಿಕೀರ್ತನೆ, ಭಜನೆ ಪಾರಾಯಣ, ಭಾಷಣ ಮೊದಲಾದವುಗಳಲ್ಲದೆ ತಾರೀಕು 31 3 47ರಿಂದ 8 4 47ರ ತನಕ ರಾತ್ರಿ 9 ಗಂಟೆಗೆ ನಾಟಕ ಗಾಯನ ನೃತ್ಯ ಮೊದಲಾದ ಮನರಂಜಕ ವಿವಿಧ ವಿನೋದಾವಳಿಗಳ ಕಾರ್ಯಕ್ರಮವೂ ಇದೆ ಎಂದು ತಿಳಿದುಬರುತ್ತದೆ

ಉಪಾಧ್ಯಾಯ ಸಭೆ
ಅಧ್ಯಾಪಕ ಆಡಳಿತಗಳೊಳಗೆ ಸಹಕಾರ

ತಾ 14 3-47ರಂದು ಶುಕ್ರವಾರ ಸಾಯಂಕಾಲ ಸ್ಥಳೀಯ ಬೆಸೆಂಟ್ ಶಾಲೆಯ ಸಭಾಂಗಣದಲ್ಲಿ ದ ಕ ಟೀಚರ್ಸ್ ಗಿಲ್ಡಿನ ಆಶ್ರಯದಲ್ಲಿ ಜರಗಿದ ಸಭೆಗೆ ಅನೇಕ ಶಾಲಾ ಆಡಳಿತಗಳ ಪ್ರತಿನಿಧಿಗಳು ಬಂದಿದ್ದರು. ಉಪಾಧ್ಯಾಯರ ಪರವಾಗಿ ಮಾತನಾಡುತ್ತ ಶ್ರೀ ಎನ್ ಮುಕುಂದರಾಯರು (ಗಿಲ್ಡಿನ ಅಧ್ಯಕ್ಷರು) ಅಧ್ಯಾಪಕ ವರ್ಗದ ಕಷ್ಟ ಸಂಕಷ್ಟಗಳನ್ನು ವಿವರಿಸಿ ಆಡಳಿತಗಳು ಇವುಗಳನ್ನು ನಿವಾರಿಸಲು ಸಹಾಯ ಮಾಡಬೇಕೆಂದು ಕೋರಿದರು ಡಾ| ಕೇಶವ ಪೈ ಅವರು ಆಡಳಿತಗಳ ಸಂಕಷ್ಟಗಳನ್ನು ವಿವರಿಸಿ ಸರಕಾರವು ಆಡಳಿತಗಳಿಗೆ ಉಂಟುಮಾಡುವ ಅನೇಕ ತೊಡಕುಗಳನ್ನು ತಿಳಿಸುತ್ತ ಸರಕಾರವನ್ನು ಮಣಿಸಲು ಅಧ್ಯಾಪಕರೂ ಆಡಳಿತಗಳವರೂ ಒಟ್ಟೊಟ್ಟಾಗಿ ಒತ್ತಡವನ್ನು ಹಾಕುವುದರ ಆವಶ್ಯಕತೆಯನ್ನು ಒತ್ತಿ ಹೇಳಿದರು ಸರಕಾರದವರು ಖರ್ಚಿನ ಮೂರನೇ ಎರಡಂಶ ಗ್ರೇಂಟನ್ನು ಕೊಟ್ಟರೆ ಮತ್ತು ಶಾಲಾ ಫೀಸನ್ನು ಇನ್ನಷ್ಟು ಸ್ವಲ್ಪ ಹೆಚ್ಚಿಸಿದರೆ ಉಪಾಧ್ಯಾಯರ ಕೇಳಿಕೆಗಳನ್ನು ಪೂರೈಸಲು ಸಾಧ್ಯವಾಗುವುದೆಂದೂ ಅವರು ತಿಳಿಸಿದರು ಅಂತೂ ಕೊನೆಯಲ್ಲಿ ಆಡಳಿತಗಾರರ ಮುಂಬರುವ ಸಭೆಯಲ್ಲಿ ಅಧ್ಯಾಪಕರ ಸಂಕಷ್ಟಗಳನ್ನು ಗಮನಿಸಿ ವಿಚಾರ ವಿನಿಮಯ ಮಾಡಬೇಕೆಂದು ವಿನಂತಿಸಿಕೊಳ್ಳಲಾಯಿತು

ಬಟ್ಟೆ ಕಾರ್ಡುಗಳು: ಚಾಲ್ತಿ ವರ್ಷದಲ್ಲಿ ಜಾರಿಗೆ ಬರಲಿರುವ ಬಟ್ಟೆ ರೇಶನ್ ಸಂಬಂಧವಾದ ಕಾರ್ಡುಗಳ ಹಂಚೋಣಿಕೆ ಹಲವು ದಿವಸಗಳಿಂದ ಪ್ರಾರಂಭವಾಗಿದೆ ಇನ್ನೂ ನಗರದಲ್ಲೆಲ್ಲ ಸಂಪೂರ್ಣವಾಗಿ ಇವು ಹಂಚಲ್ಪಟ್ಟಿಲ್ಲ ಈ ವಾರಾಂತ್ಯದಲ್ಲಿ ಈ ಕೆಲಸವು ಮುಗಿಸಲ್ಪಡುವುದೆಂದು ನಿರೀಕ್ಷೆ ಇದೆ

ಹಿಂದುಸ್ಥಾನೀ ಪ್ರಚಾರಕರ ಅವಗಾಹನೆಗೆ: "ಹಿಂದುಸ್ಥಾನೀ ಪರೀಕ್ಷೆಗಳಿಗೆ ಕಳುಹಿಸಿದ ಅವೇದನ ಪತ್ರಗಳಲ್ಲಿ ಸಫಲವಾದ ಅವೇದನ ಪತ್ರಗಳ ಮೇಲೆ ಸಿಗುವ ಗ್ರಾಂಟು ಪ್ರಾದೇಶಿಕ ಸಮಿತಿಯೇ ವಸೂಲು ಮಾಡಿ ಆಯಾ ಪ್ರಚಾರಕರಿಗೆ ಹಂಚುವುದು ಪ್ರಚಾರಕರು ತಾವು ೧೯೪೬ನೇ ವರ್ಷದಲ್ಲಿ ಕಳುಹಿಸಿದ ಮತ್ತು ಅವುಗಳಲ್ಲಿ ಸಫಲವಾದ ಆವೇದನ ಪತ್ರಗಳ ಸರಿಯಾದ ಲೆಕ್ಕವನ್ನು ಪ್ರಾದೇಶಿಕ ಸಮಿತಿಯ ಕಾರ್ಯದರ್ಶಿಯವರಿಗೆ ಕಳುಹಿಸಿಕೊಡಬೇಕು ಗ್ರಾಂಟನ್ನು ವಸೂಲುಮಾಡಿ ಸಂಬಂಧಪಟ್ಟ ಪ್ರಚಾರಕರಿಗೆ ಹಂಚುವೆವು

ಕೇಂದ್ರೀಯ ಹಿಂದೀ ಪ್ರಚಾರ ಸಭೆಯು ತಮ್ಮ ಹೆಸರನ್ನು ರಿಜಿಸ್ಟರ್ ಮಾಡಿ ಪ್ರಮಾಣಿತ ಪ್ರಚಾರಕರಿಗೆನೆ ಅವೇದನ ಪತ್ರಗಳನ್ನು ಕಳುಹಿಸುವ ಹಾಗೂ ಗ್ರಾಂಟನ್ನು ಪಡೆಯುವ ಅಧಿಕಾರವಿದೆ ಆದ್ದರಿಂದ ಪ್ರಚಾರಕರು ಬೇಗನೇ ಪ್ರಮಾಣಿತ ಪ್ರಚಾರಕರಾಗುವುದು. ಅಗಸ್ಟ್ [illegible] ವರೆಗೆ ಪ್ರಮಾಣಿತರಾಗದವರು ಪ್ರಾದೇಶಿಕ ಹಿಂದೀ ಪ್ರಚಾರ ಸಭೆ, ಮಂಗಳೂರು ಇದರ ಕಾರ್ಯದರ್ಶಿಯವರಿಗೆ ಬರೆದು ತಿಳಿಸಿದಲ್ಲಿ ಈ ಬಗ್ಗೆ ತಕ್ಕ ವ್ಯವಸ್ಥೆ ಮಾಡುವರು" ಹೀಗೆಂದು ಶ್ರೀ ಎಸ್. ಎನ್ ನಾಯಕ್, ಹಿಂದೀ ಪ್ರಚಾರಕ, ಇವರು ಬರೆಯುತ್ತಾರೆ

ಕೆನರಾ ಬ್ಯಾಂಕಿನ ಸುಗಮ ಪ್ರಗತಿ
ನಾಲ್ವತ್ತೊಂದು ವರ್ಷಗಳ ಭದ್ರ ಅಭಿವೃದ್ಧಿ

ಹಲವು ಬಿರುಗಾಳಿಗಳನ್ನೆದುರಿಸಿ ಸುಗಮವಾಗಿ ಸಾಗಿದಾಗ ಹಡಗೊಂದರ ಬಲ ಬಿಗಿಗಳ ಅರಿವಾಗುವುದು ಹಲವಾರು ಆರ್ಥಿಕ ಮುಗ್ಗಟ್ಟಿನ ಗಂಡಾಂತರಗಳನ್ನು ದಾಟಿ ಅಚಲ ಸ್ಥಿರತೆಯಿಂದ ಯಶಸ್ವಿಯಾಗಿ ಮುಂದರಿದ ಹಣಕಾಸಿನ ಸಂಸ್ಥೆಯೊಂದರ ಭದ್ರತೆಯು ಅಸಾಮಾನ್ಯವಾದುದೇ ಸರಿ ಕೆನರಾ ಬ್ಯಾಂಕಿನ ಅನುಭವವು ಅಂತಹುದೆ ಇಂದು ಅದರ ವ್ಯವಹಾರವು ಅದೆಷ್ಟು ಸುವ್ಯವಸ್ಥಿತವಾಗಿದೆ ಎಂದರೆ ಯಾವ ತರದ ಆರ್ಥಿಕ ಕಂಪನಕ್ಕೂ ಅದು ಸಿಕ್ಕಲಾರದಂತಿರುತ್ತದೆ ತಮ್ಮ ಸಂಸ್ಥೆಯ ಸರ್ವತೋಮುಖ ಅಭಿವೃದ್ಧಿ ಕೆನರಾ ಬ್ಯಾಂಕಿನ ಆಡಳಿತ ಮಂಡಳದವರು ತಮ್ಮ ಸಂಸ್ಥೆಯ ವ್ಯವಹಾರವನ್ನು ಪರಿಶೀಲಿಸಿ ಸಲಹೆ ಸೂಚನೆಗಳನ್ನು ಕೊಡಲು ತಾವಾಗಿಯೇ ರಿಸರ್ವ್ ಬ್ಯಾಂಕನ್ನು ಆಹ್ವಾನಿಸಿರುತ್ತಾರೆ ದೇಶದ ಮುಂದೆ ರಾಷ್ಟ್ರದ ಖಜಾನೆಯೇ ಆಗುವ ಅಗ್ರಗಣ್ಯದ ಮತ್ತು ಸಂಚಯ ಸಂಸ್ಥೆಯೊಂದರ ಸದ್ವಿವೇಕದ ಪರಿಶೀಲನೆಗೆ ಒಳಪಡುವ ಬ್ಯಾಂಕಿನ ಮೇಲೆ ಸಹಜವಾಗಿ ಜನತೆಗೆ ವಿಶ್ವಾಸಾಧರಗಳು ಹೆಚ್ಚಿನವು ಮಾತ್ರವಲ್ಲ ಅಂತಹ ಸಂಸ್ಥೆಯು ಸಾರ್ವಜನಿಕಕ್ಕೆ ತನ್ನ ಸೇವೆಯನ್ನು ಹೆಚ್ಚಿನ ಸುವ್ಯವಸ್ಥಿತ ರೀತಿಯಲ್ಲಿ ಸಲ್ಲಿಸಲೂ ಇಂಬುದೊರೆಯುತ್ತದೆ ಮೌಲ್ಯಗಳು ಅತೀ ಕೆಳಗಿಳಿದಾಗಲೂ ಈ ಬ್ಯಾಂಕಿನ ಕ್ಷೇಮನಿಧಿಗಳ ಮೌಲ್ಯವು 11 ಲಕ್ಷಕ್ಕೇರಿರುವುದು ರ ವೃದ್ಧ ಆಡಳಿತದ ವಿವೇಕಧೋರಣೆಗೆ ಸಾಕ್ಷಿ ದೇಶದ ಹಲವು ಪ್ರಮುಖ ನಗರಗಳಲ್ಲಿ ಬ್ಯಾಂಕಿನ ಶಾಖೆಗಳಿರುವದು ಮತ್ತೊಂದು ಸೌಕರ್ಯ ಈ ಸಂಸ್ಥೆಗೆ ಚಿರ ಅಭಿವೃದ್ಧಿ ಕೋರುತ್ತೇವೆ

ಚಳಿ ಮತ್ತು ಶೀತಗಳನ್ನು ಕೂಡಲೇ ಗುಣ ಪಡಿಸುವುದು.

ಜಾಂಬಕವನ್ನು ಪ್ರತಿ ರಾತ್ರೆ ಮಲಕೊಳ್ಳುವಾಗ ಹಚ್ಚಿರಿ

ಕೆಟ್ಟ ಶೀತಬಾಧೆಯನ್ನು ನೀವು ಪ್ರತಿದಿನ ರಾತ್ರಿ ಎದೆಗೆ ಮತ್ತು ಕೊರಳಿಗೆ ಜಾಂಬಕನ್ನು ಸವರಿ ಮಲಕೊಳ್ಳುವುದರಿಂದ, ಪರಿಹರಿಸಕೊಳ್ಳಬಹುದು ಜಾಂಬಕಿನಲ್ಲಿರುವ ಅತ್ಯುತ್ತಮ ವನೌಷಧಿ ಸತ್ವವು, ಬೇಗನೆ ಚರ್ಮಕ್ಕೆ ಹೀರಲ್ಪಟ್ಟು ನಿಮ್ಮ ಶರೀರದ ಕಾವಿನಿಂದ ಹಾರಿ ಹೋಗುವುದು ಹಾಗೆ ಅವು ಶ್ವಾಸನಾಳದಲ್ಲಿ ಶ್ವಾಸದೊಡನೆ ಸೇರಿ ನಿಮ್ಮ ತಲೆಯ ಭಾರವನ್ನು ಕಡಿಮೆ ಮಾಡುತ್ತದೆ ಜಾಂಬಕ್ ಕೂಡಲೇ ಶೀತ ಮತ್ತು ಇಂಫ್ಲುಯೆಂಜಾ ಕ್ರಿಮಿಗಳನ್ನು ನಾಶ ಮಾಡುತ್ತದೆ



ಯಾವಾಗಲೂ ಜಾಂಬಕನ್ನೇ ಸೇವಿಸಿರಿ

ZAM-BUK

ಪ್ರಾಣಿ ಕೊಬ್ಬು ವಿರಹಿತವಾದುದು.

ಜೀವನ ಕಾರ್ಯವು ಸಾಂಗವಾಗಿ ನಡೆಯಬೇಕಾದರೆ, ನಷ್ಟವಾಗುವ ಶಕ್ತಿಯು ಭರ್ತಿಯಾಗಬೇಕು ನಿಮ್ಮ ಶೋಭೆಯನ್ನೂ ಕಾಂತಿಯನ್ನೂ ರಕ್ಷಿಸಬೇಕೆಂದರೆ ನಿಮ್ಮಲ್ಲಿ ಅಂತರಾರೋಗ್ಯವಿರಬೇಕು ಈ ಬಗ್ಗೆ ನಿಮಗೆ ಬೇಕಾದುದು ಬೈಲ್‌ಬೀನ್ಸ್ ಅವುಗಳಿಂದ ನಿಮ್ಮ ದೇಹಾರೋಗ್ಯವು ನೆಟ್ಟಗಾಗುವುದು ನಿಮ್ಮ ರಕ್ತವು ಪರಿಶುದ್ಧವಾಗುವುದು ನಿಮ್ಮ ದೇಹದ ವಿಸರ್ಜನಾ ಕಾರ್ಯಗಳು ಸರಿಯಾಗಿ ನಡೆಯುವುವು ಈ ವನಸ್ಪತಿ ಮೂಲ ಮದ್ದಿನಿಂದ ನಿಮಗೆ ಹೊಸ ಹುರುಪು ದೊರಕುವುದು ಶುಭ್ರ ಲೋಚನಗಳೂ, ನಿಶ್ಚಳ ಚರ್ಮವೂ ನಿಮಗೆ ಒದಗುವವು ನಿಮ್ಮನ್ನು ಆಕರ್ಷಣೀಯರಾಗಿ ಮಾಡುವುದು

BILE BEANS

ಶಯನ ಸಮಯ ನಿತ್ಯಲೂ ಸೇವಿಸಿರಿ.

ಮಾನಸಿಕ ತಾರುಣ್ಯವನ್ನಿಟ್ಟುಕೊಳ್ಳಿರಿ

ಮಕ್ಕಳ ಮನೋವಿಕಾಸ ಮಾಡುವ ರೀತಿ

ಟೆಲಿಫೋನ್ ಸಂಶೋಧಕನ ತಜ್ಞ ಸಲಹೆ

ಟೆಲಿಫೋನ್ ಉಪಕರಣವನ್ನು ಕಂಡುಹಿಡಿದ ಪ್ರಖ್ಯಾತ ವಿದ್ಯುತ್ ವಿಜ್ಞಾನಿ ಅಲೆಕ್ಸಾಂಡರ್ ಗ್ರಹಾಮ್ ಬೆಲ್ ಅವನು 75 ವರ್ಷದವನಾಗಿದ್ದಾಗ ಅವನ ಸ್ನೇಹಿತರು "ಅವನ ಪ್ರಾಯಕ್ಕೆ ಅವನ ಮನಸ್ಸು ಇನ್ನೂ ತರುಣಾವಸ್ಥೆಯಲ್ಲೇ ಇದೆ" ಎಂದು ಆಶ್ಚರ್ಯಪಡುತಿದ್ದರು. ಬೆಲ್‌ನು ಯಾವುದೋ ಒಂದು ತಾರುಣ್ಯ ಝರಿಯನ್ನು ಕಂಡುಹಿಡಿದವನಂತಿದ್ದು ಅವನ ಮನಸ್ಸು ನಿತ್ಯ ಚಟುವಟಿಕೆ ಮತ್ತು ಚೈತನ್ಯಗಳಿಂದ ತುಳುಕಾಡುತ್ತಿತ್ತು.

ಮಾನಸಿಕ ತಾರುಣ್ಯದ ಕುರಿತು ಬೆಲ್‌ನ ಸ್ವಂತ ಅಭಿಪ್ರಾಯಗಳು ಹೀಗಿವೆ:

"ಮಾನಸಿಕ ವಿಕಾಸವೆಂದರೆ ಕೇವಲ ಇತರರು ತಿಳಿಸಿದ ಕೆಲವು ಸಂಗತಿಗಳನ್ನು ಜ್ಞಾಪಕದಲ್ಲಿಡುವ ಶಕ್ತಿಯಲ್ಲ. ಮನಸ್ಸು ತನ್ನ ವಿಕಾಸವನ್ನು ತಾನೇ ಸಾಧಿಸಿದರೆ ಉತ್ತಮ ರೀತಿಯಲ್ಲಿ ಪ್ರಗತಿ ಹೊಂದುವುದು. ಅದಕ್ಕಾಗಿ ಮನಸ್ಸು ತನ್ನಷ್ಟಕ್ಕೆ ವಿಚಾರಗೈಯ್ಯಬೇಕು. ತರ್ಕ ಮಾಡದ ಮನಸ್ಸು ನಿಷ್ಪ್ರಯೋಜಕ.

"ಸ್ವ ಶಿಕ್ಷಣದ ಕುರಿತು ನಾನು ತುಂಬಾ ಯೋಚಿಸಿದ್ದೇನೆ. ನನಗೊಂದು ಚಿಕ್ಕ ಸೂತ್ರವು ಇದರಿಂದ ತಿಳಿದಿದೆ: "ಪರಿಶೀಲನೆ! ಸ್ಮರಣೆ! ಹೋಲಿಕೆ!" "ಯಾವ ಶಿಕ್ಷಣದಾದರೂ ಪ್ರಾಮುಖ್ಯ ಆವಶ್ಯಕತೆಯೆಂದರೆ ಪ್ರತ್ಯೇಕ ಸಂಗತಿಗಳನ್ನು ಪರಿಶೀಲಿಸುವುದು. ಅದಿಲ್ಲದಿಲ್ಲದೆ ಜ್ಞಾನವನ್ನು ತಯಾರಿಸಲು ನಿಮ್ಮ ಬಳಿ ಯಾವ ವಸ್ತುವೂ ಇರುವುದಿಲ್ಲ. ನೀವು ಪರಿಶೀಲಿಸಿದುದನ್ನು ಜ್ಞಾಪಿಸಿಕೊಳ್ಳಿರಿ. ನೀವು ನೋಡಿದ ಸಂಗತಿಗಳನ್ನು ನಿಮಗೆ ಜ್ಞಾಪಕವಿರುವ ಇತರ ಸಂಗತಿಗಳೊಡನೆ ಸರಿಹೋಲಿಸಿರಿ. ಕೂಡಲೇ ವಿಷಯಗಳು ಇಂತಹವುಗಳೆಂದು ವರ್ಗೀಕರಿಸಲು ನೀವು ತೊಡಗುತ್ತೀರಿ. ಈ ವರ್ಗೀಕರಣದ ತೀರ್ಮಾನವೇ ಜ್ಞಾನವಾದ ಜ್ಞಾನ ಮತ್ತು ಇದು ನಿಮ್ಮ ಸ್ವಂತಸೊತ್ತು.

"ಈ ಶಕ್ತಿಗಳಿಂದಲೇ ವಿಜ್ಞಾನಿಗಳು ಶೋಧನೆ ನಡಿಸಿದರು: ಡಾರ್ವಿನನು ಶ್ರೇಷ್ಠ ಪ್ರಕೃತಿಶಾಸ್ತ್ರಜ್ಞನಾದ. ನೆಪೋಲಿಯನನು ಅದ್ವಿತೀಯ ಸೇನಾಪತಿಯಾದ ಮೊರ್ಗನನು ದೊಡ್ಡ ಅರ್ಥ ಶಾಸ್ತ್ರಜ್ಞನಾದ. ಇದು ಎಲ್ಲಾ ಶಿಕ್ಷಣದ ಬುನಾದಿ. ಈ ರೀತಿಯಲ್ಲಿ ಶಿಕ್ಷಣವನ್ನು ಹೊಂದುವುದರ ಒಂದು ಆಶ್ಚರ್ಯಕರವಾದ ವಿಷಯವೆಂದರೆ ಅದು ಒಂದು ಕಠಿಣ ತಪಸ್ಸು ಆಗಿರುವುದರ ಬದಲಿಗೆ ಹರ್ಷದಾಯಕವಾಗಿರುತ್ತದೆ.

"ಉದಾಹರಣೆಗಾಗಿ: ಒಂದು ಪತ್ತೇದಾರಿ ಕಾದಂಬರಿ ಅಷ್ಟೊಂದು ಸಾರಸ್ಯವಾಗಿರಲು ಕಾರಣವೇನು? ಅವರಲ್ಲಿ ಸಂಗತಿಗಳನ್ನು ಪರಿಶೀಲನೆ, ಸ್ಮರಣೆ ಮತ್ತು ತುಲನೆ ಮಾಡುವುದಿರುತ್ತದೆ. ಕೊನೆಯಲ್ಲಿ ಪತ್ತೇದಾರನು ತನ್ನ ಸ್ವಂತ ತೀರ್ಮಾನಕ್ಕೆ ಬರುತ್ತಾನೆ. ಕಾದಂಬರಿಗಳನ್ನು ಓದುವಾಗ ನಮಗೆ ಅತ್ಯಂತ ಸಾರಸ್ಯ ಕಾಣುತ್ತದೆ. ಕಾರಣ ಇದನ್ನು ಓದುತ್ತಿರುವಾಗ ನಾವು ಸ್ವಂತವಾಗಿ ಪರಿಶೀಲನೆ ಮಾಡುತ್ತೇವೆ, ಸ್ಮರಣೆಗೆ ತಂದುಕೊಳ್ಳುತ್ತೇವೆ, ತುಲನೆ ಮಾಡುತ್ತೇವೆ, ಮತ್ತು ಕೊನೆಯಲ್ಲಿ ಸರಿಯಾದ ತೀರ್ಮಾನವನ್ನು ನಾವೇ ಮಾಡುತ್ತಿರುತ್ತೇವೆ.

"ಇದೇ ರೀತಿ ನಾವು ಜ್ಞಾನವನ್ನು ಸಂಪಾದಿಸಬಹುದು. ಮತ್ತು ಇದಕಿಂತಲೂ ಹೆಚ್ಚಿನ ಆನಂದವನ್ನನುಭವಿಸಬಹುದು. ನಮ್ಮ ಜ್ಞಾನ ಸಂಪಾದನೆಯ ಈ ಕಾರ್ಯದಲ್ಲಿರುವ ಇನ್ನೊಂದು ಅನುಕೂಲವೆಂದರೆ ನಾವು ಅದೇ ಸಮಯಕ್ಕೆ ಲೋಕ ಶ್ರೇಯಸ್ಸಿಗಾಗಿಯೂ ದುಡಿದಂತಾಗುವುದು.

"ನಾವು ನಮ್ಮ ಜ್ಞಾನ ಭಂಡಾರವನ್ನು ತುಂಬಿಕೊಳ್ಳುತ್ತೇವೆ. ಅಭಿರುಚಿದಾಯಕವಾದ ವಿಷಯಗಳನ್ನು ಕಾಣುವಂತೆ ನಾವು ಮಾನಸಿಕ ಕಿಟಕಿಗಳನ್ನು ತೆರೆಯುತ್ತೇವೆ. ಒಂದು ಅರ್ಥಕೋಶವನ್ನು ನೋಡುವಾಗ ನಮಗೆ ಒಂದಕ್ಕಿಂತ ಹೆಚ್ಚು ಅರ್ಥಗಳು ಸಿಗುವುದಿಲ್ಲವೆ? ಅದೇ ರೀತಿ ನಾವೊಂದು ವಿಷಯ ಇಲ್ಲವೆ ಸಂಗತಿಯ ಕುರಿತು ಪ್ರಾರಂಭಿಸಿದಾಗ ಹೆಚ್ಚೆಚ್ಚು ಸಂಗತಿಗಳನ್ನು ತಿಳಕೊಳ್ಳುತ್ತೇವೆ.

"ಯಾವುದಾದರೊಂದು ಅತೀ ಸರಳ ಸಂಗತಿಯ ಕುರಿತು ಪ್ರಯೋಗ ಮಾಡುವಾಗ ನಾವು ಒಂದಲ್ಲ ಒಂದು ವೈಜ್ಞಾನಿಕ ಸೂತ್ರದೊಡನೆ ಕೈಯಾಡಿಸುತಿದ್ದೇವೆಯೆಂದು ತಿಳಕೊಳ್ಳಬೇಕು. ಹೀಗೆ ಸರಳ ಸಂಗತಿಗಳನ್ನು ತಿಳಕೊಳ್ಳುವುದು ಅತ್ಯಂತ ಅಭಿರುಚಿದಾಯಕವಾದುದು. ಅದರಿಂದ ನಾವು ಹೆಚ್ಚೆಚ್ಚು ಸಂಗತಿಗಳನ್ನು ತಿಳಕೊಳ್ಳುತ್ತೇವೆ.

"ಮಕ್ಕಳೊಡನೆ ವ್ಯವಹರಿಸುವಾಗ ವಿಷಯಗಳನ್ನು ಅವರಿಗೆ ಹೇಳುವುದರ ಬದಲಿಗೆ ಅವುಗಳನ್ನು ಅವರು ಸ್ವತಃ ಕಂಡುಹಿಡಿಯುವಂತೆ ಏರ್ಪಡಿಸುವುದು ಮುಖ್ಯವಾದುದು. ಅವರಿಗೆ ಪ್ರಶ್ನೆಗಳನ್ನು ಕೇಳಿ ಉತ್ತರಗಳನ್ನು ಅವರೇ ಕಂಡುಹಿಡಿಯುವಂತಾಗಬೇಕು. ಅವರು ತಪ್ಪು ಉತ್ತರಕ್ಕೆ ಬಂದಾಗ ಅವರು ತಪ್ಪು ಮಾಡಿರುವರೆಂದು ತಿಳಿಸಬಾರದು. ಮಾತ್ರವಲ್ಲ ಅವರಿಗೆ ಸರಿಯಾದ ಉತ್ತರವನ್ನು ಕೊಡಬಾರದು. ಅವರ ತಪ್ಪನ್ನು ತೋರಿಸಿಕೊಡುವ ಬೇರೆ ಪ್ರಶ್ನೆಗಳನ್ನು ಕೇಳಬೇಕು. ಇದರಿಂದ ಅವರು ತಮ್ಮ ಯೋಚನಾತರ್ಕವನ್ನು ಮುಂದರಿಸಬೇಕು.

"ಉದಾಹರಣೆಗಾಗಿ: ನೀವು ಮಕ್ಕಳಿಗೆ ತೇವ ಮತ್ತು ದ್ರವೀಕರಣದ ಕುರಿತು ಕಲಿಸುವಾಗ ಶ್ವಾಸಕೋಶದಿಂದ ಹೊರಬರುವ ವಾಯುವಿನಲ್ಲಿ ನೀರಿನ ಪಸೆ ಇದೆಯೆಂದು ನೀವು ಹೇಳಿಕೊಡಬಹುದು. ಈ ನೀರಿನ ತೇವವು ಕೆಲವೊಂದು ಪರಿಸ್ಥಿತಿಗಳಲ್ಲಿ ದ್ರವೀಭೂತವಾಗುತ್ತದೆಂದೂ ತಿಳಿಸಬಹುದು. ಹೀಗೆ ಬಾಯಿಮಾತಿನಿಂದಲೇ ನೀವು ಅವರಿಗೆ ಒಂದು ತೀರ್ಮಾನವನ್ನು ತಿಳಿಸಿ ಅದನ್ನು ನೆನಪಿನಲ್ಲಿಡುವಂತೆ ಹೇಳಬಹುದು.

"ಆದರೆ ಇದಕ್ಕಿಂತ ಬೇರೊಂದು ವಿಧಾನ ಹೀಗಿದೆ: ನೀವು ಅವರಿಗೆ ಏನನ್ನೂ ತಿಳಿಸದೆ ಬರೀ ಒಂದು ಗಾಜಿನ ಲೋಟದ ಮೇಲೆ ಶ್ವಾಸ ಬಿಡಲು ಹೇಳಿರಿ. ಅದರ ಮೇಲೆ ನೀರಿನ ಪಸೆ ಇರುವುದನ್ನು ಅವನು ಪರಿಶೀಲಿಸುತ್ತಾನೆ. ಅದು ಎಲ್ಲಿಂದ ಬಂತೆಂದು ಪ್ರಶ್ನಿಸಿರಿ. ಒಂದು ಬಿಸಿಯಾದ ಲೋಟದ ಮೇಲೆ ಶ್ವಾಸ ಬಿಟ್ಟು ಅವನು ಪ್ರಯೋಗ ನಡೆಸಲಿ. ಅದೇ ರೀತಿ ಹಿಮದಂತೆ ತಣ್ಣಗಾಗಿರುವ ತಟ್ಟೆಯ ಮೇಲೂ ಪ್ರಯೋಗ ನಡೆಸಲ್ಪಡಲಿ. ಮತ್ತೆ ಬೇರೆ ವಸ್ತುಗಳ ಮೇಲೆ ಅದೇ ಪ್ರಯೋಗಗಳಾಗಲಿ. ಅವನನ್ನು ಸ್ವಂತವಾಗಿ ಯೋಚಿಸಲು ಬಿಡಿರಿ. ಏನೇನೆಲ್ಲ ಸಂಭವಿಸುವುದನ್ನು ಅವನು ಪರಿಶೀಲಿಸಲಿ. ತಾನು ಮಾಡಿದ ಪ್ರಯೋಗದ ಬೇರೆ ಬೇರೆ ಪರಿಣಾಮಗಳನ್ನವನು ನೆನಪಿಟ್ಟು ಸರಿಹೋಲಿಸಲಿ. ಕೊನೆಗೆ ಅವನು ತನ್ನ ಸ್ವಂತ ತೀರ್ಮಾನಕ್ಕೆ ಬರುವಂತಾಗಲಿ.

"ಸ್ವಶಿಕ್ಷಣವು ಜೀವಮಾನ ಪರ್ಯಂತ ಬಾಳುವ ಜ್ಞಾನ. ಅದು ಸಹಜವಾಗಿ ಅನಿವಾರ್ಯವಾಗಿ, ಮನಸ್ಸನ್ನು ಮೇಲಿನ ಮೂರು ವಿಧಾನಗಳನ್ನೂ ಉಪಯೋಗಿಸಿ ಉಂಟಾದ ಜ್ಞಾನ. ಅದು ಶಾಶ್ವತವಾದುದು."



TENDER NOTICE

Tenders are invited for the purchase of 95 used tyres comprising of Firestone, Dunlop and Good Year makes. Intending purchasers are requested to present their tenders before the Secretary of the Stores in Bunder on or before 25-3-47 with a remittance of Rs. 5 as earnest mony. The tyres can be inspected on any working day during office hours at the Office of the lorry department of the Stores.

Mangalore.
16-3-47
Food Office
Bunder.

M. Shiva Rau,
President,
S. K. C. C.
Wholesale Stores Ltd.

NOTICE

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R. E. P. 38/47 (O. S. 6146)

ಉಪ್ಪಳ ಮುಹಮ್ಮದೆ ಬ್ಯಾರಿ—ಅರ್ಜಿದಾರ.

ಯು. ಮುಹಮ್ಮದ್ ಬ್ಯಾರಿ — ಎದ್ರಿ.

ಎದ್ರಿ ಯು. ಮುಹಮ್ಮದ್ ಬ್ಯಾರಿ ಉದ್ಯಾವರ ಶೇಕಬ್ಯಾರಿ ಮಗ, ಪುತ್ತೂರು ಕಸಬಾ – ಈತಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ -

ಎದ್ರಿ ಬಾಬ್ತು Seize ಮಾಡಲ್ಪಟ್ಟ ಚರ್ಜ್ವಾತ್ ಸೊತ್ತು sale ಮಾಡಿ ಹುಟ್ಟಿಬಂದ Challan No. 646/46ನೇಗೆ ಎದ್ರಿ ಲೆಕ್ಕಕ್ಕೆ ಡಿಪೋಜಿಟಾಗಿರುವ ರೂ. 57 11–0ನ್ನು ಜಪ್ತಿ ಮಾಡಿ ತನದೆ ಡಿಕ್ರಿ ಸಂದಾಯದ ಲೆಕ್ಕಕ್ಕೆ ಕೊಡಿಸಬೇಕೆಂತ ವಗೈರೆ ಅರ್ಜಿದಾರ ಮಾಡಿದ ಕೋರ್ಟಿನ ಅಮಲ್ದಾರಿ ತಾ. 26–3–47ಕ್ಕೆ ತನ್ನಿಗೆ ಇಟ್ಟಿರುತ್ತದೆ. ಆ ಕುರಿತು ಆಕ್ಷೇಪಗಳೇನಾದರೂ ಇದ್ದರೆ ಸದ್ರಿ ತ್ಯಾದೆ ದಿನ ಪೂರ್ವಾಹ್ನ ಗಂಟೆ 11ಕ್ಕೆ ನೀವು ಸ್ವತಃ ಯಾ ವಕೀಲದ್ವಾರಾ ಹಾಜ್ರಾಗಿ ಬರಹರಿಸದಿದ್ದರೆ, ಯುಕ್ತಕಂಡಂತೆ ತೀರ್ಮಾನಿಸಲಾದೀತು.

(By order of the Court).

Puttur,
8-3-47.

M. Sadashiva Rau,
Pleader for Petr.

ಗಾಂಧೀಜಿಗೆ ನೂರು ಕೋಟಿ ರೂಪಾಯಿ ನಿಧಿ

ಜಾತಿರಹಿತ ಸಮಾಜ ನಿರ್ಮಾಣಕಾರ್ಯಕ್ಕೆ

ಶಿಕ್ಷಣತಜ್ಞ ಡಾ| ಕಿಣಿಯವರ ಸಲಹೆ

ಜಾತಿಭೇದವಿಲ್ಲದೊಂದು ಸಮಾಜ ರಚನೆಗಾಗಿ ಮಹಾತ್ಮಾ ಗಾಂಧಿಯವರಿಗೆ ನೂರು ಕೋಟಿ ರೂಪಾಯಿಯ ನಿಧಿಯೊಂದನ್ನು ಕೂಡಿಸಿ ಅರ್ಪಿಸಬೇಕೆಂಬ ಸೂಚನೆಯೊಂದನ್ನು ಸಕಾರಣವಾಗಿ ಮೈಸೂರು ಸಂಸ್ಥಾನದ ಮಾಜಿ ವಿದ್ಯಾಖಾತೆಯ ಮುಖ್ಯಾಧಿಕಾರಿಯಾಗಿದ್ದ ಡಾ| ಕೆ. ಎನ್. ಕಿಣಿಯವರು ಒಂದು ಲೇಖನದಲ್ಲಿ ತಿಳಿಸುತ್ತಾರೆ

"ಜಾತಿ ಪದ್ಧತಿಯು ಕಾಲವಿಾರಿದೊಂದು ಕಟ್ಟಳೆಯೆಂದು ಮಹಾತ್ಮರು ಹೇಳಿ ಬಂದಿದ್ದಾರೆ. ಈ ಜಾತಿಯತೆ ಮಾಯವಾಗದೆ ಜನಾಂಗವೆಂದಿಗೂ ಪ್ರಗತಿಹೊಂದದು ಆಚಾರ್ಯ ಕೃಪಲಾನಿಯವರೂ ಒಂದು ಜಾತಿರಹಿತ ಸಮಾಜಕ್ಕಾಗಿ ಪ್ರಚಾರಗೆಯ್ಯುತ್ತಿರುವರು ಕಳೆದೊಂದು ಶತಮಾನದಿಂದ ಶ್ರೇಷ್ಠ ಮತ ಸುಧಾರಕರು ಜಾತಿಯತೆಯನ್ನು ನಿರ್ಮೂಲಿಸಲು ಯತ್ನಿಸುತ್ತಿರುವರು ಆದರೆ ಇವರೆಲ್ಲರ ಶ್ರಮಕ್ಕೆ ಗಣನೀಯವಾದ ಯಾವ ಯಶಸ್ಸೂ ದೊರಕಿರುವುದು ನಮಗೆ ಕಾಣುವುದಿಲ್ಲ ಸುಧಾರಣೆ ಮಾಡಬೇಕೆಂಬ ಲವಲವಿಕೆ ಇದ್ದ ಕೆಲವರು ತಮ್ಮ ಜಾತಿಯ ಅತೀ ಹತ್ತಿರದ ಉಪಜಾತಿಯೊಂದರಿಂದ ವಿವಾಹ ಸಂಪರ್ಕ ಮಾಡಿಕೊಂಡರೆ ಮುಂದೆ ನ್ಯಾಯ ಶಾಸನದ ತೊಡಕುಗಳುಂಟಾಗುವವೆಂಬ ಭೀತಿಪಡುತ್ತಾರೆ.

ಏಕಮಾನವ ನ್ಯಾಯ

"ವಿವಿಧ ಜಾತಿಗಳ ನೀತಿ ನಡತೆಗಳ ಕುರಿತು ಮನುವು ನಮಗೆ ನೀತಿ ಸೂತ್ರಗಳನ್ನು ಕೊಟ್ಟಿರುವನು ಇಂದು ನಾವು ಆ ಒಬ್ಬ ಮನುಷ್ಯನ ಸೂತ್ರವನ್ನೇ ಹಿಡಿದು ನಿಂತಿದ್ದೇವೆ. ನಮ್ಮ ರಾಷ್ಟ್ರೀಯ ಉದ್ದೇಶ ಸಾಧನೆಗೆ ಇದು ಹಾನಿಕರ ನಾವು ಓರ್ವ ಋಷಿಯ ಇಲ್ಲವೆ ಸೂತ್ರದಾರನ ನಿರ್ದೇಶಕ್ಕನುಸಾರವಾಗಿ ನಡೆಯುವುದು ಸುಲಭವೆಂದು ಕಂಡುಕೊಂಡರೆ, ನಮ್ಮ ಹಲವು ಪ್ರಜಾಪ್ರತಿನಿಧಿ ಸಭೆಗಳ ಶಾಸನಕ್ಕನುಸಾರವಾಗಿ ನಡೆಯುವುದು ಇನ್ನಷ್ಟು ಸುಲಭವಿದೆ. ಕಾರಣ ಅವರು ನಮ್ಮಿಷ್ಟದಿಂದ ಚುನಾಯಿತರಾದವರು

"ಒಂದು ಜಾತಿಯ ಹಿಂದುವೊಬ್ಬನು ತನಗೆ ಇಷ್ಟಕಂಡ ಬೇರೊಂದು ಜಾತಿಯ ಹಿಂದುವಿನೊಡನೆ ಮದುವೆ ಮಾಡಿಕೊಂಡರೆ ಅವನಿಗೆ ತನ್ನ ಪಿತ್ರಾರ್ಜಿತ ಆಸ್ತಿಯ ಹಕ್ಕು ನಾಶವಾಗುವುದಿಲ್ಲವೆಂದೂ, ಅವನ ಮಕ್ಕಳು ಅನೀತಿ ಹುಟ್ಟಿನವಲ್ಲವೆಂದೂ ನಮ್ಮ ಕೇಂದ್ರ ಸರಕಾರದವರು ಒಂದು ಶಾಸನ ಮಾಡಬಾರದೇಕೆ? ಅದರಲ್ಲಿ ಶ್ರೇಷ್ಠ ಬುದ್ಧಿಶಕ್ತಿಯುವರಿರುವರು. ಇಂತಹ ಶಾಸನವು ಕ್ರಮೇಣ ಜಾತಿಯತೆಯನ್ನು ನಿರ್ಮೂಲ ಮಾಡುವುದು

"ಸುಮಾರು 3000 ಸಾವಿರ ಜಾತಿ ಪಂಗಡಗಳಿಂದೊಡಗೂಡಿದ ನಮ್ಮ ಜನತೆ ಒಂದು ಆಧುನಿಕ ಜನಾಂಗವೆನಿಸದು ಕಾರಣ ಈ ಜಾತಿಯತೆಯು ಕಾಲವಿಾರಿದ ಪದ್ಧತಿ. ಈ ಸಂದರ್ಭದಲ್ಲಿ ಕಟ್ಟಾಚಾರದವರು ವಿರೋಧದ ಬಿರುಗಾಳಿಯನ್ನೇ ಎಬ್ಬಿಸುವುದು ಖಂಡಿತ. ಶಾಸನ ಸಭಾ ಪ್ರತಿನಿಧಿಗಳು ಈ ಪ್ರತಿಮಾರುತಗಳನ್ನೆದುರಿಸಿ ಧೈರ್ಯದಿಂದ ಅಂತಹ ಶಾಸನವನ್ನು ಜಾರಿಗೆ ತರಬೇಕು.

"ದೇವಸ್ಥಾನಕ್ಕೆ ಹರಿಜನರಿಗೆ ಪ್ರವೇಶ ಕೊಡುವುದರ ಕುರಿತಾ ಪ್ರಾಂತ್ಯ ಶಾಸನ ಸಭೆಗಳಲ್ಲಿ ಮಸೂದೆಗಳಾಗುವಂತೆ ಹಿಂದೂ ಸಮಾಜದೊಳಗಿನ ಜಾತಿಭೇದವನ್ನು ಹೋಗಲಾಡಿಸುವ ಶಾಸನವು ಕೇಂದ್ರ ಶಾಸನ ಸಭೆಯಲ್ಲಾಗಲಿ."

ತನ್ಮಧ್ಯ ಈ ಕೆಳಗಿನ ಕಾರ್ಯಕ್ರಮವನ್ನು ಡಾ| ಕಿಣಿಯವರು ಸೂಚಿಸುತ್ತಾರೆ:

ಆರರಿಂದ ಹದಿನೆಂಟರೊಳಗಿನ ಪ್ರಾಯದ ವಿದ್ಯಾರ್ಥಿಗಳಲ್ಲಿ ಜಾತಿರಹಿತ ಸಮಾಜದ ಆವಶ್ಯಕತೆ ಅನುಕೂಲಗಳನ್ನು ಬೋಧಿಸಬೇಕು ಪಠ್ಯ ಪುಸ್ತಕಗಳಿಂದ ಜಾತಿಸಂಬಂಧ ವಿಷಯವನ್ನು ತೆಗೆದುಹಾಕಬೇಕು ಗ್ರಂಥಕಾರರು ತಮ್ಮ ಕೃತಿಗಳಲ್ಲಿನ ವ್ಯಕ್ತಿಗಳ ಜಾತಿಮತಗಳ ಕುರಿತೇನನ್ನೂ ಬರೆಯಬಾರದು

ಮಠಾಧಿಪತಿಗಳಿಗೂ, ಧರ್ಮ ಗುರುಗಳೂ ಯುರೋಪ್ ಅಮೇರಿಕಾ ದೇಶಗಳಿಗ ಹೋಗಿ ಅಲ್ಲಿ ಹೇಗೆ ಸಮಾಜ ಸುಧಾರಣೆಗಳಾಗುತ್ತಿವೆ ಎಂದು ಅಭ್ಯಾಸಿಸಲು ಸರಕಾರವು ಪ್ರೋತ್ಸಾಹವೀಯಬೇಕು.

ಜಾತೀಯ ಉಪಾಹಾರ, ಭೋಜನ ಗೃಹಗಳಿಗೆ ಸರಕಾರವು ಅನುಮತಿ ಕೊಡಬಾರದು.

ಮಾನವ ಕೋಟಿಗೇ ಹಿತ

ಹಿಂದೂ ಎಂಬದರ ಅರ್ಥವು ಒಂದು ಸಲ ಮಹಾತ್ಮಾಜಿಯವರು ವಿವರಿಸಿದಂತೆ "ಯಾರು ತಾನು ಹಿಂದುವೆನ್ನುವನೋ ಅವನೇ ಹಿಂದು" ಎಂದು ಅತ್ಯುಕ್ತವಾದುದು. ಅಂಥವನಿಗೆ ಹಿಂದೂ ಸಮಾಜದಲ್ಲಿ ಎಲ್ಲಾ ಹಕ್ಕು ಬಾಧ್ಯತೆಗಳೂ ದೊರಕಬೇಕು, ಅವನು ಯಾವ ದೇಶ ಜನಾಂಗದವನೇ ಇರಲಿ

ಈಗ ಮಹಾತ್ಮಾಜಿಯವರು ನಮ್ಮ ನಡುವಿನಲ್ಲೇ ಇರುವರು.' ಆಚಾರ್ಯ ಕೃಪಲಾನಿಯವರು ನೂರು ಕೋಟಿ ರೂಪಾಯಿಗಳ ನಿಧಿಯೊಂದನ್ನು ಸಂಗ್ರಹಿಸಿ ಒಂದು ಜಾತಿ ರಹಿತ ಸಮಾಜವನ್ನು ರಚಿಸಲಿಕ್ಕಾಗಿ ಮಹಾತ್ಮರಿಗೆ ಅರ್ಪಿಸಬೇಕು ಗಾಂಧಿಜಿಯ ಜೀವಮಾನ ಕಾಲದಲ್ಲೇ ನಾವು ಅವರನ್ನು ಗೌರವಿಸುವುದಕ್ಕಾಗಿಯೂ ಮತ್ತವರ ವಿವೇಕಪೂರ್ಣ ನಿರ್ದೇಶವು ನಮಗೆ ದೊರೆಯುವಂತೆಯೂ ನಾವು ಅವರ ಹೆಸರಲ್ಲಿ ಈ ನಿಧಿಯನ್ನು ಸಂಗ್ರಹಿಸಬೇಕು

ಪ್ರತಿಯೊಬ್ಬ ಹಿಂದುವೂ ತನ್ನ ವಾರ್ಷಿಕ ಆದಾಯದ ಶೇಕಡಾ ಒಂದಂಶವನ್ನು ಈ ನಿಧಿಗೆ ತೆರಬೇಕು ಹಿಂದೂ ಸಮಾಜದ ಹಿತಚಿಂತಕರಾದ ಹಿಂದೇತರರಿಂದಲೂ ವಂತಿಗೆಗಳನ್ನು ಸ್ವೀಕರಿಸಬಹುದು ಕಾರಣ ಜಾತಿರಹಿತ ಹಿಂದೂ ಸಮಾಜವು ಇಡೀ ಮಾನವ ಕೋಟಿಗೇ ಕಲ್ಯಾಣದಾಯಕವಾದುದು

(೧ನೇ ಪುಟದಿಂದ)

ಹೊಸ ವಾಯಿಸರಾಯರ ಹೊಸ ಧೋರಣೆ

ಗಳನ್ನು ಮುಸ್ಲಿಂ ಮತ್ತು ಮುಸ್ಲಿಮೇತರ ಪ್ರದೇಶಗಳಾಗಿ ವಿಂಗಡಿಸಬೇಕಾಗುವುದು ಇಲ್ಲವೆ ಎಲ್ಲಾ ಪಕ್ಷಿಯರೂ ಒಟ್ಟು ಸೇರಿ ಅಖಿಲಭಾರತದ ಸಂಯುಕ್ತ ರಚನೆಯೊಂದನ್ನು ಏಕಕೇಂದ್ರಿಯ ತತ್ವದ ಮೇಲೆ ರಚಿಸಬೇಕಾಗುತ್ತದೆ ಕಾಂಗ್ರೆಸು ಆಗಲೇ ಮತ್ತೊಂದು ಬಾರಿ ಲೀಗಿಗೆ ಮಾತುಕತೆಗಾಗಿ ಆಹ್ವಾನಿಸಿದೆ. ಲೀಗ್ ಮುಖಂಡರು ಸೌಹಾರ್ದಕ್ಕೆ ಪ್ರತಿ ಸೌಹಾರ್ದವನ್ನು ತೋರುವರೆ?

— ೦ —

KANARA COMMERCIAL BANK LTD.

PUTTUR

H O Puttur | Estd 1920 | Branch Vittal.

All Kinds of Banking Business transacted.

Deposits Current, Savings, Cumulative Deposits are accepted

Fixed Deposits for periods of 3 months and above up to 24 months are accepted.

SEASON DEPOSITS

ARE Accepted up to 31-5 1947 Terms on application

ರಿಯಾಯತಿ ಲಗ್ಗೇಜಿನಲ್ಲಿ ವ್ಯಾಪಾರಿ ಸಾಮಾನುಗಳ ನಿಷೇಧ

ಪೆಸೆಂಜರರ ಸೌಕರ್ಯಗಳ ಬಗ್ಗೆ ಒಂದು ಮಣ ಭಾರದ ಸಾಮಾನುಗಳನ್ನು ಫ್ರೀ ತೆಗೆದುಕೊಂಡುಹೋಗಬಹುದಾಗಿ ಮಾಡಿದ ರಿಯಾಯತಿ ಕಾರಣದಿಂದಾಗಿ ಪೆಸೆಂಜರರು ಅವರ ಸ್ವಂತ ಉಪಯೋಗದ ಸಾಮಾನುಗಳಲ್ಲದೆ ವ್ಯಾಪಾರಿ ಸಾಮಾನುಗಳನ್ನು ತಮ್ಮೊಡನೆ ಪ್ರಯಾಣ ಬೆಳೆಸುವ ಸ್ನೇಹಿತರ ಹೆಸರಿನಲ್ಲಿ ಈ ರಿಯಾಯತಿ ಮೂಲಕ ಧರ್ಮಾರ್ಥ ಸಾಗಿಸುವುದು ರೂಢಿಯಾಗಿದೆ

ಮೋಟರ್ ವಾಹನಗಳು ರೈಲ್ವೆಗಾಡಿಗಳಂತಾಗಿಲ್ಲ. ಅವುಗಳಲ್ಲಿ ನಿಯಮಿತ ಭಾರಕ್ಕಿಂತ ಹೆಚ್ಚಿನ ಸಾಮಾನುಗಳನ್ನು ಒಯ್ಯುವುದು ಮೋಟರ್ ವಾಹನಕ್ಕೂ ಮತ್ತು ಪೆಸೆಂಜರರಿಗೂ ಅಪಾಯವಾಗಿದೆ. ಕಾರಣ ಬಸ್ಸುಗಳಲ್ಲಿ ಒಯ್ಯುವ ಸಾಮಾನುಗಳನ್ನು ಪೆಸೆಂಜರರ ಅವಶ್ಯಕತೆ ಬಗ್ಗೆನೇ ಮಿತಗೊಳಿಸುವುದು ಅಗತ್ಯವಿದೆ

ವ್ಯಾಪಾರಿ ಸಾಮಾನುಗಳನ್ನು ಒಯ್ಯುವರೆ ವ್ಯಾಪಾರಿಗಳು

ಶೆಡ್ಯೂಲ್ ಟೈಮಿಗೆ ಕೊಂಡೊಯ್ಯುವ "ಲಕ್ಷ್ಮಿ" ಯಾ "ಸಿ. ಪಿ. ಸಿ." ಲ್ಹೋರಿ ಸರ್ವಿಸುಗಳ ಸೌಖರ್ಯವನ್ನು ಉಪಯೋಗಿಸಬೆಕಾಗಿ ಅಪೇಕ್ಷಿಸುತ್ತೇವೆ.

ವ್ಯಾಪಾರಿ ಸಾಮಾನುಗಳೆನ್ನ್ನೆ ಎಷ್ಟಕ್ಕೂ ಫ್ರೀ ಲಗ್ಗೇಜಿನ ಅಂಶದಲ್ಲಿ ಸೇರಿಸಿಕೊಳ್ಳಲಾಗುವುದಿಲ್ಲ. ಈ ಕುರಿತು ಮಾಹಿತಿಯನ್ನು ಬುಕ್ಕಿಂಗ್ ಕ್ಲಾರ್ಕರಿಂದ ಪಡಿಯಬಹುದು

JOINT MANAGERS,

The Combined Booking Agency, MANGALORE

The Joint Booking Office, KODIALBAIL

THE CANARA BANKING CORPORATION LTD.
(Incorporated in British India with Limited Liability)
Estd: 1906.
Head Office: UDIPI, S. Kanara.

	Rs.
CAPITAL:	
Authorised	25,00,000
Issued, subscribed & called up	16,00,000
Paid up.	15,97,145
RESERVES	5,25,000
DEPOSITS	2,07,47,928
TOTAL RESOURCES	3,00,01,186

With a net work of branches & Agencies in all principal cities of India, we shall be able to render efficient collection services.

BANKING BUSINESS OF EVERY DESCRIPTION TRANSACTED.

ಹುಳಿ ಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳಿ ಕಡ್ಡಿ, ಪಿತ್ಥ ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,
ಬೊಂಬ್ಯಾ, ಮದರಾಸು, ಕಲ್ಕತ್ತಾ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE BOMBAY LIFE ASSURANCE COMPANY LIMITED

(ESTD. 1910)

Peace and Security........

The Mightiest War to secure freedom for the oppressed Nations of Europe has ended. With many attempts at securing the four Freedoms, we do not seem to be anywhere near it. We, in our humble way, have been contributing to this Individual Material Freedom, in War as well as in Peace, by extending Insurance Service to all who seek it.

1945 completed Business { Company's: Over $2\frac{3}{4}$ Crores
Ours: About 50 lakhs.

Kochikar Brothers, Limited.

(ESTD. 1908)

gents for South India and Special agents for Bombay City & Suburbs.

"Bombay Life Building," Gandhi Nagar, UDIPI.

With Offices at:-

MADRAS, BANGALORE, TRIVANDRUM, MANGALORE, MADURA, CALICUT, BOMBAY, & UDIPI.

And Agencies all over South India.

Bhuvanendra Products Limited,

KATAPADI S. Kanara.

'Bhuvanendra'
Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs.

Depot: **Maharata Galli, Hubli.**

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'
ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ದಿವ್ಯ ಔಷಧಿ. ಗರ್ಭಕೋಶದ ಬೇನೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.
ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.
ಕಟಪಾಡಿ ದ. ಕನ್ನಡ

ಡೊಂಗರೆ
ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Pre...

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. **1906**

[ಸಂಪುಟ 41] ತಾರೀಕು 28—3—1947 [ಸಂಚಿಕೆ 13]

★ ಆಸ್ಯದ ವೈಭವ ★

ಹೊಸ ಯುಗಕ್ಕೆ ಹೆಜ್ಜೆ ಇತ್ತಿದ್ದೇವೆ ವಿಶ್ವದತ್ತ ಆಸ್ಯದ ಹೆಡೆ ಎತ್ತಿದೆ ಮಾನವ ಜನಾಂಗದ ಉತ್ಕ್ರಾಂತಿಯಲ್ಲಿ ಅದು ಅಗ್ರ ಪಾತ್ರ ವಹಿಸಿದೆ ಸತ್ಯಶೋಧನೆಯ ನಿರಂತರ ಸಾಹಸವನ್ನು ಕೈಕೊಂಡದಿಲ್ಲಿಯೆ ಇದೇ ಜಗತ್ತಿನ ಕೈದೀವಿಗೆ ಕುಂದಿದ ಆಸ್ಯದ ಸಾಂಸ್ಕೃತಿಕ ಜ್ಯೋತಿಯಡಿಯಲ್ಲಿ ನೀಚ ಸಾಮ್ರಾಜ್ಯಶಾಹಿ ಆಟವಾಡಿತು ಭಾರತದ ಶ್ರೇಯಸ್ಸು ಹಾರೈಸಿ ಐಕ್ಯ ಸಾಧನೆಗಾಗಿತ್ತ ಚಿತ್ತೈಸಿದ ನಿಮಗೆಲ್ಲ ಸ್ವಾಗತವು

ಹಳೆಯ ಸಾಮ್ರಾಜ್ಯವಾದಗಳು ಅಳಿಯುತ್ತಿವೆ ಯಂತ್ರ ವ್ಯಾಪ್ತಿಯಿಂದ ದಾಸ್ಯ ದಬ್ಬಾಳಿಕೆಗಳಿಂದ ಪಾರುಗಾಣಲು ನಾವು ಒಂದೆಡ ಸಂಧಿಸಿವೆ ನಾವು ಪರಸ್ಪರ ನಮ್ಮ ಪೂರ್ವ ಸ್ನೇಹ ದೃಷ್ಟಿಯಿಂದ ಕಾಣುವಂತಾಗಿದೆ ಭಾರತವು ಆಸ್ಯದ ಅನೇಕ ಚಟುವಟಿಕೆಗಳ ಕೇಂದ್ರವಾಗುತ್ತಿದೆ ಪೂರ್ವ ಪಶ್ಚಿಮ ಸಂಸ್ಕೃತಿಗಳಲ್ಲಿ ಮಿಂದ ಭಾರತ ತನ್ನದೇ ಆದ ಉಜ್ವಲ ಸಂಸ್ಕೃತಿಯ ನಪ್ಪ ಕಟ್ಟಿದೆ. ಈ ಝರಿಯು ಮತ್ತೊಮ್ಮೆ ಎಲ್ಲಾ ಕಡೆಗೂ ಹರಿಯುವುದು.

ಇದೊಂದು ಬೃಹತ್ ಆಸ್ಯಾದ ಸ್ವರೂಪ ಯಾರನ್ನೂ ಆಕ್ರಮಿಸುವ ಸಂಚು ನಮ್ಮದಲ್ಲ ನಮ್ಮ ಐಕ್ಯವನ್ನು ಐರೋಪ್ಯ ಅಮೇರಿಕನ್ನರು ಸಂಶಯದಿಂದ ಕಾಣುತ್ತಿರುವರು ವಿಶ್ವ ಶಾಂತಿ ಸುಗಮಗೊಳಿಸುವುದೇ ನಮ್ಮ ಧ್ಯೇಯ ಪಾಶ್ಚಾತ್ಯರಿಗೆ ಬಿನ್ನಹ ಮಾಡಿ ಸಾಕಾಗಿದೆ. ಮಾನವ ಪ್ರಗತಿಗೆ ಶ್ರಮಿಸಿದ ಯುರೋಪ್ ಅಮೇರಿಕಕ್ಕೆ ನಮ್ಮ ಗೌರವವಿದೆ ಅಣು ಬೊಂಬಿನ ಯುಗದಲ್ಲಿ ನಾವು/ಶಾಂತಿಗಾಗಿ ದುಡಿಯಬೇಕಾಗಿದೆ.

ಆಸ್ಯದ ಸ್ವಾತಂತ್ರ್ಯ ಶಿಲ್ಪಿಗಳಾದ ಸನ್‌ಯತ್‌ಸೆನ್, ಝಗುಲುಲ್ ಪಾಶಾ, ಕೆಮಲ್ ಪಾಶಾ ಮತ್ತು ಗಾಂಧಿ ಇವರಿಗೆ ನಮ್ಮ ಸನ್ಮಾನ ಸಲ್ಲಲಿ.

— ನೆಹುರು.

ವಿಶ್ವ ಧರ್ಮಗಳ ತವರ್ಮನೆ ಆಸ್ಯಾ ಖಂಡ

ಆತ್ಮರಹಿತ ಸಾಮ್ರಾಜ್ಯಶಾಹಿಗಳ ಸುಲಿಗೆಯ ತುತ್ತು

ಆಸ್ಯಾಂತರ್ಗತ ರಾಷ್ಟ್ರಗಳ ಸಂಬಂಧ ವೃದಿ

[ಅಫಘಾನಿಸ್ಥಾನ ಇರಾಕ್ ಇರಾನ್, ಈಜಿಪ್ತ, ಉಜ್‌ಬೆಕ್ (ರಶ್ಯದಲ್ಲಿ), ಎರೇಬಿಯಾ ಮೊದಲಾಗಿ ತುರ್ಕಿ ಟಿಬೆಟ್ ಮಲಯಾ ಮಂಗೋಲಿಯಾ ಇಂಡೋನೇಶ್ಯ, ಇಂಡೋಚೀನಾ ಮೊಧಲಾದ ಮೂವತ್ತೆರಡು ಆಸ್ಯ ಜನಾಂಗಗಳ ಪ್ರತಿನಿಧಿಗಳು ವಿಶ್ವ ಶಾಂತಿ ಸ್ಥಾಪನೆಗಾಗಿಯೂ ತಮ್ಮ ತಮ್ಮ ಸಾಮಾನ್ಯ ಸಂಕಷ್ಟ ಪರಿಹಾರ ಪರಸ್ಪರ ಸಹಾಯ ಸೌಹಾರ್ದ ನಾಗರೀಕತೆಯ ತಿಳುವಳಿಕೆಗಾಗಿಯೂ ದಿಲ್ಲಿಯಲ್ಲಿ ಒಟ್ಟು ಸೇರಿದರು]

ಆಸ್ಯಾ ರಾಷ್ಟ್ರಗಳ ಪರಸ್ಪರ ಸೌಹಾರ್ದ ಪರ್ಯಾಲೋಚನೆಯ ಪವಿತ್ರ ಭಾರತದಷ್ಟು ಯುಕ್ತವಾದ ಬೇರೆ ಸ್ಥಳವಿಲ್ಲ ವಿಶ್ವ ನಾಗರೀಕತೆಗಳ ತಂಗುತಾಣವೆಂಬ ಪಿರಿ ಧರ್ಮಗಳ ಸಂಸ್ಕೃತಿ-ಸ್ಥಾನವೂ ಆಸ್ಯ ಖಂಡವೇ ಆಗಿದ್ದರೂ ಆ ನಾಗರೀಕತೆ ಮತ್ತು ಧರ್ಮ ಪದ್ಧತಿಗಳ ಸಂಧಿ ಸ್ಥಾನವು ಭಾರತವಾಗಿದೆ ಜಗತ್ತಿನ ಅನ್ಯಾವ ದೇಶದಲ್ಲಿ ಭಾರತದಂತಹ ವಿಶಾಲ ಧರ್ಮಸಹಿಷ್ಣುತೆಯ ಕಂಡ ಬರುವುದಿಲ್ಲ ಇಲ್ಲಿಯ ಮಾನವಕೋಟಿಯ ಧಾರ್ಮಿಕ ವಿಕಾಸವು ಅಗಾಧವೂ ಪವಿತ್ರವೂ ಆದುದು

ಆಸ್ಯದ ಇತರ ಭಾಗಗಳಲ್ಲಿ ಯಾವುದಾದರು ಎರಡು ಧರ್ಮಗಳು ಒತ್ತೊತ್ತಿಗೆ ಬಾಳಿಕೊಂಡಿರಬಹುದು. ಆದರೆ ಬುದ್ಧ ಭೂಮಿಯಾದೀ ಭಾರತದಲ್ಲಿ ಹಿಂದೂ, ಕ್ರೈಸ್ತ, ಮತ್ತು ಇಸ್ಲಾಮ ಧರ್ಮ ಸಂಸ್ಕೃತಿಗಳು ಒತ್ತೊತ್ತಿಗೆ ಅಭಿವೃದ್ಧಿಯಾಗುತ್ತಿವೆ ಭಾರತವನ್ನು ಬಿಟ್ಟರೆ ಈ ದೃಷ್ಟಿಯಲ್ಲಿ ಎರಡನೇ ಸ್ಥಾನವು ಚೀನಕ್ಕೆ ಸಲ್ಲುವುದು ಆದರೆ ಚೀನೀ ಜನಾಂಗಿಕರೂ ಈ ಪುಣ್ಯ ಭೂಮಿಯಲ್ಲಿ ಮಿಲನವಾಗಿರುವ ರೀತಿಯನ್ನು ನೋಡುವಾಗ ನಮ್ಮ ದೇಶಕ್ಕೇ ಅಗ್ರಗಣ್ಯ ಸ್ಥಾನ ದೊರಕಬೇಕು

ಹಿಂದೂ ಬೌಧ ಧರ್ಮಗಳ ಅಗಾಧ ಸಾಗರಕ್ಕೆ ಇಸ್ಲಾಮ್ ಇಸಾಯಿ ಧರ್ಮ ಝರಿಗಳು ಸಂಗಮ ಗೊಂಡವು: ಭಾರತೀಯ ಇತಿಹಾಸವು ಅರಬೀ, ಯೆಹೂದಿ ಮತ್ತು ಚೀನಿ ಇತಿಹಾಸಗಳೊಡನೆ ಅನ್ಯೋನ್ಯವಾಗಿ ಪೋಣಿಸಲ್ಪಟ್ಟಿದೆ. ಆಸ್ಯಧ ನಾಗರೀಕತೆಯು ವರ್ಣ ರಂಜಿತ ಹಾಸು ಹೊಕ್ಕುಗಳೊಳಗೆ ಅನೇಕಾನೇಕ ಉಪ ಸೂತ್ರಗಳು ಹೆಣೆಯಲ್ಪಟ್ಟು ಒಂದು ಸರ್ವಾಂಗ ಸುಂದರ ಸಾಂಸ್ಕೃತಿಕ ವಸನವಾಗಿದೆ

ಆಸ್ಯದ ಸಮಸ್ಯೆಗಳು

ಸಂಸ್ಕೃತಿಗಳ ಹೆಚ್ಚಿದಂತೆ ಆಸ್ಯದ ಸಮಸ್ಯೆಗಳೂ ಹೆಚ್ಚಿವೆ ವಿಶ್ವ ರಾಜಕೀಯದಲ್ಲಿ ಆಸ್ಯವು ಬಲಿಷ್ಠ ಜನಾಂಗಳ ಬೇಟೆ ತೋಟವಾಯಿತು ಜಗತ್ತಿನ ವಿಶಾಲ ವ್ಯವಹಾರದಲ್ಲಿ ಆಸ್ಯದ ಜನತೆಗೆ ದಾಸ್ಯದ ಪಾತ್ರ ಸಿಕ್ಕಿತು ಬಿಳಿಯರ ಶೋಷಣ ಪ್ರಧಾನದವಳ ಸಾಮ್ರಾಜ್ಯಶಾಹಿಯು ಆಸ್ಯದ ಜನಾಂಗಗಳನ್ನು ವಶಾಹತು ಕೂಲಿಗಳೆಂದು ಕಡೆಗಾಣಿಸಿ ಅದರ ಸಂಪತ್ತನ್ನು ಪಾದಾಕ್ರಾಂತ ಮಾಡಿಕೊಂಡವು ವರ್ಣ ದರ್ಪವು ಅವರ ಸುಲಿಗೆ ಧೋರಣಕ್ಕೆ ಉತ್ತಮ ಸೌಕರ್ಯ ಒದಗಿಸಿತು

ಹೀಗೆ ಪಾಶ್ಚಾತ್ಯ ರಾಷ್ಟ್ರಗಳ ಗುಲಾಮಗಿರಿಯ ಮಡಿಲಿಗೆ ಬಿದ್ದ ಆಸ್ಯ ಜನಾಂಗಿಕರು ಹಲವು ಶತಮಾನಗಳಿಂದ ಪರಸ್ಪರ ಸಂಪರ್ಕವಿಲ್ಲದೆ ಪ್ರತಿಪತ್ಯೇಕವಾಗಿರ ತೊಡಗಿದರು ಮತ್ತೆ ಯುಗಾಂತರಗಳ ತನ್ನ ದೀರ್ಘ ನಿದ್ರೆಯಿಂದ ಎಚ್ಚೆತ್ತ ಆಸ್ಯಾ ವಿದೇಶಿಯರ ವಿಘಾತುಕ ಹಿಡಿತದಲ್ಲಿ ಸಿಕ್ಕಿದುದನ್ನು ಅರಿತು ಜರ್ಝರಿತವಾದ ತನ್ನ ಐಕ್ಯ ಸಾಧನೆ, ಚೈತನ್ಯಸಂಗ್ರಹಕ್ಕೆ ಸಿದ್ಧತೆ ಮಾಡತೊಡಗಿತು

ಅಮೋಘ ಜಾಗೃತಿ

ಈಜಿಪ್ತದಿಂದ ಇಂಡೋ ಚೀನದ ವರೇಗೆ ಆಸ್ಯನ್ನರು ಬಿಳಿ ಯಜಮಾನನ ಹೊರೆ ಹೊತ್ತು ಹರಿದಾಡುವ ದುರಂತವೇ ದುರಂತ. ಆಸ್ಯನ್ನನ ನಾಡು ಪಾಶ್ಚಾತ್ಯರ ಎಣ್ಣೆ ನಳಿಗೆಯಿಂದಲೂ, ರೈಲು ಕಂಬಿಯಿಂದಲೂ ತಂತಿ ಸರಿಗೆಗಳಿಂದಲೂ ಸುತ್ತಲ್ಪಟ್ಟಿದ್ದು ಅಗ್ನಿ ಕಾರುವ ಯಂತ್ರ ರಾಕ್ಷಸರಿಂದಲೂ, ಆತ್ಮರಹಿತ ಸೈನ್ಯ ಕವಚದಿಂದಲೂ ಬಂಧಿಸಲ್ಪಟ್ಟಿತ್ತು. ಒಂದೆರಡು ಜಾಗತ್ತಿಕ ಯುದ್ಧಗಳ ನಂತರ ಆಸ್ಯದ ಚೈತನ್ಯ ಇಮ್ಮಡಿಯಾಯಿತು. ಅದರ ಚೇತನಾಮಯ ಚಳವಳಕ್ಕೆ ವಿದೇಶಿ ಹಿಡಿತವು ಸಡಿಲಿಸಿತು.

ಚೀನಾ, ಈಜಿಪ್ತ, ಅರೇಬಿಯಾ, ತುರ್ಕಿ, ಇರಾಕ್, ಇರಾನ್, ರಾಷ್ಟ್ರಗಳು ಮೆಲ್ಲಗೆ ಸ್ವಾತಂತ್ರ್ಯದತ್ತ ಧಾವಿಸತೊಡಗಿದಂತೆ ಭಾರತವು ಚಳವಳಕ್ಕೆ ಒಂದು ಸವನೀ ಸ್ಫೂರ್ತಿಯನ್ನೊದಗಿಸಿ ಪರಕೀಯರನ್ನು 'ಬಿಟ್ಟು ತೊಲಗಲು' ಆಜ್ಞಾಪಿಸಿತು ಶಕ್ತಿಯುಕ್ತವಾದ ರಾಜಕೀಯ ಎಚ್ಚರಿಕೆಗೆ ಸಾಮ್ರಾಜ್ಯಶಾಹಿಯು ಭಯದಿಂದ ತತ್ತರಿಸಿತು ಅತ್ತ ಇಂಡೋನೇಸ್ಯಾ ಇಂಡೋಚೀನಗಳಲ್ಲೂ ಭೀಕರ ರಾಜಕೀಯ ಕ್ರಾಂತಿಗಳಾದುವು ದೊಡ್ಡ ದೇಶಗಳಲ್ಲಿ ಬಾಳಿ ಬದುಕುವ ಆಶೆ ಮಣ್ಣುಗೂಡಲು ಸಾಮ್ರಾಜ್ಯಶಾಹಿಗಳು ತಮ್ಮ ಉದುರುವಿಕೆಯ ಕಾಲಕ್ಕೆ ಚಿಕ್ಕ ರಾಷ್ಟ್ರಗಳನ್ನು ಅಮುಕಿ ಹಿಡಿಯತೊಡಗಿವೆ ಇಂದು ಎರಡು ಘೋರ ವಿಶ್ವ ವೈಧಗಳ ನಂತರವೂ ಶಕ್ತಿ ರಾಷ್ಟ್ರಗಳು ತಮ್ಮ ಸಾಮ್ರಾಜ್ಯಶಾಹಿಯ ಕೇಂದ್ರವನ್ನು ಸ್ಥಳಾಂತರಗೊಳಿಸಲು ಪ್ರಯತ್ನ ಮಾಡುತ್ತಿವೆ

ಫ್ರೆಂಚರು ಇಂಡೋಚೀನದಲ್ಲೂ, ರಶ್ಯವು ತುರ್ಕಿ ಮಂಚೂರಿಯಗಳಲ್ಲೂ ಬ್ರಿಟಿಷರು ಮಲಯದಲ್ಲೂ, ಮಾತ್ರವಲ್ಲ ಪುಟ್ಟ ಡಚ್ಚರು ಇಂಡೊನೇಸ್ಯದಲ್ಲೂ ಶಾಶ್ವತ ಬಾಳಲು ಪ್ರಯತ್ನಗಳನ್ನು ಮಾಡುತ್ತಿದ್ದಾರೆ ಅಮೇರಿಕವಾದರೋ ತನ್ನ ಸಂಪತ್ತು ಶಕ್ತಿಗಳ ಬಲದಿಂದ ಡಾಲರ್ ಡಂಗುರವನ್ನು ಚೀನ, ಅರೇಬಿಯಗಳಲ್ಲಿ ಬಾರಿಸಹತ್ತಿದೆ

ಆಸ್ಯದ ಐಕ್ಯ

ಇಂದು ಆಸ್ಯವು ಸ್ವಾತಂತ್ರ್ಯದ ಜಯಭೇರಿಯನ್ನು ಹೊಡೆದು ಜಗತ್ತಿನ ದಾಸ್ಯ

(೬ನೇ ಪುಟಕ್ಕೆ ಮುಂದುವರಿದಿದೆ)

★ ದಾಸ್ಯ ರಹಿತ ಆಸ್ಯಾ ★

ನಾವು ಕಾಣುವ ಕನಸು ಒಂದೇ ನಮ್ಮದು ಭಿನ್ನ ಭಾಷೆ, ಸಂಸ್ಕೃತಿ. ಧರ್ಮಗಳ ಒಗ್ಗೂಟ ಸಮಾಧಿಯಿಂದೆದ್ದೇಳಿರಿ ಚಿರ ವಸಂತದ ಪ್ರತೀಕವಾಗಿರಿ ಮರಣವಿಲ್ಲ, ಮರಣವೆಂದಿಗೂ ಇರಲಾರದು ಎಂದೆದ್ದು ಗರ್ಜಿಸಿರಿ ಜನನ ಮರಣಗಳಿಲ್ಲದ ಆತ್ಮವು ಜೀವನದ ಉತ್ಕ್ರಾಂತಿ ಮಟ್ಟವೇರುತ್ತಿದೆ ನಮ್ಮ ನಕ್ಷತ್ರಲೋಕ ಗಮನವನ್ನು ತಡೆವವರಾರು? ಚಂದ್ರನಿಗಾಗಿ ಅಳುವುದು ಬೇಡ ಆಕಾಶವೇರಿ ಅದನ್ನು ತರೋಣ ಒಕ್ಕಟ್ಟಿನ ಪ್ರತಿಜ್ಞೆ ಮಾಡೋಣ 'ದ್ವೇಷ ಹಿಂಸೆ ಬೇಡ. ಪ್ರೀತಿ ಕ್ಷಮೆ ಅನುಕಂಪ ಬೇಕು' ಎನ್ನುವ ಮಹಾತ್ಮ ಗಾಂಧಿ ಸಂದೇಶ ಅರಿಯೋಣ ನಮ್ಮ ಸಂಸ್ಕೃತಿಗಳೇ ನಮ್ಮ ಐಕ್ಯಕ್ಕೆ ಸಾಧನ ಸರೋಜಿನಿ

ಗಾಂಧೀಜಿ ಗವರ್ನರರ ಸಹಾಯ ನಿರಾಕರಿಸಿದರು.

ನೌಕಾಲಿಯ ಹಿಂದೂ ಮುಸ್ಲಿಮರು ಅವರ ಕಾಲಿಗೆ ಬಿದ್ದರು

ಅಹಿಂಸಾ ತತ್ವದ ಅಮೋಘ ಯಶಸ್ಸು

"ಮಹಾತ್ಮರು ಏನೇ ಹೇಳಲಿ ನೌಕಾಲಿಯ ಪ್ರವಾಸ ದುರ್ಘಟನೆಗೆ ಪರಿಹಾರವೇನೂ ಆಗಿಲ್ಲ" ಹೀಗೆಂದು ಅನೇಕ ಹಿಂದುಗಳು ಮನಸ್ಸಿನಲ್ಲಿ ತೃಪ್ತಿ ಸೂಚಿಸದೆ ಇದ್ದವರಿದ್ದಾರೆ. ಒಂದು ಕಡೆಯಿಂದ ಹಿಂದೂ ಧರ್ಮಾಭಿಮಾನಿಗಳೂ ಇನ್ನೊಂದು ಕಡೆಯಿಂದ ಮುಸ್ಲಿಂ ಜಾತ್ಯಾಂಧರೂ 78 ವರ್ಷದ ಮಹಾತ್ಮರನ್ನು ಉಗ್ರವಾಗಿ ಟೀಕಿಸುತ್ತಿದ್ದರು. ಹಿಂದುಗಳಿಗೆ ಘೋರ ಅನ್ಯಾಯ ಅನಾಚಾರಗಳಿಗೆ ಗುರಿ ಮಾಡಿದ ಮುಸಲ್ಮಾನರ ಕಾಲು ಹಿಡಿದು ಸ್ನೇಹ ಮಾಡಲು ಹೋಗಿರುವರೆಂದು ಹಿಂದೂ ಮಹಾಸಭೆಯವರೂ, ಮುಸಲ್ಮಾನರನ್ನು ಅವಮಾನಕ್ಕೆ ಗುರಿ ಮಾಡಿ ಇಸ್ಲಾಮ್ ಧರ್ಮ ತತ್ವದ ಅಪಪ್ರಚಾರ ಮಾಡುವುದು ಅವರ ಉದ್ದೇಶವೆಂದು ಲೀಗಿನವರೂ ನಿರ್ದಾಕ್ಷಿಣ್ಯವಾಗಿ ಟೀಕಿಸುವುದನ್ನು ಲಕ್ಷಿಸದೆ ವೃದ್ಧ ಗಾಂಧೀಜಿ "ನನ್ನ ತತ್ವದ ಶಕ್ತಿ ಅಳೆಯಬೇಕಾಗಿದೆ." ಎನ್ನುತ್ತ ನೌಕಾಲಿಗೆ ನಡೆದೇ ಬಿಟ್ಟರು.

ಸನ್ನಿವೇಶಗಳೆಲ್ಲವೂ ಅವರಿಗೆ ಬದ್ಧ ವಿರುದ್ಧವಾಗಿದ್ದುವೆಂದು ಮತ್ತೆ ಹೇಳಬೇಕಾಗಿಲ್ಲ. ಬಂಗಾಲದಲ್ಲಿ ಜಾತೀಯ ಪಕ್ಷಪಾತದ ಸರಕಾರ ಒಂದು ಕಡೆ. ಆ ಪಕ್ಷಕ್ಕೆ ನ್ಯಾಯವಾಯರಂತಹ, ಗವರ್ನರರಂತಹ ಮೇಲಾಧಿಕಾರಿಗಳ ಅಪ್ರತ್ಯಕ್ಷ ಸಹಾನುಭೂತಿ. ಆದರೆ ಸರಿ ಕಂಡದ್ದನ್ನು ಸಾಗಿಸಿಯೇ ತೀರಬೇಕು. "ರಾಜಕಾರಣ ಈಗ ನನಗೆ ಮಹತ್ವದ್ದಲ್ಲ. ಭಾರತದ ಸ್ವಾತಂತ್ರ್ಯ ಬಂಗಾಲ ಬಿಹಾರಗಳಲ್ಲಿ ಗಂಡಾಂತರಕ್ಕೊಳಗಾಗಿದೆ." ಎಂದು ದಿಲ್ಲಿಯಲ್ಲಿನ ಮಹತ್ವದ ರಾಜಕೀಯ ಮಾತುಕತೆ ಉಪನಾಯಕರಿಗೆ ಬಿಟ್ಟು ಬಿಟ್ಟು ಭಾರತದ ಅಗ್ರಗಣ್ಯ ವೃದ್ಧ ವ್ಯಕ್ತಿ ಕಂಕಣ ತೊಟ್ಟಿತು.

ಕಲ್ಕತ್ತಾದಲ್ಲಿ ಲೀಗ ಪ್ರಧಾನಿ ಸುಹ್ರವರ್ದಿಯವರು ಗಾಂಧೀಜಿಗೆ ಕೊರಾನವನ್ನು ಸಿಗಿಸಿ ನೌಕಾಲಿ ಯಾತ್ರೆಯನ್ನು ಮುಂದಕ್ಕೆ ಹಾಕಬೇಕೆಂದು ವಿನಂತಿಸಿದರು. ಗವರ್ನರ್ ಬರೋಸ್ ಅವರು 'ತಮಗೆ ಬೇಕಾದ ಸಹಾಯ ನೀಡುವೆ' ಎಂದರು. ಆದರೆ ಶುದ್ಧ ಪ್ರಜಾಪ್ರಭುತ್ವ ಪ್ರಿಯ ಮಹಾತ್ಮಾ "ಜನ ಚುನಾಯಿತ ಪ್ರತಿನಿಧಿ ಪ್ರಧಾನಿ ಇರುವಾಗ ನಿಮ್ಮ ಸಹಾಯಬೇಕಾಗಿಲ್ಲ" ಎಂದು ಖಂಡತುಂಡ ತಿಳಿಸಿದರು.

ಸುಹ್ರವರ್ದಿಯವರಿಗೆ ಬಿಸಿ ನೀರಿನ ಗುಟುಕಾಯಿತು. ದಿಲ್ಲಿಯಿಂದ ಲೀಗಿನ ಕುರಿತು ಡಾನ್ ಪತ್ರಿಕೆ "ಬಂಗಾಲದಿಂದ ಗಾಂಧಿಯನ್ನು ಹೊರದೂಡಿರಿ" ಎಂದು ದ್ವೇಷಾಗ್ನಿ ಕಾರುತ್ತಿದೆ. ಮಹಾತ್ಮಾರ ಸತ್ಯ ಶೋಧನೆಯಿಂದ ತಮ್ಮ ಪಕ್ಷಪಾತ ಕುಂದು ಜಗತ್ತಿಗೆ ಕಂಡು ಬಂದು ಇತರ ಪ್ರಾಂತ್ಯಗಳಲ್ಲಿ ಅದರ ಪ್ರತಿ ಕ್ರಿಯೆ (ಬಿಹಾರದಂತೆ) ಆದರೆ ಅದರ ಹೊಣೆಗಾರಿಕೆಯೂ ತನ್ನ ಮೇಲೇ ಬೀಳುವುದೆಂದು ಅವರು ಅಂಜಿಕೆಪಟ್ಟರು. ಮಹಾತ್ಮರನ್ನು ಅವರು ಪ್ರತಿಜ್ಞೆ ತೊಟ್ಟ ಪಥದಿಂದ ಹಿಂತಿರಿಗಿಸುದು ಅಸಾಧ್ಯದ ಕೆಲಸವೇ ಸರಿ.

ಅಗ್ನಿ ಪರೀಕ್ಷೆ

ಕಡೆಗೆಂತೂ ಮಹಾತ್ಮರು ತಮ್ಮ ತತ್ವ ಪ್ರಯೋಗ ಪ್ರಯಾಣವನ್ನು ಪ್ರಾರಂಭಿಸಿಯೇ ಬಿಟ್ಟರು. "ನನ್ನದು ಬಿರುಗಾಳಿ ಪ್ರಚಾರ ಸಂದರ್ಶನವಲ್ಲ. ನಿಮ್ಮೊಡನೆ ನಿಮ್ಮವನಾಗಿ ಇಲ್ಲಿ ಇಲ್ಲಲು ಬಂದಿದ್ದೇನೆ. ಈ ಹಿಂದೂ ಮುಸ್ಲಿಂ ದ್ವೇಷದ ಕ್ರಿಡಿಯು ಆರುವವರೆಗೆ ನಾನಿಲ್ಲಿಂದ ಕದಲುವಂತಿಲ್ಲ" ಎಂದು ಮಹಾತ್ಮರು ಶ್ರೀ ರಾಮಪುರದ ರಾಮ ರಹಿಂ ಪ್ರಾರ್ಥನೆ ಸಭೆಯಲ್ಲಿ ಸ್ಪಷ್ಟ ತಿಳಿಸಿದರು.

ಮೊದಮೊದಲು ಮಹಾತ್ಮರ ಪ್ರಾರ್ಥನೆಗೆ ಮನುಷ್ಯರ ಸುಳಿವಿರಲಿಲ್ಲ. ಮುಸಲ್ಮಾನರು ಅಲಕ್ಷದಿಂದಿದ್ದರು; ಹಿಂದುಗಳಿಗೆ ಭೀತಿ ಬಿಟ್ಟಿದ್ದಿಲ್ಲ. ಸಾಯಂಕಾಲದ ನಂತರ ಒಂದು ನರ ಪ್ರಾಣಿಯೂ ಮನೆ ಬಿಟ್ಟು ಮಾರ್ಗಕ್ಕೆ ಬರುತ್ತಿರಲಿಲ್ಲ. ಹಿಂದುಗಳು ಹಗಲು ಹೊತ್ತಿನಲ್ಲೂ ಮುಸಲ್ಮಾನರಂತೆ ಲುಂಗಿ ಸುತ್ತಿ ತಿರುಗುತಿದ್ದರು. ಹಿಂದೂಗಳ ದೇವಸ್ಥಾನಗಳಲ್ಲಿ ಗಂಟೆ ಬಾರಿಸುತ್ತಿರಲಿಲ್ಲ. ಸಾಮೂಹಿಕ ಸುಲಿಗೆ, ಸಾಮೂಹಿಕ ಕೊಲೆ, ಸಾಮೂಹಿಕ ಸುಡುವಿಕೆ ಮಾತ್ರವಲ್ಲ ಅವರ್ಣನೀಯ ಸಾಮೂಹಿಕ ಸ್ತ್ರೀ ಅನಾಚಾರಗಳಿಂದ ಕಳಂಕ ರಹಿತವಾದ ಆ ನಾಡು ಮಸಣದ ಮರುಭೂಮಿಯ ವಾತಾವರಣ ಧರಿಸಿತ್ತು.

"ನಗೆ ಸದ್ಯದ ಯಾತ್ರೆಯು ಅತ್ಯಂತ ಕಠಿಣವೆಂದು ತೋರುತ್ತದೆ. ನನ್ನ ಜೀವಮಾನದಲ್ಲೇ ಇನ್ನೊಂದು ಅಘೋರ ಕಾರ್ಗತ್ತಲೆಯನ್ನು ನಾನು ಎದುರಿಸಿಲ್ಲ. ಇಷ್ಟಾದರೂ ನಾನು ಕಂಗೆಟ್ಟಿಲ್ಲದುದು ಮತ್ತು ನಿರಾಶನಾಗದಿದ್ದುದು ಒಂದು ತೃಪ್ತಿಯ ಸಂಗತಿ. ನಾನು ಎಂತಹ ಪ್ರಸಂಗಕ್ಕೂ ಸಿದ್ಧನೇ ಇದ್ದೇನೆ." ಹೀಗೆಂದು ಮಹಾತ್ಮರು ತಮ್ಮ ಮನೋ ವೇದನೆಯನ್ನು ಒರ್ವ ಸ್ನೇಹಿತರಿಗೆ ಪ್ರತಮುಖೇನ ಅರುಹಿದರು.

"ಮಾಡು ಇಲ್ಲವೆ ಮಡಿಯು ಎಂಬ ಪ್ರತಿಜ್ಞೆಯನ್ನು ಇಲ್ಲಿ ಅಗ್ನಿ ಪರೀಕ್ಷೆಗೊಳ ಮಾಡುತ್ತೇನೆ. 'ಮಾಡು' ಅಂದರೆ ಹಿಂದೂ ಮುಸಲ್ಮಾನರು ಒಗ್ಗಟ್ಟಾಗಿ ಇಲ್ಲಿ ಜೀವಿಸುವಂತೆ ಮಾಡುವುದು. 'ಮಡಿ' ಎಂದರೆ ಆ ಪ್ರಯತ್ನದಲ್ಲಿ ಪ್ರಾಣ ತ್ಯಾಗವನ್ನಾದರೂ ಮಾಡುವುದು. ಇದು ಅತ್ಯಂತ ಕಠಿಣದ ಕೆಲಸ. ದೇವರ ಇಚ್ಛೆ ಇದ್ದಂತಾಗಲಿ." ಮಹಾತ್ಮರ ನಿರ್ಧಾರ ಧೃಡವಾಗುತ್ತ ಬಂತು.

ದಿಲ್ಲಿಯಲ್ಲಿ ಮುಂದಿನ ಕಡೆ ಭಾರೀ ರಾಜಕಾರಣ ವ್ಯವಹಾರ ಸಾಗುತ್ತಿದೆ. ರಾಷ್ಟ್ರ ಸಂಸ್ಥೆಯ ವಿರಾಟ ಅಧಿವೇಶನವೂ ಜರಗಿತು. ಎಲ್ಲಾ ಕಡೆಗಳಲ್ಲೂ ಒಂದು ಅಪೂರ್ವ ಔನ್ನತ್ಯ ಕಾಣಿಸುತ್ತಿದೆ. ಅಲ್ಲಿರಬೇಕಾದ ವ್ಯಕ್ತಿ ಎಲ್ಲೊ ಮೂಲೆಯೊಂದರಲ್ಲಿ 'ದಾರಿ'ಗಾಗಿ ಅರಸುತ್ತಿದೆ. ಮತ್ತೊಂದು ಕಡೆ ಲೀಗಿನ ಜನರು "ಮುದಿ ಮಹಾತ್ಮನ ಮಾತಿಗೆ ಸ್ಥಿರತೆಯಿಲ್ಲ. ಆತ ಪದೇ ಪದೇ ಕತ್ತಲಲ್ಲಿ ಕಣ್ಣು ಕಾಣಿಸುವುದಿಲ್ಲವೆಂದು ಒದರಿಕೊಳ್ಳುತ್ತಾನೆ" ಎಂದು ವ್ಯಂಗವಾಗಿ ನಕ್ಕರು.

ಒಂದೇ ಗುರಿ

ಜನವರಿ 2ರಂದು 78 ವರ್ಷದ ಮುದುಕ ಕಾಲು ನಡೆ ಯಾತ್ರೆ ಪ್ರಾರಂಭಿಸಿದ; 'ದಿನಕ್ಕೊಂದು ಗ್ರಾಮ' ಅವರ ಕಾರ್ಯಕ್ರಮ. "ದೇವರು ಹಿಂದೂ ಮುಸಲ್ಮಾನರ ಹೃದಯಗಳನ್ನು ಪರಿಶುದ್ಧಗೊಳಿಸಲಿ." ಎಂದೇ ಅವರ ಮಂತ್ರವಾಯಿತು. "ಯಾರಿಗೂ ಹೆದರಬೇಡಿರಿ ದೇವರ ಭಯವೊಂದಿರಲಿ."

"ಅಹಿಂಸಾತ್ಮಕ ಸ್ತ್ರೀಯಾಗಲಿ ಪುರುಷನಾಗಲಿ ಪ್ರತಿಕಾರ ಮಾಡದೇ ಮಡಿಯಬೇಕು. ಆತ್ಮ ರಕ್ಷಣೆ ಮಾಡಿಕೊಳ್ಳುವಾಗ ರಾಗ ದ್ವೇಷವನ್ನಿಟ್ಟುಕೊಳ್ಳಬಾರದು. ಇದೇ ಧೀರತ್ವಗಳ ಪರಮಾವಧಿ. ನನ್ನ ತತ್ವವೆಂದು ತಪ್ಪಾಗಿ ಹೇಳಲ್ಪಡುವ ಜೀವನದ ಈ ಉನ್ನತೋತ್ತಮ ಸೂತ್ರಗ್ರವನ್ನು ಅನುಸರಿಸಲಾಗದಿದ್ದರೆ ಪ್ರತಿಕಾರ ಪ್ರತಿ ಹಿಂಸೆ ಮಾಡುವುದೇ ಎರಡನೆಯ ಉತ್ತಮ ದಾರಿ ಆದರೆ. ಮೊದಲನೇ ಮಾರ್ಗಕ್ಕಿಂತ ಇದೇ ಅತೀ ವಿಪರೀತ. ಹೇಡಿತನವು ಹಿಂಸೆಗಿಂತ ಹೇಯವಾದ ಕುಂಠಿತನ. ಮರಣಕ್ಕಂಜುವ ಹೇಡಿ ಪ್ರತಿಕಾರ ಬಯಸುವನಾದರೂ ಅದನ್ನು ಇತರರಿಂದ ಮಾಡಿಸಲು — ಮುಖ್ಯವಾಗಿ ಸರಕಾರದ ಸಹಾಯದಿಂದ — ಇಚ್ಛಿಸುವನು. ಹೇಡಿಯು ಮಾನವನಿಗಿಂತ ಕೀಳ್ಮಟ್ಟದವನು. ಸ್ತ್ರೀ ಪುರುಷರಿಂದ ಸಮಾಜದಲ್ಲಿರಲು ಅವನು ಅಯೋಗ್ಯ."

ಹೀಗೆಂದು ಮಹಾತ್ಮರು ಅಹಿಂಸೆ ಹೇಡಿತನದ ವ್ಯಾಖ್ಯಾನ ಮಾಡಿದರು. ಅ ನೀತಿ, ಅನ್ಯಾಯ, ಅನಾಚಾರಗಳು ಯಾವ ಧರ್ಮದ ಬೋಧನೆಯಲ್ಲಿಲ್ಲವೆಂದು, ಧರ್ಮದ ಹೆಸರಲ್ಲಿ ಅಧರ್ಮ ಕರ್ಮ ನಡೆಸಿದವರು ಆ ಧರ್ಮಕ್ಕೆ ಕಳಂಕವನ್ನು ತಂದೊತ್ತಿದರೆಂದೂ ಸಾರಿದರು. ಕ್ರಮೇಣ ಮಹಾತ್ಮರ ಸಂದೇಶವು ನೌಕಾಲಿಯಲ್ಲಿ ಮಾರ್ಧನಿಗೊಡತೊಡಗಿತು. ಬಹುಸಂಖ್ಯಾಕರಲ್ಲಿ ಪಶ್ಚಾತಾಪವು, ಅಲ್ಪ ಸಂಖ್ಯಾಕರಲ್ಲಿ ಧೈರ್ಯ ವಿಶ್ವಾಸಗಳೂ ಹುಟ್ಟತೊಡಗಿದವು. ಪ್ರಾರ್ಥನಾ ಸಭೆಗಳಲ್ಲಿ ಮುಸಲ್ಮಾನರು ಭಾಗವಹಿಸ ಹತ್ತಿದರು. ಮುಸಲ್ಮಾನರ ಮನೆಗಳಲ್ಲಿ ಮಹಾತ್ಮರು ಅತಿಥಿಗಳಾಗಿ ಸ್ವೀಕರಿಸಲ್ಪಟ್ಟರು. ದೋಚಿ ಕೊಂಡ ಒಡವೆಗಳು ಹಿಂತಿರುಗಿಸಲ್ಪಟ್ಟವು. ಅಲ್ಪ ಸಂಖ್ಯಾಕರಿಗೆ ಬರಹ ಮೂಲಕ ಭರವಸೆಗಳು ಕೊಡಲ್ಪಟ್ಟವು. ಹಿಂದೂಗಳು ತಾವು ಬಿಟ್ಟೋಡಿದ ಸ್ಥಳಗಳಿಗೆ ಬಂದು ಪುನಃ ನೆಲಸ ತೊಡಗಿದರು.

"ಗಾಂಧೀಜಿ, ಬಂಗಾಲ್" ಎಂದು ವಿಳಾಸ ಬರೆದರೆ ಪತ್ರಗಳು ನೌಕಾಲಿಗೆ ಮುಟ್ಟುತಿದ್ದುವು. "ಅವರು ದೇವರ ಮನುಷ್ಯರು" ಎಂದು ಮುಸಲ್ಮಾನರು ಮಹಾತ್ಮರ ವಿಷಯ ಸುತ್ತಿಸ ಹತ್ತಿದರು. ಅನೇಕ ಸಲ ಮಹಾತ್ಮರ ಬಳಿ ಬಂದ ಹೃದ್ರಾವಕ ವರದಿಗಳು ಕಣ್ಣೀರು ಇಳಿಸುವಂತಹುದು. ಆದರೆ ಕಣ್ಣೀರನ್ನು ಒರಿಸ ಹೋದವರು ಅದನ್ನು ಇಳಿಸುತ್ತ ಕೊಡುವುದೆ? ನೊಂದವರನ್ನು ಸಮಾಧಾನಿಸಿದರು. ರಾಮ ನಾಮೋಚ್ಚಾರಣೆಯ ಶ್ರೇಷ್ಠ ತಾಪಪರಿಹಾರಕ ಮಂತ್ರ ಶಕ್ತಿಯನ್ನು ಉಪದೇಶಿಸಿದರು.

"ಅಹಿಂಸೆಯು ಒಂದು ಆರೋಗ್ಯ ಬಿಂದು. ಅದು ಶರೀರವನ್ನು ಪ್ರವೇಶಿಸಿದೊಡನೆ ಇಡೀ ದೇಹವನ್ನು ವ್ಯಾಪಿಸುವುದು." ಎಂಬ ಮಹಾತ್ಮರ ನಂಬಿಕೆಯು ಬಲವಾಗತೊಡಗಿತು.

ಜಿಂದುಳ್ಕರ್.

(೧ನೇ ಪುಟದಿಂದ)

ವಿಶ್ವ ಧರ್ಮಗಳ ತವರ್ಮನೆ ಅಸ್ಯಾಖಂಡ

ದಬ್ಬಾಳಿಕೆಗಳನ್ನು ತಡೆಯಬೇಕಾಗಿದೆ. ಅತ್ಯಪಾರ ಭೂಜಲ ಸಂಪತ್ತಿನಿಂದ ಮೆರೆಯುವ ಪ್ರಧಾನ ಖಂಡವು ವರ್ಣದರ್ಪಕರ ವಶಕ್ಕೆ ತಪ್ಪಿಸಬೇಕಾಗಿದೆ. ತನ್ನ ಸರ್ವ ಶಕ್ತಿಗಳನ್ನು ಸಂಕಷ್ಟ ರಹಿತವಾದ ಆರ್ಥಿಕ ಸಾಂಪ್ರದಾಯ ರಚನೆಗೆ ಅಣಿಗೊಳಿಸಿ ಶತಮಾನಗಳಿಂದ ಪಾಶ್ಚಾತ್ಯರ ಪದಘಾತಿಗೆ ತುತ್ತಾದ ದೀನ ಪೌರ್ವಾತ್ಯರ ಆತ್ಮವನ್ನು ಉದ್ಧರಿಸಬೇಕಾಗಿದೆ.

ದಿಲ್ಲಿಯ ಪುರಾಣ ಕಿಲ ಗೋಡೆಗಳಿಗೆ, ಪ್ರಾಚೀನ ಸೌರಾಷ್ಟ್ರದ ಕುರುಕ್ಷೇತ್ರದ ಬಳಿಯಲ್ಲಿಂದು ಮೂವತ್ತೆರಡು ಆಸ್ಯ ಜನಾಂಗದ 250 ಪ್ರತಿನಿಧಿಗಳು ಈ ಉದಾತ್ತ ಧ್ಯೇಯ ಸಾಧನೆಗಾಗಿ ಸಮಾಲೋಚಿಸಿದರು. ಆಸ್ಯದ ಕಲೆ, ಸಂಸ್ಕೃತಿ, ಸಾಹಿತ್ಯ ಮೊದಲಾದವುಗಳಿಗೆ ಸಂಬಂಧಿಸಿದ ಗಾಢ ವಿಷಯಗಳು ಅವರ ವಿಚಾರಣೆಯ ಗಮನಕ್ಕೆ ಬಂದಿವೆ. ವಿಶ್ವ ಗೌರವಾನ್ವಿತರಾದ ಪಂಡಿತ ನೆಹರು, ವಿಶ್ವ ಕವಯಿತ್ರಿ ಸರೋಜಿನಿ, ಇಸ್ಲಾಮ ಪಂಡಿತ ಸನ್ಮಾನಿತ ಆಜಾದ್, ವಿಶ್ವ ತತ್ವ ಜ್ಞಾನಿಗಳ ರಾಧಾಕೃಷ್ಣನ್, ಸ್ತ್ರೀ ಸ್ವಾತಂತ್ರ್ಯ ಸರದಾರಿಣಿ ಕಮಲಾದೇವಿ ಇವರೇ ಮೊದಲಾದವರು ತಮ್ಮ ಆಸ್ಯದ ಬಂಧು ಭಗಿನಿಯರಿಗೆ ಹೃತ್ಪೂರ್ವಕ ಸ್ವಾಗತ ಬಯಸಿದರು.

ಪ್ರತಿನಿಧಿಗಳು ಬುದ್ಧ ಭೂಮಿಗೂ, ಆರ್ಯ ಭೂಮಿಗೂ ತಮ್ಮ ದೇಶಗಳ ಜನಗಳ ಪರವಾಗಿ ಸೌಹಾರ್ದ, ಸಹಕಾರದ ಸಂದೇಶಗಳನ್ನಿತ್ತರು. ತಮ್ಮ ಪ್ರೀತಿಯ ಸಹ ಆಸ್ಯನ್ನರಿಗೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಪೂರ್ವ ಯಶ ಕೋರಿದರು. ಆಸ್ಯವು ಒಟ್ಟುಗೂಡುತ್ತಿದೆ ಪೌರ್ವಾತ್ಯವು ಭುಜಕ್ಕೆ ಭುಜ ಕೊಟ್ಟು ಮುನ್ನಡೆಯುತ್ತಿದೆ; ಸಾಮ್ರಾಜ್ಯಶಾಹಿಯು ತನ್ನ ವಿಧಿ ನಿಯಮಿತ ಸಮಾಧಿಗೆಯ್ಯುತಿದೆ. ಆಸ್ಯದಲ್ಲಿನ ಶಾಂತಿಯೇ ವಿಶ್ವ ಶಾಂತಿಯ ನೆಲಗಟ್ಟು. ಆಸ್ಯದ ಸ್ವಾತಂತ್ರ್ಯವೇ ದಾಸ್ಯದ ಅಂತ್ಯ.

ಬಾವುಗಳನ್ನು ಕೂಡಲೇ ಗುಣ ಪಡಿಸಿರಿ

ನೋವನ್ನು ಉಂಟುಮಾಡುವ ವಿಷಕಾರಿ ಬಾವುಗಳು ಈ ರೀತಿ ಗುಣವಾಗುತ್ತವೆ. ಅವನ್ನು ಆಗಾಗ ನೀರಿನಿಂದ ಕುಟಿಕೂರಾ ಸೋಪು ಹಾಕಿ ತೊಳೆಯಿರಿ; ಅದರ ಮೇಲೆ ಕುಟಿಕೂರಾ ಮುಲಾಮು ಹಚ್ಚಿರಿ.



ಕುಟಿಕೂರಾ ಮುಲಾಮು

CUTICURA OINTMENT

ವಾರಾಂತ್ಯ ವರದಿ ವಿಮರ್ಶೆ

ಹೊಸ ರಾಜಪ್ರತಿನಿಧಿ

ವಾರೆನ್ ಹೆಸ್ಟಿಂಗ್ಸರು ಭಾರತದ ಮೊದಲು ವ್ಯಾಸರಾಯರಾದರೆ ವೇವಲ್ಲರು ಕೊನೆಯವರು ಎಂದು ಈಗಾಗಲೇ ಇತಿಹಾಸಗಾರರಿಗೆ ಬೆಂದು ಅಂಕವನ್ನು ಪತ್ರಿಕೋದ್ಯೋಮಿಗಳು ಸೂಚಿಸಿರುವರು ಹಾಗಾದರೆ ವೇವಲ್ಲರ ಸ್ಥಾನಕ್ಕೆ ಬಂದ ಮೌಂಟಬೆಟನ್ನರ ಸ್ಥಾನಮಾನವೇಂತಹುದು?

ವ್ಯಾಸರಾಯರ ಅಧಿಕಾರ ಪ್ರತಿಜ್ಞೆ ತೆಗೆದುಕೊಳ್ಳುವಾಗ ಗೃಹ ಖಾತೆಯ ಮುಖ್ಯಾಧಿಕಾರಿಗಳು "ನನ್ನ ಕೆಲಸಕ್ಕೆ ಸಮ್ಮತಿಯೆ?" ಎಂದು ಕೇಳುವ ರೂಢಿ ಇದೆ ಸಾಮಾನ್ಯವಾಗಿ ತಲೆಯ ಸಂಜ್ಞೆತದಿಂದಲೇ ವ್ಯಾಸರಾಯರು ಸಮ್ಮತಿ ಎನ್ನುತಿದ್ದರು ಈ ಸಲ ಮೌಂಟ್ ಬೆಟನ್ನರು 'ಸಮ್ಮತಿ' ಕೊಡುವಾಗ ಎರಡೂ ಪಕ್ಷದಲ್ಲಿ ಮುಂದಿರುವ ಮಂತ್ರಿವರ್ಯರನ್ನು ಒಬ್ಬೊಬ್ಬರಾಗಿ ನೋಡುತ್ತ ಅವರ ಸಮ್ಮತಿ ಪಡ ಕೊಂಡನಂತರ 'ಒಪ್ಪಿಗೆ' ಎಂದರು. ಇದರಿಂದ ತಾವು ಕೇವಲ ಪಟನಾತ್ಮಕವೇಲಧಿಕಾರಿಯಾಗಿರುವ ಅವರ ಇಚ್ಛೆಯು ಮುನ್ನೋಟವಿದೆಂದು ರಾಜಕೀಯ ಕೇಂದ ಗಳಲ್ಲಿ ಗ್ರಹಿಸಲಾಗಿದೆ

ಹೊಸಬರಲ್ಲ

ಮೌಂಟ್ ಬೆಟನ್ನರು ಭಾರತಕ್ಕೆ ಅಪರಚಿತರಲ್ಲ ವಿಕ್ಟೋರಿಯಾ ಮಹಾರಾಜ್ಞಿಯವರ ಮರಿಮೊಮ್ಮಗನ ಗಿದ್ದು ಆರನೇ ಜಾರ್ಜರ ಹತಿರದ ಸೋದರ ಬಂಧು 1921ರಲ್ಲಿ ಪ್ರಿನ್ಸ್ ಆಪ್ ವೇಲ್ಸರ ಜತೆ ಇಲ್ಲಿಗೆ ಬಂದಿದ್ದ ಬೊಂಬ್ಬಾ [illegible] ಕಹಿ ತಿಳಿದಿದ್ದಾರೆ ನಂತರ 1943 ರ ಒಂದ ವರ್ಷ ದಿಲ್ಲಿಯಲ್ಲಿದ್ದು ಒವರ್ [illegible] ಕದನ ದರ್ಶಿಸಿದ್ದಾರೆ [illegible] ಅನೇಕ ಭಾರತೀಯ ಮುಖಂಡರ ಪರಿಚಯ ಮಾಡಿಕೊಂಡಿದ್ದಾರೆ ಸಿಂಗಪುರದಲ್ಲಿ ನೆಹರುರಿಗೆ ಅವರ ಅತಿಥಿಗಳಾಗಿದ್ದರ [illegible] ಅಹಂ ವರಿಗೂ ಹೊಸ ವ್ಯಾಸರಾಯ [illegible] ತುಂಬ ಸ್ನೇಹವಿದೆ [illegible] ವಿನೋದ ಮಾತ ಕತೆಯಾಡುವುದೆ ಪರಿ [illegible]

ನವ ಧೋರಣೆ

[illegible] ಸೈನ್ಯದ ಮುಖ್ಯ [illegible] ಕಾರಿಯಾಗಿ [illegible] ಬೆಟನರಿಗೆ ಭಾರತದ [illegible] ಪರಿಚಯ ವಿದೆ ಇಲ್ಲಿಗ ಮೊನ್ನೆ ಹೊರಡುವ ವೇಳೆ ಒರ್ವ ಭಾರತೀಯ ಪತ್ರಿಕಾ ಪ್ರತಿನಿಧಿಯು "ಭಾರತದ ಚಟ್ನಿ ನಿಮಗೆ ರುಚಿಸುವುದೇ" ಎಂದು ಪ್ರಶ್ನಿಸಿದಾಗ "ಚೆನ್ನಾಗಿ ರುಚಿಸುತದೆ ಭಾರತೀಯರು ನನಗೆ ತುಂಬಾ ಪ್ರಿಯರು" ಎಂದು ಸಾಮಾನ್ಯ ಮನ ಷ್ಯನ ಶ್ರೇಯಸ್ಸೇ ತಮ್ಮ ಗುರಿ ಎಂಬುದನ್ನು ತೋರಿಸಿ ಕೊಟ್ಟರೆಂದು ಹಲವರು ಅರ್ಥ ಮಾಡಿಕೊಂಡಿದ್ದಾರೆ

ಆಮಂತ್ರಣ

ವೇವಲ್ಲರು ಪ್ರಾರಂಭಿಸಿದ ಧೋರಣೆಯನ್ನು ತಾವು ಪೂರ್ಣಗೊಳಿಸುವುದಾಗಿ ಹೊಸ ವ್ಯಾಸರಾಯರು ನಿರೂಪಿಸಿದ್ದಾರೆ ಮಹಾತ್ಮಾ ಗಾಂಧಿ, ಜಿನ್ನರಿಗೆ ಮಾತುಕತೆಗಾಗಿ ಆಮಂತ್ರಣ ಕಳುಹಲ್ಪಟ್ಟಿದೆ ಸದ್ಯದಲ್ಲೆ ಎರಡು ರಾಜಕೀಯ ಪಕ್ಷಗಳ ಪರವಾಗಿ ಸಮಾಲೋಚನೆ ನಡೆಯಬಹುದು. ಕೊಂಗ್ರೆಸು ಎಲ್ಲವನ್ನು ಸ್ಪಷ್ಟಮಾಡಿ ಕುಳಿತಿದೆ ಬ್ರಿಟಿಷ್ ಸರಕಾರದ ದೀರ್ಘ ಕಾಲದ ಮತ್ತು ನಡುಗಾಲದ ಯೋಜನೆಗಳೆರಡನ್ನು ಸ್ವೀಕರಿಸಿದ್ದು ಒಂದು ತರದ ವಿಚ್ಛೇಧಿಕರಣಕ್ಕೂ ಅದು ಸಮ್ಮತಿ ಇತ್ತಿದೆ ಅಲ್ಪಸಂಖ್ಯಾಕರ ಪರವಾಗಿ ಮಹಾತ್ಮರು ಕೈಕೊಂಡ ಕಾರ್ಯವಂತೂ ಲೋಕವಿಧಿತ್ವ

ವಿದ್ಯೆ ಪಂಜಾಬದ ಪರಿಸ್ಥಿತಿಯನ್ನು ಹತೋಟಿಗೆ ತರಲು ಲೀಗ ಮುಖಂಡರಿಗ್ಗೆ ಅಸಾಧ್ಯವಾದ ಸಂಗತಿಯೂ ಸ್ಪಷ್ಟವಾಗಿದೆ ಈ ಸಂದರ್ಭದಲ್ಲಿ ವಿಭಾಗೀಕರಣವಾಗುವುದಾದರೆ ಕೊಂಗ್ರೆಸು ಸೂಚಿಸಿದ ರೀತಿಯಲ್ಲಾಗುವುದೇ ನ್ಯಾಯ ಸಿದ್ಧವ ದುದು ಇಲ್ಲವೆ ಯೋಗ್ಯ ಭರವಸೆಗಳನ್ನು ಕೊಟ್ಟು ಲೀಗನ್ನು ಅಖಂಡ ಭಾರತದ ಸಂಯುಕ್ತ ಏರ್ಪಾಡಿನಲ್ಲಿ ತರಬೇಕಾಗುವುದು

ಇವೆರಡಕ್ಕೂ ಒಪ್ಪದಿದ್ದರೆ ಈ ಸಲ ಲೀಗಿನ ಸ್ಥಾನಮಾನಗಳು ನಿರ್ಬಲವಾಗಿ ಕಂಡು ಬಂದು ಮೌಂಟ್ ಬೇಟನರು ಧೈರ್ಯದ ಧೋರಣೆಯನ್ನನುಸರಿಸಬೇಕಾಗುವುದು ತೆರಿಗೆ ಯೋಜನಯಲ್ಲಿ ಲೀಗಿನ ಅರ್ಥಸಚಿವ ಲಿಯಾಖತರು ತನ್ನ ಸಂಗಾತಿಯವರ ಸೂಚನ ಮನ್ನಿಸಿ ತಿದ್ದುಪಡಿ ಮಾಡಲೊಪ್ಪಿದುದು ಭಾವಿ ಒಪ್ಪಂದಕ್ಕೆ ಪೂರ್ವ ಸೂಚನೆಯೆನ್ನಬಹುದು

ವೇವಲ್ಲರ ನಿರ್ಗಮನ

ನೌಕಾಧಿಕಾರಿಗೆ ಸ್ಥಾನ ಕೊಟ್ಟು ಸೇನಾಧಿಕಾರಿ ವೇವಲ್ಲು ನಿವೃತ್ತರಾದರ ಸೈನಿಕನ ಸತ್ಯ ಕೆಲ ಸಿ [illegible] ದೃಷ್ಟಿಕೋನದಲ್ಲಿ ಸೀದು ನೆಟ್ಟಗಿರುವಷ್ಟು ಭೇದವಿದೆಯ [illegible] ಬಾವಿಸ [illegible] ಸರ್ಕಾರ [illegible] ಸಂಪೂರ್ಣ ಸತ್ಯವಲ್ಲ ತಾವು ಅಧಿಕಾರ ವಹಿಸಿದಾಗ ವೇವಲ್ಲರ "ಹಿಂದೂ ಮತ್ತು ಮುಸ್ಲಿಮರೊಳಗೆ ಅದೆಷ್ಟು ಭೇದಾಭೇದಗಳಿರಬಹುದು ಆದರೆ ಅದರಿಂದ ದೇಶದ ಭೌಗೋಲಿಕ ಲಕ್ಷಣಗಳನ್ನು ಬದಲಿಸ ಬರುವುದಿಲ್ಲ ಸೈನಿಕನ ಒರಟು ಮಾತುಗಳಲ್ಲೇ ಸತ್ಯವನ್ನು ಹೇಳ ಬಯಸುತ್ತೇನೆ." ಎಂದು [illegible] ಅಖಂಡ ಭಾರತದ ಕನಸ್ಸಿನ [illegible]

ತಾವು [illegible] ಇದರಿಂದ ವೇವಲ್ಲರ [illegible] ಸಹಜ ಇಲ್ಲಿಯ [illegible] ರಾಜಕೀಯದಲ್ಲಿ ವಿದೇಶಿಯನಿಗೆ ಅಭಿರುಚಿಯಿಲ್ಲ ಅವರು ವಿರೋಧಿ ಪಕ್ಷಗಳನ್ನು ಸಾಧ್ಯವಿದ್ದಷ್ಟು ಮಟ್ಟಿಗೆ ಹತ್ತಿರ ತರಲು ಹೃತ್ಪೂರ್ವಕ ಪ್ರಯತ್ನಿಸಿರುವರೆಂಬುದಕ್ಕೆ ದೇಶಿ ದುರೀಣ್ಯರೂ ಪತ್ರಿಕೆಗಳೂ ಅವರಿಗೆ ಕೆತ್ತ ಶ್ಲಾಘನೆಯೇ ಸಾಕ್ಷಿ. ಅಂತೂ ಯಾರನ್ನು ನೋಯಿಸಲು ಅವರಿಗೆ ಮನಸ್ಸಿಲ್ಲದೆ ಸ್ವಲ್ಪ ದಾಕ್ಷಿಣ್ಯಕ್ಕೊಳಗಾಗಿ ಅವರು ಅಪ್ರತ್ಯಕ್ಷ ಲೀಗಿಗೆ ಸಹಾನುಭೂತಿ ತೋರಿಸಿದಂತೆ ಅವರು ಅನುಸರಿಸಿದ ಕೆಲವು ಧೋರಣೆಗಳಿಂದ ವ್ಯಕ್ತವಾದರೂ ಅದಕ್ಕೆ ದುರುದ್ದೇಶದ ಬಣ್ಣ ಕೊಡಬರುವುದಿಲ್ಲ

ಮದ್ರಾಸ್ ಮಂತ್ರಿಮಂಡಳ

ಆ ವಾರ್ಯವಾದುದು ನಡೆದೇ ಬಿಟ್ಟಿತು ಮೊದಲು ಕೆಲವೊಂದ ಆತಂಕಗಳನ್ನು ತಂದಿಡಲು ಪ್ರಯತ್ನಿಸಿದರಾದರೂ ಕೊನೆಯಲ್ಲಿ ಪ್ರಕಾಶಮ ರು ವಿಶಾಲ -ಹೃದಯತೆ ತೋರಿಸಿ ತಮ್ಮ ಪ್ರಜಾಪ್ರಭುತ್ವ ವಾತ್ಸಲ್ಯವನ್ನು ಕಾರ್ಯರೂಪಕ್ಕೆ ತಂದು ಗೊಂದಲವಿಲ್ಲದೆ ಮಂತ್ರಿಮಂಡಳದ ಸದಿಗ್ಧದಿಂದ ಹೊರಬಿದ್ದರು

ಹೊಸ ಪ್ರಧಾನ ಒಮಂದೂರ ರಾಮಸ್ವಾಮಿ ರೆಡ್ಡಿಯವರು ಅತ್ಯ ಗಾಂಧಿ ಅನಯಾಯಿ ಗಳಂತೆ ಪ್ರಿತ [illegible] ಆದರೆ [illegible] ತಳವಾದರೂ ನುರಿತ ಅನುಭವಸ್ಥರಿಂದ [illegible] ಗವರ್ನರರು ಹಾರೈಸಿದಂತೆ ಮದ್ರಾಸಿನ ಮೊದಲ ಆವಶ್ಯಕತೆ ಯ ದರೆ ಸ್ಥಿರವಾದ ಮ ತ್ರಿಮಂಡಳ [illegible] ಮಂತ್ರಿಮಂಡಳಾರಂಭದಿ ದ [illegible] ಸನ ಸಭಾ ಪಕ್ಷದಲ್ಲ ಅತೃಪ್ತಿ [illegible] ಇದ್ದುದರಿಂದ ಅದರ ಶ್ಲಾಘ [illegible] ಧೋರಣೆಗಳಲ್ಲಿಯೂ ಕಾರ್ಯಚರಣೆಯಲ್ಲಿ ನೇಕಾದಷ್ಟು ಬಿಗಿಯಿಲ್ಲದೆ ಹೋದವು ಅನೇಕ ಕಲೀಯ ದೋಷಗಳು ಅದರಲ್ಲಿ ಕಂಡು ಬಂದಿವೆ ಒಟ್ಟು [illegible] ಪಿತರಣೆಗಳಲ್ಲಿರ [illegible] ಗಳನ್ನು ಹೊಸ ಮಂತ್ರಿಮ [illegible] ಹೋಗಲಾಡಿಸ ವುದೆಂದು ಹಾರೈಸಲಾಗಿದೆ

ಅಂತರ್ ಶುದ್ಧಿಯಿಂದ ಸೌಂದರ್ಯತೆಯನ್ನು ಕಾಯ್ದು ಕೊಳ್ಳಬಹುದು ವನಸ್ಪತಿ ಮೂಲಿಕೆಗಳಿಂದ ತಯಾರಿಸಿದ ಈ ಭೇದಿ ಔಷಧಿಯು ದಿನನಿತ್ಯ ತಿಂದ ಉಳಿದ ಆಹಾರ ಭಾಗವನ್ನು ಹೊರ ಹಾಕಿ ರಕ್ತ ಸಂಚಾರವು ಸರಿಯಾಗುವಂತೆ ಮಾಡಿ ಜೀರ್ಣ ಕಾರ್ಯವು ಸರಿಯಾಗುವಂತೆ ಮಾಡುವುದು

ವನಸ್ಪತಿ ಔಷಧಿಗಳಿಂದ ತಯಾರಿಸಿದ

BILE BEANS

ಬೈಲ್ ಬೀನ್ಸ್ ಆರೋಗ್ಯ ಮತ್ತು ಶಕ್ತಿ ಪ್ರದರ್ಶಕ.

ಚಂದ್ರಲೋಕ ಪ್ರಯಾಣಕ್ಕೆ ಸಿದ್ಧತೆಯಾಗಿದೆ

ಎಟಂ ಶಕ್ತಿಯ ಆಕಾಶ ಬಾಣ

ವಿಜ್ಞಾನಿತ್ರಯರ ಸಾಹಸ

ಬ್ರಿಟಿಷ್ ಖಗೋಳ ಪರಿಶೋಧನಾ ಸಂಘದವರು ಚಂದ್ರಲೋಕ ಪ್ರಯಾಣದ ಯೋಜನೆಗಳನ್ನು ಸಂಪೂರ್ಣಗೊಳಿಸಿದ್ದಾರೆ ಆ ಯೋಜನೆ ಪ್ರಕಾರ ಚಂದ್ರಗ್ರಹಕ್ಕೆ 4 ದಿನಗಳಲ್ಲಿ ತಲಪುವ 1000ಟನ್ ಭಾರದ ಮೂರು ಪ್ರಯಾಣಿಕರನ್ನೊಯ್ಯುವ ಒಂದು ಆಕಾಶಬಾಣ ಯಂತ್ರವು ತಯಾರಾಗುತ್ತಿದೆ

ಚಂದ್ರಲೋಕದಲ್ಲಿ ಮೆಲ್ಲನೆ ಇಳಿಯಲೂ ಅಲ್ಲಿಂದ ಪುನಃ ಹಿಂತಿರುಗಲೂ ಸುಲಭಸಾಧ್ಯವಾಗುವಂತಹ ವಿಶೇಷ ತರದ ಉಪಕರಣಗಳು ಅದಕ್ಕೆ ಜೋಡಿಸಲಾಗುತ್ತವೆ. ಮಾತವಲ್ಲ ಶಶಿಪ ದೇಶದಲ್ಲಿಳಿದು ಸಂಚರಿಸಲು ಅವಶ್ಯವಿರುವ ಅಂಗ ಕವಚಗಳೂ ಅದರಲ್ಲಿರುತ್ತವೆ ಈ ಕವಚಗಳಲ್ಲಿ ಉಸಿರಾಟದ ಉಪಕರಣಗಳೂ ಇರುತ್ತವೆ ಕಾರಣ ಆ ಗ್ರಹಪ್ರದೇಶದಲ್ಲಿ ಗಾಳಿ ವಾತಾವರಣವಿಲ್ಲವಂತೆ

ಅಂತರ್ರಾಷ್ಟ್ರೀಯ ಸಹಕಾರದಿಂದ

ಈ ಸಂಬಂಧ ಪರಿಶೋಧನೆ ನಡೆಸುವ ಗಹ ವಿಜ್ಞಾನಿಗಳು ತಮ್ಮ ಆಕಾಶಬಾಣಕ್ಕೆ ಯಾವತರದ ಶಕ್ತಿಧ್ರಾವಕವನ್ನು ಉಪಯೋಗಿಸಬೇಕೆಂಬುದರ ಕುರಿತೂ ಧೀರ್ಘ ಪರಿಶೀಲನೆ ನಡೆಸಿದ್ದಾರೆ ಸಿಡಿಮದ್ದುಗಳೂ, ಪೆಟ್ರೋಲು, ಮತ್ತಿತರ ಸ್ಫೋಟಕ ದ್ರಾವಕಗಳೂ ಮಾತ್ರವಲ್ಲದೆ ಇತ್ತೀಚೆಗಿನ ಎಟಂ ಶಕ್ತಿಯ ಕುರಿತೂ ಪ್ರಯೋಗ ನಡೆದಿದೆ ಭೂಲೋಕಕ್ಕೂ ಚಂದ್ರಲೋಕಕ್ಕೂ ನಡುವೆ ಇರುವ ಆಕರ್ಷಣಶಕ್ತಿ ಪ್ರದೇಶವನ್ನು ದಾಟಲು ಎಟಂ ಚೈತನ್ಯವು ಅತ್ಯುತ್ತಮವೆಂದು ತಿಳಿದುಬಂದಿದೆ

ಈ ಪ್ರಯೋಗದ ನಿಪುಣ ಮತ್ತು ನಿರ್ವಹಣದಲ್ಲಿ ಅಂತರ್ರಾಷ್ಟ್ರೀಯ ಸಹಕಾರವನ್ನು [illegible] ಶಕ್ತಿ ರಾಷ್ಟ್ರಗಳೂ ಈ ಸಾಹಸಕ್ಕೆ [illegible] ಶವ [illegible] ಕೊಡುವವೆಂದು ನಿರೀಕ್ಷಿಸಲಾಗುತ್ತದೆ

ಮಂಜುಗಡ್ಡೆಯಾಗದ ನೀರು

ರಶ್ಯನ್ ವಿಜ್ಞಾನಿಗಳ ಶೋಧೆ

ವಾತಾವರಣದ ಹವೆಯು ಡಿಗ್ರಿ ಸಂಟಿಗ್ರೇಡಿಗೆ ಇಳಿದಾಗ ನೀರು ಹೆಪ್ಪುಗಟ್ಟಿ ಐಸ್ ಆಗುತ್ತದೆಂಬುದು ಇದುವರೆಗಿನ ಸಾಮಾನ್ಯ ಅನುಭವ ಆದರೆ ಇದಕಿಂತಲೂ ಇನ್ನೂ ಹೆಚ್ಚು ಕೆಳಗಿನ ಹವಾ ಪ್ರಮಾಣದಲ್ಲೂ ನೀರು ಘನೀಭೂತವಾಗದ ಪರಿಸ್ಥಿತಿಯೆಂದು ಪ್ರಕೃತಿಯಲ್ಲಿದೆ ಎಂದು ರಶ್ಯದ ಭೂಗರ್ಭ ಶಾಸ್ತ್ರಜ್ಞರಾದ ಟಿಪ್ಕೊವಿಜಾ ಅವರು ಒಂದು ವಿಜ್ಞಾನ ಸಭೆಯಲ್ಲಿ ತಿಳಿಸಿದರು

ರಶ್ಯದ ಈಶಾನ್ಯ ಉತ್ತರದ ಧ್ರುವವಲಯದಲ್ಲಿ ಈ ಕುರಿತು ಪರಿಶೋಧನೆಗಳಾಗುತ್ತಿವೆ ಈ ವಲಯದ ಕೆಲವು ಕಡೆಗಳಲ್ಲಿ ಇಂತಹ ನೀರಿನ ಆಶ್ರಯಗಳು ದೊರೆತಿವೆ ಸೆಂಟಿಗ್ರೇಡ್ ಡಿಗ್ರಿಯ ಕೆಳಗೆ ನೂರು ಡಿಗ್ರಿಯ ವರೇಗೆ ವಾತಾವರಣ ಶೀತವಿದ್ದರೂ ಈ ನೀರು ಗಡ್ಡೆಕಟ್ಟುವುದಿಲ್ಲವಂತೆ.

ಈ ವಿಚಿತ್ರ ಲಕ್ಷಣವು ನೀರಿಗೆ ಹೇಗುಂಟಾಗುತ್ತದೆ, ಅದರಿಂದ ಮಣ್ಣಿಗೆ, ಬೆಳೆಗಳಿಗೆ, ಕಟ್ಟಡಂಬನೆಗೆ ಯಾವ ರೀತಿಯ ಅನುಕೂಲವಿದೆ ಎಂದು ರಶ್ಯನ್ ವಿಜ್ಞಾನಿಗಳು ಕಂಡುಹಿಡಿಯಲು ಪ್ರಯತ್ನಿಸುತಿದ್ದಾರೆ.

ಎರಡು ವರ್ಷಗಳಲ್ಲಿ ಸಂಪೂರ್ಣ ಸಾಕ್ಷರತೆ

ಇತಿಹಾಸದಲ್ಲೇ ಅತ್ಯಪೂರ್ವ ಸಾಹಸ

ಶಿಕ್ಷಣತಜ್ಞ ಡಾ| ಕೆಣಿಯವರ ಯೋಜನೆ

ಬರುವ ವರ್ಷದ ಜೂನ್ ತಿಂಗಳಲ್ಲಿ ಬ್ರಿಟಿಷರು ಇಲ್ಲಿಂದ ಹೊರಡುವರಾದರೂ ಅವರು ಉದ್ದೇಶಪೂರ್ವಕವೆಂಬಂತೆ ಅಲಕ್ಷಿಸಿದ ಇಲ್ಲಿನ ಜನತೆಯ ನಿರಕ್ಷರತಾ ಸಮಸ್ಯೆಯು ಭಾವೀ ಭಾರತ ಸಂಚಾಲಕರಿಗೊಂದು ಕಠಿಣ ತೊಡಕಾಗಿಯೇ ಉಳಿಯುವುದು.

ಭಾರತದಲ್ಲಿಂದು ಶೇಕಡಾ 87 ಮಂದಿ ನಿರಕ್ಷರ ಕುಕ್ಷಿಗಳಿರುವರು. ಎರಡು ಮೂರು ವರ್ಷಗಳಲ್ಲಿ ಈ ಅಗಾಧ ಜನಕೂಟವು ಮುದ್ರಿತಾಕ್ಷರಗಳನ್ನು ಓದಲೂ ಬರೆಯಲೂ ಮತ್ತು ತಿಳಕೊಳ್ಳಲೂ ಸಮರ್ಥರಾಗುವಂತೆ ಮಾಡಬೇಕಾದುದು ಅತ್ಯಾವಶ್ಯಕ ಕರ್ತವ್ಯ. ಈ ಕೆಲಸವೇನೂ ದುಸ್ಸಾಧ್ಯವಾದುದಲ್ಲ. ಕಾರಣ ಕೇವಲ $1\frac{1}{2}$ ಕೋಟಿ ಜನಸಂಖ್ಯೆಯಿರುವ ತುರ್ಕಿ ದೇಶವು ಕೆಮಲ್ ಪಾಶಾರವರ ನಾಯಕತ್ವದಲ್ಲಿ ಒಂದೇ ವರ್ಷದಲ್ಲಿ ಸಂಪೂರ್ಣ ಸಾಕ್ಷರತೆ ಸಾಧಿಸಿತು. ನಾವೂ ನಿರ್ಧಾರಯುಕ್ತರಾಗಿ ಕೆಲಸ ಮಾಡಿದರೆ ಈ ಪ್ರಯತ್ನದಲ್ಲಿ ಯಶಸ್ವಿಯಾಗದಿರಲಾರೆವು.

ನಮ್ಮಲ್ಲಿನ ಪ್ರಾಂತ್ಯ ಮತ್ತು ದೇಶೀ ಸಂಸ್ಥಾನಗಳು ಒರ್ವ ವಿದ್ಯಾಂಗಾಧಿಕಾರಿಯ ಕೈಕೆಳಗೆ ಒಂದು ಒಂದು ಪ್ರತ್ಯೇಕ ಪ್ರಾಯಸ್ಥರ ಶಿಕ್ಷಣ ಪ್ರಚಾರ ಇಲಾಖೆಯನ್ನು ಸ್ಥಾಪಿಸಬೇಕು. ಅವಶ್ಯ ಬಿದ್ದರೆ ಸಾಲ ಎತ್ತಿಯಾದರೂ ಈ ಕಾರ್ಯಕ್ಕೆ ಬೇಕಾಗುವ ಧನವನ್ನು ಸಿದ್ಧಪಡಿಸಬೇಕು. ಪ್ರಾಯಸ್ಥರು ಕಡ್ಡಾಯವಾಗಿ ಅಕ್ಷರಸ್ಥರಾಗಬೇಕಾಗಿ ಒತ್ತಾಯಪಡಿಸುವ ಶಾಸನವೊಂದನ್ನು ಕೂಡಲೇ ಜಾರಿಗೆ ತರಬೇಕು.

ಕಾರ್ಯ ಯೋಜನೆ

ಸಾಕ್ಷರತೆಯ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಈಗಿನ ಪ್ರಾಥಮಿಕ ಶಾಲೆಗಳನ್ನು ಬೆಳಗ್ಗಿನ ಅವಧಿಯಲ್ಲಿ ಕೇವಲ ಮೂರುವರೆ ಗಂಟೆಗಳ ಕಾಲ ಜರಗಿಸುವಂತೆ ಮಾಡಿ ಉಳಿದ ಅವಧಿಯಲ್ಲಿ ಉಪಾಧ್ಯಾಯರು ಸಾಕ್ಷರತೆಯ ತರಗತಿಗಳನ್ನು ಜರಗಿಸುವಂತೆ ಏರ್ಪಡಿಸಬೇಕು. ಇದರಿಂದ ಮುಂದಿನ ಪ್ರಾಥಮಿಕ ಶಾಲೆಗಳು ಬೆಳಗ್ಗೆ ಚಿಕ್ಕವರ ಶಾಲೆಯಾಗಿಯೂ ಮಧ್ಯಾಹ್ನ ನಂತರ ದೊಡ್ಡ 'ಮಕ್ಕಳ' ಶಾಲೆಯಾಗಿಯೂ ಮಾರ್ಪಡುವುದು. ಹೀಗೆ ಬೆಳಿಗ್ಗೆಯ ನಂತರ ಬಿಡು ಸಿಕ್ಕುವ ಉಪಾಧ್ಯಾಯರು ಮಧ್ಯಾಹ್ನ, ಸಾಯಂಕಾಲ ಮತ್ತೆ ರಾತ್ರೆಗಳಲ್ಲಿ ಮೂರು ಪ್ರಾಯಸ್ಥರ ಶಿಕ್ಷಣ ತರಗತಿಗಳನ್ನು ಜರಗಿಸಬೇಕು. ಈ ಮೂರು ಅವಧಿಗಳಲ್ಲಿ ತಮಗೆ ಅನುಕೂಲವಿರುವ ಯಾವ ಸಮಯದಲ್ಲಾದರೂ ಈ ತರಗತಿಗೆ ಬಂದು ಕಲಿಯಬಹುದು.

ಈ ತರಗತಿಗಳು ಎರಡು ಗಂಟೆ ಕಾಲ ಜರಗುವವು. ಉಪಾಧ್ಯಾಯರು ಮಾತೃಭಾಷೆ ಇಲ್ಲವೆ ಪ್ರಾದೇಶಿಕ ಭಾಷೆಯನ್ನು ಕೇವಲ ಓದಲು ಮತ್ತು ಬರೆಯಲು ಬಾಗುವಷ್ಟನ್ನು ಮಾತ್ರ ಕಲಿಸಿದರೆ ಸಾಕು. ಈ ಶ್ರಮಕ್ಕಾಗಿ ಉಪಾಧ್ಯಾಯರಿಗೆ ಅವರು ಕಲಿಸುವ ಪ್ರತಿ ವಿದ್ಯಾರ್ಥಿಗೆ ತಲಾ ಮೂರು ರೂಪಾಯಿಯಂತೆ ವೇತನ ಕೊಡಬೇಕು. ಒರ್ವ ಉಪಾಧ್ಯಾಯನು 15 ವಿದ್ಯಾರ್ಥಿಗಳಿಗಿಂತಲೂ ಹೆಚ್ಚಾಗಿ ತೆಗೆದುಕೊಳ್ಳಬಾರದು. ಆರು ತಿಂಗಳಲ್ಲಿ ಓರ್ವ ಪ್ರಾಯಸ್ಥನನ್ನು ಶಿಕ್ಷಿತನನ್ನಾಗಿ ಮಾಡಬೇಕು ಮತ್ತು ಹಾಗೆ ಮಾಡಲು ಸಾಧ್ಯವಿದೆ. ಈ ಅವಧಿಯಲ್ಲಿ ಚರಿತ್ರೆ, ಭೂಗೋಳ, ವಿಜ್ಞಾನ ಮೊದಲಾದ ಉಪ ವಿಷಯಗಳ ಕಲಿಸುವಿಕೆಯಿಲ್ಲ. ಹೀಗೆ ಓರ್ವ ಉಪಾಧ್ಯಾಯನು ವರ್ಷಕ್ಕೆ 30 ಮಂದಿಗಳನ್ನು ಅಕ್ಷರಸ್ಥರನ್ನಾಗಿ ಮಾಡಬಹುದು.

ವಿದ್ಯಾರ್ಥಿಗಳು ಉಪಾಧ್ಯಾಯರಾಗಿ

ಪ್ರಾಥಮಿಕ ಶಾಲಾ ಉಪಾಧ್ಯಾಯರಲ್ಲದೆ 1947ರಿಂದ ಮುಂದೆ ಮೆಟ್ರಿಕ್ ಪಾಸಾಗುವ ಪ್ರತಿ ವಿದ್ಯಾರ್ಥಿಯೂ ಒಂದು ವರ್ಷದ ತನಕ ಸಾಕ್ಷರತಾ ಪ್ರಚಾರ ಕೈಕೊಳ್ಳಬಹುದು. ಅವರಿಗೂ ಮೇಲ್ಕಾಣಿಸಿದ ರೀತಿಯಲ್ಲೇ ತಲಬು ಸಿಗುವುದು. 15 ವಿದ್ಯಾರ್ಥಿಗಳನ್ನು ತೆಗೆದುಕೊಂಡರೆ ತಿಂಗಳಿಗೆ ಅವನಿಗೆ 45 ರೂ ಸಂಬಳ ಸಿಕ್ಕುವಂತಾಗುವುದು. ತಮ್ಮ ಆದಾಯ ಹೆಚ್ಚಿಸಲಿಚ್ಛಿಸುವ ಇತರ ಶಿಕ್ಷಿತರೂ ತಮ್ಮ ಬಿಡು ಸಮಯದಲ್ಲಿ ಈ ಕೆಲಸವನ್ನು ಕೈಕೊಳ್ಳಬಹುದು. ವಿದ್ಯಾ ಇಲಾಖೆಯಿಂದ ನಿರ್ದೇಶಿಸಲ್ಪಟ್ಟಂತೆ ಸಾಕ್ಷರತಾ ಕಾರ್ಯದ ಮೇಲ್ತನಿಕೆ ನೋಡಲು ಪರಿಶೀಲನಾಧಿಕಾರಿಗಳನ್ನೂ, ಇನ್ಸ್‌ಪೆಕ್ಟರುಗಳನ್ನೂ ನೇಮಿಸಬೇಕು.

ಉಚ್ಚ ಶಿಕ್ಷಣ

ಆರು ತಿಂಗಳ ಸಾಕ್ಷರತೆ ಅವಧಿಯಾದಾಕ್ಷಣ ಮತ್ತೆ ಮೂರು ತಿಂಗಳ ಒಂದು ವಿಶೇಷ ತರಬೇತಿಯನ್ನೇರ್ಪಡಿಸಿ ಅದರಲ್ಲಿ ಪುರಾಣ ಕತೆಗಳ, ಕೈಗಾರಿಕೆ, ಕೃಷಿಗಾರಿಗೆ, ಪ್ರಜಾ ಧರ್ಮ ಶಾಸ್ತ್ರ ಭೂಗೋಳ ಇದಕ್ಕೆ ಸಂಬಂಧಿಸಿದ ಸರಳ ಪಾಠ ವಿಷಯಗಳನ್ನು ಕಲಿಸುವ ಏರ್ಪಾಡು ಇರಬೇಕು.

ದೇಶ ವಿಶಾಲಕ್ಕೆ ಗ್ರಂಥ ಭಂಡಾರ ವಾಚನಾಲಯಗಳ ಏರ್ಪಾಡು ಮಾಡಿ ಓದುವಿಕೆಯ ಅಭ್ಯಾಸಕ್ಕೆ ಸೌಕರ್ಯ ಕಲ್ಪಿಸಬೇಕು. ಶಿಕ್ಷಿತರಾದವರ ಪ್ರತಿ ಮನೆಯವರು ಕನಿಷ್ಠ ಪಕ್ಷಕ್ಕೆ ಒಂದು ದಿನ ಇಲ್ಲವೆ ವಾರ ಪತ್ರಿಕೆಯನ್ನು ಕೊಂಡು ವಾಚನಾಲಯಕ್ಕೆ ಕೊಡಬೇಕು.

ಸರಕಾರದ ಹಣವಿಲ್ಲವೆಂಬ ಕಾರಣದಿಂದ ಈ ಕಾರ್ಯ ನಿಲ್ಲಬಾರದು. ಕೇಂದ್ರ ಸರಕಾರದಿಂದ ಪ್ರಾಂತ್ಯಗಳಿಗೆ ಶೇಕಡಾ 50 ರಷ್ಟು ಸಂಭಾವನೆ ದೊರಕುವಂತಾಗಬಹುದು. ಹಾಗಾದರೆ ಈ ಸಾಹಸವು ವಿಶ್ವ ಇತಿಹಾಸದಲ್ಲೇ ಅತ್ಯಪೂರ್ವವೆನಿಸುವುದು. ಸಂಪೂರ್ಣ ಸುಶಿಕ್ಷಿತ ಪ್ರಜೆಗಳಿಲ್ಲದೆ ಪ್ರಜಾಪ್ರಭುತ್ವವು ಗಂಡಾಂತರದ್ದೂ ತೊಡಕಿನದೂ ಆಗುವುದು.

ಹಳ್ಳಿಗಳಿಂದ

ಪ್ರಾದೇಶಿಕವಾಗಿ ಸಾಕ್ಷರತಾ ಪ್ರಚಾರವು ಪ್ರಾರಂಭವಾಗುವಂತಿದ್ದರೆ ಅದು ಮೊದಲು ಹಳ್ಳಿಗಳಿಂದಲೇ ಆರಂಭಿಸಲ್ಪಡಬೇಕು. ಇದು ತನಕ ಸುಧಾರಣೆಗಳೆಲ್ಲ ನಗರಗಳಿಂದಾರಂಭವಾಗುತಿದ್ದುವು. ಜನಾಂಗವು ಗ್ರಾಮಾಭಿವೃದ್ಧಿಯನ್ನೂ ಗಮನದಲ್ಲಿಟ್ಟುಕೊಳ್ಳಬೇಕು. ಆದುದರಿಂದ ಮೊತ್ತಮೊದಲು ಈ ಯೋಜನೆಯು ಚಿಕ್ಕ ಚಿಕ್ಕ ಹಳ್ಳಿಯಿಂದಾರಂಭವಾಗಿ ನಂತರ ಕ್ರಮೇಣ ಪಟ್ಟಣ ನಗರಗಳ ಕಡೆ ವ್ಯಾಪಿಸಲಿ. ಕೃಷಿ ಮತ್ತು ಕೈಗಾರಿಕೆ ಕೆಲಸಗಾರರಿಂದ ಇದು ಉಗಮವಾಗಲಿ.



ಸತ್ಕರ್ಮಗಳೇ ನಿತ್ಯ ಸಂಪತ್ತು

ಮುಹಮ್ಮದ್ ಪೈಗಂಬರರ ಬೋಧಾಮೃತ

ಗಾಂಧೀಜಿ ಮೆಚ್ಚಿದ ನೀತಿಕತೆ

ಪ್ರವಾದಿ ಮುಹಮ್ಮದ್ ಪೈಗಂಬರ ಮತ್ತಿತರ ಇಸ್ಲಾಂ ಬೋಧಕರ ನೀತಿ ಬೋಧನೆಗಳುಳ್ಳ ಒಂದು ಚಿಕ್ಕ ಪುಸ್ತಕವನ್ನು ಬಲುಚಿಸ್ತಾನದ ಮುಸ್ಲಿಂ ಸ್ನೇಹಿತರೊಬ್ಬರು ಗಾಂಧೀಜಿಗೆ ಕಳುಹಿಕೊಟ್ಟಿದ್ದಾರೆ. ಅದರಲ್ಲಿನ ಈ ಕೆಳಗಿನ ಸಾಮ್ಯವು ವಿಶೇಷವಾಗಿ ಗಾಂಧೀಜಿಯ ಮೆಚ್ಚಿಗೆಗೆ ಪಾತ್ರವಾಯಿತು.

ದೇವರು ಜಗತ್ತನ್ನು ನಿರ್ಮಿಸಿದಾಗ ಅದು ಹಿಂದಕ್ಕೂ ಮುಂದಕ್ಕೂ ಅಲ್ಲಾಡ ಹತ್ತಿತು. ಆಗ ದೇವರು ಅದರ ಮೇಲೆ ಘನವಾದ ಪರ್ವತಗಳನ್ನಿಟ್ಟು ತೂಗಾಡುವಿಕೆಯನ್ನು ನಿಲ್ಲಿಸಿದನು. ಆಗ ದೇವದೂತರು ಕೇಳಿದರು. "ಓ ದೇವರೆ ನಿನ್ನ ಸೃಷ್ಟಿಯಲ್ಲಿ ಈ ಪರ್ವತಕ್ಕಿಂತಲೂ ಶಕ್ತಿಯುಕ್ತವಾದುದು [illegible] ಇದೆಯೆ?" ಅದಕ್ಕೆ ದೇವರು "ಕಬ್ಬಿಣವು ಈ ಪರ್ವತಗಳಿಗಿಂತ ಬಲಿಷ್ಠವಾದುದು. ಕಾರಣ ಅದು ಪರ್ವತಗಳನ್ನು [illegible]

ಅತಿ ಬಲಿಷ್ಠವಾದುದು

[illegible] ಸೃಷ್ಟಿಯಲ್ಲಿ ಕಬ್ಬಿಣಕ್ಕಿಂತ ಶಕ್ತಿಯು[illegible] ಇದೆಯೆ?

[illegible] ಕಬ್ಬಿಣಕ್ಕಿಂತ [illegible] ಕಬ್ಬಿಣವನ್ನು ಕರಗಿಸುತ್ತದೆ

ಬೆಂಕಿಗಿಂತ ಶಕ್ತಿಯುಕ್ತವಾದುದು ಬೇರೆ ಇದೆಯೆ?

ಹೌದು [illegible] ಅದು [illegible] ಆರಿಸುವುದು

[illegible] ಶಕ್ತಿಯುಕ್ತವಾದುದು ಇದೆಯೆ?

ಹೌದು ಗಾಳಿ ಅದು [illegible] ಸುತ್ತದೆ

ಎಲ್ಲೈ ಸೃಷ್ಟಿಕರ್ತನೆ ಗಾಳಿಗಿಂತ ಶಕ್ತಿಯುಕ್ತವಾದುದು ಬೇರೆ ಯಾವುದಾದರೂ ಇದೆಯೆ?

ಹೌದು ದಾನಗಳನ್ನು ಕೊಡುವ ಸಜ್ಜನರು ಗಾಳಿಗಿಂತ ಹೆಚ್ಚು ಶಕ್ತಿಯುಕ್ತರು. ಗುಪ್ತವಾಗಿ ದಾನಮಾಡುವವರು ಎಲ್ಲರಿಗಿಂತ ಶ್ರೇಷ್ಠರು. ಪ್ರತಿಯೊಂದು ಸತ್ಕಾರ್ಯವು ದಾನವೆನಿಸುತ್ತದೆ. ಸಹೋದರನನ್ನು ಪ್ರೀತಿಸುವುದು, ದಾರಿತಪ್ಪಿದವನಿಗೆ ಸರಿದಾರಿ ತೋರಿಸುವುದು, ಬಾಯಾರಿದವನಿಗೆ ನೀರು ಕೊಡುವುದು ದಾನಗಳು. ಬಂಧು ಮಾನವರಿಗೆ ನಾವು ಮಾಡುವ ಸತ್ಕಾರ್ಯವೇ ಮನುಷ್ಯನ ನಿಜವಾದ ಸಂಪತ್ತು. ಮನುಷ್ಯನು ಸತ್ತಾಗ ಜನರು ಕೇಳುವರು "ಅವನೇನು ಆಸ್ತಿಯನ್ನು ಗಳಿಸಿಟ್ಟಿದ್ದಾನೆ?" ಎಂದು. ಆದರೆ ದೇವದೂತರು "ಅವನು ಸಾಯುವ ಮುಂಚೆ ಯಾವ ಸತ್ಕರ್ಮಗಳನ್ನು ಮಾಡಿದ್ದಾನೆ" ಎಂದು ವಿಚಾರಿಸುವರು.

ಜಿಲ್ಲಾ ಪರಿಚಯ

ಮಂಗಳೂರು

ಶ್ರೀ ಎ. ಬಿ. ಶೆಟ್ರು ಮಂತ್ರಿಗಳಾದರು

ಪ್ರಕಾಶಂ ಮಂತ್ರಿಮಂಡಳ ವಿಸರ್ಜನೆಗೊಳಿಸಲ್ಪಟ್ಟಾಗ ಅದರಲ್ಲಿದ್ದ ನಮ್ಮ ಜಿಲ್ಲೆಯ ಶ್ರೀಮಾನ್ ಕೆ. ಆರ್. ಕಾರಂತರು ಹೊರಬರಬೇಕಾಯಿತು. ಶ್ಲಾಘನೀಯ ಕರ್ತವ್ಯದಕ್ಷತೆಯಿಂದ ಇವರು ಅಭಿನಂದನೀಯರು. ನೂತನ ಮಂತ್ರಿಮಂಡಳದಲ್ಲಿ ಚುನಾಯಿತರಾದ ಮೊದಲ ಎಂಟು ಮಂದಿಗಳಲ್ಲಿ ಬಳ್ಳಾರಿಯ ಶ್ರೀ ಸೀತಾರಾಮ ರೆಡ್ಡಿಯವರೊಬ್ಬರಿದ್ದುದರಿಂದ ಪುನಃ ಇನ್ನೊರ್ವರನ್ನು ಕರ್ನಾಟಕ ಪರವಾಗಿ ಚುನಾಯಿಸುವ ನಿರೀಕ್ಷೆಯಿರಲಿಲ್ಲ. ಈಗ ಶ್ರೀಮಾನ್ ಎ. ಬಿ. ಶೆಟ್ಟಿ ಅವರು ಆರೋಗ್ಯ ಮಂತ್ರಿಗಳಾಗಿ ಆರಿಸಲ್ಪಟ್ಟಿರುವುದು ಅತ್ಯಂತ ಸಮಾಧಾನದ ಮತ್ತು ಅಭಿಮಾನದ ಸಂಗತಿಯಾಗಿದೆ. ಯಾವ ಮಂತ್ರಿಮಂಡಳದಲ್ಲೇ ಆಗಲಿ ನಮ್ಮ ಜಿಲ್ಲೆಗೆ ಅದರಲ್ಲೊಂದು ಸ್ಥಾನ ಖಂಡಿತವಿದೆಯೆಂಬ ಸಂಗತಿಯು ವಿಷದವಾಗುತ್ತದೆ. ಆ ಸ್ಥಾನಕ್ಕೆ ಅರ್ಹರಾದವರೂ ಈ ಜಿಲ್ಲೆಯಿಂದ ಪ್ರತಿನಿಧಿಗಳಾಗಿ ಚುನಾಯಿಸಲ್ಪಡುವುದೂ ಗಮನೀಯ ಸಂಗತಿ. ಅದಿಲ್ಲದಿರುತ್ತಿದ್ದರೆ ಎರಡೆರಡು ಸಾರಿ ಈ ಗೌರವ ನಮ್ಮ ಜಿಲ್ಲೆಗೆ ಸಿಗುವದು ಸಂದೇಹಾಸ್ಪದ.

ಶ್ರೀಮಾನ್ ಶೆಟ್ಟರು ವಿಧಾಯಕ ಚಟುವಟಿಕೆಗಳಲ್ಲಿ ತುಂಬಾ ನುರಿತವರು. ರಾಜಾಜಿ ಮಂತ್ರಿಮಂಡಳದಲ್ಲಿ ಕಾರ್ಯದರ್ಶಿಗಳಾಗಿದ್ದು ಅವರಿಗೆ ಮಂತ್ರಿ ಕಾರ್ಯಕಲಾಪಗಳ ಸಂಪರ್ಕವುಂಟಾಗಿತ್ತು. ನಿರ್ಮಲ ಜೀವನ, ಪ್ರಭಾವಿತ ಜನಪ್ರಿಯತೆ ಮೇಲಾಗಿ ಕುಂದದ ಸೇವಾಶ್ರದ್ಧೆ, ನಿಷ್ಪಕ್ಷಪಾತ ಮನೋಭಾವಗಳಿಂದ ಕೂಡಿರುವ ಮಾನ್ಯ ಶೆಟ್ಟರಿಗೆ ಆರೋಗ್ಯ ಖಾತೆ ದೊರಕಿದುದು ಯಥಾಯೋಗ್ಯವಾದುದು. ಮಹಾನ ಖಾತೆಯನ್ನಾದರೂ ನಿರ್ವಹಿಸಲು ಸಮರ್ಥರಾಗಿರುವ ಅವರು ತಮ್ಮ ವಿಶಾಲ ಸಾರ್ವಜನಿಕ ಜೀವನದ ವ್ಯವಹಾರಿಕಾನುಭವದಿಂದ ತಮ್ಮ ನೂತನ ಹೊಣೆಯನ್ನು ಯಶಸ್ವಿಯಾಗಿ ನಿರ್ವಹಿಸುವರೆಂದ ನಮ್ಮ ಜನತೆಗೆ ತುಂಬಾ ಭರವಸೆ ಇದೆ. ಶ್ರೇಯಸ್ಕರ ಕರ್ತವ್ಯ ನಿರ್ವಹಣೆಗೆ ಅವಶ್ಯವಾದ ಸೌಹಾರ್ದ ಸಹಕಾರಗಳೂ, ಶಕ್ತಿ ಆರೋಗ್ಯಗಳೂ ಅವರಿಗೆ ಲಭಿಸಲೆಂದು ಪ್ರಾರ್ಥಿಸುತ್ತೇವೆ.

ಟಪಾಲು ಕೆಲಸಗಾರ ಸಭೆ: ಮಂಗಳೂರು ಪೋಸ್ಟ್ ಮಾಸ್ಟರ್ ಶ್ರೀ ... ರವರ ಅಧ್ಯಕ್ಷತೆಯಲ್ಲಿ ಜರಗಿದ ಮಂಗಳೂರು ... ಖಾತೆ ಕೆಲಸಗಾರರ ಸಭೆಯಲ್ಲಿ ಅಂಚೆ ... ಸಂಬಂಧಪಟ್ಟ ... ಕುಂದುಕೊರತೆಗಳನ್ನು ಟೀಕಿಸಲ್ಪಟ್ಟು ಅವುಗಳ ಪರಿಹಾರ ಪ್ರಯತ್ನಗಳಾಗಬೇಕೆಂದಾಯಿತು. ಅಂಚೆಮನೆಗಳು ನಗರದ ಕೇಂದ್ರ ಸ್ಥಳಗಳಲ್ಲಿರಬೇಕೆಂದು ಸೂಚಿಸುವ ಠರಾವು ಈ ಸಭೆಯಲ್ಲಿ ಸ್ವೀಕೃತವಾಯಿತು.

ವರ್ಷಾವಧಿ ಸಭೆ: ಜಿಲ್ಲಾ ಕುಲಾಲರ ಸಂಘದ ವಾರ್ಷಿಕ ಸಭೆ ತಾ 23ರಂದು ರವಿವಾರ ರಥಬೀದಿಯ ಮುನ್ಸಿಪಲ್ ಶಾಲೆಯ ಆವಾರದಲ್ಲಿ ಡಾ। ಬಿ। ಎನ್. ಎನ್ ಸುವರ್ಣರ ಅಧ್ಯಕ್ಷತೆಯಲ್ಲಿ ಜರಗಿತು. ಅಂದು ರಾತ್ರಿ ತುಳುನಾಟಕವೇ ಮೊದಲಾದ ವಿವಿಧ ವಿನೋದಾವಳಿಗಳಿದ್ದವು.

ಸರಕಾರಿ ಪರೀಕ್ಷೆಗಳು: ಮುಂದರಿಸಲ್ಪಟ್ಟ ಎಸ್ ಎಸ್ ಎಲ್ ಸಿ ಪರೀಕ್ಷೆಗಳು ಈಗ ಏಪ್ರಿಲ್ ತಾ 21ರಂದು ಮತ್ತು ಮುಂದಿನಗಳಲ್ಲಿ ಜರಗಿಸಲ್ಪಡುವುದಾಗಿ ಸರಕಾರಿ ಪ್ರಕಟಣೆಯಾಗಿದೆ. ಮುಂದರಿಸಲ್ಪಟ್ಟ ಒಂದು ಎಫ್ ಎ ಪರೀಕ್ಷೆಯು ಏಪ್ರಿಲ್ 15 ರಂದು ಜರಗುವುದು.

ಮಾರ್ಗ ಸೌಕರ್ಯ: ಕಲೆಕ್ಟರರ ಬಂಗಲೆಯಿಂದ ಹಂಪನಕಟ್ಟೆಯಾಗಿ ಕಲೆಕ್ಟರರ ಆಫೀಸಿನ ಕೆಳಗಿನ ತಾರುಮಾರ್ಗವು ಸೂಕ್ಷ್ಮವಾದ ಜಲ್ಲಿಕಲ್ಲಿನಿಂದ ಆಚ್ಛಾದಿಸಲ್ಪಟ್ಟಿದೆ. ಸಂಪೂರ್ಣ ದುರುಸ್ತಿ ಮಾಡುವ ಅಮೇರಿಕನ್ ವಿಧಾನ ಇದೆಂದು ಹೇಳಲಾಗಿದೆ. ಇಲ್ಲಿ ಹರಡಿಸಲ್ಪಟ್ಟ ಈ ಶಿಲೆ ಚೂರುಗಳು ಕ್ರಮೇಣ ಕೆಳಗೆ ಸರಿಯಲ್ಪಟ್ಟು ತಾರಿನೊಡನೆ ಮಿಶ್ರಗೊಂಡು ನಯವಾದ ಗಟ್ಟಿಯು ಪದರಾಗುವ ತನಕ ಮಾರ್ಗಸ್ಥರಿಗೆ ತುಂಬಾ ಸಂಕಷ್ಟದಾಯಕವಾಗಿ ಪರಿಣಮಿಸುವುದು. ... ನಡೆದವರು ಜಾರಿಬೀಳುವುದೂ ಮೆಟ್ಟಿಲ್ಲದವರಿಗೆ ಚುಚ್ಚುವುದೂ ಈ ದುರುಸ್ತಿ ವಿಧಾನದ ವೈಶಿಷ್ಟ್ಯ. ನಿಬಿಡ ಜನಸಂಚಲನೆಯ ಮಾರ್ಗವೊಂದರಲ್ಲಿ ದೀರ್ಘ ಅವಧಿಯ ತನಕ ಇಂತಹ ಅನಾನುಕೂಲವಿರುವುದರ ಕಷ್ಟವನ್ನು ವರ್ಣಿಸುವುದಕ್ಕಿಂತ ಊಹಿಸುವುದೊಳಿತು. ಇತರ ಮಾರ್ಗಗಳಲ್ಲಾದರೊ ದುರುಸ್ತಿಯೂ ಇಲ್ಲ, ಧೂಳು ಪ್ರತಿಬಂಧಕೋಪಾಯಗಳೂ ಇಲ್ಲ. ವಾಹನಗಳು ದಾಟಿ ಹೋದ ಮೇಲೆ ಕಣ್ಣು ಕಟ್ಟುವ ಧೂಳಿನ ... ಅಪಾಯಕರ ಅವಸ್ಥೆಗಳ್ಳ ಮಾರ್ಗಸ್ಥರ ... ಪ್ರಸಂಗವಿದೆ. ... ಆದರಿಂದ ... ಮೊದಲನೇ ತರಗತಿಗೇರಿಸಲ್ಪಟ್ಟ ನಮ್ಮ ನಗರಸಭೆಯು ಈ ಕುರಿತು ಆಳ ಪರ್ಯಾಲೋಚಿಸಿ ಪರಿಹಾರೋಪಾಯಗಳನ್ನು ಶೀಘ್ರದಲ್ಲಿ ಕೈಕೊಳ್ಳುವುದು ಯುಕ್ತವಾದುದು.

ದಕ್ಷಿಣ ಕನ್ನಡ ಜಿಲ್ಲಾ ರಾಷ್ಟ್ರಸೇವಾದಳದ ಶಿಕ್ಷಕರ ತರಬೇತಿ ಶಿಬಿರ.

ಪ್ರಕಟಣೆ ಸಂ. ೧

ಜಯಪ್ರಕಾಶ ನಾರಾಯಣರಿಂದ ಉದ್ಘಾಟನೆ: ಇದೇ ಏಪ್ರಿಲ್ ತಾ 25 ರಿಂದ ಮೇ ತಾರೀಕು 15ರ ತನಕ ಕಟಪಾಡಿಯಲ್ಲಿ ರಾಷ್ಟ್ರ ಸೇವಾದಳದ ಶಿಕ್ಷಕರ ತರಬೇತಿ ಶಿಬಿರವೊಂದು ನಡೆಯಲಿರುವುದು. ಏಪ್ರಿಲ್ ತಾ 25ರಂದು ಬೆಳಗ್ಗೆ ಗಂಟೆ 7ಕ್ಕೆ ಸಮಾಜವಾದೀ ಪಕ್ಷದ ಮುಖಂಡರಾದ ಜಯಪ್ರಕಾಶ ನಾರಾಯಣರಿಂದ ಜರಗಲಿರುವುದು. ಜಿಲ್ಲೆಯ ಎಲ್ಲಾ ಕಡೆಗಳಿಂದ ಶಿಬರದ ಶಿಕ್ಷಣಕ್ಕೆ ಬರುವ ಸೈನಿಕರು ಈ ಕೆಳಗಿನ ಶರ್ತಗಳನ್ನು ಗಮನದಲ್ಲಿಡತಕ್ಕದು.

1 ಸೇವಾದಳದ ಪ್ರತಿಜ್ಞಾಪತ್ರವನ್ನು ಸಹಿ ಮಾಡಿ ಜಿಲ್ಲಾ ಸಂಘಟಕರಿಗೆ ಕಳಿಸತಕ್ಕದ್ದು. ಈ ಪ್ರತಿಜ್ಞಾಪತ್ರವು ತಾರೀಕು 15 4–47ರ ಒಳಗೆ ತಲಪತಕ್ಕದ್ದು. ಇದನ್ನೇ ಅರ್ಜಿಯೆಂದು ಪರಿಗಣಿಸಲಾಗುವುದು.

2 ಪ್ರತಿಯೊಬ್ಬ ಸೈನಿಕನು ರೂ 10/ ಪ್ರವೇಶಫೀಸಲಾಗಿ ಪ್ರವೇಶ ಪತ್ರದೊಂದಿಗೆ ಕಳುಹಿಸತಕ್ಕದ್ದು.

3 ಪ್ರತಿಯೊಬ್ಬನು ಸಮವಸ್ತ್ರವನ್ನು ತರತಕ್ಕದ್ದು (ನೀಲಚರಣ ಬಿಳಿ ಶರ್ಟು, ಬಿಳಿ ಟೊಪ್ಪಿ, ಬಿಳಿ ಕೆನ್ವಾಸ ಬೂಟು, ಬಿಳಿ ಕಾಲುಚೀಲ ಸಮೇತ)

4 ಬಿಸ್ತರ (Bedding)

5 ಆವಶ್ಯಕತೆಗಿಂತ ಹೆಚ್ಚು ವಸ್ತ್ರಗಳನ್ನು ತರಕೂಡದು.

6 100 ಪುಟದ ನೋಟು ಪುಸ್ತಕ, ಪೆನ್ಸಿಲು 1

7 ಸೈನಿಕನು ಶಿಬಿರದಲ್ಲಿ ಶಿಕ್ಷಣ ಪಡೆದಂದಿನಿಂದ ತನ್ನ ಆದಷ್ಟು ಹೆಚ್ಚಿನ ಸಮಯವನ್ನು ಸೇವಾದಳದ ಕೆಲಸಕ್ಕಾಗಿ ವಿನಿಯೋಗಿಸತಕ್ಕದ್ದು. ಕನಿಷ್ಠ ಪಕ್ಷಕ್ಕೆ ದಿವಸಕ್ಕೆ 2 ಗಂಟೆಯಾದರೂ ದುಡಿಯಬೇಕು.

ಸ್ತ್ರೀಯರ ಬಗೆ ವಿ ಸೂ: ಜಿಲ್ಲೆಯಲ್ಲೆಲ್ಲಾ ಸ್ತ್ರೀಯರ ಶಾಖೆಗಳನ್ನು ತೆರೆಯುವುದು ಅತ್ಯಾವಶ್ಯಕವಿರುವುದರಿಂದ ಶಿಬಿರದಲ್ಲಿ ಸ್ತ್ರೀಯರಿಗೆ ಶಿಕ್ಷಣ ಕೊಡುವ ಬಗ್ಗೆ ಪ್ರತ್ಯೇಕ ಸ್ತ್ರೀ ಶಿಕ್ಷಕರನ್ನು ನೇಮಿಸುವ ಏರ್ಪಾಡು ಮಾಡಲಾಗಿದೆ. ಆದುದರಿಂದ ಸ್ತ್ರೀ ಸೈನಿಕೆಯರು ಕೂಡಾ ಹೆಚ್ಚಿನ ಸಂಖ್ಯೆಯಲ್ಲಿ ಬಂದು ಶಿಬಿರದಲ್ಲಿ ತರಬೇತಿ ಹೊಂದಬೇಕಾಗಿ ವಿನಂತಿ.

ಸಮವಸ್ತ್ರ: ಬಿಳಿ ಸೀರೆ ಹಸುರು ರವಕೆ, ಬಿಳಿ ಟೊಪ್ಪಿ, ಬಿಳಿ ಕೆನ್ವಾಸ ಬೂಟು, ಬಿಳಿ ಕಾಲ್ಚೀಲ ಸಹಿತ.

ವಿ ಸೂ: ಶಿಬಿರದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪತ್ರ ವ್ಯವಹಾರ ಮೂಲಕ ಅಥವಾ ಖಾಸಗಿಯಾಗಿ ಜಿಲ್ಲಾ ಸಂಘಟಕರಿಂದ ತಿಳಕೊಳ್ಳಬಹುದು. ಪ್ರತಿಜ್ಞಾ ಪತ್ರವು ಸಮೀಪದ ಸೇವಾದಳದ ಶಾಖೆಯಲ್ಲಿ ಅಥವಾ ಜಿಲ್ಲಾ ಸಂಘಟಕರಿಂದಲೂ ಪಡೆಯಬಹುದು.

ಯಸ್ ಸತ್ಯೇಂದ್ರ ನ್ಯಾಕ.
ಜಿಲ್ಲಾ ಸಂಘಟಕ ರಾಷ್ಟ್ರ ಸೇವಾದಳ
ದ. ಕ. ಜಿಲ್ಲಾ ಕಾಂಗ್ರೆಸ್ ಕಚೇರಿ ಮಂಗಳೂರು.

ಜಿಲ್ಲಾ ಕೊಂಗ್ರೆಸ್ ಕಮಿಟಿಯ ಕಾರ್ಯಕಾರಿ ಕಮಿಟಿಯ ಸಭೆಯು ಇದೇ ತಾ 24 ನೇ ಸೋಮವಾರ ಅಪರಾಹ್ನ ಘಂಟೆ 2ಕ್ಕೆ ಕಾಂಗ್ರೆಸ್ ಕಚೇರಿಯಲ್ಲಿ ಶ್ರೀ ಎಚ್ ನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಗಳಾದ ಎಂ ಡಿ ಅಧಿಕಾರಿ, ಪಿ ಲಕ್ಷ್ಮೀನಾರಾಯಣ ನ್ಯಾಕ, ಕೆ ಕೆ ಶೆಟ್ಟಿ, ಅಮೃತ ಕೃಷ್ಣ ರಾವ್, ಕೆ ಕೆ ಪಿ. ರಾಮ ಪೋದುವಾಳ ಮತ್ತು ಡಾ. ಎಫ್. ಎಚ್. ಮೊಹಿಯುದರು ಹಾಜರಿದ್ದರು. ಈ ಕೆಳಗಿನ ಠರಾವುಗಳು ಮಂಜೂರಾದುವು.

1 ಸೇವಾದಳದ ಸೆಕೆಕಾಲದ ಶಿಬಿರವನ್ನು ಉಡುಪಿ ತಾಲೂಕಿನಲ್ಲಿ ನಡೆಸುವುದೆಂದು ನಿಶ್ಚಯವಾಯಿತು. ಈ ಶಿಬಿರವನ್ನು ಏಪ್ರಿಲ್ ತಾ. 25ರಿಂದ ಮೇ ತಾ. 15ರ ವರೆಗೆ ನಡೆಸತಕ್ಕದ್ದು. ಶಿಬಿರದ ಉದ್ಘಾಟನೆಯನ್ನು ಶ್ರೀ ಜಯಪ್ರಕಾಶ ನಾರಾಯಣರಿಂದ ನಡೆಸಬೇಕೆಂದು ತೀರ್ಮಾನಿಸಲಾಯಿತು.

ಕೂಡಲೇ ಶಿಬಿರದ ಎಲ್ಲಾ ವ್ಯವಸ್ಥೆಯ ಬಗ್ಗೆ ಶ್ರೀಗಳಾದ ಎಚ್. ನಾರಾಯಣ ರಾವ್, ಎಂ ಡಿ ಅಧಿಕಾರಿ, ಪಿ ಲಕ್ಷ್ಮೀನಾರಾಯಣ ನ್ಯಾಕ, ಕೆ ಕೆ ಶೆಟ್ಟಿ ಮತ್ತು ಜಿಲ್ಲಾ ಸಂಘಟಕರಿಂದ ಮಾಡಿದ ಉಪ ಸಮಿತಿಯೊಂದನ್ನು ರಚಿಸಲಾಯಿತು. ಈ ಕಮಿಟಿಯ ಕನ್ವೀನರರು ಜಿಲ್ಲಾ ಸಂಘಟಕರು.

ಆಧೀನ ಕಮಿಟಿಯ ಚುನಾವಣೆಯ ಅವಧಿಯನ್ನು ಏಪ್ರಿಲ್ ತಾ 10ರ ವರೆಗೆ ಮುಂದುವರಿಸಲಾಯಿತು ಮತ್ತು ಈ ವರೆಗೆ ಚುನಾವಣೆ ನಡೆಯದ ಸರ್ಕಲಲ್ಲಿ ಕೂಡ ಬೇಗನೆ ಚುನಾವಣೆ ನಡೆದು ಅಧಿಕಾರಿಗಳನ್ನು ಆರಿಸಿ ಹೊಸ ಕಮಿಟಿಯು ರಚನೆಯಾಗುವಂತೆ ಕಾರ್ಯದರ್ಶಿಗಳು ಸಂಬಂಧಪಟ್ಟವರಿಗೆ ತಿಳಿಸಬೇಕೆಂದು ನಿರ್ಣಯಿಸಲಾಯಿತು.

ಜಯಪ್ರಕಾಶ್ ನಾರಾಯಣರ ಜಿಲ್ಲಾ ಸಂಚಾರದ ಕಾರ್ಯಕ್ರಮದಲ್ಲಿ ಜಿಲ್ಲೆಯ ಸರ್ಕಲ್ ಕಾಂಗ್ರೆಸ್ ಕಮಿಟಿಗಳೆಲ್ಲ ಭಾಗವಹಿಸಿ ಅವರು ಸಂದರ್ಶಿಸುವುದಲ್ಲೆಲ್ಲಾ ಸಾರ್ವಜನಿಕ ಸಭೆ ನಡೆಸಿ ಅವರಿಗೆ ಸ್ವಾಗತವೀಯುವ ವ್ಯವಸ್ಥೆ ಮಾಡಬೇಕಾಗಿ ನಿಶ್ಚಯಿಸಲಾಯಿತು.

Puttur Co-operative Stores Ltd , L 511

NOTICE

Is hereby given that a meeting of the members of this Stores will be convened on 6 4 1947 at 4 P M in the Co-operative buildings, Puttur All members are requested to attend

Puttur
Date 26 3 47

K V Kolathay,
Hon Secretary

AGENDA

Amendment of bylaws

I Bylaw No 1 after Idkidu' add Bellipady Nekkiladi, Perne & Beliyur Villages

II Bylaw 41 (3) Instead of 4 insert 6½ p c



DJK-20



ಮುಸ್ಲಿಮರನ್ನು ದುರವಸ್ಥೆಗೊಯ್ಯುವ ಜಿನ್ನಾ

ಭಾರತೀಯ ಮುಸ್ಲಿಮರೊಬ್ಬರ ಎಚ್ಚರಿಕೆ

ಕಲಿತದಲ್ಲಿ ಹಿಂದೆ ಇರಿತದಲ್ಲಿ ಮುಂದೆ

ಹಿಂದೆ ಒರ್ವ ಕೊಳಲ ಜೋಗಿ ಇದ್ದ. ಒಂದು ಪಟ್ಟಣದಲ್ಲಿ ಹಾವಳಿಮಾಡುವ ಇಲಿಗಳನ್ನವನು ತನ್ನ ವೇಣು ನಾದಾಕರ್ಷಣೆಯಿಂದ ಸೆಳೆದು ನದಿಯಲ್ಲಿ ಮುಳುಗಿಸಿದ.

“ಈಗ ಮಿ। ಜಿನ್ನರು ಭಾರತದಲ್ಲಿ ಕೊಳಲ ಜೋಗಿಯ ನಾಟಕವಾಡುತ್ತಿದ್ದಾರೆ. ಮುಸ್ಲಿಮರನ್ನವರು ವಿನಾಶಕ್ಕೆ ಕೊಂಡೊಯ್ಯುತ್ತಿರುವರು”

ಹೀಗೆಂದು ಲಂಡನಿನ ಭಾರತೀಯ ಮಜೂರ ಸಂಘದ ಅಧ್ಯಕ್ಷರಾದ ಚೌದರಿ ಅಕ್ಬರ್ ಖಾನರು ಒಂದು ಚಿಕ್ಕ ಪುಸ್ತಕದಲ್ಲಿ ಪ್ರಕಟಿಸಿದ್ದಾರೆ. ಮಿ। ಜಿನ್ನರ ತೊಡಕುಂಟು ಮಾಡುವ ಧೋರಣೆಯನ್ನು ಟೀಕಿಸುತ್ತಾ ಅವರು ಹೀಗೆ ಬರೆದಿದ್ದಾರೆ:

ರಾಜಕೀಯವಾಗಿ ಬಹುಸಂಖ್ಯಾತ ಮುಸಲ್ಮಾನರು ಮಧ್ಯಯುಗದ ಕಾರ್ಗತ್ತಲೆಯಲ್ಲಿದ್ದಾರೆ. ಎಲ್ಲಾ ಸಮಯದಲ್ಲೂ ಅವರು ಪ್ರಗತಿಯ ಇಪ್ಪತ್ತು ವರ್ಷದ ಹಿಂದೆ ಇರುತ್ತಾರೆ. ಇತರರು ವಿದ್ಯಾಭ್ಯಾಸ ಕಲಿಯಲು ಪ್ರಾರಂಭಿಸುವಾಗ ಮುಸ್ಲಿಮರು ಅದನ್ನು ಬಹಿಷ್ಕರಿಸುತ್ತಾರೆ. ಮತ್ತೆ ಕೆಲವು ವರ್ಷಗಳ ನಂತರ ಎಚ್ಚೆತ್ತು ಅವರು ಹಿಂದೂಗಳಿಗೇ ಎಲ್ಲಾ ಸರಕಾರಿ ಕೆಲಸಗಳು ಕೊಡಲ್ಪಟ್ಟಿವೆ ಎಂದು ಕೂಗಾಡಹತ್ತಿದರು.

ಮುಸ್ಲಿಮರು ಕಛೇರಿ ಕೆಲಸಕ್ಕಾಗಿ ಹೆಣಗಾಡಲಾರಂಭಿಸಿದಾಗ ಮುಸ್ಲಿಮೇತರರು ವ್ಯಾಪಾರ ವಹಿವಾಟುಗಳ ಕಡೆಗೆ ತಿರುಗಿದರು. ಮತ್ತೊಮ್ಮೆ ಪ್ರಗತಿಯ ಜೂಜಿನಲ್ಲಿ ಮುಸ್ಲಿಮರು ಹಿಂದೆ ಬಿದ್ದರು. ಭಾರತೀಯ ಜನತೆಯ ಎಲ್ಲಾ ವರ್ಗದವರು ವಿದೇಶಿ ಬಂಧನದಿಂದ ಮುಕ್ತರಾಗಲು ತಮ್ಮ ಕಿಂಚಿತ್ ಸೇವೆ ಮಾಡುವಾಗ ಮುಸ್ಲಿಂ ಲೀಗು ಅದಕ್ಕೆ ಸಾಧ್ಯವಿದ್ದಷ್ಟು ಆತಂಕಗಳನ್ನೊಡ್ಡಲು ಪ್ರಯತ್ನಿಸುವುದು.

ಕಾದಾಟ ಪ್ರೇಮ

ಮೋಸಕ್ಕೊಳಗಾದ ಜಿನ್ನರ ಹಿಂಬಾಲಕರು ಜೀವನದ ಎಲ್ಲಾ ಕ್ಷೇತ್ರಗಳಲ್ಲೂ ಬಹಳ ಹಿಂದುಳಿದಿರುವುದಾದರೂ ಜಗಳ ಕೆಣಕುವುದರಲ್ಲಿ ಅವರು ಎಲ್ಲರಿಗೂ ಮುಂದಿರುವರು. ಉದ್ವೇಗಗೊಳಿಸುವ ಭಾಷಣಗಳಿಂದ ತಲೆ ಕೆಟ್ಟ ಲೀಗಿನವರು ದಂಗೆ, ಕೊಲೆ, ಸುಲಿಗೆ, ಸುಡುವಿಕೆಗಳನ್ನು ನಿರ್ವಹಿಸಿದರು. ಇದರ ಪರಿಣಾಮವು ಭೀಕರವಾಗಿದೆ. ಸ್ವಮಾನ ಅನಾಚಾರಗಳೂ ಅವರ ತಲೆಮೇಲೆ ಪುನಃ ತಿರುಗಿ ಬೀಳುವಂತೆಯೂ ಆಯಿತು. ಈಗ ಅವರು ತಮ್ಮ ಘಾಯಗಳನ್ನು ನೆಕ್ಕುತ್ತಿದ್ದಾರೆ.

ಇದುತನಕ ಸಂಭವಿಸಿದ ದುರಂತಗಳು ಲೀಗ್ ಮುಖಂಡರು ಉದ್ದೇಶಪೂರ್ವಕವಾಗಿ ತಮ್ಮ ಹಿಂಬಾಲಕರ ಮೂಲಕ ಬೆಳೆಸಿದ ದ್ವೇಷ ಸಾಧನೆಯ ಪರಿಣಾಮವಾಗಿದೆ. ತಮ್ಮ ನೀಚ ಗುರಿಯನ್ನು ಸಾಧಿಸಲು ಇವರು ನಿರಪರಾಧಿ ಅನಜ್ಞ ಮುಸ್ಲಿಮ ಜನತೆಯನ್ನು ಈ ಹೇಯ ರಕ್ತಮೇಧದೊಳಗೆ ಆದ್ದುತ್ತಿರುವರು. ಬಡ ಮುಸ್ಲಿಮರನ್ನು ಬಲಿ ಹಾಕುವುದರ ಬದಲಿಗೆ ವೀರಸ್ವರ್ಗವನ್ನು ಹೊಂದುವ ಆ ಭಾಗ್ಯವನ್ನು ಲೀಗ್ ಮುಂದಾಳುಗಳೇ ಏಕೆ ಹೊಂದಬಾರದು?

ಚೆಂಗಿಸ್ ಖಾನ್ ಪ್ರಿಯ ಫಿರೋಜ ಖಾನ್ ನೂನರು ಬಂಗಾಳದ ಚಕಾರ ನೋಲೆತ್ತಿದೆ ಬಿಹಾರದ ಅನಾಚಾರಗಳನ್ನು ವರ್ಣಿಸುವುದು ಕೌತುಕದ ಸಂಗತಿ. ಬ್ರಿಟಿಷ್ ಪ್ರೋತ್ಸಾಹಕರ ಪ್ರತಿನಿಧಿಯಾಗಿ ಜನರು ಒಬ್ಬರ ಕತ್ತು ಇನ್ನೊಬ್ಬರು ಹಿಸುಕುವಂತೆ ಮಾಡುವ ಕರ್ತವ್ಯ ವಹಿಸಿದವರಿವರೇ ಅಲ್ಲವೆ? ಜಿನ್ನರಾದರೂ ಭಾರತದ ಮುಸ್ಲಿಮರನ್ನು ವಿನಾಶಕ್ಕೊಯ್ಯುವ ಕೊಳಲಜೋಗಿಯ ಪಾತ್ರ ಧರಿಸಿದ್ದಾರೆ.

ಗುಲಾಮಗಿರಿ ಮೇಲು

ತನ್ನ ಸ್ವಂತ ದೇಶದ ಸ್ವಾತಂತ್ರ್ಯಪಥದಲ್ಲಿ ತೊಡಕನ್ನೊಡ್ಡುವುದು ಪಾತಕವೆಂದಾದರೆ ಲೀಗು ಪಾತಕಿಯೇ ಸರಿ. ತನ್ನ ದೇಶವನ್ನು ಗುಲಾಮಗಿರಿಯಲ್ಲಿರಿಸಲು ಸಾಮ್ರಾಜ್ಯವಾದಿ ಶಕ್ತಿಯೊಂದಕ್ಕೆ ಸಹಾಯಮಾಡುವುದು ದೇಶ ದ್ರೋಹವಾದರೆ ಜಿನ್ನರನ್ನು ಕ್ವಿಸ್ಲಿಂಗರೆನ್ನಬಹುದು. ದೇಶ ಹಿಡಿದ ಶಕ್ತಿಯೊಂದು ಬಿಟ್ಟುಹೋಗುವಾಗ ಬೇಡವೆಂದು ಹೇಳುವುದಕ್ಕಿಂತ ದೊಡ್ಡ ದ್ರೋಹ ಯಾವುದಿದೆ? ದಾಸ್ಯವನ್ನು ಬಯಸಿ ಬಾಳುವ ವ್ಯಕ್ತಿಯೊಬ್ಬರಿದ್ದರೆ ಅವರೇ ಮಹಮ್ಮದಾಲಿ ಜಿನ್ನಾ.

ಆದರೆ ಮುಸಲ್ಮಾನರ ಮನಸ್ಸು ಲೀಗು ತಿಳಕೊಂಡಷ್ಟು ರೋಗಗ್ರಸ್ತವಾಗಿಲ್ಲ. ಸುದೈವ ವಶಾತ್ ಅನೇಕಾನೇಕ ರಾಷ್ಟ್ರೀಯ ಮುಸಲ್ಮಾನರು ತಮ್ಮ ಮುಸ್ಲಿಮೇತರ ಬಂಧುಗಳೊಡನೆ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುತ್ತಲಿದ್ದಾರೆ. ಅವರ ಧ್ಯೇಯವು ನ್ಯಾಯಬದ್ಧವಾದುದು. ವಿಜಯವು ಅವರಿಗೆ ಖಂಡಿತ ಲಭಿಸುವುದು.

ಜಪಾನಿನಲ್ಲಿ ಮೆಕ್ ಆರ್ಥರರು ಸ್ತ್ರೀಯರಿಗೂ ಮತದಾನದ ಹಕ್ಕನ್ನಿತ್ತಿರುವರು. ಯೊಶಿಯೊ ಒಯಿಚಿ ಎಂಬ ಮಹಿಳೆ ಕ್ಯೋಟೊ ನಗರ ಸಭೆಯ ಅಧ್ಯಕ್ಷಸ್ಥಾನಕ್ಕೆ ಚುನಾವಣೆಗೆ ನಿಂತಿರುವಳು. ಅವಳ ಚುನಾವಣೆ ಘೋಷ: “ಸ್ತ್ರೀಯರಿಗೆ ಪುರುಷರಷ್ಟೇ ತಂಬಾಕು ಮತ್ತು ಮದ್ಯಗಳ ರೇಶನನ್ನು ಕೊಡಿಸುವೆ” ಎಂದಿದೆ.

★

ಸಿಹಿಸುದ್ದಿ ಸಂಗ್ರಹ

ಇಲೆಕ್ಟ್ರಿಕ್ ಟೊರ್ಚ್‌ಲೈಟಿನಾಕೃತಿಯ ಒಂದು ಉಪಕರಣವನ್ನು ಕುರುಡರ ಸಹಾಯಕ್ಕಾಗಿ ಕಂಡುಹಿಡಿಯಲ್ಪಟ್ಟಿದೆ. ಕುರುಡರು ನಡೆಯುವಾಗ ಅವರ ಎದುರಿಗೆ ಏನಾದರೂ ತೊಡಕಿನ ವಸ್ತುಗಳು ಬಂದಾಗ ಈ ಉಪಕರಣವು ಅವರ ಕಿವಿಯಲ್ಲಿ ಒಂದು ಗಂಟೆಯನ್ನು ಬಾರಿಸುವುದರ ಮೂಲಕ ಅದನ್ನು ತಿಳಿಸುತ್ತದೆ.

★

ಡೀನ್ ಸ್ವಿಫ್ಟ್ ಎಂಬ ಪ್ರಖ್ಯಾತ ರಾಜಕೀಯ ವಿಚಾರಿಯು ಒಂದು ಸಲ ಮಹಿಳೆಯ ಸೌಂದರ್ಯದ ಮೇಲೆ ತೆರಿಗೆ ಹಾಕಿದರೆ ಸರಕಾರಿ ಖಜಾನೆಗೆ ತುಂಬಾ ಹಣ ಶೇಕರಿತವಾಗಬಹುದೆಂಬ ಸೂಚನೆಯನ್ನು ಸಾರಿದ್ದ. ತಾವು ಸುರೂಪಿಗಳೋ ಅಥವಾ ಕುರೂಪಿಗಳೋ ಎಂದು ಹೆಂಗುಸರೇ ತೀರ್ಮಾನಿಸಿ ಸ್ವಂತ ಇಚ್ಛೆಯಿಂದ ಆ ತೆರಿಗೆಯನ್ನು ತೆರುವಂತೆ ಮಾಡಿದರೆ ಪ್ರತಿಯೊಬ್ಬ ಮಹಿಳೆಯೂ ಸಂತೋಷದಿಂದ ಅದನ್ನು ಕೊಡುವರೆಂದು ಅವನ ಸಲಹೆ.

★

ಅಮೇರಿಕದ ಒಂದು ನ್ಯಾಯಾಲಯದಲ್ಲಿ ವಿಚಾರಣೆಗೆ ಬಂದೊಂದು ಆಪಾದನೆಯಲ್ಲಿ ಒರ್ವ ಕುರುಡು ಹುಡುಗಿಯು 938 ಪ್ರಣಯ ಪತ್ರಗಳನ್ನು ಬರೆದ ಸಂಗತಿಯು ಬಯಲಿಗೆ ಬಂದಿದೆ. ಅವೆಲ್ಲವನ್ನು ಅವಳು ಕುರುಡರ ಬ್ರೈಲ್ (ಸ್ಪರ್ಶಲಿಪಿ) ಭಾಷೆಯಲ್ಲಿ ಬರೆದಿದ್ದಳಂತೆ.

★

ಸಸೆಕ್ಸಿನ ಒರ್ವ ದಿನಸು ವ್ಯಾಪಾರಿಯ ತೂಕದ ಕಲ್ಲುಗಳು ಅಕ್ರಮವಾಗಿದ್ದವೆಂದು ಅವನಿಗೆ 45 ಶಿಲಿಂಗ್ ಜುಲ್ಮಾನೆ ವಿಧಿಸಲಾಯಿತು. ಕಲ್ಲುಗಳು ಬೇಕಾದ ತೂಕಕ್ಕಿಂತ ಹೆಚ್ಚಾಗಿದ್ದುವು.

★

ನಿಜವಾಗಿ ಬ್ರಿಟನು ಕೈಗಾರಿಕೆ ದೇಶವಲ್ಲ. ಅಲ್ಲಿನ 60 ಮಿಲಿಯ ಎಕ್ರೆ ಪ್ರದೇಶದಲ್ಲಿನ 48 ಮಿಲಿಯ ಎಕ್ರೆಗಳಷ್ಟು ಸ್ಥಳವು ಕೃಷಿಗಾರಿಕೆಗಾಗಿ ಉಪಯೋಗಿಸಲ್ಪಡುತ್ತದೆ.

★

ಬರೋಡದಲ್ಲಿ ಬಟ್ಟೆ ಕ್ಷಾಮವಿದೆ. ಅಲ್ಲಿನ 6 ಲಕ್ಷ ಜನಸಂಖ್ಯೆಯಿರುವ ನವಸಾರಿ ಮಹಾಲ್ ತಾಲೂಕಿಗೆ 38½ ಮೂಟೆ ಬಟ್ಟೆ ಕೊಟ್ಟಿದ್ದಾರೆ. ಲೆಕ್ಕ ಹಾಕುವಾಗ ಇದು ತಲಾ ನಾಲ್ಕು ಇಂಚಿನಷ್ಟು ಬರುತ್ತದೆ.

★

KANARA COMMERCIAL BANK LTD.

PUTTUR.

H. O. Puttur. | Estd. 1920 | Branch: Vittal.

All kinds of Banking Business transacted.

Deposits:- Current, Savings, Cumulative Deposits are accepted.

Fixed Deposits for periods of 3 months and above up to 24 months are accepted.

SEASON DEPOSITS

ARE Accepted up to 31-5 1947 Terms on application.

ESTD. 1906.

CANARA BANK, LIMITED.

(Incorporated in British India with Limited Liability)

(PROGRESS STATEMENT CORRECT TO THOUSANDS OF RUPEES)

LIABILITIES	1945	1946	ASSETS	1945	1946
Capital Subscribed	29,00,000	29,00,000	Cash	1,61,91,000	1,16,16,000
Capital paid up	28,43,000	28,80,000	Govt. Securities	1,80,45,000	2,76,61,000
Reserve	11,00,000	11,00,000	Advances to customers	1,50,87,000	2,01,38,000
Deposits	3,50,43,000	4,60,40,000	Bills for collection and Foreign Bills negotiated	20,56,000	34,23,000
Due to Bankers	26,91,000	69,57,000	Landed Properties	28,000	5,000
Call Deposits from Bankers	8,00,000	15,00,000	Bank Premises and Furniture and Fixtures	1,46,000	1,47,000
Branch Adjustments	22,07,000	21,09,000	Other Assets	10,25,000	16,23,000
Bills for collection and foreign bills negotiated	20,56,000	34,23,000			
Other Liabilities	77,000	85,000			
Profit for the year	3,61,000	4,19,000			
Rs.	4,71,78,000	6,45,13,000	Rs.	4,71,78,000	6,45,13,000

ಸ್ವಾರಸ್ಯ ಪ್ರಪಂಚ

ವೇಗಯುಗದ ಮಹಿಮೆ

ಶಬ್ದದ ವೇಗ ಗಂಟೆಗೆ 750 ಮೈಲು ಗಳು ಮಾನವನು ಇದಕ್ಕೆ ಸಮಾನ ವೇಗದಲ್ಲೋಡುವ ವಾಹನಗಳನ್ನು ನಿರ್ಮಿಸಲು ಪ್ರಯತ್ನಿಸುತಿದ್ದಾನೆ. ಈಗಾಗಲೇ ಒಂದು ಬ್ರಿಟಿಷ್ ವಿಮಾನವು ಗಂಟೆಗೆ 616 ಮೈಲುಗಳ ವೇಗದಲ್ಲಿ ಹಾರಿ ದಾಖಲೆ ಮಾಡಿದೆ.

ರೈಲುಗಳೂ ತಮ್ಮ ಅತೀ ವೇಗದ ದಾಖಲೆಯನ್ನು ಮಾಡಿವೆ. ಅಮೇರಿಕದ ಒಂದು ಉಗಿಬಂಡಿ ಗಂಟೆಗೆ 84 ಮೈಲು ಓಡಿದೆ.

ಜಗತ್ತಿನ ಪ್ರಾಣಿಗಳಲ್ಲಿ ಅತ್ಯಂತ ವೇಗವುಳ್ಳದ್ದು ಚಿರತೆ ಪ್ರಯೋಗಾರ್ಥ ಓಡಿಸಿದ ಒಂದು ಚಿರತೆ ಆಗಲೇ 80 ಮೈಲು ವೇಗವನ್ನು ಮುಟ್ಟಿದೆ

ಮನುಷ್ಯನು ಓಡಿದ ಅತೀ ವೇಗದ ದಾಖಲೆ ಗಂಟೆಗೆ 25 ಮೈಲುಗಳಷ್ಟು

ಕೆಲವು ಪತಂಗಗಳು ನೂರು ಮೈಲು ವೇಗದಲ್ಲಿ ಓಡುತ್ತವೆಂದು ಹೇಳಲಾಗಿದೆ ಆದರೆ ಇದು ಸರಿಯಲ್ಲ ಪತಂಗಗಳು 30 ಮೈಲಿಗಿಂತ ಹೆಚ್ಚು ಹಾರಲಾರವು

ಕೃತಕ ಬಿರುಗಾಳಿ

ಹೊಸ ಮಾದರಿಯ ವಿಮಾನಗಳ ಚಲನೆಯ ಪ್ರಯೋಗಕ್ಕಾಗಿ ಅಮೇರಿಕನ್ ವಿಮಾನತಜ್ಞರು ಕೃತಕ ಬಿರುಗಾಳಿಯ ವಿಧಾನವನ್ನು ನಿರ್ಮಿಸಿದ್ದಾರೆ 250 ಸಾವಿರ ಅಶ್ವಶಕ್ತಿಯ ತಿರುಗುಯಂತ್ರಗಳನ್ನಿರಿಸಿ ಗಂಟೆಗೆ 3500 ಮೈಲು ವೇಗದ ಗಾಳಿಯನ್ನು ಬೀಸುವಂತೆ ಮಾಡಿದ್ದಾರೆ

ಮಿಂಚಿನ ವೇಗವು ಅತ್ಯಂತ ತ್ವರಿತವಾಗಿದೆ ಅದು ಸೆಕುಂಡಿಗೆ 10 ಸಾವಿರ ಮೈಲುಗಳಷ್ಟಾಗುತ್ತದೆ ಸಮುದ್ರ ಮಟ್ಟದಲ್ಲಿನ ಗಾಳಿ ಗಂಟೆಗೆ 331 ಮೈಲುಗಳನ್ನು ತಲುಪಿದುಂಟು ಬ್ರಿಟನಿನಲ್ಲಿ 100 ಮೈಲಿಗೆ ಮಿಕ್ಕಿದ ವೇಗದಲ್ಲಿ ಗಾಳಿ ಬೀಸಲಿಲ್ಲ

ರೇಡಿಯೋ ಕಿರಣಗಳು ಬೆಳಕಿನ ವೇಗದಲ್ಲೇ ಧಾವಿಸುತ್ತವೆ— ಗಂಟೆಗೆ 186000 ಮೈಲುಗಳು

ಸೂರ್ಯನ ತಿರುಗುವಿಕೆಗೆ ಗಂಟೆಗೆ 4407 ಮೈಲು ವೇಗವಿದೆ ಭೂಮಿಯು ಸೂರ್ಯನ ಸುತ್ತಲು ಗಂಟೆಗೆ 66 ಸಾವಿರ ಮೈಲು ವೇಗದಲ್ಲಿ ತಿರುಗುತ್ತಿದೆ ಭೂಮಿಯ ಸುತ್ತು ಚಂದ್ರನು ಉರುಳುವ ವೇಗ ಗಂಟೆಗೆ 2288 ಮೈಲು

ಕೊನೆಗೆ ಒಂದು ಎರೆಹುಳುವಿನ ವೇಗ ಸೆಕುಂಡಿಗೆ ಒಂದು ಗಜದ ಹತ್ತು ಸಾವಿರ ಪಾಲಿನಲ್ಲಿ 20 ಅಂಶದಷ್ಟು

ರೆಕ್ಕೆ ಬಾಂಬುಗಳ ವೇಗ

ಭೂಮಿಯ ಆಕರ್ಷಣ ಶಕ್ತಿ ಕೇಂದ್ರವನ್ನು ಮೀರಿ ದಾಟಿಹೋಗಬೇಕಾದರೆ ಒಂದು ಆಕಾಶ ಬಾಣವು ಸೆಕುಂಡಿಗೆ 7 ಮೈಲು ವೇಗದಲ್ಲಿ ಹಾರಬೇಕು.

ಜರ್ಮನರು ಯುದ್ಧಕಾಲದಲ್ಲುಪಯೋಗಿಸಿದ ರೆಕ್ಕೆ-ಬಾಂಬುಗಳ ವೇಗ ಗಂಟೆಗ 3400 ಮೈಲುಗಳಷ್ಟಿತ್ತು ನಾಜಿಗಳು ನ್ಯೂಯೋರ್ಕನ್ನು ದಾಳಿಮಾಡಲೆಂದು ಸಿದ್ಧಗೊಳಿಸುತಿದ್ದ ರೆಕ್ಕೆಬೊಂಬಿನ ವೇಗ 5 ಸಾವಿರ ಮೈಲುಗಳಷ್ಟಿರುತಿತ್ತು ಎಟ್ಲಾಂಟಿಕ್ ಸಾಗರವನ್ನದು ಅರ್ಧ ಗಂಟೆಯಲ್ಲಿ ದಾಟುತಿತ್ತು

ಕುದುರೆ ಕೊಟ್ಟು ಸಿಗರೇಟು

ಜರ್ಮನಿಯಲ್ಲಿಂದು ಅತೀ ಮೌಲ್ಯದ ಸರಕೆಂದರೆ ಸಿಗರೇಟು ಬಟ್ಟೆಬರೆ ತೊಳೆದು ಸ್ನಾನಮಾಡಬೇಕಾದ ನೀರು ಸಿಗಲಿಕ್ಕೆ ಓರ್ವ ಅಮೇರಿಕನ್ ಸೈನಿಕನು 9 ಸಿಗರೇಟು ಕೊಡುತ್ತಾನೆ. ತಾನು ತೆಗೆದುಕೊಂಡ ಸಿಗರೇಟನ್ನು ಮಡಿಯುವಳು ಜೀನಸು ಅಂಗಡಿಯವನಿಗೆ ಕೊಡುತ್ತಾಳೆ ಅವನು ರೊಟ್ಟಿಯಂಗಡಿಯವನಿಗೆ ಕೊಟ್ಟು ಆಹಾರ ಪಡಕೊಳ್ಳುತ್ತಾನೆ ರೊಟ್ಟಿಯವನು ತನ್ನ ವಸ್ತು ತಯಾರಿಸಲಿಕ್ಕೆ ಬೇಕಾಗಿ ಅದನ್ನು ಮಾರುತ್ತಾನೆ ಕೊನೆಗೆ ಯಾರೋ ಒಬ್ಬರು ಅದನ್ನು ಸೇದುತ್ತಾರೆ

ಓರ್ವ ಸೈನಿಕನೊಡನಿದ್ದ 2 ಸಾವಿರ ಸಿಗರೇಟುಗಳನ್ನು ಪಡಕೊಳ್ಳಲು ಓರ್ವ ಜರ್ಮನನು ತನ್ನ ಕುದುರೆಯನ್ನು ಕೊಟ್ಟನಂತೆ

"ಪತ್ನಿಯ ಮೇಲೆ ಒಡೆತನ ಬೇಡ"

ಇಂಗ್ಲಂಡಿನ ವಿಲ್ಸ್‌ಡೆನ್ ಕೋರ್ಟಿನಲ್ಲಿ ಒಂದು ಗಂಡಹೆಂಡತಿ ವಿವಾದ ವಿಚಾರಣೆಗೆ ಬಂದಾಗ ನ್ಯಾಯಾಧೀಶರು ಗಂಡನಿಗೆ ಹೀಗೆ ಹಿತೋಪದೇಶ ಮಾಡಿದರು

'ನಿನ್ನ ಹೆಂಡತಿಯ ಮೇಲೆ ಒಡೆತನ ತೋರಿಸಬೇಡ ನಿನ್ನಲ್ಲಿ ಅಷ್ಟು ಚಾತುರ್ಯವಿಲ್ಲ ಮಾತ್ರವಲ್ಲ ನಿನಗೆ ಅಂಥಾ ಅಧಿಕಾರವೂ ಇಲ್ಲ

ಒಬ್ಬನು ಅವಳನ್ನು ನನಗೆ ಕಟ್ಟಿಬಿಟ್ಟನೆಂದ ಮಾತ್ರಕ್ಕೆ ಅವಳು ಸ್ವಸೂತ್ರಾಗಲಿಲ್ಲ

"ಸ್ತ್ರೀಯರು ತಮ್ಮ ಕಾಲಡಿಗ ಬಿದ್ದಿರಬೇಕೆಂಬ ಭಾವನೆ ಅನೇಕ ಪುರುಷರಲ್ಲಿದೆ ಅವರ ಉದ್ದೇಶವನ್ನಾಡುವ ಸ್ವಂತ ಸ್ವಾತಂತ್ರ್ಯದ ಸೌಕರ್ಯ ದೊರಕಿತೆಂಬ ಮಾತ್ರಕ್ಕೆ ಪುರುಷರು ಸ್ತ್ರೀಯರನ್ನು ಕಾಲಡಿಯಲ್ಲಿ ಇಡು ಅವರನ್ನು ಪೀಡಿಸಲು ಸಮರ್ಥರಾಗಿ ಹುಟ್ಟಿದವರೆಂದು ಎಣಿಸುತ್ತಾರೆ

ಮೊದಲನೇ ಸಿಗರೇಟು ತುರ್ಕರದು

ವಿಲ್ಸರ ಹೊಗೆ ಸಂಪತ್ತು

ಕಳೆದ 35 ವರ್ಷಗಳಲ್ಲಿ ಇಂಗ್ಲಂಡಿನ ಪ್ರಖ್ಯಾತ ಸಿಗರೇಟು ತಯಾರಕರಾದ ವಿಲ್ಸ್ ಕುಟುಂಬದವರ ಸಂಪತ್ತು 39 ಮಿಲಿಯ ಪವನುಗಳಷ್ಟಾಗಿದೆ ಎಂದು ಲೆಕ್ಕ ಹಾಕಿರುವರು..... ಇದೆಲ್ಲವೂ ಕೇವಲ ಹೊಗೆಯಿಂದ ತಯಾರಿಸಿದ್ದು-ಸಿಗರೇಟಿನ ಹೊಗೆಯಿಂದ.

ಇಷ್ಟು ದ್ರವ್ಯ ಎಲ್ಲಿಂದ ಬಂತು? ಒಂದೇ ಕುಟುಂಬ ಇಷ್ಟೊಂದು ಸಂಪತ್ತನ್ನು ಹೇಗೆ ಸಂಪಾದಿಸಿತು? ಇದರ ಕತೆ 150 ವರ್ಷಗಳ ಹಿಂದೆ ಪ್ರಾರಂಭವಾಗುತ್ತದೆ ಆಗ ಈಜಿಪ್ಟ್ ಮತ್ತು ತುರ್ಕಿ ದೇಶಗಳೊಳಗೆ ಒಂದು ನೌಕಾಯುದ್ಧವಾಯಿತು ಈಜಿಪ್ಟ್ ಹಡಗದ ಮೇಲೆ ಒಂದು ಸಿಡಿ ಗುಂಡು ಸ್ಫೋಟವಾದಾಗ ಅವರ ಎಲ್ಲಾ ತಂಬಾಕು ನಳಿಗಗಳು ಪುಡಿಯಾದವು

ಈಜಿಪ್ತರು ತುಂಬಾ ಹೊಗೆಸೊಪ್ಪು ಸೇವಕರು ಅವರ ಓರ್ವ ಸೈನಿಕನು ಬೇರೆಗತ್ಯಂತರವಿಲ್ಲದೆ ಕಾಗದವೊಂದರಲ್ಲಿ ತಂಬಾಕು ಸುತ್ತಿ ಜಗತ್ತಿನ ಮೊದಲನೇ ಸಿಗರೇಟನ್ನು ಸೇದಿದ

ನಂತರದ ಇಂಗ್ಲೆಂಡ್ ರಶ್ಯಾ ಯುದ್ಧದಲ್ಲಿ ಭಾಗವಹಿಸಿದ ಓರ್ವ ಸೈನಿಕನಿಗೆ ಈ ಸಂಗತಿ ತಿಳಿದು ಈ ಅಭ್ಯಾಸವನ್ನವನು ಇಂಗ್ಲೆಂಡಿಗೆ ತಂದ ಎಚ್. ಓ. ವಿಲ್ಸ್ ಎಂಬ ತಂಬಾಕು ವ್ಯಾಪಾರಿಯ ಕೆಲಸಗಾರನು ಇದನ್ನು ಕೇಳಿ ಕೂಡಲೇ ಕೆಲಸಕ್ಕೆ ಹತ್ತಿದ ಅಂದಿನಿಂದ ಸಿಗರೇಟುಗಳು ಅವನ ಕುಟುಂಬಕೆ ಸಂಪತ್ತನ್ನು ಸಂಗ್ರಹಿಸಿವೆ

ಕ್ರೂರಪ್ರಾಣಿಗಳಿಂದ ಮರಣ

ಭಾರತದಲ್ಲಿ ವನ್ಯಜಂತು ಮೃತ್ಯು

ಇತ್ತೀಚೆಗಿನ ಕೆಲವು ವರ್ಷಗಳ ಮರಣ ಸಂಖ್ಯೆಗಳ ಸರಾಸರಿ ಧಾಟಿಯನ್ನು ಪರಿಶೀಲಿಸಿದಾಗ ಭಾರತದಲ್ಲಿ ಪ್ರತಿವರ್ಷವೊಂದಕ್ಕೆ ಸುಮಾರು 2 ಸಾವಿರ ಜನರು ವನ್ಯಜಂತುಗಳಿಂದ ಮಡಿಯುತ್ತಾರೆಂದು ತಿಳಿದುಬಂದಿದೆ ಇದರ ಅರ್ಧ ಸಂಖ್ಯೆ ಹುಲಿಗಳಿಗೆ ಬಲಿಯಾಗುವವು ತೋಳಗಳು ವರ್ಷಕ್ಕೆ 175 ಜನರನ್ನು ನುಂಗುತ್ತವೆ ಚಿರತೆಗಳು 175 ಮನುಷ್ಯರನ್ನು 100, ಕರಡಿಗಳು ಕಾಡು ಹಂದಿಗಳು ಆನೆಗಳ 75 ಜನರನ್ನು ಸಾಯಿಸುತ್ತವೆ

ಯಾವ ಪ್ರಾಣಿಯಿಂದ ಕೊಲ್ಲಲ್ಪಟ್ಟಿದೆಂದು ಹೇಳಲಾಗದ 225 ಶವಗಳು ಪ್ರತಿವರ್ಷ ಕಾಡುಗಳಲ್ಲಿ ಕೊಳೆಯುವಂತಹವು ಸಿಗುತ್ತವೆ. ಆದರೆ ಹಾವು ಕಡಿತದಿಂದ ಸಾಯುವ ಜನರ ಸಂಖ್ಯೆಯನ್ನು ನೋಡುವಾಗ ಮೇಲಿನ ಸಂಖ್ಯೆಗಳು ಅತ್ಯಲ್ಪವೆನಿಸಲ್ಪಡುತ್ತದೆ.

ಭಾರತದಲ್ಲಿ ದಿನಕ್ಕೆ ಸುಮಾರು ನೂರು ಮಂದಿ ವಿಷ ಹಾವುಗಳಿಂದ ಮಡಿಯುತ್ತಾರೆ ಅಂದರೆ ವರ್ಷಕ್ಕೆ ಸರಾಸರಿ 50000 ಜನರು ಹೀಗೆ ಮೃತ್ಯುವನ್ನು ಸೇರುವರು

ಸೃಷ್ಟಿಯ ಇತಿಹಾಸ ವೈಚಿತ್ರ್ಯ

ಜಗತ್ತಿನಲ್ಲಿರುವ ಅತೀ ಹಳೆಯ ಖನಿಜಪದಾರ್ಥ 2000 ಮಿಲಿಯ ವರ್ಷ ಹಿಂದಿನದು ಅಂದಿನಿಂದ 1500 ಮಿಲಿಯ ವರ್ಷಗಳ ತನಕ ಈ ಜಗತ್ತಿನಲ್ಲಿ ಕೇವಲ ಹುಳ ಹುಪ್ಪಟೆಗಳಲ್ಲದೆ ಬೇರೆ ಯಾವ ಜೀವಿಯೂ ಇರಲಿಲ್ಲ ಅನಂತರ ಬೆನ್ನೆಲುಬುಳ್ಳ ಪ್ರಾಣಿಗಳು ಕಾಣಸತೊಡಗಿದುವು 300 ಮಿಲಿಯ ವರ್ಷಗಳ ಅಂತ್ಯದಲ್ಲಿ ಈ ಪ್ರಾಣಿಗಳು ಬೃಹದಾಕೃತಿಯ ಉರಗಗಳಾಗಿಯೂ, ಓತಿ, ಹಲ್ಲಿಗಳಾಗಿಯೂ ಅಂತ್ಯವಾದುವು ಇವು ಮೀನು ಮತ್ತು ಹಾವುಗಳ ಜಾತಿಯ ನಡುವಿನ ಲಕ್ಷಣಗಳುಳ್ಳವು ನಂತರ 130 ಮಿಲಿಯ ವರ್ಷಗಳ ವರೇಗೆ ಇವು ಭೂಲೋಕ ಸಾಗರಗಳನ್ನು ಸಂಚರಿಸಿ ಆಳಿದವು ಸುಮಾರು 70 ಮಿಲಿಯ ವರ್ಷಗಳ ಹಿಂದೆ ಮರಿ ಇಡುವ ಪ್ರಾಣಿಗಳ ಸೃಷ್ಟಿಯಾಯಿತು ನಂತರ ಒಂದು ಮಿಲಿಯ ವರ್ಷಗಳ ಹಿಂದೆ ಮಾನವ ಪ್ರಾಣಿಗಳು ಇದಕ್ಕೆ ಬಂದುವು

ಪೆಟ್ರೋಲ್ ಶ್ರೀಮಂತನಾದ ಜೋನ್ ರೋಕ್‌ಫೆಲ್ಲರನು ತನ್ನ ವ್ಯಾಪಾರದ ಅತೀ ಲಾಭದ ಕಾಲದಲ್ಲಿ ಪ್ರತಿ ಆರು ಗಂಟೆಗೆ ಒಂದು ಲಕ್ಷ ಡಾಲರುಗಳಷ್ಟು ಲಾಭ ಗಳಿಸುತಿದ್ದನಂತೆ

ರಿಯಾಯತಿ ಲಗ್ಗೇಜಿನಲ್ಲಿ ವ್ಯಾಪಾರಿ ಸಾಮಾನುಗಳ ನಿಷೇಧ.

ಪಸೆಂಜರರ ಸೌಕರ್ಯಗಳ ಬಗ್ಗೆ ಒಂದು ಮಣ ಭಾರದ ಸಾಮಾನುಗಳನ್ನು ಫ್ರೀ ತೆಗೆದುಕೊಂಡುಹೋಗ ಬಹುದಾಗಿ ಮಾಡಿದ ರಿಯಾಯತಿ ಕಾರಣದಿಂದಾಗಿ ಪೆಸೆಂಜರರು ಅವರ ಸ್ವಂತ ಉಪಯೋಗದ ಸಾಮಾನುಗಳಲ್ಲದ ವ್ಯಾಪಾರಿ ಸಾಮಾನುಗಳನ್ನು ತಮ್ಮೊಡನೆ ಪ್ರಯಾಣ ಬೆಳೆಸುವ ಸ್ನೇಹಿತರ ಹೆಸರಿನಲ್ಲಿ ಈ ರಿಯಾಯತಿ ಮೂಲಕ ಧರ್ಮಾರ್ಥ ಸಾಗಿಸುವುದು ರೂಢಿಯಾಗಿದೆ

ಮೋಟರ್ ವಾಹನಗಳು ರೈಲ್ವೆಗಾಡಿಗಳಂತಾಗಿಲ್ಲ ಅವುಗಳಲ್ಲಿ ನಿಯಮಿತ ಭಾರಕ್ಕಿಂತ ಹೆಚ್ಚಿನ ಸಾಮಾನುಗಳನ್ನು ಒಯ್ಯುವುದು ಮೋಟರ್ ವಾಹನಕ್ಕೂ ಮತ್ತು ಪೆಸೆಂಜರರಿಗೂ ಅಪಾಯವಾಗಿದೆ ಕಾರಣ ಬಸ್ಸುಗಳಲ್ಲಿ ಒಯ್ಯುವ ಸಾಮಾನುಗಳನ್ನು ಪೆಸೆಂಜರರ ಅವಶ್ಯಕತೆ ಬಗ್ಗೆನೇ ಮಿತಗೊಳಿಸುವುದು ಆಗತ್ಯವಿದೆ

ವ್ಯಾಪಾರಿ ಸಾಮಾನುಗಳನ್ನು ಒಯ್ಯುವರೆ ವ್ಯಾಪಾರಿಗಳು ಶೆಡ್ಯೂಲ್ ಟೈಮಿಗೆ ಕೊಂಡೊಯ್ಯುವ "ಲಕ್ಷ್ಮಿ" ಯಾ "ಸಿ. ಪಿ. ಸಿ." ಲೋರಿ ಸರ್ವಿಸುಗಳ ಸೌಖ್ಯರ್ಯವನ್ನು ಉಪಯೋಗಿಸಬೇಕಾಗಿ ಅಪೇಕ್ಷಿಸುತ್ತೇವೆ

ವ್ಯಾಪಾರಿ ಸಾಮಾನುಗಳನ್ನು ಎಷ್ಟಕ್ಕೂ ಫ್ರೀ ಲಗ್ಗೇಜಿನ ಅಂಶದಲ್ಲಿ ಸೇರಿಸಿಕೊಳ್ಳಲಾಗುವುದಿಲ್ಲ. ಈ ಕುರಿತು ಮಾಹಿತಿಯನ್ನು ಬುಕ್ಕಿಂಗ್‌ಕ್ಲಾರ್ಕರಿಂದ ಪಡೆಯಬಹುದು

JOINT MANAGERS,

The Combined Booking Agency, MANGALORE

The Joint Booking Office, KODIALBAIL

THE CANARA BANKING CORPORATION LTD.

(Incorporated in British India with Limited Liability)

Estd: 1906.

Head Office: UDIPI, S. Kanara.

CAPITAL:	Rs.
Authorised	25,00,000
Issued, subscribed & called up	16,00,000
Paid up	15 97,145
RESERVES	5,25,000
DEPOSITS	2,07,47,928
TOTAL RESOURCES	3,00,01,186

With a net work of branches & Agencies in all principal cities of India, we shall be able to render efficient collection services

BANKING BUSINESS OF EVERY DESCRIPTION TRANSACTED.

(Regd)

ಅಮೃತಾಂಜನ

ತಲೆವೇದನೆ; ಶಿರೋವೇದನೆ; ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE BOMBAY LIFE ASSURANCE COMPANY LIMITED

(ESTD. 1910)

Peace and Security........

The Mightiest War to secure freedom for the oppressed Nations of Europe has ended. With many attempts at securing the four Freedoms, we do not seem to be anywhere near it. We, in our humble way, have been contributing to this Individual Material Freedom, in War as well as in Peace, by extending Insurance Service to all who seek it

1945 completed Business { **Company's: Over $2\frac{3}{4}$ Crores** / **Ours: About 50 lakhs.**

Kochikar Brothers, Limited.

(ESTD. 1908)

Chief Agents for South India and Special agents for Bombay City & Suburbs.

"Bombay Life Building," Gandhi Nagar, UDIPI.

With Offices at:-

MADRAS, BANGALORE, TRIVANDRUM, MANGALORE, MADURA, CALICUT, BOMBAY, & UDIPI.

And Agencies all over South India

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with seleted ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli.**

Bhuvanendra Products, Ltd.

Factory & Head Office KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ತಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ. ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. **1906**

[ಸಂಪುಟ 41] ತಾರೀಕು 4—4—1947 [ಸಂಚಿಕೆ 14]

ವಾರಾಂತ್ಯ ವರದಿ ವಿಮರ್ಶೆ

ಮಂತ್ರಿಮಂಡಳದ ಮನಸ್ತಾಪ

ಮದ್ರಾಸಿನಲ್ಲಿ ಹೊಸ ಮಂತ್ರಿಮಂಡಳ ಸ್ಥಾಪನೆಯಾದುದು ಹಲವರಲ್ಲಿ ಮನಸ್ತಾಪದ ಅನುರಾಗಗಳನ್ನುಂಟುಮಾಡಿದೆ ಈ ಸಂದರ್ಭದಲ್ಲಿ ಹೊಸ ಮಂತ್ರಿಮಂಡಳದ ಆಕ್ಷೇಪಗಾರರು ಮುಂದಿಸಿದ ಕೆಲವೊಂದು ಮುದ್ದೆಗಳ ಕುರಿತು ತಿಳಕೊಳ್ಳಲು ಪ್ರಯತ್ನಿಸುವುದೊಳಿತು ಈಗ ಯಾವ ಪ್ರಾಂತ್ಯದ ಮಂತ್ರಿಮಂಡಳದ ಪ್ರಧಾನಿಗಳಾಗಿರಲಿಕ್ಕೂ ಶ್ರೀ ರಾಜಗೋಪಾಲಾಚಾರ್ಯರು ಅರ್ಹರೇ ಇರುವರೆಂದು ಬಹುಮಂದಿಗಳ ನಿರ್ವಿವಾದವಾಗಿ ಒಪ್ಪುವರೆನ್ನಬಹುದು. ಯಾವ ರಾಜಕೀಯ ಮಾತುಕತೆಗಳಲ್ಲೂ ಅವರಿಗೊಂದು ಪ್ರಮುಖ ಸ್ಥಾನವಿರುವುದು, ಇಂದು ಕೇಂದ್ರದಲ್ಲಿ ಅವರಿಗೊಂದು ಸ್ಥಾನ ಕೊಟ್ಟದ್ದು ಕೊಂಗ್ರೆಸ್ ವರಿಷ್ಠಾಧಿಕಾರಕ್ಕೂ ಅವರ ಮೇಲೆ ಇರುವ ದೃಢ ವಿಶ್ವಾಸದ ನಿದರ್ಶನವೇ ಆಗಿದೆಯೆಂದರೆ ತಪ್ಪಾಗದು

ಅಧಿಕಾರ ಲಾಲಸೆಯಲ್ಲದೆ ರಾಜಾಜಿಯನ್ನು ಅಮಾತ್ಯ ಪದವಿಗ ಬೇಡವೆನ್ನುವ ಬೇರೆ ಯಾವ ಕಾರಣವೂ ಇಲ್ಲವೆಂದು ತೋರುತ್ತದೆ ಕೆಲವೊಂದು ನಿದಾಯುಕ ನ್ಯೂನತೆಗಳಿಗಾಗಿ ಅವರನ್ನು ಮೇಲೆ ಬಾರದಂತೆ ಮಾಡಿದ ವಿರೋಧಿ ಶಕ್ತಿಗಳ ನಾಯಕತ್ವ ವಹಿಸಿದ ಪ್ರಕಾಶಮರಿಗಾದರೂ ಅದೇ ತರದ ದುರ್ದಶಿ ಪ್ರಾಪ್ತವಾದುದು ಒಂದು ದೃಷ್ಟಿಯಿಂದ ಕೌತುಕದ ವಿಷಯವಲ್ಲ

ಮದ್ರಾಸ್ ರಾಜಕೀಯದಲ್ಲಿ ಹಿಂದಿನ ಬ್ರಾಹ್ಮಣ ಅಬ್ರಾಹ್ಮಣ ಭೇದಾಭೇದದ ಭೂತ ಛಾಯೆ ಪ್ರತ್ಯಕ್ಷ ಇಲ್ಲವೆ ಅಪ್ರತ್ಯಕ್ಷಗಾಗಿ ನಲಿದಾಡುತ್ತಿದೆಯೆಂದು ಒವರ್ ರಾಜಕೀಯ ನಿರೀಕ್ಷಕರು ಸಾರಾಸಾರ ವಿಚಾರಪರಿಪ್ಲುತವಾದೊಂದು ಲೇಖನ ಬರೆಯುವಷ್ಟರ ಮಟ್ಟಿಗೆ ಮೊನ್ನಿನ 'ಅವಿಶ್ವಾಸದ' ಕಾರ್ಯಕಲಾಪಗಳು ನಡೆದಿವೆಯೆಂದು ತಿಳಿದು ಬರುತ್ತದೆ ಈ ದೃಷ್ಟಿಯಿಂದ ರಾಜಾಜಿಯವರಂತವರು ರುಚಿಸದವರಿಗೆ ಪ್ರಕಾಶಮರಂಥವರು ತೃಪ್ತಿಪಡಿಸುತ್ತಿಲ್ಲರೇ ಎಂಬ ಶಂಕೆ ಉತ್ಪನ್ನವಾಗುತ್ತದೆ ಪರಿಸ್ಥಿತಿಯಲ್ಲಿ ಈ ರೀತಿಯ ಸಂಭವಗಳಿಗೆಡೆಯುಂಟಾಗ 'ಅವರು ಒಳ್ಳೆಯವರು ಇವರು ಕೆಟ್ಟವರು' ಎಂದು ಹೇಳುವುದು ಹುಡುಗಾಟಿಕೆಯೆನಿಸುವುದು

ಇತ್ತೀಚೆಗಿನ ಮದ್ರಾಸ್ ರಾಜ್ಯಾಂಗ ಕಾರ್ಯ ಕಲಾಪಗಳಲ್ಲಿ ಸ್ಪಷ್ಟವಾದಒಂದು ವಿಷಯವಿದ್ದರೆ ಅದು ಅಧಿಕಾರ ಸ್ಥಾನವು ಗುಣಕ್ಕೆ ಮತ್ಸರವಿಲ್ಲದ ಯೋಗ್ಯನಿಗೆ ಸಲ್ಲಬೇಕೆಂಬ ಉದ್ದೇಶದ ಲೋಪ ಎಂದು ಖಚಿತವಾಗುತ್ತದೆ ಗಾಂಧೀಜಿಯು ಚತುರ್ದಶ ರಚನಾತ್ಮಕ ಕಾರ್ಯಗಳನ್ನು ತಂದವರ ಮೇಲೂ ಅಷ್ಟಷ್ಟೆ

ಇಲ್ಲಿ ಗರುನಾರ್ಡಿಂದ ಇನ್ನೊಂದು ವಿಷಯವಿದೆ ಅಸಾಮಾನ್ಯ ಸುಭಾಷರನ್ನು, ವೀರ ನರಿಮನ್, ಡಾಕ್ಟರ್ ಖರೆ ಮೊದಲಾದವರನ್ನೆದುರಿಸಲು ಮತ್ತವರ ವಿಷಯವಾಗಿ ಯುಕ್ತವಾದುದನ್ನು ಮಾಡಲು ಹಿಂಜರಿಯದ ಕೊಂಗ್ರೆಸು ರಾಜಾಜಿ ಪ್ರಕಾಶಮರನ್ನು ಸಮರ್ಥಿಸಿ ಅವರ ವಿರೋಧಿಗಳನ್ನು ಸಂಸ್ಥೆಯಿಂದ ಹೊರ ಓಡಿಸಲು ಏಕೆ ಹಿಂಜರಿಯಿತ ? ಇದರಲ್ಲಿ ಹೆದರಿಕೆಯ ಅಂಶವೇನಾದರೂ ಇದೆಯೋ? ಇಲ್ಲವೆ ಕೊಂಗ್ರೆಸ್ಸು ಪ್ರದಾಪರ ಸತ್ವಸ್ಥಿಕೆಯ ಕಡೆ ಗಮನವಿತ್ತು ತೆಪ್ಪಗೆ ಕುಳಿಯಿತೆ? ಬಹುಶ್ಯ ಹಾಗೂ ಇರಬಹುದು ಎರಡೆರಡು ಮೂರು ಮೂರು ಬಾರಿ ಕೊಂಗ್ರೆಸ್ ಉನ್ನತ ಕೇಂದ್ರದಿಂದ ಆಸಫ್ ಆಲಿ, ದೇವ್, ಕೊನೆಗೆ ಸ್ವತಃ ಅಧ್ಯಕ್ಷ ಕೃಪಲಾನಿಯವರೇ ಬಂದು ಬಹುಮತವನ್ನು ಒಪ್ಪಿ ಹೋದರು

ಇಲ್ಲವೆ ರಾಜಾಜಿಯವರನ್ನೆತ್ತಲು ಕೈಕೊಡದಿದ್ದ ಮೇಲೆ ಪ್ರಕಾಶಮರ ಉನ್ನತಿಗೇಕೆ ಕೈಯಿಕ್ಕಬೇಕೆಂಬ ನಿಷ್ಪಕ್ಷಪಾತ ಧೋರಣೆಯನ್ನು ಕೊಂಗೆಸು ವಹಿಸಿತೆ? ಮೇಲೆತ್ತಿದ ಸಂದೇಹಗಳಲ್ಲಿನ ಹೆಚ್ಚಿನ ಸಂಗತಿಗಳು ರಹಸ್ಯವಾಗಿಯೇ ಉಳಿದಿರುವಾಗ ಬಹಿರಂಗವಾಗಿ ಯಾವೊಂದು ಕಡೆಯಿಂದ ಮನಸ್ತಾಪದ ಅಭಿಪ್ರಾಯಗಳನ್ನು ಸೂಚಿಸುವುದು ಹಾಸ್ಯಾಸ್ಪದವಾಗುವುದು

ಇನ್ನು ಹೊಸ ಚುನಾವಣೆಗಳಾಗಬೇಕೆಂಬ ವಿಷಯ ಇದನ್ನು ಕೆಲವು ವ್ಯಕ್ತಿಕ ಲೇಖಕರು (ಕೆಲವರು ಪದವೀಧರರೂ ಇರಬಹುದು) ಬರೆದ ಮಾತ್ರಕ್ಕೆ ಪ್ರಾಂತ್ಯವಿಡೀ ಅದೇ ಅಭಿಪ್ರಾಯದ್ದಿರುತ್ತದೆಂದು ತಿಳಕೊಳ್ಳುವುದೂ ತಿಳಿಗೇಡಿತನ ಜನತೆಗೆ ಕೊಂಗ್ರೆಸಿನ ಮೇಲೆ ಭರವಸೆ ತುಂಬಾ ಇದೆ. ಆ ಪವಿತ್ರ ರಾಷ್ಟ್ರ ಸಂಸ್ಥೆಯ ಪ್ರತಿನಿಧಿಗಳು ತಮಗೆ ಯಾವ ಹಾನಿಯನ್ನೂ ಮಾಡರೆಂಬ ವಿಶ್ವಾಸವೇ ಆ ಮಹಾಸಂಸ್ಥೆಯ ಅದ್ವಿತೀಯ ಶಕ್ತಿ ಪ್ರತಿಭೆಗೆ ಕಾರಣ. ಹೀಗಿರುವಾಗ ಪದೇ ಪದೇ ಚುನಾವಣೆಗಳನ್ನು ಜರಗಿಸುವುದು ಅಪ್ರಾಸಂಗಿಕವಾಗಬಹುದು.

ಆಸ್ಯಾ. ಪರಿಷತ್ತು

ಆಸ್ಯದ ಮೂವತ್ತಕ್ಕೆ ಮಿಕ್ಕಿದ ಜನಾಂಗಗಳು ಚರಿತ್ರಾರ್ಹ ದಿಲ್ಲಿಯಲ್ಲಿ ಸೇರಿ ಪೌರ್ವಾತ್ಯ ದೇಶಗಳ ಸರ್ವತೋಮುಖ ಐಕ್ಯ ಅಭಿವೃದ್ಧಿಗಳ ಸಾಧನೋಪಾಯಗಳನ್ನು ಪರ್ಯಾಲೋಚಿಸಿದರು. ಜಪಾನನ್ನು ಇದರಲ್ಲಿ ಭಾಗವಹಿಸಲು ಅವರನ್ನು 'ಆಳು'ತ್ತಿರುವ ಅಮೇರಿಕನ್ನರು ಬಿಡಲಿಲ್ಲ ನೆಹರು ಗಳು ಅದಕ್ಕಾಗಿ ತಾವು ಮೆಕ್ ಆರ್ಥರರ 'ಕಾಲು' ಹಿಡಿಯುವುದಿಲ್ಲವೆಂದೂ ಹೇಳಿದರು

ಪರಿಷತ್ತಿನ ವಿಶೇಷ ಘಟನೆಗಳಲ್ಲಿ ದಿಲ್ಲಿಗೆ ಬಂದ ಮಹಾತ್ಮರು ತಮ್ಮ ದಿವ್ಯ ವ್ಯಕ್ತಿತ್ವದಿಂದ ಭೇಟಿಕೊಟ್ಟು 'ಒಂದು ಜಗತ್ತಿಗಾಗಿ ಶ್ರಮಿಸಿರಿ' ಎಂದು ಸಂಕ್ಷೇಪವಾಗಿ ತಮ್ಮ ವಿಶ್ವ ಕಲ್ಯಾಣ ಭಾವನೆಯನ್ನು ವ್ಯಕ್ತಪಡಿಸಿದರು. ಮಹಾತ್ಮರು ಪರಿಷತ್ಪ್ರಾಂಗಣವನ್ನು ಹೊಕ್ಕೊಡನೆ 500 ಪ್ರತಿನಿಧಿಗಳೂ, ಐದು ಸಾವಿರ ಜನಸ್ತೋಮವೂ ಎದ್ದುನಿಂತು ಗೌರವಿಸಿದರು ಅವರು ಹೊರಟು ಬರುವಾಗಲೂ ಪುನಃ ಒಮ್ಮೆ ಅದೇ ರೀತಿ ಗೌರವ ಸಲ್ಲಿಸಲಾಯಿತು

ಆಪಾರ ಶ್ರಮದಿಂದ ಮೊನ್ನೆ ತಾನೆ ಎಂಬಂತೆ ಜನ್ಮವೆತ್ತಿದ ಸ್ವತಂತ್ರ ಇಂಡೋನೇಸ್ಯದ ಡಾ. ಸುಲ್ತಾನ್ ಶಾರಿಯರರು ನೆಹರೂಗಳ ಆಹ್ವಾನ ಮನ್ನಿಸಿ ಸ್ಪೆಶಲ್ ವಿಮಾನದಲ್ಲಿ ಬಂದು ಆಸ್ಯದ ಇತರ ಸಹೋದರ ಪ್ರತಿಗಳೊಡನೆ 12 ವರ್ಷದಿಂದ ನೋಡಿರದ ತಮ್ಮ ಡಚ್ ಮಡದಿಯನ್ನೂ ಕೂಡಿಕೊಂಡದ್ದೂ ಇನ್ನೊಂದು ವಿಶೇಷ ಸಂಗತಿ

ಆಸ್ಯದ ಪರಿಷತ್ತಿನಲ್ಲಿ ಭಾಗವಹಿಸಬಾರದೆಂಬ ಲೀಗಿನ ಕೂಗು ಕೊನೆ ತನಕ ಅರಣ್ಯ ರೋದನವೇ ಆಯಿತು ಹೊಸ ಪಾಕ್ಯ ಸರಾಯರು ಆಸ್ಯ ಪ್ರತಿನಿಧಿಗಳನ್ನು ಒಂದು ಸಂತೋಷ ಕೂಟಕ್ಕೆ ಆಹ್ವಾನಿಸಿ ಮನ್ನಿಸಿದರು

ಸಹಜವಾದ ಪ್ರಗತಿಯನ್ನೂ ತಡೆಯುವುದೆಂದರೆ ಸೂರ್ಯನ ಗತಿಗೆ ತಡೆಯೊಡ್ಡಿದಂತೇ ಸರಿ ಓತಿ ಅದೆಷ್ಟು ತಲೆಯಾಡಿಸಿದರೂ ಒಂಟಿ ಸಾಯು ಸಾಗದಿರುವುದೆ? ಇಡೀ ಇಸ್ಲಾಂ ಪ್ರಪಂಚವೇ ಎಂಬಂತೆ ಪ್ರತಿನಿಧಿರೂಪದಲ್ಲಿ ದಿಲ್ಲಿಗೆ ಒಂದಿರುವಾಗ ಇಲ್ಲಿಯ ಪಾಕಿಸ್ತಾನ್ ವಾದಿಗಳು ಪ್ರತ್ಯೇಕವಿರುವುದು ಹಾಸ್ಯಾಸ್ಪದ ಕಾಣುವುದು.

(3ನೇ ಪುಟಕ್ಕೆ ಮುಂದುವರಿದಿದೆ)

THE

UNITED INDIA LIFE ASSURANCE CO., LTD.

ESTD 1906 [H O MADRAS

SECURITY

Greater than any conferred by legislative enactments is guaranteed

by

UNITED INDIA'S TRUST ARRANGEMENT

with

THE OFFICIAL TRUSTEE TO THE GOVRNMENT OF MADRAS.

For Particulars apply to

INSPECTORATE OFFICE

K S. Rao Road, Mangalore.

ಸಿಕ್ಖರ ಮಾಸ್ಟರ್ ತಾರಾಸಿಂಗರು

ನಿವೃತ್ತ ಸನ್ಯಾಸಿ ರಾಜಕೀಯ ಮುಖಂಡನಾದ

ಪಂಜಾಬದ ಕ್ರಾಂತಿಸಿಂಹಗಳಲ್ಲೊಬ್ಬರು

ಪ್ರಖ್ಯಾತ ರಾಜಕೀಯ ಧುರೀಣರು ತಮ್ಮ ಜೀವನದ ಒಂದಲ್ಲ ಒಂದು ಕಾಲದಲ್ಲಿ ಉಪಾಧ್ಯಾಯರಾಗಿದ್ದ ನಿದರ್ಶನಗಳೇ ಹೆಚ್ಚು. ಗಾಂಧೀಜಿಯವರು ಆಫ್ರಿಕದಲ್ಲಿ ತಮ್ಮ ಸ್ವಂತ ಶಾಲೆ ಕಲಿಸುತ್ತಿದ್ದರು. ಮೂ ಳವೀಯರು ಅಧ್ಯಾಪಕ ವೃತ್ತಿಯಿಂದಲೇ ಪ್ರಾರಂಭಿಸಿದರು. ಅಧ್ಯಕ್ಷ ಕೃಪಲಾನಿಯವರು ಪ್ರೊಫೆಸರರಾಗಿದ್ದಾಗ ಆಂಗ್ಲ ಇನ್ಸ್‌ಪೆಕ್ಟರರನ್ನು ಗದರಿಸುತ್ತಿದ್ದರು.

ಸಿಕ್ಖರ ಮಾನ್ಯ ಮುಖಂಡ ತಾರಾಸಿಂಗರೂ ಉಪಾಧ್ಯಾಯರಾಗಿದ್ದು ಜನಪ್ರಿಯವಾದ ಮಾಸ್ಟರ್ ಬಿರುದನ್ನು ಸಂಪಾದಿಸಿದರು ಸಿಂಗರು ಹುಟ್ಟಿದ್ದು ಹಿಂದೂವಾಗಿ, ಬೆಳೆದದ್ದು ಹಿಂದೂವಾಗಿ, ಕಲಿತದ್ದು ಹಿಂದೂವಾಗಿ ಅವರದು ಪಂಜಾಬದ ಒಂದು ಪ್ರತಿಷ್ಠಿತ ಹಿಂದೂ ಕುಟುಂಬ. ಬಿ. ಎ. ಪಾಸ್ ಆದೊಡನೆ ಗುರು ನಾನಕರ ತತ್ವಗಳ ಕಡೆ ಅವರನು ಸೆಳೆಯಿತು ಅಂತೆ ಸಿಕ್ ಧರ್ಮವನ್ನು ಸ್ವೀಕರಿಸಿ ಮತಾಂತರ ಹೊಂದಿದರು.

ಲೈಲಾಪುರದಲ್ಲಿ ಅವರೊಂದು ಶಾಲೆಯನ್ನು ಸ್ಥಾಪಿಸಿ ಅದರ 15 ರೂ ವೇತನದ ಮುಖ್ಯೋಪಾಧ್ಯಾಯರಾದರು

ಮಹಾತ್ಮಾ ಗಾಂಧಿಯವರು ಶಾಸನ ಭಂಗ ಚಳವಳಿ ಆರಂಭಿಸಿದಾಗ ತಾರಾಸಿಂಗರು ತಮ್ಮ ಸಿಕ್ ಸಹಧರ್ಮಿಯರನ್ನು ಹುರುಪುಗೊಳಿಸಿ ಚಳವಳದಾಳದಲ್ಲಿ ನೇರವಾಗಿ ದುಮುಕಿದರು.

ಗುರು ನಾನಕರ ಜನ್ಮ ಸ್ಥಳದಲ್ಲಿನ ಒಂದು ಸಿಕ್ಖರ ಗುರುದ್ವಾರದ ಚಳವಳದಲ್ಲಿ 2 ಸಾವಿರ ಸಿಕ್ಖರು ಬಲಿಯಾಗಿದ್ದರು ಆದರೂ ತಾರಾಸಿಂಗರು ತಮ್ಮ ಅಮೋಘ ಸ್ಫೂರ್ತಿ ಶಕ್ತಿಯಿಂದ ಹೆಚ್ಚೆಚ್ಚು ಸಿಕ್ಖರು ಚಳವಳದಲ್ಲಿ ಭಾಗವಹಿಸುವಂತೆ ಹುರಿದುಂಬಿಸಿದರು. ಇದರಲ್ಲಿ ಸಿಂಗರು ಬಂಧಿತರಾದರು ಆದರೆ ಸ್ವಲ್ಪ ಕಾಲದಲ್ಲೇ ಪಂಜಾಬ್ ಸರಕಾರ ತನ್ನ ಹುಚ್ಚು ಧೋರಣೆಯನ್ನು ಮನಗಂಡು ಗುರುದ್ವಾರ ಸಂರಕ್ಷಣೆಯ ಕಾಯಿದೆಯೊಂದನ್ನು ಜಾರಿಗೆ ತಂದು ಸಿಂಗರನ್ನು ಬಿಟ್ಟುಬಿಟ್ಟರು

ಆನಂತರ ತಾರಾಸಿಂಗರು ವೈರಾಗ್ಯವನ್ನು ತಾಳಿ ಏಕಾಂತ ದೇವಧ್ಯಾನಗಳಿಗಾಗಿ ಹರದ್ವಾರದಲ್ಲಿ ಸನ್ಯಾಸಿಯಂತೆ ಜೀವನ ಸಾಗಿಸಲು ಹೊರಟುಹೋದರು ಆದರೆ ರಾಷ್ಟ್ರಾಭಿಮಾನ ಚೇತನಗೊಂಡ ಸಿಕ್ ಮುಖಂಡರು ತಮ್ಮ ಜನಾಂಗದ ನಾಯಕತ್ವ ವಹಿಸಲು ಯೋಗ್ಯ ಮುಖಂಡರನ್ನು ಕಾಣದೆ ಸಾಧು ತಾರಾಸಿಂಗರ ಬಳಿ ಹೋಗಿ ನಾಯಕತ್ವ ವಹಿಸಬೇಕೆಂದು ಅವರನ್ನು ಕರೆತಂದರು.

1942ರ ಕ್ರಿಪ್ಸ್ ಸಂಧಾನದ ಯೋಜನೆಯಲ್ಲಿ ಪಾಕಿಸ್ತಾನದ ಕ್ರಿಮಿಗಳನ್ನು ಸಿಂಗರು ಕಂಡು ಅದನ್ನು ತಿರಸ್ಕರಿಸಿದರು. ನಂತರದ ಕ್ವಿಟ್ ಇಂಡಿಯಾ ಚಳವಳವು ಅವರ ಅಗ್ನಿ ಪರೀಕ್ಷೆಯ ಕಾಲ. ಕೊಂಗ್ರೆಸ್ ಚಳವಳಿಕ್ಕೆ ಸೇರಿದರೆ ಸೈನ್ಯದಲ್ಲಿ ಸೇರಿ ಪಡೆಯುವ ಅನುಭವಕ್ಕೆ ಕೊರತೆ ಬರುವುದೆಂದು ಸಿಂಗರು ತಮ್ಮ ಅನುಯಾಯಿಗಳಿಗೆ ಯುದ್ಧ ಕೆಲಸಕ್ಕೆ ಪ್ರೇರೇಪಿಸಿದರು. ಆದರೂ ಕೊಂಗ್ರೆಸಿನ ಮೇಲೆ ಅವರಿಗೆ ತುಂಬಾ ಆದಾರವಿದೆ.

"ಪಾಕಿಸ್ತಾನ ಬೇಕಾದರೆ ಸಿಕ್ಕೀಸ್ತಾನವೂ ಬೇಕು" ಎಂಬುದೇ ತಾರಾಸಿಂಗರ ಘೋಷ. ಮುಸಲ್ಮಾನರು ಹಿಂದೂಗಳ ಆಳ್ವಿಕೆಗೊಳಪಡಲಿಚ್ಛಿಸುವುದಿಲ್ಲವಾದರೆ ಸಿಕ್ಖರಿಗೆ ಮುಸಲ್ಮಾನರ ಆಡಳಿತದ ಕೆಳಗಿರಲು ಮನಸ್ಸಿಲ್ಲ. ಅವರ ಕೈಕೆಳಗಿಂದು ಸಿಕ್ ಜನಾಂಗವೆಲ್ಲ ಒಟ್ಟುಗೂಡಿದೆ. ಅವರ ಸಿಂಹನಾದಕ್ಕೆ ಸಿಕ್ ಪಂಥವು ಚೇತರಿಸಿಕೊಂಡಿದೆ. ಅವರ ಗರ್ಜನೆಗೆ ಪಂಜಾಬದ ಮುಸ್ಲಿಂ ಜಾತೀಯವಾದಿಗಳು ನಡುಗಹತ್ತಿದರು.

★ ಶ್ರೇಷ್ಠತೆ ಎಲ್ಲಿದೆ? ★

ಪ್ರಸಿದ್ಧ ಇತಿಹಾಸ ಸಂಶೋಧಕರಾದ ಟಿ ಟಿ. ಪೊಟಮೆನ್ ಅವರು ಮೂಲ ಸಂಶೋಧನೆಗಳ ಒಂದು ಯಾದಿ ತಯಾರಿಸಿರುವರು ಅದರಲ್ಲಿ ಹೀಗಿದೆ ತಾಮ್ರ, ಕಂಚು, ಗೋದಿ, ನೇಗಿಲು, ಅಕ್ಷರಮಾಲೆ, ಗಾಜು, ಇಟ್ಟಿಗೆಗಳು ಈಜಿಪ್ತದಲ್ಲಿ ಮಾಡಲ್ಪಟ್ಟವು ಚಕ್ರಗಳು ತೂಕದ ಕಲ್ಲುಗಳು, ನ್ಯಾಯ ಸೂತ್ರಗಳು, ನಾಣ್ಯಗಳು, ಕಮಾನುಗಳು ಅಸ್ಸಿರಿಯ ಸುಮೇರಿಯದಲ್ಲೂ ಬೆಬಿಲೋನಿನಲ್ಲೂ ಕಂಡುಹಿಡಿಯಲ್ಪಟ್ಟವು

"ಏಸೀರಿಯದ ಜನರು ಹತ್ತಿ, ಬೇಂಕು ಮತ್ತು ಟಪ್ಪಾಲು ಪದ್ಧತಿಯನ್ನು ಪ್ರಾರಂಭಿಸಿದ್ದರು ಚೆಲ್ಡಿಯಾನರು ಜೋತಿಷ್ಯವನ್ನೂ ವಾರದ ದಿನಗಳನ್ನೂ, ವೃತ್ತವನ್ನೂ ಕಲಿಸಿಕೊಟ್ಟರು ಏಕ ದೇವತ್ವ, ಅಡಿಗೆ ಮನೆ, ಚಲ್ಲಣಗಳನ್ನು ಪರ್ಶಿಯನ್ನರಿಂದ ಕಲಿತೆವು ಅರಬರು ಬೀಜಗಣಿತ, ಸೊನ್ನೆ, ಸಂಖ್ಯೆಗಳನ್ನು ಯುರೋಪಿಗೆ ಕೊಟ್ಟರು ಗ್ರೀಕರು ರೇಖಾಗಣಿತ ತಿರುಗು ಯಂತ್ರಗಳನ್ನು ತೋರಿಸಿಕೊಟ್ಟರು ಎಂಗಾಣಿ, ಸಿಡಿಮದ್ದು, ರೇಶ್ಮೆ, ಕನ್ನಡಕ, ಮುದ್ರಣ, ನೌಕಾ ದಿಕ್ಸೂಚಿ ಮತ್ತು ಕಾಗದ ನೋಟುಗಳ ಉಪಯೋಗ ಕಲಿಸಿದ ಚೀನಿಯರಿಗೆ ನಾವು ಕೃತಜ್ಞರಿರಬೇಕು ಇವುಗಳಲ್ಲಿ ಹೆಚ್ಚಿನವು ಭಾರತದಿಂದುದ್ಭವಿಸಿದವು

ದಹನ ಸಿದ್ಧ ಭಾರತ

ಡೈಲಿ ಗ್ರೆಫಿಕ್ ಪತ್ರಿಕೆಯ ದೃಷ್ಯ

"ಭಾರತದಲ್ಲಿಂದು ಮಿಲಿಯಾವಧಿ ಜನರು ವಿನಾಶವನ್ನೆದುರು ನೋಡುತ್ತಿರುವರು" ಹೀಗೆಂದು ಡೈಲಿ ಗ್ರೆಫಿಕ್ ಎಂಬ ಇನ್ನೊಂದು ಆಂಗ್ಲ ಪತ್ರಿಕೆಯ ರಾಜಕೀಯ ಟೀಕಾಕಾರರು ಒಂದು ಲೇಖದಲ್ಲಿ ಬರೆಯುತ್ತಾರೆ ಅವರ ಅಭಿಪ್ರಾಯ ಹೀಗಿದೆ

ಬ್ರಿಟಿಷ್ ಸೈನ್ಯವನ್ನೊಯ್ಯುವ ಕೊನೆಯ ಹಡಗು ಬೊಂಬಾಯಿ ಬಂದರವನ್ನು ಬಿಟ್ಟ ಕೂಡಲೇ ಅಸಹಾಯಕ ಜನ ಜಂಗುಳಿಯ ನಾಡಿಗಳಿಂದ ಹರಿವ ರಕ್ತದ ನದಿಯಿಂದಲೂ ಆರಿಸಲಾಗದ ಕಲಹಾಗ್ನಿಯು ಭಾರತದಲ್ಲಾರಂಭವಾಗುವುದು ಈ ಮಧ್ಯ 60 ಮಿಲಿಯ ಅಸ್ಪೃಶ್ಯರ ಗತಿಯಾದರೂ ಕರುಣಾಜನಕವಾಗುವುದು. ಯುದ್ಧಕುಂಡದ ಒಂದು ಕಡೆ ಸ್ಪೃಶ್ಯ ಹಿಂದೂಗಳೂ, ಇನ್ನೊಂದು ಕಡೆ ಮುಸ್ಲಿಮರೂ ನಿಂತು ಈ ಜನರನ್ನು ನೇರವಾಗಿ ನರಕಕ್ಕೆ ಕಳುಹಿಸುವರು.

ಇವರು ಭಾರತವನ್ನು ಅಳಿಸಲೂ ಉಳಿಸಲೂ ಶಕ್ಯರು

"ಇಂಡಿಯದ ಪಂಚ ಮಹಾ ಪ್ರಭೃತಿಗಳು"

ಮಾತುಕತೆ ಕುರಿತು ಲಂಡನ ಪತ್ರಿಕೆಯ ಎಚ್ಚರಿಕೆ

"40 ಕೋಟಿ ಭಾರತೀಯರ ಭವಿಷ್ಯವು ಆ ದೇಶದ 'ಪಂಚ ಪ್ರಭೃತಿ'ಗಳ ಮೇಲೆ ಹೊಂದಿಕೊಂಡಿದೆ." ಹೀಗೆಂದು ಲಂಡನಿನ ಡೈಲಿ ಹೆರುಲ್ಡ್ ಪತ್ರಿಕೆಯು ಭಾರತದಲ್ಲಿ ಹೊಸ ವ್ಯಾಸ್‌ರಾಯರು ನಡೆಸುತ್ತಲಿದ್ದ ರಾಜಕೀಯ ಮಾತುಕತೆಗಳ ಕುರಿತು ಒಂದು ವಿಮರ್ಶಾತ್ಮಕ ಲೇಖದಲ್ಲಿ ಬರೆಯುತ್ತಿದೆ ಮೌಂಟ್‌ಬೇಟನರನ್ನು ಭಾರತದ ಕೊನೆಯ ವ್ಯಾಸರಾಯರೆಂದು ಸಂಬೋಧಿಸುತ್ತಾ ಆ ಪತ್ರಿಕೆಯ ದಿಲ್ಲಿ ಬಾತ್ಮಿದಾರರು ಹೀಗೆ ಬರೆಯುತ್ತಾರೆ

ಹೊಸ ವ್ಯಾಸರಾಯರ ಕೆಲಸವು ಅತ್ಯಂತ ಗಹನವಾದುದು ಜಗತ್ತಿನಲ್ಲೇ ಅದು ಕಠಿಣವೆನಿಸಬಹುದು ಆದರೆ ಈ ಕೆಳಗಿನ ಐದು ಭಾರತೀಯ ಮುಖಂಡರು ಸಮಾಧಾನದಿಂದ ಸಮಾಲೋಚಿಸಿದರೆ 40 ಕೋಟಿ ಭಾರತೀಯರ ಮುಂದಿರುವ ಸುವರ್ಣ ಸುಸಂಧಿಯು ಸದುಪಯೋಗಗೊಳಿಸಬಹುದು

ನೆಹರು:— ಸ್ಥಾನಮಾನಗಳಲ್ಲಿ ದಿನೇ ದಿನೇ ಬೆಳೆಯುತ್ತಿರುವ ರಾಜಕೀಯ ಮುತ್ಸದ್ದಿಗಳು ಅಗಾಧ ಮಾನವೀ ಗುಣ ಲಕ್ಷಣಗಳ ವ್ಯಕ್ತಿ ಶ್ರೇಷ್ಠ ಸಾಹಿತ್ಯ ಸಾಮರ್ಥ್ಯವಿದ್ದವರು

ಜಿನ್ನಾ: ರಾಜಕೀಯದಲ್ಲಿ ವಿಶೇಷ ಸಾಮರ್ಥ್ಯವಿದ್ದವರು ಇವರದು ಚಕಾಲಿತು ಮನಸ್ಸು

ಭೋಪಾಲ್— ದೇಶಿ ರಾಜರ ಪ್ರತಿನಿಧಿಗಳ ತೀಕ್ಷ್ಣ ಮತಿಗಳು, ಸಮರ್ಥರು ಆಗಿದ್ದು 552 ದೇಶಿ ಸಂಸ್ಥಾನಗಳಿಗೆ ತಮ್ಮಿಂದಾದಷ್ಟು ಉತ್ತಮ ಹಕ್ಕು ಬಾಧ್ಯತೆ ದೊರಕಿಸಲು ಹವಣಿಸುತ್ತಾರೆ

ತಾರಾಸಿಂಗ್ ಸಿಕ್ಖರ ಮುಖಂಡರು.

ಗಾಂಧಿ— ವಿಶಿಷ್ಟಾ ತರ ಭಾರತೀಯ ಭಾರತೀಯರ ಧ್ರುವತಾರೆ ಮಾರ್ಗದರ್ಶಕ

ಭಾರತವನ್ನು ಅಳಿಸುವುದು ಇಲ್ಲವೆ ಉಳಿಸುವುದು ಈ ಐದು ವ್ಯಕ್ತಿಗಳ ಕೈಯಲ್ಲಿದೆ ಸ್ಥೈರ್ಯದಿಂದ ಇವರು ಈ ವಿಷಾರಿ ಹೋದ ಹೊತ್ತಿನಲ್ಲೂ ಒಟ್ಟುಗೂಡಿ ತಮ್ಮೆದುರಿನಲ್ಲಿರುವ ಸುವರ್ಣ ಸಂದರ್ಭವನ್ನು ಹಿಡಿದುಕೊಳ್ಳಬಹು ಅವರು ಯಶಸ್ವಿಯಾಗುವರೆ ದು ನಂಬಲಿಕ್ಕೂ ಸಾಧ್ಯವಿಲ್ಲ

ಮುಂದಿನ ಯುದ್ಧ ನಕ್ಷತ್ರಲೋಕಕ್ಕಾಗಿ

ಬುಧ ಗ್ರಹದಿಂದ ಬೊಂಬು ದಾಳಿ

ಅಮೇರಿಕನ್ ವೈಮಾನಿಕನ ಮುಂಜಾಗ್ರತೆ

ಯಂತ್ರ ವಿಧಾನಗಳನ್ನು ಸನ್ನಿಹಿತಗೊಳಿಸಿ ಸಾಧ್ಯವಿದ್ದಷ್ಟು ಶ್ರೀಘ್ರದಲ್ಲಿ ಅಮೇರಿಕವು ಬುಧಗ್ರಹವನ್ನು ಹಿಡಿಯದಿದ್ದರೆ ಮುಂದೆ ಇತರರು ಅದನ್ನು ಹಿಡಿದು ಅಮೇರಿಕದ ಮೇಲೆ ಬೊಂಬು ದಾಳಿ ಮಾಡುವ ಸಂಭವವಿದೆ ಎಂದು ಜೇಮ್ಸ್ ರಾಂಡೋಲ್ಫ್ ಎಂಬ ಯುದ್ಧೋಪಕರಣ ತಯಾರಕ ಖಾತೆಯ ತಜ್ಞರೊಬ್ಬರು ತಮ್ಮ ಸರಕಾರಕ್ಕೆ ಎಚ್ಚರಿಸಿದ್ದಾರೆ

"ಸದ್ಯದಲ್ಲೇ ಬೇರೆ ದೇಶದ ನಿಪುಣ ಆಕಾಶಬಾಣ ವಿಜ್ಞಾನಿಗಳು ಬುಧಗ್ರಹವನ್ನು ಸ್ವಾಧೀನಪಡಿಸಿಕೊಳ್ಳಬಹುದೆಂದೂ, ಇದು ನಾವು ತಿಳಿಕೊಂಡದ್ದಕಿಂತ ಶೀಘ್ರವಾಗಿ ಸಂಭವಿಸಬಹುದೆಂದೂ, ಆದುದರಿಂದ ಕೂಡಲೇ ಅಲ್ಲಿಂದ ಭೂಲೋಕದ ಸ್ವಾಮಿತ್ವಕ್ಕಾಗಿ ಜಂಘುಟಕ್ಕಾರಂಭವಾಗುವುದೆಂದೂ ಮೇಜರ್ ರಾಂಡೋಲ್ಫರು ಶಂಕಿಸುತ್ತಾರೆ. ಅದಕ್ಕಿಂತ ಹೆಚ್ಚಿನ ಅಂಜಿಕೆಯ ಸಂಗತಿಯೆಂದರೆ ಯಾವುದಾದರೂ ತಾರತಮ್ಯವಿಲ್ಲದ ಶಕ್ತಿ ರಾಷ್ಟ್ರವೊಂದು ಆ ಗ್ರಹವನ್ನು ತಮ್ಮ ಶಸ್ತ್ರಾಸ್ತ್ರ ತಯಾರಕ ಗುಪ್ತ ಠಾಣ್ಯವನ್ನಾಗಿ ಮಾಡಿ ಭೂಲೋಕದ ದಾಳಿಯಾರಂಭಿಸಬಹುದೆಂಬ ಸಂಗತಿ

ಮೇಜರ್ ರಾಂಡೋಲ್ಫರ ತರ್ಕ ಪ್ರಕಾರ ಬುಧಗ್ರಹದಲ್ಲಿ ಬೃಹದಾಕೃತಿಯ ಜೀವಿಗಳಿರುವರೆಂದೂ, ಆದರೆ ನಮಗವರಿಂದ ಯಾವ ತೊಂದರೆಯಾಗದೆಂದೂ ತಿಳಿಸುತ್ತಾರೆ

"ಸಾಧ್ಯವಾದಷ್ಟು ಶೀಘ್ರವಾಗಿ ನಾವು ಬುಧಗ್ರಹವನ್ನು ಹಿಡಿದರೆ ಅಪಾರ ಧನವೂ ಪ್ರಾಣಗಳೂ ಉಳಿಯುವವು ವಿಜಯವೂ ಸುಲಭವಾಗಿ ನಮ್ಮದಾಗುವುದು ಆದುದರಿಂದ ಈಗಲೇ ಅದಕ್ಕೆ ಸಿದ್ಧತೆಯಾಗಬೇಕು

ವಾರಾಂತ್ಯ ವರದಿ ವಿಮರ್ಶೆ

(೧ನೇ ಪುಟದಿಂದ)

ಗಂಟೆಗೊಂದೇ ಸ್ವರ

ಮಿ ಜಿನ್ನರ ಪಾಕಿಸ್ತಾನ ತರ್ಕ ಕರ್ಕಶವಾಗುತ್ತಿದೆ ಪಂಜಾಬನ್ನು ಮುಸ್ಲಿಂ ಮತ್ತು ಮುಸ್ಲಿಮೇತರವಾಗಿ ವಿಂಗಡಿಸಬಹುದೆಂದು ವಿಚ್ಛೇದೀಕರಣಕ್ಕೆ ತಮ್ಮ ಒಪ್ಪಿಗೆಯನ್ನು, ಅಧಿಕಾರವನ್ನು ಶಾಂತರೀತಿಯಲ್ಲಿ ವಹಿಸಿಕೊಳ್ಳುವ ವಿಧಾನಗಳನ್ನು ಪರ್ಯಾಲೋಚಿಸಲು ಮಾತುಕತೆಗಳಿಗಾಗಿ ಲೀಗ್ ಪ್ರತಿನಿಧಿಗಳನ್ನು ಕೊಡಗೆಸ ಆಹ್ವಾನಿಸಿದ ವಿಷಯಗಳನ್ನೆಲ್ಲ ಗೊತ್ತಿಲ್ಲದಂತೆ ನಟಿಸುತ್ತ ಮಿ ಜಿನ್ನಾ ಕೆಲ ದಿನಗಳ ಹಿಂದಿನ ತಮ್ಮ ಬೊಂಬಾಯಿ ಭಾಷಣವೊಂದರಲ್ಲಿ ಪಾಕಿಸ್ತಾನದ ಮೂಲಕ ಪಂಜಾಬಿನ ತೀರಿಸೋಣವೆಂದು ಮತ್ತೊಮ್ಮೆ ಸಲಹೆಯಿತ್ತಿರುವರು

ಪಂಜಾಬದ ಶೇಕಡಾ 40ರಷ್ಟು ಮುಸಲ್ಮಾನೇತರರನ್ನು ತಮ್ಮ ಪ್ರದೇಶಕ್ಕೆ ಸೇರಿಸಿ ಪಾಕಿಸ್ತಾನ ಕಟ್ಟುವ ಕನಸಿನಿಂದ ಲೀಗ್ ಧುರೀಣರು ಎಚ್ಚೆತ್ತಿಲ್ಲ. ಹಿಂದೂ ಮುಸಲ್ಮಾನರು ಎರಡು ಪ್ರತಪ್ರತ್ಯೇಕ ಸಂಸ್ಕೃತಿ ಸಾಂಪ್ರದಾಯಗಳ ಜನಾಂಗಗಳು ಎಂದು ಹೇಳುತ್ತ ಮಿ ಜಿನ್ನರು "ಆದುದರಿಂದ ಅವರು ಪ್ರತಪ್ರತ್ಯೇಕವಾಗಿರಬೇಕು" ಎಂದು ಒತ್ತಿ ಹೇಳುತ್ತಾರೆ ಕೊಂಗ್ರೆಸು ಅದನ್ನು ಒಪ್ಪಿದೆ ಮುಸ್ಲಿಂ ಮತ್ತು ಮುಸ್ಲಿಮೇತರರ ಸಂಸ್ಕೃತಿ ಸಾಂಪ್ರದಾಯಗಳು ಇರುವ ರೀತಿಯ ದರೆ ಪಂಜಾಬು ಅದೇ ರೀತಿ ವಿಭಾಗಿಸಲ್ಪಡಲಿ' ಎಂಬುದೇ ಕೊಂಗ್ರೆಸಿನ ಇತ್ತೀಚೆಗಿನ ದುಃಖದ ಒಪ್ಪಿಗೆ

ಪಂಜಾಬಿನ 93 ಸೆಕ್ಷನ್ ಆಡಳಿತವನ್ನು ತಪ್ಪಿಸಿ ಲೀಗು ಜಾತೀಯ ಪಕ್ಷಪಾತದ ಪಾಕಿಸ್ತಾನ್ ಮಂತ್ರಿಮಂಡಳ ರಚಿಸುವುದಕ್ಕೆ ಅವಿಶ್ರಾಂತ ಪ್ರಯತ್ನ ಪಡುತ್ತದೆ ಆದರೆ ಇಂದು ಹೊಸ ಚುನಾವಣೆಗಳಾಗದೆ ಲೀಗಿಗೆ ಸ್ಪಷ್ಟ ಬಹುಮತ ಸಿಕ್ಕುವ ಆಶೆಯಿಲ್ಲ ಸಿಕ್ಖರಂತೂ ಕೊನೆಯ ತನಕ ಪಾಕಿಸ್ತಾನವನ್ನೆದುರಿಸುವರು ಸಿಖೀಸ್ತಾನವೇ ಅವರ ಗುರಿ.

ಬ್ರಿಟಿಷರು ಭಾರತ ಬಿಡುವುದು ಖಂಡಿತ

ಭಾರತ ಸ್ವಾತಂತ್ರ್ಯದಲ್ಲಿ ಸಂಪೂರ್ಣ ಭರವಸೆ

ಬ್ರಿಟಿಷ್ ಗ್ರಂಥಕರ್ತರ ಅಭಿಪ್ರಾಯ

ಬ್ರಿಟಿಷರು ಭಾರತದಲ್ಲಿ ಜಾರಿಗೆ ತಂದ ಜಾತಿವಾರು ಮತದಾನದ ಪದ್ಧತಿಯು ಕೋಮುಕಲಹಕ್ಕೆಡೆ ಕೊಟ್ಟಿತೆಂದು ತಿಳಿಸುತ್ತಾ ಪ್ರಖ್ಯಾತ ಬ್ರಿಟಿಷ್ ಗ್ರಂಥ ಕರ್ತರೂ ಪತ್ರಿಕೋದ್ಯೋಮಿಗಳೂ ಆಗಿರುವ ವಿಕ್ಟಾರ್ ಸ್ಮಿತ್ ಅವರು ಪ್ರಧಾನ ಎಟ್ಲಿಯವರ 'ಜೂನ್' 48ಕ್ಕೆ ಹೊರಟು ಹೋಗುವ ಘೋಷಣೆಯ ಕುರಿತು ಹೀಗೆ ಬರೆಯುತ್ತಾರೆ

ಇಷ್ಟೊಂದು ಕೋಮು ದ್ವೇಷವಿದ್ದರೂ ಭಾರತವು ಕ್ರಮೇಣ ಸ್ವಾತಂತ್ರ್ಯ ಐಕ್ಯತೆಯ ಕಡೆ ಖಂಡಿತ ಮುಂದರಿಯುವುದು ಭಾರತದ ಕುರಿತು ಯೋಚಿಸುವಾಗ ನಾನು ನೆಹುರು ಗಾಂಧಿಗಳ ಬೆಂಬಲಕ್ಕಿರುವ 27 ಕೋಟಿ ಹಿಂದೂಗಳ ವಿಷಯವಾಗಲಿ ಜಿನ್ನರ ಹಿಂದೆ ಇರುವ 9 ಕೋಟಿ ಮುಸಲ್ಮಾನರ ವಿಷಯವಾಗಲಿ ಚಿಂತಿಸುತ್ತಿಲ್ಲ ನಾನು ಅಖಂಡ ಭಾರತದ ವಿಷಯವಾಗಿಯೂ ಅಲ್ಲಿನ ಜನತೆಯ ಆವಶ್ಯಕತೆಗಳ ಸಂಬಂಧವಾಗಿ ಬ್ರಿಟಿಷ್ ಧೋರಣೆಯು ಹೇಗೆ ಪರಿಣಾಮಕಾರಿಯಾಗುವುದೆಂಬುದೇ ನನ್ನ ಯೋಚನೆ

ಬ್ರಿಟನಿನ ದ್ಯೂತ

ಮೂರು ವರ್ಷಗಳ ಹಿಂದೆ ಭಾರತದ ಕುರಿತು ಕೆಲವು ಭಾಷಣಗಳನ್ನು ಕೊಡುವಾಗ ನನಗೆ ಸಂದರ್ಭ ಸಿಕ್ಕಿತ್ತು ಪ್ರೆಸಿಡೆಂಟ್ ರೂಸ್‌ವೆಲ್ಟರ ಚತುಸ್ವಾತಂತ್ರ್ಯಗಳು ಭಾರತಕ್ಕೆ ಹೇಗೆ ಅನ್ವಯಿಸಬಹುದೆಂದೇ ನಾನು ವಿಷಧೀಕರಿಸಬೇಕಾಯಿತು ಭಯರಹಿತ, ಸಂಕಷ್ಟರಹಿತ, ದಬ್ಬಾಳಿಕೆರಹಿತ ಜಾತೀಯ ದ್ವೇಷರಹಿತ ಸ್ವಾತಂತ್ರ್ಯದ ಕುರಿತು ವಿವೇಚಿಸಬೇಕಾಗಿತ್ತು ಭಾರತವು ರಾಜಕೀಯ ಸ್ವಾತಂತ್ರ್ಯ ಗಳಿಸುವುದು ಖಂಡಿತವೆಂಬ ಸಂಗತಿಯ ಆಧಾರದ ಮೇಲೆ ಈ ಚರ್ಚೆಯು ಹೊಂದಿಕೊಂಡಿತ್ತು ಆ ಸ್ವಾತಂತ್ರ್ಯ ಎಂದು ಹೇಗೆ ಸಿಕ್ಕುತ್ತದೆಂಬ ವಿಷಯವು ಆಗ ಅಲಕ್ಷಿಸಲ್ಪಟ್ಟಿತ್ತು (ಚರ್ಚಿಲ್ಲರ ಕಾರ್ಯಭಾರ ಕಾಲದಲ್ಲಿ) ಎಲ್ಲರೂ ಅನಿಶ್ಚಿತ ಭವಿಷ್ಯದ ಕುರಿತು ಅಸ್ಪಷ್ಟವಾಗಿ ಚರ್ಚಿಸುತ್ತಿದ್ದರು

ಆಗ ನಾನು ನನ್ನ ಸಮಾರೋಪ ಭಾಷಣವೊಂದರಲ್ಲಿ ಭಾರತವು ತನ್ನ ಕೋಮು ಕಚ್ಚಾಟವನ್ನು ಬದಿಗಿರಿಸಿ ಶೀಘ್ರ ಭವಿಷ್ಯದಲ್ಲಿ ಐಕ್ಯಮತ್ಯದಿಂದ ಸ್ವಾತಂತ್ರ್ಯದತ್ತ ಸಾಗುವುದು ಖಂಡಿತವೆಂದು ತಿಳಿಸಿದ್ದೆ

ಆಧುನಿಕ ಐರೋಪ್ಯರು ರಾಜಕೀಯವನ್ನು ಭೂ ಸಂಪತ್ತಿನ ತುಲನೆಯ ಮೂಲಕ ಹೋಲಿಸಿ ನೋಡುವರು ಹಾಗೆಯೇ ಕೆಲವರು ಐರೋಪ್ಯ ರಾಜಕೀಯ ಪಕ್ಷಗಳೂ ಮಾನವ ವ್ಯವಹಾರವನ್ನೂ ಇದೇ ದೃಷ್ಟಿಯಿಂದ ವಿವೇಚಿಸುವರು ಈ ಸಂದರ್ಭದಲ್ಲಿ ಭಾರತೀಯ ಮನಸ್ಸುಗಳು ಲೌಕಿಕ ವಿಚಾರಗಿಂತಲೂ ಪಾರಮಾರ್ಥಿಕ ಭಾವನೆಯಿಂದ ಸಂಸ್ಕಾರಗೊಂಡಿವೆಯೆಂಬ ಪ್ರಾಮುಖ್ಯ ಸಂಗತಿಯನ್ನು ಐರೋಪ್ಯರು ಗಣಿಸುವುದಿಲ್ಲ ಮಹಾತ್ಮಾ ಗಾಂಧಿಯವರಿಗೆ ಭಾರತೀಯರ ಮೇಲೆ ಇಂದು ಇರುವ ಅಗಾಧ ಪ್ರಭಾವಕ್ಕಾದರೂ ಅವರ ಅಧ್ಯಾತ್ಮಿಕ ಭಾವನಾ ಪ್ರಧಾನವಾದ ಜೀವನ ಚರ್ಯೆಯೇ ಕಾರಣವೆಂಬ ವಿಷಯವನ್ನು ಈ ಸಂಗತಿಯಿಂದ ತಿಳಕೊಳ್ಳಬಹುದು.

ಭಾರತದಲ್ಲಿನ ಮತೀಯ ಘರ್ಷಣೆಗಳಿಗಾದರೂ ಇದೇ ಕಾರಣವೆನ್ನಬಹುದು. ಭಾರತೀಯರು ಲೌಕಿಕ ವಿಷಯಗಳನ್ನು ಸ್ವಲ್ಪವಾದರೂ ಕಳಕೊಳ್ಳಲು ಸಿದ್ಧರಿದ್ದಾರೆ ಆದರೆ ಅಧ್ಯಾತ್ಮಿಕ ಭಾವನೆಗಳನ್ನವರು ಕಿಂಚಿತ್ತಾದರೂ ಕಳಕೊಳ್ಳಲು ಸಿದ್ಧರಿಲ್ಲ ಆದುದರಿಂದ ಈ ಅಧ್ಯಾತ್ಮಿಕ ವಿಚಾರಗಳ ಸಮಸ್ಯೆಯ ಪರಿಹಾರವಾಗದೆ ಅಲ್ಲಿ ರಾಜಕೀಯ ಪ್ರಗತಿಯಾಗಲಾರದೆಂಬ ತರ್ಕಕ್ಕೆ ಕಾರಣ ಸಿಕ್ಕಿದೆ

ಸಮಸ್ಯೆಗಳು ಕಷ್ಟತರದ್ದಲ್ಲ

ಈಗಿನ ತೊಡಕುಗಳು ನೀಗಲಸಾಧ್ಯವಾದವುಗಳೆಂದೂ ನಾನು ಭಾವಿಸುವುದಿಲ್ಲ. ಜಾತೀಯ ವ್ಯತ್ಯಾಸಗಳು ಮುಂಚಿನಿಂದಲೂ ಇಲ್ಲಿದ್ದವು ಅವನ್ನು ಬ್ರಿಟಿಷರೇ ಉತ್ಪನ್ನ ಮಾಡಿದ್ದೆಂಬ ಅಪವಾದ ಕೇವಲ ಅಪಪ್ರಚಾರ 1920 ಚುನಾವಣೆ ಕಾಲದಲ್ಲಿ ಗಲಭೆಗಳಾಗಬಾರದೆಂದು ಬ್ರಿಟಿಷ್ ಆಡಳಿತಗಾರರು ಅಪ್ರತ್ಯಕ್ಷವಾಗಿ ಒಂದು ತರದ ಜಾತೀಯ ವೈಷಮ್ಯವನ್ನುಂಟುಮಾಡಿರಬಹುದು ಅದಕ್ಕಾಗಿಯೇ ಅವರು ಜಾತಿವಾರು ಮತದಾನದ ಪದ್ಧತಿಯನ್ನು ಜಾರಿಗೆ ತಂದರು ಇದರಿಂದ ಹಿಂದುಗಳು ಹಿಂದೂ ಪ್ರತಿನಿಧಿಗಳಿಗೂ, ಮುಸ್ಲಿಮರು ಮುಸಲ್ಮಾನ ಪ್ರತಿನಿಧಿಗಳಿಗೂ ವೋಟು ಕೊಡುವಂತಾಯಿತು. ಇದರಿಂದ ಜಾತೀಯ ದ್ವೇಷಾನುರಾಗಗಳು ವೃದ್ಧಿಯಾಗುವವು ಎಂದವರು ಭಾವಿಸಿರಲಿಲ್ಲ

ಸಂಯುಕ್ತ ಕಾರ್ಯ

ಭಾರತೀಯರಿಗೆ ಮಾಡಿದ ರಾಜ ಘಟನೆಯೊಂದನ್ನು ಅವರು ಪರಿಶೀಲಿಸಿದಾಗ ಈ ಕೋಮು ಕಚ್ಚಾಟದ ತೀವ್ರತೆ ಸಮ್ಮವಾಗಬಹುದೆಂದು ಸರ್ ಶಾವ ಸ್ವಾಮಿ ಮೊದಲಿಯಾರರು ಜನಾಂಗ ಸಂಘದ ಸಭೆಯೊಂದರಲ್ಲಿ ತಿಳಿಸಿದ್ದರು ಆದರೆ ಅಧಿಕಾರವು ಭಾರತೀಯರ ವಶಕ್ಕೆ ಕೊಡಲ್ಪಡುವಾಗ ತಮ್ಮ ಹಕ್ಕು ಬಾಧ್ಯತೆಗಳು ಬಲವಾಗಿ ಮುಂದಕ್ಕೆ ತರಲ್ಪಡುಗವು ಎಂದು ಅವರು ಸೂಚಿಸಿದ್ದರು ಪ್ರತಿಯೊಂದು ಜಾತಿ ಸಂಗಡವೂ ತನ್ನ ಭದ್ರತೆಗಾಗಿ ಹೆಣಗಾಡುವುದೆಂದೂ ಆದರ ಈ ಚೌಕಾಶಿಯು ಮುಗಿದು ಒಂದು ಸಂಯುಕ್ತ ರಾಜ ಘಟನೆ ಸಿದ್ಧ ಮಾಡಲ್ಪಟ್ಟಾಗ ಎಲ್ಲರೂ ಒಟ್ಟಿಗೂ ದಿ ಕೆಲಸ ಮಾಡುವರೆಂಬ ಹಾರೈಕೆಯನ್ನೂ ಶ್ರೀ ಮೊದಲಿಯಾರರು ಸೂಚಿಸಿದ್ದರು

ಬ್ರಿಟಿಷರ ಹೃತ್ಪೂರ್ವಕತೆ

ಮೊದಲಿಯಾರರದು ಆಶಾವಾದದ ಸಿರಿಕೆ ಐರೋಪ್ಯನಾದ ನಾನು ಅದನ್ನು ಟೀಕಿಸಲಾರೆ ಮೊದಲಿಯಾರರು ಹೇಳಿದ್ದು ನಿಜವಾದರೆ ಈಗಿನ ಬ್ರಿಟಿಷರ ಧೋರಣೆಯ 'ದ್ಯೂತವು' ಯಶಸ್ವಿಯಾಗುವುದು ಖಂಡಿತ ಆಯುಶ್ಯಸಿಯಾದರೆ ಬ್ರಿಟಿಷ್ ಧೋರಣೆಯ ಟೀಕಾಗಾರರ ಭವಿಷ್ಯ ನಿರೂಪವು ನಿಜವಾಗುವುದು ಮುಂದೆ ಭಾರತವು ಬ್ರಿಟಿಷ್ ಸಾಮಂತ ಮಂಡಳನಲ್ಲಿ ಇರಲಿ ಬಿಡಲಿ ಐಕ್ಯಮತ್ಯದ ಅಖಂಡ ಭಾರತವೊಂದು ಸ್ವತಂತ್ರತೆಯನ್ನು ಪಡೆಯಬೇಕೆಂಬ ವಿಷಯದಲ್ಲಿ ಬ್ರಿಟಿಷ್ ಸರಕಾರ ಮಾತ್ರವಲ್ಲ ಅದರ ಧೋರಣೆಯ ವಿರೋಧಿಗಳು ಕೂಡಾ ಹೃತ್ಪೂರ್ವಕ ಬಯಸುವರೆಂಬುದರಲ್ಲಿ ಸಂದೇಹವಿಲ್ಲ.

ಸಂಸಾರ ಸಂಕಷ್ಟದ ಏಳು ಕಾರಣಗಳು

ಹೆಚ್ಚೆಚ್ಚು ಲೈಂಗಿಕ ಶಿಕ್ಷಣದಾವಶ್ಯಕತೆ

ಮಕ್ಕಳು ಹೆಚ್ಚಿದಷ್ಟು ನೆಮ್ಮದಿ ಹೆಚ್ಚು

ಬ್ರಿಟಿಷ್ ತಜ್ಞನ ಸ್ಪಷ್ಟೋಕ್ತಿ

ದಾಂಪತ್ಯ ಜೀವನ ತೊಂದರೆಗಳಿಗೂ ವಿವಾಹ ವಿಚ್ಛೇದಗಳಿಗೂ ಕಾರಣಗಳೇನು?

ಲಂಡನಿನ ವಿವಾಹ ಸಲಹಾ ಮಂಡಳದ ಡಾ। ಎಡ್ವರ್ಡ್ ಗಿಫಿತ್ಸ್ ಅವರು ಒಂದು ಲೇಖದಲ್ಲಿ ಈ ಕೆಳಗಿನ ಏಳು ಕಾರಣಗಳನ್ನು ಕೊಡುತ್ತಾರೆ

1 ದಂಪತಿಗಳೊಡನೆ ವಾಸ ಮಾಡುವ ಅತ್ತೆ ಮಾವಂದಿರು ಆಗಿಂದಾಗ್ಗೆ ಅಧಿಕ ಪ್ರಸಂಗ ತೋರಿಸಿ ಅವರ ವ್ಯವಹಾರದಲ್ಲಿ ಕೈಯಿಕ್ಕುವುದು

2 ದಂಪತಿಗಳಿಬ್ಬರೂ ಸಂಪಾದನೆ ಮಾಡುವವರಾದರೆ ಅವರು ತಮ್ಮ ಆದಾಯ ವೆಚ್ಚದ ಕುರಿತು ಗೋಪ್ಯವಿರಿಸುವುದು

3 ಬೇಸರಿಕೆ

4 ಲೈಂಗಿಕ ವಿಷಯದ ಅಜ್ಞಾನ ಮತ್ತು ಆ ವಿಚಾರದಲ್ಲಿ ಪರಸ್ಪರ ಮೇಳಾಮೇಳಿ ಇಲ್ಲದಿರುವುದು

5 ಒರಟುತನ ಮತ್ತು ಪತಿಪತ್ನಿಗಳು ಪರಸ್ಪರ ಟೀಕೆಗಳಿಂದ ಮನಸ್ತಾಪಗೊಳ್ಳುವಿಕೆ

6 ಪರಸ್ಪರ ವಿಶ್ವಾಸಗಳಲ್ಲಿ ವ್ಯತ್ಯಾಸ.

7 ಸಿರಿಪಾಭಾವ

ಯಾವ ತರುಣ ತರುಣಿಯರಿಗೆ ಸರಿಯಾದ ಲೈಂಗಿಕ ಅನುಭವವು ತಮ್ಮ ಹೆತ್ತವರಿಂದ ತಿಳಿದಿದೆಯೋ ಅವರ ದಾಂಪತ್ಯ ಜೀವನವು ಅತ್ಯಂತ ಸುಖಕರವಾಗುವುದು ಮದುವೆಯ ಮೊದಲು ಗೃಹ ಜೀವನವು ಅತ್ಯಂತ ಕರುಣಾಮಯವಾಗಿಯೂ, ಹೆಚ್ಚು ಮಮತೆಯಿಲ್ಲದೆಯೂ ಇರುತ್ತದೋ ಅಂಥವರ ಸಂಸಾರ ಸುಖವು ಸುಗಮವಾಗುವುದು.

ಮಕ್ಕಳ ಸುಖ

ಲ್ಯೋಸ್ ಎಂಜಿಲಿಸಿನ ದಾಂಪತ್ಯ ಶಿಕ್ಷಣಾಲಯದ ಮಿ। ಪೌಲ್ ಪೊಪೆನೊ ಅವರ ಅಭಿಪ್ರಾಯ ಪ್ರಕಾರ ಮಕ್ಕಳು ಹೆಚ್ಚಿದಂತೆ ಸಂಸಾರ ಸುಖ ಅಭಿವೃದ್ಧಿಯಾಗುವುದೆಂದಿದೆ.

ಅಮೇರಿಕದಲ್ಲಿನ ಏಳನೇ ಒಂದರ ಭಾಗ ದಂಪತಿಗಳು ಸಂತಾನ ರಹಿತರಾಗಿರುವರೆಂದು ಪೊಪೆನೊ ಅವರು ಒಂದು ಭಾಷಣದಲ್ಲಿ ತಿಳಿಸಿದರು

'8370 ಸಂಪೂರ್ಣ ಸಂಸಾರವಂತರ ಜೀವನವನ್ನಾಭ್ಯಾಸಿಸಿದಾಗ ಸಂತಾನವಿಲ್ಲದವರಲ್ಲಿ ಶೇಕಡಾ 59ರಷ್ಟು ಮಂದಿ ಸುಖ ನೆಮ್ಮದಿಯುಳ್ಳವರೆಂದೂ, ಮೂರರಗಿಂತ ಹೆಚ್ಚು ಮಕ್ಕಳಾದವರಲ್ಲಿ ಶೇಕಡಾ 71ರಷ್ಟು ಮಂದಿ ಸುಖ ನೆಮ್ಮದಿಯುಳ್ಳವರೆಂದೂ ತಿಳಿದುಬಂದಿದೆ ಆದುದರಿಂದ ಮಕ್ಕಳಾದಷ್ಟಕ್ಕೆ ಸುಖಸಂತೋಷಗಳು ಹೆಚ್ಚುವವು ಎಂದು ಇದರಿಂದ ಸ್ಪಷ್ಟವಾಗುತ್ತದೆ

ವಿವಾಹ ವಿಚ್ಛೇದ ಮಾಡಿಕೊಳ್ಳುವ ಹೆಚ್ಚಿನ ದಂಪತಿಗಳು ಸಂತಾನಹೀನರು ವಿವಾಹ ವಿಚ್ಛೇದನ ಮಾಡಿಕೊಂಡಿರುವವರ ಸಂಖ್ಯೆ ಶಾರೀರಿಕ ನ್ಯೂನತೆ ಇರುವ ಅತ್ಯಲ್ಪ ಮಂದಿಗಳಿದ್ದಿರುತ್ತದೆ"

ಮೃದುವಾದ ಚರ್ಮವನ್ನು ಬಹು ಜಾಗ್ರತೆಯಿಂದ ಕಾಪಾಡಬೇಕು

ಕುಟಿಕೂರಾ ಸಾಬೂನು ಮಗ ಪಿನ ಮೃದ ತವ ವನ ರಕ್ಷಿಸಲಿ!

ಕುಟಿಕೂರಾ ಸೋಪು

CUTICURA SOAP.

KANARA COMMERCIAL BANK LTD.

PUTTUR

H O Puttur] Estd 1920 [Branch Vittal.

All kinds of Banking Business transacted.

Deposits – Current, Savings, Cumulative Deposits are accepted

Fixed Deposits for periods of 3 months and above up to 24 months are accepted.

SEASON DEPOSITS

ARE Accepted up to 31-5-1947 Terms on application.

೨೫ ರೂಪಾಯಿಯಲ್ಲಿ ೩ ಮಂದಿ ಸಂಸಾರ ಪೋಷಣೆ

—ಹೇಗೆ ಮಾಡಬಹುದೆಂದು ಆಹಾರತಜ್ಞರ ಸಲಹೆ

ನೆಲಗಡಲೆಯ ಪೌಷ್ಟಿಕ ಮೌಲ್ಯ

ಸಸ್ಯಾಹಾರಿಯಾಗಿರುವ ಓರ್ವ ಕೆಲಸಗಾರ ತನ್ನ ಹೆಂಡತಿ ಮತ್ತು (7 ವರ್ಷದ) ಮಗುವಿನ ಸಂಸಾರವನ್ನು 25 ರೂಪಾಯಿಯೊಳಗೆ ಪೋಷಿಸಬಹುದೆ?

ಈ ಪ್ರಶ್ನೆಯನ್ನು ಉತ್ತರಿಸುತ್ತಾ ಮದ್ರಾಸ್ ಸರಕಾರದ ಸಾರ್ವಜನಿಕ ಆರೋಗ್ಯ ಖಾತೆಯ ಡಾ. ಜೋರ್ಜ್ ಅವರು ಅದು ಸಾಧ್ಯವೆಂದು ಈ ಕೆಳಗಿನ ಆಹಾರ ಯಾದಿಯೊಡನೆ ತಮ್ಮ ತರ್ಕವನ್ನು ಸಮರ್ಥಿಸುತ್ತಾರೆ. ಮೇಲೆ ಹೇಳಿದ ಸಂಸಾರವೊಂದಕ್ಕೆ ದಿನನಿತ್ಯದ ಕೆಲಸ ಮಾಡುವ ಚೈತನ್ಯವನ್ನು ಕೊಡಬಲ್ಲ ಪೋಷಕ ದ್ರವ್ಯಗಳಿರುವ ಈ ಕೆಳಗಿನ ಆಹಾರ ವಸ್ತುಗಳ ಯಾದಿಯನ್ನು ಡಾ ಜೋರ್ಜರು ಶಿಫಾರಸು ಮಾಡುತ್ತಾರೆ.

ಪ್ರತಿದಿನ	ತೊಲೆ
ಅಕ್ಕಿ ಮತ್ತು ಗೋದಿಹಿಟ್ಟು	57
ರಾಗಿ, ಜೋಳ ಒಟ್ಟು	29
ತೊಗರಿ, ಕಡಲೆ ಬೇಳೆಗಳು	11½
ನೆಲಗಡಲೆ ಅಥವಾ ಹುಡಿ	11½
ಹಸುರು ಕಾಯಿಪಲ್ಯಗಳು	23
ಬಟಾಟೆ, ಗೆಣಸು	23
ಬದನೆ, ಬಾಳೆ, ಹಸೆರು ಕಾಯಿಗಳು	11½
ಎಣ್ಣೆಗಳು	11½
ಹಾಲು	11½
(ಅಥವಾ 32 40ತೊಲೆಗಳಷ್ಟು ಮಜ್ಜಿಗೆ) ಗೇರುಬೀಜ	3,

ಇಷ್ಟು ಆಹಾರ ವಸ್ತುಗಳಲ್ಲಿರುವ ಪೋಷಕ ವಸ್ತುಗಳ ಪ್ರಮಾಣ ಈ ಕೆಳಗಿನಂತಿದೆ.

	ಗ್ರೇಮ್ಸ್
ಸಸಾರಜನಕ (ಪ್ರೋಟಿನ್ಸ್)	193
ಕೊಬ್ಬುಗಳು	181
ಪಿಷ್ಟಗಳು	983

ಮತ್ತು ಇದರಿಂದ ದಿನನಿತ್ಯದ ಮೂವರಿಗೆ ಬೇಕಾಗುವಷ್ಟು 6505 ಕೆಲರಿ (ಶಕ್ತಿ ಉತ್ಪಾದಕ ಉಷ್ಣದ ಪ್ರಮಾಣ)ಗಳಷ್ಟು ಚೈತನ್ಯ ದೊರಕುವುದು

ಈ ಆಹಾರ ವಸ್ತುಗಳ ಈಗಿನ ಬೆಲೆಯು ತಿಂಗಳಿಗೆ ರೂ 25ದೊಳಗಿರುತ್ತದೆ

ಹಾಲಿನ ಮೌಲ್ಯ

ಮೇಲಿನ ಪಟ್ಟಿಯಲ್ಲಿ ಕಾಣಿಸಿದ ಹಾಲಿನ ಪ್ರಮಾಣವು ಅತ್ಯಲ್ಪವಿದೆಯಾದರೂ ಸಾಮಾನ್ಯವಾಗಿ ನಮ್ಮ ದೇಶದಲ್ಲಿ ತಲಾವೊಂದರ ಪ್ರಕಾರ ಉಪಯೋಗಿಸುವ ಸರಾಸರಿ ಪ್ರಮಾಣಗಿಂತಲೂ ಅದು 3 ಪಾಲಷ್ಟು ಹೆಚ್ಚಾಗಿದೆ ಸಸ್ಯಾಹಾರಿಗಳು ತಮ್ಮ ಹೆಚ್ಚಿನ ಪೋಷಣೆ ಸತ್ವಗಳನ್ನು ಹಾಲಿನಿಂದಲೇ ಪಡೆಯಬೇಕಾಗಿದೆ. ಆಹಾರವಸ್ತುಗಳು ಅಗ್ಗವಾಗಿದ್ದಲ್ಲಿ ಮಿಕ್ಕುಳಿದ ಹಣವನ್ನು ಹಾಲಿಗಾಗಿ ವಿನಿಯೋಗಿಸಬೇಕು. ಸಾಧ್ಯವಿದ್ದರೆ ದಿನಕ್ಕೆ 50 ತೊಲೆಯಷ್ಟು ಹಾಲು ಮೂರು ಜನರಿಗೆ ಬೇಕಾಗುವುದು

ಈ ಸಂದರ್ಭದಲ್ಲಿ ನೆಲಗಡಲೆಯ ಪ್ರಾಮುಖ್ಯತೆಯನ್ನು ನಾವು ಹೆಚ್ಚಾಗಿ ಅರಿಯಬೇಕಾಗಿದೆ. ನೆಲಗಡಲೆ ಹಿಟ್ಟಿನ ದೋಸೆಗಳನ್ನು ಮಾಡಿ ತಿಂದರೆ ಹೆಚ್ಚಿನ ಸಸಾರಜನಕಗಳೂ, ಕೊಬ್ಬುಗಳೂ ದೊರಕುವವು.

ಪ್ರಾಂತ್ಯದಲ್ಲಿ ವಿಪುಲ ನೆಲಗಡಲೆ ಬೆಳೆಯುತ್ತದೆ! ಅನೇಕ ಜಿಲ್ಲೆಯನ್ನು ಅದನ್ನೂ ಅದರ ಎಣ್ಣೆಯನ್ನಷ್ಟು ಧಾರಾಳವಾಗಿ ಉಪಯೋಗಿಸುತ್ತಾರೆ, ಈಗ ಬೊಂಬಾಯಿ ಮೊದಲಾದ ಕಡೆಗಳಲ್ಲಿ ಹೆಚ್ಚೆಚ್ಚು ನೆಲಗಡಲೆ ಹಿಟ್ಟು ಉಪಯೋಗಿಸುವಂತೆ ಪ್ರಚಾರ ನಡೆಯುತ್ತದೆ. ಗೋದಿ ಇಲ್ಲವೆ ಇತರ ಬೇಳೆ ಹಿಟ್ಟಿನೊಡನೆ ಬೆರಸಿ ಇದರಿಂದ ರುಚಿಕರವಾದ ಚಪಾತಿಗಳನ್ನು ಮಾಡಬಹುದು (15 ಪಾಲು ನೆಲಗಡಲೆ ಹಿಟ್ಟಿನೊಡನೆ 85 ಪಾಲು ಗೋದಿಯ ಇತರ ಹಿಟ್ಟು ಬೆರೆಸಬೇಕು) ಹಾಗೇ ಸಮತೂಕ ನೆಲಗಡಲೆ ಹಿಟ್ಟನ್ನು ಬೆರಸಿ ಬಿಸ್ಕೀಟುಗಳನ್ನು ತಯಾರಿಸಬಹುದು

ಇಷ್ಟೊಂದು ಅತ್ಯಲ್ಪ ಹಣದಿಂದ ಸಾಮಾನ್ಯವಾಗಿ ಸಾಕಾಗುವಷ್ಟು ಈ ಆಹಾರ ವಸ್ತುಗಳ ಸಂಪೂರ್ಣ ಪೋಷಕ ವಸ್ತುಗಳ ಅನುಕೂಲತೆ ಪಡೆಯಬೇಕಾದರೆ ಮತ್ತು ಅವುಗಳಲ್ಲಿನ ಪೌಷ್ಟಿಕಗಳು ನಷ್ಟವಾಗದಂತೆ ಉತ್ತಮ ಅಡಿಗೆ ವಿಧಾನಗಳನ್ನನುಸರಿಸಬೇಕು ಇದಕ್ಕಾಗಿ ಸರಕಾರದವರು ಆರೋಗ್ಯಕರ ಶಾಸ್ತ್ರೀಯ ಅಡಿಗೆ ವಿಧಾನಗಳನ್ನು ಪ್ರಚಾರ ಮಾಡಬೇಕಾಗಿದೆ

ವೈಜ್ಞಾನಿಕನ "ಮಿಂಚಿನ" ಮನೆ

ತನ್ನಷ್ಟಕ್ಕೆ ಕಾಫಿ ಮಾಡುವ ಯಂತ್ರ

ಆಧುನಿಕ ಆರಾಮ ಜೀವನದ ಪರಮಾವಧಿ

ಕೆ. ಎಲಿನ್‌ವುಡ್ ಎಂಬವರು ಪ್ರಖ್ಯಾತ ವೈಮಾನಿಕ ಯಂತ್ರೋಪಕರಣ ಸಂಶೋಧಕರು ಈಗವರು ತಮ್ಮ ಯಾಂತ್ರಿಕ ನಿಪುಣತೆಯನ್ನು ಅತ್ಯಾರಾಮದ ಒಂದು ಗೃಹ ನಿರ್ಮಾಣಕ್ಕೆ ಉಪಯೋಗಿಸಿ ಒಂದು ಮನೆಯನ್ನು ರಚಿಸಿದ್ದಾರೆ ವಿದ್ಯುತ್ ಶಕ್ತಿಯು ಮಿಂಚಿನ ರೂಪಾಂತರವೆ ದಾದರೆ ಎಲಿನ್‌ವುಡ್ಡರ ಮನೆಯನ್ನು ಮಿಂಚಿನ ಮನೆಯೆಂದು ಕರೆಯಬಹುದು , ಅದರೊಳಗಿನ ಎಲ್ಲ ಕೆಲಸಗಳೂ ವಿದ್ಯುತುಪಕರಣಗಳಿಂದಲೇ ತನ್ನಷ್ಟಕ್ಕೆ ಜರಗಿಸಲ್ಪಡುತ್ತವೆ.

ಎಲಿನ್‌ವುಡ್ಡರ ಹಾಸಿಗೆಯ ಬಳಿ ಒಂದು ಹಲವು ಗುಂಡಿಗಳ ಹಲಗೆ ಇದೆ ಗುಂಡಿಗಳೆನ್ನೊತ್ತುವುದರ ಮೂಲಕ ಅವರು ಕಿಂಡಿ ಬಾಗಿಲುಗಳನ್ನು ಮುಚ್ಚುವರು, ತೆರೆಗಳನ್ನೆಳೆಯುವರು ಒಂದು ಗುಂಡಿಯೊತ್ತಿದ ಕೂಡಲೆ ವಿದ್ಯುತ್/ಒಲೆಯ ಮೇಲೆ ಕಾಫಿ ತಯಾರಾಗುತ್ತದೆ, ಸ್ನಾನಮನೆಯ ನೀರು ಬಿಸಿಯಾಗುತ್ತದೆ. ಅವರು ಗಡ್ಡ ತೆಗೆಯುವುದೂ ವಿದ್ಯುತ್ ಚಾಲನಿಂದ

ಬೆಳಿಗ್ಗೆ ಅವನನ್ನು ಎಚ್ಚರಿಸುವುದು ಎಲಾರಂ ಗಡಿಯಾರವಲ್ಲ ನಿರ್ದಿಷ್ಟ ಸಮಯಕ್ಕೆ ಕೋಣೆಯಲ್ಲಿನ ರೇಡಿಯೋವು ಹಾಡಹತ್ತುವುದು

ಅರಬೀ ಭಾಷೆಯಲ್ಲಿ ಭಾರತ ಪುರಾಣಗಳು

ಮುಸ್ಲಿಂ ವಿದ್ವಾಂಸರ ಸಾಹಸ

ಭಾರತದ ಮುಸಲ್ಮಾನರು ತಮ್ಮ ಅತೀ ಹತ್ತಿರದ ನೆರೆ ಬಂಧುಗಳಾದ ಹಿಂದೂಗಳ ಸಂಸ್ಕೃತಿಯಲ್ಲಿ ತಿರಸ್ಕಾರದ ಭಾವನೆಯನ್ನು ಪ್ರಕಟಿಸುತ್ತಿರುವಾಗ ಮಧ್ಯ ಪೂರ್ವದ ದೇಶದ ಇಸ್ಲಾಮಿ ವಿದ್ವಾಂಸರು ಜೀವನ ದೀರ್ಘ ಶ್ರಮದಿಂದ ಭಾರತೀಯ ಪುರಾಣ ಕೃತಿಗಳನ್ನು ತಮ್ಮ ಭಾಷೆಗೆ ಭಾಷಾಂತರಿಸುವ ಮಹಾ ಕಾರ್ಯವನ್ನು ಪೂರ್ಣಗೊಳಿಸಿರುವರು

ಪ್ರಖ್ಯಾತ ಅರಬೀಕವಿ ಮತ್ತು ವಿದ್ವಾಂಸರಾದ ಪ್ರೊಫೆಸರ್ ವಾಡ್ಡಿ ಬುಸ್ತಾನಿ ಅವರು 40 ವರ್ಷಗಳ ಅವಿಶ್ರಾಂತ ಪರಿಶ್ರಮದಿಂದ ಮಹಾಭಾರತ, ರಾಮಾಯಣಗಳನ್ನು, ನಳದಮಯಂತಿ ಶಾಕುಂತಲಾ ಮೊದಲಾದ ಕಾವ್ಯ ನಾಟಕಗಳನ್ನು ಅರಬೀ ಭಾಷೆಗೆ ಭಾಷಾಂತರಿಸಿರುವರು ತಮ್ಮ ಸಾಹಸಮಯ ಕೃತಿಗಳ ಪರಿಪೂರ್ಣತೆಗಾಗಿ ಪ್ರೊ। ಬುಸ್ತಾನಿಯವರು ಯರೋಪಿನ ಪ್ರಖ್ಯಾತ ವಸ್ತು ಸಂಗ್ರಹಾಲಯಗಳಲ್ಲಿರುವ ಸಂಸ್ಕೃತ ಮೂಲ ಪ್ರತಿಗಳನ್ನೆಲ್ಲ ಪರಿಶೋಧಿಸಿರುವರು ಕೊನೆದಾಗಿ ಅವರು ಲಂಡನಿಗೆ ಹೋಗಿ ಅಲ್ಲಿನ ಬ್ರಿಟಿಷ್ ಮ್ಯೂಸಿಯಮ್‌ನಲ್ಲಿರುವ ಪ್ರತಿಗಳನ್ನು ತಾಳೆನೋಡಿ ಕೊನೆಯ ತಿದ್ದುವಿಕೆಗಳನ್ನು ಪೂರೈಸಿದರು.

ಈಗ ಅವರ ಭಾಷಾಂತರಗಳು ಪಲೇಸ್ತೀನಕ್ಕೆ ಮುದ್ರಣಕ್ಕಾಗಿ ಕಳುಹಿಸಲ್ಪಟ್ಟಿವೆ. ಇವನ್ನು ಜಾಗರೂಕತೆಯಿಂದಲೂ ಭದ್ರವಾಗಿಯೂ ಒಯ್ಯುವಂತೆ ಹಡಗವೊಂದರಲ್ಲಿ ಇವನ್ನು ಕಳುಹಿಸಲಾಗಿದೆ ಪ್ರೊ। ಬುಸ್ತಾನಿಯವರು ಪ್ರಕಟಿಸುವ ಗ್ರಂಥಗಳಲ್ಲಿ 'ಹಿಂದೂ ದಂತಕತೆಗಳ ಕೈಪಿಡಿ'ಯೊಂದೂ ಅಚ್ಚಾಗಲಿದೆ

ಸಿಹಿಸುದ್ದಿ ಸಂಗ್ರಹ

ಪೆಸಿಫಿಕಿನಲ್ಲಾದ ಶಾಂತಿ ಒಪ್ಪಂದಕ್ಕೆ ಹಾಕಿದ ಸಹಿಗಳಲ್ಲಿ ಅತಿ ಉದ್ದದ್ದು ಡಚ್ ಪ್ರತಿನಿಧಿಗಳದ್ದು ಅದು ಜೊಂಕ್ಹೀರ್ ಎ ಡಬ್ಲೂ ಎಲ್ ಜಾರ್ಡಾವೇನ್ ಸ್ಟಾರ್ಕನೊಬೊರ್ಗ್ ಸ್ಟೊ ಚೆವರ್ ಎಂದಿತ್ತು ಚೀನೀ ಪ್ರತಿನಿಧಿಗಳದ್ದು ಅತಿ ಚಿಕ್ಕ ಸಹಿ ಅದು ಸಿ ಟ್ಸ್ಯ—ಎಂದಿತ್ತು

★

ಕೊಚ್ಚೀ ಮಹಾರಾಜರೊಡನೆ ತಾವು ನಡೆಸಿದ ಅರ್ಧ ಗಂಟೆಯ ಭೇಟಿಯಲ್ಲಿ ಅಧ್ಯಕ್ಷ ಕೃಪಾಲಾನಿಯವರು ದೇಶಿ ಸಂಸ್ಥಾನಗಳಲ್ಲಿನ ಕೊಂಗ್ರೆಸ್ ಕಾರ್ಯಕ್ಕಾಗಿ ರೂಪಾಯಿ 30 ಸಾವಿರ ದಾನವನ್ನು ಸಂಪಾದಿಸಿ ಪಡೆದರು

★

ಸಂಪ್ರದಾಯದಂತೆ ಒಂದು ಹಬ್ಬದಂದ ಅರನ್ ಸ್ಪರ್ಧೆಗೆ ಕಳುಹಿಸಲ್ಪಟ್ಟ 13800 ಕವಿತೆಗಳಲ್ಲಿ ಹಿಂದಿ ಕವಿತೆಗಳದ್ದೊಂದಾಗಿದೆ

★

ಅಮೆರಿಕದ ಸೌತ್ ಕರೋಲಿನಾ ಪ್ರಾಂತ್ಯದಲ್ಲಿ ವಿವಾಹ ವಿಚ್ಛೇದ ಮಾಡಿಕೊಳ್ಳುವ ಕಾನೂನು ಇಲ್ಲ

★

ಅಮೆರಿಕದ ನೆಶನಲ್ ಸಿಟಿ ಬ್ಯಾಂಕು ಅಂಗ್ಲೋ ಇಂಡಿಯನ್ ದಶಮಾನವಾಯಿತು ... ... ಅದರ ಮುಖ್ಯ ಕಛೇರಿ ಇದ್ದಲ್ಲಿ ಇದ್ದ ಎಸೋಸಿಯೇಟೆಡ್ ಬೇಂಕಿಂಗ್ ಕೊರ್ಪೊರೇಶನ್ ... ... ಈಚೆ ದಿವಾಳಿಯಾಗಿದೆ

★

ಇಂಗ್ಲೆಂಡಿನ ಪ್ರಖ್ಯಾತ ಪತ್ತೇದಾರಿ ಸಂಸ್ಥೆಯಾದ ಸ್ಕೋಟ್ಲೆಂಡ್ ಯಾರ್ಡಿನ ಸ್ತ್ರೀ ಪತ್ತೇದಾರಿಯರು ಅತೀ ಹೆಚ್ಚಿನ ಕಳ್ಳರನ್ನು ಗೊತ್ತುಹಚ್ಚಿದ್ದರಿಂದ ಈ ಸಲ ಹೆಚ್ಚೆಚ್ಚು ಸ್ತ್ರೀಗೆಲಸಗಾರರನ್ನು ಆ ಕೆಲಸಕ್ಕೆ ತೆಗೆದುಕೊಳ್ಳಲಾಗುವುದಂತೆ.

★

ಜರ್ಮನಿಯ ಹಳ್ಳಿ ಕಡೆಗಳಲ್ಲಿ ಬಟ್ಟೆ ಕೊರತೆಯನ್ನು ನೀಗಿಸುವುದಕ್ಕೆ ಅಲ್ಲಿಯ ಜನರು ಕೈನೂಲಿಗಾಗಿ ಚರಕ ತಿರುಗಿಸ ಹತ್ತಿರುವರು

★

"ಕೊಲೆಗೆಡುಕನಿಗೆ ಹಿಡಿದುಕೊಟ್ಟರೆ 1 ಸಾವಿರ ಸಿಗರೇಟು ಮತ್ತು 125 ಪವನು ಬಹುಮಾನ"—ಒಂದು ಜರ್ಮನ್ ಜಾಹೀರಾತು.



ವ್ರಣಗಳನ್ನು ಮಾಯಿಸುವುದು
ಅವು ಕೊಳೆಯದಂತೆ ಮಾಡುವುದು

ಜೆರ್ಮೆಕ್ಸ್ ಗಾಯ—ಅಂಟುರೋಗ
ಆ ಮಧ್ಯ ತ್ರಿಕೋಣವನ್ನು
ಮುರಿಯುವುದು

ಅಟಲ್ಸ್ ಒರಿಯಂಟಲ್ ಬಾಮ್ ಮತ್ತು ಫಾರ್ಮಸ್ಯೂಟಿಕಲ್ಸ್ ಲಿಮಿಟೆಡ್,
ಪೋಸ್ಟು ಬಾಕ್ಸ್ ನಂ 67 ಮದರಾಸು.

DJK-22

ಮಾಸ್ತರರ ಮುಷ್ಕರ: ಬರುವ ಜುಲಾಯಿ ತಿಂಗಳ ಸುಮಾರಿಗೆ ಪ್ರಾಂತ್ಯದ ಅಧ್ಯಾಪಕ ವರ್ಗದವರು ಮುಷ್ಕರ ಹೂಡುವ ಸಂಭವವಿದೆ ಎಂದು ಬೇರೆ ಬೇರೆ ಕಡೆಗಳಲ್ಲಿ ಜರಗಿದ ಉಪಾಧ್ಯಾಯ ಸಭೆಗಳ ನಿರ್ಣಯಗಳಿಂದ ತಿಳಿದುಬರುತ್ತದೆ. ಸಾರ್ವತ್ರಿಕ ಸಂಬಳ ಸಿದ್ಧತೆಯು ದ. ಕ. ದಲ್ಲೂ ನಡೆಯುತ್ತಿರುವುದೆಂದು ತಿಳಿದು ಬರುತ್ತದೆ. ಆಗಲೇ ಬಹುತೇಕ ಮಂದಿ ಉಪಾಧ್ಯಾಯರು ಮುಷ್ಕರ 'ಪ್ರತಿಜ್ಞೆ'ಗೆ ಸಹಿ ಹಾಕಿರುವುದಾಗಿಯೂ ತಿಳಿದುಬರುತ್ತದೆ. ಸರಕಾರಕ್ಕೂ ಹಲವು ಕಡೆಗಳಿಂದ ಮುಂದಾಗಿ ಎಚ್ಚರ ಪತ್ರ ಕಳಿಸಿದ್ದ ವರದಿಗಳು ಪ್ರಕಟವಾಗಿವೆ

ಬಹಳ ಕಾಲದಿಂದ ಪರಿಸ್ಥಿತಿಯಲ್ಲಿರುವ ಈ ವಿದ್ಯಾ ಉದ್ಯೋಗಸ್ಥರನ್ನು ಸರಕಾರವು ಸುಲಭವಾಗಿ ಕಡೆಗಾಣಿಸಲು ಸಾಧ್ಯವಿಲ್ಲ ಯಾವುದಾದರೊಂದು ಏರ್ಪಾಡು ಮಾಡಿ ಉಪಾಧ್ಯಾಯರಿಗೆ ಸಾಧಾರಣ ತೃಪ್ತಿಕರವಾದ ಪರಿಹಾರವೊಂದನ್ನು ಕೊಡುವ ವ್ಯವಸ್ಥೆ ಮಾಡುವುದು ಸರಕಾರದ ಕರ್ತವ್ಯವಿದೆ ಖಜಾನೆಯಲ್ಲಿ ಹಣವಿಲ್ಲವೆಂಬ ಕಾರಣವೊಂದೇ ಸಾಲದು.

ದ ಕನ್ನಡದ ಏಯ್ಡೆಡ್ ಶಾಲಾ ಆಡಳಿತದವರು ತಮ್ಮ ಅಧ್ಯಾಪಕರ ಸಂಬಳವನ್ನು ಸರಕಾರದ ವೇತನ ಮಟ್ಟಕ್ಕೇರಿಸುವುದಾಗಿ ತಮ್ಮ ಇತ್ತೀಚೆಗಿನ ಸಭೆಯೊಂದರಲ್ಲಿ ನಿರ್ಣಯಿಸಿರುವುದಾಗಿ ತಿಳಿದುಬರುತ್ತದೆ ಉಪಾಧ್ಯಾಯರಾದರೂ ಎಲ್ಲಾ ವಿಧಾಯಕ ವಿಧಾನಗಳು ಮುಗಿದ ನಂತರ ಕೊನೆಯದಾದ ಮುಷ್ಕರಾಸ್ತ್ರಕ್ಕೆ ಮರೆ ಹೋಗುವುದು ಯುಕ್ತವೆಂದು ತಮ್ಮ ಪ್ರಾಂತ್ಯ ಮಂಡಳದ ಮೂಲಕ ತೀರ್ಮಾನಿಸಿರುವರು

ಉಪಾಧ್ಯಾಯರ ಮುಷ್ಕರದಿಂದ ಪ್ರಾಂತ್ಯದ ಶಿಕ್ಷಣ ಪ್ರಗತಿಯಲ್ಲಿ ಗಂಭೀರವಾದ ತೊಡಕುಂಟಾಗಬಹುದು ಜನತೆಯಾದರೂ ತಮ್ಮ ಮಕ್ಕಳ ವಿದ್ಯಾಭ್ಯಾಸವು ಯಾವ ರೀತಿಯಲ್ಲೂ ಕುಂಟಿತವಾಗಬಾರದೆಂದು ಒಪ್ಪುತ್ತಾರೆ ಶಿಕ್ಷಣ ಪ್ರಾಮುಖ್ಯತೆಯನ್ನು ಮನಗಂಡ ಕಾಲವಿದು ಇದು ತನಕ ತಾಳ್ಮೆಯಿಂದ ಸಹಿಸಿದ ಶಿಕ್ಷಕ ವರ್ಗವು ಮುಷ್ಕರ ಕೈಗೊಳ್ಳುವ ಪ್ರಸಂಗಕ್ಕೆ ಒತ್ತಾಯಿಸಲ್ಪಡುವುದು ಯಾರೂ ಅಪೇಕ್ಷಿಸದ ಸಂಗತಿ ಹೆತ್ತವರಾದರೂ ತಮ್ಮ ಮಕ್ಕಳ ಅಭಿವೃದ್ಧಿಯ ದೃಷ್ಟಿಯಿಂದ ಈ ಸಮಸ್ಯೆಯನ್ನು ವಿವೇಚಿಸಬೇಕ ಸಂತೃಪ್ತ ಅಧ್ಯಾಪಕರಿದ್ದರೆ ಉತ್ತಮ ವಿದ್ಯಾದಾನವು ಸಾಧ್ಯವಾಗುವುದು.

ನಾಗರೀಕ ವ್ಯವಹಾರ

ಸದ್ಯದಲ್ಲೇ ನಗರಸಭೆಗಳಿಗೆ ಚುನಾವಣೆಗಳಾರಂಭವಾಗಬಹುದೆಂದು ನಿರೀಕ್ಷೆಯಿದೆ ಹೊಸ ಮಂತ್ರಿ ಮಂಡಳವು ಈ ಕುರಿತು ಪರ್ಯಾಲೋಚಿಸುತ್ತಿದೆ ಈ ತನ್ಮಧ್ಯೆ ನಮ್ಮ ನಗರಾಡಳಿತ ವ್ಯವಹಾರದ ಕುರಿತು ಆ ಒಂದಾಗ್ಯೆ ಸಿಂಹಾವಲೋಕನ ಮಾಡುವುದು ಪತ್ರಿಕಾ ಸ್ವಾಪದಾಯಕ್ಕೆ ತಕ್ಕುದಾದುದು.

ನಗರ ಸಭೆಗಳ ಸಾರ್ವಜನಿಕ ಸಂಪರ್ಕ ವಿರಿಸಿ ಅದರ ಚಟುವಟಿಕೆಗಳನ್ನು ಜನತೆಯ ಗಮನಕ್ಕೆ ಆಗಿಂದಾಗ್ಗೆ ತರಬೇಕಾದುದು ಅತ್ಯಾವಶ್ಯಕ ನಮ್ಮ ನಗರಸಭೆಯ ಹಲವಾರು ವಿಷಯಗಳು ಅಕಸ್ಮಾತ್ತಾಗಿಬಂತೆ ಸಾರ್ವಜನಿಕರ ಅನುಭವಕ್ಕೆ ಬರುತ್ತವೆ ನಗರ ಸಭೆಯು ಅನೇಕ ಕಾರ್ಯಕಾರಣಗಳ ಸಂಬಂಧಗಳ ಕಡೆಗೆ ಒಹ ತೇಕ ನಾಗರೀಕರು ಅನಭಿಜ್ಞರಾಗಿಯೇ ಉಳಿಯುವದು ಇದಕ್ಕಾಗಿ ನಗರಸಭೆ ಮತ್ತು ಸ್ಥಳೀಕ ಆಡಳಿತದವರು (ಜಿಲ್ಲಾ ತಾಲೂಕು, ಪಂಚಾಯತ್ ಬೋರ್ಡುಗಳವರು) ಒಂದು ಪ್ರಚಾರ ಖಾತೆಯನ್ನು ವ್ಯವಸ್ಥಾಪಿಸುವುದು ಅತ್ಯಾವಶ್ಯಕ.

ನಗರದಲ್ಲಿನ ಹಲವು ಪತ್ರಿಕೆಗಳ ಮೂಲಕ ತಮ್ಮ ಕಾರ್ಯಕಲಾಪಗಳನ್ನು ಪ್ರಕಟ ಪಡಿಸಿದರೆ ಭರವಸೆ ಹೆಚ್ಚುವುದು ತಜ್ಞ ಸಲಹೆಗಳಿಗೂ ಸೂಚನೆ, ಯೋಜನೆಗಳನ್ನು ಕೊಡಲಿಕ್ಕೂ ಅನುಭವಸ್ಥರಿಗೆ ಅಸ್ಪದವೂ ಸಿಗುವುದು, ಇತ್ತೀಚೆಗೆ ನಗರಸಭೆಯು ಅರಿವು ತೆರಿಗೆ ವಸೂಲಿಗೆ ಬಂದಾಗ ಮಾತ್ರ ಆಗುವುದು ಸಾರ್ವಜನಿಕ ಸೇವಾ ಸಂಸ್ಥೆಯೊಂದರ ಚಟುವಟಿಕೆಗಳು ಜನತೆಯ ಗಮನಕ್ಕೆ ಬರದಂತೆ ಸಾಗಿದರೆ ಮತ್ತು ಅವುಗಳ ಕುರಿತು ಜನತೆಯೂ ನಿರಾಸಕ್ತಿ ವಹಿಸಿದರೆ ಅಂತಹ ಆಡಳಿತ ಯಂತ್ರಗಳಲ್ಲಿ ಪಕ್ಷಪಾತ, ವಂಚನೆ, ಲಂಚಗುಳಿತನಗಳಿಗಾಸ್ಪದವಾಗುವುದು. ಬ್ರಿಟಿಷ್ ಸರಕಾರದ ಕಛೇರಿ

ಜಿಲ್ಲಾ ಪರಿಚಯ

೧೧

ಆಡಳಿತವು ಪ್ರಜಾ ಸಂಪರ್ಕವಿಲ್ಲದಿದ್ದುದರಿಂದ ಇಂದು ದುರುಸ್ತಿ ಮಾಡಲಸಾಧ್ಯವೆನಿಸುವಷ್ಟು ಲೋಪದೋಷಗಳಿಗೊಳಗಾಗಿರುವುದೆಂದೂ ಆರೋಪಿಸಲ್ಪಡುವುದು ಸಾಮಾನ್ಯ ಅನುಭವ.

ರಾಮನವಮಿ ಉತ್ಸವ: ಎಂದಿನಂತೆ ಈ ಸಲದ ರಾಮನವಮಿ ಉತ್ಸವಗಳು ಹರಿದಾಸ್ ಶ್ರೀ ಶಿವಾನಂದ ಭಟಜಿಯವರಲ್ಲಿ ಯಥಾಸಾಂಗವಾಗಿ ನೆರವೇರಿದುವು ಹರಿಕೀರ್ತನೆ, ಪುರಾಣ ಪ್ರವಚನ, ಭಜನೆ, ಸಂಗೀತ, ನಾಟಕ ಮತ್ತು ವಿವಿಧ ವಿನೋದಾವಳಿಗಳಿಂದ ಈ ಸಲದ ಉತ್ಸವಾಚರಣೆಗಳು ಯಶಸ್ವಿಯಾಗಿ ಅನೇಕಾನೇಕ ನಾಗರೀಕ ಭಕ್ತವೃಂದವನ್ನು ಕಣಿಸಲಾಯಿತು. ರಥಬೀದಿಯ ಚೌಕದಲ್ಲಿ ಶ್ರೀ ಭಟಜಿಯವರು ಕಟ್ಟಿಸುತ್ತಿರುವ ರಾಮಮಂದಿರದ ಕಾರ್ಯವು ಸಂಪೂರ್ಣತೆಯ ಕಡೆಗೆ ಸಾಗುತ್ತಿದೆ ಅವರ ಸಾಂಸ್ಕೃತಿಕ ಮತ್ತು ಅಧ್ಯಾತ್ಮಿಕ ಚಟುವಟಿಕೆಗಳು ಶ್ಲಾಘನಾರ್ಹವಿದ್ದು ಸಕಲ ಪ್ರೋತ್ಸಾಹಾರ್ಹವಾಗಿವೆ

ಅಕ್ಕಿ ವ್ಯಾಪಾರ: ಜಿಲ್ಲಾ ಕಲೆಕ್ಟರರು ಈಗಾಗಲೇ ನೇ ಬೆಳೆಯ ಒತ್ತಬ್ಬಿಸುವ ತಾರೀಕನ್ನು 31 3 47ಕ್ಕೆ ಮುಂದರಿಸಿದರು ಅಕ್ಕಿಯನ್ನು ಒಪ್ಪಿಸುವ ತಾರೀಕನ್ನು 15 4—47ರ ತನಕ ಮುಂದರಿಸಲಾಗಿದೆ ಎಂದೂ ಪ್ರಕಟಿಸಲಾಗಿದೆ ಈ ಅವಧಿಗಳ ನಂತರ ಒಪ್ಪಿಸಿದ ಒಕ್ಕಲಿಗೆ 8 ನ್ನ ಅಕ್ಕಿಗೆ ರೂ 1 ನ್ನೂ ಮುಡಿಯ ಮೇಲೆ ಕಡಿಮೆ ಕೊಡಲಾಗುವುದೆಂದೂ ಎಚ್ಚರಿಸಲಾಗಿದೆ

ಇಂದ್ರಭವನ ಕಾಫಿ ಹೋಟೇಲಿನಲ್ಲಿ ಮುಷ್ಕರ

ಇಂದ ಬೆಳಗ್ಗೆ ಇಂದ್ರಭವನದ ಕೆಲಸಗಾರರು ಮುಷ್ಕರ ಹೂಡಿದ್ದರು ಕೆಲಸಗಾರರ ಪೈಕಿ ಇಬ್ಬರನ್ನು ನಿಷ್ಕಾರಣವಾಗಿ ಕೆಲಸದಿಂದ ನಿವೃತ್ತಿ ಪಡಿಸಿದುದೆ ಮುಷ್ಕರಕ್ಕೆ ಕಾರಣವಾಯಿತ ದ ಕ ಹೋಟೇಲು ಕೆಲಸಗಾರರ ಯೂನಿಯನಿನ ಕಡೆಯಿಂದ ಈ ವಿಷಯ ಚರ್ಚಿಸಲು ಪ್ರತಿನಿಧಿಗಳು ಇಂದ್ರಭವನದ ಮಾಲಿಕರಲ್ಲಿ ಹೋದಾಗ ಕೆಲಸಗಾರರ ಪ್ರತಿನಿಧಿಗಳಲ್ಲಿ ಮಾತಾಡಲೂ ನಿರಾಕರಿಸಿದ ದರಿಂದ ಬೇರಾವ ದಾರಿಯೂ ಇಲ್ಲದೆ ಕೆಲಸಗಾರರು ಮುಷ್ಕರ ಹೂಡಲೇ ಬೇಕಾಯಿತು

ಕೂಡಲೇ ಮಾಲಿಕರು ಯೂನಿಯನಿನ ಪ್ರತಿನಿಧಿಗಳೊಡನೆ ಚರ್ಚಿಸಿ ಕೆಲಸಗಾರರನ್ನು ಪುನಃ ಕೆಲಸಕ್ಕೆ ಸೇರಿಸಿಕೊಳ್ಳುತ್ತೇನೆಂದು ಒಪ್ಪಿಕೊಂಡ ನಂತರ ಮುಷ್ಕರವನ್ನು ಹಿಂತೆಗೆಯಲಾಯಿತು.

ಸುರತ್ಕಲ್: ಈಚೆಗೆ ಹೊಸಬೆಟ್ಟಿನಲ್ಲಿ ಶ್ರೀ ಶ್ರೀನಿವಾಸರಾಯರು, ವಿದ್ವಾನ್ ಯಚ್ ರಾಮರಾವ್, ಎಂ. ಎ. ಎಲ್ ಟಿ ಯವರು ಡಾ। ಯಚ್. ಯಮ್. ರಾವ್ ಇವರುಗಳು, ತಮ್ಮಲ್ಲಿ ನಡೆದ ಶ್ರೀನಿವಾಸರಾಯರ 'ಮಗನ ಬ್ರಹ್ಮೋಪದೇಶದ ವೇಳೆಕ್ಕೆ, ಶ್ರೀ ಮುಚ್ಚಿತ್ತಾಪುರ ಮಠದ ಶ್ರೀ ವಿದ್ಯಾಪೂರ್ಣ ತೀರ್ಥರನ್ನು ಬರಮಾಡಿಕೊಂಡು ಮನ್ನಿಸಿದರು

ಈಚೆಗೆ ಶ್ರೀ ಮುಚ್ಚಿತ್ತಾಪುರ ಮಠದಲ್ಲಿ ಶ್ರೀ ವಿದ್ಯಾಪೂರ್ಣ ತೀರ್ಥರ ನೇತೃತ್ವದಲ್ಲಿ, ಸನ್ನಿಹಿತರಾಗಿದ್ದ ಶ್ರೀಗಳಾದ ಎಂ ವಾಸುದೇವರಾವ್, ಎಂ ಎ ಎಲ್ ಟಿ ಎಚ್ ದಾಮೋದರ ರಾವ್, ಟಿ ಪದ್ಮನಾಭರಾವ್ ಇವರೇ ಮೊದಲಾದ ಲೌಕಿಕ ವೈದಿಕ ಪ್ರಮುಖರ ಕೂಡುವಿಕೆಯಿಂದ ವಿದ್ವಾನ್ ಹೊಸಬೆಟ್ಟು ರಾಮರಾಯರ ಅಧ್ಯಕ್ಷತೆಯಲ್ಲಿ, ಶ್ರೀ ರಾಮನವಮಿ ಸಂಬಂಧ ಸಭೆ, ಉಪನ್ಯಾಸ, ಹರಿಕಥೆ ಭಜನೆಗಳು ವಿಜೃಂಭಣೆಯಿಂದ ಜರಗಿತು

ಮುನ್ಸಿಪಾಲಿಟಿಗಳಿಗೆ ಸ್ಪೆಶಲ್ ಆಫೀಸರರು: ಈ ಸಂಸ್ಥಾನದ ಯಾವತ್ತು ಮುನ್ಸಿಪಾಲಿಟಿಗಳಲ್ಲಿನ ಕೌನ್ಸಿಲರರ ಅವಧಿಯು ಇದೇ ಮಾರ್ಚ ತಿಂಗಳ್ಕೆ ಮುಗಿದು, ಮುನ್ಸಿಪಾಲಿಟಿಗಳ ಕಮಿಶನರರೇ ಮುನ್ಸಿಪಲ್ ಕೌನ್ಸಿಲುಗಳಿಗೆ ಹೊಸ ಚುನಾವಣೆ ನಡೆಯುವ ತನಕ ಸ್ಪೆಶಲ್ ಆಫೀಸರರಾಗಿ ಆಯಾ ಮುನ್ಸಿಪಲ್ ಕೌನ್ಸಿಲುಗಳ ಕಾರ್ಯಭಾರಗಳನ್ನು ನಿರ್ವಹಿಸುತ್ತಿರಬೇಕಾಗಿದೆ

ಮೊಗವೀರ ವ್ಯವಸ್ಥಾಪಕ ಮಂಡಳಿ ಮುಂಬಯಿ: ಇದರ ಸುಲ್ತಕ್ತನಾಲ್ಕನೇ ಮೆಂಬರರ ವಾರ್ಷಿಕ ಮಹಾ ಸಭೆಯು ಕಳೆದ ಮಾರ್ಚ ತಾ 23ರಲ್ಲು ಮಂಡಲಿಯ ಅಧ್ಯಕ್ಷ [illegible] ಅಧ್ಯಕ್ಷತೆಯಲ್ಲಿ ಜರುಗಿತು [illegible] ಇಸವಿಯ ಸಂಪೂರ್ಣ ಕಾರ್ಯಕಲಾಪಗಳನ್ನೊಳಗೊಂಡ ಆಯವ್ಯಯ ಮತ್ತು ಆಸ್ತಿ ಪಾಸ್ತಿಗಳ ವಿವರಯುಕ್ತ ನಾಲತ್ತನಾಲ್ಕನೇ ವಾರ್ಷಿಕ ವರದಿಯು ಸ್ವೀಕರಿಸುವ [illegible] ಮಂಜೂರಾಯಿತು. [illegible] ಇಸವಿಯ ಬಗ್ಗೆ ಲೆಕ್ಕ ಪರಿಶೋಧಕರನ್ನು ನೇಮಿಸಲಾಯಿತು. ಸಭಿಕರಲ್ಲಿ ಹಲವರೂ ಅಧ್ಯಕ್ಷರೂ ಮಂಡಳಿಯ ಅಭ್ಯುದಯದ ಸಲುವಾಗಿ ಯೋಗ್ಯ ಸೂಚನೆಗಳನ್ನಿತ್ತು ಸ್ವಾತಿಡಿದ ಬಳಿಕ ಲಘು ಫಲಾಹಾರದೊಂದಿಗೆ ಸಭೆಯು ಸಮಾಪ್ತಿಗೊಂಡಿತು



ತಂಪು, ಶುದ್ಧಿ, ಗುಣ ಮಾಡುವುದು—

೫೦ ವರ್ಷ ಮಿಕ್ಕಿದ ಖ್ಯಾತಿ

ಜಾಂಬಕ್ ವನಸ್ಪತಿ ಮುಲಾಮು ಮುಂದ್ದಣ, ಕಜ್ಜಿ, ಕುರು, ಕಾಲು ಹುಣ್ಣು ಇತ್ಯಾದಿ ಎಲ್ಲಾ ಚರ್ಮ ಗಾಯ ವ್ಯಾಧಿಗಳ ಅತೀ ಯಶಸ್ವಿ ಮತ್ತು ಶೀಘ್ರ ಗುಣಕಾರಿ ಎಂದು ವಿಶ್ವಖ್ಯಾತಿ ಪಡೆದಿದೆ

ಜಾಂಬಕಿನೊಳಗಿನ ಪರಿಶುದ್ಧ ಎಣ್ಣೆಗಳು ಸುಲಭವಾಗಿ ಚರ್ಮ ರಂಧ್ರದೊಳಗೆ ಹೀರಲ್ಪಡುವವು. ರೋಗಗ್ರಸ್ತ ಇಲ್ಲವೆ ಧಕ್ಕೆಗೊಂಡ ಚರ್ಮಾಣುಗಳನ್ನವು ಶುದ್ಧಮಾಡಿ ಅವುಗಳಲ್ಲಿನ ವಿಷ, ನೋವು, ಊದುವಿಕೆಗಳನ್ನು ಪರಿಹರಿಸುವುದು ಕೀವು ಆರಿಹೋಗಿ ಚರ್ಮವು ತ್ವರೆಯಾಗಿ ಗುಣಹೊಂದುವುದು.

Zam-Buk

ವಿಶ್ವ ವಿಖ್ಯಾತ ವನಸ್ಪತಿ ಮುಲಾಮು
ಖಂಡಿತ ಪ್ರಾಣಿ ಕೊಬ್ಬು ರಹಿತವಾದುದು.

ಆರೋಗ್ಯ ಮಂತ್ರಿಗಳು:- ಮದ್ರಾಸ್ ಸರಕಾರದ ಆರೋಗ್ಯ ಮಂತ್ರಿಗಳಾದ ಮಾನ್ಯ ಎ. ಬಿ. ಶೆಟ್ಟಿ ಇಂದು ಕಣ್ಣಾನ್ನೂರಿಗೆ ಭೇಟಿಯಿತ್ತು ನಾಳೆ ತಾ. ೪ರಂದು ಸಾಯಂಕಾಲ ಮಂಗಳೂರಿಗೆ ಚಿತ್ತೈಸುವರು. ತಾ ೪ರ ತನಕ ಇಲ್ಲಿ ಮಾನ ಪತ್ರ, ಭಿನ್ನವತ್ತಳೆ, ಸತ್ಕಾರದ ಕಾರ್ಯಕ್ರಮಗಳನ್ನು ಮುಗಿಸಿ ಮಾನ್ಯ ಮಂತ್ರಿಗಳು ಮದ್ರಾಸಿಗೆ ಮರಳುವರು

ಮದ್ರಾಸ್ ಬಂಟ ಸಮಾಜದ ನಿವಾಸಿಗರು ವಿದ್ಯಾರ್ಥಿಗಳೂ ಕಳೆದ ತಾ 29ರಂದು ಸೇರಿ ಮಾನ್ಯ ಎ ಬಿ ಶೆಟ್ಟಿ ಅವರರಿಗೆ ಹಾರತುರಾಯಿಗಳನರ್ಪಿಸಿ ಅವರ ಹೊಸ ಉದ್ಯಮದಲ್ಲಿ ಯಶ ಕೋರಿದರು. ಬಂಟ ಸಮಾಜದ ಪ್ರಮುಖರೆಲ್ಲಾ ಈ ಸನ್ಮಾನ ಕೂಟದಲ್ಲಿ ಭಾಗವಹಿಸಿದ್ದರು

ಶ್ರೀ ರಜಕ ಸಂಘ ಮುಂಬಾಯಿ

ಇದರ ಹತ್ತನೇ ವಾರ್ಷಿಕ ವರದಿ ನಮ್ಮ ಕೈ ಸೇರಿದೆ ರಜಕ ಸಮಾಜದ ಸುಸಂಸ್ಕೃತ ತರುಣರ ಉತ್ಸಾಹದ ಶ್ರಮದಿಂದ ನಡೆಸಲ್ಪಡುವ ಈ ಸಂಘವು ಸ್ವಸಮಾಜದ ಸರ್ವತೋಮುಖ ಏಳಿಗೆಗಾಗಿ ದುಡಿಯುವುದು ತಮ್ಮ ಸಮಾಜದ ಬಡ ಮಕ್ಕಳ ಶಿಕ್ಷಣಕ್ಕೆ ಧನ ಸಹಾಯವನ್ನು ಸಂಘವು ಕೊಡುವುದೆ ಸ್ವಮಾಜಸ್ಥರ ಸಹಾಯವನ್ನು ಕೋರಲಾಗಿದೆ

ಗ್ರಂಥ ಪರಿಚಯ

ಮನೆ ಮದ್ದು: ಲೇಖಕರು ಡಾ। ಕೊರಡ್ಕಲ್ ವೆಂಕಟರಾವ್, ಎಲ್ ಐ ಎಮ್ ಪ್ರಕಾಶಕರು. ನವಭಾರತ ಪುಸ್ತಕ ಭಂಡಾರ ಉಡುಪಿ 142 ಪುಟಗಳ ಕ್ರೌನ್ [illegible] ಅಕ್ಷರಯ ಗ್ರಂಥ ಬೆಲೆ ರೂ [illegible] ಇದನ್ನು ಸಂತೋಷದಿಂದ ಸ್ವೀಕರಿಸುತ್ತೇವೆ

ವಿಪುಲ ಭೂಜಲ ಸಂಪತ್ತಿನ ಭಾರತ ಒಂದು ಅಮೂಲ್ಯ ಔಷಧ ಭಂಡಾರ ನಮ್ಮ ಹಿತ್ತಲ ಪ್ರತಿಗಿಡವೂ ಮದ್ದೇ ನಮ್ಮ ಜಲಾಶ್ರಯಗಳು ಇಹಪರ ಶೇಯ ಸಾಧಕ ತಾರಗಳ ನಮ್ಮದು. ಲೇಹ ಮಾತ್ರೆ ಕ್ವಾಥ ಕಷಾಯಗಳ ಸಂಸ್ಕೃತಿ ನಾಷ್ಟ ನವ್ಯ ಮದ್ದುಗಳ ಮೋಜಿಕನ್ನು ಮರೆತು ಪರಕೀಯ [illegible] ಕೊಯ್ದುಕೊಂಡು ಘಾತಗೊಂಡಿದ್ದೇವೆ ಒಂದು ಬೇರಿನ ಕೆಲಸಕ್ಕೆ ಚೂರಿ ಉಪಯೋಗ ಬಂದಿದೆ ಮರಣ ಮಂ[illegible] ವದ ಒಲ್ಲನವ ಹಿರಿಯರ ಅಲಕ್ಷ್ಯದಿಂದ ಮಾಯವಾದರೂ ಮತ್ತೆ ಅಳಿದುಳಿದ ದನು ಸಂಗ್ರಹಿಸಿದರೂ ನಮಗೆ ಸಾಲುವಷ್ಟಿದೆ ಡಾ। ಕೊರಡ್ಕಲ್ ಅವರು ಈ ಸೇವೆ ಮಾಡಿ ಅಭಿನಂದನೀಯರು ಇದು ತನಕದ ವೈದ್ಯ ಗ್ರಂಥಗಳಲ್ಲಿ ಅಸ್ಪಷ್ಟ ನಿರೂಪಣೆಯಮೇ ಹೆಚ್ಚು [illegible] ಪುಸ್ತಕದಿಂದ ಅಲ್ಪ ಕನ್ನಡ ಓದಲು ತಿಳಿದವರೆಲ್ಲ ಸ್ವಂತ ಮದ್ದನ್ನು ಸುಲಭದಲ್ಲಿ ತಯಾರಿಸಿ ತಮ್ಮ ಬೇನೆ ಗುಣಪಡಿಸಬಹುದು ಗ್ರಂಥಕಾರರು ದೇಶಿ ವೈದ್ಯದಲ್ಲಿ ಉಚ್ಚ ಶಿಕ್ಷಣ ಪಡೆದವರು ತುಂಬಾ ಪ್ರಯೋಗಾನುಭವವೂ ಅವರಿಗಿದೆ. ಮೂರು ಭಾಗಗಳಲ್ಲಿ ಮಕ್ಕಳ ಸ್ತ್ರೀಯರ ಮತ್ತು ಸಾಮಾನ್ಯ ಕಾಯಿಲೆಗಳ ಗುಣಲಕ್ಷಣ, ಕಾರಣಗಳನ್ನು ವಿವರಿಸಿ ಸರಳ ಪರಿಹಾರ ಸೂಚಿಸಿದ್ದಾರೆ ಇವುಗಳಿಂದ ಗುಣವೂ ಖಂಡಿತವೆಂದು ಭರವಸೆ ಇತ್ತಿದ್ದಾರೆ. ಸಾಹಸ ಶ್ರಮದ ಮತ್ತು ಮುದ್ರಣ ಕಷ್ಟಗಳ ದೃಷ್ಟಿಯಿಂದ ಬೆಲೆ ಹೆಚ್ಚಾಗಿಲ್ಲ ಪ್ರತೀ ಗೃಹಿಣಿಯ ಬಳಿ ಇರಬೇಕಾದ ಪುಸ್ತಕ. ಕೆಪ್ಟನ್ ಜಿ ಶ್ರೀನಿವಾಸ ಮೂರ್ತಿ, ಬಿ ಎ. ಬಿ. ಎಲ್, ಎಂ ಬಿ. ಸಿ. ಎಮ್. ವೈದ್ಯರತ್ನ ಮದ್ರಾಸಿ ಆಯುರ್ವೇದ ಕೋಲೇಜಿನ ಪ್ರಿನ್ಸಿಪಾಲರು ಈ ದಕ್ಷಿಣ ಕನ್ನಡಿಗರ ಕೃತಿಗೆ ಶ್ಲಾಘನೆ ಕೊಟ್ಟಿರುವುದು ಗ್ರಂಥ ಶ್ರೇಷ್ಠತೆಯ ನಿದರ್ಶನ.

—'ನಾಥ'

ಬಿ. ಎ. ಕಲಿತವರಿಗೆ ಪೂಜೆ ಮಾಡುವ ಕೆಲಸ

ಹಿಂದೂ ದೇವಾಲಯಗಳಲ್ಲಿ ಎಲ್ಲರಿಗೂ ಪ್ರವೇಶ

೫೦ ವರ್ಷಗಳ ನಂತರದ ದೇವತಾರ್ಚನೆ

ಇಪ್ಪತ್ತನೇ ಶತಮಾನದಲ್ಲಿ ಹಿಂದೂಗಳು ತಮ್ಮ ದೇವಸ್ಥಾನದ ವ್ಯವಹಾರದಲ್ಲಿ ಅಳವಡಿಸಿಕೊಂಡಿರುವ ಸುಧಾರಣೆಗಳನ್ನು ನೋಡುವಾಗ 2000 (ಅಂದರೆ ಸುಮಾರು 50 ವರ್ಷಗಳ ನಂತರ) ನೆ ಇಸವಿಯಲ್ಲಿ ಹಿಂದೂ ದೇವತಾರ್ಚನೆಯ ರೀತಿಗಳು 50 ವರ್ಷ ಹಿಂದೆ ಇದ್ದುದಕ್ಕಿಂತ ಸಂಪೂರ್ಣ ಬದಲಾವಣೆ ಹೊಂದಿದಂತಾಗುತ್ತವೆ ಹೀಗೆಂದು ಡಾ| ಕೆ. ಎನ್. ಶೆಣೈ ಎಂ ಎ ಪಿ. ಎಚ್. ಡಿ. ಅವರು ಒಂದು ಲೇಖನದಲ್ಲಿ ಬರೆಯುತ್ತಾರೆ. ಅವರ ಲೇಖನದಲ್ಲಿನ ಸ್ವಾರಸ್ಯ ವಿಷಯಗಳ ಸಾರಾಂಶ ಹೀಗಿದೆ:

ದೇವಸ್ಥಾನಗಳು ಎಲ್ಲರಿಗೂ ತೆರೆಯಲ್ಪಡುವುವು ದೇವಳಗಳು ಅಶುದ್ಧ ಮನುಷ್ಯನನ್ನು ಶುದ್ಧಗೊಳಿಸುವ ಸ್ಥಳಗಳೆಂದು ಹಿಂದೂಗಳು ಭಾವಿಸುವರು, ಯಾವ ಮಾನವ ವ್ಯಕ್ತಿಯ ಪ್ರವೇಶದಿಂದಲೂ ಅವು ಕಳಂಕಿತವಾಗಲಾರವು. ಭೂಗೋಲದ ಮೇಲೆ ವಾಸಿಸುವ ಎಲ್ಲಾ ಮಾನವರಿಗೂ ಹಿಂದೂ ದೇವಾಲಯಗಳಿಗೆ ಪ್ರವೇಶ ಸಿಗುವುದು. **2000 ಇಸವಿಯಲ್ಲಿ ಹಿಂದೂಗಳಲ್ಲಿ ಜಾತಿ ಪದ್ಧತಿಯೂ ಇರುವುದಿಲ್ಲ.**

ಅಚಲತೆ

ಅರ್ಧ ಶತಮಾನದ ಹಿಂದೆ ಹಿಂದೂ ಪೂಜೆಗಳ ಸಮಯದಲ್ಲಿ ತುಂಬಾ ಗಲಾಟೆಯಿರುತಿತ್ತು. ಅರ್ಚಕರು ಒಂದು ಗಂಟೆಯನ್ನು ಬಾರಿಸುತ್ತಾರೆ. ದೇವಳದ ಸುತ್ತಲೂ ತೂಗಾಡುವ ದೊಡ್ಡ ಗಂಟೆಗಳನ್ನೂ ಭಕ್ತವೃಂದವು ಬಾರಿಸುವುದು ಶಂಖ, ಜಾಗಟೆ, ಚಂಡೆಗಳೂ ಬಾರಿಸಲ್ಪಡುವವು ಈ ಗುಲ್ಲಿಗೆ ವಾದ್ಯದ ಸಮ್ಮೇಳ ಸೇರುತ್ತದೆ. ಜನರ ಹರಟೆ ಮಾಡುವುದು, ಮಕ್ಕಳು ಕೂಗಾಡುವುದು ಇದ್ದೇ ಇದೆ ಬೊಬ್ಬೆಯಲ್ಲಿ ಪೂಜಾರಿಗಳ ಮಂತ್ರಶ್ರವಣವೆಲ್ಲಿಯಾಗುವುದು? 2000 ಇಸವಿಯಲ್ಲಿ ಅರ್ಚಕರು ಗಂಟೆಗಳನ್ನುಪಯೋಗಿಸುವುದಿಲ್ಲ. ಪೂಜೆ ಪ್ರಾರ್ಥನೆಗಳ ಕಾಲದಲ್ಲಿ ವಾದ್ಯಗಳನ್ನು ಬಾರಿಸುವ ರೂಢಿಯೂ ಮಾಯವಾಗುವುದು ಭಕ್ತರು ಅತ್ಯಂತ ಮೌನದಿಂದ ಮನಸ್ಸನ್ನು ದೇವರ ಮೇಲೆ ಕೇಂದ್ರೀಕರಿಸಿ ಪರಮಾತ್ಮನ ಸಾಕ್ಷಾತ್ಕಾರ ದರ್ಶನವನ್ನು ಪಡೆಯಲು ಪ್ರಯತ್ನಿಸುವರು. ಅರ್ಚನೆಯ ಕಾಲದಲ್ಲಿ ಪೂಜಕರ ಮಂತ್ರಘೋಷ ಇಲ್ಲವೆ ಶಾಸ್ತ್ರ ಪ್ರವಚನದ ಶಬ್ದವಲ್ಲದೆ ಮತ್ತೇನೂ ಕೇಳಿಸದು

ಅರ್ಚಕರು

ಪೂಜಕರು ಉಚ್ಚ ಶಿಕ್ಷಣ ಪಡೆದಂಥವರು—ಸಾಮಾನ್ಯವಾಗಿ ಆಧುನಿಕ ವಿಶ್ವವಿದ್ಯಾಲಯವೊಂದರ ಪದವೀಧರರು ಅವರು ಮತೀಯ ವಿಚಾರ ತಜ್ಞರು ಮಾತ್ರವಲ್ಲ ಎಲ್ಲಾ ಧರ್ಮ ಶಾಸ್ತ್ರಗಳ ಆಳ ಅಧ್ಯಯನ ಮಾಡಿದವರಾಗಿದ್ದು ಭಕ್ತರಿಗೆ ಅವುಗಳ ಕುರಿತು ಬೋಧಪರ ಉಪದೇಶ ಕೊಡಲು ಸಮರ್ಥರಿರುವರು. ಪರಿಪೂರ್ಣ ಮತ್ತು ಉಪಯುಕ್ತ ಜೀವನವನ್ನು ನಿರ್ವಹಿಸುವಂತೆ ಭಕ್ತರಿಗೆ ಸಾಧ್ಯವಾಗಲು ಅವರು ತಮ್ಮ ಶ್ರೇಷ್ಠ ಜ್ಞಾನದಿಂದ ಸಹಾಯ ಮಾಡುವರು ಹೆಚ್ಚಿನ ಅರ್ಚಕರು ಯುರೋಪ್ ಅಮೇರಿಕಾ ಮತ್ತು ಆಸ್ಯಗಳಲ್ಲಿ ಸಂಚಾರ ಮಾಡಿದವರಿದ್ದು ವಿವಿಧ ಧರ್ಮಗಳನ್ನು ತುಲನಾತ್ಮಕ ಅಭ್ಯಸಿಸಿದವರಾಗಿರುವರು.

ಜನರನ್ನು ಮೂಢ ವಿಶ್ವಾಸಕ್ಕೊಳಮಾಡಿ ಅವರ ಆಧ್ಯಾತ್ಮಿಕ ಪ್ರಗತಿಗೆ ಪ್ರತಿಬಂಧವಾಗುವುದನ್ನು ತೊಡೆದುಹಾಕಿ ಜನತೆಯು ಇಹಪರ ಮೋಕ್ಷಸಾಧನೆಗೈಯುವಂತೆ ಆಗಿನ ಅರ್ಚಕರು ಸಹಾಯಕರಾಗಿರುವರು.

ಅರ್ಚಕ ಕೆಲಸವು ಪಾರಂಪರ್ಯವಾಗಿ ಬರುವುದಲ್ಲ. ಮಧ್ಯಕಾಲದಲ್ಲಿದ್ದಂತೆ ಅರ್ಚಕರನ್ನು ಒಂದು ನಿರ್ದಿಷ್ಟ ಪಂಗಡದಿಂದ ಇಲ್ಲವೆ ವಂಶದಿಂದ ಚುನಾಯಿಸದೆ ಆಳ ವಿದ್ವತ್ತು ಮತ್ತು ವಿಶಾಲ ಸಂಸ್ಕೃತಿಗನುಗುಣವಾಗಿ ದೇವಳದ ಆಡಳಿತಗಾರರು ಅವರನ್ನು ನೇಮಿಸುವರು ಅತ್ಯುತ್ಕೃಷ್ಟ ಹಿಂದೂ ಧರ್ಮ ಸೂತ್ರಗಳಲ್ಲಿ ಅವರಿಗೆ ಆಳ ವಿಶ್ವಾಸವಿರಬೇಕು

> ಸಕಲರೂ ಸುಖದಲ್ಲಿರಲಿ
> ಸಕಲರೂ ಸಂಕಷ್ಟರಹಿತರಾಗಿರಲಿ
> ಸಕಲರಿಗೂ ಪಾರಮಾತ್ಮ್ಯ ಪವಿತ್ರತೆಯ
> ದರ್ಶನವಾಗಲಿ
> ಯಾರೂ ನರಳದಿರಲಿ

ದೇವಸ್ಥಾನ ಕಟ್ಟಡಗಳು

ಪೂಜಾ ವಿಧಿ ವಿಧಾನಗಳನ್ನು ಅರ್ಥಪೂರ್ಣವಾಗಿ ಮಾಡಿ ಅತ್ಯಾವಶ್ಯಕವಾದವುಗಳನ್ನು ಮಾತ್ರ ಇಟ್ಟುಕೊಂಡ ಮೇಲೆ ದೇವಸ್ಥಾನಗಳ ಅನೇಕ ಕಟ್ಟಡ ಭಾಗಗಳು ಮತೀಯ ವಿಚಾರ ಶಿಕ್ಷಣಕ್ಕಾಗಿ ಮೀಸಲಿಡಲ್ಪಡುವವು ಆಧ್ಯಾತ್ಮಿಕ ಪ್ರಗತಿಗೆ ಮತೀಯ ಅಭಿವೃದ್ಧಿಯು ಅತ್ಯಾವಶ್ಯಕವಾದುದರಿಂದ ದೇವಸ್ಥಾನದ ಅನೇಕ ಭಾಗಗಳನ್ನು ಶಾಲೆ ಕೋಲೇಜುಗಳನ್ನೂ ಸರಂಜಾಮುಗಳನ್ನೂ, ವಾಚನಾಲಯ, ಗ್ರಂಥ ಭಂಡಾರಗಳನ್ನು ಸ್ಥಾಪಿಸುವಿಕ್ಕುಪಯೋಗಿಸಲ್ಪಡುವವು ಆಧ್ಯ ವ್ಯಕ್ತಿಗಳ ಭಾಷಣಗಳೂ, ವಿದ್ವಾಂಸರ ಚರ್ಚಾ ಸಭೆಗಳೂ ಮತೀಯ ಪರಿಷತ್ತುಗಳೂ ಅಲ್ಲಿ ಜರಗಿಸಲ್ಪಡುವವು ದೇವಸ್ಥಾನಗಳು ಅತ್ಯುಪಯುಕ್ತ ಸಮಾಜ ಕೇಂದ್ರಗಳಾಗುವುವು ಅಲ್ಲಿನ ಚಟುವಟಿಕೆಗಳಲ್ಲಿ ಭಾಗವಹಿಸಿ ಜನರು ತಮ್ಮ ಜೀವನ ದೃಷ್ಟಿಯನ್ನು ವಿಶಾಲಗೊಳಿಸಿ ತಮ್ಮ ಮಾನವ ಸಹಾನುಭೂತಿಯನ್ನು ವಿಸ್ತೃತಗೊಳಿಸುವರು

ದೇವಸ್ಥಾನ ಧನಭಂಡಾರ

ಹಿಂದೂ ದೇವಾಲಯಗಳ ಅಪಾರ ಧನ ಸಂಗ್ರಹವನ್ನು ಉಚ್ಚ ಶಿಕ್ಷಣಾಲಯಗಳ, ಬಡ ಮತ್ತು ಅಂಗಹೀನ ಮಕ್ಕಳ ಕೈಗಾರಿಕೆ ಶಾಲೆಗಳ, ವೈದ್ಯಾಲಯಗಳ, ಗ್ರಂಥ ಭಂಡಾರ ಮತ್ತು ವಾಚನಾಲಯಗಳ ಸ್ಥಾಪನೆಗೆ ಉಪಯೋಗಿಸಲ್ಪಡುವುದು. ಅನಾಥ ಶಿಶು ಮತ್ತು ಮಹಿಳಾಶ್ರಮಗಳನ್ನು ಸ್ಥಾಪಿಸಲೂ, ಪರದೇಶಗಳಿಗೆ ಹಿಂದೂ ಧರ್ಮ ಪ್ರಚಾರಕ್ಕೆ ತಜ್ಞ ಧರ್ಮೋಪಸಾರಕರನ್ನು ಕಳುಹಿಸಲಿಕ್ಕೂ ಇದರಲ್ಲಿನ ಹೆಚ್ಚಿನಂಶ ಉಪಯೋಗಿಸಲಾಗುವುದು

ಅರ್ಚಕರ ಮಕ್ಕಳ ವಿದ್ಯಾಭ್ಯಾಸಕ್ಕೂ ದೇವಳದ ನಿಧಿಯನ್ನು ಉದಾರವಾಗಿ ಉಪಯೋಗಿಸಲಾಗುವುದು ಅವರಿಗೆ ಯೋಗ್ಯ ವಿದ್ಯಾ ವೇತನವನ್ನೂ ಮತ್ತು ಜೀವನಾಂಶವನ್ನೂ ಕೊಡಲಾಗುವುದು

ಮಠಾಧಿಪತಿಗಳು ತಮ್ಮ ಮಠ ಸಂಸ್ಥಾನದ ಆದಾಯವನ್ನು ದೇಶದಲ್ಲಿ ನಡೆಸಲ್ಪಡುವ ಮಾನವ ಸೇವಾಕಾರ್ಯಗಳಿಗುಪಯೋಗಿಸಲು ಉದಾರವಾಗಿ ತೆರುವರು ಅನೇಕ ಸ್ವಾಮಿಗಳೂ ಯತಿಗಳೂ ಹಿಂದೂ ಮತ ಪ್ರಚಾರಕ್ಕಾಗಿ ಪರದೇಶಗಳಿಗೆ ಹೋಗುವರು ಹಿಂದೂ ಪ್ರಚಾರಕರ ಮಠಗಳು ಜಗತ್ತಿನೆಲ್ಲಾ ಕಡೆಗಳಲ್ಲಿ ಸ್ಥಾಪಿಸಲ್ಪಡುವವು ಅದಕ್ಕೆ ಪಿಶಾಲ ಶಿಷ್ಯಸಮುದಾಯವೂ ಸಿಗುವುದು

ಮಂತ್ರಗಳು

2000ದಲ್ಲಿ ಸಂಸ್ಕೃತ ಶ್ಲೋಕ ಮಂತ್ರಗಳೆಲ್ಲವೂ ಪ್ರಾದೇಶಿಕ ಭಾಷೆಗೆ ಭಾಷಾಂತರಿಸಲ್ಪಡುವವು ಇದರಿಂದ ಮತೀಯ ಶ್ರದ್ಧಾಶಕ್ತಿಗಳು ಹೆಚ್ಚುವವು ವಿಚಾರಗಳಿಂದ ಹಿಂದೂ ಧರ್ಮವು ಹೆಚ್ಚು ಚೈತನ್ಯಮಯವಾಗುವುದು.

ಅರ್ಚಕರು ಪ್ರತಿಯೊಂದು ಶಾಸ್ತ್ರ ಪುರಾಣ ಕಲಿಯುವುದರಲ್ಲಿ ಕಾಲಹರಣ ಮಾಡುವುದಿಲ್ಲ. ಅವರು ತಮ್ಮ ತರಬೇತಿಯ ಕಾಲದಲ್ಲಿ ತಮ್ಮ ಧರ್ಮದ ಸಾರವನ್ನು ತಿಳಿಕೊಂಡು ಅದನ್ನು ಸಾಮಾನ್ಯ ಜನತೆಗೆ ತಿಳಿಯುವಂತೆ ಹೇಗೆ ಪ್ರಚಾರ ಮಾಡಬಹುದೆಂಬುದರ ಕುರಿತು ವಿಚಾರ ಮಾಡುವರು. ಇದಲ್ಲದೆ ಇವರು ಸಾಮಾಜಿಕ ಮತ್ತು ಶಿಕ್ಷಣಿಕ ಮಾನಸಿಕ ಶಾಸ್ತ್ರವನ್ನೂ, ರಾಜಕೀಯ ಶಾಸ್ತ್ರವನ್ನೂ, ವಿವಿಧ ಧರ್ಮತತ್ವಗಳನ್ನೂ ತತ್ವಜ್ಞಾನಶಾಸ್ತ್ರವನ್ನೂ ರಾಜಕೀಯ ಮತ್ತು ಕೈಗಾರಿಕಾ ಇತಿಹಾಸವನ್ನೂ ಆರ್ಥಿಕ ಮತ್ತು ಆಧುನಿಕ ವಿಷಯಗಳನ್ನೂ ಕಲಿಯುವರು ಹೆಚ್ಚಿನ ಹಿಂದೂ ಅರ್ಚಕರು ಇತರ ಧರ್ಮಸಾರವನ್ನು ತಿಳಕೊಳ್ಳಲೋಸುಗ ಬೈಬಲ್, ಕೊರಾನಗಳನ್ನು ಅಭ್ಯಾಸಿಸುವರು

ಧ್ಯೇಯಗಳು

ಜಗತ್ತಿನ ಎದುರು ದೇವಸ್ಥಾನಗಳು ಹಿಂದೂ ಧರ್ಮದ ಅತ್ಯುನ್ನತ ನೀತಿ ಮಂತ್ರಗಳನ್ನಿಡುವವು ಭಗವದ್ಗೀತೆಯು ನಮ್ಮ ಎಲ್ಲಾ ದೇಶಸ್ಥರಿಗೂ ತಿಳಿಯುವಂತೆ ಪ್ರಾಮುಖ್ಯ ಪ್ರಾಂತ್ಯ ಭಾಷೆಗಳಲ್ಲಿ ಭಾಷಾಂತರಿಸಲ್ಪಡುವುದು ಪ್ರತಿಯೊಬ್ಬರಿಗೂ ಅದನ್ನು ತಿಳಕೊಳ್ಳಲು ಸುಲಭವಾಗುವುದು

ಜನರು ಪರಮಾತ್ಮನ ಬೋಧಗಳನ್ನು ತಮ್ಮ ಸಾಮರ್ಥ್ಯಕ್ಕನುಗುಣವಾಗಿ ದಿನನಿತ್ಯದ ಜೀವನದಲ್ಲಿ ಆಚರಿಸಲು ಪ್ರಯತ್ನಿಸುವರು ಸಾಮಾನ್ಯ ಜನತೆಗೆ ಅದು ಎಂದಿಗೂ ರಹಸ್ಯದ ಗ್ರಂಥವಾಗಿರದು

ಯಾರು ತನ್ನಂತೆ ಇತರರ ಸುಖ ದುಃಖಗಳನ್ನು ತಿಳಕೊಳ್ಳುವನೊ ಅವನೇ ಮಹಾ ಆತ್ಮ ಪ್ರಾಣಿಗಳ ಶ್ರೇಯಸ್ಸಿಗೆ ಶ್ರಮಿಸುವವರು ಅವನನ್ನು ಸೇರುವರು

ಇಂದು ಜಗತ್ತಿನಲ್ಲ ವಿಲಿಯಮ್ಸನಂಥವರು ಇದನ್ನು ತಿಳಕೊಂಡು ಅಭ್ಯಾಸಿಸುತ್ತಿರುವರು ಕಾರಣ ಗೀತೆಯು ಜಗತ್ತಿನ ಎಲ್ಲಾ ಭಾಷೆಗಳಲ್ಲೂ ಭಾಷಾಂತರ ಹೊಂದಿ ಪ್ರಚಾರ ಮಾಡಲ್ಪಟ್ಟಿದೆ

ಪ್ರಸಿಡೆಂಟ್ ರೂಸ್‌ವೆಲ್ಟರ ಸಾವಿನ ವಿಳಂಬಕ್ಕೆ ಅವರ ಮೆಚ್ಚುಗೆಯ ಅನೇಕ ಅಮೇರಿಕನ್ನರು ಕಳುಹಿಸಿದ ಪತ್ರಗಳನ್ನು ಶೇಖರಿಸಿ ಈಗ ಅವನ್ನು ಸರಕಾರ ಗ್ರಂಥಾಲಯದಲ್ಲಿ ಪ್ರದರ್ಶನಕ್ಕಿಡಲಾಗಿದೆ

★

ESTD 1906

CANARA BANK, LIMITED.

(Incorporated in British India with Limited Liability)

(PROGRESS STATEMENT CORRECT TO THOUSANDS OF RUPEES)

LIABILITIES	1945	1946	ASSETS	1945	1946
Capital Subscribed	29 00,000	29 00,000	Cash	1 01 91 000	1 16,16 000
Capital paid up	28 43,000	28,80,000	Govt Securities	1 80,45,000	2,75,61,000
Reserves	11,00,000	11 00,000	Advances to customers	1 56,87 000	2,01 38 000
Deposits	3,50,43,000	4 60,40,000	Bills for collection and Foreign Bills negotiated	20 56 000	34 23 000
Due to Bankers	26,91,000	69 57 000	Landed Properties	28 000	5 000
Call Deposits from Bankers	6,00,000	15,00,000	Bank Premises and Furniture and Fixtures	1,46,000	1 47,000
Branch Adjustments	22,07,000	21,09,000	Other Assets	10,26,000	16,23,000
Bills for collection and foreign bills negotiated	20,56,000	34,23,000			
Other Liabilities	77,000	85,000			
Profit for the year	3,61,000	4,19,000			
Rs.	4,71,78,000	6,45 13,000	Rs.	4,71,78,000	6,45,13,000

ಜಾತಿ ಪದ್ಧತಿಯ ನ್ಯಾಯ ನೀತಿಗಳು

ಹಿಂದೆ ಎರಡೇ ಜಾತಿಗಳಿದ್ದಾಗ

ಬ್ರಾಹ್ಮಣರು ಶೂದ್ರರೊಡನೆ ಉಣ್ಣಬಹುದು.

ನಮ್ಮ ಸಮಾಜ ಸುಧಾರಕರನ್ನು ಕಠಿಣವಾಗಿ ಎದುರಿಸುವಂತಹುದು ಒಂದೇ ಒಂದಾದ ಜಾತಿಭೇದದ ಸಮಸ್ಯೆ. ಸನಾತನಿಗಳು (ಕಟ್ಟಾಚಾರದ ಸಾಂಪ್ರದಾಯವಾದಿಗಳು) ಅದರ ಉತ್ಕೃತೆಯನ್ನೂ, ಸುಧಾರಕರು ಅದರ ತುಚ್ಛತೆಯನ್ನು ಪೋಷಣ ಖಂಡನಗಳನ್ನು ಮಾಡುವಾಗ ಮಹೋನ್ನತ ತರ್ಕ ಶೈಲಿಯನ್ನೇ ಉಪಯೋಗಿಸುತ್ತಾರೆ

ವೇದಕಾಲದಲ್ಲಿ ಆರ್ಯ ಮತ್ತು ದಾಸರೆಂಬ ಎರಡೇ ಜಾತಿಗಳಿದ್ದುವು ಇದೂ ಬಿಳಿಯಾದ ಆರ್ಯರು ತಾವು ಸೋಲಿಸಿದ ಕಪ್ಪು ದ್ರಾವಿಡರ ಮೇಲೆ ತೋರಿಸಿದ ವರ್ಣ ದರ್ಪದ ಪರಿಣಾಮವಾಗಿರುತ್ತದೆ ಈ ದಾಸ್ಯ ಜನರನ್ನು ಚೆನ್ನಾಗಿ ದುಡಿಸಿ ಆರ್ಯರು ಅವರನ್ನು ಶೂದ್ರರನ್ನಾಗಿ ಮಾಡಿಟ್ಟರು

ಬ್ರಾಹ್ಮಣ ಕಾಲದ ಆರ್ಯರಲ್ಲಿ ಬ್ರಾಹ್ಮಣ, ವೈಶ್ಯ, ಕ್ಷತ್ರಿಯರೆಂಬ ಮೂರು ವರ್ಗಗಳಿದ್ದುವು, ಕ್ರಮೇಣ ಮೊದಲೇ ಇದ್ದ ಶೂದ್ರರು ಸೇರಿ ಚತುರ್ವರ್ಣಗಳಾದುವು ಇಷ್ಟಾದರೂ ಇವುಗಳ ನಡುವೆ ಬೇರೆ ಕೆಲವು ಉಪಜಾತಿಗಳು ಇದ್ದುವು

ಮುಖ್ಯ ನಾಲ್ಕು ವರ್ಣಗಳಲ್ಲಿ ಪರಸ್ಪರ ಸಂಪರ್ಕದಿಂದ ಅನುಲೋಮ ಪ್ರತಿಲೋಮ ಸಂತಾನಗಳುತ್ಪನ್ನವಾದುವು ಒಂದೇ ವರ್ಣದವರಲ್ಲಿ ಇಲ್ಲವೆ ಯಾವುದಾದರೊಂದು ಇನ್ನೊಂದರೊಡನೆ ಸ್ಮೃತಿ ವಿರೋಧವಾಗಿ ವಿವಾಹವಾದರೆ ಅದು ಪ್ರತಿಲೋಮ ವಿವಾಹವಾಯಿತು ಈ ರೀತಿಯಲ್ಲಿ ಹುಟ್ಟುವವರದೇ ಬೇರೆ ಜಾತಿಗಳಾದುವು ಒಂದು ಕಾಲದಲ್ಲಿ ಅರ್ಧಶತಕ್ಕೂ ಮಿಕ್ಕಿದ ಇಂತಹ ಉಪಜಾತಿಗಳಿದ್ದುವೆಂದು ತಿಳಿಯುತ್ತದೆ

೮೦ ಬ್ರಾಹ್ಮಣ ಜಾತಿ

ಈಗಲೂ ಮುಖ್ಯ ವರ್ಣಗಳಲ್ಲಿ ಅನೇಕ ಜನಾಂಗಿಕ, ಪ್ರಾದೇಶಿಕ ಮತ್ತು ಸಾಂಸ್ಕೃತಿಕ ಭೇದಗಳಿಂದ ಹಲವು ಉಪಜಾತಿಗಳಿವೆ ಬ್ರಾಹ್ಮಣರಲ್ಲಿ ಮುಖ್ಯವಾದ ಪಂಚ ದ್ರಾವಿಡ ಮತ್ತು ಪಂಚಗೌಡರೆಂಬ ಹತ್ತು ಪಂಗಡಗಳಿವೆ ಗುಜರಾತ ಒಂದರಲ್ಲೇ ಬ್ರಾಹ್ಮಣರ 84 ಉಪಪಂಗಡಗಳಿವೆಯೆಂದು ಬೊಂಬಾಯಿ ಸರಕಾರಿ ದಾಖಲೆಗಳಲ್ಲಿದೆ ಪಂಜಾಬಿನ ಸಾರಸ್ವತ ಬ್ರಾಹ್ಮಣರಲ್ಲಿ 470 ಉಪಪಂಗಡಗಳಿವೆ ಎಂಬ ಸಂಗತಿಯು ಅತಿ ಕೌತುಕದ

ಈಗಿನ ಮಟ್ಟಿಗೆ ಹಿಂದೂಗಳಲ್ಲಿ ಒಟ್ಟಿಗೆ 2400 ಉಪಜಾತಿಗಳಿವೆ ಇವುಗಳಲ್ಲಿ ಹಲವು ಪರಸ್ಪರ ಅಂತರ್ವಿವಾಹ ಮಾಡುವುದಿಲ್ಲ ಇವೆಲ್ಲವೂ ಅತೀ ಪ್ರಾಚೀನದ ಎರಡು ಮುಖ್ಯ ಪಂಗಡಗಳಿಂದುಂಟಾದುವು

ಜನ್ಮದಿಂದ ಜಾತಿ

ಮುಂಚೆ ಜಾತಿ ಎಂಬ ಶಬ್ದಾರ್ಥ ಪ್ರಯೋಗವೇ ಇರಲಿಲ್ಲ ವರ್ಣಗಳೆಂದೇ ಉಪಯೋಗಿಸಲ್ಪಡುತ್ತಿತ್ತು. ಸಂಸ್ಕೃತಿ, ಗುಣ, ನಡತೆ, ವೃತ್ತಿ ಉದ್ಯೋಗದ ಮೇಲೆ ಹೊಂದಿಕೊಂಡು ವರ್ಣ ನಿರ್ಣಯವಾಗುತ್ತಿತ್ತು ಆದರೆ ಜಾತಿಪದ್ಧತಿಯು ಹೆಚ್ಚು ಕಡಿಮೆ ಹುಟ್ಟಿನ ಮೇಲೆ ಅನುಸರಿಸಿಕೊಂಡಿದೆ ಹೀಗೆ ನೀತಿ ಮತ್ತು ಬುದ್ಧಿಗನುಸಾರವಾಗಿ ವರ್ಗೀಕರಿಸಲ್ಪಡುವ ವರ್ಣ ಪದ್ಧತಿಯು ಸಮಾಜ ಪ್ರಗತಿಗೆ ಅತ್ಯನುಕೂಲವೆನ್ನಬಹುದು.

ಆದರೆ ಜನ್ಮದಿಂದ ವರ್ಗೀಕರಿಸುವ ಜಾತಿ ಪದ್ಧತಿಯು ಪರಸ್ಪರ ದ್ವೇಷ ವೈಷಮ್ಯಗಳನ್ನು ಹೆಚ್ಚಿಸುವುದು. ಇದರಲ್ಲಿ ಮನುಷ್ಯನ ಗುಣ, ಮತ್ತು ಬುದ್ಧಿ ವೈಶಿಷ್ಟ್ಯಗಳಿಗೆ ಲಕ್ಷ್ಯ ಕೊಡಲ್ಪಡುವುದಿಲ್ಲ.

ಇದನ್ನರಿತ ನಮ್ಮ ಪೂರ್ವಿಕರು ಜನ್ಮಕ್ಕೆ ಪ್ರಾಧಾನ್ಯತೆಯನ್ನು ಕೊಡದೆ ಗುಣಕ್ಕೇ ಪ್ರಾಮುಖ್ಯತೆಯನ್ನೀಯುತಿದ್ದರೆಂಬ ಸಂಗತಿಯು ಇದರಿಂದ ಸ್ಪಷ್ಟವಾಗುತ್ತದೆ.

ಪತಂಜಲಿಯ ಮಹಾ ಭಾಷ್ಯದಲ್ಲಿ ಒಂದು ಶ್ಲೋಕವಿದೆ ಅದರಲ್ಲಿ **"ಮತಾಚಾರ, ವೇದಾಭ್ಯಾಸ ಮತ್ತು ಜನ್ಮ ಇವು ಮೂರು ಕಾರಣಗಳಿಂದಲೇ ಓರ್ವನು ಬ್ರಾಹ್ಮಣನೆನಿಸುವನು"** ಎಂದಿದೆ ಮತ್ತು "ಯಾರಲ್ಲಿ ನ ತಾಚಾರ, ವೇದ ವಿದ್ಯೆಗಳು ಲೋಪವಾಗಿವೆಯೊ ಅವನು ನಿಜ ಬ್ರಾಹ್ಮಣನಲ್ಲವೆಂದೂ ಅದರಲ್ಲೇ ಹೇಳಲಾಗಿದೆ ಅವನನ್ನು ಬ್ರಾಹ್ಮಣನಿಗೆ ಹುಟ್ಟಿದವನೆಂದಿಷ್ಟು ಮಾತ್ರ ಹೇಳಬಹುದು

ಮಹಾಭಾರತದ ವಾನಪ್ರಸ್ಥ ಕಾಂಡದಲ್ಲಿ **"ಯಾರಲ್ಲಿ ಬ್ರಾಹ್ಮಣ್ಯ ವರ್ತನೆಗಳಿಲ್ಲವೊ ಅವನು ಶೂದ್ರ, ಶೂದ್ರನಲ್ಲಿ ಅವಿದ್ದರೆ ಅವನು ಬ್ರಾಹ್ಮಣನೆನಿಸುವನು"** ಎಂದಿದೆ ಇದರಿಂದ ಜನ್ಮದಿಂದ ಕೀಳು ಮೇಲೆಂದು ಪರಿಗಣಿಸುವ ಪದ್ಧತಿಯು ತಪ್ಪೆಂದೂ ಅದನ್ನು ನಾಶಮಾಡಬೇಕೆಂದೂ ಗೊತ್ತಾಗುತ್ತದೆ

ಬ್ರಾಹ್ಮಣ ಶ್ರೇಷ್ಠತೆ

ಬ್ರಾಹ್ಮಣ ವರ್ಣವನ್ನು ರಚಿಸಿದ್ದು ಮಾನವ ಪರಿಶುದ್ಧತೆಯನ್ನುಂಟುಮಾಡಲಿಕ್ಕಾಗಲಿ ಇಲ್ಲವೆ ಸಮಾಜ ಶಿಸ್ತನ್ನು ಸೃಜಿಸಲಿಕ್ಕಾಗಲಿ ಅಲ್ಲ ಆದರೆ ಬ್ರಾಹ್ಮಣರೆಂಬವರು ಶ್ರೇಷ್ಠರೆಂಬ ಭಾವನೆ ಹುಟ್ಟಿಸಲಿಕ್ಕೇ ಹೊರತು [illegible] ಇತಿಹಾಸ [illegible] ಮತ್ತು [illegible] ಆದರೆ ಬ್ರಾಹ್ಮಣರ [illegible] ಸಂಗ್ರಹವಾಗದೆ ಇದ್ದ [illegible] ರಬೇಕೆಂಬ ಸ್ಮೃತಿ ನಿರ್ದೇಶವು ಈ ವಾದವನ್ನು ತಪ್ಪೆಂದು ತೋರಿಸುತ್ತದೆ

ಮನುವಿನ ನೀತಿ ಸೂತ್ರ ಪ್ರಕಾರ ಬ್ರಾಹ್ಮಣನಾದವನು ತನಗೂ ತನ್ನ ಸಂಸಾರ ಪೋಷಣೆಗೂ ಸಾಕಾಗುವಷ್ಟೇ ಧನವನ್ನು ಯಾರಿಗೂ ಹಿಂಸೆಯಾಗದ ರೀತಿಯಲ್ಲಿ ಶೇಖರಿಸಬಹುದು ಎಂದಿದೆ ವ್ಯಾಸನ ನಿರ್ದೇಶ ಪ್ರಕಾರ ಸಂಪತ್ತನ್ನು ಸಂಗ್ರಹಿಸುವ ಬ್ರಾಹ್ಮಣನು ತನ್ನ ಬ್ರಾಹ್ಮಣತ್ವ ಕಳಕೊಳ್ಳುತ್ತಾನೆ ಎಂದಿದೆ.

ಸರಳ ಜೀವನ ಉನ್ನತ ವಿಚಾರಗಳೇ ಬ್ರಾಹ್ಮಣ ಲಕ್ಷಣಗಳು ಧನಾಪೇಕ್ಷೆ ಯಿಲ್ಲದೆ ಪವಿತ್ರ ಜೀವನ ನಡೆಸುವರೊ ಅವರೇ ಹಿಂದಿನ ಕಾಲದಲ್ಲಿ ಲೋಕ ಮಾನ್ಯರಾಗುತ್ತಿದ್ದರು. ಈಗಲಾದರೊ ಇದು ಸತ್ಯವೇ ಆಗಿದೆ ಉದಾಹರಣೆಗಾಗಿ ಮಹಾತ್ಮಾ ಗಾಂಧಿಯವರನ್ನು ನಾವು ನೋಡಬಹುದು. ಅವರೇನು ಹುಟ್ಟು ಬ್ರಾಹ್ಮಣರಲ್ಲ ಆದರೆ ಅವರ ಉನ್ನತ ಆದರ್ಶವು ಅನೇಕ ಮುಗಳಿಗೆ [illegible] ಗಿದೆ ಆದುದರಿಂದ ನಿಜವಾಗಿ ಬ್ರಾಹ್ಮಣನೆನಿಸುವುದು ಸುಲಭವಲ್ಲ

ಊಟ ಮತ್ತು ವಿವಾಹ

ಊಟ ಮತ್ತು ವಿವಾಹ ಮೊದಲಾದ ಸಾಮಾಜಿಕ ಅಂತನ್ಯ ವಹಾರಕ್ಕೆ ಜಾತಿ ಕಟ್ಟಳೆಯು ತುಂಬಾ ಆತಂಕ ತಂದೊಡ್ಡಿದೆಯೆಂದು ಸುಧಾರಕರು ಆಕ್ಷೇಪಿಸುತ್ತಾರೆ

ನಮ್ಮ ಈಗಿನ ಅನೇಕ ಆಚಾರ ವಿಚಾರಗಳು ಪೂರ್ವಿಕರ ಪಂಕ್ತಿಭೇದವಿಲ್ಲದವುಗಳು. ಪ್ರಾಚೀನ ಧರ್ಮಶಾಸ್ತ್ರ ಮತಪ್ರಕಾರ ಬ್ರಾಹ್ಮಣನು ಬ್ರಾಹ್ಮಣ, ವೈಶ್ಯ ಕ್ಷತ್ರಿಯ ಈ ಮೂರು ವರ್ಣಗಳಲ್ಲಿ ಸಾಮಾನ್ಯವಾಗಿ ಸಹಭೋಜನಮಾಡಬಹುದೆಂದಿದೆ ಮಾತ್ರವಲ್ಲ ತನ್ನ ದಾಸನೂ ಕ್ಷೌರಿಕನೂ ಆದ ಶೂದ್ರನಿಂದ ಆಹಾರವನ್ನು ಸ್ವೀಕರಿಸಬಹುದೆಂದೂ ಹೇಳಲ್ಪಟ್ಟಿದೆ. ಆದರೆ ಶುದ್ಧನಿಲ್ಲದ ಶೂದ್ರನಲ್ಲಿ ಭೋಜನ ಗ್ರಹ್ಯಾಚಾರದೆಂಬ ನಿಷೇಧವಿದೆ ಕೆಲವು ಪರಿಶುದ್ಧಾಚರಣೆಗಳಂತೆ ನಡೆಯುವ ಶೂದ್ರನನ್ನು ಬ್ರಾಹ್ಮಣರು ಅಡುಗೆಗೆ ಇಟ್ಟುಕೊಳ್ಳಬಹುದೆಂದೂ ಇದೆ

ಬ್ರಾಹ್ಮಣನಾದವನು ಇತರ ಮೂರು ವರ್ಣಗಳ ವಧುವನ್ನೂ, ಕ್ಷತ್ರಿಯನು ವೈಶ್ಯ ಶೂದ್ರರ ಹುಡುಗಿಯರನ್ನೂ, ವೈಶ್ಯನು ಶೂದ್ರರ ಹುಡುಗಿಯನ್ನೂ ಮದುವೆಯಾಗಿ ಕೊಳ್ಳಬಹುದೆಂದು ಶಾಸ್ತ್ರ ನಿರ್ದೇಶವಿದೆ ಇವು ಅನುಲೋಮ ವಿವಾಹಗಳು ಇದಕ್ಕೆ ವಿರೋಧವಾದರೆ ಅಂದರೆ ಕ್ಷತ್ರಿಯರು ಬ್ರಾಹ್ಮಣ ಕನ್ಯೆಯನ್ನು ಶೂದ್ರರು ವೈಶ್ಯ ಕನ್ನಿಕೆಯನ್ನು ಮದುವೆಯಾಗುವುದು ಪ್ರತಿಲೋಮವಾಗುತ್ತದೆ

ಅಸ್ಪೃಶ್ಯತೆ

ಜಾತಿ ಪದ್ಧತಿಯಿಂದ ದುಷ್ಟ ಅಸ್ಪೃಶ್ಯತಾ ಭಾವನೆಯು ಬೆಳೆಯುತ್ತದೆಂದೂ ಖಂಡಿಸಲಾಗುತ್ತದೆ ನಮ್ಮ ಸಮಾಜದಿಂದ ಅಸ್ಪೃಶ್ಯತೆಯನ್ನು ನಿರ್ಮೂಲಗೊಳಿಸುವ ಆವಶ್ಯಕತೆಯನ್ನು ಬೇರೆ ಹೇಳಬೇಕಾಗಿಲ್ಲ ಅದಕ್ಕೆ ಒಪ್ಪುವಂತ ಬೆಂಬಲವೂ ಇದೆ ಈಗಿನ ಕಾಲದ ಅಸ್ಪೃಶ್ಯತೆಗೆ ಪ್ರಾಚೀನ ಶಾಸ್ತ್ರಗಳ ಸಮರ್ಥನೆಯಿಲ್ಲ **ಯುದ್ಧದಲ್ಲೂ, ಸಾರ್ವಜನಿಕ ರಸ್ತೆಗಳಲ್ಲೂ, ದೇವಸ್ಥಾನಗಳಲ್ಲೂ ಅಸ್ಪೃಶ್ಯರೊಡನೆ ಬೆರೆತರೆ ದೋಷವಿಲ್ಲವೆಂದು** ಸ್ಮೃತ್ಯಾರ್ಥ ಸಾರದಲ್ಲಿ ಹೇಳಿದೆ

ನಮ್ಮ ಜನರಿಗೆ ಶಿಕ್ಷಣ ಸೌಕರ್ಯವಿಲ್ಲದಿರುವುದು ಜಾತಿಸಂಬಂಧ ಸುಧಾರಣೆಗೆ ದೊಡ್ಡದೊಂದು ಆತಂಕವಾಗಿದೆ ಗುಣ ನಡತೆ, ಜ್ಞಾನ ಪ್ರತಿಭೆ, ಸಂಸ್ಕೃತಿ ಮತ್ತು ವ್ಯಕ್ತಿಗಳ ಆಧಾರದಿಂದ ಜಾತಿಯನ್ನು ವರ್ಗೀಕರಿಸುವ ವಿಧಾನವು ಈಗಿನ ಜಾತಿ ಪದ್ಧತಿಯನ್ನು ಹೋಗಲಾಡಿಸಲು ಉತ್ತಮ ಮಾರ್ಗ ಹೀಗೆ ರಾಷ್ಟ್ರೀಯತೆ ಮತ್ತು ಸಮಾನತೆಗಳ ಅಭಿವೃದ್ಧಿಗೆ ಶಿಕ್ಷಣ ಪ್ರಚಾರವು ಅತ್ಯಾವಶ್ಯಕ

—೦:—

ರಿಯಾಯತಿ ಲಗ್ಗೇಜಿನಲ್ಲಿ ವ್ಯಾಪಾರಿ ಸಾಮಾನುಗಳ ನಿಷೇಧ

ಪಸೆಂಜರರ ಸೌಕರ್ಯಗಳ ಬಗ್ಗೆ ಒಂದು ಮಣ ಭಾರದ ಸಾಮಾನುಗಳನ್ನು ಫ್ರೀ ತೆಗೆದುಕೊಂಡು ಹೋಗಬಹುದಾಗಿ ಮಾಡಿದ ರಿಯಾಯತಿ ಕಾರಣದಿಂದಾಗಿ ಪೆಸೆಂಜರರು ಅವರ ಸ್ವಂತ ಉಪಯೋಗದ ಸಾಮಾನುಗಳಲ್ಲದೆ ವ್ಯಾಪಾರಿ ಸಾಮಾನುಗಳನ್ನು ತಮ್ಮೊಡನೆ ಪ್ರಯಾಣ ಬೆಳೆಸುವ ಸ್ನೇಹಿತರ ಹೆಸರಿನಲ್ಲಿ ಈ ರಿಯಾಯತಿ ಮೂಲಕ ಧರ್ಮಾರ್ಥ ಸಾಗಿಸುವುದು ರೂಢಿಯಾಗಿದೆ

ಮೋಟರ್ ವಾಹನಗಳು ರೈಲ್ವೆಗಾಡಿಗಳಂತಾಗಿಲ್ಲ ಅವುಗಳಲ್ಲಿ ನಿಯಮಿತ ಭಾರಕ್ಕಿಂತ ಹೆಚ್ಚಿನ ಸಾಮಾನುಗಳನ್ನು ಒಯ್ಯುವುದು ಮೋಟರ್ ವಾಹನಕ್ಕೂ ಮತ್ತು ಪೆಸೆಂಜರರಿಗೂ ಅಪಾಯವಾಗಿದೆ ಕಾರಣ ಬಸ್ಸುಗಳಲ್ಲಿ ಒಯ್ಯುವ ಸಾಮಾನುಗಳನ್ನು ಪೆಸೆಂಜರರ ಅವಶ್ಯಕತೆ ಬಗ್ಗೆನೇ ಮಿತಗೊಳಿಸುವುದು ಅಗತ್ಯವಿದೆ

ವ್ಯಾಪಾರಿ ಸಾಮಾನುಗಳನ್ನು ಒಯ್ಯುವರೆ ವ್ಯಾಪಾರಿಗಳು

ಶೆಡ್ಯೂಲ್ ಟೈಮಿಗೆ ಕೊಂಡೊಯ್ಯುವ "ಲಕ್ಷ್ಮಿ" ಯಾ "ಸಿ. ಪಿ ಸಿ" ಲೋರಿ ಸರ್ವಿಸುಗಳ ಸೌಖ್ಯರ್ಯವನ್ನು ಉಪಯೋಗಿಸಬೇಕಾಗಿ ಅಪೇಕ್ಷಿಸುತ್ತೇವೆ

ವ್ಯಾಪಾರಿ ಸಾಮಾನುಗಳನ್ನು ಎಷ್ಟಕ್ಕೂ ಫ್ರೀ ಲಗ್ಗೇಜಿನ ಅಂಶದಲ್ಲಿ ಸೇರಿಸಿಕೊಳ್ಳಲಾಗುವುದಿಲ್ಲ. ಈ ಕುರಿತು ಮಾಹಿತಿಯನ್ನು ಬುಕ್ಕಿಂಗ್‌ಕ್ಲಾರ್ಕರಿಂದ ಪಡೆಯಬಹುದು

JOINT MANAGERS,

The Combined Booking Agency, MANGALORE

The Joint Booking Office, KODIALBAIL

THE CANARA BANKING CORPORATION LTD.
(Incorporated in British India with Limited Liability)
Estd: 1906.
Head Office: UDIPI, S. Kanara.

CAPITAL:	Rs.
Authorised	25,00,000
Issued, subscribed & called up	16,00,000
Paid up	15 97,145
RESERVES	5,25,000
DEPOSITS	2,07,47,928
TOTAL RESOURCES	3,00,01,186

With a net work of branches & Agencies in all principal cities of India, we shall be able to render efficient collection services

BANKING BUSINESS OF EVERY DESCRIPTION TRANSACTED.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ಕಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ

ಅಮೃತಾಂಜನ ಡಿಪೋ,
ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

THE BOMBAY LIFE ASSURANCE COMPANY LIMITED

(ESTD. 1910)

Peace and Security........

The Mightiest War to secure freedom for the oppressed Nations of Europe has ended. With many attempts at securing the four Freedoms, we do not seem to be anywhere near it. We, in our humble way, have been contributing to this Individual Material Freedom, in War as well as in Peace, by extending Insurance Service to all who seek it.

1945 completed Business { Company's: Over $2\frac{3}{4}$ Crores; Ours: About 50 lakhs.

Kochikar Brothers, Limited.

(ESTD. 1908)

Chief Agents for South India and Special agents for Bombay City & Suburbs.

"Bombay Life Building," Gandhi Nagar, UDIPI.

With Offices at:

MADRAS, BANGALORE, TRIVANDRUM, MANGALORE, MADURA, CALICUT, BOMBAY, & UDIPI.

And Agencies all over South India

Bhuvanendra Products Limited,

KATAPADI S. Kanara.

'Bhuvanendra Dashamoolarishta

Prepared with seleteced ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour Also useful in habitual abortion and all diseases pertaining to the heart & lungs

Depot: **Maharala Galli, Hubli**

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ' ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ದಿವ್ಯ ಔಷಧಿ ಗರ್ಭಕೋಶದ ಬೇನೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುತ್ತದೆ.

ಡಿಪೊ ಮುರಾರಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಕು 11—4—1947 [ಸಂಚಿಕೆ 15]

ವಾರಾಂತ್ಯ ವರದಿ ವಿಮರ್ಶೆ

ಡಿಲ್ಲೀ ಮಾತುಕತೆಗಳ ರೂಪರೇಖೆ

ಪುನಃ ಲೀಗಿಗೆ ಸವಲತ್ತುಗಳೇ

ಮಹಾತ್ಮರ ಮುಂದಿನ ಮಹತ್ವದ ಕಾರ್ಯ

[ಹೊಸ ವ್ಯಾಸ್‌ರಾಯರ ರಾಜಕೀಯ ಇತ್ಯರ್ಥ ಪರಿಶೋಧನಾ ಮಾತುಕತೆಗಳು ಇನ್ನೂ ನಿರ್ದಿಷ್ಟ ರೂಪ ತಾಳಿಲ್ಲ ಈಗಾಗಲೇ ವಿಶಾಲ ವಿಷಯ ಪರಿಚಯದ ಪೀಠಿಕಾ ಚರ್ಚೆಗಳು ಮಾತ್ರ ಜರಗಿದುವೆಂದೂ, ವ್ಯತ್ಯಾಸಗಳಿರುವ ರಾಜಕೀಯ ಪಕ್ಷಗಳಲ್ಲಿ ಇರುವ ಅತೀ ಹೆಚ್ಚಿನ ಒಪ್ಪಿಗೆಯ ಅಂಶಗಳನ್ನು ಕಂಡು ಹಿಡಿಯುವುದು ಚಕ್ರವರ್ತಿ ಪ್ರತಿನಿಧಿಯ ಉದ್ದೇಶವಾಗಿದೆ 'ಇಷ್ಟರಲ್ಲೇ ಯಾವುದಾದರೂ ನಿರಾಧಾರ ಊಹಾಪೋಹಗಳನ್ನು ಮಾಡುವುದು ಈ ಗಂಭೀರ ಸಂಧಾನ ಯತ್ನಕ್ಕೆ ಧಕ್ಕೆಯುಂಟು ಮಾಡಬಹುದು ಆದುದರಿಂದ ಇಲ್ಲಿ ಕೊಡಲ್ಪಡುವ ಸಂಗತಿಗಳು ಯಾವುದಾದರೂ ಖಂಡಿತ ಸಂಭಂದವೆಂದು ತಿಳಿದುಕೊಳ್ಳಬಾರದು]

ವಿರೋಧ ಧ್ಯೇಯ ಪ್ರತಿನಿದಿಗಳು

ಗಾಂಧೀಜಿ ವ್ಯಾಸ್‌ರಾಯರನ್ನು ಕಂಡರು ವ್ಯಾಸ್‌ರಾಯರು ಗಾಂಧೀಜಿಯೊಡನೆ ವಿಚಾರ ವಿನಿಮಯ ಮಾಡಿದರು ರಾಜಕೀಯ ಪರಿಸ್ಥಿತಿಯನ್ನು ಎಲ್ಲಾ ಸಮಸ್ಯೆಗಳ ದೃಷ್ಟಿ ಕೋನಗಳಿಂದ ಅವಲೋಕಿಸಲಾಯಿತು ಎಲ್ಲಾ ಜಿಕ್ಕಟ್ಟಿನ ಗಂಟುಗಳನ್ನು ಪರಿಶೀಲಿಸಲಾಯಿತು

ಆದರೆ ಮಹಾತ್ಮರು ತಮ್ಮ ಸ್ಥಾನಮಾನವನ್ನು ಮುಂದಾಗಿಯೇ ತಿಳಿಸಿರುವರು 'ನಾನು ಯಾರ ಪ್ರತಿನಿಧಿಯೂ ಅಲ್ಲ ಕೇವಲ ಸಲಹೆಗಾರನಾಗಲು ಬಯಸುವೆ'ನೆಂದು ವ್ಯಾಸ್‌ರಾಯರೂ ಅವರ ಸಲಹೆಗಳನ್ನು ಪಡೆಯಲೋಸುಗ ಸಂತೋಷ ಚಿತ್ತದಿಂದ ಇದನ್ನು ಒಪ್ಪಿರುವರು ಅದಕ್ಕೂ ಕಾರಣವಿದೆ ಮಹಾತ್ಮರು ಹಿಂದೂಗಳಾದರೂ ಹಿಂದುಗಳ ಪ್ರತಿನಿದಿಯಲ್ಲ, ರಾಷ್ಟ್ರೀಯವಾದಿಗಳಾದರೂ ಕೊಂಗ್ರೆಸಿನ ನಾಲ್ಕಾಣೆ ಸದಸ್ಯರಲ್ಲ ಅವರದು ಸೇವಾದರ್ಶ ಸಲಹೆ ಕೊಡುವುದು ಒಂದು ಸೇವೆ ಅಲ್ಲವೆ?

ಮೌಂಟ್‌ಬೆಟನ್ ಮತ್ತು ಮಹಾತ್ಮಾ ಎಂತಹ ಒಂದಕ್ಕೊಂದು ಪ್ರತಿ ವಿರೋಧ ಧ್ಯೇಯ ಧರ್ಮದ ಪ್ರಭೃತಿಗಳು ಬ್ರಿಟಿಷ್ ಚಕ್ರವರ್ತಿ ಕುಟುಂಬದವರೂ, ಬ್ರಿಟಿಷ್ ಸಾಮ್ರಾಜ್ಯಾಧಿಪತ್ಯದ ಸಮರ್ಥಕರೂ ಮಾತ್ರವಲ್ಲ ಪ್ರತಿನಿಧಿಗಳೂ ಆಗಿರುವ ಮೌಂಟ್‌ಬೆಟನ್ ದೊರೆ ಒಂದು ಕಡೆ. ಮಿಲಿಯಾವಧಿ 'ಮೂಕ' ಜನತೆ'ಯ ವಿಮೋಚನೆಗಾಗಿ ಸುಲಿಗೊಳಗಾದ ಜನತೆಯನ್ನು ಸಾಮ್ರಾಜ್ಯಶಾಹಿಯವರ ಕಡೆಯಿಂದ ರಕ್ಷಿಸಲಿಕ್ಕಾಗಿ ಜೀವನ ಸವೆದ ಮಹಾತ್ಮ ಮತ್ತೊಂದು ಕಡೆ ಒಬ್ಬರು ಹಿಂಸಾಮಯವಾದ ಆಧುನಿಕ ಯುದ್ಧ ದೇವತೆಯ ಭಕ್ತರು ಇನ್ನೊಬ್ಬರು ಪರಮೋನ್ನತವಾದ ಅಹಿಂಸಾ ತತ್ವ ವಾದಿಗಳು. ಒಬ್ಬರು ಪಾಶ್ಚಿಮಾತ್ಯರ ಪರಿಪೂರ್ಣತೆಯ ನಾಗರೀಕತೆಗೆ

ಸೇ[illegible] ಇ[illegible] ಪಾರಮಾರ್ಥಿಕ ತತ್ವಜ್ಞಾನ [illegible] ಸಂಘಗಳ [illegible]ರುವುದು. ಅವರ ಸೇ[illegible] [illegible]ದಲ್ಲಿ ಇನ್ನೊಬ್ಬರು ಗುಡಿಸಲುಗಳ ಹರದಲ್ಲಿ ಬ್ರಿಟಿಷ್ ಸರಕಾರ ಪ್ರತಿನಿಧಿಗಳು ಸಾಮ್ರಾಜ್ಯಶಾಹಿಯನ್ನು ಕೊನೆಗೊಳಿಸಲು ಭಾರತ ಪ್ರತಿನಿಧಿಯ [illegible] ಸ್ವಾತಂತ್ರ್ಯವನ್ನು ಮುಕ್ತಮಾಡಲು ಪರಸ್ಪರ ಸಹಕಾರ [illegible] ಗಿದೆ

ಮಹಾತ್ಮರ ಮಹತ್ವ

ಪುನಃ ಮಾತುಕತೆಗಳ ಧೋರಣೆ [illegible] [illegible] ರಾಜಕೀಯ [illegible] ಪಕ್ಷಿ ಈ ಮಾತುಕತೆಯು ಆದರ್ಶವನ್ನ 'ಕಲ್ಪಿಸಿದವರು ಲಿನ್ ಲಿತ್ ಗೋ ಅವರು. [illegible] ಸಮೇತವಾದ ಇಪ್ಪೀಟಾ ಪಟ್ಟಿಗೆಯ ಎಲ್ಲಾ ಎಲೆಗಳನ್ನು ಮುಗುಚಿದಂತೆ ಅವರು 350 'ಬೇಟಿ'ಗಳನ್ನು ಕೊಟ್ಟು ಕಡೆಗೆ ಮಾಡಿದ್ದು ಒಂದು ಅರಾಷ್ಟ್ರೀಯ

[illegible] ರಾಷ್ಟ್ರೀಯ ಸರಕಾರ [illegible] [illegible] ಭಾರಿಯ [illegible] ನಂತರ ಬ್ರಿಟಿಷ್ ಮಂತ್ರಿಯರೂ ಮಾಡಿದ್ದು ಅದೇ ಪುನ ಅದರ ಪರಿಣತಿ ನೆ [illegible]

ಅದರಲ್ಲಿಯೂ ಮಹಾತ್ಮರನ್ನು ಕೊಂ[illegible]ಸಿನ ಪರವಾಗಿ ಕರೆಯಲು ಕಾರಣವಿಲ್ಲ ದಿಲ್ಲಿ ಅವರು ಕಿಪ್ಸ್ ಇಂಡಿಯಾ [illegible] ಗಳ [illegible] ಮಿಲಿಯಾವಧಿ ಜನರ [illegible] ಕೋಟ್ಯಾವಧಿ ಜನರ [illegible] ಅವರ ಪ್ರಭಾವವಿದ ಕಾಂಗ್ರೆಸಿನ ಎಡಬಲ ಪಕ್ಷಗಳೆರಡರ ಮೇಲೂ ಅವರಿಗೆ ಹಿಡಿತವಿದೆ ಒಂದು ವೇಳೆ ಲೀಗಿಗೆ [illegible] ಸವಲತ್ತುಗಳನ್ನು ಕೊಡಿಸಲು ಕಾಂಗ್ರೆಸ್ಸನ್ನು ಸಮಾಧಾನಿ[illegible] [illegible] ಮಹಾತ್ಮರ ಚಪ್ಪಲಿಕೆ ಅವಶ್ಯ

ಈ ಸಂದರ್ಭದಲ್ಲಿ ಕಾಂಗ್ರೆಸಿನ [illegible] ಮಹಾತ್ಮರ ಸಂಬಂಧವೇನು? ಒಂದು ಕಾಲದಲ್ಲಿ ಮಹಾತ್ಮರೆಂದರೆ ಕಾಂಗ್ರೆಸ್ ಕಾಂಗ್ರೆಸ್ಸೆಂದರೆ ಮಹಾತ್ಮಾ ಎಂಬಂತಿತ್ತು ಈ ಕೊಂಗ್ರೆಸಿನೊಳಗಿನ ಸಮತಾವಾದಿಗಳೂ ಬಲಿಷ್ಟರಾಗಿದ್ದಾರೆ ಅದಕ್ಕಾಗಿಯೇ ವ್ಯಾಸ್‌ರಾಯರು ಜಯ ಪ್ರಕಾಶ ನಾರಾಯಣರಿಗೆ ಆಮಂತ್ರಣವನ್ನು ಕಳುಹಿಸಿದ್ದಾರೆ

ಇನ್ನು ಜಿನ್ನರ ಕುರಿತು

ನಾನು ವಿವೇಕ್ಕೆಯಲ್ಲಿದ್ದೇನೆ ಎಂದು [illegible] ಜಿನ್ನರ ವ್ಯಾಸ್‌ರಾಯರಿಗೆ ತಿಳಿಸಿದುದರಲ್ಲಿ [illegible] ಜಿನ್ನರು ಮತಗಾಗಿರುವ[illegible] ಅರ್ಥವನ್ನು ಮಾಡಿಕೊಂಡಿದ್ದಾರೆ [illegible] ಹೇಳಿದಾಗ ಒಲ್ಲೆನೆ, ಪಾಕಿಸ್ತಾನ ಕೊಡಿ [illegible] ಇದರ ಅರ್ಥವಾಗುವುದಿಲ್ಲವೆ [illegible] ಪ್ರಶ್ನಿಸಿದವರೂ ಹಲವರಿದ್ದಾರೆ

ಮೌಂಟ್‌ಬೆಟನರಿಗೆ ಇಚ್ಚೆ ಕಂಡಂತೆ [illegible] ಅವಶ್ಯವಿದ್ದ ಧೋರಣೆಯನ್ನು [illegible] ಬ್ರಿಟಿಷ್ ಸರಕಾರದ ಸಂಪೂರ್ಣಾಧಿಕಾರ ದೊರಕುವುದೆಂದು ಹೇಳಲಾಗಿದೆ 'ಅತೀ ಹೆಚ್ಚು ಜನರ ಸೌಹಾರ್ದ' [illegible] ಅವರು ತಮ್ಮ ಉದ್ದೇಶವನ್ನ [illegible] ಕೊಂಗ್ರೆಸು ಭಾರತದ ಅತೀ ಹೆಚ್ಚು ಜನತೆಯ ಬೆಂಬಲವುಳ್ಳ ಸಂಸ್ಥೆ [illegible] ಮಾತ್ರಕ್ಕೆ ಅವರೊಡನೆ ಎಲ್ಲವನ್ನು ತೀರ್ಮಾನಿಸಬಾರದಿತ್ತೇ? ಹಿಂದೂ ಮುಸಲ್ಮಾನ್ ಜನತೆಯ ಅತೀ ಹೆಚ್ಚಿನ ಸೌಹಾರ್ದ'ವೆಂದು ಇದರ ಅರ್ಥ ಮಾಡಿಕೊಂಡರೆ ಜಿನ್ನರನ್ನು ಒಲಿಸಿಕೊಳ್ಳುವುದ[illegible] ಕಾರಣ ತಿಳಿಯುವುದು

ಈಗ ಲೀಗಿಗೆ ಅತೀ ಹೆಚ್ಚಿನ ಮುಸಲ್ಮಾನರ ಬೆಂಬಲವಿರುವುದಾದುದರಿಂದ ಮುಸ್ಲಿಮರು ಬಹುಸಂಖ್ಯೆಯುಲ್ಲಿರುವ ಪ್ರದೇಶಗಳನ್ನು ಲೀಗಿನ ವಶ ಬಿಟ್ಟು, ಉಳಿದವನ್ನು ಕೊಂಗ್ರೆಸಿನ ಕೈಗೆ ಕೊಡುವಂತಾದರೆ ಜಿನ್ನರ ಪಾಕಿಸ್ಥಾನ ಸ್ಥಾಪನೆಯಾಗುವುದು ಈ ಸಂದರ್ಭದಲ್ಲಿ ಮುಸ್ಲಿಂ ಬಹು ಸಂಖ್ಯಾಕ ಪ್ರಾಂತ್ಯಗಳಲ್ಲಿನ ಮುಸಲ್ಮಾನೇತರರನ್ನು ಸಮಾಧಾನ ಮಾಡುವ ದೊಡ್ಡ ಕೆಲಸ ಬೀಳುತ್ತದೆ ಹಿಂದೂ ಮುಸಲ್ಮಾನ್ ಐಕ್ಯಕ್ಕೆ ಶ್ರಮಿಸುವ ಮಹಾತ್ಮರು ಈ ಕೆಲಸವನ್ನೊಪ್ಪಿಕೊಳ್ಳುವಂತೆ ವಿನಂತಿಸಲ್ಪಡುವರೆ?

ಪಾಕಿಸ್ತಾನ ಭವಿಷ್ಯ

ಆದರೆ ಹಾಗೆಂದಿಗೂ ಸಾಧ್ಯವಿಲ್ಲ, ಜಾತೀಯ ಆಡಳಿತವನ್ನು ಮುಸಲ್ಮಾನೇತರರಾರೂ ಒಪ್ಪಲಿಕ್ಕಿಲ್ಲ, ಬಂಗಾಲದ ವಿಭಜನೆಗಾಗಿ ಅಲ್ಲಿನ ಹಿಂದುಗಳೂ, ಪಂಜಾಬದ ವಿಭಜನೆಗಾಗಿ ಅಲ್ಲಿನ ಸಿಖ್ಖ ಹಿಂದೂಗಳಿಬ್ಬರೂ

(3ನೇ ಪುಟಕ್ಕೆ ಮುಂದುವರಿದಿದೆ)

ಡಿಲ್ಲಿಯ ವಿಮಾನ ನಿಲ್ದಾಣದಲ್ಲಿ ಹೊಸ ವ್ಯಾಸರಾಯ್ ಮೌಂಟ್ ಬೆಟನರು ಲೀಗಿನ ಲಿಯಾಖತರೊಡನೆ ಕೈಕುಲುಕುವಾಗ ನೆಹರುಗಳು ನಗುತಾ ನೋಡುತಿರುವರು.

ಆದರ್ಶ ವಿದ್ಯಾಭ್ಯಾಸ

ಜ್ಞಾನಸಂಪಾದನೆ—ಜನಸೇವೆ

ಕೇಂದ್ರ ಸರಕಾರದ ಉಪಾಧ್ಯಕ್ಷ, ಮಾನ್ಯ ಶ್ರೀ ಪಂಡಿತ ಜವಾಹರಲಾಲ್ ನೆಹರು, ಇವರ ಭಾಷಣ

[ಭಾರತದ ಬಾಲ ಬಾಲಿಕೆಯರ ವಿದ್ಯಾಭ್ಯಾಸದ ಗುರಿಯು ಜ್ಞಾನಸಂಪಾದನೆಯೂ ಜನತೆಯ ಸೇವೆಯೂ ಆಗಿರಬೇಕು. ಹಳ್ಳಿಗಳ ದೇಶವಾದ ಭಾರತದ ಸೇವೆಯಲ್ಲಿ ಆಸಕ್ತಿಯುಳ್ಳವರಿಗೆ ಪಟ್ಟಣಗಳಲ್ಲೇ ನೆಲೆಸಲು ಸಾಧ್ಯವಿಲ್ಲ. ನಿಜವಾದ ಸೇವೆಯು ಹಳ್ಳಿಗಳಿಗೇ ಸಲ್ಲಬೇಕಾಗಿದೆ. ತಾಳ್ಮೆ, ಸಹಕಾರಗಳನ್ನು ಆಚರಣೆಗೆ ತರುವಂತೆ ನಮ್ಮ ತರುಣ ತರುಣಿಯರನ್ನು ತರಬೇತು ಮಾಡುವುದು ನಮ್ಮ ಶಾಲೆಗಳ ಕರ್ತವ್ಯವಾಗಿದೆ]

ಭಾರತವು ಇಂದು ದಿನದಿನಕ್ಕೂ ವ್ಯತ್ಯಾಸ ಹೊಂದುತ್ತಿದೆ. ಅತಿ ಬೇಗನೇ ಇದು ಸಂಪೂರ್ಣ ಸ್ವಾತಂತ್ರ್ಯವನ್ನು ಅನುಭವಿಸಲಿದೆ. ಆದರೆ ಯಾವ ರಾಷ್ಟ್ರವೂ ತಾನು ಪ್ರಚಾರಕ್ಕೆ ತರುತ್ತಿರುವ ನ್ಯಾಯ-ಶಾಸನಗಳಿಂದ ರಚಿಸಲ್ಪಡುವುದಿಲ್ಲ. ರಾಷ್ಟ್ರಕ್ಕಾಗಿ ದುಡಿಯುವ ಸ್ತ್ರೀಪುರುಷರಿಂದಲೇ ರಾಷ್ಟ್ರವು ನಿರ್ಮಾಣವಾಗುವುದು. ನಮ್ಮ ದೇಶದ ಸೇವೆಮಾಡುವ ಹಕ್ಕುಬಾಧ್ಯತೆಗಳು ಇಂದಿನ ವಿದ್ಯಾಮಂದಿರಗಳಲ್ಲಿ ಅಭ್ಯಾಸ ಮಾಡುತ್ತಿರುವ ತರುಣತರುಣಿಯರ ಹೆಗಲಮೇಲಿವೆ.

ಭಾರತವು ಪ್ರಗತಿಶೀಲವಾದ ದೊಡ್ಡ ರಾಷ್ಟ್ರವಾಗುವಾಗ ವಿಶೇಷ ಶಿಕ್ಷಣ ಹೊಂದಿದ ಕೆಲವೇ ಜನರ ಮೇಲೆ ಹೊಂದಿಕೊಂಡಿರಲು ಸರ್ವಥಾ ಸಾಧ್ಯವಿಲ್ಲ. ಜನಸಾಮಾನ್ಯರನ್ನೆಲ್ಲಾ ವಿದ್ಯಾವಂತರನ್ನಾಗಿ ಮಾಡಲು ಎಲ್ಲ ವಿಧದಿಂದಲೂ ಯತ್ನಿಸಬೇಕು. ದೇಶದ ಎಲ್ಲೆಡೆಗಳಲ್ಲೂ ಮೇಧಾವಿಗಳು ಇರುವರೆಂಬುದರಲ್ಲಿ ಸಂದೇಹವಿಲ್ಲ. ಅವರಿಗೆ ಸಾಕಷ್ಟು ಪ್ರೋತ್ಸಾಹ-ಸಂದರ್ಭಗಳು ಈಗ ದೊರೆಯುವುದಿಲ್ಲ. ಪ್ರತಿಯೊಬ್ಬ ವ್ಯಕ್ತಿಗೂ ತನ್ನ ಪ್ರತಿಭೆ-ಪಾಂಡಿತ್ಯಗಳನ್ನು ಬೆಳಕಿಗೆ ತರುವ ಸುಯೋಗವನ್ನು ಕಲ್ಪಿಸಿಕೊಡಲೇಬೇಕು. ಅಷ್ಟೇ ಅಲ್ಲದೆ ಸಮರ್ಥರಾದ ಕೆಲವರಿಗೆ ವಿಶೇಷ ಶಿಕ್ಷಣ-ತರಬೇತಿಗಳನ್ನೊದಗಿಸಿ ದೇಶದ ಸೇವೆಯಲ್ಲಿ ದಕ್ಷತೆಯಿಂದ ಭಾಗವಹಿಸುವಂತೆ ಮಾಡಬೇಕು.

ಭಾರತದಲ್ಲಿ ಕೇವಲ ಧನಸಂಗ್ರಹ ಮಾಡುವುದಕ್ಕೆ ಮನ್ನಣೆ ಇದ್ದಿಲ್ಲ. ಜ್ಞಾನಸಂಪಾದನೆಯೂ ಜನಸೇವೆಯೂ ಭಾರತದ ಆದರ್ಶ ಜೀವನವಾಗಿತ್ತು. ಇಂದು ನಮ್ಮ ದೌರ್ಭಾಗ್ಯದಿಂದಲೋ ಎಂಬಂತೆ ಶ್ರೀಮಂತರೂ, ದೊಡ್ಡ ದೊಡ್ಡ ಪದವೀಧರರೂ ತಮ್ಮಲ್ಲಿ ನಿಜವಾದ ವಿದ್ಯೆ-ಸಂಸ್ಕೃತಿ ಆದರ್ಶಗಳು ಇವುಗಳಿಲ್ಲದಿದ್ದರೂ, ಇತರರಿಗಿಂತ ತಾವೇ ಗಣನೀಯರೆಂದೂ ಒಳ್ಳೆಯವರೆಂದೂ ತಿಳಿದುಕೊಳ್ಳುತ್ತಾರೆ.

ನಿಜವಾದ ವಿದ್ಯಾಭ್ಯಾಸವು ಬಾಲಕ ಬಾಲಕಿಯರನ್ನು ತಮ್ಮ ಮುಂದಿನ ಸಮಾಜ ಜೀವನಕ್ಕೆ ಸರ್ವ ವಿಧದಿಂದಲೂ ಸಮರ್ಥರನ್ನಾಗಿ ಮಾಡಲು ತರಬೇತಿ ಮಾಡಬೇಕು. ಭಾರತವು ಅನೇಕ ಪಟ್ಟಣ-ಮಹಾ ನಗರಗಳಿಂದ ಕೂಡಿದ್ದರೂ ಕೇವಲ ಹಳ್ಳಿಗಳ ದೇಶವಾಗಿದೆ. ಆದುದರಿಂದ ದೇಶಸೇವೆ ಮಾಡಬೇಕೆಂದು ಬಯಸುವವರು ಹಳ್ಳಿಗಳಿಗೆ ಸಾಗಲೇಬೇಕು. ಸೇವೆಯನ್ನು ಆಶಿಸುತ್ತಿರುವವರೆಂದರೆ ಹಳ್ಳಿಗರು.

ತಾಳ್ಮೆ—ಸಹಕಾರ

ಶಾಲೆಗಳು ಒಂದಾಗಿ ವಾಸಮಾಡುವ ಹಾಗು ಒಂದಾಗಿ ದುಡಿಯುವ ಕಲೆಯನ್ನು ಕಲಿಸಬೇಕು. ಇದು ಇತರ ದೇಶಗಳಿಗಿಂತ ಭಾರತದಲ್ಲಿ ಇಂದು ಅತಿ ಪ್ರಾಮುಖ್ಯವಾದ ಕಾರ್ಯವಾಗಿದೆ. ಅನೇಕರು ನಮ್ಮ ದೇಶದಲ್ಲಿ ತಪ್ಪು ದಾರಿಯಲ್ಲೇ ಸಾಗುತ್ತಿರುವರು. ಬೇರೆ ಬೇರೆ ಪಂಗಡಗಳು ಒಂದಕ್ಕೊಂದು ವಿರೋಧವಾಗಿ ವರ್ತಿಸುವಂತೆ ಮಾಡುತ್ತಿದ್ದಾರೆ. ಭಾರತದಲ್ಲಿರುವ ಬಗೆ ಬಗೆಯ ಜಾತಿ-ಮತ-ಪಂಗಡಗಳು ಸಹಕಾರದಿಂದಲೂ ಪರಸ್ಪರ ಸಾದರ ಸಹಾನುಭೂತಿಗಳಿಂದಲೂ ಒಂದಾಗಿ ಜೀವಿಸಲು ತುಂಬ ಅವಕಾಶವಿದೆ. ಯಾವ ಮತಕ್ಕೇ ಸೇರಿರಲಿ—ನಾವು ಮಾನವರು; ಅದರಲ್ಲೂ ಭಾರತದಲ್ಲಿ ಹುಟ್ಟಿದವರು ಎಂಬುದನ್ನು ಮರೆಯದಿರುವುದು ನಮ್ಮೆಲ್ಲರ ಮೊತ್ತಮೊದಲನೆಯ ಕರ್ತವ್ಯವಾಗಿರಬೇಕು. ಭಾರತದ ರಕ್ಷಣೆ-ಪೋಷಣೆಗಳಲ್ಲಿ ನಾವೆಲ್ಲರೂ ಒಂದಾಗಿ ನಡೆಯುವುದು ನಮ್ಮಲ್ಲಿ ಪ್ರತಿಯೊಬ್ಬನಿಗೂ ಗೌರವವಾಗಿದೆ. ಬೇರೆ ಬೇರೆ ದೇಶಗಳಲ್ಲಿ ಕೇವಲ ಅಲ್ಪ ವಿಷಯಗಳಿಗಾಗಿ ಜನರು ಹೊಡೆದಾಡುತ್ತಿದ್ದಾಗ ಭಾರತವು ತನ್ನ ತಾಳ್ಮೆಯನ್ನು ತೋರಿಸಿ ಜಗತ್ಪ್ರಸಿದ್ಧವಾಗಿತ್ತು. ಇಂದು ಪುರಾತನಕಾಲದಿಂದಲೂ ಭಾರತದ ಸ್ವಭಾವವಾಗಿರುವ ಅಂತಹ ಸಹನೆಯನ್ನು ಮರೆತು ನಡೆಯುವ ನೂರಾರು ಮಂದಿ ಅವಿವೇಕಿಗಳು ನಮ್ಮ ದೇಶದಲ್ಲಿ ಅನೇಕರಿರುವರು. ಇದರಿಂದ ನಮ್ಮ ದೇಶದ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಸಹಕಾರ ಸಹನೆಗಳಲ್ಲಿ ಚೆನ್ನಾಗಿ ತರಬೇತಿ ಮಾಡುವುದು ಎಲ್ಲಾ ಶಾಲೆಗಳ ಮುಖ್ಯ ಕರ್ತವ್ಯವಾಗಿದೆ.

ಇಂದು ಶರೀರ ಪರಿಶ್ರಮವು ತನ್ನ ಗೌರವಕ್ಕೆ ಕಡಮೆಯಾದ ಕೇವಲ ಕೆಳತರಗತಿಯ ಕೆಲಸವೆಂದು ತಿಳಕೊಳ್ಳುವುದು ಆಶ್ಚರ್ಯಕರವಾಗಿದೆ. ಕೆಲಸವೇ ಮಾನವನಿಗೆ ನಿಜವಾದ ಗೌರವವನ್ನು ತರುವುದು. ತಾವು ದುಡಿಯದೆ ಇತರರ ದೈಹಿಕ ಅಥವಾ ಮಾನಸಿಕ ಪರಿಶ್ರಮಗಳ ಮೇಲೆ ಹೊಂದಿಕೊಂಡಿರುವುದರಿಂದ ಯಾರಿಗೂ ಪ್ರಯೋಜನವಿಲ್ಲ. ದೈಹಿಕ ಪರಿಶ್ರಮದಿಂದ ಜೀವನ ಮಾಡುವುದು ಕೀಳೆಂಬ ಭಾವನೆಯು ಎಲ್ಲೆಲ್ಲೂ ಹಬ್ಬಿಕೊಂಡಿದೆ. ಇದರಿಂದ ಸಮಾಜದಲ್ಲಿ ಕೆಲಸಗಾರರಿಗೆ ತಕ್ಕ ಸ್ಥಾನವಿಲ್ಲ. ಯಾರು ಇತರರ ಕೆಲಸದ ಮೇಲೆ ಆಧರಿಸಿಕೊಂಡು ಜೀವನ ಸಾಗಿಸುತ್ತಿರುವರೋ ಅಂತಹವರಿಗೆ ಸಮಾಜದಲ್ಲಿ ಹೆಚ್ಚಿನ ಸ್ಥಾನಮಾನಗಳು ಸಲ್ಲುತ್ತಿವೆ. ಇದರಿಂದ ನಿಜವಾಗಿ ಯಾರಿಗೆ ಮನ್ನಣೆ ಸಲ್ಲತಕ್ಕುದೋ ಅವರಿಗೆ ಮರ್ಯಾದೆಯೇ ಇಲ್ಲವೆಂದಾಯಿತು. ಆದುದರಿಂದ ಇಂತಹ ಪದ್ಧತಿಯನ್ನು ವ್ಯತ್ಯಾಸಗೊಳಿಸಲೇಬೇಕು.

ಹಿಂದುಸ್ಥಾನಿ - ಇಂಗ್ಲಿಷ್

ಭಾರತದ ಎಲ್ಲಾ ಕಾರ್ಯಕಲಾಪಗಳೂ ದೇಶ ಭಾಷೆಯಲ್ಲೇ ನಡೆಸಲ್ಪಡುವ ಆವಶ್ಯಕತೆ ಬರಬಹುದು. ಶಾಲೆಗಳಲ್ಲೆಲ್ಲಾ ಉರ್ದು ಅಥವಾ ಹಿಂದೀ ರೂಪದಲ್ಲಿರುವ ಹಿಂದುಸ್ಥಾನಿ ಭಾಷೆಯೇ ಹೆಚ್ಚಿನ ಸ್ಥಾನವನ್ನು ಪಡೆಯಲಿದೆ. ಆದರೂ ಇಂಗ್ಲಿಷ್ ಭಾಷೆಯು ನಮ್ಮ ದೇಶದಲ್ಲಿ ಎರಡನೆಯ ಸ್ಥಾನವನ್ನು ವಹಿಸಿ ಬದುಕಬೇಕಾಗಿದೆ. ಏಕೆಂದರೆ ಇಂಗ್ಲಿಷ್ ಎಷ್ಟೋ ವರ್ಷಗಳಿಂದ ನಮ್ಮ ದೇಶದಲ್ಲಿ ಪ್ರಚಾರದಲ್ಲಿದ್ದುದಲ್ಲದೆ ಅದು ಇಂದು ಪ್ರಪಂಚದಲ್ಲೆಲ್ಲಾ ಹಬ್ಬಿಕೊಂಡಿರುವ ಅಂತರರಾಷ್ಟ್ರೀಯ ಭಾಷೆಯೂ ಆಗಿದೆ. ಆದರೆ ನಮ್ಮ ಶಾಲೆಗಳಲ್ಲಿ ಹಿಂದುಸ್ಥಾನಿಯನ್ನು ಕಲಿಸುವಂತೆ ಇಂಗ್ಲಿಷನ್ನು ಕಲಿಸಲು ಸಾಧ್ಯವಾಗದು.

ನಾವು ಅತಿ ಕಠಿಣ ಹಾಗೂ ತೊಂದರೆಗಳಿಂದ ತುಂಬಿದ ಕಾಲದಲ್ಲಿದ್ದೇವೆ. ಆದರೆ ಅನೇಕ ಸಾಹಸ ಕೃತ್ಯಗಳನ್ನೂ ಕೈಗೊಳ್ಳಬೇಕಾಗಿದೆ. ಈ ಮಹಾ ಸಾಹಸಗಳಿಗಾಗಿ ಸಿದ್ಧರಾಗಿರುವುದು ನಮ್ಮ ಶಾಲೆ ಹಾಗೂ ಕಲಾಶಾಲೆಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರ ಹಕ್ಕುಬಾಧ್ಯತೆಗಳಾಗಿವೆ. ಈ ಸಾಹಸ ಕಾರ್ಯಗಳಿಂದ ಒದಗುವ ಕಷ್ಟಗಳನ್ನು ನಿಷ್ಕಲಂಕವಾದ ಬುದ್ಧಿಯಿಂದಲೂ ಧೈರ್ಯಸ್ಥೈರ್ಯಗಳಿಂದಲೂ ಎದುರಿಸಲು ಸರ್ವಥಾ ಬದ್ಧಕಂಕಣರಾಗಿರುವುದೂ ಅವರ ಮುಖ್ಯ ಕರ್ತವ್ಯವಾಗಿದೆ.

ಚಿತ್ತಶುದ್ಧಿಯನ್ನು ಮಾಡದ, ಮನಸ್ಸು ಇಂದ್ರಿಯಗಳನ್ನು ವಶದಲ್ಲಿಟ್ಟುಕೊಳ್ಳಲು ಕಲಿಸದ, ಧೈರ್ಯ ಸ್ವಾವಲಂಬನೆಯನ್ನು ಹುಟ್ಟಿಸದ, ಉಪಜೀವನದ ಮಾರ್ಗಗಳನ್ನು ತೋರಿಸದ, ಪಾರತಂತ್ರ್ಯದಿಂದ ಬಿಡುಗಡೆ ಹಾಗೂ ಸ್ವತಂತ್ರವಾಗಿರಲು ಧೈರ್ಯ-ಸ್ಥೈರ್ಯ-ಸಾಹಸಗಳನ್ನು ಹುಟ್ಟಿಸದ ಶಿಕ್ಷಣದಲ್ಲಿ ಜ್ಞಾನದ ಬೊಕ್ಕಸವೂ ತಾರ್ಕಿಕ ಕೌಶಲ್ಯವೂ ಭಾಷಾಪಾಂಡಿತ್ಯವೂ ಎಷ್ಟೇ ಇದ್ದರೂ ಅದು ಪೂರ್ಣ ಶಿಕ್ಷಣವೆನಿಸುವುದಿಲ್ಲ. — ಮ. ಗಾಂಧಿ.

ವಾರಾಂತ್ಯ ವರದಿ ವಿಮರ್ಶೆ

(೧ನೇ ಪುಟದಿಂದ)

ಚಳವಳ ಮಾಡಲಿರುವರು. ಇವರ ಯೋಜನೆಯಂತೆ ಮಾಡಿದರೆ ಪಾಕಿಸ್ಥಾನ ತೆಳ್ಳಗಿನ ಪದರಾಗುವುದು.

ಗಡಿನಾಡು ಬಹುಮಟ್ಟಿಗೆ ರಾಷ್ಟ್ರೀಯವಾದಿ ಪ್ರಾಂತ್ಯ. ಸಿಂಧವು ಸ್ವತಂತ್ರವಾಗುವುದೆಂದು ಅಲ್ಲಿನ ಶಾಸನ ಸಭಾ ಪಕ್ಷದ ಲೀಗ್ ಸದಸ್ಯರು ನಿರ್ಣಯಿಸಿರುವರು. ಇತ್ತ ಬಂಗಾಳದಲ್ಲಾದರೊ ಜಾತೀಯ ಸರಕಾರಕ್ಕಿಂತ ಎಲ್ಲಾ ಪಕ್ಷಗಳ ಸಂಯುಕ್ತ ಸರಕಾರವೇ ಉತ್ತಮವೆಂದು ಸ್ವತಃ ಸುಹ್ರವರ್ದಿಯವರೇ ಘೋಷಿಸಿದ್ದಾರೆ. ಈ ಪರಸ್ಪರ ವಿರೋಧ ಮತಗಳ ಪರಿಸ್ಥಿತಿಯಲ್ಲಿ ಜಿನ್ನರ ಕನಸ್ಸಿನ ಪಾಕಿಸ್ಥಾನವೆಲ್ಲಿ ಉಳಿಯುವುದು?

ನ್ಯೂಯೋರ್ಕಿನ ಒರ್ವ ಸಿಟಿಬಸ್ ಡ್ರೈವರನು ಒಂದು ವಸಂತ ಕಾಲದಲ್ಲಿ ಸೃಷ್ಟಿ ಸೌಂದರ್ಯವನ್ನು ನೋಡಬೇಕೆಂಬ ಆಸಕ್ತಿಯಿಂದ ಪ್ರೇರಿತನಾದ. ತನ್ನ ಬಸ್ಸನ್ನು ದಿನ ನಿತ್ಯದ ಮಾರ್ಗಬಿಟ್ಟು ನೇರವಾಗಿ ಹಳ್ಳಿಗಾಡಿನ ಮಾರ್ಗಕ್ಕೆ ತಿರುಗಿಸಿದ. ಮೂರು ದಿನಗಳ ವರೆಗೆ ಪೋಲಿಸರಿಗೆ ಅವನ ಪತ್ತೆ ಸಿಗಲಿಲ್ಲ. ಅವನ ಪೆಟ್ರೋಲ್ ಮುಗಿದಾಗ 1400 ಮೈಲು ದೂರದ ಹೊಲಿವುಡ್ಡಿಗೆ ಅವನು ಮುಟ್ಟಿದ್ದ. ಅಲ್ಲಿಂದ ಕಂಪೆನಿಗೆ ಅವನ ಕಾಗದ: "ವಾಪಾಸು ಬರಲು ಪೆಟ್ರೋಲ್ ಖರ್ಚು ಕಳುಹಿಸಿರಿ. ನನಗೆ ನ್ಯೂಯೋರ್ಕ್ ನಗರದಿಂದ ಬೇಸರವಾಗಿತ್ತು."

KANARA COMMERCIAL BANK LTD.

PUTTUR

H. O. Puttur.] Estd. 1920 [Branch: Vittal.

All kinds of Banking Business transacted.

Deposits: Current, Savings, Cumulative Deposits are accepted.

Fixed Deposits for periods of 3 months and above up to 24 months are accepted.

SEASON DEPOSITS

ARE Accepted up to 31-5-1947 Terms on application.

ಇದು ಮಗುವಿನ ಚರ್ಮವನ್ನು ತಂಪಾಗಿಯೂ, ಮೃದುವಾಗಿಯೂ, ಇಡುವುದು.

ಮಕ್ಕಳಿಗೆ ಕುಟಿಕೂರ ಟಾಲ್ಕಮ್ ಪೌಡರನ್ನೇ ಉಪಯೋಗಿಸಿರಿ. ಅಷ್ಟು ಸುಖಕರ— ಅಷ್ಟು ಚರ್ಮ ಮೃದುಕರ—

ಕುಟಿಕೂರ ಟಾಲ್ಕಮ್ ಪೌಡರ್

CUTICURA TALCUM POWDER

ದ್ವೇಷದಾವಾಗ್ನಿಯ ಭೀಕರ ಪರಿಣಾಮ

ಜಾತೀಯ ಆಳ್ವಿಕೆ ಸ್ಥಾಪಿಸುವ ಹುಚ್ಚು ಕನಸು

ಲೀಗ್ ದುರೀಣರು ಕಳಕೊಂಡ ಸಂದರ್ಭ

ಪಂಜಾಬದ ದುರಂತಮಯ ಘಟನೆಗಳನ್ನು ಪ್ರತ್ಯಕ್ಷ ಕಂಡು ಬಂದ ಅಮದ್ ಅಬ್ಬಾಸರು ಆ ಕುರಿತು ತಮ್ಮ ವರದಿಯೊಂದನ್ನು ಈ ಕೆಳಗಿನಂತೆ ಬರೆದಿದ್ದಾರೆ:

ಕೆಲವು ವಾರಗಳ ಹಿಂದೆ ನಾನೊಂದು ಸಲ ಲಾಹೋರಿಗೆ ಹೋದಾಗ ಅಲ್ಲಿನ ರಾಜರಸ್ತೆಗಳಲ್ಲಿ ಲೀಗ್ ಮೆರವಣಿಗೆಗಳು ಮೆರೆಯುತಿದ್ದು, ಕಿಜೀರ್ ಹಯಾತ್ ಖಾನರ ಆಡಳಿತವನ್ನು ಮುರಿದು ಹಾಕುವ ಉದ್ದೇಶದ ಈ ಪ್ರದರ್ಶನಗಳು ಸಂಪೂರ್ಣ ಗಾಂಧಿ ಮಾದರಿಯ ಅಹಿಂಸಾತ್ಮಕ ರೀತಿಯಲ್ಲಿ ಜರಗುತಿದ್ದವು. ಆದರೆ ಲೀಗ್ ಅನುಯಾಯಿಗಳು ಕಿಜೀರರ ಮತ್ತವರ ಸಹಮಂತ್ರಿಗಳ ವಿರುದ್ಧ ಉಪಯೋಗಿಸಿದ ಬೈಯುವ ಘೋಷಗಳ ಭಾಷೆ ಅತ್ಯಂತ ಕೊಳಕಿನದಾಗಿದ್ದವು

ಒಂದು ತಿಂಗಳ ತನಕ ಅನಂತ್ಯವಾಗಿ ಈ ಪ್ರದರ್ಶನಗಳು ಜರಗಿದುವು ಪರದಾ ಸ್ತ್ರೀಯರೂ, ಎಳೆ ಮಕ್ಕಳ- ವಿದ್ಯಾರ್ಥಿ ವಿದ್ಯಾರ್ಥಿನಿಯರೂ ಇದರಲ್ಲಿ ಭಾಗ ವಹಿಸಿದರು ಕಿಜೀರರ ಚಿತ್ರಪಟಗಳನ್ನು ಹೊತ್ತು ಅದರಲ್ಲಿ ಉಗುಳುವುದು ಲೀಗಿನವರು ನಡೆಸಿದ ಇನ್ನೊಂದು ಹೇಯ ವರ್ತನೆ ಪಾಕಿಸ್ತಾನವನ್ನು ಖಡ್ಗದಿಂದ ಜಯಿಸುವೆವು, ಮುಸಲ್ಮಾನೇತರರ ಮೇಲೆ ಧರ್ಮಯುದ್ಧ ಮಾಡೋಣ ಮುಸ್ಲಿಮ್ ಆಳ್ವಿಕೆ ಸ್ಥಾಪಿಸೋಣ' ಎಂಬುದೇ ಅವರ ಪ್ರಿಯ ಘೋಷಗಳಾಗಿದ್ದವು

ಕಾರಣ ಇಲ್ಲೇ ಇದೆ

ಮಾರ್ಚ್ 24ರ ಸುಮಾರಿಗೆ ಸ್ವಲ್ಪ ಕಾಲಕ್ಕೆ ಕಾಣುವ ಜಗಳಗಳ ಒಂದು ಉದ್ದೇಶದ ಒಂದು ಯುದ್ಧವು ಸಂಭವಿಸಿದಂತಿತು ಪಂಜಾಬಿನಲ್ಲಿ ನಡೆದುದು ಸರ್ವಸಾಮಾನ್ಯವಾದ ಜಾತೀಯ ದೊಂಬಿ ಅದು ಮಧ್ಯಕಾಲದ ಮತಾಂಧತೆ ಜನಗುಂಪಿನ ರಾಜ್ಯ ಮತ್ತು ಪುಂಡಾಟಿಕೆಯ ಒಟ್ಟು ಮಿಶ್ರಣ ಇದರ ಅತ್ಯಂತ ಭೀಕರ ಪರಿಣಾಮವೆಂದರೆ ಹಳ್ಳಿಹಳ್ಳಿಗಳನ್ನೇ ನಾಶ ಮಾಡಿದ್ದಲ್ಲ ಮಕ್ಕಳು ಮರಿಗಳನ್ನು ಕೊಂದದ್ದಲ್ಲ ಹೆಂಗಸರ ಮೇಲೆ ನಡೆಸಿದ ಅನಾಚಾರವಲ್ಲ, ಇಲ್ಲವೆ ಮತಾಂತರಗೊಳಿಸಿದ ಅಕೃತ್ಯವಲ್ಲ, ಇದರಿಂದ ಜನತೆಯ ಹೃದಯಕ್ಕುಂಟಾದ ಧಕ್ಕೆಯು ಅತೀ ಶೋಚನೀಯವಾದ ಸಂಗತಿ

ಪಂಜಾಬದಲ್ಲಿ ನಡೆದದ್ದು ಪಕ್ಷನೀತಿಗಿದ ಜನಕೂಟದ ಹಿಂಸೆ ಅನಾಚಾರವಲ್ಲ ಉದ್ದೇಶಪೂರ್ವಕವಾಗಿ ಸೈನ್ಯ ಪರಿಪೂರ್ಣತೆಯಿಂದ ನಿರ್ವಹಿಸಿದ ಕೊಲೆಪಾತವದು ಮತಾಂಧತೆಯ ತತ್ವಗಳಾದ ದ್ವೇಷ ಹಿಂಸೆಗಳನ್ನು ಮೇಲಿಂದ ಮೇಲೆ ನಿರಕ್ಷರಕುಕ್ಷಿ ಜನತೆಯ ಕಿವಿಯೊಳಗೆ ಹಿಂಡಿದುದರ ಘೋರ ಪರಿಣಾಮವಿದು. ಅದರಲ್ಲೂ ಲೀಗಿನವರ ಶಿಪಾಯಿಗಿರಿಯ ಮಾತುಗಳಂತೂ ಅತೀ ಹೆಚ್ಚಿನ ಕೋಪಾಗ್ನಿಯನ್ನು ಕೆರಳಿಸುವಂತಹವುಗಳಾಗಿದ್ದುವು ಅಂದ ಮಾತ್ರಕ್ಕೆ ಹಿಂದೂ ಮತ್ತು ಸಿಖ್ಖರ ಮತೋನ್ಮತ್ತತೆಯು ತುಸು ಕಡಿಮೆಯಿತ್ತೆಂದು ತಿಳಿಯಬಾರದು ತ್ರಿಸೂತ್ರದವರೂ ಈ ವಿಷಯದಲ್ಲಿ ಸಮಾನ ತೀಕ್ಷ್ಣತೆಯನ್ನು ಪ್ರದರ್ಶಿಸಿದ್ದಾರೆ ಅವರು ಜಾತೀಯ ಕಲಹದ ಬೀಜವನ್ನು ಬಿತ್ತಿದರು ಮುಸ್ಲಿಂ ಆಡಳಿತ, ಬಲಾತ್ಕಾರ, ಹಿಂಸೆ, ಕಡು ದ್ವೇಷ ಮನಸ್ಸ್ಥಿತಿಗಳನ್ನು ಬಿತ್ತು, ಅದರ ಕಹಿಯಾದ ಫಲವಿಂದು ಹಣ್ಣಾಗಿದೆ

ರಾಜಕೀಯದಲ್ಲಿ ನಾವು ಮಾಡುವ ಕೆಲಸಕ್ಕಿಂತಲೂ ನಾವು ಹೇಳುವ ರೀತಿ ಮತ್ತು ಹೇಳುವ ವಿಷಯಗಳು ಹೆಚ್ಚು ಮಹತ್ವದವು ಲೀಗಿನವರ ಮೆರವಣಿಗೆ ಪ್ರದರ್ಶನಗಳಿಂದ ಅಲ್ಲಿನ ಮುಸಲ್ಮಾನೇತರರ ಮೇಲೆ ಯಾವ ಪರಿಣಾಮವಾಗಲಿಲ್ಲ ಆದರೆ ಲೀಗ್ ಅನುಯಾಯಿಗಳುಪಯೋಗಿಸಿದ ದ್ವೇಷ, ಮತ್ಸರದ ಮತ್ತು ಹೇಯ ಶೈಲಿಯ ಮಾತುಗಳಿಂದ ಹಿಂದೂ, ಸಿಕ್ಖರು ಉಚ್ಚಮಳಗೊಂಡರು

ಪರಿಣಾಮವಾಗಿ ಲಾಹೋರಿನ ವಾತಾವರಣವೆಲ್ಲ ಹಿಂಸಾಮಯವಾಯಿತು. ಇಷ್ಟೊಂದು ದಟ್ಟವಾದ ಹಿಂಸಾತ್ಮಕ ಪರಿಸ್ಥಿತಿಯನ್ನು ನಾನು ನನ್ನ ಜೀವಮಾನದಲ್ಲೆಲ್ಲೂ ನೋಡಲಿಲ್ಲ ಜನರು ಗುಂಪುಗುಂಪಾಗಿ ಕತ್ತಿ ದೊಣ್ಣೆ, ಕಿರ್ಪಾಣಗಳನ್ನೂ, ಬಂದೂಕು, ಬಿದಿರು ಕೋಲುಗಳನ್ನೂ ಹಿಡಿದು ಬಹಿರಂಗವಾಗಿ ಅಡ್ಡಾಡುತಿದ್ದಾರೆ ಪ್ರತಿ ಮನೆಯಲ್ಲಂಬಂತೆ ಬಿಸಿಡನ್ನು ಮಣ್ಣಿನ ಕೊಡಗಳಲ್ಲಿ ತುಂಬಿಟ್ಟುಕೊಂಡಿದ್ದಾರೆ ರಕ್ತದ ಪ್ರವಾಹದ ಒಂದು ಭಯಂಕರ ಶೋಚನೀಯ ನಾಟಕದ ಪೂರ್ವಪೀಠಿಕೆಯೆಂದು ಭಾಸವಾಗುತಿತ್ತು

ದ್ವೇಷದ ಸುಗ್ಗಿ

ಲಾಹೋರಿನಲ್ಲಿ ಹಿಂದೂ, ಸಿಖ್ಖರು ವಿರೋಧ ಪ್ರದರ್ಶನಕ್ಕೆ ಪ್ರಾರಂಭಿಸಿದುದಕ್ಕೆ ಪಟಿಯಾಲರು ಮತ್ತವರ ಲೀಗ್ ದುರೀಣರೇ ಕಾರಣವೆನ್ನಬಹುದು

ಮಾರ್ಚ್ 13ರಂದು ಹಿಂದೂ ಮತ್ತು ಸಿಖ್ ವಿದ್ಯಾರ್ಥಿಗಳ ಮೆರವಣಿಗೆಯೊಂದು ಪೋಲಿಸ್ ಫೌಜಿನೊಡನೆ ಘರ್ಷಿಸಿದ ವರ್ತಮಾನ ಹರಡಿತು. ಲಾಠಿ ಚಾರ್ಜು ಮತ್ತು ಗುಂಡು ಹಾರಿಸಿದ್ದಕ್ಕೆ ಹಿಂಬಾಲಿಸಿದುವು ಎಷ್ಟು ಮಾತ್ರಕ್ಕೂ ಅಹಿಂಸಾತ್ಮಕರಲ್ಲದ ವಿದ್ಯಾರ್ಥಿಗಳು ಹೊಕ್ಕಿ ಜೋಟಿನಿಂದ ಪೋಲಿಸರನ್ನು ಘಾಯಗೊಳಿಸಿ ಒರ್ವ ಪೋಲಿಸ್ ಅಧಿಕಾರಿಯನ್ನು ಕೊಂದರು

ಸ್ಫೋಟಕ್ಕೆ ಸಿದ್ಧವಾದ ವಾತಾವರಣದಲ್ಲಿ ಇದು ಗಂಭೀರವಾದ ಕಿಡಿ ಆದರೆ ಮುಸ್ಲಿಮರು ತಮ್ಮ ಚಳವಳವನ್ನು ಕಿಜೀರರ ವಿರುದ್ಧ ಮಾತ್ರ ಹೂಡಿದಂತೆ ಹಿಂದೂ ಸಿಖ್ಖರು ತಮ್ಮ ಚಳವಳವನ್ನು ಗವರ್ನರರ 93 ಸೆಕ್ಷನಿನ ಆಡಳಿತದ ವಿರುದ್ಧ ಮಾತ್ರ ಹೂಡುವರೆಂಬ ಹಾರೈಕೆಯು ಇನ್ನೂ ಇತ್ತು ಆದರೆ ಮತ್ತೆ ಸ್ವಲ್ಪ ಸಮಯದಲ್ಲಿ ನಿಜಸ್ಥಿತಿಯು ಪ್ರಕಾಶಕ್ಕೆ ಬಂತು ಮುಸ್ಲಿಮರು ಪಾಕಿಸ್ತಾನದ ಸ್ಥಾಪನೆ ಇಚ್ಛಿಸುತ್ತಿರುವುದರಿಂದ ಅದನ್ನು ಅವಶ್ಯವಿದ್ದರೆ ರಕ್ತವನ್ನಾದರೂ ಸುರಿಸಿ ಎದುರಿಸುವರೆಂಬ ಹಿಂದೂ ಸಿಖ್ಖರ ನಿರ್ಧಾರವು ಬಹಿರಂಗವಾಗಿ ಸಾರಲ್ಪಟ್ಟಿತು ಕಿಜೀರರನ್ನುರುಳಿಸಿದ ಲೀಗಿನವರ ಚಳವಳ ಅವರ ಮೇಲೆ ಮರಳಿ ಬೀಳುವಂತಾಯಿತು

ಪಂಜಾಬಿನ ಜನರು ತಮ್ಮ ಸೈನಿಕ ಪ್ರವೃತ್ತಿಯನ್ನು ಮತೀಯ ದ್ವೇಷ ಸಾಧನೆಯ ರಥ ಚಲನೆಗೆ ಹೊಂದಿಸಿದರು ಕರುಣೆ ದಯೆ, ದಾಕ್ಷಿಣ್ಯ, ನೆರೆಕರೆಯವನ ಮೇಲಿನ ಪ್ರೀತಿ, ಸದ್ವರ್ತನೆ ಮೊದಲಾದ ಎಲ್ಲಾ ಧರ್ಮಗಳೂ ಬೋಧಿಸುವ ತತ್ವಗಳನ್ನೂ ಮತಪಿತ್ತವೇರಿದ ಜನರು ಕಾಲಡಿಯಲ್ಲಿ ಹಾಕಿ ತುಳಿದರು.

ಈ ನರಮೇಧದ ನಡುವಿನಲ್ಲಿ ಕೆಲವು ಮುಸಲ್ಮಾನರು (ಇವರೇ ನಿಜವಾದ ಮುಸಲ್ಮಾನರು!) ಜೀವದ ಹಂಗುತೊರೆದು ತಮ್ಮ ಹಿಂದೂ ನೆರೆಕರೆಯವರನ್ನು ರಕ್ಷಿಸಿದ ಸಂಗತಿ ತಿಳಿದುಬಂದಿದೆ. ಅದೇ ರೀತಿ ಕೆಲವು ಉದಾತ್ತ ಹಿಂದೂ ಸಿಖ್ಖರು ತಮ್ಮ ನೆರೆಯ ಮುಸ್ಲಿಮರಿಗೆ ರಕ್ಷಣೆ ಕೊಟ್ಟಿದ್ದಾರೆ. ಇವರೂ ನಿಜವಾದ ಹಿಂದೂ ಮತ್ತು ಸಿಖ್ಖರೆನ್ನಬೇಕು.

ಲೀಗಿನ ಹೊಣೆ

ಮುಸಲ್ಮಾನರು ಅತೀ ಹೆಚ್ಚು ಸಂಖ್ಯೆಯಲ್ಲಿರುವಲ್ಲಿ ಅತೀ ಹೆಚ್ಚಿನ ಲೂಟಿ, ಕೊಲೆ, ಸುಡುವಿಕೆಗಳು ಜರಗಿದುವು ಬಿಹಾರದ ಹಿಂದೂಗಳು ಅಲ್ಲಿನ ಮುಸಲ್ಮಾನರನ್ನು ಪೀಡಿಸಿದ ಹೊಣೆಗೆ ಬಾಧ್ಯಸ್ಥರಾಗುವಂತೆ ಪಂಜಾಬದ ಮುಸಲ್ಮಾನರು ಅಲ್ಲಿನ ಅಲ್ಪಸಂಖ್ಯಾಕರ ಗೋಳಿನ ಹೊಣೆ ಹೊರಬೇಕು

ಈ ಅನಾಚಾರಗಳಿಗೆ ಲೀಗು ಮತ್ತದರ ಮುಖಂಡರು ಎಷ್ಟರಮಟ್ಟಿಗೆ ಹೊಣೆಗಾರರು? ಅವರನ್ನು ವಿಚಾರಿಸಿದರೆ 'ಹಿಂದೂಗಳ ಮುಖ್ಯವಾಗಿ ಕೊಂಗ್ರೆಸಿನ ಮುಸ್ಲಿಂ ವಿರೋಧಿ ಮನೋಭಾವವೇ ಇದಕ್ಕೆ ಕಾರಣ'ವೆಂದು ಅವರು ಹೇಳುವರು

ನನ್ನ ಸ್ವಂತ ಪರಿಶೀಲನೆಯಿಂದ ನೋಡಿದಾಗ ಅನೇಕ ಕಡೆಗಳಲ್ಲಿ ಲೀಗ್ ಮುಖಂಡರು ಈ ಗಲಭೆಗಳಲ್ಲಿ ಪ್ರತ್ಯಕ್ಷ ಭಾಗವಹಿಸಿದ್ದು ತಿಳಿದುಬಂದಿದೆ ಆದರೆ ಲೀಗಿನ ಮೇಲ್ಮುಖಂಡರಿಗೆ ನಿಜವಾಗಿ ಇದರಲ್ಲಿ ಕೈಯಿಲ್ಲವೆನ್ನಬಹುದು. ಆದರೆ ಅವರು ತಮ್ಮ ಭಾಷಣಗಳಿಂದ ಜಾತೀಯ ದ್ವೇಷವನ್ನು ಹೆಚ್ಚಿಸಲು ಕಾರಣವಾಗುತ್ತದೆಂಬ ಸಂಗತಿಯನ್ನು ಅವರು ಲಕ್ಷ್ಯಮಾಡದ್ದು ದೊಡ್ಡ ತಪ್ಪು ಪಾಕಿಸ್ತಾನ ಬೊಬ್ಬೆ ಪಾಕಿಸ್ತಾನ ವಿರೋಧ ಪ್ರತಿಧ್ವನಿಯನ್ನು ಮಾಡಿತು 'ಕತ್ತಿಯಿಂದ ಪಾಕಿಸ್ತಾನ', 'ನಂಬಿಗಸ್ತರಲ್ಲದವರ ಮೇಲೆ ಯುದ್ಧ' ಎಂಬ 'ಪವಿತ್ರ ಸಂಗ್ರಾಮ'ದ ಕೂಗುಗಳು ಪಂಜಾಬದ ಅಲ್ಪಸಂಖ್ಯಾಕರಾದ ಹಿಂದೂ ಮತ್ತು ಸಿಖ್ಖರಲ್ಲಿ ದ್ವೇಷಾಗ್ನಿ ಕೆರಳಿಸುದುದು ಸಹಜವೇ ಆಗಿದೆ. ಪಾಕಿಸ್ತಾನ ಪಡೆಯಬೇಕೆಂಬಿಚ್ಛೆಯುಳ್ಳವರು ಅಹಿಂಸಾತ್ಮಕ ರೀತಿಯಲ್ಲೂ ರಚನಾತ್ಮಕವಾಗಿಯೂ ತಮ್ಮ ಚಳವಳ ನಡೆಯುವಂತೆ ನೋಡಬೇಕಾದುದು ಅತ್ಯಾವಶ್ಯಕವಿತ್ತು

ಮೌನ ಜಂಝಾಟ

ರಷ್ಯವು ಅಮೇರಿಕನ್ನರ ಡೊಲರ್ ಸಾಮ್ರಾಜ್ಯಶಾಹಿತ್ವವನ್ನು ಖಂಡಿಸುತ್ತಿರುವಾಗ ಅಧ್ಯಕ್ಷ ಟ್ರುಮನ್ನರು ಗ್ರೀಸ್ ತುರ್ಕಿಗಳಲ್ಲಿನ ಈಗ ರಷ್ಯದ ಪ್ರಭಾವ ತಡೆಯುವ ಹಂಚಿಕೆ ಸಾರಿದ್ದಾರೆ ಮೊಸ್ಕೊದಲ್ಲಿನ ಅಮೇರಿಕನ್ ರಾಯಭಾರಿ ಮಿ। ಅರ್ಥರ್ ಲೇನ್ ಅವರು 'ಪೋಲೆಂಡಿನ ಪ್ರಸ್ತುತದ ದುರಂತದ ಕುರಿತು ಬಹಿರಂಗವಾಗಿ ಲೇಖನ ಬರೆಯುವ ಸ್ವಾತಂತ್ರ್ಯಕ್ಕಾಗಿ' ರಾಜಿನಾಮೆಯಿತ್ತಿದ್ದಾರೆ

— ಪೋಲೆಂಡಿನಲ್ಲಿ ಕಳೆದ ಜನವರಿಯಲ್ಲಿ ನಡೆದ ಚುನಾವಣೆಗಳು ಸ್ವತಂತ್ರವಾಗಿ ಯಾರ ಕೈ ಚಳಕವಿಲ್ಲದೆ ಜರಗಬೇಕೆಂದು ಜನಾಂಗ ಸಂಘದವರು ಇತ್ಯರ್ಥಿಸಿದರು. ಆದರೆ ಅದು ಹಾಗೆ ನಡೆಯಲಿಲ್ಲ ರಷ್ಯವು ಒಳಗೊಳಗೆ ತನ್ನ ಸರ್ವಾಧಿಕಾರ, ಬಲಾತ್ಕಾರ, ಲಂಚಗಳ ಎಲ್ಲಾ ಕುಯುಕ್ತಿ ಜರುಗಿಸ ಬಹುಸಂಖ್ಯಾಕರ ಅಭಿಮತವನ್ನು ಹಿಚುಕಿದೆ. ಮುಂದಿನ ಯುದ್ಧದ ಪೂರ್ವ ಪೀಠಿಕೆಯಿದು

ರೈಲ್ವೇ ಪ್ರಯಾಣಿಕರಿಗೆ ಸೌಕರ್ಯ

ರೈಲ್ವೇ ಬಂಡಿಯಲ್ಲಿ ಪ್ರಯಾಣಮಾಡುವ ೩ನೇ ತರಗತಿಯ ಪ್ರಯಾಣಿಕರ ಸೌಕರ್ಯಗಳನ್ನು ಹೆಚ್ಚಿಸುವುದಕ್ಕೆ ಬರುವ ವರ್ಷದಲ್ಲಿ ಕನಿಷ್ಟಪಕ್ಷ ಒಂದು ಕೋಟಿ ರೂಪಾಯಿ ವೆಚ್ಚ ಮಾಡಲಾಗುವುದು ಈಗ ಇರುವ ಒಂದನೆ, ಎರಡನೆ, ಇಂಟರ್, ಮೂರನೆ ಎಂಬ ತರಗತಿಗಳ ಪೈಕಿ ಇಂಟರ್ ತರಗತಿಯನ್ನು ತೆಗೆದುಹಾಕಲಾಗುವುದು ಉಳಿದ ಮೂರು ತರಗತಿಗಳಲ್ಲಿ ಈಗ ಇರುವ ಎರಡನೆ, ಇಂಟರ್, ಮೂರನೆ ತರಗತಿಗಳ ಸೌಕರ್ಯಗಳಿರುವರು ಬ್ರಾಂಚು ಲೈನುಗಳಲ್ಲಿ ವಿಶೇಷ, ಸಾಮಾನ್ಯ ಎಂಬ ಎರಡೇ ತರಗತಿಗಳಿರುವುವು ಈಗ ಒಂದನೇ ತರಗತಿಯಲ್ಲಿರುವ ಸೌಕರ್ಯಗಳನ್ನು ತೆಗೆದು ಹಾಕಲಾಗುವುದು

ರೈಲ್ವೇ ಪ್ರಯಾಣಿಕರ ಚಾರ್ಜನ್ನು ಶೇಕಡಾ ೬।ರಷ್ಟು ಹೆಚ್ಚಿಸುವ ಏರ್ಪಾಡು ಮಾಡಲಾಗಿದೆ. ಎಂಟಾಣೆಯಿಂದ ಕಡಿಮೆ ಚಾರ್ಜಿಗೆ ಅನ್ವಯಿಸುವುದಿಲ್ಲ, ಒಂದು ಸಲ ಪ್ರಯಾಣ ಮಾಡುವ ಚಾರ್ಜು ಎಂಟಾಣೆಗಿಂತ ಕಡಿಮೆಯಾಗಿರುವ ಸೀಸನ್ ಟಿಕೆಟಿಗೆ ಈ ಹೆಚ್ಚಿಸುವಿಕೆಯು ಅನ್ವಯಿಸುವುದಿಲ್ಲ.

ನಮ್ಮ ಪ್ರಾಂತದ ಮಹಿಮೆ

ಭಾರತದ ನಾನಾ ಭಾಗಗಳಲ್ಲಿ ಅಶಾಂತಿಯು ನೆಲೆಗೊಂಡಿದೆ ಆದರೆ ನಮ್ಮ ಪ್ರಾಂತವು ಅಂತಹ ಅನಾಹುತಗಳಿಗೆ ತುತ್ತಾಗದೆ ಈವರೆಗೆ ಶಾಂತಿಯಿಂದ ಸಾಗುತ್ತಿದೆ ಎಂದರೆ 'ಜನಾಂಗಿಯೂ ಶ್ಲಾಘಿಸಿಯವೇ' ಸರಿ ಇತಿಹಾಸವನ್ನು ಪರಿಶೀಲಿಸಿ ನೋಡಿದರೆ ಎಲ್ಲಾ ಬಗೆಯ ಮಹತ್ವದ ಬದಲಾವಣೆ ಇಲ್ಲವೇ ಆಂದೋಲನಗಳೂ ಅಶಾಂತಿಯ ಮೂಲಕವೇ ಪ್ರಚಾರಕ್ಕೆ ಬಂದುವು ಆದುದರಿಂದ ಪ್ರತಿಯೊಬ್ಬನೂ ತನ್ನ ಶಕ್ತಿಯನ್ನು ಸದುಪಯೋಗ ಮಾಡಿ ದೇಶಸೇವೆಯಲ್ಲಿ ಭಾಗ ವಹಿಸುವುದು ಮುಖ್ಯ ಕರ್ತವ್ಯವಾಗಿದೆ ಆರ್ಥಿಕ ಸ್ವಾತಂತ್ರ್ಯವನ್ನು ಬ್ರಿಟಿಷ್ ಸರಕಾರವು ಸದ್ಯದಲ್ಲೇ ಕೊಡಲಿದೆಯೂ ನಿಜವಾದ ಸ್ವಾತಂತ್ರ್ಯವೆಂದರೆ ಅದಕ್ಕೆ ಆಧ್ಯಾತ್ಮಿಕ ಸ್ವಾತಂತ್ರ್ಯವೂ ಸೇರಿರಬೇಕು ಇಂತಹ ಹೊಣೆಗಾರಿಕೆಯು ಪ್ರತಿಯೊಬ್ಬ ವ್ಯಕ್ತಿಯನ್ನೂ ಆಶಯಿಸಿಕೊಂಡಿದೆ

— ಘನಹೊಂದಿದ ಸರ್ ಆರ್ಚಿಬಾಲ್ಡ್ ನೈ,
ಮದ್ರಾಸಿನ ಗವರ್ನರ್

ಶೀತ, ನೆಗಡಿ ವ ಗಂಟಲು ಬೇನೆಯ ಮೊದಲ ಚಿಹ್ನೆ ತೋರಿದಾಗಲೇ

PEPS

ವಿಷಹಾರಿ ಶಾಸನೀಯ ಮಾತ್ರೆಗಳನ್ನು ತೆಗೆದುಕೊಳ್ಳಿರಿ.

ಪೆಪ್ಸ್ ಬೇನೆಯ ಬುಡವನ್ನು ಹೋಗುತ್ತದೆ ಬಾಯಲ್ಲಿ ಕರಗಿ ಪೆಪ್ಸ್ ಬಿಟ್ಟ ಔಷಧೀಯ ಸಾರವು ಶ್ವಾಸ ಮೂಲಕ ಶ್ವಾಸ ಕೋಶಕ್ಕೊಯ್ಯಲ್ಪಟ್ಟು ಗುಣ, ಶಮನ ರಕ್ಷಣೆಗಳನ್ನು ಮಾಡುತ್ತದೆ



ಔಷಧಿ ಮಾರುವ ಎಲ್ಲಾ ಕಡೆ ಸಿಗುತ್ತದೆ. No 1

ಹತ್ತು ವರ್ಷಗಳಲ್ಲಿ ಬದಲಾದ ಭಾರತ

೧೯೩೬ ರಿಂದ್ದ ೧೯೪೬ ರ ಪ್ರಚಂಡ ಘಟನೆಗಳು

ಕೃತಕ ಕೀರ್ತಿಯ ವ್ಯಕ್ತಿಗಳು ಮಾಯವಾಗುವರು.

[illegible] ಎಂಬ ರಾಷ್ಟ್ರೀಯ ತಜ್ಞರು ಎರಡು ಸಲ ಭಾರತಕ್ಕೆ ಬಂದರು-1936ರಲ್ಲಿ ಮತ್ತು 1946 ರಲ್ಲಿ. ಈ ನಡುವಿನ ಹತ್ತು ವರ್ಷಗಳಲ್ಲಿನ ಗಣನೀಯ ಬದಲಾವಣೆಗಳು ಹೇಗಾಗಿವೆ ಎಂಬುದನ್ನು ಅವರು ಈ ಕೆಳಗಿನ ಸ್ವಾರಸ್ಯ ರೀತಿಯಲ್ಲಿ ವರ್ಣಿಸುತ್ತಾರೆ:

1936ರಲ್ಲಿ ನಾನು ಭಾರತದಲ್ಲಿದ್ದಾಗ ಇಂಗ್ಲೆಂಡಿನ ಎಂಟನೇ ಎಡ್ವರ್ಡರು ಪಟ್ಟ ತ್ಯಾಗ ಮಾಡುವುದರಲ್ಲಿದ್ದರು ಆ ಕಾಲದಲ್ಲಿ ಅದೊಂದು ಭಾರಿ ದೊಡ್ಡ ವಿಷಯವೆಂದು ತೋರಿತು. ಆದರೆ ನಂತರದ ಘಟನೆಗಳೊಂದಿಗೆ ಹೋಲಿಸಿದಾಗ ಬ್ರಿಟಿಷ್ ಅರಸನ ಪಟ್ಟ ತ್ಯಾಗವು ಬಹು ಪುಟ್ಟ ಘಟನೆಯೊಂದು ತೋರಿತು.

ಕಾರಣ 1946ರಲ್ಲಿ ನಾನು ಭಾರತದಲ್ಲಿದ್ದಾಗ ಮಹತ್ವದ ಬದಲಾವಣೆಗಳು ನನ್ನ ದೃಷ್ಟಿ ಪಥದಲ್ಲಿ ಬಂದವು. ಮಾತ್ರವಲ್ಲ ಇನ್ನೂ ಗಹನವಾದ ಮಾರ್ಪಾಡುಗಳು ಅಲ್ಲಿ ಸಂಭವಿಸಲಿಕ್ಕಿದ್ದವು ಬ್ರಿಟಿಷ್ ಮಂತ್ರಿತ್ರಯ ಮಂಡಳಿವು ಹಿಂತಿರುಗಿತ್ತು. ಅವರೊಂದು ಭಾರೀ ದೀರ್ಘ ಯೋಜನೆಯನ್ನು ತಯಾರಿಸಿದ್ದರು. ಅದರ ಪರಿಣಾಮವಾಗಿ ಜವಾಹರ ನೆಹುರು ಅವರು ಸರ್ವ ಭಾರತೀಯ ಮಂತ್ರಿಮಂಡಳದ ಉಪಾಧ್ಯಕ್ಷರಾಗಿ ಮುಖ್ಯ ಪ್ರಧಾನಿಗಳಾಗಿದ್ದರು ಅವರ ಕೈಯಲ್ಲಿ ಭಾರತ ಭವಿತವ್ಯದ ಸೂತ್ರಗಳಿದ್ದುವು. ಆದರೆ ನಾನು ಅಲ್ಲಿ ಹೋದ ಕಾಲಕ್ಕೆ ಅವರು ಬ್ರಿಟಿಷ್ ಪ್ರಧಾನರೊಡನೆ ಮಾತುಕತೆಗಾಗಿ ಲಂಡನಿಗೆ ತೆರಳಿದ್ದರು ಜಿನ್ನರು ಅವರೊಡನೆ ಹೋಗಿದ್ದರು

ಒಂದು ಕಾಲದಲ್ಲಿ ನೆಹುರುಗಳು ಬ್ರಿಟಿಷ್ ಸಾಮ್ರಾಜ್ಯವಾದಿಗಳ ಕಣ್ಣಿಗೆ ಸಿಡಿಮದ್ದಾಗಿ ಕಂಟಕ ಪ್ರಾಯರಾಗಿ ಕಾಣುತಿದ್ದರು. 11 ವರ್ಷ ಬ್ರಿಟಿಷರ ಸೆರೆಮನೆಯಲ್ಲಿ ಕಳೆದು ಅವರು ಸಮಾನತ್ವದಿಂದ ವ್ಯಾಸ್‌ರೊಡನೆ ಕುಳಿತು ಸದ್ವಿಶ್ವಾಸದ ಅತ್ಯಂತ ಜನಪ್ರಿಯ ಪ್ರಥಮ ಮಂತ್ರಿಗಳಾದರು." ಪೌರ್ವಾತ್ಯವು ಎಂದಿಗೂ ಬದಲಿಸಲಾರದೆಂದು ಹೇಳಿದ ಕಿಪ್ಲಿಂಗನಿದ್ದರೆ ಈಗ ಏನು ಹೇಳುತಿದ್ದನು!

ತುರಂಗಕ್ಕೆ ತೂರಲ್ಪಟ್ಟವರು

ನೆಹುರು ಮತ್ತು ಅವರಂತಹ ಇತರ ಅನೇಕ ಮುಖಂಡರ ಜೈಲು ವಾಸದ ಕುರಿತು ಸ್ವಲ್ಪ ವಿಮರ್ಶೆ ಅಗತ್ಯವಿದೆ ಯಾವ ದೇಶ ಪ್ರೇಮ ಲಕ್ಷಣವನ್ನು ಬ್ರಿಟಿಷ್ ಜನರು ಗೌರವ ಹೆಮ್ಮೆಗಳಿಂದ ಕಾಣುವರೊ ಅದೇ 'ತಪ್ಪಿ'ಗಾಗಿ ಚರ್ಚಿಲ್ ಮತ್ತವರ ಪಾಳಯದ ಇತರರು ಭಾರತೀಯ ಮುಖಂಡರನ್ನೂ ಮತ್ತವರ ಸಾವಿರಾರು ಅನುಯಾಯಿಗಳನ್ನೂ ವಿಚಾರಣೆಯಿಲ್ಲದೆ ತುರಂಗಕ್ಕೆ ತೂರಿದರು. ಅವರನ್ನು ಖೂನಿಗಾರರಂತೆ ನಡೆಸಿದರು.

ಬ್ರಿಟಿಷರು ಒಂದು ವಿಷಯವನ್ನು ಮಾತ್ರ ಸಹಿಸಲಾರರು. ಚರಿತ್ರೆಯಲ್ಲಿ ತಾವು ಮೂರ್ಖರೆಂದು ಉಲ್ಲೇಖಿಸಿಕೊಳ್ಳಲಿಕ್ಕೆ ಅವರಿಗೆ ಇಷ್ಟವಿಲ್ಲ. ಮುರ್ಖತನವು ಓರ್ವ ವ್ಯಕ್ತಿಯಲ್ಲಿದ್ದರೆ ಹಾಸ್ಯಾಸ್ಪದವಾಗುವುದಷ್ಟೆ. ಆದರೆ ಅದು ಒಂದು ಜನಾಂಗದಲ್ಲಿ ಕಂಡು ಬಂದರೆ ಅತೀ ದುಃಖದ ಸಂಗತಿಯೆನಿಸುವುದು.

ಸ್ವಾತಂತ್ರ್ಯ ಹೊಂದುವ ಮತ್ತು ಸ್ವಾವಲಂಬಿಯಾಗಿರುವ ಭಾರತೀಯರ ಮೊದಲ ಧೈರ್ಯದ ನಿದರ್ಶನವನ್ನು ನಾನು ಕಂಡದ್ದು ಒಂದು ಬೊಂಬಾಯಿಯ ಹೋಟೇಲಲ್ಲಿ. ಅಲ್ಲಿ "ದಕ್ಷಿಣ ಅಫ್ರಿಕನ್ನರಿಗೆ ಪ್ರವೇಶವಿಲ್ಲ" ವೆಂಬ ಪಟ್ಟಿಯನ್ನೂ ತೂಗ ಹಾಕಿದ್ದರು

ಇದನ್ನು ಪ್ರತ್ಯಕ್ಷ ಕಾರ್ಯರೂಪಕ್ಕೆ ಹೇಗೆ ತರುವರು ಎಂಬ ವಿಚಾರವು ನನ್ನಲ್ಲಿ ಬಲವಾಯಿತು. ನೋಡಲಿಕ್ಕೆ ದಕ್ಷಿಣ ಅಫ್ರಿಕದ ಬಿಳಿಯರಿಗೂ, ಐರೋಪ್ಯ ಬಿಳಿಯರಿಗೂ ವ್ಯತ್ಯಾಸವಿಲ್ಲ ಇದರ ಮೇಲೆ ಅಮೇರಿಕರಿನ್ನರೂ, ಆಸ್ಟ್ರೇಲಿಯನ್ನರೂ, ಇದ್ದಾರೆ ಭಾರತೀಯರ ಈ ಬಹಿಷ್ಕಾರವು ಹೇಗೆ ಪರಿಣಾಮಕಾರಿಯಾಗ ಬಲ್ಲದು? ಜನಾಂಗ ಸಭೆಯಲ್ಲಿ ದಕ್ಷಿಣ ಅಫ್ರಿಕದ ವಿರುದ್ಧ ಗೆದ್ದ ವಿಜಯದಿಂದ ಭಾರತೀಯರು ಹರ್ಷಗೊಂಡಿದ್ದರು

ಜನ ಪ್ರಿಯ ಸರಕಾರಗಳು

93 ಸೆಕ್ಷನಿನ ಯುದ್ಧ ಆಡಳಿತವು ಮುಗಿದಿತ್ತು ಜನತಾ ಸಂಪರ್ಕಕ್ಕಟಕುವ ಸರಕಾರಗಳು ಪ್ರಾಂತ್ಯಗಳಲ್ಲಿ ಕಾರ್ಯನಿರ್ವಾಗಿದ್ದುವು ಗವರ್ನರರ ಮತ್ತು ಇತರ ಐ. ಸಿ ಎಸ್ ಕಛೇರಿ ಅಧಿಕಾರಿಗಳ ಸೂಜಿ ಚುಚ್ಚುಗಳಿಂದ ಈ ಮಂತ್ರಿಮಂಡಳಗಳು ಸಂಪೂರ್ಣ ವಿಮೋಚನೆಗೊಂಡಿಲ್ಲವಾದರೂ ಅವರು ಧೈರ್ಯ ಚೈತನ್ಯದಿಂದ ಮುಂದೆ ಸಾಗುತಿದ್ದರು. ಅನೇಕ ಅಂತರೀಕ ಸಮಸ್ಯೆಗಳನ್ನವರು ಬಗೆಹರಿಸಲು ಪ್ರಯತ್ನಿಸುತಿದ್ದರು ಕೆಲವು ಮಂತ್ರಿಮಂಡಳಗಳು ತಮ್ಮ ಧೋರಣೆಯಲ್ಲಿ ತಪ್ಪು ಮಾಡುತಿದ್ದರೆಂದು ಕೆಲವು ಪ್ರಾಂತ್ಯಗಳಲ್ಲಿ ಕೇಳಿ ಬರುವ ವಿರೋಧ-ಗಾಳಿಯಿಂದ ತಿಳಿಯುತಿತ್ತು "ನೋಡಿದಿರೊ ಇವರ ಕೈಗೆ ಅಧಿಕಾರ ಬಂದರೆ ಇವರು ಮಾಡುತ್ತಿರುವ ಗಲಿಬಿಲಿ ಅದೆಷ್ಟು!" ಎಂದು ಬ್ರಿಟಿಷ್ ಟೀಕಾಕಾರರು ನನಗೆ ಬೆಟ್ಟು ತೋರಿಸುತಿದ್ದರು

ಹೊಸತಾಗಿ ಬಂದ ವಿದೇಶಿಗನಾದ ನನಗೆ ವಿಮರ್ಶಾತ್ಮಕ ಸಾಮರ್ಥ್ಯವಿರಲಿಲ್ಲ ಭಾರತೀಯ ಪತ್ರಿಕೆಗಳೂ ಜನರೂ ಇಚ್ಛೆ ತೋರಿದಂತೆ ತಮ್ಮ ಸರಕಾರವನ್ನು ಟೀಕಿಸುತಿದ್ದರು ಕೆಲವರು ತಮ್ಮ ಟೀಕಾ ಸ್ವಾತಂತ್ರ್ಯದ ದುರುಪಯೋಗ ಮಾಡಿ ನೇರವಾಗಿ ತುರಂಗಕ್ಕೂ ಕಳುಹಿಸಲ್ಪಡುತಿದ್ದರು. ಇಷ್ಟಾದರೂ ತಮ್ಮ ಸರಕಾರಗಳ ಮತ್ತು ಮಂತ್ರಿಗಳ ಕುರಿತು ತಮಗೆ ತೋರಿದಂತೆ ಟೀಕಿಸುವುದು ಒಂದು ಒಳ್ಳೇ ಲಕ್ಷಣ ಇದು ಸ್ವಾತಂತ್ರ್ಯದ ಚಿಹ್ನೆ.

ಜಾತೀಯ ಸಮಸ್ಯೆ

ಕೋಮುಕಲಹಕ್ಕೆ ಭಾರತದಲ್ಲಿ ಕೊರತೆಯಿಲ್ಲ ಪ್ರತಿ [illegible] ಸರಕಾರಕೆ ಇದು ಸಿಕ್ಕದ ಸಮಸ್ಯೆ ಆದರೆ ಹೊಸತಾಗಿ ರಾಜಕೀಯ ಸ್ಥಾನಮಾನಗಳನ್ನು ಪಡೆಯಲಿರುವ ಪ್ರತಿ ದೇಶದಲ್ಲಿ ಗೊಂದಲ ಗಲಭೆಗಳಿಲ್ಲದಿರುತ್ತದೆಯೆ? ಬ್ರಿಟನಿನಲ್ಲಿ ಒಂದು ಸ್ಥಿರವಾದ ಆಡಳಿತ ಸಾಂಪ್ರದಾಯ ಸ್ಥಾಪನೆಯಾಗಬೇಕಾದರೆ ಎರಡು ಶತಮಾನಗಳು ಹಿಡಿಯಲಿಲ್ಲವೆ? ಚಾರ್ಲ್ಸ್ ಅರಸನ ತಲೆ ಕಡಿದ ಮೇಲೂ ಬ್ರಿಟಿಷರು ಅದೆಷ್ಟು ಅಂತ ಕಲಹದಲ್ಲಿ ಮಗ್ನರಾಗಿದ್ದರು! ಭಾರತದಲ್ಲಿ ಅರ್ಧ ಶತಮಾನವಾದರೂ ಇಂತಹ ದುರಂತ ನಡೆಯದಿದ್ದರೆ ನೂತನ ವ್ಯವಸ್ಥೆ ಸ್ಥಿರವಾಗದು

ಆದರೆ ಮದ್ರಾಸಿನಲ್ಲೂ ಡಿಲ್ಲಿಯಲ್ಲೂ ನಾವು ಅನೇಕ ರಾಜಕೀಯ ಮುತ್ಸದ್ಧಿಗಳನ್ನು ಕಂಡು ಮಾತನಾಡಿದಾಗ ಮುಂದಿನ ಭವಿಷ್ಯದ ಕುರಿತು ಅವರಲ್ಲಿ ತುಂಬಾ ನಿರಾಶಾವಾದವೇ ಕಂಡು ಬಂದಿತು

ಹೊಸ ನಾಯಕತ್ವ ಬೇಕು

ಆದರೆ ಇಂದು ಬಹುಮಂದಿ ಭಾರತೀಯರು ವಿಶ್ವಾಸವಿರಿಸಿದ ಮುಖಂಡರಲ್ಲಿ ಹೆಚ್ಚಿನವರು ದೇಶವನ್ನು ಉಜ್ವಲ ಜನಾಂಗ ಭವಿಷ್ಯದತ್ತ ಒಯ್ಯಲು ಸಮರ್ಥರಲ್ಲವೆಂದು ಹೊರಗಿನವರಿಗೆ ಭಾಸವಾದರೆ ವಿಶೇಷವಲ್ಲ. ಹೆಚ್ಚಿನ ಭಾರತೀಯ ನಾಯಕರು ವೃದ್ಧಾಪ್ಯ ಸಮೀಪಿಸಿದ್ದಾರೆ ಇವರು ತಾವು ಇದುತನಕ ಹೋರಾಡಿದ ವಿಧಾನಗಳಿಂದ ಸಂಪೂರ್ಣ ಸುಸ್ತಾಗಿರುವರೆಂದೂ, ಮತ್ತವರು ಅಭ್ಯಾಸಿಸಿದ ಹೋರಾಟದ ಮನೋಭಾವಗಳಿಂದ ಇಂದವರು ಹೊಸ ಪರಿಸ್ಥಿತಿಗೆ ಬದಲಾಯಿಸಿಕೊಳ್ಳಲು ಸಮರ್ಥರಾಗಿರುವುದಿಲ್ಲವೆಂದೂ ಸ್ಪಷ್ಟವಾಗುತ್ತದೆ ವಿರೋಧದಲ್ಲಿ ಟೀಕೆಯಲ್ಲ [illegible] ರಾಜಕೀಯ [illegible]ದಲ್ಲಿ [illegible] ಕಳೆದವರಲ್ಲಿಂದು ಹೊಸದಾಗಿ [illegible] ಹೊಸ ಜನಾಂಗವು [illegible] [illegible] ಅವರು [illegible] [illegible] ಶಕ್ತಿ [illegible] [illegible] ಈ [illegible]

[illegible] ಭಾರತದಲ್ಲಿ [illegible] ಪ್ರಕೃತಿ [illegible] ಭಾರತದ [illegible] ಪಥದಲ್ಲಿದ್ದ [illegible] ಶಾಂತವೂ ಮತ್ತು [illegible] ತಮ್ಮ ಸಮಸ್ಯೆಗಳನ್ನು ತಾವು ಬಗೆಹರಿಸಲಾರರೆಂಬ ಸಂಗತಿಯು [illegible] ರೀತಿ ಯೋಚಿಸುವುದು ಹುಚ್ಚುತನ ಹಿಂದೆ ಭಾರತವು ಅತ್ಯುಜ್ವಲ ಜ್ಞಾನ ಸ್ಫೂರ್ತಿಯನ್ನುಂಟು ಮಾಡಿದ ದೇಶ ವಿವೇಕ ಸಾಮರ್ಥ್ಯಗಳು ಭಾರತದ ಜನ್ಮ ಸಿದ್ಧ ಸಾಂಪ್ರದಾಯ ಎರಡೂ ಪ್ರಕಾಶಕ್ಕೆ ಬರುವವು. ಸಂದರ್ಭ ಮನುಷ್ಯನನ್ನು ಹುಡುಕಿ ತೆಗೆಯುತ್ತದೆ ಬೇಕಾದರೆ ಅಂತಹನೊಬ್ಬನನ್ನು ಅದು ಸಿದ್ಧಗೊಳಿಸುತ್ತದೆ ಈ ಕೊನೆಯ ವಿಚಾರವನ್ನು ಮನಸ್ಸಿನಲ್ಲಿಟ್ಟು ನಾನು ಅಸ್ಪಷ್ಟವಾದ ಭವಿಷ್ಯದ ರಾಜಕೀಯ ವಿಚಾರವನ್ನು ಅಲ್ಲಿಗೇ ಬಿಟ್ಟು ಬಿಡುತ್ತೇನ

ಲಂಡನಿನಲ್ಲಿ ಭಾರತೀಯ ಚಿತ್ರಕಲೆ

ಲಂಡನಿನ ಭಾರತ ಭವನದಲ್ಲಿ ಆಧುನಿಕ ಭಾರತೀಯ ಚಿತ್ರಕಲೆಯ ಪ್ರದರ್ಶನವೊಂದು ಯಶಸ್ವಿಯಾಗಿ ಜರುಗಿಸಲಾಯಿತು. ಅನೇಕ ಚಿತ್ರಗಳನ್ನು ಶ್ರೀಮಂತ ಚಿತ್ರಕಲಾಭಿಮಾನಿಗಳು ಕೊಂಡುಕೊಂಡರು ಮೇಲ್ಕಾಣಿಸಿದ ಚಿತ್ರವು ವಿಖ್ಯಾತವಾಯಿತು "ಮಧುರಾ ಪ್ರಯಾಣ" ಎಂಬ ಶ್ರೀ ಅಹಿವಾಸಿ ಅವರ ಕಲಾಕೃತಿ

ಬಲರಾಮ್‌ಪುರದ ಸಿಗಾರ್ ಹಳ್ಳಿಯ ನಿವಾಸಿಯೊಬ್ಬನು ಹುಲಿಯೊಂದನ್ನು ಕತ್ತು ಹಿಚುಕಿ ಕೊಂದಿರುವ ವರ್ತಮಾನ ಬಂದಿದೆ ಹುಲಿ ಅವನ ಗೋಶಾಲೆ ಹೊಕ್ಕಿದಾಗ ಶತ್ರುಘ್ನ ಸರದಾರ್‌ನಾದ ಅವನು ವ್ಯಾಘ್ರನ ಕತ್ತು ಹಿಡಿದು ಬಲವಾಗಿ ಒತ್ತಿದನು ಪ್ರಾಣ ಬಿಡುವ ಮೊದಲು ಆ ವನ್ಯ ಮೃಗ ಅವನನ್ನು ಚೆನ್ನಾಗಿ ಘಾಯಗೊಳಿಸಿತು

★

ಜಿಲ್ಲಾ ಪರಿಚಯ

ನಾಗರಿಕ ವ್ಯವಹಾರ-ಮಾಜಿ ಕಲೆಕ್ಟರರ ಮೇಲೆ ಖಟ್ಲೆ: ಎಡ್ವೈಸರ್ ಸರಕಾರದ ಕಾಲದಲ್ಲಿ ನಮ್ಮ ಜಿಲ್ಲೆಯ ಕಲೆಕ್ಟರರಾಗಿದ್ದ ಶ್ರೀ ಬ ಪಿ. ರಾಮ್ಮೋಸ್ ಅವರ ಮೇಲಿನ ಆರೋಪಗಳ ವಿಚಾರಣೆಯು ಇದೇ ತಿಂಗಳ 29ರಂದು ಇಲ್ಲಿಯ ಹಜೂರ ಕಚೇರಿಯಲ್ಲಿ ನಡೆಯಲಿದೆ ಎಂಬ ಸಂಗತಿಯು ಇತ್ತೀಚೆಗಿನ ವರ್ತಮಾನಗಳಲ್ಲಿ ಅತ್ಯಂತ ಗಣನೀಯವಾದ ವಿಷಯ. ಕಿನ್ನಿಗೋಳಿಯ ಒಂದು ರಿಕ್ವಿಜಿಶನ್ ಖಟ್ಲೆಯ ಆರೋಪಿಗೆ ಕಠಿಣ ಶಿಕ್ಷೆ ವಿಧಿಸುವಂತೆ ಇವರು ಬರಹ ಮೂಲಕ ಡೆಪ್ಯುಟಿ ಕಲೆಕ್ಟರರಿಗೆ ಸೂಚನೆ ಕೊಟ್ಟಿದ್ದು ನಿಯಮ ಬಾಹ್ಯವೆಂದು ಶ್ರೀ ರಾಮ್ಮೋಸರ ಮೇಲೆ ಆರೋಪ ಬಿದ್ದು ಪ್ರಕಾಶಂ ಸರಕಾರವು ತಪಾಸಣೆ ಮಾಡಿಸಿದಾಗ ಬೇರೆ ಸುಮಾರು 20ಕ್ಕೆ ಮಿಕ್ಕಿದ ಲೋಪದೋಷಗಳು ಸಿಕ್ಕಿವೆಯೆಂದೂ ಅವನ್ನು ವಿಚಾರಿಸುವರೆ ಶ್ರೀಮಾನ್ ಆಚಾರ್ಯರನ್ನು ನೇಮಿಸಿರುವುದಾಗಿಯೂ ತಿಳಿದುಬರುತ್ತದೆ

ಈ ಆರೋಪಗಳ ತಪ್ಪೊಪ್ಪುಗಳನ್ನು ನಿರ್ಣಯಿಸುವುದು ನ್ಯಾಯಸ್ಥಾನದ ಕರ್ತವ್ಯ ಆದರೆ ಶ್ರೀ ರಾಮ್ಮೋಸರು ಇಲ್ಲಿ ಅಧಿಕಾರ ವಹಿಸಿದಾಗ ಕಳ್ಳಸಂತೆಯು ಇಲ್ಲಿ ಅವ್ಯಾಹತವಾಗಿ ಸಾಗುತಿತ್ತು. ಆಹಾರವಸ್ತು ವಿತರಣೆ ವಿಧಾನಗಳು ಅವ್ಯವಸ್ಥಿತವಾಗಿದ್ದು ಒಡಜನತೆಯು ಹಾಹಾಕಾರವೆದ್ದಿತ್ತು. ಅಂತಹ ಗಂಭೀರ ಪರಿಸ್ಥಿತಿಯಲ್ಲಿ ಯೋಗ್ಯವಾದ ಬಿಗು ಧೋರಣೆಯಿಂದ ಶ್ರೀ ರಾಮ್ಮೋಸರು ಕಳ್ಳಸಂತೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ತಡೆಗಟ್ಟಿ ಆಹಾರ ಪೂರೈಕೆಯನ್ನು ಕ್ರಮಗೊಳಿಸಿ ಸಾಮಾನ್ಯ ಜನತೆಯ ಕೃತಜ್ಞತೆಗೆ ಪಾತ್ರರಾದುದು ಸರ್ವ ವಿದಿತ ಸಂಗತಿ

ಅದೇ ಸಮಯದಲ್ಲಿ ಇಲ್ಲಿಗೆ ಒಂದು ಹಣ ಕಾಸಿಟ್ಟು ಕೌಶಲ್ಯದ ಆಟಗಳನ್ನಾಡ ವ (ಗ್ಯಾಬ್ಲಿ?) ಸಂಸ್ಥೆಗೂ ಮತ್ತೊಂದು ಕರ್ನಾಟಕ ವೆನಿಸೂ ಇಲ್ಲಿಯ ನಗರ ಸಭೆಯ ಒಹುವ ತ ತೀರ್ಮಾನಕ್ಕೆ ವಿರೋಧವಾಗಿ ಅವರು ಅನುಜ್ಞೆ ಕೊಟ್ಟರೆಂಬ ದೂರೂ ಮದ್ರಾಸ್ ತನಕ ಹೋಗಿತ್ತು ಇವೆಲ್ಲ ಕೂಡಿ ಸುಮಾರ 8 ಪ್ರಮಾದಗಳು ಈಗ ಅವರ ಕುರಿತು ವಿಚಾರಣೆಯಾಗಲಿವೆ ಎಂದೂ ಸುಮಾರ 0 ಸಾಕ್ಷಿದಾರರ ಇರುವರೆಂದೂ ತಿಳಿದು ಬರುತ್ತದೆ —ಬಾತ್ಮಿ

ವಸಂತೋತ್ಸವ: ಇಲ್ಲಿಯ ಬೆಸೆಂಟ್ ಶಾಲಾ ವಿದ್ಯಾರ್ಥಿನಿಯರು ರಾಷ್ಟ್ರೀಯ ವಾರದ ಸಂಬಂಧದಲ್ಲಿ ಆಚರಿಸುತ್ತಿರುವ ವಸಂತೋತ್ಸವಗಳು ತಾ 6ರಂದ ಪ್ರಾರಂಭವಾಗಿವೆ ಅಂದು ಶ್ರೀ ಕಡೆಂಗೋಡ್ಲು ಶಂಕರ ಭಟ್ ಅವರ ಅಧ್ಯಕ್ಷತೆಯಲ್ಲಿ ಸಂಗೀತ ವಾಚನ ನಾಟ್ಯ ಕವಿತಾ ವಾಚನಗಳ ಕಾರ್ಯಕ್ರಮ ಜರಗಿತು. ತಾ 9ರಂದು ಕಲೆಕ್ಟರರ ಪರ್ಸನಲ್ ಅಸಿಸ್ಟಂಟ್ ಶ್ರೀ ಗುಲಾಮ್ ಮಹಮ್ಮದ್ ಅವರು ಉತ್ಸವದ ಉದ್ಘಾಟನೆಯನ್ನು ಮಾಡಿದರ ಅಂದು ವಿವಿಧ ವಿನೋದಾವಳಿಗಳಿದ್ದುವು ತಾ 10ರಂದು ಸ್ಥಳೀಯ ಗವರ್ನಮೆಂಟ್ ಕೋಲೇಜಿನಲ್ಲಿ ಮಾನ್ಯ ಕಲೆಕ್ಟರರ ಅಧ್ಯಕ್ಷತೆಯಲ್ಲಿ ನೃತ್ಯ ಗೀತಗಳ ಕಾರ್ಯಕ್ರಮವೊಂದು ಜರಗಿತು

ವಸ್ತ್ರವಿತರಣೆಯ ಪ್ರಕಟಣೆ: ಜಿಲ್ಲಾ ಕಲೆಕ್ಟರರು ಮಿಲ್ಲುಬಟ್ಟೆ ಸ್ಟಾಕಿನ ಮತ್ತು ವಿತರಣೆಯ ಕುರಿತು ಈ ಕೆಳಗಿನ ಪ್ರಕಟಣೆಯನ್ನು ಹೊರಡಿಸಿದ್ದಾರೆ

ದ. ಕ. ಜಿಲ್ಲೆಯಲ್ಲಿನ ಎಲ್ಲಾ ಮಿಲ್ಲುಬಟ್ಟೆ ಚಿಲ್ಲರೆ ವಿಕ್ರಿತಗಾರರು ತಮ್ಮಲ್ಲಿನ ಮಿಲ್ಲುಬಟ್ಟೆ ವಿವಿಧ ನಮೂನೆಗಳನ್ನು ನಮೂದಿಸಿ ತಾರೀಖು 1 3—47ರಂದು ಇದ್ದ ಮತ್ತು ಅನಂತರ ತಾ 31—3—47ರ ತನಕ ಮಾರಿ ಉಳಿದುದರ ಪ್ರಮಾಣಗಳ ವಿವರವನ್ನು ಕಳುಹಿಸಿ ಕೊಡತಕ್ಕದ್ದು ತಾ 10—4—47ರೊಳಗೆ ಇದು ಕಲೆಕ್ಟರರ ಕಛೇರಿಗೆ ತಲುಪಬೇಕು.

ರೇಶನ್ ಬಟ್ಟೆ: ತಾ 1—4—47ರಿಂದ ಮಿಲ್‌ಬಟ್ಟೆ ರೇಶನ್ ಹಂಚುವಿಕೆಯು ಜಾರಿಗೆ ಬಂದಿದೆಯಾಗಿ ತಿಳಿಯತಕ್ಕದ್ದು ನಾಗರಿಕರಿಗೆ ಆ ಕುರಿತು ಪ್ರತ್ಯೇಕ ರೇಶನ್ ಕಾರ್ಡುಗಳನ್ನು ಹಂಚಲಾಗಿದೆ ಮಂಗಳೂರು, ಕಾಸರಗೋಡು ಮತ್ತು ಉಡುಪಿಗಳಲ್ಲಿ ಈ ಕಾರ್ಡುಗಳಲ್ಲಿ ನಮೂದಿಸಿದ ಪ್ರಕಾರ ಇಲ್ಲಿಯ ಸಾರ್ವಜನಿಕರಿಗೆ ಮಿಲ್ ಬಟ್ಟೆ ಕೊಡಲಾಗುವುದು ಈ ಕಾರ್ಡುಗಳಿಂದ ಪಡಕೊಳ್ಳದೆ ಬಾಕಿ ಉಳಿದ ಬಟ್ಟೆಯ ಪ್ರಮಾಣವು 31 12—47ರ ನಂತರ ಸಿಗಲಾರದು. ಬಟ್ಟೆ ಕೊಡುವಾಗ ವಿಕ್ರಿತಗಾರರು ಈ ಕೆಳಗಿನ ಅಂಶಗಳನ್ನು ಗಮನಿಸತಕ್ಕದ್ದು

ಮೊದಲನೇ ಸಲಕ್ಕೆ ಬಟ್ಟೆ ರೇಶನ್ ಕಾರ್ಡು ತೋರಿಸಲ್ಪಟ್ಟ ಕೂಡಲೇ ಬಟ್ಟೆ ಅಂಗಡಿಯವನು ಅಕ್ಕಿ ರೇಶನ್ ಕಾರ್ಡನ್ನು ಕೇಳತಕ್ಕದ್ದು ತಾ. 1—1—47ರಿಂದ ಅಕ್ಕಿ ಕಾರ್ಡಿನ ಮೂಲಕ ಪಡಕೊಂಡ ಬಟ್ಟೆಯನ್ನು ಹೊಸ ಬಟ್ಟೆ ಕಾರ್ಡಿನ ಪ್ರಮಾಣದಿಂದ ಕಳೆಯತಕ್ಕದ್ದು ಪ್ರತಿ ಬಟ್ಟೆ ಕಾರ್ಡು ಹೋಲ್ಡರನಿಗೆ ಅವನ ಅಕ್ಕಿ ಕಾರ್ಡಿನಲ್ಲಿ ಪಡಕೊಂಡ ಮತ್ತು ಬಟ್ಟೆ ಕಾರ್ಡಿನಲ್ಲಿ ನಮೂದಿಸಲಾದ ಪ್ರಮಾಣದ ಅಂತರದಷ್ಟು ಮಾತ್ರ ಪಡಕೊಳ್ಳಲು ಹಕ್ಕಿದೆ

ಇತರ ಕಡೆಗಳಲ್ಲಿ: ವ್ಯವಸ್ಥಾಬದ್ಧ ರೇಶನ್ ಪ್ರದೇಶಗಳಾದ ಮಂಗಳೂರು, ಉಡುಪಿ ಮತ್ತು ಕಾಸರಗೋಡು ಪಟ್ಟಣಗಳಲ್ಲದೆ ಇತರ ಕಡೆಗಳಲ್ಲಿಯೂ ಪ್ರತ್ಯೇಕ ಬಟ್ಟೆ ಕಾರ್ಡು ಕೊಡಲ್ಪಡುವುದಿಲ್ಲ ಇಲ್ಲಿಯ ಜನರಿಗೆ ಅಕ್ಕಿ ಕಾರ್ಡಿನ ಇಲ್ಲವೆ ಗುರುತು ಚೀಟಿನ ಆಧಾರದಿಂದ ಪ್ರಾಯಸ್ಥರಿಗೆ 5 1? ವರ್ಷ ಕೆಳಗಿನವರಿಗೆ ಗಜ ಪ್ರಕಾರ ಅಲ್ಲಿನ ವ್ಯಾಪಾರಿಗಳ ಕೊಡಬೇಕು ಇವರಿಗೂ 1 1 4 ರ ನಂತರ ಅಕ್ಕಿ ಕಾರ್ಡುಗಳ ಮೇಲೆ ಕೊಟ್ಟ ಬಟ್ಟೆ ಪ್ರಮಾಣವನ್ನು ತಾ 1 4 1 ರ ನಂತರ ತಾ 31 1 —47ರ ವರೆಗೆ ಕೊಡುವ ಬಟ್ಟೆ ರೇಶನ್ ಪ್ರಮಾಣದಿಂದ ಕಳೆದು ಕೊಡತಕ್ಕದ್ದು ಡೂಪ್ಲಿಕೇಟ್ ಕಾರ್ಡಿನ ಮೇಲೆ ಬಟ್ಟೆ ಕೊಡಲೇ ಬಾರದು

ಮಂಗಳೂರು, ಉಡುಪಿ ಕಾಸರಗೋಡು ರೇಶನ್ ಪ್ರದೇಶಗಳಲ್ಲಿ 1 1 47 ನಂತರದ ಬಟ್ಟೆ ಪಡಕೊಂಡು ಮಾತ್ರ ಕಾರ್ಡು ಡೂಪ್ಲಿಕೇಟಾಗಿ ಒದಗಾಯಿಸಲ್ಪಡದಿದ್ದರೆ ಹೊಸ ಬಟ್ಟೆ ರೇಶನ್ ಕಾರ್ಡಿನಿಂದ 1 ವರ್ಷ ಮೇಲ್ಪಟ್ಟವರಿಗೆ ಗಜದಂತೆಯೂ ಕೆಳಗಿನವರಿಗೆ 1 ಗಜದಂತೆಯೂ ಕಳೆದು ಕೊಡತಕ್ಕದ್ದು

ಬಟ್ಟೆ ಅಂಗಡಿಯವರು ಕೊಡುವ ಬಟ್ಟೆ ಬಿಲ್ಲುದ (ನಗದಿ ಇಲ್ಲವೆ ಕಡ) ರಶೀದಿಯಲ್ಲಿ ಬಟ್ಟೆ ಪಡೆದವರ ಬಟ್ಟೆ ಕಾರ್ಡಿನ ನಂಬ್ರ ಅಕ್ಕಿ ರೇಶನ್ ಕಾರ್ಡಿನ ನಂಬ್ರವನ್ನು ಕಾಣಿಸತಕ್ಕದ್ದು

ಮೇಲಿನ ನಿಯಮಗಳನ್ನು ಮೀರುವುದು ಅಪರಾಧವಾಗುವುದು.

ಹಾಲು ಹುಡಿ: ಹೊಟೇಲು ಬಿಸ್ಕೀಟು ತಯಾರಕರಿಗೂ ಇತರ ಸಂಸ್ಥೆಗಳಿಗೂ ಬೇಕಾಗುವ ಪರದೇಶಗಳಿಂದ ತರಿಸಿದ ಹಾಲು ಹುಡಿಯ ಡಬ್ಬಿಗಳು ತಿರುಚನಾಪಳ್ಳಿ ಕೋಯಮುತ್ತೂರು, ಸೇಲಂ ಮತ್ತು ಮದ್ರಾಸಿನ ಸರಕಾರಿ ಗೋದಾಮುಗಳಲ್ಲಿ ದಾಸ್ತಾನಿದ್ದು ಅದನ್ನೀಗ ಮಾರಲೇ ಪಾಡಿಸಿದೆ ವಿವರಗಳನ್ನು ಹಜೂರ ಕಚೇರಿಯಿಂದ ತಿಳಕೊಳ್ಳಬಹುದು.

—(ಕಲೆಕ್ಟರರ ಪ್ರಕಟಣೆ)

ವಾರ್ಷಿಕೋತ್ಸವ: ಇಲ್ಲಿಯ ಮಿಶನ್ ಹ್ಯಾಸ್ಕೂಲಿನ ಹಳೆಯ ವಿದ್ಯಾರ್ಥಿಗಳ ಸಂಘದ ದಿನಾಚರಣೆಯು ತಾ 13ರಂದು ರಾ। ಗಿರಿಯಪ್ಪನವರ ಅಧ್ಯಕ್ಷತೆಯಲ್ಲಿ ಜರಗುವುದು

ಹವಾಮಾನ: ಸಾಯಂಕಾಲ ನಂತರ ತಂಪು ಗಾಳಿ ಬೆಳಗ್ಗಿನ ಹೊತ್ತು ಮೋಡ ಮಿಶ್ರಿತ ಉಷ್ಣದ ಬಿಸಿಲು ಈ ತರದ ಹವಾ ಪರಿಸ್ಥಿತಿಯು ಕೆಲವು ದಿವಸಗಳಿಂದ ಸಂಭವಿಸುತ್ತದೆ ವಾತಾವರಣ ಲಕ್ಷಣಗಳು ರಾತ್ರೆ ಕಾಲದಲ್ಲೂ ಪ್ರಭಾತ ಕಾಲದಲ್ಲೂ ಮಳೆ ಸುರಿಯುವಂತಹುಗಳಂತೆ ಗಮನಕ್ಕೆ ಬರುತ್ತವೆ.

'ಜನಶಕ್ತಿ': ಹುಬ್ಬಳ್ಳಿಯಿಂದ ಬರುವ ಮೇ 1ರಿಂದ ಕರ್ನಾಟಕ ಪ್ರಾಂತೀಯ ಕಮ್ಯೂನಿಸ್ಟ್ ಪಾರ್ಟಿಯ ಮುಖ್ಯ ಪತ್ರವಾಗಿ "ಜನಶಕ್ತಿ" ಎಂಬ ವಾರ ಪತ್ರಿಕೆ ಹೊರಡಲಿರುವುದು ಇದರ ಸಂಪಾದಕತ್ವವನ್ನು ಶ್ರೀ ಕುಳುಕುಂದ ಶಿವರಾಯರು ವಹಿಸಲಿದ್ದು ಮುದ್ರಕ ಮತ್ತು ಪ್ರಕಾಶಕರು ಶ್ರೀ ಶಿವೇಶ್ವರ ದೊಡ್ಡಮನಿ ಇವರಿರುವರು.

ಅಖಿಲ ಭಾರತ ಅಡಿಕೆ ಪರಿಷತ್ತು: ಮತ್ತು ಪ್ರದರ್ಶನವೂ ಹಾಗೂ ದಕ್ಷಿಣ ಭಾರತ ಮಲೆನಾಡು ಪರಿಷತ್ತು ಪುತ್ತೂರು ತಾಲೂಕು ಮುಂಡಾಜೆಯಲ್ಲಿ ಮಂಗಳೂರು—ಕಡೂರು ರಸ್ತೆಯ 46ನೇ ಮೈಲು ಹತ್ತಿರ ಮುಂಡಾಜೆ ನದೀ ತೀರದಲ್ಲಿ ತಾ 24 ಮತ್ತು 25ನೇ ಎಪ್ರಿಲ್ ಈ ಎರಡು ದಿನಗಳಲ್ಲಿ ಜರಗುವದು. ಬೊಂಬಾಯಿ, ಮದರಾಸು, ಮೈಸೂರು, ಕೊಚ್ಚಿ, ತಿರುವಾಂಕೂರು ಹಾಗೂ ಬಂಗಾಳದಿಂದ ಪ್ರತಿನಿಧಿಗಳು ಮಾತ್ರವಲ್ಲದೆ ಸರಕಾರಗಳು ಸಹ ಈ ಪರಿಷತ್ತುಗಳಲ್ಲಿ ಭಾಗವಹಿಸುವವು—ನಮ್ಮ ಜಿಲ್ಲೆಯ ನೆರವಿನಲ್ಲಿ ಜರಗುವ ಈ ಪರಿಷತ್ತು ಸಮಾರಂಭಗಳಿಗಾಗಿ ಯೋಗ್ಯ ರೀತಿಯ ಊಟೋಪಚಾರಗಳ ವ್ಯವಸ್ಥೆಯೂ ಸ್ಥಳ ಪರಿಷ್ಕಾರಪೂರ್ವಕ ಸಭಾಭವನಾದಿಗಳೂ ಏರ್ಪಡುತ್ತಿವೆ ಧ್ವನಿವಾಹಕ ವ್ಯವಸ್ಥೆಯೂ ಮಾಡಲ್ಪಡುತ್ತಿದೆ ಸ್ವಯಂಸೇವಕ ದಳಗಳು ಅತಿಥಿಗಳ ವ್ಯವಸ್ಥೆಯನ್ನು ನೋಡುವದು.

ಊರ ಮಹನೀಯರು ಈ ಕಾರ್ಯ ಭಾರದಲ್ಲಿ ಮಾನ, ಪೂರ್ವಕ ಸಹಕರಿಸುವಂತೆ ಕೋರಿಕೆ. ಸ್ವಾಗತ ಸಮಿತಿಯನ್ನು ಸೇರಲಿಚ್ಛಿಸುವವರು ರೂ. 10 ವಂತಿಗೆಯನ್ನು ಪೋಷಕರಾಗುವವರು ರೂ 100 ವಂತಿಗೆಯನ್ನು ಸ್ವಾಗತ ಸಮಿತಿಗೆ ಕಳುಹಿಸಿ ಕೊಡುವಂತೆ ಸೂಚನೆ—

ಎಂ. ಎಸ್. ಭಿಡೆ,
ಸ್ವಾಗತಾಧ್ಯಕ್ಷ
ಅಖಿಲ ಭಾರತ ಅಡಿಕೆ ಪರಿಷತ್ತು.
ಪೋಸ್ಟ್ ಮುಂಡಾಜೆ ದ. ಕ

NOTICE

In the Court of the Subordinate Judge of S. Kanara.

O S No 71/36
R I A No 1562/44

Between
Subraya Karanth and another — *Petitioners*
and
Nagappa Karanth and others — *Respondents*

ಈ ಕೆಳಗೆ ದಸ್ಕತು ಮಾಡಿದವರು ಈ ಮೂಲಕ ತಿಳಿಯಪಡಿಸುವುದೇನೆಂದರೆ —

ಮೇಲ್ಕಾಣಿಸಿದ ವ್ಯವಹರಣೆಯಲ್ಲಿ ಆದ ಕೋರ್ಟು ಹುಕುಂಗಳ ಪ್ರಕಾರ ಈ ಕೆಳಗೆ ಕಾಣಿಸಿದ ಸ್ಥಿರ ಆಸ್ತಿಗಳು ತಾ 15-5-1947ರಲ್ಲು ಹಗಲು ಗಂಟೆ 9ರಿಂದ 12ರ ವರೆಗೆ ಮತ್ತು ಮಧ್ಯಾಹ್ನ ಗಂಟೆ 1ರಿಂದ 6ರ ವರೆಗೆ ಕುಂದಾಪುರ ಕಸಬಾ ಟ್ರಾವಲರ್ಸ್ ಬಂಗ್ಲೆಯಲ್ಲಿ ಪ್ರಕಟಿಸೋಣಾದ ಏಲಂ ಇಸ್ತಿಹಾರಿನಲ್ಲಿ ನಮೂದಿಸಿದ ಶರ್ತಗಳ ಪ್ರಕಾರ ಬಹಿರಂಗವಾಗಿ ಏಲಂ ಮಾಡಲ್ಪಡುವವು. ದರಖಾಸ್ತಿಗೆ ಸಿಲ್ಲುವರೆ ಅಪೇಕ್ಷೆಯುಳ್ಳವರು ಸದ್ರಿ ಆಸ್ತಿಗಳ ರಿಕಾರ್ಡು ಮಾಹಿತಿಯನ್ನೂ ಏಲಂ ಶರ್ತಗಳನ್ನೂ ಮಂಗಳೂರು ಕಸಬಾ ಡೊಂಗರಕೇರಿಯಲ್ಲಿರುವ ಈ ಕೆಳಗೆ ದಸ್ಕತು ಹಾಕಿದವರ ಆಫೀಸಿನ ಮಾಳಿಗೆಯಲ್ಲಿ ಬಂದು ತಿಳಕೊಳ್ಳಬಹುದು

ಆಸ್ತಿಗಳ ತಪಶೀಲು

1ನೇ ಆಸ್ತಿ

ಕುಂದಾಪುರ ತಾಲೂಕ, ಕುಂದಾಪುರ ಕಸಬಾ ಗ್ರಾಮದ ಸರ್ವೆ ನಂಬ್ರ 107-9A ಪುಂಜ ಸೆಂಟ್ಸ್ ವಿಸ್ತೀರ್ಣದ 0 1 0 ತೀರ್ವೆಯ ಸ್ಥಳ ಇದರಲ್ಲಿರುವ ಹಂಚು ಛಾವಣಿಯ ಉಪ್ಪರಿಗೆ ಇರುವ ಅಂಗಡಿ ಕಟ್ಟೋಣ ಸದಿ ಆಸ್ತಿಯು ಮೇಲ್ಕಾಣಿಸಿದ ಕಮಿಶನ ಎನ್ (N) ಸೆಡ್ಯೂಲಿನ ಆಸ್ತಿಯ 2ನೇ ಪ್ಲೋಟ್ ಇದ್ದವ ಆಟಿಮ್ ಆಗಿರುತ್ತದೆ ಪ್ರಥಮ ವಾರು ಕರೆಯುವ ಅಂದಾಜು ರೂಪಾಯಿ 1500 —

2ನೇ ಆಸ್ತಿ — ಕುಂದಾಪುರ ತಾಲೂಕು ಕುಂದಾಪುರ ಕಸಬಾ ಗ್ರಾಮದ ಸರ್ವೆ ನಂಬ್ರ 17 9C ಭಾಗಾಯತ 1 ಸೆಂಟ್ಸ್ 0-12 0 ಬೇರಜಿನ ಸ್ಥಳ ಮತ್ತು ಇದರಲ್ಲಿರುವ ಸಾಹುಕಾರ ಕೇಶವ ಮಂಜ ನಾಥ ಶಾನಭಾಗರು ಕಟ್ಟಿಸಿದ ಹಂಚ ಛಾವಣಿಯ ಉಪ್ಪರಿಗೆ ಕಟ್ಟೋಣ ಇದ ಮೇಲ್ಕಾಣಿಸಿದ ಕಮಿಶನ ಓ (O) ಶೆಡ್ಯೂಲ್ ಆಸ್ತಿ ಆಗಿರುತ್ತದೆ ಪ್ರಥಮ ವಾರು ಕರೆಯುವ ಅಂದಾಜು ರೂಪಾಯಿ 8000

3ನೇ ಆಸ್ತಿ ಕುಂದಾಪುರ ತಾಲೂಕ ಕುಂದಾಪುರ ಕಸಬಾ ಗ್ರಾಮದ

ಸ ನಂಬ್ರ	ಸಬ ನಂಬ್ರ	ಕಿಸಂ	ವಿಸ್ತೀರ್ಣ	ತೀರ್ವೆ	ಷರಾ
107	1 (ಅಂಶ)	ಭಾಗಾಯತ	-4	0 6-0	ಕಮಿಷನರು ತಾ 16-2-1946ರಲ್ಲು ಕೋರ್ಟಿನಲ್ಲಿ ದಾಖಲು ಮಾಡಿದ ರಿಪೋರ್ಟಿನಲ್ಲಿ ಎಮ್ (M) ಶೆಡ್ಯೂಲಿನ ಆಸ್ತಿಯಲ್ಲಿ ಕಾಣಿಸಿದ ಬಿ (B) ಅಂಶ (Share)
107	4	ಡಿ	ಡಿ	12	1-1-0	
107	11	2ನೇ ಕ್ಲಾಸ್ ನ ಪ	0- 8	1 9 0	
107	1 ಅಂಶ	ಭಾಗಾಯತು	0 18	1 1 0	ಸದ್ರಿ ಮೇಲ್ಕಾಣಿಸಿದ ಕಮಿಷನ್ ರಿಪೋರ್ಟಿನಲ್ಲಿ ಕಾಣಿಸಿದ ಎಮ್ (M) ಶೆಡ್ಯೂಲಿನ ಆಸ್ತಿಯ ಸಿ (C) ಅಂಶ (Share)
107	11	3ನೇ ಕ್ಲಾಸ್ ನಂಜ	0-26	1 7 0	

ಇವುಗಳಲ್ಲಿರುವ ಹಂಚು ಛಾವಣಿ ಮನೆ ಹಟ್ಟಿ ಕೊಟ್ಟಿಗೆ ಬಾವಿ ಮರಮಟ್ಟು ಸರ್ವಾದಿ ಇವೆರಡು ಅಂಶಗಳನ್ನು ಒಂದೇ ಲೋಟಾಗಿ ಏಲಂ ಮಾಡೋಣಾಗುವುದು ಪ್ರಥಮ ವಾರು ಕರೆಯುವ ಅಂದಾಜು ರೂಪಾಯಿ 8000/—

4ನೇ ಆಸ್ತಿ — ಕುಂದಾಪುರ ತಾಲೂಕು ಕುಂದಾಪುರ ಕಸಬಾ ಗ್ರಾಮದ

100	-1B2 (ಅಂಶ)	ಪುಂಜ	0 4⅓	0-1-0	ಕಮಿಷನರು ತಾ. 16-2-46ರಲ್ಲಿ ಕೋರ್ಟಿನಲ್ಲಿ ದಾಖಲು ಮಾಡಿದ ರಿಪೋರ್ಟಿನಲ್ಲಿ ಕಾಣಿಸಿದ ಪಿ (P) ಶೆಡ್ಯೂಲಿನ ಆಸ್ತಿಯ ಬಿ (B) ಅಂಶ (Share)
ಡಿ	11 (ಅಂಶ)	ಭಾಗಾಯತು	0 5¼	0-5 0	
100	11 (ಅಂಶ)	ಭಾಗಾಯತು	0—8⅔	0—9—0	ಸದ್ರಿ ಮೇಲ್ಕಾಣಿಸಿದ ಕಮಿಷನ್ ರಿಪೋರ್ಟಿನಲ್ಲಿ ಕಾಣಿಸಿದ ಪಿ (P) ಶೆಡ್ಯೂಲಿನ ಸಿ (C) ಅಂಶ (Share)

ಇವೆರಡು ಅಂಶಗಳಲ್ಲಿರುವ ಹಂಚು ಛಾವಣಿ ಕಾಫಿ ಹೋಟೇಲು ಕಟ್ಟೋಣ ಮತ್ತು ಹಂಚು ಛಾವಣಿ ತಕ್ತ ಪೋಪಿ ಉಪ್ಪರಿಗೆ ಮನೆ ಹಟ್ಟಿಕೊಟ್ಟಿಗೆ ಬಾವಿ ಮರಮಟ್ಟುಗಳು ಸರ್ವಾದಿ. ಇವೆರಡು ಅಂಶಗಳನ್ನು ಒಂದೇ ಲೋಟಾಗಿ ಏಲಂ ಮಾಡೋಣಾಗುವುದು ಪ್ರಥಮ ವಾರು ಕರೆಯುವ ಅಂದಾಜು ರೂಪಾಯಿ 6000/ .

ಮಂಗಳೂರು,
8—4—1947.

M. P. Kini

ದೇಶಭಕ್ತರು ಬಿತ್ತಿದ ಸ್ವಾತಂತ್ರ್ಯ ಬೀಜ

ಆಸ್ವಾದ ಸ್ವಾತಂತ್ರ್ಯತೆಯ ಕಾರಸ್ಥಾನ - ಭಾರತ

ರಾಷ್ಟ್ರೀಯ ವಾರದ ದಿವ್ಯ ಮಹತ್ವ

[ಭಾರತದ ಈ ವಾರವನ್ನು ರಾಷ್ಟ್ರೀಯ ಸಪ್ತಾಹವನ್ನಾಗಿ ಆಚರಿಸಲು 27 ವರ್ಷಗಳ ಹಿಂದೆ ಪ್ರಾರಂಭಿಸಲ್ಪಟ್ಟ ಈ ವಾರಕ್ಕೆ ಮುಟ್ಟುವ 1948ರ ಸ್ವಾತಂತ್ರ್ಯದ ದೃಷ್ಟಿಯಿಂದ ಅತೀ ಮಹತ್ವವಿದೆ.]

ಮೂವತ್ತೇಳು ವರ್ಷಗಳ ಹಿಂದೆ ರಾಷ್ಟ್ರೀಯ ಸಪ್ತಾಹವು ದೇಶದ ಪ್ರಾರ್ಥನಾ ಸ್ತೋತ್ರಕ್ಕಾಗಿಯೂ, ಗತ ಘಟನೆಗಳ ಸ್ಮಾರಕಕ್ಕಾಗಿಯೂ, ವರ್ತಮಾನಕಾಲದ ನಿರ್ಧಾರಕ್ಕಾಗಿಯೂ, ಮತ್ತು ಭವಿಷ್ಯದ ಯೋಜನಾ ನಿರ್ಮಾಣಕ್ಕಾಗಿಯೂ, ಆಚರಿಸಲ್ಪಟ್ಟಿತು. ದೇಶಪ್ರೇಮವನ್ನಭಿವೃದ್ಧಿಗೊಳಿಸುವ ಉದ್ದೇಶದ ಈ ಪುಟ್ಟ ಬೀಜವು ಮೊಳೆತು ಗಿಡವಾಯಿತು. ಮೊದಲನೇ ಜಾಗತಿಕ ಯುದ್ಧಕಾಲದಲ್ಲಿ ಎನ್ನಿಬೆಸೆಂಟ್ ಮಹಿಳೆಯು ಇದನ್ನು ತನ್ನ ಹೋಂರೂಲ್ ಚಳವಳಿಕ್ಕೆ ಕೃಷಿ ಮಾಡಿ ಮಾಡಿದಳು. ಅವಳ ಶ್ರದ್ಧಾವಂತವೂ ಶಾಸ್ತ್ರೀಯವೂ ಆದ ಆರೈಕೆಯಲ್ಲಿ ಗಿಡ ಮರವಾಗತೊಡಗಿತು. ಏಪ್ರಿಲ್ ತಿಂಗಳ ಪ್ರಥಮ ಇಲ್ಲವೆ ದ್ವಿತೀಯ ವಾರದಲ್ಲಿ ಇದು ಸಾಮಾನ್ಯವಾಗಿ ಆಚರಿಸಲ್ಪಡುತ್ತದೆ. 1919ರಲ್ಲಿ ಮಹಾತ್ಮಾ ಗಾಂಧಿಯವರು ರಾಜಕೀಯ ರಂಗಕ್ಕಿಳಿದಾಗ ಏಪ್ರಿಲ್ 6ರಂದು ತಮ್ಮ ನಿಸರ್ಗ ಚಿಕಿತ್ಸೆಯ ಒಂದು ಉಪವಾಸ ವ್ರತದಿಂದಲೂ ಸತ್ಯಾಗ್ರಹ ಮಾತ್ರೆಯಿಂದಲೂ ಶಾಸನಭಂಗದ ಅನುಷ್ಠಾನದಿಂದಲೂ ಈ ಸಪ್ತಾಹಕ್ಕೆ ಸ್ಫೂರ್ತಿ ಕೊಟ್ಟರು.

★

1919ರ ಏಪ್ರಿಲ್ 13ರಂದು (ಸಪ್ತಾಹದ ಕೊನೆದಿನ) ಜನರಲ್ ಡಾಯರರು 400 ದೇಶಭಕ್ತರ ಪ್ರಾಣಗಳಿಂದಲೂ 2000 ವೀರರ ರಕ್ತದಿಂದ ಜಾಲಿಯನ್ ವಾಲಾಭಾಗದ ಮೃತ್ಯು ಮೈದಾನದಲ್ಲಿ ಈ ಸ್ವಾತಂತ್ರ್ಯ ಗಿಡಕ್ಕೆ ಸಾರವನ್ನು ಹಾಕಿದರು ಆ ದಿನದಿಂದ ಮಿಲಿಯಾವಧಿ ಭಾರತೀಯರ ಕಣ್ಣೀರೂ ಆ ಗಿಡಕ್ಕೆ ಎರೆಯಲ್ಪಟ್ಟಿದ್ದು ಅದು ಕ್ರಮವಾಗಿ ಬೆಳೆಯಿತು. ನಂತರ ಕಾಲಾನುಕ್ರಮದಲ್ಲಿ ಬಂದ ದಬ್ಬಾಳಿಕೆಯ ಬಿರುಗಾಳಿಯಿಂದ ಅದರ ಬೇರುಗಳು ಇನ್ನಷ್ಟು ಬಲವಾದುವು. 1921, 1930, 32, 34, 41, 42 ಮತ್ತು 45ರ ಜಂಝಾವಾತಗಳು ಅದನ್ನು ಚೆನ್ನಾಗಿ ಕುಲುಕಿಸಿದುವು. ಇದರ ಪರಿಣಾಮವಾಗಿ ಅದರ ಮಣ್ಣು ಅಡಿಮೇಲಾಗಿ ಗಿಡಕ್ಕೆ ಇನ್ನಷ್ಟು ಉತ್ತಮ ಸಾರವು ದೊರಕಿತು. ಫಲಬಿಡುವ ಅವಧಿಯು ಇದರಿಂದ ಸ್ವಲ್ಪ ಮುಂದಕ್ಕೆ ಬಿತ್ತಾದರೂ ಮರವು ಶಾಶ್ವತವಾಯಿತು. 1947ರ ವರೆಗೆ ಅದು ಕ್ರಮೇಣ ಉತ್ತಮೋತ್ತಮವಾದ ಫಲವನ್ನು ಬಿಡತೊಡಗಿತು. ಈಗೀ ಸ್ವಾತಂತ್ರ್ಯ ವೃಕ್ಷವು ಸಂತಂತ್ರತೆಯ ಫಲವನ್ನು ಬಿಟ್ಟು 'ಭಾರತವು ಸರ್ವಸ್ವತಂತ್ರ ದೇಶ'ವೆಂದು ಸಾರಲ್ಪಡುವಂತಾಯಿತು. ಆಸ್ಯದ ಇತರ ಜನಾಂಗಗಳು ಈ ವೃಕ್ಷವನ್ನು ಆದರ್ಶವಾಗಿಟ್ಟುಕೊಳ್ಳಲು ಪ್ರಯತ್ನಪಡುವಂತೆಯೂ ಆಯಿತು.

★

ಸ್ವತಂತ್ರ ವಸಾಹತು ರಾಷ್ಟ್ರದಿಂದ, ಹೋಂರೂಲ್ ಸ್ವಾತಂತ್ರ್ಯಕ್ಕೂ, ಅಲ್ಲಿಂದ ಸ್ವರಾಜ್ಯಕ್ಕೂ, ಸ್ವರಾಜ್ಯದಿಂದ ಸಂಪೂರ್ಣ ಸ್ವಾತಂತ್ರ್ಯಕ್ಕೂ ಭಾರತವು ಮುಂದೆ ಮುಂದೆ ಸಾಗುತ್ತಿರುವಾಗ ಭಾರತೀಯರು ಸ್ವತಂತ್ರ ಜೀವನದ ತಿರುಳನ್ನು ತಿಳಿಕೊಂಡು ಅದನ್ನು ಅಳವಡಿಸಿಕೊಂಡರು. ಆಳೊಡೆಯರ ಶತಮಾನದ ಬಂಧನದಿಂದ ಮುಕ್ತಗೊಂಡ ಮೇಲೂ 'ನಮ್ಮನ್ನು ನಾವು ಆಳಬಲ್ಲೆವೆ?' ಎಂಬ ದಾಸ್ಯ ಮನೋಭಾವದ ಸಂದೇಹವು ನಮ್ಮನ್ನು ಬಿಟ್ಟುಹೋಗಿಲ್ಲ. ಈ ಸಂದೇಹವು ಅನೇಕ ನಿಷ್ಠಾವಂತ ದೇಶಭಕ್ತರ ದೃಷ್ಟಿಯನ್ನೂ ಮಬ್ಬುಗೊಳಿಸಿತ್ತು.

★

ಚಂದ್ರಗುಪ್ತ ಮೌರ್ಯನ ಕಾಲದ ನಗರ ಸಭಾಡಳಿತ (ಮುನ್ಸಿಪಲ್) ಪದ್ಧತಿಯನ್ನು ಪ್ರಾಚೀನ ಅಫಘಾನಿಸ್ಥಾನದ (ಇದು ಹಿಂದೆ ಭಾರತದ ಒಂದು ಪ್ರಾಂತ್ಯವಾಗಿತ್ತು.) ಜಿರ್ಗಾ ಎಂಬ ಜನಪ್ರತಿನಿಧಿ ಸಭೆಯ ಪದ್ಧತಿಯನ್ನೂ ನಾವು ಸ್ಮರಿಸಿಕೊಂಡರೆ ನಮ್ಮ ದೇಶದಲ್ಲಿ ಪ್ರಾತಿನಿಧಿಕ ಆಡಳಿತವಿರಲಿಲ್ಲವೆಂದು ಹೇಳಬರುತ್ತದೆಯೆ? ಕೌಟಿಲ್ಯನ ರಾಜನೀತಿ ಸೂತ್ರಗಳು ಐರೋಪ್ಯರ ರಾಜ್ಯಾಡಳಿತ ಕ್ರಮಗಳಿಗಿಂತ ಎಷ್ಟೋ ಶ್ರೇಷ್ಠವೆನಿಸುವವು.

ಕೌಟಿಲ್ಯನ ಸಿದ್ಧಾಂತ ಪ್ರಕಾರ ರಾಜಾಧಿಕಾರವು ಕೇವಲ ಮತೀಯವಾಗಿರದೆ ಅದು ಸಾಮಾಜಿಕ ಶ್ರೇಯಸ್ಸು ಮತ್ತು ಧಾರ್ಮಿಕ ನೀತಿಗಳನ್ನು ಒಳಗೊಂಡದ್ದಿರಬೇಕೆಂದಿದೆ. ವ್ಯಕ್ತಿಯ ರಾಜಕೀಯ ಹಕ್ಕು ಭಾಧ್ಯತೆಗಳು ಯಾವ ಮತೀಯ ಪಕ್ಷಪಾತದ್ದಿರಬಾರದು.

★

ಬೌದ್ಧ ಧರ್ಮೋನ್ನತಿಯ ಕಾಲಕ್ಕೆ ರಾಜತಂತ್ರವು ಪ್ರಜಾತತ್ವ ನೀತಿಗನುಗುಣವಾಗಿತ್ತು. ಅಲೆಕ್ಸಾಂದರನು ಭಾರತಕ್ಕೆ ಮುತ್ತಿಗೆ ಹಾಕಿದ್ದಾಗ ಪಂಜಾಬದಲ್ಲಿ ಪ್ರಜಾಪ್ರಭುತ್ವಾಡಳಿತಗಳಿದ್ದುವು. ಹಿರಿಯ ಪ್ರತಿನಿಧಿಗಳ ಅಧ್ಯಕ್ಷನಾಗಿ ಆರಿಸಲ್ಪಟ್ಟವನು ರಾಜ್ಯವಾಳುತಿದ್ದನು. ಆ ನಂತರದ ರಾಜತತ್ವ ಪದ್ಧತಿಯು ಅವುಗಳ ಸ್ಥಾನದಲ್ಲಿ ಸ್ಥಾಪಿತವಾಯಿತು. ಶಾಸ್ತ್ರ ನೀತಿಗನುಗುಣವಾಗಿ, ಸಮಾಜೋಭಿವೃದ್ಧಿ ಸಾಧಕರೆನಿಸುವ ಬ್ರಾಹ್ಮಣ ಮಂತ್ರಿಗಳ ನೇತೃತ್ವದಲ್ಲಿ ರಾಜನ ಅಧಿಕಾರವು ನಿಯಂತ್ರಿಸಲ್ಪಡುತಿತ್ತು. ವೇದ ಕಾಲದಲ್ಲಿ ಅರಸನನ್ನು ಚುನಾಯಿಸಿ ನೇಮಿಸುತಿದ್ದರು. ಹೀಗೆ ಅರಸನು ಪ್ರಜೆಗಳ ಸೇವಕನೆಂಬ ತತ್ವವು ಮುಂಚಿನಿಂದಲೂ ಇತ್ತು.

ಬಹುಸಂಖ್ಯಾಕ ಆಡಳಿತವು ಪ್ರಾಚೀನ ಭಾರತದಲ್ಲಿ ಸಾಮಾನ್ಯವಾಗಿತ್ತು. ಬಹುಜನಮತವೇ ಕೊನೆಯ ನಿರ್ಧಾರವಾಗುತಿತ್ತು. ಪ್ರಜಾಪ್ರತಿನಿಧಿಗಳಾದ ಮಂತ್ರಿಮಂಡಳಕ್ಕೆ ಅಪಾರ ಶಕ್ತಿ ವರ್ಚಸ್ಸುಗಳಿದ್ದವು. ಹಲವು ಸಂದರ್ಭಗಳಲ್ಲಿ ಅವರೇ ಅರಸನನ್ನು ಚುನಾಯಿಸುತಿದ್ದರು.

ಅರಸನ ನ್ಯಾಯಸ್ಥಾನವು ಆಗಿನಕಾಲದ ಪ್ರಿವಿ ಕೌನ್ಸಿಲ್ ಇಲ್ಲವೆ ಹೈಕೋರ್ಟ್ ಆಗಿತ್ತೆನ್ನಬಹುದು. ನಂತರ ಜಿಲ್ಲಾ ನ್ಯಾಯಸ್ಥಾನ, ಗ್ರಾಮ ನ್ಯಾಯಸ್ಥಾನಗಳು ಇದ್ದು ಜನರ ಪಂಚಾಯತದ ಮುಖಂಡನಿಂದ ನ್ಯಾಯ ತೀರ್ಮಾನವಾಗುತಿತ್ತು. ಆಗಿನ ಕಾಲದ ನ್ಯಾಯ ವಿಚಾರಣೆಗಳು ಬಹಿರಂಗವಾಗಿ ಸಾರ್ವಜನಿಕ ಸ್ಥಳದಲ್ಲಿ ಜರಗುತಿದ್ದುವು. ಅರಸನು ಕೂಡಾ ಅಂತರಂಗದಲ್ಲಿ ಗುಪ್ತವಾಗಿ ಆರೋಪ ವಿಚಾರಣೆ ಮಾಡುವುದೆಂದಿರಲಿಲ್ಲ. ಪ್ರಾಚೀನ ಗ್ರಂಥಗಳಿಂದಲೂ ಆಗಿನ ಕಾಲದ ಪ್ರವಾಸಿಗಳು ಬರೆದಿಟ್ಟ ದಾಖಲೆಗಳಿಂದಲೂ ನ್ಯಾಯ ತೀರ್ಮಾನವು ಶೀಘ್ರವಾಗಿಯೂ ಕ್ಲುಪ್ತ ಕಾಲದಲ್ಲಿಯೂ ಜರಗುತಿತ್ತು. ಆಗಿನ ನ್ಯಾಯಾಧೀಶರು ಸದ್ವ್ಯಕ್ತಿಗಳೂ, ಆಗಿನ ಪೋಲೀಸರು ಕರ್ತವ್ಯದಕ್ಷರೂ ಮತ್ತು ಜನತೆಯ ಧಾರ್ಮಿಕ ಪ್ರಾಮಾಣಿಕತೆಯವರೂ ಆಗಿದ್ದುದು ಈ ಪರಿಪೂರ್ಣತೆಗೆ ಕಾರಣ. "ಒಂದು ದೇಶವನ್ನು ಜಯಿಸಿಕೊಂಡರೂ ಅಲ್ಲಿನ ನ್ಯಾಯ ರೂಢಿಗಳನ್ನು ನಾಶಮಾಡಬಾರದು" ಎಂಬ ನ್ಯಾಯನೀತಿಯಿಂದ ಎಲ್ಲಾ ಅರಸರೂ ಪ್ರೇರಿತರಾಗಿದ್ದರು. ಮಾತ್ರವಲ್ಲ ಅರಸನಾದವನು ತಾನು ಜಯಿಸಿದ ದೇಶದ ಜನರ ಆಚಾರ ವಿಚಾರಗಳನ್ನು ಅನುಸರಿಸಬೇಕೆಂದೂ ಇತ್ತು.

★

ಶತಮಾನಗಳ ದಾಸ್ಯ ಜೀವನಾನಂತರ ಭಾರತಮಾತೆಯು ಹೆಚ್ಚಿನ ಶೋಭೆಯಿಂದ ಪುನರುತ್ಥಾನಗೊಳ್ಳುತ್ತಿರುವಳು. ಕಳೆದ ಜನವರಿಯಲ್ಲಿ ಭಾರತೀಯರು ಸ್ವಾತಂತ್ರ್ಯ ದಿನವನ್ನಾಚರಿಸಿ ಸ್ವತಂತ್ರ ಭಾರತದ ತಮ್ಮ ಧ್ಯೇಯವನ್ನು ಪುನಃ ಒತ್ತಿ ನಿರ್ಧರಿಸಿದರು. ಇದಾದ ಒಂದು ತಿಂಗಳಲ್ಲೇ ಇದುತ್ತನಕ ಅಸ್ಪಷ್ಟ ಘೋಷಣೆಯಲ್ಲೂ, ಆಡಂಬರದ ಹೇಳಿಕೆಗಳಲ್ಲೂ ಮಗ್ನರಾಗುತಿದ್ದ ಬ್ರಿಟಿಷ್ ಸರಕಾರದವರು ತಮ್ಮ ಧೋರಣೆ ಬದಲಿಸಿ ಭಾರತವನ್ನು ಬಿಟ್ಟು ಹೊರಡುವ ತಮ್ಮ ಕೊನೆಯುದ್ದೇಶವನ್ನು ಜಗತ್ತಿಗೆ ಸಾರಿದರು. 1948ನೇ ಜೂನ್ ತಿಂಗಳ ಕೊನೆ ಬ್ರಿಟಿಷ್ ಆಳ್ವಿಕೆಯ ಅಂತ್ಯಕಾಲವೆಂದು ನಿರ್ಣಯಿಸಲ್ಪಟ್ಟಿತು.

ಆದುದರಿಂದ 1942ರಲ್ಲಿ 'ಭಾರತ ಬಿಟ್ಟು ತೊಲಗಿರಿ' ಎಂಬ ಘೋಷವು ಕೇವಲ ಹುರುಳಿಲ್ಲದ ಬೊಬ್ಬೆಯಲ್ಲವೆಂದು ಜಗತ್ತಿಗೆ ತಿಳಿಯಿತು. ಸ್ವಾತಂತ್ರ್ಯವನ್ನು ಸಂಪಾದಿಸಲು ಭಾರತೀಯರ ನಿರ್ಧಾರವೆಷ್ಟಿದೆ ಎಂದು ಬಲಿಷ್ಠ ಬ್ರಿಟಿಷ್ ಸರಕಾರವು ಮನಗೊಂಡಿತು. ಆ ಘೋಷವು ಸ್ವಾತಂತ್ರ್ಯ ಮಂದಿರದ ಬೀಗದ ಕೈಯಾಯಿತೆನ್ನಬಹುದು.

★

ಆದುದರಿಂದ ಈ ವರ್ಷದ ರಾಷ್ಟ್ರೀಯ ವಾರದ ಆಚರಣೆಯು ಒಂದು ಘೋರ ರಾಜಕೀಯ ಪ್ರಯೋಗವೂ ಅಲ್ಲ, ಒಂದು ಗೊಡ್ಡು ಆಡಂಬರವೂ ಅಲ್ಲ, ಇಲ್ಲವೆ ಅದೊಂದು ಅರ್ಥರಹಿತ ಸಾಂಪ್ರದಾಯವೂ ಅಲ್ಲ. ಅದರೆ ಅದು ಗತ ಸಂಕಷ್ಟಗಳ ಸ್ಮರಣೆಯೂ, ವರ್ತಮಾನಕಾಲ ಪರಿಸ್ಥಿತಿಯ ಸಿಂಹಾವಲೋಕನವೂ ಭವಿಷ್ಯದ ಶ್ರೇಯಸ್ಸಾಧನೆಯೂ ಆಗಿರುವುದು. ಇಂದು ಭಾರತ ವರ್ಷವು ಸ್ವಾತಂತ್ರ್ಯ ಕಹಳೆಯನ್ನು, ವಿಮೋಚನೆಯ ಜಯಭೇರಿಯನ್ನು ಬಾರಿಸಿ ನಿದ್ರೆಯಲ್ಲಿ ತೂಗುತ್ತಿರುವ ಎಲ್ಲಾ ಆಸ್ಯ ಜನಾಂಗಗಳನ್ನು ಎಚ್ಚರಿಸುವಂತಾಗಿದೆ.

ಪಟ್ಟಾಭಿ ಸೀತಾರಾಮಯ್ಯ.

ಒರಿಸ್ಸಾದಲ್ಲಿ 1 ಲಕ್ಷ ಕುಷ್ಠ ರೋಗಿಗಳಿದ್ದಾರೆ. ಅಲ್ಲಿನ ಸರಕಾರದವರು ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆಗಳನ್ನು ಸ್ಥಾಪಿಸುವುದರ ಮೂಲಕ ಈ ಅನಿಷ್ಟ ವ್ಯಾಧಿಯ ಸಂಕಷ್ಟವನ್ನು ನಿವಾರಿಸಲು ಪ್ರಯತ್ನ ಮಾಡುವರು.

★

ESTD. 1906.

CANARA BANK, LIMITED.

(Incorporated in British India with Limited Liability)

(PROGRESS STATEMENT CORRECT TO THOUSANDS OF RUPEES)

LIABILITIES

	1945	1946
Capital Subscribed	29,00,000	29,00,000
Capital paid up	28,43,000	28,80,000
Reserve	11,00,000	11,00,000
Deposits	3,50,43,000	4,60,40,000
Due to Bankers	26,91,000	69,57,000
Call Deposits from Bankers	8,00,000	16,00,000
Branch Adjustments	22,07,000	21,09,000
Bills for collection and foreign bills negotiated	20,56,000	34,23,000
Other Liabilities	77,000	86,000
Profit for the year	3,61,000	4,19,000
Rs.	4,71,78,000	6,45,13,000

ASSETS

	1945	1946
Cash	1,01,91,000	1,16,16,000
Govt. Securities	1,80,45,000	2,75,61,000
Advances to customers	1,56,87,000	2,01,38,000
Bills for collection and Foreign Bills negotiated	20,56,000	34,23,000
Landed Properties	28,000	5,000
Bank Premises and Furniture and Fixtures	1,46,000	1,47,000
Other Assets	10,25,000	16,23,000
Rs.	4,71,78,000	6,45,13,000

ಯೆರುಸಲೇಮಿನಿಂದ ಯೇಸುವೂ, ಮೆಕ್ಕಾದಿಂದ ಮಹಮ್ಮದನೂ, ಭಾರತದಿಂದ ಬುದ್ಧನೂ ವಿಶ್ವಧರ್ಮಧುರಿಗಳನ್ನು ಹರಿಯಬಿಟ್ಟರು. ಇವುಗಳ ಪವಿತ್ರವಾದ ಧರ್ಮೋಪದೇಶವು ಜಗತ್ತಿನ ಅನಾಗರಿಕ ಮುರುಳು ಕಾಡುಗಳನ್ನು ಫಲವತ್ತಾಗಿ ಮಾಡಿತು.' ಐರೋಪ್ಯರು ಬಹುಸಂಖ್ಯೆಯಲ್ಲಿ ಆಸ್ಯದ ಯೇಸುವನ್ನೂ, ಸ್ವಲ್ಪಮಟ್ಟಿನಲ್ಲಿ ಆಸ್ಯದ ಮಹಮ್ಮದನನ್ನೂ ಮತ್ತೆ ಸ್ವಲ್ಪ ಮಟ್ಟಿಗೆ ಬೌಧಧರ್ಮವನ್ನೂ ಅನುಸರಿಸಿದರು

ಹೀಗೆ ಪ್ರತಿಯೊಂದು ವಿಚಾರದಲ್ಲೂ ಇಂದು ವರ್ಣದರ್ಪದಿಂದುನ್ಮತ್ತರಾದ ಐರೋಪ್ಯರು ಆಸ್ಯದ ನಾಗರೀಕತೆಯನ್ನು ಒಂದರ ಹಿಂದೆ ಒಂದಾಗಿ ಸ್ವೀಕರಿಸುತ್ತ ಬಂದರು. ತಾವು ಕಲಿತುದರ ದುರುಪಯೋಗ ಮಾಡಿ ಅವರು ತಮ್ಮ ಜ್ಞಾನದ ಉಗಮಸ್ಥಾನದ ಮೇಲೇ ಕೈಯೆತ್ತಿ ಅದನ್ನು ತಮ್ಮ ದೂರ್ತ ದುರಾಶೆಗಳಿಗೆ ಬಲಿಮಾಡಿದರು ಪರಿಣಾಮವಾಗಿ ಆಸ್ಯವಿಂದು ಐರೋಪ್ಯದ ಬಿಳಿ ಜನಾಂಗಗಳ ದಾಸ್ಯ ದೇಶವಾಗಿ ಬಾಳಬೇಕಾಯಿತು

ಇಂದು ಜನಾಂಗಿಕ ಧರ್ಮವು ಒಂದು ಹಳೇ ವಿಚಾರವಾಗಿದೆ. ಯುಗಾಂತರಗಳ ಹೊರೆಯಿಂದದು ಬಗ್ಗಿ ಬೆಂಡಾಗಿ ಸೊರಗಿ ಸುಗ್ಗಿಹೋದಂತಾಗಿದೆ ಪ್ರಾಚೀನ ಈಜಿಪ್ತಿನವರು ತಮ್ಮ ಕಾಲದ ಇತರ ಜನರಿಗಿಂತ ನಾವು ಶ್ರೇಷ್ಠರೆಂದು ತಿಳಿದಿದ್ದರು ಆನಂತರ ಯೆಹೂದಿಗಳು ತಾವು ದೇವರ ಚುನಾಯಿತ ಜನ ರೆಂದು ಕೆಲವು ಕಾಲ ಹೆಮ್ಮೆಪಟ್ಟರು ಈಜಿಪ್ತರಿಗಿಂತ ಹಿಂದೆ ಜನಾಂಗಿಕ ದರ್ಪದಿಂದುನ್ಮತ್ತರಾದ ಆರ್ಯರು ಭಾರತಕ್ಕೆ ಬಂದು ಇಲ್ಲಿನ ದ್ರಾವಿಡರಿಗಿಂತ ತಾವು ಮೇಲ್ತರಗತಿಯವರೆಂದು ಮೆರೆದರು ದ್ರಾವಿಡರಾದರೋ ಇಲ್ಲಿಯ ಗುಡ್ಡ ಕಾಡು ನಿವಾಸಿಗಳನ್ನು ಕೀಳಾಗಿರಿಸಿ ತಮ್ಮ ದರ್ಪವನ್ನು ತೋರ್ಪಡಿಸಿದರು

ಇತರರಿಗಿಂತ ಮೇಲೆಂಬ ಭಾವನೆಯಿಂದೊಡಗೂಡಿದ ಜನರ ದಾಖಲೆಗಳು ಇತಿಹಾಸದಲ್ಲಿ ತುಂಬಾ ಇವೆ ಆದರೂ ಯಾವ ಜನಾಂಗಕ್ಕೂ ಬಹುಕಾಲದ ವರೆಗೆ ಈ ಶ್ರೇಷ್ಠತೆಯನ್ನುಳ್ಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಜನಾಂಗದರ್ಪವು ಶಕ್ತಿವಂತ ರಾಷ್ಟ್ರಗಳಲ್ಲಿ ಮಾತ್ರ ತಲದೋರುತಿತ್ತು ಆ ಶಕ್ತಿಯನ್ನು ಕಳಕೊಂಡ ಕೂಡಲೇ ಆ ದರ್ಪದ ಪಿತ್ತವೂ ಇಳಿದುಹೋಗುತ್ತದೆಂದು ಚರಿತ್ರೆಯ ನಿರೂಪಗಳಿಂದ ನಾವು ತಿಳಿದುಕೊಳ್ಳಬಹುದು

ನಮ್ಮದೇ ಕಾಲದಲ್ಲಿ ಜರ್ಮನರು ತಾವು ಅತೀ ಶ್ರೇಷ್ಠ ಜನಾಂಗವೆಂದೂ ಕೆಲವು ಕಾಲ ಮೆರೆದರು ಅವರ ಬಳಿ ಸೋತವರು ಕೆಲಕಾಲ ಅದನ್ನು ಒಪ್ಪಿಕೊಳ್ಳಲೇಬೇಕಾಯಿತು. ನಂತರ ಪುಟ್ಟ ಜಪಾನರೂ ತಮ್ಮ ಶ್ರೇಷ್ಠತೆಯನ್ನು ಜಗತ್ತಿಗೆ ಸಾರಿದರು ಆದರೆ ಇಂದು ಈ ಎರಡು ಜನಾಂಗಗಳು ಸಂಪೂರ್ಣ ಸೋಲಿಗೆ ಗುರಿಯಾದ ನಂತರ ಅವರ ದರ್ಪದ ಪೊಳ್ಳುತನವು ಸ್ಪಷ್ಟವಾಗಿ ಕಾಣುತ್ತಿದೆ.

ಆಸ್ಯವು ಐರೋಪ್ಯರಿಗೆ ನಾಗರಿಕತೆ ಕೊಟ್ಟಿತು

ವರ್ಣ ದರ್ಪದ ಕೃತಕ ಶ್ರೇಷ್ಟತೆ

ಜರ್ಮನ್ ವಿಜ್ಞಾನಿಗಳ ತತ್ವದ ಪೊಳ್ಳುತನ

ದ್ವಾರೆ ವಿಶೇಷ ಜ್ಞಾನ ಪ್ರತಿಭೆಗಳು ಸಂದರ್ಭ ಸನ್ನಿವೇಶಗಳಿನನುಸಾರವುಂಟಾಗುವಂತಹುಗಳೆಂದು ಅವರು ರುಜುವಾತು ಗೊಳಿಸಿರುವರು.

ಉದಾಹರಣೆಗಾಗಿ ಈಗ ಅತೀ ಕೀಳು ಜನಾಂಗವೆಂದು ಭಾವಿಸಲ್ಪಡುವ ನಿಗ್ರೋ ಜನರು 800 ವರ್ಷಗಳ ಹಿಂದೆ ಲೋಹಗಳ ಉಪಯುಕ್ತತೆಯನ್ನು ಕಂಡು ಹಿಡಿದಿದ್ದರು ಆ ಕಾಲದಲ್ಲಿ ಅವರದೊಂದು ವಿಶ್ವವಿದ್ಯಾಲಯವು ಟಿಂಬಕ್ಟು ಎಂಬಲ್ಲಿತ್ತು ಅದೇ ಕಾಲಕ್ಕೆ ಐರೋಪ್ಯರ ನಾಗರೀಕತೆಯು ಬಾಲ್ಯಾವಸ್ಥೆಯಲ್ಲಿತ್ತೆನ್ನಬಹುದು.

ಮಹತ್ಕಾರ್ಯಗಳು

ಇಂದು ಐರೋಪ್ಯರು ಜ್ಞಾನ ಮಾರ್ಗದಲ್ಲಿ ತುಂಬಾ ಮುಂದುವರಿದವರಿರುವರೆಂದು ಹೇಳಲ್ಪಡುತ್ತಿದೆ ಆದರೆ ಅವರ ಇಂದಿನ ಜ್ಞಾನಕ್ಕೆ ಬುನಾದಿ ಹಾಕಿದವರು ಬೇರೆಯವರೇ ಇರುತ್ತಾರೆ ಮುಖ್ಯವಾಗಿ ಇಂದಿನ ಪಾಶ್ಚಾತ್ಯರ ಜ್ಞಾನ ಪ್ರಗತಿಯು ಪ್ರಾಚೀನ ಆಸ್ಯನರ ಮೂಲ ಜ್ಞಾನದ ತಳಹದಿಯ ಮೇಲೆ ಅಭಿವೃದ್ಧಿಸಲ್ಪಟ್ಟದ್ದಿರುತ್ತದೆ

ಒಂದೇ ವಿಷಯವನ್ನು ನಾವು ಮೊದಲು ತೆಗೆದುಕೊಳ್ಳೋಣ ಅದೆಂದರೆ ಸಿಡಿಮದ್ದಿನ ವಿಚಾರ ಚೀನೀಯರು ಸಾವಿರಾರು ವರ್ಷಗಳ ಹಿಂದೆ ವಿವಿಧ ಧಾತುಗಳನ್ನು ಮಿಶ್ರಣ ಮಾಡಿ 'ಪಟಾಕಿ' ಕಟ್ಟುತ್ತಿದ್ದರ ಇಂದಿಗೂ ಆ ಕೆಲಸದಲ್ಲಿ ಅವರು ನಿಪುಣರು. ಈ ರಹಸ್ಯವನ್ನು ಐರೋಪ್ಯರು ಕಲಿತು ಕೊಂಡು ಗುಂಡು ಫಿರಂಗಿಗಳನ್ನು ಕಟ್ಟಿ ಅವನ್ನು ತಮ್ಮ ಯುದ್ಧದ ಒಂದು ಮುಖ್ಯ ಆಯುಧವಾಗಿ ಮಾಡಿಕೊಂಡರು ಇದರ ಬಲದಿಂದಲೇ ಅವರು ವರ್ಣ ಜನಾಂಗಗಳನ್ನು ಪಾದಾಕ್ರಾಂತ ಮಾಡಿದರು. ದಾಸ್ಯದಲ್ಲಿ ಬಿದ್ದ ಜನರ ನಾಗರೀಕತೆ ಹೊಂಡದಲ್ಲಿ ಬಿದ್ದ ವಾಹನದಂತೆ ಹೀಗೆ ಆಸ್ಯದವರ ಪ್ರಗತಿ ರಥ ಹಿಂದುಳಿಯಿತು, ಐರೋಪ್ಯದು ಮುಂದರಿಯಿತು

ಇನ್ನು ಕ್ರಮೇಣ ಒಂದೊಂದಾಗಿ ತೆಗೆದುಕೊಳ್ಳೋಣ ಭಾರತದ ಅಗಸ್ತ್ಯ ಮುನಿಯು ಇಂದಿನ ರಾಸಾಯನಿಕ ಶಾಸ್ತ್ರದ ಮೂಲ ಪಿತನೆನಿಸಿ ಕೊಳ್ಳುತ್ತಾನೆ ಗಣಿತವೂ, ಜ್ಯೋತಿಷ್ಯಗಳೂ ಸಾವಿರಾರು ವರ್ಷಗಳ ಹಿಂದೇ ಇಲ್ಲೇ ಕಂಡು ಹಿಡಿಯಲ್ಪಟ್ಟು ವೃದ್ಧಿಗೊಳಿಸಲ್ಪಟ್ಟುವೆಂಬುದು ನಿರ್ವಿವಾದ. ಇಲ್ಲಿಂದ ಅರಬರು ಅದನ್ನು ಮಧ್ಯ ಪೂರ್ವಕೊಯ್ದರು ಅಲ್ಲಿಂದ ಅದು ಯುರೋಪಿಗೆ ಹರಡಿತು

ಎರಡು ಸಾವಿರ ವರ್ಷಗಳ ಹಿಂದೆ ಮುದ್ರಣ ಕೆಲಸವು ಚೀನದಲ್ಲಿ ಸಾಮಾನ್ಯವಾಗಿ ತಿಳಿದಿತ್ತು ಇಂದಿನ ಐರೋಪ್ಯರಾಗಲಿ ಅಮೇರಿಕನರಾಗಲಿ ಈ ಮೂಲ ಜ್ಞಾನಗಳ ಆಧಾರವಿಲ್ಲದೆ ಏನನ್ನಾದರೂ ಮಾಡಲು ಸಮರ್ಥರಾಗುತಿದರೆ? ಇಂದು ಐರೋಪ್ಯರಿಂದ 'ಕೀಳು' ಎನಿಸಲ್ಪಡುವ ಆಸ್ಯನ್ನರಿಗೆ ಈ ಪ್ರಥಮ ಜ್ಞಾನದ ಕೀರ್ತಿ ಸಲ್ಲುವುದು

ಶ್ರೇಷ್ಟತೆ ಎಲ್ಲರಲ್ಲೂ ಇದೆ

ಜ್ಞಾನ ನಾಗರೀಕತೆ ಮತ್ತು ಸಂಸ್ಕೃತಿಗಳು ಯಾವುದೊಂದು ವಿಶಿಷ್ಟ ಜನಾಂಗದ ಸೊತ್ತಾಗಿಲ್ಲ ಎಲ್ಲಾ ಜನಾಂಗಗಳ ಸಂಯುಕ್ತ ಶ್ರಮದಿಂದ ನಾಗರೀಕತೆಯು ಇಂದಿನ ಮಟ್ಟಕ್ಕೆ ಮುಟ್ಟಿದೆ ಅದನ್ನು ಇನ್ನು ವಿಕಾಸಗೊಳಿಸಲು ಎಲ್ಲಾ ಜನಾಂಗಗಳ ಸಹಕಾರವು ಅವಶ್ಯಕ ಯಾವ ಜನಾಂಗವೂ ಶ್ರೇಷ್ಠವೆಂದೆನಿಸಿ ಏಕಾಂಗಿಯಾಗಿ ಬಾಳಲಾರದು. ಜನಾಂಗಗಳ ಎಲ್ಲಾ ವ್ಯವಹಾರಗಳಲ್ಲಿ ಪರಸ್ಪರ ಸಹಾಯವೂ ಅನ್ಯೋನ್ಯ ಸಾಂಸ್ಕೃತಿಕ ಮತ್ತು ಮಾನವೀಯ ಭ್ರಾತೃತ್ವವೂ, ಅತ್ಯಾವಶ್ಯಕ.

ರಾಯರ ಗುದ್ದಾಟ

ಬೊಂಬಾಯಲ್ಲಿ ದೇಶಿ ರಾಜರ ಸಭೆ ಜರಗಿದಾಗ ಹಲವು ಸಂಸ್ಥಾನಾಧೀಶ್ವರರ ನಿಜ ಅಂತರ್ಯ ಬಯಲಿಗೆ ಬಂತು. ಇದು ತನಕ ದೇಶ ಕಲ್ಯಾಣವೇ ತನ್ನ ಗುರಿಯೆಂದು ತೋರಿಸಿಕೊಂಡ ಭೋಪಾಲದ ನವಾಬರ ನಿಜ ವೇಷವೂ ತಿಳಿಯಿತು. ದೇಶಿ ಸಂಸ್ಥಾನಗಳು ಶೀಘ್ರದಲ್ಲಿ ಘಟನಾ ಸಮಿತಿ ಸೇರಬಾರದೆಂಬ ಭೋಪಾಲರ ಲೀಗ್ ಧೋರಣೆಯನ್ನು ಬಿಕಾನಿರಿನ ಮಹಾರಾಜರು ವಿರೋಧಿಸಿ ಸಭೆಯಿಂದ ಎದ್ದು ಹೋದರು ಗ್ವಾಲಿಯರ್ ಮಹಾ ರಾಜರೂ ಹಾಗೇ ಮಾಡುವುದಾಗಿ ಖಂಡ ತುಂಡ ತಿಳಿಸಿದಾಗ ಭೋಪಾಲರು ತಬ್ಬಿಬ್ಬಾಗಿ ತಮ್ಮ ಧೋರಣೆಯನ್ನು ಚಮತ್ಕಾರವಾಗಿ ಬದಲಾಯಿಸಿ ಲಾಗ ಹೊಡೆದರು

ಈಗ ದೇಶಿ ಸಂಸ್ಥಾನಗಳು ಬೇಕಾದಾಗ ಘಟನಾ ಸಮಿತಿಗೆ ಸೇರಬಹುದೆಂದು ನಿರ್ಣಯಿಸಲಾಗಿದೆ ಬಿಕಾನಿರ್, ಗ್ವಾಲಿಯರ್, ಪಾಟಿಯಾಲಾ, ಜೈಪುರ ಮತ್ತು ಜೋಧಪುರ ಈ ಸಂಸ್ಥಾನಾಧೀಶ್ವರರು ಮುಂಚಿತವಾಗಿಯೇ ಒಂದು ಸಂಯುಕ್ತ ನಿರ್ಧಾರ ಮಾಡಿ ಸಭೆಗೆ ಹೋಗಿದ್ದರು ಮಂಡಳಾಧೀಶ್ವರ ಮಂಡಳಕ್ಕೆ ಇದುತನಕ ಮುಖಂಡರಾಗಿದ್ದ ಭೋಪಾಲರನ್ನು ಸದ್ಯದಲ್ಲೇ ನಿವೃತ್ತ ಮಾಡಲಾಗುವುದೆಂದು ತಿಳಿದು ಬಂದಿದೆ

ಹಿಟ್ಲರನ ಮೀನ್ ಕಾಂಫ್ ಗ್ರಂಥವು ಜರ್ಮನಿಯಲ್ಲಿ ಇನ್ನು ಕೊಂಡುಕೊಳ್ಳಲಾಗುತ್ತದೆ ಅದರ ಕಳ್ಳ ಸಂತೆ ಬೆಲೆ 50 ಪವನುಗಳಷ್ಟಿದೆ ಎಂದು ಅಮೇರಿಕನ್ ಸೈನಿಕರು ತಿಳಿಸುತ್ತಾರೆ

ಪ್ರಯಾಣಿಕರಿಗೆ ಸ್ಪೆಶ್ಯಲು ಸರ್ವಿಸಿನ ಸೂಚನೆ.

ಮುಲ್ಕಿ, ಬಪ್ಪನಾಡು ಪೊಳಲಿ ಇತ್ಯಾದಿ ಸ್ಥಳಗಳಲ್ಲಿ ಜರಗಲಿರುವ ಜಾತ್ರೆಯ ಸಮ್ಬಂಧ ಪ್ರಯಾಣಿಸುವ ಯಾತ್ರಿಕರ ಬಗ್ಗೆ ಸ್ಪೆಶ್ಯಲು ಸರ್ವಿಸುಗಳನ್ನು ರನ್ ಮಾಡುವ ಏರ್ಪಾಡನ್ನು ಮಾಡಲಿಚ್ಛಿಸಿದ್ದಾಗ್ಯೂ ಪ್ರಕೃತ ಮೂರು ತಿಂಗಳಿಗೆ ಸಿಗಬೇಕಾದ ಪೆಟ್ರೋಲು ಕೋಟಾದಲ್ಲಿ ಕಡಿತವಾಗಿರುವುದರಿಂದ ಕೆಲವು ಬಸ್ಸುಗಳಿಗೆ ಪೆಟ್ರೋಲು ಸಾಕಾಗದೆ ಕೆಲವು ಸರ್ವಿಸುಗಳನ್ನು ತಾತ್ಕಾಲಿಕವಾಗಿ ನಿಲ್ಲಿಸುವ ಸಂದರ್ಭ ಬಂದೊದಗಿರುವುದರಿಂದಲೂ, ಮತ್ತು ಗೇಸು ಬಸ್ಸುಗಳು ಸಹ ಕಡಿಮೆ ಇದ್ದು ಅವುಗಳಿಂದ ದಿನವಹಿ ಸರ್ವಿಸುಗಳನ್ನು ರನ್ ಮಾಡಿಸಲ್ಪಟ್ಟನಂತರವೇ ಸಾಧ್ಯವಿದ್ದಲ್ಲಿ ಮಾತ್ರ ಸ್ಪೆಶ್ಯಲು ಸರ್ವಿಸುಗಳನ್ನು ರನ್ ಮಾಡಬೇಕಾಗುತ್ತದೆ ಅಲ್ಲದೆ ಕೋಸ್ಟಲ್ಯಾನಿನಲ್ಲಿ ಕೆಲವು ಕಡೆಗಳಲ್ಲಿ ಪೆಟ್ರೋಲು ಮತ್ತು ಕೆಲವು ಕಡೆಗಳಲ್ಲಿ ಗೇಸು ಬಸ್ಸುಗಳಿರುವುದರಿಂದ ಸಾಧ್ಯವಿದ್ದ ಸ್ಥಳದ ವರೇಗೆ ಮಾತ್ರ ಸ್ಪೆಶಲು ರನ್ ಮಾಡಬೇಕಾಗಿರುತ್ತದೆ. ಉದಾಹರಣೆಗಾಗಿ ಮಂಗ್ಳೂರು—ಮುಲ್ಕಿ ಲ್ಯಾನಿನಲ್ಲಿ ಪಾವಂಜೆಯಿಂದ ಮುಲ್ಕಿಗೆ ಪೆಟ್ರೋಲು ಬಸ್ಸು ಮಾತ್ರ ರನ್ ಆಗುತ್ತಿರುವುದರಿಂದ, ಮುಲ್ಕಿ ರಥೋತ್ಸವ ಹಾಗೂ ಬಪ್ಪನಾಡು ಜಾತ್ರೆಯ ಸಮ್ಬಂಧ ಸ್ಪೆಶಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ ಗೇಸು ಬಸ್ಸುಗಳ ಅನುಕೂಲತೆ ನೋಡಿ ಪಾವಂಜೆ ತನಕ ಮಾತ್ರ ಸ್ಪೆಶ್ಯಲುಗಳನ್ನು ರನ್ ಮಾಡಲಾಗುವುದು. ಆದಕಾರಣ ಜಾತ್ರೆಯ ಬಗ್ಗೆ ಪ್ರಯಾಣಿಸಲಿಚ್ಛಿಸುವ ಯಾತ್ರಿಕರು ಸ್ಪೆಶಲ್ ಸರ್ವಿಸು ರನ್ ಆಗಬಹುದೆಂಬೀ ಹೆಚ್ಚಿನ ಭರವಸೆ ಇಡದೆ ಸೀಟು ಇದ್ದ ಹಾಗೆ ನಮ್ಮ ದಿನವಹಿ ಸರ್ವಿಸುಗಳಲ್ಲಿ ಪ್ರಯಾಣಿಸಬೇಕಾಗಿ ಅಪೇಕ್ಷಿಸುತ್ತೇವೆ

ಅಲ್ಲದೆ ಮದುವೆ ಇತ್ಯಾದಿ ಸಮಾರಂಭಗಳ ಬಗ್ಗೆ ಸ್ಪೆಶ್ಯಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ R. T. O. ಕೊಯಂಬುತ್ತೂರು ಇವರಿಂದ ಪರ್ಮಿಶನ್ ಪಡಕೊಂಡೇ ಅಂಥಾ ಸ್ಪೆಶ್ಯಲುಗಳನ್ನು, ಗೇಸು ಬಸ್ಸುಗಳ ಅನುಕೂಲತೆ ನೋಡಿ ರನ್ ಮಾಡಬೇಕಾಗಿರುವುದರಿಂದ, ಹಾಗೆ ಸ್ಪೆಶ್ಯಲು ಬಸ್ಸುಗಳನ್ನು ಅಪೇಕ್ಷಿಸುವವರು, ಸ್ಪೆಶ್ಯಲುಗಳ ಬಗ್ಗೆ ಪರ್ಮಿಶನ್ ಪಡಕೊಳ್ಳುವರೆ ನಮಗೆ ಅನುಕೂಲವಾಗುವಂತೆ ತಮ್ಮ ಅರ್ಜಿಗಳನ್ನು ನಮಗೆ 20 ದಿವಸಗಳಿಗೆ ಮುಂಚಿತವಾಗಿ ಬರಕೊಳ್ಳಬೇಕಾಗಿ ಸಾರ್ವಜನಿಕರಿಗೆ ತಿಳಿಸಲಪೇಕ್ಷಿಸುತ್ತೇವೆ

ಮಂಗ್ಳೂರು,
29-3-1947.

ಜೊಯಿಂಟ್ ಮೆನೇಜರ್ಸ್,
ದಿ. ಕಂಬೈಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

ಸರ್ವಸಾಮಾನ್ಯರು

ವಿಜ್ಞಾನಿಗಳು ವಿವಿಧ ಜನಾಂಗೀಕರ ಶಾರೀರಿಕ ಮತ್ತು ಮಾನಸೀಕ ಶಕ್ತಿಗಳನ್ನು ತುಲನಾತ್ಮಕವಾಗಿ ಹೋಲಿಸಿ ಪರಿಶೀಲನೆ ನಡೆಸಿದ್ದಾರೆ ಎಲುಬುಗಳನ್ನೂ, ತಲೆಬುರುಡೆಗಳ ರಚನೆಯನ್ನೂ, ಮಿದುಳನ್ನೂ, ರಕ್ತಕಣಗಳನ್ನೂ ಸೂಕ್ಷ್ಮವಾಗಿ ವರ್ಗೀಕರಿಸಿ ನೋಡಿದ್ದಾರೆ. ಆದರೆ ಮಿದುಳು, ಹೃತ್ಕೋಶ, ಶ್ವಾಸಕೋಶ ಮತ್ತು ನರಮಂಡಲದ ಲಕ್ಷಣಗಳು ಎಲ್ಲರಿಗೂ ಒಂದೇ ತರವಾಗಿರುವುದನ್ನು ಅವರು ಸಿದ್ಧಾಂತಗೊಳಿಸಿ

THE CANARA BANKING CORPORATION LTD.

(Incorporated in British India with Limited Liability)

Estd: 1906.

Head Office: UDIPI, S. Kanara.

CAPITAL:	Rs.
Authorised	25,00,000
Issued, subscribed & called up	16,00,000
Paid up:	15,97,145
RESERVES.	5,25,000
DEPOSITS	07,47,928
TOTAL RESOURCES	3,00,01,186

With a net work of branches & Agencies in all principal cities of India, we shall be able to render efficient collection services.

BANKING BUSINESS OF EVERY DESCRIPTION TRANSACTED.

ಅಮೃತಾಂಜನ

ತಲವೇದನ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷವುಂತಾದ ಬೇನೆ, ಪಕ್ಷವಾತ, ನೊಡಿವೆ ವೊದಲಾದ ಎಲ್ಲಾ ರೋಗ ಗಳಿಗೂ ಸಿದ್ಧೌಷಧ.

ಅಮೃಂತಾಂಜನ ಡಿಪ್ರೋ. ಬೊಂಬ್ಯಾ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE BOMBAY LIFE ASSURANCE COMPANY LIMITED

(ESTD. 1910)

Peace and Security........

The Mightiest War to secure freedom for the oppressed Nations of Europe has ended. With many attempts at securing the four Freedoms, we do not seem to be anywhere near it. We, in our humble way, have been contributing to this Individual Material Freedom, in War as well as in Peace, by extending Insurance Service to all who seek it.

1945 completed Business { **Company's: Over $2\frac{3}{4}$ Crores**
Ours: About 50 lakhs.

Kochikar Brothers, Limited.

(ESTD. 1908)

Chief Agents for South India and Special agents for Bombay City & Suburbs.

"Bombay Life Building," Gandhi Nagar, UDIPI.

With Offices at:

MADRAS, BANGALORE, TRIVANDRUM, MANGALORE, MADURA, CALICUT, BOMBAY, & UDIPI.

And Agencies all over South India

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients, under the supervision of the experienced staff. A specific for the puerperal diseases and also valuable to ~~puerperal women as tonic.~~ increases the vitality and sexual vigour. Also useful in habitual abortion and all diseases pertaining to the heart & lungs.

Depot: **Maharata Galli, Hubli.**

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ಕಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪ್ರೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಕು 18—4—1947 [ಸಂಚಿಕೆ 16]

ವಾರಾಂತ್ಯ ವರದಿ ವಿಮರ್ಶೆ

ಮಾತುಕತೆ ಮುರಿದುವೆ?

ಮಹಾತ್ಮಾ ಮೌಂಟ್‌ಬೆಟನ್ ಮಾತುಕತೆಗಳು ಅನಿರೀಕ್ಷಿತವಾಗಿ ಕೊನೆಗೊಂಡದ್ದು ರಾಜಕೀಯ ಕೇಂದ್ರಗಳಲ್ಲಿ ಕೌತುಕವನ್ನುಂಟುಮಾಡಿದೆ. ಮಹಾತ್ಮರಿಗೆ ಈ ಮಾತುಕತೆಯ ಫಲಿತಾಂಶದ ಕುರಿತು ಯಾವ ಆಸಕ್ತಿಯೂ ಇಲ್ಲದಾಗಿದೆ. ಇದರಿಂದ ಇದುತನಕ ನಡೆದ ಚರ್ಚೆಯು ತೃಪ್ತಿಕರವಾಗಿ ಸಾಗಿಲ್ಲವೆಂದು ಸ್ಪಷ್ಟವಾಗುತ್ತದೆಂದು ಅರ್ಥ ಮಾಡಿಕೊಳ್ಳಲಾಗಿದೆ. ಮಹಾತ್ಮರು ತಮ್ಮ ಪ್ರಾರ್ಥನಾ ಭಾಷಣದಲ್ಲಿ ಬಹುಸಂಖ್ಯಾಕ ಮುಸಲ್ಮಾನರಿರುವ ಪ್ರಾಂತ್ಯಗಳಲ್ಲಿ ಹಿಂದೂ ಸಿಕ್ಖರು ಅಹಿಂಸಾತ್ಮಕವಾಗಿ ಪಾಕಿಸ್ತಾನವನ್ನು ಪ್ರತಿಭಟಿಸಬೇಕೆಂದು ಉಪದೇಶಿಸಿರುವುದು, ಪಾಕಿಸ್ತಾನದ ಪ್ರಶ್ನೆಯೇ ಈ ಮಾತುಕತೆಗಳಲ್ಲಿ ಪ್ರಧಾನ ಸ್ಥಾನ ಪಡೆದಿದೆ ಎಂಬ ವಿಷಯವು ಸ್ಪಷ್ಟವಾಗುತ್ತದೆ. ಮಿ| ಜಿನ್ನರು ತಮ್ಮ ಹಟವಾದಿತನದಿಂದ ಹಿಂದೆ ಸರಿಯಲಿಲ್ಲವೆನ್ನಬಹುದು.

ಇದೇ ಸಮಯದಲ್ಲಿ ಪಂಡಿತ್ ಜವಾಹರಲಾಲ ನೆಹರೂರವರು ಭಾರತದ ಭವಿಷ್ಯವನ್ನು [illegible] ಭಾರತೀಯ [illegible] ಇತ್ತೀಚೆಗೆ [illegible] ಪಕ್ಷದವರಿಂದ [illegible] ಸಮಸ್ಯೆಗಳನ್ನು ಪರಿಹರಿಸಲಾಗುತ್ತಿಲ್ಲವೆಂದು ಅವರು ಮನಗಂಡಿರುವರು. ಈ ದೃಷ್ಟಿಯಿಂದ ಬ್ರಿಟಿಷ್ ಸರಕಾರದ ಹೊಸ ಧೋರಣೆಯು ಬಹುಸಂಖ್ಯಾಕರಿಗೆ ತೃಪ್ತಿಕರವಾಗಿಲ್ಲವೆಂದು ಊಹಿಸಲಾಗಿದೆ. ಸಾಮ್ರಾಜ್ಯಶಾಹಿಯು ತನ್ನ ಹಳೆ ಆಟದಲ್ಲಿ ಮಗ್ನವಾಗಿರುವುದೆಂಬ ಸಂದೇಹವುಂಟಾಗಿದೆ.

ಯಥಾ ಪ್ರಕಾರ ದೇಶ ಮುಖಂಡರೊಡನೆ ಮಾತುಕತೆಯಾದೊಡನೆ ವ್ಯಾಸರಾಯರಾದವರು ಪ್ರಾಂತ್ಯ ಗವರ್ನರರುಗಳನ್ನು ಕರೆಸುವಂತೆ ಮೌಂಟ್‌ಬೆಟನರೂ ದಿಲ್ಲಿಯಲ್ಲಿ ಗವರ್ನರ್ ಸಭೆಯನ್ನು ನಡೆಸಿವರು. ಹೆಚ್ಚಿನ ಸಂದರ್ಭಗಳಲ್ಲಿ ಬಿಗು ಧೋರಣೆಯ ಸೂಚನೆ ಕೊಡಲು ಇಂತಹ ಸಭೆಯು ಕರೆಯಲ್ಪಟ್ಟದ್ದು ಅನುಭವ ಸಿದ್ಧವಾಗಿದೆ. 1948ರ ಜೂನಿನ ಮೊದಲೇ ಗಲಭೆಯುಂಟಾಗುವ ಸಂಭವವನ್ನು ಬ್ರಿಟಿಷ್ ಪ್ರತಿನಿಧಿಗಳು ಮನಗಂಡಿರಬಹುದೆ?

ನೌಕಾಲಿಯ ನಾಟಕ

ನೌಕಾಲಿಯಿಂದ ಪುನಃ ಶೋಚನೀಯ ಸುದ್ದಿಗಳು ಬರಹತ್ತಿವೆ. ಹೊಸ ಅನಾಚಾರವು ಅಲ್ಲಿ ಪ್ರಾರಂಭಿಸಲಾಗಿದೆಯೆಂದು ಮಹಾತ್ಮರ ಪ್ರತಿನಿಧಿ ಸತೀಶ್ ದಾಸ್ ಗುಪ್ತರು ತಿಳಿಸುತ್ತಾರೆ. [illegible] ಪತ್ರಿಕೆಗಳ [illegible] ಹೆದರಿಕೆ ಬೆದರಿಕೆಗಳಿಂದ ಹಿಂದೂ ಜನರು ಹಳ್ಳಿಗಳನ್ನು [illegible] ಈ ದುಸ್ಥ ಜನರು ಸರಕಾರದ ಒತ್ತಾಯದಿಂದ [illegible] ಆ ಪ್ರದೇಶಗಳಲ್ಲಿ [illegible] ನೌಕಾಲಿಯ ಅಲ್ಪಸಂಖ್ಯಾಕ ಹಿಂದುಗಳು ಸಹಜವಾಗಿ ಭೀಕರ ಸಂಕಷ್ಟಕ್ಕೊಳಗಾಗಿರುವರು. ಆ ಪ್ರದೇಶಗಳಿಂದ ಹಿಂದೂ ಅಧಿಕಾರಿಗಳನ್ನು ಹಿಂದಕ್ಕೆ ಕರೆಸಲಾಗಿದೆಯೆಂದೂ ತಿಳಿದು ಬರುತ್ತದೆ. ಮಾರ್ಚಿನಲ್ಲಿ ಹಿಂದೆ ಉಂಟಾದ ಗಲಭೆಯನ್ನು ತಣಿಸಿದಕೆ ಆ ಅಧಿಕಾರಿಗಳ ಮೇಲೆ ಕಲ್ಪಿತವನ್ನು ಹೂಡಲಾಗಿದೆಯಂತೆ. ಇದು ನಿಜವಿದ್ದರೆ, ಪಾಕಿಸ್ತಾನದಲ್ಲಿ ಅಲ್ಪಸಂಖ್ಯಾಕರ ಗತಿಯೇನೆಂಬುದರ ಕುರಿತು ಇದೊಂದು ಪೂರ್ವ ಸೂಚನೆಯಾಗಿದೆ.

ಮುಸ್ಲಿಂ ಲೀಗಿನವರು ತಮ್ಮ ಹೃದಯಗಳನ್ನು ಪರಿವರ್ತಿಸಿಲ್ಲವೆಂಬ ಸಂಗತಿ ಇವುಗಳಿಂದ ಸಿದ್ಧಾಂತವಾಗುತ್ತದೆ. ನೌಕಾಲಿಯಲ್ಲಿ ಮಹಾತ್ಮ ಶಾಂತಿ ಪ್ರಚಾರ ಕಾರ್ಯದಲ್ಲಿದ್ದಾಗ ಲೀಗಿನವರು ಪಶ್ಚಾತ್ತಾಪದ ಸೋಗು ಹಾಕಿಕೊಂಡರು. ಅವರು ಬೆನ್ನು ತಿರುಗಿಸಿದ ಕೂಡಲೇ ಈಗ ಪುನ ಹಳ್ಳಿಯ ಹತ್ತಿರುವರೆಂದು ಭಾಸವಾಗುತ್ತದೆ. ಆಗಿನ ಲೀಗಿನವರ ಪಶ್ಚಾತ್ತಾಪವು ಸರಕಾರದ ಶಾಸನ ಹಸ್ತದಿಂದ ತಪ್ಪಿಸಿಕೊಳ್ಳುವ ಒಂದು [illegible] ಎಂದೂ ಸ್ಪಷ್ಟವಾಗುತ್ತದೆ.

"ಇದರಿಂದ ನಾವೊಂದು ಪಾಠವನ್ನು ಕಲಿಯಬೇಕಾಗಿದೆ. [illegible] ಕಾಳ್ಗಿಗಳಿಂದ ಮುಸ್ಲಿಂ ಲೀಗಿನವರನ್ನು ಬದುಕುವುದು [illegible] ಪ್ರತೀಕಾರವೋ [illegible] ಯೋಜನೆ ಹಿಂದೂಗಳ [illegible] ಒಂದೇ ಮಾರ್ಗವೆಂದರೆ ಸ್ವತಂತ್ರವಾಗುವುದು" ಹೀಗೆಂದು ಒಂದು ಪತ್ರಿಕೆಯು ಬರೆಯುತ್ತದೆ.

THE
UNITED INDIA LIFE ASSURANCE CO., LTD.
ESTD 1906 — H O MADRAS
SECURITY
Greater than any conferred by legislative enactments is guaranteed
by
UNITED INDIA'S TRUST ARRANGEMENT
with
THE OFFICIAL TRUSTEE TO THE GOVRNMENT OF MADRAS.
For Particulars apply to —
INSPECTORATE OFFICE
K S. Rao Road, Mangalore.

ರಾಜ ಗಾಂಭೀರ್ಯ

"ಸಂಸ್ಥಾನಿಕರ ಪ್ರತಿಗಾಮಿ ಪ್ರಭಾವದಿಂದ ಹೊರಬಿದ್ದು ದೇಶಿ ಸಂಸ್ಥಾನಾಧೀಶ್ವರರಿಗೆ ಮಾರ್ಗ ದರ್ಶನ ಮಾಡಿ ಕೊಟ್ಟ ಕೀರ್ತಿ [illegible] ಮಹಾರಾಜರಿಗೆ ಸಲ್ಲತಕ್ಕದ್ದು. ಭೋಪಾಲದ [illegible] ಧೋರಣೆಯನ್ನು ತೊರೆದು ಹಾಕಿರಿ ಎಂದು ಹೇಳುತ್ತ ಈ ಪ್ರಭುವರ್ಯರು ಭಾರತ ಸ್ವಾತಂತ್ರ್ಯ ಮುಂದಿರುವ ಶಿಲ್ಪಿಗಳಿಗೆ ನಾವು ಸಹಕರಿಸೋಣವೆಂದು ಘೋಷಿಸಿದ್ದಾರೆ. ಘಟನಾ ಸಮಿತಿಯ ಚಟುವಟಿಕೆಗಳಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸುವುದು ಅವರ ಉದ್ದೇಶವಿದೆ.

"ಭಾರತೀಯ ದೇಶಿ ರಾಜರು ದೇಶದ [illegible] ಸಹಕರಿಸಿದರೆ [illegible] ನಮ್ಮಿಂದ [illegible] ಐಕ್ಯವನ್ನು ಸಾಧಿಸಲು [illegible]" ಹೀಗೆಂದು ಅವರು ಸಂದೇಶವಿತ್ತರು.

[illegible] ಸಂಸ್ಥಾನದ ಪ್ರಜಾ [illegible] ಮಹಾತ್ಮರ [illegible] ಈಗ ಅವರ [illegible] ಪರಿವರ್ತನೆ [illegible] ಆಗಿರುತ್ತದೆ [illegible] ಅವರ ಆದರ್ಶವನ್ನ [illegible]

ರೂಪಾಯಿ ಸ್ವಾತಂತ್ರ್ಯ

[illegible] ರೂಪಾಯನ್ನು ತಮ್ಮ [illegible] ಈಗ [illegible] ಈ ಬಂಧನವನ್ನು [illegible] ಇದುತನಕ ಭಾರತವು ಪರದೇಶಗಳೊಡನೆ ವ್ಯಾಪಾರ ವಹಿವಾಟುಗಳನ್ನು ಮಾಡಬೇಕಾದರೆ ಇಂಗ್ಲೆಂಡಿನ [illegible] ರೂಪಾಯಿಯನ್ನು ಪವನನ್ನಾಗಿ ಪರಿವರ್ತಿಸಿ ತನ್ನ ಲೇವಾದೇವಿಯನ್ನು ನಿರ್ವಹಿಸಬೇಕಿತ್ತು. ಇದೊಂದು ದಾಸ್ಯದ ವ್ಯಾಪಾರವು. ಪರದೇಶದವರೂ ನಮ್ಮ ದೇಶಕ್ಕೆ ಕೊಡುವ ಹಣವನ್ನು ಪವನನ್ನಾಗಿ ಮುರಿಸಿ ರೂಪಾಯಿಯಾಗಿ ತೆರಬೇಕಿತ್ತು. ಈಗ ಭಾರತವು ನೇರವಾಗಿ ಯಾವ ದೇಶದವರೊಡನೆಯೂ ಇಂಗ್ಲೆಂಡಿನ ಮಧ್ಯಸ್ತಿಕೆಯಿಲ್ಲದೆ ವ್ಯವಹರಿಸಬಹುದಾಗಿದೆ. ಇದಕ್ಕೆ ಭಾರತ ಸರಕಾರದೊಡನೆ ಸ್ವಲ್ಪ ಬಂಗಾರದ ಸಂಗ್ರಹದ ಆವಶ್ಯಕತೆಯಿದೆ. ಒಂದೆರಡು ವರ್ಷಗಳ ತನಕ ಈ ರೂಪಾಯಿ ಸ್ವಾತಂತ್ರ್ಯದಿಂದ ಸ್ವಲ್ಪ ತೊಂದರೆಯಾಗಬಹುದಾದರೂ ನಮ್ಮನ್ನೆ ತಾನೆ ಸ್ಥಾಪಿಸಿದ ವಿಶ್ವ ಬೇಂಕಿನಲ್ಲಿ ಭಾರತಕ್ಕೆ ಆರ್ಥಿಕ ಅನುಕೂಲತೆ ದೊರೆಯುವುದು. ಇಲ್ಲಿಯ ವ್ಯಾಪಾರ ಉತ್ಪತ್ತಿಗಳು ಹೆಚ್ಚಾದಂತೆ ಸಂಪತ್ತು ಹೆಚ್ಚುವುದು. ನಮ್ಮ ವಾಣಿಜ್ಯದ ಉಪಿದಾಟಕ್ಕೆ ಸ್ವಲ್ಪ ಅನುಕೂಲತೆಯಾಯಿತು.

ಭಾರತದಲ್ಲಿ ಗ್ರಾಮೋದ್ಯೋಗ

ಹಳ್ಳಿಗಳ ಏಳ್ಗೆಯೇ ಭಾರತದ ಏಳ್ಗೆ

ಶ್ರೀ 'ಕೈತಂಜೆ' ಇವರಿಂದ

[[illegible] ಹಳ್ಳಿಗಳ ಸುಧಾರಣೆಯ ಆವಶ್ಯಕತೆಯನ್ನು ಸೂಚಿಸುತ್ತಾ, ಅವುಗಳಿಗೆ ಅಡ್ಡಿಯಾಗಿರುವ ಅನೇಕ ಸಮಸ್ಯೆಗಳನ್ನು ವಿವರವಾದ ಈ ಲೇಖನವು ಪ್ರತಿಯೊಬ್ಬರೂ ಓದತಕ್ಕದಾಗಿದೆ.]

ಹಿಂದುಸ್ಥಾನದ ಜನರಲ್ಲಿ ಶೇಕಡಾ 90 ಮಂದಿ ಹಳ್ಳಿಗಳಲ್ಲಿ ವಾಸಿಸುತ್ತಾರೆ. ಇದರಲ್ಲಿ 73 ಮಂದಿ ಧಾನ್ಯಾದಿಗಳನ್ನು ತಯಾರಿಸುವವರಾಗಿರುವರು. ಆದುದರಿಂದ ಹಿಂದುಸ್ಥಾನದ ಏಳ್ಗೆಯ ಕುರಿತಾಗಿ ಕೆಲಸ ಮಾಡುವವರು ಹಳ್ಳಿಗಳ ಉದ್ಧಾರಕ್ಕೆ ಹೆಚ್ಚಿನ ಮನಸ್ಸನ್ನು ಕೊಡಬೇಕೆಂದಾಯಿತು. ನಮ್ಮ ಜನರಲ್ಲಿ ಸಂಸ್ಕೃತಿಯು ಹಳ್ಳಿಯ ಬಾಳ್ವೆಯಿಂದ ಬೆಳೆದು ಬಂದಿದೆ. ಆದರೆ ಪಾಶ್ಚಿಮಾತ್ಯರ ಸಂಸ್ಕೃತಿಯು ಪಟ್ಟಣಿಗರಿಂದ ರೂಪುಗೊಂಡಿದೆ. ಹಿಂದುಸ್ಥಾನದ ಏಳ್ಗೆಯನ್ನು ಸಾಧಿಸಬೇಕಾದರೆ ಹಳ್ಳಿಗರ ಜೀವನವನ್ನು ಉತ್ತಮ ಮಾಡುವುದೊಂದೇ ಸಾಧನ. ಪ್ರತಿಯೊಬ್ಬನಿಗೂ ಬೇಕಾದಷ್ಟು ಉಂಡುಡಲು ದೊರಕಬೇಕು. ಇದು ಎಲ್ಲಾ ಸುಧಾರಣೆಗಳ ತಳಹದಿ. ಹಿಂದುಸ್ಥಾನದ ಗ್ರಾಮೀಣರು ಮಧ್ಯಸ್ಥರ ಪೈಪೋಟಿಯಿಂದಲೂ ಸಾಲದ ಶೂಲದಿಂದಲೂ ನಡೆಯುತ್ತಿರುವರು. ಇದನ್ನು ತಪ್ಪಿಸಲು ಪ್ರತಿಯೊಂದೂ ಹಳ್ಳಿಯಲ್ಲೂ ಆ ಹಳ್ಳಿಗೆ ಬೇಕಾಗುವಷ್ಟು ಉತ್ಪತ್ತಿ ಇರಬೇಕು. ಅದು ತನ್ನ ಜನರ ಪೋಷಣೆಗೆ ಇತರರನ್ನು ಹೊಂದಿಕೊಂಡಿರಕೂಡದು. ಹಳ್ಳಿಗರ ನೈತಿಕೋನ್ನತಿಯನ್ನು ಸಮಾಜ ಸೇವಕನು ತನ್ನ ಗುರಿಗಳಲ್ಲಿ ಒಂದನ್ನಾಗಿ ಇಟ್ಟುಕೊಂಡಿರತಕ್ಕದು. ಜನರ ದುಃಖ ದಾರಿದ್ರ್ಯಗಳಿಗೆ ಮಾನವನ ಆಶೆಯೇ ಕಾರಣ. ನಿರಾತಂಕವಾಗಿ ಪ್ರತಿಯೊಬ್ಬರೂ ತಮ್ಮಿಂದ ಆದಷ್ಟು ಲಾಭ ಪಡೆಯಲು ಬಿಟ್ಟರೆ ನಿಸ್ಸಹಾಯರ, ಬಡವರ ನೆತ್ತರನ್ನು ಶ್ರೀಮಂತರು ದುಡಿಸಿ ಹೀರುವರು. ಆದರೆ ಲಾಭ ಪಡೆಯುವ ಕೆಲಸಗಳನ್ನು ಮಾಡುವುದಕ್ಕೆ ಏನೂ ಸ್ವಾತಂತ್ರ್ಯವಿಲ್ಲದಿದ್ದರೆ ಅದರಿಂದಲೂ ಸಮಾಜಕ್ಕೆ ಕೆಟ್ಟುದಾಗುತ್ತದೆ. ಲಾಭದ ಆಶೆಯಿಲ್ಲದಿದ್ದರೆ, ಲಾಭದ ಬಲವಾದ ಸೆಳೆತವಿಲ್ಲದಿದ್ದರೆ ಲೋಕದಲ್ಲಿ ಯಾರೂ ಯಾವ ಕೆಲಸವನ್ನೂ ತಮ್ಮ ಮನೋವಾಕ್ಕಾಯಗಳಿಂದ ಮಾಡರು. ಆದುದರಿಂದ ಸಮಾಜದ ಹಿತಕ್ಕೆ ತೊಂದರೆ ಬಾರದಂತೆ ಲಾಭ ಪಡೆಯಲು ಅವರವರ ಇಚ್ಛೆ ಪಟ್ಟ ಉದ್ಯೋಗಗಳನ್ನು ಕೈಗೊಳ್ಳಲು ಪ್ರತಿಯೊಬ್ಬನಿಗೂ ಸ್ವಾತಂತ್ರ್ಯವು ಬೇಕು. ಸಮತಾ ವಾದದಲ್ಲಿ ಲಾಭದ ಆಶೆಗೆ ಧಕ್ಕೆ ತಗಲುವುದು ಮಾತ್ರವಲ್ಲದೆ, ಪ್ರತಿಯೊಬ್ಬನೂ ಕೇಂದ್ರದಿಂದ ನಿಯಮಿಸಲ್ಪಟ್ಟ ಉದ್ಯೋಗಗಳನ್ನು ಮಾತ್ರ ಕೈಗೊಳ್ಳಬಲ್ಲನಷ್ಟೆ. ಸ್ವಾತಂತ್ರ್ಯವಿಲ್ಲದ ಯಾವ ಕೆಲಸದಲ್ಲೂ ಮನುಷ್ಯನಿಗೆ ಜುಗುಪ್ಸೆ ಬರುವುದು ಕಂಡುಂಡ ಮಾತು. ಹೀಗೆ ಬಂಡವಾಳಿಗರ ಆಧಿಪತ್ಯದಲ್ಲೂ ಸಮತಾವಾದಿಗಳ ಆಧಿಪತ್ಯದಲ್ಲೂ ಕೂಲಿಗಾರರು ಹೇಳಿದ್ದನ್ನು ಮಾಡುವ ಯಂತ್ರಗಳಾಗಬೇಕಷ್ಟೆ. ಸಮತಾವಾದದಲ್ಲಿ ಕೇಂದ್ರದ ಬಿಗಿಯು ಅಪರಿಮಿತವಾಗುತ್ತದೆ. ಕೇಂದ್ರದ ಬಿಗಿಯನ್ನು ತಪ್ಪಿಸಲು ಮತ್ತು ಲಾಭದ ಆಶೆಯನ್ನಡಗಿಸಲು ಔದ್ಯೋಗಿಕ ವಿಕೇಂದ್ರೀಕರಣ ಮತ್ತು ಸ್ವದೇಶಿ ಇವೆರಡೇ ದಾರಿಗಳೆನ್ನು.

ಸ್ವದೇಶಿಯ ನಿಜವಾದ ಅರ್ಥವನ್ನು ಸರಿಯಾಗಿ ಮಾಡಿಕೊಳ್ಳುವ ಅಗತ್ಯವಿದೆ. ಸ್ವದೇಶಿಯನ್ನು ಉಪಯೋಗಿಸುವುದೆಂದರೆ ನಮ್ಮ ಹತ್ತಿರದಲ್ಲಿ ನಮ್ಮ ಗ್ರಾಮದಲ್ಲಿ, ಗ್ರಾಮದ ಸರಹದ್ದಿನಲ್ಲಿ ತಯಾರಿಸಿದ ಸಾಮಾನುಗಳನ್ನು ಉಪಯೋಗಿಸುವುದೆಂದರ್ಥ. ಸ್ವದೇಶಿಯೆಂಬುದು [illegible] ಶಬ್ದ. ಇಡೀ ಲೋಕವೇ ಒಂದು ತುಂಡು. ಪ್ರತಿ ಹಳ್ಳಿಯು ಅದರದೊಂದು ಭಾಗ. ಆ ಹಳ್ಳಿಯ ಸೇವೆ, ಅದರ ಉದ್ಧಾರ ಮಾಡುವುದರಿಂದ ಇಡೀ ಲೋಕದ ಸೇವೆ ಮಾಡಿದಂತಾಯಿತು. ಸ್ವದೇಶಿಯ ಅರ್ಥ ಗ್ರಹಿಸುವಾಗ ಅವರವರು ಅವರಿರುವ ಹಳ್ಳಿಗೆ ಮಾಡಬೇಕಾದ ಕರ್ತವ್ಯವನ್ನು ಕಣ್ಣಮುಂದೆ ಇರಿಸಿಕೊಳ್ಳಬೇಕು. ಲಾಭದ ಹುಚ್ಚನ್ನು ದೊಡ್ಡ ದೊಡ್ಡ ಯಂತ್ರಗಳಿಂದ ತಯಾರಿಸುವುದನ್ನು ನಿಲ್ಲಿಸುವುದರಿಂದ ಕಡಿಮೆ ಮಾಡಲು ಸಾಧ್ಯವಿದೆ. ಒಬ್ಬನೇ ಕೆಲಸ ಮಾಡುವಂಥ ಯಂತ್ರಗಳು ಮಾತ್ರ ಉಪಯೋಗದಲ್ಲಿರಬೇಕು. ಪ್ರತಿಯೊಬ್ಬರೂ ಗ್ರಾಮದಲ್ಲಿ ತಯಾರಾಗುವ ವಸ್ತುಗಳನ್ನು ಕೊಳ್ಳುವುದರಿಂದ ಮತ್ತು ಆ ವಸ್ತುಗಳು ಹಲವರಿಂದ ತಯಾರಿಸಲ್ಪಡುವುದರಿಂದ ಕೆಲಸವೂ ಲಾಭವೂ ಗ್ರಾಮದಲ್ಲಿರುವ ಎಲ್ಲರಿಗೂ ಹಂಚಿ ಹೋಗುವುದು. ಪ್ರತಿಯೊಬ್ಬರಿಗೂ ಸಾಕಷ್ಟು ದುಡಿಯಲು ಅನುವಿರುವುದರಿಂದ ಯಾರೂ ಉಪವಾಸ ಬೀಳಬೇಕಾಗಿಲ್ಲ.

ಗ್ರಾಮದ ಜನಜೀವನದ ಮಟ್ಟವನ್ನು ಏರಿಸಬೇಕೆಂದಿರುವವನು ಮೊದಲು ತನ್ನ ದೃಷ್ಟಿಯನ್ನು ಗ್ರಾಮವಾಸಿಯ ಆರೋಗ್ಯದ ಕಡೆಗೆ ಬೀರಬೇಕು. ಆರೋಗ್ಯವಿಲ್ಲದಿದ್ದರೆ ಯಾವ ಕೆಲಸವೂ ಸಾಗಲಾರದು. ಹಳ್ಳಿಯಲ್ಲಿ ಆರೋಗ್ಯದ ರೀತಿ ನಿಯಮಗಳ ಪರಿಶ್ರಮವಿಲ್ಲದಿರುವುದರಿಂದ ಹಲವಾರು ಮಂದಿ ರೋಗದಿಂದ ನರಳುತ್ತಿರುವರು. ಗ್ರಾಮದ ಕೆರೆ ಬಾವಿಗಳ, ರಸ್ತೆ ಚರಂಡಿಗಳ, ಬಟ್ಟೆ, ಆಹಾರಗಳ ನೈರ್ಮಲ್ಯಕ್ಕೆ ಗ್ರಾಮ ಸುಧಾರಕನು ತುಂಬ ಗಮನ ಕೊಡತಕ್ಕದ್ದು. ಆಹಾರದ ವಿಷಯದಲ್ಲಿ ಯೋಚಿಸುವಾಗ ಪ್ರತಿಯೊಬ್ಬರೂ ಮನೆಯಲ್ಲಿ ಕುಟ್ಟಿದ ಅಕ್ಕಿಯನ್ನು ಉಪಯೋಗಿಸುವ ಏರ್ಪಾಡೇ ಆದ್ಯ ಕೆಲಸವಾಗಿದೆ. ಮನೆಯಲ್ಲಿ ಕುಟ್ಟಿದ ಅಕ್ಕಿಯಲ್ಲಿ ಜೀವ ಸತ್ವಗಳು ನಾಶ ಹೊಂದುವುದಿಲ್ಲ. ಮಿಲ್ಲಿನಲ್ಲಿ ತಯಾರಾದ ಅಕ್ಕಿಯಲ್ಲಿ ಬಿ. ಜೀವಾತುವಿನೊಂದಿಗೆ ಇನ್ನು ಅನೇಕ ಶರೀರ ಪೋಷಕ ದ್ರವ್ಯಗಳ ನಾಶವೂ ಆಗುವುದೆಂದು ವೈಜ್ಞಾನಿಕರು ಮತ್ತು ವೈದ್ಯರು ಅಭಿಪ್ರಾಯಪಡುತ್ತಾರೆ. ಅಕ್ಕಿಯನ್ನು ಮನೆಯಲ್ಲೇ ಕುಟ್ಟಿ ಉಪಯೋಗಿಸುವುದರಿಂದ ಹೆಚ್ಚು ಜನರಿಗೆ ಕೆಲಸಗಳು ಹಳ್ಳಿಯಲ್ಲೇ ದೊರಕಿ ಅವರ ಉದರ ಪೋಷಣವಾಗುತ್ತದೆ. ಮನೆಯಲ್ಲಿ ಕುಟ್ಟಿದ ಅಕ್ಕಿ, ಮನೆಯಲ್ಲಿ ಬೀಸಿದ ರಾಗಿ, ಗೋಧಿ ಮುಂತಾದುವುಗಳ ಉಪಯೋಗದಿಂದ ನಮಗೆ ಈ ತೆರದಲ್ಲಿ ಎರಡು ರೀತಿಯ ಗುಣಗಳಿವೆ. ಇದೇ ರೀತಿಯಲ್ಲಿ ಬೆಲ್ಲವನ್ನು ಸಕ್ಕರೆಯ ಬದಲಾಗಿ ಉಪಯೋಗಿಸಬಹುದು. ಸಕ್ಕರೆ ಮಾಡುವಾಗ ಬೆಲ್ಲದಲ್ಲಿಯ ಕೆಲವು ಪೋಷಕ ದ್ರವ್ಯಗಳು ನಾಶವಾಗುವುವೆಂದು ವೈದ್ಯರು ಅಭಿಪ್ರಾಯಪಡುತ್ತಾರೆ.

ಗ್ರಾಮ ಔದ್ಯೋಗಿಕ ಸಂಸ್ಥೆಗಳ ಅಧ್ಯ ಗುರಿಯು ಜನರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸುವುದಾಗಿದೆ. ಅದಕ್ಕಾಗಿ ಗ್ರಾಮದಿಂದ ಯಾವ ಕಚ್ಚಾ ಮಾಲೂ ಹೊರಗೆ ಹೋಗದಂತೆ ಅದು ಪ್ರಯತ್ನಿಸಬೇಕಾಗಿದೆ. ಇಂಥ ಸಂಸ್ಥೆಗಳು ಹಳ್ಳಿಯಲ್ಲೇ ಕಚ್ಚಾ ಮಾಲುಗಳಿಂದ ಬೇಕಾದ ಸಾಮಾನುಗಳನ್ನು ತಯಾರಿಸುವಂತೆ ಪ್ರೋತ್ಸಾಹ ಕೊಡಬೇಕು. **ನಮ್ಮ ದೇಶದಲ್ಲಿ ದೊಡ್ಡ ಕಾರ್ಖಾನೆಗಳ ಅಗತ್ಯವಿಲ್ಲ.** ಏಕೆಂದರೆ ಜನರು ಹೆಚ್ಚಾಗಿ ಕೃಷಿಕರಿದ್ದು ತಮ್ಮ ಮನೆ ಹೊಲಗಳನ್ನು ಹಳ್ಳಿಯಿಂದ ಬಿಟ್ಟುಹೋಗಲಾರರು. ಅವರಿಗೆ ತಮ್ಮ ಕೃಷಿಯ ಕೆಲಸ ಮುಗಿದ ಬಳಿಕ ಉಳಿದ ಸಮಯವನ್ನು ಉತ್ಪಾದನೆಯಲ್ಲಿ ತೊಡಗಿ, ತಮ್ಮ ಸಂಪಾದನೆಯನ್ನು ಅಭಿವೃದ್ಧಿಗೊಳಿಸಲು ಸಾಧ್ಯವಾಗುವಂಥ ಉದ್ಯೋಗಗಳು ಬೇಕಾಗಿವೆ. ಯಂತ್ರಯುಗದಲ್ಲಿ ಇಡೀ ಜಗತ್ತೇ ಅಪರಿಮಿತ ಉತ್ಪಾದನೆಯಿಂದ ಬಳಲುವುದು. ಆದುದರಿಂದ ನಾವು ಪಾಶ್ಚಿಮಾತ್ಯರನ್ನು ಅನುಕರಿಸುವುದು ಹುಚ್ಚುತನವಿರುತ್ತದೆ. ನಮಗೆ ನಮ್ಮ ದೇಶದಲ್ಲಿ ಕೆಲಸವನ್ನು ಉಳಿಸುವಂಥ ಯೋಜನೆಗಳು ಅಗತ್ಯವಿಲ್ಲ. ಆದರೆ ಕೆಲಸವಿಲ್ಲದ ಲಕ್ಷಾಂತರ ಜನಕ್ಕೆಂದು ನಾವು ಗಳಿಕೆಯ ದಾರಿಯನ್ನು ತೋರಬೇಕಾಗಿದೆ. ಎಂದಿಗೆ ಮಿಗತೆ ಉತ್ಪಾದನೆಯಾಗುವುದೋ ಅಂದು ವಸಾಹತುಗಳಿಗಾಗಿ ಹೋರಾಟ, ಜನಾಂಗ ದ್ವೇಷ ಇತ್ಯಾದಿಗಳು ಬೆಳೆಯುವುದರಲ್ಲಿ ಸಂದೇಹವಿಲ್ಲ. ಪ್ರತಿಯೊಬ್ಬರೂ ಸ್ವದೇಶಿ ಉಪಯೋಗಿಸುವ ತತ್ವವನ್ನು ಪಾಲಿಸಿದರೆ ಜನರ ಆರ್ಥಿಕ ಸ್ಥಿತಿಯು ಉತ್ತಮಗೊಳ್ಳುವುದರಲ್ಲಿ ಸಂಶಯವಿಲ್ಲ. ದಿನಗಳು ಕಳೆದಂತೆ ಕೈಯಲ್ಲಿ ತಯಾರಿಸಿದ ವಸ್ತುಗಳು ಬಾಳಿಕೆ ಮತ್ತು ಅಂದ ಚೆಂದಗಳಲ್ಲಿ ಕಾರ್ಖಾನೆಯ ವಸ್ತುಗಳಿಗೆ ಏನೂ ಕಡಮೆಯಾಗವು. ಕೈಯಲ್ಲಿ ಮಾಡಿದ ವಸ್ತುಗಳಿಗೆ ಕ್ರಯವೂ ಬಹಳ ಹೆಚ್ಚಾಗಲಾರದೆಂದು ನಾವು ಸಹಜವಾಗಿ ಊಹಿಸಬಹುದಾಗಿದೆ.

ಆದರೆ ಯಂತ್ರಗಳನ್ನು ನಮಗೆ ಸಂಪೂರ್ಣವಾಗಿ ಬಿಟ್ಟುಬಿಡುವುದು ಅಸಾಧ್ಯ. ಸಕಲರಿಗೂ ಬೇಕಾದ ಮತ್ತು ದೇಶದ ಸರ್ವತೋಮುಖವಾದ ಏಳ್ಗೆಗೆ ಅಗತ್ಯವಾದ ಉದ್ಯೋಗಗಳು ಸರಕಾರದಿಂದ ಅಥವಾ ಉತ್ತಮ ಸಹಕಾರಿ ಸಂಘಗಳಿಂದ ನಡೆಯಿಸಬಹುದಾಗಿದೆ. ಯಾವ ಉದ್ಯೋಗಗಳನ್ನು ಸುಲಭವಾಗಿ ಕಲಿಯಲು ಸಾಧ್ಯವೋ, ಯಾವ ಉದ್ಯೋಗಗಳಿಗೆ ಹೆಚ್ಚಿನ ಬಂಡವಾಳ ಅಗತ್ಯವಿಲ್ಲವೋ, ಯಾವ ಉದ್ಯೋಗಗಳಲ್ಲಿ ಕಚ್ಚಾ ಮಾಲು ಸುಲಭದಲ್ಲಿ ದೊರೆಯುವುದೋ ಅಂಥವುಗಳ ಏಳ್ಗೆಗೆ ಗ್ರಾಮ ಔದ್ಯೋಗಿಕ ಸಂಸ್ಥೆಗಳು ಪ್ರೋತ್ಸಾಹ ಕೊಡಬೇಕು. ಉದಾಹರಣೆಗಾಗಿ ನೂಲುವುದಕ್ಕೆ, ನೇಯುವುದಕ್ಕೆ, ಚರ್ಮವನ್ನು ಹದ ಮಾಡುವುದಕ್ಕೆ, ಬೆಲ್ಲ ಮಾಡುವುದು, ಇತ್ಯಾದಿಗಳಿಗೆ ಸಂಘಗಳು ಚೆನ್ನಾಗಿ ಪ್ರೋತ್ಸಾಹ ಕೊಡಬಹುದು. ಪ್ರೋತ್ಸಾಹ ಕೊಡುವುದರೊಂದಿಗೆ ಪ್ರತಿಯೊಬ್ಬ ಉತ್ಪಾದಕನಿಗೂ ತನ್ನ ಜೀವನವನ್ನು ಸಾಗಿಸಲು ಬೇಕಾಗುವಷ್ಟು ಪ್ರತಿಫಲವು ಸಿಕ್ಕುವಂತೆ ಸಂಘವು ಪ್ರಯತ್ನಿಸತಕ್ಕದ್ದು. **ಜೀವನಕ್ಕೆ ಸಾಕಾಗುವಷ್ಟು ಉತ್ಪಾದಕನಿಗೆ ಸಿಗದಿದ್ದರೆ ಅಂಥ ಉದ್ಯೋಗ ಇರುವುದಕ್ಕಿಂತ**ಲೂ ಅದು ನಿರ್ನಾಮವಾಗಲೆಂದು ಗಾಂಧಿಯವರು ಹೇಳುತ್ತಾರೆ. ಹಳ್ಳಿಯಲ್ಲಿ ಯಾವ ಉದ್ಯೋಗಗಳು ಕೈಗೊಳ್ಳಲ್ಪಟ್ಟಿವೆ, ಯಾವ ಉದ್ಯೋಗಗಳನ್ನು ಪ್ರೋತ್ಸಾಹಿಸಬಹುದು. ಉದ್ಯೋಗವನ್ನು ಕೈಕೊಳ್ಳುವುದಕ್ಕೆ ಸಾಕಷ್ಟು ಕಚ್ಚಾ ಮಾಲು ಹಳ್ಳಿಯಲ್ಲಿ ಇದೆಯೇ ಮುಂತಾದುವುಗಳನ್ನು ವಿಚಾರಿಸಲು ಸಂಘವು ಪ್ರತಿ ಹಳ್ಳಿಯನ್ನು ಸೂಕ್ಷ್ಮವಾಗಿ ಪರೀಕ್ಷೆ ಮಾಡಬೇಕು.

ಹಳ್ಳಿಗಳ ಅಧೋಗತಿಗೆ ಸಾಕಷ್ಟು ವಿದ್ಯಾಸಂಪನ್ನರು ಮುಂದೆ ಬಾರದಿರುವುದೂ ಒಂದು ಕಾರಣವಾಗಿದೆ. ಪಟ್ಟಣಕ್ಕೆ ಹೋಗಿ ಕಲಿತ ಹಳ್ಳಿಗರು ಪುನಃ ತಮ್ಮ ಹುಟ್ಟೂರಿನಲ್ಲಿ ಬಂದು ನೆಲಸುವುದು ಬಿಟ್ಟು, ಸರಕಾರಿ ನೌಕರಿ ಅಥವಾ ಇನ್ನು ಯಾವುದಾದರೂ ನೌಕರಿಯನ್ನು ಕೈಗೊಳ್ಳುತ್ತಾರೆ. **ಸಂಘಗಳು ವಿದ್ಯಾಬಲ ಸಂಪನ್ನರನ್ನು ಪುನಃ ಹಳ್ಳಿಯು ಎಳೆಯುವಂತೆ ಪ್ರಯತ್ನಿಸಬೇಕು.**

ಹಳ್ಳಿಯಲ್ಲಿ ತಯಾರಾಗುವ ಸಾಮಾನುಗಳನ್ನು ತಾಳಿಕೆ ಬಾಳಿಕೆಯಲ್ಲೂ [illegible]ಯಲ್ಲೂ ಮೇಲ್ದರಗತಿಗೆ ಹೋಗುವಂತೆ ಮಾಡಲು ಸಂಘದ ಪರವಾಗಿ ಸಂಶೋಧನಾ ಮಂದಿರಗಳು ಏರ್ಪಾಡಾಗಿ, ಅದರಲ್ಲಿ ತಿಳಿದುಬಂದ ವಿಷಯಗಳು ಪ್ರತಿಯೊಬ್ಬ ಹಳ್ಳಿಗನಿಗೂ ತಿಳಿಯುವಂತೆ ಮಾಡಬೇಕು. ಉತ್ತಮ ಬೀಜ, ಗೊಬ್ಬರ ಇತ್ಯಾದಿಗಳ ಬಗ್ಗೆ ಔದ್ಯೋಗಿಕ ಸಂಘಗಳು ಮಾಹಿತಿಯನ್ನು ಕೊಡತಕ್ಕದ್ದು.

ಪ್ರತಿ ಹಳ್ಳಿಯಲ್ಲೂ ಅಲ್ಲಿ ತಯಾರಾದ ವಸ್ತುಗಳ ಒಂದು ಪ್ರದರ್ಶನಾಲಯವೂ, ಅದಕ್ಕೆ ಹೊಂದಿಕೊಂಡು ಉಪಯುಕ್ತ ಪುಸ್ತಕಗಳ ಒಂದು ಪುಸ್ತಕ ಭಂಡಾರವೂ ಇರಬೇಕು. ಪ್ರದರ್ಶನಾಲಯದಲ್ಲಿ ಸುಧಾರಿಸಿದ ಉತ್ಪಾದನೆಯ ಎಲ್ಲಾ [illegible]ಗಳನ್ನು ಪ್ರದರ್ಶಿಸಲ್ಪಟ್ಟಿರಬೇಕು.

ಔದ್ಯೋಗಿಕ ಸಂಘಗಳ ಕಾರ್ಯಕ್ರಮಗಳು ಮುಖ್ಯವಾಗಿ ಇವುಗಳಾಗಿರಬೇಕು. ಸಂಘಗಳು ಹಳ್ಳಿಗರ ಜೀವನದೇಳ್ಗೆಗೆ ಸತತ ದುಡಿಯಬೇಕು.

[ಶ್ರೀ ಭರತನ್ ಕುಮಾರಪ್ಪನವರ "ಗ್ರಾಮ ಕೈಗಾರಿಕೆ ಮತ್ತು ಪುನರ್ನಿರ್ಮಾಣ" ಎಂಬ ಲೇಖನದ ಆಧಾರದಿಂದ ಬರೆಯಲ್ಪಟ್ಟಿದೆ.]

ಯುರೋಪಿನ ಹಿಂದೂ ಸಂಘದ ಅಧ್ಯಕ್ಷರಾದ ಡಾ| ಕೆ. ಸಿ. ಪಾಂಡ್ಯಯವರು ಲಂಡನಿನಲ್ಲಿ ಒಂದು ದೇವಸ್ಥಾನ ಕಟ್ಟಿಸುವ ಯೋಜನೆ ಮಾಡಿರುವರು. [illegible] ಜನತೆಗಳಿಗೆ ಅದರಲ್ಲಿ ಪ್ರತ್ಯೇಕ ಕೋಣೆಗಳಿರುತ್ತವೆ. "ಲಂಡನ್ [illegible]ಗೊಂದು ಮಸೀದೆಯಿರುವಾಗ ಹಿಂದೂಗಳಿಗೆ ಒಂದು ದೇವಾಲಯವಾಗಲಿ ಪ್ರಾರ್ಥನಾ ಕೇಂದ್ರವಾಗಲಿ ಇಲ್ಲ. ನಾವು ಕಟ್ಟಬೇಕೆಂದಿರುವ ದೇವಸ್ಥಾನದಲ್ಲಿ ಒಂದು ಹಿಂದೂ ಗ್ರಂಥಾಲಯವೂ, ಹಿಂದೂಗಳಿಗೂ ಭಾರತೀಯರಾದವರಿಗೂ ಉಳಕೊಳ್ಳಲು ಒಂದು ಛತ್ರವೂ ಇದ್ದು, ಹಿಂದೂ ಮಕ್ಕಳಿಗೆ ಶಾಸ್ತ್ರ ಕಲಿಸಲು ಒಬ್ಬ ವಿದ್ವಾಂಸ ಅರ್ಚಕನನ್ನು ಇಟ್ಟುಕೊಳ್ಳಬೇಕೆಂದಿದ್ದೇವೆ."

★

ಅಸ್ಸಾಮ ಗಡಿಯಲ್ಲಿ ಮುಸ್ಲಿಮ್ 'ಸೈನ್ಯ'

ಬಲಾತ್ಕಾರದ ಆಕ್ರಮಣದ ಯೋಜನೆ

ಈ ಸಮಸ್ಯೆಯ ಪೂರ್ವ ಇತಿಹಾಸ

ಅಸ್ಸಾಮು ಪ್ರಾಂತದೊಳಗೆ ಪ್ರವೇಶಿಸಿ ನೆಲೆ ನಿಲ್ಲುವ ಕಾರ್ಯಕ್ರಮವು ಈ ಶತಮಾನದ ಆದಿಯಲ್ಲಿಂದಲೇ ಪ್ರಾರಂಭವಾಗಿದೆ. 1911–12ರಲ್ಲಿ ಕೆಲವು ಮುಸ್ಲಿಂ ಸಂಚಾರಕರು ಗೋಲ್‌ಪಾರು ಜಿಲ್ಲೆಯ ಓರ್ವ ಜಮೀನ್ದಾರನ ತೋಟದಲ್ಲಿ ನೆಲೆಸಿಂತರು. ಕೆಲವು ವರ್ಷಗಳ ನಂತರ ಬಂಗಾಲದ ಮೈಮನ್‌ಸಿಂಗ್ ಜಿಲ್ಲೆಯಿಂದ– (ಇದು ಅಸ್ಸಾಮ ಗಡಿ ಬಳಿಯಿದೆ)– ನೂರಾರು ಮುಸ್ಲಿಮರು ನವಗೊಂಗ್ ಜಿಲ್ಲೆಯಲ್ಲಿ ನೆಲಸಿದರು. ಆಗಿನ ಕಾಲದ ಅಸ್ಸಾಮ ಸರಕಾರವಾದರೋ ತೆರಿಗೆ ಆದಾಯ ಹೆಚ್ಚಿಸುವುದಕ್ಕೆ ಹೊರಗಿನವರ ಈ ಆಕ್ರಮಣವನ್ನು ಪ್ರೋತ್ಸಾಹಿಸಿತು.

1920ರ ವರೆಗೆ ಯಾರೂ ಈ 'ಪರಕೀಯ' ಆಕ್ರಮಣಕ್ಕೆ ಆಕ್ಷೇಪವೆತ್ತಲಿಲ್ಲ. ಕಾರಣ ಆಗ ಹೊಲ ಗದ್ದೆ ತೋಟಗಳಲ್ಲಿ ಕೆಲಸಗಾರರ ಅವಶ್ಯಕತೆಯೂ ಸ್ವಲ್ಪಮಟ್ಟಿಗೆ ಇತ್ತು. ಈ ಪರಪ್ರಾಂತ್ಯದ ಕೃಷಿ ಮಜೂರರು ಸಣ್ಣ ಸಣ್ಣ ಕೃಷಿ ಕ್ಷೇತ್ರದಲ್ಲಿ ಒಕ್ಕಲು ಮಾಡಿಕೊಂಡಿರುವ ತನಕ ಯಾವ ತೊಂದರೆಯೂ ಇಲ್ಲದೆ ಸಾಗಿತು. ಆದರೆ 'ಆಕ್ರಮಣಗಾರರು' ಪ್ರಾಂತ್ಯದ ನಿವಾಸಿಗಳು ಸಾಗುವಳಿ ಮಾಡುತ್ತಿರುವ ಪ್ರದೇಶಗಳ ಹತ್ತಿರ ಹತ್ತಿರ ಬರತೊಡಗಿದ ಹಾಗೆ ಉಭಯತರ ಹಿತಗಳಲ್ಲಿ ಘರ್ಷಣೆಯಾಗತೊಡಗಿತು. ಹೊರ ಜನರು ಒಳ ಜನರಿಗೆ ಕಂಟಕಪ್ರಾಯರಾದರು.

ಕೆಲವು ವರ್ಷಗಳಲ್ಲಿ ವಲಸೆಗಾರರಲ್ಲಿ ಕೆಲವು ವಿಸ್ತಾರವಾದ ಜಮೀನುಗಳನ್ನು ಕೊಂಡುಕೊಳ್ಳಲು ಸಮರ್ಥರಾದರು. [illegible] ವರ್ಷ ಕ್ರಮಪಟ್ಟಿ ಈ ಮುಸ್ಲಿಂ ಕೃಷಿ ಮಜೂರರು ತಮ್ಮ ಮುಸ್ಲಿಂ ಜಮೀನ್ದಾರರಿಂದ [illegible] ಪ್ರತಿಫಲವನ್ನು [illegible] ಪರಿಣಾಮವಾಗಿ ಅವರು [illegible] ಸಪ್ಪಿನ್ನಿಸಿದ [illegible] ಅಸ್ಸಾಮಿ ಜನರ ಕೃಷಿ [illegible] ಅಕ್ರಮಗಳಿಗೆ [illegible]

ಈ ಬಗೆಗೆ [illegible] ಕುರಿತು [illegible] ಅಭಿಪ್ರಾಯವೇನೆಂದು [illegible] ಜಿಲ್ಲೆಯ ಡಿವಿಜನಲ್ ಆಫೀಸರರೊಬ್ಬರ ಅಭಿಪ್ರಾಯ ಹೀಗಿದೆ "ಈ ವಲಸೆಗಾರರು ಅತಿ ಕ್ರೂರರು. [illegible] ಆಗಿರುವರು. ಅವರ ನೆರೆಹೊರೆಯಲ್ಲಿ ವಾಸಿಸಲು ಯಾರಿಗೂ ಸಾಧ್ಯವಿಲ್ಲ. ಕೆಲವು ಸಲ ಪ್ರಾಂತ್ಯವಾಸಿಗಳು ಹಳ್ಳಿಹಳ್ಳಿಗಳನ್ನು ಬಿಟ್ಟು ಹೋದುದಿದೆ. ಈ ನೀಚ ವಲಸೆಗಾರರು ಅಸ್ಸಾಮಿ ಜನರ ಹೆಂಗುಸರನ್ನು ಆಗಿಂದಾಗ್ಗೆ ಅಪಮಾನಕ್ಕೀಡುಮಾಡುವುದಕ್ಕೂ ಹೇಸುವುದಿಲ್ಲ."

ಇದಕ್ಕಾಗಿಯೇ ಈ ವಲಸೆಗಾರರನ್ನು ಅಸ್ಸಾಮಿ ಜನರಿಂದ ದೂರವಿರಿಸಬೇಕೆಂಬ ಯೋಜನೆಗಾರಂಭವಾಯಿತು. ಅವರನ್ನು ಬಂಜರುವಿದ್ದ ಭೂಮಿಯಲ್ಲಿ ನೆಲೆಸಿಲ್ಲಿಸಲು ಮೊದಲುಮಾಡಿದರು. 1920ರಲ್ಲಿ ನವಗೊಂಗ್ ಜಿಲ್ಲೆಯ ಅಧಿಕಾರಿಯು ಒಂದು ಆಜ್ಞೆ ಹೊರಡಿಸಿ ವಲಸೆಗಾರರು ಎಲ್ಲೆಲ್ಲಿ ನಿಲ್ಲಬಹುದೆಂದು ನಿರ್ಣಯಿಸಿದರು. ಅಸ್ಸಾಮಿ ಜನರ ಪ್ರದೇಶವನ್ನೂ ಹೊಸ ವಲಸೆಗಾರರ ಪ್ರದೇಶವನ್ನೂ ವಿಂಗಡಿಸಿ ಅವುಗಳ ನಡುವೆ ಶಾಂತಿ ಶಿಸ್ತುಗಳನ್ನು ರಕ್ಷಿಸಲು ವಿಶೇಷ ಅಧಿಕಾರಿಗಳನ್ನು ನೇಮಿಸಲಾಯಿತು. ಈ ಪದ್ಧತಿಗೆ ಲ್ಯಾನ್ ಪದ್ಧತಿಯೆಂದು ಕರೆಯಲಾಗುತ್ತದೆ. 1921ರಿಂದ 1930 ವರೆಗೆ 84 ಸಾವಿರ ಎಕ್ರೆ ಸ್ಥಳವನ್ನು ಹೊರಗಿನ ಹಿಂದೂಗಳೂ, 2 ಲಕ್ಷ ಎಕ್ರೆ ಸ್ಥಳವನ್ನು ಮುಸಲ್ಮಾನರೂ ಆಕ್ರಮಿಸಿದ್ದರು.

ನಂತರ 7 ವರ್ಷಗಳಲ್ಲಿ ಸುಮಾರು 7 ಲಕ್ಷ ಎಕ್ರೆ ಸ್ಥಳವು ಪುನಃ ವಲಸೆಗಾರರಿಂದ ಆಕ್ರಮಣ ಮಾಡಲಾಯಿತು. ಇದರ ಮೇಲೆ ಈ ಹೊಸ ಒಕ್ಕಲು ಜನರು ಆಸುಪಾಸಿನ ಹಳ್ಳಿಗಳನ್ನು ಆಕ್ರಮಿಸತೊಡಗಿ ಲ್ಯಾನ್ ಪದ್ಧತಿಯ ಶಿಸ್ತನ್ನು ಮುರಿಯಲಾರಂಭಿಸಿದರು. ಅದೇ ಸಮಯಕ್ಕೆ ಕಾಂಗ್ರೆಸ್ ಸರಕಾರದವರು ಆಕ್ರಮಣವನ್ನು ಹೊರದಬ್ಬುವ ಶಾಸನವನ್ನು ಮಾಡಿ ಅದಕ್ಕೆ [illegible] ತಡೆಗಟ್ಟಿದರು.

ಆದರೆ ಯುದ್ಧಕಾಲದಲ್ಲಿ ಲೀಗ್ ಮಂತ್ರಿಮಂಡಳವು ಅಸ್ಸಾಮದಲ್ಲಿ ಸ್ಥಾಪಿಸಲ್ಪಟ್ಟಾಗ ಪುನಃ ಮುಸ್ಲಿಂ ವಲಸೆಗಾರರಿಗೆ [illegible] ಲ್ಯಾನ್ ಪದ್ಧತಿಯನ್ನು ಸಂಪೂರ್ಣ ಅಲಕ್ಷ ಮಾಡಲ್ಪಟ್ಟಿತು. ನಂತರ ಪುನಃ ಕಾಂಗ್ರೆಸ್ ಸರಕಾರ ಬರುವ ವರೆಗೆ ನ್ಯಾಯ ಉಲ್ಲಂಘನೆಯ ಈ ಕಾರ್ಯಕಲಾಪವು ಅವ್ಯಾಹತವಾಗಿ ನಡೆ[illegible] ಮಾಡುವ ದುರುದ್ದೇಶವು ಲೀಗಿನದು [illegible] ಒಕ್ಕಲುಗಳನ್ನು ಹೊರಗಿಂದ [illegible] ಅಸ್ಸಾಮಿಗಳು [illegible] ಲೀಗ್ [illegible]

ಇದೇ ಸಮಯಕ್ಕೆ ಹೊರಗಿನವರಿಗೆ ಕೊಡಲ್ಪಡುವ ಜಮೀನುಗಳನ್ನು ತಮಗೆ ಕೊಡಬೇಕೆಂದು ಅಸ್ಸಾಮಿಗಳು ಮಾಡಿಕೊಂಡ ಮನವಿಗಳಿಗೂ ಗಮನ ಕೊಡಲ್ಪಡಲಿಲ್ಲ. ಜನರ ಚಳವಳ ಹೆಚ್ಚಿ ಸಾದುಲ್ಲಾ ಸರಕಾರ ರಾಜಿನಾಮೆ ಕೊಟ್ಟು ಗವರ್ನರರ ಸಲಹೆಗಾರ ಸರಕಾರ ಬಂತು. ಇವರು ಹಿಂದಿನ ಧೋರಣೆಯನ್ನು ಬದಲಾಯಿಸಿ ಅದನ್ನು ಕಾರ್ಯರೂಪಕ್ಕೆ ತರುವುದರೊಳಗೆ ಪುನಃ ಸರ್ ಸಾದುಲ್ಲರು ಪ್ರಧಾನ ಪದವಿಗೆ ತರಲ್ಪಟ್ಟರು. 'ಆಹಾರ ಹೆಚ್ಚು ಬೆಳೆಸಿರಿ' ಎಂಬ ನೆಪ ಹಿಡಕೊಂಡು ಲೀಗಿನವರು ಹೊರಗಿನಿಂದ ತಮ್ಮವರನ್ನು ಒಳ ತರಹತ್ತಿದರು. ಹೊಸ ಒಕ್ಕಲುಗಳಿಗೆ ಜಾನುವಾರು ಮೇವು ಪ್ರದೇಶಗಳೂ [illegible] ಕೊಡಲ್ಪಡುವವು ಎಂದೂ ಸಾರಲಾದಾಗ ಪೂರ್ವ ಬಂಗಾಲದಿಂದ ಮುಸ್ಲಿಂ ತಂಡತಂಡಗಳು ಅಸ್ಸಾಮಿಗೆ ಬರತೊಡಗಿದರು.

ಈಗ ಕಾಂಗ್ರೆಸ್ ಸರಕಾರವು ಈ ಆಕ್ರಮಣಕ್ಕೆ ತಡೆಹಾಕಿ ಹೊರಗಿನ ಪುಂಡ ಜನರು ತಮ್ಮ ಪ್ರಾಂತ್ಯವನ್ನು ಸುಲಿಗೆ [illegible] ಯೋಜನೆ ಮಾಡಿರುವರು. ಅದಕ್ಕಾಗಿ ಲೀಗು ದುರಿನರು [illegible] ಪಾಕಿಸ್ಥಾನವನ್ನು ಸ್ಥಾಪಿಸುವ ಅವ್ಯಕ್ತ ಉದ್ದೇಶವು [illegible] ಕಾರಣವೆನ್ನಬಹುದು. ಪಂಜಾಬದಲ್ಲಿ ಗಡಿನಾಡಿನಲ್ಲೂ ಬೇರೆ ರೀತಿಯಲ್ಲಿ ಅವರ ಚಳವಳಿಗಳಾಗುತ್ತಿವೆ. ಅಸ್ಸಾಮು ಸರಕಾರವು ಕೊನೆತನಕ ಲೀಗಿನವರ ಈ ಧೋರಣೆಯನ್ನು ಎದುರಿಸಲು [illegible]

ಕಿರಿನಾಶಕ ಜಾಂಬಕ ಉತ್ತಮ ಮುಲಾಮು ಮೂಲಿಕೆ ತೈಲವು ಬಾವನ್ನು ಕಡಿಮೆ ಮಾಡಿ ರಸಿಗೆಯನ್ನು ಒಣಗಿಸಿ ಗುಣಪಡಿಸುವುದು ಆರೋಗ್ಯದಲ್ಲಿಡಿಸುವುದು

ಜಾಂಬಕದಲ್ಲಿರುವ ಶುದ್ಧವಾದ ಗಿಡ ಕ್ರಿಮಿಗಳನ್ನು ನಾಶ ಮಾಡಿ ಅದರಿಂದ ಹೊರಬರುವ ಯಾವತ್ತೂ ಚರ್ಮ ವ್ಯಾದಿಯನ್ನು ಗುಣಪಡಿಸಿ

ಜಗತ್ಪಸಿದ್ಧ ಜಾಂಬಕ ಮುಲಾಮು ಚರ್ಮ ವ್ಯಾದಿಯನ್ನು ಮುದ್ದಣವನ್ನು ತುರಿಕಜ್ಜಿ, ಕಾಲುಕುಂಟು ಮೊದಲಾದ ಯಾವತ್ತೂ ರೋಗಗಳನ್ನು ಗುಣಪಡಿಸುವುದು.

ಜಾಂಬಕನ್ನೇ ಉಪಯೋಗಿಸಿರಿ

Zam-Buk

ಜಗತ್ಪಸಿದ್ಧ ಗಿಡ ಮೂಲಿಕೆಯ ಮುಲಾಮು.
ಪ್ರಾಣಿಕೊಬ್ಬಿನಿಂದ ವಿರಹಿತವಾಗಿದೆ

ಚಿಲ್ಲರೆ ಸುದ್ದಿ ಸಂಗ್ರಹ

ಬಿ. ಬಿ. ಸಿ. ರೇಡಿಯೋದವರು ಪ್ರತಿ ಗಂಟೆಗೆ ಸಾವಿರ ಪವನು ಖರ್ಚು ಮಾಡುವರು.

★

ಮೊನ್ನೆ ತಾನೆ ಇಂಗ್ಲೆಂಡಿನ ಪುರುಷರ ಕ್ರಿಕೆಟ್ ಟೀಮು ಒಂದು ಅಸ್ಟ್ರೇಲಿಯ ಸಂಚಾರ ಮಾಡಿ ಬಂದಷ್ಟೆ. ಈಗ ಸಧ್ಯದಲ್ಲಿ ಆಂಗ್ಲ ಮಹಿಳೆಯರ ಒಂದು ಕ್ರಿಕೆಟ್ ಟೀಮು ಆಸ್ಟ್ರೇಲಿಯವನ್ನು ಸಂಚರಿಸಲಿದೆಯೆಂದು ತಿಳಿದು ಬರುತ್ತದೆ.

★

ಮಲಯದಲ್ಲಿರುವ ಪ್ರಖ್ಯಾತ ಭಾರತೀಯ ಜೋತಿಷ್ಯರಾದ ಪ್ರೊ| ಕೆ. ಸುಬ್ರಹ್ಮಣ್ಯಂ ಎಂಬವರು "ಸಧ್ಯದಲ್ಲಿ ಭಾರತದಲ್ಲಿ ಜಾತೀಯ ನೆಮ್ಮದಿಯುಂಟಾಗುವುದೆಂದೂ, ಹಿಂದೂ ಮುಸಲ್ಮಾನ್ ಸಿಕ್ಕರು ಒಟ್ಟುಗೂಡಿ ಐಕ್ಯಮತ್ಯಗೊಳ್ಳುವರು" ಎಂದೂ ಭವಿಷ್ಯ ಹೇಳಿದ್ದಾರೆ.

★

ರಾಮನವಮಿ ಸಮಯದಲ್ಲಿ ಉತ್ತರ ಹಿಂದೂಸ್ಥಾನದ ಕ್ಷತ್ರಿಯರು ಬ್ರಾಹ್ಮಣ ಹುಡುಗಿಯರಿಗೆ ಪಾದಪೂಜೆ, ಭೋಜನ ಮಾಡಿಸಿ ದಕ್ಷಿಣೆ ಕೊಟ್ಟು ಆರಾಧಿಸುವ ಕ್ರಮವಿದೆ. ಕಾಶ್ಮೀರದ ಮಹಾರಾಣಿಯವರು ಈ ಸಲ 26 ಹರಿಜನ ಹುಡುಗಿಯರಿಗೆ ಆರಾಧನೆ ಕರೆದು ಈ ರೀತಿ ಆರಾಧಿಸಿ [illegible] ಕೊಟ್ಟರು.

★

[illegible] ಸಭೆಯ ಕಾರ್ಯಕಲಾಪಗಳನ್ನು ನೋಡಲು ಪ್ರೋಫೆಸರ್ [illegible] ಅನುಕೂಲವಾಗುವಂತೆ ಸಿಂಧ್ ಶಾಸನ ಸಭೆಯ ಒಂದು ಭಾಗದಲ್ಲಿ ಪರದೆಯ ಕೋಣೆಯನ್ನು ತಯಾರುಗೊಳಿಸಿದ್ದಾರೆ.

★

[illegible] ಸುಮಾರು 27 ಸಾವಿರ ಮೈಲು ದೂರದಲ್ಲಿ [illegible] ಭೂಮಿಯು [illegible]

★

[illegible] ತನ್ನ ಗಂಡನ ಇನ್ಸೂ[illegible] ಕೂಲಿ ಮಾಡಿದಳು. [illegible] 1 ಪೌಂ[illegible] (ಒಂದಾಣೆ [illegible]) ಜಬ್ಬಾ[illegible] ಮಾಡಿದರು.

★

ಕಾನ್ಪೂರದ ಜಿಲ್ಲಾ ಮ್ಯಾಜಿಸ್ಟ್ರೇಟರು [illegible] ಪಟ ವಿಡುವುದರ ಮೇಲೆ 144ನೇ ಸೆಕ್ಷನ್ ಮೇರೆಗೆ ನಿಷೇಧ ಹಾಕಿರುತ್ತಾರೆ. ಇತ್ತೀಚೆಗೆ ಅಲ್ಲಿ ಜಾತೀಯ ಕಲಹ ಪ್ರೇರೇಪಿಸುವ ಬರೆಹಗಳು ಇದ್ದ ಕೆಲವು ಗಾಳಿಪಟಗಳು ಸಿಕ್ಕಿದ್ದೇ ಈ ಕಾರ್ಯಕ್ಕೆ ಕಾರಣವೆನ್ನಲಾಗಿದೆ.

★

ಹದಿನಂಟು ವರ್ಷದ ಹಲ್ಲು ಚಿಕಿತ್ಸಾ ಪ್ರಯೋಗದಿಂದ ಮಿಚಿಗನ್ ವಿಶ್ವವಿದ್ಯಾಲಯದ ಡಾ| ಫಿಲಿಪ್ಸ್ ಜೇ ಅವರು ದಂತವ್ಯಾಧಿಗೆ ಸಕ್ಕರೆಯೇ ಕಾರಣವೆಂದು ಕಂಡುಕೊಂಡಿದ್ದಾರೆ.

'ತಾಮ್ರ ಲೋಹದ ಸತ್ವವಿರುವ ಮಜ್ಜಿಗೆ ಹುಲ್ಲು ಆಸ್ಟ್ರೇಲಿಯದ ಕುರಿಗಳಿಗೆ ಆರೋಗ್ಯಕರವೆಂದೂ, ಅದಿಲ್ಲದಿದ್ದರೆ ಅವುಗಳಿಗೆ ರೋಗಗಳುಂಟಾಗುವುದೆಂದೂ ತಿಳಿದು ಬಂದಿದೆ.

… ಗಾಂಧಿ ವ್ಯಾಸರಾಯರ ಪತ್ರದಿಂದ

… ರಾಷ್ಟ್ರೀಯ ಕೇಂದ್ರಗಳಲ್ಲಿ ಗಾಂಧಿ-ಪೆಥಿಕ್ ಲಾರೆನ್ಸ್ ಮಾತುಕತೆಗಳು ಬಂದು ಇತ್ಯರ್ಥಕ್ಕೆ ಬಂದಿವೆಯೆಂದು ತಿಳಿಯಲ್ಪಟ್ಟಿದೆ. ಕಾಂಗ್ರೆಸಿಗೂ ಲೀಗಿಗೂ ಮಾತ್ರವಲ್ಲ, ಇಡೀ ದೇಶಕ್ಕೂ ತೃಪ್ತಿಯಾಗುವ ಒಂದು ಯೋಜನೆ ಹುಡುಕಲಾಗಿರುವುದೆಂದೂ ಆದರೆ ಆ ಕುರಿತು ಕೊನೆಯ ನಿರ್ಧಾರವು ಜಿನ್ನರ ಮಾತುಕತೆ ಸಂಪೂರ್ಣಗೊಂಡ ನಂತರವೇ ತೆಗೆದುಕೊಳ್ಳಲಾಗುವುದೆಂದೂ ಹೇಳಲಾಗಿದೆ.

ಕಾಂಗ್ರೆಸಿನ ಬಳಿ ಸಂಧಾನ ಮಾಡಲು ಸಾಧ್ಯವಿರುವದೆನ್ನುವುದು ಯೋಜನೆ ತಯಾರಾಗಿದೆಯಂತೆ.

ವ್ಯಾಸರಾಯರೊಡನೆ ಬೇಕಾದಂತೆ ಚರ್ಚಿಸಲು ಗಾಂಧೀಜಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟಿರುವುದಾದ್ದರೂ ಅವರು ಕಾಂಗ್ರೆಸ್ ವರಿಷ್ಠ ಮಂಡಲದ ಧೋರಣೆಯೊಂದಿಗೆ ಅವರ ತೀರ್ಮಾನವು ಘರ್ಷಣೆ ಹೊಂದಬಾರದೆಂದೂ ಅವರಿಗೆ ಸೂಚನೆ ಈಯಲಾಗಿದೆಯಂತೆ

ಖೇರರು ಲಂಡನಿಗೆ

ಮುನ್ಶಿಗೆ ಮುಖ್ಯ ಮಂತ್ರಿತ್ವ

ಬೊಂಬಾಯಿ ಪ್ರಧಾನಮಂತ್ರಿ ಖೇರರಿಗೆ ಬ್ರಿಟನಿಗೆ ಭಾರತ ರಾಯಭಾರಿಯಾಗಿ ಕಳುಹಿಸುವ ವಿಷಯ ಅಸಂಭವವಲ್ಲವಂತೆ ಕೃಷ್ಣಾ ಮೆನನ್, ಕೆ. ಎಂ ಮುನ್ಶಿಯವರಿಗೂ ಈ ಹುದ್ದೆ ದೊರೆಯಬಹುದು. ಬ್ರಿಟನಿನಲ್ಲಿ ರಾಯಭಾರಿಗಳಾಗಿರಲು ಉನ್ನತ ಮುತ್ಸದ್ದಿತನ, ರಾಜತಂತ್ರ ಚಾಣಾಕ್ಷತೆಯ ಖೇರರಂತಹರೇ ಯೋಗ್ಯರೆಂದು ಹಲವರ ಅಭಿಮತವಿದೆ. ಈ ಸಂದರ್ಭದಲ್ಲಿ ಮುನ್ಶಿಗಳು ಬೊಂಬಾಯಿಯ ಪ್ರಧಾನ ಮಂತ್ರಿರಾಗುವರೆ?

ಐ. ಸಿ. ಎಸ್. ಭವಿಷ್ಯ

ಕಳೆದ ವಾರ ನೆಹರೂ ಸರಕಾರ ಐ ಸಿ. ಎಸ್ ಅಧಿಕಾರ ವಿಷಯ ಒಂದು ಇತ್ಯರ್ಥಕ್ಕೆ ಬಂದಿರುವರಂತೆ 1948ರ ವರೆಗೆ ಅವರನ್ನು ಇಟ್ಟುಕೊಳ್ಳಬೇಕು, ನಂತರ ಅವರಿಗೆ ಪರಿಹಾರ ದ್ರವ್ಯ ಕೊಟ್ಟು ಬೇರೆ ಕೆಲಸ ಇಲ್ಲವೆ ಇಚ್ಛೆ ಪಟ್ಟರ ಅದೇ ಕೆಲಸ ಕೊಡಬೇಕೆಂದು ಬ್ರಿಟಿಷ್ ಸರಕಾರ ಸೂಚಿಸಿರುವುದಂತೆ

ಆದರೆ ಈ ಸೂಚನೆಗಳು ನಡುಗಾಲ ಸರಕಾರದ ಸೂಚನೆಗಳಿಗೆ ತದ್ವಿರುದ್ಧವಾಗಿರುವುದರಿಂದ ಸದ್ಯದಲ್ಲೇ ಐ ಸಿ. ಎಸ್ ಸಂಬಂಧ ಒಂದು ಬಿಕ್ಕಟ್ಟುಂಟಾಗಬಹುದೆಂದು ನಿರೀಕ್ಷಿಸಲಾಗಿದೆ. ಸೆಕ್ರೆಟರಿ ಆಫ್ ಸ್ಟೇಟ್ ಅವರು ಐ. ಸಿ. ಎಸ್. ರ ಮೇಲಿನ ತಮ್ಮ ಅಧಿಕಾರವನ್ನು ಕೂಡಲೇ ಬಿಟ್ಟು

… ಸಾಮ್ರಾಜ್ಯ ಸರಕಾರದ …

ಬುದ್ಧನ ಬಿಹಾರ!

ಗೌತಮ ಬುದ್ಧನ ಜ್ಞಾನ ಕಿರಣ ಕಂಡ ಬಿಹಾರವು ಭಾರತದ ಹೆಮ್ಮೆ. ಚಂದ್ರಗುಪ್ತ, ಅಶೋಕ, ಷೇರ್ ಷಾ, ಗುರು ಗೋವಿಂದ್, ಕೊನೆಗೆ ರಾಜೇಂದ್ರ ಬಾಬುಗಳಂತಹ ಅಮೋಘ ಪ್ರತಿಭಾವಂತ ವ್ಯಕ್ತಿಗಳ ಜನ್ಮಭೂಮಿಯದು. ಆ ದೇಶದ ಲಾಕ್ಷಣೀಕ ವೈವಿಧ್ಯವು ಜ್ಞಾನಿಗಳನ್ನುಂಟುಮಾಡುವ ಶಕ್ತಿಯುಳ್ಳದಂತೆ.

ಈಚೆಗೆ ಅಂತಹ ಭೀಕರ, ಮತ್ತು ಅತ್ಯುಗ್ರ ಘಟನೆಗಳಲ್ಲಿ ನಡೆದಿದ್ದ ಅಮಾನುಷಿಕವಾದ ಮುಸಲ್ಮಾನ್ ಅಲ್ಪಸಂಖ್ಯಾತರ ಕೊಲೆ, ಪ್ರೊಫೆಸರ್ ಅಬ್ದುಲ್ ಬಾರಿಯವರ ಕೊಲೆ, ಇವೆರಡು ಬಿಹಾರದ ದಿವ್ಯ ನಾಮಕ್ಕೆ ಕಳಂಕವನ್ನು ತಂದೊಡ್ಡಿವೆ ಆದರೂ ಅಲ್ಲಿಯ ಜನತೆಯಲ್ಲಿ ಪ್ರಾಚೀನ ಸಂಸ್ಕೃತಿಯ ಪ್ರಭಾವ ಶಕ್ತಿಯುಂಟೆಂಬುದಕ್ಕೆ ಮಹಾತ್ಮರು "ಅಮರಣ ಉಪವಾಸ ಗೈಯುವೆ ಕೊಲ ನಿಲ್ಲಿಸಿರಿ" ಎಂದಾಗ ಬಿಹಾರದ ದಂಗೆ ಕೊನೆಗೊಂಡಿತು. ಈಚೆಗೆ ಅಲ್ಲಿ ಹೂಡಲ್ಪಟ್ಟ ಪೋಲಿಸರ ಮುಷ್ಕರವೂ ಅದೇ ರೀತಿ ಮಹಾತ್ಮರ ಮಾತಿನ ಮೇಲೆ ಹಿಂತೆಗೆಯಲಾಯಿತು

ಮೈಸೂರು 'ಮಾಡು ಮಡಿ'

ಮೈಸೂರು ಸಂಸ್ಥಾನ ಕಾಂಗ್ರೆಸು ಡ್ಯಾರೆಕ್ಟ್ ಏಕ್ಷನ್ ಪ್ರಾರಂಭಿಸಲು ನಿರ್ಧರಿಸಿರುವರು. ಬರುವ ತಿಂಗಳಲ್ಲಿ ಅದು ಸಂಭವಿಸಬಹುದು. ಜವಾಬ್ದಾರ ಸರಕಾರ ಹೊಂದುವುದೇ ಅದರ ಉದ್ದೇಶ

ಮೈಸೂರು ಅರಸರು ಕೆಲ ಕಾಲದ ಹಿಂದೆ ಒಂದು ಅಸ್ಪಷ್ಟ ಘೋಷಣೆ ಹೊರಡಿಸಿ ಹೊಸ ರಾಜ್ಯಾಂಗ ಪದ್ಧತಿ ಸಾರಿದರು. ಎಂದು ಯಾವಾಗ, ಯಾವತರದ್ದೆಂದು ಸಾರಿ ತಿಳಿಸುವಂತಿಲ್ಲ ಘಟನಾಸಮಿತಿಗೆ ಸೇರುವುದಕ್ಕೂ ಅದು ಹಿಂದು ಮುಂದು ನೋಡುತ್ತಿದೆ. ಜನತೆಯ ಕೇಳಿಕೆಗಳನ್ನು ಮನ್ನಿಸುವಂತೆ ಮಾಡದಿದ್ದರೆ ಮೈಸೂರು ಇಡೀ ಭಾರತಕ್ಕೇ ಗಂಡಾಂತರವಾಗಿ ಸಂಭವಿಸಬಹುದೆಂದು ಅಲ್ಲಿನ ಕಾಂಗ್ರೆಸಿನ ಅಭಿಪ್ರಾಯದಲ್ಲಿ ಸತ್ಯಸ್ಥಿತಿ ಇದೆಯೆಂದು ನಿರೀಕ್ಷಿತ ಮತ

ಕಾಶ್ಮೀರದ ನಂತರ ಮೈಸೂರಿನದು ಎರಡನೇ ಪ್ರದೇಶ ಇಡೀ ಜನಾಂಗದ ಬೆಂಬಲವು ಮೈಸೂರಿಗರಿಗೆ ಸಿಕ್ಕಬಹುದೆಂದು ಹಾರೈಕೆ ಇದೆ ಈ ಸಂಸ್ಥಾನಿಕರ ಘೋಷಣೆಗೆ ರಾಜತ್ವ ರೀತಿ ನೀತಿಯು ಹಳೇ ಅರಸುನೆಯ ಗೋಡೆಗಳು ಕುಸಿದು ಬೀಳುವುದು ಖಂಡಿತವೆಂದು ಒರ್ವ ಮುಖಂಡರ ಅಭಿಪ್ರಾಯ ಎಲ್ಲರೂ ಮೈಸೂರಿಗರಿಗೆ ಯಶ ಕೋರುವರು

ಹಳ್ಳಿಯ ವೈದ್ಯಕೀಯ ಸಹಾಯಕ್ಕೆ ಪ್ರೋತ್ಸಾಹ

ಈ ಹಳ್ಳಿಯ ಜನರಿಗೆ ವೈದ್ಯಕೀಯ ಸಹಾಯದ ಏರ್ಪಾಡನ್ನು ಪುನಃ ಒದಗಿಸುವ ಸಂಬಂಧ ದೇಶೀಯ ವೈದ್ಯರನ್ನು ಅಂಗೀಕರಿಸುವ ಯೋಜನೆ ಒಂದನ್ನು ಸರಕಾರವು ಮಂಜೂರು ಮಾಡಿದೆ. ಈ ಯೋಜನೆ ಪ್ರಕಾರ ಇಂಥ ವೈದ್ಯರ ಪದವಿಯನ್ನು ಯೋಗ್ಯತೆಗಳನ್ನು ನಿರ್ಧರಿಸಲಾಗುವುದಲ್ಲದೆ ಕ್ರಮವಾದ ರೀತಿಯಲ್ಲಿ ಹಳ್ಳಿಯವರಿಗೆ ಇವರ ಸಹಾಯ ಸೇವೆಗಳು ದೊರೆಯುವ ಹಾಗೆಯೂ - ಮಾಡಲಾಗುವುದು. 1000 ಅಥವಾ ಹೆಚ್ಚಿಗೆ ಜನಸಂಖ್ಯೆ ಇರುವ ಗ್ರಾಮಗಳಲ್ಲಿ ಅತಿ ಯೋಗ್ಯವಾದ ಖಾಸಗಿ ವೈದ್ಯರನ್ನು ಜಿಲ್ಲಾ ಕಲೆಕ್ಟರರು ಆರಿಸಿ ಅವರನ್ನು ಗ್ರಾಮದ ವೈದ್ಯರೆಂದಾಗಲೀ ಹಕೀಮರೆಂದಾಗಲೀ ಒಪ್ಪಿಕೊಳ್ಳಲಾಗುವುದು ಒಂದು ಗ್ರಾಮಕ್ಕೆ ಇಂಥ ಒಬ್ಬ ವೈದ್ಯನಿರುವನು. ಇವರನ್ನು ಹಿಂದೀ ವೈದ್ಯರ ಕೇಂದ್ರ ಬೋರ್ಡಿನವರು ರಿಜಿಸ್ಟರ್ ಮಾಡುವರು ಈವರೆಗೆ ರಿಜಿಸ್ಟರ್ ಮಾಡದವರನ್ನು ಕಲೆಕ್ಟರರು ಆರಿಸಿದರೆ ವಿಧಿಸಿದ ಫೀಸನ್ನು ತೆತ್ತು ಅವರು ರಿಜಿಸ್ಟರ್ ಮಾಡಬೇಕಾಗಿದೆ ಸಾಕಷ್ಟು ಹಣವಿದೆಯೆಂದಾದರೆ ಸಂಬಂಧಪಟ್ಟ ಪಂಚಾಯತ್ ಅಥವಾ ಜಿಲ್ಲಾ ಬೋರ್ಡುಗಳು ಅಂಗೀಕರಿಸಲ್ಪಟ್ಟ ಅಂಥ ವೈದ್ಯರಿಗೆ ಗೌರವ ಸಂಭಾವನೆ (ಆನರೇರಿಯಂ) ಕೊಡಬಹುದು ಆದರೆ ಇಂತಹ ಸಹಾಯವು ಅವರು ಹಳ್ಳಿಗರ ಸೇವೆಯನ್ನು ತೃಪ್ತಿಕರವಾಗಿ ನಡಸುವುದರ ಮೇಲೆ ಹೊಂದಿಕೊಂಡಿದೆ ಇಂಥ ವೈದ್ಯರ ಕೆಲಸಗಳು ಅತೃಪ್ತಿಕರವೆಂದು ಕಂಡುಬಂದರೆ ಅಥವಾ ಅವರು ಕೇಳುವ ಫೀಸು ಅತ್ಯಧಿಕವೆಂದರೆ, ಕೊಟ್ಟ ಅಂಗೀಕಾರವನ್ನು ಹಿಂತೆಗೆಯಲಾಗುವುದು. ಗೌರವ ಸಂಭಾವನೆಯನ್ನು ನಿಲ್ಲಿಸಲಾಗುವುದು. ಹಳ್ಳಿಯ ವೈದ್ಯರನ್ನೂ ಹಕೀಮರನ್ನೂ ತರಬೇತಿ ಮಾಡುವುದಕ್ಕೋಸ್ಕರ ಒಂದು ಯೋಜನೆಯನ್ನು ತಯಾರಿಸಲಾಗುವುದು. ತರಬೇತಿನ ಕೊನೆಯಲ್ಲಿ ನಡೆಯುವ ಪರೀಕ್ಷೆಯಲ್ಲಿ ತೇರ್ಗಡೆಯಾದವರಿಗೆ ಯೋಗ್ಯತಾ ಪತ್ರಗಳನ್ನು ಕೊಡಲಾಗುತ್ತದೆ

ಶಕ್ತಿ ರಾಷ್ಟ್ರಗಳ ಆಟದ ಗೊಂಬೆ ನೇಪಾಲ

ಆಂಗ್ಲೊ ಅಮೇರಿಕನ್ರ ರಾಜತಂತ್ರ!

ಏಶಿಯದ ಜನಾಂಗಗಳು ತಮ್ಮ ಭವಿಷ್ಯದ ದೃಶ್ಯವನ್ನು ರಚಿಸಲು ಪರ್ಯಾಲೋಚಿಸುತ್ತಿರುವಾಗ ಆಂಗ್ಲೊ ಅಮೇರಿಕನರು ತಮ್ಮದೇ ಆದ ಒಂದು ಏಶ್ಯಾ ಚಿತ್ರವನ್ನು ರಚಿಸಹತ್ತಿರುವರೆಂದು ಇಂದು ನೇಪಾಲದಲ್ಲಿ ನಡೆಯುತ್ತಿರುವ ಘಟನೆಗಳಿಂದ ತಿಳಿದುಬರುತ್ತದೆ. ಒಂದು ಕಡೆಯಿಂದ ಆ ಹಿಮಾಲಯ ಸಂಸ್ಥಾನದ ಜನತೆಯಲ್ಲಿ ಅತ್ಯಪೂರ್ವವಾದ ನವಚೇತನವುಂಟಾಗಿರುವುದನ್ನು ನಾವು ಕಾಣುತ್ತೇವೆ ಡಾ॥ ರಾಮಮನೋಹರ ಲೋಹಿಯಾ ಅವರ ನಿರ್ದೇಶತ್ವದಲ್ಲಿ ನೇಪಾಲಿ ಸಂಸ್ಥಾನ ಕಾಂಗ್ರೆಸ್ಸು ಅಗಾಧ ಶಕ್ತಿಯನ್ನು ವರ್ಧಿಸಿಕೊಳ್ಳುತ್ತಿದೆ ಅಲ್ಲಿನ ವಿರಾಟ ನಗರದಲ್ಲಿ ಕಳೆದ ಮಾರ್ಚ್ 4ರಿಂದ 2 ಸಾವಿರ ಕೆಲಸಗಾರರ ಮುಷ್ಕರವೊಂದು ಮುಂದರಿಯುತ್ತಿದೆ ಈ ಸಂಬಂಧ ನೇಪಾಲಿ ಕಾಂಗ್ರೆಸ್ ಅಧ್ಯಕ್ಷರಾದ ತರುಣ ಕೊಯಿರಾಲಾ ಅವರು ಬಂಧಿಸಲ್ಪಟ್ಟಿರುತ್ತಾರೆ. ನೇಪಾಲಿಗಳು ಭಾರತದೊಡನೆ ಐಕ್ಯಮತ್ಯದಿಂದಿರಲು ಪ್ರಯತ್ನ ಮಾಡುತ್ತಿರುವರು.

ಇನ್ನೊಂದು ಕಡೆಯಿಂದ ಸಂಯುಕ್ತ ಅಮೇರಿಕವು ಈ ಏಪ್ರಿಲ್ ತಿಂಗಳಲ್ಲಿ ತನ್ನೊಂದು ರಾಜತಂತ್ರ ನಿಯೋಗವನ್ನು ನೇಪಾಲಕ್ಕೆ ಕಳುಹಿಸಲಿದೆ ಅಮೇರಿಕದ ಡಾಲರ್ ಸಾಮ್ರಾಜ್ಯಶಾಹಿಗೆ ಈ ಹಿಂದೂ ಸಂಸ್ಥಾನವನ್ನು ಕಟ್ಟುವ ಯೋಜನೆ ಅವರಿಗಿದೆಯೆಂದು ತಿಳಿದುಬರುತ್ತದೆ ಬ್ರಿಟಿಷ್ ಸರಕಾರದವರು ತಮ್ಮ ಸೈನ್ಯದಲ್ಲಿ ಗೂರ್ಖಾ ಸೈನಿಕರನ್ನು ಸೇರಿಸಿಕೊಳ್ಳಲು ಮಾತುಕತೆಗೆ ಸಿದ್ಧರಿರುವುದಾಗಿ ತಿಳಿಸಿರುವರು. ಭಾರತ ಬಿಡುವ ಬ್ರಿಟಿಷರು ನೇಪಾಲದಲ್ಲಿ ತಂಗುವದು … ಶಂಕೆಗಾಸ್ಪದವಾಗಿದೆ

ಹೊಸ ವಿಶ್ವದ ಗೊಂಬೆಯಾಟದಲ್ಲಿ ನೇಪಾಳಕ್ಕೂ ಸಹ ಕಟ್ಟಳೆ ಹವಣಿಕೆ ನಡೆದಿದೆ ಎಂದು ಇದರಿಂದ ತಿಳಿದುಬರುತ್ತದೆ ಭಾರತವು ನೇಪಾಳಕ್ಕೆ ಬೇಕಾದ ಸಹಾಯವನ್ನು ಕೊಟ್ಟು ಸ್ವಾತಂತ್ರ್ಯದ ಹಸಿವನ್ನು ನೀಗಿಸಿಕೊಳ್ಳಬೇಕಾಗಿದೆ ಪ್ರಿಯ

ಬಾವುಗಳನ್ನು ಕೂಡಲೇ ಗುಣಪಡಿಸಿರಿ

ನೋವನ್ನು ಉಂಟುಮಾಡುವ ವಿಷಕಾರೀ ಬಾವುಗಳು ಈ ರೀತಿ ಗುಣವಾಗುತ್ತವೆ. ಅದನ್ನು ಆಗಾಗ ನೀರಿನಿಂದ ಕುಟಿಕೂರಾ ಸೋಪು ಹಾಕಿ ತೊಳೆಯಿರಿ, ಅದರ ಮೇಲೆ ಕುಟಿಕೂರಾ ಮುಲಾಮು ಹಚ್ಚಿರಿ.



ಕುಟಿಕೂರಾ ಮುಲಾಮು

CUTICURA OINTMENT

KANARA COMMERCIAL BANK LTD.

PUTTUR

H. O Puttur | Estd 1920 | Branch Vittal

All kinds of Banking Business transacted.

Deposits: Current, Savings, Cumulative Deposits are accepted

Fixed Deposits for periods of 3 months and above up to 24 months are accepted.

SEASON DEPOSITS

ARE Accepted up to 31-5-1947 Terms on application.

ಜಿಲ್ಲಾ ಪರಿಚಯ

ಜಯಪ್ರಕಾಶ ನಾರಾಯಣರ ಸಂಚಾರ ಕಾರ್ಯಕ್ರಮ: ತಾ. 24ರಂದು ಬೆಳಗ್ಗೆ ಕಾಸರಗೋಡಿನಿಂದ ಹೊರಟು ಬದಿಯಡ್ಕ, ಪೆರ್ಲ, ವಿಟ್ಲ, ಪಾಣೆಮಂಗಳೂರು, ಬಂಟ್ವಾಳಗಳಿಗಾಗಿ ಮಧ್ಯಾಹ್ನ ಮಂಗಳೂರಿಗೆ ತಲುಪುವರು. ಮಧ್ಯಾಹ್ನ 3ಕ್ಕೆ ಕ ಪ್ರಾಂತೀಯ ಸಮಾಜವಾದಿ ಪಕ್ಷದ ಅಧಿವೇಶನದ ಉದ್ಘಾಟನೆ. ಸಂಜೆ ಪಣಂಬೂರು, ಸುರತ್ಕಲಗಳಿಗಾಗಿ ಮೂಲ್ಕಿಗೆ ತೆರಳಿ ಅಲ್ಲಿ ಸಭೆ ಅದೇ ರಾತ್ರಿ ಪಡುಬಿದ್ರಿಗಾಗಿ ಕಟಪಾಡಿಗೆ–ಅಲ್ಲಿ ಸಭೆ. ತಾ. 25ರಂದು ಮುಂಜಾನೆ 7 ಗಂಟೆಗೆ ಕಟಪಾಡಿಯಲ್ಲಿ ಛಾತ್ರರ ಶಿಬಿರ ಉದ್ಘಾಟನೆ ಮಾಡಿ ಉಡುಪಿಗೆ ತೆರಳುವರು. ಅಲ್ಲಿ ಸಭೆಯಾಗಿ ಮಧ್ಯಾಹ್ನ ಕುಂದಾಪುರದಲ್ಲಿ ಸಭೆ ಮಾಡಿ ಕಾರ್ಕಳ ಮಾರ್ಗವಾಗಿ ಸಂಜೆ 7 ಗಂಟೆಗೆ ಮಂಗಳೂರಿಗೆ ಬಂದು ಮೈದಾನಿನಲ್ಲಿ ಸಾರ್ವಜನಿಕ ಭಾಷಣ ಮಾಡುವರು. ತಾ. 26ರಂದು ಮುಂಜಾನೆ ಪುತ್ತೂರಿಗೆ ತೆರಳಿ ಅಲ್ಲಿಯೂ ಸಾರ್ವಜನಿಕ ಸಭೆಯಲ್ಲಿ ಭಾಷಣವಿತ್ತು ಮೈಸೂರಿಗೆ ಪ್ರಯಾಣ ಮಾಡುವರು.

ಕೊಮ್ಯೂನಿಸ್ಟರಿಗೆ ಸಜೆ: ಕಳೆದ ವರ್ಷ ಗವರ್ನರರು ಇಲ್ಲಿಗೆ ಬಂದಿದ್ದಾಗ ಕಾನೂನು ಉಲ್ಲಂಘಿಸಿ ಸಭೆ ಮೆರವಣಿಗೆ ನಡೆಸಿದರೆಂಬ ಆಪಾದನೆಯ ಮೇಲೆ ವಿಚಾರಣೆಗೊಳಗಾದ ಶ್ರೀಗಳಾದ ಹೊಳ್ಳ, ಶಕ್ತಿಲ್ಲಾಯ ಮತ್ತು ಶಾಂತಾರಾಮ ಪೈ ಇವರಿಗೆ 6 ತಿಂಗಳ ಕಠಿಣ ಸಜೆ ವಿಧಿಸಲಾಗಿದೆ. ಬಂಟ್ವಾಳ ಸೆಶ್ಶನ್ ಕೋರ್ಟಿನಲ್ಲಿ ಈ ತೀರ್ಮಾನ ಕೊಡಲಾಯಿತು.

ನಾಗರೀಕ ವ್ಯವಹಾರ: ನಮ್ಮ ಜಿಲ್ಲೆಗೆ ಬರಲಿರುವ ಸಮತಾವಾದಿ ಮುಂದಾಳು ಜೈ ಪ್ರಕಾಶ ನಾರಾಯಣ ಅವರಿಗೆ ಅರ್ಪಿಸಲು ಕೆಲವು ನಿಧಿಗಳು ಸಂಗ್ರಹವಾಗುತ್ತಿವೆ. ಈ ಕುರಿತು ಸ್ಥಳೀಕ ಪತ್ರಿಕೆಯೊಂದರಲ್ಲಿ ಈಗಾಗಲೇ ಆಕ್ಷೇಪವೆತ್ತುವ ಪ್ರಕಟಣೆಯಾಗಿದೆ. ಇದಕ್ಕೆ ಕಾರಣವಿಲ್ಲದಿಲ್ಲ. ಈಚೀಚೆಗೆ ಸಾರ್ವಜನಿಕ ಉದಾರ ಪ್ರವೃತ್ತಿಗೆ ವಿನಂತಿ ಮಾಡಿ ಧನವೆತ್ತುವ ರೂಢಿಯು ಸಾಮಾನ್ಯವಾಗಿದೆ. ರಾಷ್ಟ್ರೀಯ ಚಳವಳಿದ ಹಲವು ರಚನಾತ್ಮಕ ಕಾರ್ಯಗಳಿಗೂ, ಸಮಾಜ ಸುಧಾರಣೆಯ ಕಾರ್ಯಗಳಿಗೂ ನಿಧಿ ಎತ್ತುವ ಸಂಪ್ರದಾಯ ಕೆಲವು ಹಿಂದಿನವರಿಂದ ಪ್ರಾರಂಭಿಸಲ್ಪಟ್ಟಿದೆ. ಈಗ ಸೇವಾ ಉದ್ದೇಶ ಬಹಳ ವಿಶಾಲವಾಗಿ ಹರಡಿದೆ ಎಂದು ತೋರುತ್ತದೆ. ಮಹಾತ್ಮಾ ಗಾಂಧಿಯವರ ಈ ಕಾರ್ಯದಲ್ಲಿ ತಪ್ಪುತ್ತದೆ ಎಂದು ತಾವು ಸಂಗ್ರಹಿಸಿದ ... ಚಿಕ್ಕಾಸಿಗೂ ಲೆಕ್ಕಪತ್ರ ನಿಡುವುದರಲ್ಲೂ ಅವರು ಬಹಳ ನಿಷ್ಠಾಸಾರ್ಥತೆಯನ್ನು ಸಂಪಾದಿಸಿದರು. ನಮ್ಮಲ್ಲಿ ಯೋಗ್ಯ ಲೆಕ್ಕಪತ್ರಗಳಿಲ್ಲದ ಗೊತ್ತು ಗುರಿಯಿಲ್ಲದ ಕೇಳುವವರಿಲ್ಲದ ನಿಧಿಗಳೆಷ್ಟೋ ಸಂಗ್ರಹವಾಗುತ್ತಿವೆ. ಅನೇಕರು ತಮ್ಮ ಕೈಯಿಂದ ಚಿಕ್ಕಾಸೂ ಹಾಕದೆ ಈ ಸೇವೆಯ ಪುಣ್ಯ ಸಂಪಾದಿಸುವ ನಿದರ್ಶನಗಳೂ ಹಲವಿವೆ. ಮತ್ತೆ ಭಜನೆ ಮಂದಿರ ಮಜೂರ ಹಿತಗಳಿಗೆ ಧಾರ್ಮಿಕ ವ್ಯವಹಾರ ಸಂಗೀತ, ಹರಿಕೀರ್ತನೆಗಳಿಗೆ ಎಷ್ಟೋ ಹಣ ಹರಿವಾಣಗಳು (ಇಂಥವುಗಳಲ್ಲಿ ಮಾರಿಗುಡಿಯ ಪ್ರಸಾದ ಕೊಡುವಂಥವೂ ಇವೆ) ತಿರುಗಿಸಲ್ಪಡುವುದನ್ನು ನಾವು ಆಗಾಗ ಕಾಣುತ್ತೇವೆ. ಜನಜಾಗೃತಿ, ರಾಜಕೀಯ ಪ್ರಗತಿಯ ಈ ಕಾಲಧಲ್ಲೂ ಹೊಣೆಗಾರಿಕೆ ಇಲ್ಲದ ನಿಧಿಗಳಿಗೆ ಧನ ಸಂಗ್ರಹವಾಗುವುದು ನಮ್ಮ ಜನತೆಯ ಉದಾರತೆಯ ಲಕ್ಷಣವಾಗಿರುವುದಾದರೂ ಮಾಡಿದ ದಾನದ ಯೋಗ್ಯಾಯೋಗ್ಯತೆಯನ್ನು ವಿಚಾರಿಸುವುದು ಕರ್ತವ್ಯವಾಗಿದೆ. 'ಲೆಕ್ಕಪತ್ರ ವಿಡದವರಿಗೆ ಕೊಡಬಾರದು' ಎಂದು ಮಹಾತ್ಮರು ಪತ್ರಿಕೆ ಅಗ್ರಲೇಖ ಬರೆದುದನ್ನು ಎಲ್ಲರೂ ಗಮನಿಸುವುದೊಳಿತು.

ಬೈಂದೂರಲ್ಲಿ ಸಿಡಿಲು ಮರಣ: ತಾ. 8–4 47ರ ಮುಂಜಾನೆ 7ಕ್ಕೆ ಅಕಾಲ ವೃಷ್ಟಿಯ ಪರಿಣಾಮವಾಗಿ ಸಿಡಿಲೆರಗಿದುದರಿಂದ ಉಪ್ಪುಂದದಿಂದ ತಗ್ಗರ್ಸೆ ಗ್ರಾಮದ ಮಾರ್ಗವಾಗಿ ಕಾಡಿಗೆ ಹೋಗುತ್ತಿರುವ ಜನರ ಪೈಕಿ ಎಂಟು ತಿಂಗಳ ಗರ್ಭಿಣಿಯೊಬ್ಬಳು ಅಲ್ಲೇ ಮೃತಪಟ್ಟಳು. ಮತ್ತಿಬ್ಬರಿಗೆ ವಿಶೇಷ ಜಖಂ ಆಗಿದ್ದು ಬೈಂದೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರು. ಮತ್ತೆ ನಾಲ್ವರಿಗೂ ಕೊಂಚ ಪೆಟ್ಟಾಗಿದೆ. ಸಿಡಿಲು ಬಿದ್ದ ಸ್ಥಳದಲ್ಲಿ ಸುಮಾರು ಆರು ಅಂಗುಲ ವ್ಯಾಸದ ಬಿಲು ಆಳದ ಒಂದು ಹೊಂಡಬಿದ್ದಿದೆ. ಸತ್ತು ಬಿದ್ದವಳ ಒಂದು ಕಿವಿ ಮಾಯವಾಗಿದೆ. ಒಂದು ಬ್ರಾತ್ಮಿ

ಹವಾಮಾನ: ಸೂರ್ಯನೇ ಕೆಡಿಯಲ್ಲಿ ಒಣಗುವ ಕಾಲಕ್ಕೆ ಹೀಗೆ ಮಳೆ ಬಂದರೆ ಅಕಾಲವೆನ್ನಬೇಕು. ಕಳೆದ ವಾರಾಂತ್ಯದ ಹಿಂದು ಮುಂದಿನ ದಿನಗಳಲ್ಲಿ ಮಳೆಗಾಲದಲ್ಲಿ ಬಿದ್ದಿರುವಂತೆ ಧಾರಾಕಾರವಾದ ವೃಷ್ಟಿ ಸುರಿದಿರುವುದು ಪೇಟೆಗಳ ಮಟ್ಟಿಗೆ ಸ್ವಲ್ಪ ಅತ್ಯಧಿಕ ಮಿತಿಗೆ ಮುಟ್ಟಿದಂತಿದ್ದ ಉಷ್ಣತಾಪವು ಪರಿಹರಿಸಲ್ಪಟ್ಟರೂ ಅವಶ್ಯವಿರುವ ಸೇಚಿ ಸಮಯದಲ್ಲಿ ಈ ಮಳೆ ನಿಂತುಬಿಡಬಹುದೆ ಎಂಬ ಶಂಕೆ ಕೃಷಿಕರಲ್ಲುತ್ಪನ್ನವಾಗಿದೆ. ಮಾತ್ರವಲ್ಲ ಈ ಅಲ್ಪ ಸ್ವಲ್ಪ ಮಳೆಯ ನಂತರ ಪುನಃ ಯಥಾಪ್ರಕಾರ ಬಿಸಿಲು ಕಾದರೆ ನೀರಿನ ಕೊರತೆಯಿರುವಲ್ಲಿ ಇನ್ನಷ್ಟು ತೊಂದರೆ ಹೆಚ್ಚುವ ಸಂಭವವಿದೆಯೆಂದೂ ತರ್ಕಿಸಲಾಗಿದೆ. ಕೆಲವು ದಿನಗಳಿಂದಂತೂ ನಗರದಲ್ಲಿ "ಸಿಲು ಸರಿಯಾಗಿ ಕಾದುದಿಲ್ಲ.

ಮಠ ಪ್ರತಿಷ್ಠೆ: ಜಿಲ್ಲೆಯ ಪ್ರಮುಖ ನಿಕೇತನಗಳಲ್ಲೊಂದಾದ ಮಂಗಳೂರಿನ ಬಾಳಿಪೆ ಮನೆತನದ ರಥಬೀದಿಯಲ್ಲಿದ್ದ ಸುಮಾರು ಎರಡು ಶತಮಾನಗಳಷ್ಟು ಹಳೆಯದೆಂದು ಹೇಳಲ್ಪಟ್ಟ ಕಟ್ಟಡವನ್ನು ಕೆಡವಿ ಅಲ್ಲಿ ಹೊಸ ಮಠವನ್ನು ಕಟ್ಟಿಸಿರುವರು. ಈ ಮಠದ ಪ್ರತಿಷ್ಠಾ ಉತ್ಸವವು ಇದೇ ತಾ. 7–4 47ರಲ್ಲಿ ಶ್ರೀ ಕಾಶೀ ಮಠಾಧೀಶ ಶ್ರೀಮತ್ ಸುಕೃತೀಂದ್ರ ತೀರ್ಥ ಸ್ವಾಮೀಜಿಯವರ ಪವಿತ್ರ ಹಸ್ತಗಳಿಂದ ಜರಗಿಸಲ್ಪಡುವುದೆಂದು ತಿಳಿದುಬರುತ್ತದೆ. ಈ ಮಠದಲ್ಲಿ ಮೂಲ ಆರಾಧ್ಯ ದೇವರಾದ ಕಾಳಿಯಾ ಮರ್ಧನ ಕೃಷ್ಣದೇವರ ಸೂರ್ಯನಾರಾಯಣ ಮತ್ತು ಸಂತಾನ ಗೋಪಾಲ ಮೂರ್ತಿಗಳನ್ನು ಪ್ರತಿಷ್ಠಿಸುವರು.

ಟಪ್ಪಾಲು ನೌಕರರ ಸಭೆ: ಮದ್ರಾಸ ಅಧಿಪತ್ಯದ ಪೋಸ್ಟ್‌ಮೆನ್ ಮತ್ತು ಲೋವರ್ ಗ್ರೇಡ್ ಸ್ಟಾಫ್ ಯೂನಿಯನಿನ ಕಾರ್ಯಕರ್ತರುಗಳ ಆಗ್ರಹದ ಮೇರೆಗೆ ಮಂಗಳೂರಿನ ಈ ಸಂಘದ ಶಾಖೆಯ ಜನರಲ್ ಬೋಡಿ ಸಭೆ ತಾ. 12ರಂದು ಉಪಾಧ್ಯಕ್ಷ ಇಲ್ಲಿಯ ಹೆಡ್ ಪೋಸ್ಟ್ ಆಫೀಸಿನಲ್ಲಿ ಜರಗಿತು.

ಉಡುಪಿ: ಇಲ್ಲಿಯ ಕರ್ನಾಟಕ ಸಂಘದ ಆಶ್ರಯದಲ್ಲಿ ದ ಕ ಪಂಡಿತ ಸಂಘದವರು ಮುದ್ದಣ ಸ್ಮಾರಕೋತ್ಸವವನ್ನು ತಾ. 6ರಂದು ಆಚರಿಸಿದರು. ಶ್ರೀ ಸೇಡಿಯಾಪು ಕೃಷ್ಣಭಟ್ಟರು ಅಧ್ಯಕ್ಷತೆ ವಹಿಸಿದರು. ಶ್ರೀ ಕ ಪ್ರಸನ್ನಾಚಾರ್ಯ, ಕೆ. ರಾಜಗೋಪಾಲಕೃಷ್ಣರಾಯ, ಪಿ. ಕೆ. ನಾರಾಯಣ, ಟಿ. ಗೋಪಾಲಕೃಷ್ಣಭಟ್, ಮುದುಕುರ್ಳ ವೆಂಕಟರಭಟ್ ಮೊದಲಾದವರು ಮುದ್ದಣ್ಣನ ಸಾಹಿತ್ಯ ಪ್ರತಿಭೆಯ ಸಂಬಂಧವಾದ ವಿವಿಧ ವಿಷಯಗಳನ್ನೆತ್ತಿ ಭಾಷಣಮಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ 'ಮುದ್ದಣ್ಣನ ಕೃತಿಗಳನ್ನು ಅಭ್ಯಾಸ ಮಾಡಿ ಅವನು ಆಧುನಿಕ ಕಾಲದಲ್ಲಿ ಕನ್ನಡ ಸಾಹಿತ್ಯದಲ್ಲಿ ತೋರಿಸಿದ ಹೊಸದೂ ಸ್ವತಂತ್ರವೂ ಆದ ಮಾರ್ಗವನ್ನು ಅನುಸರಿಸಿ ಸ್ಫೂರ್ತಿ ಹೊಂದಲು ಪ್ರಯತ್ನಿಸುವುದೇ ಆ ಶ್ರೇಷ್ಠ ಸಾಹಿತಿಗೆ ಉತ್ತಮ ಸ್ಮಾರಕ'ವೆನ್ನುತ್ತ ಮುದ್ದಣ್ಣನು ಆದಿಪಂಪನೇ ಮೊದಲಾದ ಕನ್ನಡ ಕವಿಶ್ರೇಣಿಯಲ್ಲಿ ಒರ್ವನಾಗಿ ಕನ್ನಡ ನವರತ್ನಗಳಲ್ಲಿ ಒಬ್ಬನಾಗಿ ಶೋಭಿಸುವನೆಂದು ತಿಳಿಸಿದರು. ಅವನ ಕುರಿತಾಗಿ ಶ್ರೀಗಳಾದ ಬೇಂದ್ರೆ, ಶಂಕರಭಟ್ ಇವರುಗಳು ರಚಿಸಿದ ಕವಿತೆಗಳನ್ನು ಹಾಡಲಾಯಿತು. ಶ್ರೀ ಗವಾಯಿ ಚಿತ್ರಿ ರಾಮರಾಯರು ಮುದ್ದಣ್ಣನ ರಾಮಪಟ್ಟಾಭಿಷೇಕದಿಂದ ಕೆಲವು ಪದ್ಯಗಳನ್ನು ಹಾಡಿದರು.

ಸೆಕ್ರಿನ್ ಉಪಯೋಗ: ಹೋಟೇಲುಗಳಲ್ಲಿ ಸಕ್ಕರೆಯ ಬದಲು ಸೆಕ್ರಿನ್ ಎಂಬ ಸಕ್ಕರೆಯ ಸತ್ವವನ್ನು ಉಪಯೋಗಿಸಿ ಚಾ ಕಾಫಿಗಳು ತಯಾರಾಗುತ್ತಿವೆಯೆಂದೂ ಈ ಸೆಕ್ರಿನಿನ ಗುಣ ಆರೋಗ್ಯಕ್ಕೆ ಹಾನಿಕರವೆಂದೂ ಆಕ್ಷೇಪಿಸಿ ಎರ್ವ ಕಾಫಿ ಕುಡುಕರ ಸ್ಥಳೀಯ ಪತ್ರಿಕೆಯೊಂದರಲ್ಲಿ ಆಕ್ಷೇಪವೆತ್ತಿರುವರು. ಆದರೂ ಆರೋಗ್ಯಾಧಿಕಾರಿಗಳ ಗಮನವನ್ನು ಈ ವಿಷಯದ ಕಡೆ ಸೆಳೆಯಬಯಸುತ್ತಾರೆ.

ಗ್ರಾಮಸಮಿತಿಗಳ ಪಕ್ಷಪಾತ: ಜಿಲ್ಲೆಯ ಹಲವು ಕಡೆಗಳಲ್ಲಿನ ಗ್ರಾಮ ಸಮಿತಿಗಳ ಸಕ್ಕರೆ ಚಿಮಿಣಿ ಎಣ್ಣೆಗಳ ಹಂಚೋಣದಲ್ಲಿ ತುಂಬಾ ಪಕ್ಷಪಾತ ಮಾಡುತ್ತಿರುವುದಾಗಿ ದೂರುಗಳು ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿವೆ. ಈ ಸಮಿತಿಗಳು ಇನ್ನೂ ಜನ ಚುನಾಯಿತವಾಗಿರದೆ ಸರಕಾರದಿಂದ ನೇಮಿಸಲ್ಪಟ್ಟವುಗಳಾಗಿವೆ. ಸರಕಾರವು ಈ ರೀತಿ ಯೋಗ್ಯ ವಿಚಾರಣೆಗಳನ್ನು ಶೀಘ್ರದಲ್ಲಿ ಮಾಡಬೇಕಾಗಿ ಹಾರೈಸಲಾಗಿದೆ.

ಕೊಂಬೆಯಿರುವ ಅಡಿಕೆ ಮರ: ಧರ್ಮಸ್ಥಳದ ಮಂಜುನಾಥ ದೇವರ ಪನ್ನೆಯ ಗದ್ದೆ ಕೆರೆಯ ಒಂದು ಅಡಿಕೆ ಮರದಲ್ಲಿ ಸುಮಾರು 15 ಕೊಂಬೆಗಳ ಎತ್ತರ ಮರದಲ್ಲಿ ಇರುವ ಹಿಂಗಾರವೇ ಬೆಳೆಗಳಾಗುತ್ತಾ ಮೇಲೆ ಹೋಗುತ್ತವೆ ಎಂದು ಬಾತ್ಮಿ.

ಗ್ರಂಥ ಪರಿಚಯ

Hinduism and Modern Science

(ಹಿಂದೂತ್ವವೂ ಆಧುನಿಕ ವಿಜ್ಞಾನವೂ):– ಲೇಖಕರು ಡಾ। ಎಂ. ಎ. ಕಾಮತ್, ಎಂ. ಬಿ. ಸಿ. ಎಂ. ಎಫ್. ಟಿ. ಎಸ್. ಕ್ರಾಸ್ 1½ ರೂಪಾಯಿ ರಟ್ಟು ಬೈಂಡಿನದು ಮುದ್ರಕರು ಶಾರದಾ ಪ್ರೆಸ್ ಮಂಗಳೂರು.

ಸತ್ಯವು ನಿರಂತರವೂ ಶಾಶ್ವತವೂ ಆದುದು. ಭಾರತೀಯ ನಾಗರೀಕತೆಯು ಸತ್ಯ ಸಂಸ್ಕೃತಿಯ ಮೇಲೆ ಭದ್ರವಾಗಿ ಬೆಳೆಸಲ್ಪಟ್ಟಿದ್ದು. ಆದುದರಿಂದ ಜಗತ್ತಿನ ಇತರ ಎಲ್ಲಾ ಕಡೆಗಳಲ್ಲಿನ ನಾಗರೀಕತೆಗಳು ನಾಮಾವಶೇಷವಾದರೂ ಭಾರತೀಯ ಸಂಸ್ಕೃತಿಯು ಹಿಂದಿನ ಜೀವನದ ಪ್ರತಿಬಿಂಬವಾಗಿಯೂ, ಇಂದಿನ ಜೀವನದ ಜೀವಸತ್ವವಾಗಿಯೂ, ಮುಂದಿನದಕ್ಕೆ ಮಾರ್ಗದರ್ಶಕವಾಗಿಯೂ ಶೋಭಿಸುತ್ತಿರುವುದು ಅದರ ಅಮೋಘ ವೈಶಿಷ್ಟ್ಯ ಶ್ರೇಷ್ಠತೆಗೆ ಸಾಕ್ಷಿಯಾಗಿದೆ. ನಮ್ಮ ದೇಶಜ್ಞಾನ ಸಂವರ್ಧನೆಗೆ ಸಹಾಯಕಾರಿಯಾಗುವ ಪಂಚಭೂತಗಳ ಪರಿಣಾಮಗಳಿಂದೊಡಗೂಡಿದೆ. ಇಲ್ಲದಿದ್ದರೆ ವೇದಕಾಲದಿಂದ ಆಧುನಿಕ ಕಾಲತನಕ ಅದೆಂತಹ ಮಹೋನ್ನತ ಮೇಧಾವಿಗಳಲ್ಲಿ ಮೆರೆದುದು' ನಮ್ಮ ಇತಿಹಾಸ ಸಾಹಿತ್ಯ ವಿಜ್ಞಾನ ಕಲಾಕೃತಿಗಳ ಅದ್ವಿತೀಯ ದಾಖಲೆ. ಸಂಸ್ಕೃತ ಭಾಷೆಯೊಂದರ ಸಂಶೋಧನೆಯೇ ನಮ್ಮ ಪ್ರಾಚೀನರ ಅಸಾಮಾನ್ಯ ವೈಜ್ಞಾನಿಕ ವಿಚಾರ ಪ್ರತಿಭೆಯ ಸಾಕ್ಷಿ. ಅವರು ತಮ್ಮ ಜ್ಞಾನ ತಪಸ್ಸಿನಿಂದ ಕಂಡುಹಿಡಿದ ವಿಶ್ವರಹಸ್ಯಗಳ ಸತ್ಯಗಳು ನಮ್ಮ ಜೀವನದಲ್ಲಿಂದಿಗೂ ಹೇಗೆ ಪರಿಣಾಮಕಾರಿಯೂ ಉಪಯುಕ್ತವೂ ಆಗಿದೆ ಎಂದು ವೈದ್ಯಶಾಸ್ತ್ರ ಪಾರಂಗತರಾದ ಗ್ರಂಥಕರ್ತರು ಸತಾರ್ಕಿಕವಾಗಿ ಪ್ರತಿಪಾದಿಸಿದ್ದಾರೆ. ಗ್ರಂಥದಲ್ಲಿ ಸ್ವಾರಸ್ಯ ವಾಚನಕ್ಕೂ ಆಳ ವಿಚಾರ ಪ್ರಚೋದನೆಗೂ ಸಹಾಯಕವಾದ ಪ ಹೇರಳ ಸುದ್ದಿ ಸಂಗತಿಗಳಿವೆ. ಪರಕೀಯ ಸಂಸ್ಕೃತಿಯ ಆಕ್ರಮಣ ಪ್ರಭಾವಕ್ಕೆ ಸಿಲುಕಿ ನಮ್ಮ ಪ್ರಾಚೀನತೆಯ ವೈಶಿಷ್ಟ್ಯವನ್ನು ಅಲಕ್ಷ್ಯದಿಂದ ಮರೆತವರು ಅತ್ಯಾವಶ್ಯಕವಾಗಿ ಓದಬೇಕಾದ ಗ್ರಂಥ. ಆದುದರಿಂದ ಇಂಗ್ಲಿಷನ್ನೇ ಮಾಧ್ಯಮವಾಗಿ ಅನುಸರಿಸಲಾಗಿದೆ. ದೇಶ ಪರದೇಶದವರಿಗೂ ಹಿಂದೂ ತತ್ವ ಶ್ರೇಷ್ಠತೆಯನು ತಿಳಿಸಿಕೊಳ್ಳಲು ಸಹಾಯಕವಾಗಿದೆ. ಪುಸ್ತಕ ಬೆಲೆ ರೂ. 1 8 0 ಗ್ರಂಥಕರ್ತರ ತಮ್ಮ ಪುಸ್ತಕದ ಅಂದ ಮುದ್ರಣ ಮತ್ತು ಅಚ್ಚುಕಟ್ಟು ತನದ ದೃಷ್ಟಿಯಿಂದ ಇದು ಮೆಚ್ಚತಕ್ಕದ್ದು.

ನಾಥ

★

ESTD 1906

CANARA BANK, LIMITED

(Incorporated in British India with Limited Liability)

(PROGRESS STATEMENT CORRECT TO THOUSANDS OF RUPEES)

LIABILITIES

	1945	1946
Capital Subscribed	29,00,000	29 00,000
Capital paid up	28,43,000	28 80 000
Reserve	11,00,000	11 00,000
Deposits	3,60,43,000	4 60,40,000
Due to Bankers	26,91,000	69 67,000
Call Deposits from Bankers	8,00,000	16,00 000
Branch Adjustments	22,07,000	21 09 000
Bills for collection and foreign bills negotiated	20,56,000	34 23,000
Other Liabilities	77,000	85,000
Profit for the year	3,61,000	4,19,000
Rs	4,71,78,000	6,45,13,000

ASSETS

	1945	1946
Cash	1 01 91 000	1 16 16 000
Govt Securities	1 80 45 000	2 75 61 000
Advances to customers	1 56 87 000	2,01 38,000
Bills for collection and Foreign Bills negotiated	20 56 000	34 23 000
Landed Properties	28 000	5 000
Bank Premises and Furniture and Fixtures	1 46 000	1 47,000
Other Assets	10,20,000	16,33 000
Rs.	4,71,78,000	6,45,13 000

ಮೀನುಗಾರಿಕೆಯ ಮೂಲಕ ಜೀವನ ಶಿಕ್ಷಣ

ಅತ್ಯನುಕೂಲತೆಯ ವಿದ್ಯಾ ಮಾಧ್ಯಮ ಕೈಗಾರಿಕೆ

ಇದು ಅಹಿಂಸೆಗೆ ವಿರೋಧವೆ?

[illegible] ವುದು [illegible] ಮನುಷ್ಯನಾಗುವ ಮಗುವಿನ [illegible] ಜೀವನದ ಮೂಲ ಜನ್ಮ [illegible] ಸ್ವತಂತ್ರವಾಗಿ ಸಂಪಾದಿಸುವ ಸಾಮರ್ಥ್ಯವುಂಟಾಗುವಂತೆ ಮಾಡುವುದು ಮೂಲ ಶಿಕ್ಷಣದ [illegible] ದೈಹಿಕ [illegible] ಜೀವನದ ಮೂಲ ಅವಶ್ಯಕತೆಗಳನ್ನು ಸಂಪಾದಿಸಲು ಸಾಮರ್ಥ್ಯವಿಲ್ಲದ ಬುದ್ಧಿವಿಕಾಸವು ಪರಾವಲಂಬನದಿಂದ ಕುಂಟಿತವಾಗುವುದು. ಈ ಸಾಮರ್ಥ್ಯ [illegible] ಅವನು [illegible] ಪ್ರದೇಶ, ಪರಿಸ್ಥಿತಿಗನುಕೂಲವಾದ [illegible] ದ್ದರಿಂದ ಕೈಗಾರಿಕೆಯನ್ನು ಅವನಿಗೆ ವಿದ್ಯಾಭ್ಯಾಸದ [illegible] ಮತ್ಸ್ಯ ಜಂತುಗಳ ಅಂಗಾಂಗ ರಚನೆ, ಆಹಾರಾಭ್ಯಾಸಗಳ ತಿಳುವಳಿಕೆಯೂ ಬುದ್ಧಿಯನ್ನು ಚುರುಕುಗೊಳಿಸುವ ಒಂದು ಶಾಸ್ತ್ರವೇ ಆಗಿದ್ದು ಪ್ರಯೋಗ, ಅನ್ವೇಷಣೆ (Research) ಗಳಿಗೆ ಅನಂತವಾದ ಸಂದರ್ಭಗಳಿಂದ ಕೂಡಿದೆ. ಇನ್ನು ಸಮುದ್ರ ತೀರದಲ್ಲಿರುವ ಅಸಂಖ್ಯಾತ ಜಲಚರಗಳೂ, ಚಿಪ್ಪು ಪ್ರಾಣಿಗಳೂ ಅಗಾಧ ಜ್ಞಾನ ಭಂಡಾರಗಳೇ ಆಗಿವೆ.

ಸಮುದ್ರದ ನೀರು ರಸಾಯನಿಕ ಶಾಸ್ತ್ರ ಸಂಬಂಧ ಅಭ್ಯಾಸಕ್ಕೆ ಅಪರಿಮಿತ ಎಡೆಯುಳ್ಳದ್ದು. ನೀರಿನ ಏರಿಳಿತಗಳು ನೇರವಾದ ಭೌಗೋಳಿಕ ಮತ್ತು ಖಗೋಳ ಪ್ರಭಾವಗಳ ಅಧ್ಯಯನಕ್ಕೆ ಆಸ್ಪದವುಳ್ಳ ವಿಷಯ. ನೀರಿನ ಒತ್ತಡ (pressure) ಸಾಂಧ್ರತೆ (density) ಉಷ್ಣ (heat) ಇವು ಭೌತಿಕ ಶಾಸ್ತ್ರಾಭ್ಯಾಸದ (Physics) ವರ್ಗ ವಿಷಯಗಳು.

ಮೀನಿನ ಆಹಾರ ಮೌಲ್ಯ, ಅದರೊಳಗಿನ ಕೊಬ್ಬು ಎಣ್ಣೆಗಳ ಜೀವಾತು (vitamins)ಗಳ ಪ್ರಮಾಣಗಳನ್ನು ಆಳ ಪರಿಶೋಧನೆ ವಿಷಯವಾಗಿ ಕಲಿಸುವುದು ಅತ್ಯಾವಶ್ಯಕವಾಗಿದೆ.

ನಮ್ಮ ದೇಶದಲ್ಲಿ ಮೀನುಗಾರಿಕೆಯು ಒಂದು ಮುಖ್ಯ ಕೈಗಾರಿಕೆ ಸುಮಾರು 2 ಸಾವಿರಕ್ಕೂ ಮಿಕ್ಕಿ ಉದ್ದವಿರುವ ಸಮುದ್ರ ಕರಾವಳಿಯಿರುವ ನಮ್ಮೀ ಪರ್ಯಾಯ ದ್ವೀಪದ ಸಮುದ್ರ ತೀರದಲ್ಲಿ ವಾಸಿಸುವ ಜನಸಂಖ್ಯೆ ಹೇರಳವಾಗಿದೆ. ಈ ಜನರಿಗೆ ಮೀನುಗಾರಿಕೆಯಿಂದ ಅತ್ಯುತ್ತಮವಾದ ಶಿಕ್ಷಣ ಮಾಧ್ಯಮ ಬೇರೊಂದಿಲ್ಲ. ಇದನ್ನು ಶಾಸ್ತ್ರೀಯವಾಗಿ ಅಭಿವೃದ್ಧಿ ಪ್ರಗತಿಗಳನ್ನು ಹೊಂದುವುದು ಮಾತ್ರವಲ್ಲ ಇದರ ಸಂಬಂಧವಾಗಿದ್ದ ಕೀಳು ಭಾವನೆಯೂ ಕಡಿಮೆಯಾಗುವುದು. ನಮ್ಮ ದೇಶದಲ್ಲಿನ ಅನೇಕ ನದಿ ತೀರಗಳ ಪ್ರದೇಶದಲ್ಲೂ ಇದನ್ನು ಮೂಲ ಶಿಕ್ಷಣ ಮಾಧ್ಯಮವಾಗಿ ಇಟ್ಟುಕೊಳ್ಳಬಹುದು.

ಮೀನುಗಾರಿಕೆಯು ಶೈಕ್ಷಣಿಕ ಅನುಕೂಲತೆಗಳಾದರೋ ಅತ್ಯಮೂಲ್ಯವಾಗಿವೆ. ಸಾಗರದೊಳಗಿನ ವಿವಿಧ ವಿಚಿತ್ರ ಲಕ್ಷಣಗಳು [illegible] ತಳಹದಿಯನ್ನಾಗಿ ಮಾಡಬಹುದು. ಕಡಲುಪ್ಪನ್ನೂ ಮರಳನ್ನೂ ಇತರ ಅನೇಕ ಕೈಗಾರಿಕೆಗಳಿಗೆ ಉಪಯೋಗಿಸುವ ಪ್ರಯತ್ನಗಳನ್ನು ಮೂಲ ಶಿಕ್ಷಣ ಶಾಲೆಯ ಪ್ರಯೋಗ ಮಂದಿರಗಳಲ್ಲಿ (laboratories) ಜರಗಿಸಬಹುದು.

ಪ್ರಾರಂಭದಿಂದ ಚಿಪ್ಪು [illegible] ಬಾಲಕರಿಗೆ ಗಣಿತವು ಕಲಿಸಲ್ಪಡುತ್ತಿ [illegible] ಸಮುದ್ರ ತೀರವು ಈ ವಿದ್ಯೆಯನ್ನು ಸುಲಭಸಾಧ್ಯ ಮಾಡುವುದು. ಮಾತ್ರವಲ್ಲ ಮೀನು ಎಣ್ಣೆ ತಯಾರಿಕೆ, ಬಲೆ ಹೆಣೆಯುವಿಕೆ, ದೋಣಿ ತಯಾರಿಸುವಿಕೆ ಇವುಗಳ ಸಂಬಂಧವಾಗಿ ಬರುವ ವಿವಿಧ ಗಣಿತ ಕ್ರಿಯೆಗಳು ಲೆಕ್ಕ ಶಾಸ್ತ್ರದ ಪ್ರಾಯೋಗಿಕ ಉದ್ದೇಶ [illegible] ವಿಕಾಸಗೊಳಿಸುವುವು.

ಬಲೆ ಹೆಣೆಯುವುದು ಒಂದು ಸ್ವತಂತ್ರ ವಾದ ಉಪ ಕೈಗಾರಿಕೆ. ವಿರಾಮ ಕಾಲದ ಸದುಪಯೋಗ ಮಾಡಲಿಕ್ಕೂ, ಆರ್ಥಿಕ ಸ್ಥಿತಿಯನ್ನು ಅಭಿವೃದ್ಧಿಗೊಳಿಸಲಿಕ್ಕೂ ಇದು ಉಪಯುಕ್ತ ಸಾಧನ. ಬೆಸ್ತರಲ್ಲಿ ನಾರಿನ ನೂಲು ತೆಗೆಯಲು ತಕಲಿಯನ್ನು ಪುರಾತನ ಕಾಲದಿಂದಲೂ ಉಪಯೋಗಿಸುತ್ತಿದ್ದರು. ಈಗ ಅದಕ್ಕೆ ಬೇಕಾಗುವ ಮತ್ತು ಹತ್ತಿ ನೂಲನ್ನು ತೆಗೆದು ಬಟ್ಟೆಬರೆಗಳನ್ನು ತಯಾರಿಸಿಕೊಳ್ಳಲು ಅನುಕೂಲವಾಗುವ ಚರಕವನ್ನು ಉಪಯೋಗಿಸಬಹುದು.

ಮೀನಿನ ಎಣ್ಣೆಯನ್ನು ತೆಗೆಯುವುದು, ಮೀನನ್ನು ಒಣಗಿಸುವುದು, ಗಾಳಿರಹಿತ ಡಬ್ಬಿಗಳಲ್ಲಿ ಅವನ್ನು ತುಂಬಿಸಿ ಸಿದ್ಧ ಆಹಾರವಾಗಿ ಮಾರಾಟಕ್ಕೆ ತಯಾರು ಮಾಡುವುದು ವಿದ್ಯಾರ್ಥಿಗಳಲ್ಲಿ ಹಲವು ಉಪಯುಕ್ತ ವ್ಯವಹಾರಿಕ ವಿಷಯಗಳ ಜ್ಞಾನವನ್ನುಂಟು ಮಾಡುವುದರೊಂದಿಗೆ ಕೈಗಾರಿಕೆಯ ವಿಸ್ತರಣವೂ ಇದರಿಂದ ಸಾಧಿಸುವುದು.

ಸಮುದ್ರ ತೀರದ ವಾತಾವರಣವು ಅವರ್ಣನೀಯವಾದ ಕಲಾ ಸನ್ನಿವೇಶವನ್ನೊದಗಿಸುವುದು. ಸಾಹಿತ್ಯ ಪ್ರಕೃತಿಯು ಬಾಲಕರಲ್ಲಿ ಚಿತ್ರಕಲೆಯನ್ನೂ, ಕವಿತಾ ಸಾಮರ್ಥ್ಯವನ್ನೂ, ಲೇಖನಾ ಶಕ್ತಿಯನ್ನೂ ಉತ್ತೇಜಿಸಲು ಇವು ಅತ್ಯಂತ ಸಹಾಯಕಾರಿಯಾಗುತ್ತವೆ. ಸಮುದ್ರದಲ್ಲಿ ಸಂಚರಿಸುವುದರಿಂದ ಬಾಲಕರಲ್ಲಿ ಧೈರ್ಯ ಸಾಹಸಗಳೂ, ಶರೀರಧಾರ್ಢ್ಯವೂ ಹೆಚ್ಚುವವು.

ದೋಣಿ ಕಟ್ಟುವಿಕೆಯೂ ಒಂದು ಶ್ರೇಷ್ಠ ಉಪಕೈಗಾರಿಕೆ. ಇದರಿಂದ ಮಕ್ಕಳಿಗೆ ಬಡಗಿ ಕೆಲಸವನ್ನು ಕಲಿತಂತಾಗಿ ಮರಮಟ್ಟುಗಳ, ಲೋಹಗಳ ಪ್ರತ್ಯಕ್ಷ ಅನುಭವ ದೊರಕುವುದು. ಅಳತೆ ಪ್ರಕಾರ ರಚಿಸುವ ಚಾತುರ್ಯವೂ, ಗಾಳಿ, ನೀರುಗಳ ಶಕ್ತಿಗಳಿಗನುಸಾರವಾಗಿ ಹೊಸ ಹೊಸ ವಿಧಾನಗಳನ್ನು ಕಂಡುಹಿಡಿಯಲಿಕ್ಕೂ ಸಂದರ್ಭವುಂಟಾಗುವುದು.

ಇನ್ನು ಮೀನುಗಾರಿಕೆಯ ತಾತ್ವಿಕ ವಿಚಾರವನ್ನು ವಿವೇಚಿಸೋಣ. ಮಹಾತ್ಮರ ಅಹಿಂಸಾ ತತ್ವಕ್ಕನುಗುಣವಾಗಿ 'ಪಾರಂಪರ್ಯವಾಗಿಯೂ, ಜಾತಿಮತ ಸಾಂಪ್ರದಾಯ ಅಭ್ಯಾಸಕ್ಕನುಗುಣವಾಗಿಯೂ ಒಬ್ಬನು ಮಾಂಸಹಾರಿಯಾದರೆ ಅವನಿಗೆ ಅದನ್ನು ಒದಗಿಸಿಕೊಡಬೇಕಾದುದು ಕರ್ತವ್ಯವೆನಿಸ [illegible] ಗಡಿನಾಡಿನ ಗಾಂಧಿ ಗಫಾರ್ ಖಾನರು ಸೇವಾಗ್ರಾಮ ಆಶ್ರಮಕ್ಕೆ ಬಂದರೆ ಲಕ್ಷ್ಮು ಮಾಂಸಹಾರ ಮಾಡುವರು. ಅಂದ ಮೇಲೆ ಮೀನುಗಾರಿಕೆಯು ತಲಾಂತರಗಳಿಂದ ಒಂದು ವಿಶಿಷ್ಟ ಜನವರ್ಗದ ಕಸುಬು ಆಗಿರುತ್ತದೆ. ಅಂದ ಮೇಲೆ ಆ ಜನರಿಗೆ ಅದರ ಮೂಲಕ ಶಿಕ್ಷಣ ಕೊಡುವುದು ಸ್ವಾಭಾವಿಕವೆನಿಸುವುದು. ಇತರರು ಅದನ್ನು ಅನುಸರಿಸುವದಾದರೆ ಹೇಗೆ ಎಂಬ ಪ್ರಶ್ನೆ ಹುಟ್ಟುತ್ತದೆ. [illegible] ತರಹ ಹಿಂಸೆ ಯಾರಿಗೂ [illegible] ಡುವಂತಹದಲ್ಲ. ಮಾತವಲ್ಲ [illegible] ಶೇಷತೆಯನ್ನು [illegible] ಲಿಯುವುದಕೆ ಇದು ಉತ್ತಮ ಸಾಧನವೆನ್ನುವವರೂ ಇದ್ದಾರೆ. ಆದುದರಿಂದ ಮೂಲ ಶಿಕ್ಷಣ ಸ್ವೀಕರಿಸುವಾಗ ಈ ಕೈಗಾರಿಕೆಯನ್ನು ಮೂಲ ಶಿಕ್ಷಣ ಮಾಧ್ಯಮವನ್ನಾಗಿ ಮಾಡುವ ಕುರಿತು ಶೈಕ್ಷಣಿಕ ತಜ್ಞರು ಆಳವಾಗಿ ವಿಚಾರ ಮಾಡುವರೆಂದು ಹಾರೈಸಲಾಗಿದೆ.



ವಾತ ರೋಗಕ್ಕೆ

ಪುಟ್ಟ ಸೀಸೆ ಅಪಾರ ಪ್ರಖ್ಯಾತಿ

ನೋವುಳ್ಳ ಜಾಗವನ್ನು ಬೆಚ್ಚಗೆ ಮಾಡಿ ದಿನಕ್ಕೆ 3 ಸಲ 10-15 ನಿಮಿಷಗಳು ಲಿಟಿಲ್ಸ್ ಓರಿಯಂಟಲ್ ಬಾಮನ್ನು ತಿಕ್ಕಿರಿ ನೋವು ಮತ್ತು ಉರಿ ಕ್ಷಣ ಮಾತ್ರದಲ್ಲಿ ಮಾಯವಾಗುವುದು

ಶೀಘ್ರ ಖಾತರಿ ಗುಣ!

[redacted]

ವೈದ್ಯರನ್ನೂ ಬೆರಗುಗೊಳಿಸುವ ಬೇತಾಳ

ಕೀಷ್ಮನಿನಿಂದ ನರರಾಕ್ಷಸನಿಗೆ ಕೊಂಡರೆ

ನಾಲ್ವತ್ತನಾಲ್ಕು ವರ್ಷದ ಜೆನ್‌ವೇನ್ ಅಲ್ಬರ್ಟನೆಂಬ ಡಚ್ ಬೇತಾಳಾಕೃತಿಯ ವ್ಯಕ್ತಿ ವೈದ್ಯತಜ್ಞರನ್ನು ಬೆರಗುಗೊಳಿಸುತ್ತಾನೆ. ಅವನ ಎತ್ತರ 9 ಅಡಿ 3¼ ಇಂಚು!

ಸರ್ವಸಾಧಾರಣವಾಗಿ ಕೆಲವೊಂದು ನರ ಗ್ರಂಥಿಗಳ ಅವ್ಯವಸ್ಥೆಯಿಂದ ಮನುಷ್ಯನ ಬೆಳವಣಿಗೆಯು ಒಂದೇ ಸವನೆ ವೃದ್ಧಿಸುವುದೆಂದು ಶರೀರ ಶಾಸ್ತ್ರಜ್ಞರ ಸಿದ್ಧಾಂತ. ಆದರೆ ಈ ಡಚ್ ರಕ್ಕಸನಲ್ಲಿ ವೈದ್ಯರು ಅಂಥಹದೇನನ್ನೂ ಕಾಣಲಿಲ್ಲ. ಅಲ್ಬರ್ಟನ ಹೆತ್ತವರು ಸಾಮಾನ್ಯ ಎತ್ತರದ ವ್ಯಕ್ತಿಗಳು. ಹುಟ್ಟುವಾಗ ಅವನು ಕೇವಲ 7 ರಾತ್ತಲಿನ ಕೂಸು. ಆದರೆ 7ನೇ ಪ್ರಾಯದಲ್ಲಿ 6 ಅಡಿ ಬೆಳೆದಿದ್ದ. 20ನೇ ವಯಸ್ಸಿನಲ್ಲಿ 8 ಅಡಿಗೆ ಮುಟ್ಟಿದ. ನಂತರ ಒಮ್ಮೆಲೇ ಅವನ ಬೆಳೆಯು [illegible] 5 ವರ್ಷಗಳ ತನಕ [illegible] ಮತ್ತೆ ಬೆಳೆಯತೊಡಗಿದವ [illegible] ಈಗಿನ ಎತ್ತರಕ್ಕೆ ಬಂದು ತಲ್ಪಿದ್ದಾನೆ.

ಅಲ್ಬರ್ಟನ ಒಂದೇ ಚಿಂತೆಯೆಂದರೆ ಹಗಲು ಹೊತ್ತಿನಲ್ಲಿ ಹೊರಗೆ ಸಂಚಾರಕ್ಕಾಗಲಿ ಸಿನೇಮಾ ನಾಟಕಕ್ಕಾಗಲೀ ಹೋಗಲಿಕ್ಕಾಗದಿರುವುದು. [illegible]

30 ಸಾವಿರ [illegible] 340 [illegible]

★

[illegible] ಸಾವಿರ [illegible] ವರ್ಗೀಕರಿಸಲಾಗಿದೆ

★

[illegible] ಕೆಲಸಗಳೆಲ್ಲ [illegible] ಶಕ್ತಿಯಿಂದ [illegible] ಪಸೆಂಜರ್ [illegible]

★

NOTICE

ಇದೇ ಪತ್ರಿಕೆಯ ಕಳೆದ ತಾ 11-4-47ರ ಸಂಚಿಕೆಯಲ್ಲಿ ಕೋರ್ಟು ಕಮಿಶನರ್ ಎಮ್ ಪಿ ಕಿಣಿಯವರ ಹೆಸರಲ್ಲಿ ಪ್ರಕಟಿಸಿದ ಲಿಲಾಂ ಇಸ್ತಿಹಾರ್ ನೋಟೀಸಿನಲ್ಲಿ ಕಾಣಿಸಿದ ಆಸ್ತಿ ವಿವರಗಳ ಪಯ್ಕಿ ಇಂಚಾ ನಂಬ್ರ 8ನೇ ಆಸ್ತಿಯಲ್ಲಿ ಸ ನಂಬ 107-4 ಅಂಶ ಬಾಗಾಯ್ತು 0 18 ಶಿರ್ವೆ 1 1-0ಯೆಂತ ಪ್ರಕಟಿಸಿದ್ದು ಶಿರ್ವೆ ರೂ 1-10-0ಯೆಂತ ದುರುಸ್ತಿ ಆಗಬೇಕಾಗಿರುತ್ತದೆ. ಮತ್ತ ಅಲ್ಲಾದಾ ಛಾಪಿಸಿದ ಲಿಲಾಂ ಇಸ್ತಿಹಾರ್ ನಲ್ಲಿ 2ನೇ ಆಸ್ತಿಯ ಸರ್ವೆ ನಂಬ್ರ 170 9C ಯೆಂತ ಛಾಪಿಸಿದ್ದು 170 9C1ಯೆಂತ ಓದಬೇಕು

Mangalore, 13-4-1947 — M P Kini, Commissioner

ಭಾರತೀಯ ಮನೋವಿಜ್ಞಾನದ ಶ್ರೇಷ್ಠತೆ

ಇಂಗ್ಲಂಡ್ ಜರ್ಮನಿಗಳಲ್ಲಿ ಅದರ ಪ್ರಯೋಗ.

ಆಂಗ್ಲ ನ್ಯಾಯಾಧೀಶರ ತೀರ್ಪು

ತುಳಸಿ ಎಲೆಗಳ ರಸವನ್ನು ಕೊಟ್ಟು ಒಂದು ಮಂತ್ರೋಪದೇಶಮಾಡಿ ಕಾಯಿಲೆಯನ್ನು ವಾಸಿಮಾಡುವೆನೆಂದು ಮೋಸಮಾಡಿದನೆಂದು ಗಂಜಾಮ್‌ಪುರಿಯ ಬೌರಿ ಬಂಧು ಪೊದಾನ್ ಎಂಬವನಿಗೆ ಮೂರು ತಿಂಗಳ ಶಿಕ್ಷೆ ವಿಧಿಸಲ್ಪಟ್ಟಿತು ಇದು ಕೆಳ ಕೋರ್ಟಿನಲ್ಲಿ. ಸೆಶ್ಶನ್ ಕೋರ್ಟಿಗೆ ಅಪೀಲು ಹೋದಾಗ ನ್ಯಾಯಾಧೀಶ ವಿ. ಬ್ಲಾಕ್ ಬರ್ನ್ ಐ. ಸಿ. ಎಸ್. ಎಂಬ ಆಂಗ್ಲ ಗೃಹಸ್ಥರು ಅವನನ್ನು ನಿರಪರಾಧಿ ಎಂದು ಬಿಡುಗಡೆ ಮಾಡಿದರು

"ಈ ತರದ ಕೇಸುಗಳಲ್ಲಿ ನ್ಯಾಯ ತೀರ್ಮಾನಿಸುವವರು ಮಂತ್ರೋಪದೇಶಗಳ ಪರಿಹಾರ ಶಕ್ತಿಯ ಕುರಿತು ಸಂದೇಹವುಳ್ಳವರಾಗಿರಬಾರದು ಇಲ್ಲವೆ ಆ ಕುರಿತು ಮೊದಲೇ ಮನಸ್ಸಿನಲ್ಲಿ ಮಾಡಿಕೊಂಡ ಭಾವನೆಗಳಿರಬಾರದು" ಹೀಗೆಂದು ತಿಳಿಸುತ್ತಾ ಆ ವಿಚಾರವಂತ ನ್ಯಾಯಾಧೀಶರು ಅದಕ್ಕೆ ಕಾರಣವನ್ನು ಹೀಗೆ ಕೊಟ್ಟಿದ್ದಾರೆ

"ಅಪರಾಧಿತನ ಪರವಾಗಿ ವಾದಿಸಿದ ವಕೀಲರು ಮಾನಸಿಕ ವಿಶ್ವಾಸದ ಮೂಲಕ ಶರೀರ ಕಾಯಿಲೆಗಳನ್ನು ಗುಣಪಡಿಸಿಕೊಳ್ಳುವ ನಿದರ್ಶನಗಳನ್ನು ಎತ್ತಿ ತೋರಿಸಿದ್ದಾರೆ ವಿಜ್ಞಾನದಲ್ಲಿ ಮುಂದರಿದ ಪಾಶ್ಚಿಮಾತ್ಯರು ಕೂಡಾ ಈ ವಿಧಾನಗಳನ್ನು ಇತ್ತೀಚೆಗೆ ಅನುಸರಿಸುತ್ತಲಿದ್ದಾರೆ"

ಮತ್ತು ಅವರು ಮುಂದೆ ವಿವರಿಸಿದ ಐತಿಹಾಸಿಕ ಮತ್ತು ಆಧುನಿಕ ಘಟನೆಗಳ ವಿವರ ಹೀಗಿದೆ

"ಆಸ್ಯದ ಪ್ರಖ್ಯಾತ ತತ್ವಜ್ಞಾನಿಯೂ ಜೀವನ ರಹಸ್ಯಜ್ಞನೂ ಆದ ಯೇಸು ಕ್ರಿಸ್ತನು ನಿಜವಾದ ದೈವಿಕ ಚಮತ್ಕಾರಗಳನ್ನು ವಿಶ್ವಾಸ ಗುಣಗಳನ್ನು ಮಾಡಿದ್ದಾನೆ ಬೈಬಲ್ ಗ್ರಂಥವಿಡೀ ಈ ಚಮತ್ಕೃತಿಗಳ ಒಂದು ದಾಖಲೆಯೇ ಆಗಿದೆ ಆದರೆ ಅವನ ಅಜ್ಞ ದೇಶಸ್ಥರು ಅವನನ್ನು ಶಿಲುಬೆಗೇರಿಸಿದರು ಅದೇ ರೀತಿ ಇತಿಹಾಸದಲ್ಲಿ ಪ್ರಸಿದ್ಧಳಾದ ಜೋನ್ ಆಫ್ ಆರ್ಕಳನ್ನು ಸಜೀವ ಸುಟ್ಟುಬಿಟ್ಟರು ಅನೇಕಾನೇಕ ಸಾಧುಸಂತರ, ತತ್ವಜ್ಞಾನಿ, ವೀರ ಪುರುಷರ ಮತ್ತು ವಿಜ್ಞಾನಿಗಳ ಅವಸ್ಥೆಯೂ ಹೀಗೆ ಆಗಿರುವುದನ್ನು ನಾವು ಬಲ್ಲೆವು. ಪ್ರಖ್ಯಾತ ಫ್ರೆಂಚ್ ಮನೋಶಾಸ್ತ್ರ ಪಂಡಿತನಾಗಿದ್ದ ಮೆಸ್ಮರ್ (ಇವನ ನಂತರವೇ ಮನೋಶಕ್ತಿ ಪಾತದ ಕೆಲಸಗಳಿಗೆ ಮೆಸ್ಮರಿಜಂ ಎಂದು ಹೆಸರು ಬಂತು) ಎಂಬವನ ಮನೋಭ್ರಮಣಗೊಳಿಸುವ ಕಾರ್ಯಗಳು ಕೇವಲ ಮೋಸದವೆಂದು ಅವನ ಕಾಲದ ವೈದ್ಯರು ಸಾರಿದ್ದರು

ಮೆಸ್ಮರನ ಪದ್ಧತಿ

"ಹತ್ತೊಂಬತ್ತನೆಯ ಶತಮಾನದಲ್ಲಿ ಮೆಸ್ಮರನ ಮನೋಸಿದ್ಧಾಂತಗಳು ಶಾಸ್ತ್ರೀಯವಾದುವೆಂದು ಫ್ರೆಂಚ್ ವೈದ್ಯ ತಜ್ಞರು ಒಪ್ಪಿದರು. ಡಾ। ಬ್ರಿಯಾಡ್ ಎಂಬವರು ಕಣ್ಣು ನರಗಳ ಶಕ್ತಿಯನ್ನು ನಿರ್ಬಲಿಸಿ ಮೂರ್ಛೆಯನ್ನುಂಟುಮಾಡುವ ಬೇರೊಂದು ವಿಧಾನವನ್ನು ಕಂಡುಹಿಡಿದರು. ಕಲ್ಕತ್ತದ ಮುಖ್ಯ ಸರ್ಜನರಾಗಿದ್ದ ಡಾ। ಇಲಿಯಟ್ಸನ್ ಮತ್ತು ಲಂಡನ್ ವೈದ್ಯಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ಡಾ। ಎಸ್‌ಡೈಲ್ ಅವರು ತಮ್ಮ ರೋಗಿಗಳನ್ನು ಮನೋ ವಿಧಾನದಿಂದ ಮೂರ್ಛೆಗೊಳಿಸಿ ಶಸ್ತ್ರ ಚಿಕಿತ್ಸೆ ಮಾಡಿದ್ದಾರೆ.

"1882ರಲ್ಲಿ ಇಂಗ್ಲೆಂಡಿನಲ್ಲಿ ಸ್ಥಾಪಿಸಲ್ಪಟ್ಟ ಶರೀರ ಸಂಶೋಧನಾಗಾರದ ಸಂಪಾದಕರು ಮಾನಸಿಕ ವರ್ಚಸ್ಸಿನ ಮಹಿಮೆಯನ್ನು ಅಲಕ್ಷ್ಯ ಮಾಡಲಿಲ್ಲ. 'ನಮ್ಮ ಪ್ರಯೋಗ ಶಾಲೆಯ ನಿದರ್ಶನಕ್ಕೆ ಬಾರದ ಸಂಗತಿಗಳನ್ನು ಅಸಂಭವನೀಯವೆಂದು ಹೇಳಬಾರದು'ವೆಂದವರು ಸಾರಿದರು ಇದೇ ರೀತಿ ಯುರೋಪ್, ಅಮೇರಿಕಾದ ವೈದ್ಯ ತಜ್ಞರ ಸಂಘಗಳು ಕ್ರಮೇಣ ಮನೋ ಚಿಕಿತ್ಸೆಯ ನಿಜತ್ವವನ್ನು ಒಪ್ಪೊಪ್ಪಾಗಿ ಒಪ್ಪಿದರು.

ಅಪ್ರಾಕೃತಿಕ ಚಮತ್ಕಾರ

"ಭೀಕರವೂ ಕ್ರೂರವೂ ಆದ ಮೃಗಗಳನ್ನು ಮನುಷ್ಯನು ಸಾಧುಗೊಳಿಸಿ ತನ್ನ ಮನೋಶಕ್ತಿಯ ಶ್ರೇಷ್ಠತೆಯನ್ನು ತೋರಿಸಿರುವನು ಚರಾಚರ ವಸ್ತುಗಳಲ್ಲಿ ಸಮಾನ್ಯವಾದ ಒಂದು ಜೀವಕಳೆಯಿದೆಯೆಂದು ವಿಜ್ಞಾನಿಗಳು ಸಿದ್ಧಾಂತ ಮಾಡಿ ತೋರಿಸಿರುವರು

ಪಾಶ್ಚಾತ್ಯ ವಿಜ್ಞಾನವು ಅನೇಕ ಶತಮಾನಗಳ ತನಕ ಕತ್ತಲಲ್ಲಿ ತಡವರಿಸುವ ಈಗ ಪೌರ್ವಾತ್ಯ ಮನೋ ಪ್ರಭಾವದ ಅಭ್ಯಾಸಕ್ಕೆ ಶರಣು ಒಂದಿರುವುದು ವಿಜ್ಞಾನಶಕ್ತಿಗೊಂದು ಮಿತಿ ಇದೆ ಅದನ್ನು ಮೀರಿಸುವ ಮನೋಶಕ್ತಿಯಿದೆಯೆಂದು ಪಾಶ್ಚಾತ್ಯ ವಿಜ್ಞಾನಿಗಳೂ ಒಪ್ಪುತ್ತಿರುವರು. ಪೌಲ್ ಬೆಂಟನ್ ಮೊದಲಾದವರು ಭಾರತ, ಟಿಬೆಟ್‌ಗಳಿಗೆ ಒಂದು ಆತ್ಮಶಕ್ತಿಯ ಶ್ರೇಷ್ಠತೆಯಿಲ್ಲಿದೆಯೆಂದು ತೆರಳಿದರು. 1936ರಲ್ಲಿ ಫ್ರೆಂಚ್ ಸರಕಾರವು ಸ್ವ ದೇಶದ ಉನ್ನತ ವೈದ್ಯಾಧಿಕಾರಿಯಾದ ಡಾ। ತೆರೆಸೆ ಬ್ರೋಸ್ಸೆ ಇವರನ್ನು ಭಾರತಕ್ಕೆ ಕಳುಹಿಸಿ ಭಾರತೀಯ ಔಷಧ ವಿಧಾನಗಳ ಅಭ್ಯಾಸ ಮಾಡುವಂತೇರ್ಪಡಿಸಿದರು. ಬರ್ಲಿನಿನ ಪ್ರಖ್ಯಾತ ಒಂದು ಶುಶ್ರೂಷಾಲಯದ ವೈದ್ಯರೂ, ಲಂಡನಿನ ಉಬ್ಬಸ ಶುಶ್ರೂಷಾಲಯದವರೂ ಭಾರತೀಯ ಪರಿಹಾರ ವಿಧಾನಗಳನ್ನು ಅನುಸರಿಸುತ್ತಿರುವರು.

"ಹ್ಯೂವೆನ್‌ತ್ಸಾಂಗನು ಭಾರತಕ್ಕೆ ಬಂದಿದ್ದಾಗ ಪ್ರಾಚೀನ ಒರಿಸ್ಸಾದ ಪುಷ್ಪಗಿರಿ ಎಂಬಲ್ಲೊಂದು ಮನೋಶಕ್ತಿ ಸಾಧಕ ವಿಶ್ವವಿದ್ಯಾಲಯವಿತ್ತೆಂದು ತಿಳಿಸುತ್ತಾನೆ. ಇಷ್ಟೇ ಅಲ್ಲ. ಪ್ರಾಚೀನ ಭಾರತೀಯರು ವನಸ್ಪತಿಗಳಲ್ಲಿ ತುಳಸಿ, ಬಿಲ್ವಪತ್ರ, ಮತ್ತು ಕಹಿಬೇವಿನ ಸೊಪ್ಪು ಇವುಗಳು ಎಲ್ಲಾ ತರದ ವ್ಯಾಧಿಗಳನ್ನು ನಿವಾರಿಸುವಂತಹವೂ ಮತ್ತು ಪರಿಹರಿಸುವಂತವೂಗಳು ಎಂದು ತಿಳಿಸಲಾಗಿದೆ"

ಕೈಯಿಂದ ನೂಲುವುದು ಹೆಚ್ಚಬೇಕು

ಹಿಂದುಸ್ಥಾನದಲ್ಲಿ ತಯಾರಾಗುವ ಗಿರಣಿ ನೂಲಿನ ಸಾಕ್ಯದಲ್ಲಿ ಒಂದು ಪಾಲಷ್ಟು ಮಾತ್ರ ಕೈಮಗ್ಗ ನೇಯುವವರಿಗೆ ದೊರೆಯುತ್ತದೆ ಅಂದರೆ ಅವರಿಗೆ ದೊರೆಯುವ ಪ್ರಮಾಣ 400 ಪೌಂಡುಗಳು ಸುಮಾರು 80000 ಬೇಲ್‌ಗಳಷ್ಟು ಮಾತ್ರ. ಪ್ರತಿ ಪ್ರಾಂತಿಕ ಸರಕಾರವು ಒಂದು ನಿರ್ದಿಷ್ಟ ಪ್ರಮಾಣದಷ್ಟು ನೂಲನ್ನು ಕೇಂದ್ರ ಸರಕಾರದಿಂದ ಪಡೆಯುತ್ತದೆ ಅದನ್ನು ಹಂಚುವ ಅಧಿಕಾರವು ಆಯಾ ಸರಕಾರಕ್ಕೇ ಸೇರಿದೆ ಈಗಿನ ಪ್ರಮಾಣವು ಕೈಮಗ್ಗ ನೇಕಾರರ ಉತ್ಪಾದನ ಸಾಮರ್ಥ್ಯದ ಮೂರರಲ್ಲಿ ಒಂದು ಪಾಲು ಅಥವಾ ಅರ್ಧದಷ್ಟು ಉಪಯೋಗಿಸಲು ಮಾತ್ರ ಸಾಕಷ್ಟಿದೆ ಅವರ ಸಾಮರ್ಥ್ಯವನ್ನು ಉಪಯೋಗಿಸಿಕೊಳ್ಳಲು ನೂಲಿನ ಸರಬರಾಯಿಯನ್ನು ಸುಮಾರು 170000 ಬೇಲ್‌ಗಳಷ್ಟಕ್ಕೆ ಹೆಚ್ಚಿಸಬೇಕಾಗಿದೆ

ಕೈಮಗ್ಗ ನೇಕಾರರಿಗೆ ಹೆಚ್ಚು ನೂಲು ದೊರೆಯುವಂತೆ ಮಾಡಲು ಅನೇಕ ಸೂಚನೆಗಳಿವೆ. ನೂಲು ತಯಾರಿಸುವ ಮತ್ತು ಅದರಿಂದ ಬಟ್ಟೆ ಮಾಡುವ ಸಂಮಿಶ್ರ (ಕಂಪೊಸಿಟ್) ಗಿರಣಿಗಳು ಅವುಗಳ ನೂಲಿನಲ್ಲಿ ಶೇಕಡ 30 ಯಾ 40ರಷ್ಟನ್ನು ಮಾತ್ರ ಉಪಯೋಗಿಸಬೇಕು; ಬಟ್ಟೆ ತಯಾರಿಸುವ ಗಿರಣಿಗಳು ಒಳ್ಳೇನಯವಾದ ಬಟ್ಟೆ ತಯಾರಿಸುವಂತೆ ಮಾಡಿ ಗಿರಣಿಗಳ ವಸ್ತ್ರದ ಉತ್ಪಾದನೆಯನ್ನು ಕ್ರಮವಾಗ್ಗಿರಿಸಬೇಕು; ಸರಕಾರವು ಹೊಸ ನೂಲುವ ಗಿರಣಿಗಳನ್ನು ಆರಂಭಿಸಬೇಕು, ಸರಕಾರವು ತಯಾರಿಸುವ ನೂಲನ್ನೆಲ್ಲಾ ಕೈಮಗ್ಗ ನೇಕಾರರ ಉಪಯೋಗಕ್ಕೋಸ್ಕರವೇ ಮೀಸಲಾಗಿರಿಸಬೇಕು ಆದರೆ ಇವೆಲ್ಲವೂ ದೀರ್ಘಕಾಲಾವಧಿಯ ಏರ್ಪಾಡುಗಳು ಅವುಗಳನ್ನು ಪ್ರತ್ಯೇಕವಾಗಿ ಗಿರಣಿಗಳು ವಸ್ತ್ರ ತಯಾರಿಸುವುದನ್ನು ಕ್ರಮವಾಗಿಸುವ ಮತ್ತು ಗಿರಣಿಗಳ ತಯಾರಿಸುವ ನೂಲಿನಲ್ಲಿ ಒಂದಂಶವನ್ನು ಬೇರ್ಪಡಿಸುವುದಾಗಿ ಕೈಮಗ್ಗ ನೇಕಾರರಿಗೆ ಕೊಡುವ ಸೂಚನೆಗಳು ಸರಕಾರದ ಪರ್ಯಾಲೋಚನೆಯಲ್ಲಿವೆ ಕೈಯಿಂದ ನೂಲುವ ಏರ್ಪಾಡನ್ನು ತೀವ್ರಗೊಳಿಸಿ ಉತ್ಪತ್ತಿಯನ್ನು ಈ ತನಕವಿದ್ದುದಕ್ಕಿಂತ ತುಂಬಾ ಹೆಚ್ಚಿಸುವುದು ಅತಿ ಪರಿಣಾಮಕಾರಿಯಾಗಿ ಹಾಗೂ ಈಗ ಅವಶ್ಯವಾಗಿರುವ ಕೆಲಸವೆಂದು ನನಗೆ ತೋರುತ್ತದೆ ಹೀಗೆ ಮಾಡಿ ಗಿರಣಿಗಳಿಂದಲೂ ಗುಡಿ ಕೈಗಾರಿಕೆಗಳಿಂದಲೂ ನಾವು ನೂಲು ಪಡೆಯಬಹುದು. ಈ ಏರ್ಪಾಡುಗಳು ಒಂದಕ್ಕೊಂದು ವಿರುದ್ಧವಾಗಿಲ್ಲ ಕೈಯಿಂದ ನೂತ ನೂಲು ನೇರಾಗಿ ನೇಯುವವನಿಗೆ ದೊರೆಯುವಂತೆ ಮಾಡಬಹುದು

ಜಗತ್ತಿನ ಅತೀ ಉದ್ದ ಬೇಲಿ ಆಸ್ಟ್ರೇಲಿಯಾದ ಕ್ವೀನ್‌ಲೇಂಡ್‌ನಲ್ಲಿದೆ ಪೈರುಗಳನ್ನು ತಿನ್ನುವ ಮೊಲಗಳನ್ನು ತಡೆಯಲು ಅಲ್ಲಿ 600 ಮೈಲು ಉದ್ದದ ಸರಿಗೆ ಬೇಲಿ ಹಾಕಿರುವರು

★

ಪ್ರಯಾಣಿಕರಿಗೆ ಸ್ಪೆಶ್ಯಲು ಸರ್ವಿಸಿನ ಸೂಚನೆ.

ಮುಲ್ಕಿ, ಬಪ್ಪನಾಡು, ಪೊಳಲಿ ಇತ್ಯಾದಿ ಸ್ಥಳಗಳಲ್ಲಿ ಜರಗಲಿರುವ ಜಾತ್ರೆಯ ಸಮ್ಮಂಧ ಪ್ರಯಾಣಿಸುವ ಯಾತ್ರಿಕರ ಬಗ್ಗೆ ಸ್ಪೆಶ್ಯಲು ಸರ್ವಿಸುಗಳನ್ನು ರನ್ ಮಾಡುವ ಏರ್ಪಾಡನ್ನು ಮಾಡಲಿಚ್ಛಿಸಿದ್ದಾಗ್ಯೂ ಪ್ರಕೃತ ಮೂರು ತಿಂಗಳಿಗೆ ಸಿಗಬೇಕಾದ ಪೆಟ್ರೋಲು ಕೋಟಾದಲ್ಲಿ ಕಡಿತವಾಗಿರುವುದರಿಂದ ಕೆಲವು ಬಸ್ಸುಗಳಿಗೆ ಪೆಟ್ರೋಲು ಸಾಕಾಗದೆ ಕೆಲವು ಸರ್ವಿಸುಗಳನ್ನು ತಾತ್ಕಾಲಿಕವಾಗಿ ನಿಲ್ಲಿಸುವ ಸಂದರ್ಭ ಬಂದೊದಗಿರುವುದರಿಂದಲೂ, ಮತ್ತು ಗೇಸು ಬಸ್ಸುಗಳು ಸಹ ಕಡಿಮೆ ಇದ್ದು ಅವುಗಳಿಂದ ದಿನವಹಿ ಸರ್ವಿಸುಗಳನ್ನು ರನ್ ಮಾಡಿಸಲ್ಪಟ್ಟನಂತರವೇ ಸಾಧ್ಯವಿದ್ದಲ್ಲಿ ಮಾತ್ರ ಸ್ಪೆಶ್ಯಲು ಸರ್ವಿಸುಗಳನ್ನು ರನ್ ಮಾಡಬೇಕಾಗುತ್ತದೆ ಅಲ್ಲದೆ ಕೋಸ್ಟಲ್ಯಾನಿನಲ್ಲಿ ಕೆಲವು ಕಡೆಗಳಲ್ಲಿ ಪೆಟ್ರೋಲು ಮತ್ತು ಕೆಲವು ಕಡೆಗಳಲ್ಲಿ ಗೇಸು ಬಸ್ಸುಗಳಿರುವುದರಿಂದ ಸಾಧ್ಯವಿದ್ದ ಸ್ಥಳದ ವರೇಗೆ ಮಾತ್ರ ಸ್ಪೆಶಲು ರನ್ ಮಾಡಬೇಕಾಗಿರುತ್ತದೆ. ಉದಾಹರಣೆಗಾಗಿ ಮಂಗ್ಳೂರು—ಮುಲ್ಕಿ ಲ್ಯಾನಿನಲ್ಲಿ ಪಾವಂಜೆಯಿಂದ ಮುಲ್ಕಿಗೆ ಪೆಟ್ರೋಲು ಬಸ್ಸು ಮಾತ್ರ ರನ್ ಆಗುತ್ತಿರುವುದರಿಂದ, ಮುಲ್ಕಿ ರಥೋತ್ಸವ ಹಾಗೂ ಬಪ್ಪನಾಡು ಜಾತ್ರೆಯ ಸಮ್ಮಂಧ ಸ್ಪೆಶಲುಗಳನ್ನು ರನ್‌ಮಾಡುವ ಸಂದರ್ಭಗಳಲ್ಲಿ ಗೇಸು ಬಸ್ಸುಗಳ ಅನುಕೂಲತೆ ನೋಡಿ ಪಾವಂಜೆ ತನಕ ಮಾತ್ರ ಸ್ಪೆಶ್ಯಲುಗಳನ್ನು ರನ್ ಮಾಡಲಾಗುವುದು. ಆದಕಾರಣ ಜಾತ್ರೆಯ ಬಗ್ಗೆ ಪ್ರಯಾಣಿಸಲಿಚ್ಛಿಸುವ ಯಾತ್ರಿಕರು ಸ್ಪೆಶಲ್ ಸರ್ವಿಸು ರನ್ ಆಗಬಹುದೆಂಬ ಹೆಚ್ಚಿನ ಭರವಸೆ ಇಡದೆ ಸೀಟು ಇದ್ದ ಹಾಗೆ ನಮ್ಮ ದಿನವಹಿ ಸರ್ವಿಸುಗಳಲ್ಲಿ ಪ್ರಯಾಣಿಸಬೇಕಾಗಿ ಅಪೇಕ್ಷಿಸುತ್ತೇವೆ.

ಅಲ್ಲದೆ ಮದುವೆ ಇತ್ಯಾದಿ ಸಮಾರಂಭಗಳ ಬಗ್ಗೆ ಸ್ಪೆಶ್ಯಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ R. T. O. ಕೊಯಂಬುತ್ತೂರು ಇವರಿಂದ ಪರ್ಮಿಶನ್ ಪಡಕ್ಕೊಂಡೇ ಅಂಥಾ ಸ್ಪೆಶ್ಯಲುಗಳನ್ನು ಗೇಸು ಬಸ್ಸುಗಳ ಅನುಕೂಲತೆ ನೋಡಿ ರನ್ ಮಾಡಬೇಕಾಗಿರುವುದರಿಂದ, ಹಾಗೆ ಸ್ಪೆಶ್ಯಲು ಬಸ್ಸುಗಳನ್ನು ಅಪೇಕ್ಷಿಸುವವರು, ಸ್ಪೆಶ್ಯಲುಗಳ ಬಗ್ಗೆ ಪರ್ಮಿಶನ್ ಪಡಕೊಳ್ಳುವರೆ ನಮಗೆ ಅನುಕೂಲವಾಗುವಂತೆ ತಮ್ಮ ಅರ್ಜಿಗಳನ್ನು ನಮಗೆ 20 ದಿವಸಗಳಿಗೆ ಮುಂಚಿತವಾಗಿ ಒಪ್ಪಿಸಿಕೊಳ್ಳಬೇಕಾಗಿ ಸಾರ್ವಜನಿಕರಿಗೆ ತಿಳಿಸಲಪೇಕ್ಷಿಸುತ್ತೇವೆ

ಮಂಗ್ಳೂರು,
29—3—1947.

ಜ್ವೊಂಟ್ ಮೆನೇಜರ್ಸ್,
ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ, ಮಂಗ್ಳೂರು.

THE CANARA BANKING CORPORATION LTD.
(Incorporated in British India with Limited Liability)
Estd: 1906.
Head Office: UDIPI, S. Kanara.

	Rs.
CAPITAL:	
Authorised	25,00,000
Issued, subscribed & called up	16,00,000
Paid up	15,97,145
RESERVES	5,25,000
DEPOSITS	2,07,47,928
TOTAL RESOURCES	3,00,01,186

With a net work of branches & Agencies in all principal cities of India, we shall be able to render efficient collection services

BANKING BUSINESS OF EVERY DESCRIPTION TRANSACTED.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

THE BOMBAY LIFE ASSURANCE COMPANY LIMITED

(ESTD. 1910)

Peace and Security........

The Mightiest War to secure freedom for the oppressed Nations of Europe has ended. With many attempts at securing the four Freedoms, we do not seem to be anywhere near it We, in our humble way, have been contributing to this Individual Material Freedom, in War as well as in Peace, by extending Insurance Service to all who seek it

1945 completed Business { Company's: Over $2\frac{3}{4}$ Crores / Ours: About 50 lakhs.

Kochikar Brothers, Limited.

(ESTD. 1908)

Chief Agents for South India and Special agents for Bombay City & Suburbs.

"Bombay Life Building," Gandhi Nagar, UDIPI.

With Offices at:

MADRAS, BANGALORE, TRIVANDRUM, MANGALORE, MADURA, CALICUT, BOMBAY, & UDIPI.

And Agencies all over South India

Bhuvanendra Products Limited,

KATAPADI S. Kanara.

'Bhuvanendra' 'ಭುವನೇಂದ್ರ'

Dashamoolarishta ದಶಮೂಲಾರಿಷ್ಟ

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic increases the vitality and sexual vigour. Also useful in habitual abortion and all diseases pertaining to the heart & lungs

***Depot:* Maharata Galli, Hubli**

Bhuvanendra Products Ltd.

Factory & Head Office
KATAPADI S. Kanara

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ-ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ತಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುತ್ತದೆ.

ಡಿಪೋ ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಕು 25—4—1947 [ಸಂಚಿಕೆ 17]

ವಾರಾಂತ್ಯ ವರದಿ ವಿಮರ್ಶೆ

ಕಾಂಗ್ರೆಸಿನಲ್ಲಿ ಕ್ರಾಂತಿ

ಪ್ರಾರಂಭದಲ್ಲಿ ಕಾಂಗ್ರೆಸು 'ಆರಾಮ ಕುರ್ಚಿಯ ರಾಜಕೀಯ ಮುತ್ಸದ್ದಿ'ಗಳ ಸಂಸ್ಥೆಯಾಗಿತ್ತು. ಸರಕಾರಿ ನಾಮಿತರಾದ ಕೆಲವು 'ಪ್ರತಿನಿಧಿ'ಗಳು ತಮ್ಮ ಪ್ರಾಮಾಣಿಕತನದ ಸ್ವಭಾವವನ್ನು ನಾಚನೆಗೊಳ ಮಾಡುವಷ್ಟು ಮುಂದರಿಯದೆ ತಮ್ಮ ಹೃತ್ಪೂರ್ವ ಮನೋಭಾವನೆಗಳಿಗೆ ಸ್ವರೂಪಕೊಟ್ಟು ಕೆಲವು ಭಾಷಣಗಳ ಇಲ್ಲವೆ 'ವಿನಂತಿಪತ್ರ' (ಅರ್ಜಿ) ಗಳ ಮೂಲಕ ಆಡಳಿತದ ಕುಂದುಕೊರತೆಗಳನ್ನು ಮೇಲಧಿಕಾರಿಗಳ ಗಮನಕ್ಕೆ ತರುತಿದ್ದರು. ಅದಕ್ಕಿಂತ ಹೆಚ್ಚಿನದೇನು ಸಾಧಿಸಲು ಅವರು ಸ್ಫೂರ್ತಿಯುಕ್ತರಾಗಲಿ, ಸೇವಾತತ್ಪರರಾಗಲಿ ಇರಲಿಲ್ಲ.

ನಂತರ ಕ್ರಮೇಣ ಉಗ್ರವಾದಿಗಳು ಕಾಂಗ್ರೆಸನ್ನು ವಶಪಡಿಸಿಕೊಂಡರು. ತಿಲಕ ಗಾಂಧಿಯವರು ಇವರಲ್ಲಿ ಅಗ್ರಗಣ್ಯರು. ಇವರ ರಾಷ್ಟ್ರೀಯತೆಯು ಒಂದು ಹೊಸ ಕ್ರಾಂತಿಯನ್ನುಂಟುಮಾಡಿತು. ಕಾಲು ಶತಮಾನದಿಂದ ಮಹಾತ್ಮಾ ಗಾಂಧಿಯವರು ಇಂದಿನ ತನಕ ರಾಷ್ಟ್ರ ಸಂಸ್ಥೆಯ ಮೇಲೆ ಪರಿಪೂರ್ಣ ಪ್ರಭಾವವನ್ನಿಟ್ಟುಕೊಂಡಿರುವರು.

ಹೊಸಕಾಲ

ಆದರೆ ಈಗ ಕಾಲಸ್ಥಿತಿಗನುಗುಣವಾಗಿ ಮತ್ತಷ್ಟು ತೀಕ್ಷ್ಣವಾದಿಗಳು ಕಾಂಗ್ರೆಸ್ಸನ್ನು ಆವರಿಸಿದ್ದು ಅವರ ತತ್ವ ಧ್ಯೇಯಗಳು ಜನಪ್ರಿಯವೂ ಜನ ಮೆಚ್ಚುಗೆಯವೂ ಆಗಿವೆ, ಅಂಥಾ ಮುಖಂಡರನ್ನು ಕಾರ್ಯಕಾರಿ ಸಮಿತಿಯಲ್ಲಿ ಸೇರಿಸುವುದು ಅನಿವಾರ್ಯವೇ ಆಯಿತು. ಅಂತೆಯೇ ಕಮಲಾದೇವಿ, ಜಯಪ್ರಕಾಶ ಮೊದಲಾದವರು ರಾಷ್ಟ್ರ ಕಾರ್ಯ ನಿರ್ವಾಹಕ ಮಂಡಳಿಯಲ್ಲಿ ಹೆಚ್ಚೆಚ್ಚು ಸಂಖ್ಯೆಯಲ್ಲಿ ಸ್ಥಾನಮಾನಗಳನ್ನು ಪಡೆದರು.

ವಲ್ಲಭಭಾಯಿ ಪಟೇಲರು ಹಳೇ ಕಾಂಗ್ರೆಸ್ ನಾಯಕತ್ವದ ಗುರಿಕಾರರಂತಿದ್ದು ಅದನ್ನು ಒಂದು ಸುವ್ಯವಸ್ಥಿತ ಮಟ್ಟಕ್ಕೆ ತಂದ ಕೀರ್ತಿಗೆ ಪಾತ್ರರಾಗಿರುವರು. ಒಂದು ಕಾಲದಲ್ಲಿ 'ಅವರೇ ಕಾಂಗ್ರೆಸು, ಕಾಂಗ್ರೆಸ್ಸೇ ಅವರು' ಎಂಬತಿತ್ತು, ಅವರ ತ್ಯಾಗ ಸೇವೆಗಳೂ ಅಪರಿಮಿತವೂ ಅಮೂಲ್ಯವೂ ಆದವುಗಳೆಂಬುದೂ ನಿರ್ವಿವಾದ. ಇವರು ಅತೀ ಹಿಂದಿನವರಿಗಿಂತ ಮುಂದಾಗಿದ್ದರೂ, ಈಗಿನ ಅತೀ ಮುಂದಿನವರನ್ನು ಮುಂದೆ ಇಲ್ಲ. ಪಟೇಲರು ಭಂಡವಾಳಶಾಹಿ ಹಿತಗಳ ಹಿತೈಷಿಗಳು ಎಂಬ ಅಪವಾದಕ್ಕೂ ಗುರಿ ಮಾಡಲ್ಪಟ್ಟಿದ್ದಾರೆ.

ಸಮಾನತೆ

ಅದು ಹೇಗಿದ್ದರೂ ಇತ್ತೀಚೆಗಿನ ತಮ್ಮ ಭಾಷಣವೊಂದರಲ್ಲಿ ಬಾರ್ಡೋಲಿಯ ಸರದಾರರು 'ಕಾಂಗ್ರೆಸಿನ ಧ್ಯೇಯ ಪೂರ್ಣವಾಗುತ್ತ ಬಂತು. ತರುಣರು ಮುಂದೆ ಬಂದು ದೇಶ ಹಿತದ ಕಾರ್ಯ ಭಾರ ವಹಿಸ್ಸಲಿ, ರಾಷ್ಟ್ರ ಸಂಸ್ಥೆಯನ್ನು ಸಮಾಪ್ತಿಗೊಳಿಸೋಣ'. ಎಂದು ಸಮತಾವಾದಿಗಳಿಗೆ 'ದಾರಿ' ಮಾಡಿ ಕೊಟ್ಟಂತೆ ಮಾತನಾಡಿರುವರು.

ಜವಾಹರಲಾಲರನ್ನು ತಮ್ಮ ಯೋಗ್ಯ ನಾಯಕನೆಂದು ಪಟೇಲರು ತಮ್ಮ ಭಾಷಣವೊಂದರಲ್ಲಿ ಒಪ್ಪಿಕೊಂಡದ್ದು ಇನ್ನೊಂದು ಅಪೂರ್ವ ಸಂಗತಿ. ನೆಹರುಗಳು ಮುಂಚಿನಿಂದಲೂ ಸಮತಾವಾದಿಗಳು. ಪಟೇಲರಿಗೂ ಅವರಿಗೂ ಬಹು ಕಾಲದಿಂದ ತೀವ್ರ ಭೇದಾಭಿಪ್ರಾಯವಿತ್ತೆಂದೂ ವರ್ಕಿಂಗ್ ಕಮಿಟಿಯಲ್ಲಿ ಸಮತಾವಾದಿಗಳನ್ನು, ರಾಷ್ಟ್ರೀಯ ಮುಸಲ್ಮಾನರನ್ನು ನೇಮಿಸುವುದಕ್ಕೆ ಅವರ ಆಕ್ಷೇಪ ವಿಕ್ಷೇಪಗಳಿದ್ದುವೆಂದೂ ಹೇಳಲಾಗಿದೆ. ಹೇಗಿದ್ದರು ಸರ್ದಾರ್ ಪಟೇಲರು ಈಗ ದೇಶದ ವಾತಾವರಣವನ್ನು ಅರಿತು ಕೊಂಡದ್ದು ಸ್ತುತ್ಯ ಸಂಗತಿ.

ಅಂತಿಮ ಧ್ಯೇಯ.

ಕಾಂಗ್ರೆಸು ಮೂಕ ಮಿಲಿಯಾದಿಗಳ ಪರವಾಗಿ, ಅವರ ವಿಮೋಚನೆಗಾಗಿ ಹೆಣಗಾಡಿದ ಸಂಸ್ಥೆ. ದೇಶದ ಸಂಪತ್ತನ್ನು ಸಮಾನತ್ವದಿಂದ ಅನುಭೋಗಿಸುವ ಹಕ್ಕು ಪ್ರತಿಯೊಬ್ಬ ಪ್ರಜೆಗಿರುತ್ತದೆ. ಸಂಪತ್ತು ಸ್ವಲ್ಪ ಮಂದಿಗಳ ವಶವಿರುವುದು ಹಾನಿಕರ. ರಕ್ತದಂತೆ ಅದು ರಾಜಕೀಯ ಶರೀರದಲ್ಲೆಲ್ಲ ಚಲನೆ ಹೊಂದಬೇಕು. ಎಂಬೀ ಸಮತಾವಾದಿತತ್ವಗಳನ್ನು ಕಾರ್ಯರೂಪಕ್ಕೆ ತರಲು ಭಾರತವು ಸ್ವತಂತ್ರವಾಗುವ ಈ ಕಾಲವೇ ಅತ್ಯುತ್ತಮವಾದುದು. ಪಂಡಿತ್ ನೆಹರುಗಳು ತಮ್ಮ ಇತ್ತೀಚೆಗಿನ ಲಕ್ನೋ ಭಾಷಣವೊಂದರಲ್ಲಿ "ಜನರೇ ಸರ್ವ ಶಕ್ತ; ನಾವು ಅವರ ಸೇವಕರು" ಎಂದು ನಿರೂಪಿಸಿದ್ದು ಸಮತಾವಾದದ ಶಕ್ತಿ ವಿಕಾಸದ ಚಿಹ್ನೆವೆಂದೆನ್ನಲಾಗಿದೆ.

ಪಾಕಿಸ್ಥಾನದ ನೆರಳು

ಮಿ। ಜಿನ್ನರ ಹಟವಾದಿತನದಿಂದ ನಿರಾಶರಾದ ಮಹಾತ್ಮರು ಮಾತುಕತೆಗಳ ಫಲಿತಾಂಶವನ್ನು ಬಗೆಯದೆ ನೇರವಾಗಿ ತಮ್ಮ ಕಾರ್ಯ ಸಾಧನೆಗೆ ಹೊರಟು ಹೋದ ಮೇಲೆ ವ್ಯಾಸರಾಯರು ಜಿನ್ನ ಮಹಾತ್ಮರು ಸಂಯುಕ್ತ ಅಭಿಪ್ರಾಯದ ಒಂದು ಹೇಳಿಕೆಯನ್ನು ಹೊರಡಿಸುವಂತೆ ಖುಶಿಯಾಗಿ ಪ್ರಯತ್ನಿಸಿದ್ದು ಶ್ಲಾಘನೀಯ ಸಂಗತಿ.

ರಾಜಕೀಯ ಗುರಿಯನ್ನು ಹೊಂದ ಬಯಸುವವರು ಬಲಾತ್ಕಾರ ಹಿಂಸೆಗಳನ್ನೆಂದಿಗೂ ಉಪಯೋಗಿಸುವುದು ಯೋಗ್ಯ ನೀತಿಯಲ್ಲ, ಆದರಿಂದ ಹೊಂದಲೆಳೆಸಿದ ವಿಷಯವು ಕೈವಶವಾಗದೆಂದೂ ಎರಡು ಕೋಮುಗಳವರೂ ಪರಸ್ಪರ ಹಿಂಸಾಕೃತಿ ಅನಾಚಾರಗಳನ್ನು ಬಿಡಬೇಕೆಂದೂ ಈ ಪ್ರಖ್ಯಾತ ಪ್ರಕಟನೆಯು ಬೇಡಿಕೆ ಮಾಡಿಕೊಳ್ಳುತ್ತದೆ. ಇಲ್ಲಿಗೆ ಬಲಾತ್ಕಾರದಿಂದ ಯಾವ 'ಸ್ಥಾನ'ವನ್ನು ಪಡೆಯುವುದು ಅಸಾಧ್ಯವೆಂಬ ಸಂಗತಿಯು ಸ್ಪಷ್ಟವಾಗುತ್ತದೆ.

ಇದಲ್ಲದೆ ಪಟೇಲ್, ನೆಹರು ಮುಂತಾದ ಅಗ್ರಗಣ್ಯರು 'ಬಲಾತ್ಕಾರದಿಂದ ಪಾಕಿಸ್ಥಾನ ಸಾಧಿಸದು' ಎಂದು ಖಂಡ ತುಂಡವಾಗಿ ನುಡಿದಿದ್ದಾರೆ. ಮುಸ್ಲಿಂ ಲೀಗ್ ಮುಖಂಡರಿಗೂ ಒಂದೆರಡು ಪ್ರಯೋಗಗಳಿಂದ ಅದರ ಸತ್ಯಾಸತ್ಯತೆ ಮನವರಿಕೆಯಾಗಿರಬಹುದು. ಈಗ ಬಂಗಾಲ, ಪಂಜಾಬ ವಿಭಜನೆಯ ಚಳವಳ ಬೇರೆ ಎದ್ದಿದೆ. ಸಿಖೀ ಸ್ಥಾನವು ಅತ್ಯಾವಶ್ಯಕವೆಂದೇ ಒತ್ತಿ ಘೋಷಿಸಲಾಗುತ್ತದೆ. ಇಂತಹ ಬಿಕ್ಕಟ್ಟಿನಲ್ಲಿ ಪಾಕಿಸ್ಥಾನ ಯೋಜನೆಯು ಬಹು ಕಠಿಣ ತರದ್ದೆಂದೂ, ಒಂದು ಬ್ರಿಟಿಷ್ ಪತ್ರಿಕೆ ತಿಳಿಸುವಂತೆ "ಒಂದುವೇಳೆ ಅದು ದೊರೆತರೂ ಪಾಕಿಸ್ಥಾನವು ಲೀಗಿನ ಮೂಲ ಕೇಳಿಕೆಯಂತಿರದೆ ಕೇವಲ ಅದರ ಛಾಯೆಯಾಗಿರುತ್ತದೆಂದು" ಭವಿಷ್ಯ ಸೂಚಿಸಿರುವುದು ಗಮನೀಯ ಸಂಗತಿ.

ಕಾರಣಗಳು

ನೆಹರುಗಳು ತಿಳಿಸಿದಂತೆ ಬಲಾತ್ಕಾರದಿಂದ ಯಾವ ಪ್ರಾಂತ್ಯವನ್ನು ಪಾಕಿಸ್ಥಾನಕ್ಕೆ ಸೇರಿಸುವುದು ಸಾಧ್ಯವಿಲ್ಲ. ಆ ಸಂದರ್ಭದಲ್ಲಿ ಗಡಿನಾಡು ಅಸ್ಸಾಮು, ಪಶ್ಚಿಮ ಬಂಗಾಲ, ಮತ್ತು ದಕ್ಷಿಣ ಪೂರ್ವ ಪಂಜಾಬುಗಳು ಮುಸಲ್ಮಾನೇತರ ಪ್ರಾಂತ್ಯಗಳಾಗುವವು. ಅವುಗಳನ್ನು ವಿಂಗಡಿಸಿದರೆ ಪಾಕಿಸ್ಥಾನವು ಕೇವಲ ತಿರುಳಿಲ್ಲದ ನೆರಳಾಗದೆ ಮತ್ತಿನ್ನೇನಾಗುವುದು? "ಆದುದರಿಂದಲೇ ಮಿ। ಜಿನ್ನರು ಒಂದು ಮೆಟ್ಟಲು ಕೆಳಗಿಳಿದು 'ಶಸ್ತ್ರ, ಹತ್ಯೆ' ಪ್ರಯೋಜನವಿಲ್ಲವೆಂದದ್ದು" ಹೀಗೆಂದು ಟೀಕಿಸಿದ ಪತ್ರಿಕೆಗಳೂ ಇವೆ.

ಪ್ರಾಂತೀಕರಣ

ಮದ್ರಾಸ್ ಶಾಸನ ಸಭೆಯಲ್ಲಿ ಭಾಷಾವಾರು ಪ್ರಾಂತ್ಯವನ್ನು ಘಟನಾ ಸಮಿತಿಗೆ ಶಿಫಾರಸು ಮಾಡುವ ಠರಾವು ಸರ್ವಾನುಮತದಿಂದ ಮಂಜೂರಾಯಿತು. ಈ ಪ್ರಾಂತೀಕರಣವು ಕೇವಲ ಸಾಂಸ್ಕೃತಿಕ ಆರ್ಥಿಕ ಮತ್ತು ಸಾಮಾಜಿಕ ಉನ್ನತಿಯ ಸಾಧನಕ್ಕಾಗಿ ಮಾತ್ರ ಪ್ರಯೋಜನವಿದೆಯಲ್ಲದೆ ಈ ಪ್ರಾಂತ್ಯಗಳು ಸರ್ವ ಸ್ವತಂತ್ರವಾಗಿ ಪ್ರತ್ಯೇಕವಾಗಿರಲು ಸಾಧ್ಯವಿಲ್ಲ. ಭಾರತದ ಅಖಂಡತ್ವವನ್ನು ಕಾಪಾಡುವುದು ಅವುಗಳ ಉದ್ದೇಶವಿರಲೇ ಬೇಕಾಗುತ್ತದೆ. ನೆಹರುಗಳೆನ್ನುವಂತೆ ಇಂದಿನ ಜಗತ್ತಿನಲ್ಲಿ ಸಣ್ಣ ಪುಟ್ಟ ರಾಷ್ಟ್ರಗಳು ಸ್ವತಂತ್ರವಾಗಿರುವುದು ಸರ್ವ ದೃಷ್ಟಿಯಿಂದ ಕಷ್ಟತರವಾದುದು. ಈ ವಿಷಯವನ್ನು ಪ್ರಾಂತೀಕರಣ ಪ್ರೇಮಿಗಳು ಗಮನಿಸದಿರಲಾರರೆಂದು ಹಾರೈಕೆ.

ಸಂಯುಕ್ತ ಮಂತ್ರಿಮಂಡಳ

ಗಡಿನಾಡಿನಲ್ಲಿ ಪಂಜಾಬಿನಲ್ಲಿದ್ದಂತೆ ಒಂದು ಕಾಂಗ್ರೆಸ್ ಲೀಗ್ ಸಂಯುಕ್ತ ಮಂತ್ರಿ ಮಂಡಳ ರಚನೆಯಾಗಲು ಪ್ರಯತ್ನಿಸಬೇಕೆಂದು ಹೊಸ ವ್ಯಾಸರಾಯರು ಡಾ। ಖಾನ ಸಾಹೇಬರಿಗೆ ವಿನಂತಿಸಿಕೊಂಡಿರುವರಂತೆ. ಪಂಜಾಬಿನಲ್ಲಿ ಯೂನಿಯನಿಸ್ಟ್ (ಜಮೀನ್ದಾರಿ) ಮತ್ತು ಕಾಂಗ್ರೆಸ್ ಸಿಕ್ ಪಕ್ಷಗಳೊಳಗೆ ಒಡಂಬಡಿಕೆಯಿತ್ತು. ಲೀಗು ಕಾಂಗ್ರೆಸುಗಳು ಸಂಯುಕ್ತವಾಗಿ ಒಟ್ಟುಗೂಡಿಸಲ್ಪಟ್ಟದ್ದು ಕೇಂದ್ರದಲ್ಲಿ ಮಾತ್ರ. ಅದು ತೃಪ್ತಿಕರವಾಗಿಲ್ಲ. ಗಡಿನಾಡಿನಲ್ಲಿ ಇಂತಹ ಏರ್ಪಾಡು ಆಗುವುದಾದರೆ ಸಿಂಧ್ ಬಂಗಾಲಗಳಲ್ಲೂ ಅದೇ ರೀತಿಯಾಗಬೇಕಾದುದೂ ಅತ್ಯಾವಶ್ಯಕ.

*

ನಿಧನ

ಮಂಗಳೂರಿನ ಪ್ರಸಿದ್ಧ ವಕೀಲರೂ ಕೆನರಾ ಹೈಸ್ಕೂಲಿನ ಮಾಜಿ ಆ॥ ಮೆನೇಜರರೂ ಆಗಿದ್ದ ಶ್ರೀ. ಗುರ್ಪುರ ಉಪೇಂದ್ರ ಪ್ರಭು ಇವರು ಇದೇ ತಾ. ೧೬ರಲ್ಲಿ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಆತ್ಮಕ್ಕೆ ಚಿರಶಾಂತಿ ಇರಲಿ!

ಇನ್ನು ಹತ್ತು ವರ್ಷಗಳಲ್ಲಿ ರಶ್ಯದ ಮೇಲೆ ಯುದ್ಧ
ಅಮೇರಿಕನ್ನರು ಸಾಮ್ರಾಜ್ಯಶಾಹಿಗೆ ವಿರೋಧಿಗಳು
ಚರ್ಚಿಲ್ಲರ ಮಾನನಷ್ಟ ಮಾಡಿದ ಗ್ರಂಥ

ಲೂಯಿಸ್ ಎಡೆಮಿಕ್ ಎಂಬ ಅಮೇರಿಕನ್ ಪತ್ರಿಕೋದ್ಯೋಗಿಗಳು "ಡಿನ್ನರ್ ಎಟ್ ದಿ ವೈಟ್ ಹೌಸ್" (ಅಮೇರಿಕನ್ ಅಧ್ಯಕ್ಷ ಭವನದಲ್ಲಿ ಭೋಜನ) ಎಂಬ ಗ್ರಂಥವನ್ನು ಬರೆದಿದ್ದು ಅದರಲ್ಲಿ ದಿವಂಗತ ಅಧ್ಯಕ್ಷ ರೂಸ್‌ವೆಲ್ಟ ಮತ್ತು ಮಾಜಿ ಬ್ರಿಟಿಷ್ ಪ್ರಧಾನಿಗಳೂ ಬದ್ಧ ಗಾಂಧಿ ವೈರಿಗಳೂ ಆದ ಚರ್ಚಿಲ್ಲರೊಳಗಾದ ರಾಜಕೀಯ ಮಾತುಕತೆಗಳ ಒಳಗುಟ್ಟನ್ನು ಪ್ರಕಟಿಸಿರುವರು ಈ ಪುಸ್ತಕವನ್ನು ಓದಿದ ಚರ್ಚಿಲ್ಲರು ಮಿತಿಮೀರಿ ರೇಗಿ ಗ್ರಂಥ ಕರ್ತರ ಮತ್ತು ಪ್ರಕಾಶಕರ ಮೇಲೆ ಮಾನನಷ್ಟಕ್ಕೆ ಮೊಕದ್ದಮೆ ಹೂಡಿದರು

"ವೈಸರಾಯರ ಅರಮನೆಯ ಅಮೃತ ಶಿಲೆ ನೆಲದ ಮೇಲೆ ಅರೆ ನಗ್ನ ಫಕೀರ (ಗಾಂಧೀಜಿ)ನೊಬ್ಬನು ಅಡ್ಡಾಡುವುದನ್ನು" ಸೈರಿಸಲಾರದ ಮಾಜಿ ಬ್ರಿಟಿಷ್ ಪ್ರಧಾನರು ಯುದ್ಧ ಕಾಲದಲ್ಲಿ ಸಂಯುಕ್ತ ಅಮೇರಿಕದ ರಾಜಧಾನಿ ವಾಶಿಂಗ್ಟನ್ನಿಗೆ ಬೇಟಿಯಿತ್ತಿದ್ದರು ಅಮೇರಿಕವನ್ನು ಹೆಚ್ಚೆಚ್ಚು ಯುದ್ಧಾಸಕ್ತವಾಗುವಂತೆ ಯತ್ನಿಸುವುದು ಅವರ ಉದ್ದೇಶವಾಗಿತ್ತು "ಆದರೆ ಪ್ರಜಾಪ್ರಭುತ್ವ ಪ್ರಿಯ ಅಮೇರಿಕನ್ ಅಧ್ಯಕ್ಷ ರೂಸ್‌ವೆಲ್ಟರಿಗೆ ಹುಲಿಗೆಯ ಸಾಮ್ರಾಜ್ಯಶಾಹಿಯ ಕೆಸರಲ್ಲಿ ಕೈಯಿಕ್ಕಿ ಕೊಳೆ ಮಾಡಿಕೊಳ್ಳುವುದಕ್ಕೆ ಏನೊಂದು ಇಷ್ಟವಿರಲಿಲ್ಲ" ಹೀಗೆಂದು ಮೇಲ್ಕಂಡ ಗ್ರಂಥಕಾರರು ತಿಳಿಸುತ್ತಾರೆ. ಅಂದು ಅಮೇರಿಕನ್ ಅಧ್ಯಕ್ಷ ಭವನದಲ್ಲಿ ಬ್ರಿಟಿಸ್ ಪ್ರಧಾನಿಗಳ ಗೌರವಾರ್ಥವಾಗಿತ್ತು ಭೋಜನ ಸಮಾರಂಭಕ್ಕೆ ಈ ಗ್ರಂಥಕಾರರೂ ಆಹ್ವಾನಿಸಲ್ಪಟ್ಟಿದ್ದರು. ಅಂದಿನಿಂದಲೇ ಅಮೇರಿಕನ್ ವಿದೇಶಾಂಗ ಧೋರಣೆಯು ಗಂಭೀರ ರೂಪವನ್ನು ತಾಳಲಾರಂಭಿಸಿತು ಅಂದಿನ ಚರ್ಚಿಲ್ಲರನ್ನು ಲೂಯಿಸ್ ಎಡೆಮಿಕರು ಹೀಗೆ ವರ್ಣಿಸುತ್ತಾರೆ

"ನಾನು ಕಲ್ಪಿಸಿದಕ್ಕಿಂತ ಅವರು ಕುಳ್ಳರಾಗಿದ್ದರು. ಅದರಲ್ಲಿಯೂ ಆರು ಅಡಿ ಎತ್ತರದ ಅಧ್ಯಕ್ಷ ಮತ್ತವರ ಪತ್ನಿಯ ನಡುವೆ ನಿಂತಾಗಂತೂ ಇನ್ನೂ ತಗ್ಗಾಗಿ ಕಾಣುತಿದ್ದರು ಉರುಟಾದ ಶರೀರಕ್ಕೆ ಪುಟ್ಟ ಪುಟ್ಟ ಕೈಕಾಲುಗಳು, ಅವರ ಹೊಟ್ಟೆ, ಭುಜ ಮತ್ತು ತಲೆಗಳೇ ಗಮನೀಯವಾದ ಭಾಗಗಳು. ಅವರಿಗೆ ಕುತ್ತಿಗೆಯೇ ಇಲ್ಲ ಭೋಜನ ಮಂದಿರಕ್ಕೆ ಪ್ರವೇಶಿಸಿದಾಕ್ಷಣ ಅವರ ಬಿಳಿ ಗುಲಾಬಿ ವರ್ಣದ ಮುಖ ಅಗಲವಾಗಿ ನೀಲ ಕಣ್ಣುಗಳು ಹೊಳೆಯಲಾರಂಭಿಸಿದುವು. ಸಂದುಗಳಿಲ್ಲದ ಗೊಂಬೆಯಂತವರು ಚಲಿಸುತಿದ್ದರು. ಎಲ್ಲವೂ ಒಂದು ದೊಡ್ಡ ಮುದ್ದೆಯಂತಿತ್ತು ಅವರ ಕಣ್ಣು ಮತ್ತು ತುಟಿಗಳು ದಯ ದಾಕ್ಷಿಣ್ಯವಿಲ್ಲದ ನಿರ್ಧಾರವನ್ನು ಸೂಚಿಸುತಿದ್ದವು."

ಅಧ್ಯಕ್ಷರ ಟೀಕೆ

ಭೋಜನದ ಕಾಲದಲ್ಲಿ ಈ ಎಂಗ್ಲೋ-ಅಮೇರಿಕನ್ ಪ್ರಭೃತಿ ಪುರುಷರೊಳಗಾದ ಸಂಭಾಷಣೆಯು ಸ್ವಾರಸ್ಯವಾಗಿದೆ. ಎದುರಿರು ಕೂತು ವಿಶ್ವ ಯುದ್ಧದ ವಿಧಿ ಪುರುಷರಿವರು ಪರಸ್ಪರ ವಿಡಂಬನಾತ್ಮಕ ಹಾಸ್ಯ ನುಡಿವಾರ್ಪು ನುಡಿಗಳಲ್ಲಿ ಮಗ್ನರಾಗಿದ್ದರು. ರೂಸ್‌ವೆಲ್ಟರು ತಮ್ಮ ಸ್ವಾಭಾವಿಕ ಅಮೇರಿಕನ್ ಪ್ರಾಮಾಣಿಕತೆಯಿಂದಲೂ ಬಿಚ್ಚು ಮನಸ್ಸಿನಿಂದಲೂ ಹಲವು ಮಂದಿ ಆಮಂತ್ರಿತರೆದುರು ಹೀಗೆಂದರು

"ಅಮೇರಿಕನ್ನರಿಗೆ ಇಂಗ್ಲೆಂಡಿನ ಮೇಲೆ ಅದೆಷ್ಟು ಆಳವಾದ ಮನಸ್ತಾಪವಿದೆಯೆಂದು ನಮ್ಮ ಮಾನ್ಯ ಸ್ನೇಹಿತರಿಗೆ ಇನ್ನು ತಿಳಿದಿಲ್ಲ. ಬ್ರಿಟಿಷರು ಇದನ್ನು ನಂಬಲಿಕಿಲ್ಲವಾದರೂ ನಮ್ಮ ದೃಷ್ಟಿಯಲ್ಲಿ ಇವು ಸ್ವಾಭಾವಿಕ. ನಮಗೂ ನಮ್ಮಲ್ಲಿನ ಅನೇಕ ಜನತಾ ಮುಖಂಡರೊಳಗೂ ಆಗಾಗ್ಗೆ ಆಗುತ್ತಿರುವ ಕಚ್ಚಾಟಕ್ಕೆ ಅಮೇರಿಕನ್ನರಿಗೆ ಬ್ರಿಟಿಷರ ಮೇಲೆ ಇರುವ ಈ ಮನಸ್ತಾಪವೇ ಕಾರಣ. ನಿದರ್ಶನವಾಗಿ ನಮ್ಮಲ್ಲಿನ ಐರಿಷ್ ಪಕ್ಷವನ್ನು ತೆಗೆದುಕೊಳ್ಳಿರಿ. ಅವರು ಬ್ರಿಟಿಷ್ ವಿರೋಧಿಗಳು ನಮ್ಮಲ್ಲಿನ ಜರ್ಮನ್ ಪಾರಂಪರ್ಯದವರನ್ನು ನೋಡಿರಿ ಅವರು ಹೇಗಾದರೂ ಬ್ರಿಟಿಷ್ ದ್ವೇಷಿಗಳೆ ನಂತರ ನಮ್ಮ ನಿಗ್ರೋಗಳು ಬ್ರಿಟಿಷರ ವರ್ಣ ಧೋರಣೆಯನ್ನು ಸದಾ ಧಿಕ್ಕರಿಸುವರು ನಮ್ಮಲ್ಲಿನ ಹಳೆಯ ಅಮೇರಿಕನ್ನರಂತೂ ಹುಟ್ಟುವಾಗಲೇ ಬ್ರಿಟಿಷ್ ವೈರತ್ವ ಕಟ್ಟಿಕೊಂಡವರೇ ಹೆಚ್ಚು ನಾನು 1889ರಲ್ಲಿ ನನ್ನ ತಾಯಿಯೊಂದಿಗೆ ಲಂಡನಿಗೆ ಹೋದಾಗ ವಿಕ್ಟೋರಿಯಾ ಮಹಾರಾಣಿ ಕುದುರೆ ಸವಾರಿ ಮಾಡುವುದನ್ನು ನೋಡಿದಾಗ ಅವಳ ಮೇಲೆ ನನಗೆ ದ್ವೇಷಾಸೂಯೆ ಹುಟ್ಟಿತು ಆದರೆ ಈಗ ನಾನು ಹಿಂದಿನಂತೆ ಬ್ರಿಟಿಷ್ ದ್ವೇಷಿಯಲ್ಲ"

ಸಾಮ್ರಾಜ್ಯ ಬಂಧನ

ಭೋಜನಾನಂತರದ ಚರ್ಚಿಲ್ಲರ ಕುರಿತು ಕೊಟ್ಟ ವರ್ಣನೆಯು ಇನ್ನಷ್ಟು ಸ್ವಾರಸ್ಯವಾಗಿದೆ. ಇಂದು ಅಮೇರಿಕನ್ ಧೋರಣೆಯು ಬಿಗುವಾದ ರಶ್ಯಾ ವಿರುದ್ಧವಾಗಿರುವಾಗ ಲೂಯಿಸ್ ಎಡೆಮಿಕರ ಭವಿಷ್ಯ ಕಲ್ಪನೆಯು ಗಮನೀಯವಾಗಿದೆ

"ಚರ್ಚಿಲ್ಲರ ನಯನೀತಿಗಳೂ, ನೇಮ ಸಿದ್ಧಾಂತಗಳೂ ಮಾನ ಗೌರವಗಳೆಲ್ಲವೂ ಸಾಮ್ರಾಜ್ಯದೊಡನೆ ಪೋಣಿಸಲ್ಪಟ್ಟಿವೆ ಸಾಮ್ರಾಜ್ಯಕ್ಕಾಗಿ ಸಾಮ್ರಾಜ್ಯಶಾಹಿಪ್ರಿಯ ದೇಶಭಕ್ತರು ಏನು ಎಂಥದ್ದನ್ನಾದರೂ ಮಾಡಲು ಹೇಸುವವರಲ್ಲ ಸಾಮ್ರಾಜ್ಯಶಾಹಿಯ ಕ್ರೂರ ಕೊಲೆಪಾತಕಗಳ ಲೋಪ ದೋಷಗಳೆಲ್ಲವೂ ಅವರ ವ್ಯಕ್ತಿತ್ವದಲ್ಲಿ ಎರಕ ಹೊಯ್ದಂತಿವೆ

"ಪರ್ಲ್ ಹಾರ್ಬರ್‌ನ್ನು ಜಪಾನಿಯರು ಅನಿರೀಕ್ಷಿತವಾಗಿ ಬೊಂಬ್ ಮಾಡಿದ್ದರಿಂದ ಅಮೇರಿಕನ್ ಗೌರವಕ್ಕಾದ ಅಪಮಾನದ ಅನುಕೂಲತೆ ತೆಗೆದುಕೊಂಡು ಚರ್ಚಿಲ್ಲರು ಅಮೇರಿಕನ್ನರನ್ನು ಯುದ್ಧ ನಿರ್ಧಾರಕ್ಕೆಳೆಯಲು ಸಂದರ್ಭ ಹುಡುಕಿದರು ಅಮೇರಿಕನ್ನರು ತಮ್ಮನ್ನು ತಾವು ಉಳಿಸಿಕೊಳ್ಳುವ ಯತ್ನಕ್ಕೆಳಿದಾಗ ಅದರಿಂದ ಬ್ರಿಟನಿನ ರಕ್ಷಣೆಯೂ ಖಂಡಿತ ಆಗುವುದೆಂದು ಚರ್ಚಿಲ್ಲರು ಚೆನ್ನಾಗಿ ಬಲ್ಲರು

"ಇನ್ನು ರಶ್ಯದ ಕುರಿತೇನು ? . . . ಅಂದಿನ ಮಾತುಕತೆಗಳಲ್ಲಿ ರೂಸ್‌ವೆಲ್ಟರು ರಶ್ಯದ ಕುರಿತು ಸಾಯಂಕಾಲ ತನಕ ಸೊಲ್ಲೆತ್ತಲಿಲ್ಲ. ನಂತರ ಅವರಿಬ್ಬರು ಗುಪ್ತವಾಗಿ ಆ ಕುರಿತು ಚರ್ಚಿಸಿರಬೇಕು. ರಶ್ಯವನ್ನು ಎದುರಿಗೆ ಹಾಕಿ ಅಮೇರಿಕನ್ನರಿಗೆ ಕೊಮ್ಯುನಿಸಮಿನ ಭೀತಿ ಹುಟ್ಟಿಸುವುದು ಚರ್ಚಿಲ್ಲರ ಕುಹಕ. ರೂಸ್‌ವೆಲ್ಟರು ಉಪಾಯಗಾಣದೆ ತಮ್ಮ ಸಾಮ್ರಾಜ್ಯಕ್ಕೆ ಬೆಂಬಲ ಕೊಡುವರೆಂದು ಅವರ ಖಂಡಿತ ಗಣಿತ."

ಚರ್ಚಿಲ್ ವಿಜಯ

ಬ್ರಿಟಿಷ್ ಅಮೇರಿಕನ್ನರು ರಶ್ಯಾ ವಿರೋಧಿಗಳಾಗುವರೆಂಬ ಲೂಯಿಸರ ಭವಿಷ್ಯವಾದವು ರೂಸ್‌ವೆಲ್ಟರ ಮರಣಾನಂತರ ಸತ್ಯವಾಗತೊಡಗಿತು. "ಯುದ್ಧಕಾಲದ ಮಿತ್ರರಾಷ್ಟ್ರಗಳ ಧ್ಯೇಯವಾದವೂ, ಸಂಯುಕ್ತ ರಾಷ್ಟ್ರ ಸಂಘಟನೆಯ ಧ್ಯೇಯವೂ ಕ್ರಮೇಣ ರಷ್ಯಾ ವಿರುದ್ಧ ಧೋರಣೆಗೆ ಪರಿವರ್ತನೆಯಾಗತೊಡಗಿತು. ಬ್ರಿಟಿಷರ ವಸಾಹತು ಸಾಮ್ರಾಜ್ಯವೂ ಅಮೇರಿಕನ್ನರ ಕೈಗಾರಿಕೆ ಸಾಮ್ರಾಜ್ಯಶಾಹಿಯೂ ಕೈಕೈ ಜೋಡಿಸಿ ಹೊಸತೊಂದು ಬಾಂಧವ್ಯವನ್ನು ಕಲ್ಪಿಸಿದಂತೆ ತೋರುತ್ತದೆ ಇದು ಮುಂದರಿದರೆ ಇನ್ನು ಹತ್ತು ವರ್ಷಗಳಲ್ಲಿ ಈ ಶಕ್ತಿ ರಾಷ್ಟ್ರಗಳು ರಷ್ಯವನ್ನು ಹತ್ತಿಕ್ಕುವುದರಲ್ಲಿ ಮಗ್ನರಾಗುವುದು ಖಂಡಿತ"

ಜನ ಜೀವನದಲ್ಲಿ
ಖಾದಿಯ ಮಹತ್ವ
ಹೊಸ ಮಂತ್ರಿಗಳು ಪ್ರಕಾಶಂ ಯೋಜನೆ ಪೂರೈಸುವರು

ಮಾಜಿ ಪ್ರಧಾನ ಪ್ರಕಾಶಂರಿಂದ ಪ್ರಾರಂಭಿಸಲ್ಪಟ್ಟ ಸರ್ವತೋಮುಖ ಖಾದಿ ಯೋಜನೆಯನ್ನು ಹೊಸ ರೆಡ್ಡಿ ಸರಕಾರವು ಮುಂದುವರಿಸಲು ನಿರ್ಧರಿಸಿರುವುದು. ತೆರಿಗೆ ಕಂದಾಯ ಮಂತ್ರಿಗಳಾದ ವೆಂಕಟರಾಮರು ಖಾದಿಯ ಮಹತ್ವದ ಕುರಿತು ಮದರಾಸಿನ ಚರಕಾ ಕ್ಲಬ್ಬಿನಲ್ಲಿ ಭಾಷಣದಲ್ಲಿ ಹೀಗೆಂದರು

1931ರಲ್ಲಿ ವಿದೇಶಿ ವಸ್ತ್ರ ಬಹಿಷ್ಕಾರ [illegible] ಭಾರತಕ್ಕೆ ಹೊರಗಿನಿಂದ ಬರುತ್ತಿದ್ದ ಬಟ್ಟೆಯ ಮೌಲ್ಯ ಸುಮಾರು 55 ಕೋಟಿಗಳಷ್ಟು ಇತ್ತು. ಆದರೆ [illegible] ಗಿರಣಿ ಒಡೆಯರಿಗೆ ಸಲ್ಲುತ್ತಿದ್ದ ಈ ಹಣವು ಭಾರತೀಯ ಬಟ್ಟೆ ಕಾರ್ಖಾನೆ ಮಾಲೀಕರ ಜೇಬಿಗೆ ಬೀಳುವಂತಾಯಿತು. ಮುಂಬಯಿ, ಅಹಮದಾಬಾದ್, ಮತ್ತು ಕೊಯಮುತ್ತೂರಿನ ಗಿರಣಿ ಸಾಹುಕಾರರು ದಷ್ಟಪುಷ್ಟರಾದರು

ಹೀಗಾದುದರಿಂದ ನಮ್ಮ ಬಡ ಜನರಿಗೆ ಯಾವ ಲಾಭವೂ ಆಗಲಿಲ್ಲ ನಮ್ಮ ಗಿರಣಿಗಳಲ್ಲಿ ಸ್ಥಾಪಿಸಲ್ಪಡುವ ನೂಲು ತೆಗೆಯುವ ಪ್ರತಿ ನೂಲು ಯಂತ್ರವೊಂದಕ್ಕೆ 3 ಸಾವಿರ ರೂಪಾಯಿ ಖರ್ಚು ಬೀಳುವುದು ಇದರಿಂದಾಗುವ ಉತ್ಪತ್ತಿಯ ಪ್ರತಿ 100 ರೂಪಾಯಿಯಲ್ಲಿ 87 ರೂಪಾಯಿಗಳು ಗಿರಣಿ ಸಾಹುಕಾರನ ಭಂಡಾರಕ್ಕೆ ಬೀಳುತ್ತವೆ ಕೇವಲ 13 ರೂಪಾಯಿಗಳು ಕೆಲಸಗಾರರಿಗೆ ದೊರೆಯುವವು

ಆದರೆ ಒಂದು ಚರಕವನ್ನು ತೆಗೆದುಕೊಳ್ಳಲು ಮೂರೇ ರೂಪಾಯಿ ಖರ್ಚು ತಗಲುವುದು ಅದಕ್ಕೆ ಇದರಿಂದಾಗುವ ನೂಲಿನ ಮತ್ತು ಬಟ್ಟೆಯ ಉತ್ಪತ್ತಿಯಲ್ಲಿನ ಪ್ರತಿ 100 ರೂಪಾಯಿಯಲ್ಲಿ 87 ನೂಲುವ ನೇಯುವವರಿಗೆ ಸಲ್ಲುವುದು ಆದುದರಿಂದ ಭಾರತದ ವಿಶೇಷ ತರದ ಪರಿಸ್ಥಿತಿಯಲ್ಲಿ ಇಲ್ಲಿನ ಸಂಕಷ್ಟದ ಜನತೆಯ ಅಭಿವೃದ್ಧಿಗೆ ಖಾದಿಯಷ್ಟು ಉತ್ತಮ ಉಪ ಉದ್ಯೋಗವು ಬೇರೊಂದಿಲ್ಲ. ಅದಕ್ಕಾಗಿಯೇ ಮಹಾತ್ಮರು ಅದಕ್ಕೆ ಮಹತ್ವವನ್ನು ಕೊಟ್ಟಿರುವರು ಪ್ರಕಾಶಮ್ ಸರಕಾರವು 8 ಕೋಟಿ ರೂಪಾಯಿಗಳನ್ನು ಗ್ರಾಮ ಕೈಗಾರಿಕೆಗಳಭಿವೃದ್ಧಿಗಾಗಿ ಪ್ರತ್ಯೇಕವಿರಿಸಿದ್ದು ಅದರಲ್ಲಿ ಪರಿಶೋಧನೆ ಪ್ರಯೋಗಗಳೆಗೆಂದು ಈಗಾಗಲೇ 24 ಲಕ್ಷಗಳಷ್ಟು ಖರ್ಚಾಗಿರುವುದಾದರೂ ಇದುತನಕ ಒಂದೇ ಒಂದು ಗಜ ಖಾದಿಯೂ ಸಿದ್ಧವಾಗಿಲ್ಲ!

ಈಗಿನ ಸರಕಾರವು ಖಾದಿ ಯೋಜನೆಯನ್ನು ಪರಿಪೂರ್ಣಗೊಳಿಸಲು ನಿರ್ಧರಿಸಿದೆ "ಇನ್ನು 30 ದಿನಗಳಲ್ಲಿ ಕಳೆಯುವಷ್ಟರಲ್ಲಿ ಈಗಾಗಲೇ ಸ್ಥಾಪಿಸಿಲ್ಪಟ್ಟ ಖಾದಿ ಕೇಂದ್ರಗಳಲ್ಲದೆ ಇತರ ಹಲವು ಕೇಂದ್ರಗಳು ಚೈತನ್ಯಯುಕ್ತವಾಗಿ ಕಾರ್ಯಮಗ್ನವಾಗುವುದೆಂದು ನಾನು ನಿಮಗೆ ವಚನ ಕೊಡುತ್ತೇನೆ"

ಕೊನೆಯಲ್ಲಿ ಮಾನ್ಯ ಮಂತ್ರಿಗಳು ಸಾರ್ವಜನಿಕರ ಹತ್ಪೂರ್ವಕವಾದ ಸಹಕಾರವನ್ನು ಕೋರಿದರು

ರಚನಾತ್ಮಕ ಕಾರ್ಯಕ್ರಮ ಪ್ರಜಾಪ್ರಭುತ್ವದ ತಳಹದಿ
ದೇಶೋನ್ನತಿಯ ಮಹತ್ವದ ಕಾರ್ಯ

ರಚನಾತ್ಮಕ ಕಾರ್ಯದಲ್ಲಿ ಸೇರಿರುವ [illegible] ರಾಜಕೀಯ [illegible] ಅವಶ್ಯವಿದ್ದ [illegible] ಭಿನ್ನ ಸ್ವರೂಪವಾಗಿವೆ [illegible] ಕಾರ್ಯದಲ್ಲಿ [illegible] ಕಾರ್ಗತೆ ಮತ್ತು ಸಾಮಾಜಿಕ, ಆರ್ಥಿಕ [illegible] ಆರೋಗ್ಯ ಮತ್ತು ಸ್ವಚ್ಛತೆ ಹಾಗೂ ಶೈಕ್ಷಣಿಕ ಇವೇ ಮೊದಲಾದ ವಿಷಯಗಳಲ್ಲಿ ಹಳ್ಳಿಗರ ಸೇವೆಗಾಗಿ ತರಬೇತಿ ಹೊಂದುವುದು ಅತ್ಯಾವಶ್ಯವಾಗಿದೆ ಕಾಂಗ್ರೆಸ್ ಕಾರ್ಯಕರ್ತರೆನ್ನಿಸಿಕೊಳ್ಳುವವರು ಈ ಕಠಿಣ ಮತ್ತು ಹೊಣೆಗಾರಿಕೆಗಳಿಂದ ತುಂಬಿದ ರಚನಾತ್ಮಕ ಕಾರ್ಯವನ್ನು ಕೈಕೊಳ್ಳುವುದು [illegible] ಅವಶ್ಯವಾಗಿ ಆ ಕಾರ್ಯದಲ್ಲಿ ತರಬೇತಿ [illegible] ಕಾಂಗ್ರೆಸ್ [illegible] ಈ ವಿಷಯದಲ್ಲಿ ತಾತ್ವಿಕ [illegible] ವ್ಯವಹಾರಿಕ ತರಬೇತಿಯ ವರ್ಗಗಳನ್ನು [illegible] ಪ್ರಾರಂಭಿಸುವರೆಂದು [illegible]

ಪ್ರಜಾಪ್ರಭುತ್ವ ತರಬೇತಿ

ಈ ವರೆಗೆ ರಚನಾತ್ಮಕ ಸ್ವರೂಪದ ಸಂಸ್ಥೆಗಳಲ್ಲಿ ಪ್ರತ್ಯಕ್ಷ ರಾಜಕೀಯ ಕರ್ತರಿಗೆ ಸ್ಥಾನವಿದ್ದಿಲ್ಲ ಈಗ ಕಾಂಗ್ರೆಸು ತನ್ನ ಧೋರಣೆಯನ್ನು ಬದಲಾಯಿಸಿ ರಚನಾತ್ಮಕ ಕಾರ್ಯದ ಕಡೆಗೆ ಹೊರಳಿದ್ದರಿಂದ ಈ ಸಂಸ್ಥೆಗಳಲ್ಲಿಯೂ ಹಳ್ಳಿಗಳ ಉನ್ನತಿಯ ದ್ವಾರಗಳಿಗಾಗಿ ದುಡಿಯುವಂತ ಕಾರ್ಯಕರ್ತರನ್ನು ಸದಸ್ಯರನ್ನಾಗಿ ಮಾಡಿಕೊಳ್ಳಬೇಕು ಇನ್ನು ಮುಂದೆ ಸ್ವತಂತ್ರ ಹಿಂದೂಸ್ಥಾನದಲ್ಲಿ ಪ್ರಜಾಪ್ರಭುತ್ವದ ತರಬೇತಿಯೆಂದರೆ ರಚನಾತ್ಮಕ ಕಾರ್ಯವೇ ಸರಿ ಇಲ್ಲಿಯ ತನಕ ನಮ್ಮ ರಾಷ್ಟ್ರವು ಸ್ವಾತಂತ್ರ್ಯದ ಹೋರಾಟದಲ್ಲಿ ಇದ್ದದ್ದರಿಂದ ನಮ್ಮ ಅನೇಕ ನಿಸ್ವಾರ್ಥ ವ್ಯಕ್ತಿಯ ಕಾರ್ಯಕರ್ತರು ರಾಜಕೀಯ ಕ್ಷೇತ್ರದಲ್ಲಿಯೇ ಎಳೆಯಲ್ಪಟ್ಟಿರು ಈಗ್ಗೆ ನಮ್ಮ ಈ ದೇಶಭಕ್ತರಿಗಾಗಿ ಬೇರೆ ಕಾರ್ಯಕ್ಷೇತ್ರಗಳು ನಿರ್ಮಾಣವಾಗಿದ್ದು ಅವರು ಮೊದಲಿನ ತಮ್ಮ ಹುರುಪು ಮತ್ತು ಸೇವಾವೃತ್ತಿಯಿಂದಲೇ ಈ ಕಾರ್ಯ ಕ್ಷೇತ್ರಗಳಲ್ಲಿ ಬಂದು ಸಾಮಾನ್ಯ ಜನತೆಯ ಜೀವನ ಪರಿಸ್ಥಿತಿಯನ್ನು ಸುಧಾರಿಸಲಿಕ್ಕೆ ಹೆಣಗುವರೆಂದು ನಮ್ಮ ಆಸೆ

—ಜಿ. ಸಿ ಕುವಸಿರಪ್ಪ.

ಅಮೇರಿಕದಲ್ಲಿ ತರಬೇತಿಯಾದ ಸಮತಾವಾದಿ

ಜೈಲು ಹಿಂಸೆಗೊಳಗಾದ ಜೈಪ್ರಕಾಶ್

೧೯೪೨ರ ಚಳವಳ ಆರಂಭಿಸಿದ್ದು ಗಾಂಧಿ

ನಡೆಸಿದುದು ನಾರಾಯಣ

ಜೈಪ್ರಕಾಶ್ ಜನ್ಮವೆತ್ತಿದ ಪ್ರಾಂತ್ಯ ಬಿಹಾರ್. ಅವರೊಂದು ಬಡ ಕುಟುಂಬದಲ್ಲಿ ಹುಟ್ಟಿದವರು ನಮ್ಮ ನಾಯಕರಲ್ಲಿ ಹೆಚ್ಚಿನವರು ಮಹಾ ಮಹಾ ಲಕ್ಷ್ಮೀಪುತ್ರರಲ್ಲವಾದರೂ ಲಕ್ಷ್ಮೀಪುತ್ರರು. "ಬಡವರ ಉದ್ಧಾರವಾಗಬೇಕು; ಸಮಾನತೆ ಬರಬೇಕು" ಎಂಬುದು ಅಂಥವರ ನಾಲಿಗೆಯೊಪ್ಪವಮಾತ್ರವಲ್ಲ, ಹೃದಯದ ಆವೇಶವೂ ಹೌದು. ಆದರೆ ಅವರ ಹೃದಯವೇ ಅದಾಗಿರಲು ಸಾಧ್ಯವಿಲ್ಲ. ಬಡತನದ ಕಷ್ಟಗಳನ್ನು ಅವರು ಪರ್ಯಾಲೋಚಿಸಿ, ಹೆಚ್ಚೆಂದರೆ ಅಭ್ಯಾಸಿಸಿ ಅರಿತಿರಬೇಕು. ಅಲ್ಲಿಗೆ ಇಳಿದು ಕಂಡವರಿವರು ಅಲ್ಲಿದ್ದು ಕಂಡವರಲ್ಲ. ಕಾಮ್ರೇಡ್ ಜೈಪ್ರಕಾಶ್ ನಾರಾಯಣರು ಸ್ವತಃ ಬಡವ ಸ್ಥಿತಿಗತಿ ಸಂಯೋಗದಿಂದ ಅಮೇರಿಕದಲ್ಲಿ ಶಿಕ್ಷಣ ಪಡೆಯುವ ಯೋಗ ಇವರಿಗೊದಗಿದ್ದಿತು ಅಲ್ಲಿ ದುಡಿತ ಮತ್ತು ಶಿಕ್ಷಣವನ್ನು ಒಟ್ಟೊಟ್ಟಿಗೆ ಸಾಗಿಸಿದ್ದರಂತೆ ಇದರ ಪರಿಣಾಮವೇ ಇಂದಿನ ಜೈ ಪ್ರಕಾಶ್ ಕೆಲಸಗಾರರ ಕಷ್ಟಗಳು ಅವರ ಕಣ್ಣಿಗೆ ಬಿದ್ದುದಲ್ಲ ಕರುಳಿಗಂಟಿದುವು ಸಮತಾವಾದದ ಆವಶ್ಯಕತೆಯನ್ನವರು ಆಲೋಚಿಸಿ ತಿಳಿದುದಲ್ಲ-ಅನುಭವದಿಂದ ಅರಿತುಕೊಂಡರು ಅಮೇರಿಕದಲ್ಲಿರುವಾಗಲೇ ಕಾರ್ಲ್ ಮಾರ್ಕ್ಸನ ತತ್ವಗಳ ಗಾಢಾಭ್ಯಾಸ ಮಾಡಿದರು ಪಾಶ್ಚಾತ್ಯ ಸಮತಾವಾದಿ ಚಳವಳಿಗಾರರ ಪರಿಚಯ ಮಾಡಿಕೊಂಡರು, ಹಲವರ ಪ್ರಾಣ ಸ್ನೇಹಿತನಾಗಿದ್ದು ಎಲ್ಲಾ ಮರ್ಮಗಳನ್ನೂ ತಿಳಿದುಕೊಂಡರು ಇತರ ದೇಶಗಳ ಸಂಪಾದಾನುಭವವು-ವ್ಯವಹಾರ ಜಗತ್ತಿನ ಚಿಕ್ಕ ದೊಡ್ಡ ಸಂಗತಿಗಳು-ಸಿಂಚಲ್ಲಿ ಕೆಳಗೆ ಹೋದಲ್ಲಿ, ಬಂದಲ್ಲಿ ಕಾಣಿಸುವ ತಾರತಮ್ಯಗಳು—ಪ್ರತಿಯೊಂದೂ ಜೈಪ್ರಕಾಶರ ಪಾಲಿಗೆ ಒಂದೊಂದು ಪ್ರಕಾಶವೇ ಆದುವು ಆ ಬೆಳಕಿನಲ್ಲಿ ಸ್ವಾತಂತ್ರ್ಯ, ಸಮತೆಯ ಸ್ಪಷ್ಟ ರೂಪವು ಭಾಯಿ ಜೈಪ್ರಕಾಶರಿಗೆ ಕಾಣಿಸಿಕೊಂಡಿತು, ಅವರದರ 'ಪಾಠ ಮಾಗಿ ಮಾರ್ಪಟ್ಟರು, ತನ್ನಲ್ಲೇ ಅದನ್ನು ಅನುಷ್ಠಾನ ಮಾಡಿಕೊಂಡರು. ಅದರಲ್ಲೇ ಐಕ್ಯವಾದರು.

ಅವರ ಭಾರತೀಯ ಪರದೇಶಗಳ ಅನುಭವ ಅವರಿಗೆ ಬೇಕು ಆದರೆ ಅವರಿಗೆ ಅಧಿಕಾರ ಪೀಠಾಗ್ನಿ ಆಡಳಿತ, ಆಚರಣೆ, ತತ್ವ ಇವುಗಳಲ್ಲಾವುದರಲ್ಲೂ ಪರಕೀಯರ ಅನುಕರಣೆ ಇವರಿಗೆ ಬೇಕಾಗಿರಲಿಲ್ಲ. ಹಿಂದುಸ್ಥಾನದಲ್ಲಿ ಸಮಾನತಾ ಸ್ಥಾಪನೆಯಾಗಬೇಕು ಆದರೆ ಹೇಗೆ? ಸ್ವತಂತ್ರ ಯುದ್ಧ ರಾಷ್ಟ್ರಗಳಲ್ಲಿ ಸಮಾನತೆಯು ಒಂದೇ ಪ್ರಶ್ನೆಯಿದ್ದೀತು, ಆದರೆ ಹಿಂದುಸ್ಥಾನದಲ್ಲಿ ಅದನ್ನೂ ಇದನ್ನೂ ಸಾಧಿಸಿಯೇ ಸಂಪಾದಿಸಬೇಕಾಗಿದೆ ಸ್ವಾತಂತ್ರ್ಯದ ಬೆನ್ನಲ್ಲಿ ಸಮಾನತೆ, ಕಾಂಗ್ರೆಸಿನೊಳಗೆ ಸಮತಾವಾದಿ ಪಕ್ಷ, ಗಾಂಧೀ ನೆಹರುಗಳ ಹಿಂದೆ ~~ಜೈಪ್ರಕಾಶ್ ಈ ಪಂಕ್ತಿ ವ್ಯವಸ್ಥೆ ಬಂತು.~~ ಸ್ವಾತಂತ್ರ್ಯ, ಸಮತೆಗಳ ಪ್ರತಿಯೊಂದು ಪ್ರಯತ್ನದಲ್ಲೂ ಭಾಯಿ ಜೈಪ್ರಕಾಶರು ತನ್ನ ಸ್ಥಾನದ ಸ್ಪಷ್ಟ ಪರಿಜ್ಞಾನವಿದ್ದೇ ಭಾಗವಹಿಸಿದರು. ಈ ವಿಶಿಷ್ಟ ರೀತಿಯ ಅಗಾಧ ಶಕ್ತಿಯ ಯೋಧನು ಹೋರಾಟ ಕೊಡುತ್ತಾ ಹೋದುದು ಮುಂಭಾಗಕ್ಕೇನೇ! ಅವರ ಧೋರಣೆಯಲ್ಲಿ ದೈವಿಕ, ಧಾರ್ಮಿಕ ಭಾವನೆಗಳ ಅಂಶಮಾತ್ರವೂ ಇಲ್ಲ; ಅವರ ಹೊಡೆತಗಳಲ್ಲಿ ಆರಿಮನಸ್ಸು, ಆರ್ಧತ್ರಾಣದ ಪ್ರಯೋಗವೆಂದೂ ಕಾಣುತ್ತಿರಲಿಲ್ಲ. ಇವುಗಳಿಗೆ ಪತ್ರಿಫಲವಾಗಿ ~~ಸಮತೆ-ಸ್ವಾಧಿ~~ಕಾರಗಳಷ್ಟೇ ದೊರೆತರೆ ಸಾಕು, ಈ ಲೌಕಿಕ ಸುಖ ಸಾಧಿಸಲು ಆ ವ್ಯಾವಹಾರಿಕ ದುಡಿಮೆಯೇ ಸಾಕು ಇಲ್ಲಿ ಸಹಜತೆ ಕಂಡು ಬಂತು ಜೈಪ್ರಕಾಶರ ಲೋಕ ಕಣ್ಣಿದಿರಲ್ಲೇ ಕಾಣಿಸಿ ಕೊಂಡಿತು ಸತ್ಯಲೋಕ ಸಾಧನೆಗಾಗಿ ಆತ್ಮ ಶುದ್ಧಿ, ಅಹಿಂಸೆಗಳ ಒಂಟಿ ಕಾಲ ತಪವಾಚರಿಸುವಂತಹ ಅಸಹಜತೆಯಾಗಲೀ ಅತಿ ಪ್ರಯಾಸವಾಗಲೀ ಇದರಲ್ಲಿಲ್ಲ ಇಂತಹ ಯೋಧನು ಹಿನ್ನೆಲೆಗೆ ಬೀಳುವದೆಂದರೆ ಹೇಗೆ? ಜೈಪ್ರಕಾಶ್ ಅಗ್ರಗಣ್ಯ ನಾಯಕರಲ್ಲೊಬ್ಬರಾದರು. 1942ರ ಆಂದೋಲನವನ್ನು ಆರಂಭಿಸಿದುದು ಗಾಂಧಿಜೀ-ನಡೆಸಿದುದು ಜೈಪ್ರಕಾಶ್ ಆ ಹೋರಾಟದ ವಿಧಾನ, ಶಕ್ತಿ ಮತ್ತು ಪ್ರಭಾವ ಎಲ್ಲವೂ ಭಾಯಿ "ಜೈಪ್ರಕಾಶರವೇ" ಗಾಂಧಿಜೀಯ ಕೆಲಸ ಅಲ್ಲಿರಲಿಲ್ಲ ಜೈಪ್ರಕಾಶ್ ಮತ್ತವರ ಸಹ ಸಂಗಿನ ಪಟ್ವರ್ಧನ್ ಅರುಣಾ ಮುಂತಾದ ಸಮತಾವಾದಿಗಳು ಸ್ವಾತಂತ್ರ್ಯ ಜಯವನ್ನೇ ಸಾಧಿಸಬೇಕಾದಿದ್ದರು ಪ್ರಿಕ್ಸ್‌ವರಂತೆ ಸ್ವಾತಂತ್ರ್ಯಕ್ಕಾಗಿ ಜೈಲನ್ನು ಸಂಪಾದಿಸಿಕೊಂಡಾಗ ಅವರ ಕೆಲಸ ಮುಗಿಯುಲಿಲ್ಲ ಜೈಪ್ರಕಾಶ್ ಹೋರಾಟ ಕೊಟ್ಟುದಕ್ಕಾಗಿಯೇ ಜೈಲು ಸೇರಿದುದು, ಆ ಹೋರಾಟ ಕೊಡಬೇಕೆಂಬುದಕ್ಕಾಗಿಯೇ ಜೈಲಿನಿಂದ ಪಾರಿದುದ! ಆತನ ಕಳಿತ ಆ ಸೇನಾ ಹೋರಾಟ ಸಾಗಿಸಿದರು. ಹಿಂದಿ ಸ್ವಾತಂತ್ರ್ಯದ ಸಪ್ತ ಮಂತ್ರ ಸಾಗಿಸುವ ಅಂತರ್ಗತ ಪಟಿಯಲ್ ಆದ ತ ಜೈಪ್ರಕಾಶ್ ..... ತಪ ಕೇಟಿಗೂ ದೊರೆಯದಂತಹ ಚಿತ್ರಹಿಂಸೆಯನ್ನು 1942ರ ಆಂದೋಲನದಲ್ಲಿ ಜೈಪ್ರಕಾಶ್ ನಾರಾಯಣರನುಭವಿಸಿದರು. ಕೈಗೆ ದೊರೆತಾಗ ಅಧಿಕಾರಿಗಳವರ ಪ್ರಾಣ ಹಿಂಡಿದರು!

ಭಾಯಿ ಜೈ ಪ್ರಕಾಶರು ಒಂದು ಅಪೂರ್ವ ಸಂಗತಿ, ಅಸಾಧ್ಯ ವಿಷಯ! ವ್ಯಕ್ತಿಶಃ ಅವರು ಅತ್ಯಂತ ಮೃದುಹೃದಯಿ ಮಧುರಭಾಷಿ, ವಿನಯಶೀಲ ವರ್ತನೆಯ ಮನುಷ್ಯ, ತುಸು ಲಜ್ಜಾ ಪ್ರಕೃತಿಯವರು ಕೂಡಾ. ಓರ್ವ ನಾಗರಿಕ ಅಥವಾ ಒಂದು ವ್ಯಕ್ತಿ ಜೈಪ್ರಕಾಶರೊಡನೆ ಒಂದೆರಡು ದಿನವಿದ್ದ ಪರೇಂಗಿತಜ್ಞನೊಬ್ಬನೊಡನೆ 'ಈ ಮನುಷ್ಯ ಜೈಲು ಗೋಡೆ ಹಾರಿದವ" ಎಂದರೆ ಆತ ನಂಬಲಾರ ಅಮೃತಕಳಶ ಮತ್ತು ಆಟಂ ಬೋಂಬು, ಎರಡರ ಸಾರವೂ ಈ ರೀತಿ ಒಂದೆಡೆ ಸೇರಿರುವ ವ್ಯಕ್ತಿತ್ವ ಬೇರೆ ದೊರೆಯುವದ ಸಾಧ್ಯ ಇನ್ನು ಭಾರತದ ನಾಳೆಯ ನಾಯಕತ್ವ ಕಾಮ್ರೇಡ್ ಜೈ ಪ್ರಕಾಶರ ಪಾಲಿಗೆ ಮೀಸಲಿದೆ, ಎಂಬ ಕುರಿತು ಯಾರಿಗಾದರೂ ಅನುಮಾನವಿದೆಯೆ? ಜನತೆಯ ವಿಶ್ವಾಸಕ್ಕರ್ಹನಾದವನು ಜನರ ಅವಶ್ಯಕತೆಯೇನೆಂದು ಅರಿತವನು ಜನಮತ ಸ್ವಭಾವವನ್ನು ಅಗತ್ಯ ತೋರಿದಂತೆ ಅಣೆಕಟ್ಟಿನಲ್ಲಿ ಸಿಲ್ಲಿಸುವದಕ್ಕೂ, ಕಾಲುವೆಯಲ್ಲಿ ಹರಿಸುವದಕ್ಕೂ, ಸಮರ್ಥನಾದವನು ಮಾತ್ರ ಜನನಾಯಕನಾಗಬಲ್ಲನು ರಾಷ್ಟ್ರವೆಂದರೆ ಬಹುಸಂಖ್ಯಾಕರಾದ ರೈತರ ಕೆಲಸಗಾರರು ನ ತಿ ತರ ಜನಸಾಮಾನ್ಯರೇ ಇವರಿಗೆ ಬೇಕಾಗಿರುವದು ಸ್ವಾತಂತ್ರ್ಯ ಮತ್ತು ಸಮಾನತೆ ಇದುವರೆಗೆ ಪ್ರಥಮಾಶ್ಯಕತೆಯಾಗಿದ್ದ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರು ಜನವಿಶ್ವಾಸಕ್ಕೆ ... ಇಂದಿನ ಹಸುಗೇಯುಗದಲ್ಲಿ ಬಿರುದು ಸಿಂಹಾಸನವೂ ಒಂದು 'ಅಗೋಸ್ಟ ಹೋರಾಟದ ವೀರ' ಅಥವಾ ಕ್ರಾಂತಿ ... ಯಕ ಬಿರುದು ಒಬ್ಬನಿಗೆ ... ದಾದಲ್ಲಿ ಅದು ಸರ್ವ ಸಮ್ಮತಿಯುಳ್ಳ ಇವರ ಪಾಲಿಗೇ. ಇವರಲ್ಲಿ ಆ ಯೋಗ್ಯತೆ ಸಂಪೂರ್ಣವಿದೆ ಬರದನೆಯದಾಗಿ ಭಾರತ ಸ್ವಾತಂತ್ರ್ಯವೀಗ ಬರುತ್ತಾ ಇದೆ ಅದಕ್ಕಾಗಿ ಹೋರಾಡುವ ಕಾಲ ಕಳೆಯಿತು. ಸ್ವಾತಂತ್ರ್ಯ ಸಾಧನೆಯ ಕೆಲಸ ಮುಗಿಯುತ್ತಾ ಬಂತು. ಈಗ ಕೈಕೊಳ್ಳಬೇಕಾದುದು ಸಮಾನತಾ ಸ್ಥಾಪನೆಯ ಪ್ರಯತ್ನ ಮಾತ್ರ. ಈ ರಂಗದಲ್ಲಿ ನೇತಾ ಆಗುವ ಯೋಗ್ಯತೆ ಭಾಯಿ ಜೈ ಪ್ರಕಾಶರಿಗಿರುವಷ್ಟು ಇನ್ನಾರಿಗೂ ಈ ವೊದಲು ಕೂಡಾ ಇರಲಿಲ್ಲ ಬಹು ಪರಿಶ್ರಮಿಗಳಾದ ಕಮ್ಯೂನಿಸ್ಟರ ರಂಗವೂ ಇದೇ. ಆದರೆ ಕಣ್ಮುಚ್ಚಿಕೊಂಡು ರಶ್ಯವನ್ನೇ ಅನುಕರಿಸುವ ದೊಡ್ಡ ದೋಷ ಅವರಲ್ಲಿದೆ ಈ ಅನುಕರಣೆಯು ಕಮ್ಯೂನಿಸ್ಟರ ಮೂಲಧೋರಣೆಯಾದ್ದರಿಂದಲೇ ಸ್ವಾತಂತ್ರ್ಯ ಹೋರಾಟಗಳಲ್ಲಿ ಅವರು ಪರಕೀಯರಂತೆ ತೋರಿದ್ದರು, ಆ ಕಾರಣದಿಂದ ಜನವಿಶ್ವಾಸ ಗಳಿಸಿಲ್ಲ ಗುಲಾಮ ಮುದ್ರೆಯನ್ನು ಇಷ್ಟೊಂದು ಪ್ರಯಾಸದಿಂದ ಉಜ್ಜಿಕೊಂಡ ಹಿಂದುಸ್ಥಾನವು, ಬೆನ್ನಲ್ಲೇ ಸಮತಾವಾದದ ಸೌಖ್ಯಕ್ಕಾಗಿಯಾದರೂ ರಶ್ಯನ್ ಮೊಹರನ್ನೊತ್ತಿಕೊಳ್ಳಲು ತಯಾರಿಲ್ಲ ಅದಕ್ಕೆ ತನ್ನದೇ ಆದ ಸ್ವಾತಂತ್ರ್ಯ ತನ್ನದೇ ಆದ ಸಮಾನತೆ ಬೇಕಾಗಿದೆ ಆದ್ದರಿಂದ ಕಮ್ಯೂನಿಸ್ಟರನ್ನು ಹಿಂದೆ ಸರಿಯಿಸಿ ಜೈ ಪ್ರಕಾಶರನ್ನೇ ಅದು ಮುಂದೂಡಬಹುದು ನಿಜಕ್ಕೂ ಬಾವೀ ಭಾರತಕ್ಕೆ ಜೈ ಪ್ರಕಾಶ್! ಇವರು ಸ್ವಾತಂತ್ರ್ಯ ಸಾಧನೆಯ ಮಟ್ಟಿಗೆ ಗಾಂಧಿಜೀಯ ಧಾರ್ಮಿಕ ಭಾವನೆ, ಅಲೌಕಿಕ ತತ್ವಾರಾಧನೆಯಿಲ್ಲದ ವ್ಯವಹಾರ ವೀರ, ನೆಹರುಗಳ ಗಾಂಧೀ ವಿಧೇಯತೆಯು ಪರಾವಲಂಬನೆ ಕೂಡಾ ಇಲ್ಲದ ಸ್ವಯಂ ಯೋಧ ಸಮಾನತಾ ಸಾಧನೆಯ ಮಟ್ಟಿಗೆ ಕವ ಮ್ಯೂನಿಸ್ಟರ ರಶ್ಯಾವಲಂಬನಾ ಬುದ್ಧಿಯಿರದ ಹಿಂದೀ ಸಮತಾವಾದಿ ನಾಯಕ ಭಾಯಿ ಜೈ ಪ್ರಕಾಶರೇ ಇಂದಿನ ಕಣಕ್ಕೆ ಹೇಳಿಸಿದ ಕಲಿ ಅನವರಂಥವರು ಅವರೊಬ್ಬರೇ ಕಾಲವೇ ಅವರನ್ನು ಕರೆದಿದೆ

ವೃದ್ಧಾಪ್ಯದಲ್ಲಿ ತಾರುಣ್ಯ ಇಟ್ಟುಕೊಳ್ಳುವ ಬಗೆ

ಓರ್ವ ಮನೋಶಾಸ್ತ್ರಜ್ಞರ ಸಲಹೆ

ಗ ಭೀರವಾಗಿ ವೃದ್ಧಾಪ್ಯವನ್ನು ಸಾರುವುದಕ್ಕಿಂತ ಚಟುವಟಿಕೆಯುಕ್ತರಾಗಿ ಕರ್ಮಬದ್ಧರಾಗಿ ಸೇವಾಸಕ್ತಿಯಿಂದ ಮುದಿತನವನ್ನು ಹೆದರುವುದು ಯುಕ್ತವೆಂದು, ನ್ಯೂಯೋರ್ಕಿನ ಮನೋಶಾಸ್ತ್ರಜ್ಞರೂ ವಯಸ್ಸು ಸಮಸ್ಯೆಯ ಸಂಶೋಧಕರೂ ಆದ ಡಾ। ಜೋರ್ಜ್ ಲೊಟನ್ ಅವರು ಒಂದು ಲೇಖನದಲ್ಲಿ ಯಶಸ್ವಿಯಾಗಿ ಮುದುಕರಾಗುವುದಕ್ಕೆ ಹೀಗೆ ಸಲಹೆ ಕೊಡುತ್ತಾರೆ

ತಾರುಣ್ಯದಿಂದ ಚಟುವಟಿಕೆಯುಕ್ತರಾಗಲು ಅಭ್ಯಾಸಿಸಿದರೆ ಆರಾಮವಾಗಿ ಗಂಭೀರ ವೃದ್ಧಾಪ್ಯವನ್ನು ತಳೆಯುವುದಕ್ಕಿಂತ ಉತ್ತಮ ವಿಧಾನ ಕಾರಣ ಈ ಧೋರಣೆಯಿಂದ ವೃದ್ಧಾಪ್ಯವು ಸುಖಮಯವೂ ಉಪಯುಕ್ತವೂ ಆಗಿ ಪರಿಣಮಿಸುವುದು

~~ವೃದ್ಧಾಪ್ಯವು ಒಂದು ಜೀವನದ ಕಾಲ~~, ಕಾರ್ಯಾಸಕ್ತವಾಗುವ ಕಾಲವೆಂದು ತಿಳಿಯಬೇಕು. ಅದು ಕೇವಲ ನಶಿಸಿಹೋಗುವ ಅವಧಿಯೆಂದು ತಿಳಿಯಬಾರದು.

ನಿರಂತರ ಯೌವನದ ಪ್ರಶ್ನೆಯೇ ಪ್ರತ್ಯೇಕ ಬೆಳವಣಿಗೆಯು ವೃದ್ಧಾಪ್ಯದಲ್ಲಿ ಕತೆ ಹಿಡಿಯಲ್ಪಡುವುದೆಂಬ ಭಾವನೆ ತಪ್ಪು. ನಾಡಿಗಳು ಹಳೆಯದಾಗುವಾಗ ವ್ಯಕ್ತಿ ಮುದಿಯಾಗುತ್ತದೆ. 'ಚಟುವಟಿಕೆಯು ನಾಡಿಗಳನ್ನು ನಿರತ ಯೌವನಾವಸ್ಥೆಯಲ್ಲಿಡುತ್ತವೆ.

KANARA COMMERCIAL BANK LTD.

PUTTUR

H O Puttur] Estd 1920 [Branch Vittal

All kinds of Banking Business transacted.

Deposits Current, Savings, Cumulative Deposits are accepted

Fixed Deposits for periods of 3 months and above up to 24 months are accepted.

SEASON DEPOSITS

ARE Accepted up to 31-5-1947 Terms on application.

ವಿಪುಲ ಹಣದ ದೇಶದಲ್ಲಿ ಕೊಳೆತ ಹಣಗಳು

ಆರ್ಥಿಕ ಸಂಪತ್ತಿನ ಸದುಪಯೋಗವಾಗಬೇಕು

ಇದು ರಾಜಕೀಯ ಚಳವಳದ ಯುಗ

ಹೇರಳ ಸಂಪತ್ತಿನ ದೇಶವಾದರೂ ಎಲ್ಲಿ ಯೋಗ್ಯ ಪ್ರಮಾಣ ಜೀವನದ ಸಂದರ್ಭಗ ಳಿರುವುದಿಲ್ಲವೋ ಆ ದೇಶವು ಅಧಃಪತನ ಹೊಂದುವುದು ಖಂಡಿತ. “ಓರ್ವ ಆಂಗ್ಲ ಕವಿಯು ತನ್ನೊಂದು ಕೃತಿಯಲ್ಲಿ ಹೀಗೆ ಹಾ ಡಿದ್ದಾನೆ.

ಮಾನವ ಜೀವನ ವ್ಯವಹಾರದಲ್ಲಿ ಹಣ ವು ಗೈಯುತ್ತಿರುವ ಅಗಾಧ ಒಳಿತು ಕೆಡು ಕುಗಳು ಕೌತುಕಗೊಳಿಸುವ ಸಂಗತಿಯಾ ಗಿದೆ.

ದ್ರವ್ಯವು ಎಲ್ಲಾ ಕೇಡುಗಳ ಮೂಲ ಕಾರಣವೆಂದೆನ್ನಲಾಗಿದೆ. ಇಷ್ಟಾದರೂ ಅ ದೇ ದ್ರವ್ಯವು ಹಲವು ಸತ್ಕಾರ್ಯಗಳ ಸ್ಫೂ ರ್ತಿ ಶಕ್ತಿಯೂ ಆಗಿರುತ್ತದೆ.

ಹೊನ್ನು ಹೆಣ್ಣಿನಷ್ಟೇ ಪ್ರಭಾವಶಾಲಿ ಯಾದುದು ಹೆಣ್ಣಿನ ಕುರಿತು ಹಿರಿಯರು “ಅವಳನ್ನು ಕಟ್ಟಿಕೊಂಡರೂ ಕಷ್ಟ, ಅವಳಿ ಲ್ಲದಿದ್ದರೂ ಕಷ್ಟ”ವೆಂದಿದ್ದಾರೆ. ಹಣವೂ ಅದೇ ರೀತಿ.

ಆದುದರಿಂದಲೇ ನಮ್ಮ ಪ್ರಾಚೀನರು ಹೆಣ್ಣು ಹೊನ್ನುಗಳನ್ನು ಜತೆಜತೆಯಾಗಿ, ಸಮಾನ ಸತ್ವಶಾಲಿಗಳಾಗಿ ವರ್ಗೀಕರಿಸಿ ದರು ಮಣ್ಣುಹೊನ್ನಿನ ಇನ್ನೊಂದು ರೂಪ

ಮತ್ತೆ ಪುನಃ ಹೆಣ್ಣು ಹೊನ್ನುಗಳನ್ನು ನಮ್ಮ ಪೂರ್ವಿಕರು ದೈವಿಕಭಾವನೆಯಲ್ಲಿ ಒಟ್ಟುಗೂಡಿಸಿ' ಧನಲಕ್ಷ್ಮಿಯನ್ನು ನಿರ್ಮಿಸಿ ದರು

★

ದಯವಿಟ್ಟು ತಪ್ಪು ತಿಳಿಯಬಾರದು!

ಹೀಗೆನ್ನುವಾಗ ನಾನೇನು ವಿನೋದವಾ ಡುತಿದ್ದೇನೆಂದು ತಿಳಕೊಳ್ಳಬೇಡಿರಿ ಇಲ್ಲವೆ ನಾನು ಕೇವಲ ಗಾಳಿಪಟ ಬಿಡುತ್ತೇನೆಂದು ಭಾವಿಸದಿರಿ

ಇಂದು ನಮ್ಮ ದೇಶದ ವಿವಿಧ ರಾಜಕೀ ಯ, ಸಾಮಾಜಿಕ ಮತ್ತು ಧಾರ್ಮಿಕ ಚಳ ವಳಿಗಳ ಮೂಲದಲ್ಲಿ, ನಮ್ಮ ಜನಜೀವನದ ಕಾರ್ಯಕ್ರಿಯ ಅಲ್ಲಕಲ್ಲೋಲದ ತೆರೆನೊರೆಗಳ ಅಳಕು ಆಡಂಬರಗಳ ನಡುವಿನಲ್ಲಿ ಈ ಆ ರ್ಥಿಕ ಪ್ರಭಾವವು ಅವ್ಯಾಹತವಾಗಿ ನಲಿ ಯುತ್ತಿದೆ

ಸಂಪತ್ತು !—ಕೆಲವು ಕಡೆಗಳಲ್ಲಿ ಇದು ಅತಿರೇಕ ಸಂಗ್ರಹವಾಗಿದೆ ಬೇರೆ ಕಡೆಗಳ ಲ್ಲಿ ಅದರ ಇರವು ಅತ್ಯಲ್ಪವಾಗಿದೆ ನಮ್ಮ ಜೀವನ ವೃಕ್ಷದ ಬೇರು ಅದೇ ಆಗಿದೆ. ಆಳ ವಾಗಿ ಪರಿಶೀಲಿಸದೆ ಇದು ನೋಡಸಿಗುವು ದಿಲ್ಲ. ಆದರೂ ನಿಜವಾದ ಸತ್ಯವಾದ ಸಂ ಗತಿ ಇದೊಂದೆ!

★

ದೇಹಕ್ಕೆ ರಕ್ತವಿರುವಂತೆ ದೇಶಕ್ಕೆ ಸಂಪ ತ್ತು ರಕ್ತ ಕಡಿಮೆಯಾದರೆ ಅಶಕ್ತಿಯುಂ ಟಾಗುವಂತೆ ಸಂಪತ್ತಿಲ್ಲದ ದೇಶದ ಪ್ರಗತಿ ಕೃಶವಾಗುತ್ತದೆ ಅತೀ ಹೆಚ್ಚು ರಕ್ತವು ದೇ ಹದ ಯಾವ ಭಾಗದಲ್ಲಾದರೂ ಒಟ್ಟುಗೂ ಡಿದರೆ ರಕ್ತರೋಗವುಂಟಾಗುವಂತೆ ಸಂಪ ತ್ತು ದೇಶದ ನಿರ್ದಿಷ್ಟ ಭಾಗಗಳಲ್ಲಿ ಶೇಕರಿಸಿ ಬಿಟ್ಟರೆ ಅನರ್ಥವಾಗುವುದು.

ವೈದ್ಯರ ಹತ್ತಿರ ವಿಚಾರಿಸಿದರೆ ಅಲ್ಪ ರಕ್ತ ಕಿಂತ ವಿಪರೀತ ರಕ್ತ ಸಂಗ್ರಹವು ಅನೇಕಾ ನೇಕ ರೋಗರುಜಿನಗಳಿಗೆ ಕಾರಣವೆಂಬ ಸಂ ಗತಿಯನ್ನು ತಿಳಿಸುವರು. ಭಾರತದ ದುರ್ದ ಶೆಗೂ ಇದೇ ಕಾರಣವೆನ್ನಬಹುದು ಯು ದ್ಧದ ನಂತರವಂತೂ ಇದರ ಲಕ್ಷಣಗಳು ತೀವ್ರವೆ ಆಗಿವೆ. ಅತಿ ರಕ್ತಸ್ರಾವದಂತೆ ಇಂದಿಲ್ಲಿ ಅತಿ ದ್ರವ್ಯಸ್ರಾವವುಂಟಾಗಿದ್ದೆ.

★

ಈ ವಿಷಯವನ್ನು ಸಿರಿವಂತರಾದವರು ಗಮನಿಸುವುದು ಅವರ ಹಿತಕ್ಕೇ ಒಳಿತು ಕಾರಣ ರಕ್ತವು ಹರಿಯದೆ ಗಟ್ಟಿಕಟ್ಟಿದರೆ ಅದೆಷ್ಟು ಕೆಡುಕೋ, ಅದೇ ರೀತಿ ದ್ರವ್ಯವು ಯೋಗ್ಯ ರೀತಿಯಲ್ಲಿ ವ್ಯವಹಾರಕ್ಕೊಳಗಾ ಗದಿದ್ದರೆ ಕೆಟ್ಟದ್ದು.

ಇಂದು, ಸುಮಾರು 70 ಸಾವಿರಕ್ಕೂ ಮಿಕ್ಕಿ ಕೈಗಾರಿಕೆ ಮಜೂರರು ನಿರುದ್ಯೋ ಗಿಗಳಾಗಿದ್ದಾರೆ—ಕಲ್ಕತ್ತವೊಂದರಲ್ಲಿ ಬಂ ಗಾಳದ 120 ಸಾವಿರ ಪ್ರಾಥಮಿಕ ಉಪಾ ಧ್ಯಾಯರು ಕೇವಲ ಜೀವನಾರ್ಥ ಸಾಧನೆ ಗಾಗಿ ಮುಷ್ಕರ ತೊಟ್ಟಿರುವರು ಇದರ ಮೊತ್ತ—2 ಲಕ್ಷ

ಈಗ ಎಲ್ಲಾ ಪ್ರಾಂತ್ಯಗಳಲ್ಲೂ ಹೆಚ್ಚು ಕಡಮೆ ಇದೇ ಪರಿಸ್ಥಿತಿ ನಿಂತಿದೆ ಮೇಲಿನ ಸಂಖ್ಯೆಯನ್ನು ಮೂರರಿಂದ ಗುಣಿಸಿದಷ್ಟು ಸಂಖ್ಯೆ ಕೆಲವು ಪ್ರಾಂತ್ಯಗಳಲ್ಲಿ ಸಿಗಬಹು ದು ಇದಕ್ಕೆ ಸದ್ಯದಲ್ಲಿ ಮುಷ್ಕರ ತೊಡಲಿ ರುವ ಜನರ ಸಂಖ್ಯೆಯನ್ನು ಸೇರಿಸಬಹುದು. ರೂ 15ರಿಂದ 50ರ ಒಳಗೆ ಸಂಪಾದನೆ ಯಿದ್ದು ಒಂದು ಜೀವ ಸಾಕಲು ಸಾಲದ ವರು ಲಕ್ಷಾಂತರ ಮಂದಿ ಇದ್ದಾರೆ

ಇನ್ನೊಂದು ವಿಷಯ ಯುದ್ಧಕ್ಕೆ ಮುಂ ಚೆ 6 ರೂಪಾಯಿಗೆ ಸಿಗುವಂತಹದು ಈಗ 15ಕ್ಕೂ ಸಿಗುವುದಿಲ್ಲ ರೂ 16ರೊಳಗ ಖರ್ಚು ಸಾಗಿಸಬಹುದಿದ್ದದು ಈಗ 50 ರಿಂದಲೂ ಕಷ್ಟ ಇದನ್ನು ನೆನಪಿಡಬೇಕು

ಇದರ ಹಿನ್ನೆಲೆಯಲ್ಲಿ ಹೊಸ ಶ್ರೀಮಂ ತರ ಅಪಾರ ನಿಧಿ ಸಂಗ್ರಹವನ್ನು ನೋಡಿರಿ ಇವೆರಡನ್ನು ತುಲನಾತ್ಮಕವಾಗಿ ನೋಡು ವಾಗ ನಮ್ಮ ಜನಾಂಗದ ಜೀವನ ಒಕಷ್ಟ ತೆಯ ಘೋರ ದೃಶ್ಯ ಕಂಗೊಳಿಸುವುದು

ಈ ಯುದ್ಧಕಾಲ ನಿಧಿ ಸಂಗ್ರಹದಿಂದ ಮತ್ತರಾದವರ ಕೈಯಲ್ಲೇ ಎಲ್ಲಾ ವಾಣಿ ಜ್ಯ ವ್ಯವಹಾರ, ಆಹಾರ ವಸ್ತುಗಳ ಸೂತ್ರ ಗಳಿವೆ ಸರಕಾರದ ಹಿಂದೆ ನಿಂತುಕೊಂಡ ಅವರು ಕಾಯಿದೆ ಭಾರ ಸೂತ್ರಗಳನ್ನೆಳೆ ಯುವರು ವಸ್ತುಗಳನ್ನು ಅಪಾರ ಪ್ರಮಾ ಣದಲ್ಲಿ ಕೊಂಡು ಕೊಂಡು ಅವುಗಳ ಧಾರ ಣೆಯನ್ನು ಏರಿಸುವರು. ಈ ಹಣದ ಕಾರ ಬಾರಿನಿಂದ ಅಧಿಕಾರ ಸ್ಥಾನಗಳನ್ನು ಪಡೆದು ಇನ್ನಷ್ಟು ದ್ರವ್ಯವನ್ನು ಸಮೃದ್ಧಿಸುವರು

ಇಂಥಾ ಸಂಪೂರ್ಣ ಚಿತ್ರದಲ್ಲಿ ಒಂದು ಸಿಡಿಮದ್ದಿನ ಮನೆಯು ತಯಾರಾಗುವುದು ಇವರ ಧೋರಣೆಯಿಂದ ಜನ ಜೀವನದ ಮನೋಭ್ರಮೆಯು ಉಷ್ಣವೇರಿ ಅದರಿಂ ದುಂಟಾದ ಕಿಡಿಯು ಆ ಸಿಡಿಮದ್ದಿಗೆ ತಗಲಿ ಭಯಂಕರ ರಾಜಕೀಯ ಕ್ರಾಂತಿ ಸ್ಫೋಟ ಗೊಳ್ಳುವುದು ಮಾತ್ರವಲ್ಲ ಜಾತೀಯ ಪಿ ಟಾಕಿ ಸುಡುವವರೂ, ಬಂಡವಾಳ ಮುಡಿಗಯ 'ಜಿಂದಾಬಾದ್' ಘೋಷಣೆಗಾರರಾಗಲು ದಾ 'ಸ್ವಯಂ ಸೇವಕ'ರೂ ಜನ್ಮ ಪೆತ್ತಿ ದೇಶ್ವ ದಸ್ತಾಪ ದರ್ಶಕತ್ವದಲ್ಲಿ ಕೂಲ ಸುಲಿಗೆ ನಡುಸಿದ ಅನಾಚಾರಗಳನ್ನು ಗೈ ಯುವರು ಈ ಗಲಭೆಯ ಮಧ್ಯ ತವ ರಾಶಿಯ ಮೇಲೆ ಕುಳಿತ ಅಧಿಕಾರದ ಹಣ್ಣು ಕೊಯ್ಯಲು ಪ್ರಯತ್ನ ನಡೆಸುವವರಷ್ಟು ಮಂದಿ ಇದ್ದಾರೆ!

★

ಸ್ವಾರ್ಥ ಸೇವೆ, ತ್ಯಾಗ, ಬಲಿದಾನ ಗಳಿಂದ ಪೇರಿತರಾಗಿರುವ ತನಕ ರಾಜಕೀ ಯವು ಒಂದು ಗೌರವದ ಉದ್ಯೋಗವೆನಿ ಸುತ್ತದೆ. ಆದರೆ ಅಧಿಕಾರ ಲಾಲಸೆ, ದ್ರವ್ಯ ಸಂಪಾದನೆಯೇ ಉದ್ದೇಶವಿದ್ದವರು ಈ ಆಟವಾಡುವಾಗ ಅದು ಕೊಳೆತು ನಾರು ವುದು.

ಈಗಿನ ಪರಿಸ್ಥಿತಿಯಲ್ಲಿ ಹಿಂದಿನಂತೆ ಉದ್ಯೋಗ ಮಾಡಿ ತಿನ್ನುವ ಆವಶ್ಯಕತೆಯಿ ಲ್ಲದವರಿಗೆ ಅದು ಒತ್ತಾಯದಿಂದ ಕೊಡ ಲ್ಪಡುವುದು ನಿರುದ್ಯೋಗಿಯಾಗಿ ನರಳು ವವರಿಗೆ ಬೇಕೆಂದರೂ ಒಂದು ಕೆಲಸವಿಲ್ಲ. ಕೆಲಸವಿದ್ದರೂ ಸೌಕರ್ಯಗಳಿಲ್ಲ

ನಮ್ಮ ಸಮಾಜ, ರಾಜಕೀಯಗಳು ಪುನ ರ್ವ್ಯವಸ್ಥಿತವಾಗುವುದು ಅತ್ಯಾವಶ್ಯಕ ಎಲ್ಲಾ ಹೊಟ್ಟೆ ಬಟ್ಟೆಯ ವಸ್ತುಗಳು ರೇಶ ನ್ ರೀತಿಯಲ್ಲಿ ವಿತರಣೆಯಾಗುವಂತೆ ನಮ್ಮ ದೇಶದ ದ್ರವ್ಯವೂ ಸಮರ್ಪಕವಾಗಿ ಹಂಚಲ್ಪಡಬೇಕು ಎಲ್ಲರಿಗೂ ನಿಜವಾಗಿ ಮಾರೂ ಹಾಳು ಮಾಡದಂತೆ—ವ್ಯವಸ್ಥೆ ಯಾಗಬೇಕಾದುದು ಅತ್ಯಾವಶ್ಯಕ ಹೀಗಾ ಗುವುದರಿಂದಲೇ ದೇಶದ ಮುಂದಿರುವ ಅನೇಕಾನೇಕ ಆರ್ಥಿಕ ಸಮಸ್ಯೆಗಳು ಪರಿ ಹಾರಗೊಂಡಾವು — ಓರಿಯಂಟ್

ರಾ ಬ ಪಿ ರಾಮ್ದಾಸರ ವಿಚಾರಣೆ:

ಇಲ್ಲಿ ಹಿಂದೆ ಜಿಲ್ಲಾ ಕಲೆಕ್ಟರರಾಗಿದ್ದ ರಾ ... ರಾಮ್ದಾಸ್ ಪಿ ... ಅವರ ಮೇ ಲಿನ ಕೆಲವು ಆಪಾದನೆಗಳ ತನಿಖೆಗಾಗಿ ಕಲ್ಲಿಕೋಟೆಯಲ್ಲಿ ನಡೆಯುತಿದೆ ಎಂದು ...



ESTD 1906

CANARA BANK, LIMITED.

(Incorporated in British India with Limited Liability)

(PROGRESS STATEMENT CORRECT TO THOUSANDS OF RUPEES)

LIABILITIES

	1945	1946
~~Capital Subscribed~~	29,00,000	29,00,000
Capital paid up	28,43,000	28,80 000
Reserve	11,00,000	11,00 000
Deposits	3,50,43,000	4 60 40,000
Due to Bankers	26 91,000	69 57 000
Call Deposits from Bankers	8 00,000	15,00 000
Branch Adjustments	22 07,000	21,09 000
Bills for collection and foreign bills negotiated	20,56,000	34,23,000
Other Liabilities	77,000	85,000
Profit for the year	3,61,000	4 19,000
Rs	4,71,78,000	6,45,13,000

ASSETS

	1945	1946
Cash	1 01 91 000	1 16,16 000
Govt Securities	1 80 46 000	2 75,61,000
Advances to customers	1 56 87 000	2 01 38 000
Bills for collection and Foreign Bills negotiated	20,56 000	34 23,000
Landed Properties	28 000	5,000
Bank Premises and Furniture and Fixtures	1,46,000	1,47 000
Other Assets	10,25,000	16 23,000
Rs	4,71,78,000	6,45,13,000

ಜಿಲ್ಲಾ ಪರಿಚಯ

ವರ್ಧಂತಿ ದಿನಾಚರಣೆ: ಬಿ. ಇ. ಎಂ. ಹ್ಯಾಸ್ಕೂಲ್ ಹಳೇ ವಿದ್ಯಾರ್ಥಿ ಸಂಘದ ವರ್ಧಂತಿ ಉತ್ಸವವು ಈಚೆಗೆ ಆ ಶಾಲೆಯಲ್ಲಿ ನಾಟಕಾದಿ ವಿನೋದಗಳೊಡನೆ ಜರುಗಿತು.

ಜಿಲ್ಲಾ ಉಪಾಧ್ಯಾಯರ ಗಿಲ್ಡ್: ಈಚೆಗೆ ಬಿಸೆಂಟ್ ಹ್ಯಾಸ್ಕೂಲಿನಲ್ಲಿ ಜರುಗಿದ ಶ್ರೀ। ಎಂ. ಎಸ್. ಏಕಾಂಬರರಾಯರ ಅಧ್ಯಕ್ಷತೆಯನ್ನೊಳಗೊಂಡ, ಗಿಲ್ಡಿನ ಮೀಟಿಂಗಿನಲ್ಲಿ, ಉಪಾಧ್ಯಾಯರ ಉನ್ನತಿಗೆ ಸಂಬಂಧಿಸಿದ ಹಲವಾರು ನಿರ್ಣಯಗಳೊಂದಿಗೆ, ಕಡ್ಡಾಯ ಶಿಕ್ಷಣ ಕ್ಷೇತ್ರದ ಬಡ ವಿದ್ಯಾರ್ಥಿಗಳಿಗೆ ಕೊಡುತ್ತಿದ್ದ ಮಧ್ಯಾಹ್ನ ಊಟ ನಿಲ್ಲಿಸಿದ್ದಕ್ಕಾಗಿ ವಿಷಾದವನ್ನು ಸೂಚಿಸಿದೆ

ನೇಮಕಗಳು: ಪುತ್ತೂರು ಜನರಲ್ ಡ್ಯೂಟಿ ಡೆ। ಕಲೆಕ್ಟರ್ ಶ್ರೀ। ವೆಂಕಟಾಚಲಂ ನಾಯ್ಡು ಇವರು ಮೋಸದ ಸೋಡ್ತಿ ಮೊಕದ್ದಮೆಗಳ ತನಿಖೆ ಬಗ್ಗೆ ಸ್ಪೆಶಲ್ ಡ್ಯೂಟಿಗೆ ನಿಯಮಿಸಲ್ಪಟ್ಟಿರುವುದರಿಂದ ಚಿತ್ತೂರಿನ ಶ್ರೀ ಯು ವೆಂಕಟೇಶ್ವರಲು ಇವರು ಜನರಲ್ ಡ್ಯೂಟಿ ಡೆ। ಕಲೆಕ್ಟರರಾಗಿ ನೇಮಿಸಲ್ಪಟ್ಟಿದ್ದಾರೆ

ಜೈ ಪ್ರಕಾಶರು

ತಾ 24ರಂದು ಇಲ್ಲಿಯ ಎಸ್ ಆರ್ ಎಸ್ ಹೋಮಿನ ಗಣೇಶ ನಗರದಲ್ಲಿ ಅಖಿಲ ಕರ್ನಾಟಕ ಪ್ರಾಂತಿಕ ಸಮಾಜವಾದಿಗಳ ಪರಿಷತ್ತು ಸೇರಿತು. ತಮ್ಮ ಆಂಧ್ರ, ಕೇರಳನಾಡು ಸಂಚಾರ ಮುಗಿಸಿ ನಮ್ಮ ಜಿಲ್ಲೆಗೆ ದಯಮಾಡಿಸಿದ ಅಖಿಲಭಾರತ ಸಮಾಜವಾದಿ ಪಕ್ಷದ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ಜೈ ಪ್ರಕಾಶ್ ನಾರಾಯಣರು ಅಂದು ಸಾಯಂಕಾಲ ನಂತರ 9 ಗಂಟೆಗೆ ಪರಿಷತ್ತನ್ನು ಉದ್ಘಾಟಿಸಿದರು ಶ್ರೀ ಕಮಲಾ ದೇವಿಯವರು ಅಧ್ಯಕ್ಷಸ್ಥಾನ ವಹಿಸಿದ್ದರು. ಜೈಪ್ರಕಾಶರ ದೇಶದ ಪ್ರಸ್ತುತದ ರಾಜಕೀಯ ಪರಿಸ್ಥಿತಿಯ ಸಿಂಹಾವಲೋಕನ ಮಾಡುತ್ತಾ ಬ್ರಿಟಿಷರು ಹೋದರೂ ಅವರಿಲ್ಲಿ ಬಹುಕಾಲಕ್ಕೆ ಸಾಕಾಗುವಷ್ಟು ಸಾಮ್ರಾಜ್ಯಶಾಹಿ, ಬಂಡವಲಶಾಹಿ ವಿಷಗಳ ಬೀಜವನ್ನು ಹಾಕಿಯೇ ಹೋಗುವರೆಂದೂ, ನಮ್ಮ ಸಾಮಾಜಿಕ ಮತ್ತು ರಾಜಕೀಯ ಪುನರ್ವ್ಯವಸ್ಥೆಯಾಗದೆ ಭಾರತದ ಬಡ ಮಿಲಿಯಾವಧಿಗೆ ವಿಮೋಚನೆ ದೊರೆಯಲಾರದೆಂದೂ ತಿಳಿಸುತ್ತ, ತರುಣ ಜನಾಂಗವು ಜಾತಿಮತ ಭಾವನೆಗಳನ್ನು ತೊರೆದು ಸಮಾಜವಾದಿ ತತ್ವದ ರಾಜ್ಯಾಧಿಷ್ಠಿತ ಸ್ಥಾಪನೆಗಾಗಿ ತನುಮನಗಳನ್ನು ಸವೆಸಬೇಕೆಂದೂ ತಿಳಿಸಿದರು. ಅಂದು ಸಾಯಂಕಾಲ 7 ಗಂಟೆಗೆ ಜೈ ಪ್ರಕಾಶರು ಮೈದಾನಿನಲ್ಲಿ ಸಾರ್ವಜನಿಕ ಭಾಷಣ ಮಾಡುತ್ತ ಬ್ರಿಟಿಷ್ ಸರಕಾರವು ಸಾಮ್ರಾಜ್ಯಶಾಹಿಯನ್ನು ತೊಡೆದುಹಾಕುವುದೆಂದರೆ ಚಿರತೆಯು ತನ್ನ ಚಿಟ್ಟೆಗಳನ್ನು ತೊಡೆದುಹಾಕುವಷ್ಟು ಕಷ್ಟವೆಂದು ತಿಳಿಸುತ್ತಾ ಸಮಾಜವಾದದ ಧ್ಯೇಯ ಧೋರಣೆಗಳನ್ನು ಕೊಮ್ಯುನಿಸ್ಟ್ ವಾದದ ಲೋಪ ದೋಷಗಳನ್ನು ವಿವರಿಸಿದರು. ಮರುದಿವಸ ಅವರು ಉತ್ತರಭಾಗದ ಸಂಚಾರಕ್ಕೆ ತೆರಳಿ ತಾ 25ರಂದು ಕಡಿಪಾಡಿಯಲ್ಲಿ ರಾಷ್ಟ್ರೀಯ ಸೇವಾದಳ ತರಬೇತಿ ಶಿಬಿರದ ಉದ್ಘಾಟನೆಯನ್ನು ಮಾಡಿ ಮುಂದೆ ಉಡುಪಿ, ಕುಂದಾಪುರ, ಕಾರ್ಕಳ, ಮೊದಲಾದ ಸ್ಥಳಗಳಿಗೆ ಸಂದರ್ಶನವಿತ್ತು ಭಾಷಣಗಳನ್ನು ಕೊಟ್ಟರು

ಉಡುಪಿಯಲ್ಲಿ ಬಿರುಗಾಳಿ ಅನಾಹುತ!

ಕಳೆದ ಶುಕ್ರವಾರ ತಾ. 11ರಲ್ಲಿ ಸಂಜೆ 8॥ಗೆ, ಉಡ್ಪಿ ಪಟ್ಟಣ ಮತ್ತು ಆಸುಪಾಸುಗಳಲ್ಲಿ, ಒಂದು ಉತ್ಪಾತ ಬಿರುಗಾಳಿ ಕೆಲ ನಿಮಿಷ ಬೀಸಿತು. ಕಡಿಯಾಳಿ, ಬನ್ನಂಜೆ, ಕಸ್ಪೆಟ್ಟು, ಅಂಬಲಪಾಡಿ ಮೊದಲಾದ ಕೆಲವು ಕಡೆಗಳಲ್ಲಿಯೂ, ಸಂತೇಕಟ್ಟೆ, ರಸ್ತೆ ಮೊದಲಾದ ಹಲವು ರಸ್ತೆಗಳಲ್ಲಿಯೂ ಈ ಬಿರುಗಾಳಿ ಅನಾಹುತ ಕಂಡುಬಂದಿದೆ

ಬಿರುಗಾಳಿಯಿಂದ ಸುಮಾರು ೪೦೦ ೫೦೦ ಮರಗಳೂ ಕೊಂಬೆಗಳೂ ಉರುಳಿ ಅಥವಾ ಮುರಿದು ಬಿದ್ದ (ಕೆಲವು ರಸ್ತೆಗಳಲ್ಲಿ, ಕೆಲವು ಮನೆಗಳ ಮಾಡಿನ ಮೇಲೆ) ನಿದರ್ಶನಗಳೂ, ಮನೆ ಮಂದಿರಗಳ ಹಲವಾರು ಹಂಚುಗಳು ಹಾರಿ 'ಹೋದ' ದೃಷ್ಟಾಂತಗಳೂ ಇವೆ

ಮರ ಕೊಂಬೆಗಳು ಜರಿದು ಬಿದ್ದೂ, ಗಾಳಿಯ ರಭಸಕ್ಕೆ ತುಂಡಾಗಿಯೂ ವಿದ್ಯುಚ್ಛಕ್ತಿಯ ಸರಿಗೆಗಳು ವ್ಯರ್ಥವಾಗಿ ಹೋದದ್ದರಿಂದ ಅಂದು ಆ ದೀಪಗಳು ಬೆಳಗಲಿಲ್ಲ, ಮರುದಿವಸದಿಂದ ಆ ಸರಿಗೆಗಳ ದುರುಸ್ತಿಯಾಗಿ ಹಲವು ರಸ್ತೆಗಳಲ್ಲಿ, ಆ ದೀಪಗಳು ಬೆಳಗಿದವು

ಬಿರುಗಾಳಿ ಬೀಸುವ ಕಾಲದಲ್ಲಿ "ವಿದ್ಯುಚ್ಛಕ್ತಿ ವಹಿಸಿಕೊಂಡವರು "ಕರೆಂಟ್" ನಿಲ್ಲಿಸಿದ್ದರಿಂದ, ಹಲವಾರು ಪ್ರಾಣಗಳಿಗೆ ಉಂಟಾಗಬಹುದಾಗಿದ್ದ ಅಪಾಯ ತಪ್ಪಿತು

ಇದೇ ಗಾಳಿ ರಾತ್ರಿ ಬೀಸಿದ್ದರೆ ಅನರ್ಥವು ವಿಸ್ತೃತವಾಗುತ್ತಿತ್ತು

ಈ ಪರಿ ಗಾಳಿಯಿಂದ ಹಲವು ಸಾವಿರ ರೂಪಾಯಿಗಳ ನಷ್ಟವಾಗಿದೆ ಇಂಥ ಬಿರುಗಾಳಿಯನ್ನು ತಮ್ಮ ಜೀವಮಾನದಲ್ಲಿ ಒಂದು ದಿವಸ ಕಂಡ ವೃದ್ಧರೊಬ್ಬರೂ ಉಡುಪಿಯಲ್ಲಿ ಸಿಕ್ಕುವ ಹಾಗಿಲ್ಲ!

ಪ್ರತಿಷ್ಠೋತ್ಸವ: ರಥಬೀದಿಯಲ್ಲಿನ ಶ್ರೀ [illegible] ಕುಟುಂಬದ ಪರವಾಗಿ ಕಟ್ಟಿಸಲ್ಪಟ್ಟ ದೇವ ಮಂದಿರದ ಮುಖ್ಯ ಪ್ರತಿಷ್ಠೆಯು ತಾ 24ರಂದು ಪೂರ್ವದ ಶುಭ ಮುಹೂರ್ತದಲ್ಲಿ ಶ್ರೀ ಕಾಶೀಮಠಾಧೀಶ ಶ್ರೀ ಸುಕೃತೀಂದ್ರ ಸ್ವಾಮೀಜಿಯವರಿಂದ ಜರಗಿಸಲ್ಪಟ್ಟಿತು ಶ್ರೀ ಸ್ವಾಮೀಜಿಯವರು ಈ ಸಮಾರಂಭಕ್ಕಾಗಿ ತಾ 23ರಂದು ಸಾಯಂಕಾಲ ಶಿಷ್ಯಸಮೇತರಾಗಿ ಚಿತ್ತೈಸಿದ್ದು ವಿಜೃಂಭಣೆಯಿಂದ ಸ್ವಾಗತಿಸಲ್ಪಟ್ಟು ಮೆರವಣಿಗೆಯಲ್ಲಿ ಕರೆತರಲ್ಪಟ್ಟಿದ್ದರು. ಪ್ರತಿಷ್ಠೆ ಸಂಬಂಧ ಸಮಾರಾಧನ, ಬಡಬಗ್ಗರಿಗೆ ಊಟ, ದಾನ, ಧರ್ಮಗಳು ನೆರವೇರಿಸಲ್ಪಟ್ಟವು

ದ. ಕ ಜಿಲ್ಲಾ ವಾಣಿಜ್ಯ ನೌಕರರ ಪ್ರಥಮ ಪರಿಷತ್ತು ಇದೇ ಬರುವ ಮೇ ೧೮ರ ದಿನ ಮಂಗಳೂರಿನಲ್ಲಿ ಕೆನರಾ ಹೈಸ್ಕೂಲಿನ ಭುವನೇಂದ್ರ ಹಾಲಿನಲ್ಲಿ ಜರಗಲಿದೆ ಈ ಸಮ್ಮೇಳನದ ಉದ್ಘಾಟನೆಯನ್ನು ಮದರಾಸು ಸರಕಾರದ ಮಾನ್ಯ ಮಜೂರ ಮಂತ್ರಿ ಡಾ। ಟಿ ಎಸ್ ಎಸ್ ರಾಜನ್‌ರು ಮಾಡುವಂತೆ ಕೇಳಿಕೊಳ್ಳಲಾಗಿದೆ ಅಧ್ಯಕ್ಷಸ್ಥಾನವನ್ನು ಶ್ರೀ। ಸೂರ್ಯನಾರಾಯಣ ರಾವ್, ಎಂ ಎಲ್ ಎ ಇವರು ವಹಿಸಲಿರುವರು ಇದಕ್ಕೆ ಮಹಾಜನರೂ, ವಾಣಿಜ್ಯ ನೌಕರರೂ ಸರ್ವ ರೀತಿಯಿಂದಲೂ ಸಹಕರಿಸಿ ಈ ಸಮ್ಮೇಲನವನ್ನು ಯಶಸ್ವಿಯಾಗಿ ಮಾಡಬೇಕೆಂದು ನಮ್ಮ ಸವಿನಯಪೂರ್ವಕ ಕೇಳಿಕೆ.

ಕಾರ್ಯದರ್ಶಿ, ಸ್ವಾಗತ ಸಮಿತಿ.

ಅಂಚೆ ಮಂದಿಯ ಮಹಾಸಭೆ: ಕಳೆದ ತಾ. ೧೩ನೇ ಆದಿತ್ಯವಾರ ಮಂಗಳೂರು ಜಿಲ್ಲಾ ಪೋಸ್ಟ್‌ಮಾಸ್ಟರ್ ಶ್ರೀ. ಬಿ. ಕೇಶವರಾಯರ ಅಧ್ಯಕ್ಷತೆಯಲ್ಲಿ ಜರಗಿದ ಮದರಾಸು ಪ್ರಾಂತೀಯ ಪೋಸ್ಟ್‌ಮೇನ್ ಸಂಘದ ದಕ್ಷಿಣ ಕನ್ನಡ ಶಾಖೆಯ ಮಹಾಸಭೆಯ ವರದಿ ಹೀಗಿದೆ.—ಸಂಘದ ಮುಂಚಿನ ಕಾರ್ಯದರ್ಶಿಗಳಾದ ಶ್ರೀ. ಜಿ. ಸೋಮಯ್ಯನವರೂ ಶ್ರೀ. ಬಿ. ಕೇಶವರಾಯರೂ ಸಂಘದ ವಿಷಯವಾಗಿ ಭಾಷಣ ಮಾಡಿದ ನಂತರ ಕೆಳ ಕಾಣಿಸಿದವರನ್ನು ಕಾರ್ಯಕಾರಿ ಮಂಡಲಿಯ ಸದಸ್ಯರನ್ನಾಗಿ ಚುನಾಯಿಸಲಾಯಿತು ಶ್ರೀ ಬಿ. ಎಸ್. ಭಾಸ್ಕರ ರೈ, ಬಿ ಎ ,ಎಲ್ ಎಲ್ ಬಿ, ಎಡ್ವೊಕೇಟ್, ಅಧ್ಯಕ್ಷ, ಶ್ರೀ ಜಿ ಸೋಮಯ್ಯ ಮತ್ತು ಮಿ. ಶೇಕ್ ಇಬ್ರಾಹಿಮ್, ಉಪಾಧ್ಯಕ್ಷರು, ಮಿ. ರಾಬರ್ಟ್ ಸಿಕ್ವೇರ, ಕಾರ್ಯದರ್ಶಿ, ಶ್ರೀ ಎ ಬಾಬು ಮತ್ತು ಮಿ ಪಿ ಮಹಮ್ಮದ್, ಉಪ ಕಾರ್ಯದರ್ಶಿಗಳು, ಮಿ. ಎಮ್ ಯೂಸುಫ್ ಖಾನ್, ಕೋಶಾಧಿಕಾರಿ

ಕಾರ್ಕಳ ಗೌಡಸಾರಸ್ವತ ಬ್ರಾಹ್ಮಣ ಸಮಾಜಕ್ಕೆ ಸೇರಿದ ಕಾರ್ಕಳ ಶ್ರೀ ವೆಂಕಟರಮಣ ದೇವಸ್ಥಾನದ ಪಟ್ಟದ ದೇವರ ಹೊಸತಾಗಿ ತಯಾರಿಸ[illegible] ಕೆತ್ತನೆಗಳಿಂದ ಸುಶೋಭಿತವಾದ [illegible] ಕಲಾತ್ಮಕ ಒಂದು [illegible] ಸ್ವರ್ಣಪೀಠದ ಪ್ರತಿಷ್ಠಾಪನಾ ವಿಧಿ ಮತ್ತು ತತ್ಸಂಬಂಧವಾದ ಮಹೋತ್ಸವಾದಿಗಳು ಇದೇ ಬರುವ ಗುರುವಾರ ತಾ. ೮ಕ್ಕೆ ಮಧ್ಯಾಹ್ನ [illegible] ಸಮಯ ಸುಮುಹೂರ್ತದಲ್ಲಿ ನಡೆಸುವದೆಂದು ಬಜಕ್ಕ[illegible]ದಕ್ಕೆ ಈ ಮೂಲಕ ಸಂತೋಷ ತಿಳಿಸಲಾಗುತ್ತದೆ



ಉಕ್ಕಿ ಬರುವ ಕೆಮ್ಮನ್ನು
ಶಾಂತಮಾಡಿ ಗುಣಪಡಿಸುತ್ತದೆ

ಪೆಪ್ಸ್ ವಿಷಹಾರಿ ಶ್ವಾಸನೀಯ ಮಾತ್ರೆಗಳು ಕೆಮ್ಮನ್ನು ಗುಣಪಡಿಸಿ ಬಾತುಹೋದ ಗಂಟಲು ಚರ್ಮವನ್ನು ಗುಣಪಡಿಸಿ ಕಫವನ್ನು ಸಡಲಿಸಿ ಮುಂದೆ ತೊಂದರೆಯಾಗದಂತೆ ನೋಡುತ್ತದೆ.

ಶೀತ, ಗಂಟಲು ಬೇನೆ, ಕೆಮ್ಮು, ಬ್ರೊಂಕೈಟಿಸ್, ಇನಫ್ಲುಯೆಂಜಾ, ಮತ್ತು ಇತರ ಎಲ್ಲಾ ಶ್ವಾಸಕೋಶ ಮತ್ತು ಎದೆಯ ಬೇನೆಗಳನ್ನು ಪೆಪ್ಸ್ ನಿವಾರಿಸುತ್ತದೆ.

ಪೆಪ್ಸನ್ನು ಸೇವಿಸಿರಿ



No 2

PEPS

ವಿಷಹಾರಿ ಶ್ವಾಸನೀಯ ಮಾತ್ರೆಗಳು
ಯಾವಾಗಲೂ ದೊರಕುತ್ತದೆ

ನಾಗರೀಕ ವ್ಯವಹಾರ

ಆಹಾರ ಕೊರತೆಯ ಈ ಕಾಲದಲ್ಲಿ ಅನಾರೋಗ್ಯಕರ ವಸ್ತುಗಳ ಸೇವನೆಯಿಂದ ಉಂಟಾಗುವ ಹಾನಿ ಅಷ್ಟಿಷ್ಟೆಂದು ಹೇಳಬರುವುದಿಲ್ಲ. ಸಾಕಷ್ಟು ಮತ್ತು ಆವಶ್ಯಕವಿರುವ ವಸ್ತುಗಳು ತಕ್ಕ ಪ್ರಮಾಣದಲ್ಲಿ ದೊರೆಯದಿದ್ದುದರಿಂದ ಅವುಗಳ ಅಲ್ಪ ಸೇವನೆಯಿಂದ ಸಹಜವಾಗಿ ಮನುಷ್ಯರ ಶರೀರದಲ್ಲಿ ರೋಗ ರುಜಿನಗಳನ್ನು ಪ್ರತಿಬಂಧಿಸುವ ಶಕ್ತಿಯು ಬಹಳ ಕಡಿಮೆಯಾಗುವುದು.

ಇಂತಹ ಪರಿಸ್ಥಿತಿಯಲ್ಲಿ ಸಾರ್ವಜನಿಕ ಸರಬರಾಯಿಗೆ ಮಾರಲ್ಪಡುವ ತಿಂಡಿ ತೀರ್ಥಗಳು ಕೃತ್ರಿಮ ಆಹಾರ, ಸತ್ವದವಾದರೆ ಅವುಗಳು ಹಾಗಾಗದಂತೆ ಯೋಗ್ಯ ನಿರೀಕ್ಷಣೆಯಿಂದ ತಡೆಗಟ್ಟುವುದು ನಗರಾಡಳಿತದ ಮುಖ್ಯವಾಗಿ ಆರೋಗ್ಯ ಖಾತೆಯ ಕರ್ತವ್ಯವಾಗಿದೆ

ಈಚೆಗೆ ನಗರದಲ್ಲಿ ಮಾತ್ರವಲ್ಲ ಇಡೀ ಜಿಲ್ಲೆಯಲ್ಲಿ ಸಕ್ಕರೆ ತುಪ್ಪಗಳ ಸ್ಥಾನದಲ್ಲಿ [illegible] ಹಾಲು, ಎಣ್ಣೆ, ಹಿಟ್ಟುಗಳ ಸ್ಥಾನದಲ್ಲಿಯೂ, ಕೃತಿಮ ಪದಾರ್ಥಗಳನ್ನುಪಯೋಗಿಸುವ ರೂಢಿಯಾಗಿದೆಯೆಂದು ತಿಳಿದುಬರುತ್ತದೆ ಈ ಅಕ್ಷಮ್ಯ ವ್ಯವಹಾರಕ್ಕೆ ಬಹುಮಟ್ಟಿಗೆ ಸರಕಾರವೇ ಕಾರಣವೆನ್ನಬಹುದು. ಕಾರಣ ಅನಾರೋಗ್ಯಕರ ವಸ್ತುಗಳ ಮಾರಾಟವು ಆವಶ್ಯಕ ವಸ್ತುಗಳ ಕೊರತೆಯ ಈ ಕಾಲದಲ್ಲಿ ಸ್ವಾಭಾವಿಕವಾದುದು. ಆದರೆ ಜನತೆಯನ್ನು ಈ ಕೇಡಿನಿಂದ ತಪ್ಪಿಸಲು ಪ್ರಯತ್ನಗಳಾಗಬೇಕಾದುದೂ ಅತ್ಯಾವಶ್ಯಕ [illegible] ಪರಿಹಾರಕ್ಕಿಂತ ಪ್ರತಿಬಂಧಕವು ಉತ್ತಮ ವಿಧಾನ. ಅನಾರೋಗ್ಯಕರ ವಸ್ತು ಉಪಯೋಗಿಸಿದ ಜನತೆ ಯಾವುದಾದರೂ ಸಾಂಕ್ರಾಮಿಕಕ್ಕೆ ತುತ್ತಾಯಿತೆಂದರೆ ಆರೋಗ್ಯ ಖಾತೆಗೆ ಗಂಭೀರ ಪರಿಸ್ಥಿತಿಯನ್ನೆದುರಿಸುವ ಪ್ರಸಂಗವುಂಟಾಗುವುದು ಯೋಗ್ಯ ಪರಿಹಾರಕ ಔಷಧಗಳಿಗೂ ಈಗ ಕೊರತೆಯೇ ಇದೆ

ಸಿಹಿ ತಿಂಡಿಗಳಲ್ಲಿ [illegible] ಕಾಯಿಸಿದವುಗಳಲ್ಲಿ [illegible]ಗಳನ್ನೂ ಪಾನೀಯಗಳಲ್ಲಿ ರಾಸಾಯನಿಕ ವರ್ಣ ಚೂರ್ಣಗಳನ್ನೂ, ಕಾಫಿ, ಟೀ ಹುಡಿಗಳಲ್ಲಿ ಕೃತಕ ಬೀಜ ಹುಡಿಗಳನ್ನೂ ಸೇರಿಸುವುದು [illegible] ಅಪಾಯಕರ ಪರಿಸ್ಥಿತಿಯೇ ಎನ್ನಬೇಕು ಅವುಗಳಿಂದಾಗುವ ಹಾನಿಯ ಕುರಿತು ಆರೋಗ್ಯ ಖಾತೆಯವರು ಯೋಗ್ಯ ಪ್ರಚಾರ ಮಾಡುವುದರಿಂದಲೂ ಸತ್ಪರಿಣಾಮವಿದೆ

ಮಿಲ್ ಬಟ್ಟೆ ಲೈಸನ್ಸುಗಳು: ೧೯೪೬-೪೭ನೇ ವರ್ಷದಲ್ಲಿದ್ದ ಮಿಲ್ ಬಟ್ಟೆ ಲೈಸನ್ಸುಗಳನ್ನು ರದ್ದುಪಡಿಸಕೂಡದಾಗಿ ಮದ್ರಾಸು ಗವರ್ನಮೆಂಟಿನ ಇಂಡಸ್ಟ್ರೀಸ್ ಇಲಾಖೆಯ ಈಗಿನ ಮಾನ್ಯ ಮಂತ್ರಿ ಶ್ರೀ ಎಚ್. ಸೀತಾರಾಮ ರೆಡ್ಡಿರವರ ಬಳಿ, ದಕ್ಷಿಣ ಕನ್ನಡ ಜಿಲ್ಲಾ ಜವುಳಿ ವ್ಯಾಪಾರಸ್ಥರ ಸಂಘದ ಕಡೆಯಿಂದ ಇದೇ ತಿಂಗಳ ತಾ. ೧೬ರಲ್ಲಿ ಡೆಪ್ಯುಟೇಶನ್ ತೆರಳಿ ಮಿಲ್ ಬಟ್ಟೆ ವ್ಯಾಪಾರಸ್ಥರ ಹಾಲೆತ್ತುಪಾಲೆಗಳನ್ನು ಅರಿಕೆ ಮಾಡಿಕೊಂಡಲ್ಲಿ ಗವರ್ನಮೆಂಟಿನವರ ಈಗಿನ ಸ್ಕೀಮು ಮಂಜೂರು ಆಗುವ ತನಕ, ಈ ಜಿಲ್ಲೆಯ ಈಗಿನ ಮಿಲ್ ಬಟ್ಟೆ ವ್ಯಾಪಾರಸ್ಥರೆಲ್ಲರ ಲೈಸನ್ಸುಗಳನ್ನೂ ರಿನ್ಯೂವಲ್ ಮಾಡುವ ಹಾಗೆ, ಜಿಲ್ಲಾ ಕಲೆಕ್ಟರರವರಿಗೆ ತಿಳಿಸುವದಾಗಿ ಅಭಯ ಕೊಟ್ಟಿರುವರೆಂದು ಸಂಘದ ಒನರರಿ ಸೆಕ್ರೆಟರಿಯವರಿಂದ ಮದರಾಸಿನಿಂದ ತಂತಿ ಬಂದಿರುವುದಾಗಿ ಸಂಘದ ಮೆನೇಜರರು ತಿಳಿಸುತ್ತಾರೆ.

ನವ ಶಿಕ್ಷಿತ ನಾಗರೀಕತೆಗೆ ಯೋಗ್ಯರಾಗಿ ಬಾಳಿರಿ

ಅನಾಚಾರದಿಂದ ಧರ್ಮನಾಶ ಮಾಡದಿರಿ

ಸ್ವಾಮಿ ಶಿವಾನಂದರ ಬೋಧಾಮೃತ

ಹೃಷಿಕೇಶ ಹಿಮಾಲಯದ ತಮ್ಮ ಆಶ್ರಮದಿಂದ ಸ್ವಾಮಿ ಶಿವಾನಂದ ಸರಸ್ವತಿಯವರು ಹೀಗೆ ಸಂದೇಶವೀಯುತ್ತಾರೆ:

ನಿಮ್ಮನ್ನೆಲ್ಲ ಮುಸುಕಿರುವ ಈ ಮಾಯಾ ಕನಸಿನಿಂದ ಎಚ್ಚೆತ್ತುಕೊಳ್ಳಿರಿ. ದುರ್ಮಾರ್ಗ ಬುದ್ಧಿಯು ನಿಮ್ಮನ್ನು ಹಿಡಕೊಂಡಿರುವ ಹಿಡಿಯಿಂದ ತಪ್ಪಿಸಿಕೊಳ್ಳಿರಿ. ನೀವೆಲ್ಲರೂ ಜಗತ್ತಿನ ಅತ್ಯಮೋಘ ನಾಗರೀಕತೆಯ ಹಕ್ಕು ಬಾಧ್ಯಸ್ಥರು. ಇದು ನಿಮ್ಮ ತಾಳ್ಮೆ ತಪಸ್ಸುಗಳ ಪವಿತ್ರ ನಾಡು. ಈ ಪ್ರಾಚೀನ ಆಸ್ತಿಯನ್ನು ಗಳಿಸಲು ಯೋಗ್ಯರಾಗಿರಿ, ನಿಜವಾದ ಪುರುಷರಾಗಿರಿ. ದಾವರಹೀಮರು ಓರ್ವನೆ ಎಂದು ತಿಳಿಸಿದ ನಿಮ್ಮ ಪ್ರಾಚೀನ ದೇವತಾ ಮನುಷ್ಯರ ಕೀರ್ತಿಗೆ ಶೋಭೆಯನ್ನು ಕೊಡಿರಿ

ಹಿಂಸೆ ರಕ್ತಪಾತಗಳಲ್ಲಿ ಕೀರ್ತಿಯಿಲ್ಲ. ಸತ್ಕರ್ಮ, ದೇವತಾರ್ಚನೆಗಳಲ್ಲಿ ಕೀರ್ತಿಯು ಅಡಗಿದೆ. "ಚಳ್ಳೀಯುದನ್ನು ಮಾಡಿರಿ, ಅಂಥವರನ್ನು ದೇವರು ಪ್ರೀತಿಸುವನು." ಹೀಗೆಂದು ಇಸ್ಲಾಮ್ ಧರ್ಮವು ತಿಳಿಸುತ್ತದೆ "ಪರೋಪಕಾರಾಯ ಪುಣ್ಯಂ, ಪಾಪಾಯ ಪರಪೀಡನಂ" ಎಂದು ವೇದ ವಚನವಿದೆ ಅಂದರೆ ಇತರರಿಗೆ ಸಹಾಯ ಉಪಕಾರಗಳನ್ನು ಮಾಡಿದರೆ ಪುಣ್ಯವೂ, ಇತರರನ್ನು ಪೀಡಿಸಿದರೆ ಪಾಪವೂ ಉಂಟಾಗುವುದೆಂದರ್ಥ.

ಅವಿಚಾರದಿಂದ ವರ್ತಿಸಬೇಡಿರಿ ಶತಮಾನಗಳಿಂದ ಎಲ್ಲ ಮಸೀದಿ ಮಂದಿರಗಳೂ, ಮೌಲವಿ, ಮಹಾತ್ಮರುಗಳೂ, ಪೀರ್ ಪಂಡಿತರುಗಳೂ, ನೆಲ್ಮೆಯಿಂದ ವಾಸಿಸಿದರೂ ಅಂತಹ ನಾಡಿಗೆ ಅಪಮಾನವನ್ನೂ ಅಪಕೀರ್ತಿಯನ್ನೂ ತಂದೊಡ್ಡದಿರಿ

ಅವಿಚಾರದ ಹಿಂಸೆ

ಮಹಮ್ಮದನ ಕೊರಾನಿನ, ನಾನಕನ ಗ್ರಂಥ ಸಾಹೇಬದ, ಬುದ್ಧನ ಮತ ಬೈಬಲಿನ ಮಕ್ಕಳೇ ನೀವೆಲ್ಲರೂ ಒಂದಾಗಿ ವರ್ತಿಸಿರಿ ದ್ವೇಷಾಸೂಯೆಯ ನಿರರ್ಥಕ ಕಲಹದಲ್ಲಿ ಮಗ್ನರಾಗಬೇಡಿರಿ ಶ್ರೇಷ್ಠನಾದ ಅಲ್ಲಾನು ಶಾಂತಿಯ ನೆಲೆಯಾಗಿರುವನು ಶಾಂತಿಯ ಮೂಲವೂ ಅವನೇ. ಆತ್ಮನು ನಿರತ ಶಾಂತಿಯುಕ್ತನೆಂದು ಹೇಳಲ್ಪಟ್ಟಿದೆ. ಈ ಶಾಂತಿಯನ್ನು ಭೂಮಿಯ ಮೇಲೆ ಪಸರಿಸಿರಿ. ನಿಮ್ಮ ಶಾಂತಿಯನ್ನು ಅಪಹರಿಸುವವನನ್ನು ಧೈರ್ಯ ಸ್ಥೈರ್ಯದಿಂದೆದುರಿಸಿರಿ ಧೈರ್ಯವು ವೇದಾಂತದ ತಳಹದಿ. ಗೀತೆಯ ಗುಟ್ಟು ಅದೇ ಆಗಿದೆ. ಹೇಡಿತನದಿಂದ ವೇದಾಂತವನ್ನು ನಾಚಿಗೆಗೀಡುಮಾಡದಿರಿ. ಇಸ್ಲಾಮು ವಿಶ್ವ ಬಾಂಧವ್ಯವನ್ನು ಸಾರುತ್ತದೆ. ಅದನ್ನು ಪೂರೈಸಲು ಪ್ರಯತ್ನಿಸಿರಿ ಅವಿಚಾರದ ಹಿಂಸೆಯಿಂದ ಇಸ್ಲಾಮನ್ನು ಕೊಲ್ಲದಿರಿ

ನಿರತ ಪ್ರಾರ್ಥನೆ

ದೇವರಿಗೆ ನಿತ್ಯವೂ ಪ್ರಾರ್ಥಿಸಿರಿ ಈಗಾಗಲೇ ಪ್ರಾರ್ಥಿಸುವವರು ಅದನ್ನು ಇನ್ನು ಹೆಚ್ಚು ಮಾಡಿರಿ. ಇತರರು ಕೂಡಲೇ ಪ್ರಾರ್ಥನೆಗಾರಂಭಿಸಿರಿ ಪಂಜಾಬಾಗಲಿ, ಇಡೀ ಭಾರತವೇ ಆಗಲಿ ದೇವರನ್ನು ಎಂದಿಗೂ ಮರೆಯುವಂತಿಲ್ಲ ಎಲ್ಲರೂ ಎದ್ದೇಳಿರಿ ದೇವತ್ವದ ಮಕ್ಕಳೇ ಎದ್ದೇಳಿರಿ ಲೌಕಿಕತೆಯನ್ನು ಬಿಟ್ಟುಬಿಡಿರಿ ದ್ವೇಷವನ್ನು ತ್ಯಜಿಸಿರಿ ಅಹಿಂಸೆಯನ್ನು ತೊಲಗಿಸಿರಿ ಭೂಲೋಕದ ಅಲ್ಪ ಸಂಪತ್ತಿಗಾಗಿ ಹಾತೊರೆಯಬೇಡಿರಿ ಪ್ರೀತಿ ಮಾಡುವರಾಗಿರಿ, ಒಳ್ಳೆಯವರಾಗಿರಿ ಅನಂತವೂ ಅಮರವೂ ಆದ ಸುಖ ಸಾಮ್ರಾಜ್ಯಕ್ಕಾಗಿ ಸಾಧಿಸಿರಿ.

ಬುದ್ಧ, ಶಂಕರ, ನಾನಕ್ ಮಹಮ್ಮದ, ಕ್ರಿಸ್ತ ಜೊರಾಸ್ಟರ್ ರಾಮ ಕೃಷ್ಣ ಸ್ಯೆನಾಥನ ಆಶೀರ್ವಾದಗಳು ನಿಮ್ಮನ್ನು ಒಂದು ಬಾಂಧವ್ಯದಲ್ಲಿ ಒಟ್ಟುಗೂಡಿಸಲಿ

ತೋರಿಕೆಯ ಭಿನ್ನತೆಯಲ್ಲಿ ಅಮೋಘ ಐಕ್ಯತೆಯಿದೆಯೆಂಬುದನ್ನು ಜಗತ್ತಿಗೆ ತೋರಿಸಿ ಕೊಟ್ಟು ನಿಮ್ಮ ಮಾತೃಭೂಮಿಯ ಪವಿತ್ರ ಪ್ರಭಾವವನ್ನು ಪ್ರಕಟಿಸಿರಿ

For IMMEDIATE SALE

Offers are invited for a tiled house with compound 16 cents, at Pentlandpet in the vicinity of the Municipal Girls' School (2nd compound to the North of the Municipal well) on the main road leading to the Urva Market, complete with a set of 6 rooms, verandah, portico, kitchen, bathroom, cow-shed, etc. belonging to Mrs. Catherine Colaco D'Souza.

Apply to —

Mr. J. P. D'Souza,
temporarily residing at
BELTHANGADY (S. K.)

or

Mr. U. Ganesh Shenai,
C/o Saraswathi
Printing Works, Ltd.,
MANGALORE.

★ ಸರ್ಪ ★

ಕಡಿತಕ್ಕೆ ಪರಿಹಾರ

ಮೈಸೂರು ಜಿಲ್ಲೆಯ ಹುಣಸೂರಿನ ಪೋಸ್ಟ್ ಮಾಸ್ತರರಾಗಿರುವ ಶ್ರೀ ರಾಮಚಂದ್ರ ಅಯ್ಯರ್ ಇವರಲ್ಲಿ ವಿಷ ಹಾವು ಕಡಿತಗಳನ್ನು ಗುಣಪಡಿಸುವ ವಿಶೇಷ ಶಕ್ತಿ ಇದ್ದು ಅದನ್ನವರು ಜನಸೇವೆಗೆ ನೀಡಲು ಮುಂದೆ ಬಂದಿದ್ದಾರೆ

ಯಾರಾದರೂ ಸರ್ಪದಿಂದ ಕಡಿಯಲ್ಪಟ್ಟ ಕ್ಷಣ ಆ ವ್ಯಕ್ತಿಯ ಹೆಸರು ಪ್ರಾಯಗಳನ್ನು ತಂತಿಮೂಲಕ್ಕವೇ ಲ್ಯಂಡ ಪೋಸ್ಟ್ ಮಾಸ್ತರರಿಗೆ ತಿಳಿಸುವುದು. ತಂತಿ ಮುಟ್ಟುವ ಕಾಲಕ್ಕೆ ಕಡಿಯಲ್ಪಟ್ಟ ವ್ಯಕ್ತಿ ಜೀವಂತವಿರಬೇಕು. ಈ ಸೇವೆಯು ಧರ್ಮಾರ್ಥವಾಗಿ ಮಾಡಲಾಗುವುದು.

ಇಂಗ್ಲೆಂಡಿನಲ್ಲಿ ಪ್ರಯೋಗಾರ್ಥ ವಿವಾಹಗಳು

ವಿವಾಹ ವಿಚ್ಛೇದದ ಗಂಡಾಂತರ

ಓರ್ವ ತಜ್ಞ ನ್ಯಾಯಾಧೀಶರ ಎಚ್ಚರಿಕೆ

ಇಂಗ್ಲೆಂಡಿನ ವಿವಾಹ ವಿಚ್ಛೇದ ವಿಚಾರಣಾ ಕಮಿಟಿಯ ಅಧ್ಯಕ್ಷ ನ್ಯಾಯಾಧೀಶ ಡೆನ್ನಿಂಗ್ ಅವರು ಕಿಂಗ್ಸ್ ಕೊಲೇಜಿನ ವಿದ್ಯಾರ್ಥಿ ಸಭೆಯಲ್ಲಿ ಭಾಷಣ ಕೊಡುತ್ತ ತಮ್ಮ ದೇಶದ ಜನರು ಸದ್ಯದಲ್ಲೇ ಪ್ರಯೋಗ ವಿವಾಹದ ಪರಿಸ್ಥಿತಿಗೆ ಮುಟ್ಟುವರೆಂದು ಎಚ್ಚರಿಸಿದರು

"ವಿವಾಹ ವಿಚ್ಛೇದವನ್ನು ಸುಲಭವಾಗಿ ಎರಡು ಪಕ್ಷದವರಲ್ಲಿ ಏರ್ಪಡಿಸಬಹುದಾದ ವಿಧಾನವೆಂದು ಜನರು ತಿಳಕೊಳ್ಳಲಾರಂಭಿಸಿದ್ದಾರೆ ಇದರ ಪರಿಣಾಮವಾಗಿ ತರುಣ ತರುಣಿಯರು ಒಂದು ಪ್ರಯೋಗ ನೋಡೋಣ, ಸರಿಹೋದರೆ ಇರಲಿ, ಇಲ್ಲದಿದ್ದರೆ ಬೇರ್ಪಡೋಣ" ಎಂಬ ಅಭಿಪ್ರಾಯವನ್ನು ಮಾಡಿಕೊಳ್ಳ ಹತ್ತಿದ್ದಾರೆ ಕಾರಣ ವಿವಾಹ ವಿಚ್ಛೇದನ ಪತ್ರವು ಅವರಿಗೆ ಸುಲಭವಾಗಿ ದೊರೆಯುವಂತಾಗಿದೆ

"ಹಲವು ಸಂದರ್ಭದಲ್ಲಿ ವಿಚ್ಛೇದನಕ್ಕೆ ಅರ್ಜಿ ಹಾಕುವವರು ಯಾವುದಾದರೂ ಒಂದು ಕಡೆಯವರು. ಇನ್ನೊಂದು ಕಡೆಯವರು ವಿಚಾರಣೆಗೆ ಹಾಜರಾಗುವುದೇ ಇಲ್ಲ ಇಂತಹ ಪರಿಸ್ಥಿತಿಯಲ್ಲಿ ಕೋರ್ಟಿನವರು ಬೇಗನೆ ವಿಚ್ಛೇದ ಪತ್ರ ಕೊಡುವರು. ಪರಸ್ಪರ ಇಚ್ಛೆಯಿಂದ ಏರ್ಪಡುವುದಕ್ಕೆ ನ್ಯಾಯ ಸಮ್ಮತವು ಒಂದು ಹೆಸರಿಗೆ ಮಾತ್ರ ಇರುವ [illegible] ಎಂದು ಹಲವರ ಅಭಿಮತವಿದೆ

"ಈ ಕುರಿತು [illegible] ಅಭಿಪ್ರಾಯಗಳನ್ನು [illegible] ತಂದೆತಾಯಿಗಳ [illegible] ರುವ ಮಕ್ಕಳ [illegible] ಅತ್ಯಂತ [illegible] ಮಕ್ಕಳ [illegible] ಅವಿಭಕ್ತ ಕುಟುಂಬದ [illegible] ತಾಯಿ ತಂದೆಗಳು ಈ ದೃಷ್ಟಿಯಿಂದ ಪ್ರತ್ಯೇಕವಾಗಿ ಎಂದಿಗೂ ಹಕ್ಕುಳ್ಳವರಾಗಿಲ್ಲ. ಒಂದು ವಿಚ್ಛೇದವು ಅನಿವಾರ್ಯವಾದ ಪಕ್ಷದಲ್ಲಿ ಮಕ್ಕಳ [illegible] ನಶ ಬಿಡುವುದೇ ಒಳಿತು

ಕನ್ನಡ ಟೈಪ್‌ರೈಟಿಂಗ್ ಯಂತ್ರ

ಪ್ರಪಂಚದಲ್ಲೇ ಹೊಸ ಶೋಧನೆ

ಇಂಗ್ಲಿಷ್ ಟ್ಯಾಪ್‌ರ್ಯಾಟಿಂಗ್ ಯಂತ್ರಕ್ಕೆ ಕನ್ನಡ ಲಿಪಿಯ ಮೊಳೆ ಜೋಡಿಸಿ ಹಿಂದೆ ಒಂದು ಯಂತ್ರ ತಯಾರಿಸಲಾಗಿತ್ತು. ಆದರೆ ಮೈಸೂರಿನ ಶ್ರೀ ಕೆ ಅನಂತ ಸುಬ್ಬರಾಯರೆಂಬವರು 'ನಮ್ಮ ಕನ್ನಡ ಲಿಪಿ ಕ್ರಮಕ್ಕೆ ತಕ್ಕಂಥ ಟ್ಯಾಪ್‌ರ್ಯಾಟರನ್ನು ತಯಾರಿಸಿ ಕೊಳ್ಳುವುದು ಸಾಧ್ಯವಿದೆ' ಎಂದು ತಿಳಿಸುತ್ತಾರೆ ಈಗ ಸದ್ಯಕ್ಕೆ ನಮ್ಮಲ್ಲಿ ಪ್ರಚಾರದಲ್ಲಿರುವ ಟೈಪ್‌ರೈಟರಿನ ಮೂಲಕವೇ ನಮ್ಮ ಕನ್ನಡದಲ್ಲಿಯೂ ಅದಷ್ಟು ಸುಲಭವಾಗಿ ಟೈಪ್ ಮಾಡುವಂತೆ ಇದರಲ್ಲಿ ಮಾಡಲಾಗಿದೆ ಎಂದೂ ಹಲವು ವರ್ಷಗಳ ಶ್ರಮ, ನೂರಾರು ಪ್ರಯೋಗ ಸಾವಿರಾರು ರೂಪಾಯಿಯನ್ನು ವೆಚ್ಚ ಮಾಡಿ ಈ ಯೋಜನೆ ಮಾಡಲಾಗಿದೆ ಎಂದೂ ತಿಳಿದು ಬರುತ್ತದೆ.

ಈ ಟೈಪ್ ರೈಟರಿನ ವಿಶೇಷ ಸೌಕರ್ಯಗಳು

ಇದರ ಅಕ್ಷರಗಳೆಲ್ಲಾ ಅಚ್ಚಿನ ಅಕ್ಷರಗಳೇ ಆಗಿವೆ

ಕನ್ನಡ ಬರವಣಿಗೆಯ ಕ್ರಮಕ್ಕನುಸಾರವಾಗಿ ಅಕ್ಷರಗಳನ್ನು ಟೈಪ್ ಮಾಡುವ ಏರ್ಪಾಡಿದೆ

ಇದರಲ್ಲಿನ ಅಕ್ಷರಗಳನ್ನು ಹೆಚ್ಚಾಗಿ ಒಂದೊಂದೇ ಟೈಪ್ ಮಾಡಬಹುದು. ಈ ಅನುಕೂಲ ಬೇರೆ ಯಾವುದರಲ್ಲೂ ಇಲ್ಲ. (ಇತರ ಯಂತ್ರಗಳಲ್ಲಿ ಪ್ರತಿಯೊಂದು ಅಕ್ಷರವನ್ನು ಎರಡೆರಡು ಸಲ ಟೈಪ್ ಮಾಡಬೇಕಾಗುತ್ತದೆ)

ಈ ಟೈಪ್ ರೈಟಿಂಗ್ ಕ್ರಮದಲ್ಲಿ ಯಂತ್ರವನ್ನು ಲೇಶವೂ ಬದಲಾಯಿಸಿ ಕೆಡಿಸುವುದಿಲ್ಲ

ಇದಕ್ಕೆ ಮಾಡಿರುವ 'ವಿಶೇಷ ಜೋಡಣೆ'ಯ ಸಹಾಯದಿಂದ ಒಂದೇ ಯಂತ್ರದಲ್ಲಿ ಎಷ್ಟು ಭಾಷೆಗಳಲ್ಲಿ ಬೇಕಾದರೂ ಟೈಪ್ ಮಾಡುವ ಏರ್ಪಾಡು ಮಾಡಲಾಗಿದೆ 4 ನಿಮಿಷಗಳಲ್ಲಿ ಅಕ್ಷರಗಳನ್ನು ಜೋಡಿಸಿ ತೆಗೆಯಬಹುದು. ವಸಂತದಲ್ಲೇ ಹೊಸ ಪರಿಶೋಧನೆಯಿದು.

ಮುಂದೆ ಲಿಪಿ ಬದಲಾವಣೆಯಾದರೂ [illegible]

ಇಂಗ್ಲಿಷಿನಂತೆಯೇ ನಮ್ಮ ಕನ್ನಡ ಲಿಪಿ ಕ್ರಮದಲ್ಲೇ ಹೆಚ್ಚು ವೇಗ ದೊರೆಯುವುದರಿಂದ ಅದಕ್ಕೆ ಅನುಸಾರವಾಗಿ ಈ ಟೈಪ್‌ರೈಟರ್ ತಯಾರಿಸಲಾಗಿದೆ

ಇಂಗ್ಲಿಷ್ ಟೈಪ್‌ರೈಟಿಂಗ್ ಬಲ್ಲವರೆಲ್ಲ ಇದನ್ನು ಸುಲಭವಾಗಿ ಟೈಪ್ ಮಾಡಬಹುದು

[illegible]

ಪುಸ್ತಕ ಪರಿಚಯ

Srimad Bhagavadgita or The Lord's Song ಸಂಸ್ಕೃತ ಲಿಪಿಯಲ್ಲಿ ಮೂಲ ಶ್ಲೋಕಗಳ ನಿರೂಪ ಮತ್ತು ಅದರೊಂದಿಗೆ ಸರಳ ಇಂಗ್ಲಿಷ್ ಭಾಷಾಂತರ ಕರ್ತೃಗಳು ಮತ್ತು ಪ್ರಕಾಶಕರು ಶ್ರೀ ಮುದ್ಗಲ್ ರಾಮಚಂದ್ರ ಗೀತಪ್ರಿಯ, 1ನೇ ಕ್ರಾಸ್ ರೋಡ್ ಚಾಮರಾಜಪೇಟೆ ಬೆಂಗಳೂರು ನಗರ ಕ್ರೌನ್ 1/16 ಆಕೃತಿ ಸಂಸ್ಕೃತ ಭಾಷಾಂತರದ ಇಂಗ್ಲಿಷ್ ಪಾರಿಭಾಷಿಕ ಶಬ್ದಗಳ ವಿವರಣೆಯೊಳಗೊಂಡಿದೆ ಎ ಬಿ ಸುಬ್ಬಯ್ಯ ಎಂಡ್ ಸನ್ಸ್, ಬೆಂಗಳೂರು ಇವರಲ್ಲಿ ಮಾರಲ್ಪಡುತ್ತಿದೆ

ಇಂಗ್ಲಿಷ್ ಭಾಷೆಯ ಸಾಮಾನ್ಯ ಪರಿಚಯವಿದ್ದವರು ಇದರಲ್ಲಿನ ಸರಳವೂ ಸುಲಭವೂ ಆದ ಭಾಷಾಂತರದಿಂದ ಮಾನವ ಆತ್ಮವಿಜ್ಞಾನದ ಅಮೋಘ ನೀತಿಸೂಕ್ತಗಳನ್ನೂ ಜಗತ್ತಿನ ಮಹೋನ್ನತ ಧರ್ಮವೊಂದರ ಅಂತರಾಳವನ್ನೂ ಅರ್ಥಮಾಡಿಕೊಳ್ಳಬಹುದಾಗಿದೆ ಭಾಷಾಂತರಿತ ಶಬ್ದಗಳ ಸರಳ ಪಾರಿಭಾಷಿಕ ಅರ್ಥವಿವರಣೆಯನ್ನೊಳಗೊಂಡಿರುವುದರಿಂದ ಗೀತೆಯ ನೀತಿಮಾರ್ಗವನ್ನು ಸ್ವಾನುಭವ ರೂಪದಿಂದ ಕುಲನಾತ್ಮಕವಾಗಿ ತಿಳಿಕೊಳ್ಳಲು ಅಲ್ಪಸ್ವಲ್ಪ ಆಂಗ್ಲಭಾಷಾ ಪರಿಚಯುಳ್ಳವರಿಗೆ ಅನುಕೂಲವಾಗಿರುವುದು ಚಿಕ್ಕವೂ ಚೊಕ್ಕವೂ ಆಗಿರುವ ಈ ಧರ್ಮಸಾರ ನಿರೂಪದ ಪ್ರತಿಯೊಬ್ಬನ ಬಳಿ ನಿತ್ಯ ಪಠನೆಗೂ ವಿಚಾರವಾಚನೆಗೂ ಇರಬೇಕಾದುದು ಪ್ರಕಾಶಕರ ಯತ್ನಗಳು ಶ್ಲಾಘನೀಯವಾದುವು ಕೆಲವೊಂದು ಅಚ್ಚುದೋಷಗಳನ್ನು ಎರಡನೇ ಮುದ್ರಣದಲ್ಲಿ ತಿದ್ದಲು ಪ್ರಯತ್ನಿಸಬಹುದು

'ನಾಥ'

★

ನರ್ಮದಾ ತೀರದ ನಾಗರೀಕತೆ

ಜಗತ್ತಿನಲ್ಲಿ ಅತೀ ಪ್ರಾಚೀನವಾದ್ದುದು

೫ ಸಾವಿರ ವರ್ಷ ಹಿಂದಿನ ಭಾರತೀಯ ಗಾಜು

೧೯೩೧ರ ವರೆಗೂ ಹಿಂದುಸ್ಥಾನ ನಾಗರಿಕತೆಯ ದೃಷ್ಟಿಯಲ್ಲಿ ಅಷ್ಟೇನೂ ಹಳೆಯದಲ್ಲೆಂಬ ಭಾವನೆ ಪ್ರಚಲಿತವಾಗಿತ್ತು. ಆದರೆ ಆ ವರ್ಷ ಹರಪ್ಪಾ ಮತ್ತು ಮೊಹೆಂಜೊದಾರೊ (ಸಿಂಧು)ಗಳಲ್ಲಿ ಸಿಕ್ಕಿದ ಭೂಗರ್ಭವಾದ ಇತಿಹಾಸ ಪೂರ್ವದ ಪ್ರಾಚೀನ ನಗರಗಳ ಅವಶೇಷಗಳಿಂದ ಈ ದೇಶದ ನಾಗರಿಕತೆ ಕ್ರಿಸ್ತ ಪೂರ್ವ ೩೦೦೦ ವರ್ಷಗಳಷ್ಟು ಹಳೆಯದೂ ಇಜಿಪ್ತ ಮತ್ತು ಇರಾಕ ನಾಗರಿಕತೆಗಳಿಗೆ ಸಮಕಾಲೀನವೂ ಎಂದು ಸಿದ್ಧವಾಯಿತು. ಆದರೆ ಈಗ ಶ್ರೀ ಅಮೃತ ಪಾಂಡ್ಯರು ನರ್ಮದಾ ನದೀ ತೀರದಲ್ಲಿ ನಡೆಸಿದ ಸಂಶೋಧನೆಗಳಿಂದ ರಾಜಪಿಪ್ಪಲ ಸಂಸ್ಥಾನದ ಕೆಲ ಭಾಗಗಳಲ್ಲಿಯೂ ಮಧ್ಯ ಹಿಂದುಸ್ಥಾನದಲ್ಲಿಯೂ ಹರಪ್ಪ ಸಂಸ್ಕೃತಿಗಿಂತಲೂ ಒಂದು ಸಾವಿರ ವರ್ಷ ಹಳೆಯ ನಾಗರಿಕತೆಯೊಂದು ಹಬ್ಬಿತ್ತೆಂದು ವಿದಿತವಾಗಿದೆ. ಲೋಹಯುಗಕ್ಕಿಂತ ಹಿಂದಿನ ನೂತನ ಶಿಲಾಯುಗದ ಮಟ್ಟದ ನಾಗರಿಕತೆಯ ಕಾಲದ ನಗರಗಳಿವೆಂದು ಸಿದ್ಧವಾಗಿದೆ.

ಕೃಷಿ ಮೂಲ

ನರ್ಮದಾ ಸಂಸ್ಕೃತಿಯೆಂದು ಕರೆಯಬಹುದಾದ ಇದ ಕೃಷಿಮೂಲ ಸಂಸ್ಕೃತಿಯೆಂದು ತೋರುತ್ತದೆ. ಆದರ ಕರ್ತೃಗಳಿಗೆ ಲೋಹದ ಉಪಯೋಗ ಗೊತ್ತಿದ್ದಿಲ್ಲವಾದರೂ ಶಿಲಾ ಸಂಸ್ಕೃತಿಯಲ್ಲಿ ಅವರು ಬಹಳ ಮುಂದುವರಿದಿದ್ದರು. ಔದ್ಯೋಗಿಕ ಮತ್ತು ಅಲಂಕಾರ ಕಲೆಗಳು ಮುಖ್ಯವಾಗಿ ಶೋಧಿದ ಕೆತ್ತನೆ, ಗಂಜಿನ ಒಡವೆಗಳು ಮತ್ತು ಭಿತ್ತಿ ಚಿತ್ರಗಳು—ಅವರ ಒಳ್ಳೆ ಕೈಗೂಡಿದ್ದವು. ಅವಕ್ಕಿಂತಲೂ ಹೆಚ್ಚಾಗಿ, ಅವರ ಸಂಸ್ಕೃತಿ ನಗರ ರಚನೆಯ ಮಟ್ಟಕ್ಕೆ ಮುಟ್ಟಿದ್ದಿತು. ಆ ಕಾಲದಲ್ಲಿ ಸುಮೇರು ಮತ್ತು ಇಜಿಪ್ತ ದೇಶಗಳಲ್ಲಿ ಕೂಡ ನಗರ ಜೀವನ ಇದ್ದಿದಿಲ್ಲವೆಂಬುದನ್ನು ನೆನೆಯತಕ್ಕದ್ದು.

ಕ್ರಿಸ್ತ ಪೂರ್ವ ೪೦೦೦ ವರ್ಷಗಳಷ್ಟು ಹಳೆಯ ಈ ನರ್ಮದಾ ಸಂಸ್ಕೃತಿ ಜನ್ಮಕ್ಕೊ ಒಂದು ಸಾವಿರ ವರ್ಷ ಹಿಂದೆ ಮಧ್ಯ ಏಶಿಯಾದಿಂದ ಅಫಗಾಣಿಸ್ಥಾನ, ಇರಾಣ, ಇರಾಕ ಸಿರಿಯಾಗಳಲ್ಲಿ ಪ್ರಾರಂಭವಾದ ಕೃಷಿವಿದ್ಯೆಯ ವಿಸ್ತರಣ ಪರಿಣಾಮವಾಗಿ ಹುಟ್ಟಿರಬೇಕು. ಆಗ ಇನ್ನೂ ಸಿಂಧು, ಯುಫ್ರೆಟಿಸ್ ಟೈಗ್ರಿಸ, ಸರಸ್ವತೀ ಗಂಗಾ ಸಿಂಧು, ಹೆಲ್ಮಂಡ ನದೀ ತೀರಗಳ ಹುಲುಸು ಭೂಮಿಗಳ ಇನ್ನೂ ಸಮುದ್ರ ದಡಿಯಲ್ಲಿ ರೂಪಗೊಳ್ಳುತ್ತಿದ್ದವು. ಆದರೆ ನರ್ಮದೆಯಂಥ ಕೆಲ ಭಾರತೀಯ ನದಿಗಳು ಆಗಲೇ ರೂಪುಗೊಂಡ ಬಿಟ್ಟಿದ್ದವು. ಇರಾಣ ಎತ್ತರ ಭೂಮಿಯಲ್ಲಿದ್ದ ಆದಿ ಕೃಷಿಕ ಜನರ ವೃದ್ಧಿ ರಭಸದಿಂದಾಗುತಿದುದರಿಂದ ಹೊಸ ಕೃಷಿ ಭೂಮಿಗಳನ್ನು ಹುಡುಕುತ್ತ ಅವರಲ್ಲಿ ಕೆಲವರು ವಿಂಧ್ಯ ಸಾತಪುರ ಪರ್ವತ ಮಾಲೆಗಳ ನಡುವೆ ಹಬ್ಬಿನ ನರ್ಮದಾ ತೀರದ ಸಂಪದ್ಭೂಮಿಗೆ ಅವರಲ್ಲಿ ಕೆಲವರು ವಲಸೆ ಬಂದಿರಬೇಕು. ಆಗ ಸಿಂಧೂ—ಸರಸ್ವತಿ ನದಿಗಳಾಗಲಿ, ಯುಫ್ರಟಿಸ್—ಟಿಗ್ರಿಸಗಳಾಗಲಿ ಇನ್ನೂ ಇದ್ದೇ ಇಲ್ಲ.

ಭೂಗರ್ಭ ಸಂಶೋಧನೆಯಿಂದ ಈ ನರ್ಮದಾ ಸಂಸ್ಕೃತಿಯ ಪ್ರಥಮ ಸ್ವರೂಪ ಹಿಂದುಸ್ಥಾನವನ್ನು ಪಶ್ಚಿಮದಿಂದ ಪ್ರವೇಶಿಸಿ ಪೂರ್ವಕ್ಕೆ ಹಬ್ಬುತ್ತ ಗಂಗಾ ತೀರದ ವರೆಗೆ ಹಬ್ಬಿತೆಂದು ತೋರಿಬರುತ್ತದೆ. ಈ ಪ್ರಾಚೀನ ಸಂಸ್ಕೃತಿಯ ಕಾಲದ ಅನೇಕ ಹಳ್ಳಿಗಳನ್ನೂ ನಗರಗಳನ್ನೂ ರಾಜ ಪಿಪ್ಪಲ ಮತ್ತು ಮಧ್ಯ ಹಿಂದುಸ್ಥಾನ ಪ್ರದೇಶಗಳಲ್ಲಿ ಕಂಡುಹಿಡಿಯಲಾಗಿದೆ.

ಲೋಹದ ಕುರುಹಿಲ್ಲ

ನರ್ಮದಾ ಸಂಸ್ಕೃತಿಯ ಜನರು ಕಲ್ಲು ಚೂರು ಮಣ್ಣುಗಳಿಂದ ಕಟ್ಟಿದ ಮನೆಗಳಲ್ಲಿ ವಾಸಿಸುತಿದ್ದರು. ಅವರ ಶಸ್ತ್ರಾಸ್ತ್ರ, ಆಯುಧ ಮೊದಲಾದ ಸಾಮುಗ್ರಿಗಳೆಲ್ಲವೂ ಹಲಬಗೆಯ ಕಲ್ಲುಗಳಿಂದ ರಚಿಸಲ್ಪಡುತಿದ್ದವು. ಲೋಹದ ವಸ್ತುಗಳ ಕುರುಹು ಎಲ್ಲಿಯೂ ನೋಡ ಸಿಕ್ಕಿಲ್ಲ. ಅವರ ಮಣ್ಣಿನ ಪಾತ್ರೆ ಪದಾರ್ಥಗಳಲ್ಲಿ ಸರಳ ರೇಖಾ ಚಿತ್ರಗಳನ್ನು ಕೆತ್ತಿದ್ದು ಇವೆಲ್ಲ ಕೆಂಪು ಬಣ್ಣದ ಮೇಲೆ ಕರಿ ಗೆರೆಗಳನ್ನು ಚಿತ್ರಿಸಿದ್ದು ಕಾಣಬಂದಿದೆ. ಅವರಿಗೆ ಗಾಜ ಹತ್ತುವ ವಿದ್ಯೆಯೂ ಗೊತ್ತಿತ್ತು. ಕಲ್ಲುಗಳಿಂದ ಸುಂದರ ಬಳೆಗಳನ್ನೂ ಭಾಂಡೆಗಳನ್ನೂ ಕೆತ್ತುತಿದ್ದರು. ಆದರೆ ಅವರಿಗೆ ಗೊತ್ತಿದ್ದ ಅತಿ ಮಹತ್ವದ ವಿದ್ಯೆಯೆಂದರೆ ಗಂಜಿನ ಉದ್ಯಮ. ಸುಮೇರಿಯನ್ನರಿಗೂ ಇಜಿಪ್ಶಿಯನ್ನರಿಗೂ ಆ ಕಾಲದಲ್ಲಿ ಗೊತ್ತಿಲ್ಲದ ವಿದ್ಯೆಯಿದು. ಅವರು ಒಂದು ಸಾವಿರ ವರ್ಷದ ನಂತರ ಅದನ್ನು ಕಲಿತರು. ಜಗತ್ತಿನ ಇಜಿಪ್ತದಲ್ಲಿಯೂ ಸುಮೇರದಲ್ಲಿಯೂ ಸಿಕ್ಕ ಪ್ರಾಚೀನ ಗಾಜಿನ ಒಡವೆಗಳ ನರ್ಮದಾ ತೀರದಿಂದ ಕಳಿಸಿದವಿರಬೇಕು.

ಹುಶಿ ಗಾಜಿನ ಸುಂದರವಾದ ಮೊದಲಾದ ಸ್ಥಳಗಳಲ್ಲಿ ಈ ಮೊದಲು ಸಿಕ್ಕಿದ್ದ ಅಜ್ಞಾತ ಕಾಲದ ಅನಾದಿ ಬಣ್ಣದ ಚಿತ್ರಗಳ ಈ ನರ್ಮದಾ ಸಂಸ್ಕೃತಿಗೆ ಸೇರಿದವೆಂದು ಸಂಶೋಧನೆಗಳು ತೋರಿಸಿದೆ.

ಬೆರಗುಪಡಿಸುವ ಶೋಧ

ಆದರೆ ಎಲ್ಲಕ್ಕಿಂತ ಬೆರಗುಪಡಿಸುವ ಶೋಧವೆಂದರೆ ಈ ಸಂಸ್ಕೃತಿಯ ಜನಕ್ಕೆ ಸೇರಿದ ಮಹೇಶ್ವರ ನಗರದ ಅವಶೇಷಗಳ ಉಪಲಬ್ಧ. ಈ ನಗರ ಹರಪ್ಪಾ ಮೊಹೆಂಜೊದಾರೊಗಿಂತ ಒಂದು ಸಾವಿರ ವರ್ಷ ಪುರಾತನವಾಗಿದೆ. ಅದರಲ್ಲಿಯೂ ಈ ಲೋಹದ ಅರಿವಿಲ್ಲದ ಶಿಲಾಯುಗದ ಅವಶೇಷಗಳು ಪುರಾಣಗಳಲ್ಲಿ ಮಾಹಿಷ್ಮತಿ (ಕಾರ್ತವೀರ್ಯನ ರಾಜಧಾನಿ)ಯೆಂದು ಹೆಸರಾದ ಅಂದಿನ ಅನೂಪದೇಶದ ರಾಜಧಾನಿಯಿತ್ತೆಂದು ಉಲ್ಲೇಖಿಸಲ್ಪಟ್ಟ ಸ್ಥಳದಲ್ಲಿಯೆ ಸಿಕ್ಕಿದ್ದು. ಇನ್ನಷ್ಟು ಕೌತುಕ ಸಂಗತಿ ಮಾಹಿಷ್ಮತಿ ನಗರವನ್ನು ಚಂದ್ರಗುಪ್ತನಿಗಿಂತ ೧೫೦೦ ವರ್ಷಗಳಿಗೆ ಪೂರ್ವದಲ್ಲಿ ಒಂದು ಭಾರತೀಯ ಆರ್ಯ ಭಾಷೆಯನ್ನಾಡುವ ಪ್ರಾಚೀನ ರಾಜವಂಶದವರು ಸ್ಥಾಪಿಸಿದರೆಂದು ಪುರಾಣಗಳು ಹೇಳುತ್ತವೆ. ಆ ಭಾಷೆಯಲ್ಲಿ ಅವರು ಕಟ್ಟಿದ ಸೂಕ್ತಗಳು ಋಗ್ವೇದದಲ್ಲಿ ದೊರಕುತ್ತವೆ.

ಈ ಪ್ರಕಾರ ಭಾರತೀಯ ಸಂಶೋಧನೆಯು ಇತಿಹಾಸದಲ್ಲಿಯೆ ಮೊಟ್ಟ ಮೊದಲಾಗಿ ವೇದ ಪುರಾಣಗಳಲ್ಲಿ ಉಲ್ಲೇಖಿಸಲ್ಪಟ್ಟ ಐತಿಹ್ಯಗಳಿಗೆ ಅನಾದಿ ಕಾಲದ ಭೂಗರ್ಭ ಸಂಶೋಧನೆಗಳ ತಾಳೆಬಿದ್ದಂತಾಗಿದೆ.

ಇದರಿಂದ ನರ್ಮದಾ ತೀರದ ಸಂಸ್ಕೃತಿಯ ಕರ್ತೃಗಳು ಮಧ್ಯ ಏಶಿಯಾದಿಂದ ವಲಸೆ ಬಂದವರೆಂಬ ಪೌರಾಣಿಕ ಉಲ್ಲೇಖಗಳಿಗೆ ಭೂಗರ್ಭ ಸಂಶೋಧನೆಗಳ ಬೆಂಬಲ ದೊರೆತಂತಾಗಿದೆ. ಪೌರಾಣಿಕ ಜನರು ಪಾಮೀರ ಎತ್ತರ ಭೂಮಿಯ ಸಮೀಪದಿಂದ ಇಳಿದು ಬಂದವರೆಂದು ಪುರಾಣಗಳು ಹೇಳುವದು ನಿಜವಿರಬಹುದೆಂದು ಇದು ತೋರಿಸುತ್ತದೆ. ಈ ಸಂಶೋಧನೆಗಳಿನ್ನು ಇನ್ನಷ್ಟು ಮುಂದುವರಿಸಿದರೆ ದಕ್ಷಿಣ ಏಶಿಯಾದ ಪ್ರಾಚೀನ ಇತಿಹಾಸದ ಬಗ್ಗೆ ನಾವು ನಂಬಿಕೊಂಡಿರುವ ಕಲ್ಪನೆಗಳ ಬುಡಮೇಲು ಬದಲಾಗಬಹುದೇನೊ.

ಕಾಂಗ್ರೆಸಿನೊಡನೆ

ಇಪಿಫಕೀರರ ಒಪ್ಪಂದ

ಗಡಿನಾಡಿನಲ್ಲಿ ಕಾಂಗ್ರೆಸ್ ಪ್ರಭಾವ

ನೆಹರುರವರು ಗಡಿನಾಡ ಸಂಚಾರಕ್ಕೆ ಹೋದಾಗ ಲೀಗ್ ಪ್ರೇರಿತ ಪುಂಡಾಟಿಕೆ ಅವರ ಮೇಲೆ ನಡೆಸಲ್ಪಟ್ಟಿತು. ಮುಸ್ಲಿಂ ಲೀಗಿಗೂ ಗಡಿನಾಡಿನ ಜನರಿಗೂ ಮ್ಯಾಳಾಮೇಳ ಬೀಳುವಂತಿಲ್ಲ. ಕಾರಣ ಲೀಗು ಬ್ರಿಟಿಷ್ ಸಾಮ್ರಾಜ್ಯಶಾಹಿಯ ಉದಾರಾಶ್ರಯದಿಂದ ಬೆಳೆದ ಸಂಸ್ಥೆ. ಬ್ರಿಟಿಷ್ ಬಂಡವಾಳ ಹಿತಗಳ ಅಪ್ರತ್ಯಕ್ಷ ಸಹಾನುಭೂತಿ ಅದಕ್ಕಿದೆ. ಆದುದರಿಂದಲೇ ಅದು ಇಂದು ದೇಶದ ರಾಜಕೀಯ ಪ್ರಗತಿಗೆ ಪ್ರತಿಬಂಧಕವನ್ನು ತಂದೊಡ್ಡಲು ಧೈರ್ಯ ತಾಳಿತು.

ಆದರೆ ಗಡಿನಾಡ ನಿವಾಸಿಗಳು ಬ್ರಿಟಿಷರ ಬದ್ಧ ವೈರಿಗಳು. ಕಾಂಗ್ರೆಸ್ಸು ಬ್ರಿಟಿಷರ ತೀಕ್ಷ್ಣ ವಿರೋಧಿ ಸಂಸ್ಥೆ. ಇಂದು ಬ್ರಿಟಿಷರನ್ನು ಭಾರತದಿಂದ ತೊಲಗುವಂತೆ ಮಾಡಿದ ಶಕ್ತಿ ಕಾಂಗ್ರೆಸಿನದು. ಇದನ್ನು ಮನಗಂಡ ಬ್ರಿಟಿಷರ ಆಜನ್ಮ ಶತ್ರು ಇಪಿಫಕೀರರು ಒಂದು ಬಹಿರಂಗ ಪ್ರಕಟಣೆಯಲ್ಲಿ ಭಾರತ ಪ್ರತಿನಿಧಿಗಳೊಡನೆ ಒಪ್ಪಂದ ಮಾಡಿಕೊಳ್ಳುವ ತನ್ನ ಇಚ್ಛೆಯನ್ನು ಪ್ರಕಟಿಸಿದ್ದಾರೆ. ಇವರನ್ನು ಹಿಡಿಯಲು ಬ್ರಿಟಿಷ್ ಸೈನ್ಯಾಧಿಕಾರಿಗಳು ಲೆಕ್ಕವಿಲ್ಲದ ಶ್ರಮ ವಹಿಸಿದ್ದಾರೆ. ಆದರೆ ಔರಂಗಜೇಬನನ್ನು ಹತಾಶನನ್ನಾಗಿ ಮಾಡಿದ ಶಿವಾಜಿಯಂತೆ ಗಡಿನಾಡಿನ ಈ ವೀರ ಇಲ್ಲಿ ಗುಪ್ತವಾದ ತನ್ನ ವಜೀರಿಸ್ಥಾನದ ಗುಹೆಗಳಲ್ಲಿ ಅವಿತುಕೊಂಡಿರುತ್ತಾನೆ. ಇಪಿಫಕೀರರ ಒಳ ಒಂದೂಕು, ಸಿಡಿಮದ್ದಿನ ಪುಟ್ಟ ಕಾರ್ಖಾನೆಗಳೂ ಇವೆ. ಈ ಹೊಸ ವರ್ತಮಾನದಿಂದ ಮುಂದಿನ ರೀತಿ ಅದೆಷ್ಟು ನಿರೀಕ್ಷಿಸಬಹುದಾಗಲಿಕ್ಕಿಲ್ಲ!

ಪ್ರಯಾಣಿಕರಿಗೆ ಸ್ಪೆಶಲು ಸರ್ವಿಸಿನ ಸೂಚನೆ.

ಮುಲ್ಕಿ, ಒಪ್ಪನಾಡು, ಪೊಳಲಿ ಇತ್ಯಾದಿ ಸ್ಥಳಗಳಲ್ಲಿ ಜರಗಲಿರುವ ಜಾತ್ರೆಯ ಸಮ್ಬಂಧ ಪ್ರಯಾಣಿಸುವ ಯಾತ್ರಿಕರ ಬಗ್ಗೆ ಸ್ಪೆಶಲು ಸರ್ವಿಸುಗಳನ್ನು ರನ್ ಮಾಡುವ ಏರ್ಪಾಡನ್ನು ಮಾಡಲಿಚ್ಛಿಸಿದ್ದಾಗ್ಯೂ ಪ್ರಕೃತ ಮೂರು ತಿಂಗಳಿಗೆ ಸಿಗಬೇಕಾದ ಪೆಟ್ರೋಲು ಕೋಟಾದಲ್ಲಿ ಕಡಿತವಾಗಿರುವುದರಿಂದ ಕೆಲವು ಬಸ್ಸುಗಳಿಗೆ ಪೆಟ್ರೋಲು ಸಾಕಾಗದೆ ಕೆಲವು ಸರ್ವಿಸುಗಳನ್ನು ತಾತ್ಕಾಲಿಕವಾಗಿ ನಿಲ್ಲಿಸುವ ಸಂದರ್ಭ ಒದಗಿರುವುದರಿಂದಲೂ, ಮತ್ತು ಗೇಸು ಬಸ್ಸುಗಳು ಸಹ ಕಡಿಮೆ ಇದ್ದು ಅವುಗಳಿಂದ ದಿನವಹಿ ಸರ್ವಿಸುಗಳನ್ನು ರನ್ ಮಾಡಿಸಲ್ಪಟ್ಟನಂತರವೇ ಸಾಧ್ಯವಿದ್ದಲ್ಲಿ ಮಾತ್ರ ಸ್ಪೆಶಲು ಸರ್ವಿಸುಗಳನ್ನು ರನ್ ಮಾಡಬೇಕಾಗುತ್ತದೆ. ಅಲ್ಲದೆ ಕೋಸ್ಟಲ್ ಝೋನಿನಲ್ಲಿ ಕೆಲವು ಕಡೆಗಳಲ್ಲಿ ಪೆಟ್ರೋಲು ಮತ್ತು ಕೆಲವು ಕಡೆಗಳಲ್ಲಿ ಗೇಸು ಬಸ್ಸುಗಳಿರುವುದರಿಂದ ಸಾಧ್ಯವಿದ್ದ ಸ್ಥಳದ ವರೆಗೆ ಮಾತ್ರ ಸ್ಪೆಶಲು ರನ್ ಮಾಡಬೇಕಾಗಿರುತ್ತದೆ. ಉದಾಹರಣೆಗಾಗಿ ಮಂಗಳೂರು—ಮುಲ್ಕಿ ರಾಸ್ತೆಯಲ್ಲಿ ಪಾವಂಜೆಯಿಂದ ಮುಲ್ಕಿಗೆ ಪೆಟ್ರೋಲು ಬಸ್ಸು ಮಾತ್ರ ರನ್ ಆಗುತಿರುವುದರಿಂದ, ಮುಲ್ಕಿ ರಥೋತ್ಸವ ಹಾಗೂ ಒಪ್ಪನಾಡು ಜಾತ್ರೆಯ ಸಮ್ಬಂಧ ಸ್ಪೆಶಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ ಗೇಸು ಬಸ್ಸುಗಳ ಅನುಕೂಲತೆ ನೋಡಿ ಪಾವಂಜೆ ತನಕ ಮಾತ್ರ ಸ್ಪೆಶಲುಗಳನ್ನು ರನ್ ಮಾಡಲಾಗುವುದು. ಆದಕಾರಣ ಜಾತ್ರೆಯ ಬಗ್ಗೆ ಪ್ರಯಾಣಿಸಲಿಚ್ಛಿಸುವ ಯಾತ್ರಿಕರು ಸ್ಪೆಶಲ್ ಸರ್ವಿಸು ರನ್ ಆಗಬಹುದೆಂಬೀ ಹೆಚ್ಚಿನ ಭರವಸೆ ಇಡದೆ ಸೀಟು ಇದ್ದ ಹಾಗೆ ನಮ್ಮ ದಿನವಹಿ ಸರ್ವಿಸುಗಳಲ್ಲಿ ಪ್ರಯಾಣಿಸಬೇಕಾಗಿ ಅಪೇಕ್ಷಿಸುತ್ತೇವೆ.

ಅಲ್ಲದೆ ಮದುವೆ ಇತ್ಯಾದಿ ಸಮಾರಂಭಗಳ ಬಗ್ಗೆ ಸ್ಪೆಶಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ R. T. O. ಕೊಯಂಬುತ್ತೂರು ಇವರಿಂದ ಪರ್ಮಿಶನ್ ಪಡಕ್ಕೊಂಡೇ ಅಂಥಾ ಸ್ಪೆಶಲುಗಳನ್ನು ಗೇಸು ಬಸ್ಸುಗಳ ಅನುಕೂಲತೆ ನೋಡಿ ರನ್ ಮಾಡಬೇಕಾಗಿರುವುದರಿಂದ, ಹಾಗೆ ಸ್ಪೆಶಲು ಬಸ್ಸುಗಳನ್ನು ಅಪೇಕ್ಷಿಸುವವರು, ಸ್ಪೆಶಲುಗಳ ಬಗ್ಗೆ ಪರ್ಮಿಶನ್ ಪಡಕೊಳ್ಳುವಂತೆ ನಮಗೆ ಅನುಕೂಲವಾಗುವಂತೆ ತಮ್ಮ ಅರ್ಜಿಗಳನ್ನು ನಮಗೆ 20 ದಿವಸಗಳಿಗೆ ಮುಂಚಿತವಾಗಿ ಬರಕೊಳ್ಳಬೇಕಾಗಿ ಸಾರ್ವಜನಿಕರಿಗೆ ತಿಳಿಸಲಪೇಕ್ಷಿಸುತ್ತೇವೆ.

ಮಂಗ್ಳೂರು,
29-3-1947.

ಜ್ವಾಂಟ್ ಮೆನೇಜರ್ಸ್,
ದಿ. ಕೆಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

Regd. No: M.3460

THE CANARA BANKING CORPORATION LTD.

(Incorporated in British India with Limited Liability)

Estd: 1906.

Head Office: UDIPI, S. Kanara.

	Rs.
CAPITAL	
Authorised	25,00,000
Issued, subscribed & called up	16,00,000
Paid up	15,97,145
RESERVES	5,25,000
DEPOSITS	2,07,47,928
TOTAL RESOURCES	3,00,01,186

With a net-work of branches & Agencies in all principal cities of India, we shall be able to render efficient collection services.

BANKING BUSINESS OF EVERY DESCRIPTION TRANSACTED.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲಿ ಶಾ. ಕಂಪೆನಿಯಲ್ಲಿ ದೊರೆಯುವುದು.

THE BOMBAY LIFE ASSURANCE COMPANY LIMITED

(ESTD. 1910)

Peace and Security........

...htiest War to secure freedom for the oppressed Nations of Europe has ended. With many attempts at securing the four Freedoms, we do not seem to be anywhere near it. We, in our humble way, have been contributing to this Individual Material Freedom, in War as well as in Peace, by extending Insurance Service to all who seek it.

1945 completed Business { **Company's: Over $2\frac{3}{4}$ Crores**
Ours: About 50 lakhs.

Kochikar Brothers, Limited.

(ESTD. 1908)

Chief Agents for South India and Special agents for Bombay City & Suburbs.

"Bombay Life Building," Gandhi Nagar, UDIPI.

With Offices at:-

MADRAS, BANGALORE, TRIVANDRUM, MANGALORE, MADURA, CALICUT, BOMBAY, & UDIPI.

And Agencies all over South India.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs.

Depot: **Maharata Galli, Hubli.**

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ಹುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ಹುಂಟುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಕು 2—5—1947 [ಸಂಚಿಕೆ 18]

ವಾರಾಂತ್ಯ ವರದಿ ವಿಮರ್ಶೆ

ಪ್ರಾಂತ್ಯಗಳಲ್ಲಿ ಪಾಕಿಸ್ಥಾನ

ಇಂದಿನ ವೈಸರಾಯರು ಹಿಂದಿನವರಂತೆ ನಿರಾಶರಾಗಿರುವರೆಂದು ತಿಳಿದು ಬರುತ್ತದೆ. ಅಖಂಡ ಹಿಂದೂಸ್ಥಾನವೇ ಬ್ರಿಟಿಷರ ಉದ್ದೇಶವಾಗಿತ್ತಾದರೂ ಮುಸ್ಲಿಂ ಲೀಗಿನ ಹಟವಾದಿತನದಿಂದ ಒಂದು ತರದ ವಿಚ್ಛೇದಿಕರಣವು ಅನಿವಾರ್ಯವಾಗಿದೆಯೆಂದು ರಾಜಕೀಯ ತಜ್ಞರು ಅಭಿಪ್ರಾಯ ಮಾಡಿಕೊಂಡಿರುವರು ಆದರೆ ಈ ವಿಭಾಗೀಕರಣವು ಲೀಗಿನ ಆಶಯದಂತಿರದೆ ಕೇವಲ ಅವರ ಮೂಲ ಪಾಕಿಸ್ಥಾನದ ನೆರಳಿನಂತಿರುತ್ತದೆಂದು ಗಣಿಸಲಾಗಿದೆ

ಮೌಂಟ್‌ಬೇಟನರು ಸದ್ಯದಲ್ಲಿ ಘೋಷಿಸಲಿರುವ ಯೋಜನೆಯಲ್ಲಿ ಪಂಜಾಬವು ಎರಡು ಪ್ರತಪ್ರತ್ಯೇಕ ಪ್ರದೇಶಗಳಾಗಿ ವಿಭಾಗಿಸಲ್ಪಡುವುದು ಆದರೆ ಬಂಗಾಲವನ್ನು ವಿಭಜಿಸುವುದು ವೈಸರಾಯರಿಗೆ ಯುಕ್ತವೆಂದು ತೋರುವುದಿಲ್ಲವಂತೆ ಎಲ್ಲದಕ್ಕಿಂತ ಗಡಿನಾಡಿನ ಸಮಸ್ಯೆಯು ಕಠಿಣವಾದುದು ಅಲ್ಲಿ ಕೋಮು ಪಕ್ಷಗಳಿಲ್ಲ ಒಂದು ಮತದವರಲ್ಲಿ ಎರಡು ಪಕ್ಷಗಳು ಕಾಂಗ್ರೆಸ್ ಪಟಾನರು ಮತ್ತು ಲೀಗ್ ಪಟಾನರು, ಪ್ರಾಂತ್ಯಗಳಿಗೆ ಹೆಚ್ಚು ಕಡಿಮೆ ಸಂಪೂರ್ಣ ಸ್ವಾತಂತ್ರ್ಯವು ಕೊಡಲ್ಪಡುವುದರಿಂದ ಯಾರಿಗೂ ಹೆಚ್ಚಿನ ತೊಂದರೆಯಾಗಲಾರದೆಂದು ನಿರೀಕ್ಷಿಸಲಾಗಿದೆ

ತ್ರಿಪಕ್ಷಗಳು

ಮೌಂಟ್‌ಬೇಟನ್ ಘೋಷಣೆಯ ಪ್ರಕಾರ ಈ ಕೆಳಗಿನ ಮೂರು ರಾಜಕೀಯ ಮಂಡಳಗಳುತ್ಪನ್ನವಾಗುವವು:

1 ಪ್ರಾಂತೀಯ ಸರಕಾರಗಳು.
2 ದೇಶಿ ಸಂಸ್ಥಾನ ಸರಕಾರಗಳು
3 ಕೇಂದ್ರ ಸರಕಾರ

ಕೇಂದ್ರ ಸರಕಾರಕ್ಕೆ ಸೇರುವ ಮತ್ತು ಬಿಡುವ ಸ್ವಾತಂತ್ರ್ಯವು ಪ್ರಾಂತ್ಯಗಳಿಗೂ ದೇಶಿ ಸಂಸ್ಥಾನಗಳಿಗೂ ಇದೆ

ಎರಡು ಕೇಂದ್ರಗಳು

ಪಾಕಿಸ್ಥಾನ ಪ್ರದೇಶಗಳನ್ನು ವಿಂಗಡಿಸಿ ಅವಕ್ಕೆ ಪ್ರತ್ಯೇಕ ಕೇಂದ್ರವನ್ನೂ ಅವುಗಳ ರಾಜ ಘಟನೆಯನ್ನು ತಯಾರಿಸಲು ಪ್ರತ್ಯೇಕ ಘಟನಾಸಮಿತಿಯನ್ನೂ ಕರೆಯಬೇಕೆಂದು ಮಿ। ಜಿನ್ನರ ಪ್ರಯತ್ನವಾಗಿರುವುದೆಂದು ಊಹಾಪೋಹೆಗಳಿವೆ ಆದರೆ ವೈಸರಾಯರು ಘೋಷಿಸಲಿರುವ ಯೋಜನೆಯ ಪ್ರಕಾರ ಪ್ರತ್ಯೇಕ ಕೇಂದ್ರ ಮಾಡುವುದರಿಂದ ಯಾವ ಪ್ರಯೋಜನವೂ ಇಲ್ಲ. ಒಂದು ಗಿಡವನ್ನು ಕೊಂಬೆ ಕೊಂಬೆಗಳಾಗಿ ಕಡಿದು ಹಾಕಿದಂತೆ ಈ ಪರಿಸ್ಥಿತಿಯಾಗುವುದು ಇನ್ನು ಯಾವ ಕೊಂಬೆಗಳನ್ನು ಪ್ರತ್ಯೇಕ ನೆಡಬೇಕು, ಯಾವುದನ್ನು ಕಾಂಡಕ್ಕೆ ಕೃಷಿ ಮಾಡಬೇಕೆಂಬ ಇತ್ಯರ್ಥವು ಆಯಾ ಕೊಂಬೆಗಳೇ ನಿರ್ಣಯಿಸಬೇಕು.

"ನ್ಯಾಯವಾದ ಪಾಕಿಸ್ಥಾನ ತೆಗೆದುಕೊಳ್ಳಿ ಅದರಿಂದ ಇತರರಿಗೆ ತೊಂದರೆ ಒತ್ತಾಯಗಳಾಗಬಾರದೆಂದು" ನೆಹರುಗಳು ಹೇಳಿದರ ಮರ್ಮವು ಮುಂದೆ ವೈಸರಾಯರು ಸೂಚಿಸುವ ಪರ್ಯಾಯ ಕುರಿತು ಆಗಿರುವುದೆಂದೂ ಕೆಲವರು ತರ್ಕಿಸುವರು

ಗಲಭೆಯ ಗುಟ್ಟು

ಇಂದು ದೇಶದಲ್ಲೆಲ್ಲ ಕೋಮುವಾರು ಪುಂಡರಿಂದ ಗಲಭೆಗಳಾಗುವುದರ ಹಿನ್ನೆಲೆಯನ್ನು ಗಡಿನಾಡಿನ ಗಾಂಧಿಯವರು ಸಂಕ್ಷೇಪವಾಗಿ ತಿಳಿಸಿದ್ದಾರೆ "ಲೀಗಿನವರ ಒಂದೇ ವ್ಯಥೆಯೆಂದರೆ ಇದುತನಕ ತಮ್ಮ ಆಪ್ತರಾಗಿದ್ದ ಬ್ರಿಟಿಷರು ಬಿಟ್ಟು ಹೋಗುವರಲ್ಲಾ ಎಂದು. ಈಗ ಅವರನ್ನು ನಿರಂತರವಾಗಿ ಇಲ್ಲಿಯೇ ಇರುವಂತೆ ಮಾಡುವುದು ಅವರ ಉದ್ದೇಶ. ಕಾರಣ 1948ರ ಜೂನಿನೊಳಗೆ ಎಟ್ಲಿ ಮಂತ್ರಿಮಂಡಳವು ರಾಜಿನಾಮೆ ಕೊಡುವಂತಾಗುವ ಪ್ರಸಂಗಗಳುಂಟಾಗಬಹುದೆಂದು ಚರ್ಚಿಲ್ ಪಕ್ಷದ ಹಾರೈಕೆ ಅಂತಹ ಸಂದರ್ಭದಲ್ಲಿ ಮತ್ತೆ ಅಧಿಕಾರಕ್ಕೆ ಬರುವವರು ಚರ್ಚಿಲ್ಲರೆ ಆಗ ಲೀಗಿಗೆ ಬ್ರಿಟಿಷರು ಇಲ್ಲಿಯೇ ಇರುವಂತೆ ಮನವಿ ಮಾಡಿ ಕೊಳ್ಳಲು ಅನುಕೂಲವಾಗುತ್ತದೆ ಇದು ಗಫ್ಫಾರ್ ಖಾನರ ಭವಿಷ್ಯವಾಚನ

ಗಫ್ಫಾರ್ ಖಾನರು ಇನ್ನೊಂದು ಮಹತ್ವದ ವಿಚಾರ ತಿಳಿಸಿದರು ಲೀಗು ಮುಖಂಡರು ಬೇಜವಾಬ್ದಾರಿಯ ತಮ್ಮ ಘೋಷಣೆಗಳಿಂದ ಬ್ರಿಟಿಷ್ ಸೈನ್ಯವು ಇಲ್ಲಿಂದ ಬಿಟ್ಟು ಹೋಗದಂತೆ ಉಪಯುಕ್ತವಾಗಿ ದಂಗೆಯನ್ನು ಪ್ರೋತ್ಸಾಹಿಸುವಂತಾಯಿತು "ಒಂದು ಸಲ ಪ್ರಾರಂಭಿಸಲ್ಪಟ್ಟ ಮೇಲೆ ಇದನ್ನು ಲ್ಲಿಸಲು ಲೀಗ್ ಮುಖಂಡರಿಗೆ ಸಾಮರ್ಥ್ಯವಿಲ್ಲ. ಮಿ। ಜಿನ್ನರ ಅದೆಷ್ಟು ಪ್ರಕಟಣೆಗಳಾದರೂ, ಗಲಭೆಯು ಶಾಂತವಾಗುವುದು ಕಾಣುವುದಿಲ್ಲ. ಇದರಿಂದ ಜಿನ್ನರ ಪ್ರಭಾವ ಕಳೆಗುಂದಿದೆ ಎಂದು ಸ್ಪಷ್ಟವಾಗುತ್ತದೆ."

ಕನ್ನಡವು ಕೇರಳಕ್ಕೆ

ಮಲೆಯಾಳಿಗಳು ಕೇರಳ ಐಕ್ಯದ ಪ್ರಯತ್ನದಲ್ಲಿರುವುದು ತುಂಬಾ ಸಂತೋಷದ ಸಂಗತಿ ಕೊಚ್ಚಿಯಲ್ಲಿ ಕೇರಳ ಏಕೀಕರಣ ಪರಿಷತ್ತು ಜರಗಿದಾಗ ಅಧ್ಯಕ್ಷರಾದ ಶ್ರೀ ಕೇಳಪ್ಪನ್ ಅವರು ಸಾಂಸ್ಕೃತಿಕ ಐತಿಹಾಸಿಕ ದೃಷ್ಟಿಯಿಂದ ಮುಂದಿನ ಐಕ್ಯ ಕೇರಳಕ್ಕೆ ಸೇರುವ ಪ್ರದೇಶಗಳನ್ನು ನಿರೂಪಿಸಿದರು ದಕ್ಷಿಣ ಕನ್ನಡ, ಕೊಡಗು, ನೀಲಗಿರಿಗಳು ಅವರ ಅಭಿಪ್ರಾಯದಲ್ಲಿ ಸಂಯುಕ್ತ ಕೇರಳದ ಭಾಷಾವಾರು ಪ್ರಾಂತ್ಯಕ್ಕೆ ಸೇರಲರ್ಹವೆನಿಸುತ್ತವೆ

ದಕ್ಷಿಣ ಕನ್ನಡ ಎಂಬ ಹೆಸರು ಮಾತ್ರದಿಂದ ನಮ್ಮ ಜಿಲ್ಲೆ ಕರ್ನಾಟಕದ ಭಾಗವೆಂದು ಸ್ಪಷ್ಟವಾಗುತ್ತದೆ ಪೂರ್ವ ಇತಿಹಾಸ ಹೇಗೂ ಇರಲಿ ನಮ್ಮ ಜಿಲ್ಲೆಯ ಸಾಹಿತ್ಯ ಚಿತ್ರಕಲೆ ಸಾಂಸ್ಕೃತಿಕ ವ್ಯವಹಾರಗಳು ಕನ್ನಡಮಯವಾಗಿವೆ ಅದನ್ನು ಇನ್ನು ಬೇರೆ ಮಾಡಿ ಭಾಷಾ ಸಂಸ್ಕರ ಕಿತ್ತಳ ಮಾಡುವುದು ಅಸ್ವಸ್ತವೂ ಅಪ್ರಾಸಂಗಿಕವೂ ಎನಿಸುವುದು.

ಕಲ್ಕತ್ತದ ಅಮೃತ್ ಬಜಾರ್ ಪತ್ರಿಕೆಯು ಏರ್ಪಡಿಸಿದ ಒಂದು ಶಿಘ್ರಮತದಾನದಲ್ಲಿ ಶೇಕಡಾ 99ಕ್ಕೂ ಮಿಕ್ಕಿದ ಜನರು ಬಂಗಾಲದ ವಿಭಾಗೀಕರಣವಾಗಬೇಕೆಂದು ಅಭಿಪ್ರಾಯ ಸೂಚಿಸಿರುವರು.

ಲೀಗ್ ಕಾಂಗ್ರೆಸಿನೊಳಗಿನ ಭೇದಾಭಿಪ್ರಾಯವು ಮೇಲಿನ ತೋರಿಕೆಗೆ ವಿಶಾಲವಾಗಿರುವುದಾಗಿ ಕಂಡರೂ ಆಳದಲ್ಲಿ ಒಪ್ಪಂದದ ಸಂದರ್ಭಗಳಿಗೆ ಆಸ್ಪದವಿದೆ ಎಂದು ಡಿಲ್ಲಿಯಿಂದ ಡಾ। ಸ್ಟೆನ್ಲಿ ಜೋನ್ಸರು ತಿಳಿಸುತ್ತಾರೆ

ಘಟನಾ ಸಮಿತಿಯು ಸಂಯುಕ್ತ ಭಾರತದ ಭಾವೀ ಘಟನೆಯನ್ನು ತಯಾರಿಸುವ ರೀತಿ ನೀತಿಗಳ ಕುರಿತು ಅತೃಪ್ತಿಯುಂಟಾದುದರಿಂದ ಡಾ। ಜಯಕರರ ರಾಜಿನಾಮೆಗೆ ಕಾರಣವೆಂದೂ ಒಂದು ಸುದ್ದಿ ಇದೆ ಅವರು ಪ್ರಿವಿ ಕೌನ್ಸಿಲರರಾಗಿ ವಿಲಾಯಿತಿಗೆ ಹೋಗುವುದೂ ನಿಜ,

"ದೇಶಿ ಸಂಸ್ಥಾನಗಳಲ್ಲಿ ಗ್ರಾಮ ಪಂಚಾಯತ ಪದ್ಧತಿ ಸ್ಥಾಪಿಸಲ್ಪಡಬೇಕು. ದೇಶಿ ರಾಜರ ಕಾಲವಾಯಿತು. ಆದರೆ ಕಾಂಗ್ರೆಸು ಅವರಿಗೆ ಕೇಡುಕು ಮಾಡಬಯಸುವುದಿಲ್ಲ ಅವರ ನಿರಂಕುಶಾಧಿಕಾರಕ್ಕೆ ಕಾಂಗ್ರೆಸು ವಿರೋಧ" ಹೀಗೆಂದು ಅಧ್ಯಕ್ಷ ಕೃಪಲಾನಿಯವರು ತಿಳಿಸುತ್ತಾರೆ.

THE
UNITED INDIA LIFE ASSURANCE CO., LTD.
ESTD 1906 H. O. MADRAS
SECURITY
Greater than any conferred by legislative enactments is guaranteed
by
UNITED INDIA'S TRUST ARRANGEMENT
with
THE OFFICIAL TRUSTEE TO THE GOVRNMENT OF MADRAS.
For Particulars apply to—
INSPECTORATE OFFICE
K. S. Rao Road, Mangalore.

ವನಸ್ಪತಿ ತುಪ್ಪಗಳ ಹಾನಿಕರ ಪ್ರಭಾವ

ಆರೋಗ್ಯ ಖಾತೆಯಲ್ಲೂ ಬ್ರಿಟಿಷರ ಕುಯುಕ್ತಿಯ ಧೋರಣೆ

ಆಸ್ಟ್ರೇಲಿಯಾ, ಕೆನಡಾಗಳಲ್ಲಿ ಕೃತಕ ತುಪ್ಪಕ್ಕೆ ನಿಷೇಧ

ಬೊಂಬೇ ಕ್ರಾನಿಕಲ್ ಪತ್ರಿಕೆಯ ಡಿಲ್ಲೀ ಬಾತ್ಮಿದಾರರು ಬರೆದ ವಿಶೇಷ ಲೇಖದಲ್ಲಿ ವನಸ್ಪತಿ ತುಪ್ಪಗಳ ಕುರಿತು ಖಂಡಿಸಿ ಬರೆದುದರ ಸಾರಾಂಶ ಹೀಗಿದೆ:

ಕೇಂದ್ರ ಶಾಸನ ಸಭೆಯಲ್ಲಿ ವನಸ್ಪತಿ ತುಪ್ಪದ ಕುರಿತು ವಿಶೇಷ ಚರ್ಚೆಯಾಯಿತು ಈ ತುಪ್ಪಗಳಲ್ಲಿ ಏನಾದರೂ ಆರೋಗ್ಯ ಹಾನಿಕರ ವಸ್ತುಗಳಿವೆಯೇ ಎಂಬ ಪ್ರಶ್ನೆ ಮೇಲಕ್ಕೆ ಬಂದಾಗ ಆಹಾರ ಖಾತೆಯ ಮುಖ್ಯಾಧಿಕಾರಿ ಮಿ। ಪಂಜಾಬಿಯವರು 'ಇದೆ' ಎಂದರು ಆದರೆ ಬೊಂಬಾಯಿಯ ಪ್ರಖ್ಯಾತ ವೈದ್ಯ ತಜ್ಞರಾದ ಡಾ। ದೇಶಮುಖರವರು 'ಇಲ್ಲ'ವೆಂದು ಪ್ರತಿಪಾದಿಸಿದರು. ಈಗ ಭಾರತದಲ್ಲಿ ತಯಾರಿಸಲ್ಪಡುವ ವನಸ್ಪತಿ ತುಪ್ಪಗಳು ಶರೀರದಲ್ಲಿ ಹೀರಲ್ಪಡುವುದಿಲ್ಲವೆಂದವರು ತಿಳಿಸುವವರಾದರು

ಕರ್ನಲ್ ಸೋಕೆ ಎಂಬವರು ಹಿಂದೆ ತಮ್ಮೊಂದು ವರದಿಯಲ್ಲಿ ವನಸ್ಪತಿ ತುಪ್ಪಗಳು ಹಾನಿಕರವಿದ್ದು ಕಣ್ಣಿನ ಮೇಲೆ ತುಂಬಾ ಕೆಡುಕು ಪರಿಣಾಮವನ್ನುಂಟುಮಾಡುತ್ತವೆಯೆಂದು ನಿರೂಪಿಸಿರುವುದನ್ನು ಮಿ। ಮನೂ ಸುಬೇದಾರರು ಸಭೆಯ ಲಕ್ಷ್ಯಕ್ಕೆ ತಂದರು ಭಾರತ ಸರಕಾರದ ಆರೋಗ್ಯ ಪರಿಶೋಧನಾಲಯದವರು ಈ ಕುರಿತು ಪ್ರಯೋಗಗಳನ್ನು ನಡೆಸಿ ಈ ತುಪ್ಪಗಳಿಂದ ಮಾನವ ಶರೀರಕ್ಕೆ ಹಾನಿಯಿಲ್ಲವೆಂದು ಒಂದು ವರದಿಯಾಗಿತ್ತು ಕೆಲವು ಸಮಯದ ನಂತರ ಇನ್ನೊಂದು ವರದಿಯಲ್ಲಿ ಅದೇ ಪ್ರಯೋಗ ಮಂದಿರದವರು "ಈ ತುಪ್ಪಗಳಿಂದ ಮುಂದಿನ ಪೀಳಿಗೆಗೆ ಹಾನಿಯಿದೆ" ಎಂದು ಕಂಡು ಹಿಡಿದಿರುವುದನ್ನು ದಾಖಲೆ ಮಾಡಿತ್ತು

ಖೇದಾಸ್ಪದ ವಿಷಯ

ವನಸ್ಪತಿ ತುಪ್ಪಗಳ ಕುರಿತಾದ ಎಲ್ಲ ಸಂಗತಿಗಳು ಒಂದು ಅರ್ಧಮರ್ಧ ಪರಿಜ್ಞಾನದ ವಿಷಯವಾಗಿದೆ ಕಳೆದ 15 ವರ್ಷಗಳಿಂದ ಈ ಕುರಿತು ಮಹಾ ವಿವಾದಗಳೆದ್ದಿವೆ ಮೊದಲು ಈ ವಸ್ತುವು ಪರದೇಶಗಳಿಂದ ಬರುತಿತ್ತು—ಮುಖ್ಯವಾಗಿ ಇಂಗ್ಲೆಂಡನಿಂದ. ಆಗಿನ ಬ್ರಿಟಿಷ್ ಪ್ರಭಾವದ ಭಾರತ ಸರಕಾರ ಅಧಿಕಾರಿಗಳು ಅದಕ್ಕೆ ಭಾತೃತ್ವದ ಅನುರಾಗ ತೋರಿಸಿದರು ಆಗಿನ ವೈದ್ಯ ತಜ್ಞರೂ ವನಸ್ಪತಿ ತುಪ್ಪದ ಒಳಿತು ಕೆಡುಕುಗಳ ಕುರಿತು ಬೇಧಾಭಿಪ್ರಾಯವಿದ್ದವರಾಗಿದ್ದರು. ಆರೋಗ್ಯದ ಅತೀ ಮಹತ್ವದ ವಿಚಾರದಲ್ಲೂ ಬ್ರಿಟಿಷ್ ಸರಕಾರದವರು 'ವಿಭಾಗಿಸಿ ಆಳುವ ಧೋರಣೆ'ಯನ್ನೇ ಅನುಸರಿಸಿ ತನಗೆ ಬೇಕಾದ ವೈದ್ಯ ತಜ್ಞರ ಅಭಿಪ್ರಾಯಗಳನ್ನೇ ಈ ತುಪ್ಪದ ಪ್ರಚಾರಕ್ಕೆ ನೈತಿಕ ಆಧಾರವಾಗಿ ತೆಗೆದುಕೊಂಡರು

ಈ ಹೊಸ ಭಾರತೀಯ ಕೈಗಾರಿಕೆಯಲ್ಲಿ ವನಸ್ಪತಿ ತುಪ್ಪ ತಯಾರಿಕೆಯು ಪ್ರಾಮುಖ್ಯ ಸ್ಥಾನವಹಿಸಿತು ತೆಂಗಿನೆಣ್ಣೆ ನೆಲಗಡಲೆಣ್ಣೆ ಇಲ್ಲವೆ ಹತ್ತೀಬೀಜದೆಣ್ಣೆಗಳನ್ನುಪಯೋಗಿಸಿ ಕೃತಕ ತುಪ್ಪಗಳ ತಯಾರಿಗಾರಂಭವಾಯಿತು. ಒಳ್ಳೆ ತುಪ್ಪದೊಂದಿಗೆ ಸೇರಿಸಿ ಮಾರಾಟ ಮಾಡಲು ಈ ಕೃತಕ ಕೊಬ್ಬು ವಂಚಕ ವ್ಯಾಪಾರಸ್ಥರಿಗೆ ಉತ್ತಮ ಸಾಧನವಾಯಿತು.

ಯುದ್ಧಕಾಲದಲ್ಲಿ ಮುಖ್ಯ ಆಹಾರ ವಸ್ತುಗಳ ಕೊರತೆಯೂ, ಅಪಾರ ಸಂಖ್ಯೆಯಲ್ಲಿ ಜಾನುವಾರು ಕಡಿತವೂ ಉಂಟಾದುದರಿಂದ ವನಸ್ಪತಿ ಪದಾರ್ಥಕ್ಕೆ ತುಂಬಾ ಪ್ರೋತ್ಸಾಹ ದೊರಕಿತು. ಅದನ್ನು ರಾಷ್ಟ್ರೀಯ ಕೈಗಾರಿಕೆಯೆಂದೂ ಪರಿಗಣಿಸಲಾಯಿತು! ಅದರ ಉಪಯೋಗ 1938ರಲ್ಲಿ 38 ಸಾವಿರ ಟನ್‌ಗಳಷ್ಟಿದ್ದದ್ದು 1941ರಲ್ಲಿ 82 ಸಾವಿರ ಟನ್‌ಗಳಷ್ಟು ಹೆಚ್ಚಿತು. ಯುದ್ಧಾನಂತರದ ಕೈಗಾರಿಕೆಯಲ್ಲಿ ಕೃತಕ ತುಪ್ಪ ತಯಾರಿಕೆಯು ಒಂದು ಅಗ್ರಗಣ್ಯ ಉದ್ಯಮವೆಂದು ಸ್ವೀಕೃತವಾಗಿ ಅದಕ್ಕಾಗಿ 1950ರಲ್ಲಿ ಅದರ ತಯಾರಿಕೆ ಪ್ರಮಾಣ 4 ಲಕ್ಷ ಟನ್‌ಗಳಷ್ಟಾಗಬಹುದೆಂದು ಅಂದಾಜು ಮಾಡಲಾಗಿತ್ತು ಲಿನ್ ಲಿತ್‌ಗೋ ಅವರ ವೈಸ್‌ರಾಯಾಧಿಕಾರತ್ವದ ಕಾಲದಲ್ಲಿ ಈ ಅಂಕ ಸಂಖ್ಯೆಗಳನ್ನು ನ್ಯಾಯವೆಂದು ಸ್ವೀಕರಿಸಲಾಗಿತ್ತು ಇದೇ ಸಂದರ್ಭದಲ್ಲಿ ಯುದ್ಧಕಾಲದ ಆತಳಿತ ಅವ್ಯವಸ್ಥೆಯಿದ್ದುದರಿಂದ ವನಸ್ಪತಿ ತುಪ್ಪಗಳ ಅನಾರೋಗ್ಯಕರ ಸಂಗತಿಗಳು ಕಡೆಗಾಣಿಸಲ್ಪಟ್ಟವು

ನಿರಾಶೆಯ ಪರಮಾವಧಿ

ಜನಾಂಗದ ಆರೋಗ್ಯವು ಅತಿ ಮುಖ್ಯವಾದ ವಿಷಯ ನೆಹರು ಸರಕಾರಕ್ಕಿಂತ ಹಿಂದಿನ ಸರಕಾರಗಳು ಕೇವಲ ಶಾಂತಿ ಶಿಸ್ತು ಕಾಪಾಡುವ ಪಂಥವುಗಳಾಗಿದ್ದುದರಿಂದ ಅವರಿಗೆ ಈ ವಿಚಾರ ಹೆಚ್ಚಿನ ಆಸಕ್ತಿಯದಾಗಲಿಲ್ಲ ಆದರೆ 'ಜನಾದ ರಾಷ್ಟ್ರೀಯ ಸರಕಾರವಾದ ನೆಹರು ಮಂತ್ರಿಮಂಡಳವು ಈ ವಿಚಾರವನ್ನು ಅಲಕ್ಷಿಸುವಂತಿಲ್ಲ ಮೇಲೆ ಹೇಳಿದ ಕರ್ನಲ್ ಸೋಕೆಯವರಾಗಲಿ, ಡಾ। ದೇಶಮುಖರಾಗಲಿ ಸಾಮಾನ್ಯ ವೈದ್ಯ ತಜ್ಞರಲ್ಲ ಅವರ ಅಭಿಪ್ರಾಯಕ್ಕೆ ಸರಕಾರ ಸರಿಯಾದ ಲೋಕ ಕೊಡಲೇಬೇಕು

ವನಸ್ಪತಿ ತುಪ್ಪ ತಿಂದ ಇಲಿಗಳು ಕಣ್ಣು ಕುರುಡಾಗಿರುವ ಸಂಗತಿಯನ್ನು ಶಾಸನ ಸಭೆಯಲ್ಲಿ ಶ್ರೀ ಮೋಹನ್ ಲಾಲ್ ಸೆಕ್ಸೇನಾ ಅವರು ತಿಳಿಸಿದರು ಇದು ನಿಜವಿದ್ದರೆ ತುಂಬಾ ಗಂಭೀರದ ಸಂಗತಿಯಾಗಿದೆ ಇದರ ಸತ್ಯಾಸತ್ಯತೆಯು ಕುರಿತು ಪ್ರಯೋಗಗಳಾಗುತ್ತಿವೆಯೆಂದು ಮಿ। ಪಂಜಾಬಿಯವರು ತಿಳಿಸುತ್ತಾ 'ಇದಕ್ಕಿಂತಲೂ ಹೆಚ್ಚಿನದೇನನ್ನು ನಾವು ಮಾಡಬಲ್ಲೆವು' ಎಂದು ತಿಳಿಸಿದ್ದು ನಿರಾಶೆಯ ಪರಮಾವಧಿ ಆದರೆ ಜನಾಂಗದ ಆರೋಗ್ಯದ ಕುರಿತು ಯಾರೂ ಆಟವಾಡುವಂತಿಲ್ಲ ವನಸ್ಪತಿ ತುಪ್ಪಗಳು ನಿಜವಾಗಿಯೂ ನಿರಪಾಯಕಾರಿಯೆಂದು ರುಜುವಾತಾಗುವ ವರೆಗೆ ಇದರ ತಯಾರಿಯನ್ನು ತಡೆದು ನಿಲ್ಲಿಸುವುದು ಅತ್ಯಾವಶ್ಯಕ ಹೀಗೆ ಮಾಡಿದರೆ ಕೈಗಾರಿಕೆ ಮಾಲಕರು ಗಲಭೆಗಾರಂಭಿಸುವರು ತಮ್ಮ ಸಂಸ್ಥೆಗಳಲ್ಲಿ ಬಂಡವಾಳ ಹಾಕಿದ ಬಡವರ ಹೆಸರಲ್ಲಿ ಅವರು ರೋಧಿಸ ಹತ್ತುವರು

ಕೈಗಾರಿಕೆ ಮಾಲಕರದು ನಿಸ್ವಾರ್ಥ ಬೃಹದ್ ದೇಶ ಭಕ್ತರ ತಂಡ! ಭಾರತದ ಅಭ್ಯುದಯಕ್ಕಾಗಿ ಭಾರತೀಯ ಕೈಗಾರಿಕೆಗಳನ್ನು ಅಭಿವೃದ್ಧಿಸುವುದು ಅವರ ಏಕ ಮಾತ್ರ ಧ್ಯೇಯ! ಈ ವನಸ್ಪತಿ ತುಪ್ಪದ ತಯಾರಿ ಖರ್ಚು ರಾತ್ಲಿಗೆ ಬರೇ 1 ಆಣೆ ಎಂಟು ಪೈ ಆದರೆ ಅದನ್ನು ಮಾರುವ ಬೆಲೆ ರಾತ್ಲಿಗೆ 11 ಆಣೆ 10½ ಪೈ. ಆದರೆ ಇದೆಲ್ಲ ಕೇವಲ ವ್ಯಾಪಾರಿ ಮಹಿಮಾಟು. ತಯಾರಿಕರಿಗೆ

ಪ್ರತಿ ಟನ್ನಿಗೆ ... ಬೆಳೆಗುವುದು—ಕೆಲ್ಲ!

ದೀನ ಮಿಲಿಯನಾಧಿಗಳ ಚರ್ಚೆನಲ್ಲಿ ಅದೆಂತಹ ದುರ್ವ್ಯವಹಾರ! ಇಷ್ಟಾದರೂ ಆಹಾರ ಖಾತೆಯ ಮಿ॥ ಪಂಜಾಬಿಗಳು 'ಇದಕ್ಕಿಂತಲೂ ಹೆಚ್ಚಿನದೇನನ್ನು ಮಾಡಬಲ್ಲೆವು' ಎಂದು ಬಿಸುಸುಯ್ಯುತ್ತಾರೆ. 'ಈ ದುರ್ವ್ಯಾಪಾರವನ್ನು ಕೆಡವಿ ಹಾಕಿರಿ' ಎಂಬುದೇ ಇದಕ್ಕೆ ಉತ್ತರ.

ಖೇದಾಸ್ಪದ ವಿಷಯ

ನೆಹರು ಸರಕಾರ ಒಂದ ಮೇಲೂ ನಮ್ಮ ಕೇಂದ್ರ ಆರೋಗ್ಯ ಖಾತೆಯು ಇನ್ನೂ ಅಲಕ್ಷ್ಯದಿಂದಲೇ ಇರುವುದು ದುಃಖದ ಸಂಗತಿ ವನಸ್ಪತಿ ತುಪ್ಪಗಳ ಕುರಿತು ಚಟುವಟಿಕೆ ಯುಕ್ತವಾದ ಪರಿಶೋಧನೆ ನಡೆಸಿ ಒಂದು ನಿರ್ಧಾರಕ್ಕೆ ಬರಲು ಪ್ರಯತ್ನಿಸುವುದು ಇದರ ಪ್ರಥಮ ಕರ್ತವ್ಯವಾಗಿರಬೇಕಿತ್ತು ಕಾರಣ 'ಪರಿಹಾರಕ್ಕಿಂತ ಪ್ರತಿಬಂಧಕವು ಉತ್ತಮ ವಿಧಾನ

ಇನ್ನು ವನಸ್ಪತಿ ಕೈಗಾರಿಕೆಯಿಂದಾಗುವ ನಿರುದ್ಯೋಗ ಸಮಸ್ಯೆ ಎಣ್ಣೆ ಮತ್ತು ಪ್ರಾಣಿಜನ್ಯ ತುಪ್ಪಗಳ ಸ್ಥಾನದಲ್ಲಿ ಈ ವನಸ್ಪತಿಗಳು ಉಪಯೋಗಿಸಲ್ಪಡುತ್ತವೆ ಹಾಲು ತುಪ್ಪದ ತಯಾರಿಕೆಯು ಒಂದು ಗುಡಿ ಕೈಗಾರಿಕೆ ಬೀಜ ಎಣ್ಣೆಯಂತೂ ಹಳ್ಳಿ ಕಸಬುದಾರರ ಜೀವನಾಧಾರದ ಉದ್ಯೋಗ ಇಲ್ಲಿಯ ನೆಲಗಡಲೆಯ ಶೇಕಡಾ 42ರಷ್ಟು ಅಂಶವನ್ನು ವನಸ್ಪತಿಗಳಿಗೆ ಉಪಯೋಗಿಸಲ್ಪಡುತ್ತದೆಯಂತೆ ಇದರಿಂದ ಅದೆಷ್ಟು ಗಾಣಿಗರಿಗೆ ನಿರುದ್ಯೋಗವಾಯಿತೆಂದು ಊಹಿಸಬಹುದು

ಇದು ಆಹಾರವಲ್ಲ

ಭಾರತದಲ್ಲಿ ವರ್ಷಕ 3589 ಲಕ್ಷ ಮಣ ಹಾಲು ತುಪ್ಪಕ್ಕಾಗಿ ಉಪಯೋಗಿಸಲ್ಪಡುತ್ತದೆ ಅನೇಕ ಪ್ರಾಂತ್ಯಗಳಲ್ಲಿ ಸಾಸಿವೆ ಎಣ್ಣೆ ... ಅಡಿಗೆಗಾಗಿ ಉಪಯೋಗಿಸಲ್ಪಡುತ್ತದೆ ದಕ್ಷಿಣದಲ್ಲಿ ನೆಲಗಡಲೆ ತೆಂಗಿನ ಎಣ್ಣೆಗಳ ಬಳಸುತ್ತಾರೆ ಅವುಗಳ ಸ್ಥಾನದಲ್ಲಿ ವನಸ್ಪತಿ ತುಪ್ಪಗಳನ್ನು ತರುವುದು ಕೈಗಾರಿಕ ಮಾಲಕರ ಉದ್ದೇಶ! ಹೀಗೆ ಮಾಡುವುದರ ಜೊತೆ ಮಿಲಿಯನಾಂತರ ಹಾಲು ತುಪ್ಪ ಬೀಜದ ಎಣ್ಣೆ ವ್ಯಾಪಾರಸ್ಥರನ್ನು ನಿರುದ್ಯೋಗಕ್ಕೀಳಿಸಿದಂತಾಗುವುದು

ಕೊನೆಯಲ್ಲಿ ವನಸ್ಪತಿ ತುಪ್ಪಗಳ ಆವಶ್ಯಕತೆಯ ಪ್ರಶ್ನೆ ಏಳುತ್ತದೆ ಸಾವಿರಾರು ವರ್ಷಗಳಿಂದ ಸಹಜ ಎಣ್ಣೆ ತುಪ್ಪ ತಿಂದುಂಡು ಬಂದವರಿಗೆ ಅನೇಕೆ ಈ ನಕಲಿ ಡಬ್ಬಿ ವಸ್ತುಗಳು? ಆಸ್ಟ್ರೇಲಿಯಾ ಕೆನಡಾ, ಹೊಲೆಂಡ್ ದೇಶಗಳಲ್ಲಿ ಕೃತಕ ತುಪ್ಪಗಳ ಮೇಲೆ ಸರಕಾರಿ ನಿಷೇಧವಿದೆ ರಶ್ಯಾವೊಂದು ಬಿಟ್ಟರೆ ಇತರ ದೇಶಗಳಲ್ಲೆಲ್ಲಾ ಸರಕಾರಗಳು ಬಂಡವಾಳ ಹಿತಗಳ ಸೂತ್ರ ಗೊಂಬೆಗಳಂತಿವೆ ಭಾರತ ಸರಕಾರವಾದರೂ ಪ್ರಾಂತೀಕ ಸರಕಾರಗಳ ಮೇಲೆ ವನಸ್ಪತಿ ತುಪ್ಪಗಳನ್ನು ನಿಲ್ಲಿಸುವ ಇಲ್ಲವೆ ವೃದ್ಧಿಸುವ ಹೊಣೆಗಾರಿಕೆ ಬಿಟ್ಟು ಬಿಟ್ಟಿದೆ ಈ ರಾಜಕೀಯ ತೊಡಕು ಹೇಗಿದ್ದರೂ ಜನಾಂಗ ಆರೋಗ್ಯದ ಹಿತ ದೃಷ್ಟಿಯಿಂದ ಹಾನಿಕರ ಕೃತಕ ತುಪ್ಪಗಳಿಗೆ ತಡ ಹಾಕುವುದು ಅತ್ಯಂತ ಆವಶ್ಯಕವೆನಿಸುತ್ತದೆ

ಮೇ ತಿಂಗಳ 9ರಂದು ಚರ್ಚಿಲ್ಲರಿಗೆ ಫ್ರಾನ್ಸಿನ ಅತೀ ಉನ್ನತ ಸೈನ್ಯ ಪ್ರಶಸ್ತಿಯ ಪದಕವು ಕೊಡಲ್ಪಡುವುದು

✱

ನಮ್ಮ ಇಂದಿನ

ಜೀವನದ ವೈವಿಧ್ಯ

ಉಪಾಧ್ಯಾಯರ ಪಾಡು ಸರಿಗೊಳಿಸಬೇಕು

ಜನರು ಇಂದು ಚರ್ಚಿಸುವ ವಿಷಯಗಳೆರಡೇ. ಒಂದು ರಾಜಕೀಯ ಭವಿಷ್ಯ. ಇದನ್ನು ಬಿಟ್ಟರೆ ಎರಡನೆ ವಿಷಯವೆ ಏರಿದ ಬೆಲೆಗಳ ಮತ್ತಿತರ ಜೀವನಾವಶ್ಯಕತೆಯ ವಸ್ತುಗಳದ್ದು. ಒಂದು ದಿನ ಬದನೆಗೆ ಬೆಲೆ ಹೆಚ್ಚು, ಇನ್ನೊಂದು ದಿನ ತೆಂಗಿನ ಕಾಯಿಗೆ ಮತ್ತೊಂದು ದಿನ ಎಣ್ಣೆಗೆ ಹೊಟ್ಟೆ ವಸ್ತುಗಳ ವಿಚಾರ ಹೀಗಿರುವಾಗ ಬಟ್ಟೆ ಪಾಡು ದರೂ ನೆಟ್ಟಗಿಲ್ಲ ಪರದೇಶದಿಂದ ಬರುವ ಕೆಲವು ಕಟ್ಲೆರಿ ಸಾಮಾನುಗಳ ಬೆಲೆಯೇನೊ ಕಳಗಿಳಿಯುತ್ತಿದೆ ಪರಿಣಾಮ ನಾವಿಂದು ಕೆಲವು ತಿಂಗಳ ಹಿಂದಿನ ಪೆನ್ಸಲು ಕಡ್ಡಿಗಳನ್ನೂ, ಬಾಚಣಿಗೆ ಪೌಡರನ್ನೂ ಕಮ್ಮಿ ಬೆಲೆಗ ಕೊಂಡು ಬಹುದು

ಇಷ್ಟಾದರೂ ಸರ್ವ ಸಾಮಾನ್ಯ ನೋಡ ವಾಗ ಬೆಲೆಗಳ ತಲೆ ಎತ್ತರಕ್ಕೇ ಎತ್ತಿ ಹಿಡಿದಂತಿದ್ದು ಶೇರ್ ಬಜಾರುಗಳಲ್ಲಿ ಯೂ ಒಂದು ತರದ ಸಿಗೂಢ ವ್ಯಥೆ ಬಿಡೆ ಕಾರಣ ಬೆಲೆ ಇಳಿತಗಳ ಇನ್ನು ಬರಲಿದೆ ಸಾಮಾನ್ಯ ಕೈಗಾರಿಕೆ ಮಜೂರರಿಗಂತೂ ನಿರುದ್ಯೋಗದ ಹೆದರಿಕೆಗಿಂತ ಮನ ಖರ್ಚು ಅಲ್ಲಲ್ಲಿ ಮಾಡುವಗೊಡವೆ ಹೆಚ್ಚಿದೆ ಅವನ ಮಜೂರಿಯಾದರೂ ಯುದ್ಧ ಪೂರ್ವಕ್ಕಿಂತ ಮುಮ್ಮಡಿ ನಾಲ್ಮಡಿಯಾಗಿದೆಯೆಂದು ವಾದಿಸುವ ಮಾಲಕರೂ ಇದ್ದಾರೆ ಆದರೆ ಕೆಲಸಗಾರರಿಗೆ ಇನ್ನು ತೃಪಿಯಾದಂತೆ ಕಾಣುವುದಿಲ್ಲ ಇನ್ನು ಮುಷ್ಕರಗಳು ಅಲ್ಲಲ್ಲಿ ಮುಂದುವರಿಯುತ್ತಿರುವುದು ಇದರ ದರ್ಶನ

ಮಜೂರರು ಮಾಲಕರಿಗೆ ಸಿಕ್ಕುವುದಕ್ಕಿಂತ ಹೆಚ್ಚು ದೊರೆಯಬೇಕೆನ್ನುವರೆ ಮಧ್ಯ ವರ್ಗದ ಜನರು ನಿಜವಾಗಿ ದಯಾರ್ಹರಿಗಿಂತಲೂ ಹೆಚ್ಚು ಶ್ರೇಯಸ್ಕರರಾಗಿರುವರು ಇಲ್ಲವೆ ನೌಕರ ವರ್ಗದವರು ಮೆಲ್ಲಗೆ ಸಾಲದ ಬಳೆಯೊಳಗೆ ಬೀಳುತ್ತಿರುವರೊ? ವಸ್ತುಗಳ ಬೆಲೆ ಏರಿದ ಅಂಕೆ ಸಂಖ್ಯೆಗಳನ್ನು ಮಜೂರಿಯ ದಾಮಾಶಯದಲ್ಲಿ ಹೋಲಿಸುವಾಗ ಮಜೂರಿಯು ಬೆಲೆಗೆ ಬಹಳ ಹಿಂದೆ ಇದ್ದಂತೆ ತೋರುವುದಾದರೂ ನಮ್ಮ ಜನತೆಯು ದುಡಿದ ಹಣವನ್ನು ನಿರ್ದಿಷ್ಟವಾಗಿ ಯಾವ್ಯಾವುದಕ್ಕೆ ಖರ್ಚು ಮಾಡುತ್ತವಂಟ ಸರಿಯಾದ ಸೂಚನೆ ತಿಳಿದು ಬರುವಂತಿಲ್ಲ

ಸಂಯುಕ್ತ ಪ್ರಾಂತ್ಯದ ಸರಕಾರದವರು ಮಧ್ಯ ವರ್ಗದ, ಕೃಷಿ ಮತ್ತು ಕೈಗಾರಿಕೆ ಮಜೂರ ಕುಟುಂಬದಲ್ಲಿ ಖರ್ಚು ಆದಾಯಗಳು ಹೇಗ ಎಷ್ಟಾಗುತ್ತವೆಂದು ಅಂಕೆ ಸಂಖ್ಯೆ ತೆಗೆಯಲು ಒಂದು ಆರ್ಥಿಕ ಪರಿಶೀಲನಾ ಸಮಿತಿಯನ್ನು ನೇಮಿಸಿದೆ ಒರ್ವ ಆಫೀಸ್ ಕಾರಕೂನ, ಒರ್ವ ಗಿರಣಿ ಕೆಲಸಗಾರ ಮತ್ತೋರ್ವ ರೈತನಿಗೆ ತಿಂಗಳಿಗೆ ಸರಾಸರಿ 60 ರೂಪಾಯಿ ಆದಾಯವಿದೆಯೆಂದು ಹಿಡಿದರೆ ಅವರಲ್ಲಿ ಪ್ರತಿಯೊಬ್ಬನೂ ಖರ್ಚು ಮಾಡುವ ವಿಧಾನಗಳು ಬೇರೆ

(೩ನೇ ಪುಟಕ್ಕೆ ಮುಂದುವರಿದಿದೆ)

ಕಾಂಗ್ರೆಸು ಎತ್ತಕಡೆ ಸಾಗುತ್ತಿದೆ?

ಮೂಲ ಮಿಲಿಯಾದಿಗಳ ಪ್ರಜಾಪ್ರಭುತ್ವ

ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯ ಆವಶ್ಯಕತೆ

"ಒಂದು ದೇಶದ ಜನತೆಯೇ ಆ ದೇಶದ ವಿಧಿಯನ್ನು ರೂಪಿಸಲು ಸಮರ್ಥವಾದ ಶಕ್ತಿ" ಎಂಬೀ ತತ್ವವನ್ನು ಪ್ರಜಾಪ್ರಭುತ್ವವೆನ್ನಲೂಬಹುದು; ಸಮತಾವಾದವೆಂದು ಕರೆಯಲ್ಪಡಬಹುದು. ಇಲ್ಲವೆ ಉಗ್ರ ಸಮತಾವಾದವಾದ "ಕಮ್ಯುನಿಸಂ" ಎಂದೂ ತಿಳಕೊಳ್ಳಬಹುದು. ಈ ಮುಕ್ಕ ಮೂರರಲ್ಲಿ ಯಾವುದು ಒಳಿತು ಯಾವುದು ಕೆಡುಕು ಎಂಬುದು ಈ ತತ್ವ ಪ್ರೇರಣೆಯಿಂದುದ್ಭವವಾದ ಧೋರಣೆ, ರಾಜ ಪರಿಪಾಲನೆಯ ರೀತಿ ನೀತಿಗಳಿಂದ ಅರಿತುಕೊಳ್ಳಬೇಕಾಗುವುದು.

ಇಂಗ್ಲೆಂಡಿನ ಪ್ರಜಾಪ್ರಭುತ್ವ ಒಂದು ವಿಚಿತ್ರ ಮಾದರಿಯದು. ಅಲ್ಲಿ ಬಡ ಮತ್ತು ಶ್ರೀಮಂತ ವರ್ಗಗಳು ಒಟ್ಟೊಟ್ಟಿಗೆ ಅಸ್ತಿತ್ವದಲ್ಲಿವೆ. ದೇಶದ ಸಂಪತ್ತು ಒಡೆಯರಿಗೂ ಶ್ರೀಮಂತರಿಗೂ ಅವರವರ ಯೋಗ್ಯತೆ, ಆವಶ್ಯಕತೆಗಳಿಗೆ ತಕ್ಕಷ್ಟು ಹಂಚಲ್ಪಡುತ್ತದೆ. ಆದರೆ ಶ್ರೀಮಂತರು ಅತಿ ಸಿರಿವಂತರಾಗಲೂ, ಬೇಕಾದ ಉದ್ಯೋಗ ಕೈಗಾರಿಕೆಗಳನ್ನು ಸ್ಥಾಪಿಸಲೂ ಸ್ವತಂತ್ರವುಳ್ಳವರಾಗಿದ್ದಾರೆ. ಇದರಿಂದ ಬಡ ವರ್ಗವನ್ನವರು ಬಹುಮಟ್ಟಿಗೆ ಶೋಷಣೆಗೆ (Exploitation) ಒಳಪಡಿಸುವ ಸಂದರ್ಭಗಳಿವೆ. ಅಮೇರಿಕವೂ ಹೆಚ್ಚುಕಮ್ಮಿ ಇದೇ ಮಾದರಿಯಲ್ಲಿ ಆಳಲ್ಪಡುತ್ತದೆ. ಇಂಗ್ಲೆಂಡಿಗೆ ವಸಾಹತು ವ್ಯಾಪಾರದಿಂದ ಅಪಾರ ಸಂಪತ್ತಿನ ಪಾಲು ದೊರೆಯುತ್ತದೆ. ಅಮೇರಿಕದ ಸ್ವಸಂಪತ್ತು ಅಲ್ಲಿನ ಜನಸಂಖ್ಯೆಯ ದಾಮಾಶಯಕ್ಕೆ ಮಿಕ್ಕಿ ಇದೆ. ಆದುದರಿಂದ ಈ ಎರಡು ದೇಶಗಳಲ್ಲಿ ಸಮತಾವಾದ ತತ್ತ್ವಕ್ಕನುಸಾರವಾಗಿ 'ದೇಶ ಸಂಪತ್ತು ಸಮಾನವಾಗಿ ಹಂಚಲ್ಪಡಬೇಕಾದ' ಆವಶ್ಯಕತೆ ಇನ್ನೂ ಉಂಟಾಗಿಲ್ಲವೆನ್ನಬಹುದು.

ಆಂಗ್ಲ ಒಕ್ಕೂಟ

ಈ ಇಂಗ್ಲಿಷ್ ಭಾಷಾ ಜನಾಂಗಗಳ ಪ್ರಜಾಪ್ರಭುತ್ವವು ಅಲ್ಲಿಯ ಜನರ ಮಟ್ಟಿಗೆ ನಮ್ಮದಿಯುಕ್ತವಾಗಿದ್ದರೂ ಅವರು ಜಗತ್ತಿನ ಇತರ ಪ್ರದೇಶಗಳ ಮೇಲೆ ಒಂದಿಲ್ಲೊಂದು ತರದ ಒಡೆತನವಿಟ್ಟುಕೊಂಡಿರುವುದರಿಂದ ಸಾಮ್ರಾಜ್ಯಶಾಹಿಯ ವಿಲಕ್ಷಣ ಲೋಪದೋಷಗಳಿಗೆ ಇವು ಗುರಿಯಾಗಿದೆ. ಇಂಗ್ಲೆಂಡು ತನ್ನ ಸೈನ್ಯ ನೌಕಾ ಮತ್ತು ವಿಮಾನ ಬಲಗಳಿಂದ ವಸಾಹತು ಜನತೆಯನ್ನು ಬಲಾತ್ಕಾರದಿಂದ ಕೈಕೆಳಗೆ ಇಟ್ಟುಕೊಂಡು ತಮ್ಮ ವ್ಯಾಪಾರಿ ಮತ್ತಿತರ ಹಿತಗಳಿಗಾಗಿ ದುಡಿಸುವುದು ಶುದ್ಧ ಪ್ರಜಾಪ್ರಭುತ್ವ ನೀತಿಗೆ ಕಲಂಕಪ್ರಾಯವಾದ ಸಂಗತಿ. ಅಮೇರಿಕವಾದರೂ ಹಲವು ವಿಷಯಗಳಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ಸಮರ್ಥಿಸುತ್ತ ತನ್ನ ಪ್ರಬಲ ಸಂಪತ್ತಿನ ಮತ್ತು ಬಲಿಷ್ಠ ಕೈಗಾರಿಕೆಯ ಸಹಾಯದಿಂದ ಇಡೀ ವಿಶ್ವದ ವ್ಯವಹಾರದ ಮೇಲೆ ಪ್ರಭಾವವನ್ನಿಟ್ಟುಕೊಂಡಿದೆ. ವಿಶ್ವ ವ್ಯವಹಾರದಲ್ಲಿ ಅಮೇರಿಕವು ಹುಲಿಯ 'ಮಾರ್ವಾಡಿ'ಯ ಪಾತ್ರವನ್ನು ವಹಿಸುವುದು. ಯಾವ ರೀತಿಯಲ್ಲೂ ಇತರ ಜನಾಂಗಗಳನ್ನು ಸ್ವಹಿತಕ್ಕಾಗಿ ಶೋಷಣೆಗೊಳಪಡಿಸುವ ಧ್ಯೇಯವು ಪ್ರಜಾಪ್ರಭುತ್ವ ನೀತಿಗೆ ಸಲ್ಲದು.

ರಶ್ಯದ ನಮೂನೆ

ರಶ್ಯವು ಸಂಪೂರ್ಣ ಸಮಾನತಾ ಪದ್ಧತಿಯದು. ಅಲ್ಲಿ ಎಲ್ಲವೂ ಸರಕಾರದ ಸೊತ್ತು. ಸರಕಾರವು ಜನರ ಪ್ರತಿನಿಧಿಗಳಿಂದ ಅಧಿಕಾರ ಪಡೆದದ್ದು. ದೇಶದ ಸಂಪತ್ತನ್ನು ಅನುಭೋಗಿಸಲು ಎಲ್ಲರಿಗೂ ಹಕ್ಕುಗಳಿವೆ. ಎಲ್ಲರಿಗೂ ಕೆಲಸ ಕೊಡಿಸುವುದು ಸರಕಾರದ ಕರ್ತವ್ಯ. ಜನರಿಗೆ ಭವಿಷ್ಯದ ಭೀತಿ ಇಲ್ಲ. ಬಡತನದ ಭೀತಿ ಇಲ್ಲ.

ಆದರೆ ಸೋವಿಯಟ್ ದೇಶದಲ್ಲಿ ವ್ಯಕ್ತಿಸ್ವಾತಂತ್ರ್ಯವಿಲ್ಲ. ಒಂದು ಸಲ ಅಧಿಕಾರಕ್ಕೆ ಬಂದವರು ಪ್ರಬಲವಾದ ಒಂದು ಉಕ್ಕಿನ ಕೋಟೆಯ ಆವರಣದಲ್ಲಿ ತಮ್ಮ ಜನತೆಯನ್ನು ಜಾನುವಾರುಗಳಂತೆ ಮೇಯಿಸುತ್ತಿರುವರೆಂಬ ಆರೋಪ ರಶ್ಯದ ಮೇಲಿದೆ. ಇಲ್ಲಿ ನಿರಂಕುಶ ಸರ್ವಾಧಿಕಾರಕ್ಕೆಡೆಯಾಯಿತು. ಕೇವಲ ಹೊಸ ಬಲಾತ್ಕಾರಗಳು ಅಲ್ಲಿಯ ದಿನದಿನದ ಧೋರಣೆಗಳು. ಜನತೆ ತನ್ನ ಲೌಕಿಕ ಆವಶ್ಯಕತೆಗಳನ್ನು ಉಪಭೋಗಿಸಿಕೊಂಡಿರಬೇಕು. ಮರು[illegible] ವೂ ದೇಶಹಿತಕ್ಕಾಗಿ ವಿರೋಧ ಪ್ರದರ್ಶನಕ್ಕಲ್ಲಿ ಎಡೆಯಿಲ್ಲ. ಈ ಪದ್ಧತಿ [illegible] ಉತ್ತಮವೂ [illegible] ರಕ್ಷಿಪ [illegible] ಈ ವರ್ಗವೇ [illegible] ಪ್ರತ್ಯೇಕ ಜಾತಿಯಾಗಿ ಜನತೆಯ [illegible] ಆಗಲೇ ಪೆಸಿಸ್ಟ್ ಇಟಲಿ ಸರ್ವಾಧಿಕಾರದ ಅನಾಚಾರ [illegible]

ಸ್ವತಂತ್ರ ಭಾರತ

ಇದ [illegible] ಭಾರತ ವು [illegible] ದಾಸ್ಯದಿಂದ [illegible] ಪಕ್ಷನುಗುಣವಾಗಿ ಮಾಡಿದ್ದೇ [illegible] ಆದರೆ 1948ರ ಜೂನ್ 30ರ ನಂತರ ನಮ್ಮ ದೇಶ ಸರ್ವ ಸ್ವತಂತ್ರವಾಗುವುದು. ಆ ಬಳಿಕ ಬ್ರಿಟಿಷರು ತಮ್ಮ ಅಧಿಕಾರ [illegible] ಸಂಪೂರ್ಣ ಒಪ್ಪಿಸಿಬಿಡುವರು. ಆ ನಂತರ ದೇಶ [illegible] ಸಾರಥ್ಯವು [illegible] ಕೈಗೆ ಬರುವುದು. ಅದನ್ನು ಸುಗಮವಾದ ಮಾರ್ಗದಲ್ಲಿ ಸಾಗಿಸುವ ಕಾರ್ಯಭಾರ ನಮ್ಮವರ ಪಾಲಿಗೇ ಬೀಳುವುದು. ಈ ಕಾರ್ಯವು ಹೇಗೆ ಸಾಗಬೇಕೆಂಬುದೇ ಇಂದಿನ ಮಹತ್ವದ ವಿಚಾರ.

ಕೊಂಗ್ರೆಸು ನಮ್ಮ ದೇಶ ಅತೀ ಪ್ರಬಲವೂ ಪರಿಪೂರ್ಣವೂ ಆದ ರಾಷ್ಟ್ರೀಯ ಸಂಸ್ಥೆಯಾಗಿರುವುದೆಂಬುದು ಸರ್ವವಿದಿತ. 'ಸಂಪೂರ್ಣ ಸ್ವರಾಜ್ಯವನ್ನು ಸಾಧಿಸುವುದು ಅದರ ಗುರಿ'ಯೆಂದು ಹಲವು ವರ್ಷಗಳಿಂದ ಸ್ಪಷ್ಟಪಡಿಸಲಾಗಿದೆ. 1948ರ ಜೂನಿನ ನಂತರ ನಮಗೆ ದೊರೆಯುವುದು ಸಂಪೂರ್ಣ ಸ್ವರಾಜ್ಯವೆ? ಅದರ ಮುಂದೆ ಕಾಂಗ್ರೆಸಿನ ಆವಶ್ಯಕತೆ ಇದೆಯೇ ಇಲ್ಲವೋ ಎಂಬುದು ಅತ್ಯಂತ ವಿಚಾರಾಸ್ಪದವಾದ ಸಂಗತಿ.

ಸಂಪೂರ್ಣ ಸ್ವರಾಜ್ಯವೆಂದರೆ 'ಸಂಪೂರ್ಣ ರಾಜಕೀಯ ಆರ್ಥಿಕ ಮತ್ತು ಸಾಮಾಜಿಕ ಸಮಾನತೆಗಳನ್ನೊಳಗೊಂಡದ್ದೆಂದು 1930ರ ಕೊಂಗ್ರೆಸ್ ಮಹಾಸಭೆಯಲ್ಲಿ ಸ್ಪಷ್ಟಪಡಿಸಲಾಗಿದೆ. ಈ ದೃಷ್ಟಿಯಿಂದ 1948ರ ಜೂನಿನ ನಂತರ ಭಾರತವು ಸಂಪೂರ್ಣ [illegible] ಹೊಂದಿದಂತಾಗುವುದಿಲ್ಲ. ಹಾಗಾದರೆ ಕೊಂಗ್ರೆಸ್ಸು ತನ್ನ ಗುರಿಯನ್ನು ಪೂರ್ತಿಗೊಳಿಸಲು ಅಸ್ತಿತ್ವದಲ್ಲಿರಬೇಕು. ಮಾತ್ರವಲ್ಲ ಅದಕ್ಕಾಗಿ ಬೇಕಾದ ಚಳವಳಿಯನ್ನು [illegible] ಈ ಚಳವಳಿಯನ್ನು ಈಗ [illegible] ಪ್ರಭಾವಿತವಾಗಿರುವ ನಾಯಕರೇ ನಡೆಸಬೇಕೊ, ಇಲ್ಲವೆ ಸಮಾನತೆಯ ತತ್ವಕ್ಕೆ ಕಂಕಣಬದ್ಧರಾದ [illegible] ನಡೆಸ [illegible] ಎಂಬುದೂ ಅತ್ಯಂತ [illegible]

ಈಗಿನ ಕಾಂಗ್ರೆಸ್ [illegible] ಕತ್ವವು [illegible] ಅಗ್ರಗಣ್ಯ ಮ[illegible] ಮೇಲೆ ಹೊಂದಿಕೊಂಡಿದೆ. ಅವರಲ್ಲಿ ಮಹಾತ್ಮರು ಅತ್ಯಂತ ಪ್ರಭಾವಶಾಲಿಗಳು. ಇವರು ಸಮತಾವಾದವನ್ನೊಪ್ಪುತ್ತಾರೆ. ಆದರೆ ಹಿಂಸಾತ್ಮಕ [illegible] ಯಾವ ಕ್ರಾಂತಿಗೂ ಅವರು ವಿರೋಧಿಗಳು. ಶ್ರೀಮಂತರನ್ನು [illegible] ಪರಿವರ್ತಿಸುವುದು ಅವರ ಜೀವನ ತತ್ವ. ಇದು ಅಸಾಧ್ಯದ ನಿರೀಕ್ಷೆ ಎಂದು ಉಗ್ರವಾದಿಗಳ ವಾದ. ಕಾರಣ ಹಿಂದೆ ಯೇಸುಕ್ರಿಸ್ತನೇ "ಶ್ರೀಮಂತರು ಸ್ವರ್ಗಕ್ಕೆ ಹೋಗುವುದು ಸೂಜಿಯ ಕಣ್ಣಿನಿಂದ ಒಂಟೆ ಹೋಗುವಷ್ಟು ಕಷ್ಟದ ಕೆಲಸ"ವೆನ್ನಲಿಲ್ಲವೆ? ಹಾಗಾದರೆ ಮಹಾತ್ಮರು ಎನ್ನುವಂತೆ ಶ್ರೀಮಂತರು ದರಿದ್ರರ ಧರ್ಮದರ್ಶಿಗಳಾಗುವುದು ಸಾಧ್ಯವೆ? "ಬೆಕ್ಕು ಇಲಿಯನ್ನು ಕಾಪಾಡಬಲ್ಲುದೆ?" "ಶಿಕಪಕ್ಷಿಯು ಮೀನಿನ ಹಿತ ಬಯಸುವುದೆ?" ಇಲ್ಲವೆ "ಬೆಕ್ಕು ಇಲಿಯನ್ನು ಕಾಪಾಡಬಲ್ಲುದೆ?" ಮೊದಲಾದ ಆಲಂಕಾರಿಕ ಉಪಮೆಗಳು ಸಮತಾವಾದಿಗಳ ಕಡೆಯಿಂದ ಮುಂದೆ ಹಾಕಲ್ಪಡುತ್ತವೆ.

ಸಮತಾವಾದಿ ನೆಹರು

ಆಜನ್ಮ ಶ್ರೀಮಂತರಿರುವಂತೆ ನೆಹರುಗಳು ಆಜನ್ಮ ಸಮತಾವಾದಿಗಳೆಂದು ಖ್ಯಾತಿ ಪಡೆದಿದ್ದಾರೆ. ಆದರೆ ಇಂದಿನ ತನಕ ಅವರು ಗಾಂಧಿ ಪ್ರಭಾವದಲ್ಲಿರುವರೊ ಅಂದಿನ ತನಕ ಅವರ ಸಮತಾವಾದ ಬರೀ ಮಾತುಗಳಲ್ಲುಳಿಯುವುದು. ಭಾರತದ ದಾಸ್ಯ ವಿಮೋಚನೆಯಾಗುವ ತನಕ ನೆಹರುಗಳಾಗಲಿ ಇತರ ದೇಶಾಭಿಮಾನಿ ಮುಖಂಡರಿಗಾಗಲಿ ಕಾಂಗ್ರೆಸ್ಸನ್ನು ಬಿಟ್ಟುಹೋಗುವ ಸಾಧ್ಯವಿಲ್ಲ. ಈಗಾಗಲೆ ಹಲವು ಸಲ ನಹರುಗಳು ಕೊಂಗ್ರೆಸಿನ ಧೋರಣೆಗಳನ್ನು ರೂಪಿಸುವಾಗ ಮಹಾತ್ಮರ ಸೂಚನೆಗಳನ್ನು ಸಂಪೂರ್ಣ ಅನುಸರಿಸಿಲ್ಲ. ಕಾರ್ಯಕಾರಿ ಮಂಡಳಿಯಲ್ಲಿ ಸಮತಾವಾದಿಗಳನ್ನು ತರಲು ಅವರು ಬಹಳ ಶ್ರಮಿಸಿದ್ದಾರೆ. 'ದೇಶದ ಬಡ ಮನುಷ್ಯನ ಹಿತವೇ ತನ್ನ ಧ್ಯೇಯ'ವೆಂದು ತಾವು ನಡುಗಾಲದ ಅಧಿಕಾರ ವಹಿಸುವಾಗ ಸಾರಿದ್ದಾರೆ. ದೇಶವು ಸಮತಾವಾದಕ್ಕೆ ಸಿದ್ಧವಾಗುವಾಗ ನಹರುಗಳು ಅದರ ಮುಂದಾಳತ್ವದಲ್ಲಿರುವರೆಂದು ನಾವು ಪಕ್ಷಪಾತವಿಲ್ಲದೆ ನಿರೀಕ್ಷಿಸಿಕೊಂಡಿದ್ದಾರೆ.

ವಲ್ಲಭ್ಭಾಯಿ ಪರಿಷ್ಕಾರು

ಇವರು ಬಹಿರಂಗ ಬಂಡವಾಳಶಾಹಿ [illegible] ಸಿಕ್ಕೊಂಡಿದ್ದಾರೆ. ಆದರೆ [illegible] ಇದುವರೆಗೆ ರಾಷ್ಟ್ರ [illegible] ಧ್ಯೇಯ [illegible] ಶಿಸ್ತಿನಲ್ಲಿ [illegible] ಇದು ತನಕದ ತಮ್ಮ ಜೀವನಮಾನವನ್ನು ಕಳೆದವರು. ರಾಜಕೀಯದ ಎಡಬಲಗಳನ್ನು ಪರಿಶೀಲಿಸಲು ಇವರಿಗೆ ಆಸ್ಪದ ದೊರೆತಿರಲಿಲ್ಲವೆನ್ನಬಹುದು. "ಇವರು ಶುದ್ಧ ಗಾಂಧಿ ಭಕ್ತರಾದರೂ ಕತ್ತಿಗೆ ಕತ್ತಿ" ಕೊಡಲು ಸಿದ್ಧರಿರುವ ಮನೋಭಾವದವರು. ಸಮತಾವಾದಿಗಳೂ ಕತ್ತಿ ಭಕ್ತರೇ ಆಗಿರುವರು. ಅಂಥಹ ಸಂದರ್ಭ ವಲ್ಲಭ್ಭಾಯಿಯಂತಹ ವ್ಯವಸ್ಥಾಪಕರು ಅವರಿಗೆ ಅತ್ಯುಪಯುಕ್ತರಾಗುವರು. ಈಚೆಗೆ ವಲ್ಲಭ್ಭಾಯಿಯವರು ನೆಹರುಗಳನ್ನು ತಮ್ಮ ಶ್ರೇಷ್ಠ ನಾಯಕನೆಂದು ಒಪ್ಪಿಕೊಂಡಿರುವರು. ಒಂದು ವೇಳೆ ನೆಹರುಗಳು ಬಲಗಡೆ ತಿರುಗಿದರೆ ಸರ್ದಾರರು ಅವರನ್ನನುಸರಿಸಲು ಆಕ್ಷೇಪಿಸಲಿಕ್ಕಿಲ್ಲವೆಂದು ಹಾರೈಸುವವರೂ ಇದ್ದಾರೆ.

ಸಮತಾವಾದಕ್ಕೆ ಶರಣು

ದಾಸ್ಯದ ಹೊರೆಯಿಂದ ಮುಕ್ತಗೊಂಡಾಕ್ಷಣ ನಮ್ಮ ದೇಶದೆದುರು ಭೀಕರ ಸಮಸ್ಯೆಗಳೆದ್ದು ನಿಲ್ಲುತ್ತವೆ. ಅವುಗಳನ್ನು ಪರಿಹರಿಸಲು ಜನತೆಯ ಸೌಹಾರ್ದದ ಸಹಕಾರ ಸಂಪರ್ಕಗಳು ಅತ್ಯಾವಶ್ಯಕ. ಕೊಂಗ್ರೆಸು ತನ್ನ ಶಾಸನಭಂಗದ ಉದ್ಯಮವನ್ನು ಬಿಟ್ಟು ವಿಧಾಯಕ ಚಟುವಟಿಕೆಗಳ ಕಡೆಗೆ ತಿರುಗಿದಾಗಂದಿನಿಂದ ಅದಕ್ಕೆ ಜನತಾ ಸಂಪರ್ಕವು ಕಡಿಮೆಯಾಗಿದೆಯೆಂದು ಹೇಳಲ್ಪಡುವುದು.

(೮ನೇ ಪುಟಕ್ಕೆ ಮುಂದುವರಿದಿದೆ)

KANARA COMMERCIAL BANK LTD.

PUTTUR

H 'O' Puttur] Estd 1920 [Branch Vittal

All kinds of Banking Business transacted.

Deposits Current, Savings, Cumulative

Deposits are accepted

Fixed Deposits for periods of 3 months and above up to 24 months are accepted.

SEASON DEPOSITS

ARE Accepted up to 31-5-1947 Terms on application.

ವಾರದ ವಿಜ್ಞಾನ ಪರಿಚಯ

ಗಟ್ಟಿ ಮೊಟ್ಟೆ

ಮೊಟ್ಟೆ ವ್ಯಾಪಾರವು ಜಗತ್ತಿನ ದೊಡ್ಡ ವ್ಯಾಪಾರವ್ಯವಹಾರಗಳಲ್ಲೊಂದಾಗಿದೆ. ಆದರೆ ಒಂದು ಕಡೆಯಿಂದ ಇನ್ನೊಂದು ಕಡೆ ಸಾಗಿಸುವಾಗ ಪಿಂಡಾಂಡಗಳು ಒಡೆದು ಹೋಗುವುದೂ ಹೆಚ್ಚಾಗುತ್ತ ಬಂದಿದೆ. ಈಗ ಅಮೇರಿಕನ್ ಕೋಳಿ ಶಾಸ್ತ್ರಜ್ಞರು ಸುಲಭವಾಗಿ ಒಡೆದುಹೋಗದ ಮೊಟ್ಟೆಗಳನ್ನು ತಯಾರಿಸುವುದಕ್ಕೆ ಪ್ರಯೋಗ ನಡೆಸುತ್ತಿರುವರು. ಮೊದಲು ಅವರು ಹೇಟೆಯ ಆಹಾರದಲ್ಲಿ ಯೋಗ್ಯ ಬದಲಾವಣೆ ಮಾಡಿ ಇದನ್ನು ಸಾಧಿಸಬಹುದೆಂದು ತಿಳಕೊಂಡರು. ಆದರೆ ಒಂದೇ ಆಹಾರ ತಿನ್ನುವ ಹೇಟೆಗಳ ಮೊಟ್ಟೆಗಳು ಬೇರೆ ಬೇರೆ ದಪ್ಪದ ಚಿಪ್ಪುಗಳಿದ್ದವಾಗಿವೆಯೆಂದು ಕಂಡುಕೊಂಡರು. ಈಗ ದಪ್ಪ ಚಿಪ್ಪಿನ ಮೊಟ್ಟೆಯಿಡಿಸುವಂತಾಗುವ ಕೋಳಿಗಳನ್ನು ಜತೆಮಾಡಿಸಿಯೇ ಈ ಉದ್ದೇಶ ಸಾಧಿಸಲು ಪ್ರಯತ್ನಮಾಡುತಿದ್ದಾರೆ. ಪರಿಣಾಮವಾಗಿ ಅವರು ಈಚೇಗೆ ತಯಾರಿಸಿದ ಮೊಟ್ಟೆಗಳು 8 ರಾತ್ಲಿನ ಒತ್ತಡಕ್ಕೆ ಒಡಯುವಂತಹುಗಳಾಗಿವೆ—ಮುಂಚಿನವು 4 ರಾತ್ಲಿನ ಒತ್ತಡಕ್ಕೆ ಬಿರುಕು ಬಿಡುತಿದ್ದವು.

★

೧೦೦೦ ಟನ್ ನಕ್ಷತ್ರ ಬಂಡೆ

ರಶ್ಯದ ಅತೀ ಪೂರ್ವದ ಬಂದರು ವ್ಲ್ಯಾಡಿವೊಸ್ತೋಕಿನ ಬಳಿ 2 ತಿಂಗಳ ಹಿಂದೆ ಒಂದು ಉಲ್ಕಾಪಾತದ ಪರಿಣಾಮವಾಗಿ 1000 ಟನ್ ಭಾರದ ನಕ್ಷತ್ರ ಬಂಡೆ ಬಿದ್ದಿದ್ದು, ನೆಲದಲ್ಲಿ 90 ಅಡಿಯು ಹೊಂದವಾಗಿವೆ. ಮೊಸ್ಕೋದಿಂದ ಒಂದು ವೈಜ್ಞಾನಿಕ ಮಂಡಳವು ಇದರ ಪರಿಶೋಧನೆಗೆ ತೆರಳಿದೆ. ಈ ಬಂಡೆಯ ಒಂದು ತುಂಡನ್ನು ಮೊಸ್ಕೋದ ವಿಜ್ಞಾನ ಪರಿಶೋಧನಾಲಯಕ್ಕೆ ಕಳುಹಿಸಿದಲ್ಲಿ ಅದರಲ್ಲಿ ಕಬ್ಬಿಣ, ನಿಕ್ಕೆಲ್ ಮೊದಲಾದ ಲೋಹಗಳಿವೆಯೆಂದು ತಿಳಿದು ಬಂದಿದೆ.

★

ಲಘು ಸೇತುವೆ

ಜಗತ್ತಿನ ಪ್ರಥಮ ಲಘು ಸೇತುವೆಯೊಂದು ಬ್ರಿಟನಿನಲ್ಲಿ ರಚಿತವಾಗುತ್ತಿದೆ. ಅದನ್ನು ಎಲ್ಯೂಮಿನಿಯಂ ಲೋಹ ಮಿಶ್ರಣದಿಂದ ತಯಾರಿಸಲಾಗುತ್ತದೆಂದು ಹೇಳಲಾಗಿದೆ. ಈ ಸೇತುವೆಯು ಮೇಲಕ್ಕೂ ಕೆಳಕ್ಕೂ ಚಲಿಸಲಾಗುವಂಥಹದಿದ್ದು ಅದರ ಒಂದೊಂದು ಹಂತವು 90 ಅಡಿ ಉದ್ದವಿರುತ್ತದೆ. ಅದರ ಮೇಲೆ 56½ ಇಂಚು ಅಗಲದ ರೈಲ್ವೇ ಪಟ್ಟಿಯೂ ಹಾಕಲ್ಪಡುತ್ತದೆ ಮಾತ್ರವಲ್ಲ ಜನಸಂಚಾರದ ಮಾರ್ಗಕ್ಕೂ ಅದರಲ್ಲಿ ಸ್ಥಳವಿರಿಸಲಾಗಿದೆ. ಉಕ್ಕಿನ ಬದಲಿಗೆ ಎಲ್ಯೂಮಿನಿಯಂ ಲೋಹವನ್ನು ಪಯೋಗಿಸಿರುದರಿಂದ ಸಂಕದ ಭಾರ ತುಂಬಾ ಕಡಿಮೆಯಾಗುವುದು. ಇಷ್ಟಾದರೂ ಅದು ಉಕ್ಕಿನಷ್ಟೇ ಗಟ್ಟಿಯಾಗಿದ್ದು ಮಣ್ಣು ಹಿಡಿದು ಹಾಳಾಗುವುದೂ ಇಲ್ಲ.

★

ಕೃತಕ ಮರ

ಮರದ ಎಲ್ಲಾ ಲಕ್ಷಣಗಳನ್ನೊಳಗೊಂಡಿರುವ ವಸ್ತುವೊಂದನ್ನು ಇತ್ತೀಚೆಗೆ ಲಂಡನಿನ ಪ್ರದರ್ಶನವೊಂದರಲ್ಲಿ ಇಡಲಾಗಿತ್ತು. ಅದನ್ನು ಕಾಗದ ಮತ್ತು ಮರದ ಗೊಂದಿನಿಂದ ತಯಾರಿಸಲ್ಪಟ್ಟಿದೆಂದು ತಿಳಿಸಲಾಗಿದೆ. ಇದು ಮರಕ್ಕಿಂತ ಹಗುರವಿರುವುದಾ

ದರೂ ಅದಕ್ಕಿಂತ ಹೆಚ್ಚು ಗಟ್ಟಿಯಾಗಿರುವುದು. ಉಷ್ಣತೆಗಳಿಗೆ ಇದು ಬೆಗ್ಗುವುದು, ಸುಗ್ಗುವುದು ಇಲ್ಲ.

ಕಾರ್ಖಾನೆ ಕಣ್ಣು

ಟೆಲಿವಿಜನ್ ಮಾದರಿಯ ಒಂದು 'ಕೈಗಾರಿಕೆ ಕಣ್ಣು' ತಯಾರಾಗಿದೆಯೆಂದು ಸಂಯುಕ್ತ ಅಮೇರಿಕದಲ್ಲಿ ಸಾರಲಾಗಿದೆ. ಅದಕ್ಕೆ 'ಯುಟಿಲೋಸ್ಕೋಪ್' ಎಂದು ಹೆಸರು. ಕಾರ್ಖಾನೆಯೊಂದರ ಕೇಂದ್ರ ಕಛೇರಿಯಲ್ಲಿ ಕೂತು ಅದರ ವಿವಿಧ ಭಾಗಗಳಲ್ಲಿ ಏನೇನು ನಡೆಯುತ್ತಿರುವುದೆಂದು ಇದರ ಸಹಾಯದಿಂದ ಪರಿಶೀಲಿಸಬಹುದು.

★

ಮೀನು ಕೃಷಿ

ಅಮೇರಿಕದ ಮೆಕ್‌ಗಿಲ್ ವಿಶ್ವವಿದ್ಯಾಲಯದ ಪ್ರೊಫೆಸರ್ ಬಿ ಡಬ್ಲ್ಯೂ ಟೈಲರ್ ಎಂಬವರು ಮೀನು ಉತ್ಪತ್ತಿಯನ್ನು ಅಭಿವೃದ್ಧಿಸುವ ಮತ್ತು ಮೀನುಗಳ ಆಕೃತಿಯನ್ನು ಹೆಚ್ಚಿಸುವ ಒಂದು ವಿಧಾನವನ್ನು ಕಂಡುಹಿಡಿದಿರುವರು.

ಮೊಂಟ್ರೀಲ್ ನಗರದ ಬಳಿಯಿರುವ ಎರಡು ಸರೋವರಗಳಲ್ಲಿ ಪ್ರೊಫೆಸರರು ಪ್ರಯೋಗಗಳನ್ನು ನಡೆಸಿ ಕಲ್ಲು ಸುಣ್ಣ, ಸಸಾರಜನಕ, ರಂಜಕ ಮತ್ತು ನೆಲಲವಣಗಳನ್ನು ಮಿಶ್ರಮಾಡಿದ ಆಹಾರವನ್ನು ಮೀನುಗಳಿಗೆ ಹಾಕಿದಾಗ ಅವುಗಳ ಆಕೃತಿಯೂ ಸಂಖ್ಯೆಯೂ ಹೆಚ್ಚಿದವು.

ಘಟನಾ ಸಮಿತಿಗೆ ಪ್ರತಿನಿಧಿಗಳನ್ನು ಕಳುಹಿಸಲು ನಿರ್ಧರಿಸಿದ ಉದಯಪುರ ಸಂಸ್ಥಾನಾಧೀಶರು ಇತ್ತೀಚೆಗೆ ಬೇರೆ ಕೆಲವು ಕುತಂತ್ರಿ ರಾಜರುಗಳ ದುರ್ಬೋಧನೆಗೊಳಗಾಗಿ ತಮ್ಮ ನಿರ್ಧಾರ ಬದಲಾಯಿಸಿದುದರಿಂದ ಅವರ ದಿವಾನರಾದ ಸರ್ ಟಿ ವಿಜಯ ರಾಘವಾಚಾರ್ಯರು ರಾಜಿನಾಮೆ ಇತ್ತಿರುವರು.

ಉಕ್ಕನ್ನು ತಯಾರಿಸುವ ಕೈಗಾರಿಕೆಯನ್ನು ಭಾರತ ಸರಕಾರವು ಕ್ರಮೇಣ ವಶಪಡಿಸಿಕೊಳ್ಳುವುದೆಂದೂ, ಈಗಾಗಲೇ ಎರಡು ಉಕ್ಕಿನ ಕಾರ್ಖಾನೆಗಳನ್ನು ತೆರೆಯಲು ಯೋಜನೆ ನಡೆದಿರುವುದೆಂದೂ ರಾಜಾಜಿಯವರು ಒಂದು ಭಾಷಣದಲ್ಲಿ ತಿಳಿಸಿದರು.

★

(೧ನೇ ಪುಟದಿಂದ)

ಕಾಂಗ್ರೆಸು ಎತ್ತ ಕಡೆ ಸಾಗುತ್ತಿದೆ?

ತ್ತಿದೆ. 'ತ್ಯಾಗ ಸೇವಾದರ್ಶಗಳಿಂದ ಜನಾಕರ್ಷಿತರಾಗಿದ್ದವರು ಅಧಿಕಾರ ಸ್ಥಾನಗಳ ಪ್ರಭಾವದಿಂದ ಜನಾದರ ಪಡೆಯಲು ಪ್ರಯತ್ನಿಸುವಂತಾಗಿದೆ' ಎಂದೂ ಆಪಾದಿಸಲಾಗಿದೆ.

ಈಗ ಕಾಂಗ್ರೆಸಿನ ಸದಸ್ಯರಾಗಬೇಕಾದರೆ ಕೆಲವೊಂದು ವಿಶಿಷ್ಟ ಶರ್ತಗಳನ್ನು ಪೂರೈಸಬೇಕು. ಆ ಸಂಸ್ಥೆಯ ಅಧಿಕಾರ ಸ್ಥಾನದಲ್ಲಿರುವವರು ಖಾದಿ ಅಭ್ಯಾಸಿಗಳೂ, ಜನ ಸೇವಾದರ್ಶದವರೂ, ಮಾದಕ ದ್ರವ್ಯ ನಿಷೇಧಿಗಳೂ ಆಗಿರಬೇಕೆಂದಿದೆ. ಇದು ಜನ ಸಾಮಾನ್ಯರಿಗೆ ಸಾಧ್ಯವಾಗುವುದಂತಹದಲ್ಲ. ಒಂದು ಸಂಸ್ಥೆಯು ಇಂತಹ ಶುದ್ಧ ಸದಸ್ಯರಿಂದ ತುಂಬಿದರೆ ಅದರಷ್ಟು ಸುಸಂಸ್ಕೃತ ಸಂಘ ಬೇರೊಂದಿರಲಿಕ್ಕಿಲ್ಲ. ಅಂತಹ ಸಂಘವು ಜಗತ್ತಿನ ನಾಯಕತ್ವ ವಹಿಸಲೂ ಅರ್ಹವಾಗುವುದು. ಆದರೆ ಭಾರತದ ಈಗಿನ ಪರಿಸ್ಥಿತಿಯಲ್ಲಿ ಇಂತಹ ಉನ್ನತ ಜನ ಲಕ್ಷಣಗಳನ್ನು ಪರೀಕ್ಷಿಸಿ ಕುಳಿತುಕೊಳ್ಳಲು ಸಮಯವಿಲ್ಲ. ಪರಿಣಾಮವಾಗಿ ಕಾಂಗ್ರೆಸು ಹೆಸರಿಗೆ ಮಾತ್ರ ಆದರ್ಶ ಕಟ್ಟಿಕೊಂಡವರ ಸಂತ್ರಾಗುವುದು. ಅದರ ಸದಸ್ಯತನದ ಮೇಲೆ ಇದೊಂದು ತಾತ್ವಿಕ ನಿರ್ಬಂಧ. ಇದರಿಂದ ಸಂಸ್ಥೆ ಜನಸಾಮಾನ್ಯರ ಹಿತಾಭಿಲಾಷಿಯಾಗುವ ಸಂಭವವಿಲ್ಲ" ಎಂದು ಸಮತಾವಾದಿಗಳು ತರ್ಕಿಸುತ್ತಿರುವರ.

[illegible] ಹಿತಗಳು ತಮ್ಮ ಸ್ವ... ಬಳದ ಕೈ... ಗೆ ಸೇರಿಸಿ ತಮ್ಮ ಹಿತ ಸಾಧಿಸಲು ಈಗಿನ ಕಾಂಗ್ರೆಸ್ ಪಟ್ಟಿನಲ್ಲಿ ಅವಕಾಶವಿದೆ. ... ದನ್ನು ಕೆಲವೊಂದ ... ಹಿತದ ಮುಖಂಡರು ಉದ್ದೇಶಪೂರ್ವಕವಾಗಿ ಮಾಡಿದ ಉಪಾಯವೆಂದು ಹೇಳಲಾಗಿದೆ.

ಇದೇ ಸಮಯಕ್ಕೆ ದೇಶದ ಸಂಪತ್ತನ್ನು ಹಂಚಿ ಹಾಕಬೇಕೆಂಬ ಸಮತಾವಾದದ ಸೊಲ್ಲು ಕೇವಲ ನಗೆಯ ದಾರಿದ್ರ್ಯವನ್ನನುಭವಿಸುವ ಜನರ ಕಿವಿಗೆ ಇಂಪಾಗಿ ಕಾಣುವುದೂ ಸಹಜವೆ. ಇದರಿಂದ ಅಂತಹ ತತ್ವ ಪ್ರಚಾರಕರಿಗೆ ಪ್ರಚಂಡ ಬೆಂಬಲವೂ ದೊರಕುವುದು.

ಎಂತಹ ಸಮತಾವಾದ

ಇಂದು ದೇಶದ ಜನತೆಗೆ ಹಳೇ ರಾಜ ನಾಯಕತ್ವದ ಮೇಲೆ ಜಿಗುಪ್ಸೆ ಹುಟ್ಟಿದ್ದು ಕೌತುಕವಲ್ಲ. ಹೊಸ ಯುಗ, ಹೊಸ ಯೋಜನೆ, ವಿಚಾರಗಳ ಕಾಲವಿದು. ಆಧುನಿಕ ವಿಜ್ಞಾನ ಪ್ರಗತಿಯ ಸುಖವನ್ನನುಭವಿಸಲು ಎಲ್ಲರೂ ಹಾತೊರೆಯುವರು. ಶರೀರವೆದು ಅರೆಹೊಟ್ಟೆಯ ಸನ್ಯಾಸಿಗಳಾಗಲು ಯಾರಿಗೂ ಇಷ್ಟವಿಲ್ಲ. ಇಂಗ್ಲೆಂಡಿನ ಜನರಾದರೂ ಚರ್ಚಿಲ್ಲರಂತಹ ಪ್ರಚಂಡ ಯುದ್ಧ ದಿಗ್ವಿಜಯಿಗಳನ್ನು ಮೂಲೆಗೆ ತಳ್ಳಿ ಹಾಕಲು ಅತ್ಯಲ್ಪ ಸಮಯ ತೆಗೆಯಿತು. ದೇಶದ ಒಡೆತನ ದುಡಿಯಾಳುಗಳಿಗೆ ಸಲ್ಲತಕ್ಕದೆಂಬ ಭಾವನೆ ವಿಶ್ವದ ಜನತೆಯಲ್ಲಿ ಬಲವಾಗಿ ಬೇರೂರಿದೆ.

ಇಲ್ಲಿ ನಾವು ಜಾಗರೂಕರಾಗಿರಬೇಕಾದ ಒಂದು ವಿಷಯವಿದೆ. ಸಮತಾವಾದ ಕೂಡಲೇ ಅದರೊಂದಿಗೆ ಸರ್ವಾಧಿಕಾರ, ಪ್ರತೀಕಾರ, ಪ್ರತಿಹಿಂಸೆಯ ಉದ್ರೇಕಗಳು ಕಾರ್ಯ ಪ್ರೇರಣೆಗಳಾಗುವುದೂ ಸಹಜ. ಆದುದರಿಂದ ಸಮತಾವಾದವು ಬರುವುದಾದರೆ ಬರಲಿ. ಅದನ್ನು ತಡೆಯಲು ಯತ್ನಿಸುವುದೆಂದರೆ 'ಮಿಂಚಿಗೆ ಕೊಡೆ ಹಿಡಿಯುವ ಮರ ಳುತನ'. ರಾಜಕೀಯ ಕ್ರಾಂತಿಗಳು ಜ್ವಾಲಾಮುಖಿಯಂತೆ ಪ್ರಕೃತಿ ಸಹಜವಾದುವು. ಆದರೆ ಭಾರತಕ್ಕೆ ಅತ್ಯಪೂರ್ವವಾದೊಂದು ಸಂಸ್ಕೃತಿಯ ಹಿನ್ನೆಲೆಯಿದೆ. ... ದ ವಿಚಾರಗಳ, ಬುದ್ಧ ಬೋಧನೆಯ ... ರಹರಿದು ಕಾಂಗ್ರೆಸು ಬ್ರಿಟಿಷರು ಹೊ... ಡೆದ ವಿಸರ್ಜನ ಹೊಂದಬೇಕಾಗಿ ... ಅದರ ಘಟನೆಯನ್ನು ಪರಿಸ್ಥಿತಿಗನುಕೂಲವಾಗಿ ಬದಲಾಯಿಸಿ ಹೆಚ್ಚೆಚ್ಚು ಜನತೆಯು ಅದರಲ್ಲಿ ಸೇರಲಾಸ್ಪದ ಕೊಡಬೇಕು. ಆ ... ಮುಖಂಡರು ತಮ್ಮ ಹಿಂದಿನ ಅನುಭವದಿಂದ ಸುಸಂಸ್ಕೃತವಾದ ಸಮಾಜವಾದ ಪದ್ಧತಿಯೊಂದನ್ನು ಸ್ಥಾಪಿಸಲು ನಿರ್ಧರಿಸಬೇಕು. ... ಯಾವ ವಿಶಿಷ್ಟ ವರ್ಗಕ್ಕೂ ಅದರಲ್ಲಿ ಪ್ರತ್ಯೇಕ ಸಹಾನುಭೂತಿಗೆಡೆಯಿರಬಾರದು. ಹೀಗಾಗುವುದಾದರೆ ಹಿಂಸೆ, ಅನಾಚಾರಕ್ಕಾಗಲಿ, ಸರ್ವಾಧಿಕಾರ ದಬ್ಬಾಳಿಕೆಗಾಗಲಿ ಎಡೆಯೆಲ್ಲಿ? —ಕ್ರಾನಿಕಲ್

ESTD 1906

CANARA BANK, LIMITED.

Incorporated in British India with Limited Liability)

(PROGRESS STATEMENT CORRECT TO THOUSANDS OF RUPEES)

LIABILITIES

	1945	1946
Capital Subscribed	29,00,000	29 00 000
Capital paid up	28,43,000	28 80,000
Reserve	11,00,000	11,00 000
Deposits	3 50,43,000	4 60 40 000
Due to Bankers	26,91,000	69 57 000
Call Deposits from Bankers	8 00,000	15 00 000
Branch Adjustments	22,07,000	21,09,000
Bills for collection and foreign bills negotiated	20,56,000	34,23,000
Other Liabilities	77,000	85,000
Profit for the year	3,61,000	4,19 000
Rs	4,71,78,000	6,45,13,000

ASSETS

	1945	1946
Cash	1 01 91 000	1 16,16 000
Govt Securities	1,80,45,000	2,75,61,000
Advances to customers	1,66 87 000	2 01,38,000
Bills for collection and Foreign Bills negotiated	20 56,000	34,23,000
Landed Properties	28,000	5,000
Bank Premises and Furniture and Fixtures	1,46,000	1,47,000
Other Assets	10,25,000	16,23,000
Rs	4,71,78,000	6,45,13,000

ಮಂಗಳೂರು ಕೋ-ಒಪರೇಟಿವ್ ಟೌನ್ ಬೇಂಕ್, ಲಿಮಿಟೆಡ್

ಈ ಬೇಂಕಿನ ವಾರ್ಷಿಕ ಮಹಾಸಭೆ ಆ ಬೇಂಕಿನಲ್ಲಿ ಕಳೆದ ತಾ ೨೭ರಲ್ಲಿ ಅದರ ಅಧ್ಯಕ್ಷ ಶ್ರೀ। ಎ. ಎಸ್ ಪ್ರಭು ಅವರ ಅಧ್ಯಕ್ಷತೆಯಲ್ಲಿ ಜರುಗಿ, ಸೇಕಡಾ ೨೮ ಡಿವಿಡೆಂಡ್, ಸಿಬಂದಿಗೆ ೧ ತಿಂಗಳ ಸಂಬಳದಷ್ಟು ಬೋನಸು ಕೊಡುವ ನಿರ್ಣಯವಾಯಿತು. ನಿವೃತ್ತ ಡೈರೆಕ್ಟರ್‌ಗಳು ತಿರುಗಿ ಚುನಾಯಿಸಲ್ಪಟ್ಟಿದ್ದಾರೆ

ದ ಕ. ಜಿಲ್ಲಾ ವಾಣಿಜ್ಯ ನೌಕರರ ಸಂಘ ಮಂಗಳೂರು ಈ ಪ್ರಥಮ ಪರಿಷತ್ತು ಇದೇ ಬರುವ ಮೇ ತಾ ೧೮ರಂದು ಮಂಗಳೂರಲ್ಲಿ ಕೆನರಾ ಹ್ಯಾಸ್ಕೂಲಿನ ಭುವನೇಂದ್ರ ಹಾಲಿನಲ್ಲಿ ಜರಗಲಿದೆ ಈ ಸಮ್ಮೇಳನದ ಉದ್ಘಾಟನೆಯನ್ನು ಮದರಾಸು ಸರಕಾರದ ಮಾನ್ಯ (ಮಜೂರಿ) ಮಂತ್ರಿ ಡಾ ಟಿ ಯಸ್ ಯಸ್ ರಾಜನ್‌ರವರು ಮಾಡಲಿರುವರು ಅಧ್ಯಕ್ಷಸ್ಥಾನವನ್ನು ಶ್ರೀ ಸೂರ್ಯನಾರಾಯಣ ರಾವ್ ಎಂ ಎಲ್ ಎ ಇವರು ವಹಿಸಲಿರುವರು—ಹೀಗೆಂದು ತಿಳಿದುಬಂದಿದೆ

ಮಜೂರರ ದಿನಾಚರಣೆ: ಈ ದಿನಾಚರಣೆಯು ಇದೇ ತಾರೀಕು 4-5 47 ರಲ್ಲಿ ಪಂದ್ಯಾಟ, ಸಂಗೀತ ಇತ್ಯಾದಿ ವಿನೋದಗಳೊಡನೆ ಮಿಲಾಗ್ರೀಸ್ ಹ್ಯಾಸ್ಕೂಲ್ ವಠಾರದಲ್ಲಿ ನಡೆಯಲಿದೆ ಎಂದು ತಿಳಿದುಬಂದಿದೆ

ಸಂಗೀತ ಕಚೇರಿ: ಮಂಗಳೂರು ಲಲಿತಕಲಾ ಮಂದಿರದವರು ಕಳೆದ ತಾ ೨೦ನೇ ರವಿವಾರ "ದುರ್ಗಭವನ ದಲ್ಲಿ ಲಲಿತಕಲಾ ಮಂದಿರದ ಶಿಕ್ಷಕರಾದ ಶ್ರೀ ಡಿ ವಿ ಕಾಮತ್ ಬಿ ಮ್ಯೂಸಿಕ್ ಇವರದೊಂದ ಸಂಗೀತ ಕಚೇರಿಯನ್ನೇರ್ಪಡಿಸಿದ್ದರು. ಮುಂಬಯಿಂದ ಬಂದಿರುವ ಶ್ರೀ ರವಿಚಂದ್ರ ಇವರ ತಬ್ಲಾ ವಾದನವೂ ಶ್ರೀ ಸುಂದರರಾಮರಾವ್ ಇವರ ಹಾರ್ಮೋನಿಯಂ ವಾದನವೂ ಇದ್ದುವು ಮಂಗಳೂರಿಗೆ ಬಂದಿರುವ ಡೆಪ್ಯುಟಿ ಡೈರೆಕ್ಟರ್ ಒಫ್ ಇಂಡಸ್ಟ್ರೀಸ್ ಎಂಡ್ ಕೊಮರ್ಸ್ ರಾವ್ ಬಹದೂರ್ ಎನ್ ಎಂ ಅಡ್ಯಂತಾಯರು (ಇವರೂ ಸ್ವತಃ ಉಚ್ಚಶ್ರೇಣಿಯ ಸಂಗೀತ ವಿದ್ವಾಂಸರು) ಅಂದಿನ ಮಾನ್ಯ ಅತಿಥಿಯಾಗಿದ್ದರು.

೧ನೇ ನಂಬ್ರ: ಶ್ರೀ ನರಸಿಂಹ ರಾವ್, ಇವರ ಜಟ್ಕಕ್ಕೆ ಈ ವಾರಿಯೂ ೧ನೇ ನಂಬ್ರವನ್ನು ಕೊಡಲಾಗಿದೆ ಜಟ್ಕವನ್ನು ಅಚ್ಚುಕಟ್ಟಾಗಿ ಇರಿಸಿದ ಸಂಭಾವನೆಯಾಗಿ ಇದನ್ನು ಗಣಿಸಬಹುದು ನಮ್ಮೂರಿನ ಜಟ್ಕಗಳ ಬಾಡಿಗೆ ಯುದ್ಧಪೂರ್ವದ ನಾಲ್ಕೈದು ಪಾಲು ಹೆಚ್ಚಿದಂತೆ, ಎಷ್ಟೋ ಜಟ್ಕಗಳ ದುಸ್ಥಿತಿಯೂ ನಾಲ್ಕೈದು ಪಾಲು ಹೆಚ್ಚಿದೆ ಸಾರ್ವಜನಿಕರು ಉಪಯೋಗಿಸುವ ವಾಹನಗಳನ್ನು ಸ್ವಚ್ಛವಾಗಿರಿಸುವಂತೆ ಅಧಿಕಾರಿಗಳು ಕಠಿನ ನಿಯಮಗಳನ್ನಿರಿಸುವುದೂ ಅವಶ್ಯವಿದೆ

ಕೋರ್ಟುಗಳು: ಮುನ್ಸೀಫ್ ಕೋರ್ಟು, ಸಬ್ ಕೋರ್ಟು ಮತ್ತು ಡಿಸ್ಟ್ರಿಕ್ಟ್ ಕೋರ್ಟುಗಳು ಸೆಕೆಗಾಲದ ರಜೆಗಾಗಿ ಮುಚ್ಚಲ್ಪಟ್ಟಿದ್ದು, ಜೂನ್ ತಿಂಗಳಲ್ಲಿ ಆರಂಭವಾಗುವುವು

ಕಾಲ್ಚೆಂಡು ಪಂದ್ಯಾಟ: ಇದೇ ತಿಂಗಳ ೮ರಿಂದ ಕುಂಬಳೆ ಮೈದಾನಿನಲ್ಲಿ ಕಾಲ್ಚೆಂಡು ಪಂದ್ಯಾಟದ ವ್ಯವಸ್ಥೆಯನ್ನು ಕುಂಬಳೆ ಅಥ್ಲೆಟಿಕ್ ಎಸೋಸಿಯೇಶನ್‌ನವರು ಮಾಡಿರುತ್ತಾರೆ ಸ್ಪರ್ಧಿಸಲಿಚ್ಛಿಸುವವರು ಈ ತಿಂಗಳ ಆಖೈರಿಯೊಳಗೆ ಟೀಮಿಗೆ ರೂ. ೫ ೦-೦ರಂತೆ ಪ್ರವೇಶಧನ ಕಳಿಸಿಕೊಡಬೇಕು.

ಜಿಲ್ಲಾ ಪರಿಚಯ

೧

ಸ್ವಾಮಿಜಿಯವರು: ಕಳೆದ ವಾರ ನಗರಕ್ಕೆ ಚಿತ್ತೈಸಿದ ಶ್ರೀ ಕಾಶೀಮಠಾದೀಶ ಮತ್ತವರ ಶಿಷ್ಯ ಸ್ವಾಮಿಜಿಯವರು ಇಂದು ಮೂಲ್ಕಿಗೆ ಹಿಂತಿರಿಗಿದರೆಂದು ತಿಳಿದುಬರುತ್ತದೆ ಶ್ರೀ ಶ್ರೀಯವರು ಇಲ್ಲಿದ್ದ ಅವಧಿಯಲ್ಲಿ ಭಕ್ತವೃಂದದ ಹಲವು ವಿಧದ ಸೇವೆಯನ್ನು ಸ್ವೀಕರಿಸಿ ತಾ 27ರಂದು ಗುರುಪುರದ ರಥೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಲೂ ಹೋಗಿದ್ದರು

ಹವಾಮಾನ: ಕಳೆದ ವಾರವೆಲ್ಲ ಕಡು ಬೇಸಗೆಯ ಪರಮಾವಧಿ ಎಂಬಂತೆ ಅತ್ಯುಷ್ಣತೆಯದಾಗಿ ಅನುಭವವಾಯಿತು ನಗರ ಮಧ್ಯದಲ್ಲಿ ಸೊಳ್ಳೆಗಳ ಕಾಟವೂ ವಿಪರೀತವಾಗಿದೆಯೆಂದೂ ಹೇಳಲ್ಪಟ್ಟಿದೆ ನಗರ ಆರೋಗ್ಯ ಖಾತೆಯವರು ತೋಡು ಮತ್ತು ಮನೆ ವಠಾರಗಳಲ್ಲಿರುವ ಕೆಸರು ಕೊಳೆಯ ಸ್ಥಳಗಳನ್ನು ಹೊಸದಾಗಿ ಪ್ರಚಾರಕ್ಕೆ ಬಂದಿರುವ ಡಿ ಡಿ ಟಿ ರಾಸಾಯನಿಕ ದ್ರವ್ಯದಿಂದ ಪ್ರಸಾರ ಮಾಡಿರುವರ ಇದರಿಂದ ಸೊಳ್ಳೆ ಮತ್ತಿತರ ರೋಗಾಣುಗಳು ಶೀಘ್ರವೂ ಸಂಪೂರ್ಣವೂ ಆಗಿ ನಾಶಹೊಂದುತ್ತವೆಂದ ...ಳಲಾಗಿ...

ಹಡಗ ಪ್ರಯಾಣ: ಬೊಂಬೇ ಸ್ಟೀಮ್ ನೆವಿಗೇಶನ್ ಕಂಪೆನಿಯವರು ಒಂದು ಪ್ರಕಟಣೆ ಹೊರಡಿಸುತ್ತ ಈ ರೀತಿ ತಿಳಿಸಿರುತ್ತಾರೆ

ಮಂಗಳೂರಿಂದ ಮುಂಬಾಯಿಗೆ ಹೋಗುವ ಸ್ಟೀಮರುಗಳನ್ನು ಇದೇ ತಾ ೧೭ರಿಂದ ಬಂದು ಮಾಡಲಾಗಿದೆ ಆದರೆ ಪ್ರಯಾಣಿಕ ಹಡಗಗಳು ಮಲ್ಪೆ ಬಂದರದಿಂದ ಇದೇ ಮೇ ತಾ ೧ಕ್ಕೆ ಪ್ರಯಾಣಿಕರನ್ನು ಮುಂಬಾಯಿಗೆ ಒಯ್ಯುವವು ನಂತರ ಮಳೆಗಾಲದ ಕಾರಣದಿಂದ ಜಲಪ್ರವಾಸ ಬಂದಾಗುವುದು

೧೫ ದಿನಕ್ಕೊಮ್ಮೆ ಹೊರಡುವ ಸರಕು ಮತ್ತು ಪ್ರವಾಸದ ಹಡಗವು ಮೇ ತಾ ...ಕ್ಕೆ ಹೊರಟು ೧೨ಕ್ಕೆ ಇಲ್ಲಿ ಮುಟ್ಟುವುದು ಮಂಗಳೂರಿನ ಪ್ರವಾಸಿಕರನ್ನು ಈ ಸಂದರ್ಭದಲ್ಲಿ ಒಯ್ಯಲಾಗುವುದು

ಸಿಟಿ ಬಸ್ ಸೌಕರ್ಯ ಗಣಪುರದ ವರೆಗೆ ಸಿಟಿ ಬಸ್ಸಿನ ಸಂಚಾರ ಕಾರ್ಯಕ್ರಮದ ಏರ್ಪಾಡಾಗಿದ ಅದೇ ರೀತಿ ಒಂ...ಳ ಲೈಟ್ ಹೌಸ್ ಪಡೀಲ್ ತನಕ ಸಿಟಿಬಸ್ ಹೋಗುವುದು ಒಟ್ಟಿನಲ್ಲಿ ಎರಡು ಸರ್ವೀಸ್ ಬಸ್ಸುಗಳು ಹೆಚ್ಚಿಸಲ್ಪಟ್ಟಿವೆ

ಬಾವುಗಳನ್ನು ಕೂಡಲೇ ಗುಣಪಡಿಸಿರಿ

ಚರ್ಮವನ್ನು ಉಬ್ಬಿ ನೋವುಂಟುಮಾಡುವ ವಿಷಕಾರಿ ವ್ರಣಗಳು ಈ ರೀತಿ ಗುಣವಾಗುತ್ತವೆ ಅದನ್ನು ಆಗಾಗ ಬಿಸಿ ಕುಟಿಕೂರಾ ಸೋಪು ಹಾಕಿ ತೊಳೆಯಿರಿ, ಅದರ ಮೇಲೆ ಕುಟಿಕೂರಾ ಮುಲಾಮು ಹಚ್ಚಿರಿ

ಕುಟಿಕೂರಾ ಮುಲಾಮು

CUTICURA OINTMENT

ಒಡೆದು, ಬಾತು, ನೋಯಿಸುವ ಕಾಲುಗಳು ತ್ವರೆಯಾಗಿ ಶಮನಿಸಿ ಸಂತೈಸಲ್ಪಡುತ್ತದೆ

ಮಲಿಯಾವಧಿಗಳಿಗೆ ಜಾಂಬಕ್ ಮುಲಾಮು ಪಾದ ಸುಖ ಕೊಡುತ್ತದೆ ಅದರ ವನಸ್ಪತಿ ಎಣ್ಣೆಗಳು ನೋವು ಆಯಾಸವನ್ನು ಶಮನಿಸುತ್ತವೆ, ಬಾತುವಿಕೆಯನ್ನೂ ಕಡಿಮೆ ಮಾಡುತ್ತವೆ ಕಾಲು ಆಣಿಗಳನ್ನು ಸುಲಭವಾಗಿ ತೆಗೆಯಬರುವಂತೆ ಅವನ್ನು ಮೃದುಮಾಡುತ್ತದೆ ಒಡೆದು, ಬಾತುಹೋದುದನ್ನು ಜಾಂಬಕು ಶೀಘ್ರ ಗುಣಪಡಿಸುತ್ತದೆ

ಮಡವೆ, ಮುದ್ದಣ, ಕಜ್ಜಿ, ಕಾಲು, ಪಾದ ಬೇನೆ ಮುಂತಾದ ಚರ್ಮವ್ಯಾಧಿ ಮತ್ತು ಘಾತಗಳಿಗೆ ಜಾಂಬಕು ಗುಣಕಾರಿ



ಜಾಂಬಕನ್ನೇ ಉಪಯೋಗಿಸಿರಿ

Zam-Buk

ಜಗದ್ವಿಖ್ಯಾತ ವನಸ್ಪತಿ ಮುಲಾಮು,

ಖಂಡಿತ ಪ್ರಾಣಿಕೊಬ್ಬು ರಹಿತವಾದುದು.

ನಾಗರೀಕ ವ್ಯವಹಾರ

ಆಹಾರ ಪರಿಸ್ಥಿತಿಯು ಪುನಃ ಗಂಭೀರ ರೂಪ ತಾಳಿದಂತಿದೆ. ಅಕ್ಕಿಯೊಂದನ್ನು ಕೆಲವು ವಾರಗಳ ಹಿಂದೆ ಒಂದುವರೆ ಪಾವಿಗೆ ತಂದನಂತರ ಗೋದಿ, ಹಿಟ್ಟು, ಬೇಳೆಗಳ ಅಭಾವ ಬಹಳ ತೀವ್ರವೇ ಆಗಿದೆ ಎನ್ನಬಹುದು ಕೆಲವು ಸಮಯ ಬೆಲ್ಲ, ತೆಂಗಿನಕಾಯಿ, ಎಣ್ಣೆಗಳು ನಿಯಂತ್ರಣಗೊಳಗಾದವು, ನಂತರ ಉದ್ದು ಹೆಸರು ಮೊದಲಾದ ಧಾನ್ಯಗಳು ಶೇಕರಿಸುವ ಶಿಕ್ಷೆಗೊಳಗಾದವು ಸರಕಾರ ಇವುಗಳ ಕಂಟ್ರೋಲು ಒಂದಿಷ್ಟು ಕೈಯಾಡಿಸಹತ್ತಿತೆಂದರೆ ಮತ್ತೆ ಆ ವಸ್ತುಗಳು ಮಾಯವಾಗುವುದು ಸಾಮಾನ್ಯ ಅನುಭವವಾಗತೊಡಗಿತು. ಕಂಟ್ರೋಲ್ ತೆಗೆದಾಕ್ಷಣ ಅವು ಪುನಃ ಕಾಣಿಸಿಕೊಳ್ಳುವುದು ವಿಚಿತ್ರ ಈಗ ಯಾವುದಕ್ಕೆ ಕಂಟ್ರೋಲ್ ಇದೆ ಏನು ಸಂಗತಿ ಎಂಬುದೂ ಸರಿಯಾಗಿ ತಿಳಿಯಲು ಏರ್ಪಾಡಿಲ್ಲ ಒಂದು ಕಂಟ್ರೋಲ್ ಮಾಡಲ್ಪಡುವಾಗ ಎರಡು ಕಂಟ್ರೋಲುಗಳು ತೆಗೆದುಹಾಕಲ್ಪಡುತ್ತವೆ ಮತ್ತೀ ವಸ್ತುಗಳಾದರೂ ಎಲ್ಲಿ ಸಿಗುತ್ತವೆ, ಅವುಗಳನ್ನು ಪಡೆಯುವ ವಿಧಾನಗಳೇನು ಎಂಬುದರ ಕುರಿತೂ ಅಧಿಕಾರಿಗಳು ಸ್ಪಷ್ಟವಾಗಿ ಸಾರ್ವಜನಿಕರ ತಿಳುವಳಿಕೆಗೆ ತರುವುದೊಳಿತು ಕೆಲವಕ್ಕೆ ಪರ್ಮಿಟು ಬೇಕು, ಕೆಲವು ಅಕ್ಕಿ ಕಾರ್ಡಿನ ಮೂಲಕ ಸಿಗುತ್ತವೆ ಇಂತಹ ಏರ್ಪಾಡಿನಲ್ಲಿ ಕೆಲವರು ಹಲವರ ಮೋಸದ ಕಾರ್ಯಗಳಿಗೆ ತೊಡಗಲು ಆಸ್ಪದವಿದೆ ಆದುದರಿಂದ ಆಹಾರವಸ್ತುಗಳ ವಿತರಣಾಧಿಕಾರಿಗಳು ಇನ್ನಷ್ಟು ಬಿರುಸಾದ ಪ್ರಚಾರ ಪ್ರಕಟಣೆಗೆ ಯತ್ನಿಸಬೇಕು ನಾಗರೀಕರಿಗೆ ನಿರ್ದಿಷ್ಟವಾಗಿ ಯಾವುವು ಸಿಕ್ಕುವುದಿಲ್ಲ, ಅವನ್ನು ಸಿಕ್ಕುವಂತೆ ಹೇಗೆ ಮಾಡಬಹುದು, ಲಾಭಖೋರರು, ಕಪ್ಪುಸಂತೆಗಾರರು ಆಹಾರ ವಸ್ತುಗಳ ಮೇಲೆ ಅನೀತಿ ಲಾಭಗಳಿಸಲು ಯತ್ನಿಸುವರೋ ಎಂದು ತಪಶೀಲು, ಗುಪ್ತ ವಿಚಾರಣೆ ನಡೆಸುವುದರಿಂದ ಸರಕಾರಕ್ಕೆ ಸಂಪಾದಿಸಬೇಕಾದ್ದು ತುಂಬಾ ಇದೆ 'ಜನಪದೆ ಜನತೆಗೆ ಇದರಿಂದ ಭಕ್ತಿ ಭಾವನೆಗಳು ಹೆಚ್ಚುತ್ತವೆ ಮುಂದೆ ಆಡಳಿತವನ್ನು ಜನತೆ ತಮ್ಮದನ್ನಾಗಿಯೇ ಆದರಿಸುವರು ಅದಿಲ್ಲದಿದ್ದರೆ ಆಡಳಿತದಲ್ಲೂ, ಸಾರ್ವಜನಿಕ ವ್ಯವಹಾರದಲ್ಲೂ ಅಲ್ಲಸಲ್ಲದ ಕೆಟ್ಟ ತರ್ಕ ವಿತಂಡವಾದಗಳಿಗೆ ಆಸ್ಪದವಾಗುವುದು

ಶ್ರೀ। ಆರೂರು ಶೇಷಗಿರಿರಾಯರ ನಿಧನ: ಕನರಾ ಪಬ್ಲಿಕ್ ಮೋಟಾರು ಕಂಪೆನಿಯ ಮೆನೇಜಿಂಗ್ ಡೈರೆಕ್ಟರರೂ, ಉಡುಪಿ ತಾಲೂಕಿನ ಪ್ರಸಿದ್ಧ ವರ್ಗದಾರ ಶ್ರೀಮಂತರೂ ಆಗಿದ್ದ ಶ್ರೀ ಆರೂರು ಶೇಷಗಿರಿರಾಯರು ಇದೇ ಕಳೆದ ತಾ ೨೧ರಲ್ಲಿ ದಿವಂಗತರಾದರೆಂದು ತಿಳಿಸಲು ವಿಷಾದಿಸುವೆವು ಮೃತರ ಆತ್ಮಕ್ಕೆ ಶಾಂತಿಯಾಗಲಿ

REGISTERED

Arroniya & Hills Herb

A most powerful and well renowned Asthma extraordinary herb for more than 150 years founded by a Sidh Mahatma to be taken once in a month on full moonday. 5-5-5.

Correspondance in English.

Mahatma, S. K. Dass

Sri Sant Sewa Ashram

P. O. Chitrakot (Banda)

...ಯಾಯಿತು... ಬಿಟಿಷರ ಪ್ರಾ... ಸಂಸ್ಥಾನಗಳ ಒಂದಿಷ್ಟು ಭಾಗಗಳನ್ನು, ಪಾಕಿಸ್ತಾನ ವನ್ನೂ, ಪ್ರತ್ಯೇಕ... ಭಾರತ ಸಾಮ್ರಾಜ್ಯವನ್ನು ಕಟ್ಟಿದ್ದರು. ಆದರೆ ಇಂದು ಸಂಕಷ್ಟದಿಂದ ಈ ಸಾಮ್ರಾಜ್ಯ ಕರಗಿಹೋಗುವುದೆಂದು ಅವರು ಕನಸಿನಲ್ಲೂ ಭಾವಿಸಲಿಲ್ಲ. ಒಂದು ಕಾಲದಲ್ಲಿ ಸಾಮ್ರಾಜ್ಯಶಾಹಿಗಳ ಚಮತ್ಕಾರದ ಮುಖ ಭಾಗ್ಯಗಳನ್ನು ಪೂರೈಸಿಕೊಟ್ಟ ಈ ವಿಭಾಗ, ಪಾಕಿಸ್ತಾನ ಸಾಂಪ್ರದಾಯಿಕ... ಬ್ರಿಟಿಷ್ ಸಾಮ್ರಾಜ್ಯದ ಭೋಗಗಳ ಮತ್ತು ರಕ್ಷಣಾ ಯೋಜನೆಯ ಪ್ರತೀಕವೆಂದು ಹಿಂತದಲ್ಲೂ ಒಂದು ಚರಿತ್ರಾರ್ಹ ಕೆಲಸವಾಗುತ್ತದೆ.

ಒಂದು ಮನೆಯನ್ನು ಕಟ್ಟುವುದಕ್ಕಿಂತ ಅದನ್ನು ನಾಶಗೊಳಿಸುವುದು ಅತ್ಯಂತ ಸುಲಭವೆಂದನ್ನಲಾಗುತ್ತದೆ. ಆದರೆ ಬ್ರಿಟಿಷ್ ಸಾಮ್ರಾಜ್ಯವನ್ನು ಕರಗಿಸಲು ನೇಮಿತರಾದ ಮೌಂಟ್ ಬೇಟನ್ನರಿಗೆ ತಮ್ಮ ಕಾರ್ಯವು ಅಷ್ಟೊಂದು ಸುಲಭವಾಗಿ ತೋರುವುದಿಲ್ಲ.

ಅವರ ದಕ್ಷತೆಯ ಮೊದಲ ಪರಿಚ್ಛೇದವು ಮುಗಿದು ಅದರಲ್ಲವರು ವಿವಿಧ ರಾಜಕೀಯ ಮುಖಂಡರ ಅಭಿಪ್ರಾಯ ತತ್ವಗಳನ್ನು ಪರಿಚಯಮಾಡಿಕೊಂಡಿರುವರು. ಈಗವರು ವ್ಯಾವಹಾರಿಕತೆಯ ಎರಡನೆಯದೂ ಮಹತ್ವದ್ದೂ ಆದ ಭಾಗವನ್ನು ಪರಿಶೀಲಿಸುತ್ತಿರುವರು.

ಗವರ್ನರುಗಳ ಮತ್ತು ಇತರ ರಾಜಕೀಯ ಅಧಿಕಾರಿ ವರ್ಗದವರ ಬಳಿ ನಡೆಸಿದ ಮಾತುಗಳಿಂದ ಇಂದಿನ ಬಿಕ್ಕಟ್ಟಿನ ಸಮಸ್ಯೆಯನ್ನು ಪರಿಹರಿಸುವ ಯಾವ ಉಪಾಯವೂ ಬಗೆಹರಿಯಲಿಲ್ಲವೆಂದು ತೋರುತ್ತದೆ. ಬ್ರಿಟಿಷರು ಒಂದು ನಿರ್ದಿಷ್ಟ ಅವಧಿಯಲ್ಲಿ ಖಂಡಿತ ಬಿಟ್ಟುಹೋಗುವರೆಂಬೊಂದು ಸಂಗತಿಯಲ್ಲದೆ ಇದುತನಕದ ಮಾತುಗಳು ಹಿಂದಿನಂತೆ ಬಿಕ್ಕಟಿನ ಪರಮಾವಧಿಗೆ ಮುಟ್ಟಿ ಪುನಃ ಶಿರಾಶಾಮಯ, ಸ್ತಬ್ಧಮಯ ಪರಿಸ್ಥಿತಿ ಉಂಟಾದ ಕಾರಣ ಇಂದಿಗೆ ಹಲವು ವರ್ಗಗಳಿಂದ ಭಾರತದ ರಾಜಕೀಯದ ಲಕ್ಷಣವು ಹೀಗೆ ಆಗಿರುತ್ತದೆ.

ಮೂರನೇ ವಿಶ್ವ ಯುದ್ಧ

ಭಾರತದಲ್ಲೂ ಮತ್ತದರ ಹೊರಗೂ ಉಂಟಾದ ಗಂಭೀರ ಪರಿಸ್ಥಿತಿಯಿಂದ ಇಲ್ಲಿಯ ರಾಜಕೀಯ ಪಕ್ಷಗಳು ಅನಿವಾರ್ಯವಾಗಿ ಒಂದು ಸಂಯುಕ್ತ ಒಡಂಬಡಿಕೆಗೆ ಬರುವಂತಾಗಬಹುದೆಂದು ನಿರೀಕ್ಷಿಸಲ್ಪಟ್ಟಿದೆ.

ಈಗಿನ ಬಿಕ್ಕಟ್ಟನ್ನು ಮತ್ತದರ ಪರಿಹಾರವನ್ನು ಬ್ರಿಟಿಷ್, ಕಾಂಗ್ರೆಸ್ ಮತ್ತು ಲೀಗ್ ಎಂಬೀ ಮೂರು ದೃಷ್ಟಿಕೋನಗಳಿಂದ ವಿವೇಚಿಸಬಹುದು.

ಈ ಮೂರರಲ್ಲಿ ಬ್ರಿಟಿಷರದು ದೊಡ್ಡ ಪಕ್ಷ. ಅವರೀಗ ರಶ್ಯಾ ಮತ್ತು ಆಂಗ್ಲೋ ಅಮೇರಿಕನರೊಳಗಾಗಲಿರುವ ಮುಂದಿನ ಘರ್ಷಣೆಯ ದೃಷ್ಟಿಯಿಂದ ಭಾರತ ಸಮಸ್ಯೆಯನ್ನು ಬಿಡಿಸಲು ಪ್ರಯತ್ನಿಸುವರು. ಅಮೇರಿಕನ್ ಅಧ್ಯಕ್ಷ ಟ್ರುಮೆನ್ನರೊಡನೆ ಹತ್ತಿರದ ಸಂಪರ್ಕವಿರಿಸಿರುವ ಬ್ರಿಟಿಷ್ ನಿರ್ದೇಶಕರ ಕಛೇರಿಯಲ್ಲಿ ರಶ್ಯದೊಡನೆ ಯುದ್ಧವು ಬಹುದೂರದ ಸಂಭವವಲ್ಲವೆಂಬ ಭಾವನೆ ಬಲವಾಗಹತ್ತಿದೆ. ಈ ಸಂಭವನೆಯ ದೃಷ್ಟಿಯಲ್ಲಿಟ್ಟುಕೊಂಡು ಬ್ರಿಟಿಷರು ಮುಂದಾಗುವ ಘಟನೆಗಳಲ್ಲಿ ಭಾರತಕ್ಕೆ ಪ್ರಾಮುಖ್ಯತೆಯ ಪಾತ್ರ ವಿದೆಯೆಂಬ ಮಹತ್ವ ಸಂಗತಿಯನ್ನು ಚೆನ್ನಾಗಿ ತಿಳಕೊಂಡಿರುವರು...

ವಿಭಾಗಿತ ಭಾರತದ ನ್ಯೂನತೆ

ಈ ದೃಷ್ಟಿಕೋನದಿಂದಲೇ ನಾವು

ಸೈನ್ಯಾಧಿಕಾರವುಳ್ಳ ಬಲಿಷ್ಠ ಕೇಂದ್ರ ಸರಕಾರ ಸ್ಥಾಪನೆ

ಮೌಂಟ್ ಬೇಟನರ ನಿರ್ಧರಿತ ಯೋಜನೆ

ಮೂರನೇ ಯುದ್ಧಸಂಭವದ ಪರಿಣಾಮ

ಅವಲೋಕಿಸ್ಸಿದರ ಭಾರತವನ್ನು ವಿಭಾಗಿಸಿದರೆ ಬ್ರಿಟಿಷರಿಗೆ ಯಾವೊಂದು ಪ್ರಯೋಜನವೂ ತೋರುವುದಿಲ್ಲವೆಂಬ ಸಂಗತಿಯು ಸ್ಪಷ್ಟವಾಗುವುದು.

ಈ ಗುರಿಯನ್ನಿಟ್ಟುಕೊಂಡು ಮೌಂಟ್ ಬೇಟನ್ನರು ಜಿನ್ನರಿಗೆ 'ಪಾಕಿಸ್ತಾನ' ದಿಂದಾಗುವ ಅನಾನುಕೂಲತೆಗಳನ್ನು ಮನಗಾಣಿಸಲು ತುಂಬಾ ಪ್ರಯತ್ನಪಟ್ಟಿರುವರಾಗಿ ರಾಜಕೀಯ ನಿರೀಕ್ಷಕರು ಭಾವಿಸುತ್ತಾರೆ. ವಿಚ್ಛೇದೀಕರಣವು ಪಾಕಿಸ್ತಾನ ಹಿಂದೂಸ್ಥಾನಗಳೆರಡಕ್ಕೂ ಗಂಡಾಂತರಪ್ರಾಯವಾದುದೆಂದು ಜಿನ್ನರಿಗೆ ಸ್ಪಷ್ಟಪಡಿಸಲಾಗಿದೆಯಂತೆ.

ಇಷ್ಟೇ ಅಲ್ಲ ಪಾಕಿಸ್ತಾನದ ಕೈಕಳಗೆ ಇರುವ ಗಡಿಪ್ರದೇಶಗಳ ರಕ್ಷಣೆಯೂ ಸಿಕ್ಖ ಯವಾಗಿ ಆಕ್ರಮಣಗಾರರಿಗೆ ತುಂಬಾ ಸಹಕಾರಿಯಾಗುವದೆಂಬ ಸಂಗತಿಯನ್ನೂ ವ್ಯಾಸ್‌ರಾಯರು ಲೀಗ್ ಮುಖಂಡರಿಗೆ ಒತ್ತಿ ಹೇಳಿರುವರಂತೆ.

ಆಧುದರಿಂದ ಭಾರತವು ರಶ್ಯದ ಆಕ್ರಮಣದ ಕೈಗೊಳ್ಳದಂತಾಗದಂತೆಯೂ, ಇಲ್ಲವೆ ಕಮ್ಯೂನಿಸಮಿನ ಸೌಕಾರ್ಯ ಬೆಳೆಸದಂತೆಯೂ ಆಗುವಂತೆ ಉದ್ದೇಶದಿಂದ ಪರಿಣಾಮವಾದ ಘೋರಣೆಯನ್ನು ಬ್ರಿಟಿಷರು ತಮ್ಮ ಅಂತಿಮ ತೀರ್ಪಿನಲ್ಲಿ ಅನುಸರಿಸ ಬರೆದು ಹಾಕೈಸಲಾಗುತ್ತದೆ.

ಆದುದರಿಂದ ಸಮಗ್ರ ಭಾರತವನ್ನು ಒಂದುಗೂಡಿಸಿ ಅದನ್ನು ರಶ್ಯಾ ವಿರೋಧವಾದ ಒಂದು ತೊಡಕಿನ ಭೂಭಾಗವಾಗಿರಿಸುವುದು ಬ್ರಿಟಿಷರ ಯತ್ನವಾಗಿ ತ್ತದೆ.

ಬಲವಾದ ಕೇಂದ್ರ

ಆದುದರಿಂದ ಈ ಕಠಿಣ ತರವಾದ ಸಮಸ್ಯೆಯನ್ನು ಬಿಡಿಸಲು ಮೌಂಟಬೇಟನ್ನರು ಕಬಿನೆಟ್ ಮಿಶನಿನ ಯೋಜನೆಯೇ ಯಥಾಯೋಗ್ಯವಾದುದೆಂದು ಭಾರತೀಯ ಮುಂದಾಳುಗಳಿಗೆ ಅತ್ಯುತ್ತಮವೆಂದೆಂದು ಶಿಫಾರಸು ಮಾಡುವರು. ಅದರ ಪ್ರಕಾರ 'ಪಾಕಿಸ್ತಾನದ ತಿರುಳೂ' ಅಖಂಡ ಭಾರತದ ಸಂಯುಕ್ತ ಬಗೆಯೂ ಒತ್ತೊತ್ತಿಗೆ ದೊರಕುವಂತಾಗುವುದು.

ಈ ದೃಷ್ಟಿಯಿಂದ ರಕ್ಷಣೆಯ ಹೊಣೆಗಾರಿಕೆಯನ್ನು ಸಂಯುಕ್ತ ಭಾರತದ ಕೇಂದ್ರಕ್ಕೆ ವಹಿಸಿಕೊಟ್ಟರೆ ರೈಲು, ಟಪ್ಪಾಲು, ತಂತಿ, ಹಣ ಚಲಾವಣೆ, ಸುಂಕ, ಶಸ್ತ್ರಾಸ್ತ್ರ ಕೈಗಾರಿಕೆ ಇವುಗಳನ್ನು ಕೇಂದ್ರಕ್ಕೇ ಬಿಟ್ಟುಕೊಡಬೇಕಾಗುವುದು.

ಇದಲ್ಲದೆ ಕಾಂಗ್ರೆಸ್ ಮುಖಂಡರು ಸೂಚಿಸಿದ ಬೇರೆ ಸಮಾನ ಯೋಜನೆಗಳನ್ನು ವ್ಯಾಸ್‌ರಾಯರು ಜಿನ್ನಾರೊಡನೆ ಚರ್ಚಿಸಿರುವರೆಂದು ತೋರುತ್ತದೆ. ಆದರೆ ಲೀಗ್ ದುರೀಣರಿಗೆ ಅದು ಸಮ್ಮತಿಯಾಗಲಿಲ್ಲವೆಂದು ತಿಳಿಯಲಾಗಿದೆ. ಅತ್ತ ಗಾಂಧಿಜಿಯ ಯೋಜನೆಯೂ ವ್ಯಾಸ್‌ರಾಯರಿಗೆ ಒಪ್ಪಿಗೆಯಾಗಲಿಲ್ಲ. ಕಾರಣ ಇದಕ್ಕೆ ವರ್ಕಿಂಗ್ ಕಮಿಟಿಯ ಕೇವಲ ಎರಡು ಇಲ್ಲವೆ ಮೂರು ಮಂದಿ ಮುಖಂಡರ ಬೆಂಬಲ ಮಾತ್ರವಿತ್ತೆಂದು ತಿಳಿಯಬರುತ್ತದೆ.

ಪಂಜಾಬ್, ಬಂಗಾಲಗಳನ್ನು ವಿಭಾಗಿಸಿ ಲೀಗ್ ಮುಸ್ಲಿಮ್ ಬಹುಸಂಖ್ಯಾಕ ಪ್ರದೇಶಗಳ ಒಡೆತನ ವಹಿಸಲೆಂಬ ಕಾಂಗ್ರೆ

ಸಿನ ಸೂಚನೆಯೂ ಮಿ। ಜಿನ್ನರಿಗೆ ತೃಪ್ತಿಯನ್ನುಂಟುಮಾಡಲಿಲ್ಲವೆಂದು ನಂಬಲಾಗಿದೆ. ತಮ್ಮ ಪಾಕಿಸ್ತಾನ ಯೋಜನೆಯೇ ಯುಕ್ತವಾದುದೆಂದು ಅವರು ವ್ಯಾಸ್‌ರಾಯರಿಗೆ ಖಂಡಿತವಾಗಿ ತಿಳಿಸಿರಬಹುದು.

ಜಿನ್ನರ ಹಟಮಾರಿತನದಿಂದ ಮೌಂಟ್‌ಬೇಟನರ ದೃಷ್ಟಿಯಲ್ಲಿ ಲೀಗಿನ ತೂಕ ಕಡಿಮೆಯಾಗಿ ತೋರಿರುವುದೆಂದೂ, ಆದುದರಿಂದ ಒಂದು ಇತ್ಯರ್ಥವನ್ನು ಮಾಡುವುದಕ್ಕ ಅವರು ಲೀಗನ್ನು ಕಡೆಗಾಣಿಸುವ ಪ್ರಸಂಗವನ್ನೂ ಎದುರಿಸಬಹುದೆಂದೂ ನಿರೀಕ್ಷಿಸಲಾಗಿದೆ.

ಲೀಗಿನ ಗಾಳಿ ಮುರಿಯಿತು

ಇಷ್ಟೆಲ್ಲ ಸಂದರ್ಭಗಳಿಂದ ಲೀಗಿನ ಧೋರಣೆ ಅಸಹಾಯ ಸ್ಥಿತಿಯಲ್ಲಿರುವುದೆಂಬ ವಿಷಯ ಸ್ಪಷ್ಟವಾಯಿತು. ಕಬಿನೆಟ್ ಮಿಶನಿನ ಯೋಜನೆಯ ತೆ ಅದು ಸಂ... ಕೇಂದ್ರಕ್ಕೆ ಸೇರಿ ಸಿದ್ಧವಿಲ್ಲ. ಇಷ್ಟಲ್ಲದೆ ತಾನು ಹೇಳಿದ ಲ ... ಗಳನ್ನು ಇತರರಿಗೆ ... ಅದು ... ಲ್ಲ (ಪಾಕಿಸ್ತಾನ ಪ್ರಾಂತ್ಯಗಳ...) ... ಕೊಡಲು ಲೀಗ್ ಸಮ್ಮತಿಸುವುದಿಲ್ಲ. ಇಂದು ಭಾರತದಲ್ಲಿ ಶೇಕಡಾ 25ರಷ್ಟು ... ಅಧಿಕಾರ... ಕೊಟ್ಟ.

ಆದರೆ ಕಾಂಗ್ರೆಸು ತನ್ನ ವಿರೋಧಿಗಳನ್ನು ಸಂಪೂರ್ಣ ದಂಗು ಬಡಿದಿದೆ. ಇತ್ತೀಚೆಗೆ ಪಂಡಿತ ನಹರೂರವರು "ಪಾಕಿಸ್ತಾನಬೇಕಾದರೆ ತೆಗೆದುಕೊಳ್ಳಿರಿ ಅಂತೆ ಆದರೆ ಹಿಂಸೆ ಬಲಾತ್ಕಾರದಿಂದ ಮಾತ್ರ ಸಾಧ್ಯವಿಲ್ಲ" ಎಂದು ತಿಳಿಸುತ್ತ ಈಗ ಲೀಗಿಗೆ ಕೂಗಾಟವೆಬ್ಬಿಸಲು ಯಾವ ಘೋಷಣೆಯಿಲ್ಲದಂತೆ ಮಾಡಿರುವರು. ಇದರಿಂದ ಕಾಂಗ್ರೆಸ್ಸಿನ ವರ್ಚಸ್ಸು ಹೆಚ್ಚಿದ್ದು ಅದು ಮುಂದಿನ ಅದೆಂತಹ ಸಂದಿಗ್ಧವನ್ನಾದರೂ ಎದುರಿಸಲು ಸದಾ ಸಿದ್ಧವಾಗಿಯೇ ಇದೆ.

ರಾಜರಿಗೆ ಘೋರರ ಗತಿ

ರಶ್ಯದಲ್ಲಿ ಸಮತಾವಾದ ಪದ್ಧತಿ ಸ್ಥಾಪನೆಯಾಗುವಾಗ ಕ್ರಾಂತಿಕಾರರು ... ಕಾರಿಂದ ರಷ್ಯಾ ಝಾರನು ಆತನ ಕುಟುಂಬ ಪರಿವಾರವನ್ನು ... ಕೌನ್ಸಿಲ್... ಸಭೆಯಲ್ಲಿ ಪ್ರತಿನಿಧಿಗಳನ್ನು ... ನ ಭೋಪಾಲ ನವಾಬರ ... ಗಂಡಾಂತರದಿಂದ ಪಾರಾಗುವ ದಾರಿಮಾಡಿಕೊಂಡರು. ದೇಶಿರಾಜರು ಇಷ್ಟಾದರೂ ಸಂಪೂರ್ಣ ಪರಿವರ್ತನಗೊಂಡಿದ್ದಾರೆಂದು ಹೇಳಬರುವುದಿಲ್ಲವಾದರೂ ಪರಿಸ್ಥಿತಿಯು ಒತ್ತಾಯವು ಅವರನ್ನು ಯೋಗ್ಯ ದಾರಿಗೆ ಹಚ್ಚಬಹುದೆಂದು ಹೃತ್ಪೂರ್ವಕ ನಂಬಲಾಗಿದೆ.

~

ಇದುತನಕ ಬಹಳ ಆಳವಾಗಿದ್ದ ಚೀನಿ ಜಪಾನಿ ವೈಷಮ್ಯವನ್ನು ಕಡಿಮೆಮಾಡಲು ಟೋಕಿಯೋದಲ್ಲಿ ಒಂದು ಚೀನಿ ಜಪಾನಿ ಸಾಂಸ್ಕೃತಿಕ ಸಂಪರ್ಕ ಸಂಘವೊಂದು ಸ್ಥಾಪಿಸಲ್ಪಟ್ಟಿದೆ.

★

(3ನೇ ಪುಟದಿಂದ)

ನಮ್ಮ ಇಂದಿನ ಜೀವನದ ವೈವಿಧ್ಯ

ಬೇರೆ ತರದವು ಇರುತ್ತವೆ. ಆದುದರಿಂದ ಈ ತರದ ಜನರ ಸಾಮಾನ್ಯ ಅವಶ್ಯಕತೆಗಳೇನೆಂದು ತಿಳಕೊಳ್ಳುವುದು ಮಹತ್ವದ ಸಂಗತಿ.

ಜೀವನದ ಖರ್ಚಿನ ಹೆಚ್ಚು ಕಡಿಮೆಗಳು ವಾಸಿಸುವ ಸ್ಥಳದ ಮೇಲೆ ಹೊಂದಿಕೊಂಡಿದೆ. ಉದಾ। ಹಳ್ಳಿ ಕಡೆಗಳಲ್ಲಿ ವಾಸಿಸುವುದು ಪಟ್ಟಣಗಳಿಗಿಂತ ತುಂಬ ಸುಲಭವಾದುದು. ಯುದ್ಧ ಮತ್ತದರ ಪರಿಣಾಮದಿಂದ ನಮ್ಮ ಸಮಾಜದಲ್ಲಿ ಮಹತ್ತರವಾದ ಆರ್ಥಿಕ ಅಲ್ಲಕಲ್ಲೋಲವುಂಟಾಗಿದ್ದು, ಕನಸಿನಲ್ಲಿ ಕೂಡಾ ನೆನಸದೆ ಕೆಲವರು ಸಿರಿವಂತರಾಗಿರುವರು. ಮತ್ತೆ ಕೆಲವರು ಎಂದಿನಂತೆ ಹಣದ ಮುಗ್ಗಟ್ಟಿನಿಂದ ಮಾರ್ಗದ ಹಿಂದೆ ಬಿದ್ದಿರ ವಗು. ಇದಕ್ಕೆ ಅವರದೇನು ತಪ್ಪಿಲ್ಲ.

ನ್ಯಾಯಸಮ್ಮತದ ವಿಧಾನಗಳಿಂದ ದುಡ್ಡುಗಳಿಸುವುದಕ್ಕೆ ಯಾರದೇನು ಆಕ್ಷೇಪವಿಲ್ಲ. ಆದರೆ ಕಾಲಕ್ಕೆ ನಮ್ಮ ಜನತೆಯು ಉಪಾಯ... ವರ್ಗವನ್ನು ಅಥವಾ... ರಕ್ಷಿಸುವುದು ಸರಕಾರದ ... ವರ್ಗದ ಜನರು ... ರೀತಿಯಿಂದ ... ಕಸುಬುಗಳನ್ನು ಹುಡುಕಿ ಹೇಗೆ ... ಅತ್ಯಾವಶ್ಯಕ. ಈ ವರ್ಗದ ಜನ ಹೇಗೆ ಜೀವಿಸುತ್ತಿದ್ದಾರೆ ... ಅವಶ್ಯಕ ... ಸಂಗತಿಗಳನ್ನು ... ಕಷ್ಟದ ಕೆಲಸವೆಂದರೂ ... ಸರಕಾರವು ... ಸರಕಾರದ ಆದರ್ಶ ...

—ಹಿಂದೂ

★

ಜಪಾನು ಮೇಚಿಚಿ ನಗರದಲ್ಲಿ ಸಮಾಜ ... ಕೆಲವೊಂದು ಪ್ರಶ್ನೆಗಳ ... ಅಲ್ಲಿನ ಸ್ತ್ರೀಯರ ಅಭಿಪ್ರಾಯ ತಿಳ... ಶೇಕಡಾ 25ರಷ್ಟು ಜಪಾನಿ ಸ್ತ್ರೀಯರು ತಮ್ಮ ಗಂಡನ ದಾಸಿಯರಾಗಲು ಇಷ್ಟಪಡುತ್ತಾರೆ. ಶೇಕಡಾ 17ರಷ್ಟು ಅವಿವಾಹಿತ ಸ್ತ್ರೀಯರು ಗಂಡನ ನಮ್ರ ಸೇವಕರಾಗಿರಲು ಇಷ್ಟಪಡುತ್ತಾರೆ. ಆದರೆ ಶೇಕಡ 80ರಷ್ಟು ಸ್ತ್ರೀಯರು ಹೊಸದಾಗಿ ಕೊಡಲ್ಪಟ್ಟ ಮತದಾನದ ಹಕ್ಕನ್ನು ಸಂತೋಷದಿಂದ ಸ್ವಾಗತಿಸುತ್ತಾರೆ.

★

ಹೊಲೆಂಡಿನಲ್ಲಿ ಭೂತ ಪಿಶಾಚಗಳ ಖಾನೇಷುಮಾರಿ ತೆಗೆಯಲಾಗುವುದು! ಅಲ್ಲಿನ ಜಾನಪದ ಸಾಹಿತ್ಯ ಸಂಘದವರು ಇಡೀ ದೇಶದ ಹಳ್ಳಿಹಳ್ಳಿಗಳಿಗೆ ಒಂದು ಪ್ರಶ್ನೆಮಾಲಿಕೆಯನ್ನು ಕಳುಹಿಸಿ ಭೂತ ಸಂಚಾರವಿರುವ ಪ್ರದೇಶಗಳ ಪತ್ತೆಯನ್ನು ತಿಳಿಸಬೇಕೆಂದು ಕೋರಿರುವರು. "ನಮ್ಮ ದೇಶದ ಭೂತಗಳು ನಿರ್ಮೂಲವಾಗುತ್ತಿವೆ. ಆದರೂ ಕೆಲವೊಂದು ಹಳೆಯವು ಇನ್ನೂ ಮಾಯವಾಗಿಲ್ಲ"ವೆಂದು ಸಂಘದ ಹೇಳಿಕೆ.

★

ಭೂಶಾಸ್ತ್ರಜ್ಞರ ಅಭಿಪ್ರಾಯ ಪ್ರಕಾರ ಭೂಮಿಯು 1500ದಿಂದ 3000 ಮಿಲಿಯ ವರ್ಷಗಳ ಹಿಂದಿನಿಂದ ಒಂದು ಗ್ರಹವಾಗಿ ಅಸ್ತಿತ್ವದಲ್ಲಿದೆಯೆಂದು ಹೇಳಲ್ಪಟ್ಟಿದೆ.

★

ಮುಂದಿನ ಮನುಷ್ಯನ ಕಾಲಿಗೆ ನಾಲ್ಕೆ ಬೆರಳುಗಳು

ಕಾಡು ವಾನರದಿಂದ— ನಾಡು ಮಾನವ

ಪ್ರಾಣಿ ಶಾಸ್ತ್ರಜ್ಞರ ಕಲ್ಪನಾವೈಖರಿ

ಮನುಷ್ಯನು ಪರಮಾತ್ಮನಿಂದ ಸೃಷ್ಟಿಸಲ್ಪಟ್ಟನು ಎಂಬುದು ಕೇವಲ ಮತೀಯ ನಂಬಿಗೆ ಡಾರ್ವಿನನಂತಹ ತಾರ್ಕಿಕ ವಿಜ್ಞಾನಿಯು ತಲೆಬುರುಡೆ ಶೋಧೆಯಲ್ಲಿ ಈ ನಂಬಿಗೆಯು ಬರಡಾಯಿತು. ಅವನು 'ಮನುಷ್ಯನ ಪೂರ್ವಜ 'ಮಂಗ' ವೆಂದಾಗ ಸಾಮಾನ್ಯ ಮನುಷ್ಯರು ಕೌತುಕಗೊಂಡರು ಡಾರ್ವಿನನು ತನ್ನ ಸಿದ್ಧಾಂತಕ್ಕೆ ಸಮರ್ಪಕವಾಗಿರುವ ನಿದರ್ಶನಗಳನ್ನು ತೋರಿಸಿದ. ಮಂಗಗಳಲ್ಲಿ ಗೋರಿಲ್ಲಾ ಎಂಬ ಮನುಷ್ಯಾಕೃತಿಯ ಕಪಿ ಇದೆ ಇದರ ನಂತರದ ರೂಪಾಂತರವೇ ಮನುಷ್ಯನದು ಆದರೆ ಆದಿಯಲ್ಲಿ 'ಮನುಷ್ಯನ' ರೂಪ ತಲೆಕೂದಲುಗಳಿಂದಲ್ಲದೆ ಅಲ್ಪಸ್ವಲ್ಪ ಗಡ್ಡ ಮೀಸೆಗಳಿಂದಲೂ ಕೂಡಿತ್ತು

ಇಂದಿನಿಂದ ಸುಮಾರು 60 ಲಕ್ಷ ವರ್ಷಗಳಲ್ಲಿ ಮಾನವನ ರೂಪ ಕ್ರಮೇಣ ಅವನ ಸ್ಥಿತಿಗಳ ವಾಸಸ್ಥಾನದ ವಾತಾವರಣ, ಆಹಾರಗಳಿಗನುಸಾರವಾಗಿ ಬದಲಾಗುತ್ತ ಬಂದು ಇಂದಿನ ರೂಪವುಂಟಾಯಿತು. ಈ ಶರೀರ ಪ್ರಕೃತಿ ಬದಲಾವಣೆಗಳನ್ನು ಅಭ್ಯಾಸಿಸಿದ ಪ್ರಾಣಿ ಶಾಸ್ತ್ರಜ್ಞರು ಭಾವೀ ಮನುಷ್ಯನಲ್ಲಿ ಯಾವ್ಯಾವ ಬದಲಾವಣೆಗಳಾಗುವುವೆಂದು ಕಲ್ಪನೆ ಮಾಡಿರುವರು

ಆಧುನಿಕ ವಿಜ್ಞಾನವು ಅಪೇಕ್ಷಾ ಪರಿಪೂರ್ಣತೆಗೆ ಮುಟ್ಟಿರುವುದು ದೀರ್ಘವತ್ತರ ಪರಿಣಾಮವಾಗಿ ಮನುಷ್ಯನ ಜೀವನ ಪರಿಶ್ರಮದಲ್ಲಿ ಅಪಾಕೃತಿಕವಾದ ಅನೇಕ ಬದಲಾವಣೆಗಳಾಗಿರುವುದರಿಂದಲೂ ಮುಂದಿನ ಪೀಳಿಗೆಯು ಶಾರೀರಿಕ ಅಂಗಾಂಗಗಳು ಸಂಪೂರ್ಣವಲ್ಲವಾದರೂ ಕೌತುಕಗೊಳಿಸುವ ರೀತಿಯಲ್ಲಿ ಬದಲಾವಣೆ ಹೊಂದುವ [illegible] ಪ್ರಾಣಿ ಶಾಸ್ತ್ರಜ್ಞರ ಅಭಿಪ್ರಾಯವಾಗಿದೆ ತಪ್ಪದೆ ಮಾನವನ ಸಶರೀರರೂಪವು ಅಳಿಯುತ್ತ [illegible] ದೊಡ್ಡದಂತೆ ತಲೆ ಕೀಟ ಸಮಾನ ಕೈಕಾಲು ಕಣ್ಣಲ್ಲಿ ಕನ್ನಡಕ, ಹೊಟ್ಟೆಗೆ ಔಷಧ ಮಾತ್ರೆಗಳು ಮೊದಲಾದ ಲಕ್ಷಣಗಳ ಸಾಮಾನ್ಯವಾಗುವುವು ಅವನ ಭಾಷೆಯೂ ಬದಲಾಯಿಸಿ ಕೇವಲ ಅಕ್ಷರ (ಶಬ್ದಗಳಲ್ಲ) ಗಳಿಂದೊಡಗೂಡಿದ ಮಾತುಗಳಿಂದ ಕೂಡಿರುವುದು.

ಬೇರೆ ಕೆಲವರ ಅಭಿಪ್ರಾಯ ಬೇರೆಯೆ ಮನುಷ್ಯ ದೊಡ್ಡ ಪ್ರಾಣಿ, ಅವನ ದೇಹದಾಕೃತಿ ಅವನಿಗೆ ಬಹಳ ಸಹಾಯಕವಾಗಿದೆ ಅಂದಮೇಲೆ ಅವನ ಕೈಕಾಲು ಎದೆ ಹೊಟ್ಟೆ ಸೊರಸೊರಗುತ್ತ ಹೋಗುವ ಭಯವಿಲ್ಲ ಅವನ ಶರೀರ ಸುಸ್ಥಿತಿಯಲ್ಲಿ ಸುಭದ್ರವಾಗಿ ಉಳಿಯುವುದೇ ತೀರುವುದು ಆದುದರಿಂದ ನಿರುಪಯುಕ್ತ ಕೀಟದೇಹದ ನಡೆಯುವ ಮೆದುಳಾಗಿ ಮನುಷ್ಯ ವಿಕೃತಗೊಳ್ಳುವ ಭಯವಿಲ್ಲ

60 ಲಕ್ಷ ವರ್ಷ ಹಿಂದಿನ ಮನುಷ್ಯನಿಗೂ ಇಂದಿನವನಿಗೂ ಇರುವ ವ್ಯತ್ಯಾಸಗಳನ್ನು ಪರಿಗಣಿಸುವಾಗ ಮುಂದೆ ಅವನು ಖಂಡಿತ ರೂಪಾಂತರಗೊಳ್ಳುವನೆಂಬುದು ನಿಸ್ಸಂದೇಹ ಇತರ ಎಲ್ಲಾ ಪ್ರಾಣಿಗಳಿಗಿಂತ ಮನುಷ್ಯನ ಬದಲಾವಣೆ ಶೀಘ್ರಗೊಳ್ಳುವುದಂತೆ.

ರೂಪರೇಷೆ

ಮನುಷ್ಯನ ಎತ್ತರ ಹೆಚ್ಚುವದೆಂದು ಡಾ॥ ಹೆನ್ರಿ ಶಾಕೊ ಎಂಬ ಪ್ರಾಣಿ ಶಾಸ್ತ್ರಜ್ಞರ ಅಭಿಪ್ರಾಯ ಹೆಚ್ಚೆಚ್ಚು ನಾಗರೀಕನಾದಂತೆ ಮನುಷ್ಯ ಆರೋಗ್ಯಕರ ಆಹಾರ, ಜೀವನ ಕ್ರಮಗಳನ್ನನುಸರಿಸುವನು. ಅದರ ಪರಿಣಾಮವಾಗಿ ಈಗೊಂದು ಶತಮಾನದಿಂದ ಮನುಷ್ಯ ಸರಾಸರಿ ಆಕಾರದಲ್ಲಿ ಎತ್ತರ ಹೆಚ್ಚಿದೆ ಎಂದು ತಿಳಿದುಬರುತ್ತದೆ. ಆದರೆ ಎತ್ತರ ಹೆಚ್ಚುತ್ತ ಹೋದರೆ ಮನುಷ್ಯನಿಗೆ ಅನಾನುಕೂಲತೆ ಹೆಚ್ಚುವುದು. ಎತ್ತರ ಹೆಚ್ಚಿದರೆ ಭಾರ ಹೆಚ್ಚುವುದು, ಅಸ್ಥಿಪಂಜರ ವಿಕಸಿತವಾಗುವುದು. ಇದರಿಂದ ನಡೆಯಲು ಅನವಶ್ಯಕ ಶ್ರಮ ವಹಿಸಬೇಕಾಗುವುದು ಈ ಶ್ರಮದಿಂದ ಅವನ ಬೆನ್ನು ಬಗ್ಗಿಹೋಗಬಹುದು ಮೇಲಾಗಿ ರಕ್ತಸಂಚಾರದಿಂದ ಅವನಿಗೆ ಆಗುವ ಪ್ರಯೋಜನವಾದರೂ ಈ ಮಂತ್ರಯುಗದಲ್ಲಿ ಏನೂ ಇಲ್ಲ

ಮೆದುಳು ಬೆಳೆಯುವುದರಿಂದ ನಾವು ಕಳ್ಳರಾಗುತ್ತೇವೆಂದು ತಿಳಕೊಳ್ಳಬಾರದು ಈಗಿನ ನಮ್ಮ ಮಿದುಳಿನ ಗಾತ್ರ ಯೋಗ್ಯ ಪ್ರಮಾಣದ್ದಿದೆ ಇನ್ನೊಂದು ವಿಷಯ, ಮನುಷ್ಯನ ಮಿದುಳು ಅತೀ ದೊಡ್ಡದಾಗುವಂತೆ ಬೆಳೆಯುತ್ತದೆಂಬುದಕ್ಕೂ ಆಧಾರವಿಲ್ಲ [illegible] ಇತಿಹಾಸವನ್ನು ಪರಿಶೋಧಿಸಿದರೆ ಸರ್ವ ಜಾತಿಯ ಉರಗಗಳ ರಕ್ತ ಮಂಗ [illegible]ಗಳಿಂದ ಕ್ರಮೇಣ ಬಿಸಿ [illegible] ಹೋಗಿರುವುದು ಗಮನಕ್ಕೆ ಬರುತ್ತದೆ ಆದರೆ ಇದೇ ರೀತಿ ಮುಂದಿನವರ ಅವುಗಳ ದೇಹದಲ್ಲಿ ಕುದಿಯುವ ರಕ್ತವುಂಟಾಗುತ್ತದೆಂದು ಹೇಳಬರುವುದಿಲ್ಲ. ಒಂದು ವ್ಯಕ್ತಿಕ ಸ್ವಭಾವಗಳೂ ಶರೀರಾಂಗ ಬೆಳವಣಿಗೆಗೆ ಬಲವಾದ ತಡೆಯನ್ನೊಡ್ಡುತ್ತವೆ

ಅಸ್ಥಿಪಂಜರ

ಇದಕ್ಕೆ ಕಾರಣವೂ ಇದೆ ಈಗಿರುವ ಮಿದುಳಿನ ಸಂಪೂರ್ಣ ಉಪಯೋಗವನ್ನು ನಾವು ಮಾಡಿಕೊಂಡಿಲ್ಲವೆನ್ನಬೇಕು ಅದನ್ನು ಸರಿಯಾಗಿ ಶ್ರಮಿಸಿದರೆ ಅದು ಬೆಳೆಯುವ ಸಂಭವವಿಲ್ಲ ಮಾನವನ ಮನೋಶಕ್ತಿ, ವಿಚಾರಶಕ್ತಿ ಕಲ್ಪನಾಶಕ್ತಿಗಳು ದಿನೇದಿನೇ ಬೆಳೆಯುತ್ತವೆಂಬುದಕ್ಕೆ ಇಂದಿನ ವೈಜ್ಞಾನಿಕ ಪ್ರಗತಿಯೇ ಸಾಕ್ಷಿ. ಅದಿಲ್ಲದಿರುತಿದ್ದರೆ ಮೆದುಳು ಬೆಳೆಯುವ ಸಂಭವ ಹೆಚ್ಚು.

ಇದೇ ರೀತಿ ಗಂಟಲ ಎಲುಬು ಎದೆ, ಬೆನ್ನು, ಟೊಂಕದೆಲುಬು, ಕಾಲು ಪಾದ ಇವೆಲ್ಲವೂ ಅವನಿಗೆ ಪೂರ್ಣ ಉಪಯುಕ್ತವಾಗುವಂತೆ ಉತ್ಕ್ರಾಂತಿ ಹೊಂದಿವೆ. ಅವನ ಕೈಯೂ ಹಸ್ತವೂ ಅತ್ಯಂತ ತೃಪ್ತಿಕರವಾಗಿವೆ. ಇವೆಲ್ಲ ಬಹಳ ದೂರ ಭವಿಷ್ಯತ್ತಿನ ವರೆಗೆ ಬದಲಾಗುವ ಲಕ್ಷಣವಿಲ್ಲ

ನಮ್ಮ ದೇಹದಲ್ಲಿರುವ ಅತಿ ದುರ್ಬಲ ದುರ್ಬಲ ಭಾಗವೆಂದರೆ ಕಿಬ್ಬೊಟ್ಟೆ ಭಾಗದ ಅಂಗಗಳು ಟೊಂಕದ ಮೇಲಿನ ಭಾಗವನ್ನೆಲ್ಲ ಹೊತ್ತು ನೆಟ್ಟಗಿರಿಸಬೇಕಾದ ಬೆನ್ನ ಹುರಿಯ ಕೆಳಭಾಗ ಭಾಗಿ ದುರ್ಬಲವಾಗಿರುವುದರಿಂದ ಈಗಾಗಲೆ ಮಾನವನಿಗೆ ಭಾರ ಹೊರಲು ಮತ್ತು ಶ್ರಮವಾದ ಕೆಲಸಗಳನ್ನು ಮಾಡಲು ಕಠಿಣವಾಗಿದೆ ಆದುದರಿಂದ ಈ ಭಾಗದ ಬೆನ್ನುಹುರಿ ಎಲುಬು ಇನ್ನಷ್ಟು ಕುಳ್ಳು ಹಾಗೂ ದಪ್ಪವಾಗಬಹುದು

ಉರುಟು ತಲೆ

ತಲೆಯ ಆಕೃತಿ ಈಗಿನ ತ ದುಂಡಗಾಗಬಹುದೆಂದು ನಿಶ್ಚಯ ವೇ ತಲೆಯ ಆಕೃತಿ ಒಹುಮಟ್ಟಿಗೆ ಮೆದುಳಿನ ವಿಕಾಸವನ್ನವಲಂಬಿಸಿದೆ ಅದು ದೊಡ್ಡದಾದರೂ ಚಿಕ್ಕದಾದರೂ ತಲೆಬುರುಡೆ ಉರುಟಾಗುವುದು ಖಚಿತ ಈ ಲಕ್ಷಣ ಈಗಾಗಲೇ ಅನೇಕ ಮಾನವ ಕುಲಗಳಲ್ಲಿ ಸ್ಪಷ್ಟವಾಗಿ ಗೋಚರಕ್ಕೆ ಬರುತ್ತಿದೆ. ಇದೂ ಅಲ್ಲದೆ ತಲೆ ದುಂಡಗಾಗಿದ್ದರೆ ಎಲುಬಿನ ಉಳಿತಾಯ ಬಹಳವಾಗುವುದು

ಇನ್ನು ಮುಖದ ಮಟ್ಟಿಗೆ ಅದು ಸಣ್ಣ ಸಣ್ಣದಾಗುತ್ತ ಹೋಗುವುದು ಗಮನಕ್ಕೆ ಬಂದಿರುತ್ತದೆ ಆದರೆ ಮೂಗು ದೊಡ್ಡದಾಗುವ ಸಂಭವವಿದೆ. ಗಡ್ಡ ಇನ್ನಷ್ಟು ಕೋನಾಕೃತಿ ಹೊಂದಿ ಮುಂದೆ ಚಾಚುತ್ತ ಹೋಗುವುದು. ಮುಖದ ನಡುಭಾಗ ಮಂಗೋಲಿ ಜನರಂತೆ ಇನ್ನಷ್ಟು ಒಳಹೋಗಿ ಚಪ್ಪಟೆಯಾಗುವುದು ಒಟ್ಟಿನಲ್ಲಿ ಮೂಗು ಮತ್ತು ಗಡ್ಡ (ಗಡ್ಡದ ತುದಿ) ಬಹಳ ಮುಂದೆ ಚಾಚಿ ಮುಖದ ಇತರ ಭಾಗ ಒಳಹೋಗುವುದು

ಹಲ್ಲು ಇಲ್ಲ?

ಮುಂದಿನ ಮನುಷ್ಯನ ಕೊನೆ ಜವಡೆ ಹಲ್ಲುಗಳು ಖಂಡಿತ ಮಾಯವಾಗುವವು ಈಗಾಗಲೇ ಅನೇಕರಿಗೆ ಈ ಹಲ್ಲುಗಳು ಬಹಳ ಉಪದ್ರವಿಗಳೂ ನಿಷ್ಪ್ರಯೋಜಕವೂ ಆಗಿವೆ ಉಳಿದ ಹಲ್ಲುಗಳು ಇನ್ನೂ ಚಿಕ್ಕವೂ ಸುರೂಪವೂ ಆಗುವವೆಂದು ಹೇಳಬಹುದು

ನಾಲ್ಕೇ ಬೆರಳು

ಈಗಾಗಲೇ ನಮ್ಮ ಕಾಲ ಕಿರಿಬೆರಳು ತೀರ ಚಿಕ್ಕವೂ ದುರ್ಬಲವೂ, ನಿಷ್ಪ್ರಯೋಜಕವೂ ಆಗಿದೆ ಅನೇಕರಲ್ಲಿ ನಡೆಯುವಾಗ ಅದು ಊರಲ್ಪಡುವುದೂ ಅಪರೂಪ ಕೆಲವರ ಕಿರಿಬೆರಳಿಗೆ ಉಗುರು ಕೂಡ ಇರುವುದಿಲ್ಲ ಲಕ್ಷಾಂತರ ವರ್ಷಗಳ ನಂತರ ಮನುಷ್ಯನ ಕಾಲಿಗೆ ನಾಲ್ಕೇ ಬೆರಳುಗಳು ಸಾಮಾನ್ಯವಾಗುವವು ಆದರೆ ಅವನ ಪಾದವು ಈಗಿಂತ ಅಗಲವಾಗಬಹುದೆಂಬ ನಿರೀಕ್ಷೆ ಇದೆ ಕಾರಣ ಅದು ಅವನಿಗೆ ಅತ್ಯಾವಶ್ಯಕವಾಗಿದೆ.

ಬಿಳಿ ಜನರಲ್ಲಿ ಈಗಾಗಲೇ ತಲೆಕೂದಲು ಕ್ಷಯಿಸುವುದು ಕಂಡುಬಂದಿದೆ ಮುಂದೆ ಇವರು ಪೂರ್ಣ ಬೋಳು ತಲೆಯವರಾಗುವರು ಇತರರು ಕಮ್ಮಿ ಕೂದಲಿನವರಾಗುವರು ಅದನ್ನು ತಡೆಯಲು ಯಾವ ಕೇಶವರ್ಧಿನಿ, ಇಲ್ಲವೆ ಇತರ ವೈಜ್ಞಾನಿಕ ವಿಧಾನಗಳಿಂದಾಗದು

ಪ್ರಯಾಣಿಕರಿಗೆ ಸ್ಪೆಶ್ಯಲು ಸರ್ವಿಸಿನ ಸೂಚನೆ.

ಮುಲ್ಕಿ, ಬಪ್ಪನಾಡು ಪೊಳಲಿ ಇತ್ಯಾದಿ ಸ್ಥಳಗಳಲ್ಲಿ ಜರಗಲಿರುವ ಜಾತ್ರೆಯ ಸಮ್ಬಂಧ ಪ್ರಯಾಣಿಸುವ ಯಾತ್ರಿಕರ ಬಗ್ಗೆ ಸ್ಪೆಶ್ಯಲು ಸರ್ವಿಸುಗಳನ್ನು ರನ್ ಮಾಡುವ ಏರ್ಪಾಡನ್ನು ಮಾಡಲಿಚ್ಛಿಸಿದ್ದಾಗ್ಯೂ ಪ್ರಕೃತ ಮೂರು ತಿಂಗಳಿಗೆ ಸಿಗಬೇಕಾದ ಪೆಟ್ರೋಲು ಕೋಟಾದಲ್ಲಿ ಕಡಿತವಾಗಿರುವುದರಿಂದ ಕೆಲವು ಬಸ್ಸುಗಳಿಗೆ ಪೆಟ್ರೋಲು ಸಾಕಾಗದೆ ಕೆಲವು ಸರ್ವಿಸುಗಳನ್ನು ತಾತ್ಕಾಲಿಕವಾಗಿ ನಿಲ್ಲಿಸುವ ಸಂದರ್ಭ ಬಂದೊದಗಿರುವುದರಿಂದಲೂ, ಮತ್ತು ಗೇಸು ಬಸ್ಸುಗಳು ಸಹ ಕಡಿಮೆ ಇದ್ದು ಅವುಗಳಿಂದ ದಿನವಹಿ ಸರ್ವಿಸುಗಳನ್ನು ರನ್ ಮಾಡಿಸಲ್ಪಟ್ಟನಂತರವೇ ಸಾಧ್ಯವಿದ್ದಲ್ಲಿ ಮಾತ್ರ ಸ್ಪೆಶ್ಯಲು ಸರ್ವಿಸುಗಳನ್ನು ರನ್ ಮಾಡಬೇಕಾಗುತ್ತದೆ ಅಲ್ಲದೆ ಕೋಸ್ಟಲ್ಯಾಸಿನಲ್ಲಿ ಕೆಲವು ಕಡೆಗಳಲ್ಲಿ ಪೆಟ್ರೋಲು ಮತ್ತು ಕೆಲವು ಕಡೆಗಳಲ್ಲಿ ಗೇಸು ಬಸ್ಸುಗಳಿರುವುದರಿಂದ ಸಾಧ್ಯವಿದ್ದ ಸ್ಥಳದ ವರೆಗೆ ಮಾತ್ರ ಸ್ಪೆಶಲು ರನ್ ಮಾಡಬೇಕಾಗಿರುತದೆ. ಉದಾಹರಣೆಗಾಗಿ ಮಂಗ್ಳೂರು— ಮುಲ್ಕಿ ಲ್ಯಾಸಿನಲ್ಲಿ ಪಾವಂಜೆಯಿಂದ ಮುಲ್ಕಿಗೆ ಪೆಟ್ರೋಲು ಬಸ್ಸು ಮಾತ್ರ ರನ್ ಆಗುತ್ತಿರುವುದರಿಂದ, ಮುಲ್ಕಿ ಬಢೋತ್ಸವ ಹಾಗೂ ಬಪ್ಪನಾಡು ಜಾತ್ರೆಯ ಸಮ್ಬಂಧ ಸ್ಪೆಶಲುಗಳನ್ನು ರನ್‌ಮಾಡುವ ಸಂದರ್ಭಗಳಲ್ಲಿ ಗೇಸು ಬಸ್ಸುಗಳ ಅನುಕೂಲತೆ ನೋಡಿ ಪಾವಂಜೆ ತನಕ ಮಾತ್ರ ಸ್ಪೆಶ್ಯಲುಗಳನ್ನು ರನ್ ಮಾಡಲಾಗುವುದು ಆದಕಾರಣ ಜಾತ್ರೆಯ ಬಗ್ಗೆ ಪ್ರಯಾಣಿಸಲಿಚ್ಛಿಸುವ ಯಾತ್ರಿಕರು ಸ್ಪೆಶಲ್ ಸರ್ವಿಸು ರನ್ ಆಗಬಹುದೆಂಬೀ ಹೆಚ್ಚಿನ ಭರವಸೆ ಇಡದೆ ಸೀಟು ಇದ್ದ ಹಾಗೆ ನಮ್ಮ ದಿನವಹಿ ಸರ್ವಿಸುಗಳಲ್ಲಿ ಪ್ರಯಾಣಿಸಬೇಕಾಗಿ ಅಪೇಕ್ಷಿಸುತ್ತೇವೆ

ಅಲ್ಲದೆ ಮದುವೆ ಇತ್ಯಾದಿ ಸಮಾರಂಭಗಳ ಬಗ್ಗೆ ಸ್ಪೆಶ್ಯಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ R. T. O. ಕೊಯಂಬುತ್ತೂರು ಇವರಿಂದ ಪರ್ಮಿಶನ್ ಪಡಕ್ಕೊಂಡೇ ಅಂಥಾ ಸ್ಪೆಶ್ಯಲುಗಳನ್ನು ಗೇಸು ಬಸ್ಸುಗಳ ಅನುಕೂಲತೆ ನೋಡಿ ರನ್ ಮಾಡಬೇಕಾಗಿರುವುದರಿಂದ, ಹಾಗೆ ಸ್ಪೆಶ್ಯಲು ಬಸ್ಸುಗಳನ್ನು ಅಪೇಕ್ಷಿಸುವವರು, ಸ್ಪೆಶ್ಯಲುಗಳ ಬಗ್ಗೆ ಪರ್ಮಿಶನ್ ಪಡಕೊಳ್ಳುವರೆ ನಮಗೆ ಅನುಕೂಲವಾಗುವಂತೆ ತಮ್ಮ ಅರ್ಜಿಗಳನ್ನು ನಮಗೆ 30 ದಿವಸಗಳಿಗೆ ಮುಂಚಿತವಾಗಿ ಬರಕೊಳ್ಳಬೇಕಾಗಿ ಸಾರ್ವಜನಿಕರಿಗೆ ತಿಳಿಸಲಪೇಕ್ಷಿಸುತ್ತೇವೆ.

ಮಂಗ್ಳೂರು,
29-3-1947.

ಜ್ವೈಂಟ್ ಮೆನೇಜರ್ಸ್,
ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ, ಮಂಗ್ಳೂರು.

THE CANARA BANKING CORPORATION LTD.

(Incorporated in British India with Limited Liability)

Estd: 1906.

Head Office: UDIPI, S. Kanara.

	Rs.
CAPITAL:	
Authorised	25,00,000
Issued, subscribed & called up	16,00,000
Paid up	15 97,145
RESERVES	5,25,000
DEPOSITS	2,07,47,928
TOTAL RESOURCES	3,00,01,186

With a net work of branches & Agencies in all principal cities of India, we shall be able to render efficient collection services

BANKING BUSINESS OF EVERY DESCRIPTION TRANSACTED.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳಕಡ್ಡಿ, ಪಿತ್ಥ ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತ ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

The 1946 Record Business proves the popularity

THE BOMBAY LIFE ASSURANCE COMPANY LIMITED

Company's New Business in 1946 - 3·28 Crores

Our Cheif Agency New Business in 1946 about 60 Lakhs.

Our experience of 37 years available to you for arranging Insurance investment. It therefore, pays you to consult us to Insure or to represent

Messrs. Kochikar Brothers, Limited.

Chief Agents for South India,

Bombay Life Building,

Central Office, Udipi:

Branches at: MANGALORE, CALICUT, MADRAS, TRIVANDRUM, MADURA, BANGALORE AND BOMBAY.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with seletced ingredients under the supervision of the experienced staff. A specific for the puerperal diseases and also valuable to puerperal women as tonic increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli

Bhuvanendra Products Ltd.

Factory & Head Office

KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ತಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುತ್ತದೆ.

ಡಿಪೊ ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ
SWADESHABHIMANI
ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906
[ಸಂಪುಟ 41] ತಾರೀಕು 9—5—1947 [ಸಂಚಿಕೆ 19]

ವಾರಾಂತ್ಯ ವರದಿ ವಿಮರ್ಶೆ

[ಗಡಿನಾಡಿನಿಂದ ಹಿಂತಿರುಗಿದ ವ್ಯಾಸ್‌ರಾಯರು ದೇಶದ ರಾಜಕೀಯ ಪರಿಸ್ಥಿತಿಯ ಎಲ್ಲಾ ಮುಖಗಳನ್ನು ಪರಿಶೀಲಿಸಿ ಬ್ರಿಟಿಷ್ ಸರಕಾರದ ಪರಿಶೀಲನೆಗಾಗಿ ತಮ್ಮ ವರದಿಯನ್ನು ಲೋಡ್ ಇಸ್ಮೆಯವರ ಮುಖಾಂತರ ಕಳುಹಿಸಿಕೊಟ್ಟಿರುವರು ಅದರ ರೂಪರೇಷೆಯ ಕುರಿತು ಬಿಗುವಾದ ಗೌಪ್ಯವಿಟ್ಟಿರಲಾಗಿದೆ ಇಸ್ಮೆಯವರು ಮರಳಿದ ನಂತರ ವ್ಯಾಸ್‌ರಾಯರ ಸ್ವಂತ ಕಾರ್ಯದರ್ಶಿಯವರಾದ ಸರ್ ಎರಿಕ್ ಮೆಲ್‌ವಿಲ್ಲರು ಮುಂದಿನ ಬದಲಾವಣೆಗಳ ವರದಿಯನ್ನೊಯ್ಯುವರಂತೆ ಈ ತಿಂಗಳಂತ್ಯದಲ್ಲಿ ಬ್ರಿಟಿಷ್ ಸರಕಾರದವರು ತಮ್ಮ ಕೊನೆಯ ತೀರ್ಪನ್ನು ಕೊಡಲಿರುವರು ಅದು ಹೇಗಿರುವುದು?]

ವ್ಯಾಸ್‌ರಾಯರ ವರದಿ

ಭಾರತೀಯ ಮುಖಂಡರೊಡನೆ ಮಾತುಕತೆ ಮುಗಿಸಿ ವ್ಯಾಸ್‌ರಾಯರು ಲಾರ್ಡ್ ಇಸ್ಮೆಯವರ ಮೂಲಕ ಬ್ರಿಟಿಷ್ ಸರಕಾರದ ಅವಗಾಹನೆಗೆ ಕಳುಹಿಸಿದ ವರದಿಯ ರೂಪರೇಷೆಗಳ ಕುರಿತು ದಿಲ್ಲಿಯ ರಾಜಕೀಯ ಕೇಂದ್ರಗಳಲ್ಲಿ ವಿವಿಧ ಊಹಾಪೋಹಗಳಿವೆ ಅದರಲ್ಲಿ ಈ ಕೆಳಗಿನ ವಿಷಯಗಳು ನಮೂದಿಸಲಾಗಿವೆಯೆಂದು ನಂಬಲಾಗಿದೆ

1 ಕೆಬಿನೆಟ್ ಮಿಶನ ಯೋಜನೆಯ ಮೇಲೆ ಹೊಂದಿಕೊಂಡಿರುವ ಅಖಂಡ ಭಾರತದ ಕಾಂಗ್ರೆಸ್ ದೃಷ್ಟಿಕೋನ

2 ಬಲೂಚಿಸ್ತಾನ್ ಸಿಂಧ್ ಪಂಜಾಬ್, ಗಡಿನಾಡು ಅಸ್ಸಾಮು ಮತ್ತು ಬಂಗಾಲ ಈ ಆರು ಪ್ರಾಂತ್ಯಗಳ ಸಂಪೂರ್ಣ ಸ್ವಾಮಿತ್ವವನ್ನು ಕೇಳುವ ಲೀಗಿನ ಪಾಕಿಸ್ತಾನ ಯೋಜನೆ

3 ಭಾರತವನ್ನು ತುಂಡರಿಸುವುದಕ್ಕಿಂತ ಅದನ್ನು ಇಷ್ಟಬಂದಂತೆ ಅಖಂಡವಾಗಿ ಆಳುವ ಸಂದರ್ಭವನ್ನು ಸಂಪೂರ್ಣವಾಗಿ ಜಿನ್ನರಿಗೇ ಬಿಟ್ಟುಕೊಡುವ ಮಹಾತ್ಮರ ಸೂಚನೆ.

ಮೌಂಟ್‌ಬೇಟನರ ವರದಿಯಲ್ಲಿ ದೇಶಿ ಸಂಸ್ಥಾನಗಳ ವಿಷಯವೂ ಇದೆಯೆಂದೆನ್ನಲಾಗಿದೆ ಆದರೆ ಈ ರಾಜರುಗಳು ತಾವು ಇತ್ತೀಚೆಗೆ ವಹಿಸಿದ ಸರಕಾರದ ಧೋರಣೆಯಿಂದ ಈ ವಿಷಯವು ಹೆಚ್ಚಿನ ತೊಡಕಿನದಲ್ಲವೆಂದು ಭಾವಿಸಲಾಗಿದೆ.

ಪಾಕಿಸ್ತಾನವೆಂತಹುದು?

ಇದೇ ಸಮಯಕ್ಕೆ ಪಾಕಿಸ್ತಾನ ವಿರೋಧ ಚಳವಳಿ ಬಂಗಾಲ ಪಂಜಾಬಗಳಲ್ಲಿ ಬಿರುಸಾಗಿ ನಡೆಯುತ್ತಿದೆ ಸುಹ್ರವರ್ದಿಯವರು ಅಖಂಡ ಬಂಗಾಲದ ಪರವಾಗಿಯೂ, ಪಂಜಾಬಿನ ಕೆಲವು ಲೀಗ್ ಶಾಸನ ಸಭಾ ಸದಸ್ಯರು ಕಾಂಗ್ರೆಸ್ ಲೀಗ್-ಸಿಕ್ ಸಂಯುಕ್ತ ಮಂತ್ರಿಮಂಡಳ ರಚನೆಗೆ ಒತ್ತಾಯ ಮಾಡುತ್ತಿರುವುದರಿಂದ ಮಿ। ಜಿನ್ನಾರಿಗೆ ತಮ್ಮ ಅನುಯಾಯಿಗಳ ಮೇಲಿದ್ದ ಬಿಕ್ಕಿನ ಹಿಡಿತವು ಸಡಿಲಾಗಿದೆಯೆಂದು ತಿಳಿದುಬರುತ್ತದೆ

ಬಂಗಾಲ ಮತ್ತು ಪಂಜಾಬದ ಲೀಗ್ ಧುರೀಣರ ಧೋರಣೆಯು ಜಿನ್ನರ ವ್ಯಯಕ್ತಿಕ ಧೋರಣೆಗಿಂತ ಬದಲಾಗಹತ್ತಿದೆ ಸದ್ಯದಲ್ಲೇ ಈ ಬಿರುಕು ವಿಶಾಲವಾಗಿ ಜಿನ್ನರ ಗಾಳಿ ಗೋಪುರಗಳು ಕುಸಿದು ಬೀಳುವಂತಾಗಬಹುದು

ಅವರ ಇತ್ತೀಚೆಗಿನ ಹೇಳಿಕೆಯಲ್ಲಿ ಮಿ। ಜಿನ್ನರು ಬಲೂಚಿಸ್ತಾನ ಸಮೇತವಾದ ಆರು ಪ್ರಾಂತಗಳನ್ನು ಕೊಡಬೇಕೆಂದೂ ಬಂಗಾಲ ಮತ್ತು ಪಂಜಾಬನ್ನು ವಿಭಾಗಿಸಿದ, 'ಸೊರಗಿದ, ಜಿರಳೆ ತಿಂದ' ಪಾಕಿಸ್ತಾನ ತಮಗೆ ಬೇಡವೆಂದೂ ತಿಳಿಸಿದ್ದಾರೆ. ಬಹುಶ 'ಜಿರಳೆ ತಿಂದ' ಪಾಕಿಸ್ತಾನವೇ ಅವರಿಗೆ ಸಿಗಬಹುದೆಂದು ಮೌಂಟ್‌ಬೇಟನರು ಅವರಿಗೆ ತಿಳಿಸಿರಬಹುದೇ?

ಮೂರು ಜನಾಂಗ?

ಜಿನ್ನರ ವಾದವು ಎರಡು ಜನಾಂಗ ತತ್ವದ--ಹಿಂದೂ ಮತ್ತು ಮುಸ್ಲಿಂ ಆದರೆ ಸುಹ್ರವರ್ದಿಯವರು ತಮ್ಮದೊಂದು ಜನಾಂಗ ಬೇರೆ ಎಂದು ತಿಳಿಸಿದ್ದಾರೆ—ಬಂಗಾಳಿ ಜನಾಂಗ ಪಂಜಾಬಿಗಳು ಬೇರೆ, ಸಿಂಧವಂತೂ ಸ್ವತಂತ್ರ ಸಿಂಧೀ ಪ್ರಾಂತ್ಯವಾಗುವುದೆಂದು ಹಿದಾಯತುಲ್ಲರು ಬಹಳ ಕಾಲ ಹಿಂದೆಯೇ ಹೇಳಿದ್ದಾರೆ ಗಡಿನಾಡು ಪಠಾಣ ಜನಾಂಗಕ್ಕೆ ಸೇರಿದ್ದು ಅಸ್ಸಾಮು ಅಸ್ಸಾಮಿಗಳದ್ದೆಂದು ಬಾರ್ಡಲೊಯಿ ಅವರು ಸಾರಿದ್ದಾರೆ ಹಾಗಾದರೆ ಇದರಲ್ಲಿ ಪ್ರತ್ಯೇಕವಾದ ಮುಸ್ಲಿಂ ಜನಾಂಗವಾವುದು? ಇದರ ಮಧ್ಯ ಸಿಕ್ಕರದು ಜನಾಂಗವೇ ಪ್ರತ್ಯೇಕ ಅವರಿಗೆ ಸಿಖ್ಖಿಸ್ತಾನವೇ ಬೇಕು ಈ ಮಟ್ಟಿಗೆ ನಾವು ಜಿನ್ನರ ವಾದವನ್ನು ತೆಗೆದುಕೊಳ್ಳೋಣವೆ, ಸುಹ್ರವರ್ದಿಯವರ ತರ್ಕವನ್ನು ಸಮರ್ಥಿಸೋಣವೆ?

ಪಂಜಾಬ್ ಬಂಗಾಲವನ್ನು ವಿಭಾಗಿಸಿದರೆ ಭಾರತದಲ್ಲಿ ಮುಸಲ್ಮಾನರಿರುವಲ್ಲೆಲ್ಲ ವಿಭಾಗೀಕರಣವಾಗಬೇಕಾದೀತೆಂದು ಮಿ। ಜಿನ್ನರು ಎಚ್ಚರಿಸುತ್ತಾರೆ ಬಾಬು ರಾಜೇಂದ್ರಪ್ರಸಾದರು ಹಾಗೇ ಆಗಲಿ, ಹಾಗಾಗುವುದೇ ಒಳಿತು ಎಂದೇಬಿಟ್ಟಿರುವರು. ಜಿನ್ನರಿಗೆ ಬರೀ ಆರು ಪ್ರಾಂತ್ಯಗಳ ಒಡೆತನವೇಕೆ? ಎಲ್ಲಾ ಪ್ರಾಂತ್ಯಗಳಲ್ಲೂ ಪಾಕಿಸ್ತಾನ ಕ್ಷೇತ್ರಗಳಿರಲಿ ಎಂದೇ ಈಚೀಚೆಗಿನ ರಾಷ್ಟ್ರೀಯ ಅಭಿಪ್ರಾಯ ರೂಪಗೊಂಡಿದೆ

ಶೇಕಡಾ 25ರಷ್ಟು ಮುಸ್ಲಿಮರಿಗೆ ಪ್ರತ್ಯೇಕ ಸ್ಥಾನ ಬೇಕಾದರೆ ಶೇಕಡಾ 45, 50ರಷ್ಟು ಪಂಜಾಬದ ಮತ್ತು ಬಂಗಾಲದ ಮುಸಲ್ಮಾನೇತರರಿಗೆ ಪ್ರತ್ಯೇಕ ಮನೆಗಳು ಬೇಡವೆ? ಜಿನ್ನರ ಪ್ರಕಟಣೆಯಲ್ಲಿನ ವಾದವು ಕೇವಲ ಹುಡುಗಾಟಿಕೆಯದಲ್ಲದೆ ನುರಿತ ರಾಜಕೀಯ ಮುತ್ಸದ್ದಿಯೊಬ್ಬರ ಗಂಭೀರ ತರ್ಕ ನಿರೂಪಣೆಯು ಅದರಲ್ಲಿ ಲೋಪವಾಗಿದೆಯೆಂದು ಹಲವು ಪ್ರಮುಖ ಪತ್ರಿಕೆಗಳು ವಿಡಂಬನಾತ್ಮಕ ಅಗ್ರಲೇಖ ಬರೆದಿವೆ. ಅಂತೂ ಇದು ಜಿನ್ನರ ಕೊನೆಯ ಅಸ್ತ್ರ.

ವಿದೇಶ ರಾಜಕೀಯ

ಜನಾಂಗ ಸಂಘವು ಪ್ರಪಂಚ ಶಾಂತಿ ಸ್ಥಾಪನೆಗೆ ಸಾಧಕವಾದ ಏಕಮಾತ್ರ ಸಂಸ್ಥೆ ಈ ಲೋಕ ಶಾಂತಿಸ್ಥಾಪನೆಗೆ ಪರಸ್ಪರ ಸಹಕರಿಸಬೇಕ ಅಧ್ಯಕ್ಷ ಟ್ರೂಮನ್ನರ ಕಾರಣ ತಿಯೆಂದ ಯುದ್ಧಗ್ರಸ್ತ ದೇಶಗಳಲ್ಲಿ ದಂದ್ವಯುದ್ಧವು ಪ್ರಾರಂಭವಾಗಿದೆ ಚರ್ಚಿಲ್ಲರು ಮಾರ್ಶಲ್ ಟ್ರುಮನ್ನರ ಧೋರಣೆಗೆ ಬೆಂಬಲ ಕೊಟ್ಟಿದ್ದಾರೆ ಎಂದು ತಮ್ಮ ಯುರೋಪ್ ಪ್ರವಾಸದ ಅನುಭವದ ಕುರಿತು ಅಮೇರಿಕದ ಮಾಜಿ ಉಪಾಧ್ಯಕ್ಷ ಹೆನ್ರಿ ವಾಲೆಸರು ಒಂದು ರೇಡಿಯೋ ಭಾಷಣದಲ್ಲಿ ತಿಳಿಸಿದ್ದಾರೆ

"ರಶ್ಯಾ ಮತ್ತು ಅಮೇರಿಕದ ರಾಜ್ಯಭಾರ ಕ್ರಮಗಳು ಬೇರೆ ಬೇರೆಯಾದರೂ ನಾವು ಯುದ್ಧ ಮಾಡಿಕೊಂಡಿಲ್ಲ ನಮಗೆ ಆ ಉದ್ದೇಶವೂ ಇಲ್ಲ"ವೆಂದು ಸ್ಟೇಲಿನರು ಓರ್ವ ಅಮೇರಿಕನ್ ಕಾಂಗ್ರೆಸ್ ಪ್ರತಿನಿಧಿಗೆ ತಿಳಿಸಿದ್ದಾರೆ 'ಸಹಕಾರವು ಸಾಧ್ಯವಿದೆ ಅದರ ನಾವು ಮನಸ್ಸು ಮಾಡಬೇಕು ಇಲ್ಲದಿದ್ದರೆ ಯುದ್ಧವೇ ಗತಿಯಾಗುವುದು" ಎಂದೂ ಅವರು ತಿಳಿಸಿದ್ದಾರೆ

ಕೋರಿಯಾದಲ್ಲಿ ಸ್ವತಂತ್ರ ತಾತ್ಕಾಲಿಕ ಸರಕಾರವನ್ನು ಸ್ಥಾಪಿಸಲು ಅಮೇರಿಕವು ರಶ್ಯಕ್ಕೆ ಸೂಚನೆಯನ್ನು ಕೊಟ್ಟಿದೆ

ಜಪಾನಿನಲ್ಲಿ ಹೊಸ ರಾಜ್ಯಾಂಗ ಘಟನೆಯನ್ನು ಜಾರಿಗೆ ತರಲು ಶ್ರಮಿಸಿದ ಮೆಕ್ ಆರ್ಥರರನ್ನು ಚಕ್ರವರ್ತಿ ಹಿರೋಹಿಟೋರವರು ಒಂದು ಸಂದರ್ಶನದಲ್ಲಿ ಶ್ಲಾಘಿಸಿರುವರು. ಹೊಸ ರಾಜ್ಯ ಘಟನೆಯು ಪ್ರಜಾಪ್ರಭುತ್ವ ತತ್ವಕ್ಕನುಸಾರವಾಗಿ ರಚಿಸಲಾಗಿದೆ.

ಸ್ವದೇಶ ವಾರ್ತೆ

ಪಂಜಾಬನ್ನು ಆಡಳಿತ ವಿಭಾಗಗಳಾಗಿ ವಿಂಗಡಿಸಿ ಇದಕ್ಕೆ ಪ್ರತ್ಯಪ್ರತ್ಯೇಕ ಮಂತ್ರಿಮಂಡಳ ರಚಿಸುವ ಯೋಜನೆ ಉಚ್ಚ ಅಧಿಕಾರಿ ಕೇಂದ್ರದಲ್ಲಿ ಚರ್ಚಿಸಲ್ಪಡುತ್ತಿದೆಯಂತೆ

ಪಾಕಿಸ್ತಾನ ಪಡೆದ ನಂತರ ಮುಸ್ಲಿಂ ಅಲ್ಪಸಂಖ್ಯಾಕ ಪ್ರಾಂತ್ಯಗಳಲ್ಲಿ ಪ್ರತ್ಯೇಕ ಸ್ವತಂತ್ರ ಮುಸ್ಲಿಂ ಪ್ರದೇಶ ಸ್ಥಾಪನೆಗಾಗಿ ಮಿ। ಜಿನ್ನರು ಯತ್ನಿಸಲಿರುವರೆಂದು ವೀಕ್ಷಕರ ಅಭಿಪ್ರಾಯ

ನೇಪಾಳದ ಸರಕಾರವನ್ನು ತಮ್ಮ ಪಕ್ಷಕ್ಕೆ ಸೇರಿಸಿಕೊಳ್ಳಲು ಬ್ರಿಟಿಷರೂ ಅಮೇರಿಕನ್ನರೂ ಪ್ರತ್ಯಪ್ರತ್ಯೇಕವಾಗಿ ಪ್ರಯತ್ನಿಸುತ್ತಿರುವರೆಂದು ಒಂದು ಪತ್ರಿಕೆ ತಿಳಿಸುತ್ತದೆ

ಸದ್ಯದಲ್ಲಿ ಸಕ್ಕರೆ ಮತ್ತು ಬಟ್ಟೆ ನಿಯಂತ್ರಣ ಮತ್ತು ವಿತರಣ ಪದ್ಧತಿಯನ್ನು ತೆಗೆದುಹಾಕಲು ಮದ್ರಾಸ್ ಸರಕಾರವು ವಿಚಾರ ಮಾಡುವುದಾಗಿ ಸುದ್ದಿಯಿದೆ

ಈ ವರ್ಷವೂ ಆಹಾರ ಪರಿಸ್ಥಿತಿಯು ಕಠಿಣವಾಗಿಯೇ ಉಳಿಯಬಹುದೆಂದು ಹೇಳಲಾಗಿದೆ ಮಲಬಾರ್ ಜಿಲ್ಲೆಯಲ್ಲಿ ಆಗಲೇ ಅಕ್ಕಿಯನ್ನು 12 ಔನ್ಸಿನಿಂದ 10ಕ್ಕೆ ತಂದು ನಿಲ್ಲಿಸಲಾಗಿದೆ

ಈಗಿನ ಭಾರತೀಯ ಸಂಗೀತವು ಸಂಪೂರ್ಣ ಹಿಂದೂ ಮೂಲದಿರುವುದರಿಂದಲೂ, ಇಸ್ಲಾಂ ತತ್ವ ಪ್ರಕಾರ ಸಂಗೀತ ನಿಷೇಧವಿರುವುದರಿಂದಲೂ ಪಾಕಿಸ್ತಾನದಲ್ಲಿ ಸಂಗೀತಕ್ಕೆ ಸ್ಥಾನವಿಲ್ಲವೆಂದೂ, ಮುಸ್ಲಿಂ ಸಂಗೀತಗಾರರು ಹಿಂದೂಸ್ಥಾನದಲ್ಲೇ ಉಳಿಯುವರೆಂದೂ ಶ್ರೀಮತಿ ಕೃಷ್ಣಾ ಉದಯ್ವರಕರ್ ಅವರು ಒಂದು ಲೇಖನದಲ್ಲಿ ತಿಳಿಸುತ್ತಾರೆ.

ಇತಿಹಾಸದಲ್ಲಿ ಸಮೃದ್ಧಿ ಸಂತಾನದ ದಾಖಲೆ

ಎರಡು ನೂರೈವತ್ತು ಶತಮಾನ ಬದುಕಿದ ಚೀನಿಯನ

ಜಗಿಲ ಮಕ್ಕಳು ಮೊಮ್ಮಕ್ಕಳಿದ್ದ ಮಹಿಳೆ

... ಎಲ್ಲಿಯಾದರೂ ... ಹುಟ್ಟಿದರೆ ... ವಾಗುತ್ತದೆ. ಅಂತಹ ಪ್ರಸಂಗ ... ಯಲ್ಲಿ ಅವ ... ದರೆ ... ಯುಂದಿಗೆ ... ಉತ್ಪನ್ನಕ್ಕೆ ... ಜಗ ... ಕಡೆಗಳ ಸಂತಾನ ಸಂಬಂಧವಾದ ಸಂಭವಿಸಿದ ಸಂಗತಿಗಳನ್ನು ಸಂಗ್ರಹಿಸಿದರೆ ಅದೊಂದು ಸ್ವಾರಸ್ಯವಾದ ... ವೇ ಆಗುವುದು. ಈ ಕೆಳಗೆ ಅಂ... ಸಂಗ್ರಹವೊಂದನ್ನು ಕೊಡಲಾಗಿದೆ.

ಇಂಗ್ಲೆಂಡಿನ ವಿಲ್ಟ್‌ಶ್ಯಾಯರ್ ಜಿಲ್ಲೆಯ ... ಥಾಮಸ್ ಎಂಬ ಮಹಿಳೆಯ ದಾಖಲೆ ದಾಟಲು ಯಾರಿಗೂ ಅಸಾಧ್ಯವೇ ಸರಿ. ಅವಳಿಗೆ ಪ್ರಥಮತ ಅವಳಿಜವಳಿ ಕೂಸುಗಳು ಹುಟ್ಟಿದುವು ನಂತರ ಏಳು ವರ್ಷಗಳ ತನಕ ಅವಳಿಗೆ ವಿಶ್ರಾಮ ದೊರಕಿತು. ಆ ವೇಳೆ ಅವಳಿಗೆ ಕಳೆದ ಏಳು ವರ್ಷಗಳ ಬಡ್ಡಿಸಮೇತವೆಂಬಂತೆ ಒಂದೇ ಸಲ ಅವಳು ಏಳು ಕೂಸುಗಳನ್ನು ಹೆತ್ತಳು!

ಅಮೇರಿಕದ ಜೋರ್ಜಿಯಾ ಪ್ರಾಂತ್ಯದ ಎಡ್ವರ್ಡ್ ಹೆನ್ರಿ ಎಂಬ ನಿಗ್ರೋ ಗುಲಾಮ 116 ವರ್ಷಗಳ ತನಕ ಬದುಕಿದ್ದ. ಆ ಅವಧಿಯಲ್ಲಿ ಅವನಿಗೆ 5 ಸಲ ವಿವಾಹ ಬಂಧನವಾಯಿತು. ಕೊನೆಯ ಲಗ್ನವಾಗುವಾಗ ಅವನಿಗೆ 80 ವರ್ಷ ದಾಟಿತ್ತು ಆದರೆ ಆ ಕೊನೆಯವಳಲ್ಲಿ ಆತನಿಗೆ 13 ಮಕ್ಕಳಾದುವು. ಒಟ್ಟಿಗೆ ಅವನ ಮಕ್ಕಳ ಸಂಖ್ಯೆ 60!

ಓರ್ವ ನಿಕರಾಗುವಾ ನಿಗ್ರೋ ನ ಹೆಳೆಗೆ ಒಂದೇ ಸಲ ಸಪ್ತ ಶಿಶುಗಳು ಹುಟ್ಟಿದ್ದುವು. 4 ಹೆಣ್ಣು 3 ಗಂಡು!

1899ರಲ್ಲಿ ಅಮೇರಿಕದ ಪೆನ್ಸಿಲ್ವೇನಿಯದ ಓರ್ವ ಮಹಿಳೆಗೆ ಏಳು ಶಿಶುಗಳು ಹುಟ್ಟಿದ ದಾಖಲೆ ಇದೆ

1872ರಲ್ಲಿ ಓರ್ವ ಹೆಂಗುಸು ಎಂಟು ಶಿಶುಗಳನ್ನು ಹೆತ್ತು ಮೊದಲನೇ ದಾಖಲೆ ಮಾಡಿಟ್ಟಿದ್ದಳು.

ಆದರೆ ಏಕಕಾಲದಲ್ಲಿ ಅತಿ ಹೆಚ್ಚಿನ ಕೂಸುಗಳನ್ನು ಹೆತ್ತ ದಾಖಲೆಯ ಬಹುಮಾನ ಚೀನದ ಕಾಲ್ಟನ್ ಪ್ರಾಂತ್ಯದ ಮಹಿಳೆಗೆ ಸಲ್ಲುವುದು ಅವಳು 9 ಗಂಡು ಒಂದು ಹೆಣ್ಣು ಹೀಗೆ 10 ಕೂಸುಗಳನ್ನು ಒಂದೇ ಸಲ ಪಡೆದಳು. ಇವುಗಳಲ್ಲಿ ಆರು ಸತ್ತು ಹೋದುವು.

★

ಅತೀ ದೀರ್ಘ ವಯಸ್ಸಿನ ದಾಖಲೆ ಓರ್ವ ಚೀನೀಯ ಗೃಹಸ್ಥನದೇ ಆಗಿರುತ್ತದೆ ಲಿನ್ ಚಿಂಗ್‌ಯುನ್ ಎಂಬೀ ಮನುಷ್ಯ 1677ರಲ್ಲಿ ಹುಟ್ಟಿದ್ದು 1929ರಲ್ಲಿ ಕೆಲವೇ ವರ್ಷಗಳ ಹಿಂದೆ ಮೃತಪಟ್ಟನಂತೆ ತನ್ನೀ 252 ವರ್ಷಗಳ ಬಾಳ್ವಿಕೆಯಲ್ಲಿ ಆತ 24 ಮುಡದಿಯರೊಡನೆ ಸಂಸಾರ ಮಾಡಿದ್ದಾನೆ ಅವನ ಕೊನೆಯ ಪತ್ನಿ 60 ವರ್ಷದ ತರುಣಿ! ತನಗೆಷ್ಟು ಮಕ್ಕಳಾಗಿವೆ ಎಂದು ಅವನಿಗೆ ನೆನಪಿಲ್ಲ. ಚಿಂಗನ ಮರಣಕಾಲಕ್ಕೆ ಅವನ ಅತಿ ಕಿರಿಯ ಮೊಮ್ಮಗನಿಗೆ 76 ವರ್ಷವಂತೆ.

ಅಮೇರಿಕದ ಕೆಂಟುಕಿಯಲ್ಲಿ ಓರ್ವ ಹೆಂಗುಸು ಮೂರನೇ ಸಲ ತ್ರಿ ಶಿಶುಗಳನ್ನು ಹೆತ್ತಿದ್ದಾಳೆ. ಇದಕ್ಕೆ ಆಶ್ಚರ್ಯ ಪಡಬೇಡಿರಿ. ಅವಳ ಹೆಸರು ಕೂಡ ತ್ರಿಪ್ಲೆಟ್ ಎಂದದೆ!

... ಫಿನ್‌ಲೆಂಡಿನ ಬಳಿ) ದ ಓರ್ವ ಮಹಿಳೆ ಒಂದೇ ವರ್ಷ ಆರು ಮಕ್ಕಳನ್ನು ಪಡೆದಳು ಮತ್ತೆ 12 ತಿಂಗಳಲ್ಲಿ ... ಮೂರು ಮಕ್ಕಳಾದವನಳಿಗೆ!

ಅಮೇರಿಕದ ಓರ್ವ ಸ್ತ್ರೀ ನ... ರಳಿಗೆ ...

ಹದಿನಾಲ್ಕು ದಿವಸ ಬಿಟ್ಟು ಎರಡು ಸಲ ಅವಳಿಜವಳಿ (ಒಟ್ಟು ನಾಲ್ಕು) ಮಕ್ಕಳು ಹುಟ್ಟಿದುವು.

ಪಿಟ್ಸ್‌ಬರ್ಗಿನ ಓರ್ವ ನೂರು ವಯಸ್ಸಿನ ಮುದುಕನ ಹೆಂಡತಿ ಅವಳಿಜವಳಿ ಮಕ್ಕಳಿಗೆ ಜನ್ಮ ಕೊಟ್ಟಳು

★

ಇಂದು ಜಗತ್ತಿನಲ್ಲಿ ಅವಳಿಜವಳಿ ಸಾಮಾನ್ಯ ಸಂಭವವಾಗಿದೆ. ಪ್ರತಿ 67 ಮಕ್ಕಳಲ್ಲಿ ಒಂದರಂತೆ ಈ ಜೋಡಿಗಳು ಹುಟ್ಟುವುದೆಂದು ಲೆಕ್ಕ ಹಾಕಲಾಗಿದೆ ಸಯಾಮಿನ ಪ್ರಖ್ಯಾತ ಸಹೋದರಿಗಳ ದೇಹವು ಒಂದಕ್ಕೊಂದು ಜೋಡಿಸಿ ಇದ್ದದ್ದು ಇದರಲ್ಲಿ ಇನ್ನೊಂದು ವೈಚಿತ್ರ ಅವಳಿಜವಳಿಗಳು ಒಂದಾಗಿ ಇದ್ದರೂ ಬೇರೆ ಬೇರೆಯಾಗಿದ್ದರೂ ಅವರ ಜೀವನದಲ್ಲಿ ಒಂದು ತರದ ಏಕಪ್ರಾಣತೆ ಇರುವುದೆಂದು ಈ ಕೆಳಗಿನ ಸಂಗತಿಗಳಿಂದ ತಿಳಿಯಬಹುದು.

ಕೆಲವು ವರ್ಷಗಳ ಹಿಂದೆ 65 ವರ್ಷ ಪ್ರಾಯದ ಇರ್ವ ಅವಳಿಜವಳಿ ಸಹೋದರರು ನಾಲ್ಕೈದು ತಾಸುಗಳ ಅಂತರದಲ್ಲಿ ಇರ್ವರೂ ಮಡಿದರು

ಇನ್ನೊಂದು ಸಂದರ್ಭದಲ್ಲಿ 12 ಸಾವಿರ ಮೈಲು ದೂರದಲ್ಲಿ ಇರ್ವ ಅವಳಿಜವಳಿ ಸಹೋದರಿಯರು ಒಂದೇ ಸಮಯಕ್ಕೆ ವಿವಾಹವಾದರು ಒಬ್ಬಳದು ಇನ್ನೊಬ್ಬಳಿಗೆ ಗೊತ್ತಿರಲಿಲ್ಲ.

ಆದರೆ ಇಂದಿನ ಬಟ್ಟೆ, ಹೊಟ್ಟೆ ಹಿಟ್ಟು ದೀಕಸನಿನ ಕಾಲದಲ್ಲಿ ಜವಳಿ, ಮೂವಳಿ ಮಕ್ಕಳನ್ನು ಪಡೆದರೆ ಅತೀ ಕಷ್ಟವಾಗುವುದು

★

ಸ್ಯಾಂಟ್ ಉಸೇಜಸ್ ಎಂಬ ಫ್ರಾನ್ಸ ಹಳ್ಳಿಯೊಂದರ ರೈತನು ಮೂರು ಸಲ ವಿವಾಹವಾಗಿ 19 ಗಂಡು, 13 ಹೆಣ್ಣು ಮಕ್ಕಳ ತಂದೆಯಾಗಿದ್ದಾನೆ 1914ರ ಯುದ್ಧ ಕಾಲದಲ್ಲಿ ಅವನ ಸಾಯುವಾಗ ಅವನ 20 ಮಕ್ಕಳು ಬದುಕಿದ್ದವು

ಕೆಲವು ವರ್ಷಗಳ ಹಿಂದೆ ಹಸನ್ ಬಾಬಾ ಎಂಬ ತುರ್ಕಿಯವನು 37 ವರ್ಷದ ಪಾತಿಮಾ ಹಸುನ್ ಎಂಬವಳನ್ನು ಏಳನೇ ಪತ್ನಿಯಾಗಿ ಮದುವೆಯಾದ. ಅವನ ಹಳ್ಳಿಯ ನಾಲ್ಕನೆ ಒಂದು ಜನಸಂಖ್ಯೆ ಅವನ ಸಂತಾನವೇ ಆಗಿತ್ತು. ಅವನ ಕೆಲವು ಹುಡುಗರು ನೂರು ವರ್ಷಕ್ಕೂ ಮುಟ್ಟಿದ್ದರು

ಆದರೆ ಅಮೇರಿಕದ ಕೆಂಟುಕಿಯ ಜೇನ್ ಮೋರಿಸ್ ಎಂಬ ಮಹಿಳೆ ಏಕ ಪತಿವ್ರತೆಯಾಗಿದ್ದು ಜಗತ್ತಿನ ಅತೀ ಹೆಚ್ಚು ಮಕ್ಕಳು, ಮೊಮ್ಮಕ್ಕಳ ಪೂರ್ವಜೆಯಾಗಿ ಬಾಳಿರುವರು ಅವಳಿಗೆ 15 ಮಕ್ಕಳಿದ್ದು ಅವರಲ್ಲಿ 12 ಮಂದಿಗೆ ಮದುವೆಯಾಗಿ 100 ಮೊಮ್ಮಕ್ಕಳಾದುವು. ಜೇನಳು 80 ವರ್ಷ ತನಕ ಬದುಕಿದ್ದು, ಆಗ ಅವಳ ಮರಿಮಕ್ಕಳ ಸಂಖ್ಯೆ 326ಕ್ಕೆ ಮುಟ್ಟಿತ್ತು ಅವಳಿಂದ ಐದನೇ ತಲಾಂತರಕ್ಕೆ ಹುಟ್ಟಿದ್ದ ಮಕ್ಕಳ ಸಂಖ್ಯೆಯೇ 49ರಷ್ಟಿತ್ತು. ಹೀಗೆ ಅವಳಿಂದಲೇ ಪ್ರಾರಂಭವಾದೆಲ್ಲಾ ಸಂತಾನದ ಲೆಕ್ಕ ಹಾಕಿದರೆ 518ಕ್ಕೆ ಬಂದು ತಲುಪುವುದು.

★

ಹೊಲಿವುಡ್ಡಿನ ತಾರೆಯರು ಅತೀ ಹೆಚ್ಚಿನ ಮದುವೆ ಮಾಡಿಕೊಳ್ಳುವುದಕ್ಕೆ ಪ್ರಖ್ಯಾತರೆಂದು ಖ್ಯಾತಿ ಇದೆ ಆದರೆ ಇಜಿಪಿನ ಓರ್ವ ಗೃಹಸ್ಥನ 23 ಮಕ್ಕಳು ಅವನು 10ನೇ ಮದುವೆ ಮಾಡಿಕೊಳ್ಳಬೇಕೆಂದು ಅಪೇಕ್ಷಿಸಿರುವರು ಈಗ ಅವನ ಪ್ರಾಯ 130 ಅವನ ಕಿರಿದಿದ ಹುಡುಗಿಗೆ ಕೇವಲ 25

ಇಟಲಿಯಲ್ಲಿ 20ಕ್ಕೂ ಮಿಕ್ಕಿ ಮಕ್ಕಳಿರುವ 6 ಸಾವಿರ ಕುಟುಂಬಗಳಿವೆಯೆಂ ... ಮಣ್ಣು ಮುಕ್ಕಿದ ಅಲ್ಲಿಯ ಸರ್ವಾಧಿಕಾರಿ ಮುಸ್ಸೋಲಿನಿಯು ಜಂಬ ಕೊಚ್ಚುತಿದ್ದ ಪತಿ ಇಟಲಿಯಾನನಿಗೂ ಕಮ್ಮಿಯೆಂದರೆ 4 ಮಕ್ಕಳಾಗಲೇಬೇಕೆಂದು ಅವನು ಆರ್ಡರ್ ಕೊಟ್ಟಿದ್ದ ಈ ಮಕ್ಕಳನ್ನ ನಿರ್ಬಲ ರಾಷ್ಟ್ರಗಳ ಮೇಲಿನ ಯುದ್ಧಕ್ಕೆ ಸೇರಿಸಿ ರಕ್ಷಣ ಇಲ್ಲದ ಹೆಂಗುಸು ಮಕ್ಕಳ ಮೇಲೆ ಬಾಂಬಿನ ಸುರಿಮಳೆಗೆರೆಯಲು ಅವನು ಕೋರಿದ ಹಾರೈಕೆಗಳೆಲ್ಲ ಮಣ್ಣುಗೂಡಿದುವು

1935ರಲ್ಲಿ ಮೃತನಾದ ವೆನಿಜೂಲಾ ರಾಷ್ಟ್ರಾಧ್ಯಕ್ಷನಾದ ಜನರಲ್ ಗೋಮೆಜನಿಗೆ ನಾವು ಗೌರವ ಸಲ್ಲಿಸೋಣ ಅವನು 114 ಮಕ್ಕಳ ತಂದೆಯಾಗಿದ್ದ ಇವು ಬೇರೆ ಬೇರೆ ಅವನ ಮಡದಿಯರಿಗೆ ಹುಟ್ಟಿದ್ದು ವೇನೂ ನಿಜ ಆದರೆ ಎಲ್ಲಾ ಮಕ್ಕಳಿಗೂ ಅವನು ತನ್ನ ಆಸ್ತಿಯನ್ನು ಹಂಚಿಕೊಟ್ಟಿದ್ದಾನೆ. ಅವರೆಲ್ಲರಿಗೂ ವಾಸಿಸಲು 200 ಕೋಣೆಯ ಮನೆಯೊಂದು ಕಟ್ಟಿಸಲಾಗಿತ್ತು ಎಲ್ಲರಿಗೂ ಸಂಪಾದನೆ ಮಾಡಲು ಸಾಮರ್ಥ್ಯವಿರುವ ಒಂದಲ್ಲ ಒಂದು ಕೈಗಾರಿಕೆಯನ್ನು ಕಲಿಸಿದ್ದಾನೆ

ಹತ್ತು ವರ್ಷಗಳಲ್ಲಿ ಅತೀ ಹೆಚ್ಚು ಮಕ್ಕಳನ್ನು ಪಡೆಯುವ ತಾಯಿಗೆ 10 ಸಾವಿರ ಪವನು ಬಹುಮಾನ ಕೊಡುವೆನೆಂದೋರ್ವ ಟೊರೊಂಟೋ ದೇಶದ ವ್ಯಾಪಾರಿ ಸಾರಿದ್ದ ಈ ಸ್ಪರ್ಧೆಯಲ್ಲಿ 16 ಕುಟುಂಬಗಳು ಭಾಗವಹಿಸಿದುವು ಕೊನೆಗೆ ಎರಡು ತಾಯಂದಿರಲ್ಲಿ ಹತ್ತಿರದ ಸ್ಪರ್ಧೆಯಾಯಿತು ಆದರೆ ಒಬ್ಬಳು ಮಾತ್ರ ಒಟ್ಟು 12 ಮಂದಿ ಮಕ್ಕಳನ್ನು ಹೆತ್ತು ಬಹುಮಾನ ಗೆದ್ದಳು

★

ಮಕ್ಕಳ ಹೆಸರಲ್ಲೂ ವೈಶಿಷ್ಟ್ಯವಿದೆ ಸಂಯುಕ್ತ ಅಮೇರಿಕದ ಎಮಿ ಜೆಕ್ಸನ್ ಎಂಬಾಕೆ ತನ್ನ ಮಕ್ಕಳಿಗೆ ಎಪೆಂಡಿಸಿಟಿಸ್, ಟಾನ್ಸಿಲಿಟಿಸ್ ಮತ್ತು ಮೆನಿಂಜಿಟಿಸ್ ಎಂದು ರೋಗಗಳ ಹೆಸರನ್ನು ಇಟ್ಟಿರುವಳು

ಮಿಕ್ಕಿಮೌಸ್, ಡೊನಾಲ್ಡ್ ಡಕ್ ಎಂಬ ಹೆಸರನ್ನು ಮಕ್ಕಳಿಗೆ ಇಡುವ ರೂಢಿಯಾಗುತ್ತಿದೆ

ನೀವೊಂದು 'ಭಾವೀ ಮಗುವಿನ ರೂಪರೇಷೆಗಳನ್ನು ಹೇಳಬಲ್ಲಿರಾ? ಅಮೆರಿಕದ ನಾರ್ತ್ ಕೆರೋಲಿನದ ಎಲಿನ್ ಜೆ. ಪಾರ್ ... ಗರ್ಭಿಣಿ ಮಹಿಳೆ ಬಸಿಗೆ ಬಿದ್ದಳು ... ವೇದಲು ಆಕೆ ಮಗು ಹೆತ್ತಳು ಅದೇ ಪಾಪಿ ಮಗು.

ಡ... ಫ್ರೈಲ್ ಎಂಬ ಪ್ರಖ್ಯಾತ ಆಂಗ್ಲ ಪುಸ್ತಕ ಪ್ರಕಾಶಕನು ಏಳನೇ ಮಗನ, ಏಳನೇ ಮಗನ ಏಳನೇ ಮಗ ಓರ್ವತಂದೆಯ ಏಳನೇ ಮಗನು ಎಂತಹ ಶಾರೀರಿಕ ವ್ಯಾಧಿಯನ್ನೂ ಗುಣಮಾಡಬಲ್ಲ ವೈದ್ಯನಾಗುವನೆಂದು ಸ್ಕಾಟ್ಲೆಂಡಿನ ಜನರಲ್ಲೊಂದು ನಂಬಿಕೆಯಿದೆ

ಈ ಗಣಿತ ಲೆಕ್ಕಾಚಾರದಲ್ಲಿ ಆಸ್ಟ್ರೇಲಿಯದ ಸಿಡ್ನಿ ನಗರದ ಜೋರ್ಜ್ ಲಿತ್ಗೋ ಎಂಬ ಪೋಲೀಸನನ್ನು ಯಾರೂ ಹಿಂದೆ ಹಾಕಲು ಸಾಧ್ಯವಿಲ್ಲ ಅವನಿಗೆ 5 ಮಕ್ಕಳಿವೆ. ಪ್ರತಿ ಮಗುವು ಜೂನ್ 13ರಂದು ಹುಟ್ಟಿದ್ದು—ಬೇರೆ ಬೇರೆ ಇಸವಿಯಲ್ಲಿ

★

ಈಗ ಜೀವಂತವಿರುವ ಏಕಕಾಲ ಜನ್ಮಿತ ಶಿಶುಗಳಲ್ಲಿ ಅಮೇರಿಕದ ಡಿಯೊನೆ ಪಂಚ ಕನ್ನೆಗಳು ಪ್ರಖ್ಯಾತಿ ಪಡೆದಿವೆ ಪ್ರಪಂಚದ ಐತಿಹಾಸಿಕ ಅದ್ಭುತಗಳಿಗಿಂತ ಈ ಹುಡುಗಿಯರು ಹೆಚ್ಚು ಜನರನ್ನು ಆಕರ್ಷಿಸಿ ಅಪಾರ ಹಣವನ್ನು ಶೇಖರಿಸಿವೆ

ಜಾತೀಯ ಗಲಭೆಗಳನ್ನೆಬ್ಬಿಸಿದವರು ಅದನ್ನು ನಿಲ್ಲಿಸಲು ಅಸಮರ್ಥರಾಗಿರುವುದರಿಂದ ಭಾರತದಲ್ಲಿ ಶಾಂತಿ ಸಮೃದ್ಧಿಗಳ ಸ್ಥಾಪಿಸಲ್ಪಡುವ ತನಕ ಬ್ರಿಟಿಷರು ಇಲ್ಲಿರುವಂತೆ ಮಾಡಲು ಚಳವಳಿನಡೆಯಬೇಕೆಂದು ಫಜಲುಲ್ ಹಕ್ಕರ ಇತ್ತೀಚೆಗಿನ ಸೂಚನೆ

KANARA COMMERCIAL BANK LTD.

PUTTUR

H O Puttur] Estd 1920 [Branch Vittal

All kinds of Banking Business transacted.

Deposits Current, Savings, Cumulative Deposits are accepted.

Fixed Deposits for periods of 3 months and above up to 24 months are accepted.

SEASON DEPOSITS

ARE Accepted up to 31-5-1947 Terms on application

ಪಾಕಿಸ್ಥಾನ ಸ್ಥಾಪಿಸಲು ಲೀಗಿನ ಅತ್ಯಾಚಾರ ಧೋರಣೆ

ಲೀಗ್ ಪ್ರಾಂತ್ಯಗಳಲ್ಲಿ ಅಲ್ಪಸಂಖ್ಯಾಕರ ದುಃಸ್ಥಿತಿ

ಪಂಜಾಬ್ ಬಂಗಾಲ ವಿಭಾಗೀಕರಣದಾವಶ್ಯಕತೆ

ಯುದ್ಧ ಕಾಲದಲ್ಲಿ ಟೋರಿ ಪಕ್ಷದ ಸಂಪೂರ್ಣ ಸಹಾನುಭೂತಿ ಲೀಗಿನ ಕಡೆಗಿದ್ದಿತು. ರಾಷ್ಟ್ರೀಯ ಭಾರತವು ಸಾಮ್ರಾಜ್ಯಶಾಹಿ ವಿರುದ್ಧ ದಂಗೆ ಎದ್ದಾಗ ಲೀಗ್ ಅನುಯಾಯಿಗಳು ಬಹಿರಂಗವಾಗಿ ಸಾಮ್ರಾಜ್ಯಶಾಹಿಯೊಡನೆ ಸಹಕರಿಸಿ ತಮ್ಮ ಸೇವೆಯ ಪರಿಪಕ್ವವಾದ ಫಲವನ್ನುಂಡರು. ಯುದ್ಧಾನಂತರ ಬ್ರಿಟನಿನಲ್ಲಿ ಮಜೂರ ಸರಕಾರ ಅಧಿಕಾರ ವಹಿಸಿದೊಡನೆ ಅವರ ಭಾರತ ಧೋರಣೆಯೂ ಬದಲಾಯಿತು. ಭಾರತವನ್ನು ವಿಭಾಗಿಸುವುದರ ಗಂಡಾಂತರವನ್ನು ಅವರು ಲೀಗಿಗೆ ಮನಗಾಣಿಸಲು ಪ್ರಯತ್ನಪಟ್ಟರು

ಆದರೆ ಮಿ| ಜಿನ್ನರು ತಮ್ಮ ಅನುಯಾಯಿಗಳಿಗೆ ಪಾಕಿಸ್ಥಾನದ ಮಹದಾಶೆ ತೋರಿಸಿದ್ದರು. ಅದನ್ನು ಹೊಂದದಿದ್ದರೆ ಲೀಗಿನ ರಾಜಕೀಯ ಮರಣವು ಸ್ವತಃ ಸಿದ್ಧವಾದುದು. ತಮ್ಮ ಅನುಯಾಯಿಗಳಲ್ಲಿ ತಾವು ಮಹಾ ವೇಧಾವಿಗಳೆನಿಸಿದ ಲೀಗ್ ಧುರೀಣರು ಅಪಹಾಸ್ಯಕ್ಕೀಡಾಗುವುದೂ ಖಂಡಿತ. ಇದರ ಮೇಲೆ ಭಾರತದ 11 ಪ್ರಾಂತ್ಯಗಳಲ್ಲಿ 5 ತಮಗೆ ಸಿಕ್ಕಿದರೆ ಅಲ್ಲಿ ತಮ್ಮ ಮತೀಯ ಸೂತ್ರಾಧಾರದ ರಾಜ್ಯ ಸ್ಥಾಪಿಸಿದರೆ ಇಸ್ಲಾಮಿನ ಅಪಾರ ಸೇವೆ ಮಾಡಿದ ಪುಣ್ಯವೂ ಲಭಿಸುವುದು. ಹೀಗೆಂದೆಲ್ಲ ಅವರು ಕನಸನ್ನು ಕಾಣುತ್ತಿದ್ದರು

ಇದೇ ಸಮಯಕ್ಕೆ ತಮ್ಮ ಕನಸಿನ ರಾಜ್ಯದಲ್ಲಿ ಮುಸಲ್ಮಾನೇತರರೂ ಇರಬಯಸುವುದಿಲ್ಲವೆಂಬ ಸಂಗತಿಯನ್ನು ಲೀಗ್ ಪುಡಾರಿಗಳು ಸಂಪೂರ್ಣ ಮರೆತಿದ್ದರು. ಅವರ ಪಾಕಿಸ್ಥಾನದ ಪರ ಘೋಷ ಹೆಚ್ಚಾದಂತೆಲ್ಲ ಅದರ ವಿರುದ್ಧ ಚಳವಳವೂ ಹೆಚ್ಚಾಗತೊಡಗಿತು. ತಮ್ಮ ರಾಜ್ಯ ಸ್ಥಾಪಿಸಲಳೆಸಿದ ಐದು ಪ್ರಾಂತ್ಯಗಳಲ್ಲಿನ ಬರೀ ಎರಡು (ಸಿಂಧ್ ಬಂಗಾಲ) ಪ್ರಾಂತ್ಯಗಳಲ್ಲಿ ಮಾತ್ರ ಅತಿ ಕಷ್ಟದಿಂದ ಲೀಗ್ ಮಂತ್ರಿಮಂಡಳಗಳು ಸ್ಥಾಪಿಸಲ್ಪಟ್ಟವು. ಅದರಲ್ಲಿಯೂ ಬಂಗಾಲದಲ್ಲಿ ಯುರೋಪಿಯನ ಪಕ್ಷದ ಬೆಂಬಲವಿಲ್ಲದಿದ್ದರೆ ಲೀಗಿಗೆ ಅಲ್ಲಿ ಬಹುಮತ ದೊರೆಯುವುದಿಲ್ಲ. ಸಿಂಧದಲ್ಲಿ ಪ್ರಸ್ತುತ ಚುನಾವಣೆಯಾಗದಂತೆ ಲೀಗ್ ಧುರೀಣರನ್ನು ಅಲ್ಲಿನ ಗವರ್ನರರು ತಮ್ಮ ಸಲಹೆಗಾರರಾಗಿ ಆರಿಸಿದ್ದರಿಂದ ಚುನಾವಣೆಗಳು ಬಲಾತ್ಕಾರ, ಒತ್ತಾಯ ಹೆದರಿಕೆ ಬೆದರಿಕೆ, ಕೊಲೆ, ಖೂನಿಗಳ ವಾತಾವರಣದಲ್ಲೇ ನಡೆದವು

ಘಾತುಕ ನೀತಿ

ಬೇರೆ ಯಾವ ನ್ಯಾಯವಾದ ವಿಧಾಯಕ ರೀತಿ ನೀತಿಗಳಿಂದ ತಾವು ಮೇಲೆ ಬರುವಂತಿಲ್ಲವೆಂದು ಲೀಗ್ ಮುಖಂಡರಿಗೆ ಮನದಟ್ಟಾಯಿತು. ಗಡಿನಾಡಿನಲ್ಲೂ ಪಾಕಿಸ್ಥಾನದ ಉದ್ದೇಶದಿಂದ ಚುನಾವಣೆಗಳು ನಡೆದುವು. ಇಷ್ಟಲ್ಲದೆ ಲೀಗ್ ಮುಖಂಡರ ಸರಕಾರವು ಆ ಸಮಯದಲ್ಲಿ ಅಲ್ಲಿ ಅಧಿಕಾರದಲ್ಲಿತ್ತಾದರೂ ಪಠಾಣರು ತಮ್ಮ ರಾಷ್ಟ್ರೀಯತೆಯನ್ನು ವ್ಯಕ್ತಪಡಿಸಿ ಬಹುಸಂಖ್ಯೆಯಲ್ಲಿ ಕೊಂಗ್ರೆಸ್ ಸದಸ್ಯರನ್ನು ಚುನಾಯಿಸಿದರು

ಪಂಜಾಬದಲ್ಲಿ ಲೀಗು ಬಹುಮತ ಪಡೆಯಲಾರದೆ ಅಲ್ಲಿ ಯೂನಿಯನಿಸ್ಟ್, ಸಿಕ್ ಮತ್ತು ಕೊಂಗ್ರೆಸ್ ಪಕ್ಷಗಳು ಒಟ್ಟುಗೂಡಿ ಮಂತ್ರಿಮಂಡಳ ರಚನೆಯಾಯಿತು. ಇದರಿಂದ ಲೀಗಿಗೆ ದೊಡ್ಡ ಅಪಮಾನವೇ ಆಯಿತು. ಕಾರಣ ಪಂಜಾಬು ಭಾವೀ ಪಾಕಿಸ್ಥಾನದ ಕೇಂದ್ರವೆನಿಸಲ್ಪಟ್ಟಿತ್ತು.

ಗೂಂಡಾ ರಾಜ್ಯ

ಪಾಕಿಸ್ಥಾನ ದೊರೆಯದಿದ್ದರೆ ಭಾರತದಲ್ಲಿ ಅಂತಃಕಲಹವುಂಟಾಗುವುದೆಂದು ತೋರಿಸುವುದೊಂದೇ ಉಪಾಯ ಲೀಗಿನ ಬಳಿ ಉಳಿಯಿತು. ಅದೇ ಸಮಯಕ್ಕೆ ನಡುಗಾಲ ಕೇಂದ್ರ ಸರಕಾರದ ಹೊಣೆಗಾರಿಕೆ ಕೊಂಗ್ರೆಸಿಗೆ ಕೊಡಲ್ಪಟ್ಟದ್ದರಿಂದ ಲೀಗಿನ ಹೊಟ್ಟೆಯುರಿ ಮತ್ತಷ್ಟು ಉರಿಗೊಂಡಿತು. 'ಡೈರೆಕ್ಟ್ ಏಕ್ಶನ್' ಎಂದು ಲೀಗು ಹಿಂದೂಗಳ ಮೇಲೆ ಯುದ್ಧ ಸಾರಿತು. ಈಗಿನ ನಾಗರಿಕ ವರ್ಗದಲ್ಲಿ ಪುಂಡಾಟಿಕೆಯ ವ್ಯಕ್ತಿಗಳಿಗೆ ಕೊರತೆಯಿಲ್ಲ. ಬಂಗಾಲದಲ್ಲಿ ಅವರನ್ನು ಬೆಂಬಲಿಸಲಿಕ್ಕೆ ಲೀಗ್ ಸರಕಾರವಂತೂ ಇದ್ದೇ ಇತ್ತು. ಡೈರೆಕ್ಟ್ ಏಕ್ಶನ್ ದಿವಸ ಪ್ರಾಂತ್ಯಕ್ಕೆಲ್ಲಾ ರಜೆ ಸಾರಿ ಪ್ರಧಾನಿ ಸುಹ್ರವರ್ದಿಯವರು ದಂಗೆಗೆ ಒಳ್ಳೇ ಅನುಕೂಲತೆ ಕಲ್ಪಿಸಿದರು

ಬಂಗಾಲದಲ್ಲಿ ಅದೆಷ್ಟು ಭೀಕರ ಕೊಲೆ ಪ್ರಯತ್ನ ನಡೆದರೂ ಪಾಕಿಸ್ಥಾನಕ್ಕೆ ಅದರಿಂದ ಯಾವ ಸಮರ್ಥನೆಯೂ ಸಿಗದಂತಾಯಿತು. ಅಂತೆಯೇ ಲೀಗಿನ ನೋಟ ಪಂಜಾಬದ ಕಡೆ ತಿರುಗಿತು. ಅಲ್ಲಿನ ಕಿಜೀರ್ ಹಯತ್ ಖಾನರ ಮಂತ್ರಿಮಂಡಳ ಉರುಳಿಸುವುದು ಅವರ ಗುರಿಯಾಯಿತು. ಆದರೆ ಪಂಜಾಬದಲ್ಲಿ ಮುಸಲ್ಮಾನೇತರರೂ ಸನ್ನದ್ಧರಾಗಿಯೇ ಇದ್ದರು. ಲೀಗಿನ ನ್ಯಾಶನಲ್ ಗಾರ್ಡ್ಸ್ ಮತ್ತು ಹಿಂದೂಗಳ ಸ್ವಯಂಸೇವಕ ಸಂಘವು ಎದುರು ಬದುರಾಗಿ ನಿಂತಾಗ ಸಿರ್ಜಾಲ ಮನಸ್ಸಿನ ಕಿಜೀರರು ರಾಜಿನಾಮೆ ಕೊಟ್ಟು ಸೆಕ್ಷನ್ 93ರ ಗವರ್ನರ್ ರಾಜ್ಯಕ್ಕೆ ಆಸ್ಪದ ಮಾಡಿಕೊಟ್ಟರು

ಪಂಜಾಬದ ಗವರ್ನರರಾದರೋ ತಾಜಾ ಕೊಂಗ್ರೆಸ್ ವಿರೋಧಿಗಳು ಮಾತ್ರವಲ್ಲ ಬಹಿರಂಗ ಲೀಗ್ ಸಹಾನುಭೂತಿಗಳು. ಪಂಜಾಬದಲ್ಲಿ ದಂಗೆಗಳಾದಾಗ ಜಿಲ್ಲೆಗಳಲ್ಲಿನ ಬ್ರಿಟಿಷ್ ಅಧಿಕಾರಿಗಳೆಲ್ಲ ಪಕ್ಷಪಾತದ ಧೋರಣೆ ವಹಿಸಿ ರಕ್ಷಣೆಗಾಗಿ ತಮ್ಮ ಬಳಿ ಬಂದ ಅಲ್ಪಸಂಖ್ಯಾಕರಿಗೆ 'ಕೊಂಗ್ರೆಸಿನ ಬಳಿ ಹೋಗಿರಿ' ಎಂದು ಹಾಸ್ಯ ಮಾಡಿ ಕಳುಹಿಸಿದರಂತೆ. ಈ ಧೋರಣೆಯಿಂದ ಪುಂಡರಿಗೆ ನಿರ್ಭಯವಾದ ಬೆಂಬಲ ಸಿಕ್ಕಿದಂತಾಯಿತು

ಸೇವೆಯ ಫಲ

ಬ್ರಿಟಿಷ್ ಸೈನ್ಯದಲ್ಲಿ ಬಹುಸಂಖ್ಯಾಕ ಮುಸಲ್ಮಾನರಿರುವರೆಂದು ಚರ್ಚಿಲ್ಲರು ಸುಳ್ಳು ಪ್ರಚಾರ ಮಾಡಿದ್ದರು. ಆದರೆ ನಿಜಸ್ಥಿತಿಯನ್ನು ನೋಡ ಹೋದರೆ ಶೇಕಡಾ 66ರಷ್ಟು ಮುಸಲ್ಮಾನೇತರರು ಬ್ರಿಟಿಷ್ ಭಾರತ ಸೈನ್ಯದಲ್ಲಿರುವರು. ಇಡೀ ಭಾರತದಿಂದ ಸೈನ್ಯಕ್ಕೆ ಸೇರಿದ ಮುಸಲ್ಮಾನರ ಸಂಖ್ಯೆಗಿಂತ ಹೆಚ್ಚಾದ ಮುಸಲ್ಮಾನೇತರರು ಪಂಜಾಬ ಪ್ರಾಂತ್ಯವೊಂದರಿಂದಲೇ ಸೇರಿರುವರೆಂದ ಮೇಲೆ ಪಂಜಾಬದಲ್ಲಿ ಮುಸಲ್ಮಾನೇತರರಿಗೆ ವಿಶೇಷ ರಕ್ಷಣೆ ದೊರಕಬೇಕಾದುದು ಅತ್ಯಂತ ನ್ಯಾಯಬದ್ಧವಾದುದು. ಆದರೆ ಇಂದು ಬ್ರಿಟಿಷರು ಪಕ್ಷಪಾತದಿಂದ ಅವರಿಗೆ ಹೆಚ್ಚು ಸಹಾಯ ಮಾಡಿದ, ಅವರ ಸಾಮ್ರಾಜ್ಯದ ಮೂಲೆ ಮೂಲೆಗೂ ಹೋಗಿ ರಕ್ತ ಸುರಿಸಿದ ಮುಸಲ್ಮಾನೇತರ ಸಿಕ್ ಹಿಂದೂ, ಕ್ರೈಸ್ತರ ಹಿತಗಳನ್ನು ಬ್ರಿಟಿಷ್ ಅಧಿಕಾರಿಗಳು ಅಲಕ್ಷ ಮಾಡಿದ್ದು ಕೃತಘ್ನತೆಯ ಪರಮಾವಧಿಯೆಂದು ಅವಾದಿಸಲಾಗಿದೆ

ಪಂಜಾಬ ಬಂಗಾಲ ವಿಭಾಗ

ಕಿಜೀರ್ ಹಯತ್ ಖಾನರಿಗೆ ಜವಾಬ್ದಾರ ಜನತಾ ಬೆಂಬಲವಿರಲಿಲ್ಲವಾದುದರಿಂದ ಅವರು ರಾಜಿನಾಮೆ ಕೊಟ್ಟದ್ದು ಸಹಜವೆನ್ನಬಹುದು. ಅವರ ಹೊಣೆಗಾರಿಕೆಯೂ ಅತಿ ಕಮ್ಮಿ ಪ್ರಮಾಣದ್ದು. ಆದರೆ ಇಂದು ತಾವು ಪಂಜಾಬದಲ್ಲಿ ಗೆದ್ದೆವೆಂದು ಲೀಗಿನವರು ಗಡಿನಾಡಿನಲ್ಲೂ ಕಿರುಕುಳ ಮಾಡ ಹತ್ತಿರುವರು. ಅಲ್ಲಿ ಎರಡೆರಡು ಸಲ ಸೋತು ಹೋದ ಲೀಗು ಕೆಲವುಂದಿ ಜಮೀನ್ದಾರರ, ಸರಕಾರಿ ಕಛೇರಿ ಅಧಿಕಾರಿಗಳ (ಇವರಲ್ಲಿ ಕೆಲವರು ಲೀಗ್ ಪಕ್ಷಪಾತಿಗಳು) ಮತ್ತು ಪ್ರತಿಗಾಮಿ ಮಸೀದಿ ಮೌಲ್ವಿಗಳ ಸಹಾಯದಿಂದ ಜನಪ್ರಿಯ ಸರಕಾರವನ್ನು ಉರುಳಿಸಲು ಯತ್ನಿಸುತ್ತಿದ್ದಾರೆ. ವೈಸ್‌ರಾಯರು ಸ್ವತಃ ಅಲ್ಲಿನ ಪರಿಸ್ಥಿತಿಯನ್ನು ಪರಿಶೀಲಿಸಿ ಬಂದಿದ್ದು ಕೊಂಗ್ರೆಸ್ ಮಂತ್ರಿಮಂಡಳವನ್ನು ಸಮಾಪ್ತಗೊಳಿಸುವ ಆವಶ್ಯಕತೆಯಿಲ್ಲವೆಂದು ಮನಗಂಡಿದ್ದಾರೆ.

ಗಡಿನಾಡಿನಲ್ಲಿ ನಡೆಯುವುದು ಕೇವಲ ಪುಂಡರ ಗಲಾಟೆ. ಕೆಲ ಅಧಿಕಾರಿಗಳ ಗುಪ್ತ ಚಳಕದಿಂದ ಇದು ಸಾಧ್ಯವಾಗಿದೆ. ಆದರೆ ಬಹುಕಾಲ ಇದು ನಡೆಯಲಾರದು. ಕಾರಣ ಖಾನ್ ಅಬ್ದುಲ್ ಗಫ್ಫಾರ್ ಖಾನರ ಕೆಂಪಂಗಿ ದಳದವರು ಅಲ್ಲಿ ಶಾಶ್ವತವಾದ ನಿಸ್ವಾರ್ಥ ಸೇವೆಯನ್ನು ಮಾಡಿ ಹೆಚ್ಚಿನ ಜನತೆಯ ಪ್ರೀತ್ಯಾದರಗಳಿಗೆ ಪಾತ್ರರಾಗಿದ್ದಾರೆ. ಈಗ ಗಲಭೆ ಮಾಡುತ್ತಿರುವವರನ್ನು ಒಂದು ಸಲ ಬಲವಾದ ಧೋರಣೆಯಿಂದ ದಬ್ಬಿ ಬಿಟ್ಟರೆಂದರೆ ಮತ್ತೆ ಲೀಗು ಗಡಿನಾಡಿನಲ್ಲಿ ತನ್ನ ಕುರುಕ್ಷೇತ್ರವನ್ನು ಕಾಣುವುದು

ಇದೇ ಸಮಯಕ್ಕೆ ಪೂರ್ವ ಪಂಜಾಬದ ಮುಸಲ್ಮಾನೇತರ ಬಹುಸಂಖ್ಯಾಕ ಪ್ರದೇಶಗಳನ್ನು, ಬಂಗಾಲದ ಪಶ್ಚಿಮದ ಬಹುಸಂಖ್ಯಾಕ ಹಿಂದೂ ಪ್ರದೇಶಗಳನ್ನು ವಿಭಾಗಿಸಲೇ ಬೇಕೆಂಬ ಚಳವಳ ಪ್ರಬಲವಾಗಿದೆ. ಬ್ರಿಟಿಷ್ ಪ್ರತಿನಿಧಿಗಳಿಗೂ ಇದು ತುಂಬಾ ಮನವರಿಕೆಯಾಗಿರುವುದು. ಅಸ್ಸಾಮದಲ್ಲಿ ತಮ್ಮ ಜನಸಂಖ್ಯೆ ಹೆಚ್ಚಿಸಲು (ಅಲ್ಲಿ ಮುಸಲ್ಮಾನರು ಕೇವಲ ಶೇಕಡಾ 33ರಷ್ಟು) ಲೀಗು ಸಾವಿರಾರು 'ಸತ್ಯಾಗ್ರಹಿ'ಗಳನ್ನು ಬಂಗಾಲ ಗಡಿಯಲ್ಲಿ ಸಿದ್ಧಗೊಳಿಸಿರುವುದಾದರೂ ಅಲ್ಲಿನ ಗವರ್ನರರು ಸ್ತಬ್ಧ ಕೂತಿರುವರು. ಅವರೆ ಎಂತಹ ಕಿರುಕುಳವನ್ನಾದರೂ ಕಠಿಣ ಹಸ್ತದಿಂದ ನಿರ್ನಾಮಗೊಳಿಸುವುದಾಗಿ ಅಸ್ಸಾಮ ಪ್ರಧಾನಿ ಬಾರ್ಡಲೋಯವರು ಸಾರಿರುವರು.

ತಾವು ಕೇಳಿದಂತೆ ಪಾಕಿಸ್ಥಾನ ದೊರೆಯಲಾರದೆಂದು ಜಿನ್ನಾ ಸಾಹೇಬರಿಗೆ ಖಚಿತವಾದಂತೆ ತೋರುತ್ತದೆ. ಅವರು ತಮ್ಮ ಇತ್ತೀಚೆಗಿನ ಹೇಳಿಕೆಯಲ್ಲಿ ಪಂಜಾಬ ಬಂಗಾಲಗಳನ್ನು ವಿಭಾಗಿಸಬಾರದೆಂದು ಬ್ರಿಟಿಷ್ ಸರಕಾರಕ್ಕೂ ವೈಸ್‌ರಾಯರಿಗೂ ನಮ್ರ ಪೂರ್ವಕವಾಗಿ ವಿನಂತಿಸಿಕೊಂಡಿರುವರು. ಆದರೆ ಲೀಗು ಅಲ್ಪಸಂಖ್ಯಾಕರ ಹಿತಗಳನ್ನು ರಕ್ಷಿಸುವ ಯಾವೊಂದು ಭರವಸೆಯನ್ನು ತೋರಿಸದಿದ್ದುದರಿಂದ ಪಾಕಿಸ್ಥಾನದಲ್ಲಿ ಮುಸಲ್ಮಾನೇತರರು ವಾಸಿಸುವುದು ಅಪಾಯಕರವೆಂದೇ ತಿಳಿಯಲ್ಪಟ್ಟಿದೆ

—ಮೋಡರ್ನ್ ರಿವ್ಯೂ.

ಒಂದು ತರದ ಜವಾಬ್ದಾರಿ ಸರಕಾರವನ್ನು ಸ್ಥಾಪಿಸುವುದಾಗಿ ಮೈಸೂರ್ ದಿವಾಣರು ತಿಳಿಸಿರುವುದರಿಂದ 'ಸತ್ಯಾಗ್ರಹದ ಯೋಜನೆಯನ್ನು ಮೈಸೂರು ಕೊಂಗ್ರೆಸು ಮುಂದಕ್ಕೆ ಹಾಕಿರುವುದು.



ನಿಮಗೆ ಬೇಕಾದುದು ಅಂತರ್ಯ ಶುದ್ಧಿ ಮತ್ತು ಬ್ಯಾಲ್ ಬಿನ್ಸ್ ನಿಮಗೆ ಅವಶ್ಯವಿದೆ. ಅವನ್ನು ನಿತ್ಯಲೂ ಕ್ರಮವಾಗಿ ಸೇವಿಸಿದಲ್ಲಿ ನಿಮ್ಮ ರಕ್ತದ ಶುದ್ಧೀಕರಣವಾಗಿ, ಕಶ್ಮಲಗಳ ವಿಸರ್ಜನೆಯು ನಡೆದು ನಿಮ್ಮಲ್ಲಿ ನವಚೇತನವು ಬರುವುದು.

ಆರೋಗ್ಯದಿಂದಲೂ, ದೃಢಕಾಯರಾಗಿಯೂ ಸಂತೋಷ ಚಿತ್ತರಾಗಿಯೂ, ಬಾಳಿರಿ. ಇಂದಿನ ರಾತ್ರೆಯಿಂದ ಬ್ಯಾಲ್‌ಬಿನ್ಸ್‌ಗಳನ್ನು ಸೇವಿಸಿರಿ, ನಾಳೆಗೆ ನೀವು ಉತ್ತಮಸ್ಥಿತಿಯನ್ನು ಪಡೆಯುವಿರಿ

ಮಲಬದ್ಧತೆ, ಪಿತ್ತವಿಕಾರ, ತಲೆಸಿಡಿತ, ಪ್ಲೀಹ ಸಂಬಂಧ ಪೀಡೆಗಳು ಜೀರ್ಣಕೋಶದ ವಿಕಾರಗಳು ಮತ್ತಿತರ ಇದೇ ಸಂಬಂಧದ ಸಂಕಟಗಳಿಗೆ ಬ್ಯಾಲ್ ಬಿನ್ಸ್ ದಿವ್ಯ ಔಷಧಿಯು.



ಶುದ್ಧ ವನಸ್ಪತಿಗಳಿಂದ ಸಿದ್ಧವಾದ

BILE BEANS

ನೈಸರ್ಗಿಕ ಟಾನಿಕ್ ಮತ್ತು ದೋಷನಾಶಕ

ವಾರ್ತ ವಿಜ್ಞಾನ ವಾರ್ತೆಗಳು

ಏಟಂ ಬಾಂಬಿನ ದುಷ್ಪರಿಣಾಮ

ಏಟಂ ಬಾಂಬಿನ ಶಾಶ್ವತ ದುಷ್ಪರಿಣಾಮಗಳೇನೆಂದು ಈಗ ಟೋಕಿಯೊದಿಂದ ಬರುತ್ತಿದೆ. ನಾಗಸಾಕಿಯ ಅಣುಬಾಂಬಿನ ವನಸ್ಪತಿಗಳಲ್ಲಿ ವಿಲಕ್ಷಣ ಚಿಹ್ನೆಗಳು ಕಂಡುಬಂದಿವೆ. ಹೊಸದಾಗಿ ಬೆಳೆದ ಎಲೆಗಳು ಹಸುರಾಗಿರದೆ ಬಿಳಿಯಾಗಿರುವವು. ಅಲ್ಲಿ ಏಟಂ ಬಾಂಬು ಬಿದ್ದನಂತರ ಹುಟ್ಟಿದ ಕೂಸುಗಳ ಅಂಗಾಂಗಗಳೂ ವಿಲಕ್ಷಣೀಯವಾಗಿ ಕಂಡುಬರಲಿವೆಯೆಂದು ವಿಜ್ಞಾನಿಗಳ ಹೇಳಿಕೆ.

ಕಲ್ಲಿದ್ದಲಿಯ ಬದಲಿಗೆ ನೀರು

ಯುರೋಪಿನಲ್ಲಿ ಕಲ್ಲಿದ್ದಲಿನ ಅಭಾವವುಂಟಾಗಿರುವುದರಿಂದ ಕೈಗಾರಿಕೆ ಯಂತ್ರಗಳನ್ನು ಚಲಿಸಲು ಹೊಸ ವಿಧಾನಗಳನ್ನು ಹುಡುಕುವ ಪ್ರಯತ್ನಗಳಾಗುತ್ತಿವೆ. ಫ್ರಾನ್ಸಿನಲ್ಲಿ ನದಿಗಳ ಏರಿಳಿತ ಅನುಕೂಲತೆಯನ್ನು ತೆಗೆದುಕೊಂಡು ಏರಿದ ನೀರನ್ನು ಯಂತ್ರ ಚಲನೆಗೆ ಉಪಯೋಗಿಸುವ ಏರ್ಪಾಡುಗಳಾಗಿವೆ. ಇಂಥಹ ನದಿಗಳಿಗೆ ಅಣೆಕಟ್ಟುಗಳನ್ನು ಹಾಕುವ ಯೋಜನೆಗಳಾಗಿವೆ. ಇಂಗ್ಲೆಂಡಿನ ಕೆಲವು ನದಿಗಳ ನೀರು ಭರತಿಯು ಸಮಯದಲ್ಲಿ 45 ಅಡಿಗಳ ತನಕ ಏರುವುದರಿಂದ ಅಲ್ಲಿಯೂ ಸಮಾನ ಏರ್ಪಾಡುಗಳನ್ನು ಮಾಡಲು ಸಿದ್ಧತೆ ನಡೆಸುತ್ತಿರುವರು.

ಲಘು ಮೋಟಾರ್ ಸ್ಕ್ಯಾಕಲು

ಸ್ಕ್ಯಾಕಲಿನಂತೆ ಓರ್ವ ಮನುಷ್ಯನು ಎತ್ತಿ ಹಿಡಕೊಂಡುಹೋಗಲು ಸಾಧ್ಯವಾಗುವಷ್ಟು ಹಗುರವಾದ ಮೋಟಾರ್ ಸ್ಕ್ಯಾಕಲನ್ನು ಒಂದು ಬ್ರಿಟಿಷ್ ಯಂತ್ರಗಾರಿಕೆಯ ಸಂಸ್ಥೆಯವರು ತಯಾರಿಸಿದ್ದಾರೆ. ಅದರ ಭಾರ ಕೇವಲ 135 ರಾತ್ತಲಿನಷ್ಟಿದೆ. ಓರ್ವ ಸಾಧಾರಣ ಗಾತ್ರದ ಮನುಷ್ಯನು ಅದರಲ್ಲಿ 40ರಿಂದ 50 ಮೈಲು ವೇಗದಲ್ಲಿ ಸ್ವಾರಿ ಮಾಡಬಹುದು.

ಯಂತ್ರೋಭಿವೃದ್ಧಿ

ಕೈಗಾರಿಕೆಗಳಿಗೆ ಈಗ ಸಾಕಷ್ಟು ಮನುಷ್ಯರು ಕೆಲಸಕ್ಕೆ ಸಿಕ್ಕುವುದಿಲ್ಲ. ಯುದ್ಧಕಾಲದಲ್ಲಿ ಕೈಗಾರಿಕೆಗಳು ಹೆಚ್ಚಿದ್ದು ಹೊಸ ಹೊಸ ಶೋಧೆಗಳಾದುದೂ ಇದಕ್ಕೊಂದು ಕಾರಣ. ಆಗಾಗ್ಗೆ ಮಜೂರ ಮುಷ್ಕರಗಳಾಗುವುದು ಇನ್ನೊಂದು ಕಾರಣ. ಇದರಿಂದ ಕಾರ್ಖಾನೆಗಳು ಸುಗಮವಾಗಿ ಸಾಗಲು ತೊಡಕುಂಟಾಗಿ ಆವಶ್ಯಕ ವಸ್ತುಗಳನ್ನು ಪೂರೈಸುವುದು ಕಠಿಣವಾಗುತ್ತದೆ. ಇದರ ನಿವಾರಣೆಗಾಗಿ ಯಂತ್ರವಿಜ್ಞಾನಿಗಳು ತಮ್ಮ ವೃತ್ತಿಗೆ ಕೆಲಸಗೈಯ್ಯುವ ಯಂತ್ರಗಳನ್ನು ರಚಿಸುತ್ತಿರುವರು. ಅತೀ ಕಡಿಮೆ ಜನರಿಂದ ಇಂತಹ ಯಂತ್ರಗಳಿದ್ದ ಕಾರ್ಖಾನೆಗಳನ್ನು ನಡೆಸಬಹುದು.

ಬಡಬಗ್ಗರಿಗೆ ಅಗ್ಗದ ಮನೆ

ಕೇವಲ 2300 ರೂಪಾಯಿ ಖರ್ಚಿನೊಳಗೆ ಎಂಟು ಜನರು ವಾಸಿಸುವ ಕಾರ್ಖಾನೆ ತಯಾರಿತ ಮನೆಗಳು ಸದ್ಯದಲ್ಲೇ ರೂಢಿಗೆ ಬರಬಹುದು. ಇಂತಹ ಮನೆಯೊಂದನ್ನು ಮೊನ್ನೆ ಮದರಾಸಿನಲ್ಲಿ ಜರುಗಿದ ಕೈಗಾರಿಕೆ ಮತ್ತು ಎಂಜಿನಿಯರಿಂಗ್ ಪ್ರದರ್ಶನದಲ್ಲಿ ಇಡಲಾಗಿತ್ತು. ಈ ಮನೆಯ ಪಂಚಾಂಗದಿಂದ ಮಾಡಿನ ತನಕದ ಎಲ್ಲಾ ಭಾಗಗಳು ಕಾರ್ಖಾನೆಯಲ್ಲಿ ಮೊದಲೇ ತಯಾರಿಸಲ್ಪಟ್ಟವು. ಕೆಲವೇ ದಿವಸಗಳಲ್ಲಿ ಇದನ್ನು ಕಟ್ಟಬಹುದು. ಬಡಬಗ್ಗರಿಗೂ, ಮಜೂರ ವಸತಿಗಳಿಗೂ ಇವನ್ನು ಉಪಯೋಗಿಸಲು ಸರಕಾರವು ಪರ್ಯಾಲೋಚಿಸುವುದು.

ಸಿಂಗಾಪುರದಲ್ಲಿ ಜಪಾನರ ಕಪಿ ಕಾವಲು

ಬ್ರಿಟಿಷ್ ಸೈನ್ಯದ ಕಣ್ಣಿಗೆ ಮಣ್ಣೆರಚಿದ ಸ್ವಾರಸ್ಯ

ಮೌಂಟ್ ಬ್ಯಾಟನ್ನರು ಸೇನಾಪತಿಯಾಗಿದ್ದಾಗ

ಕಾಂಗ್ರೆಸು ಮಲಯಕ್ಕೊಂದು ವೈದ್ಯಕೀಯ ಮಂಡಳವನ್ನು ಕಳುಹಿಸಿತ್ತು. ಆದರೆ ಆಗಿನ ಭಾರತ ಸರಕಾರಕ್ಕೆ ಈ ಮಂಡಳವನ್ನು ಕಳುಹಿಸುವುದಕ್ಕೆ ಒಂದಿಷ್ಟೂ ಮನಸ್ಸಿರಲಿಲ್ಲವೆಂದು ತಿಳಿಸುತ್ತಾ ಮಂಡಳದ ಸದಸ್ಯರಲ್ಲೊಬ್ಬರಾದ ಡಾ। ಶಿವರಾಮಶಾಸ್ತ್ರಿಯವರು ಒಂದು ಚಿಕ್ಕ ಪುಸ್ತಕದಲ್ಲಿ ತಿಳಿಸುತ್ತಾರೆ.

"ಭಾರತ ಸರಕಾರಕ್ಕೆ ಮನಸ್ಸಿಲ್ಲದಿದ್ದರೂ 'ಆಗುವುದಿಲ್ಲ'ವೆಂದು ಹೇಳಲು ಧೈರ್ಯವಿರಲಿಲ್ಲ. ಮಂಡಳದ ಅರ್ಜಿಯನ್ನು ಅವರು ಬರ್ಮಾ ಮತ್ತು ಮಲಯಾ ಸರಕಾರಕ್ಕೆ ಕಳುಹಿಸಿದರು. ಬರ್ಮಾ ಸರಕಾರ ಒರಟಾಗಿ ಅದನ್ನು ತಿರಸ್ಕರಿಸಿತ. ಆದರೆ ಮಲಯದಲ್ಲಿದ್ದ ಮೌಂಟ್ ಬ್ಯಾಟನ್ನರು ಸವಿನಯ ಸಹಕಾರವನ್ನು ತೆತ್ತು ಅನುಮತಿ ಇತ್ತರು. ನಂತರ ಭಾರತ ಸರಕಾರ ಕಾಲವಿಳಂಬದ ಆಟವಾಡ ತೊಡಗಿತು. ನಂವು 20 ಜನರಿಂದ ಮಾತ್ರ ಹೋಗಬಹುದೆಂದವರು ಸೂಚಿಸಿದರು."

"ಎಲ್ಲರಿಗೂ ಒಂದೇ ಪಾಸ್‌ಪೋರ್ಟು ಕೊಡಿರೆಂದು ನಾವು ಕೇಳಿದಾಗ ನಾವು ಪ್ರತ್ಯೇಕವಾಗಿ ಒಬ್ಬೊಬ್ಬರೆ ಅರ್ಜಿ ಹಾಕಬೇಕೆಂದು ತಿಳಿಸಿದರು. ಹೀಗೆ ಮಾಡಲು ಎಲ್ಲರಿಗೂ ಒಂದೇ ಪಾಸ್‌ಪೋರ್ಟ್ ಕೊಡಲಾಯಿತು!"

ಜಪಾನರ ಕುಯುಕ್ತಿ

'ಬ್ರಿಟಿಷರು ಲಾರಿಗಳಲ್ಲಿ ಶಸ್ತ್ರಾಸ್ತ್ರಗಳನ್ನು ಸೈನಿಕ ಜನರನ್ನು ತುಂಬಿಸುತ್ತಿರುವಾಗ ಜಪಾನಿಯರು ತಮ್ಮ ಲಾರಿಗಳಲ್ಲಿ ತೆಂಗಿನಕಾಯಿಗಳನ್ನು ತುಂಬಿಸುತ್ತಿದ್ದರು. ಕೂಲಿಗಳು ಇದೇಕೆ ಎಂದು ಪ್ರಶ್ನಿಸಿದ್ದಾಗ ಓರ್ವ ಜಪಾನಿ ಸೈನ್ಯಾಧಿಕಾರಿಯು "ಬಾಯಾರಿಕೆಯಾದಾಗ ಕುಡಿಯಲು" ಎಂದು ತಿಳಿಸಿದನಂತೆ."

"ತೆಂಗಿನಕಾಯಿಯ ವಾಹನಗಳು ಕಾಲ್ದಳಗಿಂತ ಮುಂದೆ ಹೋದುವು. ಒಳ್ಳೇ ನೌಕಾಸಿದ್ಧತೆ ಮಾಡಿದ್ದ ಬ್ರಿಟಿಷ್ ಸೈನ್ಯ ಸುಸಜ್ಜಿತವಾಗಿ ಸಿದ್ಧವಾಗಿ ನಿಂತಿದ್ದವು. ಸಿಂಗಾಪುರವು ಮಲಯದ ದಕ್ಷಿಣ ತೀರಕ್ಕೆ ತಗಲಿರುವ ದ್ವೀಪ. ಕುತಂತ್ರಿ ಜಪಾನಿಯರು ಎಲ್ಲಾ ತೆಂಗಿನಕಾಯಿಗಳನ್ನು ರಾತ್ರೆ ಸಮಯದಲ್ಲಿ ಸಮುದ್ರದಲ್ಲಿ ಬಿಸುಡಿ ಬಿಟ್ಟರು. ತಮ್ಮ ನೌಕಾ ರಾಣ್ಯಗಳಿಂದ ಪ್ರಕಾಶಿತ ದೀಪಗಳಿಂದ ಸಮುದ್ರ ಭಾಗಗಳನ್ನು ಪರಿಶೀಲಿಸುತ್ತಿದ್ದ ಬ್ರಿಟಿಷರಿಗೆ ತೇಲುವ ತೆಂಗಿನಕಾಯಿಗಳು ಮನುಷ್ಯರ ತಲೆಗಳಂತೆ ತೋರಿದವು.

"ಕೂಡಲೇ ಅವರು ಗುಂಡು ಹಾರಿಸಿ, 'ಜಪಾನಿಗಳ ತಲೆ' ಒಡೆಯ ಹತ್ತಿದರು. ಜಪಾನರ 'ತಲೆ' ಹಾರಿದಂತೆ ಬ್ರಿಟಿಷರು ಗುಂಡು ಮದ್ದು ಖಾಲಿಯಾಯಿತು. ನಂತರ ಸಿಂಗಾಪುರವನ್ನು ನುಗ್ಗಲು ಜಪಾನರಿಗೆ ಸುಲಭ ಸರಳವಾಯಿತು!"

ಕಪಿ ಕಾವಲು

'ತಮ್ಮ ಆಕ್ರಮಣಕ್ಕೆ ಸಹಾಯ ಮಾಡಲು ಜಪಾನಿಗಳು ನಾಯಿ ಮಂಗಗಳನ್ನು ಕೂಡ ಉಪಯೋಗಿಸಿದ್ದರು. ತರಬೇತುಗೊಳಿಸಿದ ಮಂಗಗಳು ಎತ್ತರದ ರಬ್ಬರ್ ಮರಗಳನ್ನು ಹತ್ತಿ ಬ್ರಿಟಿಷ್ ಸೈನಿಕರ ಸುಳಿವನ್ನು ಕಂಡಾಕ್ಷಣ ಕಿರಚ ಹತ್ತುವವು. ಅವರ ಪೋಷಾಕಿನ ಮೂಲಕ ಕಪಿಗಳು ಶತ್ರುಗಳ ಪತ್ತೆ ಹಚ್ಚುತ್ತಿದ್ದವು. ಬ್ರಿಟಿಷ್ ಸೈನ್ಯವು ವಿಶಾಲ ಸಂಖ್ಯೆಯುಳ್ಳದ್ದರೆ ಜಪಾನರು ಹಿಂದಕ್ಕೆ ಸರಿಯುತ್ತಿದರು.

★

ಇಂಗ್ಲೆಂಡಿನಲ್ಲಿ ಯಾವ ಪ್ರದೇಶವೂ ಸಮುದ್ರ ತೀರದಿಂದ 70 ಮೈಲಿಗಿಂತ ದೂರದಲ್ಲಿರುವುದಿಲ್ಲ.

★

ಭಾರತದ ಹಣನುಂಗುವ ಪ್ರಯತ್ನ

ಪಾರ್ಲಿಮೆಂಟ್ ಸದಸ್ಯರ ಆಕ್ರೋಶ

ಭಾರತ ರಕ್ಷಣೆಗಾಗಿ ಬಹುಮಾನವಂತೆ

ಕೊಮನ್ಸ್ ಸಭೆಯಲ್ಲಿ ಬ್ರಿಟಿಷ್ ಆಯವ್ಯಯ ಲೆಕ್ಕಾಚಾರದ ಚರ್ಚೆಯಾಗುತ್ತಿರುವಾಗ ಮಿ। ಬ್ರೆಂಡನ್ ಬ್ರೇಕನ್ ಎಂಬ ಸದಸ್ಯ ತುಂಬಾ ಸಿಡುಕಿನ ಉಗಿ ಹಾರಿಸಿದರು. ಬ್ರಿಟನು ಯುದ್ಧಕಾಲದ ಸಾಲವಾಗಿ ಇತರ ಜನಾಂಗಗಳಿಗೆ (ಮುಖ್ಯವಾಗಿ ಈಜಿಪ್ಟ್ ಮತ್ತು ಭಾರತಕ್ಕೆ) ಕೊಡಲಿರುವ ಸ್ಟರ್ಲಿಂಗ್ ಹಣವನ್ನು ಅಲ್ಲಲ್ಲಿ ಜಮಾ ಖರ್ಚು ಮಾಡಿ ತೋರಿಸಲು ಹೊಸ ನೆಪಗಳನ್ನೇಕೆ ಹುಡುಕಲಿಲ್ಲವೆಂದು ಅವರು ತಮ್ಮ ಹಣಕಾಸಿನ ಮಂತ್ರಿ ಡಾ। ಡಾಲ್ಟನ್ನರಿಗೆ ತೀವ್ರವಾಗಿ ಟೀಕಿಸಿದರು.

ತಮಗೆ ಸಲ್ಲಬೇಕಾದ ಹಣದ ಬದಲು ಸುವೇಜ ಕಾಲುವೆ ಕಂಪನಿಯ ಕೆಲವು ಪಾಲುಗಳನ್ನು, ಈಜಿಪ್ಟಿನ ಎಣ್ಣೆ ಗಣಿಯ (ಇದರಲ್ಲಿ ಬ್ರಿಟಿಷ್ ಬಂಡವಾಳವಿದೆ) ಒಂದಂಶವನ್ನು ತಮಗೆ ಕೊಡಬೇಕೆಂದು ಕೇಳಿದ (ಇದರ ಸತ್ಯಾಸತ್ಯತೆ ಇನ್ನು ತಿಳಿದಿಲ್ಲ) ಈಜಿಪ್ಟಿನ ಹಣಕಾಸಿನ ಮಂತ್ರಿಗಳನ್ನು ಮಿ। ಬ್ರೇಕನ್ನರು ಕಡುವಾಗಿ ಟೀಕಿಸಿದರು. ಈಜಿಪ್ಟಿನ ಕುರಿತು ಅವರು ಹೀಗೆಂದರು: "ಇದು ಕಲ್ಪನಾತೀತವಾದ ವಿಚಾರ. ಈಜಿಪ್ತನ್ನು ಜರ್ಮನರ ಆಕ್ರಮಣದಿಂದ ರಕ್ಷಿಸಿದ ಪಾಪಕ್ಕೆ ಬ್ರಿಟಿಷ್ ಜನತೆ ವರ್ಷಗಟ್ಲೆ ದುಡಿಯಬೇಕೆಂದು ಅವರ ಯೋಚನೆಯಿರುವುದೆ?"

ಭಾರತದ ಕುರಿತು ಅದೇ ರೀತಿ ಅಲಂಕಾರಿಕವಾಗಿ ಮಿ। ಬ್ರೇಕನ್ನರು "ಜಪಾನ ಆಕ್ರಮಣದಿಂದ ಭಾರತವನ್ನು ರಕ್ಷಿಸಿದ ಶ್ರಮಕ್ಕೆ ನಮಗಿದು ದಂಡನೆಯೆ?" ಎಂದು ಪ್ರಶ್ನಿಸಿದರು.

ಬ್ರೇಕನರ ಈ ಆಕ್ಷೇಪವು ಮಿತಿಮೀರಿದ ವಿಪರೀತದ್ದೆಂದು ನಮ್ಮ ಭಾವನೆ. ಈಸ್ಟ್ ಇಂಡಿಯಾ ಕಂಪನಿ ಕಾಲದಿಂದ ಬ್ರಿಟನು ತನ್ನ ಸ್ವಂತ ಹಿತಸಾಧನೆಯ ಅಫಘಾನಿಸ್ಥಾನ, ನೇಪಾಲ, ಬರ್ಮಾ ಮೊದಲಾದ ದೇಶಗಳ ಮೇಲಿನ ದಿಗ್ವಿಜಯಕ್ಕಾಗಿ ಮಾಡಿದ ಸಾಹಸದ ವೆಚ್ಚವನ್ನು ಭಾರತದ ಮೇಲೆ ದಂಡನೆಯ ರೂಪವಾಗಿ ಹೊರಿಸಿದ ಲೆಕ್ಕಪತ್ರ ವರದಿಯನ್ನು ಪರಿಶೀಲಿಸಿದರೆ ಸ್ಟರ್ಲಿಂಗ್ ಸಾಲದ ಸಂಖ್ಯೆಯು ಅದರೆದುರಿನಲ್ಲಿ ಕುಳ್ಳದಾಗಿ ಕಾಣುವುದು.

"ಭಾರತವನ್ನು ಜಪಾನಿನಿಂದ ರಕ್ಷಿಸಿದುದಕ್ಕೆ ಭಾರತವು ತನ್ನ ಖರ್ಚಿನ ಸಂಪೂರ್ಣ ಹೊರೆ ಹೊತ್ತಿಲ್ಲವೆಂದು ಹೇಳುವುದು ಹಾಸ್ಯಾಸ್ಪದ ಸಂಗತಿ. ಭಾರತದ ಖರ್ಚಿನ ಭಾಗ ಕಳೆದು ಈ ಸ್ಟರ್ಲಿಂಗ್ ವ್ಯತ್ಯಾಸ ಉಳಿದುದೆಂದು ಮಿ। ಬ್ರೇಕನ್ನರಿಗೆ ಪ್ರತ್ಯೇಕ ಲೆಕ್ಕ ಕಲಿಸಬೇಕೆ?" ಹೀಗೆಂದು ಮದ್ರಾಸಿನ ಹಿಂದೂ ಪತ್ರಿಕೆ ಪ್ರಶ್ನಿಸಿದೆ.

ಮತ್ತೊಂದು ಕಡೆ ಬ್ರೇಕನರು "ಭಾರತವು ಯುದ್ಧಕಾಲದಲ್ಲಿ ಲಾಭಖೋರರ ಸ್ವರ್ಗವಾಗಿತ್ತೆಂದಿದ್ದಾರೆ." ಅದಕ್ಕುತ್ತರಿಸುತ್ತಾ ಹಿಂದೂ ಹೀಗೆ ಬರೆಯುತ್ತದೆ:

"ಕಳ್ಳ ಸಂತೆಗಾರರೂ, ಲಾಭಬಡಕರೂ ಮೆರೆದ ಸಂಗತಿಗೆ ಇಲ್ಲಿ ಈಗ ಆಳುತ್ತಿದ್ದ ಬ್ರಿಟಿಷ್ ಅಧಿಕಾರಿಗಳೇ ಹೊಣೆಗಾರರೆಂಬ ಸಂಗತಿಯನ್ನು ಮಿ। ಬ್ರೇಕನರಿಗೆ ನಾವು ಜ್ಞಾಪಿಸಬಯಸುತ್ತೇವೆ. ಈ ಪರಿಸ್ಥಿತಿಯಿಂದ ಹೆಚ್ಚು ಸಂಕಷ್ಟಕ್ಕೊಳಗಾದವರು ಭಾರತೀಯರಲ್ಲದೆ ಬ್ರಿಟಿಷರಲ್ಲ. ಬ್ರೇಕನರ ಬೊಗಳುವಿಕೆಯನ್ನು ಬ್ರಿಟಿಷ್ ಅರ್ಥ ಸಚಿವರು ಅಲಕ್ಷಿಸಿದ್ದು ವಿವೇಕದ ಧೋರಣೆ."

ಹುಣ್ಣನ್ನು ಮಾಯಿಸುವುದು
ಅದು ಕೊಳೆಯದಂತೆ ತಡೆಯುವುದು
ಜೆರ್ಮೆಕ್ಸ್‌ಗೆ ಸಮಾನವಾದುದು
ಇಲ್ಲವೆ ಇಲ್ಲ

ಲಿಟ್ಲಲ್ಸ್ ಓರಿಯಂಟಲ್ ಬಾಮ್ ಮತ್ತು ಫಾರ್ಮಸ್ಯೂಟಿಕಲ್ಸ್ ಲಿಮಿಟೆಡ್,
ಪೋಸ್ಟು ಬಾಕ್ಸ್ ನಂ. 67 ಮದರಾಸು.

ನಾಗರೀಕ ವ್ಯವಹಾರ

ಬರುವ ತಿಂಗಳಲ್ಲಿ ನಗರ ಸಭಾಮಂಡಳಿಕ್ಕೆ ಚುನಾವಣೆಗಳು ನಡೆಯಲಿವೆ. ಯೋಗ್ಯ ಪ್ರಜಾಪ್ರಾತಿನಿಧ್ಯವಿಲ್ಲದೆ ಕೇವಲ ಸರಕಾರಿ ನೇಮಿತ ಸದಸ್ಯರಿದ್ದ ಇಂದಿಗೆ ಕೆಲವು ವರ್ಷಗಳಿಂದ ಸೂಪ್ತಾವಸ್ಥೆಯಲ್ಲಿ ಬಿದ್ದಿದ್ದ ನಮ್ಮ ನಗರಸಭೆ ಪುನರ್ಜೀತನಗೊಳ್ಳಲಿದೆ. ಯುದ್ಧಕಾಲದಿಂದ ಯಾವದೊಂದು ನಿರ್ದಿಷ್ಟ ಗೊತ್ತುಗುರಿಯಿಲ್ಲದೆ ಹೆಚ್ಚಾಗಿ ಬರೀ ಸರಕಾರಿ ಆಜ್ಞೆಗಳನ್ನು ಮಂಜೂರು ಮಾಡುವುದೇ ನಿವೃತ್ತ ಸಭೆಯ ಚಟುವಟಿಕೆಯಾಗಿದ್ದು ಜನತೆಗೂ ಅದಕ್ಕೂ ಯಾವೊಂದು ತರದ ಸಂಪರ್ಕವಿರಲಿಲ್ಲ. ಈ ದಾರುಣ ಪರಿಸ್ಥಿತಿಯಲ್ಲಿ ನಗರಕ್ಕೂ ನಾಗರೀಕರಿಗೂ ಆ ಸಭೆ ಸಲ್ಲಿಸಬೇಕಾದ ಅನೇಕಾನೇಕ ಹೊಣೆಗಾರಿಕೆಯ ಕರ್ತವ್ಯಗಳು ಅಪೂರ್ಣವಾಗಿಯೇ ಉಳಿದವೆ.

ಮುಖ್ಯವಾಗಿ ಆರೋಗ್ಯ ಸಂಬಂಧವಾದ ವಿಚಾರಗಳು ಹೊಸ ನಗರಸಭೆಯ ಗಮನಕ್ಕೆ ಬರಬೇಕಾಗಿವೆ. ಧೂಳೀಳಿದ ಮಾರ್ಗಗಳು, ಕೊಳೆ ನಿಲ್ಲದ ಚರಂಡಿಗಳು, ಆನೆಕಾಲು, ವಿಷಮಜ್ವರ ಮೊದಲಾದ ವ್ಯಾಧಿ ಸಂಬಂಧ ರೋಗಾಣುಗಳಿಲ್ಲದ ನೀರು ಸರಬರಾಯಿ, ಹೊಗೆ, ಕೊಳೆಗಳಿಲ್ಲದ ಬಡಜನ, ಮಜೂರ ವಸತಿಗಳು. ಉತ್ತಮ ಹಾಲು ಪೂರೈಕೆ, ತೋಟಗಳು, ಹಾನಿಕಾರಕ ವಸ್ತುಗಳಿಂದ ತಯಾರಾಗದ ತಿಂಡಿತೀರ್ಥಗಳು ಇವೇ ಮೊದಲಾದುವು ಪರಿಹಾರವನ್ನು ಕಾಯುವ ಜರೂರಿನ ಸಮಸ್ಯೆಗಳಲ್ಲಿ ಕೆಲವು.

ನಾಗರೀಕರ ಸಂಪೂರ್ಣ ವಿಶ್ವಾಸಕ್ಕೊಳಗಾದ ಪ್ರತಿನಿಧಿಗಳು ನಗರಸಭೆಯ ಕಾರ್ಯಕಲಾಪಗಳ ನಿರ್ದೇಶಕತ್ವದಲ್ಲಿರಬೇಕಾದುದೂ ಅತ್ಯಾವಶ್ಯಕ. ಸ್ಥಳೀಯ ಕೊಂಗ್ರೆಸು ರಹಸ್ಯವಾದ ಅದ್ಯಾವ ಕಾರಣದಿಂದಲೂ ಸ್ಥಳೀಕ ಸಂಸ್ಥೆಗಳಿಗೆ ತನ್ನ ಪರವಾಗಿ ಉಮೇದುವಾರರನ್ನು ನಿಲ್ಲಿಸುವುದಿಲ್ಲವೆಂಬ ನಿರ್ಣಯಕ್ಕೆ ಬಂದಿರುವುದು ಖೇದಾಸ್ಪದ ಸಂಗತಿ. ಇದು ನಮ್ಮ ಸಾರ್ವಜನಿಕ ಜೀವನದ ನಿಕೃಷ್ಟತೆಯ ಲಕ್ಷಣವೆನ್ನುವವರೂ ಇದ್ದಾರೆ. ಜನತಾ ಸಂಸ್ಥೆ ಜನತೆಯ ಪರವಾಗಿ ಪ್ರಾತಿನಿಧ್ಯ ವಹಿಸಲು ಅಳುಕುವಂತಾಗುವುದಕ್ಕೆ ಅದರ ಅನಾಸಕ್ತ ಕ್ರಿಯಾಭಗ್ನ ನಾಯಕತ್ವವು ಕಾರಣವಾಗಿರಬೇಕೆಂದು ಸಹಜವಾಗಿ ಊಹಿಸಬೇಕಾಗುತ್ತದೆ. ಈ ಕಾರ್ಯಸ್ತಬ್ಧತೆಯನ್ನು ಕೊನೆಗೊಳಿಸಲು ಇನ್ನು ಕಾಲ ವಿಳಂಬವಾಗಿಲ್ಲ. ರಾಷ್ಟ್ರಸಂಸ್ಥೆ ಕೇಂದ್ರ, ಪ್ರಾಂತ್ಯಗಳ ಅಧಿಕಾರಸ್ಥಾನದಲ್ಲಿ ರೂಢವಾಗಿರುವಾಗ ಅದರ ಉಪಶಾಖೆಗಳು ವೈರಾಗ್ಯತೊಡುವುದು ಯುಕ್ತವೆಂದೆನಿಸುವುದಿಲ್ಲ. ಈಗಲಾದರೂ ಅದು ತನ್ನ ಧೋರಣೆಯನ್ನು ಬದಲಾಯಿಸಿ ತನಗೆ ಹೃತ್ಪೂರ್ವಕ ಕಾರ್ಯತತ್ಪರತೆಗೆ ಆತಂಕವುಂಟುಮಾಡಿದ ಕಾರಣಗಳಿಗೆ ಸ್ವಪರಿಹಾರವನ್ನು ಕಂಡು ಹಿಡಿದು ನಾಗರೀಕ ಕ್ಷೇತ್ರದಲ್ಲೂ ಯೋಗ್ಯ ಮಾರ್ಗದರ್ಶಕವಾಗಬೇಕೆಂದು ಬಹುಸಂಖ್ಯಾಕ ಜನತೆಯು ಮನಃಪೂರ್ವಕವಾಗಿ ಹಾರೈಸುತ್ತದೆ.

ಪೋಸ್ಟ್‌ಮ್ಯಾನರ ಕಾರ್ಯಕಾರಿ ಸಮಿತಿ ಸಭೆ

ದ. ಕನ್ನಡ ಜಿಲ್ಲಾ ಪೋಸ್ಟ್‌ಮೇನ್ ಮತ್ತು ಕೆಳ ತರಗತಿಯ ನೌಕರರ ಕಾರ್ಯಕಾರಿ ಸಮಿತಿಯ ಸಭೆಯು, ಇದೇ ಕಳೆದ ತಾ. ೨೭ನೇ ಆದಿತ್ಯವಾರ ಜರುಗಿ ಕೆಳಕಂಡ ವಿಷಯಗಳು ಚರ್ಚಿಸಲ್ಪಟ್ಟವು.

ದ. ಕ. ಜಿಲ್ಲೆಯ ಪೋಸ್ಟ್‌ಮೇನ್, ಲೋ. ಡಿವಿಜನ್ ಕ್ಲಾರ್ಕ್, ಬೆಂಚ್ ಪೋಸ್ಟ್ ಮಾಸ್ಟರ್, ಟೆಲಿಗ್ರಾಫ್ ಮೆಸೆಂಜರ್ಸ್ ಮತ್ತು ಕೆಳ ತರಗತಿಯ ಎಲ್ಲಾ ನೌಕರರ ಪಟ್ಟಿಯನ್ನು ತಯಾರಿಸಿ, ಅವರನ್ನೆಲ್ಲಾ ಸಂಘಕ್ಕೆ ಸದಸ್ಯರಾಗಬೇಕಾಗಿ ಮನವಿ ಮಾಡಿಕೊಳ್ಳುವುದು; ಮತ್ತು ಈ ತನಕ ನಡೆದ ಕಾರ್ಯಕಲಾಪಗಳ ವಿವರವನ್ನು ಛಾಪಿಸಿ ಅವರಿಗೆಲ್ಲಾ ಹಂಚುವುದು.

೨ ತಾಲೂಕು ಕಮಿಟಿಗೆ ಮಿ. ಜೋನ್ ವಾಸ್ ಮತ್ತು ಶ್ರೀ ಬಿ. ಉಳಿಯಪ್ಪ ಇವರನ್ನೂ, ಜಿಲ್ಲಾ ಕಮಿಟಿಗೆ ಶ್ರೀ ಜಿ. ಕೆ. ಸುವರ್ಣ (ಮುಲ್ಕಿ) ಮಿ. ಕೆ. ಎ. ರಹಿಮಾನ್ (ಕಾರ್ಕಳ) ಶ್ರೀ ಬಿ. ಕೃಷ್ಣಪ್ಪ (ಕಾಸರಗೋಡು) ಇವರನ್ನೂ ಚುನಾಯಿಸಲಾಯಿತು.

೩. ೧೯೪೭ ದಶಂಬರ ತಿಂಗಳ ಅಖೈರಿಯ ಒಳಗೆ ಪ್ರಾಂತಿಕ ಸಮ್ಮೇಳನವನ್ನು ಮಂಗಳೂರಲ್ಲಿ ಕರೆಯುವ ಹಾಗೆ ಪ್ರಾಂತಿಕ ಸಂಘವನ್ನು ಕೇಳಿಕೊಳ್ಳುವುದು.

ಶಾಲಾ ವರ್ಧಂತಿ: ಬೋಳೂರು ರೂರಲ್ ಎಲಿಮೆಂಟರಿ ಶಾಲಾ ವಾರ್ಷಿಕ ವರ್ಧಂತಿ ಉತ್ಸವವು, ಇಡ್ಯ ವಿದ್ಯಾದಾಯಿನಿ ಹೈಸ್ಕೂಲಿನ ಹೆಡ್ಮಾಸ್ತರರಾದ ಶ್ರೀ. ಎಂ. ವಾಸುದೇವರಾವ್ ಎಂ. ಎ. ಎಲ್. ಟಿ. ಇವರ ಅಧ್ಯಕ್ಷತೆಯಲ್ಲಿ ಆ ಶಾಲೆಯಲ್ಲಿ ಕಳೆದ ಆದಿತ್ಯವಾರ ಜರುಗಿತು. ಆ ಶಾಲಾ ಹೆಡ್ಮಾಸ್ತರರಾದ ಶ್ರೀ. ಬಿ. ಶಿವರಾಮಯ್ಯನವರು ಶಾಲಾ ವರದಿಯನ್ನೋದಿದರು; ಶ್ರೀ. ಪಿ. ರಾಮಚಂದ್ರ ಅವರು ಶಾಲಾ "ಶ್ರೇಯಃ ಪ್ರಾರ್ಥನೆ" ಮಾಡಿದರು. ಅಧ್ಯಕ್ಷರು ಬಹುಮಾನ ವಿತರಣ ಮಾಡಿ, ತಮ್ಮ ಅಧ್ಯಕ್ಷ ಭಾಷಣದಲ್ಲಿ ಶಾಲಾ ಏಳಿಗೆಯನ್ನು ಬಯಸಿ "ಊರವರು ಶಾಲೆಗೆ ಹೆಚ್ಚಿಗೆ ಸಹಾಯ ಮಾಡಬೇಕು; ಶಾಲೆಗೊಂದು ಆಟದ ಬಯಲು ಬೇಕು" ಎಂಬಿತ್ಯಾದಿ ಹಿತಸೂಚನೆಗಳನ್ನು ಕೊಟ್ಟರು; ಈ ಸಂದರ್ಭದಲ್ಲಿ ಅಭಿನೈಸಲಾದ ಕನ್ನಡ ತುಳು ನಾಟಕಗಳು ಜನಮನೋರಂಜಕವಾಗಿದ್ದುವು.

ಜಿಲ್ಲಾ ಪರಿಚಯ

೩

ಜಿಲ್ಲಾ ಸಮಿತಿ: ದ. ಕ. ಜಿಲ್ಲಾ ಸಮಿತಿಯು ಕಳೆದ ಎಪ್ರಿಲ್ ತಾ. 29ರಂದು ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿತು. ನಮ್ಮ ಪ್ರಾಂತ್ಯದ ಹೆಚ್ಚು ಅಕ್ಕಿ ಬೆಳೆಯುತ್ತಿದ್ದ ಜಿಲ್ಲೆಗಳಲ್ಲಿ ಈ ವರ್ಷದ ಬೆಳೆಯು ಅಯಶಸ್ವಿಯಾದುದರ ಪರಿಣಾಮವಾಗಿ ಹಿಂದಿನಂತೆ ನಮ್ಮ ಜಿಲ್ಲೆಗೆ ಅಲ್ಲಿಂದ ಅಕ್ಕಿ ಸಿಕ್ಕುವ ನಿರೀಕ್ಷಣೆಯಿಲ್ಲವೆಂದೂ, ನಮ್ಮ ಜಿಲ್ಲೆಯಲ್ಲೇ ಉತ್ಪತ್ತಿಯಾದ ಅಕ್ಕಿ, ಧಾನ್ಯಗಳನ್ನು ಆದಷ್ಟು ಹೆಚ್ಚು ಪ್ರಮಾಣದಲ್ಲಿ ಶೇಖರಿಸುವುದಕ್ಕೆ ಅವಿಶ್ರಾಂತ ಪ್ರಯತ್ನಗಳಾಗಬೇಕೆಂದೂ ಕಲೆಕ್ಟರರು ತಿಳಿಸಿದರು. ಈ ಸಲದ ಅಕ್ಕಿ ಸಂಗ್ರಹದ ಕಾರ್ಯದೊಡನೆ ಜನತೆಯೂ ಕೃಷಿಕರೂ ಹೃತ್ಪೂರ್ವಕ ಸಹಕರಿಸಬೇಕೆಂದು ಅವರು ವಿನಂತಿಸಿಕೊಂಡರು.

ಈಗ ಜಿಲ್ಲೆಯ ನಾಲ್ಕು ತಾಲೂಕು ಕೇಂದ್ರಗಳಲ್ಲಿ ಪಶು ವೈದ್ಯ ಶಾಲೆಗಳಿಲ್ಲದಿರುವುದರಿಂದ ಅವನ್ನು ಸ್ಥಾಪಿಸುವುದು ಅವಶ್ಯವೆಂದು ಸಮಿತಿಯು ನಿರ್ಧರಿಸಿತು. ಟೆಕ್ಸ್ಟೈಲ್ ಸಬ್ ಕಮಿಟಿಯ ಓರ್ವ ಎಂ. ಎಲ್. ಎ. ಸದಸ್ಯರು ರಾಜಿನಾಮೆ ಕೊಟ್ಟ ಅವರ ಸ್ಥಾನದಲ್ಲಿ ಓರ್ವ ಮುಸ್ಲಿಂ ಎಂ. ಎಲ್. ಎ. ಅವರನ್ನು ನೇಮಿಸಬೇಕೆಂದು ನಿರ್ಧರಿಸಲಾಯಿತು. ಜಿಲ್ಲೆಯಲ್ಲಿ ಸಕ್ಕರೆ ವಿತರಣೆ ಪ್ರಮಾಣವು ಸರಿಯಾಗಿಲ್ಲವಾದುದರಿಂದ ಆ ಕುರಿತು ಸಲಹೆಗಳನ್ನು ಆಹ್ವಾನಿಸಲಾಗಿದೆ. ಆದರೆ ವಿತರಣೆ ಪದ್ಧತಿಯು ತೃಪ್ತಿಕರವಿರುವುದರಿಂದ ಅದನ್ನು ಸದ್ಯಕ್ಕೆ ಬದಲಾಯಿಸುವ ಅವಶ್ಯಕತೆಯಿಲ್ಲವೆಂದಾಯಿತು. ವಿಶೇಷ ಸಂದರ್ಭಗಳಿಗಾಗಿ ಸಕ್ಕರೆ ಪರ್ಮಿಟುಗಳನ್ನು ಕೊಡುವ ಅಧಿಕಾರವನ್ನು ತಹಶೀಲ್ದಾರ ಮತ್ತು ಡೆಪ್ಯುಟಿ ತಹಶೀಲ್ದಾರರಿಗೆ ಕೊಡಬೇಕೆಂದು ನಿರ್ಣಯವಾಯಿತು. ಗ್ರಾಮ ಕಮಿಟಿಗಳ ಶಿಫಾರಸಿನ ಮೇಲೆ ಅವರು ಅದನ್ನು ಮಂಜೂರುಮಾಡಬೇಕೆಂದಾಯಿತು.

ಧಾನ್ಯ ಮಾರಾಟ: ಅಧಿಕೃತ ಧಾನ್ಯ ಮಾರಾಟಗಾರರ ಒಳಿ ಇಪ್ಪ ಒಗಡೆ, ಉದ್ದು, ಹೆಸರು, ಕಡಲೆ ಮೊದಲಾದ ಧಾನ್ಯಗಳನ್ನು ಸರಕಾರದವರು ಕೆಲವು ಸಮಯದ ಹಿಂದೆ ಮಾರಾಟಮಾಡದಂತೆ ನಿರ್ಬಂಧಿಸಿದ್ದರು. ಈಗ ಜಿಲ್ಲಾ ಕಲೆಕ್ಟರರು ತಮ್ಮೊಂದು ಪ್ರಕಟನೆಯಲ್ಲಿ ಈ ಧಾನ್ಯಗಳನ್ನು ಪುನಃ ಯಥಾ ಪ್ರಕಾರ ಮಾರಾಟಕ್ಕೆ ಬಿಟ್ಟುಕೊಟ್ಟಿರುವುದಾಗಿ ಆಜ್ಞೆಕೊಟ್ಟಿದ್ದಾರೆ.

ಪತ್ರಿಕೆ ಪರಿಚಯ

ಜಯಕರ್ನಾಟಕ: ವ್ಯವಸ್ಥಾಪಕ ಸಂಪಾದಕರು: ಶ್ರೀ. ಎ. ಎಸ್. ಬಸವನಾಳ; ಸಂಪಾದಕರು: ಶ್ರೀ. ಶಿ. ಶಿ. ಬಸವನಾಳ. ಕ್ರಾಉನ್ ಅರ್ಧಾಕೃತಿಯ ಸಚಿತ್ರವಾದ ಪತ್ರಿಕೆ, ಪ್ರತಿ ಗುರುವಾರ ಪ್ರಕಟವಾಗುವುದು. ಇದನ್ನು ಶ್ರೀ. ಫಕೀರಪ್ಪಾ ಯಲ್ಲಪ್ಪಾ ಮಿಂಡಗುದ್ದಿ ಇವರು ಧಾರವಾಡ ಉಳವೀ ಬಸವೇಶ್ವರ ಗುಡ್ಡದಲ್ಲಿರುವ ರವೀಂದ್ರ ಮುದ್ರಣಾಲಯದಲ್ಲಿ ಮುದ್ರಿಸಿ ಶ್ರೀ. ದಿ. ಟಿ. ಕಾಮೆಸ್ಕ ಅವರಿಂದ ಅಲ್ಲಿಯೇ ಪತ್ರಿಕೆಯ ಕಾರ್ಯಾಲಯದಲ್ಲಿ ಪ್ರಕಟಿಸಲ್ಪಡುವುದು.

ಈ ಬಂಧು ಪತ್ರವನ್ನು ಸಂತೋಷದಿಂದ ಸ್ವೀಕರಿಸುತ್ತೇವೆ. ಸಂಪಾದಕರುಗಳು ಕನ್ನಡ ನುಡಿ ನಾಡ ಅಗ್ರಗಣ್ಯ ಸೇವಕರು. ಪತ್ರಿಕೆಯ ಆಶಯವೂ ನಾಡಿನ ಸರ್ವತೋಮುಖ ಸೇವೆಯೇ ಆಗಿದೆ. ಬಸವಣ್ಣ ಜಯಂತಿಯ ಶುಭ ಮುಹೂರ್ತದಲ್ಲಿ ಭಾವನಾವಿಷ್ಟವಾದ ದೃಷ್ಟಿಯನ್ನು ಕಡಿಮೆಮಾಡಿ ವಸ್ತುನಿಷ್ಠವಾದ ದೃಷ್ಟಿಯನ್ನು ಬಲಿಸುವ ಪತ್ರಿಕೆಯ ಮುಖ್ಯೋದ್ದೇಶ ಯಶಸ್ವಿಯಾಗಲೆಂದು ಹಾರೈಸುತ್ತೇವೆ. ಸ್ಥಳೀಯ ವಾರ್ತೆಯಿಂದ ಪ್ರಾಂತ್ಯ ದೇಶ, ವಿಶ್ವ ವಾರ್ತೆಗಳೂ ಇವೆ. ವಾರ ಭವಿಷ್ಯ, ಬಜಾರ್ ಧಾರಣೆಗಳ ಕುರಿತೂ ಪ್ರಸ್ತಾಪವಿದೆ. ಕನ್ನಡಿಗರಿದನ್ನಾದರಿಸಲೆಂದು ಕೋರಿಕೆ. —'ನಾಥ'

ಗಂಟಲು, ಶ್ವಾಸಕೋಶಗಳನ್ನು ಉಪಶಮನ ಮಾಡಿ ರಕ್ಷಿಸುವುದು.

ಬಾಯಲ್ಲಿ ಕರಗಿದಾಕ್ಷಣ ಪೆಪ್ಸ್ ಕ್ರೀಷ್ಣ ವಿಷಹಾರಿ ವನಸ್ಪತಿ ಸಾರಗಳನ್ನು ಬಿಟ್ಟುಬಿಡುತ್ತದೆ. ಶ್ವಾಸದ ಮೂಲಕ ಶ್ವಾಸಕೋಶದ ಆಳಕ್ಕೆ ಹಾಯ್ದು ಹೋಗಿ ಇದು ವೇದನೆಯನ್ನು ಶಮನಿಸಿ ನಿಮ್ಮನ್ನು ರೋಗರುಜೆಗಳಿಂದ ರಕ್ಷಿಸುತ್ತದೆ.

ಗಂಟಲು ನೋವು, ಕೆಮ್ಮು, ನೆಗಡಿ, ಶೀತ, ಉಬ್ಬಸ ಶೀತಜ್ವರ, ಎದೆಶ್ವಾಸಕೋಶ ತೊಂದರೆಗಳಿಗೆ ಪೆಪ್ಸ್ ಪರಿಣಾಮಕಾರಿ ಔಷಧಿ.

ವಿಷಹಾರಿ ಮಾತ್ರೆಗಳಾದ ಪೆಪ್ಸನ್ನು ತೆಗೆದುಕೊಳ್ಳಿರಿ.
PEPS
ಇದರ ಪೂರೈಕೆಗೆ ಕೊರತೆಯಿಲ್ಲ.

ಮಾರಾಟಕ್ಕಿದೆ

ಉತ್ತಮ ತರಗತಿಯ ಎರಡು ಕುದುರೆಗಾಡಿಗಳೂ, ಒಂದು ದೊಡ್ಡ ಕುದುರೆಯೂ ಮಾರಾಟಕ್ಕಿದೆ. ಕೊಂಡುಕೊಳ್ಳಲು ಬಯಸುವವರು ಸ್ವತಹ ಉಡ್ಪಿಗೆ ಬಂದು ಪರೀಕ್ಷಿಸಬಹುದು. ರೂಪಾಯಿ 1500 ರ ಅದರ ಸಮೀಪದ ಕೇಳಿಕೆಯನ್ನು ಗಮನಿಸಲಾಗುವದು. ಬೇಕಾದವರು ಸ್ವತಹ ಯಾ ಪತ್ರದ್ವಾರ ಈ ತಿಂಗಳೊಳಗೆ ಈ ಕೆಳಗಿನವರೊಡನೆ ವಿಚಾರಿಸಬಹುದು.

Deputy Manager
M/S. Kochikar Brothers,
Udipi.

Ammembal Subba Rao Pai Memorial Fund.

Applications for loan stipends from the above Fund should reach the Hon. Secretary of the Fund on or before 15th June 1947. While granting stipends, first preference will be given to those who are already undergoing courses with aid from this Fund. If funds are available after awarding the above-said stipends, applications for Technical Courses will be considered. Applications for Arts Courses will be considered in cases of exceptional merit. Only Gowd Saraswath Brahmins need apply.

Application forms will be supplied free of cost on application to The Hon. Secretary, A. Subba Rao Pai Memorial Fund, Canara High School, Mangalore. While applying for forms, please state if applications are for renewals or for fresh ones.

Mangalore,
31-4-1947.

J. Vasudeva Pai,
Hon. Secretary.

ಇದು ಮಗುವಿನ ಚರ್ಮವನ್ನು ತಂಪಾಗಿಯೂ, ಮೃದುವಾಗಿಯೂ, ಇಡುವುದು.
ಮಕ್ಕಳಿಗೆ ಕುಟಿಕೂರ ಟಾಲ್ಕಮ್ ಪೌಡರನ್ನೇ ಉಪಯೋಗಿಸಿರಿ- ಅಷ್ಟು ಸುಖಕರ- ಅಷ್ಟು ಚರ್ಮ ಮೃದುಕರ-
ಕುಟಿಕೂರ ಟಾಲ್ಕಮ್ ಪೌಡರ್
CUTICURA TALCUM POWDER

ನಾಳಿನ ಭಾರತದ ಶಿಕ್ಷಣ ಹೊಣೆಗಾರಿಕೆ

ಧೈರ್ಯದ ಕಾರ್ಯಕ್ರಮವನ್ನನುಸರಿಸಬೇಕು.

ಡಾ। ಕಿಣಿಯವರ ಯೋಜನೆಗೆ ಮಹಾತ್ಮರ ಆಶೀರ್ವಾದ

ಭಾರತವು ಸ್ವತಂತ್ರವಾದ ಮೇಲೆ ಎಂತಹ ರಾಷ್ಟ್ರೀಯ ಶಿಕ್ಷಣ ಪದ್ಧತಿ ಜಾರಿಯಾಗಬೇಕೆಂಬುದು ಸಮಸ್ಯೆಯಾಗಿದೆ. ಧೋರಣೆ ಮತ್ತು ಕಾರ್ಯಕ್ರಮಗಳನ್ನು ಅನುಸರಿಸಿ ಜನಾಂಗದ ಬೌದ್ಧಿಕ ವಿಕಾಸದ ಹೊಣೆಗಾರಿಕೆಯನ್ನು ಕೇಂದ್ರ ಸರಕಾರವೇ ವಹಿಸಬೇಕಾದುದು ಅತ್ಯವಶ್ಯಕವೆಂದು ಪ್ರಖ್ಯಾತ ಶಿಕ್ಷಣ ತಜ್ಞರಾದ ಡಾ। ಕೆ. ವ್ಹಿ. ಕಿಣಿಯವರು ಒಂದು ವಿಶೇಷ ಲೇಖನದಲ್ಲಿ ತಿಳಿಸುತ್ತಾರೆ. ಮಹಾತ್ಮರಿಂದ ಹರಸಲ್ಪಟ್ಟ ಅವರ ಯೋಜನೆಯ ಸಾರಾಂಶ ಈ ಕೆಳಗಿನಂತಿದೆ:

ಕೈಗಾರಿಕೆ ಕೇಂದ್ರಗಳಲ್ಲೂ ಕೃಷಿ ಕೇಂದ್ರಗಳಲ್ಲೂ ಶಿಶು ಸಂರಕ್ಷಣಾಲಯಗಳನ್ನು ಸ್ಥಾಪಿಸುವುದು ಅತ್ಯಾವಶ್ಯಕ. ಇವುಗಳಲ್ಲಿ 2 ತಿಂಗಳಿಂದ 2 ವರ್ಷಗಳ ವಯಸ್ಸಿನ ಕೂಸುಗಳ ಆರೈಕೆ ಶಾಸ್ತ್ರೀಯ ವಿಧಾನಗಳಿಗನುಸಾರವಾಗಿ ಜರಗಬೇಕು. ಈ ಶಿಶು ಆಲಯಗಳು ಸರಕಾರದ ಆರೋಗ್ಯ ಖಾತೆಯ ನೇತೃತ್ವದಲ್ಲಿ ನಡೆಯಬೇಕಾದರೂ ಅಲ್ಲಿನ ಮಕ್ಕಳನ್ನು ಯೋಗ್ಯ ರೀತಿಯಲ್ಲಿ ತರಬೇತಿಗೊಳಿಸುವರೆ ಶಿಕ್ಷಣ ಇಲಾಖೆಯವರು ಮಕ್ಕಳ ಮಾನಸಿಕ ಚಟುವಟಿಕೆಗಳ ತಕ್ಕ ಸಂಶೋಧನೆ ಮಾಡಿ ಸಮರ್ಪಕ ವಿಧಾನಗಳನ್ನು ಸೂಚಿಸುವುದು ಯುಕ್ತವಿದೆ ಈ ಎರಡು ಖಾತೆಗಳು ಪರಸ್ಪರ ಸಹಕರಿಸುವುದಗತ್ಯ.

2ರಿಂದ 5 ವರ್ಷದ ಮಕ್ಕಳ ಶಿಕ್ಷಣಕ್ಕೆ ಭಾರತದಲ್ಲಿ ವಿಶೇಷ ಗಮನ ಕೊಡಬೇಕು. ನಮ್ಮ ದೇಶದ ಐಕ್ಯತೆಗೆ ದೊಡ್ಡ ಧಕ್ಕೆಯು ತೊಡಕಿನಂತಿರುವ ಜಾತೀಯ ಪ್ರಶ್ನೆಯನ್ನು ಬಗೆಹರಿಸಲು ಮಕ್ಕಳಲ್ಲಿ ಚಿಕ್ಕಂದಿನಿಂದ ಸಮಾನತೆಯ ಮನೋಭಾವವನ್ನುಂಟುಮಾಡುವುದು ಅತ್ಯಾವಶ್ಯಕ. ಮಾತ್ರವಲ್ಲ ಮಕ್ಕಳನ್ನು ಯೋಗ್ಯ ರೀತಿಯಲ್ಲಿ ಬೆಳೆಸುವ ವಿಧಾನವು ನಮ್ಮ ತಾಯಂದಿರಿಗೆ ತಿಳಿದಿರುವುದಿಲ್ಲ ಚಿಕ್ಕ ಪ್ರಾಯದ ಮಕ್ಕಳಲ್ಲಿ ಸ್ಥಿರಗೊಂಡ ಭಾವಗಳು ಕೊನೆ ತನಕವಿರುವವು ಎಂಬ ಸಂಗತಿಯು ಮಹತ್ವದ್ದು ನಂತರದ ಯಾವ ದಸೆಯಲ್ಲಿ ಯೂ ಆ ಸ್ಥಿರತೆಯನ್ನುಂಟುಮಾಡಲಿಕ್ಕಾಗುವುದಿಲ್ಲ. ಆದುದರಿಂದ ಶಿಶು ಶಿಕ್ಷಣವು ಸರಕಾರದ್ದೇ ಹೊಣೆಗಾರಿಕೆಯಾಗಿರತಕ್ಕದ್ದು. ಅದಕ್ಕೆ ತಗಲುವ ಖರ್ಚನ್ನು ಸುಖಲೋಲುಪತೆಯ ದುಂದುಗಾರಿಕೆಯೆಂದು ತಿಳಿಯಬಾರದು ಹಳ್ಳಿ ಮಕ್ಕಳನ್ನು ಇದೇ ಯೋಜನೆಯೊಳಗೆ ತರಬೇಕು ಸರಕಾರವು ಸಾರ್ವತ್ರಿಕ ಶಿಶು ಶಿಕ್ಷಣದ ಪದ್ಧತಿಯನ್ನು ಜಾರಿಗೆ ತರಬೇಕು. ಈ ಕುರಿತಾಗುವ ಖರ್ಚಿಗಾಗಿ ಜನಾಂಗವು ಹೊಸ ತೆರಿಗೆಯನ್ನು ಸಂತೋಷದಿಂದ ಹೊರಲು ಸಿದ್ಧವಿರಬೇಕು.

ಪ್ರಾಥಮಿಕ ಮೂಲ ಶಿಕ್ಷಣ

5ರಿಂದ 15 ವರ್ಷಗಳ ತನಕ ಧರ್ಮಾರ್ಥವೂ ಕಡ್ಡಾಯವೂ ಆದ ಪ್ರಾಥಮಿಕ ಶಿಕ್ಷಣವು ಇಡೀ ದೇಶದಲ್ಲಿ ಕೂಡಲೇ ಜಾರಿಗೆ ತರಬೇಕು. ಈ ಶಿಕ್ಷಣವು ಯಾವುದಾದರೂ ಕೈಗಾರಿಕೆಯ ಮೂಲಕ ಕೊಡಲ್ಪಡಬೇಕು. ಕೊನೆಯ ಎರಡು ಮೂರು ವರ್ಷಗಳಲ್ಲಿ ವಿದ್ಯಾರ್ಥಿಗಳನ್ನು ಸ್ವಸಂಪಾದನೆ ಮಾಡಲು ಯೋಗ್ಯರಾಗುವಂತೆ ಕೈಗಾರಿಕೆಯಲ್ಲಿ ತರಬೇತುಗೊಳಿಸಬೇಕು. ನಾಗರೀಕತೆಯಿಂದಿದ ಆಧುನಿಕ ಜನಾಂಗವೊಂದು [illegible] ಯೋಜನೆಯನ್ನು ನಿರ್ವಹಿಸಬೇಕು. ಹೊಸ ಯೋಜನೆಯು ಪ್ರಾಥಮಿಕ [illegible] ಅದನ್ನು ವ್ಯವಸ್ಥಾಪಿಸುವ, ಪರಿ[illegible] ಮತ್ತು ಪ್ರಗತಿ ಮಾಡುವ ಕಾರ್ಯ[illegible] ಗಡುತರವಾದ ತೊಡಕುಗಳು ಬರುವುದು ಸಹಜವಾದುದು. ಆದರೆ ಅವನ್ನು ಧೀರೋದಾತ್ತ ಜನಾಂಗದವರಾದ ನಾವು ಧೈರ್ಯದಿಂದೆದುರಿಸಬೇಕು. ಪ್ರಾರಂಭದಲ್ಲಿ ಪರಿಪೂರ್ಣ ಸ್ಥಿತಿಯನ್ನೇ ನಿರೀಕ್ಷಿಸುವುದು ಯುಕ್ತವಲ್ಲ. ನಮ್ಮ ಬಳಿಯಿರುವ ವಸ್ತು ಒಡವೆಗಳಿಂದ ನಾವು ಜನಾಂಗ ವಿಶಾಲವಾಗಿ ಈ ಯೋಜನೆಯನ್ನು ಪ್ರಾರಂಭಿಸಿ ಕ್ರಮೇಣ ನಮ್ಮ ಗುರಿಯನ್ನು ಉನ್ನತೋನ್ನತ ಮಟ್ಟಕ್ಕೇರಿಸಲು ಪ್ರಯತ್ನಿಸಬೇಕು.

ಕಡ್ಡಾಯದ ಪ್ರಾಥಮಿಕ ಶಿಕ್ಷಣವನ್ನು ಪರಿಪೂರ್ಣತೆಗೆ ಮುಟ್ಟಿಸಲು ಇಂಗ್ಲೆಂಡಿಗೆ ಒಂದು ತಲಾಂತರ ಹಿಡಿಯಿತು ಅಮೇರಿಕವು ಅರ್ಧ ಶತಮಾನದ ನಂತರ ತೃಪ್ತಿಕರ ಫಲವನ್ನು ಪಡೆಯಿತು ಇಷ್ಟಾದರೂ ಅಮೇರಿಕದಲ್ಲಿ ಇನ್ನೂ ವಿಶಾಲ ಸಂಖ್ಯೆಯ ಬಾಲಕರು ಕಡ್ಡಾಯ ಶಿಕ್ಷಣ ಕ್ರಮದಿಂದ ತಪ್ಪಿಸಿಕೊಂಡವರಿದ್ದಾರೆ ಇಷ್ಟರಿಂದ ಮಾತ್ರಕ್ಕೆ ನಾವು ನಮ್ಮ ಕಷ್ಟಗಳನ್ನು ಬೃಹತ್ಕರಿಸುವುದಶ್ಯವಿಲ್ಲ ತೆರಿಗೆ ಮೂಲಕ ಧನ ಸಂಗ್ರಹವಾಗದಿದ್ದರೆ ರಾಷ್ಟ್ರೀಯ ಸಾಲದ ಮೂಲಕ ಕಾರ್ಯನಿರ್ವಹಿಸಬೇಕು. ಹೇರಳ ಸಂಖ್ಯೆಯಲ್ಲಿ ಉಪಾಧ್ಯಾಯರನ್ನು ತರಬೇತುಗೊಳಿಸಬೇಕು ಕಡ್ಡಾಯ ಶಿಕ್ಷಣದ ಸ್ಕೀಮಿನ ಯಮಾವಳಿಗಳನ್ನು ಹಳ್ಳಿ ಕಡೆಗಳಲ್ಲಿ ಪ್ರಚಾರ ಮಾಡಲು ಪತ್ರಿಕೆಗಳ, ಪೇಟಿ ವಿದ್ಯಾರ್ಥಿಗಳ, ಸರಕಾರಿ ನೌಕರರ, ರೇಡಿಯೊ ಸಿನೇಮಾಗಳ ಸಹಾಯವನ್ನು ಪಡೆಯಬೇಕು

ಕಡ್ಡಾಯ ಶಿಕ್ಷಣ ಖಾತೆಗಾಗಿ ವಿಶೇಷ ತರಬೇತಿಯ ಅಧಿಕಾರಿಗಳನ್ನು ಸಿದ್ಧಗೊಳಿಸಬೇಕು ಸಾವಿರಾರು ವರ್ಷಗಳಿಂದ ಪೂಜಾ ಮಂದಿರಗಳಿಗೆ ಪ್ರವೇಶವಿಲ್ಲದವರಿಗೆ ಪ್ರವೇಶ ಸಿಗುವಂತೆ ಶಾಸನಗಳನ್ನು ಒಂದೇ ದಿನದಲ್ಲಿ ಮಂಜೂರು ಮಾಡಿದ ಜನರು ಅದಕ್ಕಿಂತಲೂ ಮಹತ್ವದ ಈ ವಿಚಾರಕ್ಕೆ ಹೆಚ್ಚಿನ ಗಮನವನ್ನು ಕೊಡುವರೆಂದು ಹಾರೈಸಬಹುದು

ಹ್ಯಾಸ್ಕೂಲ್ ವಿದ್ಯಾಭ್ಯಾಸ

ನಮ್ಮ ಈಗಿನ ಹ್ಯಾಸ್ಕೂಲ್ ವಿದ್ಯಾಭ್ಯಾಸವು ಕೇವಲ ಪಠ್ಯಪುಸ್ತಕ ಪ್ರಧಾನವಾದುದು. ಅದು ಹೆಚ್ಚಾಗಿ ಬೌದ್ಧಿಕವಾಗಿದ್ದು ಸಾಂಸ್ಕೃತಿಕ ಉದ್ದೇಶದ್ದೆಂದು ಹೇಳಲ್ಪಡುತ್ತದೆ ಸಂಸ್ಕೃತಿಯೆಂದರೆ ಒಂದು ಮುಂದುವರಿಯುತ್ತಿರುವ ಮಾನಸಿಕ ಸಂಸ್ಕಾರ ಅದು ಶಾಲೆಯಲ್ಲೆ ಅಲ್ಲ ಜೀವನಾಂತ್ಯದ ತನಕ ಪ್ರತ್ಯಕ್ಷ ವ್ಯವಹಾರದಿಂದ ಅನುಭವಕ್ಕೆ ಬರುತ್ತದೆ ಎಂಬೀ ಸಂಗತಿಯನ್ನು ನಾವು ವಿವೇಚಿಸಿದರೆ ಸಾಂಸ್ಕೃತಿಕ ಶಿಕ್ಷಣದೊಂದಿಗೆ ಕ್ರಿಯಾತ್ಮಕವಾದ ಕೈಗಾರಿಕೆಯ ಶಿಕ್ಷಣಕ್ಕೂ ಯೋಗ್ಯ ಸ್ಥಾನ ಸಿಗಬೇಕಾದುದು ಅತ್ಯಾವಶ್ಯಕವೆಂದು ತಜ್ಞರು ಅಭಿಪ್ರಾಯ ಪಡಹತ್ತಿರುವರು ಜನ್ಮಾರಂಭದಿಂದ ಜೀವನಾಂತ್ಯದವರೇಗೆ ಶಿಕ್ಷಣವೆಂದು ನಮ್ಮ ಉದ್ದೇಶವಿರಬೇಕು

ಬುದ್ಧಿ ಪುರಸ್ಕರವಾಗಿ ಒಂದು ಕಾಮಗಾರಿಕೆಯನ್ನು ಕಲಿಯುವಾಗ ಹೊಂದುವ ಸಾಂಸ್ಕೃತಿಕ ದೀಕ್ಷೆಯು ಇನ್ನಿತರ ತಾತ್ವಿಕ ಶಿಕ್ಷಣಗಿಂತ ಎಷ್ಟೋ ಶ್ರೇಷ್ಠವಾದುದು ಇದರಲ್ಲಿ ಕಿವಿ, ಕಣ್ಣು, ಮನಸ್ಸು, ಕೈಕಾಲುಗಳೆ ಮೊದಲಾದ ಇಂದ್ರಿಯಗಳನ್ನೂ, ಕ್ರಿಯಾಂಗಗಳನ್ನು ಉಪಯೋಗಿಸಿ ವ್ಯಕ್ತಿಯ ಸರ್ವತೋಮುಖ ತಜ್ಞತೆಗೆ ಸಂದರ್ಭವುಂಟಾಗುವುದು ಮಾತ್ರವಲ್ಲ ಗಣಿತ ಕಲೆ, ವಿಜ್ಞಾನ, ಅರ್ಥಶಾಸ್ತ್ರಾದಿಗಳ ಪರಸ್ಪರ ಸಂಯೋಗವೂ ಉಂಟಾಗುವುದು ಇದರೊಂದಿಗೆ ಮೂಲ ಕೈಗಾರಿಕೆಯ ವಿಶ್ವ ಮತ್ತು ಆರ್ಥಿಕ ಇತಿಹಾಸವನ್ನು ಅದರ ಭೌಗೋಲಿಕ ಸಂಬಂಧವನ್ನು ಕಲಿತರೆ ಪರಿಣಾಮಕಾರಿಯಾದ ಸಾಂಸ್ಕೃತಿಕ ಶಿಕ್ಷಣವು ಪರಿಪೂರ್ಣವೆನಿಸುವದು ಇದರ ಜೊತೆಯಲ್ಲೇ ಕೈಗಾರಿಕೆ ಮತ್ತು ಕೃಷಿಗಾರಿಕೆಯ ಕೇಂದ್ರಗಳಿಗೆ ಮೇಲಿಂದ ಮೇಲೆ ಸಂಚಾರ ಸಂದರ್ಶನಗಳಿಗೆ ವಿಹಾರ ಕೂಟಗಳಾಗಿ ಹೋಗುವುದರಿಂದ ಶಿಕ್ಷಣದ ಗುರಿಯು ಸಂಪೂರ್ಣಗೊಳ್ಳುವುದು

ವಿಶ್ವವಿದ್ಯಾಲಯ ಶಿಕ್ಷಣ

ಇಂದು ನಮ್ಮಲ್ಲಿನ ವಿಶ್ವವಿದ್ಯಾಲಯಗಳು ನಗರ ಪ್ರಧಾನವಾದುವು. ನಗರ ಜೀವನದಾವಶ್ಯಕತೆಗಳನ್ನು ಪೂರೈಸುವುದು ಇಂದು ಅವುಗಳ ಧ್ಯೇಯವಾಗಿದೆ. ಆದರೆ ನಮ್ಮಲ್ಲಿನ ನಗರ ವಾಸಿಗಳ ಸಂಖ್ಯೆ ಕೇವಲ ಶೇಕಡಾ 15ರಷ್ಟು. ಬಹುಸಂಖ್ಯಾಕ ಜನತೆಯೊಡನೆ ಸಂಪರ್ಕವಿಲ್ಲದೆ ಈ ವಿಶ್ವವಿದ್ಯಾಲಯಗಳ ಜ್ಞಾನಾನುಭವವೂ ವೃದ್ಧಿಯಾಗಿರುವುದಿಲ್ಲ. ನಮ್ಮ ದೇಶದ 40 ಕೋಟಿ ಜನಸಂಖ್ಯೆಗೆ ನಮ್ಮಲ್ಲಿಯ ವಿಶ್ವವಿದ್ಯಾಲಯಗಳು ಅತ್ಯಲ್ಪ ದಾನಾಶಯದಲ್ಲಿವೆ 1957ರಲ್ಲಿ ನಮ್ಮ ಜನಸಂಖ್ಯೆ 45 ಕೋಟಿಗಳಷ್ಟಾಗಬಹುದು 19 ಕೋಟಿ ಜನಸಂಖ್ಯೆಯಿರುವ ರಷ್ಯಾದಲ್ಲಿ 806 ವಿಶ್ವವಿದ್ಯಾಲಯಗಳಿವೆ 14 ಕೋಟಿ ಜನಸಂಖ್ಯೆಯ ಅಮೇರಿಕದಲ್ಲಿ ಪದವಿಯನ್ನು ಕೊಡುವ ಅಂತಹ 1750 ಸಂಸ್ಥೆಗಳಿವೆಯೆಂದರೆ ಕೌತುಕದ ಸಂಗತಿ ಕೆನಡದ 1 ಕೋಟಿ ಜನಸಂಖ್ಯೆಗೆ 21 ವಿಶ್ವವಿದ್ಯಾಲಯಗಳಿವೆ ಆದರೆ 40 ಕೋಟಿಯ ಭಾರತದಲ್ಲಿ ಕೇವಲ 20 ವಿಶ್ವವಿದ್ಯಾಲಯಗಳಿರುವುದೆಂದರೆ ನಮ್ಮ ದೇಶದ ಶಿಕ್ಷಣ ದುರ್ದೆಶೆ ಅದೆಷ್ಟಿರುವುದೆಂಬುದನ್ನು ಊಹಿಸಬಹುದು

ಮುಂದಿನ ಸಂಯುಕ್ತ ಭಾರತದ ಕೇಂದ್ರ ಸರಕಾರವು ಗ್ರಾಮ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿ ಉನ್ನತ ಶಿಕ್ಷಣದ ಸ್ಥಿತಿಯನ್ನು ಸುಧಾರಿಸಬೇಕು. ಈ ವಿಶ್ವವಿದ್ಯಾಲಯಗಳಲ್ಲಿ ಗ್ರಾಮೋದ್ಧಾರಕ್ಕೆ ಸಂಬಂಧಪಟ್ಟ ಎಲ್ಲಾ ತರಬೇತಿಯು ಕೊಡಲ್ಪಡಬೇಕು ಈ ಕುರಿತು ಮಹಾತ್ಮಾಗಾಂಧಿಯವರು ತಾ 13 10-46ರ ಹರಿಜನದಲ್ಲಿ ಹೀಗೆ ಬರೆದಿದ್ದರು

"ಕೇಂದ್ರ ಮತ್ತು ಪ್ರಾಂತಿಕ ಮಂತ್ರಿಮಂಡಳಗಳು ಗ್ರಾಮ ವಿಶ್ವವಿದ್ಯಾಲಯದ ಈ ಯೋಜನೆಯನ್ನು ಮನಃಪೂರ್ವಕವಾಗಿ ತಮ್ಮದನ್ನಾಗಿ ಮಾಡಿಕೊಂಡರೆ ಅತ್ಯಂತ ಫಲಕಾರಿಯಾಗುವುದು"

ಪ್ರತಿ ಹತ್ತತ್ತು ಲಕ್ಷ ಜನರಿಗೊಂದರಂತೆ ಇಂತಹ ವಿಶ್ವವಿದ್ಯಾಲಯವನ್ನು ಸ್ಥಾಪಿಸಬೇಕೆಂದು ಡಾ। ಕಿಣಿಯವರ ಅಭಿಪ್ರಾಯ

ESTD. 1906

CANARA BANK, LIMITED.

(Incorporated in British India with Limited Liability)

(PROGRESS STATEMENT CORRECT TO THOUSANDS OF RUPEES)

LIABILITIES	1945	1946	ASSETS	1945	1946
Capital Subscribed	29,00 000	29 00,000	Cash	1 01,91 000	1 16 16,000
Capital paid up	28 43,000	28,80,000	Govt Securities	1 80,45,000	2 75,61,000
Reserve	11,00,000	11,00,000	Advances to customers	1 56 87 000	2 01 38 000
Deposits	3,50 43,000	4 60,40 000	Bills for collection and Foreign Bills negotiated	20 56 000	34 23 000
Due to Bankers	26,91,000	69 57,000	Landed Properties	28 000	5,000
Call Deposits from Bankers	8,00,000	15,00,000	Bank Premises and Furniture and Fixtures	1,46,000	1,47,000
Branch Adjustments	22,07,000	21,09,000	Other Assets	10,25,000	16,23,000
Bills for collection and foreign bills negotiated	20,56,000	34,23,000			
Other Liabilities	77,000	85,000			
Profit for the year	3,61,000	4,19,000			
Rs.	4,71,78,000	6 45,13,000	Rs	4,71,78,000	6,45,13,000

ಕಲ್ಕತ್ತಾ ದಂಗೆಗೆ ಮುಸ್ಲಿಂ ಲೀಗ್ ಕಾರಣ

ಬ್ರಿಟಿಷ್ ಸೇನಾಧಿಕಾರಿಯ ಆರೋಪ

"ಘಟನಾ ಸಮಿತಿಗೆ ಅಧಿಕಾರ ಬಿಟ್ಟುಕೊಡಿರಿ"

ಇಂಗ್ಲೆಂಡಿನ ಡೈಲಿ ಟೆಲಿಗ್ರಾಫ್ ಎಂಬ ಪತ್ರಿಕೆಯಲ್ಲಿ ಕಟುವಾದ ಶ್ರೇಣಿಯನ್ನೊಳಗೊಂಡ ಲೇಖನವೊಂದನ್ನು ಬರೆಯುತ್ತ ಮೇಜರ್ ಜನರಲ್ ಸರ್ ಡೇವಿಡ್ ಸ್ಟೆಟಲ್ ಎಂಬ ಭಾರತದಲ್ಲಿನ ನಿವೃತ್ತ ಬ್ರಿಟಿಷ್ ಸೇನಾಧಿಪತಿಗಳು ಇತ್ತೀಚೆಗಿನ ಇಲ್ಲಿಯ ಕೋಮುವಾರು ದಂಗೆಗೆ ಮುಸ್ಲಿಂ ಲೀಗಿನ ಧೋರಣೆಯೇ ಕಾರಣವೆಂದು ತರ್ಕಿಸಿದ್ದಾರೆ

ಮೇಜರ್ ಜನರಲ್ ಸ್ಟೇಟಲ್ ಅವರು 44 ವರ್ಷ ಭಾರತ ಸೈನ್ಯದಲ್ಲಿ ದುಡಿದಿದ್ದಾರೆ ಅವರ ಕುಟುಂಬದವರು ನಾಲ್ಕು ತಲಾಂತರಗಳಿಂದ ಭಾರತದೊಂದಿಗೆ ಸಂಪರ್ಕವಿದ್ದವರು ಅವರು ಹೀಗೆ ಬರೆಯುತ್ತಾರೆ

ನಾನು ಕಾಂಗ್ರೆಸಿನ ಪರವಾಗಿ ಪಕ್ಷವಹಿಸಲಿಚ್ಛಿಸುವುದಿಲ್ಲ ಅದರ ಅನೇಕ ಧೋರಣೆಗಳೂ ಅದರ ಮುಖಂಡರನೇಕರ ಹೇಳಿಕೆಗಳೂ ನನಗೆ ಅತ್ಯಂತ ಖೇದವನ್ನು ಉಂಟುಮಾಡಿವೆ ಆದರೆ ಕಾಂಗ್ರೆಸು ನಿಸ್ಸಂಕೋಚದಿಂದ ಸಂಯುಕ್ತ ಭಾರತದ ಕೇಳಿಕೆಯನ್ನು ಮಂಡಿಸಿರುವುದು ಶ್ಲಾಘನೀಯ ಭಾರತವು ಸಮಗ್ರವಾಗಿ ಐಕ್ಯವಾಗಿರುವುದು ಶ್ರೇಯಸ್ಕರ ವಿಚ್ಛೇದಿಸಲ್ಪಟ್ಟ ಭಾರತವು ಪರಕೀಯ ಆಕ್ರಮಣ ಗಂಡಾಂತರಕ್ಕೆ ಈಡಾಗಿ ಅರಾಜಕತೆ ಅಶಾಂತಿಗಳ ನೆಲೆಯಾಗುವುದು ಖಚಿತ

ಜಿನ್ನರ ದೋಷ

ಅಲ್ಪಸಂಖ್ಯಾಕರ ಹಿತರಕ್ಷಣೆಯು ನಮ್ಮ ನಮ್ಮ ಆಸಕ್ತಿಯಲ್ಲಿ ನಾವು ಮುಸ್ಲಿಂ ಲೀಗಿಗೆ ಅನಾವಶ್ಯಕವಾದ ಪಾವಿತ್ರ್ಯವನ್ನು ಕೊಟ್ಟಿರುತ್ತೇವೆ. ಜವಾಗಿ ನೋಡಿದರೆ ಲೀಗ್ ಮತ್ತವರ ವಂಶದಂತೆ ಮಿ। ಜಿನ್ನರ ಭಾರತದಲ್ಲಿನ ಇತ್ತೀಚೆಗಿನ ಎಲ್ಲಾ ಹತ್ಯಾಕಾಂಡಗಳಿಗೆ ಮುಖ್ಯ ಕಾರಣಭೂತರಾಗಿರುವರು ಅವರ 'ಡೈರೆಕ್ಟ್ ಏಕ್ಷನ್' ಕಾರ್ಯಕ್ರಮವು ಕಲ್ಕತ್ತೆಯ ದಂಗೆಯ ಹೇತುವಾಗಿ ನಂತರ ಕ್ರಮವಾಗಿ ಪೂರ್ವ ಬಂಗಾಲದಲ್ಲಿ ಅದು ಬಲಿತು, ಬಿಹಾರದಲ್ಲಿ ಅದರ ಪ್ರತೀಕಾರ ರೂಪ ಕಾಣಿಸಿಕೊಳ್ಳುವಂತಾಯಿತು

ಪಂಜಾಬದಲ್ಲಿ ಪುರವರ್ಗಗಳ ಮೇಲೆ ಹಾಕಿದ ಪ್ರತಿಬಂಧಕವನ್ನು ಲೀಗಿನವರು ಮುರಿಯಲೆತ್ನಿಸಿದುದರಿಂದ ಅಲ್ಲಿಯೂ ಗಲಭೆ ಉಂಟಾಯಿತು ನೆಹರುಗಳಂತೆ ಮಿ। ಜಿನ್ನರು ತಮ್ಮ ಅನುಯಾಯಿಗಳನ್ನು ಸಮಾಧಾಯಿಸಲು ಗಲಭೆಯ ಪ್ರದೇಶಗಳಿಗೆ ಹೋಗಲಿಲ್ಲ ಹೊತ್ತು ಮೀರಿದ ನಂತರ ಜಿನ್ನರು ಕೆಲವೊಂದು ಅರೆಮನಸ್ಸಿನ ತತ್ಕಾಲೋಪದೇಶಕ ಪ್ರಕಟಣೆಗಳನ್ನು ಹೊರಡಿಸಿರುವರು

ಅನಾವಶ್ಯಕ ತಿಕ್ಕಾಟ

ಮುಸ್ಲಿಂ ಹಿತಗಳನ್ನು ರಕ್ಷಿಸುವುದಕ್ಕಾಗಿ ಜಿನ್ನರು ತಮ್ಮ ಪ್ರತಿನಿಧಿಗಳನ್ನು ನಡುಗಾಲ ಸರಕಾರದಲ್ಲಿ ಸೇರಬಿಟ್ಟರು ಆದರೆ ಇವರ ಮಂತ್ರಿಗಳು ಸಂಯುಕ್ತ ಮಂತ್ರಿಮಂಡಳದ ಹೊಣೆಗಾರಿಕೆಯನ್ನು ಒಪ್ಪಿಕೊಳ್ಳದೆ ಸ್ವತಂತ್ರವಾಗಿ ವರ್ತಿಸಹತ್ತಿದರು ಇವೆಲ್ಲ ಕುತಂತ್ರಗಳು ಅನಾವಶ್ಯಕವೇ ಸರಿ ಕಾರಣ ಕಾಂಗ್ರೆಸು ಮುಸಲ್ಮಾನ ಬಹುಸಂಖ್ಯಾಕ ಪ್ರಾಂತಗಳಿಗೆ ಶೇಕಡಾ 95ರಷ್ಟು ಸ್ವಾತಂತ್ರ್ಯ ಕೊಡುವ ಮತ್ತು ನಡುಗಾಲ ಸರಕಾರದಲ್ಲಿ ಮುಸ್ಲಿಂ ಸಂಬಂಧ ಶಾಸನವನ್ನು ಮಾಡುವಾಗ ಮುಸಲ್ಮಾನ ಸದಸ್ಯರ ಬಹುಮತವಿರಬೇಕೆಂಬ ತತ್ವವನ್ನು ಒಪ್ಪಿಕೊಂಡಿದೆ ಕೇಂದ್ರ ಸರಕಾರಕ್ಕೆ ಅತ್ಯಲ್ಪ ವಿಷಯಗಳ ಕುರಿತು ಮಾತ್ರ ಅಧಿಕಾರ ಕೊಟ್ಟರೆ ಸಾಕೆಂದು ಅದು ತಿಳಿಸಿದೆ.

ತಾವು ಬಿಟ್ಟುಹೋಗುವ ಅವಧಿಯ ನಿರ್ದಿಷ್ಟ ತಾರೀಕನ್ನು ಬ್ರಿಟಿಷ್ ಸರಕಾರದವರು ನಮೂದಿಸಿದ್ದು ಮಾನಸಿಕವಾಗಿ ಯಥಾರ್ಥವಾದುದು ಆದರೆ ಅಧಿಕಾರವನ್ನು ಹಂಚಿಹೋಗುವ ವಿಧಾನವು ಲೀಗಿನ ಹಟಮಾರಿತನಕ್ಕೆ ಪ್ರೋತ್ಸಾಹ ಕೊಡುವಂತಹುದಾಗಿದೆ

ಈ ಬಿಕ್ಕಟ್ಟನ್ನು ಬಿಡಿಸುವ ಒಂದೇ ಉಪಾಯವೆಂದರೆ: ಅಧಿಕಾರವನ್ನು ಘಟನಾ ಸಮಿತಿಯು ಚುನಾಯಿಸಿದ ಮಂಡಳಿಗೆ ಬಿಟ್ಟುಬಿಡುವುದಾಗಿ ಸಾರಿದರೆಂದರೆ ಲೀಗು ಆ ಸಮಿತಿಗೆ ಒತ್ತಾಯಪೂರ್ವಕವಾಗಿ ಸೇರಬೇಕಾಗುವುದು

ಮದುವೆ ಮತ್ತಿತರ ಸಾಮಾಜಿಕ ವಿವಾದಗಳಲ್ಲಿ ಭಾಗವಹಿಸುವ ತರುಣ ಸ್ತ್ರೀಯರ ಕಲ್ಯಾಣ ವಿಚಾರಣೆ ಮಾಡಲು ಕುರುಡ ನ್ಯಾಯಾಧೀಶರನ್ನೇ ನೇಮಿಸುವುದೊಳಿತೆಂದು ಸರ್ ಆಯನ್ ಫ್ರೇಸರ್ ಎಂಬ ಪಾರ್ಲಿಮೆಂಟ್ ಸದಸ್ಯರು ಒಂದು ವರದಿಯಲ್ಲಿ ಶಿಫಾರಸು ಮಾಡುತ್ತಾರೆ ಸುಂದರ ಸ್ತ್ರೀಯರನ್ನು ನೋಡಿ ಅವರು ಹೇಳುವುದು ಸತ್ಯವೆಂದು ತಿಳಕೊಳ್ಳುವ ಭಾವನೆ ಕಣ್ಣಿದ್ದ ಅನೇಕ ಮೇಜಿಸ್ಟ್ರೇಟರಲ್ಲುಂಟಾಗುವುದೆಂದು ಅವರ ಆಕ್ಷೇಪ

ವಿವಾಹ ವಿಚ್ಛೇದನ ಮತ್ತು ಪುನರ್ವಿವಾಹದ ಸಮಸ್ಯೆ

ಶಾಸ್ತ್ರಗಳೇನು ನಿರ್ದೇಶಿಸಿವೆ?

ಏಕಪತ್ನಿತ್ವ ಮತ್ತು ಬಹುಪತ್ನಿತ್ವದ ಕುರಿತು ಈಗ ನಮ್ಮ ದೇಶದಲ್ಲಿ ಪರಿತಪಿತವಾಗ್ವಾದವು ನಡೆಯುತ್ತಿದೆ ಗಂಡಂದಿರನ್ನು ಸರಿದೋರಿದಾಗ ಬಿಡುವ ಹಕ್ಕು ತಮಗಿರಬೇಕೆಂದು ಹಿಂದೂ ಮಹಿಳಾ ವರ್ಗದಲ್ಲಿ ಬಹಳ ಆಂದೋಲನ ನಡೆಯುತ್ತಿದೆ ಈ ಸುದ್ದಿಯನ್ನು ಕೇಳುವಾಗ ಕಟ್ಟಾಚಾರದವರು ಬೆರಗಿನಿಂದ ಬಾಯ್ಬಿಡುವರು ಸಾಮಾಜಿಕ ಸುಧಾರಕರು ಸ್ತ್ರೀಯರ ಈ ಹಕ್ಕುಬಾಧ್ಯತೆಗಳು ನ್ಯಾಯವಾದುದೆಂದು ಒಪ್ಪುತ್ತಾರೆ ಇದರಿಂದ ಹಿಂದೂತ್ವಕ್ಕೆ ಹಾನಿಯಾಗುತ್ತದೆಂದು ನಾವು ಮನಸ್ತಾಪ ಕಟ್ಟಿಕೊಳ್ಳುವುದವಶ್ಯವಿಲ್ಲ ಸಂಭವಿಸುವುದೆಲ್ಲ ಸಂಭವಿಸಿಯೇ ತೀರುವುದು ಅಸಂಭವವು ಎಂದೆಂದಿಗೂ ಅಸಂಭವವೇ ಆಗಿರುತ್ತದೆ ಹೇಗೂ ಹಿಂದೂತ್ವವು ಈ ವಿಷಯ ತನ್ನ ರಕ್ಷಣೆಯನ್ನು ತಾನೇ ಮಾಡಿಕೊಳ್ಳಬಲ್ಲುದು.

ಒತ್ತಾಯದ ವಿವಾಹಗಳು

ನಮ್ಮ ಸ್ಮೃತಿ ಶಾಸ್ತ್ರಗಳು ಸ್ತ್ರೀಯರ ವಿವಾಹ ವಿಚ್ಛೇದಕ್ಕೂ ಪುನರ್ವಿವಾಹಕ್ಕೂ ಸಮ್ಮತಿಯಿತ್ತಿವೆಯೋ ಎಂಬ ಪ್ರಶ್ನೆಯನ್ನು ಪರಿಶೀಲಿಸೋಣ ನಮ್ಮ ಪ್ರಾಚೀನ ಸಮಾಜ ಸೂತ್ರ ನಿರ್ಮಾಪಕರು ಏನೆಂದಿದ್ದಾರೆಂದು ನೋಡೋಣ ವ್ಯಾಸ್ಪ್ರವಾದನು ಹೀಗೆನ್ನುತ್ತಾನೆ

ಕಲಿಯುಗದಲ್ಲಿ ಕೂಡಾ ಹೆಂಡತಿ ಸತ್ತೊಡನೆ ಪುರುಷನೊಬ್ಬನು ಪುನರ್ವಿವಾಹಮಾಡಿಕೊಳ್ಳುವಂತೆ ಗಂಡ ಸತ್ತೊಡನೆ ಸ್ತ್ರೀಯು ಮತ್ತೊಂದು ವಿವಾಹ ಮಾಡಿಕೊಳ್ಳಲೇಬೇಕು

ತನ್ನ ಸ್ವಂತ ಇಚ್ಛೆಗೆ ವಿರೋಧವಾಗಿ ಬಲಾತ್ಕಾರದಿಂದೆಂಬಂತೆ ಒಬ್ಬನಿಗೆ ವಿವಾಹ ಮಾಡಲ್ಪಟ್ಟ ಸ್ತ್ರೀಯನ್ನು ಮತ್ತೊಬ್ಬನಿಗೆ ಲಗ್ನಮಾಡಿಸಬಹುದೆಂದು ಯಜ್ಞವಲ್ಕ್ಯನು ತಿಳಿಸುತ್ತಾನೆ

ನಪುಂಸಕನಾದಾಗ

ಗಂಡನು ಬೇರೆ ಜಾತಿಯವನೂ, ನಪುಂಸಕನೂ, ಗುಲಾಮನೂ ಮತಾಚಾರವಿಲ್ಲದವನೂ ಆದಾಗ ಅವನನ್ನು ವರಿಸಿದ ಸ್ತ್ರೀಯು ನ್ನು ಇನ್ನೊಬ್ಬ ಪುರುಷನಿಗೆ ಪಾಣಿಗ್ರಹಣ ಮಾಡಿಕೊಡಬಹುದೆಂದೂ, ಗಂಡ ಸಾಯುವಾಗ ಹೆಂಡತಿಯು ಪ್ರಾಯಕ್ಕೆ ಬಂದಿರದಿದ್ದರೆ ಅವಳನ್ನು ಪುನರ್ವಿವಾಹಕ್ಕೊಳಪಡಿಸಬಹುದೆಂದು ಸಮಾಜ ಶಾಸನಕಾರರಾದ ಕಾತ್ಯಾಯನ ವಶಿಷ್ಠರು ಅಭಿಪ್ರಾಯಪಟ್ಟಿದ್ದಾರೆ

ನಪುಂಸಕನಾಗಿದ್ದ ಗಂಡನನ್ನು ಬಿಟ್ಟು ಸ್ತ್ರೀಯು ಬೇರೊಬ್ಬ ಪತಿಯನ್ನು ಮಾಡಿಕೊಳ್ಳಬಹುದೆಂದು ನಾರದ, ಪ್ರಜಾಪತಿಗಳೆಂಬ ಸೂತ್ರದಾರರು ಬರೆದಿದ್ದಾರೆ ಅಗಸ್ತ್ಯನ ಅಭಿಪ್ರಾಯ ಪ್ರಕಾರ ಗಂಡನಿಂದ ಬೇರ್ಪಟ್ಟ ಪ್ರೌಢ ಸ್ತ್ರೀಯು ಪುನರ್ವಿವಾಹ ಮಾಡಿಕೊಳ್ಳಬಹುದೆಂದಿದೆ

ಬಾಲ ವಿಧವೆಯರು.

ಕಲವು ವರ್ಷಗಳಿಂದ ಪರದೇಶದಲ್ಲಿ ವಾಸಿಸಿಕೊಂಡಿರುವ ಗಂಡನನ್ನು ತ್ಯಜಿಸಿ ಪುನರ್ವಿವಾಹ ಮಾಡಿಕೊಳ್ಳುವುದಕ್ಕೂ ಶಾಸ್ತ್ರಾಧಾರವಿದೆ ಸೂತ್ರಕಾರ ನಾರದನ ಅಭಿಪ್ರಾಯದಂತೆ ಓರ್ವ ಬ್ರಾಹ್ಮಣ ಸ್ತ್ರೀಯು ಇಂತಹ ಸಂದರ್ಭದಲ್ಲಿ 8 ವರ್ಷಗಳ ತನಕ ಕಾಯಬೇಕೆಂದಿದೆ, ಮಕ್ಕಳಾಗದಿದ್ದಲ್ಲಿ ಅವಳು ನಾಲ್ಕೇ ವರ್ಷಗಳ ನಂತರ ಪುನರ್ವಿವಾಹಮಾಡಿಕೊಳ್ಳಬಹುದು ಇದೇ ರೀತಿ ಕ್ಷತ್ರಿಯ ಹೆಂಗುಸು ಆರು ಮತ್ತು ಮೂರು ವರ್ಷಗಳ ತನಕವೂ, ವೈಶ್ಯಸ್ತ್ರೀಯು ನಾಲ್ಕು ಮತ್ತು ಎರಡು ವರ್ಷಗಳ ತನಕವೂ ಕಾಯಬೇಕು ಗಂಡನು ಜೀವಂತವಿರುವನಾದರೆ ಈ ಅವಧಿಯ ಇಮ್ಮಡಿ ಕಾಲ ಕಾಯಬೇಕು ಎಲ್ಲಾ ಸೂತ್ರಕಾರರು ಬಾಲ ವಿಧವೆಯರು ಪುನರ್ವಿವಾಹಮಾಡಿಕೊಳ್ಳುವುದಕ್ಕೆ ಸಮ್ಮತಿ ಸೂಚಿಸಿದ್ದಾರೆ ಯಜ್ಞವಲ್ಕ್ಯನು ಇನ್ನೂ ಮುಂದರಿದು ಹೆಂಗುಸು ಗರ್ಭಿಣಿಯಾಗುವ ತನಕ ಪುನರ್ವಿವಾಹಗಳನ್ನು ಮಾಡಿಕೊಳ್ಳಬಹುದೆಂದು ತಿಳಿಸಿರುತ್ತಾನೆ

ಪ್ರಯಾಣಿಕರಿಗೆ ಸ್ಪೆಶಲು ಸರ್ವಿಸಿನ ಸೂಚನೆ.

ಮುಲ್ಕಿ, ಬಪ್ಪನಾಡು ಪೊಳಲಿ ಇತ್ಯಾದಿ ಸ್ಥಳಗಳಲ್ಲಿ ಜಾಗರಿಗೆ ಜಾತ್ರೆಯ ಸಮ್ಬಂಧ ಪ್ರಯಾಣಿಸುವ ಯಾತ್ರಿಕರ ಬಗ್ಗೆ ಸ್ಪೆಶಲು ಸರ್ವಿಸುಗಳನ್ನು ರನ್ ಮಾಡುವ ಏರ್ಪಾಡನ್ನು ಮಾಡಲಿಚ್ಛಿಸಿದ್ದೇವಾದರೂ ಪ್ರಕೃತ ಮೂರು ತಿಂಗಳಿಗೆ ಸಿಗಬೇಕಾದ ಪಟ್ರೋಲು ಕೋಟಾದಲ್ಲಿ ಕಡಿತವಾಗಿರುವುದರಿಂದ ಕಲವು ಬಸ್ಸುಗಳಿಗೆ ಪರ್ಮಿಟ್ ಸಿಕ್ಕದೆ ಕಲವು ಸರ್ವಿಸುಗಳನ್ನು ತಾತ್ಕಾಲಿಕವಾಗಿ ನಿಲ್ಲಿಸುವ ಸಂದರ್ಭ ಒದಗಿರುವುದರಿಂದಲೂ ಮತ್ತು ಗೇಸು ಬಸ್ಸುಗಳು ಸಹ ಕಡಿಮೆ ಇದ್ದು ಅವುಗಳಿಂದ ದಿನವಹಿ ಸರ್ವಿಸುಗಳನ್ನು ರನ್ ಮಾಡಿಸಲ್ಪಟ್ಟನಂತರವೇ ಸಾಧ್ಯವಿದ್ದಲ್ಲಿ ಮಾತ್ರ ಸ್ಪೆಶಲು ಸರ್ವಿಸುಗಳನ್ನು ರನ್ ಮಾಡಬೇಕಾಗುತ್ತದೆ ಅಲ್ಲದೆ ಕೋಸ್ಟಲ್ಯಾಸಿನಲ್ಲಿ ಕೆಲವು ಕಡೆಗಳಲ್ಲಿ ಪಟ್ರೋಲು ಮತ್ತು ಕಲವು ಕಡೆಗಳಲ್ಲಿ ಗೇಸು ಬಸ್ಸುಗಳಿರುವುದರಿಂದ ಸಾಧ್ಯವಿದ್ದ ಸ್ಥಳದ ವರೆಗೆ ಮಾತ್ರ ಸ್ಪೆಶಲು ರನ್ ಮಾಡಬೇಕಾಗಿರುತ್ತದೆ ಉದಾಹರಣೆಗಾಗಿ ಮಂಗ್ಳೂರು— ಮುಲ್ಕಿ ಲ್ಯಾಸಿನಲ್ಲಿ ಪಾವಂಜೆಯಿಂದ ಮುಲ್ಕಿಗೆ ಪೆಟ್ರೋಲ ಬಸ್ಸು ಮಾತ್ರ ರನ್ ಆಗುತ್ತಿರುವುದರಿಂದ, ಮುಲ್ಕಿ ರಥೋತ್ಸವ ಹಾಗೂ ಬಪ್ಪನಾಡು ಜಾತ್ರೆಯ ಸಮ್ಬಂಧ ಸ್ಪೆಶಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ ಗೇಸು ಬಸ್ಸುಗಳ ಅನುಕೂಲತೆ ನೋಡಿ ಪಾವಂಜೆ ತನಕ ಮಾತ್ರ ಸ್ಪೆಶಲುಗಳನ್ನು ರನ್ ಮಾಡಲಾಗುವುದು ಆದಕಾರಣ ಜಾತ್ರೆಯ ಬಗ್ಗೆ ಪ್ರಯಾಣಿಸಲಿಚ್ಛಿಸುವ ಯಾತ್ರಿಕರು ಸ್ಪೆಶಲ್ ಸರ್ವಿಸು ರನ್ ಆಗಬಹುದೆಂಬ ಹೆಚ್ಚಿನ ಭರವಸೆ ಇಡದೆ ಸೀಟು ಇದ್ದರೆ ನಮ್ಮ ದಿನವಹಿ ಸರ್ವಿಸುಗಳಲ್ಲಿ ಪ್ರಯಾಣಿಸಬೇಕಾಗಿ ಅಪೇಕ್ಷಿಸುತ್ತೇವೆ

ಅಲ್ಲದೆ ಮದುವೆ ಇತ್ಯಾದಿ ಸಮಾರಂಭಗಳ ಬಗ್ಗೆ ಸ್ಪೆಶಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ R T O ಕೊಡುತ್ತಿದ್ದ ಇವರಿಂದ ಪರ್ಮಿಶನ್ ಪಡಕೊಂಡೇ ಅಂಥಾ ಸ್ಪೆಶಲುಗಳನ್ನು ಗೇಸು ಬಸ್ಸುಗಳ ಅನುಕೂಲತೆ ನೋಡಿ ರನ್ ಮಾಡಬೇಕಾಗಿರುವುದರಿಂದ, ಹಾಗೆ ಸ್ಪೆಶಲು ಬಸ್ಸುಗಳನ್ನು ಅಪೇಕ್ಷಿಸುವವರು, ಸ್ಪೆಶಲುಗಳ ಬಗ್ಗೆ ಪರ್ಮಿಶನ್ ಪಡಕೊಳ್ಳುವರೆ ನಮಗೆ ಅನುಕೂಲವಾಗುವಂತೆ ತಮ್ಮ ಅರ್ಜಿಗಳನ್ನು ನಮಗೆ 20 ದಿವಸಗಳಿಗೆ ಮುಂಚಿತವಾಗಿ ಬರಕೊಳ್ಳಬೇಕಾಗಿ ಸಾರ್ವಜನಿಕರಿಗೆ ತಿಳಿಸಲಪೇಕ್ಷಿಸುತ್ತೇವೆ.

ಮಂಗ್ಳೂರು,
29-3-1947.

ಜೋಯಿಂಟ್ ಮೆನೇಜರ್ಸ್,
ದಿ. ಕಂಬೈಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

ನಾಳಿನ ಭಾರತದ ಶಿಕ್ಷಣ ಹೊಣೆಗಾರಿಕೆ

ಧೈರ್ಯದ ಕಾರ್ಯಕ್ರಮವನ್ನನುಸರಿಸಬೇಕು.

ಡಾ। ಕಿಣಿಯವರ ಯೋಜನೆಗೆ ಮಹಾತ್ಮರ ಆಶೀರ್ವಾದ

ಭಾರತ ಸ್ವತಂತ್ರವಾದ ಮೇಲೆ [illegible] ಪ್ರಥಮಶಿಕ್ಷಣದ [illegible] ಬೌದ್ಧಿಕ [illegible] ಬೆಳೆಸಬೇಕಾದುದು ಅತ್ಯವಶ್ಯವೆಂದು ಪ್ರಖ್ಯಾತ ಶಿಕ್ಷಣ ತಜ್ಞರಾದ ಡಾ। [illegible] ಕಿಣಿಯವರು ಒಂದು [illegible] ತಿಳಿಸುತ್ತಾರೆ. ಮಹಾತ್ಮರಿಂದ ಹರಸಲ್ಪಟ್ಟ ಅವರ ಯೋಜನೆಯ ಸಾರಾಂಶ ಈ ಕೆಳಗಿನಂತಿದೆ.

ಕೈಗಾರಿಕೆ ಕೇಂದ್ರಗಳಲ್ಲೂ ಕೃಷಿ ಕೇಂದ್ರಗಳಲ್ಲೂ ಶಿಶು ಸಂರಕ್ಷಣಾಲಯಗಳನ್ನು ಸ್ಥಾಪಿಸುವುದು ಅತ್ಯಾವಶ್ಯಕ. ಇವುಗಳಲ್ಲಿ [illegible] ತಿಂಗಳಿಂದ 2 ವರ್ಷಗಳ ವಯಸ್ಸಿನ ಕೂಸುಗಳ ಆರೈಕೆ ಶಾಸ್ತ್ರೀಯ ವಿಧಾನಗಳಿಗನುಸಾರವಾಗಿ ಜರಗಬೇಕು. ಈ ಶಿಶು ಆಲಯಗಳು ಸರಕಾರದ ಆರೋಗ್ಯ ಖಾತೆಯ ನೇತೃತ್ವದಲ್ಲಿ ನಡೆಯಬೇಕಾದರೂ ಅಲ್ಲಿನ ಮಕ್ಕಳನ್ನು ಯೋಗ್ಯ ರೀತಿಯಲ್ಲಿ ತರಬೇತಿಗೊಳಿಸುವ ಶಿಕ್ಷಣ ಇಲಾಖೆಯವರು ಮಕ್ಕಳ ಮಾನಸಿಕ ಚಟುವಟಿಕೆಗಳ ತಕ್ಕ ಪರಿಶೋಧನೆ ಮಾಡಿ ಸಮರ್ಪಕ ವಿಧಾನಗಳನ್ನು ಸೂಚಿಸುವುದು ಯುಕ್ತವಿದೆ. ಈ ಎರಡೂ ಖಾತೆಗಳು ಪರಸ್ಪರ ಸಹಕರಿಸುವುದಗತ್ಯ.

2ರಿಂದ 5 ವರ್ಷದ ಮಕ್ಕಳ ಶಿಕ್ಷಣಕ್ಕೆ ಭಾರತದಲ್ಲಿ ವಿಶೇಷ ಗಮನ ಕೊಡಬೇಕು. ನಮ್ಮ ದೇಶದ ಐಕ್ಯತೆಗೆ ದೊಡ್ಡದೊಂದು ತೊಡಕಿನಂತಿರುವ ಜಾತೀಯ ಪ್ರವೃತ್ತಿಯನ್ನು ಬಗೆಹರಿಸಲು ಮಕ್ಕಳಲ್ಲಿ ಚಿಕ್ಕಂದಿನಿಂದ ಸಮಾನತೆಯ ಮನೋಭಾವವನ್ನುಂಟುಮಾಡುವುದು ಅತ್ಯಾವಶ್ಯಕ. ಮಾತ್ರವಲ್ಲ ಮಕ್ಕಳನ್ನು ಯೋಗ್ಯ ರೀತಿಯಲ್ಲಿ ಬೆಳೆಸುವ ವಿಧಾನವು ನಮ್ಮ ತಾಯಂದಿರಿಗೆ ತಿಳಿದಿರುವುದಿಲ್ಲ. ಚಿಕ್ಕ ಪ್ರಾಯದ ಮಕ್ಕಳಲ್ಲಿ ಸ್ಥಿರಗೊಂಡ ಭಾವಗಳು ಕೊನೆತನಕವಿರುವವು. ಎಂಬ ಸಂಗತಿಯು ಮಹತ್ವದ್ದು. ನಂತರದ ಯಾವ ದೆಸೆಯಲ್ಲಿಯೂ ಆ ಸ್ಥಿರತೆಯನ್ನುಂಟುಮಾಡಲಿಕ್ಕಾಗುವುದಿಲ್ಲ. ಆದುದರಿಂದ ಶಿಶು ಶಿಕ್ಷಣವು ಸರಕಾರದ ಹೊಣೆಗಾರಿಕೆಯಾಗಿರತಕ್ಕದ್ದು. ಅದಕ್ಕೆ ತಗಲುವ ಖರ್ಚನ್ನು ಸುಖಲೋಲುಪ್ತತೆಯ ದುಂದುಗಾರಿಕೆಯೆಂದು ತಿಳಿಯಬಾರದು. ಹಳ್ಳಿ ಮಕ್ಕಳನ್ನು ಇದೇ ಯೋಜನೆಯೊಳಗೆ ತರಬೇಕು. ಸರಕಾರವು ಸಾರ್ವತ್ರಿಕ ಶಿಶು ಶಿಕ್ಷಣದ ಪದ್ಧತಿಯನ್ನು ಜಾರಿಗೆ ತರಬೇಕು. ಈ ಕುರಿತಾಗುವ ಖರ್ಚಿಗಾಗಿ ಜನಾಂಗವು ಹೊಸ ತೆರಿಗೆಯನ್ನು ಸಂತೋಷದಿಂದ ಹೊರಲು ಸಿದ್ಧವಿರಬೇಕು.

ಪ್ರಾಥಮಿಕ ಮೂಲ ಶಿಕ್ಷಣ

5ರಿಂದ 15ವರ್ಷಗಳ ತನಕ ಧರ್ಮಾರ್ಥವೂ ಕಡ್ಡಾಯವೂ ಆದ ಪ್ರಾಥಮಿಕ ಶಿಕ್ಷಣವು ಇಡೀ ದೇಶದಲ್ಲಿ ಕೂಡಲೇ ಜಾರಿಗೆ ತರಬೇಕು. ಈ ಶಿಕ್ಷಣವು ಯಾವುದಾದರೂ ಕೈಗಾರಿಕೆಯ ಮೂಲಕ ಕೊಡಲ್ಪಡಬೇಕು. ಕೊನೆಯ ಎರಡು ಮೂರು ವರ್ಷಗಳಲ್ಲಿ ವಿದ್ಯಾರ್ಥಿಗಳನ್ನು ಸ್ವಸಂಪಾದನೆ ಮಾಡಲು ಯೋಗ್ಯರಾಗುವಂತೆ ಕೈಗಾರಿಕೆಯಲ್ಲಿ ತರಬೇತು ಕೊಳಿಸಬೇಕು. ನಾಗರಿಕತೆಯಿಂದಿದ್ದ ಆಧುನಿಕ ಜನಾಂಗವೊಂದು [illegible] ಯೋಜನೆಯನ್ನು ನಿರ್ವಹಿಸಲೇಬೇಕು. [illegible] ಯೋಜನೆಯು ಪ್ರಾಥಮಿಕ [illegible] ಅದನ್ನು [illegible] ಪರಿ[illegible] ಗಡುತರವಾದ ತೊಡಕುಗಳು ಬರುವುದು ಸಹಜವಾದುದು. ಆದರೆ ಅವನ್ನು ಧೀರೋದಾತ್ತ ಜನಾಂಗದವರಾದ ನಾವು ಧೈರ್ಯದಿಂದೆದುರಿಸಬೇಕು. ಪ್ರಾರಂಭದಲ್ಲಿ ಪರಿಪೂರ್ಣ ಸ್ಥಿತಿಯನ್ನೇ ನಿರೀಕ್ಷಿಸುವುದು ಯುಕ್ತವಲ್ಲ. ನಮ್ಮ ಬಳಿಯಿರುವ ವಸ್ತು ಒಡವೆಗಳಿಂದ, ನಾವು ಜನಾಂಗ ವಿಶಾಲವಾಗಿ ಈ ಯೋಜನೆಯನ್ನು ಪ್ರಾರಂಭಿಸಿ ಕ್ರಮೇಣ ನಮ್ಮ ಗುರಿಯನ್ನು ಉನ್ನತೋನ್ನತ ಮಟ್ಟಕ್ಕೇರಿಸಲು ಪ್ರಯತ್ನಿಸಬೇಕು.

ಕಡ್ಡಾಯದ ಪ್ರಾಥಮಿಕ ಶಿಕ್ಷಣವನ್ನು ಪರಿಪೂರ್ಣತೆಗೆ ಮುಟ್ಟಿಸಲು ಇಂಗ್ಲೆಂಡಿಗೆ ಒಂದು ತಲಾಂತರ ಹಿಡಿಯಿತು. ಅಮೇರಿಕವು ಅರ್ಧ ಶತಮಾನದ ನಂತರ ತೃಪ್ತಿಕರ ಫಲವನ್ನು ಪಡೆಯಿತು. ಇಷ್ಟಾದರೂ ಅಮೇರಿಕದಲ್ಲಿ ಇನ್ನೂ ವಿಶಾಲ ಸಂಖ್ಯೆಯ ಬಾಲಕರು ಕಡ್ಡಾಯ ಶಿಕ್ಷಣ ಕ್ರಮದಿಂದ ತಪ್ಪಿಸಿಕೊಂಡವರಿದ್ದಾರೆ ಇಷ್ಟೆಂದ ಮಾತ್ರಕ್ಕೆ ನಾವು ನಮ್ಮ ಕಷ್ಟಗಳನ್ನು ಬೃಹತ್ಕರಿಸುವುದಶ್ಯವಿಲ್ಲ. ತೆರಿಗೆ ಮೂಲಕ ಧನ ಸಂಗ್ರಹವಾಗದಿದ್ದರೆ ರಾಷ್ಟ್ರೀಯ ಸಾಲದ ಮೂಲಕ ಕಾರ್ಯನಿರ್ವಹಿಸಬೇಕು. ಹೇರಳ ಸಂಖ್ಯೆಯಲ್ಲಿ ಉಪಾಧ್ಯಾಯರನ್ನು ತರಬೇತುಗೊಳಿಸಬೇಕು. ಕಡ್ಡಾಯ ಶಿಕ್ಷಣದ ನೀತಿ ನಿಯಮಾವಳಿಗಳನ್ನು ಹಳ್ಳಿ ಕಡೆಗಳಲ್ಲಿ ಪ್ರಚಾರ ಮಾಡಲು ಪತ್ರಿಕೆಗಳ, ಪೇಟೆ ವಿದ್ಯಾರ್ಥಿಗಳ, ಸರಕಾರಿ ನೌಕರರ, ರೇಡಿಯೊ ಸಿನೇಮಾಗಳ ಸಹಾಯವನ್ನು ಪಡೆಯಬೇಕು.

ಕಡ್ಡಾಯ ಶಿಕ್ಷಣ ಖಾತೆಗಾಗಿ ವಿಶೇಷ ತರಬೇತಿಯ ಅಧಿಕಾರಿಗಳನ್ನು ಸಿದ್ಧಗೊಳಿಸಬೇಕು. ಸಾವಿರಾರು ವರ್ಷಗಳಿಂದ ಪೂಜಾಮಂದಿರಗಳಿಗೆ ಪ್ರವೇಶವಿಲ್ಲದವರಿಗೆ ಪ್ರವೇಶ ಸಿಗುವಂತೆ ಶಾಸನಗಳನ್ನು ಒಂದೇ ದಿನದಲ್ಲಿ ಮಂಜೂರು ಮಾಡಿದ ಜನರು ಅದಕ್ಕಿಂತಲೂ ಮಹತ್ವದ ಈ ವಿಚಾರಕ್ಕೆ ಹೆಚ್ಚಿನ ಗಮನವನ್ನು ಕೊಡುವರೆಂದು ಹಾರೈಸಬಹುದು.

ಹ್ಯಾಸ್ಕೂಲ್ ವಿದ್ಯಾಭ್ಯಾಸ

ನಮ್ಮ ಈಗಿನ ಹ್ಯಾಸ್ಕೂಲ್ ವಿದ್ಯಾಭ್ಯಾಸವು ಕೇವಲ ಪಠ್ಯಪುಸ್ತಕ ಪ್ರಧಾನವಾದುದು. ಅದು ಹೆಚ್ಚಾಗಿ ಬೌಧಿಕವಾಗಿದ್ದು ಸಾಂಸ್ಕೃತಿಕ ಉದ್ದೇಶದ್ದೆಂದು ಹೇಳಲ್ಪಡುತ್ತದೆ, ಸಂಸ್ಕೃತಿಯೆಂದರೆ ಒಂದು ಮುಂದುವರಿಯುತ್ತಿರುವ ಮಾನಸಿಕ ಸಂಸ್ಕಾರ. ಅದು ಶಾಲೆಯಲ್ಲಿ ಅಲ್ಲ ಜೀವನಾಂತ್ಯದ ತನಕ ಪ್ರತ್ಯಕ್ಷ ವ್ಯವಹಾರದಿಂದ ಅನುಭವಕ್ಕೆ ಬರುತ್ತದೆ. ಎಂಬೀ ಸಂಗತಿಯನ್ನು ನಾವು ವಿವೇಚಿಸಿದರೆ ಸಾಂಸ್ಕೃತಿಕ ಶಿಕ್ಷಣದೊಂದಿಗೆ ಕ್ರಿಯಾತ್ಮಕವಾದ ಕೈಗಾರಿಕೆಯ ಶಿಕ್ಷಣಕ್ಕೂ ಯೋಗ್ಯ ಸ್ಥಾನ ಸಿಗಬೇಕಾದುದು ಅತ್ಯಾವಶ್ಯಕವೆಂದು ತಜ್ಞರು ಅಭಿಪ್ರಾಯ ಪಡಹತ್ತಿರುವರು. ಜನ್ಮಾರಂಭದಿಂದ ಜೀವನಾಂತ್ಯದವರೆಗೆ ಶಿಕ್ಷಣವೆಂದು ನಮ್ಮ ಉದ್ದೇಶವಿರಬೇಕು.

ಬುದ್ಧಿಪುರಸ್ಕರವಾಗಿ ಒಂದು ಕಾಮಗಾರಿಕೆಯನ್ನು ಕಲಿಯುವಾಗ ಹೊಂದುವ ಸಾಂಸ್ಕೃತಿಕ ದೀಕ್ಷೆಯು ಇನ್ನಿತರ ತಾತ್ವಿಕ ಶಿಕ್ಷಣಗಿಂತ ಎಷ್ಟೋ ಶ್ರೇಷ್ಠವಾದುದು. ಇದರಲ್ಲಿ ಕಿವಿ, ಕಣ್ಣು, ಮನಸ್ಸು, ಕೈಕಾಲುಗಳೇ ಮೊದಲಾದ ಇಂದ್ರಿಯಗಳನ್ನೂ, ಕ್ರಿಯಾಂಗಗಳನ್ನು ಉಪಯೋಗಿಸಿ ವ್ಯಕ್ತಿಯ ಸರ್ವತೋಮುಖ ತಜ್ಞತೆಗೆ ಸಂದರ್ಭವುಂಟಾಗುವುದು ಮಾತ್ರವಲ್ಲ ಗಣಿತ, ಕಲೆ, ವಿಜ್ಞಾನ, ಅರ್ಥಶಾಸ್ತ್ರಾದಿಗಳ ಪರಸ್ಪರ ಸಂಯೋಗವೂ ಉಂಟಾಗುವುದು. ಇದರೊಂದಿಗೆ ಮೂಲ ಕೈಗಾರಿಕೆಯು ಶಿಕ್ಷ ಮತ್ತು ಆರ್ಥಿಕ ಇತಿಹಾಸವನ್ನು, ಅದರ ಭೌಗೋಲಿಕ ಸಂಬಂಧವನ್ನು ಕಲಿತರೆ ಪರಿಣಾಮಕಾರಿಯಾದ ಸಾಂಸ್ಕೃತಿಕ ಶಿಕ್ಷಣವು ಪರಿಪೂರ್ಣವೆನಿಸುವುದು. ಇದರ ಜೊತೆಯಲ್ಲೇ ಕೈಗಾರಿಕೆ ಮತ್ತು ಕೃಷಿಗಾರಿಕೆಯ ಕೇಂದ್ರಗಳಿಗೆಮೇಲಿಂದ ಮೇಲೆ ಸಂಚಾರ ಸಂದರ್ಶನಗಳಿಗೆ ವಿಹಾರ ಕೂಟಗಳಾಗಿ ಹೋಗುವುದರಿಂದ ಶಿಕ್ಷಣದ ಗುರಿಯು ಸಂಪೂರ್ಣಗೊಳ್ಳುವುದು.

ವಿಶ್ವವಿದ್ಯಾಲಯ ಶಿಕ್ಷಣ

ಇಂದು ನಮ್ಮಲ್ಲಿನ ವಿಶ್ವವಿದ್ಯಾಲಯಗಳ ನಗರ ಪ್ರಧಾನವಾದುವು. ನಗರ ಜೀವನದಾವಶ್ಯಕತೆಗಳನ್ನು ಪೂರೈಸುವುದು ಇಂದವುಗಳ ಧ್ಯೇಯವಾಗಿದೆ. ಆದರೆ ನಮ್ಮಲ್ಲಿನ ನಗರ ವಾಸಿಗಳ ಸಂಖ್ಯೆ ಕೇವಲ ಶೇಕಡಾ 15ರಷ್ಟು. ಬಹುಸಂಖ್ಯಾತ ಜನತೆಯೊಡನೆ ಸಂಪರ್ಕವಿಲ್ಲದೆ ಈ ವಿಶ್ವವಿದ್ಯಾಲಯಗಳ ಜ್ಞಾನಾನುಭವವೂ ವೃದ್ಧಿಯಾಗುವುದಿಲ್ಲ. ನಮ್ಮ ದೇಶದ 40 ಕೋಟಿ ಜನಸಂಖ್ಯೆಗೆ ನಮ್ಮಲ್ಲಿಯ ವಿಶ್ವವಿದ್ಯಾಲಯಗಳು ಅತ್ಯಲ್ಪ ದಾಮಾಶಯದಲ್ಲಿವೆ. 1957ರಲ್ಲಿ ನಮ್ಮ ಜನಸಂಖ್ಯೆ 45 ಕೋಟಿಗಳಷ್ಟಾಗಬಹುದು. 19 ಕೋಟಿ ಜನಸಂಖ್ಯೆಯಿರುವ ರಷ್ಯಾದಲ್ಲಿ 806 ವಿಶ್ವವಿದ್ಯಾಲಯಗಳಿವೆ. 14 ಕೋಟಿ ಜನಸಂಖ್ಯೆಯ ಅಮೇರಿಕದಲ್ಲಿ ಪದವಿಯನ್ನು ಕೊಡುವ ಅಂತಹ 1750 ಸಂಸ್ಥೆಗಳಿವೆಯೆಂದರೆ ಕೌತುಕದ ಸಂಗತಿ. ಕೆನಡದ 1 ಕೋಟಿ ಜನಸಂಖ್ಯೆಗೆ 21 ವಿಶ್ವವಿದ್ಯಾಲಯಗಳಿವೆ. ಆದರೆ 40 ಕೋಟಿಯ ಭಾರತದಲ್ಲಿ ಕೇವಲ 20 ವಿಶ್ವವಿದ್ಯಾಲಯಗಳಿರುವುದೆಂದರೆ ನಮ್ಮ ದೇಶದ ಶಿಕ್ಷಣ ದುರ್ದೆಶೆ ಅದೆಷ್ಟಿರುವುದೆಂಬುದನ್ನು ಊಹಿಸಬಹುದು.

ಮುಂದಿನ ಸಂಯುಕ್ತ ಭಾರತದ ಕೇಂದ್ರ ಸರಕಾರವು ಗ್ರಾಮ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿ ಉನ್ನತ ಶಿಕ್ಷಣದ ಸ್ಥಿತಿಯನ್ನು ಸುಧಾರಿಸಬೇಕು. ಈ ವಿಶ್ವವಿದ್ಯಾಲಯಗಳಲ್ಲಿ ಗ್ರಾಮೋದ್ಧಾರಕ್ಕೆ ಸಂಬಂಧಪಟ್ಟ ಎಲ್ಲಾ ತರಬೇತಿಯೂ ಕೊಡಲ್ಪಡಬೇಕು. ಈ ಕುರಿತು ಮಹಾತ್ಮಾಗಾಂಧಿಯವರು ತಾ. 13 10-46ರ ಹರಿಜನದಲ್ಲಿ ಹೀಗೆ ಬರೆದಿದ್ದರು:

ಕೇಂದ್ರ ಮತ್ತು ಪ್ರಾಂತಿಕ ಮಂತ್ರಿಮಂಡಳಗಳು ಗ್ರಾಮ ವಿಶ್ವವಿದ್ಯಾಲಯದ ಈ ಯೋಜನೆಯನ್ನು ಮನಃಪೂರ್ವಕವಾಗಿ ತಮ್ಮದನ್ನಾಗಿ ಮಾಡಿಕೊಂಡರೆ ಅತ್ಯಂತ ಫಲಕಾರಿಯಾಗುವುದು."

ಪ್ರತಿ ಹತ್ತತ್ತು ಲಕ್ಷ ಜನರಿಗೊಂದರಂತೆ ಇಂತಹ ವಿಶ್ವವಿದ್ಯಾಲಯವನ್ನು ಸ್ಥಾಪಿಸಬೇಕೆಂದು ಡಾ। ಕಿಣಿಯವರ ಅಭಿಪ್ರಾಯ.

ESTD. 1906.

CANARA BANK, LIMITED.

(Incorporated in British India with Limited Liability)

(PROGRESS STATEMENT CORRECT TO THOUSANDS OF RUPEES)

LIABILITIES	1945	1946	ASSETS	1945	1946
Capital Subscribed	29,00,000	29,00,000	Cash	1,01,91,000	1,16,16,000
Capital paid up	28,43,000	28,80,000	Govt. Securities	1,80,45,000	2,75,61,000
Reserve	11,00,000	11,00,000	Advances to customers	1,56,87,000	2,01,38,000
Deposits	3,50,43,000	4,60,40,000	Bills for collection and Foreign Bills negotiated	20,56,000	34,23,000
Due to Bankers	26,91,000	69,57,000	Landed Properties	28,000	5,600
Call Deposits from Bankers	8,00,000	15,00,000	Bank Premises and Furniture and Fixtures	1,46,000	1,47,000
Branch Adjustments	22,07,000	21,09,000	Other Assets	10,25,000	16,23,000
Bills for collection and foreign bills negotiated	20,56,000	34,23,000			
Other Liabilities	77,000	85,000			
Profit for the year	3,61,000	4,19,000			
Rs.	4,71,78,000	6,45,13,000	Rs.	4,71,78,000	6,45,13,000

ಕೋಮು ಕಲಹಕ್ಕೆ ಮುಸ್ಲಿಂ ಲೀಗ್ ಕಾರಣ

ಬ್ರಿಟಿಷ್ ಸೇನಾಧಿಕಾರಿಯ ಆರೋಪ

ಘಟನಾ ಸಮಿತಿಗೆ ಅಧಿಕಾರ ಬಿಟ್ಟುಕೊಡಿರಿ

ಇಂಗ್ಲೆಂಡಿನ ಡೈಲಿ ಟೆಲಿಗ್ರಾಫ್ ಎಂಬ ಪತ್ರಿಕೆಯಲ್ಲಿ ಕಟುವಾದ ಶ್ರೇಣಿಯನ್ನೊಳಗೊಂಡ ಲೇಖನವೊಂದನ್ನು ಬರೆಯುತ್ತ ಮೇಜರ್ ಜನರಲ್ ಸರ್ ಡಶ್‌ವುಡ್ ಸ್ಟೈಟೆಲ್ ಎಂಬ ಭಾರತದಲ್ಲಿನ ನಿವೃತ್ತ ಬ್ರಿಟಿಷ್ ಸೇನಾಧಿಪತಿಗಳು ಇತ್ತೀಚೆಗಿನ ಇಲ್ಲಿಯ ಕೋಮುವಾರು ದಂಗೆಗೆ ಮುಸ್ಲಿಂ ಲೀಗಿನ ಧೋರಣೆಯೇ ಕಾರಣವೆಂದು ತರ್ಕಿಸಿದ್ದಾರೆ.

ಮೇಜರ್ ಜನರಲ್ ಸ್ಟೈಟೆಲ್ ಅವರು 44 ವರ್ಷ ಭಾರತ ಸೈನ್ಯದಲ್ಲಿ ದುಡಿದಿದ್ದಾರೆ. ಅವರ ಕುಟುಂಬದವರು ನಾಲ್ಕು ತಲಾಂತರಗಳಿಂದ ಭಾರತದೊಂದಿಗೆ ಸಂಪರ್ಕವಿದ್ದವರು. ಅವರು ಹೀಗೆ ಬರೆಯುತ್ತಾರೆ:

ನಾನು ಕೊಂಗ್ರೆಸಿನ ಪರವಾಗಿ ವಕಾಲತು ವಹಿಸಲಿಚ್ಛಿಸುವುದಿಲ್ಲ. ಅದರ ಅನೇಕ ಧೋರಣೆಗಳೂ, ಅದರ ಮುಖಂಡರನೇಕರ ಹೇಳಿಕೆಗಳೂ ನನಗೆ ಅತೃಪ್ತಿಯನ್ನೂ ಖೇದವನ್ನೂ ಉಂಟುಮಾಡಿವೆ. ಆದರೆ ಕೊಂಗ್ರೆಸು ಸಿಸ್ಸಂಕೋಚದಿಂದ ಸಂಯುಕ್ತ ಭಾರತದ ಕೇಳಿಕೆಯನ್ನು ಮಂಡಿಸಿರುವುದು ಶ್ಲಾಘನೀಯ. ಭಾರತವು ಸಮಗ್ರವಾಗಿ ಐಕ್ಯವಾಗಿರುವುದು ಶ್ರೇಯಸ್ಕರ. ವಿಚ್ಛೇದಿಸಲ್ಪಟ್ಟ ಭಾರತವು ಪರಕೀಯ ಆಕ್ರಮಣಗಾರರ ಕೊಳ್ಳೆಯಾಗಿ ಅರಾಜಕತೆ ಅಶಾಂತಿಗಳ ನೆಲೆಯಾಗುವುದು ಖಂಡಿತ.

ಜಿನ್ನರ ದೋಷ

ಅಲ್ಪ ಸಂಖ್ಯಾಕರ ಹಿತರಕ್ಷಣೆಯ ನಮ್ಮ ನಮ್ಮ ಆಸಕ್ತಿಯಲ್ಲಿ ನಾವು ಮುಸ್ಲಿಂ ಲೀಗಿಗೆ ಅನಾವಶ್ಯಕವಾದ ಪ್ರಾಮುಖ್ಯತೆಯನ್ನು ಕೊಟ್ಟಿರುತ್ತೇವೆ. ನಿಜವಾಗಿ ನೋಡಹೋದರೆ ಲೀಗ್ ಮತ್ತದರ ಮುಖಂಡರಾದ ಮಿ। ಜಿನ್ನರು ಭಾರತದಲ್ಲಿನ ಇತ್ತೀಚೆಗಿನ ಎಲ್ಲಾ ಹತ್ಯಾಕಾಂಡಗಳಿಗೆ ಮುಖ್ಯ ಕಾರಣ ಭೂತರಾಗಿರುವರು. ಅವರ 'ಡೈರೆಕ್ಟ್ ಏಕ್ಷನ್' ಕಾರ್ಯಕ್ರಮವು ಕಲ್ಕತ್ತೆಯ ದಂಗೆಯ ಹೇತುವಾಗಿ ನಂತರ ಕ್ರಮಶಃ ಪೂರ್ವ ಬಂಗಾಲದಲ್ಲಿ ಅದು ಬಲಿತು, ಬಿಹಾರದಲ್ಲಿ ಅದರ ಪ್ರತೀಕಾರ ರೂಪ ಕಾಣಿಸಿಕೊಳ್ಳುವಂತಾಯಿತು.

ಪಂಜಾಬದಲ್ಲಿ ಮೆರವಣಿಗೆಗಳ ಮೇಲೆ ಹಾಕಿದ ಪ್ರತಿಬಂಧಕವನ್ನು ಲೀಗಿನವರು ಮುರಿಯಲೆತ್ನಿಸಿದುದರಿಂದ ಅಲ್ಲಿಯೂ ಗಲಭೆಯುಂಟಾಯಿತು. ನೆಹುರುಗಳಂತೆ ಮಿ। ಜಿನ್ನರು ತಮ್ಮ ಅನುಯಾಯಿಗಳನ್ನು ಸಮಾಧಾಯಿಸಲು ಗಲಭೆಯ ಪ್ರದೇಶಗಳಿಗೆ ಹೋಗಲಿಲ್ಲ. ಹೊತ್ತು ಮೀರಿದ ನಂತರ ಜಿನ್ನರು ಕೆಲವೊಂದು ಅರೆಮನಸ್ಸಿನ ಶಾಂತಿ ಪ್ರದೇಶಕ ಪ್ರಕಟಣೆಗಳನ್ನು ಹೊರಡಿಸಿರುವರು.

ಅನಾವಶ್ಯಕ ತಿಕ್ಕಾಟ

ಮುಸ್ಲಿಂ ಹಿತಗಳನ್ನು ರಕ್ಷಿಸುವುದಕ್ಕಾಗಿ ಜಿನ್ನರು ತಮ್ಮ ಪ್ರತಿನಿಧಿಗಳನ್ನು ನಡುಗಾಲ ಸರಕಾರದಲ್ಲಿ ಸೇರಬಿಟ್ಟರು. ಆದರೆ ಇವರ ಮಂತ್ರಿಗಳು ಸಂಯುಕ್ತ ಮಂತ್ರಿಮಂಡಳದ ಹೊಣೆಗಾರಿಕೆಯನ್ನು ಒಪ್ಪಿಕೊಳ್ಳದೆ ಸ್ವತಂತ್ರವಾಗಿ ವರ್ತಿಸಹತ್ತಿದರು. ಇವೆಲ್ಲ ಕುತಂತ್ರಗಳು ಅನಾವಶ್ಯಕವೇ ಸರಿ. ಕಾರಣ ಕೊಂಗ್ರೆಸು ಮುಸಲ್ಮಾನ ಬಹುಸಂಖ್ಯಾಕ ಪ್ರಾಂತಗಳಿಗೆ ಶೇಕಡಾ 95ರಷ್ಟು ಸ್ವಾತಂತ್ರ್ಯ ಕೊಡುವ ಮತ್ತು ನಡುಗಾಲ ಸರಕಾರದಲ್ಲಿ ಮುಸ್ಲಿಂ ಸಂಬಂಧ ಶಾಸನವನ್ನು ಮಾಡುವಾಗ ಮುಸಲ್ಮಾನ ಸದಸ್ಯರ ಬಹುಮತವಿರಬೇಕೆಂಬ ತತ್ವವನ್ನು ಒಪ್ಪಿಕೊಂಡಿದೆ. ಕೇಂದ್ರ ಸರಕಾರಕ್ಕೆ ಅತ್ಯಲ್ಪ ವಿಷಯಗಳ ಕುರಿತು ಮಾತ್ರ ಅಧಿಕಾರ ಕೊಟ್ಟರೆ ಸಾಕೆಂದು ಅದು ತಿಳಿಸಿದೆ.

ತಾವು ಬಿಟ್ಟುಹೋಗುವ ಅವಧಿಯ ನಿರ್ದಿಷ್ಟ ತಾರೀಕನ್ನು ಬ್ರಿಟಿಷ್ ಸರಕಾರದವರು ನಮೂದಿಸಿದ್ದು ಮಾನಸಿಕವಾಗಿ ಯಥಾರ್ಥವಾದುದು. ಆದರೆ ಅಧಿಕಾರವನ್ನು ಹಂಚಿಹೋಗುವ ವಿಧಾನವು ಲೀಗಿನ ಹಟಮಾರಿತನಕ್ಕೆ ಪ್ರೋತ್ಸಾಹ ಕೊಡುವಂತಹುದಾಗಿದೆ.

ಈ ಬಿಕ್ಕಟ್ಟನ್ನು ಬಿಡಿಸುವ ಒಂದೇ ಉಪಾಯವೆಂದರೆ: ಅಧಿಕಾರವನ್ನು ಘಟನಾ ಸಮಿತಿಯು ಚುನಾಯಿಸಿದ ಮಂಡಳಿಗೆ ಬಿಟ್ಟುಬಿಡುವುದಾಗಿ ಸಾರಿದರೆಂದರೆ ಲೀಗು ಆ ಸಮಿತಿಗೆ ಒತ್ತಾಯಪೂರ್ವಕವಾಗಿ ಸೇರಬೇಕಾಗುವುದು.

ಮದುವೆ ಮತ್ತಿತರ ಸಾಮಾಜಿಕ ವಿವಾದಗಳಲ್ಲಿ ಭಾಗವಹಿಸುವ ತರುಣ ಸ್ತ್ರೀಯರ ಕಷ್ಟಗಳನ್ನು ವಿಚಾರಣೆ ಮಾಡಲು ಕುರುಡ ನ್ಯಾಯಾಧೀಶರನ್ನೇ ನೇಮಿಸುವುದೊಳಿತೆಂದು ಸರ್ ಜಾನ್ ಫ್ರೇಸರ್ ಎಂಬ ಪಾರ್ಲಿಮೆಂಟ್ ಸದಸ್ಯರು ಒಂದು ವರದಿಯಲ್ಲಿ ಶಿಫಾರಸು ಮಾಡುತ್ತಾರೆ. ಸುಂದರ ಸ್ತ್ರೀಯರನ್ನು ನೋಡಿ ಅವರು ಹೇಳುವುದು ಸತ್ಯವೆಂದು ತಿಳಕೊಳ್ಳುವ ಭಾವನೆ ಕಣ್ಣಿದ್ದ ಅನೇಕ ಮೇಜಿಸ್ಟ್ರೇಟರಲ್ಲುಂಟಾಗುವುದೆಂದು ಅವರ ಆಕ್ಷೇಪ.

ವಿವಾಹ ವಿಚ್ಛೇದನ ಮತ್ತು ಪುನರ್ವಿವಾಹದ ಸಮಸ್ಯೆ

ಶಾಸ್ತ್ರಗಳೇನು ನಿರ್ದೇಶಿಸಿವೆ?

ಏಕಪತ್ನಿತ್ವ ಮತ್ತು ಬಹುಪತ್ನಿತ್ವದ ಕುರಿತು ಈಗ ನಮ್ಮ ದೇಶದಲ್ಲಿ ಪರಿತಪಿತ ವಾಗ್ವಾದವು ನಡೆಯುತ್ತಿದೆ. ಗಂಡಂದಿರನ್ನು ಸರಿದೋರಿದಾಗ ಬಿಡುವ ಹಕ್ಕು ತಮಗಿರಬೇಕೆಂದು ಹಿಂದೂ ಮಹಿಳಾ ವರ್ಗದಲ್ಲಿ ಬಹಳ ಆಂದೋಲನ ನಡೆಯುತ್ತಿದೆ. ಈ ಸುದ್ದಿಯನ್ನು ಕೇಳುವಾಗ ಕಟ್ಟಾಚಾರದವರು ಬೆರಗಿನಿಂದ ಬಾಯ್ಬಿಡುವರು. ಸಾಮಾಜಿಕ ಸುಧಾರಕರು ಸ್ತ್ರೀಯರ ಈ ಹಕ್ಕುಬಾಧ್ಯತೆಗಳು ನ್ಯಾಯವಾದುದೆಂದು ಒಪ್ಪುತ್ತಾರೆ. ಇದರಿಂದ ಹಿಂದೂತ್ವಕ್ಕೆ ಹಾನಿಯಾಗುತ್ತದೆಂದು ನಾವು ಮನಸ್ತಾಪ ಕಟ್ಟಿಕೊಳ್ಳುವುದವಶ್ಯವಿಲ್ಲ; ಸಂಭವಿಸುವುದೆಲ್ಲ ಸಂಭವಿಸಿಯೇ ತೀರುವುದು. ಅಸಂಭವವು ಎಂದೆಂದಿಗೂ ಅಸಂಭವವೇ ಆಗಿರುತ್ತದೆ. ಹೇಗೂ ಹಿಂದೂತ್ವವು ಈ ವಿಷಯ ತನ್ನ ರಕ್ಷಣೆಯನ್ನು ತಾನೇ ಮಾಡಿಕೊಳ್ಳಬಲ್ಲುದು.

ಒತ್ತಾಯದ ವಿವಾಹಗಳು

ನಮ್ಮ ಸ್ಮೃತಿ ಶಾಸ್ತ್ರಗಳು ಸ್ತ್ರೀಯರ ವಿವಾಹ ವಿಚ್ಛೇದಕ್ಕೂ ಪುನರ್ವಿವಾಹಕ್ಕೂ ಸಮ್ಮತಿಯಿತ್ತಿವೆಯೋ ಎಂಬ ಪ್ರಶ್ನೆಯನ್ನು ಪರಿಶೀಲಿಸೋಣ. ನಮ್ಮ ಪ್ರಾಚೀನ ಸಮಾಜ ಸೂತ್ರ ನಿರ್ಮಾಪಕರು ಏನೆಂದಿದ್ದಾರೆಂದು ನೋಡೋಣ: ವ್ಯಾಘ್ರಪಾದನು ಹೀಗೆನ್ನುತ್ತಾನೆ:

ಕಲಿಯುಗದಲ್ಲಿ ಕೂಡಾ ಹೆಂಡತಿ ಸತ್ತೊಡನೆ ಪುರುಷನೊಬ್ಬನು ಪುನರ್ವಿವಾಹಮಾಡಿಕೊಳ್ಳುವಂತೆ ಗಂಡ ಸತ್ತೊಡನೆ ಸ್ತ್ರೀಯು ಮತ್ತೊಂದು ವಿವಾಹ ಮಾಡಿಕೊಳ್ಳಲೇಬೇಕು.

ತನ್ನ ಸ್ವಂತ ಇಚ್ಛೆಗೆ ವಿರೋಧವಾಗಿ ಬಲಾತ್ಕಾರದಿಂದೆಂಬಂತೆ ಒಬ್ಬನಿಗೆ ವಿವಾಹ ಮಾಡಲ್ಪಟ್ಟ ಸ್ತ್ರೀಯನ್ನು ಮತ್ತೊಬ್ಬನಿಗೆ ಲಗ್ನಮಾಡಿಸಬಹುದೆಂದು ಯಾಜ್ಞವಲ್ಕ್ಯನು ತಿಳಿಸುತ್ತಾನೆ.

ನಪುಂಸಕನಾದಾಗ

ಗಂಡನು ಬೇರೆ ಜಾತಿಯವನೂ, ನಪುಂಸಕನೂ, ಗುಲಾಮನೂ ಮತಾಚಾರವಿಲ್ಲದವನೂ ಆದಾಗ ಅವನನ್ನು ವರಿಸಿದ ಸ್ತ್ರೀಯನ್ನು ಇನ್ನೊಬ್ಬ ಪುರುಷನಿಗೆ ಪಾಣಿಗ್ರಹಣ ಮಾಡಿಕೊಡಬಹುದೆಂದೂ, ಗಂಡ ಸಾಯುವಾಗ ಹೆಂಡತಿಯು ಪ್ರಾಯಕ್ಕೆ ಬಂದಿರದಿದ್ದರೆ ಅವಳನ್ನು ಪುನರ್ವಿವಾಹಕ್ಕೊಳಮಾಡಬಹುದೆಂದು ಸಮಾಜ ಶಾಸನಕಾರರಾದ ಕಾತ್ಯಾಯನ ವಶಿಷ್ಠರು ಅಭಿಪ್ರಾಯಪಟ್ಟಿದ್ದಾರೆ.

ನಪುಂಸಕನಾಗಿದ್ದ ಗಂಡನನ್ನು ಬಿಟ್ಟು ಸ್ತ್ರೀಯು ಬೇರೊಬ್ಬ ಪತಿಯನ್ನು ಮಾಡಿಕೊಳ್ಳಬಹುದೆಂದು ನಾರದ, ಪ್ರಜಾಪತಿಗಳೆಂಬ ಸೂತ್ರಧಾರರು ಬರೆದಿದ್ದಾರೆ. ಅಗಸ್ತ್ಯನ ಅಭಿಪ್ರಾಯ ಪ್ರಕಾರ ಗಂಡನಿಂದ ಬೇರ್ಪಟ್ಟ ಪ್ರೌಢ ಸ್ತ್ರೀಯು ಪುನರ್ವಿವಾಹ ಮಾಡಿಕೊಳ್ಳಬಹುದೆಂದಿದೆ.

ಬಾಲ ವಿಧವೆಯರು

ಕೆಲವು ವರ್ಷಗಳಿಂದ ಪರದೇಶದಲ್ಲಿ ವಾಸಿಸಿಕೊಂಡಿರುವ ಗಂಡನನ್ನು ತ್ಯಜಿಸಿ ಪುನರ್ವಿವಾಹ ಮಾಡಿಕೊಳ್ಳುವುದಕ್ಕೂ ಶಾಸ್ತ್ರಾಧಾರವಿದೆ. ಸೂತ್ರಕಾರ ನಾರದನ ಅಭಿಪ್ರಾಯದಂತೆ ಓರ್ವ ಬ್ರಾಹ್ಮಣ ಸ್ತ್ರೀಯು ಇಂತಹ ಸಂದರ್ಭದಲ್ಲಿ 8 ವರ್ಷಗಳ ತನಕ ಕಾಯಬೇಕೆಂದಿದೆ; ಮಕ್ಕಳಾಗದಿದ್ದಲ್ಲಿ ಅವಳು ನಾಲ್ಕೇ ವರ್ಷಗಳ ನಂತರ ಪುನರ್ವಿವಾಹಮಾಡಿಕೊಳ್ಳಬಹುದು. ಇದೇ ರೀತಿ ಕ್ಷತ್ರಿಯ ಹೆಂಗುಸು ಆರು ಮತ್ತು ಮೂರು ವರ್ಷಗಳ ತನಕವೂ, ವೈಶ್ಯಸ್ತ್ರೀಯು ನಾಲ್ಕು ಮತ್ತು ಎರಡು ವರ್ಷಗಳ ತನಕವೂ ಕಾಯಬೇಕು. ಗಂಡನು ಜೀವಂತವಿರುವನಾದರೆ ಈ ಅವಧಿಯ ಇಮ್ಮಡಿ ಕಾಲ ಕಾಯಬೇಕು. ಎಲ್ಲಾ ಸೂತ್ರಕಾರರು ಬಾಲ ವಿಧವೆಯರು ಪುನರ್ವಿವಾಹಮಾಡಿಕೊಳ್ಳುವುದಕ್ಕೆ ಸಮ್ಮತಿ ಸೂಚಿಸಿದ್ದಾರೆ. ಯಾಜ್ಞವಲ್ಕ್ಯನು ಇನ್ನೂ ಮುಂದರಿದು ಹೆಂಗುಸು ಗರ್ಭಿಣಿಯಾಗುವ ತನಕ ಪುನರ್ವಿವಾಹಗಳನ್ನು ಮಾಡಿಕೊಳ್ಳಬಹುದೆಂದೂ ತಿಳಿಸಿರುತ್ತಾನೆ.

ಪ್ರಯಾಣಿಕರಿಗೆ ಸ್ಪೆಶಲು ಸರ್ವಿಸಿನ ಸೂಚನೆ.

ಮುಲ್ಕಿ, ಬಪ್ಪನಾಡು, ಪೊಳಲಿ ಇತ್ಯಾದಿ ಸ್ಥಳಗಳಲ್ಲಿ ಜರಗಲಿರುವ ಜಾತ್ರೆಯ ಸಮ್ಬಂಧ ಪ್ರಯಾಣಿಸುವ ಯಾತ್ರಿಕರ ಬಗ್ಗೆ ಸ್ಪೆಶಲು ಸರ್ವಿಸುಗಳನ್ನು ರನ್ ಮಾಡುವ ಏರ್ಪಾಡನ್ನು ಮಾಡಲಿಚ್ಛಿಸಿದ್ದಾಗ್ಯೂ ಪ್ರಕೃತ ಮೂರು ತಿಂಗಳಿಗೆ ಸಿಗಬೇಕಾದ ಪೆಟ್ರೋಲು ಕೋಟಾದಲ್ಲಿ ಕಡಿತವಾಗಿರುವುದರಿಂದ ಕೆಲವು ಬಸ್ಸುಗಳಿಗೆ ಪೆಟ್ರೋಲು ಸಾಕಾಗದೆ ಕೆಲವು ಸರ್ವಿಸುಗಳನ್ನು ತಾತ್ಕಾಲಿಕವಾಗಿ ನಿಲ್ಲಿಸುವ ಸಂದರ್ಭ ಬಂದೊದಗಿರುವುದರಿಂದಲೂ, ಮತ್ತು ಗೇಸು ಬಸ್ಸುಗಳು ಸಹ ಕಡಿಮೆ ಇದ್ದು ಅವುಗಳಿಂದ ದಿನವಹಿ ಸರ್ವಿಸುಗಳನ್ನು ರನ್ ಮಾಡಿಸಲ್ಪಟ್ಟನಂತರವೇ ಸಾಧ್ಯವಿದ್ದಲ್ಲಿ ಮಾತ್ರ ಸ್ಪೆಶಲು ಸರ್ವಿಸುಗಳನ್ನು ರನ್ ಮಾಡಬೇಕಾಗುತ್ತದೆ. ಅಲ್ಲದೆ ಕೋಸ್ಟಲ್ಲ್ಯಾಸಿನಲ್ಲಿ ಕೆಲವು ಕಡೆಗಳಲ್ಲಿ ಪೆಟ್ರೋಲು ಮತ್ತು ಕೆಲವು ಕಡೆಗಳಲ್ಲಿ ಗೇಸು ಬಸ್ಸುಗಳಿರುವುದರಿಂದ ಸಾಧ್ಯವಿದ್ದ ಸ್ಥಳದ ವರೇಗೆ ಮಾತ್ರ ಸ್ಪೆಶಲು ರನ್ ಮಾಡಬೇಕಾಗಿರುತ್ತದೆ. ಉದಾಹರಣೆಗಾಗಿ ಮಂಗ್ಳೂರು—ಮುಲ್ಕಿ ಲ್ಯಾಸಿನಲ್ಲಿ ಪಾವಂಜೆಯಿಂದ ಮುಲ್ಕಿಗೆ ಪೆಟ್ರೋಲು ಬಸ್ಸು ಮಾತ್ರ ರನ್ ಆಗುತ್ತಿರುವುದರಿಂದ, ಮುಲ್ಕಿ ರಥೋತ್ಸವ ಹಾಗೂ ಬಪ್ಪನಾಡು ಜಾತ್ರೆಯ ಸಮ್ಬಂಧ ಸ್ಪೆಶಲುಗಳನ್ನು ರನ್‌ಮಾಡುವ ಸಂದರ್ಭಗಳಲ್ಲಿ ಗೇಸು ಬಸ್ಸುಗಳ ಅನುಕೂಲತೆ ನೋಡಿ ಪಾವಂಜೆ ತನಕ ಮಾತ್ರ ಸ್ಪೆಶಲುಗಳನ್ನು ರನ್ ಮಾಡಲಾಗುವುದು. ಆದಕಾರಣ ಜಾತ್ರೆಯ ಬಗ್ಗೆ ಪ್ರಯಾಣಿಸಲಿಚ್ಛಿಸುವ ಯಾತ್ರಿಕರು ಸ್ಪೆಶಲ್ ಸರ್ವಿಸು ರನ್ ಆಗಬಹುದೆಂಬ ಹೆಚ್ಚಿನ ಭರವಸೆ ಇಡದೆ ಸೀಟು ಇದ್ದ ಹಾಗೆ ನಮ್ಮ ದಿನವಹಿ ಸರ್ವಿಸುಗಳಲ್ಲಿ ಪ್ರಯಾಣಿಸಬೇಕಾಗಿ ಅಪೇಕ್ಷಿಸುತ್ತೇವೆ.

ಅಲ್ಲದೆ ಮದುವೆ ಇತ್ಯಾದಿ ಸಮಾರಂಭಗಳ ಬಗ್ಗೆ ಸ್ಪೆಶಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ R. T. O. ಕೊಯಂಬುತ್ತೂರು ಇವರಿಂದ ಪರ್ಮಿಶನ್ ಪಡಕ್ಕೊಂಡೇ ಅಂಥಾ ಸ್ಪೆಶಲುಗಳನ್ನು ಗೇಸು ಬಸ್ಸುಗಳ ಅನುಕೂಲತೆ ನೋಡಿ ರನ್ ಮಾಡಬೇಕಾಗಿರುವುದರಿಂದ, ಹಾಗೆ ಸ್ಪೆಶಲು ಬಸ್ಸುಗಳನ್ನು ಅಪೇಕ್ಷಿಸುವವರು, ಸ್ಪೆಶಲುಗಳ ಬಗ್ಗೆ ಪರ್ಮಿಶನ್ ಪಡಕೊಳ್ಳುವರೆ ನಮಗೆ ಅನುಕೂಲವಾಗುವಂತೆ ತಮ್ಮ ಅರ್ಜಿಗಳನ್ನು ನಮಗೆ 20 ದಿವಸಗಳಿಗೆ ಮುಂಚಿತವಾಗಿ ಬರಕೊಳ್ಳಬೇಕಾಗಿ ಸಾರ್ವಜನಿಕರಿಗೆ ತಿಳಿಸಲಪೇಕ್ಷಿಸುತ್ತೇವೆ.

ಮಂಗ್ಳೂರು,
29—3—1947.

ಜೊಯಿಂಟ್ ಮೆನೇಜರ್ಸ್,
ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.

(Incorporated in British India with Limited Lisbility)

Estd: 1906.

Head Office: UDIPI, S. Kanara.

CAPITAL:	Rs.
Authorised	25,00 000
Issued, subscribed & called up	16,00,000
Paid up	15 97,145
RESERVES	5 25,000
DEPOSITS	2,07,47,928
TOTAL RESOURCES	3,00 01,186

With a net work of branches & Agencies in all principal cities of India, we shall be able to render efficient collection services

BANKING BUSINESS OF EVERY DESCRIPTION TRANSACTED

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷವುಂಟಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

The 1946 Record Business proves the popularity

THE BOMBAY LIFE ASSURANCE COMPANY LIMITED

Company's New Business in 1946 - 3 28 Crores

Our Cheif Agency New Business in 1946 about 60 Lakhs.

Our experience of 37 years available to you for arranging Insurance investment. It therefore, pays you to consult us to Insure or to represent

Messrs. Kochikar Brothers, Limited..

Chief Agents for South India,

Bombay Life Building,

Central Office, Udipi:

Branches at: MANGALORE, CALICUT, MADRAS, TRIVANDRUM, MADURA, BANGALORE AND BOMBAY

Bhuvanendra Products Limited,

KATAPADI S. Kanara.

'Bhuvanendra' 'ಭುವನೇಂದ್ರ'

Dashamoolarishta

Prepared with seleteed ingredients under the supervision of the experienced staff.

A specific for the puerperal diseases and also valuable to puerperal women as tonic increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli**

Bhuvanendra Products Ltd.

Factory & Head Office KATAPADI S. Kanara

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ

ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ತಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶ್ವಾಸಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು

ಡಿಪೊ ಮರಾಠಗಲ್ಲಿ, ಹುಬ್ಬಳ್ಳಿ

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಕು 16—5—1947 [ಸಂಚಿಕೆ 20]

ವಾರಾಂತ್ಯ ವರದಿ ವಿಮರ್ಶೆ

ಗವರ್ನರರ ಚೆಲ್ಲಾಟ

ಕಾಂಗ್ರೆಸಿನ ಜನರಲ್ ಸೆಕ್ರೆಟರಿ ಆಚಾರ್ಯ ಜುಗಲ್ ಕಿಶೋರ್ ಮತ್ತು ದಿವಾನ್ ಚಮನ್‌ಲಾಲರು ಗಡಿನಾಡು ಗಲಭೆಯ ಸಂಬಂಧ ಅಲ್ಲಿನ ಗವರ್ನರ್ ಸರ್ ಒಲಾಫ್ ಕೆರೋ ಅವರು ವಹಿಸಿದ ಪಕ್ಷಪಾತದ ಧೋರಣೆಯ ಕುರಿತು ಕೊಟ್ಟ ಪ್ರಕಟಣೆಯು ಓದುಗರನ್ನು ಕೌತುಕಗೊಳಿಸುವ ವಿಷಯಗಳಿಂದ ಕೂಡಿದೆ

ಗವರ್ನರ್ ಕೆರೊ ಅವರು ಮುಂಚಿನಿಂದಲೂ ಲೀಗ್ ಸಹಾನುಭೂತಿಯವರೆಂದು ಪ್ರಖ್ಯಾತಿ ಇದೆ. ಆದರೆ ತನ್ನ ಕೈಕೆಳಗಿನ ಮಂತ್ರಿಮಂಡಳದವರು ಕೈದು ವಾರಂಟು ಹೊರಡಿಸಿರುವ ಲೀಗಿನ ಚಳವಳಗಾರರೊಂದಿಗೆ ಗವರ್ನರರು ಭ್ರಾತೃತ್ವದ ಸಲುಗೆ ತೋರಿಸಿರುವರೆಂದು ಕನಸ್ಸಿನಲ್ಲಿಯೂ ಭಾವಿಸಲಿಲ್ಲ!

ಆದರೆ ಡೇರಾ ಇಸ್ಮಾಯಿಲ್ ಖಾನ್ ನಗರದಲ್ಲಿ ಅವರು ಪ್ರತ್ಯಕ್ಷ ಹೀಗೆ ಮಾಡಿದರು. "ಈ ಸಂದರ್ಭದಲ್ಲಿ ಗಂಡಾಂತರವು ಅನಿವಾರ್ಯವೇ ಸರಿ." ಎಂದು ಜುಗಲ್ ಕಿಶೋರ್ ಮತ್ತು ಚಮನ್‌ಲಾಲರು ತಿಳಿಸುತ್ತಾರೆ. ಪರಿಣಾಮವಾಗಿ "ಸಂಪೂರ್ಣ ಪೇಟೆಗಳೇ ಸುಲಿಗೆ ಮಾಡಲ್ಪಟ್ಟು ಸುಟ್ಟು ಹಾಕಲ್ಪಟ್ಟವು."

ಅಲ್ಪಸಂಖ್ಯಾಕರನ್ನು ರಕ್ಷಿಸುವುದು ಗವರ್ನರರ 'ವಿಶೇಷ ಹೊಣೆಗಾರಿಕೆ'. ಆದರೆ ಗಡಿನಾಡಿನಲ್ಲಿ ತನ್ನ ಹೊಣೆಗಾರಿಕೆಗೆ ಸಂಪೂರ್ಣ ವಿರೋಧ ವರ್ತಿಸುವ ಗವರ್ನರರಿರುವುದು ಆ ಪ್ರಾಂತ್ಯದ ದುರ್ಭಾಗ್ಯವೆನ್ನಬೇಕು. ಅವರ ವರ್ತನೆಯು ಇನ್ನು ಮುಂದೆ ಅವರು ಆಸ್ಥಾನಕ್ಕೆ ಅರ್ಹರಾಗುವಂತಹದಲ್ಲವೆಂದು ಸ್ಪಷ್ಟವಾದ ಮೇಲೆ ಅವರನ್ನು 'ತೊಲಗಿಸಲು' ನಡೆಯುವ ಚಳವಳವು ಸ್ವಾಭಾವಿಕವಾದುದು. ಬಲಿಸಿದ ಭಾರತದಲ್ಲಿ ಅಂಥವರಿಗೆ ಅಧಿಕಾರ ಸ್ಥಾನವೇರಲಿಕ್ಕೂ ದೊರೆಯಬಾರದೆಂದೇ ವಿಚಾರಶೀಲರೆಲ್ಲರ ಅಭಿಪ್ರಾಯ.

ಇದು ಇಸ್ಲಾಮ್ ವಿರೋಧ

ಇಸ್ಲಾಮ್ ಎಂದರೆ ಶಾಂತಿ ಎಂದರ್ಥ. ಆದರೆ ಇಂದು ಆ ಶ್ರೇಷ್ಠ ಧರ್ಮ ಸಂದೇಶಕ್ಕೆ ಪ್ರತಿ ವಿರೋಧವಾಗಿ ಅದರ ಅಗ್ರಗಣ್ಯ ಅನುಯಾಯಿಗಳು ವರ್ತಿಸುವುದು ಖೇದಾಸ್ಪದ ಸಂಗತಿ. ಹೀಗೆಂದು ದೇಶದ ಪ್ರಮುಖ ಶಾಂತಿ ಸಾಧಕರ ಅಭಿಪ್ರಾಯವಿದೆ.

ಕಳೆದ ವಾರದ ಗಾಂಧಿ-ಜಿನ್ನಾ ಭೇಟಿಯು ಎಂದಿನಂತೆ ಅಯಶಸ್ವಿಯಾಗಿ ಕೊನೆಗೊಂಡಿತು. ಇಸ್ಲಾಮ್ ಧರ್ಮ ಪ್ರವರ್ತಕನೆನಿಸುವ ಲೀಗಿನೊಡನೆ ಶಾಂತ ಒಪ್ಪಂದ ಮಾಡಿಕೊಳ್ಳುವುದು ದುಸ್ಸಾಧ್ಯವೆಂದು ಇದರಿಂದ ವಿಶದವಾಗುತ್ತದೆ.

ಈ ಭೇಟಿಯ ನಂತರ ಮಿ॥ ಜಿನ್ನರು ಒಂದು ಪ್ರಕಟಣೆ ಹೊರಡಿಸಿ 'ಗಾಂಧಿಯವರು ವಿಚ್ಛೇದೀಕರಣವು ಅವಶ್ಯವಲ್ಲವೆಂದು ಅಭಿಪ್ರಾಯಪಡುತ್ತಾರೆ. ಆದರೆ ನನ್ನ ಅಭಿಪ್ರಾಯ ಪ್ರಕಾರ ಪಾಕಿಸ್ತಾನವು ಅವಶ್ಯಕ ಮಾತ್ರವಲ್ಲ ಅನಿವಾರ್ಯವೂ ಎಂದಿದೆ. ಭಾರತದ ರಾಜಕೀಯ ಸಮಸ್ಯೆಯ ಪರಿಹಾರಕ್ಕೆ ಅದೊಂದೇ ದಾರಿ' ಎಂದು ತಮ್ಮ ಹಟವಾದವನ್ನು ಮುಂದುವರಿಸಿದ್ದಾರೆ. ಇದರಿಂದ ಹೆಚ್ಚಿನವರಿಗಾರಿಗೂ ನಿರಾಶೆಯಾಗಲಿಲ್ಲ ಕಾರಣ ಎಲ್ಲರೂ ಲೀಗ್ ಧುರೀಣರ ಕಡೆಯಿಂದ ಅದಕ್ಕಿಂತ ಹೆಚ್ಚಿನದನ್ನು ನಿರೀಕ್ಷಿಸಿ ಕೊಂಡಿರಲಿಲ್ಲ.

ಅದೇ ಭೇಟಿಯಲ್ಲಿ ಚರ್ಚಿಸಲ್ಪಟ್ಟ ಇನ್ನೊಂದು ವಿಷಯವೆಂದರೆ ಸ್ವಲ್ಪ ಕಾಲದ ಹಿಂದೆ ಈ ಇರ್ವ ವ್ಯಕ್ತಿಗಳು ಸಂಯುಕ್ತವಾಗಿ ಹೊರಡಿಸಿದ ಪ್ರಕಟನೆಯ ಕುರಿತಾಗಿದೆ. ಜಿನ್ನರು ಅದನ್ನು "ನಾವಿಬ್ಬರೂ ಸಹಿಹಾಕಿದ ಪತ್ರ"ವೆಂದು ಸಂಬೋಧಿಸಿದ್ದಾರೆ. ಇದರ ಅರ್ಥವೆಂದರೆ ಪೂರ್ಣ ಮನಸ್ಸಿನಿಂದ ಅದಕ್ಕೆ ಒಪ್ಪಿಗೆ ಕೊಟ್ಟದ್ದಲ್ಲವೆಂದಾಗುತ್ತದೆ. ಆ ಪ್ರಕಟನೆಯಲ್ಲಿ ತಾವು ತಮ್ಮ ಅನುಯಾಯಿಗಳಿಗಿತ್ತ ಬುದ್ಧಿವಾದವನ್ನು ಅವರು ನಿರ್ಲಕ್ಷಿಸಿದುದರ ಕುರಿತು ಒಂದಿಷ್ಟು ಕನಿಕರವನ್ನು ನಿರೂಪಿಸಲಿಲ್ಲ. ನಂತರ ಅವರು ಇಷ್ಟೇ ತಿಳಿಸುತ್ತಾರೆ: "ತಾವು ನಮ್ಮ ಕ್ಷೇತ್ರಗಳಲ್ಲಿ ನೆಮ್ಮದಿಗಾಗಿ ಪ್ರಯತ್ನ ಮಾಡಬೇಕೆಂಬ ಇತ್ಯರ್ಥಕ್ಕೆ ಬಂದಿದ್ದೇವೆ."

ತಾವು ಪ್ರಕಟಿಸಿದ ವಿನಂತಿಯಲ್ಲಿ ಅವರ ಸಂಪೂರ್ಣ ಹೃದಯವಿಲ್ಲವೆಂಬುದು-ಇದರ ಒಟ್ಟರ್ಥ. ಇದಕ್ಕೆ ಕಾರಣವೂ ಇದೆ. ಏಕೆಂದರೆ ಒಮ್ಮೆ ಜಿನ್ನರು ಹಿಂದೂ ಮುಸ್ಲಿಂ ಐಕ್ಯತೆಗಾಗಿ ಮನಃಪೂರ್ವಕ ಪ್ರಯತ್ನಿಸಿದರೆಂದರೆ ಪಾಕಿಸ್ತಾನದ ಪರವಾಗಿ ಅವರು ಮುಂದಿಟ್ಟ ತರ್ಕಗಳೆಲ್ಲ ಮಾಯವಾಗುವುವು. ಕಾರಣ ಹಿಂದೂ ಮುಸ್ಲಿಮರೊಳಗೆ ಸಂಪೂರ್ಣ ಸೌಹಾರ್ದವಿದ್ದರೆ ದೇಶವನ್ನು ತುಂಡರಿಸುವ ಅವಶ್ಯಕತೆ ಎಲ್ಲಿದೆ?

ಆದುದರಿಂದ ಕೋಮು ಸೌಹಾರ್ದತೆಯು ಜಿನ್ನರ ಆಶೆಗೆ ವಿರುದ್ಧವಾದ ಪರಿಸ್ಥಿತಿ. ಅಂದ ಮೇಲೆ ಆ ಕುರಿತು ಅವರು ಸಂಕೋಚಪಡುವುದು ಸಹಜವೆ.

ಮದ್ರಾಸಿಗೆ ರಾಜಾಜಿ

ನಮ್ಮ ಪ್ರಧಾನಿ ರಾಮಸ್ವಾಮಿ ರೆಡ್ಡಿಯವರೂ ಕಾಮರಾಜ ನಾಡರರೊಂದಿಗೆ ಡಿಲ್ಲಿಗೆ ಮಾತುಕತೆಗಾಗಿ ಹೋಗಿದ್ದರು. ಅಲ್ಲಿಯ ದಕ್ಷಿಣ ಭಾರತೀಯರ ಸಂಘದಲ್ಲಿ ಭಾಷಣ ಕೊಡುತ್ತಾ ಮಾನ್ಯ ರೆಡ್ಡಿಯವರು "ನಮ್ಮ ಪ್ರಾಂತ್ಯದ ಎಲ್ಲಾ ಮಹತ್ವದ ಆಡಳಿತ ವಿಚಾರದಲ್ಲಿ ನಾವು ರಾಜಾಜಿಯ ಸಹಾಯವನ್ನು ಸದಾ ಕೇಳುತ್ತಲಿರುತ್ತೇವೆ" ಎಂದರು.

ಶ್ರೀ ನಾಡರರು ಇನ್ನೂ ಒಂದು ಹೆಜ್ಜೆ ಮುಂದೆ ಸರಿದು "ನಮಗೆ ರಾಜಾಜಿಯ ವಿವೇಕದ ಸಲಹೆಗಳು ಸದಾ ಬೇಕಾಗಿವೆ. ಅವರು ತಿಂಗಳಿಗೊಮ್ಮೆಯಾದರೂ ಮದ್ರಾಸಿಗೆ ಬಂದು ನಮ್ಮ ಕಾರ್ಯಕಲಾಪಗಳು ಸುಗಮವಾಗಿ ಸಾಗುತ್ತವೆಯೋ ಎಂದು ಪರಿಶೀಲಿಸಬೇಕೆಂದು ನಾನು ಅವರಿಗೆ ವಿನಂತಿಸಿಕೊಳ್ಳುತ್ತೇನೆ" ಎಂದು ತಿಳಿಸಿದರು. ಕಳೆದ ಹತ್ತು ವರ್ಷಗಳಿಂದ ಮದ್ರಾಸ್ ರಾಜಕೀಯವನ್ನು ಅಭ್ಯಾಸಿಸಿದವರಿಗೆ ಈ ಮುಖಂಡರ ಮಾತುಗಳ ನಿಜವಾದ ಗಂಭೀರತೆಯೇನೋ ಎಂದು ಶಂಕೆ ಹುಟ್ಟದಿರಲಾರದು ಎಂದೊಂದು ಪ್ರಮುಖ ಪತ್ರಿಕೆ ಬರೆದಿರುವುದು ಗಣನೀಯ.

ಇವುಗಳ ಅಂತರಾಳವೇನಿದ್ದರೂ ಮದ್ರಾಸಿನ ರಾಜಕೀಯ ಪಕ್ಷ ಪಂಗಡಗಳು ತಮ್ಮ ಭೇದಾಭಿಪ್ರಾಯಗಳನ್ನು ಬದಿಗಿರಿಸಿ ಐಕ್ಯದಿಂದ ಪ್ರಾಂತ್ಯದ ಹಲವು ಭೀಕರ ಸಮಸ್ಯೆಗಳನ್ನು ಪರಿಹರಿಸಲು ಯತ್ನಿಸುವುದರಲ್ಲಿ ಶ್ರೇಯಸ್ಸಿದೆ: ಸದ್ಯಕ್ಕೆ ನಮ್ಮ ಪ್ರಾಂತ್ಯದ ಆಹಾರ ಪರಿಸ್ಥಿತಿಯು ಹದಗೆಡಬಹುದೆಂದು ಅಂಜಿಕೆ ಪ್ರಕಟವಾಗಿದೆ. ಜನತೆಯ ವಿಶ್ವಾಸವನ್ನು ಗಳಿಸಿ ಇಲ್ಲಿಯ ಉತ್ಪತ್ತಿಯ ಸದುಪಯೋಗ ಮಾಡುವಂತೆ ತಕ್ಕ ಪ್ರಚಾರ ಕಾರ್ಯಕ್ರಮವನ್ನು ಕೈಕೊಂಡರೆ ಮುಂದಿನ ತಿಂಗಳುಗಳ ಗಂಡಾಂತರವು ಸಂಕಷ್ಟವಿಲ್ಲದೆ ದಾಟಿ ಹೋಗುವುದು ಖಂಡಿತ.

ಡಾಲ್ಟನರ ಡೊಂಕುವಾದ

ಯುದ್ಧಕ್ಕೆ ಸೇರಲು ಭಾರತ ಮುಖಂಡರು ಅಸಮ್ಮತಿ ಸೂಚಿಸಿದುದರ ಒಂದು ಕಾರಣ ಬ್ರಿಟನಿಗೆ ತೆಗೆದುಕೊಂಡ ಸಾಲ ಮರುಪಾವತಿ ಮಾಡುವ ಅಭ್ಯಾಸವಿಲ್ಲವೆಂಬ ಉದ್ದೇಶವಿದ್ದಿರುತ್ತದೆ. 1914ರ ಯುದ್ಧದಲ್ಲಿ ಬ್ರಿಟನ್ನು ಭಾರತಕ್ಕೆ ತೆರಬೇಕಾದ ಸಾಲವನ್ನು ಬಹುಮಾನವಾಗಿ ತನ್ನ ವ್ಯಾಸ್‌ರಾಯರ ಮೂಲಕ ಘೋಷಿಸಿ ಕಬಳಿಸಿ

(ಕಡೇ ಪುಟಕ್ಕೆ ಮುಂದುವರಿದಿದೆ)

THE
UNITED INDIA LIFE ASSURANCE CO., LTD.
ESTD. 1906 | H. O. MADRAS

SECURITY

Greater than any conferred by legislative enactments is guaranteed

by

UNITED INDIA'S TRUST ARRANGEMENT

with

THE OFFICIAL TRUSTEE TO THE GOVRNMENT OF MADRAS.

For Particulars apply to—

INSPECTORATE OFFICE
K. S. Rao Road, Mangalore.

ಕುರುಡ, ಕುಂಟ, ಕಿವುಡರ ಭಾರಿ ಸಮಸ್ಯೆ

ಅಂಗಾಂಗ ಹೀನರಿಗೆ ಸಂತಾನ ಶಸ್ತ್ರಚಿಕಿತ್ಸೆ ಬೇಕು

ಬಡಬಗ್ಗರ ಪರಾಂಬರಿಕೆ ದೇವಸ್ಥಾನಗಳು ನೋಡಬೇಕು.

ಇತರ ದೇಶದಲ್ಲಿ ಅಂಗಹೀನರೂ, ಇಂದ್ರಿಯ ದೋಷವಿದ್ದವರೂ ಮತ್ತು ನಾನಾ ಜೀವನಕ್ಕೆ ಅಯೋಗ್ಯರಾದವರೂ ಇದ್ದಾರೆ. ಆದರೆ ಭಾರತದಲ್ಲಿ ಈ ಜನರ ಸಂಖ್ಯೆಯಲ್ಲಿ ಮಿತಿಯಿಲ್ಲದಾಗಿದೆ. ಖಾನೇಷುಮಾರಿ ಲೆಕ್ಕದಂತೆ ನಮ್ಮ ದೇಶದ ಇಂಥಾ ಜನರ ಸಂಖ್ಯೆ ಹೀಗಿದೆ:

ಹುಚ್ಚರು	1,20,304.
ಕಿವುಡರು	2,30,895
ಕುರುಡರು	6,01,370
ಕುಷ್ಠರೋಗಿಗಳು	1,47,911

ಇವು ಕೂಡ ಸರಿಯಾದ ಅಂಕೆಸಂಖ್ಯೆಗಳಲ್ಲ. ಕಾರಣ ನಮ್ಮಲ್ಲಿ ಹಲವರು ತಮ್ಮ ದೋಷಗಳನ್ನು ಹೊರಗೆಡಹುದಿಲ್ಲ. ನಾಚಿಗೆ, ಅಪಮಾನಗಳ ಹೆದರಿಕೆಯು ಇದರ ಮೂಲದಲ್ಲಿರುವುದು.

ಭಾರತದಲ್ಲಿರುವ ನಾವು ಇಂತಹ ಅನೇಕ ಊನಗಳನ್ನು ಪರಿಹರಿಸಲು ಅಸಾಧ್ಯವೆಂದೂ ತಿಳಕೊಳ್ಳುತ್ತೇವೆ ಆದರೆ ಇಂದು ವೈದ್ಯ ಮತ್ತು ಶಾರೀರಿಕ ಚಿಕಿತ್ಸಾ ವಿಧಾನಗಳು ಬಹಳ ಮುಂದುರಿದಿವೆಯೆಂಬ ವಿಷಯವನ್ನು ನಾವು ಗಮನಿಸಬೇಕು. ಅದೇ ಸಮಯಕ್ಕೆ ನಮ್ಮ ದೇಶದಲ್ಲಿ ಅಂಗಾಂಗ ಹೀನರನ್ನು ಆರೈಕೆ ಮಾಡಿ ಅವರಿಗೆ ಯಾವುದಾದರೂ ಯೋಗ್ಯ ಕೈಗಾರಿಕೆಯಲ್ಲಿ ತರಬೇತಿ ಕೊಟ್ಟು, ಅವರನ್ನು ಸ್ವಾವಲಂಬಿ ಜೀವನ ನಡೆಸಲು ಶಕ್ತರನ್ನಾಗಿ ಮಾಡುವ ಸಂಸ್ಥೆಗಳೂ ನಮ್ಮ ದೇಶದಲ್ಲಿ ಬಹಳ ಕಡಿಮೆ ಇವೆ.

ನಮ್ಮ ದೇಶದ 6 ಲಕ್ಷ ಕುರುಡರಿಗೆ ಬಾಲ್ಯದಲ್ಲೇ ಯೋಗ್ಯ ವೈದ್ಯಕೀಯ ಚಿಕಿತ್ಸೆಯ ಅನುಕೂಲತೆ ಸಿಗುತ್ತಿದ್ದರೆ ಅವರ ಸಂಖ್ಯೆ ಇಷ್ಟು ಹೆಚ್ಚಾಗುತ್ತಿರಲಿಲ್ಲ. ಬಾಲಕರ ಕಣ್ಣು ದೋಷಗಳಿಗೆ ಹೆತ್ತವರ ಅಲಕ್ಷವು ಒಂದು ಮುಖ್ಯ ಕಾರಣ. ಸಿಡುಬು ಮೇಹ ರೋಗಗಳೂ ಇವಕ್ಕೆ ಕಾರಣಭೂತಗಳು. ನಮ್ಮ ಆರೋಗ್ಯ ಖಾತೆಯವರು ದಾಕು ಹಾಕುವ, ಮೇಹ ಪ್ರತಿಬಂಧಕ ಇಂಜೆಕ್ಷನ್ ಕೊಡುವ, ಶಾಲೆಗಳಲ್ಲಿನ ಮಕ್ಕಳ ಕಣ್ಣು ಪರೀಕ್ಷೆ ಮಾಡುವ, ಮುದುಕರ ಕಣ್ಣು ಪರೆಗಳನ್ನು ಶಸ್ತ್ರ ಚಿಕಿತ್ಸೆಗೊಳ ಪಡಿಸುವ ಕಾರ್ಯಕ್ರಮ ಶ್ರದ್ಧಾಪೂರ್ವಕವಾಗಿ ಕೈಕೊಂಡರೆ ಎಷ್ಟೋ ಕುರುಡರ ಮತ್ತಿತರ ಅಂಗ ಹೀನರ ಸಂಖ್ಯೆ ಕಡಿಮೆಯಾಗುತಿತ್ತು.

ಕಿವುಡು ಮೂಕತನ ಮತ್ತು ಕುಂಟತನಗಳೂ ನಮ್ಮ ದೇಶದಲ್ಲಿ ಗಣನೀಯ ಪ್ರಮಾಣದಲ್ಲಿವೆ. ಇಂಥವರ ಸಂಖ್ಯೆ ಸುಮಾರು 2,20,000 ಇವೆಯೆಂದು ಲೆಕ್ಕ ಹಾಕಿರುವರು. ಈ ದೋಷಗಳನ್ನು ನಿವಾರಿಸಲು ಕಷ್ಟ ಸಾಧ್ಯವಲ್ಲ.

ಖಾನೇಷುಮಾರಿಯಲ್ಲಿ ಕುಷ್ಠ ರೋಗಿಗಳ ಸಂಖ್ಯೆ ಒಂದೂವರೆ ಲಕ್ಷವೆಂದು ಕಾಣಿಸಿದರೂ ತಜ್ಞರು 10 ಲಕ್ಷಕ್ಕೂ ಮಿಕ್ಕಿ ಇಂತಹ ವ್ಯಾಧಿಗ್ರಸ್ತರಿರುವರೆಂದು ತಿಳಿಸುತ್ತಾರೆ. ಇದನ್ನು ಪರಿಗಣಿಸುವಾಗ ಈ ದೆಸೆಯಲ್ಲಿ ಅದೆಷ್ಟು ಗಹನವಾದ ಪರಿಹಾರ ಕಾರ್ಯ ನಡೆಯಬೇಕೆಂಬುದರ ಅರಿವಾಗುತ್ತದೆ.

ಭಾರತದಲ್ಲಿ ಕುಷ್ಠ ರೋಗಿ ಕ್ಷೌರಿಕರೂ, ತರಕಾರಿ ಮಾರುವವರೂ, ವ್ಯಾಪಾರಿಗಳೂ ಹಾಲು ಮಾರುವವರೂ, ಮತ್ತು ಮನೆ ಕೆಲಸದವರೂ ಅಪಾರ ಸಂಖ್ಯೆಯಲ್ಲಿರುವುದನ್ನು ನಾವು ಕಾಣಬಹುದು. ಮತ್ತೆ ಕುಷ್ಠ ರೋಗಿ ಭಿಕ್ಷುಕರು ಜಾತ್ರೆ ಸಮಯದಲ್ಲಿ ಪ್ರಖ್ಯಾತ ಕ್ಷೇತ್ರ ಪ್ರದೇಶದ ದೇವಸ್ಥಾನದ ಬಳಿಯಲ್ಲೂ ಗುಂಪು ಗುಂಪಾಗಿ ನಿಲ್ಲುವುದನ್ನು ನಾವು ನೋಡಬಹುದು. ಈ ಸ್ಥಳಕ್ಕೆ ಯಾತ್ರಾರ್ಥಿಗಳಾಗಿ ಬರುವ ಜನರಿಗೆ ಈ ರೋಗಗಳು ಪಸರುವ ಗಂಡಾಂತರವಿದ್ದೇ ಇದೆ.

ಸಮಾಜ ಸೇವಕರೂ, ವೈದ್ಯರೂ, ಕುಷ್ಠ ರೋಗಿಗಳ ಅಂಕೆ ಸಂಖ್ಯೆ ತೆಗೆದು ಅವರನ್ನು ಯೋಗ್ಯ ಶುಶ್ರೂಷೆಗೊಳಪಡಿಸುವ ಕಾರ್ಯವನ್ನು ಕೈಕೊಳ್ಳಬೇಕು. ಸರಕಾರವು ಇಂತಹ ಕೆಲಸಕ್ಕೆ ಯೋಗ್ಯ ಚಿಕಿತ್ಸಾಲಯ, ಶುಶ್ರೂಷಾ ಕೇಂದ್ರಗಳನ್ನು ಸ್ಥಾಪಿಸಲು ಶೀಘ್ರ ಯೋಜನೆಗಳನ್ನು ಕೈಕೊಳ್ಳಬೇಕು. ಸಂಪರ್ಕದಿಂದ ಕುಷ್ಠ ರೋಗವು ಹರಡುವುದರಿಂದ ಈ ರೋಗಿಗಳು ವಿವಾಹವಾಗದಂತೆಯೂ, ಅವರಿಗೆ ಮಕ್ಕಳಾಗದಂತೆಯೂ ಪ್ರತಿಬಂಧಕ ಶಾಸನಗಳನ್ನು ಹೊರಡಿಸಬೇಕು. ಅವರನ್ನು ಒತ್ತಾಯಪೂರ್ವಕವಾಗಿ ಸಮಾಜದಿಂದ ಪ್ರತ್ಯೇಕಿಸುವುದೂ ಅತ್ಯಾವಶ್ಯಕ. ಯಾತ್ರಾಸ್ಥಳಗಳಲ್ಲಿನ ಸಿರಿವಂತ ದೇವಸ್ಥಾನಗಳು ತಮ್ಮ ಪ್ರದೇಶದ ಆಸುಪಾಸಿನಲ್ಲಿ ಇಂತಹ ವ್ಯಾಧಿಗ್ರಸ್ತರಿಗೆ ಯೋಗ್ಯ ಆಶ್ರಯಗಳನ್ನು ಕಟ್ಟಿಸಿ ಕೊಡಲು ತಮ್ಮ ಧನವನ್ನು ವೆಚ್ಚಮಾಡಬೇಕು.

ಹುಚ್ಚರ ವಿಷಯದಲ್ಲೂ ವಿಶೇಷ ಗಮನ ವಹಿಸಬೇಕಾದುದೂ ನಮ್ಮ ದೇಶದ ಅಸಂಖ್ಯಾತ ಬುದ್ಧಿ ಭ್ರಮಣೆಯ ಜನದ ಹಿತ ದೃಷ್ಟಿಯಿಂದ ಅವಶ್ಯಕವೆನಿಸುತ್ತದೆ. ಅಲಕ್ಷದಿಂದ ಎಷ್ಟೋ ಅಲ್ಪ ಸ್ವಲ್ಪ ನರ ನಿರ್ಬಲತೆಯುವರು ಭೀಕರ ಹುಚ್ಚುತನಕ್ಕೊಳಗಾಗುವರು. ಯುರೋಪ್ ಅಮೇರಿಕಗಳಲ್ಲಿ ಇಂಥವರಿಗೆ ವಿಶೇಷ ತರದ ಶೈಕ್ಷಣಿಕ ಸಂಸ್ಥೆಗಳಲ್ಲಿ ಪರಿಹಾರೋಪಾಯಗಳು ನಡೆಯುತ್ತವೆ. ಈ ಹೊಣೆಗಾರಿಕೆಯನ್ನು ಸ್ಥಳೀಕ ಸಂಸ್ಥೆಗಳೇ ನೋಡಿಕೊಳ್ಳುವವು. ನಮ್ಮ ದೇಶದಲ್ಲಿ ದುರ್ಬಲ ಮನಸ್ಸಿನ ಮಕ್ಕಳ ಆರೈಕೆ ನೋಡುವ ಎರಡೇ ಸಂಸ್ಥೆಗಳಿವೆ.

ನಮ್ಮ ದೇಶದಲ್ಲಿ ಹೆಚ್ಚಾಗಿ ಸಾರ್ವಜನಿಕ ಕಛೇರಿ ಕೆಲಸಗಾರರೂ, ಕೈಗಾರಿಕೆ ಉದ್ಯೋಗಸ್ಥರೂ ವ್ಯಾಪಾರಿಗಳೂ, ಕೂಲಿ ಕೆಲಸದವರೂ ಮನೆ ಕೆಲಸದಾಳುಗಳೂ ಹೆಚ್ಚಾಗಿ ಉನ್ಮಾದರಾಗಿರುವುದು ಕಂಡು ಬಂದಿದೆ. ತಮಗೆ ಬಂದ ಪರಿಸ್ಥಿತಿಗಳಿಗನುಸಾರ ಜೀವನವನ್ನು ಸ್ವಿತ್ಯಂತರಗೊಳಿಸಲಾಗದಿದ್ದುದರಿಂದಲೇ ಈ ಮಾನಸಿಕ ದೌರ್ಬಲ್ಯವುಂಟಾಗುವುದೆಂದು ತಿಳಿದು ಬರುತ್ತದೆ.

ಇನ್ನಿತರ ದೇಶಗಳಲ್ಲಿ ಹುಚ್ಚಿನ ಲಕ್ಷಣ ಕಂಡ ಕೂಡಲೇ ವ್ಯಕ್ತಿಗಳನ್ನು ಅದರ ಶುಶ್ರೂಷೆಯ ಆಸ್ಪತ್ರೆಗಳಿಗೆ ಸಾಗಿಸುತ್ತಾರೆ. ಆದರೆ ನಮ್ಮ ದೇಶದಲ್ಲಿ ಅಂಥವರಿಗೆ ಕೇಳುವವರೇ ಇರುವುದಿಲ್ಲ. ತಲೆ ಕೆಟ್ಟ ಕೂಡಲೇ ಅವರು ಮಾರ್ಗಗಳಲ್ಲಿ ತಿರುಗಾಡ ಹತ್ತಿ ಅವರ ಹುಚ್ಚು ಇನ್ನಷ್ಟು ಹೆಚ್ಚಾಗುವುದು ಮಾತ್ರವಲ್ಲ ಅವರು ಸಮಾಜಕ್ಕೊಂದು ಹೊರೆಯೂ ಗಂಡಾಂತರದವರೂ ಆಗುತ್ತಾರೆ. ಇಂತಹವರು ನಮ್ಮ ದೇಶದಲ್ಲಿ ಸುಮಾರು 50 ಲಕ್ಷ ಮಂದಿಗಳಿದ್ದಾರೆಂದು ಲೆಕ್ಕ ಹಾಕಲಾಗಿದೆ. ಇಂಥ ವ್ಯಕ್ತಿಗಳು ಮದುವೆಯಾಗದಂತೆ ಮತ್ತವರಿಗೆ ಮಕ್ಕಳಾಗದಂತೆ ನೋಡಿ ಕೊಳ್ಳುವುದೂ ಸರಕಾರದ ಕರ್ತವ್ಯವಾಗಿರಬೇಕು.

ಭಾರತದ ನಗರಗಳಲ್ಲಿ ಕೊಳಕು ನಿವಾಸ ಪ್ರದೇಶಗಳು ಸಾಮಾನ್ಯ ದೃಶ್ಯಗಳಾಗಿವೆ. ಇಲ್ಲಿ ಭಿಕ್ಷುಕರೂ, ತಿರುಕರೂ, ಕೇಡಿಗಳೂ ವ್ಯಭಿಚಾರಿ ವ್ಯಕ್ತಿಯರೂ ಒಟ್ಟೊಟ್ಟಿಗೆ ವಾಸಿಸುತ್ತಾರೆ. ಇವರೊಳಗೆ ಅನ್ಯೋನ್ಯ ಬಾಂಧವ್ಯವುಂಟಾಗಿ ಅವರವರೊಳಗೆ ಮದುವೆಗಳೂ ಆಗುತ್ತವೆ. ಇಂಥವರಿಗೆ ಹುಟ್ಟುವ ಮಕ್ಕಳೂ ರೋಗಿಗಳೂ, ಅಂಗಹೀನರೂ ಇಲ್ಲವೆ ಇತರ ಶಾರೀರಿಕ ಮಾನಸಿಕ ದೋಷವುಳ್ಳವರೂ ಆಗುತ್ತಾರೆ. ಇಂತಹ ನಿಷ್ಪ್ರಯೋಜಕ ಜನ ಸಂಖ್ಯೆಯನ್ನು ಬೆಳೆಸಲೂ ಸರಕಾರವು ಯೋಗ್ಯ ಶಾಸನದ ಮೂಲಕ ನಿರ್ಬಂಧವನ್ನುಂಟು ಮಾಡಬೇಕು. ಪರದೇಶಗಳಲ್ಲಿ ಈ ವರ್ಗದ ಜನರನ್ನು ಶಸ್ತ್ರಚಿಕಿತ್ಸೆಯ ಮೂಲಕ ಸಂತಾನ ಶೂನ್ಯರನ್ನಾಗಿ ಮಾಡುತ್ತಾರೆ.

ಈ ಸಂಬಂಧದಲ್ಲಿ ನಾವು ವ್ಯಭಿಚಾರ ವ್ಯಾಧಿಗಳ ಕುರಿತೂ ಪರ್ಯಾಲೋಚಿಸಬೇಕಾಗಿದೆ. ಮೇಹ ರೋಗವು ಪೋರ್ತುಗೀಸರಿಂದ ಈ ದೇಶಕ್ಕೆ ಆಮದು ಮಾಡಲ್ಪಟ್ಟಿದ್ದು ಆದಿಗೆ ದೇಶ ವಿದೇಶ ಹರಡುತ್ತಲಿವೆ. ಹಳ್ಳಿ ಕಡೆಗಳಲ್ಲಿ ಇದು ಹೆಚ್ಚಾಗಿ ಈಗ ಹಾವಳಿ ಮಾಡುತ್ತದೆಂದು ತಿಳಿದು ಬರುತ್ತದೆ. ಮದುವೆ ಮಾಡಿಕೊಳ್ಳುವವರಲ್ಲಿ ಆರೋಗ್ಯವಂತ ಲಕ್ಷಣಗಳಿವೆಯೋ ಎಂದು ನೋಡಿ ಶಿಫಾರಸು ಮಾಡಲು ಸರಕಾರವು ಒಂದು ವೈದ್ಯ ಮಂಡಳವನ್ನು ಪ್ರತಿ ಹಳ್ಳಿ ಪಟ್ಟಣ ಕೇಂದ್ರಗಳಲ್ಲಿ ಸ್ಥಾಪಿಸಿದರೆ ಇಂತಹ ವ್ಯಾಧಿಗಳ ವೃದ್ಧಿಗೆ ಬಹು ಮಟ್ಟಿಗೆ ತಡೆಗಟ್ಟುವುದು. ಆರೋಗ್ಯ ಖಾತೆಯವರು ಈ ವಿಷಯದಲ್ಲಿ ಅನುಮತಿಯನ್ನು ಕೊಡಬೇಕು.

ನಮ್ಮ ದೇಶದ ಹಲವು ನಗರಗಳಲ್ಲಿ ವೇಶ್ಯಾವಾಸದಂಗಡಿಗಳ ವಿಷಯದಲ್ಲಿ ಮಜೂರ ಸಿಪಾಯಿಗಳ ತಿರುಗಾಟ ಹೆಚ್ಚಿ ಸೂಳೆಯರ ಬಿಡಾರಗಳಿಗೆ ಪ್ರವೇಶ ಸಾಮಾನ್ಯ ಸಂಗತಿಯಾಗಿದೆ. ವ್ಯಭಿಚಾರ ವಿರೋಧ ಶಾಸನವನ್ನು ಜಾರಿಗೆ ತಂದ ಸೂಳೆಗಾರಿಕೆ ಮಾಡುವವರಿಗೆ ಪ್ರತ್ಯೇಕ ವಾಸಗಳನ್ನು ಕಲ್ಪಿಸಿ ಅವರನ್ನು ಆಗಿಂದಾಗ್ಗೆ ವೈದ್ಯಕೀಯ ಪರಿಶೀಲನೆಗೊಳ ಪಡಿಸುವುದು ಅತ್ಯಾವಶ್ಯಕ. ಗುಪ್ತ ವ್ಯಭಿಚಾರವನ್ನು ಕಂಡು ಹಿಡಿಯುವ ಏರ್ಪಾಡುಗಳನ್ನು ಮಾಡಿ ಅಂಥಾ ಅಪರಾಧಗಳಿಗೆ ಕಠಿಣ ಶಿಕ್ಷೆ ವಿಧಿಸುವುದರಿಂದಲೂ ಅದನ್ನು ನಿರುತ್ಸಾಹಗೊಳಿಸಬಹುದು. ಹೀಗೆ ಮಾಡುವುದರಿಂದ ನಮ್ಮ ದೇಶದ ದೋಷಯುಕ್ತ ವ್ಯಕ್ತಿಗಳ ಸಮಸ್ಯೆಯು ಬಹಳ ಮಟ್ಟಿಗೆ ಪರಿಹಾರವಾಗುವುದು.

ಆನೆಗಳಿಗೆ ಇಂಗ್ಲಿಷು ಅತಿ ಸುಲಭ

ಕಾಡು ಮೃಗಗಳಲ್ಲಿ ಕಳ್ಳಸಂತೆ

ಅಮೇರಿಕನ ಸರ್ಕಸ್‌ವಾಲನ ಅಭಿಪ್ರಾಯ

ನಮ್ಮ ದೇಶದಲ್ಲಿ ಎಲ್ಲಾ ವಸ್ತುಗಳಿಗೆ ಬೆಲೆ ಏರಿದಂತೆ ಆನೆಗಳಿಗೂ ಯುದ್ಧಪೂರ್ವಕ್ಕಿಂತ 10ರಿಂದ 30 ಪಾಲಷ್ಟು ಬೆಲೆ ಹೆಚ್ಚಿದೆ. ಈಗಂತೂ ಪರದೇಶಗಳಿಂದ ಅನೇಕ ಸರ್ಕಸ್ ಮತ್ತು ಮೃಗಾಲಯಗಳವರು ಪ್ರಾಣಿ ಸಂಗ್ರಹಕ್ಕಾಗಿ ನಮ್ಮ ದೇಶದಲ್ಲಿ ಸಂಚರಿಸುತ್ತಿರುವುದರಿಂದ ಅಪರೂಪ ಪ್ರಾಣಿಗಳನ್ನು ಕಳ್ಳಸಂತೆಯಲ್ಲೂ ವಿಪರೀತ ಬೆಲೆಗೆ ಪಡೆಯ ಪರಿಸ್ಥಿತಿ ಉಂಟಾಗಿರುವುದೆಂದು ನ್ಯೂಯೋರ್ಕಿನ ಪ್ರಖ್ಯಾತ ಸರ್ಕಸ್‌ವಾಲನಾದ ರೀಡ್ ಎಂಬುವನು ತಿಳಿಸುತ್ತಾನೆ. ಇವನೀಗ ದಕ್ಷಿಣ ಭಾರತದಲ್ಲಿ ಸಂಚರಿಸುತ್ತಿದ್ದಾನೆ.

ಯುದ್ಧಕ್ಕೆ ಮುಂಚೆ ಸಾಮಾನ್ಯವಾಗಿ ಒಂದು ಆನೆಗೆ 500 ರೂಪಾಯಿ ಬೆಲೆಯಿತ್ತು. ಈಗ ಅಂತಹದೇ ಆನೆಗೆ ರೂಪಾಯಿ 4 ಸಾವಿರದಿಂದ 12 ಸಾವಿರದ ವರೆಗೆ ತೆರಬೇಕಾಗುವುದೆಂದು ರೀಡನ ಅನುಭವ. ಇಷ್ಟೊಂದು ಬೆಲೆ ಸುಮಾರು ಎಳೆಂಟು ಹೆಣ್ಣಾನೆಗಳನ್ನವನು ಪಡಕೊಂಡಿರುವನು. ಇವೆಲ್ಲ ಐದು ಅಡಿಗಿಂತ ಹೆಚ್ಚು ಎತ್ತರವಿಲ್ಲ.

"ಭಾರತೀಯ ಆನೆಗಳನ್ನು ತರಬೇತು ಮಾಡುವುದು ಅತೀ ಸುಲಭ. ಅವಕ್ಕೆ ಇಂಗ್ಲಿಷ್ ಭಾಷೆ ಶೀಘ್ರವಾಗಿ ಅರ್ಥವಾಗುತ್ತದೆ" ಎಂದು ರೀಡ್ ತಿಳಿಸುತ್ತಾನೆ. ಇವನು ಆನೆಗಳನ್ನು ಮಾತ್ರವಲ್ಲ ಕಾಡುಕೋಣ, ಹೆಬ್ಬಾವು, ನಾಗರಹಾವು ಮತ್ತು ಸುಮಾರು ಮಂಗಗಳನ್ನು ಕೊಂಡುಕೊಂಡಿರುವನು.

ವಾರಾಂತ್ಯ ವರದಿ ವಿಮರ್ಶೆ

(೧ನೇ ಪುಟದಿಂದ)

ಬಿಟ್ಟಿದೆ. ಈಗ ಭಾರತಕ್ಕೆ ತೆರಬೇಕಾಗಿರುವ ಸ್ಟರ್ಲಿಂಗ್ ಹಣವನ್ನು ಮುಳುಗಿಸಲು ಬ್ರಿಟಿಷ್ ಅರ್ಥ ಸಚಿವರು ಹೊಸ ನೆವನಗಳನ್ನು ಹುಡುಕಿರುವರು. "ಯುದ್ಧದ ಸಾಲ ಸ್ವೀಕೃತ ರಾಷ್ಟ್ರಗಳಿಗೆ ಕೊಡುವುದಿಲ್ಲವೆಂದು ಮೊದಲೆ ಗೊತ್ತು ಮಾಡಬೇಕು" ಎಂದು ಮಿ. ಡಾಲ್ಟನ್ ಸಾಹೇಬರ ತರ್ಕ. "ಹಿಂದೂದೇಶದ ರಕ್ಷಣೆಯನ್ನು ಲಕ್ಷಿಸಿದಕ್ಕೆ ಇದು ಸಾಲವೇ?" ಎಂದು ಕೆಲವರು ಕೇಳಿದ್ದಾರೆ. ಮಿ. ಬ್ರೆಂಡನ್ ಬೆಕನ್ ಎಂಬ ಪಾರ್ಲಿಮೆಂಟಿನ ಚರ್ಚಿಲ್ ಪಕ್ಷದ ಸದಸ್ಯರು ಉಪೇಕ್ಷಿತರಾಗಿ ಕೇಳಿರುವರು. ಈ ವಾದವ ಜವಾಬ ಮಂತ್ರಿಗಳಿಗೂ ಇಂತಾಗಿ ಕೇಳಿಸಬಹುದು. ಎಲುಬಿನ ತುಂಡು ಗಂಟಲಲ್ಲಿ ಸಿಕ್ಕಿದಾಗ ಅದನ್ನು ತೆಗೆದವರಿಗೆ ಏನು ಕೇಳಿದ್ದನ್ನು ಕೊಡಲು ವಾಗ್ದಾನ ಮಾಡಿ ಎಲುಬು ತೆಗೆದ ಕೊಕ್ಕರೆಗೆ 'ನಿನ್ನ ಕೊಕ್ಕು ನನ್ನ ಬಾಯಿಯಲ್ಲಿದ್ದಾಗ ನುಂಗಿ ಬಿಡದೇ ಇದ್ದುದು ಉಪಕಾರವೆಂದು ತಿಳಿದುಕೊ' ಎಂದು ಹೇಳಿದ ಏಸೋಪನ ಕತೆಯ ನರಿಯ ನ್ಯಾಯವಾಯಿತಿದು. ಇಲ್ಲವೆ ಬಹುಸಂಖ್ಯಾಕ ಭಾರತೀಯರು ಆಕ್ಷೇಪಿಸಿದ್ದರೂ ಬ್ರಿಟನ್ನು ತನ್ನ ಸಾಮ್ರಾಜ್ಯಶಾಹಿ ಶಕ್ತಿಯ ಮೂಲಕ ಭಾರತವನ್ನು ಯುದ್ಧಕುಂಡಕ್ಕೆಳೆದು ಜನ ಧನಗಳನ್ನು ವಿಪುಲವಾಗಿ ಸೆಳೆದು ಕೊಂಡಿತು. ಭಾರತದ ರಕ್ಷಣೆಯ ಖರ್ಚನ್ನು ಭಾರತವೇ ಹೊರುತ್ತಿದೆ. ಅದನ್ನು ಕಳೆದು ಬ್ರಿಟನ್ನು ಭಾರತದಿಂದ ಇತರ ತನ್ನ ಯುದ್ಧರಂಗಗಳಿಗೆ ಒಯ್ದ ಶಸ್ತ್ರಾಸ್ತ್ರ, ವಸ್ತ್ರ, ಆಹಾರಗಳ ಬೆಲೆಯನ್ನು ಕೊಡಲು ಕುತರ್ಕ ಮಾಡುತ್ತಿರುವುದು ಲಜ್ಜಾಸ್ಪದ ಸಂಗತಿ. ಹಣ ಕಾಸಿನ ಮಟ್ಟಿಗೆ ಹೇಗೂ ರಾಜಕೀಯದಲ್ಲೂ ಬ್ರಿಟನಿನ ಮನಸ್ಸಿನಲ್ಲಿ ವಂಚನೆಯಿಲ್ಲವೆಂದು ಸಂಪೂರ್ಣ ನಂಬಲಿಕ್ಕಾಗುವುದಿಲ್ಲವೆಂದು ಈವೊಂದು ನಿದರ್ಶನದಿಂದ ತಿಳಕೊಳ್ಳಬಹುದು!

"ಇಂದಿನ ನಮ್ಮ ಸ್ಥಿತಿಯನ್ನು ಸ್ಮರಿಸಿಕೊಂಡರೆ 'ನೀಲಕಣ್ಠ ವಿಜಯ'ವನ್ನು ಬರೆದ ನೀಲಕಂಠ ದೀಕ್ಷಿತರು ದೇವತೆಗಳನ್ನು ಕುರಿತು ಹೇಳಿದ ಮಾತುಗಳೂ, ಈಗಿನ ಕಾಲದ ಸುಖ ಸಂಪತ್ತುಗಳ ಶಿಖರದಲ್ಲಿರುವ ಶ್ರೀಮತಿ ಮೆರಿಸಿಕ್‌ಫರ್ಡ್ ಎಂಬಾಕೆಯು ಹೇಳಿರುವ ಮಾತುಗಳೂ ಏಕಕಾಲದಲ್ಲಿ ನನ್ನ ನೆನಪಿಗೆ ಬರುತ್ತವೆ. ಮೊದಲು ಆಕೆಯ ಮಾತುಗಳನ್ನೇ ಸೂಚಿಸುತ್ತೇನೆ. ನಿಮ್ಮ ಹೆಸರಿನಲ್ಲಿ ಹತ್ತು ಲಕ್ಷ ಡಾಲರುಗಳು ಬೇಂಕಿನಲ್ಲಿದ್ದು ನಿಮಗೆ ಚೆಕ್ ಬರೆಯಲು ಬಾರದಿದ್ದರೆ ನಿಮಗೆ ಆ ಹಣದಿಂದ ಹೆಚ್ಚು ಪ್ರಯೋಜನವಿಲ್ಲ ಅಲ್ಲವೆ? ನಿಮ್ಮ ಗೆರೇಜಿನಲ್ಲಿ ಒಂದು ಮೋಟರ್ ಕಾರ್ ಇದ್ದು ಅದು ಹೊರಡುವಂತೆ ಮಾಡುವ ಬೀಗದ ಕೈಯನ್ನು ನೀವು ಕಳೆದುಕೊಂಡಿದ್ದರೆ ನೀವು ಎಲ್ಲಿಗೂ ಬಹಳ ವೇಗವಾಗಿ ಹೋಗುವಂತಿಲ್ಲ ಅಲ್ಲವೆ? ಇವತ್ತು ಮಾನವ ವರ್ಗಕ್ಕೆ ಒದಗಿರುವ ಗತಿಯೂ ಸುಮಾರು ಇದೇ ಬಗೆಯದು." ನೀಲಕಂಠ ದೀಕ್ಷಿತರ ಮಾತುಗಳ ತಾತ್ಪರ್ಯ ಹೀಗಿದೆ: "ದೇವತೆಗಳಿಗೆ ಆಸ್ವಾದಿಸಲು ಅಮೃತವಿದೆ, ಧರಿಸಲು ದಿವ್ಯಾಂಬರಗಳಿವೆ, ಅಲಂಕರಿಸಲು ನಾನಾರು ತೊಡಿಗೆ ಆಭರಣಗಳಿವೆ. ಆದಾಗ್ಯೂ ಸುಖವಾಗಿ ಬಾಳುವುದಕ್ಕೆ ಒದ್ದಾಡುತ್ತಾರೆ. ಏಕೆಂದರೆ ಕರ್ಮಾತ್ಯ ಲಭ್ಯವಾದ ದೇವತ್ವವನ್ನು ಪಡೆದಿರುವುದರಿಂದ ಸ್ವತಂತ್ರರಾಗಿಯೂ ಸುಖವಾಗಿಯೂ ಬಾಳುವುದನ್ನು ಬಿಟ್ಟು ದುರ್ಮೋಧಸರಾದ ಅವರು ಸೇವಕನೆಂದೂ ಸ್ವಾಮಿಯೆಂದೂ (ಎಂದರೆ ಕೀಳೆಂದೂ ಮೇಲೆಂದೂ) ವೃಥಾ ಭೇದಗಳನ್ನು ಕಲ್ಪಿಸಿಕೊಂಡು ಕ್ಲೇಶಪಡುತ್ತಾರೆ." ಅವರಿಬ್ಬರ ಮಾತುಗಳೂ ನನಗೆ [illegible] ಅರ್ಥಗರ್ಭಿತವಾಗಿರುವ ಆ ಮಾತುಗಳನ್ನು ಅನೇಕ ರೀತಿಯಲ್ಲಿ [illegible] ಳ್ಳಬಹುದಾದರೂ ನಾನು ಒಂದೆರಡು ಸಂಗತಿಯನ್ನು [illegible] ತಿಸುತ್ತೇನೆ.

"ನಾವುಗಳು ಸರ್ವ ಸಮೃದ್ಧವಾದ ನಾಡಿನಲ್ಲಿ ಹುಟ್ಟಿ ಪವಿತ್ರವಾದ ಜೀವನದ ಭಾರತೀಯ ಸಂಸ್ಕೃತಿಯ ಆಶ್ರಯದಲ್ಲಿದ್ದು ಕೂಡಾ "ನಾನು ಮೇಲು, ತಾನು ಮೇಲು, ಅವನು ಕೀಳು, ಇವನು ಕೀಳು" ಎಂಬ ಭಾವನೆಯನ್ನು ವೃದ್ಧಿಪಡಿಸಿಕೊಂಡೆವು. "ಈಶ್ವರನು ಸರ್ವಭೂತಗಳ ಹೃದಯಗಳಲ್ಲಿಯೂ ಇದ್ದಾನೆ, ಅರ್ಜುನ" ಎಂಬ ದಿವ್ಯ ವಾಣಿಯ ಅರ್ಥವನ್ನು ಸರಿಯಾಗಿ ಸಮನ್ವಯ ಮಾಡಿ ಮಾನವ ಜನ್ಮದ ಘನತೆಯನ್ನು ಗ್ರಹಿಸಿ ವರ್ತಿಸಲಾರದೆ ಹೋದೆವು. ಉಪನಿಷತ್ತಿನ "ಹೆಂಗುಸು ನೀನೆ ಗಂಡಸು ನೀನೆ, ಯುವಕನೂ ನೀನೆ ಯುವತಿಯೂ ನೀನೆ, ವೃದ್ಧಾಪ್ಯದಿಂದ ದೊಣ್ಣೆಯನ್ನು ಹಿಡಿದಿರುವ ಮಾಟಗಾರನೂ ನೀನೆ, ಜನ್ಮ ಧಾರಣೆ ಮಾಡಿ ನೀನು ಸರ್ವತೋಮುಖನಾಗಿರುವೆ" ಎಂಬ ಅಮರ ವಾಣಿಗಳನ್ನು ಅರಗಿಸಿಕೊಂಡು ರಕ್ತಗತ ಮಾಡಿಕೊಳ್ಳಲಾರದೆ ಹೋದೆವು.

"ಅಡಿಗೆ ಮಾಡುವ ಕೆಲಸವು ಕೀಳು, ಸಂಪಾದನೆ ಮಾಡುವ ಕೆಲಸವು ಮೇಲು" ಎಂಬ ಮೂರ್ಖತೆಯ ಭಾವನೆಯಿಂದ ಮಹಿಳೆಯರನ್ನು ಕಡೆಗಂಡು ಜನಾಂಗದ ಅರ್ಧಭಾಗಕ್ಕೇ ಅನ್ಯಾಯ ಮಾಡಿದೆವು. ಪರಮೇಶ್ವರನ ಪಟ್ಟದ ರಾಣಿಯಾದ ಆದಿ ಶಕ್ತಿಯ ಒಂದು ಹೆಸರು ಅನ್ನಪೂರ್ಣೆಯೆಂಬುದನ್ನೂ ಸೂಪವಿದ್ಯೆಯನ್ನು ನಮ್ಮ ಹಿರಿಯರು ಪಾಕಶಾಸ್ತ್ರವೆಂಬ ಹೆಸರಿನಿಂದ ಕರೆಯುತ್ತಿರುವುದನ್ನು ಭೀಮಸೇನನು ನಳಚಕ್ರವರ್ತಿಯೂ ಪಾಕಶಾಸ್ತ್ರ ಪರಿಣತರಾಗಿದ್ದರೆಂಬುದನ್ನೂ ಮರೆತು ಮಹಿಳೆಯರು ಕೀಳೆಂದು ಭಾವಿಸಿ ಮಹಿಳಾ ಕುಲಕ್ಕೆ ಅಪಮಾನ ಮಾಡಿದೆವು.

ಸಾಹಿತ್ಯವು ಸದಾ ಪ್ರಗತಿಶೀಲವುಳ್ಳದ್ದು

ಮೇಲು ಕೀಳು ಭಾವನೆಗೆ ಅವಿಚಾರವೇ ಕಾರಣ

ಸ್ತ್ರೀ ಸಮಸ್ಯೆ, ಜಾತಿ ಸಮಸ್ಯೆಗಳಿಗೆ ಪರಿಹಾರ

ಜಾತೀಯ ವೈಪರಿತ್ಯ

ಭಾರತ ಮಾತೆಯ ರತ್ನ ಕಂಕಣದಂತಿದ್ದ ಜಾತಿ ಪದ್ಧತಿಯು ನಮ್ಮ ಅವಿವೇಕದ ದೆಸೆಯಿಂದ ಕಬ್ಬಿಣದ ಬಳೆಯಾಗುವಂತೆ ಮಾಡಿದೆವು. ವಿಶ್ವಕವಿ ರವೀಂದ್ರರು ಹೇಳಿರುವಂತೆ, ಜಾತಿ ಪದ್ಧತಿಯು ದೂರದೃಷ್ಟಿಯುಳ್ಳ ಮೇಧಾವಿಗಳಾದ ನಮ್ಮ ಹಿರಿಯರಿಂದ ಕಲ್ಪಿತವಾದ ಅಮೃತ ಫಲ. ಹಿಂದೆ ಅಮೇರಿಕಾದವರು ಕಲ್ಪಿಸಿದ ಸಂಯುಕ್ತ ರಾಜ್ಯಾಂಗ ವ್ಯವಸ್ಥೆಗಿಂತಲೂ ಹೆಚ್ಚಿನ ವ್ಯಾಪ್ತಿಯುಳ್ಳದಾಗಿ ವ್ಯವಹಾರ ಪ್ರಪಂಚವನ್ನು ಒಳಗಿದ ಬುದ್ಧಿ ಕೌಶಲ್ಯದ ಕಾರ್ಯಸಿದ್ಧಿ. ಆ ಅಮೃತಫಲವನ್ನು ನಮ್ಮ ಅಜ್ಞಾನದಿಂದ ವಿಷಫಲವನ್ನಾಗಿ ಮಾಡಿಕೊಂಡೆವು. ಆತ್ಮ ಕಲ್ಯಾಣ ಸಾಧನೆಗಾಗಿ ಅವರವರ ಮನೆಗಳಲ್ಲಿ ಮಾತ್ರವೇ ಅನುಷ್ಠಾನದಲ್ಲಿದ್ದ ಸರ್ವರಲ್ಲಿಯೂ ಪರಸ್ಪರ ಪ್ರೀತಿಯು ವೃದ್ಧಿಯಾಗಲು ಸಹಾಯಕವಾಗಬೇಕಾಗಿದ್ದ ಜಾತಿಮತ ಧರ್ಮಗಳ ದುರುಪಯೋಗವು ಪ್ರಬಲವಾಗಿ ಅವುಗಳನ್ನು ಅನ್ಯಾಯವಾಗಿ ಇತರ ರಾಜಕೀಯ, ಸಾಮಾಜಿಕ ಕಾರ್ಯರಂಗಗಳಿಗೆ ಸಳೆದು ಅನರ್ಥ ಮಾಡಿಕೊಂಡೆವು. ಇದನ್ನು [illegible] ಹೇಳಿದರೂ ತೀರದು.

ಇವುಗಳೆಲ್ಲದರ ವಿಷಮ ಪರಿಣಾಮವು [illegible] ಅಮೃತ [illegible] ಹೋಲಿಸಿ ನೋಡತಕ್ಕದಾಗಿತ್ತು. ಇದಕ್ಕೆ ಹಿಂದಿನ ಕೆಲವು ತಲೆಮಾರುಗಳವರು ಮಾಡಿದ [illegible] ಕಾರಣವೆಂದು ಈ ತಲೆಮಾರಿನವರಾದ ನಾವು ತೃಪ್ತಿಪಟ್ಟುಕೊಳ್ಳುವಂತಿಲ್ಲ. ಏಕೆಂದರೆ ಈ ಕಾರಣವೇ ಒಂದಲ್ಲವಿದ್ದರೆ [illegible] ದಿನ ಕೆಲವು ಶತಮಾನಗಳಿಂದ ಇಂದಿನ ವರೆಗೂ ನಡೆಯುತ್ತಲೇ ಬಂದ [illegible] "ಈ ರಾಷ್ಟ್ರ ಮೇಲು, ಆ ರಾಷ್ಟ್ರ [illegible] ಎಂದು ಕಡಿದಾಟವಾಯಿತು. "ಗಂಡಸರು ಮೇಲು, ಹೆಂಗಸರು ಕೀಳು" ಎಂದು ಅಬ್ಬರಿಸಿ ನಾವು ಕೋಲಾಹಲ ಮಾಡಿದುದಾಯಿತು. "ಇಂಗ್ಲಿಷ್ ಬಲ್ಲವರು ಮೇಲು, ಇಂಗ್ಲಿಷ್ ಬಲ್ಲದಿದ್ದವರು ಕೀಳು" ಎಂಬ ಭಾವನೆಯಿಂದ ನಮ್ಮವರನ್ನು ನಾವೇ ಕಡೆಗಂಡುದಾಯಿತು. "ಧನಿಕರು ಮೇಲು, ದರಿದ್ರರು ಕೀಳು" ಎಂದು ನಾವು ವಿಜೃಂಭಿಸಿದುದಾಯಿತು. "ಈ ಭಾಷೆ ಮೇಲು, ಉಳಿದ ಭಾಷೆ ಕೀಳು" ಎಂದು ನಾವು ಕಲಹ ಮಾಡಿದುದಾಯಿತು.

ಪ್ರಗತಿಶೀಲ ಸಾಹಿತ್ಯ

ಈಗ ಮುದುಕರ ಮತ್ತು ಯುವಕರ ಹೋರಾಟವಾರಂಭವಾದಂತೆ ತೋರುತ್ತಿದೆ. ಇದರ ಮೂಲ ಕಾರಣವೂ ಮೇಲು ಕೀಳೆಂಬ ಭಾವನೆಯ ಗೊಂದಲವೇ. ಉಭಯ ಪಕ್ಷಗಳಲ್ಲಿ ಹಲವರ ಮನಸ್ಸಿನಲ್ಲಿ ಅದು ಮೂಡಿರುವುದರ ಪ್ರಭಾವವೇ. ಹಾಗಾದರೆ ಈ ಕುತ್ತಗಳಿಂದ ಪಾರಾಗಲು ಮಾರ್ಗವೇ ಇಲ್ಲವೆ? ಮಾರ್ಗವಿದೆ. ನಾವೆಲ್ಲರೂ ಈ [illegible] ಭಾವನೆಗಳನ್ನೆಲ್ಲ ಸಾಹಿತ್ಯ ಕ್ಷೇತ್ರದಲ್ಲಿ [illegible] ತೊಡೆದು ಹಾಕಿ ನಾವೆಲ್ಲರೂ ಒಬ್ಬಳೇ ದೇಶಮಾತೆಯ ಮಕ್ಕಳಾದ ಕನ್ನಡ ಭಾಂಧವರೆಂಬ ಭಾವನೆಯಿಂದ ಉದ್ದೀಪಿತರಾಗಿ ನಮ್ಮೆಲ್ಲರ ಹೃದಯಗಳೂ ಒಂದಾಗುವಂತೆ ಮಾಡಿಕೊಳ್ಳುವುದೇ ಅದಕ್ಕಿರುವ ರಾಜಮಾರ್ಗ. ವಿರೋಧವೇ ವಿಷದ [illegible] ಯಾರಲ್ಲಿ ಯಾವ ರೂಪದಲ್ಲಿದ್ದರೂ ಅದನ್ನು ಕಿತ್ತು ಹಾಕಿ [illegible] ವರ್ತಿಸುವ [illegible]

"ನಾನು ಯಾರು? ನಾನು ಒಂದುದಲ್ಲಿಂದ ನಾನು ಇರುವುದೆಷ್ಟು [illegible] ಹೋಗುವ [illegible] ನನ್ನ ಕರ್ತವ್ಯ [illegible] ನನ್ನ ಸಾಧ್ಯ [illegible] ಆ ರಾಜಮಾರ್ಗದ ಇಕ್ಕೆಲಗಳಲ್ಲಿ [illegible] ಯಾನಿಕರಿಗೆ [illegible] ಸುಖವನ್ನು ಕೊಡುತ್ತ ಒಕಾಲದಲೂ ಹೊಸ ಸಂತಸವ ಸಾರುವ ಮರಗಳು.

"ದೇವನೊಬ್ಬ ನಾಮ ಹಲವು" "ನಾಥನೊಬ್ಬ ತಾ ಘನ್ನನೆನ್ನದಿರಿ। ಘನ್ನನೊಬ್ಬನೇ ಕಾಣಿರೊ ಪುರಂದರ ವಿಠಲ" ಎಂಬ ಅಮರ ವಾಣಿಗಳೂ, ಕನಕದಾಸರ "ನಾನು ನೀನು ಎನ್ನದಿರೊ ಹೀನ ಮಾನವಾ" ಎಂಬ ಪವಿತ್ರ ವಾಣಿಗಳೂ ಆ ರಾಜಮಾರ್ಗದಲ್ಲಿ ಆಯಾಸ ಕಾಣದಂತೆ ಪ್ರಯಾಣಿಕರಿಗೆ ನೆರವಾಗುವ ಮೋಹನ ಗೀತೆಗಳು. ಆ ಮಾರ್ಗದಲ್ಲಿ ಆದಷ್ಟು ದೂರ ಮುಂದರಿದು ನಮ್ಮೆಲ್ಲರ ಹೃದಯಗಳೂ ಒಂದಾಗುವಂತೆ ಮಾಡಿಕೊಳ್ಳುವ ವರೆಗೂ ಸಾಹಿತ್ಯ ಕ್ಷೇತ್ರದಲ್ಲಾಗಲಿ ಅಥವಾ ಮತ್ತಾವ ಕಾರ್ಯರಂಗದಲ್ಲಾಗಲೀ ದೊಡ್ಡ ಕೆಲಸವಾವುದೂ ಸಾಗುವಂತಿಲ್ಲ. ಸಾಹಿತ್ಯ ಸಂಗೀತಕಲಾ ಕ್ಷೇತ್ರಗಳಲ್ಲಿ ಅರ್ಥಾತ್ ಸರಸ್ವತಿಯ ದೇವಾಲಯದಲ್ಲಿ ಅಸ್ಪೃಶ್ಯತೆಗೆ ಅವಕಾಶವಿಲ್ಲ. ಹೆಂಗುಸು ಗಂಡಸೆಂಬ ಅಥವಾ ಮುದುಕರು ಯುವಕರೆಂಬ ಭೇದವಿಲ್ಲ. ಧನಿಕರು ದರಿದ್ರರೆಂಬ ಕೋಟಲೆಯಿಲ್ಲ. ವೀಣಾ ಪುಸ್ತಕಧಾರಿಣಿಯಾದ ವಾಗ್ದೇವತೆಗೆ ಪುಷ್ಪಾಂಜಲಿಯನ್ನರ್ಪಿಸಲು ಭಕ್ತರೆಲ್ಲರಿಗೂ ಅಧಿಕಾರವುಂಟು.

ಸರಸ್ವತೀ ದೇವಿಯ ಕೈಯಲ್ಲಿರುವುದು ಬೃಹತೀ ವೀಣೆ. ಅದರಲ್ಲಿರುವ ಮೆಟ್ಟಲುಗಳಿಗೆ ಲೆಕ್ಕವಿಲ್ಲ. ಅದರಲ್ಲಿ ನುಡಿಯುವ ಸ್ವರಗಳು ಅನಂತ. ದೇವಿ ಸರಸ್ವತಿಯು ನುಡಿಸುವ ರಾಗಗಳ ಸಂಖ್ಯೆಗಾಗಲಿ ವ್ಯಾಪ್ತಿಗಾಗಲಿ ಪರಿಮಿತಿಯೇ ಇಲ್ಲ. ಸರಸ್ವತಿ ದೇವಿಯು ಲಾವಣ್ಯಮಯಿ, ಚಿನ್ಮಯಿ, ಆನಂದಮಯಿ, ಮಂಗಳಮಯಿ. ಭಕ್ತರ ಚಿತ್ತ ಸ್ವರ್ಯಕ್ಕನುಸಾರವಾಗಿ ಅವರವರ ಹೃದಯಗಳಲ್ಲಿ ಪ್ರತಿಬಿಂಬಿಸಿ ಅನುಗ್ರಹಿಸುವ ವಾತ್ಸಲ್ಯಮಯಿಯಾದ ವಿಶ್ವಮಾತೆ. ಭಕ್ತರೆಲ್ಲರ ಹೃದಯಗಳೂ ತಾಯಿ ಸರಸ್ವತಿಯ ಮೇಲಿನ ಭಕ್ತಿಯೆಂಬ ಸುವರ್ಣ ಸೂತ್ರಕ್ಕೆ ಪೋಣಿಸಿರುವ ಜೀವ ರತ್ನಗಳು. ಎಷ್ಟು ಜೀವ ರತ್ನಗಳನ್ನಾದರೂ ಧರಿಸಬಲ್ಲಷ್ಟು [illegible] ಆ ಸುವರ್ಣ ಸೂತ್ರ. ಆ ಜೀವ ರತ್ನಗಳನ್ನು ನಿರಂತರವೂ ಬೆಳಗಿಸುವುದು [illegible] ಮಹದಾಸೆ."

(ಹರಪನಹಳ್ಳಿ ಸಾಹಿತ್ಯ ಸಮ್ಮೇಳನಾಧ್ಯಕ್ಷ ಶ್ರೀ ಸಿ. ಕೆ. ವೆಂಕಟರಾಮಯ್ಯ ಅವರ ಭಾಷಣದಿಂದ)

ESTD 1906

CANARA BANK, LIMITED.

(Incorporated in British India with Limited Liability)

(PROGRESS STATEMENT CORRECT TO THOUSANDS OF RUPEES)

LIABILITIES	1945	1946	ASSETS	1945	1946
Capital Subscribed	29,00,000	29 00,000	Cash	1,01,91 000	1,16 16 000
Capital paid up	28,43,000	28 80,000	Govt Securities	1,80 40,000	2 75,61 000
Reserve	11,00,000	11,00,000	Advances to customers	1 56,87,000	2,01 38,000
Deposits	3,50,43,000	4,60,40,000	Bills for collection and Foreign Bills negotiated	20 06,000	34,23 000
Due to Bankers	26,91,000	69,57,000	Landed Properties	28,000	5,000
Call Deposits from Bankers	8,00,000	15,00,000	Bank Premises and Furniture and Fixtures	1,46,000	1,47,000
Branch Adjustments	22,07,000	21,09,000	Other Assets	10,25,000	16,23,000
Bills for collection and foreign bills negotiated	20,56,000	34,23,000			
Other Liabilities	77,000	85,000			
Profit for the year	3,61,000	4,19,000			
Rs	4,71,78,000	6,45 13,000	Rs.	4,71,78,000	6,45,13,000

ತಾಯಿ ಭಾರತಾಂಬೆ, ಪುತ್ರಿ ಕನ್ನಡಾಂಬೆ

ಸಾಹಿತ್ಯ ಸೇವಕರು ಕಾಣುವ ದಿವ್ಯನೋಟ

ಹರಪನಹಳ್ಳಿ, ಸಮ್ಮೇಳನಾಧ್ಯಕ್ಷರ ಪರಿಸಮಾಪ್ತಿ ಭಾಷಣ

ಕರ್ನಾಟಕ ಭೂಖಂಡ ಕಾಣದ ತಮ್ಮಲ್ಲಿ ನಾನು ಪ್ರತಿನಿಧಿಸುವ ನಾವೆಲ್ಲರೂ ಒಕ್ಕಟ್ಟಿನ ತಪಸ್ಸನ್ನು ಗೈದಲ್ಲಿ ನಿಶ್ಚಯ ಒಮ್ಮೆಯ ಪ್ರಯತ್ನದಿಂದ ತಪಸ್ಸಿದಲ್ಲದೆ, ಮುಂದಿನ ಹಿತಕರವಾದ ಮತ್ತು ಭವ್ಯತರವಾದ ಕನ್ನಡನಾಡನ್ನು ಕಟ್ಟಲಾರೆವು. ಅದು ಸುಮ್ಮನೆ ಸ್ವಾರ್ಥ, ಸಂಘಟನೆಯಿಂದ ಸಾಧ್ಯವಾಗುವ ಕೆಲಸವೇ ಹೊರತು, ಮಾತುಗಳ ಸುರಿಮಳೆಯಿಂದಲೂ, ಉದ್ರೇಕದ ಘೋಷಣೆಗಳಿಂದಲೂ, ಪರಸ್ಪರ ದೂಷಣೆಗಳಿಂದಲೂ ಸಾಗುವ ಕೆಲಸವಲ್ಲ. ನಾನು ಈ ಮೊದಲೇ ಸೂಚಿಸಿರುವಂತೆ ಪ್ರಾರಂಭದಲ್ಲಿ ಸಾಹಿತ್ಯಕ್ಷೇತ್ರದಲ್ಲಾದರೂ ಆ ಜಾತಿ ಈ ಜಾತಿಯೆಂಬ ಭೇದವನ್ನೂ, ವೃದ್ಧರು ತರುಣರು, ಗಂಡಸರು ಹೆಂಗಸರು, ಸಂಪ್ರದಾಯ ಪ್ರೇಮಿಗಳು ಪ್ರಗತಿಶೀಲರು—ಎಂಬಿವೇ ಮುಂತಾದ ಭಿನ್ನ ಭಾವನೆಗಳನ್ನೂ ಮರೆತು ಕನ್ನಡಿಗರೆಲ್ಲರೂ "ಕನ್ನಡ ಕುಲ"ವೆಂಬ ಭಾವನೆಯಿಂದ ಒಟ್ಟುಗೂಡಿ ಕೆಲಸ ಮಾಡುವುದು ಸಾಧ್ಯವಾಗಲು ಸಹಾಯವಾಗಲೆಂಬ ಒಂದೇ ಒಂದು ಉದ್ದೇಶದಿಂದ, ನಾನು ಈ ಭಾಷಣದ ನಾನಾ ಸಂಗತಿಗಳನ್ನೂ ಬಿನ್ನೈಸಿದ್ದೇನೆ; ಅದು ಸಾಧ್ಯವಾದರೆ ಸಂತೋಷ ಸಾಹಿತ್ಯ ಸೇವಕರೆಲ್ಲರೂ ಸತ್ಯಪ್ರಿಯರಾಗಿ, ಸೌಂದರ್ಯೋಪಾಸಕರಾಗಿ, ಪ್ರತಿಭೆ ಪಾಂಡಿತ್ಯಗಳ ಸಹಾಯದಿಂದ ಭಾರತೀಯ ಸಂಸ್ಕೃತಿಯ ಪಡಿಯಚ್ಚಿನಲ್ಲಿ ಒಟ್ಟು ಮಾನವ ವರ್ಗಕ್ಕೇ ಮಂಗಳದಾಯಕವೆನಿಸುವ ರಮಣೀಯವಾದ ಸಾಹಿತ್ಯ ಕೃತಿಗಳನ್ನು ಎರಕ ಹೊಯ್ದು ಸಿದ್ಧಗೊಳಿಸಬೇಕು ವಿಶ್ವಮಾತೆಯಾದ ವಾಗೀಶ್ವರಿಯು ಸಾಹಿತ್ಯ ಪ್ರೇಮಿಗಳಲ್ಲಿ ಪ್ರತಿಯೊಬ್ಬರಿಗೂ ಒಂದಲ್ಲದಿದ್ದರೆ ಮತ್ತೊಂದು ವಿಧದಲ್ಲಿ ಯಥೇಷ್ಟವಾದ ಸೇವಾವಕಾಶವನ್ನೊದಗಿಸಿ ಕೃಪೆ ಮಾಡಿದ್ದಾಳೆ

ಭಾಷಾಪ್ರಾಂತ

ಭರತಖಂಡದ ನೂತನ ವ್ಯವಸ್ಥೆಯಲ್ಲಿ ತೆಲುಗು ಬಾಂಧವರು, ತಮಿಳು ಬಾಂಧವರು ಕೇರಳಬಾಂಧವರು ಮುಂತಾದವರಲ್ಲಿ ತಮ್ಮ ತಮ್ಮ ಪ್ರಾಂತಕ್ಕೂ, ತಮ್ಮ ತಮ್ಮ ಭಾಷೆಗೂ ಯಾವ ಸ್ಥಾನಮಾನಗಳನ್ನು ಪಡೆಯುವರೋ ಅವೇ ಸ್ಥಾನಮಾನಗಳೇ ಕನ್ನಡ ನಾಡಿಗೂ ಮತ್ತು ಕನ್ನಡ ಭಾಷೆಗೂ ದೊರೆಯುವಂತೆ ಸರ್ವಪ್ರಯತ್ನಗಳನ್ನೂ ಸಫಲರೀತಿಯಲ್ಲಿ ನೆರವೇರಿಸಿ ಚರಿತಾರ್ಥರಾಗೋಣ! ನಾವೆಲ್ಲರೂ ಸೋದರ ಭಾವದಿಂದಲೂ ಐಕಮತ್ಯದಿಂದಲೂ ಒಟ್ಟುಗೂಡಿ ಜೀವನದ ಸಮಸ್ತ ಕಾರ್ಯಕ್ಷೇತ್ರಗಳಲ್ಲಿಯೂ ಕನ್ನಡ ನಾಡಿಗೆ ಮುನ್ನಡೆಯುರುವಂತೆ ಅಭ್ಯುದಯ ಸಾಧನೆಮಾಡಿ, ಪ್ರೇಯಸ್ಸು ಶ್ರೇಯಸ್ಸುಗಳೆರಡೂ ಸಮ್ಮಿಳಿತವಾಗಿ ಸೇರಿರುವಂತೆ ಕಾರ್ಯರಂಗವನ್ನು ರೂಪಿಸಿ, ಕಾಲಕ್ರಮದಲ್ಲಿ ಕನ್ನಡ ನಾಡು ಪ್ರಪಂಚಕ್ಕೇ ಆದರ್ಶವಾಗಲನುಕೂಲಿಸುವಂತೆ ನಿರ್ವಂಚನೆಯಿಂದ ನಮ್ಮ ಕರ್ತವ್ಯಗಳನ್ನು ಪಾಲಿಸಿ ಧನ್ಯರಾಗೋಣ! ವಿಶ್ವಸಾಹಿತ್ಯ ಸಂಸ್ಕೃತಿಗಳ ಭಂಡಾರಕ್ಕೆ ಇತರ ದೇಶಗಳವರ ಕಾಣಿಕೆಗಳ ಜೊತೆಗೆ ನಮ್ಮ ಕಾಣಿಕೆಯನ್ನೂ ಸಮರ್ಪಿಸಿ ನಮ್ಮ ಜೀವನವನ್ನು ಸಾರ್ಥಕಪಡಿಸಿಕೊಳ್ಳೋಣ!

ತ್ರಿಜಗನ್ಮಯಿಯಾದ ಭಾರತಮಾತೆಯ ಪುತ್ರಿಯೂ, ಸೌಭಾಗ್ಯಸ್ವರೂಪಿಣಿಯೂ, ಪರಮಯೋಗಿನಿಯೂ ಆದ ಕನ್ನಡ ತಾಯಿಯು ತನ್ನ ನಾಡನ್ನೆಲ್ಲ ಸುತ್ತಿ, ಸುತ್ತಿ, ಮಂಗಳ ಪ್ರಭಾತ ಗೀತೆಯನ್ನು ಹಾಡುತ್ತ ಮನೆಮನೆಗೂ ಹೋಗಿ ಬಾಗಿಲುಗಳನ್ನು ತಟ್ಟಿ ತಟ್ಟಿ, ಪಣೆದು ಬಂದಿದ್ದಾಳೆ. ತಾನೇ ಸುಪ್ರಭಾತ ಗೀತೆಯನ್ನು ಹಾಡಿ ಬಂದಮೇಲೂ ಹಲವರು ನಿದ್ರಿಸುತ್ತಿದ್ದುದನ್ನು ಕಂಡು ವಿಷಾದಪಟ್ಟಿದ್ದಾಳೆ ತನ್ನಿಂದಲೇ ಉಪಕಾರ ಹೊಂದಿದವರನೇಕರು ತನಗೇ ಕೇಡೆಣಿಸಿದುದನ್ನು ಕಂಡು ತಲ್ಲಣಗೊಂಡಿದ್ದಾಳೆ. ತನ್ನ ಸಿದ್ಧಿಗಗಳನ್ನು ತನ್ನ ಮಕ್ಕಳೇ ಅಲಕ್ಷ್ಯಮಾಡಿ, ಪರಕೀಯರ ಅನುಗ್ರಹಕ್ಕಾಗಿ ಬಾಯಿಬಿಡುವ ಆತ್ಮಗೌರವ ವಿಹೀನವಾದ ಮರುಳಾಟವನ್ನು ಕಂಡು ಮನಮರುಗಿದ್ದಾಳೆ

ಕನ್ನಡ ಭಾರತಿ

ಕಾವೇರಿಯಿಂದ ಗೋದಾವರಿಯುವರೆಗೆ ಮತ್ತೆ ಮತ್ತೆ ದೃಷ್ಟಿಸಿ ನೋಡಿ, ಹಿಂದಿನ ವೈಭವದ ದಿನಗಳನ್ನು ನೆನೆದು, ತಾನು ದ್ವಂದ್ವಾತೀತೆಯಾದ ಯೋಗಿನಿಯೆಂಬುದನ್ನೂ ಮರೆತು ನಿಟ್ಟುಸಿರುಬಿಡುತ್ತ ನಿಂತಿದ್ದಾಳೆ ಒಟ್ಟು ಸೃಷ್ಟಿಯೇ ಸ್ವರ್ಗೀಯ ಕಾಂತಿಯಲ್ಲಿ ಮಿಂದು, ನೈರ್ಮಲ್ಯದ ಮಡಿಯನ್ನುಟ್ಟು, ಭಕ್ತಿ ಜಪಮಾಡುತ್ತಿರುವಂತೆ ತೋರುತ್ತಿರುವ ಆನಂದಧಾಮವಾಗಿರುವುದನ್ನು ಕಂಡು ಬೆಚ್ಚುತ್ತಾಳೆ ವಿಶ್ವಸೂತ್ರಧಾರಿ ಪರಮ ಮಂಗಳಮೂರ್ತಿ ನಟರಾಜನೇ ಅನೇರಡರ ಹಿನ್ನಲೆಯಲ್ಲಿ ಆ ಮಂಗಳ ಪ್ರಭಾತ ಗೀತದ ಸುಧಾತರಂಗದ ಮೂರ್ತಸ್ವರೂಪವೋ ಎಂಬಂತೆ ನರ್ತಿಸುತ್ತ ನಿಂತಿರುವುದನ್ನು ಕಂಡು ಭಕ್ತಿನಮ್ರಳಾಗಿ ಆನಂದಬಾಷ್ಪವನ್ನು ಸುರಿಸುತ್ತ ನಿಂತಿದ್ದಾಳೆ, ನಮ್ಮ ಕನ್ನಡ ತಾಯಿ ಸಚ್ಚಿದಾನಂದಮಯನಾದ ನಟರಾಜನ ಸುಂದರ ವದನದಲ್ಲಿ ಮಂದಹಾಸವು ಮಿನುಗುತ್ತದೆ ಒಡನೆಯೇ ನಕ್ಷತ್ರವೃಷ್ಟಿ ಗಾರಂಭವಾಗಿ, ಒಂದೊಂದು ನಕ್ಷತ್ರವೂ ಕನ್ನಡತಾಯಿಯ ಪದಕಮಲಗಳಿಗೆ ಸೋಂಕಿದೊಡನೆಯೇ ಒಂದೊಂದು ಪುಷ್ಪವಾಗಿ ಪರಿಣಾಮ ಹೊಂದಿ ಸುತ್ತಲೂ ಪುಷ್ಪರಾಶಿಯೇಳುತ್ತದೆ ಅವಳು ಮತ್ತಷ್ಟು ಆಶ್ಚರ್ಯ ಭರಿತೆಯಾಗಿ ಆ ನಕ್ಷತ್ರಗಳನ್ನು ದೃಷ್ಟಿಸಿ ನೋಡಿ, ಭೂಲೋಕದ ಮಹಿಮೆಯಾಗಿದ್ದ ತನ್ನ ಮುದ್ದು ಮಕ್ಕಳಾದ ವಿಭೂತಿಪುರುಷರೇ—ನಾನಾ ಕಾರ್ಯಕ್ಷೇತ್ರಗಳಲ್ಲಿಯ ಜ ಸೇವೆಯನ್ನು ಸಲ್ಲಿಸಿ ಧನ್ಯರಾದ ತೇಜಸ್ವಿಗಳೇ—ಆ ನಕ್ಷತ್ರಗಳ ರೂಪದಲ್ಲಿ ಧರೆಗಿಳಿದು ಬಂದು, ಆ ಬಳಿಕ ಪುಷ್ಪಗಳ ರೂಪದಲ್ಲಿ ತನ್ನನ್ನು ಓಲೈಸುತ್ತಿರುವುದನ್ನು ಕಂಡು ಅವಳು ನಲಿಯುತ್ತಾಳೆ, ಅಷ್ಟರಲ್ಲಿ ಅಮೃತ ಹಸ್ತದ ಆನಂದ ಸ್ಪರ್ಶವನ್ನನುಭವಿಸಿ ಸುಖಮಯಿಯಾಗಿ ಹಿಂತಿರುಗಿ ನೋಡುತ್ತಾಳೆ ಪಾವನಸ್ವರೂಪಳಾದ ಭಾರತಮಾತೆ! "ನೋಡು, ನೋಡು, ಮಂಗಳ ಸ್ವರೂಪಿಣಿ! ನಿನ್ನ ಸೌಭಾಗ್ಯರಾಶಿಯನ್ನು ನೋಡಿ ಸಂತಸಪಡು" ಎಂದು ಹೇಳುತ್ತಿರುವಳೋ ಎಂಬಂತೆ ಅರಳಿದ ಕಣ್ಣುಗಳಿಂದ ಮಗಳನ್ನು ನೋಡುತ್ತ, ಮೈದಡವುತ್ತ ಹಿಂದೆ ನಿಂತಿದ್ದಾಳೆ, ಭಾರತಮಾತೆ!

ಒಟ್ಟು ಭಾರತಭೂಮಿಯೇ ಕಮಲಮಯವಾಗಿ ತನ್ನ ಕಮನೀಯ ಸೌಂದರ್ಯದಿಂದ ಮುದ್ದು ಬೀರುತ್ತಿದೆ ಇಂದ್ರಭೋರ ವಿಧಾನ ರೂಪದಲ್ಲಿಯೂ ಧಾರ್ಮಿಕ ಸಿದ್ಧಾಂತಗಳ ರೂಪದಲ್ಲಿಯೂ ಭಾಷ್ಯಗಳ ರೂಪದಲ್ಲಿಯೂ, ಲಲಿತ ಕಲೆಗಳ ರೂಪದಲ್ಲಿಯೂ, ಜೀವನದ ಉದಾತ್ತ ಧ್ಯೇಯಗಳ ರೂಪದಲ್ಲಿಯೂ ಕನ್ನಡತಾಯಿ ಭರತಖಂಡದ ಇತರ ಭಾಗಗಳಿಗೆ ಉಪಕಾರ ಮಾಡಿದ ಸವಿನೆನಪಿನಿಂದಲೂ ಕೃತಜ್ಞತೆಯಿಂದಲೂ ಆ ಕಮಲಗಳೆಲ್ಲ ತಲೆಬಾಗಿ ಕುಣಿದಾಡುತ್ತಿವೆ ಅದನ್ನು ನೋಡಿ ನೋಡಿ ಭಾರತಮಾತೆಯು ... ಅವಳ ಇತರ ಕುವರಿಯರು ನಲಿದಾಡುತ್ತಿದ್ದಾರೆ ಸುಂದರ ಪರಿಮಳದ ಸುವರ್ಣದ ಹರಿವಾಣದಲ್ಲಿ ಹಸಿರು ಕುಸುಮಗಳಲ್ಲಿ ಹ ಮಗಳು ... ಯ ಫಲಗಳನ್ನು ಇರಿಸುತ್ತಾಳೆ. ಶ ... ಮಯವಾದ ಭಾರತ ಮಾತೆಯು ... ವನ್ನು ಸ್ವೀಕರಿಸಿ ಮಗಳ ... ಅಮೃತಹಸ್ತವನ್ನಿರಿಸುತ್ತ ... ಆ ನಸ ಧಾನ ... ಗಳ ... ರಳಿ, ಹಸಿರ ... ಗಳನ್ನು ಧರಿಸಿ ಹೊಸ ಹೆಜ್ಜೆ ... ಭವನ್ನು ಬೀರುತ್ತ ... ಭಾರತಮಾತೆ ... ಪ್ರಾಂತ ... ಪ್ರಿಂಚ ... ಬಿಸ್ಸಿಸಿಕೊಟ್ಟ ಹರಿವಾಣವನ್ನು ಅತ್ಯಂತ ಆದರದಿಂದಲೂ ಆಸ್ಥೆಯಿಂದಲೂ ಸ್ವೀಕರಿಸಿ, ಅರಳು ಮಲ್ಲಿಗೆಗಳ ಕಡೆಗೆ ನೋಡುತ್ತಾಳೆ. ಅವಳ ಮುಗುಳ್ನಗೆಯ ಬೆಳದಿಂಗಳು ಅವುಗಳನ್ನೆಲ್ಲ ಬೆಳಗುತ್ತ ಅವುಗಳ ಮೇಲೆಲ್ಲ ಪಸರಿಸುತ್ತದೆ.. ಕನ್ನಡ ಬಂಧುಗಳೇ! ಉದುರಿಹೋದ ಹಸಿರು ಕುಸುರಿಗಳೇ ಭೇದಕಲ್ಪನೆಯ ಆವರಣಗಳು! ಅರಳು ಮಲ್ಲಿಗೆಗಳೇ ಕನ್ನಡಿಗರ ಅಂತರಾತ್ಮಗಳು! ಹೇಳಿ, ಒಕ್ಕೊರಲಿನಿಂದ ಹೇಳಿ: "ಬಾ ತಾಯೆ, ಬಾರಮ್ಮ! ನಮ್ಮ ನಾಲಗೆಯ ನಡೆಮುಡಿಯನ್ನು ಹಾಸುವೆವು, ಬಾ, ತಾಯೆ! ನಮ್ಮ ದೇಹ ದೇವಾಲಯಕ್ಕೆ ಬಿಜಯಮಾಡು, ತಾಯೆ! ನಮ್ಮ ಹೃದಯ ಸಿಂಹಾಸನದಲ್ಲಿ ಮಂಡಿಸಿ ಉದ್ಧರಿಸು ತಾಯೆ! ನಾವು ಅನನ್ಯ ಶರಣರಾಗಿ ನಿನ್ನ ಆರಾಧನೆಯಿಂದ ಧನ್ಯರಾಗುವಂತೆ ಕರುಣಿಸಿ ಕೃಪೆ ಮಾಡು, ತಾಯೆ!" ಎಂದು ಪ್ರಾರ್ಥಿಸದೆ ಕನ್ನಡಿಗರಾದ ನಮಗ ಬೇರೆ ಗತಿಯುಂಟೆ? ಉಂಟೇ—ಎಂದು ಪ್ರತಿಧ್ವನಿಯು ಮೊಳಗುತ್ತಿದೆ

ಸಿರಿಗನ್ನಡಂ ಗೆಲ್ಗೆ!

ಪ್ರಕಟಣೆ

ಹಳೇ ಕೋಟೆ ಕಂಬಾಮಾಹಿ ಕುಟ್ಟಿ ಬ್ಯಾರಿಗಳ ಮಗ ಪಿ ಮಹಮ್ಮದ ಆದ ನಾನು ಈ ಮೂಲಕ ಎಲ್ಲಾ ಜನರಿಗೆ ತಿಳಿಸುವುದೆನೆಂದರೆ ನನ್ನ ಯಾವತ್ತೂ ಪತ್ರ ರಿಕಾರ್ಡು, ದಸ್ತಾವೇಜು ಮತ್ತು ಇನ್ನಿತರ ದಸ್ಕತು ಹಾಕಲಿರುವ ಪತ್ರಗಳಿಗೆ ಅಕ್ಷರದಲ್ಲಿ ಬರೆದು ದಸ್ಕತನ್ನು ಹಾಕುತಿದ್ದೆ ಆದರೆ ಇನ್ನು ಮೇಲೆ ಎಡಬದಿಯಲ್ಲಿ P MOHAMMED Land Lord Chemnad KASARAGOD ಕಾಣಿಸಿದಂತೆ ರಬ್ಬರಿನ ಸೀಲು ಇಟ್ಟು ನನ್ನ ದಸ್ಕತನ್ನು ಹಾಕುತ್ತೇನೆ ಆದ್ದರಿಂದ ಇನ್ನು ಮುಂದೆ ಆಗುವ ಯಾವದೇ ರಿಕಾರ್ಡು ... ಇನ್ನಿತರ ಪತ್ರಗಳಿಗೆ ಮೇಲೆ ಕಾಣಿಸಿದ ರಬ್ಬರ ಸೀಲು ಮತ್ತು ದಸ್ಕತು ಇದರೆ ಮಾತ್ರ ಸಿಂಧುವಾಗತಕ್ಕದೆಂದು ತಿಳಿಯುವುದು ಸೀಲು ಮತ್ತು ದಸ್ಕತು ಇಲ್ಲದಿದ್ದರೆ ಅದ ಪೋರ್ಜರಿ ... ದು ತಿಳಿಯತಕ್ಕದ್ದು

ಪಿ ಮಹಮ್ಮದ್

KANARA COMMERCIAL BANK LTD.

PUTTUR

H O Puttur] Estd 1920 [Branch Vittal

All kinds of Banking Business transacted.

Deposits Current, Savings, Cumulative Deposits are accepted

Fixed Deposits for periods of 3 months and above up to 24 months are accepted.

SEASON DEPOSITS

ARE Accepted up to 31-5-1947 Terms on application.

ಡಿ. ಡಿ. ಟಿ.

ಹೇರ್ ಲೋಷನ್

ಇದರ ಒಂದು ಲೇಪನವು ತಲೆಯೊಳಗಿನ ಹೇನು ಮತ್ತು ಮೊಟ್ಟೆಗಳನ್ನು ಸಂಪೂರ್ಣವಾಗಿ ನಿರ್ಮೂಲ ಮಾಡುವುದಲ್ಲದೆ ಮತ್ತೆ ಮೂರು ತಿಂಗಳು ವರೆಗೆ ಸೋಂಕು ತಗಲದಂತೆ ರಕ್ಷಿಸುವುದು

ಜಿಲ್ಲಾ ಪರಿಚಯ

ನಾಗರೀಕ ವ್ಯವಹಾರ

ನಮ್ಮದು ದಿನೇ ದಿನೇ ಎಂಬಂತೆ ವೃದ್ಧಿ ವಿಕಾಸಗೊಳ್ಳುತ್ತಿರುವ ನಗರ. ನಗರ ಬಡಾವಣೆಯ ಕೆಲವು ಪ್ರದೇಶಗಳು ಮುನ್ಸಿಪಲ್ ಮಿತಿಯೊಳಗೆ ಸೇರಿಸಲ್ಪಟ್ಟ ಮೇಲಂತೂ ಮಂಗಳೂರು ಮೂವರ್ಕಡಿಯಾದಂತಿದೆ ಎಂದು ಬಹುಕಾಲದ ನಂತರ ಇಲ್ಲಿಗೆ ಸಂದರ್ಶನವೀಯುವವರು ಕೌತುಕಪಡುತ್ತಾರೆ.

ಆದರೆ ಇಷ್ಟೊಂದು ಪ್ರಗತಿಶೀಲ ನಾಗರೀಕ ನಿವಾಸ ಸ್ಥಾನದಲ್ಲಿ ಶೈಕ್ಷಣಿಕ ಪ್ರಾಧಾನ್ಯದ ಸಾರ್ವಜನಿಕ ಸೌಕರ್ಯಗಳು ಕನಿಷ್ಟ ಪ್ರಮಾಣದಲ್ಲಿವೆಯೆಂಬ ವಿಷಯವು ಖೇದವನ್ನುಂಟುಮಾಡುವಂತಹದು. ಉದಾ ರಸ್ತೆಗಳು ಅತೀ ಹಾಳು ಸ್ಥಿತಿಯಲ್ಲಿವೆ ನಮ್ಮ ನಗರದಲ್ಲಿ ಸಾಕಷ್ಟು ಸಾರ್ವಜನಿಕ ವಾಚನಾಲಯಗಳಿಲ್ಲ. ಪೆಂಟ್ಲೆಂಡ್ ಪೇಟೆ, ಬೆಂದೂರು, ಕದ್ರಿ, ಕಂಕನಾಡಿ, ಬೋಳಾರು, ಇವು ಈ ಬಡಾವಣೆಗಳಲ್ಲಿರುವ ಶಿಕ್ಷಿತ ಜನತೆಗಾಗಲಿ, ಶ್ರಮಾನಿಷ್ಠ ಜನತೆಗಾಗಲಿ ವಿರಾಮಕಾಲದ ಸದುಪಯೋಗ ಮಾಡುವ ಅನುಕೂಲತೆಗಳಿಲ್ಲ. ಈ ಪ್ರದೇಶಗಳಲ್ಲಿ ರೇಡಿಯೊ ಕೇಂದ್ರಗಳನ್ನೂ, ವಾಚನಾಲಯ ಗ್ರಂಥ ಭಂಡಾರ ಶಿಶು ವಿಹಾರಗಳನ್ನೂ ಸ್ಥಾಪಿಸುವುದು ಅತ್ಯಾವಶ್ಯಕವಿದೆ

ಬಾವುಟ ಗುಡ್ಡದಲ್ಲಿರುವ ಮುನ್ಸಿಪಲ್ ವಾಚನಾಲಯವು ಅತ್ಯಲ್ಪ ಸಂಖ್ಯೆಯ ನಾಗರೀಕರ ಸೌಕರ್ಯ ಪೂರೈಕೆಯದೆನ್ನಬಹುದು ನಗರ ಮಧ್ಯದ ಆಸುಪಾಸಿನ ಅನುಕೂಲಸ್ಥ ಜನರು ಮಾತ್ರ ಹೆಚ್ಚಾಗಿ ಅದರ ಸದುಪಯೋಗ ಪಡೆಯಬಹುದು. ಆದರೆ ಇಂದು ನಮ್ಮ ಜನತೆಯನ್ನು ಇಂತಹ ಶೈಕ್ಷಣಿಕ ಸಾಧನಗಳ ಕಡೆ ಸಳೆಯುವುದು ಅವಶ್ಯಕ ಕರ್ತವ್ಯವೆನಿಸುವಾಗ ಮೇಲೆ ಹೇಳಿದ ಸ್ಥಳಗಳಲ್ಲಿ ಯೋಗ್ಯ ಮನೋರಂಜಕ ಚಟುವಟಿಕೆಗಳಿರಬೇಕಾದುದು ನ್ಯಾಯವೆನಿಸುತ್ತದೆ

ಇದಕ್ಕಾಗಿ ಆ ಕಡೆಯವರು ಸಂಪೂರ್ಣವಾಗಿ ಸ್ಥಳೀಯ ಆಡಳಿತವನ್ನೇ ನಂಬಿ ಕುಳಿತುಕೊಳ್ಳುವುದು ಯುಕ್ತವಲ್ಲ ಅವರಲ್ಲಿ ಸಾರ್ವಜನಿಕ ಸೇವಾಸಕ್ತಿಯುಳ್ಳವರು ಮುಂದೆ ಬಂದು ಯೋಗ್ಯ ಪ್ರಾತಿನಿಧಿಕ ಸಮಿತಿಗಳನ್ನೇರ್ಪಡಿಸುವುದರ ಮೂಲಕ ತಮ್ಮ ಪ್ರದೇಶದ ಜನರಲ್ಲಿ ಯೋಗ್ಯ ಪ್ರಚಾರ ನಡೆಸಿ ಧನಸಂಗ್ರಹಮಾಡಿ ಅಂತಹ ಉಪಯುಕ್ತ ಸೌಕರ್ಯಗಳನ್ನು ಸ್ಥಾಪಿಸಲು ಯತ್ನಿಸಿದರೆ ಕ್ರಮೇಣ ಅವಕ್ಕೆ ಎಲ್ಲಾ ತರದ ಸಹಾಯಗಳು ದೊರಕುವವು

ವಿರಾಮಕಾಲದ ಸದುಪಯೋಗ ಮಾಡುವ ಜನತೆಯಲ್ಲಿ ಸಾಮಾಜಿಕ ಸಾಂಸ್ಕೃತಿಕ ಹೊಣೆಗಾರಿಕೆಗಳು ಜಾಗೃತಿಹೊಂದಿ ನಾಗರೀಕ ಜೀವನವು ಅತ್ಯಂತ ನೆಮ್ಮದಿಯದ್ದಾಗುವುದು. ಮಾತವಲ್ಲ ಇದೇ ಆದರ್ಶವು ಬೆಳೆಯುತ್ತ ಹೋದಲ್ಲಿ ಮುಂದಿನ ನೂತನ ಸಹಕಾರಿ ಮಾದರಿಯ ಜನಾಂಗ ಜೀವನಕ್ಕೂ ತಕ್ಕ ತರಬೇತಿ ದೊರಕಿದಂತಾಗುವುದು; ಸಮಾನತೆ, ಐಕ್ಯಭಾವಗಳು ವಿಕಾಸವಾಗಿ ಸುಸಂಸ್ಕೃತ ಸಾರ್ವಜನಿಕ ಜೀವನವು ಶ್ರೇಯಸ್ಕರವಾಗಿ ಅಭಿವೃದ್ಧಿಹೊಂದುವುದು. ಈ ಕುರಿತು ನಗರ ಸಭೆಯವರೂ ಮಾರ್ಗದರ್ಶನ ಮಾಡಿದರೂ ಯುಕ್ತವೇ ಎನಿಸುವುದು.

ಹವಾಮಾನ: ನಗರದಲ್ಲಿ ಈ ಸಲದ ಸೆಕೆಯು ಅತ್ಯುಗ್ರವಾದುದೆಂದು ಹೇಳಲಾಗಿದೆ. ಕೆಲವು ದಿವಸಗಳ ಹಿಂದೆ ಅಕಾಲವೃಷ್ಟಿಯಾದುದರ ದುಷ್ಪರಿಣಾಮವಿದೆಂದೂ ಹೀಗೇ ಜೂನಿಗಿಂತಲೂ ಮುಂದರಿದರೆ ನಾಗರೀಕರ ಆರೋಗ್ಯಕ್ಕೆ ತುಂಬಾ ಗಂಡಾಂತರವಿರುವುದೆಂದೂ ಅನುಭವಸ್ಥರ ಹೇಳಿಕೆ. ಸಾಯಂಕಾಲ ರಾತ್ರಿಗಳಲ್ಲಿ ಅಲ್ಪ ಸ್ವಲ್ಪ ಮೋಡದ ಮಬ್ಬು ಹಬ್ಬಿರುತ್ತದೆ. ಒಂದೆರಡು ಹನಿಗಳೂ ಉದುರಿ ಬೀಳುತ್ತಿವೆ. ಮಧ್ಯಾಹ್ನದ ಹೊತ್ತಿನಲ್ಲಿ ಸ್ವಲ್ಪ ಗಾಳಿ ಬೀಸುವುದರಿಂದ ಆ ಕಾಲದಲ್ಲಿ ಬಿಸಿಲಿನ ತಾಪ ಕೊಂಚ ಕಡಿಮೆಯೆನಿಸುತ್ತದೆ ಕೆಲವು ಕಡೆಗಳಲ್ಲಿ ಬಾವಿ ನೀರು ಆರಿ ಸ್ವಲ್ಪ ಶ್ರಮದಾಯಕವಾಗುತ್ತಿದೆಂದು ಬಾತ್ಮಿಗಳಿವೆ

ಪಂಡಿತರ ತರಬೇತಿ: ಕನ್ನಡ ವಿದ್ವಾನ್ ಪದವಿಧರರಾಗಿ ಶಾಲೆಗಳಲ್ಲಿ ಕನ್ನಡ ಪಂಡಿತರಾಗಿರುವವರಿಗೆ ಶಿಕ್ಷಣ ವಿಧಾನಗಳ ತರಬೇತಿ ಕೊಡಲು ಸ್ಥಳೀಯ ಗವರ್ನಮೆಂಟ್ ಕೊಲೇಜಿನಲ್ಲಿ ಬರುವ ಜೂಲೈ ತಿಂಗಳಿಂದ ಟ್ರೈನಿಂಗ್ ಕ್ಲಾಸನ್ನು ತೆರೆಯಲು ವಿದ್ಯಾ ಇಲಾಖೆಯವರು ಏರ್ಪಡಿಸಿರುವರೆಂದು ತಿಳಿದುಬರುತ್ತದೆ ಈ ತರಬೇತಿಯು ಎಪ್ರಿಲ್ ತನಕ 9 ತಿಂಗಳು ಜರಗುವುದು ಹೀಗೆ ತರಬೇತು ಹೊಂದಿದ ಅಧ್ಯಾಪಕರಿಗೆ ಹೆಚ್ಚು ಸಂಬಳ ಪ್ರಮಾಣ ಸಿಗುವುದರಿಂದ ಬಹುಮಂದಿ ಇದಕ್ಕೆ ಹಾಜರಾಗಬಹುದೆಂದು ನಿರೀಕ್ಷಿಸಲ್ಪಟ್ಟಿದೆ ಒಂದೇ ಕ್ಲಾಸು ಇರುವುದರಿಂದ 40ಕ್ಕಿಂತ ಹೆಚ್ಚು ವಿದ್ಯಾರ್ಥಿ ಅಧ್ಯಾಪಕರನ್ನು ತೆಗೆದುಕೊಳ್ಳಲಾಗುವುದಿಲ್ಲವೆಂದೂ ಮತ್ತು ಅವರಿಗೆ ಮಾಸಿಕ ವಿದ್ಯಾರ್ಥಿ ವೇತನ (ಸ್ಟೈಫಂಡ್) ಕೂಡಾ ಕೊಡಲಾಗುವುದಿಲ್ಲವೆಂದೂ ತಿಳಿದುಬರುತದೆ ಇಲ್ಲಿ ಈ ವರ್ಷದಿಂದ ಬಿ ಟಿ ಟ್ರೈನಿಂಗ್ ಕ್ಲಾಸುಗಳು ತೆರೆಯಲ್ಪಡುವ ಯೋಜನೆಯಿದ್ದದ್ದು ಸಧ್ಯಕ್ಕೆ ಮುಂದರಿಸಲಾಗಿದೆ

ಬಿಲ್ಲವರ ಎಸೋಸಿಯೇಶನ್ ಮುಂಬಾಯಿ

ಬಿಲ್ಲವರ ಎಸೋಸಿಯೇಶನ್ ವರ್ಷಂಪ್ರತಿಯೂ ವಿದ್ಯಾರ್ಥಿ ವೇತನ ಕೊಡುತ್ತಾ ಬರುವಂತೆ ಈ ವರ್ಷವೂ ಬಿಲ್ಲವ ಜಾತಿಯ ಬಡ ವಿದ್ಯಾರ್ಥಿಗಳಿಗೆ ವಿದ್ಯಾ ವೇತನ ಕೊಡಲಿರುವುದು. ಈ ಬಗ್ಗೆ ವಿದ್ಯಾ ವೇತನ ಅಪೇಕ್ಷಿಸುವ ಬಡ ವಿದ್ಯಾರ್ಥಿಗಳು ಇದೇ ಜೂನ್ ತಿಂಗಳ ತಾ. 30ರೊಳಗೆ ಈ ಕೆಳಗಿನ ವಿಳಾಸಕ್ಕೆ ಅರ್ಜಿ ಮಾಡಿಕೊಳ್ಳಬೇಕಾಗಿ ಕಾರ್ಯದರ್ಶಿಗಳು ತಿಳಿಸುತ್ತಾರೆ

Secretary, Billawar Association
17 Raghunath Dadaji Street,
Fort Bombay

ಮಿಂಚು ಮರಣ: ಗುರುವಾಯನಕೆರೆಯ ಸಮೀಪದ ಮದ್ದಡ್ಕ ಎಂಬಲ್ಲಿ ಕೆಲ ದಿನಗಳ ಹಿಂದೆ ಸಿಡಿಲು ಮಿಂಚಿನ ಆರ್ಭಟವು ಜೋರಾಗಿತ್ತು. ಇಲ್ಲಿಯ ಕಾಡಿನ ಒಂದು ಮರಕ್ಕೆ ಮಿಂಚು ಬಡಿದು ಅದರ ಕೆಳಗೆ ನಿಂತಿದ್ದ ಓರ್ವ ಹೊಲೆಯ ಜಾತಿಯವನು ತಕ್ಷಣ ಮೃತಪಟ್ಟಿರುವನು ಮರವೂ ಸಂಪೂರ್ಣ ಸುಟ್ಟುಹೋಗಿದೆ.

ಕರ್ನಾಟಕದ ಕರಾವಳಿಯಲ್ಲಿ ವಾಸಿಸುವ: ಹರಿಕಾಂತ (ಮತ್ಸ್ಯ ವ್ಯವಸಾಯಿಗಳ) ಮಹಾಜನ ಸಂಘದ ಪ್ರಥಮ ವಾರ್ಷಿಕೋತ್ಸವವು ದಿನಾಂಕ 3–5–48ರಲ್ಲಿ ಉಪ್ಪುಂದ ಅಮ್ಮನವರ ಕೊಪ್ಪಲ ಬಳಿ ತಳಿರುತೋರಣಗಳಿಂದ ಶೃಂಗರಿಸಲ್ಪಟ್ಟ ಸಭಾ ಮಂಟಪದಲ್ಲಿ ಫಿಶರೀಸ್ ಇಲಾಖೆಯ ಅಸಿಸ್ಟಾಂಟ್ ಡೈರೆಕ್ಟರ್ ಯನ್. ಡಿ. ಕಮ್ತೂರರ ಅಧ್ಯಕ್ಷತೆಯಲ್ಲಿ ಜರಗಿತು. ರಾಷ್ಟ್ರಧ್ವಜಾರೋಹಣ; ಪ್ರಾರ್ಥನೆ; ವರದಿ ವಾಚನಗಳಾದ ತರುವಾಯ ಶ್ರೀ ಕೃಷ್ಣಯ್ಯ ಶೆಟ್ಟಿಯವರು ವಿದ್ಯಾ ವರ್ಧನೆ; ಮತ್ತು ಗರಡೀ ಸಾಧನೆಯ ಅವಶ್ಯಕತೆಯ ಕುರಿತು ಮಂಗಳೂರಿನ ಬಿ. ಮೋಹನಪ್ಪ ತಿಂಗಳಾಯರು ಮಧ್ಯಪಾನ ತ್ಯಾಗದ ಅವಶ್ಯಕತೆ–ಸಂಘಶಕ್ತಿಯ ಮಹತ್ವ; ಐದು ವರ್ಷಗಳ ಒಳಗೆ ಹತ್ತು ಸಾವಿರ ರೂಪಾಯಿಗಳ ನಿಧಿಯನ್ನು ಸಂಗ್ರಹಿಸುವ ವಿಧಾನದ ಕುರಿತೂ, ಇನ್ನು ಕೆಲವು ಗೃಹಸ್ಥರು ವಿದ್ಯಾ ಪ್ರಚಾರದ ಕುರಿತೂ, ಭಾಷಣಗಳನ್ನು ಕೊಟ್ಟರು ಅನಂತರ ಅಧ್ಯಕ್ಷರು ಭಾಷಣ ಮಾಡುತ್ತಾ ಮತ್ಸ್ಯಾಹಾರದ ವಿಶಿಷ್ಟತೆ ಮತ್ತು ಜನತೆಯ ಆಹಾರ ಪೂರೈಕೆಯಲ್ಲಿ ಅದರ ಮಹತ್ವ ಮತ್ಸ್ಯ ವ್ಯವಸಾಯದಲ್ಲಿ ಮಾಡಬೇಕಾದ ಸುಧಾರಣೆ ಇತ್ಯಾದಿಗಳ ಕುರಿತು ಬೋಧಪ್ರದವಾದ ಭಾಷಣ ಕೊಟ್ಟರು

ಬೆಲ್ಲ: ಬೆಲ್ಲದ ಸ್ಟಾಕು ಕಡಿಮೆಯಿದೆ

ಎಣ್ಣೆ: ತೆಂಗಿನೆಣ್ಣೆಯು ಈಗ ಬೇಕಾದಷ್ಟು ದೊರೆಯುತ್ತಿದೆ ಮಲಬಾರಿನಿಂದ (ಬಡಗಾರ ಮತ್ತು ಕಲ್ಲಿಕೋಟೆ) ಧಾರಾಳವಾಗಿ ಕೊಬ್ಬರಿಯು ನಮ್ಮ ಜಿಲ್ಲೆಗೆ ಆಮದು ಆಗಿರುವುದರಿಂದ ಪರ್ಮಿಟು ಇಲ್ಲದೇ ತೆಂಗಿನೆಣ್ಣೆಯನ್ನು ವಿಕ್ರಯಿಸಬಹುದೆಂದು ಜಿಲ್ಲಾಧಿಕಾರಿಗಳು ವ್ಯಾಪಾರಸ್ಥರಿಗೆ ತಿಳಿಸಿರುವರು. ಈಗ ತೆಂಗಿನೆಣ್ಣೆಗೆ ಮಿಲ್ಲುಗಳಿಗೇ ಹೋಗಬೇಕಾಗಿಲ್ಲ, ಅಂಗಡಿಗಳಲ್ಲೂ ಸಿಗುತ್ತಿದೆ ನೆಲಗಡಲೆ ಎಣ್ಣೆಯ ಸ್ಟಾಕು ಮಾತ್ರ ಮಂಗಳೂರಲ್ಲಿ ಕಡಿಮೆಯಿದೆ ತೆಂಗಿನೆಣ್ಣೆಯು ದುರ್ಲಭವಿದ್ದಾಗ ನೆಲಗಡಲೆ ಎಣ್ಣೆಯನ್ನು ಇಲ್ಲಿಯ ಹೋಟೇಲುಗಳೂ ಅನೇಕ ಮನೆಯವರೂ ಉಪಯೋಗಿಸಿದ್ದರು.

ತೊಗರಿ ಬೇಳೆ: ಕೆಲಕಾಲದ ಹಿಂದೆ ಜಿಲ್ಲಾಧಿಕಾರಿಗಳು, ಇಲ್ಲಿಯ ವ್ಯಾಪಾರಸ್ಥರೊಡನೆ ಸಂಗ್ರಹವಿರುವ ತೊಗರಿಯನ್ನು ಬೇಳೆ ಮಾಡಿಸಿ ಅಲ್ಪ ಕ್ರಯದಲ್ಲಿ ತಮ್ಮ ಮೂಲಕ ವಿತರಣವಾಗದ ಹಾಗೇ ಉಳಿದಿತ್ತು ಈ ವಾರದಲ್ಲಿ ಈ ತೊಗರಿ ಬೇಳೆಯನ್ನು ರೇಶನ ಅಂಗಡಿಗಳ ಮೂಲಕ ಮಾರಾಟಕ್ಕೆ ಪ್ರಸಿದ್ಧಪಡಿಸಿ ನಿರ್ದಿಷ್ಟ ಪ್ರಮಾಣದಲ್ಲಿ ಒಂದು ಕಾರ್ಡಿಗೆ ತಿಂಗಳಿಗೆ ಸುಮಾರು ಅರ್ಧ ಸೇರು ತೊಗರಿಬೇಳೆ ಕೊಡಲಾಗುವುದೆಂದು ತಿಳಿಯಲಾಗಿದೆ

ಅಭಾವ: ಉದ್ದು ಹುರುಳಿ ಹೆಸರು ಇವು ಮೊದಲು ಬೇಕಾದಷ್ಟು ದೊರೆಯುತ್ತಿತ್ತು, ಈ ವರ್ಷ ಇವುಗಳ ಪತ್ತೆಯೇ ಇಲ್ಲ. ನಮ್ಮ ಜಿಲ್ಲೆಯಲ್ಲಿ ಉತ್ಪತ್ತಿಯಾಗುವ ಉದ್ದು ಮತ್ತು ಹೆಸರು ಇಡೀ ಜಿಲ್ಲೆಗೆ ವರ್ಷಕ್ಕೆ ಸಾಕಾಗುವಷ್ಟು ಇಲ್ಲವಾದರೂ, ಇದ್ದ ಅಲ್ಪ ಸ್ಟಾಕ್ ಎಲ್ಲಿಗೆ ಹೋಗುತ್ತಿದೆಯೆಂಬುದು ಒಂದು ದೊಡ್ಡ ಗೂಢವಾಗಿದೆ

ಗ್ರಾಮ ಸಮಿತಿ ಸಭೆ: ಕಡಂದಲೆ ಗ್ರಾಮ ನಿವಾಸಿಕರಿಗಾಗಿ ಸುಮಾರು ರೂ 900 ಬೆಲೆ ಬಾಳುವಷ್ಟು ಮಿಲ್ಲು ಬಟ್ಟೆ ಮಿತ್ತ ಬೈಲಿನ ಅಧಿಕೃತ ವ್ಯಾಪಾರಿಗಳಿಗೆ ಬಂದಿದ್ದರೂ ಆ ಬಟ್ಟೆ ವಿತರಣೆ ಮಾಡುವರೆ ಹುಕುಂಬಾರದಿರುವುದರಿಂದ ಗ್ರಾಮ ಸಮಿತಿಯವರು ಇತ್ತೀಚೆಗೆ ಸಭೆ ಸೇರಿ ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿಕೊಳ್ಳುವಂತೆ ನಿರ್ಣಯವಾಗಿದೆ

ಹಿಂಡಿ: ತೆಂಗಿನ ಹಿಂಡಿ ಇಲ್ಲದೆ ಜಾನುವಾರುಗಳ ಪೋಷಣೆಯ ಸಮಸ್ಯೆಯು ನಮ್ಮ ಜಿಲ್ಲೆಯಲ್ಲಿ ದಿನೇ ದಿನೇ ಕಠಿನವಾಗುತ್ತಿದೆ. ತೆಂಗಿನಕಾಯಿ, ಕೊಬ್ಬರಿ ಮತ್ತು ಎಣ್ಣೆಗಳ ರಫ್ತಿನ ಮೇಲಿನ ನಿರ್ಬಂಧ ಹೋದರೂ, ಮಲಬಾರು ಜಿಲ್ಲಾ ಕಲೆಕ್ಟರರು, ತಮ್ಮ ಅನುಮತಿಯಿಲ್ಲದೆ ಹಿಂಡಿಯು ಮಲಬಾರು ಜಿಲ್ಲೆಯ ಹೊರಗೆ ರಫ್ತಾಗಕೂಡದೆಂದು ಹುಕುಂ ಹೊರಡಿಸಿರುವ ಕಾರಣ ಈ ಅಭಾವವು ಇಲ್ಲಿ ವಿಶೇಷವಾಗಿದೆ. ಈ ಸಂಕಷ್ಟವನ್ನು ವ್ಯಾಪಾರಸ್ಥರು ಆಗ್ರಹದಿಂದ ನಮ್ಮ ಜಿಲ್ಲಾಧಿಕಾರಿಗಳ ಮೂಲಕ ಮದರಾಸು ಸರಕಾರಕ್ಕೆ ನಿವೇದಿಸಿ, ಹಿಂಡಿಯು ಯಥೇಷ್ಟವಾಗಿ ಆಮದಾಗುವಂತೆ ಮಾಡಬೇಕು. ಇಲ್ಲಿಯ ಎಣ್ಣೆಯ ಮಿಲ್ಲುಗಳಲ್ಲಿ ತಯಾರಾಗುವ ಹಿಂಡಿಯು ನಮ್ಮ ಜಿಲ್ಲೆಯ ಖಾಲ್ಯನೇ ಒಂದಂಶ ಪೂರೈಕೆಗಾದರೂ ಸಾಕಾಗುವುದಿಲ್ಲ.

ಬೇಕಲ: ಸ್ಥಳೀಯ ಮಿಶನ್ ಶಾಲೆಯಲ್ಲಿ ಇದೇ ತಿಂಗಳ ಕಡಲ್ಲು "ಕರ್ನಾಟಕ ನಾಟ್ಯ ವಿನೋದಿನೀ ಬಾಲ ಸಂಘ"ವು ಭಕ್ತೋತ್ತಮ ಕಬೀರ ದಾಸ'' ಎಂಬ ಕನ್ನಡ ಸಂಗೀತ ನಾಟಕವನ್ನು ಶ್ರೀ ಕೆ. ಯಸ್. ಶರ್ಮರ ದಿಗ್ದರ್ಶನದಲ್ಲಿ ಚೆಲುವಾಗಿ ಅಭಿನಯಿಸಿದರು

ಮೈದಾನಿನ ಹಂಚು ಖಾಲಿಯಾಯಿತು ಸೆಂಟ್ರಲ್ ಮೈದಾನಿನಲ್ಲಿ ಯುದ್ಧಯತ್ನ ಸಂಬಂಧವಾಗಿ ದಾಸ್ತಾನುಮಾಡಲ್ಪಟ್ಟ ಹಂಚನ್ನು ಇದೀಗ ಸಂಪೂರ್ಣ ರವಾನೆಮಾಡಲಾಗಿದೆ ಹಂಚು ಪೂರ್ಣ ಖಾಲಿಯಾಗಿದ್ದು ಮೈದಾನಿಗೆ ಮೊದಲಿನ ಶೋಭೆ ಬಂದಿರುವುದು

ಗ್ರಂಥ ಸ್ವೀಕಾರ

ಯುಗಾಂತರ (ಹೊಸ ಬಾಳಿನ ಸುಕುಮಾರ ಪ್ರಯೋಗ) ಬರೆದವರು ವಿ ಕೃ. ಗೋಕಾಕ ಮನೋಹರಗ್ರಂಥಮಾಲೆಯ ಆಷಾಢಯ ಕುಸುಮ ಬೆಲೆ ಆರು ಆಣೆ.

ವಿಮರ್ಶಕ ವೈದ್ಯ ಮನೋಹರಗ್ರಂಥಮಾಲೆಯ ಬಿಡಿ ಮುತ್ತು ಹಾಸ್ಯ ವಿಡಂಬನೆಗಳ ದ್ವಾರವಾಗಿ ಸತ್ಯ ಹಾಗು ಔಚಿತ್ಯದ ಪಕ್ಷವನ್ನು ಸಮರ್ಥಿಸುವ ಏಕಾಂತ. ಬರೆದವರು ವಿ ಕೃ ಗೋಕಾಕ ಬೆಲೆ ಆರಾಣೆ.

ಬಿನೆಯ ಕನ್ನಡ ಸಾಹಿತ್ಯ ಸಮ್ಮೇಳನ ಹಂಪನ ಹಳ್ಳಿ–ಅಧ್ಯಕ್ಷ ಭಾಷಣ ಕ್ರೌನ್ ¼ ಆಕಾರ–ಬೆಳ ಪ್ರತಿಗಳು

ಮಾರಾಟಕ್ಕಿದೆ

ಉತ್ತಮ ತರಗತಿಯ ಎರಡು ಕುದುರೆಗಾಡಿಗಳೂ, ಒಂದು ದೊಡ್ಡ ಕುದುರೆಯೂ ಮಾರಾಟಕ್ಕಿದೆ ಕೊಂಡುಕೊಳ್ಳಲು ಬಯಸುವವರು ಸ್ವತಹ ಉಡುಪಿಗೆ ಬಂದು ಪರೀಕ್ಷಿಸಬಹುದು. ರೂಪಾಯಿ 1500 ವ ಅದರ ಸಮೀಪದ ಕೇಳಿಕೆಯನ್ನು ಗಮನಿಸಲಾಗುವದು ಬೇಕಾದವರು ಸ್ವತಹ ಯಾ ಪತ್ರದ್ವಾರ ಈ ತಿಂಗಳೊಳಗೆ ಈ ಕೆಳಗಿನವರೊಡನೆ ವಿಚಾರಿಸಬಹುದು

Deputy Manager
M/S Koohiker Brothers,
Udipi

ನೋಟೀಸು

ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸುವುದೇನೆಂದರೆ ನಾನು ಸಾಧಾರಣ 2½ ವರ್ಷದಿಂದ ಅಳಕೆ ಸಂಕದ ಬಳಿ ಕಂಬಳ ಹಿಂದೂ ರೆಸ್ಟೋರೆಂಟ್ ಎಂಬ ಹೋಟೆಲಿನಲ್ಲಿ ಬರವಣಿಗೆಯ ಕೆಲಸಕ್ಕಿದ್ದು ಈಗ ನಾನು ಆ ಕೆಲಸವನ್ನು ಬಿಟ್ಟಿರುತ್ತೇನೆ. ನಾನು ಕೆಲಸದಲ್ಲಿರುವಾಗ ನನಗೂ ಆ ಹೋಟೆಲಿನ ಮಾಲಿಕರಿಗೂ ಏನೊಂದು ದ್ವೇಷವೂ ಇರಲಿಲ್ಲ ಆದರೆ ಆ ಹೋಟೆಲಿನ ಮಾಲಕರು ನಾನು ಕೆಲಸ ಬಿಟ್ಟಿದ್ದೇನೆಂಬ ಕಾರಣ ದ್ವೇಷದಿಂದ ನನಗೆ ಅಪಮಾನಕರವಾದ ಯಾವದೇ ಕೆಲಸಗಳನ್ನು ಮಾಡಿದರೂ ನಾನು ಅದಕ್ಕೆ ಜವಾಬ್ದಾರನಲ್ಲ ಮತ್ತು ನನ್ನಿಂದ ಸದ್ರಿ ಹೋಟೆಲಿನ ಮಾಲಕರಿಗೆ ಏನು ಸಲಕಬೇಕಿಲ್ಲ.

ಎಮ್. ಸುಬ್ಬಯ್ಯ ಶೆಟ್ಟಿ.

ವಾಲ್ಮೀಕಿಯ ಆರ್ಯ ಜನಾಂಗದ ಪಕ್ಷಪಾತ

ದ್ರಾವಿಡರು ಕಪಿಗಳು ಕರಡಿಗಳು

ಐರೋಪ್ಯರ ಮೂಢ ನಂಬಿಕೆಗಳು

ಹರಪನ ಹಳ್ಳಿಯಲ್ಲಿ ಜರಗಿದ 30ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣ ಸಂದರ್ಭದಲ್ಲಿ ಶ್ರೀಮಾನ್ ಟಿ. ಕೆ. ವೆಂಕಟರಾಮಯ್ಯನವರು ಜನಾಂಗ ವೈಶಿಷ್ಟ್ಯದ ಕುರಿತು ಸ್ವಾರಸ್ಯವಾದ ಕೆಲವು ನಿದರ್ಶನಗಳನ್ನು ಕೊಟ್ಟಿರುವರು:

"ಪ್ರತಿಯೊಂದು ಜನಾಂಗಕ್ಕೂ ಅದರದರ ವೈಶಿಷ್ಟ್ಯವೂ ಅದರದರ ಛಾಯಮಾನವೂ ಉಂಟು. ಆದಕಾರಣ ಒಂದು ಜನಾಂಗಕ್ಕೆ ಸರಿದೋರಿದುದು ಮತ್ತೊಂದು ಜನಾಂಗಕ್ಕೆ ಸರಿಬೀಳದೆ ಇರಬಹುದು. ಉದಾಹರಣೆಗಾಗಿ: ಮದುವೆಯಾದ ಮಹಿಳೆಯು ಮತ್ತೊಬ್ಬರ ಮನೆಯಲ್ಲಿ ಮಕ್ಕಳ ಶಿಕ್ಷಕಿಯಾಗಿ ಕೆಲಸಮಾಡುವುದು ಇಂಗ್ಲೆಂಡಿನಲ್ಲಿ ಅಸಭ್ಯ ವರ್ತನೆಯಾದರೆ ಮದುವೆಯಾಗದ ಹೆಂಗಸು ಹಾಗೆ ಕೆಲಸಮಾಡುವುದು ರಷ್ಯಾ ದೇಶದಲ್ಲಿ ಅಸಭ್ಯ ವರ್ತನೆ: ಇವೆರಡರಲ್ಲಿ ಯಾವ ದೇಶದವರ ಪ್ರಗತಿಯು ಹೆಚ್ಚೆಂದು ಹೇಳೋಣ?

"ಮತ್ತೊಂದು ಮಾತು: ಭಾರತೀಯರು ಒಂಟಿ ಬ್ರಾಹ್ಮಣನು ಎದುರಿಗೆ ಬಂದರೆ ಅಥವಾ ಕಾಗೆ ಬಲಗಡೆಯಿಂದ ಎಡಗಡೆಗೆ ಹಾರಿಹೋದರೆ ಅಪಶಕುನವೆಂದು ಭಾವಿಸುತ್ತಾರೆಂದು ಪಾಶ್ಚಾತ್ಯರು ಹಾಸ್ಯ ಮಾಡುತ್ತಾರೆ. ನಾವು ಕಪ್ಪು ಹಕ್ಕಿ ಬಲದಿಂದ ಎಡಕ್ಕೆ ಹೋಗುವುದು ಅಪಶಕುನವೆಂದು ಭಾವಿಸಿದರೆ ಅವರು ಕೆಂಪು ಹಕ್ಕಿ ಹಾರಿ ಹೋಗುವುದು ಅಪಶಕುನವೆಂದು ಭಾವಿಸುತ್ತಾರೆ. ಅತಿಥಿಗಳಲ್ಲಿ ಹದಿಮೂರನೆಯವನಾಗಿ ಊಟಕ್ಕೆ ಕುಳಿತುಕೊಳ್ಳಲು ಅವರಲ್ಲಾರೂ ಸಮ್ಮತಿಸುವುದಿಲ್ಲ. ಬೀದಿಯಲ್ಲಿ ಕುದುರೆ ಲಾಳವು ಸಿಕ್ಕಿದರೆ ಅದು ಅಭ್ಯುದಯ ಸೂಚಕವೆಂದವರು ಹಿಗ್ಗುತ್ತಾರೆ. ಕನ್ನಡಿಯು ಒಡೆದು ಹೋಗುವುದು ಮುಂಬಿನ ವಿಪತ್ತನ್ನು ಸೂಚಿಸುವುದೆಂದು ಅವರು ನಡುಗುತ್ತಾರೆ.

"ಇವೆಲ್ಲವನ್ನೂ ಒಟ್ಟಿಗೆ ಪರಿಗಣಿಸಿದರೆ ಫಲಿತವಾಗುವುದಾದರೂ ಏನು? ಒಂದು ಜನಾಂಗದಲ್ಲಿ ಒಂದು ಬಗೆಯ ದೋಷಗಳಿದ್ದರೆ ಇನ್ನೊಂದು ಜನಾಂಗದಲ್ಲಿ ಇನ್ನೊಂದು ಬಗೆಯ ದೋಷಗಳಿರುತ್ತವೆ. ಆದಕಾರಣ ರಾಜಕೀಯ ದೃಷ್ಟಿಯಿಂದ ಕೆಲಕೆಲವು ಜನಾಂಗಗಳು ಬಲಿಷ್ಠವಾಗಿದ್ದ ಮಾತ್ರಕ್ಕೇ ಸಾಹಿತ್ಯ ವಿಚಾರಗಳಲ್ಲಿಯೂ ಅದೇ ಮೇಲೆಂಬ ಭಾವನೆಯನ್ನಿಟ್ಟುಕೊಳ್ಳಬೇಕಾಗಿಲ್ಲ. ನಾವು ಭಾರತೀಯ ಸಂಸ್ಕೃತಿಯ ಅಮೃತಪುತ್ರರೆನಿಸಬೇಕೇ ಹೊರತು, ಮತ್ತಾವ ದೇಶದವರ ಮಾನಸ ಪುತ್ರರಾಗುವುದೂ ಬೇಡ.

ವಾಲ್ಮೀಕಿಯ ಪಕ್ಷಪಾತ

"ಹಿಂದಿನವರನ್ನು ಆಕ್ಷೇಪಿಸುವಾಗಲೂ ಕೂಲಂಕಷವಾಗಿ ವಿಚಾರಮಾಡಿ ನೋಡಿ ಆಕ್ಷೇಪಿಸಬೇಕು. ನಮಗೆ ತೋರಿದುದೇ ಪರಮಾರ್ಥವೆಂದು ದುಡುಕಿ ವರ್ತಿಸಬಾರದು. ಉದಾಹರಣೆಗಾಗಿ ಮದರಾಸು ಪ್ರಾಂತ್ಯದಲ್ಲಿ ಕೆಲವರಿಗೆ ರಾಮಾಯಣದ ಮೇಲೆ ಆಕ್ರೋಶ. ವಾಲ್ಮೀಕಿ ಮಹರ್ಷಿಯು ಆರ್ಯರ ಅಭಿಮಾನಿ, ದ್ರಾವಿಡ ದ್ವೇಷಿ, ಆದಕಾರಣ ದ್ರಾವಿಡರನ್ನು ಕಪಿಗಳೆಂದೂ ಕರಡಿಗಳೆಂದೂ, ರಾಕ್ಷಸರೆಂದೂ ಚಿತ್ರಿಸಿದ್ದಾನೆ, ಆದುದರಿಂದ ರಾಮಾಯಣವನ್ನು ನಾವು ಕೈಮುಟ್ಟಲೇಬಾರದು—ಎಂಬುದು ಅವರ ವಾದ. ಅವರ ಕಡೆಯ ಗಾಳಿ ಕನ್ನಡ ನಾಡಿಗೂ ಕೊಂಚ ಬೀಸುತ್ತಿದೆ. ಕನ್ನಡಿಗರಲ್ಲಿ ಕೆಲವರಿಗೆ ಅದು ಹಿತವಾಗಿದೆ. ಆದರೆ ವಿಚಾರಮಾಡಿ ನೋಡಿದರೆ ಅದರಲ್ಲಿ ಹುರುಳಿಲ್ಲ. ಪಾಶ್ಚಾತ್ಯ ಕವಿಯ ಕಾವ್ಯವನ್ನೋದಿ "ನರಕದಲ್ಲಿ ಮೂರು ತಲೆಯ (ಇದು ಗ್ರೀಕ ಪುರಾಣಗಳಲ್ಲಿದೆ.) ನಾಯಿಗಳಿರುವುದೆಂದರೇನು? ಅದು ಮಾತನಾಡುವುದೆಂದರೇನು? ಅರ್ಧ ದೇಹವು ಪ್ರಾಣಿಗಳಂತೆಯೂ ಅರ್ಧ ದೇಹವು ಮನುಷ್ಯರಂತೆಯೂ ಇರುವ ಭೂತಗಳಿರುವುದೆಂದರೇನು? ಗುಲಾಮರನ್ನು ದೂಷಿಸುವುದಕ್ಕಾಗಿ ಮತ್ತು ಅವರ ಮುಖಕ್ಕೆ ಮಸಿಯನ್ನು ಬೊಳಿಯುವುದಕ್ಕಾಗಿ ಕವಿಯು ಮಾಡಿರುವ ಕುಹಕವಿದು" ಎಂದರೆ ವೆಷ್ಟು ಸುಸಂಗತವೊ ವಾಲ್ಮೀಕಿ ಮಹರ್ಷಿಗಳ ಮೇಲಿನ ಆಕ್ಷೇಪಣೆಯೂ ಅಷ್ಟೇ ಸುಸಂಗತ.

"ಒಂದು ಕ್ರೌಂಚ ಪಕ್ಷಿಯು ಹತವಾದುದನ್ನು ಸಹಿಸದೆ ಶೋಕಿಸಿದ ವಾಲ್ಮೀಕಿಗೆ ಪಶುಪಕ್ಷಿಗಳಲ್ಲಿ ಶ್ರೀರಾಮನಿಗೆ ಆತ್ಮೀಯತೆಯೆಂದು ವರ್ಣಿಸಿ ಜಟಾಯುವೆಂಬ ಮುದಿ ಹದ್ದನ್ನು ಅವನು ಪಿತೃಭಕ್ತಿಯಿಂದು ಕಂಡು ಸಂಭಾಷಣೆ ನಡೆಸಿದನೆಂದು ವರ್ಣಿಸಿದ ವಾಲ್ಮೀಕಿ ಮಹರ್ಷಿಗೆ ದ್ರಾವಿಡ ದ್ವೇಷವೆಂದು ಸಮರ್ಥಿಸುವುದು ಹೇಗೆ? ವಾಲ್ಮೀಕಿಯನ್ನು ಬ್ರಾಹ್ಮಣ ದ್ವೇಷಿಯೆಂದು ಬ್ರಾಹ್ಮರು ಆಕ್ಷೇಪಿಸಿದರೆ ಅದೂ ನ್ಯಾಯವೆನಿಸಬಹುದೇನೋ! ಏಕೆಂದರೆ "ಬ್ರಾಹ್ಮಣನಾದ ರಾವಣನನ್ನು ಹತ್ತು ತಲೆಗಳ ಭೂತವೆಂದೂ, ರಾಕ್ಷಸನೆಂದೂ ವರ್ಣಿಸಿ ಕ್ಷತ್ರಿಯನಾದ ರಾಮನಿಂದ ಕೊಲ್ಲಿಸಿದುದು ಬ್ರಾಹ್ಮಣ ದ್ವೇಷವಲ್ಲದೆ ಮತ್ತೇನು? ಬ್ರಾಹ್ಮಣ ಪರಶುರಾಮನನ್ನು ಕ್ಷತ್ರಿಯ ರಾಮ ಸೋಲಿಸಿದುದು ಬ್ರಾಹ್ಮಣ ದ್ವೇಷವೇ?" ಹೀಗೆ ವಾದಿಸಿದರೆ ರಾಮಾಯಣ ರಚಿತವಾದುದು ಸಾರ್ಥಕವಾದೀತೋ ಏನೋ!

ಸಿಹಿಸುದ್ದಿ ಸಂಗ್ರಹ

ಜೋರ್ಜಿಯಾ ಎಂಬುದೊಂದು ರಶ್ಯದ ಪ್ರಜಾಪ್ರಭುತ್ವಕ್ಕೆ ಸೇರಿದ ಸ್ವತಂತ್ರ ರಾಜ್ಯ. ಅಲ್ಲಿಯ ಜನರ ಭಾಷೆಯೂ ಐರೋಪ್ಯ ಭಾಷೆಗಳಲ್ಲೊಂದು—ತುರ್ಕಿ ಮತ್ತು ರಶ್ಯನ್ ಭಾಷೆಗಳ ಮಿಶ್ರಣ. ಈಗ ಈ ಜೋರ್ಜಿಯನ್ ಭಾಷೆಯಲ್ಲಿ ಕಾಳಿದಾಸದ ಶಾಕುಂತಲವು ಭಾಷಾಂತರಿಸಲ್ಪಡುವುದಂತೆ.

★

ಶಾಲಾಮಕ್ಕಳ ಮನೆಲೆಕ್ಕಗಳನ್ನೂ ಇತರ ಮನೆ ಕೆಲಸಗಳನ್ನೂ ಹೆತ್ತವರು ಮಾಡಿ ಕೊಡುವುದೇ ರೂಢಿಯಾಗಿರುವುದರಿಂದ ಇಂಗ್ಲೆಂಡಿನ ಡೆವನ್‌ಪೋರ್ಟಿನ ಓರ್ವ ಹೆಡ್‌ಮಾಸ್ತರರು ವರ್ಷಾವಧಿ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಪಾಸಾದ ಹುಡುಗನ ತಂದೆಗೆ ಒಂದು ಬಹುಮಾನವನ್ನು ಕೊಡುವುದಾಗಿ ಸಾರಿದ್ದಾರೆ.

★

ಪಾರ್ಲಿಮೆಂಟಿನ ಇತ್ತೀಚೆಗಿನ ಅಧಿವೇಶನದಲ್ಲಿ ಪ್ರಶ್ನಾ ಸಮಯದಲ್ಲಿ 30 ಸಾವಿರ ಪ್ರಶ್ನೆಗಳು ಕೇಳಲಾಗಿವೆ.

★

ಬ್ರಿಟನಿನ ಕಾರ್ಖಾನೆಗಳಿಂದ ಹೊರಡುವ ಹೊಗೆಯಲ್ಲಿ ಪ್ರತಿ ವರ್ಷ 30 ಲಕ್ಷ ಟನ್ ಮಸಿಯು ವಾತಾವರಣದಲ್ಲಿ ಸೇರುವುದಂತೆ.

★

ಜಗತ್ತಿನಲ್ಲಿ ಸಿಕ್ಕಿದ ಅತೀ ದೊಡ್ಡ ವಜ್ರ ಕುಲಿನನ್ ಎಂಬುದು. ಇದು 1½ ರಾತ್ತಲ್ ಭಾರವಿತ್ತು.

★

ಬ್ರಿಟನಿನಲ್ಲಿ 24 ಸಾವಿರ ನ್ಯಾಯಾಧೀಶರಿದ್ದಾರೆ.

★

ಬ್ರಿಟನಿನಲ್ಲಿ 2 ಸಾವಿರ ವರ್ಷಗಳಿಂದ ಬೆಳ್ಳಿ ನಾಣ್ಯಗಳು ಉಪಯೋಗದಲ್ಲಿವೆ.

★

ಬೀರ್ ಮದ್ಯವು 3 ಸಾವಿರ ವರ್ಷಗಳ ಹಿಂದೆ ಕಂಡುಹಿಡಿಯಲ್ಪಟ್ಟಿತು. ಇದನ್ನು ಕುಡಿದು ಮತ್ತನಾದವನೊಬ್ಬನನ್ನು ಕ್ರಿಸ್ತಪೂರ್ವ 1300 ಇಸವಿಯಲ್ಲಿ ಕೈದುಮಾಡಿದ ದಾಖಲೆ ಈಜಿಪ್ಟಿನಲ್ಲಿ ದೊರಕಿದೆ.

★

ಪಶ್ಚಿಮ ಇಂಡೀಸ್ ದ್ವೀಪಗಳಲ್ಲೊಂದಾದ ಬೆರ್ಮುಡಾ ದ್ವೀಪದಲ್ಲಿ ಒಸರು, ನದಿ, ಬಾವಿ ಇಲ್ಲವೆ ಸರೋವರಗಳಿಲ್ಲ. ಅಲ್ಲಿಯ ಜನರು ಸಂಪೂರ್ಣ ಮಳೆ ನೀರಿನ ಮೇಲೆ ಹೊಂದಿಕೊಂಡಿದ್ದಾರೆ.

★

ಫೀಲ್ಡ್ ಮಾರ್ಶಲ್ ಮೊಂಟ್ ಗೋಮರಿಯವರ ಸೈನ್ಯ ಪದಕಗಳ ಒಟ್ಟು ಭಾರವು ಸುಮಾರು ಅರ್ಧ ಮಣದಷ್ಟಿದೆಯಂತೆ.

★

ಸಾಮಾನ್ಯವಾಗಿ ತಿಳಕೊಂಡಂತೆ "ಬೆಕ್ಕುಗಳು ಸಂಪೂರ್ಣ ಕತ್ತಲಲ್ಲಿ ನೋಡಲಾರವು.

★

ಸಮುದ್ರ ನೀರಿನಿಂದ ಬಂಗಾರ ತೆಗೆಯುವ ಒಂದು ಕಮ್ಮಿ ಖರ್ಚಿನ ವಿಧಾನವು ಕಂಡುಹಿಡಿಯಲ್ಪಟ್ಟರೆ ಸಾಗರಗಳ ಪ್ರತಿ ಒಂದು ಘನ ಮೈಲು (1 ಮೈಲು ಉದ್ದ, 1 ಮೈಲು ಅಗಲ, 1 ಮೈಲು ಆಳ) ಉಪ್ಪು ನೀರಿನಿಂದ 50 ಲಕ್ಷ ಪವನು ಮೌಲ್ಯದ ಚಿನ್ನವನ್ನು ಪಡೆಯಬಹುದು.

★

ಕೊಮನ್ಸ್ ಸಭೆಯ ಅಧ್ಯಕ್ಷನಿಗೆ ಸ್ಪೀಕರ್ ಇಲ್ಲವೆ ಮಾತನಾಡುವವನೆಂದು ಹೆಸರು. ಇವರು ರಾಜರೊಡನೆ ಪ್ರಜಾಪ್ರತಿನಿಧಿ ಸಭೆಯ ಪರವಾಗಿ ಮಾತನಾಡುತ್ತಾರೆ.

★

ಕಿವಿ ಮೂಗು ಮತ್ತು ಗಂಟಲು ವ್ಯಾಧಿಗಳ ತಜ್ಞ ವೈದ್ಯರಿಗೆ ಇಂಗ್ಲಿಷಿನಲ್ಲಿ ಒಟೋರಿನೊ ಲಾರಿಂಗೊಲೊಜಿಸ್ಟ್ ಎಂದು ಕರೆಯುತ್ತಾರೆ.

ಜಾಂಬಕ್ ಅದ್ಭುತ ಗುಣಕಾರಿ

ಜ್ಯಾಂಬಕ್ ಐವತ್ತು ವರ್ಷಗಳಿಂದ ಚರ್ಮ ವ್ಯಾಧಿಗಳಿಗೆ ಗುಣಕಾರಕ ಮುಲಾಮು ಎಂದು ಹೆಸರು ಪಡೆದಿದೆ. ಜ್ಯಾಮ್‌ಬುಕ್‌ನಲ್ಲಿರುವ ಕೆಲವೊಂದು ಬೇರುಗಳ ಶುದ್ಧ ತೈಲವು ಧಾತುವಿಕೆಯನ್ನೂ ನೋವನ್ನೂ ಕಡಿಮೆ ಮಾಡಿ ವ್ರಣಗಳಿಂದ ಹೊರಬರುವ ರಸಿಗೆಯನ್ನು ನಿಲ್ಲಿಸಿ ಹುಣ್ಣನ್ನು ಗುಣಪಡಿಸುವುದು. ಅಲ್ಲದೆ ಜ್ಯಾಂಬಕ್ ವ್ರಣಗಳಿಂದ ಕೊಳೆತ ಭಾಗವನ್ನು ಮೊದಲಿನಂತೆ ಮಾಡಲು ಪ್ರಗತಿಗೆ ಸಹಾಯ ಮಾಡುತ್ತದೆ.

ವ್ರಣ, ದದ್ದು, ಮುದ್ದಣ, ಕಡಿತ, ಕುರಿಕಜ್ಜಿ, ಕಾಲು ಕುಂಚು ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಜ್ಯಾಂಬಕು ಜಗತ್‌ಪ್ರಖ್ಯಾತ ಔಷಧಿ.

ಜಾಂಬಕನ್ನೇ ಉಪಯೋಗಿಸಿರಿ.

Zam-Buk

ಜಗತ್‌ಖ್ಯಾತಿಯ ಗಿಡಮೂಲಿಕೆಯ ಮುಲಾಮು.

ಪ್ರಾಣಿಕೊಬ್ಬು ವಿರಹಿತವಾದ್ದು.

ಬಾವುಗಳನ್ನು ಕೂಡಲೇ ಗುಣಪಡಿಸಿರಿ

ನೋವನ್ನು ಉಂಟುಮಾಡುವ ವಿಷಕಾರೀ ಬಾವುಗಳು ಈ ರೀತಿ ಗುಣವಾಗುತ್ತವೆ. ಅವನ್ನು ಆಗಾಗ ನೀರಿನಿಂದ ಕುಟಿಕೂರಾ ಸೋಪು ಹಾಕಿ ತೊಳೆಯಿರಿ; ಅದರ ಮೇಲೆ ಕುಟಿಕೂರಾ ಮುಲಾಮು ಹಚ್ಚಿರಿ.



ಕುಟಿಕೂರಾ ಮುಲಾಮು

CUTICURA OINTMENT

ನಿದ್ರೆಯಲ್ಲಿ ನಡೆವವರ ಮಾನಸಿಕ ಸ್ಥಿತಿ ಹೇಗಿದೆ?

ಕನ್ನಡಿಗ ವೈದ್ಯರ ವೈಜ್ಞಾನಿಕ ವಿವರಣೆ

ಯುದ್ಧಭಯದಿಂದ ನರದುರ್ಬಲತೆ

"ಸ್ವಪ್ನಗಳೂ ನಿದ್ರೆಯ ಸಹಜವಾದ ಭಾಗಗಳು. ಸ್ವಪ್ನಗಳು ಮಿತಿಮೀರಿದರೆ ವ್ಯಕ್ತಿಯು ನಿದ್ದೆಯಲ್ಲಿ ನಡೆದುಹೋಗುವಂತಾಗುತ್ತದೆ. ಈ ಭಂಗಿಯಲ್ಲಿ 'ನಡೆಯುವವ' ಶರೀರ ಅಂಗಾಂಗಗಳನ್ನು ಸಂಪೂರ್ಣ ಹತೋಟಿಯಲ್ಲಿಟ್ಟುಕೊಂಡು ವರ್ತಿಸುತ್ತಾನೆ. ಆದರೆ ಅವನ ಮಿದುಳಿನ ಶಕ್ತಿಗಳು ಮಾತ್ರ ಕಮ್ಮಿಯಾಗುವುದರಿಂದ ತಾನು ನಡೆಸಿದ ಸಂಗತಿ ಎಚ್ಚರವಾದ ಮೇಲೆ ಅವನಿಗೆ ಜ್ಞಾಪಕವಿರುವುದಿಲ್ಲ" ಹೀಗೆಂದು ಲಂಡನಿನ ಡಾ। ಎಂ. ನರಸಿಂಹ ಪೈ ಅವರು (ಇವರು ದಕ್ಷಿಣ ಕನ್ನಡ ಜಿಲ್ಲೆಯವರು) ಬ್ರಿಟಿಷ್ ಮನಶ್ಶಾಸ್ತ್ರ ಪತ್ರಿಕೆಯಲ್ಲಿ ಬರೆಯುತ್ತಾರೆ. ನಿದ್ರೆಯಲ್ಲಿ ನಡೆಯುವುದನ್ನು ತಡೆಯುವುದಕ್ಕೂ ಅವರು ಕೆಲವು ಸಲಹೆಗಳನ್ನು ಕೊಟ್ಟಿರುತ್ತಾರೆ.

ಡಾ। ಪೈ ಅವರು ನಿದ್ರಾ ವ್ಯಾಧಿಯಿಂದ ನರಳುವ 117 'ರೋಗಿ'ಗಳನ್ನು ಪ್ರಯೋಗಾರ್ಥ ಪರಿಶೀಲಿಸಿ ಒಂದು ವರದಿ ಸಿದ್ಧ ಮಾಡಿದ್ದಾರೆ. ಅದರ ಅಂತ್ಯದಲ್ಲಿ ಅವರು ಹೀಗೆ ಇತ್ಯರ್ಥಕ್ಕೆ ಬಂದಿರುವರು.

ಹಲವು ಸಂದರ್ಭಗಳಲ್ಲಿ ಇವರ ವ್ಯಾಧಿಯನ್ನು ಕೇವಲ 'ನಿದ್ರಾ ಸಂಚಾರ'ವೆಂದು ಕರೆಯುವುದು ತಪ್ಪು. ಕಾರಣ ಹೀಗೆ ನಡೆಯುವ ಹೆಚ್ಚಿನವರು ಸಂಪೂರ್ಣ ನಿದ್ರಾ ಪರವಶರಾಗಿರದೆ ಅರ್ಧಮರ್ಧ ಜಾಗ್ರತಾವಸ್ಥೆಯಲ್ಲಿಯೂ ಇರುತ್ತಾರೆ. ನಿದ್ರೆಯಲ್ಲಿ ನಡೆಯುವ ಈ ವಿಕಾರಕ್ಕೆ ಮಾನಸಿಕ ಅಸ್ವಸ್ಥತೆಯ ಕಾರಣಗಳೇ ಮೂಲವಾಗಿವೆ. ನಿದ್ರೆಯಲ್ಲಿ ನಡೆಯುವ ಮನುಷ್ಯರು ತಮ್ಮ ಬಾಲ್ಯ ಪ್ರಾಯದಿಂದಲೂ ಅದೇ ಅಭ್ಯಾಸವುಳ್ಳವರಾಗಿದ್ದರು.

ಯುದ್ಧ ಶ್ರಮ

ನಿತ್ಯವೂ ಅತೀ ಹೆಚ್ಚು ಮಾನಸಿಕ ಸಂಕಷ್ಟವನ್ನನುಭವಿಸುವವರೂ, ಯುದ್ಧ ಕೆಲಸದಲ್ಲಿ ಜೀವರಕ್ಷಣೆಯ ಅತೀ ಆಸಕ್ತಿಯುಳ್ಳವರೂ ತಮ್ಮ ನಿದ್ದೆಯಲ್ಲಿ ನಡೆಯುವ ಈ ರೋಗಕ್ಕೆ ತುತ್ತಾಗುವರು. ಜರ್ಮನರ ದಾಳಿಗೆ ಸೋತು ಡಂಕರ್ಕ್ ನಿಂದ ಪಲಾಯನ ಮಾಡಿ ಓಡಿಬಂದ ಸೈನಿಕರು ರಾತ್ರಿ ಹಗಲು ಪ್ರಾಣಭಯದಿಂದ ನರಳುತ್ತಿದ್ದರು. ಅವರಲ್ಲಿ ಈ ನಡೆಯುವಿಕೆಯು ಹೆಚ್ಚು ಸಂಖ್ಯೆಯಲ್ಲಿ ಕಂಡುಬಂದಿದೆ. ಹಲವು ಸಲ ಇವರ ಪಕ್ಕನೇ ಮಲಗಿದಲ್ಲಿಂದ ಎದ್ದು ಕೈಗೆ ಸಿಕ್ಕುವುದನ್ನೆಲ್ಲ ದರೂ ಆಯುಧಗಳಂತೆ ಹಿಡಿದು ಶತ್ರುಗಳನ್ನು ಹೊಡೆಯಲೆಂದು ಹೋಗುವ ಹಲವು ನಿದರ್ಶನಗಳು ಗಮನಕ್ಕೆ ಬಂದಿವೆ. ಈ ಸೈನಿಕರೆಲ್ಲರೂ ತಮಗೆ ಸರಿಯಾದ ನಿದ್ದೆ ಬೀಳುವುದಿಲ್ಲವೆಂದೂ ತಿಳಿಸಿದ್ದಾರೆ. ಅವರನ್ನು ಯುದ್ಧಪರಿಸ್ಥಿತಿಯಿಂದ ತಪ್ಪಿಸಿ ವಿಶ್ರಾಂತಿಗಾಗಿ ದೂರದ ಪ್ರಶಾಂತ ಸ್ಥಳಕ್ಕೆ ಒಯ್ದಾಗ ಅವರು ಸುಖ ನಿದ್ರೆಯಲ್ಲಿ ಲೋಲರಾಗುತ್ತಿದ್ದರು. ಆಗ ನಡೆಯುವ ಲಕ್ಷಣಗಳೂ ಕಂಡುಬಂದಿಲ್ಲ.

ಮನಸ್ಸು ಬಹುಕಾಲದಿಂದ ಸದಾ ಚಿಂತೆಗೊಳಪಟ್ಟುದರಿಂದುಂಟಾಗುವ ನಿದ್ದೆ ನಡತಕ್ಕೆ ಪರಿಹಾರವು ಕಷ್ಟತರವಾಗುತ್ತದೆ. ಭಾವನಾಪರವಶರಾಗಿ ಅಲ್ಪ ಸ್ವಲ್ಪ ಕಾರಣಗಳಿಂದ ಉದ್ರೇಕರಾಗುವ ತರುಣರಲ್ಲಿ ಕಲಿಯುವ ಚಿಂತೆ, ಉದ್ಯೋಗದ ಚಿಂತೆ, ಹಣದ ಚಿಂತೆಗಳುಂಟಾದಲ್ಲಿ ನಿದ್ರೆ ನಡೆತವುಂಟಾಗುವುದು. ಇಂಥವರು ನಿದ್ರೆಯಲ್ಲಿ ನಡೆಯುವಾಗ ಅರ್ಧ ಕಣ್ಣು ಬಿಟ್ಟುಕೊಂಡೇ ಇರುವರು. ಬೆಳಕು ಕಂಡೊಡನೆ, ಇಲ್ಲವೆ ಸೂಜಿ ಚುಚ್ಚಿದಾಗ ಅಥವಾ ಶಬ್ದ ಕೇಳಿದಾಕ್ಷಣ ಇವರು ಎಚ್ಚರಗೊಳ್ಳುವರು. ಆದರೆ ಇವರು ಪ್ರಶ್ನೆಗಳಿಗೆ ಉತ್ತರಗಳನ್ನು ಕೊಡುವುದಿಲ್ಲ. ಅಂಥವರನ್ನು ಸುಲಭವಾಗಿ ಪುನ ಮಲಗಿಸಬಹುದು.

ವಿರೋಧ ವರ್ತನೆ

ಕ್ರೂರ ಸಂಕಷ್ಟದಾಯಕ ಸ್ವಪ್ನಗಳ ಮತ್ತು ಮುಂಚಿನ ಒಂದೆರಡು ರಾತ್ರಿಗಳ ನಿದ್ರಾಭಂಗದಿಂದ ಕೆಲವು ಕಠಿಣ ನಿದ್ರಾಚಾಲಕರುತ್ಪನ್ನರಾಗುವರು. ಇವರು ಎದುರು ಸಿಕ್ಕಿದವರನ್ನು ಹೊಡೆಯುವುದು ಒಡೆಯುವುದಿದೆ. ಇವರ ನಿದ್ರಾ ಭಂಗದ ಕಾರಣಗಳನ್ನು ತಿಳಿಕೊಂಡು ಅವರ ಚಿಂತೆಯನ್ನು ಪರಿಹರಿಸುವುದೇ ಇಂಥವರಿಗೆ ಯೋಗ್ಯ ಚಿಕಿತ್ಸೆ. ನಿದ್ರೆ ಬೀಳುವ ಔಷಧಿಯನ್ನು ಮೂರು ವಾರಗಳ ತನಕ ಕೊಡುವುದರಿಂದಲೂ ಇದು ಗುಣವಾಗುವುದು.

ಜಾಗ್ರತರಾಗಿರುವಾಗ ವ್ಯಕ್ತಿಯು ಯೋಚಿಸಿದ ಕಾರ್ಯಗಳು ಅಯಶಸ್ವಿಯಾಗಿ ಅವನಿಗೆ ಅತೀ ಹೆಚ್ಚಿನ ನಿರಾಶೆಯುಂಟಾದರೆ ಅವನು ತಾನು ಬಯಸಿದ ಕಾರ್ಯಗಳನ್ನು ನಿದ್ರೆಯಲ್ಲಿ ನೆರವೇರಿಸಲು ಪ್ರಯತ್ನಿಸಿದ ದೃಷ್ಟಾಂತ ಇದೆ. ಈ ಅವಸ್ಥೆ ... ದ ಪರಿಣಾಮ.

ಈ ಅವಸ್ಥೆಯಲ್ಲಿ ... ಮತಾಚಾರದವರು ನಿದ್ರೆಯಲ್ಲಿ ಅತ್ಯಂತ ದುರಾಚಾರದ ಕೃತ್ಯಗಳನ್ನು ಮಾಡಲು ಯತ್ನಿಸುವುದು ... ಶ್ರೀಮಂತರೂ ... ನಾಗರಿಕರು ... ವಸ್ಥೆಯಲ್ಲಿ ಕಾಲ್ಪನಿಕ ಚಟುವಟಿಕೆಗಳನ್ನು ಸಾಧಿಸಲು ಹವಣಿಸುವರು.

ನಿದ್ರೆಯಲ್ಲಿ ನಡೆಯುವವರು ಅತ್ಯಂತ ಪ್ರಣತೆಯಿಂದ ... ಅಡ್ಡಂತರಗಳನ್ನು ತಪ್ಪಿಸಿಕೊಳ್ಳುತ್ತಾರೆ. ಕಣ್ಣು ಮುಚ್ಚಿಕೊಂಡಿದ್ದರೂ ... ಇಂಥವರಿಗೆ ದಿಗಿಲು ... ಕಾಲ್ಪನಿಕ ... ವಿಯಲ್ಲಿ ... ವರು ಬೆಳಗಿನ ಹೊತ್ತು ನಿತ್ಯಕ್ರಮದಂತೆ ಕೆಲಸ ಮಾಡುವರು. ಇಂಥವರನ್ನು ಮಾನಸಿಕ ಇಂದ್ರಜಾಲತಜ್ಞರಿಂದ (Hypnotists) ಗುಣಪಡಿಸಬಹುದು.

ಶೇಕ್ಸ್‌ಪಿಯರ್ ಕತೆ

ಪ್ರಣಯ ನಿರಾಶೆ, ಲೈಂಗಿಕ ದುರ್ಬಲತೆ, ನರದುರ್ಬಲತೆ, ದ್ವೇಷ ವೈಷಮ್ಯಗಳಿಂದಲೂ, ದಾಂಪತ್ಯ ಸುಖವಿಲ್ಲದಿರುವಿಕೆಯಿಂದಲೂ ಭೀಕರ ನಿದ್ರಾ ನಾಟಕಗಳಾಗುತ್ತಿವೆ. ಶೇಕ್ಸ್‌ಪಿಯರನ ಮೆಕ್‌ಬೆತ್ ನಾಟಕದಲ್ಲಿ ಇಂತಹವೊಂದು ಘಟನೆಯು ಉಲ್ಲೇಖಿತವಾಗಿದೆ. ಇಂತಹವರನ್ನು ಗುಣಪಡಿಸುವುದು ವೈದ್ಯತಜ್ಞರಿಗೆ ಅತ್ಯಂತ ಕಠಿಣದ ಕೆಲಸವಾಗಿದೆ. ಶೇಕ್ಸ್‌ಪಿಯರನ ಡಾಕ್ಟರ್ ಪಾತ್ರವೆಂದಂತೆ "ಈ ವ್ಯಾಧಿ ನನ್ನ ಉದ್ಯೋಗಕ್ಕೆ ಮಿಕ್ಕಿದಾಗಿದೆ ಎನಿಸುವುದು" ಹೀಗೆಂದು ಡಾ। ಪೈ ಅವರು ತಮ್ಮ ಲೇಖನವನ್ನು ಮುಗಿಸುತ್ತಾರೆ.

ಅಂಬೇಡ್ಕರರಿಗೆ ಬಿಹಾರ ಗವರ್ನರ್ ಪದವಿ

ಪ್ರಾಂತ್ಯಗಳಲ್ಲೆಲ್ಲಾ ಭಾರತೀಯ ಮೇಲಾಧಿಕಾರಿಗಳು

ಭಾರತದಿಂದ ಹೊರಡುವ ಪೂರ್ವ ಸಿದ್ಧತೆ

1948ರ ಜೂನ್ ... ಭಾರತೀಯ ... ಗವರ್ನರ್‌ಗಳು ... ವಹಿಸಿಕೊಳ್ಳುವುದಂತೆ.

ದಿಲ್ಲಿಯಲ್ಲಿ ... ಸಂಬಂಧ ಗವರ್ನರರ ಸಭೆಯಲ್ಲಿ ಈ ಬಗ್ಗೆ ... ಹೇಳಿಕೆ ... ದೊಡ್ಡ ... ಪತ್ರಿಕೆಯ ವಿಶೇಷ ಬಾತ್ಮೀದಾರರೊಬ್ಬರು ತಿಳಿಸುತ್ತಾರೆ. ಬರುವ ತಿಂಗಳಿಂದ ಬಹು ಮಂದಿ ಗವರ್ನರರು ಅಧಿಕಾರ ಬಿಟ್ಟು ಬ್ರಿಟನಿಗೆ ತೆರಳುವರಂತೆ.

ಬರುವ ಜುಲಾಯಿ ತಿಂಗಳಲ್ಲಿ ಬಂಗಾಳದ ಗವರ್ನರರಾದ ಸರ್ ಫ್ರೆಡ್ರಿಕ್ ಬರೋ ಅವರು ರಾಜಿನಾಮೆ ಇತ್ತು ಹೋಗುವಾಗ ಅವರ ಸ್ಥಾನದಲ್ಲಿ ಮೈಸೂರ್ ದಿವಾನ್ ರಾಮಸ್ವಾಮಿ ಮೊದಲಿಯಾರರು ನೇಮಿಸಲ್ಪಡಬಹುದು.

ಮದ್ರಾಸಿಗೆ ಸರ್ ಅಶೋಕ್‌ರೇ

ಒರಿಸ್ಸಾದಲ್ಲಿ ಸರ್ ಚಂದೂಲಾಲ್ ತ್ರಿವೇದಿಯವರು ಈಗಾಗಲೇ ಗವರ್ನರರಾಗಿರುವರು. ಸರ್ ಅಕ್ಬರ್ ಹೈದಾರಿಯವರು ಅಸ್ಸಾಮಿನ ಗವರ್ನರರಾಗಿರುವರು.

ಸರ್ ಗಿರಿಜಾಶಂಕರ್ ಬಾಜ್ಪೈಯವರು ಸಿಂಧ್ ಗವರ್ನರರಾಗಿಯೂ ಸರ್ ಆರ್ದೇಶಿರ್ ದಲಾಲ್ ಅವರು ಗಡಿನಾಡಿಗೂ, ಸರ್ ಸಾಮುವೇಲ್ ರಂಗನಾದನ್ ಅವರು ಪಂಜಾಬಿಗೂ ಸರ್ ಮಹ್ಮದ್ ಉಸ್ಮಾನ್ ಅವರು ಸಂಯುಕ್ತಪ್ರಾಂತ್ಯಕ್ಕೂ ಗವರ್ನರರಾಗುವರಂತೆ.

ಸರ್ ದಾತಾರ್ ಸಿಂಗರು ಮಧ್ಯಪ್ರಾಂತ್ಯದ ಗವರ್ನರ್ ಪದವಿಗೂ ಸರ್ ಅಶೋಕ್‌ರೇ ಅವರು ಮದ್ರಾಸಿನ ಪದವಿಗೂ ಡಾ। ಅಂಬೇಡ್ಕರರು ಬಿಹಾರಕ್ಕೂ ಗವರ್ನರರಾಗಿ ನೇಮಿಸಲ್ಪಡುವ ಯೋಜನೆ ನಿರ್ಧಾರವಾಗಿದೆಯೆಂದು ಊಹನೆಗಳಿವೆ.

ಭಾರತದ ಪ್ರಗತಿಯನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲವೆಂದೂ ಚರ್ಚಿಲ್ಲರ ಸಾಮ್ರಾಜ್ಯಶಾಹಿ ಧೋರಣೆಗೆ ಅಮೇರಿಕದ ಬೆಂಬಲವಿಲ್ಲವೆಂದೂ ಬ್ರಿಟನಿನ ಇಂದಿನ ... ಚರ್ಚಿಲ್ಲರೇ ... ಒಂದು ಭಾಷಣದಲ್ಲಿ ತಿಳಿಸಿದರು.

*

ಪ್ರಯಾಣಿಕರಿಗೆ ಸ್ಪೆಶ್ಯಲು ಸರ್ವಿಸಿನ ಸೂಚನೆ.

ಮುಲ್ಕಿ, ಬಪ್ಪನಾಡು ... ಇತ್ಯಾದಿ ಸ್ಥಳಗಳಲ್ಲಿ ಜರಗಲಿರುವ ಜಾತ್ರೆಯ ಸಮ್ಮಂಧ ಪ್ರಯಾಣಿಸುವ ಯಾತ್ರಿಕರ ಬಗ್ಗೆ ಸ್ಪೆಶ್ಯಲು ಸರ್ವಿಸುಗಳನ್ನು ರನ್ ಮಾಡುವ ಏರ್ಪಾಟನ್ನು ಮಾಡಲಿಚ್ಛಿಸಿದ್ದೆವಾದರೂ ಪ್ರಕೃತ ಮೋಟಾರು ಕಂಪೆನಿಗಳಿಗೆ ಸಿಗಬೇಕಾದ ಪೆಟ್ರೋಲು ಕೋಟಾದಲ್ಲಿ ಕಡಿತವಾಗಿರುವುದರಿಂದ ಕೆಲವು ಬಸ್ಸುಗಳಿಗೆ ಪೆಟ್ರೋಲು ಸಾಕಾಗದೆ ಕೆಲವು ಸರ್ವಿಸುಗಳನ್ನು ತಾತ್ಕಾಲಿಕವಾಗಿ ನಿಲ್ಲಿಸುವ ಸಂದರ್ಭ ಬಂದೊದಗಿರುವುದರಿಂದಲೂ, ಮತ್ತು ಗ್ಯಾಸು ಬಸ್ಸುಗಳು ಸಹ ಕಡಿಮೆ ಇದ್ದು ಅವುಗಳಿಂದ ದಿನವಹಿ ಸರ್ವಿಸುಗಳನ್ನು ರನ್ ಮಾಡಿಸಲ್ಪಟ್ಟನ ತರುವಾಯ ಸಾಧ್ಯವಿದ್ದಲ್ಲಿ ಮಾತ್ರ ಸ್ಪೆಶ್ಯಲು ಸರ್ವಿಸುಗಳನ್ನು ರನ್ ಮಾಡಬೇಕಾಗುತ್ತದೆ. ಅಲ್ಲದೆ ಕೋಸ್ಟಲ್ಯಾಂಡಿನಲ್ಲಿ ಕೆಲವು ಕಡೆಗಳಲ್ಲಿ ಪೆಟ್ರೋಲು ಮತ್ತು ಕೆಲವು ಕಡೆಗಳಲ್ಲಿ ಗ್ಯಾಸು ಬಸ್ಸುಗಳಿರುವುದರಿಂದ ಸಾಧ್ಯವಿದ್ದ ಸ್ಥಳದ ವರೇಗೆ ಮಾತ್ರ ಸ್ಪೆಶಲು ರನ್ ಮಾಡಬೇಕಾಗಿರುತ್ತದೆ. ಉದಾಹರಣೆಗಾಗಿ ಮಂಗಳೂರು— ಮುಲ್ಕಿ ಲೈನಿನಲ್ಲಿ ಪಾವಂಜೆಯಿಂದ ಮುಲ್ಕಿಗೆ ಪೆಟ್ರೋಲು ಬಸ್ಸು ಮಾತ್ರ ರನ್ ಆಗುತ್ತಿರುವುದರಿಂದ ಮುಲ್ಕಿ ರಥೋತ್ಸವ ಹಾಗೂ ಬಪ್ಪನಾಡು ಜಾತ್ರೆಯ ಸಮ್ಮಂಧ ಸ್ಪೆಶಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ ಗ್ಯಾಸು ಬಸ್ಸುಗಳ ಅನುಕೂಲತೆ ನೋಡಿ ಪಾವಂಜೆ ತನಕ ಮಾತ್ರ ಸ್ಪೆಶ್ಯಲುಗಳನ್ನು ರನ್ ಮಾಡಲಾಗುವುದು. ಆದಕಾರಣ ಜಾತ್ರೆಯ ಬಗ್ಗೆ ಪ್ರಯಾಣಿಸಲಿಚ್ಛಿಸುವ ಯಾತ್ರಿಕರು ಸ್ಪೆಶಲ್ ಸರ್ವಿಸು ರನ್ ಆಗಬಹುದೆಂಬ ಹೆಚ್ಚಿನ ಭರವಸ ಇಡದೆ ಸಾಧ್ಯ ಇದ್ದ ಹಾಗೆ ನಮ್ಮ ದಿನವಹಿ ಸರ್ವಿಸುಗಳಲ್ಲಿ ಪ್ರಯಾಣಿಸಬೇಕಾಗಿ ಅಪೇಕ್ಷಿಸುತ್ತೇವೆ.

ಅಲ್ಲದೆ ಮದುವೆ ಇತ್ಯಾದಿ ಸಮಾರಂಭಗಳ ಬಗ್ಗೆ ಸ್ಪೆಶ್ಯಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ R. T. O. ಕೊಯಂಬುತ್ತೂರು ಇವರಿಂದ ಪರ್ಮಿಶನ್ ಪಡಕೊಂಡೇ ಅಂಥಾ ಸ್ಪೆಶ್ಯಲುಗಳನ್ನು ಗ್ಯಾಸು ಬಸ್ಸುಗಳ ಅನುಕೂಲತೆ ನೋಡಿ ರನ್ ಮಾಡಬೇಕಾಗಿರುವುದರಿಂದ ಹಾಗೆ ಸ್ಪೆಶ್ಯಲು ಬಸ್ಸುಗಳನ್ನು ಅಪೇಕ್ಷಿಸುವವರು ಸ್ಪೆಶ್ಯಲುಗಳ ಬಗ್ಗೆ ಪರ್ಮಿಶನ್ ಪಡಕೊಳ್ಳುವರೆ ನಮಗೆ ಅನುಕೂಲವಾಗುವಂತೆ ತಮ್ಮ ಅರ್ಜಿಗಳನ್ನು ನಮಗೆ 20 ದಿವಸಗಳಿಗೆ ಮುಂಚಿತವಾಗಿ ಬರಕೊಳ್ಳಬೇಕಾಗಿ ಸಾರ್ವಜನಿಕರಿಗೆ ತಿಳಿಸಲಪೇಕ್ಷಿಸುತ್ತೇವೆ.

ಮಂಗ್ಳೂರು,
29-3-1947.

ಜ್ಯೋಂಟ್ ಮೆನೇಜರ್ಸ್,
ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD
(Incorporated in British India with Limited Liability)
Estd: 1906.
Head Office: UDIPI, S. Kanara.

CAPITAL:	Rs.
Authorised	25,00,000
Issued, subscribed & called up	16,00,000
Paid up	15 97,145
RESERVES	5,25,000
DEPOSITS	2,07,47,928
TOTAL RESOURCES	3,00,01,186

With a net work of branches & Agencies in all principal cities of India, we shall be able to render efficient collection services

BANKING BUSINESS OF EVERY DESCRIPTION TRANSACTED

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತ
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ
ದೊರೆಯುವುದು

The 1946 Record Business proves the popularity

THE BOMBAY LIFE ASSURANCE COMPANY LIMITED

Company's New Business in 1946 - 3 28 Crores

Our Cheif Agency New Business in 1946 about 54 Lakhs.

Our experience of 37 years available to you for arranging Insurance investment Ittherefore, pays you to consult us to Insure or to represent

Messrs. Kochikar Brothers, Limited.

Chief Agents for South India,

Bombay Life Building,

Central Office, Udipi:

Branches at: MANGALORE, CALICUT, MADRAS, TRIVANDRUM, MADURA BANGALORE AND BOMBAY

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic increases the vitality and sexual vigour Also useful in habitual abortion and all diseases pertaining to the heart & lungs

Depot: **Maharata Galli, Hubli**

Bhuvanendra Products Ltd.

Factory & Head Office
KATAPADI S. Kanara

ಭುವನೇಂದ್ರ

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ತಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುತ್ತದೆ

ಡಿಪೊ ಮರಾಠಗಲ್ಲಿ, ಹುಬ್ಬಳ್ಳಿ

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಕು 23—5—1947 [ಸಂಚಿಕೆ 21]

ವಾರಾಂತ್ಯ ವರದಿ ವಿಮರ್ಶೆ

ವಿಚ್ಛೇದೀಕರಣ ಅನಿವಾರ್ಯ

ಲಂಡನಿನಲ್ಲೊಂದು ಕತೆ ಹರಡಿದೆ "ಭಾರತದಲ್ಲಿ ಅ ರಾಜಕತೆ ಮತ್ತು ಅಂತರ್ಯುದ್ಧಗಳನ್ನು ಕೊನೆಗಾಣಿಸಲೋಸುಗ ಬ್ರಿಟಿಷರು 1948ರ ಜೂನಿಗಿಂತ ಮೊದಲಾಗಿಯೇ ಭಾರತವನ್ನು ಬಿಟ್ಟು ತೊಲಗುವರು. ಆದರೆ ಹಿಂದೂ ಮುಸ್ಲಿಮರು ತಮ್ಮ ರಾಜಕೀಯ ಭಿನ್ನಾಭಿಪ್ರಾಯಗಳನ್ನು ಶೀಘ್ರವಾಗಿ ಸುಧಾರಿಸಿಕೊಳ್ಳಬೇಕು."

ವ್ಹೈಸ್ ರಾಯರು ಮೇ 17ರಂದು ಕೊಂಗ್ರೆಸ್ ಲೀಗ್ ಮತ್ತು ಸಿಕ್ ಮುಖಂಡರನ್ನು ಒಂದು ಪರಿಷತ್ತಿಗಾಗಿ ಕರೆದಿದ್ದರು. ಆದರೆ ಮರು ದಿವಸವೇ ಅದನ್ನು ಮತ್ತೆ 15 ದಿವಸಗಳಿಗೆ ಮುಂದೆ ಹಾಕಲಾಯಿತೆಂದು ಸಾರಲಾಯಿತು.

ಕೇವಲ ಇಪ್ಪತ್ತನಾಲ್ಕು ತಾಸುಗಳಲ್ಲಿ ಮೊದಲು ತೆಗೆದುಕೊಂಡ ನಿರ್ಣಯವು ಬದಲಾಯಿಸಲ್ಪಡಬೇಕಾದ ಆವಶ್ಯಕತೆಯು ಪರಿಸ್ಥಿತಿಗಳು ಬ್ರಿಟಿಶ್ ಭಾರತ ರಾಜಕೀಯದಲ್ಲುಂಟಾಗುತ್ತವೆಂದು ಇದರಿಂದ ಖಚಿತವಾಗುತ್ತದೆ. ಇದೇ ರೀತಿ ಹಿಂದೊಮ್ಮೆ ವ್ಹೈಸ್‌ರಾಯ್ ವೇವೆಲ್ಲರು ಸಿಮ್ಲಾ ಪರಿಷತ್ತನ್ನು ಅನಿರ್ದಿಷ್ಟ ಅವಧಿಯ ತನಕ ಮುಂದೆ ಹಾಕಿದ್ದರು—ಅದೂ ಕೂಡಾ ಒಂದು ನಿರ್ಧಾರಯುಕ್ತ ಘೋಷಣೆಯನ್ನು ಸಾರುವ ಸಂಧಿ ಕಾಲದಲ್ಲಿ.

ಈ ಸಲವೂ ಅದೇ ರೀತಿ ಸಂಭವಿಸಿತು. ಇಂತಹ ಹಲವು ಸನ್ನಿವೇಶಗಳಲ್ಲಿ ಬ್ರಿಟಿಷ್ ಸರಕಾರವು ನಿರ್ಬಲತೆ ಅಸ್ಥಿರತೆಗಳನ್ನು ಪ್ರದರ್ಶಿಸುತ್ತ ಬಂದಿದೆ. ಪರಿಣಾಮವಾಗಿ ಪ್ರತಿ ಸಲವೂ ಲೀಗು ಹೆಚ್ಚೆಚ್ಚು ಆತಂಕಗಳನ್ನೊಡ್ಡುವುದಕ್ಕೂ ಪ್ರಯತ್ನಿಸಿದೆ. ಈ ಆತಂಕಗಳನ್ನೆದುರಿಸುವಾಗ ಬ್ರಿಟಿಷರು ತೋರಿಸುವ ಸಡಿಲು ಧೋರಣೆಯನ್ನು ಲೀಗು ತನಗೆ ಸಿಕ್ಕಿದ ಯಶಸ್ವಿ ಪ್ರೋತ್ಸಾಹವೆಂದು ಭಾವಿಸುವಂತಾಗಿದೆ.

ಪೂರ್ವ ಇತಿಹಾಸ

ಜೂನ್ 2ರಂದು ವ್ಹೈಸ್‌ರಾಯರು ಬ್ರಿಟಿಷ್ ಸರಕಾರದ ಇತ್ಯರ್ಥವನ್ನು ಮುಖಂಡರಿಗೆ ತಿಳಿಸುವರಂತೆ. ಆದುದರಿಂದ ಇದುತನಕ ನಡೆದ ಘಟನೆಗಳ ಸಿಂಹಾವಲೋಕನ ಮಾಡುವುದು ಉಚಿತವೆಂದು ತೋರುತ್ತದೆ. ಕೆಬಿನೆಟ್ ಮಿಶನಿನವರು 1946ರ ಮೇ 16ರಂದು ಒಂದು ಘೋಷಣೆ ಹೊರಡಿಸಿ ಅದರಲ್ಲಿ ದೀರ್ಘ ಕಾಲದ ಮತ್ತು ನಡುಗಾಲದ ಎರಡು ಯೋಜನೆಗಳನ್ನು ಮುಂದಿಸಿದ್ದರು. ದೇಶದ ಪ್ರಾಂತ್ಯಗಳನ್ನು ಮೂರು ವಿಂಗಡಗಳಾಗಿ ವಿಂಗಡಿಸಿ ಒಂದು ಅಲ್ಪ ಅಧಿಕಾರದ ಕೇಂದ್ರವನ್ನು ರಚಿಸಬೇಕಾಗಿಯೂ ಈ ವಿಂಗಡಗಳಿಗೆ ಸಂಪೂರ್ಣ ಸ್ವಾತಂತ್ರ್ಯ ... ಪ್ರಾಂತಕ್ಕೆ ಇರುವುದೆಂದಾಗಿಯೂ ಅದರಲ್ಲಿ ಸೂಚಿಸಲಾಗಿತ್ತು. ಘಟನಾಸಮಿತಿಯು ಹೊಸ ಘಟನೆಯನ್ನು ತಯಾರಿಸುವ ತನಕ ನಡುಗಾಲ ಸರಕಾರವೊಂದು ರಾಜ್ಯಭಾರ ನಡೆಸುವಂತೆ ಅದರಲ್ಲಿ ವಿವಾದವಿದ್ದಿತು.

ಕೊಂಗ್ರೆಸು ಈ ಎರಡು ಯೋಜನೆಗಳನ್ನು ಸ್ವೀಕರಿಸಿತು. ಆದರಲ್ಲಿ ಕೆಲವೊಂದು ದೋಷಗಳಿದ್ದವೆಂದು ಅದಕ್ಕೆ ಸ್ಪಷ್ಟವಾಗಿ ತಿಳಿಸಿತ್ತಾದರೂ ಅದನ್ನು ಪರಸ್ಪರ ಮಾತುಕತೆ ಒಡಂಬಡಿಕೆಗಳ ಮೂಲಕ ತೀರ್ಮಾನಿಸಬಹುದೆಂದು ಅದು ತಿಳಕೊಂಡಿತ್ತು. ಲೀಗು ಮೊತ್ತೊದಲ ಸಲ ಈ ಎರಡು ಯೋಜನೆಗಳನ್ನು ಸ್ವೀಕರಿಸಿ ನಂತರ ಅದರಿಂದ ತನಗೆ ಧಕ್ಕೆ ತಟ್ಟುವುದೆಂದು ಮನಗಂಡು ತನ್ನ ಮೊದಲಿನ ನಿರ್ಣಯವನ್ನು ಬದಲಿಸಿ ಕೆಬಿನೆಟ್ ಮಿಶನ ಯೋಜನೆಯನ್ನು ಸಂಪೂರ್ಣವಾಗಿ ಹಿಂತೆಗೆಯುವ ಕಂಪ್ಲೀಟ್ ಘೋಷಣೆ ಮಾಡಿತು.

ಪುನಃ ಮತ್ತೊಂದು ಸಲ ಈ ಎರಡು ಪಕ್ಷಗಳನ್ನು ಸಮಾಧಾನಿಸಲು ಬ್ರಿಟಿಷ್ ಸರಕಾರವು ಮುಖಂಡರನ್ನು ಲಂಡನಿಗೆ ಕರೆಸಿ ದಶಂಬರ 6ರಂದು ಒಂದು ಹೇಳಿಕೆ ಹೊರಡಿಸಿ ಕೆಬಿನೆಟ್ ಮಿಶನ್ ಯೋಜನೆಯ ಕ್ಲಿಷ್ಟ ವಾಕ್ಯ ಪ್ರಯೋಗಗಳ ಅರ್ಥವನ್ನು ವ್ಯಾಖ್ಯೆ ಮಾಡಿತು. ಇದನ್ನು ಕೊಂಗ್ರೆಸು ಒಪ್ಪಿಕೊಂಡಿತು. ಇಷ್ಟಾದರೂ ಲೀಗಿಗೆ ತೃಪ್ತಿ ತೋರಲಿಲ್ಲ. ಮೇಲ್ಲೆಲ್ಲ ತಪ್ಪಣೆಕೆಯಿಂದ ನಡುಗಾಲ ಸರಕಾರದೊಳಗೆ ಸೇರಿದ ಅದರ ಪ್ರತಿನಿಧಿಗಳು ಕೇಂದ್ರ ಸರಕಾರದ ಸಂಯುಕ್ತ ಹೊಣೆಗಾರಿಕೆಯನ್ನು ಅಲಕ್ಷಿಸಿ ಸ್ವೇಚ್ಛೆಯಾಗಿ ವರ್ತಿಸ ತೊಡಗಿದರು. ಇತ್ತ ಅವರ ಅನುಯಾಯಿಗಳು ಕೋಮು ದ್ವೇಷದ ವಿಷವನ್ನು ಹರಡಲು ಪ್ರಯತ್ನ ಮಾಡಿದರು.

ಈ ಪರಿಸ್ಥಿತಿಯು ಅಸಹನೀಯವಾಗಲು ಕೊಂಗ್ರೆಸ್ ಮುಖಂಡರು ನಿರ್ದಿಷ್ಟ ಧೋರಣೆಗಾಗಿ ಬ್ರಿಟಿಷ್ ಸರಕಾರವನ್ನು ಒತ್ತಾಯಪಡಿಸಿದರು. ನಡುಗಾಲ ಸರಕಾರದಲ್ಲಿರ ಬಯಸುವುದಾದರೆ ಲೀಗು ದೀರ್ಘಕಾಲದ ಯೋಜನೆಯನ್ನು ಸ್ವೀಕರಿಸಿ ಘಟನಾಸಮಿತಿಯೊಳಗೆ ಭಾಗವಹಿಸುವಂತೆ ಮಾಡಬೇಕೆಂದವೆ ಇಲ್ಲವಾದರೆ ತಾವು ರಾಜಿನಾಮೆ ಕೊಡುವುದಾಗಿಯೂ ಬೆದರಿಕೆ ಹಾಕಲಾಯಿತು. ಉಪಾಯ ಕಾಣದ ಬ್ರಿಟಿಷರು ಫೆಬ್ರುವರಿ 20ರ ಒಂದು ಹೇಳಿಕೆಯಲ್ಲಿ ಭಾರತವನ್ನು 1948ರ ಜೂನ್ ಅಖೇರಿಯೊಳಗೆ ಬಿಟ್ಟು ಹೋಗುವ ತಮ್ಮ ನಿರ್ಧಾರವನ್ನು ಸಾರಿದರು.

ಅಧಿಕಾರ ಹಂಚೋಣ

ಬ್ರಿಟಿಷರು ಬಿಟ್ಟುಹೋಗುವಾಗ ಶಾಂತ ರೀತಿಯಲ್ಲಿ ಅಧಿಕಾರ ಸ್ಥಳಾಂತರಮಾಡುವ ಕಾರ್ಯದ ಹೊಣೆಗಾರಿಕೆಯನ್ನು ಬ್ರಿಟಿಷರು ವಹಿಸಿಕೊಂಡರು. ಒಂದು ದೃಷ್ಟಿಯಿಂದ ಇದು ಅನುಚಿತವೆಂದೂ ಕಾಲಹರಣ ಮಾಡುವ ಧೋರಣೆಯೆಂದೂ ದೇಶದ ಉಗ್ರವಾದಿಗಳು ಟೀಕಿಸುತ್ತಿದ್ದರು. "ಬ್ರಿಟಿಷರು ಆದಷ್ಟು ಶೀಘ್ರದಲ್ಲಿ ಹೊರಡುವುದು ಸುಖಕರವೆಂದು ಮಹಾತ್ಮರೇ ಅಭಿಪ್ರಾಯಪಟ್ಟಿರುವರು. ಕೊಂಗ್ರೆಸ್ ಪಕ್ಷವೊಂದು ಇರುವ ... ರಾಜಕೀಯ ಪಕ್ಷಗಳೊಳಗೆ ಒಪ್ಪಂದವಾಗುವುದು ಶಕ್ಯವಿಲ್ಲವೆಂದೇ ಹೆಚ್ಚಿನವರ ಅಭಿಪ್ರಾಯ.

ಬ್ರಿಟಿಷರು ಹೊರಡುವುದರೊಳಗೆ ಆದಷ್ಟು ಹೆಚ್ಚಿನ ಸೌಕರ್ಯಗಳನ್ನೂ ಹಕ್ಕುಬಾಧ್ಯತೆಗಳನ್ನೂ ಗಳಿಸಬೇಕೆಂಬುದು ಮಿ। ಜಿನ್ನರ ಆಶಯವಿದ್ದಂತೆ ತೋರುತ್ತದೆ. ಆದರೆ ಅವರು ತಮ್ಮ ಧ್ಯೇಯ ಸಾಧನೆಗಾಗಿ ಮುಂದಿಟ್ಟ ತರ್ಕದಲ್ಲಿ ತಿರುಳಿಲ್ಲವೆಂದು ಬ್ರಿಟಿಷ್ ಸರಕಾರಕ್ಕೆ ಮುಂದಟ್ಟಾಗಿರಬಹುದೆಂದು ರಾಜಕೀಯ ನಿರೀಕ್ಷಕರು ಅಭಿಪ್ರಾಯಪಡುತ್ತಾರೆ. ಜಿನ್ನರ ಕನಸಿನ ಪಾಕಿಸ್ಥಾನವು ಅಸಂಭವವೆಂದೂ ಹೇಳಲಾಗಿದೆ.

ಅದಲು ಬದಲು

ಪಾಕಿಸ್ಥಾನವನ್ನು ಕೇಳುವ ಜಿನ್ನರು ಮುಸ್ಲಿಂ ಬಹುಸಂಖ್ಯಾಕ ಪ್ರದೇಶಗಳಲ್ಲಿನ ಮುಸಲ್ಮಾನೇತರರ ಭದ್ರತೆಯ ಕುರಿತು ವಿಶ್ವಾಸಾರ್ಹ ಭರವಸೆ ಕೊಡಲು ಸಿದ್ಧರಿಲ್ಲ. ಆದುದರಿಂದ ಪಂಜಾಬದ ಹಿಂದೂ ಸಿಕ್ಕರೂ, ಬಂಗಾಲದ ಹಿಂದೂಗಳೂ ಆ ಪ್ರಾಂತ್ಯಗಳ ವಿಭಾಗೀಕರಣವನ್ನು ಬಯಸುವುದು ಸಹಜವೇ ಆಗಿದೆ. ಜಿನ್ನರಿಗೆ ಬೇಕಾದುದು ಪ್ರದೇಶ-ಪ್ರಜೆಗಳಲ್ಲ. ಪಾಕಿಸ್ಥಾನದಲ್ಲಿ ಇರ ಬಯಸುವವರು ಹೊರಟುಹೋಗಬಹುದು ಎಂದವರು ಅತೀ ಸುಲಭವೆಂಬಂತೆ ತಿಳಿಸುತ್ತಾರೆ. ಹಿಂದೆ ಮಹಮ್ಮದ್ ಬಿನ್ ತೊಗ್ಲಕನು ತನ್ನ ರಾಜಧಾನಿಯಾದ ಡಿಲ್ಲಿಯನ್ನು ಬಿಟ್ಟು ತಾನು ಹೊಸದಾಗಿ ಕಟ್ಟಿಸಿದ ತೊಗಲಕಾಬಾದಿಗೆ ಸ್ಥಳಾಂತರಿಸುವ ಉದ್ದೇಶದಿಂದ ಪ್ರಜೆಗಳನ್ನೆಲ್ಲ ಸೇರಿಲ್ಲದ ಆ ಪ್ರದೇಶಕ್ಕೆ ರವಾನಿಸಲು ಪ್ರಯತ್ನಿಸಿದನಂತೆ. ಈ ಹುಚ್ಚು ಪ್ರಯತ್ನವು ಅಯಶಸ್ವಿಯಾಯಿತೆಂದು ಮತ್ತೆ ಹೇಳಬೇಕಾಗಿಲ್ಲ. ತಲಾಂತರಗಳಿಂದ ಒಂದು ಪ್ರದೇಶದಲ್ಲಿ ನೆಲೆಸಿಂತವರನ್ನು ನೂತನವಾದ ಮತ್ತೊಂದು ಪ್ರದೇಶಕ್ಕೆ ನೆಲೆಹೋಗುವಂತೆ ಮಾಡುವುದು ಅತ್ಯಂತ ಕಷ್ಟದ ಮಾತ್ರವಲ್ಲ ಅವಿವೇಕದ ಯೋಜನೆಯೂ ಆಗಿದೆಯೆನ್ನಬಹುದು.

ಮದ್ರಾಸ್ ಪ್ರಕರಣ

ಮೊನ್ನೆ ನಮ್ಮ ಪ್ರಾಂತ್ಯದ ರಾಜಧಾನಿಯಲ್ಲಿ ರಾಜಾಜಿ ರಾಜೇಂದ್ರ ಪ್ರಸಾದರ ಭಾಷಣಗಳು ಜರಗಲಿರುವಂದು ನಡೆದ ದುರ್ವರ್ತನೆಗಳ ವರದಿಯು ಬಹಳ ವ್ಯಸನದ ಕತೆಯಾಗಿದೆ. ಸುಮಾರು ಒಂದು ಲಕ್ಷ ಜನ ಸಭೆ ಸೇರಿದಾಗ ಕೆಲವು ಪುಂಡರು ಹೇಯ ಕಾರ್ಯದಲ್ಲಿ ಪ್ರವೃತ್ತರಾದುದು ನಮ್ಮ ಕಲಿ ಜನತೆಯ ನಾಗರೀಕ ಸುಸ್ಥಿತಿಗೆ ತಟ್ಟಿರುವ ಸಂಗತಿಯನ್ನು ವಿಷದಪಡಿಸುತ್ತದೆ - ಭಾಷಣ ವೇದಿಕೆಯ ಕಡೆಗೆ ಹಳೆಯ ಪಾದರಕ್ಷೆಗಳನ್ನು ಎಸೆಯುವುದು, ಹೆಂಗಸು ಮಕ್ಕಳೆನ್ನದೆ ಮಣ್ಣು ಕಲ್ಲುಗಳನ್ನೆರಚುವುದು ಯಾವ ಉದ್ದೇಶದಿಂದ ಮಾಡಲ್ಪಟ್ಟರೂ ಖಂಡನೀಯವೇ ಸರಿ.

ಈ ಗಲಭೆಯು ಅಂದಿನ ಭಾಷಣಗಾರರ ಮೇಲಿನ ದ್ವೇಷದಿಂದ ಪ್ರಾರಂಭಿಸಲ್ಪಟ್ಟದ್ದಲ್ಲವೆನ್ನಬಹುದು. ಕಾರಣ ಮದ್ರಾಸಿನಲ್ಲಿ ಮುಷ್ಕರ ಹೂಡಲ್ಪಟ್ಟ ಬಕ್ಕಿಂಗ್‌ಹಾಮ್ ಮಿಲ್ಲಿನ ರಾಜಕೀಯದಲ್ಲೂ ಈ ಮುಖಂಡರಿಗೆ ಯಾವ ಕೈವಾಡವೂ ಇಲ್ಲ. ಗಲಭೆಯು ಮುಷ್ಕರಕ್ಕೊಳಗಾದ ಕೆಲಸಗಾರರ ಮತಿಯಿಂದ ಮಾಡಲ್ಪಟ್ಟದೆಂದು ಊಹಿಸಲಾಗಿದೆ. ಈ ಮುಷ್ಕರವನ್ನು ಇತ್ಯರ್ಥಿಸಲು ಸರಕಾರವು ಪ್ರಯತ್ನದಲ್ಲಿದೆ. ಪ್ರಕಾಶಂ ಅವರ ಕಾಲದಲ್ಲಿ ಜಾರಿಗೆ ತಂದ ಸಾರ್ವಜನಿಕ ಭದ್ರತೆಯ ಶಾಸನದಿಂದ ನೊಂದ ಕೊಮ್ಯುನಿಷ್ಟರ ಕೈಚಳಕವೂ ಇದರಲ್ಲಿದೆ ಎಂದು ಹೇಳಲಾಗಿದೆ. ಅಂತೂ ಅಂದು ರಾಜಾಜಿಯವರು ಒಂದು ವಿಶೇಷ ಸಂದೇಶ ತಂದಿದ್ದರು. ಇನ್ನಾದರೂ ಅಲ್ಲಿನ ಆ ಮುಷ್ಕರವು ಕೊನೆಗಾಣುವಂತೆ ಮಾಡುವುದು ಹಿತಕರ. ಇಲ್ಲವೆ ಕೆಲಸಗಾರರು ಹೆಚ್ಚೆಚ್ಚು ತಾಳ್ಮೆ ತಪ್ಪಬಹುದು.

ಅಮೇರಿಕನರಿಗೆ ಭಾರತ ರಾಜಕೀಯ ಏಕೆ ಅರ್ಥವಾಗದು?

'ಗಾಂಧೀಜಿಯು ಭಾರತದ ಆತ್ಮವಾಗಿದ್ದಾರೆ'

ವಿಭಾಗೀಕರಣವು ಅಪಾಯಕಾರಕನಾದುದು

ಅಮೇರಿಕನ್ ಪತ್ರಿಕೋದ್ಯೋಮಿ ಅಭಿಪ್ರಾಯ

[illegible] ದಿನಕ್ಕೆ [illegible] ಭಾರತದ ರಾಜಕೀಯ ಮತ್ತು ಆರ್ಥಿಕ ಸಮಸ್ಯೆಗಳನ್ನು ತಿಳಕೊಳ್ಳಲು ಅಮೇರಿಕನರಿಗೆ ತುಂಬಾ ಕಷ್ಟದಾಯಕವಾಗುತ್ತದೆ. ಇದಕ್ಕೆರಡು ಕಾರಣಗಳಿವೆ.

1. ಭಾರತೀಯ ಜನಜೀವನವು ಅದನ್ನು ಪರಸ್ಪರ ಮಿಳಿತ ಹೊಂದಿದ್ದುದರಿಂದ ಅಮೆರಿಕನ್ನರಿಗೆ ಅದನ್ನು ತಮ್ಮ ಪ್ರಾಂತ್ಯಗಳನ್ನಾಗಿ ಪ್ರತ್ಯೇಕಿಸಿ ತಿಳಕೊಂಡಂತೆ ತಿಳಕೊಳ್ಳಲು ಕಠಿಣವಾಗುತ್ತದೆ.

2. ಅಮೇರಿಕಕ್ಕೆ ಬರುವ ಭಾರತೀಯ ಮುಖಂಡರು ಒಬ್ಬೊಬ್ಬರು ಒಂದೊಂದು ಸಲ ಒಂದೊಂದು ರೀತಿಯ ವಿವರಗಳನ್ನು ಹೇಳುವುದರಿಂದ ಅಮೇರಿಕನರಿಗೆ ಅದು ತುಂಬಾ ಗಲಿಬಿಲಿಯನ್ನುಂಟುಮಾಡುತ್ತದೆ.

ಭಾರತದ ಸಮಸ್ಯೆಯನ್ನು ತಿಳಕೊಳ್ಳಲು ಅಮೇರಿಕದಲ್ಲಿ ಆ ದೇಶದಂತಹ ಸಮಾನ ಪರಿಸ್ಥಿತಿಗಳು ಯಾವುದೂ ಇರುವುದಿಲ್ಲ.

ಅಮೇರಿಕನ್ ರಾಜಕೀಯವು ಪಕ್ಷ ವಿಧಾನಗಳ ಮೂಲಕ ವಿಭಾಗಿಸಲ್ಪಟ್ಟಿದೆ. ಭಾರತದಲ್ಲಿರುವಂತೆ ಅಮೇರಿಕದಲ್ಲಿ ರಾಜಕೀಯವು ಮತೀಯ ವಿಚಾರದೊಂದಿಗೆ ಮಿಶ್ರ ಮಾಡಲ್ಪಟ್ಟಿಲ್ಲ ಇಲ್ಲಿಯ ಪ್ರೊಟೆಸ್ಟೆಂಟರು, ಕೆಥೋಲಿಕರು, ಯೆಹೂದಿಗಳು, ಇಚ್ಛೆ ಬಂದಂತೆ ಪ್ರಜಾಪ್ರಭುತ್ವ ಪಕ್ಷಕ್ಕೂ, ಸಮತಾವಾದಿ ಪಕ್ಷಕ್ಕೂ, ಪ್ರಗತಿಶೀಲ ಪಕ್ಷಕ್ಕೂ ರಾಜಕೀಯ ಅಭಿರುಚಿಗನುಸಾರವಾಗಲ್ಲದೆ ಮತೀಯ ಭಾವನೆಯಿಂದ ಪ್ರೇರಿಪಿತವಾಗಲ್ಲ.

ಭಾರತೀಯ ರೀತಿಯ ಜಾತಿವಾರು ಸಮಸ್ಯೆ ಅಮೇರಿಕದಲ್ಲಿಲ್ಲ ಇಲ್ಲಿಯ ರಾಜಕೀಯ ಇಲ್ಲವೆ ಆರ್ಥಿಕ ಸಂಗತಿಗಳು ಜಾತಿ ಪದ್ಧತಿಯ ಮೂಲಕ ಸಮಸ್ಯಾತ್ಮಕವಾಗಿರುವುದಿಲ್ಲ

ಜನಸಂಖ್ಯಾ ವೈಪರಿತ್ಯ

ಅಮೇರಿಕನರಿಗೆ ಜನ ನಿಬಿಡತೆಯ ಪರಿಣಾಮದ ಅನುಭವವಿಲ್ಲ ಮಾತ್ರವಲ್ಲ ಅಲ್ಲಿ ಬರಗಾಲದಿಂದಾಗುವ ಸಾಮೂಹಿಕ ಉಪವಾಸದ, ಹೊಟ್ಟೆ ಹೊರಕೊಳ್ಳುವ ಭಾರತೀಯರಂತಹ ಜೀವನ ಹೋರಾಟದ ಸಂಕಷ್ಟವಿಲ್ಲ

ಭಾರತೀಯ ಸಮಸ್ಯೆಯಂತಹ ಒಂದೇ ಒಂದು ಕಳವಳಾಸ್ಪದವಾದ ಸಂಗತಿಯೊಂದರಲ್ಲಿ ಅಮೇರಿಕದಲ್ಲಿರುವ ನಿಗ್ರೊ ಸಮಸ್ಯೆ ಇದು ಜನಾಂಗೀಕ ವರ್ಣದರ್ಪದ್ದೂ, ಆರ್ಥಿಕ ದುಃಸ್ಥಿತಿದ್ದೂ ಮತ್ತು ಒಂದು ದೃಷ್ಟಿಯಲ್ಲಿ ಕೋಮುವಾರು ರೀತಿಯದೂ ಆಗಿದೆನ್ನಬಹುದು ಆದರೆ ಮಿಲಿಯಾವಧಿ ಅಮೇರಿಕನರು ಈ ಸಮಸ್ಯೆಯಿಂದ ದೂರವಿದ್ದಾರೆ-ಕೆಲವೊಂದು ಪ್ರಾಂತ್ಯಗಳಲ್ಲಿ ಮಾತ್ರ ಇದು ಹಾವಳಿಗೈಯುತ್ತದೆ

ಭಾರತದಲ್ಲಿ ಕೆಲಕಾಲವಿದ್ದ ಕೆಲವೇ ಮಂದಿ ಅಮೇರಿಕನರು ಮಾತ್ರ ಭಾರತ ಸಮಸ್ಯೆಯನ್ನು ಸ್ವಲ್ಪ ಮಟ್ಟಿಗೆ ತಿಳಕೊಳ್ಳಲು ಸಮರ್ಥರಾಗಿದ್ದಾರೆ ಉಳಿದ ಹೆಚ್ಚಿನವರು ತಾವು ಓದಿದ ಇಲ್ಲವೆ ಕೇಳಿದ ಸುದ್ದಿ ಸಂಗತಿಗಳ ಆಧಾರದಲ್ಲಿ ಅಭಿಪ್ರಾಯ ಮಾಡಿಕೊಳ್ಳಬೇಕಾಗಿದೆ. ಈ ಸಂದರ್ಭದಲ್ಲಿ ಇಲ್ಲಿಗೆ ಬರುವ ಭಾರತೀಯ ಸಂದರ್ಶಕರ ಕುರಿತು ಸ್ವಲ್ಪ ಪರ್ಯಾಲೋಚಿಸಬೇಕಾಗುತ್ತದೆ.

ಕಳೆದೊಂದು ತಿಂಗಳಲ್ಲಿ ಸೇನ್‌ಫ್ರೆನ್ಸಿಸ್ಕೋಗೆ ಬೆಂಗಳೂರಿನ ಶ್ರೀಮತಿ ಮತ್ತು ಶ್ರೀಯುತ ರಾಮಚಂದ್ರರಾವ್ ಅವರೂ, ಶ್ರೀಯುತ ಮತ್ತು ಶ್ರೀಮತಿ ಹತೀಸಿಂಗರೂ (ನೆಹರುಗಳ ತಂಗಿ ಕೃಷ್ಣಾ), ಅಮೇರಿಕದ ಮುಸ್ಲಿಂ ಲೀಗಿನ ಕಾರ್ಯದರ್ಶಿಗಳಾದ ಡಾ। ಮುಬಾರಕ್ ಅಲಿಖಾನರೂ ಬಂದಿದ್ದರು. ಅಲ್ಲಿ ಅವರು ಪತ್ರಿಕಾ ಪ್ರತಿನಿಧಿಗಳಿಗೆ ಭೇಟಿಕೊಟ್ಟರು

ಒಂದು ಪ್ರಕಟಣೆಯಲ್ಲಿ ಭಾರತೀಯ ಯೋಜನಾ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಹತೀಸಿಂಗರು ಹೀಗೆ ತಿಳಿಸಿದರು

"ಸರ್ವ ಸ್ವತಂತ್ರ ಭಾರತವನ್ನು ರಚಿಸುವುದು ಭಾರತದಷ್ಟೇ ಬ್ರಿಟನಿನ ಹೊಣೆಗಾರಿಕೆಯೂ ಇದೆ. ಅವರು ಅಧಿಕಾರವನ್ನು ಬಿಟ್ಟುಕೊಡುವ ವಿಧಾನದಲ್ಲೇ ಅವರ ಹೊಣೆಗಾರಿಗೆ ಅಡಕವಾಗಿದೆ ಆಂತರೀಕ ಪರಿಸ್ಥಿತಿಯನ್ನು ಹತೋಟಿಯಲ್ಲಿಟ್ಟುಕೊಂಡು ಅಧಿಕಾರವನ್ನು ಸ್ವೀಕರಿಸಲು ಯೋಗ್ಯವಾದ ಸರಕಾರವನ್ನು ರಚಿಸಿಕೊಳ್ಳುವುದು ಭಾರತೀಯರ ಹೊಣೆಗಾರಿಕೆಯಾಗಿದೆ "

ಭ್ರಾತೃ ಕಲಹ

ಡಾ। ಖಾನರು ತಮ್ಮ ಹೇಳಿಕೆಯಲ್ಲಿ ಹೀಗೆ ತಿಳಿಸುತ್ತಾರೆ

"ಭಾರತದಲ್ಲಿ ಅಂತರ್ಯುದ್ಧವು ಅನಿವಾರ್ಯ ಇದನ್ನು ತಪ್ಪಿಸಬೇಕಾದರೆ 10 ಕೋಟಿ ಮುಸಲ್ಮಾನರಿಗೆ ಬ್ರಿಟಿಷರಿಂದಲೆ ಮಾತ್ರವಲ್ಲ ಹಿಂದೂಗಳಿಂದಲೂ ಸ್ವಾತಂತ್ರ್ಯ ಸಿಕ್ಕಬೇಕು

ಸ್ವಾತಂತ್ರ್ಯಪ್ರಿಯರಾದ ಅಮೇರಿಕನರಿಗೆ ಸ್ವತಂತ್ರತೆಯ ತತ್ವಗಳ ಕುರಿತು ಪ್ರತ್ಯೇಕ ವಿವರಿಸಬೇಕಾಗಿಲ್ಲ ಸ್ವತಂತ್ರರಾಗುವವರ ಕಡೆಗೆ ಅವರು ಸದಾ ಸಹಾನುಭೂತಿಯುಳ್ಳವರಾಗಿದ್ದಾರೆ ಅಮೇರಿಕನರಿಗೂ ಅಂತರ್ಯುದ್ಧದ ಕ[illegible]ರ ಅನುಭವವಿದೆ ಆದರೆ ಸ್ವಾತಂತ್ರ್ಯ ಸಿಗುವ ಮೊದಲೇ ಭಾರತದಲ್ಲಿ ಅಂತರ್ಯುದ್ಧವಾಗುವ ಸಂಭವ ಹೇಗೆಂದವರು ಆಶ್ಚರ್ಯಪಡುವರು ಬ್ರಿಟಿಷರಿಂದ ಸ್ವಾತಂತ್ರ್ಯ ಕಸಕೊಳ್ಳುವಾಗ ಅಮೇರಿಕನ್ನರು ಆಂತರೀಕ ಐಕ್ಯವು ಅತ್ಯಾವಶ್ಯಕವೆಂದು ಕಲಿತರು

ಪಂಡಿತ್ ಜವಾಹರ್‌ಲಾಲ್ ನೆಹರು ಅವರ ಕಿರಿಯ ತಂಗಿಯಾದ ಕೃಷ್ಣಾ ಹತೀಸಿಂಗರು ಒಂದು ಭೇಟಿಯಲ್ಲಿ ಹೀಗೆ ತಿಳಿಸಿರುವರು

ಅಮೇರಿಕದ ಕೈಗಾರಿಕೆ ಮತ್ತು ಕೃಷಿಗಾರಿಕೆಯ ಮಾದರಿಯಲ್ಲಿ ಭಾರತವು ತನ್ನ ಸ್ವತಂತ್ರ ಆರ್ಥಿಕ ರಚನೆಯನ್ನು ಕಟ್ಟಿಕೊಳ್ಳುವುದು ಅಮೇರಿಕದ ಮಿಸ್ಸೋರಿ ನದಿ ಯೋಜನೆ, ಟೆನೇಸಿ ಕಣಿವೆ ಯೋಜನೆಯಂತೆ 15 ವರ್ಷಗಳಲ್ಲಿ ಭಾರತವು ಹೊಸ ಹೊಸ ಯೋಜನೆಗಳನ್ನು ಪ್ರಾರಂಭಿಸಿ ತನ್ನ ಅತ್ಯಂತ ದೀನ ಜನರ ದರಿದ್ರತೆಯನ್ನು ನೀಗಲು ಪ್ರಯತ್ನಿಸುವುದು "

ಕೆಲವು ದಿನಗಳ ನಂತರ ಬೆಂಗಳೂರಿನ ಭೂಶಾಸ್ತ್ರ ತಜ್ಞರಾದ ರಾಮಚಂದ್ರರಾಯರಿಂದ ಹೀಗೆ ಹೇಳಿಕೆಯಾಯಿತು

ಮಹಾತ್ಮಾ ಗಾಂಧಿ[illegible] ಆರ್ಥಿಕ [illegible] ಭಾರತದಲ್ಲಿದ್ದಾರೆ [illegible] ಗಾಂಧೀಜಿ [illegible] ಕೈಗಾರಿಕೆ [illegible]

ಭಾರತದಲ್ಲಿ [illegible] ಭಾರತದ ಕೃಷಿ [illegible] ಆದರೆ ಹೆಚ್ಚಿ[illegible] ಅಮೇರಿಕನರಿಗೆ [illegible] ಎರಡು [illegible] ಪರಸ್ಪರ ವಿರೋಧ ಕಾಣುತ್ತಿವೆ "ಅಮೇರಿಕದ ಮಾದರಿಯ ಮೇಲೆ ಕೈಗಾರಿಕೆಗಳನ್ನು ಪ್ರಾರಂಭಿಸಿ ಅದೇ ಸಮಯಕ್ಕೆ ಗ್ರಾಮಕ್ಕೆ ಕಸಬುಗಳನ್ನು ಅಭಿವೃದ್ಧಿಪಡಿಸುತ್ತಾ ಹೇಗೆ ಮುಂದೆ ಸಾಗಬಹುದು?" ಎಂದೇ ಅವರ ಕೌತುಕದ ಪ್ರಶ್ನೆ

ಭಾರತದ ಮಹಾ ಆತ್ಮ

ಪುನಃ ಹತೀಸಿಂಗರ ಹೇಳಿಕೆ: "ಗಾಂಧೀಜಿ ಭಾರತದ ಆತ್ಮವಾಗಿದ್ದು ನೆಹುರುಗಳು ಅದರ ಮಿದುಳಾಗಿರುವರು."

ಆದರೆ ಡಾ। ಖಾನರ ಸಂದರ್ಶನದಲ್ಲಿ ಅವರು ಹೀಗೆ ತಿಳಿಸಿದರು: "ಗಾಂಧೀಜಿ ಮೂಲದಲ್ಲಿ ಹಿಟ್ಲರ್ ಟೋಜೋಗಳಂತೆ ಸರ್ವಾಧಿಕಾರಿಗಳಾಗಿರುವರು"

ಈ ಎರಡು ಪರಸ್ಪರ ವಿರೋಧ ಹೇಳಿಕೆಗಳಿಂದ ಅಮೇರಿಕನರ ಮನಸ್ಸುಗಳಲ್ಲಿ ಅದೆಷ್ಟು ಗಲಿಬಿಲಿಯಾಗಬಹುದೆಂದು ಊಹಿಸಬಹುದು

ಬೆಂಗಳೂರಿನ ರಾಮಚಂದ್ರರಾಯರ ಇನ್ನೊಂದು ಹೇಳಿಕೆ ಹೀಗಿದ

"ಹಿಂದೂ ಮುಸ್ಲಿಮರೊಳಗೆ ಭೇದವು ಬೃಹತ್ಕರಿಸಲಾಗಿದೆ ಭಾರತವು ತನ್ನ ಸ್ವತಂತ್ರ ಸರಕಾರದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಸಮರ್ಥವಾಗಿದೆ. ಹಿಂದೂ ಮುಸಿಮರು [illegible] ವಿಷಯಗಳಲ್ಲಿ ಸೌಹಾರ್ದವಿಂದಿರು[illegible]ರು ಮುಂದೆಯೂ ಅವರು [illegible] ಬಾಳಲಿಚ್ಛಿಸುವರು "

ಆದರೆ ಡಾ। [illegible]ನರು ಪುನಃ ಹೀಗೆನ್ನುವರು

'ನನ್ನ ಅಭಿಪ್ರಾಯದಲ್ಲಿ ಹಿಂದೂ ಮುಸಲ್ಮಾನರು [illegible] ಒಬ್ಬರಿಗೊಬ್ಬರು ಹತ್ತಿರ [illegible] ಪ್ರತ್ಯೇಕ [illegible] ಅದು [illegible] ತಮ್ಮ ಭವಿಷ್ಯದ [illegible] ಬೇಕಾಗಿದೆ

[illegible] ಅಮೇರಿಕನರು ತಮ್ಮ [illegible] ಕಲ್ಕತ್ತಾ [illegible] ಹಿಂದೂ ಮು[illegible] ಅಮೇರಿಕನರು [illegible] ಅವರ ಹಿಂದಿನ ಹೇಳಿಕೆಗ[illegible] ಅಭಿಪ್ರಾಯ[illegible] ಕೇಳಿದ[illegible] ಖಾನರೆಂದಿದ್ದರು "ಮುಸಲ್ಮಾನರು ಕೇವಲ ಪಾಕಿಸ್ಥಾನದಿಂದಲೇ ತೃಪ್ತ[illegible]ವುದಿಲ್ಲ

ಅವರು ನಂತರದ ಇನ್ನೊಂದು ಹೇಳಿಕೆಯಲ್ಲಿ ಹೀಗೆನ್ನುತ್ತಾರೆ

"ಮಧ್ಯಸ್ಥಿಕರಿಲ್ಲದೆ ಭಾರತವು ತನ್ನ ಸ್ವಂತ ಸಮಸ್ಯೆಗಳನ್ನು ಬಗೆಹರಿಸಲು ಬಿಟ್ಟುಬಿಡಲ್ಪಡಬೇಕು ಅದನ್ನು ಪ್ರಜಾಪ್ರಭುತ್ವ ವಿಧಾನದಲ್ಲಿ ನಿರ್ವಹಿಸಬೇಕು ನಮಗ ಪ್ರಜಾಪ್ರಭುತ್ವ ಮಾದರಿಯ ಭಾರತವು ಬೇಕು ಹಿಂದೂ ಭಾರತವೂ ಬೇಡ, ಮುಸ್ಲಿಂ ಭಾರತವೂ ಬೇಡ "

ಆದರೆ ಅಮೇರಿಕನ್ ದೃಷ್ಟಿಯ ಪ್ರಜಾಪ್ರಭುತ್ವವೆಂದರೆ ಬಹುಸಂಖ್ಯಾಕರು ಅಲ್ಪಸಂಖ್ಯಾಕರೊಡನೆ ಪರಸ್ಪರ ಒಪ್ಪಂದ ಸಮ್ಮತಿಗಳ ಮೂಲಕ ಆಳಿಕೊಂಡಿರುವುದು. ಐಕ್ಯವು ಅದರ ಮೂಲ ಮಂತ್ರ ಜನಾಂಗವನ್ನು ವಿಭಾಗಿಸುವುದು ನಿರ್ಬಲತೆಗೆ ಎಡೆಕೊಟ್ಟಂತಾಗುವುದು

ಮೇಲಿನೆಲ್ಲ ವಿಷಯಗಳನ್ನು ಓದಿದ ಮೇಲೆ ಅಮೇರಿಕನರು ಭಾರತದ ಸಮಸ್ಯೆಗಳನ್ನು ತಿಳಕೊಳ್ಳಲು ಏಕೆ ಕಷ್ಟಪಡುವರೆಂಬ ಸಂಗತಿಯು ಮನವರಿಕೆಯಾಗುವುದು.

—ವಿಲಿಯಂ ಹಿಪ್ಸ್

KANARA COMMERCIAL BANK LTD.

PUTTUR

H O Puttur] Estd 1920 [Branch Vittal

All kinds of Banking Business transacted.

Deposits Current, Savings, Cumulative Deposits are accepted.

Fixed Deposits for periods of 3 months and above up to 24 months are accepted.

SEASON DEPOSITS

ARE Accepted up to 31-5-1947 Terms on application.

ಬ್ರಿಟಿಷ್ ಆಳ್ವಿಕೆಯಲ್ಲಿ ಕಲಾ ಸಂಸ್ಕೃತಿಯ ಅಧಃಪತನ

ಕುಂದು 'ದೊರೆ'ಗಳನ್ನು ತಯಾರಿಸಲು ಮಾಡಿದ ಪ್ರಯತ್ನ

ಕ್ರೈಸ್ತ ಮಿಶನರಿಗಳ ವಿಘಾತುಕ ಕಾರ್ಯ

ಬ್ರಿಟನು ಭಾರತದ ರಾಜಕೀಯ ಅಧಿಕಾರವನ್ನು ವಶಪಡಿಸಿದಾಗಲೇ ಈ ದೇಶದ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹೊಣೆಗಾರಿಕೆಗಳನ್ನು ಅದು ವಹಿಸಿಕೆನ್ನಬೇಕು. ಇದೇ ಸಮಯಕ್ಕೆ ಭಾರತದಲ್ಲಿನ ಹಿಂದೂ ಮತ್ತು ಮುಸಲ್ಮಾನ ಜನತೆಯನ್ನು ಕ್ರೈಸ್ತ ಪಂಥಕ್ಕೆ ಮತಾಂತರಿಸಿಕೊಳ್ಳುವುದರಲ್ಲೂ ಪ್ರತ್ಯಕ್ಷವಾಗಿ ಇಲ್ಲವೆ ಅಪ್ರತ್ಯಕ್ಷವಾಗಿಯಾದರೂ ಬ್ರಿಟನ್ನು ತನ್ನ ಅಧಿಕಾರಹಸ್ತವನ್ನು ಪಯೋಗಿಸಿದೆಯೆಂಬುದಕ್ಕೆ ಧಾರಾಳ ನಿದರ್ಶನಗಳಿವೆ. ಭಾರತೀಯರಿಗೆ ತಮ್ಮ ಪ್ರಾಚೀನ ಕಲಾ ವೈಭವಗಳ ಮತ್ತು ಸಾಂಸ್ಕೃತಿಕ ಸಾಂಪ್ರದಾಯಗಳ ಮೇಲೆ ಅನನ್ಯ ಭಾವನಾತ್ಮಕ ಭಕ್ತಿ ಗೌರವಗಳಿದ್ದುದರಿಂದ ಇಂಥವರನ್ನು ಪರಕೀಯ ಧರ್ಮ ಸಾಂಪ್ರದಾಯವೊಂದಕ್ಕೆ ಪರಿವರ್ತಿಸಿಕೊಳ್ಳಬೇಕಾದರೆ ಅವರ ಸ್ವಾಭಿಮಾನಕ್ಕೊಳಗಾದ ಈ ವಿಷಯಗಳನ್ನು ನಷ್ಟಗೊಳಿಸಬೇಕಾದುದು ಅವಶ್ಯವೆಂದು ಬ್ರಿಟನಿನ ಸಾಮ್ರಾಜ್ಯವಾದಿ ಆಡಳಿತಗಾರರು ಮನಗಂಡರು.

ಭಾರತೀಯ ರಾಜನೀತಿಯ ಪ್ರಕಾರ ರಾಜನೊಬ್ಬನ ರಾಜಕೀಯ ಹೊಣೆಗಾರಿಕೆಗಳಷ್ಟು ಮಹತ್ವದ್ದುವೂ ಅವನ ನೈತಿಕ ಜವಾಬ್ದಾರಿಗಳೂ ಅಷ್ಟೇ ಪವಿತ್ರವೆನಿಸಲ್ಪಡುತ್ತಿದ್ದವು. ಆದರೆ ಬ್ರಿಟಿಷರು ಇವೆರಡನ್ನು ಕಡೆಗಣಿಸಿ ತಮ್ಮ ದೂರ್ತ ಉದ್ದೇಶ ಸಾಧನೆಗೆ ನೀತಿ ನಿಯಮಗಳನ್ನು ಗಾಳಿಗೆ ತೂರಿಬಿಟ್ಟರು. ಲಾರ್ಡ್ ಮೆಕಾಲೆಯವರ ಸೂಚನೆಯಂತೆ ಬ್ರಿಟನ್ನು ಇಲ್ಲಿನ ಜನತೆಯನ್ನು "ರಕ್ತ ಮತ್ತು ಬಣ್ಣದಲ್ಲಿ ಮಾತ್ರ ಭಾರತೀಯರಾಗಿಯೇ ಇರಿಸುವುದು. ಆದರೆ ಅಭಿರುಚಿ, ಅಭಿಪ್ರಾಯ, ನೀತಿ ವಿಚಾರಗಳಲ್ಲಿ ಆಂಗ್ಲೇಯರನ್ನಾಗಿ ಮಾಡುವ ದುಷ್ಕಾರ್ಯಕ್ಕೀಡುಮಾಡಿತು. ಇಂದು ಅಮೇರಿಕನ್ನರು ಜಪಾನಿಯರನ್ನು ಇದೇ ತರ ಮಾಡಲು ಪ್ರಯತ್ನಿಸುವರು. ಇದು ಕಣ್ಣೀರು ಇಳಿಸುವಂತಹುದಲ್ಲವಾದರೂ ಖಂಡಿತವಾಗಿಯೂ ಹಾಸ್ಯಾಸ್ಪದವಾದ ಸಂಗತಿ.

ಪೌರ್ವಾತ್ಯ ಭಾಷಾ ಪ್ರವೀಣರಾದ ಮೊದಲ ಆಂಗ್ಲ ತಜ್ಞರೊಬ್ಬರು (ಜೋನಾಥನ್ ಡಂಕನ್) 1792ರಲ್ಲಿ ಭಾರತೀಯ ಭಾಷಾ ಸಾಹಿತ್ಯದ ಕುರಿತು "ಜಗತ್ತಿನ ಅತೀ ಪ್ರಾಚೀನವೂ ಜ್ಞಾನ ಸಂವರ್ಧಕವಾದ ಸರ್ವ ವಿಷಯಗಳನ್ನು ರೂಢಿ ಸಾಂಪ್ರದಾಯಗಳನ್ನು ಒಳಗೊಂಡಿರುವಂತಹುದು" ಎಂದು ಬರೆದಿದ್ದರು. ಇಂಗ್ಲಿಷ್ ಶಿಕ್ಷಣವು ಭಾರತೀಯರ ಈ ವೈಶಿಷ್ಟ್ಯವನ್ನು ನಿಕೃಷ್ಟವಾಗಿ ಮಾಡಲು ಪ್ರಯತ್ನಿಸಿದೆ. ಇಂಗ್ಲಿಷ್ ಶಿಕ್ಷಕರು ನಮ್ಮ ಜನತೆಗೆ ಲೌಕಿಕ ಸಂಪತ್ತಿನ ಶ್ರೇಷ್ಠತೆಯನ್ನು ಕಲಿಸಿ ಅಧ್ಯಾತ್ಮಿಕ ಶ್ರೇಷ್ಠತೆಯನ್ನು ಮರೆತು ಬಿಡುವಂತೆ ಮಾಡಿದರು. ಹಿಂದೂಸ್ಥಾನ್ ಸ್ಟೇಂಡಾರ್ಡ್ ಎಂಬ ಪತ್ರಿಕೆಯು ತನ್ನೊಂದು ಅಗ್ರಲೇಖದಲ್ಲಿ **ಪಾಶ್ಚಾತ್ಯ ಆಳ್ವಿಕೆಯು ಒಂದು ಭೀಕರ ಶಾಪ. ಅದರಿಂದ ದೊರಕಿದ ಅಲ್ಪ ಸ್ವಲ್ಪ ಅನುಕೂಲತೆಗಳನ್ನು ನೋಡಿ ಅದರಿಂದಾದ ಅಧ್ಯಾತ್ಮಿಕ ಅಧಃಪತನವನ್ನು ಮರೆತುಬಿಡಬಾರದು** ಎಂದು ಬರೆದದ್ದು ಅತ್ಯಂತ ಸಮಂಜಸವಾಗಿದೆ.

ಪೌರ್ವಾತ್ಯರ ಮುಖ್ಯವಾಗಿ ಭಾರತೀಯರ ವಿಷಯವಾಗಿ ತಮ್ಮ ಜನತೆಯಲ್ಲಿ ಭೀಕರ ತಪ್ಪು ಕಲ್ಪನೆಗಳನ್ನು ಮೂಡಿಸಿದವರಲ್ಲಿ ಕುಖ್ಯಾತಿಯ ರುಡ್ಯಾರ್ಡ್ ಕಿಪ್ಲಿಂಗನೊಬ್ಬ. ಈತನು ಭಾರತೀಯವಾದ ಪ್ರತಿಯೊಂದು ಸಂಗತಿಯ ಕುರಿತು ಕುತ್ಸಿತ ಮನೋಭಾವವನ್ನು ತಾಳಿದ್ದು ಬೇರೊಂದು ಜನಾಂಗದ ಕುರಿತು ಬರೆಯುವಾಗ ಮಾನವೀಯತೆಯ ರೀತಿನೀತಿಗಳನ್ನೆಲ್ಲ ಮರೆತಿರುವನು. "ಸುವೇಜ್ ಕಾಲುವೆಯ ಪೂರ್ವಕ್ಕೆ ದೈವ ನೀತಿಯ ಶಾಸನಗಳಿಲ್ಲ" ವೆಂದು ಬರೆದು ಕಿಪ್ಲಿಂಗನು ಪೌರ್ವಾತ್ಯ ಜನತೆಯನು ಕೀಳು ಅನಾಗರಿಕರೆಂದು ವರ್ಣಿಸಿರುವುದು ಆಂಗ್ಲ ಜನಾಂಗದ ಗಂಭೀರ ಸಂಸ್ಕೃತಿಗೆ ಲಜ್ಜಾಸ್ಪದವಾದ ವಿಚಾರವೇ ಸರಿ. ಆಂಗ್ಲ ಜನರಾದರೋ ಕಿಪ್ಲಿಂಗನಂತಹ ಕುವಿಚಾರಿಗಳನ್ನು ಅಕ್ಷರಶಃ ನಂಬಿದರು. ಅವನಿಗೆ ಆಂಗ್ಲ ಸಾಹಿತ್ಯದಲ್ಲಿ ಉನ್ನತ ಸ್ಥಾನವು ಸಿಗುವಂತಾಯಿತು. ಕಿಪ್ಲಿಂಗನ ಮಾದರಿಯನ್ನು [illegible] ಅನುಸರಿಸಿದರು. [illegible] 'ಚಿತ್ರಗಳು [illegible] ವಿಚಾರವಾಗಿ ಭಯಂಕರ ಅಸತ್ಯವನ್ನು [illegible] ಸಿದವು.

ಲಾರ್ಡ್ [illegible] ಎಂಬವರು ತನ್ನೊಂದು ಗ್ರಂಥದಲ್ಲಿ 'ಒಂದು ಶತಮಾನದ ಆಳ್ವಿಕೆಯ ನಂತರವೂ ಭಾರತೀಯರ ಅಧ್ಯಾತ್ಮಿಕ ಪ್ರಗತಿಗೆ ನಾವು ಒಂದಿಷ್ಟನ್ನು ಸೇರಿಸಲಿಲ್ಲ' ವೆಂದು ಪ್ರತಿಪಾದಿಸಿದ್ದಾರೆ. ಪಂಡಿತ ನೆಹರೂರವರು ಇಂಗ್ಲಿಷ್ ಶಿಕ್ಷಣದ ಪರಿಣಾಮವಾಗಿ [illegible] "ನಾನು ಪೂರ್ವ ಪಶ್ಚಿಮಗಳ ವಿಚಿತ್ರ ಮಿಶ್ರಣವಾಗಿದ್ದೇನೆ. ಎರಡು ದೇಶಗಳಲ್ಲಿ ನಾನು ಸಮಾಧಾನ ಚಿತ್ತದಿಂದ ಇರಲಾರೆನು" ಎಂದಿರುವರು. [illegible] ಜನ್ನರ ಪರಿಸ್ಥಿತಿಯಾದರೋ ಅದೇ ತರವಾಗಿದೆ. ಅವರು ತಮ್ಮ ಆಂಗ್ಲ [illegible] ಸಂಪೂರ್ಣ ಮರೆತಿದೆ. ಇದಕ್ಕೆಲ್ಲ ಕಾರಣ ಅವರ ಆಂಗ್ಲ ಭಾರತೀಯ ಶಿಕ್ಷಣವೇ ಆಗಿರುತ್ತದೆ.

ಸಾಕ್ಷರತೆಯ ಬಡತನ

ಅಭದ್ರವೂ ಅಸ್ಥಿರವೂ ಆದ ಈ ಆಂಗ್ಲ ಭಾರತೀಯ ಮಿಶ್ರ ಸಂಸ್ಕೃತಿಯು ನಮ್ಮ ದೇಶದ ಪ್ರಾಚೀನ ಸಂಸ್ಕೃತಿಗೆಯಾವ ರೀತಿಯಲ್ಲಿ ಪ್ರಗತಿಯನ್ನುಂಟುಮಾಡಿದೆ? ಸಾಕ್ಷರತೆಯ ಮೂಲಕವೆ?

ಬ್ರಿಟಿಷರು ಇಲ್ಲಿ ಸಾಕ್ಷರತೆಯನ್ನು ಪ್ರಚಾರಮಾಡಲು ಪ್ರಯತ್ನಿಸಿರುವುದಾಗಿ ಜಂಬಕೊಚ್ಚಿಕೊಳ್ಳುತ್ತಾರೆ. ಸಾಕ್ಷರತೆಯೆಂದರೆ ಒಂದು ದೇಶದ ಜನರಿಗೆ ತಮ್ಮ ಸ್ವಂತ ಮಾತೃ ಭಾಷೆಯಲ್ಲಿ ಓದಲೂ ಬರೆಯಲೂ ಮತ್ತು ತಮ್ಮ ಪ್ರಾಚೀನ ಸಾಹಿತ್ಯಗಳನ್ನು ಅರಿತುಕೊಳ್ಳಲೂ ಸಾಧ್ಯವಾಗುವ ಒಂದು ಪರಿಸ್ಥಿತಿಯಾಗಿರುತ್ತದೆ. ಇಂದು ಭಾರತೀಯರ ಮಟ್ಟಿಗೆ ಹೇಗಾಗಿದೆಯೆಂದರೆ ಅವರು ತಮ್ಮ ಮಾತೃ ಭಾಷೆಯನ್ನೇ ಮರೆತಿರುವರು. ತಾವು ಕಲಿತ ಇಂಗ್ಲಿಷ್ ಭಾಷೆಯಾದರೋ ಅರ್ಧಮರ್ಧವೇ ಎನ್ನಬಹುದು. ಅದರಲ್ಲಿನ ಒಂದು ಕಷ್ಟ ಶಬ್ದ ಬಂದರೆ ಅದನ್ನು ಬೇರೊಂದು ಅರ್ಥಕೋಶದ ಸಹಾಯದಿಂದ ತಿಳಿಯಬೇಕಾಗುತ್ತದೆ.

ಭಾರತದ ಪ್ರಾಚೀನ ವಿದ್ಯಾಭ್ಯಾಸಕ್ರಮವು ನಿತ್ಯ ಜೀವನದ ಸಮಸ್ಯೆಗಳನ್ನು ತಿಳಿಸಿಕೊಂಡು ಅವುಗಳ ಪರಿಹಾರಕ್ಕೆ ತಕ್ಕುದಾದ ಸಾಮರ್ಥ್ಯವು ವ್ಯಕ್ತಿಯಲ್ಲಿ ಬರುವಂತೆ ತರಬೇತಿ ಮಾಡುವ ಉದ್ದೇಶವುಳ್ಳದ್ದಾಗಿತ್ತು. ಜ್ಞಾನ ಸಂವರ್ಧನೆಯು ಅದರ ಇನ್ನೊಂದು ಪ್ರಾಮುಖ್ಯ ಉದ್ದೇಶ. ಈಗಿನ ಪುಸ್ತಕ ಜ್ಞಾನಕ್ಕೆ ಆಗ ಸ್ಥಾನವಿರಲಿಲ್ಲ. ವ್ಯವಹಾರಿಕ [illegible] ಎಲ್ಲವೂ ಕಲಿಸಲ್ಪಡುತ್ತಿತ್ತು. ಹಿಂದಿನ ಕಾಲದಲ್ಲಿ ತಂದೆಯಂತೆ ಮಗನೆನ್ನು [illegible] ಗುರುವಿನಂತೆ ಶಿಷ್ಯನೆನ್ನುವುದೇ ರೂಢಿಯಾಗಿತ್ತು. ಗುರುವಿನ ಪ್ರಭಾವವು ಅಷ್ಟು [illegible]ವಾಗಿತ್ತು.

ಮಹಾತ್ಮಾಗಾಂಧಿಯವರು ನಮ್ಮ ಶಿಕ್ಷಣವನ್ನು ಹೀಗೆ ಕಂಡಿದ್ದಾರೆ: **ನಮ್ಮ ಸಮಾಜ ಯಂತ್ರಗಳು ಗುಲಾಮಗಿರಿಯಲ್ಲಿ ಸಿಲುಕಿವೆ. ತನ್ನೀ ರಚನೆಯಿಂದಲೇ ಅದು ಸ್ವನಾಶದ ಕಡೆ ಧಾವಿಸುತ್ತದೆ.** ಕವಿ ರವೀಂದ್ರರು: **ಯುರೋಪಿನ ಕಡೆ ಭಯ ಸಂದೇಹಗಳಿಂದ ನೋಡದ ಪೌರ್ವಾತ್ಯರಿಲ್ಲ**—ಹೀಗೆಂದಿರುವರು. ದಕ್ಷಿಣದ ಸಮುದ್ರಗಳ ಮೇಲೆ ಬಿಳಿ ನೆರಳು ಪಸರಿಸುತ್ತಿದೆ. ಐರೋಪ್ಯರು ತಮ್ಮ ಸುಖಸಂತೃಪ್ತಿಗಾಗಿ ಪೌರ್ವಾತ್ಯರ ಪವಿತ್ರ ಕಲಾ ಸಂಸ್ಕೃತಿಗಳ ಕೊಲೆಯನ್ನು ಮಾಡುತ್ತಿರುವರು.

ಮಿಶನರಿ ಚಟುವಟಿಕೆ

ಬ್ರಿಟಿಷರ ಮತ ಪ್ರಚಾರಕ ನೀತಿಯಾದರೊ ಅವರ ಸಾಮ್ರಾಜ್ಯಶಾಹಿಯೊಡನೆ ನಿಕಟ ಸಂಬಂಧವುಳ್ಳದ್ದು. ಭಾರತೀಯರ ದೀನ ದರಿದ್ರತೆಯ ಅನುಕೂಲತೆಯನ್ನು ತೆಗೆದುಕೊಂಡು ಇಲ್ಲಿ ಬ್ರಿಟಿಷರ ಹಸ್ತಕರಾದ ಮಿಶನರಿಗಳು ಶೈಕ್ಷಣಿಕ ಮತ್ತು ಮತಾಂತರದ ಕಾರ್ಯಗಳನ್ನಾರಂಭಿಸಿದರು. ಇದಕ್ಕೆ ಸರಕಾರದ ವಿಪುಲ ಧನ ಸಹಾಯವು ದೊರಕುತಿತ್ತು. ಕ್ರೈಸ್ತ ಮತವು ದೇವರಿಂದ ದಾರಿ ತೋರಿಸಲ್ಪಟ್ಟ ಒಂದೇ ಒಂದು ಧರ್ಮವೆಂದೂ ಹೇಳಲ್ಪಟ್ಟಿತು. ತಮ್ಮ ಈ ಉನ್ನತ ತತ್ತ್ವ ಪ್ರಚಾರದ ಉದ್ವೇಗದಲ್ಲಿ ಮಿಶನರಿಗಳು ಎಲ್ಲಾ ಮತಗಳು ಒಂದೇ, ಎಲ್ಲವೂ ಒಬ್ಬನೇ ಪರಮಾತ್ಮನ ಸಾಕ್ಷಾತ್ಕಾರಕ್ಕಾಗಿ ಯತ್ನಿಸುವಂತಹುಗಳೆಂಬ ಉದಾತ್ತ ವಿಚಾರವನ್ನು ಮರೆತುಬಿಟ್ಟರು!

ಮೊದಮೊದಲಿನ ಮಿಶನರಿ ಶಾಲಾ ಕಾಲೇಜುಗಳಲ್ಲಿನ ವಾತಾವರಣವು ಸಂಪೂರ್ಣ ಪಾಶ್ಚಾತ್ಯ ಸಂಸ್ಕೃತಿಮಯವಾಯಿತು. ಐರೋಪ್ಯ ಚಿತ್ರಕಲೆ, ಆಂಗ್ಲ ಮತ್ತು ಬೈಬಲ್ ಪ್ರಧಾನ ಸಾಹಿತ್ಯಗಳು ನಮ್ಮ ಮಕ್ಕಳ ಮನಸ್ಸಿನಲ್ಲಿ ತುಂಬಿಸಲ್ಪಟ್ಟವು. ನಮ್ಮ ರೂಢಿ ಸಾಂಪ್ರದಾಯಗಳೆಲ್ಲವೂ ಮೂಢನಂಬಿಕೆಯದೆಂದು ತಿಳಿಸಲ್ಪಟ್ಟವು. ಇದು ಮಿಶನರಿಗಳ ಅಜ್ಞಾನದ ಒಂದು ಲಕ್ಷಣ. ಶಾಲಾ [illegible] ತೀರ್ಥಸ್ನಾನ ಮಾಡುವುದು, ಗಂಧಲೇಪಗಳನ್ನು ಹಚ್ಚುವುದು, ಅಶ್ವತ್ಥ ಮತ್ತು ತುಳಸಿ ಗಿಡಗಳ ಸುತ್ತು ತಿರುಗುವುದೇ ಮೊದಲಾದ ನಮ್ಮ ಸಂಪ್ರದಾಯಗಳು ಅತ್ಯಾಧುನಿಕ ಆರೋಗ್ಯ ತತ್ವಗಳಿಗನುಸಾರವಾಗಿ ರಚಿಸಲ್ಪಟ್ಟಿವೆಂದು ಅವರು ಹೇಗೆ ತಿಳಿಯಬೇಕು?

—ಆನಂದ ಕುಮಾರಸ್ವಾಮಿ

"ಕ್ಲಾಸಿಕಲ್"

ESTD 1906

CANARA BANK, LIMITED

(Incorporated in British India with Limited Liability)

(PROGRESS STATEMENT CORRECT TO THOUSANDS OF RUPEES)

LIABILITIES	1945	1946	ASSETS	1945	1946
Capital Subscribed	29,00,000	29 00,000	Cash	1,01 91,000	1,16,16,000
Capital paid up	28,43,000	28,80,000	Govt Securities	1,80,45,000	2,75,61,000
Reserves	11,00,000	11,00,000	Advances to customers	1,56,87,000	2,01,38,000
Deposits	3,50,43,000	4,60,40,000	Bills for collection and Foreign Bills negotiated	20,56,000	34,23,000
Due to Bankers	26,91,000	69,57,000	Landed Properties	28,000	5,000
Call Deposits from Bankers	8,00,000	15,00,000	Bank Premises and Furniture and Fixtures	1,46,000	1,47,000
Branch Adjustments	22,07,000	21,99,000	Other Assets	10,25,000	16,23,000
Bills for collection and foreign bills negotiated	20,56,000	34,23,000			
Other Liabilities	77,000	85,000			
Profit for the year	3,61,000	4,19,000			
Rs.	4,71,78,000	6,45,13,000	Rs.	4,71,78,000	6,45,13,000

ಅಮೇರಿಕನ್ನರ ಯಂತ್ರಪಿಪಾಸೆ

ಸುಖೋಪಭೋಗಿಗಳಾದ ಅಮೇರಿಕನ್ನರು ಶ್ರಮ ಕಡಿಮೆ ಮಾಡುವ ಯಂತ್ರ ವಿಧಾನಗಳನ್ನು ಕಡಿಮೆ ಮಾಡಲು ಅವಿಶ್ರಾಂತ ಸಂಶೋಧನೆ ನಡೆಸುತ್ತಾರೆ.

ಉದಾಹರಣೆಗಾಗಿ ನ್ಯೂಯೋರ್ಕಿನ ಒಂದು ಮೋಟಾರು ಗೆರೇಜಿಗೆ ನಿಮ್ಮ ಮೋಟಾರ್ ಕಾರನ್ನು ಒಯ್ದರೆ ಅಲ್ಲಿ ಕೇವಲ 3½ ಮಿನಿಟುಗಳಲ್ಲಿ ಅದನ್ನು ಸಂಪೂರ್ಣ ತೊಳೆದು 'ಪೊಲಿಶ್' ಮಾಡಲ್ಪಡುವ 'ಸ್ವಕಾರ್ಯ' ಯಂತ್ರವಿದೆ.

ಅದೇ ರೀತಿ ಕೆಲಿಫೋರ್ನಿಯದಲ್ಲಿ ನೀವು ನೇರವಾಗಿ ನಿಮ್ಮ ಕಾರನ್ನು ಒಂದು ಬೇಂಕಿನ ಕಾರಕೂನನ ಕಿಟಕಿ ಬಳಿ ಒಯ್ದು ನಿಮ್ಮ ಹಣಕಾಸಿನ ಲೇವಾದೇವಿಗಳನ್ನು ಕಾರಿನಲ್ಲಿ ಕೂತಲ್ಲಿಂದಲೇ ಸರ್ವಹಿಸುವ ಏರ್ಪಾಡು ಇದೆ.

ಯಂತ್ರ ಮಡಿ

ಅಮೇರಿಕದಲ್ಲೀಗ ಚಿಕ್ಕ ಮಡಿಮಾಡುವ ಯಂತ್ರಗಳು ಜಾರಿಗೆ ಬಂದಿವೆ. ಅವುಗಳಲ್ಲಿ ಕೊಳೆ ಬಟ್ಟೆಗಳನ್ನು ತುರುಕಿಸಿ ಯಂತ್ರವನ್ನು ಚಲಿಸಿಬಿಟ್ಟರೆ ಸಾಕು—ನಂತರದ ಅರ್ಧ ಗಂಟೆಯೊಳಗೆ ಬಟ್ಟೆಗಳೆಲ್ಲ ತೊಳೆಯಲ್ಪಟ್ಟು, ಮಡಿ ಮಾಡಲ್ಪಟ್ಟು, ಇಸ್ತ್ರಿ ಹಾಕಲ್ಪಟ್ಟು ಹೊರಬರುವವು ಅಷ್ಟು ಅವಧಿಯಲ್ಲಿ ನೀವು ಇನ್ನಿತರ ಕೆಲಸವನ್ನು ಮಾಡಿಕೊಂಡು ಬರಬಹುದು ಇದಕ್ಕೆ ತಗಲುವ ಖರ್ಚು ಪ್ರತಿ ಹತ್ತು ರಾತ್ಲ ಬಟ್ಟೆಗೆ ಒಂದು ರೂಪಾಯಿ ಮಾತ್ರ

ಮಡಿ ಮಾಡುವ ಅಂಗಡಿಯೊಂದರಲ್ಲಿ ಇಂತಹ 21 ಯಂತ್ರಗಳನ್ನಿಟ್ಟಿರುವರು. ಓರ್ವ ಯಜಮಾನಿ ಮತ್ತವಳ ಸಹಾಯಕರಾಗಿ ಇನ್ನಿರ್ವ ಸ್ತ್ರೀ ಕೆಲಸಗಾರರು-ಒಟ್ಟು ಮೂರು ಮಂದಿ—ಇವುಗಳನ್ನು ನಡಸುತ್ತಾರೆ ಬೆಳಿಗ್ಗೆ 8ರಿಂದ ರಾತ್ರೆ 8ರ ತನಕ ಇಲ್ಲಿ ಬಿಡುವಿಲ್ಲದ ಕೆಲಸ ನಡಯುತ್ತದೆ

ಗಿರಾಕಿಯು ತಂದ ಬಟ್ಟೆಯನ್ನು ತೂಕ ಮಾಡುವರು—ಕಾರಣ ಪ್ರತಿ ಯಂತ್ರದಲ್ಲಿ 10 ರಾತ್ಲುಗಳಿಗಿಂತ ಹೆಚ್ಚಿನ ಭಾರದ ಬಟ್ಟೆ ಹಿಡಿಯುವುದಿಲ್ಲ ಬಟ್ಟೆಗಳನ್ನು ಒಂದು ತೂತಿನಿಂದ ಯಂತ್ರದೊಳಗೆ ಸೇರಿಸಿ ಅವುಗಳು ಎಷ್ಟು ಸಮಯದ ತನಕ ಮಡಿಮಾಡಲ್ಪಡಬೇಕೆಂದು ನಿಶ್ಚಯಿಸಿ ಅದಕ್ಕನುಸಾರವಾಗಿ ಕೆಲವೊಂದು ಉಪಕರಣಗಳನ್ನು ಒತ್ತಿಬಿಟ್ಟುಬಿಡುವುದು ಬಣ್ಣದ ಬಟ್ಟೆಗಳನ್ನು ತೊಳೆಯಲು ಪ್ರತ್ಯೇಕ ಯಂತ್ರಗಳಿವೆ ಮಡಿಯಾಗುವ ಅವಧಿಗೆ ಗಿರಾಕಿ ಅಲ್ಲಿ ಹಾಜರಿರಬೇಕು ಹೊತ್ತಾದರೆ ಇತರ ಗಿರಾಕಿಗಳಿಗೆ ತೊಂದರೆಯಾಗುವುದರಿಂದ ಹೊತ್ತಾದುದಕ್ಕೆ ಹೆಚ್ಚಿನ ಬಾಡಿಗೆ ಕೊಡಬೇಕಾಗುವುದು.

ಅಮಲು ಮಾಪಕ

ಮಿಚಿಗನ್ ನಗರದ ಪೋಲಿಸರ ಬಳಿ ಮದ್ಯಸೇವನೆ ಮಾಡಿದ ಮೋಟಾರ್ ಡ್ರ್ಯೈವರರ ಪತ್ತೆಹಚ್ಚುವ ಒಂದು ಉಪಕರಣವಿದೆ. ಮಾರ್ಗದಲ್ಲಿ ನಿಂತಾಗಲೇ ಇದನ್ನು ಉಪಯೋಗಿಸಿ ಕುಡಿತವನ್ನು ಕಂಡುಹಿಡಿಯಬಹುದು. ಈ ಉಪಕರಣವೆಂದರೆ ಒಂದು ತೆಳ್ಳಗಿನ ರಬ್ಬರ್ ಚೀಲ ಅದನ್ನು ಕುಡಿದವನು ಊದಿದರೆ ಅವನ ಶ್ವಾಸದಲ್ಲಿರುವ ಅಮಲು ದ್ರಾವಕದ ಕಣಗಳು ಅದರಲ್ಲಿನ ಕೆಲವು ರಾಸಾಯನಿಕ ಪದಾರ್ಥಗಳಲ್ಲಿ ಕಾಣಿಸಿಕೊಳ್ಳುವವು.

ಮದ್ಯ ಸೇವನೆ ಮಾಡದ ಡ್ರೈವರರಿಗೆ ಇದರ ಪ್ರಯೋಗದಿಂದ ಭಯವಿಲ್ಲ. ಇದನ್ನು ಊದಲು ತಿರಸ್ಕರಿಸುವವನು ಕುಡಿದಿದ್ದಾನೆಂದು ಪ್ರತ್ಯೇಕ ಕಂಡುಹಿಡಿಯುವ ಕೆಲಸವಿಲ್ಲ. ಮಿಚಿಗನಿನ ಪೋಲಿಸ್ ವಾಹನಗಳಲ್ಲೆಲ್ಲ ಒಂದೊಂದು ಇಂತಹ ಉಪಕರಣವಿರುವುದು. ಸಂದೇಹಕ್ಕೊಳಗಾದ ಡ್ರ್ಯೈವರನನ್ನು ಕೂಡಲೇ ಪರೀಕ್ಷೆಗೊಳಮಾಡಿ ತಪ್ಪು ಕಂಡುಹಿಡಿಯುವರು.

ಯಂತ್ರ ಬೀಗ

ಸಂಯುಕ್ತ ಅಮೇರಿಕದ ಎಲ್ಲಾ ಪ್ರಾಮುಖ್ಯ ರೈಲ್ವೇ ಸ್ಟೇಶನುಗಳಲ್ಲಿ ಪ್ರಯಾಣಿಕರ ಸಾಮಾನುಗಳನ್ನು ಇಡುವ ಯಂತ್ರ ಬೀಗದ ಪೆಟ್ಟಿಗೆಗಳಿವೆ. ಇವುಗಳಲ್ಲಿ 24 ತಾಸುಗಳ ತನಕ ಪ್ರಯಾಣಿಕರು ತಮ್ಮ ಸಾಮಾನುಗಳನ್ನಿಡಬಹುದು ಸಾಮಾನುಗಳನ್ನಿಟ್ಟಕೂಡಲೇ ನೀವು ಆ ಪೆಟ್ಟಿಗೆಗೆ ಬೀಗಹಾಕಿ ಬೀಗದ ಕೈಯನ್ನೊಯ್ಯಬೇಕು ಇದರ ಬಾಗಿಲು ತೆರೆದರೆ ಬೀಗದ ಕೈಯನ್ನು ತೆಗೆಯಲು ಬರುವುದಿಲ್ಲ 24 ಗಂಟೆಗಳ ಅಂತ್ಯದಲ್ಲಿ ಈ ಪೆಟ್ಟಿಗೆಗಳ ಬೀಗವು ತನ್ನಷ್ಟಕ್ಕೆ ತೆರೆಯಲ್ಪಡುವ ಒಂದು ಗಡಿಯಾರ ನಮೂನೆಯ ಯಂತ್ರ ಜೋಡನೆಯಿಡಲ್ಲಿದೆ ಆ ಸಮಯಕ್ಕೆ ಸಾಮಾನಿನ ಮಾಲಕರು ಬಾರದಿದ್ದಲ್ಲಿ ರೈಲ್ವೇಯ ಕೆಲಸಗಾರರು ಅದನ್ನು ತೆಗೆದು ಹೊತ್ತಾದುದಕ್ಕೆ ಪ್ರತ್ಯೇಕ ಬಾಡಿಗೆ ತೆಗೆದುಕೊಳ್ಳುತ್ತಾರೆ

ಎಟಂ ವಿಷಕ್ಕೆ ಮದ್ದು

ಎಟಂ ಬೊಂಬಿನ ದುಷ್ಪರಿಣಾಮವು ಮಾನವ ಶರೀರದ ಮೇಲೂ ಮುಂದಿನ ಪೀಳಿಗೆಯ ಮೇಲೂ ಉಂಟಾಗುವುದೆಂದು ಇದುತನಕ ಹೇಳಲಾಗಿತ್ತಷ್ಟೆ ಈಗ ಚಿಕಾಗೋ ನಗರದ ಇರ್ವ ವಿಜ್ಞಾನಿಗಳು ಎಟಂ ಶಕ್ತಿಯ ದುಷ್ಪ್ರಸಾರಕ್ಕೆ ಪ್ರತಿಹಾರಕ ಔಷಧಿಯೊಂದನ್ನು ಕಂಡುಹಿಡಿದಿರುವರಾಗಿ ಸಾರಿರುವರು ಈ ಔಷಧಿಯು, ಕೈಗಾರಿಕೆ ವಸ್ತು ತಯಾರಿಕೆಯಲ್ಲಿ ಹೆಚ್ಚಾಗಿ ಉಪಯೋಗಿಸಲ್ಪಡುವ ಒಂದು ನೀಲ ಬಣ್ಣದ ರಸಾಯನವಾಗಿರುತ್ತದೆಯಂತೆ. ಎಟಂ ಶಕ್ತಿಯನ್ನು ತಯಾರಿಸುವ ಕೆಲಸಗಾರರ ರಕ್ತವು ತೆಳ್ಳಗಾಗುತ್ತ ಜೀವಕ್ಕೆ ಗಂಡಾಂತರವನ್ನುಂಟುಮಾಡುವುದನ್ನು ಈ ರಸಾಯನಿಕವು ತಡೆಯುತ್ತದೆ.

ಪೆನಿಸಿಲಿನ್ ಗೊಬ್ಬರ

ಸಂಯುಕ್ತ ಅಮೇರಿಕದ ವಿಜ್ಞಾನಿಗಳು ಪೆನಿಸಿಲಿನ್ ತಯಾರಿಯನ್ನು ವೇಗಗೊಳಿಸುತಿದ್ದಾರೆ ಕೃಷಿಗಾರಿಕೆಯಲ್ಲಿ ಇದನ್ನು ಹೇಗೆ ಉಪಯೋಗಿಸದೆಂಬುದರ ಕುರಿತೂ ಅವರು ಪರಿಶೋಧನೆ ನಡೆಸುತ್ತಲಿರುವರು ಇದಕ್ಕೆ ಕಾರಣವಿದೆ. ವರ್ಷಕ್ಕೆ 20 ಲಕ್ಷ ಡಾಲರ್ ಬೆಲೆಯ ಕೃಷಿ ಉತ್ಪತ್ತಿ ವಸ್ತುಗಳನ್ನು 100 ಲಕ್ಷ ಡಾಲರ್ ಮೌಲ್ಯದ ಪೆನಿಸಿಲಿನನ್ನು ತಯಾರಿಸಲು ಉಪಯೋಗಿಸುವರು ಆದುದರಿಂದ ಈ ಸಂಜೀವಿನಿ ಔಷಧಿ ಕೂಡ ಕೃಷಿಗಳ ಮೇಲೆ ಸತ್ಪರಿಣಾಮಕಾರಿಯಾಗಬಹುದೆಂದು ಊಹಿಸಲಾಗಿದೆ ದನಗಳ ಒಂದು ತರದ ಹುಣ್ಣುಗಳಿಗೆ ಇದು ಅತ್ಯಂತ ಪರಿಣಾಮಕಾರಿಯಾಗುವುದಂತೆ ಪೆನಿಸಿಲಿನ್ ಔಷಧಿಯು ಶೀಘ್ರ ಗುಣಕಾರಿ ಮಾತ್ರವಲ್ಲ, ಹಚ್ಚಿದಾಗ ಉರಿಯುವುದಿಲ್ಲ

ಗಾಳಿಯಿಂದ ಮದ್ಯ ತಯಾರಿ

ಭೂಗರ್ಭದಲ್ಲಿ ಗ...ಗಳಲ್ಲಿ, ರಾಸಾಯನಿಕ ವಸ್ತುಗಳಲ್ಲಿ, ವಾತಾವರಣದಲ್ಲಿ, ...ನಲ್ಲಿ ವಿವಿಧ ಅಂಶಗಳ ಇರುತ್ತವೆ ... ಜನಕ ಜಲಜನಕ, ... ಇವು ಕೆಲವು ಮುಖ್ಯ ಅಂಶಗಳು ಇವುಗಳಿಂದ ಉತ್ತಮ ಮದ್ಯಸಾರಗಳನ್ನು ತಯಾರಿಸಬಹುದೆಂದು ಅಮೇರಿಕದ ಡಾ। ರೋಬರ್ಟ್ ಎರಿಸ್ ... ರಸಾಯನ ಶಾಸ್ತ್ರಜ್ಞರು ಒಂದು ವೈಜ್ಞಾನಿಕರ ಕೂಟದಲ್ಲಿ ತಿಳಿಸಿದರು ಇದರ ಖರ್ಚು ಮರ, ಹಣ್ಣು ಹಂಪಲುಗಳಿಂದ ... ವ ಸಾರಾಯಿಗಳಿಗಿಂತ ಶೇಕಡಾ 80ರಷ್ಟು ಕಮ್ಮಿ ಬೀಳುತ್ತದೆಯೆಂದು ಅವರ ಹೇಳಿಕೆ

ಗ್ರಹಯಾನ

ಬ್ರಿಟನಿನ ವಿಜ್ಞಾನಿಗಳು ತಮ್ಮ ಗ್ರಹ ಪ್ರಯಾಣದ ಯೋಜನೆಗಳನ್ನು ಮುಂದೊತ್ತುತ್ತಿದ್ದಾರೆ. ಚಂದ್ರಲೋಕಕ್ಕೂ, ಬುಧಗ್ರಹಕ್ಕೂ ಪ್ರಯಾಣವು ಸಾಧ್ಯವೆಂದು ಈಗಾಗಲೇ ಅನೇಕ ಖಗೋಳ ವಿಜ್ಞಾನಿಗಳು ಪ್ರಯೋಗ ಮೂಲಕ ಕಂಡುಹಿಡಿದಿರುವರು. ಆದರೆ ಇದಕ್ಕೆ ಬೇಕಾಗುವ ವಿಶೇಷ ಮಾದರಿಯ ವಾಹನವು ಇನ್ನೂ ತಯಾರಿಯಲ್ಲಿಯೇ ಇದೆ

ಬ್ರಿಟಿಷ್ ಸಾಮ್ರಾಜ್ಯದ ಉತ್ತರಾಧಿಕಾರಿ ಅಮೇರಿಕಾ

ಅಮೇರಿಕನ್ ಪತ್ರಿಕೋದ್ಯೋಮಿಯ ಜಂಬ

ಅಮೇರಿಕದ ಪ್ರಬಲವಾದ ಹರ್ಸ್ಟ್ ಪತ್ರಿಕಾ ಮಾಲೆಯ ವಿದೇಶಿ ಬಾತ್ಮಿದಾರರಾದ ಕಾರ್ಲ್ ವೊನ್ ವಿಗಾಂಡ ಅವರು 'ಬ್ರಿಟನ್ನು ಶೀಘ್ರವಾಗಿ ನಶಿಸುತ್ತದೆ' ಎಂದು ಅಭಿಪ್ರಾಯಪಡುತ್ತಾರೆ

ಬ್ರಿಟಿಷ್ ಸಾಮ್ರಾಜ್ಯವು ಇತಿಹಾಸದ ಮುಸುಕಿನೊಳಗೆ ಸೇರುವುದೆಂದು ಅವರು ಬರೆಯುತ್ತಾರೆ

"ಕಳೆದೆರಡು ಯುದ್ಧಗಳಲ್ಲಿಯೂ ಇಂಗ್ಲೆಂಡು ಸುರಕ್ಷಿತವಾಗಿ ಕಾಪಾಡಲ್ಪಟ್ಟಿದೆ ಆದರೆ ಬ್ರಿಟಿಷ್ ಸಾಮ್ರಾಜ್ಯವು ಮಾತ್ರ ಕಳೆದು ಹೋದಂತೆಯೇ ಸರಿ

ಕಳೆದೆರಡು ಶತಮಾನಗಳಿಂದ ಜಗತ್ತಿನಲ್ಲಿ ತನ್ನ ದೌಲತ್ತು, ಶಕ್ತಿ, ಆಡಂಬರಗಳಿಂದ ಮೆರೆದ ಬ್ರಿಟಿಷ್ ಸಾಮ್ರಾಜ್ಯವು ಕೊನೆಗೊಳ್ಳುತ್ತಿದೆ"

1600 ವರ್ಷಗಳ ಹಿಂದೆ ಕುಸಿದು ಬಿದ್ದ ರೋಮನ್ ಸಾಮ್ರಾಜ್ಯದ ನಂತರ ಎರಡನೆಯ ಪ್ರಬಲ ಸಾಮ್ರಾಜ್ಯವೇ ಬ್ರಿಟಿಷರದು ಆದರೆ ಇಂಥ ಸಾಮ್ರಾಜ್ಯಶಾಹಿ ... ಕ್ಕೆ ... ಶೀತವಾಗಿಯೇ ಸಾ... ಗಿದೆ

ಮುತ್ಸದ್ದಿಗಳ ತಪ್ಪು

"ಕಳೆದ 59 ವರ್ಷಗಳಲ್ಲಿ ಬ್ರಿಟನಿನ ರಾಜಕೀಯ ಮುತ್ಸದ್ದಿಗಳು ಮಾಡಿದ ತಪ್ಪುಗಳಿಂದ ... ಇಂದು ಕಾಲ ಮುಂಚಿತವಾಗಿ ಕೂಳೆಯಬೇಕಾಯಿತು ಯುದ್ಧಗಳಿಂದ ಬಳಲಿ, ಬ್ರಿಟಿಷ್ ಜನಾಂಗ ನಶಿಸಿದೆ ಅಲ್ಲಿಯ ಜನಸಂಖ್ಯೆ ಕುಗ್ಗುತ್ತಿದೆ. ಅಲ್ಲಿನ ರಾಜಕೀಯ, ಮತ್ತು ಆರ್ಥಿಕ ತತ್ವಗಳಿಗೂ ರೋಗಾಣುಗಳಂಟಿವೆ "

"ರಕ್ತ ಸಂಬಂಧದಲ್ಲೂ, ಭಾಷೆಯಲ್ಲೂ, ರಾಜಕೀಯ ಮತ್ತು ಸಾಂಸ್ಕೃತಿಕ ಸಮಾನತೆಯಲ್ಲೂ ಇದುತನಕ ಬ್ರಿಟನ್ನು ವಹಿಸಿದ ಲೋಕ ನಾಯಕತ್ವಕ್ಕೆ ಅಮೇರಿಕವೇ ಸಹಜವಾದ ಹಕ್ಕುದಾರಿಯಾಗಿರುತ್ತದೆ "



ಸಮರ್ಥತೆ, ಬಲ, ಶುಭ್ರತೆ ಮತ್ತು ಮನೋಹರತೆ, ಇವುಗಳನ್ನು ಸುಭದ್ರ ಮತ್ತು ಸುಲಭವಾದ ಈ ರೀತಿಯಲ್ಲಿ ನಿಮ್ಮದಾಗಿ ಮಾಡಿಕೊಳ್ಳಬಹುದು ವನಸ್ಪತಿ ಮೂಲಗಳಿಂದ ಸಿದ್ಧವಾಗುವ ಬ್ಯಾಲ್ ಬೀನ್ಸ್, ಎಂಬ ಈ ಶಕ್ತಿಕಾರಕ ಬೇದಿ ಮದ್ದನ್ನು ಕ್ರಮವಾಗಿ ಸೇವಿಸಿದಲ್ಲಿ ರಕ್ತದಿಂದ ವಿಷವಸ್ತುಗಳು ವಿಸರ್ಜನೆಯಾಗಿ, ಜೀರ್ಣಶಕ್ತಿಯು ವೃದ್ಧಿಯಾಗಿ ನಿಮ್ಮ ಆಂತರ್ಯ ಆರೋಗ್ಯವು ಉತ್ತಮಗೊಳ್ಳುವುದು

ಶುಭ್ರ ಆರೋಗ್ಯದಲ್ಲಿರಬೇಕಾದರೆ, ನಿಮಗೆ ಬ್ಯಾಲ್ ಬೀನ್ಸ್‌ಗಳ ಅವಶ್ಯವಿದೆ ಎಂದು ಸದಾ ಜ್ಞಾಪಕದಲ್ಲಿಡಿರಿ.

ಮಲಗುವ ಮೊದಲು ಶುದ್ಧ ವನಸ್ಪತಿಯಾದ

BILE BEANS

ಬ್ಯಾಲ್ ಬೀನ್ಸ್‌ಗಳನ್ನು ನಿತ್ಯಲೂ ಸೇವಿಸಿ

ಮಾರಾಟಕ್ಕಿದೆ

ಉತ್ತಮ ತರಗತಿಯ ಎರಡು ಕುದುರೆಗಾಡಿಗಳೂ, ಒಂದು ದೊಡ್ಡ ಕುದುರೆಯೂ ಮಾರಾಟಕ್ಕಿದೆ ಕೊಂಡುಕೊಳ್ಳಲು ಬಯಸುವವರು ಸ್ವತಹ ಉಡ್ಪಿಗೆ ಬಂದು ಪರೀಕ್ಷಿಸಬಹುದು. ರೂಪಾಯಿ 1500 ರ ಅದರ ಸಮೀಪದ ಕೇಳಿಕೆಯನ್ನು ಗಮನಿಸಲಾಗುವದು. ಬೇಕಾದವರು ಸ್ವತಹ ಯಾ ಪತ್ರದ್ವಾರ ಈ ತಿಂಗಳೊಳಗೆ ಈ ಕೆಳಗಿನವರೊಡನೆ ವಿಚಾರಿಸಬಹುದು

Deputy Manager
M/S. Kochikar Brothers.
Udipi.

ನಾಗರೀಕ ವ್ಯವಹಾರ

ನಮ್ಮ ನಗರವು ಸ್ವಲ್ಪ ಭಾಗಗಳಲ್ಲಿ ಮಾತ್ರ ಸುಂದರವಾಗಿಯೂ ಚೊಕ್ಕಟವಾಗಿಯೂ ಕಂಡರೂ ಇದರ ಹೆಚ್ಚಿನ ನಿವಾಸ ಪ್ರದೇಶಗಳೂ, ಮಾರ್ಗ ಚರಂಡಿಗಳೂ, ಉಪಮಾರ್ಗ, ಒಳಮಾರ್ಗಗಳೂ, ಹಿತ್ತಲು ತೋಟಗಳೂ, ವ್ಯಾಪಾರಿ ಸ್ಥಳಗಳೂ, ಶಾಲಾವಟಾರಗಳೂ ಕೂಡ ಕಸ ಕೊಳೆಗಳಿಂದಲೂ, ದುರ್ವಾಸನೆಯಿಂದಲೂ ಕೂಡಿರುವುದು ಗಮನಕ್ಕೆ ಒರುತ್ತದೆ.

ಕಸ ಕೊಚ್ಚೆಗಳನ್ನು ಮಾರ್ಗದ ಬದಿಯಲ್ಲಿ ಬಿಸಾಡುವುದು ನಮ್ಮಲ್ಲಿ ಹಲವು ನಾಗರೀಕರಿಗೊಂದು ಅನುಕೂಲದ ಅಭ್ಯಾಸವಾಗಿದೆ. ಯೋಗ್ಯ ಕಸ ಡಬ್ಬಿಗಳ ಅಭಾವವೂ ಇದಕ್ಕೊಂದು ಕಾರಣ. ಅನೇಕ ಸ್ಥಳಗಳಲ್ಲಿ ಇದನ್ನು ಇಡಲು ಬೇಕಾದ ಸ್ಥಳವೂ ಇರುವುದಿಲ್ಲ. ಕಸ, ಕೊಳೆ, ಕೆಸರಿನಿಂದಲೂ, ಹರಿಯದೆ ನಿಲ್ಲುವ ನೀರು ದಾಸ್ತಾನಿನಿಂದಲೂ, ಮಲ ಮೂತ್ರಾದಿಗಳನ್ನು ಮಾಡುವ ಸ್ಥಳಗಳು ಸರಿಯಾಗಿ ತೊಳೆಯದಿರುವುದರಿಂದಲೂ ನಮ್ಮ ನಗರವು ಅತ್ಯಂತ ಹಾನಿಕಾರಕವೂ ತ್ರಾಸದಾಯಕವೂ ಆದ ನೊಳ್ಳೆಗಳಿಗೆ ಸುಖಾಶ್ರಯ ದೊರೆವಂತಾಗಿದೆ. ಪರಿಣಾಮವಾಗಿ ಸಾಂಕ್ರಾಮಿಕ ವ್ಯಾಧಿಗಳೂ ಅಪರಿಹಾರ್ಯವೆನಿಸುವ ಅನೇಕಾಲಿನ ರೋಗವೂ ಉಂಟಾಗಿ ನಗರಕ್ಕೆ ಶಾಶ್ವತ ದುಃಖಭಯ, ಕಳವಳಗಳನ್ನು ತಂದೊಡ್ಡಿದೆ. ಆನೆಕಾಲಿನ ರೋಗವು ಮದ್ದಿಲ್ಲದ ವ್ಯಾಧಿಯೆಂಬುದನ್ನು ಇನ್ನಾದರೂ ನಾಗರೀಕರು ಮನಸ್ಸಿಗೆ ತಂದುಕೊಂಡು ತಮ್ಮ ಸುತ್ತಮುತ್ತಲಿನ ಮಾನಸ್ಥಾನಗಳ ಸ್ವಚ್ಛತೆಯ ಕುರಿತು ಗಮನ ತೆಗೆದುಕೊಳ್ಳಬೇಕಾದುದು ಅತ್ಯವಶ್ಯಕ.

ಈ ಕುರಿತು ನಗರಾಡಳಿತದವರು, ಶ್ರೀ ರೋಗ್ಯ ಖಾತೆಯವರೂ ಸರಕಾರವೂ ಅಲ್ಲದೆ ಇತರ ಸಾರ್ವಜನಿಕ ಸೇವಾಸಂಸ್ಥೆಯವರು ಪ್ರಚಾರ ಕೈಕೊಳ್ಳುವುದರಿಂದ ಪರಿಸ್ಥಿತಿಯನ್ನು ತುಂಬಾ ಸುಧಾರಿಸಬಹುದು. ಆಗಾಗ್ಗೆ ಸಭೆಗಳನ್ನು ಪರಿಷತ್ತುಗಳನ್ನು ಸೇರಿಸಿಯೂ, ಚಲಚಿತ್ರ, ಗೋಡೆ ಚಿತ್ರಗಳ ಮೂಲಕವೂ ಪುಸ್ತಕಗಳ ಮೂಲಕವೂ ಆರೋಗ್ಯ ರಕ್ಷಣೆಯ ಪ್ರಾಮುಖ್ಯತೆಯನ್ನು ಜನತೆಯ ಮನಸ್ಸಿನ ಮೇಲೆ ಒತ್ತಬಹುದು.

ಬಡ ಜನರು, ಶ್ರಮಜೀವಿಗಳು ಈ ಕುರಿತು ಇನ್ನಷ್ಟು ಹೆಚ್ಚಿನ ಜಾಗ್ರತೆಗಳನ್ನು ವಹಿಸಬೇಕು. ಕುದಿಸಿದ ನೀರನ್ನೇ ಕುಡಿಯುವುದು, ತಮ್ಮ ಬಿಡು ಸಮಯಗಳಲ್ಲಿ ಮನೆಯ ಹೊರ ಒಳ ಪ್ರದೇಶಗಳನ್ನು ನಿರ್ಮಲ ಮಾಡುವುದು, ತಮ್ಮ ಮಕ್ಕಳಲ್ಲಿ ನಿರ್ಮಲಾಭ್ಯಾಸಗಳನ್ನು ಬೆಳೆಸುವುದು, ಸ್ವಲ್ಪ ಕಷ್ಟವಾದರೂ ಸೊಳ್ಳೆ ಪರದೆಗಳನ್ನು ತಯಾರಿಸಿಕೊಳ್ಳುವುದು ಇವೇ ಮೊದಲಾದುವುಗಳನ್ನು ಕರ್ತವ್ಯವೆಂದು ತಿಳಿದು ನಿರ್ವಹಿಸುವುದು ಸ್ವಂತದ ಆರೋಗ್ಯ ದೃಷ್ಟಿಯಿಂದ ಮಹತ್ವದ ವಿಷಯ. ಕಾರಣ ಬಡ ಜನರು ವ್ಯಾಧಿರಹಿತರಾಗಿದ್ದರೇನೇ ಅವರ ಸಂಸಾರ ಜೀವನವು ಸುಗಮವಾಗಿ ಸಾಗೀತು.

ಬಾಂಧವ್ಯದ ಕರಾರು

ಮಂಗಳೂರಲ್ಲಿ ತಾ 4—5—'47ರಂದು ಶ್ರೀ ಎಚ್. ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ನಮ್ಮ ಜಿಲ್ಲೆಯನ್ನು ಕೇರಳಕ್ಕೆ ಕೂಡಿಸಲು ಮಾಡುವ ಯತ್ನಗಳನ್ನು ವಿರೋಧಿಸಿ ನಮ್ಮ ಜಿಲ್ಲೆಯು ಕನ್ನಡ ಪ್ರಾಂತ್ಯಕ್ಕೇ ಸೇರಬಯಸುವುದೆಂದೂ ಸ್ಪಷ್ಟಪಡಿಸುವ ನಿರ್ಣಯ ಮಾಡಲಾಗಿದೆ. ಇದಕ್ಕೆ ಒಪ್ಪಿಗೆ ಇದ್ದವರು ತಮ್ಮ ಹೆಸರು, ವೃತ್ತಿ, ವಿಳಾಸ ಮನೆಮಾತು ಇವನ್ನು ಒಂದು ಕಾರ್ಡಿನಲ್ಲಿ ಬರೆದು ಸಹಿಹಾಕಿ

ಜಿಲ್ಲಾ ಪರಿಚಯ

ಶ್ರೀ ಎಸ್. ಮುಕುಂದರಾವ್, ವಿರೋಧಿದಯ ಸಂಪಾದಕರು, ಮಂಗಳೂರು ಇವರಿಗೆ ಈ ತಿಂಗಳ ಅಂತ್ಯದೊಳಗೆ ಕಳುಹಿಸಬೇಕೆಂದು ವಿನಂತಿಯಿದೆ. ಅನೇಕರು ಒಟ್ಟಾಗಿ ಹಿಂದೇ ಪತ್ರದಲ್ಲಿ ತಮ್ಮ ಒಪ್ಪಿಗೆಯನ್ನು ಬರೆದರೂ ಆದೀತು.

ಮೇಲ್ಕಂಡ ಸಭೆಯ ನಿರ್ಣಯದ ಸಾರಾಂಶ ಹೀಗಿದೆ. ದಕ್ಷಿಣ ಉತ್ತರ ಕನ್ನಡಗಳು ಒಂದೇ ಜಿಲ್ಲೆಯ ಎರಡು ಭಾಗಗಳು. ಇವು ಕನ್ನಡ ಪ್ರಾಂತ್ಯಕ್ಕೆ ಸೇರಿಸಲ್ಪಡಲು ಪ್ರಯತ್ನಗಳಾಗುತ್ತಿವೆ. ಇದನ್ನು ಅಲಕ್ಷಿಸಿ ಐಕ್ಯ ಕೇರಳ ಪರಿಷತ್ತಾಧ್ಯಕ್ಷ ಶ್ರೀ ಕೇಳಪ್ಪನ್ ಅವರು ಈ ಜಿಲ್ಲೆಗಳನ್ನು ತಮ್ಮ ಭಾವೀ ಭಾಷಾ ಪ್ರಾಂತ್ಯಕ್ಕೆ ಸೇರಿಸುವ ಯೋಜನೆ ನಿರೂಪಿಸಿರುವುದು ಮತ್ತು ಮದ್ರಾಸಿನ 'ಹಿಂದೂ' ಪತ್ರಿಕೆ ಅದಕ್ಕೆ ಸಮರ್ಥನೆ ಇತ್ತುದು ಆಶ್ಚರ್ಯದ ಸಂಗತಿ. ಗೋಕರ್ಣದಿಂದ ಉಡುಪಿಯ ಕಲ್ಯಾಣಪುರ ನದಿಯವರೆಗೆ ಶುದ್ಧ ಕನ್ನಡ ಮಾತನಾಡುವ ಪ್ರದೇಶ. ಅಲ್ಲಿಂದ ಕಾಸರಗೋಡಿನ ಚಂದ್ರಗಿರಿ ನದಿ ವರೆಗಿನ ಪ್ರದೇಶದಲ್ಲಿ ತುಳು, ಕೊಂಕಣಿಗಳು ಮನೆಮಾತಾಗಿದ್ದರೂ [illegible] ಸಂಸ್ಕೃತಿಯೇ ಈ ಕಡೆಗಳಲ್ಲಿ ಬೆಳೆಸಲ್ಪಡುತ್ತಿದೆ. [illegible] ಕನ್ನಡದಲ್ಲಿ ಜರಗುತ್ತವೆ. [illegible] ಕೊಂಕಣಿ ಮಾತನಾಡುವವರು ಕನ್ನಡ ಸಾಹಿತ್ಯ ವ್ಯವಸಾಯವನ್ನೇ ಮಾಡಿ [illegible] ಕರ್ನಾಟಕದ [illegible] ಪ್ರತಿಷ್ಠಿಗ ಪಡೆದಿದ್ದಾರೆ. ಇಲ್ಲಿಯ ಸಂಸ್ಕೃತಿಯಲ್ಲಿ ತುಳು ಮಳೆಯಾಳಿ [illegible] ಹೆಚ್ಚು [illegible] ಕನ್ನಡಗಳೇ ಆಗಿವೆ. ನಮ್ಮ ಜೀವನ ಕನ್ನಡದೊಡನೆ ಹೆಣೆಯಲ್ಪಟ್ಟಿದೆ. ಆದುದರಿಂದ [illegible] ಕೇರಳಕ್ಕೆ ಸೇರಿಸುವ [illegible] ನಾವು ವಿರೋಧಿಸುತ್ತೇವೆ.

ಮಜೂರರ ನ್ಯಾಯದ ತೀರ್ಪು

ಇಲ್ಲಿನ [illegible] ತೀರ್ಮಾನಿಸಲು ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ನೇಮಕರಾದ ಇತ್ಯರ್ಥ ಸಮಿತಿಯು ತನ್ನ ತೀರ್ಪನ್ನು ಕೊಟ್ಟಿದೆ. ಮೂಲ ಮಜೂರಿಯಲ್ಲಿ 8 ಆಣೆ ಹೆಚ್ಚಿಸಬೇಕೆಂಬ ಮಜೂರರ ಕೇಳಿಕೆಯು ಕಾಲ ಮುಂಚಿತವಾದುದೆಂಬ ಈ ಸಮಿತಿಯು ಹೆಚ್ಚಿನ ಸದಸ್ಯರು ಅಭಿಪ್ರಾಯ ಪಡುತ್ತಾರೆ. ಕಲ್ಲಿಕೋಟೆಯ ಜೀವನ ಖರ್ಚಿನ ಪ್ರಮಾಣದ ಆಧಾರದಿಂದ ಪ್ರತಿ ತಿಂಗಳು ತುಟ್ಟಿಭತ್ತೆಯನ್ನು ಕೊಡುವುದು ತೃಪ್ತಿಕರ ವಿಧಾನ. ಇದರೊಂದಿಗೆ ಮೂಲ ಮಜೂರಿಯ ಕನಿಷ್ಠ ಪ್ರಮಾಣವು 1934ರ ಸೆಪ್ಟಂಬರ್ ತಿಂಗಳಲ್ಲಿದ್ದಂತೆ ಪಡೆಯಲು ಮಜೂರರು ಬಾಧ್ಯಸ್ಥರಾಗಿರುವರು (ಗಂಡಸರಿಗ 6 ಆಣೆ, ಹೆಂಗಸರಿಗೆ 5 ಆಣೆ, ಮಕ್ಕಳಿಗೆ 4 ಆಣೆ) 1945–46ನೇ ವರ್ಷಕ್ಕೆ ಶೇಕಡಾ 16⅔ ರಷ್ಟು ಬೋನಸ್ಸನ್ನು ಹಂಚುವಂತೆ ಸಮಿತಿಯು ಶಿಫಾರಸು ಮಾಡಿರುತ್ತದೆ. ಇದನ್ನು ಇದೇ ಮೇ 31ರೊಳಗೆ ಹಂಚಬೇಕು. 1946ನೇ ಜೂನ್ 30ರೊಳಗಿನ ವರ್ಷದಲ್ಲಿ ಶೇಕಡಾ 75ರಷ್ಟು ದಿನ ಕಲಸಕ್ಕೆ ಹಾಜರಾದವರಿಗೆ [illegible] ಇದು ಸಿಗಬೇಕು. ಮಾತ ಅಂಥವರು ಕಳೆದ ಮಾರ್ಚ್ 17ರ ಮುಷ್ಕರದ ನಂತರ ಕೆಲಸಕ್ಕೆ ಪುನಃ ಸೇರಿದವರೂ ಇರಬೇಕು. ಮುಷ್ಕರ ಮಾಡಿದ ಅವಧಿಯ ಪರಿಹಾರ ಕೊಡುವ ಅವಶ್ಯವಿಲ್ಲವೆಂದು ಸಮಿತಿಯು ಅಭಿಪ್ರಾಯ ಪಡುತ್ತದೆ.

ಹೊಸ ತರಗತಿ: ಸ್ಥಳೀಯ [illegible] ಹೈಸ್ಕೂಲಿನ [illegible] ಇದೇ [illegible] ಆರ್ಟ್ಸ್ [illegible] ತೆರೆಯುವ [illegible] ಇಲಾಖೆಯ ಅನುಮತಿ ದೊರಕಿರುವುದ [illegible] ಈ ಹೊಸ ಶಾಲೆ [illegible] 1ನೇ [illegible] 6ನೇ ಫಾರ್ಮು [illegible] ಹೈಸ್ಕೂಲ್ [illegible] ಕೆಲಸವೂ [illegible]

ಶಿರೂರು: "ಈಗಿನ ಪ್ರಜಾ ಸರಕಾರದವರು ಅಕ್ಕಿಮುಡಿಗೆ ಮತ್ತು ಬತ್ತಮುಡಿಗೆ ಬೋನಸ್ಸು ಕೊಡುವುದಾಗಿ ಪ್ರಚಾರಮಾಡಿದಂತೆ ಎಲ್ಲಾ ಗ್ರಾಮಗಳಿಗೆ ಅದನ್ನು ಹಂಚಿದ್ದು ನಮ್ಮ ಗ್ರಾಮಕ್ಕೆ ಮಾತ್ರ ಏಕೆ ಕೊಡಲಿಲ್ಲ. ಆದ್ದರಿಂದ ತಾವು ಈ ವಿಷಯವನ್ನು ದಯವಿಟ್ಟು ಪ್ರಕಟಿಸಬೇಕಾಗಿ ವಿನಂತಿ"— ಒಂದು ಬಾತ್ಮಿ

ಉಡುಪಿ

ದ. ಕ. ಜಿಲ್ಲಾ ಮಕ್ಕಳ ಸಮ್ಮೇಳನ: ಇದು ಎರಡನೆಯ ಸಲಕ್ಕೆ ಇದೇ ಮೇ ತಿಂಗಳ ಕೊನೆಯ ವಾರದಲ್ಲಿ ಉಡುಪೀ ಕ್ಷೇತ್ರದಲ್ಲಿ ಕೂಡಲಿರುವುದು. ಅದೇ ಸಂದರ್ಭದಲ್ಲಿ ಹೆಣ್ಣು ಗಂಡು ಚಿಕ್ಕ ಮಕ್ಕಳ ವಿದ್ವತ್ ಚತುರತೆಯ ಪ್ರದರ್ಶನಕ್ಕಾಗಿ ಲೇಖನ, ವಾಚನ, ಭಾಷಣಗಳ ಏರ್ಪಾಡು ಮಾಡಲಾಗಿದೆ. ಸ್ಪರ್ಧೆಯಲ್ಲಿ ಗೆದ್ದವರಿಗೆ ಉಚಿತ ಬಹುಮಾನಗಳನ್ನು ಹಂಚುವ ಏರ್ಪಾಡೂ ಮಾಡಲಾಗಿದೆ. ಹೆತ್ತವರು ಹಾಗೂ ಉಪಾಧ್ಯಾಯರು ತಮ್ಮ ಸಹಾಯ ಸಹಕಾರಗಳಿಂದ ಪ್ರೋತ್ಸಾಹವಿತ್ತು ಮಕ್ಕಳ ಸಮ್ಮೇಳನದಲ್ಲಿ ಸೇರುವಂತೆ ಮಕ್ಕಳಿಗೆ ಒತ್ತಾಯಿಸಬೇಕಾಗಿ ವಿನಂತಿ. ಸ್ಪರ್ಧೆಯಲ್ಲಿ ಭಾಗವಹಿಸುವ ಮತ್ತು ಸಮ್ಮೇಳನಕ್ಕೆ ಬರುವ ಮಕ್ಕಳ ಹೆಸರು ವಿಳಾಸವನ್ನು ತಾ. 25 5 '47 ರೊಳಗೆ ವ್ಯವಸ್ಥಾಪಕ ಮಂಡಳಿಯ ವಿಳಾಸಕ್ಕೆ– ಶ್ರೀಮತಿ ಎ. ಸುಂದರಮ್ಮ, ಬೀಡು ಹೌಸ್ [illegible] ರೋಡ್ ಉಡುಪಿ (ಇವರಿಗೆ) [illegible] ಮಕ್ಕಳಿಗೆ ಊಟದ ವ್ಯವಸ್ಥೆ ಮಾಡಲಾಗುವುದು ಎಂದು ಬಿ. [illegible] ಸೆಟ್ಟಿ ಇವರು ತಿಳಿಸುತ್ತಾರೆ.

ಕಾರ್ಕಳ: ಕಾಂತಾವರದಲ್ಲಿ ಕಳೆದ ತಾ. 28ರಂದು ಮಂಗಳೂರು ಸಬ್ ಡಿವಿಜನ್ ಪೋಸ್ಟಲ್ ಇನ್ಸ್‌ಪೆಕ್ಟರರಿಂದ ಪರೀಕ್ಷಾರ್ಥ ಪೋಸ್ಟ್ ಆಫೀಸು ತೆರೆಯಲ್ಪಟ್ಟಿದೆ.

ಕುಂದಾಪುರ: ಇಲ್ಲಿಯ ಬೋರ್ಡ್ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿದ್ದ ಶ್ರೀ [illegible] ಸೆಟ್ಟರಿಗೆ ಕಾರ್ಕಳಕ್ಕೆ ವರ್ಗವಾಗಿ ಆ ಸ್ಥಾನದಲ್ಲಿ ಶ್ರೀ ಬಿ. ವೆಂಕಟಕೃಷ್ಣ ಪುರಾಣಿಕರು ಬಂದಿರುತ್ತಾರೆ.

ಸುರತ್ಕಲ್: ಇಲ್ಲಿಯ ಮಿತ್ರ ಮಂಡಳಿಯವರ [illegible] ದಿನಗಳ ಹಿಂದೆ [illegible] ವಿದ್ಯಾರ್ಥಿ ಸಂಘದ ನೇತೃತ್ವದಲ್ಲಿ ವಿದ್ಯಾದಾಯಿ ಹೈಸ್ಕೂಲಿನ ನೂತನ [illegible] ಮಂದಿರದ ರಂಗಭೂಮಿಯಲ್ಲಿ [illegible] ಎಂಬ ಐತಿಹಾಸಿಕ ಸಂಗೀತ ನಾಟಕವನ್ನು ಆಡಿ ತೋರಿಸಿದರು. ಈ ನಾಟಕದ ಉತ್ಪನ್ನವು ಸದ್ರಿ ಹೈಸ್ಕೂಲಿನ ಸಹಾಯಾರ್ಥವಾಗಿ ಕೊಡಲ್ಪಟ್ಟಿತು. ಅದೇ ಸಮಯದಲ್ಲಿ ಕುಮಾರಿ ಯಮುನಾ ಮತ್ತು ಮಂಗಳೂರಿನ ಕುಮಾರಿ ದೇವಕಿ ರಾಣಿಯ ನರ್ತನವೂ ಶ್ರೀ ಎಚ್. ಗೋವಿಂದರಾವ್ ಇವರ ಶಾರೀರಿಕ ಸಾಮರ್ಥ್ಯ ಪ್ರದರ್ಶನಗಳೂ ಜನಮನರಂಜಕವಾಗಿ ನಡೆದವು.

ಮಣಿಪುರ: ಈ ಗ್ರಾಮದ ಎಡಸೀರ್ ಹಿಂದೂ ಎಲಿಮೆಂಟರಿ ಶಾಲೆಗೆ ಉಡುಪಿ ಪೋಸ್ಟಲ್ ಇನ್ಸ್‌ಪೆಕ್ಟರರೂ ಉಡುಪಿ ಸಬ್ ಪೋಸ್ಟ್ ಮಾಸ್ಟರರೂ ಚಿತ್ತೈಸಿ ಈ ಶಾಲೆಯಲ್ಲೇ ಪರೀಕ್ಷಾರ್ಥವಾಗಿ ಒಂದು ಬ್ರಾಂಚ್ ಪೋಸ್ಟಾಫೀಸನ್ನು ತೆರೆದಿರುವರು.

ಅಲೆವೂರು: ಇಲ್ಲಿಯ ಸುಬೋಧಿನಿ ಪ್ರಾಥಮಿಕ ಶಾಲೆಯ ವಾರ್ಷಿಕ ಉತ್ಸವವು ತಾ 3ರಂದು ಉಡುಪಿ ರೇಂಜಿನ ಶಾಲೆಗಳ ಡೆಪ್ಯುಟಿ ಇನ್ಸ್‌ಪೆಕ್ಟರರಾದ ಶ್ರೀ ವೈ. ಗೋಪಾಲ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಬಿ. ಭುಜಂಗರೈ, ಕುರುಕಾಲು ಗಣಪಯ್ಯ ಸೆಟ್ಟರೇ ಮೊದಲಾದವರು ಶಾಲೆಯ ಉನ್ನತಿ ಬಯಸಿ ಭಾಷಣವಿತ್ತರು.

ಉಳುಕು, ವಾತರೋಗ, ಹರಿವಾತ, ಸುಳುಕು, ನ್ಯೂರೈಟಿಸ್, ಸೆಡವು, ಅಥವಾ ಹಲ್ಲು ನೋವುಗಳಿಗೆ

ಖಾತರಿ ಗುಣವನ್ನು ಪಡೆಯಲು ಉಪಯೋಗಿಸಿರಿ



ನೋವಿರುವ ಕಡೆ ಬೆಚ್ಚಗೆ ಮಾಡಿ ಲಿಟಲ್ಸ್ ಒರಿಯಂಟಲ್ ಬಾಮ್ ದಿನಕ್ಕೆ ಮೂರಾವರ್ತಿ ಹಚ್ಚಿ 10–15 ನಿಮಿಷ ಚೆನ್ನಾಗಿ ತಿಕ್ಕಿರಿ. ನೋವು, ವ್ಯಥೆ ಅತಿ ಶೀಘ್ರ ಮಾಯವಾಗಿ ಬಿಡುವುದು.

ಇನ್ನೂ ನಡುನೋವು ಸೊಂಟ, ನೋವುತಲೆನೋವು, ಸಂಧಿವಾಯು ಕ್ರಿಮಿಕೀಟಗಳ ಕಡಿತ, ಶೈತ್ಯ, ನೆಗಡಿ, ಶೀತದ ಉಬ್ಬಸ, ಶ್ವಾಸಕಾಸ, ಗಂಟಲು ಕಟ್ಟುವುದು, ಕೆಮ್ಮು ಮೊದಲಾದುವನ್ನೂ ಗುಣಪಡಿಸುವುದು.

LITTLE'S
ORIENTAL BALM

ಇಂಡಿಯದ ಸುಪ್ರಸಿದ್ಧ ಅತ್ಯುತ್ತಮ ಮುಲಾಮು.

D.J.K.18

ವಾರದ ವಿಜ್ಞಾನ ವಾರ್ತೆ

ಅಮೇರಿಕನ್ನರ ಯಂತ್ರ ಪಿಪಾಸೆ

ಸುಖೋಪಭೋಗಿಗಳಾದ ಅಮೇರಿಕನ್ನರು ಶ್ರಮ ಕಡಿಮೆ ಮಾಡುವ ಯಂತ್ರ ವಿಧಾನಗಳನ್ನು ಕಡಿಮೆ ಮಾಡಲು ಅವಿಶ್ರಾಂತ ಸಂಶೋಧನೆ ನಡೆಸುತ್ತಾರೆ.

ಉದಾಹರಣೆಗಾಗಿ ನ್ಯೂಯೋರ್ಕಿನ ಒಂದು ಮೋಟಾರು ಗೆರೇಜಿಗೆ ನಿಮ್ಮ ಮೋಟಾರ್ ಕಾರನ್ನು ಒಯ್ದರೆ ಅಲ್ಲಿ ಕೇವಲ 3½ ಮಿನಿಟ್ಟುಗಳಲ್ಲಿ ಅದನ್ನು ಸಂಪೂರ್ಣ ತೊಳೆದು 'ಪೊಲಿಶ್' ಮಾಡಲ್ಪಡುವ 'ಸ್ವಕಾರ್ಯ' ಯಂತ್ರವಿದೆ.

ಅದೇ ರೀತಿ ಕೆಲಿಫೋರ್ನಿಯದಲ್ಲಿ ನೀವು ನೇರವಾಗಿ ನಿಮ್ಮ ಕಾರನ್ನು ಒಂದು ಬೇಂಕಿನ ಕಾರಕೂನನ ಕಿಟಿಕಿ ಬಳಿ ಒಯ್ದು ನಿಮ್ಮ ಹಣಕಾಸಿನ ಲೇವಾದೇವಿಗಳನ್ನು ಕಾರಿನಲ್ಲಿ ಕೂತಲ್ಲಿಂದಲೇ ಸರ್ವಹಿಸುವ ಏರ್ಪಾಡು ಇದೆ

ಯಂತ್ರ ಮಡಿ

ಅಮೇರಿಕದಲ್ಲೀಗ ಚಿಕ್ಕ ಮಡಿಮಾಡುವ ಯಂತ್ರಗಳು ಜಾರಿಗೆ ಬಂದಿವೆ. ಅವುಗಳಲ್ಲಿ ಕೊಳೆ ಬಟ್ಟೆಗಳನ್ನು ತುರುಕಿಸಿ ಯಂತ್ರವನ್ನು ಚಲಿಸಿಬಿಟ್ಟರೆ ಸಾಕು—ನಂತರದ ಅರ್ಧ ಗಂಟೆಯೊಳಗ ಬಟ್ಟೆಗಳೆಲ್ಲ ತೊಳೆಯಲ್ಪಟ್ಟು, ಮಡಿ ಮಾಡಲ್ಪಟ್ಟು, ಇಸ್ತ್ರಿ ಹಾಕಲ್ಪಟ್ಟು ಹೊರಬರುವವು ಅಷ್ಟು ಅವಧಿಯಲ್ಲಿ ನೀವು ಇನ್ನಿತರ ಕೆಲಸವನ್ನು ಮಾಡಿಕೊಂಡು ಬರಬಹುದು ಇದಕ್ಕೆ ತಗಲುವ ಖರ್ಚು ಪ್ರತಿ ಹತ್ತು ರಾತ್ಲ ಬಟ್ಟೆಗೆ ಒಂದು ರೂಪಾಯಿ ಮಾತ್ರ

ಮಡಿ ಮಾಡುವ ಅಂಗಡಿಯೊಂದರಲ್ಲಿ ಇಂತಹ 21 ಯಂತ್ರಗಳನ್ನಿಟ್ಟಿರುವರು. ಓರ್ವ ಯಜಮಾನಿ ಮತ್ತವಳ ಸಹಾಯಕರಾಗಿ ಇನ್ನಿರ್ವ ಸ್ತ್ರೀ ಕೆಲಸಗಾರರು—ಒಟ್ಟು ಮೂರು ಮಂದಿ—ಇವುಗಳನ್ನು ನಡಸುತ್ತಾರೆ ಬೆಳಿಗ್ಗೆ 8ರಿಂದ ರಾತ್ರಿ 8ರ ತನಕ ಇಲ್ಲಿ ಬಿಡುವಿಲ್ಲದ ಕೆಲಸ ನಡಯುತ್ತದೆ

ಗಿರಾಕಿಯು ತಂದ ಬಟ್ಟೆಯನ್ನು ತೂಕ ಮಾಡುವರು—ಕಾರಣ ಪ್ರತಿ ಯಂತ್ರದಲ್ಲಿ 10 ರಾತ್ಲುಗಳಿಗಿಂತ ಹೆಚ್ಚಿನ ಭಾರದ ಬಟ್ಟೆ ಹಿಡಿಯುವುದಿಲ್ಲ ಬಟ್ಟೆಗಳನ್ನು ಒಂದು ತೂತಿನಿಂದ ಯಂತ್ರದೊಳಗ ಸೇರಿಸಿ ಅವುಗಳು ಎಷ್ಟು ಸಮಯದ ತನಕ ಮಡಿಮಾಡಲ್ಪಡಬೇಕೆಂದು ನಿಶ್ಚಯಿಸಿ ಅದಕ್ಕನುಸಾರವಾಗಿ ಕಲವೊಂದು ಉಪಕರಣಗಳನ್ನು ಒತ್ತಿಬಿಟ್ಟುಬಿಡುವುದು ಬಣ್ಣದ ಬಟ್ಟೆಗಳನ್ನು ತೊಳೆಯಲು ಪ್ರತ್ಯೇಕ ಯಂತ್ರಗಳಿವೆ ಮಡಿಯಾಗುವ ಅವಧಿಗೆ ಗಿರಾಕಿ ಅಲ್ಲಿ ಹಾಜರಿರಬೇಕು ಹೊತ್ತಾದರೆ ಇತರ ಗಿರಾಕಿಗಳಿಗೆ ತೊಂದರೆಯಾಗುವುದರಿಂದ ಹೊತ್ತಾದುದಕ್ಕೆ ಹೆಚ್ಚಿನ ಬಾಡಿಗೆ ಕೊಡಬೇಕಾಗುವುದು

ಅಮಲು ಮಾಪಕ

ಮಿಚಿಗನ್ ನಗರದ ಪೋಲೀಸರ ಬಳಿ ಮದ್ಯಸೇವನೆ ಮಾಡಿದ ಮೋಟಾರ್ ಡ್ರೈವರರ ಪತ್ತೆಹಚ್ಚುವ ಒಂದು ಉಪಕರಣವಿದೆ. ಮಾರ್ಗದಲ್ಲಿ ನಿಂತಾಗಲೇ ಇದನ್ನು ಉಪಯೋಗಿಸಿ ಕುಡಿತವನ್ನು ಕಂಡುಹಿಡಿಯಬಹುದು ಈ ಉಪಕರಣವೆಂದರೆ ಒಂದು ತೆಳ್ಳಗಿನ ರಬ್ಬರ್ ಚೀಲ. ಅದನ್ನು ಕುಡಿದವನು ಊದಿದರೆ ಅವನ ಶ್ವಾಸದಲ್ಲಿರುವ ಅಮಲು ದ್ರಾವಕದ ಕಣಗಳು ಅದರಲ್ಲಿನ ಕೆಲವು ರಾಸಾಯನಿಕ ಪದಾರ್ಥಗಳಲ್ಲಿ ಕಾಣಿಸಿಕೊಳ್ಳುವವು.

ಮದ್ಯ ಸೇವನೆ ಮಾಡದ ಡ್ರೈವರರಿಗೆ ಇದರ ಪ್ರಯೋಗದಿಂದ ಭಯವಿಲ್ಲ. 'ಇದನ್ನು ಊದಲಿಕೆ ತಿರಸ್ಕರಿಸುವವನು ಕುಡಿದಿದ್ದಾನೆಂದು ಪ್ರತ್ಯೇಕ ಕಂಡುಹಿಡಿಯುವ' ಕೆಲಸವಿಲ್ಲ ಮಿಚಿಗನಿನ ಪೋಲೀಸ್ ವಾಹನಗಳೆಲ್ಲೆಲ್ಲ ಒಂದೊಂದು ಇಂತಹ ಉಪಕರಣವಿರುವುದು ಸಂದೇಹಕ್ಕೊಳಗಾದ ಡ್ರೈವರರನ್ನು ಕೂಡಲೇ ಪರೀಕ್ಷೆಗೊಳಮಾಡಿ ತಪ್ಪು ಕಂಡುಹಿಡಿಯುವರು.

ಯಂತ್ರ ಬೀಗ

ಸಂಯುಕ್ತ ಅಮೇರಿಕದ ಎಲ್ಲಾ ಪ್ರಾಮುಖ್ಯ ರೈಲ್ವೇ ಸ್ಟೇಶನುಗಳಲ್ಲಿ ಪ್ರಯಾಣಿಕರ ಸಾಮಾನುಗಳನ್ನು ಇಡುವ ಯಂತ್ರ ಬೀಗದ ಪೆಟ್ಟಿಗೆಗಳಿವೆ. ಇವುಗಳಲ್ಲಿ 24 ತಾಸುಗಳ ತನಕ ಪ್ರಯಾಣಿಕರು ತಮ್ಮ ಸಾಮಾನುಗಳನ್ನಿಡಬಹುದು ಸಾಮಾನುಗಳನ್ನಿಟ್ಟಕೂಡಲೇ ನೀವು ಆ ಪೆಟ್ಟಿಗೆಗೆ ಬೀಗಹಾಕಿ ಬೀಗದ ಕೈಯನ್ನೊಯ್ಯಬೇಕು ಇದರ ಬಾಗಿಲು ತೆರೆದರೆ ಬೀಗದ ಕೈಯನ್ನು ತೆಗೆಯಲು ಬರುವುದಿಲ್ಲ 24 ಗಂಟೆಗಳ ಅಂತ್ಯದಲ್ಲಿ ಈ ಪೆಟ್ಟಿಗೆಗಳ ಬೀಗವು ತನ್ನಷ್ಟಕ್ಕೆ ತೆರೆಯಲ್ಪಡುವ ಒಂದು ಗಡಿಯಾರ ನಮೂನೆಯ ಯಂತ್ರ ಜೋಡನೆಯಿದರಲ್ಲಿದೆ ಆ ಸಮಯಕ್ಕೆ ಸಾಮಾನಿನ ಮಾಲಕರು ಬಾರದಿದ್ದಲ್ಲಿ ರೈಲ್ವೇಯ ಕೆಲಸಗಾರರು ಅದನ್ನು ತೆಗೆದು ಹೊತ್ತಾದುದಕ್ಕೆ ಪ್ರತ್ಯೇಕ ಬಾಡಿಗೆ ತೆಗೆದುಕೊಳ್ಳುತ್ತಾರೆ

ಎಟಂ ವಿಷಕ್ಕೆ ಮದ್ದು

ಎಟಂ ಬಾಂಬಿನ ದುಷ್ಪರಿಣಾಮವು ಮಾನವ ಶರೀರದ ಮೇಲೂ ಮುಂದಿನ ಪೀಳಿಗೆಯ ಮೇಲೂ ಉಂಟಾಗುವುದೆಂದು ಇದುತನಕ ಹೇಳಲಾಗಿತ್ತಷ್ಟೆ ಈಗ ಚಿಕಾಗೋ ನಗರದ ಇರ್ವ ವಿಜ್ಞಾನಿಗಳು ಎಟಂ ಶಕ್ತಿಯ ದುಷ್ಪರಿಣಾಮಕ್ಕೆ ಪ್ರತಿಕಾರಕ ಔಷಧಿಯೊಂದನ್ನು ಕಂಡುಹಿಡಿದಿರುವರಾಗಿ ಸಾರಿರುವರು ಈ ಔಷಧಿಯು ಕೈಗಾರಿಕೆ ನಸ ತಯಾರಿಕೆಯಲ್ಲಿ ಹೆಚ್ಚಾಗಿ ಉಪಯೋಗಿಸಲ್ಪಡುವ ಒಂದು ನೀಲ ಬಣ್ಣದ ರಸಾಯನವಾಗಿರುತ್ತದೆಯಂತೆ. ಎಟಂ ಶಕ್ತಿಯನ್ನು ತಯಾರಿಸುವ ಕೆಲಸಗಾರರ ರಕ್ತವು ತೆಳ್ಳಗಾಗುತ್ತ ಜೀವಕ್ಕೆ ಗಂಡಾಂತರವನ್ನುಂಟು ಮಾಡುವುದನ್ನು ಈ ರಸಾಯನಿಕವು ತಡೆಯುತ್ತದೆ.

ಪೆನಿಸಿಲಿನ್ ಗೊಬ್ಬರ

ಸಂಯುಕ್ತ ಅಮೇರಿಕದ ವಿಜ್ಞಾನಿಗಳು ಪೆನಿಸಿಲಿನ್ ತಯಾರಿಯನ್ನು ವೇಗಗೊಳಿಸುತ್ತಿದ್ದಾರೆ. ಕೃಷಿಗಾರಿಕೆಯಲ್ಲಿ ಇದನ್ನು ಹೇಗೆ ಉಪಯೋಗಿಸದ್ದೊಬುದರ ಕುರಿತೂ ಅವರು ಪರಿಶೋಧನೆ ನಡೆಸುತ್ತಲಿರುವರು ಇದಕ್ಕೆ ಕಾರಣವಿದೆ ವರ್ಷಕ್ಕೆ 20 ಲಕ್ಷ ಡಾಲರ್ ಬೆಲೆಯ ಕೃಷಿ ಉತ್ಪತ್ತಿ ವಸ್ತುಗಳನ್ನು 100 ಲಕ್ಷ ಡಾಲರ್ ಮೌಲ್ಯದ ಪೆನಿಸಿಲಿನನ್ನು ತಯಾರಿಸಲು ಉಪಯೋಗಿಸುವರು ಆದುದರಿಂದ ಈ ಸಂಜೀವಿನಿ ಔಷಧಿ ಕೂಡ ಕೃಷಿಗಳ ಮೇಲೆ ಸತ್ಪರಿಣಾಮಕಾರಿಯಾಗಬಹುದೆಂದು ಊಹಿಸಲಾಗಿದೆ ದನಗಳ ಒಂದು ತರದ ಹುಣ್ಣುಗಳಿಗೆ ಇದು ಅತ್ಯಂತ ಪರಿಣಾಮಕಾರಿಯಾಗುವುದಂತೆ ಪೆನಿಸಿಲಿನ್ ಔಷಧಿಯು ಶಿಘ್ರ ಗುಣಕಾರಿ ಮಾತ್ರವಲ್ಲ ಹಚ್ಚಿದಾಗ ಉರಿಯುವುದಿಲ್ಲ

ಗಾಳಿಯಿಂದ ಮದ್ಯ ತಯಾರಿ

ಭೂಗರ್ಭದಲ್ಲಿ [illegible] ಗಳಲ್ಲಿ [illegible] ವಾತಾವರಣದಲ್ಲಿ [illegible] ವಿವಿಧ [illegible] ಇವುಗಳಿಂದ [illegible] ವಿಜ್ಞಾನಿಗಳು [illegible] ಪದ್ಧತಿಗಳು [illegible]

ಡಾ "80 ರಷ್ಟು ಕಮ್ಮಿಬೀಳುತ್ತದೆಯೆಂದು ಅವರ ಹೇಳಿಕೆ

ಗ್ರಹಯಾನ

ಬ್ರಿಟನಿನ ವಿಜ್ಞಾನಿಗಳು ತಮ್ಮ ಗ್ರಹ ಪ್ರಯಾಣದ ಯೋಜನೆಗಳನ್ನು ಮುಂದೊತ್ತುತಿದ್ದಾರೆ ಚಂದ್ರಲೋಕಕ್ಕೂ ಬುಧಗ್ರಹಕ್ಕೂ ಪ್ರಯಾಣವು ಸಾಧ್ಯವೆಂದು ಈಗಾಗಲೇ ಅನೇಕ ಖಗೋಳ ವಿಜ್ಞಾನಿಗಳು ಪ್ರಯೋಗ ಮೂಲಕ ಕಂಡುಹಿಡಿದಿರುವರು. ಆದರೆ ಇದಕ್ಕೆ ಬೇಕಾಗುವ ವಿಶೇಷ ಮಾದರಿಯ ವಾಹನವು ಇನ್ನೂ ತಯಾರಿಯಲ್ಲಿಯೇ ಇ

ಬ್ರಿಟಿಷ್ ಸಾಮ್ರಾಜ್ಯದ ಉತ್ತರಾಧಿಕಾರಿ ಅಮೇರಿಕಾ

ಅಮೇರಿಕನ್ ಪತ್ರಿಕೋದ್ಯೋಗಿಯ ಜಂಬ

ಅಮೇರಿಕದ ಪ್ರಬಲವಾದ ಹರ್ಸ್ಟ್ ಪತ್ರಿಕಾ ಮಾಲಿಕೆಯ ವಿದೇಶಿ ಬಾತ್ಮಿದಾರರಾದ ಕಾರ್ಲ್ ವ್ರೋನ್ ವಿಗಾಂಡ ಅವರು 'ಬ್ರಿಟನ್ನು ತ್ವರಿತವಾಗಿ ನಶಿಸುತ್ತದ' ಎಂದು ಅಭಿ[illegible]

[illegible] ಬ್ರಿಟಿಷ್ ಸಾಮ್ರಾಜ್ಯವು ಇತಿಹಾಸದ [illegible] ಸೇರುವುದೆಂದ ಅವರು [illegible]

[illegible] ಗಳಲ್ಲಿ [illegible] ಇಂ[illegible] ಕಾಪಾಡಲ್ಪಟ್ಟಿದೆ [illegible] ಬ್ರಿಟಿಷ್ ಸಾಮ್ರಾಜ್ಯವು ಮಾತ್ರ [illegible]

ಕಳೆದೆರಡು ಶತಮಾನಗಳಿಂದ ಜಗತ್ತಿನಲ್ಲಿ ತನ್ನ ದೌಲತ್ತು, ಶಕ್ತಿ, ಆಡಂಬರಗಳಿಂದ ಮೆರೆದ ಬ್ರಿಟಿಷ್ ಸಾಮ್ರಾಜ್ಯವು ಕೊನೆಗೊಳುತ್ತಿದೆ

1000 ವರ್ಷಗಳ ಹಿಂದೆ [illegible] ಸಾಮ್ರಾಜ್ಯದ ನಂತರ [illegible] ಸಾಮ್ರಾಜ್ಯವೇ [illegible] ಸಾಮ್ರಾಜ್ಯಶಾಹಿ [illegible] ಸಾ[illegible]ಗಿದೆ

ಮುತ್ಸದ್ದಿಗಳ ತಪ್ಪು

ಕಳೆದ 59 ವರ್ಷಗಳಲ್ಲಿ ಬ್ರಿಟನಿನ ರಾಜಕೀಯ [illegible] ಗಳು ಮಾಡಿದ ತಪ್ಪುಗಳ [illegible] ಇಂದು ಕಾಣ [illegible] ಯುದ್ಧಗಳಿಂದ ಬಳಲಿ ಬ್ರಿಟಿಷ್ ಜನಾಂಗ ನಶಿಸಿದೆ ಅಲ್ಲಿಯ ಜನಸಂಖ್ಯೆ ಕುಗ್ಗುತ್ತಿದೆ. ಅಲ್ಲಿನ ರಾಜಕೀಯ ಮತ್ತು ಆರ್ಥಿಕ ತತ್ವಗಳಿಗೆ ರೋಗಗಳುಂಟಾಗಿವೆ"

"ರಕ್ತ ಸಂಬಂಧದಲ್ಲೂ, ಭಾಷೆಯಲ್ಲೂ, ರಾಜಕೀಯ ಮತ್ತು ಸಾಂಸ್ಕೃತಿಕ ಸಮಾನತೆಯಲ್ಲೂ ಇದುತನಕ ಬ್ರಿಟನ್ನು ವಹಿಸಿದ ಲೋಕ ನಾಯಕತ್ವಕ್ಕೆ ಅಮೇರಿಕವೇ ಸಹಜವಾದ ಹಕ್ಕುದಾರಿಯಾಗಿರುತ್ತದೆ"

ಈ ಕೆಯು ಅತ್ಯಂತ ಸಮರ್ಥಳೂ ಶುಭ್ರಳೂ ಮತ್ತು ಮನೋಹರಳು ಆಗಿರುವಳು



ಸಮರ್ಥತೆ ಬಲ, ಶುಭ್ರತೆ ಮತ್ತು ಮನೋಹರತೆ ಇವುಗಳನ್ನು ಸುಭದ್ರ ಮತ್ತು ಸುಲಭವಾದ ಈ ರೀತಿಯಲ್ಲಿ ನಿಮ್ಮದಾಗಿ ಮಾಡಿಕೊಳ್ಳಬಹುದು ವನಸ್ಪತಿ ಮೂಲಗಳಿಂದ ಸಿದ್ಧವಾಗುವ, ಬ್ಯಾಲ್ ಬೀನ್ಸ್, ಎಂಬ ಈ ಶಕ್ತಿಕಾರಕ ಬೇದಿ ಮದ್ದನ್ನು ಕ್ರಮವಾಗಿ ಸೇವಿಸಿದಲ್ಲಿ ರಕ್ತದಿಂದ ವಿಷವಸ್ತುಗಳು ವಿಸರ್ಜನೆಯಾಗಿ, ಜೀರ್ಣಶಕ್ತಿಯು ವೃದ್ಧಿಯಾಗಿ ನಿಮ್ಮ ಅಂತರ್ಯ ಆರೋಗ್ಯವು ಉತ್ತಮಗೊಳ್ಳುವುದು,

ಶುಭ್ರ ಆರೋಗ್ಯದಲ್ಲಿರಬೇಕಾದರೆ, ನಿಮಗೆ ಬ್ಯಾಲ್ ಬೀನ್ಸ್‌ಗಳ ಅವಶ್ಯವಿದೆ ಎಂದು ಸದಾ ಜ್ಞಾಪಕದಲ್ಲಿಡಿ



ಮಲಗುವ ಮುನ್ನ ಶುದ್ಧ ವನಸ್ಪತಿಯಾದ

BILE BEANS

ಬ್ಯಾಲ್ ಬೀನ್ಸ್‌ಗಳನ್ನು ನಿತ್ಯಲೂ ಸೇವಿಸಿ

ಮಾರಾಟಕ್ಕಿದೆ

ಉತ್ತಮ ತರಗತಿಯ ಎರಡು ಕುದುರೆಗಾಡಿಗಳೂ, ಒಂದು ದೊಡ್ಡ ಕುದುರೆಯೂ ಮಾರಾಟಕ್ಕಿದೆ ಕೊಂಡುಕೊಳ್ಳಲು ಬಯಸುವವರು ಸ್ವತಹ ಉಡ್ಪಿಗೆ ಬಂದು ಪರೀಕ್ಷಿಸಬಹುದು. ರೂಪಾಯಿ 1500 ವ ಅದರ ಸಮೀಪದ ಕ್ರಯ ಕೇಳಿಕೆಯನ್ನು ಗಮನಿಸಲಾಗುವದು ಬೇಕಾದವರು ಸ್ವತಹ ಯಾ ಪತ್ರದ್ವಾರ ಈ ತಿಂಗಳೊಳಗೆ ಈ ಕೆಳಗಿನವರೊಡನೆ ವಿಚಾರಿಸಬಹುದು.

Deputy Manager
M/S Koohikar Brothers.
Udipi

ಜಿಲ್ಲಾ ಪರಿಚಯ

ನಾಗರೀಕ ವ್ಯವಹಾರ

ನಮ್ಮ ನಗರವು, ಸ್ವಲ್ಪ ಭಾಗಗಳಲ್ಲಿ ಮಾತ್ರ ಸುಂದರವಾಗಿಯೂ ಚೊಕ್ಕಟವಾಗಿ ಯೂ ಕಂಡರೂ ಇದರ ಹೆಚ್ಚಿನ ನಿವಾಸ ಪ್ರದೇಶಗಳೂ ಮಾರ್ಗ ಚರಂಡಿಗಳೂ, ಉಪಮಾರ್ಗ, ಒಳಮಾರ್ಗಗಳೂ, ಹಿತ್ತಲು ತೋಟಗಳೂ, ವ್ಯಾಪಾರಿ ಸ್ಥಳಗಳೂ, ಶಾಲಾವಠಾರಗಳೂ ಕೂಡ ಕಸ ಕೊಳೆಗಳಿಂದಲೂ, ದುರ್ವಾಸನೆಯಿಂದಲೂ ಕೂಡಿರುವುದು ಗಮನಕ್ಕೆ ಬರುತ್ತದೆ.

ಕಸ ಕೊಳ್ಚೆಗಳನ್ನು ಮಾರ್ಗದ ಬದಿಯಲ್ಲಿ ಬಿಸಾಡುವುದು ನಮ್ಮಲ್ಲಿ ಹಲವು ನಾಗರೀಕರಿಗೊಂದು ಅನುಕೂಲದ ಅಭ್ಯಾಸವಾಗಿದೆ. ಯೋಗ್ಯ ಕಸ ಡಬ್ಬಿಗಳ ಅಭಾವವೂ ಇದಕ್ಕೊಂದು ಕಾರಣ. ಅನೇಕ ಸ್ಥಳಗಳಲ್ಲಿ ಇದನ್ನು ಇಡಲು ಬೇಕಾದ ಸ್ಥಳವೂ ಇರುವುದಿಲ್ಲ. ಕಸ, ಕೊಳೆ, ಕೆಸರಿನಿಂದಲೂ, ಹರಿಯದೆ ನಿಲ್ಲುವ ನೀರು ದಾಸ್ತಾನಿಸಿಂದಲೂ, ಮಲ ಮೂತ್ರಾದಿಗಳನ್ನು ಮಾಡುವ ಸ್ಥಳಗಳು ಸರಿಯಾಗಿ ತೊಳೆಯದಿರುವುದರಿಂದಲೂ ನಮ್ಮ ನಗರವು ಅತ್ಯಂತ ಹಾನಿಕಾರಕವೂ ತ್ರಾಸದಾಯಕವೂ ಆದ ನೊಳ್ಳೆಗಳಿಗೆ ಸುಖಾಶ್ರಯ ದೊರೆವಂತಾಗಿದೆ. ಪರಿಣಾಮವಾಗಿ ಸಾಂಕ್ರಾಮಿಕ ವ್ಯಾಧಿಗಳೂ ಅಪರಿಹಾರ್ಯವೆನಿಸುವ ಆನಕಾಲಿನ ರೋಗವೂ ಉಂಟಾಗಿ ನಗರಕ್ಕೆ ಶಾಶ್ವತ ದುಃಖ ಭಯ, ಕಳವಳಗಳನ್ನು ತಂದಿಟ್ಟಿದೆ. ಆನಕಾಲಿನ ರೋಗವು ಮಣ್ಣಿಲ್ಲದ ವ್ಯಾಧಿಯೆಂಬುದನ್ನು ಇನ್ನಾದರೂ ನಾಗರೀಕರು ಗಣಿಸಿಗೆ ತಂದುಕೊಂಡು ತಮ್ಮ ಸ್ವಚ್ಛಮೂತ್ರಾಲಿನ ಮಾನಸ್ಥಾನಗಳ ಸ್ವಚ್ಛತೆಯ ಕುರಿತು ಗಮನ ತೆಗೆದುಕೊಳ್ಳಬೇಕಾದುದು ಅತ್ಯಾವಶ್ಯಕ.

ಈ ಕುರಿತು ನಗರಾಡಳಿತವವರೂ, ಆರೋಗ್ಯ ಖಾತೆಯವರೂ, ಸರಕಾರವೂ ಅಲ್ಲದೆ ಇತರ ಸಾರ್ವಜನಿಕ ಸೇವಾಸಂಸ್ಥೆಯವರು ಪ್ರಚಾರ ಕೈಕೊಳ್ಳುವುದರಿಂದ ಪರಿಸ್ಥಿತಿಯನ್ನು ತುಂಬಾ ಸುಧಾರಿಸಬಹುದು. ಆಗಾಗ್ಗ ಸಭೆಗಳನ್ನೂ, ಪರಿಷತ್ತುಗಳನ್ನೂ ಸೇರಿಸಿಯೂ, ಚಲಚಿತ್ರ, ಗೋಡೆ ಚಿತ್ರಗಳ ಮೂಲಕವೂ, ಪುಸ್ತಕಗಳ ಮೂಲಕವೂ ಆರೋಗ್ಯ ರಕ್ಷಣೆಯ ಪ್ರಾಮುಖ್ಯತೆಯನ್ನು ಜನತೆಯ ಮನಸ್ಸಿನ ಮೇಲೆ ಒತ್ತಬಹುದು.

ಬಡ ಜನರು, ಕೆಲಸಗಾರರು ಈ ಕುರಿತು ಇನ್ನಷ್ಟು ಹೆಚ್ಚಿನ ಜಾಗ್ರತೆಗಳನ್ನು ವಹಿಸಬೇಕು. ಕುದಿಸಿದ ನೀರನ್ನೇ ಕುಡಿಯುವುದು, ತಮ್ಮ ಬಿಡು ಸಮುದಾಯಗಳಲ್ಲಿ ಮನೆಯ ಹೊರ ಒಳ ಪ್ರದೇಶಗಳನ್ನು ನಿರ್ಮಲ ಮಾಡುವುದು, ತಮ್ಮ ಮಕ್ಕಳಲ್ಲಿ ನಿರ್ಮಲ ಅಭ್ಯಾಸಗಳನ್ನು ಬೆಳೆಸುವುದು, ಸ್ವಲ್ಪ ಕಷ್ಟವಟ್ಟಾದರೂ ಸೊಳ್ಳೆ ಪರದೆಗಳನ್ನು ತಯಾರಿಸಿಕೊಳ್ಳುವುದು. ಇವೇ ಮೊದಲಾದುವುಗಳನ್ನು ಕರ್ತವ್ಯವೆಂದು ತಿಳಿದು ನಿರ್ವಹಿಸುವುದು ಸ್ವಂತದ ಆರೋಗ್ಯ ದೃಷ್ಟಿಯಿಂದ ಮಹತ್ವದ ವಿಷಯ. ಕಾರಣ ಬಡ ಜನರು ವ್ಯಾಧಿರಹಿತರಾಗಿದ್ದರೇನೇ ಅವರ ಸಂಸಾರ ಜೀವನವು ಸುಗಮವಾಗಿ ಸಾಗೀತು.

ಬಾಂಧವ್ಯದ ಕರಾರು

ಮಂಗಳೂರಲ್ಲಿ ತಾ 4–5–'47ರಂದು ಶ್ರೀ ಎಚ್. ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ನಮ್ಮ ಜಿಲ್ಲೆಯನ್ನು ಕೇರಳಕ್ಕೆ ಕೂಡಿಸಲು ಮಾಡುವ ಯತ್ನಗಳನ್ನು ವಿರೋಧಿಸಿ ನಮ್ಮ ಜಿಲ್ಲೆಯು ಕನ್ನಡ ಪ್ರಾಂತ್ಯಕ್ಕೇ ಸೇರಬಯಸುವುದೆಂದೂ ಸ್ಪಷ್ಟಪಡಿಸುವ ನಿರ್ಣಯ ಮಾಡಲಾಗಿದೆ. ಇದಕ್ಕೆ ಒಪ್ಪಿಗೆ ಇದ್ದವರು ತಮ್ಮ ಹೆಸರು, ವೃತ್ತಿ, ವಿಳಾಸ ಮನೆಮಾತು ಇವನ್ನು ಒಂದು ಕಾರ್ಡಿನಲ್ಲಿ ಬರೆದು ಸಹಿಹಾಕಿ

ಶ್ರೀ ಎಸ್. ಮುಕುಂದರಾವ್, ವಿಶ್ವೋದಯ ಸಂಪಾದಕರು, ಮಂಗಳೂರು ಇವರಿಗೆ ಈ ತಿಂಗಳ ಅಂತ್ಯದೊಳಗೆ ಕಳುಹಿಸಬೇಕೆಂದು ವಿನಂತಿಯಿದೆ. ಅನೇಕರು ಒಟ್ಟಾಗಿ ಒಂದೇ ಪತ್ರದಲ್ಲಿ ತಮ್ಮ ಒಪ್ಪಿಗೆಯನ್ನು ಬರೆದರೂ ಆದೀತು.

ಮೇಲ್ಕಂಡ ಸಭೆಯ ನಿರ್ಣಯದ ಸಾರಾಂಶ ಹೀಗಿದೆ: ದಕ್ಷಿಣ ಉತ್ತರ ಕನ್ನಡಗಳು ಒಂದೇ ಜಿಲ್ಲೆಯ ಎರಡು ಭಾಗಗಳು. ಇವು ಕನ್ನಡ ಪ್ರಾಂತ್ಯಕ್ಕೆ ಸೇರಿಸಲ್ಪಡಲು ಪ್ರಯತ್ನಗಳಾಗುತ್ತಿವೆ. ಇದನ್ನು ಅಲಕ್ಷಿಸಿ ಐಕ್ಯ ಕೇರಳ ಪರಿಷತ್ತಾಧ್ಯಕ್ಷ ಶ್ರೀ ಕೇಳಪ್ಪನ್ ಅವರು ಈ ಜಿಲ್ಲೆಗಳನ್ನು ತಮ್ಮ ಭಾವೀ ಭಾಷಾ ಪ್ರಾಂತ್ಯಕ್ಕೆ ಸೇರಿಸುವ ಯೋಜನೆ ನಿರೂಪಿಸಿರುವುದು ಮತ್ತು ಮದ್ರಾಸಿನ 'ಹಿಂದೂ' ಪತ್ರಿಕೆ ಅದಕ್ಕೆ ಸಮರ್ಥನೆ ಇತ್ತುದು ಆಶ್ಚರ್ಯದ ಸಂಗತಿ. ಗೋಕರ್ಣದಿಂದ ಉಡುಪಿಯ ಕಲ್ಯಾಣಪುರ ನದಿಯವರೆಗೆ ಶುದ್ಧ ಕನ್ನಡ ಮಾತನಾಡುವ ಪ್ರದೇಶ. ಅಲ್ಲಿಂದ ಕಾಸರಗೋಡಿನ ಚಂದ್ರಗಿರಿ ನದಿ ವರೆಗಿನ ಪ್ರದೇಶದಲ್ಲಿ ತುಳು, ಕೊಂಕಣಿ, ಮನೆಮಾತಾಗಿದ್ದರೂ ಕನ್ನಡ ಸಂಸ್ಕೃತಿಯೇ ಈ ಕಡೆಗಳಲ್ಲಿ ಬೆಳೆಸಲ್ಪಡುತ್ತಿದೆ. [illegible] ತುಳು, ಕೊಂಕಣಿ [illegible] ಕನ್ನಡ ಸಾಹಿತ್ಯ ವ್ಯವಸ್ಥೆಯವರನ್ನೆ ಮಾಡಿ [illegible] ಕರ್ನಾಟಕದ ಜನ [illegible] ತುಳು ಕನ್ನಡಗಳೆರಡೂ ನಮ್ಮ ಜೀವನ ಕನ್ನಡದೊಡನೆ [illegible] ನಮ್ಮನ್ನು ಕೇರಳಕ್ಕೆ ಸೇರಿಸುವ ಪ್ರಯತ್ನವನ್ನು ನಾವು ವಿರೋಧಿಸುತ್ತೇವೆ.

ಮಜೂರ ನ್ಯಾಯದ ತೀರ್ಪು

ಇಲ್ಲಿಯ [illegible] ಮಜೂರರೊಳಗಿನ [illegible] ತೀರ್ಮಾನಿಸಲು ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಮೊಕರೂರಾದ ಇತ್ಯರ್ಥ ಸಮಿತಿಯು ತನ್ನ ತೀರ್ಪನ್ನು ಕೊಟ್ಟಿದೆ. ಮೂಲ ಮಜೂರಿಯಲ್ಲಿ 8 ಆಣೆ ಹೆಚ್ಚಿಸಬೇಕೆಂಬ ಮಜೂರರ ಕೇಳಿಕೆಯು ಕಾಲ ಮುಂಚಿನವಾದುದೆಂಬ ಈ ಸಮಿತಿಯ ಹೆಚ್ಚಿನ ಸದಸ್ಯರು ಅಭಿಪ್ರಾಯ ಪಡುತ್ತಾರೆ. ಕಲ್ಲಿಕೋಟೆಯ ಜೀವನ ಖರ್ಚಿನ ಪ್ರಮಾಣದ ಆಧಾರದಿಂದ ಪ್ರತಿ ತಿಂಗಳು ತುಟ್ಟಿಭತ್ತೆಯನ್ನು ಕೊಡುವುದು ತೃಪ್ತಿಕರ ವಿಧಾನ. ಇದರೊಂದಿಗೆ ಮೂಲ ಮಜೂರಿಯ ಕನಿಷ್ಠ ಪ್ರಮಾಣವು 1934ರ ಸೆಪ್ಟಂಬರ್ ತಿಂಗಳಲ್ಲಿದ್ದಂತೆ ಪಡೆಯಲೂ ಮಜೂರರು ಬಾಧ್ಯಸ್ಥರಾಗಿರುವರು (ಗಂಡಸರಿಗೆ 6 ಆಣೆ, ಹೆಂಗಸರಿಗೆ 5 ಆಣೆ, ಮಕ್ಕಳಿಗೆ 4 ಆಣೆ) 1945–46ನೇ ವರ್ಷಕ್ಕೆ ಶೇಕಡಾ 16⅔ರಷ್ಟು ಬೋನಸ್ಸನ್ನು ಹಂಚುವಂತೆ ಸಮಿತಿಯು ಶಿಫಾರಸು ಮಾಡಿರುತ್ತದೆ. ಇದನ್ನು ಇದೇ ಮೇ 31ರೊಳಗೆ ಹಂಚಬೇಕು. 1946ನೇ ಜೂನ್ 30ರೊಳಗಿನ ವರ್ಷದಲ್ಲಿ ಶೇಕಡಾ 75ರಷ್ಟು ದಿನ ಕೆಲಸಕ್ಕೆ ಹಾಜರಾದವರಿಗೆ ಮಾತ್ರ ಇದು ಸಿಗಬೇಕು. ಮಾತ್ರ ಅಂಥವರು ಕಳೆದ ಮಾರ್ಚ್ 17ರ ಮುಷ್ಕರದ ನಂತರ ಕೆಲಸಕ್ಕೆ ಪುನಃ ಸೇರಿದವರಾಗಿರಬೇಕು. ಮುಷ್ಕರ ಮಾಡಿದ ಅವಧಿಯ ಪರಿಹಾರ ಕೊಡುವುದನಶ್ಯವಿಲ್ಲವೆಂದು ಸಮಿತಿಯು ಅಭಿಪ್ರಾಯ ಪಡುತ್ತದೆ.

ಹೊಸ ತರಗತಿ: ಸ್ಥಳೀಯ ಕೆನರಾ [illegible] ಇದೇ ಬರುವ ಜೂನ್ [illegible] ಅನುಮತಿ ದೊರೆತಿರುವುದು. ಇಲ್ಲಿಗೆ ಈ ಹೊಸ ಕಾಲೇಜು 1ನೇ [illegible] ಫಸ್ಟ್ ಫಾರ್ಮ್ [illegible] ಹೈಸ್ಕೂಲ್ [illegible]

ಉಳುಕು, ವಾತರೋಗ, ಹರಿವಾತ,
ಸುಳುಕು, ನ್ಯೂರೈಟಿಸ್, ಸೆಡವು, ಅಥವಾ
ಹಲ್ಲು ನೋವುಗಳಿಗೆ

ಖಾತರಿ ಗುಣವನ್ನು
ಪಡೆಯಲು
ಉಪಯೋಗಿಸಿರಿ

ನೋವಿರುವ ಕಡೆ ಬೆಚ್ಚಗೆ ಮಾಡಿ ಅಟಿಲ್ಸ್ ಓರಿಯಂಟಲ್ ಬಾಮ್ ದಿನಕ್ಕೆ ಮೂರಾವರ್ತಿ ಹಚ್ಚಿ 10–15 ನಿಮಿಷ ಚೆನ್ನಾಗಿ ತಿಕ್ಕಿರಿ. ನೋವು, ವ್ರಣ ಅತಿ ಶೀಘ್ರ ವಾಸಿಯಾಗಿ ಬಿಡುವುದು

ಇನ್ನೂ
ನಡುನೋವು ಸೊಂಟ ನೋವುತಲೆನೋವು, ಸಂಧಿವಾಯು ಕ್ರಿಮಿಕೀಟಗಳ ಕಡಿತ, ಶೈತ್ಯ, ನೆಗಡಿ, ಶೀತದ ಉಬ್ಬಸ, ಶ್ವಾಸಕಾಸ, ಗಂಟಲು ಕಟ್ಟುವುದು, ಕೆಮ್ಮು ಮೊದಲಾದುವನ್ನೂ ಗುಣಪಡಿಸುವುದು.

LITTLE'S
ORIENTAL BALM
ಇಂಡಿಯದ ಸುಪ್ರಸಿದ್ಧ
ಅತ್ಯುತ್ತಮ ಮುಲಾಮು.
DJK 18

ಶೀರೂರು: "ಈಗಿನ ಪ್ರಜಾ ಸರಕಾರದವರು ಅಕ್ಕಿಮುಡಿಗೆ ಮತ್ತು ಬತ್ತಮುಡಿಗೆ ಬೋನಸ್ಸು ಕೊಡುವುದಾಗಿ ಪ್ರಚಾರಮಾಡಿದಂತೆ ಎಲ್ಲಾ ಗ್ರಾಮಗಳಿಗೆ ಅದನ್ನು ಹಂಚಿದ್ದು ನಮ್ಮ ಗ್ರಾಮಕ್ಕೆ ಮಾತ್ರ ಏಕೆ ಕೊಡಲಿಲ್ಲ ಅದ್ದರಿಂದ ತಾವು ಈ ವಿಷಯವನ್ನು ದಯವಿಟ್ಟು ಪ್ರಕಟಿಸಬೇಕಾಗಿ ವಿನಂತಿ"— ಒಂದು ಬಾತ್ಮಿ.

ಉಡುಪಿ

ದ. ಕ. ಜಿಲ್ಲಾ ಮಕ್ಕಳ ಸಮ್ಮೇಳನ: ಇದು ಎರಡನೆಯ ಸಲಕ್ಕೆ ಇದೇ ಮೇ ತಿಂಗಳ ಕೊನೆಯ ವಾರದಲ್ಲಿ ಉಡುಪೀ ಕ್ಷೇತ್ರದಲ್ಲಿ ಕೂಡಲಿರುವುದು. ಅದೇ ಸಂದರ್ಭದಲ್ಲಿ ಹೆಣ್ಣು ಗಂಡು ಚಿಕ್ಕ ಮಕ್ಕಳ ವಿದ್ವತ್ ಚತುರತೆಯ ಪ್ರದರ್ಶನಕ್ಕಾಗಿ ಲೇಖನ, ವಾಚನ, ಭಾಷಣಗಳ ಏರ್ಪಾಡು ಮಾಡಲಾಗಿದೆ. ಸ್ಪರ್ಧೆಯಲ್ಲಿ ಗೆದ್ದವರಿಗೆ ಉಚಿತ ಬಹುಮಾನಗಳನ್ನು ಹಂಚುವ ಏರ್ಪಾಡೂ ಮಾಡಲಾಗಿದೆ. ಹೆತ್ತವರು ಹಾಗೂ ಉಪಾಧ್ಯಾಯರು ತಮ್ಮ ಸಹಾಯ ಸಹಕಾರಗಳಿಂದ ಪ್ರೋತ್ಸಾಹವಿತ್ತು ಮಕ್ಕಳ ಸಮ್ಮೇಳನದಲ್ಲಿ ಸೇರುವಂತೆ ಮಕ್ಕಳಿಗೆ ಒತ್ತಾಯಿಸಬೇಕಾಗಿ ವಿನಂತಿ. ಸ್ಪರ್ಧೆಯಲ್ಲಿ ಭಾಗವಹಿಸುವ ಮತ್ತು ಸಮ್ಮೇಳನಕ್ಕೆ ಬರುವ ಮಕ್ಕಳ ಹೆಸರು ವಿಳಾಸವನ್ನು ತಾ. 25 5 '47 ರೊಳಗೆ ವ್ಯವಸ್ಥಾಪಕ ಮಂಡಳಿಯ ವಿಳಾಸಕ್ಕೆ— ಶ್ರೀಮತಿ ಬಿ ಸುಂದರಮ್ಮ, ಬೀಡು ಹೌಸ್ [illegible] ರೋಡ್ ಉಡುಪಿ [illegible] ಕಳುಹಿಸಬೇಕು. ಮಕ್ಕಳಿಗೆ ಊಟದ ವ್ಯವಸ್ಥೆ ಮಾಡಲಾಗುವುದು ಎಂದು ಬಿ [illegible] ಇವರು ತಿಳಿಸುತ್ತಾರೆ.

ಕಾರ್ಕಳ: ಕಾಂತಾವರದಲ್ಲಿ ಕಳೆದ ತಾ 28ರಂದು ಮಂಗಳೂರು ಸಬ್ ಡಿವಿಜನ್ ಪೋಸ್ಟಲ್ ಇನ್ಸ್‌ಪೆಕ್ಟರವರಿಂದ ಎಕ್ಸ್‌ಟ್ರಾ ಡಿಪಾರ್ಟ್ ಪೋಸ್ಟ್ ಆಫೀಸು ತೆರೆಯಲ್ಪಟ್ಟಿದೆ.

ಕುಂದಾಪುರ: ಇಲ್ಲಿಯ ಬೋರ್ಡ್ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿ [illegible] ಕಾರ್ಕಳಕ್ಕೆ ವರ್ಗವಾಗಿ ಅವರ ಸ್ಥಾನದಲ್ಲಿ ಶ್ರೀ ಬಿ. ಬಾಲಕೃಷ್ಣ ಪುರಾಣಿಕರು ಬಂದಿರುತ್ತಾರೆ.

ಸುರತ್ಕಲ್: ಇಲ್ಲಿಯ ಮಿತ್ರ ಮಂಡಳಿ [illegible] ದಿನಗಳ ಹಿಂದೆ ಇಲ್ಲಿ [illegible] ವಿದ್ಯಾರ್ಥಿ ಸಂಘದ ನೇತೃತ್ವದಲ್ಲಿ ವಿದ್ಯಾದಾಯಿನೀ ಹೈಸ್ಕೂಲಿನ ಸುಸಜ್ಜಿತ ಮಂದಿರದ ರಂಗಭೂಮಿಯಲ್ಲಿ ವಿಜಯೀ ವಿಶ್ವನಾಥ ಐತಿಹಾಸಿಕ ಸಂಗೀತ ನಾಟಕವನ್ನು ಆಡಿ ತೋರಿಸಿದರು. ಈ ನಾಟಕದ ಉತ್ಪನ್ನವು ಸದ್ರಿ ಹೈಸ್ಕೂಲಿನ ಸಹಾಯಾರ್ಥವಾಗಿ ಕೊಡಲ್ಪಟ್ಟಿತು. ಅದೇ ಸಮಯದಲ್ಲಿ ಕುಮಾರಿ ಯಮುನಾ ಮತ್ತು ಮಂಗಳೂರಿನ ಕುಮಾರಿ ದೇವಕಿ ಇವರ ನರ್ತನವೂ ಶ್ರೀ ಎಚ್ ಗೋವಿಂದರಾವ್ ಇವರ ಶಾರೀರಿಕ ಸಾಮರ್ಥ್ಯ ಪ್ರದರ್ಶನಗಳೂ ಜನಮನರಂಜಕವಾಗಿ ನಡೆದವು.

ಮಣಿಪುರ: ಈ ಗ್ರಾಮದ ಎಡಪೀಠ ಹಿಂದೂ ಎಲಿಮೆಂಟರಿ ಶಾಲೆಗೆ ಉಡುಪಿ ಪೋಸ್ಟಲ್ ಇನ್ಸ್‌ಪೆಕ್ಟರೂ ಉಡುಪಿ ಸಬ್ ಪೋಸ್ಟ್ ಮಾಸ್ಟರರೂ ಬಂದು ಈ ಶಾಲೆಯಲ್ಲಿ ಪರೀಕ್ಷಾರ್ಥವಾಗಿ ಒಂದು ಬ್ರಾಂಚ್ ಪೋಸ್ಟಾಫೀಸನ್ನು ತೆರೆದಿರುವರು.

ಅಲೆವೂರು: ಇಲ್ಲಿಯ ಸುಬೋಧಿನಿ ಪ್ರಾಥಮಿಕ ಶಾಲೆಯ ವಾರ್ಷಿಕ ಉತ್ಸವವು ತಾ. 3ರಂದು ಉಡುಪಿ ರೇಂಜಿನ ಶಾಲೆಗಳ ಡೆಪ್ಯುಟಿ ಇನ್ಸ್‌ಪೆಕ್ಟರರಾದ ಶ್ರೀ ವೈ ಗೋಪಾಲ್ ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀಗಳಾದ ಬಿ. ಭುಜಂಗಶೆಟ್ಟಿ, ಕುರುಕಾಲು ಗಣಪಯ್ಯ ಶೆಟ್ಟರೇ ಮೊದಲಾದವರು ಶಾಲೆಯ ಉನ್ನತಿ ಬಯಸಿ ಭಾಷಣವಿತ್ತರು.

... ವಾರ್ತೆ

ಅಮೇರಿಕನ್ನರ ಯಂತ್ರ ಪಿಪಾಸೆ

ಸುಖೋಪಭೋಗಿಗಳಾದ ಅಮೇರಿಕನ್ನರು ಶ್ರಮ ಕಡಿಮೆ ಮಾಡುವ ಯಂತ್ರ ವಿಧಾನಗಳನ್ನು ಕಡಿಮೆ ಮಾಡಲು ಅವಿಶ್ರಾಂತ ಸಂಶೋಧನೆ ನಡೆಸುತ್ತಾರೆ.

ಉದಾಹರಣೆಗಾಗಿ ನ್ಯೂಯೋರ್ಕಿನ ಒಂದು ಮೋಟಾರು ಗೆರೇಜಿಗೆ ನಿಮ್ಮ ಮೋಟಾರ್ ಕಾರನ್ನು ಒಯ್ದರೆ ಅಲ್ಲಿ ಕೇವಲ 3½ ಮಿನಿಟುಗಳಲ್ಲಿ ಅದನ್ನು ಸಂಪೂರ್ಣ ತೊಳೆದು 'ಪೊಲಿಶ್' ಮಾಡಲ್ಪಡುವ 'ಸ್ವಕಾರ್ಯ' ಯಂತ್ರವಿದೆ.

ಅದೇ ರೀತಿ ಕೆಲಿಫೋರ್ನಿಯದಲ್ಲಿ ನೀವು ನೇರವಾಗಿ ನಿಮ್ಮ ಕಾರನ್ನು ಒಂದು ಬೇಂಕಿನ ಕಾರಕೂನನ ಕಿಟಿಕಿ ಬಳಿ ಒಯ್ದು ನಿಮ್ಮ ಹಣಕಾಸಿನ ಲೇವಾದೇವಿಗಳನ್ನು ಕಾರಿನಲ್ಲಿ ಕೂತಲ್ಲಿಂದಲೇ ಸರ್ವಹಿಸುವ ಏರ್ಪಾಡು ಇದೆ

ಯಂತ್ರ ಮಡಿ

ಅಮೇರಿಕದಲ್ಲೀಗ ಚಿಕ್ಕ ಮಡಿಮಾಡುವ ಯಂತ್ರಗಳು ಜಾರಿಗೆ ಬಂದಿವೆ. ಅವುಗಳಲ್ಲಿ ಕೊಳೆ ಬಟ್ಟೆಗಳನ್ನು ತುರುಕಿಸಿ ಯಂತ್ರವನ್ನು ಚಲಿಸಿಬಿಟ್ಟರೆ ಸಾಕು—ನಂತರದ ಅರ್ಧ ಗಂಟೆಯೊಳಗೆ ಬಟ್ಟೆಗಳೆಲ್ಲ ತೊಳೆಯಲ್ಪಟ್ಟು, ಮಡಿ ಮಾಡಲ್ಪಟ್ಟು, ಇಸ್ತ್ರಿ ಹಾಕಲ್ಪಟ್ಟು ಹೊರಬರುವವು ಅಷ್ಟು ಅವಧಿಯಲ್ಲಿ ನೀವು ಇನ್ನಿತರ ಕೆಲಸವನ್ನು ಮಾಡಿಕೊಂಡು ಬರಬಹುದು ಇದಕ್ಕೆ ತಗಲುವ ಖರ್ಚು ಪ್ರತಿ ಹತ್ತು ರಾತ್ಲ ಬಟ್ಟೆಗೆ ಒಂದು ರೂಪಾಯಿ ಮಾತ್ರ

ಮಡಿ ಮಾಡುವ ಅಂಗಡಿಯೊಂದರಲ್ಲಿ ಇಂತಹ 21 ಯಂತ್ರಗಳನ್ನಿಟ್ಟಿರುವರು. ಓರ್ವ ಯಜಮಾನಿ ಮತ್ತವಳ ಸಹಾಯಕರಾಗಿ ಇನ್ನಿರ್ವ ಸ್ತ್ರೀ ಕೆಲಸಗಾರರು-ಒಟ್ಟು ಮೂರು ಮಂದಿ—ಇವುಗಳನ್ನು ನಡೆಸುತ್ತಾರೆ ಬೆಳಿಗ್ಗೆ 8ರಿಂದ ರಾತ್ರೆ 8ರ ತನಕ ಇಲ್ಲಿ ಬಿಡುವಿಲ್ಲದ ಕೆಲಸ ನಡೆಯುತ್ತದೆ

ಗಿರಾಕಿಯು ತಂದ ಬಟ್ಟೆಯನ್ನು ತೂಕ ಮಾಡುವರು—ಕಾರಣ ಪ್ರತಿ ಯಂತ್ರದಲ್ಲಿ 10 ರಾತ್ಲುಗಳಿಗಿಂತ ಹೆಚ್ಚಿನ ಭಾರದ ಬಟ್ಟೆ ಹಿಡಿಯುವುದಿಲ್ಲ ಬಟ್ಟೆಗಳನ್ನು ಒಂದು ತೂತಿನಿಂದ ಯಂತ್ರದೊಳಗೆ ಸೇರಿಸಿ ಅವುಗಳು ಎಷ್ಟು ಸಮಯದ ತನಕ ಮಡಿಮಾಡಲ್ಪಡಬೇಕೆಂದು ನಿಶ್ಚಯಿಸಿ ಅದಕ್ಕನುಸಾರವಾಗಿ ಕೆಲವೊಂದು ಉಪಕರಣಗಳನ್ನು ಒತ್ತಿಬಿಟ್ಟುಬಿಡುವುದು ಬಣ್ಣದ ಬಟ್ಟೆಗಳನ್ನು ತೊಳೆಯಲು ಪ್ರತ್ಯೇಕ ಯಂತ್ರಗಳಿವೆ ಮಡಿಯಾಗುವ ಅವಧಿಗೆ ಗಿರಾಕಿ ಅಲ್ಲಿ ಹಾಜರಿರಬೇಕು. ಹೊತ್ತಾದರೆ ಇತರ ಗಿರಾಕಿಗಳಿಗೆ ತೊಂದರೆಯಾಗುವುದರಿಂದ ಹೊತ್ತಾದುದಕ್ಕೆ ಹೆಚ್ಚಿನ ಬಾಡಿಗೆ ಕೊಡಬೇಕಾಗುವುದು

ಅಮಲು ಮಾಪಕ

ಮಿಚಿಗನ್ ನಗರದ ಪೋಲಿಸರ ಬಳಿ ಮದ್ಯ ಸೇವನೆ ಮಾಡಿದ ಮೋಟಾರ್ ಡ್ರೈವರರ ಪತ್ತೆಹಚ್ಚುವ ಒಂದು ಉಪಕರಣವಿದೆ. ಮಾರ್ಗದಲ್ಲಿ ನಿಂತಾಗಲೇ ಇದನ್ನು ಉಪಯೋಗಿಸಿ ಕುಡಿತವನ್ನು ಕಂಡುಹಿಡಿಯಬಹುದು. ಈ ಉಪಕರಣವೆಂದರೆ ಒಂದು ತೆಳ್ಳಗಿನ ರಬ್ಬರ್ ಚೀಲ ಅದನ್ನು ಕುಡಿದವನು ಊದಿದರೆ ಅವನ ಶ್ವಾಸದಲ್ಲಿರುವ ಅಮಲು ಧ್ರಾವಕದ ಕಣಗಳು ಅದರಲ್ಲಿನ ಕೆಲವು ರಾಸಾಯನಿಕ ಪದಾರ್ಥಗಳಲ್ಲಿ ಕಾಣಿಸಿಕೊಳ್ಳುವವು.

ಮದ್ಯ ಸೇವನೆ ಮಾಡದ ಡ್ರೈವರರಿಗೆ ಇದರ ಪ್ರಯೋಗದಿಂದ ಭಯವಿಲ್ಲ. ಇದನ್ನು ಊದಲು ತಿರಸ್ಕರಿಸುವವನು ಕುಡಿದವನೆಂದು ಪ್ರತ್ಯೇಕ ಕಂಡುಹಿಡಿಯುವ ಕೆಲಸವಿಲ್ಲ. ಮಿಚಿಗನಿನ ಪೋಲಿಸ್ ವಾಹನಗಳಲ್ಲೆಲ್ಲ ಒಂದೊಂದು ಇಂತಹ ಉಪಕರಣವಿರುವುದು. ಸಂದೇಹಕ್ಕೊಳಗಾದ ಡ್ರೈವರನನ್ನು ಕೂಡಲೇ ಪರೀಕ್ಷೆಗೊಳಮಾಡಿ ತಪ್ಪು ಕಂಡುಹಿಡಿಯುವರು.

ಯಂತ್ರ ಬೀಗ

ಸಂಯುಕ್ತ ಅಮೇರಿಕದ ಎಲ್ಲಾ ಪ್ರಾಮುಖ್ಯ ರೈಲ್ವೇ ಸ್ಟೇಶನುಗಳಲ್ಲಿ ಪ್ರಯಾಣಿಕರ ಸಾಮಾನುಗಳನ್ನು ಇಡುವ ಯಂತ್ರ ಬೀಗದ ಪೆಟ್ಟಿಗೆಗಳಿವೆ ಇವುಗಳಲ್ಲಿ 24 ತಾಸುಗಳ ತನಕ ಪ್ರಯಾಣಿಕರು ತಮ್ಮ ಸಾಮಾನುಗಳನ್ನಿಡಬಹುದು. ಸಾಮಾನುಗಳನ್ನಿಟ್ಟಕೂಡಲೇ ನೀವು ಆ ಪೆಟ್ಟಿಗೆಗೆ ಬೀಗಹಾಕಿ ಬೀಗದ ಕೈಯನ್ನೊಯ್ಯಬೇಕು ಇದರ ಬಾಗಿಲು ತೆರೆದರೆ ಬೀಗದ ಕೈಯನ್ನು ತೆಗೆಯಲು ಬರುವುದಿಲ್ಲ 24 ಗಂಟೆಗಳ ಅಂತ್ಯದಲ್ಲಿ ಈ ಪೆಟ್ಟಿಗೆಗಳ ಬೀಗವು ತನ್ನಷ್ಟಕ್ಕೆ ತೆರೆಯಲ್ಪಡುವ ಒಂದು ಗಡಿಯಾರ ನಮೂನೆಯ ಯಂತ್ರ ಜೋಡನೆಯಿದರಲ್ಲಿದೆ ಆ ಸಮಯಕ್ಕೆ ಸಾಮಾನಿನ ಮಾಲಕರು ಬಾರದಿದ್ದಲ್ಲಿ ರೈಲ್ವೇಯ ಕೆಲಸಗಾರರು ಅದನ್ನು ತೆಗೆದು ಹೊತ್ತಾದುದಕ್ಕೆ ಪ್ರತ್ಯೇಕ ಬಾಡಿಗೆ ತೆಗೆದುಕೊಳ್ಳುತ್ತಾರೆ

ಎಟಂ ವಿಷಕ್ಕೆ ಮದ್ದು

ಎಟಂ ಬೋಂಬಿನ ದುಷ್ಪರಿಣಾಮವು ಮಾನವ ಶರೀರದ ಮೇಲೂ ಮುಂದಿನ ಪೀಳಿಗೆಯ ಮೇಲೂ ಉಂಟಾಗುವುದೆಂದು ಇದುತನಕ ಹೇಳಲಾಗಿತ್ತಷ್ಟೆ ಈಗ ಚಿಕಾಗೋ ನಗರದ ಇರ್ವ ವಿಜ್ಞಾನಿಗಳು ಎಟಂ ಶಕ್ತಿಯ ದುಷ್ಪ್ರಸಾರಕ್ಕೆ ಪ್ರತಿಹಾರಕ ಔಷಧಿಯೊಂದನ್ನು ಕಂಡುಹಿಡಿದಿರುವರಾಗಿ ಸಾರಿರುವರು ಈ ಔಷಧಿಯು ಕೈಗಾರಿಕೆ ವಸ್ತು ತಯಾರಿಕೆಯಲ್ಲಿ ಹೆಚ್ಚಾಗಿ ಉಪಯೋಗಿಸಲ್ಪಡುವ ಒಂದು ನೀಲ ಬಣ್ಣದ ರಸಾಯನವಾಗಿರುತ್ತದೆಯಂತೆ ಎಟಂ ಶಕ್ತಿಯನ್ನು ತಯಾರಿಸುವ ಕೆಲಸಗಾರರ ರಕ್ತವು ತೆಳ್ಳಗಾಗುತ್ತ ಜೀವಕ್ಕೆ ಗಂಡಾಂತರವನ್ನುಂಟುಮಾಡುವುದನ್ನು ಈ ರಸಾಯನಿಕವು ತಡೆಯುತ್ತದೆ.

ಪೆನಿಸಿಲಿನ್ ಗೊಬ್ಬರ

ಸಂಯುಕ್ತ ಅಮೇರಿಕದ ವಿಜ್ಞಾನಿಗಳು ಪೆನಿಸಿಲಿನ್ ತಯಾರಿಯನ್ನು ವೇಗಗೊಳಿಸುತಿದ್ದಾರೆ ಕೃಷಿಗಾರಿಕೆಯಲ್ಲಿ ಇದನ್ನು ಹೇಗೆ ಉಪಯೋಗಿಸಬಹುದೆಂಬುದರ ಕುರಿತೂ ಅವರು ಪರಿಶೋಧನೆ ನಡೆಸುತ್ತಲಿರುವರು ಇದಕ್ಕೆ ಕಾರಣವಿದೆ ವರ್ಷಕ್ಕೆ 30 ಲಕ್ಷ ಡಾಲರ್ ಬೆಲೆಯ ಕೃಷಿ ಉತ್ಪತ್ತಿ ವಸ್ತುಗಳನ್ನು 100 ಲಕ್ಷ ಡಾಲರ್ ಮೌಲ್ಯದ ಪೆನಿಸಿಲಿನನ್ನು ತಯಾರಿಸಲು ಉಪಯೋಗಿಸುವರು ಆದುದರಿಂದ ಈ ಸಂಜೀವಿನಿ ಔಷಧಿ ಕೂಡ ಕೃಷಿಗಳ ಮೇಲೆ ಸತ್ಪರಿಣಾಮಕಾರಿಯಾಗಬಹುದೆಂದು ಊಹಿಸಲಾಗಿದೆ ದನಗಳ ಒಂದು ತರದ ಹುಣ್ಣುಗಳಿಗೆ ಇದು ಅತ್ಯಂತ ಪರಿಣಾಮಕಾರಿಯಾಗುವುದಂತೆ ಪೆನಿಸಿಲಿನ್ ಔಷಧಿಯು ಶೀಘ್ರ ಗುಣಕಾರಿ ಮಾತವಲ್ಲ, ಹಚ್ಚಿದಾಗ ಉರಿಯುವುದಿಲ್ಲ

ಗಾಳಿಯಿಂದ ಮದ್ಯ ತಯಾರಿ

ಭೂಗರ್ಭದಲ್ಲಿ ಗಣಿಗಳಲ್ಲಿ, ರಾಸಾಯನಿಕ ವಸ್ತುಗಳಲ್ಲಿ ವಾತಾವರಣದಲ್ಲಿ ... ನಲ್ಲಿ ವಿವಿಧ ಅ...ಗಳ ... ಅಮ್ಲಜನಕ ಜಲಜನಕ, ... ಇವು ಕೆಲವು ... ಇವುಗಳಿಂದ ಉತ್ತಮ ಮದ್ಯಸಾರಗಳ ... ತಯಾರಿಸ ... ಅಮೇರಿಕದ ಡಾ ... ... ವಿಜ್ಞಾನಿಗಳು ... ಒಂದು ವ್ಯಾಪಾರಕರ ... ತಿಳಿಸಿದರು ಇದರ ... ಹಣ್ಣುಹಂಪಲುಗಳಿಂದ ... ... ಡಾ 80 ರಷ್ಟು ಕಮ್ಮಿ ಬೀಳುತ್ತದೆಯೆಂದು ಅವರ ಹೇಳಿಕೆ.

ಗ್ರಹಯಾನ

ಬ್ರಿಟನಿನ ವಿಜ್ಞಾನಿಗಳು ತಮ್ಮ ಗ್ರಹ ಪ್ರಯಾಣದ ಯೋಜನೆಗಳನ್ನು ಮುಂದೊತ್ತುತಿದ್ದಾರೆ ಚಂದ್ರಲೋಕಕ್ಕೂ, ಬುಧಗ್ರಹಕ್ಕೂ ಪ್ರಯಾಣವು ಸಾಧ್ಯವೆಂದು ಈಗಾಗಲೇ ಅನೇಕ ಖಗೋಳ ವಿಜ್ಞಾನಿಗಳು ಪ್ರಯೋಗ ಮೂಲಕ ಕಂಡುಹಿಡಿದಿರುವರು. ಆದರೆ ಇದಕ್ಕೆ ಬೇಕಾಗುವ ವಿಶೇಷ ಮಾದರಿಯ ವಾಹನವು ಇನ್ನೂ ತಯಾರಿಯಲ್ಲಿಯೇ ಇದೆ

ಬ್ರಿಟಿಷ್ ಸಾಮ್ರಾಜ್ಯದ ಉತ್ತರಾಧಿಕಾರಿ ಅಮೇರಿಕಾ

ಅಮೇರಿಕನ್ ಪತ್ರಿಕೋದ್ಯೋಗಿಯ ಜಂಬ

ಅಮೇರಿಕದ ಪ್ರಬಲವಾದ ಹರ್ಸ್ಟ್ ಪತ್ರಿಕಾ ಮಾಲಿಕೆಯ ವಿದೇಶಿ ಬಾತ್ಮಿದಾರರಾದ ಕಾರ್ಲ್ ವೊನ್ ವಿಗಾಂಡ ಅವರು 'ಬ್ರಿಟನ್ನು ತೀವ್ರವಾಗಿ ನಶಿಸುತ್ತದೆ' ಎಂದು ಅಭಿಪ್ರಾಯಪಡುತ್ತಾರೆ

ಬ್ರಿಟಿಷ್ ಸಾಮ್ರಾಜ್ಯವು ಇತಿಹಾಸದ ... ಸೇರುವುದೆಂದು ಅವರು ಬರೆಯುತ್ತಾರೆ

ಕಳೆದೆರಡು ... ಗಳಲ್ಲಿಯೂ ಇಂಗ್ಲೆಂಡು ಸುರಕ್ಷಿತವಾಗಿ ಕಾಪಾಡಲ್ಪಟ್ಟಿದೆ ... ಬ್ರಿಟಿಷ್ ಸಾಮ್ರಾಜ್ಯವು ಮಾತ ಕಳೆದು ... ದಂತೆಯೆ ಸರಿ

"ಕಳೆದೆರಡು ಶತಮಾನಗಳಿಂದ ಜಗತ್ತಿನಲ್ಲಿ ತನ್ನ ದೌಲತ್ತು, ಶಕ್ತಿ, ಆಡಂಬರಗಳಿಂದ ಮೆರೆದ ಬ್ರಿಟಿಷ್ ಸಾಮ್ರಾಜ್ಯವು ಕೊನೆಗೊಳ್ಳುತ್ತಿದೆ"

1600 ವರ್ಷಗಳ ಹಿಂದೆ ಕುಸಿದ ... ರೋಮನ್ ಸಾಮ್ರಾಜ್ಯದ ನಂತರ ... ಸಾಮ್ರಾಜ್ಯವೇ ಬ್ರಿಟಿಷರ ... ಸಾಮ್ರಾಜ್ಯಶಾಹಿ ... ...ತವಾಗಿದೆ ... ...ತಂಗಿದೆ

ಮುತ್ಸದ್ದಿಗಳ ತಪ್ಪು

"ಕಳೆದ 59 ವರ್ಷಗಳಲ್ಲಿ ಬ್ರಿಟನಿನ ರಾಜಕೀಯ ಮುತ್ಸದ್ದಿಗಳು ಮಾಡಿದ ತಪ್ಪುಗಳಿಂದ ... ಇಂದು ಕಾಲ ಮುಂಚಿವಾಗಿ ಕೊಳೆಯಬೇಕಾಯಿತು ಯುದ್ಧಗಳಿಂದ ಬಳಲಿ, ಬ್ರಿಟಿಷ್ ಜನಾಂಗ ನ... ಸಿದೆ ಅಲ್ಲಿಯ ಜನಸಂಖ್ಯೆ ಕುಗ್ಗುತ್ತಿದೆ ಅಲ್ಲಿನ ರಾಜಕೀಯ, ಮತ್ತು ಆರ್ಥಿಕ ತತ್ವಗಳಿಗೂ ರೋಗಾಣುಗಳಂಟಿವೆ"

"ರಕ್ತ ಸಂಬಂಧದಲ್ಲೂ, ಭಾಷೆಯಲ್ಲೂ, ರಾಜಕೀಯ ಮತ್ತು ಸಾಂಸ್ಕೃತಿಕ ಸಮಾನತೆಯಲ್ಲೂ ಇದುತನಕ ಬ್ರಿಟನ್ನು ವಹಿಸಿದ ಲೋಕ ನಾಯಕತ್ವಕ್ಕೆ ಅಮೇರಿಕವೇ ಸಹಜವಾದ ಹಕುದಾರಿಯಾಗಿರುತ್ತದೆ"

ಸಮರ್ಥತೆ, ಬಲ, ಶುಭ್ರತೆ ಮತ್ತು ಮನೋಹರತೆ ಇವುಗಳನ್ನು ಸುಭದ್ರ ಮತ್ತು ಸುಲಭವಾದ ಈ ರೀತಿಯಲ್ಲಿ ನಿಮ್ಮದಾಗಿ ಮಾಡಿಕೊಳ್ಳಬಹುದು ವನಸ್ಪತಿ ಮೂಲಗಳಿಂದ ಸಿದ್ಧವಾಗುವ, ಬ್ಯಾಲ್ ಬೀನ್ಸ್, ಎಂಬ ಈ ಶಕ್ತಿಕಾರಕ ಬೇದಿ ಮದ್ದನ್ನು ಕ್ರಮವಾಗಿ ಸೇವಿಸಿದಲ್ಲಿ ರಕ್ತದಿಂದ ವಿಷವಸ್ತುಗಳು ವಿಸರ್ಜನೆಯಾಗಿ, ಜೀರ್ಣಶಕ್ತಿಯು ವೃದ್ಧಿಯಾಗಿ ನಿಮ್ಮ ಅಂತರ್ಯ ಆರೋಗ್ಯವು ಉತ್ತಮಗೊಳ್ಳುವುದು

ಶುಭ್ರ ಆರೋಗ್ಯದಲ್ಲಿರಬೇಕಾದರೆ, ನಿಮಗೆ ಬ್ಯಾಲ್ ಬೀನ್ಸ್‌ಗಳ ಅವಶ್ಯವಿದೆ ಎಂದು ಸದಾ ಜ್ಞಾಪಕದಲ್ಲಿಡಿರಿ.

ಮಲಗುವ ಮುನ್ನ ಶುದ್ಧ ವನಸ್ಪತಿಯಾದ

BILE BEANS

ಬ್ಯಾಲ್ ಬೀನ್ಸ್‌ಗಳನ್ನು ನಿತ್ಯಲೂ ಸೇವಿಸಿ

ಮಾರಾಟಕ್ಕಿದೆ

ಉತ್ತಮ ತರಗತಿಯ ಎರಡು ಕುದುರೆಗಾಡಿಗಳೂ, ಒಂದು ದೊಡ್ಡ ಕುದುರೆಯೂ ಮಾರಾಟಕ್ಕಿದೆ ಕೊಂಡುಕೊಳ್ಳಲು ಬಯಸುವವರು ಸ್ವತಹ ಉಡುಪಿಗೆ ಬಂದು ಪರೀಕ್ಷಿಸಬಹುದು ರೂಪಾಯಿ 1500 ರ ಅದರ ಸಮೀಪದ ಕ್ರಯವನ್ನು ಗಮನಿಸಲಾಗುವದು ಬೇಕಾದವರು ಸ್ವತಹ ಯಾ ಪತ್ರದ್ವಾರ ಈ ತಿಂಗಳೊಳಗೆ ಕೆಳಗಿನವರೊಡನೆ ವಿಚಾರಿಸಬಹುದು.

Deputy Manager
M/S Koohiker Brothers
Udipi.

ಜಿಲ್ಲಾ ಪರಿಚಯ

ನಾಗರೀಕ ವ್ಯವಹಾರ

ನಮ್ಮ ನಗರವು ಸ್ವಲ್ಪ ಭಾಗಗಳಲ್ಲಿ ಮಾತ್ರ ಸುಂದರವಾಗಿಯೂ ಚೊಕ್ಕಟವಾಗಿಯೂ ಕಂಡರೂ ಇದರ ಹೆಚ್ಚಿನ ನಿವಾಸ ಪ್ರದೇಶಗಳೂ ಮಾರ್ಗ ಚರಂಡಿಗಳೂ, ಉಪಮಾರ್ಗ, ಒಳಮಾರ್ಗಗಳೂ, ಹಿತ್ತಲು ತೋಟಗಳೂ, ವ್ಯಾಪಾರಿ ಸ್ಥಳಗಳೂ, ಶಾಲಾವಠಾರಗಳೂ ಕೂಡ ಕಸ ಕೊಳೆಗಳಿಂದಲೂ, ದುರ್ವಾಸನೆಯಿಂದಲೂ ಕೂಡಿರುವುದು ಗಮನಕ್ಕೆ ಬರುತ್ತದೆ.

ಕಸ ಕೊಚ್ಚೆಗಳನ್ನು ಮಾರ್ಗದ ಬದಿಯಲ್ಲಿ ಬಿಸಾಡುವುದು ನಮ್ಮಲ್ಲಿ ಹಲವು ನಾಗರೀಕರಿಗೊಂದು ಅನುಕೂಲದ ಅಭ್ಯಾಸವಾಗಿದೆ ಯೋಗ್ಯ ಕಸ ಡಬ್ಬಿಗಳ ಅಭಾವವೂ ಇದಕ್ಕೊಂದು ಕಾರಣ ಅನೇಕ ಸ್ಥಳಗಳಲ್ಲಿ ಇದನ್ನು ಇಡಲು ಬೇಕಾದ ಸ್ಥಳವೂ ಇರುವುದಿಲ್ಲ. ಕಸ, ಕೊಳೆ, ಕೆಸರಿನಿಂದಲೂ, ಹರಿಯದೆ ನಿಲ್ಲುವ ನೀರು ದಾಸ್ತಾನಿನಿಂದಲೂ, ಮಲ ಮೂತ್ರಾದಿಗಳನ್ನು ಮಾಡುವ ಸ್ಥಳಗಳು ಸರಿಯಾಗಿ ತೊಳೆಯದಿರುವುದರಿಂದಲೂ ನಮ್ಮ ನಗರವು ಅತ್ಯಂತ ಹಾನಿಕಾರಕವೂ ತ್ರಾಸದಾಯಕವೂ ಆದ ಸೊಳ್ಳೆಗಳಿಗೆ ಸುಖಾಶ್ರಯ ದೊರೆವಂತಾಗಿದೆ ಪರಿಣಾಮವಾಗಿ ಸಾಂಕ್ರಾಮಿಕ ವ್ಯಾಧಿಗಳೂ ಅಪರಿಹಾರ್ಯವೆನಿಸುವ ಆನೆಕಾಲಿನ ರೋಗವೂ ಉಂಟಾಗಿ ನಗರಕ್ಕೆ ಶಾಶ್ವತ ದುಃಖ, ಭಯ, ಕಳವಳಗಳನ್ನು ತಂದೊಡ್ಡಿದೆ ಆನೆಕಾಲಿನ ರೋಗವು ಮದ್ದಿಲ್ಲದ ವ್ಯಾಧಿಯೆಂಬುದನ್ನು ಇನ್ನಾದರೂ ನಾಗರೀಕರು ಮನಸ್ಸಿಗೆ ತಂದುಕೊಂಡು ತಮ್ಮ ಸುತ್ತಮುತ್ತಲಿನ ವಾಸಸ್ಥಾನಗಳ ಸ್ವಚ್ಛತೆಯ ಕುರಿತು ಗಮನ ತೆಗೆದುಕೊಳ್ಳಬೇಕಾದುದು ಅತ್ಯಾವಶ್ಯಕ

ಈ ಕುರಿತು ನಗರಾಡಳಿತದವರೂ, ಆರೋಗ್ಯ ಖಾತೆಯವರೂ, ಸರಕಾರವೂ ಅಲ್ಲದೆ ಇತರ ಸಾರ್ವಜನಿಕ ಸೇವಾಸಂಸ್ಥೆಯವರು ಪ್ರಚಾರ ಕೈಕೊಳ್ಳುವುದರಿಂದ ಪರಿಸ್ಥಿತಿಯನ್ನು ತುಂಬಾ ಸುಧಾರಿಸಬಹುದು. ಆಗಾಗ್ಗೆ ಸಭೆಗಳನ್ನೂ, ಪರಿಷತ್ತುಗಳನ್ನೂ ಸೇರಿಸಿಯೂ, ಚಲಚಿತ್ರ, ಗೋಡೆ ಚಿತ್ರಗಳ ಮೂಲಕವೂ, ಪುಸ್ತಕಗಳ ಮೂಲಕವೂ ಆರೋಗ್ಯ ರಕ್ಷಣೆಯ ಪ್ರಾಮುಖ್ಯತೆಯನ್ನು ಜನತೆಯ ಮನಸ್ಸಿನ ಮೇಲೆ ಒತ್ತಬಹುದು.

ಬಡ ಜನರು, ಶ್ರಮಜೀವಿಗಳು ಈ ಕುರಿತು ಇನ್ನಷ್ಟು ಹೆಚ್ಚಿನ ಜಾಗ್ರತೆಗಳನ್ನು ವಹಿಸಬೇಕು ಕುದಿಸಿದ ನೀರನ್ನೇ ಕುಡಿಯುವುದು, ತಮ್ಮ ಬಿಡು ಸಮಯಗಳಲ್ಲಿ ಮನೆಯ ಹೊರ ಒಳ ಪ್ರದೇಶಗಳನ್ನು ನಿರ್ಮಲ ಮಾಡುವುದು, ತಮ್ಮ ಮಕ್ಕಳಲ್ಲಿ ನಿರ್ಮಲಾಭ್ಯಾಸಗಳನ್ನು ಬೆಳೆಸುವುದು, ಸ್ವಲ್ಪ ಕಷ್ಟಪಟ್ಟಾದರೂ ಸೊಳ್ಳೆ ಪರದೆಗಳನ್ನು ತಯಾರಿಸಿಕೊಳ್ಳುವುದು ಇವೇ ಮೊದಲಾದುವುಗಳನ್ನು ಕರ್ತವ್ಯವೆಂದು ತಿಳಿದು ನಿರ್ವಹಿಸುವುದು ಸ್ವಂತದ ಆರೋಗ್ಯ ದೃಷ್ಟಿಯಿಂದ ಮಹತ್ವದ ವಿಷಯ. ಕಾರಣ ಬಡ ಜನರು ವ್ಯಾಧಿರಹಿತರಾಗಿದ್ದರೇನೇ ಅವರ ಸಂಸಾರ ಜೀವನವು ಸುಗಮವಾಗಿ ಸಾಗೀತು

ಬಾಂಧವ್ಯದ ಕರಾರು

ಮಂಗಳೂರಲ್ಲಿ ತಾ. 4—5—'47ರಂದು ಶ್ರೀ ಎಚ್. ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ನಮ್ಮ ಜಿಲ್ಲೆಯನ್ನು ಕೇರಳಕ್ಕೆ ಕೂಡಿಸಲು ಮಾಡುವ ಯತ್ನಗಳನ್ನು ವಿರೋಧಿಸಿ ನಮ್ಮ ಜಿಲ್ಲೆಯು ಕನ್ನಡ ಪ್ರಾಂತ್ಯಕ್ಕೇ ಸೇರಬಯಸುವುದೆಂದೂ ಸ್ಪಷ್ಟಪಡಿಸುವ ನಿರ್ಣಯ ಮಾಡಲಾಗಿದೆ. ಇದಕ್ಕೆ ಒಪ್ಪಿಗೆ ಇದ್ದವರು ತಮ್ಮ ಹೆಸರು, ವೃತ್ತಿ, ವಿಳಾಸ ಮನೆಮಾತು ಇವನ್ನು ಒಂದು ಕಾರ್ಡಿನಲ್ಲಿ ಬರೆದು ಸಹಿಹಾಕಿ ಶ್ರೀ ಎಸ್. ಮುಕುಂದರಾವ್, ವಿರೋಧಯ ಸಂಪಾದಕರು, ಮಂಗಳೂರು ಇವರಿಗೆ ಈ ತಿಂಗಳ ಅಂತ್ಯದೊಳಗೆ ಕಳುಹಿಸಬೇಕೆಂದು ವಿನಂತಿಯಿದೆ. ಅನೇಕರು ಒಟ್ಟಾಗಿ ಹಿಂದೇ ಪತ್ರದಲ್ಲಿ ತಮ್ಮ ಒಪ್ಪಿಗೆಯನ್ನು ಬರೆದರೂ ಆದೀತು.

ಮೇಲ್ಕಂಡ ಸಭೆಯ ನಿರ್ಣಯದ ಸಾರಾಂಶ 'ಹೀಗಿದೆ ದಕ್ಷಿಣ ಉತ್ತರ ಕನ್ನಡಗಳು ಒಂದೇ ಜಿಲ್ಲೆಯ ಎರಡು ಭಾಗಗಳು ಇವು ಕನ್ನಡ ಪ್ರಾಂತ್ಯಕ್ಕೆ ಸೇರಿಸಲ್ಪಡಲು ಪ್ರಯತ್ನಗಳಾಗುತ್ತಿವೆ. ಇದನ್ನು ಅಲಕ್ಷಿಸಿ ಐಕ್ಯ ಕೇರಳ ಪರಿಷತ್ತಾಧ್ಯಕ್ಷ ಶ್ರೀ ಕೇಳಪ್ಪನ್ ಅವರು ಈ ಜಿಲ್ಲೆಗಳನ್ನು ತಮ್ಮ ಭಾವೀ ಭಾಷಾ ಪ್ರಾಂತ್ಯಕ್ಕೆ ಸೇರಿಸುವ ಯೋಜನೆ ನಿರೂಪಿಸಿರುವುದು ಮತ್ತು ಮದ್ರಾಸಿನ 'ಹಿಂದೂ' ಪತ್ರಿಕೆ ಅದಕ್ಕೆ ಸಮರ್ಥನೆ ಇತ್ತುದು ಆಶ್ಚರ್ಯದ ಸಂಗತಿ ಗೋಕರ್ಣದಿಂದ ಉಡುಪಿಯ ಕಲ್ಯಾಣಪುರ' ನದಿಯವರೆಗೆ ಶುದ್ಧ ಕನ್ನಡ ಮಾತನಾಡುವ ಪ್ರದೇಶ ಅಲ್ಲಿಂದ ಕಾಸರಗೋಡಿನ ಚಂದ್ರಗಿರಿ ನದಿ ವರೆಗಿನ ಪ್ರದೇಶದಲ್ಲಿ ತುಳು ಕೊಂಕಣಿಗಳು ಮನೆಮಾತಾಗಿದ್ದರೂ ಕನ್ನಡ ಸಂಸ್ಕೃತಿಯೇ ಈ ಕಡೆಗಳಲ್ಲಿ ಬಳಸಲ್ಪಡುತ್ತದೆ ಕಾಲ ಕಛೇರಿಗಳ [illegible] ವ್ಯವಹಾರಗಳೆಲ್ಲ ಕನ್ನಡದಲ್ಲೇ ಜರಗುತ್ತವೆ ತುಳು, ಕೊಂಕಣಿಯನ್ನಾಡುವವರು ಕನ್ನಡ ಸಾಹಿತ್ಯ ವ್ಯವಸಾಯವನ್ನೆ ಮಾಡಿ [illegible] ಕರ್ನಾಟಕದ ಜನ ಮೆಚ್ಚಿಗೆ ಪಡೆದಿದ್ದಾರೆ ಇಲ್ಲಿಯ ಸಂಸ್ಕೃತಿಯಲ್ಲಿ ತುಳು ಮಳೆಯಾಳ [illegible] ಹತ್ತಿರವಾದರೂ [illegible] ತುಳು ಕನ್ನಡಗಳೊಳಗಿವೆ ನಮ್ಮ ಜೀವನ ಕನ್ನಡದಿಂದ ಹೆಣೆಯಲ್ಪಟ್ಟಿದೆ ಆದುದರಿಂದ ನಮ್ಮನ್ನು ಕೇರಳಕ್ಕೆ ಸೇರಿಸುವ ಯತ್ನವನ್ನು ನಾವು ವಿರೋಧಿಸುತ್ತೇವೆ

ಮಜೂರ ನ್ಯಾಯದ ತೀರ್ಪು

ಇಲ್ಲಿಯ [illegible] ಮಜೂರರಿಗೆ [illegible] ತೀರ್ಮಾನಿಸಲು ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ನೇಮಕರೂರಾದ ಇತ್ಯರ್ಥ ಸಮಿತಿಯು ತನ್ನ ತೀರ್ಪನ್ನು ಕೊಟ್ಟಿದೆ. ಮೂಲ ಮಜೂರಿಯಲ್ಲಿ 8 ಆಣೆ ಹೆಚ್ಚಿಸಬೇಕೆಂಬ ಮಜೂರರ ಕೇಳಿಕೆಯು ಕಾಲ ಮುಂಚಿತವಾದುದೆಂಬ ಈ ಸಮಿತಿಯ ಹೆಚ್ಚಿನ ಸದಸ್ಯರು ಅಭಿಪ್ರಾಯ ಪಡುತ್ತಾರೆ ಕಲ್ಲಿಕೋಟೆಯ ಜೀವನ ವೆಚ್ಚದ ಪ್ರಮಾಣದ ಆಧಾರದಿಂದ ಪ್ರತಿ ತಿಂಗಳು ತುಟ್ಟಿಭತ್ತೆಯನ್ನು ಕೊಡುವುದು ತೃಪ್ತಿಕರ ವಿಧಾನ ಇದರೊಂದಿಗೆ ಮೂಲ ಮಜೂರಿಯು ಕನಿಷ್ಟ ಪ್ರಮಾಣವು 1934ರ ಸೆಪ್ಟಂಬರ್ ತಿಂಗಳಲ್ಲಿದ್ದಂತೆ ಪಡೆಯಲೂ ಮಜೂರರು ಬಾಧ್ಯಸ್ಥರಾಗಿರುವರು (ಗಂಡಸರಿಗೆ 6 ಆಣೆ, ಹೆಂಗಸರಿಗೆ 5 ಆಣೆ, ಮಕ್ಕಳಿಗೆ 4 ಆಣೆ) 1945–46ನೇ ವರ್ಷಕ್ಕೆ ಶೇಕಡಾ 16⅔ರಷ್ಟು ಬೋನಸ್ಸನ್ನು ಹಂಚುವಂತೆ ಸಮಿತಿಯು ಶಿಫಾರಸು ಮಾಡಿರುತ್ತದೆ ಇದನ್ನು ಇದೇ ಮೇ 31ರೊಳಗೆ ಹಂಚಬೇಕು 1946ನೇ ಜೂನ್ 30ರೊಳಗಿನ ವರ್ಷದಲ್ಲಿ ಶೇಕಡಾ 75ರಷ್ಟು ದಿನ ಕೆಲಸಕ್ಕೆ ಹಾಜರಾದವರಿಗೆ ಮಾತ್ರ ಇದು ಸಿಗಬೇಕು ಮಾತ ಅಂಧವರು ಕೇವ ಮಾರ್ಚ್ 17ರ ಮುಷ್ಕರದ ನಂತರ ಕೆಲಸಕ್ಕೆ ಪುನಃ ಸೇರಿದರೂ ಇದರಿಂದ ಮುಷ್ಕರ ಮಾಡಿದ ಅವಧಿಯ ಪರಿಹಾರ ಕೊಡುವುದಾವಶ್ಯವಿಲ್ಲ ವೆಂದು ಸಮಿತಿಯ ಅಭಿಪ್ರಾಯ ಪಡುತ್ತದೆ

ಹೊಸ-ತರಗತಿ: [illegible] ಹೈಸ್ಕೂಲಿನ [illegible] ಜೂನ್ [illegible] ಸರಕಾರದ [illegible] ಅನುಮತಿ [illegible] ಇಲ್ಲಿಗೆ ಈ ಹೊಸ [illegible] 1ನೇ ಫಾರ್ಮ್ [illegible] 6ನೇ ಫಾರ್ಮ್‌ಗಳ [illegible] ಕ್ಲಾಸ್ [illegible] ಆಗುವುದು [illegible]

ಶಿರೂರು: "ಈಗಿನ ಪ್ರಜಾ ಸರಕಾರದವರು ಅಕ್ಕಿಮುಡಿಗೆ ಮತ್ತು ಬತ್ತಮುಡಿಗೆ ಬೋನಸ್ಸು ಕೊಡುವುದಾಗಿ ಪ್ರಚಾರಮಾಡಿದಂತೆ ಎಲ್ಲಾ ಗ್ರಾಮಗಳಿಗೆ ಅದನ್ನು ಹಂಚಿದ್ದು ನಮ್ಮ ಗ್ರಾಮಕ್ಕೆ ಮಾತ್ರ ಏಕೆ ಕೊಡಲಿಲ್ಲ ಆದ್ದರಿಂದ ತಾವು ಈ ವಿಷಯವನ್ನು ದಯವಿಟ್ಟು ಪ್ರಕಟಿಸಬೇಕಾಗಿ ವಿನಂತಿ"— ಒಂದು ಬಾತ್ಮಿ.

ಉಡುಪಿ

ದ. ಕ. ಜಿಲ್ಲಾ ಮಕ್ಕಳ ಸಮ್ಮೇಳನ: ಇದು ಎರಡನೆಯ ಸಲಕ್ಕೆ ಇದೇ ಮೇ ತಿಂಗಳ ಕೊನೆಯ ವಾರದಲ್ಲಿ ಉಡುಪಿ ಕ್ಷೇತ್ರದಲ್ಲಿ ಕೂಡಲಿರುವುದು ಅದೇ ಸಂದರ್ಭದಲ್ಲಿ ಹೆಣ್ಣು ಗಂಡು ಚಿಕ್ಕ ಮಕ್ಕಳ ವಿದ್ವತ್ ಚತುರತೆಯ ಪ್ರದರ್ಶನಕ್ಕಾಗಿ ಲೇಖನ, ವಾಚನ, ಭಾಷಣಗಳ ಏರ್ಪಾಡು ಮಾಡಲಾಗಿದೆ ಸ್ಪರ್ಧೆಯಲ್ಲಿ ಗೆದ್ದವರಿಗೆ ಉಚಿತ ಬಹುಮಾನಗಳನ್ನು ಹಂಚುವ ಏರ್ಪಾಡೂ ಮಾಡಲಾಗಿದೆ ಹೆತ್ತವರು ಹಾಗೂ ಉಪಾಧ್ಯಾಯರು ತಮ್ಮ ಸಹಾಯ ಸಹಕಾರಗಳಿಂದ ಪ್ರೋತ್ಸಾಹವಿತ್ತು ಮಕ್ಕಳ ಸಮ್ಮೇಳನದಲ್ಲಿ ಸೇರುವಂತೆ ಮಕ್ಕಳಿಗೆ ಒತ್ತಾಯಿಸಬೇಕಾಗಿ ವಿನಂತಿ ಸ್ಪರ್ಧೆಯಲ್ಲಿ ಭಾಗವಹಿಸುವ ಮತ್ತು ಸಮ್ಮೇಳನಕ್ಕೆ ಬರುವ ಮಕ್ಕಳ ಹೆಸರು ವಿಳಾಸವನ್ನು ತಾ. 25 5 '47 ರೊಳಗೆ ವ್ಯವಸ್ಥಾಪಕ ಮಂಡಳಿಯ ಕಾರ್ಯದರ್ಶಿ ಶ್ರೀಮತಿ ಬಿ ಸುಂದರಮ್ಮ, [illegible] ಉಡುಪಿ [illegible] ಕಳುಹಿಸಬೇಕ ಮಕ್ಕಳಿಗೆ ಊಟದ ವ್ಯವಸ್ಥೆ ಮಾಡಲಾಗುವುದು ಎಂದು [illegible] ಇವರು ತಿಳಿಸುತ್ತಾರೆ

ಕಾರ್ಕಳ: ಕಾಂತಾವರದಲ್ಲಿ ಕಳೆದ ತಾ. 28ರಂದು ಮಂಗಳೂರು ಸಬ್ ಡಿವಿಜನ್ ಪೋಸ್ಟಲ್ ಇನ್ಸ್‌ಪೆಕ್ಟರವರಿಂದ ಪರೀಕ್ಷಾರ್ಥ ಪೋಸ್ಟ್ ಆಫೀಸು ತೆರೆಯಲ್ಪಟ್ಟಿದೆ

ಕುಂದಾಪುರ: ಇಲ್ಲಿಯ ಬೋರ್ಡ್ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿದ್ದ ಶ್ರೀ [illegible] ಸೆಟ್ಟರಿಗೆ ಕಾರ್ಕಳಕ್ಕೆ ವರ್ಗವಾಗಿ ಅವರ ಸ್ಥಾನದಲ್ಲಿ ಶ್ರೀ ಬಿ [illegible] ಪುರಾಣಿಕರು ಬರಲಿರುತ್ತಾರೆ

ಸುರತ್ಕಲ್: ಇಲ್ಲಿಯ ಮಿತ್ರ ಮಂಡಳಿ [illegible] ಕೆಲ ದಿನಗಳ ಹಿಂದೆ [illegible] ಹಳೆ ವಿದ್ಯಾರ್ಥಿ ಸಂಘದ ನೇತೃತ್ವದಲ್ಲಿ ವಿದ್ಯಾದಾಯಿನೀ ಹೈಸ್ಕೂಲಿನ ನೂತನ [illegible] ಮಂಟಪದ ರಂಗಭೂಮಿಯಲ್ಲಿ [illegible] ಐತಿಹಾಸಿಕ ಸಂಗೀತ ನಾಟಕವನ್ನು ಆಡಿ ತೋರಿಸಿದರು ಈ ನಾಟಕದ ಉತ್ಪನ್ನವು ಸದ್ರಿ ಹೈಸ್ಕೂಲಿನ ಸಹಾಯಾರ್ಥವಾಗಿ ಕೊಡಲ್ಪಟ್ಟಿತು. ಅದೇ ಸಮಯದಲ್ಲಿ ಕುಮಾರಿ ಯಮುನಾ ಮತ್ತು ಮಂಗಳೂರಿನ ಕುಮಾರಿ ದೇವಕಿ [illegible] ನರ್ತನವೂ ಶ್ರೀ ಎಚ್ ಗೋವಿಂದರಾವ್ ಇವರ ಶಾರೀರಿಕ ಸಾಮರ್ಥ್ಯ ಪ್ರದರ್ಶನಗಳೂ ಜನಮನರಂಜಕವಾಗಿ ನಡೆದವು.

ಮಣಿಪುರ: ಈ ಗ್ರಾಮದ ಎಡೆಸೀರ್ ಹಿಂದೂ ಎಲಿಮೆಂಟರಿ ಶಾಲೆಗೆ ಉಡುಪಿ ಪೋಸ್ಟಲ್ ಇನ್ಸ್‌ಪೆಕ್ಟರರೂ ಉಡುಪಿ ಸಬ್ ಪೋಸ್ಟ್ ಮಾಸ್ಟರರೂ ಚಿತ್ತೈಸಿ ಈ ಶಾಲೆಯಲ್ಲಿ ಪರೀಕ್ಷಾರ್ಥವಾಗಿ ಒಂದು ಬ್ರ್ಯಾಂಚ್ ಪೋಸ್ಟಾಫೀಸನ್ನು ತೆರೆದಿರುವರು.

ಅಲೆವೂರು: ಇಲ್ಲಿಯ ಸುಬೋಧಿನಿ ಪ್ರಾಥಮಿಕ ಶಾಲೆಯ ವಾರ್ಷಿಕ ಉತ್ಸವವು ತಾ. 3ರಂದು ಉಡುಪಿ ರೇಂಜಿನ ಶಾಲೆಗಳ ಡೆಪ್ಯುಟಿ ಇನ್ಸ್‌ಪೆಕ್ಟರರಾದ ಶ್ರೀ ವೈ ಗೋಪಾಲ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಬಿ. ಭುಜಂಗರೈ, ಕುರುಕಾಲು ಗಣಪಯ್ಯ ಸೆಟ್ಟರೇ ಮೊದಲಾದವರು ಶಾಲೆಯ ಉನ್ನತಿ ಬಯಸಿ ಭಾಷಣವಿತ್ತರು.

ಉಳುಕು, ವಾತರೋಗ, ಹರಿವಾತ,
ಸುಳುಕು, ನ್ಯೂರೈಟಿಸ್, ಸೆಡವು, ಅಥವಾ
ಹಲ್ಲು ನೋವುಗಳಿಗೆ

ಖಾತರಿ ಗುಣವನ್ನು
ಪಡೆಯಲು
ಉಪಯೋಗಿಸಿರಿ



ನೋವಿರುವ ಕಡೆ ಚಚ್ಚಿಗೆ ಮಾಡಿ ಲಿಟಿಲ್ಸ್ ಒರಿಯಂಟಲ್ ಬಾಮ್ ದಿನಕ್ಕೆ ಮೂರಾವರ್ತಿ ಹಚ್ಚಿ 10–15 ನಿಮಿಷ ಚೆನ್ನಾಗಿ ತಿಕ್ಕಿರಿ ನೋವು, ವ್ರಣ ಅತಿ ಶೀಘ್ರ ವಾಸಿಯಾಗಿ ಬಿಡುವುದು

LITTLE'S
ORIENTAL BALM

ಇಂಡಿಯದ ಸುಪ್ರಸಿದ್ಧ
ಅತ್ಯುತ್ತಮ ಮುಲಾಮು

ಇನ್ನೂ
ನಡುನೋವು ಸೊಂಟ
ನೋವುತಲೆನೋವು, ಸಂಧಿ
ವಾಯು ಕ್ರಿಮಿಕೀಟಗಳ
ಕಡಿತ, ಶೈತ್ಯ, ನೆಗಡಿ, ಶೀತದ
ಉಬ್ಬಸ, ಶ್ವಾಸಕಾಸ,
ಗಂಟಲು ಕಟ್ಟುವುದು,
ಕೆಮ್ಮು ಮೊದಲಾದುವನ್ನೂ
ಗುಣಪಡಿಸುವುದು.

D-J-K-18

ವಿದೇಶೀ ರಾಜಕೀಯ

ಫ್ರಾನ್ಸು ತನ್ನ ಸಾಮ್ರಾಜ್ಯಶಾಹಿ ಧೋರಣೆ ತ್ಯಜಿಸಲಿಚ್ಛಿಸುವುದಿಲ್ಲವೆಂಬುದಕ್ಕೆ ಎರಡು ನಿದರ್ಶನಗಳು ಸಿಕ್ಕಿವೆ.

1. ಮಡಗಾಸ್ಕರದಲ್ಲಿರುವ ರಾಷ್ಟ್ರೀಯ ಪಕ್ಷವನ್ನು ನಾಮಾಶೇಷ ಮಾಡಲು ಅದು ಹೊಸ ಶಾಸನಗಳನ್ನು ಜಾರಿಗೆ ತಂದಿರುತ್ತದೆ.

2. ಸಾಮ್ರಾಜ್ಯಶಾಹಿಯ ನಾಯಕರಾಗಿರುವ ಚರ್ಚಿಲ್ಲರಿಗೆ ಫ್ರಾನ್ಸಿನ ಅತೀ ಉನ್ನತ ಸೈನ್ಯ ಪದಕ ಕೊಡಲ್ಪಟ್ಟಿದೆ.

— ಬ್ಲಿಟ್ಜ್.

★

ಹಿಟ್ಲರನ ಹೆಸ್ಸನು ಇಂಗ್ಲೆಂಡಿಗೆ ಓಡಿಬಂದು "ನಾವು ಹಿಡಿದ ಯುರೋಪನ್ನು ನಮಗೇ ಬಿಡುವುದಾದರೆ ಬ್ರಿಟಿಷ್ ಸಾಮ್ರಾಜ್ಯವನ್ನು ಶಾಶ್ವತ ಮಾಡಲು ನಾವು ಬೆಂಬಲ ಕೊಡುವೆವು" ಎಂದು ತಿಳಿಸಿದಾಗ ಚರ್ಚಿಲ್ಲರು ಅದನ್ನು ಕಿವಿಮೇಲೆ ಹಾಕಿಕೊಳ್ಳಲಿಲ್ಲ. ಕಾರಣ ಎರಡನ್ನೂ ನುಂಗುವ ಯೋಚನೆ ಅವರದಿತ್ತು. ಆದರೆ ಅತ್ತ ರಶ್ಯ ಇತ್ತ ಅಮೇರಿಕಗಳಿದ್ದುವೆಂದು ಉಷ್ಟ್ರಪಕ್ಷಿ ಧೋರಣೆಯ ಚರ್ಚಿಲ್ಲರು ಮರೆತುಬಿಟ್ಟಿರಬಹುದು.

—ನಾಗ್ಪುರ್ ಟ್ಯಾಮ್ಸ್.

★

ಜನಾಂಗ ಸಂಘದಲ್ಲಿ ಆಸಫ್ ಅಲಿಯವರು ಅರಬರ ಪರವಾಗಿ ವಹಿಸಿದ ಧೋರಣೆಯನ್ನು ಅರಬೀ ದುರೀಣರು ಹೃತ್ಪೂರ್ವಕವಾಗಿ ಶ್ಲಾಘಿಸಿ ಅಖಂಡ ಭಾರತಕ್ಕೆ ತಮ್ಮ ಬೆಂಬಲವನ್ನು ಸೂಚಿಸಿರುವರು.

★

ಭಾರತೀಯ ಎಣ್ಣೆ, ಚರ್ಮಗಳಿಗೆ ಯುರೋಪಿನಲ್ಲಿ ಮುಂದೆ ತುಂಬಾ ಗಿರಾಕಿಗಳು ಲಭಿಸುವುದೆಂದು ಭಾರತೀಯ ವಾಣಿಜ್ಯ ಪ್ರತಿನಿಧಿಗಳೊಬ್ಬರು ಜರ್ಮನಿಯಿಂದ ತಿಳಿಸಿರುವುದನ್ನು ವಿನೋದ ದಾಟಿಯಲ್ಲಿ ಟೀಕಿಸುತ್ತಾ ಒಂದು ಪತ್ರಿಕೆ "ನಮ್ಮ ರಕ್ತ ಮಾಂಸ ಶೋಷಿಸಿದ ಬಿಳಿಯರಿಗೆ ನಮ್ಮ ಚರ್ಮ, ಎಣ್ಣೆಗಳು ಖಂಡಿತ ರುಚಿಸುವವು."

★

ಪೆಲೆಸ್ತೀನಿನಲ್ಲಿ ರಶ್ಯವು ಕೈಯಾಡಿಸುತ್ತಿದೆ. ಯೆಹೂದಿ ಕ್ರಾಂತಿಕಾರರಿಗೆ ಅಷ್ಟೊಂದು ಶಸ್ತ್ರಾಸ್ತ್ರಗಳು ಎಲ್ಲಿಂದ ದೊರಕಿದುವು. ಇವೇ ಮೊದಲಾದ ಊಹಾಪೋಹೆಗಳಿರುವಾಗ ರಶ್ಯವು "ಪಲೇಸ್ತೀನ ಮೇಲೆ ತಮಗಿರುವ ಅಧಿಕಾರವನ್ನು ಬ್ರಿಟಿಷರು ಬಿಟ್ಟುಬಿಡಬೇಕು'' ಎಂದು ಒಂದು ರೇಡಿಯೊ ಟೀಕೆಯಲ್ಲಿ ತಿಳಿಸಿರುವುದು ಈ ಸಂದೇಹವನ್ನು ಬಲಪಡಿಸುತ್ತದೆಂದು ಟ್ಯಾಮ್ಸ್ ಪತ್ರಿಕೆಯು ಒಂದು ಲೇಖನ ತಿಳಿಸುತ್ತದೆ.

★

ಮಣಿಪುರ ಎಂಬ ಹೆಸರೇ ಭಾರತೀಯ ಮೂಲದ್ದು. ಬರ್ಮಾ ಗಡಿಯ ಬಳಿಯಿರುವ ಮಣಿಪುರ ಸಂಸ್ಥಾನವು ಬರ್ಮಾ ಪ್ರಾಂತ್ಯಕ್ಕೆ ಸೇರಲು ಇಚ್ಛೆಪಡುವುದೆಂದೂ ಆ ಕುರಿತು ಪರ್ಯಾಲೋಚಿಸಲು ಆಂಗ್ ಸೇನರು ಕಡೆ ತೆರಳುವರೆಂದೂ ಒಂದು ವರದಿ. "ಫೆಸಿಸ್ಟ್ ವಿರೋಧಿಗಳಾದ ಆಂಗ್ ಸೇನರು ಈ ಶುದ್ಧ ಭಾರತೀಯರ ಸಂಸ್ಥಾನವನ್ನು ವಶಪಡಿಸುವುದಕ್ಕೆ ಇಚ್ಛಿಸದಿದ್ದರಷ್ಟೆ ಸಾಕು"—ಆ. ಬ. ಪತ್ರಿಕೆ.

ಸಿಹಿಸುದ್ದಿ ಸಂಗ್ರಹ

ಸಂಯುಕ್ತ ಜನಾಂಗ ಸಂಘದ 'ಕಳೆಕೊಂಡ ವಸ್ತು ಸಂಗ್ರಹಾಲಯ'ದಲ್ಲಿ ಜನರು ಮೋಟಾರು ರೈಲು ಮತ್ತಿತರ ಸ್ಥಳಗಳಲ್ಲಿ ಮರೆತು ಬಿಡುವ ಸಾಮಾನುಗಳನ್ನು ನೋಡಿದರೆ ಈ ನಿರ್ಬಲತೆಯು ಒಂದು ಅಂತರಾಷ್ಟ್ರೀಯ ಮಾನವ ಲಕ್ಷಣವೆಂದು ತೋರುತ್ತದೆ. ಇಂತಹ ವಸ್ತುಗಳಲ್ಲಿ ಕೃತಕ ಹಲ್ಲು ಮಾಲೆಗಳೂ, ಕನ್ನಡಕ, ಪುಸ್ತಕಗಳೂ, ಕಾಫಿಹುಡಿ ಡಬ್ಬಿಗಳೂ, ಕತ್ತರಿ ಕೊಡೆಗಳೂ, ಜನಾಂಗ ಸಂಘದ ಸಭೆಯ ಕಾರ್ಯಕಲಾಪ ವರದಿಗಳೂ, ಗೊಂಬೆ ಪಾದರಕ್ಷೆಗಳೂ ಇವೆ.

★

ಜಗತ್ತಿನ ಕೃಷಿಗಾರಿಕೆಯ ಪ್ರಾಣಿಗಳ ಆರೋಗ್ಯ ರಕ್ಷಣೆಯ ಅಂತರಾಷ್ಟ್ರೀಯ ಯೋಜನೆಯೊಂದನ್ನು ತಯಾರಿಸಲು ವೊಶಿಂಗ್ಟನ್ನಿನಲ್ಲಿ ಹಲವು ರಾಷ್ಟ್ರಗಳ ಪ್ರತಿನಿಧಿಗಳು ಪರ್ಯಾಲೋಚಿಸುತ್ತಿರುವರು.

★

ಕೆಲಿಫೋರ್ನಿಯದಲ್ಲಿ ನೀವೊಂದು ಇಲಿಯ ಗೂಡನ್ನು ಕೊಂಡುಕೊಳ್ಳಬೇಕಾದರೆ ಮೊದಲು ಸರಕಾರದ 'ಬೇಟೆ ಲೈಸನ್ಸ'ನ್ನು ಪಡಕೊಳ್ಳಬೇಕು.

★

ಡಿಲ್ಲಿಯಲ್ಲಿ ಒರ್ವ ಕುದುರೆ ಬಂಡಿಯವನು ತನ್ನ ಗಾಡಿಯ ಸುತ್ತು ಕುಸ್‌ಕುಸ್ ಬೇರಿನ ಪರದೆಗಳನ್ನು ಇರಿಸಿ ಅದರ ಮೇಲೆ ನೀರು ಒಯ್ಯುವುದರ ಮೂಲಕ ಪ್ರಯಾಣಿಕರಿಗೆ ಸೆಕೆಕಾಲದಲ್ಲಿ ತಂಪಾಗಿ ಕೂಡುವ ಏರ್ಪಾಡನ್ನು ಮಾಡಿರುವನು.

★

ಕರಾಚಿಯಲ್ಲಿ ಒಂದು ಸಾವಿರಕ್ಕೂ ಮಿಕ್ಕಿ ವರದಕ್ಷಿಣೆ ಪಡೆಯುವುದು ಶಿಕ್ಷಾರ್ಹವಾಗುವುದು. ಆದರೆ ಈಗ ಗಂಡಿನ ಕಡೆಯವರು ಲಗ್ನವಾದಾಕ್ಷಣ ಗುಪ್ತವಾಗಿ 10ರಿಂದ 30 ಸಾವಿರ ತನಕ ದಕ್ಷಿಣೆ ಕೇಳುತ್ತಾರೆ. ಕೊಡದಿದ್ದರೆ ಹುಡುಗಿಯನ್ನು ತ್ಯಜಿಸುವುದಾಗಿ ಬೆದರಿಕೆ ಹಾಕುತ್ತಾರೆ. ಹೀಗೆ ಅಲ್ಲಿ ಅನೇಕ 'ಕಪ್ಪುಸಂತೆ' ಮದುವೆಗಳು ನಡೆಯುತ್ತವೆಂದು ಅಲ್ಲಿನ ಒಂದು ಪತ್ರಿಕೆ ತಿಳಿಸುತ್ತದೆ.

★

ಲೋಸ್‌ಎಂಜಲಿಸ್‌ನಲ್ಲಿ ಎಸ್ತರ್ ಬ್ರೂಕ್ಸ್ ಎಂಬ ಮಹಿಳೆ ಒಂದು ಮೋಟಾರ್ ಕಾರಿಗೆ ಸಿಕ್ಕಿಬಿದ್ದಳು. ಆಸ್ಪತ್ರೆಗೆ ಒಯ್ದು ನೋಡುವಾಗ ಅವಳ ಮೂಗಿನ ತುಂಡು ಕಾಣೆಯಾಗಿತ್ತು. ಅದಿದ್ದರೆ ಪುನಃ ಜೋಡಿಸಿ 'ಕೃಷಿ' ಮಾಡಬಹುದೆಂದು ಶಸ್ತ್ರ ಚಿಕಿತ್ಸಜ್ಞರು ತಿಳಿಸಿದಾಗ ಪೋಲೀಸರು ಘಟನೆಯ ಸ್ಥಳಕ್ಕೆ ಹೋಗಿ ಅಲ್ಲಿ ಬಿದ್ದ ಮೂಗಿನ ತುಂಡನ್ನು ಹಸಿಹಸಿಯಾಗಿ ತಂದು ಕೊಟ್ಟಾಗ ಅದನ್ನು ಯಶಸ್ವಿಯಾಗಿ ಜೋಡಿಸಲಾಯಿತು.

★

ಕೆಲವು ದಿನಗಳ ಹಿಂದೆ ಲಂಡನಿನ ಕೊನ್ವೆ ಹೋಲಿನಲ್ಲಿ 5 ಸಾವಿರ ಬ್ರಿಟಿಷ್ ಬೌಧರು 200 ಅಡಿ ಬುದ್ಧನ ವಿಗ್ರಹವನ್ನು ಪೂಜಿಸಿದರು. ಭಕ್ತರು ಕೊಟ್ಟ ಕಾಣಿಕೆಯನ್ನು ವೆಸ್ಟ್ ಮಿನ್ಸ್ಟರ್ ಆಸ್ಪತ್ರೆಗೆ ಕೊಡಲಾಯಿತು. ಬಿ. ಬಿ. ಸಿ ಯವರು ಈ ಸಮಾರಂಭವನ್ನು ತಮ್ಮ ಕೇಂದ್ರದಿಂದ ಪ್ರಸಾರ ಮಾಡಿದ್ದರು.

★

ನಾವು ಸೀನುವಾಗ ನಮ್ಮ ಮೂಗಿನಿಂದ ಶೀತದ ಅಣುಗಳು ಗಂಟೆಗೆ ನೂರು ಮೈಲು ವೇಗದಲ್ಲಿ ಹಾರಿ ಇತರರನ್ನು ಅಂಟಿಕೊಳ್ಳಲು ಧಾವಿಸುತ್ತವೆ.

★

ಅಲಹಾಬಾದ್ ನಗರಸಭೆಯವರು ತಮ್ಮ ಸಭೆಯ ಆಯವನ್ನು ಹೆಚ್ಚಿಸಲು ಹೊಸ ತೆರಿಗೆ ವಿಧಾನಗಳನ್ನು ಪರ್ಯಾಲೋಚಿಸಲು ಸಭೆ ಸೇರಿದಾಗ ಒರ್ವ ಸದಸ್ಯರು ವಿಳ್ಯವು ಒಂದು ಸುಖದ ವಸ್ತುವಾಗಿರುವುದೆಂದೂ ಅದಕ್ಕೆ ತೆರಿಗೆ ಹಾಕಬೇಕೆಂದೂ ಸೂಚಿಸಿದಾಗ ಅಧ್ಯಕ್ಷರು ವಿಳ್ಯ ತಿನ್ನುವುದು ಸೌಖ್ಯಕ್ಕಾಗಲ್ಲವೆಂದು ತಿಳಿಸಿದರು.

★

ಸೂರ್ಯಮಂಡಲದ ಮೇಲ್ಭಾಗದ ಉಷ್ಣತೆಯು 11 ಸಾವಿರ ಡಿಗ್ರಿಗಳಷ್ಟಿದೆ. 3500 ಡಿಗ್ರಿ ಉಷ್ಣಕ್ಕೆ ಎಂತಹ ಲೋಹವಾದರೂ ಕರಗುವುದು.

★

ಅಮೇರಿಕದ ಬಸ್ ನಿಲ್ದಾಣಗಳಲ್ಲಿ ಕಾದು ನಿಲ್ಲುವ ಪ್ರಯಾಣಿಕರ ಮನೊರಂಜನೆಗಾಗಿ 'ಇಣುಕುವ ಚಲಚಿತ್ರ ಗೂಡು'ಗಳನ್ನು ಇಡಲಾಗಿದೆ. ಅರಾಣೆ ನಾಣ್ಯ ಹಾಕಿ ಇಣಿಕಿದರೆ 10 ಮಿನಿಟುಗಳ ತನಕ ಮಾತನಾಡುವ ಚಲಚಿತ್ರವು ಕಾಣುವುದು.

★

ಬೊಂಬಾಯಿಯಲ್ಲಿ 8 ಸಾವಿರ ಕುರುಡರಿದ್ದಾರೆ. ಭಾರತದಲ್ಲಿ 6 ಲಕ್ಷ ಅಂಧರಿದ್ದಾರೆ. ಪ್ರತಿ ನೂರರಲ್ಲಿ ಒಬ್ಬನು ಕಿವುಡ ಮೂಕನಿದ್ದಾನೆ.

★

ಮನುಷ್ಯನಲ್ಲಿ ನಿಜವಾದ ರಾಜಕೀಯ ವಿವೇಕವು ಅರಳಬೇಕಾದರೆ ಅವನು 300 ವರ್ಷಗಳ ತನಕ ಬಾಳಬೇಕೆಂದು ಬರ್ನಾರ್ಡ್ ಶೋ ಅವರ ಅಭಿಪ್ರಾಯ.

ಇಂಗ್ಲೆಂಡಿನ ಲೀಕ್ ಎಂಬ ಪಟ್ಟಣ ಸಮುದ್ರ ಬಳಿಯ ಕಣಿವೆಯಲ್ಲಿದೆ. ಅಲ್ಲಿ ಸೂರ್ಯನು ಕಣಿವೆಯ ಒಂದು ಕಡೆಯ ಗುಡ್ಡದ ಹಿಂದೆ ಅಸ್ತನಾಗುವನು. ನಂತರ ಅದರ ಹಿಂದಿನ ಸಮುದ್ರದಲ್ಲಿ ಮುಳುಗುವನು. ಆದುದರಿಂದ ಈ ಊರಿನ ಜನರು ತಮಗೆ ಎರಡು ಸೂರ್ಯಾಸ್ತಗಳೆಂದು ಹೇಳಿಕೊಳ್ಳುತ್ತಾರೆ.

ನಿಮ್ಮ ಭಾರ 140 ರಾತ್ತಲುಗಳಿದ್ದರೆ ನಿಮ್ಮ ದೇಹದಲ್ಲಿ 9 ಸಾವಿರ ಪೆನ್ಸಿಲುಗಳಿಗಾಗುವಷ್ಟು ಅಂಗಾರ (carbon)ವಿರುತ್ತದೆ.

ಚತುರಂಗದ ಆಟವು ಭಾರತದಲ್ಲೇ ಪ್ರಾರಂಭಿಸಲ್ಪಟ್ಟದ್ದು.

ಲಂಡನ್ ನಗರ ಸಭೆಯವರ ಆಡಳಿತದಲ್ಲಿ 117 ಚದರ ಮೈಲು ವಿಸ್ತೀರ್ಣದ ನಗರ ಭಾಗವಿದೆ.

ಲಂಡನಿನ ಕಲ್ಲಿದ್ದಲು ಗನಿಗಳಲ್ಲಿ ಕೃತಕ ಸೂರ್ಯನ ಬಿಸಿಲು ಬೀರುವ ವಿದ್ಯುತ್ ದೀಪಗಳನ್ನು ಜೋಡಿಸಲು ಏರ್ಪಾಡುಗಳಾಗಿವೆ.

ವಾರ್ಸೊ ನಗರದಲ್ಲಿ ಕಳೆದ ಚಳಿಗಾಲದಲ್ಲಿ ವಿಪರೀತ ಹಿಮವು ಬಿದ್ದಿತ್ತು. ಕೆಲವು ಕಡೆ ಆರೆಂಟು ಅಡಿಗಳ ತನಕ ಹಿಮ ರಾಶಿಯುಂಟಾಗಿತ್ತು. ಚಳಿಗಾಲ ಕಳೆದು ವಸಂತಕಾಲ ಬರುತ್ತಲೆ ಹಿಮ ಕರಗಿದಾಗ ಅದರಿಂದುಂಟಾದ ನೀರಿನಿಂದ ಎರಡು ಸೇತುವೆಗಳೆ ಸಂಪೂರ್ಣ ಕೊಚ್ಚಿಕೊಂಡು ಹೋಗಿವೆಯಂತೆ.

ಜಗತ್ತಿನಲ್ಲಿ ಬೆಡನ್ ಪವೆಲ್ಲರ ಬ್ರಿಟಿಷ್ ಸಂಘಕ್ಕೆ ಸೇರಿದ 5 ಲಕ್ಷ ಸ್ಕೌಟ್ ಸದಸ್ಯರಿರುವರು.

ಗಂಟಲು ಬೇನೆ
ಅಥವಾ ಕೆಮ್ಮಿಗೆ

ವಿಷಹಾರಿ ಶ್ವಾಸನೀಯ ಪೆಪ್ಸ ಮಾತ್ರೆಗಳನ್ನು ತೆಗೆದುಕೊಳ್ಳಿರಿ. ಪೆಪ್ಸು ಬಾಯಲ್ಲಿ ಕರಗುತ್ತಿರುವಾಗ ಅದರ ಔಷಧೀಯ ಸತ್ವವು ಶ್ವಾಸದೊಡನೆ ಕೂಡಿ ನಿಮ್ಮ ಶ್ವಾಸಕೋಶವನ್ನು ಸೇರುವುದು.
ಪೆಪ್ಸು, ನೆಗಡಿ, ಕೆಮ್ಮು, ಬ್ರೊಂಕೈಟಿಸ್, ಇನಫ್ಲುಯೆಂಜಾ ಮತ್ತಿನ್ನಿತರ ಎಲ್ಲಾ ಶ್ವಾಸಕೋಶಗಳ ಬೇನೆಗೆ ಜಗತ್ಪ್ರಸಿದ್ಧ.

ಪೆಪ್ಸನ್ನು ಸೇವಿಸಿರಿ

PEPS

ವಿಷಹಾರಿ ಶ್ವಾಸನೀಯ ಮಾತ್ರೆಗಳು
ಅದಿಲ್ಲದೆ ಎಂದೂ ಇರದಿರಿ

NO 4.

ವೀರ ಬಚ್ಚಾ

ಮಕ್ಕಳನ್ನು ಬಲಿಷ್ಠರನ್ನಾಗಿಯೂ, ಆರೋಗ್ಯವಂತರನ್ನಾಗಿಯೂ, ಮಾಡುವ ಶಕ್ತಿದಾಯಕ 4ಔನ್ಸಿನ ಬಾಟ್ಲಿಗೆ 1ರೂ.

ಬಿರ್ಲಾ ಲೆಬೋರೇಟರಿಸ್

ಸೇಲ್ಸ್ ಆಫೀಸು.
64, ವಿಕ್ಟೋರಿಯಾ ಘಾಟ್ ಸ್ಟ್ರೀಟ್, ಕಲ್ಕತ್ತಾ.

ಮದ್ರಾಸು ಸಮಾಚಾರ

ಗಿರಣಿ ಬಟ್ಟೆ–ಪ್ರತ್ಯೇಕ ಪರ್ಮಿಟು

ಯಾವ ಉದ್ದೇಶಕ್ಕೂ ಗೊತ್ತುಪಡಿಸಿದ ರೇಷನ್ ಪ್ರಮಾಣಕ್ಕಿಂತ ಹೆಚ್ಚಿಗೆ ಗಿರಣಿ ಬಟ್ಟೆ ಕೊಳ್ಳುವ ಬಗ್ಗೆ ಪ್ರತ್ಯೇಕ ಪರ್ಮಿಟುಗಳು ಸರಕಾರದಿಂದ ಕೊಡಲ್ಪಡುವುವು. ಅಂಥ ಅರ್ಜಿಗಳನ್ನು ಪರಿಶೀಲಿಸಿ ಶಿಫಾರಸು ಮಾಡುವಂತೆ ಒಂದು ಸಮಿತಿಯು ರಚಿಸಲ್ಪಟ್ಟಿದೆ. ಅರ್ಜಿದಾರನು ವಾಸಿಸುವ ಅಥವಾ ಬಟ್ಟೆಗಾಗಿ ಕೇಳುವ ಸಂಸ್ಥೆಯು ಇರುವ ಜಿಲ್ಲೆಯ ಕಲೆಕ್ಟರಿಗೆ ಅರ್ಜಿ ಮಾಡಬೇಕಲ್ಲದೆ, ಪ್ರೊವಿನ್ಸಿಯಲ್ ಟೆಕ್ಸ್‌ಟೈಲ್ ಕಮಿಷನರಿಗೆ ನೇರಾಗಿ ಕಳುಹಿಸಕೂಡದು. ಅರ್ಜಿಯಲ್ಲಿ ಅರ್ಜಿದಾರನ ಹೆಸರು, ವಿಳಾಸ, ವಸ್ತ್ರದ ಪ್ರಮಾಣ ಹಾಗೂ ವಿವರ ವಸ್ತ್ರ ಬೇಕಾಗಿರುವ ಅವಶ್ಯಕತೆ, ತನಗೆ ದೊರೆಯುವ ರೇಷನ್ ಪ್ರಮಾಣ ಇತ್ಯಾದಿಗಳನ್ನೂ ಸೂಚಿಸಬೇಕು. ಕಲೆಕ್ಟರರು ತಾವು ಶಿಫಾರಸುಮಾಡಿದ ಅರ್ಜಿಗಳನ್ನು ಪ್ರತಿ ಸೋಮವಾರ ಪ್ರಾಂತಿಕ ಟೆಕ್ಸ್‌ಟೈಲ್ ಕಮಿಷನರಿಗೆ ತಲಪುವಂತೆ ಕಳುಹಿಸಿಕೊಡುವರು. ಕಮಿಟಿಯು ಅಂತಹ ಅರ್ಜಿಗಳನ್ನು ಪರಿಶೀಲಿಸಿದ ಅನಂತರ ಸರಕಾರದ ಅಪ್ಪಣೆಯನ್ನು ಪಡೆದು ಕಮಿಷನರು ಕಲೆಕ್ಟರರಿಗೆ ಕಳುಹಿಸುವರು. ಸರಕಾರದ ಅಪ್ಪಣೆ ಅನುಸಾರವಾಗಿ ಕಲೆಕ್ಟರರು ಪ್ರತ್ಯೇಕ ಪರ್ಮಿಟುಗಳನ್ನು ಅರ್ಜಿದಾರರಿಗೆ [illegible] ಕಳುಹಿಸುವರು. ಗಿರಣಿ ಬಟ್ಟೆಯು ಕೊರತೆ ಇರುವುದರಿಂದ ಅತ್ಯಾವಶ್ಯಕ ಸಂದರ್ಭಗಳಲ್ಲಿ ಮಾತ್ರವೇ ಪ್ರತ್ಯೇಕ ಪರ್ಮಿಟುಗಳು ಕೊಡಲ್ಪಡುವುವು.

ದ್ವಿದಳ ಧಾನ್ಯ

ಏಪ್ರಿಲಲ್ಲಿ 4000 ಟನ್ ತೊಗರಿ, 1000 ಟನ್ ಹೆಸರು, ಮದ್ದು [illegible] ಮುಂದೆ ಮುಟ್ಟಿತು. [illegible] 1080 ಕಡಲೆ ಹಿಟ್ಟು 1130 ಟನ್ ತೊಗರಿ ಮತ್ತು ಹೆಸರು [illegible]. ಜಿಲ್ಲೆಗೆ 13ನೇ ತಾರೀಕಿಗೆ 1600 ಟನ್ ತೊಗರಿ, ಮತ್ತು ಹಿಟ್ಟು ಬಂದಿವೆ [illegible] ಧಾನ್ಯಗಳ [illegible] ಜಾರಿಗೆ ಬಂದಿದೆ

ಗ್ರಾಮ ಕೈಗಾರಿಕೆ

"ವಿಕೇಂದ್ರೀಕರಣದ ತತ್ವವನ್ನು ಪ್ರಚಾರ ಪಡಿಸುವುದು ನನ್ನ ಮುಖ್ಯತ್ವ [illegible] ಹಾಗಿಲ್ಲದಿದ್ದರೆ ಮುಕ್ತಿ ಇಲ್ಲ [illegible] ಏಕೆಂದರೆ ದೊಡ್ಡ ಕೈಗಾರಿಕೆಗಳಿಂದ ಕೂಡಿದ ಸರ್ವಾಧಿಕಾರ ಅಸಂಖ್ಯಾತ ಜನರ ಜೀವನವನ್ನು ಕೆಲವೇ [illegible] ಕೈಗೆ ಒಪ್ಪಿಸುವುದಾಗಿದೆ. ಕೇಂದ್ರೀಕೃತ ಆರ್ಥಿಕ ಅಧಿಕಾರವು ಕೆಲವೇ [illegible] ಶಾಮಿಗಳಲ್ಲಾಗಲೀ, ಸರಕಾರದ ಕೈಯಲ್ಲಾಗಲೀ ಇರಕೂಡದು. ಪೂರ್ಣ ಅಧಿಕಾರವು ಸಂಪೂರ್ಣ [illegible] ಎಡೆ ಕೊಡುತ್ತಿದೆ. ಸರಕಾರದ ವಶ ರಾಜಕೀಯ ಅಧಿಕಾರ ಮಾತ್ರ ಇದ್ದರೆ ಸಾಕು. ಅದಕ್ಕೆ ಆರ್ಥಿಕ ಅಧಿಕಾರವನ್ನು ಸೇರಿಸಿದರೆ ಅದು ಸರ್ವಾಧಿಕಾರವಾಗುತ್ತದೆ. ನೌಕರ ಶಾಹಿಗಳೂ, ಸರ್ವಾಧಿಕಾರಿಗಳೂ ಸ್ವಸ್ಥಚಿತ್ತದಿಂದಿರಲಾರರು"

ಆಚಾರ್ಯ ಕೃಪಾಲಿನಿ

ರೇಷನ್

ಪ್ರಾಂತದಲ್ಲೆಲ್ಲಾ 12 ಔನ್ಸ್ ಅಕ್ಕಿ ಕೊಡುವ ಉದ್ದೇಶದಿಂದ ಮೇ 4ನೇ ತಾರೀಖಿನಿಂದ ಮಲಬಾರು ಜಿಲ್ಲೆಯಲ್ಲಿ 12 ಔನ್ಸ್ ಅಕ್ಕಿ ಕೊಡಲಾಗುವುದು. ನಮ್ಮ ಪ್ರಾಂತಕ್ಕೆ ಬೇರೆ ಪ್ರಾಂತಗಳಿಂದಲೂ, ಸಂಸ್ಥಾನ ಹಾಗು ಪರದೇಶಗಳಿಂದಲೂ ಮುಂದಿನ ತಿಂಗಳಲ್ಲಿ ಅಕ್ಕಿ ಬರಬಹುದೆಂದು ಆಶಿಸಲಾಗಿದೆ. ಪ್ರಾಂತದಲ್ಲಿ ಈಗ ಇರುವ ದಾಸ್ತಾನು ಬೆಳೆಗಳಿಂದ ಪ್ರಕೃತ ಜಾರಿಯಲ್ಲಿರುವ ಪರಿಮಾಣವನ್ನೇ ಇಟ್ಟುಕೊಳ್ಳಲು ಅನುಕೂಲವಾಗದು. ಆದುದರಿಂದ ಒಂದುವೇಳೆ ಹೊರಗಿನಿಂದ ಅಕ್ಕಿ ಬಾರದಿದ್ದರೆ ತಿರುಗಿ ರೇಷನನ್ನು 8 ಔನ್ಸಿಗೆ ಇಳಿಸಲಾದೀತೆಂದು ಸರಕಾರವು ಈ ಮೂಲಕ ತಿಳಿಸುತ್ತದೆ.

ಕಮ್ಯುನಿಸ್ಟ್ ಪಕ್ಷದ ದುಷ್ಪರಿಣಾಮ

ದೇಶದ ಸ್ವಾತಂತ್ರ್ಯವನ್ನು ನಾಶ ಮಾಡುವುದಕ್ಕೂ ಅದರ ಅಭ್ಯುದಯವನ್ನು ಕೆಡಿಸುವುದಕ್ಕೂ ಯತ್ನಿಸಿ, ಯಾವ ದೇಶವನ್ನಾದರೂ ಕೊನೆಗೆ ದಾಸ್ಯಕ್ಕಿಳಿಸುವ ಕಮ್ಯುನಿಸ್ಟ್ ಪಕ್ಷದ ಮೂರು ಗುರಿಗಳು.

ಒಂದನೆಯದಾಗಿ, ಎಲ್ಲೆಲ್ಲಿಯೂ ಮುಷ್ಕರಗಳಾಗುವಂತೆ ಹುರಿದುಂಬಿಸುವುದು. ಸಾಧ್ಯವಿದ್ದಷ್ಟು ಅಧಿಕ ಕೈಗಾರಿಕಾ ಗಲಭೆಯನ್ನೂ ಅವಿಶ್ವಾಸವನ್ನೂ ಉಂಟುಮಾಡುವುದು.

ಎರಡನೆಯದಾಗಿ ಜನರಲ್ಲಿ ದುರಭಿಪ್ರಾಯ ಹುಟ್ಟುವಂತೆ ಪ್ರಚಾರ ಮಾಡುವುದು. ವ್ಯಾಪಾರಸ್ಥರಿಗೆ ತಪ್ಪು ತಿಳುವಳಿಕೆಯನ್ನು [illegible] ವ್ಯಾಪಾರದಲ್ಲಿರುವ [illegible] ಕಡಿಮೆ [illegible] ಅಲ್ಲದೆ [illegible] ಉತ್ಪನ್ನವು ವ್ಯರ್ಥವಾದು [illegible] ಪ್ರಯತ್ನಿಸುವುದು.

[illegible]

ಜಾರ್ಜ್ ಎಸ್ ಬನ್ಸನ್,

ಪ್ರೆಸಿಡೆಂಟ್ ಹಾರ್ಡಿಂಗ್ ಕಾಲೇಜು ಅಮೇರಿಕ

ಸ್ವದೇಶ ವಾರ್ತೆ

ಕಾಠ್ಯಾವಾಡ್ ಸಂಸ್ಥಾನಗಳನ್ನು ಒಟ್ಟು ಸೇರಿಸಿ ಒಂದು ಒಕ್ಕೂಟ ಮಾಡಿ ರಾಜನೇಮಿತ ಪ್ರತಿನಿಧಿಗಳನ್ನು ಘಟನಾಸಮಿತಿಗೆ ಸೇರಿಸಲು ನವನಗರದ ಜಾಮ್ ಸಾಹೇಬರು ಯತ್ನಿಸುವರೆಂದೂ ಆ ಕುರಿತು ಅವರು "ಸರ್ದಾರ್ ಪಟೇಲ್, ನೆಹುರುಗಳನ್ನು ಅವರು ಸಂದರ್ಶಿಸಲಿರುವರೆಂದೂ "ಇದಕ್ಕೆ ಪ್ರಜೆಗಳ ಬೆಂಬಲವಿಲ್ಲ"ವೆಂದೂ ಕಾಠ್ಯಾವಾಡ್ ಪ್ರಜಾಮಂಡಳದ ಕಾರ್ಯದರ್ಶಿಗಳು ಪಟೇಲರಿಗೆ ತಿಳಿಸಿದ್ದಾರೆ

★

"ಗಾಂಧೀ–ಜಿನ್ನಾ ಭೇಟಿಯ ನಂತರ ಮಿ। ಜಿನ್ನರು ಹೊರಡಿಸಿದ ಹೇಳಿಕೆಯ ಮೇರೆಗೆ ವಿಭಾಗೀಕರಣವು ಖಂಡಿತವೆಂದು ಭಾಸವಾಗುತ್ತದೆ. ಪಂಜಾಬವೂ ವಿಚ್ಛೇದಿಸಲ್ಪಟ್ಟು ಅಲ್ಲಿನ ಹಿಂದೂ ಸಿಕ್ಕರಿಗೆ ಅವರವರ ಅಭಿವೃದ್ಧಿ ತಕ್ಕುದಾಗಿ ಪ್ರದೇಶಗಳು ಸಿಗಬೇಕು. ಲೀಗಿನ ಕೈಕೆಳಗೆ ಇರಲು ಮುಸಲ್ಮಾನೇತರರಾರೂ ಇಚ್ಛಿಸುವುದಿಲ್ಲ"ವೆಂದು ಸರ್ದಾರ್ ಸ್ವರನ್‌ಸಿಂಗರು (ಸಿಕ್ ಪಂಥದ ನಾಯಕರು) ತಿಳಿಸುತ್ತಾರೆ

★

ಬಂಗಾಲವನ್ನು ವಿಭಾಗಿಸುವದು ಖಂಡಿತವಾದರೆ ಪೂರ್ವ ಬಂಗಾಲದ ದಳಿತವರ್ಗದ ಜನತೆಯನ್ನು ಆ ಕಡೆಗಳಿಂದ ಪಶ್ಚಿಮ ಬಂಗಾಲಕ್ಕೆ ರವಾನೆ ಮಾಡುವ ಏರ್ಪಾಡು ಮಾಡಬೇಕೆಂದು ಬಂಗಾಲದ ದಳಿತವರ್ಗದ ನಾಯಕರಾದ ಶ್ರೀ ಪಿ. ಆರ್. ಥಾಕೂರರು ಭಾರತ ಸಚಿವ ಲೋರ್ಡ್ ಲಿಸ್ಟೋವೆಲ್ಲರಿಗೆ ತಂತಿ ಮೂಲಕ ತಿಳಿಸಿದ್ದಾರೆ.

★

"ಮನಸ್ಸಿಲ್ಲದೆಯಾದರೂ ಕೊಂಗ್ರೆಸು ಒಂದು ತರದ ವಿಭಾಗೀಕರಣಕ್ಕೆ ಒಪ್ಪಿಕೊಂಡಂತೆ ಮುಸ್ಲಿಂ ಲೀಗು ಬಂಗಾಲ ಪಂಜಾಬದ ವಿಚ್ಛೇದೀಕರಣಕ್ಕೆ ಒಪ್ಪಬೇಕು" ಹೀಗೆಂದು ಲಂಡನಿನ ಸ್ಪೆಕ್ಟೇಟರ್ ಪತ್ರಿಕೆಯು ಸೂಚಿಸುತದೆ

★

ಬ್ರಿಟಿಷ್ ಸರಕಾರದ ಪರವಾಗಿ ಭಾರತದ ದೇಶಿ ಸಂಸ್ಥಾನಗಳಲ್ಲಿರುವ ರೆಸಿಡೆಂಟರೇ ಮೊದಲಾದ ರಾಜಕೀಯ ಮೇಲಾಧಿಕಾರಿಗಳ ಸ್ಥಾನವನ್ನು ಇದೇ ಬರುವ ಜುಲೈ ತಿಂಗಳಾಂತ್ಯದೊಳಗೆ ರದ್ದುಗೊಳಿಸಿ, ಅವರನ್ನು ಸ್ವದೇಶಕ್ಕೆ ಕಳುಹಿಸಲಾಗುವುದೆಂದು ಒಂದು ವರ್ತಮಾನವಿದೆ. ಈ ಅಧಿಕಾರಿಗಳೆಲ್ಲರೂ ಬಿಳಿಯರೆ

★

ಚಾಪ್ರುಗಳನ್ನು ಕೂಡಲೇ ಗುಣ ಪಡಿಸಿರಿ

[illegible] ಕುಟಿಕೂರಾ ಸೋಪು [illegible] ಕುಟಿಕೂರಾ [illegible]

ಕುಟಿಕೂರಾ ಮುಲಾಮು

CUTICURA OINTMENT

ಪ್ರಯಾಣಿಕರಿಗೆ ಸ್ಪೆಶಲು ಸರ್ವಿಸಿನ ಸೂಚನೆ.

ಮುಲ್ಕಿ [illegible] ಫೊಳಲ ಇತ್ಯಾದಿ ಸ್ಥಳಗಳಲ್ಲಿ [illegible] ಜಾತ್ರೆ [illegible] ಸಮ್ಬಂಧ ಪ್ರಯಾಣಿಸುವ ಯಾತ್ರಿಕರ ಬಗ್ಗೆ ಸ್ಪೆಶಲು ಸರ್ವಿಸುಗಳನ್ನು ರನ್ ಮಾಡುವ ಏರ್ಪಾಡನ್ನು ಮಾಡಲಿಚ್ಛಿಸಿದ್ದಾಗ್ಯೂ ಪ್ರಕೃತ ಮೂರು ತಿಂಗಳಿಗೆ ಸಿಗಬೇಕಾದ [illegible] ಕಡಿತವಾಗಿರುವುದ [illegible] ಪೆಟ್ರೋಲು ಸಾಕಾಗದೆ ಕೆಲವು ಸರ್ವಿಸುಗಳನ್ನು ತಾತ್ಕಾಲಿಕವಾಗಿ [illegible] ಸಂದರ್ಭ ಒದಗಿರುವುದರಿಂದಲೂ ಮತ್ತು ಗೇಸು ಬಸ್ಸುಗಳು ಸಹ ಕಡಿಮೆ ಇದ್ದು ಅವುಗಳಿಂದ ದಿನವಹಿ ಸರ್ವಿಸುಗಳನ್ನು ರನ್ ಮಾಡಿಸಲ್ಪಟ್ಟನಂತರವೇ ಸಾಧ್ಯವಿದ್ದಲ್ಲಿ ಮಾತ್ರ ಸ್ಪೆಶಲು ಸರ್ವಿಸುಗಳನ್ನು ರನ್ ಮಾಡಬೇಕಾಗುತ್ತದೆ. ಅಲ್ಲದೆ [illegible] ಕೆಲವು ಕಡೆಗಳಲ್ಲಿ ಪೆಟ್ರೋಲು ಮತ್ತು ಕೆಲವು ಕಡೆಗಳಲ್ಲಿ ಗೇಸು ಬಸ್ಸುಗಳಿರುವುದರಿಂದ ಸಾಧ್ಯವಿದ್ದ ಸ್ಥಳದ ವರೆಗೆ ಮಾತ್ರ ಸ್ಪೆಶಲು ರನ್ ಮಾಡಬೇಕಾಗಿರುತ್ತದೆ. ಉದಾಹರಣೆಗಾಗಿ ಮಂಗ್ಳೂರು—ಮುಲ್ಕಿ ರೂಟಿನಲ್ಲಿ ಪಾವಂಜೆಯಿಂದ ಮುಲ್ಕಿಗೆ ಪೆಟ್ರೋಲು ಬಸ್ಸು ಮಾತ್ರ ರನ್ ಆಗುತ್ತಿರುವುದರಿಂದ, ಮುಲ್ಕಿ ರಥೋತ್ಸವ ಹಾಗೂ ಒಪ್ಪನಾಡು ಜಾತ್ರೆಯ ಸಮ್ಬಂಧ ಸ್ಪೆಶಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ ಗೇಸು ಬಸ್ಸುಗಳ ಅನುಕೂಲತೆ ನೋಡಿ ಪಾವಂಜೆ ತನಕ ಮಾತ್ರ ಸ್ಪೆಶಲುಗಳನ್ನು ರನ್ ಮಾಡಲಾಗುವುದು. ಆದಕಾರಣ ಜಾತ್ರೆಯ ಬಗ್ಗೆ ಪ್ರಯಾಣಿಸಲಿಚ್ಛಿಸುವ ಯಾತ್ರಿಕರು ಸ್ಪೆಶಲ್ ಸರ್ವಿಸು ರನ್ ಆಗಬಹುದೆಂಬ ಹೆಚ್ಚಿನ ಭರವಸೆ ಇಡದೆ ಸೀಟು ಇದ್ದ ಹಾಗೆ ನಮ್ಮ ದಿನವಹಿ ಸರ್ವಿಸುಗಳಲ್ಲಿ ಪ್ರಯಾಣಿಸಬೇಕಾಗಿ ಅಪೇಕ್ಷಿಸುತ್ತೇವೆ

ಅಲ್ಲದೆ ಮದುವೆ ಇತ್ಯಾದಿ ಸಮಾರಂಭಗಳ ಬಗ್ಗೆ ಸ್ಪೆಶಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ R T O. ಕೊಯಂಬುತ್ತೂರು ಇವರಿಂದ ಪರ್ಮಿಶನ್ ಪಡಕೊಂಡೇ ಅಂಥಾ ಸ್ಪೆಶಲುಗಳನ್ನು ಗೇಸು ಬಸ್ಸುಗಳ ಅನುಕೂಲತೆ ನೋಡಿ ರನ್ ಮಾಡಬೇಕಾಗಿರುವುದರಿಂದ, ಹಾಗೆ ಸ್ಪೆಶಲು ಬಸ್ಸುಗಳನ್ನು ಅಪೇಕ್ಷಿಸುವವರು, ಸ್ಪೆಶಲುಗಳ ಬಗ್ಗೆ ಪರ್ಮಿಶನ್ ಪಡಕೊಳ್ಳುವರೆ ನಮಗೆ ಅನುಕೂಲವಾಗುವಂತೆ ತಮ್ಮ ಅರ್ಜಿಗಳನ್ನು ನಮಗೆ 20 ದಿವಸಗಳಿಗೆ ಮುಂಚಿತವಾಗಿ ಬರಕೊಳ್ಳಬೇಕಾಗಿ ಸಾರ್ವಜನಿಕರಿಗೆ ತಿಳಿಸಲಪೇಕ್ಷಿಸುತ್ತೇವೆ.

ಮಂಗ್ಳೂರು,
29-3-1947.

ಜ್ಯೊಂಟ್ ಮೆನೇಜರ್ಸ್,
ದಿ. ಕೆಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

ದೇಶ ರಾಜಕೀಯ

...ನ್ನು ತನ್ನ ಸಾಮ್ರಾಜ್ಯಶಾಹಿ ಧೋರಣೆಯಲ್ಲಿಟ್ಟುಕೊಳ್ಳುವುದಿಲ್ಲವೆಂಬುದಕ್ಕೆ ಎರಡು ನಿದರ್ಶನಗಳು ಸಿಕ್ಕಿವೆ.

1. ಮಡಗಾಸ್ಕರದಲ್ಲಿರುವ ರಾಷ್ಟ್ರೀಯ ಪಕ್ಷವನ್ನು ನಾಮಾಶೇಷ ಮಾಡಲು ಅದು ಹೊಸ ಶಾಸನಗಳನ್ನು ಜಾರಿಗೆ ತಂದಿರುತ್ತದೆ.

2. ಸಾಮ್ರಾಜ್ಯಶಾಹಿಯ ನಾಯಕರಾಗಿರುವ ಚರ್ಚಿಲ್ಲರಿಗೆ ಫ್ರಾನ್ಸಿನ ಅತೀ ಉನ್ನತ ಸೈನ್ಯ ಪದಕ ಕೊಡಲ್ಪಟ್ಟಿದೆ.

— ಬ್ಲಿಟ್ಜ್.

★

ಹಿಟ್ಲರನ ಹೆಸ್ಸನು ಇಂಗ್ಲೆಂಡಿಗೆ ಓಡಿ ಬಂದು "ನಾವು ಹಿಡಿದ ಯುರೋಪನ್ನು ನಮಗೇ ಬಿಡುವುದಾದರೆ ಬ್ರಿಟಿಷ್ ಸಾಮ್ರಾಜ್ಯವನ್ನು ಶಾಶ್ವತ ಮಾಡಲು ನಾವು ಬೆಂಬಲ ಕೊಡುವೆವು" ಎಂದು ತಿಳಿಸಿದ್ದಾಗ ಚರ್ಚಿಲ್ಲರು ಅದನ್ನು ಕಿವಿಮೇಲೆ ಹಾಕಿಕೊಳ್ಳಲಿಲ್ಲ. ಕಾರಣ ಎರಡನ್ನೂ ನುಂಗುವ ಯೋಚನೆ ಅವರದಿತ್ತು. ಆದರೆ ಅತ್ತ ರಶ್ಯ ಇತ್ತ ಅಮೇರಿಕಗಳಿದ್ದುವೆಂದು ಉಷ್ಟಪಕ್ಷಿ ಧೋರಣೆಯ ಚರ್ಚಿಲ್ಲರು ಮರೆತುಬಿಟ್ಟಿರಬಹುದು.

—ನಾಗ್ಪುರ್ ಟೈಮ್ಸ್

★

ಜನಾಂಗ ಸಂಘದಲ್ಲಿ ಅಸಫ್ ಆಲಿಯವರು ಅರಬರ ಪರವಾಗಿ ವಹಿಸಿದ ಧೋರಣೆಯನ್ನು ಅರಬೀ ಧುರೀಣರು ಹೃತ್ಪೂರ್ವಕವಾಗಿ ಶ್ಲಾಘಿಸಿ ಅಖಂಡ ಭಾರತಕ್ಕೆ ತಮ್ಮ ಬೆಂಬಲವನ್ನು ಸೂಚಿಸಿರುವರು.

★

ಭಾರತೀಯ ಎಣ್ಣೆ, ಚರ್ಮಗಳಿಗೆ ಯುರೋಪಿನಲ್ಲಿ ಮುಂದೆ ತುಂಬಾ ಗಿರಾಕಿಗಳಿರಬಹುದೆಂದು ಭಾರತೀಯ ವಾಣಿಜ್ಯ ಪ್ರತಿನಿಧಿಗಳೊಬ್ಬರು ಜರ್ಮನಿಯಿಂದ ತಿಳಿಸಿರುವುದನ್ನು ವಿನೋದ ದಾಟಿಯಲ್ಲಿ ಟೀಕಿಸುತ್ತಾ ಒಂದು ಪತ್ರಿಕೆ "ನಮ್ಮ ರಕ್ತ ಮಾಂಸ ಶೋಷಿಸಿದ ಬಿಳಿಯರಿಗೆ ನಮ್ಮ ಚರ್ಮ, ಎಣ್ಣೆಗಳು ಖಂಡಿತ ರುಚಿಸುವೆವು.'

★

ಪೆಲೆಸ್ತೀನಿನಲ್ಲಿ ರಶ್ಯವು ಕೈಯಾಡಿಸುತ್ತಿದೆ. ಯೆಹೂದಿ ಕ್ರಾಂತಿಕಾರರಿಗೆ ಅಷ್ಟೊಂದು ಶಸ್ತ್ರಾಸ್ತ್ರಗಳು ಎಲ್ಲಿಂದ ದೊರಕಿದುವು ಇವೇ ಮೊದಲಾದ ಊಹಾಪೋಹೆಗಳಿರುವಾಗ ರಶ್ಯವು "ಪಲೇಸ್ತೀನ ಮೇಲೆ ತಮಗಿರುವ ಅಧಿಕಾರವನ್ನು ಬ್ರಿಟಿಷರು ಬಿಟ್ಟು ಬಿಡಬೇಕು'' ಎಂದು ಒಂದು ರೇಡಿಯೊ ಟೀಕೆಯಲ್ಲಿ ತಿಳಿಸಿರುವುದು ಈ ಸಂದೇಹವನ್ನು ಬಲಪಡಿಸುತ್ತದೆಂದು ಟೈಮ್ಸ್ ಪತ್ರಿಕೆಯ ಒಂದು ಲೇಖನ ತಿಳಿಸುತ್ತದೆ

★

ಮಣಿಪುರ ಎಂಬ ಹೆಸರೇ ಭಾರತೀಯ ಮೂಲದ್ದು. ಬರ್ಮಾ ಗಡಿಯ ಬಳಿಯಿರುವ ಮಣಿಪುರ ಸಂಸ್ಥಾನವು ಬರ್ಮಾ ಪ್ರಾಂತ್ಯಕ್ಕೆ ಸೇರಲು ಇಚ್ಛೆಪಡುವುದೆಂದೂ ಆ ಕುರಿತು ಪರ್ಯಾಲೋಚಿಸಲು ಆಂಗ್ ಸೇನರು ಆ ಕಡೆ ತೆರಳುವರೆಂದೂ ಒಂದು ವರದಿ. "ಫೆಸಿಸ್ಟ್ ವಿರೋಧಿಗಳಾದ ಆಂಗ್ ಸೇನರು ಈ ಶುದ್ಧ ಭಾರತೀಯರ ಸಂಸ್ಥಾನವನ್ನು ವಶಪಡಿಸುವುದಕ್ಕೆ ಇಚ್ಛಿಸದಿದ್ದರಷ್ಟೆ ಸಾಕು"—ಅ. ಬ. ಪತ್ರಿಕೆ.

ಸುದ್ದಿ ಸಂಗ್ರಹ

ಸಂಯುಕ್ತ ಜನಾಂಗ ಸಂಘದ 'ಕಳೆಕೊಂಡ ವಸ್ತು ಸಂಗ್ರಹಾಲಯ'ದಲ್ಲಿ ಜನರು ಮೋಟಾರು ರೈಲು ಮುತ್ತಿತರ ಸ್ಥಳಗಳಲ್ಲಿ ಮರೆತು ಬಿಡುವ ಸಾಮಾನುಗಳನ್ನು ನೋಡಿದರೆ ಈ ನಿರ್ಬಲತೆಯು ಒಂದು ಅಂತರರಾಷ್ಟ್ರೀಯ ಮಾನವ ಲಕ್ಷಣವೆಂದು ತೋರುತ್ತದೆ. ಇಂತಹ ವಸ್ತುಗಳಲ್ಲಿ ಕೃತಕ ಹಲ್ಲು ಮಾಲೆಗಳೂ, ಕನ್ನಡಕ, ಪುಸ್ತಕಗಳೂ, ಕಾಫಿಹುಡಿ ಡಬ್ಬಿಗಳೂ, ಕತ್ತರಿ ಕೊಡೆಗಳೂ, ಜನಾಂಗ ಸಂಘದ ಸಭೆಯ ಕಾರ್ಯಕಲಾಪ ವರದಿಗಳೂ, ಗೊಂಬೆ ಪಾದರಕ್ಷೆಗಳೂ ಇವೆ.

★

ಜಗತ್ತಿನ ಕೃಷಿಗಾರಿಕೆಯ ಪ್ರಾಣಿಗಳ ಆರೋಗ್ಯ ರಕ್ಷಣೆಯ ಅಂತರರಾಷ್ಟ್ರೀಯ ಯೋಜನೆಯೊಂದನ್ನು ತಯಾರಿಸಲು ವೊಶಿಂಗ್ಟನ್ನಿನಲ್ಲಿ ಏಳು ರಾಷ್ಟ್ರಗಳ ಪ್ರತಿನಿಧಿಗಳು ಪರ್ಯಾಲೋಚಿಸುತ್ತಿರುವರು

★

ಕೆಲಿಫೋರ್ನಿಯದಲ್ಲಿ ನೀವೊಂದು ಇಲಿಯ ಗೂಡನ್ನು ಕೊಂಡುಕೊಳ್ಳಬೇಕಾದರೆ ಮೊದಲು ಸರಕಾರದ 'ಬೇಟೆ ಲೈಸನ್ಸ'ನ್ನು ಪಡಕೊಳ್ಳಬೇಕು

★

ಡಿಲ್ಲಿಯಲ್ಲಿ ಒರ್ವ ಕುದುರೆ ಬಂಡಿಯವನು ತನ್ನ ಗಾಡಿಯ ಸುತ್ತು ಕುಸ್‌ಕುಸ್ ಬೇರಿನ ಪರದೆಗಳನ್ನು ಇರಿಸಿ ಅದರ ಮೇಲೆ ನೀರು ಒಯ್ಯುವುದರ ಮೂಲಕ ಪ್ರಯಾಣಿಕರಿಗೆ ಸೆಕೆಕಾಲದಲ್ಲಿ ತಂಪಾಗಿ ಕೂಡ್ರುವ ಏರ್ಪಾಡನ್ನು ಮಾಡಿರುವನು

★

ಕರಾಚಿಯಲ್ಲಿ ಒಂದು ಸಾವಿರಕ್ಕೂ ಮಿಕ್ಕಿ ವರದಕ್ಷಿಣೆ ಪಡೆಯುವುದು ಶಿಕ್ಷಾರ್ಹವಾಗುವುದು ಆದರೆ ಈಗ ಗಂಡಿನ ಕಡೆಯವರು ಲಗ್ನವಾದಾಕ್ಷಣ ಗುಪ್ತವಾಗಿ 10ರಿಂದ 30 ಸಾವಿರ ತನಕ ದಕ್ಷಿಣೆ ಕೇಳುತ್ತಾರೆ ಕೊಡದಿದ್ದರೆ ಹುಡುಗಿಯನ್ನು ತ್ಯಜಿಸುವುದಾಗಿ ಬೆದರಿಕೆ ಹಾಕುತ್ತಾರೆ ಹೀಗೆ ಅಲ್ಲಿ ಅನೇಕ 'ಕಪ್ಪುಸಂತೆ' ಮದುವೆಗಳು ನಡೆಯುತ್ತವೆಂದು ಅಲ್ಲಿನ ಒಂದು ಪತ್ರಿಕೆ ತಿಳಿಸುತ್ತದೆ

★

ಲೋಸ್ ಎಂಜಲಿಸ್‌ನಲ್ಲಿ ಎಸ್ತರ್ ಬ್ರೂಕ್ಸ್ ಎಂಬ ಮಹಿಳೆ ಒಂದು ಮೋಟಾರ್ ಕಾರಿಗೆ ಸಿಕ್ಕಿಬಿದ್ದಳು. ಆಸ್ಪತ್ರೆಗೆ ಒಯ್ದು ನೋಡುವಾಗ ಅವಳ ಮೂಗಿನ ತುಂಡು ಕಾಣೆಯಾಗಿತ್ತು ಅದಿದ್ದರೆ ಪುನಃ ಜೋಡಿಸಿ 'ಕೃಷಿ' ಮಾಡಬಹುದೆಂದು ಶಸ್ತ್ರ ಚಿಕಿತ್ಸಜ್ಞರು ತಿಳಿಸಿದಾಗ ಪೋಲೀಸರು ಘಟನೆಯ ಸ್ಥಳಕ್ಕೆ ಹೋಗಿ ಅಲ್ಲಿ ಬಿದ್ದ ಮೂಗಿನ ತುಂಡನ್ನು ಹಸಿಹಸಿಯಾಗಿ ತಂದು ಕೊಟ್ಟಾಗ ಅದನ್ನು ಯಶಸ್ವಿಯಾಗಿ ಜೋಡಿಸಲಾಯಿತು

★

ಕೆಲವು ದಿನಗಳ ಹಿಂದೆ ಲಂಡನಿನ ಕೊನ್ವೆ ಹೋಲಿನಲ್ಲಿ 5 ಸಾವಿರ ಬ್ರಿಟಿಷ್ ಬೌಧರು 200 ಅಡಿ ಬುದ್ಧನ ವಿಗ್ರಹವನ್ನು ಪೂಜಿಸಿದರು. ಭಕ್ತರು ಕೊಟ್ಟ ಕಾಣಿಕೆಯನ್ನು ವೆಸ್ಟ್ ಮಿನ್ಸ್ಟರ್ ಆಸ್ಪತ್ರೆಗೆ ಕೊಡಲಾಯಿತು. ಬಿ. ಬಿ. ಸಿ ಯವರು ಈ ಸಮಾರಂಭವನ್ನು ತಮ್ಮ ಕೇಂದ್ರದಿಂದ ಪ್ರಸಾರ ಮಾಡಿದ್ದರು.

★

ನಾವು ಸೀನುವಾಗ ನಮ್ಮ ಮೂಗಿನಿಂದ ಶೀತದ ಅಣುಗಳು ಗಂಟೆಗೆ ನೂರು ಮೈಲು ವೇಗದಲ್ಲಿ ಹಾರಿ ಇತರರನ್ನು ಅಂಟಿಕೊಳ್ಳಲು ಧಾವಿಸುತ್ತವೆ.

★

ಅಲಹಾಬಾದ್ ನಗರಸಭೆಯವರು ತಮ್ಮ ಸಭೆಯ ಆಯವನ್ನು ಹೆಚ್ಚಿಸಲು ಹೊಸ ತೆರಿಗೆ ವಿಧಾನಗಳನ್ನು ಪರ್ಯಾಲೋಚಿಸಲು ಸಭೆ ಸೇರಿದಾಗ ಒರ್ವ ಸದಸ್ಯರು ವಿಳ್ಯವು ಒಂದು ಸುಖದ ವಸ್ತುವಾಗಿರುವುದೆಂದೂ ಅದಕ್ಕೆ ತೆರಿಗೆ ಹಾಕಬೇಕೆಂದೂ ಸೂಚಿಸಿದಾಗ ಅಧ್ಯಕ್ಷರು ವಿಳ್ಯ ತಿನ್ನುವುದು ಸೌಖ್ಯಕ್ಕಾಗಲ್ಲವೆಂದು ತಿಳಿಸಿದರು

★

ಸೂರ್ಯಮಂಡಲದ ಮೇಲ್ಭಾಗದ ಉಷ್ಣತೆಯು 11 ಸಾವಿರ ಡಿಗ್ರಿಗಳಷ್ಟಿದೆ 3500 ಡಿಗ್ರಿ ಉಷ್ಣಕ್ಕೆ ಎಂತಹ ಲೋಹವಾದರೂ ಕರಗುವುದು.

★

ಅಮೇರಿಕದ ಬಸ್ ನಿಲ್ದಾಣಗಳಲ್ಲಿ ಕಾದು ನಿಲ್ಲುವ ಪ್ರಯಾಣಿಕರ ಮನೋರಂಜನೆಗಾಗಿ 'ಇಣುಕುವ ಚಲಚಿತ್ರ ಗೂಡು'ಗಳನ್ನು ಇಡಲಾಗಿದೆ ಆರಾಣೆ ನಾಣ್ಯ ಹಾಕಿ ಇಣಿಕಿದರೆ 10 ಮಿನಿಟುಗಳ ತನಕ ಮಾತನಾಡುವ ಚಲಚಿತ್ರವು ಕಾಣುವುದು

★

ಬೊಂಬಾಯಿಯಲ್ಲಿ 8 ಸಾವಿರ ಕುರುಡರಿದ್ದಾರೆ ಭಾರತದಲ್ಲಿ 6 ಲಕ್ಷ ಅಂಧರಿದ್ದಾರೆ ಪ್ರತಿ ನೂರರಲ್ಲಿ ಒಬ್ಬನು ಕಿವುಡ ಮೂಗನಿದ್ದಾನೆ

★

ಮನುಷ್ಯನಲ್ಲಿ ನಿಜವಾದ ರಾಜಕೀಯ ವಿವೇಕವು ಅರಳಬೇಕಾದರೆ ಅವನು 300 ವರ್ಷಗಳ ತನಕ ಬಾಳಬೇಕೆಂದು ಬರ್ನಾರ್ಡ್ ಶೋ ಅವರ ಅಭಿಪ್ರಾಯ.

◆

ಇಂಗ್ಲೆಡಿನ ಲೀಕ್ ಎಂಬ ಪಟ್ಟಣ ಸಮುದ್ರ ಬಳಿಯ ಕಾವೇರುಲ್ಲಿದೆ ಅಲ್ಲಿ ಸೂರ್ಯನು ಕಣಿವೆಯ ಒಂದ ಕಡೆಯ ಗುಡ್ಡದ ಹಿಂದೆ ಅಸ್ತನಾಗುವನು ಇತ್ತ ಅದರ ಹಿಂದಿನ ಸಮುದ್ರದಲ್ಲಿ ಮುಳುಗುವನು ಆದುದರಿಂದ ಈ ಊರಿನ ಜನರು ತಮಗೆ ಎರಡು ಸೂರ್ಯಾಸ್ತಗಳೆಂದ ಹೇಳಿಕೊಳ್ಳುತ್ತಾರೆ.

◆

ನಿಮ್ಮ ಭಾರ 140 ರಾತಲುಗಳಿದ್ದರೆ ನಿಮ್ಮ ದೇಹದಲ್ಲಿ 9 ಸಾವಿರ ಪೆನ್ಸಿಲುಗಳಿಗಾಗುವಷ್ಟು ಅಂಗಾರ (carbon)ವಿರುತ್ತದೆ

◆

ಚತುರಂಗದ ಆಟವು ಭಾರತದಲ್ಲೇ ಪ್ರಾರಂಭಿಸಲ್ಪಟ್ಟದ್ದು

◆

ಲಂಡನ್ ನಗರ ಸಭೆಯವರ ಆಡಳಿತದಲ್ಲಿ 117 ಚದರ ಮೈಲು ವಿಸ್ತೀರ್ಣದ ನಗರ ಭಾಗವಿದೆ

◆

ಲಂಡನಿನ ಕಲ್ಲಿದ್ದಲ್ಲು ಗನಿಗಳಲ್ಲಿ ಕೃತಕ ಸೂರ್ಯನ ಬಿಸಿಲು ಬೀರುವ ವಿದ್ಯುತ್ ದೀಪಗಳನ್ನು ಜೋಡಿಸಲು ಏರ್ಪಾಡುಗಳಾಗಿವೆ

◆

ವಾರ್ಸೊ ನಗರದಲ್ಲಿ ಕಳೆದ ಚಳಿಗಾಲದಲ್ಲಿ ವಿಪರೀತ ಹಿಮವು ಬಿದ್ದಿತ್ತು ಕೆಲವು ಕಡೆ ಆರೆಂಟು ಅಡಿಗಳ ತನಕ ಹಿಮ ರಾಶಿಯುಂಟಾಗಿತ್ತು. ಚಳಿಗಾಲ ಕಳೆದು ವಸಂತ ಕಾಲ ಬರುತ್ತಲೆ ಹಿಮ ಕರಗಿದಾಗ ಅದರಿಂದುಂಟಾದ ನೀರಿನಿಂದ ಎರಡು ಸೇತುವೆಗಳ ಸಂಪೂರ್ಣ ಕೊಚ್ಚಿಕೊಂಡು ಹೋಗಿವೆಯಂತೆ.

◆

ಜಗತ್ತಿನಲ್ಲಿ ಬೇಡನ್ ಪವೆಲ್ಲರ ಬ್ರಿಟಿಷ್ ಸಂಸ್ಥೆಗೆ ಸೇರಿದ 5 ಲಕ್ಷ ಸ್ಕೌಟ್ ಸದಸ್ಯರಿರುವರು.

ಗಂಟಲು ಬೇನೆ
ಅಥವಾ ಕೆಮ್ಮಿಗೆ

ವಿಷಹಾರಿ ಶ್ವಾಸನೀಯ ಪೆಪ್ಸ ಮಾತ್ರೆಗಳನ್ನು ತೆಗೆದುಕೊಳ್ಳಿರಿ ಪೆಪ್ಸು ಬಾಯಲ್ಲಿ ಕರಗುತ್ತಿರುವಾಗ ಅದರ ಔಷಧೀಯ ಸತ್ವವು ಶ್ವಾಸದೊಡನೆ ಕೂಡಿ ನಿಮ್ಮ ಶ್ವಾಸಕೋಶವನ್ನು ಸೇರುವುದು.
ಪೆಪ್ಸ್, ನೆಗಡಿ ಕೆಮ್ಮು, ಬ್ರೊಂಕೈಟಿಸ್, ಇನಫ್ಲುಯಂಜಾ ಮತ್ತಿನ್ನಿತರ ಎಲ್ಲಾ ಶ್ವಾಸಕೋಶಗಳ ಬೇನೆಗೆ ಜಗತ್ಪ್ರಸಿದ್ಧ

ಪೆಪ್ಸನ್ನು ಸೇವಿಸಿರಿ

PEPS

ವಿಷಹಾರಿ ಶ್ವಾಸನೀಯ ಮಾತ್ರೆಗಳು

ಅದಿಲ್ಲದೆ ಎಂದೂ ಇರದಿರಿ

ವೀರ ಬಚ್ಚಾ

ಮಕ್ಕಳನ್ನು ಬಲಿಷ್ಠರನ್ನಾಗಿಯೂ, ಆರೋಗ್ಯವಂತರನ್ನಾಗಿಯೂ, ಮಾಡುವ ಶಕ್ತಿಸಾಧಕ 4ಔನ್ಸಿನಬಾಟ್ಲಿಗೆ 1ರೂ.

ಬಿರ್ಲಾ ಲೆಬೊರೇಟರಿಸ್

ಸೇಲ್ಸ್ ಆಫೀಸು.
84 ಪಥೋರಿಯಾ ಘಾಟ್ ಸ್ಟ್ರೀಟ್, ಕಲ್ಕತ್ತಾ.

ಮದ್ರಾಸು ಸಮಾಚಾರ

ಗಿರಣಿ ಬಟ್ಟೆ–ಪ್ರತ್ಯೇಕ ಪರ್ಮಿಟು

ಯಾವ ಉದ್ದೇಶಕ್ಕೂ ಗೊತ್ತುಪಡಿಸಿದ ರೇಷನ್ ಪ್ರಮಾಣಕ್ಕಿಂತ ಹೆಚ್ಚಿಗೆ ಗಿರಣಿ ಬಟ್ಟೆ ಕೊಳ್ಳುವ ಬಗ್ಗೆ ಪ್ರತ್ಯೇಕ ಪರ್ಮಿಟುಗಳು ಸರಕಾರದಿಂದ ಕೊಡಲ್ಪಡುವುವು. ಅಂಥ ಅರ್ಜಿಗಳನ್ನು ಪರಿಶೀಲಿಸಿ ಶಿಫಾರಸು ಮಾಡುವಂತೆ ಒಂದು ಸಮಿತಿಯು ರಚಿಸಲ್ಪಟ್ಟಿದೆ. ಅರ್ಜಿದಾರನು ವಾಸಿಸುವ ಅಥವಾ ಬಟ್ಟೆಗಾಗಿ ಕೇಳುವ ಸಂಸ್ಥೆಯು ಇರುವ ಜಿಲ್ಲೆಯ ಕಲೆಕ್ಟರಿಗೆ ಅರ್ಜಿ ಮಾಡಬೇಕಲ್ಲದೆ, ಪ್ರೊವಿನ್ಸಿಯಲ್ ಟೆಕ್ಸ್ಟೈಲ್ ಕಮಿಷನರಿಗೆ ನೇರಾಗಿ ಕಳುಹಿಸಕೂಡದು. ಅರ್ಜಿಯಲ್ಲಿ ಅರ್ಜಿದಾರನ ಹೆಸರು, ವಿಳಾಸ, ವಸ್ತ್ರದ ಪ್ರಮಾಣ ಹಾಗೂ ವಿವರ ವಸ್ತ್ರ ಬೇಕಾಗಿರುವ ಅವಶ್ಯಕತೆ, ತನಗೆ ದೊರೆಯುವ ರೇಷನ್ ಪ್ರಮಾಣ ಇತ್ಯಾದಿಗಳನ್ನೂ ಸೂಚಿಸಬೇಕು. ಕಲೆಕ್ಟರರು ತಾವು ಶಿಫಾರಸು ಮಾಡಿದ ಅರ್ಜಿಗಳನ್ನು ಪ್ರತಿ ಸೋಮವಾರ ಪ್ರಾಂತಿಕ ಟೆಕ್ಸ್ಟೈಲ್ ಕಮಿಷನರಿಗೆ ತಲಪುವಂತೆ ಕಳುಹಿಸಿಕೊಡುವರು. ಕಮಿಟಿಯು ಅಂತಹ ಅರ್ಜಿಗಳನ್ನು ಪರಿಶೀಲಿಸಿದ ಅನಂತರ ಸರಕಾರದ ಅಪ್ಪಣೆಯನ್ನು ಪಡೆದು ಕಮಿಷನರು ಕಲೆಕ್ಟರರಿಗೆ ಕಳುಹಿಸುವರು. ಸರಕಾರದ ಅಪ್ಪಣೆಗೆ ಅನುಸಾರವಾಗಿ ಕಲೆಕ್ಟರರು ಪ್ರತ್ಯೇಕ ಪರ್ಮಿಟುಗಳನ್ನು ಅರ್ಜಿದಾರರಿಗೆ ನೇರಾಗಿ ಕಳುಹಿಸುವರು. ಗಿರಣಿ ಬಟ್ಟೆಯ ಕೊರತೆ ಇರುವುದರಿಂದ ಅತ್ಯಾವಶ್ಯಕ ಸಂದರ್ಭಗಳಲ್ಲಿ ಮಾತ್ರವೇ ಪ್ರತ್ಯೇಕ ಪರ್ಮಿಟುಗಳು ಕೊಡಲ್ಪಡುವುವು.

ದ್ವಿದಳ ಧಾನ್ಯ

ಏಪ್ರಿಲಿನಲ್ಲಿ 4,000 ಟನ್ ತೊಗರಿ, 1000 ಟನ್ ಹೆಸರು ಮತ್ತು ಸಿಗ ಕರಾಚಿಯಿಂದ ಬಂದು ಮುಟ್ಟಿತು. ಇನ್ನು 1080 ಕಡಲೆ ಹಿಟ್ಟು, 1130 ಟನ್ ತೊಗರಿ ಮತ್ತು ಹೆಸರು ಬರಲಿವೆ. ಏಪ್ರಿಲ್ 13ನೇ ತಾರೀಕಿನ 1600 ಟನ್ ತೊಗರಿ ಮತ್ತು ಹಿಟ್ಟೂ ಬಂದಿವೆ. [illegible] ದ್ವಿದಳ ಧಾನ್ಯಗಳ ನಿಯಂತ್ರಣವು ಮದ್ರಾಸಿನಲ್ಲಿ ಜಾರಿಗೆ ಬಂದಿದೆ.

ಗ್ರಾಮ ಕೈಗಾರಿಕೆ

"ವಿಕೇಂದ್ರೀಕರಣದ ಆದರ್ಶವನ್ನು ಪ್ರಚಾರ ಪಡಿಸುವುದೇ ನನ್ನ ಮನೋತ್ಸಾಹ. ಹಾಗಿಲ್ಲದಿದ್ದರೆ ಮುಕ್ತಿ ಇಲ್ಲ. ಕೇಂದ್ರೀಕರಣವೆಂದರೆ ದೊಡ್ಡ ಕೈಗಾರಿಕೆಗಳಿಂದ ಕೂಡಿದ ಸರ್ವಾಧಿಕಾರ. ಅಸಂಖ್ಯಾತರ ಜೀವನವನ್ನು ಕೆಲವೇ ಬಂಡವಾಳಶಾಹಿಗಳ ಕೈಗೆ ಒಪ್ಪಿಸುವುದಾಗಿದೆ. ಕೇಂದ್ರೀಕೃತ ಆರ್ಥಿಕ ಅಧಿಕಾರವು ಕೆಲವೇ ಬಂಡವಾಳಶಾಯಿಗಳಲ್ಲಾಗಲೀ, ಸರಕಾರದ ಕೈಯಲ್ಲಾಗಲೀ ಇರಕೂಡದು. ಪೂರ್ಣ ಅಧಿಕಾರವು, ಸಂಪೂರ್ಣ ಏಕಚಕ್ರಾಧಿಪತ್ಯಕ್ಕೆ ಎಡೆ ಕೊಡುತ್ತಿದೆ. ಸರಕಾರದ ವಶ ರಾಜಕೀಯ ಅಧಿಕಾರ ಮಾತ್ರ ಇದ್ದರೆ ಸಾಕು. ಅದಕ್ಕೆ ಆರ್ಥಿಕ ಅಧಿಕಾರವನ್ನು ಸೇರಿಸಿದರೆ ಅದು ಸರ್ವಾಧಿಕಾರವಾಗುತ್ತದೆ. ನೌಕರಶಾಹಿಗಳೂ, ಸರ್ವಾಧಿಕಾರಿಗಳೂ ಸ್ವಸ್ಥಚಿತ್ತದಿಂದಿರಲಾರರು"

ಆಚಾರ್ಯ ಕೃಪಾಲಿನಿ.

ರೇಷನ್

ಪ್ರಾಂತದಲ್ಲೆಲ್ಲಾ 12 ಔನ್ಸ್ ಅಕ್ಕಿ ಕೊಡುವ ಉದ್ದೇಶದಿಂದ ಮೇ 4ನೇ ತಾರೀಖಿನಿಂದ ಮಲಬಾರು ಜಿಲ್ಲೆಯಲ್ಲಿ 12 ಔನ್ಸ್ ಅಕ್ಕಿ ಕೊಡಲಾಗುವುದು. ನಮ್ಮ ಪ್ರಾಂತಕ್ಕೆ ಬೇರೆ ಪ್ರಾಂತಗಳಿಂದಲೂ, ಸಂಸ್ಥಾನ ಹಾಗು ಪರದೇಶಗಳಿಂದಲೂ ಮುಂದಿನ ತಿಂಗಳಲ್ಲಿ ಅಕ್ಕಿ ಬರಬಹುದೆಂದು ಆಶಿಸಲಾಗಿದೆ. ಪ್ರಾಂತದಲ್ಲಿ ಈಗ ಇರುವ ದಾಸ್ತಾನು ಬೆಳೆಗಳಿಂದ ಪ್ರಕೃತ ಜಾರಿಯಲ್ಲಿರುವ ಪರಿಮಾಣವನ್ನೇ ಇಟ್ಟುಕೊಳ್ಳಲು ಅನುಕೂಲವಾಗದು. ಆದುದರಿಂದ ಒಂದುವೇಳೆ ಹೊರಗಿನಿಂದ ಅಕ್ಕಿ ಬಾರದಿದ್ದರೆ ತಿರುಗಿ ರೇಷನನ್ನು 8 ಔನ್ಸಿಗೆ ಇಳಿಸಲಾದೀತೆಂದು ಸರಕಾರವು ಈ ಮೂಲಕ ತಿಳಿಸುತ್ತದೆ.

ಕಮ್ಯುನಿಸ್ಟ್ ಪಕ್ಷದ ದುಷ್ಪರಿಣಾಮ

ದೇಶದ ಸ್ವಾತಂತ್ರ್ಯವನ್ನು ನಾಶ ಮಾಡುವುದಕ್ಕೂ ಅದರ ಅಭ್ಯುದಯವನ್ನು ಕೆಡಿಸುವುದಕ್ಕೂ ಯತ್ನಿಸಿ, ಯಾವ ದೇಶವನ್ನಾದರೂ ಕೊನೆಗೆ ದಾಸ್ಯಕ್ಕಿಳಿಸುವ ಕಮ್ಯುನಿಸ್ಟ್ ಪಕ್ಷದ ಮೂರು ಗುರಿಗಳು,

ಒಂದನೆಯದಾಗಿ, ಎಲ್ಲೆಲ್ಲಿಯೂ ಮುಷ್ಕರಗಳಾಗುವಂತೆ ಹುರಿದುಂಬಿಸುವುದು. ಸಾಧ್ಯವಿದ್ದಷ್ಟು ಅಧಿಕ ಕೈಗಾರಿಕಾ ಗಲಭೆಯನ್ನೂ ಅವಿಶ್ವಾಸವನ್ನೂ ಉಂಟುಮಾಡುವುದು.

ಎರಡನೆಯದಾಗಿ ಜನರಲ್ಲಿ ದುರಭಿಪ್ರಾಯ ಹುಟ್ಟುವಂತೆ ಪ್ರಚಾರ ಮಾಡುವುದು. ವ್ಯಾಪಾರಸ್ಥರಿಗೆ ತಪ್ಪು ತಿಳುವಳಿಕೆಯನ್ನು ಕೊಟ್ಟು, ವ್ಯಾಪಾರದಲ್ಲಿರುವ ನಂಬಿಕೆ ಕಡಿಸುವುದು. ಅಲ್ಲದೆ ಖಾಸಗಿ ಉದ್ಯಮವು ವ್ಯರ್ಥವೆಂದು ತೋರಿಸಿಕೊಡಲು ಪ್ರಯತ್ನಿಸುವುದು.

ಮೂರನೆಯದಾಗಿ ಶಕ್ತಿ ಸಭಾಧಿವೇಶನದಲ್ಲಿ [illegible] ಸಂಘಟನೆ ಮತ್ತು ವ್ಯರ್ಥಕಾಲಕ್ಷೇಪದ ಸಂದೇಹಗಳನ್ನು ಒಳ್ಳೆದೆಂದು ಹೊರಗೆ ಅನುಮೋದಿಸುವುದು. ಉಚಿತವಾಗಿ ಸರಕಾರದ [illegible] ಜನರು ರಕ್ಷಿಸುವಂತೆ ಕಲಿಸಿ, ರಾಷ್ಟ್ರದ ಆರ್ಥಿಕ ರಚನೆಯನ್ನು ದುರ್ಬಲಗೊಳಿಸುವುದು.

ಹೀಗೆ ಈ ಮೂರು ಚಟುವಟಿಕೆಗಳ [illegible] ತಪ್ಪು ನಾಶವಾಗದೆ ಇರಲಾರದು.

ಜಾರ್ಜ್ ಎಸ್ ಬೆನ್ಸನ್,
ಪ್ರೆಸಿಡೆಂಟ್ ಹಾರ್ಡಿಂಗ್ ಕಾಲೇಜು ಅಮೇರಿಕಾ

ಸ್ವದೇಶ ವಾರ್ತೆ

ಕಾಠ್ಯಾವಾಡ್ ಸಂಸ್ಥಾನಗಳನ್ನು ಒಟ್ಟುಸೇರಿಸಿ, ಒಂದು ಒಕ್ಕೂಟ ಮಾಡಿ ರಾಜನೇಮಿತ ಪ್ರತಿನಿಧಿಗಳನ್ನು ಘಟನಾಸಮಿತಿಗೆ ಸೇರಿಸಲು ನವನಗರದ ಜಾಮ್ ಸಾಹೇಬರು ಯತ್ನಿಸುವರೆಂದೂ ಆ ಕುರಿತು ಅವರು ಸರ್ದಾರ್ ಪಟೇಲ್, ನೆಹರುಗಳನ್ನು ಅವರು ಸಂದರ್ಶಿಸಲಿರುವರೆಂದೂ "ಇದಕ್ಕೆ ಪ್ರಜೆಗಳ ಬೆಂಬಲವಿಲ್ಲ"ವೆಂದೂ ಕಾಠ್ಯಾವಾಡ್ ಪ್ರಜಾಮಂಡಳದ ಕಾರ್ಯದರ್ಶಿಗಳು ಪಟೇಲರಿಗೆ ತಿಳಿಸಿದ್ದಾರೆ.

★

"ಗಾಂಧೀ–ಜಿನ್ನಾ ಭೇಟಿಯ ನಂತರ ಮಿ। ಜಿನ್ನರು ಹೊರಡಿಸಿದ ಹೇಳಿಕೆಯ ಮೇರೆಗೆ ವಿಭಾಗೀಕರಣವು ಖಂಡಿತವೆಂದು ಭಾಸವಾಗುತ್ತದೆ. ಪಂಜಾಬವೂ ವಿಚ್ಛೇದಿಸಲ್ಪಟ್ಟು ಅಲ್ಲಿನ ಹಿಂದೂ ಸಿಕ್ಕರಿಗೆ ಅವರವರ ಅಭಿವೃದ್ಧಿ ತಕ್ಕುದಾಗಿ ಪ್ರದೇಶಗಳು ಸಿಗಬೇಕು. ಲೀಗಿನ ಕೈಕೆಳಗೆ ಇರಲು ಮುಸಲ್ಮಾನೇತರರಾರೂ ಇಚ್ಛಿಸುವುದಿಲ್ಲ"ವೆಂದು ಸರ್ದಾರ್ ಸ್ವರನ್‌ಸಿಂಗರು (ಸಿಕ್ ಪಂಥದ ನಾಯಕರು) ತಿಳಿಸುತ್ತಾರೆ.

★

ಬಂಗಾಲವನ್ನು ವಿಭಾಗಿಸುವದು ಖಂಡಿತವಾದರೆ ಪೂರ್ವ ಬಂಗಾಲದ ದಳಿತವರ್ಗದ ಜನತೆಯನ್ನು ಆ ಕಡೆಗಳಿಂದ ಪಶ್ಚಿಮ ಬಂಗಾಲಕ್ಕೆ ರವಾನೆ ಮಾಡುವ ಏರ್ಪಾಡು ಮಾಡಬೇಕೆಂದು ಬಂಗಾಳದ ದಳಿತವರ್ಗದ ನಾಯಕರಾದ ಶ್ರೀ ಸಿ. ಆರ್. ಠಾಕೂರರು ಭಾರತ ಸಚಿವ ಲೋರ್ಡ್ ಲಿಸ್ಟೋವೆಲ್ಲರಿಗೆ ತಂತಿ ಮೂಲಕ ತಿಳಿಸಿದ್ದಾರೆ.

★

"ಮನಸ್ಸಿಲ್ಲದೆಯಾದರೂ ಕೊಂಗ್ರೆಸು ಒಂದು ತರದ ವಿಭಾಗೀಕರಣಕ್ಕೆ ಒಪ್ಪಿಕೊಂಡಂತೆ ಮುಸ್ಲಿಂ ಲೀಗು ಬಂಗಾಲ ಪಂಜಾಬದ ವಿಚ್ಛೇದೀಕರಣಕ್ಕೆ ಒಪ್ಪಬೇಕು" ಹೀಗೆಂದು ಲಂಡನಿನ ಸ್ಪೆಕ್ಟೇಟರ್ ಪತ್ರಿಕೆಯು ಸೂಚಿಸುತ್ತದೆ.

★

ಬ್ರಿಟಿಷ್ ಸರಕಾರದ ಪರವಾಗಿ ಭಾರತದ ದೇಶಿ ಸಂಸ್ಥಾನಗಳಲ್ಲಿರುವ ರೆಸಿಡೆಂಟರೇ ಮೊದಲಾದ ರಾಜಕೀಯ ಮೇಲಾಧಿಕಾರಿಗಳ ಸ್ಥಾನವನ್ನು ಇದೇ ಬರುವ ಜುಲೈ ತಿಂಗಳಾಂತ್ಯದೊಳಗ ರದ್ದುಗೊಳಿಸಿ, ಅವರನ್ನು ಸ್ವದೇಶಕ್ಕೆ ಕಳುಹಿಸಲಾಗುವುದೆಂದು ಒಂದು ವರ್ತಮಾನವಿದೆ. ಈ ಅಧಿಕಾರಿಗಳೆಲ್ಲರೂ ಬಿಳಿಯರೇ.

★

ಪ್ರಯಾಣಿಕರಿಗೆ ಸ್ಪೆಶಲು ಸರ್ವಿಸಿನ ಸೂಚನೆ.

ಮುಲ್ಕಿ, ಉಪ್ಪಿನಂಗಡಿ, ಪೊಳಲಿ ಇತ್ಯಾದಿ ಸ್ಥಳಗಳಲ್ಲಿ ಜಾತ್ರೆ ಇತ್ಯಾದಿ ಸಮ್ಮಂಧ ಪ್ರಯಾಣಿಸುವ ಯಾತ್ರಿಕರ ಬಗ್ಗೆ ಸ್ಪೆಶಲು ಸರ್ವಿಸುಗಳನ್ನು ರನ್ ಮಾಡುವ ಏರ್ಪಾಡನ್ನು ಮಾಡಲಿಚ್ಛಿಸಿದಾಗ್ಯೂ ಪ್ರಕೃತ ಮೂರು ತಿಂಗಳಿಗೆ ಸಿಗಬೇಕಾದ ಪೆಟ್ರೋಲು ಕೋಟಾದಲ್ಲಿ ಕಡಿತವಾಗಿರುವುದು. ದಿನವು ಬಸ್ಸುಗಳಿಗೆ ಪೆಟ್ರೋಲು ಸಾಕಾಗದೆ ಕೆಲವು ಸರ್ವಿಸುಗಳನ್ನು ತಾತ್ಕಾಲಿಕವಾಗಿ ನಿಲ್ಲಿಸುವ ಸಂದರ್ಭ ಒದಗಿರುವುದರಿಂದಲೂ, ಮತ್ತು ಗೇಸು ಬಸ್ಸುಗಳು ಸಹ ಕಡಿಮೆ ಇದ್ದು ಅವುಗಳಿಂದ ದಿನವಹಿ ಸರ್ವಿಸುಗಳನ್ನು ರನ್ ಮಾಡಿಸಲ್ಪಟ್ಟನಂತರವೇ ಸಾಧ್ಯವಿದ್ದಲ್ಲಿ ಮಾತ್ರ ಸ್ಪೆಶಲು ಸರ್ವಿಸುಗಳನ್ನು ರನ್ ಮಾಡಬೇಕಾಗುತ್ತದೆ. ಅಲ್ಲದೆ ಕೆಲ ಸ್ಥಳಗಳಿಗೆ ಕೆಲವು ಕಡೆಗಳಲ್ಲಿ ಪೆಟ್ರೋಲು ಮತ್ತು ಕೆಲವು ಕಡೆಗಳಲ್ಲಿ ಗೇಸು ಬಸ್ಸುಗಳಿರುವುದರಿಂದ ಸಾಧ್ಯವಿದ್ದ ಸ್ಥಳದ ವರೆಗೆ ಮಾತ್ರ ಸ್ಪೆಶಲು ರನ್ ಮಾಡಬೇಕಾಗುತ್ತದೆ. ಉದಾಹರಣೆಗಾಗಿ ಮಂಗ್ಳೂರು—ಮುಲ್ಕಿ ಲ್ಯಾನಿನಲ್ಲಿ ಪಾವಂಜೆಯಿಂದ ಮುಲ್ಕಿಗೆ ಪೆಟ್ರೋಲು ಬಸ್ಸು ಮಾತ್ರ ರನ್ ಆಗುತ್ತಿರುವುದರಿಂದ ಮುಲ್ಕಿ ರಥೋತ್ಸವ ಹಾಗೂ ಉಪ್ಪಿನಂಗಡಿ ಜಾತ್ರೆಯ ಸಮ್ಮಂಧ ಸ್ಪೆಶಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ ಗೇಸು ಬಸ್ಸುಗಳ ಅನುಕೂಲತೆ ನೋಡಿ ಪಾವಂಜೆ ತನಕ ಮಾತ್ರ ಸ್ಪೆಶಲುಗಳನ್ನು ರನ್ ಮಾಡಲಾಗುವುದು. ಆದಕಾರಣ ಜಾತ್ರೆಯ ಬಗ್ಗೆ ಪ್ರಯಾಣಿಸಲಿಚ್ಛಿಸುವ ಯಾತ್ರಿಕರು ಸ್ಪೆಶಲ್ ಸರ್ವಿಸು ರನ್ ಆಗಬಹುದೆಂಬ ಹೆಚ್ಚಿನ ಭರವಸೆ ಇಡದೆ ಸೀಟು ಇದ್ದ ಹಾಗೆ ನಮ್ಮ ದಿನವಹಿ ಸರ್ವಿಸುಗಳಲ್ಲಿ ಪ್ರಯಾಣಿಸಬೇಕಾಗಿ ಅಪೇಕ್ಷಿಸುತ್ತೇವೆ.

ಅಲ್ಲದೆ ಮದುವೆ ಇತ್ಯಾದಿ ಸಮಾರಂಭಗಳ ಬಗ್ಗೆ ಸ್ಪೆಶಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ R T O. ಕೊಯಂಬತ್ತೂರು ಇವರಿಂದ ಪರ್ಮಿಶನ್ ಪಡಕ್ಕೊಂಡೇ ಅಂಥಾ ಸ್ಪೆಶಲುಗಳನ್ನು ಗೇಸು ಬಸ್ಸುಗಳ ಅನುಕೂಲತೆ ನೋಡಿ ರನ್ ಮಾಡಬೇಕಾಗಿರುವುದರಿಂದ, ಹಾಗೆ ಸ್ಪೆಶಲು ಬಸ್ಸುಗಳನ್ನು ಅಪೇಕ್ಷಿಸುವವರು, ಸ್ಪೆಶಲುಗಳ ಬಗ್ಗೆ ಪರ್ಮಿಶನ್ ಪಡಕೊಳ್ಳುವರೆ ನಮಗೆ ಅನುಕೂಲವಾಗುವಂತೆ ತಮ್ಮ ಅರ್ಜಿಗಳನ್ನು ನಮಗೆ 20 ದಿವಸಗಳಿಗೆ ಮುಂಚಿತವಾಗಿ ಬರಕೊಳ್ಳಬೇಕಾಗಿ ಸಾರ್ವಜನಿಕರಿಗೆ ತಿಳಿಸಲಪೇಕ್ಷಿಸುತ್ತೇವೆ.

ಮಂಗ್ಳೂರು,
29-3-1947.

ಜ್ಯೊಂಟ್ ಮೆನೇಜರ್ಸ್,
ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.

(Incorporated in British India with Limited Liability)

Estd: 1906.

Head Office: UDIPI, S. Kanara.

	Rs
CAPITAL:	
Authorised	25,00,000
Issued, subscribed & called up	16,00,000
Paid up	15,97,145
RESERVES	5,25,000
DEPOSITS	2,07,47,928
TOTAL RESOURCES	3,00,01,186

With a net work of branches & Agencies in all principal cities of India, we shall be able to render efficient collection services.

BANKING BUSINESS OF EVERY DESCRIPTION TRANSACTED.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪ್ಪೋ ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

The 1946 Record Business proves the popularity

THE BOMBAY LIFE ASSURANCE COMPANY LIMITED

Company's New Business in 1946 - 3·28 Crores

Our Cheif Agency New Business in 1946 about 54 Lakhs.

Our experience of 37 years available to you for arranging Insurance investment. Ittherefore, pays you to consult us to Insure or to represent

.ochikar Brothers, Limited.

Chief Agents for South India,

Bombay Life Building,

Central Office, Udipi:

Branches at: MANGALORE, CALICUT, MADRAS, TRIVANDRUM, MADURA, BANGALORE AND BOMBAY.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with seleted ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs.

Depot: **Maharata Galli, Hubli.**

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಕು 30—5—1947 [ಸಂಚಿಕೆ 22]

ಪಾಕಿಸ್ತಾನದ ಮಾರಾಟ

ಪಂಜಾಬದ ಮತ್ತು ಬಂಗಾಲದ ವಿಭಾಗೀಕರಣ ಚಳವಳದಿಂದ ತಮ್ಮ ಪಾಕಿಸ್ತಾನದ ಕೇಳಿಕೆಯೇ ತಮಗ ವಿರೋಧವಾಗಿ ನಿಂತಿರುವುದನ್ನು, ತಮ್ಮ ಅನ್ಯಾಯ ತಮಗೆ ವಿಷವಾಗಿರುವುದನ್ನು ಕಂಡ ಮಿ| ಜಿನ್ನರು ಕೊನೆಯಲ್ಲಿ ತಾವು ಎಲ್ಲಾ ದಿಕ್ಕುಗಳಲ್ಲೂ ಸೋಲು ಅನುಭವಿಸುವುದು ಖಂಡಿತವೆಂದು ಮನಗಂಡು ಕಳದ ವರ್ಷ ಯಾವ ಬ್ರಿಟಿಷರ ಮೇಲೆ ಅವರು ಧರ್ಮಯುದ್ಧ (ಜೆಹಾದ್) ಸಾರಿದರೋ ಆ ಬ್ರಿಟಿಷರನ್ನು ಈಗ ಗುಪ್ತವಾಗಿ ಮರೆ ಹೊಕ್ಕಿರುವರೆಂದೂ ಅದಕ್ಕಾಗಿಯೇ ತಮ್ಮ ಸೇನಾಪತಿಗಳೂರ್ವರಾದ ಚೌಧರಿಗಳನ್ನು ಲಂಡನ್ನಿಗೆ ಕಳುಹಿಸಿರುವರೆಂದೂ ... ಯೊಂದರ ದಿಲ್ಲಿ ... ತ್ತಾರೆ ಪಾಕಿಸ್ತಾನವು ಶಾಶ್ವತವಾಗಿ ಬ್ರಿಟಿಷ್ ಸಾಮ್ರಾಜ್ಯದಡಿಯಲ್ಲಿ ಉಳಿವುದೆಂದು ವಾಗ್ದಾನವನ್ನು ಅವರು ... ತಿಳಿದು ಬರುತ್ತದೆ

ಇಂದು ಮಿ| ಜಿನ್ನರ ಅನುಸರಿಸುವ ಧೋರಣೆಯು ಹಿಂದ ಅವರು ಚರ್ಚಿಲ್ಲರ ಟೋರಿ ಪಕ್ಷದೊಡನೆ ಮಾಡಿದ ಒಪ್ಪಂದಕ್ಕನುಸಾರವಾಗಿದಯಂತೆ ಅವರು ಹಿಂದೆ ಇಂಗ್ಲೆಂಡಿನಲ್ಲಿ ವಕಾಲತು ಮಾಡುತಿದ್ದು ಭಾರತದಲ್ಲಿ ಉಕ್ಕೇರುವ ರಾಷ್ಟ್ರೀಯತೆಯನ್ನು ತಡೆ ಗಟ್ಟಲು ಅಕಸ್ಮಾತ್ ಇಲ್ಲಿಗೆ ಬಂದು ಮುಸ್ಲಿಂ ಲೀಗನ್ನು ಸುವ್ಯವಸ್ಥಿತಗೊಳಿಸುವ ಕಾರ್ಯಕ್ಕೆ ತೊಡಗಿದರೆಂದೂ ಅವರ ಈ ವಾಗ್ದಾನದ ದೃಷ್ಟಿಯಿಂದಲೇ ಎಟ್ಲಿ ಸರಕಾರವು ಭಾರತೀಯ ರಾಜಕೀಯದ ಇತ್ಯರ್ಥದ ಹಾದಿಯಲ್ಲಿ ತೊಡಕುಗಳನ್ನು ಹಾಕುತ್ತಿರುವರೆಂದೂ ಊಹಾಪೋಹಗಳಿವೆ

ಲೀಗು ದುರೀಣರು ತಮ್ಮ ದುಸ್ಸಾಹಸನೆಯನ್ನು ಯಶಸ್ವಿಗೊಳಿಸಲು ಯೋಗ್ಯಾಯೋಗ್ಯ ವಿವೇಚನೆಯಿಲ್ಲದೆ ಮಾಡುವ ಕಾರ್ಯಗಳು ಭಾರತೀಯ ಮುಸಲ್ಮಾನರಿಗೆ ಮುಖ್ಯವಾಗಿ ಬಂಗಾಲಿ ಮತ್ತು ಪಠಾಣರಿಗೆ ತೃಪ್ತಿಕರವಾಗಿಲ್ಲವೆಂದು ಐಕ್ಯ ಬಂಗಾಲ ಮತ್ತು ಸ್ವತಂತ್ರ್ಯ ಪಠಾಣಿಸ್ಥಾನದ ಚಳವಳದಿಂದ ಅರಿತುಕೊಳ್ಳಬಹುದು.

ಅವಿವೇಕದ ಪರಮಾವಧಿ

ಲೀಗ್ ದುರೀಣರ ಇತ್ತೀಚೆಗಿನ ಹೇಳಿಕೆಗಳನ್ನು ಕೇಳಿಕೆಗಳನ್ನು ಪರಿಶೀಲಿಸುವಾಗ ಹಿಟ್ಲರನ ಸಂಸ್ಕಾರವು ಅವರಲ್ಲಿ ಪೂರ್ಣ

ವಾರಾಂತ್ಯ ವರದಿ ವಿಮರ್ಶೆ

೪

ಆವಿಷ್ಕಾರ ಹೊಂದಿದೆಯೆಂದು ಬಿಂಬಿಸಲಾಗುತ್ತದ. ಸರ್ದಾರ್ ಪಟೇಲರು ಹೇಳುವಂತೆ "ಐತಿಹಾಸಿಕ ವಿರೋಧಿ ಪಕ್ಷವನ್ನು ಪ್ರವೇಶದಿಂದ ಹಾದು ಹೋಗಿ ... ಸಾವಿರ ಮೈಲು ಅಂತರದಲ್ಲಿ ... ನಾಡನ್ನು ತಮ್ಮ ಪೂರ್ವ ಪಶ್ಚಿಮ ಪಾಕಿಸ್ತಾನಗಳನ್ನು ಜೋಡಿಸಲು ಮಿ| ಜಿನ್ನರು ... ಒರ್ವ ಪಾಕಿಸ್ತಾನಿ ... ವ್ಯಕ್ತಿವಾದಿಗೆ ತಿಳಿಸಿರುವರು.

... ತನ್ನ ಸಂಗಡಿಗರನ್ನು ... ತರದ ಒಂದು ಜೋಡಂಗಣವನ್ನು ಕೇಳಿದ್ದು ... ಬಹಿಷ್ಕಾರದ ... ಗಳಾಗುತ್ತಿರುವಾಗಲ ... ಕಲಾಪದ ಕೇಳಿಕೆಗಳು ಗಂಭೀರ ಲಕ್ಷ್ಯ ಕಪಾತ್ರವಲ್ಲವೆಂದು ಸ್ಪಷ್ಟ ಪಡಿಸಿರುವರು.

ಮೌಂಟ್‌ಬೇಟನ್ ಯೋಜನೆ

ಜಿನ್ನರ ... ಹೇಳಿಕೆಯಿಂದ ಜೂನ್ 2ರಂದು ತಿಳಿಸಲಾಗುವ ಬ್ರಿಟಿಷ್ ಸರಕಾರದ ಇತ್ಯರ್ಥದ ಅಸ್ಪಷ್ಟ ಅಂದಾಜು ಸಿಗ ... ಲೀಗಿನ ಕೇಳಿಕೆಯು ಪಾಕಿಸ್ತಾನ ದೊರೆಯದ ... ತನಕದ ಮಾತುಕತೆಗಳ ... ಸ್ಪಷ್ಟವಾಗಿ ... ಇಲ್ಲದಿದ್ದರೆ ಈ ... ಕೇಳುವ ಅವಶ್ಯಕತೆಯಿರ ... ಹಿಂದು, ವ್ಯಾಸ್‌ರಾಯ ... ಯನ್ನು ತಿರಸ್ಕರಿಸಿ ಮುಂದಿನ ಪರಿಣಾಮ

THE

UNITED INDIA LIFE ASSURANCE CO., LTD.

ESTD 1906 H. O. MADRAS

SECURITY

Greater than any conferred by legislative enactments is guaranteed

by

UNITED INDIA'S TRUST ARRANGEMENT

with

THE OFFICIAL TRUSTEE TO THE GOVRNMENT OF MADRAS.

For Particulars apply to,—

INSPECTORATE OFFICE

K. S. Rao Road, Mangalore.

ಕೆಂದು ತಿಪ್ಪಗಿರಬೇಕೆಂದೂ ಈ ಹೊಸ ಉಪಾಯದ ಉದ್ದೇಶವಾಗಿರಬೇಕು. ರಾಜಕೀಯದ ಹಾಸು ಹೊಕ್ಕುಗಳನ್ನರಿಯದವರನ್ನು ಮಾತ್ರ ಈ ಡಾಂಭಿಕತನದ ಕೇಳಿಕೆಗಳು ವಂಚಿಸಬಲ್ಲವು

ವಿವೇಕೋದಯ

... ಜಿನ್ನರ ... ವಿವೇಕ ... ಸಂಗತಿಗಳು ... ಸಂದರ್ಶನದಲ್ಲಿ ... ಬಂಗಾಲದ ವಿಭಾಗೀಕರಣದ ಕುರಿತು "... ಪೂರ್ವ ಪಶ್ಚಿಮ ಬಂಗಾಲಗಳೊಳಗಿನ ವೈಷಮ್ಯ ಹೆಚ್ಚುವುದು ... ಸಂಭವಿಸುವುದು" ಹೇಳಿದರು.

... ಹಿಂದೂ ಮುಸಲ್ಮಾನರೊಳಗೆ ... ಜಿನ್ನಾ ... ತಜ್ಞರು ... ಅವರು ತಮ್ಮ ಕೇಳಿಕೆಗಳ ... ಸಮರ್ಥ ... ಸರಕಾರ ... ತಿಳಿಯುತ್ತದೆ

ಪಾಠ

... ಬಂಗಾಲ ಪಂಜಾಬ ವಿಭಾಗೀಕರಣಕ್ಕೆ ಈಗ ಪ್ರತ್ಯೇಕ ಪರಾಣ ... ಜನಾಂಗವಾಗಿಸುವುದಾದರೆ ಭೌಗೋಳಿಕ ... ಲಕ್ಷಣಗಳುಳ್ಳ ಪಠಾಣರೇಕೆ ಸ್ವತಂತ್ರ ಜನಾಂಗವಾಗಬಾರದು?

ಇವರು ತಮ್ಮ ಟೊಳ್ಳು ಬೊಂಬನ್ನು ಬಿಸಾಡಿರುವುದು ರಾಜಕೀಯ ಕೇಂದ್ರಗಳಲ್ಲಿ ಹಾಸ್ಯಾಸ್ಪದ ಸಂಗತಿಯೆಂದು ತಿಳಕೊಳ್ಳಲಾಗಿದೆ.

ನೆಹರುಗಳು ಇದನ್ನು 'ಭೀಕರ ಕಲ್ಪನೆಯೆಂದೂ; ವಲ್ಲಭಭಾಯಿಯವರು 'ಅವಿವೇಕದ ಪರಮಾವಧಿ'ಯೆಂದೂ ತಿಳಿಸುತ್ತ ಇಂತಹ ಗಳನ್ನು ಎದುರಿಸಲು ತಮ್ಮ ಸಂಸ್ಥೆಯ ಶಕ್ತಿ ಸಾಲದೆಂದೂ ಅವರಿಗೆ ಮನದಟ್ಟಾಗಿರಬೇಕು. ಆದುದರಿಂದ ಬ್ರಿಟಿಷ್ ಸರಕಾರದ ಇತ್ಯರ್ಥ ಸಾರಲ್ಪಟ್ಟ ಮೇಲೆ ತಮ್ಮ 'ಅನುಯಾಯಿಗಳಲ್ಲಿ 'ನಿರಾಶೆಯುಂಟಾಗಬಾರದೆಂದೂ ಪಾಕಿಸ್ತಾನ ಸಿಕ್ಕಿದಂತೆ ತಾವು ಕೇಳಿದೆಲ್ಲ ದೊರಕುವುದೆಂದೂ ಅವರು ತಿಳ

ವ್ಯಾಸ್‌ರಾಯರ ಯೋಜನೆಯಲ್ಲಿ ಇಂತಹ ಪ್ರಾದೇಶಿಕ ಸ್ವಾಯತ್ತೆಗೆ ಸಂಪೂರ್ಣ ಎಡೆಕೊಡಲಾಗುತ್ತದೆಂದೂ ನಿರೀಕ್ಷೆಗಳಿವೆ. ವಿಭಾಗೀಕರಣದ ವಿಷ ಬೀಜವು ಈಗ ಮೊಳಕೆ ಬಿಟ್ಟಂತೆ ತೋರುವುದು. ಅದರ ಬೆಳೆಯನ್ನು ಕೊಯ್ಯಲು ಅದನ್ನು ಉತ್ತವರಿಂದ ಎಂದಿಗೂ ಸಾಧ್ಯವಾಗಲಾರದು. ಅಖಂಡ ಭಾರತವೇ ಈ ಎಲ್ಲ ಕೋಟಲೆಗಳಿಗೆರಾಮಬಾಣವಾಗಿದೆಯೆಂಬ ಸಂಗತಿಯನ್ನು ಇಲ್ಲಿ ಪುನ ಒತ್ತಿ ಹೇಳಬೇಕಾಗುತ್ತದೆ.

ವಿದೇಶ ರಾಜಕೀಯ

★ ವಿನಾಶ ಬ್ರಿಟಿಷ್ ಅರಸರಾಗಿದ್ದ ವಿಂಡ್ಸರಿನ ಡ್ಯೂಕರು ಪುನಃ ತಮ್ಮ ಪ್ರೇಯಸಿಯೊಡಗೂಡಿ ಇಂಗ್ಲೆಂಡಿಗೆ ಬಂದಿರುವುದರಿಂದ ಅಲ್ಲಿಯ ರಾಜಕೀಯ ಮೇಲಧಿಕಾರ ವರ್ಗಕ್ಕೆ ದೊಡ್ಡ ತಲೆಶೂಲೆಯುತ್ಪನ್ನವಾಗಿದೆ. ಅವರೀಗ ನಿರುದ್ಯೋಗಸ್ಥರಾಗಿರುವರು. ತಮಗೇನಾದರೂ ಕೆಲಸ ಕೊಡಬೇಕೆಂದು ಡ್ಯೂಕರ ಆಶಯ. ಯಾವ ಕೆಲಸ ಕೊಡಲಿಕ್ಕೂ ಸಾಮಾನ್ಯ ವರ್ಗಕ್ಕೆ ಸೇರಿದ ಅವರ ಪತ್ನಿಯ ವಿಷಯ ಬ್ರಿಟಿಷ್ ಗೌರವಸ್ಥ ರಾಜಕುಟುಂಬಿಗಳಲ್ಲಿ ಒಂದು ತರದ ಜಿಗುಪ್ಸೆ ನಿರತವಾದ ಮನಸ್ತಾಪವನ್ನುಂಟುಮಾಡಿದೆ.

★ ಬ್ರಿಟನ್ ಮತ್ತು ಅಮೇರಿಕಗಳು ಹೆಚ್ಚೆಚ್ಚು ಕಡುವಾದ ರಶ್ಯಾ ವಿರೋಧವನ್ನು ಐಕ್ಯಮತ್ಯದಿಂದ ಬೆಳೆಸಹತ್ತಿವೆ ಸದ್ಯದಲ್ಲೇ ಇಂಗ್ಲೆಂಡು ಅಮೇರಿಕದೊಡನೆ ಒಂದು ಸಾಲದ ಮೂಟೆ ಕೇಳಲಿದೆಯೆಂದೂ ಅದನ್ನು ವಿಳಂಬವಿಲ್ಲದೆ ಕೊಡಲಾಗುವುದೆಂದೂ ತಿಳಿದುಬರುತ್ತದೆ.

★ ಟ್ರುಮೆನ್ನರ ಧೋರಣೆಯಿಂದ ರಶ್ಯಕ್ಕೆ ಬಹಳ ಸಂಕಷ್ಟವಾಗಹತ್ತಿದೆಯಂತೆ ಹಿಂದೆ ಬ್ರಿಟನ್ನು ರಶ್ಯದ ಬದ್ಧ ವೈರಿಯಾಗಿತ್ತು ಈಗ ಈ ಗೌರವ ಅಮೇರಿಕಕ್ಕೆ ಸಲ್ಲುತ್ತದೆಂದು ಕೆಲವು ರಶ್ಯನ್ ಪತ್ರಿಕೆಗಳು ನಿರೂಪಿಸಿವೆ ಬ್ರಿಟನ್ ಅಮೇರಿಕಗಳೊಳಗೆ ವೈಷಮ್ಯ ಹುಟ್ಟಿಸುವುದೇ ಮುಂದಿನ ರಶ್ಯದ ವಿದೇಶಾಂಗ ಧೋರಣೆಯಾಗಿರುತ್ತದೆಯೆಂದು ಊಹಿಸಲಾಗಿದೆ

★ ಪೆಲೆಸ್ಟೈನಿನಿಂದ ಬ್ರಿಟಿಷ್ ಮತ್ತು ಅಮೇರಿಕನ್ ಪ್ರಭಾವಗಳನ್ನು ಹಿಂತೆಗೆಯಬೇಕೆಂದು ರಶ್ಯವು ತಿಳಿಸಿದೆ ಅಮೇರಿಕವು ಯೆಹೂದಿಯರಿಗೂ ರಶ್ಯವು ಅರಬರಿಗೂ ಸಹಾನುಭೂತಿ ತೋರಿಸಹತ್ತಿದೆ ಅಮೇರಿಕದಿಂದ ಚುರುಟುಗಳಲ್ಲಿ ಸುತ್ತಿ ಖೋಟಾ ನೋಟುಗಳು ಯೆಹೂದಿಯರಿಗೆ ಕಳುಹಿಸಲ್ಪಟ್ಟದ್ದು ಅಲ್ಲಿನ ಸೈನ್ಯಾಧಿಕಾರಿಗಳಿಗೆ ಸಿಕ್ಕಿದೆ

★ ಚೀನದ ಯೆನಾನ್ ಪ್ರಾಂತ್ಯವು ಅಲ್ಲಿನ ಕಮ್ಯೂನಿಸ್ಟರ ಕೈಬಿಟ್ಟ ಮೇಲೆ ಕಮ್ಯೂನಿಸ್ಟ್ ಪ್ರಭಾವವು ನಿರ್ನಾಮವಾಗುವುದೆಂದು ಭಾವಿಸಲಾಗಿತ್ತು ಆದರೆ ಇನ್ನೂ ಕಮ್ಯೂನಿಸ್ಟ್ ಸೈನ್ಯಗಳು ಒಟ್ಟುಗೂಡುವುದನ್ನು ಕಾಣುವಾಗ ರಾಜಕೀಯ ನಿರೀಕ್ಷಕರು ರಶ್ಯದ ಆಟವೆಂದು ಶಂಕಿಸಿದ್ದಾರೆ

★ ಅಮೇರಿಕದಲ್ಲಿ ವರ್ಣದ್ವೇಷವು ಹೆಚ್ಚುತ್ತಿದೆ ದಿನೇ ದಿನೇ ನಿಗ್ರೋಗಳನ್ನು ಜೀವಂತ ಕೊಂದ ವರದಿಗಳು ಅಲ್ಲಿಂದ ಬರುತ್ತವೆ ಯುದ್ಧಾನಂತರ ಇಂತಹ 50ಕ್ಕೆ ಮಿಕ್ಕಿದ ಕೊಲೆ ಪಾತಕಗಳಾದುವು 1848ರಿಂದ ಇದುತನಕದ ಒಂದು ಶತಮಾನದ ಅವಧಿಯಲ್ಲಿ ನಿಗ್ರೋಗಳನ್ನು ಕೊಂದ ಒರ್ವ ಬಿಳಿಯನಿಗಾದರೂ ಮರಣದಂಡನೆಯಾಗಲಿಲ್ಲ ಕೆರೊಲಿನಾದಲ್ಲಿ ಕೆಲದಿನ ಹಿಂದೆ ಅಪಾದಿತರಾದ 28 ಬಿಳಿಯರನ್ನು ಅಲ್ಲಿಯ ಬಿಳಿ ಜೂರಿಯವರು ನಿರಪರಾಧಿಗಳೆಂದು ಬಿಟ್ಟುಬಿಟ್ಟಿರುವರು ಸದ್ಯದಲ್ಲೇ ಇಂಗ್ಲೆಂಡಿನಲ್ಲಿ ವರ್ಣ ಜನಾಂಗ ರಕ್ಷಣೆಯ ಪರಿಷತ್ತೊಂದು ಜರಗಲಿದೆ.

★ ಗ್ರೀಕ್ ವಿಮಾನಗಳೂ ಮತ್ತು ಸೈನ್ಯಗಳು ಆಸುಪಾಸಿನ ಆಲ್ಬೇನಿಯಾದಲ್ಲಿ ಮಾಡುವ ಹಾವಳಿಯು ದೂರ ನೋಟಕ್ಕೆ ಕಿರುಕುಳವೆಂದು ಕಂಡರೂ ಮೂರನೇ ಯುದ್ಧಕ್ಕೆ ಇದೇ ಘಟನೆಯು ಕಿಡಿಯಾಗಬಹುದೆಂದು ರಾಜಕೀಯ ತಜ್ಞರು ಎಚ್ಚರಿಕೆ ಕೊಟ್ಟಿರುವರು. ಗ್ರೀಸಿಗೆ ಅಮೇರಿಕವು ಸಹಾಯ ವಾಗ್ದಾನ ಮಾಡಿದೆ.

ಮತ್ತೊಂದು ಸಲ ಮೊಗಲ್ ಸಾಮ್ರಾಜ್ಯ ಸ್ಥಾಪನೆ

ಪಾಕಿಸ್ತಾನಾನಂತರ ಲೀಗಿನ ಯೋಜನೆ

ಬ್ರಿಟಿಷರು ಹೋದ ನಂತರದ ಭೀಕರ ಭವಿಷ್ಯ

"ಬ್ರಿಟಿಷರು ಭಾರತವನ್ನು ಮೊಗಲರಿಂದ ಪಡೆದರು. ಅದನ್ನು ಪುನಃ ಅದರ ಮಾಜಿ ಹಕ್ಕುದಾರರಿಗೇ ಬಿಟ್ಟು ಬಿಡುವುದು ನ್ಯಾಯವಾದುದು." ಎಂದು ಹಿಂದೊಮ್ಮೆ ಮಿ। ಜಿನ್ನರು ಸಲಹೆ ಸೂಚಿಸಿದ್ದರು.

ಇದಕ್ಕೆ ಉತ್ತರವಾಗಿ ಹಿಂದೂ ಮಹಾಸಭೆಯ ಸಾವರ್ಕರ್‌ರವರು "ಮೊಗಲರು ಶಕ್ತಿ ಬಲಾತ್ಕಾರದಿಂದ ಭಾರತವನ್ನು ಹಿಂದೂಗಳಿಂದ ಕಿತ್ತು ಕೊಂಡರು ಅಂದ ಮೇಲೆ ಇದನ್ನು ತಮ್ಮದೆನ್ನುವ ಅಧಿಕಾರ ಅವರಿಗಿಲ್ಲ ಬ್ರಿಟಿಷರು ಅಧಿಕಾರವನ್ನು ಪ್ರಾಚೀನ ಕಾಲದಿಂದಿಲ್ಲಿ ನೆಲೆನಿಂತು ಆಳಿದ ಹಿಂದೂಗಳಿಗೇ ಬಿಟ್ಟು ಕೊಡಬೇಕು" ಎಂದೂ ತಿಳಿಸಿರುವರು

ಆದರೆ ಮಿ। ಜಿನ್ನರು ತಮಗೆ ಬೇಕಾದಕ್ಕಿಂತ ಹೆಚ್ಚಿನ ತರ್ಕಗಳನ್ನು ಯೋಚಿಸುವವರಲ್ಲ ಅವರ ಅನುಯಾಯಿಗಳಂತೂ ತಮ್ಮ ದುರೀಣರು ಹೇಳಿದ್ದೇ ಪರಮ ಸತ್ಯವೆಂದು ಭಾವಿಸುತ್ತಾರೆ ಈ ಅಂಧ ಅವಲಂಭನವು ಲೀಗಿಗೆ ಅತ್ಯಂತ ಅನುಕೂಲವಾಗಿದೆ ಅದು ಒಂದರ ಹಿಂದೆ ಒಂದಾಗಿ ತನ್ನ ತರ್ಕ ರಹಿತ ಕೇಳಿಕೆಗಳನ್ನು ಮುಂದಿಟ್ಟು ತಮ್ಮ ಮೇಲೆ ಸಹಾನುಭೂತಿ ಇಟ್ಟಿರುವ ಬ್ರಿಟಿಷರಿಂದ ಅದನ್ನು ಪೂರೈಸಿಕೊಳ್ಳುತ್ತ ಬಂದಿರುವರು ಬ್ರಿಟಿಷರಿಗಾದರೋ ತಮ್ಮ 'ವಿಭಾಗಿಸಿ ಆಳುವ' ಧೋರಣೆಗೆ ಲೀಗು ಅತ್ಯಂತ ಸಹಾಯಕಾರಿಯಾಗಿದೆ.

ಮುಸಲ್ಮಾನರಿಗೆ ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿ ವಿಶೇಷ ಸವಲತ್ತುಗಳು ಸಿಗುವಂತೆ ಲೀಗು ಚಳವಳ ಮಾಡಿ ಅದನ್ನು ದೊರಕಿಸಿ ಕೊಂಡಿತು ನಂತರ ಸಿಂಧ ಪ್ರಾಂತ್ಯ ಪ್ರತ್ಯೇಕೀಕರಣವನ್ನು ಸಾಧಿಸಿತು ಈಗ ಪಾಕಿಸ್ತಾನವು ಅದರ ಕೈವಶವಾಗಲಿದೆ

ನುಂಗುವ ನ್ಯಾಯ

ಬೇರು ರುಚಿಯಾಗಿ ಮರ ನುಂಗಲೆಳಸಿದ ನ್ಯಾಯವಿದು ವ್ಯಾಸ್‌ರಾಯರ ಯೋಜನೆಯು ಈಗಾಗಲೇ ಎಲ್ಲಾ ಭಾರತೀಯ ಮುಖಂಡರಿಗೆ ತಿಳಿಸಲ್ಪಟ್ಟಿದೆ "ಆದರೆ ಅಧಿಕಾರವನ್ನು ಬಿಟ್ಟು ಕೊಟ್ಟ ನಂತರ ಹಿಂದೂ ಮುಸಲ್ಮಾನರ ಸಂಬಂಧವು ಶಾಶ್ವತವಾಗಿ ಇತ್ಯರ್ಥವಾಗುವುದೆಂದು ಭಾರತದಲ್ಲಿನ ಯಾವ ಹಿಂದೂ ಮುಸಲ್ಮಾನ ಮುಖಂಡರೂ ತಿಳಿಕೊಂಡಿಲ್ಲ." ಹೀಗೆಂದು ಒಂದು ಬ್ರಿಟಿಷ್ ಪತ್ರಿಕೆ ಬರೆಯುತ್ತದೆ. ಮತ್ತು ಅದು ಹೀಗೆನ್ನುತ್ತದೆ

"ತಮ್ಮ ಜಾತಿಯವರು ಇತರರಿಗಿಂತ ಬಲಿಷ್ಠರಾಗಿರುವರೆಂದು ಹಿಂದೂ ಮತ್ತು ಮುಸ್ಲಿಂ ಮುಖಂಡರು ಗುಪ್ತವಾಗಿ ಪಿಸುಗುಟ್ಟುತಿದ್ದಾರೆ ಯಾವುದಕ್ಕೂ ಬ್ರಿಟಿಷರು ಬಿಟ್ಟು ಹೋಗಲಿ ಮತ್ತೆ ನೋಡೋಣವೆಂದು ಇತ್ತಂಡದವರೂ ಭರವಸೆ ಪ್ರದರ್ಶಿಸುತ್ತಿದ್ದಾರೆ ಒಬ್ಬರು ಮತ್ತೊಬ್ಬರನ್ನು ನಿರ್ಮೂಲಿಸುವ ಕನಸನ್ನೇ ಕಾಣುತ್ತಿರುವರು

"ಮೌಂಟ್ ಬೇಟನರ ಯೋಜನೆಯ ಪ್ರಕಾರ ಲೀಗಿಗೆ ಕೊರೆದ ಪಾಕಿಸ್ಥಾನವು ಸಿಗುವುದಾದರೂ ಜಿನ್ನರು ಅದನ್ನೀಗ ಬಾಯಿ ಮುಚ್ಚಿ ಹಸಾದವೆಂದು ಸ್ವೀಕರಿಸುವರು. ಕಾರಣ ಅದನ್ನು ತಿರಸ್ಕರಿಸುವಷ್ಟು ಈಗ ಸದ್ಯಕ್ಕೆ ತನ್ನ ಸೂಸ್ತ್ರೆ ಶಕ್ತಿಯುಕ್ತವಾಗಿಲ್ಲವೆಂದೂ ಅವರಿಗೆ ಚೆನ್ನಾಗಿ ತಿಳಿದಿದೆ. ಆದರೆ ಬಹುಕಾಲದ ತನಕ ಲೀಗು ಅದರಿಂದಲೇ ತೃಪ್ತಿಪಟ್ಟು ಕೊಂಡಿರುವುದಿಲ್ಲವೆಂದು ಬ್ರಿಟಿಷರು ಬಿಟ್ಟು ಹೋದ ಕೆಲವೆ ಸಮಯದಲ್ಲಿ ಅದನ್ನು ತನ್ನ ಪ್ರದೇಶಗಳನ್ನು ವಿಕಾಸಗೊಳಿಸಲು ಕ್ರಾಂತಿಕಾರರ ಚಟುವಟಿಕೆಗಳನ್ನಾರಂಭಿಸುವುದೆಂದೂ ಒರ್ವ ಪ್ರಮುಖ ಲೀಗ್ ಮುಖಂಡರು ನನಗೆ ತಿಳಿಸಿರುತ್ತಾರೆ

ಈ ಊಹಾಪೋಹೆಯ ಆಧಾರ ಸಿದರ್ಶನವೆ ಒಂತೆ ಇತ್ತೀಚೆಗೆ ಜಿನ್ನರು ಪಾಕಿಸ್ತಾನದ ಪೂರ್ವ ಪಶ್ಚಿಮ ಬಂಗಾಲ ಮತ್ತು (ಪಂಜಾಬದ) ತುಂಡುಗಳನ್ನು ಜೋಡಿಸುವ ನಡುವಂಗಣದ ಪ್ರದೇಶ (corridor) ವು ಪಾಕಿಸ್ತಾನಕ್ಕೆ ಅತ್ಯಗತ್ಯವೆಂತಲೂ ಅದನ್ನು ಸಾಧಿಸುವೆವೆಂದೂ ತಿಳಿಸಿರುವರು ಈ ಪಾಕಿಸ್ಥಾನದ 'ನೆಲ ಸಂದು' ಪ್ರಮುಖ ಹಿಂದೂ ಬಹುಸಂಖ್ಯಾಕ ಪ್ರದೇಶದಲ್ಲೇ ಇರುವುದು ಎಂದ ಮೇಲೆ ಕ್ರಮೇಣ ಲೀಗು ಒಂದರ ಹಿಂದೆ ಒಂದಾಗಿ ತನ್ನ ವಿಕಸಿತ ಧೋರಣೆಯನ್ನು ಖಂಡಿತ ಮುಂದುವರಿಸುವುದೆಂಬುದೂ ನಿಸ್ಸಂದೇಹ ಅದನ್ನು ತಡೆಯಲು ಈಗಲೇ ಸಿದ್ಧತೆಗಳಾಗಬೇಕೆಂದು ಅಖಂಡ ಹಿಂದೂಸ್ಥಾನ ವಾದಿಗಳೂ ಎಚ್ಚರಿಕೆ ಇತ್ತಿರುವರು

ಸ್ವದೇಶ-ವಾರ್ತೆ

ದೇಶ ಮತ್ತು ಪ್ರಾಂತ್ಯ ವಿಭಾಗೀಕರಣ ಮಾಡಿದರೂ ಬ್ರಿಟಿಷರು ಹೋಗುವಾಗ ಸೈನ್ಯವನ್ನು ಪಾಲು ಮಾಡುವುದಿಲ್ಲವೆಂದು ಲಂಡನ್ ರಾಜಕೀಯ ಕೇಂದ್ರಗಳ ಅಭಿಪ್ರಾಯ.

ಬ್ರಿಟಿಷ್ ಸರಕಾರ ಮತ್ತು ವ್ಯಾಸ್‌ರಾಯ ಮೌಂಟ್ ಬೇಟನರೊಳಗೆ ತೀಕ್ಷ್ಣ ಅಭಿಪ್ರಾಯ ಭೇದವುಂಟಾದುದರಿಂದಲೇ ಮೇ 17ಕ್ಕೆ ಕರೆದ ಮುಖಂಡರ ಪರಿಷತ್ತು ಜೂನ್ 2ಕ್ಕೆ ಮುಂದೆ ಬೀಳಲು ಕಾರಣವಾಯಿತು. ಈಗ ಬ್ರಿಟಿಷ್ ಸರಕಾರವು ವ್ಯಾಸ್‌ರಾಯರ ಯೋಜನೆಯ ಕುರಿತು ಸಂತೃಪ್ತರಾಗಿರುವರೆಂದು ವರದಿಯಿದೆ.

ಕಾಶ್ಮೀರದ ಮಹಾರಾಜರು ಕೊಂಗ್ರೆಸ್ ಅಧ್ಯಕ್ಷರ ಪತ್ನಿಯರ ವಶ 25 ಸಾವಿರ ರೂಪಾಯಿಗಳನ್ನು ಸತ್ಕಾರ್ಯ ವಿನಿಯೋಗಕ್ಕಾಗಿ ಕೊಟ್ಟಿರುವರು ಕೊಚ್ಚಿ ಮಹಾರಾಜರು ಕೃಪಲಾನಿಯವರ ಬಳಿ 30 ಸಾವಿರ ಕೊಟ್ಟಿದ್ದರು

ಗಾಂಧಿ ನೆಹರುಗಳಂತಹರು ಕೂಡಾ ಮಾತುಕತೆಗೆ ತಾಸಿದ್ದಲ್ಲಿಗೇ ಬರಬೇಕೆನ್ನುವ ಮಿ। ಜಿನ್ನರು ಸಿಕ್ಕರನ್ನು ಆಕರ್ಷಕ ಸವಲತ್ತುಗಳಿಂದ ಸಿಕ್ಕರನ್ನೂ ಒಲಿಸಲು ಪ್ರಯತ್ನಿಸುತ್ತಿರುವರು-ಅವರು ಮೊನ್ನೆ ದಿಲ್ಲಿಯಲ್ಲಿ ಪಾಟಿಯಾಲಾ ಮಹಾರಾಜರ ಹೊಟೇಲ್ ನಿವಾಸಕ್ಕೆ ಹೋಗಿ ಮಾತುಕತೆಯಾಡಿದರು. ಅವರ ಶ್ರಮವು ಯಶಸ್ವಿಯಾಗಲಿಲ್ಲವೆಂದೂ ವರದಿಗಳಿವೆ

ಬಂಗಾಲ ಐಕ್ಯತೆಯ ಕುರಿತು ಪ್ರಧಾನಿ ಸುಹ್ರವರ್ದಿ ಮತ್ತು ಇತರ ಕೆಲ ಮುಸ್ಲಿಂ ಲೀಗ್ ಮುಖಂಡರು ಜಿನ್ನರ ಮೇಲೆ ಆಕ್ರೋಶಗೊಂಡಿರುವರಂತೆ ಜಿನ್ನರು ಅವರ ಸಂಯುಕ್ತ ಬಂಗಾಲ ಯೋಜನೆಯನ್ನು ನಿರಾಕರಿಸಿದರೆಂದು ಸದ್ಯದಲ್ಲೇ ಬಂಗಾಲಿ ಲೀಗ್ ದುರಿಣರು ಅಖಿಲ ಭಾರತ ಲೀಗಿನಿಂದ ಹೊರಬರುವ ಸಂಭವವಿದೆಯೆಂದೂ ಕೆಲವು ಪತ್ರಿಕೆಗಳು ತಿಳಿಸುತ್ತವೆ

[illegible] ಪ್ರಾಂತ್ಯವು ಮಹಾರಾಷ್ಟ್ರದ ರಾಜಧಾನಿಯಾಗಬೇಕೆಂದು ಡಾ। ಜಯಕರ್, ಶಂಕರರಾವ್ ದೇವ ಮೊದಲಾದವರು ಸೂಚಿಸಿರುವುದನ್ನು ಅಲ್ಲಿನ ಪಾರ್ಸಿ ಪತ್ರಿಕೆಗಳು ಖಂಡಿಸಿರುವವು ಮಧ್ಯ ಬೊಂಬಾಯಿಯಲ್ಲಿ ಶೇಕಡಾ 92ರಷ್ಟು ಮರಾಠಿ ಮಾತೃಭಾಷೆಯವರಿರುವರೆಂದು ಲೆಕ್ಕಹಾಕಲಾಗಿದೆ

ಬೊಂಬಾಯಿಯ ಇಂಡಿಯಾ ಯುನೈಟೆಡ್ ಮಿಲ್ಲಿನವರು ಸರ್ದಾರ್ ವಲ್ಲಭಭಾಯಿ ಪಟೇಲರಿಗೆ ಒಂದೂಕಾಲು ಲಕ್ಷ ರೂಪಾಯಿಗಳನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಕೊಟ್ಟಿರುವ ಸಂಗತಿಯು ಲೆಕ್ಕ ಪರಿಶೋಧನದಲ್ಲಿ ಪ್ರಕಾಶಕ್ಕೆ ಬಂಬರುವುದು. ಈ ಕುರಿತು ಸಮತಾವಾದಿಗಳು ಆಕ್ಷೇಪ ತೆಗೆದಿರುವರು ಪಟೇಲರು ಅದನ್ನು ರಾಷ್ಟ್ರೀಯ ಮಜೂರ ಸಂಘದ ಅಭಿವೃದ್ಧಿಗಾಗಿ ವಿನಿಯೋಗಿಸುವರಂತೆ.

★

ಬೊಂಬಾಯಿಯ ಮಲಬಾರ್ ಹಿಲ್ಲಿನಲ್ಲಿರುವ ಜಿನ್ನರ ಮೌಂಟ್ ಪ್ಲೆಸೆಂಟ್ ಎಂಬ ಬಂಗಲೆಯನ್ನು ಪ್ರಖ್ಯಾತ ಮಾರ್ವಾಡಿ ಶ್ರೀಮಂತರಾದ ಸೇಟ್ ರಾಮಕೃಷ್ಣ ದಾಲ್ಮಿಯಾ ಅವರು 21 ಲಕ್ಷ ರೂಪಾಯಿಗೆ ಕೊಂಡುಕೊಂಡಿರುವರೆಂದು ವದಂತಿ ಇದೆ.

★

ಬಿಸಿಲು ಬೆಳದಿಂಗಳಿಗಿಂತ 4 ಲಕ್ಷ ಪಾಲು ಹೆಚ್ಚು ಪ್ರಕಾಶಮಾನವಾಗಿದೆ.

ಮೃದುವಾದ ಚರ್ಮವನ್ನು ಬಹು ಜಾಗ್ರತೆಯಿಂದ ಕಾಪಾಡಬೇಕು

ಕುಟಿಕೂರಾ ಸಾಬೂನು ಮಗುವಿನ ಮೃದುಚರ್ಮವನ್ನು ರಕ್ಷಿಸಲಿ!



ಕುಟಿಕೂರಾ ಸೋಪು

CUTICURA SOAP

ಸ್ವಾತಂತ್ರ್ಯದೊಡನೆ ಐಕ್ಯವೂ ಒದಗುವುದು

ಬ್ರಿಟಿಷ್ ಕೊಮ್ಯುನಿಸ್ಟರ ಅಭಿಪ್ರಾಯ

"ಸ್ವಾತಂತ್ರ್ಯ ದೊರೆಕಿ ದೇಶದ ಸಂಪತ್ತು ತನತೆಯೊಳಗೆ ಹೆಚ್ಚೆಚ್ಚು ಹಂಚಲ್ಪಡುತ್ತಾಗ ಭಾರತದಲ್ಲಿ ಈಗ ತೋರಿ ಬರುವ ಪ್ರತ್ಯೇಕೀಕರಣದ ಭಾವನೆಗಳೆಲ್ಲ ಮಾಯವಾಗುವವು." ಎಂದು ಪ್ರಖ್ಯಾತ ಬ್ರಿಟಿಶ್ ಕೊಮ್ಯುನಿಸ್ಟ್ ಮುಖಂಡರೂ ಪಾರ್ಲಿಮೆಂಟಿನ ಸದಸ್ಯರೂ ಆದ ಮಿ। ವಿಲಿಯಂ ಗಾಲಾಚಾರರು ಒಂದು ಲೇಖನದಲ್ಲಿ ಬರೆಯುತ್ತಾರೆ

"ಬ್ರಿಟನಿನಲ್ಲಿ ಪ್ರೊಟೆಸ್ಟೆಂಟ್ ಮತ್ತು ಕೆಥೋಲಿಕ್ ಕೆಲಸಗಾರರಿರುವಂತೆ ಹಿಂದೂ ಮತ್ತು ಮುಸಲ್ಮಾನ್ ಕೆಲಸಗಾರರು ಒಂದೇ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತ ಒಂದೇ ಮಜೂರ ಸಂಘದ ಸದಸ್ಯರಾಗಿ ತಮ್ಮ ಉನ್ನತಿಯನ್ನು ಸಾಧಿಸುವರು '

"ಇಂದು ಅವರಿಗೆ ಕೈಗಾರಿಕೆ ಮತ್ತಿತರ ವಿಷಯ ಸಂಬಂಧವಾದ ಶಿಕ್ಷಣ ಅವಶ್ಯಕತೆಯಿದೆ. ಭಾರತೀಯರ ಮತೀಯ ವಿಚಾರಗಳು ಏನೇ ಇರಲಿ ಅವರನ್ನು ಬಂಡವಾಳಶಾಹಿಗಳ ಶೋಷಣೆಯಿಂದ ತಪ್ಪಿಸಿ ಸುವ್ಯವಸ್ಥಿತ ಆರ್ಥಿಕ ವ್ಯವಸ್ಥೆಯು ಅವರಿಗೆ ಒದಗುವಂತೆ ಮಾಡಬೇಕಾದುದು ಅತ್ಯಾವಶ್ಯಕ

"ಪ್ರಗತಿಯ ಈ ಶ್ರೇಷ್ಠ ಮಾರ್ಗದಲ್ಲಿ ಭಾರತೀಯ ಜನಾಂಗವು [illegible] ವಿಭಾಗೀಕರಣದ ನಂತರವೂ ಹಿಂದೂಸ್ಥಾನ ಪಾಕಿಸ್ತಾನಗಳು ಸಮಾನತೆಯಲ್ಲಿ ವರ್ತಿಸಿ ಪರಸ್ಪರ ಮೈತ್ರಿ[illegible] ಆರ್ಥಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಗಾಗಿ ಪ್ರಯತ್ನಿಸಬೇಕೆಂದೂ ಎಲ್ಲ ಕಡೆಗಳಿಂದ[illegible] ಕಾರ್ಯಸಲ್ಪಡುತ್ತದೆ

ಬ್ರಿಟಿಷರು ಬಿಟ್ಟು ಹೋಗ[illegible]ದ ಭಾರತದಲ್ಲಿ [illegible] ಬ್ರಿಟಿಷರು [illegible] ಅಲ್ಲಿನ [illegible] ವಾಗುವಂತೆ [illegible] ಕಳೆದ [illegible] ತನಕ ಜಿನ್ನರ ಪಾಕಿಸ್ತಾನ [illegible] ಅಕ್ಷರಶ [illegible] ಇದೊಂದು [illegible] ಐಕ್ಯವೂ ಎಂದೂ ಇನ್ನು [illegible] ಈಗ ಅವಧಿ [illegible] ಒಂದು [illegible] ಸ್ವತಂತ್ರ ರಾಜ್ಯ ಸ್ಥಾಪನೆಯಾಗ[illegible] ಜಿನ್ನರು [illegible] ಹತ್ತಿರ [illegible] ರಾಜ್ಯದ ಗಡಿಗಳನ್ನು [illegible] ಕಷ್ಟದ ಕೆಲಸವೇ ಆಗಿದ[illegible] ಅಂತರ್ಯುದ್ಧವು [illegible] ದೀರ್ಘ ಕಾಲದ ತನಕ ಪರಸ್ಪರ [illegible] ಕೊನೆಗ[illegible] ಮನಸ್ಸಿಲ್ಲ

ಭಾರತದ ವಿಭಾಗೀಕರಣದ ದುರ್ವಿಧಿಯನ್ನು ಯಾರೂ ಇಚ್ಛಿಸುವುದಿಲ್ಲ ಮುಸ್ಲಿಂ ಲೀಗು ಮಾತ್ರ ಇದನ್ನು ಬಯಸುತ್ತದೆ ಇಂದು ಇಡೀ ಖಂಡ ಖಂಡಗಳೇ ಒಕ್ಕಟ್ಟಾಗಿ ತಮ್ಮ ಜನತೆಯ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಬೇಕಾದ ಕಾಲದಲ್ಲಿ ಈ ಕೇಳಿಕೆಯು ಕೇವಲ ಗಂಡಾಂತರದ್ದು ಬ್ರಿಟಿಷರು ಭಾರತದಲ್ಲುಂಟು ಮಾಡಿದ ಆರ್ಥಿಕ ಮತ್ತು ರಾಜಕೀಯ ಐಕ್ಯತೆಗೆ ಇದರಿಂದ ಕೊಡಲಿ ಹಾಕಿದಂತೆಯೇ ಸರಿ ಈ ಜಂಬೂ ದ್ವೀಪದಲ್ಲಿ ಎರಡು ಪ್ರತ್ಯೇಕ ಸೈನ್ಯ ಶಿಬಿರಗಳಿದ್ದರೆ ಭದ್ರತೆಯು ಸಂದೇಹಾಸ್ಪದವೇ ಆಗಿರುತ್ತದೆ ದೇಶದಲ್ಲೆಲ್ಲ ಕುಂಕ ತೆರುವ ಮುಳ್ಳು ಬೇಲಿಯ ।ಹಲವು ಗಡಿಗಳಿದ್ದರೆ ಅದರ ಆರ್ಥಿಕ ಸಂಪತ್ತಿಗೆ ಎದೆಷ್ಟು ಹಾನಿಯಿದೆ ಎಂಬುದನ್ನು ಊಹಿಸಬಹುದು. ಮಾತ್ರವಲ್ಲ ಪಾಕಿಸ್ತಾನ ದೊರೆತಾಕ್ಷಣ ವಿಭಾಗೀಕರಣವು ಅಷ್ಟಕ್ಕೇ ನಿಲ್ಲುವುದೆಂತಲೂ ಹೇಳ ಬರುವುದಿಲ್ಲ ಲೀಗು ಬಹಿಷ್ಕರಿಸಿದುದರಿಂದ ಸಟನಾಸಮಿತಿಯ ಗೌರವಕ್ಕೆ ಧಕ್ಕೆ ತಗಲಿದೆ ಉದಾರ ಧೋರಣೆಯ ದೇಶಿ ಸಂಸ್ಥಾನಗಳೂ ಇದರಲ್ಲಿ ಸೇರಿವೆ ಕೆಲವು ದೊಡ್ಡ ದೇಶಿ ಸಂಸ್ಥಾನಗಳು ಇನ್ನೂ ಸಮಿತಿಯಿಂದ ದೂರ ನಿಂತಿದ್ದು ಸ್ವತಂತ್ರರಾಗಲು ಸಮಯ ಕಾಯುತ್ತಿವೆ

ತಪ್ಪು ದಾರಿಗೆ

ಪಾಕಿಸ್ತಾನವು ಹಳೇ ಕಾಲದ ಒಂದು ಮತೀಯ ರಾಜ್ಯವಾಗುತ್ತದೆಂದೇ ಅದಕ್ಕೆ ನಮ್ಮಲಿ ಹೆಚ್ಚಿನವರ ಆಕ್ಷೇಪ ಇದರಿಂದ ಮುಸ್ಲಿಂ ಜನತೆಯ ಧರ್ಮ ಭಾವನೆಯು ಆಳವಾಗ[illegible] ಒಂದ ವೇಳೆ ಅದನ್ನು ಸಮಾಧಾನದ ಸಂಗತಿಯೆಂದು ಭಾವಿಸ[illegible] ಸಂಪ್ರದಾಯದಲ್ಲಿ [illegible] ಸ್ವತೀಕ ಮತ್ತು ಸಾಮಾಜಿಕ [illegible] ವಿಭಾಗೀಕರಣದ ಉದ್ದೇಶವು ನರಿಕರಿಯ [illegible] ಗಳ [illegible] ಕಟ್ಟಲ್ಪಟ್ಟಿದ[illegible] [illegible] ಮಧ್ಯವರ್ಗದ [illegible] ಅಭಿವೃದ್ಧಿಗಾಗಿ [illegible] [illegible] ಮತ್ತು ಕೈಗಾರಿಕೆ [illegible] ವರ್ಗ [illegible] ಸಮಾಜವಾದಿ[illegible] ದೃಷ್ಟಿಗೆ [illegible] ತಪ್ಪು ದಾರಿಗ[illegible] ಭಾವನೆ [illegible] ಕಾರಣ [illegible] ಜನತೆಯ [illegible] ಇಂದು ಮಹತ್ವದ [illegible] ಲೀಗು ಅದನ್ನು ಪರಿಹರಿಸಲು ಕಿಂಚಿತ್ ಪ್ರಯತ್ನವನ್ನು ಮಾಡಿಲ್ಲ. ಬಡತನವು ಹಿಂದೂ ಮುಸಲ್ಮಾನರಿಗೆ ಸಮಾನ ದುಃಸ್ಥಿತಿಯನ್ನುಂಟುಮಾಡಿದ ಗದ್ದೆಗಳಿಗೆ ಹೆಚ್ಚೆಷ್ಟು ನೀರು ಆಸ್ಪತ್ರೆಗಳೂ, ಶಾಲೆಗಳು, ಧನ ಹೀರ ವವರಿಂದ ಶೋಷಣಗಾರರಿಂದ ವಿಮೋಚನೆ, ಇವುಗಳೆಲ್ಲ ಭಾರತದ ಇಂದಿನ ಆವಶ್ಯಕತೆಗಳು

ಇದನ್ನೆಲ್ಲ ಚಿಂತಿಸಲು ಈಗ ಸಮಿತಿಯ ವಿಳಂಬವಾಗಿದೆ. ಈಗ ಈ ವಿಭಾಗೀಕರಣವನ್ನು ಸಾಧ್ಯವಿದ್ದಷ್ಟು ಕಮ್ಮಿ ಹಾನಿಕಾರಕವಾಗಿ ಮಾಡಬೇಕಾದುದು ಅತೀ ಮಹತ್ವದ ಕೆಲಸ ಮೊದಲನೇ ಸಮಸ್ಯೆ ಪ್ರಾದೇಶಿಕವಾದುದು ಕಳೆದ ವರ್ಷದ ಚುನಾವಣೆಗಳು ವಿಚಿತ್ರ ತರದ ಫಲಿತಾಂಶವನ್ನುಂಟು ಮಾಡಿವೆ ಭಾರತದೆಲ್ಲಾ ಕಡೆಗಳಲ್ಲಿ ಲೀಗು ಶೇಕಡ 75ರಷ್ಟು ಮತಗಳನ್ನು ಪಡೆದಿದೆ ಚುನಾವಣೆಗಸಾದರೊ ಖೇದಕರ ದೃಶ್ಯದವು ಲಂಚ ಮೋಸಗಳೇ ಎಲ್ಲಲ್ಲೂ ಆಚರಿಸಲ್ಪಟ್ಟವೆ ಮಾತ್ರವಲ್ಲ ಬಂಗಾಲ ಸಿಂಧಗಳಲ್ಲಿ ಬೆದರಿಕೆಯ ಒತ್ತಾಯಗಳೂ ಇದ್ದವು. ಪಂಜಾಬದಲ್ಲಿ ಗುಪ್ತ ಮತದಾನದ ಕ್ರಮವನ್ನೇ ಆಚರಿಸಲ್ಲಾಗಲಿಲ್ಲ. ಜನತೆಯಂತೂ ತೀರ ನಿರಕ್ಷರಸ್ಥರು ಚುನಾವಣೆಗಳಲ್ಲಿ ಲೀಗಿನ ವ್ಯವಸ್ಥಿತ ಶಕ್ತಿಯ ಪ್ರದರ್ಶನವಾಯಿತು ಇಷ್ಟಾದರೂ ಮಂತ್ರಿಮಂಡಳಗಳನ್ನು ರಚಿಸಲು ಲೀಗಿಗೆ ಸಾಧ್ಯವಾದುದು ಎರಡೇ ಪ್ರಾಂತ್ಯಗಳಲ್ಲಿ ಬಂಗಾಲ ಮತ್ತು ಸಿಂಧಗಳಲ್ಲಿ ಇದರ ನಂತರ ಲೀಗು ಮಾಡಿದ ಒಂದೇ ಪ್ರಯತ್ನವೆಂದರೆ, ಪಂಜಾಬ್ ಗಡಿನಾಡು ಮತ್ತು ಅಸ್ಸಾಮುಗಳನ್ನು ಡ್ಯಾರೆಕ್ಟ್ ಏಕ್ಶನಿನ ವಿವಿಧ ರೂಪಾಂತರಗಳಿಂದ ತನ್ನ ವಶಪಡಿಸಿಕೊಳ್ಳುವ ಯತ್ನ ಬಂಗಾಲದಿಂದ ತಿರುಕ ಮುಸಲ್ಮಾನರೆಲ್ಲ ಅಸ್ಸಾಮುದೊಳಗೆ ನುಗ್ಗಲು ಪ್ರಯತ್ನಿಸುತ್ತಾರೆ ಪಂಜಾಬದಲ್ಲಿ ಬಹಿರಂಗ ಸಾಮೂಹಿಕ ಪ್ರದರ್ಶನ ಮೆರವಣಿಗೆಗಳಿಂದ ಅಲ್ಲಿನ ಸಂಯುಕ್ತ ಮಂತ್ರಿಮಂಡಳವನ್ನು ಉರುಳಿಸಿತಾದರೂ ಲೀಗಿಗೆ ಇನ್ನೂ ಅಲ್ಲಿ ಮಂತ್ರಿಮಂಡಳ [illegible] ಲು ಸಾಧ್ಯವಾಗಲಿಲ್ಲ ಅಲ್ಲಿ ಗವರ್ನರರ ರಾಜ್ಯವೇ ಆಗಿ[illegible] ಕುತಂತ್ರಗಳಿಂದ ಗಡಿನಾಡು [illegible] ಮಂಡಳವನ್ನು ಉರುಳಿಸಲು [illegible] ಈ ಎರಡು ಪ್ರಾಂತ್ಯಗಳಲ್ಲೂ ಲೀಗಿನ 'ಸೈನ್ಯ'ಗಳೇ ರಚಿತವಾಗಿವೆ [illegible] ಗಳು ಅಲ್ಲಿ ಝಳಪಿಸಲ್ಪಡುತ್ತವೆ ಗಡಿನಾಡಿನ ರಾಜಧಾನಿ ಪೇಶಾವರ ನಗರದಲ್ಲಿ ಲೀಗಿನವರು ಬಹು ಸಂಖ್ಯೆಯಲ್ಲಿರುವರಾದರೂ ಹಳ್ಳಿ ಪ್ರದೇಶಗಳ ಪಠಾಣರು ತಮ್ಮ ಹಿತೈಷಿಗಳಾದ ಅಬ್ದುಲ್ ಗಫಾರ್ ಖಾನರನ್ನು ಮರೆಯಲ್ಲ ಅವರ [illegible] ದಳದವರು ಇನ್ನೂ ಜನತಾ ಸೇವೆಯಲ್ಲೇ ಮಗ್ನರಾಗಿರುವರು

ಸಿಕ್ಕರ ಪಾಡು

ಉತ್ತರ ಹಿಂದೂಸ್ತಾನದ [illegible] ರನ್ನೆಲ್ಲ ಜಿನ್ನರ ನಾಯಕತ್ವದ[illegible] ಮಾಡುವುದು ಈ [illegible] ಈ [illegible] ವರಣದಿಂದ [illegible] ಧೈರ್ಯ[illegible] ಕೊಳ್ಳುವವರ ವಿರಳ [illegible] ಹಿಂದೂಗಳು ತಮ್ಮೊಳಗಿನ ವ್ಯತ್ಯಾಸಗಳನ್ನು ಮರೆತು ಒಟ್ಟುಗೂಡಿರ[illegible] ಪೂರ್ವ ಬಂಗಾಲ ಬಿಹಾರ ಮತ್ತು ಪಂಜಾಬಗಳಲ್ಲಿ ಇವರು ಪ್ರತೀಕಾರ ಕಾರ್ಯದಲ್ಲಿ ಭಾಗವಹಿಸಿದ ಆರೋಪಕ್ಕೊಳಗಾಗಿರುವರು ಈ ಅನಪ[illegible]ಗಳೆಲ್ಲದರ ಒಟ್ಟಾರ್ಥವೆಂದರೆ ಪಂಜಾಬದ ಸಿಕ್ಕ ಹಿಂದೂಗಳಾಗಲಿ, ಅಸ್ಸಾಮುದ ಹಿಂದೂಗಳಾಗಲಿ ಬ್ರಿಟಿಷ್ ಕೆಬಿನೆಟ್ ಮಿಶನಿನ ಪ್ರಾದೇಶಿಕ ಯೋಜನೆಯಲ್ಲಿರಲು ಇಷ್ಟಪಡುವುದಿಲ್ಲ

ಭಾರತದ ಐಕ್ಯ ಸಾಧನೆಯಾಗುವುದೆಂಬ ಉದ್ದೇಶದಿಂದ ಕಾಂಗ್ರೆಸ್ಸು ಕೆಬಿನೆಟ್ ಮಿಶನಿನ ಗುಂಪೀಕರಣವನ್ನು ಒಪ್ಪಿತು ಎರಡು ಗುಂಪುಗಳಲ್ಲಿ ಪಾಕಿಸ್ತಾನದ ಪ್ರದೇಶಗಳನ್ನು ಸೇರಿಸಿ ಕೆಬಿನೆಟ್ ಮಿಶನ್ ಯೋಜನೆಯು ಮಿ। ಜಿನ್ನರನ್ನು ತೃಪ್ತಿಪಡಿಸಲು ಯೋಚಿಸಿತ್ತು ಆದರೆ ಲೀಗು ಈ ಯೋಜನೆಯನ್ನು ತಿರಸ್ಕರಿಸಿದೆ ಭಾರತದ ಐಕ್ಯವು ಸಾಧ್ಯವಿಲ್ಲದಿದ್ದರೆ ಲೀಗಿಗೆ ಅದು ಬಯಸುವ ಪ್ರದೇಶಗಳೆಲ್ಲ ದೊರಕುವುದು ಅಸಾಧ್ಯವೇ ಸರಿ ಅಸ್ಸಾಮುದ ಮೂರನೇ ಒಂದಂಶ ಜನಸಂಖ್ಯೆ ಮಾತ್ರ ಮುಸ್ಲಿಮರದು ಅದೂ ಸಿಲೆಟ್ ಎಂಬ ಜಿಲ್ಲೆಯಲ್ಲಿ ಮಾತ್ರ ನಬಿಡವಾಗಿದೆ. . ಈ ಜಿಲ್ಲೆಯನ್ನು ವಿಂಗಡಿಸಿ ಪೂರ್ವ ಬಂಗಾಲಕ್ಕೆ ಜೋಡಿಸಲು ಸಾಧ್ಯವಿದೆ ಗಡಿನಾಡಿನ ಪರಿಸ್ಥಿತಿಯು ಮತ್ತೊಂದು ತರದ ವೈಚಿತ್ರ್ಯದ್ದು ಕಾರಣ ಅಲ್ಲಿಯ ಜನಸಂಖ್ಯೆ ಬಹುಸಂಖ್ಯಾಕ ಮುಸಲ್ಮಾನರದೇ ಆದರೂ ಅಲ್ಲಿ ಪಾಕಿಸ್ತಾನಕ್ಕೆ ವಿರೋಧಿಸಿ ಕೊಂಗ್ರೆಸಿಗೆ ಬೆಂಬಲ ಕೊಡುವ ಬಹುಸಂಖ್ಯಾಕರಿದ್ದಾರೆ ಒಂದು ವೇಳೆ ಪಾಕಿಸ್ಥಾನವಾದರೆ ಗಡಿನಾಡು ಹಿಂದೂಸ್ಥಾನದಿಂದ ಬೇರ್ಪಟ್ಟು ಏಕಾಂಗಿಯಾಗಿ ಬಾಳಬಹುದೆ ಎಂದು ಪಶ್ನೆ ಇದರ ಕೊನೆಯ ತೀರ್ಮಾನವನ್ನು ಅಲ್ಲಿನ ಪ್ರಜಾಪ್ರತಿನಿಧಿ ಸಭೆಯೇ ಮಾಡಬೇಕಾಗಿದೆ. ಪಂಜಾಬವನ್ನೂ ವಿಭಾಗಿಸಲೇ ಬೇಕಾಗುವುದು ಆದರೆ ಎಲ್ಲಿ ಹೇಗೆ ಎಂಬುದು ಕಷ್ಟ ಕಾರಣ ಅಲ್ಲಿ ಹಿಂದೂ ಸಿಕ್ಕರು ಬಹುಸಂಖ್ಯಾಕರಾಗಿರುವ ವಿಸ್ತಾರವಾದ ಒಂದೇ ಪ್ರದೇಶವಿಲ್ಲ ಸಿಕ್ಕರು ಬಹುಸಂಖ್ಯೆಯಲ್ಲಿರುವ ಜಿಲ್ಲೆಗಳು ಪಶ್ಚಿಮ ಮತ್ತು ಪೂರ್ವ ಪಂಜಾಬಗಳೆರಡರಲ್ಲೂ ಇವೆ ಸಂಪತ್ತಿನ ಪ್ರಾಂತ್ಯವಾದ ಪಂಜಾಬನ್ನು ವಿಚ್ಛೇದಿಸಲು ಜಿನ್ನರು ಎಂದಿಗೂ ಒಪ್ಪಲಾರರು ಆದರೆ ಸಿಕ್ಕರಿಗೆ ಸಂಕಷ್ಟಕಾಲದಲ್ಲಿ ತಮ್ಮ ಕೆಲವು ದೇಶಿ ರಾಜರುಗಳ ಸೈನ್ಯಗಳು ಸಹಾಯಕ್ಕೆ ಸಿಗುತ್ತವೆ

ಕಠಿಣ ಬಂಗಾಲ

ಭಾಷೆ ಮತ್ತು ಸಂಸ್ಕೃತಿಯ ಮಟ್ಟಿಗೆ ಬಂಗಾಲಿಗಳೆಲ್ಲ ಒಂದೇಯಾಗಿದ್ದಾರ ಪೂರ್ವದಲ್ಲಿ ಮುಸ್ಲಿಮರೂ ಪಶ್ಚಿಮದಲ್ಲಿ ಹಿಂದೂಗಳೂ ಬಹುಸಂಖ್ಯೆಯಲ್ಲಿದ್ದಾರೆ ಮಾಜಿ ವ್ಯಾಸರಾಯ ಕರ್ಜನರು ಬಂಗಾಲವನ್ನು ವಿಭಾಗಿಸಿದಾಗ ಹಿಂದೂಗಳು ಚಳವಳವನ್ನು ಮಾಡಿ ಅದನ್ನು ತಪ್ಪಿಸಿದ್ದ ಆದರೆ ಇಂದು ಹಿಂದುಗಳೇ ಅದರ ವಿಭಾಗೀಕರಣವಾಗಬೇಕೆಂದು ಚಳವಳ ನಡಸುತಿದ್ದಾರೆ. ಈ ವಿಷಯದಲ್ಲಿ ಅವರು ಗಾಂಧೀಜಿಯ ಸಲಹೆಯನ್ನು ಕೇಳುವಂತಿಲ್ಲ. ಆದರೆ ವಿಭಾಗೀಕರಣವಾದರ ಪೂರ್ವ ಬಂಗಾಲವು ಸ್ವತಂತ್ರ ಜೀವನ[illegible] ಮಾಡಬಲ್ಲುದು? ಕಲಕತ್ತದ [illegible] ಸಂಪತ್ತು ಪಶ್ಚಿಮದ [illegible] ತೆರಿಗೆ [illegible] ಕೃಷಿ ಮತ್ತು ಕೈಗಾರಿಕೆ [illegible] ಅದಕ್ಕೆ ನೆರವು [illegible] ಪೂರ್ವ ಬಂಗಾಲ [illegible] ಪಾಕಿಸ್ತಾನದಿಂದ 700 ಮೈಲಿಗಳಷ್ಟು ದೂರ ನಾವಲ್ಪಡುವ ಪೂರ್ವ ಬಂಗಾಲದ ರಕ್ಷಣೆಯನ್ನಾದರೂ ಹೇಗೆ ಮಾಡಬಹುದೆಂದು ಜಿನ್ನರೇ ವಿವರಿಸಬೇಕಾಗಿದೆ

ಇದಾದ ಮೇಲ ಕೇಂದ್ರ ಸರಕಾರದ ಆಸ್ತಿಯನ್ನು, ಸೈನ್ಯವನ್ನು ಹಂಚಿಕೊಳ್ಳುವ ಸಮಸ್ಯ ಉಂಟಾಗುತ್ತದ ಭಾರತ ರಕ್ಷಣೆಯ ಮಟ್ಟಿಗೆ ಒಮ್ಮ ತರದ ಸ್ವಲ್ಪ ಒಪ್ಪಂದಕ್ಕೆ ಜಿನ್ನರು ಸಿದ್ಧರಿದ್ದಾರೆಂದನ್ನಲಾಗಿದೆ ಆದರೆ ವಿಭಾಗೀಕರಣವಾದ ಈಗಿನ ಮತಾಂಧತೆಯು ಕಳೆದು ಎರಡು ಪ್ರದೇಶಗಳಲ್ಲೂ ಸಾಮಾಜಿಕ ಉನ್ನತಿಗಾಗಿ ಚಳವಳಗಳುಂಟಾಗುತ್ತವೆಂದು ಹಾರೈಕೆಯಿಂದ ಎರಡೂ ಕಡೆಗಳಲ್ಲಿನ ಸಮಾಜವಾದಿಗಳು ಪರಸ್ಪರ ಒಟ್ಟುಗೂಡಿ ಪುನಃ ಭಾರತದ ಐಕ್ಯ ಸಾಧಿಸುವಂತಾಗುವುದು ಕಾರಣ ಭಾರತವು ಎಂದಿಗೂ ವಿಭಾಗಿಸಲ್ಪಡುವಂತಹದಲ್ಲ. ವಿಭಾಗಿಸಲ್ಪಟ್ಟರೆ ಅದು ಭಾರತವೂ ಅಲ್ಲ, ಮುಸಲ್ಮಾನರು ಅದರ ಸಂಸ್ಕೃತಿಗೆ ಕೊಡಿಸಿದ ತಮ್ಮ ಪಾಲಿನ ಭಾಗವನ್ನೆಂದಿಗೂ ಕಳೆದುಕೊಳ್ಳುವ ಅಪಕೀರ್ತಿಯನ್ನು ಬಯಸಲಾರರೆಂದು ನಂಬಬಹುದು.

'ಆಭರಣ ಭೂಷಿತ ಕಪ್ಪು ಕಾಲುಗಳು'

ದೇಶಿ ರಾಜರುಗಳ ವಿಚಿತ್ರ ರಾಜಕೀಯ

ಕೊಂಗ್ರೆಸಿಗೆ ಲೀಗುಗಳಿಗೆ ಕಪ್ಪ ಕೊಟ್ಟ ರಾಜರು

[illegible] ಎಂದು ಹುರಿದುಂಬಿಸುತ್ತ ಅಮೇರಿಕದ [illegible] ಪತ್ರಿಕೆಯು ಭಾರತ ದೇಶಿ ರಾಜರುಗಳ [illegible] ಕಾರ್ಯಕಲಾಪಗಳನ್ನು ತನ್ನದೇ ಆದೊಂದು ವಿಡಂಬನಾತ್ಮಕ ಶೈಲಿಯಲ್ಲಿ ವಿವರಿಸುತ್ತಾ ಬ್ರಿಟಿಷರು ಬಿಟ್ಟು ಹೋದ ಮೇಲೆ ದೇಶೀ ರಾಜರುಗಳ ಪರಿಸ್ಥಿತಿ ಹೇಗಾಗುವುದೆಂದು ತಿಳಿಸುತ್ತಾರೆ.

ಸಿಡಿಲಾರ್ಭಟವು ನವಿಲು ಗುಂಪನ್ನು ಚೆದರಿಸುವಂತೆ ಬ್ರಿಟಿಷರ ಬಿಟ್ಟುಹೋಗುವ ಘೋಷಣೆಯಿಂದ ಭಾರತದ ದೇಶಿ ರಾಜರ ಶಿಬಿರದಲ್ಲಿ ಚಲ್ಲಾಪಿಲ್ಲಿಯಾಯಿತು. ದೇಶಿ ಸಂಸ್ಥಾನಿಕರ ಮಂಡಳವು ಜಗತ್ತಿನ ಅತ್ಯೈಶ್ವರ್ಯದ ಉದ್ಯೋಗ ಸಂಘ. ಯಾವ ಶಿಸ್ತು ಸಾಂಪ್ರದಾಯವಿಲ್ಲದ ಹಲವೊಂದು ರಾಜ ಮಹಾರಾಜರುಗಳ, ನವಾಬ ಗಾಯಕವಾಡ, ಹೋಲ್ಕರುಗಳ ಭಾಂಧವ್ಯಕೂಟವದು. ಬೊಂಬಾಯಿ ತಾಜ್‌ಮಹಾಲ್ ಹೋಟೇಲಿನ ರಾಜಭವನದಲ್ಲಿ ಇವರ ಸಭೆ ಜರುಗಿತು. ಎಲ್ಲಾ ಮಜೂರ ಸಂಘಗಳು ಹಿಂದೆ ಅನೇಕ ವೇಳೆ ಪರ್ಯಾಲೋಚಿಸಿದ ಸಮಸ್ಯೆಯನ್ನೇ ಈ ಸಂಸ್ಥಾನೀಶರೂ ಪರ್ಯಾಲೋಚಿಸಿದರು. ಆ ಸಮಸ್ಯೆಯೆಂದರೆ ನಿರುದ್ಯೋಗದ್ದು. ಮುಂದೆ ಪ್ರಜೆಗಳು ಪ್ರಜಾಪ್ರಭುತ್ವ ಬೇಕೆಂದರೆ ಇವರಿಗೆ ಕೆಲಸವೆಲ್ಲಿ?

ಕಠಿಣ ಸಮಸ್ಯೆ

ಇದುತನಕದ ತಮ್ಮ ಸಭೆಗಳಲ್ಲಿ ದೇಶಿ ರಾಜರು ತಮ್ಮ ಸುಖೋಪಭೋಗ ಸಾಧನಗಳ ಕುರಿತೇ ಪರ್ಯಾಲೋಚಿಸುತ್ತಿದ್ದರು. ಆದರೆ ಈಗ ಆ ದಿನಗಳು ಕಳೆದುಹೋಗಿವೆ. ಜನಜಾಗೃತಿಯಿಂದಾಗಿ ಅವರ ಇರುವಿಕೆಯೇ ಗಂಡಾಂತರಗೊಳಗಾಗಿದೆ. ಹಿಂದೆ ತಮ್ಮ ಸಂಸ್ಥಾನ ಖಜಾನೆಯಿಂದ ಖರ್ಚಿಗೆ ಎಷ್ಟು ತೆಗೆದುಕೊಳ್ಳಬೇಕು ಎಂಬ ವಿಷಯವಿರುತ್ತಿದ್ದರೆ ಈಗ ಎಷ್ಟು ಸಿಗಬಹುದು ಎಂದೇ ಚಿಂತೆಯಾಗಿದೆ (ಬರೋಡದ ಗಾಯಕವಾಡರು ಕಳೆದ ವರ್ಷ ಕುದುರೆಕೊಳ್ಳಲು 5 ಲಕ್ಷ ಪವನು ಖರ್ಚು ಮಾಡಿದ್ದಾರೆಂಬ ಸಂಗತಿ ಜ್ಞಾಪಿಸಿಕೊಳ್ಳುವುದು ಈ ಸಂದರ್ಭದಲ್ಲಿ ಅಪ್ರಸ್ತುತವಲ್ಲ.)

ಇದುತನಕ ಅಲಕ್ಷಮಾಡಿದ ತಮ್ಮ ಪ್ರಜೆಗಳ ಶಿಕ್ಷಣಕ್ಕಾಗಿ ಎಷ್ಟು ಖರ್ಚು ಮಾಡಬೇಕೆಂಬುದೂ ಅವರಿಗೊಂದು ದೊಡ್ಡ ಸಮಸ್ಯೆಯಾಗಿದೆ. ಹೈದರಾಬಾದಿನಂತಹ ಸಂಪತ್ಸಮೃದ್ಧಿಯ ಸಂಸ್ಥಾನದಲ್ಲಿ ಶೇಕಡಾ 98 ರಷ್ಟು ಜನರು ನಿರಕ್ಷರಸ್ಥರಿದ್ದಾರೆ!

ಆದರೆ ಇದಕ್ಕಿಂತಲೂ ಬಿಗುವಾದ ಸಮಸ್ಯೆಗಳು ಬೇರೆ ಇವೆ. ಇನ್ನು ಹದಿಮೂರು ತಿಂಗಳಲ್ಲಿ ಇದುತನಕ ತಮ್ಮನ್ನು ಪಾಲಿಸಿದ ಬ್ರಿಟಿಷರು ಮೂಟೆಕಟ್ಟಿ ಹೋದಮೇಲೆ ತಮ್ಮ ಅವಸ್ಥೆ ಏನಾಗುವುದು? ಮತ್ತೆ ಅತೀ ಪೂರೂರಿನ ಸಮಸ್ಯೆಯೆಂದರೆ ಘಟನಾ ಸಮಿತಿಯನ್ನು ಯಾವಾಗ ಹೇಗೆ ಸೇರುವುದು ಎಂಬುದು.

ಈ ಸಂಸ್ಥಾನಾಧೀಶ್ವರರು ಐಕ್ಯಮತ್ಯದಿಂದ ಬಲಿಷ್ಟವಾದ ಪ್ರಭಾವವನ್ನು ಹೊಸ ಕೇಂದ್ರ ಸರಕಾರದ ಮೇಲೆ ಬೀರಬಹುದು. ಆದರೆ ಮೊನ್ನಿನ ಅವರ ಸಭೆಯಲ್ಲಿ ಸಾಕಷ್ಟು ಐಕ್ಯತೆ ತೋರಲಾರದಾಯಿತು. ಪ್ರತಿಯೊಬ್ಬರೂ ಸ್ವತಂತ್ರವಾಗಿ ವರ್ತಿಸಿದರು.

ರಾಜರ ಭವಿಷ್ಯ

ದೇಶಿ ರಾಜರಲ್ಲಿ ಬಲಿಷ್ಟರಾಗಿದ್ದು ಅತೀ ಹೆಚ್ಚಿನ 21 ತೋಪುಗಳ ಸನ್ಮಾನತೆಯುಳ್ಳವರು ತಾವು ಸ್ವತಂತ್ರರಾಗಿರಬಲ್ಲೆವೆಂದು ಭರವಸೆಪಟ್ಟುಕೊಂಡಿದ್ದಾರೆ. ಇತರರು ತಾವು ಪಾಕಿಸ್ಥಾನವನ್ನು ಸೇರಿದರೆ ಸುಖವಾಗಿರಬಹುದೆಂದೂ ಇಲ್ಲವೆ ಮತ್ತೆ ಕೆಲವರು ಕೊಂಗ್ರೆಸೊಡನೆ ಸೇರಿಕೊಂಡರೆ ಗಂಡಾಂತರವಿಲ್ಲವೆಂದೂ ನಂಬಿಕೊಂಡಿರುವರು.

ಕೊಂಗ್ರೆಸಿನ ಕಡೆ ವಾಲಿರುವವರ ಗುರಿಕಾರರೇ ಬಿಕಾನಿರದ ಮಹಾರಾಜರು. ಇವರು ಒಳ್ಳೇ ತೀಕ್ಷ್ಣ ನೋಟದ ಶಿಖಾರಿಗಳು. ತಮ್ಮ ರಾಜ ಭವನದಲ್ಲಿ 12 ದೇಶಗಳಲ್ಲಿ ಕೊಂದ 75 ವಿವಿಧ ಕ್ರೂರ ಜಂತುಗಳ ತಲೆಗಳನ್ನು ಶೃಂಗಾರಕ್ಕಾಗಿಟ್ಟುಕೊಂಡಿದ್ದಾರೆ. ಸ್ವರಕ್ಷಣೆಗೆ ಕೊಂಗ್ರೆಸಿನ ಮರೆಹೋಗುವುದೇ ಕ್ಷೇಮಕರವೆಂದಿವರ ಭಾವನೆ. ಇದೇ ಸಮಯಕ್ಕೆ ಇತರ ರಾಜರು ಕೆಲವರು ತಮಗೆ ಮೇಲಿಂದ ಮೇಲೆ ತೊಂದರೆ ಕೊಡುವ ಕೊಂಗ್ರೆಸಿಗೆ ವಿರೋಧವಾದೊಂದು 'ಕೋಟೆ' ಕಟ್ಟಲು ಹವಣಿಸುತ್ತಿದ್ದರು. ಸಭೆಯ ಸನ್ನಿವೇಶಗಳು ನಾಟಕೀಯವಾಗಿ ಜರಗಿ ಬಿಕಾನಿರರು ಸಭೆಯಿಂದ ಎದ್ದು ಹೋಗುತ್ತಾ ತಾವು ಘಟನಾ ಸಮಿತಿಗೆ ಸದಸ್ಯರನ್ನು ಕಳುಹಿಸುವುದಾಗಿ ಸಾರಿದರು. ಸಭಾಂತ್ಯವಾಗುವುದರೊಳಗೆ ಇತರ ಹನ್ನೊಂದು ಮಂದಿ ರಾಜರು ಅವರೊಟ್ಟಿಗೆ ಸೇರಿದ್ದರು.

ಅನಾಥ ಪ್ರಾಣಿ ಆಲಯ

ಪಾಕಿಸ್ಥಾನ ಪರವಾಗಿಯೂ ಕೊಂಗ್ರೆಸ್ ವಿರೋಧವಾಗಿಯೂ ವರ್ತಿಸುವ ಸುಂದರ ಕುದುರೆ ಬಂಡಾಟ ಪ್ರವೀಣರಾದ ಭೋಪಾಲದ ನವಾಬರು ಸಲಹೆ ಕೊಡುತ್ತಾ "ಘಟನಾ ಸಮಿತಿಯನ್ನು ರಾಜರೂ ಮುಸ್ಲಿಂ ಲೀಗೂ ಬಹಿಷ್ಕರಿಸಿದರೆ ಅದನ್ನು ಕೇವಲ ಕೊಂಗ್ರೆಸಿಗರ 'ತಮಾಷೆ'ಯಾಗಿ ಮಾಡಬಹುದೆಂದು' ತಿಳಿಸಿದರು.

ಧೋಲ್‌ಪುರದ ರಾಣರು ಭೋಪಾಲರ ಅನುಯಾಯಿಗಳಲೊಬ್ಬರು. ಬಿಕಾನಿರರು ಗುಂಡಿಕ್ಕಿಕೊಂದ ಪ್ರಾಣಿಗಳಿಗಿಂತ ಹೆಚ್ಚು ಪ್ರಾಣಿಗಳನ್ನಿವರು ತಮ್ಮ ಅನಾಥ ಪ್ರಾಣಿ ಆಲಯದಲ್ಲಿ ರಕ್ಷಿಸಿದ್ದಾರೆ. ತಮಗೊಬ್ಬ ಉತ್ತರಾಧಿಕಾರಿಯಾಗುವ ಸಂಭವದ ಕುರಿತು ಇವರು ಆಗಾಗ್ಗೆ ಜ್ಯೋತಿಷ್ಯರನ್ನು ವಿಚಾರಿಸುತ್ತಾರೆ.

ಪ್ರತಿಯೊಬ್ಬರ ಆಟ

ನಡುಗಾಲದ ಕೇಂದ್ರ ಸರಕಾರವನ್ನು ನಿರ್ಬಲಗೊಳಿಸುವ ಯತ್ನದಲ್ಲಿ ಹೆಚ್ಚಿನವರು ಭೋಪಾಲದ ನವಾಬರ ಬೆಂಬಲಕ್ಕೆ ನಿಂತರಾದರೂ ಇವರಲ್ಲಿ ಪ್ರತಿಯೊಬ್ಬರೂ ತಮ್ಮ ತಮ್ಮ ಸಂಸ್ಥಾನಗಳ ಭೌಗೋಳಿಕ ಮತ್ತು ಸ್ಥಾನ ಮಹತ್ವದ ದೃಷ್ಟಿಯಿಂದ ಅಂದಿನ ಸಭೆಯಲ್ಲಿ ವ್ಯವಹರಿಸಿದರು.

ಉದಾ: ಜಿನ್ನರು ಕೇಳುವ ಪಾಕಿಸ್ಥಾನದ ಗಡಿಯಲ್ಲಿರುವ ಹಿಂದೂ ಮತ್ತು ಸಿಕ್ ಸಂಸ್ಥಾನಗಳ ಮಾಂಡಲಿಕರು ತಾವು ಮುಸ್ಲಿಂ ರಾಜ್ಯಕ್ಕೆ ಸೇರಲು ಇಷ್ಟಪಡುವುದಿಲ್ಲ. ಇಂಥವರಲ್ಲಿ ಪ್ರಮುಖರೆಂದರೆ ಸಂಪೂರ್ಣ ಪಾಶ್ಚಾತೀಕರಣ ಹೊಂದಿದ ಕಾಪುರ್ತಾಲದ 74 ವರ್ಷದ ಮಹಾರಾಜರು. ಇವರು ಸಿಕ್ ಮತದವರಾದರೂ ಗಡ್ಡವಿಟ್ಟಿಲ್ಲ. ಆದರೆ ಈಚೆಗೆ ಸಿಕ್ ಜನರನ್ನು ಒಲಿಸಲೋಸುಗ ತಮ್ಮ ಮೊಮ್ಮಗನಿಗೆ ಸಿಕ್ ಧರ್ಮ ದೀಕ್ಷೆ ಕೊಡಿಸಿ ಕೂದಲು ಕತ್ತರಿಸಿದ ಪ್ರತಿಜ್ಞೆ ತೆಗೆಸಿದ್ದಾರೆ.

ತಿರುವಾಂಕೂರಿನ ಮಹಾರಾಜರು ಈಗಾಗಲೇ ತಾವು ಸ್ವತಂತ್ರರಾಗಿರುವುದಾಗಿ ಪ್ರಕಟಿಸಿದ್ದಾರೆ. ಆದರೆ ಇದೇ ರಾಜರೊಡನೆ ಒಂದೇ ಭಾಷೆಯ ಸಂಬಂಧವಿರುವ (ಮಲೆಯಾಳಂ) 71 ವಯಸ್ಸಿನ ಕೊಚ್ಚಿ ರಾಜರು ಈ ಮಾಂಡಲಿಕ ಮಂಡಳಿಯಿಂದ ಅತಿ ದೂರ ನಿಂತಿರುವರು ಮಾತ್ರವಲ್ಲ ಸಂಸ್ಥಾನ ಪ್ರಜಾ ಪರಿಷತ್ತಿಗೆ ಉದಾರ ಧನದಾನವನ್ನೂ ಕೊಟ್ಟಿರುವರು!

ಅಮೇರಿಕದ ನ್ಯೂ ಜೆರ್ಸಿಯ ಒರ್ವ ಕೈದಿಗೆ ಜೈಲು ಕೋಣೆ ಅದೆಷ್ಟು ಸುಖಕರವಾಗಿ ಕಂಡಿತೆಂದರೆ ಅವನ ಅವಧಿ ನೀಗಿದ ಮೇಲೆ ಬಿಟ್ಟುಹೋಗಲು ಅವನಿಗೆ ಒಂದು ತಿಂಗಳ ನೋಟಿಸ್ ಕೊಟ್ಟರೂ ಅವನು ಹೊರಡಲೊಲ್ಲ.

★

ಪೇಪರ್ ಮಾರುವ ಕೋತಿಗ[illegible]

ಮಂಗಗಳ ಮೇಲೆ ಬಾಂಬ್ ದಾಳಿ

ಸಂಯುಕ್ತ ಅಮೇರಿಕದ ಫ್ಲೋರಿಡಾ ಪ್ರಾಂತ್ಯದಲ್ಲಿ ಕೆಲಸಗಾರರ ಕೊರತೆ ತುಂಬಾ ಇದೆ. ಅಲ್ಲಿಯ ಡೈನ್ ಎಂಬ [illegible] ಹಳ್ಳಿ ಪಟ್ಟಣವೊಂದರಲ್ಲಿ ಜನರು [illegible] ಬುದ್ಧಿ ಕಲಿಸಿದ ಚಿಂಪಾಂಜಿ ಬಾಲವಿಲ್ಲದ ಮಂಗನನ್ನು ವರ್ತಮಾನ ಪತ್ರಿಕೆ ಮಾರುವ ಕೆಲಸಕ್ಕೆ ನೇಮಿಸಿರುವರು.

ಆದನ್ನೆಷ್ಟು ತರಬೇತಿಗೊಳಿಸಿದ್ದಾರೆಂದರೆ ಐದು ಡಾಲರ್ ನೋಟು ಕೊಟ್ಟರೂ ಅದು ಚಿಲ್ಲರೆ ಕೊಡುವುದು. ಆದರೆ ಹಾಗೆ ಚಿಲ್ಲರೆ ಕೊಡುವಾಗ ಮಾತ್ರ ಅದಕ್ಕೆ ಸ್ವಲ್ಪ ತೊಂದರೆಯಾಗುವುದೊ ಏನೊ–ಅದು ಗಿರಾಕಿಗಳ ಕಡೆಗೆ ಒಂದು ವಕ್ರ ದೃಷ್ಟಿಯನ್ನು ಹಾಕಿ ಹಲ್ಲು ಕಡಿಯುವುದು. ಇಷ್ಟಿಲ್ಲದಿದ್ದರೆ ಇತರ ವಿಷಯಗಳಲ್ಲೆಲ್ಲ ಅಲ್ಲಿನ ಗಿರಾಕಿಗಳೊಡನೆ ಅದು ತುಂಬಾ ಜನಪ್ರಿಯವಾಗಿರುವುದು. ತನ್ನ ಕೆಲಸವನ್ನು ಯಾವ ಕಪಿ ಚೇಷ್ಟೆಗಳಿಲ್ಲದೆ ಅದು ನಿರ್ವಹಿಸುತ್ತಿರುವುದೇ ಎಲ್ಲರಲ್ಲಿ ಕೌತುಕವುಂಟುಮಾಡುತ್ತದೆ.

ಕಪಿ ಹಾವಳಿ

ಆದರೆ ಅಲಹಾಬಾದಿನ ಹತ್ತಿರದ ಕೆತ್ರಾ ಬಡಾವಣೆಯ ಮಂಗಗಳಿಗೆ ಮೇಲ್ಕಂಡ ಕೋತಿಯ ಕಿಂಚಿತಾಂಶದಷ್ಟು ಬುದ್ಧಿ ಇಲ್ಲವೆನ್ನಬೇಕು ಇವು ಅಲ್ಲಿನ ನಾಗರೀಕರ ಮೇಲೆ ಯುದ್ಧವನ್ನೇ ಸಾರಿವೆಯೆನ್ನಬೇಕು.

ಅವುಗಳ ಶಸ್ತ್ರಾಸ್ತ್ರಗಳು: ಮಾಡಿನ ಹಂಚು, ಕಿಟಕಿ ಪರದೆಗಳು, ಇಲ್ಲವೆ ಹಿಟ್ಟಿನ ಪೊಟ್ಟಣಗಳು. ಇವು ಅಕಸ್ಮಾತಾಗಿ ನುಗ್ಗುವವು. ಶತ್ರುಗಳು ಬಂದಾಕ್ಷಣ ಯೋಜನೆ ಪ್ರಕಾರ ಹಿಮ್ಮೆಟ್ಟುವವು. ಅವುಗಳ ಐಕ್ಯತೆ ಮತ್ತು ಶಿಸ್ತು ಪ್ರಶಂಸನೀಯವಾಗಿರುವುದರಿಂದ ಜನರು ಇವುಗಳನ್ನು ಸೋಲಿಸಲು ವಿಮಾನ ದಾಳಿ ಅತ್ಯಾವಶ್ಯಕವೆಂದು ನಗರ ಸಭೆಗೆ ಮನವಿ ಮಾಡಿಕೊಂಡರುವರಂತೆ. ಕೆಲವೇ ಸಮಯದಲ್ಲಿ ಈ ವಾನರ ಸೇನೆಯು ಸುಮಾರು 50 ಸಾವಿರ ರೂಪಾಯಿ ಸೊತ್ತುಗಳನ್ನು ನಷ್ಟಪಡಿಸಿವೆಯಂತೆ.

ESTD. 1906.

CANARA BANK, LIMITED.

(Incorporated in British India with Limited Liability)

(PROGRESS STATEMENT CORRECT TO THOUSANDS OF RUPEES)

LIABILITIES

	1945	1946
Capital Subscribed	29,00,000	29,00,000
Capital paid up	28,43,000	28,80,000
Reserves	11,00,000	11,00,000
Deposits	3,50,43,000	4,60,40,000
Due to Bankers	26,91,000	62,57,000
Call Deposits from Bankers	8,00,000	15,00,000
Branch Adjustments	22,07,000	21,09,000
Bills for collection and foreign bills negotiated	20,56,000	34,23,000
Other Liabilities	77,000	86,000
Profit for the year	3,61,000	4,19,000
Rs.	4,71,78,000	6,45,13,000

ASSETS

	1945	1946
Cash	1,01,91,000	1,16,16,000
Govt. Securities	1,80,45,000	2,75,61,000
Advances to customers	1,56,87,000	2,01,38,000
Bills for collection and Foreign Bills negotiated	20,56,000	34,23,000
Landed Properties	28,000	5,000
Bank Premises and Furniture and Fixtures	1,46,000	1,47,000
Other Assets	10,25,000	16,23,000
Rs.	4,71,78,000	6,45,13,000

ಜಿಲ್ಲಾ ಪರಿಚಯ

ನಗರದಲ್ಲಿ ಆರೋಗ್ಯ ಮಂತ್ರಿಗಳು

ನಿನ್ನೆ ತಾ. ೧೯ರಂದು ಜಿಲ್ಲಾ ಬೋರ್ಡ್ ಸಭಾಭವನದಲ್ಲಿ ಜಿಲ್ಲಾ ಭೂಪಾಲಕ ಸಂಘ ಮತ್ತು ವೈದ್ಯ ಸಂಘದವರು ಆರೋಗ್ಯ ಮಂತ್ರಿಗಳಾದ ಮಾನ್ಯ ಎ. ಬಿ. ಶೆಟ್ಟಿಯವರ ಗೌರವಾರ್ಥ ಸತ್ಕಾರ ಕೂಟವೊಂದನ್ನು ಏರ್ಪಡಿಸಿ ಪರಿಹಾರಾರ್ಹವಾದ ಕೆಲವು ಸಾರ್ವಜನಿಕ ಸಮಸ್ಯೆ ಸಂಕಷ್ಟಗಳನ್ನು ನಿವೇದಿಸಿಕೊಂಡರು. ಅವುಗಳಲ್ಲಿ ಆರೋಗ್ಯ ಮಂತ್ರಿಗಳ ಪ್ರತ್ಯಕ್ಷ ಹೊಣೆಗಾರಿಗೊಳಪಟ್ಟ ವಿಷಯಗಳೆಂದರೆ ನೀರು ಸರಬರಾಯಿ, ವೈದಕೀಯ ಸೌಕರ್ಯ, ಮಲೇರಿಯಾ ಮತ್ತು ಆನೆಕಾಲು ರೋಗ ನಿವಾರಣೆ ಸಂಬಂಧವುಗಳು. ಗುರುಪುರದ ಬಳಿಯಿಂದ ನೀರಿನ ವ್ಯವಸ್ಥೆ ಮಾಡಲು 42 ಲಕ್ಷ ರೂಪಾಯಿಗಳ ಖರ್ಚಿರುವುದರಿಂದಲೂ, ಆನೆಕಾಲಿನ ನಿವಾರಣೆ ಸಂಬಂಧ ಪಶ್ಚಿಮ ಕರಾವಳಿಯ ಹಲವು ಕಡೆಗಳಲ್ಲಿ ಅದರ ಪ್ರತಿಬಂಧಕ ಯೋಜನೆಗಳಾವಶ್ಯಕವಿರುವುದರಿಂದಲೂ ಸರಕಾರದವರು ತಮ್ಮ ವಿ...ತಿಯಲ್ಲಿನ ...ನ ಪ್ರಮಾಣದ ಧಾರ್ಮಾಶಯದಲ್ಲಿ ಈ ಕುರಿತು ಆರೋಗ್ಯ ಕಾರ್ಯಗಳನ್ನು ಕೈಗೊಳ್ಳಲಾಗುವುದೆಂದು ತಿಳಿಸಿದರು. ಆಯುರ್ವೇದ ಕೋಲೇಜನ್ನು ಸ್ಥಾಪಿಸಲು ಯೋಗ್ಯ ಶಿಕ್ಷಕ ವರ್ಗದ ಕೊರತೆಯಿರುವುದರಿಂದಲೂ ಮತ್ತು ದೇಶಿ ಔಷಧಿಗಳ ಸಾಕಷ್ಟು ಸಂಶೋಧನೆ ಪ್ರಯೋಗಗಳಾಗಿಲ್ಲವಾದುದರಿಂದ ಸದ್ಯದಲ್ಲಿ ಮದ್ರಾಸಿನ ದೇಶಿ ವೈದ್ಯ ಶಾಲೆಯನ್ನು ಮಾತ್ರ ಕೋಲೇಜ್ ಆಗಿ ಪರಿವರ್ತಿಸಿ ಫಲಿತಾಂಶಗಳನ್ನು ನಿರೀಕ್ಷಿಸಲಾಗುವುದೆಂದೂ ಯಶಸ್ವಿಯಾದರೆ ಎಲ್ಲಾ ಭಾಷಾ ಪ್ರದೇಶಗಳಲ್ಲಿ ಒಂದೊಂದನ್ನು ಸ್ಥಾಪಿಸುವ ಏರ್ಪಾಡು ನಡೆಯುವುದೆಂದೂ ತಿಳಿಸಲಾಯಿತು. ಕಬ್ಬಿಣ ಸಿಮೆಂಟುಗಳ ಅಭಾವ ಸರಕಾರಕ್ಕೂ ಇರುವುದರಿಂದ ಚಿಕಿತ್ಸಾಲಯಗಳನ್ನು ಕಟ್ಟಿಸುವ ಕಾರ್ಯವು ಸದ್ಯಕ್ಕೆ ಮಂದಗತಿಯಲ್ಲಿ ಸಾಗಬೇಕಾಗಿದೆ, ಹಳ್ಳಿಗರಿಗೆ ಹೆಚ್ಚಿನ ವೈದಕೀಯ ಸೌಕರ್ಯ ಕೊಡಲು ಪ್ರಯತ್ನಗಳಾಗುವುವು. ಕೃಷಿಗಾರರಿಗೆ ಬಾವಿ, ಕರೆ, ಗೊಬ್ಬರದ ಸರಬರಾಯಿಗೆ ಸಕಲ ಸಹಾಯ ಕೊಡಲಾಗುವುದು ಇವೇ ಮೊದಲಾದ ವಿಷಯಗಳನ್ನು ಮಾನ್ಯ ಮಂತ್ರಿಗಳು ತಿಳಿಸಿದರು. ಮಂಗಳೂರಲ್ಲಿ ಆಗಲೇ ಒಂದು ಒಂದನೇ ತರಗತಿಯ ಕಾಲೇಜು ಇರುವುದರಿಂದ ಮತ್ತು ಕೋಲೇಜುಗಳೇ ಇರದ ಜಿಲ್ಲೆಗಳಿರುವುದರಿಂದ ಸದ್ಯಕ್ಕೆ ಗವರ್ನಮೆಂಟ್ ಕೋಲೇಜನ್ನು ಫಸ್ಟ್ ಗ್ರೇಡ್ ಆಗಿ ಮಾಡುವ ಯೋಜನೆಯು ಮುಂದರಿಸಲಾಗಿದೆಯೆಂದು ಅವರು ತಿಳಿಸಿದರು. ನಂತರ ಮಂಗಳೂರು, ಮಲ್ಪೆ ಮತ್ತು ಬಟ್ಕಳ ಬಂದರದ ಕುರಿತು ಸರಕಾರವು ಸಮಿತಿಗಳ ಮೂಲಕ ಪರ್ಯಾಲೋಚಿಸಲಿದೆ ಎಂದರು.

ಕೊನೆಯಲ್ಲಿ ಮಾನ್ಯ ಮಂತ್ರಿಗಳು ಪತ್ರಿಕಾ ಪ್ರತಿನಿಧಿಗಳನ್ನು ಆಹ್ವಾನಿಸಿ ಸರಕಾರದ ಯೋಜನೆಗಳಿಗೆ ಪತ್ರಿಕೆಗಳು ಯಾವ ರೀತಿಯ ಪ್ರಚಾರ ಕೊಡಬಹುದು ಎಂದು ವಿನಿಮಯಮಾಡಿದರು. ಪ್ರತಿನಿಧಿಗಳು ಸಾರ್ವಜನಿಕ ಸಮಸ್ಯೆಗಳನ್ನು ನಿವೇದಿಸಿಕೊಂಡು ಸ್ಥಳೀಯ ಪತ್ರಿಕೆಗಳ ಕಡೆಗೆ ಸರಕಾರವು ವಿಶೇಷ ಗಮನಕೊಡಬೇಕೆಂದೂ ಕನ್ನಡ ಪ್ರಾಂತ್ಯ ರಚನೆಗೆ, ಭಾಷಾಭಿವೃದ್ಧಿಗೆ ಸಹಾಯ ಮಾಡಬೇಕೆಂದೂ ಕೇಳಿಕೊಂಡು ಸಹಾನುಭೂತಿಯ ಭರವಸೆಯನ್ನು ಪಡೆದರು. ಸ್ಥಳೀಯ ಸಂಸ್ಥೆಯ ಮಂತ್ರಿಗಳು ಜಾರಿಗೆತರಲಿರುವ ಸಹಕಾರಿ ಮನೆಕಟ್ಟುವ ಯೋಜನೆಯ ಪ್ರತಿಯೊಂದನ್ನೂ ಮಂತ್ರಿಗಳು ಪ್ರಕಟನೆ ಪ್ರಚಾರಕ್ಕಾಗಿ ಕೊಟ್ಟರು. ಮುಂಬರುವ ಪಾನ ನಿಷೇಧ ಯೋಜನೆಗೆ ಪತ್ರಿಕೆಗಳು ಬೇಕಾದ ಪ್ರಚಾರಮಾಡಿ ಅನುಕೂಲ ಸಾರ್ವಜನಿಕ ಪರಿಸ್ಥಿತಿಯನ್ನುಂಟುಮಾಡಲು ಸಹಕರಿಸಬೇಕೆಂದು ವಿನಂತಿಸಿ ವಂದನೆಗಳನ್ನಿಯುತ್ತ ಸಂದರ್ಶನವನ್ನು ಮುಗಿಸಿದರು.

ಪದವು ಸಹಕಾರಿ ಉಪನಗರದ ನಿರ್ಮಾಣ

ಸಾಕಷ್ಟು ಸಂಖ್ಯೆಯ ಅರ್ಜಿಗಳು ಕೈಸೇರಿದ ಬಳಿಕ, ಮೇಲ್ಕಂಡ ಯೋಜನೆಯ ವ್ಯವಸ್ಥಾಪಕರು ಕಟ್ಟಡಗಳ ಒಂದು ಸ್ಥೂಲ ರಚನೆಯ ಬಗ್ಗಾದ ತಮ್ಮ ಮನವಿಯನ್ನು ಮದ್ರಾಸಿನ ಸಹಕಾರಿ ಸಂಘಗಳ ರಿಜಿಸ್ಟ್ರಾರರಿಗೊಪ್ಪಿಸಿದ್ದಾರೆಂಬ ವಾರ್ತೆ ತಲುಪಿದೆ.

ಮನೆಗಳನ್ನೇರ್ಪಡಿಸುವ ಇಲಾಖೆಯ ಮಂತ್ರಿ ಮಾನ್ಯ ಮಿ. ದಾನಿಯೆಲ್ ಥೋಮಸರು, ಸಹಕಾರಿ ಸಂಘಗಳ ಜತೆ ರಿಜಿಸ್ಟ್ರಾರರಾದ ರಾವ್ ಬಹದ್ದೂರ್ ಜೆ. ಸಿ. ರಾಮನ್ ಇವರೊಡಗೂಡಿ ಸದ್ಯದಲ್ಲೇ ಮಂಗಳೂರನ್ನು ಸಂದರ್ಶಿಸುವರೆಂದು ತಿಳಿದುಬಂದಿದೆ. ಅವರು ಪದವಿನ ಸ್ಥಳ ಸಂದರ್ಶನ ಮಾಡಿ ಗವರ್ನಮೆಂಟ್ ಕಾಲೇಜಿನಲ್ಲಿ ನೆರೆಯುವ ಸಂಘದ ಮೆಂಬರರ ಒಂದು ಸಾರ್ವಜನಿಕ ಮಹಾಸಭೆಯಲ್ಲಿ ಹಾಜರಿರುವರು. ಸಚಿವರ ಕಾರ್ಯಕ್ರಮ ನಿಶ್ಚಯವಾದೊಡನೆ, ಆ ವ ಹಾಸಭೆಯ ತಾರೀಕು ಸಮಯ ಗಳನ್ನು ಪ್ರಕಟಿಸಲಾಗುವುದು.

ಮಂಗಳೂರಿನಲ್ಲಿ ಮನೆಗಳ ಅಭಾವದ ನಿವಾರಣೆಯ ಉದ್ದೇಶವಿರಿಸಿಕೊಂಡು ಈ ಪದವಿನ ಉಪನಗರ ನಿರ್ಮಾಣದ ಯೋಜನೆ ಜನವರಿಯಲ್ಲೇ ಆರಂಭಿಸಿದ್ದಾಯಿತು. ಮೊದಲು ಪಾಲಿಕೆ ... ಗಳಿತ್ತಿರುವ ಹದಿನೈದು ಮುನ್ಸಿಪಲ್ ಗಡಿಗಳ ಹೊರಗೆ ಸುಮಾರು 1000 ಎಕ್ರೆ ಭಾಗವನ್ನು ಒಕ್ಕಲೆಬ್ಬಿಸಿ ಮಾಡಿ ಅದನ್ನು 50 ಸೆಂಟ್ಸ್, 25 ಸೆಂಟ್ಸ್ ಮತ್ತು 12॥ ಸೆಂಟ್ಸ್‌ಗಳ ಪ್ಲೋಟುಗಳನ್ನಾಗಿ ವಿಂಗಡಿಸಲಾಗುವುದು. ಅಲ್ಲಿ ರಸ್ತೆಗಳನ್ನು ನಿರ್ಮಿಸಿ ವಿದ್ಯುದ್ದೀಪಗಳನ್ನು ಜೋಡಿಸಿ, ನೀರಿನ ಸರಬರಾಯಿಯನ್ನು ಮಾಡಲಾಗುವುದು; ಶಾಲೆಗಳನ್ನೂ ಮಾರ್ಕೆಟುಗಳನ್ನು ಕಟ್ಟಿ ಹೂದೋಟಗಳನ್ನೂ, ಆಟದ ಕ್ಷೇತ್ರಗಳನ್ನೂ ಒದಗಿಸಲಾಗುವುದು. ಈ ಪ್ಲೋಟುಗಳನ್ನು ಸುಮಾರು ರೂ 2000—ರೂ. 1000,—ಮತ್ತು ರೂ 500ಕ್ಕೆ ಮಾರಲಾಗುವುವಲ್ಲದೆ, ಮನೆಗಳನ್ನು ಕಟ್ಟಲಿಕ್ಕೆ ಸಂಘದ ಮೆಂಬರರಿಗೆ ಸಾಲಗಳನ್ನು ಕೊಡಲಾಗುವುದು. ಈ ಸಾಲಗಳನ್ನು 20 ವರ್ಷಗಳಲ್ಲಿ ಸರಿಸಮಾನವಾದ ತಿಂಗಳ ಕಂತುಗಳಲ್ಲಿ ಹಿಂದೆ ಸಲ್ಲಿಸತಕ್ಕದು. ಸಂಘವು ಈ ಹೊಸ ನಗರದಿಂದ ಮಂಗಳೂರಿಗೆ ಹೋಗಿಬರಲು ಒಂದು ಬಸ್ ಸರ್ವಿಸನ್ನೂ ಏರ್ಪಡಿಸುವುದು.

ಶ್ರೀಗಳಾದ ಪಿ. ಯು. ಭಂಡಾರಿ, ಎಂ. ವೆಂಕಟೇಶ ಪೈ, ಡಾ ಎ ಕೊಯಿಲೊ ಪಿ. ಬಿ ಫೆರ್ನಾಂಡೀಸ್, ರಾವ್ ಸಾಹೇಬ್ ಪಿ ಆರ್ ಆರ್ ಪೂಂಜ, ಶ್ರೀ ಬಿ ಗಂಗಾಧರದಾಸ್, ಶ್ರೀ ದೀರ್ಜಲಾಲ್ ವಿಠ್ಠಲ್ಜಿ ಸೇಟ್ ಇವರಿಷ್ಟು ಮಂದಿಯುಳ್ಳ ಒಂದು ಸಮಿತಿಯವರು ಈ ಯೋಜನೆಯ ಸಂಬಂಧದ ಆರಂಭದ ಕಾರ್ಯಗಳನ್ನು ಚುರುಕಾಗಿ ಸಾಗಿಸು[illegible]ವರು.

ಮಂಗಳೂರ ಬೀಡಿ ಲೇಬರ್ ಯೂನಿಯನ್

ಈ ಯೂನಿಯನಿನ 11ನೇ ವಾರ್ಷಿಕ ಮಹಾ ಸಭೆಯು ಈಚೆಗೆ ಶ್ರೀ ಬಿ ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿದಾಗ ಶ್ರೀ ಎಸ್ ಎಲ್ ಉಪಾಧ್ಯಾಯರು ದೇಶದ ಆರ್ಥಿಕ ಸ್ಥಿತಿ, ಅದನ್ನು ಸುಧಾರಿಸುವ ಅವಶ್ಯಕತೆಯ ಕುರಿತು ಭಾಷಣ ಮಾಡಿದರು. ರಾಷ್ಟ್ರೀಯ ಟ್ರೇಡ್ ಯೂನಿಯನ್ ಕಾಂಗ್ರೆಸಿನ ಖಂಡನೆಯೇ ಮೊದಲಾದವುಗಳನ್ನು ಒಳಗೊಂಡ ಠರಾವುಗಳು ಮಂಜೂರಾದುವು.

ಶ್ರೀ ಸಿದ್ಧವನ ಗುರುಕುಲ, ಉಜ್ರೆ

ಶ್ರೀ ಸಿದ್ಧವನ ಗುರುಕುಲದ ವಾರ್ಷಿಕೋತ್ಸವವು 23ರಂದು ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಸರೋಜಿ ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಜರಗುವುದು—ಎಂದು ಶ್ರೀ ಎಂ. ಸುಬ್ಬಣ್ಣ ಶಾಸ್ತ್ರಿ, ಬಿ. ಎ ಬಿ. ಎಲ್. ಪ್ರಿನ್ಸಿಪಾಲ್, ಇವರು ತಿಳಿಸಿದ್ದಾರೆ.

ರಾಮಕೃಷ್ಣ ಮಿಶನಿನ ಶಾಖೆ ಮಂಗಳೂರಲ್ಲಿ

ರಾಮಕೃಷ್ಣ ಮಿಶನಿನ ಒಂದು ಶಾಖೆ ಇದೇ ಬರುವ ಜೂನ್ ತಿಂಗಳ ಪ್ರಥಮ ವಾರದಲ್ಲಿ ಇಲ್ಲಿ ಫಳ್ನೀರಿನಲ್ಲಿ ತೆರೆಯಲಾಗುವುದೆಂದು ತಿಳಿದು ಬಂದಿದೆ. ಇದು ವರೆಗೆ ಆ ಮಿಶನಿನ ಕಡೆಯಿಂದ ಬೆಂಗಳೂರಲ್ಲಿ ನಡೆಸಿಕೊಂಡು ಬರುತ್ತಿದ್ದ ಆ ವೇದಾಂತ ಕಾಲೇಜನ್ನು ಅಲ್ಲಿ ಮುಚ್ಚಿ ಅದನ್ನು ಇಲ್ಲಿ ಸ್ಥಾಪಿಸಲಾಗುವುದು.

ಸೇತುವೆಯ ಉದ್ಘಾಟನೆ

ಮದ್ರಾಸ್ ಸರಕಾರದ ಆರೋಗ್ಯ ಮಂತ್ರಿಗಳಾದ ಮಾನ್ಯ ಅತ್ತಾವರ ಬಾಲಕೃಷ್ಣ ಶೆಟ್ಟಿಯವರು 23ರಂದು ಬೆಳಿಗ್ಗೆ 9 ಗಂಟೆಗೆ ಉಜ್ರೆಯಿಂದ ಶ್ರೀ ಧರ್ಮಸ್ಥಳಕ್ಕೆ ಹೋಗುವ ಮಾರ್ಗದಲ್ಲಿ ಇರುವ ನೇತ್ರಾವತಿ ನದಿಗೆ ಹೊಸತಾಗಿ ಕಟ್ಟಿಸಿದ ಸೇತುವೆಯ ಉದ್ಘಾಟನೆ ಮಾಡಲಿದ್ದಾರೆ.

ಆನಂದಾಶ್ರಮ ಶಾಲೆ, ಉಳ್ಳಾಲ

ಕಳೆದ ವರ್ಷ I II III ಫೋರ್ಮ್ ಕ್ಲಾಸುಗಳ ಒಗ್ಗೆ ಸ್ಥಾಪಿಸಿದ ಈ ಶಾಲೆಯು ಸೆಕೆಯ ರಜೆ ಕಳೆದು ಬರುವ ಜೂನ್ ತಿಂಗಳ ತಾ 2ನೇ ಸೋಮವಾರ ಪುನಃ ಆರಂಭವಾಗುವುದು. ಅದೇ ದಿನ IV ಫೋರ್ಮ್ ಕ್ಲಾಸು ತೆರೆಯಲ್ಪಡುವುದು. ಆ ದಿನದಿಂದಲೇ ಎಲ್ಲ ಕ್ಲಾಸುಗಳಿಗೂ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳಲಾಗುವುದು. ಸ್ಥಳದಲ್ಲಿದ ವಿದ್ಯಾರ್ಥಿಗಳ ಊಟ ವಸತಿಯ ಸೌಕರ್ಯಗಳ ಒಗೆ ವಿದ್ಯಾರ್ಥಿ ಭವನವು ತೆರೆಯಲ್ಪಡುವುದು—ಹೀಗೆಂದು ಕರೆಸ್ಪಾಂಡೆಂಟರಾದ ಶ್ರೀ ಎ. ... [illegible] ತಿಳಿಸುತ್ತಾರೆ.

KANARA COMMERCIAL BANK LTD.

PUTTUR

H O Puttur] Estd 1920 [Branch Vittal

All kinds of Banking Business transacted.

Deposits Current, Savings, Cumulative Deposits are accepted.

Fixed Deposits for periods of 3 months and above up to 24 months are accepted.

SEASON DEPOSITS

ARE Accepted up to 31-5 1947 Terms on application.

ಡಿ. ಡಿ. ಟಿ.
ಹೇರ್ ಲೋಷನ್
ಇದರ ಒಂದು ಲೇಪನವು ತಲೆಯೊಳಗಿನ ಹೇನು ಮತ್ತು ನೊಣ್ಣೆಗಳನ್ನು ಸಂಪೂರ್ಣವಾಗಿ ನಿರ್ಮೂಲಮಾಡುವುದಲ್ಲದೆ ಮತ್ತೆ ಮೂರು ತಿಂಗಳ ವರೆಗೆ ಸೋಂಕು ತಗಲದಂತೆ ರಕ್ಷಿಸುವುದು

ಕೇರಳದವರ ಜುಲುಮಿನ ಖಂಡನೆ

ಮಾನ್ಯ ಎ. ಬಿ. ಶೆಟ್ಟಿ ಅವರ ಸಾಹಿತ್ಯ ಭಾಷಣ

ಏಕೀಕರಣದ ಅವಶ್ಯಕತೆ

ಮುದ್ರಾಸು ಸರಕಾರ ಆರೋಗ್ಯ ಶಾಖಾ ಮಂತ್ರಿಗಳಾದ ಶ್ರೀ ಅತ್ತಾವರ ಬಾಲಕೃಷ್ಣ ಶೆಟ್ಟಿ ಅವರು ಮೂವತ್ತನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟನೆಯನ್ನು ನಡೆಸುತ್ತಾ ಮಾಡಿದ ಭಾಷಣ:—

ಕನ್ನಡ ಸಾಹಿತ್ಯ ಪರಿಷತ್ತಿನ ಈ ಸಲದ ಸಮ್ಮೇಳನದ ಪರ್ವಕಾಲದಲ್ಲಿ ನನಗೂ ಭಾಗವಹಿಸಲು ಎಡೆ ದೊರೆತುದು ನನ್ನ ಸೌಭಾಗ್ಯ. ನನ್ನ ಕನ್ನಡ ಬಂಧುಗಳಾದ ನೀವುಗಳು ಈ ಮಹಾ ಕಾರ್ಯದ ಉದ್ಘಾಟನೆಯನ್ನು ನಾನು ಮಾಡಬೇಕೆಂಬುದಾಗಿ ನಿಯಮಿಸಿರುವುದು ನನಗೆ ಮತ್ತೊಂದು ಗೌರವ. ಇದಕ್ಕೆ ನಾನು ನಿಮಗೆಲ್ಲರಿಗೂ ಅತ್ಯಂತ ಕೃತಜ್ಞನಿದ್ದೇನೆ.

ಕನ್ನಡ ಸಾಹಿತ್ಯ ಪರಿಷತ್ತು ಕಳೆದ ಮೂವತ್ತು ವರ್ಷಗಳಲ್ಲಿ ಕನ್ನಡ ಜನತೆಗೋಸ್ಕರ ಬಹಳವಾಗಿ ದುಡಿದಿರುತ್ತದೆ. ಪರಿಷತ್ತಿನ ಈ ಮಹಾಸಂಸ್ಥೆಯು ಸಾಹಸದ ಫಲವಾಗಿ ಕನ್ನಡಿಗರಲ್ಲಿ ಸಂಘಟನೆ, ಭಾಷಾಭಿಮಾನ, ಗ್ರಂಥ ರಚನೆಗೆ ಪ್ರೋತ್ಸಾಹ, ಪತ್ರಿಕೋದ್ಯೋಗದಲ್ಲಿ ಪ್ರಗತಿ ಇತ್ಯಾದಿ ಅಮೂಲ್ಯ ಸೇವೆ ಸಂದಿರುತ್ತದೆ. ಹರಿಹಂಚಾಗಿ ವಿವಿಧ ಪ್ರಭುತ್ವಗಳ ಅಧಿಕಾರಗೊಳಗಾದ ಅಖಿಲ ಕನ್ನಡಿಗರಲ್ಲಿ ಒಂದು ಜಾಗೃತಿಯನ್ನೂ, ನವಚೈತನ್ಯವನ್ನೂ, ಐಕ್ಯ ಭಾವನೆಯನ್ನೂ ಉಂಟುಮಾಡುವುದರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ವಹಿಸಿದ ಭಾಗವು ಮಹತ್ವವಾದುದೆಂಬುದು ನಿಸ್ಸಂದೇಹ.

"ಕನ್ನಡ ಸಾಹಿತ್ಯ ಪರಿಷತ್ತು ಎಲ್ಲ ಪ್ರಾಂತದ ಕನ್ನಡಿಗರೂ ಸೇರಿ ಒಟ್ಟು ಜನದ ಒಟ್ಟು ಬಾಳುವೆಯ ಮೇಲ್ಮೆಗಾಗಿ ನಿರ್ಮಿಸಿ ಬೆಳೆಸಿರುವ ಏಕಮಾತ್ರ ಸಂಸ್ಥೆ' ಎಂಬುದಾಗಿ ಶ್ರೀ ಮಾಸ್ತಿಯವರು ಹೇಳಿದಂತೆ ಅದು ನಮಗೆಲ್ಲರಿಗೂ ಸೇರಿದ ಕೇಂದ್ರ ಸಂಸ್ಥೆಯಾಗಿದೆ. ಇನ್ನೂ ಮಾಡಬೇಕಾದ ಪ್ರಯತ್ನಗಳು ಅನೇಕ ಇವೆ. ಇಂದು ಕನ್ನಡದ ಪರಿಸ್ಥಿತಿ ಕೆಲವು ಕನ್ನಡ ಪ್ರದೇಶಗಳಲ್ಲಿ ಶೋಚನೀಯಾವಸ್ಥೆಯಲ್ಲಿದೆಯೆಂಬುದು ಎಲ್ಲರಿಗೂ ತಿಳಿದ ವಿಷಯ. ಉದಾಹರಣೆಗೆ ಅನೇಕ ಕನ್ನಡಿಗರಿರುವ ಮದ್ರಾಸು ನಗರದಲ್ಲಿ, ಮದ್ರಾಸು ಕರ್ನಾಟಕಕ್ಕೆ ಸೇರಿದ ಬಳ್ಳಾರಿಯ ಕೆಲವೆಡೆಗಳಲ್ಲಿ, ಕೊಯಂಬತ್ತೂರಿಗೆ ಸೇರಿದ ಕೊಳ್ಳೇಗಾಲದಲ್ಲಿ ನೀಲಗಿರಿಯ ಹಲವೆಡೆಗಳಲ್ಲಿ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಕೊಡಲು ತಕ್ಕ ಏರ್ಪಾಡು ಇರುವುದಿಲ್ಲ. ಮಾತ್ರವಲ್ಲ, ಈ ಮದ್ರಾಸು ಕರ್ನಾಟಕದಲ್ಲಿ ಒಂದೇ ಒಂದು ಟ್ರೈನಿಂಗ್ ಕಾಲೇಜ್ ಸಹ ಇರುವುದಿಲ್ಲ. ಒಂದು ಕಾಲೇಜ್ ಈ ವರ್ಷವೇ ಜನ್ಮವೆತ್ತುವುದರಲ್ಲಿತ್ತು. ಆದರೆ ದುರ್ದೈವದಿಂದ ಅದೀಗ ಸ್ವಲ್ಪ ಹಿಂದೆ ಬಿದ್ದಿದೆ. ಈ ಸಂದರ್ಭದಲ್ಲಿ ಕರ್ನಾಟಕದ ಪ್ರತಿನಿಧಿಗಳಾದ ನಾವು ನಮ್ಮಿಂದ ಕೈಲಾದ ಪ್ರಯತ್ನಗಳನ್ನು ಮಾಡಿ ನಮ್ಮಿಂದ ಸಾಧ್ಯವಾದ ಯತ್ಕಿಂಚಿತ್ ಸೇವೆಯನ್ನು ಕರ್ನಾಟಕಕ್ಕೆ ಸಲ್ಲಿಸಲು ನೋಡುವೆವೆಂದು ಹೇಳಲು ಬಯಸುತ್ತೇವೆ.

"ಇಂದಿನ ಪರಿಸ್ಥಿತಿಯನ್ನಿಷ್ಟು ಆಲೋಚಿಸಿ ನೋಡೋಣ. ಎಲ್ಲಿ ನೋಡಿದರೂ ವಿಘ್ನಗಳು ತಂಡೋಪತಂಡವಾಗಿ ಬರುತ್ತಿವೆ. ಆರ್ಥಿಕ ದುಸ್ಥಿತಿಯಿಂದಲೂ, ಸಾಮಾಜಿಕ ಜೀವನದೊಳಗಣ ಏರುತಗ್ಗುಗಳಿಂದಲೂ, ಅಲ್ಲಲ್ಲಿ ಅವ್ಯವಸ್ಥೆಗಳು ಒಡೆದು ಮೂಡಿವೆ. ಇಷ್ಟೇ ಸಾಲದಿರುವುದಕ್ಕೆ ರಾಜಕೀಯ ವಾತಾವರಣದೊಳಗೂ ಎಲ್ಲವೂ ಸರಿಯಾಗಿಲ್ಲ, ಕೆಲವು ಸಂದರ್ಭಗಳಲ್ಲಿ ರಾಜಕೀಯ ಲಾಭವನ್ನು ಸಾಧಿಸುವುದಕ್ಕೋಸ್ಕರ ಸತ್ಯವನ್ನು ಬಲಿ ಕೊಡುವುದಕ್ಕೂ ಕೆಲ ಮಂದಿ ಮುಂದಾಳುಗಳು ಹಿಂಜರಿಯುವುದಿಲ್ಲ. ಇದೊಂದು ಚಿಕ್ಕ ನಿದರ್ಶನವನ್ನು ಗಮನಿಸಿರಿ. ಆಗಲೇ "ಭಾಷಾನುಗುಣ ಪ್ರಾಂತ ರಚನೆ"ಯೆಂಬ ಕಹಳೆಯ ನಾದವು ಕೇಳಿಸ ತೊಡಗಿದೆಯಷ್ಟೆ? ಇದು ಆನಂದದ ವಿಷಯ. ಆದರೆ ಕೇರಳ ಏಕೀಕರಣ ಪರಿಷತ್ತಿನ ಮುಂದಾಳುಗಳು ತಮ್ಮ ಭಾವೀ ಕೇರಳ ಪ್ರಾಂತಕ್ಕೆ ಉತ್ತರ ದಕ್ಷಿಣ ಕನ್ನಡ ಜಿಲ್ಲೆಗಳನ್ನೂ ಕೊಡಗನ್ನೂ, ನೀಲಗಿರಿಯನ್ನೂ ಸೇರಿಸಿ ಬಿಡಬೇಕೆಂಬ ಹೇಳಿಕೆಯಲ್ಲಿ ಏನಾದರೂ ಹುರುಳುಂಟೆ? ಇದೊಂದು ಅವಸರವಾಗಿ ದುರಾಶೆಯಿಂದ ಹೇಳಿದ ಅನ್ಯಾಯದ ಮಾತಲ್ಲವೆ? ಗೋಕರ್ಣದಿಂದ ಕನ್ಯಾಕುಮಾರಿ ವರೆಗಿನ ಪಶ್ಚಿಮ ಕರಾವಳಿಯ ಪ್ರಾಂತಗಳಲ್ಲಿ ಎಲ್ಲೆಡೆಯಲ್ಲೂ 10 ಜನರ ಪೈಕಿ 9 ಜನರಿಗೆ ಮಲೆಯಾಳ ಬರುವುದಂತೆ. ಆ ಪ್ರದೇಶಗಳ ಮತ್ತು ಕೇರಳದ ವಾಯುಗುಣ ಮಣ್ಣಿನ ತರ ಇತ್ಯಾದಿ ಒಂದೇ ತೆರನಂತೆ. ಈ ಸಂದರ್ಭದಲ್ಲಿ ನಾನು ಹೇಳ ಬಯಸುವುದೇನಂದರೆ— ಆಯಾ ಪ್ರದೇಶದ ಜನರ ಅಭಿಪ್ರಾಯದ ಮೇರೆಗೆ ಆಯಾ ಪ್ರದೇಶವನ್ನು ಅದಕ್ಕೆ ಸಂಬಂಧಿಸಿದ ಭಾಷಾ ಪ್ರಾಂತಕ್ಕೆ ಸೇರಿಸಿಕೊಳ್ಳುವುದು ಯುಕ್ತ. ಬರಿಯ "ಜುಲುಮಿ"ನಿಂದ ಕಾರ್ಯ ಸಾಗದು.

"ನಮ್ಮಲ್ಲಿನ ಅನೇಕ ಕೊರತೆಗಳನ್ನು ವಿದ್ಯಾಭ್ಯಾಸ ಮತ್ತು ಪ್ರಚಾರ ಕಾರ್ಯಗಳಿಂದ ಹೋಗಲಾಡಿಸಬಹುದು. ಹಾಗೆಯೇ ಕರ್ನಾಟಕ ಏಕೀಕರಣವೂ ಕೈಗೂಡುವುದು. ಆಗ ಕರ್ನಾಟಕಕ್ಕೊಂದು ವಿಶ್ವವಿದ್ಯಾಲಯ, ಕನ್ನಡ ಮಾಧ್ಯಮ, ಕನ್ನಡ ಆಕಾಶವಾಣಿ, ಔದ್ಯೋಗಿಕ ಶಿಕ್ಷಣಾಲಯಗಳು ಇತ್ಯಾದಿ ಕನ್ನಡಿಗರ ನಿತ್ಯ ವೇದಿಕೆಗಳು ಕಾರ್ಯರೂಪಕ್ಕೆ ಬರುವುವು. ಕರ್ನಾಟಕದಲ್ಲಿ ಎಲ್ಲ ಸಾರ್ವಜನಿಕ ಜೀವನವೂ ಕನ್ನಡದಲ್ಲಿಯೇ ನಡೆಯುವುದು. ಕರ್ನಾಟಕದ ವಿಶಿಷ್ಟ ಸಂಸ್ಕೃತಿಯು ಅಚ್ಚಳಿಯದ ಉಳಿದು, ಬೆಳೆದು, ಬಾಳುವುದು.

"ಜ್ಞಾನವೃದ್ಧರೂ, ವಯೋವೃದ್ಧರೂ, ನವೋತ್ಸಾಹಿಗಳೂ ಕಾರ್ಯಶೂರರೂ, ಸಾಹಿತಿಗಳೂ, ಪಂಡಿತರೂ, ಪ್ರಾಧ್ಯಾಪಕರೂ, ಕವಿಗಳೂ, ವಿವಿಧ ಕಲಾಭಿಜ್ಞರೂ ಈ ತಿರುಳ್ಗನ್ನಡ ನಾಡ ನಿದ ಹರಪನಹಳ್ಳಿಯಲ್ಲಿ ಇಂದು ಸೇರಿ ವಿಚಾರ ವಿನಿಮಯ ಮಾಡಿಕೊಂಡು ಸಮ್ಮೇಳನದ ಕಾರ್ಯಭಾಗಗಳನ್ನು ಯಶಸ್ವಿಯಾಗಿ ನಿರ್ವಹಿಸಿ, ತನ್ಮೂಲಕ ಕನ್ನಡಿಗರ ಸರ್ವತೋಮುಖವಾದ ಶ್ರೇಯಸ್ಸಿಗೆ ಅತ್ಯಧಿಕ ಪ್ರಯೋಜನ ಉಂಟಾಗಲೆಂದು ಹಾರೈಸಿ ಬಹಳ ಸಂತೋಷದಿಂದ ಸಮ್ಮೇಳನದ ಉದ್ಘಾಟನೆಯನ್ನು ಮಾಡುತ್ತೇನೆ". (ಕನ್ನಡನುಡಿ)

ಭಾರತದ ಕಡೆ ಅಮೇರಿಕನ್ ಸಹಾನುಭೂತಿ

ಪ್ರಖ್ಯಾತ ಲೇಖಿಕೆಯ ಅಭಿಪ್ರಾಯ

ಅಮೇರಿಕನ್ ತರುಣವರ್ಗ ಅನೀತಿವಂತವೆ?

ಬೊಂಬಾಯಿಯ ಒಂದು ಪತ್ರಿಕೆಯ ವಿಶೇಷ ಬಾತ್ಮಿದಾರರು ಪ್ರಖ್ಯಾತ ಅಮೇರಿಕನ್ ಲೇಖಿಕೆಯಾದ ಪರ್ಲ್‌ಬಕ್ ಅವರಿಗೆ ಕೆಲವು ಪ್ರಶ್ನೆಗಳನ್ನು ಕೇಳಿದ್ದು ಅವಕ್ಕೆ ಈ ಕೆಳಗಿನ ಉತ್ತರಗಳನ್ನು ಪಡೆದಿರುವರು.

ಪ್ರಶ್ನೆ ಅಮೇರಿಕನ್ ತರುಣ ತರುಣಿಯರು ಅನೀತಿ ಮಾರ್ಗ ಪ್ರವರ್ತಕರೆಂಬ ಭಾರತೀಯರನೇಕರ ಭಾವನೆ ಸರಿಯೆ?

ಉತ್ತರ ಬಾಲ್ಯದಿಂದ ಒಟ್ಟೊಟ್ಟಿಗೆ ಆಟಪಾಟ ಮಾಡುತ್ತಿರುವುದು ಅಮೇರಿಕನ್ ತರುಣಿ ತರುಣರಿಗೆ ಸಾಮಾನ್ಯವಾಗಿದೆ. ಹಾಗೆಂದ ಮಾತ್ರಕ್ಕೆ ಅವರಲ್ಲಿ ಇತರ ದೇಶಗಳಲ್ಲಿರುವುದಕ್ಕಿಂತ ಹೆಚ್ಚು ಅನೀತಿ ವರ್ತನೆಯಿದೆಯೆಂದು ಹೇಳಬರುವುದಿಲ್ಲ.

ಪ್ರಶ್ನೆ ಅಮೇರಿಕನ್ ಮಹಿಳೆಯರು ತುಂಬಾ ಶಿಕ್ಷಿತರೂ ಮುಂದುವರಿದವರಿದ್ದರೂ ಅವರಲ್ಲೊಬ್ಬರಾದರೂ ಅಧ್ಯಕ್ಷರಾಗಲಿಲ್ಲವೇಕೆ?

ಉತ್ತರ ಅವರಿಗೆ ರಾಜಕೀಯದಲ್ಲಿ ಅಭಿರುಚಿಯಿಲ್ಲ. ಆದುದರಿಂದಲೇ ಅವರಲ್ಯಾರೂ ಅಧ್ಯಕ್ಷ ಸ್ಥಾನವೇರಿಲ್ಲ. ಬಹುಕಾಲದ ವರೆಗೆ ಹಾಗಾಗುವವರೂ ಇಲ್ಲ.

ಪ್ರಶ್ನೆ ಅಮೇರಿಕನ್ನರ ಲೌಕಿಕ ಸ್ಥಿತಿ ಉತ್ತಮವಿದ್ದರೂ ಅವರು ನಿಜವಾಗಿಯೂ ಸುಖ ನೆಮ್ಮದಿಯಿಂದಿರುವರೆ?

ಉತ್ತರ ಸಾಮಾನ್ಯ ಅಮೇರಿಕನನ ಜೀವನ ಸಂಕಷ್ಟರಹಿತವೂ ಪ್ರಶಾಂತವೂ ಆಗಿರುತ್ತದೆ. ಈಗಸದ್ಯಕ್ಕೆ ವಿಶ್ವ ಪರಿಸ್ಥಿತಿಯು ಅವನನ್ನು ಕಳವಳಗೊಳಿಸುತ್ತಿವೆ.

ಪ್ರಶ್ನೆ ಅಮೇರಿಕನ್ ಮಾನವ ಹಕ್ಕು ಪ್ರಜಾರಾಜ್ಯ, ಸ್ವಾತಂತ್ರ್ಯ ಮೊದಲಾದ ಉದ್ದಾತ್ತ ತತ್ವ [illegible] ಆದರೆ ಅಲ್ಲೀಗ ನಡೆಯುತ್ತಿ[illegible] ವಿಕೆಗಳರ್ಥವೇನು

ಉತ್ತರ ಇದು ಎಲ್ಲಾ ಅಮೇರಿಕನ್ನರಿಗೂ ಲಜ್ಜಾಸ್ಪದವಾದ ಸಂಗತಿ. ಸಂಯುಕ್ತ ಅಮೇರಿಕದ ದಕ್ಷಿಣ ಭಾಗದಲ್ಲಿ ಬಹುಸಂಖ್ಯಾಕ ನಿಗ್ರೋಗಳೂ ಬಹು ಅಲ್ಪ ಸಂಖ್ಯೆಯ ಬಿಳಿಯರೊಡನೆ ವಾಸಿಸುತ್ತಿರುವುದರಿಂದ ಅಲ್ಲಿ ವರ್ಣ ದ್ವೇಷಕ್ಕೆಡೆಯುಂಟಾಗಿದೆ. ನಿಗ್ರೋಗಳನ್ನು ಕೊಲ್ಲುವುದೂ ಅಕ್ಷಮ್ಯ ಅಪರಾಧವೇ ಸರಿ.

ಪ್ರಶ್ನೆ ಅಮೇರಿಕನ್ನರಿಗೆ ಭಾರತದ ಮೇಲೆ ತುಂಬಾ ಸಹಾನುಭೂತಿಯಿದೆಯೆಂದು ತಿಳಿಯುತ್ತೇವೆ. ಇಲ್ಲಿಯ 40 ಕೋಟಿ ಜನರ ವ್ಯಾಪಾರ ಸೆಳೆಯುವ ಅಮೇರಿಕದ ಉದ್ದೇಶವಿರಬಹುದೆ?

ಉತ್ತರ ಸರಿಯಾಗಿ ನಡೆದಲ್ಲಿ ವ್ಯಾಪಾರಾಭಿವೃದ್ಧಿಯು ಇತ್ತಂಡದವರಿಗೂ ಶ್ರೇಯಸ್ಕರ. ಈ ದೃಷ್ಟಿಯಿಂದ ಅಮೇರಿಕನ್ನರು ಭಾರತದ ಸ್ವಾತಂತ್ರ್ಯವನ್ನು ಬಯಸುತ್ತಾರೆ.

ಬೆನಾರಿಸ್ ಹಿಂದೂ ವಿಶ್ವ ವಿದ್ಯಾಲಯದಲ್ಲಿ 'ರಹಸ್ಯ'

ಸ್ನೇಹ ಸಂವರ್ಧನೆಗೆ ವಿದ್ಯಾರ್ಥಿಗಳ ಗುಪ್ತ ಕಾರ್ಯ

ಕೆಲವು ಸಮಯದಿಂದ ಕಾಶಿಯ ಹಿಂದೂ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಕೆಲವೊಂದು ರಹಸ್ಯ ಪಾರಿತೋಷಕಗಳನ್ನು ಪಡೆಯುತ್ತಿದ್ದರು. ಅಲ್ಲಿನ ವಿದ್ಯಾರ್ಥಿಗಳ ಕೆಲವರ ಮೇಜಿನ ಮೇಲೆ ಆಕಸ್ಮಾತಾಗಿ ಹಣ್ಣು ಹಂಪಲುಗಳೂ, ಮಿಠಾಯಿ ಕಟ್ಟುಗಳೂ—ಕೆಲ ಸಮಯ ರೂಪಾಯಿ ನೋಟುಗಳೂ ಕೂಡಾ—ಇರುತ್ತಿದ್ದವು. ಒಂದೊಂದು ಸಮಯ ಇವು ಟಪ್ಪಾಲ ಮೂಲಕವೂ ಕಳುಹಿಸಲ್ಪಡುತ್ತಿದ್ದವು. ಯಾರು ಎಲ್ಲಿಂದ ಕಳುಹಿಸಿದ್ದು ಎಂಬ ಸಂಗತಿಯೇ ನಿಗೂಢವಾಗಿರುತ್ತಿತ್ತು. ಆದರೆ ಸ್ವಲ್ಪ ಸಮಯದ ಹಿಂದೆ ಅಂದರೆ ವಿದ್ಯಾರ್ಥಿಗಳು ಪರೀಕ್ಷೆಗಳಾಗಿ ರಜೆಯಲ್ಲಿ ಹಿಂತಿರುಗುವಂದು ಜರುಗಿದ ಬೀಳ್ಕೊಡುವ ಸಭೆಯಲ್ಲಿ ಇದರ ರಹಸ್ಯವು ಬಹಿರಂಗವಾಯಿತು.

ಅಲ್ಲಿನ ಕೆಲವು ಶ್ರೀಮಂತ ವಿದ್ಯಾರ್ಥಿಗಳೇ ಈ 'ಈ ಗುಪ್ತಮಿತ್ರ'ರಾಗಿದ್ದರು. ಅವರು ತಮ್ಮ ಸಹಪಾಠಿಗಳಲ್ಲಿ ಬಡವರೂ, ಕಲಿಯುವುದರಲ್ಲಿ ಪ್ರವೀಣರೂ ಆಗಿರುವವರಿಗೆ ಸಂತೋಷಾನಂದಗಳನ್ನುಂಟುಮಾಡಲು ಗುಪ್ತವಾಗಿ ಈ ಪಾರಿತೋಷಕಗಳನ್ನು ಅವರಿಗೆ ಸಿಗುವಂತೆ ಮಾಡುತ್ತಿದ್ದರು. "ಇತರರನ್ನು ಸಂತೋಷಪಡಿಸುವುದೊಂದು ಪುಣ್ಯದಾಯಕ ವಿನೋದ. ಈ ವಿಧಾನದಿಂದ ನಾವು ಶಾಶ್ವತವೂ ಆದರಪೂರ್ಣವಾದುದೂ ಆದ ಸ್ನೇಹ ಸೌಂದರ್ಯಗಳನ್ನು ಸಂಪಾದಿಸಿದ್ದೇವೆ". ಹೀಗೆಂದೊರ್ವ 'ಗುಪ್ತ ಸ್ನೇಹಿತ' ತಿಳಿಸುತ್ತಾನೆ.

★

ಸಮಾನ ಹಕ್ಕು ಬಾಧ್ಯತೆ ಬೇಡವಾದ ಸ್ತ್ರೀಯರು

ಲಂಡನ್ ನಾರಿಯರ ವಿಚಿತ್ರ ಚಳವಳ

[illegible] ಸಂಗೀತಗಾರನ ಆಶ್ರಯದಲ್ಲಿ ಲಂಡನಿನ 20 ಮಹಿಳೆಯರು ಸ್ತ್ರೀಯರ ಒಂದು ವಿಚಿತ್ರ ಉದ್ದೇಶದ ಸಂಘವೊಂದನ್ನು ಸ್ಥಾಪಿಸಿರುವರು.

ಇವರ ನಾಯಕನ ಅಭಿಪ್ರಾಯದಲ್ಲಿ "ಸ್ತ್ರೀಯರಿಂದಿಗೂ ಪುರುಷರಿಗೆ ಸಮಾನರಲ್ಲವೆಂದು".

"ನಮ್ಮ ಕುಟುಂಬ ಜೀವನವು ಹೆಚ್ಚು ಆನಂದದಾಯಕವಾಗಬೇಕಾದರೆ ಸಂಸಾರ [illegible] ಗಂಡಸರೇ ಎಲ್ಲಾ ವ್ಯವಸ್ಥೆಗಳನ್ನು [illegible]ಹಿಸುವ ಹಾಗಾಗಬೇಕು. ಹೆಂಗುಸರು [illegible] ಆರ್ಥಿಕೆಯ ಹೊಣೆಗಾರಿಕೆಯನ್ನು [illegible]ಕೊಳ್ಳುವಂತಾಗಬೇಕು. ಮಹಿಳೆಯರು ತಮ್ಮ ಸ್ತ್ರೀಯತ್ವವನ್ನು ಕಳೆದುಕೊಳ್ಳಬಾರದು. ಮನೆಯೇ ಅವರ ಯೋಗ್ಯ ಸ್ಥಾನ. ಹೀಗೆಂದು ಸಂಘದ ಅಧ್ಯಕ್ಷನು ತಿಳಿಸುತ್ತಾನೆ.

—※—

ನ್ಯೂಯಾರ್ಕಿನ ಜಮೈಕಾ ಬಡಾವಣೆಯ [illegible] ಅವಳಿಜವಳಿ ಸಹೋದರಿಯರು ನಾಟ್ಯಶಾಲೆಗೆ [illegible]ಗುತ್ತಿರುವರು. ಅವರ ವಯಸ್ಸು 92 ವರ್ಷ.

★

ಹಿಂದೂ ಯೋಗಾಭ್ಯಾಸದಲ್ಲಿ ನಿರತನಾದ ಲಂಡನಿನ ಒರ್ವ ದಂತ ವೈದ್ಯನು ನೆಲದಲ್ಲಿ ಕೂತು ಉಣ್ಣುವನು, ತನ್ನ ಹೆಂಡತಿಯ ಬಳಿ ದಿವಸದ ಒಂದು ನಿರ್ದಿಷ್ಟ ಸಮಯದಲ್ಲಿ ಮಾತ್ರ ಮಾತನಾಡುವನು. ಹೆಂಡತಿಯು ಅವನಿಂದ ವಿವಾಹ ವಿಚ್ಛೇದ ಮಾಡಿಕೊಂಡಳು. ಅವಳು ಕೊಟ್ಟ ಕಾರಣ ಕ್ರೂರ ವರ್ತನೆಯೆಂದು.

★

ಬೆನಾರಿಸ್ ಜಿಲ್ಲೆಯಲ್ಲಿ 60 ಸಾವಿರ ಖೋಟಾ ರೇಶನ್ ಕಾರ್ಡುಗಳು ಜಾರಿಯಲ್ಲಿವೆಯಂತೆ. ಅವುಗಳ ಪತ್ತೆಯಾಗುತ್ತದೀಗ.

ವಾರದ ವಿಜ್ಞಾನ ಪರಿಚಯ

ಪೌಷ್ಟಿಕಾನ್ನ

ಅಕ್ಕಿಯ ಪೌಷ್ಟಿಕ ಗುಣಗಳನ್ನು ಅಭಿವೃದ್ಧಿಗೊಳಿಸುವ ವಿಧಾನವೊಂದನ್ನು ಮೈಸೂರು ವಿಶ್ವವಿದ್ಯಾಲಯದ ರಾಸಾಯನಿಕ ಪ್ರೊಫೆಸರರಾದ ಡಾ| ಬಿ ಸಂಜೀವ ರಾವ್ ಅವರು ಕಂಡುಹಿಡಿದಿರುವರು

ಬತ್ತವನ್ನೂ ತೊಳೆದು ಕಲ್ಸಿಯಂ ಕ್ಲೋರ್ಯಾಡ್ ಎಂಬ ಧಾತುವಿನ ದ್ರಾವಕದೊಡನೆ ಸಂಪರ್ಕಗೊಳಿಸಿದರೆ ಮತ್ತೆ ಅದನ್ನು ತೇವ ಆರುವಂತೆ ಮೂರು ತಿಂಗಳು ದಾಸ್ತಾನಿಡುವ ಅವಶ್ಯಕತೆಯಿಲ್ಲವೆಂದೂ, ಹೀಗೆ ಮಾಡಿದ ಅಕ್ಕಿಯು ಕ್ರಿಮಿಕೀಟಗಳ ಹಾವಳಿಗೊಳಗಾಗಲಾರದೆಂದೂ ಡಾ| ರಾಯರು ತಿಳಿಸುತ್ತಾರೆ. ಇದರಿಂದ ಅಕ್ಕಿಯ ಪೌಷ್ಟಿಕ ಗುಣಗಳು ಹಾಳಾಗದಂತೆ ಉಳಿದು ಈ ವಿಧಾನದಿಂದ ತಯಾರಿಸಿದ ಅಕ್ಕಿಯು ಈಗಿನದಕ್ಕಿಂತ ಹೆಚ್ಚು ಆಹಾರ ಮೌಲ್ಯವುಳ್ಳದ್ದಾಗುವುದೆಂದು ಪ್ರಯೋಗಗಳಿಂದ ಕಂಡುಹಿಡಿಯಲ್ಪಟ್ಟಿದೆ

ರೋಗಾಣು ಮೋಕ್ಷ

ಕಣ್ಣಿಗೆ ಕಾಣದ ಮತ್ತು ಪ್ಲೇಗ್ ಮತ್ತು ನಿಮೋನಿಯಾ ಜ್ವರಗಳ ರೋಗಾಣುಗಳಿಂದ ತುಂಬಿದ ಮಂಜು ಮೋಡಗಳನ್ನು ತಯಾರಿಸುವ ಯಂತ್ರವೊಂದನ್ನು ಬ್ರಿಟಿಸಿನ ರೋಗಾಣು ಪರಿಶೋಧನಾ ತಜ್ಞರಾಗಿರುವ ಡಾ| ಹೆಂಡರ್ಸನ್ನರು ಕಂಡುಹಿಡಿದಿರುವರು ಈ ಮೋಡಗಳ ಸಂಪರ್ಕದಲ್ಲಿ ಬಿಳಿ ಇಲಿ ಮತ್ತು ಹಂದಿಗಳು ವ್ಯಾಧಿಗ್ರಸ್ತವಾದುವು ನಂತರ ಅದನ್ನು ಗುಣಪಡಿಸುವ ಒಂದು ಔಷಧಿಯನ್ನು ಕಂಡುಹಿಡಿಯಲೂ ಸುಲಭವಾಯಿತು ಹೆಸರು ಮಣ್ಣಿನಿಂದ ತಯಾರಿಸಿದ ಈ ಔಷಧವು ಭೀಕರ ಪ್ಲೇಗ್ ರೋಗಕ್ಕೂ ಪರಿಹಾರವಂತೆ

ಚಿಕ್ಕ ಚಿತ್ರ ಗ್ರಾಹಿ

2 ಇಂಚು ಉದ್ದ 1¼ ಇಂಚು ಅಗಲ ಮತ್ತು 1¼ ಇಂಚು ದಪ್ಪವಾಗಿರುವ ಕೆಮೆರಾ ಉಪಕರಣವೊಂದು ಬ್ರಿಟಿಷ್ ಯಂತ್ರ ಶಿಲ್ಪಿಗಳಿಂದ ರಚಿಸಲ್ಪಟ್ಟಿದೆ ಇದರಿಂದ ತೆಗೆದ ಚಿತ್ರಗಳು ಟಪ್ಪಾಲು ಸ್ಟಾಂಪಿನ ಅರ್ಧ ಆಕೃತಿಯುಳ್ಳಿರುತ್ತದೆ ಈ ಕೆಮರಾವನ್ನು ವೆಸ್ಟ್‌ಕೋಟಿನ ಗಡಿಯಾರ ಜೇಬಿನಲ್ಲಿ ಹಾಕಬಹುದು

ಕುಕ್ಕು ನರಿ ಮುಖ

ಬಾಲದ ಮೇಲೆ ಸಿಲ್ಲಬಲ್ಲ ಮತ್ತು ಹೊಟ್ಟೆಯ ಬಳಿ ಮರಿಗಳನ್ನು ಹೊರಲು ಒಂದು ಚೀಲವಿರುವ ಕಂಗರೂ ಇಲ್ಲವೆ ಕುಕ್ಕು ನರಿ ಎಂಬ ಪ್ರಾಣಿಯು ಆಸ್ಟ್ರೇಲಿಯದಲ್ಲಿ ತುಂಬಾ ಇವೆ ಇವುಗಳ ಮೂತಿ ನರಿಗಳಂತೆ ಉದ್ದ ಆಸ್ಟ್ರೇಲಿಯದ ಹಳ್ಳಿ ಪ್ರದೇಶಗಳಲ್ಲಿ ಹುಟ್ಟಿದವರ ಮುಖಗಳು ಇವುಗಳಂತೇ ಆಗುತ್ತಿವೆಂದು ಐಯರ್ಲೆಂಡಿನ ಪ್ರಖ್ಯಾತ ಮನುಷ್ಯಶರೀರ ಶಾಸ್ತ್ರಜ್ಞರಾದ ಡಾ| ಹೊರಿಸ್ ಫುಫಿನ್ ಅವರು ತಿಳಿಸುತ್ತಾರೆ ಒಂದು ಪ್ರಾಣಿ ತನ್ನ ಸುತ್ತು ಮುತ್ತಲಿನಲ್ಲಿ ಹೆಚ್ಚಾಗಿರುವ ಪ್ರಾಣಿಗಳ ಅಂಗ ಲಕ್ಷಣಗಳನ್ನು ಹೊಂದುವುದೆಂಬ ಡಾರ್ವಿನನ ಸಿದ್ಧಾಂತವನ್ನು ಈ ನಿದರ್ಶನದ ಮೂಲಕ ಸರಿಯೆನ್ನಬೇಕಾಗುತ್ತದೆ ಎಂದವರ ಅಭಿಪ್ರಾಯ.

ಎಟಂ ನಿರಪಾಯಕಾರಿ

ಎಟಂ ಶಕ್ತಿ ತಯಾರಿಸುವುದರಿಂದ ಅದರ ಸಂಪರ್ಕವಿದ್ದವರು ಸಂತಾನ ಹೀನರಾಗಿ ಜಗತ್ತಿನ ಜನಸಂಖ್ಯೆಯ ಅಭಿವೃದ್ಧಿ ಕುಂಟಿತವಾಗುವುದೆಂಬ ಭಾವನೆಯು ನಿರಾಧಾರವಾದುದೆಂದು ವಿಜ್ಞಾನಿಗಳು ತಿಳಿಸುತ್ತಾರೆ. ಎಟಂ ಶಕ್ತಿ ಉತ್ಪಾದನೆಯಾಗುತ್ತಿರುವ ಓಕ್‌ರಿಜ್ ಮತ್ತು ಟಿನಿಸಿ ಪ್ರದೇಶಗಳಲ್ಲಿನ ಕಾರ್ಖಾನೆಗಳಲ್ಲಿ ಕೆಲಸ ಮಾಡುವವರ ಸಂತಾನ ಸಂಖ್ಯೆಯು ಅಮೇರಿಕೆದ ಇತರ ಭಾಗಗಳಿಗಿಂತ ಹೆಚ್ಚಾಗಿರುವುದೇ ಇದಕ್ಕೆ ನಿದರ್ಶನವಾಗಿ ತೋರಿಸಲಾಯಿತು. ಈ ಎಟಂ ಕಾರ್ಖಾನೆ ಪ್ರದೇಶದ ಪ್ರತೀ 1000 ಜನರಿಗೆ 27ರಂತೆ ಮಕ್ಕಳು ಹುಟ್ಟುವರು ಇಡೀ ಅಮೇರಿಕದ ಸರಾಸರಿ ಜನನ ಸಂಖ್ಯೆ ಸಾವಿರಕ್ಕೆ 19

ಶೀತ ಪ್ರತಿಬಂಧಕ ವಸ್ತ್ರ

ಯುದ್ಧಾನಂತರದ ಹೊಸ ಸಂಶೋಧನೆಗಳಲ್ಲಿ 'ವೆಂಟ್ಯಾಲ್' ಎಂಬೊಂದು ವಸ್ತ್ರ ವಸ್ತು ನಿಚಿತವಾದುದು ಇನ್ನು ಬ್ರಿಟನಿನಲ್ಲಿ ಸಿದ್ಧಗೊಳಿಸಿದ್ದಾರೆ ಇದರ ಪೋಷಾಕುಗಳು ಅದೆಷ್ಟು ಕೊಳೆಯಲ್ಲಾ ಕೊಳಕಾಗುವುದಿಲ್ಲ ಮಾತ್ರವಲ್ಲ ಇದನ್ನು ಹಾಕಿಕೊಂಡವರಿಗೆ ಶೀತ ನೆಗಡಿಗಳು ಹತ್ತಿರ ಬರುವುದಿಲ್ಲವಂತೆ ವೆಂಟ್ಯಾಲ್ ಬಟ್ಟೆ ಹತ್ತಿಗಿಂತ ಹಗುರ ನೀರು ತಗಲುವುದಿಲ್ಲ ವಾಯು ಹೀರಿಕವಲ್ಲ, ಇಷ್ಟಾದರೂ ದೇಹಕ್ಕೆ ಬೆವರನ್ನುಂಟುಮಾಡುವುದಿಲ್ಲ

ರೂಪಾಯಿ ನಾಣ್ಯದ ರೂಪಾಂತರ

ಬೆಳ್ಳಿಯಿಂದ ನಿಕ್ಕೆಲಿಗೆ

[illegible] ಶತಮಾನದ [illegible] ನಾಣ್ಯವು [illegible] ಚಲಾವಣೆ [illegible] ಈಗ ಕೇಂದ್ರ ಸರಕಾರದ [illegible] ಬೆಳ್ಳಿ ರೂಪಾಯಿ [illegible] ರೂಪಾಯಿಗಳು ಸದ್ದಡಗಿ [illegible] ದರಿಂದ ಹಿಂದಿನ ನಾಣ್ಯದ [illegible] ಕಿಲಕಿಲ ಶಬ್ದದಿಂದ [illegible] ಮಾತ್ರವಲ್ಲ [illegible] ನಾಣ್ಯಗಳಲ್ಲಿ ಅದರ [illegible] ಪ್ರಮಾಣದಿಂದ [illegible]

ವಿಧಿಗಳಲ್ಲೂ ಪೂಜ್ಯ ಸಾಧನವಾಗಿ ಉಪಯೋಗಿಸುವ ರೂಢಿಯಿತ್ತು ದಾನ, ದಕ್ಷಿಣೆ ಮತ್ತು ಉಡುಗೊರೆಗಳಿಗೆ ಅವಿಲ್ಲದೆ ನಿರ್ವಾಹವಿರುತ್ತಿದ್ದಿಲ್ಲ

ರೂಪಾಯಿ ಇಲ್ಲವೆ ರುಪೀ (Rupee) ಎಂಬ ಶಬ್ದ ಹಳೇ ಸಂಸ್ಕೃತದ ರೌಪ್ಯ (ಬೆಳ್ಳಿಯದು) ಎಂಬುದರಿಂದ ರೂಪಾಂತರ ಹೊಂದಿತು ಎರಡು ಸಾವಿರ ವರ್ಷಗಳ ಹಿಂದೆ ನಾನಾತರದ ಆಕೃತಿಗಳ ಬೆಳ್ಳಿ ನಾಣ್ಯಗಳು ಭಾರತದಲ್ಲಿ ಚಲಾವಣೆಯಲ್ಲಿದ್ದುವೆಂದು ಅನೇಕ ಸಂಶೋಧನೆಗಳಿಂದ ತಿಳಿದುಬಂದಿದೆ

ಈಗಿನ ರೂಪಾಯಿಯು 16ನೇ ಶತಮಾನದಲ್ಲಿ ಮೊಗಲರ ಹುಮಾಯೂನನ್ನು ಓಡಿಸಿ ಸ್ವಲ್ಪಕಾಲ ಅದ್ವಿತೀಯ ಶಾಂತಿ ಶಿಸ್ತಿನಿಂದಾಳಿದ ಷೇರ್‌ಶಾ ಅವನ ಕಾಲದಲ್ಲಿ ಮೊದಲಿನ ಸಲಕ್ಕೆ ಜನ್ಮ ತಾಳಿತು ಆನಂತರ ಅನೇಕ ಇತರ ಚಿಕ್ಕಪುಟ್ಟ ಸಂಸ್ಥಾನಗಳು ಅಖಂಡ ಬೆಳ್ಳಿಯ ಬೇರೆ ಬೇರೆ ರೂಪಾಯಿಗಳನ್ನು ಅಚ್ಚುಹಾಕಿಸಿದ್ದರು.

ಈಸ್ಟ್ ಇಂಡಿಯಾ ಕಂಪೆನಿಯವರು ಇಲ್ಲಿನ ನಾನಾತರದ ರೂಪಾಯಿಗಳನ್ನೆಲ್ಲ ರದ್ದುಗೊಳಿಸಿ ಇಡೀ ದೇಶಕ್ಕೆ ಒಂದಾಗಿರುವ ಈಗಿನ ನಾಣ್ಯವನ್ನು ಚಲಾವಣೆ ಮಾಡಿದರು ಇದರಲ್ಲಿ 11 ಅಂಶ ಬೆಳ್ಳಿ ಒಂದಂಶ ಇತರ ಲೋಹ ಮಿಶ್ರಣವಿತ್ತ 1939ರ ನಂತರದ ಯುದ್ಧ ಕಾಲದಲ್ಲಿ [illegible] ಕೊರತೆಯುಂಟಾದಾಗ ಅರ್ಧ [illegible] ನಿಕ್ಕಲ್ ಸೇರಿಸಿರುವ ನಾಣ್ಯಗಳುಂಟಾದುವು

ನಿಕ್ಕಲ್ ಲೋಹವು ಇಂದಿನ ಪ್ರತಿಯೊಂದು ಕೈಗಾರಿಕೆಯಲ್ಲಿಯಂತೆ ಉಪಯೋಗಿಸಲ್ಪಡುತ್ತದೆ ಇದರಿಂದ ಅದನ್ನು ಕೃತಕವೆಂದು ತಿಳಕೊಳ್ಳಬಾರದು ಅದು ಆಧುನಿಕ ಯುಗದ ಸಂಕೇತವಾಗಿದೆ [illegible] ದು ವೈಶಿಷ್ಟ್ಯವೆಂದರೆ [illegible] ನಾಣ್ಯಗಳನ್ನು [illegible] ಇದರಿಂದ [illegible] ಅಧಿಕ [illegible] ಕೆಡಿಸಿದರೆ ಅದರ ಆಕರ್ಷಣ ಶಕ್ತಿ [illegible] ತದೆ ಇದರಿಂದ [illegible] ಸುಲಭವಾಗಿ ತಿಳಿಕೊಳ್ಳಬಹುದು.

ಕಿರಿಸುದ್ದಿ ಸಂಗ್ರಹ

ಲಂಡನಿನ ನೆಲ್ಸನ್ ಹಡಗು ನಿಲ್ದಾಣದಲ್ಲಿ ಸಾವಿರ ವರ್ಷ ಹಿಂದಿನ ಹಿಂದೂ ವಿಗ್ರಹವೊಂದು ಸಿಕ್ಕಿದ್ದು ಬ್ರಿಟಿಷ್ ಮ್ಯೂಸಿಯಮ್ಮಿನವರು ಅದು ವಿಷ್ಣುವಿನದೆಂದು ಗುರುತು ಹಚ್ಚಿ ತಮ್ಮ ಪೌರ್ವಾತ್ಯ ಪ್ರಾಚೀನ ವಸ್ತು ಮಂದಿರದಲ್ಲಿರಿಸಿರುವರು

★

ಅಮೇರಿಕದ ಇಂಡಿಯಾನಾ ಪ್ರಾಂತ್ಯದ 103 ವಯಸ್ಸಿನ ಬ್ರಹ್ಮಚಾರಿ ಡೆನ್ ಯಂಗ್ (ತರುಣ ಎಂದರ್ಥ) ಎಂಬಾತನು ತನ್ನ ಪ್ರಾಯದವಳೊಬ್ಬಳು ಸಿಕ್ಕಿದರೆ ವಿವಾಹವಾಗುವೆನೆಂದು ಸಾರಿರುವನು

★

ಅಮೇರಿಕದ ಆಡಳಿತಕ್ಕೊಳಪಟ್ಟ ಜರ್ಮನಿಯ ಒಂದು ಭಾಗದಲ್ಲಿನ ಇಗರ್ಜಿ ಅರ್ಚಕರು ಭಕ್ತರಿಗೆ 'ದೇವರ ಡಬ್ಬಿಗೆ ದುಡ್ಡು ಹಾಕುವ ಬದಲು ಹಾಲು ಗೆಡ್ಡೆ (ಬಟಾಟೆ) ಹಾಕಿರೆಂದು ವಿನಂತಿಸಿಕೊಂಡಿರುವರು ಆಹಾರ ಕೊರತೆಯ ಪರಿಣಾಮ

★

ಅತೀ ಆಳದ ಸಮುದ್ರಭಾಗವು ಫಿಲಿಪ್ಪೈನಿನ ಮಿಂಡನಾವೊ ದ್ವೀಪದ ಬಳಿ ಇದೆ 35,400 ಅಡಿಗಳಿಗಿಂತಲೂ ಹೆಚ್ಚಿದೆಯಂತೆ

★

ಎಲ್ಲೆಯೂ ಒಂದಿಷ್ಟು ತಿರುಗುಗಳಿಲ್ಲದೆ ನೇರವಾಗಿರುವ ರೈಲ್ವೇ ಪಟ್ಟಿ ಆಸ್ಟ್ರೇಲಿಯದಲ್ಲಿದೆ ಅದು 328 ಮೈಲು ಉದ್ದವಿದೆ

★

ಅಮೇರಿಕದಲ್ಲಿ ನೆಲೆಸಿಲ್ಲದ ಹೊರಗಿನವರು ಸಿರಕ್ಷಸ್ಥರಿರಬಾರದು

★

ನ್ಯೂಯಾರ್ಕಿನ ಒಳಿ ನ್ಯಾನ್ ಕ್ಲವ್ ಎಂಬಳು [illegible] ವರದಿನ ಕಷ್ಟಪಟ್ಟು ಒಂದು ಪೌತ್ತು ಭಾರದ ಮೊಟ್ಟೆಯಿಟ್ಟು ಅದನ್ನು ನೋಡುತ್ತ ಮರುಕ್ಷಣವೇ ಪ್ರಾಣಬಿಟ್ಟಿತು

★

ಪ್ರಯಾಣಿಕರಿಗೆ ಸ್ಪೆಶಲು ಸರ್ವಿಸಿನ ಸೂಚನೆ.

ಮುಲ್ಕಿ, ಬಪ್ಪನಾಡು, ಪೊಳಲಿ ಇತ್ಯಾದಿ ಸ್ಥಳಗಳಲ್ಲಿ ಜರಗಲಿರುವ ಜಾತ್ರೆಯ ಸಮ್ಮಂಧ ಪ್ರಯಾಣಿಸುವ ಯಾತ್ರಿಕರ ಬಗ್ಗೆ ಸ್ಪೆಶಲು ಸರ್ವಿಸುಗಳನ್ನು ರನ್ ಮಾಡುವ ಏರ್ಪಾಡನ್ನು ಮಾಡಲಿಚ್ಛಿಸಿದ್ದೆವಾದ್ದು ಸಕತ ಮೂರು ತಿಂಗಳಿಗೆ ಸಿಗಬೇಕಾದ ಪೆಟ್ರೋಲು ಕೋಟಾದಲ್ಲಿ ಕಡಿತವಾಗಿರುವುದರಿಂದ ಕೆಲವು ಬಸ್ಸುಗಳಿಗೆ ಪೆಟ್ರೋಲು ಸಾಕಾಗದೆ ಕೆಲವು ಸರ್ವಿಸುಗಳನ್ನು ತಾತ್ಕಾಲಿಕವಾಗಿ ನಿಲ್ಲಿಸುವ ಸಂದರ್ಭ ಬಂದೊದಗಿರುವುದರಿಂದಲೂ, ಮತ್ತು ಗ್ಯಾಸು ಬಸ್ಸುಗಳು ಸಹ ಕಡಿಮೆ ಇದ್ದು ಅವುಗಳಿಂದ ದಿನವಹಿ ಸರ್ವಿಸುಗಳನ್ನು ರನ್ ಮಾಡಿಸಲ್ಪಟ್ಟನಂತರವೇ ಸಾಧ್ಯವಿದ್ದಲ್ಲಿ ಮಾತ್ರ ಸ್ಪೆಶಲು ಸರ್ವಿಸುಗಳನ್ನು ರನ್ ಮಾಡಬೇಕಾಗುತ್ತದೆ ಅಲ್ಲದೆ ಕೋಸ್ಟಲ್ಯಾನಿನಲ್ಲಿ ಕೆಲವು ಕಡೆಗಳಲ್ಲಿ ಪೆಟ್ರೋಲು ಮತ್ತು ಕೆಲವು ಕಡೆಗಳಲ್ಲಿ ಗ್ಯಾಸು ಬಸ್ಸುಗಳಿರುವುದರಿಂದ ಸಾಧ್ಯವಿದ್ದ ಸ್ಥಳದ ವರೆಗೆ ಮಾತ್ರ ಸ್ಪೆಶಲು ರನ್ ಮಾಡಬೇಕಾಗಿರುತ್ತದೆ. ಉದಾಹರಣೆಗಾಗಿ ಮಂಗಳೂರು — ಮುಲ್ಕಿ ಲ್ಯಾನಿನಲ್ಲಿ ಪಾವಂಜೆಯಿಂದ ಮುಲ್ಕಿಗೆ ಪೆಟ್ರೋಲು ಬಸ್ಸು ಮಾತ್ರ ರನ್ ಆಗುತ್ತಿರುವುದರಿಂದ ಮುಲ್ಕಿ ರಥೋತ್ಸವ ಹಾಗೂ ಬಪ್ಪನಾಡು ಜಾತ್ರೆಯ ಸಮ್ಮಂಧ ಸ್ಪೆಶಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ ಗ್ಯಾಸು ಬಸ್ಸುಗಳ ಅನುಕೂಲತೆ ನೋಡಿ ಪಾವಂಜೆ ತನಕ ಮಾತ್ರ ಸ್ಪೆಶಲುಗಳನ್ನು ರನ್ ಮಾಡಲಾಗುವುದು ಆದಕಾರಣ ಜಾತ್ರೆಯ ಬಗ್ಗೆ ಪ್ರಯಾಣಿಸಲಿಚ್ಛಿಸುವ ಯಾತ್ರಿಕರು ಸ್ಪೆಶಲ್ ಸರ್ವಿಸು ರನ್ ಆಗಬಹುದೆಂಬೀ ಹೆಚ್ಚಿನ ಭರವಸ ಇಡದೆ ಸೀಟು ಇದ್ದ ಹಾಗೆ ನಮ್ಮ ದಿನವಹಿ ಸರ್ವಿಸುಗಳಲ್ಲಿ ಪ್ರಯಾಣಿಸಬೇಕಾಗಿ ಅಪೇಕ್ಷಿಸುತ್ತೇವೆ

ಅಲ್ಲದೆ ಮದುವೆ ಇತ್ಯಾದಿ ಸಮಾರಂಭಗಳ ಬಗ್ಗೆ ಸ್ಪೆಶಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ R. T. O. ಕೊಯಂಬುತ್ತೂರು, ಇವರಿಂದ ಪರ್ಮಿಶನ್ ಪಡಕ್ಕೊಂಡೇ ಅಂಥಾ ಸ್ಪೆಶಲುಗಳನ್ನು ಗ್ಯಾಸು ಬಸ್ಸುಗಳ ಅನುಕೂಲತೆ ನೋಡಿ ರನ್ ಮಾಡಬೇಕಾಗಿರುವುದರಿಂದ, ಹಾಗೆ ಸ್ಪೆಶಲು ಬಸ್ಸುಗಳನ್ನು ಅಪೇಕ್ಷಿಸುವವರು, ಸ್ಪೆಶಲುಗಳ ಬಗ್ಗೆ ಪರ್ಮಿಶನ್ ಪಡಕೊಳ್ಳುವರೆ ನಮಗೆ ಅನುಕೂಲವಾಗುವಂತೆ ತಮ್ಮ ಅರ್ಜಿಗಳನ್ನು ನಮಗೆ 20 ದಿವಸಗಳಿಗೆ ಮುಂಚಿತವಾಗಿ ಬರಕೊಳ್ಳಬೇಕಾಗಿ ಸಾರ್ವಜನಿಕರಿಗೆ ತಿಳಿಸಲಪೇಕ್ಷಿಸುತ್ತೇವೆ

ಮಂಗ್ಳೂರು,
29—3—1947.

ಜ್ವಾಯಿಂಟ್ ಮೆನೇಜರ್ಸ್,
ದಿ. ಕಂಬೈಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD
(Incorporated in British India with Limited Liability)
Estd: 1906.
Head Office: UDIPI, S. Kanara.

CAPITAL:	Rs.
Authorised	25,00,000
Issued, subscribed & called up	16,00,000
Paid up	15 97,145
RESERVES	5,25,000
DEPOSITS	2,07,47,928
TOTAL RESOURCES	3,00,01,186

With a net work of branches & Agencies in all principal cities of India, we shall be able to render efficient collection services

BANKING BUSINESS OF EVERY DESCRIPTION TRANSACTED.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳಕಡ್ಡಿ, ಪಿತ್ಥ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ

ಅಮೃತಾಂಜನ ಡಿಪೋ,

ಬೊಂಬ್ಯಾ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

The 1946 Record Business proves the popularity

THE BOMBAY LIFE ASSURANCE COMPANY LIMITED

Company's New Business in 1946 - 3·28 Crores

Our Cheif Agency New Business in 1946 about 54 Lakhs.

Our experience of 37 years available to you for arranging Insurance ...vestment. Ittherefore, pays you to consult us to Insure or to represent

Messrs. Kochikar Brothers, Limited.

Chief Agents for South India,

Bombay Life Building,

Central Office, Udipi:

Branches at: **MANGALORE, CALICUT, MADRAS, TRIVANDRUM, MADURA, BANGALORE AND BOMBAY.**

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with selected ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli.**

Bhuvanendra Products Ltd.

Factory & Head Office
KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ಕುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ತೀಕಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನೂ ಬಲವನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಕು 20—6—1947 [ಸಂಚಿಕೆ 25]

ಸ್ವದೇಶ ವಾರ್ತೆ

"ಹೈದರಾಬಾದು ತನ್ನ ಧೋರಣೆಯನ್ನು ಬದಲಾಯಿಸಿ ಹಿಂದುಸ್ಥಾನ ಘಟನಾ ಸಮಿತಿಗೆ ಸೇರಬೇಕು ಸಂಪೂರ್ಣ ಪ್ರಜಾಪ್ರಭುತ್ವ ಮಾದರಿಯ ರಾಜ್ಯಘಟನೆಯನ್ನು ಸಾರಬೇಕು ಇಲ್ಲದಿದ್ದರೆ ಅವುಗಳನ್ನು ಹೊಂದಲು ಪ್ರಜಾಮಂಡಳದವರು ನಿರಂತರ ಚಳವಳಿಯನ್ನಾರಂಭಿಸುವರು. ಹೀಗೆಂದು ಮೊನ್ನೆ ಅಲ್ಲಿ ಜರಗಿದ ಸಂಸ್ಥಾನ ಪ್ರಜಾಪರಿಷತ್ತಿನಲ್ಲಿ ಅಧ್ಯಕ್ಷ ಸ್ವಾಮಿ ರಮಾನಂದ ತೀರ್ಥರು ಉದ್ಗರಿಸಿದರು

★

ಹೈದರಾಬಾದಿನ ಸ್ವಾತಂತ್ರ್ಯ ಘೋಷಣೆ ಅಲ್ಲಿನ ಶೇಕಡಾ 15ರಷ್ಟು ಮುಸಲ್ಮಾನರಿಗೆ ತೃಪ್ತಿಯನ್ನೂ ಶೇಕಡಾ 85ರಷ್ಟು ಹಿಂದುಗಳಿಗೆ ಅತೃಪ್ತಿಯನ್ನೂ ಉಂಟುಮಾಡಿರುವುದು ಬಹುಸಂಖ್ಯಾಕರು ಚಳವಳಿ ಪ್ರಾರಂಭಿಸಿದರೆ ಅಲ್ಪಸಂಖ್ಯಾಕರು ಒಂದು ಕ್ಷಣವೂ ಅದನ್ನು ಸಹಿಸಲಾರರೆಂದು ಒರ್ವ ಅಲ್ಪಸಂಖ್ಯಾಕ ಧುರೀಣರು ತಿಳಿಸುತ್ತಾರೆ

★

ತಮ್ಮ ಸ್ವತಂತ್ರ ಧೋರಣೆಗೆ ಬಹುಸಂಖ್ಯಾಕರ ಬೆಂಬಲವಿದೆಯೆಂದು ಸಿ. ಪಿ. ಯವರು ಮಹಾತ್ಮರಿಗೆ ಧೃಢವಾಗಿ ತಿಳಿಸಿದ್ದಾರೆ ಇತರರಷ್ಟೇ ತಾವೂ ದೇಶಾಭಿಮಾನಿಗಳೆಂದೂ ಅವರು ಮಹಾತ್ಮರ ವಿಶೇಷ ಗಮನಕ್ಕೆ ತಂದಿದ್ದಾರೆ

★

ವಿಜಯಲಕ್ಷ್ಮಿ ಪಂಡಿತರು ರಶ್ಯಕ್ಕೆ ಭಾರತೀಯ ರಾಯಭಾರಿಗಳಾಗಿಯೂ, ವಿ. ಕೆ. ಕೃಷ್ಣ ಮೇನನ್ನರು ಭಾರತ ಸರಕಾರದ ಸಂಚಾರ ರಾಯಭಾರಿಗಳಾಗಿಯೂ ನೇಮಿಸಲ್ಪಡುವರೆಂದು ತಿಳಿದುಬರುತ್ತದೆ ಕೆ. ಎಂ. ಮುನ್ಷಿಯವರನ್ನು ರಾಯಭಾರಿಯಾಗಿ ಲಂಡನಿಗೆ ಕಳಹಿಸುವ ವಿಚಾರಾಲೋಚನೆಯೂ ನಡದಿದೆಯಂತೆ

★

ಇದುತನಕ ಹಿಂದೂ ಬಹುಸಂಖ್ಯಾಕ ಪ್ರದೇಶಗಳಲ್ಲಿದ್ದ ಮುಸಲ್ಮಾನರಿಗೆ ವಿಶೇಷ ಸವಲತ್ತುಗಳಿದ್ದುವು ಈಗ ಇವುಗಳನ್ನು ರದ್ದುಮಾಡುವರೆ ಕೇಂದ್ರ ಸರಕಾರವು ಪರ್ಯಾಲೋಚನೆ ನಡೆಸುತ್ತದೆ.

★

ಪಾಕಿಸ್ಥಾನ ಸ್ಥಾಪನೆ ಸಂಬಂಧದಲ್ಲಿ ತಗಲಲಿರುವ ಪ್ರಥಮ ಖರ್ಚಿಗಾಗಿ ಜಿನ್ನಾರವರು ಒಂದು ಪಾಕಿಸ್ಥಾನ ನಿಧಿಯನ್ನು ಪ್ರಾರಂಭಿಸಿರುವರು.

ಮದ್ರಾಸ್ ಸರಕಾರಕ್ಕೆ ಎಚ್ಚರಿಕೆ

ಗಾಂಧೀ ಮಿತ್ರರ ಸೂಚನೆ

'ವನಸ್ಪತಿ ಉತ್ಪಾದನೆ ... ನಿಷೇಧಿಸಬೇಕೆಂದು ... ಮದ್ರಾಸು ಸರಕಾರದವರು ... ವಿಚಾರ ಮತ್ತು ತೀರ್ಮಾನಗಳೇ ನೆರವೇರಿ ... ಮದ್ರಾಸ ಪ್ರಾಂತವು ... ವರುಷದಿಂದ ಆಂಧ್ರದಲ್ಲಿ ... ತಮಿಳು ನಾಡಿನಲ್ಲಿ ನಾಲ್ಕು ಮತ್ತು ... ಒಂದು ಹೀಗೆ ಒಂಭತ್ತು ಕಾರಖಾನೆಗಳನ್ನು ಹೆಚ್ಚಾಗಿ ಹೊರಡಿಸಬೇಕೆಂದು ಯೋಜಿಸಲಾಗಿದೆ ಇವುಗಳಲ್ಲಿ ಮದ್ರಾಸ ಸರಕಾರ ಒಂದನ್ನಾದರೂ ತಾನೇ ನಡೆಸುವುದು ...

ಹೊಸ ಸರಕಾರಗಳು ... ಮಾರ್ಗದರ್ಶನ ... ಇಷ್ಟೊಂದು ... ಗಳಾದ್ದರಿಂದ ... ತಮ್ಮ ಮನಸ್ಸಿನಲ್ಲಿ ... 'ಫ್ಯಾಕ್ಟರಿ' ... ಕಾದುದು ಅತ್ಯವಶ್ಯವಾಗಿದೆ ... ಕಾಂಗ್ರೆಸ್ ಮಂತ್ರಿಮಂಡಳ 'ವನಸ್ಪತಿ' ... ದ ... ಸುವಾಗ ... ಕಾಂಗ್ರೆಸ್ ಮಂತ್ರಿಮಂಡಳ ಅದು ಅಮೃತ ಸದೃಶ ಬಾವಿಸಿ ಅದಕ್ಕೆ ಪ್ರೋತ್ಸಾಹನ ಕೊಡಬೇಕೆಂದು ಮುಂದಾಗುವದೆಂದರೆ ... ತಿಳಿಯದು ಈ ... ಭಿನ್ನ ಭಿನ್ನ ಧೋರಣೆ ... ವರೆಗೆ ಪ್ರಗತಿಪರವಾಗಲಾರದೆಂದು ನಮ್ಮ ಅಭಿಪ್ರಾಯ ಇಡೀ ದೇಶಕ್ಕಾಗಿ ... ಉಚಿತವಾದ ಒಂದೇ ಬಗೆಯ ಧೋರಣೆಯನ್ನು ನಾವು ನಿರೀಕ್ಷಿಸುತ್ತಿದ್ದೇವೆ ಇಡೀ ದೇಶದ ಕಲ್ಯಾಣಕ್ಕಾಗಿ ಯಾವ ಬಗೆಯ ಧೋರಣವನ್ನು ಅನುಸರಿಸತಕ್ಕದ್ದು ಎಂಬುದನ್ನು ಸಾರಲು ವಿಧಾಯಕ ಕಾರ್ಯಕ್ರಮ ಸಮಿತಿಯು ಮುಂದೆ ಬರುವುದಕ್ಕೆ ಇನ್ನೂ ಕಾಲ ವಿಳಂಬವಾಗಿಲ್ಲವೆ?

ಕಡೆಯ ಅಂತಸ್ತು

ನಿಷ್ಕೃಷ್ಟ ಕಾರ್ಯಕ್ರಮವಿಲ್ಲದೆ ಬರಿದೆ ಧಾರ್ಮಿಕಪ್ರತಿಜ್ಞೆಗಳನ್ನು ಮಾಡುವುದರಿಂದಾಗುವ ಅಪಾಯವನ್ನು ಯೇಸುಕ್ರಿಸ್ತನು ಒಂದು ಕತೆಯಲ್ಲಿ ಹೇಳಿದ್ದಾನೆ ಮನುಷ್ಯನ ಅಶುದ್ಧ ಭಾವವು ದೇಹದಿಂದ ಹೊರಹೊರಟು ಹೋದಾಗ, ಶುದ್ಧ ಭಾವವು ಆ ಸ್ಥಳವನ್ನು ಬಂದು ಆಕ್ರಮಿಸದಿರುವಾಗ, ಹೊರ ಹೋಗಿದ್ದ ಅಶುದ್ಧ ಭಾವವು ತನಗಿಂತ ಅಶುದ್ಧವಾದ ಏಳು ಪೀಡೆಯ ಭಾವಗಳನ್ನು ಕರೆದುಕೊಂಡು ಪುನಃ ದೇಹವನ್ನು ಪ್ರವೇಶಿಸುತ್ತದೆ ಆಗ ಎಷ್ಟೇ ಸದುದ್ದೇಶವುಳ್ಳ ಮನುಷ್ಯನಾದರೂ ಮೊದಲಿಗಿಂತ ಹೆಚ್ಚು ಕೆಟ್ಟ ಸ್ಥಿತಿಗೆ ಇಳಿಯುತ್ತಾನೆ

ಮದ್ರಾಸ ಸರಕಾರವು ಮಾಡುತ್ತಿರುವ ಕೃತಗಳಿಂದ ಮೇಲಿನ ಮಾತಿನ ಸತ್ಯತೆಯು ಹೆಚ್ಚು ಹೆಚ್ಚು ಸ್ಪಷ್ಟವಾಗತೊಡಗಿದೆ ಅದು ಸಲಹೆಗಾರರ ಆಡಳಿತವನ್ನು ಕೊನೆಗೊಳಿಸಿತು. ಪ್ರಕಾಶಂರವರ ಮಂತ್ರಿತ್ವವು ಒಳ್ಳೆ ... ನಿರ್ಧಾರಗಳನ್ನು ಮಾಡಿತು. ... ಈಗ ... ದಾಸನ ಧಿಕ್ಕಾರವಾದಂತೆ ತೋರುತ್ತದೆ

ಓರ್ವ ಗ್ರಾಮೋದ್ಯೋಗದ ಅಧಿಕಾರಿಯ ... ಸುದ್ದಿ ಬಂದಿದೆ ಶ್ರೀ ... ಪಿಳ್ಳೆಯವರಂತಹ ಗಾಂಧಿ ತತ್ವದ ಆರ್ಥಿಕ ಕ್ರಮದಲ್ಲಿ ಶ್ರದ್ಧೆ ಉತ್ಸಾಹಗಳುಳ್ಳ ಸರಕಾರಿ ಉದ್ಯೋಗದ ಬಾಗಿಲನ್ನು ಹೊಕ್ಕವರ ... ಬಹಿಷ್ಕರಿಸಿದಂತಾಗಿದೆ ಇವರು ರಚನಾತ್ಮಕ ಪ್ರವೀಣರು ಮತ್ತು ಹಿಂದೆ ಒಳ್ಳೆಯ ಕೆಲಸ ಮಾಡಿ ಹೆಸರುಗಳಿಸಿದವರು ಮಂತ್ರಿಮಂಡಳದವರು ಅನುಸರಿಸುತ್ತಿರುವ ಧೋರಣೆಗಳ ಬಗ್ಗೆ ನಮ್ಮ ಆಕ್ಷೇಪವಿಲ್ಲ ಅವುಗಳ ಜವಾಬ್ದಾರಿಯು ಆಯಾ ಮತದಾರ ಕ್ಷೇತ್ರದವರಿಗೆ ಸೇರಿದ್ದು ಮಂತ್ರಿಗಳು ಜನತೆಗೆ ವಿರುದ್ಧವಾಗಿ ನಡೆದುಕೊಂಡರೆ ಅವರನ್ನು ಪದಚ್ಯುತ ಮಾಡುವುದಕ್ಕಾಗಲಿ, ಕಡೆಯ ಪಕ್ಷ ತಮ್ಮವರಲ್ಲವೆಂದು ತಿರಸ್ಕರಿಸುವುದಕ್ಕಾಗಲಿ ಬೇಕಾದ ಕಾರ್ಯಕ್ರಮಕೈಗೊಳ್ಳುವುದು ಜನರ ಪಾಲಿನ ಕರ್ತವ್ಯ ಮಂತ್ರಿಮಂಡಲವು ನೇರವಾಗಿ ನಮ್ಮ ಧ್ಯೇಯವಿಂಥದು, ನಾವು ಇಂಥ ಧ್ಯೇಯವನ್ನು ಅನುಸರಿಸುತ್ತಿದ್ದೇವೆ ಎಂದು ನಿರ್ಧರಿಸಿ ಹೇಳುವದಷ್ಟೇ ನಮಗೆ ಬೇಕಾದದ್ದು ಬಟ್ಟೆಯ ಧೋರಣೆ ಬದಲಾಯಿಸಿದ್ದು ಮತ್ತು ಮೇಲಿನ ಅಧಿಕಾರಿಗಳನ್ನು ನಿವೃತ್ತಿಗೊಳಿಸಿದ್ದು ಗಾಳಿ ಯೆತ್ತ ಬೀಸುತ್ತದೆಂಬುದನ್ನು ಸೂಚಿಸುತ್ತವೆ ಮತ್ತು ನಮ್ಮನ್ನು ಹೆದರಿಸುವುದೇಕೆಂದರೆ ಮನುಷ್ಯನ ಮೊದಲಸ್ಥಿತಿಗಿಂತ ಕಡೆಯ ಸ್ಥಿತಿ, ಇನ್ನೂ ಹೆಚ್ಚು ಕೆಟ್ಟದ್ದಾದೀತು" ಎಂಬುದೇ.

ಜೆ. ಸಿ. ಕುಮಾರಪ್ಪ.

ವಿದೇಶ ರಾಜಕೀಯ

ಯುರೋಪಿಗೆ ಸಹಾಯ ಕೊಡುವ ಅಮೇರಿಕನ್ ವಿದೇಶಾಂಗ ಸಚಿವ ಜಾರ್ಜ್ ಮಾರ್ಶಲ್ಲರ ಯೋಜನೆಯನ್ನು ರಶ್ಯದ ಪ್ರಾವ್ದಾ ಪತ್ರಿಕೆಯು ಇದು ಡಾಲರ್ ಮೂಲಕ ಒತ್ತಾಯ ಹಾಕುವ ವಿಧಾನವೆಂದು ಟೀಕಿಸಿರುವುದು

★

ಇಂಡೋನೇಸ್ಯಾದ ಜನತೆಯೊಡನೆ ಜಗಳವಾಡುವುದು ವಿಘಾತುಕವಾದುದೆಂದು ಡಚ್ ಮಜೂರ ಪಕ್ಷದವರು ಅಭಿಪ್ರಾಯ ಸೂಚಿಸಿರುವರು ಇದೇ ರೀತಿ ಡಚ್ ಜನಾಂಗ ಅಭಿಪ್ರಾಯ ಪಟ್ಟರೆ ಇಂಡೋನೇಸ್ಯಾದಲ್ಲಿ ಶೀಘ್ರ ಶಾಂತಿ ಸ್ಥಾಪನೆಯಾಗುವುದೆಂದು ಅಲ್ಲಿನ ಒರ್ವ ದುರೀಣರು ತಿಳಿಸುತ್ತಾರೆ

★

ಭಾರತದಲ್ಲಿ ಕೊಮ್ಯುನಿಸ್ಟ್ ತತ್ವವಾದ ಪ್ರಸರಿಸಿದರೆ ತಮಗೆ ತುಂಬಾ ಹಾನಿಯುಂಟಾದೀತೆಂಬ ಅಂಜಿಕೆ ಅಮೇರಿಕನರಲ್ಲಿದೆಯೆಂದು ಅಮೇರಿಕದಿಂದ ಇತ್ತೀಚೆ ಹಿಂತಿರುಗಿದ ಶ್ರೀ ಹರೀ ಸಿಂಗರ ತಿಳಿಸುತ್ತಾರೆ

★

ಎಟಂ ಬಾಂಬಿನಿಂದ ಧೂಳೀ ಬೂತವಾದ ಹಿರೋಶೀಮದ ಭಗ್ನಾವಶೇಷಗಳ ಮೇಲೆ ಹೊಸ ಮಾದರಿಯ ನಗರವೊಂದನ್ನು ಕಟ್ಟಲು ಬ್ರಿಟಿಷ್ ಕಟ್ಟಡ ಶಿಲ್ಪಿಗಳು ಯೋಜಿಸಿರುವರು

★

ಸ್ಟಾಲಿನ್ ಮತ್ತು ಮೊಲೊಟೊವರನ್ನು ಆಹ್ವಾನಿಸಿ ಅಧ್ಯಕ್ಷ ಟ್ರೂಮನ್ ಮತ್ತು ಜೆನೆರಲ್ ಮಾರ್ಶಲ್ಲರು ಒಂದು ಪರಿಷತ್ತನ್ನು ಸೇರಿಸಿ ಜರ್ಮನಿ ಮತ್ತು ಆಸ್ಟ್ರಿಯಾದ ಕುರಿತು ಈಗಿರುವ ಭೇದಾಭಿಪ್ರಾಯಗಳನ್ನು ಇತ್ಯರ್ಥ ಮಾಡಬೇಕೆಂದೂ ಅಮೇರಿಕದ ಮಾಜಿ ಉಪಾಧ್ಯಕ್ಷರಾದ ಹೆನ್ರಿ ವಾಲೇಸರು ಸೂಚಿಸಿದ್ದಾರೆ

★

ಪ್ರಖ್ಯಾತ ಚಲಚಿತ್ರ ನಟನಾದ ಚಾರ್ಲಿ ಚಾಪ್ಲಿನನು ಅಮೇರಿಕದಲ್ಲಿ ಕೊಮ್ಯುನಿಸ್ಟ್ ವಾದವನ್ನು ಗುಪ್ತವಾಗಿ ಪ್ರಚಾರ ಮಾಡುತ್ತಿರುವನೆಂದು ಅವನನ್ನು ದೇಶದಿಂದ ಗಡಿಪಾರು ಮಾಡಿ ಇಂಗ್ಲೆಂಡಿಗೆ ಕಳುಹಿಸಬೇಕೆಂದೂ ಒರ್ವ ಅಮೇರಿಕನ್ ಪ್ರಜಾಪ್ರತಿನಿಧಿಗಳೂ ಬಹಿರಂಗ ಪ್ರಕಟಣೆ ಕೊಟ್ಟಿದ್ದಾರೆ.

★

ಭಾರತದ ಕೊಲೆ ಮಾಡಿದವರಾರು?

ಹಿಂದೂ ಮುಸ್ಲಿಂ ಕಚ್ಚಾಟದ ದುರಂತ

ಮೌಂಟ್ ಬೇಟನ್ನರ ಮೊಸಳೆ ಕಣ್ಣೀರು

"ಕಳೆದ ಕೆಲವು ವರ್ಷಗಳ ನಮ್ಮ ಜಾತೀಯ ಕಚ್ಚಾಟದಿಂದ ಮುಸಲ್ಮಾನರಿಗೆ ಸೀಳಿದ ಪಾಕಿಸ್ಥಾನವೂ, ಹಿಂದೂಗಳಿಗೆ ಹೋಳಾದ ಹಿಂದುಸ್ಥಾನವೂ ದೊರೆಯಿತು. ಈ ಹೋರಾಟದಲ್ಲಿ ಅಖಂಡ ಭಾರತವು ಮೃತವಾಯಿತು. ಆದರೆ ಇದರ ಕೊಲೆಗಡುಕನಾರು?" ಹೀಗೆಂದು ಬೊಂಬ್ಬಾಯಿ ಕ್ರೊನಿಕಲ್ ಪತ್ರಿಕೆಯ 'ಕ್ರೊನಿಕ್ಲರರು' ಪ್ರಶ್ನಿಸುತ್ತಾ ಕೊಲೆ ಗಡುಕರ ಪತ್ತೆ ಮಾಡಿದ ವಿವರವನ್ನು ಹೀಗೆ ಬರೆದಿದ್ದಾರೆ:

ಓರ್ವ ಗಾಂಧಿಯು ಭಾರತೀಯ ಮನೋಕೂಪದ ಆಳವನ್ನು ಅಳೆಯಬಲ್ಲ, ಓರ್ವ ನೆಹರುವಿನ ಐತಿಹಾಸಿಕ ದಿಗ್ದರ್ಶನದ ಸ್ಫೂರ್ತಿಯನ್ನು ತಿಳಿಯಬಲ್ಲ, ಮತ್ತು ಶರ್ಲಕ್ ಹೋಮ್ಸನ ರಹಸ್ಯಮಯವಾದ ಸೂಕ್ಷ್ಮ ಪರಿಶೋಧನಾ ಶಕ್ತಿಯುಳ್ಳ ಪತ್ತೆದಾರನು ಈ ಭೀಕರ ಕೊಲೆ ಘಾತದ ರಹಸ್ಯವನ್ನು ಪತ್ತೆ ಹಚ್ಚ ಬಲ್ಲನು.

ಭಾರತವನ್ನು ಕೊಲೆ ಮಾಡಿದವರಾರು? ನಿಜವಾಗಿಯೂ ಯಾರು?

ಜಾತೀಯ ದಂಗೆಯಲ್ಲಿ ಬೆನ್ನ ಹಿಂದಿನಿಂದ ತಿವಿದಾತನಿದನ್ನು ಮಾಡಿದನೊ, ಇಲ್ಲವೆ ಪುಂಡ ದಂಗೆಗಾರರ ಕೂಟವು ಇದನ್ನು ಮಾಡಿದ್ದೊ? ಇದೊಂದು ವಿಷ ಹಾಕಿ ಕೊಂದ ಪ್ರಕರಣವೇನು? ಇಲ್ಲವೆ ಮೃತನು ತನ್ನಿಂದ ತಾನೆ ಆತ್ಮಹತ್ಯೆ ಮಾಡುವಂತೆ ಪ್ರೇರೇಪಿಸಿದ ನಿಗೂಢ ಸಮಸ್ಯಾತ್ಮಕ ಘಟನೆ ಅದಾಗಿರಬಹುದೇ?

ಪ್ರತಿವಾದಿಗಳ ಕಡೆ ಸಾಕ್ಷಿದಾರನಾದ 'ಕ್ರೊನಿಕ್ಲರ'ನ ನಮ್ರ ಹೇಳಿಕೆಯ ಅಭಿಪ್ರಾಯ ಹೀಗಿದೆ:

ಭಾರತವನ್ನು ಬ್ರಿಟಿಷರು ಕೊಂದದ್ದು. ಮುಸ್ಲಿಮರು ಪ್ರತ್ಯೇಕ ಮತದಾನದ ಹಕ್ಕು ಕೇಳುವಂತೆ ಪ್ರೇರೇಪಿಸಿ ಅದನ್ನು ಅವರಿಗೆ ಸಿಗುವಂತೆ ಮಾಡಿದಾಗಲೇ ಭಾರತದ ರಾಜಕೀಯ ಶರೀರಕ್ಕೆ ಮೊದಲನೇ ಪೆಟ್ಟು ಬಿತ್ತು. ಅದು ಪಾಕಿಸ್ಥಾನದ ಕಡೆಗಿಟ್ಟ ಮೊದಲ ಹೆಜ್ಜೆ. ಆದುದರಿಂದ ಅಖಂಡ ಭಾರತದ ಜರ್ಝರಿತ ಶವಕ್ಕಾಗಿ ಲೋರ್ಡ್ ಮೌಂಟ್‌ಬೇಟನರು ಅದೆಷ್ಟು ಮೊಸಳೆ ಕಣ್ಣೀರು ಸುರಿಸಿದರೂ ವ್ಯರ್ಥವೆ.

ಭಾರತವು ಬ್ರಿಟನಿನಿಂದ ಮತ್ತದರ 'ವಿಭಾಗಿಸಿ ಆಳುವ ಧೋರಣೆಯಿಂದ' ಕೊಲ್ಲಲ್ಪಟ್ಟಿತು. ಆದರೆ ಬ್ರಿಟನ್ನು ಕೊಂದದ್ದು ಏಕಾಂಗಿಯಲ್ಲ.

ತಮ್ಮ ಅನುಯಾಯಿಗಳ ಅಂಜಿಕೆ ಸಂಶಯಗಳನ್ನು ಪ್ರೇರೇಪಿಸಿ ಅದರಿಂದ ಅಪಾಯಕಾರಕವೂ, ನೈಚವೂ ಮತ್ತು ಮತಾಂಧತೆಯದೂ ಅದ ದಬ್ಬಾಳಿಕೆಯ ಶಿಪಾಯಿ ಮನೋವೃತ್ತಿಯನ್ನುಂಟುಮಾಡಿದ ಮುಸ್ಲಿಂ ಲೀಗ್ ದುರೀಣರು ಭಾರತವನ್ನು ಕೊಂದರು.

ಮುಸ್ಲಿಮರ ಜಾತೀಯತೆಗೂ ಅಂಧ ಉನ್ಮತ್ತತೆಗೂ ಉರಿ ಹಚ್ಚಲು ಬೆಂಕಿಯನ್ನೊದಗಿಸಿದ ಮತಾಂಧತೆಯ ಹಿಂದೂಗಳೂ, ನಿರಂಕುಶಾಧಿಕಾರದ ಹಿಂದೂಗಳೂ, ಸಾಮ್ರಾಜ್ಯವಾದಿ ಹಿಂದೂಗಳೂ, ಹಿಂದೂ ಸಾಮ್ರಾಜ್ಯ ಸ್ಥಾಪನೆಯ ಸ್ವಪ್ನ ಕಾಣುವ ಹಿಂದೂಗಳೂ, ಹಿಂದೂ ಸಂಘಾತನವಾದಿಗಳಾದ ಧರ್ಮ ಪ್ರವರ್ತಕ ಹಿಂದೂಗಳೂ ಭಾರತವನ್ನು ಕೊಂದರು.

ತಮ್ಮ ಮತಾಭಿಮಾನದ ಅನುರಾಗಗಳನ್ನು ರಾಷ್ಟ್ರೀಯತೆಯ ಸೋಗಿನಿಂದ ಮುಚ್ಚಿ ಗುಪ್ತವಾಗಿ ಜಾತೀಯ ಪ್ರತ್ಯೇಕೀಕರಣವನ್ನು ಪ್ರೋತ್ಸಾಹಿಸಿದ ರಾಷ್ಟ್ರೀಯವಾದಿಗಳೂ, ಕೊಂಗ್ರೆಸಿಗರೂ, ಕೊಂಗ್ರೆಸು ಪರಿಪೂರ್ಣವಾದ ಎಲ್ಲಾ ಕೋಮುಗಳನ್ನೊಳಗೊಂಡ ರಾಷ್ಟ್ರೀಯ ಒಕ್ಕಟ್ಟಿನ ಸಂಸ್ಥೆಯಾಗಿರದಂತೆ ಮಾಡಿದ ಕೊಂಗ್ರೆಸಿಗರೂ ಭಾರತವನ್ನು ಕೊಂದರು.

ಮುಸ್ಲಿಮರ ಅರಾಷ್ಟ್ರೀಯವೂ ಅವಿಚಾರದ್ದೂ ಆದ ಪಾಕಿಸ್ಥಾನ ಕೇಳಿಕೆಗೆ ಪ್ರೋತ್ಸಾಹವಿತ್ತು ಯುದ್ಧ ಕಾಲದಲ್ಲಿ ತಮ್ಮ 'ಜನತೆಯ ಯುದ್ಧ'ದ ಪಾಕಿಸ್ಥಾನ ಪರವಾದ ಧೋರಣೆಯಿಂದ ಸಾಮ್ರಾಜ್ಯವಾದಿಗಳೊಡನೆ ಸಹಕರಿಸಿದ ಕೊಮ್ಯುನಿಸ್ಟ್ ಪಾರ್ಟಿಯವರಿಂದ ಭಾರತವು ಕೊಲ್ಲಲ್ಪಟ್ಟಿತು. ('ಮನೆನಾಡು', 'ದ್ವಿರಾಷ್ಟ್ರ ತತ್ವ', 'ಸ್ವಯಂನಿರ್ಣಯ' ಮೊದಲಾದ ಈ ಸ್ಫೋಟಕ ಘೋಷಣೆಗಳನ್ನು ಪಾಕಿಸ್ಥಾನ ಸೈನ್ಯಕ್ಕೆ ಕೊಮ್ಯುನಿಸ್ಟರೇ ಒದಗಿಸಿಕೊಟ್ಟರು.)

ಇತ್ತೀಚೆಗಿನ ಕೋಮು ದಂಗೆಗಳಲ್ಲಿ ಪ್ರತಿಯೊಬ್ಬ ಹಿಂದೂವನ್ನು ಇರಿದ ಮುಸ್ಲಿಮನೂ, ಮುಸ್ಲಿಮನನ್ನು ತಿವಿದ ಹಿಂದೂವೂ, ಕೊಲೆ, ಸುಲಿಗೆ, ಸುಡುವಿಕೆ, ಅನಾಚಾರಗಳಲ್ಲಿ ಹಿನ್ನೆಲೆಯಲ್ಲಿ ನಿಂತು ಬೆಂಬಲವಿತ್ತ ಪ್ರತಿ ಹಿಂದೂವೂ ಮತ್ತು ಮುಸಲ್ಮಾನನೂ ಭಾರತವನ್ನು ಕೊಂದನು.

ಸ್ವಾತಂತ್ರ್ಯೋದಯ ಕಾಲದಲ್ಲಿ ಒಂದು ಸಾಮ್ರಾಜ್ಯಶಾಹಿ ದೇಶವು ನಮ್ಮ ದೇಶವನ್ನು ವಿಚ್ಛೇದಿಸಿದ ಸಂಗತಿಯು ಕೌತುಕದಲ್ಲ. ಭಾರತವನ್ನು ಭಾರತೀಯರೇ ಕೊಂದದ್ದು ಅತ್ಯಂತ ವಿಷಾದಮಯವೂ ಆಶ್ಚರ್ಯಕರವಾದುದೂ ಆದ ದುರಂತವಾಗಿದೆ. ಈ ವಿಷಯವನ್ನು ನಾವು ಮನಗಂಡರೆ ನಮ್ಮ ದುಃಖದಿಂದ ಐಕ್ಯ ಭಾರತೋದಯವಾಗಬಹುದು. ವೀರ ಸೈನಿಕರು ಅಮರರಿರುವಂತೆ ಪ್ರಾಚೀನ ದೇಶವು ಅಮರವೇ ಆಗಿದೆ.

ಪಲೇಸ್ತೀನದಿಂದ ಬ್ರಿಟಿಷರು ಹೊರಟು ಹೋದರೆ ಅರಬ ಯೆಹೂದಿಗಳಿಬ್ಬರು ಪರಸ್ಪರ ಇತ್ಯರ್ಥಗಳಿಂದ ನೆಮ್ಮದಿಯಲ್ಲಿ ಬಾಳುವರೆಂದು ಎಮಿಲ್ ಬೇ ಎಂಬ ಅರಬ ಸಂಘ ಸದಸ್ಯರು ತಿಳಿಸುತ್ತಾರೆ.

ವಾರದ ವಿಜ್ಞಾನ ವಾರ್ತೆಗಳು

ಚಹಾ ಯಂತ್ರ

ತುಂಬಾ ಕೆಲಸವಿದ್ದವರಿಗೂ, ಆರಾಮಪ್ರಿಯರಿಗೂ ಸಹಾಯಕವಾಗುವ ಒಂದು ಹೊಸ ಉಪಕರಣವನ್ನು ಬ್ರಿಟಿಷ್ ಯಂತ್ರನಿಪುಣರು ರಚಿಸಿದ್ದಾರೆ. ಇದೆಂದರೆ ಚಹಾ ತಯಾರಿಸುವ ಯಂತ್ರ. ಎಲಾರಂ ಗಡಿಯಾರದಂತೆ ಇದು ಬೇಕಾದ ಸಮಯದಲ್ಲಿ ಚಹಾವನ್ನು ತಯಾರಿಸಿ ಇಟ್ಟನಂತರ ಸಮಯಕ್ಕೆ ಸರಿಯಾಗಿ ತನ್ನ ಯಜಮಾನನಿಗೆ ಗಂಟೆ ಬಾರಿಸಿ ಸೂಚನೆ ಕೊಡುವುದು. ಇದರಲ್ಲಿನ ಗಡಿಯಾರದ ಮುಳ್ಳುಗಳನ್ನು ಬೇಕಾದ ಸಮಯಕ್ಕೆ ತಿರುಗಿಸಿಟ್ಟಾಗ ಇದರೊಳಗಿನ ವಿದ್ಯುತ್ ಪಾತ್ರೆಯೊಂದು ನೀರನ್ನು ಕುದಿಸುವುದು. ಬೇಕಾದಷ್ಟು ಸಕ್ಕರೆ, ಚಹಾಸೊಪ್ಪು, ಹಾಲುಗಳು ತನ್ನಷ್ಟಕ್ಕೆ ಒಟ್ಟು ಸೇರಿಸಲ್ಪಡುವವು. ಕೊನೆಯಲ್ಲಿ ಸಿದ್ಧವಾದ ಪಾನೀಯವು ಕಪ್ಪಿನೊಳಗೆ ಸುರಿಯಲ್ಪಟ್ಟು ಕುಡಿಯಲು ತಯಾರಾಗುವುದು.

ಮಡಚುವ ದೋಣಿ

ಯುದ್ಧಕಾಲದಲ್ಲಿ ಅನೇಕ ನಾವಿಕರ ಜೀವರಕ್ಷಣೆ ಮಾಡಿದ ಈ ಸಾಧನವು ಈಗ ಶಾಂತಿಕಾಲದ ಜನರ ಸುಖಸಾಧನವಾಗಿದೆ: ಈ ದೋಣಿಯು ಎಲ್ಯೂಮಿನಿಯಂ ಲೋಹದಿಂದ ಮಾಡಲ್ಪಟ್ಟಿದ್ದಿರುತ್ತದೆ. ಯುದ್ಧ ಹಡಗಗಳಲ್ಲಿ ಇದನ್ನು ಮಡಚಿ ಮುದ್ದೆ ಮಾಡಿ ಒಯ್ಯುವುದಿತ್ತು. ಈಗ ಸಂಚಾರಕರು ತಮ್ಮ ಮೋಟಾರಿನ ಮಾಡಿನ ಮೇಲೆ ಹಾಕಿ ಒಯ್ಯಬಹುದು. ಬಿಡಿಸಿದಾಗ ಇದು 12 ಅಡಿ ಉದ್ದವಾಗುವುದು. 400 ರಾತ್ತಲ ಭಾರದ ಸರಕನ್ನೂ ಅಂದರೆ 2 3 ಜನರನ್ನು ತುಂಬಿಸಬಹುದು. ನೋರ್ವೆ, ಕೆನಡಾ, ದ. ಅಮೇರಿಕಾ, ಟರ್ಕಿಗಳಲ್ಲಿ ಇದು ತುಂಬ ಜನಪ್ರಿಯವಾಗಿದೆ. ಇದರ ಯಾವ ಭಾಗಗಳೂ ಉಪ್ಪು ನೀರಿನಿಂದ ಕೊರೆಯಲ್ಪಡುವುದಿಲ್ಲ.

ಎಟಂ ಕೋಟೆ

ನೋರ್ವೇ ದೇಶದ ಮಧ್ಯ ಪ್ರದೇಶದಲ್ಲಿನ ದೊಡ್ಡ ಬಂಡೆ ಕಲ್ಲಿನ ಗುಡ್ಡದಿಂದ ಒಂದು ಮಿಲಿಯದ ಇನ್ನೂರು ಸಾವಿರ ಟನ್ ಭಾರದಷ್ಟು ಶಿಲೆಯನ್ನು ಕೊರೆದು ತೆಗೆದು ಅದರೊಳಗೆ ಶಕ್ತಿಯುಕ್ತವಾದ ವಿದ್ಯುತ್ ಉತ್ಪಾದಕ ಯಂತ್ರವಿರಿಸುವರು. ಈ ಶಿಲಾಗುಹೆಯು ಎಟಂ ಬೊಂಬಿನ ದಾಳಿಗೂ ಹಾಳಾಗುವುದಿಲ್ಲವಂತೆ. 200 ಅಡಿಗಳಷ್ಟು ಶಿಲಾ ಮುಚ್ಚಳವು ಗುಹೆಯನ್ನು ಸಂಪೂರ್ಣ ರಕ್ಷಿಸುವುದು.

ಅಡಿಗೆಗೆ ಮಣ್ಣಿನ ಪಾತ್ರೆಗಳು ಅತ್ಯುತ್ತಮ

ಲೋಹ ಪಾತ್ರೆಗಳಿಂದ ಆರೋಗ್ಯ ಹಾನಿ

ಅಡಿಗೆಗೆ ಎಲ್ಯೂಮಿನಿಯಮ್ ಪಾತ್ರೆಗಳನ್ನುಪಯೋಗಿಸುವುದರ ಗುಣಾವಗುಣಗಳನ್ನು ಚರ್ಚಿಸುವ ಒಂದು ಲೇಖನದಲ್ಲಿ ಮದ್ರಾಸ್ ಸರಕಾರದ ಆರೋಗ್ಯ ವಿಭಾಗದ ಅಧಿಕಾರಿಗಳಲ್ಲೊರ್ವರಾದ ಮಿ| ಕೆ. ವಿ. ಸುಂದರಂ ಅಯ್ಯರ್ ಎಂ. ಎಸ್. ಸಿ. ಎಫ್. ಆರ್. ಎ. ಸಿ. ಅವರು ಮಣ್ಣಿನ ಪಾತ್ರೆಗಳ ಕುರಿತು ಈ ಕೆಳಗಿನ ಗಣನೀಯ ಸಲಹೆಗಳನ್ನು ಕೊಡುತ್ತಾರೆ:

ಈಗ ಎಲ್ಯೂಮಿನಿಯಮ್ ಪಾತ್ರೆಗಳು ಹೆಚ್ಚೆಚ್ಚು ಖರ್ಚು ಆಗುವ ಪ್ರಮಾಣವನ್ನು ಗಣಿಸುವಾಗ ಅವುಗಳಿಂದ ಹೆಚ್ಚಿನವರಿಗೆ ಹಾನಿಯಿಲ್ಲವೆಂಬ ಸಂಗತಿ ಸ್ಪಷ್ಟವಾಗುತ್ತದೆ.

ಎಲ್ಯೂಮಿನಿಯಮ್ ಪಾತ್ರೆಗಳಲ್ಲಿ ಅಡಿಗೆ ಮಾಡುವುದರಿಂದ ಅತ್ಯಲ್ಪ ಸಂಖ್ಯೆಯ ಕೆಲವರಿಗೆ ಮಾತ್ರ ಅವರ ಶರೀರ ಪ್ರಕೃತಿಯ ವಿಶಿಷ್ಟ ರಚನೆಯಿಂದ ಸ್ವಲ್ಪ ಹಾನಿಯಾಗಬಹುದು. ಆದರೆ ಈ ಲೋಹದ ಪಾತ್ರೆಗಳನ್ನೂ ತಟ್ಟೆಗಳನ್ನೂ ಬೇಯಿಸಿದ ಆಹಾರಗಳಾದ ಅಕ್ಕಿ, ಹಾಲು ಪದಾರ್ಥಗಳನ್ನು ತೆಗೆದಿಡಲಿಕ್ಕೂ, ಒಯ್ಯಲಿಕ್ಕೂ, ಮತ್ತು ಊಟ ತಿಂಡಿಗಳನ್ನು ಬಡಿಸಲಿಕ್ಕೂ, ಇತರ ಪಾತ್ರೆಗಳಿಗೆ ಮುಚ್ಚಳಗಳಾಗಿಯೂ ಸುರಕ್ಷಿತವಾಗಿ ಉಪಯೋಗಿಸಬಹುದು.

ಎಲ್ಯೂಮಿನಿಯಮ್ ಪಾತ್ರೆಗಳಲ್ಲಿ ಕುದಿಸಿ ಇಡಲ್ಪಡುವ ಹಾಲು ತನ್ನ ಸ್ವಭಾವಿಕ ರುಚಿ ಮತ್ತು ಸತ್ವ ಗುಣಗಳನ್ನು ಕಳೆದುಕೊಳ್ಳುವುದಿಲ್ಲ. ತಾಮ್ರದ ಪಾತ್ರೆಗಳಲ್ಲಿ ಹಾಲನ್ನು ಕುದಿಸಿದರೆ ಅದರ ಸ್ವಾಧ ನಷ್ಟವಾಗುವುದಲ್ಲದೆ ಜೀವಾತುಗಳೂ ಹಾಳಾಗುವವು.

ಉಪ್ಪು, ಹುಳಿ, ಇಲ್ಲವೆ ಅದೆಂತಹ ಕ್ಷಾರದ ಪದಾರ್ಥಗಳನ್ನೇ ಆಗಲಿ, ಮಾತ್ರವಲ್ಲ ಎಲ್ಲಾ ತರದ ಅಡಿಗೆ ಕೆಲಸಕ್ಕೂ ನಮ್ಮ ಹಳ್ಳಿನಾಡಿನ ಜನತೆ ಉಪಯೋಗಿಸುವ ಮಣ್ಣಿನ ಪಾತ್ರೆಗಳಷ್ಟು ಉತ್ತಮವಾದವು ಬೇರೊಂದಿಲ್ಲ. ಇವುಗಳಿಂದ ಇತರ ಎಲ್ಲಾ ಪಾತ್ರೆಗಳಿಂದ ಹಾನಿ ಕಡಿಮೆ. ಇದರಲ್ಲಿಯೂ ಮೃದು ಕಡಿಕಲ್ಲಿನ ಪಾತ್ರೆಗಳಂತೂ ಉತ್ತಮ ಮಾತ್ರವಲ್ಲ ಧೀರ್ಘಕಾಲ ಬಾಳಿಕೆಯವೂ ಆಗಿವೆ. ಮಣ್ಣಿನ ಪಾತ್ರೆಗಳಲ್ಲಿ ಬೇಯಿಸಲ್ಪಡುವ ಆಹಾರವು ಅತ್ಯಂತ ಸುರಕ್ಷಿತವಾಗಿದೆ.

ಆರೋಗ್ಯ ಹಾನಿ

ನಾಜೂಕಿಗಾಗಿ ಉಪಯೋಗಿಸಲ್ಪಡುವ ಲೋಹಪಾತ್ರೆಯಿಂದಾಗುವ ಹಾನಿಗೆ ಅವನ್ನು ಕೊಳ್ಳುವವರು ಭಾಧ್ಯಸ್ಥರಾಗುವರು. ಅವರಿಗೆ ಆಹಾರ ವಸ್ತುಗಳ ಪ್ರಕೃತೀಯವಾದ ರುಚಿ ಮತ್ತು ಸತ್ವಗಳನ್ನನುಭವಿಸಲಿಕ್ಕಾಗುವುದಿಲ್ಲ. ಆರೋಗ್ಯಕ್ಕೆ ಹಾನಿಯೂ ಇದೆ.

ಒಂದು ಮಂಜು ಮುಸುಕಿದ ದಿನ ಪ್ರತಿಯೋರ್ವ ಲಂಡನ್ ನಗರವಾಸಿಯು 7½ ಮಿಲಿಯ ದೂಳಿನ ಕಣಗಳನ್ನು ತನ್ನ ಪ್ರತಿ ಉಸಿರಿನೊಡನೆ ಶ್ವಾಸಕೋಶದೊಳಗೆಳೆದುಕೊಳ್ಳುತ್ತಾನೆ.

*

ಹಿಟ್ಲರನು ತನ್ನಂತೆ ಕಾಣುವ ಅನೇಕ ವ್ಯಕ್ತಿಗಳನ್ನು ಇಟ್ಟುಕೊಂಡಿದ್ದನೆಂಬ ಸಂಗತಿಯು ತೀರ ಸುಳ್ಳೆಂದು ಈಗ ಕೈದಿನಲ್ಲಿರುವ ಓರ್ವ ನಾಜೀ ದುರೀಣನು ತಿಳಿಸಿದ್ದಾನೆ.

KANARA COMMERCIAL BANK LTD.

PUTTUR.

H. O. Puttur.] Estd. 1920 [Branch: Vittal.

All kinds of Banking Business transacted.

Deposits: Current, Savings, Cumulative Deposits are accepted.

Fixed Deposits for periods of 3 months and above up to 24 months are accepted.

ಜಾತಿಭೇಧ ಮತ್ತದರ ಘೋರ ಪರಿಣಾಮ

ಹಿಂದುಗಳು ಮಹಮ್ಮದನನ್ನು ಅವತಾರವೆಂದರೆ

ಇಂದಿನ ಕೋಮು ವೈಷಮ್ಯಕ್ಕೊಂದು ಪರಿಹಾರ

ಭಾರತವನ್ನು ತುಂಡರಿಸುವ ಕಾರ್ಯ ಪ್ರಾರಂಭವಾಗಿದೆ. ಆದರೆ ಭಾರತವು ನಿರಂತರ ವಿಭಾಗಿತವಾಗಿರಬೇಕೆ? ನಮ್ಮ ಮಾತೃಭೂಮಿಯ ಐಕ್ಯತೆಯನ್ನು ಪುನಃ ಸ್ಥಾಪಿಸಲಿಕ್ಕಾಗುವುದಿಲ್ಲವೆ? ಈ ಕೆಳಗಿನ ಲೇಖನದಲ್ಲಿ ಭರತನ್ ಕುಮಾರಪ್ಪಾ ಅವರು ಇಂದಿನ ಈ ಗಂಭೀರ ಸಮಸ್ಯೆಯನ್ನು ಚರ್ಚಿಸುತ್ತಾರೆ:

1947ನೇ ಇಸವಿಯು ಭಾರತದ ಇತಿಹಾಸದಲ್ಲಿ ಸಂಕೇತಾರ್ಥವುಳ್ಳದ್ದು. ಇದು ತನಕ ಸ್ವಾತಂತ್ರ್ಯ ಗಳಿಸುವುದು ಹೇಗೆಂಬ ವಿಚಾರವೇ ನಮ್ಮನ್ನು ಆವರಿಸಿತ್ತು. ಇಂದು ಅದನ್ನು ಹೊಂದಲಿರುವಾಗಲೇ ನಮ್ಮ ರಾಷ್ಟ್ರೀಯ ಐಕ್ಯವನ್ನು ಕಾಪಾಡುವ ಬಗೆಯೆಂತೆಂಬ ಸಮಸ್ಯೆಯು ನಮ್ಮನ್ನು ಕಾಡ ಹತ್ತಿದೆ. ಬ್ರಿಟಿಷ್ ಆಳ್ವಿಕೆಯು ಕೊನೆಗೊಳ್ಳುತ್ತಿರುವಾಗ ಜನಾಂಗವು ವಿಚ್ಛೇಧೀಕರಣದ ಕಲಹದಲ್ಲಿ ಮಗ್ನವಾಗಿದೆ. ಭಾರತದ ಅನೈಕ್ಯತೆಯಲ್ಲೇ ಬ್ರಿಟಿಷರ ಶಕ್ತಿ ಅಡಗಿದೆ. ಇಂದವರು ಬಹುಕಾಲದಿಂದ ಹಾರೈಸಿದ ಉದ್ದೇಶವು ಸಫಲವಾದಂತಾಗುವುದು.

ಬ್ರಿಟಿಷರು ತಮ್ಮ ಉದ್ದೇಶ ಸಾಧನೆಯಲ್ಲಿ ಯಶಸ್ವಿಯಾದರೂ ಅವರ ದುಷ್ಟ ಧೋರಣೆಗೆ ಬಲಿಬಿದ್ದ ನಮ್ಮನ್ನು ನಾವು ಹಿಂತಿಸಿಕೊಳ್ಳಬೇಕಾಗಿದೆ. ಎರಡೂ ಮುಖ್ಯ ಮತಸ್ಥರೂ ಇದಕ್ಕೆ ಹೊಣೆಗಾರರಿರುವರು. ಸದ್ಯಕ್ಕೆ ಹಿಂದೂಗಳ ದೋಷಗಳನ್ನೇ ನಾವು ವಿವೇಚಿಸೋಣ. ಜಿನ್ನರ ಮೇಲೆ ಜಾತಿಕಲಹದ ಆರೋಪಣೆ ಹೊರಿಸುವ ಮೊದಲು ಹಿಂದೂಗಳೇ ಅದಕ್ಕೆ ಎಷ್ಟರಮಟ್ಟಿಗೆ ಕಾರಣಭೂತರಾಗಿರುವರೆಂಬ ಸಂಗತಿಯನ್ನು ಪರ್ಯಾಲೋಚಿಸುವುದು ಅತ್ಯಾವಶ್ಯಕ.

ಇದಕ್ಕಾಗಿ ನಾವು ಭಾರತವು ತನ್ನ ಸುಸಂಸ್ಕೃತಿಯ ಶಿಖರಕ್ಕೆ ತಲ್ಪಿದ ಕಾಲದ ಇತಿಹಾಸದ ಕಡೆ ಹೊರಳಬೇಕು. ಆಗ ಭಾರತ ಸಂಸ್ಕೃತಿಯು ಎಲ್ಲಾ ಪಾಶ್ಚಾತ್ಯ ಸಂಸ್ಕೃತಿಗಳನ್ನು ತನ್ನೊಳಗೆ ಜೀರ್ಣಿಸಿಕೊಳ್ಳುವಷ್ಟು ಶಕ್ತಿಯುಕ್ತವಾಗಿತ್ತು. ಆಗಿನ ನಮ್ಮ ಸಂಸ್ಕೃತಿಯ ವಿಧಾನಗಳನ್ನು ಸಂತರದ ಅದರ ನಿರ್ಬಲತೆಯೊಡನೆ ನಾವು ಹೋಲಿಸಬೇಕು. ಇತರ ಸಂಸ್ಕೃತಿಗಳನ್ನು ಸ್ವೀಕರಿಸಿ ತನ್ನೊಳಗೆ ವಿಲೀನಮಾಡಿಕೊಳ್ಳುವ ಈ ಶಕ್ತಿಯು ಭಾರತ ಸಂಸ್ಕೃತಿಯಲ್ಲಿ ಹೇಗೆ ಕುಂದಿತೆಂಬ ಸಂಗತಿಯು ಆಗ ನಮಗೆ ಹೊಳೆಯುವುದು.

ಆರ್ಯರು ಪ್ರಥಮತಃ ಭಾರತದಲ್ಲಿ ಕಾಲಿರಿಸಿದಾಗ ಇಲ್ಲಿ ಅನಾರ್ಯ ಮೂಲ ನಿವಾಸಿಗಳು ಪ್ರಾಚೀನ ಕಾಲದಿಂದಲೂ ನೆಲೆಯೂರಿದ್ದನ್ನು ಕಂಡರು. ಕೂಡಲೇ ಆರ್ಯರು ಇಲ್ಲಿಯ ಅನಾರ್ಯರೊಂದಿಗೆ ಬೆರಸಹತ್ತಿದರು. ಅವರೊಳಗೆ ವಿವಾಹ ಸಂಬಂಧ ಮಾಡತೊಡಗಿ, ಅವರ ಆಚಾರ ವಿಚಾರ, ರೂಢಿ, ಸಾಂಪ್ರದಾಯಗಳನ್ನು ಅನುಸರಿಸಿದರು. ಈಗ ಯಾವುದು ಆರ್ಯ ಮತ್ತು ಯಾವುದು ಅನಾರ್ಯವೆಂಬುದನ್ನು ನಿರ್ದಿಷ್ಟವಾಗಿ ವಿಂಗಡಿಸಲಿಕ್ಕಾಗದ ರೀತಿಯಲ್ಲಿ ಈ ಮಿಶ್ರಣವು ಸಂಘಟಿಸಿದೆ. ಆರ್ಯರು ಇಲ್ಲಿಯ ಜನತೆಯು ಪೂಜಿಸಿಕೊಂಡು ಬಂದ ದೇವರುಗಳನ್ನು ತಮ್ಮದನ್ನಾಗಿ ಸ್ವೀಕರಿಸಿದರು. ಅವುಗಳ ಸಂಬಂಧವಾದ ಮತೀಯ ವಿಚಾರ ಪುರಾಣ ಕತೆಗಳನ್ನೂ ಒಪ್ಪಿಕೊಂಡು ತಮ್ಮ ಸಾಹಿತ್ಯದಲ್ಲಿ ಸೇರಿಸಿದರು. ಇಲ್ಲಿಗೆ ಬೆರೆತವು ಪರಿಪೂರ್ಣವಾಗಿತ್ತು.

ಈ ಬೆರೆತದ ಪರಿಣಾಮವಾಗಿ ಆರ್ಯರ ಮತೀಯ ವಿಚಾರಗಳೂ, ತತ್ವಜ್ಞಾನವೂ ಸಾಹಿತ್ಯವೂ ಅಮೋಘ ವಿಶಾಲತೆಯನ್ನು ತಳೆಯಿತು. ಆ ಕಾಲದಲ್ಲಿ ಜಾತೀಯ ವಿಭೇಧಗಳಿರಲಿಲ್ಲ. ಈಗಿನಂತೆ ಶಾಸ್ತ್ರಾಚಾರ ವಿಧಿಗಳೂ ಇರಲಿಲ್ಲ. ಜೀವನವು ಸರಳವಾಗಿದ್ದು ಜನರು ಯಾವೊಂದು ಉಚ್ಚ ನೀಚ ಭಾವನೆಗಳಿಲ್ಲದೆ ಒಬ್ಬರೊಡನೊಬ್ಬರು ಸ್ವೇಚ್ಛೆಯಾಗಿ ಬೆರೆಯುತ್ತಿದ್ದರು.

ಉಪನಿಷತ್ತುಗಳಲ್ಲಿ ಆಗಿನ ಕಾಲದ ಈ ವಿಶಾಲ ವಿಶ್ವ ಬಾಂಧವ್ಯ ಭಾವನೆಗಳು ನಿರೂಪಿಸಲ್ಪಟ್ಟಿವೆ. ಯಾವ ಭೇಧಾಭೇದವಿಲ್ಲದೆ ಎಲ್ಲರೂ ಒಂದೇಯಾಗಿದ್ದರು. ಬ್ರಹ್ಮ ಸಾಕ್ಷಾತ್ಕಾರವು ಬ್ರಾಹ್ಮಣನಲ್ಲಿ ಮಾತ್ರವಲ್ಲ, ಚಾಂಡಾಲನಲ್ಲಿಯೂ, ಬಾಹ್ಯೇತರರಲ್ಲೂ ಪ್ರಾಣಿಗಳಲ್ಲಿಯೂ ಮತ್ತು ಅಚೇತನ ಪ್ರಕೃತಿಯಲ್ಲಿ ಇದೆ ಎಂದು ಆಗಿನ ಭಾವನೆಯಿತ್ತು. ಆದುದರಿಂದ ಎಲ್ಲರೂ, ಎಲ್ಲವೂ ಪವಿತ್ರವೆನಿಸಲ್ಪಟ್ಟು ಯಾವುದೂ ಬಹಿಷ್ಕಾರಾರ್ಹವಾಗಿರಲಿಲ್ಲ. ಈ ಭಾವನೆಯೇ ಭಾರತದ ತಾಳ್ಮೆ, ಸಹಿಷ್ಣುತೆ ಮತ್ತು ಮಿಲನ ಗುಣಗಳ ಶಕ್ತಿಮೂಲವಾಗಿತ್ತು. ಇತಿಹಾಸದ ಈ ಭಾವನೆಗಳನ್ನೇ ಭಾರತೀಯರು ಅನುಸರಿಸಿ ಬಂದಿದ್ದರೆ ಇಂದು ಈ ದೇಶವು ರಾಜಕೀಯ ಸಮಾಧಾನಗಳಿಗೆ ಜಗತ್ತಿಗೇ ಬಲಿಷ್ಠ ಮಾರ್ಗದರ್ಶಕವಾಗುತಿತ್ತು.

ದುರಾದೃಷ್ಟವಶಾತ್ ಈ ಉನ್ನತ ವಿಶಾಲ ಧರ್ಮದ ಮನೋಭಾವವು ಕ್ರಮೇಣ ಸಂಕುಚಿತ ಜಾತೀಯ ಅನುದಾರಗಳಿಗೂ ವೈಷಮ್ಯಗಳಿಗೂ ರೂಪಾಂತರ ಹೊಂದಿತು. ಒಂದು ಕಾಲದಲ್ಲಿ ಕೇವಲ [illegible] ಕೆಲಸಗಳನ್ನು ತಿಳಿಸುವ [illegible] ಕ್ರಮ ಈಗ ಯಾವ [illegible] ಇಲ್ಲದ ಜನ್ಮದಿಂದ ಜಾತಿ ಎಂಬ ಭಾವನೆಗೆ ಡೆಕೊಟ್ಟಿತು.

ವಿವೇಕವಂತರೆನಿಸುವ ಬ್ರಾಹ್ಮಣ ವರ್ಗದವರು ಈ ತಪ್ಪು ಭಾವನೆಯನ್ನು ತಡೆಯಲು ಯತ್ನಿಸಬೇಕಿತ್ತು. ಆದರೆ ಕ್ರಮೇಣ ಅವರೇ ಅದನ್ನು ಸರಿಯೆನ್ನತೊಡಗಿದರು. ತನಗೆ ದೈವದತ್ತವಾಗಿರುವುವೆಂಬ ಅಧಿಕಾರಗಳಿಂದ ಅವನು ಜಾತೀಯ ಬಹಿಷ್ಕಾರದ ಕಟ್ಟುಕಟ್ಟಳೆಗಳನ್ನು ಇನ್ನಷ್ಟು ಬಿಗಿಮಾಡಿದನು. ಮಂತ್ರ ವಿಧಿಗಳನ್ನು ಕಲಿಯುವ ಈ ಉದ್ಯೋಗವನ್ನು ಅವರು ಹೊಟ್ಟೆಹೊರಕೊಳ್ಳುವ ಸಾಧನವಾಗಿ ಮಾಡಿ ಇತರ ವರ್ಗದವರು ಆ ಉದ್ಯೋಗವನ್ನು ಕಲಿಯದಂತೆ ದೂರವಿರಿಸಿದನು. ಇಲ್ಲಿಂದ ವ್ಯತ್ಯಾಸಗಳಿಗೆ ಪ್ರಾರಂಭವಾಯಿತು. ಜಾತಿಭೇದದ ಝರಿಯು ನಿರಾತಂಕವಾಗಿ ಹರಿಯಹತ್ತಿತು. ಎಲ್ಲಾ ಜಾತಿಗಳೂ ಇತರರಿಂದ ದೂರವಿರಲು ಪ್ರಯತ್ನಿಸಿದುವು.

ಆದುದರಿಂದ ಜಾತಿ ನಿಯಮಕ್ಕನುಗುಣವಾಗಿ ಹುಟ್ಟಿದವನು ಆ ಜಾತಿಯಲ್ಲಿರುವಂತಾಯಿತು. ಹೀಗೆ ಜಾತಿ ಜಾತಿಗಳೊಳಗಿನ ಪ್ರತ್ಯೇಕತೆ ಹೆಚ್ಚೆಚ್ಚು ಬಿಗಿಯಾಯಿತು. ಪ್ರತಿ ಜಾತಿಯವರು ತಾವು ಶ್ರೇಷ್ಠರೆಂಬ ಕಲ್ಪನೆಯನ್ನು ಮಾಡತೊಡಗಿದರು. ಈ ಹೆಮ್ಮೆಯು ದರ್ಪಕ್ಕೆಡೆಕೊಟ್ಟಿತು. ತಮಗಿಂತ ಕೆಳಗಿನವರನ್ನು ತುಚ್ಛೀಕರಿಸುವುದು ಸಾಮಾನ್ಯ ರೂಢಿಯಾಯಿತು. ಈ ಜಾತಿ ಏಣಿಯ ಕೆಳಗಿನ ಮೆಟ್ಟಿಲಲ್ಲಿ ಜಾತಿಬಹಿಷ್ಕಾರದ ಪರಿಜನರು ಇದ್ದರು. ಇವರ ನೆರಳು ಕೂಡ ಮೇಲ್ಜಾತಿಯವರನ್ನು ಅಶುದ್ಧಗೊಳಿಸುತಿತ್ತು. ಮಾನವ ಭಾವನೆಯು ಇದಕ್ಕಿಂತ ಹೆಚ್ಚಿನ ಹುಚ್ಚುತನಕ್ಕೆ ಮುಟ್ಟೀತೆ? ಉಪನಿಷತ್ತುಗಳ ತತ್ವಜ್ಞಾನ ಎಲ್ಲರೊಳ ಬ್ರಹ್ಮ ಕಾಣಗೊಡದ ಸಂದಿತಿತ್ತು.

ಮುಸಲ್ಮಾನರು ಈ ದೇಶಕ್ಕೆ ಬಂದಾಗ ಹಿಂದೂ ಸಮಾಜದ ಪರಿಸ್ಥಿತಿ ಹೀಗಿತ್ತು. [illegible] ಮುಸಲ್ಮಾನರ [illegible] ಸಮಾಜದಲ್ಲಿ [illegible] ಇರಲಿಲ್ಲ. ಹಿಂದಿನ ತಾಳ್ಮೆ, [illegible] ಸಂಪೂರ್ಣ [illegible] ಮುಸಲ್ಮಾನರು ಕೂಡಾ ಹಿಂದೂಗಳ ಕ್ರೂರ ರೀತಿಯಲ್ಲಿ ವರ್ತಿಸಿ ಅವರ ಮತೀಯ ಭಾವನೆಗಳನ್ನು ಕಣಕಿದರು. ಇದರಿಂದ ಮುಸಲ್ಮಾನರ ಮೇಲಿನ ತಿರಸ್ಕಾರ ಭಾವನೆ ಹೆಚ್ಚುವಂತಾಯಿತು. ಆದರೂ ನಂತರದ ಶಾಂತಿ ಕಾಲಗಳಲ್ಲಿ ಹಿಂದೂ ಮುಸಲ್ಮಾನರು ಪರಸ್ಪರ ನೆಮ್ಮದಿಯಲ್ಲಿ ಹಳ್ಳಿ ಪಟ್ಟಣಗಳಲ್ಲಿ ಹತ್ತಿರಹತ್ತಿರ ವಾಸಿಸತೊಡಗಿದರು. ಹೊಲಗಳಲ್ಲಿ ಬೆರೆತು ಕೆಲಸಮಾಡತೊಡಗಿದರು. ಕ್ರಮೇಣ ಅವರು ಪರಸ್ಪರದ ಹಬ್ಬ ಉತ್ಸವಗಳನ್ನು ಆಚರಿಸತೊಡಗಿದರು. ಕೆಲವು ಶತಮಾನಗಳ ತನಕ ಈ ಅನ್ಯೋನ್ಯ ಆಚಾರ ವಿಚಾರಗಳು ನಡೆಯುತ್ತ ಬಂದುವು.

ಇಷ್ಟಾದರೂ ಮುಸಲ್ಮಾನನು ಹಿಂದೂ ಕ್ಷೇತ್ರದ ಹೊರಗಡೆಯೇ ಉಳಿದನೆಂಬ ಸಂಗತಿಯು ಗಣನೀಯ. ಇತರರೊಡನೆ ಬೆರೆಯಲು ಬಹಿಷ್ಕರಿಸುವ ಮುಸಲ್ಮಾನರ ಮತಸೂತ್ರವೂ ಇದಕ್ಕೊಂದು ಕಾರಣ. ಆದರೆ ಹಿಂದೂ ಸಂಸ್ಕೃತಿಯಲ್ಲಿ ಆ ಹಿಂದಿನ ತಾಳ್ಮೆ ಮಿಲನದ ಶಕ್ತಿಗಳಿರುತ್ತಿದ್ದರೆ ಅದೆಂತಹ ಕಡು ಜಾತ್ಯಾಂಧತೆಯ ಮುಸಲ್ಮಾನರನ್ನಾದರೂ ಅದು ತನ್ನೊಳಗೆ ಪೋಣಿಸಿಕೊಳ್ಳುತಿತ್ತು. 'ಮಹಮ್ಮದನನ್ನು ತನ್ನ ಅವತಾರಗಳಲ್ಲೊಂದಾಗಿ ಅದು ಒಪ್ಪುತಿತ್ತು. ಆದರೆ ಆ ಕಾರ್ಯದಲ್ಲಿ ಹಿಂದೂ ಸಂಸ್ಕೃತಿಯು ಅಯಶಸ್ವಿಯಾಯಿತು. ಯಾಕೆ? ಅದರ ಕತ್ತನ್ನು ಬಿಗಿದಿದ್ದ ಜಾತೀಯ ವಿಭೇದವೇ ಇದರ ಕಾರಣ.

ಇಂದು ನಾವೇನು ನೋಡುತ್ತಿದ್ದೇವೆ. ಅದೆಂತಹ ಬಡ ಬ್ರಾಹ್ಮಣನೇ ಆಗಲಿ, 'ಅದೆಷ್ಟು ಶ್ರೀಮಂತ ಮುಸಲ್ಮಾನನನ್ನು ಅವನು ತನ್ನ ಮನೆಯೊಳಗೆ ಪ್ರವೇಶಿಸಲಾಗಲಿ, ತನ್ನೊಡನೆ ಕೂತು ಉಣ್ಣಲಿಕ್ಕಾಗಲಿ ಬಿಡಲಾರ. ಅದೇ ಬ್ರಾಹ್ಮಣ ಹಸಿವು ತೃಷೆಗಳಿಂದ ಪ್ರಾಣವೇ ಹೋಗುತ್ತದೆಂದರೂ ಮುಸಲ್ಮಾನನೊಬ್ಬನಲ್ಲಿ ಉಣ್ಣಲೂ ಕುಡಿಯಲೂ ಇಷ್ಟಪಡುವುದಿಲ್ಲ. ಸ್ವಾಭಿಮಾನವುಳ್ಳ ಯಾವ ವ್ಯಕ್ತಿ ಇಂತಹ ಸ್ವಶ್ರೇಷ್ಠ ಭಾವವನ್ನು ತಾಳುವನು? ಇಂದು ಹಿಂದೂಗಳಲ್ಲಿ ಒರ್ವ ಮುಸಲ್ಮಾನ ನೀರು ತೆಗೆದುಕೊಳ್ಳುವುದಿಲ್ಲವೆಂದರೆ ಅದು ಹಿಂದಿನ ಪ್ರತಿಕ್ರಿಯೆಯ ಪರಿಣಾಮವಲ್ಲವೆ? ದಕ್ಷಿಣ ಆಫ್ರಿಕದ ಬಿಳಿಯರು ಭಾರತೀಯರನ್ನು ಹತ್ತಿರ ಸೇರಿಸುವುದಿಲ್ಲವೆಂದು ಬೊಂಬಾಯಿಯ ತಾಜಮಹಲ್ ಹೊಟೇಲಿನಲ್ಲಿ ದಕ್ಷಿಣ ಆಫ್ರಿಕದ ಬಿಳಿಯರನ್ನು ಬಹಿಷ್ಕರಿಸಲಾಗಿದ್ದುದು ತಾರ್ಕಿಕ ಪ್ರತಿಕ್ರಿಯೆ.

ಇಂದು ನಾವು ಜಾತೀಯ ಭೇದಗಳನ್ನು ಕಟ್ಟಿಕೊಂಡು ಭಾರತದ ಐಕ್ಯತೆಯನ್ನು ಬಲಪಡಿಸಲಿಕ್ಕಾಗುವುದಿಲ್ಲ. ಹಿಂದೂ ಆಚಾರ ವಿಚಾರಗಳಲ್ಲಿ ಕ್ರಾಂತಿಯುಂಟಾಗಬೇಕಾಗಿದೆ. ಹಿಂದಿನ ಆ ವಿಶ್ವ ವಿಶಾಲ ಭಾವನೆಗಳು ನಮ್ಮಲ್ಲಿ ಇಂದು ಪುನಃ ಅರಳಿಸಿಕೊಳ್ಳಬೇಕಾಗಿದೆ. ಆಗಲೇ ನಿಜವಾದ ಐಕ್ಯವು ಸಾಧಿಸುವುದು.

ಭಾರತವನ್ನು ಮುಸ್ಲಿಮರೇ ಆಳುವರು

ಒರ್ವ ಲೀಗ್ ದುರೀಣರ ಜಂಬ

"ಈಗ ಮುಸ್ಲಿಮರು ತಮಗೆ ಕೊಟ್ಟದ್ದನ್ನು ಸ್ವೀಕರಿಸುವರು. ಆದರೆ ಕ್ರಮೇಣ ಅವರು ಸಂಪೂರ್ಣ ಪಾಕಿಸ್ಥಾನದ ಪ್ರದೇಶಗಳನ್ನು ಪಡೆಯುವರು. ಹಿಂದಿನ ಮೊಗಲ್ ಸಾಮ್ರಾಜ್ಯದ ಪ್ರದೇಶಗಳೆಲ್ಲವನ್ನೂ ತಮಗೆ ಕೊಡಬೇಕೆಂದೂ ಅವರು ಕೇಳುವರು" ಹೀಗೆಂದು ಸಿಂಧದ ಕಂದಾಯ ಮಂತ್ರಿಗಳಾದ ಅಬ್ದುಸ್ ಸತ್ತಾರ್ ಪಿರ್ಜಾಡಾ ಅವರು ಒಂದು ಭಾಷಣದಲ್ಲಿ ತಿಳಿಸಿದರು.

ಮೀರ್ ಜಾಫರ್ ಜಾಮಲ್ ಎಂಬ ಲೀಗ್ ಶಾಸನ ಸಭಾ ಸದಸ್ಯರು ಹೀಗೆಂದರು.

"ನಾವೀಗ ಪ್ರತ್ಯಕ್ಷ ಪಾಕಿಸ್ಥಾನವನ್ನು ಪಡೆದಿದ್ದೇವೆ. ಈಗ ನಾವು ಹಿಂದೂಸ್ಥಾನವನ್ನೂ ಪಡೆಯಲು ಮುಂದುವರಿಯುವೆವು. ಆಗ ಇಡೀ ಭಾರತವು ನಮ್ಮ ಆಳ್ವಿಕೆಗೊಳಪಡುವುದು."

ಮೃದುವಾದ ಚರ್ಮವನ್ನು ಬಹು ಜಾಗ್ರತೆಯಿಂದ ಕಾಪಾಡಬೇಕು

ಕುಟಿಕೂರಾ ಸಾಬೂನು ಮಗುವಿನ ಮೃದುಚರ್ಮವನ್ನು ರಕ್ಷಿಸಲಿ!



ಕುಟಿಕೂರಾ ಸೋಪು

CUTICURA SOAP

ಹೊಸಸುದ್ದಿ ಸಂಗ್ರಹ

ನಾಟ್ಟಾದ ಭೊವಾನಿಪೋಲಾ ಎಂಬಲ್ಲಿ 40 ವರ್ಷ ಪ್ರಾಯದ ಒರ್ವ ಹೆಂಗುಸು ಪುರುಷ ಲಕ್ಷಣಗಳನ್ನು ಹೊಂದುತಿದ್ದಾಳೆಂತೆ. ಅನೇಕ ಮಕ್ಕಳಾಗಿರುವ ಈ ಹೆಂಗುಸಲ್ಲಿ 13 ವರ್ಷಗಳ ಹಿಂದೆ ಈ ಲಕ್ಷಣಗಳು ತೋರಲಾರಂಭಿಸಿದುವು. ಈಗ ಆ ಕ್ರಿಯೆಯು ಸಂಪೂರ್ಣಗೊಂಡಿದೆಯಾಗಿ ಬಿಹಾರದ ಒರ್ವ ಪ್ರಖ್ಯಾತ-ಡಾಕ್ಟರರು ತಿಳಿಸುತ್ತಾರೆ.

★

ಕಣ್ಣು ಮುಚ್ಚಿದವನೊಬ್ಬನು ನೆರವಾಗಿ ನಡೆಯಲಾರ.

★

ಘೂರ್ಕಾ ಸ್ತ್ರೀಯರ ಒಂದು ಪೋಲೀಸ್ ಪೌಜನ್ನು ಕಾಶ್ಮೀರ ಸಂಸ್ಥಾನ ಸರಕಾರದವರು ಸಿದ್ಧಗೊಳಿಸುವರಂತೆ.

★

ಸರ್ಪ ಕಡಿತವನ್ನು ಗುಣಪಡಿಸಬಲ್ಲವರಾರಾದರೂ ಪ್ರಯೋಗ ನಡೆಸಲೆಂದು ಸಂಯುಕ್ತ ಪ್ರಾಂತ್ಯದ ನೆತ್ರ ಕೋನಾ ಎಂಬಲ್ಲಿ ಸರ್ಪ ಕಡಿತದಿಂದ ಮೃತಪಟ್ಟ ಮೂವರ ಶವಗಳನ್ನು ಹರಿಯುವ ನದಿಯೊಂದಕ್ಕೆ ಬಿಸಾಡಿಬಿಟ್ಟಿರುವರಂತೆ.

★

ಗೋಲಿ ಆಟವು ಅತೀ ಪ್ರಾಚೀನ ಕಾಲದಿಂದ ಆಡಲ್ಪಡುತಿತ್ತು. ಅದು ಗ್ರೀಕರ ಪ್ರೀತಿಯ ಆಟಗಳಲ್ಲೊಂದಾಗಿದ್ದು, ಇಂದಿನ ಬಿಲಿಯಾರ್ಡ್ಸ್ ಆಟವು ಗೋಲಿ ಆಟದ ರೂಪಾಂತರವಾಗಿದೆ.

★

ಜಗತ್ತಿನ ಚಾ ಸೊಪ್ಪಿನ ಉತ್ಪತ್ತಿಯ ಅರ್ಧಾಂಶವನ್ನು ಬ್ರಿಟನ್ನು ತರಿಸಿಕೊಳ್ಳುತ್ತದೆ.

★

ನಿಜಾಮರು ಬಲಿಷ್ಠ ಸೈನ್ಯ ಸಂಗ್ರಹಿಸುತ್ತಿರುವರು

ಒಂದು ಹಳೆ ಭವಿಷ್ಯ ನಿಜವಾಯಿತು

ಸಿನೇಮಾ ಮಂದಿರಗಳಲ್ಲಿ ಜಾಹಿರಾತು

ನಿಜಾಮ ಸರಕಾರವು ಸಂಸ್ಥಾನದ ಸೈನ್ಯಕ್ಕೆ ಭರತಿ ಮಾಡಲು ಜನರನ್ನು ಸೇರಿಸಲು ಪ್ರಚಾರ ಪ್ರಾರಂಭಿಸಿದೆಯೆಂದು ಇಂಡಿಪೆಂಡೆಂಟ್ ಪತ್ರಿಕೆಯ ಒಂದು ವರದಿ ತಿಳಿಸುತ್ತದೆ.

ಸಾರ್ವಜನಿಕ ಸ್ಥಳಗಳಲ್ಲಿ ಮಾರ್ಕೆಟು ಸ್ಥಳಗಳಲ್ಲಿ ಸಿನೇಮಾ ನಾಟಕ ಮಂದಿರಗಳಲ್ಲಿ ನಿಂತು ಸೈನ್ಯ ಖಾತೆಯ ಅಧಿಕಾರಿಗಳು ಅಲ್ಲಿ ಸೇರುವ ಜನತೆಗೆ ಸೈನ್ಯಕ್ಕೆ ಸೇರುವಂತೆ ಪ್ರೋತ್ಸಾಹದ ಭಾಷಣ ಕೊಡುತ್ತಿರುವರು. ಇದೇನು ಮುಂದಿನ ವಿಶಾದಾಂತದ ಪೂರ್ವ ಪೀಠಿಕೆಯೆ? ಎಂದು ಪ್ರಶ್ನಿಸುತ್ತ ಆ ಪತ್ರಿಕೆಯ ಬಾತ್ಮಿದಾರರು ಈ ಸಂಬಂಧದ ಒಂದು ಹಳೆ ಕತೆಯನ್ನು ತಿಳಿಸುತ್ತಾರೆ:—

ಫಕೀರನ ಭವಿಷ್ಯ ವಾಣಿ

ಒಂದೊಂದು ಸಲ ನಿಜಾಮ ಶಾಹಿಯ ಮೂಲಕ ಸ್ಥಾಪಕನಾದ ಸುಲ್ತಾನನು ಡಿಲ್ಲಿಯಿಂದ ದಕ್ಷಿಣದ ಕಡೆ ಪ್ರಯಾಣ ಬರುತಿದ್ದಾಗ ಅವನಿಗೊಬ್ಬ ಫಕೀರನ ಭೇಟಿಯಾಯಿತು. ಫಕೀರನು ಸುಲ್ತಾನನಿಗೆ ದೋಸೆಗಳನ್ನು ತಿನ್ನು ಎಂದನಂತೆ. ಸುಲ್ತಾನನು ಹನ್ನೊಂದನ್ನು ಮಾತ್ರ ತಿಂದನಂದೆ. ಆಗ ಫಕೀರನು "ನಿನ್ನ ವಂಶದ ಆಳ್ವಿಕೆಯು ಹನ್ನೊಂದು ತಲಾಂತರಗಳ ವರೆಗೆ ಮಾತ್ರ ಬಾಳುವುದು" ಎಂದನಂತೆ.

ಈಗಿನ ನಿಜಾಮರು ಹನ್ನೊಂದನೇ ತಲೆಯವರಂತೆ. ಆದುದರಿಂದ ಫಕೀರನ ಭವಿಷ್ಯದ ಅವಧಿಯು ಹತ್ತಿರ ಬಂದ ಹಾಗಿದೆ. ಕೆಲವು ಜೋತಿಷ್ಯರು ಕೂಡಾ ಈಗಿನ ನಿಜಾಮರೇ ಕೊನೆಯವರೆಂದೂ ತಿಳಿಸಿರುವರಂತೆ.

ಶಾಂತಿ ಕಾಲದಲ್ಲಿ ಸೈನ್ಯ ಭರತಿ ನಡೆಯುವುದೆಂದರೆ ಏನಾದರೊಂದು ದುರುದ್ದೇಶವಿಲ್ಲದಿಲ್ಲ. ಕೆಟ್ಟ ಕಾಲದ ಪೂರ್ವ ಸೂಚನೆಯಿದು. ಹೆಚ್ಚಿನವರೆಲ್ಲರೂ ಇದನ್ನು ಖಂಡಿಸದಿರರು.

ಜಿನ್ನರನ್ನು ತಡೆಯಲು ಮರಾಟೆ ಸೈನ್ಯ

ಸುಭಾಸ್ ಸೇನಾಪತಿಯೊಬ್ಬರ ಭವಿಷ್ಯ ಯೋಜನೆ

'ಹಿಂದೂಸ್ಥಾನವನ್ನು ಆಕ್ರಮಿಸುವ ಜಿನ್ನರ ಯೋಜನೆಯನ್ನು ಮಣ್ಣುಮುಕ್ಕಿಸಲು' ಸುಭಾಸ್ ಸೈನ್ಯಾಪತಿಗಳಲ್ಲೊಬ್ಬರಾಗಿರುವ ಮೇಜರ್ ಜನರಲ್ ಬೊನಸ್ಲೆ ಅವರು 2 ಲಕ್ಷ ಮರಾಟರ ಒಂದು ಸೈನ್ಯವನ್ನು ತರಬೇತಿಗೊಳಿಸಲು ನಿರ್ಧರಿಸಿರುವರು.

ಬೊಂಬಾಯಿಯ ಭಾರತ ಜ್ಯೋತಿ ಪತ್ರಿಕೆಯ ಬಾತ್ಮಿದಾರರೊಡನೆ ಬೊನಸ್ಲೆಯವರು ತಮ್ಮೀ ಉದ್ದೇಶವನ್ನು ಹೊರಗೆಡವಿದರು. ಅವರ ಅಭಿಪ್ರಾಯ ಹೀಗಿದೆ:

ಜಿನ್ನರು ತಮಗೆ ಈಗ ಸಿಕ್ಕಿದ್ದರಿಂದಲೇ ತೃಪ್ತಿಪಡುವುದಿಲ್ಲ. ಪಂಜಾಬ ಬಂಗಾಳಗಳೊಳಗೆ ತಾವು ಕಳಕೊಂಡ ಭಾಗಗಳನ್ನವರು ಪುನಃ ಸಂಪಾದಿಸಲು ಸಾಧಿಸಬಹುದು. ಇತ್ತ ದಕ್ಷಿಣದಲ್ಲಿ ಹೈದರಾಬಾದು ಅವರಿಗೆ ಉತ್ತಮ ಸಹಾಯಕವಾಗಬಹುದು. ಅಲ್ಲಿ ಸುಸಜ್ಜಿತ ಸೈನ್ಯವೂ ಇದೆ. ಹೈದರಾಬಾದು ಕೂಡ ಒಂದು ಕಡೆಯಿಂದ ಅಂಧ್ರದ ಮೇಲೂ ಇನ್ನೊಂದು ಕಡೆಯಿಂದ ಬೊಂಬಾಯಿ ಮೇಲೂ ಬೀಳಲು ಹವಣಿಸಬಹುದು. ಇದೆಲ್ಲಾ ಸಂಭವಿಸದಿರಬಹುದು. ಆದರೆ ಆ ಕುರಿತು ಜಾಗರೂಕತೆ ವಹಿಸುವುದು ಅಪ್ರಸ್ತುತವೆನಿಸದು.

ಮರಾಟರ ಒಂದು ಸೈನ್ಯವನ್ನು ತಯಾರಿಸುವುದೇ ಉತ್ತಮ ಎಚ್ಚರಿಕೆ. ನಮ್ಮೊಳಗಿನವರೇ ರಾಜ್ಯ ವಿಸ್ತರೀಕರಣಕ್ಕೆ ಕೈಹಾಕುವ ಸಂದರ್ಭದಲ್ಲಿ ಈ ಸೈನ್ಯವು ದೇಶಕ್ಕೆ ಒಳ್ಳೇ ಸಹಾಯ ಕೊಡುವುದು. ಒಳ್ಳೇ ರಕ್ಷಣೆಯನ್ನಿಟ್ಟುಕೊಂಡು ಅದರ ಕುರಿತು ವಿರೋಧಿಗಳಿಗೆ ಮುಂಜಾಗ್ರತೆ ಕೊಡುವುದು ಶಾಂತಿ ಶ್ರೇಯಸ್ಸುಗಳನ್ನು ಸಾಧಿಸುವ ಒಳ್ಳೇ ಉಪಾಯ.

ಮರಾಟರೆ ಏಕೆ?

ಹಿಂದೂಸ್ಥಾನದ ಭದ್ರತೆಗೆ ಮರಾಟರೇ ಏಕೆ ಇತರರೂ ಸಂತೋಷದಿಂದ ಸೇರುವರೆಂಬುದು ನಿಜ. ಆದರೆ ನಾವೀಗಲೇ ಸಿದ್ಧತೆ ನಡೆಸದಿದ್ದರೆ ಮುಂದೆ ಹಿಂದೂಸ್ಥಾನದೊಳಗಿನ ಜನರೇ ತಮ್ಮ ಜೀವ ರಕ್ಷಣೆಗೆ ಬಲಿಷ್ಠರಾದ ಶತ್ರುಗಳ ಪುರೆಹೋಗಲೂಬಹುದು. ಇದು ಸಹಜವಾದೊಂದು ಮಾನವ ನಿರ್ಬಲತೆ. ಆದುದರಿಂದ ಈಗಲೇ ನಾವು ಶಕ್ತಿವಂತರಾಗಿರಲು ಪ್ರಯತ್ನಗಳನ್ನು ಕೈಕೊಳ್ಳಬೇಕೆಂದು ನಾವು ಪ್ರಚಾರ ಮಾಡುತ್ತಿರುವುದು. ಆಗ ಎಲ್ಲರೂ ನಮ್ಮ ಧ್ವಜದಡಿಯಲ್ಲೀ ಸೇರುವರು.

ಮುಂದಿನ ಯುದ್ಧಕ್ಕೆ ತಯಾರಿಯೊ!

ಹಂಗೇರಿಯಲ್ಲಿ ಮುಖ್ಯ ಮಂತ್ರಿ ನಾಗಿಯವರ ಒತ್ತಾಯದ ರಾಜೀನಾಮೆಯಿಂದ ಹಿಂದಿನ ವಾರ ಪ್ರಾರಂಭವಾದ ಘಟನೆಗಳು ಅಮೇರಿಕನ್ ಅಧ್ಯಕ್ಷ ಟ್ರೂಮನ್ನರು ಜಾಗತಿಕ ಕಮ್ಯುನಿಸ್ಟರನ್ನು ತಡೆಯಲು ಕೈಕೊಂಡ ಹೊಸ ಧೋರಣೆಗೆ ಸೋವಿಯಟ್ ಸರಕಾರದ ಉತ್ತರವೆಂಬಂತೆ ರೂಪುಗೊಳ್ಳುತ್ತಿವೆ. ಟ್ರೂಮನ್ನರು ಗ್ರೀಸ್, ತುರ್ಕಿಗಳಿಗೆ ಸಹಾಯ ನೀಡುವ ಯೋಜನೆಯನ್ನು ಪ್ರಾರಂಭಿಸಿ ಯುರೋಪಿನಲ್ಲೆಲ್ಲ "ಪ್ರಜಾ ತಂತ್ರಾತ್ಮಕ" ಸರಕಾರಗಳಿಗೆ ಸಹಾಯ ನೀಡಲು ಡಾಲರುಗಳನ್ನು ನೀರಿನಂತೆ ಸುರಿಯಲು ಸಿದ್ಧರಾಗಿರುವದನ್ನು ಪ್ರಚುರಪಡಿಸಿದ ಕೆಲ ವಾರಗಳ ತನಕ ರಶಿಯಾ ವಹಿಸಿದ ನಿಷ್ಕ್ರಿಯತೆಯನ್ನು ನೋಡಿ ಅನೇಕರು ರಶಿಯಾಕ್ಕೆ ಬಿಸಿ ಹತ್ತಿತೆಂದು ಭಾವಿಸಿದ್ದರು. ಆದರೆ ಹಿಂದಿನ ವಾರ (ಕರ್ನಾಟಕವೀರ ತಾ. ೯-೫-'೪೭) ಹಂಗೆರಿಯಲ್ಲಿ ಪ್ರಾರಂಭವಾದುದು ಟ್ರೂಮನ್ನರಿಗೆ ರಶಿಯಾದ ಪ್ರತೀಕಾರವೆಂದು ಈಗ ಸ್ಪಷ್ಟವಾಗಿದೆ. ಬಾಲ್ಕನ್ ರಾಷ್ಟ್ರಗಳಲ್ಲಿ ಘಟನೆಗಳು ಭೀಮ ವೇಗದಿಂದ ನಡೆಯತೊಡಗಿವೆ:

ಹಂಗೆರಿಯ ಮುಖ್ಯ ಮಂತ್ರಿ ನಾಗಿಯವರು ಸ್ವಿಝರ್ಲೆಂಡಿನಿಂದ ರಾಜೀನಾಮೆ ಕಳಿಸಿದ ನಂತರ ಹಂಗೇರಿಯನ್ ಪಾರ್ಲಮೆಂಟಿನ ಅಧ್ಯಕ್ಷರಾದ ಬೇಲಾ ವರ್ಗಾ ಅವರು ಕಾಣೆಯಾದರು. ನಾಗಿಯವರ ಮೇಲೆ ಹೊರಿಸಲಾದ "ಒಳಸಂಚಿ"ನ ಆರೋಪದಲ್ಲಿ ವರ್ಗಾರ ಕೈಯೂ ಇತ್ತೆಂದು ತಿಳಿದು ಬಂದುದರಿಂದ ಅವರು ಕಮ್ಯುನಿಸ್ಟ್ ಪೋಲೀಸರ ಕೈಗೆ ಸಿಕ್ಕುವ ಮೊದಲೇ ದೇಶ ಬಿಟ್ಟು ಆಸ್ಟ್ರಿಯಕ್ಕೆ ಪಲಾಯನ ಮಾಡಿದರು. ಹಂಗೆರಿಯ ಕಮ್ಯುನಿಸ್ಟ್ ವಿರೋಧಿ ಪಕ್ಷಗಳ ಮುಂದಾಳುಗಳನ್ನು ಸೆರೆ ಹಿಡಿಯಲಾಗುತ್ತಿದೆ.

ಹಂಗೆರಿಯ ಘಟನೆಯು ಬಿಸಿ ಇನ್ನೂ ತಣಿರಲಿಲ್ಲ, ಆದರೆ ನೆರೆ ರಾಷ್ಟ್ರವಾದ ಬಲ್ಗೇರಿಯಾದಲ್ಲಿ ವಿರೋಧಿ ರೈತಪಕ್ಷದ ಮುಂದಾಳುಗಳಾದ ನಿಕೋಲಾಯಿ ಪೆಟ್ಕೋವನನ್ನು ಬಂಧಿಸಲಾಯಿತು. ಬಲ್ಗೇರಿಯನ್ ಪಾರ್ಲಮೆಂಟಿನ ವಿರೋಧಿ ಪಕ್ಷದ ಮುಂದಾಳಾದ ಇವನಿಗ ಪಾರ್ಲಮೆಂಟಿನ ಸದಸ್ಯತ್ವದಿಂದ ಪ್ರಾಪ್ತವಾದ ಬಂಧನಾತೀತತೆಯ ಹಕ್ಕನ್ನು ಪಾರ್ಲಮೆಂಟು ಹಿಂತೆಗೆದುಕೊಂಡಿತು. "ಸರಕಾರದೊಡನೆ ಮನಸಾ ಸಹಕರಿಸಬೇಕು, ಇಲ್ಲವೆ ಅವರ ಫಲ ಭೋಗಿಸಬೇಕು" ಎಂದು ಸರಕಾರ (ಕಮ್ಯುನಿಸ್ಟ) ಪಕ್ಷ ಒಂದೇ ಒಂದು ತಾಸಿನ ನೋಟೀಸು ಕೊಟ್ಟಿತ್ತಂತೆ! ಪೆಟ್ಕೋವನ ಮೇಲೆ ಸರಕಾರವನ್ನು ಬಲಪ್ರಯೋಗದಿಂದ ಉರುಳಿಸಲು "ಫ್ಯಾಸಿಸ್ಟ್" ಗುಪ್ತ ಸೈನ್ಯವನ್ನು ಸಂಘಟಿಸಲು ಪ್ರಯತ್ನಿಸಿದನೆಂದು ಆರೋಪಿಸಲಾಗಿದೆ.

ತಿಕ್ಕಾಟ

ಹೀಗೆ ಟ್ರೂಮನ್ನರು ಧೋರಣೆಯನ್ನು ರಶಿಯನ್ನರು ತಪ್ಪಗೆ ಸ್ವೀಕರಿಸುವದಿಲ್ಲೆಂಬುದು ಸ್ಪಷ್ಟವಾಗಿದೆ. ಇದರಿಂದ ಪ್ರಬಲ ರಾಷ್ಟ್ರಗಳ ವೈಷಮ್ಯ ಇನ್ನಷ್ಟು ಹೆಚ್ಚಾಗುತ್ತಿದೆ. ಹಂಗೇರಿಯಲ್ಲಾದ ಘಟನೆಗಳ ಬೆನ್ನಿಗೆ ಜರುಗಿದ ಸಂಗತಿಗಳಿವು.

ಹಂಗೇರಿಯ ಮುಖ್ಯ ಮಂತ್ರಿ ನಾಗಿಯ ಮೇಲೆ ಹೊರಿಸಲಾದ ಆರೋಪಗಳ ಪುರಾವೆಗಳನ್ನು ತಮಗೆ ತೋರಿಸಬೇಕೆಂದು ಸೋವಿಯಟ ಮಿಲಿಟರಿ ಅಧಿಕಾರಿಗಳಿಗೆ ಆಂಗ್ಲೋ-ಅಮೇರಿಕನ್ನರು ರಾಯಸ ಕಳಿಸಿದರು. ಅವುಗಳನ್ನು ತೋರಿಸಲು ರಶಿಯನ್ನರು ನಿರಾಕರಿಸಿದರು.

ಹಂಗೇರಿಗೆ ತಾವು ಕೊಟ್ಟಿದ್ದ ಸಾಲದ ಅನುಪಯುಕ್ತ ಭಾಗವನ್ನು ಅಮೇರಿಕನ್ನರು ತಡೆ ಹಿಡಿದು "ಹೆಚ್ಚು ಯೋಗ್ಯರಾದವರಿಗೆ" ಸಹಾಯ ಮಾಡಲು ವಿನಿಯೋಗಿಸುವೆವೆಂದರು. ಹೇಳಿದರು ಹಂಗೇರಿಯನ್ ಕಮ್ಯುನಿಸ್ಟರು: "ಇದು ಅನ್ಯಾಯ. ಆದರೆ ಇದಕ್ಕೆ ನಾವು ಬಗ್ಗುವವರಲ್ಲ."

ಹಂಗೇರಿಯಲ್ಲಿ ನಡೆದುದು "ಭಯಾನಕ ಅನ್ಯಾಯ" ಎಂದರು ಅಧ್ಯಕ್ಷ ಟ್ರೂಮನ್ನರು. ಈ ವಿಚಾರವನ್ನು ಯುಕ್ತ ರಾಷ್ಟ್ರ ಸಂಸ್ಥೆಯ ಮುಂದೆ ತರುವದಾಗಿ ಅಮೇರಿಕನ್ ವಿದೇಶಖಾತೆ ಬೆದರಿಕೆ ಹಾಕಿದೆ.

Applications Invited

For the Post of an Executive Officer (temporary for a year at present) on a pay of Rs. 100 – 8 – 180 per mensem with the usual Dearness Allowance

Qualifications: Beside a knowledge of Kannada.

(1) Degree of B. A. or B. Com., or B. Sc. of any recognised University; and

(2) A course of training undergone in the Government Institute of Commerce or Central Co-op. Institute Madras, or a course of training undergone before 1938 in any of the moffusil Institutes; and

(3) A pass in the Government Technical Examinations in Book-keeping, Banking, Co-operation and Auditing or the Examinations in these subjects held by the Central Co-operative Institute, Madras.

Apply by 30-6-1947 to President, South Canara Central Co-operative Bank, Limited Mangalore.

ಶೀತ, ನೆಗಡಿ ವ ಗಂಟಲು ಬೇನೆಯ ಮೊದಲ ಚಿಹ್ನೆ ತೋರಿದಾಗಲೇ

PEPS

ವಿಷಹಾರಿ ಶಾಸನೀಯ ಮಾತ್ರೆಗಳನ್ನು ತೆಗೆದುಕೊಳ್ಳಿರಿ.

ಪೆಪ್ಸ್ ಬೇನೆಯ ಬಾಧವನ್ನು ಹೋಗುತ್ತದೆ. ಬಾಯಲ್ಲಿ ಕರಗಿ ಪೆಪ್ಸ್ ಬಿಟ್ಟ ಔಷಧೀಯ ಸಾರವು ಶ್ವಾಸ ಮೂಲಕ ಶ್ವಾಸ ಕೋಶಕ್ಕೊಯ್ಯಲ್ಪಟ್ಟು ಗುಣ, ಶಮನ ರಕ್ಷಣೆಗಳನ್ನು ಮಾಡುತ್ತದೆ.

ಔಷಧಿ ಮಾರುವ ಎಲ್ಲಾ ಕಡೆ ಸಿಗುತ್ತದೆ.

ನಾಗರೀಕ ವ್ಯವಹಾರ

ವೈರಾಗ್ಯದ ನಾಯಕತ್ವ

1942ರ ನಂತರ ನಮ್ಮ ಜಿಲ್ಲೆಯ ರಾಜಕೀಯ ಚಟುವಟಿಕೆ ಸಂಪೂರ್ಣ ಸ್ತಬ್ಧವಾದದ್ದು ಗಮನಾರ್ಹವಾದ ಸಂಗತಿ. ರಾಷ್ಟ್ರಸಂಸ್ಥೆಯ ಉಪಾಂಗವಾಗಿ ಇಲ್ಲಿಯ ಜನತಾ ಸಂಘವು ಗಾಬರಿಗೊಳಿಸುವ ಅನಾಸಕ್ತತೆಯನ್ನು ತಳೆದಿರುವುದರ ರಹಸ್ಯ ಇನ್ನೂ ಬೆಳಕಿಗೆ ಬಂದಿಲ್ಲ. ಸರ್ವ ಸಾಮಾನ್ಯವಾಗಿ ಹೇಳುವುದಾದರೆ ಜಿಲ್ಲೆಗೆ ಯೋಗ್ಯ ಮಾರ್ಗದರ್ಶಕರಾದ ಮುಂದಾಳುಗಳೇ ಇಲ್ಲವಾಗಿದೆಯೆಂದರೆ ಅತಿಶಯವಾಗದು. ಇದ್ದ ಕೆಲವರು ತಮಗೇ ಚೆನ್ನಾಗಿ ತಿಳಿದಿರುವ ಕಾರಣಗಳಿಗಾಗೇನೊ ಸಾರ್ವಜನಿಕ ಸಂಪರ್ಕರಹಿತರಾದಂತೆ ಅಭಿಪ್ರಾಯವಾಗುತ್ತದೆ

ನಮ್ಮ ಜಿಲ್ಲಾ ಕೊಂಗ್ರೆಸ್ ಸಮಿತಿ ಮತ್ತು ಟೌನ್ ಕೊಂಗ್ರೆಸ್ ಸಮಿತಿಗಳು ಮುಂಬರುವ ಸ್ಥಳೀಕ ಸಂಸ್ಥೆಗಳ ಚುನಾವಣೆಗಳಿಗೆ ಪ್ರತಿನಿಧಿಗಳನ್ನು ನಿಲ್ಲಿಸುವುದಿಲ್ಲವೆಂಬ ನಿರ್ಧಾರಕ್ಕೆ ಬಂದುದು ಈ ವೈರಾಗ್ಯದ ಪರಮಾವಧಿಯಾಗಿರಬಹುದೆ? ಇಂದು ಜನತಾಪ್ರತಿನಿಧಿಗಳು ಜಿಲ್ಲೆಯ ಈ ಅತ್ಯಂತ ಸಂಕಷ್ಟಮಯ ಭವಿಷ್ಯದ ಕಾಲದಲ್ಲಿ ಅಸಹಾಯಕ ಮನೋಭಾವವನ್ನು ತಳೆದುದು ದುರ್ದೈವವೆನ್ನಬೇಕು. ಕೊಂಗ್ರೆಸು ವಿಧಾಯಕ ಚಟುವಟಿಕೆಗಳನ್ನು ನಿಷೇಧಿಸುವ ಕಾಲವಿದ್ದಿತ್ತು. ಆದರೆ ಈಗೇನು ಅಂತಹ ತಾತ್ವಿಕ ಧೋರಣೆಯ ನಿರ್ದೇಶವಿಲ್ಲ. ನಮ್ಮ ಜಿಲ್ಲೆಯ ಪರಿಸ್ಥಿತಿ ವಿಶೇಷ ಮಾದರಿಯದಿರಬಹುದು. ಹಿಂದೆ ರಾಷ್ಟ್ರ ಸಂಸ್ಥೆಯ ಪರ್ವವಾಗಿ ಜಿಲ್ಲಾ ಬೋರ್ಡು, ಮುನ್ಸಿಪಾಲಿಟಿಗಳಿಗೆ ಆರಿಸಿ ಬಂದವರು ಪಕ್ಷ ಶಿಸ್ತನ್ನು ಮುರಿದು ವರ್ತಿಸಿದ ನಿದರ್ಶನಗಳಿರಬಹುದು. ಅಂದಮಾತ್ರಕ್ಕೆ ನಿರುತ್ಸಾಹಗೊಳ್ಳುವ ಅವಶ್ಯಕತೆಯಿಲ್ಲ. ಇದಕ್ಕಿಂತ ಮಹತ್ತಾದ ಸಮಸ್ಯೆಗಳನ್ನೆದುರಿಸಿ ಅನುಭವವಿದ್ದವರು ಕೆಲವೊಬ್ಬ ಸ್ವಾರ್ಥ ಸಾಧಕರ ಅಶಿಸ್ತಿಗೆ ಅಳುಕಬಾರದು. ಒಂದು ಪಕ್ಷದ ಪ್ರತಿನಿಧಿಗಳು ಪಕ್ಷಕೋಟಿ ಮೀರಿ ನಡೆಯುವುದಾದರೆ ಅದಕ್ಕೆ ಆದರ್ಶ ನಾಯಕತ್ವವಿಲ್ಲದಿರುವುದೇ ಕಾರಣವಾಗಿರುತ್ತದೆ. ಆದರೆ ನಮ್ಮ ಜಿಲ್ಲೆಯ ಮಟ್ಟಿಗೆ ಇದನ್ನು ಒಪ್ಪುವುದು ಕಷ್ಟ. ಹೆಚ್ಚಿನವರು ನಿಸ್ವಾರ್ಥಿಗಳಾಗಿದ್ದರೆ ಒಬ್ಬಿಬ್ಬರ ಸಲುವಾಗೇಕೆ ಹಿಂಜರಿಯಬೇಕು. ಅದಕ್ಕಿಂತ ಸಾರ್ವಜನಿಕ ಸೇವಾ ನಿರ್ಧಾರವನ್ನು ತ್ಯಜಿಸುವುದು ಲೇಸಲ್ಲವೆ?

ಇಲ್ಲಿಯ ರಾಷ್ಟ್ರಸಂಸ್ಥೆಯು ರಚನಾತ್ಮಕ ಕಾರ್ಯದಲ್ಲೇ ಮಗ್ನವಾಗಿದೆಯೆಂದು ತಿಳಕೊಳ್ಳಲೂ ಸಾಕಷ್ಟು ನಿದರ್ಶನಗಳು ಬಹಿರಂಗವಾಗಲಿಲ್ಲ. ಇಲ್ಲವೆ ವಿಧಾಯಕ ಚಟುವಟಿಕೆಗಳನ್ನು ಖಂಡಿಸುವ ಸಮಾಜವಾದಿಗಳು ನಮ್ಮ ಕೊಂಗ್ರೆಸು ಸಮಿತಿಗಳಲ್ಲಿ ಬಹುಮತದಲ್ಲಿರುವರೆಂದು ಭಾವಿಸಲಿಕ್ಕೂ ಆಧಾರವಿಲ್ಲ. ಸಾರ್ವಜನಿಕ ಆಡಳಿತ ಸಂಸ್ಥೆಗಳು ಪರಿಶುದ್ಧವಾಗಿರುವಂತೆ ಯತ್ನಿಸುವುದು ಜನತಾ ಪ್ರತಿನಿಧಿಗಳ ಅನೇಕ ಕರ್ತವ್ಯಗಳಲ್ಲೊಂದು. ಇಲ್ಲಿಯ ಕೊಂಗ್ರೆಸು ಸ್ಥಳೀಯ ಸಂಸ್ಥೆಗಳನ್ನು ಚಲಾಯಿಸುವ ಹೊಣೆಗಾರಿಕೆಯನ್ನು ತಪ್ಪಿಸಿ ಈಗದನ್ನು ಯಾವ ಜನ ಪಕ್ಷಕ್ಕೂ ಹೊಣೆಗಾರಿಕೆಯಿಲ್ಲದವರ ಹೆಗಲ ಮೇಲೆ ಅದು ಹೊರಲ್ಪಡುವಂತಾಗಲು ಅನುಕೊಟ್ಟದ್ದು ತುಂಬಾ ಖೇದಕರ ವಿಚಾರ. ಸ್ಥಳೀಯ ಸಂಸ್ಥೆಗಳು ಉಪಯುಕ್ತವಾಗಿ ಕೆಲಸನಿರ್ವಹಿಸುವಂತೆ ಮಾಡುವ ಬೇರೆ ವಿಧಾನಗಳು ನಮ್ಮ ಜನತಾ ಪ್ರತಿನಿಧಿ ಕೂಟದ ಮನಸ್ಸಿನಲ್ಲಿರಬಹುದೆಂದು ಹಾರೈಸಿ ಸದ್ಯಕ್ಕೆ ಸಮಾಧಾನಪಟ್ಟುಕೊಳ್ಳಬಹುದು.

ಇನ್ನು ಮುಂಬರುವ ಚುನಾವಣೆಗಳಲ್ಲಿ ಆರಿಸಬಹುದಾದ ಸ್ವತಂತ್ರರ ಅವಗಾಹನೆಗೆ ಒಂದು ಮಾತು. ಇವರಾದರೂ ಸಾರ್ವಜನಿಕ ಹಾರೈಕೆಗಳನ್ನು ಬಲ್ಲದವರಾಗಿರಲಿಕ್ಕಿಲ್ಲ. ಅವರು ನಮ್ಮ ಜಿಲ್ಲೆಯ ಮತ್ತು ನಗರಗಳ ಪರಿಹಾರಕ್ಕಾಗಿ ಮೊರೆಯಿಡುತ್ತಿರುವ ಅವಶ್ಯಕತೆಗಳನ್ನು ಗಮನದಲ್ಲಿಟ್ಟು ಅವುಗಳ ಯೋಗ್ಯ ನಿವಾರಣೆಗೆ ಹೃತ್ಪೂರ್ವಕ ಶ್ರಮಿಸಬೇಕೆಂದು ಜನತೆ ನಿರೀಕ್ಷಿಸುತ್ತದೆ. ಈ ನಿರೀಕ್ಷಣೆಯನ್ನು ಅವರು ಪರಿಪೂರ್ಣಗೊಳಿಸಿ ಜನಾದರಕ್ಕೆ ಪಾತ್ರರಾದರೆ ರಾಷ್ಟ್ರಸಂಸ್ಥೆಯು ಸಾಂಘಿಕವಾಗಿ ಪೂರೈಸುವ ಕರ್ತವ್ಯಗಳನ್ನು ಅವರು ಪೂರೈಸಿದ ಕೀರ್ತಿಗೆ ಪಾತ್ರರಾಗುವರು.

ಜಿಲ್ಲಾ ಪರಿಚಯ

ಮಲೀ ಜ್ವರ ನಿವಾರಣೆ

ಕೇಂದ್ರ ಸರಕಾರದವರು ದ. ಕನ್ನಡದಲ್ಲಿ ಕೈಕೊಳ್ಳಲಿರುವ ಮಲೇರಿಯಾ ನಿವಾರಣಾ ಯೋಜನೆಯ ಪೂರ್ವ ಸಿದ್ಧತೆಯನ್ನು ಮಾಡುವುದಕ್ಕಾಗಿ ಶ್ರೀ ಎಂ. ಎನ್. ಭಿಡೆ ಅವರು ಕೂನೂರಿಗೆ ತೆರಳಿದರು. ಮಲೇರಿಯಾ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ ಎಂಬ ಸಂಸ್ಥೆಯ ದ. ಭಾರತದ ಶಾಖೆಯು ಕೂನೂರಲ್ಲಿದೆ. ಆ ಶಾಖೆಯ ಡೈರೆಕ್ಟರರೊಡನೆ ಎಲ್ಲಾ ವ್ಯವಸ್ಥೆಯನ್ನು ಸರಿಪಡಿಸಿದ್ದಲ್ಲದೆ ಕೊಯಮುತ್ತೂರಿನ ವಿವಿಧ ಕಾರ್ಯಕಲಾಪಗಳನ್ನೂ ಕೇಂದ್ರ ಸರಕಾರದ ಕಬ್ಬಿನ ಪರಿಶೋಧನಾ ಕ್ಷೇತ್ರ, ಪ್ರಾಂತಿಕ ಸರಕಾರದವರು ಮೆಟ್ಟುಪಾಳಯದ ಹತ್ತಿರ ಕಲ್ಲಾರು ಎಂಬಲ್ಲಿ ಏರ್ಪಡಿಸಿದ ಹಣ್ಣುಹಂಪಲು ಪರಿಶೋಧನಾ ಕ್ಷೇತ್ರವನ್ನೂ ಇತರ ಸಂಬಂಧಪಟ್ಟ ಕಾರ್ಯಗಳನ್ನೂ ಮೆಟ್ಟುಪಾಳಯದ ಪ್ರಾಂತ್ಯದ ಅಧಿಕ ಆರೋಗ್ಯಕರ ಸ್ಥಳಗಳನ್ನೂ ಸಂದರ್ಶಿಸಿದರು. ಮೆಟ್ಟುಪಾಳಯದ ಕಲ್ಲಾರು ಮುಂತಾದ [illegible] ಪ್ರದೇಶಗಳು ನಮ್ಮ ಮಲೆನಾಡುಗಳಂತಿದ್ದು ಅಲ್ಲಿಯೂ [illegible] ಕಾರ್ಯವು ಪರೀಕ್ಷಾ ರೂಪದಲ್ಲಿ ನಡೆಯುತ್ತಿದೆ. ಕಲ್ಲಾರಿನ ಹಣ್ಣುಹಂಪಲು ಶೋಧನಾ ಕ್ಷೇತ್ರದಲ್ಲಿ ಅಡಿಕೆ ಸಂಬಂಧವಾದ ಯಾವ ಶೋಧವೂ ನಡೆಯುವುದಿಲ್ಲವೆಂಬುದು ಆಶ್ಚರ್ಯಕರ ಸಂಗತಿ. ಆದರೂ ಮಲೆನಾಡಿಗೆ ಅನ್ವಯಿಸುವ ಅನೇಕ ತರದ ಕೃಷಿ ವಿಧಾನಗಳ ಸಂಶೋಧ ಈಗ ಅಲ್ಲಿ ನಡೆಯುತ್ತಿರುವ ಕೇಂದ್ರದಿಂದ ಅನುಭವ ಪಡೆಯುವಂತಿದೆ. ಕೆಲವು ವಿಧದ ಹೊಸ ಕೃಷಿಯನ್ನು ಆರಂಭಿಸುವ ಸಂಬಂಧ ಅಲ್ಲಿ ತುಂಬಾ ಮಾಹಿತಿ ದೊರಕುವುದು. ಅಡಿಕೆ ಕುರಿತ ಪರಿಶೋಧನಾಕ್ಷೇತ್ರವೊಂದು ಪ್ರತ್ಯೇಕವಾಗಿ ಮಲೆನಾಡಿನಲ್ಲಿ ತೆರೆಯುವುದು ಅತ್ಯವಶ್ಯಕವೆಂದು ಹಣ್ಣಿನ ಶೋಧನಾ ಕ್ಷೇತ್ರವನ್ನು ಕಂಡಾಗ ವಿದಿತವಾಯಿತು.

ಜಿಲ್ಲಾ ವಾಣಿಜ್ಯ ಸಂಘ: ಈ ಸಂಘದ ವಾರ್ಷಿಕ ಮಹಾಸಭೆ, ಅದರ ಅಧ್ಯಕ್ಷ ಶ್ರೀ ಎ. ದಾಮೋದರ ಪೈ, ವಕೀಲ ಅವರ ಅಧ್ಯಕ್ಷತೆಯಲ್ಲಿ ನೆರೆದು ವರದಿ ಲೆಕ್ಕಪತ್ರಗಳು ಮಂಜೂರಾಗಿ, ಚಾಲ್ತಿ ವರ್ಷಕ್ಕೆ ಶ್ರೀ. ಪಿ. ಎಸ್. ಕುಡ್ವ ಅವರನ್ನು ಸಂಘದ ಅಧ್ಯಕ್ಷ, ಜನಾಬ್ ಮೊಹಮ್ಮದ್ ಅಬ್ದುಲ್ ಸತ್ತಾರ್ ಉಪಾಧ್ಯಕ್ಷ, ಶ್ರೀ. ಪಿ. ಉಮಾನಾಥ ಭಂಡಾರಿ, ಕೋಶಾಧಿಕಾರಿ, ಶ್ರೀಗಳಾದ ದೇವದಾಸ್ ಗಿರಿಧರಲಾಲ್ ಮತ್ತು ಪಿ. ರಮಾನಾಥ ಶೆಣೈ ಇವರನ್ನು ಜತೆಕಾರ್ಯದರ್ಶಿಗಳನ್ನಾಗಿ ಆಯಾ ಸ್ಥಾನಗಳಿಗೆ ಆರಿಸಿದ್ದಲ್ಲದೆ ಬೇರೆ ೧೨ ಮಂದಿಗಳುಳ್ಳ ಒಂದು ಕಾರ್ಯಕಾರಿ ಸಮಿತಿಯ ರಚನೆಯೂ ಆಯಿತು. ಶ್ರೀ. ದಾಮೋದರ ಪೈಗಳವರ ಅಮೋಘ ಸೇವಾ ಸಹಕಾರಗಳನ್ನು ಮೆಚ್ಚಿ ಅವರ ಉಪಕಾರ ಸ್ಮರಿಸುವ ಒಂದು ಠರಾವೂ ಸರ್ವಾನುಮತದಿಂದ ಮಂಜೂರಾಯಿತು.

ಮರ್ಮಗೋವ ಮತ್ತು ಕೊಚ್ಚಿಗಳ ನಡುವೆ, ಒಂದು ದೊಡ್ಡ ಬಂದರಿನ ನಿರ್ಮಾಣದ ಕುರಿತು ಸಮಾಲೋಚಿಸಲು ಬೊಂಬಯಿಯಲ್ಲಿ ಇಂಡಿಯಾ ಸರಕಾರದ ಆಶ್ರಯದಲ್ಲಿ ಈಚೆಗೊಂದು ಸಮ್ಮೇಳನ ನಡೆದಿತ್ತು, ಬೊಂಬಯಿ, ಮದ್ರಾಸ್, ಮೈಸೂರು ಸರಕಾರಗಳ ಪ್ರತಿನಿಧಿಗಳೂ ಸೇರಿ ಈ ವಿಷಯವನ್ನು ಚರ್ಚಿಸಿ ಕೊನೆಗೆ, ಈ ಪ್ರಶ್ನೆಯ ಸಂಪೂರ್ಣ ಇತ್ಯರ್ಥಕ್ಕಾಗಿ ಒಂದು ಸಮಿತಿಯನ್ನೇ ನೇಮಿಸಬೇಕೆಂಬ ಶಿಫಾರಸನ್ನು ಈ ಸಮ್ಮೇಳನವು ಮಾಡಿತು

ದ. ಕ. ಜಿಲ್ಲಾ ವಾಣಿಜ್ಯ ಸಂಘದವರು ಈ ಸಂಬಂಧವಾಗಿ ತಯಾರಿಸಿದ್ದ ಒಂದು ಮೆಮೋರಂಡಮನ್ನು, ಶ್ರೀ ಕೆ. ಆರ್. ಕಾರಂತರು ತಾವು ಬೊಂಬಯಿ ಸಮ್ಮೇಳನಕ್ಕೆ ಹೋಗುವಾಗ ತೆಗೆದುಕೊಂಡು ಹೋಗಿದ್ದು ಅವರೂ ಶ್ರೀ ಯು. ಶ್ರೀನಿವಾಸ ಮಲ್ಯರೂ ಈ ವಿಷಯದಲ್ಲಿ ಅಲ್ಲಿಯಾದ ಮೇಲ್ಕಂಡ ತೀರ್ಮಾನದ ವಿಷಯವನ್ನು, ಈ ಸಂಘಕ್ಕೆ ತಂತಿ ಮೂಲಕ ತಿಳಿಸಿದ್ದಾರೆ. ಪಶ್ಚಿಮ ಕರಾವಳಿಯಲ್ಲಿ ಹೆಚ್ಚಿಗಿನ ದೊಡ್ಡ ಬಂದರದ ಅಭಿವೃದ್ಧಿ, ಕಾರ್ಯಗಳ ಕುರಿತಂತ ಈ ಪ್ರಶ್ನೆಯು ವಿಚಾರದ ಕಾಲದಲ್ಲಿ ಆ ಸಮಿತಿಯಲ್ಲಿ ಶ್ರೀ ಕಾರಂತರಲ್ಲದೆ ಜಿಲ್ಲಾ ಕಲೆಕ್ಟರ್ ಮತ್ತು ಪೋರ್ಟ್ ಆಫೀಸರ್ ಮಂಗಳೂರ ಇವರನ್ನು ಇಲ್ಲಿನ ಪ್ರತಿನಿಧಿಗಳನ್ನಾಗಿ ಇರಿಸಬೇಕೆಂದು ಈ ಸಂಘದವರು ಡಾ. ಜಾನ್ ಮತ್ತಾಯಿ, (ಇಂಡಿಯಾ ಸರಕಾರದ ಸಚಿವರು) ಅವರಿಗೂ ಸಂಬಂಧಪಟ್ಟ ಇತರರಿಗೂ ತಂತಿ ಕೊಟ್ಟಿದ್ದಾರೆ

ಕುಂಬಳೆ

ಅನಾನುಕೂಲತೆ: ಸುಳ್ಯ ರಸ್ತೆಯಲ್ಲಿದ್ದ ಬಸ್ಸು ತಿರುಗಾಟ ಇತ್ತೀಚೆ ನಿಂತುಹೋಗಿ ಪ್ರಯಾಣಿಕರಿಗೆ ತುಂಬಾ ಅನಾನುಕೂಲವಾಗಿದೆ ತಾಲೂಕಿನ ಕೆಲವು ಗ್ರಾಮಗಳಲ್ಲಿ ಒಪ್ಪಿ ವ್ಯಾಪಾರಿಗಳಿಲ್ಲದಿರುವುದರಿಂದ ಅಲ್ಲಿಯ ನಿವಾಸಿಗಳಿಗೆ ಸಿಕ್ಕ ಒಪ್ಪಿ ಹಂಚುವ ವ್ಯವಸ್ಥೆ ಇನ್ನೂ ಆಗದೆ ಗ್ರಾಮಾಂತರ ನಿವಾಸಿಗಳಿಗೆ ಹೆಚ್ಚಿನ ತೊಂದರೆಯಾಗಿದೆ.

ಹುಲಿ ಶಿಕಾರಿ: ಕೆಳಗಿನ ಕಾಡಿನಲ್ಲಿ ದೊಡ್ಡ ಜಾತಿಯ ಹುಲಿಯು ಕೆಲವು ದಿವಸದಿಂದ ಜನ ಜಾನುವಾರುಗಳನ್ನು ಕೊಲ್ಲುತ್ತಿದ್ದಿತು ಈ ವರ್ತಮಾನವನ್ನು ತಿಳಿದ ಹುಲಿ ಶಿಕಾರಿಗಾರರಾದ [illegible] ಕೆ. ಅಪ್ಪಯ್ಯ ಗೌಡರೆಂಬವರು ತಾ [illegible] ಗುಂಡು ಹೊಡೆದು ಹುಲಿಯನ್ನು ಕೊಂದುದು ಸ್ತುತ್ಯವು

ಕಾಸರಗೋಡು: ಶ್ರೀ ಎಚ್. ಎಂ. ನಾರಾಯಣ ಭಟ್ಟರು, ಕಾಸರಗೋಡು [illegible] ಸಪ್ಲೈ ಆಫೀಸರರಾಗಿ ನೇಮಕ ಹೊಂದಿರುವರು.

ಇಲ್ಲಿಯೇ ಸಮೀಪವಿರುವ ನಾರಾಯಣ ಮಂಗಲದಲ್ಲಿ ಹಿಂದೀ ಪ್ರೌಢ ವಿದ್ಯಾಲಯವೊಂದು ಇತ್ತೀಚೆಗೆ ತೆರೆಯಲ್ಪಟ್ಟಿದೆ.

ನಡುಬೈಲು ಬೋರ್ಡ್ ಎಲಿಮೆಂಟರಿ ಶಾಲೆಯು ಬೇಗನೆ ತೆರೆಯಲ್ಪಡುವುದೆಂದು ತಿಳಿದುಬರುತ್ತದೆ. ಕುಂಬಳೆಗೆ ಮಿಲಿಟರಿ ಕೇಂದ್ರ ಬಂದಿದ್ದಾಗ ಮಿಲಿಟರಿಯವರ ಅಗತ್ಯಕ್ಕಾಗಿ ಸರಕಾರದವರಿಂದ ಸ್ವಾಧೀನಪಡಿಸಲ್ಪಟ್ಟ ಪ್ರದೇಶದೊಳಗೆ ಈ ಶಾಲೆಯಿದ್ದುದರಿಂದ ಈ ವರೆಗೆ ಮುಚ್ಚಲ್ಪಟ್ಟಿತ್ತು.

ಕಾಫಿಯ ಸದುಪಯೋಗ: ಕಾಫಿ ಬೀಜ ಒಂದು ಸೇರು ಮತ್ತು ಬಟಾಣಿ ಒಂಭತ್ತು ಸೇರನ್ನು ಪ್ರತ್ಯೇಕ ಪ್ರತ್ಯೇಕವಾಗಿ ಹುರಿದು ನುಣ್ಣಗೆ ಹುಡಿ ಮಾಡಿ ಕಾಫಿ ಮಾಡುವ ರೀತಿಯಲ್ಲಿ ಈ ಹುಡಿ ಹಾಕಿ ಕಾಫಿ ಮಾಡಿದರೆ ಅಶಕ್ತವಂತರಿಗೂ ಬಲಹೀನರಿಗೂ ಬಾಲವೃದ್ಧರಿಗೂ ಬಾಣಂತಿಯಾಗಿ ನಿತ್ರಾಣ ಹೊಂದಿದ ಹೆಂಗಸರಿಗೂ ಬಹಳ ಒಳ್ಳೆದು ಡಿಕೋಕ್ಷನ್ ಪಾತ್ರೆಯಲ್ಲಿ ಹಾಕಿ ಡಿಕೋಕ್ಷನ್ ಕಾಫಿ ಸಹ ಮಾಡಬಹುದು- ಹೀಗೆಂದು ಕುದಿಗೆ ಮಂಜುನಾಥ ನ್ಯಾಸಭಾಗರು ತಿಳಿಸುತ್ತಾರೆ

ಕುಂದಾಪುರ: ಶ್ರೀ ದ್ವಾರಕಾ ಪೀಠಾಧೀಶ್ವರ ಜಗದ್ಗುರು ಶ್ರೀ ಶಂಕರಾಚಾರ್ಯ ಶ್ರೀ ಅಭಿನವ ಸಚ್ಚಿದಾನಂದ ತೀರ್ಥ ಸ್ವಾಮಿಗಳವರ ಸನ್ನಿಧಾನದಲ್ಲಿ, ಬೆಂಗಳೂರು ಸೆಂಟ್ರಲ್ ಕಾಲೇಜಿನ ಗಣಿತ ಶಾಸ್ತ್ರದ ಪ್ರೊಫೆಸರರಾದ ಮ. ರಾ. ರಾ. ಎನ್. ಶ್ರೀನಿವಾಸಯ್ಯಂಗಾರ್ ಡಿ. ಎಸ್. ಸಿ. ಯವರ ಅಧ್ಯಕ್ಷತೆಯಲ್ಲಿ ತಾ [illegible]ರಿಂದ ಶಿವಮೊಗ್ಗದಲ್ಲಿ ಸೇರಿದ ಅಖಿಲ ಕರ್ನಾಟಕ ತೃತೀಯ ಜ್ಯೋತಿಷ ಸಮ್ಮೇಲನದಲ್ಲಿ ಕುಂದಾಪುರ ತಾಲೂಕಿನವರಾದ, ಸಿದ್ಧಾಂತ ಕೇಸರಿ, ಶ್ರೀ. ವೇ. ನೊಗೇರಿ ಭಾಸ್ಕರ ಅಡಿಗರವರಿಗೆ ಅವರ ಜ್ಯೋತಿಃಶಾಸ್ತ್ರ ವಿದ್ಯಾದಿ ಉತ್ಕೃಷ್ಟತರ ಪಾಂಡಿತ್ಯವನ್ನು ಮನಗಂಡು ಮೆಚ್ಚಿದ ಶ್ರೀ ಸ್ವಾಮಿಗಳವರು 'ದೈವಜ್ಞ ಪಂಚಾನನ' ಎಂಬ ಪದವಿಯನ್ನು ಅನುಗ್ರಹಿಸಿ ಗೌರವಿಸಿದರು.

ಸ್ಥಳೀಯ 'ಕನಕ ಸಾಹಿತ್ಯ ಭಂಡಾರ'ದವರು ತಮ್ಮ ಕನ್ನಡ ಸಾಹಿತ್ಯೋತ್ಸವವನ್ನು ಸ್ಥಳೀಯ ಕಾಲೇಜಿನ ಡೆಪ್ಯುಟಿ ಇನ್ಸ್ಪೆಕ್ಟರರಾದ ಬಿ. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಯಶಸ್ವಿಯಾಗಿ ಜರಗಿಸಿದರು. ಅಂದಿನ ಕಾರ್ಯಕ್ರಮದ ಅಂತ್ಯದಲ್ಲಿ ನಡೆದ ವಿನೋದಾವಳಿಯಲ್ಲಿ 'ಹರಿಜನವೀರ' ಎಂಬ ನಾಟಕ ಪ್ರದರ್ಶನವೂ ಇತ್ತು

ಮೂಲ್ಕಿ: ಸ್ಥಳೀಯ ಯೂನಿಯನ್ ಕ್ಲಬ್ಬಿನ ವಾರ್ಷಿಕ ಮಹಾಸಭೆಯೂ ದಿವಂಗತ ಜೋಗಿ ಶ್ಯಾಮರಾಯರ ಜನ್ಮ ದಿನಾಚರಣೆ ಸಮಾರಂಭವೂ ಇದೇ ತಾ. ೧೬ [illegible] ನೇ ಸೋಮವಾರ ಸಾಯಂಕಾಲ [illegible] ಕ್ಲಬ್ಬಿನ ಸಭಾಮಂದಿರದಲ್ಲಿ ಜರಗಿತ್ತು.

ಸ್ಥಳೀಯ ಗ್ರಾಮ ಉದ್ಯೋಗಸ್ಥರ ಸಂಘದಿಂದ ಮಾಡಿಕೊಂಡ ಮನವಿ ಮೇರೆಗೆ ಗ್ರಾಮ ಉದ್ಯೋಗಸ್ಥರು ಮೇಲಾಧಿಕಾರಿಗಳ ಒಪ್ಪಿಗೆ ಪಡಕೊಂಡು ಇತರ ಖಾಸಗಿ ವೃತ್ತಿಗಳನ್ನು ಮಾಡಬಹುದೆಂದು ಸರಕಾರಿ ಹುಕುಂ ಬಂದಿದೆಯಾಗಿ ಕೇಳಿಬರುತ್ತದೆ.

ತಮ್ಮ ಜನಸಂಖ್ಯೆ ಕಡಿಮೆಯಾಗುವುದನ್ನು ಕಂಡು ಗಾಬರಿಗೊಂಡು ಆಸ್ಟ್ರೇಲಿಯನ್ ಸರಕಾರವು ತಮ್ಮ ನೌಕರರಿಗೆ ವಿವಾಹ ಭತ್ತೆ ಕೊಡಲು ಯೋಚಿಸುತ್ತಿದೆ.

ದೊಡ್ಡ ಬಂದರಾಗಲು ಮಂಗಳೂರಿನ ಅರ್ಹತೆ

ಭಟ್ಕಲ ಮಲ್ಪೆಗಳಿಗಿಂತ ಹೆಚ್ಚು ಸೌಕರ್ಯಗಳು

ಭೌಗೋಳಿಕ ಸ್ಥಾನಮಾನಗಳ ಅಂಕೆಸಂಖ್ಯೆ

ಮರ್ಮಗೋವಾ ಮತ್ತು ಕೊಚ್ಚಿನ್ ಬಂದರುಗಳ ನಡುವೆ ಪಶ್ಚಿಮ ಕರಾವಳಿಯಲ್ಲಿ ದೊಡ್ಡದಾದ ಇನ್ನೊಂದು ಬಂದರವನ್ನು ಸ್ಥಾಪಿಸುವುದರ ಕುರಿತು ಇಂಡಿಯಾ ಸರಕಾರದ ಆಶ್ರಯದಲ್ಲಿ ಕಳೆದ ಜೂನ್ 10ರಂದು ಬೊಂಬಾಯಿಯಲ್ಲಿ ಸೇರಿದ ಸಭೆಗೆ ಡಾ। ಜಾನ್ ಮಥಾಯಿಯವರು ಅಧ್ಯಕ್ಷರಾಗಿದ್ದು ಮದ್ರಾಸ್ ಸರಕಾರದ ಪರವಾಗಿ ಶ್ರೀ ಕೆ. ಆರ್. ಕಾರಂತರೂ ಪ್ರತಿನಿಧಿಯಾಗಿ ಹಾಜರಿದ್ದರು. ಈ ಸಭೆಯು ಬಂದ ನಿರ್ಣಯದ ಪ್ರಕಾರ ಸದ್ರಿ ವಿಷಯವನ್ನು ಆಳವಾಗಿ ಪರಿಶೀಲಿಸಿ ವರದಿ ಮಾಡಲು ಒಂದು ವಿಶೇಷ ಸಮಿತಿಯು ರಚನೆಯಾಗಬೇಕೆಂದು ಶಿಫಾರಸು ಮಾಡಲ್ಪಟ್ಟಿದೆ. ಈ ಸಮಿತಿಯಲ್ಲಿ ದ. ಕನ್ನಡದ ಪರವಾಗಿ ಶ್ರೀ ಕಾರಂತರಲ್ಲದೆ, ಇಲ್ಲಿಯ ಜಿಲ್ಲಾ ಕಲೆಕ್ಟರರೂ, ಪೋರ್ಟ್ ಆಫೀಸರರೂ ಅಲ್ಲದೆ ಕೆನರಾ ಚೇಂಬರ್ ಆಫ್ ಕೊಮರ್ಸಿನ ಒರ್ವ ಪ್ರತಿನಿಧಿಗಳೂ ಆ ಸಮಿತಿಯಲ್ಲಿ ಪ್ರಾತಿನಿಧಿಸಲ್ಪಡಬೇಕೆಂದು ಚೇಂಬರಿನವರು ಸಂಬಂಧಪಟ್ಟ ಅಧಿಕಾರಿಗಳಿಗೆ ವಿನಂತಿಸಿಕೊಂಡಿರುವರು.

ಮಂಗಳೂರಿನ ಮಹತ್ವ

ಪಶ್ಚಿಮ ಕರಾವಳಿಯಲ್ಲಿರುವ ಪ್ರಾಮುಖ್ಯ ಬಂದರುಗಳಾದ ಕರಾಚಿ, ಒಖ್ಖಾ, ಭಾವನಗರ, ಬೊಂಬಾಯಿ, ಮರ್ಮಗೋವಾ ಇವುಗಳ ಒಂದರಿಂದಿನ್ನೊಂದರ ಅಂತರವು ಸುಮಾರು 200 ಮೈಲುಗಳಿಷ್ಟಿರುತ್ತದೆ ಮಂಗಳೂರು ಕೊಚ್ಚಿಯಿಂದ 200, ಮರ್ಮಗೋವಾದಿಂದ 188 ಮೈಲು ಅಂತರದಲ್ಲಿದೆ. ಎಸ್ ಐ. ಆರ್ ರೈಲ್ವೇಯ ಕೊನೆಯ ಸ್ಟೇಶನೂ ಇದಾಗಿದೆ ಮೈಸೂರು ಕೊಡಗುಗಳಿಗೆ ಇಲ್ಲಿಂದ ಉತ್ತಮ ಮೋಟಾರ್ ಸಾಗಿಸುವಿಕೆಯ ಸೌಕರ್ಯ ಸಂಬಂಧವಿದೆ. ಎರಡು ನದಿಗಳ ಸಂಗಮ ಸ್ಥಾನದಲ್ಲಿರುವುದರಿಂದ ಹಡಗು ನಿಲ್ದಾಣ ಮಾಡಲು ಸಾಕಷ್ಟು ನೀರಾಶ್ರಯವುಳ್ಳದ್ದಾಗಿದೆ.

ಭಟ್ಕಳವು ಅಭಿವೃದ್ಧಿ ಯೋಗ್ಯವಾಗಿದ್ದರೂ ಅದರ ಒಳ ಪ್ರದೇಶದಲ್ಲಿ ಸಾಗಿಸುವಿಕೆಯ ಸೌಕರ್ಯಗಳಿಲ್ಲ ಮಲ್ಪೆಯಾದರೂ ಅಂತೆಯೆ ಭಟ್ಕಳ ಒಂದು ಚಿಕ್ಕ ಬೆಸ್ತರ ಹಳ್ಳಿ, ಆಸುಪಾಸಿನಲ್ಲಿ ದೊಡ್ಡ ಪೇಟೆ ಪಟ್ಟಣಗಳಿಲ್ಲ. ಈ ಮಟ್ಟಿಗೆ ಮಲ್ಪೆಯು ಸ್ವಲ್ಪ ಉತ್ತಮವಾದುದು ಹತ್ತಿರ ಜನಸಂಖ್ಯೆಯ ಊರುಗಳಿವೆ

ಮಂಗಳೂರಿನ ಮತ್ತು ಮೈಸೂರು ಕಡೆಯ ವ್ಯಾಪಾರವನ್ನು ಆ ಕಡೆ ಸಾಗಿಸದಿದ್ದರೆ ಭಟ್ಕಳವು ಹೆಚ್ಚು ಉಪಯುಕ್ತವಾಗದು ಇದರಿಂದ ಮದ್ರಾಸು ಬಂದರದ ಉತ್ಪತ್ತಿಗೆ ಹಾನಿಯಿದೆ, ಮಾತ್ರ ಮಂಗಳೂರು ಸಂಪೂರ್ಣ ಖಾಲಿಯಾಗುವುದು ಇದು ದೊಡ್ಡ ನಷ್ಟವೆ ಸರಿ

ಒಂದುಕಾಲು ಲಕ್ಷ ಜನಸಂಖ್ಯೆಯ ಮಂಗಳೂರು ಅಭಿವೃದ್ಧಿಹೊಂದುವ ವ್ಯಾಪಾರ ಕೇಂದ್ರ. ಹತ್ತಿರ ಜನನಿಬಿಡ ಸಣ್ಣ ಪೇಟೆ ಪಟ್ಟಣಗಳಿವೆ ದ ಕನ್ನಡ, ಮೈಸೂರು, ಕೊಡಗುಗಳ ಸರಕುಗಳ ಸಮುದ್ರ ದ್ವಾರವಿದು

ಮಲ್ಪೆಯೂ ಮೈಸೂರಿಗೆ ಅಲ್ಪ ಸೇವೆ ಮಾಡಬಹುದು. ಈ ಸಂದರ್ಭದಲ್ಲೂ ಮಂಗಳೂರು ವ್ಯಾಪಾರ ಒಂದು ಮೀನು ಹಳ್ಳಿಗೆ ರವಾನೆಯಾಗಿ ಇದು ನಿರುದ್ಯೋಗ ಪ್ರದೇಶವಾಗಬಹುದು.

ಮಂಗಳೂರಿನ ಹಕ್ಕು

ಇಲ್ಲಿಯ ವ್ಯಾಪಾರ ಶ್ರೇಯಸ್ಕರ ಅಭಿವೃದ್ಧಿಹೊಂದುತ್ತಲಿದೆ. ವರ್ಷವಿಡೀ ಹಡಗು ಚಲಾವಣೆಯ ಸೌಕರ್ಯ ಕಲ್ಪಿಸಿದರೆ ಹೆಚ್ಚೆಚ್ಚು ಹಡಗುಗಳು ಸರಕು ಒಯ್ಯಲೂ ಇಳಿಸಲೂ ಬರುವವು. ಇದುತನಕ ಮಲ್ಪೆಯಿಂದ ತಲಚೇರಿ ತನಕ ಹಂಚಿ ಬೀಳುವ ಪಶ್ಚಿಮ ಘಟ್ಟದ ಉತ್ಪತ್ತಿಗಳು ನೇರವಾಗಿ ಮಂಗಳೂರಿಗೇ ಬರುವಂತಾಗುವುದು ತುಂಬಿಸುವ ಕೆಲಸವೂ ಕಮ್ಮಿ ಅಪಾಯ ಕಾರಕವೂ, ಕಮ್ಮಿ ಶ್ರಮದಾಯಕವೂ, ಕಮ್ಮಿ ಖರ್ಚಿನದೂ ಆಗುವುದು ಸಣ್ಣ ಬಂದರುಗಳಿಗಾಗುವ ನಷ್ಟವೂ ಇದರಿಂದ ಬಹಳ ಕಡಿಮೆ. ಅದೇ ಸಮಯಕ್ಕೆ ಮಂಗಳೂರಿನ ಒಟ್ಟು ಆದಾಯವು ಹೆಚ್ಚುವುದು ಈ ನಗರ ವ್ಯಾಪಾರ ಕೇಂದ್ರ ಮಾತ್ರವಲ್ಲ ಕೈಗಾರಿಕೆ ಕೇಂದ್ರವೂ ಆಗಿದೆ ಪ್ರಖ್ಯಾತ ಶಿಕ್ಷಣ ಸಂಸ್ಥೆಗಳೂ ಇಲ್ಲಿವೆ ಕರ್ನಾಟಕ ಪ್ರಾಂತ್ಯವಾದಾಗ ಮುಖ್ಯ ನಗರವಾಗಲು ಮಂಗಳೂರಿಗೆ ಹೆಚ್ಚು ಅರ್ಹತೆವುಂಟಾಗುವುದು ಹಡಗು ಸಂಚಾರಕ್ಕೆ ಸುರಕ್ಷಿತಗೊಳಿಸಲ್ಪಟ್ಟರೆ ಈ ನಗರದ ವ್ಯಾಪಾರ ಉದ್ಯೋಗಗಳು ಹೆಚ್ಚುವವು

ಅಭಿವೃದ್ಧಿ ಯೋಜನೆ

ಭಟ್ಕಳವನ್ನು ಮೈಸೂರ್ ರೈಲ್ವೆಗಲ್ಲದೆ ಬೇರೆ ಸೇರಿಸಲಿಕ್ಕೆ ಸಾಧ್ಯವಿಲ್ಲ ಮಂಗಳೂರಿನಿಂದ ಎಸ್ ಐ ಆರ್ ಲ್ಯಾನಿಗೂ ಹುಬ್ಬಳ್ಳಿಯಿಂದ ಎಂ ಎಸ್ ಎಮ್ ಲ್ಯಾನಿಗೂ ಸೇರಿಸುವುದೆಂದರೆ ಕಲ್ಪನಾತೀತ ಕಷ್ಟಕರ ಸಂಗತಿ.

ಮಂಗಳೂರನ್ನು ಕಡೂರಿನೊಂದಿಗೆ ರೈಲ್ವೆ ಮೂಲಕ ಜೋಡಿಸಿದರೆ ಮೈಸೂರು, ಹುಬ್ಳಿ, ಪೂನಾ ಮತ್ತು ಬೊಂಬಾಯಿ ಕಡೆಯ ವಿಶಾಲ ಪರಿಮಾಣದ ಆಮದು ರಫ್ತುಗಳನ್ನು ಸೆಳೆಯಬಹುದಾಗಿದೆ ಕ್ರಮೇಣ ಕಾರ್ಕಳದಿಂದಾಗಿ ಉಡುಪಿ ಮಲ್ಪೆಗಳನ್ನು ಜೋಡಿಸಬಹುದು.

ಖರ್ಚಿನ ದಾಮಾಶಯು

ಭಟ್ಕಳವನ್ನು ಸುವ್ಯವಸ್ಥಿತ ಬಂದರನ್ನಾಗಿ ಮಾಡಲು ಅಲ್ಲಿಯ ಮರಳು ದಿನ್ನೆ, ನೆಲಭಾಗ ಮತ್ತು ನೀರಡಿಯಲ್ಲಿ ಸಿಕ್ಕಬಹುದಾದ ಬಂಡೆಗಳ ದೃಷ್ಟಿಯಿಂದ ಖರ್ಚು ಸುಮಾರು 4 ಕೋಟಿಯಷ್ಟಾಗಬಹುದು ಮಲ್ಪೆಯಲ್ಲೂ ಸಮಾನ ಪರಿಸ್ಥಿತಿಯಿರುವುದರಿಂದ ಅದರ ಸಿದ್ಧತೆಗೆ 3ರಿಂದ 4 ಕೋಟಿಗಳ ತನಕ ಖರ್ಚು ತಗಲುವುದು.

ಮಂಗಳೂರಿನ ಬಂದರದ ಆಸುಪಾಸಿನಲ್ಲೆಲ್ಲೂ ಬಂಡೆಗಳಿಲ್ಲ ಸಮುದ್ರದಿಂದ ನದಿಮುಖದ ತನಕ $1\frac{1}{2}$ ಮೈಲು ತನಕ ಹಡಗು ಚಲಾವಣೆಗೆ ಭದ್ರವಾದ ಆಳವನ್ನು ಮಾಡಬೇಕಾಗುವುದು ನಂತರ ಗುರ್ಪುರ ನದಿ ತನಕ ತಳವನ್ನು ಅಗೆಯಬೇಕಾಗುವುದು ಮಂಗಳೂರಿನ ಮಟ್ಟಿಗೆ ಈ ಖರ್ಚು ಇತರ ಕಡೆಗಳಿಗಿಂತ ತುಂಬಾ ಕಡಿಮೆಯಾಗುತ್ತದೆ



ಉಪಸಂಹಾರ

ಖರ್ಚು, ಸೌಕರ್ಯ ಮತ್ತು ಅತೀ ಹೆಚ್ಚು ಒಳಿತುಗಳ ದೃಷ್ಟಿಯಿಂದ ಮಂಗಳೂರನ್ನೇ ದೊಡ್ಡ ಬಂದರಾಗಿ ಮಾಡುವುದು ಲಾಭಕರ. ಇಲ್ಲಿಂದ ಗೇರುಬೀಜ, ಅದರ ಎಣ್ಣೆ, ಕಾಫಿ, ಏಲಕ್ಕಿ, ಕರಿಮೆಣಸು, ಅಡಿಕೆ, ಹಂಚು, ಮರಮಟ್ಟು, ಮೀನು, ಅದರ ಗೊಬ್ಬರ ಮತ್ತು ಪಶ್ಚಿಮ ಘಟ್ಟದ ಉತ್ಪತ್ತಿಗಳು ರಫ್ತಾಗುತ್ತಿವೆ. ಬೆಳೆಯುವ ವ್ಯಾಪಾರ ಹಲವು ತಲಾಂತರಗಳಿಂದ ಸಾಗುತ್ತಿದೆ 30 ಹಂಚಿನ, 5 ಕಾಫಿಯ, 5 ಗೇರುಬೀಜದ ಕಾರ್ಖಾನೆಗಳೂ ಅನೇಕ ಮೀನು ವೃತ್ತಿ ಬಯಲುಗಳೂ, ನೇಯಿಗೆ ಕಾರ್ಖಾನೆಗಳೂ ಇಲ್ಲಿವೆ. 2 ಕೋಟಿ ರೂಪಾಯಿ ವೆಚ್ಚದ ಸಹಕಾರಿ ಪದ್ಧತಿಯ 4 ಸಾವಿರ ಮನೆಗಳನ್ನೂ ಮಧ್ಯ ಮತ್ತು ಮಜೂರ ವರ್ಗದವರಿಗಾಗಿ ಕಟ್ಟಲು ಯೋಜನೆಯಾಗಿದೆ

ಭಟ್ಕಳ ಮಲ್ಪೆಗಳನ್ನು ಅಭಿವೃದ್ಧಿ ಮಾಡಲು ಹಿಡಿದರೆ ಮಂಗಳೂರು ಕ್ರಮೇಣ ನಾಮಶೇಷವಾಗುವುದು ಆದರೆ ಮಂಗಳೂರನ್ನು ಬಂದರ ಮಾಡಲು ಹಿಡಿದರೆ ಭಟ್ಕಳ ಮಲ್ಪೆಗಳಿಗೆ ಯಾವ ಹಾನಿಯೂ ತಟ್ಟುವುದಿಲ್ಲ ಇಲ್ಲಿ ಖರ್ಚು ಕಡಿಮೆ, ಸೌಕರ್ಯ ಹೆಚ್ಚು ಸಂಬಂಧಪಟ್ಟ ಎಲ್ಲಾ ಸರಕಾರಗಳು ಈ ವಿಷಯವನ್ನು ಗಮನಿಸುವರಾಗಿ ಹಾರೈಸಲಾಗಿದೆ

◇

ಇಂಡೋನೇಶ್ಯದ ಪ್ರಜಾಪ್ರತಿನಿಧಿ ಸರಕಾರದವರು ಈ ಮುಂಚೆ ಮಾಡಿದ ಶಾಂತಿ ಒಪ್ಪಂದದ ಕರಾರುಗಳನ್ನು ಮುರಿದು ತಮ್ಮ ಸೈನ್ಯಗಳ ಮೇಲೆ ಆಕ್ರಮ ದಬ್ಬಾಳಿಕೆ ನಡೆಸುವರೆಂದು ಡಚ್ ಸರಕಾರದ ಒಂದು ಪ್ರಕಟಣೆ ತಿಳಿಸುತ್ತದೆ ಇದು ಸುಳ್ಳೆಂ... ಮರುವಾದಿಗಳ ರೇಡಿಯೊ ಸಾರಿದೆ

◇

...ದ ಜಗತ್ತಿನಲ್ಲಿ ಮಿಲಿಯಾವಧಿ ಒಸ... ಒಂದಲ್ಲ ಒಂದು ರಾಜಕೀಯ ...ಇಲ್ಲವೆ ಸಮಾಜ ವಾದಿ ಪಕ್ಷದ ದಬ್ಬಾಳಿಕೆಗೆ ಗುರಿಯಾಗಿರುವುದರಿಂದ ವಿಶ್ವದ ನೀತಿಪ್ರಿಯ ಮುಖಂಡರು ಜಗತ್ತಿನಲ್ಲಿ ಸಾಮಾಜಿಕ ನ್ಯಾಯ ಸ್ಥಾಪನಗಾಗಿ ಯತ್ನಿಸಬೇಕೆಂದು ಪೋಪ್ ಸಾಹೇಬರು ವಿನಂತಿಸಿಕೊಂಡಿರುವರು

◇

...ನದ ಪ್ರಮುಖ್ಯ ನಗರಗಳಲ್ಲಿ ಪೋಲಿಸ್ ರಾಜ್ಯವು ಸ್ಥಾಪಿಸಲ್ಪಟ್ಟಿದೆಯೆಂದು ರಶ್ಯನ ರೇಡಿಯೊದಲ್ಲಿ ಆಪಾದಿಸಲಾಗಿದೆ. ಕಮ್ಯೂನಿಸ್ಟ್ ಪ್ರಭಾವನ್ನು ತಡೆಗಟ್ಟುವ ಅಲ್ಲಿನ ಚೆಂಗ್ ಸರಕಾರದ ನಿರ್ಧಾರವೇ ಈ ಪರಿಸ್ಥಿತಿಗೆ ಕಾರಣವೆಂದು ಹೇಳಲಾಗಿದೆ

◇

ಭಾರತದ ಬ್ರಿಟಿಷ್ ಯೋಜನೆಯ ಕುರಿತು ಅಮೇರಿಕನ್ ಸರಕಾರಿ ಕೇಂದ್ರಗಳಲ್ಲಿ ಯಾವ ಅಭಿಪ್ರಾಯ ಸೂಚಿಸಲಾಗಲಿಲ್ಲ ಪರ್ಲ್ ಬಕ್ ಮಹಿಳೆ ಮತ್ತಿತರ ಅಧಿಕಾರೇತರ ಮಹನೀಯರು "ಒಗ್ಗಟ್ಟಿನಿಂದ ಭಾರತೀಯರು ಇದನ್ನು ಕಾರ್ಯರೂಪಕ್ಕೆ ತಂದರೆ ಶ್ರೇಯಸ್ಸಿದೆ" ಎಂಬಭಿಪ್ರಾಯ ಸೂಚಿಸಿರುವರು.

ಗಾಂಧಿ ವಿಚಾರ ತರಂಗ

ಕಳ್ಳ ಪೇಟೆ

"ಕಳ್ಳಪೇಟೆಯಲ್ಲಿ ತೊಡಗಿರುವ ವ್ಯಾಪಾರಿಗಳ ಪೈಕಿ ಕೆಲವರಿರಬಹುದಾದರೂ ನಿಜವಾದ ಕಳ್ಳ ಪೇಟೆ ಸರಕಾರಿ ಕಚೇರಿಗಳಲ್ಲಿರುವ ಲಂಚ ಗುಳಿತನದಲ್ಲಿಯೇ ಇದೆಯೆಂದು ಒರ್ವ ವರ್ತಕನು ನನಗೆ ತಿಳಿಸಿದ್ದಾನೆ. ಸರಕಾರವೇ ಒಂದು ವ್ಯಾಪಾರಿ ಸಂಸ್ಥೆ. ಆದರೆ ಸರಕಾರಿ ನೌಕರರ ಕೈ ಈ ಕಳ್ಳ ಪೇಟೆಯ ವ್ಯವಹಾರದಲ್ಲಿರುವುದು ವ್ಯಸನಾಸ್ಪದವಾದ ಸಂಗತಿ ಅವರು ಯುರೋಪಿನವರಿರಲಿ, ಹಿಂದೀಯರಿರಲಿ, ಹಿಂದೂಗಳಿರಲಿ, ಮುಸಲ್ಮಾನರಿರಲಿ ಪರಿಣಾಮ ಒಂದೇ. ಸರಕಾರಿ ನೌಕರರೂ ಜನರೂ ಲಂಚವಂಚನೆಗಳಿಗೆ ಉತ್ತೇಜನ ಕೊಟ್ಟರೆ ದೇಶದ ಭಾಗ್ಯಕ್ಕೆ ಅರದಾಳವೇ ಸರಿ ಪ್ರಾಮಾಣಿಕ ಸಹಕಾರ ದೊರೆಯದಿದ್ದರೆ ರಾಜಾಜಿಯವರಾಗಲಿ, ರಾಜೇನ್ ಬಾಬುಗಳಾಗಲಿ ಏನು ಮಾಡಬಲ್ಲರು?

◈

ಕರ್ತವ್ಯ

"ಜನರಿಂದ ಆರಿಸಿ ಬಂದ ಪ್ರತಿನಿಧಿ ಯಾವನಾದರೂ ಖಡ್ಗ ಬಲದಿಂದ ಆಳಲಾರನು. ಪ್ರಜಾತಂತ್ರ ರಾಜ್ಯದಲ್ಲಿ ಅದು ಸಾಧ್ಯವಿಲ್ಲ ಆದುದರಿಂದ ಸರಕಾರಿ ನೌಕರರು ಹಿಂದೂಸ್ಥಾನದ ಉಂಡ ಉಪ್ಪಿಗೆರಡು ಬಗೆಯದೆ ವಂಚನೆ ಅಪ್ರಾಮಾಣಿಕತೆಗಳಿದ್ದಲ್ಲೆಲ್ಲ ಅವನ್ನು ತಿರಸ್ಕರಿಸಬೇಕು ಸಾರ್ವಜನಿಕರಾದರೋ ಸ್ವಾತಂತ್ರ್ಯದಿಂದ ತಮ್ಮ ಮೇಲೆ ಬಿದ್ದ ದೊಡ್ಡ ಹೊಣೆಗಾರಿಕೆಯನ್ನು ಮನಗಂಡು ಸತ್ಯ ಅಹಿಂಸೆಗಳ ಕೈಬಿಡದೆ ಪೂರ್ಣ ಕರ್ತವ್ಯ ಪರಾಯಣರಾಗಬೇಕು ಅದರಿಂದ ನಮ್ಮ ಸ್ವಂತ ಪ್ರತಿಷ್ಠೆ ಬೆಳೆದೀತು ಮಾತ್ರವಲ್ಲ ಹಿಂದೂಸ್ಥಾನದಿಂದ ಬ್ರಿಟಿಷರು ಹೊರಟು ಹೋಗುವಾಗ ಇಲ್ಲ ಸುವ್ಯವಸ್ಥಿತ ಆಡಳಿತೆ ಸಾಗುತ್ತಲೆ ಇರುವಂತಾಗುವುದು. ಬ್ರಿಟಿಷರು ತಮ್ಮ ಕೃತಿಯಿಂದಲೇ ವಿಶ್ವಾಸ ಘಾತ ಮಾಡಿದ ಹೊರತು ಅವರ ಅಪ್ರಾಮಾಣಿಕರೆಂದು ನಾವು ಬಗಯಬಾರದು ವ್ಯಾಸ್‌ರಾಯರು ಪ್ರಾಮಾಣಿಕರೆಂದು ಸ್ವತಃ ನನಗೆ ನಂಬಿಕೆಯಿದೆ ಆದರೆ ನಾವು ಸ್ವತಃ ಪ್ರಾಮಾಣಿಕರಾಗಿದ್ದರೇನೇ ನಮ್ಮ ರಾಜ್ಯ ನೌಕೆಯನ್ನು ಸುರಕ್ಷಿತವಾಗಿ ರೇವಿಗೆ ಮುಟ್ಟಿಸಬಲ್ಲೆವು"

◈

ಮನಸ್ಸಿಲ್ಲದ ಒಪ್ಪಿಗೆ

"ಆಕಾಶವಾಣಿಯಲ್ಲಿ ಜೂನ್ 3ರಂದು ನೆಹರು, ಜಿನ್ನಾ, ಬಲ್ದೇವ ಸಿಂಗರು ಜನರನ್ನುದ್ದೇಶಿಸಿ ಮಾತನಾಡಿದ್ದರು ಹಿಂದೂಗಳಲ್ಲಿ ಅಧಿಕಾಂಶರು ವಿಷಣ್ಣರಾಗಿದ್ದರು ಪಂಡಿತಜಿಯವರ ಆಕಾಶವಾಣಿ ಅತ್ಯಂತ ವಿಷಾದ ಪೂರ್ಣವಾಗಿತ್ತು. ಹಿಂದೂಸ್ಥಾನವನ್ನು ತುಂಡರಿಸುವುದು ಎಲ್ಲರಿಗೂ ಅಪ್ರಿಯವಾದುದು ಆದರೆ ಹಿಂದೂಸ್ಥಾನವನ್ನು ನಿರಂತರವಾಗಿ ರಕ್ತ ಸುರಿಸಗೊಡುವುದು ಯೋಗ್ಯವಲ್ಲ ಇಂಥ ಪ್ರಸಂಗದಲ್ಲಿ ಶಸ್ತ್ರಕ್ರಿಯೆಯೇ ಮೇಲು - ಮೂರು ಲೋರಿ ತುಂಬ ಮುಸ್ಲಿಮರು ಜಿನ್ನಾರ ಮನೆಗೆ ಹೋಗಿ ಪಾಕಿಸ್ತಾನ ಜಿಂದಾಬಾದ್ ಎಂದು ಜಯ ಘೋಷ ಮಾಡಿದರಂತೆ ಆದರೆ ಅನೇಕ ಮುಸ್ಲಿಮರು ನನ್ನ (ಗಾಂಧೀಜಿಯ) ಬಳಿಗೆ ಬಂದು ನಡೆದುದಕ್ಕೆ ದುಃಖ ವ್ಯಕ್ತಗೊಳಿಸಿದ್ದಾರೆ. ಪಂಜಾಬ ಬಂಗಾಲಗಳಲ್ಲಿ ಅನೇಕಾನೇಕ ಮುಸ್ಲಿಮರು ಅಸಂತುಷ್ಟರಾಗಿದ್ದಾರೆ."

ಬಲವಂತಕ್ಕೆ ಬಗ್ಗಬಾರದು

"ಬಲವಂತಕ್ಕೆ ಒಂದಂಗುಲವಾದರೂ ಹಿಂದೆ ಸರಿಯುವುದು ಸರ್ವಥಾ ಅಯೋಗ್ಯವೆಂದು ನಾನು ನಿಮಗೆ ಅನೇಕ ಬಾರಿ ತಿಳಿಸಿದ್ದೇನೆ. ಕೊಂಗ್ರೆಸಿಗರಲ್ಲಿ ಬಹುಸಂಖ್ಯಾಕರು 'ಒಲ್ಲದ ಪಾಲುಗಾರರು ತಮಗೆ ಬೇಡ'ವೆನ್ನುತ್ತಾರೆ. ತಮ್ಮ ಸಾಧನ ಅಹಿಂಸೆ, ಆದುದರಿಂದ ಬಲವಂತ ಸಲ್ಲದೆಂದು ಅವರ ಹೇಳಿಕೆ. ಅದು ಕಾರಣ ಹಿಂದು ಮುಂದನ್ನೆಲ್ಲ ವಿಚಾರಿಸಿದ ನಂತರ ಘಟನಾ ಸಮಿತಿಯನ್ನು ಬಹಿಷ್ಕರಿಸಿದ ಪ್ರದೇಶಗಳಿಗೆ ಭಾವಿ ಒಕ್ಕೂಟದಿಂದ ಪ್ರತ್ಯೇಕ ಹೋಗಲು ತಾವು ಮನಸ್ಸಿಲ್ಲಗಿದ್ದರೂ ಒಪ್ಪಿಗೆ ಕೊಟ್ಟಿದ್ದಾಗಿದೆ ನನ್ನ ಅಭಿಪ್ರಾಯದಲ್ಲಿ ಮುಸ್ಲಿಂ ಲೀಗಿನ ಧೋರಣೆ ತಪ್ಪು. ಅದಕ್ಕಾಗಿ ವ್ಯಸನಪಡುತ್ತೇನೆ ಹಿಂದೂ ವರ್ಚಸ್ಸಿನ ಭಯ ತಮಗುಂಟಾಗಿದೆಯೆಂದೂ ಅದರಿಂದ ತಮ್ಮ ಮಾತೃ ಭೂಮಿಯಲ್ಲಿ ತಾವೇ ಆಳುವೆವೆಂದೂ ಅವರೆನ್ನುವುದ್ ತಪ್ಪು ನಿಜವಾಗಿ ಹಿಂದೂಸ್ಥಾನದಲ್ಲಿ ಹುಟ್ಟಿ ಬೆಳೆದವರಿಗೆಲ್ಲ ಹಿಂದೂಸ್ಥಾನ ಮಾತೃ ಭೂಮಿ ಮುಸ್ಲಿಮರ್ ಮಾತೃ ಭೂಮಿ ... ಪರಲ ... ಪರಿದು ಬಾಳುವುದೆ? ... ಭೂಮಿ ಅಲ್ಲಿನ ಹಿಂದೂ, ಸಿಖ್, ಕ್ರಿಶ್ಚನ್ ಪಾರ್ಸಿಯೆಹೂದ್ಯರೆಲ್ಲರಿಗೂ ತಾಯ್ನಾಡಲ್ಲವೇ?

ಧೀರ ಸಿಖರು

"ನನ್ನನ್ನು ಕಾಣ ಬಂದ ಧೀರ ಸಿಖರ ಮಾತು ... ಸಿಖರ ... ಕಾಲು ಲಕ್ಷ ಜನರಿಗೆ ... ಎಂಬುದಕ್ಕೆ ನಾನು ಹಚ್ಚಿದ ಅರ್ಥವನ್ನು ಅವರಿಗೆ ... ... ಲಕ್ಷ ಜನರು ... ಅವರನ್ನೆದುರಿಸಿ ಸ್ಥಿರವಾಗಿ ... ತನ ... ಗೆ ... ಅದರ ಅರ್ಥ ಇಂಥ ಶೌರ್ಯ ಶ್ರೇಷ್ಠತನವು ಶುದ್ಧತನವೂ ಆದರೆ ಮಾತ್ರ ಇರಬಲ್ಲದು ಅಹಿಂಸೆಯಿಂದೊಗೆದ ಆ ಶೌರ್ಯ ಶ್ರದ್ಧೆಗಳಿದ್ದರೆ ಸಿಖರು ಖಾಲಸಾ ಎಂಬ ಹಮ್ಮಿಯ ಹೆಸರಿಗೆ ತಕ್ಕವರಾಗುವರು. ಗ್ರಂಥ ಸಾಹೇಬದಿಂದಲೂ ಖಾಲಸಾ ಇತಿಹಾಸದಿಂದಲೂ ನಾನು ಕಲಿತ ಪಾಠ ಇದು"

◈

ಉಪವಾಸ ವಿಚಾರ

"ಪಾಕಿಸ್ತಾನವೆಂಬುದೊಂದು ಪಾಪ. ಅದಲ್ಲಿ ನಾನೆಂದೂ ಭಾಗವಹಿಸಲಾರೆನೆಂದು ನಾನು ಹಿಂದೊಮ್ಮೆ ಹೇಳಿದ್ದೆ. ಕೊಂಗ್ರೆಸ್ ಕಾರ್ಯಕಾರಿ ಸಮಿತಿ ವಿಭಜನೆಗೆ ಒಪ್ಪಿದರೆ ನಾನು ಉಪವಾಸ ಕೈಕೊಳ್ಳುವೆನೋ ಎಂದು ಕೆಲವರು ನನಗೆ ಪ್ರಶ್ನಿಸಿರುವರು ನಾನು ಯಾರೊಬ್ಬರ ಅಪ್ಪಣೆಯಂತೆ ಉಪವಾಸ ಕೈಕೊಳ್ಳಲಾರೆ ಅದೇನು ಹುಡುಗಾಟಿಕೆಯಲ್ಲಿ ಉಪವಾಸವು ಸರ್ವಥಾ ಅನಿಷ್ಟವಾಗಿಯೂ ಇರಬಹುದು ಸಿಟ್ಟಿನ ಭರದಲ್ಲಿ ಅದನ್ನು ಕೈಕೊಳ್ಳುವಂತಿಲ್ಲ ಸಿಟ್ಟಿಗೂ ಹುಚ್ಚಿಗೂ ಬಹಳ ಅಂತರವಿಲ್ಲ ಆದುದರಿಂದ ಉಪವಾಸ ಕೈಕೊಳ್ಳುವ ಮೊದಲು ಸ್ತಬ್ಧವಾದ ನನ್ನ ಅಂತರಂಗದಿಂದ ವಾಣಿ ಹೊರಡಬೇಕು ನಾನು ದೇಶದ ಸೇವಕನಂತೆ ಕೊಂಗ್ರೆಸಿನ ಸೇವಕನೂ ಆಗಿದ್ದೇನೆ ಕಾಂಗ್ರೆಸ್ಸು ನನ್ನ ಅಭಿಪ್ರಾಯಕ್ಕೆ ಒಪ್ಪದಿದ್ದರೆ ನಾನೇಕೆ ಉಪವಾಸ ಮಾಡಬೇಕು? ಇಷ್ಟಕ್ಕೆ ಸ್ವೈರಣೆಗೆಡಬಾರದು ತಾಳ್ಮೆಗೆಟ್ಟು ಉಪವಾಸ ಕೈಕೊಳ್ಳಲಾರೆ ಸುತ್ತಲೂ ಉರಿಯುವ ದಾವಾಗ್ನಿಯ ನಡುವೆ ಸ್ಥಿರವಾಗಿದ್ದು ಸದ್ಯದ ಅಂತಿಮ ವಿಜಯದಲ್ಲಿ ಶ್ರದ್ಧೆಯನ್ನು ಕಾಯ್ದುಕೊಳ್ಳಬೇಕೆಂದು ನನಗನಿಸುತ್ತಿದೆ

◈

ವಿಭಜನೆಯ ಸಮಸ್ಯೆ

ಕ... ಮುಸ್ಲಿಮರ ... ತ್ತು, ಇನ್ನು ದೇಶವನ್ನು ... ಇಲ್ಲದೆ ನಮಗೆ ... ಗೊಳಿಸಲು ಆತಂಕವಿಲ್ಲ ಎಂದು ಸಮಾಧಾನದ ನಿಟ್ಟುಸಿರು ಬಿಟ್ಟ ಅಸಂಖ್ಯ ಹಿಂದುಗಳಿದ್ದಾರೆ. ಆದರೆ ವಿಭಜನೆಯಿಂದ ಸಮಸ್ಯೆ ಬಗೆಹರಿಯುವುದಿಲ್ಲವೆಂದು ನಿಚ್ಚಳವಾಗಿ ಕಾಣುವವರೂ ಇಲ್ಲದಿಲ್ಲ ಇನ್ನು ಹೆಚ್ಚು ಕಡಿಮೆ ನಾಲ್ಕು ಕೋಟಿ ಹಿಂದೂಗಳು ಪಾಕಿಸ್ತಾನ ಭೂಮಿಯಲ್ಲಿರುವರು. ಅವರು ಕೊಂಗ್ರೆಸಿನ ನಿರ್ಣಯದಿಂದ ಸಿಟ್ಟಾಗಿ ಕೊಂಗ್ರೆಸ್ಸನ್ನೂ ನನ್ನನ್ನೂ ದೂರುತ್ತಾರೆ ಪ್ರೇಮ ಅಥವಾ ಅಹಿಂಸೆಯೆಂಬುದು ಜಗತ್ತಿನಲ್ಲೆಲ್ಲ ಅತಿ ಪ್ರಬಲವಾದ ಆಕರ್ಷಕ ವಸ್ತು ಅದು ಎಂದೂ ಯಾರಿಗೂ ಏನೂ ಹಾನಿ ಮಾಡಲಾರದು"

ಡಿ. ಡಿ. ಟಿ.
ಹೇರ್ ಲೋಷನ್
ಇದರ ಒಂದು ಲೇಪನವು
ತಲೆಯೊಳಗಿನ ಹೇನು ಮತ್ತು
ಮೊಟ್ಟೆಗಳನ್ನು ಸಂಪೂರ್ಣವಾಗಿ
ನಿರ್ಮೂಲ ಮಾಡುವುದಲ್ಲದೆ
ಮತ್ತೆ ಮೂರು ತಿಂಗಳು ವರೆಗೆ
ಸೋಂಕು ತಗಲದಂತೆ
ರಕ್ಷಿಸುವುದು

ಪ್ರಯಾಣಿಕರಿಗೆ ಸೂಚನೆ.

ಪ್ರಕೃತ ಮೂರು ತಿಂಗಳಿಗೆ ಸಿಗಬೇಕಾದ ಪೆಟ್ರೋಲು ಕೋಟಾ ದಲ್ಲಿ ಕಡಿತವಾಗಿರುವುದರಿಂದ ಕೆಲವು ಬಸ್ಸುಗಳಿಗೆ ಪೆಟ್ರೋಲು ಸಾಕಾಗದೆ ಕೆಲವು ಸರ್ವಿಸುಗಳನ್ನು ತಾತ್ಕಾಲಿಕವಾಗಿ ನಿಲ್ಲಿಸುವ ಸಂದರ್ಭ ಒದಗಿರುವುದರಿಂದಲೂ, ಮತ್ತು ಗೇಸು ಬಸ್ಸುಗಳು ಸಹ ಕಡಿಮೆ ಇದ್ದು ಅವುಗಳಿಂದ ದಿನವಹಿ ಸರ್ವಿಸುಗಳನ್ನು ರನ್ ಮಾಡಿಸಲ್ಪಟ್ಟ ನಂತರವೇ ಸಾಧ್ಯವಿದ್ದಲ್ಲಿ ಮಾತ್ರ ಸ್ಪೆಶ್ಯಲು ಸರ್ವಿಸುಗಳನ್ನು ರನ್ ಮಾಡಬೇಕಾಗುತ್ತದೆ ಅಲ್ಲದೆ ಕೆಲವೊಂದು ಸ್ಥಳಗಳಲ್ಲಿ ಕೆಲವು ಕಡೆಗಳಲ್ಲಿ ಪೆಟ್ರೋಲು ಮತ್ತು ಕೆಲವು ಕಡೆಗಳಲ್ಲಿ ಗೇಸು ಬಸ್ಸುಗಳಿರುವುದರಿಂದ ಸಾಧ್ಯವಿದ್ದ ಸ್ಥಳದ ವರೆಗೆ ಮಾತ್ರ ಸ್ಪೆಶಲ್ ರನ್ ಮಾಡಬೇಕಾಗಿರುತ್ತದೆ. ಉದಾಹರಣೆಗಾಗಿ ಮಂಗ್ಳೂರು-ಮುಲ್ಕಿ ಲ್ಯಾನಿನಲ್ಲಿ ಪಾವಂಜೆಯಿಂದ ಮುಲ್ಕಿಗೆ ಪೆಟ್ರೋಲು ಬಸ್ಸು ಮಾತ್ರ ರನ್ ಆಗುತ್ತಿರುವುದರಿಂದ, ಸ್ಪೆಶಲುಗಳನ್ನು ರನ್ ಮಾಡುವ ಸಂದರ್ಭಗಳಲ್ಲಿ ಗೇಸು ಬಸ್ಸುಗಳ ಅನುಕೂಲತೆ ನೋಡಿ ಪಾವಂಜೆ ತನಕ ಮಾತ್ರ ಸ್ಪೆಶ್ಯಲುಗಳನ್ನು ರನ್ ಮಾಡಲಾಗುವುದು

ಅಲ್ಲದೆ ಮದುವೆ ಇತ್ಯಾದಿ ಸಮಾರಂಭಗಳ ಬಗ್ಗೆ ಸ್ಪೆಶ್ಯಲುಗಳನ್ನು ರನ್ ಮಾಡ... ಸಂದರ್ಭಗಳಲ್ಲಿ R T O. ಕೊಯಂಬುತ್ತೂರು ಇವರಿಂದ ಪರ್ಮಿಶನ್ ಪಡಕೊಂಡೇ ಅಂದು ಸ್ಪೆಶ್ಯಲುಗಳನ್ನು ಗೇಸು ಬಸ್ಸುಗಳ ಅನುಕೂಲತೆ ನೋಡಿ ರನ್ ಮಾಡಬೇಕಾಗಿರುವುದರಿಂದ, ಹಾಗೆ ಸ್ಪೆಶ್ಯಲು ಬಸ್ಸುಗಳನ್ನು ಅಪೇಕ್ಷಿಸುವವರು, ಸ್ಪೆಶ್ಯಲುಗಳ ಬಗ್ಗೆ ಪರ್ಮಿಶನ್ ಪಡಕೊಳ್ಳುವರೆ ನಮಗೆ ಅನುಕೂಲವಾಗುವಂತೆ ತಮ್ಮ ಅರ್ಜಿಗಳನ್ನು ನಮಗೆ 20 ದಿವಸಗಳಿಗೆ ಮುಂಚಿತವಾಗಿ ಬರಕೊಳ್ಳಬೇಕಾಗಿ ಸಾರ್ವಜನಿಕರಿಗೆ ತಿಳಿಸಲಪೇಕ್ಷಿಸುತ್ತೇವೆ.

ಅಲ್ಲದೆ ಇತ್ತೀಚೆಗೆ ಪ್ರಯಾಣಿಕರು ಅವರ ಪ್ರಯಾಣವನ್ನು ಸರಿಯಾಗಿ ನಿರ್ಧರಿಸದೆ, ಟಿಕೇಟು ಸಿಕ್ಕುವುದಿಲ್ಲವೆಂಬುದಾಗಿ ಮೊದಲೇ ಟಿಕೇಟುಗಳನ್ನು ಪಡೆದು, ನಂತ್ರ ಪ್ರಯಾಣಿಸದೆ, ಸದ್ರಿ ಟಿಕೇಟುಗಳ ಚಾರ್ಜಿನ ಬಗ್ಗೆ ರಿಫಂಡಿಗೆ ಬರಕೊಳ್ಳುವುದು ತಿಳಿದುಬರುತ್ತದೆ ಇದರಿಂದ ಪರವೂರಿನಿಂದ ಯಾ ಇತರ ಕಡೆಗೆ ಹೋಗುವ ಬೇರೆ ಪ್ರಯಾಣಿಕರಿಗೆ ಸದ್ರಿ ದಿನ ಪ್ರಯಾಣಿಸುವರೆ ತೊಂದ್ರೆಯಾಗುವ ಪ್ರಸಂಗ ಬಂದೊದಗುವ ಕಾರಣ ಬಸ್ಸು ಪ್ರಯಾಣ ಮಾಡುವವರು ಅವರವರ ಪ್ರಯಾಣವನ್ನು ಸರಿಯಾಗಿ ನಿರ್ಧಾರ ಮಾಡಿಕೊಂಡು ಟಿಕೇಟುಗಳನ್ನು ಪಡೆಯುವುದಲ್ಲದೆ, ಅಗತ್ಯವಿದ್ದಲ್ಲಿ ಮಾತ್ರ ಪ್ರಯಾಣ ಬೆಳಸಿ, ಕಂಪೆನಿಯವರೊಡನೆ ಸಹಕರಿಸಬೇಕಾಗಿ ಅಪೇಕ್ಷಿಸಲಾಗಿದೆ.

ಮಂಗ್ಳೂರು,
29-3-1947.

ಜೊಯಿಂಟ ಮೆನೇಜರ್ಸ್,
ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD

(Incorporated in British India with Limited Lisbility)

Estd: 1906.

Head Office: UDIPI, S. Kanara.

CAPITAL:	Rs.
Authorised	25,00,000
Issued, subscribed & called up	16,00,000
Paid up	15 97,145
RESERVES	5,25,000
DEPOSITS	2,07,47,928
TOTAL RESOURCES	3,00,01,186

With a net work of branches & Agencies in all principal cities of India, we shall be able to render efficient collection services.

BUSINESS OF EVERY DESCRIPTION TRANSACTED.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷವುಂಟಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

The 1946 Record Business proves the popularity

THE BOMBAY LIFE ASSURANCE COMPANY LIMITED

Company's New Business in 1946 - 3·28 Crores

Our Cheif Agency New Business in 1946 about 54 Lakhs.

Our experience of 37 years available to you for arranging Insurance investment. It therefore, pays you to consult us to Insure or to represent

Messrs. Kochikar Brothers, Limited.

Chief Agents for South India,

Bombay Life Building,

Central Office, Udipi:

it: **MANGALORE, CALICUT, MADRAS, TRIVANDRUM, MADURA, BANGALORE AND BOMBAY.**

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with seletced ingredients under the supervision of the experienced staff. A specific for the puerperal diseases and also valuable to puerperal women as tonic. increases the vitality and sexual vigour. Also useful in habitual abortion and all diseases pertaining to the heart & lungs

Depot: Maharata Galli, Hubli.

Bhuvanendra Products Ltd.

Factory & Head Office

KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ತಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುತ್ತದೆ.

ಡಿಪೊ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೊಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. 1906

[ಸಂಪುಟ 41] ತಾರೀಕು 27—6—1947 [ಸಂಚಿಕೆ 26]

ಪಾಕಿಸ್ತಾನ ಸ್ಥಾಪನೆ—ಜಿನ್ನಾ ಸಾಹೇಬರ ವಿಜಯ—ಮುಂದೇನು?

ಇದೇ ಜೂನ್ ೨೦ನೇ ದಿನ ಬಂಗಾಳ ಶಾಸನ ಸಭೆಯ ಎರಡು ಶಾಖೆಗಳೂ ೨೩ನೇ ದಿನ ಪಂಜಾಬು ಶಾಸನ ಸಭೆಯ ಶಾಖೆಗಳೂ ಕೂಡಿ ಬಂಗಾಳ ಪಂಜಾಬುಗಳ ವಿಭಜನೆಯಾಗಬೇಕೆಂದು ತಮ್ಮ ಮತದಾನಗಳಿಂದ ಸೂಚಿಸಿರುವರು. ಇನ್ನು ಪಾಕಿಸ್ತಾನ ಸ್ಥಾಪನೆಯು ಆದಂತೆಯೇ ಸರಿ, ಈಗ ಜಿನ್ನಾ ಸಾಹೇಬರ ಆನಂದಕ್ಕೆ ಪಾರವಿಲ್ಲ. ತನ್ನ ಪ್ರಯತ್ನಗಳಿಂದ ಸ್ವತಂತ್ರ ಮುಸ್ಲಿಂ ರಾಷ್ಟ್ರವೊಂದು ಜನಿಸಿತೆಂದು ಜಿನ್ನಾ ಸಾಹೇಬರು ಸಂತೋಷಪಡುವುದರಲ್ಲಿ ಆಶ್ಚರ್ಯವಿಲ್ಲ. ೨೫ ವರ್ಷಗಳಿಂದ ಮಹಾತ್ಮಾಜೀಯವರ ನಾಯಕತ್ವದಲ್ಲಿ ಹಿಂದೀಯರು ಸರ್ವ ಕಷ್ಟಗಳನ್ನು ಅನುಭವಿಸಿ, ಬೇಕೆಂದು ಹೋರಾಡಿದ ಹಿಂದೀ ಐಕ್ಯತೆ, ಹಿಂದೀ ಸ್ವಾತಂತ್ರ್ಯಗಳು ಜಿನ್ನಾ ಸಾಹೇಬರ ಛಲದಿಂದ ಇಂದು ಹಿಂದುಸ್ಥಾನಕ್ಕೆ ತಪ್ಪಿಹೋದವು. ಬ್ರಿಟಿಷರೇನೋ ೧೯೪೮ನೇ ಜೂನಿನ ಮೊದಲು ತಮ್ಮ ಅಧಿಕಾರಗಳನ್ನು ಬಿಟ್ಟುಕೊಡುತ್ತೇನೆಂದು ಹೇಳುತ್ತಿದ್ದಾರೆ. ಆದರೆ ಅವರ ಆ ಅಧಿಕಾರಗಳನ್ನು ಚಲಾಯಿಸುವ ಸಾಮರ್ಥ್ಯವು ಯಾರಿಗೂ ಇಲ್ಲದಂತಾಗಿಯುವೆ. ಪಾಕಿಸ್ತಾನವಾಗಲಿ ಉಳಿದ ಹಿಂದುಸ್ಥಾನವಾಗಲಿ ಬ್ರಿಟಿಷ್ ಇಂಡಿಯದಂತೆ ಸ್ವಾಭಾವಿಕ, ದೈವನಿರ್ಮಿತ ಗಡಿಗಳೊಳಗಿರುವ ಭದ್ರ ರಾಷ್ಟ್ರವೆಂದೂ ಆಗವು. ಒಕ್ಕಟ್ಟಿನ ಹಿಂದುಸ್ಥಾನಕ್ಕೆ ಸಿಕ್ಕಬಹುದಾಗಿದ್ದ ಹೊರ ಜಗತ್ತಿನ ಮನ್ನಣೆಯು ಈ ತುಂಡು ರಾಷ್ಟ್ರಗಳಿಗೆಂದೂ ದೊರಕದು. ನಮ್ಮ ದೀರ್ಘಕಾಲದ ಆಶೆಯು ಹೀಗೆ ದೈವ ವಿಲಾಸದಿಂದ ತತ್ಕಾಲಕ್ಕೆ ವ್ಯರ್ಥವಾಗಿ ಹೋಗಿರುವದನ್ನು ನಾವು ಕಾಣುತ್ತೇವೆ. ಜಿನ್ನಾ ಸಾಹೇಬರೊಡನೆ ಆನಂದ ಕಹಳೆಯನ್ನೂದಲು ನಮಗೆ ಈಗ ಸಾಧ್ಯವಿಲ್ಲ.

ಇನ್ನು ಆಂಗ್ಲರು ತಮ್ಮ ಅಧಿಕಾರಗಳನ್ನು ಸಂಪೂರ್ಣ ತ್ಯಾಗಮಾಡುವ ಮೊದಲು ಎಷ್ಟು ವಿಭಜನೆಗಳಾಗಬೇಕೋ ಎಂಬ ಭೀತಿಯು ಈಗ ವಿಚಾರಿಗಳ ಮನಸ್ಸನ್ನು ಮುಸುಕಿಕೊಂಡಿದೆ. ನಿಜಾಮರಿಗೆ ಸ್ವತಂತ್ರ ಹೈದರಾಬಾದು, ಸರ್. ಸಿ. ಪಿ. ರಾಮಸ್ವಾಮಿ ಐಯ್ಯರರಿಗೆ ಸ್ವತಂತ್ರ ತಿರುವಾಂಕೂರು ಬೇಕೆಂದು ಅವರು ಹೇಳುತ್ತಿದ್ದಾರೆ. ಕಾಶ್ಮೀರಿನ ಸಂಸ್ಥಾನಾಧೀಶರ ನಿಶ್ಚಯವಿನ್ನೂ ಆಗಲಿಲ್ಲ. ಉಳಿದ ಸಂಸ್ಥಾನಾಧೀಶರಲ್ಲಿಯೂ ಅಲ್ಲಲ್ಲಿ ಕೆಲವು ಪುಟ್ಟ ನರೇಂದ್ರರು ತಮ್ಮ ಸಂಸ್ಥಾನಗಳು ಸ್ವತಂತ್ರವಾಗಬೇಕೆಂದು ಜಾಮ ರಾಮಸ್ವಾಮಿ ಅಯ್ಯರರು ಎತ್ತಿದ ಮೇಲ್ಪಂಕ್ತಿಗನುಗುಣವಾಗಿ ಬರುತ್ತಿದ್ದಾರೆ. ನರೇಂದ್ರರು ಅಪೇಕ್ಷಿಸುವುದನ್ನೆಲ್ಲಾ ಕೊಟ್ಟರೆ ಹಿಂದುಸ್ಥಾನವು ಹತ್ತು ಸ್ವತಂತ್ರ ತುಂಡುಗಳಾಗಿ ಒಡೆಯುವುದು. ಹಿಂದೀಯರ ದುರ್ಭಾಗ್ಯವು ಆಗ ಸಂಪೂರ್ಣವಾದಂತಾಗುವುದು.

ಈ ನರೇಂದ್ರ ಚಳವಳಿಗಳಿಂದ ಜನಿಸಬಹುದಾದ ಪತ್ತಿನ್ನೆತ್ತು (?) ಸ್ವತಂತ್ರ ರಾಷ್ಟ್ರಗಳಾಗಲಿ ಅದವಾ ಪಾಕಿಸ್ತಾನ ಮತ್ತು ಉಳಿದ ಹಿಂದುಸ್ಥಾನವೆಂಬ ಎರಡೇ ಸ್ವತಂತ್ರ ರಾಷ್ಟ್ರಗಳಾಗಲಿ ಪರಸ್ಪರ ಮೈತ್ರತ್ವದಿಂದ ತಮ್ಮ ಕಾರ್ಯಗಳನ್ನು ನಡಸಿ, ವಿಭಜನೆಯಿಂದ ಹಿಂದುಸ್ಥಾನಕ್ಕೆ ಕ್ಷೀಣತೆಯೊದಗದಂತೆ ಜಾಗ್ರತೆ ಇಡಬಹುದೆಂದು ಇನ್ನು ಹಲವರ ಆಶೆಯಿದೆ. ಇದು ಸಾಧ್ಯವೆಷ್ಟಿದೆಯೆಂದು ನೋಡಲಿಕ್ಕೆ ಹೆಚ್ಚು ಕಾಲ ಬೇಕಾಗದು. ಪಾಕಿಸ್ತಾನವು ಪಡುವಣ ಮುಸ್ಲಿಮ್ ರಾಷ್ಟ್ರಗಳೊಡನೆ ಮೈತ್ರತ್ವ ಭಾಂದವ್ಯಗಳನ್ನಪೇಕ್ಷಿಸುತ್ತಿದೆ. ಪಾಕಿಸ್ತಾನಿಗಳ ಕನಸಿನಲ್ಲಿ ಪೈಗಂಬರನ ನಂತರದ ಮೂರು ಖಲೀಫರ ಕಾಲದಲ್ಲಿ ಅರೇಬಿಯದ ಮುಸ್ಲಿಮರು ಸುಲಭದಲ್ಲಿ ಪಾರಸೀಕರನ್ನೆಲ್ಲ ಜಯಿಸಿ, ಇಸ್ಲಾಮ್ ಮತದ ಅರ್ಧಚಂದ್ರಾಂಕಿತ ಧ್ವಜವನ್ನು ಸುತ್ತಲಿರುವ ಇರಾಕ್, ಇರಾನ್, ಸಿರಿಯಾ, ಈಜಿಪ್ತ ಗಳಲ್ಲಿ ನೆಟ್ಟ ದಿನಗಳು ಸದಾ ಕಾಣಿಸುತ್ತಿವೆ. ಪಾಕಿಸ್ತಾನಿಗಳ ಆಶೆಗಳು ಇಕ್ಬಾಲರ ಕಾವ್ಯಗಳಲ್ಲಿ ಪ್ರತಿಬಿಂಬಿತವಾಗಿವೆ. ಇಕ್ಬಾಲರು ಹಿಂದುಸ್ಥಾನಕ್ಕೆ ತನ್ನ ಪ್ರಥಮದ ಭಕ್ತಿಯನ್ನರ್ಪಿಸಿದರೂ ಕೊನೆಗೆ ಇಸ್ಲಾಮ್ ಮತಕ್ಕೆ ನನ್ನ ಹೃದಯವನ್ನು ತೆರೆದಂತೆ ತೋರುತ್ತದೆ. ಪೈಗಂಬರನ ಕಾಲದಲ್ಲಿ ಬಹಳ ಸಿಕ್ಕಿಷ್ಟ ಸ್ಥಿತಿಯಲ್ಲಿದ್ದ ಅಲ್ಪಸಂಖ್ಯಾಕ ಅರಬರು ದೇವರ ಸಹಾಯದಿಂದ ತಮ್ಮ ಸಂಖ್ಯೆಯ ಹತ್ತು ಪಾಲು ಹೆಚ್ಚಿನ ಸೇನೆಗಳನ್ನು ಹಿಮ್ಮೆಟ್ಟಿಸಿ ಇಸ್ಲಾಮಿನ ಪತಾಕೆಯನ್ನು ಜಗತ್ತಿನ ನಾಲ್ಕು ದಿಕ್ಕಿನಲ್ಲಿಯೂ ಹಾರಿಸಿದರು, ಇದು ಈ ವಿಗ್ರಹಾರಾಧಕರೊಂದಿಗೆ ಬೆರೆತುದರಿಂದಲೋ ದೇವಾ, ನೀನು ನಿನ್ನ ಭಕ್ತರ ಕೈಬಿಟ್ಟಿರುತ್ತೀ" ಎಂಬುದೇ ಇಕ್ಬಾಲರ ಜೀವಕಾಲದ ಎರಡನೇ ಭಾಗದ ಉದ್ಗಾರವಾಗಿತ್ತು. ಪಾಕಿಸ್ತಾನಿಗಳೀಗ ತಮ್ಮ ಸ್ವತಂತ್ರ ರಾಷ್ಟ್ರದಲ್ಲಿ ಇಸ್ಲಾಮ್ ಧ್ಯೇಯಗಳೂ ಇಸ್ಲಾಮಿನ ಶರಯತ್ತಿನ ಶಾಸನಗಳೂ ಮೆರೆಯುವಂತೆ ಪ್ರಯತ್ನಿಸದಿರರು. ಪಾಕಿಸ್ತಾನಿಗಳಿಗೆ ಕಾಫರರಾಜ್ಯವಾದ ಉಳಿದ ಹಿಂದುಸ್ಥಾನದೊಡನೆ ಎಂಥ ಸ್ನೇಹದ ಆಶೆ ಉಳಿಯದು. ಹೀಗಾಗಿ ಅವರ ಉನ್ಮತ್ತ ಕಾರ್ಯಕಲಾಪಗಳಿಂದ ಹಿಂದುಸ್ತಾನವು ಪುನಃ ಐಕ್ಯತೆಯನ್ನು ಸಂಪಾದಿಸಿಕೊಳ್ಳುವ ಸಂದರ್ಭಗಳೆಲ್ಲವೂ ನಾಶವಾಗದಿರವು. ನೌಖಾಲಿ, ಪಶ್ಚಿಮ ಪಂಜಾಬುಗಳಲ್ಲಿ ಮುಸ್ಲಿಮ ಪುಂಡರು ಭೀಕರ ಅತ್ಯಾಚಾರಗಳನ್ನು ನಡೆಸುತ್ತಿರುವಾಗ ಜಗತ್ತಿನ ಉಳಿದ ನಾಗರೀಕರಲ್ಲಿ ಎದ್ದ ಹಾಹಾಕಾರದ ಹತ್ತರಲ್ಲಿ ಒಂದು ಪಾಲಾದರೂ ಹಿಂದೀ ಮುಸ್ಲಿಮರಲ್ಲಿ ತೋರುತ್ತಿರಲಿಲ್ಲ. ಮುಸ್ಲಿಮರ ದೃಷ್ಟಿ ರಾಜಕೀಯ ಸಂಗತಿಗಳಲ್ಲಿ ಇಲ್ಲ. ಮತ ಪ್ರಚಾರ, ಇಸ್ಲಾಮಿನ ಪುನರುತ್ಥಾನದ ಕಡೆಯೇ ಹೆಚ್ಚಿದೆಯಾದ್ದರಿಂದ ಹೀಗಾಗಲಿಕ್ಕೆ ಕಾರಣವಾಯಿತು. ಇನ್ನು ತಮ್ಮ ಹಿಂಸಾತ್ಮಕ ಚಟುವಟಿಕೆಗಳಿಂದ ತಮ್ಮ ಅಭೀಷ್ಟವನ್ನು ಸಿದ್ಧಿಸಿಕೊಂಡೆವೆಂಬ ಗರ್ವವು ಅವರ ಮತ, ಧರ್ಮ ಭಕ್ತಿಯೊಡನೆ ಸೇರಿ ಪಾಕಿಸ್ತಾನಿಗಳನ್ನು ಸಂಪೂರ್ಣ ಮತಾಂಧರನ್ನಾಗಿ ಮಾಡದಿರದು.

ಪಾಕಿಸ್ತಾನಿಗಳಿಂದ ಇನ್ನು ಬರಬಹುದಾದ ಗಂಡಾಂತರಗಳನ್ನು ಅಲಕ್ಷಿಸಿ, ಉಳಿದ ಹಿಂದುಸ್ಥಾನದಲ್ಲಿ ಹಿಂದಿನಂತೆಯೇ ಮುಸ್ಲಿಮರನ್ನು ಆಪ್ತ ಬಾಂಧವರಂತೆ ಸೇರಿಸಿಕೊಂಡರೆ ಉಳಿದ ಹಿಂದುಸ್ಥಾನವೂ ಬೇಗನೆ ಪಾಕಿಸ್ಥಾನವಾಗಬಹುದು. ಹಾಗೆಂದು ಮುಸ್ಲಿಮರನ್ನೆಲ್ಲಾ ಅನ್ಯ ದೇಶದ ಬೇಹುಗಾರರೆಂದು ತಿರಸ್ಕರಿಸುವುದಾದರೂ ಸಾಧ್ಯವೇ? ಹಿಂದುಸ್ಥಾನವು ಎಂದಾದರೂ ಪುನಃ ಒಂದಾಗಬೇಕಾದರೆ ಇಲ್ಲಿ ಮುಸ್ಲಿಮರಿಗೆ ಹಿಂದುಗಳೊಡನೆ ಸಮಾನತೆಯನ್ನು ಕೊಡಬೇಕಾಗಿದೆ. ಆದರೆ ದೇಶದ್ರೋಹಿಗಳಿಂದ ಇದ್ದ ಸ್ವಾತಂತ್ರ್ಯವೂ ಕಳೆದುಹೋಗದಂತೆ ನಾವು ಇಡಬೇಕಾದ ಜಾಗ್ರತೆಯನ್ನು ಇನ್ನು ಇಮ್ಮಡಿ ಇಡುವದೂ ಅತೀ ಅವಶ್ಯವಾಗಿದೆ. ಪಾಕಿಸ್ತಾನದಲ್ಲಿ ಹಿಂದೂ ಅಲ್ಪಸಂಖ್ಯಾಕರಿಗಿರುವ ಹಕ್ಕು ಬಾಧ್ಯತೆಗಳನ್ನೆಲ್ಲಾ ಉಳಿದ ಹಿಂದುಸ್ಥಾನದಲ್ಲಿ ಮುಸ್ಲಿಮರ ಅಲ್ಪಸಂಖ್ಯಾಕರಿಗೆ ನಾವು ಒದಗಿಸಬೇಕಲ್ಲದೆ, ಅವರು ಇಲ್ಲಿಯ ಇತರ ಮತಾನುಯಾಯಿಗಳಿಂದ ವಿದ್ಯೆಯು ಆರ್ಥಿಕ ಸ್ಥಿತಿಗಳಲ್ಲಿ ಹಿಂದೆ ಬೀಳದಂತೆಯೂ ನಾವು

(೨ನೇ ಪುಟಕ್ಕೆ ಮುಂದುವರಿದಿದೆ)

THE
UNITED INDIA LIFE ASSURANCE
CO., LTD.

ESTD 1906] [H. O. MADRAS

SECURITY

Greater than any conferred by legislative enactments is guaranteed

by

UNITED INDIA'S TRUST ARRANGEMENT

with

THE OFFICIAL TRUSTEE TO THE GOVERNMENT OF MADRAS.

For Particulars apply to —

INSPECTORATE OFFICE
K. S. Rao Road, Mangalore.

THE CANARA BANKING CORPORATION LTD.

(Incorporated in British India with Limited Liability)

Estd: 1906.

Head Office: UDIPI, S. Kanara.

CAPITAL:	Rs.
Authorised	25,00,000
Issued, subscribed & called up	16,00,000
Paid up	15 97,145
RESERVES	5,25,000
DEPOSITS	2,07,47,928
TOTAL RESOURCES	3,00,01,186

With a net work of branches & Agencies in all principal cities of India, we shall be able to render efficient collection services.

BANKING BUSINESS OF EVERY DESCRIPTION TRANSACTED.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷಮುಂತಾದ ಚೇನ, ಪಕ್ಷವಾತ, ಮೊಡಿವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬ್ಯಾ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

The 1946 Record Business proves the popularity

THE BOMBAY LIFE ASSURANCE COMPANY LIMITED

Company's New Business in 1946 - 3·28 Crores

Our Cheif Agency New Business in 1946 about 54 Lakhs.

Our experience of 37 years available to you for arranging Insurance investment. It therefore, pays you to consult us to Insure or to represent

Messrs. Kochikar Brothers, Limited.

Chief Agents for South India,

Bombay Life Building,

Central Office, Udipi:

Branches at: MANGALORE, CALICUT, MADRAS, TRIVANDRUM, MADURA, BANGALORE AND BOMBAY.

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with seleted ingredients under the supervision of the experienced staff. A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli.**

Bhuvanendra Products Ltd.

Factory & Head Office KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ. ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು. ಸೂತಿಕಾ ರೋಗಗಳನ್ನು ಕಡೆಗಟ್ಟುವುದು. ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು. ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುವುದು.

ಡಿಪೋ: ಮರಾಠಗಲ್ಲಿ, ಹುಬ್ಬಳ್ಳಿ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು. **1906**

[ಸಂಪುಟ 41] ತಾರೀಕು 27—6—1947 [ಸಂಚಿಕೆ 26]

ಪಾಕಿಸ್ತಾನ ಸ್ಥಾಪನೆ — ಜಿನ್ನಾ ಸಾಹೇಬರ ವಿಜಯ — ಮುಂದೇನು?

ಇದೇ ಜೂನ್ ೨೦ನೇ ದಿನ ಬಂಗಾಳ ಶಾಸನ ಸಭೆಯ ಎರಡು ಶಾಖೆಗಳೂ ೨೩ನೇ ದಿನ ಪಂಜಾಬು ಶಾಸನ ಸಭೆಯ ಶಾಖೆಗಳೂ ಕೂಡಿ ಬಂಗಾಳ ಪಂಜಾಬುಗಳ ವಿಭಜನೆಯಾಗಬೇಕೆಂದು ತಮ್ಮ ಮತದಾನಗಳಿಂದ ಸೂಚಿಸಿರುವರು. ಇನ್ನು ಪಾಕಿಸ್ತಾನ ಸ್ಥಾಪನೆಯು ಆದಂತೆಯೇ ಸರಿ. ಈಗ ಜಿನ್ನಾ ಸಾಹೇಬರ ಆನಂದಕ್ಕೆ ಪಾರವಿಲ್ಲ. ತನ್ನ ಪ್ರಯತ್ನಗಳಿಂದ ಸ್ವತಂತ್ರ ಮುಸ್ಲಿಂ ರಾಷ್ಟ್ರವೊಂದು ಜನಿಸಿತೆಂದು ಜಿನ್ನಾ ಸಾಹೇಬರು ಸಂತೋಷಪಡುವುದರಲ್ಲಿ ಆಶ್ಚರ್ಯವಿಲ್ಲ. [illegible] ವರ್ಷಗಳಿಂದ ಮಹಾತ್ಮಾಜಿಯವರ ನಾಯಕತ್ವದಲ್ಲಿ ಹಿಂದಿಯರು ಸರ್ವ ಕಷ್ಟಗಳನ್ನು ಅನುಭವಿಸಿ, ಬೇಕೆಂದು ಹೋರಾಡಿದ ಹಿಂದೀ ಐಕ್ಯತೆ ಹಿಂದೀ ಸ್ವಾತಂತ್ರ್ಯಗಳು ಜಿನ್ನಾ ಸಾಹೇಬರ ಛಲದಿಂದ ಇಂದು ಹಿಂದುಸ್ಥಾನಕ್ಕೆ ತಪ್ಪಿ ಹೋದವು. ಬ್ರಿಟಿಷರೇನೋ ೧೯೪೮ನೇ ಜೂನಿನ ಮೊದಲು ತಮ್ಮ ಅಧಿಕಾರಗಳನ್ನು ಬಿಟ್ಟುಕೊಡುತ್ತೇವೆಂದು ಹೇಳುತ್ತಿದ್ದಾರೆ. ಆದರೆ ಅವರ ಆ ಅಧಿಕಾರಗಳನ್ನು ಚಲಾಯಿಸುವ ಸಾಮರ್ಥ್ಯವು ಯಾರಿಗೂ ಇಲ್ಲದಂತಾಗಿಯದೆ. ಪಾಕಿಸ್ತಾನವಾಗಲಿ ಉಳಿದ ಹಿಂದುಸ್ಥಾನವಾಗಲಿ ಬ್ರಿಟಿಷ್ ಇಂಡಿಯದಂತೆ ಸ್ವಾಭಾವಿಕ, ದೈವನಿರ್ಮಿತ ಗಡಿಗಳೊಳಗಿರುವ ಭದ್ರ ರಾಷ್ಟ್ರವೆಂದೂ ಆಗವು. ಒಕ್ಕಟ್ಟಿನ ಹಿಂದುಸ್ಥಾನಕ್ಕೆ ಸಿಕ್ಕಬಹುದಾಗಿದ್ದ ಹೊರ ಜಗತ್ತಿನ ಮನ್ನಣೆಯೂ ಈ ತುಂಡು ರಾಷ್ಟ್ರಗಳಿಗೆಂದೂ ದೊರಕದು. ನಮ್ಮ ದೀರ್ಘಕಾಲದ ಆಶೆಯು ಹೀಗೆ ದೈವ ವಿಲಾಸದಿಂದ ತತ್ಕಾಲಕ್ಕೆ ವ್ಯರ್ಥವಾಗಿ ಹೋಗಿರುವದನ್ನು ನಾವು ಕಾಣುತ್ತೇವೆ. ಜಿನ್ನಾ ಸಾಹೇಬರೊಡನೆ ಆನಂದ ಕಹಳೆಯನ್ನೂದಲು ನಮಗೆ ಈಗ ಸಾಧ್ಯವಿಲ್ಲ.

ಇನ್ನು ಅರಸರು ತಮ್ಮ ಅಧಿಕಾರಗಳನ್ನು ಸಂಪೂರ್ಣ ತ್ಯಾಗಮಾಡುವ ಮೊದಲು ಎಷ್ಟು ವಿಭಜನೆಗಳಾಗಬೇಕೋ ಎಂಬ ಭೀತಿಯು ಈಗ ವಿಚಾರಿಗಳ ಮನಸ್ಸನ್ನು ಮುಸುಕಿಕೊಂಡಿದೆ. ನಿಜಾಮರಿಗೆ ಸ್ವತಂತ್ರ ಹೈದರಾಬಾದು, ಸರ್ ಸಿ ಪಿ ರಾಮಸ್ವಾಮಿ ಐಯ್ಯರರಿಗೆ ಸ್ವತಂತ್ರ ತಿರುವಾಂಕೂರು ಬೇಕೆಂದು ಅವರು ಹೇಳುತ್ತಿದ್ದಾರೆ. ಕಾಶ್ಮೀರಿನ ಸಂಸ್ಥಾನಾಧೀಶರ ನಿಶ್ಚಯವಿನ್ನೂ ಆಗಲಿಲ್ಲ. ಉಳಿದ ಸಂಸ್ಥಾನಾಧೀಶರಲ್ಲಿಯೂ ಅಲ್ಲಲ್ಲಿ ಕೆಲವು ಪುಟ್ಟ ನರೇಂದ್ರರು ತಮ್ಮ ಸಂಸ್ಥಾನಗಳು ಸ್ವತಂತ್ರವಾಗಬೇಕೆಂದು ಜಾವು ರಾಮಸ್ವಾಮಿ ಅಯ್ಯರರು ಎಳೆದ ಮೇಲ್ಪಂಕ್ತಿಗನುಗುಣವಾಗಿ ಉಸುರುತ್ತಿದ್ದಾರೆ. ನರೇಂದ್ರರು ಅಪೇಕ್ಷಿಸುವುದನ್ನೆಲ್ಲಾ ಕೊಟ್ಟರೆ ಹಿಂದ ಸ್ಥಾನವು ಹತ್ತಿಪ್ಪತ್ತು ಸ್ವತಂತ್ರ ತುಂಡುಗಳಾಗಿ ಒಡೆಯಬಹುದು. ಹಿಂದೀಯರ ದುರ್ಭಾಗ್ಯವು ಆಗ ಸಂಪೂರ್ಣವಾದಂತಾಗುವುದು.

ಈ ನರೇಂದ್ರ ಚಳವಳಿಗಳಿಂದ ಜ[illegible] ಶಕ್ತಿಸ್ವತ್ತು ಸ್ವತಂತ್ರ ರಾಷ್ಟ್ರಗಳಾಗಲಿ ಅಥವಾ ಪಾಕಿಸ್ತಾನ ಮತ್ತು ಉಳಿದ ಹಿಂದುಸ್ಥಾನವೆಂಬ ಎರಡೇ ಸ್ವತಂತ್ರ ರಾಷ್ಟ್ರಗಳಾಗಲಿ ಪರಸ್ಪರ ಮೈತ್ರಿತ್ವದಿಂದ ತಮ್ಮ ಕಾರ್ಯಗಳನ್ನು ನಡಸಿ, ವಿಭಜನೆಯಿಂದ ಹಿಂದುಸ್ಥಾನಕ್ಕೆ ನಿಕೃಷ್ಟತೆಯೊದಗದಂತೆ ಜಾಗ್ರತೆ ಇಡಬಹುದೆಂದು ಜನ ಹಲವರ ಆಶೆಯಿದೆ. ಇದು ಸಾಧ್ಯವೆನ್ನಿದೆಯೆಂದು ನೋಡಲಿಕ್ಕೆ ಹೆಚ್ಚು ಕಾಲ ಬೇಕಾಗದು. ಪಾಕಿಸ್ತಾನವು ಪಡುವಣ ಮುಸ್ಲಿಮ್ ರಾಷ್ಟ್ರಗಳೊಡನೆ ಮೈತ್ರಿತ್ವ ಬಾಂಧವ್ಯಗಳನ್ನಪೇಕ್ಷಿಸುತ್ತಿದೆ. ಪಾಕಿಸ್ತಾನಿಗಳ ಕನಸಿನಲ್ಲಿ ಪೈಗಂಬರನ ನಂತರದ ಮೂರು ಕಲೀಫರ ಕಾಲದಲ್ಲಿ ಅರೇಬಿಯದ ಮುಸ್ಲಿಮರು ಸುಲಭದಲ್ಲಿ [illegible] ಜಯಿಸಿ, ಇಸ್ಲಾಮಿನ ವಿಜಯದ ಅರ್ಧಚಂದ್ರ [illegible] ಧ್ವಜವನ್ನು ಸುತ್ತಲಿನ [illegible], ಸಿರಿಯಾ ಈಜಿಪ್ತ ಗಳಲ್ಲಿ ನೆಟ್ಟ [illegible]ಳು ಸದಾ ಕಾಣುತ್ತಿದ್ದ ಪಾಕಿಸ್ತಾನಿಗಳ ಆಶೆಗಳು ಇಷ್ಟು ದಿನಗಳಲ್ಲಿ [illegible] ತವಾಗಿವೆ. ಇಪ್ಪತ್ತು [illegible] ಹಿಂದುಸ್ಥಾನಕ್ಕ ತನ್ನ [illegible] ಭಕ್ತಿಯನ್ನರ್ಪಿಸಿದರೂ ಕೊನೆಗೆ ಇಸ್ಲಾಮಿನ ತಕ್ಕಡಿ [illegible] ಯವನ್ನು ತೆರೆದಂತೆ [illegible] ಸ್ವರ್ಗ [illegible] ದಲ್ಲಿ ಒಹಳ ಕೃಷ್ಣ [illegible] ಲ್ಲಿದ್ದ ಅಲ್ಲಾನ [illegible] ದೇವರ ಸಹಾಯದಿಂದ ತನ್ನ ಸಂಖ್ಯೆಯು ಹತ್ತು [illegible] ಗಳನ್ನು ಹಿಮ್ಮೆಟ್ಟಿಸಿ ಇಸ್ಲಾಮಿನ ಪತಾಕೆಯನ್ನು ಜಗತ್ತಿನ ನಾಲ್ಕು ದಿಕ್ಕಿನಲ್ಲಿಯೂ ಹಾರಿಸುವರು, ಇದು ಈ [illegible] ವಿಗ್ರಹಾರಾಧಕರೊಂದಿಗೆ 'ಬೆರೆತರೆಂದಲ್ಲೋ ದೇವಾ, ನೀನು ನಿನ್ನ ಭಕ್ತರ ಕೈಬಿಟ್ಟಿರುತ್ತೀ" ಎಂಬುದೇ ಇಕ್ಬಾಲರ ಜೀವಕಾಲದ ಎರಡನೇ ಭಾಗದ ಉದ್ಗಾರವಾಗಿತ್ತು. ಪಾಕಿಸ್ತಾನಿಗಳೀಗ ತಮ್ಮ ಸ್ವತಂತ್ರ ರಾಷ್ಟ್ರದಲ್ಲಿ ಇಸ್ಲಾಮ್ ಧ್ಯೇಯಗಳೂ ಇಸ್ಲಾಮಿನ ಶರಿಯತ್ತಿನ ಶಾಸನಗಳೂ ಮೆರೆಯುವಂತೆ ಪ್ರಯತ್ನಿಸದಿರರು. ಪಾಕಿಸ್ತಾನಿಗಳಿಗೆ ಶಾಪರಂಜನವಾದ ಉಳಿದ ಹಿಂದುಸ್ಥಾನದೊಡನೆ [illegible] ಸಂಘರ್ಷದ ಆಶೆ ಉಳಿಯದು. ಹೀಗಾಗಿ ಅವರ ಉನ್ನತ ಕಾರ್ಯಕಲಾಪಗಳಿಂದ ಹಿಂದುಸ್ಥಾನವು ಪುನಃ ಐಕ್ಯತೆಯನ್ನು ಸಂಪಾದಿಸಿಕೊಳ್ಳುವ ಸಂದರ್ಭಗಳೆಲ್ಲವೂ ನಾಶವಾಗದಿರವು. [illegible] ಪಶ್ಚಿಮ ಪಂಜಾಬುಗಳಲ್ಲಿ ಮುಸ್ಲಿಮ ಗುಂಡರು ಭೀಕರ ಅತ್ಯಾಚಾರಗಳನ್ನು ನಡಸುತ್ತಿರುವಾಗ ಜಗತ್ತಿನ ಉಳಿದ ನಾಗರೀಕರಲ್ಲಿ ಎದ್ದ ಹಾಹಾಕಾರದ ಹತ್ತರಲ್ಲಿ ಒಂದು ಪಾಲಾದರೂ ಹಿಂದೂ ಮುಸ್ಲಿಮರಲ್ಲಿ ತೋರುತ್ತಿರಲಿಲ್ಲ. ಮುಸ್ಲಿಮರ ದೃಷ್ಟಿ ರಾಜಕೀಯ ಸಂಗತಿಗಳಲ್ಲಿ ಇಲ್ಲ. ಮತ ಪ್ರಚಾರ, ಇಸ್ಲಾಮಿನ ಪ್ರಸರಣದ ಕಡೆಯೇ ಹೆಚ್ಚಿದೆಯಾದ್ದರಿಂದ [illegible] ಕಾರಣವಾಯಿತು. ಇನ್ನು [illegible] ಹಿಂಸಾತ್ಮಕ ಚಟುವಟಿಕೆಗಳಿಂದ ತಮ್ಮ ಉದ್ದೇಶವನ್ನು ಸಿದ್ಧಿಸಿಕೊಂಡೆವೆಂಬ ಗರ್ವವು ಅವರ ಮತ, ಧರ್ಮ ಭಕ್ತಿಯೊಡನೆ ಸೇರಿ ಪಾಕಿಸ್ತಾನಿಗಳನ್ನು ಸಂಪೂರ್ಣ [illegible] ಮಾಡದಿರದು.

[illegible] ಇನ್ನು ಬರಬಹುದಾದ [illegible]ಗಳನ್ನು ಲಕ್ಷಿಸಿ, ಉಳಿದ ಹಿಂದುಸ್ಥಾನದಲ್ಲಿ ಹಿಂದಿನಂತೆಯೇ ಮುಸ್ಲಿಮರನ್ನು ಆಪ್ತ ಬಾಂಧವರಂತೆ [illegible]ಕೊಂಡರೆ ಉಳಿದ ಹಿಂದುಸ್ಥಾನವೂ [illegible] ಪಾಕಿಸ್ಥಾನವಾಗಬಹುದು. ಹಾಗೆಂದು ಮುಸಲ್ಮಾನರನ್ನೆಲ್ಲಾ ಅನ್ಯ ದೇಶದ ಬೇಹುಗಾರರೆಂದು ತಿಳಿದು ದೂರವಿಡುವುದಾದರೂ ಸಾಧ್ಯವೇ? ಹಿಂದುಸ್ಥಾನವು ಎಂದಾದರೂ ಪುನಃ ಒಂದಾಗಬೇಕಾದರೆ ಇಲ್ಲಿ ಮುಸ್ಲಿಮರಿಗೆ ಹಿಂದುಗಳೊಡನೆ ಸಮಾನತೆಯನ್ನು ಕೊಡಬೇಕಾಗಿದೆ. ಆದರೆ ದೇಶದ್ರೋಹಿಗಳಿಂದ ಇದ್ದ ಸ್ವಾತಂತ್ರ್ಯವೂ ಕಳೆದುಹೋಗದಂತೆ ನಾವು ಇಡಬೇಕಾದ ಜಾಗ್ರತೆಯನ್ನು ಇನ್ನು ಇಮ್ಮಡಿ ಇಡುವದೂ ಅತೀ ಅವಶ್ಯವಾಗಿದೆ. ಪಾಕಿಸ್ತಾನದಲ್ಲಿ ಹಿಂದೂ ಅಲ್ಪ ಸಂಖ್ಯಾತರಿಗಿರುವ ಹಕ್ಕು ಬಾಧ್ಯತೆಗಳನ್ನೆಲ್ಲಾ ಉಳಿದ ಹಿಂದುಸ್ಥಾನದಲ್ಲಿ ಮುಸ್ಲಿಮ್ ಅಲ್ಪ ಸಂಖ್ಯಾತರಿಗೆ ನಾವು ಒದಗಿಸಬೇಕಲ್ಲದೆ, ಅವರು ಇಲ್ಲಿಯ ಇತರ ಮತಾನುಯಾಯಿಗಳಿಂದ ವಿದ್ಯೆಯು ಆರ್ಥಿಕ ಸ್ಥಿತಿಗಳಲ್ಲಿ ಹಿಂದೆ ಬೀಳದಂತೆಯೂ ನಾವು

(೩ನೇ ಪುಟಕ್ಕೆ ಮುಂದುವರಿದಿದೆ)

THE

UNITED INDIA LIFE ASSURANCE

ESTD 1906 | CO., LTD. | H. O. MADRAS

SECURITY

Greater than any conferred by legislative enactments is guaranteed

by

UNITED INDIA'S TRUST ARRANGEMENT

with

THE OFFICIAL TRUSTEE TO THE GOVRNMENT OF MADRAS.

For Particulars apply to —

INSPECTORATE OFFICE

K. S. Rao Road, Mangalore.

(ಗತ ಸಂಚಿಕೆಯಿಂದ)

ಪಾಕಿಸ್ತಾನ ಸ್ಥಾಪನೆ ಜಿನ್ನಾ ಸಾಹೇಬರ ವಿಜಯ.

ನೋಡಿಕೊಳ್ಳುವದು ಅವಶ್ಯವಾಗಿದೆ. ತಾವಿರುವ ರಾಷ್ಟ್ರದಲ್ಲಿ ನಿಜವಾದ ಅಭಿಮಾನವಿರುವ ಮುಸ್ಲಿಮರಿಗೆ ಪಾಕಿಸ್ತಾನಿಗಳ ದುರ್ನಡತೆಯಿಂದ ಲವಸ್ಥಾದರೂ ನೋವಾಗಬಾರದೆಂಬದೂ ನ್ಯಾಯವಾದ ಮಾತು. ಆದರೆ ಈಗ ಮುಸ್ಲಿಮರಿಗೆ ಅವರ ಸಂಖ್ಯೆಗೆ ಮೀರಿ ಕೊಟ್ಟಿರುವ ಪ್ರಾತಿನಿಧ್ಯವನ್ನು ಎಲ್ಲಾ ಸಂಸ್ಥೆ, ಇಲಾಖೆ, ಶಾಸನ ಸಭೆ, ಮಂತ್ರಿಮಂಡಲಗಳಿಂದ ಲೋಪಗೊಳಿಸುವುದರಲ್ಲಿ ನ್ಯಾಯಕ್ಕೆ ವಿರೋಧ ಮಾತಿಲ್ಲ. ಅದನ್ನು ಇನ್ನು ತಡವಿಲ್ಲದೆ ಲೋಪಗೊಳಿಸಬೇಕು.

ವಿದ್ಯಾ ಪ್ರಚಾರದಲ್ಲಿಯೂ ಅನೇಕ ವಿಚಾರಗಳ ಅವಶ್ಯವಿದೆ ಈ ತನಕ ಸಾರ್ವಜನಿಕ ಉತ್ಪತ್ತಿ, ರಾಜ್ಯದ ಕಂದಾಯಗಳಿಂದ ಮುಸ್ಲಿಮ್ ಶಾಲೆಗಳಿಗೆ ಎಷ್ಟೋ ಸಹಾಯವನ್ನು ಕೊಡುತ್ತಿತ್ತು. ಅರಬೀ ಭಾಷೆ, ಖುರಾನನ್ನು ಕಲಿಸಲಿಕ್ಕೆ ಇನ್ನು ಪ್ರತ್ಯೇಕ ಶಾಲೆಗಳು ಇಲ್ಲಿ ಅವಶ್ಯವಿಲ್ಲ ಸಾಮಾನ್ಯ ಶಾಲೆಗಳಲ್ಲಿ ಇತರ ಮತಾನುಯಾಯಿಗಳೊಂದಿಗೆ ಸಮಾನತೆಯಿಂದ ಬೆರೆತು ದೇಶಭಕ್ತಿಯನ್ನು ಸಂಪಾದಿಸಲಿಕ್ಕೆ ನಾವು ಮುಸ್ಲಿಮ್ ಬಾಲಕರಿಗೆ ಸಹಾಯ, ಪ್ರೋತ್ಸಾಹಗಳನ್ನು ಉದಾರತೆಯಿಂದ ಕೊಡಬಹುದಲ್ಲದೆ ಮತಾಂಧ ಮೌಲ್ವಿ, ಮುಕ್ರಿಗಳು ಅವರ ಎಳೇ ಮನಸ್ಸನ್ನು ದೇಶದ್ರೋಹದ ಕಡೆ ತಿರುಗಿಸಲಿಕ್ಕೆಂದೂ ಸಹಾಯವನ್ನೀಯಕೂಡದು ಅರಬೀ ಭಾಷೆ, ಕುರಾನುಗಳನ್ನು ಕಲಿಸಲಿಕ್ಕೆ ಅವರವರ ಮನೆಗಳೇ ಯೋಗ್ಯ ಸ್ಥಳವಾಗಿವೆ ರಾಷ್ಟ್ರನಿಧಿಯಿಂದ ಪೋಷಿತವಾಗುವ ಶಾಲೆಗಳಲ್ಲಿ ರಾಷ್ಟ್ರವೃದ್ಧಿಯ ವಿಚಾರಗಳೇ ಪ್ರಚಾರವಾಗಬೇಕು ಸೋವಿಯಟ್ ರಶ್ಯವು ಒಂದು ತಲಾಂತರದಲ್ಲಿ ತನ್ನ ಕಮ್ಯುನಿಜಮನ್ನು ವಿಶಾಲ ರಶ್ಯಾದ ಸರ್ವ ಜನರಲ್ಲಿಯೂ ಬಿತ್ತಿದ ರೀತಿಯನ್ನು ನಾವು ಅನುಸರಿಸಬೇಕು ಈ ವಿಚಾರದಲ್ಲಿ ಇನ್ನು ದಾಕ್ಷಿಣ್ಯ, ಅರೆನಂಬಿಕೆಗಳಿರಬಾರದು.

ಶಾಸನ ಸಭೆಗಳಿಗೆ ಪಾಕಿಸ್ತಾನಕ್ಕಾಗಿ ಹೋರಾಡಿ, ಅಲ್ಲಲ್ಲಿ ರಕ್ತಪಾತಕ್ಕೆ ಕಾರಣರಾದ ಅನೇಕ ಮುಸ್ಲಿಮರಿನ್ನು ಉಮೇದ್ವಾರರಾಗಿ ಬರಬಹುದು ಮತದಾರರ ಮತಾನುಸಾರ ತಯಾರಿಸಿದ ಪಟ್ಟಿಗಳನ್ನು ಇನ್ನೂ ಊರ್ಜಿತವಿಟ್ಟರೆ ಹಿಂದೀ ಐಕ್ಯತೆಯನ್ನು ನಾಶಪಡಿಸಲಿಕ್ಕೆ ಮುಖ್ಯ ಹೊಣೆಗಾರರಾದ ಆ ಪಾಕಿಸ್ತಾನಿಗಳು ಶಾಸನ ಸಭೆಗಳನ್ನು ಸೇರಿ ದೇಶಾಭಿವೃದ್ಧಿಯ ಕಾರ್ಯಗಳಿಗೆ ಕಂಟಕ ಸ್ವರೂಪಿಗಳಾಗಿರುವರೆಂಬುದರಲ್ಲಿ ಸಂಶಯವಿಲ್ಲ ಪ್ರತಿಯೊಂದು ಪ್ರದೇಶಕ್ಕೆ ಇನ್ನು ಮತದಾರರ ಪಟ್ಟಿಯೊಂದೇಯಾಗಬೇಕು ಯೋಗ್ಯತೆಗಳಿರುವ ಎಲ್ಲಾ ಜನರೂ ಜಾತಿಭೇದ ಪಟ್ಟಿಯಲ್ಲಿದ್ದು ಬಹುಮತದಿಂದ ತಮ್ಮ ಮತದಾನವನ್ನು ಉಪಯೋಗಿಸಿ, ತಮ್ಮ ಪ್ರದೇಶದ ಬಗ್ಗೆ ಪ್ರತಿನಿಧಿಯನ್ನಾರಿಸುವಂತಾಗಬೇಕು. ಅಂಥಾ ಪ್ರತಿನಿಧಿಗಳು ರಾಷ್ಟ್ರದ ಉನ್ನತಿ, ರಾಷ್ಟ್ರದ ಐಕ್ಯತೆಯೇ ತಮ್ಮ ಗುರಿಯೆಂದು ಪ್ರಮಾಣವನ್ನು ಮಾಡಿದ ಬಳಿಕವೇ ಅವರನ್ನು ಶಾಸನ ಸಭೆಯ ಕಾರ್ಯಗಳಲ್ಲಿ ಭಾಗವಹಿಸ ಬಿಡಬೇಕು.

ಸೈನಿಕ, ವೈಮಾನಿಕ, ನೌಕಾ ಪಡೆಗಳಲ್ಲಿ ಮುಸ್ಲಿಮರನ್ನು ಸೇರಿಸಿಕೊಳ್ಳುವ ಕಡೆ ತುಂಬಾ ವಿಚಾರವೂ ಬೇಕಾಗಿದೆ. ಸಿಂಧೂ ದೇಶವನ್ನು ಕಾಸಿಮನು ದಂಡೆತ್ತಿ ಬಂದಾಗ ಬ್ರಾಹ್ಮಣ ಅರಸನಾದ ದಾಹಿರನ ವೇತನಧಾರರಾದ ಮುಸ್ಲಿಮ್ ದಳಪತಿಗಳು ತಾವು ಮುಸ್ಲಿಮರೊಡನೆ ಹೋರಾಡುವುದಿಲ್ಲವೆಂದು ರಣರಂಗದಿಂದ ಹೊರಟುಹೋದ್ದರಿಂದ ದಾಹಿರನ ರಾಜ್ಯವು ಕಾಸಿಮ್ಮನ ವಶವಾಯಿತು,-ದಾಹಿರನ ವಿಧವೆಯು ಕಾಸೀಮನ ಶಯ್ಯಾಭಾಗಿಯಾದಳು,-ಹಿಂದುಸ್ಥಾನದಲ್ಲಿ ಇಸ್ಲಾಮಿನ ಪ್ರಥಮ ಪ್ರದೇಶವಾಯಿತು ಏಳು ಶತಮಾನಗಳ ಬಳಿಕ ರಕ್ಷಸತಂಗಡಿ (ತಾಳಿಕೋಟೆ) ಯುದ್ಧದಲ್ಲಿ ವಿಜಯ ನಗರದ ಸಾಮ್ರಾಟರೂ ಮುಸ್ಲಿಮರ ವಿಶ್ವಾಸಘಾತಕದಿಂದ ಹಿಂದೂ ಸಾಮ್ರಾಜ್ಯವನ್ನು ಕಳಕೊಳ್ಳಬೇಕಾಯಿತು ಮುಸ್ಲಿಮರು ಹಿಂದೂ ಅರಸರಿಗಾಗಿ ಜೀವಾರ್ಪಣೆ ಮಾಡಿದ ಹಲವು ದೃಷ್ಟಾಂತಗಳ ಚರಿತ್ರೆಯು ಇತರ ಕಡೆಗಳಲ್ಲಿರುವುದಾದರೂ ವಿಶ್ವಾಸಘಾತುಕಕ್ಕೆ ಎಡೆಯಾಗದಂತೆ ಸೈನಿಕ ನೌಕಾ ವಿಮಾನ ಪಡೆಗಳ ರಚನೆ ಅವುಗಳ ಪ್ಲಾಣಗಳಾಗಬೇಕೆಂಬುದನ್ನು ಯಾರೂ ಅಲ್ಲಗಳೆಯ ಸಾಧ್ಯವಿಲ್ಲ

ಈ ತನಕ ಮೋಡ ಮುಸುಕಿದ ಅನೇಕ ಸಮಸ್ಯೆಗಳೀಗ ಮುಂದೆ ಬಂದು ನಿಲ್ಲುತ್ತಿವೆ ಅವುಗಳ ಪರಿಹಾರವು ದೀರ್ಘ ದೃಷ್ಟಿ, ಗಂಭೀರ ವಿಚಾರಗಳಿಂದಾಗಬೇಕಾದ ಸಂದರ್ಭವು ಬಂದು ಬಿಟ್ಟಿರುತ್ತದೆ ಮುಂದೆ ಹಿಂದುಸ್ಥಾನವು ಒಂದೇಯಾಗಬೇಕೆಂಬುದನ್ನು ಮರೆಯದೆ ಇಂದಿನ ಪಾಕಿಸ್ತಾನವಿರಹಿತ ಹಿಂದುಸ್ಥಾನದ ಪಿಚಾರಗಳಾಗಬೇಕು. ಈ ಪವರ್ಕಾಲದಲ್ಲಿ ಜ್ಞಾನಿಯರಾದ ಜವಾಹರಲಾಲರಿನ್ನೂ ನಮ್ಮ ನಾಯಕರಾಗಿ ಉಳಿದಿರುವರೆ ಬುದ್ಧಿ ನಮ್ಮ ಭಾಗ್ಯವಾಗಿದೆ ಅವರ ನಾಯಕತ್ವದಲ್ಲಿ ನಮ್ಮ ಈ ಕಾಲಂಬ ಮುರಿದ ಹಿಂದುಸ್ಥಾನವು ಕೊಂಬುಗಳನ್ನು ಪುನಃ ಬೆಳೆಸಿ, ಲೋಕದಲ್ಲಿ ಪೂಜ್ಯತೆಯನ್ನು ಸಂಪಾದಿಸಿ ಮಾನವೋನ್ನತಿ ಜಾಗತಿಕ ಶಾಂತಿಗಳಿಗೆ ಸಹಾಯಕವಾಗಲಿ'

'C

ಮೃದುವಾದ ಚರ್ಮವನ್ನು ಬಹು ಜಾಗ್ರತೆಯಿಂದ ಕಾಪಾಡಬೇಕು

ಕುಟಿಕೂರಾ ಸಾಬೂನು ಮಗ ವಿನ ಮೃದುಚರ್ಮವನ್ನು ರಕ್ಷಿಸಲಿ!



ಕುಟಿಕೂರಾ ಸೋಪು

CUTICURA SOAP

ಗಂಡಾಂತರದೊಳಗೆ ಬಿದ್ದ ಗಡಿನಾಡು

ಪಟಾಣಿಸ್ತಾನದ ಪ್ರಾಮುಖ್ಯತೆ,

ಅತ್ಯಾಚಾರ ಪ್ರೋತ್ಸಾಹಿಸಿದ ಗವರ್ನರರು

ಗಡಿನಾಡಿನ ಭವಿತವ್ಯದ ಕುರಿತು ಹಿಂದೂ ಪತ್ರಿಕೆಯು ಈ ಕೆಳಗಿನ ಗಣನೀಯ ಸೂಚನೆಗಳನ್ನು ನಿರೂಪಿಸಿದೆ

ಮೌಂಟ್ ಬೇಟನ್ ಯೋಜನೆಯಲ್ಲಿನ ಅನೇಕ ಲೋಪ ದೋಷಗಳನ್ನು ಗಣಿಸದೆಯೂ ಕೊಂಗ್ರೆಸ್ಸು ಅದನ್ನು ಸ್ವೀಕಾರ ಮಾಡಿತು ಅಲ್ಲಿ ನಡೆಯುತ್ತಿರುವ ಭೀಕರ ಅಮಾನುಷಿಕತೆಯ ಕೃತ್ಯಗಳಂತ್ಯಗೊಳ್ಳಲೆಂಬುದೇ ರಾಷ್ಟ್ರ ಸಂಸ್ಥೆಯ ಪ್ರಧಾನ ಉದ್ದೇಶವಾಗಿತ್ತು

ಕಳೆದ ಕೆಲವು ದಿನಗಳ ವಿಹಂಗಮ ಘಟನೆಗಳನ್ನು ಪರಿಶೀಲಿಸುವಾಗ ಗಡಿನಾಡು ಪ್ರಾಂತ್ಯದಲ್ಲಿ ಮುಂದೆ ನಡಯಲಿರುವ ಮತಗಣನೆಯು ಅಪಾಯಕಾರಕವೆಂದು ಖಚಿತವಾಗುತ್ತದೆ ಈಗ ಗಡಿನಾಡಿನದೇ ಒಂದು ಬಿಕ್ಕಟ್ಟಿನ ಸಮಸ್ಯೆಯಾಗಿದೆ ಮೌಂಟ್ ಬೇಟನ್ನರ ಯೋಜನೆಯು ಪಟಾಣರ ಮುಂದೆ ಎರಡೇ ದಾರಿಗಳಿರಿಸಲ್ಪಟ್ಟಿವೆ – ಪಾಕಿಸ್ತಾನ ಇಲ್ಲವೆ ಸಂಯುಕ್ತ ಭಾರತ ಇದುತನಕ ಗಡಿನಾಡನ್ನು ಅಖಂಡ ಭಾರತದೊಳಗೂ ಮತ್ತು ಕೊಂಗ್ರೆಸ್ಸಿನ ಪರ್ಗಸ್ಸಿನೊಳಗೂ ಇಟ್ಟ ಮಂತೆ ಶ್ರಮಿಸಿದ ಖಾನ್ ಬಂಧುಗಳಿಗೆ ಇದೊಂದು ಧರ್ಮ ಸಂಕಟವಾಗಿದೆ ಕೊಂಗ್ರೆಸು ಅವರನ್ನು ಬದಿಗಿಟ್ಟು ಕಾರ್ಯಸಾಗಿಸಿದಂತ ಈಗ ತೋರುತ್ತದೆ

ಖಾನ್ ಬಂಧುಗಳಾದರೂ ತಮ್ಮ ಚೈತನ್ಯಮಯ ಜೀವನದಲ್ಲಿ ಒಂದು ಕಡೆ ಆಕ್ರಮ್ಯ ಪ್ರಚೋದಿತ ಲೀಗ್ ಅನುಯಾಯಿಗಳನ್ನೂ, ಇನ್ನೊಂದು ಕಡೆಯಿಂದ ಲೀಗ್ ಸಹಾನುಭೂತಿಯ ಗವರ್ನರ್ ರ ಅಲ್ಲಿನ ರಾಜಕೀಯ ಹಿಂತೆಯನ್ನೂ ಎದುರಿಸಿ ಅದೆಷ್ಟು ಕಷ್ಟವನ್ನನುಭವಿಸಿರುವರು ಬಹಿರಂಗವಾಗಿ ಹಿಂಸಾತ್ಮಕ ಚಟುವಟಿಕೆಗಳನ್ನು ಇನ ಪ್ರ ತುಂಬ ಮರ ಮತ್ತೊಂದ ತ ಭೂತೂರಿಯ ಮಾಡುತಿದ್ದರು

ಈಗ ಮುಂದಿನ ನಿ ಗ ಣನೆಯಲ್ಲಿ ತಾವು ಇದುತನಕ ಯಶಸ್ಸು ಸಂಪಾದಿಸಿ ಧೋರಣೆಯನ್ನೇ ಅನುಸರಿಸುವುದಂತ ಖಂಡಿತ ಆದರೆ ಪಟಾಣರ ಮಟ್ಟಿಗೆ ಹಿಂದುಸ್ಥಾನವ ಸೇರುವದಾಗಲಿ ಇಲ್ಲದೆ ಸ್ವತಂತ್ರ ಸ್ಥಾನವೊಂದನ್ನು ರಚಿಸುವ ಯೋಜನ ಅವಶ್ಯವೆ ದು ತೋರುತ್ತಿದೆ ಈಗ ಈ ಕಡೇ ಹೊತ್ತಿನಲ್ಲಿ ಕೆಂಗ್ರೆಸ ಗಡಿನಾಡಿನ ಭವಿಷ್ಯವನ್ನು ಬೇಕಾದಂತೆ ರಚಿಸಿಕೊಳ್ಳಲು ಖಾನ್ ಬಂಧುಗಳಿಗ ಸರ್ವ ಸ್ವತಂತ್ರವನ್ನು ಕೊಟ್ಟು ಅವರ ಕಬಿಟ್ಟಂತಾಗಿದೆ

ಗಡಿನಾಡಿನ ವ್ಯವಹಾರದಿಂದ ಕೈತೊಳೆದು ಕೊಂಡದ್ದರಿಂದ ಯಾವ ಸಮಸ್ಯೆಯನ್ನು ಪರಿಹರಿಸಿದಂತಾಗಲಿಲ್ಲ. ಇದರಿಂದ ಮೌಂಟ್ ಬೇಟನ್ ಯೋಜನೆಯ ಶರ್ತಗಳನ್ನೂ ಮುರಿದಂತಾಗುವುದು ಕಾರಣ ಒಂದು ವೇಳೆ ಖಾನ್ ಬಂಧುಗಳು ಮತಗಣನೆಯಲ್ಲಿ ಭಾಗವಹಿಸುವುದಿಲ್ಲವೆಂದರೆ? ಆಗಲೂ ಗಡಿನಾಡಿನ ಗಂಡಾಂತರವು ಕಡಿಮೆಯಾಗುವುದಿಲ್ಲ, ಏಕೆಂದರೆ ಬಹು ಸಂಖ್ಯಾಕ ಪಟಾಣರು ಪಾಕಿಸ್ತಾನಕ್ಕೆ ವಿರೋಧವಾಗಿದ್ದಾರೆಂದು ವಿಶ್ವಾಸವಿದ್ದವರೂ ಇದ್ದಾರೆ. ಈ ಸಂದರ್ಭದಲ್ಲಿ ಅಲ್ಪಸಂಖ್ಯಾಕರಾಗಿರಬಹುದಾದ ಲೀಗ್ ಅನುಯಾಯಿಗಳಿಗೆ ಸುಲಭ ದ್ವಾರ ಮಾಡಿಕೊಟ್ಟಂತಾಗುತ್ತದೆ.

ಇಂತಹ ಪರಿಸ್ಥಿತಿಯಲ್ಲಿ ಗಡಿನಾಡಿನ ಮುಖಂಡರು ಮೂರನೆಯ ದಾರಿಯಾದ ಪಟಾಣಿಸ್ತಾನದ ಕೇಳಿಕೆಯನ್ನು ಮುಂದರಿಸಿದ್ದು ಸಹಜವೇ ಆಗಿದೆ. ಸ್ವತಂತ್ರ ಪ್ರಿಯರಾದ ಪಟಾಣರಿಗೆ ಇದೇ ಯೋಗ್ಯವಾದುದು ಕೊಂಗ್ರೆಸು ಕೂಡ ಪಟಾಣರ ಇಚ್ಛೆಗನುಸಾರವಾಗಿ ಬ್ರಿಟಿಷ್ ಬಂಧನವನ್ನು ಕಿತ್ತೊಗೆಯುವ ಧ್ಯೇಯಬದ್ಧವಾದುದೂ ಪಟಾಣ-ಕೊಂಗ್ರೆಸ್‌ಗಳ ಇದುತನಕದ ಆಪ್ತತೆಗೆ ಕಾರಣವಾಗಿತ್ತು ಈಗ ಬ್ರಿಟಿಷರು ಊರು ಬಿಟ್ಟು ಹೋಗುವಾಗ ಪಟಾಣರು ಕರಾಚಿಯಲ್ಲಿರುವ ಇನ್ನೊಂದು ಸರಕಾರಕ್ಕೆ ಬಗ್ಗಿಕೊಂಡಿರಲಿಚ್ಛಿಸುವರೆಂಬ ಮಾತು ಸುಳ್ಳು

ಈಗ ಈ ಪಟಾಣಿಸ್ತಾನದ ಸೊಲ್ಲೀ ಮೌಂಟ್ ಬೇಟನ್ ಯೋಜನೆಯಲ್ಲಿಲ್ಲ ಅಂದ ಮೇಲೆ ಲೀಗು ಸಹಜವಾಗಿ ಅದನ್ನು ವಿರೋಧಿಸುವುದು ಮಾತ್ರವಲ್ಲ ಎಂದಿಗೂ ಸ್ವಾವಲಂಬಿಯಾಗಿಬಲ್ಲ ಪ್ರಾಂತ ಗಡಿನಾಡಲ್ಲ ಅದಕ್ಕೆ ಹೊರಗಿನ ಆರ್ಥಿಕ ಮತ್ತು ಆಡಳಿತ ಸಹಾಯಗಳು ಬೇಕೇಬೇಕು ಈ ಸಂಕಷ್ಟ... ಇದನ್ನು ತಪ್ಪಿಸದಿದ್ದರೆ ನಮ್ಮ ದೇಶದ ... ಯಲ್ಲಿರುವ ಆ ಪ್ರಾಂತ್ಯವು ಸುಲಭವಾಗಿ ಹತ್ತಿರದ ವಿದೇಶಿಯರ ... ಸ್ವಾರ್ಥ ವಾಂಛೆಗೆ ಬಲಿಯಾಗಬಹುದು ಆದರಿಂದ ಭಾರತಕ್ಕೆ ತುಂಬಾ ಗಂಡಾಂತರವಿದೆಯೆಂಬುದು ಸ್ವತಃ ಸಿದ್ಧ ಆದುದರಿಂದ ಗಾಂಧೀಜಿ ಅಂದಂತೆ ಗಂಡಾಂತರವು ... ಮುಂತ್ರಿ ಮಂಡಳಿಯ ತ್ರಾಸದಲ್ಲಿ ಭಾರತ ಪ್ರಾಂತ್ಯದ ಕೊಂಗ್ರೆಸ್ಸಿಗ ಪಾಕಿಸ್ತಾನ ಪ್ರಾಂತ್ಯದ ಲೀಗಿಗೂ ಈ ಗಂಡಾಂತರವಿದೆ

... ಪಟಾಣರ ಹಾರೈಕೆಗಳಿಗನು ... ಭಾರತಕ್ಕೆ ಗಡಿನಾಡಿನ ನೆಮ್ಮದಿಯಲ್ಲಿರುವ ಮಹತ್ವದ ದೃಷ್ಟಿಯಿಂದಲೂ ಈಗೊಂದು ಪರಿಹಾರವನ್ನು ಹುಡುಕಲೇ ಬೇಕಾಗಿದೆ ಮೌಂಟ್ ಬೇಟನ್ ಯೋಜನೆಯಲ್ಲಿ ಇದಕ್ಕೆ ಬೇಕಾದ ಬದಲಾವಣೆಗಳನ್ನು ತರಬಹುದು ಆದರೆ ರಾಜಕೀಯ ಪಕ್ಷಗಳು ಅಕ್ಕವುಟ್ಟ ಅನಾನುಕೂಲತೆಗಳನ್ನು ... ಸಮಸ್ಯೆಯ ನಿವಾರಣೆಯ ದಾರಿಯಲ್ಲಿ ತೊಡಕನ್ನುಂಟುಮಾಡಬಾರದು.

ಮಂಗಳೂರು

ಬೆಂಕಿ ಅನಾಹುತ: ಇಲ್ಲಿಯ ವಿಟೋಬ ದೇವಸ್ಥಾನ ರಸ್ತೆಯ ಬಳಿಯಲ್ಲಿ ಪೂರ್ವಕ್ಕಿರುವ ಹತ್ತಿಲೊಂದರಲ್ಲಿರುವ ಒಂದು ಮನೆಯ ಮಾಡಿಗೆ ನಿನ್ನೆ ರಾತ್ರೆ ಸುಮಾರು 10 ಗಂಟೆಗೆ ಬೆಂಕಿಹಿಡಿದುದು ಕಂಡುಬಂದು ನಿವಾಸಿಕರು ಆರ್ತನಾದ ವೆಬ್ಬಿಸಿದಾಗ ಆಸುಪಾಸಿನವರ ಸಹಾಯದಿಂದಲೂ ಅಗ್ನಿಶಾಮಕ ದಳದ ಸಕಾಲ ಆಗಮನದಿಂದಲೂ ಅನಾಹುತವನ್ನು ತಪ್ಪಿಸಲಾಯಿತೆಂದು ತಿಳಿದು ಬರುತ್ತದೆ

ಪೋಸ್ಟ್‌ಮೇನ್ ಸಂಘದ ಸಭೆ: ಈ ಸಭೆ ಅದರ ಅಧ್ಯಕ್ಷ ಶ್ರೀ ಬಿ ರೈ ಅವರ ಅಧ್ಯಕ್ಷತೆಯಲ್ಲಿ ಕಳೆದ ತಾ 15ರಲ್ಲಿ ಕಾಸರಗೋಡು ತಾಲೂಕು ಪೋಸ್ಟಾಫೀಸಿನಲ್ಲಿ ಜರಗಿತು, ಕೆಲವೊಂದು ಸುಖಕಷ್ಟಗಳ ವಿಚಾರದಲ್ಲಿನ ಕರ್ತವ್ಯಗಳೇನೆಂದು ನಿರ್ಧರಿಸಲಾಯಿತು.

ಎರಡು ತಿಂಗಳಲ್ಲಿ ಎರಡು ರಾಜ್ಯಗಳು

ಬ್ರಿಟಿಷ್ ಸಮತಾವಾದಿಗಳ ದೃಷ್ಟಿಕೋನ

ಸೈನ್ಯ ವಿಭಾಗೀಕರಣದ ಸಂದರ್ಭ

ಲೋರ್ಡ್ ಮೌಂಟ್‌ಬೇಟನ್ನರ ರಾಜನೀತಿ ಪ್ರತಿಭೆಗೂ ಅವರ ಧೈರ್ಯ ಮತ್ತು ದ್ಧೀಕ್ಷಣಕ್ಕೂ ಇಂದು ಇಡೀ ಜಗತ್ತು ಶ್ಲಾಘನೆ ಸಲ್ಲಿಸುತ್ತದೆ. ಒಂದೇ ಏಟಿಗೆ ಹಲವು ಬಿಕ್ಕಟ್ಟುಗಳನ್ನು ಕತ್ತರಿಸಿದ ಸಾಮರ್ಥ್ಯ ಹಿಂದೆ ಯಾವ ರಾಜ್ಯ ಘಟನಾ ಮುತ್ಸದ್ಧಿಯೂ ಪ್ರದರ್ಶಿಸಿರಲಿಲ್ಲ. ಮೌಂಟ್‌ಬೇಟನ್ನರ ಇತ್ಯರ್ಥದಂತೆ ಭಾರತದ ಜನ ಚುನಾಯಿತ ನಾಯಕರಿಗೆ ಬರುವ ಆಗೋಸ್ಟ್ ತಿಂಗಳಾಂತ್ಯದೊಳಗೆ ಬ್ರಿಟಿಷ್ ಸರಕಾರವು ಅಧಿಕಾರವನ್ನು ಹಂಚಿಕೊಡುವುದು. ಬ್ರಿಟಿಷರು ಬಲಾತ್ಕಾರದಿಂದ ಗೆದ್ದುದನ್ನು ಸಮಾನತೆಯ ಒಪ್ಪಿಗೆಯಿಂದ ಬಿಟ್ಟು ಕೊಟ್ಟಂತಾಗುವುದು.

ಮುಸ್ಲಿಂಲೀಗಿನ ಹೊರತು ಮತ್ತಿನ್ಯಾರೂ ವಿಭಾಗೀಕರಣದಿಂದ ತೃಪ್ತಿ ಪಟ್ಟಿಲ್ಲ. ಮುಸ್ಲಿಂ ಬಹುಸಂಖ್ಯಾಕ ಪ್ರಾಂತ್ಯಗಳು ಅದೇ ಸಿಂಧುವೆಂದು ಹೇಳಿದ ಮೇಲೆ ಮೌಂಟ್‌ಬೇಟನ್ ಯೋಜನೆಗಿಂತ ಉತ್ತಮವಾದುದು ಬೇರೊಂದಿಲ್ಲ. ಇನ್ನು ಮುಂದೆ ಮಾಡಬೇಕಾದುದನ್ನು ಶೀಘ್ರದಲ್ಲಿ ನಯವಾಗಿ ಮಾಡಬಹುದು. ನಿರೀಕ್ಷಿಸಿದಂತೆ ಪ್ರಾಂತ್ಯಗಳಲ್ಲೂ ವಿಲಾಗೀಕರಣವು ಆಗಲೇಬೇಕೆಂದಾದ ಮೇಲೆ ಭಾರತವನ್ನು ಎರಡು ಸಾಮಂತ ರಾಜ್ಯಗಳಾಗಿ ಮಾಡುವರೆ ಪಾರ್ಲಿಮೆಂಟಿನಲ್ಲಿ ಮಸೂದೆಯೊಂದು ಮಂಜೂರು ಆಗಬೇಕೆಂಬುದು ಹೊಸ ಯೋಜನೆಯ ಒಂದು ವಿಶೇಷ ಲಕ್ಷಣ.

ಕೌತುಕದ ಘಟನೆ

ಇಂದು ಭಾರತದಲ್ಲಿ ನಡೆಯುವ ಈ ರಾಜಕೀಯ ಇತ್ಯರ್ಥವು ಜಗತ್ತಿನ ಇತಿಹಾಸದಲ್ಲೇ ಒಂದು ಗಣನೀಯ ಘಟ್ಟ. ಕಾರಣ ಇದರ ಪರಿಣಾಮವು ಭಾರತೀಯರ ಮೇಲೆ ಆಗುವುದಕ್ಕಿಂತ ಸ್ವಲ್ಪ ಕಡಿಮೆ ಪ್ರಮಾಣದಲ್ಲಿ ಎಲ್ಲಾ ಯುರೋಪಿಯನ್ನರ ಮೇಲೆ ಖಂಡಿತ ಪ್ರಭಾವಿತವಾಗುತ್ತದೆ. ಇದಾದ ನಂತರ ಬ್ರಿಟಿಷ್ ಸಾಮ್ರಾಜ್ಯ ಸಂಘವನ್ನು ತ್ಯಜಿಸಿ ಸ್ವತಂತ್ರವಾಗಿರಲು ಹಿಂದೂಸ್ಥಾನಕ್ಕೆ ಸಂಪೂರ್ಣ ಅರ್ಹತೆ ಬರುತ್ತದೆ. ಇಷ್ಟಾದರೂ 1948 ಜೂನ್ ತಿಂಗಳವರೆಗಿನ ಕೆಲವು ತಿಂಗಳುಗಳ ತನಕವಾದರೂ ಹೊಸ ಎರಡು ಸಾಮಂತ ರಾಜ್ಯಗಳು ಬ್ರಿಟಿಷ್ ಸಾಮ್ರಾಜ್ಯ ಸಂಘದೊಳಗಿರುವಂತಾಗುತ್ತದೆ. ಈ ಘಟನಾ ವೈಶಿಷ್ಟ್ಯದ ಮಹತ್ವವನ್ನು ಹೆಚ್ಚಿನವರು ಅರಿತಿಲ್ಲ.

ಇಷ್ಟೊಂದು ನಾಟಕೀಯವಾದ ಘಟನೆ ಹಿಂದೆ ಇತಿಹಾಸದಲ್ಲೆಂದಾದರೂ ಸಂಭವಿಸಿದೆಯೆ? ಇದೇ ಬರುವ ಆಗೋಸ್ಟ್ 15ರ ತನಕ ಬ್ರಿಟಿಷ್ ಸಾಮ್ರಾಜ್ಯ ಒಕ್ಕೂಟದಲ್ಲಿ ಕೇವಲ ಬಿಳಿ ಜನಾಂಗಿಕರ ರಾಜ್ಯಗಳು (ಕೆನಡಾ, ದ. ಆಫ್ರಿಕಾ, ಆಸ್ಟ್ರೇಲಿಯಾ) ಮಾತ್ರ ಕೂಡಿ ಕೊಂಡಿರುತ್ತವೆ. ಆದರೆ ಆಗೋಸ್ಟ್ 15ರ ನಂತರ ಒಂದು ದೊಡ್ಡ ಆಸ್ಯದ ನಾಗರೀಕತೆಯು ಆ ಸಂಘವನ್ನು ಪ್ರವೇಶಿಸುತ್ತದೆ. ಹಿಂದೂ, ಮುಸ್ಲಿಂ ಕ್ರೈಸ್ತ ಮತ ಪ್ರಧಾನವಾದ ಮೂರು ಜನಾಂಗ ಪಂಗಡಗಳು ಇದುತನಕ ಕ್ರೈಸ್ತಮಯವಾಗಿದ್ದ ಆ ಸಂಘದ ಆಶ್ರಯವನ್ನು ಹೊಂದುವಂತಾಗುವುದು. ಇದುತನಕ ಬಿಳೀ ಸಾಮಂತ ರಾಜ್ಯ ಪ್ರಜೆಗಳ ಮುಖ್ಯ ಸ್ಥಾನವೆನಿಸುವ ಬ್ರಿಟನ್ನು ವರ್ಣ ಜನಾಂಗ ಇನ್ನೊಂದರ ಭಾಗ್ಯ ಸ್ಥಾನವಾಗುವುದು.

ವರ್ಷಗಳುರುಳಿದಂತೆ ಭಾರತವು ತನ್ನ ಪ್ರಗಲ್ಭ ಕೈಗಾರಿಕೆ ಶಕ್ತಿಯನ್ನು ಪ್ರಚೋದನಗೊಳಿಸಿದಾಗ ಈ ಸಾಮ್ರಾಜ್ಯ ಸಂಘದ ಶಕ್ತಿ ಕೇಂದ್ರವು ಮೆಲ್ಲನೆ ಪೂರ್ವದ ಕಡೆಗೆ ಚಲಿಸುವುದು. ಭಾರತ ಜನರು ಈ ಪರಿವರ್ತನೆಯನ್ನುಂಟುಮಾಡಲು ಕಾರಣಭೂತರಾಗುವರು.

ಭಾರತೀಯ ರಾಷ್ಟ್ರೀಯವಾದಿಗಳು ಬ್ರಿಟನಿನೊಡನೆ ಸ್ನೇಹ ಸೌಹಾರ್ದದಲ್ಲಿರಬಯಸುತ್ತಾರಲ್ಲದೆ ಬ್ರಿಟಿಷ್ ಸಾಮಂತ ಒಕ್ಕೂಟವನ್ನು ಪ್ರವೇಶಲಿಚ್ಛಿಸುವದಿಲ್ಲ. ಇಂದಿನವರ ಹಿರಿಯರಾದರೋ ಒಂದು ವೇಳೆ ಹಾಗೆ ಮಾಡಲು ಇಚ್ಛೆಪಡುತ್ತಿದ್ದರು. ಆದರೆ ಗೋಖಲೆ ಮತ್ತು ಮೋತಿಲಾಲ್ ನೆಹರುಗಳ ದಿನಗಳು ಕಳೆದವು. ಕೆಲವು ತಿಂಗಳ ಹಿಂದೆ ಡಿಲ್ಲಿಯಲ್ಲಿ ಸೇರಿದ ಅಖಿಲ ಆಸ್ಯಾ ಜನಾಂಗಿಕ ಪರಿಷತ್ತಿನ ನಂತರ ಭಾರತೀಯರು ತಮ್ಮ ಹತ್ತಿರದ ಬಂಧುಗಳಾದ ಆಸ್ಯನ್ನರೊಡನೇ ಭ್ರಾತೃತ್ವ ಒಲುಮೆಯನ್ನು ಕಾಣುವಂತಾಗಿದೆ.

ಈ ಶತಮಾನದಲ್ಲಿ ಯಾವೊಂದು ಜನಾಂಗವಾದರೂ ಪ್ರತ್ಯೇಕವಾಗಿರಲಾರದೆಂದೂ ಅವರಿಗೆ ತಿಳಿದಿದೆ. ಆದರೆ ಸ್ನೇಹಸೌಹಾರ್ದಕ್ಕೆ ಬ್ರಿಟಿಷ್ ಸಾಮಂತ ರಾಜ್ಯ ಸಂಘವೊಂದೇ ಅಲ್ಲ, ವಿಶ್ವ ಜನಾಂಗ ಕೂಟವು ಸಂಘ ಧೋರಣೆಗೆ ಯುಕ್ತವಾದೆಂದೂ ಅವರು ಮನಗಂಡಿರುವರು. ತಮ್ಮ ಭದ್ರತೆಗಾಗಿ ಅವರು ಈ ವಿಶ್ವಜನಾಂಗ ಸಂಘದ ಕಡೆಗೇ ನೋಡುತ್ತಿರುವರು. ಚರ್ಚಿಲ್ಲರು ವರ್ಣಿಸಿರುವ ಈ ರಹಸ್ಯಮಯ ಕಿರೀಟ ಚಕ್ರವ್ಯೂಹದ ಆಕರ್ಷಣೆಯೂ ಅವರಿಗಿಲ್ಲ. ಘಟನಾ ಸಮಿತಿಯ ಕಾರ್ಯಕಲಾಪದಿಂದ ತಿಳಿದಂತೆ ಭಾರತೀಯರು ಹೆಚ್ಚಾಗಿ ಪ್ರಜಾಪ್ರಭುತ್ವ ತತ್ವಪ್ರಿಯರೆಂದೂ ಖಚಿತವಾಗುತ್ತದೆ.

ಆದರೆ ಸಾಮಂತ ರಾಜ್ಯದ ಅನುಭವ ಪಡೆಯಲು ಭಾರತೀಯರಿಗೆ ಸ್ವಲ್ಪ ಅವಧಿಯೊದಗುತ್ತದೆ. ಅಷ್ಟರಲ್ಲಿ ಅವರು ತಮ್ಮ ಭವಿಷ್ಯವನ್ನು ನಿರ್ಧರಿಸಬೇಕು. ಶಕ್ತಿ ರಾಷ್ಟ್ರಗಳಿಂದ ಎಂದಾದರೂ ತಡೆಹಿಡಿಯಲ್ಪಡಬಹುದಾದ ಜನಾಂಗ ಸಂಘವು ತನ್ನ ಸದಸ್ಯರಿಗೆ ಭದ್ರತೆ ಕೊಟ್ಟೀತೆ ಎಂಬುದನ್ನೂ ನಾವು ವಿಚಾರಿಸಬೇಕಾಗಿದೆ.

ಜನಾಂಗ ಸಂಘಕ್ಕೆ ಎಲ್ಲಾ ಶಕ್ತಿಯನ್ನು ತನ್ನ ವಶವಿಟ್ಟುಕೊಳ್ಳಲು ಶಕ್ಯವಾಗುವುದಾದರೆ, ಎಲ್ಲಾ ರಾಷ್ಟ್ರಗಳನ್ನು ನಿಶ್ಶಸ್ತ್ರೀಕರಣಗೊಳಿಸಲಾಗುವುದಾದರೆ, ಮತ್ತು ಒಂದು ಅಂತರಾಷ್ಟ್ರೀಯ ಪೋಲಿಸ್ ಫೌಜನ್ನು ಸ್ಥಾಪಿಸಲು ಅದಕ್ಕೆ ಶಕ್ಯವಾಗುವುದಾದರೆ ಮಾತ್ರ ಅದು ತನ್ನ ಸದಸ್ಯ ಜನಾಂಗಗಳಿಗೆ ಭದ್ರತೆಯ ಭರವಸೆ ಕೊಡಬಲ್ಲುದು. ಈಗಿನ ಶಕ್ತಿಸ್ಪರ್ಧೆಯಲ್ಲಿ ಯಾವುದಾದರೂ ದೊಡ್ಡ ಶಕ್ತಿ ರಾಷ್ಟ್ರವನ್ನು ಕೂಡಿಕೊಂಡಿರದ ನಿರ್ಬಲ ರಾಷ್ಟ್ರಕ್ಕೆ ಸ್ವತಂತ್ರ ಬಾಳ್ವೆಯು ಸಾಧ್ಯವಿದೆಯೆ? ಶಕ್ತಿ ರಾಷ್ಟ್ರಗಳಲ್ಲಿ ಅತೀ ಶಕ್ತಿವಂತರಾದವರಿಗೆ ಮಾತ್ರ ಯಾವ ಸಹಾಯವಿಲ್ಲದೆ ತಮ್ಮ ಕಾಲಿನ ಮೇಲೆ ತಾವು ನಿಲ್ಲಲು ಸಾಧ್ಯವಾಗುವುದು. ಇವುಗಳೆಂದರೆ ಎರಡೇ ಎರಡು.

ಬ್ರಿಟನಿನ ಪಾತ್ರವೇನು?

ಈಗ ಪಾಕಿಸ್ತಾನ ಬ್ರಿಟಿಷ್ ಸಾಮಂತ ರಾಜ್ಯ ಕೂಟದಲ್ಲಿ ಸೇರಿ ಹಿಂದೂಸ್ಥಾನ ಪ್ರತ್ಯೇಕ ನಿಂತರೆ ಬ್ರಿಟನು ಹೇಗೆ ವರ್ತಿಸಬೇಕಾಗುತ್ತದೆ? ಭಾರತದಲ್ಲಿನ ಅದರ ಮುಸ್ಲಿಂ ಸಾಮಂತ ರಾಜ್ಯಕ್ಕೆ ಸಂಕಷ್ಟವಾಗುತ್ತಿದೆಯೆಂದಾದರೆ ಅದು ತನ್ನ ಸಹಾಯವನ್ನು ಕೊಡಲೇ ಬೇಕಾಗುತ್ತದೆಯಷ್ಟೆ? ಇದು ಕಠಿಣ ಪ್ರಸಂಗವೊಂದನ್ನು ತಂದೊಡ್ಡುವುದು. ಈ ಧರ್ಮಸಂಕಟದಿಂದ ತಪ್ಪಿಸಿಕೊಳ್ಳುವುದಾದರೂ ಹೇಗೆ? ಇದಕ್ಕಾಗಿಯೇ ಮೌಂಟಬೇಟನ್ನರು ಪಾಕಿಸ್ತಾನ ಹಿಂದೂಸ್ತಾನಗಳೆರಡರ ಮೇಲೆ ಸದ್ಯಕ್ಕೆ ಸಾಮಂತ ರಾಜ್ಯತನವನ್ನು ಹೊರಿಸಿದ್ದು. ಕಾಲಕ್ರಮೇಣದಲ್ಲಿ ಹಿಂದುಸ್ತಾನವು ತನ್ನ ಸಂಪರ್ಕವನ್ನು ಕಡಿದುಕೊಳ್ಳಲಿಚ್ಛಿಸಿದರೆ ಬ್ರಿಟನಿಗೆ ಅದೊಂದು ದುರ್ವಿಧಿಯ ಕಾಲವಾಗುವುದು.

ಈ ಸಂದರ್ಭದಲ್ಲಿ ಭಾರತ ಸೈನ್ಯದ ಭವಿಷ್ಯವನ್ನು ಪರ್ಯಾಲೋಚಿಸಬೇಕಾಗುತ್ತದೆ. ಈ ಸೈನ್ಯ ಆಸ್ಯದಲ್ಲೇ ಅಸಮಾನ ಸಾಮರ್ಥ್ಯದ ಕೀರ್ತಿಗಳಿಸಿದೆ. ಸರ್ ಕ್ಲಾಡ್ ಆಕಿನ್‌ಲೆಕ್ಕರ ನಾಯಕತ್ವದಲ್ಲಿ ಅದು ಇದುತನಕ ಜಾತೀಯ ವೈಷಮ್ಯದಿಂದ ದೂರವಿದ್ದು ರಾಷ್ಟ್ರೀಯ ಧ್ಯೇಯಸೇವಾದರ್ಶವನ್ನು ರೂಢಿಸಿಬಂದಿದೆ. ಈಗ ಅದನ್ನು ಹಂಚಿ ಅದರ ಸುವ್ಯವಸ್ಥೆಯನ್ನು ನಾಶಗೊಳಿಸಬೇಕೆ?

ಎರಡು ಸರಕಾರಗಳ ಪರಸ್ಪರ ಒಪ್ಪಿಗೆಯಿಂದ ಸೈನ್ಯವಿಭಾಗೀಕರಣವನ್ನು ಕೆಲವು ತಿಂಗಳ ಮಟ್ಟಿಗೆ ಮುಂದೆ ಹಾಕಲಾಯಿತೆಂದು ಭಾವಿಸೋಣ. ಆ ಅವಧಿಯಲ್ಲಿ ಪಾಕಿಸ್ತಾನ ಹಣಕಾಸಿನ ಮಂತ್ರಿಗಳು ತಮ್ಮ ಆಯವ್ಯಯದ ಪಟ್ಟಿಯನ್ನು ತಯಾರಿಸುವಾಗ ಅವರು ಭಾರತ ಗಡಿಯ ರಕ್ಷಣೆಯ ಖರ್ಚಲ್ಲದೆ, ಹಿಂದುಳಿದ ಬಲೂಚಿಸ್ಥಾನದ, ದಾರಿದ್ರ್ಯದಲ್ಲಿ ಕೊಳೆಯುವ ಪೂರ್ವ ಬಂಗಾಲದ ಅಭಿವೃದ್ಧಿಗಳ ಖರ್ಚನ್ನೂ ಪರಿಗಣಿಸಬೇಕಾಗುವುದು.

ಈಗ ಈ ಎರಡು ರಾಜ್ಯಗಳು ತಮ್ಮ ರಕ್ಷಣೆಗಾಗಿ ಒಂದೇ ಸೈನ್ಯವನ್ನಿಟ್ಟುಕೊಂಡರೆ ಅವರ ಖರ್ಚು ಲಘುವಾಗಿ ಹಂಚಿಬೀಳುವುದು. ಪಾಕಿಸ್ತಾನ ಸರಕಾರವು ಕಾರ್ಯಮಗ್ನವಾಗಿ ನಿಜಸ್ಥಿತಿಯನ್ನು ಅರಿತುಕೊಂಡ ಹಾಗೆ ಅದು ತನ್ನ ಅಸಮಂಜಸವಾದ ಕೇಳಿಕೆಗಳನ್ನು ಮರೆತುಬಿಡುವುದೆಂದು ಹಾರೈಕೆಯಿದೆ. (ಮಿ. ಜಿನ್ನರ ಪೂರ್ವ ಪಶ್ಚಿಮ ಪಾಕಿಸ್ತಾನ ತುಂಡುಗಳನ್ನು ಜೋಡಿಸಲು ಒಂದು ನೆಲಸಂಧು ಬೇಕೆಂಬ ಕೇಳಿಕೆಯು ಈಗ ಅದು ಸಂಪೂರ್ಣ ಹಿನ್ನೆಲೆಗೆ ಹೋಗಿದೆ.) ಅದೇ ರೀತಿ ಮುಸಲ್ಮಾನರು ತಮ್ಮ ಹಿಂದೂ ಬಹುಸಂಖ್ಯಾಕರ ಹೆದರಿಕೆಯಿಂದ ಮುಕ್ತರಾಗಿ ತಮ್ಮ 'ಮನೆನಾಡಿ'ನಲ್ಲಿ ಸ್ವತಂತ್ರರಾದ ಮೇಲೆ ಈಗಿನ ದ್ವೇಷವೈಷಮ್ಯಗಳೆಲ್ಲ ನೀಗುವುವೆಂದೂ ನಿರೀಕ್ಷೆಯಿದೆ.

ಐರೋಪ್ಯ ಮಾದರಿ

ಸಹಕರಿಸುವ ಮನಸ್ಸಿದ್ದರೆ ಅದಕ್ಕೆ ತಕ್ಕ ದಾರಿಯೂ ಸಿಗುತ್ತದೆ. ಈ ಸಂಬಂಧ ಅಭ್ಯಾಸಿಸಬಹುದಾದ ಒಂದು ಐರೋಪ್ಯ ಮಾದರಿ ಇದೆ. 1918ರ ಯುದ್ಧದ ಅಂತ್ಯದ ವರೆಗೆ ಆಸ್ಟ್ರಿಯಾ ಮತ್ತು ಹಂಗೇರಿಗಳು ಎರಡು ಪ್ರತ್ಯೇಕ ರಾಜ್ಯಗಳಾಗಿದ್ದು ಜರ್ಮನ್ ಚಕ್ರಾಧಿಪತ್ಯದಲ್ಲಿ ಮಾತ್ರ ಒಟ್ಟು ಗೂಡಿಸಲ್ಪಟ್ಟಿದ್ದವು, ಆದರೂ ಅವರು ಒಂದೇ ಸೈನ್ಯ ಒಂದೇ ಯುದ್ಧ ಖಾತೆಯನ್ನಿಟ್ಟುಕೊಂಡಿದ್ದರು. ಅವರ ಎರಡು ಪ್ರಜಾ ಪ್ರತಿನಿಧಿ ಸಭೆಗಳಿಂದ ಸ್ಥಾಪಿಸಲ್ಪಡುವ ಒಂದು ಸಂಯುಕ್ತ ಸಮಿತಿಯು ಈ ವಿಷಯವನ್ನು ಮೇಲ್ವಿಚಾರಣೆ ಮಾಡುತಿತ್ತು. ಇದೇ ರೀತಿ ಹಿಂದೂಸ್ಥಾನ ಪಾಕಿಸ್ತಾನಗಳು ತಮ್ಮ ರಕ್ಷಣೆಯ ಏರ್ಪಾಡುಗಳನ್ನು ಸುವ್ಯವಸ್ಥಿತವೂ ಅಖಂಡವೂ ಆಗಿ ಇರಿಸಬಹುದು.

ವಿಭಾಗೀಕರಣದಿಂದ ಭಾರತ ಮಿತ್ರರ ಐಕ್ಯ ಭಾರತದ ಕನಸ್ಸು ಮಾಯವಾದಂತಾಗಿದೆ. ಮುಸ್ಲಿಂ ಪ್ರಜೆಗಳಿಂದ ಭಾರತದ ನಾಗರೀಕತೆಗೆ ಸಾಕಷ್ಟು ಸಹಾಯವಿದೆ. ಅದಿಲ್ಲದಿದ್ದರೆ ಭಾರತವು ಭಾರತವೆನಿಸಲಾರರು.

ಇವರೀರ್ವರೂ ಸ್ವತಂತ್ರರಾದಾಗ ಅವರು ಪರಸ್ಪರ ಐಕ್ಯತೆಯ ಆವಶ್ಯಕತೆಯನ್ನು ಮನಗಾಣುವರು. ವಿದೇಶೀಯರ ನೀಗಿಲು ಗಾಣವು ಮೊದಲು ಎತ್ತಲ್ಪಡಬೇಕು. ಆಗ ಐಕ್ಯವು ನಾವೆಣಿಸಿದಕ್ಕಿಂತ ಶೀಘ್ರವಾಗುವುದು.

—ಬ್ರೈಲ್ಸ್‌ಫೋರ್ಡ್.



ಲಂಡನಿನಲ್ಲಿ ಪ್ರದರ್ಶಿಸಲ್ಪಟ್ಟ ಹಿಂದೂದೇಶದ ಚಿತ್ರಗಳಲ್ಲೊಂದು

ಗಾಂಧಿಯ ಸೇವಾದರ್ಶದಿಂದಲೇ ಭಾರತಕ್ಕೆ ಮುಕ್ತಿ

ಬ್ರಿಟಿಷ್ ಚುನಾವಣೆಗಳಲ್ಲಿ ಗಾಂಧಿ ಚಿತ್ರಕ್ಕೆ ಜಯ

1 ಸಾವಿರ ಮೈಲು ದೂರದ ಸಂದರ್ಶಕರು

ಡೊನಾಲ್ಡ್ ಡಂಕನ್ ಎಂಬೊರ್ವ ಪ್ರಖ್ಯಾತ ಆಂಗ್ಲ ಪತ್ರಿಕೋದ್ಯೋಗಿಯು ಒಂದು ಬ್ರಿಟಿಷ್ ಪತ್ರಿಕೆಯಲ್ಲಿ ತನ್ನ ಮತ್ತು ಗಾಂಧೀಜಿಯ ಪರಸ್ಪರ ಪರಿಚಯವಾದ ಘಟನೆಯೊಂದನ್ನು ಈ ಕೆಳಗಿನಂತೆ ಬರೆದಿದ್ದಾರೆ:

ಬ್ರಿಟನಿನಲ್ಲಿ ಚುನಾವಣೆಗಳಾಗುವಾಗ ಕೆಲವು ಉಮೇದುವಾರರು ಭಾರತದ ಕುರಿತು ತೃಪ್ತಿಕರ ಇತ್ಯರ್ಥಗಳನ್ನು ಮಾಡಲು ತಾವು ಪ್ರಯತ್ನಿಸುತ್ತಿರುವುದಾಗಿ ತಮ್ಮ ಚುನಾವಣೆ ಪ್ರಕಟಣೆಗಳಲ್ಲಿ ಬಹಿರಂಗಪಡಿಸುವುದು ಮಾತ್ರವಲ್ಲದೆ ಭಾರತದ ಸಂಕೇತವಾದ ಗಾಂಧಿಯ ಚಿತ್ರವೊಂದನ್ನು ಒಂದು ಮೋಟಾರು ಕಾರಿಗೆ ಕಟ್ಟಿ ಎಳೆಸಿಕೊಂಡು ಪ್ರದರ್ಶನ ಮಾಡುವುದು ಸಾಮಾನ್ಯ ಕಾರ್ಯಕ್ರಮವಾಗತೊಡಗಿತು. ಅನೇಕ ಬ್ರಿಟಿಷರಿಗೆ ಇದೊಂದು ಕೇವಲ ವಿನೋದವೇ ಆಗಿತ್ತಾದರೂ ಯಾರೂ ಗಾಂಧಿಯನ್ನು ಅವಮಾನಗೊಳಿಸಬೇಕೆಂಬುದ್ದೇಶದವರಿರಲಿಲ್ಲ.

ಭಾರತದ ಮಾಜಿ ವ್ಯೈಸ್‌ರಾಯರಾಗಿದ್ದ ಹೆಲಿಫೆಕ್ಸರು (ಲೋರ್ಡ್ ಇರ್ವಿನ್) ಗಾಂಧಿಯ ವಿಷಯ ತುಂಬಾ ಅಭಿಮಾನವಿಟ್ಟುಕೊಂಡಿದ್ದರು. ಗಾಂಧಿಯನ್ನು ಒರ್ವ ಶ್ರೇಷ್ಠ ಪ್ರಾಮಾಣಿಕ ಸತ್ಪುರುಷನೆಂದವರು ಗೌರವಿಸುತ್ತಿದ್ದರು. ಈ ರೀತಿ ಭಾವನೆಯಿಟ್ಟುಕೊಂಡಿರುವ ರಾಜಕೀಯ ಮುತ್ಸದ್ದಿಗಳು ನಮ್ಮಲ್ಲೆಷ್ಟು ಮಂದಿ ಇದ್ದಾರೆ.

ಇಂದು ಭಾರತದ ಭವಿಷ್ಯ ಈ ಮಹಾಪುರುಷನೊಬ್ಬನ ಸತ್ವ ತೇಜಸ್ಸಿನ ಮೇಲೆ ಅವಲಂಬಿತವಾಗಿದೆ. ಇಷ್ಟಾದರೂ ನಮ್ಮ ಜನರು ಆತನ ವಿಷಯ ಅತ್ಯಲ್ಪ ಪರಿಚಯವಿದ್ದವರಿದ್ದಾರೆ. ನಮ್ಮವರಿಗೆ ಗಾಂಧಿಯ ವ್ಯಂಗಚಿತ್ರವನ್ನು ಗುರುತಿಸುವುದಕ್ಕಿಂತ ಹೆಚ್ಚಿನದು ಗೊತ್ತಿರುವುದಿಲ್ಲ.

ನನ್ನ ಸಂದರ್ಶನ

ನಾನು ಕೋಲೇಜು ವಿದ್ಯಾಭ್ಯಾಸದಲ್ಲಿರುವಾಗಲೇ ಗಾಂಧಿಯ ಕುರಿತೊಂದು ಪ್ರಬಂಧ ಬರೆದು ಅದರ ಪ್ರತಿಯೊಂದನ್ನು ಅವರಿಗೆ ಕಳುಹಿಸಿಕೊಟ್ಟೆ. ಆ ಪ್ರಬಂಧದಲ್ಲಿ ವಿದ್ಯಾರ್ಥಿತನದ ಹುಳುಕುಗಳೆಲ್ಲವೂ ತುಂಬಿಕೊಂಡಿದ್ದುವು. ಅದನ್ನು ವಿಮರ್ಶಿಸಿ ಪುನಃ ಕಳುಹಿಸಬೇಕೆಂದೂ ಒಂದು ವಿನಂತಿ ಸೂಚನೆಯನ್ನು ಅದರೊಂದಿಗೆ ಬರೆದು ಕಳುಹಿಸಿದ್ದೆ. ಕೆಲವು ದಿವಸಗಳಲ್ಲೇ ಜಾಗರೂಕತೆಯಿಂದ ತಪ್ಪು ವಿಷಯಗಳನ್ನು ತಿದ್ದಿದ ನನ್ನ ಪ್ರಬಂಧವು ಹಿಂತಿರುಗಿತು.

ನನ್ನ ಪ್ರಬಂಧದ ಮೇಲಿನ ಅವರು ತಿದ್ದಿದ ವಿಷಯವು ತುಂಬಾ ಚರ್ಚಾಸ್ಪದವಾಗಿದೆಯೆಂದು ಮನಗೊಂಡ ನಾನು ಲಂಡನಿನಿಂದ ಒಂದು ತಂತಿ ಕಳುಹಿಸಿ "ನಮ್ಮ ಚರ್ಚೆಯನ್ನು ನಾವು ಎಂದು ಎಲ್ಲಿ ಮುಂದರಿಸಲು ಸಾಧ್ಯ"! ಎಂದು ಗಾಂಧಿಗೆ ಪ್ರಶ್ನಿಸಿದೆ. ಅವರು "ವಾರ್ಧಾದಲ್ಲಿ ದಶಂಬರ 21ರಂದು" ಎಂದು ತಂತಿಯಲ್ಲೇ ಉತ್ತರ ಕೊಟ್ಟರು.

ನಾನು ಭೂಪಟದ ನಕಾಶೆಗಳನ್ನು ಪರಿಶೀಲಿಸಿದೆ. ವಾರ್ಧಾವು ಭಾರತದ ಮಧ್ಯಪ್ರಾಂತದಲ್ಲಿತ್ತು. ತಾರೀಕು ಪಟ್ಟಿಯನ್ನು ನೋಡುವಾಗ ಸಂದರ್ಶನಕ್ಕೆ ಕೇವಲ ನಾಲ್ಕು ವಾರಗಳ ಅವಧಿ ಮಾತ್ರ ಉಳಿದಿತ್ತು.

ಗಾಂಧಿಯ ಉತ್ತರ ಬಂದ ದಿನ ಮಧ್ಯಾಹ್ನ ನನ್ನ ಸ್ನೇಹಿತರೊಬ್ಬರೊಡನೆ ನಾನು ಚದುರಂಗದಾಟವಾಡಲು ನಾನು ಏರ್ಪಡಿಸಿದ್ದೆ. ತಂತಿ ಉತ್ತರವನ್ನು ಅವನಿಗೆ ತೋರಿಸಿ ಅವನ ಅಭಿಪ್ರಾಯ ಕೇಳಿದೆ. ಅವನು ನನಗೆ ಆ ಕುರಿತು ಪ್ರೋತ್ಸಾಹವನ್ನೇ ಕೊಟ್ಟದ್ದರಿಂದ ನಾವು ಆಡುವ ಬದಲು ಹಡಗು ಆಫೀಸಿಗೆ ಹೋದೆವು. . . . . .

ವಾರ್ಧಾದಲ್ಲಿ ಇಳಿದೆ. ಆದರೆ ಗಾಂಧಿ ಇದ್ದ ಸ್ಥಳಕ್ಕೆ ಹೋಗಲು ಮಾರ್ಗವು ಬಹಳ ಹಾಳಾದ ಪರಿಸ್ಥಿತಿಯಲ್ಲಿದ್ದುದರಿಂದ ಮೋಟಾರು ಟೆಕ್ಸಿಯವರಾರೂ ಅಲ್ಲಿಗೆ ನನ್ನನ್ನೊಯ್ಯಲು ಒಪ್ಪಲಿಲ್ಲ. ಕಡೆಗೊಂದು ಎತ್ತಿನ ಗಾಡಿ ಬಾಡಿಗೆ ಮಾಡಿ ಏಳು ಮೈಲುಗಳ ಪೊದರು ಬಂಜರು ಬಯಲುಗಳ ಪ್ರದೇಶ ದಾಟಿದ ಮೇಲೆ ನನ್ನನ್ನು ಭೇಟಿಯಾಗಲು ಬಂದೊರ್ವ ಮುದಿ ಮನುಷ್ಯನನ್ನು ಕಂಡೆ. ಅವನ ಮುದಿ ತಲೆಗೂ ಚಟುವಟಿಕೆಯುಕ್ತವಾದ ಚುರುಕು ಕಾಲು ಹೆಜ್ಜೆಗಳಿಗೂ ತುಂಬಾ ವ್ಯತ್ಯಾಸವಿದ್ದುದನ್ನು ಚೆನ್ನಾಗಿ ಗಮನಿಸಿದೆ. ಅವರೇ ಗಾಂಧಿ.

ಸ್ವಯಂಸೇವೆ

ಅವರಿಗೆ ನನ್ನ ಸಂದರ್ಶನದ ತಾರೀಕು ನೆನಪಿತ್ತು. ನಾಲ್ಕು ವಾರಗಳ ಹಿಂದೆ ಅವರು ನನಗೆ ಬರೆದಿದ್ದರು. ನಾನು 7 ಸಾವಿರ ಮೈಲು ದಾಟಿ ಬಂದಿದ್ದೇನೆ. ಇಷ್ಟಾದರೂ ಏನೊಂದು ಕೌತುಕವನ್ನೂ ತೋರಿಸದೆ ಇಲ್ಲವೆ ನನ್ನ ಪ್ರಯಾಣದ ಸಂಕಷ್ಟಗಳನ್ನು ವಿಚಾರಿಸದೆ ಅವರು ನೇರವಾಗಿ ಒಂದು ತಿಂಗಳ ಹಿಂದೆ ನಾವು ಪತ್ರ ವ್ಯವಹಾರದ ಮೂಲಕ ಪ್ರಾರಂಭಿಸಿದ ಚರ್ಚೆಯನ್ನು ಮುಂದರಿಸಿದರು. ಸಮಯ ಮತ್ತು ಅಂತರಗಳು ಅವರಿಗೆ ಯಾವೊಂದು ಆತಂಕವನ್ನುಂಟುಮಾಡದಂತಿತ್ತು.

ರಾಜಕೀಯ ಮುತ್ಸದ್ದಿಗಳು ಅಯಶಸ್ವಿಯಾದಲ್ಲಿ ಒರ್ವ ಸಂತ ಪುರುಷ ಯಶಸ್ವಿಯಾಗಬಲ್ಲನೆ? ಗಾಂಧಿಗೆ ಮಿಲಿಯಾಂತರ ಶ್ರದ್ಧೆಯ ಅನುಯಾಯಿಗಳಿದ್ದಾರೆ. ಹಿಂದೂ ಮುಸಲ್ಮಾನರೊಳಗೆ ಭೀಕರ ಕಚ್ಚಾಟವಾದಾಗ ಅವರು ಆಮರಣಾಂತಿಕ ಉಪವಾಸ ಕೈಕೊಳ್ಳುತ್ತಾರೆಂದು ನಾನು ಖಂಡಿತ ಬಲ್ಲೆ. ಇತ್ತಂಡದವರು ಶಾಂತಿ ಮಾಡಿಕೊಳ್ಳುವ ತನಕ ಅವರು ತಮ್ಮ ತಪಸ್ಸನ್ನು ಬಿಡುವವರಲ್ಲ. ಈ ಉಪವಾಸ ಅವರ ಮರಣದಲ್ಲಿಯೂ ಅಂತ್ಯವಾಗಬಹುದು. ಆದರಿಂದ ಒಂದು ಜನಾಂಗವು ಪುನಃರುದ್ಧಾರವಾಗಲೂ ಸಾಧ್ಯವಿದೆ. ಆದರೆ ಈ ಮನುಷ್ಯನ ತ್ಯಾಗ ಬಲಿದಾನದ ಮೇಲೇ ಭಾರತದ ವಿಮೋಚನೆ ಅವಲಂಭಿಸಿದೆಯೆಂಬ ವಿಷಯವು ಖಂಡಿತವಾದುದು.

ಭಾರತೀಯ ಆಯುರ್ವೇದದ ಮಹಿಮೆ

ಬಗ್ದಾದಿನ ಸತ್ತ ರಾಜ ಕುವರನನ್ನು ಬದುಕಿಸಿತು

ಹಿಂದೀ ಹಕೀಮನೊಬ್ಬನ ಇತಿಹಾಸ

ಅರಬೀ ರಾತ್ರೆ ಕತೆಗಳಲ್ಲಿ ಪ್ರಖ್ಯಾತನಾಗಿದ್ದ ಬಗ್ದಾದಿನ ಚಕ್ರವರ್ತಿ ಹಾರೂನ್ ಅಲ್ ರಶೀದನ ಆಸ್ಥಾನಕ್ಕೆ ಸಂಚಾರಹೋಗಿದ್ದ ಸಾಲೇ ಬಿನ್ ಬ್ಹಾಲಾ ಎಂಬ ಹಕೀಮನೊಬ್ಬನ ಸಾಹಸಮಯ ಜೀವನದ ಘಟನೆಯೊಂದನ್ನು ಮಿ। ಅಬ್ದುಲ್ ಆಲೀಮ್ ಎಂಬ ಲೇಖಕರು ಮೋಡರ್ನ್ ರಿವ್ಯೂ ಪತ್ರಿಕೆಯಲ್ಲಿ ಕೊಟ್ಟಿದ್ದಾರೆ:

ಸಾಲೇಬಿನ್ ಬ್ಹಾಲಾ ಅವನಿಗೆ ಆಯುರ್ವೇದ ವೈದ್ಯ ವಿಧಾನವು ಚೆನ್ನಾಗಿ ಗೊತ್ತಿತ್ತು. ಒಂದು ದಿನ ಸಮ್ರಾಟನಾದ ಹಾರೂನ್ ಅಲ್ ರಶೀದನು ಊಟಕ್ಕಾಗಿ ಭೋಜನ ಶಾಲೆಗೆ ಬಂದಾಗ ಅವನು ತಿನ್ನುವ ಆಹಾರ ವಸ್ತುಗಳನ್ನು ಪರೀಕ್ಷಿಸುವ ಆಸ್ಥಾನ ವೈದ್ಯರು ಅಲ್ಲಿರಲಿಲ್ಲ. ಹಸಿವುಗೊಂಡ ಖಲಿಫನು ಕೋಪಗೊಂಡು ವಿಳಂಬಕ್ಕಾಗಿ ತಕ್ಕ ಶಿಕ್ಷೆಯನ್ನವನಿಗೆ ವಿಧಿಸುವೆನೆಂದು ನಿರ್ಧರಿಸಿದನು.

ಸ್ವಲ್ಪ ಹೊತ್ತಿನ ನಂತರ ಆ ವೈದ್ಯನು ಬಂದು ಕೋಪಗೊಂಡರಸನ ಭಾವವನು ಅರಿತು ತನಗೆ ವಿಳಂಬವಾದುದರ ಕಾರಣವನ್ನು ತಿಳಿಸಿದನು. ಖಲೀಫನ ದಾಯಾದಿಯಾದ ಇಬ್ರಾಹಿಮನು ಮರಣಾಂತಿಕ ಶಾಯಿಲೆಯಲ್ಲಿರುವನೆಂದೂ ಅವನನ್ನು ನೋಡಲು ತಾನು ಹೋಗಿದ್ದೆನೆಂದೂ, ಎಷ್ಟು ಪ್ರಯತ್ನಮಾಡಿದರೂ ಅವನು ಬದುಕುವ ಆಶೆಯಿಲ್ಲವೆಂದೂ ಅರುಹಿದನು. ಖಲೀಫನ ಕೋಪ ದುಃಖವಾಗಿ ಪರಿವರ್ತನಹೊಂದಿತು. ಯಾವಾದರೂ ಉತ್ತಮ ವೈದ್ಯರನ್ನು ಕರಕೊಂಡು ಬರಬೇಕೆಂದೂ ಅದೆಷ್ಟು ಖರ್ಚಾದರೂ ಇಬ್ರಾಹೀಮನ ಜೀವರಕ್ಷಣೆ ಮಾಡಬೇಕೆಂದೂ ಆಜ್ಞಾಪಿಸಿದನು. ಆ ಸಮಯಕ್ಕೆ ಕೆಲವು ಸರದಾರರು ಸಾಲೇಬಿನ್ ಬ್ಹಾಲಾನ ಕುರಿತು ಖಲೀಫನ ಅವಧಾನಕ್ಕೆ ತಂದರು. ಅವನು ಆಯುರ್ವೇದವೆಂಬ ಹಿಂದೂ ಶಾಸ್ತ್ರ ಪ್ರಧಾನವಾದ ಚಿಕಿತ್ಸಾಕ್ರಮವನ್ನು ಬಲ್ಲನೆಂದೂ ಗ್ರೀಕ್ ವೈದ್ಯ ವಿಧಾನದಿಂದ ಇಬ್ರಾಹೀಮನನ್ನು ಆರೈಕೆಮಾಡಿದ ತಮ್ಮ ಆಸ್ಥಾನ ಪಂಡಿತನ ಯತ್ನಗಳು ನಿಷ್ಫಲವಾಗಿವೆಯೆಂದೂ ಅವರು ತಿಳಿಸಿದರು.

ಹುಸಿಯಾಗುವ ಸಿದ್ಧತೆ

ಖಲೀಫನ ಆಜ್ಞೆ ಪ್ರಕಾರ ಹಿಂದೀ ಹಕೀಮನನ್ನು ರೋಗಿಯ ಬಳಿಗೆ ಕಳುಹಿಸಲಾಯಿತು. ಅವನು ಇಬ್ರಾಹೀಮನನ್ನು ಸೂಕ್ಷ್ಮವಾಗಿ ಪರೀಕ್ಷಿಸಿ ಅವನ ಜೀವಕ್ಕೆ ಯಾವ ಅಪಾಯವಿಲ್ಲವೆಂದೂ ಭರವಸೆ ತಿಳಿಸಿದನು. ಖಲೀಫನಲ್ಲಿಗೆ ಬಂದು ಬ್ಹಾಲಾನು ಹಾಗೇ ತಿಳಿಸಿ ಇಬ್ರಾಹೀಮನು ಗುಣಹೊಂದುವನೆಂದು ತಿಳಿಸಿದನು. ಸಂತೋಷಗೊಂಡ ಖಲೀಫನು ಊಟತೀರಿಸಿ ಸರದಾರರೊಡನೆಯೂ ಬ್ಹಾಲಾನೊಡನೆಯೂ ವಿನೋದದಿಂದ ವಿಹರಿಸುತಿದ್ದನು. ಸಾಯಂಕಾಲವಾಗುತ್ತಲೆ ನಗರ ಜವಾನರು ಬಂದು ಇಬ್ರಾಹೀಮನು ಮೃತಿಯನ್ನೈದಿದನೆಂತಲೂ ಖಲೀಫನು ಶವಸಂಸ್ಕಾರ ಪ್ರಾರ್ಥನೆಗೆ ಬರಬೇಕೆಂದೂ ಬಿನ್ನವಿಸಿದರು.

ತನ್ನ ಸೋದರ ತಮ್ಮನ ಮರಣ ವಾರ್ತೆ ಕೇಳಿದ ಕೂಡಲೇ ಖಲೀಫನು ಉಗ್ರ ಕೋಪಗೊಂಡು ಹಿಂದೀ ಹಕೀಮನ ಮತ್ತವನ ವೈದ್ಯ ವಿದ್ಯೆಯನ್ನು ತೆಗಳಿ ಮಾತನಾಡಿ, ಭಾರವಾದ ಹೃದಯದಿಂದ ಶವ ವಿಧಿಗಳಲ್ಲಿ ಭಾಗವಹಿಸಿದನು. ಅವನ ಕಣ್ಣುಗಳಿಂದ ನೀರು ಧಳಧಳನೆ ಸುರಿಯುತಿತ್ತು. ಶವ ಪೆಟ್ಟಿಗೆಯಲ್ಲಿ ಹಾಕಿದ ಇಬ್ರಾಹೀಮನ ಜಡ ಶರೀರವನ್ನು ರಾಜಸಭೆಯ ಮುಂದಿರಿಸಲಾಯಿತು. ಹಿಂದೀ ಹಕೀಮನಾದ ಬ್ಹಾಲಾನು ದೂರ ಒಂದು ಕಡೆ ನಿಂತು ಎಲ್ಲವನ್ನೂ ಆತುರದಿಂದ ನೋಡುತಿದ್ದನು.

ಕಡೆಗೆ ಖಲೀಫನ ಬಳಿ ಬಂದು ಅವನು ಜೀವಂತನಾಗಿರುವ ಇಬ್ರಾಹೀಮನನ್ನು ಹೂಳಬಾರದೆಂದು ವಿನಂತಿಸಿಕೊಂಡನು. ಇದನ್ನು ಕೇಳುತ್ತಲೆ ಮೊದಲು ಖಲೀಫನು ನಕ್ಕು ಅವನನ್ನು ಕಡೆಗಣಿಸಿದನು. ಆದರೂ ಹಕೀಮನು ಮೇಲಿಂದ ಮೇಲೆ ಒತ್ತಾಯಪಡಿಸಿದನು. ತನಗೆ ಮತ್ತೊಂದು ಸಲ ಶವ ಪರೀಕ್ಷೆ ಮಾಡಲು ಅಪ್ಪಣೆಕೊಡಬೇಕೆಂದೂ ಅರಿಕೆಮಾಡಿಕೊಂಡನು. ಕೊನೆಗೆ ನೋಡೋಣವೆಂದು ಖಲೀಫನು ಅವನ ಬಿನ್ನಹವನ್ನು ಮಾಪಿಸಿದಾಗ ಬ್ಹಾಲಾನು ಶವದ ಬಳಿ ಹೋಗಿ ಮತ್ತೊಂದು ಸಲ ಪರೀಕ್ಷಿಸಿ ಸತ್ತವನಲ್ಲಿ ಜೀವವಿದೆ ಎಂದೂ ಖಲೀಫನು ಇಚ್ಛಿಸಿದರೆ ತಾನವನಿಗೆ ಮಾತನಾಡಿಸುವೆನೆಂದೂ ತಿಳಿಸಿದನು.

ಪುನರ್ಜೀವ

ಪ್ರಭುವಿನಾಜ್ಞೆ ಪಡೆಯುತ್ತಲೆ ಹಕೀಮನಾದ ಬ್ಹಾಲಾನು ಪೆಟ್ಟಿಗೆಯಿಂದ ಶವವನ್ನು ಹೊರ ತೆಗೆಸಿ ಅದನ್ನು ನೀರಿನಿಂದ ಚೆನ್ನಾಗಿ ತೊಳೆಯಬೇಕೆಂದೂ, ಆ ಪೆಟ್ಟಿಗೆಯಲ್ಲಿಟ್ಟ ಕೆಲವೊಂದು ಅರಬಿ ಪರಿಮಳ ದ್ರವ್ಯಗಳ ವಾಸನೆಯಿಂದ ಮೃತನ ಹೃತ್ಕ್ರಿಯೆ ಸಂಪೂರ್ಣ ಸ್ತಬ್ಧವಾಗಬಹುದೆಂದೂ ಸೂಚಿಸಿದನು. ಚಾಕರರು ಹಾಗೇ ಮಾಡಲು ನಿದ್ದೆಯಿಂದೆಚ್ಚೆತಂತೆ ಇಬ್ರಾಹಿಮನು ಎದ್ದು ಕುಳಿತುಕೊಂಡನು. ಬೆರಗುಗೊಂಡ ಅರಸನು ಅವನ ಅನುಭವವನ್ನು ಕೇಳಿದಾಗ ತಾನು ಸುಖನಿದ್ರೆ ಮಾಡುತಿದ್ದೆನೆಂದೂ ತನ್ನ ಬೆರಳಿಗೆ ನಾಯಿ ಕಚ್ಚಿದಂತೆ ಸ್ವಪ್ನ ಬಿದ್ದುದರಿಂದ ಎಚ್ಚೆತ್ತೆನೆಂದೂ ಇಬ್ರಾಹೀಮನು ತಿಳಿಸಿದನು. ಮೊದಲನೇ ಸಲ ಶವ ಪರೀಕ್ಷೆ ಮಾಡಿದಾಗ ಬ್ಹಾಲಾನು ಅವನ ಬೆರಳಿಗೆ ಔಷಧ ಮಿಶ್ರವಾದ ಸೂಜಿಯೊಂದನ್ನು ಚುಚ್ಚಿದ್ದನು. ಎಲ್ಲರೂ ಹಿಂದೀ ವೈದ್ಯನ ಸಾಹಸವನ್ನು ಕೊಂಡಾಡಿದರು.

KANARA COMMERCIAL BANK LTD.

PUTTUR.

H. O. Puttur.] Estd. 1920 [Branch: Vittal.

All kinds of Banking Business transacted.

Deposits: Current, Savings, Cumulative Deposits are accepted.

Fixed Deposits for periods of 3 months and above up to 24 months are accepted.

ಜಿಲ್ಲಾ ಕಾಂಗ್ರೆಸ್ ಕಮಿಟಿ ಮಹಾಸಭೆ

ಮಂಗಳೂರು, ತಾ. 18—ಕಳೆದ ತಾ. 12ಕ್ಕೆ ಮಧ್ಯಾಹ್ನ 5 ಗಂಟೆಗೆ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮಹಾಸಭೆ ಶ್ರೀ। ಎಚ್ ನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಆರಂಭವಾಯಿತು ಸಭೆಗೆ 19 ಜನ ಸದಸ್ಯರು ಬಂದಿದ್ದರು.

ಗತಸಭೆಯವರ ವರದಿ ಓದಲಾಗಿ ಅದು ಮಂಜೂರಾದ ಬಳಿಕ ಮುಂದೆ ಬರುವ ಸ್ಥಳೀಕ ಸಂಸ್ಥೆಗಳ ಚುನಾವಣೆಯಲ್ಲಿ ಕಾಂಗ್ರೆಸ್ ಒಂದು ಪಕ್ಷವಾಗಿ ಭಾಗವಹಿಸುವದು ಅಗತ್ಯವೆಂದು ಶ್ರೀ। ಉಮೇಶ ರಾಯರು ಮಂಡಿಸಿದ ಠರಾವಿನ ಮೇಲೆ ದೀರ್ಘ ಚರ್ಚೆಯಾಗಿ 9ರ ವಿರುದ್ಧ 7 ಮತಗಳಿಂದ ಠರಾವು ಬಿದ್ದುಹೋಯಿತು

ಆ ಮೇಲೆ ಘಟನೆಯಲ್ಲಿ ತಿದ್ದುಪಡಿಯಾಗುವ ಬಗ್ಗೆ ಶ್ರೀ। ಉಮೇಶರಾಯರು ಮಂಡಿಸಿದ ಠರಾವಿನ ಬಗ್ಗೆ ಚರ್ಚೆಯಾಗಿ ಘಟನೆಯ ಸೆಕ್ಷನ್ 30ರಲ್ಲಿ ಹೆಚ್ಚೆಂದರೆ ಲಕ್ಷಕ್ಕೆ ಎರಡಕ್ಕೆ ಮಿಕ್ಕದೆ ಎಂಬ ಶಬ್ದಗಳನ್ನು ಬಿಡಬೇಕು ಎಂಬ ಸೂಚನೆ ಸ್ವೀಕೃತವಾಯಿತು ಅಲ್ಲದೆ "ಪ್ರತಿ ಸರ್ಕಲನ್ನು ಒಂದು ಯೂನಿಟ್ ಆಗಿ ಕಾರ್ಯಕಾರಿ ಸಮಿತಿಯವರು ಬೇರೇ ರೀತಿಯಲ್ಲಿ ತೀರ್ಮಾನಿಸದಿದ್ದರೆ ಎಂಬ ಅಂಶ ಬಿಟ್ಟು' ಈ ಚುನಾವಣೆಗಾಗಿ ಕಾರ್ಯಕಾರಿ ಸಮಿತಿಯ ಮತದಾರ ಕ್ಷೇತ್ರಗಳನ್ನು ಆಯಾ ತಾಲೂಕ ಕಮಿಟಿಗಳಿಗೆ ಕೇಳಿ ನಿಶ್ಚಯಿಸಬೇಕು ಎಂಬ ನಿರ್ಣಯ ಸ್ವೀಕೃತವಾಗಿ ಸಭೆ ಮರುದಿನಕ್ಕೆ ಮುಂದರಿಯಿತು.

ಮರುದಿನದ ಸಭೆಯಲ್ಲಿ ಗೋವೆ ಮತ್ತು ಕೊಚ್ಚಿಯ ನಡುವೆ ಕರ್ನಾಟಕದಲ್ಲಿ ಒಂದು ಬಂದರವಾಗಬೇಕು ಅದಕ್ಕೆ ಮಂಗಳೂರು ಯೋಗ್ಯವಾದದ್ದು. ಈ ಕೆಲಸವನ್ನು ದಕ್ಷತೆಯಿಂದ ನಿರ್ವಹಿಸುವಂತೆ ಶ್ರೀ। ಕೆ ಆರ್. ಕಾರಂತ ಮತ್ತು ಶ್ರೀ। ಯು ಶ್ರೀನಿವಾಸ ಮಲ್ಯರನ್ನು ಆಗ್ರಹ ಪೂರ್ವಕ ವಿನಂತಿಸಿದ ಠರಾವು ಪಾಸಾಯಿತು ಅಲ್ಲದೆ, ತಾಜಮಹಲ ಹೊಟೇಲ ಕೆಲಸಗಾರರು ಮತ್ತು ಮಾಲಕರ ನಡುವಿನ ವಿವಾದವನ್ನು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮಧ್ಯಸ್ಥಿಕೆಗೆ ಒಪ್ಪಿಸಿ ಅದನ್ನು ಶ್ರೀ ಶೆಟ್ಟರ ಬಗೆಹರಿಸಿದ್ದರಿಂದ ಕೆಲಸಗಾರರನ್ನು ಅಭಿನಂದಿಸಿದ ಹಾಗೂ ಗುಂಡ್ಯಡ್ಕದಲ್ಲಿ ಬಡ ಒಕ್ಕಲುಗಳ ಮೇಲೆ ಪೋಲೀಸರು ನಡೆಸಿದ ಅತ್ಯಾಚಾರವನ್ನು ಕುರಿತು ಸರಕಾರವು ತನಿಖೆ ನಡಿಸಿ ತಕ್ಕ ಪರಿಹಾರ ಕೊಡಬೇಕೆಂಬ ಆಶಯದ ಠರಾವುಗಳು ಪಾಸಾದವು

ಅಲ್ಲದೆ ಸಾರ್ವಜನಿಕ ಸಂಪರ್ಕ ಸಮಿತಿ ಹರಿಜನ ಮತ್ತು ಸಮಾಜ ಸುಧಾರಣ ಸಮಿತಿ ಹಾಗೂ ರಚನಾತ್ಮಕ ಸಮಿತಿಗಳನ್ನು ರಚಿಸಿದ ಠರಾವುಗಳು ಪಾಸಾದವು ಕೊನೆಯದಾಗಿ ಕಾಂಗ್ರೆಸ್ ಮಂತ್ರಿಗಳು ಮತ್ತು ಸಮಿತಿಗಳ ನಡುವೆ ಇರಬೇಕಾದ ಸಂಬಂಧವನ್ನು ಕುರಿತು ಸರ್ವಾನುಮತದಿಂದ ಸ್ವೀಕೃತವಾದ ಠರಾವನ್ನು ಮಂತ್ರಿವರ್ಗದವರು ಉಪೇಕ್ಷಿಸಿದ್ದರಿಂದ ಇನ್ನು ಅದೇ ರೀತಿ ಅವರು ನಡೆಯುವುದಾದರೆ ಜಿಲ್ಲಾ ಕಾಂಗ್ರೆಸ್ ಕಮಿಟಿ ಸದಸ್ಯರಾಗಲಿ, ಜಿಲ್ಲೆಯ ಎಂ. ಎಲ್. ಎ.ಗಳಾಗಲಿ ಅವರೊಡನೆ ಸಹಕರಿಸಬಾರದು ಎಂಬ ಆಶಯದ ಹಾಗೂ ಒಕ್ಕಲುಹಿತ ಮಸೂದೆ ಶೀಘ್ರವಾಗಿ ಜಾರಿಯಲ್ಲಿ ಬರುವಂತೆ ಮದ್ರಾಸ ಸರಕಾರವನ್ನು ಬಿನ್ನವಿಸಿ ಜಿಲ್ಲೆಯ ಎಂ. ಎಲ್. ಸಿ. ಗಳಿಗೆ ಈ ದೃಷ್ಟಿಯಿಂದ ಪ್ರಯತ್ನ ಮಾಡಲು ಆಗ್ರಹ ಪಡಿಸಿದ ಠರಾವುಗಳು ಪಾಸಾದವು.

ಜಿಲ್ಲಾ ಪರಿಚಯ

ಹವಾಮಾನ: ಕಳೆದ ಮೃಗಶಿರಾ ನಕ್ಷತ್ರದಲ್ಲಿ ಇರಬೇಕಾದ ಬಿರುಸು ಮಳೆ ಈ ಸಲ ಬರಲಿಲ್ಲ ಮಧ್ಯದಲ್ಲಿ ದೀರ್ಘ ಅವಧಿಯ ತನಕ ಬಿಸಿಲು ಕಾಯುತಿದ್ದಿತು. ಆದರೆ ಈಗೆರಡು ದಿನಗಳಿಂದ ಆದ್ರಾ ನಕ್ಷತ್ರದಲ್ಲಿ ಸ್ವಲ್ಪ ಬಿರುಸಾದ ಮಳೆ ಸಂಭವಿಸಿದೆ ಈ ಸಲ ನಿರೀಕ್ಷಿಸಿದಷ್ಟು ಮಳೆ ಬಾರದ್ದರಿಂದ ಬೆಟ್ಟು ಗದ್ದೆಗಳಿಗೆ ಕೊಂಚ ಅನಾನುಕೂಲವಾಗಿದೆಯೆಂದು ಭಾವಿಸಲಾಗಿದೆ ಪ್ರಾಂತೀಕ ಹವಾಮಾನ ವರದಿಗಳಿಂದ ಮುಂದಿನ ದಿವಸಗಳಲ್ಲಿ ಮಳೆಯು ಚೆನ್ನಾಗಿ ಹಿಡಿಯಬಹುದೆಂದು ತಿಳಿದುಬರುತ್ತದೆ

ನಿಧನ: ತಾ 13ರಂದು ಮಧ್ಯಾಹ್ನ ಸುಮಾರು ಮೂರು ಗಂಟೆ ಸಮಯಕ್ಕೆ ನಿವೃತ್ತ ಡಿ ಎಮ್ ಓ ಗಳೂ, ಗೌಡ ಸಾರಸ್ವತ ಸಮಾಜದ ಪ್ರಮುಖ ಮುಂದಾಳುಗಳಲ್ಲೊರ್ವರೂ ಆಗಿದ್ದ ಡಾ ಬಿ. ರಾಮ ಬಾಳಿಗಾ ಬಿ ಎ ಎಂ ಬಿ ಬಿ ಎಸ್ ಅವರು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ ಹಂಪನಕಟ್ಟೆಯ ಬಳಿ ನಡೆದು ಹೋಗುತಿದ್ದಾಗ ಡಾ। ಬಾಳಿಗರು ಅಕಸ್ಮಾತ್ ಬಿದ್ದುಬಿಟ್ಟರು ಕೂಡಲೆ ಅವರನ್ನು ಹತ್ತಿರದ ವೆನ್‌ಲೊಕ್ ಆಸ್ಪತ್ರೆಗೆ ಒಯ್ಯಲಾಗಿ ಪ್ರಾಣವಾಯುವು ಹಾರಿಹೋಗಿರುವುದೆಂದು ಕಂಡುಬಂತು ಹೃದಯ ವಿಕಾರವೇ ಇದಕ್ಕೆ ಕಾರಣವೆನ್ನಲಾಗಿದೆ ಮೃತರು ವೈದ್ಯ ವೃತ್ತಿಯಲ್ಲಿ ಗಣನೀಯ ಕೀರ್ತಿಯನ್ನು ಪಡೆದಿದ್ದು ರೋಗ ಪರೀಕ್ಷೆಯಲ್ಲಿ ಅತ್ಯಂತ ತಜ್ಞರೆಂದೆನಿಸಿದ್ದರು ಸರಕಾರಿ ಕೆಲಸದಲ್ಲಿರುವಾಗಲೂ ನಿವೃತ್ತರಾದ ಮೇಲೂ ಶ್ರೀಯುತರು ಸಾರ್ವಜನಿಕ ಸೇವಾದರ್ಶದಿಂದ ಸ್ಪೂರ್ತಿಗೊಂಡವರಿದ್ದು ವಿವಿಧ ಪ್ರಗತಿಶೀಲ ಚಟುವಟಿಕೆಗಳಲ್ಲಿ ಭಾಗವಹಿಸುತಿದ್ದರು ಸಮಾಜ ಸುಧಾರಣೆಯ ವಿಷಯದಲ್ಲಿ ಡಾ। ಬಾಳಿಗರು ಸುದೃಢವೂ ವಿಶಾಲ ಹೃದಯದವೂ ಆಧುನಿಕ ಕಾಲಕನ್ನಯಿಸುವವೂ ಆದ ಅಭಿಪ್ರಾಯಗಳನ್ನಿಟ್ಟುಕೊಂಡಿದ್ದರು ಹಲವು ವಿಷಯಗಳಲ್ಲಿ ಆದರ್ಶ ವ್ಯಕ್ತಿಯಾಗಿದ್ದ ಇವರನ್ನು ಕಳಕೊಂಡ ನಮ್ಮ ಜಿಲ್ಲೆಗೆ ತುಂಬಾ ನಷ್ಟವಾಗಿರುವುದು, ಅವರ ಆತ್ಮಕ್ಕೂ ಶೋಕಿತ ಕುಟುಂಬಕ್ಕೂ ಶಾಂತಿ ದೊರಕಲೆಂದು ಪ್ರಾರ್ಥಿಸುತ್ತೇವೆ

ತಾ 22ರಂದು ಆದಿತ್ಯವಾರ ಸಾಯಂಕಾಲ ಮಾಜಿ ಕೋರ್ಟ್ ಶಿರಸ್ತೆದಾರರೂ ತಾತ್ಕಾಲಿಕ ಮುನ್ಸಿಫರೂ ಆಗಿದ್ದ ರಾವ್ ಸಾಹೇಬ್ ಪಿ ಎಸ್ ಭಂಡಾರ್‌ಕಾರ್ ಅವರು ಅಕಸ್ಮಾತ್ ಮೃತಿಯನ್ನೈದಿದರು. ಅಂದವರು ಎಸ್ ಕೆ ಸಿ ಸಿ ಯ ಒಂದು ವಿಶೇಷ ಮೀಟಿಂಗಿಗೆ ಹಾಜರಾಗಿದ್ದರು ಸಭೆ ಮುಗಿದು ಹೊರ ಬಂದೊಡನೆ ಹೃದಯ ವಿಕಾರದಿಂದ ಅವರ ಅಂತ್ಯವಾಯಿತೆಂದು ತಿಳಿದು ಬರುತ್ತದೆ ಅವರ ಆತ್ಮಕ್ಕೆ ಶಾಂತಿ ಕೋರುವೆವು.

ಅಂಬ್ಲಮೊಗ್ರು: ಇದೇ ತಿಂಗಳ ತಾರೀಕು 16ರಿಂದ ಅಂಬ್ಲಮೊಗ್ರು, ಮುನ್ನೂರು, ಹರೇಕಳ ಈ ಮೂರು ಗ್ರಾಮಗಳಿಗೆ ಇಲ್ಲಿ ಒಂದು ಪೋಸ್ಟಾಫೀಸನ್ನು ಎಕ್ಸಪರಿಮೆಂಟಲಾಗಿ ತೆರೆದಿರುತ್ತಾರೆ.

ಅಭಿನಂದನೆ: ಕೆನರಾ ಹಾಯಸ್ಕೂಲಿನಿಂದ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಕುಳಿತ ಮುಸ್ಲಿಂ ವಿದ್ಯಾರ್ಥಿಗಳಲ್ಲಿ 100ಕ್ಕೆ 50ರಂತೆ ಪಾಸಾಗಿದ್ದಾರೆ. ಇದರ ಕೀರ್ತಿ ಆ ಹಾಯಸ್ಕೂಲಿಗೆ ಸಲ್ಲುತ್ತದೆ ಈ ರೀತಿ ಒಳ್ಳೆ ಸಹಕಾರಕೊಟ್ಟು ಮುಸ್ಲಿಂ ವಿದ್ಯಾರ್ಥಿಗಳನ್ನು ತರಬೇತಿ ಮಾಡಿದ ಬಗ್ಗೆ ಕೆನರಾ ಹಾಯಸ್ಕೂಲಿನ ಶಿಕ್ಷಕವರ್ಗದವರನ್ನು ನಾನು ಮನಃಪೂರ್ವಕ ಅಭಿನಂದಿಸುತ್ತೇನೆ ಹೀಗೆಂದು ಮದ್ರಾಸ್ ಲೀಗ್ ಸಮಿತಿಯ ಮಹಮ್ಮದ್ ಪ್ರಧಾನಿಯವರು ತಿಳಿಸುತ್ತಾರೆ

ಬುಕ್ಕಿಂಗ್ ಕ್ಲಾರ್ಕರ ಮನವಿ: ಸ್ಥಳೀಯ ಹಂಪನಕಟ್ಟೆ ಜೊಯಿಂಟ್ ಬುಕ್ಕಿಂಗ್ ಆಫೀಸಿನ ಬುಕ್ಕಿಂಗ್ ಕ್ಲಾರ್ಕರು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಡೆಗೆ ಒಂದು ಮನವಿ ಕಳಿಸಿದ್ದು, ಸರಕಾರಿ ನೌಕರರಿದ ತಮ್ಮ ಕೆಲಸಕ್ಕೆ ಆಗುವ ಅಡಚಣೆ ಹಾಗು ನಾಗರಿಕ ಪ್ರವಾಸಿಗಳ ಪ್ರವಾಸಕ್ಕೆ ಆಗುತ್ತಿರುವ ತೊಡಕುಗಳ ಕುರಿತು ನಿವೇದಿಸಿಕೊಂಡಿರುವರೆಂದು ತಿಳಿದುಬಂದಿದೆ

ವಾಣಿಜ್ಯ ನೌಕರರ ಸಂಘ: ಸಂಘದ ಕಾರ್ಯಕಾರೀ ಸಮಿತಿಯ ಸಭೆಯು ಸಂಘದ ಕಚೇರಿಯಲ್ಲಿ ತಾ 15 6 4 ರಲ್ಲು ಜರಗಿ ಜಿಲ್ಲೆಯ ಎಲ್ಲಾ ವಾಣಿಜ್ಯ ನೌಕರರನ್ನು ಸಂಘಟಿಸುವದೆ ಉಪಾಧ್ಯಕ್ಷರಾದ ಶ್ರೀ। ಯು ವೇಣುಗೋಪಾಲರಾಯರು ಇಡೀ ಜಿಲ್ಲೆಯ ತಾಲೂಕು ಕೇಂದ್ರಗಳನ್ನು ಸಂಚರಿಸಬೇಕೆಂದೂ, ಅವರಿಗೆ ಸಂಘಟನೆ ಮತ್ತು ಸದಸ್ಯರನ್ನು ಸೇರಿರುವರೆ ಆಯಾ ತಾಲೂಕು ಕಾಂಗ್ರೆಸ್ ಕಮಿಟಿಯವರು ಸಹಾಯವನ್ನೀಡುವಂತೆ ಕೇಳಿಕೊಳ್ಳಬೇಕೆಂದೂ ಮತ್ತು ಜಿಲ್ಲೆಯ ವಾಣಿಜ್ಯ ನೌಕರರ ಖಾನೆಷುಮಾರಿ ಲೆಕ್ಕವನ್ನು ಸಹಾ ಬೇಗನೇ ತೆಗೆಯಬೇಕೆಂದೂ ನಿರ್ಧಾರವಾಯಿತು

ಮಾರ್ಗದ ಮಧ್ಯದಲ್ಲಿ ನಡೆಯಬಾರದು: ಕೆಲ ದಿನಗಳ ಹಿಂದೆ ಪೋಲೀಸ್‌ನವರು ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಮೆಗಫೋನ್ ಮೂಲಕ "ಮಾರ್ಗದ ಎಡಬಲ ಬದಿಗಳಲ್ಲಿ ಇರುವ ಫೂಟ್ ಪಾತ್ ಯಾನೆ ಕಾಲುದಾರಿಯಲ್ಲೇ ನಡೆಯಬೇಕಲ್ಲದೆ ಮಾರ್ಗದ ಮಧ್ಯದಲ್ಲಿ ನಡೆಯುವುದು ಅಪಾಯಕರವಾಗಿದೆ ಎಂದು ಸಾರಿರುವುದು ಮಂಗಳೂರು ನಗರ ಬಿತ್ತ ದಿಂದ ದಿನಕ್ಕೆ ಜನಸಂಖ್ಯೆ ಮೊತ್ತ ಇತ್ಯಾದಿ ವಿಷಯಗಳಲ್ಲಿ ಬೆಳೆಯುತ್ತಿದೆ ನಾಗರಿಕರೂ ತಮ್ಮ ಹೊಣೆಗಾರಿಕೆಯನ್ನರಿತುಕೊಂಡು ನಾಗರಿಕ ಸೂತ್ರಗಳನ್ನು ಯಾವ ಒಬ್ಬ ರಂಗಿ ಪಾಲಿಸುವುದವಶ್ಯ ಕಾಲುದಾರಿಗಳಿಲ್ಲದೆ ಕಡೆಯಲ್ಲಿ ಅವುಗಳನ್ನು ರಚಿಸುವ ಸೌಕರ್ಯವೂ ಒದಗಬೇಕು.

ಪುಸ್ತಕ ವಿಮರ್ಶೆ

ಯುಗಾಂತರ—ಲೇಖಕರು

ವಿ. ಕೃ. ಗೋಕಾಕ

ಇದೊಂದು ಸಮಾಜ-ರಾಜಕಾರಣಗಳಿಂದ ಸಮ್ಮಿಶ್ರವಾದ(Socio-political) ಉಜ್ವಲ ನಾಟಕ ಗೋಕಾಕರ ವಾಸ್ತವಿಕತೆ ಮತ್ತು ಸಮತಾವಾದಗಳು ಇದರಲ್ಲಿ ಚೆನ್ನಾಗಿ ಮೂಡಿವೆ. ಈ ನಾಟಕವನ್ನು ಓದಿದಾಗಲೆಲ್ಲ ಹಿಂದೂದೇಶದ ಈಗಿನ ರಾಜಕೀಯ ಪರಿಸ್ಥಿತಿಯು ಕಣ್ಣೆದುರು ಅರಳಿ ನಿಲ್ಲುತ್ತದೆ. ಎಲ್ಲ ಪಾತ್ರಗಳೂ ಜೀವಕಳೆಯಿಂದ ತುಂಬಿದ, ತಮ್ಮದೇ ಆದ ಒಂದು ವೈಶಿಷ್ಟ್ಯದಿಂದ ಬೆಳಗುತ್ತವೆ.

ಈ ಸಣ್ಣ ನಾಟಕವನ್ನು ಬರೆದು ಗೋಕಾಕರು ಕನ್ನಡ ವಾಙ್ಮಯದ ಒಂದು ಹೊಸ ಜಾತಿಯ ಗ್ರಂಥಗಳ ಮೂಲ ಪುರುಷರಾಗಿದ್ದಾರೆಂದು ಹೇಳಬಹುದು. ಕನ್ನಡದಲ್ಲಿ ಇಂತಹ ಒಂದೆರಡು ಗ್ರಂಥಗಳು ಹೊರಟಿದ್ದರೂ, ಜನ ಸಾಮಾನ್ಯರಿಗೆ ರಾಜಕಾರಣವನ್ನು ತಿಳಿಸುವ ಉದ್ದೇಶದಿಂದ ಬರೆದ ಪುಸ್ತಕಗಳಲ್ಲಿ ಇದೇ ಮೊದಲನೇಯದು. ಸಾಹಸ ಕಾರ್ಯಕ್ಕೆ ಕೈಹಾಕಿ ಜಯಶಾಲಿಗಳಾದ ಗ್ರಂಥ ಕರ್ತರನ್ನು ಕನ್ನಡಿಗರೆಲ್ಲರೂ ಅಭಿನಂದಿಸಲೇ ಬೇಕು.

ದೇವದಾಸ್

ನೋಟೀಸು

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O P No 81/1947.

M ಸುಬ್ಬರಾವ್ M. ಶ್ರೀನಿವಾಸ ರಾಯರ ಮಗ—ಹಾಸನ ಜಿಲ್ಲಾ, ಆಲೂರು ತಾಲೂಕು, ಶ್ರೀ ದುರ್ಗಾ ಪ್ರಸನ್ನ ಕಾಫಿ ಕ್ಲಬ್ಬಿನ ಪ್ರೊಪ್ರೈಟರ ಅರ್ಜಿದಾರ

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನಂದ್ರೆ

ಉಡ್ಪಿ ತಾಲೂಕು ನಡಿಸಾಲು ಗ್ರಾಮದ ಪಡುಬಿದ್ರಿಯಲ್ಲಿ ಮೃತಪಟ್ಟಿರುವ ಸುಬ್ರಾಯ ಶ್ಯಾನುಭಾಗರ ಮಗ M. ಶ್ರೀನಿವಾಸ ರಾವ್ ಯೆಂಬವರ ಬಾಬ್ತು ದಿ ಕೆನರಾ ಬೇಂಕಿಂಗ್ ಕೋಪೊರೇಶನ್ ಲಿಮಿಟೆಡ್ ಉಡುಪಿ—ಈ ಬೇಂಕಿನಲ್ಲಿ Fixed Deposit No 106/46ಕ್ಕೆ ಡಿಪೋಜಿಟು ಇರುವ ರೂಪ್ಯಾ 1,622—0 0 (ಒಂದು ಸಾವಿರದ ಆರುನೂರ ಇಪ್ಪತ್ತೆರಡು)ನ್ನು ಪಡಿಯುವರೆ ನನ್ನ ಹೆಸರಲ್ಲಿ ಒಂದು ವಾರೀಸು ಸರ್ಟಿಫಿಕೇಟು ಕೊಡಿಸಬೇಕಾಗಿ ವಗೈರೆ ಅರ್ಜಿದಾರನು ಕೊಟ್ಟ ಅರ್ಜಿಯು ತಾರೀಕು 2—7—1947ಕ್ಕೆ ಇಟ್ಟಿದೆ ಆ ಕುರಿತು ಆಕ್ಷೇಪವುಳ್ಳವರು ಆ ದಿವಸ ಸದ್ರಿ ಕೋರ್ಟಿನ ಮುಂದೆ ಬಂದು ಹಾಜರಾಗಿ ಜ್ಯಾಹೀರು ಮಾಡಿಕೊಳ್ಳಬಹುದು

Udipi 19 6 1947 — K. Ramakrishna Rao, Vakil for Petitioner

ನೋಟೀಸು

ಪುತ್ತೂರು ಡಿ ಮು ಕೋರ್ಟಿನಲ್ಲಿ

O S 9 47

ರಾಘವರಾವ್ ವಾದಿ

ಹರೂನ್ ಆಲಿಸಾಹೇಬ ಕೂಡಾ—

ಪ್ರತಿವಾದಿಗಳು

1 ಹರೂನ್ ಆಲಿಸಾಹೇಬ್—ಅಕ್ಬರ ಸಾಹೇಬರ ಮಗ—ಮಂಗಳೂರು ಶಹರ್ ರೇಶನ್ ಡಿಪೊ, ಪ್ಯೊಗೆ ಬಜಾರು

6 ಶಾಂಭವಿಬಾಯಿ, P ನಾರಾಯಣ ರಾಯರ ಹೆಂಡತಿ—ಪುತ್ತೂರು ಕಸಬಾ

ಹಾಲಿ Room 82, Mahindrakar Building, Fort Ahmadnagar.

1 — 6ನೆ ಪ್ರತಿವಾದಿರಿಗೆ

ವಾದಿ ಮತ್ತು 8 — 9ನೆ ಪ್ರತಿವಾದಿರ ಹೆಸರಿಗೆ 1 2ನೆ ಪ್ರತಿವಾದಿರ ತಂದೆ ಅಕ್ಬರ್ ಸಾಹೇಬ್ ಎಂಬವನು ಬರಕೊಟ್ಟ ತಾರೀಕು 17 12—1934ನೇ ದಾವಾ ಅಡವು ದಸ್ತಾವಜು ಪ್ರಕಾರ ಪ್ರತಿವಾದಿರಿಂದ ಬಾಕಿ ಅಸಲು ಬಡ್ಡಿ ದಿವಜು ರೂ 797—12—0ನ್ನು ಭರ್ತಿಮಾಡಿಕೊಳ್ಳುವರೆ ಮಾಡಿದ ಮೇಲಿನ ದಾವೆಯು ಇದೇ ಬರುವ ತಾ 4—7—1947ಕ್ಕೆ ನೋಟೀಸಿನ ತನ್ಕ ಮ್ಯಾದೆ ನಿಶ್ಚಯಿಸಿರುವದ್ರಿಂದ ಪ್ರತಿವಾದಿರು ಆಕ್ಷೇಪಗಳೇನಾದರೂ ಹೇಳುವದಿದ್ದರೆ ಆ ಮ್ಯಾದೆಗೆ ಈ ಕೋರ್ಟಿನಮುಂದೆ 11 ಘಂಟೆಗೆ ತಪ್ಪದೆ ಹಾಜ್ರಾಗಿ ಬರಹ ಮೂಲಕ ಹೇಳಿಕೊಳ್ಳತಕ್ಕದ್ದು ಇದಕ್ಕೆ ತಪ್ಪಿದರೆ ಅವರನ್ನು ಶಿವಾಯಿ ಎಂತ ಎಣಿಸಿ ಈ ದಾವೆಯು ಮುಂದಿನ ತಖ್ತಿಯಿಂದ ತೀರ್ಮಾನಿಸಲಾದೀತು. ಎಂತ ಈ ಕೋರ್ಟಿನ R. I A. 614/47ನೆ ಅರ್ಜಿ ಮೇಲಾದ ಹುಕುಂ ಪ್ರಕಾರ ಈ ನೋಟೀಸು ಮಾಡಿಸಿಯದೆ.

ತಾ. 14-6-47 Puttur S. K. — S. Ramachandra Rao, Pleader for Plaintiff

ಬಟ್ಟೆಯ ಸಮಸ್ಯೆಯ ಸುಲಭ ಪರಿಹಾರ

ನಮ್ಮ ಪ್ರಾಚೀನರ ಅಮೋಘ ಆದರ್ಶ

ಐ. ಸಿ. ಎಸ್. ಆಫೀಸರರ ಸಲಹೆ

"ಬಟ್ಟೆ ಕೊರತೆಯು ಆಹಾರ ಪರಿಸ್ಥಿತಿಯಂತೆ ದಿನ ಹೋದದ್ದಂತೆ ಕಠಿಣವಾಗುತ್ತಿರುವುದು, ನಮ್ಮ ಪೂರ್ವಜರು ದೇಶದ ಹವಾ ಪರಿಸ್ಥಿತಿಗನುಗುಣವಾಗಿ ಅನಾವಶ್ಯಕ ಉಡುಪು ತೊಡುಪುಗಳ ಕುರಿತು ಒಂದಿಷ್ಟು ಕಾವತ್ರಯ ಪಟ್ಟುಕೊಳ್ಳುತ್ತಿರಲಿಲ್ಲ." ಹೀಗೆಂದು ಶ್ರೀ ಟಿ. ಎಸ್. ರಾಮಚಂದ್ರನ್ ಐ. ಸಿ. ಎಸ್. ಅವರು ಒಂದು ಚಿಕ್ಕ ಲೇಖನದಲ್ಲಿ ತಿಳಿಸುತ್ತಾರೆ:

"ಹೈಕೋರ್ಟು ಜಡ್ಜರುಗಳಾಗಿದ್ದ ಸರ್ ಟಿ. ಸದಾಶಿವಯ್ಯರ್, ಸರ್ ಮುತ್ತುಸ್ವಾಮಿ ಅಯ್ಯರ್ ಮತ್ತು ಸರ್ ಸುಬ್ರಹ್ಮಣ್ಯ ಅಯ್ಯರ್ ಇಂಥವರು ಕೂಡಾ ತಮ್ಮ ಮನೆಗಳಲ್ಲಿ ಉಡಲು ಒಂದು ಅಡ್ಡ ಮುಂಡು ಮತ್ತೊಂದು ಎಲ ವಸ್ತ್ರಗಳನ್ನು ದಿನನಿತ್ಯ ಒಗೆದು ಉಪಯೋಗಿಸುತ್ತಿದ್ದರು. ಹೀಗೆ ಮಾಡುವುದು ಆರೋಗ್ಯಕರವೂ ಕಮ್ಮಿ ಖರ್ಚಿನದೂ ಆಗಿರುತ್ತದೆ.

"ಸರ್ ಸಿ. ರಾಜಗೋಪಾಲ ಆಚಾರ್ಯರ ತಂಗಿ ಶ್ರೀಮತಿ ಕನಕಮ್ಮನವರು ಒಂದೇ ಒಂದು ತೆಳ್ಳಗಿನ ರವಕೆಯನ್ನು ಉಪಯೋಗಿಸುತ್ತಿದ್ದರು. ಅವರು ಉಡುತ್ತಿದ್ದ 18 ಮೊಳದ ಸೀರೆಯು ಭಾರತೀಯ ಮಹಿಳೆಯ ಅಲಂಕಾರವನ್ನು ಆಕರ್ಷಿತವಾಗಿ ಮಾಡುವುದರೊಂದಿಗೆ ತರಕಾರಿ ತರಲು, ದುಡ್ಡು ಕಟ್ಟಲು, ಬೀಗದ ಕೈ ಕಳ್ಳಲು, ಕೈವಸ್ತ್ರವಾಗಿಯೂ, ತಲೆ ವಸ್ತ್ರವಾಗಿಯೂ, ಇವೇ ಮೊದಲಾದ ಅನೇಕ ಉಪಯೋಗಗಳಿಗೆ ಸಹಾಯವಾಗುತ್ತಿತ್ತು.

ಅನಾವಶ್ಯಕ ಬಟ್ಟೆ ಬರೆ

"ಈಗೆಲ್ಲವೂ ಬದಲಾಗಿದೆ. ಪುರುಷನೊಬ್ಬನಿಗೆ ಒಂದು ಒಳಚಡ್ಡಿ, ಒಳಅಂಗಿ, ಹೊರ ಶರ್ಟು, ದೋತರ ಇಲ್ಲವೆ ಚಲ್ಲಣ, ಕೋಟು ಹೇಟು ಇಲ್ಲವೆ ಮುಂಡಾಸುಗಳಲ್ಲದೆ ಅನೇಕಾನೇಕ ಕರವಸ್ತ್ರಗಳಾಗಬೇಕು. ಹೆಂಗುಸರಿಗೆ ಒಂದು ಒಳ ರವಕೆ, ಒಂದು ಹೊರ ರವಕೆ, ಕೆಲವರಿಗೆ ಒಳಗವನು ಹೊರ ಸೀರೆ ಇವುಗಳು ಅವಶ್ಯಕವೆನಿಸುತ್ತವೆ.

"ಈಗಿನ ಶ್ರೀಮಂತರು ತಮ್ಮ ಪೂರ್ವಜರಿಗಿಂತ ಹೆಚ್ಚು ಬೆಲೆಯ ಹೆಚ್ಚು ಬಟ್ಟೆಬರೆಗಳನ್ನು ಉಪಯೋಗಿಸುತ್ತಾರೆ. ಪರಿಣಾಮವಾಗಿ ಬಡವರು ಹರಕು ಮುರುಕು ವೇಷದಲ್ಲಿ ಅಲೆದಾಡಬೇಕು ಇಲ್ಲವೆ ಬಂಗಾಲದಲ್ಲಿ ಮಾಡಿದಂತೆ ಆತ್ಮಹತ್ಯ ಮಾಡಿಕೊಳ್ಳಬೇಕು. ಶ್ರೀಮಂತ ನೆರೆಕೆರೆಯವರಿಗೆ ತಮ್ಮ ನಗ್ನಾವಸ್ಥೆ ತೋರಿಸುವುದಕ್ಕಿಂತ ಕೆಲರು ಮರಣವನ್ನೇ ಕೋರುತ್ತಾರೆ.

"ನಮ್ಮ ಹಿರಿಯರಿಗೆ ಒಂದು ಕಲ್ಲಿನ ಇಟ್ಟಿಗೆ ಇಲ್ಲವೆ ಮರದ ಹಲಗೆಯ ತುಂಡು ತೃಪ್ತಿಕರವಾದ ತಲೆಗೆಂಬಾಗೆತ್ತು. ಆದರೆ ಇಂದು ನಮಗೆ ಹತ್ತಿ ತುಂಬಿದ ಮೆದುವಾದ ಗಿಂಬುಗಳೇ ಬೇಕು. ಹಿಂದಿನವರು ಹುಲ್ಲುಚಾಪೆಯಲ್ಲಿ ಸುಖನಿದ್ರೆ ತೆಗೆಯುವವರಿದ್ದರೆ ನಾವು ವ್ಯರ್ಥ ಹತ್ತಿ ಹಾಸಿಗೆಯನ್ನೆ ಕೊಳ್ಳಲೆಳೆಸುತ್ತೇವೆ. ಮತ್ತೆ ಇವಕ್ಕೆ ಹಾಸು ಬಟ್ಟೆಗಳೂ, ತಲೆಗಿಂಬು ಚೀಲಗಳೂ ಬೇಕು.

ದೈವಕಪಿತ ಸುಖವೇ ಅದೆಷ್ಟು ಮಾನವರು ನಿನ್ನ ಛಾಯೆಗೆ ಮೋಸಹೋಗುವರು!

ಸರಳವಾಗಿರಿ

ನಮ್ಮೆಲ್ಲರಿಗೂ ಮಹಾತ್ಮಾ ಗಾಂಧಿಯವರಂತೆ ಮೊಣಕಾಲಿನ ತನಕ ಉಡಲು ಸಾಧ್ಯವಿಲ್ಲವಾದರೂ ಆರೋಗ್ಯಾನಂದಭಿವೃದ್ಧಿಗಳ ದೃಷ್ಟಿಯಿಂದ ಅವರ ಸರಳತ್ವವನ್ನನುಕರಿಸಿ ಅತ್ಯಾವಶ್ಯಕವೆನಿಸುವಷ್ಟೇ ಬಟ್ಟೆಬರೆಗಳನ್ನು ನಾವು ಉಪಯೋಗಿಸುವ ಅಭ್ಯಾಸ ಮಾಡಿದರೆ ಈ ದೇಶದ ಜನತೆಗೇ ಶ್ರೇಯಸ್ಕರವಾಗುವುದು. ರಬ್ಬರಿನ ತಲೆಗಿಂಬುಗಳನ್ನುಪಯೋಗಿಸಿ ಚಾಪೆಯ ಮೇಲೆ ಮಲಗುವ ಅಭ್ಯಾಸವನ್ನು ಮಾಡೋಣ. ಇದರಿಂದ ಹೇರಳ ವಸ್ತ್ರವನ್ನು ಉಳಿಸಿದಂತಾಗುತ್ತದೆ.

ಚೀನೀಯರು ತಮ್ಮ ಶರ್ಟು ಚಲ್ಲಣಗಳನ್ನು ಒಂದೊಂದು ಗೇಣಿನಷ್ಟು ಗಿಡ್ಡವಾಗಿ ಹೊಲಿಸುವುದರಿಂದ ಅಮೆರಿಕನ್ ಬಟ್ಟೆ ಗಿರಣಿಗಳಿಗೆ ತುಂಬಾ ನಷ್ಟವಿದೆಯೆಂದು ಓರ್ವ ಅಮೇರಿಕನ್ ಗಿರಣಿ ಒಡೆಯನು ತಿಳಿಸಿದ್ದನು. ಇದರಿಂದ ಬಟ್ಟೆ ಉಳಿತಾಯ ಮಾಡುವುದರ ಮಹತ್ವವನ್ನು ಮನಗಾಣಬಹುದು.

ಉಷ್ಣತೆಯ ಹತ್ತಿ ಬಟ್ಟೆಗಳನ್ನು ಧರಿಸುವ ಬದಲಿಗೆ ನಮ್ಮ ಮನೆ ಉಪಯೋಗಕ್ಕಾಗಿಯಾದರೂ ಕೆಲವೊಂದು ನಾರುಗಳಿಂದ ಮಾಡಿದ ಬಟ್ಟೆಗಳನ್ನು ಉಪಯೋಗಿಸೋಣ.

ಬಡವರ ಮೇಲಿನ ಕರುಣೆಯಿಂದ ಶ್ರೀಮಂತರು ಹತ್ತಿಯನ್ನು ಉಳಿತಾಯ ಮಾಡುವಂತಾದರೆ ಅದರಿಂದ ಸಾಮಾಜಿಕ ಐಕ್ಯತೆ ಸೌಹಾರ್ದಗಳು ಹೆಚ್ಚುವವು. ಚಾಪೆ ತಯಾರಿಸುವ ದೊಡ್ಡ ಗುಡಿ ಕೈಗಾರಿಕೆಯೂ ಅಭಿವೃದ್ಧಿಯಾಗುವುದು. ಅನೇಕ ನದಿ, ಕೆರೆ, ತೊರೆ, ಹಳ್ಳ ಪಳ್ಳಗಳಲ್ಲಿ ಬೆಳೆಯುವ ನಾರು ಗಿಡಗಳು ಕಡಿಯಲ್ಪಟ್ಟು ಹೆಚ್ಚೆಚ್ಚು ನೀರು ಕೃಷಿ ಕೆಲಸಕ್ಕೆ ಒದಗುವುವು. ಇದರಿಂದ ಹೆಚ್ಚು ಆಹಾರ ಬೆಳೆಗೂ ಅನುಕೂಲವಾಗುವುದು.

ಒಂದು ವರ್ಷದ ತನಕ ನಾವೀ ಪ್ರಯೋಗವನ್ನು ಮಾಡಿದರೆ ನಾವು ಅದೆಷ್ಟೋ ಆರೋಗ್ಯವಂತರೂ ಸಿರಿವಂತರೂ ಆಗಿ ಜಗತ್ತಿನಲ್ಲಿ ಮಾನವ ಸ್ವಾತಂತ್ರಗಳು ಸ್ಥಾಪಿಸಲ್ಪಡಲು ಸುಲಭವಾಗುವುದು.

ನಾಗರೀಕ ವ್ಯವಹಾರ

ಮಾರ್ಗ ರಕ್ಷಣೆ

ವಾಹನ ಚಲಾವಣೆಗೆ ಆತಂಕವಾಗದಂತೆಯೂ ಮಾರ್ಗ ದುರ್ಘಟನೆಗಳು ಸಂಭವಿಸದಂತೆಯೂ ಮುಂಜಾಗ್ರತೆಯೆಂಬಂತೆ ಪೋಲೀಸ್ ಇಲಾಖೆಯು ತನ್ನ ಸಿಬಂಧಿಯನ್ನು ನಿಬಿಡ ಸಂಚಾರದ ರಸ್ತೆಗಳಲ್ಲಿ ನಿಲ್ಲಿಸಿರುವುದು ಸ್ತುತ್ಯ. ಆದರೆ ಈ ಸಂದರ್ಭದಲ್ಲಿ ಕೆಲವೊಂದು ಉಪಸೂಚನೆಗಳೂ ಸಂದರ್ಭೋಚಿತವೆನಿಸದಿರಲಾರವು. ಸಂಚಾರ ಸುರಕ್ಷತೆ ಕಾಪಾಡಲು ನಿಂತ ಅಧಿಕಾರಿಗಳು ಶಾಲಾ ಮಕ್ಕಳೂ ಹಾದಿ ತಪ್ಪದಂತೆ ವಿಶೇಷ ಗಮನವಿಟ್ಟುಕೊಳ್ಳುವುದವಶ್ಯ. ಮಾತ್ರವಲ್ಲ ಮಿತಿ ತಪ್ಪಿದ ವೇಗದಿಂದ ವಾಹನಗಳನ್ನು ಚಲಾಯಿಸುವ ಹವ್ಯಾಸಕ್ಕೆ ಪ್ರತಿಬಂಧಕವನ್ನೊಡ್ಡಬೇಕು. ಮಾರ್ಗದ ಹಲವು ಕಡೆಗಳಲ್ಲಿನ ನೀರು ತುಂಬಿದ ಹೊಂಡ ಪ್ರದೇಶಗಳನ್ನು ಹಾಯ್ದು ಹೋಗುವ ವಾಹನಗಳು ಇಕ್ಕಡೆಯ ಮಾರ್ಗಸ್ಥರ ಮೇಲೆ ಕೆಂಪು ನೀರಿನ ಪ್ರೋಕ್ಷಣೆಯಾಗದಂತೆ ಸಕಾಲದಲ್ಲಿ ಎಚ್ಚರಿಕೆಯನ್ನೀಯಬಹುದು. ನಮ್ಮ ಮಾರ್ಗಗಳಲ್ಲಿ ಇಗಿಂದಾಗ್ಗೆ ಆಗಬಹುದಾದ ಕಿರುಕುಳ ಜಗಳ ಪೋಕರಿಗಳಾಗದಂತೆಯೂ ಅವರು ತಮ್ಮ ವ್ಯಕ್ತಿತ್ವವನ್ನು ಸದುಪಯೋಗ ಮಾಡಬಹುದು. ನಾಗರೀಕರು ಮಾರ್ಗದ ಬದಿಗಳನ್ನೂ, ಬಹಿರಂಗ ಸ್ಥಳಗಳನ್ನೂ ಅವಿಚಾರ ಪೂರ್ವಕವಾಗಿ ಹೊಲಸು ಮಾಡುವುದರ, ಕಸ ಕೊಳೆಗಳನ್ನು ಬಿಸಾಡುವುದರ ಕಡೆಗೆ ಗಮನ ತೆತ್ತು ಅವುಗಳು ಯೋಗ್ಯ ಸ್ಥಾನದತ್ತ ನಿರ್ದೇಶಿಸಲ್ಪಡುವಂತೆ ಮಾಡಿದರೆ ಇವರ ಸೇವೆ ಹೆಚ್ಚಿನ ಶ್ಲಾಘೆನಾರ್ಹವಾಗುವುದು.

ವಿಷಮಯ
ಗಾಯ, ಕಡಿತ,
ಬೆಂಕಿ ಸುಡು
ಪಿಕೆಗಳನ್ನು



ಶಮನಿಸಿ – ಶುದ್ಧಿಸಿ ಗುಣಪಡಿಸುವುದು.

ಸುರಕ್ಷಿತ ಶೀಘ್ರ ಗುಣಪಡೆಯುವುದಕ್ಕೆ ಅತೀ ಶ್ರೇಷ್ಠ ಜಾಂಬಕ್ ವಿಷಹಾರಿ ಮುಲಾಮನ್ನುಪಯೋಗಿಸಿರಿ. ಇದರ ಔಷಧಿಯ ಎಣ್ಣೆಗಳು ವಿಚಿತ್ರ ಶಮನಗುಣದವು. ಗಾಯದ ವಿಷಾಣುಗಳನ್ನು ಶುದ್ಧಿಸಿ ಜಖಂಗೊಂಡ ಚರ್ಮವನ್ನು ಆರೋಗ್ಯವಂತ ಮಾಡುತ್ತದೆ. ಮಡವೆ, ಮುದ್ದಣ, ಕ್ರಿಮಿಕಡಿತಗಳಿಂದ ಕಜ್ಜಿ, ಕೊಬೆ, ಕಾಲು ನೋವು ಇತ್ಯಾದಿಗೆ ಜಾಂಬಕ್ ವಿಶ್ವವಿಖ್ಯಾತ ಔಷಧಿ.

ಜಾಂಬಕನ್ನೇ ಉಪಯೋಗಿಸಿರಿ.

Zam-Buk

ಜಗತ್ ಖ್ಯಾತಿಯ ಗಿಡಮೂಲಿಕೆಯ ಮುಲಾಮು.
ಪ್ರಾಣಿಕೊಬ್ಬು ವಿರಹಿತವಾದ್ದು.

ESTD. 1906.

CANARA BANK, LIMITED.

(Incorporated in British India with Limited Liability)

(PROGRESS STATEMENT CORRECT TO THOUSANDS OF RUPEES)

LIABILITIES

	1945	1946
Capital Subscribed	29,00,000	29,00,000
Capital paid up	28,43,000	28,80,000
Reserves	11,00,000	11,00,000
Deposits	3,50,43,000	4,60,40,000
Due to Bankers	26,91,000	69,57,000
Call Deposits from Bankers	8,00,000	15,00,000
Branch Adjustments	22,07,000	21,09,000
Bills for collection and foreign bills negotiated	20,56,000	34,23,000
Other Liabilities	77,000	85,000
Profit for the year	3,61,000	4,19,000
Rs.	4,71,78,000	6,45,13,000

ASSETS

	1945	1946
Cash	1,01,91,000	1,16,16,000
Govt. Securities	1,80,45,000	2,75,61,000
Advances to customers	1,56,87,000	2,01,38,000
Bills for collection and Foreign Bills negotiated	20,56,000	34,23,000
Landed Properties	28,000	5,000
Bank Premises and Furniture and Fixtures	1,46,000	1,47,000
Other Assets	10,25,000	16,23,000
Rs.	4,71,78,000	6,45,13,000

ಗಾಂಧೀಜಿ ವಿಚಾರ ದರ್ಶನ

ಪರಮಾತ್ಮನಾರು

"ವಿದ್ಯುತ್, ಒಳ್ಳೆ ಪ್ರಚಂಡ ಶಕ್ತಿ, ಎಲ್ಲರೂ ಅದರ ಪ್ರಯೋಜನ ಪಡೆಯಲಾರರು. ಇದನ್ನು ಉತ್ಪಾದಿಸುವ ಬಗ್ಗೆ ಕೆಲವು ವಿಧಾನಗಳಿವೆ. ಅದನ್ನುಪಯೋಗಿಸಿ ಬಹು ಪರಿಶ್ರಮಪಟ್ಟರೆ ಮಾತ್ರ ಮಾನವನು ಅದರ ಪ್ರಯೋಜನ ಪಡೆಯಬಲ್ಲನು

"ಪರಮಾತ್ಮನೆಂದರೆ ಒಂದು ವ್ಯಕ್ತಿಯಲ್ಲ ಅವನು ಸರ್ವವ್ಯಾಪಿಯಾಗಿರುವುದರಿಂದ ಮಾನವ ಹೃದ್ಮಂದಿರಗಳಲ್ಲಿ ಅವನು ವಾಸಿಸುವನು. ಆದುದರಿಂದ ಪ್ರತಿಯೊಬ್ಬ ಮಾನವ ಜೀವಿಯು ಅವನ ಅವತಾರವೆಂದು ಹೇಳಬೇಕಾಗುವುದು ಅವನನ್ನು ಸಾಕ್ಷಾತ್ಕರಿಸಿಕೊಳ್ಳಬೇಕಾದರೆ ಅವನ ಬಗ್ಗೆ ಜ್ಞಾನ ಮಾಡಿಕೊಂಡು ಅವನು ಹಾಕಿಕೊಟ್ಟ ಮಾರ್ಗದಂತೆ ನಡೆದರೆ ಮಾತ್ರ ಸಾಧ್ಯ ಅವನ ಆ ವಿಧಿಗಳನ್ನು ತಿಳಿದುಕೊಳ್ಳಬೇಕಾದರೆ ಬಹು ಪರಿಶ್ರಮಪಡಬೇಕಾಗುವುದೆಂಬುದು ಸ್ಪಷ್ಟವೇ ಇದೆ ಬ್ರಹ್ಮಚರ್ಯವೆಂಬ ಒಂದೇ ಹೆಸರಿಸಿಂದದನ್ನು ಕರೆಯಬಹುದು ರಾಮ ನಾಮೋಚ್ಚಾರವೇ ಅದರ ಪಾಲನೆಯ ರಾಜ ಮಾರ್ಗ ಭಕ್ತರು ಮತ್ತು ಸಂತ ಪುರುಷರು ಇದನ್ನು ನಮಗೆ ತೋರಿಸಿಕೊಟ್ಟರು ನಮ್ಮೆಲ್ಲರ ಕಷ್ಟಗಳಿಗೆ ರಾಮನಾಮವೇ ರಾಮಬಾಣ

★

ಸಂಸ್ಥಾನಗಳ ಸ್ವಾತಂತ್ರ್ಯ

"ಆಗೋಸ್ತ ೧೫ರ ನಂತರ ತಿರುವಾಂಕೂರು ಸ್ವತಂತ್ರವಾಗುವುದೆಂದು ಅಲ್ಲಿನ ಪ್ರಖ್ಯಾತ ದಿವಾನರು ಸಾರಿದ್ದಾರೆ ಇದೇ ಸಮಯದಲ್ಲಿ ಅಲ್ಲಿನ ಕೊಂಗ್ರೆಸ್ಸು ಯಾವದೇ ಸಭೆಗಳನ್ನು ಕೂಡ್ರಿಸಬಾರದೆಂದೂ ಅವರು ವಿಧಿಸಿರುವರಂತೆ ತಿರುವಾಂಕೂರಿನ ನಿವಾಸಿಗಳಲ್ಲಿ ಯಾರಾದರೂ ಇದಕ್ಕೆ ಆಕ್ಷೇಪಿಸಿದರೆ ಸಂಸ್ಥಾನ ಬಿಟ್ಟುಹೋಗಬಹುದಂತೆ. ಬ್ರಿಟಿಷ್ ಅರಸರು ಸಮ್ರಾಟರಾಗಿರುವವರೆಗೆ ತಿರುವಾಂಕೂರು ಹಿಂದೂಸ್ಥಾನದಲ್ಲಿ ಉಳಿಯುವಲ್ಲಿ ಸರ್ ಸಿ ಪಿ ಯವರು ಸಂತುಷ್ಟರಾಗಿದ್ದರು. ಆದರೆ ಆ ಅಧಿಕಾರ ಹಿಂದೀಯರ ಕೈಗೆ ಹೋದ ಕೂಡಲೇ ಹಿಂದೀ ಒಕ್ಕೂಟವನ್ನು ಸೇರಬಾರದೆಂಬುದು ಅವರ ಅಭಿಪ್ರಾಯವೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಇದೊಳ್ಳೇ ವಿಚಿತ್ರ ಪರಿಸ್ಥಿತಿ! ಯಾವುದೇ ಸಂಸ್ಥಾನಕ್ಕೆ ಅತ್ಯಂತ ಅಪಮಾನಕರವಾದುದು ಈ ಬಗೆಯ ವರ್ತನೆಗೆ ಬ್ರಿಟಿಷರು ಪಾಲುಗಾರರಾಗುವರಾದರೆ ಅದು ಅವರಿಗೆ ಶಾಶ್ವತ ನಾಚಿಗೇಡಾದ ಮಾತು.

ತಿರುವಾಂಕೂರಿಗೆ ಅನ್ವಯಿಸುವ ಮಾತುಗಳೇ ಹೈದರಾಬಾದಿಗೂ ಅನ್ವಯಿಸುವವು. ನಿಜಾಮರ ಧೋರಣೆಯೂ ಅನ್ಯಾಯದ್ದಾಗಿರುವುದು ಅಲ್ಲಿ ನೂರಕ್ಕೆ 90 ರಷ್ಟು ಮುಸಲ್ಮಾನೇತರರು ಈ ಸಂಸ್ಥಾನ ನಿಶ್ಚಯವಾಗಿ ಅಲ್ಲಿಯ ಜನತೆಯ ಒಡೆತನಕ್ಕೆ ಸೇರಿದ್ದು ಜನತೆಯ ಧರ್ಮದರ್ಶಿಗಳು ಮತ್ತು ಸೇವಕರಾದುದಾದರೆ ಮಾತ್ರ ಅರಸರಿಗೆ ಅಲ್ಲಿರಲು ಹಕ್ಕುಂಟು. ಕಾಲಮಾನ ಪರಿಸ್ಥಿತಿ ಈಗ ಬದಲಾಗಿದೆ. ನರೇಂದ್ರರು ಇದಕ್ಕನುಸಾರ ವರ್ತಿಸದಿದ್ದರೆ ಅವರ ಅಸ್ತಿತ್ವಕ್ಕೆ ಅಳಿಗಾಲ

★

ಕೊಂಗ್ರೆಸ್ ಧೋರಣೆ

"ಪ್ರಾರಂಭದಿಂದಲೂ ಕೊಂಗ್ರೆಸ್ಸು ಸಂಸ್ಥಾನಿಕರ ಮಿತ್ರ. ಸಂಸ್ಥಾನಿಕರನ್ನು ನಿರ್ಮೂಲಗೊಳಿಸಬೇಕೆಂದು ಅದರ ಉದ್ದೇಶವಿಲ್ಲ ಈ ಜಗತ್ತಿನಲ್ಲಿರುವವರೆಲ್ಲ ನನ್ನ ಗೆಳೆಯರಿರುವಂತೆ ಸಂಸ್ಥಾನಿಕರೂ ನನ್ನ ಗೆಳೆಯರೆ

ಹಿಂದೂ ಮುಸಲ್ಮಾನರ ಕಲಹದ ನಿಮಿತ್ತ ಹಿಂದೂಸ್ಥಾನದ ವಿಭಜನೆಯೂ ಆಗುತ್ತಿದೆ! ದುಃಖದಾಯಕ ಸಂಗತಿ!! ಸಂಸ್ಥಾನಿಕರು ಮತ್ತಷ್ಟು ವಿಭಾಗಗಳನ್ನು ಮಾಡಬಾರದು ನರೇಂದ್ರರಿಗೆ ಮಾತ್ರವಲ್ಲ ವ್ಹಾಯ್‌ಸರಾಯ ಮೌಂಟ್ ಬೇಟನರಿಗೂ ಪರಮಾತ್ಮನು ಸುಬುದ್ಧಿಯನ್ನು ದಯಪಾಲಿಸುವನೆಂದು ಆಶಿಸುತ್ತೇನೆ ಬ್ರಿಟನ್ನದ ಕೊನೆಯ ವ್ಹಾಯ್‌ಸರಾಯರು ಹಿಂದೂಸ್ಥಾನದಲ್ಲಿ ಅನವಶ್ಯಕ ಕಿಕ್ಕಟವನ್ನುಂಟುಮಾಡಿ ಹೋಗಬಾರದು.

★

ಗಡಿನಾಡು ಗೊಂದಲ

"ವಾಯುವ್ಯ ಗಡಿನಾಡು ಪ್ರಾಂತ್ಯದಲ್ಲಿ ಮತಗಣನೆಯಾಗುವುದಂತೆ ನನ್ನನ್ನು ಕೇಳಿದರೆ ಜಿನ್ನಾ ಸಾಹೇಬರು ಗಡಿನಾಡ ಮಂತ್ರಿಗಳನ್ನು ಬಾದಷಾ ಖಾನರನ್ನು ಇತರ ಖುದಾಯಿ ಖಿದ್ಮತಗಾರರನ್ನು ಭೆಟ್ಟಿಯಾಗಿ ಅವರು ಪಾಕಿಸ್ಥಾನದಲ್ಲಿ ಏಕೆ ಸೇರಬೇಕೆಂದು ತಿಳಿಸಿ ಹೇಳಬೇಕು. ಕಾರಣಗಳು ಆಕರ್ಷಕವಾಗಿದ್ದರೆ ಗಡಿನಾಡ ಗೆಳೆಯರಿಗೆ ಪಾಕಿಸ್ಥಾನದಲ್ಲಿ ಸೇರಿ ಪರಾಕೆಸ್ಥಿತನವನ್ನು ಇದ್ದಂತೆ ಇರಗೊಡಿಸಬಹುದಾದರೆ ಪರ್ಯಾಯ ಪರಾಣದಲ್ಲಿ ಕಿಕ್ಕಟವೊದಗುವುದನ್ನು ತಪ್ಪಿಸಲು ಗಡಿನಾಡು ಮುಸ್ಲಿಂ ಬಹುಸಂಖ್ಯಾಕ ರಾಜ್ಯಗಳ ಸಂಯುಕ್ತ ಘಟನೆಯಲ್ಲಿ ಸೇರುವುದೊಳಿತೆಂದು ಸೂಚಿಸಲು ನಾನು ಹಿಂದೆ ಮುಂದೆ ನೋಡಲಿಕ್ಕಿಲ್ಲ ಪರಂತು ರನ್ನು ಮತಗಣನೆಗೋಸ್ಕರ ಇಬ್ಬಣವಾಗಿ ಒಡೆಯುವುದು ಖಂಡಿತ ಒಳಿತಲ್ಲ."

★

ಮುಯಿಗೆ ಮುಯಿ

ಸಾಧುವೊಬ್ಬನು ತನ್ನನ್ನು ಕಡಿದ ಚೇಳನ್ನು ನೀರಿನಿಂದೆತ್ತಿ ರಕ್ಷಿಸಿದನು ಅದಕ್ಕ ಅವನನ್ನು ಕೆಲವರು ಜರೆದರು ಆಗ ಅವನಿತ್ತ ಮೃಧುವಾದರೂ ಪರಿಣಾಮಕಾರಿಯಾದ ಉತ್ತರವಿದು ಚೇಳು ತನ್ನ ಸ್ವಭಾವಕ್ಕೆ ತಕ್ಕಂತೆ ವರ್ತಿಸಿತು ಮತ್ತು ಸಾಧುವಾದ ನಾನಾದರೊ ನನ್ನ ಸ್ವಭಾವದಂತೆ ವರ್ತಿಸಿದೆ ದಯಾಮಯತೆ ಪಶುವೃತ್ತಿಯ ಆಚರಣೆಯ ಬಗೆಗೆ ಮೌನವಾಗಿರಬೇಕೆಂದು ಸೂಚಿಸುವದು ಕಪಟಕ್ಕೆ ಕರೆಕೊಟ್ಟಂತೆ ಹೇಡಿತನದಿಂದ ತಲೆವಾಗುವದಕ್ಕಿಂತ ಪ್ರತಿಹಿಂಸೆಯೇ ಮೇಲೆಂದು ನಾನಷ್ಟೊ ಬಾರಿ ಹೇಳಿದ್ದೇನೆ ಇನ್ನೂ ಹೇಳುವೆ ಆದರೆ ಪ್ರತಿಹಿಂಸೆ ನಿಜವಾದ ಶೌರ್ಯದ ಚಿಹ್ನೆಯಲ್ಲ ಅದರಿಂದ ದ್ವೇಷಾಗ್ನಿಯೂ ನಂದಿ ಹೋಗಲಾರದು "

★

ಮುಸ್ಲಿಮೇತರ ಬೆಂಬಲ

"ಮುಸ್ಲಿಮೇತರ ಹಿಂದೂಸ್ಥಾನವೊಂದು ಸಂಪೂರ್ಣವಾಗಿ ನನ್ನ ಬೆಂಬಲಕ್ಕಿದ್ದರೆ ಒದಗಿರುವ ವಿಭಜನೆಯನ್ನು ತಲಕಳಗು ಮಾಡುವ ಹಾದಿಯನ್ನು ತೋರಿಸುತಿದ್ದೆನೆಂದು ಎದೆತಟ್ಟಿ ಹೇಳುವೆ ಆದರೆ ನಾನಿಂದು ಗತಕಾಲದ ಮನುಷ್ಯನಾಗಿಬಿಟ್ಟಿದ್ದೇನೆ ಇಲ್ಲವೆ ಜನರು ಹಾಗೆ ಭಾವಿಸತೆ [illegible] ದು ಒಪ್ಪಿಕೊಳ್ಳಬೇಕಾಗಿದೆ. ಕಳೆದ [illegible] ವತ್ತು ವರ್ಷಗಳಿಂದ ಕಲಿತ ಪಾಠವನ್ನು ನಾವು ಮರೆತುಬಿಟ್ಟಿದ್ದೇವೆ ಅಸತ್ಯವನ್ನು ಸತ್ಯದಿಂದಲೂ ಅಸಹನೆಯನ್ನು ಸಹನೆಯಿಂದಲೂ, ಕಾರ್ಯ [illegible] ದಲೂ ಗೆಲ್ಲಬೇಕೆಂಬುದನ್ನು ನಾವು ಮರೆತುಬಿಟ್ಟಿದ್ದೇವೆ ವಿರೋಧದ ಮುಂದೆ [illegible] ಹೊಲವರು ನನ್ನ ಕರೆ ಕೇಳುತ್ತಿದ್ದರೆ ಆದರೆ ಆ ವಿರೋಧವೊಂದ ಹೊರತು ನನ್ನ ಅವರ ನಡುವೆ ಮತ್ತಾವ ಸಮಾನ ಧರ್ಮವೂ [illegible] ಲ್ಲವ?

★

ಮಂಗಳೂರು

ಮಂಗಳೂರಿನ "ಗವರ್ನಮೆಂಟ್ ಮುಸ್ಲಿಂ ಗರ್ಲ್ಸ್ ಹೈಸ್ಕೂಲಿನ ಎಸ್. ಎಸ್. ಎಲ್. ಸಿ ಪರೀಕ್ಷೆ"ಗೆ ಈ ಬಾರಿ ಕುಳಿತಿದ್ದ ಮೂವರು ವಿದ್ಯಾರ್ಥಿನಿಯರೂ ಕೃತಾರ್ಥರೆಂದು ತಿಳಿದುಬಂದಿದೆ.

ವೀರ ಬಚ್ಚಾ

ಬಿರ್ಲಾ ಲೆಬೊರೇಟರಿಸ್

ಸೇಲ್ಸ್ ಆಫೀಸು
64 ಪದೋರಿಯಾ ಘಾಟ್ ಸ್ಟ್ರೀಟ್, ಕಲ್ಕತ್ತಾ

ಪ್ರಯಾಣಿಕರಿಗೆ ಸೂಚನೆ.

ಪ್ರಕೃತ ಮೂರು ತಿಂಗಳ ಸಿಗರೇಟಿನ ಪ [illegible] ದಲ್ಲಿ ಕ್ಷೀಣತೆಯಾಗುವುದರಿಂದ ಕೆಲವು ಬಸ್ಸುಗಳಿಗೆ ಪೆಟ್ರೋಲು ಸಾಕಾಗದೆ ಕೆಲವು ಸರ್ವಿಸುಗಳನ್ನು ತಾತ್ಕಾಲಿಕವಾಗಿ [illegible] ಪರ್ಮಿಟುಪತ್ರಗಳಿಂದಲೂ, ಮತ್ತು ಗ್ಯಾಸು ಬಸ್ಸುಗಳು ಸಹ ಕಡಿಮೆ ಇದ್ದು ಅವುಗಳಿಂದ [illegible] ನಿಶ್ಚಯಿಸಲ್ಪಟ್ಟ ನಂತರವೇ ಸಾಧ್ಯವಿದ್ದಲ್ಲಿ ಮಾತ್ರ ಸ್ಪೆಶ್ಯಲ್ ಸರ್ವಿಸುಗಳನ್ನು ರನ್ ಮಾಡಬೇಕಾಗುತ್ತದೆ ಅಲ್ಲದೆ [illegible] ಸಲ್ಲಿ ಕೆಲವು ಕಡೆಗಳಲ್ಲಿ ಪೆಟ್ರೋಲು ಮತ್ತು ಕೆಲವು ಕಡೆಗಳಲ್ಲಿ ಗ್ಯಾಸು ಬಸ್ಸುಗಳಿರುವುದರಿಂದ [illegible] ಸ್ಪೆಶ್ಯಲ್ ರನ್ ಮಾಡಬೇಕಾಗಿರುತ್ತದೆ. ಉದಾಹರಣೆಗಾಗಿ ಮಂಗ್ಳೂರು—ಮುಲ್ಕಿ ಲ್ಯಾನಲ್ಲಿ [illegible] ಬಸ್ಸು ಮಾತ್ರ ರನ್ ಆಗುತ್ತಿರುವುದರಿಂದ, ಸ್ಪೆಶಲುಗಳನ್ನು ರನ್ ಮಾಡುವ [illegible] ಗಳಲ್ಲಿ [illegible] ಬಸ್ಸುಗಳ ಅನುಕೂಲತೆ ನೋಡಿ ಮಂಗಳೂರಿನ ತನಕ ಮಾತ್ರ ಸ್ಪೆಶ್ಯಲುಗಳನ್ನು ರನ್ ಮಾಡಲಾಗುವುದು.

ಅಲ್ಲದೆ ಮದುವೆ ಇತ್ಯಾದಿ ಸಮಾರಂಭಗಳ ಬಗ್ಗೆ ಸ್ಪೆಶ್ಯಲುಗಳನ್ನು ರನ್ [illegible] ಸಂದರ್ಭಗಳಲ್ಲಿ R. T. O. ಕೊಯಂಬುತ್ತೂರು ಇವರಿಂದ ಪರ್ಮಿಶನ್ ಪಡಕೊಂಡು ಅಂಥಾ ಸ್ಪೆಶ್ಯಲುಗಳನ್ನು [illegible] ಬಸ್ಸುಗಳ ಅನುಕೂಲತೆ ನೋಡಿ ರನ್ ಮಾಡಬೇಕಾಗಿರುವುದರಿಂದ, ಹಾಗೆ ಸ್ಪೆಶ್ಯಲ್ ಬಸ್ಸುಗಳನ್ನು ಅಪೇಕ್ಷಿಸುವವರು ಸ್ಪೆಶ್ಯಲುಗಳ ಬಗ್ಗೆ ಪರ್ಮಿಶನ್ ಪಡಕೊಳ್ಳುವರೆ ನಮಗೆ ಅನುಕೂಲವಾಗುವಂತೆ ತಮ್ಮ ಅರ್ಜಿಗಳನ್ನು ನಮಗೆ 20 ದಿವಸಗಳಿಗೆ ಮುಂಚಿತವಾಗಿ ಬರಕೊಳ್ಳಬೇಕಾಗಿ ಸಾರ್ವಜನಿಕರಿಗೆ ತಿಳಿಸಲಪೇಕ್ಷಿಸುತ್ತೇವೆ

ಅಲ್ಲದೆ ಇತ್ತೀಚೆಗೆ ಪ್ರಯಾಣಿಕರು ಅವರ ಪ್ರಯಾಣವನ್ನು ಸರಿಯಾಗಿ ನಿರ್ಧರಿಸದೆ ಟಿಕೇಟು ಸಿಕ್ಕುವುದಿಲ್ಲವೆಂಬುದಾಗಿ ಮೊದಲೇ ಟಿಕೇಟುಗಳನ್ನು ಪಡೆದು, ನಂತ್ರ ಪ್ರಯಾಣಿಸದ, ಸದ್ರಿ ಟಿಕೇಟುಗಳ ಚಾರ್ಜಿನ ಬಗ್ಗೆ ರಿಫಂಡಿಗೆ ಬರಕೊಳ್ಳುವುದು ತಿಳಿದುಬರುತ್ತದೆ ಇದರಿಂದ ಪರವೂರಿನಿಂದ ಯಾ ಇತರ ಕಡೆಗೆ ಹೋಗುವ ಬೇರೆ ಪ್ರಯಾಣಿಕರಿಗೆ ಸದ್ರಿ ದಿನ ಪ್ರಯಾಣಿಸುವರೆ ತೊಂದ್ರೆಯಾಗುವ ಪ್ರಸಂಗ ಬಂದೊದಗುವ ಕಾರಣ ಬಸ್ಸು ಪ್ರಯಾಣ ಮಾಡುವವರು ಅವರವರ ಪ್ರಯಾಣವನ್ನು ಸರಿಯಾಗಿ ನಿರ್ಧಾರ ಮಾಡಿಕೊಂಡು ಟಿಕೇಟುಗಳನ್ನು ಪಡೆಯುವುದಲ್ಲದೆ, ಅಗತ್ಯವಿದ್ದಲ್ಲಿ ಮಾತ್ರ ಪ್ರಯಾಣ ಬೆಳಸಿ, ಕಂಪೆನಿಯವರೊಡನೆ ಸಹಕರಿಸಬೇಕಾಗಿ ಅಪೇಕ್ಷಿಸಲಾಗಿದೆ.

ಮಂಗ್ಳೂರು,
29-3-1947.

ಜೊಯಿಂಟ್ ಮೆನೇಜರ್ಸ್,
ದಿ. ಕಂಬ್ಯಾಂಡ್ ಬುಕ್ಕಿಂಗ್ ಏಜೆನ್ಸಿ ಮಂಗ್ಳೂರು.

THE CANARA BANKING CORPORATION LTD.

(Incorporated in British India with Limited Liability)

Estd: 1906.

Head Office: UDIPI, S. Kanara.

	Rs
CAPITAL:	
Authorised	25,00,000
Issued, subscribed & called up	16,00,000
Paid up	15 97,145
RESERVES	5,25,000
DEPOSITS	2,07,47,928
TOTAL RESOURCES	3,00,01,186

With a net work of branches & Agencies in all principal cities of India, we shall be able to render efficient collection services

BANKING BUSINESS OF EVERY DESCRIPTION TRANSACTED

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ

ಅಮೃತಾಂಜನ ಡಿಪೋ,

ಬೊಂಬ್ಬಾ, ಮದರಾಸು, ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ

ದೊರೆಯುವುದು

The 1946 Record Business proves the popularity

THE BOMBAY LIFE ASSURANCE COMPANY LIMITED

Company's New Business in 1946 - 3 28 Crores

Our Cheif Agency New Business in 1946 about 54 Lakhs

Our experience of 37 years available to you for arranging Insurance investment. It therefore, pays you to consult us to Insure or to represent

Messrs. Kochikar Brothers, Limited.

Chief Agents for South India,

Bombay Life Building.

Central Office, Udipi:

Branches at: MANGALORE, CALICUT, MADRAS, TRIVANDRUM, MADURA, BANGALORE AND BOMBAY

Bhuvanendra Products Limited,

KATAPADI S. Kanara.

'Bhuvanendra'

Dashamoolarishta

Prepared with seleted ingredients under the supervision of the experienced staff, A specific for the puerperal diseases and also valuable to puerperal women as tonic, increases the vitality and sexual vigour. Also useful in habitual abortion and all diseases pertaining to the heart & lungs

Depot: **Maharata Galli, Hubli**

Bhuvanendra Products Ltd.

Factory & Head Office

KATAPADI S. Kanara

'ಭುವನೇಂದ್ರ'

ದಶಮೂಲಾರಿಷ್ಟ

ತುಂಬಾ ನುರಿತ ಅನುಭವಸ್ಥರಿಂದ ಉತ್ತಮ ಗಿಡಮೂಲಿಕೆಗಳಿಂದ ತಯಾರಿಸಲ್ಪಡುವ ದಿವ್ಯ ಔಷಧಿ ಗರ್ಭಕೋಶದ ಪೀಡೆಗಳನ್ನು ನಿವಾರಿಸಿ ದೇಹದಲ್ಲಿ ಶಕ್ತಿಯನ್ನು ತುಂಬುವುದು ಸೂತಿಕಾ ರೋಗಗಳನ್ನು ತಡೆಗಟ್ಟುವುದು ಬಂಜೆತನವನ್ನು ಹೋಗಲಾಡಿಸಿ ಗರ್ಭಧಾರಣೆಗೆ ಸಹಾಯ ಮಾಡುವುದು ಕೆಮ್ಮು, ಕ್ಷಯ, ಶೀತಬಾಧೆ ಇತ್ಯಾದಿ ಪುಪ್ಪುಸ ವಿಕಾರಗಳನ್ನು ಗುಣಪಡಿಸುತ್ತದು

ಡಿಪೊ ಮರಾಠಗಲ್ಲಿ, ಹುಬ್ಬಳ್ಳಿ

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್.

ಕಟಪಾಡಿ ದ. ಕನ್ನಡ

ಡೋಂಗರೆ

ಬಾಲಾಮೃತ

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

Edited, Printed & Published by A. S. Kamath at the Sharada Press, Car Street, Mangalore.